ನವ ಯುಗ

1)	3-9-1959	12
2)	10-9-1959	12
3)	17-9-1959	12
4)	24-9-1959	12
5)	1-10-1959	12
6)	8-10-1959	12
7)	15-10-1959	12
8)	22-10-1959	12
9)	29-10-1959	12
10)	5-11-1959	12
11)	12-11-1959	12
12)	19-11-1959	12
13)	26-11-1959	12
14)	3-12-1959.	12
15)	10-12-1959.	12
16)	17-12-1959.	12
17)	24-12-1959.	12
18)	7-1-1960	12
19)	14-1-1960	12
20)	21-1-1960	12
		240

21)	28- 1- 1960	32	[illegible]
22)	4- 2- 1960	8	
23)	11- 2- 1960.	12	
24)	18- 2- 1960	12	
25)	25- 2- 1960	12	
26)	3- 3- 1960.	12	
27)	10 3- 1960	12	
28)	17- 3- 1960	12	
29)	24 3- 1960.	12	
30)	31- 3- 1960	10	
31)	7- 4- 1960.	8	
32)	14- 4- 1960	10	
33)	21- 4- 1960	12	
34)	28- 4- 1960.	10	
35)	5- 5- 1960.	12	
36)	12- 5- 1960	10	
37)	19- 5- 1960	10	
38)	26 5 1960	10	
39)	2 6 1960	12	
40)	1- 6 1960.	12.	
	—	240	

41)	16-6-1960	12
42)	23-6-1960	12
43)	30-6-1960	12
44)	7-7-1960	12
45)	14-7-1960	12
46)	21-7-1960	12
47)	28-7-1960	12
48)	4-8-1960	12
49)	18-8-1960	32 స్వాతంత్ర్య [illegible]
50)	25-8-1960	12
		140

1) 240

2) 240

3) 140
− 120

ವಾ. ಚಂದಾ ರೂ 5-75 ಬಿಡಿ 13 ನ ಪೈಸೆ

Vol 39 No 1
ವರುಷ ೩೯, ವಾರ ೧

3-9-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ಇದು ಸಹೋದರ ಪ್ರೇಮದ ಪರಾಕಾಷ್ಠೆಯಲ್ಲವೆ?

ಭಾರತದೊಡನೆ ಮೈತ್ರಿಯಿಂದಿರಲಭಿಲಷಿಸುವ ಚೀನವೇ ಭಾರತವನ್ನು ಅಕ್ರಮವಾಗಿ ಪ್ರವೇಶಿಸುವ್ರದಾದರೆ, ಇದನ್ನೇನೆನ್ನಬೇಕು? ಸಾಹಸವೆಂದೆ, ದ್ರೋಹವೆಂದೆ?

ಎಲ್ಲರೊಡನೆಯೂ ಸ್ನೇಹಾಚರಣೆಯಿಂದ ನಡೆದುಕೊಳ್ಳಬೇಕ, ಸರ್ವ ಸಮಸ್ಯೆಗಳನ್ನೂ ಶಾಂತಯುತವಾದ ವಿಚಾರ ವಿನಿಮಯಗಳಿಂದಲೇ ಬಗೆಹರಿಸಬೇಕು ಎಂಬ ಉದಾರಾದರ್ಶವನ್ನಿಟ್ಟುಕೊಳ್ಳುವುದು ತಪ್ಪೆಂದು ಹೇಳುವಂತಿಲ್ಲವಾದರೂ ಈ ಉದಾರತಾ ಪ್ರದರ್ಶನಕ್ಕೆ ಪಾತ್ರಾಪಾತ್ರ ವಿವೇಚನೆ ಬೇಕು ಎಂದು ಹೇಳಬೇಕಾಗಿದೆ "ಮೂರ್ಖಂ ಪ್ರಥಮಂ ವಂದೇ' ಎಂದು ಸಾರಿದ ಆ ಯೋಕ್ತಿಯೇ "ಮೂರ್ಖಸ್ಯನಾಸ್ತ್ಯೌಷಧಂ" ಎಂದೂ ಘೋಷಿಸಿದೆ ಹಾವಿನೊಡನೆ ಸರಸಾಟ ಸಲ್ಲದು" ಎಂದೂ 'ಹಾವಿಗೆ ಹಾಲೆರೆದೇನು ಫಲ?' ಎಂದೂ ಗಾದೆ ಮಾತುಗಳಿವೆ, ದಾಸವರರೂ ಹಾಡಿದ್ದಾರೆ

ಭಾರತದ ಗಡಿಪ್ರದೇಶದಲ್ಲಿ ಚೀನೀಯರು ಮಾಡಿದ ಉಲ್ಲಂಘನಾಕ್ರಮಗಳಿಂದಾಗಿ ಈ ಮಾತುಗಳೆಲ್ಲವೂ ನೆನಪಿಗೆ ಬರುವಂತಾಯಿತು ಕಮ್ಯುನಿಸ್ಟ ಚೀನಕ್ಕೆ ವಿಶ್ವಸಂಸ್ಥೆಯ ಪ್ರಾತಿನಿಧ್ಯದೊರೆಯಬೇಕೆಂದು ಭಾರತವೂ ಈ ಮೊದಲು ಸಕಾರಣವಾಗಿ ಸಮರ್ಥಿಸಿತ್ತು. ಇಂದಿಗೂ ಸಾಮಾನ್ಯವಾಗಿ ಅದೇ ಅಭಿಪ್ರಾಯ ಭಾರತಕ್ಕಿದೆ ಆದರೆ, ಅಕ್ರಮಣ ಹಾಗೂ ವಿಸ್ತರಣಾವಾದಿಗಳಾದ ಚೀನೀಯ ಕಮ್ಯುನಿಸ್ಟರು ಟಿಬೇಟಿನ ಆಂತರಿಕ ವ್ಯವಹಾರದಲ್ಲಿ ಕೈಹಾಕಿ ಅಲ್ಲಿ ಮಾತ್ರ ಗೊಂದಲವೆಬ್ಬಿಸಿದುದಲ್ಲದೆ ಅಲ್ಲಿಂದಲೂ ಮುಂದೆ ಕಾಲಿರಿಸಿ ಭಾರತದ ಗಡಿಯ ಬಳಿಗೂ ಬಂದು ಪ್ರವೇಶಿಸಲು ಹವಣಿಸುತ್ತಿರುವ ಘಟನೆಯನ್ನು ಸ್ವಯಂ ಪ್ರಧಾನಿ ನೆಹರೂರವರೇ ಇದೀಗ ಒಪ್ಪಿಕೊಂಡಿದ್ದಾರೆ. 'ಹಿಂದೂ ಚೀನೀ ಭಾಯಿ ಭಾಯಿ" ಎಂದು ಉಚ್ಚರಿಸಿದ ಅದೇ ಬಾಯಿಯಿಂದ ಈಗ ಉದ್ವೇಗಪೂರ್ಣವಾಗಿ ಈ ಘಟನೆಯನ್ನೂ ಅವರೇ ಲೋಕ ಸಭೆಯಲ್ಲಿ ಒಂದು ಹೇಳಿಕೆಯಲ್ಲಿ ಹೇಳಿದ್ದಾರೆ

ಇದರಿಂದಾಗಿ ಭಾರತವನ್ನು ಕಮ್ಯುನಿಸ್ಟ ಚೀನವು ವಿಸ್ತರಣ ವಾದಿ ರಾಷ್ಟ್ರವೆಂಬ ಅನುಮಾನದಿಂದ ಕಂಡರೂ, ನಿಜವಾದ ವಿಸ್ತರಣಾವಾದಿಗಳಾರೆಂದು ತಿಳಿಯುತ್ತದೆ ಆದರೆ, ಭಾರತವು ತನ್ನ ಸೀಮಾ ಪ್ರದೇಶದ ರಕ್ಷಣೆಯ ಕಾರ್ಯದಲ್ಲಿ ಎಂದಿಗೂ ಹಿಂದುಳಿಯಲಾರದೆಂಬ ಭಾರತೀಯ ಪ್ರಧಾನಿಯವರ ಘೋಷಣೆಯನ್ನು ಲೋಕಸಭೆಯು ಮೈಯೆಲ್ಲ ಕಣ್ಣಾಗಿ ಕೇಳಿತು. ಅಮೆರಿಕೆಯ ಅಧ್ಯಕ್ಷ ಐಸೆನ್ ಹಾವರ್ ಮತ್ತು ರಶ್ಯನ್ ಪ್ರಧಾನಿ ಕ್ರುಶ್ಚೇವರ ಭೇಟಿಯು ಸಂಭವವು ಪಿಸುಮಾತಿನಲ್ಲಿರುವಾಗ, ಚೀನವೂ ಈ ಮಾತುಕತೆಯಲ್ಲಿ ಭಾಗವಹಿಸುವ ಇಚ್ಛೆಯಿಂದಲೇ ಭಾರತಕ್ಕೆ ಕಿರುಕುಳವೀಯಲು ತೊಡಗಿದೆ ಎಂದೂ ಹೇಳುವವರಿದ್ದಾರೆ



ಅಮೆರಿಕೆಯ ಬೆಳೆಯುತ್ತಿರುವ ಕೈಗಾರಿಕೆಗಳಲ್ಲಿ 'ಸ್ಪೇಸ್‌ಕ್ರಾಫ್ಟ್' ಕೂಡ ಒಂದಾಗಿದೆ.

ಭಾರತದ ಅಧಿಕಾರಸೂತ್ರ ವಹಿಸಿದ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರಿಗೂ ಪ್ರಧಾನಿ ನೆಹರೂ ಅವರಿಗೂ ಚೀನದ ಬಗೆಗೆ ಭಾರತ ಸರಕಾರದ ಧೋರಣೆಯ ಕುರಿತಾಗಿ ಭಿನ್ನಾಭಿಪ್ರಾಯವೂ ತಲೆದೋರಿದೆಯೆಂದು ವದಂತಿಯಿದೆ ನೆಹರೂರವರು ಚೀನಕ್ಕೆ ಯುಕ್ತ ರಾಷ್ಟ್ರ ಸಂಘದಲ್ಲಿ ಪ್ರವೇಶ ದೊರೆಯಬೇಕೆಂದೂ, ಒಮ್ಮೆ ಅದು ಪ್ರವೇಶಿಸಿ ಸದಸ್ಯ ರಾಷ್ಟ್ರವಾದರೆ, ಮುಂದೆ, ಅದನ್ನು ಅನುಕೂಲವಾಗಿ ಉಪಯೋಗಿಸಬಹುದೆಂದೂ ಹೇಳಿದರೆ, ಶ್ರೀಮತಿ ಗಾಂಧಿಯವರು ಇದಕ್ಕೆ ವಿರುದ್ಧಾಭಿಪ್ರಾಯಪಡುತ್ತಾರೆ. ಭಾರತ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸಿ, ಚೀನದ ಸದಸ್ಯತನಕ್ಕಾಗಿ ಪ್ರಯತ್ನಿಸಬಾರದೆಂದೂ ಅವರು ಹೇಳುತ್ತಾರೆ. ಈ ಬಗ್ಗೆ ಸದ್ಯವೇ ನಡೆಯಲಿರುವ ಕಾಂಗ್ರೆಸ್ ಅಧಿವೇಶನದಲ್ಲಿ ಅಂತಿಮ ಧೋರಣೆ ನಿರ್ಧಾರವಾಗಬಹುದೆಂದೂ ಹೇಳಲಾಗುತ್ತಿದೆ.

ಕೇರಳದಲ್ಲಿ ಅಧ್ಯಕ್ಷಾಡಳಿತೆಯನ್ನು ಘೋಷಿಸುವ ಕುರಿತಾಗಿಯೂ ಈ ತಂದೆ ಮತ್ತು ಮಗಳಲ್ಲಿ ಭಿನ್ನಾಭಿಪ್ರಾಯವಿತ್ತೆಂಬುದೂ ಜಗಜ್ಜನಿತವಿದೆ ಶ್ರೀಮತಿಯವರು ಇದಕ್ಕೆ ಅಗ್ರಹಪಟ್ಟಾಗ ಪಂಡಿತ ಶ್ರೀ ನೆಹರೂರವರಿಗೂ ಮುಕ್ತಿಯ ಮಾರ್ಗ ತೋರಿದ್ದು ಬಿಟ್ಟಿತು ಒಂದೆರಡು ದಿನಗಳಲ್ಲಿಯೇ ರಾಜಕೀಯ ವಾತಾವರಣ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ – ಮಂಗಳೂರು—3

ಸ್ಥಾಪನೆ - 1931

ಕಾಯಂ ರೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ದ ಹೆಚ್ಚಿನ ರೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ ..

ಕಥಾ ವಿಹಾರ

ಕಳೆದು ಹೋದ ಅಡಿಕೋಲು!

ಒಂದು ವಸ್ತು ಇಬ್ಬರದೆನ್ನುವಾಗ, ಈ ವಾದವನ್ನು ಹೇಗೆ ತೀರ್ಮಾನಿಸಬೇಕು? ಒಂದು ಅಲ್ಪ ವಸ್ತು ದೊಡ್ಡ ರಾದ್ಧಾಂತವನ್ನೇ ಎಬ್ಬಿಸಿತು!

"ಅಪ್ಪಾ, ಅಡಿಕೋಲು ತರಬೇಕು ಅಂದಿದಾರೆ ಮಾಸ್ತ್ರು."

ತನ್ನ ಕೊಂಡಾಟದ ಮಗ ರಾಮು ಹೇಳಿದ ಈ ಮಾತು ಕೇಳಿ, ಸದಾಶಿವ—"ಸರಿ. ನೀನು ಕೇಳಿದರೇನೇ ಅದು ಸಿಕ್ಕಿ ತೀರಬೇಕು. ಇನ್ನು ಮಾಸ್ತ್ರೇ ಹೇಳಿದ್ದಾರಂದ ಮೇಲೆ ಮಾತೇ ಇಲ್ಲ. ನೀನು ಕೇಳ್ತೀ ಅಂತ ನನಗೆ ಗೊತ್ತು. ಇಕೋ ಹೊಸಾ ಅಡಿಕೋಲು. ಜಾಗ್ರತೆಯಾಗಿ ಇಟ್ಟುಕೋ. ಮತ್ತುಗಿತ್ತು ಅಲ್ಲಿ ಇಲ್ಲೀ ಹಾಕಿ ಬಿಡಬೇಡಾ!" ಎನ್ನುತ್ತಾ ಮೇಜೀ ಡ್ರಾವರಿನಿಂದ ಒಂದು ಅಡಿಕೋಲನ್ನು ತೆಗೆದು ರಾಮುಗಿತ್ತನು.

ರಾಮು ಮುಖವರಳಿಸಿಕೊಂಡು—"ಜಾಗ್ರತೆಯಾಗಿಟ್ಟುಕೊಳ್ತೀನಪ್ಪಾ" ಎನ್ನುತ್ತಾ ಅದನ್ನು ತೆಗೆದುಕೊಂಡ.

"ಗೊತ್ತಿದೆ ಬಿಡು. ನೀನು ಜಾಗ್ರತೆಯಾಗಿಟ್ಟುಕೊಳ್ಳೋದೆಷ್ಟು. ಹೋದ ವರ್ಷ ಮೂರನೇ ಕ್ಲಾಸು ಮುಗಿಯೋದ್ರೊಳಗೇ ಮೂರು ಸ್ಲೇಟಾಯಿತು. ಮೂರು ಚೀಲವಾಯಿತು. ನಾಲ್ಕೈದು ರಬ್ಬರಾಯಿತು" ಎಂದು ಸದಾಶಿವ ಪ್ರಾರಂಭಿಸಿದಾಗ ರಾಮುವಿನ ಮರ್ಯಾದೆಗೆ ಧಕ್ಕೆ ಬಿತ್ತು. "ನೋಡಮ್ಮ, ಅಪ್ಪ ಬಯ್ತಾರೇ" ಅಂತ ರಾಗ ತೆಗೆದ.

"ಸುಮ್ಮನಿರೀಂದ್ರೆ. ಬೇರೆ ಮಕ್ಕಳು ಇವನಿಗಿಂತ ಹೆಚ್ಚು ಹಾಳು ಮಾಡ್ತಾರೆ ಗೊತ್ತೊ?" ಗಂಡನಿಗೆರಡು ಗದರಿಸಿದಳು ಕಲ್ಯಾಣಿ.

"ಮೊದಲು ಪೆಟ್ಟು ಬಿದ್ರೆ ಮಾತ್ರ ಅಳ್ತಾ ಇದ್ದ. ಈಗ ಮಾತು ಕೇಳಿದ ಕೂಡ್ಲೇ ಕಣ್ಣೀರಿಳಿಸುತ್ತಾನೆ. ಮನುಷ್ಯರಿಗೆ ಮಾತಿನ ಪೆಟ್ಟು ಎಂಬ ಹಾಗೆ 'ಈಗ ನಮ್ಮ ರಾಮು ಮನ ಶ್ಯನಾಗ್ತಾ ಬರ್ತಾನೇಂತಾ ಕಾಣುತ್ತೆ" ಎಂದ ಸದಾಶಿವ.

"ಏನು ಮಾತೊ! ನಮ್ಮ ಮಗ ನನ್ನು ಮೃಗಾಂತ ತಿಳಿದಿದ್ದೀರೇನೋ!" ಎಂದು ಪತಿಯನ್ನು ನೋಡಿ ಮತ್ತೆ ಕಣ್ಣು ಕೆಂಪು ಮಾಡಿದಳು ಕಲ್ಯಾಣಿ.

"ಸರಿ. ಗೊತ್ತಾಗುತ್ತಲ್ಲಾ. ಏನೋ ರಾಮು, ಈ ಅಡಿಕೋಲು ಬಿಸಾಡಿದರೆ. ಅಡಿಕೋಲೇ ಎದ್ದೀತು ನಿನ್ನ ಚರ್ಮದಲ್ಲಿ!" ಎಂದ ಸದಾಶಿವ ತನ್ನ ಯಜಮಾನಿಕೆಯ ದರ್ಪದಿಂದ.

ಪಾಸಾಗಿ ನಾಲ್ಕನೇ ಕ್ಲಾಸಿಗೆ ಏರಿ ಹೊಸ ಹೊಸ ಪುಸ್ತಕಗಳ ಹೊರೆಯನ್ನು ಹೊರುವುದೇ ರಾಮುವಿಗೊಂದು ಸಂಭ್ರಮವಾಗಿತ್ತು. ಅಡಿಕೋಲನ್ನು ಕೈಯಲ್ಲಿ ಹಿಡಿದುಕೊಂಡು ಆಡಿಸುತ್ತಾ ಉತ್ಸಾಹದಿಂದ ಶಾಲೆಗೆ ಹೋಗಿ ಬರುತ್ತಾ ಇದ್ದ.

ಹತ್ತು ದಿನ ಕಳೆಯಿತು. ಪ್ರತಿದಿನವೂ ಸದಾಶಿವ ಕೇಳುತ್ತಿದ್ದ "ಅಡಿಕೋಲುಂಟೇನೋ" ಎಂದು. "ಇಗೋ ನೋಡಪ್ಪ" ಎಂದು ತೋರಿಸುತ್ತಿದ್ದ ರಾಮು.

ಮತ್ತೊಂದು ನಾಲ್ಕು ದಿನದ ಮೇಲೆ, ಸಂಜೆ ರಾಮು ಶಾಲೆಯಿಂದ ಮನೆಗೆ ಬಂದವನೇ ಪುಸ್ತಕ ಸಂಚಿಯನ್ನು ಕುರ್ಚೀ ಮೇಲೆ ಹಾಕಿ ಓಡಿದ. "ಎಲ್ಲಿಗೆ ಓಡುತ್ತಿಯೊ?" ಎಂದು ತಾಯಿ ಕೇಳಿದಳು. "ಅಡಿಕೋಲು ಶಾಲೇಲೇ ಮರ್ತುಬಂದೆ ಅಮ್ಮಾ" ಎಂದು ಕೂಗಿ ಹೇಳುತ್ತಾ ಓಡಿಯೇ ಹೋದ ರಾಮು.

ಇದನ್ನು ನೋಡಿ ಸದಾಶಿವ ಗೊಣಗಿದ. "ಸರಿ. ಅಡಿಕೋಲಿನ ಕತೆ ಮುಗಿದ ಹಾಗೇ. ತಿಂಗಳಿಗೆರಡೋ ಮೂರೋ ಅಡಿಕೋ....' ಎನ್ನುವಾಗ ಗೃಹಿಣಿ ಎರಡು ಬೈದಳು. "ಸುಂಸುಮ್ಮನೇ ಕೆಟ್ಟ ಸಂಶಯಾನೇ ನಿಮಗೆ ಯಾವಾಗಲೂ?" ಇದನ್ನು ಕೇಳಿ ಸದಾಶಿವ ಬಾಯಿ ಮುಚ್ಚಿಬಿಟ್ಟ.

ರಾಮು ಬರಿಗೈಯಲ್ಲಾಡಿಸುತ್ತಾ ಬಂದು—"ಶಾಲೇ ಬಾಗಲು ಮುಚ್ಚಿಯಾಯ್ತಮ್ಮ. ಯಾರೂ ಇಲ್ಲ" ಅಂದ.

"ಅಡಿಕೋಲು ನೀನು ಎಲ್ಲಿಟ್ಟಿದ್ದಿ?" ತಾಯಿ ಕೇಳಿದಳು.

"ಬೆಂಚೀ ಮೇಲೇ" ಅಂದ ರಾಮು.

"ಸರಿ. ನಾಳೆ ಹೋದಕೂಡಲೇ ಮಾಸ್ತ್ರ ಹತ್ತಿರ ಹೇಳು. ಅವರು ತೆಗೆದಿಟ್ಟಿದ್ದಾರು" ಎಂದಳು ತಾಯಿ.

ತಲೆಯೊಲಿದು ಒಪ್ಪಿಗೆ ಸೂಚಿಸುತ್ತ, ತಂದೆಯ ಮುಖವನ್ನೊಮ್ಮೆ ಹಾರುಗಣ್ಣಿನಿಂದ ನೋಡಿದ ರಾಮು. ತಂದೆಯ ಬಾಯಿಯಿಂದ ಬೈಗಳೋ, ಕೈಯಿಂದ ಪೆಟ್ಟೋ ಬರುತ್ತದೆಂದು ಅವನು ನಿರೀಕ್ಷಿಸಿರಬೇಕು. ಆದರೆ ಸದಾಶಿವ ಮಾತೇ ಆಡಲಿಲ್ಲ. ಅಡಿಕೋಲಿನ ಇತ್ಯರ್ಥದ ಜವಾಬುದಾರಿಯನ್ನು ಕಲ್ಯಾಣಿಯೇ ಹೊತ್ತಹಾಗಿರುವುದನ್ನು ನೋಡಿಯೋ ಏನೋ, ಆತ ಸುಮ್ಮನೆಯೇ ಇದ್ದ. ರಾಮು ಪಾರಾದೆವನ ಹಾಗೆ ಹಾರುತ್ತಾ ಎಂದಿನಂತೆ ಆಟಕ್ಕೆ ಓಡಿದ.

○ ○

ಮರುದಿನ ಮಧ್ಯಾಹ್ನದ ಹೊತ್ತಿಗೆ ಅವನು ಶಾಲೆಯಿಂದ ಮನೆಗೆ ಬರುತ್ತಲೇ ಅವನ ಅಕ್ಕ ಗಿರಿಜಾ ಅಂದಳು: "ಬರಿಕೈಲೇ ಬರುತ್ತಾ ಇದ್ದಾನೆ. ಅಡಿಕೋಲೇ ಇಲ್ಲ."

"ಮಾಸ್ತರ ಹತ್ತಿರ ಕೇಳ್ಲಿಲ್ಲವೇನೊ?" ತಾಯಿ ಕೇಳಿದಳು.

ಸಣ್ಣ ದನಿಯಿಂದ ಒಂದೊಂದೇ ಅಕ್ಷರವಾಗಿ "ಇಲ್ಲಮ್ಮ, ಮಾಸ್ತ್ರು ಪೆಟ್ಟು ಕೊಡ್ತಾರೇ!" ಅಂದ ರಾಮು.

"ಪೆಟ್ಟ್ಯಾಕೋ ಕೊಡ್ತಾರೆ? ಅಡಿಕೋಲು ತೆಗೆದಿಟ್ಟಿದ್ರೆ ಕೊಡುತ್ತಾರೆ. ಇಲ್ಲದಿದ್ದರೆ ಇಲ್ಲಾ ಅನ್ನುತ್ತಾರೆ ಧೈರ್ಯವಿರಬೇಕು. ಮಧ್ಯಾಹ್ನ ಖಂಡಿತ ಕೇಳಿ ಕಾ!" ಎಂದು ಒತ್ತಿಯೊತ್ತಿ ಅವನಿಗೆ ಹೇಳಿದಳು ತಾಯಿ. ಒಪ್ಪಿಕೊಂಡವನ ಹಾಗೆ ರಾಮು ತಲೆಯಾಡಿಸಿದ.

ಆದರೆ ಸಂಜೆಗೆ ಅವನು ಶಾಲೆಯಿಂದ ಹಿಂದಿರುಗಿ ಬಂದಾಗ ಅಡಿಕೋಲಿನ ವಿಷಯ ಶಾಲೆಯಲ್ಲಿ ಎತ್ತಲೇ ಇಲ್ಲವೆಂದು ಗೊತ್ತಾಯಿತು.

"ಹೂಂ. ಇವನು ಹೋದ ಹಾಗೇ, ಅಡಿಕೋಲು ಬಂದ ಹಾಗೇ. ಅದನ್ನು ಯಾರು ಕದ್ದರೋ ಏನೋ! ಇನ್ನದು ಎಲ್ಲಿ ಸಿಕ್ಕೀತು!" ಎಂದ ಸದಾಶಿವ.

"ಇವನಿಗೇನೋ ಮಾಸ್ತ್ರು ಹತ್ತಿರ ಕೇಳಲಿಕ್ಕೆ ಭಯ. ನೀವೇ ಶಾಲೆಗೆ ಹೋಗಿ ವಿಚಾರಿಸಬಾರದೆ? ಸುಮ್ನೇ ಹುಡುಗನ್ನ ಬೈಯಲಿಕ್ಕೊಂದೇ ನಿಮಗೆ ಗೊತ್ತು." ಅಂದಳು ಕಲ್ಯಾಣಿ.

ಏನು! ತಾನೇ ಹೋಗಬೇಕೆ? ಅಲ್ಪ ಅಡಿಕೋಲಿನ ತನಿಖೆಗಾಗಿ? ಯಾವ ಕಳ್ಳ ಹುಡುಗನೋ ಅದನ್ನು ಹೊಡೆದಿರಬೇಕು. ತಾನು ಹೋಗಿ ತನಿಖೆ ಮಾಡಿಯೂ ಅದು ಸಿಕ್ಕದಿದ್ದರೆ ಇನ್ನಷ್ಟು ಹೇಸಿಗೆ ಎಂದುಕೊಂಡನು ಸದಾಶಿವ. ಇಷ್ಟಕ್ಕೂ ಆ ಅಡಿಕೋಲನ್ನು ಅವನು ದುಡ್ಡು ಕೊಟ್ಟೇ ತೆಗೆದುಕೊಂಡದ್ದಲ್ಲ ಬೀದಿಯಲ್ಲಿ ಅವನಿಗೆ ಸಿಕ್ಕಿದ್ದು. ಸುಮ್ಮನೆ ಸಿಕ್ಕಿದ್ದಾದರೂ ಇಷ್ಟಕ್ಕೇ ಬಿಟ್ಟುಬಿಡಲೂ ಅವನ ಮನಸ್ಸು ಒಪ್ಪಲಿಲ್ಲ. ಅಂತೆಯೇ ಮರುದಿನ ಬೆಳಗ್ಗೆ ರಾಮು ಶಾಲೆಗೆ ಹೋಗುವಾಗ ಸದಾಶಿವ ಹೀಗೊಂದು ಚೀಟಿ ಬರೆದ: "......ಮಾಸ್ತರರಿಗೆ. ನಮ್ಮ ಹುಡುಗ ರಾಮು ಮೊನ್ನೆ ಶಾಲೆಯಲ್ಲಿ ತನ್ನ ಅಡಿಕೋಲನ್ನು ಮರೆತು ಬಂದನಂತೆ. ಅದನ್ನು ನೀವಾರಾದರೂ ತೆಗೆದಿಟ್ಟಿದ್ದರೆ ದಯಮಾಡಿ ಕೊಟ್ಟುಕಳಿಸಿರಿ."

ಈ ಚೀಟನ್ನು ರಾಮುಗೆ ಕೊಟ್ಟು "ಲೋ, ನಿನಗೆ ಮಾಸ್ತರ್ರ ಹತ್ರ ಮಾತಾಡಲಿಕ್ಕೆ ಹೆದರಿಕೆಯಾಗುತ್ತದಾದರೆ, ಈ ಚೀಟನ್ನ ಮಾಸ್ತರ್ರ ಹತ್ರ ಕೊಡು" ಎಂದ ಸದಾಶಿವ. ರಾಮು ಅದನ್ನು ಓದಿ ಕಿಸೆಗೆ ಹಾಕಿಕೊಂಡ.

"ನೀವೇ ಹೋದರೆ ಉಂಟೋ ಇಲ್ಲವೋ ತಿಳಿದುಹೋಗುತ್ತೆ. ನಿಮಗೇ ಭಯವಿದ್ದ ಮೇಲೆ ನಿಮಗಿಂತ ಹೆಚ್ಚು ಭಯ ನಿಮ್ಮ ಮಗನಿಗಿರಲಿಕ್ಕಿಲ್ಲವೆ?" ಎಂದು ಕೊಂಕಿದಳು ಕಲ್ಯಾಣಿ.

"ನೀನು ಹೋಗು ಅಷ್ಟು ಧೈರ್ಯವಿರುವವಳು!" ಎಂದು ಹೆಂಡತಿಯನ್ನು ನೋಡಿ ಗುಡುಗಿದ ಸದಾಶಿವ.

ಮಧ್ಯಾಹ್ನ ಹನ್ನೆರಡುವರೆ ಗಂಟೆಯ ಹೊತ್ತು. ರಾಮು ಮನೆಗೆ ಬಂದ. ಅವನನ್ನು ಕಾಣುತ್ತಲೇ ಗಿರಿಜ—"ಏನಂದ್ರು ಮಾಸ್ತ್ರು?" ಎಂದು ಕೇಳಿದಳು.

"ಚೀಟಿ ಕೊಟ್ಟೆಯೋ ಇಲ್ಲವೋ?" ತಾಯಿ ಕೇಳಿದಳು.

"ಊ—ಹುಂ" ಕೊಟ್ಟಿಲ್ಲವೆಂದು ತಲೆಯಾಡಿಸಿದ ರಾಮು.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ	4¼%
5 ,, 12 ,,	4½%
13 ,, 24 ,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಲೇವಣಾತಿಗೆ ½%

... ಬಡ್ಡಿ ದರದಲ್ಲಿ ಚಿನ್ನಾಭರಣ ... ಇತರ ರೀತಿಯಲ್ಲಿ

... INDIA

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಅಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
...ಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
... ರೂ. ಒಂದೂವರೆ, ಉತ್ತಮ ಪ್ರತಿ: ರೂ. ಎರಡು.
...ಗಳಲ್ಲಿ ಸಿಗುತ್ತದೆ ...

ಆದರ್ಶ ಚರಿತೆ

ಅವತಾರಿ ಪುರುಷ ಭಗವಾನ್ ಶ್ರೀಕೃಷ್ಣ

ತಾನು ಸರ್ವಮಾನ್ಯನಾದರೂ ಅಹಂಭಾವವು ಆತನಿಗೆ ಲವಲೇಶವೂ ಇರಲಿಲ್ಲ; ಕಲಿಯುಗದ ಧರ್ಮವನ್ನೂ ಆತ ಅಂದೇ ಬೋಧಿಸಿರುವನು.

ಐದು ಸಾವಿರ ವರ್ಷಗಳಿಗೆ ಮೊದಲು ನಮ್ಮ ದೇಶದಲ್ಲಿ ಒಬ್ಬ ಅಲೌಕಿಕ ಮತ್ತು ಅತಿ ಚಮತ್ಕಾರದ ಪುರುಷನು ಜನಿಸಿದನು. ಆ ಕಾಲದ ಮಹಾ ಪುರುಷರೂ ಆತನನ್ನು ಯುಗ ಪುರುಷನೆಂದು ಮನ್ನಿಸಿದರು. ವೇದ ವ್ಯಾಸರಂತಹ ಮಹಾ ಮುನಿಗಳೂ ಭೀಷ್ಮರಂತಹ ಮಹಾ ವ್ಯಕ್ತಿಗಳೂ ವಿದುರನಂತಹ ಸಾಧುನರೋತ್ತಮರೂ ದ್ರೋಣಾಚಾರ್ಯ ಹಾಗೂ ಕೃಪಾಚಾರ್ಯರಂತಹ ವಿದ್ವಾಂಸರೂ ಕೃಷ್ಣನನ್ನು ತಮ್ಮ ಕಾಲದ ಸರ್ವ ಶ್ರೇಷ್ಠ ಪುರುಷನೆಂದು ಹೇಳಿದರು; ರಾಜಸೂಯ ಯಾಗದ ಸಮಯದಲ್ಲಿಯೂ ಆತನಿಗೇನೇ ಅರ್ಘ್ಯ ಪ್ರದಾನ ಮಾಡಲಾಯಿತು. ಆತನ ಯುಗವಾಣಿಯು ಇಂದೂ ೭೦೦ ಶ್ಲೋಕಗಳ ಗೀತೆಯಲ್ಲಿ ಅಡಗಿದ್ದು ಇಡೀ ದೇಶದ ಮೂಲೆ ಮೂಲೆಯಲ್ಲೂ ಪ್ರತಿಧ್ವನಿತವಾಗುತ್ತಿದೆ. ಇದೇ ಅಮರ ವಾಣಿಯು ಭಾರತದ ಕ್ರಾಂತಿಕಾರಿ ಯುವಕರಿಗೆ ನಗು ನಗುತ್ತ ಶೂಲಕ್ಕೇರಲು ಪ್ರೇರಣೆಯಿತ್ತಿತು. ದೇಶಕ್ಕೋಸ್ಕರ ಪ್ರಾಣ ಬಲಿದಾನನೀಡುವ ಪ್ರೇರಕ ಶಕ್ತಿಯುಕ್ತ ಅಮರವಾಣಿಯ ಗಾಯಕ ಶ್ರೀಕೃಷ್ಣನೇ ಇಂದಿನ ಕೋಟ್ಯಂತರ ಭಾರತೀಯ ಹೃದಯಗಳಿಗೆ ಆರಾಧ್ಯದೇವನಾಗಿದ್ದಾನೆ; ನಿರಾಶಾಂಧಕಾರದಲ್ಲಿ ಆಶಾಜ್ಯೋತಿಯಾಗಿ ಬೆಳಗುತಿದ್ದಾನೆ.

ಶ್ರೀಕೃಷ್ಣನ ಕರ್ತೃತ್ವ ಶಕ್ತಿ ಹಿರಿದು. ಮಗಧ ಸಾಮ್ರಾಟನಾದ ಜರಾಸಂಧ ಮತ್ತವನ ಮಿತ್ರ ಕಾಲನೇಮಿಯರು ಮಧುರೆಯನ್ನಾಕ್ರಮಿಸಿದಾಗ, ಕೃಷ್ಣನ ಕಾರ್ಯಕೌಶಲದಿಂದಲೇ ಅರಬಿ ಸಮುದ್ರದ ನಡುವೆ ದ್ವಾರಕಾ ನಗರಿಯ ನಿರ್ಮಾಣವಾಯಿತು ಧನಕನಕಾದಿಗಳಿಂದ ಸಂಪದ್ಭರಿತವಾಯಿತು. ದ್ವಾರಕೆಯ ಸಂಪತ್ತಿನ ಮೇಲೆ ಎಲ್ಲರೂ ಈರ್ಷ್ಯಾಪೂರ್ಣ ದೃಷ್ಟಿ ಹರಿಸಿದ್ದರು. ಭಾರತದ ಸಪ್ತ ಸಾಂಸ್ಕೃತಿಕ ನಗರಗಳಲ್ಲಿ ದ್ವಾರಕೆಯೂ ಒಂದಾಗಿರುವುದು.

ಶ್ರೀ ಕೃಷ್ಣನು ಎಂದೂ ರಾಜ್ಯಾಭಿಷೇಕ ಮಾಡಿಕೊಂಡಿರಲಿಲ್ಲ. ಆತನಿಗೆ ಸ್ವತಃ ಪಾಲಿಸಲು ರಾಜ್ಯವೂ ಇರಲಿಲ್ಲ. ಅನೇಕಾನೇಕ ದುಷ್ಟ ರಾಜರನ್ನಾತ ಕೊಂದಿದ್ದರೂ ಅವರ ರಾಜ್ಯವನ್ನು ತಾನು ಆಳಲಿಲ್ಲ. ಕಂಸನನ್ನು ಕೊಂದ; ಉಗ್ರಸೇನನಿಗೆ ಪಟ್ಟ ಕಟ್ಟಿದ; ಜರಾಸಂಧನನ್ನು ಕೊಂದ; ಅವನ ಮಗ ಕ್ಷೇಮಧೂರ್ತಿಗೆ ಅಭಿಷೇಕವಾಯಿತು. ಕೌರವರನ್ನೂ ಕೊಲ್ಲಿಸಿದ, ಪಾಂಡುನಂದನರ ಪಾಲಿಗೆ ರಾಜ್ಯ ಲಭಿಸಿತು. ಇದೇಕೆ ಹೀಗೆ? ಯಯಾತಿಯು ಶನ್ನೊರ್ವ ಮಗ ಯದುವಿನ ಮೇಲೆ ಸಿಟ್ಟುಗೊಂಡು ಅವನಿಗೆ ಸಿಂಹಾಸನಾಧಿಕಾರ ನೀಯಲಿಲ್ಲವಂತೆ! ಹಾಗಿರುವಾಗ ಯಾದವನಾದ ಕೃಷ್ಣ ಅಧಿಕಾರದ ಗದ್ದುಗೆಯೇರುವುದು ಸಾಧ್ಯವಿಲ್ಲವಂತೆ! ತನ್ನ ಹಿರಿಯರ ಬಗ್ಗೆ ತಾನು ಅವತಾರ ಪುರುಷನೆನಿಸಿದರೂ ಎಂತಹ ಭಕ್ತಿಯಿದೆ! ಪಿತೃಭಕ್ತಿಯನ್ನು ರಾಮನಿಂದ ಮಾತ್ರವಲ್ಲ, ಕೃಷ್ಣನಿಂದಲೂ ನಾವು ಕಲಿಯಬೇಡವೆ?

ಆ ವರ್ಷದ ಮಗಧ ಸಾಮ್ರಾಟ ಜರಾಸಂಧನ ವಧೆಯಾಯಿತು ಆತನ ಸೆರೆಯಲ್ಲಿದ್ದ ೧೦೦ ಜನ ರಾಜರು ಈ ಘಟನೆಯನ್ನು ಮೊದಲು ನಂಬದೆ ಹೋದರೂ ಭಗವಾನ್ ಕೃಷ್ಣನೇ ತಮ್ಮ ಕಣ್ಮುಂದೆ ನಿಂತಾಗ ಅವರು ಕೈಮುಗಿದು, "ಪ್ರಭೋ! ಏನಪ್ಪಣೆ?" ಎನ್ನದೆ ಮತ್ತೇನನ್ನಬೇಕು? ಆಗ ಕೃಷ್ಣ ಮುಗುಳ್ನಗುತ್ತ, "ಧರ್ಮರಾಯ ರಾಜಸೂಯ ಯಾಗವನ್ನು ಮಾಡುತ್ತಾನೆ; ಅವನಿಗೆ ಸಹಾಯ ಮಾಡಿರಿ" ಎಂದುಬಿಟ್ಟ. "ನೀವೆಲ್ಲಾ ನನ್ನ ಅಧೀನತ್ವದಲ್ಲಿರಬೇಕು" ಎಂದೆನ್ನಲಿಲ್ಲ. ರಾಜರೆಲ್ಲರೂ ಮನಸ್ಸಂತೋಷದಿಂದ ಆಜ್ಞೆಯನ್ನು ಮನ್ನಿಸಿದರು.

ಅಭಿಮಾನ ದಂಭಗಳು ಶ್ರೀಕೃಷ್ಣನನ್ನು ಸೋಕುತ್ತಿರಲಿಲ್ಲ. ವಿನಮ್ರತೆಯ ಸಾಕ್ಷಾತ್ ಮೂರ್ತಿ ಆತ. ರಾಜಸೂಯ ಯಾಗದ ವೇಳೆ, ಆತನು ಸ್ವತಃ ಬ್ರಾಹ್ಮಣರ ಪಾದ ತೊಳೆಯಲು ಮುಂದಾಗಿದ್ದ. ಈತನ ಸಹಾಯದಿಂದಲೇ ಪಾಂಡವರು ಇಂದ್ರಪ್ರಸ್ಥ ರಾಜ್ಯವನ್ನು ಗಳಿಸಿಕೊಂಡರು. ದ್ರೌಪದೀ ಸ್ವಯಂವರದ ವೇಳೆಯಲ್ಲಿ ಮೊತ್ತ ಮೊದಲಿಗೇನೇ ತನ್ನ ತಂಗಿಯ ಮಕ್ಕಳು ಪಾಂಡವರನ್ನು ಗುರುತಿಸಿ, ಅವರಿಗೆ ರಾಜ ಸತ್ಕಾರವನ್ನು ಮಾಡಿದ ಮರ್ಯಾದಾವಂತನಾತ. ಪಾಂಡವರ ಇತರ ಬಂಧು-ಬಾಂಧವರಾರೂ ಅವರ ನೆರವಿಗೆ ಬರಲಿಲ್ಲ. ಅನ್ಯಾಯಕ್ಕೆ ವಿರೋಧವಾಗಿ ಹೋರಾಡುತ್ತ ನ್ಯಾಯ ಸ್ಥಾಪನೆಯಲ್ಲೇ ಆಯುಷ್ಯ ವ್ಯಯಿಸಿದ ಮಹಾ ಪುರುಷ ಶ್ರೀ ಕೃಷ್ಣ.

ಶ್ರೀ ಕೃಷ್ಣನ ಮೈತ್ರಿ ವಿಶ್ವವಿಖ್ಯಾತವಾದುದು ತನ್ನ ಸಹಪಾಠಿ ನಿರ್ಧನನಾದ ಸುದಾಮನ ಬಗ್ಗೆ ವೈಭವಪೂರ್ಣನಾಗಿ ಬದುಕುತಿದ್ದ ಶ್ರೀ ಕೃಷ್ಣ ತೋರಿಸಿದ ಆದರ, ಮಾಡಿದ ಉಪಕಾರಗಳೇ ಇದಕ್ಕೆ ಸಾಕ್ಷಿ. ಇದಕ್ಕೆ ತದ್ವಿರುದ್ಧವಾದ ವರ್ತನೆಯೂ ಅದೇ ಕಾಲದಲ್ಲಿತ್ತು ದ್ರುಪದ ಮಹಾರಾಜನು ಬಡವನಾದ ದ್ರೋಣಾಚಾರ್ಯನನ್ನು ಅಪಮಾನಪಡಿಸಿ ಬ್ರಹ್ಮಶಾಪಕ್ಕೆ ಗುರಿಯಾದುದೂ ಆಗಲೇ ಅಲ್ಲವೆ? ಎಂತಹ ಅಜಗಜಾಂತರ! ಸ್ನೇಹವನ್ನು ಮರೆಯದೆ ಮಾಡಿದ ಮನ್ನಣೆಯೆಲ್ಲಿ? ತಿಳಿದೂ ತಿಳಿಯದವನಂತೆ ಕಪಟ ವರ್ತನೆಯಿಂದ ಅತಿಥಿಗೆ ಗೈದ ಅಪಮಾನವೆಲ್ಲಿ! ಇದಕ್ಕೇ ತುಂಬಿದ ಕೊಡ ತುಳುಕುವುದಿಲ್ಲ ಎನ್ನುವುದು! ಶ್ರೀಕೃಷ್ಣನಲ್ಲಿ ಐಶ್ವರ್ಯ ತುಂಬಿದ್ದರೂ ಐಶ್ವರ್ಯಮದ ನಿಕಟ ಬರುತ್ತಿರಲಿಲ್ಲ; ನಮ್ರತೆ ಮತ್ತು ನಿರಭಿಮಾನಗಳ ನೆಲೆಮನೆಯಾತನಾಗಿದ್ದ. ಆತನ ಜೀವನ ಕಮಲ ಪತ್ರದಂತೆ ವಿಶುದ್ಧ ಸಾತ್ವಿಕ ಚರಿತ್ರೆಯಿಂದ ಕೂಡಿದೆ.

ಶ್ರೀ ಕೃಷ್ಣನು ಬಹುಪತ್ನೀಕನೆನ್ನುತ್ತಾರೆ. ಆದರೆ, ಸಾಮಾನ್ಯವಾಗಿ ಎಂಟು ಪತ್ನಿಯರಿದ್ದರೆನ್ನುತ್ತಾರೆ. ಈ ಸಂಖ್ಯೆ ೧೬,೦೦೮ರ ವರೆಗೂ ಏರುತ್ತದೆ ಆದರೆ, ಎಲ್ಲರಲ್ಲಿಯೂ ಶ್ರೀ ಕೃಷ್ಣ ಸಮಾನ ಭಾವದಿಂದ ವರ್ತಿಸುತಿದ್ದನು. ಆತನ ಆಚರಣೆ ಕಂಡು ನಾರದರೇ ಮೂಗಿಗೆ ಬೆರಳೇರಿಸಿದರಂತೆ! ಅವರು ವಿಸ್ಮಯಚಕಿತರಾಗಿ, ಈ ಸಂಗತಿಯನ್ನು ಪರೀಕ್ಷಿಸಿದರೂ, ಆಗಲೇ ಅವರಿಗೆ ಈ ಸತ್ಯ ಸಂಗತಿಯ ಬಗ್ಗೆ ವಿಶ್ವಾಸ ಹುಟ್ಟಿದುದು! "ಶ್ರೀ ಕೃಷ್ಣ ಅಲೌಕಿಕ ಪುರುಷ! ಸಮಬುದ್ಧಿಯಿಂದ ಎಲ್ಲರೊಡನೆ ವ್ಯವಹರಿಸುವ ಚಾತುರ್ಯ ಇವನಿಗಿದೆ" ಎಂದು ಉದ್ಗರಿಸಿ ಸರ್ಟಿಫಿಕೇಟೂ ಕೊಟ್ಟುಬಿಟ್ಟರಂತೆ!

ಮಹಾಭಾರತ ಸಮರದ ಸಿದ್ಧತೆ ನಡೆಯುತಿತ್ತು. ಶ್ರೀ ಕೃಷ್ಣನಿಗೆ ಕೌರವರು—ಪಾಂಡವರು ಇತ್ತಂಡದವರೂ ಸರಿಯೇ ಎಂತಲೇ ಕೌರವನೂ ಅರ್ಜುನನೂ ಆತನ ಸಹಾಯ ನಿರೀಕ್ಷಿಸಿ ದ್ವಾರಕೆಗೆ ತೆರಳಿದರು. ಅಲ್ಲಿ ಕೃಷ್ಣನು ಮಾಡಿದ ಪಾಲು ನೋಡಿ, ಒಂದೆಡೆ ಒಂದು ಅಕ್ಷೋಹಿಣೀ ಸೇನೆ; ಇನ್ನೊಂದು ಕಡೆ ನಿರಾಯುಧನಾದ ತಾನು! ಇಂತಹ ಸಮಾನತೆಯ ಭಾವ ಶ್ರೀಕೃಷ್ಣ!

ಸಂಧಿಯ ವಿಚಾರವನ್ನೆತ್ತಿಕೊಂಡು ದುರ್ಯೋಧನನನ್ನು ಕಾಣಲು ಬಂದ ಶ್ರೀ ಕೃಷ್ಣ ಯಾರಲ್ಲಿ ಉಳಕೊಂಡ ಗೊತ್ತೆ? ಸಾಧುಸಂತ ಭಕ್ತವರ ದರಿದ್ರ ವಿದುರನ ಗುಡಿಸಲಿನಲ್ಲಿ! ಮಹಾರಾಜ ದುರ್ಯೋಧನ, ಪಿತಾಮಹ ಭೀಷ್ಮ, ಗುರು ದ್ರೋಣ, ಕರ್ಣರು ತಂತಮ್ಮ ಮನೆಗೆ ಹರಿ ಬಾರದಿರನೆಂದು ಪರಿಪರಿಯ ರಸ ಭೋಜನಗಳನ್ನು ತಯಾರಿಸಿದರೂ ನಿಷ್ಕಲ್ಮಶ ಭಕ್ತನ ಅಂಬಲಿಯಲ್ಲಿರುವ ರುಚಿ ಇದ್ದೀತೆ? "ಭಕ್ತನಿರುವಲ್ಲಿ ತಾನಿರುವೆನು" ಎಂದು ಘೋಷಿಸಿದ ಶ್ರೀಕೃಷ್ಣ ಇದನ್ನು ಕಾರ್ಯತಃ ಮಾಡಿ ತೋರಿಸಿದ್ದಾನೆ!

ಸ್ವಯಂ ಶ್ರೀಕೃಷ್ಣನಿಗೆ ದುರ್ಯೋಧನ ಸಂಧಿಗೊಡಂಬಡುವವನಲ್ಲವೆಂಬುದು ಗೊತ್ತಿದ್ದರೂ ಆತ ಮುಂದೆ ಯುದ್ಧವೇ ಆಗುವುದೆಂದು ಭೀಷ್ಮಾದಿಗಳಿಗೆ ಭರವಸೆ ಇತ್ತಿದ್ದರೂ ಏಕೆ ಹಸ್ತಿನಾಪುರಕ್ಕೆ ಬಂದ ಎಂಬುದೊಂದು ಪ್ರಶ್ನೆ. ಇದನ್ನೇ ವಿದುರ ಕೇಳಿದಾಗ ಆತ ಉತ್ತರಿಸಿದ್ದನೆ: ಜಗತ್ತು ಮೃತ್ಯುವಿನತ್ತ ಸರಿಯುತ್ತಿದೆ; ಇದು ಗೊತ್ತು. ಮೃತ್ಯು ಮುಖದಿಂದ ಅದನ್ನು ಉಳಿಸುವವನು ಪುಣ್ಯ ಪಡೆಯುತ್ತಾನೆ; ಒಂದು ವೇಳೆ, ಉಳಿಸುವುದು ಎಷ್ಟು ಮಾತ್ರಕ್ಕೂ ಅಸಾಧ್ಯವಾದರೂ, ಉಳಿಸುವ ಪ್ರಯತ್ನವನ್ನಾದರೂ ಮಾಡಿದರೆ, ಅಂತಹವನಿಗೂ ಆ ಪುಣ್ಯ ದೊರೆಯುವುದು! ಆದುದರಿಂದ ಧೃತರಾಷ್ಟ್ರನ ಸುಪುತ್ರ ಸುಯೋಧನನಿಗೆ ನಾಲ್ಕು ನೀತಿಯ ಮಾತನ್ನು ಹೇಳಲೇಬೇಕು.

ಮಹಾಭಾರತದ ಯುದ್ಧ ಕಾಂಡ ಮುಕ್ತಾಯಗೊಂಡು ಪಾಂಡವರು ವಿಜಯಿಗಳಾದರು. ಭೀಮನ ಗದಾದಂಡ, ಅರ್ಜುನನ ಗಾಂಡೀವಗಳು ದ್ರೌಪದಿಯ ಹೇತುವಿಗಾಗಿ ತಮ್ಮ ಶಕ್ತಿ ಪ್ರದರ್ಶಿಸಿದುವು. ಆದರೆ, ನಿಜವಾಗಿ ಯಾರಿಂದಾಗಿ ಮಹಾಭಾರತದಲ್ಲಿ ಅವರು ವಿಜಯಿಗಳಾದರು? ಮಹಾಭಾರತ ಕರ್ತೃವಿನ ಅಭಿಪ್ರಾಯದಲ್ಲಿ ಭಗವಾನ್ ಶ್ರೀಕೃಷ್ಣನಿಂದಲೇ. ಇದನ್ನು ಅಲ್ಲವೆನ್ನುವುದು ಯಾರಿಂದ ಸಾಧ್ಯ? ಈ ಮಾತನ್ನು ಸಂಜಯ ಮೊದಲೇ ಧೃತರಾಷ್ಟ್ರನಿಗೆ ತಿಳಿಸಿದ್ದನೆ — ಶ್ರೀಕೃಷ್ಣ ಮತ್ತು ವಿಜಯರು ಇರುವ ಪಕ್ಷವೇ ವಿಜಯಿ ಆಗುತ್ತದೆ ಎಂದು. ಶ್ರೀ ಕೃಷ್ಣನಿರುವಲ್ಲಿ ವಿಜಯ ಇದ್ದೇ ಇರುತ್ತದೆ. ಎಂತಲೇ ಆತನ ಉಪದೇಶಾಮೃತ ಭಗವದ್ಗೀತೆಯ ಪಠನ ದಿನಂಪ್ರತಿ ನಡೆಯುತ್ತಿದೆ. ಪರಮಾತ್ಮನ ಅವತಾರಗಳೆಂದು ಗಣಿಸಲ್ಪಟ್ಟ ಹತ್ತವತಾರಗಳಿದ್ದರೂ ಶ್ರೀಕೃಷ್ಣನ ಅವತಾರವೇ ಅತ್ಯಂತ ಜನಪ್ರಿಯವಾಗಿದೆ.

ಮಿಸುಪ ಮುಕುಟದಿಂದ, ನೊಸಲ ತಿಲಕದಿಂದ, ಅಲಕದಿಂದ, ಎಸಳುಗಳಿಂದ, ತೊಳಪ ಕದಪಿನಿಂದ, ಪದಪಿನಿಂದ ಪಸರಿಸುವ ನಸು ನಗೆಯ ವದನದಿಂದ, ರದನದಿಂದ ಪೊಳೆವ ಚುಬುಕಾಗ್ರದಿಂದ, ತ್ರಿವಲಿ ಕೌಸ್ತುಭ ಸುಕೇಯೂರದಿಂದ, ಹಾರದಿಂದ, ಬಸೆದುಟ್ಟ ಪೊಂಬಟ್ಟೆಯುಡುಗೆಯಿಂದ, ತುಡುಗೆಯಿಂದ, ಎಸೆವ ನೀಲೋತ್ಪಲ ಶಾಮಲ ಕೋಮಲನನ್ನು ಕಂಡರೆ ಯಾರ ಮನಸ್ಸು ಆಕರ್ಷಿತವಾಗದೆ ಉಳಿದೀತು?

— ಗೋರಾ

ಸಾಮಾನ್ಯರಿಗೂ, ಸಿರಿವಂತರಿಗೂ
— ಸರ್ವರಿಗೂ —
ಬೇಕಾಗುವ ಬೇಂಕು ಸೌಲಭ್ಯಗಳಿಗೆ
ನೆಟ್ಟಗೆ ನಮ್ಮಲ್ಲಿಗೆ ನಡೆಯಿರಿ ಇಲ್ಲವೆ ನಮಗೆ ಬೇಗನೆ ಬರೆಯಿರಿ.
ಎಲ್ಲರಿಗೂ, ಎಲ್ಲ ಕಾಲಕ್ಕೂ, ಎಲ್ಲ ವಿಧದ ಬೇಂಕು ಸೌಲಭ್ಯಗಳಿಗೂ
ನಮ್ಮ ಬೇಂಕು ಯೋಗ್ಯವಿದೆ!
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906
ಪ್ರಧಾನ ಕಚೇರಿ : ಉಡುಪಿ (ದ. ಭಾರತ)
(ಸಮಗ್ರ ಮೈಸೂರು ರಾಜ್ಯದಲ್ಲಿ ಸಂಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ನಮ್ಮ ಬೇಂಕಿಗೆ ಅತಿ ದೀರ್ಘ ಕಾಲದ ಬೇಂಕು ಮಾಹಿತಿ ಇದೆ!)

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2 V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ

ಪುನರ್ಜನ್ಮ

ಮಾನವನಿಗೆ ಪುನರ್ಜನ್ಮವಿದೆಯೆ?

ಆಧುನಿಕ ವಿಜ್ಞಾನಿಗಳು ಈ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ಬದಲಿಸಬೇಕಾಗುವಂತಹ ಘಟನೆಯೊಂದು ಬಿಹಾರದ ಮುಡ್ವಾಲವೆಂಬಲ್ಲಿ ನಡೆಯಿತು.

ಜಗತ್ತಿನಲ್ಲಿ ಜನ್ಮವೆತ್ತಿದ ಮಾನವನಿಗೆ ಪುನರ್ಜನ್ಮವಿದೆಯೇ ಎಂಬುದು ಇಂದಿಗೂ ಸಮಸ್ಯಾಪೂರ್ಣವಾದ ವಿಷಯವಾಗಿದೆ. ಅಂತರಿಕ್ಷವನ್ನು ಜಯಿಸಿದ ಈ ವಿಜ್ಞಾನಯುಗದಲ್ಲಿಯೂ ಈ ಸಮಸ್ಯೆಯನ್ನು ಸೂರಗೆಡವಲು ವಿಜ್ಞಾನಿಗಳು ಅಸಮರ್ಥರಾಗಿದ್ದಾರೆ. ಈ ಸಮಸ್ಯೆಯ ಶೋಧನೆಯನ್ನು ಒಂದೊಂದು ಜನಾಂಗದವರು ಒಂದೊಂದು ರಾಷ್ಟ್ರದವರು ಒಂದೊಂದು ವಿಧದಲ್ಲಿ ಪ್ರತಿಪಾದಿಸುತ್ತಿದ್ದಾರೆ. ಆಧ್ಯಾತ್ಮಿಕ ವಾದಿಗಳು ಮಾನವನ ಜನನ ಮರಣಗಳನ್ನು ಕಾಲಚಕ್ರದ ತಿರುವಿಗೆ ಹೋಲಿಸುತ್ತಾ ಮಾನವನ ಜೀವದಲ್ಲಿರುವ ಒಂದು ಅವ್ಯಕ್ತ ಶಕ್ತಿಯು ಶಾಶ್ವತವಾದುದು. ಇದಕ್ಕೆ ಎಂದೂ ಅಳಿಗಾಲವಿಲ್ಲ. ಇಂದು ಈ ಶಕ್ತಿಯು ಒಂದು ದೇಹವನ್ನು ಬಿಟ್ಟು ಅಗಲಿದರೆ ಅದು ಮರುಕ್ಷಣದಲ್ಲೇ ಇನ್ನೊಂದು ದೇಹದ ಮೂಲಕ ಪುನಃ ಈ ಪ್ರಪಂಚಕ್ಕೆ ಕಾಲಿಡುವುದು ಎಂದು ಹೇಳುತ್ತಾರೆ. ವಿಜ್ಞಾನಿಗಳಾದರೋ ತಮ್ಮ ಊಹೆಗೆ ಸಿಲುಕುವಷ್ಟೇ ತಮ್ಮ ದೃಷ್ಟಿಕೋನವನ್ನು ಪಸರಿಸಿ ಒಮ್ಮೆ ಮರಣದ ಮುಷ್ಟಿಯೊಳಗೆ ಸಿಕ್ಕ ಮಾನವನಿಗೆ ಪುನಃ ಜನ್ಮವಿಲ್ಲ ಎಂದು ಹೇಳುತ್ತಾರೆ. ಹಾಗೆಯೇ ಹಿಂದೂ ಶಾಸ್ತ್ರಗಳು ಮಾನವನಿಗೆ ಪುನರ್ಜನ್ಮವಿದೆಯೆಂದು ಪ್ರತಿಪಾದಿಸುತ್ತವೆಯಾದರೂ ಪಾಶ್ಚಾತ್ಯ ಗ್ರಂಥಗಳು ಇದನ್ನು ಅಲ್ಲಗಳೆಯುತ್ತವೆ. ಅಂತೂ ಇದು ನಮ್ಮ ಊಹೆಗೆ ನಿಲುಕದ ವಿಷಯವಾಗಿದ್ದುಕೊಂಡು ಈ ವಿಷಯದ ಮೇಲೆ ನಮ್ಮ ಕಲ್ಪನೆಯ ಕಟ್ಟಡವನ್ನು ಕಟ್ಟುತ್ತಾ ಇದ್ದೇವೆ. ತಮ್ಮ ವಾದವೇ ಸರಿ ಎಂದು ವಾದಿಸಲು ಇದಕ್ಕೆ ಹಲವಾರು ಶಾಸ್ತ್ರ ಗ್ರಂಥಗಳ ಉದಾಹರಣೆಗಳನ್ನು ಕೊಟ್ಟೋ ಅಥವಾ ಕೆಲವು ಪ್ರಾಯೋಗಿಕ ಸಿದ್ಧಾಂತಗಳ ಮೂಲಕವೋ ದೃಢಪಡಿಸುತ್ತಿದ್ದಾರೆ. ಆದರೆ ಇತ್ತೀಚಿಗೆ ನಡೆದ ಒಂದು ಘಟನೆಯನ್ನು ವಿಮರ್ಶಿಸಿದರೆ ಈ ವಾದಗಳೆಲ್ಲಾ ಕುರುಡರು ಮುಟ್ಟಿದ ಆನೆಯಂತೆ ಎಂದು ಹೇಳಬಹುದು. ಬಿಹಾರ್ ಪ್ರಾಂತ್ಯದಿಂದ ವರದಿಯಾಗಿರುವ ಒಂದು ಸಮಾಚಾರ ವಿಜ್ಞಾನಿಗಳ ವಾದವನ್ನು ತಲೆಕೆಳಗೆ ಮಾಡಿಬಿಟ್ಟಿದೆ.

ಒಹಾರದಿಂದ ಸುಮಾರು ೧೨೦ ಮೈಲು ದೂರವಿರುವ ಪಾಂಛೋಲಿ (Pancholi) ಎಂಬ ಗ್ರಾಮವು ಇಂದು ಪತ್ರಿಕಾಪ್ರತಿನಿಧಿಗಳ, ವಿಜ್ಞಾನಿಗಳ, ಆಧ್ಯಾತ್ಮಿಕ ವಾದಿಗಳ ಮತ್ತು ಸಂದರ್ಶಕರ ಗಮನವನ್ನು ವಿಶೇಷವಾಗಿ ಸೆಳೆಯುತ್ತಿದೆ. ಪಾಶ್ಚಾತ್ಯರೂ ಕುತೂಹಲದಿಂದ ಈ ವಿಷಯವನ್ನು ವಿಮರ್ಶಿಸುತ್ತಿದ್ದಾರೆ. ಈ ವಿಜ್ಞಾನ ಯುಗದಲ್ಲೂ ಒಂದೊಂದೇ ಹೊಸ ಸಮಸ್ಯೆಗಳು ತಲೆ ಎತ್ತಿ ಮಾನವನ ಬುದ್ಧಿಶಕ್ತಿಯನ್ನು ಕೆಣಕುತ್ತವೆ. ಹಾಗೆಯೇ ಸಂಶೋಧನೆಯ ಪ್ರವಾಹದತ್ತ ಸೆಳೆಯುತ್ತದೆ.

ಪಾಂಛೋಲಿ ಗ್ರಾಮದಲ್ಲಿ ಯೋಗೇಂದ್ರನಾಥ ಶರ್ಮರೆಂಬ ವೈದಿಕರೊಬ್ಬರು ವಾಸಿಸುತ್ತಿದ್ದಾರೆ. ವೈದಿಕ ವೃತ್ತಿಯನ್ನೇ ಅವಲಂಬಿಸಿಕೊಂಡಿರುವ ಇವರಿಗೆ ಹಲವು ವರುಷಗಳ ತನಕ ಮಕ್ಕಳಾಗಿರಲಿಲ್ಲ. ಕೊನೆಗೆ ಇವರ ಮೊರೆಯು ಪರಮಾತ್ಮನಿಗೆ ಕೇಳಿತೋ ಏನೋ? ಪರಮಾತ್ಮನ ಕೃಪೆಯಿಂದಲೋ ಅಥವಾ ವಿಜ್ಞಾನಿಗಳ ಪ್ರಯತ್ನದ ಫಲವಾಗಿಯೋ ಇವರಿಗೆ ಒಂದು ಗಂಡು ಮಗುವಿನ ಜನನವಾಯಿತು. ಸ್ವತಃ ವಿದ್ವಾಂಸರಾದ ಶರ್ಮರೇ ಈ ಬಾಲಕನಿಗೆ ಸಂಸ್ಕೃತ, ಜ್ಯೋತಿಷ, ವೈದ್ಯ ಮತ್ತು ತಂತ್ರಪ್ರಯೋಗವನ್ನು ಕಲಿಸತೊಡಗಿದರು. ಶರ್ಮರ ಪತ್ನಿಗೆ ಪ್ರಥಮ ವೈದ್ಯಕೀಯ ಚಿಕಿತ್ಸೆಯನ್ನು ಮಾಡಿದ ಡಾ। ವಿಷ್ಣುನಾಥ ಮಹಾದೇವ ರಾನಡೆ ಇವರ ಸವಿನೆನಪಿಗಾಗಿಯೋ ಅಥವಾ ಭಗವಾನ್ ವಿಷ್ಣುವಿನ ಕೃಪೆಯಿಂದ ಈ ಮಗುವಿನ ಜನನವಾದುದಕ್ಕಾಗಿಯೋ ಈ ಬಾಲಕನನ್ನು ವಿಷ್ಣು ಎಂದು ಕರೆಯತೊಡಗಿದರು. ಬಾಲಕ ವಿಷ್ಣುವು ತಂದೆಯನ್ನು ಮೀರಿಸುವ ವೇಗದಿಂದ ವಿದ್ಯೆಯನ್ನು ಕಲಿಯತೊಡಗಿದನು. ಆ ಹಳ್ಳಿಯ ಜನರ ಅನುರಾಗವನ್ನು ಸಂಪಾದಿಸುವಷ್ಟು ಗುಣನಡತೆಗಳು ವಿಷ್ಣುವಿನಲ್ಲಿ ಮನೆಮಾಡಿಕೊಂಡಿದ್ದವು. ವಿಷ್ಣು ಎಲ್ಲರಿಂದಲೂ ಹೊಗಳಿಸಿಕೊಂಡು ಎಲ್ಲರಿಂದಲೂ ಮನ್ನಣೆಯನ್ನು ಗಳಿಸುತ್ತಾ ಇದ್ದ ಹಾಗೆಯೇ ತನ್ನ ೧೮ನೇ ವಯಸ್ಸಿನಲ್ಲಿ ವಿಷಮ ಜ್ವರಕ್ಕೆ ಬಲಿಬಿದ್ದು ಮೃತಪಟ್ಟನು. ಈ ಘಟನೆಯಿಂದ ಅತೀವ ವೇದನೆಗೊಳಗಾದ ಶರ್ಮರು ತನ್ನ ಆಸ್ತಿ ಭೂಮಿ, ಮನೆ ಇವೆಲ್ಲವನ್ನು ಬಿಟ್ಟು ಪಕ್ಕದ ಹಳ್ಳಿಯಲ್ಲಿರುವ ದೇವಸ್ಥಾನದಲ್ಲಿ ವಾಸಿಸ ತೊಡಗಿದರು.

ಈ ಪಾಂಛೋಲಿ ಗ್ರಾಮದಿಂದ ಸುಮಾರು ೩೭ ಮೈಲು ದೂರದಲ್ಲಿ ತಾರಬಾಂವ್ ಎಂಬ ಹಳ್ಳಿಯಿದೆ. ಈ ಹಳ್ಳಿಯಲ್ಲಿ ಹೆಚ್ಚಿನವರು ಚಮ್ಮಾರರು. ಇಲ್ಲಿಯ ಚಪ್ಪಲಿಗಳು ಬಿಹಾರ್ ಪ್ರಾಂತದಲ್ಲೇ ಪ್ರಸಿದ್ಧಿಗೊಂಡಿವೆ. ಈ ಚಮ್ಮಾರರ ಪೈಕಿ ಮುಡ್ವಾಲ್ ಎಂಬ ಒಂದು ಮನೆತನದವರು ಚಪ್ಪಲಿ ತಯಾರಿಕೆಯಲ್ಲಿ ಬಹು ಪ್ರಸಿದ್ಧಿ ಹೊಂದಿದ್ದಾರೆ. ಈ ಮುಡ್ವಾಲ್ ಮನೆತನದವರು ತಯಾರಿಸಿದ ಚಪ್ಪಲಿಗಳು ವಿದೇಶಗಳಲ್ಲೂ ತುಂಬಾ ಪ್ರಸಿದ್ಧಿ ಹೊಂದಿವೆ. ಕಾಶೀನಾಥ್ ಮುಡ್ವಾಲ್ ಇದೇ ಮುಡ್ವಾಲ್ ಮನೆತನಕ್ಕೆ ಸೇರಿದ ಓರ್ವ ಚಮ್ಮಾರ. ಇವನ ಹೆಂಡತಿ ಸೋನೂಬಾಯಿ. ಇವನಿಗೆ ಪರಮಾತ್ಮನಿಂದ ಬೇರೇನೂ ದೊರೆಯದಿದ್ದರೂ ಮನೆ ತುಂಬಾ ಮಕ್ಕಳು ದೇವರ ಆಶೀರ್ವಾದ ಬಲದಿಂದ ದೊರೆತಿವೆ. ತನ್ನ ಮಕ್ಕಳಿಗೆಲ್ಲಾ ತನ್ನ ಕುಲ ಕಸುಬನ್ನೇ ಕಲಿಸಿ ಹೇಗೂ ಕಷ್ಟದಿಂದ ತನ್ನ ಸಂಸಾರ ರಥವನ್ನು ಸಾಗಿಸುತ್ತಿದ್ದನು. ವಿದ್ಯಾಜ್ಞಾನವಿಲ್ಲದ ಈ ಮಕ್ಕಳಾದರೋ ಚರ್ಮದ ರಾಶಿಗಳ ಮಧ್ಯೆ ತಮ್ಮ ತಂದೆಯಂತೆ ಚರ್ಮವನ್ನು ಹೊಲಿಯುತ್ತಾ ಕಾಲ ಕಳೆಯುತ್ತಿದ್ದರು. ಈ ಹರಕು ಗುಡಿಸಲಲ್ಲಿ ಕುಳಿತು ಲಾಂದ್ರದ ಬೆಳಕಿನಲ್ಲಿ ಚಪ್ಪಲಿಯನ್ನು ಹೊಲಿಯುತ್ತಿದ್ದ ಕಾಶೀನಾಥನ ಹೆಸರು ಅಂತಾರಾಷ್ಟ್ರದಲ್ಲೇ ಬೆಳಕಿಗೆ ಬರುವುದೆಂದು ಯಾರು ಬಗೆದಿದ್ದರು? ಇದಕ್ಕೆ ಸೋನೂಬಾಯಿಯ ಉದರದಲ್ಲಿ ಏಳನೇಯವನಾಗಿ ಜನ್ಮವೆತ್ತಿದ ದ್ವಾರಕಾನಾಥನೇ ಕಾರಣ. ಈ ದ್ವಾರಕಾನಾಥನು ಎಳೆಯ ಮಗುವಾಗಿರುವಾಗಲೇ ತನ್ನ ಅಣ್ಣಂದಿರ ಹಾಗೆ ಮಚ್ಚೆಯ ಚೂರುಗಳ ಮಧ್ಯೆ ಹೊರಳಾಡದೆ ತಾನು ತಾಯಿಯೊಂದಿಗೆ ಅಡುಗೆ ಮನೆಯಲ್ಲೋ ಅಥವಾ ದೇವರ ಕೋಣೆಯಲ್ಲೋ ಹೆಚ್ಚಾಗಿ ಕಾಲ ಕಳೆಯುತ್ತಿದ್ದರು. ಈ ದ್ವಾರಕಾನಾಥನಿಗೆ ಮಾತು ಬಂದೊಡನೆಯೇ ತನ್ನ ಮಾತೃಭಾಷೆಯೊಂದಿಗೆ ಸಂಸ್ಕೃತ ಭಾಷೆಯನ್ನು ಆಡ ತೊಡಗಿದನು. ಹಾಗೆಯೇ ವರುಷಗಳು ಸಂದಂತೆ ಈ ಬಾಲಕನ ನಡತೆಗಳೇ ಪರಿವರ್ತನೆ ಹೊಂದುತ್ತಾ ಬಂತು. ಚಮ್ಮಾರನ ಹೊಟ್ಟೆಯಲ್ಲಿ ಜನಿಸಿದ ಈ ಬಾಲಕನು ದೇವರ ಪೂಜೆಯನ್ನೂ ಗೀತಾಧ್ಯಯನವನ್ನೂ ಎಡೆಬಿಡದೆ ಮಾಡತೊಡಗಿದನು. ಎಂತಹ ವಿದ್ವಾಂಸರನ್ನು ಕೂಡಾ ದಂಗು ಬಡಿಸುವ ರೀತಿಯಲ್ಲಿ ಸಂಸ್ಕೃತ ಭಾಷೆಯನ್ನು ಆಡತೊಡಗಿದನು. ಯಾವೊಂದು ಗುರುವಿನ ಸಹಾಯವಿಲ್ಲದೆ ಸಂಸ್ಕೃತ ಭಾಷೆಯನ್ನಾಡುವ ಈ ಬಾಲಕನ ವಿಚಿತ್ರ ನಡತೆಗಳನ್ನು ಕಂಡು ಆ ಹಳ್ಳಿಯ ಜನರೆಲ್ಲಾ ಆಶ್ಚರ್ಯಪಟ್ಟರು. ಈ ಸುದ್ದಿಯು ಆಸುಪಾಸಿನ ಹಳ್ಳಿಗಳಿಗೂ ಪಸರಿಸಿ ದಿನಂಪ್ರತಿ ಸಾವಿರಗಟ್ಟಲೆ ಜನರು ಈ ಅದ್ಭುತ ಬಾಲಕನ ದರ್ಶನ ಪಡೆಯಲು ಬಂದರು. ಹಾಗೆಯೇ ಹಲವು ವಿದ್ವಾಂಸರು ಕೂಡಾ ಈ ಬಾಲಕನೊಡನೆ ವಾದಕ್ಕೆ ನಿಂತು ಸೋತು ಹಿಂತಿರುಗಿದರು. ಈ ಬಾಲಕನು ತನ್ನ ಹದಿನಾಲ್ಕನೇ ವರ್ಷಕ್ಕೆ ಕಾಲಿಟ್ಟ ನಂತರ ತನ್ನ ತಾಯಿತಂದೆಯರನ್ನು ಮರೆಯತೊಡಗಿದನು. ಹಾಗೆಯೇ ತನ್ನನ್ನು ಪಾಂಛೋಲಿ ಗ್ರಾಮಕ್ಕೆ ಕೊಂಡೊಯ್ಯುವಂತೆ ಕೇಳಿಕೊಂಡನು. ಮೊದಲೇ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ಈ ಚಮ್ಮಾರ ದಂಪತಿಗಳು ಮಗನ ಈ ವಿಚಿತ್ರ ನಡತೆಯಿಂದ ತುಂಬಾ ಬಳಲಿದ್ದರು. ಈಗ್ಗೆ ತನ್ನನ್ನು ಪಾಂಛೋಲಿ ಗ್ರಾಮಕ್ಕೆ ಕೊಂಡೊಯ್ಯಬೇಕೆಂದು ಛಲ ಮಾಡುತ್ತಿರುವ ತಮ್ಮ ಮಗನ ಮನೋಭಿಲಾಷೆಯನ್ನು ನೆರವೇರಿಸಲು ಅಸಾಧ್ಯವಾದುದಕ್ಕಾಗಿ ತುಂಬಾ ನೊಂದುಕೊಂಡು ತಮ್ಮ ಗ್ರಾಮಾಧಿಕಾರಿಯಾದ ಅಣ್ಣಾ ಸಾಹೇಬ್ ಮುಧೋಳ್‌ಕರರೊಡನೆ ಮೊರೆಯಿಟ್ಟರು. ಈ ಮುಧೋಳ್‌ಕರರು ತನ್ನ ಆಪ್ತಬಂಧುಗಳಾದ ಡಾ। ಆರ್. ವಿ. ಚಪಟೆಯವರಿಗೆ ಈ ವಿಚಿತ್ರ ಬಾಲಕನ ವಿಷಯವನ್ನು ತಿಳಿಸಿದರು. ಮಾನಸಿಕ ರಾಯಿಲೆಗಳ ತಜ್ಞರಾದ ಡಾ। ಚಪಟೆಯವರು ಈ ಬಾಲಕನನ್ನು ಪರಿಶೀಲಿಸಲು ಬಿಹಾರ್‌ನಿಂದ ಪಾಂಛೋಲಿ ಗ್ರಾಮಕ್ಕೆ ಬಂದು ಈ ಬಾಲಕನೊಂದಿಗೆ ವಾಸಿಸ ತೊಡಗಿದರು.

ಡಾ. ಚಪಟೆಯವರಿಗೆ ಕೂಡಾ ಇದೊಂದು ಬಿಡಿಸಲಾಗದ ಸಮಸ್ಯೆಯಾಗಿ ಪರಿಣಮಿಸಿತು. ಹೇಗಾದರೂ ಈ ಅದ್ಭುತ ಬಾಲಕನ ರಹಸ್ಯವನ್ನು ಕಂಡುಹಿಡಿಯಬೇಕೆಂಬ ಛಲವೂ ಉಂಟಾಯ್ತು. ಅಂತೆಯೇ ಈ ಬಾಲಕನ ಅಪೇಕ್ಷೆಯಂತೆ ಅವನನ್ನು ಪಾಂಛೋಲಿ ಗ್ರಾಮಕ್ಕೆ ಕೊಂಡೊಯ್ದರು. ಪಾಂಛೋಲಿ ಗ್ರಾಮವನ್ನು ಪ್ರವೇಶಿಸಿದೊಡನೆಯೇ ಈ ಬಾಲಕನು ನೇರವಾಗಿ ಪರಿಚಯವಿದ್ದವನಂತೆ ಯೋಗೇಂದ್ರನಾಥ ಶರ್ಮರ ಮನೆಯನ್ನು ಪ್ರವೇಶಿಸಿದನು. ಏನನ್ನೋ ಸ್ಮರಿಸಿಕೊಂಡವನಂತೆ ಮನೆತುಂಬಾ ಓಡಾಡಿದನು. ಆಸುಪಾಸಿನ ಮನೆಗಳಿಗೆ ತೆರಳಿ ಅವರ ಪರಿಚಯವಿದ್ದವರಂತೆ ಮಾತನಾಡಿದನು. ಪ್ರತಿಯೊಬ್ಬರನ್ನೂ ಹೆಸರು ಹಿಡಿದು ಕೂಗಿದನು. ಕೊನೆಗೆ ಪುನಃ ಶರ್ಮರ ಮನೆಗೆ ತೆರಳಿ 'ಅಪ್ಪಾ' ಎಂದು ಕೂಗತೊಡಗಿದನು. ದ್ವಾರಕಾನಾಥನ ಈ ವಿಚಿತ್ರ ನಡತೆ

(೯ನೇ ಪುಟ ನೋಡಿರಿ)

ರಾಮತೀರ್ಥ
ಬ್ರಾಹ್ಮೀ ತೈಲ

ಸಿರ್ಯಲ್ ನಂ ೧]   [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತವೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೪.

ಸಂಸ್ಮರಣೆ

ಸಾವಿರದೆಂಟ್ನೂರೈವತ್ತೇಳರ ಸ್ಫೂರ್ತಿ

ಅಂದುದಿಸಿದ ಸ್ಫೂರ್ತಿಜ್ಯೋತಿಯ ಬೆಳಕಿನಲ್ಲೇ ಮುನ್ನಡೆದು ಭಾರತನಿಂದು ಸ್ವತಂತ್ರನಾಗಿ ವಿಶ್ವಮಾನ್ಯನಾಗಿದೆ.

ಎರಡು ವರ್ಷಗಳ ಹಿಂದೆ (೧೯೫೭ರ ಆಗಸ್ಟ್ ತಿಂಗಳಲ್ಲಿ) ಸ್ವತಂತ್ರ ಭಾರತದ ೧೦ನೇ ಜಯಂತಿಯನ್ನು ಆಚರಿಸಿದ ಪೂರ್ವ ಕಾಲದಲ್ಲಿ ೧೮೫೭ರ ಸ್ವಾತಂತ್ರ್ಯ ಯುದ್ಧದ ಶತಸಾಂವತ್ಸರಿಕ ಸ್ಮರಣೋತ್ಸವವನ್ನು ಆಚರಿಸಿದೆವು. ೧೮೫೭—ಈ ರೋಮಾಂಚಕಾರಕ ಇಸವಿಯನ್ನು ನೆನೆದಾಗಲೆಲ್ಲಾ ಭಾರತೀಯರ ಗಂಡು ಹೃದಯ, ಅವರ ಹೃದಯದಲ್ಲಿ ಸುಪ್ತವಾಗಿದ್ದ ಸ್ವಾತಂತ್ರ್ಯದ ದೀಪ್ತಿಯ ಪ್ರಕಾಶವು ಗೋಚರಗೊಂಡು ನಮ್ಮ ಹೃದಯದಲ್ಲೂ ಆನಂದ ಉಂಟಾಗುತ್ತವೆ. ಭಾರತದಲ್ಲಿ ಬಲವಾಗಿ ಬೇರು ಬಿಡಲು ನಿರ್ಧರಿಸಿದ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ವ್ಯಾಪಕ ರೀತಿಯಲ್ಲಿ ಸಶಸ್ತ್ರವಾಗಿ ಇದಿರಿಸಿದ ಮೊದಲ ಹೋರಾಟವು ೧೮೫೭ರದಲ್ಲಾಯಿತು. ಅಂದು ಸೂರ್ಯ ಮುಳುಗದ ಸಾಮ್ರಾಜ್ಯಶಾಹಿಯು ಎದೆ ನಡುಗಿಬಿಟ್ಟಿತು. ಭಾರತೀಯರ ಸತ್ವ ಶಕ್ತಿಯ—ಧೀರ ವ್ಯಕ್ತಿತ್ವದ ಪರಿಚಯ ಬ್ರಿಟಿಷರಿಗಾಗಿ ಭಾರತೀಯರ ಸ್ವಾತಂತ್ರ್ಯಕಾಂಕ್ಷೆ ಎಷ್ಟು ಪ್ರಭಾವಯುತವಾದುದೆಂಬುವರ ಪ್ರತ್ಯಕ್ಷ ಅನುಭವ ಅವರಿಗಾಯಿತು.

ಅಂದಿನಿಂದ ೯೦ ವರ್ಷಗಳ ತನಕ ಭಾರತೀಯರು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದ್ದಾರೆ. ಬ್ರಿಟಿಷರ ಕಾಲದಲ್ಲಿ "ಸಿಪಾಯಿದಂಗೆ", "ಬಂಡಾಯ"ವೆಂದು ಕರೆಯಲ್ಪಟ್ಟ ೧೮೫೭ರ ಪ್ರಥಮ ಸ್ವಾತಂತ್ರ್ಯ ಯುದ್ಧವು ಸಶಸ್ತ್ರ ಯುದ್ಧವಾಗಿದ್ದಿತು. ಆ ವೇಳೆ ಸ್ವಾತಂತ್ರ್ಯದ ತನಕ ಬ್ರಿಟಿಷರ ವಿರುದ್ಧ ಅಂತಹ ಬೀಭತ್ಸಕಾರಿ ಸಮರಣವೇ ಎಂದೂ ನಡೆದುದಿಲ್ಲ. ಇಡೀ ದೇಶದಲ್ಲೇ ಬ್ರಿಟಿಷರನ್ನು ನುಚ್ಚುನೂರು ಮಾಡಲು ಸನ್ನದ್ಧವಾದ ಆ ಸ್ವಾತಂತ್ರ್ಯ ಹೋರಾಟ ಜಗತ್ತಿನ ಚರಿತ್ರೆಯಲ್ಲೇ ಉಲ್ಲೇಖನೀಯ ಇತಿಹಾಸವಾಗಿದೆ. ವ್ಯಾಪಾರದ ನೆಪದಿಂದ ಭಾರತದಲ್ಲಿ ತಳವೂರಿ ಭಾರತೀಯರ ಪರಂಪರಾಗತ ಸೌಜನ್ಯವನ್ನು ತಮ್ಮ ಸ್ವಾರ್ಥಸಾಧನೆಗೆ ಕುಟಿಲೋಪಾಯಗಳಿಂದ ಅಳವಡಿಸಿಕೊಂಡು ಹಲವು ಸಂಸ್ಕೃತಿ, ಧರ್ಮ, ಭಾಷೆಗಳ ಜನರನ್ನು ಒಬ್ಬರಿಂದೊಬ್ಬರಿಗೆ ಎತ್ತಿ ಕಟ್ಟುವುದರ ಮೂಲಕ, ಕುಟಿಲ ರಾಜನೀತಿಯ ಮೂಲಕ ಜಯಗಳಿಸಿ ಭಾರತವನ್ನು ಕಬಳಿಸಿದ ಜನರು ತಮ್ಮ ಸ್ವಾರ್ಥ ಸಾಧನೆಯ ದರ್ಪದ ಮಬ್ಬಿನಲ್ಲಿ ಅನೈತಿಕವಾಗಿ ಭಾರತೀಯರ ಅಂತಃಕರಣಕ್ಕೆ ಕೊಡಲಿ ಏಟು ಕೊಡ ಹತ್ತಿದಾಗ ಭಾರತೀಯರಲ್ಲಿ ಸುಪ್ತವಾಗಿದ್ದ ಸ್ವಾತಂತ್ರ್ಯಾಕಾಂಕ್ಷೆ ಜಾಗೃತವಾಯಿತು. ಕೇಸರ ಕೆದರಿದ ಕೇಸರಿಯಂತಾಯಿತು—ಭಾರತ! ಇಡೀ ಭಾರತದಲ್ಲೇ ಬ್ರಿಟಿಷರ ವಿರುದ್ಧ ದ್ವೇಷದ ಜ್ವಾಲಾಮುಖಿಯ ಲಾವಾರಸ ಹರಿದು ಬಂತು. ಇದರ ಪರಿಣಾಮವಾಗಿ ಬ್ರಿಟಿಷರು ಸಾಮೂಹಿಕವಾಗಿ ಕೊಲೆಗೀಡಾದರು. ಕೇವಲ ದ್ವೇಷದ ನೆಲೆಯಲ್ಲಿ ಪ್ರಾರಂಭವಾದ ಈ ಸ್ವಾತಂತ್ರ್ಯ ಯುದ್ಧವನ್ನು ಬ್ರಿಟಿಷರು ಬಹು ಪ್ರಯಾಸದಿಂದ ಮುಟ್ಟುಗೋಲು ಹಾಕಿದರೂ, ಅದನ್ನು ದಮನಿಸಲು ಭಾರತೀಯರಲ್ಲಿದ್ದ ಕೆಲವೊಂದು ದೌರ್ಬಲ್ಯಗಳೇ ಕಾರಣವಾಯಿತಲ್ಲದೆ ಬ್ರಿಟಿಷರ ಅತುಲ ಬಲವಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಸ್ವಾತಂತ್ರ್ಯ ಯುದ್ಧವು ಕೇವಲ ಬ್ರಿಟಿಷರ ಮೇಲಿನ ಸೇಡಿನಲ್ಲೇ ಪರ್ಯವಸಾನ ಹೊಂದಿತು. ದೇಶದ ಅಲ್ಲಲ್ಲಿ ಇದು ಕಾಡ್ಗಿಚ್ಚಿನಂತೆ ಹೊತ್ತಿಕೊಂಡರೂ ಈ ಸಮರವು ವ್ಯವಸ್ಥಿತವಾದ ರೀತಿಯಲ್ಲಿ ಮುನ್ನಡೆಸಲ್ಪಡಲಿಲ್ಲ. ಯಾವುದೇ ಹಿನ್ನೆಲೆಯಿಲ್ಲದೆ ಅಥವಾ ಭದ್ರವಾದ ನಿರ್ದೇಶನವಿಲ್ಲದೆ ಪ್ರಾರಂಭವಾದ ಈ ಯುದ್ಧ ಅನೈಕತೆಯ ಪರಿಣಾಮವಾಗಿಯೇ ನಂದಿ ಬಿಟ್ಟಿತು.

ಈ ಯುದ್ಧದ ಮುಂದಾಳುತನವನ್ನು ನಾನಾ ಸಾಹೇಬ, ತಾತ್ಯಾಟೋಪಿ, ಝಾನ್ಸಿ ಲಕ್ಷ್ಮೀಬಾಯಿ, ಕುವರ ಸಿಂಗರಂತಹ ಧೀರೋದಾತ್ತ ನಾಯಕರು ವಹಿಸಿಕೊಂಡಿದ್ದರೂ, ಬ್ರಿಟಿಷರಿಂದ ತರಬೇತಾದ ಸಹಸ್ರ ಸಂಖ್ಯೆಯ ಸಿಪಾಯಿಗಳೇ ಈ ಹೋರಾಟ ರಂಗದಲ್ಲಿ ಪಾಲುಗಾರರಾಗಿದ್ದರೂ, ಇವರೆಲ್ಲರೂ ಪೂರ್ವ ನಿಶ್ಚಿತವಾದ ಯೋಜನೆಯಿಲ್ಲದೆ ಒಂದು ವ್ಯವಸ್ಥಿತವಾದ ಕಾರ್ಯಕ್ರಮವಿಟ್ಟುಕೊಳ್ಳದೆ ಅಲ್ಲಲ್ಲಿ ಬ್ರಿಟಿಷರ ವಿರುದ್ಧ ಬಂಡಾಯವೆದ್ದುದರಿಂದ ಅವರನ್ನು ಕುಟಿಲ ರಾಜನೀತಿಯಿಂದ ಬ್ರಿಟಿಷರಿಗೆ ಸದೆ ಬಡಿಯಲು ಅನುಕೂಲವಾಯಿತು. ಈ ದಂಗೆಯು ಖಂಡದೊಳಗೆ ನೇರವಾದ ಸಂಪರ್ಕ, ಸಾರಿಗೆ ಸೌಕರ್ಯ, ನಿಶ್ಚಿತ ಯೋಜನೆ ಹಾಗೂ ವಿನಿಮಯದ ಅನುಕೂಲತೆ ಇದ್ದಿದ್ದರೆ ಈ ಸ್ವಾತಂತ್ರ್ಯದ ಜ್ಯೋತಿ ಪ್ರತಿಯೊಬ್ಬನ ಹೃದಯದಲ್ಲೂ ಬೆಳಗಿ, ಆ ಜ್ಯೋತಿ ಕುಂಡದಲ್ಲಿ ಬ್ರಿಟಿಷರು ಸಂಪೂರ್ಣ ನಿರ್ನಾಮವಾಗುತ್ತಿದ್ದರು. ಬಂಡಾಯದ ಕಾಲದಲ್ಲಿ ಕೆಲವೊಂದು ಗುಂಡರು, ಸ್ವಾರ್ಥಿಗಳು ಸೇರಿಕೊಂಡು ಕೊಲೆ, ಸುಲಿಗೆಯಂತಹ ಪೈಶಾಚಿಕ ಕೃತ್ಯಗಳನ್ನು ಮಾಡತೊಡಗಿ ಸ್ವಾತಂತ್ರ್ಯ ಯೋಧರ ಕುರಿತು ಜನರಲ್ಲಿ ಅತೃಪ್ತಿ ಹುಟ್ಟಿಸಲು ಕಾರಣರಾದರು. ಅಲ್ಲದೆ ಭಾರತದ ಕೆಲವೊಂದು ಪುಕ್ಕಲು ಮನೋಭಾವದ ಅಳರಸರು, ಪಂಚಮದಳದ ಸ್ವಾರ್ಥಿ ಭಾರತೀಯರು ಈ ಸ್ವಾತಂತ್ರ್ಯ ಯೋಧರ ವಿರುದ್ಧ ಬ್ರಿಟಿಷ್ ಕಾರ್ಯಾಚರಣೆ ನಡೆಸಲು ಸಹಾಯಕರಾದರು ಇದರಿಂದಾಗಿ ತಾಂತ್ಯಾಟೋಪಿಯಂತಹ ಧೀರ ವ್ಯಕ್ತಿಗಳು ಅಮಾನುಷವಾಗಿ ಬ್ರಿಟಿಷ್ ಹಿಂಸೆಗೆ ಗುರಿಯಾದರು. ಸಿಪಾಯಿಗಳು ವಿಜಯ ಸಂಪಾದಿಸಿದಾಗ ಜನರನ್ನು ಸಮಾಧಾನಗೊಳಿಸಲು ಯತ್ನಿಸಲು ಹೋಗದೆ, ಅವರಿಗೆ ಯೋಗ್ಯ ಭರವಸೆ ನೀಡದೆ ಹೋದುದರಿಂದ ಜನರು ತಮ್ಮ ಸುರಕ್ಷಿತತೆಯ ಬಗ್ಗೆ ಭೀತರಾಗಿ ಹೋದುದರಿಂದ ಸಿಪಾಯಿಗಳು ಆಕ್ರಮಿಸಿದ ಸ್ಥಳದಲ್ಲಿ ಜನರ ವಿತ್ತ-ಜೀವಿತಗಳ ಬಗ್ಗೆ ಒಂದು ವಿಧದ ಭೀತಿಯ ಛಾಯೆಯೇ ಆವರಿಸಲ್ಪಟ್ಟಿತು. ನಿತ್ಯ ವ್ಯವಹಾರ ಸರಿಯಾಗಿ ನಡೆಯದಾಯಿತು. ಜೀವನಾವಶ್ಯಕ ಸರಕು-ಸರಂಜಾಮುಗಳು ಪೂರೈಕೆಯಾಗದೆ ಜನಸಾಮಾನ್ಯರು ತತ್ತರಿಸಿದರು. ಈ ಎಲ್ಲ ಪರಿಸ್ಥಿತಿಗಳ ದುರ್ಲಾಭದಿಂದ ಬ್ರಿಟಿಷರೂ ಸ್ವಾತಂತ್ರ್ಯ ಯುದ್ಧದಲ್ಲಿ ಜಯ ಸಂಪಾದಿಸಿದರು.

ಈ ಸ್ವಾತಂತ್ರ್ಯ ಯುದ್ಧವು ಮದೋನ್ಮತ್ತ ಬ್ರಿಟಿಷರನ್ನು ಕಣ್ಣು ತೆರೆಯುವಂತೆ ಮಾಡಿತು. ಅನಾಗರಿಕರೂ, ಅಸಂಸ್ಕೃತರೂ, ಅಜ್ಞಾನಿಗಳೂ ಎಂದು ನೆನಸಿದ ಭಾರತೀಯರ ಪರಂಪರಾಗತ ಶೌರ್ಯ, ಸಾಹಸಗಳಿಂದ ಅವರ ಮಿದುಳಿಗೆ ಬಿಸಿತಾಗಿತು. ಕೇವಲ ಮದೋನ್ಮತ್ತತೆಯಿಂದ, ದಂಡೋಪಾಯದಿಂದ ನಿರಂಕುಶವಾಗಿ ಭಾರತೀಯರನ್ನು ಆಳಲು ಸಾಧ್ಯವಿಲ್ಲ. ಅವರನ್ನು ವಿಭಜಿಸಿ, ಸಾಮೋಪಾಯದಿಂದಲೇ ಆಳಬೇಕೆಂದು ನಿರ್ಧರಿಸಿದರು. ಕಂಪೆನಿಯ ಕೈಯಿಂದ ಬ್ರಿಟಿಷ್ ಚಕ್ರಾಧಿಪತ್ಯವೇ ನೇರವಾಗಿ ಭಾರತದ ಆಡಳಿತೆ ವಹಿಸಿಕೊಂಡಿತು. ತಮ್ಮ ವ್ಯಾಘ್ರ ಮುಖವನ್ನು ತೋರಿಸುವ ಬದಲು ತಮ್ಮ ಮುಖಕ್ಕೆ ಗೋಮುಖವಿಟ್ಟುಕೊಂಡರು. ಆಡಳಿತೆಯ ನೆಪಕ್ಕಾಗಿ ಭಾಷಾ ಪ್ರಾಂತ್ಯಗಳನ್ನು ತುಂಡರಿಸಿ ಒಂದು ವರ್ಗದವರು—ಒಂದು ಭಾಷೆಯವರು—ಒಂದೇ ಜನಾಂಗದವರು ಒಂದೇ ಪ್ರಾಂತ್ಯದಲ್ಲಿ ಬಾರದ ರೀತಿಯಲ್ಲಿ ಪ್ರಾಂತ್ಯಗಳನ್ನು ರಚಿಸಲಾಯಿತು. ಈ ಪ್ರಾಂತ್ಯಗಳ ಮಧ್ಯೆ ತಮ್ಮ ಆಡಳಿತೆಯ ಬಿಗಿ ಸಂಕೋಲೆಯ ಭದ್ರ ಕೋಡಿಗಳಾಗಿ ಏನೂರಕ್ಕೂ ಮೇಲ್ಪಟ್ಟು ಅಳರಸರ ಅರಸೊತ್ತಿಗೆಯನ್ನು ಕೂಡಲಿಳೆಯಲ್ಲಿ ಕತ್ತಿಕಟ್ಟಿ ಅವರನ್ನು ಉಳಿಸಲಾಯಿತು. ಅವರ ವಿಲಾಸ ವೈಭವಕ್ಕೆ ಪ್ರಚೋದನೆ ಕೊಟ್ಟು ಅರಸರ ಆಡಳಿತೆಗಿಂತ ಬ್ರಿಟಿಷರ ಆಳ್ವಿಕೆ ಮೇಲೆಂಬ ಭಾವನೆ ಮೂಡಿಸಲಾಯಿತು. ಸಮಾಜ ಸುಧಾರಣೆಯ ನೆಪದಲ್ಲಿ ಸಮಾಜ ಶೋಷಣೆಯ ಕಾರ್ಯಕ್ರಮವನ್ನು ರೂಪಿಸಲಾಯಿತು. ಈ ರೀತಿ ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ಭದ್ರಗೊಳಿಸಿದರು.

ಆದರೆ ಬ್ರಿಟಿಷ್ ಜನಾಂಗವು ಅನಾಗರಿಕ ಸ್ಥಿತಿಯಲ್ಲಿದ್ದಾಗ ನಾಗರಿಕತೆಯ ವೈಭವದ ತುತ್ತ ತುದಿಯಲ್ಲಿದ್ದ ನಾಡು ನಮ್ಮದು. ಸ್ವಾತಂತ್ರ್ಯದ ಬೆಂಕಿಯನ್ನು ದಮನಿಸಲೆತ್ನಿಸಿದ ಹಾಗೆ ಅದು ಪ್ರಖರಗೊಳ್ಳುತ್ತದೆ. ಬ್ರಿಟಿಷರ ಭೇದೋಪಾಯಗಳನ್ನು ಅವರು ಸಮಾಜಕ್ಕೆ ನೀಡಿದ ಕೊಡುಗೆಗಳು ದಾಸ್ಯದ ಸಂಕೇತಗಳೆಂದು ತಿಳಿಯಲು ಜನರಿಗೆ ಹೆಚ್ಚು ಕಾಲ ಹೋಗಲಿಲ್ಲ. ಭಾರತೀಯರ ಸಂಘಟಿತ ಸಂಸ್ಥೆಯೊಂದು ೧೮೮೫ರಲ್ಲಿ 'ಭಾರತ ರಾಷ್ಟ್ರೀಯ ಕಾಂಗ್ರೆಸ್' ಎಂಬ ಅಭಿದಾನದಲ್ಲಿ ಸ್ಥಾಪಿತವಾಯಿತು. ಅದು ಕೇವಲ ಬ್ರಿಟಿಷ್ ವಿರೋಧಿಯಾಗದೆ ಭಾರತೀಯರಿಗೆ ಆದಷ್ಟು ಸ್ವಾಯತ್ತಾಧಿಕಾರವನ್ನು ನೀಡಲು ಬಯಸಿತ್ತು. ಈ ರಾಷ್ಟ್ರೀಯ ಕಾಂಗ್ರೆಸಿನ ಜನಪ್ರಿಯತೆ ದಿನದಿಂದ ದಿನಕ್ಕೆ ಹಬ್ಬಲು ಬ್ರಿಟಿಷರು ಆ ಸಂಘಟನೆ ಮುರಿಯಲು ಯತ್ನಿಸಿದರು. ಆದರೆ ಲೋಕಮಾನ್ಯ ತಿಲಕ, ಗೋಪಾಲಕೃಷ್ಣ ಗೋಖಲೆ, ದಾದಾಭಾಯಿ ನೌರೋಜಿಯಂತಹವರು ಭಾರತದಲ್ಲಿ ಅವತರಿಸಲು ಜನಜಾಗೃತಿಯುಂಟಾಯಿತು. ೨೦ನೇ ಶತಮಾನದ ಮೊದಲ ದಶಕದಲ್ಲಿ ಮಹಾತ್ಮಾ ಗಾಂಧಿಯವರು ಭಾರತಕ್ಕೊಂದು ಆಶಾಕಿರಣವಾದರು. ಅವರ ಪ್ರವೇಶದಿಂದ ಭಾರತದ ರಾಜಕೀಯ ಬಣ್ಣವೇ ಬದಲಾಯಿತು. ಆದರೂ ಬ್ರಿಟಿಷರ ವಿರುದ್ಧ ಭಾರತದ ಜನನಾಯಕರು ಬಂಡು ಹೂಡಲೆತ್ನಿಸಲಿಲ್ಲ. ಪ್ರಥಮ ಸ್ವಾತಂತ್ರ್ಯ ಯುದ್ಧದ ಕಹಿ ಅನುಭವದಿಂದ ಸದಾ ಜಾಗೃತರಿರುತ್ತಿದ್ದ ಬ್ರಿಟಿಷರು ಭಾರತೀಯರ ರಾಜಕೀಯವನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುತ್ತಿದ್ದರು ಆದರೆ ಯಾವುದೇ ಕಾರ್ಯಾಚರಣೆಯನ್ನು ಹಿಂಸಾತ್ಮಕವಾಗಿ ಪ್ರತಿಭಟಿಸಿದರೆ ಪುನಃ ಬಂಡಾಯವೇಳುವುದೋ ಎಂಬ ಭಯ ಬ್ರಿಟಿಷ್ ಸಿಂಹಕ್ಕಿದ್ದಿತು.

ಇಷ್ಟರಲ್ಲೇ ಪ್ರಥಮ ಮಹಾಯುದ್ಧ (೧೯೧೪—೧೮) ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಭಾರತೀಯರು ಈ ಮಹಾಯುದ್ಧದಲ್ಲಿ ಮುಕ್ತ ಹಸ್ತದಿಂದ ಸಹಾಯ ಮಾಡಬೇಕೆಂದೂ, ಯುದ್ಧ ಮುಗಿದ ಬಳಿಕ ಭಾರತಕ್ಕೆ ಸ್ವಾಯತ್ತಾಧಿಕಾರ ಕೊಡಲಾಗುವುದೆಂದೂ ಬ್ರಿಟಿಷರು ಆಶ್ವಾಸನೆ ಕೊಟ್ಟರು. ಯುದ್ಧಕ್ಕೆ ಮಹಾತ್ಮಾ ಗಾಂಧಿಯವರಾದಿಯಾಗಿ ಸಕಲರೂ ಸಕ್ರಿಯ ಸಹಾಯವನ್ನಿತ್ತರು. ಬ್ರಿಟಿಷರ ಪರವಾಗಿ ಭಾರತವೂ ಆ ಮಹಾಯುದ್ಧದಲ್ಲಿ ಭಾಗ ವಹಿಸಿತು. ಆದರೆ ಯುದ್ಧದಲ್ಲಿ ವಿಜಯಶ್ರೀ ಒಲಿದಾಗ ಬ್ರಿಟಿಷರ ನಿಜಬಣ್ಣ ಬಯಲಾಯಿತು. ಕೊಟ್ಟ ಆಶ್ವಾಸನೆಯನ್ನು ಗಾಳಿಗೆ ತೂರಲಾಯಿತು. ಇದರಿಂದ ಖತಿಗೊಂಡ ಗಾಂಧೀಜಿಯವರು ಒಂದು ಹೊಸ ಮಾದರಿಯ ಪ್ರತಿಭಟನೆಯನ್ನು ಸರಕಾರದ ವಿರುದ್ಧ ಹೂಡಿದರು. ಸಶಸ್ತ್ರವಾದ ಸರಕಾರವನ್ನು ಇದಿರಿಸುವ ಮಾರ್ಗ ಭಾರತೀಯರಿಗಿಲ್ಲ. ಆದರೆ ತಮ್ಮ ನ್ಯಾಯೋಚಿತ ಕೋರಿಕೆಯನ್ನು ಧೀರತೆಯಲ್ಲಿ ಮಂಡಿಸಲು ಅಹಿಂಸಾ ಸತ್ಯಾಗ್ರಹವನ್ನು ಗಾಂಧೀಜಿ ಹೂಡಿದರು. ಈ ಚಳವಳವು ಬ್ರಿಟಿಷರ ನೈತಿಕ ವ್ಯವಹಾರದಲ್ಲಿ ಭಯಂಕರವಾದ ಆಘಾತವನ್ನುಂಟುಮಾಡಿತು.

(೮ನೇ ಪುಟ ನೋಡಿರಿ)

ಉಡುಪಿ. ಡಿ. ಮು. ಕೋರ್ಟಿನಲ್ಲಿ

ಕ್ರಮ ವ್ಯಾಜ್ಯ 204/1959.

ಬೊಮ್ಮ ಪೂಜಾರಿ —ವಾದಿ

ಮತ್ತು

ರುದ್ರಯ್ಯ ಆಚಾರಿ —ಪ್ರತಿವಾದಿ

ಇವರೊಳಗೆ

ರುದ್ರಯ್ಯ ಆಚಾರಿ, ವೆಂಕಯ್ಯ ಆಚಾರಿ ಮಗ ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಸಗ್ರಿಯಲ್ಲಿರುವವರು. —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿ ಮೇಲೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಗೆ ಆಪೈರಿ ನೋಟಿಸಿನ ಬಗ್ಗೆ ತಾ. 22-9-1959 ಕ್ಕೆ ಇಡೋಣಾಗಿಯದೆ. ಪ್ರತಿವಾದಿಯು ಸದ್ರಿ ತನಖಿ ದಿನ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳದಿದ್ದರೆ ಸದ್ರಿ ವ್ಯಾಜ್ಯವು ಆತನ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನವಾದೀತು.

(By Order of the C

K- Varad

Advoca

ಉಡುಪಿ. ತಾ. 29-8-

ಮಹಾತ್ಮರ ಹೃದಯ ಸದಾ ಕೋಮಲವೂ ದಯಾಳುವೂ ಆಗಿರುತ್ತದೆ. ಇವರು ತಾವು ಆಪತ್ತಿನಲ್ಲಿ ಸಿಕ್ಕಿಬಿದ್ದರೂ ತಮ್ಮ ಮುಖದಿಂದ ಎಂದಿಗೂ ಅಪರಾಧಿಯನ್ನು ಅಪರಾಧಿ ಎನ್ನುವುದಿಲ್ಲ.

NAVAYUGA

Founder.—

A. B SHETTY,

Former Minister for Public Health
Govt of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೩-೯-'೫೯	೧

ಬೊಂಬಾಯಿಯ ವಿಭಜನೆ

ಭಾಷಾವಾರು ಪ್ರಾಂತ ರಚನೆಯ ಆಶ್ವಾಸವನ್ನಿತ್ತಿದ್ದ ಕಾಂಗ್ರೆಸ್ಸು ಸ್ವತಂತ್ರ ಭಾರತದಲ್ಲಿ ಅಧಿಕಾರಾರೂಢವಾದ ಮೇಲೆ ಕೈಗೊಂಡ ಮಹಾಸಾಹಸ ಕೃತ್ಯಗಳಲ್ಲಿ ರಾಜ್ಯ ಪುನರ್ವಿಂಗಡಣೆ ಮಾಡಿದುದೂ ಒಂದೆನ್ನಬಹುದು. ಆ ಕಾಲದಲ್ಲಿ ಈ ಬಗ್ಗೆ ಹಲವಾರು ಗಂಡಾಂತರಗಳು ಎಡತಾಕಿದರೂ ಬೊಂಬಾಯಿಯೊಂದನ್ನು ಬಿಟ್ಟು ಉಳಿದ ದಕ್ಷಿಣದ ರಾಜ್ಯಗಳೆಲ್ಲವೂ ತೋರಮಟ್ಟಿಗೆ ಭಾಷಾ ತಳಹದಿಯಲ್ಲಿ ರೂಪುಗೊಂಡಿದ್ದುವು. ಆದರೆ, ಬೊಂಬಾಯಿ ನಗರದ ಬೇಡಿಕೆಯನ್ನು ಮುಂದಿಟ್ಟು ಮಹಾರಾಷ್ಟ್ರ ಮತ್ತು ಗುಜರಾತ ಭಾಷಿಗಳು ಎಬ್ಬಿಸಿದ ಗಲಭೆಯಿಂದಾಗಿ ಬೊಂಬಾಯಿಯು ದ್ವಿಭಾಷಾರಾಜ್ಯವಾಗಿಯೇ ಮುಂದುವರಿದುಕೊಂಡು ಬಂತು. ಇದರಲ್ಲಿ ವಿದರ್ಭವೂ ಲೀನವಾಗಲೇ ಬೇಕಾಯಿತು. ಈಗ, ಪುನಃ ಈ ಪ್ರಶ್ನೆಯತ್ತ ಕಾಂಗ್ರೆಸ್ಸಿನ ಲಕ್ಷ್ಯ ಹರಿದಿದ್ದು ಬೊಂಬಾಯಿ ರಾಜ್ಯವನ್ನು ಒಡೆದು ಪ್ರತ್ಯೇಕಿಸುವತ್ತ ಆಸಕ್ತಿಯನ್ನು ತೋರಿಸುತ್ತಿರುವುದು ಸ್ವಾಗತಾರ್ಹವಾಗಿದೆ.

ರಾಜ್ಯಗಳ ವಿಂಗಡಣೆ ಯಾವ ರೀತಿಯಾದರೆ ಚೆನ್ನ ಎಂಬುದರಲ್ಲಿ ಭಿನ್ನಾಭಿಪ್ರಾಯಗಳಿರುವುದು ಸಹಜವೇ. ಆದರೂ ಒಂದೇ ಭಾಷೆಯನ್ನಾಡುವವರು ಒಂದೇ ಸರಕಾರದಡಿಯಲ್ಲಿರುವುದರಿಂದ ಅಲ್ಲಿನ ಸರಕಾರದ ಆಡಳಿತೆಗೂ ಕಾರ್ಯಕಲಾಪಗಳಿಗೂ, ಭಾಷೆಗೂ ಜನತೆಗೂ ಸೌಲಭ್ಯ ಮತ್ತು ಸಂಬಂಧ ಅಧಿಕಾಧಿಕವಾಗುವುದು ಸಾಧ್ಯವೆಂಬುದನ್ನು ಅಲ್ಲಗಳೆಯುವಂತಿಲ್ಲ. ಬೊಂಬಾಯಿಯು ದ್ವಿಭಾಷಾ ರಾಜ್ಯವಾಗಿಯೇ ಈ ಮೂರು ವರ್ಷಗಳಲ್ಲಿ ಮುಂದುವರಿದುಕೊಂಡು ಬರುವುದಾದರೂ ಅಲ್ಲಿನ ಜನತೆಯಲ್ಲಿ ಇದಕ್ಕೆ ತೀವ್ರ ಅಸಮಾಧಾನವಿದೆ ಎಂಬುದಕ್ಕೆ ಸಂಯುಕ್ತ ಮಹಾರಾಷ್ಟ್ರ ಸಮಿತಿ ಹಾಗೂ ಮಹಾಗುಜರಾತ ಪರಿಷತ್ತುಗಳೇ ಉದಾಹರಣೆಗಳಾಗಿವೆ. ಕಾಂಗ್ರೆಸ್ಸು ಈ ದ್ವಿಭಾಷಾ ರಾಜ್ಯದ ಬೆಂಬಲಿಗನಾದುದರಿಂದಲೇ ಈ ಪ್ರದೇಶಗಳಲ್ಲಿ ಕೆಲವೊಂದು ಸ್ಥಾನಗಳನ್ನೂ ಚುನಾವಣೆಯಲ್ಲಿ ಕಳೆದುಕೊಂಡಿದೆ ಎಂಬುದನ್ನು ನಾವು ನಿಷ್ಪಕ್ಷಪಾತ ದೃಷ್ಟಿಯಿಂದ ನೋಡುವುದಾದರೆ, ಜನಮತವೆತ್ತ ಎಂಬುದು ಸವೇದ್ಯವಾಗುವುದು. ಈ ಕಾರಣದಿಂದಾಗಿಯೂ ಸ್ವಲ್ಪ ಅವಧಿಯಲ್ಲಿ ದ್ವಿಭಾಷಾರಾಜ್ಯವನ್ನು ಜನಪ್ರಿಯಗೊಳಿಸಲು ಕೈಗೊಂಡ ಎಲ್ಲ ಸಾಹಸಗಳೂ ಪೂರ್ಣ ನಿರರ್ಥಕವಾಗುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ಕಾಂಗ್ರೆಸ್ಸು ಅಂದು ಅಲ್ಲಸಲ್ಲದ ಗೊಂದಲಗಳನ್ನುಂಟು ಮಾಡಬಯಸದೆ, ಪರಿಸ್ಥಿತಿಯು ಶಾಂತವಾದ ಮೇಲೆ ಸೌಹಾರ್ದದಿಂದಲೇ ಈ ಪ್ರಶ್ನೆಯನ್ನು ಬಗೆಹರಿಸಬಹುದೆಂದು ಆಶಿಸಿದ್ದಿತು. ಸದ್ಯ, ಈ ಮಹಾರಾಜ್ಯವನ್ನು ಬೊಂಬಾಯಿ ರಾಜಧಾನಿಯಾಗಿರುವ ಮಹಾರಾಷ್ಟ್ರ ಮತ್ತು ಅಹಮದಾಬಾದ ಪ್ರಧಾನ ನಗರವಾಗಿರುವ ಗುಜರಾತ ರಾಜ್ಯಗಳಾಗಿ ವಿಭಜಿಸುವುದಕ್ಕೆ ಸಮ್ಮತಿ ನೀಡಲು ಸಿದ್ಧವಾಗುತ್ತಿದೆ ಇನ್ನೇನು, ಕೆಲವೇ ಸಮಯದೊಳಗೆ ಇದು ಕಾರ್ಯರೂಪಕ್ಕೂ ಬರಲಿದೆ.

ಕಾಯಿದೆ ಕಾನೂನುಗಳನ್ನು ಮನುಷ್ಯನು ಮನುಷ್ಯನಿಗಾಗಿಯೇ ಮಾಡುತ್ತಾನೆ ಅಲ್ಲದೇ ಕಾನೂನುಗಳಿಗಾಗಿಯೇ ಮಾನವ ಜೀವಿಸಬೇಕೆಂಬುದು ಎಂದಿಗೂ ಮಾನ್ಯವಲ್ಲ. ಆದುದರಿಂದ, ಸದ್ಯ ಕಾಂಗ್ರೆಸ್ಸು ಇಡಲು ನಿರ್ಧರಿಸಿದ ಈ ಹೆಜ್ಜೆಯು ನಿಜವಾಗಿಯೂ ಅಭಿನಂದನೀಯ. ಅದು ಜನತೆಯ ಇಷ್ಟವನ್ನು ಪೂರೈಸುವುದೇ ತನ್ನ ಕರ್ತವ್ಯವೆಂದು ಬಗೆದ ಪ್ರಜಾಪ್ರಭುತ್ವವಾದಿ ಪಕ್ಷವೆಂಬುದಕ್ಕೆ ಇದಿನ್ನೊಂದು ಉದಾಹರಣೆಯಾಗಿದೆ.

ಈ ನಡುವೆ 'ವಿದರ್ಭ'ದ ಕುರಿತಾದ ಬೇಡಿಕೆಯನ್ನೂ ಅಲಕ್ಷ್ಯದಿಂದ ಕಾಣದೆ ಬಿಡುವುದು ಸಾಧ್ಯವಿಲ್ಲ. ಫಜಲ್ ಅಲಿ ಆಯೋಗವು ತನ್ನ ವರದಿಯಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರಗಳ ರಾಜ್ಯಗಳ ಬದಲಿಗೆ ಮುಂಬಯಿಯನ್ನು ರಚಿಸುವಂತೆ ಸಿಫಾರಸು ಮಾಡಿದ್ದರೂ ಮಹಾರಾಷ್ಟ್ರೀಯರಿಗೆ ವಿದರ್ಭವನ್ನು ಕೊಡಮಾಡಿದ್ದರು. ಆದರೆ, ಕಾರಣಾಂತರಗಳಿಂದದು ರಚಿತವಾಗದೆ, ಸದ್ಯ ಈ ಬಗ್ಗೆ ಆಂದೋಲನವೂ ಬಲಗೊಳ್ಳುತ್ತಿದೆ. ಪ್ರತ್ಯೇಕ ವಿದರ್ಭ ರಾಜ್ಯದ ಪ್ರವರ್ತಕರಾದ ಡಾ| ಎಂ. ಎಸ್. ಅಣೆಯವರು ಈ ಬಗ್ಗೆ ವಿಶೇಷವಾಗಿ ಪ್ರಯತ್ನಿಸುತ್ತಿದ್ದಾರೆ. ಕೇವಲ ೮೦ ಲಕ್ಷ ಪ್ರಜೆಗಳಿರುವ ಈ ವಿದರ್ಭದ ಅಸ್ತಿತ್ವದ ಬಗ್ಗೆ ಅವರು ಬದ್ಧಕಂಕಣರಾಗಿದ್ದಾರೆ.

ಅಂತೂ ಮುಂಬಯಿ ರಾಜ್ಯದ ವಿಭಜನೆಯು ಗುಜರಾತ ಮತ್ತು ಮಹಾರಾಷ್ಟ್ರಗಳವರಿಗೆ ಶಾಂತಿಯನ್ನು ತಂದೀಯಬಲ್ಲುದಾದರೂ ವಿದರ್ಭದ ಬೇಡಿಕೆಯನ್ನೂ ಮನ್ನಿಸದೆ ಉಳಿದರೆ, ಯಾವ ಕಾರಣಕ್ಕಾಗಿ ಈ ವಿಭಜನೆ ನಡೆಯುತ್ತಿದೆಯೋ ಅದು ಸಂಪೂರ್ಣ ಯಶಸ್ವಿಯಾಯಿತೆಂದು ಹೇಳುವಂತಿಲ್ಲ. ಹಾಗಾದರೆ, ಈ ಬಗ್ಗೆಯೂ ಸೂಕ್ತ ನಿರ್ಧಾರವನ್ನು ಈಗಲೇ ಮಾಡಿ ಒಂದೇ ಸಲ ಕಿರುಕುಳವೆಲ್ಲವನ್ನೂ ದೂರಮಾಡುವುದು ಸರಿಯಲ್ಲವೆ?

೩೯ನೆಯ ಅರುಣೋದಯ

'ನವಯುಗ'ದ ಈ ಸಂಚಿಕೆಯಿಂದ ನವವರ್ಷ ಪ್ರಾರಂಭವಾದುದನ್ನು ವಾಚಕರು ಅರಿತಿರಬಹುದು. ಮೂವತ್ತೆಂಟು ವರ್ಷಗಳ ದೀರ್ಘಾವಧಿಯನ್ನು ಪತ್ರಿಕಾಪ್ರಪಂಚದಲ್ಲಿ, ಅದೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಕಳೆಯುವುದೆಂದರೆ, ಸಾಹಸದ ಕೃತ್ಯವೆಂದು ಹೇಳುವುದು ಅತಿಶಯೋಕ್ತಿಯಾಗದು. ಇದೀಗ ಮೂವತ್ತೊಂಬತ್ತನೆಯ ವರ್ಷ ಪ್ರಾರಂಭವಾಗಿದೆ. ಕಳೆದ ವರ್ಷಗಳಲ್ಲಿ ನಮಗೆ ನಾನಾವಿಧವಾಗಿ ನಾನಾರೂಪದಲ್ಲಿ ಸಹಕಾರವಿತ್ತ ನಿಮ್ಮೆಲ್ಲರಿಗೂ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇವೆ, ಮಾತ್ರವಲ್ಲ ನಿಮ್ಮೆಲ್ಲರ ಪ್ರೀತ್ಯಾದರಗಳೂ ಸಹಕಾರ ಹಸ್ತವೂ ಇನ್ನುಮುಂದಕ್ಕೂ ಇರಲಿ ಎಂದು ವಿನಂತಿಸುತ್ತೇವೆ.

ಕನ್ನಡದಲ್ಲಿನ ಪತ್ರಿಕೋದ್ಯಮದ ಕಂಟಕಾಕೀರ್ಣ ಪಥದರ್ಶನದಿಂದ ಒಂದು ಬಾರಿ ಹೃದಯ ಕಸಿವಿಸಿಗೊಳ್ಳುತ್ತಿದೆ. ಅಲ್ಲದೇ ಇತ್ತೀಚೆಗಿನ ಪರಿಸ್ಥಿತಿಯು ತೀರ ಕೆಟ್ಟು ಹೋಗುತ್ತಿದ್ದು ಸಾಪ್ತಾಹಿಕಗಳ ಬಾಳು ತನ್ನ ಕಾಲ ಮೇಲೆ ಭದ್ರವಾಗಿ ನಿಲ್ಲುವುದೂ ಕಠಿನವಾಗುತ್ತಿದೆ ಆದರೂ ನಿಮ್ಮೆಲ್ಲರ ಸಹಾಯ, ಸಹಕಾರ, ಗೌರವ, ಆದರಗಳ ಗಳಿಕೆಯನ್ನೇ ನಂಬಿಕೊಂಡು ಮುಂದ ವರಿಯುತ್ತಿದ್ದೇವೆ 'ನವಯುಗ'ಕ್ಕೆ ತಕ್ಕ ವೇಶಭೂಷಣಗಳಿಂದಲೂ ಅದು ಅಲಂಕೃತವಾಗುವುದು ಅನಿವಾರ್ಯವಾಗಿ ಪರಿಣಮಿಸಿದೆ, ಕಾಲ ಕಳೆದಂತೆ ನಿಮ್ಮ ನಮ್ಮ ಅಭಿರುಚಿಯೂ ಆಸಕ್ತಿಯೂ ಬೇರೆ ಬೇರೆಯಾಗಿ ಪರಿಣಮಿಸುವುದೂ ಸ್ವಾಭಾವಿಕವೆ ಅದನ್ನು ಹೊಂದಿಸಿಕೊಂಡು ಹೋಗಬೇಕಾದುದೂ ನಮ್ಮ ಧರ್ಮವೆಂದು ತಿಳಿಯುತ್ತೇವೆ.

ಈ ನವ ವರ್ಷೋದಯದ ಪ್ರಭಾತ ಕಾಲದಲ್ಲಿ ನಮ್ಮೆಲ್ಲ ಹಿತಚಿಂತಕರಿಗೂ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುವುದಲ್ಲದೇ ಇನ್ನು ಮುಂದಿನ ವರ್ಷಗಳಲ್ಲೂ ನಿಮ್ಮ ಉದಾರತೆಯೇ ನಮ್ಮ ಬೆಂಗೋಲಾಗಿದ್ದು ನಮ್ಮನ್ನು ಮುಂದುವರಿಸಲೆಂದು ಹಾರೈಸುವೆವು.

ಸಂಕ್ಷಿಪ್ತ ಸುದ್ದಿಗಳು

ಡಾ| ಸುಬ್ಬರಾಯನ್

ಆಹಾರ ಮಂತ್ರಿಯಾಗಿದ್ದ ಶ್ರೀ ಅಜಿತಪ್ರಸಾದ ಜೈನರಿತ್ತ ರಾಜಿನಾಮೆಯಿಂದಾಗಿ, ಅವರ ಖಾತೆಯನ್ನು ಸಾರಿಗೆ ಮತ್ತು ಸಂಪರ್ಕ ಶಾಖೆಯ ಮಂತ್ರಿ ಶ್ರೀ ಎಸ್. ಕೆ ಪಾಟೀಲರು ನೋಡಿಕೊಂಡಿದ್ದಾರೆ. ಈಗ ಮದ್ರಾಸದ ಮಾಜಿ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ೭೦ ವರ್ಷದ ಲೋಕಸಭಾ ಸದಸ್ಯರಾದ ಡಾ| ಪಿ ಸುಬ್ಬರಾಯನ್ನರನ್ನು ಪ್ರಧಾನಿಯವರ ಸಲಹೆಯ ಮೇರೆಗೆ ರಾಷ್ಟ್ರಾಧ್ಯಕ್ಷರು ಕ್ಯಾಬಿನೆಟ್ ವರ್ಗದ ಮಂತ್ರಿಯನ್ನಾಗಿ ನೇಮಿಸಿಕೊಂಡಿದ್ದಾರೆ. ಈ ನೂತನ ಮಂತ್ರಿಯವರು ಶ್ರೀ ಪಾಟೀಲರಿಂದ ಸಾರಿಗೆ ಮತ್ತು ಸಂಪರ್ಕ ಶಾಖೆಯನ್ನು ತೆಗೆದುಕೊಂಡು ನೋಡಿಕೊಳ್ಳುವರೆಂದು ತಿಳಿದು ಬಂದಿದೆ

ಚೀನೀಯರಿಂದ ಸೀಮೋಲ್ಲಂಘನ

ಭಾರತದ ಈಶಾನ್ಯ ಗಡಿಪ್ರದೇಶದಲ್ಲಿ ಚೀನೀಯರ ಸೀಮೋಲ್ಲಂಘನೆಯಾಗುತ್ತಿರುವ ಘಟನೆಗಳು ವರದಿಯಾಗುತ್ತಿವೆ ಲಡಖ್ ಮತ್ತು ನೇಫಾ ಪ್ರದೇಶಗಳಲ್ಲಿ ಈ ಆಕ್ರಮಣ ನಾಸ್ತೋವೃತ್ತಿ ಗೋಚರಕ್ಕೆ ಬರುತ್ತಿರುವುದು. ಈ ಬಗ್ಗೆ ಭಾರತವು ದ್ವಿಮುಖ ಧೋರಣೆಯನ್ನಿಟ್ಟುಕೊಳ್ಳುವುದೆಂದು ಪ್ರಧಾನಿ ನೆಹರೂ ಘೋಷಿಸಿದ್ದಾರೆ. ಭಾರತದ ಗಡಿಗಳನ್ನು ರಕ್ಷಿಸಿಕೊಳ್ಳುವುದು ಮತ್ತು ದೇಶದ ಸಮಗ್ರತೆಯನ್ನು ಕಾಯ್ದುಕೊಳ್ಳುವುದು ಮೊದಲನೆಯದಾಗಿದ್ದರೆ, ಈ ವಿವಾದಗಳನ್ನು ಸೌಹಾರ್ದಮಯ ಚರ್ಚೆಗಳಿಂದಲೇ ತೀರ್ಮಾನಿಸಿಕೊಳ್ಳುವುದು ಎರಡನೆಯದು ಕಮ್ಯೂನಿಸ್ಟರ ಒತ್ತಾಯದಿಂದಾಗಿ ಈಶಾನ್ಯ ಗಡಿ ಪ್ರದೇಶವನ್ನು ಸೈನಿಕ ಅಧಿಕಾರಕ್ಕೆ ಬಿಟ್ಟು ಕೊಟ್ಟಿರುತ್ತದೆ ಭಾರತ ಮತ್ತು ಪಾಕಿಸ್ತಾನಗಳ ನಡುವಣ ವಿಷಮತೆಯ ಲಾಭವನ್ನು ಚೀನ ಪಡೆಯಬಯಸಿ ಈ ಕಿರುಕುಳಗಳ ನ್ನೀಯುತ್ತಿದೆ ಎಂದೂ ಅನ್ನುವವರಿದ್ದಾರೆ.

ವಿಶ್ವಸಂಸ್ಥೆಗೆ ಟಿಬೇಟ್ ಪ್ರಶ್ನೆ

ದಲಾಯ್ ಲಾಮಾರವರು ಟಿಬೇಟಿನ ಸಮಸ್ಯೆಯನ್ನು ವಿಶ್ವಸಂಸ್ಥೆಗೊಯ್ಯುವ ನಿರ್ಧಾರ ಮಾಡಿದ್ದಾರೆ ಅವರೆನ್ನುವಂತೆ ಸದ್ಯ ಟಿಬೇಟದಲ್ಲಿ ಅಗಾಧ ಅಂಧಕಾರವು ಹರಡಿದ್ದು ಟಿಬೇಟಿಯನರ ಸಂಕಷ್ಟಗಳು ತೀವ್ರವಾಗುತ್ತಿವೆ. ಈ ದುರವಸ್ಥೆಯನ್ನು ದೂರೀಕರಿಸಲು ಜಗತ್ತಿನ ಎಲ್ಲ ಮುಂದುವರಿದ ರಾಷ್ಟ್ರಗಳು ತನಗೆ ಸಹಾಯನೀಡಬೇಕೆಂದೂ ಅವರು ಈ ಹೇಳಿಕೆಯಲ್ಲಿ ತಿಳಿಸಿದ್ದಾರೆ

ಸಾಮ್ರಾಜ್ಯಶಾಹಿ ಬುದ್ಧ

ಭಾರತೀಯರಿಗೆ ಮಾತ್ರವಲ್ಲ, ಸಿಲೋನ್, ಬರ್ಮಾ, ಟಿಬೇಟು ಮೊದಲಾದ ಆಗ್ನೇಯ ಏಷ್ಯದ ರಾಷ್ಟ್ರಗಳ ಜನತೆಯ ಗೌರವಾದರಗಳಿಗೆ ಪಾತ್ರನಾದ ಗೌತಮ ಬುದ್ಧನ ಬಗ್ಗೆ ಚೀನೀಯರೊಂದು ಹೊಸ ಸಂಶೋಧನೆ ನಡೆಸಿದ್ದಾರೆ. ಅವರ ಈ ಶೋಧನೆಯ ಪರಿಣಾಮವಾಗಿ ಪ್ರತ್ಯೇಕ ಬುದ್ಧಚರಿತೆ ಸಿದ್ಧವಾಗಬೇಕಾಗಿದೆ "ಶಾಕ್ಯಮುನಿಯು ತೀರ ತುಂಟನಾಗಿದ್ದನು, ಅವನನ್ನು ತಂದೆಯೂ ಜನರೂ ನಿಂದಿಸುತಿದ್ದರು. ಆತ ಮನೆಯನ್ನು ಬಿಟ್ಟು ಕಾಡಿಗೆ ಹೋಗಿ, ಅಲ್ಲಿ ಜನತೆಯ ಮೇಲೆ ಮಂಕುಬೂದಿ ಎರಚುವ ವಿದ್ಯೆಯನ್ನು ಕಲಿತು ಹಲವಾರು ವರ್ಷಗಳ ನಂತರ ಮರಳಿ ಸ್ವದೇಶಕ್ಕೆ ಬಂದು ತನ್ನ ವಿದ್ಯೆಯಿಂದ ತನ್ನ ಅಭಿಲಾಷೆಯನ್ನು ಈಡೇರಿಸಿಕೊಂಡು ಜನತೆಯನ್ನು ವಂಚಿಸಿ ಅವರನ್ನು ತನ್ನ ಕಪಿಮುಷ್ಟಿಯಲ್ಲಿಟ್ಟುಕೊಂಡನು, ಸಾಮ್ರಾಜ್ಯಶಾಹಿಯಾದನು"—ಇದು ಈ ಅಮೋಘ ಸಂಶೋಧನೆಯ ಸಾರಾಂಶ

In tho Court of the District Munsif of Mangaloro.

S C. No 196 of 1959.

Between

Marpu Beary . Plaintiff.
and
Narayana Poojary .Defendant.

Notice to the Defendant, Narayana Poojary nephew of Rama, Mazdoor, residing near Basrur Post office, Coondapoor Taluk, is hereby given that the Plaintiff has filed the above suit against him for recovery of the amount due under the Promissory Note dated 23--6--1956 for Rs 75/-, executed by him in favour of the Plaintiff and that the said suit is posted to 7- 9 -1959 for hearing.

John Gonsalves,
Vakil for Plaintiff.

Mangalore, 1-9-1959.

ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲೆಗಳ ಮೆನೇಜರರ ಯಶಸ್ವಿ ಪರಿಷತ್ತು

ದ. ಕ. ಜಿಲ್ಲಾ ವಿದ್ಯಾ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸಿರುವ ಖಾಸಗಿ ಪ್ರಾಥಮಿಕ ಶಾಲೆಗಳ ಮೆನೇಜರರು ತಾ. ೩೦ರಂದು ಉಡುಪಿಯಲ್ಲಿ ಒಂದು ಸೇರಿ ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಸಂಘವೊಂದನ್ನು ಸ್ಥಾಪಿಸಿದ್ದು ಒಂದು ವಿದ್ಯಾ ಕ್ಷೇತ್ರದ ಮಹತ್ವಪೂರ್ಣ ಘಟನೆಯಾಗಿದೆ. ಇತ್ತೀಚೆಗೆ ವಿದ್ಯಾ ಇಲಾಖೆಯ ಅಧಿಕಾರಿಗಳಿಂದ ಕೊಡಲಾದ ಹಲವಾರು ಆಜ್ಞೆಗಳಿಂದಲೇ ಈ ಸಂಘ ಸ್ಥಾಪನೆಗೆ ಪ್ರೇರಣೆ ದೊರೆತಿದೆ ಎಂದು ಹೇಳಬಹುದು.

ತಾ. ೩೦ರಂದು ಪೂರ್ವಾಹ್ನ ಶ್ರೀ ಎಂ. ಡಿ. ಅಧಿಕಾರಿ ಅವರ ನೇತೃತ್ವದಲ್ಲಿ ವಿಷಯ ನಿಯಾಮಕ ಸಭೆಯು ಸೇರಿತು. ಇದರಲ್ಲಿ ಜಿಲ್ಲಾ ಮಟ್ಟದ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘವನ್ನು ಸ್ಥಾಪಿಸಬೇಕೆಂದು ನಿರ್ಣಯವಾಗಿ ಆವಶ್ಯಕ ಘಟನೆಯನ್ನೂ ತಯಾರಿಸಲಾಯಿತು. ಸಂಘವನ್ನು ರಿಜಿಸ್ಟ್ರ ಮಾಡಬೇಕೆಂದೂ ಗೊತ್ತುಪಡಿಸಲಾಯಿತು. ಅಲ್ಲದೇ ಆಡಳಿತ ಮಂಡಳಿಯೊಂದನ್ನೂ ಆರಿಸಲಾಯಿತು. ಶ್ರೀ ಟಿ. ಎ. ಪೈ ಅವರು ಇದರ ಅಧ್ಯಕ್ಷರಾಗಿಯೂ ಶ್ರೀ ಎಂ. ಡಿ. ಅಧಿಕಾರಿ ಇವರು ಉಪಾಧ್ಯಕ್ಷರಾಗಿಯೂ ಶ್ರೀ ಕುರುಕಾಲು ಗಣಪಯ್ಯ ಶೆಟ್ಟಿ ಇವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ.

ಅಪರಾಹ್ನ ಶ್ರೀ ಟಿ. ಎ. ಪೈ ಅವರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಬಹಿರಂಗಾಧಿವೇಶನವು ಜರಗಿತು. ಎಂ. ಎಲ್. ಸಿ. ಶ್ರೀ ಕೆ. ಕೆ. ಶೆಟ್ಟರು ಇದನ್ನು ಉದ್ಘಾಟಿಸಿದರು. ಸಮ್ಮೇಳನವು ನಡೆಯುತ್ತಿರುವಾಗ, ಎಂ. ಪಿ. ಸಿ. ಸಿ.ಯ ಕಾರ್ಯದರ್ಶಿ ಶ್ರೀ ರಾಮಕೃಷ್ಣ ಹೆಗಡೆಯವರೂ ಎಂ. ಎಲ್. ಎ. ಎಫ್. ಎಕ್ಸ್. ಡಿ. ಪಿಂಟೊ ಅವರೂ ಆಗಮಿಸಿರುವುದು ಸಮ್ಮೇಳನಕ್ಕೆ ವಿಶೇಷ ಕಳೆಯನ್ನುಂಟು ಮಾಡಿತ್ತು.

ಆರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಎ. ಜೆ. ಆಲ್ವ ಅವರು ಮಾತನಾಡಿ, ಸಮ್ಮೇಳನವನ್ನು ಕರೆದುದರ, ಸಂಘಟನೆಯ ಉದ್ದೇಶವನ್ನು ವಿವರಿಸಿ, ಎಲ್ಲರನ್ನೂ ಸ್ವಾಗತಿಸಿದರು. ಆ ಮೇಲೆ ಕಾರ್ಯದರ್ಶಿ ಶ್ರೀ ಗಣಪಯ್ಯ ಶೆಟ್ಟರು ಸರಕಾರದ ಪಕ್ಷಪಾತ ಪೂರ್ಣವಾದ ಧೋರಣೆಯನ್ನು ಖಂಡಿಸಿ ಸಂಘಟಿತರಾಗಿಯೇ ಈ ಅನ್ಯಾಯತನವನ್ನೆದುರಿಸಬೇಕೆಂದು ಹೇಳಿದರು.

ಉದ್ಘಾಟಕರಾದ ಶ್ರೀ ಕೆ. ಕೆ. ಶೆಟ್ಟರು ತಮ್ಮ ಭಾಷಣದಲ್ಲಿ ಮಾನವನಿಗಾಗಿ ಕಾನೂನುಗಳಿರಬೇಕೇ ಹೊರತು ಕಾನೂನುಗಳಿಗಾಗಿ ಮನುಷ್ಯನಿರುವುದಲ್ಲ ಎಂದು ಹೇಳಿದರು. "ನಾನು ಜಿಲ್ಲಾ ವಿದ್ಯಾಧಿಕಾರಿಗಳನ್ನು ಕಂಡು ಈ ಬಗ್ಗೆ ಅವರ ನಿಲುವೇನೆಂದು ತಿಳಿಯ ಬಯಸಿದರೂ ಅವರಿಂದ ಸಮರ್ಪಕವಾದ ವಿವರಣೆ ತನಗೆ ದೊರೆತಂತಿಲ್ಲ. "ಈ ಹೊಸ ನಿಯಮದಿಂದ ಸುಮಾರು ೭೦ ಅಧ್ಯಾಪಕರು ಮಾತ್ರ ನಿರುದ್ಯೋಗಿಗಳಾಗುವರೆಂದೂ ಅವರ ಕುರಿತು ಮುಂದೆ ಪರಿಶೀಲಿಸಬಹುದೆಂದೂ ಅವರು ಹೇಳುತ್ತಾರೆ. ಆದರೆ, ನಿರುದ್ಯೋಗಿಗಳನ್ನು ಉದ್ಯೋಗಿಗಳನ್ನಾಗಿ ಮಾಡುವುದನ್ನು ಬಿಟ್ಟು ಉದ್ಯೋಗಿಗಳನ್ನೇ ಈಗ ನಿರುದ್ಯೋಗಿಗಳನ್ನಾಗಿ ಮಾಡುವುದು ಸರಿಯಲ್ಲ" ಎಂದರು. ಸರಕಾರವಾಗಲಿ, ಅಧಿಕಾರಿಗಳೇ ಆಗಲಿ ಈ ಕಾಯಿದೆ ತರುವಾಗ, ಅದರ ಪರಿಣಾಮ ಏನಾಗಬಹುದೆಂದು ಯೋಚಿಸಿ ಸಂಬಂಧಿಸಿದವರೊಡನೆ ಪರ್ಯಾಲೋಚಿಸಬೇಕಾಗಿತ್ತು. ಮೆನೇಜರರ ಅಭಿಪ್ರಾಯಗಳನ್ನೂ ಪಡೆದುಕೊಂಡಿದ್ದರೆ, ಚೆನ್ನಾಗಿತ್ತು. ಒಂದು ಕಾಯಿದೆಯನ್ನು ಜ್ಯಾರಿಗೊಳಿಸುವಾಗ, ಅದಕ್ಕೆ ಅನುಕೂಲವಾದ ವಾತಾವರಣವನ್ನು ಮೊದಲು ಸಿದ್ಧಪಡಿಸಬೇಕಾಗಿತ್ತು' ಎಂದು ಹೇಳಿ, 'ಇಂದಿನ ಕಾಲಸ್ಥಿತಿಗೆ ತಕ್ಕಂತೆ ಮೆನೇಜರರು ನಡೆದುಕೊಳ್ಳಬೇಕು. ಕೆಲವೊಂದು ಮೆನೇಜರರು ಅಧ್ಯಾಪಕರನ್ನು ಯೋಗ್ಯ ರೀತಿಯಲ್ಲಿ ನೋಡಿಕೊಳ್ಳುತ್ತಿಲ್ಲ ಎನ್ನಲಾಗುತ್ತದೆ. ಅವಕ್ಕೆಲ್ಲಾ ಅಸ್ಪದ ಕೊಡದೆ ಗೌರವದಿಂದ ತಮ್ಮ ಸೇವೆಯನ್ನು ಸಲ್ಲಿಸಿ ಹೊಣೆಗಾರಿಕೆಯನ್ನೂ ನಿರ್ವಹಿಸಬೇಕೆಂದು" ವಿನಂತಿಸಿ, ತನ್ನಿಂದ ಆಗಬಹುದಾದ ಸಹಾಯ ನೀಡುವ ವಿಶ್ವಾಸವಿತ್ತರು.

ಆಗ, ಸಭೆಗಾಗಮಿಸಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ಖಾಸಗಿ ಶಾಲೆಗಳ ಹೊಸ ನೀತಿ ಹಳೆ ಮೈಸೂರಿನಲ್ಲಿಲ್ಲ. ಬೊಂಬಾಯಿ ಕರ್ನಾಟಕ ಮತ್ತು ಮದ್ರಾಸ ಕರ್ನಾಟಕಗಳಲ್ಲಿ ಇರುವ ಈ ಸಂಸ್ಥೆಗಳ ಕುರಿತಾದ ತಿಳುವಳಿಕೆ ಮೈಸೂರಿನ ಅಧಿಕಾರಿಗಳಿಗೆ ಇನ್ನೂ ಬಂದಿಲ್ಲ ಎಂದು ಹೇಳಿ, ತಾನು ನೆರೆಯಿಂದ ಪೀಡಿತವಾದ ಪ್ರದೇಶವನ್ನು ಸಂದರ್ಶಿಸಿ ಆವಶ್ಯಕತೆಗಳನ್ನು ತಿಳಿದುಕೊಳ್ಳಲು ಬಂದಿರುವುದಾಗಿ ತಿಳಿಸಿ, ಈ ಸಮ್ಮೇಳನವು ಸೇರಿದ ಉದ್ದೇಶಸಾಧನೆಗೆ ತಾನೂ ನೆರವು ನೀಡುವುದಾಗಿ ಭರವಸೆ ಇತ್ತರು.

ತದನಂತರ ಶ್ರೀ ಎಫ್. ಎಕ್ಸ್. ಡಿ. ಪಿಂಟೊ ಅವರು ಮಾತನಾಡುತ್ತ ಅಧಿಕಾರಿಗಳ ದೋಷವೇ ಆಡಳಿತೆಯ ದೋಷಕ್ಕೆ ಕಾರಣವೆಂದು ಹೇಳಿ, ಸದ್ಯ ಬೆಂಗಳೂರಿಗೆ ತೆರಳಲಿರುವ ನಿಷ್ಠಮಂಡಳಿಕ್ಕೆ ತಾವೂ ಸಹಾಯ ನೀಡುವುದಾಗಿ ಹೇಳಿದರು. ಆ ಮೇಲೆ ಕೆಲವು ಗೊತ್ತುವಳಿಗಳು ಮಂಜೂರಾದುವು.

ಅಧ್ಯಕ್ಷರು ಮಾತನಾಡುತ್ತ, ನಮಗಾದ ಅನ್ಯಾಯವನ್ನು ದೂರಮಾಡುವಂತೆ ಕೇಳಿಕೊಂಡರೆ, ಸರಕಾರ ಇಲ್ಲವೆನ್ನಲಾರದು. ಮೆನೇಜರರ ಸಂಘವು ಬಲಿಷ್ಠವಾಗಿ ಇಂತಹ ಹೊಡೆತಗಳನ್ನು ಎದುರಿಸಬೇಕು, ಮುಂದೆ ಬರಲಿರುವ ಆಘಾತಗಳಿಗಿದು ಮುನ್ಸೂಚನೆ ಎಂದು ಹೇಳಿ, ಸಂಘದ ಸದಸ್ಯರೆಲ್ಲರೂ ತಮ್ಮ ಶಾಲೆಯ ಅಧ್ಯಾಪಕರನ್ನು ಆದರ್ಶ ರೀತಿಯಿಂದ ಕಾಣಬೇಕೆಂದು ಕೇಳಿ ಕೊಂಡರು. ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಗೊತ್ತುವಳಿಗಳು

ತಾ ೯-೮-೫೫ರಂದು ಜರಗಿದ ಉಡುಪಿ ತಾಲೂಕು ಖಾಸಗಿ ಶಾಲಾ ಮೆನೇಜರರ ಸಂಘದ ಸಭೆಯಲ್ಲಿ ಅಂಗೀಕೃತವಾದ ೯ ಗೊತ್ತುವಳಿಗಳಲ್ಲದೆ (ಇವು ತಾ ೨೦-೮-೫೫ರ ನವಯುಗದಲ್ಲಿ ಪ್ರಕಾಶಿತವಾಗಿವೆ) ಇನ್ನೂ ಕೆಲವು ಠರಾವುಗಳು ಈ ಅಧಿವೇಶನದಲ್ಲಿ ಮಂಜೂರಾಗಿವೆ. ಅವುಗಳು ಹೀಗಿವೆ:

೧. ಹೊಸ ರೂಲುಗಳಿಂದಾಗಿ ೧-೬-೫೫ರಿಂದ ಜಿಲ್ಲೆಯ ಅನೇಕ ಖಾಸಗಿ ಶಾಲೆಗಳಲ್ಲಿ ಅನೇಕ ಅಧ್ಯಾಪಕರ ಗ್ರಾಂಟು ತಡೆಹಿಡಿಯಲ್ಪಟ್ಟಿದೆ. ಆದುದರಿಂದ, ಈ ಅಧ್ಯಾಪಕರ ಗ್ರಾಂಟನ್ನು ಹಳೆ ರೂಲಿನ ಪ್ರಕಾರ ಕೂಡಿಸಿ ಕೊಡುವಂತೆ ಕೇಳಿಕೊಳ್ಳುತ್ತದೆ.

೨. ಅಧ್ಯಾಪಕ ವಿದ್ಯಾರ್ಥಿ ದಾಮಾಶಯ ಮತ್ತು ವಿಭಜನಾ ರಾಜರಿಗಳ ಹೆಚ್ಚಳವನ್ನು ರಾಜ್ಯದಲ್ಲಿ ಏಕಪ್ರಕಾರದ ವಿದ್ಯಾಭ್ಯಾಸ ಕ್ರಮವು ಬರುವ ವರೆಗೆ ತಡೆಹಿಡಿಯುವಂತೆ ಕೇಳಿಕೊಳ್ಳುತ್ತದೆ.

೩. ೧-೪-೫೫ರಿಂದ ಅಧ್ಯಾಪಕರ ವೇತನದಲ್ಲಿ ಏರಿಕೆಯಾಗಿದ್ದು ಮೆನೇಜ್‌ಮೆಂಟಿನವರು ಅವರ ಕ್ಷೇಮನಿಧಿಗೆ ವಂತಿಗೆಯನ್ನು ಹೆಚ್ಚಿಗೆ ಕಟ್ಟಬೇಕಾದುದರಿಂದ ಅಂದಿನಿಂದಲೂ ಪ್ರತಿ ವರ್ಷದಲ್ಲಿ ಆಯಾಯ ಶಾಲೆಗೆ ಕೊಟ್ಟದರಲ್ಲಿಯೂ ಈ ಏರಿದ ಸಂಬಳದ ಮೇಲೆಯೂ ಮೈಂಟೈನೆನ್ಸ್ ಗ್ರಾಂಟ್ ಕೊಡಬೇಕೆಂದು ಕೇಳಿಕೊಳ್ಳುತ್ತದೆ.

೪. ೧೦ ಉಪಾಧ್ಯಾಯರಿಗೆ ಮಿಕ್ಕಿರುವ ಪ್ರತಿ ಪ್ರಾಥಮಿಕ ಶಾಲೆಯಲ್ಲಿ ಒಬ್ಬ ಗುಮಾಸ್ತ ನೇಮಿಸುವಂತೆ ಸಾಕಷ್ಟು ಗ್ರಾಂಟು ಕೊಡಬೇಕೆಂದು ಕೇಳಿಕೊಳ್ಳುತ್ತದೆ.

೫. ರಾಜ್ಯದ ಶಾಸನ ಸಭೆಯಲ್ಲಿಯೂ ಇತರ ಸರಕಾರಿ ವಿದ್ಯಾಸಮಿತಿಗಳಲ್ಲಿಯೂ ಪ್ರಾಥಮಿಕ ಶಾಲಾ ಮೆನೇಜರರಿಗೆ ಪ್ರಾತಿನಿಧ್ಯ ಕೊಡಬೇಕೆಂದು ಕೇಳಿಕೊಳ್ಳುತ್ತದೆ.

೬. ಸಭಾ ನಿರ್ಣಯಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸಂಘದ ಅಧ್ಯಕ್ಷರಾದ ಶ್ರೀಮಾನ್ ಟಿ. ಎ. ಪೈ ಅವರ ಮುಂದಾಳುತನದಲ್ಲಿ ವಿದ್ಯಾಮಂತ್ರಿಗಳ ವಾ ಇಲಾಖಾಧಿಕಾರಿಗಳ ಬಳಿಗೊಂದು ನಿಯೋಗವನ್ನು ಕಳಿಸಿಕೊಡಬೇಕೆಂದು ನಿಶ್ಚಯಿಸುತ್ತದೆ.

ಅಲ್ಲಲ್ಲಿಯ ಸುದ್ದಿಸಾರ

ಶ್ರೀಕೃಷ್ಣ ಜಯಂತಿ ಮಹೋತ್ಸವವು—ಕಳೆದ ತಾ. ೨೬ರಲ್ಲಿ ಪರ್ಯಾಯ ಶ್ರೀ ಕೃಷ್ಣಾಪುರ ಮಠದ ಶ್ರೀಮದ್ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಶ್ರೀಕೃಷ್ಣ ಮಠದಲ್ಲಿ ಆಚರಿಸಲ್ಪಟ್ಟಿತು. ಮರುದಿನ ವಿಟ್ಲಪಿಂಡಿಯು ವಿಜೃಂಭಣೆಯಿಂದ ನೆರವೇರಿತು.

ಶ್ರೀಕೃಷ್ಣ ಜಯಂತಿಯ ಅಂಗವಾಗಿ ಉಡುಪಿ ಯಕ್ಷಗಾನ ಕಲಾಮಂಡಲದವರು ಹಲವು ಕಲಾವಿದರ ಕೂಡುವಿಕೆಯಿಂದ ಶ್ರೀಕೃಷ್ಣ ಪಾರಿಜಾತವೆಂಬ ಯಕ್ಷಗಾನ ಕಥಾ ಕಾಲಕ್ಷೇಪವನ್ನು ಜರಗಿಸಿದರು.

ಬೊಂಬಾಯಿಯ ದ. ಕ. ಬ್ರಾಹ್ಮಣರ ಸಂಘದಲ್ಲಿ ಶ್ರೀಕೃಷ್ಣ ಜಯಂತಿಯು ಗೋಕುಲ ಕಟ್ಟಡದಲ್ಲಿ ಗೀತಾ ಗೋವಿಂದ ಸಭಾ ಸದನದಲ್ಲಿ ಶ್ರೀ ಕುಡ್ವಿ ಭುಜಂಗರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪೇಜಾವರ ಮಠಾಧೀಶರೂ ವಡಾಲದ ದ್ವಾರಕಾನಾಥ ಮಠಾಧೀಶರೂ ಸಂದರ್ಭೋಚಿತ ಭಾಷಣವಿತ್ತರು. ಮನರಂಜನೆಯ ಕಾರ್ಯಕ್ರಮಗಳೂ ನೆರವೇರಿದವು.

ಉಡುಪಿ ತಾಲೂಕು ಹಿಂದಿ ಪ್ರಚಾರ ಸಮಿತಿಯ ಆಶ್ರಯದಲ್ಲಿ ಇದೇ ತಾ. ೧ರಿಂದ ಹೊಸ ಹಿಂದೀ ವರ್ಗಗಳು ಆರಂಭವಾಗಲಿವೆ.

ಸಿಂಡಿಕೇಟ್-ನಗರ್‌ಕಾರ್ಸ್ ಬೇಂಕಿನ ಸಮಾವೇಶ ಸಮಾರಂಭವು ಇದೇ ತಾ. ೧ರಲ್ಲಿ ನಗರ್‌ಕಾರ್ಸ್ ಬೇಂಕಿನ ಮಹಾರದಲ್ಲಿ ನಗರ ಸಭಾಧ್ಯಕ್ಷ ಶ್ರೀ ಮಹೇಲ್ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಿಂಡಿಕೇಟಿನ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗಳು ಸ್ವಾಗತಿಸಿ ಪ್ರಚಲಿತ ಬೇಂಕಿಂಗ್ ಪರಿಸ್ಥಿತಿಯ ಕುರಿತು ಮಾತನಾಡಿದರು. ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್, ಜಿ. ಎಸ್. ನಗರ್‌ಕಾರ್, ಸ್ವಾಮಿ ಆದಿದೇವಾನಂದರೇ ಮೊದಲಾದವರು ಮುಖ್ಯ ಅಧ್ಯಕ್ಷರು ಭಾಷಣವಿತ್ತ ಮೇಲೆ ಶ್ರೀ ಕೆ. ಕೆ. ಪೈಗಳು ಕೃತಜ್ಞತೆಯನ್ನರ್ಪಿಸಿದರು.

ಹಳೇ ನಿವಾಸಿಗಳ ಸಭೆ-ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಹಳೇ ನಿವಾಸಿಗಳ ಸಂಘದ ಸಭೆಯು ಕಳೆದ ತಾ ೨೯ರಂದು ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ವರ್ಷಕ್ಕೆ ೧೫ ಜನರ ಕಾರ್ಯಕಾರೀ ಸಮಿತಿಯನ್ನು ರಚಿಸಿದ ಮೇಲೆ ಗ್ರಾಮಾಧಿಕಾರಿಗಳ ವಂಶ ಪಾರಂಪರ್ಯಗಳ ಹಕ್ಕು ಕೊನೆಗೊಳಿಸುವಾಗ ಅವರಿಗೆ ಬೇರೆ ಉದ್ಯೋಗವನು ಕಲ್ಪಿಸಿಕೊಡಬೇಕೆನ್ನುವ ಭೂಮಸೂದೆಯಲ್ಲಿ ಅಳಿಯಸಂತಾನಿಗರಿಗೆ ವಿಶಿಷ್ಟ ಸವಲತನ್ನು ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಇತ್ಯಾದಿ ನಿರ್ಣಯಗಳಾದುವು.

ಉಚ್ಚಿಲ—ಇಲ್ಲಿಯ ಸಬ್ ಪೋಸ್ಟ್ ಆಫೀಸಿನ ಉದ್ಘಾಟನೆಯು ಕಳೆದ ತಾ ೨೦ರಲ್ಲಿ ಶ್ರೀ ಟಿ. ಎ. ಪೈಗಳ ಹಿರಿತನದಲ್ಲಿ ನೆರವೇರಿತು.

ಶ್ರೀ ಮದ್ಭಾಗವತ ತಾತ್ಪರ್ಯ ನಿರ್ಣಯದ ಉದ್ಘಾಟನಾ ಸಮಾರಂಭವು ಶ್ರೀ ಸುಧೀಂದ್ರ ಸೇನಾ ಸಂಘದ ನೇತೃತ್ವದಲ್ಲಿ ಕಳೆದ ತಾ. ೨೬ರಲ್ಲಿ ಶ್ರೀ ಶಿರೂರು ಮಠದ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಸಂಸ್ಕೃತ ಕಾಲೇಜಿನಲ್ಲಿ ಜರಗಿತು. ಗ್ರಂಥೋದ್ಘಾಟನೆಯನ್ನು ಪುತ್ತಿಗೆ ಮಠದ ಶ್ರೀಗಳವರು ನೆರವೇರಿಸಿದರು. ಆರಂಭದಲ್ಲಿ ಶ್ರೀ ಪೈಲೂರು ವಾಸುದೇವರಾಯರು ಸ್ವಾಗತಿಸಿದರು. ಡಾ| ಸುಂದರರಾವ್ ಪೈಗಳವರು ಸಂಘದ ವರದಿಯನ್ನು ವಿವರಿಸಿ ಅಂತ್ಯದಲ್ಲಿ ಧನ್ಯವಾದವಿತ್ತರು.

ಸರ್ವ ಧರ್ಮ ಸಂಸ್ಥೆಗಳ ಜಿಲ್ಲಾ ಪರಿಷತ್ತೊಂದನ್ನು ತಾ. ೧೭ ಮತ್ತು ೧೮ರಲ್ಲಿ ಉಡುಪಿಯಲ್ಲಿ ಜರಗಿಸುವ ವ್ಯವಸ್ಥೆಯಾಗುತ್ತಿದೆ. ಈ ಬಗ್ಗೆ ಪರ್ಯಾಯ ಶ್ರೀ ಕೃಷ್ಣಾಪುರ ಶ್ರೀ ಪಾದಂಗಳವರ ಅಧ್ಯಕ್ಷರಾಗಿರುವ ಸ್ವಾಗತ ಸಮಿತಿಯೊಂದು ರಚಿಸಲ್ಪಟ್ಟಿದೆ. ಈ ಕುರಿತು ತಾ. ೨೩ರಲ್ಲಿ ಶ್ರೀಕೃಷ್ಣಾಪುರ ಮಠದಲ್ಲಿ ಏರ್ಪಡಿಸಿದ ಪತ್ರಿಕಾ ಗೋಷ್ಠಿಯಲ್ಲಿ ಸ್ವಾಗತ ಸಮಿತಿಯ ಪರವಾಗಿ ಶ್ರೀ ಅದಮಾರು ಮಠದ ಶ್ರೀ ಪಾದಂಗಳವರು ಪರಿಷತ್ತಿನ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಜಿಲ್ಲೆಯ ವಿವಿಧ ಧರ್ಮ ಸಂಸ್ಥೆಗಳ ಸಮ್ಮೇಳನ ಜರಗಿದ ಮೇಲೆ ಪ್ರಾಂತೀಯ ಪರಿಷತ್ತನ್ನು ಕೂಡಾ ಜರಗಿಸಲಾಗುವುದೆಂದು ಶ್ರೀಗಳವರು ತಿಳಿಸಿರುವರು.

ಕೆನರಾ ಬೇಂಕಿನ ಜ್ಯುಬಿಲಿ ಎಜುಕೇಶನ್ ಫಂಡು

ಕೆನರಾ ಬೇಂಕಿನ ಜ್ಯುಬಿಲಿ ಎಜುಕೇಶನ್ ಫಂಡಿನ ವಿದ್ಯಾರ್ಥಿಸದಸ್ಯರನ್ನು ಎದುರುಗೊಳ್ಳುವ ಸಮಾರಂಭವೊಂದು ತಾ. ೨೨ರಂದು ನ್ಯಾಯಮೂರ್ತಿ ಶ್ರೀ ಎ. ನಾರಾಯಣ ಪೈ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಲ್ಲಿ ಜರಗಿತು. ಬೇಂಕಿನ ಅಧ್ಯಕ್ಷ ಶ್ರೀ ಎ. ದಾಮೋದರ ಪೈಯವರು ಸ್ವಾಗತಿಸುತ್ತಾ, ಕೆನರಾ ಬೇಂಕು ಈ ವರ್ಷ ೧೦೩ ವಿದ್ಯಾರ್ಥಿಗಳಿಗೆ ಸಾಲರೂಪದಲ್ಲಿ ಸಹಾಯ ನೀಡಿದೆ ಎಂದೂ ಹೇಳಿ ಸಾಲವಿತ್ತ ಮೊಬಲಗು ೧ಲಕ್ಷ ಒಂಭತ್ತುಸಾವಿರಕ್ಕೂ ಮೀರಿದೆ ಎಂದೂ ಹೇಳಿದರು. ಅಲ್ಲದೇ ಬುಕ್ ಬೇಂಕ್ ಸೌಲಭ್ಯವನ್ನೂ ಭಾರತದ ಬೇರೆ ಬೇರೆ ರಾಜ್ಯಗಳ ಒಟ್ಟು ೨೫೦ ವಿದ್ಯಾರ್ಥಿಗಳು ಉಪಭೋಗಿಸುತಿದ್ದಾರೆ ಎಂದರು. ಬೇಂಕಿನ ಡೈರೆಕ್ಟರಾದ ಶ್ರೀ ಜಿನಾಭಾಯಿ ದೇಸಾಯಿಯವರು ಬುಕ್ ಬೇಂಕು ಸೌಕರ್ಯವನ್ನು ಮೈಸೂರು, ಹುಬ್ಬಳ್ಳಿ, ಕೊಯಂಬುತ್ತೂರು, ಮೊದಲಾದೆಡೆಗಳಿಗೂ ವಿಸ್ತರಿಸುವ ಯೋಚನೆ ಇದೆ ಎಂದರು. ಬೆಂಗಳೂರಿನ ವಿವಿಧ ಕಾಲೇಜುಗಳ ವಿದ್ಯಾರ್ಥಿ ಸದಸ್ಯರು, ಈ ಉದ್ಯಮವನ್ನು ಪ್ರಶಂಸಿಸಿದರು. ಅಧ್ಯಕ್ಷರು, ಇಂತಹ ಸೌಕರ್ಯವು ಶ್ರೀಮಂತ ರಾಷ್ಟ್ರ ಅಮೇರಿಕೆಯಲ್ಲಿಯೂ ಇರುವುದೆಂದೂ ಇದರಿಂದಾಗಿ ಮಹಾದಾನವಾದ ವಿದ್ಯಾದಾನಕ್ಕೆ ಸಹಾಯದೊರೆಯುವುದೆಂದೂ ಹೇಳಿದರು. ಈ ಸಮಾರಂಭದಲ್ಲಿ ಉಪಸ್ಥಿತರಿದ್ದ ಅಮೇರಿಕೆಯ ನ್ಯಾಶನಲ್ ಸಿಟಿ ಬೇಂಕಿನ ಭಾರತೀಯ ಪ್ರತಿನಿಧಿ ಶ್ರೀ ಸಿಡ್ನಿ ಡೇರ್‌ಪೂಡರು ಕೆನರಾ ಬೇಂಕಿನ ಯೋಜನೆಗಳನ್ನು ಕೊಂಡಾಡಿದರು. ವಿದ್ಯಾರ್ಥಿಗಳಿಂದ ಮನರಂಜನಾ ಕಾರ್ಯಕ್ರಮಗಳಾದ ಮೇಲೆ ಜ್ಯುಬಿಲಿ ಫಂಡಿನ ಕಾರ್ಯದರ್ಶಿ ಶ್ರೀ ಎಸ್. ಆರ್. ಪ್ರಭುಗಳು ಧನ್ಯವಾದವಿತ್ತರು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮೂಲಕ ಕಳುಹಿಸಲಾಗುವುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಸಂಸ್ಮರಣೆ

(೫ನೇ ಪುಟದಿಂದ)

ಈ ಹೊಸ ಮಾದರಿಯ ಚಳವಳಿವನ್ನು ನಿ ಶ್ಶಸ್ತ್ರರಾದ ಭಾರತೀಯರು ಬಹು ಸಂಘಟಿತನಾಗಿ ನಡೆಸುತ್ತಿದ್ದರು. ಇದನ್ನು ಶಸ್ತ್ರನಾಗಿ ಎದುರಿಸಲಾಯಿತು. ಸಾವಿರಾರು ಜನರನ್ನು ಜೇಲಿಗಟ್ಟಿ ಚಿತ್ರಹಿಂಸೆಗೆ ಗುರಿಪಡಿಸಲಾಯಿತು. ನೂರಾರು ಜನರನ್ನು ಗುಂಡಿಕ್ಕಲಾಯಿತು. ಅದರ ಬೆನ್ನಲ್ಲೇ ಜಲಿಯನ್‌ವಾಲಾ ಬಾಗಿನ ದುರಂತ ಸಂಭವಿಸಿತು. ಜಾತ್ರೆಗೆ ಸೇರಿದ ಸ್ತ್ರೀ-ಪುರುಷ, ಬಾಲಕರಾದಿಯಾಗಿ ಎಲ್ಲರನ್ನೂ ಹಟ್ಟ ಹಗಲಲ್ಲೇ ಕಗ್ಗೊಲೆಮಾಡಿ ಬ್ರಿಟಿಷರ ವಿರುದ್ಧ ಸೆಟೆದು ನಿಂತವರಿಗೆ ಎದೆ ಬಿಗಿಯಾಗುವಂತೆ ಒಂದು ಪಾಠ ಹಾಕಿಕೊಟ್ಟಿ ಹಾಗಾಯಿತೆಂದು ಬ್ರಿಟಿಷರು ನೆನೆಸಿದರು. ಆದರೆ ಬ್ರಿಟಿಷರು ನೆನೆಸಿದುದರ ವಿರುದ್ಧ ಪರಿಣಾಮವಾಯಿತು. ಈ ಜಲಿಯನ್‌ವಾಲಾ ಬಾಗಿನ ದುರಂತ ಬ್ರಿಟಿಷಿನ ಮುಳುಗುವ ಸೂರ್ಯನಿಗೆ ಓಕುಳಿಯ ಲೇಪ ಮಾಡಿ ಅವನಿಗೆ ಅಸ್ತಾಚಲದ ನೆನಪು ಹುಟ್ಟಿಸಿತು. ಇಡೀ ಭಾರತವೇ ಈ ಅಮಾನುಷ ಚಿತ್ರಹಿಂಸೆಯ ವಿರುದ್ಧ ಸಂಘಟಿತವಾಯಿತು. ಆ ಬಳಿಕ ನಡೆದ ಉಪ್ಪಿನ ಸತ್ಯಾಗ್ರಹ, ಗಾಂಧೀಜೀಯ ದಾಂಡಿ ಯಾತ್ರೆ ಸ್ವಾತಂತ್ರ್ಯ ಸಮರದ ಪ್ರಾಮುಖ್ಯ ಮೈಲುಗಲ್ಲಾಗಿವೆ. ಇಲ್ಲೂ ಜನಮನದ ಅವ್ಯಾಹತವಾಗಿ ಸಾಗಿತು. ಆದರೆ ನಿಶ್ಶಸ್ತ್ರರಾದ ಭಾರತೀಯರು ಕೇವಲ ಸೇಡಿನ ಸೆಲೆಯಲ್ಲಿ ಒಲಿವಾಣಗೊಳ್ಳಬಾರದೆಂದು ಗಾಂಧೀಜೀ ಸತ್ಯಾಗ್ರಹದ ಪವಿತ್ರ ಅಸ್ತ್ರವನ್ನು ಜನತೆಗಿತ್ತರು. ಗಾಂಧೀಜೀಯವರಿಗೆ ಮೋತಿಲಾಲ್ ನೆಹರೂ, ಜವಾಹರಲಾಲ್, ಆಜಾದ್, ಪ್ರಸಾದ್, ವಲ್ಲಭಭಾಯಿ ಪಟೇಲ್, ಸಿ. ರಾಜಗೋಪಾಲಾಚಾರಿ, ಸುಭಾಸ್‌ರಂತಹವರು ಬೆಂಬಲಿಗರಾಗಿ ನಿಂತರು.

ಪ್ರಥಮ ಸ್ವಾತಂತ್ರ್ಯ ಯುದ್ಧಕಾಲದ ಶ್ರೀ ಸಂಘಟನೆ, ಅನೈಕ್ಯತೆಯಿಂದ ಆ ಬಂಡಾಯವು ವಿಫಲಗೊಳ್ಳುವಂತಾದರೂ, ಈ ಬಾರಿ ಕನ್ಯಾಕುಮಾರಿಯಿಂದ ಹಿಮಾಚಲದ ವರೆಗೆ ಸ್ವಾತಂತ್ರ್ಯದ ಬಗೆಗೆ ಜನತೆ ಒಂದುಗೂಡಿದ್ದರಿಂದ ಬ್ರಿಟಿಷರಿಗೆ ಯಾವ ಕುಟಿಲೋಪಾಯವನ್ನೂ ನಡೆಸಲು ಸಾಧ್ಯವಾಗಲಿಲ್ಲ. ಆದರೂ ರಾಜಕೀಯ ಆಮಿಷ ತೋರಿಸಿ ಈ ಅಪೂರ್ವ ಸಂಘಟನೆ ಮುರಿಯಲು ತವಕಿಸುತ್ತಿದ್ದಾಗಲೇ ದ್ವಿತೀಯ ಮಹಾಯುದ್ಧದ ಘೋಷಣೆ ತೂರಿಬಂತು. ಇಡೀ ಬ್ರಿಟಿಷ್ ಸಾಮ್ರಾಜ್ಯವೇ ಹಿಟ್ಲರನ ಭೀಕರ ತಾಡನಕ್ಕೆ ಒಲಿಬಿದ್ದ ಕಾಲವದು. ಆ ಸಂದರ್ಭದಲ್ಲೇ ಬ್ರಿಟಿಷರು, ಯುದ್ಧಾನಂತರ ಸ್ವಾತಂತ್ರ್ಯದ ಕೊಡುಗೆ ನೀಡಿದರು. ಇದನ್ನು ಮೊದಲ ಯುದ್ಧದ ಅನುಭವ ಪಡೆದ ನಮ್ಮ ಮುಂದಾಳುಗಳು ನಂಬಲಿಲ್ಲ. ಸ್ವಾಯತ್ತಾಧಿಕಾರವನ್ನು ಕೇಳುತ್ತಿದ್ದವರು ಪೂರ್ಣ ಸ್ವಾತಂತ್ರ್ಯವನ್ನೇ ಕೇಳಿದರು. ಸರಕಾರದ ಯಾವ ಉಪಾಯವೂ ನಡೆಯದೆ ೧೯೪೨ರಲ್ಲಿ ಬಹು ತೀವ್ರಗತಿಯ ಹಾಗೂ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲೇ ಪ್ರಾಮುಖ್ಯತೆ ಪಡೆದ 'ಕ್ವಿಟ್ ಇಂಡಿಯಾ' ಚಳವಳಿಯು ಪ್ರಾರಂಭವಾಯಿತು. ಈ ಚಳುವಳಿಯು ಒಂದು ಯೋಗ್ಯ ಮಾರ್ಗದರ್ಶನದಲ್ಲಿ ನಡೆಸಲು ನಿಶ್ಚೈಸಿದ್ದ ಗಾಂಧೀಜಿ, ನೆಹರೂರವರಂತಹ ಭಾರತದ ಪ್ರಥಮ ಶ್ರೇಣಿಯ ಮುಂದಾಳುಗಳನ್ನು ಮುನ್ಸೂಚನೆಯಿಲ್ಲದೆ ಸೆರೆಮನೆಗಟ್ಟಿದರು. ಇದರಿಂದ ಖತಿಗೊಂಡ ಜನರು ಬ್ರಿಟಿಷರ ವಿರುದ್ಧ ಬಂಡಾಯವೆದ್ದರು. ದೇಶದಾದ್ಯಂತ ವಿಧ್ವಂಸಕ ಚಟುವಟಿಕೆಗಳೂ ನಡೆದುವು. ಭಾರತೀಯರ ಈ ಅಸಹಕಾರ ಚಳವಳಿಯಿಂದ ಇಡೀ ದೇಶದಲ್ಲೇ ಅರಾಜಕತೆ ಎದ್ದಿತು. ಇದಕ್ಕೆ ಕರಿಯಾಗಿ ಜಪಾನಿನ ಸಹಕಾರ ಪಡೆದು ಜಪಾನಿಯರು ಸೆರೆಹಿಡಿದ ಭಾರತೀಯರನ್ನು ಸಂಘಟಿಸಿ ಸುಭಾಷ್‌ಚಂದ್ರರು ಭಾರತದ ಗಡಿಗೆ ಧಾಳಿಮಾಡಲು ತೊಡಗಿ ಬಿಟ್ಟಿದ್ದರು. ಗಾಂಧೀಜೀಯವರು ಸೆರೆಮನೆಯಲ್ಲಿ ಆಮರಣ ಉಪವಾಸವನ್ನಾಚರಿಸಿದರು. ಇದರಿಂದ ಕಂಗೆಟ್ಟ ಭಾರತ ಸರಕಾರ ಧುರೀಣರನ್ನು ಬಿಡುಗಡೆಗೊಳಿಸಿತು. ಬ್ರಿಟಿಷ್ ಸರಕಾರದ ವಿರುದ್ಧ ಇದೇ ಸಮಯದಲ್ಲಿ ನಾವಿಕರ ಬಂಡಾಯ ನಡೆಯಿತು. ಸಂಪರ್ಕ ಖಾತೆಯ ಕೆಲಸಗಾರರ ಚಳವಳ ನಡೆಯಿತು. ಉಳಿದವರೂ ಚಳವಳದ ಬೆದರಿಕೆ ಹಾಕಿದರು.

ಈ ಎಲ್ಲ ಸಂದರ್ಭ ನೋಡಿ ಇನ್ನೊಂದು ನರಹತ್ಯಾಕಾಂಡ ನಿರ್ಮಿಸಿ ಭಾರತದ ಶಾಶ್ವತ ವೈರತ್ವ ಕಟ್ಟಿಕೊಳ್ಳುವ ಬದಲು ಮಿತ್ರರಾಗಿಯೇ ಅಗಲೋಣವೆಂದು ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯದ ಕೊಡುಗೆಯಿತ್ತರು. ಈ ಸಂದರ್ಭದಲ್ಲೂ ತಮ್ಮ ಕುಟಿಲ ರಾಜಕಾರಣ ತಂತ್ರವನ್ನು ಪ್ರಯೋಗಿಸದೆ ಬಿಡಲಿಲ್ಲ. ಒಂದಿದ್ದ ಭಾರತವನ್ನು ಹಿಂದೂ-ಮುಸ್ಲಿಂ ಭೇದ ಪ್ರಚೋದಿಸಿ ಇಭ್ಭಾಗ ಮಾಡಿಕೊಟ್ಟರು. ಆಳರಸರ ಸಮಸ್ಯೆಯನ್ನು ಬೃಹದಾಕಾರ ಮಾಡಿ ಬಿಟ್ಟು ಹೋದರು. ಪಾಕಿಸ್ತಾನದ ನಿರ್ಮಾಣವನ್ನು ಬಹು ಜಾಣತನದಿಂದ ನಿರ್ಮಿಸಿ, ಆ ಮೂಲಕ ನಿತ್ಯ ತಂಟೆಯನ್ನು ಏಳುವಂತೆ ಮಾಡಿ ಅದರ ಹುಲ್ಲಾಭ ಪಡೆಯಲು ಯತ್ನಿಸಿದರು. ಆದರೆ ಬ್ರಿಟಿಷರ ಕನಸೊಂದೂ ನನಸಾಗಲಿಲ್ಲ. ಆಳರಸರು ವಜ್ರದೇಹಿ ಸರ್ದಾರ್ ಪಟೇಲರಂತಹ ಅಹಿಂಸಾ ಪರಶುರಾಮರಿಗೆ ಮಣಿದೇ ಬಿಟ್ಟರು.

ಪಾಕಿಸ್ತಾನವು ನೋಡುತ್ತಿದ್ದ ಹಾಗೆ ಭಾರತವು ಯೋಜನೆಗಳ ಮೂಲಕ ತನ್ನ ಆಂತರಿಕ ಶಕ್ತಿ ಹೆಚ್ಚಿಸುತ್ತಿದೆ. ಕರಿ ಜನಾಂಗವಾದ ಭಾರತವು ಒಂದಲ್ಲ ಒಂದು ದಿನ ತಮ್ಮ ಆಂಕಿತಕ್ಕೆ ಖಂಡಿತ ಬರುತ್ತದೆ ಎಂದು ಲೆಕ್ಕ ಹಾಕುತ್ತಿದ್ದ ಬ್ರಿಟಿಷರು ಇಂದು ಇಡೀ ಪ್ರಪಂಚದಲ್ಲಿ ಭಾರತವು ಪಡೆದ ಗೌರವ ಸ್ಥಾನವನ್ನು ಕತ್ತೆತ್ತಿ ನೋಡುವ ಪ್ರಮೇಯ ಬಂದಿದೆ. ಇಂದು ಕಾಮನವೆಲ್ತ್ ರಾಷ್ಟ್ರ ಕೂಟದಲ್ಲಿ ಭಾರತದ ಧ್ವನಿಗಿರುವ ಪ್ರಾಶಸ್ತ್ಯ, ಲೋಕದ ಅಗ್ರಗಣ್ಯ ರಾಷ್ಟ್ರಗಳು ಭಾರತಕ್ಕೆ ನೀಡುವ ಗೌರವವನ್ನು ಕಂಡು ಇಡೀ ಲೋಕವೇ ಬೆರಗಾಗಿದೆ. ಶಾಂತಿ ಪ್ರಿಯ ರಾಷ್ಟ್ರಗಳ ಕೈವಾರಿಯಾದ ಭಾರತವು ಲೋಕದ ಅಜೇಯ ಶಕ್ತಿಯಾಗಿದೆ.

ಭಾರತೀಯರ ಪಾರಂಪರ್ಯಗತ ಆತ್ಮಶಕ್ತಿಯೇ ಬ್ರಿಟಿಷರ ಶಕ್ತಿಯನ್ನು ಕೆಡವಿತು. ಭಾರತವು ಸ್ವಾತಂತ್ರ್ಯ ಸಮರಗಳನ್ನೆದುರಿಸಿತು. ಭಾರತವು ಆಧ್ಯಾತ್ಮಿಕ ಧ್ಯೇಯವನ್ನು ರಾಜಕೀಯ ಧರ್ಮದೊಂದಿಗೆ ತಾದಾತ್ಮ್ಯಗೊಳಿಸಿದುದರಿಂದಲೇ "ಸತ್ಯಮೇವ ಜಯತೇ" ಎಂಬ ನೀತಿಯನ್ನು ನಿಷ್ಠೆಯಿಂದ ಪಾಲಿಸಿದುದಾಗಿದೆ. ಅಶೋಕನ ಅಹಿಂಸಾ ನೀತಿಗೆ ಕಟಿ ಬದ್ಧವಾಗಿ ಅವನ ಸಂಕೇತವನ್ನೇ ತನ್ನ ರಾಜ ಲಾಂಛನವಾಗಿ ಅಂಗೀಕರಿಸಿಕೊಂಡುದರಿಂದಲೇ ಭಾರತದ ಶಕ್ತಿ ಚಿರಂಜೀವಿಯಾಯಿತು. ಅದು ಚಿರಂತನವಾಗುವುದೂ ನಿಶ್ಚಯ!

ಜೈ ಹಿಂದ್!

—ಎನ್. ನಾರಾಯಣ ಬಲ್ಲಾಳ.

ಭಾವಕಥೆಗಳು

ಉಪದೇಶ ಯಾರಿಗೆ?

ಒಂದು ಸುಪ್ರಭಾತದ ಸಮಯ ಧರ್ಮೋಪದೇಶಕನು ತನ್ನ ಭಕ್ತವೃಂದಕ್ಕೆ ಉಪದೇಶವೀಯುತ್ತಿದ್ದನು— "ಇಂದು ಏಕಾದಶಿಯ ವ್ರತದ ದಿನ, ಇಂದು ಯಾರು ವ್ರತ ಮಾಡುವುದಿಲ್ಲವೋ ಅವರಿಗೆ ಪಾಪ ತಗಲುತ್ತದೆ. ಪಾಪದ ಪುರಸ್ಕಾರವೇ ರೋಗಗಳು. ಪ್ರತಿಯೊಬ್ಬ ಮಾನವನೂ ರೋಗಗಳಿಂದ ದೂರವಿರಬೇಕೆಂಬುದೇ ದೇವರ ಆದೇಶ. ಆದುದರಿಂದ ಇವತ್ತು ಎಲ್ಲರೂ ಉಪವಾಸ ಆಚರಿಸಬೇಕು. ಯಾರಾದರೂ ಅಡಿಗೆ ಮಾಡಿಟ್ಟಿದ್ದರೆ, ಅದನ್ನು ಹಸ್ಸು ಕಾಗೆ ನಾಯಿ ಬೆಕ್ಕುಗಳಿಗೆ ಎರಚಿರಿ ಎಂದೇ ನನ್ನ ಉಪದೇಶ".

ಧರ್ಮೋಪದೇಶಕನ ಧರ್ಮಕಥನವ ಶ್ರಾವಕಳಾಗಿ ಅವನ ಮಡದಿಯೂ ಕುಳಿತಿದ್ದಳು. ಈ ಉಪದೇಶವು ಅವಳ ಮೇಲೆ ಬಹಳ ಪ್ರಭಾವ ಬೀರಿತು. ಧರ್ಮೋಪದೇಶಕನ ಮಡದಿಯು ಕೂಡಲೇ ತನ್ನ ಮನೆಗೆ ಹೋಗಿ ಅಲ್ಲಿ ಅರ್ಧ ಬೇಯಿಸಲ್ಪಟ್ಟ ಅನ್ನವನ್ನು ಹಸ್ಸು ಕಾಗೆ, ನಾಯಿ ಬೆಕ್ಕುಗಳಿಗೆ ಎರಚಿದಳು. ಪ್ರೇಕ್ಷಕರು ಧರ್ಮೋಪದೇಶಕನನ್ನು ಮತ್ತವನ ಮಡದಿಯನ್ನು ಬಹುವಾಗಿ ಹೊಗಳಿದರು. "ಇವರೆಷ್ಟು ಧಾರ್ಮಿಕರು!" ಎಂದುದ್ಗರಿಸಿತು ಜನ.

ಧರ್ಮೋಪದೇಶಕನು ಮನೆಗೆ ಬಂದಾಗ ನಡೆದ ಸರ್ವ ಘಟನೆಯನ್ನೂ ಕೇಳಿ ತಿಳಿದು ತುಂಬಾ ವ್ಯಾಕುಲವಾದನು, ಅವನು ತನ್ನ ಮಡದಿಗೆ—"ನೀನೊಂದು ಹಳ್ಳಿಗುಗ್ಗು. ಧರ್ಮೋಪದೇಶಕನ ಉಪದೇಶ ತನ್ನ ಪರಿಗಾಗಿಯಲ್ಲ, ಇನ್ನೊಬ್ಬರಿಗಾಗಿ ಇರುತ್ತದೆಂಬುದೂ ತಿಳಿಯದೇ?" ಎಂದನು.

ಪುನಃ ಧರ್ಮೋಪದೇಶಕನು— "ನನ್ನ ಉಪದೇಶವನ್ನು ಮನಃಪೂರ್ವಕವಾಗಿ ಕೇಳಿ, ಉಪದೇಶದಂತೆ ಭಕ್ತಿಪೂರ್ಣರಾಗಿ ವರ್ತಿಸುವುದು ನನ್ನ ಭಕ್ತರ ಕೆಲಸ. ಜನರೊಡನೆ ಕುಳಿತು ತಾನು ಕೇಳಿದ ಉಪದೇಶವನ್ನು ಅಲ್ಲಿಯೇ ಬಿಟ್ಟುಬರುವುದು ನಿನ್ನ ಧರ್ಮ ನನ್ನ ಮತ್ತು ನಿನ್ನ ಧರ್ಮ ಸಾಮಾನ್ಯ ಜನರ ಧರ್ಮಕ್ಕಿಂತ ಭಿನ್ನವಾಗಿದೆ" ಎಂದು ವಿವರಿಸಿದನು.

ಅಹಂಕಾರ!

ಮಾನವನ ಸೃಷ್ಟಿಯ ನಂತರ ಪ್ರಕೃತಿಯು ಯಾವುದೋ ಅದ್ಭುತ ಶಕ್ತಿಯೊಂದು, ಅವನ ಕಿವಿಯಲ್ಲಿ ಹಲವಾರು ಮಾತುಗಳನ್ನು ಹೇಳಿತು—"ಜಗತ್ತಿನಲ್ಲಿ ನಿನ್ನಂಥವರು ಯಾರೂ ಇಲ್ಲ, ನೀನು ಅದ್ವಿತೀಯ"ಎಂಬುದು ಅದರಲ್ಲೊಂದು.

ಆದರೆ ಮಾನವನು ಸರ್ವವನ್ನೂ ಮರೆತು ಬಿಟ್ಟರೂ ಈ ಒಂದು ಮಾತನ್ನು ಮಾತ್ರ ಮರೆಯಲಿಲ್ಲ. ಅವನು ತನ್ನನ್ನು ತಾನು ಎಲ್ಲಾ ಕಡೆಗಳಲ್ಲಿಯೂ ಎಲ್ಲಾ ಸಮಯದಲ್ಲಿಯೂ ಅದ್ವಿತೀಯನೆಂದೇ ತಿಳಿಯತೊಡಗಿದನು.

ಆದರೆ ಅವನು ತನ್ನನ್ನು ತಾನು ಅದ್ವಿತೀಯನೆಂದು ತಿಳಿದು ಸುಮ್ಮನಿರಲಿಲ್ಲ. ಇತರರೂ ತನ್ನನ್ನು ಅದ್ವಿತೀಯನೆಂದು ತಿಳಿದು ಗೌರವಿಸಬೇಕೆಂದು ಆಶಿಸಿದನು.

ಆದುದರಿಂದಲೇ ಮಾನವ ಜೀವನ ಮಾರ್ಗವು ಉತ್ಸಾಹಹೀನವಾಗುತ್ತದೆ, ಜೀವನವು ಮುರುಟಿ ಕಳಾಹೀನವಾಗಿ ಕಿರಿದಾಗುತ್ತದೆ. ಇದರಿಂದಲೇ ಯುದ್ಧ ಜಗಳಗಳು ಪ್ರಾರಂಭವಾಗಿ, ಅವನು ಎಲ್ಲರನ್ನೂ ತನ್ನೆಡೆಗೆ ಸೆಳೆಯತೊಡಗುತ್ತಾನೆ.

—ಶ್ರೀ ಎಸ್. ಎಂ. ಶೆಟ್ಟಿ,
ಶಿಮುಂಜೆಪರಾರಿ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

R. C. OP. No. 13/1959

ಶ್ರೀ ಕುಣ್ಣಾಂಡಿಸ ಅಮ್ಮದೇವರ ಭಂಡಾರ ಯದ್ರ ಟ್ರಸ್ಟಿ ಮತ್ತು ಮೆನೇಜರ ಪ್ರಸ್ತ ಶ್ರೀ ಲಲಿತ ಕೀರ್ತಿ ಭಟಾರಕಜೀಯ ಸ್ವಾಮಿಯು— ಅರ್ಜಿದಾರರು

ಕುಸುಮೂಜಿ ಸದಾ— ಎದ್ರಿರು

೩ನೇ ಎದ್ರಿಯು ಯಶೋವತಿ ಕುಸುಮೂಜಿ ಮಗಳು ಕಾರ್ಕಳ ಕೃಷಾ ದಾನ್ಸಾಲೆಯಲ್ಲಿರುವವರು, ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ-

ನೀವು ನಮ್ಮರು ಅರ್ಜಿದಾರ ಮಠದ ವಳಿಗೆ ಬಾಡಿಗೆಗೆ ವೈಶಿಕರಿಂದು ಅನುಭವಿಸಿ ಬರುವ ಮನೆಯ ಅಂಶವನ್ನು ಸ್ವಾಧೀನತೆ ಕೇಳಿ ಅರ್ಜಿದಾರರು ದಾಖಲ್ಲುಮಾಡಿದ ಮೇಲಿನ ಅರ್ಜಿಯು ತಾ. 10—9—59ಕ್ಕೆ ನಿಮಗೆ ಅಪ್ಪಿರ ನೋಟೀಸಿನ ಬಗ್ಗೆ ಇಟ್ಟದೆ. ಅಕ್ಷೇಪ ಇದ್ರೆ ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. V. Kamath,
Advocate for petitioner.

Karkal, 31—8—59.

ಗೋವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ, ತನ್ನುಪ್ಪಕ್ಕೆ ತಾನೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—3—0

ನವಯುಗ ಪ್ರೆಸ್, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಅನುಭವ

ಮರ್ಯಾದೆ ಉಳಿಸಿದ ವೇಷಭೂಷಣಗಳು

ಎಂದೂ ಕೊಡದೆ ತಪ್ಪಿತೊಟ್ಟ ಆ ಖಾದಿ ಉಡುಗೆಗಳೇ ನನ್ನ ಬಗ್ಗೆ ಪೋಲೀಸು ಅಧಿಕಾರಿಗಳಲ್ಲಿ ಗೌರವಾದರದ ಭಾವನೆಯನ್ನು ಹುಟ್ಟಿಸಿತು.

ಪೂನಾದಲ್ಲಿ ನನ್ನ ಉಚ್ಚ ಶಿಕ್ಷಣ ಮುಗಿದಿತ್ತು. ಮನೆಗೆ — (ದಾವಣಗೆರೆ) ಬಂದು ನಾಲ್ಕೈದು ದಿನವಾಗಿತ್ತು—ಅಂದಿನ ಪೇಪರಿನಲ್ಲಿ ನನ್ನ M. A. ಪರೀಕ್ಷೆಯ ಫಲಿತಾಂಶ ಹೊರ ಬಂದಿತ್ತು. ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿದ ಹೆಮ್ಮೆಯಿಂದ ಮಿತ್ರರನ್ನು ಕಾಣಲು ಊರೊಳಗೆ ಹೋಗೋಣವೆಂದೆ. ಆದರೆ ಅಮ್ಮ ನನ್ನ ಅರಿವೆಗಳನ್ನೆಲ್ಲ ದೋಬಿಗೆ ಕೊಟ್ಟದ್ದರಿಂದ ನನ್ನ ಉನ್ಮತ್ತತೆ—ಸ್ವಲ್ಪ ತಗ್ಗಿತಾದರೂ ಅಣ್ಣನ ಅರಿವೆಗಳಲ್ಲಿ ಒಂದು ಪಾಯಿಜಾಮು ಇನ್ನೊಂದು ಜುಬ್ಬ ಧರಿಸಿದೆ. ನನ್ನ ಮತ್ತು ಅಣ್ಣನ ನಿಲುವಿಕೆ ಸರಿಹೋಲುತ್ತಿದ್ದ ಮೂಲಕ ಅವನ ಅರಿವೆಗಳು ನನಗೆ ಹೊಂದುತ್ತಿದ್ದವು.

ನನ್ನಣ್ಣ ಊರಲ್ಲಿಯೊಬ್ಬ ಸಮಾಜಕಾರ್ಯಕರ್ತರಾಗಿದ್ದರು. ಅವರು ಧರಿಸುತ್ತಿದ್ದ ಬಟ್ಟೆಗಳೆಲ್ಲ ಖಾದಿಯವು. ಅರಿವೆಗೆ ಇಸ್ತ್ರಿ ಹಾಕುವ ರೂಢಿಯನ್ನು ಅವರು ಎಂದೋ ಬಿಟ್ಟಿದ್ದರು. ಅಲ್ಲದೆ ಖಾದಿ ಅರಿವೆಗೆ ಇಸ್ತ್ರಿ ನಿಲ್ಲುತ್ತಲೂ ಇರಲಿಲ್ಲ!! ಅಂತೂ ಮರ್ಯಾದೆಯಂತೆ ಅರಿವೆ ಧರಿಸಿ ಹೊರ ಹೊರಟೆ—ಸ್ಯಾಕಲ್ ತಳ್ಳುತ್ತಾ!

ನನ್ನ ವಿಚಾರವೂ ಆನಂದೋತ್ಸಾಹವೂ. ರಸ್ತೆಗುಂಟ ಪರಿಚಿತರ ನಿರೀಕ್ಷಣೆಯಲ್ಲಿದ್ದ ಮೂಲಕ ಇನ್ನಾವ ಪರಿವೆಯೂ ಇರಲಿಲ್ಲ! ಹೋಗುತ್ತಿದ್ದಂತೆ. ರಸ್ತೆಯ ಬಲಬಾಜುವಿನಲ್ಲಿಯ "ಫ್ರೆಂಡ್ಸ ಕ್ಲಬ್ಬ"ಗೆ ನೇರವಾಗಿ ತಿರುಗಿದೆ—ಕೂಟದಲ್ಲಿ ನಿಯಾಮಕ ಪೋಲೀಸು ಶೀಟಿ ಹೊಡೆದು ನನ್ನನ್ನು ಕರೆದ—ಎರಡನೇ ಶೀಟಿಗೆ ನಿಲ್ಲಲೇ ಬೇಕಾಯ್ತು!

"ಏನ್ರೀ ನೀವು wrong side ಸ್ಯಾಕಲ್ ಬಿಡಬಾರದೆಂದು ತಿಳಿದೂ ಹೊಗುತ್ತಿದ್ದೀರಿ" ಎಂದ—

ನಾನು ರಸ್ತೆಯ ಬಲಭಾಗದಲ್ಲಿ ಸ್ಯಾಕಲ್ ಸವಾರಿಮಾಡುತ್ತಿದ್ದ ಜ್ಞಾಪಕ ಬಂದು—"ಏನೋ ಅರ್ಜಂಟ್ ಕೆಲ್ಸ ಇತ್ತಪ್ಪಾ—ತಿಳಿಯಲಿಲ್ಲ! ನನಗೂ ಸ್ಯಾಕಲ್ ಬಿಡಲು ಗೊತ್ತು. ಇಲ್ಲಿ ಯಾವ ದೊಡ್ಡ Traffic ಇದೆಯಂತೆ? ಅಂತ ಬಲಕ್ಕೇ ಹೊರಳಿಸಿದೆ" ಎಂದೆ.

ಪೋಲೀಸು ದುರಗುಟ್ಟುತ್ತಾ "ಎಲ್ಲಾ ಗೊತ್ತಿದ್ದೇ ಬಿಡಿ, ನಿಮ್ಮಂಥ ನೂರು ಕಾಲೇಜ ಸ್ಟುಡೆಂಟರನ್ನ ಕಂಡಿದ್ದೇನೆ. ಎಲ್ಲ ಹೀಗೇ ಕೋಲೇಜಗೆ ಹೋಗೋದೇ ತಡ ದೊಡ್ಡ ಮಾತಾಡ್ತಾರೆ. ಬರ್ರಿಲ್ಲಿ—ಠಾಣೆಗೆ ಹೋಗಿ ನಿಮ್ಮ ಜವಾಬುಕೊಡಿ" ಎಂದವನೇ ಸ್ಯಾಕಲ್ ಹೆಂಡ್ಲ ಹಿಡಿದು ನಿಲ್ಲಿಸಿದ.

ಇದೆಲ್ಲಿ ಗ್ರಹಚಾರ ಎಂದೆ. ಏನು ಮಾಡಿದರೂ ಆ ಪೋಲೀಸು ಮಣಿಯಲಿಲ್ಲ! ಇನ್ನೊಬ್ಬ ಲಾರಿಯವನು ಬಂದ! ಆದೇನೋ ಜಾಸ್ತಿ ಲೋಡಮಾಡಿ ಬಂದಿದ್ದಿ ಎಂತ ಅವನನ್ನೂ ಗದರಿಸಿ ನಿಲ್ಲಿಸಿದ. ಆ ಡ್ರೈವರು ಪೋಲೀಸಿನ ಕೈಯಲ್ಲಿ 'ಮಾಮೂಲ'ನ್ನಿಕ್ಕು ಪಾರಾದ ಲೋರಿ ಮುಂದೆ ಹೊಂಟಿತು. ಇನ್ನೊಂದು ಮೋಟಾರು ಬಂದಿತು—ಅದರಲ್ಲಿ ಡ್ರೈವರಾಡಲು ಕಲಿತಿದ್ದ ವ್ಯಕ್ತಿಯನ್ನು ಲೈಸನ್ಸ ಕೇಳಿದಾಗ ಆ ಜನವೂ ಒಂದು ರೂಪಾಯಿಯನ್ನು ಪೋಲೀಸನ ಕೈಗಿತ್ತು ಹಲ್ಲುಕಿರಿದು ಕೈ ಮುಗಿದು ಹೊಂಟಿತು.

ನಂತರ ನೋಡುತ್ತಲೇ ನಿಂತಿದ್ದ ಅಪರಾಧಿಯಾಗಿ. ಇನ್ನು ಠಾಣೆಗೆ ಹೋಗ ತಪ್ಪಿಸಿಕೊಳ್ಳುವದು. ನನ್ನ ಕಿಸೆಯಲ್ಲಿ ಹಣವೂ ಇದ್ದಿಲ್ಲ. ಕಾಫಿಯ ಖರ್ಚನ್ನಾದರೂ ಆ ಮಹಾನುಭಾವನಿಗಿತ್ತು ಪಾರಾಗುವದೆಂದರೆ! ಅವನಾದರೋ ಗಂಭೀರನಾಗಿದ್ದ. ನನ್ನಿಂದಲೇನೂ ದೊರೆಯದ್ದನ್ನು ತಿಳಿದ—"ನಡೆಯಿರಿ ಠಾಣೆಗೆ" ಎಂದ. ನನ್ನ ಹೆಸರನ್ನೂ ತನ್ನ ಪುಸ್ತಕದಲ್ಲಿ ಬರೆಯುತ್ತಾ!

ಏನು ಹೇಳಿದರೂ ಆ ಪೋಲೀಸು ಮಹಾಶಯ ಬಿಡುವ ರೀತಿ ತೋರಲಿಲ್ಲ! ತಾಸೊಂದು ನಿಂತುಕೊಂಡು ಅವನಿಗೆ ತೆರವಾದೊಡನೆ ಪೋಲೀಸ ಸ್ಟೇಶನ್ನಿನತ್ತ ಅವನ ಜೊತೆಗೆ ಹೊರಟೆ. M. A. ಪರೀಕ್ಷೆಯಲ್ಲಿ ಪಾಸಾದ ಹುರುಪೆಲ್ಲ ಅಡಗಿ ಹೋಗಿತ್ತು! ಅಷ್ಟೇ ಅಲ್ಲದೆ ಇಂದು ಮೊದಲ ಬಾರಿ ಅಪರಾಧಿತನಾಗಿದ್ದೆ! ಅಂತೂ ಅವನಿಂದ ಪಾರಾಗಿದ್ದರೆ ಸಾಕಾಗಿತ್ತು! ಅಲ್ಲಿಂದ ಓಡಿ ಹೋಗೋಣವೆಂದರೆ—ನಾನೇನು ಕಳ್ಳನೇ? ನನ್ನಿಂದ ತಪ್ಪೇನು ಅಂತಹ ಮಹಾ ಘಟಿಸಿದೆ? ಅಂತೂ ಪೋಲೀಸ ಇನ್ಸ್ಪೆಕ್ಟರರ ಕಚೇರಿ ಸಮೀಪ ಹೋಗಿದ್ದಾಯಿತ—"ನೀವು ಇಲ್ಲೇ ನಿಲ್ಲಿ— ನಾನೀಗಲೇ ರಿಪೋರ್ಟ ಕೊಟ್ಟು ಬರುವೆನೆಂದು ತಿಳಿಸಿ ಆಫೀಸಿನ ಒಳಗೆ ಹೋದ! ಎರಡು ನಿಮಿಷಗಳಲ್ಲಿ ಪೇದೆಯೊಬ್ಬನು ಹೊರಬಂದು ಸಾಹೇಬರು ಕರೆದಿದ್ದಾರೆ ಎಂದ! ಅಧೈರ್ಯದಿಂದಲೇ ಒಳಹೊಕ್ಕೆ:—

ನನ್ನನ್ನೊಮ್ಮೆ ನೋಡಿದ ಇನ್ಸ್ಪೆಕ್ಟರ್ ಮಹಾಶಯರು ಕುರ್ಚಿಯಿಂದೆದ್ದು ಹಸ್ತಲಾಘವ ಮಾಡಿ "ಬನ್ನೀ ಕೂತ್ಕೊ", ಕುಳಿತುಕೊಳ್ಳಿ— ನಮ್ಮ ಪೋಲೀಸನಿಗೆ ತಿಳಿಯಲಿಲ್ಲ! ಯಾವ ಜನ ಹೇಗೆ ಎಂದು ತಿಳಿಯುವ ಜ್ಞಾನವೇ ಇಲ್ಲ! ಇಂಥ ಪೋಲೀಸರಿಂದಾಗಿ ನಮ್ಮ ಇಲಾಖೆಗೇ ಕುಂದು ಬರುತ್ತಿದೆ. ಕ್ಷಮಿಸಬೇಕು ಎಂದರು! ನಾನು ಆಶ್ಚರ್ಯಚಕಿತನಾದೆ! ಇನ್ನೂ ಮುಂದುವರಿದು 'ಕಾಫಿ ತರಿಸಲೇ' ಎಂದರು. ಉತ್ತರಿಸಬೇಕಾದ ಮುನ್ನವೇ ನಾನು "ಥ್ಯಾಂಕ್ಸ್. ಇರಲಿ ಬಿಡಿ—ನನಗೆ ಅರ್ಜಂಟು ಕೆಲಸವಿದೆ, ಬರುತ್ತೇನೆ" ಎನ್ನುತ್ತಾ—ನೀಟಾಗಿದ್ದ ಎದ್ದೆ—ಆ ಪೋಲೀಸನ ಮೋರೆ ಬಾಡಿ ಹೋಗಿತ್ತು! ಹೊರ ಬರುವ ವರೆಗೆ ಬಂದು ಇನ್ಸ್ಪೆಕ್ಟರ ಮಹಾಶಯರು ಬೀಳ್ಕೊಟ್ಟರು. ಅಂತೂ ಆ ದಿನ ಖಾದಿ ಡ್ರೆಸ್ಸು ನನ್ನನ್ನೊಬ್ಬ ಮಹಾವ್ಯಕ್ತಿಯನ್ನಾಗಿ ಮಾಡಿತ್ತು.

— ಎ. ಪವಿತ್ರ.

ಪುನರ್ಜನ್ಮ

(೯ನೇ ಪುಟದಿಂದ)

ಯಿಂದ ಹಳ್ಳಿಯ ಜನರು ದಂಗುಬಡೆದರು. ಡಾ|| ಚುಪಟಿಯವರು ಈ ಮನೆಯಲ್ಲಿ ಹಿಂದೆ ವಾಸಿಸುತ್ತಿದ್ದವರ ಪೂರ್ವಚರಿತ್ರೆಯನ್ನು ಸಂಪೂರ್ಣವಾಗಿ ನೆರೆ ಹೊರೆಯವರಿಂದ ತಿಳಿದನಂತರ ದ್ವಾರಕಾನಾಥನನ್ನು ಯೋಗೇಂದ್ರ ಸಾಹರು ತಮ್ಮ ಪತ್ನಿಯೊಂದಿಗೆ ವಾಸಿಸುತ್ತಿದ್ದ ದೇವಾಲಯಕ್ಕೆ ಕರೆದೊಯ್ದರು. ಈ ವೃದ್ಧ ದಂಪತಿಗಳನ್ನು ನೋಡಿದೊಡನೆಯೇ ದ್ವಾರಕಾನಾಥನು 'ಅಪ್ಪಾ—ಅಮ್ಮಾ' ಎಂದು ಕೂಗುತ್ತಾ ಇಬ್ಬರನ್ನೂ ಆಲಂಗಿಸಿದನು. ಹಾಗೆಯೇ ತನ್ನ ಪೂರ್ವಜನ್ಮದ ಪ್ರತಿಯೊಂದು ಘಟನೆಯನ್ನು ಸವಿವರವಾಗಿ ತಿಳಿಸುತ್ತಾ ತಾನು ದ್ವಾರಕಾನಾಥನಲ್ಲವೆಂದೂ ತನ್ನ ಹೆಸರು ವಿಷ್ಣುಶರ್ಮನೆಂದೂ ಹೇಳಿದನು ತನ್ನನ್ನು ಇಂಬನವರೇಗೂ ಮರೆತುದಕ್ಕಾಗಿ ತುಂಬಾ ಪಶ್ಚಾತ್ತಾಪ ಪಟ್ಟನು. ಹಾಗೆಯೇ ಡಾ| ಚುಪಟಿಯವರಿಗೆ ತಾನು ತನ್ನ ತಾಯಿತಂದೆಗಳ ಸೇವೆ ಮಾಡುತ್ತಾ ಇಲ್ಲಿಯೇ ವಾಸಿಸುವೆನೆಂದು ಹೇಳಿ ಅವರನ್ನು ಬಿಹಾರಿಗೆ ಹಿಂತಿರುಗುವಂತೆ ಒತ್ತಾಯಿಸಿದನು. ಈ ಸುದ್ದಿಯು ಕಾಶಿನಾಥನಿಗೆ ತಿಳಿದೊಡನೆಯೇ ಇಲ್ಲಿಗೆ ಧಾವಿಸಿ ದ್ವಾರಕಾನಾಥನನ್ನು ತನ್ನೊಂದಿಗೆ ಬರುವಂತೆ ಒತ್ತಾಯಿಸಿದ. ಆದರೆ ದ್ವಾರಕಾನಾಥನಾದರೋ ತಾನು ಯೋಗೇಂದ್ರನಾಥ ಶರ್ಮರ ಮಗನೆಂದೂ ತನ್ನ ಹೆಸರು ವಿಷ್ಣುಶರ್ಮನೆಂದೂ ಹೇಳಿ ತಾನು ಇವರನ್ನು ಬಿಟ್ಟು ಬರೆನೆಂದು ಛಲತೊಟ್ಟನು. ಕಾಶೀನಾಥನು ತನ್ನ ಮಗನನ್ನು ಯಾವುದೋ ಮೋಸದಿಂದ ಈ ಶರ್ಮ ದಂಪತಿಗಳು ವಶಪಡಿಸಿಕೊಂಡಿರುವರೆಂದೂ ತನ್ನ ಮಗನನ್ನು ತನಗೇ ಬಿಟ್ಟುಕೊಡಬೇಕೆಂದೂ ಪೋಲೀಸರಿಗೆ ದೂರಿತ್ತನು. ಪೋಲೀಸು ಅಧಿಕಾರಿಗಳ ಮುಂದೆ ದ್ವಾರಕಾನಾಥನು ತನಗೂ ಈ ಚಮತ್ಕಾರ ದಂಪತಿಗಳಿಗೂ ಯಾವ ಸಂಬಂಧವೂ ಇಲ್ಲವೆಂದೂ ತಾನು ಯೋಗೇಂದ್ರನಾಥರ ಶರ್ಮರ ಮಗ ವಿಷ್ಣು ಶರ್ಮನೆಂದೂ ಹೇಳಿದನು. ಹಾಗೆಯೇ ತನ್ನ ಪೂರ್ವಜನ್ಮದ ಪ್ರತಿಯೊಂದು ಘಟನೆಯನ್ನೂ ಸವಿವರವಾಗಿ ಹೇಳಿ ತನ್ನ ಕುಟುಂಬದ ಎಲ್ಲಾ ವ್ಯಕ್ತಿಗಳನ್ನೂ ಗುರುತಿಸಿದನು. ಹೀಗಾಗಿ ಪೋಲೀಸು ಅಧಿಕಾರಿಗಳು ಕೂಡಾ ಪೇಚಿನಲ್ಲಿ ಸಿಕ್ಕಿಕೊಂಡರು. ಸರಕಾರದ ಮುಂದೆ ಇಂತಹ ಘಟನೆಯು ಇದೇ ಪ್ರಥಮವಾಗಿ ಬರುತ್ತಿರುವ ಕಾರಣ ಇದನ್ನು ಬಿಡಿಸಬೇಕಾದರೆ ಹೊಸ ಕಾಯಿದೆಯನ್ನೇ ರಚಿಸಬೇಕೆಂದು ತೋರುತ್ತದೆ. ಈ ಸಂದರ್ಭದಲ್ಲಿ ಸರಕಾರವು ಕೂಡಾ ತನ್ನ ಅಸಹಾಯಕತೆಯನ್ನು ತೋರಿಸಿದಾಗ ಡಾ|| ಚುಪಟಿಯವರಿಂದಾಗಿ ಒಂದು ತೀರ್ಮಾನಕ್ಕೆ ಬಂತು.

ಇನ್ನು ಮುಂದೆ ದ್ವಾರಕಾನಾಥನನ್ನು ಯೋಗೇಂದ್ರನಾಥ ಶರ್ಮರೊಂದಿಗೆ ಇರಗೊಡಬೇಕೆಂದೂ ಚಮತ್ಕಾರ ಕಾಶಿನಾಥನು ತನಗೆ ಬೇಕಾದಾಗ ಈ ಬಾಲಕನನ್ನು ಯಾವುದೂ ಅಡ್ಡಿ ಆತಂಕವಿಲ್ಲದೆ ನೋಡಿಕೊಂಡು ಹೋಗಬಹುದೆಂದೂ ತೀರ್ಮಾನಿಸಿದರು.

ಇದೊಂದು ಈ ವಿಜ್ಞಾನಯುಗದಲ್ಲಿ ಹೊಸ ಘಟನೆ. ಮಾನವನು ತನ್ನ ಬುದ್ಧಿಶಕ್ತಿಯ ಬಲವನ್ನು ಹೆಚ್ಚಿಸಿದಂತೆ ಹೊಸ ಹೊಸ ಸಮಸ್ಯೆಗಳು ಕೂಡಾ ತಲೆಎತ್ತುತ್ತವೆ ಎಂಬುದಕ್ಕೆ ಇದೇ ಸಾಕ್ಷಿ. ಮಾನವನಿಗೆ ಬಿಡಿಸಲು ಅಸಾಧ್ಯವಾದ ಕೆಲವು ಸಮಸ್ಯೆಗಳು ಕೆಲವೊಮ್ಮೆ ಪ್ರಕೃತಿಯ ವೈಚಿತ್ರ್ಯದಿಂದಾಗಿಯೋ ಅಥವಾ ಬೇರೆ ಯಾವ ಕಾರಣಗಳಿಂದಾಗಿಯೋ ತನ್ನಷ್ಟಕ್ಕೇ ಸುಲಭದಲ್ಲಿ ಬಗೆಹರಿಸಲ್ಪಡುವುವು. ಅಂತೆಯೇ ಮಾನವನ ಜನನ—ಮರಣಗಳ ರಹಸ್ಯವನ್ನು ಹಲವು ರೀತಿಗಳಲ್ಲಿ ಶೋಧಿಸುತ್ತಾ ತಮ್ಮ ವಾದವೇ ಸರಿಯೆಂದು ವಾದಿಸುವ ವಿಜ್ಞಾನಿಗಳ ಸಂಶೋಧನೆಯು ಈ ಘಟನೆಯಿಂದಾಗಿ ಅಡಿಮೇಲಾಯಿತು ಎಂಬುದರಲ್ಲಿ ಸಂದೇಹವಿಲ್ಲ.

(ಆಧಾರದಿಂದ)

—ಶ್ರೀ ಯು ಶ್ರೀನಿವಾಸರಾವ್.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ಆತ್ಮಾನುಶಾಸನ

ಪ್ರಜಾಪ್ರಭುತ್ವದಲ್ಲಿ ಆತ್ಮಾನುಶಾಸನ ಅವಶ್ಯ

ನಮ್ಮಲ್ಲಿ ಆತ್ಮಾನುಶಾಸನದ ಹ್ರಾಸವಾದಾಗಲೇ ಬಾಹ್ಯ ಶಾಸನವು ನಮ್ಮ ಮೇಲೆ ಹೇರಲ್ಪಡುವುದು.

ನಮ್ಮ ಮೇಲೆ ಯಾರಾದರೂ ಒಂದಲ್ಲ ಒಂದು ವಿಧದ ನಿಯಂತ್ರಣವನ್ನು ಹೇರಬಯಸಿದರೆ, ನಾವು ನೊಂದುಕೊಳ್ಳುವುದು ಸ್ವಾಭಾವಿಕವೇ. ಆದರೆ, ನಮ್ಮ ಮೇಲೆ ನಿಯಂತ್ರಣವು ತಾನಾಗಿಯೇ ಬಂದು ಹೇರಲ್ಪಡುವುದಿಲ್ಲವೆಂಬುದನ್ನು ನಾವು ಗಮನಿಸಬೇಕು. ಮಾನವ ತನ್ನ ಅಭಿಲಾಷೆಗಳ ಮೇಲೆ ಸ್ವಯಂ ನಿಯಂತ್ರಣವನ್ನು ಹೇರಲು ಅಸಮರ್ಥನಾಗಿದ್ದ ಪಕ್ಷದಲ್ಲಿ, ಬೇರೆಯವರು ಆತನ ಮೇಲೆ ಅನಿವಾರ್ಯವಾಗಿ ನಿಯಂತ್ರಣವನ್ನು ಹೇರಲೇ ಬೇಕಾಗಿ ಬರುತ್ತದೆ. "ಆತ್ಮನಿಯಂತ್ರಣರಹಿತನಾದವನಿಗೆ ಬಾಹ್ಯನಿಯಂತ್ರಣ ಅಧಿಕವಾಗುವುದು" ಎಂಬ ಪ್ರಸಿದ್ಧ ಬ್ರಿಟನ ವಿಚಾರಕ ಶ್ರೀ ಎಡ್ಮಂಡ್ ಬರ್ಕನು ಫ್ರಾನ್ಸಿನ ರಾಜ್ಯಕ್ರಾಂತಿಯ ವೇಳೆ ಉದ್ಗರಿಸಿದ ಮಾತುಗಳನ್ನಿಲ್ಲಿ ನೆನೆದುಕೊಳ್ಳಬಹುದು.

ಶ್ರೀ ಬರ್ಕನ ಮಾತುಗಳು ಸಾರ್ವಕಾಲಿಕವೆನ್ನಬಹುದು. ಈ ಹೇಳಿಕೆ ನಿತ್ಯನೂತನವಾಗಿದೆ. ಆದುದರಿಂದ ಕುಶಲ ರಾಜನೀತಿಜ್ಞನು ಬಾಹ್ಯನಿಯಂತ್ರಣ ಮತ್ತು ಆತ್ಮನಿಯಂತ್ರಣಗಳೆರಡನ್ನೂ ಹೊಂದಿಸಿಕೊಂಡು ಹೋಗುವುದು ತನ್ನ ಕರ್ತವ್ಯವೆಂದು ತಿಳಿದುಕೊಳ್ಳಬೇಕು. ಆತ್ಮನಿಯಂತ್ರಣ ಸಹಿತರಾಗಿ ಸಮಾಜದ ಕಾನೂನುಕಾಯಿದೆಗಳನ್ನು ಪಾಲಿಸಿದವರು ಉನ್ನತರಾದುದೂ ಆತ್ಮನಿಯಂತ್ರಣರಹಿತರಾಗಿ ಕೇವಲ ಕಾಯಿದೆ ಕಾನೂನುಗಳ ಬಲವನ್ನು ಆಧರಿಸಿಕೊಂಡಿರುವವರು ಪತಿತರಾದುದೂ ಇತಿಹಾಸದಿಂದ ತಿಳಿಯುತ್ತದೆ. ಈ ದ್ವಿತೀಯ ವರ್ಗದ ಜನರು ಅನೀತಿ, ಅತ್ಯಾಚಾರ ಹಾಗೂ ಕುಮಾರ್ಗನಿರತರಾಗಿಕೊಂಡು ತಮ್ಮನ್ನೂ ತಮ್ಮ ಸಮಾಜವನ್ನೂ ಅಧೋಗತಿಗಿಳಿಸಿದ್ದಾರೆಂಬುದೂ ಸ್ವಯಂವೇದ್ಯ.

ರೋನಾಲ್ಡ್ ನೇಬರ್, ನೈತಿಕತೆಯು ವ್ಯಕ್ತಿಯ ಒಡವೆ; ಸಮಾಜದ್ದಲ್ಲ; ತನ್ನ ಹಿತ ಇಲ್ಲವೇ ಸ್ವಾರ್ಥಗಳ ರಕ್ಷಣೆಗಾಗಿಯೇ ಮಾನವ ಸಮಾಜವನ್ನು ರಚಿಸಿಕೊಂಡಿದ್ದಾನೆ ಎನ್ನುತ್ತಾನೆ. ರಾಜಾಜಿಯವರೂ ಒಂದು ಬಾರಿ, ವ್ಯಕ್ತಿಯೇ ನಿಸ್ವಾರ್ಥ ದೃಷ್ಟಿಯಿಂದ ಕೆಲಸ ಮಾಡಬಲ್ಲನಲ್ಲದೆ ಸಮಾಜ ಮಾಡಲಾರದು ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ, ವ್ಯಕ್ತಿಯಂತೆಯೇ ಸಮಾಜಕ್ಕೂ ಒಂದು ನೈತಿಕತೆ ಇದೆ. ಅದು ವ್ಯಕ್ತಿಯ ನೈತಿಕತೆಗಿಂತ ಭಿನ್ನವಾಗಿದೆ. ಸಮಾಜದ ನೈತಿಕತೆ ಕೇವಲ ತತ್ವಗಳಲ್ಲಿ ಅಡಕವಾಗಿರದೆ, ತನ್ನ ಹಿತ, ಸಂಸ್ಥೆ ಮತ್ತು ಇಚ್ಛೆಗಾಗಿ ತನ್ನ ಚಲನ ಪ್ರಥೆಗಳನ್ನು ಆಧರಿಸಿಕೊಂಡಿದೆ.

ಸಾಮಾಜಿಕ ಪದ್ಧತಿಗಳೇನೋ ಉತ್ತಮವಾದವು. ಆದರೆ, ಇವುಗಳ ಉಪಯೋಗ ಶೂನ್ಯವಾಯಿತೆಂದರೆ, ಅವು ರೂಢಿಯಾಗಿ ಮಾತ್ರ ಉಳಿಯುವುವು. ಕ್ರಮೇಣ ಅದರ ರಚನಾತ್ಮಕ ಕರ್ತೃತ್ವ ಶಕ್ತಿ ಲೋಪವಾಗುವುದು; ಅದು ಸತ್ವಹೀನವಾಗುವುದು; ಕೊಳೆತ ಕುಂಬಳಕಾಯಿಯಾಗುವುದು. ಉಚ್ಚನೀಚ ಭೇದಭಾವ, ಸಂಕುಚಿತ ದೃಷ್ಟಿಕೋಣ ಮೊದಲಾದುವುಗಳ ನೆಲೆಮನೆಯಾಗುವುದು.

ಈ ಜೀರ್ಣಶೀರ್ಣ ರೂಢಿಗಳನ್ನು ನಾಶಗೊಳಿಸುವುದೇ ಕ್ರಾಂತಿಯ ಉದ್ದೇಶ. ಈ ಕ್ರಾಂತಿಯಾದಾಗ ಇರುವ ಒಳಿತು ಕೆಡುಕುಗಳೆಲ್ಲ ನಿರ್ನಾಮವಾಗುವುವು. ಆದರೆ, ಒಳಿತುಗಳು ಪುನಃ ಚಿಗುರುವುವು; ಜನತೆ ಸುವ್ಯವಸ್ಥೆಗಾಗಿ ಉತ್ಸುಕತೆಯಿಂದ ಕಾದಿರುವುದು.

ಫ್ರಾನ್ಸಿನ ಮಹಾಕ್ರಾಂತಿಯ ನಂತರ ಅಲ್ಲಿನ ಮಹಾ ಸಮಾಜ ಶಾಸ್ತ್ರಿ ಶ್ರೀ ರೋಯರ್ ಕೋಲಾರ್ಡನ ಮಾತುಗಳನ್ನು ಓದಿ: ಕ್ರಾಂತಿಕಾರಿಗಳು ರಾಜ್ಯತಂತ್ರದೊಡನೆ ಸ್ಥಾನೀಯ ಸಂಸ್ಥೆಗಳು, ಪಂಚಾಯತುಗಳನ್ನೂ ಕೊನೆಗೊಳಿಸಿದರು. ಈ ಸಂಸ್ಥೆಗಳು ವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಪ್ರತೀಕಗಳಾಗಿದ್ದುವು. ರಾಜಸತ್ತೆಯ ಮೇಲೆ ಅವು ಅಂಕುಶವಿಡುತ್ತಿದ್ದುವು. ಇವುಗಳ ಸ್ಥಾನದಲ್ಲಿ ಯಾವುದೇ ಹೊಸ ವ್ಯವಸ್ಥೆಯು ಆಗಲಿಲ್ಲ. ಕ್ರಾಂತಿಯಿಂದ ಎಲ್ಲವೂ ಮೂಲೆಪಾಲಾಯಿತು. ವ್ಯಕ್ತಿಗತ ವಿಷಯವೊಂದನ್ನುಳಿದು ಎಲ್ಲವನ್ನೂ ಸರಕಾರವೇ ಮಾಡುತ್ತಿದೆ. ನಮ್ಮ ಸಮಾಜ ಇದರಿಂದ ವಿಶೃಂಖಲಿತವಾಯಿತು.

ಇದೇ ಮಾದರಿಯಲ್ಲಿ ಸಂಪ್ರದಾಯ ಮತ್ತು ಕ್ರಾಂತಿಜನ್ಯ ಅರಾಜಕತೆಗಳ ನಡುವೆ ಸಮಾಜ ಬೀಳುತ್ತೇಳುತ್ತ ನಡೆದು ಬಂದಿದೆ. ಜ್ಞಾನಿಗಳು ಇವುಗಳಲ್ಲಿ ಸ್ಥಿರತೆಯನ್ನುಳಿಸಲು ಪ್ರಯತ್ನ ನಡೆಸುತ್ತಿದ್ದರು. ರಾಜಸತ್ತೆಯ ಮೇಲೆ ಅಂಕುಶ ಹೇರಲು ಮತ್ತು ವ್ಯಕ್ತಿಗತ ಸ್ವಾತಂತ್ರ್ಯದಲ್ಲಿ ಸರಕಾರ ಹಸ್ತಕ್ಷೇಪ ಮಾಡದಿರಲು ಕಾನೂನುಗಳಾದುವು. ಇಂಗ್ಲೆಂಡಿನಲ್ಲಿ ರಾಜ್ಯಕ್ರಾಂತಿಯಾದರೆ, ಅಮೆರಿಕೆಯ ಸಂವಿಧಾನದ ಬುನಾದಿಯೇ ಆಗಾಯಿತು. ಭಾರತದಲ್ಲಿಯೂ ಅಮೆರಿಕೆಯ ಮಾದರಿಯಲ್ಲೇ ಸಂವಿಧಾನವನ್ನು ರಚಿಸಲಾಗಿದೆ.

ನಿಜವಾಗಿ ನೋಡುವುದಾದರೆ, "ಪೂರ್ಣ ಸ್ವಾತಂತ್ರ್ಯ"ಎಂಬುದೂ "ಕರ್ತವ್ಯ"ವೆಂಬುದಕ್ಕಿಂತ ಹಿರಿದಾದ ಅಧಿಕಾರವೂ ಇರುವುದಿಲ್ಲ. ಸ್ವಾತಂತ್ರ್ಯ ಮತ್ತು ಸಂಯಮ ನಿಯಮಗಳು ಒಂದರೊಡನೊಂದು ಮುಂದುವರಿಯುತ್ತವೆ. ಆದುದರಿಂದಲೇ ಪ್ರಜಾಸತ್ತೆಯ ಮೂಲಾಧಾರ ಜನತೆಯ ಪ್ರತ್ಯಕ್ಷ ಸಂಸ್ಥೆಗಳಾದ ಪಂಚಾಯತು ಮೊದಲಾದ ಸ್ಥಳೀಯ ಸಂಸ್ಥೆಗಳೇ ಆಗಿವೆ.

ಸಂಪ್ರದಾಯವಾದವಿಂದು ದೂರವಾಗಿ ಹೋಗಿದೆ. ಪಾಶ್ಚಾತ್ಯ ಮಾದರಿಯ ಹೊಸ ಸಂಪ್ರದಾಯಗಳು ಇಂದು ವ್ಯವಹಾರಕ್ಕೆ ಬಂದಿವೆ. ಹಳೆಯ ಪದ್ಧತಿಗಳು ದೂರವಾಗುವುದರೊಡನೆಯೇ ಹೊಸ ಕ್ರಮ ನಡವಳಿಕೆ ಅಥವಾ ಪರಂಪರೆಗಳು ವ್ಯವಹಾರಕ್ಕೆ ಬರುವುದೂ ಅಪರಿಹಾರ್ಯ. ಭಾರತದಲ್ಲಿಯೂ ಹಲವಾರು ಸಾಮಾಜಿಕ ಸಂಘ ಸಂಸ್ಥೆಗಳಿಂದಿವೆ. ಮಜೂರ ಸಂಘ, ಸಹಕಾರಿ ಸಮಿತಿ, ರಾಜಕೀಯ ಪಕ್ಷ, ಧಾರ್ಮಿಕ ಚರ್ಚ ಕೂಟ ಮೊದಲಾದುವುಗಳು ಪಾಶ್ಚಾತ್ಯರಲ್ಲಿ ತುಂಬ ತಲೆಯೆತ್ತಿವೆ. ಹಲವಾರು ರೂಪಗಳಿಂದಿವು ರಾಜಸತ್ತೆಯ ಮೇಲೆ ಅಂಕುಶ ಹಿರಿಯುತ್ತವೆ.

ಭಾರತದಲ್ಲಿಯೂ ಪ್ರಾಚೀನ ಸಮಾಜ ಪದ್ಧತಿ ಮುರಿದು ಹೋಗಿದೆ. ಆದರೆ, ಅದು ಆಮೂಲ ನಾಶವಾಗದಿರುವುದರಿಂದ, ಹೊಸ ಸಮಾಜ ಸ್ಥಾಪಿತವಾಗಲಿಲ್ಲ. ಈ ವಿಷಮ ಸ್ಥಿತಿಯಲ್ಲಿರುವ ಸಮಾಜದಿಂದ ಅನುಚಿತ ಲಾಭವನ್ನೆತ್ತಿಕೊಳ್ಳುವವರೂ ಇದ್ದಾರೆ. ಪ್ರಜಾಸತ್ತೆಯು ಸಫಲವಾಗಬೇಕಾದರೆ, ಅನೇಕ ಪ್ರಕಾರದ ಸಂಘಗಳು ಶಾಶ್ವತವಾಗಿರಬೇಕು. ಸ್ವೇಚ್ಛೆಯಿಂದ ಜನತೆಯು ಇಂತಹ ಸಂಘಸಂಸ್ಥೆಗಳನ್ನು ಕಟ್ಟಿ, ನಡೆಸುವಾಗಲೇ ಹೊಸ ಸಮಾಜದ ಸೃಷ್ಟಿಯಾಗಬಲ್ಲುದು. ವ್ಯಕ್ತಿಯ ಸಮಾಜದ ಸಂಬಂಧ ಸಮನ್ವಯವೂ ಇವುಗಳಿಂದಲೇ ಆಗಬೇಕು. ಪ್ರಾಚೀನಪರಂಪರೆಯ ಸ್ಥಾನದಲ್ಲಿ ನೂತನ ಪರಂಪರೆಯು ಭದ್ರವಾಗಿ ತಳವೂರದೆ ಹೋದರೆ, ಆಗ, ಆ ಸಮಾಜದ ಜನತೆಯಲ್ಲಿ ಒಳ ಜಗಳಗಳು, ಉದಾಸೀನತೆ ಅಸಹಿಷ್ಣುತೆ ಮೊದಲಾದುವು ತಾಂಡವವಾಡುವುವು; ಮಾನವತೆಯು ಹ್ರಾಸವಾಗುವುದು.

ಸಮಾಜ ಮತ್ತು ವ್ಯಕ್ತಿ ಒಂದಕ್ಕೊಂದು ಪೂರಕ ಶಕ್ತಿಯಾಗಿರುವಾಗ ಮಾತ್ರ ಉನ್ನತಿಸಾಧ್ಯ. ಮನುಷ್ಯ ತನ್ನ ಸ್ವಾರ್ಥವನ್ನು ಮಾತ್ರ ನೋಡುವುದಾದರೆ, ಧರೆ ಮತ್ಸ್ಯನ್ಯಾಯವಾದೀತು. ಸ್ವಾರ್ಥತ್ಯಾಗವೊಂದೇ ಈ ದಿಸೆಯಲ್ಲಿ ಅಭಿವೃದ್ಧಿಯ ಏಕಮಾತ್ರ ಸಾಧನ. ಆದುದರಿಂದ ಪ್ರಜಾಪ್ರಭುತ್ವ ಸರಕಾರಗಳು ಜನತೆಯು ಶಾಂತಿಪೂರ್ಣವಾಗಿ ಮತ್ತು ವೈಧಾನಿಕ ವಿಧಾನಗಳಿಂದ ಇರುವಲ್ಲಿ ಅವರಿಗೆ ಸಹಾಯ ನೀಡಬೇಕು ಮತ್ತು ಸ್ವೇಚ್ಛೆಯಿಂದ ಕೆಲಸಮಾಡುವವರಿಗೆ ಪ್ರೋತ್ಸಾಹ ನೀಡಬೇಕು.

ಭಾರತದಲ್ಲಿ ವಿಕೇಂದ್ರೀಕರಣದ ಮಾತು ಬಹು ದಿನಗಳಿಂದ ಕೇಳಬರುತ್ತಿದೆ. ಆದರೆ, ನಮ್ಮ ಜನತೆಯ ಸ್ಥಾನೀಯ ಸಂಸ್ಥೆಗಳು ತೀರ ಅಬಲವಾಗಿವೆ. ಪಂಚಾಯತುಗಳಿಗೆ ಅಧಿಕಾರ ಕಡಿಮೆಯಾಯಿತು, ಸಂಘಸಂಸ್ಥೆಗಳಲ್ಲಿ ಬಿರುಕುಗಳೆದ್ದಿವೆ; ಸಹಕಾರಿ ಸಂಸ್ಥೆಗಳು ನಿರ್ಬಲವಾಗಿವೆ. ವೈಧಾನಿಕ ವಿಧಾನಗಳಿಂದ ನಮ್ಮ ಜನತೆಯ ಸಂಕಷ್ಟ ದೂರೀಕರಿಸುವ ಸಂಸ್ಥೆಗಳು ನಮಗಿಂದು ಬೇಕಾಗಿದೆ. ಇದು ಸರಕಾರದ ಮೇಲೆ ಪರಿಣಾಮ ಬೀರಬೇಕಾದರೆ ಅನ್ನ ಸತ್ಯಾಗ್ರಹಾದಿ ಮಾರ್ಗಗಳೇ ಬೇಕಾಗಿವೆ. ಗೋಳೀಬಾರುಗಳು ನಡೆದೇ ತೀರಬೇಕಾಗಿದೆ. ಇವುಗಳಿಗೆ ಹೊರತು ಮತ್ತಾವ ಕೇಳಿಕೆಗಳೂ ನಮ್ಮಲ್ಲಿ ಇಂದು ಬೆಲೆ ಬರುವುದಿಲ್ಲ. ಭಾರತದಂತಹ ದೇಶದಲ್ಲಿ ಇಂತಹ ಮಾರ್ಗವೇ ಇನ್ನೂ ಮುಂದುವರಿಯುತ್ತ ಹೋಗುವುದಾದರೆ, ನಮ್ಮ ಪ್ರಜಾಪ್ರಭುತ್ವ ಎಷ್ಟರ ಮಟ್ಟಿಗೆ ಮುಂದುವರಿದಿದೆ ಎಂದು ಊಹಿಸಿಕೊಳ್ಳಬಹುದು

ಭಾರತದ ಸುತ್ತುಮುತ್ತಲಿನ ದೇಶಗಳಲ್ಲಿ ಪ್ರಜಾತಂತ್ರ ಯಶಸ್ವಿಯಾಗಿಲ್ಲ. ಇದಕ್ಕೆ ಅಲ್ಲಿನ ಜನರು ಉಚ್ಛೃಂಖಲರೂ ದುರ್ವಿನೀತರೂ ಆದರೆಂದು ಅರ್ಥವಲ್ಲ. ಅಲ್ಲಿಯ ರಾಜಕೀಯ ನೇತಾರರು ರಚನಾತ್ಮಕ ಕಾರ್ಯಗಳ ಬದಲು ಬಿರುಕಿನ ಬೀಜವನ್ನು ಬಿತ್ತಿದರು. ನಮ್ಮ ದೇಶದಲ್ಲಿ ನಾವು ಪ್ರಜಾಪ್ರಭುತ್ವವನ್ನು ಶಾಶ್ವತಗೊಳಿಸ ಬಯಸುವುದಾದರೆ, ಕೆಲವೊಂದು ಕಾರ್ಯಗಳನ್ನು ಕೈಗೊಳ್ಳಬೇಕು:

೧. ಆರ್ಥಿಕ ಕ್ಷೇತ್ರದಲ್ಲಿ ಜಗಳ ದೂರ ಮಾಡುವ ಮತ್ತು ವರ್ಗ ಹಿತರಕ್ಷಣೆ ಮಾಡುವ ಸರಕಾರೇತರ ಸಂಸ್ಥೆಗಳಿರುವಂತೆಯೇ ರಾಜಕೀಯ ಕ್ಷೇತ್ರದಲ್ಲೂ ಸಂಸ್ಥೆಗಳಿರಬೇಕು.

೨. ರಾಜಕೀಯ ದಳಗಳು ತಮ್ಮ ಆಚರಣೆಗಾಗಿ ಕೆಲವೊಂದು ನಿಯಮಗಳನ್ನು ತಯಾರಿಸಿ ಅವಕ್ಕೆ ಸರಿಯಾಗಿ ನಡೆಯಬೇಕು.

೩. ದೇಶದಲ್ಲಿ ನಿಷ್ಪಕ್ಷರಾಗಿ ರಾಜಕೀಯ ಕಾರ್ಯಗಳನ್ನು ಸಮಾಲೋಚಿಸಬಲ್ಲ ರಾಜನೀತಿಜ್ಞರಿರಬೇಕು.

೪. ರಾಜ್ಯದ ಅಧಿಕಾರಗಳಲ್ಲಿ ಸ್ಥಾನೀಯ ಶಾಸನ ಸಂಸ್ಥೆಗಳಿಗೂ ಪಾಲು ನೀಡಬೇಕು. ಬೇರೆ ಬೇರೆ ವ್ಯವಸಾಯಗಳ ಸಂಘಗಳನ್ನೂ ಸ್ಥಾಪಿಸಬೇಕು.

ಇದರಿಂದ ರಾಜ್ಯದ ಆಡಳಿತೆಯನ್ನು ನಡೆಸಿಕೊಂಡು ಹೋಗುವಾಗ ಕೊಂಚ ಮಟ್ಟಿಗೆ ಹೆದರಬೇಕಾಗಿ ಬರಬಹುದಾದರೂ ಆಡಳಿತವು ಜನಹಿತವಾಗಬೇಕಾದರೆ, ಇದು ಅತ್ಯವಶ್ಯ. ಹೀಗೆ ಮಾಡಿದರೆ ಮಾತ್ರ ಸಮಾಜದಲ್ಲಿ ಸ್ವಾತಂತ್ರ್ಯವು ಉಳಿಯುವುದು. ನಮ್ಮ ಆತ್ಮಾನುಶಾಸನವು ಇರುವಷ್ಟು ಸಮಯ ಬಾಹ್ಯಶಕ್ತಿಗಳು ಬಂದು ನಮ್ಮನ್ನು ತಮ್ಮ ಕೈಗೊಂಬೆಗಳನ್ನಾಗಿ ಮಾಡಲಾರವು

ಆದುದರಿಂದಲೇ ಎಲ್ಲಕ್ಕಿಂತ ಮೊದಲು ಆತ್ಮಾನುಶಾಸನ.

(ಅಶೋಕ ಮೆಹತಾರ ಲೇಖನವೊಂದರಿಂದ ಆಧಾರಿತ)

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ–
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ
ಬುಕ್ ವರ್ಕನ್ನೂ ಚೆಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI
Printers & Publishers
Santhekatte — UDIPI.

ಕಥಾ ವಿಹಾರ

(೨ನೇ ಪುಟದಿಂದ)

ಅಪ್ಪನಿಗಿಂತ ಕಡೇ –" ತಾಯಿ ಅಣಕಿಸಿದಳು.

ಝುರ್ರೆಂದು ಸದಾಶಿವನಿಗೆ ಸಿಟ್ಟು ನೆತ್ತಿಯ ತನಕ ಏರಿತು. ಮರುಕ್ಷಣವೇ ಮೂರು ಪೆಟ್ಟುಗಳು ರಾಮೂನ ತೊಡೆಯ ಮೇಲೆ ಬಿದ್ದುವು. ರಾಮು ದೊಡ್ಡ ದೊಂಡೆ ತೆಗೆದ. ಬಿಸ್ನಾಡಿಪೇಂತ ಚಿಂತೆ ಇಲ್ಲ! ಅಪ್ಪಂದು ಹೆದ್ರಿಕೇನೂ ಇಲ್ಲ' ಮಾಸ್ಟ್ರಿಗೆ ಮಾತ್ರ ಹೆದ್ರತಾನೆ! ಬಿಸ್ನಾಡಿ ಬಂದು ಸಂತೋಷದಿಂದ ಆಡ್ತಾನೆ' ಫಟಿಂಗ!!! ಸದಾಶಿವ ಮಿಂಚಿನ ವೇಗದಿಂದ ಹೀಗೆ ಅರ್ಭಟಿಸುತ್ತಾ ಪೆಟ್ಟುಗಳನ್ನು ಕೊಟ್ಟಿದ್ದ.

ಛಟ್ ಛಟೀರೆಂಬ ಶಬ್ದ ಕೇಳಿ ಕಲ್ಯಾಣಿಯೂ ಚೀರಿದಳು. "ಅಯ್ಯಯ್ಯೋ! ಏನಾಯ್ತಪ್ಪಾ ಹೀಗೆ ಹೊಡೀಲಿಕ್ಕೆ? ಹಸಿವಿನಿಂದ ಬಂದವನಿಗೆ ಹೀಗೂ ಹೊಡಿಯೋದಾ! ಎರಡಾಣೆ ಕಾಸಿನ ವಸ್ತುಗೆ!" ಎಂದು ಕಣ್ಣೀರು ತುಂಬಿದಳು ಕಲ್ಯಾಣಿ.

ಮತ್ತೇನೂ ಮಾತಡದೇ ಸದಾಶಿವ ಸುಮ್ಮನೆ ಮಲಗಿಬಿಟ್ಟ. "ಬಾರೋ, ಅನ್ನ ಹಾಕ್ತೇನೆ" ಅಂದಳು ತಾಯಿ. "ನನಗೆ ಊಟ ಬೇಡಾ..." ಎಂದು ರಾಗ ತೆಗೆಯುತ್ತಾ ಇದ್ದ ರಾಮು

ರಾಮು ಶಾಲೆಯಿಂದ ಬಂದಕೂಡಲೇ ಎಲ್ಲರಿಗೂ ಬಡಿಸುವುದು ಕಲ್ಯಾಣಿಯ ಪದ್ಧತಿ. ಇಂದು ಸುಮ್ಮನೆಯೇ ಕುಳಿತು ಬಿಟ್ಟಳು.

ಕಾಲುಗಂಟೆ ಸಾಗಿತು. ರಾಮೂನ ರಾಗ ತಗ್ಗುತ್ತಾ ಇತ್ತು ಕಡೆಗೆ ಈಗೊಂದು 'ಊ' ಆಗೊಂದು 'ಊ' ಎಂಬ ಸ್ಥಾಯಿಗೆ ತಗ್ಗಿತು. ಮೆಲ್ಲನೆ ಎದ್ದ ತನ್ನ ಆಟದ ಬೊಂಬೆಗಳನ್ನು ಉರುಳಿಸಿಕೊಂಡ ಆಗಾಗ ಒಂದೊಂದು 'ಊ'ಕಾರ ಮಾಡುತ್ತಾ ತನ್ನ ಕೆಲಸದಲ್ಲೇ ಮಗ್ನನಾದ ಅವನಿಗೆ ಹಸಿವಿನ ಲಕ್ಷ್ಯವಿರುವ ಹಾಗೇ ಕಾಣಿಸಲಿಲ್ಲ ಈ ದಿನಶನಿವಾರವಾದುದರಿಂದ ಮಧ್ಯಾಹ್ನದ ಮೇಲೆ ಶಾಲೆಯಿಲ್ಲ. ತಂದೆಯ ಕೈಯಿಂದ ಪೆಟ್ಟುಬಿದ್ದು ಹೋದುದರಿಂದ ಅವನ ಪಾಲಿಗೆ ಇನ್ನು ಅಡಿಗೋಲಿನ ಸಮಸ್ಯೆಯೂ ತೀರಿದಂತೆಯೇ ಆಟವೇ ಅವನ ಮನಸ್ಸನ್ನೀಗ ಆಕ್ರಮಿಸಿಕೊಂಡಿತ್ತು.

"ಅಮ್ಮ ನುಮ್ಮನೆ ಕೂತಿದ್ದೀಯಲ್ಲಾ?" ಎಂದು ಗಿರಿಜ ಊಟದ ನೆನಪು ಮಾಡಿದಳು.

"ನೀ ಬಡಿಸು ಅಪ್ಪ ಸ್ವೀವಿಯಿದ್ರೆ. ಪೆಟ್ಟು ತಿಂದ ಮಗು ಊಟವೇ ಬೇಡಾನ್ನುತ್ತೆ. ನಿನಗೆ ಊಟದ್ದೇ ಯೋಚ್ನೆ. ಹಸಿವಾದರೆ ನೀನುಣ್ಣು! ನಿಂಗೇನಿದೆ ಯೋಚ್ನೆ ಉಣ್ಣೋದೊಂದಲ್ಲದೆ" ಎಂದು ಕಲ್ಯಾಣಿ ಮಗಳ ಮೇಲೆ ತನ್ನ ಸಂತಾಪವನ್ನು ಹಾರಿಸ ತೊಡಗಿದಳು.

"ನಾನು ಬಡಿಸುತ್ತೇನೆ ರಾಮು. ಅಪ್ಪನ್ನ ಕರಿ ಬನ್ನಿ ಅಪ್ಪಾ" ಎಂದಳು ಗಿರಿಜ.

"ಊಹುಂ ನಾ ಉಣ್ಣಾಕ್ಕಿಲ್ಲ ಅಪ್ಪ ಪೆಟ್ಟು ಕೊಟ್ಟದ್ದು ಯಾಕೆ ಮತ್ತೆ?" ಎಂದ ರಾಮು

"ಹೋಗ್ಲಿ, ಅಪ್ಪನಿಗೆ ಅನ್ನ ಹಾಕ್ಬೇಡ ನಾವು ಉಣ್ಣುವ" ಗಿರಿಜನೆಂದಳು

"ಊಹುಂ. ಅಪ್ಪನೂ ಉಣ್ಣಬಾರ್ದು ನಾನೂ ಉಣ್ಣೋಲ್ಲ" ಎಂದ ರಾಮು. ಸಿಟ್ಟಾದರೂ ಅಪ್ಪನ ಪಕ್ಷಕ್ಕೆ ಅವನಿರುವ ಹಾಗಿತ್ತು

ಸದಾಶಿವನ ಮನಸ್ಸಿನಲ್ಲಿ ತಿಳಿ ಬೆಳಕೊಂದು ಮೂಡಿದಂತಾಯಿತು ಪೆಟ್ಟಿನ ಪರಿಣಾಮದಿಂದ ಎಲ್ಲ ಕಲ್ಮಷಗಳೂ ಬಳದು ಹೋದಂತಾಯಿತು. ರಾಮುವಿಗಾದರೋ ತಿಂದ ಪೆಟ್ಟಿನ ಲಕ್ಷ್ಯವೇ ಇರುವಂತೆ ಕಾಣಲಿಲ್ಲ.

"ಇಲ್ಲಿ ಬಾ ರಾಮೂ" ಸದಾಶಿವ ಎದ್ದು ಕುಳಿತುಕೊಳ್ಳುತ್ತಾ ಮಗನನ್ನು ಕರೆದನು ರಾಮು ತಂದೆಯ ಬಳಿ ನಿಂತ. ತಂದೆಗೆ ಮಗನ ಮೇಲೆ ಅಕ್ಕರೆ; ಮಗನಿಗೆ ತಂದೆಯ ಮೇಲೆ ಸಲಿಗೆ. ನಡುವೆ ಪರಕೀಯಳ ಹಾಗಿದ್ದವಳು ತಾಯಿಯೇನೋ!

"ನಾನು ಬಡಿಸಿದರೆ ಊಟ ಮಾಡ್ತೀಯ?" ಕೇಳಿದ ಸದಾಶಿವ.

"ಇಲ್ಲಾ"

ಸದಾಶಿವನೆದ್ದು ಒಟ್ಟೆಗಾತಿ ಕೊಳ್ಳುತ್ತಾ – "ನನ್ನ ಜತೇಲಿ ಬರುತ್ತೀಯಾ?"

"ಓ!" ಎಂದು ರಾಮು ಒಂಟೆಗಾಲಲ್ಲಿ ಸಿದ್ಧನಾದ.

"ಏನಿದೊಂತೆ? ಊಟ ಮಾಡೋದಿಲ್ವಾ ಇವತ್ತು?" ಎಂದು ಕಲ್ಯಾಣಿ ಗುರುಗುಟ್ಟಿದಳು

"ಯಾವಾಗಲೂ ಊಟ ಹಾಕುತ್ತಿಯಾ ಅಂತ ಕೇಳಿದರೇನೇ ನೀನು ಬಡಿಸೋದು?" ಎಂದು ಹೇಳಿ ಸದಾಶಿವನು ರಾಮೂನನ್ನು ಕರೆದುಕೊಂಡು ಹೊರಟೇ ಬಿಟ್ಟ

ತಂದೆ ಮಗ ಇಬ್ಬರೂ 'ಗ್ರಾಂಡ್ ರೆಸ್ಟೋರೆಂಟ್'ಗೆ ಹೋಗಿ ನಾಲಗೆಯ ಚಪಲ ತೀರಿಸಿ ಕೊಳ್ಳುತ್ತಾ ಹೊಟ್ಟೆ ತುಂಬಿಸಿಕೊಂಡರು ಸಿಹಿತಿಂಡಿಗಳನ್ನು ತಿಂದು ರಾಮು ಹರ್ಷಭರಿತನಾದ. ಸದಾಶಿವ ಸ್ವಲ್ಪ ತಿಂಡಿಗಳನ್ನು ಮನೆಗೂ ಕಟ್ಟಿಸಿಕೊಂಡು ಹೊರಟ

ಮನೆಯಲ್ಲಿ ಸದಾಶಿವನಿಗೆ ಬಲು ದೊಡ್ಡ ಜವಾಬ್ದಾರಿ ಕಾದುಕೊಂಡಿತ್ತು ಕಲ್ಯಾಣಿ ಮುಸುಕು ಹಾಕಿ ಬಿದ್ದುಕೊಂಡಿದ್ದಳು.

"ಅಮ್ಮ ಉಪವಾಸ ಊಟವೇ ಮಾಡಿಲ್ಲ" ಎಂದಳು ಗಿರಿಜ.

"ನೀನು?"

"ನಾನು ಉಂಡೆ"

ಹಾಳಾದ ಅಡಿಕೋಲು ಹೇಗೆ ಕೇಗೋ ತಿರುಗಾಡಿ ಕಲ್ಯಾಣಿಯಿಂದೀಗ ಅನ್ನ ಸತ್ಯಾಗ್ರಹ ಮಾಡಿಸುತ್ತಿತ್ತು. ರಾಮುವನ್ನೇ ಮುಂದೆ ಮಾಡಿ, ಅವಳನ್ನು ಸಮಜಾಯಿಸಿ ನಗಿಸಿ ಊಟಕ್ಕೇಳಿಸಬೇಕಾದರೆ ಸಾಕೋ ಸಾಕಾಯಿತು. ಉಣ್ಣುತ್ತಾ "ಹಾಳಾದ ಅಲ್ಪ ಅಡಿಕೋಲಿನಿಂದಾಗಿ ಹೋಟಲಿಗಷ್ಟು ದುಡ್ಡಾಯಿತು. ಹುಡುಗನಿಗಷ್ಟು ಪೆಟ್ಟಾಯಿತು!" ಎಂದಳು ಕಲ್ಯಾಣಿ ಬಾಯಿಯಲ್ಲಿ ಅನ್ನದ ತುತ್ತಿಟ್ಟುಕೊಂಡು.

೦೦ ೧೦ ೦೦

ಆ ದಿಕ್ಕೆಟ್ಟ ಅಡಿಕೋಲಿನ ಕತೆ ಅಲ್ಲಿಗೇ ಮುಗಿಯಲಿಲ್ಲ. ಸೋಮವಾರ ದಿನ ಸಾಯಂಕಾಲ ರಾಮು ಮನೆಗೆ ಬರುವಾಗ ಯುದ್ಧ ಭೂಮಿಯಿಂದ ತಿರುಗಿ ಬಂದ ಯೋಧನ ರೀತಿಯಲ್ಲಿದ್ದ. ಅಂಗಿ ಹರಿದಿತ್ತು. ತಲೆಕೆದರಿತ್ತು ಕೆನ್ನೆಯಲ್ಲಿಷ್ಟು ರಕ್ತವೂ ಕಾಣುತ್ತಿತ್ತು ಕೈಯ್ಯಲ್ಲೊಂದು ಮುರಿದ ಅಡಿಗೋಲನ್ನು ವಿಜಯ ಖಡ್ಗದಂತೆ ಬೀಸುತ್ತಾ ಬಂದ — 'ಅಪ್ಪಾ! ಅಡಿಕೋಲು ಸಿಕ್ಕಿತು ನೋಡಿ" ಎಂದು ಕೇಕೇ ಹಾಕುತ್ತಾ ವಿಜಯ ಗರ್ವದಿಂದ ಬೀಗಿ ನಿಂತ. ಮತ್ತೆ ವಿಚಾರಿಸಿದಾಗ ನಡೆದ ಕತೆ ಹೀಗೆ,—

ಆ ದಿನ ಗೋಪು ವೆಂಬ ಹುಡುಗನ ಕೈಯಲ್ಲಿ ತನ್ನ ಕಳೆದು ಹೋದ ಅಡಿಕೋಲನ್ನು ರಾಮು ನೋಡಿದ. 'ಇದು ನಂದು. ಕೊಡು —' ಎಂದ ರಾಮು ಅದಕ್ಕೆ ಕೈ ಹಾಕಿದ ಗೋಪು ಅದು ತನ್ನದೆಂದು ವಾದಿಸಿದ ಅದು ಅವನ ಅಪ್ಪ ಅವನಿಗೆ ತೆಗಿಸಿಕೊಟ್ಟದ್ದಂತೆ ಒಂದು ದಿನ ಬೀದಿಯಲಿ ಲೆಲ್ಲೋ ಬಿದ್ದು ಹೋಯಿತಂತೆ. ಅದರಲ್ಲಿರುವ ಒಂದು ಗುರುತು ಅದು ಅವನದೆಂದು ಹೇಳುತ್ತದಂತೆ ಮತ್ತೆ ಅದು ಅವನಿಗೆ ಮೊನ್ನೆ ಶಾಲೆಯಲ್ಲೇ ಸಿಕ್ಕಿತಂತೆ.

ಆದರೆ ರಾಮು ಬಿಡಲಿಲ್ಲ ಅದು ತನ್ನದೆಂದೂ ತನ್ನ ಅಪ್ಪ ತನಗೆ ತೆಗಿಸಿಕೊಟ್ಟದ್ದೆಂದೂ ಅವನೊಡನೆ ಸೆಣಸಾಡಿದ. ಈ ಸೆಣಸಾಟದಲ್ಲಿ ಅಡಿಕೋಲು ಮುರಿದು ಅರ್ಧ ಅವನಿಗೂ ಅರ್ಧ ಇವನಿಗೂ ಸಿಕ್ಕಿತ್ತು. ಆತ ತನ್ನ ಅಪ್ಪನೊಡನೆ ಹೇಳುತ್ತೇನೆಂದು ಓಡಿದ ಈತನೂ ತನ್ನಪ್ಪನೊಡನೆ ಹೇಳುತ್ತೇನೆಂದು ಓಡಿ ಬಂದಿದ್ದಾನೆ.

ಹೀಗೆ ಅಡಿಕೋಲೇನೋ ಕೊನೆಗಂಡಿತು. ಇನ್ನು ಇಬ್ಬರು 'ಅಪ್ಪಂದಿರು' ಸಂಧಿಸಿಕೊಂಡು ಏನೇನು ಮಾಡುವರೋ ಅದಿನ್ನೂ ಗೊತ್ತಾಗಿಲ್ಲ ಗೊತ್ತಾದಾಗ ನೋಡಿಕೊಳ್ಳೋಣವಂತೆ.

—"ನವಗಿರಿನಂದ".

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ ಎ.

ಪ್ರಕಾಶಕರು
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ. ರೂ 1=75, ಬಿಳಿ ಕಾಗದ
ರೂ. 2ನ್ನು M O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.



ಕುಮಾರಿ ಚಿತ್ರಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಪ್ರಶಸ್ತ,

ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/-
(ವಿ. ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು. ಷಾ ಕಂಪೆನಿ, ಮಂಗಳೂರು—1.

ಕವಿತಾ ವಿತಾನ

ತುಂಬುಯೌವನದಲ್ಲಿ

ಚಿಗರೆಯಂತೆ ನೆಗೆಯುತಿಹುದು
ಮನವು ಬಂಧವಿಲ್ಲದೆ!
ಆಸೆ, ಆತುರಗಳು ತುಂಬ
ಮನವೊಳೆನ್ನ ಹುದುಗಿದೆ ॥ ೧ ॥

ಮೀಸೆ ಮೂಡಿ ಬರಲು ಎನಗೆ
ಲೋಕ ಕಾಣದಾಯಿತು!
ಎಲ್ಲ ನಾನೆ ನನ್ನದೆಂಬ
ಅಹಂಭಾವ ಬೆಳೆಯಿತು ॥ ೨ ॥

ತಪ್ಪೊ ಒಪ್ಪೊ? ಯಾರು ಬಲ್ಲ?
ನ್ಯಾಯ ನಡತೆ ಇಲ್ಲವು.
ತಾನು ಮಾಡಿದೆಲ್ಲ ಶುದ್ಧ—
ವೆನುವ ಬುದ್ಧಿ ಭಾವವು! ॥ ೩ ॥

ಹೆತ್ತ ತಾಯಿ ಪಡೆದ ತಂದೆ
ಗುರುವು ಹಿರಿಯರೆಲ್ಲರು,—
ಕಣ್ಣಿಗೆನ್ನ ಸಣ್ಣದಾಗಿ
ಕಾಣುತಿದ್ದ ಅಜ್ಞರು! ॥ ೪ ॥

ಮೋದದಿಂದ ವಿಹರಿಸುತ್ತ
ಸುಖವ ಪಡೆದೆ ಕೆಲದಿನ
ಇಂದಿಗಿದುವೆ ಸುದಿನವೆಂದು—
ಹಿಗ್ಗಿ ನಲಿದೆ ದಿನದಿನ ॥ ೫ ॥

ಕಷ್ಟವೆಂದರೇನೊ? ತಿಳಿಯೆ!
ಚಿಂತೆ ಎಂಬುದಿರುವುದೆ?
ಹೊರೆಯ ಹೊರದ ಜೀವಿಗಿಂತು
ಭಾರದರಿವು ಬರುವುದೆ? ॥ ೬ ॥

ನಿನ್ನೆ ಎಂಬುದಿಂದು ಇಲ್ಲ,
ಇಂದು ಕಳೆದು ನಾಳೆಯು—
ಅಂತೆ ಎನಿತೊ ಕಾಲ ಸಂದು—
ಇಂದು ಮೊಳತು ಬಾಳ್ವೆಯು! ॥ ೭ ॥

—ಶ್ರೀ ಕೆ ಜಿ ಶೆಟ್ಟಿ ಕಡಂದಲೆ.

ಉಡುಪಿ ಡಿ ಮು ಕೋರ್ಟಿನಲ್ಲಿ

O. S No 182/59

ಅಂಪಾರು ಲಕ್ಷ್ಮೀನಾರಾಯಣ ದೇವರು, ಇದರ ಟ್ರಸ್ಟಿ ಎ. ಲಕ್ಷ್ಮೀನಾರಾಯಣ ಆಚಾರ್—ವಾದಿ

ಮತ್ತು

ಯೋಜನಗಂಧಿ ಹೆಗಡ್ತಿ-ಸಿದ್ದ ಯಾನೆ ರಾಮಕ್ಕ ಹೆಗಡ್ತಿ ಮಗಳು ಉಡುಪಿ ತಾಲ್ಲೂಕು ಆತ್ರಾಡಿ ಗ್ರಾಮದ ಪರೀಕ—ಪ್ರತಿವಾದಿಳು.

ಇವರೊಳಗೆ

ಪ್ರತಿವಾದಿಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,–

ವಾದಿ ದೇವರ ಭಂಡಾರಕ್ಕೆ ಪ್ರತಿವಾದಿಳಿಂದ ಕಳದ ವಿಳಂಬಿ ಸಂವತ್ಸರಕ್ಕೆ ಬರತಕ್ಕ ಕೊಡುನಿಕೆ ಬಾಕಿ ವಸೂಲಿಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾ 11 9-59 ಕ್ಕೆ ಪ್ರತಿವಾದಿಳ ಜಾಹೀರಾತು ಬಗ್ಗೆ ಇಟ್ಟಿರುವುದರಿಂದ ಆ ದಿವಸದಲ್ಲಿ ಸಾಕ್ಷಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಸ್ವತಃ ವ ವಕೀಲರ ಮುಖಾಂತ್ರ ಹಾಜ್ರಾಗಿ ಜವಾಬು ಮಾಡಿಕೊಳ್ಳತಕ್ಕದ್ದು

Y C S Hegde,
Advocate for Plaintiff

ಉಡುಪಿ, ತಾ 18 8 59

NAVAYUGA
REGD. NO. M. 3619

UDIPI, THURSDAY
3—9—1959

LICENSE NO. 31
Licensed to Post without Prepayment

ಅಭಿಪ್ರಾಯ

ಶ್ರೀ ಅಜಿತ ಪ್ರಸಾದ ಜೈನರು ಅಸಫಲರಾದರು.

ನೆಹರೂ ಕೃಪಾದೃಷ್ಟಿ ಅವರಿಗಿದ್ದಿದ್ದರೂ ಪ್ರಕೃತಿ ವಿರುದ್ಧವಾಯಿತು; ಗುರ್ವನುಗ್ರಹವಿದ್ದರೂ ಅದು ಅಕರ್ಮಣ್ಯವಾಯಿತು.

ಜನತೆಯ ದೈನಂದಿನ ಜೀವನಕ್ಕೆ ಅತ್ಯಂತಾವಶ್ಯಕವಾದ ಪದಾರ್ಥವಾದ ಆಹಾರ ಧಾನ್ಯಗಳಿಗೆ ಸಂಬಂಧಿಸಿದ ಆಹಾರ ಮಂತ್ರಿಶಾಖೆಯು ಭಾರತದ ಮಟ್ಟಿಗೆ ಸೈತಾನರೂಪಿಯಾಗಿದೆ ಎಂದು ಹೇಳಬಹುದು. ಕಳೆದ ಹನ್ನೆರಡು ವರ್ಷಗಳಲ್ಲಿ ಈ ವಿಭಾಗದ ಯಾಜಮಾನ್ಯವನ್ನು ಹೊತ್ತ ಆರು ಮಂತ್ರಿಗಳಲ್ಲಿ ಕೇವಲ ಒಬ್ಬ ಮಾತ್ರ ಈ ಸೈತಾನನ ಹಿಡಿತದಿಂದ ಪಾರಾಗಿ ಬಂದಿರುವನೆಂದು ಅಭಿಪ್ರಾಯವಿದೆ. ಶ್ರೀ ಅಜಿತಪ್ರಸಾದ ಜೈನರು ಈ ಸೈತಾನನ ವಕ್ರದೃಷ್ಟಿಗೂ ಕಪಿಮುಷ್ಟಿಗೂ ಸಿಕ್ಕಿದ ಒಬ್ಬ ಮಂತ್ರಿವರ್ಯರೆಂದು ಹೇಳಬಹುದು.

ಇಂದಿನವರೆಗಿನ ಇತಿಹಾಸದ ಅನುಭವದಿಂದ ಹೇಳುವುದಾದರೆ, ಆಹಾರ ಮಂತ್ರಿಯ ಪಾಲಿಗೆ ಪ್ರಶಂಸೆ ತಿಲಾಂಶ, ನಿಂದೆ ಸಾಗರಾಂಶ ದೊರೆಯುವುದು. ದಿವಂಗತ ರಫಿ ಅಹಮದ ಕಿದ್ವಾಯಿಯವರು ಮಾತ್ರ ಇದಕ್ಕೆ ಅಪವಾದವಾಗಿದ್ದರು. ಇವರ ರಾಜಕೀಯ ಕ್ಷೇತ್ರದ ಶಿಷ್ಯರಾಗಿರುವ ಶ್ರೀ ಜೈನರು ಗುರುವಿನಂತೆ ಯಶಸ್ವಿಯಾಗದಿರುವುದರಿಂದ "ಯಥಾಗುರುಃ ತಥಾ ಶಿಷ್ಯ" ಎಂಬ ಉಕ್ತಿಯೂ ಅರ್ಥಹೀನವಾಯಿತು. ಗುರುವಿನ ಕಾಲದಲ್ಲಿ ಪರಿಸ್ಥಿತಿ ತುಸು ಅನುಕೂಲವಾಗಿಯೇ ಇತ್ತು; ಆದರೆ, ಶಿಷ್ಯನ ದುರದೃಷ್ಟದಿಂದ; ಅವನ ಕಾಲದಲ್ಲದು ಪ್ರತಿಕೂಲವಾಗಿ ಮಾರ್ಪಟ್ಟಿತು. ಶ್ರೀ ಜೈನರ ಮಾತುಗಳಲ್ಲಿಯೇ ಹೇಳುವುದಾದರೆ "೧೯೫೭-೫೮ರಲ್ಲಿ ಆಹಾರಧಾನ್ಯೋತ್ಪತ್ತಿಯು ಒಂದು ಕೋಟಿ ಟನ್ನುಗಳಷ್ಟು ಕಡಿಮೆಯಾಯಿತು. ಇಂತಹ ಪರಿಸ್ಥಿತಿ ಕಳೆದ ೩೦ ವರ್ಷಗಳಿಂದಲೂ ಒದಗಿ ಬಂದಿಲ್ಲ." ಶ್ರೀ ಜೈನರು ಇದಕ್ಕೆ ತಾವು ಕಾರಣರೆಂದು ಹೇಳುವುದಿಲ್ಲ. "ಪರಿಸ್ಥಿತಿ ಕಠಿನವಾಗಿದ್ದರೂ ನಾವು ವಿಜಯಿಗಳಾಗಿದ್ದೇವೆ; ಬೇಡಿಕೆ ಮತ್ತು ಪೂರೈಕೆಗಳಲ್ಲಿ ಸಾಮಂಜಸ್ಯ ಕಲ್ಪಿಸಿದ್ದೇವೆ. ಹಿಂದಿನ ಕಾಲದಲ್ಲಿ ಈ ಅಭಾವ ಅತಿ ಕಡಿಮೆಯಿದ್ದಾಗಿನ ಪರಿಸ್ಥಿತಿಯನ್ನು ನಾವು ನೋಡುವುದಾದರೆ, ಇಂದು ನಾವು ನಾಚಿಕೊಳ್ಳಬೇಕಾಗಿಲ್ಲ" ಎಂದವರು ವಿಶ್ವಾಸದಿಂದ ಹೇಳುತ್ತಾರೆ.

ಭಾರತದಲ್ಲಿ ಗಂಭೀರ ಆಹಾರ ಪರಿಸ್ಥಿತಿ ಇದೆ ಎಂಬುದನ್ನು ಶ್ರೀ ಅಜಿತ ಪ್ರಸಾದರು ತಮ್ಮ ಅಂತಿಮ ಮಂತ್ರಿ ಭಾಷಣದಲ್ಲಿಯೂ ಆಡಿದ್ದಾರೆ. ಆಹಾರ ಧಾನ್ಯಗಳ ರಾಜ್ಯ ವ್ಯಾಪಾರದ ನಿರ್ಣಯವನ್ನು ಮಾಡಿ, ಅದಕ್ಕೆ ಅವಶ್ಯಕವಾದ ನಿಯಂತ್ರಣ ಮತ್ತಿತರ ವಿಧದ ವ್ಯವಸ್ಥೆಯನ್ನು ತನ್ನ ಸಹೋದ್ಯೋಗಿಗಳನ್ನು ಈ ಪರಿಸ್ಥಿತಿಯ ಜವಾಬ್ದಾರರನ್ನಾಗಿ ಅವರು ಮಾಡಿದ್ದಾರೆ. ಕಾಂಗ್ರೆಸ್ ವಾಮಪಕ್ಷದವರೆಂದು ತಿಳಿಯಲಾದ ಶ್ರೀ ಜೈನರ ಈ ಮಾತು ಬಲಪಕ್ಷದವರಿಗೆ ಶಕ್ತಿನೀಡುವುದೆನ್ನಬಹುದು.

ಆಹಾರ ಮಂತ್ರಿ ಪದವಿಯಿಂದ ತನ್ನನ್ನು ನಿವೃತ್ತಗೊಳಿಸಬೇಕೆಂದು ಈ ಮೊದಲೇ ಒಂದೆರಡುಬಾರಿ ಅವರು ಪ್ರಧಾನಿಯವರನ್ನು ವಿನಂತಿಸಿಕೊಂಡಿದ್ದರೂ ಅದು ಆಗ ಸ್ವೀಕೃತವಾಗಲಿಲ್ಲ. ಲೋಕಸಭೆಯಲ್ಲಿ ಆಹಾರಶಾಖೆಯ ಕುರಿತು ಚರ್ಚೆ ನಡೆದಾಗ, ಶ್ರೀ ಜೈನರ ಪರಮಮಿತ್ರ ಶ್ರೀ ಮಹಾವೀರ ತ್ಯಾಗಿಯವರೂ ಈ ವಿಷಯವಾಗಿ ಕಟುವಾಗಿ ಟೀಕಿಸಿದರು. ಅವರ ರಾಜಿನಾಮೆಯನ್ನೂ ಬೇಡುವ ಪ್ರಸಂಗ ಒದಗಿಬರುತ್ತಿದ್ದಂತೆಯೇ ಪ್ರಜಾತಂತ್ರದ ಸಂಪ್ರದಾಯಕ್ಕನುವಾಗಿ ಅವರು ರಾಜಿನಾಮೆಯಿತ್ತರು. ನಿಜವಾಗಿಯೂ ಶ್ರೀ ಜೈನರು ಮಂತ್ರಿಗಳಾಗಿ ಲೋಕಪ್ರಿಯರಾಗಲಿಲ್ಲ. ಹಿಂದೆ ಅವರು ಪುನರ್ನಿವೇಶನ ಶಾಖೆಯ ಮಂತ್ರಿಯಾಗಿದ್ದಾಗಲೂ ಇದೇ ಮಾದರಿಯ ಟೀಕೆ ಟಿಪ್ಪಣಿಗಳಿಗೆ ಗುರಿಯಾಗಿರುವುದನ್ನು ನಾವು ಗಮನಿಸಬಹುದು.

ಶ್ರೀ ಜೈನರು ಕಳೆದ ನಾಲ್ಕೂವರೆ ವರ್ಷಗಳಿಂದ ಆಹಾರಮಂತ್ರಿಯಾಗಿದ್ದರು. ಆಹಾರದ ವಿಕಟ ಪರಿಸ್ಥಿತಿಯನ್ನೆದುರಿಸಲು ಅವರು ಈ ಅವಧಿಯಲ್ಲಿ ಹತಾಶರಾಗಲಿಲ್ಲ. ತನ್ನ ಕಾರ್ಯದಲ್ಲವರು ನಿಷ್ಠೆ ಇರಿಸಿದ್ದರು; ಅಧಿಕಾರಿಗಳ ವಿಶ್ವಾಸವನ್ನೂ ಪಡೆದುಕೊಂಡಿದ್ದರು. ಆದರೆ, ಸರಕಾರಿ ನೀತಿಗನುಕೂಲವಾಗಿ ವ್ಯಾಪಾರಿಗಳು ನಡೆಯುವಂತೆ ಮಾಡುವುದಕ್ಕೆ ಮಾತ್ರ ಆಗಲಿಲ್ಲ; ಅಂಕೆಸಂಖ್ಯೆಗಳ ಮಾಯಾಜಾಲದಿಂದಲೂ ಇವರು ಬಿಡುಗಡೆ ಹೊಂದಲಿಲ್ಲ. ಪ್ರಕೃತಿಯ ಮೇಲೂ ಶ್ರೀ ಜೈನರಿಗೆ ಅಪರಿಮಿತ ವಿಶ್ವಾಸವಿತ್ತು; ಆದರೇನು, ಅವರ ದುರ್ದೈವದಿಂದ ಅದೂ ಅವರಿಗೆ ಕೈಕೊಟ್ಟಿತು!

ಶ್ರೀ ಅಜಿತ ಪ್ರಸಾದ ಜೈನರು ಪಶ್ಚಿಮ ಉತ್ತರ ಪ್ರದೇಶದ ಸಹಾರನಪುರಕ್ಕೆ ಸೇರಿದವರು. ೧೯೩೦ರಲ್ಲಿ ತಾವು ೨೮ ವರ್ಷ ವಯಸ್ಸಿನವರಾಗಿರುವಾಗ ಸವಿನಯ ಕಾಯಿದೆ ಭಂಗದ ಚಳವಳಿಯಲ್ಲಿ ಮೊತ್ತಮೊದಲಿಗೆ ಭಾಗವಹಿಸಿದರು. ಕೆಲಕಾಲದಲ್ಲೇ ಅವರು ತಮ್ಮ ರಾಜ್ಯದ "ಕಿದ್ವಾಯಿ ಲೆಫ್ಟಿನೆಂಟ"ರೆಂದು ಗಣಿಸಲ್ಪಟ್ಟರು. ಶ್ರೀ ಕಿದ್ವಾಯಿಯವರ ಮೇಲೆ ಶ್ರೀ ಜೈನರ ವಿಶ್ವಾಸ ಅಪರಿಮಿತವಾಗಿತ್ತು. ಶ್ರೀ ಪುರುಷೋತ್ತಮದಾಸ ತಂಡನರು ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಾಗ, ಶ್ರೀ ಕಿದ್ವಾಯಿಯವರು ತಮ್ಮ ಮಂತ್ರಿಪದವಿಗೆ ರಾಜಿನಾಮೆಯಿತ್ತರು. ಆಗಲೇ ಶ್ರೀ ಜೈನರು ತಮ್ಮ ರಾಜಿನಾಮೆಯನ್ನು ಮುಂದಿಟ್ಟಿದ್ದರು. ಏನೇ ಇರಲಿ, ಪ್ರಧಾನ ಮಂತ್ರಿಯವರ ವಿಶ್ವಾಸಭಾಜನರಾದವರಲ್ಲಿ ಶ್ರೀ ಜೈನರೂ ಒಬ್ಬರು.

ಉತ್ತರ ಪ್ರದೇಶದಲ್ಲಿ ಜನಿಸುವ ಭಾಗ್ಯವೊಂದು, ಪ್ರಧಾನಿ ನೆಹರೂರವರ ಕೃಪಾದೃಷ್ಟಿಯೆರಡು, ಇರುವ ಶ್ರೀ ಜೈನರಿಗೆ ಮಂತ್ರಿಪದವಿ ಮೂರನೆಯದಾಗಿ ದೊರೆತರೂ ಅದನ್ನು ಉಳಿಸಿಕೊಳ್ಳುವ, ಜನತೆಯು ಮೆಚ್ಚುವಂತೆ ನಿರ್ವಹಿಸುವ ಶಕ್ತಿ ಅವರಲ್ಲಿಲ್ಲದುದು ವಿಶಾದನೀಯವಾಗಿರುತ್ತದೆ.

ರಾಜಕೀಯ

(೧ನೇ ಪುಟದಿಂದ)

ದಲ್ಲಿ ತೀವ್ರ ಪರಿವರ್ತನೆಯಾಗಿ ರಾಷ್ಟ್ರಾಧ್ಯಕ್ಷರ ಘೋಷಣೆಯು ಹೊರಡಿಯೇ ಬಿಟ್ಟಿತು. ತಂದೆಗಿಂತ ಮಗಳು ಮೇಲು ಎಂಬುದು ನಿಜವಾದರೆ, ಈ ಬಾರಿಯೂ ಪುತ್ರಿಯದೇ ಮೇಲುಗೈಯಾಗುವ ಸಂಭವವು ಹೆಚ್ಚು. ಏಕೆಂದರೆ, ಚೀನವು ಮಾಡುತ್ತಿರುವ ಕುತಂತ್ರಗಳಿಂದಾಗಿ, ಸಾಮಾನ್ಯವಾಗಿ ಎಲ್ಲರೂ ಚಿಂತಿತರಾಗಿದ್ದಾರೆ; ಇತ್ತೀಚೆಗೆ ಚೀನಕ್ಕೆ ಭಾರತ ಸರಕಾರ ಕಳಿಸುತ್ತಿರುವ ಪ್ರತಿಭಟನಾ ಪತ್ರಗಳಿಗೂ ಉತ್ತರಿಸುವ ಸೌಜನ್ಯವನ್ನೂ ಚೀನೀ ಸರಕಾರ ತೋರಿಸುವುದಿಲ್ಲವೆಂದಾದಲ್ಲಿ ಅದು ಮೈತ್ರಿ, ಸಹೋದರತೆ ಎಂಬುದಕ್ಕೆ ಯಾವ ರೀತಿ ವ್ಯಾಖ್ಯೆ ಬರೆಯುವುದೆಂದು ತಿಳಿದು ಕೊಳ್ಳಬಹುದು. "ಸಹೋದರ ಪ್ರೇಮದಿಂದಲೇ ಅದು ಚೀನಾದಿಂದ ಹೊರಟು ಸಹೋದರ ರಾಷ್ಟ್ರ ಭಾರತವನ್ನೂ ಪ್ರವೇಶಿಸುವುದೆಂದು ತಿಳಿಯಬೇಕೆ?

ಚೀನಾದ ಸೀಮೋಲ್ಲಂಘನೆಯು ಭಾರತೀಯರ ಸ್ವಾತಂತ್ರ್ಯಕ್ಕೊಂದು ಆಹ್ವಾನವಾಗಿದೆ. ಭಾರತೀಯರು ತಮ್ಮ ದೇಶವನ್ನುಳಿಸಲು ಯಾವುದೇ ರೀತಿಯಿಂದ ಹಿಂದುಳಿಯಲಾರರೆಂಬುದೂ ಇದಕ್ಕೆ ಅವಶ್ಯಕವಾದ ಕಾರ್ಯಕ್ರಮವನ್ನು ಈಗಾಗಲೇ ಕೈಗೊಳ್ಳಲಾಗುತ್ತಿದೆ ಎಂಬುದೂ ಸಂತೋಷದವಿಷಯ. ಪ್ರಜಾಪ್ರಭುತ್ವದ ಈ ೨೦ನೆಯ ಶತಮಾನದಲ್ಲಿ ಸಾಮ್ರಾಜ್ಯಶಾಹಿಯೂ ವಿಸ್ತರಣಾವಾದವೂ, ಆಕ್ರಮಣ ಮನೋವೃತ್ತಿಯೂ ನಿಂದಾರ್ಹವಾದುದೆಂಬುದನ್ನು ಜಗತ್ತು ತಿಳಿದಿದೆ. ಭಾರತ ಸರಕಾರ ಕೇವಲ ಪ್ರತಿಭಟನೆ ಸೂಚಿಸುವುದರಲ್ಲೇ ಹೊತ್ತುಗಳೆಯದೆ, ಭಾರತದ ಸೀಮಾ ರಕ್ಷಣೆಯನ್ನು ಮಾಡಲು ಸನ್ನದ್ಧವಾಗುವ ಕಾಲ ಈಗ ಸಮೀಪವಾಗುತ್ತಿದೆ. ಇದಕ್ಕೆ ಹಿಂದು ಮುಂದು ನೋಡುತ್ತ ಕುಳಿತರೆ ಪ್ರಯೋಜನವಿಲ್ಲವೆಂಬುದು ಇತಿಹಾಸಜನಿತ.

Notice

ಉಡ್ಪಿ. ಡಿ. ಮು. ಕೋರ್ಟಿನಲ್ಲಿ
O. S. No.181/1959
ಕಾಡೂರು ಮಹಾಬಲ ಹೆಗ್ಡೆ—ವಾದಿ
ಮತ್ತು
ಗೋವಿಂದ ಶೆಟ್ಟಿ ಕೂಡಾ—ಪ್ರತಿವಾದಿರು
ಇವರೊಳಗೆ—

To

14ನೇಪ್ರತಿವಾದಿ ಜಟ್ಟ ಯಾನೆ ಕೊರಗ ಶೆಟ್ಟಿ, 15ನೇಪ್ರತಿವಾದಿ ತೇಜಪ್ಪ ಶೆಟ್ಟಿ, 16ನೇ ಪ್ರತಿವಾದಿಳು ಅಕ್ಕು ಸೆಟ್ತಿ — ಉಡ್ಪಿ ತಾಲ್ಲೂಕು ತೆಂಕನಿಡಿಯೂರು ಗ್ರಾಮದ ಬೆಳ್ಳಿ.

ವಾದಿಯು ಮೂಲಗೇಣಿಯ ಗೇಣಿ ಬಾಕಿ ಮೊಬಲಗು ರೂಪಾಯಿ1054=57ರ ವಸೂಲಿಗೆ ಮಾಡಿದ ಮೇಲಿನ ದಾವೆಯು ತಾ.11-9-1959ಕ್ಕೆ ಇಟ್ಟಿದೆ. ನಿಮ್ಮ ಉಜ್ರ ಹರಕೆಯಿದ್ದರೆ ಆ ದಿವಸ ಹಗಲು ಗಂಟೆ10ಕ್ಕೆ ನೀವು ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಲಿಕ್ಕೆ ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ಸದ್ರಿ ವ್ಯಾಜ್ಯ ತೀರ್ಮಾನಿಸಲ್ಪಡುವುದು.

B. S. Hegde,
Vakil for Plaintiff.

Udipi, 29-8-1959

ಹಲ್ಲಿದ್ದಾಗಲೇ ಹುರಿಗಡಲೆ

ಒಂದು ಹಳೆಯ ಗಾದೆ. ಮಾತು ಹಳತಾದರೂ ಅಭಿಪ್ರಾಯ ಹಳತಲ್ಲ. ಹಲ್ಲು ಬಿದ್ದ ಮೇಲೆ ಹುರಿಗಡಲೆಯನ್ನು ಸವಿಯುವ ಕನಸು ನನಸಾಗಲಾರದು. ಮುರುಗಿದರೆ ಹಲ್ಲುಗಳು ಮತ್ತೆ ಬರುವಂತಿಲ್ಲ. ಇದ್ದಾಗಲೇ ಯಾಕೆ ಕಾರ್ಯೋನ್ಮುಖರಾಗಬಾರದು?

ಉಳಿತಾಯದ ಸವಿಯೂ ಹಾಗೆಯೇ. ನಿಮ್ಮ ಭಾಗ್ಯಲಕ್ಷ್ಮಿಯು ಒಲಿದು ಬಂದಾಗ ಇಂದು ನಾಳೆನ್ನದೆ ಬಂದು

ಲಕ್ಕೀ ಕೇಶ್ ಸರ್ಟಿಫಿಕೇಟಿಗಾಗಿ

ಸಿಂಡಿಕೇಟ್ ಬೇಂಕಿನಲ್ಲಿ ವಿಚಾರಿಸಿರಿ.

ಚಲಾವಣಾ ನಿಧಿ ರೂ. 18 ಕೋಟಿಗೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.

The Canara Industrial & Banking Syndicate Ltd., Udipi.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No· 466 N/50 date 2-12-1950 of the Director of public Instruction, Madras·

Edited, Printed & Published by K. H. Shetty, at the Navayuga Press, Udipi, S. India.

ವಾ ಚಂದಾ ರೂ 5-75 | ಬೆಲೆ 13 ನ.ಪೈಸೆ

ನವಯುಗ

Vol 39 No 2
ವರುಷ ೩೯. ವಾರ ೨

10-9-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ಅನಿರೀಕ್ಷಿತವಾಗಿ ಸಂಭವಿಸಿದ ಗೊಂದಲದ ಒಳಗುಟ್ಟೇನು?

ಸಂರಕ್ಷಣಾದಳ ಮತ್ತು ಮಂತ್ರಿಶಾಖೆಗಳ ನಡುವಿನ ಭಿನ್ನಾಭಿಪ್ರಾಯದ ಬಿರುಗಾಳಿಯ ದುಷ್ಪರಿಣಾಮ ಶಾಶ್ವತವಾಗಿ ಕೊನಗೊಳ್ಳುವಂತಾಗಬೇಕು

ಭಾರತದ ರಾಜಕೀಯ ವಲಯಗಳಲ್ಲಿ ಮಾತ್ರವಲ್ಲ ಎಲ್ಲ ಕ್ಷೇತ್ರಗಳಲ್ಲಿಯೂ ಒಂದು ಪ್ರಬಲವಾದ ಗೊಂದಲವು ಅನಿರೀಕ್ಷಿತವಾಗಿ ತಲೆದೋರಿದ್ದು ಅದು ಸಂಪೂರ್ಣವಾಗಿಯಲ್ಲವಾದರೂ ಕೊಂಚ ಮಟ್ಟಿಗೆ ದೂರವಾಗುತ್ತಿರುವುದು ಸಮಾಧಾನದ ನಿಟ್ಟುಸಿರು ಎಳೆದುಕೊಳ್ಳಲು ಸಮಯಾವಕಾಶವಿತ್ತಿತು. ಮೇ| ಜ| ತಿಮ್ಮಯ್ಯನವರು ಮಹಾದಂಡನಾಯಕನ ತನ್ನ ಹುದ್ದೆಗೆ ರಾಜಿನಾಮೆಯನ್ನಿತ್ತರೆಂದೊಮ್ಮೆ, ಸಂರಕ್ಷಣಾ ಮಂತ್ರಿ ಶ್ರೀ ವಿ ಕೆ ಕೆ ಮೆನನ್ನರು ರಾಜಿನಾಮೆಯಿತ್ತುದರ ಪರಿಣಾಮವಾಗಿ ಮಹಾದಂಡನಾಯಕರು ತಾವಿತ್ತ ತ್ಯಾಗಪತ್ರವನ್ನು ಹಿಂತೆಗೆದುಕೊಂಡರೆಂದಿನ್ನೊಮ್ಮೆ ದೊಡ್ಡ ಶೀರ್ಷಿಕೆಗಳಲ್ಲಿ ಭಾರತೀಯ ಹಾಗೂ ವಿದೇಶೀಯ ಪತ್ರಿಕೆಗಳಲ್ಲಿಯೂ ಪ್ರಕಟವಾಗುವಾಗ, ಭಾರತೀಯ ಜನಸಾಮಾನ್ಯರು ಈ ತಂತ್ರದ ರಹಸ್ಯವೇನೆಂದು ತಿಳಿಯಬೇಕು?

ಕೆಲವಾರು ಸೈನಿಕ ಅಧಿಕಾರಿಗಳ ಭಡ್ತಿಯ ಸಂದರ್ಭದಲ್ಲಿ ಮಹಾದಂಡನಾಯಕ ಮತ್ತು ಸಂರಕ್ಷಣಾಮಂತ್ರಿಗಳ ನಡುವೆ ಭಿನ್ನಾಭಿಪ್ರಾಯವಿದ್ದುದರಿಂದಲೇ ಇಂತಹ ಅಘಟಿತ ಘಟನೆಗಳು ತಲೆಯೆತ್ತುವಂತಾಯಿತೆಂದು ಆ ಮೇಲೆ ತಿಳಿದು ಬಂದರೂ ಈ ಬಗ್ಗೆ ಪಂಡಿತ ಪ್ರಧಾನಿ ನೆಹರು ಇತ್ತ ಹೇಳಿಕೆಯನ್ವಯ ಈ ರೀತಿಯ ಭಿನ್ನಾಭಿಪ್ರಾಯವಿದ್ದುದು ಗೋಚರಿಸುವುದಿಲ್ಲ. ತಪ್ಪು ತಿಳುವಳಿಕೆ ಉಭಯ ತರದಲ್ಲಿರಬಹುದಾದರೂ ಮಹಾದಂಡನಾಯಕರನ್ನು ತಾನು ಕರೆದು ಸ್ಥಿತಿಗತಿಯನ್ನು ಸವಿವರವಾಗಿ ತಿಳಿಯಪಡಿಸಿದ ಮೇಲೆ ಅವರು ಮನಸ್ಸನ್ನು ತಿಳಿಸಿಕೊಂಡಿದ್ದರೆಂದೂ ಪ್ರಧಾನಿಯವರು ಹೇಳಿದ್ದಾರಾದರೂ ಆ ಮೇಲೆಯೂ ಮೇ| ಜ| ತಿಮ್ಮಯ್ಯನವರು ರಾಜಿನಾಮೆಯೇಕಿತ್ತರೆಂದು ತಿಳಿಯುವುದಿಲ್ಲ. ಅಲ್ಲದೇ ತಾನು ಪುನಃ ತಿಳಿಹೇಳಿದ ಮೇಲೆ ಅವರು ತಮ್ಮ ರಾಜಿನಾಮೆ ಹಿಂತೆಗೆದುಕೊಂಡರೆಂದು ಪ್ರಧಾನಿಯವರು ಹೇಳಿಕೆಯಿತ್ತರೂ ಶ್ರೀ ಮೆನನ್ನರ ರಾಜಿನಾಮೆಯ ಸುದ್ದಿಯ ಬಗ್ಗೆ ಅವರು ಚಕಾರವೆತ್ತಲಿಲ್ಲ. ಸಂರಕ್ಷಣಾ ಮಂತ್ರಿಯವರೂ ಮಹಾದಂಡನಾಯಕರೂ ಭಾರತಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನವರು ಪ್ರಶಂಸಿಸಿ ಇವರಿಬ್ಬರಿಂದಲೂ ಇನ್ನೇ ಮಟ್ಟದ ಸೇವೆಯನ್ನು ಅವರು ನಿರೀಕ್ಷಿಸಿದ್ದಾರೆ.

ಈಗ ಈ ರಾಜೀನಾಮೆಗಳ ಒಳಗುಟ್ಟು ಪ್ರಕಾಶಕ್ಕೆ ಬಂದಿಲ್ಲ. ಇಲಿಯೋಡಿದೊಡನೆಯೇ ಹುಲಿಯೋಡಿತೆಂಬಂತೆ ಮೇ| ಜ| ತಿಮ್ಮಯ್ಯ ಮತ್ತು ಶ್ರೀ ಮೆನನ್ನರ ನಡುವಿದ್ದ ಭಿನ್ನಾಭಿಪ್ರಾಯವನ್ನೂ ಶ್ರೀ ತಿಮ್ಮಯ್ಯನವರು ರಾಜಿನಾಮೆಯಿತ್ತ ಸುದ್ದಿಯನ್ನೂ, ಹಿಂದಿನಿಂದವರದನ್ನು ಹಿಂತೆಗೆದುಕೊಂಡದನ್ನೂ ಒಂದಕ್ಕೊಂದು ಸಂಬಂಧ ಕಲ್ಪಿಸಿ ಶ್ರೀ ಮೆನನ್ನರ ರಾಜಿನಾಮೆಯ ಸುದ್ದಿ ಊಹೆಯ ಮೇಲೆಯೇ ಸ್ಫೋಟಗೊಂಡಿರಲೂ ಬಹುದು. ಆದರೂ ಈ ಬಗ್ಗೆ ಖಚಿತವಾಗಿ ಪ್ರಧಾನಿಯವರೂ ಏನೊಂದೂ ಹೇಳದೆ ಇದ್ದುದನ್ನು ನೋಡುವಾಗ, ಶ್ರೀ ಮೆನನ್ನರು ರಾಜಿನಾಮೆಯಿತ್ತಿದ್ದರೂ ಇರಬಹುದು, "ಧಾಳಿ ಈ ಯುವೆನೆಂದಿರಲೂ ಬಹುದು, ಇಲ್ಲವೇ ಇತ್ತಿದ್ದರೂ ನೆಹರೂ ಪ್ರಭಾವದಿಂದ ಅದನ್ನು ಹಿಂದೆಗೆದಿರಲೂ ಸಾಕು, ಆದರೆ, ಈ ಭೇದದತ್ತ ಬೆಳಕು ಮಾತ್ರ ಬಿದ್ದಿಲ್ಲ ಅಷ್ಟೆ.

ಹಂಗೇರಿಯ ಮರಣದಂಡನೆಗೀಡಾದ ಪ್ರಧಾನಿ ಇಮ್ರೆನಾಗಿ ಅವರ ಮಂತ್ರಿಮಂಡಳದಲ್ಲಿ ಸಂರಕ್ಷಣಾಶಾಖೆಯ ಮಂತ್ರಿಯಾಗಿದ್ದ ಪಾಲ್ ಮಲೇಟರರನ್ನು ಬಿಡುಗಡೆ ಮಾಡಬೇಕೆಂದವರ ಮಕ್ಕಳು ಸೋವಿಯೆತ್ ನಾಯಕರಿಗೆ ಕೇಬಲ್ ಮಾಡಿದರು

ಭಾರತದ ಗಡಿಯ ಪ್ರದೇಶಗಳಾದ ನೇಫಾ, ಗಢವಾಲ ಮತ್ತು ಲಡಕ್‌ಗಳನ್ನು ಚೀನೀಯ ಭೂಪಟದಲ್ಲಿ ಚೀನೀಯ ಪ್ರಧಾನಿ ಚೌ ಎನ್ ಲಾಯರೆಂದಂತೆ ತಪ್ಪಾಗಿ ಅಚ್ಚುಮಾಡಿದ್ದರೂ ಈಗದನ್ನು ಒಪ್ಪೇದು ತೋರಿಸಿಕೊಡಲು ಆತಿಕ್ರಮಣಕ್ಕೆ ಮೊದಲಾಗಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿಯೇ ಸಂರಕ್ಷಣಾ ಮಂತ್ರಿಶಾಖೆ ಮತ್ತು ಸಂರಕ್ಷಣ ದಳಗಳ ನಡುವಿನ ಈ ಸಂಘರ್ಷಗಳ ಎಲ್ಲರನ್ನೂ ವಿಮಂಚನಗೀಡುಮಾಡುವುದು ನ್ಯಾಯವೇ. ತಟಸ್ಥ ರಾಷ್ಟ್ರ ಭಾರತವನ್ನು ಸಾಮ್ರಾಜ್ಯಶಾಹಿಯೆಂದೂ ಆಕ್ರಮಣ ರಾಷ್ಟ್ರವೆಂದೂ ಶಾಂತಿ ಅಹಿಂಸೆಯ ಸಾಕಾರಮೂರ್ತಿಯಾದ ಭಗವಾನ ಬುದ್ಧನನ್ನು ಸಾಮ್ರಾಜ್ಯಶಾಹಿ ತತ್ತ್ವವೇತ್ತನೆಂದೂ ಸಾರಿದ ಕಮ್ಯುನಿಸ್ಟ ಚೀನೀಯರು ದೇಶದ ಗಡಿಯಲ್ಲಿಯೇ ಸವಾಲಗಳನ್ನು ಮಾಡುತ್ತಿರುವಾಗ ಈ ರೀತಿಯ ಭಿನ್ನಾಭಿಪ್ರಾಯಗಳ ಭೀಕರ ಪರಿಣಾಮ ಎದುರುಬಂದುದು ಆಶ್ಚರ್ಯಕಾರಿ ಘಟನೆಯಾಗಿದೆ,

ಮಹಾದಂಡನಾಯಕ ತಿಮ್ಮಯ್ಯನವರು ಭಾರತದ ಸೇವೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು. ಅವರು ತನ್ನ ಕರ್ತವ್ಯವನ್ನು ಭಾರತ ಸರಕಾರದ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ – ಮಂಗಳೂರು—3 | ಸ್ಥಾಪನೆ – 1931

ಕಾಯಂ ರೇವಣಾತಿ ಬಡ್ಡಿ ದರ

1 ತಿಂಗಳಿಂದ ೫ ತಿಂಗಳ ವರೆಗ 4¼%
6 ,, 12 , 4½%
13 ,, 24 ,, 4¾%

ರೂಪಾ 10,000/ ಮ, ಹೆಚ್ಚಿನ ರೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ

ಕಥಾವಿಹಾರ

ಕಲ್ಯಾಣ ದುರ್ಗದ ಅನುಪಮ ವಿಜಯ

ಮಹಾರಾಜನ ಸೇವೆಗೆಂದು ಸೇನಾಪತಿ ಅತ್ಯುತ್ತಮವಾದ ಕಾಣಿಕೆಯೊಂದನ್ನು ತಂದನು; ಆದರೆ, ಮಹಾಪ್ರಭು ಅದನ್ನು ತಿರಸ್ಕರಿಸಬೇಕೆ?

ಸಂಧ್ಯಾ ಸಮಯ; ಸಹ್ಯಾದ್ರಿ ಪರ್ವತದ ತಪ್ಪಲಿನ ಎತ್ತರದ ಗುಡ್ಡವೊಂದರ ಮೇಲೆ ರಾಯಗಡ ದುರ್ಗ ಕಂಗೊಳಿಸುತ್ತಿತ್ತು. ಮುಳುಗಲು ಸಮೀಪಿಸಿದ ಸೂರ್ಯನ ಕೆಂಪು ಕಿರಣ ದುರ್ಗದ ಕರಿ ಶಿಲೆಯ ಗೋಡೆಯ ಮೇಲೆ ಬಿದ್ದು ಹೊಳೆದು, ಸಹ್ಯಾದ್ರಿ ಪರ್ವತ ಮಾಲೆಯಿಂದ ದುರ್ಗವು ಬೇರ್ಪಟ್ಟು, ಪ್ರೇಕ್ಷಕರಿಗೆ ಎದ್ದು ತೋರುವಂತೆ ಮಾಡಿತ್ತು. ದುರ್ಗದ ಹೊರಗೆ ವಾತಾವರಣ ಸ್ತಬ್ಧವಾಗಿತ್ತು. ಗೂಡುಸೇರಲು ಹೊರಟಿರುವ ಹಕ್ಕಿಗಳ 'ಚಿಲಿಪಿಲಿ' ಸದ್ದೊಂದನ್ನುಳಿದು ಮತ್ತೆಲ್ಲವೂ ನೀರವ.

ದುರ್ಗದ ಒಳಗೂ ಹಾಗೆಯೇ—ಗಂಭೀರ ಮೌನ ಆವರಿಸಿತ್ತು.

ದುರ್ಗದ ಮಹಾದ್ವಾರ ಹೊಕ್ಕುತ್ತಲೇ ಮಹಾರಾಜ ಶಿವಾಜಿ ವಾಸಿಸುವ ರಾಜಭವನ ತೋರುತ್ತಿತ್ತು. ಮತ್ತೂ ಮುನ್ನಡೆದರೆ ಅರಮನೆಯ ಸಮೀಪದ ಅಂಗಳದ ದ್ವಾರ—ಅಲ್ಲಿ ಪಹರೆ ಕಾಯುತ್ತಿರುವ ಇಬ್ಬರು ಸೈನಿಕರು—ಅಂಗಳಕ್ಕೆ ಹೊಂದಿಕೊಂಡೇ ತಗ್ಗಿನಲ್ಲಿ ವಿಶಾಲವಾದ ಮೈದಾನ ಕಂಡುಬರುವುದು—ಮೈದಾನದ ತೀರದಲ್ಲಿದ್ದ ಎತ್ತರವಾದ ಸ್ತಂಭದ ಮೇಲೆ ಶಿವಾಜಿಯ 'ಭಗವಾ ಝುಂಡಾ' ಧ್ವಜ ಹಾರಾಡುತ್ತಿದೆ. ಹತ್ತಿರದಲ್ಲೇ ಹಾಸಿದ್ದ ರತ್ನಗಂಬಳಿಯ ಮೇಲೆ ಗಾದಿಯೊಂದಕ್ಕೊರಗಿಕೊಂಡು ಶಿವಾಜೆ ಮಹಾರಾಜ ಏನೋ ವಿಚಾರದಲ್ಲಿ ಮಗ್ನನಾಗಿ ಕುಳಿತಿದ್ದ.

ಹಾಗೆಯೇ ಆತ ಎಷ್ಟು ಹೊತ್ತು ಕುಳಿತಿದ್ದನೋ ಏನೋ—ಅವನ ಪೇಶ್ವೆ ಮೊರೋಪಂತ ಸಡಗರದಿಂದ ಅಲ್ಲಿಗೆ ಬಂದು ಶಿವಾಜಿಗೆ ಪ್ರಣಾಮಗೈದು ನುಡಿದಾಗಲೇ ಆತ ವಿಚಾರಲಹರಿಯಿಂದೆಚ್ಚತ್ತ.

"ಮಹಾಜರೇ, ಸೇನಾಪತಿ ಆಬಾಜಿ ಸೋನದೇವ ಕಲ್ಯಾಣ ದುರ್ಗವನ್ನು ಜಯಿಸಿ ಬರುತ್ತಿದ್ದಾನೆ! ಸಂಗಡ ಅಲ್ಲಿಂದ ಅಪಾರ ಧನವನ್ನೂ ಲೂಟಿಗೈದು ತರುತ್ತಿರುವನು."

ಶಿವಾಜಿ ಅದೇ ಸುದ್ದಿಯನ್ನು ನಿರೀಕ್ಷಿಸುತ್ತ ಕುಳಿತಿದ್ದ—ಆದರೂ ಆಗ ಸ್ವಲ್ಪ ಸಂಶಯವಿತ್ತು. ಈಗ ಮಾತ್ರ ಸಂತೋಷದಿಂದ ಪುಳಕಿತನಾಗಿ ಕೇಳಿದ—

"ಸಂತೋಷ, ಪೇಶ್ವೆಯವರೇ, ಸಂತಸದ ಸುದ್ದಿಯನ್ನೇ ತಂದಿರಿ. ಆಬಾಜಿ ಎಲ್ಲಿದ್ದಾನೆ?"

'ಆತ ಕೂಡಲೇ ತಮ್ಮೆಡೆಗೆ ಬರಬಹುದು ಪ್ರಭೂ."

"ಮೋರೋಪಂತರೇ, ಇಂದು ನನ್ನ ಮನಸ್ಸಿನ ಬಹುದೊಡ್ಡ ಬಯಕೆಯೊಂದು ಕೈಗೂಡಿತು. ಈ ವಿಜಯದಿಂದ ಮರಾಠರ ಬಲವು ಇನ್ನೂ ಹೆಚ್ಚಿದಂತಾಯಿತು"—ಗಾಳಿಯಲ್ಲಿ ಹಾರಾಡುತ್ತಿದ್ದ ಭಗವಾ ಝುಂಡವನ್ನೊಮ್ಮೆ ನಿರುಕಿಸಿ ಹೆಮ್ಮೆಯಿಂದ ನುಡಿದ.

"ಅದರಲ್ಲೇನು ಸಂದೇಹ? ತಮ್ಮ ಪ್ರತಾಪ ಮತ್ತು ಅಭಿವೃದ್ಧಿಗಳಿಗೆ ತಡೆಯಿಕ್ಕುವವರಾರು ಪ್ರಭು?' ಪೇಶ್ವೆ ಅನುಮೋದಿಸಿದ.

"ಇಲ್ಲ, ಮೋರೋಪಂತರೇ; ಇದರಲ್ಲಿ ನಾನೊಬ್ಬನೇ ಏನು ಮಾಡಲು ಶಕ್ತನಾಗಿರುವೆ? ಮಾತೆ ಭಗವಾನಿಯ ಆಶೀರ್ವಾದ ಮತ್ತು ನಮ್ಮ ವೀರ ಸರದಾರರ ಕರ್ತೃತ್ವ ಶಕ್ತಿಯ ನೆರವುಗಳಿಲ್ಲದಿದ್ದರೆ ನಾನೊಬ್ಬನೇನು ಮಾಡಬಲ್ಲೆ? ಆಬಾಜಿ ಸೋನದೇವ ಸಿಕ್ಷ್ಯಯವಾಗಿಯೂ ಈ ಕಾರ್ಯ ಸಾಧಿಸುವನೆಂಬ ವಿಶ್ವಾಸ ನನಗೆ ಮೊದಲೇ ಇತ್ತು."



ಉತ್ತರ ಧ್ರುವ ಪ್ರದೇಶದಲ್ಲಿ ಹಿಮದ ಗಡ್ಡೆಗಳೇ ತುಂಬಿವೆ. ಹಿಮವಲಯ ಗುರುತಿಸಿರುವುದನ್ನಿಲ್ಲಿ ಕಾಣಬಹುದು. ಈ ಹಿಮವೆಲ್ಲ ಕರಗಿದರೆ, ಪ್ರಪಂಚದ ಜಲಮಟ್ಟವು ೧೫೦ ಅಡಿ ಏರುವುದೆಂದು ಹೇಳಲಾಗುತ್ತದೆ.

—ಮನಸ್ಸಿನಲ್ಲಿಯೇ ಭವಾನಿದೇವಿಯನ್ನೊಮ್ಮೆ ಸ್ಮರಿಸಿ ನುಡಿದ.

ಅದೇ ಸ್ವಲ್ಪ ಹೊತ್ತಿನಲ್ಲಿ ಆಬಾಜೀ ಸೋನದೇವ ಬರುತ್ತಿರುವುದು ಗೋಚರಿಸಿತು. ಆವನ ಹಿಂದೆ ಕೆಲವರು ಪ್ರಮುಖ ಯೋಧರಿದ್ದರು. ಅವರಿಗೂ ಹಿಂದೆ ಆಳುಗಳು ಭಾರೀ ಭಾರೀ ಮೂಟೆಗಳನ್ನು ಹೊತ್ತು ತರುತ್ತಿದ್ದರು. ಕೊನೆಯಲ್ಲಿ ಭೋವಿಗಳು ಹೊತ್ತ ಮೇನೆಯೊಂದು ಈ ಸಾಲನ್ನನುಸರಿಸುತ್ತಿತ್ತು.

ಆಬಾಜೀ ಆಳುಗಳನ್ನೂ ಬೋವಿಗಳನ್ನೂ ಅಂಗಳದಲ್ಲಿಯೇ ನಿಲ್ಲಿಸಿ ತಾನೊಬ್ಬನೇ ಮುಂದೆ ಬಂದು ಶಿವಾಜಿಗೆ ನಮಸ್ಕರಿಸಿ ನಿಂತು ನುಡಿದ—

"ಮಹಾ ರಾಜರಿಗೆ ಜಯವಾಗಲಿ! ಕಲ್ಯಾಣ ದುರ್ಗವು ತಮ್ಮ ಅಧೀನವಾಯಿತು."

"ಬಾ ಆಬಾಜೀ, ಈ ವಿಷಯಕ್ಕಾಗಿ ನಾನು ನಿನ್ನನ್ನು ಅಭಿನಂದಿಸುತ್ತೇನೆ. ಇತ್ತ ಬಾ, ಕುಳಿತುಕೊ. ನಮ್ಮ ಕಡೆಯ ವೀರ ಸೈನಿಕರು ಹೇಗೆ ಹೋರಾಡಿದರೆಂಬುದನ್ನು ನನಗೆ ತಿಳಿಸು. ನಮ್ಮ ಸೈನಿಕರಲ್ಲಿ ಯಾರು ಹೆಚ್ಚಿನ ಶೌರ್ಯ ತೋರಿಸಿದರು—ಕಾಲಾಳುಗಳೋ, ರಾವುತರೋ?" ಯುದ್ಧದ ವಿವರ ತಿಳಿಯುವ ಉದ್ದೇಶದಿಂದ ಶಿವಾಜಿ ಕುತೂಹಲಯುಕ್ತನಾಗಿ ಕೇಳಿದ.

"ಎಲ್ಲರೂ ತಮ್ಮ ತಮ್ಮ ವೀರತ್ವವನ್ನು ತೋರಿಸಿ ಹೋರಾಡಿದರು, ಮಹಾಪ್ರಭು. ಯಾರೂ ಯಾರಿಗೂ ಕಡಿಮೆಯಿರಲಿಲ್ಲ." ಆಬಾಜಿ ಸಂಕ್ಷಿಪ್ತವಾಗಿ ವಿವರಿಸಿದ.

"ಆಗಲಿ. ಈ ಭಾರಿಯ ಮುತ್ತಿಗೆ ಸುಲಭದಲ್ಲಾಯಿತೋ, ಕಠಿಣವಿದ್ದಿತೊ? ನಮಗೆ ಹೆಚ್ಚಿನ ಹಾನಿ ಸಂಭವಿಸಲಿಲ್ಲವೇನ.?"

"ಇಲ್ಲ ಪ್ರಭೋ, ತಾವು ನಮ್ಮೆಲ್ಲರಲ್ಲಿ ಯಾವ ಆವೇಶವನ್ನು ತುಂಬಿ ಕಳುಹಿದ್ದಿರೋ, ಅದರ ಬಲದಿಂದ ನಮಗೆ ಯಾವುದೂ ಕಠಿಣವೆನ್ನಿಸಲಿಲ್ಲ."

"ಅದೇನು ಹೊರೆಯಾಳುಗಳ ಭಾರೀ ಸಮೂಹವೇ ನೆರೆದಿದೆ! ತುಂಬಾ ಸಂಪತ್ತು ದೊರೆಯಿತೇನ.?"

—ದೂರದಲ್ಲಿ ನಿಂತಿದ್ದ ಆಳುಗಳನ್ನು, ಅವರ ಹತ್ತಿರ, ನೆಲದ ಮೇಲಿದ್ದ ಮೂಟೆಗಳನ್ನೂ ನೋಡಿ ಶಿವಾಜಿ ಕೇಳಿದ.

"ಹೌದು ಮಹಾರಾಜಾ, ತುಂಬಾ ಸರಕು ದೊರೆಯಿತು. ಸಂಪೂರ್ಣ ಧನ-ದೌಲತ್ತನ್ನು ಲೂಟಿ ಮಾಡಿ ತಂದಿರುವೆನು. ಇಷ್ಟು ಐಶ್ವರ್ಯ ಯಾವ ಮುತ್ತಿಗೆಯಲ್ಲೂ ದೊರೆತುದಿಲ್ಲ. ಚಿನ್ನ, ಬೆಳ್ಳಿ, ಮುತ್ತು, ರತ್ನ...."

"ನಿಜ ನಿಜ; ನಾನು ಕಲ್ಯಾಣದ ಖಜಾನೆಯ ವಿಷಯ ಕೇಳಿದ್ದೇನೆ. ಇನ್ನು ನಾವು ನಮ್ಮ ಸೈನ್ಯವನ್ನು ಈ ಐಶ್ವರ್ಯದಿಂದ ಇನ್ನೂ ಉತ್ತಮವಾಗಿ ಸಂಘಟಿಸಬಹುದು."

(೧೧ನೇ ಪುಟ ನೋಡಿರಿ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಕಟಣೆ

ನಿರಖು ಠೇವಣಾತಿಗಳ ಮೇಲೆ ನಾವೀಗ ತೆರುತ್ತಿರುವ ಸಾ. ಸೇ. $4\frac{1}{8}$ರಿಂದ $4\frac{1}{4}$ರ ವರೆಗಿನ ಬಡ್ಡಿ ದರಗಳಲ್ಲಿ ಯಾವುದೊಂದೂ ಬದಲಾವಣೆ ಇಲ್ಲದೆ, ಅಂತಹ ಠೇವಣಾತಿಗಳನ್ನು ಅವೇ ದರಗಳಲ್ಲಿ ಸ್ವೀಕರಿಸಲಾಗುವುದೆಂದು ಪ್ರಕಟಿಸಲು ಸಂತೋಷಪಡುತ್ತೇವೆ.

ವಿಶೇಷ ಮಾಹಿತಿಗೆ
ನಿಮಗೆ ಸಮೀಪವಿರುವ ನಮ್ಮ ಯಾವುದೇ ಶಾಖೆಯನ್ನು ಸಂದರ್ಶಿಸಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : **ಉಡುಪಿ** (ದ. ಭಾರತ)

(ವಿಶಾಲ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ ಬೇಂಕುಗಳಲ್ಲೆಲ್ಲಾ ನಮ್ಮದು ಅತಿ ಹಿರಿಯ ಬೇಂಕು!)

ದೂರಗಾಮಿ ಅಸ್ತ್ರ

ಆಸ್ಟ್ರೇಲಿಯಾದ ಬಾಲಕ್ರೀಡೆ-ಭೂಮರಂಗ

ಸೃಷ್ಟಿಯ ಪ್ರಪ್ರಥಮ ದೂರಗಾಮಿ ಅಸ್ತ್ರವೇ ಭೂಮರಂಗವೆನ್ನಬಹುದು. ಬಹು ಸರಳವಾದ ಈ ಅಸ್ತ್ರ ಬೇಟೆಗಳಿಗೆ ಉಪಯುಕ್ತವಾಗಿದೆ.

"ಭೂಮರಂಗ' (Bhoomerang) ಈ ನೂತನ ಅಸ್ತ್ರವು ಮಾನವನ ಪ್ರಥಮ ದೂರಗಾಮಿ ಶಸ್ತ್ರವಾಗಿದೆ! ಆದರೆ ಪ್ರಪಂಚಕ್ಕೆ ಇದೊಂದು ಆಯುಧವಾಗಿದ್ದರೂ, ಪ್ರತ್ಯೇಕ ಭೂಭಾಗದಲ್ಲಿದ್ದ ಆಸ್ಟ್ರೇಲಿಯನ್ನರಿಗೆ ಒಂದು ಲೋಕಪ್ರಿಯ ಆಟಿಗೆಯ ವಸ್ತುವಾಗಿ ಮಾರ್ಪಟ್ಟಿರುವದು! "ಭೂಮರಂಗ ಹಾರಿಸುವ ಈ ಜನಪ್ರಿಯ ಆಟವನ್ನು ಒಲಂಪಿಕ್ ಪಂದ್ಯಗಳಲ್ಲಿ ಸಮಾವೇಶಗೊಳಿಸಿರಿ" ಎಂದು ಬೇಡಿಕೆಯು ಆಸ್ಟ್ರೇಲಿಯನ್ನರಿಂದ ಸಾರಿ ಸಾರಿ ಬರಲಿಕ್ಕೆ ಆರಂಭವಾದಂದಿನಿಂದ, ಸಮಗ್ರ ಪ್ರಪಂಚದ ದೃಷ್ಟಿಕೋನವು ಕುತೂಹಲದಿಂದ ಅತ್ತ ಹೊರಳಿತು; ಈ ಮಾನವನ ಪ್ರಥಮ ದೂರಗಾಮಿ "ಭೂಮರಂಗ" ಅಸ್ತ್ರದತ್ತ!

ಭೂಮರಂಗ ಹಾರಿಸುವ ಈ ಕಲೆಯು ಆಸ್ಟ್ರೇಲಿಯಾದೊಳಗಿನ ಒಂದು ಪ್ರಾಚೀನ ಕಲೆಯಾಗಿ ಹೊಂದಿದೆ. ಆಸ್ಟ್ರೇಲಿಯಾದ ಆದಿವಾಸಿಗಳಾದ 'ಮಾವರೀ" ಜನರು ಈ ಶಸ್ತ್ರವನ್ನು ಶೋಧಿಸಿ ತೆಗೆದರೆಂದು ಹೇಳುತ್ತಾರೆ! ಆದರೆ ಭಾರತ, ಬೋರ್ನಿಯೋ, ಮತ್ತು ಇಥೋಪಿಯಾ ದೇಶಗಳಲ್ಲಿ ಈ ಕಲೆಯು ಪ್ರಸಾರವಿದ್ದಿತ್ತು ಎಂದು ಸಿದ್ಧಮಾಡಲು ಸಾಕಷ್ಟು ಉಲ್ಲೇಖಗಳು ಉಪಲಬ್ಧವಾಗಿರುವವು! ಅತಿ ಇತ್ತೀಚಿನ ಸಾಕ್ಷಿ ಬೇಕಿದ್ದರೆ—, ಉಸುಕಿನ ಪ್ರದೇಶವಲ್ಲಿರುವ ಇಜಿಪ್ತ ದೇಶದಲ್ಲಿ ಪಕ್ಷಿಗಳನ್ನು ಹೊಡೆಯುವದೋಸ್ಕರ ಈ ಬೂಮರಂಗವನ್ನು ಆಯುಧದಂತೆ ಉಪಯೋಗಿಸುತ್ತಿರೆಂದು ಅಧಿಕೃತ ತಿಳಿದು ಬಂದಿದೆ. ಬೂಮರಂಗದ ವೈಶಿಷ್ಟ್ಯವನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ, ಅದಕ್ಕೆ ಜಗತ್ತಿನ ಮೊಟ್ಟಮೊದಲಿನ ದೂರಗಾಮಿ ಅಸ್ತ್ರದ ಉಚ್ಚಸ್ಥಾನ ಕೊಡಲಿಕ್ಕೆ ಬರುವದು? ಬೂಮರಂಗದ ವೈಶಿಷ್ಟ್ಯವೆಂದರೆ— ಅದನ್ನು ಓರ್ವನು ತಮ್ಮ ಲಕ್ಷ್ಯಕ್ಕೆ ಸರಿಯಾಗಿ ಬಿಂಬಿಸಿದರೆ, ಪುನಃ ಅದು ಹಾರಿಸುವವರ ಹಸ್ತಗತವಾಗುವದು!

ಆಸ್ಟ್ರೇಲಿಯಾದೊಳಗಿನ ಮೂಲ ನಿವಾಸಿಗಳಲ್ಲಿ, "ಕೈಲಾಸ ಪತೀ ಈಶ್ವರನು ಯಾವ ಐದು (ಪಂಚ) ಆಯುಧಗಳನ್ನು ನಿರ್ಮಿಸಿರುವನೋ, ಅವುಗಳಲ್ಲಿ ಭೂಮರಂಗವೊಂದಾಗಿದೆ" ಎಂದು ಮಹತ್ವ ನಂಬಿಕೆಯಿರುವುದು. ಈ ಅಂಧಶ್ರದ್ಧೆಯು ಅನಾದಿ ಕಾಲದಿಂದಲೂ ಅವರಲ್ಲಿ ಬೇರೂರಿರುವುದು. ಆಸ್ಟ್ರೇಲಿಯಾದ 'ಮಾವರೀ ಜನಾಂಗ'ವು ತಮ್ಮ ಮಕ್ಕಳಿಗೆ ಚಿಕ್ಕಂದಿನಿಂದಲೂ ಬೂಮರಂಗ ಹಾರಿಸುವ ಶಿಕ್ಷಣವನ್ನು ಕೊಡುವ ಪರಿಪಾಠ ಇಟ್ಟುಕೊಂಡಿರುವರು. ಆ ನಾಡಿನಲ್ಲಿ ಈ ವಿದ್ಯೆಗೇ ಹೆಚ್ಚಿನ ಪ್ರಾಧಾನ್ಯ ಕೊಟ್ಟು, ಕಡ್ಡಾಯವಾಗಿ ಹುಡುಗರಿಗೆ ಈ ಶಿಕ್ಷಣವನ್ನು ಸ್ವತಃ ಪಾಲಕರೇ ಕೊಡುವರು. ಯಾವಾಗ ಬಾಲಕನು ಎಂಟನೇ ವರ್ಷಕ್ಕೆ ಬಂದನೋ, ಅಂದು ಅವನು ಬೂಮರಂಗ ಹಾರಿಸುವ ವಿದ್ಯೆಯಲ್ಲಿ ಯೋಗ್ಯ ಪಾರಂಗತನಾಗಿರುವನು ಎಂದು ಭಾವಿಸುವರು. ಹಾಗೂ ೪ ವರ್ಷದ ಹುಡುಗನು ೯೦-೧೦೦ ಫೂಟಗಳಲ್ಲಿಯ ಗಿಡಗಳ ಮೇಲೆ ಕುಳಿತ ಯಾವದೇ ಸಣ್ಣ-ದೊಡ್ಡ ಪಕ್ಷಿಗಳನ್ನು ಹೊಡೆಯಲು ಶಕ್ಯನಾಗಿರುವನು. ಅಲ್ಲಿಯ ಜನರು ತಮ್ಮ ತಮ್ಮ ಹುಡುಗರಿಗೆ ಪ್ರ-ಪ್ರಥಮವಾಗಿ ಆಟವಾಡಲು ಬೇರೆ ಯಾವದೇ ಆಟಿಗೆಗಳನ್ನು ಕಾಣಿಸದೇ ಕೇವಲ ಬೂಮರಂಗವನ್ನು ಅರ್ಪಿಸುವರು. ಆದರೆ ಈ ಬೂಮರಂಗದ ಉಪಯೋಗವನ್ನು ಏಕಾಂತದಲ್ಲಿ ಮಾಡದೇ ದೊಡ್ಡ ಜನರ ಎದುರಿನಲ್ಲಿಯೇ ಮಾಡಬೇಕಾಗುವುದು. ಯಾಕೆಂದರೆ ಬಾಲಕರು ಹೇಗೆ ಹೇಗೆ ದೊಡ್ಡವರಾಗುವರೋ, ಆಗ ವರಿಗೆ ನಿಜವಾದ ಬೂಮರಂಗವನ್ನು ಹಾರಿಸಲು ಕೊಡುವರು. ಅದು ಉಗ್ರರೂಪದಲ್ಲಿರುವದು. ತರುಣ ಮಾವರೀ ಜನರು ಬಕಪಕ್ಷಿ, ವಾರಿವಾಳ ಇತ್ಯಾದಿ ಪಕ್ಷಿಗಳು ಗುಂಪುಕಟ್ಟಿಕೊಂಡು ಮುಗಿಲಲ್ಲಿ ಹಾರುವಾಗ ಆ ಗುಂಪಿನ ೪-೫ ಪಕ್ಷಿಗಳನ್ನು ಒಂದೇ ಹೊಡತದಿಂದ ಸಹಜವಾಗಿ ಬಲಿ ತೆಗೆದುಕೊಳ್ಳಲು ಶಕ್ತರಾಗುವರು. ಶಾಲೆಗಳಲ್ಲಿ ಇಲ್ಲವೇ ಇನ್ನಿತರ ಸಮಾರಂಭಗಳಲ್ಲಿ ಮಕ್ಕಳಿಗೆ ಬಹುಮಾನ ಇಲ್ಲವೇ ಪ್ರಶಸ್ತಿ ಪತ್ರಗಳನ್ನು ಅರ್ಪಿಸುವಾಗ ವಿಶೇಷವಾಗಿ, "ಬೂಮರಂಗ"ವನ್ನು ಅಧಿಕವಾಗಿ ಬಳಸುವರು.

ಬಲು ಗಟ್ಟಿಯಾದ ಕಟ್ಟಿಗೆಯ ತೆಳ್ಳಗಿನ ಹಲಿಗೆ ಇಲ್ಲವೇ ಬಿದಿರುಗಳಿಂದ ಬೂಮರಂಗವನ್ನು ತಯಾರಿಸುವರು. ಅದು ಒಂದು ಬದಿಗೆ ಸಪಾಟಾಗಿದ್ದು, ಇನ್ನೊಂದು ಬದಿಗೆ ಗೋಲಾಕಾರವಾಗಿರುವದು. ತುದಿಗಳ ಭಾಗ ಗೋಲಾಕಾರವಾಗಿಯೇ ಇದ್ದು ಹರಿತವಾದ ಧಾರೆಯು ಅಧಿಕ ಪ್ರಮಾಣದಲ್ಲಿರುವದು. ಮತ್ತು ಮಧ್ಯ ಭಾಗವು ಬಗ್ಗಿದಂತೆ ಇರುವದು. ಆದರೆ ಅತಿ ಹೆಚ್ಚು ದಪ್ಪವೆಂದರೆ, ಒಂದು ಮೂರಾಂಶ ಹಾಗೂ ಉದ್ದವು ೨ರಿಂದ ೨॥ ಫೂಟಗಳಷ್ಟು ಇದ್ದರೆ; ಅಗಲವು ಒಂದುವರೆ ಇಂಚಷ್ಟು ಇರುವದು. ಈ ರೀತಿಯಾಗಿ ಅತಿ ಕಡಿಮೆ ಉದ್ದ, ಅಗಲ, ದಪ್ಪಗಳಿಂದ ಇಷ್ಟ ಇದೊಂದು ಪ್ರಬಲ ಅಸ್ತ್ರವಾಗಿದೆ! ಇದಕ್ಕಿಂತಲೂ ದೊಡ್ಡ ಆಕಾರದ ಬೂಮರಂಗಗಳನ್ನು ತಯಾರಿಸಲು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ.

ಆಟವಾಡಲು ಅಥವಾ ಪಕ್ಷಿಗಳನ್ನು ಹೊಡೆಯಲು ಬೂಮರಂಗದ ಉಪಯೋಗಮಾಡಿಕೊಳ್ಳಲು ಬರುವದು. ಬೂಮರಂಗ ಎರಡು ಪ್ರಕಾರಗಳಲ್ಲಿರುವದು. ಒಂದನೇ ಪ್ರಕಾರವೆಂದರೆ, ತಿರುಗಿ ಕೈಯೊಳಗೆ ಬರುವದು ಹಾಗೂ ಎರಡನೇಯದು ಕೈಯೊಳಗೆ ಬಾರದೇ ಇರುವದು. ಪುನಃ ಬಾರದೇ ಇದ್ದ ಬೂಮರಂಗಕ್ಕೆ ಎರಡೂ ಬದಿಗಳಲ್ಲಿ ಬಗ್ಗಿದಂತೆ ಇರುವದು, ಆದರೆ ಒಂದನೇ ಪ್ರಕಾರದ ಬೂಮರಂಗ ನೆಲಕ್ಕೆ ಸಮಾಂತರವಾಗಿಸದೇ ಅದನ್ನು ನೀಟಾಗಿ ತಿರುಗಿಸಿ ಮೇಲೆ ಹಾರಿಸುವರು. ಜಪಾನದಲ್ಲಿರುವ ಗಾಳಿಯ ಪಂಖಗಳು ಪಕಳೆಗೆ ಯಾವ ಪ್ರಕಾರ ಬಗ್ಗಿರುವವೋ ಅದೇ ರೀತಿಯಲ್ಲಿ ಈ ಒಂದನೇ ಪ್ರಕಾರದ ಬೂಮರಂಗಕ್ಕೆ ಇರುವದು.

ಹಾರಿಸಿದ ಬೂಮರಂಗ ತಿರುಗಿ ಕೈಗೆ ಹೇಗೆ ಬರುತ್ತದೆ? ಇದೊಂದು ಸೋಜಿಗದ ಪ್ರಶ್ನೆಯಾಗಿದೆ. ಕಾರಣ ಅದು ಹಾರಿಸಲು ವಿರಲ ಭಾರವಿದ್ದ ಮೂಲಕ ಭ್ರಮಣದರ್ಶಕದ ಕ್ರಿಯೆ ಮತ್ತು ಗಾಳಿಯ ಪಂಖಗಳಂತೆ ಇದ್ದ ಕಾರಣ ಅದರ ಪೃಷ್ಠಭಾಗದ ಮೇಲೆ ಗಾಳಿಯು ಬೀಸುವದರಿಂದ ಒಂದು ವಿಶಿಷ್ಟ ನಮೂನೆಯ ಶಕ್ತಿ ನಿರ್ಮಾಣವಾಗುತ್ತದೆ. ಈ ಎರಡೂ ಕ್ರಿಯೆಗಳ ಪ್ರಭಾವ ಬೂಮರಂಗದ ಹಾರುವಿಕೆಯ ಮೇಲೆ ವಿಶೇಷ ಬೀಳುವದು. ಯಾವದೇ ಒಂದು ಕೋಲು ಅಥವಾ ವಸ್ತುವನ್ನು ಒಗೆಯುವಾಗ ಪ್ರಥಮವಾಗಿ ಹಿಂದುಗಡೆಯಲ್ಲಿ ತೆಗೆದುಕೊಂಡು, ನಂತರ ಮುಂದೆ ಒಗೆಯುವೆವು. ಅದಲ್ಲದೆ ಗಾಲಿಯನ್ನು ನೆಲಕ್ಕೆ ಸಮಾಂತರವಾಗಿ ಹಾರಿಸುವಾಗ ಅದಕ್ಕೆ ಗತಿ ಬರುವದೋಸ್ಕರ ಒಂದು ಸಲ ಹಿಂದೆ ಮಾಡಿ ಹಾರಿಸುವ ಪದ್ಧತಿಯಿದೆ. ಅದೇ ಪ್ರಕಾರ ಬೂಮರಂಗಕ್ಕೆ ಇದ್ದ ಭಾರದ ಮೂಲಕ ಅದನ್ನು ನೆಲದ ಮೇಲೆ ಬೀಳದೇ ತಿರುಗುತ್ತ ಇರುವದು ಒಮ್ಮೊಮ್ಮೆ ಪ್ರೇಕ್ಷಕರುಗಳಿಂದಲೂ ಬೂಮರಂಗನ್ನು ಮಾಡಲಿಕ್ಕೆ ಬರುತ್ತವೆ. ಒಂದು ಕಾರ್ಡನ್ನು ಮುಂದುಗಡೆಯಲ್ಲಿ ಸಪಾಟಾಗಿ ಮಾಡಿ, ಹಿಂದುಗಡೆ ಗೋಲಾಕಾರವಾಗಿ ಬಗ್ಗಿಸಿರಿ, ಅದರ ಒಂದು ತುದಿಯನ್ನು ಎಡಗೈ ತಳದಲ್ಲಿ ಹಿಡಿದುಕೊಂಡು, ಬಲಗೈಯಿಂದ ಬಲವಾಗಿ ಗಾಳಿಯಲ್ಲಿ ಹಾರಿಸಿರಿ. ಅದು ಹಾರಿಸಿದ ತಕ್ಷಣ ತಿರುಗಿ ತಮ್ಮ ಬಳಿಗೆ ಬರುವದು.

ತಿರುಗಿ ಬರುವ ಭೂಮರಂಗವನ್ನು ನೀಟಾಗಿ ಹಾರಿಸಬಹುದು. ಅದು ತನ್ನ ನಿರ್ದಿಷ್ಟ ಕಕ್ಷೆಯ ತನಕ ಮೇಲೆ ಹಾರಲು ಶಕ್ತವಾಗುವದು. ಆದರೆ ಅಲ್ಪ ಸಮಯದಲ್ಲಿಯೇ ಗುರುತ್ವಾಕರ್ಷಣೆಯ ಮೂಲಕ ಅದು ತಿರುಗಿ ಬರಲು ಪ್ರಾರಂಭಿಸುವದು. ಯಾವ ದಾರಿಯಿಂದ ಅದು ಮೇಲಕ್ಕೆ ಹೋಗುವದೋ— ಅದೇ ಮಾರ್ಗದಿಂದ ಪುನಃ ಕೆಳಗೆ ಬರುವದು. "ಬಂದ ದಾರಿಗೆ ಸುಂಕವಿಲ್ಲ!" ಎಂಬ ತತ್ವವನ್ನು ಅದು ಚನ್ನಾಗಿ ಅರಿತುಕೊಂಡಿರುವದು! ಆದರೆ ಅದು ಎರಡನೇ ದಾರಿಯಿಂದ ಕೆಳಕ್ಕೆ ಬಂದರೆ, ನೀವು ಮೇಲಕ್ಕೆ ಹಾರಿಸುವಾಗ ಅದಕ್ಕೆ ಒಂದು ಸುತ್ತು ಕೊಟ್ಟ ಮೂಲಕ ಅದು ಹೊಸ ದಾರಿಯಿಂದ ಬರುವದು.

ಅತ್ಯಧಿಕ ಉನ್ನತ ಭೂಮರಂಗ ಹಾರಿಸುವ ಜಾಗತಿಕ ವಿಕ್ರಮವನ್ನು, ಆಸ್ಟ್ರೇಲಿಯಾದೊಳಗಿನ ಸಿಡ್ನಿ ಪಟ್ಟಣದ ಓರ್ವ ಮುದ್ರಕನಾದ ಫ್ರೇಂಕ್ ಡಾನೇಲಿಯನ್ ಎಂಬ ಹೆಸರಿನ ಗೃಹಸ್ಥನು ಸ್ಥಾಪಿಸಿದ್ದಾನೆ! ಅವನು ಕಟ್ಟಿಗೆಯ ಕಂಬದ ಸಹಾಯದಿಂದ ಬೂಮರಂಗ ನಿರ್ಮಿಸಿ ೧೬೦ ಯಾರ್ಡ ಹಾರಿಸಿದನು; ಹಾಗೂ ಅದನ್ನು ತಿರುಗಿ ತರಿಸಿದನು. ಇಂಗ್ಲಂಡಿನ ಇಂದಿನ ಅರಸಿ ಎರಡನೇ ಇಲಿಜಾಬೇಥ್ ಮತ್ತು ಅವಳ ಪತಿ ಡ್ಯೂಕ್ ಆಫ್ ಎಡಿನ್‌ಬರೋ ಜೊತೆಯಾಗಿ ಔಪಚಾರಿಕ ಭೆಟ್ಟಿಯನ್ನು ಆಸ್ಟ್ರೇಲಿಯಾದಲ್ಲಿ ಕೊಟ್ಟಾಗ, ಜೋಟಿಂಬರೀ ಹೆಸರಿನ ಓರ್ವ ಮೂಲ ನಿವಾಸಿ ಯುವಕನು, ೨॥ ಫೂಟ ಉದ್ದದ ಬೂಮರಂಗವನ್ನು ಹಾರಿಸುವ ಪ್ರಯೋಗವನ್ನು ಪ್ರತ್ಯಕ್ಷ ಅತಿಥಿಗಳ ಸಮ್ಮುಖದಲ್ಲಿ ಮಾಡಿತೋರಿಸಿದನು! ಅವನು ಹಾರಿಸಿದ ಬೂಮರಂಗ ಪ್ರಥಮ ೪೦ ಯಾರ್ಡಗಳವರೆಗೆ ಹೋಯಿತು. ಆಗ ಅತಿಥಿ ಮತ್ತು ಪ್ರೇಕ್ಷಕರಲ್ಲಿ ನಿರಾಶೆಯಾಯಿತು. ಅಷ್ಟರಲ್ಲಿಯೇ ಅದು ಸುತ್ತಾಡಿ ಇನ್ನೂ ೧೦೦ ಫೂಟಗಳವರೆಗೆ ಹಾರಿತು! ಬೂಮರಂಗ ಹಾರಿಸಿದ ತಕ್ಷಣ ಅವನು ನೆಲಕ್ಕೆ ಒರಗಿದನು; ಬಳಿಕ ಕಾಲಿನ ಹಿಮ್ಮಡದಿಂದ ತಿರುಗಿಬರುವ ಬೂಮರಂಗವನ್ನು ಹಿಡಿದು ತೋರಿಸಿದನು.

ಸತತ ಪ್ರಯತ್ನದಿಂದ ಬೂಮರಂಗ ಹಾರಿಸುವ ಕಲೆಯನ್ನು ಸ್ವಾಭಾವಿಕ ಹಸ್ತಗತ ಮಾಡಿಕೊಳ್ಳಲು ಬರುತ್ತದೆ. ಒಂದುಗಿಡಕ್ಕೆ ಎರಡುಸುತ್ತುಗಳನ್ನು ಹಾಕಿ ಬೂಮರಂಗವನ್ನು ತಿರುಗಿ ತರುವ ಆಟ ಆಸ್ಟ್ರೇಲಿಯಾದಲ್ಲಿ ತುಂಬಾ ಲೋಕಪ್ರಿಯವಾಗಿರುವದು. ಗ್ಲಾಯಡರ್ ಪ್ಲ್ಯಾಟ್‌ಫೋರ್ಟ್ಸ್‌ವನ್ನು ನಡಿಸುವವರು ಗಾಳಿಯ ಪ್ರವಾಹದ ಉಪಯೋಗ ಹೇಗೆ ಮಾಡಿಕೊಳ್ಳುವರೋ, ಅದೇ ಪ್ರಕಾರ ಈ ಬೂಮರಂಗವನ್ನು ಹಾರಿಸುವವರು ಮಾಡಿಕೊಳ್ಳುತ್ತಾರೆ. ಯಾವಾಗ ಆಗಸದಲ್ಲಿ ಪಕ್ಷಿಗಳು ಗುಂಪುಕಟ್ಟಿಕೊಂಡು ಹಾರುವವೋ, ಆ ಸಮಯಕ್ಕೆ ಆಸ್ಟ್ರೇಲಿಯ

(೧೦ನೇ ಪುಟ ನೋಡಿರಿ)

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

ವಿಚಿತ್ರ ಪ್ರಪಂಚ

ಐದನೆಯ ಹಿಮಯುಗ ಮೊದಲಾಗಿದೆ

ಭೂಮಿಯ ಮೇಲಿನ ಹಿಮವೆಲ್ಲ ಕರಗಿದರೆ, ಸಮುದ್ರ ಮುನ್ನೂರು ಅಡಿ ಮೇಲೇರುವುದು; ಮಂಜಿನ ಮಳೆ ಸುರಿಯತೊಡಗುವುದು!

ನಾವೀಗ ವಾಸಿಸುತ್ತಿರುವ ಈ ಪ್ರಪಂಚವನ್ನು ಈ ಮೊದಲು ನಾಲ್ಕು ಬಾರಿ ಹಿಮಪ್ರಳಯ ಆವರಿಸಿದೆಯಂತೆ. ಇನ್ನು ಐದನೆಯ ಹಿಮಯುಗವೂ ಸಮೀಪಿಸುತ್ತಿದೆ. ಆದರೆ, ಎಂದು ಮತ್ತು ಎಂದಿನ ವರೆಗೆಂದು ಮಾತ್ರ ಈಗ ಹೇಳುವುದಸಾಧ್ಯ. ಈ ಪ್ರಶ್ನೆಗೆ ಉತ್ತರವರಸಲು ಸಹಸ್ರಾರು ವಿಜ್ಞಾನಿಗಳು, ಪರ್ವತಾರೋಹಣ, ಮಂಜುಬೆಟ್ಟಗಳ ಅಗೆತ, ದಕ್ಷಿಣ ಧ್ರುವ ಯಾತ್ರೆ, ಉತ್ತರ ಧ್ರುವದ ಹಿಮರಾಶಿಯಲ್ಲಿ ಶಿಬಿರಸ್ಥಾಪನೆ ಮೊದಲಾದ ಸಾಹಸ ಕೃತ್ಯಗಳಲ್ಲಿ ತೊಡಗಿದ್ದಾರೆ. ಇವರ ಪ್ರಯತ್ನ ತೀವ್ರವಾಗಿ ನಡೆಯುತಿದ್ದು, ಅದು ಸಫಲವಾದರೆ, ಪ್ರಶ್ನೆಗೆ ಉತ್ತರ ಸಿಕ್ಕೇ ಸಿಕ್ಕುವುದು.

ಪರ್ವತಗಳು, ಉತ್ತರಧ್ರುವ, ದಕ್ಷಿಣ ಧ್ರುವ ಪ್ರದೇಶಗಳಲ್ಲಿ ಒಟ್ಟು ೯೦ ಲಕ್ಷ ಚದರಮೈಲು ವಿಸ್ತಾರದಲ್ಲಿ ಹಿಮ ಹರಡಿದೆ. ಇದು ಇಡಿ ಭೂವಿಸ್ತೀರ್ಣದ ಇಪ್ಪತ್ತರಲ್ಲೊಂದು ಪಾಲು. ಇದು ಹವಾಮಾನ, ಕಾಲಗಳ ಮೇಲೆ ಮಾತ್ರವಲ್ಲದೆ ಪ್ರತಿ ಪ್ರಾಣಿಯ ಮೇಲೂ ಪರಿಣಾಮ ಬೀರುತ್ತದೆ. ಅವುಗಳ ರೂಪ ಪರಿವರ್ತನೆಯು ನಮ್ಮ ಮೇಲೆ ಅತ್ಯಧಿಕವಾಗಿ ಪ್ರಭಾವ ಬೀರುತ್ತದೆ.

ಇದು ವರೆಗೆ ನಡೆಸಿದ ಪರಿಶೀಲನೆಗಳಿಂದ ಹಲವಾರು ಹಿಮ ಭಂಡಾರಗಳಲ್ಲಿ ಈಗಾಗಲೇ ಪರಿವರ್ತನೆಯಾಗಿದೆ ಎಂದು ಗೊತ್ತಾಗಿದೆ. ಕಳೆದ ೭೦ ವರ್ಷಗಳಲ್ಲಿ ಪಶ್ಚಿಮ ಅಮೆರಿಕೆಯ ಹಿಮವು ಅರ್ಧಕ್ಕರ್ಧ ಕರಗಿ ಹೋಗಿದೆ. ಉತ್ತರ ಧ್ರುವ ಪ್ರದೇಶದಲ್ಲಿ ಮೂರರಲ್ಲೊಂದಂಶ ಹಿಮ ನೀರಾಗಿದೆ. ಇದೇ ರೀತಿಯಲ್ಲಿ ಬೇರೆ ಕೆಲವೆಡೆಯೂ ಆಗಿದೆ. ಇದರಿಂದ ಭೂಮಿ ಹಿಂದಿನ ಕಾಲಕ್ಕಿಂತ ಅಧಿಕಾಧಿಕ ಬಿಸಿಯಾಗುತ್ತಿದೆ ಎಂದು ತಿಳಿಯಬಹುದು. ಆದರೆ, ಭೂಶಾಸ್ತ್ರವೇತ್ತರ ಅಭಿಪ್ರಾಯದಲ್ಲಿ ಉತ್ತರ ಧ್ರುವ ಪ್ರದೇಶದ ಹಿಮವು ಕರಗತೊಡಗಿದುದು ಒಂದು ನವೀನ ಹಿಮಯುಗದ ಆರಂಭ ಸೂಚಕ!

ಈಗಿರುವ ಹಿಮರಾಶಿಯೆಲ್ಲವೂ ಹಿಂದಿನ ಹಿಮಯುಗದಲ್ಲಿ ಅಳಿದುಳಿದುದೆಂದು ಅನ್ವೇಷಣೆಗಳಿಂದ ಗೊತ್ತಾಗಿದೆ. ಆ ಕಾಲದಲ್ಲಿ ಹಿಮಭಾಗವು ಈಗಿಗಿಂತ ನಾಲ್ಕು ಪಟ್ಟು ಅಧಿಕವಿದ್ದು, ಇದರ ಅಂಶವು ಯುರೋಪು, ಉತ್ತರ ಅಮೆರಿಕೆ ಹಾಗೂ ಉತ್ತರ ಏಶಿಯಾಗಳಲ್ಲಿ ಹರಡಿತ್ತು. ಈಗ, ಒಟ್ಟು ಹಿಮದಲ್ಲಿ ಮೂರರಲ್ಲೆರಡಂಶ ಭೂಮಿಯ ಮೇಲೆ ಇದೆ ಎಂದು ಗೊತ್ತಾಗಿದೆ. ದಕ್ಷಿಣ ಧ್ರುವದಲ್ಲಿ ೪೪ ಲಕ್ಷ ಚದರಮೈಲು; ೬೬೦ ಸಾವಿರ ಚದರ ಮೈಲು ಗ್ರೀನ್‌ಲೇಂಡಿನಲ್ಲಿ, ೩೫೦ ಸಾವಿರ ಚದರ ಮೈಲು ಉತ್ತರ ಧ್ರುವದ ದ್ವೀಪಗಳಲ್ಲಿ ಹಾಗೂ ಪರ್ವತಗಳ ಶಿಖರಗಳಲ್ಲಿ ಮತ್ತು ೩೦ ಲಕ್ಷ ಚದರಮೈಲು ಮಂಜುಗೆಡ್ಡೆಯ ರೂಪದಲ್ಲಿ ಉತ್ತರ ಧ್ರುವ ಸಾಗರದಲ್ಲಿದೆ.

ಹಿಮವು ಕರಗುವುದಕ್ಕಿಂತ ವೇಗವಾಗಿ, ಜಮೆಯಾದರೆ, ಅದು ಘಟ್ಟಿಯಾಗಿ ಗೆಡ್ಡೆಯಾಗುತ್ತದೆ. ಮೇಲಿನಿಂದ ಹಿಮಬೀಳುವಾಗ ಅಡಿಯ ಹಿಮದಕಣಗಳು ಒತ್ತೊತ್ತಾಗಿ ಸೇರಿ ಅದು ಕ್ರಮೇಣ ಘನವಾಗುತ್ತದೆ. ಧ್ರುವದ ಸಮೀಪ ಹಿಮಕ್ಕೆ ಕರಗುವ ಅವಕಾಶವೇ ಇಲ್ಲದೆ ಅದು ಗಡ್ಡೆ ಕಟ್ಟಿ ಹೋಗುತ್ತದೆ ಎಂದು ಹೇಳಬಹುದು.

ಹಿಮವು ನಿರಂತರವಾಗಿ ಒಂದೆಡೆ ಕೂಡುವಾಗ ಅದು ಸಘನವಾಗಿ, ಅವಕಾಶ ಒದಗಿದಾಗ ಅದು ತನ್ನ ಭಾರದ ಕಾರಣದಿಂದ ಮಾರ್ಗ ದೊರೆತರೆ ಸಂಚರಿಸತೊಡಗುತ್ತದೆ, ಇದು ತನಗಿಂತ ಗಟ್ಟಿಯಾದ ಗೆಡ್ಡೆಗೆ ಹೊಡೆದು ಒಡೆದು ಹೋಗುವವರೆಗೆ ಅಥವಾ ಬೆಚ್ಚಗಾಗಿ ಕರಗುವ ವರೆಗೆ ತೇಲುತ್ತಾ ಮುಂದುವರಿಯುತ್ತದೆ. ಹೊಸ ಹಿಮವು ದೊರೆಯುವಷ್ಟು ಸಮಯ ಅದು ಮೇಲ್ಭಾಗದಲ್ಲಿ ಬೆಳೆಯುತ್ತ ಹೋಗುತ್ತದೆ,



ಸೀಟಲ್ಲಿ ನಗರದಲ್ಲಿ ಫ್ಲೆಕಿಬ್ಲ್ ಕಾರಖಾನೆಯ ಒಂದು ನೋಟ.

ಇದರ ಚಲನೆಯೂ ವಿಚಿತ್ರ! ಕೆಲವು ವಾರಗಳಲ್ಲಿ ನಾಲ್ಕಾರು ಅಂಗುಲವೂ ಅದು ಚಲಿಸಲಾರದು; ಆದರೆ ಇನ್ನು ಕೆಲವು ದಿನಗಳಲ್ಲಿ ನೂರಾರು ಅಡಿಗಳಷ್ಟು ಓಡುತ್ತದೆ!

ಸಾಮಾನ್ಯತಃ ಒಂದು ಶತಮಾನದಲ್ಲಿ ಸಮುದ್ರದ ಜಲಮಟ್ಟ ಮೂರಂಗುಲಗಳಷ್ಟು ಏರುತ್ತ ಬರುತ್ತಿದೆ ಎಂದು ಸಂಶೋಧನೆಗಳಿಂದ ತಿಳಿದು ಬಂದಿದೆ, ಸಮುದ್ರದ ನೀರು ಉಕ್ಕಲಿರುವ ಮೂಲ ಕಾರಣ ಭೂಮಿಯ ಹಿಮವು ಕರಗುವುದೇ ಆಗಿದೆ; ಏಕೆಂದರೆ, ತೇಲುವ ಗೆಡ್ಡೆಗಳು ಕರಗುವುದರಿಂದ ನೀರೇರುವುದು ಅಸಾಧ್ಯ ತೇಲುಗೆಡ್ಡೆಗಳ ಭಾರವೂ ಅವು ಕರಗಿದಾಗ ಆಗುವ ಭಾರವೂ ಸಮಾನವೇ ಆಗಿದೆ

ಪಶ್ಚಿಮ ಅಮೆರಿಕೆಯ ಮಂಜುಗೆಡ್ಡೆಗಳಲ್ಲದೆ ಆಲ್ಪ್ಸ್ ಮೊದಲಾದ ಪರ್ವತದ ಶಿಖರಗಳ ಹಿಮವೂ ಕರಗತೊಡಗಿದೆ ಇವು ಕರಗುವುದರಿಂದ ಕ್ರಮೇಣ ಅನೇಕ ನೀರಿನ ಆಧಾರಗಳ ಕೊರತೆಯಾಗುವುದೂ ಸಾಧ್ಯ. ಆದುದರಿಂದ, ಅವನ್ನು ಕರಗದಂತೆ ತಡೆಗಟ್ಟುವ ಉಪಾಯಗಳನ್ನು ಅರಸುತಿದ್ದಾರೆ. ಚಳಿಗಾಲದಲ್ಲಿ ತಣ್ಣಗಿನ ಪರ್ವತ ಶಿಖರಗಳಿಗೆ ಪಂಪುಗಳ ಮೂಲಕ ನೀರನ್ನು ಸಾಗಿಸಿ ಕೃತಕ ಮಂಜುಗೆಡ್ಡೆಗಳನ್ನು ನಿರ್ಮಿಸುವ ಯೋಜನೆಯೂ ಇವುಗಳಲ್ಲಿ ಒಂದು.

ಆದರೆ ಒಂದು ಮಾತು ಸತ್ಯ. ಈ ಪರ್ವತಗಳ ಹಿಮಕರಗಿ ಬರುವ ನೀರಿನ ಪ್ರಮಾಣಕ್ಕಿಂತಲೂ ಸಮುದ್ರದ ನೀರು ಮಿತಿಮೀರಿದೆ. ಆದುದರಿಂದ ಕರಗುವ ಮಂಜಿರುವ ಬೇರೆ ಸ್ಥಾನಗಳಿರಬೇಕಾದುದು ಅನಿವಾರ್ಯ. ಈ ಬಗ್ಗೆ ಬಂದ ಹಲವಾರು ವರದಿಗಳು ಕಲಸು ಮೇಲೋಗರವೇ ಸೈ. ಆದುದರಿಂದ ಸಮುದ್ರದ ನೀರ ಮಟ್ಟ ಏರಿಸುವ ಜಲಸ್ರೋತದ ಮೂಲ ಯಾವುದುಎಂದು ಹೇಳುವಂತಿಲ್ಲ.

ಅಂತಾರಾಷ್ಟ್ರೀಯ ಭೂಭೌತಿಕ ವರ್ಷದ ವೈಜ್ಞಾನಿಕರ ಅಂಬೋಣದಂತೆ, ಎಲ್ಲ ಮಂಜು ಬೆಟ್ಟಗಳು ಕರಗುತ್ತಿಲ್ಲ. ಚಳಿಯಕಾರಣದಿಂದ ಅಧಿಕ ಹಿಮಬಿದ್ದು ಅದು ಬೆಳೆಯುತ್ತದೆ. ಅಮೆರಿಕೆಯ ಓಲಂಪಿಕ್ ಮತ್ತು ಕಾಸ್ಕೇಡ ಪರ್ವತಗಳೇ ಇದಕ್ಕೆ ಉದಾಹರಣೆಗಳು. ದಕ್ಷಿಣ ಅಲಾಸ್ಕಾದ ಟಾಕೂ ಮತ್ತಿತರ ಕೆಲವು ಪರ್ವತಗಳೂ ಬೆಳೆಯುತ್ತಿವೆ; ಆದರೆ ಇವುಗಳ ವೃದ್ಧಿ ಬೇಸಿಗೆಯಿಂದಾಗಿ. ಬಹಳ ಎತ್ತರದ ಶಿಖರಗಳಿವೆ; ಇಲ್ಲಿನ ಅತ್ಯಧಿಕ ತಂಪು ಮತ್ತು ಒಣ ಹವಾಮಾನವೇ ಹಿಮನಿರ್ಮಾಣಕ್ಕೆ ಸಹಾಯವಾಗಿದೆ.

ಗ್ರೀನ್‌ಲೆಂಡ್ ಆಯಿಸ್‌ಕೆಂಪದ ಸ್ಥಿತಿ ಆಶ್ಚರ್ಯಕಾರಕವಾಗಿದೆ. ಇದು ಏಕಕಾಲದಲ್ಲಿ ಬೆಳೆಯುತ್ತಲೂ ಇದೆ; ಕರಗುತ್ತಲೂ ಇದೆ. ಇದರ ದಕ್ಷಿಣ ಪಕ್ಕದಲ್ಲಿ ಹಿಮ ಕರಗುತ್ತಿದೆ; ಈ ಪ್ರದೇಶದಲ್ಲಿ ಎಂಟು, ಹತ್ತು ಶತಮಾನಗಳಿಂದ ಹಿಮದಡಿ ಬಿದ್ದಿರುವ ಮೈದಾನುಗಳು ದೃಷ್ಟಿಗೋಚರವಾಗುತ್ತಿವೆ. ಆಯಿಸ್‌ಲೇಂಡಿನ ಒಳಭಾಗದಲ್ಲಿ ಹಿಮ ಮತ್ತು ಮಂಜುಗಳು ಹೆಚ್ಚುತ್ತಿವೆ.

ಅತ್ಯಧಿಕ ಹಿಮಾಚ್ಛಾದಿತ ಪ್ರದೇಶವಾದ ದಕ್ಷಿಣ ಧ್ರುವದ ಸುತ್ತುಮುತ್ತ ಯಾವ ಪ್ರಮಾಣದಲ್ಲಿ ಹಿಮ ಕರಗುತಿದೆಂದು ಅನ್ವೇಷಣೆಯಾಗಿಲ್ಲ. ಇಲ್ಲಿ ಹಿಮ ಕರಗುತ್ತಿರುವುದಾದರೂ ಬಹಳ ಅಲ್ಪ ಪ್ರಮಾಣದಲ್ಲಿ ಮಾತ್ರ.

ಕೆಲ ವರ್ಷಗಳಿಗೆ ಮೊದಲು ಹಿಮತಜ್ಞರು ಭೂಮಿಯ ಹಿಮವೆಲ್ಲವೂ ಕರಗಿದರೆ, ಸಮುದ್ರದ ನೀರಿನ ಮಟ್ಟವು ೧೫೦—೨೦೦ ಅಡಿಗಳಷ್ಟು ಏರುವುದೆಂದೂ ಇದರಿಂದಾಗಿ ಪ್ರಪಂಚದ ಹೆಚ್ಚಿನ ದೊಡ್ಡ ನಗರಗಳು ನಿರ್ನಾಮವಾಗುವುದೆಂದೂ ಹೇಳಿದರು. ಇತ್ತೀಚೆಗಿನ ಸಂಶೋಧನೆಗಳಿಂದ ದಕ್ಷಿಣ ಧ್ರುವದ ಹಿಮ ಬಹಳ ಆಳದವರೆಗಿದೆ ಎಂದು ಗೊತ್ತಾಗಿದೆ. ಹಾಗಾಗಿ ಭೂಮಿಯ ಹಿಮವೆಲ್ಲ ಕರಗಿದರೆ, ಸಮುದ್ರ ೩೦೦ ಅಡಿ ಎತ್ತರ ಏರಬಹುದು.!

(೯ನೇ ಪುಟ ನೋಡಿರಿ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ನಾವು ಬೆಳೆದ ಬರಬೇಕಾದರೆ—
- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.
ಇದೀಗ ಸಿದ್ಧವಾಗಿದೆ.
ಭಾರತೀಯ ಮಹಾಪುರುಷರು
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)
ಪುಟಗಳು: ೧೨೪. ಬೆಲೆರೂ. ೧-೫೦.
ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.
ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.
ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ದೇಶ ಪರಿಚಯ

ಫಿಯೋರ್ಡ್‌ಗಳ ತವರ್ಮನೆ—ನಾರ್ವೆ

ಸಸ್ಯ ಸಂಪತ್ತಿನಿಂದಲೇ ತನ್ನ ಅಭಿವೃದ್ಧಿಯನ್ನು ನಾರ್ವೆಯು ಸಾಧಿಸಿಕೊಂಡು, ಯುರೋಪದ ವಿವಿಧ ರಾಜ್ಯಗಳಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ.

ನೋರ್ವೆ ಎಂಬ ರಾಜ್ಯ ಯುರೋಪ್ ಖಂಡದ ವಾಯುವ್ಯ ಮೂಲೆಯಲ್ಲಿರುವ ರಾಜ್ಯ. ನಮ್ಮ ಮನಸ್ಸಿನ ಇದೊಂದು ಚಿಕ್ಕ ರಾಷ್ಟ್ರ ಎಂಬ ಭಾವನೆಯಿರುವುದಾದರೂ ಇದು ನಾವೆಣಿಸದಷ್ಟು ಸಣ್ಣದಲ್ಲ. ದಕ್ಷಿಣದಿಂದ ಉತ್ತರಕ್ಕೆ ಒಂದು ಸಾವಿರ ಮೈಲು ಉದ್ದವಿರುವುದು. ಒಂದು ಪರ್ವತಶ್ರೇಣಿ ಇಡೀ ಸ್ಕೇಂಡಿನೇವಿಯವನ್ನು ಮಧ್ಯದಲ್ಲಿ ವಿಭಾಗಿಸಿ ಸ್ವೀಡನ್ ಮತ್ತು ನೋರ್ವೆ ಎಂಬ ಎರಡು ರಾಜ್ಯಗಳನ್ನಾಗಿ ಮಾಡಿತು. ಪಶ್ಚಿಮದ ಅತ್ಲಾಂತಿಕ ಸಾಗರ ಕರಾವಳಿಯಲ್ಲಿ ದಕ್ಷಿಣದಿಂದ ಉತ್ತರದ ತುದಿಯ ವರೆಗೆ ಸಾಲುಸಾಲಾಗಿ ದ್ವೀಪಗಳು ತುಂಬಿವೆ. ಅನೇಕ ಕಾಲುವೆಗಳು ಕೊಲ್ಲಿಗಳು ಇದ್ದು ಮೀನುಗಾರಿಕೆಯ ಕಸಬಿನವರಿಗೆ, ನಾವಿಕರಿಗೆ ಮತ್ತು ದೇಶದ ರಕ್ಷಣೆಯ ದೃಷ್ಟಿಯಿಂದಲೂ ಅನುಕೂಲವಾಯಿತ್ತು. ಸಮುದ್ರವು ಮೂಲಭೂಮಿಯ ಒಳಹೊಕ್ಕು ಅನೇಕ ಕೊಲ್ಲಿಗಳು ಇರುವವು. ಈ ದ್ವೀಪಗಳ ಜೊತೆಗೆ ಅಲ್ಲಿ ಶಾರ್‌ಗೂರ್ಡ್ ಎಂದು ಕರೆಯುವರು.

ಈ ರಾಜ್ಯದಲ್ಲಿ ಪೈನ್ ಮತ್ತು ಹೆಮ್ಲೋಕ್ ಮರಗಳ ಕಾಡುಯಿದೆ. ಅಲ್ಲಿ ಸಾಗಾಟಕ್ಕೆ ಸೌಕರ್ಯವಿಲ್ಲದ ಕಾರಣ ಮರದ ತುಂಡುಗಳನ್ನು ನದಿಯಲ್ಲಿ ಬಿಡುಬಿಟ್ಟು ಕರಾವಳಿಯ ಸಮೀಪ ತೇಲಿ ಬಂದ ತುಂಡುಗಳನ್ನು ಒಟ್ಟುಮಾಡುವವರು. ಈ ನದಿಗಳು ಪರ್ವತದಿಂದ ಬರುವಾಗ ಅಲ್ಲಲ್ಲಿ ಬಹು ಎತ್ತರದಿಂದ ನೀರು ಕೆಳಗೆ ಹಾರಿ ನದಿಯು ಮುಂದೆ ಹರಿಯಬೇಕಾಗಿದೆ. ಇಂಥಾ ವಾಟರ್ ಫಾಲ್ಸನಂಥ ನೂರಾರು ಸ್ಥಳಗಳಿವೆ. ಇದರಿಂದ ವಿದ್ಯುತ್ಪಾದನೆಯನ್ನು ಮಾಡುವರು. ನೋರ್ವೆಯು ಇದಕ್ಕೆ ಹೆಸರುಗೊಂಡಿದೆ.

ನೋರ್ವೆಯಲ್ಲಿ ಮರಗಳ ಸಂಪತ್ತು ಸಮೃದ್ಧಿಯಾಗಿರುವುದರಿಂದ ಆ ದೇಶದ ಕಟ್ಟಡಗಳು ಹೆಚ್ಚಾಗಿ ಮರಗಳಿಂದ ಕಟ್ಟಲ್ಪಡುವವು. ಈ ಕಟ್ಟಡಗಳಿಗೆ ಕಿಟಕಿಗಳಿಲ್ಲ. ಹೊಗೆಯು ಹೊರಗೆ ಹೋಗಲು ಮಾಡಿನಲ್ಲಿಟ್ಟ ಒಂದು ತೂತಿನಿಂದ ಮಾತ್ರ ಬೆಳಕು ಬರುವದು. ಮರದ ಮಂಚದ ಮೇಲೆ ಮಲಗುವರು. ಕೋಣೆಯು ಬೆಚ್ಚಗಾಗುವಂತೆ ಎತ್ತರದ ಅಗ್ಗಿಷ್ಟಿಯಿರುವದು. ಅಲ್ಲಿನ ಜನರು ಈಗಲೂ ಹಳೇ ಪದ್ಧತಿಗಳಿಗೆ ಅಂಟಿಕೊಂಡಿರುವರು.

ಓಸ್ಲೋ ಪಟ್ಟಣದಲ್ಲಿ ಒಂದು ವಸ್ತು ಸಂಗ್ರಹಾಲಯವಿರುವದು. ಅಲ್ಲಿ ಪುರಾತನ ಕಾಲದಲ್ಲಿ ಮರದಿಂದ ತಯಾರಿಸಿದ ಒಂದು ಇಗರ್ಜಿಯ ಮಾದರಿಯನ್ನು ಪ್ರೇಕ್ಷಕರಿಗಾಗಿ ಇಟ್ಟಿರುವರು. ಅದು ಸುಮಾರು ಹದಿಮೂರನೆಯ ಶತಮಾನದಲ್ಲಿ ತಯಾರಿಸಿದ್ದಂತೆ. ಇದು ಯುರೋಪ ಖಂಡದಲ್ಲಿ ಅತಿ ವಿಚಿತ್ರತರವಾದ ಮರದ ಕಟ್ಟೋಣವೆಂಬುದು. ನಾರ್ವೆ ದೇಶದಲ್ಲಿ ಈಗಲೂ ಅಂಥಹ ಇಗರ್ಜಿಗಳು ಸುಮಾರು ಇಪ್ಪತ್ತು ಇವೆಯಂತೆ. ಅನೇಕ ಶತಮಾನಗಳ ಹಿಂದೆ ಕಟ್ಟಲ್ಪಟ್ಟವುಗಳಾದರೂ ಈಗಲೂ ಅಚ್ಚಳಿಯದೆ ಇರುವವು. ಕಟ್ಟಡಗಳಿಗೆ ಅನೇಕ ಮಾಡುಗಳಿವೆ. ಅವುಗಳ ಮೂಲೆಯ ಜಂಗುಗಳು ಕೆಳಗೆ ಬಂದ ತ್ರಿಕೋಣಾಕೃತಿಯ ಸಂದುಗಳಲ್ಲಿ ಪೌರ್ವಾತ್ಯ ಕಟ್ಟಡಗಳಲ್ಲಿರುವಂತೆ ಕಾಣುವ ಸರ್ಪಾಕೃತಿಯನ್ನು ನಮ್ಮ ಕಡೆಯಿಂದಲೇ ಅವರು ಮಾಡಿದ್ದರೋ ಎಂಬ ಊಹನೆಗೆ ಎಡೆ ಕೊಡುತ್ತದೆ.

ನೋರ್ವೆಯ 'ಲಾಪ್ಸ್' ಯುರೋಪದ ಇತರ ಹಿಂದುಳಿದ ಜನಾಂಗಕ್ಕಿಂತ ಕೀಳು ಮಟ್ಟದ ಅನಾಗರೀಕರು. ಅವರು ಸದಾ ಸಂಚಾರವನ್ನು ಹೊಂದಿಕೊಂಡಿರುವರು. ಲಾಪ್ಸ್ ಜನರನ್ನು ಅವರ ವಾಸಸ್ಥಾನ ಆಚಾರ ರೀತಿಗಳನ್ನನುಸರಿಸಿ ವಿಭಾಗಿಸಬಹುದು. ಕರಾವಳಿ ಮತ್ತು ನದಿ ದಡಗಳಲ್ಲಿ ಜೀವಿಸುವ ಲಾಪ್ಸ್‌ಜನರು ಮೀನ ಹಿಡಿಯುವುದರಲ್ಲಿ ನಿಪುಣರು ಮತ್ತು ಸಾಹಸಿಗಳಾದ ನಾವಿಕರಾಗಿರುವರು. ಇನ್ನು ಗುಡ್ಡಗಾಡಿನ ಲಾಪ್ಸ್‌ಜನರು ಜೀವನೋಪಾಯಕ್ಕೆ ತಮ್ಮ ಪಶುಗಳಾದ 'ರೈನ್‌ಡೀಯರು'ಗಳನ್ನು ಹೊಂದಿಕೊಂಡಿರುವರು. ಇವುಗಳಿಂದ ಅವರಿಗೆ ಆಹಾರವನ್ನೂ ವಸ್ತ್ರವನ್ನೂ ಗ್ರಹಕೃತ್ಯಕ್ಕೆ ಬೇಕಾದ ಪಾತ್ರೆಗಳನ್ನೂ ಪಡೆಗಿಸಿಕೊಳ್ಳುವರು ಮಾತ್ರವಲ್ಲ ತಮ್ಮ ಸಾಮಾನುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಇವುಗಳನ್ನು ಉಪಯೋಗಿಸುವರು. ಕಡೆಗೆ ಹೇಳಿದ ಈ ಜನರಿಗೆ ಖಾಯಂ ವಸತಿಯಿಲ್ಲ. ತಮ್ಮ ರೈನ್‌ಡೀಯರ್ ಹಿಂಡನ್ನು ಹೊಡೆದುಕೊಂಡು ಹಸುರಾದ ಹೊಸ ಹುಲ್ಲುಗಾವಲು ಸ್ಥಳ ಹುಡುಕಿಕೊಂಡು ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲೆದಾಡಿಕೊಂಡಿರುವ ಜನರು. ನೋರ್ವೆ ಸ್ತ್ರೀಯರು ಬಿಳಿಹತ್ತಿಯಿಂದ ತಯಾರಿಸಿದ ತಲೆದುಸ್ತನ್ನು ಅಲ್ಸೇಶಿಯದ ದಾಯಿಯರಂತೆ ಧರಿಸುವರು. ಅವರ ಅಂಗಿಯ ಬದಿಗೆ ಮಣಿಗಳನ್ನು ಪೋಣಿಸುವರು; ದಟ್ಟಿಯ ಗುಬ್ಬಿಗಳು ಮತ್ತು ಗುಣಿಸು ಹೆಚ್ಚಾಗಿ ಬೆಳ್ಳಿಯದಾಗಿರುವದು. ಈಗಿನ ಕಾಲದಲ್ಲಿ ಈ ದುಸ್ತು ಆದಿತ್ಯವಾರ ಹೊರತು ಬಾಕಿ ದಿನಗಳಲ್ಲಿ ನೋಡಲು ಸಿಕ್ಕುವುದು ಅಪರೂಪ.

ಆ ದೇಶದಲ್ಲಿ ಹಿಮಕಾಲವು ಬಹು ದೀರ್ಘವಿರುವುದು. ಆ ಸಮಯ ಅಲ್ಲಿಯ ಜನರಿಗೆ ಹೊರಗೆ ಹೋಗಿ ಆಟವಾಡುವದೆಂದರೆ ಬಹಳ ಖುಶಿ. ಮರದ ಸಪುರಾದ ಹಲಗೆಯ ತುದಿಯನ್ನು ಕೊಂಡಿಯಂತೆ ಮಾಡಿ ಆ ಹಲಗೆಯನ್ನು ತಮ್ಮ ಬೂಟ್ಸಿನ ತಳದಿಯಲ್ಲಿ ಸಿಕ್ಕಿಸಿಕೊಂಡು ಕೈಯಲ್ಲಿ ಎರಡು ಕೋಲುಗಳನ್ನು ಹಿಡಿಯುವರು. ಈ ಕೋಲಿನ ತುದಿಯು ಹಿಮದಲ್ಲಿ ಹೂತುಹೋಗದಂತೆ ಮತ್ತು ಹಿಡಿತವು ತಪ್ಪಬಾರದೆಂದು ಚೂಪಾಗಿ ಅಂಕುಶದಂತಿದ್ದು ಅದರ ಸ್ವಲ್ಪ ಮೇಲ್ಗಡೆಯಲ್ಲಿ ಒಂದು ಚಪ್ಪಟೆಯಾದ ತಟ್ಟೆಯು ಸಿಕ್ಕಿಸಿ ಹಿಮದ ಮೇಲೆ ಬಹುದೂರದವರೆಗೆ ತಾವು ಮೆಟ್ಟಿಕೊಂಡ ಹಲಗೆಯನ್ನು ಜಾರಿಸಿಕೊಂಡು ಹೋಗುವರು. ಹೀಗೆ ಚುರುಕಾಗಿ ಸಾಗುವಾಗ ಮನುಷ್ಯನ ದೇಹವೂ ಮುಂದೆ ಹೋಗುವದು. ಇಳಿಜಾರಿನಲ್ಲಿ ಜೋರಾಗಿ ಗಾಳಿವೇಗದಂತೆ ಆಟಗಾರನು ಕೆಳಗೆ ಬರುವನು. ಈ ಆಟಕ್ಕೆ ಅವರು "ಶೀಯಿಂಗ್" ಎಂದು ಹೇಳುವರು. ಇದು ಹಿಮಬೀಳುವ ರಾಷ್ಟ್ರಗಳಲ್ಲೆಲ್ಲಾ ಇರುವ ಆಟ.

ಬರ್ಮಿಂಗೇಮಿನ ಕಾರ್ಖಾನೆಯೊಂದರಲ್ಲಿ ಕೊಳವೆಯ ಲೋಹಗಳನ್ನು ಹದಮಾಡುವ ವಿದ್ಯುತ್ ಕುಲಿಮೆಯೊಂದರ ಕಾರ್ಯದ ಬಗ್ಗೆ ಅಭ್ಯಾಸ ನಡೆಯುತ್ತಿದೆ.

ಉತ್ತರ ಭೂಶಿರದ ಕಡೆಗೆ ಹೋದರೆ ಮಧ್ಯ ರಾತ್ರಿಯ ಸೂರ್ಯನು ಕಣ್ಣಿಗೆ ಕಾಣಸಿಕ್ಕುವನು. ಹೆಮ್ಮರ್‌ಫೆಸ್ಟ್ ಎಂಬ ಪಟ್ಟಣವು ಭೂಲೋಕದ ಅತ್ಯಂತ ಉತ್ತರದ್ದು. ಇಲ್ಲಿ ವಸಂತಋತುವಿನ ಹನ್ನೊಂದು ವಾರಗಳಲ್ಲಿ ಸೂರ್ಯನು ಮುಳುಗುವದೇ ಇಲ್ಲ ಮತ್ತು ಹಿಮಕಾಲದಲ್ಲಿ ನವಂಬ್ರ ಹದಿನೆಂಟರಿಂದ ಜನವರಿ ಇಪ್ಪತ್ತಮೂರರವರೆಗೆ ಸೂರ್ಯನು ಉದಯಿಸುವುದಿಲ್ಲ.

ನೋರ್ವೆ, ಸ್ವೀಡನ್ ಮತ್ತು ಡೆನ್ಮಾರ್ಕ್ ಈ ಮೂರು ದೇಶಕ್ಕೂ ಸಂಬಂಧವಿದೆ. ಇವರು ಒಂದೇ ವರ್ಣದವರು. ಒಂದೇ ಭಾಷೆ ಒಂದೇ ನಾಡಕಥೆ ಹಾಡುಗಳು. ಇವರ ಪುರಾಣಗಳು ಒಂದೇ ಆಗಿರುವದು. ಸ್ಕೇಂಡಿನೇವಿಯದವರ ಪುರಾಣಗಳಲ್ಲಿ ದೇವಮರವೆಂಬುದು ಪ್ರಾಮುಖ್ಯ ವಿಷಯ. ಇದನ್ನವರು ಪೃಥ್ವೀಮರ "ಯಾಗ್ ಯಗ್ಡ್ರಸಿಲ್" ಎನ್ನುವರು. ಈ ಮರವು ಮಾನವನ ಜನನಕ್ಕೂ ಇರುವಿಕೆಗೂ ಜೀವನಕ್ಕೂ ತಿಳುವಳಿಕೆಗೂ ಸುಖದುಃಖ ಇಹಪರಕ್ಕೂ ವಿಶ್ವದ ಮರವೇ ಆಗಿದೆ. ಇದರ ಬೇರುಗಳು ಪೃಥ್ವಿ, ನರಕ, ಸ್ವರ್ಗಗಳನ್ನೂ ಆವರಿಸಿಕೊಂಡಿದೆ. ಇದರ ಬೇರು ಜ್ಞಾನ ಮತ್ತು ತಿಳುವಳಿಕೆ ಕೊಡುವ ಸರೋವರದವರೆಗೆ ಹೋಗಿದೆ. ಇನ್ನೊಂದು ಬೇರು ನ್ಯಾಯತೀರ್ಮಾನಿಸುವ ದೇವತೆಗಳ ಕಚೇರಿವರೆಗೆ ಹೋಗಿದೆಯಂತೆ. ಈ ದೇವತೆಗಳು ಬಿಲ್‌ಫ್ರೊಸ್ಟ್ ಸೇತುವೆಯ ಮೇಲೆ ನ್ಯಾಯಾಮಕ್ಕೆ ಸವಾರಿಮಾಡುವರಂತೆ.

ನೋರ್ವೆ ದೇಶದಲ್ಲಿ ಸಿಡಿಲು ಮಿಂಚು ಜಾಸ್ತಿ. ಸಾಹಸದ ಕೃತ್ಯಗಳು ಮಾಡಿದವರು ಯುದ್ಧದಲ್ಲಿ ಮಡಿದ ವೀರ ಯೋಧರಿಗೆ ಮಾತ್ರ ವಾಲಹಳ್ಳ ಅಂದರೆ ಸ್ವರ್ಗ ಸಿಕ್ಕುವದು, ಮನೆಯಲ್ಲಿ ಹಾಸಿಗೆಯ ಮೇಲೆ ಜೀವಬಿಟ್ಟವರು ಹಿಮ ತುಂಬಿದ ನರಕದಲ್ಲಿ ಬೀಳುವರೆಂಬ ನಂಬಿಕೆ. ಚಿಕ್ಕಂದಿನಿಂದಲೇ ಮಕ್ಕಳಿಗೆ ಈ ಮನೋಭಾವನೆ ಬೇರೂರುವಂತೆ ಮಾಡುವರು. ಹೆನ್ರಿಕ್ ಇಬ್ಸೆನ್ ಸಮಾಜಿಕ ನಾಟಕ ಗ್ರಂಥಕರ್ತನು ಈ ಅಂಥ ಶ್ರದ್ಧೆ ಕುರುಡು ಭಕ್ತಿಗಳನ್ನು ಕೆತ್ತಿಗೆದನು. ಮೀನುಗಾರಿಕೆಯೊತ್ತಿಗೆ ಹೈನುಗಾರ್ಮ ಮತ್ತು ಮರಗಳ ಮಾರಾಟವನ್ನು ಮಾಡುವರು. ನಾರ್ವೆ ಮರಗಳು ಉತ್ತಮ ಕಾಗದ ತಯಾರಿಕೆಗೆ ಬರುವದು.

—ಶ್ರೀ ಸಿ. ಎಚ್. ಶೆಟ್ಟಿ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ
ಬುಕ್‌ವರ್ಕನ್ನೂ ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI
Printers & Publishers
Santhekatte — UDIPI.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚು ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

> ಒಂದೇ ಚಕ್ರದಿಂದ ಯಾವ ಗಾಡಿಯೂ ಸರಳವಾಗಿ ಹರಿದಾಡಲಾರದು; ಜನತೆಯ ಬೆಂಬಲವಿಲ್ಲದೆ ಯಾವ ಸರಕಾರವಾದರೂ ಯಶಸ್ವಿಯಾಗಿ ಒಂದು ಯೋಜನೆಯನ್ನು ಸಾಧಿಸಲು ಸಮರ್ಥವಾಗದು.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೦-೯-'೬೪	೨

ಆಹಾರ ಸ್ವಾವಲಂಬನೆ

ರಾಷ್ಟ್ರೀಯ ಆಹಾರ ಮಂಡಲವು ನವದೆಹಲಿಯಲ್ಲಿ ಸಭೆಸೇರಿ ತಾನು ಈ ಮೊದಲೇ ನಿರ್ಧರಿಸಿಕೊಂಡಿದ್ದ ಧೋರಣೆಗಳಲ್ಲಿ ಯಾವುದೇ ತಿದ್ದುಪಡಿಗಳನ್ನು ಮಾಡಿಕೊಳ್ಳದೇನೇ ಅವನ್ನೇ ಒಪ್ಪಿಕೊಂಡು ಚದರಿ ಬಿಟ್ಟಿತು. ಆಹಾರ ಧಾನ್ಯಗಳ ಸರಕಾರಿ ವ್ಯಾಪಾರ ಮತ್ತು ಆಹಾರ ಧಾನ್ಯಗಳ ಎತ್ತುವಳಿ, ಆಹಾರವಲಯ ಮೊದಲಾದ ಎಲ್ಲ ವಿಷಯಗಳೂ ಇದೇ ರೀತಿ ಮೂಲ ರೂಪದಲ್ಲಿಯೇ ನಿಲ್ಲುವಂತಾಗಿದೆ.

ಸದ್ಯ, ಆಹಾರದ ಸ್ಥಿತಿಯು ರಾಷ್ಟ್ರದಲ್ಲಿ ತುಸು ವಿಮಂಚನೆಗೆ ಎಡೆಮಾಡಿಕೊಟ್ಟಿದೆ ಎಂಬುದನ್ನು ಸಂಪೂರ್ಣ ಅಲ್ಲಗಳೆಯುವಂತಿಲ್ಲ. ಎಲ್ಲ ರಾಜ್ಯಗಳಲ್ಲಿಯೂ ಇದು ತುಂಬ ಬಿಕ್ಕಟ್ಟನ್ನುಂಟುಮಾಡಿದೆ ಎನ್ನುವಂತಿಲ್ಲವಾದರೂ ಸಾಮಾನ್ಯವಾಗಿ ಸರಕಾರದ ಆಹಾರ ಧಾನ್ಯಗಳ ಎತ್ತುವಳಿ ಮತ್ತು ವ್ಯಾಪಾರದ ಕಾರ್ಯಭಾರ ಯಶಸ್ವಿಯಾಗಿ ನಡೆಯಿತೆಂದು ಹೇಳುವಂತಿಲ್ಲ. ಪಶ್ಚಿಮ ಬಂಗಾಳದಲ್ಲಿನ ಆಂದೋಲನವನ್ನೂ ಚಿತ್ತಕ್ಷೋಭಕಾರಿ ಘಟನೆ ಮತ್ತು ಸನ್ನಿವೇಶಗಳನ್ನೂ ನಾವು ನೋಡುವುದಾದರೆ, ಅಲ್ಲಿನ ಪರಿಸ್ಥಿತಿ ಹೇಗೆ ಎಂದು ಊಹಿಸಿಕೊಳ್ಳಬಹುದು. ಪಶ್ಚಿಮ ಬಂಗಾಳದ ಈ ಆಂದೋಲನಕ್ಕೆ ರಾಜಕೀಯ ದುರುದ್ದೇಶವೂ ಒಂದು ಪ್ರಬಲ ಕಾರಣವೆಂದು ನಾವೂ ಒಪ್ಪುತ್ತೇವೆ; ಆದರೆ, ಕೇವಲ ಗಾಳಿಯಲ್ಲಿ ಕೈಯಾಡಿಸಿದರೆ, ಸದ್ಬಾಗದೆಂಬುದನ್ನು ಅಲ್ಲಗಳೆಯುವಂತಿಲ್ಲ.

ದಕ್ಷಿಣದ ಆಹಾರವಲಯಕ್ಕೆ ಸೇರಿದ ಮೈಸೂರು, ಕೇರಳ ರಾಜ್ಯಗಳು ಆಹಾರ ಧಾನ್ಯಗಳ ಮಟ್ಟಿಗೆ ಕೊರತೆಯವುಗಳಾದರೆ, ಆಂಧ್ರ ಮತ್ತು ಮದರಾಸಗಳು ಉಳಿಕೆಯವಾಗಿವೆ. ಈ ರಾಜ್ಯಗಳೊಳಗೆ ಆಹಾರ ಧಾನ್ಯಗಳ ವಿತರಣೆಯಾಗುವುದು ಸರಿಯಾಗಿರುತ್ತಿದ್ದರೆ, ಮೈಸೂರು ಮತ್ತು ಕೇರಳಗಳಲ್ಲಿ ಆಹಾರ ಧಾನ್ಯಗಳ ಬೆಲೆಯು ಸರ್ವಥಾ ಹಿತದಲ್ಲಿರುತ್ತಿತ್ತೆಂದು ಹೇಳಬಹುದು. ಕೇರಳದಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆಯು ಸಾರಲ್ಪಟ್ಟ ಕೆಲವು ದಿನಗಳಲ್ಲಿ ಅಕ್ಕಿಯ ಬೆಲೆ ತುಸು ಕಡಿಮೆಯಾಯಿತಾದರೂ ಈಗ ಪುನಃ ಏರಿದೆ ಎಂದು ತಿಳಿಯುತ್ತದೆ. ಮೈಸೂರಿನಲ್ಲಂತೂ ಬೆಲೆಯು ಇಳಿಯುತ್ತಲೇ ಇಲ್ಲ. ಇದಕ್ಕೆ ಕಾರಣವನ್ನು ಯೋಚಿಸಿದರೆ ಸರಕಾರವು ತನ್ನ ವ್ಯಾಪಾರದಲ್ಲಿ ನ್ಯಾಯಪರವಾದ ಧೋರಣೆಯನ್ನು ಅನುಸರಿಸುತ್ತಿಲ್ಲವೆಂದೇ ಹೇಳಬೇಕಾಗುತ್ತದೆ. ರೈತಾಪಿ ಜನರಿಂದ ಆಹಾರ ಧಾನ್ಯಗಳನ್ನು ಪಡೆದುಕೊಳ್ಳುವಾಗ, ಅವರಿಗೆ ತಗಲಿದ ಮೂಲ ವೆಚ್ಚವೆಷ್ಟೆಂಬುದನ್ನು ಗಮನಿಸಲಿಲ್ಲ. ರೈತ ಜನರ ಜೀವನವೂ ಈ ಆಹಾರ ಧಾನ್ಯಗಳಿಂದಲೇ ಸಾಗಬೇಕಾಗಿರುವುದರಿಂದ, ಅವರು ತಮ್ಮ ಜೀವನೋಪಯೋಗಿ ಇತರ ಪದಾರ್ಥಗಳಿಗೆ ತೆರಬೇಕಾಗುವ ಬೆಲೆಯೆಷ್ಟು ಎಂಬುದನ್ನೂ ಲಕ್ಷ್ಯಕ್ಕೆ ತಂದಂತೆ ಕಾಣುವುದಿಲ್ಲ. ಜೀವನೋಪಯೋಗಿ ಪದಾರ್ಥಗಳ ಬೆಲೆಯು ದಿನೇ ದಿನೇ ಏರುತ್ತಿರುವುದು ರಾಷ್ಟ್ರದ ಅಭಿವೃದ್ಧಿಯ ದ್ಯೋತಕವೆಂದೆನ್ನುವವರೂ ಇದ್ದಾರೆ. ಆದರೆ, ಅದರೊಂದಿಗೆ ರಾಷ್ಟ್ರೀಯರ, ಮುಖ್ಯವಾಗಿ ಕಿನ್ನು ಮತ್ತು ಮಧ್ಯಮವರ್ಗದ ಜನರ ಆದಾಯವೂ ಅದೇ ಪ್ರಮಾಣದಲ್ಲಿ ಏರಬೇಕೆಂದೂ ವಾದಿಸಿದರೆ ತಪ್ಪಿಲ್ಲ. ಕೇವಲ ಆಹಾರಧಾನ್ಯಗಳ ಬೆಲೆ ಮಾತ್ರ ಇಳಿಯಬೇಕು ಎಂದು ಘೋಷಿಸಿದರೂ ಪ್ರಯೋಜನವಿಲ್ಲ. ಆಹಾರ ಧಾನ್ಯದ ಉತ್ಪಾದಕನೂ ಒಬ್ಬ ಪ್ರಜೆಯಾದುದರಿಂದ, ಅವನೂ ತನ್ನ ಜೀವನವನ್ನು ಸಾಗಿಸುವಂತಾಗಬೇಕು ಎಂದೂ ಹೇಳಬೇಕಾಗುತ್ತದೆ. ಆದುದರಿಂದ ಸರಕಾರವು ತನ್ನ ಆಹಾರದ ವ್ಯಾಪಾರ ಧೋರಣೆಯಲ್ಲಿ ಹಲವಾರು ವಿಷಯಗಳನ್ನು ಅವಶ್ಯ ಗಮನಿಸಬೇಕಾಗಿದೆ.

ಸರಕಾರವು ರೈತ ಜನರಿಗೆ ಯೋಗ್ಯ ನ್ಯಾಯವಾದ ಬೆಲೆಯನ್ನು ಕೊಡದೆ ಹೋದರೆ, ಅವರಾದರೂ ತಮ್ಮಲ್ಲಿದ್ದ ಆಹಾರಧಾನ್ಯಗಳನ್ನು ಸರಕಾರಕ್ಕೆ ಕೊಡಲು ಮುಂದಾಗಲಾರರು; ಮೊದಲು ಅಡಗಿಸಿ, ಮುಂದೆ ಅಧಿಕ ಬೆಲೆಗೆ ಮಾರುವ ಕಂಟಿಕೆಯನ್ನೇ ಅವರು ಮಾಡಲು ಮುಂದಾದರೆ, ಅದರಲ್ಲಿ ಆಶ್ಚರ್ಯಪಡ ಮಾತೇನಿಲ್ಲ. ಆದುದರಿಂದ ಸರಕಾರವು ಇತ್ತ ತೀವ್ರ ಗಮನ ಹರಿಸಬೇಕಾಗಿದೆ. ಪರದೇಶಗಳಿಂದ ಅಧಿಕಾಧಿಕ ಆಹಾರಧಾನ್ಯಗಳನ್ನು ತರಿಸಿಕೊಳ್ಳುವುದು ಸ್ವಯಂಪೂರ್ಣತೆಯ ದೃಷ್ಟಿಯಿಂದ ಎಂದಿಗೂ ಸಮವಲ್ಲ. ಹಾಗೆಂದು ಜನತೆ ಉಪವಾಸದಿಂದ ಸಾಯುವಂತೆ ಮಾಡುವುದು ಸರ್ವಥಾ ಮಹಾಪರಾಧವಾಗುತ್ತದೆ; ಅನ್ನ ಕೇಳುವವರಿಗೆ ಬೆತ್ತ ತೋರಿಸಿ ಓಡಿಸಬಹುದು. ಆದರದಕ್ಕೆ ಪ್ರಜಾಪ್ರಭುತ್ವ ಎನ್ನುತಾರೆಯೆ? ಕೇಂದ್ರ ಆಹಾರಮಂತ್ರಿಯಾಗಿದ್ದ ಶ್ರೀ ಅಜಿತಪ್ರಸಾದ ಜೈನರು ತಮ್ಮ ಮಂತ್ರಿತನದ ಅಂತಿಮಭಾಷಣದಲ್ಲಿ ರಾಜ್ಯಸರಕಾರಗಳು ಕೇಂದ್ರದೊಡನೆ ಈ ಸಂಬಂಧದಲ್ಲಿ ಸಾಕಷ್ಟು ಸಹಕರಿಸದೆ ಹೋದುದರಿಂದಲೇ ಪರಿಸ್ಥಿತಿ ಬಿಗಡಾಯಿಸಿತು ಎಂದರು. ಇದ್ದರೂ ಇರಬಹುದು. ಉಳಿಕೆಯ ರಾಜ್ಯಗಳು ತಮ್ಮ ಮಟ್ಟಿಗೆ ತಾವು ಎಂಬ ತತ್ತ್ವವನ್ನು ಅಂಟಿಸಿಕೊಳ್ಳದೆ ತುಸು ವಿಶಾಲಭಾವನೆ ತಾಳಿದರೆ, ರಾಜ್ಯ ಮುಖ್ಯಮಂತ್ರಿಗಳು ಚಟುವಟಿಕೆ ತೋರಿಸಿದರೆ, ಇಂತಹ ಸ್ಥಿತಿ ತುಸು ದೂರವಾಗಬಹುದು. ಆದರೆ, ಶಾಶ್ವತವಾಗಿ ನಮ್ಮ ಆಹಾರ ಪ್ರಶ್ನೆ ಕೊನೆಗೊಳ್ಳಬೇಕಾದರೆ, ನಾವೇ ಸ್ವಯಂಪೂರ್ಣತೆಯನ್ನು ಮಾಡಿಕೊಳ್ಳಬೇಕಾಗುವುದು. ಪ್ರಕೃತದ ಆಹಾರ ಮಂತ್ರಿ ಶ್ರೀ ಎಸ್. ಕೆ. ಪಾಟೀಲರು ಇದಕ್ಕೆ ಐದು ವರ್ಷಗಳ ಕಾಲಾವಧಿ ಬೇಕೆನ್ನುತ್ತಾರೆ. ಈ ಅವಧಿಯಲ್ಲಿ ಅವರು ಯಾವ ವಿಧಾನಗಳನ್ನು ಕೈಗೊಳ್ಳುವರೆಂದು ಸ್ಪಷ್ಟವಾಗಿ ಗೊತ್ತಿಲ್ಲ. ಸಹಕಾರಿ ವ್ಯವಸಾಯವೂ ಹೀಗೆ ಕೈಗೊಳ್ಳಲಾಗುವ ಯೋಜನೆಗಳಲ್ಲಿ ಒಂದಾಗಿರಬಹುದು. ಇದು ಎಷ್ಟರ ಮಟ್ಟಿಗೆ ವ್ಯಾವಹಾರಿಕವೆಂದು ಇನ್ನು ಚರ್ಚಿಸಿ ಪ್ರಯೋಜನವಿಲ್ಲ. ಆದರೂ ರೈತರು ಅಧಿಕಾಧಿಕ ಪ್ರಮಾಣದಲ್ಲಿ ಆಹಾರಧಾನ್ಯಗಳನ್ನು ಬೆಳೆಸುವತ್ತ ಗಮನ ಹರಿಸುವಂತೆ ನೋಡಿಕೊಳ್ಳುವುದೂ ಒಂದು ಅವಶ್ಯಕ ಕರ್ತವ್ಯವೆಂದು ನಾವು ಅಭಿಪ್ರಾಯ ಪಡುತ್ತೇವೆ. ಇದಕ್ಕಾಗಿ ರೈತರಲ್ಲಿ ಅತಿ ಹೆಚ್ಚು ಉತ್ಸಾಹವನ್ನು ತುಂಬಿಸಿ ಅವರು ಪರಿಶ್ರಮಪಟುಗಳಾಗುವಂತೆ ನೋಡಿಕೊಳ್ಳಲು ಅವಶ್ಯವೆನಿಸಿದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು.

ನಿರಾಭರಣ ಸುಂದರಿ

ದಕ್ಷಿಣ ಕನ್ನಡ ಜಿಲ್ಲೆಯ ಸ್ವಾಭಾವಿಕ ರೇವೆಂಬ ಹೆಸರಿಗೆ ಪಾತ್ರವಾದ ಮಲ್ಪೆಗೆ ಮಹಾಬಂದರವಾಗುವ ಯೋಗ, ಅದರೊಡನೆ ಮಧ್ಯಮ ವರ್ಗದ ಬಂದರವಾಗುವ ಯೋಗಗಳು ದೂರದೂರ ಹೋಗುತ್ತಿರುವುದಲ್ಲದೇ, ಅದರ ಸ್ವಾಭಾವಿಕ ಸೃಷ್ಟಿ ಸೌಂದರ್ಯಕ್ಕೂ ಪಾವಿತ್ರ್ಯಕ್ಕೂ ಚ್ಯುತಿ ಬರುವ ಯೋಗವೊಂದು ಅಸ್ಪಷ್ಟವಾಗಿ ದೃಷ್ಟಿಗೋಚರವಾಗುತ್ತಿದೆ. ಮಲ್ಪೆಯ ಸಮೀಪದ ಒಡಬಾಂಡೇಶ್ವರದಲ್ಲಿನ ಸಮುದ್ರ ಸ್ನಾನವನ್ನು ಮಾಡಲು ಅನುಕೂಲವಾದ ಕೃತ್ರಿಮ ಸ್ನಾನಘಟ್ಟವೇನಿಲ್ಲವಾದರೂ ಪ್ರಾಕೃತಿಕ ಸ್ನಾನಘಟ್ಟದ ಉಪಯೋಗವನ್ನು ಮಾಡಿಕೊಳ್ಳುತ್ತಿರುವರು. ಇದಕ್ಕೆ ಅನತಿದೂರದಲ್ಲಿಯೇ ಒಡಭಾಂಡೇಶ್ವರದ ಬಲರಾಮ ದೇವಾಲಯವೂ ಇದೆ. ಪ್ರಸಿದ್ಧ ಆಚಾರ್ಯತ್ರಯರಲ್ಲೊಬ್ಬರಾದ ಶ್ರೀ ಮಧ್ವಾಚಾರ್ಯರು ಸಂಚರಿಸುತ್ತಿದ್ದ ಪ್ರದೇಶವೂ ಇದೇ ಆಗಿತ್ತೆಂದು ಹೇಳಲಾಗುತ್ತದೆ. ಮಹಾತ್ಮಾ ಗಾಂಧೀಯವರ ಚಿತಾಭಸ್ಮವನ್ನು ಸಮುದ್ರರಾಜನಲ್ಲಿ ವಿಲೀನಗೊಳಿಸಿದ ಮಹಾಪುಣ್ಯಕಾರ್ಯದ ಸವಿನೆನಪಿನ ಒಂದು ಸ್ಮಾರಕವೂ ಇಲ್ಲೇ ಸಮುದ್ರ ದಂಡೆಯಲ್ಲಿದೆ. ಇಂತಹ ಇತಿಹಾಸ ಪ್ರಸಿದ್ಧವಾದ ಹಾಗೂ ಪ್ರಾಕೃತಿಕ ಸೃಷ್ಟಿ ಸೌಂದರ್ಯದ ತವರೂರಾದ ಈ ಪ್ರದೇಶದ ಒಂದು ಭಾಗವನ್ನು ಮೀನು ಒಣಗಿಸುವ ಅಂಗಣಕ್ಕಾಗಿ ಸಿಂಧೀಯರೊಬ್ಬರಿಗೆ ಕೊಡುವ ಹಂಚಿಕೆಯು ನಡೆಯುತ್ತಲಿದೆಯೆಂದು ತಿಳಿಯುತ್ತದೆ. ಮೈಸೂರಿನ ಸರಕಾರ ಬೆಂಗಳೂರಲ್ಲಿ ಕುಳಿತುಕೊಂಡು ಈ ಹಂಚಿಕೆಯನ್ನು ಒಪ್ಪಿಬಿಟ್ಟಿತು ಎಂದರೆ, ಮಲ್ಪೆಯ ಅದೃಷ್ಟ ನಿಜವಾಗಿಯೂ ಭಾಗ್ಯಹೀನವೇ ಎಂದು ಹೇಳಲೇಬೇಕು. ಮಲ್ಪೆಯು ಈಗಾಗಲೇ ಅನುಭವಿಸಿದ, ಅನುಭವಿಸುವ ನಿರಾಭರಣತೆಯ ಕೊರಗೇ ಅತಿಯಾಗಿರುವಾಗ, ಅದರ, ಪ್ರಾಕೃತಿಕ ಕೇಶಪಾಶವೂ ದೂರವಾದರೆ, ಮುತ್ತೈದೆ ಭಾಗ್ಯವನ್ನೂ ಕಳೆದುಕೊಂಡಂತೆಯಲ್ಲವೆ ಆಗ ನಮ್ಮ ಮಲ್ಪೆಯ ವಿಧವಾವಿಲಾಪವನ್ನು ನಾವು ಸಹಿಸುವುದು ಸಾಧ್ಯವೆ ?

ಅಭಿನಂದನೆ

ಹುಬ್ಬಳ್ಳಿಯಿಂದ "ಪ್ರಪಂಚ" ವಾರಪತ್ರಿಕೆಯನ್ನು ಬೃಹದಾಕಾರದಲ್ಲಿ ಸಂಪಾದಿಸಿ, ಪ್ರಕಟಿಸಿ, ಕನ್ನಡ ಪತ್ರಿಕಾ ಪ್ರಪಂಚದಲ್ಲಿ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿರುವ ಶ್ರೀ ಪಾಟೀಲ ಪುಟ್ಟಪ್ಪನವರ ಸಂಪಾದಕತ್ವದಲ್ಲಿಯೇ ಹೊಸತಾಗಿ ಹೊರಟಿರುವ ದಿನಪತ್ರಿಕೆ "ವಿಶ್ವವಾಣಿ"ಯ ಕೆಲವೊಂದು ಪ್ರತಿಗಳು ನಮ್ಮ ಹಸ್ತಗತವಾಗಿವೆ. ಮೊದಲನೆಯ ಸಂಚಿಕೆಯಲ್ಲಿ ವಿಶ್ವವಾಣಿಯು ತನ್ನ ಧ್ಯೇಯ ಧೋರಣೆಗಳನ್ನು ವಿವರಿಸಿದ್ದು ಅವು ಇಂದಿನ ಪ್ರಗತಿಪರಕಾಲಕ್ಕೆ ಉಚಿತವಾಗಿವೆ. ಸದ್ಬುದ್ಧಿಯ ಪಾವಿತ್ರ್ಯವನ್ನೇ ತನ್ನ ಶೀಲವನ್ನಾಗಿ ಇರಿಸಿಕೊಂಡ "ವಿಶ್ವವಾಣಿ"ಯು ಕರ್ನಾಟಕದಲ್ಲಿನ ಅಭಿಪ್ರಾಯ ಪ್ರಕಟಣೆಗೆ ಇನ್ನೊಂದು ಮಹಾದ್ವಾರವನ್ನು ತೆರೆದಿಟ್ಟಿದೆ. ಕನ್ನಡಿಗರೆಲ್ಲರಿಗೂ ಅವಶ್ಯಕವಾದ ನಿಷ್ಪಕ್ಷಪಾತ, ಜಾತ್ಯತೀತ ಹಾಗೂ, ರಾಷ್ಟ್ರೀಯ ವಿಚಾರಗಳ ಪ್ರಕಟಣೆಯನ್ನು ನಿರ್ದಾಕ್ಷಿಣ್ಯವಾಗಿ ಮಾಡಿ, ಸತ್ಯಪ್ರದರ್ಶನವನ್ನು ಗಳಿಸಿಕೊಂಡು ಇತರೋಪ್ಯತಿಶಯವಾಗಿ ವಿಶ್ವವಾಣಿ ಪ್ರತಿಧ್ವನಿಸುತ್ತಿರಲೆಂದು ಹಾರೈಸಿ, ಇಂತಹ ಮಹಾ ಸಾಹಸಕ್ಕೆ ಕೈಹಾಕಿರುವ ಪತ್ರಿಕೋದ್ಯಮದ ಪಂಡಿತರಾದ ಶ್ರೀ ಪಾಟೀಲ ಪುಟ್ಟಪ್ಪನವರನ್ನು ಹೃತ್ಪೂರ್ವಕವಾಗಿ ಅಭಿವಂದಿಸಿ ಈ ನೂತನ ದೈನಿಕವನ್ನು ಸ್ವಾಗತಿಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಚೀನೀರಹಸ್ಯ ಭೇದನ

ಭಾರತೀಯರೆಲ್ಲರಲ್ಲಿಯೂ ವಿಮಂಚನೆಯುಂಟುಮಾಡಿರುವ ಚೀನದ ಸೀಮೋಲ್ಲಂಘನದಿಂದಾಗಿ, ಭಾರತ ಚೀನಗಳ ನಡುವಣ ಪತ್ರವ್ಯವಹಾರ ಮಾತ್ರವಲ್ಲದೇ ನಾನಾ ಒಪ್ಪಂದಗಳೆಲ್ಲವೂ ಬಹಿರಂಗವಾದವು. ಪ್ರಧಾನಿ ನೆಹರೂ ಕಳೆದ ಐದು ವರ್ಷಗಳಲ್ಲಿ ಈ ಬಗ್ಗೆ ನಡೆದ ಪತ್ರವ್ಯವಹಾರ ಹಾಗೂ ಮಾಡಿಕೊಂಡ ಒಪ್ಪಂದವೆಲ್ಲವನ್ನೂ ಲೋಕಸಭಾ ಸದಸ್ಯರ ಮುಂದೆ ಒಂದು ಶ್ವೇತಪತ್ರದ ಮೂಲಕ ಸಾದರಪಡಿಸಿದರು. ಭಾರತವು ತನ್ನ ಸೀಮೆಯನ್ನು ರಕ್ಷಿಸಿಕೊಳ್ಳಲು ಶಕ್ತವಾಗಿದೆ ಎಂದು ಅಮೆರಿಕೆಯಲ್ಲಿನ ಭಾರತೀಯ ರಾಯಭಾರಿ ಶ್ರೀ ಛಗಲಾ ಹೇಳಿದ್ದಾರಲ್ಲದೇ, ಈ ಬಗ್ಗೆ ಭಾರತವು ತಾಳಿದ ನಿಲು

ನವಯುಗದ

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ಟ್ ತಿಂಗಳಾಂತ್ಯಕ್ಕೆ 'ನವಯುಗ'ದ **38**ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ **39**ನೇ ವರ್ಷಾರಂಭವಾಗಿದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಅಲ್ಲಲ್ಲಿಯ ಸುದ್ದಿ ಸಾರ

ವಿದಾಯ ಸತ್ಕಾರ— ಮಂಗಳೂರು ಸರಕಾರೀ ಕಾಲೇಜಿನ 1958–59ನೇ ವರ್ಷದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಸತ್ಕರಿಸಿ ವಿದಾಯವೀಯುವ ಸಮಾರಂಭವೊಂದು ಮಾಜಿ ಮಂತ್ರಿ ಶ್ರೀ ಎ. ಬಿ. ಶೆಟ್ಟರ ಹಿಂತನದಲ್ಲಿ ಕಳೆದ ತಾ. 31ರಲ್ಲಿ ನೆರವೇರಿತು. ವಿದ್ಯಾರ್ಥಿಕೂಟದ ಅಧ್ಯಕ್ಷ ಶ್ರೀ ಎಸ್. ಸೀತಾರಾಮರಾಯರು ಸ್ವಾಗತಿಸಿದ ಬಳಿಕ ಪ್ರಿನ್ಸಿಪಾಲ್ ಶ್ರೀ ಆರ್. ಆರ್. ಉಮರ್ಜಿಯವರು ಉತ್ತೀರ್ಣರಾದ ವಿದ್ಯಾರ್ಥಿಗಳ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷ ಶ್ರೀ ಶೆಟ್ಟರು ವಿದ್ಯಾರ್ಥಿಗಳು ಉತ್ತಮ ಗುಣನಡತೆಗಳುಳ್ಳವರಾಗಬೇಕೆಂದು ತಮ್ಮ ಭಾಷಣದಲ್ಲಿ ಹೇಳಿದರು. ಶ್ರೀ ಕೆ. ನರಸಿಂಹ ಭಟ್ಟರು ಧನ್ಯವಾದಗಳನ್ನಿತ್ತರು.

ಮೆಗೆ ಅಮೆರಿಕೆಯೂ ಬೆಂಬಲ ನೀಡಿದೆ. ಉತ್ತರದ ಗಡಿಯು ಭಾರತದ ಸ್ವಾತಂತ್ರ್ಯದ ಸೀಮೆಯೆಂದು ಅಮೆರಿಕೆಯು ಭಾವಿಸಿರುವುದರಿಂದ, ಭಾರತವು ಬಯಸಿದರೆ, ಅದಕ್ಕೆ ನೆರವುನೀಡುವ ರಾಷ್ಟ್ರಗಳಲ್ಲಿ ಅಮೆರಿಕೆಯು ಒಂದನೆಯದಾಗುವುದು ಎಂದೂ ತಿಳಿಯುತ್ತದೆ.

ಆರೋಪ ಪ್ರತ್ಯಾರೋಪಗಳು

ಭಾರತದ ಗಡಿ ಪ್ರದೇಶದಲ್ಲಿ ಚೀನೀಯರು ಅನ್ಯಾಯವಾಗಿ ಆಕ್ರಮಣ ಮಾಡಿರುವರೆಂಬ ಭಾರತದ ದೂರನ್ನು ಚೀನವು ಅಲ್ಲಗಳೆದು ಅದೇ ಆರೋಪವನ್ನು ಭಾರತದ ಮೇಲೆ ಹೊರಿಸಿದೆ. ಮೆಕಮೋಹನ ರೇಖೆಯು ಭಾರತ– ಚೀನಗಳ ಗಡಿಗೆ ಮೂಲಾಧಾರವೆಂದು ಡಿಲ್ಲಿ ಸಾರಿದರೆ, ಆ ರೇಖೆ ಬ್ರಿಟಿಷ ಸಾಮ್ರಾಜ್ಯಶಾಹಿಯ ರೂಪವೆಂದು ಪೇಕಿಂಗ ಉತ್ತರಿಸಿದೆ.

ರಾಜಕೀಯ ದುರುದ್ದೇಶ

ಕೇರಳದಲ್ಲಿದ್ದ ಕಮ್ಯುನಿಸ್ಟ್ ಸರಕಾರದ ವಿವಿಧ ನೀತಿಯನ್ನು ವಿರೋಧಿಸಿ ವಿರೋಧಿಪಕ್ಷಗಳು ಸಂಘಟಿತವಾಗಿ, ಆಂದೋಲನ ಹೂಡಿದುದರಿಂದ ಅಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆಯು ಸಾರಲ್ಪಟ್ಟಿತೆಂದು ಭಾವಿಸಿದ ಕಮ್ಯುನಿಸ್ಟರು ಮೊದಲೇ ನಿರೀಕ್ಷಿಸಿದ್ದಂತೆ ಪಶ್ಚಿಮ ಬಂಗಾಳದಲ್ಲಿ ತಮ್ಮ ಪ್ರಭಾವ ತೋರಿಸಲು ತೊಡಗಿದ್ದಾರೆ. ಆಹಾರಧಾನ್ಯಗಳ ಬೆಲೆಯಲ್ಲಿ ಏರಿಕೆ ಹಾಗೂ ಆಹಾರಧಾನ್ಯಗಳ ಅಭಾವವನ್ನು ಮುಂದಿಟ್ಟುಕೊಂಡು ಆಂದೋಲನ ಹೂಡಿದ ಬರಗಾಲ ನಿರೋಧ ಸಮಿತಿಯು ಈಗ, ಆಹಾರಧಾನ್ಯಗಳನ್ನು ಸಾಕಷ್ಟು ಅಗ್ಗದ ದರದಲ್ಲಿ ಪೂರೈಸುತಿದ್ದರೂ ಆಂದೋಲನವನ್ನು ಮತ್ತೂ ಮುಂದುವರಿಸುತ್ತಿದೆ. ರಾಜ್ಯಪಾಲರಿಗೂ ಈ ತರದ ಆಂದೋಲನದ ಮೂಲಧ್ಯೇಯ ಸಾಮಾಜಿಕವಾಗಿರದೆ ರಾಜಕೀಯ ದುರುದ್ದೇಶವೆಂದು ಮನಗಂಡಿರುವುದಾಗಿ ತಿಳಿದು ಬಂದಿದೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No 39/1959

ಕುಸುಮಾಕ್ಷಿ ಹೆಗ್ಗಡ್ತಿ, ಮುತ್ತಕ್ಕ ಹೆಗ್ಗಡ್ತಿರ ಮಗಳು, ಉಡ್ಪಿತಾಲ್ಲೂಕು ಪಾದೂರು ಗ್ರಾಮ —ಅರ್ಜಿದಾರಳು.

ಈ ಮೂಲಕ ಸಕಲ ಜನರಿಗೂ ತಿಳಿಯಪಡಿಸುವುದೇನಂದರೆ: —

ಉಡ್ಪಿ ತಾಲೂಕು ಪಾದೂರು ಗ್ರಾಮದಲ್ಲಿ ತಾ. 9—7—56ರಲ್ಲು ಮೃತಪಟ್ಟ ಪಾದೂರು ರಾಮಣ್ಣ ಹೆಗ್ಗೇರಿಗೆ ಮೇಲ್ಕಂಡ ಅರ್ಜಿಯಲ್ಲಿ ಕಾಣ್ಸಿದಂತೆ ಬರಬೇಕಾದ ಡಿಕ್ರಿಯ ಆವಜನ್ನು ವಸೂಲುಪಡಿಯುವರ್ಕೆ, ಸದ್ರಿ ರಾಮಣ್ಣ ಹೆಗ್ಗೇರು ತಾ. 11—5—1954ಲ್ಲು ರಿ. ನಿಶಿ ಬರದಿಟ್ಟ ಮೀಲುಪ್ರಕಾರ ಅರ್ಜಿದಾರಳೇ ಹಕ್ಕುದಾರಳೆಂತಲೂ, ಆ ಬಗ್ಗೆ ಅವಳ ಹೆಸರಿಗೆ ಸಕ್ಸೆಶ್ಶನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಅರ್ಜಿದಾರಳು ದಾಖ್ಲು ಮಾಡಿರುವ ಮೇಲ್ಕಂಡ ಅರ್ಜಿಯು ತಾ. 21.9.1959ಕ್ಕೆ ಯಿಟ್ಟಿರುತ್ತದೆ. ಆ ವಿಷಯದಲ್ಲಿ ಆಕ್ಷೇಪವುಳ್ಳಂಥವರು ಆ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಬೆಳಗ್ಗೆ 11 ಘಂಟೆಗೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

P. V. Acharya,
Vakil for Petitioner,
ಉಡ್ಪಿ, ತಾ. 5—9—59.

ಯಕ್ಷಗಾನ ಸಮಾರಂಭ

ಯಕ್ಷಗಾನ ಸಮಾರಂಭ–ಉಡುಪಿ ಯಕ್ಷಗಾನ ಕಲಾ ಮಂಡಲ (ರಿ) ಇದರ ಪ್ರಧಾನ ಕಾರ್ಯಾಲಯದಲ್ಲಿ ಗಣೇಶ ಚತುರ್ಥಿಯ ಅಂಗವಾಗಿ. ದಮಯಂತೋಪಾಖ್ಯಾನವೆಂಬ ಯಕ್ಷಗಾನ ಕೂಟವು ಪಂಪುಬೆಟ್ಟು ಸೀನ ಶೆಟ್ಟರ ಅಧ್ಯಕ್ಷತೆಯಲ್ಲಿ, ಶ್ರೀ ಕೆ ನಾರಾಯಣ ಶೆಟ್ಟಿಯವರ ಹಾಡುಗಾರಿಕೆ. ಶ್ರೀ ಜನಾರ್ಧನ ಆಚಾರಿಯ, ಮೃದಲಗವಾದನ, ಪಿ. ಸೀನ ಶೆಟ್ಟಿ, ವೆಂಕಟಾಚಾಲಯ್ಯ, ಜಿ. ಗೋಪಾಲ ಶೆಟ್ಟಿ, ಪಾ ಲಾ. ನಾ. ಉಪಾಧ್ಯಾಯರ ರಾಮ ಶೆಟ್ಟಿ, ಜೆ. ಎಲ್. ಪ್ರಭು, ಕೆ. ಗೋಪು ಶೆಟ್ಟಿ. ಮೊದಲಾದ ಉತ್ತಮ ಕಲಾವಿದರ ಕೂಡುವಿಕೆಯಿಂದ ಯಶಸ್ವಿಯಾಗಿ ಜರಗಿತು.

ಗ್ರಾಮ ಸಹಾಯಕ ಶಿಕ್ಷಣ ಶಿಬಿರ

ಮುಲ್ಕಿ ಗ್ರಾಮಸೇವಕ ವಲಯದ ಮೂರು ದಿವಸಗಳ ಗ್ರಾಮ ಮುಂದಾಳುಗಳ ಶಿಕ್ಷಣ ಶಿಬಿರವು ತಾ. 29–8–59ರಂದು ಮುಲ್ಕಿ ಕಾರ್ನಾಡು U. B. M. C. ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಪ್ರಾರಂಭಿಸಲ್ಪಟ್ಟಿತು. ಡಾ. ಯಸ್. ಚಂಪಾ M. L. C. ಇವರು ಶಿಬಿರದ ಉದ್ಘಾಟನೆಗೈದರು. ಡಾ. ರಾಮಣ್ಣ ಶೆಟ್ಟರು ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮುಲ್ಕಿ ಪಂಚಾಯತ ಅಧ್ಯಕ್ಷ ಶ್ರೀ ಭೋಜರಾಯರು ಸ್ವಾಗತ ಭಾಷಣಕಿತ್ತರು. ಮುಲ್ಕಿ ಬ್ಲೋಕಿನ ಸಮಾಜ ಶಿಕ್ಷಣಾಧಿಕಾರಿ ಶ್ರೀ ಧರ್ಮರಾಜರು ಶಿಬಿರದ ಉದ್ದೇಶಗಳನ್ನೂ, ಕಾರ್ಯಕ್ರಮಗಳನ್ನೂ ವಿವರವಾಗಿ ತಿಳಿಸಿದರು. ಗ್ರಾಮಸೇವಕ ಶ್ರೀ ಜಯರಾಮ ಶೆಟ್ಟರು ಧನ್ಯವಾದವಿತ್ತರು.

ಅನಂತರ ವ್ಯವಸಾಯ ವಿಸ್ತರಣಾಧಿಕಾರಿ ಶ್ರೀ ಮರಿಯಯ್ಯನವರು ಸುಧಾರಿತ ಕೃಷಿಯ ಕುರಿತು ವಿವರಿಸಿದರು.

ಶಿಬಿರದ ಎರಡನೇ ದಿವಸ ಬೆಳಿಗ್ಗೆ ಶ್ರೀ ಹರಿ ಪೂಂಜರು ರಾಷ್ಟ್ರಧ್ವಜವನ್ನು ಆರಳಿಸಿದರು. ಅನಂತರ ಪಿಸ್ತಿಗೋಳಿಯ ಗೋ ಡಾಕ್ಟರ್ ಶ್ರೀ ನರಸಿಂಹ ಶೆಟ್ಟರು ಪಶುಪಾಲನೆಯ ವಿಚಾರದಲ್ಲೂ, ಶ್ರೀ ಧರ್ಮರಾಜರು ಸಮಾಜ ಶಿಕ್ಷಣದ ವಿಚಾರದಲ್ಲೂ, ಶ್ರೀ ಬೇರಣ್ಣರೈಗಳು ಕಂಪೋಸ್ಟು ಗೊಬ್ಬರದ ತಯಾರಿಯ ವಿಚಾರದಲ್ಲೂ, ಸಹಕಾರ ವಿಸ್ತರಣಾಧಿಕಾರಿ ಶ್ರೀ ಕಿಣಿಯವರು ಸಹಕಾರ ಸಂಘಗಳ ವಿಚಾರದಲ್ಲೂ ರೈತರಿಗೆ ತಿಳಿಸಿ ಹೇಳಿದರು.

ಈ ಕ್ಷೇತ್ರದ ವಿಧಾನ ಸಭಾ ಸದಸ್ಯ ಶ್ರೀ ಕೆ. ದೂಮಪ್ಪನವರು ಶಿಬಿರವನ್ನು ಸಂದರ್ಶಿಸಿ ಭೂಸುಧಾರಣೆಯ ರೂಪರೇಷಗಳನ್ನು ವಿವರಿಸಿದರು.

ದ. ಕ. ಜಿಲ್ಲಾ ಅಸಿಸ್ಟಾಂಟ್ ರಿಜಿಸ್ಟ್ರಾರ್ ಶ್ರೀ ವೀರ ಶೇಖರ್ ಮತ್ತು ಸೆಂಟ್ರಲ್ ಬ್ಯಾಂಕಿನ ಕಾರ್ಯದರ್ಶಿ ಶ್ರೀ ಎಸ್. ಆದಾನ್ನರವರೂ ಶಿಬಿರದಲ್ಲಿ ಸಹಕಾರದ ಕುರಿತು ಹೆಚ್ಚಿನ ಸಲಹೆಯಿತ್ತರು.

ತಾ. 31–8 59ರಲ್ಲು ಶಿಬಿರದ ಸಮಾರೋಪ ಸಮಾರಂಭವು ಶ್ರೀ ನಯಂಪಳ್ಳಿ ರಾಮರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಪಾವ್ಲ್ ನೋರಾನ್ಹರು ಧ್ವಜಾರೋಹಣಗೈದರು. ಸಮಾಜ ಶಿಕ್ಷಣಾಧಿಕಾರಿ ಧರ್ಮರಾಜರು ಶಿಬಿರದ ವರದಿ ವಾಚನ ಮಾಡಿದರು. ಶಿಬಿರದ ಅನುಭವದ ಕುರಿತು ಶ್ರೀ ಚಿನ್ನಯ ಶೆಟ್ಟರೂ, ವಲೇರಿಯನ್ ನೊರೋನ್ಹರು ಶಿಬಿರದ ಅನುಭವಗಳನ್ನು ವಿವರಿಸಿದರು. ಕ್ಷೇತ್ರಾಧಿಕಾರಿ ಜನಾಬ ರಹ್ಮಾನರು ಶಿಬಿರಾರ್ಥಿಗಳ ಕರ್ತವ್ಯಗಳನ್ನು ವಿವರಿಸಿದರು. ಶ್ರೀ ಮಹಾಬಲ ಶೆಟ್ಟರು ಧನ್ಯವಾದವಿತ್ತರು.

ಜೀವವಿಮಾ ಕಾರ್ಪೋರೇಶನಿನ ವಾರ್ಷಿಕೋತ್ಸವ

ಜೀವವಿಮಾ ಕಾರ್ಪೋರೇಶನಿನ ವಾರ್ಷಿಕೋತ್ಸವ—ಜೀವವಿಮಾ ಕಾರ್ಪೋರೇಶನಿನ ತೃತೀಯ ವಾರ್ಷಿಕ ದಿನವನ್ನು ಆಚರಿಸಲು ಡಿವಿಜನಲ್ ಮೆನೇಜರ ಹಾಗೂ ಇನ್ನಿತರ ಉಡುಪಿಗೆ ಸಂಬಂಧಿಸಿದ ಕಾರ್ಪೋರೇಶನಿನ ಕಾರ್ಯಾಲಯಗಳ ಅಧಿಕಾರಿ ವರ್ಗದವರೊಂದು ಸಮಾರಂಭವನ್ನು ದಿನಾಂಕ ೧ ರಂದು ಏರ್ಪಡಿಸಿದ್ದರು. ಕಾರ್ಪೋರೇಶನಿನ ಅಜ್ಜರಕಾಡಿನ ಭವನದಲ್ಲಿ ಕೂಡಿದ ಈ ಸಮಾರಂಭದಲ್ಲಿ ಎಲ್ಲಾ ವರ್ಗದ ನೌಕರರೂ ಭಾಗವಹಿಸಿದ್ದರು.

ಲಘೂಪಹಾರವಾದನಂತರ ಡಿವಿಜನಲ್ ಮೆನೇಜರ ಶ್ರೀ ಕೆ. ಆರ್. ಕೆ. ಭಟ್ ಅವರು ಅತಿಥಿಗಳನ್ನು ಸ್ವಾಗತಿಸಿ, ಉಡುಪಿ ವಿಭಾಗದ ಪ್ರಗತಿಯತ್ತ ಹೊರಳಿ, ನೌಕರರ ವಿಶ್ವಾಸ ಮತ್ತು ಸಹಕಾರವನ್ನು ಪ್ರಶಂಸಿಸಿದರು. ಇನ್ನೂ ಸುಧಾರಣೆಯಾಗ ಬೇಕಾದ ಆವಶ್ಯಕತೆಯನ್ನು ಪ್ರತಿಬಿಂಬಿಸಿ, ಪ್ರತಿಪಾಲಿಸಿದಾರೆನಿಗೂ ತೃಪ್ತಿಯೊದಗಿಸುವುದೇ ನಮ್ಮ ಧ್ಯೇಯ ಎಂದರು. ನಮ್ರತೆ ಮತ್ತು ಸಕಾಲಿಕತೆಗಳ ಮಹತ್ವವನ್ನವರು ಎತ್ತಿಹೇಳಿ, ಪ್ರತಿ ಕಾಗದದ ಹಿಂದೊಂದು ಮಾನವ ಹೃದಯವು ಮಿಡಿಯುತ್ತಿದೆ ಎಂಬುದನ್ನು ಗಮನಿಸಬೇಕು ಎಂದರು.

ಅಸಿಸ್ಟಂಟ್ ಡಿವಿಜನಲ್ ಮೆನೇಜರ ಶ್ರೀ ಇ. ಯು. ಚಾಕೋಬರು ನೂತನವಾದುತ್ತ ನೌಕರರ ಪರಿಶ್ರಮಯುತ ಸೇವೆಯನ್ನು ಕೊಂಡಾಡಿದರು. ಇತರ ಅಧಿಕಾರಿಗಳೂ ನೌಕರರ ಸಹಕಾರವನ್ನು ಪ್ರಶಂಸಿಸಿದರು.

ನೌಕರರ ಪರವಾಗಿ ಶ್ರೀ ಪಿ. ವಿ. ವೆಂಕಣ್ಣನ್ ಮತ್ತು ಶ್ರೀ ಪಿ. ವಿ. ಪ್ರಭುಗಳು ಆಭಾರ ಮನ್ನಿಸಿ ತಮ್ಮ ವಿಧೇಯತೆ ಮತ್ತು ಸಹಕಾರಗಳ ಭರವಸೆಯಿತ್ತರು ಕ್ಷೇತ್ರಾಧಿಕಾರಿಗಳ ಕಡೆಯಿಂದ ಶ್ರೀ ಟಿ. ಸಂಜೀವ ಪೈ ಅವರು ಆಡಳಿತೆಯ ನೌಕರರನ್ನು ಅವರಿತ್ತ ಸಹಕಾರಕ್ಕಾಗಿ ಅಭಿನಂದಿಸಿದರು.

ನಿಕೋಪಾಧ್ಯಾಯ ಶಾಲೆ-ಆಗೋಸ್ತು

ನಿಕೋಪಾಧ್ಯಾಯ ಶಾಲೆ-ಆಗೋಸ್ತು ತಿಂಗಳ ೨೧ನೆ ದಿನಾಂಕದಂದು ಉಡುಪಿ ತಾಲೂಕಿನ ಬಂಡಾರು ಗ್ರಾಮದ ಮೂರ್ಸಿ ಎಂಬಲ್ಲಿ ಸರಕಾರಿ ಪ್ರಾಥಮಿಕ ಶಾಲೆಯೊಂದು ಶ್ರೀ ರಾಮಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕಕ್ಕುಂಜೆ ಗ್ರಾಮದ ಪಟೇಲರಾದ ಶ್ರೀ ರಾಮಕೃಷ್ಣ ಅಡಿಗರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಎಂ. ಎ. ಹೆಬ್ಬಾರರೂ ಇನ್ನಿತರರೂ ಆ ಶಾಲೆಯ ಅವಶ್ಯಕತೆಯ ಮತ್ತು ಹೆತ್ತವರ ಕರ್ತವ್ಯದ ಕುರಿತಾಗಿ ಮಾತಾಡಿದರು. ಶಾಲೆಯಲ್ಲಿ ದಾಖಲಾದ ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಿದ ಮೇಲೆ, ಅಧ್ಯಾಪಕರಾಗಿ ಬಂದಿರುವ ಶ್ರೀ ವೈ. ಲಕ್ಷ್ಮಣ ಬೆಲ್ಚಾಡ ಅವರು ಧನ್ಯವಾದಗಳನ್ನಿತ್ತರು.

ಶಾಲಾ ಪಾರ್ಲಿಮೆಂಟು ಮತ್ತು ಹಸ್ತಲಿಖಿತ ಪತ್ರಿಕೆಗಳ ಉದ್ಘಾಟನೆ

ಕಡಿಯಾಳಿ ಹಿರಿಯ ಬುನಾದಿ ಶಾಲೆಯ ಪಾರ್ಲಿಮೆಂಟು ಮತ್ತು ಹಸ್ತ ಲಿಖಿತ ಪತ್ರಿಕೆಗಳ ಉದ್ಘಾಟನಾ ಸಮಾರಂಭವು ತಾ. 4–9–59 ರಂದು ಶ್ರೀ ಎ. ಜನಾರ್ಧನ ಅಲ್ಸೆ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತ ಭಾಷಣ ಮಾಡಿದರು. ಮನರಂಜನೆಯ ಕಾರ್ಯಕ್ರಮದ ಅಂಗವಾಗಿ ವಿನೋದಾವಳಿಗಳು ಪ್ರದರ್ಶಿಸಲ್ಪಟ್ಟವು.

ಶಾಲೆಯ ಹಸ್ತಲಿಖಿತ ಪತ್ರಿಕೆ "ಕುಸುಮ"ವನ್ನು ಶ್ರೀ ಬನ್ನಂಜೆ ರಾಮಾಚಾರ್ಯರು ಉದ್ಘಾಟಿಸಿದರು

ಶಾಲಾ ಸರಕಾರದ ಅಧ್ಯಕ್ಷ ಶ್ರೀ ಡೇನಿಸ್ ಡಿ' ಸೋಜಾರವರು ಶಾಲಾ ಪಾರ್ಲಿಮೆಂಟು ಉದ್ಘಾಟನೆ ಮಾಡುತ್ತಾ ಪಾರ್ಲಿಮೆಂಟಿ ಸದಸ್ಯರನ್ನುದ್ದೇಶಿಸಿ ಭಾಷಣ ವಿತ್ತರು. ಆ ಬಳಿಕ ಮಂತ್ರಿಗಳಿಂದ ಪ್ರತಿಜ್ಞಾ ಸ್ವೀಕಾರ ವಿಧಿಯು ನೆರವೇರಿತು ಸ್ಪೀಕರ ಸುಮತಿ ಶೇಳಾಯರು ಭಾಷಣ ಮಾಡಿದ ಬಳಿಕ ಮುಖ್ಯ ಮಂತ್ರಿ ಆನಂದ ಶೆಟ್ಟಿಯವರು- ಮಾತನಾಡುತ್ತಾ ಮಂತ್ರಿ ಮಂಡಳದ ಕಾರ್ಯಗಳಲ್ಲಿ ಸದಸ್ಯರು ಸಹಕರಿಸಬೇಕೆಂದು ಕೇಳಿಕೊಂಡರು

ಅತಿಥಿ ಶ್ರೀ ಆರ್. ಆರ್. ಕುಂಜೂರ್ ಇವರು ಮಾತನಾಡುತ್ತಾ ಶಿಕ್ಷಣದ ಪರಿಪೂರ್ಣತೆಯಾಗ ಬೇಕಾದರೆ ಇಂತಹ ಪಾಠೇತರ ಚಟುವಟಿಕೆಗಳನ್ನು ಜರಗಿಸುವುದು ಅಗತ್ಯ ಎಂದರು. ಆ ಬಳಿಕ ಅಧ್ಯಕ್ಷತೆ ವಹಿಸಿದ್ದ ಶ್ರೀ ಎ. ಜೆ. ಅಲ್ಸೆಯವರು ಮಾತನಾಡುತ್ತಾ ಶಾಲೆ ಪಾರ್ಲಿಮೆಂಟ್ ಚಟುವಟಿಕೆಗಳಿಂದ ಅನಾಹುತಗಳಾಗುತ್ತವೆ ಎಂಬ ವಾದವನ್ನು ಅಲ್ಲಗಳೆದು ವಿದ್ಯಾರ್ಥಿಗಳಿಗೆ ಹಲವಾರು ಹಿತನುಡಿಗಳನ್ನು ಹೇಳಿದರು. ಸಾಂಸ್ಕೃತಿಕ ಮಂತ್ರಿ ಕುಮಾರಿ ಟಿ. ಮಾಲತಿ ಡೇನಿಯವರು ಧನ್ಯವಾದವನ್ನರ್ಪಿಸಿದರು.

ಧಾರ್ಮಿಕ ಸಮ್ಮೇಲನ–ಇದೇ ತಿಂಗಳ 17 ಮತ್ತು 18ನೇ ದಿನಗಳಲ್ಲಿ ಉಡುಪಿಯಲ್ಲಿ ಸೇರಲಿರುವ ದ. ಕನ್ನಡ ಸಕಲ ಧಾರ್ಮಿಕ ಸಂಸ್ಥೆಗಳ ಸಮ್ಮೇಲನದ ಅಧ್ಯಕ್ಷತೆಯನ್ನು ಹಿಂದುಸ್ಥಾನದ ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀ ಪತಂಜಲಿ ಶಾಸ್ತ್ರಿ, ಅವರು ವಹಿಸಿ ಸಮ್ಮೇಲನದ ಕಾರ್ಯಕ್ರಮಗಳನ್ನು ನಡೆಸಿಕೊಡಲು ಒಪ್ಪಿರುವರು. ಶ್ರೀನಿವಾಸ ಶಾಸ್ತ್ರಿಯವರು ತಾ. 17ನೇ ಪ್ರಾತಃಕಾಲ ಉಡುಪಿಗೆ ಬರುವರು. ಇವರೊಂದಿಗೆ ಶ್ರೀಮತಿ ಶಾಸ್ತ್ರಿಯವರೂ, ನಿವೃತ್ತ ಎಂಡೋಮೆಂಟ್ ಕಮಿಷನರಾದ ಶ್ರೀ ವೆಂಕಟ್ರಮಣ ಅಯ್ಯರ್ ಮತ್ತು ಕಡಂದಲೆ ಕೃಷ್ಣಭಟ್ಟರೂ ಬರಲಿರುವರು.

ಶ್ರೀ ಟಿ. ರಮೇಶಪೈಗಳ ಅಮೇರಿಕಾ ಸಂಚಾರ—ಇದೇ ಬರುವ ಅಕ್ಟೋಬರ ಪ್ರಥಮವಾರದಲ್ಲಿ ನ್ಯೂಯೋರ್ಕಿನಲ್ಲಿ ಜರಗಲಿರುವ ಅಂತಾರಾಷ್ಟ್ರೀಯ ಉತ್ಪಾದಕರ ಸಮ್ಮೇಳನಕ್ಕೆ ಅಖಿಲ ಭಾರತ ಉತ್ಪಾದಕರ ಸಂಘದ ಪ್ರತಿನಿಧಿಗಳಾಗಿ ಡಾ। ಟಿ. ಎಂ. ಎ. ಪೈಗಳೂ ಶ್ರೀ ಟಿ. ರಮೇಶ ಪೈಗಳೂ ಭಾಗವಹಿಸಲಿರುವರಾಗಿ ಕೇಳುತ್ತೇವೆ.

ನಸಿಹಿತ್ಲು—ಇಲ್ಲಿಯ ಬೋರ್ಡ ಪ್ರಾಥಮಿಕ ಶಾಲೆಯಲ್ಲಿ ಆರನೆಯ ತರಗತಿಯನ್ನು ತೆರೆಯುವ ಸಮಾರಂಭವು ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ದೂಮಪ್ಪ, ಎಂ. ಎಲ್. ಎ. ಅವರು ಹೊಸತರಗತಿಯನ್ನು ಉದ್ಘಾಟಿಸಿದರು.

ವಿಶೇಷ ಮಹಾಸಭೆ—ದ.ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ವಿಶೇಷ ಮಹಾಸಭೆಯೊಂದು ಇದೇ ತಾ. 13ನೇ ಆದಿತ್ಯವಾರ ಅಪರಾಹ್ನ 3 ಗಂಟೆಗೆ ಮಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಚೇರಿಯಲ್ಲಿ ಜರಗಲಿರುವುದು.

ಶ್ರೀ. ಟಿ. ಎ. ಪೈಗಳು ಜಪಾನಿಗೆ ತೆರಳುವರು—ಸಣ್ಣ ಕೈಗಾರಿಕೋದ್ಯಮಗಳನ್ನು ಪರಿಶೀಲಿಸುವ ಸಲುವಾಗಿ ಶ್ರೀ ಟಿ. ಎ. ಪೈಗಳು ಸದ್ಯವೇ ಜಪಾನಿಗೆ ತೆರಳಲಿರುವರಾಗಿ ತಿಳಿದು ಬರುತ್ತದೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 384/57 R. I. A. 544/59

ಉಪ್ಪೂರು ಶ್ರೀ ವಿನಾಯಕ ದೇವಸ್ಥಾನದ ಟ್ರಸ್ಟಿ–ಯು. ಕೆ. ಶೇಷಪ್ಪಯ್ಯ–ಅರ್ಜಿದಾರ,

ಮತ್ತು

ತುಂಗಂಮ ಸೆಡ್ತಿ, ಕೂಡಾ —ಯೆದ್ರಿರು,

ಇವರೊಳಗೆ—

5ನೆ ಯೆದ್ರಿ ತೇಜಪ್ಪ ಸೆಟ್ಟಿ— ಪುಟ್ಟಂಮ ಸೆಡ್ತಿ ಮಗ.

7. ಮಂಜಯ್ಯ ಸೆಟ್ಟಿ–ಸರ್ವೇಶ್ರಿ ಸೆಡ್ತಿ ಮಗ, ಉಡ್ಪಿ ತಾಲ್ಲೂ ಉಪ್ಪೂರು ಗ್ರಾಮ.

11ನೆ ಯೆದ್ರಿ ಶಿವರಾಮ ಸೆಟ್ಟಿ–ಸಂಜೀವಿ ಸೆಡ್ತಿ ಮಗ, ಉಡ್ಪಿತಾಲ್ಲೂ ಕೊರಂಗ್ರಪಾಡಿ ಗ್ರಾಮ, ಯಿವರಿಗೆ ಯಿಮೂಲ್ಕ ತಿಳಿಸುವದೇನಂದ್ರೆ—

ಮೇಲ್ಕಂಡ ದಾವೆಯಲ್ಲಿ ಕೊಡೋಣಾದ ಪ್ರಿಲಿಮ್ನರಿ ಡಿಕ್ರಿ ವಿಧಯಂತೆ ಫ್ಯನಲ ಡಿಕ್ರಿ ಕೊಡ್ಬೆಬೇಕಾಗಿ ಅರ್ಜಿದಾರ್ರು ದಾಕ್ಲು ಮಾಡಿದ ಸದ್ರಿ ಅರ್ಜಿ ತಾ. 24—9—1959ಕ್ಕೆ ತನ್ಖಿಗೆ ಯಿಡೋಣಾಗಿಯದೆಂತಲ್ಲೂ ಆ ಕುರಿತು ಆಕ್ಷೇಪ ಯೇಳತಕ್ಕದ್ದು ಯಿದ್ರೆ ಸದ್ರಿ ಯೆದ್ರಿರು ಆ ದಿವ್ಸ ಮೇಲ್ಕಂಡ ಕೊರ್ಟಮುಂದೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಯೆಂತ ಸಹಾ ಸದ್ರಿ 5, 7, 11ನೆ ಯೆದ್ರಿರಿಗೆ ತಿಳಿಸೋಣಾಗಿಯದೆ.

V. R. Kidiyoor,
Advocate for Petitioner.
Udipi. 5—9—59.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶ್ರಮದಾನದಿಂದ ತಟಾಕ ನಿರ್ಮಾಣ

ಉತ್ತರ ಪ್ರದೇಶದ ಮಥುರೆಗೆ ಸಮೀಪವಿರುವ ಗೋವರ್ಧನ ಬಡಾವಣೆಯ ಕ್ಷೇತ್ರದಲ್ಲಿ ಗ್ರಾಮಸರೋವರವೊಂದನ್ನು ತೋಡಲಾಗುತ್ತದೆ. ಉರಿಯುವ ಸೂರ್ಯನ ತಾಪವೂ ಈ ಕಾರ್ಯದಲ್ಲಿ ತೊಡಗಿರುವ ಜನರನ್ನು ಕರ್ತವ್ಯ ಪರಾಙ್ಮುಖರಾಗಿ ಮಾಡುವುದಿಲ್ಲ. ಪುರುಷರಿಗೆ ಸಹಾಯ ನೀಡಲು ಸ್ತ್ರೀ ಮತ್ತು ಬಾಲಕರು ಬರುತ್ತಾರೆ. ಸುತ್ತಲಿನ ನೆಲವೆಲ್ಲವನ್ನೂ ಅಗೆದು ಸಮತಟ್ಟು ಮಾಡಲಾಗುತ್ತದೆ. ತೋಡಿದ ಕೆರೆಯಲ್ಲಿ ನೀರು ತುಂಬುವುದಕ್ಕೋಸ್ಕರ ಮಳೆರಾಯನ ಪ್ರಾರ್ಥನೆಯನ್ನೂ ಮಾಡುತ್ತಾರೆ.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು!

ಸುಬ್ಬ ಬೆಳಗ್ಗೆ ಸ್ನಾನ ಮುಗಿಸಿ, ಸಂಧ್ಯಾವಂದನೆಗೆ ಬೇಕುಬೇಕೆನಿಸಿದ ಉಪಕರಣಗಳನ್ನು ಸಿದ್ಧಪಡಿಸಿ ಬಂದು ಕೂತನು. ಕೆಲಸದಾಳು ಬಾಳೂಗೆ, ದೇವರ ಕೋಣೆಯೊಳಕ್ಕೆ ಯಾರಾದರೂ ಬರುವರಿದ್ದರೆ ತಿಳಿಸಬೇಕೆಂದು ಆಜ್ಞೆಯನ್ನು ಇತ್ತ. "ಅಯ್ಯು ಬುದ್ಧಿ, ತಾವ್ ಹೇಳಿದಾಂಗೆ"—ಬಾಳೂನ ಬಾಳಿನ ಮರ್ಮವೇ ಉತ್ತರ. ಸ್ವಲ್ಪ ಸಮಯದನಂತರ ಸುಬ್ಬನ ತಂದೆ ದೇವರ ಕೋಣೆಗಾಗಿ ಬಂದರು. ಆದರೆ ಬಾಳೂ, ಸುಬ್ಬ ತನಗಿತ್ತ ಕೆಲಸವನ್ನು ತಿಳಿಸಿದ. ರಾಯರು ಮೆಲ್ಲಗೆ ಕಿಟಕಿಯಿಂದ ಇಣಿಕಿ ಒಳನೋಡಿದರು. ನೋಡಿ ಅಲ್ಲಿ ನಿಲ್ಲದೆ ಸ್ವಲ್ಪ ದೂರ ಸರಿದು ಬಿದ್ದುಬಿದ್ದು ನಕ್ಕರು. ಬಾಳೂಗೂ ಆಸೆ ಹುಟ್ಟಿತು. ತಾನೂ ಇಣಿಕಿ ನೋಡಿದ. ಸುಬ್ಬನ ಸಂಧ್ಯಾವಂದನಾ ಕಾರ್ಯಕ್ರಮ ಬಹಳ ಚಲೋದಾಗಿ ನಡೆಯುತ್ತಿತ್ತು. ಚಲೋದೆಂದರೆ ಹಾಗೇನಿಲ್ಲವೆನ್ನಿ. ಸುಬ್ಬನಿಗೆ ಉಪನಯನವಾಗಿ ವರ್ಷ ಮೂರಾಗಿ ತಿಂಗಳು ಹತ್ತು ಕಳೆದರೂ ಇಂದೂ ಸುಬ್ಬ ನಾಮಹಾಕುವಾಗ ಯಾವಾಗಲೂ ಕನ್ನಡಿ ನೋಡಿಕೊಳ್ಳುತ್ತಿದ್ದ. ಸ್ವಲ್ಪ ಘಳಿಗೆ ಕಳೆದುಹೋಯಿತೋ ಇಲ್ಲವೋ ಒಳಗಿಂದ 'ಅಪೋಜ್ಯೋತಿ ರಸೋಮೃತಂ ಬ್ರಹ್ಮ ಭೂ........' ಹೊರಡಲು ರಾಯರು ಒಳಬಂದರು. ಬಂದವರೇ "ಏನೋ ಸುಬ್ಬ ನಾಮ ಹಾಕಿಕೊಂಡಿಯೇನು" ಎಂದರು.

ಸುಬ್ಬ ಅರ್ಧದಲ್ಲೇ, "ಅಪ್ಪ, ನಮಗೆ ಸ್ವತಃ ನಾಮ ಹಾಕೋಕ್ಕೆ ಚೆನ್ನಾಗಿ ಬಾರದು......."

ರಾಯರು ಮಧ್ಯದಲ್ಲೇ, "ಅಂದ್ರೆ?"

ಸುಬ್ಬ ಮುಂದುವರಿಸುತ್ತ, "ಅಂದ್ರೆ ಏನಿಲ್ಲ. ಇತರರಿಗಾದರೆ ನಾಮ ಹಾಕೋಕೆ ಶರಾಗವಾಗಿ......ಹ್ಞಾ......ಗೊತ್ತಾಯಿತಲ್ಲ?" ಕಿಟಕಿಯ ಹೊರಗಿಂದ ಬಾಳೂ "ಭಲಾ ಭಲಾ......" ಎಂದ ಕಸಬರಿಕೆ ಸಹಿತ ಕೈಯನ್ನು ಸೊಂಟದ ಮೇಲಿರಿಕೊಂಡು, ಕತ್ತು ಮೇಲೆತ್ತಿಕೊಂಡು...!

○ ○

ಸುಬ್ಬನಿಗೆ ಮರುದಿನ ಪರೀಕ್ಷೆಯಾದುದರಿಂದ ರಾತ್ರೆ ೧೨ ಘಂಟೆಯ ವರೆಗೆ ಓದುತ್ತ ಕುಳಿತು ಕೊನೆಗೆ ನಿದ್ದೆತೆಗೆದ. ಸುಮಾರು ೨ ಗಂಟೆಯ ಹೊತ್ತು. ಸುಬ್ಬ ಕನವರಿಸತೊಡಗಿದ. ಆಗಲೇ ಜಗತ್ತಿನಲ್ಲೆಲ್ಲ ಕವಿದಿದ್ದ ಕತ್ತಲೆ,ಮೌನ ಮುರಿದು "ಸುಬ್ಬ ಓ...ಸುಬ್ಬ....' ಸುಬ್ಬನನ್ನು ಯಾರೋ ಕೂಗಿದರು.

"ಯಾರದ..?' ಸುಬ್ಬ ತನ್ನನ್ನು ಕರೆದವನನ್ನು ಪ್ರಶ್ನಿಸಿದ.

"ನಾನದ.!"

"ಅಯ್ಯೋ, ಯಾವ ಕರ್ಮದ ಜನವಯ್ಯಾ ನೀನು. ನಿನ್ನಪ್ಪಮ್ಮ ನಿನಗೆ ಹೆಸರೇ ಇಡಲಿಲ್ಲ?'

"ಇದೆ ಇದೆ. ಹೆಸರಂಡಯ್ಯಾ"

"ಏನಂತೆ?"

"ನಾನು ಆಗೋ, ಯಮಧರ್ಮರಾಯ ಬಂದಿದ್ದೇನೆ.'

"ಓಹೋ, ತಾವುಗಳು ನನ್ನಂತಹ ಅಲ್ಪ ಮಾನವನ ಬಳಿ ಬರುವುದೆ?"

"ಇಲ್ಲ, ಇಲ್ಲ ಇನ್ನು ೧೩ ಘಳಿಗೆಯೊಳಕ್ಕೆ ಕೊಂಡೊಯ್ಯುತ್ತೇನೆ ನಿನ್ನನ್ನು ನಾನು...."

"ನನ್ನನ್ನು..."

"ಹೌದಂತೆ....ನಿಮ್ಮಂತಹ ವೀರರುಗಳಿಗೆ (?) ಬರುವ ಮರಣವನ್ನು ಮೊದಲೇ ತಿಳಿಸಬೇಕೆನ್ನುವ ಗೊತ್ತುವಳಿ ನಮ್ಮ ಪಾರ್ಲಿಯಮೆಂಟಿನಲ್ಲಿ ಸರ್ವಾನುಮತದಿಂದ ಮಂಜೂರಾಗಿದೆ...."

"ಹಾಗೇನು? ಹಾಗಾದರೆ ನನ್ನದೊಂದು ಕೆಲಸ ಮುಗಿಸು...."

"ಏನಂತೆ" ಮೀಸೆ ತಿರುಹುತ್ತ ಯಮಪ್ರಭು.

ಸುಬ್ಬ—ಆಗಲೇ ಚೀಲದಿಂದ ಒಂದಾಣೆ ಕೊಡುತ್ತ, "ನೋಡು ರಾಜಾ, ಜನ್ನರ ಅಂಗಡಿಯನ್ನೂ ಮುಚ್ಚಲ್ಪಡಲಿಲ್ಲ. ನಾಲ್ಕು ಬೀಡಾ, ಎರಡು ಸಿಗರೇಟ್, ಎಂಟು ನೆಲಗಡಲೆ....ತರಬೇಕಲ್ಲ....ಉಳಿದ ಚಿಲ್ಲರೆ ತಪ್ಪದೆ ವಾಪಾಸು ತರಬೇಕು ...ತಿಳಿಯಿತೋ? ಹಾಗಾದರೆ ನಿನ್ನೊಟ್ಟಿಗೆ ಬರುವೆನಯ್ಯ; ದೇವಲೋಕದ ಪಾರ್ಲಿಯಮೆಂಟಿಗೆ...." ನನ್ನನ್ನು ಅಲ್ಲಿನ ಅಧ್ಯಕ್ಷ, ಮಂತ್ರಿ, ಕಾರ್ಯದರ್ಶಿ ಮಾಡಬೇಕು. ಅಂದಿದ್ದರೆ ಅವಶ್ಯವಾಗಿ ಬರುತ್ತೇನೆ. ಹೇಗೂ ನಾಳೆ ಪರೀಕ್ಷೆ....'

"ಹಾಗಾದರೆ" ತಲೆ ತುರಿಸುತ್ತ ಯಮ "ಇನ್ನೊಮ್ಮೆ ಪುರಸೊತ್ತಿದ್ದಾಗ ಬರುತ್ತೇವೆ...."

ಮರುದಿನ ಸುಬ್ಬ ಮಂಚದ ಕೆಳಗಿದ್ದ, ತಪ್ಪಿ ಎದ್ದಾಗ ತಲೆಗೆ ಪೆಟ್ಟಾಗಲು ಪರೀಕ್ಷೆಗೆ ಚಕ್ಕರ್....

○ ○ ○

ಸುಬ್ಬ—ಡ್ರಾಯಿಂಗ್ ಮಾಡುತ್ತಿರುವ ವೇಳೆ ಅಜ್ಜಿ ಬಂದಳು ಹತ್ತಿರಕ್ಕೆ "ಸುಬ್ಬ...." ಎಂದಳು. ಮೊದ ಮೊದಲು ಸುಬ್ಬ ಏನೂ ಆಡದೆ ಸುಮ್ಮನೆ ಹೋಗಿ ಕ್ಷೌರಿಕನನ್ನು ಕರೆದು ತರುತ್ತಿದ್ದ, ಸುಬ್ಬನ ಅಜ್ಜಿ (ಸುಬ್ಬ ಅವಳೊಬ್ಬಳನ್ನು ಬಿಟ್ಟು ಉಳಿದ ಅಜ್ಜಿ—ಪಿಜ್ಜಿಯರನ್ನೆಲ್ಲಾ ಥಾರ್'ವರ್ ಪೊಲಿಶ್‌ಮೆನ್ನ್ ಅನ್ನುತ್ತಿದ್ದುದು ನಿಮಗೆ ಗೊತ್ತಿದೆ)ಗೆ ವಾರವೆರಡಕ್ಕೊಮ್ಮೆ ಕ್ಷೌರ ಮಾಡಿಸಬೇಕಾಗಿತ್ತು. ಆದಕ್ಕಾಗಿ ಆಕೆ ಪ್ರತಿಸಾರೆ ಸುಬ್ಬನನ್ನು ಕರೆದು ಕ್ಷೌರಿಕನನ್ನು ಬರ ಹೇಳಲು ಆಜ್ಞೆ ಮಾಡುತ್ತಿದ್ದಳು. ಇದರಿಂದ ಸುಬ್ಬ ಗೊಣಗುಟ್ಟುತ್ತಿದ್ದ....(ಹಾಗೊಂದು ದಿನಕ್ಕೆ ಮೂರಾವರ್ತಿ ಊಟ ಮಾಡಲು?) ಇನ್ನೊಂದು ದಿನ ಅಜ್ಜಿ ಸುಬ್ಬನನ್ನು ಕರೆದು ಹೀಗನ್ನುತ್ತಿದ್ದಾಗ ಸುಬ್ಬ ಮಾಗುತ್ತರ ಗೊಡುತ್ತಾ, "ಅಯ್ಯೋ, ಏನೊಂದು ಚಿರಚಿರಿ ಅಜ್ಜ ಇದ್ದಿದ್ದರೆ ಅವನಾದರೂ ಕರೆದರುತ್ತಿದ್ದ ಆ ಶನಿರಾಯ ಕ್ಷೌರಿಕನನ್ನು..." ಎಂದು ಬಿಟ್ಟ ಸುತ್ತಲೂ ನೆರೆದವರಿಗೆ ಅತ್ತ ನಗಲೂ ಅಲ್ಲ, ಇತ್ತ ಅಳಲೂ ಅಲ್ಲ. ಅಂತಹ ಸನ್ನಿವೇಶವನ್ನು ತಂದೊಡ್ಡಿದ ಸುಬ್ಬ.

○ ○ ○

ಸುಬ್ಬನ ಬಾಯಿಯಿಂದ ಹೊರ ಹೊಮ್ಮಿದ್ದ ಹಲವು ಕೆಲವು ಉತ್ತಮ ಸಮಯದಾಯದಲ್ಲಿ ಕೆಲವೊಮ್ಮೆ ಹಲವೊಂದು ಸತ್ಯಾಂಶ ಎದ್ದು ಕಾಣುತ್ತಿತ್ತು. ಒಮ್ಮೆ ತನ್ನ ಗೆಳೆಯ ಎಪ್ಪಾರನಿಗೆ ಆತ ಅಂದಿದ್ದ. "ನಿನಗೆ ಆ ಕಂಪನಿಯಿಂದ ಕೆಟಾಲಾಗ್ ಬರುವುದಿಲ್ಲ" ಅಂದಿದ್ದ. ನಿಜ ಕ್ಯಾ ಬರಬೇಕೆ?

ಎಲ್ಲರಿಗೂ ಆಶ್ಚರ್ಯ! "ಅತ್ಯುತ್ತಮವಾಗಿ ಬರದು ಕಳುಹಿಸಿದ್ದೆ ನಾನು" ಎಪ್ಪಾರ ಗೊಣಗಿದ, ಆದರೆ ಸುಬ್ಬನ ಮಾತು ಸತ್ಯವಾಗಲು ಬೇರೆ ಕಾರಣವಿರಲಿಲ್ಲ. ಪೋ. ಬಾ. ನಂ. 53 ಅಂತಿದ್ದುದನ್ನು ಪೋ. ಬಾ. ನಂ. 1957 ಅಂತಲೂ ಪೊಂಬಾರ್ಯ ಮೂರು ಅಂತಿದ್ದುದನ್ನು ಪೂನಾ 46 ಅಂತ ಆಡ್ರಾಸ್ ಬರೆದು ಕೊಟ್ಟಿದ್ದ. ಇನ್ನೊಮ್ಮೆ ನೆರೆಮನೆಯ ಹುಡುಗಿಯೊಬ್ಬಳ ಕೈಹಿಡಿದು ಸುಬ್ಬ ಹೇಳಿದ... "ಎಲೈ ನಳಿನಾಕ್ಷಿ! ನೀನು ಅದಾವುದೋ ತರುಣನನ್ನು ಪ್ರೀತಿಸಿದಂತಿದೆ....'

"ಹೌ....ದು...."

"ಸರಿ... ಹೆಸರು ಪುಂಡರೀಕಾಕ್ಷ... ಅಂತಲ್ಲವೇನು?'

[ಸ್ವಗತ] "ಅರೆ? ಇವನಿಗೆ ಹೇಗೆ ತಿಳಿಯಿತು?"

ಆದರೆ ಸುಬ್ಬನಿಗೆ ತಿಳಿದುದು ಬೇರೆ ವಿಧಾನದಿಂದಲ್ಲ, ಅವಳ ಕೈಯಲ್ಲಿದ್ದ PUNDARIKAKSHA ಹೆಸರಿನ ಉಂಗುರವೇ ಸಾಕ್ಷಿ...!

—ಕೆ. ರಮೇಶ ಪೈ.

ಕುಟುಂಬ ಯೋಜನೆ
(ಮಿತ ಸಂತಾನ)
Family Planning

ಮಾಜಿ ಮಂತ್ರಿ ಎ. ಬಿ. ಶೆಟ್ಟಿರ ಮುನ್ನುಡಿಯೊಂದಿಗೆ ದ. ಕ. ಜಿಲ್ಲಾ ಕುಟುಂಬಯೋಜನಾ ಸಮಿತಿಯಪರವಾಗಿ ಪ್ರಕಟಿಸಲ್ಪಟ್ಟ ಕುಟುಂಬ ಯೋಜನೆಯ ಆವಶ್ಯಕತೆಯನ್ನೂ ಸಂತತಿಯನ್ನೂ ಒಂದು ಉಚಿತ ಪ್ರಮಾಣದಲ್ಲಿ ನಿರೋಧಿಸುವ ಸರಳ ಮಾರ್ಗವನ್ನೂ ಬೋಧಿಸುವ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಕೈಪಿಡಿಗಳು.

ಪ್ರತಿಯೊಂದರ ಬೆಲೆ 19 ನಯಾಪೈಸೆ.

ಪ್ರತಿಗಳು ಎಲ್ಲೆಲ್ಲಿಯೂ ವಿಕ್ರಯಿಸಲ್ಪಡುತ್ತವೆ

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಿಚಿತ್ರ ಪ್ರಪಂಚ

(೪ನೇ ಪುಟದಿಂದ)

೧೯೫೭ರಲ್ಲಿ ಅಮೆರಿಕೆಯ ಹಿಮವಿಶೇಜ್ಞರು ದಕ್ಷಿಣ ಧ್ರುವಪ್ರದೇಶಕ್ಕೆ ತೆರಳಿ, ಅಲ್ಲಿ ವಿವಿಡೆಡೆಗಳಲ್ಲಿನ ಹಿಮದ ಆಳವನ್ನು ಅಳೆದರು. ಮೊದಲು ಎರಡು ಸಾವಿರ ಅಡಿ ಎಂದಿದ್ದ ಹಿಮದ ದಪ್ಪ, ಮೇರಿ ಬರ್ಡ್ ಲೇಂಡಿನ ಬಳಿ ೮,೫೫೦ ಅಡಿ ಎಂದು ಗೊತ್ತಾಯಿತು. ಇದರ ಸಮೀಪವೇ ೧೪ ಸಾವಿರ ಅಡಿ ದಪ್ಪ ಹಿಮವಿರುವ ಒಂದು ಸ್ಥಳ ವಿರವುದೂ ಕಂಡುಬಂತು!

ನಮ್ಮ ಸೌಭಾಗ್ಯವಶದಿಂದ, ದಕ್ಷಿಣ ಧ್ರುವ ಅಥವಾ ಗ್ರೀನ ಲೇಂಡ್ ಪ್ರದೇಶದ ಹಿಮರಾಶಿ ಸಂಪೂರ್ಣ ಕರಗಿಹೋಗುವುದು ಅಸಂಭವ. ಉತ್ತರ ಧ್ರುವದಲ್ಲಿ ತೇಲುತ್ತಿರುವ ಮಂಜು ನೀರಲ್ಲಿ ವಿಲೀನವಾಗುವುದು. ಇದು ಕರಗಿದರೆ, ತಾನು ಆಕ್ರಮಿಸಿದ್ದ ಭಾಗದಷ್ಟೇ ಅದು ಹರಡಿಕೊಳ್ಳುವುದು ಅಲ್ಲದೆ, ನೀರಿನ ಮಟ್ಟ ಒಂದು ರೋಮದಷ್ಟಾದರೂ ಹೆಚ್ಚದು.

ಆದರೆ, ಉತ್ತರಧ್ರುವ ಸಾಗರದ ಹಿಮ ಕರಗಿದರೆ, ಒಂದು ಹೊಸ ವಾತಾವರಣ ನಿರ್ಮಾಣವಾಗುತ್ತದೆ. ಇದರಿಂದ ಹವಾಮಾನದ ಮೇಲೆ ಕೆಟ್ಟ ಪರಿಣಾಮವಾಗುವುದು. ಹಿಂದಿನ ೧೦ ಲಕ್ಷ ವರ್ಷಗಳಲ್ಲಾದ ನಾಲ್ಕು ಹಿಮಯುಗಗಳು ಉತ್ತರ ಧ್ರುವ ಸಾಗರದ ಹಿಮಕರಗಿಯೇ ಆದವೆಂದು ಅಮೇರಿಕನ್ ತಜ್ಞರೆನ್ನುತ್ತಾರೆ. ಆದುದರಿಂದ ಉತ್ತರ ಧ್ರುವ ಸಾಗರದ ಹಿಮ ಕರಗಿದರೆ, ಪ್ರಪಂಚದಲ್ಲಿ ಮಂಜಿನ ಮಳೆ ಬೀಳುವುದೆನ್ನುತ್ತಾರೆ ಅವರು.

ಅತ್ಲಾಂತಿಕ ಸಾಗರದ ಉಷ್ಣ ಪ್ರವಾಹ ಗ್ರೀನ್‌ಲೇಂಡ್ ಮತ್ತು ನಾರ್ವೆಗಳ ನಡುವೆ ಸ್ವೇಚ್ಛಾನುಸಾರ ಹರಿಯುತಿದ್ದುದರಿಂದ ಧ್ರುವದ ವಾತಾವರಣದಲ್ಲಿ ಆವಿ ಹರಡಿ ಯುರೇಶಿಯಾ ಮತ್ತು ಉತ್ತರ ಅಮೆರಿಕೆಯ ಧ್ರುವ ನಿಕಟ ಪ್ರದೇಶಗಳಲ್ಲಿ ಹಿಮದ ಮಳೆ ಬಿದ್ದು ಬಿಟ್ಟಿದ್ದುದರಿಂದಲೇ ಈಗ ಅಲ್ಲಿ ಹಿಮವಿದೆ ಎಂದು ಹೇಳುತ್ತಾರೆ. ಈ ರೀತಿ ನೀರು ಹಿಮವಾದುದರಿಂದ ನೀರಿನ ಆಳ ಸಮುದ್ರದಲ್ಲಿ ಕೆಲವು ನೂರು ಅಡಿ ಕಡಿಮೆಯಾಯಿತು. ಇದರಿಂದಾಗಿ ಅತ್ಲಾಂತಿಕ ಸಾಗರದ ನೀರು ಉತ್ತರ ಧ್ರುವ ಸಾಗರದತ್ತ ಹರಿಯದಿರಲು ಹಿಮ ಬೀಳುವುದೂ ನಿಂತಿತು.

ಉತ್ತರಧ್ರುವ ಸಾಗರದ ಹಿಮ ಎಂದು ಕರಗಲಾರಂಭಿಸುತ್ತದೆ? ಅಥವಾ ಹಿಮಯುಗ ಎಂದು ಆರಂಭವಾಗುತ್ತದೆ? ಐದನೆಯ ಹಿಮಯುಗ ಎಂದು ಕಾಲಿರಿಸುತ್ತದೆ? ಎಂಬ ಪ್ರಶ್ನೆ ಏಳುತ್ತದೆ. ಹಲವಾರು ನೂರು ವರ್ಷಗಳ ವರೆಗೆ ಹೀಗಾಗದೆಂದು ವಿಜ್ಞಾನಿಗಳು ಹೇಳುತ್ತಾರೆ.

ಇದನ್ನು ತಡೆಯುವುದು ಸಾಧ್ಯವೇ ಎಂಬುದಕ್ಕೆ ಪ್ರಸಿದ್ಧ ಇಂಜಿನಿಯರ್ ಜೇಥ್ವೇ ಎಂಬವರು ಪರಿಹಾರ ಸೂಚಿಸಿದ್ದಾರೆ—ನಾರ್ವೆ ಮತ್ತು ಗ್ರೀನ್‌ಲೇಂಡ್‌ಗಳ ಮಧ್ಯೆ ಅಣೆಕಟ್ಟೊಂದನ್ನು ನಿರ್ಮಿಸಿದರೆ, ಹಿಮಯುಗ ಬರಲಾರದು ಎಂದು. ಅಲ್ಲದೇ ಡಾ| ಹೆರ್ರಿ ವೆರ್ಸ್ಲರ್ ಎಂಬವರು ಎರಡು ಉಪಾಯ ಹೇಳಿದ್ದಾರೆ. ಉತ್ತರ ಭೂಭಾಗದ ಉಷ್ಣತೆಯನ್ನು ಹೆಚ್ಚಿಸುವುದು ಮತ್ತು ಉತ್ತರ ಧ್ರುವಪ್ರದೇಶದ ಮಂಜನ್ನು ಅಣುಬಾಂಬುಗಳ ಮೂಲಕ ಕರಗಿಸಿ ಅಗರಷ್ಟಿ ಹಡಗು ಸಂಚಾರಕ್ಕೆ ತೊಡಗುವುದು.

ಆದರೆ, ಆಗ ಬೇರಾವ ಗಂಡಾಂತರ ಬರುವುದೆಂದು ಇನ್ನೂ ವಿಜ್ಞಾನಿಯ ಮೆದುಳಿಗೆ ಹೊಳೆದಿಲ್ಲ; ಅಷ್ಟೇ.

ಭಾರತದಲ್ಲಿ ಶ್ರೀಲಂಕೆಯ ಕಲಾವಿದರು

ಶ್ರೀ ಲಂಕೆಯ ಸಾಂಸ್ಕೃತಿಕ ಸಂಬಂಧ ಮಂತ್ರಿ ಶಾಖೆಯ ಪಾರ್ಲಿಮೆಂಟರಿ ಕಾರ್ಯದರ್ಶಿಯಾದ ಶ್ರೀ ಎಂ. ಬಿ. ಮೇಧಿವಾಕರವರ ನಾಯಕತ್ವದಲ್ಲಿ ೩೩ ಶ್ರೀ ಲಂಕೆಯ ನರ್ತಕರ ಶಿಷ್ಟ ಮಂಡಳವೊಂದು ಭಾರತಕ್ಕೆ ಸಂದರ್ಶನವಿತ್ತಿತ್ತು. ಮೂರು ವಾರಗಳ ವರೆಗೆ ಭಾರತದಲ್ಲುಳಿದ ಈ ಮಂಡಳವು ಮದ್ರಾಸು, ಡಿಲ್ಲಿ ಮತ್ತು ಬೊಂಬಾಯಿಗಳಲ್ಲಿ ಪ್ರದರ್ಶನವನ್ನೇರ್ಪಡಿಸಿತ್ತು. ಮಾತ್ರವಲ್ಲ, ಆಗ್ರ, ವಾರಣಾಸಿ ಮತ್ತು ಗಯಗಳನ್ನೂ ಸಂದರ್ಶಿಸಿತ್ತು.

ನವದೆಹಲಿಯಿಂದ ೧೭ ಮೈಲು ದೂರದ ಕರಾಳದಲ್ಲಿ ಇದು ಎರಡು ತಾಸುಗಳ ಪ್ರದರ್ಶನವೊಂದನ್ನೇರ್ಪಡಿಸಿತ್ತು. ಇದನ್ನು ಈಕ್ಷಿಸಲು ಗ್ರಾಮೀಣ ಜನ ಸಮೂಹವು ನೆರೆದಿತ್ತು. ಈ ಪ್ರದರ್ಶನದ ನಾಲ್ಕು ದೃಶ್ಯಗಳನ್ನು ಇಲ್ಲಿ ಕಾಣುವಿರಿ,

ಪ್ರಥಮ ದೃಶ್ಯ— ಸಂಗೀತಗಾರರು ಒಂದುಸೇರಿ ಹಾಡುತ್ತಿದ್ದಾರೆ.

ದ್ವಿತೀಯ ದೃಶ್ಯ— ಗ್ರಾಮಶಾಲೆಯ ಮುಂದುಗಡೆಯಲ್ಲಿ ಕಟ್ಟಿದ ವೇದಿಕೆ ಮತ್ತು ಸುತ್ತಲೂ ನೆರೆದಿರುವ ಜನಸ್ತೋಮ.

ತೃತೀಯ ದೃಶ್ಯ—ಶ್ರೀ ಲಂಕೆಯ ಒಂದು ನರ್ತನ.

ಚತುರ್ಥ ದೃಶ್ಯ— ಕಲಾವಿದರನ್ನು ಗ್ರಾಮನಾಯಕನು ಹೂಮಾಲೆ ಅರ್ಪಿಸಿ ಸನ್ಮಾನಿಸುತ್ತಿದ್ದಾನೆ.

ಅಭಿವೃದ್ಧಿ ಪಥ

ಉಕ್ಕು ಕಬ್ಬಿಣಗಳಲ್ಲಿ ಸ್ವಪರಿಪೂರ್ಣತೆ

ಕಚ್ಚಾ ಕಬ್ಬಿಣಗಳ ನಿರ್ಯಾತವನ್ನು ಮಾಡಲಿಕ್ಕೂ ನಾವು ಸಮರ್ಥರಾಗಿದ್ದೇವೆ.

ಲೋಹ ಶಿಲ್ಪ ಮತ್ತು ವಿಶ್ವ ಲೋಹ ವಿಜ್ಞಾನದಲ್ಲಿ ಭಾರತವು ಸುವಿಖ್ಯಾತವಾಗಿದ್ದು ಜಗತ್ತಿನ ಇತರ ರಾಷ್ಟ್ರಗಳಿಗಿಂತ ಅಗ್ರಗಣ್ಯ ಸ್ಥಾನದಲ್ಲಿದ್ದ ಕಾಲವೊಂದಿತ್ತು. ಪೃಥ್ವೀ ರಾಜನು ಕಟ್ಟಿಸಿದನೆನ್ನುವ ಡಿಲ್ಲಿಯ ಉಕ್ಕಿನ ಸ್ತಂಭವೇ ಇದಕ್ಕೆ ಸಾಕ್ಷಿ.

ಆದರೆ, ಅನೇಕಾನೇಕ ಕಾರಣಗಳಿಂದಾಗಿ ಭಾರತೇತರ ರಾಷ್ಟ್ರಗಳು, ಮುಖ್ಯವಾಗಿ ಪಾಶ್ಚಾತ್ಯ ರಾಷ್ಟ್ರಗಳು ಲೋಹ ವಿಜ್ಞಾನದಲ್ಲಿ ಭಾರತಕ್ಕೆ ಸರಿಮಿಗಿಲೆನಿಸಿದುದು ಮಾತ್ರವಲ್ಲ, ಭಾರತವನ್ನು ಹಿಮ್ಮೆಟ್ಟಿಸಿಯೂ ಬಿಟ್ಟವೆ. ಇಂಜನಿಯರಿಂಗ್ ಮತ್ತು ಲೋಹ ವಿಜ್ಞಾನಗಳ ಮಟ್ಟಿಗೆ ಭಾರತವು ತೀರ ಹಿಂದುಳಿದ ರಾಷ್ಟ್ರ ಎಂದು ಜಗದ್ವಿಜ್ಞಾನ ಸಾರಿ ಹೇಳುವ ಪರಿಸ್ಥಿತಿಯೊದಗಿತ್ತು.

ಭಾರತವು ಸ್ವತಂತ್ರವಾದೊಡನೆಯೇ ಅದರ ಅಭಿವೃದ್ಧಿಯ ಯೋಜನೆಗಳೂ ಕಾರ್ಯಗತವಾಗ ತೊಡಗಿದುವು. ದೇಶದ ತ್ವರಿತಗತಿಯ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ಭಾರತವು ಲೋಹವಿಜ್ಞಾನ ಸಂಬಂಧದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸತೊಡಗಿತು. ಆದರೂ ರಾಷ್ಟ್ರ ಪುನಾರಚನೆಯ ಕಾರ್ಯಕ್ರಮಗಳಿಗಾಗಿ ಅವಶ್ಯವಾದ ಕಬ್ಬಿಣ ಮತ್ತು ಉಕ್ಕುಗಳ ಕೈಗಾರಿಕೆಯತ್ತ ವಿಶೇಷ ಗಮನ ಹರಿಸಲಾಯಿತು.

ಇದರ ಪರಿಣಾಮವಾಗಿ, ಭಾರತದಲ್ಲಿ ಮೊದಲೇ ಇದ್ದ ಜಮಶೇದಪುರ, ಬರನಪುರ ಮತ್ತು ಭದ್ರಾವತಿಗಳ ಕಾರಖಾನೆಗಳನ್ನು ಅಭಿವೃದ್ಧಿಪಡಿಸಿ, ಅವುಗಳಲ್ಲಿ ಒಟ್ಟು ಮೂರು ಮಿಲಿಯ ಟನ್ ಉಕ್ಕನ್ನು ಉತ್ಪಾದಿಸಲು ಸಮರ್ಥವಾಗುವಂತೆ ವಿಸ್ತರಿಸಲಾಯಿತು.

ಸಮಗ್ರವಾದ ಉಕ್ಕಿನ ಕಾರಖಾನೆಗಳನ್ನು ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ನಿರ್ಮಿಸುವ ಪ್ರಯತ್ನ ನಡೆದಿದೆ. ರೂರಕೇಲಾ, ಭಿಲಾಯಿ ಮತ್ತು ದುರ್ಗಾಪುರಗಳಲ್ಲಿ ಹೊಸತಾಗಿ ಒಂದೊಂದು ಉಕ್ಕಿನ ಕಾರಖಾನೆಯನ್ನು ಸ್ಥಾಪಿಸುವ ಕೆಲಸ ಸಾಗಿದೆ.

ಉಕ್ಕಿನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಕೈಗೊಳ್ಳಲಾದ ಪ್ರಯತ್ನಗಳು ಈಗ ಫಲಿಸಿವೆ. ಜಮಶೇದಪುರ, ಬರನ್‌ಪುರಗಳ ಉಕ್ಕಿನ ಕಾರಖಾನೆಗಳ ಅಭಿವೃದ್ಧಿ ಯೋಜನೆಗಳು ಮುಕ್ತಾಯ ಘಟ್ಟದಲ್ಲಿವೆ. ರೂರಕೇಲಾ ಮತ್ತು ಭಿಲಾಯಿಗಳಲ್ಲಿ ಪ್ರಥಮ ಬ್ಲಾಸ್ಟ್‌ಫರ್ನೇಸ್‌ಗಳು ಉತ್ಪಾದನೆಯನ್ನು ಆರಂಭಿಸಿವೆ. ರೂರಕೇಲಾದಲ್ಲಿ ಉಕ್ಕಿನ ತಯಾರಿಕೆ ಆರಂಭವಾಗಿದೆ.

ಫೌಂಡ್ರಿಗಳಿಗೆ ಬೇಕಾಗುವ ಕಚ್ಚಾ ಕಬ್ಬಿಣ ವಿಷಯದಲ್ಲಿ ನಾವು ಸ್ವಪರಿಪೂರ್ಣತೆಯನ್ನು ಗಳಿಸಿದ್ದೇವೆ. ಅದಕ್ಕೆ ಈಗ ವಿದೇಶೀ ಮಾರುಕಟ್ಟೆಯನ್ನು ಹುಡುಕಲಾಗುತ್ತಿದೆ. ಒಂದಲ್ಪ ಪ್ರಮಾಣದ ಈ ಜಾತಿಯ ಕಬ್ಬಿಣವನ್ನು ನಿರ್ಯಾತ ಮಾಡಲಾಗುತ್ತಿದೆ.

ಉಕ್ಕಿನ ಕಾರಖಾನೆಗಳಲ್ಲಿರುವ ರೋಲಿಂಗ್ ಮಿಲ್‌ಗಳ ಸ್ಥಾಪನೆ ಇದೀಗ ಮುಕ್ತಾಯಗೊಂಡಿವೆ. ಅವುಗಳಲ್ಲಿ ಹಲವು ಇಷ್ಟರಲ್ಲಿಯೇ ಕಾರ್ಯಾಚರಣೆಗೆ ತೊಡಗುವುವು. ತೃತೀಯ ಯೋಜನೆಯ ಅವಧಿಯಲ್ಲಿ ಒಟ್ಟು ೧೦ ಮಿಲಿಯ ಟನ್ನುಗಳಷ್ಟು ಉಕ್ಕನ್ನೂ ೧॥ ಮಿಲಿಯ ಟನ್ನುಗಳಷ್ಟು ಕಚ್ಚಾ ಕಬ್ಬಿಣವನ್ನೂ ಉತ್ಪಾದಿಸುವ ಗುರಿಯನ್ನು ಸಾಧಿಸುವ ಗುರಿಯಿರುವುದು. ಈ ಲಕ್ಷ್ಯವನ್ನು ನಾವು ಪೂರೈಸುವೆವೆಂಬ ವಿಶ್ವಾಸವಿದೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ವಿಚಿತ್ರ ಜೀವನ

ಅಮೇರಿಕೆಯ ವಿಲಕ್ಷಣ ಜನಜೀವನ

ಸುವಿಶಾಲ ಅಮೇರಿಕೆಯಲ್ಲಿ ವಿಜ್ಞಾನ ರಹಸ್ಯವಿರುವುದಾದರೂ ಜನಜೀವನವು ತೀರ ಸರಳವಾಗಿದೆ.

ಪೂರ್ವಸಾಗರ ಕಿನಾರೆಯಿಂದ ಪಶ್ಚಿಮ ಕಿನಾರೆಯವರೆಗೆ ಸಂಚರಿಸಲು ಭಗವಾನ್ ಭಾಸ್ಕರನಿಗೇನೇ ಐದು ತಾಸುಗಳಷ್ಟು ಸಮಯ ಬೇಕಾಗುವ ಒಂದು ದೇಶವನ್ನೂ ಅಲ್ಲಿನ ನಿವಾಸಿಗಳನ್ನೂ ಕೇವಲ ಒಂದೂವರೆ ಎರಡು ತಿಂಗಳುಗಳಲ್ಲಿ ಅರ್ಥ ಮಾಡಿಕೊಂಡೆನೆಂದು ಯಾರಾದರೂ ಹೇಳಿದರೆ, ಅದು ಆತನ ಮೂರ್ಖತೆಯನ್ನಷ್ಟೇ ಪ್ರಕಟಗೊಳಿಸೀತು. ಆದರೂ ಈ ಅಲ್ಪಾವಧಿಯಲ್ಲಿ ಕಂಡುಕೊಳ್ಳುವ ಕೆಲವೊಂದು ವಿಷಯಗಳು ಆ ದೇಶದ ಬಗ್ಗೆ ವಿಶ್ಲೇಷಣೆ ಮಾಡಲು ಪ್ರೇರಕವಾದಾವು.

ಅಮೇರಿಕೆಯ ಚರಿತ್ರೆ ವಿಲಕ್ಷಣತೆ ಮತ್ತು ಅಸಂಗತಿಗಳ ಅದ್ಭುತ ಸಮನ್ವಯ ಇವುಗಳ ಮಿಶ್ರಣವು ಒಂದು ನೂತನ ಅದ್ಭುತ ಶಕ್ತಿಯನ್ನು ನಿರ್ಮಿಸಿದೆ ಎಂದೇ ಹೇಳಬಹುದು

ವಿಜ್ಞಾನಕ್ಷೇತ್ರದಲ್ಲಿ ಅಮೇರಿಕೆ ಬಹಳ ಉನ್ನತಿಗೇರಿದೆ ವಿಜ್ಞಾನದ ಪ್ರಭಾವಬೀರದ ಒಂದೇ ಒಂದು ಮನೆಯೂ ಅಲ್ಲಿಲ್ಲ ಆದರೆ, ವಿಜ್ಞಾನವು ಜಟಿಲವಾಗಿರುವಷ್ಟೇ ಅಮೇರಿಕೆಯ ಜೀವನ ಸರಳವಾಗಿದೆ ವಿಜ್ಞಾನವು ರಹಸ್ಯಮಯವಾದರೂ ಅಲ್ಲಿನ ಜೀವನ ಸ್ಪಷ್ಟವಾಗಿದೆ ವಿಜ್ಞಾನವನ್ನು ಅಮೇರಿಕೆಯು ಅಡಗಿಸಿಟ್ಟಿರುವುದಾದರೂ ಅಮೇರಿಕೆಯ ಸ್ತ್ರೀ-ಪುರುಷರ ಹೃದಯವು ನಿಷ್ಕಲಂಕವಾಗಿದೆ. ಅವರು ಅತಿಥಿಗಳಿಗೆ ತಮ್ಮ ಮನೆಯ ಮೂಲೆ ಮೂಲೆಯನ್ನೂ ತೋರಿಸುತ್ತಾರೆ. ಅಮೇರಿಕೆಯ ಯುವತಿಯು ಚಿಕ್ಕಮಕ್ಕಳಂತೆ ನಿಮ್ಮ ಭುಜಕ್ಕೆ ಕೈಹಾಕಿ, "ನೋಡಿ ಇದು ನನ್ನ ಶಯ್ಯಾಗೃಹ. ಓ, ಒಂದ ಮರೆತೇ ಬಿಟ್ಟೆ .." ಎಂದು ಓಡಿ ತನ್ನ [illegible]ದಲೂ ಆಭರಣವೊಂದನ್ನು ತರುತ್ತಾಳೆ. ಕಣ್ಣುಗಳಲ್ಲಿ ನಗೆಯನ್ನು ಬೀರುತ್ತ ಅದನ್ನು ಕಾಣಿಸುತ್ತ ಹೇಳುತ್ತಾಳೆ. "ಇದನ್ನು ನಿನ್ನೆ ತಾನೇ ತಂದಿದ್ದೇನೆ, ತೊಟ್ಟಾಗ ಹೇಗೆ ಕಾಣುತ್ತದೋ ನೋಡಿ" ಆಗ ಅತಿಥಿ ತನ್ನ ಸಂಬಂಧಿಯೊಬ್ಬನ ಮನೆಯಲ್ಲಿಯೇ ಇರುವೆನೆಂದು ಭ್ರಮಿಸುತ್ತಾನೆ ವೈಜ್ಞಾನಿಕ ರಹಸ್ಯಗಳ ತವರ್ಮನೆಯಾದ ಅಮೇರಿಕೆಯಲ್ಲಿ ಇಂತಹ ಪ್ರವೃತ್ತಿಯಿರುವುದು ಅಸಂಗತಿಯಲ್ಲದೆ ಇನ್ನೇನು?

ವಿಜ್ಞಾನದಲ್ಲಿ ಅಮೇರಿಕೆಯು ಪ್ರಗತಿ ಮಾಡಿದೆ, ನಿಜ ಆದರೆ, ಅದರ ಜೀವನವು ವಿಜ್ಞಾನದಂತೆ ಜಟಿಲವಲ್ಲ; ಕಲ್ಪನಾತೀತವಲ್ಲ. ಕಲಕತ್ತೆ, ಬೆಂಗಳೂರು, ಬೊಂಬಾಯಿ ಮೊದಲಾದ ನಗರಗಳಲ್ಲಿ ಒಬ್ಬ ಹೊಸಬ ಅಲೆದಾಡುವುದು ಸಹಜವೇ. ಆತನಿಗ ಯಾರಾದರೊಬ್ಬನ ವಿಳಾಸ ಹುಡುಕ ಬೇಕಾದರೆ ತುಂಬ ಪೇಚಾಡಬೇಕಾಗುವುದು. ಆದರೆ, ಅಮೇರಿಕೆಯಲ್ಲಿ ದಿಕ್ಕಿನ ಅರಿವು ಮತ್ತು ವರ್ಣ ಸಂಖ್ಯೆಗಳ ಜ್ಞಾನವಿರುವವನು ಈ ರೀತಿ ತಿರುಗಾಡಬೇಕಾಗಿಲ್ಲ ಪ್ರತಿನಗರ ನಾಲ್ಕು ದಿಕ್ಕುಗಳಲ್ಲಿ ವಿಭಾಗಿಸಲಾಗಿದೆ. ಮಾರ್ಗಗಳ ಹೆಸರು ವರ್ಣಮಾಲೆಯ ಅಕ್ಷರ ಮತ್ತು ಸಂಖ್ಯೆಗಳಿಂದ ಇಡಲ್ಪಟ್ಟಿದೆ ವಿಜ್ಞಾನದ ಜಟಿಲತೆಯ ನಡುವೆ ನಗರ ನಿರ್ಮಾಣದಲ್ಲಿ ಅಮೇರಿಕೆಯು ಸರಳತೆಯನ್ನೇ ತೋರಿಸಿದೆ.

ಅಲ್ಲಿ ಸಂಪತ್ತು ಅಪಾರವಾಗಿ ತುಂಬಿದೆ ಧನೋಪಾರ್ಜನೆಗಾಗಿ ಜನರಲ್ಲಿ ಒತ್ತಾಯವೂ ಇದೆ ಪ್ರತಿಯೊಬ್ಬನೂ ಇನ್ನೊಬ್ಬರಿಂದ ಮುಂದುವರಿಯಬಯಸುತ್ತಾನೆ. ನಡವಳಿಕೆ ಆಚರಣೆಯಲ್ಲಿಯೂ ಆತ ಮುಂದುವರಿಯಲೆಳಸುತ್ತಾನೆ. ಒಂದು ವಿಚಿತ್ರ ಕಥೆ ಕೇಳಿರಿ: ಒಬ್ಬ ಮನುಷ್ಯ ಒಂದು ಹೊಸ ಮಾದರಿಯ ಮೋಟಾರು ಕಾರನ್ನು ಕೊಂಡು ತಂದಿದ್ದ. ಆತನ ಪತ್ನಿ ತನ್ನ ನೆರೆಯಾಕೆಯೊಡನೆ ಈ ಕಾರಿನ ಪ್ರಶಂಸೆ ಮಾಡುತ್ತ ಆಕೆಯ ಅಭಿಪ್ರಾಯ ಕೇಳಿದಳು ನೆರಮನೆಯಾಕೆಯ ಪತಿಯೂ ಕೆಲದಿನ ಮೊದಲು ಹೊಸ ಕಾರೊಂದನ್ನು ತಂದಿದ್ದ. ತನ್ನ ಹೊಸ ಕಾರನ್ನು ತೋರಿಸಲು ಆಕೆಯನ್ನು ಕರೆದುಕೊಂಡು ಹೋದಳು. ಮೊದಲನೆಯಾಕೆ ಏನು ನೋಡುತ್ತಾಳೆ! ತನ್ನ ಪತಿ ತಂದಿರುವಂತಹ ಕಾರು ತನಗಿಂತಲೂ ಮೊದಲೇ ಈಕೆಯ ಮನೆಯಲ್ಲಿದ್ದುದನ್ನು ಕಂಡು, ಆಕೆಯ ಮುಖವರ್ಣವೇ ಬದಲಾಯಿತು ಆಕೆ ಮನೆಗೆ ಬಂದ. ಆ ಕಾರನ್ನು ಮಾರಿ ಬೇರೆಯೇ ಇನ್ನೊಂದು ಮಾದರಿಯದೊಂದನ್ನು ಕೊಂಡುಕೊಂಡಳು! ಆದರೆ, ತಾನು ಶ್ರೀಮಂತ ಎಂಬ ಡಂಗುರ ಹೊಯ್ಯುವವನನ್ನು ಅಮೇರಿಕೆ ಮನ್ನಿಸುವುದಿಲ್ಲ. ದಂಭ ಮತ್ತು ದರ್ಪಗಳಿಗೆ ಅಮೇರಿಕೆಯ ಜೀವನದಲ್ಲಿ ಏನೇನೂ ಸ್ಥಾನವಿಲ್ಲ ಒಂದೆಡೆ ತಾನು ಎಲ್ಲರಿಂದಲೂ ಮುಂದಿರುವೆನೆಂಬ ಪ್ರವೃತ್ತಿ ಇರುವುದಾದರೂ ಬೀದಿಗಳಲ್ಲಿ ಹೋಗುವುದರಲ್ಲಿ ಯಾರು ಶ್ರೀಮಂತರು, ಯಾರು ನಿರ್ಧನರು ಎಂಬುದೇ ಅರಿಯಲಾಗದು. ಸಾಮಾನ್ಯ ಕಾರಖಾನೆಯವನ ಮಗಳೂ ಅಮೇರಿಕೆಯ ಶ್ರೀಮಂತ ಕುಟುಂಬವೊಂದರ ಮಗಳೂ ವಾಶಿಂಗಟನ್ನಿನ ಬೀದಿಗಳಲ್ಲಿ ಅಕ್ಕತಂಗಿಯರಂತೆ ಒಂದಾಗಿ ತಿರುಗುತ್ತಾರೆ. ಅವರ ಉಡುಗೆ ತೊಡುಗೆಗಳಿಂದಾಗಲಿ ವೇಷಭೂಷಣಗಳಿಂದಾಗಲೀ ಹಾವಭಾವಗಳಿಂದಾಗಲಿ ಅವರಲ್ಲಿ ಯಾರು ಶ್ರೀಮಂತ ವರ್ಗದವರು ಅಥವಾ ಯಾರು ನಿರ್ಧನ ವರ್ಗದವರೆಂದು ತಿಳಿಯುವುದು ಕಷ್ಟವೇ

ಒಂದೆಡೆ ಡಾಲರಗಳಿಂದ ಮನೆತುಂಬಿಸುವ ಆಸಕ್ತಿ, ಇನ್ನೊಂದೆಡೆ ಡಾಲರಿನ ಜಣತ್ಕಾರದತ್ತ ತಿರಸ್ಕಾರ! ಇವೇ ಅಮೇರಿಕೆಯ ಜೀವನದ ಅಸಂಗತಿ. ಇವುಗಳ ಸಮನ್ವಯ ಇಲ್ಲಿದೆ ಶ್ರೀಮದ ಎಲ್ಲೆಲ್ಲಿಯೂ ಇರುವುದಾದರೂ ಅಮೇರಿಕೆಯಲ್ಲಿ ಶ್ರೀ (ಸಂಪತ್ತು) ಇದೆ, ಆದರೆ, ಮದ ಮಾತ್ರ ಹಾದಾರಿ ದೂರ!

ಅಮೇರಿಕೆಯು ಪ್ರಪಂಚದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಸರಕಾರದ ಪ್ರತಿ ಹೆಜ್ಜೆಯಲ್ಲಿಯೂ ಜನತೆಯ ವಿಮರ್ಶಾ ದೃಷ್ಟಿ ಹರಿಯುತ್ತದೆ ಸರಕಾರ ಜನತೆಯದು. ಜನಪ್ರತಿನಿಧಿಗಳು ಅದನ್ನು ನಡೆಸುತ್ತಾರೆ. ಆದರೆ, ಜನತೆಯು ಈ ಪ್ರತಿ ಸರಕಾರಕ್ಕೂ ಒಂದು ಸೀಮೆಯನ್ನು ಮಾಡಿದೆ ತಮ್ಮ ಸಂಬಂಧದಲ್ಲಿ—ಜನಹಿತ ಸಂಬಂಧದಲ್ಲಿ ಕೂಡ—ಸರಕಾರ ತನ್ನ ಹಸ್ತಕ್ಷೇಪ ಮಾಡುವುದನ್ನು ಅಮೇರಿಕನರೆಂದೂ ಒಪ್ಪುವುದಿಲ್ಲ. ಸರಕಾರ ಜನಹಿತ ಕಾರ್ಯ ಮಾಡಬಯಸುತ್ತದೆ. ಆದರೆ, ಈ ಕಾರ್ಯವನ್ನು ಸರಕಾರ ಮಾಡಲು ತೊಡಗುವುದನ್ನು ಕಂಡು ಜನತೆ ವಿರೋಧಿಸುತ್ತದೆ. ಇದನ್ನು ನೋಡುವಾಗ ಏನೋ ಕೊಂಚ ವಿಸ್ಮಯವಾಗಬಹುದು; ನಂಬುವುದೂ ಕಷ್ಟವಾಗಬಹುದು, ಆದರೆ, ಅಮೇರಿಕೆಯ ಚರಿತ್ರೆಯ ವಿಲಕ್ಷಣತೆ ಎಂದರೆ, ಇದೇ

ಅಮೇರಿಕೆಯ ಜೀವನದಲ್ಲಿ ತೀವ್ರ ವೇಗವಿದೆ ಅತ್ಯಂತ ವೇಗದಿಂದದು ಮುಂದುವರಿಯುತ್ತಿದೆ ನ್ಯೂಯಾರ್ಕಿನಂತಹ ನಗರದಲ್ಲಿ ಪ್ರಾತಃಕಾಲ ಮತ್ತು ಸಂಧ್ಯಾಕಾಲಗಳಲ್ಲಿ ಮಾನವ ಸಮೂಹವು ವೇಗವಾಗಿ ಹೆಜ್ಜೆಯಿಟ್ಟು ನಡೆಯುವುದನ್ನು ಕಂಡೇ ಅಮೇರಿಕೆಯ ತೀವ್ರ ಪ್ರಗತಿಯನ್ನು ಊಹಿಸಿಕೊಳ್ಳಬಹುದು, ಆದರೆ, ಇದರಲ್ಲಿ ನಿಧಾನವೂ ಇದೆ ಮನೆಯಲ್ಲಿ ಒಬ್ಬ ಅಮೇರಿಕನ್ ಕ್ರಿಯಾಶೀಲನಾಗಿದ್ದರೆ ಹೊರಗಡೆ ಆತ ನಿಧಾನನಾಗಿ ಹೋಗುತ್ತಾನೆ ಅನಭಿವೃದ್ಧ ದೇಶಗಳಿಗೆ ಸಹಾಯ ನೀಡುವ ವಿಷಯದ ಕುರಿತು ಮೆಸಚುಟಿಸ್‌ನ ಟೆಕ್ನಾಲಜಿ ಸಂಸ್ಥೆಯ ಸಹಾಯಕ ಮಾರ್ಗದರ್ಶಕ ಹೇಳುತ್ತಾನೆ–ಈ ವಿಷಯದಲ್ಲಿ ಅಮೇರಿಕೆ ನಿಧಾನ ಮಾಡುತ್ತಿದೆ. ಅವರಿಗೆ ದೊಡ್ಡ ಪೆಟ್ಟು ಬೀಳುವ ವರೆಗೆ ಅವರು ನಿದ್ರಿಸುತ್ತಿರುತ್ತಾರೆ."

ಅಮೇರಿಕೆಯ ಈ ವಿಚಿತ್ರತೆ ಹಾಗೂ ಅಸಂಗತಿಗಳ ಮಾಲೆ ಇದೇ ರೀತಿ ಮುಂದುವರಿಯುತ್ತದೆ. ಒಂದೊಂದನ್ನು ತಿಳಿಯಬೇಕಾದರೂ ಒಂದು ವರ್ಷ ಕಾಲವೂ ಸಾಲದೆಂದು ತೋರುತ್ತದೆ.

ಮೂಲ: "ನವಭಾರತ ಟಾಯಿಮ್ಸ್"
ಅನುವಾದ "ಗೋರಾ"

ದೂರಗಾಮಿ ಅಸ್ತ್ರ

(೪ನೇ ಪುಟದಿಂದ)

ನ್ನರು ಕೆಳಗೆ ನೀರು ಇದ್ದ ಭಾಗಗಳಲ್ಲಿ ಬಲೆಯನ್ನು ಪಸರಿಸಿ ಇಟ್ಟು, ಆ ಮೇಲೆ ಬೂಮರಂಗ ಮೇಲೆ ಹಾರಿಸುವರು. ಅದರ ಪ್ರಚಂಡ ಧ್ವನಿಗೆ ಅವು ಹೌಹಾರಿ ತಮ್ಮ ಗುಂಪನ್ನು ಒಡೆದು ಕೆಳಗೆ ನೀರಿದ್ದ ಸ್ಥಳಗಳಲ್ಲಿ ಜೀವದ ಆಶೆಗೆ ಇಳಿಯುವವು. ಆಗ ಅಲ್ಲಿದ್ದ ಬಲೆಯೊಳಗೆ ಸಿಕ್ಕಿಕೊಂಡು ಮೋಸ ಹೊಂದುವವು. ಈ ಪ್ರಕಾರ ಆಸ್ಟ್ರೇಲಿಯಾದ ಆದಿವಾಸಿಗಳು ಪಕ್ಷಿಗಳನ್ನು ಹಿಡಿಯುವರು. ಇದೊಂದು ಅವರ ಅತಿ ಪ್ರೀತಿಯ ಉದ್ಯೋಗವಾಗಿದೆ.

ಈ ಅದ್ಭುತ ಅಸ್ತ್ರವಾದ ಬೂಮರಂಗ ಹಾರಿಸಲು ಅತಿ ತಜ್ಞನಾದ ಫ್ರೇಂಕ್ ದಾನೇಲಿಯನ್‌ನು ಈ ರೀತಿಯಾಗಿ ತನ್ನ ಇಚ್ಛೆಯನ್ನು ಎಲ್ಲೆಡೆಯಲ್ಲಿ ಪ್ರಕಟಿಸಿರುವನು—"ಬೂಮರಂಗ ಹಾರಿಸುವ ಕಲೆಯು ಒಂದು ಪಂದ್ಯವೆಂದು ಜಗತ್ತಿನಾದ್ಯಂತ ಪ್ರಚಾರ ಮಾಡಿರಿ! ಆಸ್ಟ್ರೇಲಿಯಾದಲ್ಲಿ ಸಧ್ಯ ಪ್ರತಿಯೊಂದು ಶಾಲೆ-ಕಾಲೇಜುಗಳಲ್ಲಿ ಇದ. ತುಂಬಾ ಪ್ರಚಾರವಿದ್ದು, ವಿಲಂಬ ಮಾಡದೇ ಓಲಿಂಪಿಕ್ ಪಂದ್ಯಗಳಲ್ಲಿ ಈ ಆಟವನು ಸಮಾವೇಶಗೊಳಿಸಿರಿ. ಜಾಗತಿಕ ಕೆಲವೇ ಆಟಗಳಲ್ಲಿ ಇದೊಂದನ್ನು ಸೇರಿಸಿರಿ!"

ವಿವಿಧ ದೇಶಗಳ ಭಿನ್ನಭಿನ್ನ ಜನತೆಗೆ ಮಾರುವದೋಸ್ಕರ ತಜ್ಞ ಫ್ರೇಸದಾನೇಲಿಯನ್ನನು ಬೇರೆ--ಬೇರೆ ಧಾತುಗಳಿಂದ ಬೂಮರಂಗ ತಯಾರಿಸಲು ತೊಡಗಿರುವನು. ಅವನು ಇತ್ತೀಚೆಗೆ ಪ್ಲೆಸ್ಟಿಕ್ ಧಾತುವಿನಿಂದ "ಬೂಮರಂಗ-ಅಸ್ತ್ರ"ವನ್ನು ನಿರ್ಮಿಸಿರುವನು ಹಾಗೂ ಅವುಗಳ ಅತಿ ದೊಡ್ಡ ಪ್ರಮಾಣದಿಂದ ಉತ್ಪಾದನವಾಡಲಿಕ್ಕೇ ಬರುವದೆಂದು ಅವನಿಗೆ ಖಾತ್ರಿಯಾಗಿದೆ ಆದರೆ ಅತಿ ವೇಗದ ಮತ್ತು ಅತ್ಯುತ್ತಮ ಬೂಮರಂಗಗಳನ್ನು ಮಾತ್ರ ಕೇವಲ ಆಸ್ಟ್ರೇಲಿಯ ಆದಿವಾಸಿ ಜನಾಂಗವೇ ತಯಾರಿಸಲು ಶಕ್ತವಾಗಿವೆ ಹೊರತು, ಇನ್ನುಳಿದವರಿಗಲ್ಲ.

ಬೂಮರಂಗ ಎಷ್ಟು ಉತ್ತಮವಾಗಿರುವದೋ ಅಷ್ಟೇ ಘಾತಕವೂ ಆಗಿದೆ! ವಿಶಾಲ ಮೈದಾನಿನ ಹೊರತು ಬೂಮರಂಗ ಹಾರಿಸಲು ಬರುವದಿಲ್ಲ. ಒಂದು ವೇಳೆ ಸಣ್ಣಪುಟ್ಟ ಬೈಲುಗಳಲ್ಲಿ ಅದನ್ನು ಹಾರಿಸಿದರೆ ಸ್ವತಃ ಬಲಿ ತೆಗೆದುಕೊಳ್ಳುವುದು.

'ಸಂಡೇ ಸ್ಟೆಂಡರ್ಡ' ದಿಂದ ಸಂಗ್ರಹಿತ.
—ರಾಮಕೃಷ್ಣ ಎ. ಪೈ, ಅಂಕೋಲೆ

ಇದೀಗ ಪ್ರಕಟವಾಗಿದೆ!
'ಮದುವೆ ಸೀರೆ'
ಜೀವನದ ಬೇರೆ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.


ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಪ್ರಶಸ್ತ,
ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕಥಾವಿಹಾರ

(೨ನೇ ಪುಟದಿಂದ)

ಆಬಾಜಿಯ ಮಾತಿನ ಮಧ್ಯೆ ಪ್ರವೇಶಿಸಿ ಉಲ್ಲಾಸಿತನಾಗಿ ಶಿವಾಜಿ ಹೇಳಿದ.

"ಹೌದು ಮಹಾ ಪ್ರಭೂ, ಇನ್ನು ನಾವು ಇದರಿಂದ ದಕ್ಷಿಣವೊಂದೇ ಅಲ್ಲ; ಉತ್ತರವನ್ನೂ ಜಯಿಸಬಹುದು."— ಪೇಶ್ವೆ ಹೇಳಿದ.

"ಇದೂ ಸಾಧ್ಯ......ಅದೇನು?—ಆ ಮೇನೆಯಲ್ಲಿ?' ಅಂಗಳದಲ್ಲಿದ್ದ, ಪರದೆಯ ಆವರಣವಿದ್ದ ಮೇನೆಯನ್ನು ನೋಡಿ ಕೇಳಿದ—ಶಿವಾಜಿ.

ಆಬಾಜಿ ಮೇನೆಯ ಕಡೆಗೊಮ್ಮೆ ನೋಡಿ ಮುಗುಳುನಗುತ್ತಾ ನುಡಿದ.

"ಅದರಲ್ಲೇ?– ಅದರಲ್ಲಿ ಈ ವಿಜಯದ ಅತ್ಯಮೂಲ್ಯ ಕಾಣಿಕೆಯೊಂದಿದೆ ಮಹಾರಾಜ!"

"ಆಬಾಜಿ, ನೀನು ನಗುತ್ತಿರುವುದೇಕೆ? ಅದರಲ್ಲೇನಿದೆಯೆಂದು ಹೇಳು"

—ಶಿವಾಜಿ ಮುಗುಳುನಗುತ್ತಿದ್ದ ಆಬಾಜಿಯ ಕಡೆಗೊಮ್ಮೆ ನೋಡಿ ಆಜ್ಞಾಪಿಸುವವನಂತೆ ಗಂಭೀರನಾಗಿ ನುಡಿದ.

"ಪ್ರಭೋ, ಕಲ್ಯಾಣದ ಸುಭೇದಾರ ಅಹಮ್ಮದನ ಸೊಸೆಯ ಅನುಪಮ ಸೌಂದರ್ಯದ ಪ್ರಶಂಸೆಯನ್ನೂ ತಾವೂ ಕೇಳಿರಬಹುದಲ್ಲ. ಆಕೆಯನ್ನು ಮಹಾಪ್ರಭುಗಳ ಸೇವೆಗೆಂದು ಕೈದುಮಾಡಿ ತಂದಿರುವೆನು......."

ಶಿವಾಜಿಯ ಹೊಗಳಿಕೆಯನ್ನು ನಿರೀಕ್ಷಿಸುತ್ತ ಮಾತನಾಡುತ್ತಿದ್ದ ಆಬಾಜಿ ಆತನ ಮುಖದಲ್ಲಾದ ಬದಲಾವಣೆಯನ್ನು ಕಂಡು ಅಲ್ಲಿಗೇ ಮಾತು ನಿಲ್ಲಿಸಿದ.

ವಿಜಯದಿಂದ ಪ್ರಸನ್ನಗೊಂಡಿದ್ದ ಶಿವಾಜಿಯ ಮೋರೆಯಲ್ಲಿ ಅಸಮಾಧಾನದ ಭಾವ ಕಂಡುಬಂತು; ಆತನ ಹುಬ್ಬುಗಂಟಿಕ್ಕಿತು. ಮೋರೋಪಂತ ಮತ್ತು ಆಬಾಜಿ, ಶಿವಾಜಿಯ ಮುಖದಲ್ಲಿ ಕ್ರೋಧದ ಚಿಹ್ನೆ ನೋಡಿ ಬೆದರಿದರು. ಸ್ವಲ್ಪ ಸಮಯ ಯಾರೂ ಮಾತೆತ್ತಲಿಲ್ಲ. ಶಿವಾಜಿಯೇ ಹೇಳಿದ.

"ಓಹೋ.......ಹೀಗೋ, ಆಗಲಿ; ಆ ಮೇನೆಯನ್ನಿತ್ತ ತರಿಸು"

ಕೂಡಲೇ ಆಬಾಜಿ ಹೋಗಿ, ಆತನ ಹಿಂಗೆಯೇ ಮೇನೆಯನ್ನು ಹೊರಿಸಿಕೊಂಡು ಶಿವಾಜಿಯ ಹತ್ತಿರ ನೆಲದ ಮೇಲಿಡಿಸುವನು.

ಶಿವಾಜಿ ವ್ಯಾಕುಲಚಿತ್ತನಾಗಿ, ಆ ಮುಸಲ್ಮಾನ ಸ್ತ್ರೀಯನ್ನು ಕುರಿತು, ನಮ್ರನಾಗಿ ಹೇಳಿದ

"ತಾಯೀ, ಶಿವಾಜಿ ತನ್ನ ಸೇನಾಪತಿಯ ಈ ಅನುಚಿತ ಕಾರ್ಯಕ್ಕೋಸ್ಕರ ನಿನ್ನೊಡನೆ ಕ್ಷಮೆ ಕೇಳುತ್ತಿದ್ದಾನೆ. ತಾಯೀ, ನೀನು ಸ್ವಲ್ಪವೂ ಭಯಪಡುವ ಅವಶ್ಯವಿಲ್ಲ. ನಾನು ನಿನ್ನನ್ನು ಜೋಪಾನವಾಗಿ ಮರ್ಯಾದೆಯಿಂದ ನಿನ್ನ ಪತಿಯೆಡೆಗೆ ಕಳುಹುವೆನು."

ಶಿವಾಜಿಯೆದ್ದು ಮೇನೆಯ ಪರದೆಯನ್ನು ಸರಿಸಿ, ಒಳಗೆ ಕುಳಿತಿದ್ದ ಆಕೆಯನ್ನೊಮ್ಮೆ ನೋಡಿ ಮುಂದುವರಿಸಿದ.

"ನಿಜವಾಗಿಯೂ ನೀನು ಸುಂದರಿಯಾಗಿರುವೆ! ನಾನು ಯೋಚಿಸುತ್ತಿದ್ದೇನೆ. ನನ್ನ ತಾಯಿ ಕೂಡ ನಿನ್ನಂತೇ ರೂಪವತಿಯಾಗಿದ್ದಿದ್ದರೆ, ನಾನು ಇನ್ನೂ ಸುಂದರನಾಗುತ್ತಿದ್ದೆ."

ಶಿವಾಜಿ ಆಬಾಜಿಯೆಡೆಗೆ ತಿರುಗಿ ಕೇಳಿದ.

"ಆಬಾಜೀ, ನೀನು ಈ...."

"ಮಹಾರಾಜ, ನನಗೆ ನೆನಪು ಬರಲಿಲ್ಲ, ಕ್ಷಮಿಸು...."

—ಆಬಾಜಿ ಹೆದರುತ್ತಾ ಮಧ್ಯದಲ್ಲಿಯೇ ಬಡಬಡಿಸಿದ.

"ನೀನು ಎಂತಹ ಕೆಲಸ ಮಾಡಿರುವಿಯೆಂದರೆ, ಅದಕ್ಕೆ ಎಂದೆಂದಿಗೂ ಕ್ಷಮೆ ದೊರೆಯಲಾರದು. ಶಿವಾಜಿಯನ್ನು ಇಷ್ಟು ದಿನಗಳ ತನಕ, ಇಷ್ಟು ಸಮೀಪದಿಂದಿದ್ದು ತಿಳಿದುಕೊಂಡೂ, ನೀನು ಈ ಕೆಲಸ ಮಾಡುವ ಸಾಹಸಕ್ಕೆ ಹೇಗೆ ಇಳಿದೆ?"

"ಮಹಾರಾಜ, ನನ್ನ ಬುದ್ಧಿ...."

ಆಬಾಜಿಗೆ ಮಾತನಾಡಲೂ ಬಿಡದೇ ಶಿವಾಜಿ ಗದ್ಗದ ಕಂಠದಿಂದ ಮುಂದುವರಿಸಿದ.

"ಆಬಾಜೀ, ಎಂದಾದರೂ ನಿನ್ನ ಶಿವಾಜಿ ಯಾವದಾದರೊಂದು ಮಸೀದಿಯನ್ನು ಸ್ವಲ್ಪವಾದರೂ ಹಳಿದುದಾಗಲೀ ಅಪಾತ್ರಗೈದುದಾಗಲೀ ನೀನು ಕಂಡಿರುವಿಯೇನು? ಒಂದು ವೇಳೆ ನನಗೆ ಲೂಟಿಯ ವೇಳೆ—ಮುಸಲ್ಮಾನರ ಪವಿತ್ರ ಗ್ರಂಥ 'ಖುರಾನು' ದೊರೆತಾಗಲೂ ನಾನದನ್ನು ರಕ್ಷಿಸಿ ಮುಸಲ್ಮಾನರ ಧರ್ಮಗುರುವಿಗೆ (ಮೌಲ್ವಿ) ಹಿಂತಿರುಗಿಸಿದ ಘಟನೆಗಳನ್ನು ನೀನಿಷ್ಟು ಬೇಗ ಮರೆತೆಯೇನು? ನಾನು ಹಿಂದುವಾಗಿದ್ದರೂ, ಹಿಂದು ಮತ್ತು ಮುಸಲ್ಮಾನ ಪ್ರಜೆಗಳಲ್ಲಿ ಭೇದ ತೋರಿಸಿದುದು ನೀನು ನೋಡಿರುವಿಯೇನು?

"ನಿಜ ಮಹಾರಾಜ, ತಾವು ರಾಜ್ಯದಲ್ಲಿ ನ್ಯಾಯವಾದ ಸ್ವರಾಜ್ಯ ಸ್ಥಾಪಿಸಲು ಇಚ್ಛಿಸುತ್ತಿರುವಿರಿ..." ಮೋರೋಪಂತ ಹೇಳಿದ.

"ಅದೇ — ಮೋರೋಪಂತ; ನಾನು ದುರ್ಮಾರ್ಗಿಗಳ ಕೈಯಿಂದ ಶಾಸನದ ಅಧಿಕಾರ ಕಿತ್ತುಕೊಂಡು, ನ್ಯಾಯವಾದಿ ಉದಾರ ವ್ಯಕ್ತಿಗಳಿಗೆ ಒಪ್ಪಿಸಬಿಚ್ಛಿಸುತ್ತಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ಪರಸ್ತ್ರೀಹರಣವೇ? ಈ ಶಿವಾಜಿ ಈ ಎಲ್ಲಾ ಯುದ್ಧಗಳನ್ನು ತನ್ನ ಸುಖಸಂಪತ್ತಿಗೋಸುಗ ಕೈಕೊಂಡನೇನು? ಹಾಗಿದ್ದರೆ ನನಗೂ ನೀಚ ದರೋಡೆ ಚೋರರಿಗೂ ಯಾವ ವ್ಯತ್ಯಾಸವುಳಿಯಿತು? ಇಂತಹ ವಿಜಯಗಳಿಗಿಂತ ನಾನು ಸೋಲನ್ನೇ ಹೆಚ್ಚು ಇಚ್ಛಿಸುತ್ತೇನೆ"

ಪುನಃ ಆಬಾಜಿಯೆಡೆಗೆ ತಿರುಗಿ ಹೇಳಿದ—

"ಆಬಾಜೀ, ಇಂದು ಶಿವಾಜಿಯು ಒರ್ವ ಸೇನಾಪತಿ ಇದನ್ನೇನನ್ನು ಕಂಡಿತ್ತ! ನನ್ನ ತಲೆ ಲಜ್ಜೆಯಿಂದ ಭೂಮಿಯಲ್ಲಿ ಹೊರಳುವಂತಾಯಿತು.....ಆಗಲಿ. ಇದಕ್ಕೂ ಶಿಕ್ಷೆಯನ್ನೂ ನಾನು ಹೇಳಲಾರೆ."

ಶಿವಾಜಿ ಸ್ವಲ್ಪ ಹೊತ್ತು ತಡೆದು ಪುನಃ ಗಂಭೀರನಾಗಿ ನುಡಿದ—

"ಪೇಶ್ವೆಯವರೇ, ಸೇನಾಪತಿಯವರೇ ಕೇಳಿ, ಎಲ್ಲರೂ ಕೇಳಿಕೊಳ್ಳಿ. ನಾನು ಈ ಸಮಯದಲ್ಲಿ ಎಲ್ಲರ ಮುಂದೆ ಈ ಘೋಷಣೆ ಗೈಯುತ್ತಿದ್ದೇನೆ—ಇನ್ನು ಮುಂದೆ ಯಾರೇ ಆಗಲಿ, ಇಂತಹ ನಿಕೃಷ್ಟವಾದ ಕೆಲಸ ಮಾಡಿದಲ್ಲಿ, ಆತನ ಶಿರ ಅದೇ ಕ್ಷಣದಲ್ಲೇ ತುಂಡರಿಸಲಾಗುವುದು."

ಕ್ಷಣ ಹೊತ್ತು ಅಲ್ಲಿಯ ವಾತಾವರಣವನ್ನು ಸ್ಮಶಾನ ಮೌನ ಆವರಿಸಿತು. ಕಲ್ಯಾಣ ದುರ್ಗದ ವಿಜಯದಿಂದ ಉಲ್ಲಸಿತಗೊಂಡಿದ್ದ ಅವರೆಲ್ಲರ ಮನಸ್ಸು ಈ ಅನಿರೀಕ್ಷಿತ ಘಟನೆಯಿಂದಾಗಿ ಅಸಂತೋಷಗೊಂಡಿತು. ಎಲ್ಲರ ಮನಸ್ಸು ಆ ಅಘಟಿತ ಘಟನೆಯನ್ನೇ ನೆನೆಯುತ್ತಿತ್ತು.

ಶಿವಾಜಿ ಆ ಮುಸಲ್ಮಾನ ಸ್ತ್ರೀಯ ಹತ್ತಿರ ಹೋಗಿ ನಿಂತು ಹೇಳಿದ—

"ತಾಯೀ—ನೀನಿನ್ನು ಮೇನೆಯಲ್ಲಿ ನಿಶ್ಚಿಂತೆಯಿಂದ ಕುಳಿತುಕೊಳ್ಳಬಹುದು. ಶಿವಾಜಿಯ ಸರದಾರನ ಈ ಕೃತ್ಯವನ್ನು ಕ್ಷಮಿಸೆಂದು ಪುನಃ ನಾನು ಪ್ರಾರ್ಥಿಸುತ್ತೇನೆ."

ಮೋರೋಪಂತನೆಡೆಗೆ ತಿರುಗಿ ಮತ್ತೆ ಹೇಳಿದ—

"ಮೋರೋಪಂತರೇ, ಈಕೆಯನ್ನು ಸರಿಯಾದ ರಕ್ಷಣೆಯೊಂದಿಗೆ, ನಮ್ಮ ಒಂದು ಸೇನಾಸಹಿತ ಗೌರವಪೂರ್ವಕವಾಗಿ ಅವಳ ಪತಿಯೆಡೆಗೆ ಕಳುಹಿಸುವ ವ್ಯವಸ್ಥೆ ಮಾಡಿರಿ".

(ಆಧಾರದಿಂದ.)

—"ಜನ್ನ" ಮುರವಂತೆ.

ಹಾರ್ಮೋನಿಯಮ್ ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ 2-50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೊ, ಉಡುಪಿ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾನೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ

ಸುಲಭವಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.
ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:0.
ಪುಸ್ತಕದ ಬೆಲೆಯೊಂದಿಗೆ ೨೫ ನ. ಪೈ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.
ಪ್ರತಿಗಳು ಮುಖ್ಯ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

NAVAYUGA
REGD. NO. M. 3619

UDIPI, THURSDAY
10—9—1959

LICENSE NO. 31
Licensed to Post without Prepayment

ಅಭಿಪ್ರಾಯ

ಮಹಾದಂಡನಾಯಕ ಶ್ರೀ ತಿಮ್ಮಯ್ಯನವರು ತನ್ನ ಕರ್ತವ್ಯವರಿತೇ ವರ್ತಿಸಿದ್ದಾರೆ

ತಾವಿತ್ತ ರಾಜಿನಾಮೆಯನ್ನವರು ಹಿಂದೆಗೆದು ಬೀಸಿದ ಸುಂಟರಗಾಳಿಗೆ ಎದೆಯೊಡ್ಡಲು ಭಾರತೀಯರಿಗೆ ಶಕ್ತಿಪ್ರದಾನವಾಡಿದ್ದಾರೆ.

ಭಾರತದ ಭೂಸೈನ್ಯದ ಮಹಾದಂಡನಾಯಕ ಜನರಲ್ ಕೆ. ಎಸ್. ತಿಮ್ಮಯ್ಯನವರು ಯಾವ ಕಾರಣದಿಂದಲೇ ತಮ್ಮ ಹುದ್ದೆಗೆ ರಾಜಿನಾಮೆಯಿತ್ತಿರಲಿ, ಅವರು ಅದನ್ನು ಹಿಂತೆಗೆದುಕೊಂಡು, ಯಾರೊಡನೆಯೇ ಎಂತಹ ಮತಭೇದವಿದ್ದರೂ ಈ ಸಂಕಟ ಕಾಲದಲ್ಲಿ ತನ್ನ ಹೊಣೆಗಾರಿಕೆಯನ್ನು ಅರಿತಿರುವೆನೆಂದೂ, ಯಾವುದೇ ರೀತಿಯಲ್ಲಿ ರಾಷ್ಟ್ರದ ಭದ್ರತೆಯನ್ನು ಅಪಾಯಕ್ಕೀಡು ಮಾಡಲು ತಾನು ಬಯಸುವುದಿಲ್ಲವೆಂದೂ ಸಾರಿ ತೋರಿಸಿದ್ದಾರೆ; ಎಂತಲೇ ಅವರ ಬಗ್ಗೆ ಭಾರತೀಯರು ಈಗಾಗಲೇ ಇಟ್ಟುಕೊಂಡಿದ್ದ ಗೌರವಾದರಗಳು ದ್ವಿಗುಣಿತವಾಗಿವೆ. ಅವರ ಈ ರೀತಿಯ ನಡೆವಳಿಕೆಯು ಸೈನಿಕಾನುಶಾಸನಕ್ಕೆ ಅನುಕೂಲವಾದುದೂ ಆದರ್ಶವೂ ಅನುಕರಣೀಯವೂ ಆಗಿದೆ.

ಅಂತಾರಾಷ್ಟ್ರೀಯ ಕೀರ್ತಿ ಪಡೆದ ಮಹಾದಂಡ ನಾಯಕ ಶ್ರೀ. ಕೋದಂಡ ರಾವ್ ಸುಬ್ಬಯ್ಯ ತಿಮ್ಮಯ್ಯರವರು ಎರಡು ವರ್ಷಗಳಿಗೆ ಮೊದಲು ಭಾರತದ ಭೂಸೇನೆಯ ಅತ್ಯುಚ್ಚ ಪದವಿಯನ್ನು ಸ್ವೀಕರಿಸಿದರು. ಭಾರತದ ಉಚ್ಚ ಸೈನಿಕ ಅಧಿಕಾರಿಗಳಲ್ಲಿ ಇವರಿಗೆ ಬೇರೆ ಬೇರೆ ವಿಧದ ಕಾರ್ಯಗಳ ಅನುಭವ ಹೆಚ್ಚಿದೆ. ಸೈನಿಕ ಜೀವನದ ಪ್ರಾರಂಭಿಕ ವರ್ಷಗಳಲ್ಲಿ ಅವರು ಬಲೂಚಿಸ್ತಾನ, ಇರಾಕ್ ಮತ್ತು ಮಲಯಾಗಳ ಸೇನೆಯೊಡನೆ ತಿರುಗಿದರು. ಬರ್ಮಾದಲ್ಲಿ ಹೋರಾಡಿ ಅರಾಕಾನದ ಯುದ್ಧದಲ್ಲಿ ಮೊತ್ತಮೊದಲಿಗೆ ಖ್ಯಾತಿ ಪಡೆದರು. ೧೯೪೫ರಲ್ಲಿ ಸಿಂಗಾಪುರದಲ್ಲಿ ಜಪಾನೀಯರು ಆತ್ಮಸಮರ್ಪಣೆ ಗೈದಾಗ, ಭಾರತೀಯ ಸೇನೆಯ ಪ್ರತಿನಿಧಿಗಳಾಗಿ ಅವರೂ ಅಲ್ಲಿದ್ದರು.

ಕಾಶ್ಮೀರದ ಹೋರಾಟವು ಅವರ ಕೀರ್ತಿಯನ್ನು ದಿಗ್ದೇಶಗಳಲ್ಲಿ ಹರಡಿತು. ವಿಶೇಷಜ್ಞರು ತಡೆದರೂ ಅವರು ೧೧ ಸಾವಿರ ಅಡಿ ಎತ್ತರದ ಜೋಜಿಲಾ ಶಿಖರದಲ್ಲಿ ಭಾರತೀಯ ಶಿಬಿರವನ್ನು ಸ್ಥಾಪಿಸಿ ಪಾಕಿಸ್ತಾನಿ ಸೇನೆಯನ್ನು ಪಾಕ್ ಗಡಿಯವರೆಗೂ ಓಡಿಸಿಬಿಟ್ಟರು. ಆಗಿನ ಕಾಶ್ಮೀರದ ಪ್ರಧಾನ ಮಂತ್ರಿ ಶ್ರೀ ಶೇಖ ಅಬ್ದುಲ್ಲಾರು ಇವರನ್ನು "ಮುಕ್ತಿದೂತ" ಎಂದು ಕರೆದಿದ್ದಾರೆ. ಅನಂತರ ಕೋರಿಯಾದಲ್ಲಿಯೂ ನಿರೀಕ್ಷಕ ಆಯೋಗದ ಅಧ್ಯಕ್ಷರಾಗಿಯೂ ಇವರು ತಮ್ಮ ಬುದ್ಧಿಮತ್ತೆಯನ್ನು ಪ್ರದರ್ಶಿಸಿದರು. ಇದಾದ ಕೆಲ ವರ್ಷಗಳಲ್ಲಿ ವಿದ್ರೋಹಿ ನಾಗಾ ಜನರನ್ನು ಎದುರಿಸಲೂ ಇವರೇ ಹೋಗಬೇಕಾಯಿತು.

ಬಾಲ್ಯ ಕಾಲದಿಂದಲೂ ಸೈನಿಕ ಜೀವನವನ್ನು ಬಿಟ್ಟು ಮತ್ತಾವುದನ್ನೂ ಕಲ್ಪಿಸದೆ ಇದ್ದುದರಿಂದ ಜನರಲ್ ತಿಮ್ಮಯ್ಯರವರನ್ನು ಜನ್ಮಜಾತ ಸೈನಿಕನೆನ್ನಬಹುದು. ಬೆಂಗಳೂರಲ್ಲಿ ಅವರು ಮೊತ್ತಮೊದಲು ಸೈನಿಕ ಶಿಬಿರವನ್ನು ಕಂಡರು; ಆಗ ಅವರನ್ನು ಸೈನಿಕ ಜೀವನ ತನ್ನತ್ತ ಆಕರ್ಷಿಸಿತು. ಬೆಂಗಳೂರಲ್ಲಿ ಪ್ರಾರಂಭಿಕ ಶಿಕ್ಷಣ ಪಡೆದ ತಿಮ್ಮಯ್ಯ ಮುಂದೆ ಡೆಹರಡೂನಿನ ಪ್ರಿನ್ಸ್ ಆಫ್ ವೇಲ್ಸ್ ರಾಯಲ್ ಇಂಡಿಯನ್ ಮಿಲಿಟ್ರಿ ಕಾಲೇಜಿನಲ್ಲಿ ಸೇರಿದರು. ಕಾಲೇಜಿಗೆ ಪ್ರವೇಶ ಪಡೆದ ೩೨ ಭಾರತೀಯರಲ್ಲಿ ಇವರು ಮೊದಲಿಗರಾಗಿದ್ದರು. ಅನಂತರ ಅವರು ಸೆಂಡ್‌ಹರ್ಸ್ಟ್‌ನಲ್ಲಿ ಸೈನಿಕ ಶಿಕ್ಷಣ ಪಡೆದು, ೧೯೨೬ರಲ್ಲಿ "ಕಮಿಶನ್ಡ್" ಆದರು.

ವ್ಯಾಯಾಮ ಮತ್ತು ಆಟಗಳಲ್ಲಿ ಮುಖ್ಯವಾಗಿ ಹಾಕ್ಕಿ ಮತ್ತು ಪೋಲೊಗಳಲ್ಲಿ ಆಸಕ್ತಿಯೂ ಇತಿಹಾಸ ಮತ್ತು ಕಾದಂಬರಿ ಪುಸ್ತಕವೋದುವುದರಲ್ಲಿ ಅಭಿರುಚಿಯೂ ಶ್ರೀ ತಿಮ್ಮಯ್ಯನವರಲ್ಲಿದೆ.

ಜನರಲ್ ತಿಮ್ಮಯ್ಯನವರು ಪ್ರಧಾನ ಮಂತ್ರಿಯವರ ವ್ಯಕ್ತಿಗತ ಮಿತ್ರರಾಗಿದ್ದಾರೆ. ಕೆಲ ವರ್ಷಗಳಿಗೆ ಮೊದಲು ಒಂದು ನಿಯತಕಾಲಿಕೆಯು ಅವರೊಂದಿಗೆಯೊಡನೆ ಅವರ ನಿಕಟ ಸಂಬಂಧವನ್ನು ಕಲ್ಪಿಸಿ ಅನುಚಿತ ಆರೋಪವನ್ನು ಹೇರಿದಾಗ, ಪ್ರಧಾನ ಮಂತ್ರಿಯವರು ಸ್ಪಷ್ಟ ಶಬ್ದಗಳಲ್ಲಿ ಅವರ ನೀತಿಮತ್ತೆಯನ್ನು ಪ್ರಶಂಸಿಸಿ ಆರೋಪಗಳನ್ನು ಅಲ್ಲಗಳೆದಿದ್ದರು. ರಾಷ್ಟ್ರ ಹಿತಕಾರಿಯಾಗುವ ಎಲ್ಲ ನೀತಿಯಲ್ಲಿಯೂ ಜನರಲ್ ತಿಮ್ಮಯ್ಯನವರ ಸಹಕಾರವಿದೆ. ಅವರು ಸೈನಿಕರಾಗಿದ್ದರೂ ಮದ್ಯನಿಷೇಧವನ್ನು ವಿರೋಧಿಸಲಿಲ್ಲ!

ರಾಷ್ಟ್ರಪತಿಯವರಿಂದ "ಪದ್ಮವಿಭೂಷಣ" ಗೌರವವನ್ನು ಗಳಿಸಿದ ಜನರಲ್ ತಿಮ್ಮಯ್ಯ ೫೩ ವರ್ಷಗಳಿಗೆ ಮೊದಲು ಕೊಡಗಿನಲ್ಲಿ ಜನಿಸಿದರು. ಕಳೆದ ೩೩ ವರ್ಷಗಳಲ್ಲಿ ಅವರು ಸೈನಿಕನಾಗಿ ಸೇನಾನಿಯಾಗಿ, ಬೇರೆ ಬೇರೆ ರಾಷ್ಟ್ರೀಯ-ಅಂತಾರಾಷ್ಟ್ರೀಯ ಕ್ಷೇತ್ರಗಳಲ್ಲಿ ಉಲ್ಲೇಖ

ರಾಜಕೀಯ

(೧ನೇ ಪುಟದಿಂದ)

ನೀತಿಗೆ ಅನುಸಾರವಾಗಿಯೇ ನಡೆಸಿಕೊಂಡು ಬಂದವರು. ಅಂತಹ ಸೈನಿಕಾಧಿಕಾರಿಯಾದರೂ ನಿಷ್ಠುರವಾಗಿರದೆ ಆದರ್ಶರೀತಿಯಿಂದ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತ ಭಾರತೀಯರೆಲ್ಲರ ನೆಚ್ಚಿಗೆ ಪಾತ್ರರಾದವರು ಸಂರಕ್ಷಣ ಮಂತ್ರಿಗಳಾದ ಕೃಷ್ಣ ಮೆನನ್ನರು ಕಮ್ಯುನಿಸ್ಟ ಪ್ರಧಾಯುತರೆಂಬ ಒಂದು ಕಲಂಕವನ್ನು ತೊಡೆದು ಹಾಕಿದರೆ, ಉಳಿದೆಲ್ಲ ದೃಷ್ಟಿಯಿಂದಲೂ ಭಾರತಕ್ಕೆ ಅಮೂಲ್ಯ ಸೇವೆಗಳನ್ನು ಅವಿರತವಾಗಿ ಮಾಡುತಿದ್ದಾರೆ. ಕಾಶ್ಮೀರ ಸಮಸ್ಯೆಯ ಬಗ್ಗೆ ಅವರು ಮಾಡಿದ್ದ ಇತಿಹಾಸ ಪ್ರಸಿದ್ಧ ಭಾಷಣಗಳನ್ನು ಯಾವ ಭಾರತೀಯನೂ ಎಂದಿಗೂ ಮರೆಯಲಾರ. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದವರು ಘಂಟಾ ಘೋಷವಾಗಿ ಸಾರಿದ್ದಾರೆ. ನೆಹರೂರವರ ವಿದೇಶ ನೀತಿಗೆ ಚಕ್ಕಂತೆ ಹೊಂದಿಕೊಂಡು ಬಂದಿದ್ದಾರೆ.

ಆದರೆ, ಇಂದು ಭಾರತದ ಗಡಿಯಲ್ಲಿ ಕಮ್ಯುನಿಸ್ಟರು ತಳವೂರಿರುವರೆಂದಾಗ, ಅವರಿಗೆ ವಿರುದ್ಧವಾಗಿ ಯಾವುದನ್ನೂ ಮಾಡಲೊಲ್ಲದ ಕೃಷ್ಣ ಮೆನನ್ನರು ಮತ್ತು ಭಾರತದ ಗಡಿರಕ್ಷಣೆಗಾಗಿ ಬದ್ಧಕಂಕಣರಾದ ಮೇ| ಜ| ತಿಮ್ಮಯ್ಯನವರ ನಡುವೆ

ನೀಯು ಕಾರ್ಯವಾಡಿದ್ದಾರೆ. ಕಳೆದ ಎಪ್ರಿಲ್ ತಿಂಗಳಲ್ಲಿ ಅವರು ಆಕ್ರಮಣಕಾರಿ ಶಕ್ತಿಗಳಿಗೆ ಎಚ್ಚರಿಕೆಯಿತ್ತಿದ್ದರು—"ಭಾರತದ ಒಂದಂಗುಲ ಭೂಮಿಯ ಅತಿಕ್ರಮಣವನ್ನೂ ನಾವು ಸಹಿಸಲಾರೆವು" ಎಂದು. ನಮ್ಮ ನೆರೆಯ ಮಿತ್ರರಾಷ್ಟ್ರವೇ ಭಾರತದವೇಲೆ ಆಕ್ರಮಣನಡೆಸಿರುವ ಈ ಪರಿಸ್ಥಿತಿಯಲ್ಲಿ ಅವರು ತಮ್ಮ ರಾಜಿನಾಮೆಯನ್ನು ಹಿಂತೆಗೆದುಕೊಂಡು ದೇಶವನ್ನು ಮಹಾ ಆಂತರಿಕ ಸಂಕಷ್ಟದಿಂದ ಪಾರು ಮಾಡಿದ್ದಾರೆ. ಶತ್ರುವಿನಿಂದಾಗಬಹುದಾದ ಹಾನಿಗಿಂತ ಮಿತ್ರನೇ ಶತ್ರುವಾದಾಗ ಆಗ ಬಹುದಾದ ಹಾನಿಯು ಅಪಾರವೆಂದು ಮಹಾದಂಡ ನಾಯಕ ತಿಮ್ಮಯ್ಯನವರು ಅರಿತುಕೊಳ್ಳದೆ ಇದ್ದಾರೆ?

'ಭಿನ್ನಾಭಿಪ್ರಾಯ'ವು ಈ ಮೊದಲೇ ಒಳಗೊಳಗಿದ್ದಿರಬಹುದಾದರೂ ತೀರ ಉಲ್ಬಣಾವಸ್ಥೆಗೇರಲಿದ್ದ ಮೂಲ ಕಾರಣಗಳ ಸ್ಫೋಟವಿನ್ನೂ ಆಗಿಲ್ಲ. ಆದರೂ ಭಾರತದ ಗಡಿಪ್ರದೇಶಗಳನ್ನು ಮುಖ್ಯವಾಗಿ ಆಗ್ನೇಯ ಭಾರತದ ನೇಫಾ ಪ್ರದೇಶವನ್ನು ಸೈನಿಕರ ವಶಕ್ಕೆ ಒಪ್ಪಿಸಲಾಗಿದೆ. ಸದ್ಯವೇ ಲಡಕ್ ಮತ್ತು ಗಡವಾಲಗಳ ರಕ್ಷಣೆಗೂ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿ ಪರಿಣಮಿಸಲೂ ಬಹುದು.

ಭಾರತೀಯ ಸೀಮಾ ಪ್ರದೇಶದ ಮೇಲೆ ಚೀನವು ದಾಳಿಮಾಡಿದೆ ಎಂದು ಭಾರತ ಸರಕಾರವು ಕಳಿಸಿದ ಪ್ರತಿಭಟನಾ ಪತ್ರಕ್ಕೆ ಭಾರತವೇ ಅತಿಕ್ರಮಣ ನಡೆಸಿದೆ ಎಂದು ಚೀನಾ ಮಾರೋಲೆ ರವಾನಿಸಿದೆ. ಭಾರತ ಮತ್ತು ಚೀನಗಳ ಅತಿದೀರ್ಘವಾದ ೨೫೦೦ ಮೈಲುಗಳ ಸೀಮೆಯು ಸಂಪೂರ್ಣವಾಗಿ ನಿರ್ಧಾರಿತವಾಗಿಲ್ಲವಾದರೂ ಮೆಕ್ಮಹೊನ ರೇಖೆಯನ್ನೇ ಸದ್ಯ ಆಧರಿಸಿಕೊಂಡಿರಬೇಕಾಗಿದೆ. ಈ ಬಗ್ಗೆ ಸೌಹಾರ್ದಮಯ ವಾತಾವರಣದಲ್ಲಿಯೇ ಏನಾದರೂ ಕಿಂಚಿತ್ ಬದಲಾವಣೆಗಳನ್ನು ಮಾಡಿಕೊಳ್ಳಲು ಭಾರತ ಸಿದ್ಧವಿರುವುದಾಗಿ ಪ್ರಧಾನಿ ನೆಹರೂ ಘೋಷಿಸಿದ್ದಾರೆ. ಮುಖ್ಯವಾಗಿ, ಪರ್ವತ ರಾಜ್ಯವಾದ ಬೆಟ್ಟ ನದಿನದಗಳಿಂದ ಕೂಡಿದ ಈ ಪ್ರದೇಶದಲ್ಲಿ ಸೀಮೆಯ ನಿರ್ಣಯ ಮಾಡುವುದೂ ಪ್ರಯಾಸಕರವೆಂದೂ ಒಪ್ಪಬೇಕು. ಆದರೂ ಚೀನೀಯರ ಅಂತರ್ಯ ಮಾತ್ರ ಪ್ರಕಟಗೊಂಡಿಲ್ಲ. ಭಾರತದೊಡನೆ ಮೈತ್ರಿಯುತ ಸಹಜೀವನವನ್ನು ಬಾಳಬಯಸುವ ಪಂಚಶೀಲಗಳಿಗೆ ಮನ್ನಣೆಯೊಯ್ಯುವ ಬಾಡುಂಗ ಪರಿಷತ್ತಿನಲ್ಲಿಯೂ ಭಾಗವಹಿಸುವ ಭಾಯಿ ಚೀನ ಈಗ ಮಾತ್ರ ತನ್ನ ಸ್ಥಾಯಿ ಮಿತ್ರನ ಮೇಲೆ ಅಪಚಾರವನ್ನು ಹೇರಿ ಮಿತ್ರತೆಯ ಹಾಲಿಗೆ ಹುಳಿ ಹಿಂಡಲು ಪ್ರಾರಂಭಿಸಿರುವುದು ಶೋಚನೀಯವಲ್ಲದೆ ಮತ್ತೇನು?

ನಮ್ಮ ಸಂರಕ್ಷಕ ಪಡೆ ಶಕ್ತಿಶಾಲಿಯಾಗಿದೆ; ಅದಕ್ಕೆ ಯೋಗ್ಯ ನಾಯಕನ ಮಾರ್ಗದರ್ಶನವೂ ಇದೆ. ಆದರೆ, ಪಡೆ ಮತ್ತು ಮಂತ್ರಿಶಾಖೆಗಳ ನಡುವೆ ಸಮರಸವಿರಬೇಕಲ್ಲದೆ ವಿರಸವಲ್ಲ. ಈಗ ಇಲ್ಲಿ ಘಟಿಸಿದ ಇತಿವೃತ್ತಗಳಿಂದ ತೋರಿಬಂದ ಅವ್ಯವಸ್ಥಿತ ಹಾಗೂ ಅಸಮಾಧಾನಕರವಾದ ಪರಿಸ್ಥಿತಿಯು ದೂರಹೋದರೂ ಅದು ಚಿರಕಾಲದವರೆಗೆ ಮಾಯವಾಗಿದೆ ಎನ್ನುವಂತಿಲ್ಲ. ಯಾವ ಸಮಯದಲ್ಲೂ ಅದು ಪುನಃ ಕಾಣಿಸಿಕೊಂಡರೆ, ಇದರಿಂದ ಭಾರತಕ್ಕೆ ಸರ್ವಥಾ ಕ್ಷೇಮವಾಗಲಾರದು. ಆದುದರಿಂದ ಪ್ರಧಾನಿ ನೆಹರೂ ಅವರು ತಮ್ಮ ವೈಯಕ್ತಿಕ ಪ್ರಭಾವದಿಂದ ಸದ್ಯ ಈ ಬಿಕ್ಕಟ್ಟನ್ನು ದೂರಮಾಡಿರುವುದಾದರೆ, ಭಾರತದ ಹಿತದೃಷ್ಟಿಯಿಂದ ಇನ್ನು ಮುಂದೆ ಎಂದೆಂದಿಗೂ ಇಂತಹ ವಿಮಂಚನಾತ್ಮಕ ಗಂಭೀರ ಹಾಗೂ ಕ್ಷೋಭಕರವಾದ ಪರಿಸ್ಥಿತಿಯು ತಲೆಯೆತ್ತದಂತೆ ಪ್ರಯತ್ನಿಸುವುದು ಅವಶ್ಯವಿದೆ. ಇದೇ ಪ್ರಜಾಪ್ರಭುತ್ವವಾದಿ ಭಾರತೀಯರೆಲ್ಲರ ಅಭಿಲಾಷೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಪ್ರಧಾನ ಕಾರ್ಯಾಲಯ: **ಉಡುಪಿ**, ಮೈಸೂರು ರಾಜ್ಯ.

ಪ್ರಕಟಣೆ

ವಿಶೇಷವಾಗಿ ಗ್ರಾಮಸ್ಥರ ಆರ್ಥಿಕ ಪ್ರಯೋಜನಕ್ಕಾಗಿ ಚಿನ್ನಾಭರಣಗಳ ಮೇಲಿನ ಸಾಲದ ಬಡ್ಡಿಯ ದರವನ್ನು ಇಳಿಸಲಾಗಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ ಹೆಚ್ಚಿನ ವಿವರಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತವಿರುವ ನಮ್ಮ ಶಾಖೆಗಳಲ್ಲಿ ವಿಚಾರಿಸಿರಿ.

ಮುಖ್ಯ ಶಾಖೆಗಳು:

ಮಂಗಳೂರು-ಹಂಪನಕಟ್ಟೆ, ಮಂಗಳೂರು-ಬಂದರ, ಮಂಗಳೂರು-ರಥಬೀದಿ, ಉಡುಪಿ-ರಥಬೀದಿ, ಉಡುಪಿ-ಲೋಕಲ್ ಆಫೀಸ್, ಕಾರ್ಕಳ, ಕುಂದಾಪುರ, ಬ್ರಹ್ಮಾವರ.

ಗ್ರಾಮೀಣ ಶಾಖೆಗಳು:

ಕಡೆಕಾರ್, ಕಾಪು, ಕಿನ್ನಿಗೋಳಿ, ಕೆಮ್ಮಣ್ಣು, ಗುರುಪುರ, ಗಂಗೊಳ್ಳಿ, ಸಿಟ್ಟೆ, ಸಲಿಮಾರು, ಪಾಣೆಮಂಗಳೂರು, ಪುತ್ತೂರು, ಪೆರ್ಡೂರು, ಬಸ್ರೂರು, ಬಂಟ್ವಾಳ, ಬಾರ್ಕೂರು, ಬೆಳ್ತಂಗಡಿ, ಬೈಲೂರು, ಬೈಂದೂರು, ಮಣಿಪಾಲ, ಮಲ್ಪೆ, ಮೂಡಬಿದ್ರಿ, ಮೂಲ್ಕಿ, ಸಾಲಿಗ್ರಾಮ, ಶಂಕರನಾರಾಯಣ, ಹೆಬ್ರಿ.

ಬೇಗನೆ ತೆರೆಯಲ್ಪಡುವ ಶಾಖೆಗಳು: ಅಕ್ಟೋಬರ 1ರಿಂದ:

ಉಪ್ಪಿನಂಗಡಿ, ಪಡುಬಿದ್ರಿ, ಬದಿಯಡ್ಕ-ಪೆರ್ಡಾಲ, ವಿಟ್ಲ, ಸುಳ್ಯ.

ಶ್ರೀ. ಟಿ ಎ. ಪೈ, ಜನರಲ್ ಮೆನೇಜರ್.

Edited, Printed & Published by K. H. Shetty, at the Navayuga Press, Udipi, S. India.

ವಾ ಚಂದಾ ರೂ. 5-75

ಬೆಲೆ: 13 ನ.ಪೈಸೆ

Vol. 39 No. 3.
ವರುಷ ೩೯. ವಾರ ೩.

17-9-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ವಿದೇಶನಿಷ್ಠ ಸ್ವದೇಶೀಯರಿಂದಲೇ ಭಾರತದ ಭದ್ರತೆಗೆ ಗಂಡಾಂತರ

ಚೀನೀ ಸಾಮ್ರಾಜ್ಯಶಾಹಿಯು ಅತಿಕ್ರಮಣವನ್ನು ಮಾಡಿರುವುದು ಸ್ಪಷ್ಟವಿದೆ. ಅದನ್ನು ಭಾರತವೆಂದಿಗೂ ಸಹಿಸದು.

ಚೀನವು ನಮ್ಮ ರಾಷ್ಟ್ರದ ಉತ್ತರ ಸೀಮೆಯಲ್ಲಿ ಮಾಡಿದೆಯೆಂದು ಹೇಳಲಾದ ಅತಿಕ್ರಮಣವು ತೀರ ಸಾಮಾನ್ಯ ವಿಷಯವೆಂದೂ, ಈ ಬಗ್ಗೆ ಭಾರತೀಯರು ಭಾವೋದ್ರೇಕಗೊಳ್ಳಬಾರದೆಂದೂ ಭಾರತವು ತಾನು ನಂಬಿದ ನೆಚ್ಚಿದ ಪಂಚಶೀಲವನ್ನು ಅನುಗುಣವಾಗಿಯೇ ಈ ಸಮಸ್ಯೆಯನ್ನು ಬಗೆಹರಿಸಲು ಬಯಸುವುದಾಗಿಯೂ ಒಂದು ವೇಳೆ ಈ ಅತಿಕ್ರಮಣವನ್ನು ಸೌಹಾರ್ದಮಯ ವಾತಾವರಣದಲ್ಲಿ ತೀರ್ಮಾನಿಸುವುದು ಅಸಾಧ್ಯವೇ ಎಂದಾದರೆ, ತುಸು ಬಿಗಿಯ ಧೋರಣೆಯನ್ನೇ ಅದು ಅನುಸರಿಸುವುದೆಂದೂ ಲೋಕ ಸಭೆಯಲ್ಲಿ ಪ್ರಧಾನಿ ನೆಹರೂ ಘೋಷಿಸಿದ್ದಾರೆ, ಅಲ್ಲದೇ ಲೋಕ ಸಭೆಯೂ ಈ ತೆರದ ವಿದೇಶ ನೀತಿಗೆ ತನ್ನ ಬೆಂಬಲವನ್ನೂ ಒಪ್ಪಿಗೆಯನ್ನೂ ಇತ್ತಿದೆ.

ಈ ಬಾರಿಯ ಲೋಕಸಭಾಧಿವೇಶನದಲ್ಲಿ ನಡೆದ ಸರ್ವ ಪ್ರಧಾನವಾದ ವಿಷಯಗಳಲ್ಲಿ ಕೇರಳದಲ್ಲಿದ್ದ ಕಮ್ಯುನಿಸ್ಟ ಸರಕಾರವನ್ನು ಮನೆಗೆ ಕಳಿಸಿದ ಬಗ್ಗೆ ಒಂದು ದಳದವರ ಅಸಮಾಧಾನ, ದೇಶದಲ್ಲಿನ ಆಹಾರದ ಭೀಕರ ಪರಿಸ್ಥಿತಿಯ ಬಗ್ಗೆ ಕಟು ಟೀಕೆಗಳಿಂದಾಗಿ ಆಹಾರಮಂತ್ರಿಯಾಗಿದ್ದ ಶ್ರೀ ಎ. ಪಿ. ಜೈನರ ನಿವೃತ್ತಿಗಳು ದೇಶದ ಆಂತರಿಕ ಪ್ರಶ್ನೆಗಳಾದರೆ, ಚೀನದ ಆಕ್ರಮಣಶೀಲತೆಯು ಮೂರನೆಯದಾದರೂ ಅತಿ ಮುಖ್ಯವಾಗಿದೆ; ಮತ್ತು ಮೊದಲನೆಯ ಎರಡರಿಂದ ಭಾರತದ ಸ್ವಾತಂತ್ರ್ಯಕ್ಕೆ ಅದರ ಸಾರ್ವಭೌಮತೆಗೆ ಯಾವ ಗಂಡಾಂತರವಿಲ್ಲ ಆದರೆ, ಮೂರನೆಯ ಘಟನೆಯು ಮಾತ್ರ ಭಾರತದ ವಿದೇಶನೀತಿಯ ಅಡಿಗಟ್ಟಾದ ಪಂಚಶೀಲಗಳ ಸತ್ವ ಪರೀಕ್ಷೆಗೊಂದು ಸಂಧಾಹ್ವಾನವಾಗಿರುವುದು ಮಾತ್ರವಲ್ಲ, ಭಾರತದ ಸ್ವಾತಂತ್ರ್ಯಕ್ಕೂ ಸಾರ್ವಭೌಮತ್ವಕ್ಕೂ ಹಾನಿಯನ್ನು ತರುವ ಒಳಸಂಚಿನಿಂದ ಕೂಡಿದುದು.

ಭಾರತದ ಪ್ರಧಾನಿ ನೆಹರೂ ಅವರು ಈ ಬಗ್ಗೆ ಆರು ತಿಂಗಳ ಹಿಂದೆ ಚೀನೀ ಪ್ರಧಾನಿಗಳಿಗೆ ಬರೆದಿದ್ದ ಒಂದು ಪತ್ರಕ್ಕೆ ಈಗತಾನೇ ಉತ್ತರವು ಬಂದಿದೆ. ಇದರಲ್ಲಿ ಗಡಿ ತಂಟೆಯನ್ನು ಸೌಹಾರ್ದದಿಂದಲೇ ಬಿಡಿಸಿಕೊಳ್ಳುವ ಇಚ್ಛೆಯನ್ನು ಚೀನೀ ಪ್ರಧಾನರು ವ್ಯಕ್ತಪಡಿಸಿದ್ದರೂ, ಭಾರತೀಯ ಸೇನೆಯೇ ಭಾರತ—ಚೀನಾ ಗಡಿಯನ್ನು ಉಲ್ಲಂಘಿಸಿರುವುದೆಂದೂ, ಅದನ್ನು ಭಾರತ ಸರಕಾರವು ಹಿಂತೆಗೆದುಕೊಳ್ಳಬೇಕೆಂದೂ ಹೇಳಿ, ಭಾರತದ ಮೇಲೆಯೇ ಅಪವಾದ ಹೇರಿಸಿದ್ದಾರೆ. ಟಿಬೇಟದಲ್ಲಿ ಸಶಸ್ತ್ರ ಟಿಬೇಟಿಯನ್ನರು ಪುನಃ ಬಂದು ತಮ್ಮ ಕಾರ್ಯಕವನ್ನು ನಡೆಸದಂತೆ, ಭದ್ರತೆಗಾಗಿ ಮಾತ್ರ ತಾನು ಆಗ್ನೇಯ ಟಿಬೇಟಿನಲ್ಲಿ ತಮ್ಮ ಕಾವಲು ಪಡೆಯನ್ನಿರಿಸಿದ್ದೇವೆಯಲ್ಲದೇ ಇನ್ನಿತರ ಯಾವುದೇ ರಾಷ್ಟ್ರದ ಮೇಲೆ ದಾಳಿಮಾಡುವ ಬಯಕೆಯಿಂದಲ್ಲ ಎಂದವರು ಆಶ್ವಾಸನೆ ನೀಡಿದ್ದಾರೆ.

ಭಾರತವು ತನ್ನ ಮತ್ತು ಚೀನೀಯ ಸೀಮೆಯನ್ನು ಮ್ಯಾಕಮಹೋನ ರೇಖೆಯ ಆಧಾರದ ಮೇಲೆ ಗುರುತಿಸಬೇಕೆಂದು ಬಯಸಿದರೆ, ಚೀನೀಯ ಪ್ರಧಾನಿಯವರು ಈ ರೇಖೆಯು ಬ್ರಿಟಿಷರ ಸಾಮ್ರಾಜ್ಯಶಾಹಿಯ ಪ್ರತೀಕವಾಗಿದ್ದು ಅದನ್ನು ಚೀನವು ಮಾನ್ಯಮಾಡುವುದಿಲ್ಲವೆಂದು ಹೇಳಿದ್ದಾರೆ.

ಒಂದು ಸಮಯದಲ್ಲಿ ಚೀನವೂ ತನ್ನ ಸಾಮ್ರಾಜ್ಯಶಾಹಿಯಿಂದಾಗಿಯೇ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಿತು. ಇತಿಹಾಸದ ಪುಟಗಳನ್ನು ಅವಲೋಕಿಸುವಾಗ, ಭಾರತವೂ ಹಿಂದಕ್ಕೆ ದೇಶವಿದೇಶಗಳಲ್ಲಿ ವಸಾಹತುಗಳನ್ನೂ ಸಾಮ್ರಾಜ್ಯಗಳನ್ನೂ ಸ್ಥಾಪಿಸಿದ ಉದಾಹರಣೆಗಳು ಲಭಿಸುತ್ತವೆ. ಆದರೆ, ಹಿಂದಿನ ವಿಷಯವನ್ನು ಈಗ ಎತ್ತಿಕೊಂಡು ವಾದವಿವಾದ ಮಾಡುವುದು ಬುದ್ಧಿವಂತರ ಲಕ್ಷಣವಲ್ಲ. ಆದರೆ, ಭಾರತ ಮತ್ತು ಚೀನಗಳ ಸೀಮೆಯನ್ನು ನಿರ್ಧರಿಸಲು ನೇಮಿಸಲ್ಪಟ್ಟಿದ್ದ ಮ್ಯಾಕಮಹೋನ ಸಮಿತಿಯೇ ಇತ್ತೀಚಿನದಾಗಿದ್ದು, ಈಗಲೂ ಅದಕ್ಕೇನೇ ಅಂಟಿಕೊಂಡು ಸೀಮೆಯನ್ನು ಸುಸ್ಪಷ್ಟವಾಗಿ ರೂಪಿಸಿಕೊಳ್ಳಬೇಕಾದುದು ನ್ಯಾಯ. ಅದನ್ನು ಸಾಮ್ರಾಜ್ಯಶಾಹಿ ಎಂದು ಹೇಳಿ, ತನ್ನ ಬಯಕೆ ಮಾತ್ರ ಈಡೇರಬೇಕೆಂದು ಚೀನ ಪಟ್ಟು ಹಿಡಿದರೆ, ಅದಕ್ಕೆ ಮುತ್ಸದ್ಧಿತನವೆನ್ನುವಂತಿಲ್ಲ. ಭಾರತಮೊಡನೆ ಸ್ನೇಹವೂ ಬೇಕು; ಪಂಚಶೀಲವೂ ಬೇಕು, ಜೊತೆಗೆ ಭಾರತದ ಭಾಗಗಳಲ್ಲಿಯೂ ಪಾಲು

(೧೩ನೇ ಪುಟ ನೋಡಿರಿ)

ಆಕಾಶಕ್ಕೆ ಹಾರಿಸುವ ಮೊದಲು ಉಪಗ್ರಹಗಳನ್ನು ಚೆನ್ನಾಗಿ ಪರೀಕ್ಷಿಸಲಾಗುತ್ತಿದೆ.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ - ಮಂಗಳೂರು—3

ಸ್ಥಾಪನೆ.- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪ್ಯಾ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ... ಇತ್ಯಾದಿ ..

ಕಥಾ ವಿಹಾರ

ನನ್ನ ಭಾಗ್ಯದ ಕಣ್ಣು ತೆರೆದಾಗ

ಅರಸಿ ಹೋಗುತಿದ್ದ ಬಳ್ಳಿ ಕಾಲಿಗೆ ಎಡವಿಬಿತ್ತು; ಅದನ್ನು ಎತ್ತಿ ಮುದ್ದಿಟ್ಟರೆ, ಅದೇ ಕೊನೆಗೆ ಯಮಪಾಶವಾಗಬೇಕೆ?

ನಡುಹಗಲ ಸಮಯ. ಭಗವಾನ್ ಭಾಸ್ಕರನು ಬಾನ ಶಿಖರದ ಅತ್ಯುನ್ನತ ಸ್ಥಾನವನ್ನಲಂಕರಿಸಿದ್ದನು. ತನ್ನ ಅಳವಿನ ಅರಿವು ಲೋಕದಿದಿರು ಪ್ರದರ್ಶಿಸುವನೋ ಎಂಬಂತೆ ಪ್ರಚಂಡವಾದ ಕಾದ ಕಿರಣಗಳನ್ನು ಹೊರಸೂಸುತ್ತಿದ್ದ. ಇದರ ಪರಿಣಾಮವಾಗಿ ಜಗತ್ತು ಮಾತ್ರವಲ್ಲದೆ ಸಕಲ ಜೀವರಾಶಿಗಳೂ ಕುದಿಯುತ್ತಿದ್ದುವು. ನೆಲವು ಕಾದ ಕೆಂಡದಂತಿತ್ತು! ತಾಪವು ವಿಪರೀತವಾಗಿತ್ತು! ಕ್ಷಣ ಕ್ಷಣಕ್ಕೆ ಬಿಸಿಲ ಬೇಗೆಯು ವರ್ಧಿಸುತ್ತಿತ್ತು!

ಇಂತಹ ಹೊತ್ತಿನಲ್ಲಿ ನಾನು ರಸ್ತೆಯಲ್ಲಿ ಆಲೋಚನಾಮಗ್ನನಾಗಿ ಸಾಗುತ್ತಿದ್ದೆನು. ಜನಸಂಚಾರವೂ, ವಾಹನಗಳ ಓಡಾಟವೂ ಕಡಿಮೆಯಾಗಿತ್ತು. ಬಿಸಿಲಿನ ಉರಿಯನ್ನು ಆದಷ್ಟು ಬೇಗನೆ ಪರಿಹರಿಸುವ ತವಕದಿಂದ ವೇಗವಾಗಿ ಹೆಜ್ಜೆಯಿಡುತ್ತಿದ್ದೆನು. ಸ್ವಲ್ಪ ದೂರ ಕ್ರಮಿಸುವಷ್ಟರಲ್ಲಿ ರಸ್ತೆಯ ಮಧ್ಯಭಾಗದಲ್ಲಿ ಯಾವುದೋ ಒಂದು ವಸ್ತುವು ಬಿದ್ದಿರುವುದನ್ನು ನನ್ನ ಕಣ್ಣುಗಳು ಕೂಡಲೇ ಶೋಧಿಸಿಬಿಟ್ಟುವು! ಸೂರ್ಯರಶ್ಮಿಗೆ ಅದರ ಹೊಳಪು ಹೆಚ್ಚಾಗುತ್ತಿದ್ದಂತೆ ಭಾಸವಾಯಿತು! ತತ್‌ಕ್ಷಣವೇ ನಡಿಗೆಯ ವೇಗವನ್ನು ಇಮ್ಮಡಿಗೊಳಿಸಿ ಅದರತ್ತ ಧಾವಿಸಿದೆ! ಸಮೀಪಿಸಿದೊಡನೆಯೇ ಆತುರದಿಂದ ಅದನ್ನೆತ್ತಿಕೊಂಡೆನು ಹತ್ತಿರದಲ್ಲಿ ಅನ್ಯರಾರೂ ಇಲ್ಲವೆಂದು ದೃಢಪಡಿಸಿಕೊಂಡೆನು!

ಅದೊಂದು ಹಣದ ಚೀಲ ಆಗಿತ್ತು. ಹಸುರುವರ್ಣದ ಪ್ಲಾಸ್ಟಿಕ್ ಆದುದರಿಂದ ಹಾಗೆ ಹೊಳೆಯಲು ಕಾರಣ.... ನನ್ನ ಕಣ್ಣ ಮುಂದೆ ನೋಟುಗಳ ಕಂತೆಯೊಂದು ಮಿಂಚಿ ಮಾಯವಾಯಿತು. ಅವ್ಯಕ್ತ ಭಾವನೆಗಳು ಮೂಡತೊಡಗಿದುವು. ಎಷ್ಟೆಂದರೂ ಹಣದ ಚೀಲವಲ್ಲವೇ? ನನ್ನ ಕೈಗಳು ಯಾಂತ್ರಿಕವಾಗಿ ಅದನ್ನು ತೆರೆಯ ತೊಡಗಿದುವು. ತೆರೆದು ನೋಡಿದಾಗ,

ಐದು ರೂಪಾಯಿಯ ಒಂದು
ನೋಟು!

ಒಂದು ರೂಪಾಯಿಯ ಮೂರು
ನೋಟುಗಳು!

ಮತ್ತೆ ಸ್ವಲ್ಪ ಚಿಲ್ಲರೆ! ಅಷ್ಟೆ. ಉತ್ಸಾಹ ಭಂಗವಾಯಿತು!

ವಿಶೇಷದ ಘಟನೆ ಇದಲ್ಲ! ಭಾರಿ ಮೊತ್ತದ ಹಣವೂ ಅಲ್ಲ. ನೋಟುಗಳ ಕಡೆಗೆ ಒಂದು ನಿರಾಶಾತ್ಮಕವಾದ ನೋಟ ಬೀರಿ ಅವನ್ನು ಯಥಾ ಸ್ಥಾನದಲ್ಲಿರಿಸಿದೆ. ಕೈ ಸುಮ್ಮನೆ ಇರದೆ ಪರ್ಸಿನ ಇನ್ನೊಂದು ದಾರಿಯನ್ನು ಪ್ರವೇಶಿಸಿತು. ರಶೀದಿಗಳ ಒಂದು ಕಟ್ಟು ಸಿಕ್ಕಿತು. ಉದಾಸೀನ ಭಾವನೆಯಿಂದ ಒಂದೊಂದನ್ನೇ ಪರೀಕ್ಷಿಸುತ್ತಿದ್ದಾಗ... ಅನಿರೀಕ್ಷಿತವಾಗಿ ನನ್ನ ಗಮನವು ಒಂದು ಕಾಗದದ ಕಡೆಗೆ ಹರಿಯಿತು, ಅತ್ಯಾತುರದಿಂದ ಬಿಡಿಸಿದೆ.

ಮೈಯೆಲ್ಲಾ ಕಣ್ಣಾಗಿ, ಅದನ್ನು ಇನ್ನಷ್ಟು ಆಲಿಸಿ ನೋಡಿದೆ! ಕುತೂಹಲ ಕೆರಳಿಸಿ ನೋಡಿದೆ! ಅದು ಸಾಮಾನ್ಯ ಕಾಗದವಲ್ಲ,

ಕೆನರಾ ಬೇಂಕಿನ ಚೆಕ್! ನನ್ನಲ್ಲಿ ವಿದ್ಯುತ್ಸಂಚಾರವಾದಂತಾಯಿತು ಹಣ ಒದಗಿಸುವ ಚೆಕ್ ಅಲ್ಲವೇ? ವಿಸ್ಮಯಾನಂದಗಳು ಏಕ ಕಾಲದಲ್ಲಿ ಉದ್ಭವಿಸಿದುವು!

ಆದರೆ ಒಂದು ವಿಷಯದಲ್ಲಿ ಆ ಚೆಕ್ ಅಪೂರ್ಣವಾಗಿತ್ತು. ಹಣವು ಯಾರ ಹೆಸರಿಗೆ ಪಾವತಿಯಾಗಬೇಕೆಂದು ಅದರಲ್ಲಿ ಸೂಚಿಸಲ್ಪಟ್ಟಿರಲಿಲ್ಲ. ಇದು ಒಂದು ರೀತಿಯಲ್ಲಿ ನನಗೆ ಅನುಕೂಲವೇ ಆಯಿತೆನ್ನಬೇಕು. ನನ್ನ ಹೆಸರನ್ನೇ ಅಲ್ಲಿ ಬರೆದು ಹಣ ಪಡೆಯಲು ಅಭ್ಯಂತರವಿರಲಿಲ್ಲ! ಕೂಡಲೇ ಅದರಲ್ಲಿ ನಮೂದಿಸಲಾದ ರೂಪಾಯಿಗಳ ಸಂಖ್ಯೆಯ ಕಡೆಗೆ ದೃಷ್ಟಿ ಹೊರಳಿಸಿದೆನು.

ಹಾಂ! ಮೊದಲನೆಯ ಅಂಕೆ 5.

ಆ ಮೇಲೆ ಮೂರು ಸೊನ್ನೆಗಳು! ಹಾಗಾದರೆ ಐದು ಸಾವಿರ ರೂಪಾಯಿಗಳ ಚೆಕ್! ನಾನು ನನ್ನ ಕಣ್ಣುಗಳನ್ನೇ ನಂಬಲಿಲ್ಲ. ಆದರೆ Rupees five thousand only' ಎಂಬ ವಾಕ್ಯವನ್ನು ನೋಡಿ ಅನುಮಾನ ಪರಿಹಾರವಾಯಿತು. ಐದು ಸಾವಿರ ರೂಪಾಯಿಗಳಿಗೆ ನಾನೀಗ ಒಡೆಯನೆಂಬುದಕ್ಕೆ ಸಂದೇಹವೇ ಇರಲಿಲ್ಲ. ಕೊನೆಯಲ್ಲಿ ಚೆಕ್ ಬರೆದು ಕೊಟ್ಟವರ ಸಹಿಯಿತ್ತು. ಧನಿಕರಾಗಿರಬಹುದು, ಯಾರಾದರೇನು? ಚೆಕ್ ಅವರನ್ನು ತೊರೆದು ನನ್ನ ಆಶ್ರಯ ಬೇಡಿದೆ. ಆನಂದೋತ್ಸಾಹದಿಂದ ಅದನ್ನು ನನ್ನ ಜೇಬಿಗೆ ಸೇರಿಸಿ ಸ್ವಲ್ಪ ಸಮಯ ಮೈ ಮರೆತೆ!

ಸಮೀಪದಲ್ಲಿ ಒಂದೆರಡು ಅಂಗಡಿಗಳಿದ್ದುವು. ಪುಣ್ಯಕ್ಕೆ ಅವರಾರ ಗಮನವೂ ನನ್ನ ಮೇಲೆ ಹರಿದಿಲ್ಲ. ಈ ಧೈರ್ಯದಿಂದ ನನ್ನ ನಡಿಗೆಯನ್ನು ಮುಂದುವರಿಸಿದೆನು.

ಮನಸ್ಸಿನಲ್ಲಿ ಅನೇಕ ವಿಧದ ಭಾವನಾ ತರಂಗಗಳೇಳತೊಡಗಿದುವು!

ಐದು ಸಾವಿರ ರೂಪಾಯಿ.. ಅತ್ಯಲ್ಪ ಅವಧಿಯಲ್ಲಿ ಈ ಅಪಾರ ನಿಧಿಯ ಪ್ರಾಪ್ತಿ......ಲಕ್ಷ್ಮೀದೇವಿಯೇ ಒಲಿದಿದ್ದಳು. ಲಕ್ಷ್ಮಿಯು ಪ್ರಸನ್ನಳಾಗಬೇಕಾದರೆ ವಿಳಂಬವಿಲ್ಲ! ಇದರ ಪ್ರತ್ಯಕ್ಷ ಅನುಭವವಾಯಿತು. ಆದರೆ ಸರಸ್ವತೀ ದೇವಿ ಮಾತ್ರ ಹಾಗಲ್ಲ. ನಿರಂತರವಾದ ಪರಿಶ್ರಮವಿಲ್ಲದೆ ಯಾರಿಗೂ ಆಕೆ ಒಲಿಯಲಾರಳು ಒಲಿದನಂತರ ಹಿಂದೆ ಮರಳಲಾರಳು.... ಇದೇ ಲಕ್ಷ್ಮಿಗೂ ಸರಸ್ವತಿಗೂ ಇರುವ ತಾರತಮ್ಯ!

ಲಕ್ಷ್ಮಿ ಹಾಗೂ ಸರಸ್ವತೀ ದೇವಿಯರ ಪ್ರಸಾದಗಳಲ್ಲಿ ಅಮೂಲ್ಯವಾದುದ ಯಾವುದೆಂದು ಕೇಳಿದಾಗ ಸರಸ್ವತೀ ಅನುಗ್ರಹವೇ ಉತ್ತಮವೆಂಬುದಾಗಿ ಹೆಚ್ಚಿನವರ ಅಭಿಮತ. ನಾನೂ ಅದೇ ರೀತಿಯ ಭಾವನೆ ಕಟ್ಟಿಕೊಂಡವನು ಆದರೆ ಈ ಸಂದರ್ಭದಲ್ಲಿ ಸಂಪತ್ತು ಕೈಸೇರಿದ ಮೇಲೆ ಹಣದಲ್ಲಿ ಅನುರಾಗ ಮೂಡುವುದು ಸಹಜ. ಹಣವೇ ಶ್ರೇಷ್ಠವೆಂಬ ಸಿದ್ಧಾಂತ ಈಗ ನಿಶ್ಚಯವಾಯಿತು.

ವಿದ್ಯಾರ್ಥಿಯಾಗಿದ್ದ ಸಮಯದಲ್ಲಿ ಹಲವು ತರ್ಕಸಭೆಗಳಲ್ಲಿ ಭಾಗವಹಿಸಿದ ನೆನಪಾಯಿತು. ಹಣ ಶ್ರೇಷ್ಠವೋ? ಗುಣ ಶ್ರೇಷ್ಠವೋ? ಎಂಬ ವಿಷಯದಲ್ಲಿ ಬಿಸಿ ಚರ್ಚೆಯಾಗುತ್ತಿತ್ತು. ಹೆಚ್ಚಿನವರು ಗುಣವೇ ಉತ್ತಮವೆಂಬ ವಾದವನ್ನು ಸಮರ್ಥಿಸಿದ್ದರು. ಹಣವನ್ನು ತುಚ್ಛೀಕರಿಸಿ ಒಣ ವೀರಾವೇಶದಿಂದ ಭಾಷಣ ಬಿಗಿದವರು ನಾವು! ಆದರೆ ಈಗ ಹಣವನ್ನು ಹೊಂದುವ ಗುಣ ಪಡೆದ ನಾನು ಗುಣಕ್ಕೆ ಬೆಲೆಯೀಯಲಾರದೆ ಹೋದೆ.

ಇದೇ ಸಮಯದಲ್ಲಿ ನನ್ನ ಹೃದಯದ ಯಾವುದೋ ಒಂದು ಮೂಲೆಯಿಂದ ಕ್ಷೀಣ ಸ್ವರವೊಂದು ಕೇಳಿಸಿತು. ಕಿವಿಗೊಟ್ಟು ಆಲಿಸಿದೆ...! ಸ್ವರದ ಪರಿಚಯ ಸಿಕ್ಕಿತು!

'ವಿವೇಕ'ವು ನನ್ನನ್ನು ಎಚ್ಚರಿಸುತ್ತಿತ್ತು.

'ಭಾಗ್ಯ ಬಂತೆಂದು ನಲಿಯಬೇಡ. ಇದು.... ಪರರ ಸೊತ್ತು. ನಿನಗೆ ದೊರಕಿದಾಗ ಆದ ಸಂಭ್ರಮದಷ್ಟೇ ವ್ಯಸನವು ಅದನ್ನು ಕಳೆದು ಕೊಂಡವರಿಗಾಗಿರಬೇಕು. ಆ ಚೆಕ್ ಯಾರದೆಂಬುದನ್ನು ಪತ್ತೆಹಚ್ಚಿ, ಅವರಿಗೆ ಅದನ್ನು ಹಿಂದಿರುಗಿಸಿ ನಿನ್ನ ಔದಾರ್ಯವನ್ನು ಪ್ರಕಟಿಸು.... ಆದರ್ಶತೆಯನ್ನು ಪ್ರದರ್ಶಿಸು........'

ಅನಂತರದ ಮಾತುಗಳು ಅಸ್ಪಷ್ಟವಾಗ ತೊಡಗಿದುವು. ದನಿ ಇನ್ನಷ್ಟು ಕುಗ್ಗುತ್ತಾ ಇತ್ತು.

ಇದು ತನಕವೂ ಮೌನದಿಂದಿದ್ದ ನನ್ನ 'ಮನಸ್ಸು' ಈಗ ಎಚ್ಚರಗೊಂಡಿತು. ವಿವೇಕದ ಉಪದೇಶ ಕೇಳಿ ಅದರ ಸರ್ವಾಂಗವೂ ಉರಿಯ ತೊಡಗಿತು! ಅದು ದೃಢಸ್ವರದಿಂದ,

'ಛಿ, ಆದರ್ಶವೆಂಬ ನೆಪದಿಂದ ಕಾಲ ಬಳಿ ಬಂದಿರುವ ಭಾಗ್ಯವನ್ನು—ನಿನ್ನನ್ನು ಅರಸಿಕೊಂಡು ಬಂದ ನಿಧಿಯನ್ನು, ಕಳೆದು ಕೊಳ್ಳುವುದು ಮೂರ್ಖತನವಲ್ಲದೆ ಮತ್ತೇನು? ನೀನೇನೂ ಪರರ ಸೊತ್ತನ್ನು ಕದಿಯಲಿಲ್ಲ.... ಅಪಹರಿಸಲಿಲ್ಲ. ದಾರಿಯಲ್ಲಿ ದೊರೆತುದನ್ನು ತೂರಿಬಿಟ್ಟು ಬಾಯಿಗೆ ಮಣ್ಣು ಹಾಕಿಕೊಳ್ಳುವುದು ಜಾಣತನದ ಲಕ್ಷಣವೇನು? ಅವಿವೇಕತನವನ್ನು ಪ್ರದರ್ಶಿಸುವೆಯಾ? ತಿಳಿಗೇಡಿಯಾಗುವೆಯಾ?' ಎಂದು ಬೋಧಿಸ ತೊಡಗಿತು.

ಮನಸ್ಸು ಮತ್ತು ವಿವೇಕ—ಇವೆರಡರ ಉಪದೇಶಗಳನ್ನೂ ಆಲಿಸಿದ ನಾನು ಯಾವ ನಿರ್ಣಯಕ್ಕೂ ಬಾರದೆ ತಟಸ್ಥನಾದೆನು.

ಇವುಗಳ ವಾದ—ವಿವಾದ ಬೆಳೆಯಿತು. ಕೊನೆಗೆ 'ಮನಸ್ಸು' ವಿಜಯದ ಕಹಳೆಯನ್ನೂದಿತು. ವಿವೇಕವು ಸೋಲನ್ನಪ್ಪಿಕೊಳ್ಳಬೇಕಾಯಿತು. ನಾನು ಮನಸ್ಸಿನ ಕಟ್ಟಪ್ಪಣೆಗೆ ತಲೆ ಬಾಗಲೇ ಬೇಕಾಯಿತು. ಆ ಚೆಕ್ಕನ್ನು ಹಿಂದಿರುಗಿಸುವ ಯೋಚನೆಯನ್ನು ತ್ಯಜಿಸಿದೆನು.

ಹೀಗೆ ಆದರ್ಶ ಲೋಕದಿಂದ ವಾಸ್ತವಿಕತೆಯ ಧರಾತಲಕ್ಕೆ ಕುಸಿದು ಬೀಳುವ ಸಂದರ್ಭವೊದಗಿತು. ಆದರ್ಶತೆಯನ್ನು ಬೋಧಿಸುವುದು ಸುಲಭ. ಆದರೆ ಆಚರಿಸುವುದು ಬಹು ಕಠಿಣವೆಂದು ಅರಿವಾಯಿತು

० ० ०

ನನ್ನ ಕಾಲುಗಳು ನನ್ನನ್ನು ಹೊತ್ತುಕೊಂಡು ಮುಂದೆ ಸರಿದಂತೆ ಮುಂದಿನ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ನನ್ನ ಮನಸ್ಸು ಮಗ್ನವಾಗಿತ್ತು.

ಲಕ್ಷ್ಮಿಯ ಅನುಗ್ರಹವಾಯಿತು... ಆ ಪ್ರಸಾದವನ್ನು ವಿನಿಯೋಗಿಸುವ ವಿಧಾನಗಳ ಕುರಿತು ಮೆದುಳು ಬಹು ಚುರುಕಾಗಿ ಕೆಲಸಮಾಡತೊಡಗಿತು. ಹಲವಾರು ಬಗೆಯ ಯೋಜನೆಗಳು ಸಿದ್ಧವಾದುವು. ಕೊನೆಯ ಅನುಮತಿಗಾಗಿ ಮನಸ್ಸಿನ 'ಕಾರ್ಯಾಲಯ'ಕ್ಕೆ ರವಾನಿಸಲ್ಪಟ್ಟುವು! ಆದರೆ... ಒಂದೂ ಸ್ವೀಕೃತವಾಗಲಿಲ್ಲ.

ಆಗ ಮೆದುಳಿನ ಉಷ್ಣತೆ ಏರಿತು! ತಲೆ ಸಿಡಿತ ಆರಂಭವಾಯಿತು. ಒಂದು ಸಣ್ಣ ಕೀಟವು ಮೆದುಳನ್ನು ಕೊರೆಯುತ್ತಿರುವಂತೆ ಭಾಸವಾಯಿತು.

ಹೊರಗೆ ಸೂರ್ಯನ ತಾಪ!
ಒಳಗೆ ಇದರ ಬಗೆಗೆ ಅನುತಾಪ!
ಹೀಗೆ, ತಾಪ-ಅನುತಾಪಗಳ ಆಲಾಪ!

ಇದರ ಫಲವಾಗಿ ಇದು ಸಾಮಾನ್ಯ ಕಾರ್ಯವಲ್ಲವೆಂದು ತಿಳಿಯಿತು. ಪ್ರಾಪ್ತವಾದ ಹಣವನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳುವುದೆಂಬುದು ಗಹನವಾದ ವಿಚಾರವಾಯಿತು ಬರಿಗೈಯಲ್ಲಿದ್ದಾಗ ಹಣಕ್ಕಾಗಿ ಯೋಚನೆ.... ಈಗ ಹಣವನ್ನು ಏನು ಮಾಡಲೆಂದು ಪರ್ಯಾಲೋಚನೆ. ಅಂತೂ ನೆಮ್ಮದಿ ಇಲ್ಲವಾಯಿತು.

ಹೊಸ ಹೊಸ ಸೂಚನೆಗಳು ಮಂಡಿಸಲ್ಪಟ್ಟುವು. ಮೊತ್ತಮೊದಲು,

ಈ ಐದು ಸಾವಿರ ರೂಪಾಯಿಗಳನ್ನು ಭಂಡವಾಳವಾಗಿ ಮಾಡಿ ವ್ಯಾಪಾರ ಆರಂಭಿಸುವ ಚಪಲ ಹುಟ್ಟಿತು. ಕೆಲವು ವ್ಯಾಪಾರಿಗಳು ಬಹುಬಗೆಯ ಸುಖ ಪಡೆಯ

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸೀರಿಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೪.

ಸ್ವಪ್ನ ಭವಿಷ್ಯ

ಸ್ವಪ್ನಗಳೂ ಭವಿಷ್ಯ ನುಡಿಯುತ್ತವೆ

ಅನಪೇಕ್ಷಣೀಯ ಘಟನೆಗಳನ್ನು ನಿರೀಕ್ಷಿಸಿ ಸುಪ್ತಚೇತನ ಮಾನವನನ್ನು ಸ್ವಪ್ನಕಾಲದಲ್ಲಿ ಜಾಗ್ರತಗೊಳಿಸುವುದೂ ಉಂಟು.

ಎರಡೂವರೆ ಸಾವಿರ ವರ್ಷಗಳ ಹಿಂದೆ ಈಗಿಪ್ತದ ರಾಜನಾಗಿದ್ದ ಫೈರೋವೊ ಎಂಬವನು ಒಂದು ರಾತ್ರಿ ಈ ರೀತಿ ಕನಸು ಕಂಡ— ನಿರ್ಮಲ ಜಲದೊಡನೆ ಹರಿಯುವ ನೀಲ ನದಿಯ ದಡಗಳಲ್ಲಿ ಹಸುರಾದ ಹುಲ್ಲು ಬೆಳೆದಿತ್ತು. ನದಿಯ ತೆರೆಗಳ ನಡುವೆ ಘುಳು-ಘುಳು ಧ್ವನಿಯು ಕೇಳಿ, ಅದರೊಳಗಿಂದ, ಬಿಳಿಯದಾದ ಸುಂದರ ಮತ್ತು ಸೌಮ್ಯವಾದ ಏಳು ದನಗಳೆದ್ದು ಬಂದು ಮೇಯತೊಡಗಿದುವು. ತುಸು ಸಮಯದನಂತರ, ಪುನಃ ಅಂಥದೇ ಸ್ವರ ಕೇಳಿ ಏಳು ಜೀರ್ಣ ಆಡರೆ ಕಾಳ ಭಯಂಕರಾಕಾರದ ದನಗಳು ಎದ್ದು ಬಂದು ಮೊದಲಿನವನ್ನು ಆಕ್ರಮಿಸಿ ಕೊಂದುಬಿಟ್ಟವು.

ಈ ಸ್ವಪ್ನದ ಅರ್ಥವನ್ನು ರಾಜನ ದರಬಾರಿಗಳಾರೂ ಹೇಳಲು ಅಸಮರ್ಥರಾದುದರಿಂದ ಕೈದಿಯಾಗಿದ್ದ ಒಬ್ಬ ಯೆಹೂದೀಯ ಸ್ವಪ್ನ ಶಾಸ್ತ್ರಜ್ಞನನ್ನು ಕೇಳಲಾಯಿತು. ಇಂದಿನಿಂದ ಏಳು ವರ್ಷಗಳವರೆಗೆ ನಿನ್ನ ರಾಜ್ಯದಲ್ಲಿ ಸುಭಿಕ್ಷವುಂಟಾಗಿ ಹಾಲು-ಜೇನು ಸುರಿಯುವುದು; ಆದರೆ ಆ ಮೇಲಿನ ಏಳು ವರ್ಷ ಬರಗಾಲ ಒದಗುವುದು" ಎಂಬುದೇ ಈ ಸ್ವಪ್ನದ ಅರ್ಥವಾಗಿತ್ತು. ಇದರಿಂದ ವ್ಯಸ್ತ ಚಿತ್ತನಾದ ರಾಜನಿಗೆ ಆತನೇ ಪರಿಹಾರಮಾರ್ಗವನ್ನೂ ತೋರಿಸಿದ "ಪ್ರಾರಂಭದ ಏಳು ವರ್ಷಗಳ ಸುಭಿಕ್ಷಕಾಲದಲ್ಲಿ ಮುಂದಿನ ಏಳು ವರ್ಷಗಳಿಗೆ ಸಾಕಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸಿಡಬೇಕು". ಇದರಂತೆ ನಡೆದುದರಿಂದ, ಅಕಾಲತಾಂಡವವಾಡಲಿಲ್ಲ.

ಈಜಿಪ್ತದ ಈ ಜಾನಪದ ಕಥೆಯ ಸತ್ಯಾಸತ್ಯತೆಯನ್ನು ಪರಿಶೀಲಿಸುವುದು ಅಸಾಧ್ಯವಾದರೂ ಸ್ವಪ್ನಗಳೂ ಭವಿಷ್ಯ ನುಡಿಯುತ್ತವೆ ಎಂಬ ಒಂದು ಮಾತನ್ನು ಪುಷ್ಟೀಕರಿಸುತ್ತದೆ ಪ್ರಪಂಚದ ಪ್ರತಿ ದೇಶದಲ್ಲಿಯೂ ಇದಕ್ಕೆ ಉದಾಹರಣೆಗಳು ದೊರೆಯುತ್ತವೆ ಮಾತ್ರವಲ್ಲ, ಇಂದಿಗೂ ಈ ವಿಶ್ವಾಸವನ್ನು ದೃಢಪಡಿಸಲು ಅನೇಕಾನೇಕ ಹೊಸ ಉದಾಹರಣೆಗಳನ್ನೂ ಇಂದು ಕೊಡಲಾಗುತ್ತಿದೆ.

ನ್ಯೂಯಾರ್ಕಿನ ಓರ್ವ ವ್ಯಾಪಾರಿಗೊಂದು ರಾತ್ರಿ ಸ್ವಪ್ನ ಬಿತ್ತು: ತನ್ನ ಪಾಲುಗಾರ ಮೋಸ ಮಾಡಿದನೆಂದು! ಇದನ್ನಾತ ಕಡೆಗಣಿಸಿಬಿಟ್ಟ. ಆದರೆ, ಒಂದು ವರ್ಷದೊಳಗೆ ನಿಜವಾದ ಮೋಸವಾಗಿ ಹೋಗಿ ವ್ಯಾಪಾರಿಗೆ ಅಪಾರ ನಷ್ಟವಾಯಿತು—ಇದು ಸ್ವಪ್ನ ವಿಶೇಷಜ್ಞ ಶ್ರೀ ಎರಿಕ ಫ್ರೋಮನ ಅನುಭವ.

ಇಂಗ್ಲೆಂಡಿನ ಮನಶ್ಶಾಸ್ತ್ರ ಸಂಶೋಧನಾ ಪತ್ರಿಕೆಯೊಂದು ಈ ಘಟನೆಯನ್ನು ವರದಿ ಮಾಡಿದೆ—ಒಂದು ಪುಟ್ಟ ದೋಣಿಯ ನಾವಿಕ ತನ್ನ ಕೇಬಿನಿನಲ್ಲಿ ಮಲಗಿಕೊಂಡಿದ್ದ. ಸ್ವಪ್ನದಲ್ಲವನಿಗೆ ಒಂದು ದೊಡ್ಡ ಹಡಗು ಬಂದು ತನ್ನ ದೋಣಿಗೆ ಡಿಕ್ಕಿ ಹೊಡೆದಂತೆ ಭಾಸವಾಯಿತು. ಆತ ಹೆದರಿ ಎಚ್ಚತ್ತು ಸುತ್ತ ನೋಡಿ ಧೈರ್ಯಗೊಂಡು ಮಲಗಿದ. ಆದರೆ, ಪುನಃ ಅದೇ ಕನಸು ಬೀಳಬೇಕೆ? ಆತ ಹೆದರಿ ಕಂಗಾಲಾಗಿ ನೋಡುವುದೇನು? ಒಂದು ಹಡಗು ಅತಿ ವೇಗದಲ್ಲಿ ಕೇವಲ ೩೦ ಗಜ ದೂರದಲ್ಲಿ ಧಾವಿಸಿ ಬರುತ್ತಿದೆ! ತತ್‌ಕ್ಷಣ ಆತ ಎಚ್ಚರಿಕೆಯ ಗಂಟೆಯನ್ನು ಬಾರಿಸಿದ; ಹಡಗು ಈ ದೋಣಿಯ ಸಮೀಪದಲ್ಲೇ ಸ್ತಬ್ಧವಾಯಿತು! ಒಂದು ಕ್ಷಣ ತಡವಾಗುತಿದ್ದರೆ, ಈತನ ಅವಸ್ಥೆ ವಿಪನ್ನವಾಗುತಿತ್ತು!

ನಿಮಗೂ ಇಂತಹ ಸ್ವಪ್ನಗಳು ಬಿದ್ದಿರಬಹುದು. ಭಾರತೀಯರಿಗೆ ಸ್ವಪ್ನಶಾಸ್ತ್ರದಲ್ಲಿ ವಿಶ್ವಾಸವಿದೆ. ಸುಸ್ವಪ್ನ ಮತ್ತು ದುಸ್ವಪ್ನಗಳಿವೆ. ಇದರಿಂದ ನಮಗೆ ಬೀಳುವ ಸ್ವಪ್ನಗಳಲ್ಲಿ ನಮ್ಮ ಭವಿಷ್ಯ ಸೂಚಿಸುವ ಶಕ್ತಿ ಇದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ಆದರೆ, ಈ ಬಗ್ಗೆಯೂ ಅಭಿಪ್ರಾಯ ಭೇದಗಳಿವೆ. ಯೂನಾನೀ ದಾರ್ಶನಿಕ ಅರಸ್ತೂ ಇದನ್ನು ಸರ್ವಥಾ ಒಪ್ಪುವುದಿಲ್ಲ. ಅಮೇರಿಕೆಯ ಹಮರ್ಸ್ ಕೆಲವು ವೇಳೆ ಅವ್ಯಕ್ತ ಚೇತನವು ಸ್ವಪ್ನದಲ್ಲಿ ಮಾನವನಿಗೆ ಭವಿಷ್ಯದ ಸೂಚನೆಯನ್ನು ಸಾಂಕೇತಿಕವಾಗಿ ಈಯುವುದು ಎನ್ನುತ್ತಾನೆ. ಫ್ರಾಯಿಡನು ಈ ಮಾತನ್ನು ಒಪ್ಪುತ್ತಾನೆ. ಆದರೆ, ಈತನು ಸ್ವಪ್ನಭವಿಷ್ಯವೆಂದು ತಿಳಿದಿರುವುದು ನಮ್ಮ ತಿಳುವಳಿಕೆಗೆ ವಿರುದ್ಧವಾಗಿದೆ ಎಂದು ಹೇಳುತ್ತಾನೆ. ವಿರುದ್ಧರೂಪದಲ್ಲಿ ಭವಿಷ್ಯ ಸೂಚನೆ ಮಾಡುವುದು ಮನಶ್ಶಾಸ್ತ್ರವಲ್ಲ, ಅದು ಆಧ್ಯಾತ್ಮ ಎನ್ನುತ್ತಾನೆ ಒಬ್ಬ ಅಮೇರಿಕನ್ ಮನಶ್ಶಾಸ್ತ್ರವೇತ್ತ. ಇಂತಹ ಸ್ವಪ್ನಗಳ ವಿಶ್ಲೇಷಣೆಯನ್ನು ಮನಶ್ಶಾಸ್ತ್ರಜ್ಞರು ಮಾಡಬೇಕಾಗುತ್ತದೆ.

ನ್ಯೂಯಾರ್ಕಿನ ವ್ಯಾಪಾರಿಯ ಸ್ವಪ್ನವನ್ನು ತೆಗೆದುಕೊಳ್ಳಿರಿ. ಆತನ ಅಂತರಾತ್ಮದಲ್ಲಿ ಈ ಹೊಸ ಪಾಲುಗಾರನಲ್ಲಿ ಅವಿಶ್ವಾಸವಿದ್ದುದರಿಂದಲೇ ಅದು ನಿಶ್ಚಿಂತವಾಗುವಾಗ ಚೇತನಾವಸ್ಥೆಗೆ ಬಂದು ಸ್ವಪ್ನರೂಪದಲ್ಲಿ ಕಾಣಿಸಿಕೊಂಡಿತು. ಆದರೆ, ಬಾಹ್ಯಾತ್ಮವು ಹಲವಾರು ಅಡಚಣೆಗಳ ನಡುವಲ್ಲಿ ಈ ಮಾತನ್ನು ಮುಚ್ಚಿಬಿಟ್ಟಿತು; ಈ ಬಗ್ಗೆ ನಿಶ್ಚಯ ಜ್ಞಾನ ಮಾಡುವ ಶಕ್ತಿ ಅದರಲ್ಲಿರಲಿಲ್ಲ. ಆದುದರಿಂದಲೇ ಸ್ವತಂತ್ರವಾದ ಅಂತರಾತ್ಮ, ಬಾಹ್ಯಾತ್ಮವು ನಿದ್ರಿತಾವಸ್ಥೆಯಲ್ಲಿರುವಾಗ ತನ್ನ ಅಭಿಪ್ರಾಯವನ್ನು ಪ್ರಕಟಿಸಿ ಬಿಟ್ಟಿತು.

ಅಂತರ್ಮನವು ನಿದ್ರಾವಸ್ಥೆಯಲ್ಲಿ ಹಲವು ವೇಳೆ ಸೂಕ್ಷ್ಮಾತಿ ಸೂಕ್ಷ್ಮ ಶಬ್ದಗಳನ್ನೂ ಅರಿತುಕೊಳ್ಳುವುದುಂಟು. ಆದುದರಿಂದಲೇ ದೋಣಿಯ ಮಾಲಕನಿಗೆ ನೀರಿನ ಸ್ಪಂದನ ಮತ್ತು ಹಡಗಿನ ಧ್ವನಿಗಳ ಅರಿವು ಸ್ವಪ್ನದಲ್ಲಾಯಿತು

ಸ್ವಪ್ನಗಳು ಭವಿಷ್ಯ ಹೇಳುತ್ತವೆಂಬುದನ್ನು ಅರಸ್ತೂ ಒಪ್ಪದಿದ್ದರೂ ಹಲವು ಬಾರಿ ಮುಂದೆ ಬರಲಿರುವ ರೋಗಗಳ ಸಂಕೇತವನ್ನು ಅವು ಕೊಡುತ್ತವೆ ಎಂದು ತಿಳಿಯುತ್ತಾನೆ. ದೈನಂದಿನ ಕಾರ್ಯಕ್ರಮಗಳಲ್ಲಿ ನಾವು ವ್ಯಾಪೃತರಿರುವಾಗ, ಸೂಕ್ಷ್ಮವಾದ ರೋಗರುಜಿನಗಳ ಅರಿವು ನಮಗಾಗುವುದಿಲ್ಲವೆಂದೂ, ನಿದ್ರಾವೇಳೆಯಲ್ಲಿ ನಮ್ಮ ಅಂಗಗಳಿದರ ಅನುಭವವನ್ನು ಪಡೆದುಕೊಂಡು ಸ್ವಪ್ನದಲ್ಲಿ ಭವಿಷ್ಯದ ರೂಪದಲ್ಲಿ ಪ್ರಕಟಿಸುವುದೆಂದೂ ಈತ ಹೇಳುತ್ತಾನೆ.

ನಮ್ಮ ಮನಸ್ಸಿನಲ್ಲಿ ಸುಪ್ತವಾಗಿರುವ ಅನೇಕಾನೇಕ ವಿಷಯಗಳಿರುತ್ತವೆ. ವಿವೇಕದ ಭಯದಿಂದ ಅವು ಜಾಗ್ರತಾವಸ್ಥೆಯಲ್ಲಿ ಪ್ರಕಟವಾಗದೆ ರಾತ್ರಿ ಹೊತ್ತಿನಲ್ಲಿ ನಿದ್ರಾವಸ್ಥೆಯಲ್ಲಿ ಕಾಣಿಸತೊಡಗುತ್ತದೆ. ಒಬ್ಬ ಕುಶಲ ವಿದ್ಯಾರ್ಥಿಯ ಓದು ಸಾಂಗವಾಗಿ ನಡೆಯಲಿಲ್ಲವಾದರೆ, ಆತನಿಗೆ ತಾನು ಅನುತ್ತೀರ್ಣನಾದೆನೆಂದು ಸ್ವಪ್ನ ಬಿದ್ದೀತು. ಆತ ವಾಸ್ತವವಾಗಿ ಫೇಲಾದರೆ ಸ್ವಪ್ನ ಭವಿಷ್ಯವಾಣಿ ನುಡಿಯಿತು ಎನ್ನುತ್ತಾನೆ. ಆದರೆ, ನಿಜವಾಗಿಯೂ ವಿದ್ಯಾರ್ಥಿಯ ಆಂತರಿಕ ಭಯ ಮಾತ್ರ ಪ್ರಕಟವಾಯಿತು.

ನಮ್ಮ ಹಲವಾರು ಗುಪ್ತ ಮನೋವೃತ್ತಿಗಳು ಸ್ವಪ್ನರೂಪದಲ್ಲಿ ಪ್ರಕಟವಾಗುತ್ತವೆ ಈ ಬಗ್ಗೆ ಸುಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ಡಾ| ಕಾರ್ಲ್‌ಯುಂಗರು ಒಂದು ಅನುಭವವನ್ನು ಹೇಳಿದ್ದಾರೆ. ಅವರ ಪರ್ವತಾರೋಹಿ ಮಿತ್ರನೊಬ್ಬ ಆಲ್ಪ್ಸ ಪರ್ವತವನ್ನು ಏರಿದಂತೆಯೂ ಅಲ್ಲಿಂದ ಅಂತರಿಕ್ಷದಲ್ಲಿ ಹಾರಿ ಸ್ವರ್ಗಕ್ಕೆ ಹೋಗುತ್ತಿರುವಂತೆಯೂ ಕನಸು ಕಂಡನಂತೆ. ಈ ಸ್ವಪ್ನವನ್ನು ಕೇಳಿದ ಡಾ. ಯುಂಗರಿಗೆ ತಮ್ಮ ಮಿತ್ರನ ಹಿಂದೆ ಕರಾಳ ಮೃತ್ಯು ಅಡಗಿರುವಂತೆ ಕಂಡು, ಪರ್ವತವನ್ನೇರಬಾರದೆಂದೂ, ಕಡೆಗೆ ಏಕಾಕಿಯಾಗಿಯಾದರೂ ಹತ್ತಬಾರದೆಂದೂ ಸಲಹೆಯಿತ್ತರು. ಆದರೆ, ಆ ಮಿತ್ರ ಈ ಸಲಹೆಯನ್ನು ನಕ್ಕು ಬಿಟ್ಟುಕೊಟ್ಟರು. ಕೆಲ ದಿನಗಳ ನಂತರ ಅವರು ಪರ್ವತವನ್ನು ಹತ್ತಿ ಹೋಗಿ ಅಲ್ಲಿ ದುರಂತಕ್ಕೀಡಾದ ಸರದಿ ಬಂತು. ಅದನ್ನು ದೂರದಿಂದ ಕಂಡ ಓರ್ವ ಈ ರೀತಿ ಹೇಳುತ್ತಾನೆ—ಅವರು ಪರ್ವತ ಶಿಖರವನ್ನು ಏರಿದ ಮೇಲೆ, ತಮ್ಮ ಕಾಲುಗಳನ್ನು ಆಕಾಶದತ್ತ ಹಾರಿಸಿದರು; ಕೆಳಗೆ ಕಣಿವೆಯಲ್ಲಿ ಬಿದ್ದು ಸತ್ತರು!

ಒಬ್ಬ ಮನಶ್ಶಾಸ್ತ್ರಜ್ಞನಲ್ಲಿಗೆ ೧೪ ವರ್ಷದ ಬಾಲಕ ಬರುತ್ತಿದ್ದ. ಅವನ ತಂದೆ ತಾಯ್ಗಳು ಕಾರಣಾಂತರದಿಂದ ಬೇರೆ ಬೇರೆ ವಾಸಿಸುತ್ತಿದ್ದರು. ಒಂದು ದಿನ, ಆತ, ತಾನು ತನ್ನ ತಂದೆ ಸತ್ತನೆಂದು ಸ್ವಪ್ನಕಂಡಿದ್ದಾಗಿಯೂ, ಅವರ ಕೆಲದಿನಗಳಲ್ಲಿಯೇ ಆತ ತೀರಿಹೋದುದಾಗಿಯೂ ತಿಳಿಸಿ ಇದು ಭವಿಷ್ಯವಾಣಿಯಲ್ಲವೆ? ಎಂದು ಕೇಳಿದ. ಇದಕ್ಕೆ ಶಾಸ್ತ್ರಜ್ಞನ ಉತ್ತರ ಹೀಗಿತ್ತು—ಹುಡುಗನಿಗೆ ತಂದೆಯ ಮೇಲೆ ಅಪಾರ ತಿರಸ್ಕಾರಭಾವವಿತ್ತು. ಆದುದರಿಂದಲೇ ಆತಹ ಸ್ವಪ್ನ ಬಿತ್ತು. ತಂದೆ ಸತ್ತುದು ಮಾತ್ರ ಕಾಕತಾಲೀಯ ನ್ಯಾಯದಂತೆ.

ಆದರೂ ಇದೇ ಶಾಸ್ತ್ರಜ್ಞನು ಕೆಲವು ವೇಳೆ ಸ್ವಪ್ನಗಳು ಮನೋವೈಜ್ಞಾನಿಕ ದೃಷ್ಟಿಯಿಂದ ಭವಿಷ್ಯವಾಣಿ ಯಾಗುವುದೂ ಇದೆ ಎನ್ನುತ್ತಾನೆ. ನಾವು ಜಾಗ್ರತಾವಸ್ಥೆಯಲ್ಲಿರುವಾಗ ಗಣನೆಗೆ ತಾರದಿರುವ ಅಪ್ರಿಯ ಮತ್ತು ಭಯಜನಕವಾದ ಸತ್ಯಗಳನ್ನು ಸ್ವಪ್ನದಲ್ಲಿ ಕಾಣಬಹುದೆಂದು ಹೇಳಿ, ಅದಕ್ಕೆ ಒಬ್ಬ ಹುಡುಗಿಯ ಕಥೆಯನ್ನು ಎತ್ತಿ, ಹೇಳುತ್ತಾನೆ: ಆಕೆಗೆ ತನ್ನ ತಂದೆಯ ಮೇಲೆ ಅಪಾರ ಪ್ರೇಮವಿತ್ತು. ಒಂದು ದಿನ ಆಕೆಗೆ ತಂದೆ ತೀರಿ ಹೋದ ಭಯಾವಹ ಸ್ವಪ್ನ ಬಿತ್ತು; ಕೆಲ ದಿನಗಳಲ್ಲಿಯೇ ಆತನು ಸತ್ತು ಹೋದ. ಇದೂ ಕಾಕತಾಲೀಯವೆ? ಅಲ್ಲ; ಹುಡುಗಿಯ ಮನೋವಿಶ್ಲೇಷಣೆಗೈದಾಗ, ಆಕೆಯಿಂದ ಮನೆಯವರು ಏನೋ ಒಂದು ವಿಷಯವನ್ನು ಮರೆಮಾಚುವಂತೆ ಕಂಡಿತ್ತು. ಅದೇ ಈ ಮರಣದ ಭೀಕರತೆ. ಮಗಳಿಗೆ ತಂದೆಯು ತೋರಿದ್ದ ಪ್ರೀತಿಯಿಂದ ಅದು ಪಥ್ಯವಾಗಲಿಲ್ಲ; ಎಂತಲೇ ಸ್ವಪ್ನದ ಮೂಲಕ ಪ್ರಕಟವಾಯಿತು.

ಅಮೇರಿಕೆಯ ಅಧ್ಯಕ್ಷರಾಗಿದ್ದ ಲಿಂಕ

(೯ನೇ ಪುಟ ನೋಡಿರಿ)

NOTICE.

Notice is hereby given that Share Certificate No. 2315 issued by The Vijaya Bank Ltd., in respect of its 10 Shares numbered 18312 to 18321, standing in the name of Late Sri B. Thimmappa Shetty, S/o B Lokayya Shetty, Landholder, Bajal Beedu House, Bajal Village, Kankanady, Mangalore 2, is reported to be lost and an application has been received from his Widow Mrs. Nagarathna Shedthy, Aladi House of Padu Shedde Village, Post Bondel, for the the issue of a fresh Share Certificate in lieu thereof, for the purpose *of transmission of the said Shares to her name.* Any person having any objection whatsoever for the issue of a fresh Share Certificate or for the transmission of the said Shares to the name of the applicant, should communicate immediately the same to the undersigned. If objection is not filed within 15 days from this date with the undersigned, fresh Share Certificate in the place of the original Share Certificate No. 2315, will be issued and the transmission of the said Shares to the name of the applicant, will be registered in the Books of the Bank.

The Vijaya Bank Limited,
Head Office, Mangalore-3.
Dated: 8—9—1959.

(Sd.) P. Jayarama Shetty,
Secretary

ಪ್ರಗತಿ ಪಥ

ವರದಕ್ಷಿಣಾ ಪ್ರತಿಬಂಧಕ ಮಸೂದೆ

ಹೆಣ್ಮಕ್ಕಳನ್ನು ಹೆತ್ತವರ ತಲೆಭಾರವಾಗಬಾರದೆಂಬ ಈ ಮಸೂದೆಯನ್ನು ತಯಾರಿಸಿದ್ದರೂ ಇದರಿಂದ ನಿಯೋಜಿತ ಪರಿಣಾಮವಾಗುವುದು ಸಂದೇಹ

ಭಾರತೀಯ ಸಮಾಜದಲ್ಲಿ ನೆಲೆಯೂರಿದ್ದು ಅದಕ್ಕೆ ಘಾತಕವಾಗಿಯುವಾದ ಪದ್ಧತಿಗಳಲ್ಲಿ ವರದಕ್ಷಿಣೆಯೂ ಒಂದು. ತಮ್ಮ ಪುತ್ರಿಯರ ಬಗ್ಗೆ ಅತ್ಯಧಿಕ ಮೌಲ್ಯ ತೆತ್ತು ವರರನ್ನು ಪಡೆಯಲು ಅಸಾಧ್ಯರಾಗುವ ತಂದೆ ತಾಯ್ಗಳಿಗೆ ಈ ಪದ್ಧತಿಯು ಅವ್ಯಕ್ತ ವೇದನೆಯನ್ನುಂಟು ಮಾಡುವುದು.

ಈ ಕ್ರೂರ ಪದ್ಧತಿಯನ್ನು ತಡೆಹಿಡಿಯಲು ಇದುವರೆಗೆ ಕೈಗೊಂಡಿದ್ದ ಪ್ರಯತ್ನಗಳೆಲ್ಲವೂ ಸಾಫಲ್ಯವಾಗಿದ್ದು ಅಪ್ರತ್ಯಕ್ಷವಾಗಿವೆ. ಇಂತಹ ಪ್ರಯತ್ನಗಳಲ್ಲಿ ೧೯೫೬ರ ಹಿಂದೂ ವಾರಸುದಾರ ಮಸೂದೆಯೂ ಒಂದಾಗಿದ್ದು, ಇದರಿಂದಾಗಿ ಸ್ತ್ರೀಯರಿಗೂ ತಮ್ಮ ಹೆತ್ತವರ ಆಸ್ತಿಗಳಲ್ಲಿ ಪಾಲು ದೊರೆಯುವ ಸೌಲಭ್ಯ ಕೊಡಮಾಡಿದೆ. ಸಾರ್ವಜನಿಕಾಭಿಪ್ರಾಯವನ್ನು ಉನ್ನತೀಕರಿಸಲು ಮತ್ತು ಕ್ರೂರದೃಷ್ಟಿಯನ್ನು ತಪ್ಪಿಸಲು ವರದಕ್ಷಿಣೆಯ ಪದ್ಧತಿಯನ್ನು ವಿರೋಧಿಸುವ ಮತ್ತು ಒಂದು ವೇಳೆ, ವರದಕ್ಷಿಣೆಯನ್ನು ಕೊಟ್ಟರೂ ಅದನ್ನು ಹೆಂಡತಿಯ ಉಪಯೋಗಕ್ಕಾಗಿಯೇ ಬಳಸುವಂತೆ ನೋಡಿಕೊಳ್ಳುವ ಕಾನೂನೊಂದು ಅವಶ್ಯವೆಂದು ಮನಗಾಣಲಾಯಿತು.

ಈ ಬಗ್ಗೆ ಒಂದು ಪರಿಣಾಮಕಾರಿ ಸುಧಾರಣೆಯ ಒಂದಂಗವಾಗಿ, ಕಳೆದ ಮುಂಗಡ ಪತ್ರದ ಅಧಿವೇಶನದಲ್ಲಿ ವರದಕ್ಷಿಣೆಯನ್ನು ಕೊಡುವುದನ್ನು ಮತ್ತು ಪಡೆಯುವುದನ್ನು ಪ್ರತಿಬಂಧಿಸಲು ಮೊದಲ ಹಂತವಾಗಿ ಒಂದು ಮಸೂದೆಯನ್ನು ಮುಂದೆ ತಂದರು. ಮುಂದೆ ಈ ಮಸೂದೆಯನ್ನು ಮಳೆಗಾಲದ ಅಧಿವೇಶನದಲ್ಲಿ ಪಾರ್ಲಿಮೆಂಟಿನ ಎರಡೂ ಸಭೆಗಳು ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಿದುವು.

ಈ ಮಸೂದೆಯಲ್ಲಿ ವರದಕ್ಷಿಣೆಯನ್ನು ಕೊಡಮಾಡುವುದು ಅಲ್ಲದೇ ಕೇಳುವುದೂ ದಂಡನಾರ್ಹ ಅಪರಾಧವೆಂದು ಪರಿಗಣಿಸಲಾಗಿವೆ. ಈ ಮಸೂದೆಯು ಕಾಯದೆಯಾಗಿ ವ್ಯವಹಾರಕ್ಕೆ ಬಂದರೆ, ವರದಕ್ಷಿಣೆಯನ್ನು ಕೊಡುವ ಅಥವಾ ತೆಗೆದುಕೊಳ್ಳುವ ಇಲ್ಲವೆ ಕೊಡುವುದನ್ನೂ ತೆಗೆದುಕೊಳ್ಳುವುದನ್ನೂ ಪ್ರೋತ್ಸಾಹಿಸುವವನು ಆರು ತಿಂಗಳುಗಳ ಶಿಕ್ಷೆ ಅಥವಾ ರೂ. ೫,೦೦೦ದ ವರೆಗಿನ ಜುಲ್ಮಾನೆ ಇಲ್ಲವೇ ಎರಡಕ್ಕೂ ಗುರಿಯಾಗುವನು. ಇದೇ ರೀತಿಯ ದಂಡನೆಯು ವರ ಅಥವಾ ವಧುವಿನ ಹೆತ್ತವರು ಇಲ್ಲವೇ ರಕ್ಷಕರಿಂದ ವರ ಇಲ್ಲವೇ ವಧು ದಕ್ಷಿಣೆಯನ್ನು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಕೇಳುವವನಿಗೂ ವಿಧಿಸಲ್ಪಡುವುದು.

"ವರ ದಕ್ಷಿಣೆ" ಎಂದರೆ ವಿವಾಹ ಕ್ರೋಸ್ಕರವಾಗಿ ಒಂದು ಪಂಗಡದಿಂದ ಇನ್ನೊಂದು ಪಂಗಡಕ್ಕೆ ಕೊಟ್ಟ ಅಥವಾ ಕೊಡುವುದಾಗಿ ಒಪ್ಪಿದ "ಆಸ್ತಿ" ಅಥವಾ ಬೆಲೆ ಬಾಳುವ ಭದ್ರತೆ ಎಂದು ಈ ಮಸೂದೆಯಲ್ಲಿ ಹೇಳಲಾಗಿದೆ. ಇದನ್ನು ಮದುವೆಯ ಸಮಯದಲ್ಲಾಗಲೀ ಮೊದಲಾಗಲೀ ಕೊನೆಗಾಗಲೀ ಮದುವೆಯ ಸಂಬಂಧವಾಗಿ ಕೊಡಬಹುದು.

ಆದರೆ, ಈ ಮಸೂದೆಯೂ ಸಾಂಪ್ರದಾಯಿಕವಾಗಿ ಕೊಡುವ ಉಡುಗೆ ತೊಡುಗೆಗಳು ಹಾಗೂ ಆಭರಣಾದಿಗಳಿಗೆ ಅನ್ವಯಿಸುವುದಿಲ್ಲವಾದರೂ ಇವುಗಳ ಬೆಲೆಯು ಎರಡು ಸಾವಿರ ರೂಪಾಯಿಗಳೊಳಗಿರಬೇಕೆಂದು ವಿಧಿಸಿದೆ. ಮಸೂದೆಯಲ್ಲಿ ಅದರ ಉದ್ದೇಶ ಮತ್ತು ಕಾರಣವನ್ನು ವಿವರಿಸುವಾಗ, ಈ ಒಂದು ಸೌಲಭ್ಯವನ್ನು ಕಾಯದೆಯು ಸುಯೋಗ್ಯರೀತಿಯಲ್ಲಿ ವ್ಯವಹರಿಸಲ್ಪಡುವುದಕ್ಕೋಸ್ಕರ ನೀಡಲಾಗಿದೆ ಎಂದು ವಿವರಿಸಿದ್ದಾರೆ.

ಈ ಕೊಡುಗೆಯನ್ನು ಸ್ವೀಕರಿಸುವವಳು ವಧುವಾಗಿರದಿದ್ದರೆ, ಯಾರಿದನ್ನು ಪಡೆಯುತ್ತಾನೋ ಅವನು ಅದನ್ನು ಒಂದು ವರ್ಷದ ಒಳಗೆ ವಧುವಿಗೆ ಮುಟ್ಟಿಸಬೇಕು. ಒಂದುವೇಳೆ, ವಧುವು ಅಪ್ರಾಯಸ್ಥಳಾಗಿದ್ದರೆ, ಆಕೆಗೆ ೧೮ ವರ್ಷ ತುಂಬಿದ ಒಂದು ವರ್ಷದೊಳಗೆ ಆಕೆಗೆ ಮುಟ್ಟಿಸಬೇಕು. ಈ ರೀತಿ ಆಕೆಗೆ ಅದನ್ನು ಮುಟ್ಟಿಸುವ ವರೆಗೆ, ಅದನ್ನು ಪಡೆಯುವವನು ಆಕೆಯ ಪರವಾಗಿ ಅದರ ವಿಶ್ವಸ್ಥನಂತೆ ವರ ದಕ್ಷಿಣೆಯನ್ನು ಇಟ್ಟುಕೊಳ್ಳಬೇಕು. ಇದಕ್ಕೆ ತಪ್ಪಿದವರು ಕಾಯದೆಯ ಅನ್ಯನಿಯಮಗಳಿಗೊಳಪಟ್ಟು ಶಿಕ್ಷೆಗೆ ಗುರಿಯಾಗುವರು.

ಈ ರೀತಿ ವಧುವು ತನ್ನ ಪರವಾಗಿರುವ ವಿಶ್ವಸ್ಥರಿಂದ ನಿಯಮಿತ ಅವಧಿಯೊಳಗೆ 'ವರ ದಕ್ಷಿಣೆಯನ್ನು' ಪಡೆಯದೆ ಹೋದರೆ, ನ್ಯಾಯಾಲಯಗಳು ಆಕೆಯಿಂದ ಲಿಖಿತ ಆಕ್ಷೇಪವನ್ನು ಒಂದು ವರ್ಷದೊಳಗೆ ಪಡೆದುಕೊಂಡು ತೀರ್ಮಾನಿಸಬಹುದು. ಇಕ್ಕಡೆಯವರ ಸಾಂತ್ವನದಿಂದ ದನ್ನು ಇತ್ಯರ್ಥಗೊಳಿಸಬಾರದು.

ಈ ಶಾಸನವು ವ್ಯವಹೃತವಾದೊಡನೆಯೇ ಬೇರೆ ಬೇರೆ ರಾಜ್ಯಗಳಲ್ಲಿ ಈ ಬಗ್ಗೆ ಇರುವ ಅನ್ಯಾನ್ಯ ಕಾಯದೆಗಳು ಕೊನೆಗೊಂಡು, ಎಲ್ಲ ವಿಧದ ವರ ದಕ್ಷಿಣೆಯನ್ನು ಕೊಡುವ ಮತ್ತು ತೆಗೆದುಕೊಳ್ಳುವ ಪದ್ಧತಿಗಳು ಆದೇ ದಿನದಿಂದ ದೂರವಾಗುವುವು.

ಈ ಕಾಯದೆಯನ್ನು ವ್ಯವಹಾರದಲ್ಲಿ ತರುವಾಗ ಒದಗುವ ಕಷ್ಟಪರಂಪರೆಗಳು ಪರಿಶೀಲನಾಸಮಿತಿಗೆ ಅದನ್ನು ಕೊಡುವುದಕ್ಕೆ ಮೊದಲು ನಡೆದ ಚರ್ಚೆಯವೇಳೆ ವಿವರಿಸಲ್ಪಟ್ಟುವು. ಈ ಪರಿಶೀಲನಾ ಸಮಿತಿಯು ಇವನ್ನು ದೂರೀಕರಿಸಲು ಯಾವ ಪ್ರಯತ್ನವನ್ನು ಮಾಡುವುದೆಂಬುದು ಕುತೂಹಲ ಹುಟ್ಟಿಸುವ ವಿಷಯವಾಗಿದೆ.

ಈ ಸಂಕಷ್ಟಗಳನ್ನು ಹೌದೆಂದು ಒಪ್ಪಿ, ಕಾಯದೆ ಮಂತ್ರಿ ಶ್ರೀ ಎ. ಕೆ. ಸೇನರು, "ವರದಕ್ಷಿಣೆಯಂತಹ ಸಾಮಾಜಿಕ ಕ್ರೂರತೆಯನ್ನು ಶಾಸನದ ಮೂಲಕವೇ ಸಂಪೂರ್ಣವಾಗಿ ಪ್ರತಿಬಂಧಿಸುವುದು ಸಾಧ್ಯವಿಲ್ಲ. ಎಲ್ಲ ವಿಧದ ಪಾಪ ಮತ್ತು ಕ್ರೌರ್ಯಗಳಿಗೆ ಸಾಮಾಜಿಕ ವಿವೇಕ ಮಾತ್ರ ತಡೆಹಾಕಬಹುದು. ಕಾನೂನು ಕೇವಲ ವಿವೇಕವಿದು ಎಂದು ಎತ್ತಿ ತೋರಿಸಬಲ್ಲುದು ಮಾತ್ರ. ಅಲ್ಲದೇ ಸದ್ಯದ ಮಸೂದೆಯು ಅವಿವೇಕತೆಯನ್ನು ದೂರ ಮಾಡುವ ಪ್ರಥಮ ಪ್ರಯತ್ನ. ವರ ದಕ್ಷಿಣೆಯನ್ನು ಸ್ವೀಕರಿಸುವ ಅಲ್ಲವೇ ಕೊಡಮಾಡುವುದು ಅವಿವೇಕದ ಪರಮಾವಧಿ ಎಂದು ಮಾತ್ರ ಈ ಶಾಸನ ಸಾರುವುದು" ಎಂದು ಹೇಳಿದರು.

ಮಾನವನು ವಿವೇಕ ಯುಕ್ತನಾಗಿ ನಡೆದರೆ ಮಾತ್ರ ಇಂದಿನ ಕಾಯದೆ ಕಾನೂನುಗಳು ಪ್ರಯೋಜನಕಾರಿಯಾದಾವು. ಆದರೆ, ಕಾಯದೆ ಕಾನೂನುಗಳು ಹೆಚ್ಚಾದಂತೆ ಅವುಗಳಿಗೆ ಗುರಿಯಾಗದೆ ತಪ್ಪಿಸಿಕೊಳ್ಳುವ ಕಾನೂನು ದೃಷ್ಟಿಯ ದಾರಿ ಮಾರ್ಗಗಳೂ ಬಹಳವಾಗುತ್ತವೆ ಎಂಬುದನ್ನು ಮರೆಯುವುದು ಸಾಧ್ಯವಿಲ್ಲ.



ಅಣ್ವಸ್ತ್ರ ನಿರೋಧದ ಕುರಿತು ಸೋವಿಯತ್ತಿನೊಡನೆ ಮಾತುಕತೆ ನಡೆಸಿದ ಅಮೆರಿಕನ್ ವಿಜ್ಞಾನಿಗಳು. ಎಡದಿಂದ ಬಲಕ್ಕೆ—ಡಾ| ರಾಬರ್ಟ್ ಎಫ್. ಬಾಚರ್, ಡಾ| ಅರ್ನೆಸ್ಟ್ ಎಲ್. ಲಾರೆನ್ಸ್ ಮತ್ತು ಡಾ| ಜೇಮ್ಸ್ ಬ್ರಾನ್ ಫಿಸ್ಕ್.

ಉಡುಪಿ ಡಿ. ಮು. ಕೋರ್ಟಿನಲ್ಲಿ

S C· 344/1959

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಉಡುಪಿ ... ವಾದಿ.

ಜಿ. ಪಂಗ್ಲಣ್ಣ ಕೂಡಾ ... ಪ್ರತಿವಾದಿರು.

2ನೇ ಪ್ರತಿವಾದಿ— ಕೆ. ರಾಘವನ್— T. K. ಕುಮಾರನ್ನರ ಮಗ= ಮಲ್ಪೆಯಲ್ಲಿ ಫಿಶ್ಯರಿಸ್ ಶಾಲಾ ಟೀಚರ್—ಇವರಿಗೆ.

ಪ್ರತಿವಾದಿರು ವಾದಿ ಬ್ಯಾಂಕಿಗೆ ತಾರೀಕು 18–7–1956ರಲ್ಲಿ ರೂಪಾಯಿ 160/-ಕ್ಕೆ ಬರಕೊಟ್ಟ ದಿಮಾಂಡ್ ನೋಟಿನ ಅಸಲು ಬಾಕಿ ವ ಬಡ್ಡಿ ಕೂಡಾ ರೂಪಾಯಿ 116–26ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 29—9—1959ಕ್ಕೆ ತನಿಖೆಗೆ ಇಟ್ಟಿದೆ. ಆ ದಿವಸ ಸದರಿ 2ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಪರಿಸದೆಯಿದ್ರೆ ಆತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damoder Kamath,
Advocate for Pltf.

ಉಡುಪಿ, ತಾರೀಕು 9-9-1959.

ಪ್ರಕಟಣೆ

ನಿರಖು ಠೇವಣಾತಿಗಳ ಮೇಲೆ ನಾವೀಗ ತೆರುತ್ತಿರುವ ಸಾ. ಸೇ. 4½ರಿಂದ 4½ರ ವರೆಗಿನ ಬಡ್ಡಿ ದರಗಳಲ್ಲಿ ಯಾವುದೊಂದೂ ಬದಲಾವಣೆ ಇಲ್ಲದೆ, ಅಂತಹ ಠೇವಣಾತಿಗಳನ್ನು ಅದೇ ದರಗಳಲ್ಲಿ ಸ್ವೀಕರಿಸಲಾಗುವುದೆಂದು ಪ್ರಕಟಿಸಲು ಸಂತೋಷಪಡುತ್ತೇವೆ.

ವಿಶೇಷ ಮಾಹಿತಿಗೆ
ನಿಮಗೆ ಸಮೀಪವಿರುವ ನಮ್ಮ ಯಾವುದೇ ಶಾಖೆಯನ್ನು ಸಂದರ್ಶಿಸಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : ಉಡುಪಿ (ದ. ಭಾರತ)

(ವಿಶಾಲ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ನಮ್ಮದು ಅತಿ ಹಿರಿಯ ಬೇಂಕು!)

ಉಡುಪಿ ದಿ ಮು ಕೋರ್ಟಿನಲ್ಲಿ

S C. No 431/1959.

ಕೆ. ಗೋಪಾಲಕೃಷ್ಣ ಭಟ್ಟ — ವಾದಿ.

ಮತ್ತು

ಕೆ. ಮಿಯಾ ಮುಲ್ಲಾ ಸಾಹೇಬ ಕೂಡಾ — ಪ್ರತಿವಾದಿರು.

ಇವರೊಳಗೆ

ಸದ್ರಿ ವ್ಯಾಜ್ಯದ 2 ಮತ್ತು 3ನೇ ಪ್ರತಿವಾದಿರು.

ಬಿ ಇಬ್ರಾಹಿಮ್ ಸಾಹೇಬ, ಬಿ. ಅಬ್ದುಲ್ ಖಾದರ್, ಕರೀಮ್ ಸಾಹೇಬರ ಮಕ್ಕಳು ಉಡ್ಪಿ ತಾಲ್ಕು ನಂಬ್ರ 76ನೇ ಬಡಗಬೆಟ್ಟು ಗ್ರಾಮದಲ್ಲಿ ಇರುವವರು.

ಇವರಿಗೆ

ಸದ್ರಿ ವ್ಯಾಜ್ಯದಲ್ಲಿ ಕೇಳಿದ ನಿವೃತ್ತಿ ಬಗ್ಗೆ ವಾದಿಯು ನಿಮ್ಮ ಮೇಲೆ ಮಾಡಿದ ಸದ್ರಿ ದಾವೆಯು ತಾರೀಕು 29–9–1959ಕ್ಕೆ ಈ ಕೋರ್ಟಿನ ಮುಂದೆ ನಿಸ್ಕಿ ಬಗ್ಗೆ ಇಟ್ಟಿರುತ್ತದೆ. ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಆ ದಿವಸ ಬೆಳಿಗ್ಗೆ 10 ಗಂಟೆಗೆ ನೀವು ಸ್ವತಹ ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜರಾತಿಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

(By order of the Court.)

K. Gururaja Rao,
Advocate for Plaintiff.

ಉಡ್ಪಿ, ತಾ. 11–9–1959.

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ದೇಶ ಪರಿಚಯ

ಪರ್ವತರಾಜ್ಯ - ಅಫಘಾನಿಸ್ಥಾನ

ಇಸ್ಲಾಂ ಧರ್ಮವು ರಾಷ್ಟ್ರಧರ್ಮವಾದರೂ ಇಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ; ರಶ್ಯದಿಂದ ಸಹಾಯ ಹಾಗೂ ಅಸ್ತ್ರಗಳನ್ನು ಪಡೆದುಕೊಂಡರೂ ಇದು ಕಮ್ಯೂನಿಸ್ಟ ರಾಷ್ಟ್ರವಲ್ಲ!

ಭಾರತದ ಪ್ರಧಾನಿ ಶ್ರೀ ಜವಾಹರಲಾಲ ನೆಹರೂ ಅವರು ಸೌಹಾರ್ದಮಯ ಸಂದರ್ಶನದ ಮೇಲೆ ಅಫಘಾನಿಸ್ಥಾನ ಮತ್ತು ಇರಾಣಗಳ ಸಂಚಾರಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆ. ಭಾರತದ ನಿಕಟವರ್ತಿಗಳಾದರೂ ಈ ದೇಶಗಳು ಸಂಸ್ಕೃತಿ ಹಾಗೂ ಮಾನವ ಕುಲಗಳಲ್ಲಿ ಭಾರತೀಯರಿಂದ ಭಿನ್ನವಾಗಿದೆ.

ಅಫಘಾನಿಸ್ಥಾನವು ೨,೫೦,೦೦೦ ಚದರ ಮೈಲಿ ವಿಸ್ತಾರವುಳ್ಳ ಒಂದು ಗುಡ್ಡಗಳ ರಾಜ್ಯ. ೧೯೫೫ರ ಸರಕಾರಿ ಅಂದಾಜಿನಂತೆ ಇಲ್ಲಿನ ಜನಸಂಖ್ಯೆ ಕೇವಲ ೧೨೦ ಲಕ್ಷ ಮಾತ್ರ. ಇದರ ರಾಜಧಾನಿಯು ಕಾಬುಲ್.

ಏಷ್ಯದ ಪರ್ವತ ರಾಜ್ಯಗಳಲ್ಲಿ ಅಫಘಾನಿಸ್ಥಾನವೂ ಒಂದಾಗಿದೆ. ಪೂರ್ವ–ಪಶ್ಚಿಮವಾಗಿ ಇದು ೭೭೦ ಮೈಲುದ್ದವಾಗಿದೆ. ಉತ್ತರದಲ್ಲಿ ಸೋವಿಯತ್ ರಶ್ಯ, ಪೂರ್ವ ಮತ್ತು ದಕ್ಷಿಣಗಳಲ್ಲಿ ಪಶ್ಚಿಮ ಪಾಕಿಸ್ತಾನ ಮತ್ತು ಪಶ್ಚಿಮದಲ್ಲಿ ಇರಾಣದಿಂದಲೂ ಇದು ಆವೃತವಾಗಿವೆ. ಈ ರಾಜ್ಯವು ಸಾಮಾನ್ಯವಾಗಿ ಸಮುದ್ರ ಮಟ್ಟದಿಂದ ೪,೦೦೦ ಅಡಿಗಳಿಗಿಂತಲೂ ಹೆಚ್ಚು ಎತ್ತರದಲ್ಲಿದೆ. ಗುಡ್ಡಗಳ ನಾಡಾದುದರಿಂದ ಹಲವಾರು ನಿರ್ಝರಿಗಳಿರುವುದಾದರೂ, ಅವುಗಳಲ್ಲಿ ಮೂರು ಮಾತ್ರ ದೊಡ್ಡ ನದಿಗಳು. ಓಕ್ಸಸ್ ಮತ್ತು ಕಾಬೂಲ್ ನದಿಗಳು ಈಶಾನ್ಯ ಭಾಗದಲ್ಲಿ ಹರಿದರೆ, ಹೆಲ್ಮಂಡ್ ಎಂಬುದು ನೈಋತ್ಯದಲ್ಲಿ ದೇಶದ ಮಧ್ಯಭಾಗದಲ್ಲಿ ಹರಿಯುತ್ತಿದೆ. ಈ ನದಿಪ್ರದೇಶಗಳ ಭಾಗಗಳು ಸಾಕಷ್ಟು ಫಲವತ್ತಾಗಿವೆ.

ಹಿಂದೂಕುಶ್ ಪರ್ವತಶ್ರೇಣಿಗಳಿಂದಾಗಿ ಇದು ಭಾರತದಿಂದ ಪ್ರತ್ಯೇಕಿಸಲ್ಪಟ್ಟಿದೆ. ಕಾಬೂಲಿನ ಸಮೀಪದಲ್ಲಿ ಈ ಪರ್ವತ ಶ್ರೇಣಿಯು ೧೫ರಿಂದ ೧೭ ಸಾವಿರ ಅಡಿಗಳ ಎತ್ತರದಲ್ಲಿರುವುದು ಮಾತ್ರವಲ್ಲ ೧೦೦–೨೦೦ ಮೈಲು ಪೂರ್ವದಲ್ಲಿ ಇದು ೨೫ ಸಾವಿರ ಅಡಿಗಳಿಗೂ ಮೀರುತ್ತದೆ. ಇದರಲ್ಲಿರುವ ಖೈಬರ್ ಕಣಿವೆಯು ಇತಿಹಾಸ ಪ್ರಸಿದ್ಧವಿದೆ. ಭಾರತಕ್ಕೆ ನೆಲ ಮಾರ್ಗವಾಗಿ ಬಂದಿರುವ ಎಲ್ಲ ಆಕ್ರಮಣಕಾರರಿಗೂ ಇದು ಮುಕ್ತದ್ವಾರವಾಗಿತ್ತು. ಈ ಕಣಿವೆಯ ಮೂಲಕವಾಗಿಯೇ ಅಫಘಾನಿಸ್ಥಾನ–ಪಾಕಿಸ್ತಾನ ಹಾಗೂ ಭಾರತಗಳ ನಡುವಣ ವ್ಯಾಪಾರವು ನಡೆಯುತ್ತದೆ.

ಪರ್ವತ ಪ್ರದೇಶವಾದುದರಿಂದ ಕೃಷಿಯ ಅನುಕೂಲತೆ ಇಲ್ಲಿ ಕಡಿಮೆ. ಆದರೂ ನೀರಾವರಿಯ ಸಹಾಯದಿಂದ ಹಣ್ಣುಗಳು, ಕಾಯಿಪಲ್ಲೆಗಳನ್ನು ಬೆಳೆಸುತ್ತಾರೆ. ದಪ್ಪ ಬಾಲದ ಕುರಿಗಳು ಇಲ್ಲಿನ ಅಫಘಾನರ ಸಾಕುವ ಮತ್ತು ಮಾಂಸಕ್ಕೆ ಉಪಯೋಗವಾಗುವ ಮುಖ್ಯ ಪ್ರಾಣಿಗಳಾಗಿವೆ. ಇವುಗಳ ತೋರಬಾಲದಲ್ಲಿನ ಚರ್ಬಿಯು ಅವರಿಗೆ ಬೆಣ್ಣೆಯಂತೆ ಉಪಯೋಗ ಬೀಳುತ್ತದೆ. ಕೆಲವು ತರದ ಎಣ್ಣೆಯೂ ಇಲ್ಲಿ ತಯಾರಾಗುತ್ತದೆ. ಉಣ್ಣೆ ಮತ್ತು ಚರ್ಮಗಳು ಅಫಘಾನಿಸ್ಥಾನದ ಪ್ರಧಾನ ರಫ್ತುಗಳು. ಬೀಜಗಳು ಹಾಗೂ ಹಣ್ಣುಗಳೂ ನಿರ್ಯಾತವಾಗುತ್ತವೆ. ಹತ್ತಿ, ಬಟ್ಟೆಬರೆಗಳು, ಲೋಹಗಳು, ಕಬ್ಬಿಣದ ಒಡವೆಗಳು, ಚರ್ಮದ ವಸ್ತುಗಳು ಚಹಾ, ಸಕ್ಕರೆಗಳು ಆಯಾತಗೊಳಿಸಲ್ಪಡುತ್ತವೆ. ತಾಮ್ರ, ಸೀಸ, ಕಬ್ಬಿಣ, ಬೆಳ್ಳಿ ಮತ್ತು ಎಣ್ಣೆಗಳು ಅಫಘಾನಿಸ್ಥಾನದಲ್ಲಿಯೇ ಲಭ್ಯಮಾನವಿವೆ.

ಅಫಘಾನಿಸ್ಥಾನವು ೨೦ನೆಯ ಶತಮಾನದ ಉತ್ತರಾರ್ಧದಲ್ಲಿದ್ದರೂ ಇಲ್ಲಿ ಒಂದು ಗಜದಷ್ಟೂ ರೇಲ್ವೆ ದಾರಿಯಿಲ್ಲ. ರಾಷ್ಟ್ರದಲ್ಲಿ ಒಟ್ಟು ೨೫೦೦ ಮೈಲುಗಳ ಏರುತಗ್ಗಿನ ಮೋಟಾರು ಮಾರ್ಗವಿದೆ. ನವೀನ ಮಾದರಿಯ ಮಾರ್ಗರಚನೆ ಹಾಗೂ ನೀರಾವರಿ ಯೋಜನೆಗಳು ಮುನ್ನಡೆಯುತ್ತಿವೆ.

ಅಫಘಾನಿಸ್ಥಾನಕ್ಕೆ ಈ ಹೆಸರು ಬಂದುದು ಸುಮಾರು ೧೮ನೆಯ ಶತಮಾನದ ಮಧ್ಯಾವಧಿಯಲ್ಲಿ. ಪ್ರಾಚೀನಕಾಲದ ಇದರ ಹೆಸರು ಆರ್ಯಾಣವೆಂದಿದ್ದು ಇತಿಹಾಸದ ಮಧ್ಯಕಾಲದಲ್ಲಿದು ಖೊರಾಸಾನ ಎಂದಿತ್ತು. ಇಲ್ಲಿನ ಜನರಲ್ಲಿ ನೂರಕ್ಕೆ ೫೫ರಷ್ಟು ಪಖ್ತೂನರು; ೩೦ರಷ್ಟು ತಾಜಿಕರು, ಉಜಬೆಕರು ೬ರಷ್ಟು. ಹಜಾರರು ೩ರಷ್ಟು ಇನ್ನುಳಿದವರು ಕೇವಲ ನೂರಕ್ಕೆ ಒಂದು.

ಸಾಂವಿಧಾನಿಕ ಅರಸೊತ್ತಿಗೆಯಿಂದ ಇಲ್ಲಿನ ಸರಕಾರವು ನಡೆಯುತ್ತಿದೆ. ಶಾಸನದ ಅಧಿಕಾರವು ರಾಜನಿಂದ ಕೂಡಿದ ಪಾರ್ಲಿಮೆಂಟಿನ ಕೈಯಲ್ಲಿದೆ. ೫೦ ಜನರ ಆಜೀವ ಸಿನೇಟನ್ನು ರಾಜನು ನೇಮಿಸಿದ್ದಾನೆ. ರಾಷ್ಟ್ರೀಯ ಸಮಿತಿಯೊಂದು ಚುನಾಯಿತ ಪ್ರತಿನಿಧಿಗಳಿಂದ ಕೂಡಿದೆ. ಈಗ, ರಾಜರಾಗಿರುವ ಮಹಮ್ಮದ ಜಾಹೀರಶಹರು ೧೫–೧೦–೧೯೧೪ರಂದು ಜನಿಸಿದ್ದು ತಮ್ಮ ತಂದೆಯು ಗುಂಡಿಕ್ಕಲ್ಪಟ್ಟು ಕೊಲೆಯಾದನಂತರ, ೧೯೩೩ನೆ ನವಂಬರ ೮ರಂದು ಸಿಂಹಾಸನಾರೋಹಣ ಮಾಡಿದರು. ರಾಜಕುಮಾರ ಮಹಮ್ಮದ ದಾವೂದ ಖಾನರು ಪ್ರಧಾನಮಂತ್ರಿಯಾಗಿರುವರು. ೨೦ ವರ್ಷ ಪ್ರಾಯಕ್ಕೆ ಮೀರಿದ ಎಲ್ಲ ಅಫಘಾನಿ ಪುರುಷರೂ ಮತದಾನ ಮಾಡಬಲ್ಲರು. ೧೯೫೬ನೆಯ ವರ್ಷದಲ್ಲಿ ಅಫಘಾನಿಸ್ಥಾನವು ತನ್ನ ಆರ್ಥಿಕ ಬೆಳವಣಿಗೆಗಾಗಿ ಸೋವಿಯತ್ ರಶ್ಯದಿಂದ ೧೦ ಕೋಟಿ ಡಾಲರಗಳನ್ನು ಸಹಾಯವಾಗಿ ಪಡೆದಿದೆ.

ಅಫಘಾನಿಸ್ಥಾನದ ಎಲ್ಲ ವಿದ್ಯೆ ಮತ್ತು ತಾಂತ್ರಿಕ ಸಂಸ್ಥೆಗಳಲ್ಲಿ ಧರ್ಮಾರ್ಥ ಶಿಕ್ಷಣವು ಕೊಡಲ್ಪಡುತ್ತದೆ. ಸೇನೆಯ ಸೇವೆಯ ವೇಳೆ ಪುರಸ್ಕರ ಶಿಕ್ಷಣವು ಅನಿವಾರ್ಯವಾಗಿದೆ. ಕಾಬೂಲಿನ ವಿಶ್ವವಿದ್ಯಾನಿಲಯವು ೧೯೩೨ರಲ್ಲಿ ಸ್ಥಾಪಿತವಾಯಿತು. ಪುಸ್ತು ಮತ್ತು ಪರ್ಶಿಯನ್‌ಗಳು ಮುಖ್ಯ ಭಾಷೆಗಳು. ಇಸ್ಲಾಂ ಸ್ವೀಕೃತ ರಾಷ್ಟ್ರಧರ್ಮವಾದರೂ ಇಲ್ಲಿ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವಿದೆ. ಎರಡು ವರ್ಷಗಳ ಅನಿವಾರ್ಯ ಮಿಲಿಟರಿ ಸೇವೆ ಸಲ್ಲಿಸುವ ಪದ್ಧತಿ ಇಲ್ಲಿದೆ. ಅಫಘಾನಿಸ್ಥಾನವು ರಶ್ಯದಿಂದ ಅಸ್ತ್ರಗಳನ್ನೂ ಸಹಾಯವನ್ನೂ ಪಡೆಯುತ್ತಿದೆ.

ಹಿಂದಿನ ಇತಿಹಾಸದ ಕಾಲಾವಧಿಯಲ್ಲಿ ಅಫಘಾನಿಸ್ಥಾನದ ಮೇಲೆಯೂ ಭಾರತದ ಪ್ರಭುತ್ವವಿತ್ತು. ಭಾರತೀಯ ಸಮರ್ಥ ಸಾಮ್ರಾಟರು ಇಲ್ಲಿಯವರೆಗೂ ರಾಜ್ಯವನ್ನು ವಿಸ್ತರಿಸಿದ್ದರು. ಆದರೆ, ಪ್ರಕೃತಿಯೇ ಇದನ್ನು ಭಾರತದಿಂದ ಪ್ರತ್ಯೇಕಿಸಿರುವಾಗ, ಏನು ತಾನೇ ಮಾಡಲು ಸಾಧ್ಯ? ಅರೇಬಿಯಾದಲ್ಲಿ ಜನಿಸಿದ ಇಸ್ಲಾಂ ಧರ್ಮವು ಮೆಲ್ಲಮೆಲ್ಲನೆ ಪ್ರಚಾರವಾಗುತ್ತ ಬಂದು ಭಾರತಕ್ಕೂ ಕಾಲಿರಿಸಿತು. ಇದೇ ಸಮಯದಲ್ಲಿ ಅಥವಾ ತುಸು ಮೊದಲು ಅಫಘಾನಿಸ್ಥಾನದಲ್ಲಿ ಇಸ್ಲಾಂ ಧರ್ಮದ ಸ್ಥಾಪನೆಯಾಯಿತು.

ಅಫಘಾನಿಸ್ಥಾನದಲ್ಲಿ ಸಂಸ್ಕೃತ ಭಾಷಾಭ್ಯಾಸಕ್ಕೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿದೆ. ಕಾಬೂಲ ವಿಶ್ವವಿದ್ಯಾಲಯದಲ್ಲಿಯೂ ಇದು ಮಹತ್ವದ ಸ್ಥಾನವನ್ನು ಪಡೆದಿದೆಯೆಂದು ಹೇಳಬಹುದು.

ಈಗ, ಭಾರತ ಪ್ರಧಾನರು ಅಫಘಾನಿಸ್ಥಾನವನ್ನು ಸಂದರ್ಶಿಸುತಿದ್ದಾರೆ. ಅಫಘಾನಿಸ್ಥಾನವು ರಶ್ಯದಿಂದ ಶಸ್ತ್ರಾಸ್ತ್ರಗಳನ್ನೂ ಸಹಾಯವನ್ನೂ ಪಡೆಯುವುದೆಂಬುದು ನಿಜ; ಆದರೆ, ಅದು ಕಮ್ಯೂನಿಸ್ಟ ರಾಷ್ಟ್ರವಾಗಿಲ್ಲ. ಭಾರತವು ಯಾರೊಡನೆಯೂ ಯಾವ ವಿಧದ ಸೈನಿಕ ಇಲ್ಲವೇ ಅಸ್ತ್ರ ಸಂಬಂಧದ ಒಪ್ಪಂದವನ್ನು ಮಾಡಿಕೊಳ್ಳುವ ಪಂಚಶೀಲ ರಾಷ್ಟ್ರ. ಸದ ಭಾರತದ ಉತ್ತರಗಡಿಯಲ್ಲಿ ಕಮ್ಯುನಿಸ್ಟ ಚೀನವು ಅತಿಕ್ರಮಣ ಮಾಡುತ್ತಿದೆಯೆಂಬುದಕ್ಕೂ ಪ್ರಧಾನಿಯವರ ಅಫಘಾನಿಸ್ಥಾನ ಸಂದರ್ಶನಕ್ಕೂ ಸಂಬಂಧ ಕಲ್ಪಿಸಿದರೆ ಅದು ಅಪಾರ್ಥವಾದೀತು. ಪ್ರಧಾನಿಯವರು ಅಲ್ಲಿಂದ ಇರಾಣಕ್ಕೂ ಭೇಟಿ ಕೊಡಲಿರುವರು. ಇವರ ಸಂದರ್ಶನದಿಂದ ಉಭಯರಾಷ್ಟ್ರಗಳ ಸಂಬಂಧ ಸುದೃಢಗೊಳ್ಳುವುದೆಂದು ಹಾರೈಸಿದರೆ, ತಪ್ಪಿಲ್ಲ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 325/59.

ಶೀನ ಶೆಟ್ಟಿ — ವಾದಿ.

ಮತ್ತು

1. ರಾಮಯ್ಯ ಶೆಟ್ಟಿ. ಮರಿಯಂಮ ಶೆಡ್ತಿ ಮಗ.
2. ದೇವು ಶೆಟ್ಟಿ, 3. ಪದು ಶೆಟ್ಟಿ, 4. ಶೀನ ಶೆಟ್ಟಿ, 5. ಗೋಪ ಶೆಟ್ಟಿ, 6. ಸಿಂಧು ಶೆಟ್ಟಿ.. ಗಿರಿಯಮ್ಮ ಶೆಟ್ಟಿ ಮಕ್ಕಳು.
7. ಮುದ್ದಣ ಶೆಟ್ಟಿ, 8. ಎಚ್ಚು ಶೆಟ್ಟಿ— ನರ್ಸಿ ಶೆಟ್ಟಿ ಮಕ್ಕಳು.
9. ವಾರಿಜ ಶೆಟ್ಟಿ, 10. ಪುಷ್ಪ ಶೆಟ್ಟಿ..ಗಿರಿಜ ಶೆಟ್ಟಿ ಮಕ್ಕಳು.
11. ಸಂಕ್ರಿ ಶೆಟ್ಟಿ ಮೊತ್ತಕ್ಕ ಶೆಟ್ಟಿ ಮಗಳು.

—1 ಮತ್ತು 7ರಿಂದ 11ನೇ ವರೇಗಿನವರು ಉಡುಪಿ ತಾಲ್ಲೂಕು ಕೊರಂಗ್ರಪಾಡಿ ಗ್ರಾಮದ ಕಮ್ಮತ್ತರಲ್ಲಿಯೂ 2ರಿಂದ 6ನೇ ವರೇಗಿನವರು ಶಿವಳ್ಳಿ ಗ್ರಾಮದ ಬಡ್ಗಾರಿನಲ್ಲಿಯೂ ಇರುವವರಾಗಿರುತ್ತಾರೆ — ಪ್ರತಿವಾದಿಗಳು.

ಸದ್ರಿ ಪ್ರತಿವಾದಿರೀಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ವಾದಿ ಪೂರ್ವಾಧಿಕಾರಿ ಲಕ್ಷ್ಮಿನಾರಾಯಣ ಬಲ್ಲಾಳರು ಪ್ರತಿವಾದಿರ ಹಿರಿಯರು ಶಿವಪ್ಪ ಶೆಟ್ರೀಗೆ ತಾ. 2—6—1893ರಲ್ಲಾ ರಿ. ನೀಂ ಬರಕೊಟ್ಟ ಮೂಲಗೇಣಿಚೀಟಿನ ಮೇರೆಗೆ ಬರತಕ್ಕ ಗೇಣಿ ಪಯ್ಕಿ ½ ಅಂಶದ ಗೇಣಿ ವಸೂಲು ಮಾಡುವ ಹಕ್ಕು ವಾದಿಗೆ ಬಂದ ಮೇರೆಗೆ ಪ್ರತಿವಾದಿರಿಂದ ವಾದಿಗೆ ಬರತಕ್ಕ ಹೇಮಲಂಬಿ ಮತ್ತು ವಿಳಂಬಿ ಈ ಎರಡು ಸಂವತ್ಸರಗಳ ಗೇಣಿ ಬಾಕಿ ವ ಬಡ್ಡಿ ಕೂಡಾ ಕೇಳಿ ವಾದಿಯು ಮೇಲಿನ ದಾವೆ ಮಾಡಿ ಅದು ಪ್ರತಿವಾದಿರ ನೋಟೀಸು ಬಗ್ಗೆ ತಾ. 24—9—59ಕ್ಕೆ ಇಟ್ಟಿರುತ್ತದೆ ಎಂಬ ಸಂಗ್ತಿ ಈ ಮೂಲಕ ಯಾವತ್ತೂ ಪ್ರತಿವಾದಿರೀಗೆ ತಿಳಿಸೋಣಾಗುತ್ತದೆ,

(Sd.) Y. C. S. Hegde,
Advocate for Plaintiff.

ಉಡುಪಿ, ತಾ. 14-9-59.

ಒಂದು ಕೆಲಸವನ್ನು ಪ್ರಾರಂಭಿಸುವಾಗ ಅದರ ಫಲಾಫಲಗಳೆನ್ನು ಮೊತ್ತಮೊದಲು ಯೋಚಿಸಿಕೊಳ್ಳಬೇಕು. ಮುಂದೆ ಪಶ್ಚಾತ್ತಾಪ ಪಡಬೇಕಾಗಿ ಬರುವ ಯಾವ ಕೆಲಸವೂ ಕರಣೀಯವಲ್ಲ; ಸಂತುಷ್ಟತೆಯಿಂದ ಸ್ವಾಗತಿಸುವ ಫಲದಾಯಕ ಕರ್ಮಗಳನ್ನೇ ನಾವು ಸದಾ ಮಾಡಬೇಕು

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೭-೯-'೫೯	೩

ಟಿಬೇಟಿನ ಪ್ರಶ್ನೆ

ಕಮ್ಯುನಿಸ್ಟ ಚೀನದ ಸಾರ್ವಭೌಮಾಧಿಕಾರದ ಒಳಗಡೆ ಒಂದು ಸ್ವತಂತ್ರ ರಾಷ್ಟ್ರದ ರೂಪದಲ್ಲಿರುವ ಟಿಬೇಟದಲ್ಲಿ ಚೀನೀಯರು ಹಸ್ತಕ್ಷೇಪ ನಡೆಸಿದುದನ್ನು ಪ್ರಗತಿಶೀಲ ಜಗತ್ತಿನಲ್ಲಿರುವ ಪ್ರತಿಯೋರ್ವನೂ ಏಕ ಮನದಿಂದ ಖಂಡಿಸುವುದು ಸಹಜವೇ. ಆ ಸಮಯದಲ್ಲಿ ಭಾರತವು ಆಶ್ರಯವನ್ನು ಬಯಸಿ ಬಂದ ಟಿಬೇಟದ ಅಧಿಪತಿ ದಲಾಯಿಲಾಮಾರಿಗೆ ಇಲ್ಲಿ ಬೇಕಾದ ಅನುಕೂಲತೆಗಳನ್ನು ಒದಗಿಸಿ ಆಶ್ರಯವಿತ್ತಿತು. ತನ್ನ ಮನೆ ಹೊಕ್ಕವರನ್ನು ಆಸರೆಯಿತ್ತು ಉಳಿಸುವ ಅಧಿಕಾರ ಪ್ರತಿ ಸಾರ್ವಭೌಮಾಧಿಕಾರವುಳ್ಳ ರಾಷ್ಟ್ರಕ್ಕೂ ಇದೆ. ಭಾರತವೂ ಮುಂದೆ ಒದಗಬಹುದಾದ ಲಾಭ ಹಾನಿಗಳತ್ತ ವಿಶೇಷ ಗಮನವೀಯದೆ ತನ್ನ ಉದಾರತೆಯನ್ನು ಪ್ರದರ್ಶಿಸಿತು.

ಮನೆಗೆಬಂದ ಅತಿಥಿಯು ತಾನು ಬಯಸುವಷ್ಟು ದಿನ ಉಳಿದುಕೊಂಡು ಮುಂದೆ ಹೋಗುವುದು ಸ್ವಾಭಾವಿಕವೇ. ಆದರೆ, ಈ ನಡುವೆ ಅತ ಅನಪೇಕ್ಷಣೀಯವಾದ ಕೃತ್ಯಗಳನ್ನು ಮಾಡತೊಡಗಿದರೆ, ಅದು ಅಸಮಂಜಸವೆನಿಸುವುದು. ಭಾರತದಲ್ಲಿರುವ ದಲಾಯ್ ಲಾಮರನ್ನು ಕಮ್ಯುನಿಸ್ಟ ಚೀನ ವಂಚಿಸಿದೆ ಎಂಬುದು ಸತ್ಯ; ಈ ಅನ್ಯಾಯ ಸರಿಯಾಗಬೇಕೆಂದು ಬಯಸುವುದೂ ಅನ್ಯಾಯವಲ್ಲ. ಆದರೆ, ಈ ಬಗ್ಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ರೂಪಿಸುವಾಗ ಮಾತ್ರ ತೀರ ಜಾಗ್ರತೆಯಾಗಿರಬೇಕಾಗುತ್ತದೆ. ಚೀನವು ಟಿಬೇಟನೊಡನೆ ಮಾಡಿಕೊಂಡ ಒಪ್ಪಂದವನ್ನು ಮುರಿದು, ಅವರ ಆಂತರಿಕ ಸ್ವಾತಂತ್ರ್ಯಕ್ಕೆ ಭಂಗತಂದಿದೆ. ಈ ಅನ್ಯಾಯದ ಬಗ್ಗೆ ದಲಾಯ್ ಲಾಮಾರು ಯುಕ್ತ ರಾಷ್ಟ್ರ ಸಂಘಕ್ಕೆ ದೂರಿಕೊಂಡಿದ್ದಾರೆ. ಸಂಯುಕ್ತ ರಾಷ್ಟ್ರಸಂಘವು ಜಗತ್ತಿನ ಎಲ್ಲ ರಾಷ್ಟ್ರಗಳ ಪ್ರತಿನಿಧಿಯಾಗಬೇಕಾಗಿದ್ದರೂ ಹಲವಾರು ಕಾರಣಗಳಿಂದ ಈ ರೀತಿಯ ವಿಶ್ವಸಂಸ್ಥೆಯಾಗಿಲ್ಲ. ಮುಖ್ಯವಾಗಿ ಜಗತ್ತಿನ ಅತಿದೊಡ್ಡ ರಾಷ್ಟ್ರಗಳಲ್ಲಿ ಒಂದಾದ ಕಮ್ಯುನಿಸ್ಟ ಚೀನಕ್ಕೆ ಇದರಲ್ಲಿ ಸದಸ್ಯತನ ಇನ್ನೂ ದೊರೆಯಲಿಲ್ಲ. ಕೆಂಪು ಚೀನವು ತನಗೆ ಅನ್ಯಾಯ ಮಾಡಿತೆಂಬ ದಲಾಯ್ ಲಾಮಾರ ದೂರನ್ನು ಸಂಯುಕ್ತ ರಾಷ್ಟ್ರ ಸಂಸ್ಥೆ ಚರ್ಚೆಗೆ ತೆಗೆದುಕೊಳ್ಳುವುದಾದರೂ ಹೇಗೆ? ಸ್ವತಂತ್ರ ಸಾರ್ವಭೌಮಾಧಿಕಾರವಿರುವ ಚೀನವು ಅದರಲ್ಲಿಲ್ಲದೆ, ಚೀನದ ಸಾರ್ವಭೌಮತೆಯನ್ನಂಗೀಕರಿಸಿರುವ ಟಿಬೇಟದ ದೂರನ್ನು ತಾನಾಗಿಯೇ ಅದು ಎತ್ತಿಕೊಳ್ಳುವಂತಿಲ್ಲ. ಯದ್ಯಪಿ, ಭಾರತ ಸಮೇತ ಹಲವಾರು ರಾಷ್ಟ್ರಗಳು ಕೆಂಪು ಚೀನದ ಈ ಕೃತ್ಯವನ್ನು ಯಾವಜ್ಜೀವ ವಿರೋಧಿಸುವುದಾದರೂ, ಅದನ್ನು ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಎತ್ತಲು ತುಸು ಆಲೋಚಿಸಬೇಕಾಗುತ್ತದೆ. ಅಮೇರಿಕೆಯಾದರೂ ಈ ಪ್ರಶ್ನೆಯನ್ನು ಯಾವುದಾದರೂ ಒಂದು ಸಣ್ಣ ರಾಷ್ಟ್ರವು ಎತ್ತಬೇಕೆಂದು ಅಭಿಪ್ರಾಯಪಟ್ಟಂತೆ ತಿಳಿದು ಬಂದಿದೆ. ಭಾರತದ ಶ್ರೀ ಜಯಪ್ರಕಾಶ ನಾರಾಯಣರು ಈ ಬಗ್ಗೆ ಏಶಿಯಾ ರಾಷ್ಟ್ರಗಳ ಪ್ರತಿನಿಧಿಗಳೊಡನೆಯೂ ಮಾತುಕತೆ ನಡೆಸಿದ್ದರು. ಟಿಬೇಟವು ಅಂತಾರಾಷ್ಟ್ರೀಯ ಕಾನೂನಿಗನುಗುಣವಾಗಿ ಚೀನಾದ ಆಂತರಿಕ ಪ್ರಶ್ನೆಯಾಗಿರುವುದೊಂದು ಹಾಗೂ ಸಂಯುಕ್ತ ರಾಷ್ಟ್ರ ಸಂಘದಿಂದ ಈ ಪ್ರಶ್ನೆಯನ್ನು ಬಗೆ ಹರಿಸುವುದು ಸಾಧ್ಯವಿಲ್ಲ ಎಂಬ ಭಾವನೆಯಿನ್ನೊಂದು—ಹೀಗೆ ಈ ಎರಡು ಕಾರಣಗಳಿಂದ ಯಾವುದೇ ಸದಸ್ಯ ರಾಷ್ಟ್ರ ಈ ಪ್ರಶ್ನೆಯನ್ನು ಮುಂದೆ ತರಲು ಹಿಂಜರಿಯುತ್ತದೆ. ಚೀನವಿಲ್ಲದ ಸಂಯುಕ್ತ ರಾಷ್ಟ್ರ ಸಂಘ ಯಾವುದೇ ನಿರ್ಧಾರ ಮಾಡಿದರೂ ಅದು ಕೆಂಪು ಚೀನವನ್ನು ಬಾಧಿಸಲಾರದು. ಹಾಗಿರುವಾಗ ವ್ಯರ್ಥವಾಗಿ ಪ್ರಶ್ನೆಯನ್ನೆತ್ತಿ ಚೀನದ ಕೃತಿಯನ್ನು ಖಂಡಿಸಿ ಏನು ತಾನೇ ಪ್ರಯೋಜನ?

ಕಮ್ಯುನಿಸ್ಟ ಚೀನಕ್ಕೆ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಪ್ರಾತಿನಿಧ್ಯ ನೀಡಬೇಕೆಂದು ಭಾರತ ಹಾಗೂ ಇನ್ನಿತರ ಕೆಲವು ರಾಷ್ಟ್ರಗಳು ದೀರ್ಘಕಾಲದಿಂದ ಪ್ರತಿಪಾದಿಸುತ್ತ ಬಂದಿವೆ. ಇಂದು ಭಾರತದ ಉತ್ತರ ಗಡಿಯಲ್ಲಿ ಚೀನವು ಆಕ್ರಮಣ ನಡೆಸಿ ಮಿತ್ರದ್ರೋಹ ಮಾಡಿರುವುದಾದರೂ ಭಾರತದ ಈ ಅಭಿಲಾಷೆ ಅಥವಾ ಧೋರಣೆ ವ್ಯತ್ಯಸ್ಥವಾಗಿಲ್ಲವೆಂದು ತಿಳಿಯುತ್ತದೆ. ಕಾಂಗ್ರೆಸ್ ಅಧ್ಯಕ್ಷೆ ಇಂದಿರಾ ಗಾಂಧಿ ಮತ್ತು ಪ್ರಧಾನಿ ನೆಹರೂರ ನಡುವೆ ಈ ಬಗ್ಗೆ ಮತಭೇದವಿದ್ದಂತೆ ತಿಳಿಯುವುದಾದರೂ ಅಂತಿಮ ನಿರ್ಣಯವಾಗುವ ತನಕ ಈಗಿನ ಧೋರಣೆಯೇ ಮುಂದುವರಿಯುವುದು; ಮತ್ತು ಮುಂದಕ್ಕೂ ಈ ಧೋರಣೆಗೇನೇ ಜನಬಲ ದೊರೆಯಬಹುದು. ಹಿರಿಯ ರಾಜಕಾರಣಿ ರಾಜಗೋಪಾಲಾಚಾರಿಯವರೂ ಚೀನ–ಭಾರತಗಳ ಸದ್ಯದ ವಿವಾದದ ಬಗ್ಗೆ ಮಾತನಾಡುವಾಗ, ಅಮೇರಿಕೆಯು ಸೈನಿಕ ಸಹಾಯ ನೀಡುವ ಬದಲು ಚೀನಕ್ಕೆ ವಿಶ್ವಸಂಸ್ಥೆಯಲ್ಲಿ ಪ್ರಾತಿನಿಧ್ಯನೀಡಲು ಸಹಾಯಮಾಡಬೇಕೆಂದಿರುವರು ಒಮ್ಮೆ, ಚೀನವು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾದರೆ, ಮತ್ತೆ ಅದನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳುವುದು ವಿಶ್ವಸಂಸ್ಥೆಯ ಕರ್ತವ್ಯವಾಗುತ್ತದೆ. ಸುಯೇಜ ಕಾಲುವೆಯ ಬಗ್ಗೆ ಬ್ರಿಟನ್ ಮತ್ತು ಫ್ರಾನ್ಸ ಗಳಿಗೆ ಈಜಿಪ್ತದೊಡನೆ ಎಂತಹ ವೈಮನಸ್ಸ ಬಲಿತಿದ್ದರೂ, ಆ ಪ್ರಶ್ನೆ ಬೃಹದಾಕಾರವಾಗಿಸೆ ಎಂದು ಎಲ್ಲರೂ ಅಂಜಿದ್ದರೂ, ಯುಕ್ತರಾಷ್ಟ್ರ ಸಂಘದ ಮೂಲಕವಾಗಿಯೇ ಸ್ವಮಿತಕ್ಕೆ ಬಂದಿತು. ಹಾಗಿರುವಾಗ, ಚೀನವು ಟಿಬೇಟದಲ್ಲಿ ಮಾಡಿದ ಆಕ್ರಮಣವನ್ನೂ ಭಾರತದ ಗಡಿಗಳ ಅತಿಕ್ರಮಣವನ್ನೂ ಪ್ರತಿಭಟಿಸಿ, ಅದರಿಂದ ನಿರೀಕ್ಷಿತ ಫಲದೊರೆಯಬೇಕಾದರೆ, ಚೀನಕ್ಕೆ ಪ್ರಾತಿನಿಧ್ಯ ದೊರಕಿಸುವುದೇ ಪ್ರಧಾನಕಾರ್ಯವಾಗಿದೆ. ಇದಿಲ್ಲವೆ ಅದರ ವಿರುದ್ಧ ದೂರಿಕೊಂಡರೆ, ಕೇವಲ ಕಂಠಶೋಷಣೆಯಲ್ಲದೆ, ನಿರೀಕ್ಷಿತ ಪರಿಣಾಮ ದೊರೆಯಲಾರದು. ದಲಾಯ್ ಲಾಮಾರ ವ್ಯಾಕುಲ ' ಎಲ್ಲರಿಗೂ ತಿಳಿದಿದೆ ಆದರೆ, ಅವರು ದೂರಿದೊಡನೆಯೇ ಅದು ಎಂದಿಗೂ ದೂರವಾಗಲಾರದು. ಅವರು ಈಗ ಕಳೆದು ಕೊಂಡ ಟಿಬೇಟಿನ ಪ್ರಭುತ್ವವನ್ನು ಅವರು ಕೇವಲ ದೂರುವುದರಿಂದ ಎಂದಿಗೂ ಪಡೆಯಲಾರರು. ಜನತೆ ಈಗಾಗಲೇ ಅರಿತುಕೊಂಡಿರುವ ವಿಷಯವನ್ನು ಮತ್ತೂ ಮತ್ತೂ ಹೇಳಬೇಕೆಂಬ ಆಶೆಯಿದ್ದರೆ ಅದು ಮಾತ್ರ ಈಡೇರಬಹುದು.

ಆದರ್ಶ ಯೋಜನೆ

ವಿದ್ಯಾರ್ಥಿಗಳಿಂದ ಸಂಬಳವನ್ನು ತೆಗೆದುಕೊಳ್ಳದೆ ಶಿಕ್ಷಣಕೊಡುವ ಪ್ರಾಥಮಿಕ ಶಾಲೆಗಳ ಅಧ್ಯಾಪಕರಿಗೆ ನೇರವಾಗಿ ಅವರ ಸಂಬಳವನ್ನು ಮನಿಯಾರ್ಡರಿನ ಮೂಲಕ ಕಳಿಸಿಕೊಡುವ ನಿರ್ಧಾರವನ್ನು ಮದ್ರಾಸು ಸರಕಾರವು ಮಾಡಿದೆ ಎಂದು ಮದ್ರಾಸದ ಅರ್ಥಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಮರು ರಾಜ್ಯವಿಧಾನಸಭೆಯಲ್ಲಿ ಹೇಳಿದ್ದಾರೆ. ಹಲಕೆಲವು ವ್ಯವಸ್ಥಾಪಕರು ಉಪಾಧ್ಯಾಯರಿಗೆ ಅವರಿಗೆ ಸಲ್ಲಬೇಕಾದ ಸಂಬಳವೆಲ್ಲವನ್ನೂ ಕೊಡುತ್ತಿಲ್ಲವೆಂಬುದಾಗಿ ಸರಕಾರಕ್ಕೆ ದೂರುಗಳು ಬಂದಿರುವುವಲ್ಲದೆ, ಕಡಿಮೆ ಸಂಬಳ ಕೊಟ್ಟು ಪೂರ್ತಿ ಹಣ ಸಂದ ಬಗ್ಗೆ ಉಪಾಧ್ಯಾಯರಿಂದ ರಶೀದಿ ಪಡೆಯುತ್ತಿರುವರೆಂದೂ ಸರಕಾರಕ್ಕೆ ತಿಳಿದುಬಂದಿರುವುದರಿಂದ, ಮದ್ರಾಸ ಸರಕಾರವು ಈ ನಿರ್ಧಾರ ಮಾಡಿರುವುದಾಗಿ ಅವರು ತಿಳಿಸಿದ್ದಾರೆ. ನಮ್ಮ ಜಿಲ್ಲೆಯೂ ಈಗ ಮದ್ರಾಸ ರಾಜ್ಯದಲ್ಲಿರುತಿದ್ದರೆ, ಇಲ್ಲಿಗೂ ಈ ವ್ಯವಸ್ಥೆಯು ಒದಗುತಿತ್ತು. ಮದ್ರಾಸ ರಾಜ್ಯ ಸರಕಾರದ ಈ ನಿರ್ಧಾರವು ನಿಜವಾಗಿಯೂ ಸ್ವಾಗತಾರ್ಹವಾದುದು. ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಸಹಾಯಧನ ನಿಯಮಗಳಿಗೊಳಪಟ್ಟು ಅಧ್ಯಾಪಕರ ಪೂರ್ಣ ವೇತನ ಹಾಗೂ ತುಟ್ಟಿ ಭತ್ತೆಯನ್ನು ಸರಕಾರವೇ ಕೊಡುತ್ತಿರುವಾಗ, ಅದರಲ್ಲಿಯೂ ಅಧ್ಯಾಪಕರಿಗೆ ವ್ಯವಸ್ಥಾಪಕರಿಂದ ಅನ್ಯಾಯವಾಗುವುದಾದರೆ, ನೇರಾಗಿ ಸರಕಾರವೇ ಸಂಬಳ ಕೊಡುವುದಾದರೆ, ಅದು ಒಂದು ಉತ್ತಮವಾದ ವ್ಯವಸ್ಥೆ ಎಂದು ಹೇಳಬೇಕು. ನಮ್ಮ ನೆರೆರಾಜ್ಯ ಕೇರಳದಲ್ಲಿಯೂ ಇದೇ ಮಾದರಿಯ ಶಾಸನವು ತಯಾರಾಗಿತ್ತು. ಅಧ್ಯಾಪಕರ ಶ್ರೇಯೋಭಿವೃದ್ಧಿಗಾಗಿ ದುಡಿಯುವ ಇಚ್ಛೆಯಿರುವವರು ನಮ್ಮ ಜಿಲ್ಲೆಯಲ್ಲಿಯೂ ಕೆಲವೊಂದು ವ್ಯವಸ್ಥಾಪಕರು ಅಧ್ಯಾಪಕರನ್ನು ಸರಿಯಾಗಿ ಕಾಣುತ್ತಿಲ್ಲ; ಅವರ ವೇತನದಲ್ಲಿ ವ್ಯವಸ್ಥಾಪಕರು ಒಂದಂಶವನ್ನಿಟ್ಟುಕೊಳ್ಳುತ್ತಾರೆ ಎಂದು ದೂರುತ್ತಿರುವುದೂ ಅಲ್ಲಲ್ಲಿ ಕೇಳಿಬರುತ್ತಿದೆ. ಈ ವಿಷಯದ ಸತ್ಯಾಸತ್ಯತೆಯನ್ನು ಕಂಡುಕೊಂಡು, ಆವಶ್ಯಕವೆನಿಸಿದರೆ, ನೇರಾಗಿ ಸರಕಾರವೇ ವೇತನ ರವಾನಿಸುವ ವ್ಯವಸ್ಥೆಯನ್ನೂ ಮಾಡಬಹುದು. ಒಳ್ಳೆಯದು ಎಲ್ಲಿದ್ದರೂ ಅದನ್ನು ಮೊದಲು ಸ್ವೀಕರಿಸುವುದರಿಂದ ಏನೇನೂ ಹಾನಿಯಿರುವುದಿಲ್ಲ.

ಸಂಕ್ಷಿಪ್ತ ಸುದ್ದಿಗಳು

ರಶ್ಯನ್ ವಿಜಯ

ಚಂದ್ರಲೋಕವನ್ನು ತಲಪುವುದರಲ್ಲಿ ರಶ್ಯ ಮತ್ತು ಅಮೇರಿಕೆಗಳ ನಡುವಿನ ಸ್ಪರ್ಧೆಯ ಒಂದು ಹಂತವು ಈಗ ಮುಕ್ತಾಯವಾದಂತಾಯಿತು. ಮೋಸ್ಕೋ ವೇಧ ಶಾಲೆಯಿಂದ ಬಂದ ಒಂದು ಆಶ್ಚರ್ಯ ಆದರೂ ನಿಜವಾದ ಸುದ್ದಿಯೇ ಇದಕ್ಕೆ ಕಾರಣವಾಗಿದೆ. ಮೋಸ್ಕೋದ ವೇಧಶಾಲೆಯಿಂದ ಸಪ್ಟಂಬರ ೧೩ಕ್ಕೆ ಹಾರಿಸಿದ ವಿವಿಧ ಯಂತ್ರಗಳಿಂದ ಕೂಡಿದ ಒಂದು ಆಕಾಶಬಾಣವು ಚಂದ್ರಲೋಕವನ್ನು ಸೇರಿ ತಲಪಿತು ಎಂದೀಗ ಅಧಿಕೃತವಾಗಿ ವಿಶ್ವಾಸಾರ್ಹ ವರದಿಗಳು ಬಂದಿವೆ. ಈ ಆಕಾಶಬಾಣವು ತಾಸಿಗೆ ೭,೦೦೦ ಮೈಲುಗಳಿಂದ ಓಡುತಿತ್ತು. ಇದರಿಂದಾಗಿ ಇನ್ನು ಮುಂದೆ ಚಂದ್ರಲೋಕದ ಬಗ್ಗೆ ವಿಶೇಷ ಅಧ್ಯಯನ ಮಾಡಿ, ಅಲ್ಲಿಯೂ ಜನವಸತಿಗೆ ಅನುಕೂಲವಾದ ವಾತಾವರಣವನ್ನು ನಿರ್ಮಿಸುವ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಯಬಹುದು.

ಮುಂಧ್ರರಿಗೆ ಶಿಕ್ಷೆ

ಕಾನಪುರದ ಬ್ರಿಟಿಷ ಇಂಡಿಯಾ ಕಾರ್ಪೋರೇಶನನ್ನು ಮೋಸಗೊಳಿಸಿದ ಮತ್ತು ಖೊಟ್ಟಿ ಕಾಗದ ಪತ್ರಗಳನ್ನು ಉಪಯೋಗಿಸಿದ ಬಗ್ಗೆ ವಿಚಾರಣೆಗೆ ಗುರಿಯಾದ ಕಲಕತ್ತೆಯ ಸುಪ್ರಸಿದ್ಧ ಉದ್ದಿಮೆದಾರ ಶ್ರೀ ಹರಿದಾಸ ಮುಂಧ್ರ ಅವರ ಮೇಲೆ ತಪ್ಪು ಸ್ಥಾಪನೆಯಾಗಿ, ನಾಲ್ಕು ವರ್ಷ ಕಠಿಣ ಸಜೆ ಹಾಗೂ ೨ ಲಕ್ಷ ರೂ. ದಂಡವನ್ನೂ ಇನ್ನೊಂದು ಅಪರಾಧದ ಮೇಲೆ ಆರು ವರ್ಷ ದಂಡನೆಯನ್ನೂ ವಿಧಿಸಲಾಗಿದೆ. ಈ ಎರಡೂ ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸಬೇಕಾಗಿರುವುದರಿಂದ ಒಟ್ಟು ಆರುವರ್ಷ ಕಠಿನ ಸಜೆ ಹಾಗೂ ೨ ಲಕ್ಷ ರೂ. ದಂಡ ತಪ್ಪಿದರೆ ಪುನಃ ಒಂದು ವರ್ಷ ಕಠಿನ ಸಜೆಯನ್ನವರು ಅನುಭವಿ

ನವಯುಗದ

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ಟ ತಿಂಗಳಾಂತ್ಯಕ್ಕೆ 'ನವಯುಗ'ದ **38**ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ **39**ನೇ ವರ್ಷಾರಂಭವಾಗಿದೆ ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ತಮ್ಮ ಚಂದಾ ಹಣವನ್ನು ದಯೆಮಾಡಿ ಆದಷ್ಟು ಬೇಗನೇ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ವಿ. ಪಿ. ಪಿ. ಮಾಡಿದರೆ 75 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಚಂದಾಹಣವನ್ನು ಮುಂದಾಗಿ ಕಳಿಸಿಕೊಡಬೇಕಾಗಿ ವಿನಂತಿಸುತ್ತೇವೆ.

ಮೆನೇಜರ್.

ಅಲ್ಲಲ್ಲಿಯ ಸುದ್ದಿ ಸಾರ

ಪ್ರಾದೇಶಿಕ ವಿಂಗಡಣೆ ಮತ್ತು ಬಂಟವಾಳ ಹೊಸ ತಾಲೂಕು ರಚನೆ—ದ. ಕ. ಜಿಲ್ಲೆಯ ಪ್ರಾದೇಶಿಕ ವಿಂಗಡಣೆಯಲ್ಲಿ ಕೆಳಗಿನಂತೆ ಕೆಲವು ಮಾರ್ಪಾಟುಗಳನ್ನು ಮಾಡಲಾಗಿರುವುದಲ್ಲದೆ ಇದೂ ಇದೇ ಅಕ್ಟೋಬರ ೧ರಿಂದ ಜ್ಯಾರಿಗೆ ಬರುವುದಾಗಿ ತಿಳಿದುಬರುತ್ತದೆ.

ಉಡುಪಿ ತಾಲೂಕಿನ ಹಾಲಾಡಿ ಗ್ರಾಮವನ್ನು ಕುಂದಾಪುರ ತಾಲೂಕಿಗೂ ಮಂಗಳೂರು ತಾಲೂಕಿನ ಹೆಜಮಾಡಿ ಗ್ರಾಮವನ್ನು ಉಡುಪಿ ತಾಲೂಕಿಗೂ ಇನ್ನ ಮುಳ್ಳಡ್ಕ ಮತ್ತು ಮುಂಡ್ಕೂರು ಗ್ರಾಮಗಳನ್ನು ಮಂಗಳೂರು ತಾಲೂಕಿನಿಂದ ಪ್ರತ್ಯೇಕಿಸಿ ಕಾರ್ಕಳ ತಾಲೂಕಿಗೂ ಕಾರ್ಕಳ ತಾಲೂಕಿನ ವೇಣೂರು ಫಿರ್ಕವನ್ನು ಬೆಳ್ತಂಗಡಿ ತಾಲೂಕಿಗೂ ಜೋಡಿಸಲಾಗಿದೆ.

ಬೆಳ್ತಂಗಡಿ ತಾಲೂಕಿನ ಪಾಣೆಮಂಗಳೂ

ಸಬೇರಾಗಿದೆ. ತನ್ನ ಮೇಲಿರುವ ವಿವಿಧ ಕಟ್ಲೆಗಳ ಮೇಲೆ ವ್ಯವಹರಿಸಲು ಜಾಮೀನಿನ ಮೇಲೆ ಬಿಡುಗಡೆಹೊಂದಿದ್ದ ಇವರನ್ನು ಈಗ ಸೆರೆಮನೆಗೊಯ್ಯಲು ಆಜ್ಞೆ ಕೊಡಲಾಗಿದೆ.

ವರಿಷ್ಠ ನ್ಯಾಯಾಲಯದ ಅಧಿಕಾರ ವ್ಯಾಪ್ತಿ

ಭಾರತದ ಅಂಗವಾಗಿರುವ ಕಾಶ್ಮೀರವನ್ನು ಭಾರತಕ್ಕೆ ಮತ್ತಷ್ಟು ನಿಕಟವಾಗಿ ತರಲು ಉಪಯುಕ್ತವಾಗುವಂತೆ ಭಾರತದ ವರಿಷ್ಠ ನ್ಯಾಯಾಲಯ ಮತ್ತು ಚುನಾವಣಾ ಆಯೋಗದ ಸೀಮೆಯನ್ನು ಕಾಶ್ಮೀರಕ್ಕೂ ವಿಸ್ತರಿಸಬೇಕೆಂದು. ಕಾಶ್ಮೀರದ ರಾಷ್ಟ್ರೀಯ ಪರಿಷತ್ತು ಸರ್ವಾನುಮತದಿಂದ ಒಪ್ಪಿಕೊಂಡಿತು. ರಾಜ್ಯದ ವಿಧಾನ ಮಂಡಳವು ಈ ಬಗ್ಗೆ ಆವಶ್ಯಕವಾದ ವಿಧೇಯಕವನ್ನು ಸ್ವೀಕರಿಸಿದ ಮೇಲೆ ರಾಷ್ಟ್ರಪತಿಯವರು ತತ್ಸಂಬಂಧದ ಘೋಷಣೆಯನ್ನು ಹೊರಡಿಸುವರು

In the Court of the District Munsif of Coondapoor.

R.E.P. 445/59 in O.S· No.222/57

Between:

P. Shankaranarayana Rao ... Petitioner.

and

Ganapathi Shet & others ... Respondents.

To

1. Sri. Dayananda Shet, son of Puttappa Shet (3rd respondent).

2. Minor Nagesh Shet, son of Laxminarayana Rao—by his guardian ad litem mother Srimathi Sushila Bai—(10th respondent).

All residing at Vadarhobli village, Coondapoor Taluk.

Please take notice that the above execution petition filed by the petitioner for recovering the amounts due to him under the above decree—by the sale of the immoveable properties charged for payment of the amunnt, stands posted to 19—10—1959 for settlement of the terms of the sale. You are hereby requested to appear in person or through a pleader on that date at 11 A. M. failing which further steps will be ordered in your absence by declaring you exparte.

(By Order of the Court)

(Sd.) K. Ramappayya, *B. A., B. L.,*

Advocate for petitioner.

Coondapoor, 14—9—1959.

ರು ಬಂಟ್ವಾಳ ಫಿರ್ಕಾಗಳು, ಪುತ್ತೂರು ತಾಲೂಕಿನ ವಿಟ್ಲ ಫಿರ್ಕದ ಬೆಳ್ಳಿಪ್ಪಾಡಿ, ನೆಕ್ಕಿಲಾಡಿ, ಕೊಡಿಂಬಾಡಿ ಗ್ರಾಮಗಳನ್ನುಳಿದ ವಿಟ್ಲ ಫಿರ್ಕಗಳನ್ನು ಸೇರಿಸಿ ಬಂಟವಾಳ ತಾಲೂಕೆಂಬ ಹೊಸ ತಾಲೂಕನ್ನು ರೂಪಿಸಲಾಗಿದೆ.

ಪುತ್ತೂರು ತಾಲೂಕಿನ ಪುತ್ತೂರು ಫಿರ್ಕಕ್ಕೆ ಬೆಳ್ಳಿಪ್ಪಾಡಿ, ನೆಕ್ಕಿಲಾಡಿ, ಕೊಡಿಂಬಾಡಿ ಗ್ರಾಮಗಳನ್ನು ಹೊಂದಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯನ್ನು ಕುಂದಾಪುರ ಉಡುಪಿ ಮತ್ತು ಕಾರ್ಕಳ ತಾಲೂಕುಗಳಿಂದೊಡಗೂಡಿರುವ ಕುಂದಾಪುರ ಸಬ್ ಡಿವಿಜನ್, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳಿಂದೊಡಗೂಡಿರುವ ಪುತ್ತೂರು ಸಬ್ ಡಿವಿಜನ್, ಮಂಗಳೂರು ಮತ್ತು ಬಂಟವಾಳ ತಾಲೂಕುಗಳಿಂದೊಡಗೂಡಿರುವ ಮಂಗಳೂರು ಸಬ್ ಡಿವಿಜನ್ ಎಂದು ವಿಂಗಡಿಸಲಾಗುತ್ತದೆ.

ಅಧ್ಯಾಪಕಿ ಇಲ್ಲ—ಉಡುಪಿ ಸರಕಾರಿ ಹೆಮ್ಮಕ್ಕಳ ಟ್ರೈನಿಂಗ್ ಶಾಲೆಯಿಂದ ಅಧ್ಯಾಪಕಿಯೊಬ್ಬರು ವರ್ಗವಾಗಿ ಹೋಗಿ 3—4 ತಿಂಗಳು ಕಳೆದರೂ ಇಲ್ಲಿಗೆ ಬೇರೊಬ್ಬ ಅಧ್ಯಾಪಕಿಯರು ವರ್ಗಾಯಿಸಲ್ಪಟ್ಟಿಲ್ಲವೆಂದೂ ಈ ವರೆಗೂ ಆ ಸ್ಥಾನವನ್ನು ತೆರವಾಗಿಯೇ ಇಡಲಾಗಿದೆಯೆಂದೂ ಸಂಬಂಧಪಟ್ಟ ಅಧಿಕಾರಿಗಳು ಈ ಕಡೆಗೆ ಗಮನವನ್ನೇ ಕೊಟ್ಟಿಲ್ಲವೆಂದೂ ತಿಳಿದು ಬರುತ್ತದೆ.

ಕರ್ನಾಟಕ ಸಾಹಿತ್ಯ ಸಂಘ

ಉಡುಪಿ ಬೋರ್ಡ್ ಹೈಸ್ಕೂಲಿನ ಕರ್ನಾಟಕ ಸಾಹಿತ್ಯ ಸಂಘವನ್ನು ಸ್ಥಳೀಯ ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಅನಂತಕೃಷ್ಣಾಚಾರ್ ಅವರು ಇದೇ ತಾ. 11ರಲ್ಲಿ ಉದ್ಘಾಟಿಸಿದರು.

ಶಾಲಾ ಮೆನೇಜರರ ಸಂಘ—ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯು ಇದೇ ತಾ. 10ರಂದು ಉಡುಪಿಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಇದೇ ತಾ. 19ಕ್ಕೆ ಜಿಲ್ಲಾ ವಿದ್ಯಾಧಿಕಾರಿಗಳ ಬಳಿಗೂ ಅನಂತರ ಬೆಂಗಳೂರಿಗೆ ವಿದ್ಯಾ ಇಲಾಖಾಧಿಕಾರಿಗಳ ಬಳಿಗೂ ನಿಷ್ಠ ಮಂಡಲ ಹೋಗುವರೆ ಶ್ರೀಗಳಾದ ಟಿ. ಎ. ಪೈ, ಕುಕ್ಕಾಲು ಗಣಪಯ್ಯ ಶೆಟ್ಟಿ, ಯು. ಕೇಶವರಾವ್, ಆರ್ ಡಿ. ಜತನ್ನ ಮತ್ತು ರೆ. ಫಾ. ಜೆ. ಡಿ'ಸೋಜ ಈ ಐದು ಜನರನ್ನು ಆರಿಸಲಾಯ್ತು.

ಅಕ್ಕಿ ವಿತರಣೆ— ತಾ. 26–8–59ನೇ ಶ್ರೀ ಕೃಷ್ಣಾಷ್ಟಮಿ ಮತ್ತು ತಾ. 5–9–59ನೇ ಗೌರೀ ತದಿಗೆ ಈ ಎರಡು ದಿನಗಳಲ್ಲಿ ಉದ್ಯಾವರದಲ್ಲಿ, ಉಡುಪಿ-ಕುಂದಾಪುರ ನೆರೆಪೀಡಿತ ಸಹಾಯ ಸಮಿತಿಯವರು ನೆರೆಹಾವಳಿಗೆ ತುತ್ತಾದ ಸುಮಾರು 400 ಕುಟುಂಬಗಳಿಗೆ ಸಾಧಾರಣ 2000ಕ್ಕೂ ಮಿಕ್ಕಿ ದಜನರಿಗೆ ಧರ್ಮಾರ್ಥವಾಗಿ ಅಕ್ಕಿ ಹಂಚಿರುವುದಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ತಿರು ಓಣಂ— ಉಡುಪಿ ಕೇರಳ ಸಮಾಜದವರು ಪ್ರತಿವರ್ಷವೂ ಆಚರಿಸಿಕೊಂಡು ಬರುವಂತೆ ತಾ. 13ನೇ ಸಂಜೆ ಮೊದಲ್ ಫಾರಂ ಎಲಿಮೆಂಟರಿ ಶಾಲಾಕಟ್ಟಡದಲ್ಲಿ ತಿರು ಓಣಂ ಹಬ್ಬವನ್ನು ಉಡುಪಿ ನಗರ ಸಭಾಪತಿ ಡಾ। ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಆಚರಿಸಿದರು.

ಎಲ್ಲೆಲ್ಲಿಯೂ ಸಕ್ಕರೆಯ ಅಭಾವ

ಇತ್ತೀಚೆಗೆ ಜಿಲ್ಲೆಯ ಎಲ್ಲ ಕಡೆಗಳಲ್ಲಿಯೂ ಸಕ್ಕರೆಯ ಅಭಾವ ತಲೆದೋರಿದೆ. ಮಂಗಳೂರಲ್ಲಿ ರಾತ್ರಿಗೆ 12 ಆಣೆಯಿಂದ ಹಿಡಿದು 1ರೂ 4ಆಣೆಯ ವರೆಗೂ ಸಕ್ಕರೆ ವಿಕ್ರಿತವಾಗುತ್ತದೆ ಎಂದು ವರದಿಯಾಗಿದೆ ಉಡುಪಿಯಲ್ಲಿಯೂ ಸಾಮಾನ್ಯ ಅದೇ ದರದಲ್ಲಿ ಮಾರಾಟವಾಗುತ್ತಿರುವುದಾಗಿ ತಿಳಿದುಬರುತ್ತದೆ. ನಮ್ಮ ಜಿಲ್ಲೆಗೆ ತಿಂಗಳಿಗೆ ಸುಮಾರು 7,500 ಗೋಣಿ ಸಕ್ಕರೆ ಬೇಕಾಗುತ್ತದೆಂದು ತಿಳಿದುಬರುತ್ತದೆ. ಸಪ್ಟಂಬರ ತಿಂಗಳಿಗೆ ಮೈಸೂರು ಸರಕಾರವು 3,800 ಗೋಣಿ ಸಕ್ಕರೆಯನ್ನು ಒದಗಿಸಿದ್ದು ಅದನ್ನು ತಾಲೂಕುವಾರಾಗಿ ವಿತರಣೆಗೊಳಿಸಿ ಮಾರಾಟ ಮಾಡುವ ವ್ಯವಸ್ಥೆಯಾಗಿರುವುದಾಗಿ ತಿಳಿದು ಬರುತ್ತದೆ.

ದ. ಕ. ಜಿಲ್ಲಾ ಪ್ರಾಥಮಿಕ ಶಿಕ್ಷಕರ ಯೂನಿಯನಿನ ಸಭೆಯು ಕಳೆದ ತಾ, 13–9–59ರಲ್ಲು ಉಡುಪಿ ಮೋಡರ್ನ್ ಹಾ. ಎ. ಶಾಲೆಯಲ್ಲಿ ಯೂನಿಯನಿನ ಅಧ್ಯಕ್ಷ ಶ್ರೀ. ಬನ್ನಾಡಿ ಸುಬ್ಬಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಯೂನಿಯನಿನ ಕಾರ್ಯದರ್ಶಿ ಶ್ರೀ. ಬಿ. ವೆಂಕಟರಾಯರು ಜಿಲ್ಲಾ ಯೂನಿಯನು ಈ ವರೆಗೆ ಸಾಧಿಸಿದ ಕಾರ್ಯಗಳ ವರದಿ ಒಪ್ಪಿಸಿದ ಬಳಿಕ ಸಭೆಯು ಹಲವಾರು ನಿರ್ಣಯಗಳನ್ನು ಕೈಗೊಂಡಿತು.

ವಿದ್ಯಾರ್ಥಿ ಅಧ್ಯಾಪಕರ ನಿಷ್ಪತ್ತಿಯ ಹೊಸ ಕಾನೂನನ್ನು ಏಕ ರೂಪದ ಗ್ರಾಂಟ್ ಇನ್ ಎಯಿಡ್ ಕಾನೂನು ಜ್ಯಾರಿಗೆ ಬರುವ ವರೆಗೆ ತಡೆಯಬೇಕೆನ್ನುವ ಸರಕಾರಿ ಪ್ರಕಟಿತ ರಜಾಪಟ್ಟಿಯ ಸ್ಥಳೀಯ ರಜೆಯನ್ನು 10ಕ್ಕೆ ಏರಿಸಬೇಕೆನ್ನುವ; ಅಧ್ಯಾಪಕರಿಗೆ ವೈದ್ಯಕೀಯ ಸವಲತ್ತು, ಖಾಸಗಿಯಾಗಿ ಪರೀಕ್ಷೆಗೆ ಕುಳಿತುಗೊಳ್ಳುವ ಅವಕಾಶ; ಟ್ರಿಬಲ್ ಬೆನಿಫಿಟ್ ಸ್ಕೀಮನ್ನು ಕೊಡಬೇಕೆನ್ನುವ; ಜಿಲ್ಲಾ ಬೋರ್ಡ್ ಶಾಲೆಗಳ ಅಧ್ಯಾಪಕರ ಇಂಕ್ರಿಮೆಂಟು, ಪಂಚಾಯತ್ ಶಾಲೆಗಳ ಇಂಕ್ರಿಮೆಂಟ್ ಮತ್ತು ಪೈಟೀಜನ್ನು ಕೂಡಲೇ ಸಿಗುವಂತೆ ಮಾಡಬೇಕೆನ್ನುವ; ವೃತ್ತಿಪರ ಶಿಕ್ಷಕರಿಗೂ ಅವರ ಯೋಗ್ಯತೆಯನುಸಾರ ಹೊಸದರದ ಸಂಬಳ, ಪೈಟೀಜು ಕೊಡಬೇಕೆನ್ನುವ; 10 ವರ್ಷ ಮೇಲ್ಪಟ್ಟು ಸರ್ವಿಸಾದ ಹಾ ಗ್ರೇಡು ಅಧ್ಯಾಪಕರು ಖಾಸಗಿಯಾಗಿ ಎಸ್. ಎಸ್. ಎಲ್. ಸಿ. ಪಾಸಾದಲ್ಲಿ ಅವರನ್ನು ಸೆಕೆಂಡರಿ ಗ್ರೇಡ್ ಅಧ್ಯಾಪಕರೆಂದು ಪರಿಗಣಿಸಬೇಕೆನ್ನುವ; ಖಾಸಗಿ ಶಾಲಾ ಅಧ್ಯಾಪಕರು ಒಂದು ಮೆನೇಜುಮೆಂಟಿನಿಂದ ಇನ್ನೊಂದಕ್ಕೆ ಸೇರಿದಾಗ ಹಿಂದಿನ ಸರ್ವಿಸನ್ನು ಗಣನೆಗೆ ತೆಗೆದುಕೊಳ್ಳಬೇಕೆನ್ನುವ; ಜಿಲ್ಲಾ ಬೋರ್ಡು ಶಾಲಾ ಮುಖ್ಯೋಪಾಧ್ಯಾಯರ ಸ್ಪೆಶಿಲ್ಪೇ ಪುಟಿನ ಗ್ರೇಡನ್ನು ಇಮ್ಮಡಿ ಮಾಡಬೇಕೆನ್ನುವ, ಎಲ್ಲಾ ಮುಖ್ಯ ಅಧ್ಯಾಪಕರಿಗೆ ಪ್ರತ್ಯೇಕ ಸಂಬಳದ ದರ ಕೊಡಬೇಕನ್ನುವ, ನಿವೃತ್ತಿ ಪ್ರಾಯವನ್ನು 60ಕ್ಕೆ ಏರಿಸಬೇಕೆನ್ನುವ 1/2 ದಿನ ಕೆಜುವಲ್ ರಜೆಯನ್ನು ಜ್ಯಾರಿಗೆ ಗೊಳಿಸಬೇಕೆನ್ನುವ; ಒಂದು ಎರಡನೇ ತರಗತಿಗಳ ಹೊಸ ಪಾಠ ಪಟ್ಟಿಗೆ ಟೀಚರ್ಸ್ ಗೈಡನ್ನು ಬೇಗ ಪ್ರಕಟಿಸಬೇಕೆನ್ನುವ ಗೊತ್ತುವಳಿಗಳು ಮಂಜೂರಾದುವು.

ಈ ಗೊತ್ತುವಳಿಗಳಲ್ಲಿ ಪ್ರಾಮುಖ್ಯವಾದುಗಳ ಕುರಿತು ಪರ್ಯಾಲೋಚಿಸಿ ಶೀಘ್ರ ಕಾರ್ಯ ಕೈಕೊಳ್ಳುವರೆ ಶ್ರೀಗಳಾದ ಬಿ. ವೆಂಕಟರಾವ್, ಸುಬ್ಬಣ್ಣ ಹೆಗ್ಡೆ, ಭೋಜರಾಜ ಶೆಟ್ಟಿ ದಾಸಪ್ಪ ಮತ್ತು ಕಲ್ಕೂರರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು. ಶಿಕ್ಷಕರ ಯೂನಿಯನಿನ ಗಣನೀಯ ಸ್ಥಾನಗಳಲ್ಲಿರುವ ಕೆಲವು ವ್ಯಕ್ತಿಗಳು ಕಮ್ಯೂನಿಸ್ಟ ಮನೋಭಾವದವರೆಂದು ಆರೋಪಿಸಿ, ಈ ಹಿಂದೆ ಹಲವು ಪತ್ರಿಕೆಗಳಲ್ಲಿ ಪ್ರಕಟವಾದ ಅಭಿಪ್ರಾಯವನ್ನು ಈ ಸಭೆಯು ತೀವ್ರವಾಗಿ ಖಂಡಿಸಿದಲ್ಲದೆ, ಈ ಶಿಕ್ಷಕರ ಯೂನಿಯನು ಪಕ್ಷಾತೀತವಾದುದೆಂದು ಸಂಬಂಧಪಟ್ಟ ಪತ್ರಿಕೆಗಳಿಗೆ ಹೇಳಿಕೆಕೊಡಲು ಕಾರ್ಯದರ್ಶಿಯವರಿಗೆ ಅಧಿಕಾರವಿತ್ತರು.

ಬೀಳ್ಕೊಡುವ ಸಮಾರಂಭ— ಉಡುಪಿ ಹಿಂದೀ ಪ್ರಚಾರ ಪರಿಷತ್ತಿನ ವಿವಿಧ ವರ್ಗಗಳ ವಿದ್ಯಾರ್ಥಿಗಳು ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಪರೀಕ್ಷೆಗಳಿಗೆ ಉಪಸ್ಥಿತರಾಗಲಿರುವುದರಿಂದ ಅವರೆಲ್ಲರೂ ಒಂದು ಸೇರಿ, ಬೀಳ್ಕೊಡುವ ಸಮಾರಂಭವೊಂದನ್ನು ಎಂ. ಜಿ ಎಂ ಕಾಲೇಜಿನ ಹಿಂದೀ ಪ್ರಧ್ಯಾಪಕ ಶ್ರೀ ಕೆ. ನಾರಾಯಣ ಐತಾಳರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಶ್ರೀ ಗ್ಲೇಡ್ಸನ್ ಜತ್ತನ್ನರು ಅಧ್ಯಕ್ಷರನ್ನೂ ಅತಿಥಿಗಳನ್ನೂ ಸ್ವಾಗತಿಸಿದರು. ಶ್ರೀ ಕೆ. ದಾಮೋದರ ಐತಾಳರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಅನಂತರ ವಿದ್ಯಾರ್ಥಿಗಳು ತಮಗೆ ಶಿಕ್ಷಣವಿತ್ತ ಪರಿಷತ್ತನ್ನೂ ಅಧ್ಯಾಪಕರನ್ನೂ ಅಭಿನಂದಿಸಿ ಮಾತಾಡಿದರು. ಶ್ರೀ ಪಿ. ಹರಿದಾಸ ಆಚಾರ್ಯ ಮತ್ತು ಶ್ರೀ ಕೆ. ಎ. ದೇವದಾಸಗು ಪರಿಷತ್ತಿನ ಸೇವಾಕಾರ್ಯಕ್ರಮಗಳಿಗೆ ತೃಪ್ತಿಯನ್ನು ವ್ಯಕ್ತಪಡಿಸಿ, ಯಶಸ್ಸನ್ನು ಕೋರಿದರು. ತದನಂತರ ಮುಖ್ಯೋಪಾಧ್ಯಾಯ ಶ್ರೀ ಎಸ್. ಗೋಪೀಚಂದ ರಾವ್ ಇವರು ಪರಿಷತ್ತಿನ ಬಗ್ಗೆ ಅಭಿಮಾನವನ್ನೂ ಸೇವಾಹಸ್ತವನ್ನೂ ವ್ಯಕ್ತಪಡಿಸಿದುದಕ್ಕೆ ಕೃತಜ್ಞತೆಯನ್ನರ್ಪಿಸಿ, ಕನ್ನಡ, ಹಿಂದೀ ಸಂಸ್ಕೃತ ಭಾಷೆಗಳ ಆಳವಾದ ಅಭ್ಯಾಸವನ್ನು ಈ ಇಂಗ್ಲಿಷ್ ಯುಗದಲ್ಲಿ ಎಲ್ಲರೂ ಮಾಡಬೇಕೆಂದರು.

ಅಧ್ಯಕ್ಷರು ನಮ್ಮ ರಾಷ್ಟ್ರದ ಭಾಷಾ ಪ್ರಶ್ನೆಯನ್ನು ವಿವರಿಸಿದರು. ಇಂಗ್ಲಿಷಿಗೆ ಇನ್ನೂ ಇನ್ನೂ ಪ್ರಾಧಾನ್ಯ ನೀಯುವದನ್ನವರು ಖಂಡಿಸಿ, ಆ ಸ್ಥಾನವನ್ನು ಹಿಂದಿಗೆ ಈಯ ಬೇಕೆಂದೂ ಜತೆಗೆ ಉಳಿದ ಪ್ರಾದೇಶಿಕ ಹಾಗೂ ಸಂಸ್ಕೃತ ಭಾಷೆಗಳ ಅಧ್ಯಯನವೂ ಅವಶ್ಯವೆಂದೂ ಅಭಿಪ್ರಾಯಪಟ್ಟರು.

ಆರಂಭದದಲ್ಲಿ ವಿದ್ಯಾರ್ಥಿಗಳೊಂದು ಲಘುಉಪಹಾರವನ್ನೂ ಅಂತ್ಯದಲ್ಲಿ ಫೊಟೋ ಕಾರ್ಯಕ್ರಮವನ್ನೂ ಏರ್ಪಡಿಸಿದ್ದರು.

ದಸರಾ ಪಂದ್ಯಾಟಗಳ ಸಮಿತಿ ಸಭೆಯು—ತಾ. 10—9—59ರಲ್ಲಿ ಮಂಗಳೂರಲ್ಲಿ ಡಿಪ್ಟಿ ಕಮಿಷನರ ಆಫೀಸಿನಲ್ಲಿ ಡಿಪ್ಟೀ ಕಮಿಷನರ್ ಶ್ರೀ ಸಿ ಜೆ. ಪದ್ಮನಾಭ ಇವರ ಅಧ್ಯಕ್ಷತೆಯಲ್ಲಿ ಜರಗಿ ಸರಕಾರದಿಂದ ಮಂಜೂರಾದ ೬.೦೫೦ ಸಾವಿರ ರೂಪಾಯಿಯನ್ನು ವಿನಿಯೋಗಿಸುವ ವಿಧಿವಿಧಾನ ನಿರ್ಧರಿಸಿ ಜಿಲ್ಲಾ ಮಟ್ಟದಲ್ಲಿ ವಿವಿಧ ಪಂದ್ಯಾಟಗಳನ್ನು ಜರಗಿಸಲು ಬೇರೆ ಬೇರೆ ಉಪಸಮಿತಿಗಳನ್ನು ಮಾಡಲಾಯಿತು.

ನಮ್ಮ ಹಳ್ಳಿ ನಾಟಕ—ಭಾರತದ ಪಂಚವಾರ್ಷಿಕ ಯೋಜನೆಯ ಪ್ರಚಾರ ಕಾರ್ಯಕ್ರಮವಾಗಿ ನ್ಯೂ ಡಿಲ್ಲಿಯ ಹಾಡು ಮತ್ತು ನಾಟಕ ವಿಭಾಗದ ಡೈರೆಕ್ಟರರಿಂದ ನೇಮಿಸಲ್ಪಟ್ಟ ಸಾಗರದ ಉದಯ ಕಲಾವಿದರು ಉಡುಪಿಯ ಮಹೇಂದ್ರ ಕಲಾ ಮಂದಿರದಲ್ಲಿ ಇದೇ ತಾ. 19ರಂದು 'ನಮ್ಮ ಹಳ್ಳಿ' ಎಂಬ ನಾಟಕವನ್ನು ಅಭಿನಯಿಸಲಿರುವರೆಂದೂ ನಾಟಕವು ಯೋಜನೆಗಳ ಅಗತ್ಯ ಮತ್ತು ಉದ್ದೇಶಗಳ ಕುರಿತಾಗಿಯೂ ಅದನ್ನು ಕಾರ್ಯಗತಗೊಳಿಸಿ ಯಶಸ್ವಿಗೊಳಿಸುವುದರಲ್ಲಿ ಜನತೆಯ ಪಾತ್ರಗಳ ಕುರಿತಾಗಿಯೂ ಜನರಲ್ಲಿ ತಿಳುವಳಿಕೆಯುಂಟು ಮಾಡುವುದೆಂದೂ ಉಡುಪಿ ನಗರ ಸಭಾಪತಿ ಡಾ। ಕೆ. ಎಲ್. ಐತಾಳರು ತಿಳಿಸುತ್ತಾರೆ.

ಪೆರ್ಡೂರು— ತಾ. 12–9.59ರಲ್ಲಿ ಪರ್ಕಳ ಯಕ್ಷಗಾನ ಕಲಾ ಮಂಡಳಿಯ ಕಿಯಿಂದ ಶ್ರೀ ಯಚ್. ರಾಮಚಂದ್ರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ "ಶ್ರೀಕೃಷ್ಣ ರಾಯಭಾರ" ಯೆಂಬ ಕಥಾ ಭಾಗದ ಯಕ್ಷಗಾನ ಕೂಟವು ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದಲೂ, ಕಿಕ್ಕಿರಿದ ಜನ ಸಂದಣಿಯಿಂದಲೂ ನೆರವೇರಿತು.

ಸ್ವೀಕಾರ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು.) ಸಂ. ನ.

ಕುಸುಮ— ಉಡುಪಿಯ ಸುವಿಖ್ಯಾತ ಶಾಲೆಯಾದ ಕಡಿಯಾಳಿ ಹಿರಿಯ ಬುನಾದಿ ಶಾಲೆಯ ಸುಮಾರು ಅಂಗಕ್ಕೂ ಮಿಕ್ಕಿದ ವಿದ್ಯಾರ್ಥಿಗಳು ತಮ್ಮಲ್ಲಿ ಸುಪ್ತವಾಗಿರುವ ಸಾಹಿತ್ಯ ಶಕ್ತಿಯ ಮತ್ತು ಪ್ರತಿಭೆಯ ಅಭಿವ್ಯಕ್ತಿಗೋಸ್ಕರ ಪ್ರಕಟಪಡಿಸುತ್ತಿರುವ "ಕುಸುಮ" ಎಂಬ ಹಸ್ತಲಿಖಿತ ಪತ್ರಿಕೆಯನ್ನು ಅಭಿಮಾನಪೂರ್ವಕವಾಗಿ ಅವಲೋಕಿಸಿದ್ದೇವೆ; ಅದರಲ್ಲಿನ ಪ್ರತಿ ಪುಟದ ಮೇಲೆ ದೃಷ್ಟಿಯಾಡಿಸಿದ್ದೇವೆ. ಬಾಲಕರ ಭಾಷಾಶಕ್ತಿಯು ಉನ್ನತವಿದೆ; ಸ್ವತಂತ್ರವಾಗಿ ಮತ್ತು ಕಾಲ್ಪನಿಕವಾಗಿ ಊಹಿಸುವ, ತಮ್ಮ ಊಹನೆಗೆ ಲಿಖಿತ ರೂಪವನ್ನೀಯುವ ಶಕ್ತಿ ಅಲ್ಲಿನ ವಿದ್ಯಾರ್ಥಿಗಳಲ್ಲಿದೆ. ಪತ್ರಿಕೆಯ ಪ್ರತ್ಯೇಕ ಪೃಷ್ಠವೂ ಕಲಾತ್ಮಕವಾಗಿದ್ದು ಮುಗ್ಧಗೊಳಿಸುತ್ತದೆ.

ಶಾಲೆಯ ವಿದ್ಯಾರ್ಥಿಗಳಿಗೆ ಯೋಗ್ಯ ಪಥವನ್ನು ತೋರಿಸಿಕೊಟ್ಟರೆ ಅವರ ಆಸಕ್ತಿಯನ್ನತ್ತ ಆಕರ್ಷಿಸಬಹುದೆಂಬುದಕ್ಕೆ ಈ "ಕುಸುಮ"ವೇ ಏಕೈಕ ನಿದರ್ಶನ. ಉಳಿದವರಿಗೂ "ಕುಸುಮ"ವೊಂದು ಪಥಪ್ರದರ್ಶಕ.

ಇತಿಹಾಸ ಶೋಧ

ಅಲೆಗ್ಸಾಂಡರನೂ ಸಂಸ್ಕೃತನಾದನು

ಗ್ರೀಕ ದೊರೆ ಅಲೆಗ್ಸಾಂಡರ ಸಂಸ್ಕೃತವನ್ನು ತನ್ನಲ್ಲಿಗೆ ಆಹ್ವಾನಿಸಿದರೆ, ಸ್ವತಂತ್ರ ಸಂಸ್ಕೃತ ಆತನನ್ನೇ ತನ್ನತ್ತ ಆಕರ್ಷಿಸಿಬಿಟ್ಟಿತು!

ಅಲೆಗ್ಸಾಂಡರ! ಅವನಂತಹ ವೀರ ರಾಜ ಆ ಕಾಲದಲ್ಲಿ ಬೇರೆಯಾರೂ ಇರಲೇ ಇಲ್ಲ. ಅನೇಕ ನೂರು ವರ್ಷಗಳ ಹಿಂದಿನ ಕಥೆ. ಕತೆಯಲ್ಲ ಸತ್ಯಕ್ಕೂ ಇದ್ದನು ಗ್ರೀಕ್ ದೊರೆ ಅಲೆಗ್ಸಾಂಡರ್. ಅವನಿಗೆ ಯುದ್ಧವೆಂದರೆ ಒಂದು ಆಟ. ಆತ ಸುತ್ತುಮುತ್ತಲಿನ ಎಲ್ಲಾ ದೇಶಗಳನ್ನೂ ಗೆದ್ದುಬಿಟ್ಟ. ಎಲ್ಲಿ ಹೋದರೂ ಅವನಿಗೇ ಜಯಮಾಲೆ. ಮತ್ತೆ ಮತ್ತೆ ಅವನ ಹೆಸರು ಕೇಳಿದರೇ ಸಾಕು; ಎಲ್ಲಾ ದೊರೆಗಳೂ ಅವನಿಗೆ ಶರಣಾಗುತಿದ್ದರು. ಅವನು ಗ್ರೀಕ್ ಸಾಮ್ರಾಜ್ಯದ ಚಕ್ರಾಧಿಪತಿಯಾದ.

"ಎಲ್ಲಾ ಜಯಿಸಿಬಿಟ್ಟೆ. ಇನ್ನೇನಿದೆ ಜಯಿಸಲಿಕ್ಕೆ?" ಎಂಬ ತೃಪ್ತಿಯಿಂದ ಗುರುವಿನ ಬಳಿಗೆ ಹೋದ ಅಲೆಗ್ಸಾಂಡರ್. ಅವನ ಗುರು 'ಅರಿಸ್ಟಾಟಿಲ್' ಎಂಬ ಮಹಾತ್ಮ. "ಗುರುಗಳೇ, ನಾನು ಎಲ್ಲವನ್ನೂ ಜಯಿಸಿಬಿಟ್ಟೆ. ಚಕ್ರಾಧಿಪತಿಯಾದೆ, ಹರಸಿರಿ" ಎಂದು ಅಲೆಗ್ಸಾಂಡರ್ ಗುರುವಿಗೆ ಅಭಿವಂದನೆ ಮಾಡಿದ.

ಗುರು ಅರಿಸ್ಟಾಟಲ್ ಆತನನ್ನು ನೋಡಿ—"ಇಲ್ಲ ದೊರೇ, ಇಲ್ಲ. ನೀನು ಎಲ್ಲವನ್ನೂ ಜಯಿಸಲಿಲ್ಲ. ಹಿಂದೂದೇಶವೆಂಬ ಸುವರ್ಣ ಕ್ಷೇತ್ರವನ್ನು ನೀನು ಜಯಿಸಲಿಲ್ಲ. ಅಲ್ಲಿಯ ಸಂಸ್ಕೃತವನ್ನು ನೀನು ಅರಿತುಕೊಳ್ಳಲಿಲ್ಲ. ಎಲ್ಲಕ್ಕೂ ಮೇಲಾಗಿ ಸಂಸ್ಕೃತವನ್ನು ಅರಿತುಕೊಂಡರೆ ಮಾತ್ರವೇ ನೀನು ಚಕ್ರೇಶ್ವರನಾಗುವಿ"ಎಂದನು.

ಇದು ಅಲೆಗ್ಸಾಂಡರನ ಹೃದಯಕ್ಕೆ ನಾಟಿತು. "ಇಷ್ಟು ಸಾಧಿಸಿದ ನಾನು ಅಷ್ಟನ್ನೂ ಸಾಧಿಸಲಾರೆನೇ?" ಎಂದುಕೊಂಡ. ತನ್ನ ವೀರಸೇನಾಪರಿವಾರವನ್ನು ಸಾಗಿಸಿಕೊಂಡು ಹಿಂದೂದೇಶದ ಕಡೆಗೆ ದಂಡೆತ್ತಿದನು.

ಪಾಂಚಾಲ ದೇಶಕ್ಕೆ ಹೊಕ್ಕಿತು ಅವನ ಪ್ರಚಂಡ ಪರಿವಾರ. ಅಲ್ಲಿಯ ರಾಜ ವೀರಾಧಿವೀರ ಪುರುಷೋತ್ತಮ. ಅಲೆಗ್ಸಾಂಡರನ ಹೆಸರು ಕೇಳಿ ಅವನೇನೂ ನಡುಗಲಿಲ್ಲ. ಬದಲಾಗಿ ಹೆಬ್ಬಂಡೆಯಂತೆ ಅವನನ್ನು ಇದಿರಿಸಿದ; ತಡೆದ. "ಆ! ನನ್ನನ್ನು ತಡೆಯುವ ರಾಜನೊಬ್ಬ ಇನ್ನೂ ಇದ್ದಾನೆಯೆ?" ಎಂದು ತೋರಿತು ಅಲೆಗ್ಸಾಂಡರನಿಗೆ. ಪುರುಷೋತ್ತಮನಿಗೂ ಅಲೆಗ್ಸಾಂಡರನಿಗೂ ಬಹುದೊಡ್ಡ ಕಾಳಗವಾಯಿತು. ಪುರುಷೋತ್ತಮನನ್ನು ಅಲೆಗ್ಸಾಂಡರ್ ಸೆರೆಹಿಡಿದುಬಿಟ್ಟ.

ಮಹಾ ಸಿಂಹವನ್ನೆ ಬಲೆಯಲ್ಲಿ ಹಿಡಿದೆನೆಂದು ಅಲೆಗ್ಸಾಂಡರ್ ಭಾವಿಸಿದ. ಆತ ಕೂಡ ಮಹಾವೀರ ತಾನೆ? ಪುರುಷೋತ್ತಮನಷ್ಟು ಪೌರುಷದಿಂದ ಆತನನ್ನು ಇದಿರಿಸಿ ಯಾರೂ ಕಾದಾಡಿರಲಿಲ್ಲ. ಅಂತೆಯೇ ಅವನು ಪುರುಷೋತ್ತಮನನ್ನು ಮೆಚ್ಚಿದ. ಬಿಡುಗಡೆ ಮಾಡಿ ಆಲಿಂಗಿಸಿ ಸ್ನೇಹ ಹಸ್ತ ನೀಡಿದ. "ಪುರುಷೋತ್ತಮ, ನಾನು ಕೂಡ ಸ್ನೇಹಕ್ಕಾಗಿ ಬಂದೆನೇ ಹೊರತು ಸೂರೆಗಾಗಿ ಅಲ್ಲ. ವೀರ ಮಿತ್ರನೇ ನಿನಗೇನು ಕಾಣಿಕೆ ಕೊಡಲಿ?" ಎಂದು ಕೇಳಿದ ಅಲೆಗ್ಸಾಂಡರ್.

"ನನ್ನನ್ನು ಸ್ವತಂತ್ರ ರಾಜನಂತೆ ನೋಡಬೇಕು. ಅಷ್ಟೇ" ಎಂದ ಪುರುಷೋತ್ತಮ.

ಹಾಗೆಯೇ ಅಲೆಗ್ಸಾಂಡರನು ಅವನನ್ನು ಗೌರವಿಸಿ ಅವನ ರಾಜ್ಯವನ್ನು ಅವನಿಗೇ ಬಿಟ್ಟುಕೊಟ್ಟನು. ಅದಾದ ನಂತರ, "ನಿಮ್ಮ ಹಿಂದೂ ದೇಶದಲ್ಲಿ ಸಂಸ್ಕೃತವಿದೆಯಂತಲ್ಲಾ? ಅದನ್ನು ತಿಳಿದುಕೊಳ್ಳಬೇಕೆಂದೇ ಮುಖ್ಯವಾಗಿ ನಾನು ಬಂದೆ. ಅದನ್ನು ನನಗೆ ವಶಪಡಿಸುವಿಯಾ ಪುರುಷೋತ್ತಮ?" ಎಂದು ಕೇಳಿದ ಅಲೆಗ್ಸಾಂಡರ್.

"ಅದು ನನ್ನ ಕೈಯೊಳಗಿನ ವಸ್ತುವಲ್ಲ. ಸ್ವತಂತ್ರ ವಸ್ತುವದು. ಮಹಾ ಪಂಡಿತರಾದ ದಂಡಮಿಯವರ ವಶದಲ್ಲಿದೆ. ನೀನೇ ಪಡೆದುಕೊಳ್ಳಬೇಕಾದುದು" ಎಂದ ಪುರುಷೋತ್ತಮ.

"ಅವರಾರು? ಎಲ್ಲಿದ್ದಾರೆ?" ಕೇಳಿದ ಅಲೆಗ್ಸಾಂಡರ್.

"ಅವರು ಕೂಟಾಶ್ವತ್ಥದ ಬುಡದಲ್ಲಿ ತಪಸ್ಸು ಮಾಡುತಿದ್ದಾರೆ" ಎಂದು ಪುರುಷೋತ್ತಮ ಹೇಳಿದ.

೦ ೦ ೦

ಅಲೆಗ್ಸಾಂಡರ್ ತನ್ನ ಸೇನಾ ನಾಯಕನನ್ನು ಕುರಿತು ಆಜ್ಞೆ ಮಾಡಿದ:— "ಕೂಟಾಶ್ವತ್ಥ ಎಂಬ ಸ್ಥಳದಲ್ಲಿ ದಂಡಮಿ ಎಂಬ ಪಂಡಿತರಿದ್ದಾರೆ. ಅಲೆಗ್ಸಾಂಡರ್ ಚಕ್ರವರ್ತಿಯ ಆಜ್ಞೆಯಾಗಿದೆ; ಸಂಸ್ಕೃತದೊಂದಿಗೆ ಬರಬೇಕಂತೆ, ಎಂದು ಹೇಳಿ ಅವರನ್ನು ಕರೆದುಕೊಂಡು ಬಾ".

ಈ ಆಜ್ಞೆಯನ್ನು ಹೊತ್ತುಕೊಂಡು ಹೋದ ಸೇನಾಧಿಪತಿ ಹಾಗೆಯೇ ಮರಳಿ ಬಂದು ತಲೆವಾಗಿ ನಿಂತ. "ಎಲ್ಲಿ ದಂಡಮಿ?" ಕೇಳಿದ ಅಲೆಗ್ಸಾಂಡರ್.

"ಪ್ರಭು. ಆತ ನಿಮ್ಮಾಜ್ಞೆಯನ್ನು ನಕ್ಕು ಅಲಕ್ಷ್ಯ ಮಾಡಿಬಿಟ್ಟ. ಇದು ಸ್ವತಂತ್ರ ಸ್ಥಳ. ನಾನೂ ಸ್ವತಂತ್ರನು. ನಿಮ್ಮ ಅಲೆಗ್ಸಾಂಡರನ ಸ್ಥಳದಂತೆ ಕರೆದರೆ ಮಾತ್ರ ಬರುವ ಸ್ಥಳವು ಇದಲ್ಲ; ನಾನು ಕರೆಯದೆಯೇ ಇಲ್ಲಿಗೆ ಯಾರೂ ಬರಬಹುದು. ಶಿಷ್ಯ ಭಾವವಿದ್ದವರಾರೂ ಬರಬಹುದು—ಎಂದು ದಂಡಮಿ ಹೇಳಿದನು ಪ್ರಭೂ" ಎಂದ ಸೇನಾಧಿಪತಿ.

"ಅಷ್ಟು ದೊಡ್ಡ ಮಾತಾಡಿಬಿಟ್ಟನೆ? ಅಷ್ಟು ದೊಡ್ಡವನೆ?" ಎಂದು ಬೆರಗಾದ ಅಲೆಗ್ಸಾಂಡರ್.

"ಮಹಾ ಪ್ರಭುಗಳೆಲ್ಲಿ, ಅವನೆಲ್ಲಿ? ಆತ ಬಡ ಭಿಕ್ಷುಕ—ನಿರ್ಗತಿಕ. ಎಂದವು ಗೂಡಿನಿಂದ ಗಾಳಿ ತಿಂದುಕೊಂಡು ಕುಳಿತಿದ್ದಾನೆ. ಅಪ್ಪಣೆಯಾದರೆ ಅವನನ್ನು ಎಳೆದುಕೊಂಡು ಬಂದೇನು ಪ್ರಭು" ಎಂದ ಸೇನಾಧಿಪತಿ.

"ಬೇಡ ಹೋಗು" ಎಂದು ಅಲೆಗ್ಸಾಂಡರ್ ಯೋಚನೆಗೆ ಬಿದ್ದನು.

"ಅವನನ್ನು ಎಳೆದು ತರಿಸಲಾರೆನೆ ನಾನು? ಅದರಿಂದೇನು ಲಾಭ? ಹೆಚ್ಚಾದರೆ ನಾನು ಅವನ ತಲೆಗಡಿಯಬಹುದು. ಅವನಲ್ಲಿರುವ ಸಂಸ್ಕೃತ ನನಗೆ ವಶವಾಗುವುದು ಹೇಗೆ? ಬಹಳ ವಿಚಿತ್ರವಾಗಿದೆ. ನನ್ನನ್ನಿದಿರಿಸಿ ಗೆದ್ದ ಪುರುಷೋತ್ತಮನೊಬ್ಬನನ್ನು ಕಂಡೆ. ಈ ಜಗಜ್ಜೇತನಿಗೆ ತಲೆವಾಗದ ಬಡ ತಿರುಕನೊಬ್ಬನೂ ಇಲ್ಲಿದ್ದಾನೆಯೆ? ಅವನು ನನಗಿಂತಲೂ ಹೆಚ್ಚಿನವನೇ ಸರಿ. ದೊಡ್ಡವನೇ ಸರಿ. ದೊಡ್ಡವನೆಂದರೇನು? ಈ ದೇಶದಲ್ಲಿ—ವೀರ ಪರಿವಾರವೂ ದೇಹಶಕ್ತಿಯೂ ದೊಡ್ಡಸ್ಥಿಕೆಯಲ್ಲ. ಈ ತಿರುಕನು ಕಾಣದೆಯೇ ದೊಡ್ಡದೇನೆಂಬುದನ್ನು ತೋರಿಸಿಕೊಡುತ್ತಿದ್ದಾನೆ! ಅದೇ ವಿನಯ. ವಿನಯವೇ ದೊಡ್ಡದು. ಜ್ಞಾನದ ಗುಡಿಗೆ ವಿನಯವೇ ಸೋಪಾನ...."

ಅಲೆಗ್ಸಾಂಡರನಿಗೆ ಒಮ್ಮಿಂದೊಮ್ಮೆಗೇ ಜ್ಞಾನ ಬಂತು. ಒಬ್ಬನೇ ಕಾಲುನಡಿಗೆಯಿಂದ ದಂಡಮಿಯ ಬಳಿಗೆ ಧಾವಿಸಿದ. ಆ ಬಡ ಋಷಿಯ ಕಾಲುಹಿಡಿದನು ಚಕ್ರವರ್ತಿ. "ಸ್ವಾಮಿ, ನನ್ನ ಅವಿಧೇಯತೆಯನ್ನು ಮನ್ನಿಸಿ ಸಂಸ್ಕೃತವನ್ನು ದಾನಮಾಡಿ" ಎಂದು ಬೇಡಿದನು ಆ ಜಗಜ್ಜೇತ.

ದಂಡಮಿ ಅಲೆಗ್ಸಾಂಡರನನ್ನು ಆಲಿಂಗಿಸಿ "ಶಿಷ್ಯ ಅಲೆಗ್ಸಾಂಡರ್, ಈಗಲೇ ನಿನಗೆ ಸಂಸ್ಕೃತ ಬಂತು. ನೀನು ಸುಸಂಸ್ಕೃತನಾದೆ. ಒಳಿತು ತಿಳಿದುಕೊಂಡು ನರ್ತಿಸುವುದೇ ಸಂಸ್ಕೃತ. ವೀರನಾದರೂ ಜಗವಿಜೇತನಾದರೂ ತನಗಿಂತಲೂ ಹೆಚ್ಚಿನದು ಪ್ರಪಂಚದಲ್ಲಿದೆ ಎಂದು ತಿಳಿದಿರುವುದೇ ಸಂಸ್ಕೃತ, ಅದೀಗ ನಿನ್ನ ವಶವಾಯಿತು." ಎಂದು ಬಿಡಿಸಿ ಹೇಳಿದನು. ತೃಪ್ತನಾಗಿ ತನ್ನ ದೇಶಕ್ಕೆ ಸಾಗಿಸಿದನು ಅಲೆಗ್ಸಾಂಡರ್.

—ಶ್ರೀ. ಎಂ. ರಂಗರಾವ್.

ಅಭಿಪ್ರಾಯ

(೧೨ನೇ ಪುಟದಿಂದ)

ವಿಶ್ವವಿದ್ಯಾಲಯದಲ್ಲಿ ಸಮಾಜ ಶಾಸ್ತ್ರದ ಪ್ರಾಧ್ಯಾಪಕರಾಗಿ ಸೇರಿಕೊಳ್ಳಬೇಕೆಂದು ಕರೆ ಬಂದಿತು. ಆದರೆ, ಅವರಿಗೆ, ರಾಜಕೀಯ ಆಂದೋಲನದಿಂದ ದೂರವುಳಿಯುದು ಅಸಂಭವವಾಗಿದ್ದು, ಕಾಂಗ್ರೆಸ್ ಕಾರ್ಯಾಲಯದಲ್ಲಿ ಕರ್ಮಚಾರಿಗಳಾಗಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ೧೯೩೪ರಲ್ಲಿ ಕಾಂಗ್ರೆಸ್‌ಸಮಾಜವಾದ ದಳದ ಸ್ಥಾಪನೆ, ೧೯೪೨ರ ಆಂದೋಲನ ಮತ್ತು ಭೂದಾನ ಕಾರ್ಯಗಳೇ ಅವರ ಜೀವನದ ಮಹತ್ವಪೂರ್ಣ ಅಧ್ಯಾಯಗಳಾಗಿವೆ. ಇಂದಿಗೂ ಶ್ರೀ ಜಯಪ್ರಕಾಶರು ಶ್ರೀ ನೆಹರೂರವರ ಉತ್ತರಾಧಿಕಾರಿ ಎಂದು ಪರಿಗಣಿಸಲ್ಪಟ್ಟಿದ್ದಾರೆ. ಆದರೆ, ನೆಹರೂ ಹಿಂದೊಮ್ಮೆ ಉಚ್ಚರಿಸಿದ್ದ ಭವಿಷ್ಯವಾಣಿಯಲ್ಲಿ ಸತ್ಯಾಂಶವೆಷ್ಟಿದೆ ಎಂದು ಭವಿಷ್ಯವೇ ಹೇಳಬೇಕಾಗಿದೆ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1939

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ, ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು, ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ತ್ರಿ ನೋಟೀಸು ಕೊಟ್ಟಲ್ಲಿ ಸಹಾ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರಿಗೆ ವ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರ ಈಡಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 24—9—1959ರ ಒಳಗೆ ಬಿಡಿಸದಿದ್ದಲ್ಲಿ ತಾರೀಕು 28—9—1959ರಲ್ಲಿ ಬೆಳಗ್ಗೆ ಗಂಟೆ 12ಕ್ಕೆ ಯಾ ನಮಗೆ ಯುಕ್ತ ಕಂಡ ಇತರ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
33/876	ಚಿನ್ನ ಮೇಸ್ತ್ರಿ, ಬಬ್ಬುನ ಮಗ, ಉಪ್ಪೂರು, ಜಾತಬೆಟ್ಟು, ಉಪ್ಪೂರು P. O.	10 . 00
33/1046	ಬಾಪ್ತಿಸ್ತ್ ಡಿಸೋಜ. ರುಜಾರಿಯೋ ಡಿಸೋಜರ ಮಗ, ಕೆಳಕುದ್ರು, ಕೊಲಲ್‌ಗಿರಿ P. O.	20 . 00
33/1300	ಅಪ್ಪಿ ಡಿಸೋಜ, ಮಿಂಗೆಲ್ ಡಿಸೋಜರ ಮಗ, ಪಾಪಂಜೆ, ಕುದ್ರು, ಕೊಲಲ್‌ಗಿರಿ P. O.	25 . 00
34/1158	ದೇವ ಪೂಜಾರಿ, ಮಾಲಿಂಗ ಪೂಜಾರಿಯ ಅಳಿಯ, ಬೆಲ್ಕಾರ್, ಅರೂರು ಗ್ರಾಮ, ಕೊಲಲ್‌ಗಿರಿ P. O.	40 . 00
34/1270	ಥೋಮಸ್ ಮಸ್ಕರೇನಸ್, ಅಬ್ರಾಮ್ ಮಸ್ಕರೇನಸ್‌ರ ಮಗ, ಪರಾರಿ, ಕೊಲಲ್‌ಗಿರಿ P. O.	60 . 00
34/1430	ಕೆ. ತೇಜ ಪೂಜಾರಿ, ಅಣ್ಣಯ್ಯ ಪೂಜಾರಿಯ ಮಗ, ದೋಣಿಯವ, ಮೂಡುಕುದ್ರು, ಕಲ್ಯಾಣಪುರ P. O.	45 . 00

Kallianpur,
11—9—1959

S. Rebello,
Agent

ಬಲ್ಗೇರಿಯಾ

ಸ್ವತಂತ್ರ ವಾಯುವಿನಲ್ಲಿ ಹದಿನೈದು ವರುಷ

ಅರಸೊತ್ತಿಗೆಯನ್ನು ತುಳಿದು ಸ್ವಪ್ರಾದಸ್ಥಿತರಾಗಿ ಅಭಿವೃದ್ಧಿ ಪಥಗಾಮಿಗಳಾದ ಬಲ್ಗೇರಿಯನರು ತಮ್ಮ ಸ್ವಾತಂತ್ರ್ಯದ ಸವಿಯುಣ್ಣುತಿದ್ದಾರೆ

ಈ ವರ್ಷ ಸೆಪ್ಟೆಂಬರ್ ದಿನಾಂಕ ೯ರಂದು ಬಲ್ಗೇರಿಯಾದ ಜನತೆಯು ತಮ್ಮ ೧೫ನೆಯ ಸ್ವಾತಂತ್ರ್ಯ ದಿನೋತ್ಸವವನ್ನು ಆಚರಿಸುವರು. ೧೯೪೪ರಲ್ಲಿ ಆ ದಿನ ಬಲ್ಗೇರಿಯಾದ ಜನರು, ಸಾಯುಧ ಜನತಾ ಹೋರಾಟದ ಪರಿಣಾಮವಾಗಿ ಅರಸೊತ್ತಿಗೆಯ ಫ್ಯಾಸಿಸ್ಟ್ ದಬ್ಬಾಳಿಕೆಯಿಂದಲೂ ಮತ್ತು ನಾತ್ಸಿ ಆಕ್ರಮಣದಿಂದಲೂ ತಮ್ಮ ವಿಮೋಚನೆಯನ್ನು ಸಾಧಿಸಿಕೊಂಡರು.

ಕಳೆದ ೧೫ ವರ್ಷಗಳಲ್ಲಿ ಬಲ್ಗೇರಿಯಾದ ಜನತೆಯು ಕೈಗಾರಿಕೋದ್ಯಮ—ವ್ಯವಸಾಯಗಳ ವಿಕಾಸದಲ್ಲಿಯೂ, ವಿದ್ಯಾಭ್ಯಾಸ—ವಿಜ್ಞಾನ—ಸಂಸ್ಕೃತಿಗಳ ಪ್ರಗತಿಯಲ್ಲಿಯೂ ಮತ್ತು ರಾಷ್ಟ್ರದ ಸಂಕ್ಷೇಮದ ಸುಧಾರಣೆಯಲ್ಲಿಯೂ ಪ್ರಮುಖ ವಿಜಯಗಳನ್ನು ಸಾಧಿಸಿಕೊಂಡಿದ್ದಾರೆ.

೧೯೩೯ರಲ್ಲಿ ಔದ್ಯೋಗಿಕ ಉತ್ಪಾದನೆಯ ಸಾರ್ವತ್ರಿಕ ಮೊತ್ತವು ಕೇವಲ ೩೯೪.೩ ಕೋಟಿ 'ಲೀವಾ'ಗಳಷ್ಟಾಗಿತ್ತು. ಈಗ ಅದು ಸುಮಾರು ಒಂಬತ್ತು ಪಾಲು ಹೆಚ್ಚಾಗಿ ೩,೦೦೦ ಕೋಟಿ ಲೀವಾಗಳಷ್ಟಾಗಿದೆ. ೧೯೫೮ರ ಎರಡೇ ತಿಂಗಳುಗಳಲ್ಲೇ ಬಲ್ಗೇರಿಯಾದ ಕೈಗಾರಿಕೋದ್ಯಮಗಳು ೧೯೩೯ರಲ್ಲಿ ಇಡೀ ವರ್ಷದಲ್ಲಿ ಉತ್ಪಾದಿಸಿದಷ್ಟಕ್ಕಿಂತಲೂ ಹೆಚ್ಚು ಸರಕನ್ನು ತಯಾರು ಮಾಡಿಕೊಟ್ಟವು.

ಬಲ್ಗೇರಿಯಾದ ವ್ಯವಸಾಯದಲ್ಲಿಯೂ ಐತಿಹಾಸಿಕ ಸಂಧಿಕಾಲವು ಹೋಗಿದೆ. ಹಂಚಿ—ಹರಡಿ ಹೋಗಿ ಹಿಂದುಳಿದ ಸಣ್ಣ ಹಿಡುವಳಿಗಳಿಂದ, ಶಕ್ತಿಯುತವಾದ ಸಮಷ್ಟಿ ವ್ಯವಸಾಯ ವ್ಯವಸ್ಥೆಯಾಗಿ ಬಲ್ಗೇರಿಯಾದ ಬೇಸಾಯವು ರೂಪುಗೊಂಡಿದೆ. ೧೫ ವರ್ಷಗಳ ಹಿಂದೆ ದೇಶದ ವ್ಯವಸಾಯ ಯೋಗ್ಯ ಜಮೀನನ್ನೆಲ್ಲ ೧೨೦ ಲಕ್ಷ ತುಂಡು ಭೂಮಿಗಳಾಗಿ ವಿಂಗಡಿಸಿ, ಪುರಾತನ ರೀತಿಯ ಬೇಸಾಯವನ್ನು ನಡೆಸಲಾಗುತ್ತಿತ್ತು. ಈಗ ರೈತಾಪಿ ಜನರೆಲ್ಲರೂ ದೊಡ್ಡ ದೊಡ್ಡ ವ್ಯವಸಾಯ ಸಹಕಾರ ಸಂಘಗಳಲ್ಲಿ ಒಂದುಗೂಡಿದ್ದಾರೆ. ಅವರ ಬಳಿ ಹೆಚ್ಚು ಯಂತ್ರಗಳು ಇವೆ. ಯಂತ್ರ ಕಲಾವಿಧಾನಗಳು ಅವರಿಗೆ ತಿಳಿದಿವೆ. ಇದರ ಪರಿಣಾಮವಾಗಿ ಭೂಮಿಯ ಹುಟ್ಟುವಳಿಯನ್ನು ಕ್ರಮಶಃ ಹೆಚ್ಚಿಸುವುದರ ಪ್ರತಿಯೊಂದು ಅವಕಾಶವೂ ಅವರಿಗೆ ಸಿಕ್ಕಿದೆ.

ಕಾರ್ಮಿಕ ಜನತೆಯ ಪುತ್ರ-ಪುತ್ರಿಯರಿಗೆ ಪ್ರೌಢ ಶಾಲೆಯ ಮತ್ತು ವಿಶ್ವವಿದ್ಯಾನಿಲಯದ ದ್ವಾರಗಳು ಈಗ ತೆರೆದಿವೆ. ಬಲ್ಗೇರಿಯಾದ ೭೫ ಲಕ್ಷ ಜನ ನಾಗರಿಕರಲ್ಲಿ ಸುಮಾರು ೧೩ ಲಕ್ಷ ಜನ ಯುವಕ—ಯುವತಿಯರು ಯಾವುದಾದರೊಂದು ಶಿಕ್ಷಣ ಸಂಸ್ಥೆಗೆ ಹಾಜರಾಗುತ್ತಾರೆ. ಈಗ ೪೦,೦೦೦ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳ ನೋಂದಾವಣೆ ಇರುವ ೨೦ ವಿಶ್ವವಿದ್ಯಾನಿಲಯ ಸಂಸ್ಥೆಗಳು ಬಲ್ಗೇರಿಯಾದಲ್ಲಿವೆ.

ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾಗಿರುವ ಶಕ್ತಿಶಾಲೀ ಉತ್ಥಾನದಿಂದ, ಕೈಗಾರಿಕೋದ್ಯಮ ವಿಕಾಸದಲ್ಲಿ ನೂತನ ಗತಿ-ವಿಧಿ-ಪ್ರಮಾಣಗಳ ಆವಶ್ಯಕತೆಯುಂಟಾಗಿದೆ. ಉತ್ಪಾದನೆಯ ಪ್ರತಿಯೊಂದು ಶಾಖೆಯಲ್ಲಿಯೂ ಮಹತ್ತರ ಆಂತರಿಕ ಆಸನ್ನನಗಳನ್ನು ಕೂಡಿಸಿಡಲಾಗಿದೆ. ಭೂಮಿಯ ಕೆಳಪದರದ ಬೃಹನ್ನಿಧಿಯ ಸದುಪಯೋಗವನ್ನು ಮಾಡಿಕೊಳ್ಳಲಾಗುತ್ತಿದೆ.

ಯಂತ್ರದ ಯಂತ್ರಶಿಲ್ಪಕ್ಕೆ ಮುಖ್ಯತಃ ಲೋಹಶಾಸ್ತ್ರ, ಯಂತ್ರನಿರ್ಮಾಪಕ ಯಂತ್ರಗಳು, ಕಲ್ಲಿದ್ದಲಿನ ಗಣಿ ಕೆಲಸ, ವಿದ್ಯುಚ್ಛಕ್ತಿ—ಇವುಗಳಿಗೆ ಸಂಬಂಧಿಸಿದ ಕೈಗಾರಿಕೋದ್ಯಮ ಶಾಖೆಗಳಿಗೂ ವಿಶೇಷ ಗಮನವನ್ನು ನೀಡಲಾಗಿದೆ.

೧೯೬೨ರ ವೇಳೆಗೆ ಯಂತ್ರ ಶಿಲ್ಪೋದ್ಯಮದ ಮತ್ತು ಲೋಹ-ಸಂಸ್ಕರಣೋದ್ಯಮದ ಹುಟ್ಟುವಳಿಯು ಮೂರು-ನಾಲ್ಕು ಪಾಲು ಹೆಚ್ಚಾಗುವುದು ಮತ್ತು ೧೯೬೫ರ ವೇಳೆಗೆ ೧೯೫೭ರೊಂದಿಗೆ ಹೋಲಿಸಿ ನೋಡಿದಲ್ಲಿ—ಆರು ಪಾಲು ಹೆಚ್ಚಾಗುವುದು.

ರಾಸಾಯನಿಕ ವಸ್ತುಗಳ ಜವಳಿ—ಆಹಾರ—ಗಣಿ ಕೈಗಾರಿಕೆಗಳ ಮತ್ತು ವ್ಯವಸಾಯದ ಯಂತ್ರಗಳನ್ನು ತಯಾರಿಸುವ ಶಾಖೆಗಳನ್ನು ವಿಶೇಷವಾಗಿ ವಿಕಾಸಗೊಳಿಸಲಾಗುವುದು.

ಲೋಹಕರ್ಮ, ಯಂತ್ರಶಿಲ್ಪ, ಕಲ್ಲಿದ್ದಲ ಗಣಿ ಕೆಲಸ ಮತ್ತು ವಿದ್ಯುದುತ್ಪಾದನೆಗಳ ವಿಕಾಸದ ಉನ್ನತ ಗತಿಯನ್ನು ಖಚಿತಪಡಿಸಲು ಅನೇಕ ನೂತನ ಯಂತ್ರಸ್ಥಾವರಗಳನ್ನೂ, ಕಾರಖಾನೆಗಳನ್ನೂ, ವಿದ್ಯುತ್ಕೇಂದ್ರಗಳನ್ನೂ, ನಿರ್ಮಿಸುವುದಕ್ಕಾಗಿಯೂ, ಮತ್ತು ಇಲ್ಲಿ ದೊರೆಯುವ ಎಲ್ಲ ಮೂಲಾಧಾರಗಳ ಪೂರ್ಣ ಬಳಕೆಯನ್ನು ಮಾಡಿಕೊಳ್ಳುವ ದೃಷ್ಟಿಯಿಂದ ನೂತನ ಖನಿಜದ, ಕಲ್ಲಿದ್ದಲಿನ ನಿಕ್ಷೇಪಗಳನ್ನು ಹೊರ ತೆಗೆಯುವುದಕ್ಕಾಗಿಯೂ ಯೋಜನೆಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

ಕಚ್ಚಾ ಪದಾರ್ಥಗಳ ಮನೆ..ಬುನಾದಿಯ ತೀವ್ರಗತಿಯ ವಿಸ್ತರಣೆ, ಮತ್ತು ಪ್ರತಿಯೊಂದು ಬಗೆಯ ಬಳಕೆಯ ವಸ್ತುಗಳ ಬಗ್ಗೆಯೂ ಜನತೆಯಲ್ಲಿ ನಿರಂತರ ಬೆಳೆಯುತ್ತಿರುವ ಬೇಡಿಕೆಗಳು, ಲಘು—ಆಹಾರ ಕೈಗಾರಿಕೋದ್ಯಮಗಳ ಗತಿಯನ್ನು ತ್ವರಿತಗೊಳಿಸುವುದಕ್ಕೆ ನಿಜವಾದ ಸಾಧ್ಯತೆಗಳನ್ನು ಒದಗಿಸುತ್ತವೆ.

ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರೀ ವ್ಯವಸಾಯವು ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಅಧಿಕ ವಿಕಾಸಕ್ಕೆ ಅತ್ಯಂತ ವ್ಯಾಪಕ ಫಲನಿರೀಕ್ಷೆಗಳನ್ನು ತೆರೆದಿದೆ. ಗತವರ್ಷದವರೆಗೆ ಅಸ್ತಿತ್ವದಲ್ಲಿದ್ದ ಸಹಕಾರೀ ಕ್ಷೇತ್ರಗಳು, ಮೂಲಭೂತ ಕ್ಷೇತ್ರಕರ್ಮದ ಯುಕ್ತಿ ಯುಕ್ತವಾದ ಪೂರ್ಣ ಯಂತ್ರೀಕರಣವನ್ನು ಸಾಧಿಸುವುದಕ್ಕಾಗಿಯೂ, ಉತ್ತಮೀಕರಣದ ಯೋಜನೆಗಳ ಸಾಧನೆಗಾಗಿಯೂ, ನೀರಾವರಿ ವ್ಯವಸ್ಥೆಗಳ ವಿಸ್ತರಣೆಗಾಗಿಯೂ ಮತ್ತು ಅತ್ಯುನ್ನತ ವ್ಯವಸಾಯ ಫಲಗಳನ್ನು ಖಚಿತಪಡಿಸುವಂತೆ ಆಧುನಿಕ ವಿಧಾನಗಳನ್ನು ಪೂರ್ಣತಃ ಆಚರಣೆಗೆ ತರುವುದಕ್ಕಾಗಿಯೂ, ತುಂಬಾ ಚಿಕ್ಕವೆಂದು ಕಂಡುಬಂದುವು. ಈ ಕಾರಣದಿಂದಲೇ, ಗತ ವರ್ಷಾಂತ್ಯದಲ್ಲೂ, ಈ ವರ್ಷಾರಂಭದಲ್ಲೂ, ಬಲ್ಗೇರಿಯಾದ ವ್ಯವಸಾಯ ವ್ಯವಸ್ಥೆಯು, ಒಂದುಗೂಡಿಕೆಯ ತೀವ್ರ ಕ್ರಮವನ್ನು ಕೈಗೊಂಡಿತು. ಬೃಹತ್ ಪ್ರಮಾಣದ ವ್ಯವಸಾಯದ ಪ್ರಯೋಜನಗಳನ್ನು ಮನಗಂಡು, ರೈತರು ತಮ್ಮ ಮೂಲಾಧಾರಗಳನ್ನೆಲ್ಲ ಒಂದುಗೂಡಿಸಿದರು. ೩,೪೫೦ ಸಹಕಾರೀ ಕ್ಷೇತ್ರಗಳನ್ನು ಒಂದುಗೂಡಿಸಿ ೧೯೫೮ರಲ್ಲಿ ದೊಡ್ಡ ಪ್ರಮಾಣದ ೯೩೨ ಸಹಕಾರೀ ಕ್ಷೇತ್ರಗಳನ್ನು ನಿರ್ಮಿಸಲಾಯಿತು.

೧೯೬೫ರ ವೇಳೆಗೆ (೧೯೫೭ರೊಂದಿಗೆ ಹೋಲಿಸಿದಲ್ಲಿ) ಪಶುಗ್ರಾಸದ ಒಟ್ಟು ಉತ್ಪಾದನೆಯು ಮೂರು ಪಾಲಿನಷ್ಟು, ಸೂರ್ಯಕಾಂತಿ ಬೀಜವು (ಎಣ್ಣೆಗಾಗಿ) ಎರಡೂವರೆಯಷ್ಟು, ಹತ್ತಿಯು ಐದರಷ್ಟಕ್ಕಿಂತಲೂ ಹೆಚ್ಚಾಗಿಯೂ, ಸಕ್ಕರೆಯ 'ಬೀಟ್'ಗಡ್ಡೆಯು ಇಮ್ಮಡಿಗಿಂತ ಹೆಚ್ಚಾಗಿಯೂ, ದ್ರಾಕ್ಷಿಯು ಸುಮಾರು ನಾಲ್ಕು ಪಾಲೂ, ಮೊಟ್ಟೆಗಳು ಸುಮಾರು ಎಂಟರಷ್ಟೂ ಮತ್ತು ಮಾಂಸ, ಕೋಳಿ, ಮಗ್ಗರೆಗಳು ಮೂರುಪಾಲಿಗಿಂತ ಹೆಚ್ಚಾಗಿಯೂ ವೃದ್ಧಿಯಾಗುವುವು.

ಈ ಹುಟ್ಟುವಳಿಯನ್ನು ಖಚಿತಪಡಿಸುವುದಕ್ಕಾಗಿ ೧೯೬೫ರ ವೇಳೆಗೆ ಸುಮಾರು ೧೨೫ ಲಕ್ಷ ಎಕರೆ ಭೂಮಿಯನ್ನು ಸಾಗುವಳಿಗೆ ತರಲಾಗುವುದು. ನೀರಾವರಿಯ ಸೌಕರ್ಯಗಳಿಗೊಳಪಟ್ಟ ಭೂಮಿಯು ೨೫ ಲಕ್ಷ ಎಕರೆಗಳಷ್ಟಾಗುವುದು ೧೯೬೫ರ ವೇಳೆಗೆ ನೀರಾವರಿಯ ಸಾಗುವಳಿ ಕ್ಷೇತ್ರವನ್ನು ಪುನಃ ಇಮ್ಮಡಿಗೊಳಿಸಲಾಗುವುದು.

ಸ್ವಪ್ನ ಭವಿಷ್ಯ

(೩ನೇ ಪುಟದಿಂದ)

ನ್ನರಿಗೆ ಅವರ ಮರಣದ ಭವಿಷ್ಯ ಮೂರು ದಿನಗಳಿಗೆ ಮೊದಲೇ ತಿಳಿದಿತ್ತು. ಅವರು ವೈಟ್ ಹೌಸಿನಲ್ಲಿ ತನ್ನ ಮಿತ್ರರಿಗೆ ಭೋಜನವನ್ನು ಏರ್ಪಡಿಸಿದ್ದರು. ಆ ದಿನ ಲಿಂಕನ್ ಉದಾಸೀನರಾಗಿದ್ದರು. ಕೆಲ ದಿನಗಳಿಗೆ ಮೊದಲು, ದಕ್ಷಿಣದ ಸೇನಾಪತಿ ಲೀ ಆತ್ಮ ಸಮರ್ಪಣೆ ಮಾಡಿದ್ದರು. ಲಿಂಕನ್ನರ ಪತ್ನಿ ಕಾರಣ ಕೇಳಿದಾಗ, ಈ ಭವಿಷ್ಯವಾಣಿಯ ಸ್ಫೋಟವಾಯಿತು. ಆ ರಾತ್ರೆ ಲಿಂಕನ್ ಮಲಗಿದ್ದರು. ಸ್ವಪ್ನದಲ್ಲಿ ಅಕಸ್ಮಾತ್ತಾಗಿ ಅವರನ್ನು ಕರುಣಾಭರಿತ ರೋದನಧ್ವನಿ ಎಚ್ಚರಿಸಿತು. ಅವರು ಎದ್ದು ವೈಟ್ ಹೌಸನ್ನು ಪರೀಕ್ಷಿಸುವಾಗ, ಒಂದು ಕೋಣೆಯಲ್ಲಿ ಒಂದು ಶವವನ್ನಿಟ್ಟು, ಯಾರೋ ಅಳುತ್ತಿರುವುದು ಕಂಡಿತು. ಅತ ವೈಟ್ ಹೌಸಿನಲ್ಲಿನ ಹೆಣ ಯಾರದೆಂದು ಕೇಳಿದ. "ಅಧ್ಯಕ್ಷರದ್ದು; ಇವರು ಒಬ್ಬ ಕೊಲೆಗಡುಕನಿಂದ ಕೊಲ್ಲಲ್ಪಟ್ಟಿದ್ದಾರೆ" ಎಂದುತ್ತರ ಬಂತು. ಈ ಸ್ವಪ್ನ ಬಿದ್ದ ಮೂರೇ ದಿನಗಳಲ್ಲಿ ಅಧ್ಯಕ್ಷ ಲಿಂಕನ್ ಅದೇ ವೈಟ್ ಹೌಸಿನಲ್ಲಿ ಕೊಲೆಗಾರನೊಬ್ಬನಿಂದ ವಧಿಸಲ್ಪಟ್ಟರು.

ಇಷ್ಟೊಂದು ಹೊಂದಾಣಿಕೆಯಿರುವ ಸ್ವಪ್ನ ಬೇರಾವುದೂ ಇರಲಾರದು. ಆದರೆ, ಆ ಸಮಯದಲ್ಲಿ ಲಿಂಕನ್ನರ ಮನೋಸ್ಥಿತಿ ಯಾವ ರೀತಿಯಿತ್ತು ಎಂದು ತಿಳಿದರೆ, ಈ ಬಗ್ಗೆ ವಿಸ್ಮಯಪಡಬೇಕಾಗಿಲ್ಲ. ೧೮೬೪ರಲ್ಲಿ ಲಿಂಕನ್ ಎರಡನೆ ಬಾರಿ ಅಧ್ಯಕ್ಷರಾಗಿ ಆಯ್ಕೆಗೊಂಡಾಗ ಅವರ ಪ್ರಾಣದ ಹೆದರಿಕೆ ಎಲ್ಲ ಮಿತ್ರರಿಗೂ ಇತ್ತು. ಪ್ರತಿ ದಿನವೂ ರಾಷ್ಟ್ರಾಧ್ಯಕ್ಷರ ಕೊಲೆಯ ನೂರಾರು ರಹಸ್ಯಗಳನ್ನು ಪತ್ರಿಕೆಗಳು ಭೇದಿಸುತಿದ್ದುವು. ನೈಯಕ್ತಿಕ ಪತ್ರಗಳೂ ಬರುತಿದ್ದುವು. ಬಹಿರಂಗದಲ್ಲಿ ಈ ಬಗ್ಗೆ ಅವರು ನಿಶ್ಚಿಂತರಾಗಿದ್ದರೂ ಅಂತರಂಗದಲ್ಲಿ ವ್ಯಸ್ತಚಿತ್ತರಾಗಿಯೇ ಇದ್ದುದರಿಂದ ಸ್ವಪ್ನದಲ್ಲಿ ಅದು ಸೂಚನೆ ಕೊಟ್ಟಿತು.

ಹೀಗೆ ಸ್ವಪ್ನಗಳೂ ಭವಿಷ್ಯ ಹೇಳುತ್ತವೆ ಎಂಬುದು ಸತ್ಯವೆನ್ನಬಹುದು. ಆದರೆ, ಅದು ಹೇಳುವ ಕ್ರಮ, ಭಾಷೆಗಳು ಮಾತ್ರ ಬೇರೆ. ನಾವು ಪ್ರತಿದಿನ ನೂರಾರು ಸ್ವಪ್ನ ಕಾಣುತ್ತೇವೆ; ಆದರೆ, ಅವೆಲ್ಲವೂ ಸತ್ಯ ಎನ್ನುವಂತಿಲ್ಲ. ಮನೋವೈಜ್ಞಾನಿಕ ಸ್ಥಿತಿಗತಿಗಳಿಗನುಸಾರವಾಗಿ, ಕೆಲವೊಂದು ಸ್ವಪ್ನಗಳು ಮಾತ್ರ ಭವಿಷ್ಯ ನುಡಿಯುತ್ತವೆ ಎಂಬುದನ್ನು ಸಂಪೂರ್ಣ ಅಲ್ಲಗಳೆಯಲು ಅಸಾಧ್ಯ.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಜನಾಂಗ ಪರಿಚಯ

ಉತ್ತರಪ್ರದೇಶದ ವನಮಾನುಷರು

ತೀರ ಅನಾಗರಿಕರಾದ ಇವರು ನಮ್ಮನ್ನು ಕಂಡರೆ ಕಾಲಿಗೆ ಬುದ್ಧಿ ಹೇಳುತ್ತಾರೆ; ಆವರ ಕರಾಳ ರೂಪ ಕಂಡರೆ ನಾವೂ ಹೆದರಿಹೋಗುತ್ತೇವೆ.

ಭಾರತದ ವಿವಿಧ ರಾಜ್ಯಗಳಲ್ಲಿ ಭಿನ್ನ ಭಿನ್ನ ಆದಿವಾಸಿ ಜನಾಂಗಗಳು ಜೀವಿಸಿರುವದು ನಮಗೆ ಕಂಡುಬರುವವು. ಬಾಹ್ಯ ಪ್ರಪಂಚದ ತಿಲಮಾತ್ರವೂ ಜ್ಞಾನವಿಲ್ಲದ ಆ ಅಜ್ಞಾನಿ ಮೂಲನಿವಾಸಿಗಳು, ನಮ್ಮಂಥ ಹೊಸ ಹೊಳಪಿನ ಉಡುಪನ್ನು ಧರಿಸಿದ ಸುಧಾರಿಸಿದ ಓರ್ವ ಮಾನವನನ್ನು ಅಕಸ್ಮಾತ್ ಕಂಡರೆ ಒಮ್ಮೆಯೇ ಭಯಭೀತರಾಗಿ ಕಾಲಿಗೆ ಬುದ್ಧಿ ಹೇಳುವರು! ಅಷ್ಟು ಅಂಜುಬುರುಕರಾಗಿ ಇರುವರು! ಆದರೆ ತಮ್ಮ ಗುಡ್ಡಗಾಡು ಪ್ರದೇಶಗಳಲ್ಲಿ ಅದೆಂಥ ಭೀಕರ ಸ್ವರೂಪದ ಪಶು-ಪಕ್ಷಿಗಳನ್ನು ಕಂಡರೆ ಅವನ್ನು ಸುಲಭದಲ್ಲಿಯೇ ನಾಶಗೊಳಿಸುವಷ್ಟು ಸಾಮರ್ಥ್ಯ ಅವರ ದೇಹದಲ್ಲಿರುವದು.

ಇಂತಹದೊಂದು ವಿಚಿತ್ರ ಜನಜಾತಿಯು ಉತ್ತರಪ್ರದೇಶ ರಾಜ್ಯದಲ್ಲಿ ಇತ್ತೀಚೆಗೆ ಕಂಡುಬಂದಿರುವದು. ಈ ಜನಾಂಗಕ್ಕೇ ಆ ಪ್ರದೇಶದ ಸುಧಾರಿಸಿದ ಜನರು, "ವನಮಾನುಷ್ಯ"ರೆಂದು ಸಂಭೋಧಿಸುವರು. ಇವರ ಜನಸಂಖ್ಯೆಯು ಸುಮಾರು ೧೨-೧೫ ನೂರು ಇರುವದು ಹಿಮಾಲಯದ ಅಡಿಯಲ್ಲಿರುವ ಹಾಗೂ 'ಅಸಕೋಟ"ದ ಸಮೀಪದಲ್ಲಿರುವ "ಕುಮಾವೂ" ಪಟ್ಟಡವಿಗಳಲ್ಲಿ ವಾಸಿಸುವರು. ಈ ಜನಜಾತಿಯ ಶೋಧವನ್ನು—' ಉತ್ತರ ಪ್ರದೇಶ ಸರಕಾರ ದ್ವಾರ ನಿಯುಕ್ತ ಕುಮಾವೂ— ವನಸಂಪದಾ-- ವಿತರಣ— ಜಾಂಚ-ಸಮಿತಿ"ಯು ಮುಖಾಂತರ ಮಾಡಲಾಯಿತು. ಗುಡ್ಡಗಾಡು ಪ್ರದೇಶಗಳಲ್ಲಿ ಜೀವಿಸುವ ಮೂಲನಿವಾಸಿಗಳ ಶೋಧವನ್ನು ಮಾಡುವದೋಸ್ಕರ ಸಂಚಾರ ಮಾಡುತ್ತ ಅಸಕೋಟ ಅರಣ್ಯದತ್ತ ತಲಪಿದರು. ಅಲ್ಲಿಯ ಜನರ ಜೀವನ ಪರಿಚಯವನ್ನು ತಿಳಿದುಕೊಳ್ಳುತ್ತಿರುವಾಗ ಆ ವಿಚಿತ್ರ ಜನಜಾತಿಯ ಎರಡು ಪ್ರತಿನಿಧಿಗಳು ಸಮಿತಿಯ ಸದಸ್ಯರಿಗೆ ಭೆಟ್ಟಿಯಾದರು! ಹಾಗೂ ತಮ್ಮ ಪ್ರದೇಶದ ಪರಿಚಯವನ್ನು ಹೇಳಿ ಅವರನ್ನು ಅತ್ತ ಒಯ್ದರು.

ಐತಿಹಾಸಿಕ ಘಟನೆಗಳಿಗೆ ಅನುಸಾರವಾಗಿ ಅತಿಪ್ರಾಚೀನ ಕಾಲದಿಂದಲೂ ಈ ವನಮಾನುಷರಲ್ಲಿ ಎರಡು ಭಾಗಗಳಾಗಿರುವವು. ಅಷ್ಟೇ ಅಲ್ಲ ಆವೆರಡೂ ಗುಂಗಳು ಪ್ರತ್ಯೇಕವಾದ ಭಿನ್ನಭಿನ್ನ ಜಾತಿಗಳಾಗಿ ಮಾರ್ಪಟ್ಟಿರುವವು. ಅವೆಂದರೆ— ಒಂದು "ತಾಪಸ' ವರ್ಗವಾದರೆ, ಇನ್ನೊಂದು "ರಾಜಸ" ಇವುಗಳಲ್ಲಿ "ತಾಪಸ"ವೇ ಶ್ರೇಷ್ಠ ಜಾತಿಯೆಂದು ಭಾವಿಸಿರುವರು. ಇವರ ಪೂರ್ವಜರು ಅತ್ಯಂತ ಪ್ರಾಚೀನ ಕಾಲದಿಂದ ಅರಣ್ಯಗಳಲ್ಲಿಯೇ ವಾಸಿಸಿ, ತಪಸ್ಸು ಮಾಡುತ್ತಿದ್ದರು. ಆದರೆ ಇಂದು ಮಾತ್ರ ತಾಪಸಿ ಜನರೂ ನಿರಕ್ಷರಕುಕ್ಷಿಗಳಾಗಿ ಹೋಗಿರುವರು.

ಇನ್ನು ರಾಜಸ ವರ್ಗ ಮಾತ್ರ, ನೂರಾರು ವರ್ಷಗಳ ಪೂರ್ವಕಾಲದಲ್ಲಿ ವನಜೀವನ ತ್ಯಾಗಮಾಡಿ ಶಸ್ತ್ರಗ್ರಹಣಮಾಡಿ ಜೀವಿಸುತಿದ್ದರು; ಹಾಗೂ ಅವರ ಪೂರ್ವಜರು ಅಸಕೋಟದ ಮೇಲೆ ಶಾಸನ ಸಹ ಮಾಡಿರುವರೆಂದು ವಿಶ್ವಸನೀಯನಾಗಿ ತಿಳಿದುಬಂದಿರುವದು. ಪರಂತು ಕೌಟುಂಬಿಕ ಯುದ್ಧಗಳಲ್ಲಿ ಅವರ ವೈಭವವು ನಷ್ಟವಾಗಿ ಹೋಯಿತು! ಮತ್ತು ಅಂದಿನಿಂದ ಅವರು ಯಥಾಸ್ಥಿತಿಯಲ್ಲಿಯೇ ಅರಣ್ಯಪ್ರದೇಶದಲ್ಲಿ ಜೀವಿಸಲು ಧಾವಿಸಿದರು.

ಆದರೆ ಇತ್ತಿತ್ತಲಾಗಿ ಆವೆರಡೂ ಪ್ರತ್ಯೇಕ ಜಾತಿ (ವರ್ಗ)ಗಳು ಒಂದಾಗಿ ತಮ್ಮ ಗುಡ್ಡಗಾಡು ಜೀವನವನ್ನು ಸಾಗಿಸುವರು

ಗಿಡಮಂಗಳ ಗೊಂಚಲಗಳಲ್ಲಿಯೂ ಇಲ್ಲವೇ ಇಳಿಜಾರಾದ ಕಂದರಗಳಲ್ಲಿ ಸ್ಥಳಗಳನ್ನು ಆಯ್ದುಕೊಂಡು ಅಡವಿಯಲ್ಲಿರುವ ಹಸುರು ಎಲೆಗಳ ಸಹಾಯದಿಂದಲೂ ಮತ್ತು ಗಿಡ-ಮರಗಳ ಬೊಡ್ಡೆಗಳ ಆಧಾರದಿಂದ ಊ ಸಣ್ಣ—ಪುಟ್ಟ ಗುಡಿಸಲುಗಳನ್ನು ಕಟ್ಟಿಕೊಳ್ಳುವರು. ಈ ಜನಾಂಗಕ್ಕೆ ಕಾಲಮಾನ ಪರಿಸ್ಥಿತಿಗೆ ಅನುಗುಣವಾಗಿ ವರ್ಷದಲ್ಲಿ ಮೂರುಸಲ ತಮ್ಮ ಜೋಪಡಿಗಳನ್ನು ಸ್ಥಳಾಂತರಿಸುವ ಸಂದರ್ಭವು ಒದಗುವದು. ಬೇಸಿಗೆಯಕಾಲದಲ್ಲಿ ಗಿಡಗಂಟಿಗಳ ತಂಪಾದ ನೆರಳಿನಲ್ಲಿ, ಜೀವಿಸಿದರೆ ಚಳಿಗಾಲದಲ್ಲಿ ಹಿಮದ ಪ್ರವಾಹಕ್ಕೂ ಮತ್ತು ಅತಿ ಉಗ್ರಸ್ವರೂಪದ ಚಳಿಯ ಪ್ರಭಾವಕ್ಕ ತಲೆಬಾಗಿ ವಿಶಾಲವಾದ ಮರಗಳ ಮೇಲೆ ವಾಸಿಸುವರು. ಆದರೆ ಮಳೆಗಾಲದಲ್ಲಿ ಮಾತ್ರ ಗುಡ್ಡಗಾಡು ಪ್ರದೇಶಗಳಲ್ಲಿರುವ ಹರವಾಗಿ ಪಸರಿಸಿದ ಪಾಷಾಣ ಶಿಲೆಯ ಮೇಲೆ ತೊಗಲಿ ತಂಬುಗಳನ್ನು ಕಟ್ಟಿ ದಿವಸವನ್ನು ನೂಕುವರು! ಈ ರೀತಿ ಕಷ್ಟದಾಯಕ ಪರಿಸ್ಥಿತಿಯಿಂದ ತಮ್ಮ ಸಂಸಾರವನ್ನು ಸಾಗಿಸುತ್ತಾರೆ.

ಈ ಜನರ ಆಹಾರವೆಂದರೆ, ಅರಣ್ಯದಲ್ಲಿ ಬೆಳೆಯುವ ಗಡ್ಡೆ—ಗೆಣಸುಗಳೂ, ಹಣ್ಣು—ಹಂಪಲಗಳೂ ಪ್ರಮುಖವಾಗಿವೆ. ಇಷ್ಟೇ ಅಲ್ಲದೇ ಬೇಟೆಯಾಡಿ ತಂದ ಪಶು—ಪಕ್ಷಿಗಳ ಮಾಂಸವನ್ನೂ ಬಹು ರುಚಿಕರವಾಗಿ ತಿನ್ನುವರು. ಇವರ ಮೂಲೋದ್ಯೋಗವೆಂದರೆ ಬೇಟೆಯಾಡುವದು. ಮೇಲಾಗಿ ಬೇಟೆಯಾಡಿ ತಂದ ಪ್ರಾಣಿಗಳ ಚರ್ಮವನ್ನು ಮಾರುವದೂ, ಅಡವಿಯಲ್ಲಿರುವ ವಿವಿಧ ಗಿಡಮೂಲಿಕೆಗಳ ಬೇರುಗಳನ್ನು ತಂದು ಮಾರುವದು ಸಹ ಎರಡನೇ ಉದ್ಯೋಗವಾಗಿದೆ. ತಮ್ಮ ನಿತ್ಯದ ಜೀವನಕ್ಕೆ ಬೇಕಾಗುವಷ್ಟು ಗಡ್ಡೆ—ಗೆಣಸುಗಳನ್ನು ಬೆಳೆಸುವದೇ ಇವರ ಪ್ರಮುಖ ವ್ಯವಸಾಯವಾಗಿರುವದು. ಒಂದು ವೇಳೆ ಹೆಚ್ಚಾದ ಆ ಗೆಣಸುಗಳನ್ನು ಅಲ್ಲಿಯೇ ಮಾರುವರು.

ಈ ಜನಾಂಗಕ್ಕೆ ಶಿಕ್ಷಣದ ಎಳ್ಳಷ್ಟೂ ಜ್ಞಾನವಿಲ್ಲ. ಇವರು ಮಾತನಾಡುವ ಭಾಷೆಯು ಚಿತ್ರ-ವಿಚಿತ್ರವಾಗಿದೆ! ಅರಿಯದೇ ಇದ್ದ ನಮ್ಮ-ನಿಮ್ಮಂಥವರು ಅವರು ಮಾತಾಡುವದನ್ನು ಆಲಿಸಿದರೆ, ಅವರೇನು ಪದ್ಯವನ್ನು ಹೇಳುವರೋ ಅಥವಾ ಶ್ಲೋಕ ಹೇಳುವರೋ ಎಂಬುದು ತಿಳಿಕೊಳ್ಳುವದು ಬಲು ಕಠಿಣ! ಭಾಷೆ ಪ್ರತ್ಯೇಕವಾಗಿದ್ದರೂ, ಲಿಪಿ ಮಾತ್ರ ಪ್ರತ್ಯೇಕವಿಲ್ಲ. ಇವರ ಎಲ್ಲ ಕೊಡು—ಕೊಳ್ಳುವ ವ್ಯವಹಾರವು ಮಾತಿನ ಮೂಲಕವೇ ಸಾಗುವದು. ಸುದ್ದಿಗಳನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ಮುಟ್ಟಿಸುವದಾದರೆ ಬಾಯಿ ಮಾತಿನ ಮುಖಾಂತರವೇ ನಡೆಯುವದು. ಬರೆಯುವದೆಂದರೆ ಇವರು ಹೆದರಿ ಕಂಗಾಲರಾಗುವರು.

ಇಷ್ಟಿದ್ದರೂ ಈ ಜನಜಾತಿಯನ್ನು ಅಧಿಕಾರಿಸುವದಕ್ಕೆ ಒಂದು ಪ್ರತ್ಯೇಕವಾದ ಸರಕಾರವಿರುವದು. ನಮ್ಮ ಕಡೆಯಲ್ಲಿ ಯಾವ ಪ್ರಕಾರ ಹಳ್ಳಿಯಲ್ಲಿ ಗ್ರಾಮ ಪಂಚಾಯತವು ಆಳುವದೋ ಅದೇ ರೀತಿಯಲ್ಲದಿದ್ದರೂ ಕಿಂಚಿತ್ ಭಿನ್ನರೂಪದಲ್ಲಿದ್ದ ಒಂದು ವಯಸ್ಸುಮೀರಿದ ಏಳುಜನ ಮುದುಕರ ಸಮಿತಿಯು ಆ ಪ್ರದೇಶವನ್ನು ಆಳುವದು! ಅಂದರೆ—"ಸತ್ತ ಪಿತರ್ಜ" (ಸಪ್ತ ಪಿತೃಜನ) ಎಂಬ ಹೆಸರಿನ ಪರಿಷತ್ತು ಈ ವನಮಾನುಷ ಜನಾಂಗದ ಮೇಲೆ ಶಾಸನ ಮಾಡುತ್ತದೆ. ಈ ಪರಿಷತ್ತಿನ ಸದಸ್ಯರೆಂದರೆ—ಆ ಜನ—ಜಾತಿಯಲ್ಲಿಯೇ ವಯಸ್ಸು ಮೀರಿದ ಏಳು ಅತೀ ವೃದ್ಧ ಪುರುಷರು ಇರುವರು. ಇವರು ಅಲ್ಲಿಯ ಜನರಿಂದ ಬಹುಮತವಾಗಿ ಆರಿಸಿ ಬಂದವರೇ ಆಗಿರುವರು. ಈ ಏಳು ಜನ ಮುದುಕರಲ್ಲಿ, ಅತಿ ಹೆಚ್ಚು ವಯಸ್ಸಿನ ಮುದುಕನೇ ಹಿರಿಯ ಅಧಿಕಾರಿಯ ಸ್ಥಾನವನ್ನು ಪಡೆಯುತ್ತಾನೆ. ಈ ರೀತಿಯಲ್ಲಿ ತಮ್ಮ ೧೨ ನೂರು ಜನರನ್ನು ಯೋಗ್ಯ ರೀತಿಯಲ್ಲಿ ನಿಯಂತ್ರಣದಲ್ಲಿ ತಂದು ಕಾಯದೆ ಬದ್ಧವಾಗಿ ಆ ಪ್ರದೇಶವನ್ನು ಆಳುವದು.

ಹೀಗೆ ಆಳುವ ಪಂಕ್ತಿಗೆ ಸುಧಾರಿಸಿದ ಜನರ ಸಂಪರ್ಕ ನಿಕಟವಾಗಿ ಬೆಳೆಯಿತು. ಹಾಗೂ ಅವರಿಗೆ ಕ್ರಮೇಣ ಜ್ಞಾನೋದಯವಾಯಿತು! ಈ ವನ ಮಾನುಷರ ಹೆಸರು ಆ ಜಿಲ್ಲೆಯ ನಿರ್ವಾಚನ ಸೂಚಿ ಪತ್ರಿಕೆಯಲ್ಲಿ ಕಾಣಲಾರದೆ ಹೋಯಿತು. ಮತ್ತು ಔಪಚಾರಿಕ ರೂಪದಿಂದ ಅವರು ಈ ದೇಶದ ನಾಗರಿಕರಲ್ಲಿ ಎಂದು ಇತರೇ ಜನರು ನಂಬಿದ್ದರು. ಆದರೆ ಇಂದು ಕೆಲವು ಸಂಗತಿಗಳ ಆಧಾರದ ಮೇಲಿಂದ ಅವರು ಸಾವಿರಾರು ವರ್ಷಗಳ ಹಿಂದಿನಿಂದ ಇದೇ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಹೀಗಿದ್ದರೂ ನೆರೆಯ ಪ್ರದೇಶದ ಗ್ರಾಮವಾಸಿಗಳೂ ಮತ್ತು ವ್ಯವಸಾಯಿಕ ನಿವಾಸಿಗಳು ಈ ವನ ಮಾನುಷರ ಹತ್ತಿರ ಯಾವತರದಿಂದಲೂ ಸಂಪರ್ಕವನ್ನು ಬೆಳೆಸಲಿಲ್ಲ.

ಯಾಕಂದರೆ—ಈ ವಿಚಿತ್ರ ಜನ ಜಾತಿಯ "ವನ ಮಾನುಷ"ರು ಅರ್ಧಮಾನವ ಮತ್ತು ಅರ್ಧವಾನರರು ಎಂದು ತಿಳಿಯುವರು. ಅವರ ಆ ವಿಚಿತ್ರ ರೂಪದಿಂದಲೇ ಈ ಅನ್ವರ್ಥ ಹೆಸರು ಪ್ರಾಪ್ತವಾಗಿದೆ! ಅವರ ಮೈಮೇಲೆ ಅತಿ ಉದ್ದ ಹಾಗೂ ದಟ್ಟವಾಗಿ ಕೂದಲುಗಳು ಬೆಳೆದಿರುವವು! ಕಣ್ಣು, ಮೂಗು ಮತ್ತು ಹಣೆಯ ಪಟ್ಟಿಯ ಭಾಗವನ್ನು ಬಿಟ್ಟು ಅವರ ಸಂಪೂರ್ಣ ಮೋರೆಯು ಕಪ್ಪಾದ ಕೂದಲುಗಳಿಂದ ಮುಚ್ಚಿರುವದ ! ಅಪರಿಚಿತ ಮನುಷ್ಯರು ಒಮ್ಮೆ ಇವರನ್ನು ನೋಡಿದರೆ ಹೆದರದೇ ಇರಲಾರರು. ಅಂಥ ಅಕರಾಳ-ವಿಕರಾಳ ಸ್ವರೂಪದ ಜನಾಂಗವು ಭಾರತದ ಇನ್ನಾವ ಪ್ರದೇಶದಲ್ಲಿಯೂ ದೃಷ್ಟಿಗೆ ಗೋಚರಿಸಲಾರದು.

ತೀರ ಹಿಂದುಳಿದ ಈ ಜನಾಂಗವು ತಮ್ಮ ಸಂಪ್ರದಾಯದಂತೆಯೇ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ನಡೆಯುವರು. ಇವರಲ್ಲಿ ಅನೇಕ ರೀತಿಯಲ್ಲಿ ಮೂಢ ನಂಬಿಕೆಗಳು ತುಂಬಿ ಕೊಂಡಿರುವವು. ಈ ಅಂಧಶ್ರದ್ಧೆಗಳ ಮೇಲೆ ತುಂಬಾ ವಿಶ್ವಾಸವನ್ನಿಟ್ಟುಕೊಂಡಿದ್ದಾರೆ. ವಿವಾಹ ಇತ್ಯಾದಿ ಮಹತ್ಕಾರ್ಯಗಳನ್ನು ಮೂಢ ನಂಬಿಕೆಗಳ ಆಧಾರದ ಮೇಲೆಯೇ ಸಾಗಿಸುವರು. ಇಂಥ ಚಿತ್ರ—ವಿಚಿತ್ರದ ಜನ ಜಾತಿಯು ಸುಧಾರಿಸಿದ ನಮ್ಮ ಭಾರತದಲ್ಲಿ ಇನ್ನೂ ತನಕ ಕಂಡು ಬರುತ್ತದೆ ಎಂದರೆ ನಿಜವಾಗಿಯೂ ನಾವು ಪ್ರಪಂಚದ ಸುಧಾರಿಸಿದ ರಾಷ್ಟ್ರಗಳಿಗಿಂತ ತೀರ ಹಿಂದುಳಿದಿದ್ದೇವೆ ಎಂದು ಹೇಳಿದರೆ ಅತಿಶಯೋಕ್ತಿ ವೆನಿಸಲಾರದು

—ಶ್ರೀ ರಾಮಕೃಷ್ಣ ಎ. ಹೈ.

NOTICE.

Notice is hereby given that Share Certificate Nos. 1473 and 1697 issued by the Vijaya Bank Ltd., in respect of its 4 Shares numbered 9548, 9549, 11512 and 11513, standing in the name of Late Kowdur Meenakshi Heggadthi, W/o Sri T. Bommaya Hegde, Kowdur Village, Bailoor, are reported to be lost and an application has been received from her daughter Srimathi Chandravathi Heggadthi, "Chandra Vihar", Bailoor, for the issue of a fresh Share Certificate in lieu thereof, for the purpose of transmission of the said Shares to her name. Any person having any objection whatsoever for the issue of a fresh Share Certificate or for the transmission of the said Shares to the name of the applicant, should communicate immediately the same to the undersigned. If objection is not filed within 15 days from this date with the undersigned, fresh Share Certificate in the place of the Original Share Certificate Nos. 1473 and 1697, will be issued and the transmission of the said Shares to the name of the applicant, will be registered in the Books of the Bank.

The Vijaya Bank Limited,
Head Office, Mangalore-3.
Dated: 8—9—1959.

(Sd) P. Jayarama Shetty,
Secretary.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಕಥಾ ವಿಹಾರ

(೨ನೇ ಪುಟದಿಂದ)

ವ್ಯವರ ಪರಿಚಯ ನನಗಿತ್ತು. ಒಲವು ಆ ಕಡೆಗೆ ವಾಲಿತು.. ಆದರೆ 'ಬಿಸಿನೆಸ್'ಗೆ 'ನಶೀಬು' ಬೇಕಂತೆ! ಇಲ್ಲವಾದರೆ ದಿವಾಳಿಯಾಗಿ ಮನೆ ಮಾರಾಟ ಆಗುವ ಪ್ರಸಂಗವೂ ಬರಬಹುದು. ನನ್ನ ಅದೃಷ್ಟವನ್ನು ಅರಿತವರಾರು? ಬ್ರಹ್ಮನು ಹೇಗೆ ಬರೆದಿರುವನೋ ಏನೋ? ಮನಸ್ಸು ಹಿಂದೇಟು ಹಾಕಿತು! ಅದೂ ಅಸ್ವೀಕೃತವಾಯಿತು.

ಇನ್ನು ಈ ಹಣವನ್ನು ಹೇಗೆ ಸದ್ವಿನಿಯೋಗಗೊಳಿಸಲಿ?

ಇನ್ನೊಂದು ವಿಚಾರ ಚಿತ್ರಕ್ಕೆ ಗೋಚರಿಸಿತು.

ವಿದೇಶ ಪರ್ಯಟನ....ಯುರೋಪಿನ ಪ್ರವಾಸ, ಲಂಡನ್, ಪ್ಯಾರಿಸ್, ರೋಮ್, ಜನೇವಾ....ಮೊದಲಾದ ಬೆಡಗಿನ ನಗರಗಳ ಸಂದರ್ಶನ....ಇನ್ನೂ ಅನೇಕ ಹುಚ್ಚು ಬಯಕೆಗಳು!

ಈ ಹಣದಿಂದ ಇಂತಹ ಅಪೂರ್ವ ಸೌಭಾಗ್ಯವನ್ನು ಹೊಂದೋಣವೇ? ಇಂತಹ ಪ್ರವಾಸವು ಆಳವಾದ ಅನುಭವವನ್ನು ನೀಡುವುದು. ಅಲ್ಲದೆ ಊರಿನಲ್ಲಿ ಗೌರವಾದರಗಳು ಹೆಚ್ಚುವುವು. ಗಣ್ಯವ್ಯಕ್ತಿಯಾಗಬಹುದು. ಆದರೆ,

ಅತ್ಯಲ್ಪ ಅವಧಿಯ ಸಂಭ್ರಮಕ್ಕೆ ದೊರೆತ ಹಣವನ್ನೆಲ್ಲಾ ಧಾರೆಯೆರೆದು ಕೈಕಟ್ಟಿ ಕುಳಿತುಕೊಳ್ಳುವುದೇ? ಇದೂ ಸಮ್ಮತವಾಗಲಿಲ್ಲ....ಜೀವನದ ಉಳಿದ ಭಾಗವನ್ನೇ ಸುಖಮಯವನ್ನಾಗಿ ಮಾರ್ಪಡಿಸುವಂತೆ ಇದರ ಉಪಯೋಗವಾಗಬೇಕು. ಹಾಗಾದರೆ ಮಾತ್ರ ಸಾರ್ಥಕವಾದೀತು. ಆ ರೀತಿ ಹೇಗೆ?

ಯೋಚನಾ ಚಕ್ರವು ಇನ್ನೊಂದು ದಿಶೆಯಲ್ಲಿ ತಿರುಗ ತೊಡಗಿತು..

ಭವ್ಯವಾದ ವಿದೇಶಿ ಪೋಷಾಕಿನಲ್ಲಿ ಮೆರೆಯಬಾರದೇ? ನವನವೀನವಾದ ಬಟ್ಟೆಗಳು ಈಗ ತಾನೇ ಬಂದಿವೆಯೆಂದು ನಮ್ಮೂರ ಜವುಳಿ ವ್ಯಾಪಾರಿ ಯೋರ್ವರು ಸೂಚಿಸಿದುದು ನೆನಪಾಯಿತು. ಬಗೆ ಬಗೆಯ ಉಡುಪುಗಳನ್ನು ಭರ್ಜರಿಯಾಗಿ ಧರಿಸಿಕೊಂಡು ಠೀವಿಯಿಂದ ತಿರುಗಾಡುವ ಆಸೆಯಾಯಿತು. ಇದಕ್ಕಾಗುವ ವೆಚ್ಚವು ನೂರಿನ್ನೂರು ರೂಪಾಯಿಗಳನ್ನು ಮೀರಲಿಕ್ಕಿಲ್ಲ! ಹಣದ ಹೆಚ್ಚಿನ ಅಂಶವು ಹಾಗೆಯೇ ಉಳಿಯುತ್ತದೆ ಅದಕ್ಕೆ ಯೋಗ್ಯ ಗತಿಗಾಣಿಸುವುದು ಎಂತು?

ಆಗಲೇ ಹತ್ತಿರದ ಹೋಟೆಲೊಂದರಿಂದ 'ರೇಡಿಯೋ'ದ ಪಾಶ್ಚಾತ್ಯ ಸಂಗೀತ ಕೇಳಿ ಬಂತು. ಈ ಹಣದಿಂದ ಒಂದು ರೇಡಿಯೋವನ್ನು ತೆಗೆದು ಕೊಂಡರೆ?

ಆಹಾ!...ಸುಮಧುರ ಗಾನ....ವಿವಿಧ ಸಮಾಚಾರಗಳು...ಉಜ್ವಲ ಭಾಷಣಗಳು...ಕ್ರಿಕೆಟ್ ಟೆಸ್ಟ್ ಪಂದ್ಯದ ರನ್ನಿಂಗ್ ಕಮೆಂಟ್ರಿ ಇನ್ನೂ ಹಲವು ವಿಷಯಗಳು. ಬೇಸರವನ್ನು ನಿವಾರಿಸಿ ಮನೋರಂಜನೆಯನ್ನೊದಗಿಸಬಲ್ಲ ಉತ್ತಮ ಸಾಧನವಿದು. ಇದನ್ನು ಕ್ರಯಕ್ಕೆ ಪಡೆದುಕೊಳ್ಳುವ ಅಚಲ ನಿರ್ಧಾರವಾಯಿತು. ಕೆಲವು ನೂರು ರೂಪಾಯಿಗಳು ಬೇಕಾಗಬಹುದು. ಉಳಿದುದನ್ನು ಏನು ಮಾಡುವುದು?

ಭರ್ರನೆ ಒಂದು ಕಾರು ನನ್ನ ಸಮೀಪದಿಂದ ಹಾದು ಹೋಯಿತು. ಕಾರನ್ನು ತೆಗೆದುಕೊಳ್ಳುವ ಹಂಬಲವಾಯಿತು. ಸ್ವಂತ ಕಾರು ಇದ್ದರೆ ನಡೆಯುವ ಪ್ರಸಂಗ ತಪ್ಪೀತು! ಎಷ್ಟೋ ಧನಿಕರು ತಮ್ಮ ಕಾರುಗಳಲ್ಲಿ ವಿಹರಿಸುತ್ತಿರುವುದನ್ನು ಕಂಡ ನಾನು ಅಸೂಯೆ ಪಟ್ಟಿದ್ದೆ. ಆ ಭಾಗ್ಯ ನಾನೂ ಹೊಂದಬೇಕು. ನಾಲ್ಕು ಸಾವಿರದ ಒಳಗೆ ದೇಶೀಯ ಕಾರನ್ನು ತೆಗೆದುಕೊಳ್ಳಬಹುದು. ಹೀಗೆ ರೇಡಿಯೋ...ಕಾರು...ಇವೆರಡು ನಿಶ್ಚಯವಾದುವು.

ಆ ಕೂಡಲೇ ಹೊಸ ಸಮಸ್ಯೆಯೊಂದು ತಲೆಹಾಕಿತು. ಹಳ್ಳಿಯ ಮನೆಯಲ್ಲಿ ರೇಡಿಯೋ ಇದ್ದು ಏನು ಫಲ? ಹಳ್ಳಿಯಲ್ಲಿ ಕಾರನ್ನು ಓಡಿಸಿ ಮೆರೆಯುವುದು ಹೇಗೆ? ಇದಕ್ಕೆ ಬೇರೆ ಪರಿಹಾರ ಹುಡುಕಬೇಕು. ನಗರದಲ್ಲಿ ನೆಲಸಬೇಕು. ಭವ್ಯವಾದ ಬಂಗಲೆಯನ್ನು ಖರೀದಿಮಾಡಿ ರೇಡಿಯೋ ಮತ್ತು ಕಾರುಗಳ ಸಮ್ಮತ ಅಲ್ಲಿ ವಾಸಿಸಿದರೆ ಅದಕ್ಕೊಂದು ಅಪೂರ್ವವಾದ ಶೋಭೆ ಬರುತ್ತದೆ. ಹಾಗಾದರೆ ಹೊಸ ಮನೆಯಾಗಬೇಕು.

ನಗರದಲ್ಲಿ ಒಂದು ಭವನ ತೆಗೆದುಕೊಳ್ಳುವುದೆಂದರೆ ಸುಲಭವಲ್ಲ. ಕನಿಷ್ಠ ಪಕ್ಷ ೫ ಸಾವಿರವಾದರೂ ಬೇಕು.

ಅಂತಹ ಭವನವಿಲ್ಲದೆ ರೇಡಿಯೋ ಕಾರುಗಳಿಗೆ ಬೆಲೆಯಿಲ್ಲ!

ರೇಡಿಯೋ, ಕಾರುಗಳಿಲ್ಲದೆ ಆ ಬಂಗಲೆಗೆ ಶೋಭೆಯಿಲ್ಲ!

ಆದರೆ ಇವೆಲ್ಲವನ್ನೂ ಐದು ಸಾವಿರದಲ್ಲಿ ಪೂರೈಸುವ ಬಗೆ ಮಾತ್ರ ಹೊಳೆಯಲಿಲ್ಲ!....ಈಗ ಪ್ರಥಮ ಬಾರಿಯಾಗಿ ಜೆಕ್ಕಿನಲ್ಲಿ ನಮೂದಿಸಲಾದ ಸಂಖ್ಯೆ ಕಡಿಮೆ. ಯಾಯಿತಲ್ಲಾ ಎಂಬ ಸಂತಾಪ ನನ್ನಲ್ಲಿ ಮೂಡಿತು. ಹತ್ತು ಸಾವಿರವಾದರೂ ಇರುತ್ತಿದ್ದರೆ ನನ್ನ ಯೋಜನೆಗಳು ಪ್ರಾರಂಭವಾಗುತ್ತಿರಲಿಲ್ಲ!

ಎಲ್ಲಿಯೋ ಒಂದು ಕಡೆ ಓದಿದ ನೆನಪಾಯಿತು. 'ಹಣ ಇಲ್ಲದಿದ್ದರೂ ಚಿಂತೆ; ಹಣ ಇದ್ದರೂ ಚಿಂತೆ' ಹೌದು! ಇದರ ಸ್ಪಷ್ಟ ಅರಿವಾಯಿತು ಹಣ ಇಲ್ಲದಾಗ ಅದನ್ನು ಗಳಿಸುವುದು ಹೇಗೆಂಬ ವ್ಯಥೆ... ಸಂಪತ್ತು ದೊರೆತಾಗ ಅದು ಅಲ್ಪವಾಗಿ ತೋರುವುದು! ಎಷ್ಟು ಗಳಿಸಿದರೂ ಅತೃಪ್ತಿಯೇ!....

ಅದೇ ರೀತಿಯ ಭಾವನೆ ನನ್ನದಾಯಿತು. ಸದ್ಯಕ್ಕೆ ಅವನ್ನೆಲ್ಲಾ ಅನಾವಶ್ಯಕಗೊಳಿಸಿ ಮುಂದಕ್ಕೆ ಸ್ವಲ್ಪ ವಿರಾಮ ಸಿಗುವಂತೆ ಮಾಡಿದೆ,...ಮೊದಲಿನ ಉಷ್ಣತೆ ಕಡಿಮೆಯಾಗಿ ತಣಿಯತೊಡಗಿತು.......

ೲ ೲ ೲ

ನನ್ನ ನಡಿಗೆ ನಿಧಾನವಾಗಿ ಸಾಗುತ್ತಿತ್ತು. ಮನಸ್ಸು ಶಾಂತವಾಗಿತ್ತು. ವ್ಯಗ್ರತೆ ದೂರವಾಗಿತ್ತು ...ಬೇಡ ಬೇಡವೆಂದರೂ ಇನ್ನೊಂದು ಅಪೇಕ್ಷೆಯುಂಟಾಯಿತು. ಇಷ್ಟರ ವರೆಗೆ ಒಮ್ಮೆಯೇ ಐದು ಸಾವಿರ ರೂಪಾಯಿಗಳನ್ನು ಕೈಯಿಂದ ಹಿಡಿದವನು ನಾನಲ್ಲ. ಬೇಂಕಿನಲ್ಲಿ ಚೆಕ್ಕನ್ನು ಪಟಾಯಿಸಿದಾಗ ಅಷ್ಟು ಹಣ ಸಿಗುವುದು. ಒಮ್ಮೆ ಅಷ್ಟು ಹಣವನ್ನು ಹಿಡಿದ ಪುಣ್ಯ ಪಡೆಯಬಹುದು ಆ ಬಳಿಕ ಉಳಿದ ಕಾರ್ಯಕ್ರಮಗಳೆಂದು ನಿರ್ಧಾರವಾಯಿತು. ಆದರೆ ನನ್ನ ಹೆಸರಿನಲ್ಲಿ ಹಣ ಕೊಟ್ಟಾರೇ? ಎಂಬ ಸಂಕೋಚವಾಯಿತು. ಚೆಕ್ ಕೊಟ್ಟವರ ಸಹಿ ಇರುವಾಗ ನಿಶ್ಚಯವಾಗಿಯೂ ಕೊಟ್ಟೇ ತೀರುತ್ತಾರೆ ಎಂಬ ಧೈರ್ಯವೂ ಮೂಡಿತು. ನೇರವಾಗಿ ಮಂಗಳೂರಿಗೆ ಹೋದರೆ ಅಲ್ಲಿ ಅಷ್ಟು ಸಂದೇಹ ಬರಲಿಕ್ಕಿಲ್ಲ.

ಅದೇ ತಾನೇ ಮಂಗಳೂರಿಗೆ ತೆರಳುವ ಬಸ್ಸೊಂದು ಧೂಳು ಹಾರಿಸುತ್ತಾ ಧಾವಿಸಿ ಬರುತ್ತಿತ್ತು. ಕೈಯೆತ್ತಿ ನಿಲ್ಲಿಸಿದೆ. ಹತ್ತಿ ಕುಳಿತ ನಂತರ ಪುನಃ ಹೊರಟಿತು. ಉಳಿದ ಪ್ರಯಾಣಿಕರ ಸಂಗಡ ನನ್ನನ್ನೂ ಮಂಗಳೂರಿಗೆ ತಲುಪಿಸಿತು.

ಬಸ್ ನಿಲ್ದಾಣದಲ್ಲಿ ಇಳಿದವನೇ ಕೆನರಾ ಬೇಂಕಿನತ್ತ ಹೆಜ್ಜೆ ಹಾಕಿದೆ. ಚೆಕ್ಕನ್ನು ನಾವಕಾಶವಾಗಿ ಹೊರಡೆಗೆದು ಅವಶ್ಯವಿರುವ ಹೆಸರು ಹಾಗೂ ಸಹಿಗಳನ್ನು ಭರ್ತಿಪಡಿಸಿ ಬೇಂಕಿನಲ್ಲಿ ಹಾಜರು ಪಡಿಸಿದೆ. ಯಾವ ತಕರಾರೂ ಇಲ್ಲದೆ ನೋಟುಗಳು ನನ್ನ ಹಸ್ತವಾದುದನ್ನು ನೋಡಿ ಅಪರಿಮಿತವಾದ ಆನಂದವಾಯಿತು.

ನೂರು ರೂಪಾಯಿಗಳ ಐವತ್ತು ನೋಟುಗಳು!

ಎಲ್ಲವನ್ನೂ ಲಗುಬಗೆಯಿಂದ ಜೇಬಿನಲ್ಲಿ ಭದ್ರವಾಗಿ ಇರಿಸಿ ತಲೆಯನ್ನು ಮೇಲಕ್ಕೆ ಎತ್ತಿದಾಗ....ನನ್ನ ಜೀವವೇ ಹಾರಿಹೋದಂತಾಯಿತು! ಸ್ವಲ್ಪ ದೂರದಲ್ಲಿ ಒಂದು ವ್ಯಕ್ತಿಯು ವಿಚಿತ್ರ ದೃಷ್ಟಿಯಿಂದ ನನ್ನನ್ನೂ ನೋಟುಗಳನ್ನು ನೋಡುತ್ತಿತ್ತು! ಆ ತೀಕ್ಷ್ಣ ನೋಟದಿಂದ ನಾನು ತಪ್ಪಿಸಿಕೊಳ್ಳಬೇಕು! ಬೆವರು ಧಾರೆಗಟ್ಟಿ ಸುರಿಯಲಾರಂಭವಾಯಿತು.ಅಬ್ಬಾ!ಆ ದೃಷ್ಟಿಯಲ್ಲಿ ಇರುವ ಭೀಕರತೆಯೇ? ಭೀತಿಯಿಂದ ನನ್ನ ದೇಹವಿಡೀ ನಡುಗಿತು. ಹಣಕ್ಕೆ ಶತ್ರುಗಳು ಬೇಗನೇ ಹುಟ್ಟಿ ಕೊಳ್ಳುತ್ತಾರೆ. ಹಣವಿರುವಲ್ಲಿ ಅಪಾಯವೂ ಇದೆ. ಆದುದರಿಂದ ಆದಷ್ಟು ಬೇಗನೆ ಇಲ್ಲಿಂದ ಪಾರಾಗಿ ಸುರಕ್ಷಿತವಾದ ಸ್ಥಳ ಸೇರುವುದೆಂದು ಬಗೆಯುತ್ತಾ ಕಂಬಿ ಕಿತ್ತೆ!

'ವಿಶ್ವ ಭವನ'ದಲ್ಲಿ ಒಂದು ರೂಮನ್ನು ಗೊತ್ತುಪಡಿಸಿಯೂ ಆಯಿತು. ಕೋಣೆಯೊಳಗೆ ಪ್ರವೇಶಿಸಿ ಒಳಗಿರುವ ಕುರ್ಚಿಯಲ್ಲಿ ಕುಳ್ಳಿರಿಸಿ ಸಮಾಧಾನದ ಉಸಿರನ್ನು ಸೂಸಿದೆ...ನೋಟುಗಳ ಕಟ್ಟು ಜೇಬಿನಲ್ಲಿಯೇ ಇತ್ತು.

ತಕ್ಷಣವೇ 'ಹ್ಹ...ಹ್ಹ...ಹ್ಹಾ' ಎಂಬ ವಿಕಟವಾದ ನಗುವಿನ ಧ್ವನಿಯು ನನ್ನ ಕಿವಿಗೆ ಬಿತ್ತು. ಬೆಚ್ಚಿಬಿದ್ದೆ....ಭಯಾಶ್ಚರ್ಯಗಳಿಂದ ಆ ಕಡೆಗೆ ನೋಡಿದೆ. ಎದೆ 'ಧಸಕ್' ಎಂದಿತು.

ಅದೇ ವ್ಯಕ್ತಿ....ಅದೇ ಮುಖ...ಅದೇ ದೃಷ್ಟಿ.

ಬಾಗಿಲ ಬಳಿ ನಿಂತು ನಗುತ್ತಿತ್ತು. ನೋಟದಲ್ಲಿ ಕ್ರೂರತೆ ತುಂಬಿತ್ತು! ಯಮನ ಕರಾಳ ದರ್ಶನವಾದಂತಾಯಿತು.

ಅಷ್ಟೇ ಅಲ್ಲದೆ ಆ ವ್ಯಕ್ತಿಯ ಕೈಯಲ್ಲಿ ಪಿಸ್ತೂಲು ಇತ್ತು... ನನ್ನೆಡೆಗೆ ಗುರಿ ಹಿಡಿದಿದ್ದಾನೆ!

ನನ್ನ ಬಾಯಿಯ ದ್ರವ ಆರಿತು. ಕೈಕಾಲುಗಳು ನಿಶ್ಚಲವಾದುವು. ಸಾವು ಸಮೀಪಿಸಿತೆಂದು ನಿಶ್ಚಯಿಸಿದೆ....

ಆಹಾ! ನನ್ನ ದೌರ್ಭಾಗ್ಯವೇ? ಈ ಹಣ ನನಗೆ ಏಕೆ ಗಂಟುಬಿತ್ತೋ? ಹಣದ ಸಲುವಾಗಿಯೇ ಈ ನೀಚನು ನನ್ನನ್ನು ಅನುಸರಿಸಿಕೊಂಡು ಬಂದಿದ್ದಾನೆ!

ಹರಣ ತೆಗೆಯಲು ಕಾರಣವಾಗುವ ಹಣ ಇದು!

'ಆ ನೋಟುಗಳ ಕಟ್ಟನ್ನು ಇತ್ತ ಕೊಡುವಾಗ ಕೂಗಿದರೆ ಸುಟ್ಟು ಬಿಡುವೆನು?' ವ್ಯಕ್ತಿಯು ಗುಡುಗಿದನು!

ಆ ದನಿ ಸಿಡಿಲಿನ ಗರ್ಜನೆಯಂತಿತ್ತು!

ಕಡಲಿನ ಮೊರೆತದಂತಿತ್ತು!

ಎನ್ನೊಡಲಿನ ಅಂತಕನಂತಿತ್ತು!

ಇದೇ ಸಮಯದಲ್ಲಿ ನನ್ನಲ್ಲಿಯೂ ಒಂದು ಧೈರ್ಯವು ಅಂಡಲೆಯುತ್ತಿತ್ತು. ಅವನನ್ನು ಮೂದಲಿಸಬೇಕೆಂದು ನಾಲಗೆ ಕುಣಿಯಿತು.

'ಸೀ... ಚ..' ನಾಲಗೆ ತಡವರಿಸಿತು.

ಅಪ್ರಯತ್ನವಾಗಿ ಈ ಶಬ್ದ ನನ್ನ ಬಾಯಿಯಿಂದ ಹೊರಟದ್ದೇ ತಡ,

'ಢಮ... ....ಢಮ!......' ಎಂಬ ಘನ ಘೋರನಿನಾದದೊಂದಿಗೆ ಪಿಸ್ತೂಲಿನ ಗುಂಡುಗಳು ಎನ್ನೆದೆಯನ್ನು ಪ್ರವೇಶಿಸಿಬಿಟ್ಟುವು! ರಕ್ತವು ಧಾರೆಗಟ್ಟಿ ಹರಿಯ ತೊಡಗಿದಂತೆ ಭಾಸವಾಯಿತು! 'ಅಯ್ಯೋ' ಎಂಬ ಕಿರಿಚನೊಂದಿಗೆ ನಾನು ಧೊಪ್ಪನೆ ನೆಲಕ್ಕುರುಳಿದೆನು!

ಆಗ....ಥಕ್ಕನೆ ಎಚ್ಚರವಾಯಿತು. ಕಣ್ಣು ತೆರೆದು ಈಕ್ಷಿಸಿದಾಗ ಏನೂ ಗೋಚರಿಸಲಿಲ್ಲ! ಅಂಧಕಾರವೇ ಕವಿದಿತ್ತು! ಹತ್ತಿರವೇ ರಾತ್ರಿಯಲ್ಲಿ ನಾನು ಮಲಗಿದ್ದ ಮಂಚವಿತ್ತು. ಕ್ಷಣದೊಳಗೆ ಎಲ್ಲ ತಿಳಿದು ಹೋಯಿತು.

ರಾತ್ರಿ ಮಂಚದ ಮೇಲೆ ಮಲಗಿದ ನಾನು ಕನಸಿನ ಪ್ರಭಾವದಿಂದ ಹಾಗೆ ಜಾರಿ ಮಂಚದಿಂದ ಕೆಳಗೆ ಉರುಳುವಂತಾಯಿತು!

ಬರೇ ಸ್ವಪ್ನ....ಹಾಳು ಕನಸು!.... ನಾನು ಎಷ್ಟು ಬೆದರಿದ್ದೆನು! ಈಗ ಪುನಃ ಜೀವ ಬಂದಂತಾಯಿತು! ದೊರೆತ ಸಂಪತ್ತು ತೊರೆದು ಹೋದುದರಿಂದ ಆದ ಸಂಕಟಕ್ಕಿಂತಲೂ ಮೃತ್ಯುವಿನ ದವಡೆಯಿಂದ ಪಾರಾದ ಆನಂದದ ಪರಿಮಾಣವು ಹಿರಿದಾಯಿತು. ಇದನ್ನು ನೆನೆದಾಗ ಆ ಕಾಳ ರಾತ್ರಿಯಲ್ಲಿಯೂ ನನಗೆ ನಗು ಬಾರದಿರಲಿಲ್ಲ!

ಪುನಃ ಎದ್ದು ಮಂಚದ ಮೇಲೆ ಮುಸುಕೆಳೆದು ಪವಡಿಸಿದೆನು. ಅನತಿ ಕಾಲದಲ್ಲಿಯೇ ನಿದ್ರಾದೇವಿಯು ನನ್ನನ್ನು ಆಲಿಂಗಿಸಿದಳು!

—ಶ್ರೀ ಹೇಮನಾಥ ಶೆಟ್ಟಿ.

ಕುಮಾರಿ ಚಿತ್ರಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಪ್ರಶಸ್ತ,

ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-

(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,

ಉಡುಪಿ.

NAVAYUGA
REGD. NO. M. 3619

UDIPI, THURSDAY
17—9—1959

LICENSE NO. 31
Licensed to Post without Prepayment

ಅಭಿಪ್ರಾಯ

ಜಯಪ್ರಕಾಶರು ರಾಜಕಾರಣದಿಂದ ದೂರವುಳಿಯುವುದು ಸಾಧ್ಯವಿಲ್ಲ

ಅವರನ್ನೊಮ್ಮೆ ಪ್ರಧಾನಿ ನೆಹರೂ ಭಾರತದ ಭಾವಿ ಪ್ರಧಾನಿ ಎಂದು ಕರೆದರು; ಆದರೆ, ಇದು ಎಷ್ಟರ ಮಟ್ಟಿಗೆ ಸಂಭವನೀಯ?

ಪಕ್ಷೀಯ ರಾಜನೀತಿಯಲ್ಲಿ ತನಗೆ ಅಭಿರುಚಿಯಿಲ್ಲ ಎಂದು ಕೆಲವು ವರ್ಷಗಳಿಗೆ ಮೊದಲೇ ಶ್ರೀ ಜಯಪ್ರಕಾಶ ನಾರಾಯಣರು ಘೋಷಿಸಿದ್ದಾರೆ. ಶ್ರೀ ಜಯಪ್ರಕಾಶನಾರಾಯಣರು ರಾಜಕೀಯ ರಂಗದಿಂದ ದೂರವುಳಿಯಲು ಬಯಸಿದ್ದರೂ ಅದಕ್ಕಾಗಿ ಸಾಕಷ್ಟು ಪ್ರಯತ್ನಗಳನ್ನು ನಡೆಸಿದ್ದರೂ ಇದರಲ್ಲಿವರು ಇನ್ನೂ ಅಸಫಲರಾಗಿದ್ದಾರೆ ಎಂದು ಹೇಳಬಹುದು.

ಯಾವುದೇ ಒಂದು ಗೋಳೀಬಾರು ನಡೆಯಲಿ, ಸಂಯುಕ್ತ ಮಹಾ ರಾಷ್ಟ್ರದ ಪ್ರಶ್ನೆ ಇರಲಿ, ಕೇರಳದ ಆಂದೋಲನವಿರಲಿ, ಅಥವಾ ಟಿಬೇಟಿನ—ಪ್ರಶ್ನೆಯಿರಲಿ, ಎಲ್ಲ ರಾಜಕಾರಣದ ವಿಷಯಗಳಲ್ಲಿಯೂ ಶ್ರೀ ವಿನೋಬಾ ಭಾವೆಯವರಂತೆ ಸರ್ವಥಾ ಮೌನವಾಗಿರುವುದು ಶ್ರೀ ಜಯಪ್ರಕಾಶರಿಂದ ಸಾಧ್ಯವಾಗಿಲ್ಲ. ಅವರಿಲ್ಲಿ ಕೈಹಾಕಿಯೇ ಹಾಕುತ್ತಾರೆ. ಇದಕ್ಕೆ ಅವರು ಮೊದಲು ಸಮಾಜವಾದಿ ನಾಯಕರಾಗಿದ್ದುದೇ ಕಾರಣವಿರಬಹುದು. ಸಮಾಜದ ಹಿತಕಾರಕ ಘಟನೆಗಳಿಂದ ತನ್ನನ್ನು ದೂರವಿಟ್ಟುಕೊಳ್ಳಲು ಅವರು ಅಸಾಧ್ಯರಾಗಿದ್ದಾರೆ ಎಂಬುದಂತೂ ನಿಜವೆ.

ಟಿಬೇಟಿನ ಸಾರ್ವಭೌಮತೆಯ ಪ್ರಶ್ನೆಯಮೇಲೆ ಮತ್ತು ಆದರ ಪಕ್ಷವಾಗಿ ಎಲ್ಲರಿಗಿಂತ ಹೆಚ್ಚಾಗಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ನಾಯಕರೆಂದರೆ ಜಯಪ್ರಕಾಶ ನಾರಾಯಣರೊಬ್ಬರೇ. ನವದೆಹಲಿಯಲ್ಲಿ ಅವರು ಏಶಿಯಾದ ರಾಷ್ಟ್ರಗಳ ರಾಯಭಾರಿಗಳನ್ನೂ ದಲಾಯಿಲಾಮರನ್ನೂ ಭೆಟ್ಟಿಮಾಡಿದುದರ ಪರಿಣಾಮವಾಗಿಯೇ ದಲಾಯಿ ಲಾಮಾರು ಟಿಬೇಟಿನ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರಸಂಘಕ್ಕೆ ಒಯ್ಯಲು ನಿರ್ಧರಿಸಿರುವುದಾಗಿ ಉದ್ಘೋಷಿಸಿದರೆನ್ನಬಹುದು. ಸಕ್ರಿಯ ರಾಜಕೀಯದಿಂದ ನಿವೃತ್ತರಾದ ಜಯಪ್ರಕಾಶರು ಟಿಬೇಟಿನ ಸಂದರ್ಭದಲ್ಲಿ ನಿಷ್ಕ್ರಿಯರಾಗುಳಿಯಲು ಅಸಮರ್ಥರಾದರು.

ಇಂದು ಭಾರತ—ಚೀನಾ ದೇಶಗಳ ಸೀಮಾ ವಿವಾದದ ಸಂಬಂಧದಲ್ಲಿಯೂ ಶ್ರೀ ಜಯಪ್ರಕಾಶರು ಪ್ರಧಾನಿ ಮಂತ್ರಿ ನೆಹರೂ ಅವರಿಗೆ ಬೆಂಬಲ ನೀಡುವಂತೆ ರಾಷ್ಟ್ರಕ್ಕೆ ಆಹ್ವಾನ ನೀಡಿದ್ದಾರೆ. ಪ್ರಧಾನಿ ನೆಹರೂ ಮತ್ತು ಜಯಪ್ರಕಾಶರಿಬ್ಬರೂ ಆದಿಯಿಂದಲೂ ಸಾಮಾನ್ಯವಾಗಿ ಸಮಾನ ವಿಚಾರಧಾರೆಯುಳ್ಳವರೇ ಎನ್ನಬಹುದು; ಆದರೆ, ಕಮ್ಯುನಿಸ್ಟರ ವಿಷಯದಲ್ಲಿ ಮಾತ್ರ ಇವರಿಬ್ಬರಲ್ಲಿ ಬಹಳ ಭಿನ್ನಾಭಿಪ್ರಾಯಗಳಿವೆ.

ಕೆಲವು ವರ್ಷಗಳಿಗೆ ಮೊದಲು, ಅಮೆರಿಕೆಯ ಪತ್ರಿಕಾಕರ್ತ ಶ್ರೀ ಲೂಯಿ ಫಿಶರ್‌ರೊಡನೆ ಪ್ರಧಾನ ಮಂತ್ರಿಯವರು, "ಜಯಪ್ರಕಾಶರು ಭಾರತದ ಭಾವೀ ಪ್ರಧಾನ ಮಂತ್ರಿ" ಎಂದಿದ್ದರು. ರಾಜಕೀಯ ಕ್ಷೇತ್ರದ ಸಂಬಂಧವನ್ನು ಜಯಪ್ರಕಾಶರು ಕಡಿದೊಗೆದು ಐದಾರು ವರ್ಷ ಕಳೆದಿದ್ದರೂ, ಈಗ ಅವರು ರಾಜಕೀಯ ರಂಗದಲ್ಲಿಲ್ಲ ಎಂದು ಹೇಳಿದರೆ, ನಂಬುವವರ ಸಂಖ್ಯೆ ವಿರಳವೆಂದೆನ್ನಬೇಕು. ನೆಹರೂರವರ ನಂತರ ಭಾರತದ ಕಲ್ಪನಾ ಚಿತ್ರವು ಶ್ರೀ ಜಯಪ್ರಕಾಶರಿಲ್ಲದೆ ಪೂರ್ಣವಾಗದೆಂದೂ ಹೇಳುವವರಿದ್ದಾರೆ.

ಸ್ವಾತಂತ್ರ್ಯಕ್ಕೆ ಮೊದಲು ಶ್ರೀ ಜಯಪ್ರಕಾಶರು ಸಮಾಜವಾದಿ ಕ್ರಾಂತಿಕಾರಿ ಪಕ್ಷದ ನಾಯಕರಾಗಿದ್ದರು. ಇಂದೂ ಅವರು ಒಂದಲ್ಲ ಒಂದು ರೂಪದಲ್ಲಿ ಅಹಿಂಸಕ ಕ್ರಾಂತಿಕಾರಿಗಳ ನೇತಾರರಿದ್ದಾರೆ. ತತ್ವವನ್ನವರು ವಿಶೇಷವಾಗಿ ಶ್ರದ್ಧೆಯಿಂದ ನೋಡುವುದಿಲ್ಲ; ಆದರೆ, ಸತ್ಯವನ್ನು ಬಿಡುವವರಲ್ಲ. ಆದುದರಿಂದಲೇ ಅವರು ಮಾರ್ಕ್ಸಿನತ್ತಣಿಂದ ಮೆಲ್ಲಮೆಲ್ಲನೆ ಜಾರಿಕೊಂಡು ಗಾಂಧಿಯತ್ತ ಹರಿದುಬಂದರು. ಸತ್ಯದಲ್ಲಿ ತನಗಿದ್ದ ಈ ಅಚಲನಿಷ್ಠೆಯಿಂದಾಗಿಯೇ ಅವರು ಪಕ್ಷೀಯ ರಾಜಕಾರಣದಿಂದ ಬೇರೆಯಾದರು; ಅಲ್ಲದೇ ವ್ಯಾಪಕವಾದ ಮಾನವೀಯ ಪ್ರಶ್ನೆಗಳ ಮೇಲೆ ನಿರ್ಭೀತರಾಗಿದ್ದು ಧ್ವನಿಯೆತ್ತುವುದರಲ್ಲಿ ಮಾತ್ರ ಹಿಂದುಳಿಯಲಿಲ್ಲ.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಗೆ ಪಾತ್ರರಾದ ಶ್ರೀ ಜಯಪ್ರಕಾಶ ನಾರಾಯಣರ ಜನ್ಮ ೫೭ ವರ್ಷಗಳಿಗೆ ಮೊದಲು ಬಿಹಾರ ರಾಜ್ಯದ ಒಂದು ಗ್ರಾಮದಲ್ಲಾಯಿತು. ಪಾಟ್ನಾ, ಕಲಿಕತ್ತೆ ಮತ್ತು ಅಮೆರಿಕೆಗಳಲ್ಲಿ ಅವರು ತಮ್ಮ ಶಿಕ್ಷಣವನ್ನು ಮುಗಿಸಿದರು. ಶಾರೀರಿಕ ಪರಿಶ್ರಮಪಟ್ಟು ವಿದೇಶಗಳಲ್ಲಿ ಶಿಕ್ಷಣವನ್ನು ಪಡೆದ ಭಾರತೀಯ ವಿದ್ಯಾರ್ಥಿಗಳಲ್ಲಿ ಇವರೂ ಅಗ್ರಗಣ್ಯರು.

ಅಮೆರಿಕೆಯ ತಮ್ಮ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಿ ಸ್ವದೇಶಕ್ಕೆ ಮರಳಿ ಬಂದ ನಂತರ, ಅವರಿಗೆ ಕಾಶಿಯ ಹಿಂದೂ

(೮ನೇ ಪುಟ ನೋಡಿರಿ)

ರಾಜಕೀಯ

(೧ನೇ ಪುಟದಿಂದ)

ಕು ಎಂದು ಹೇಳಿದರೆ, ಆದೀಗಿನ ಪ್ರಪಂಚದ ವಿಶ್ವಬಾಂಧವ್ಯದ ಲಕ್ಷಣವಲ್ಲವೆಂದೇ ಹೇಳಬೇಕು.

ಭಾರತದಲ್ಲಿಯೂ ಚೀನದಂತೆಯೇ ಶಕ್ತಿ ಇದೆ. ಭಾರತೀಯರು ನಿರ್ವೀರ್ಯರು ಎಂದು ತಿಳಿಯಬೇಕಾಗಿಲ್ಲ. ಭಾರತದ ಮೇಲೆ ಪರರ ಆಕ್ರಮಣವು ನಡೆದರೆ, ಆಗ; ಅದನ್ನು ಸಹಿಸಿ ಸುಮ್ಮನಿರುವಷ್ಟು ಗತಸತ್ವ ಭಾರತವಲ್ಲ. ಈ ಬಗ್ಗೆ ಪ್ರಧಾನಿ ನೆಹರೂ "ಭಾರತ ಉಳಿಯಲಿ ಇಲ್ಲವೇ ಅಳಿಯಲಿ, ಪರಕೀಯರ ಆಕ್ರಮಣವನ್ನದು ಎಂದೂ ಸೈರಿಸುವುದಿಲ್ಲ" ಎಂದ ಘೋಷಣೆಯು ಭಾರತೀಯರೆಲ್ಲರಲ್ಲಿಯೂ ಒಂದು ನವಶಕ್ತಿ, ನವಚೇತನವನ್ನು ಹರಿಸಿದೆ. ಸಂರಕ್ಷಣಾ ಮಂತ್ರಿ ಶ್ರೀ ಕೃಷ್ಣಮೆನನ್ನರೂ ಚೀನದ ಆಕ್ರಮಣದ ಬಗ್ಗೆ ವಿರೋಧಾಭಿಪ್ರಾಯವನ್ನು ತಾಳಿರುವುದಲ್ಲದೇ ಚೀನೀಯರ ಈಗ ಕೈಗೊಂಡಿರುವ ಏಕಪಕ್ಷೀಯ ಕ್ರಮದಿಂದ ಈ ತಂಟೆ ಎಂದಿಗೂ ಬಗೆಹರಿಯಲಾರದೆಂದು ಎಚ್ಚರಿಕೆಯಿತ್ತಿರುವರು. ಇವರು ನ್ಯೂಯಾರ್ಕಿಗೆ ತೆರಳಲಿರುವಾಗ, ಲಂಡನ್ನಿನಲ್ಲಿ ತಂಗಿರುವಾಗ, ಅವರನ್ನು ಪ್ರಶ್ನಿಸಿದ್ದ ಹಲವಾರು ಪತ್ರಿಕಾ ಪ್ರತಿನಿಧಿಗಳನ್ನು ಕುರಿತಾಗಿ, ಭಾರತವು ತನ್ನ ಶಕ್ತಿ ಮೀರಿ ಚೀನೀಯ ಆಕ್ರಮಣವನ್ನು ಪ್ರತಿಭಟಿಸುವುದು ಎಂದು ಸ್ಪಷ್ಟಪಡಿಸಿದಾರೆ.

ಭಾರತದ ಹಿರಿಯ ರಾಜಕಾರಣಿ ಶ್ರೀ ರಾಜಾಜಿಯವರು ಒಂದು ಲೇಖನದಲ್ಲಿ ಚೀನವು ಭಾರತವನ್ನು ಆಕ್ರಮಿಸಿರುವ ಈ ಸಂದರ್ಭದಲ್ಲಿ ಅಮೆರಿಕೆಯು ಭಾರತಕ್ಕೆ ಸಹಾಯ ನೀಡಲು ಉತ್ಸುಕವಾಗಿರುವುದನ್ನರಿತು, ಕಮ್ಯುನಿಸ್ಟ ಚೀನಕ್ಕೆ ಸಂಯುಕ್ತ ರಾಷ್ಟ್ರಸಂಘದಲ್ಲಿ ಪ್ರಾತಿನಿಧ್ಯವನ್ನು ಕೊಡಲು ಪ್ರಯತ್ನಿಸುವುದೇ ಮಹೋಪಕಾರವೆಂದು ಹೇಳಿದ್ದಾರೆ. ಒಮ್ಮೆ ಚೀನವು ಸಂಯುಕ್ತ ರಾಷ್ಟ್ರ ಸಂಘದ ಮೇರೆಯೊಳಗೆ ಬಂದರೆ, ಮತ್ತೆ ಅದನ್ನು ಅಂಕಿತದಲ್ಲಿಟ್ಟುಕೊಳ್ಳುವುದು ಸುಲಭವಾಗುವುದು ಎಂದಿದ್ದಾರೆ. ಇದೇ ಅಭಿಪ್ರಾಯವನ್ನು ಪ್ರಧಾನಿ ನೆಹರೂರವರೂ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಅಧ್ಯಕ್ಷೆ ಇಂದಿರಾ ಗಾಂಧಿಯವರು ಮಾತ್ರ ಇದಕ್ಕೆ ವಿರೋಧಾಭಿಪ್ರಾಯವುಳ್ಳವರೆಂದು ತಿಳಿದುಬಂದಿದೆ. ಭಾರತವು ಈ ಮೊದಲು ಹಲವು ಬಾರಿ ಈ ಪ್ರಯತ್ನವನ್ನು ಕೈಗೊಂಡಿದ್ದರೂ ಅದರಲ್ಲಿ ಯಶಸ್ಸು ಪಡೆಯಲಿಲ್ಲ. ಈ ಬಾರಿ ಯಾವ ರೀತಿಯ ಹೆಜ್ಜೆಯಿಡುವುದೆಂದು ನಿರ್ಧಾರವಾಗಿ ಗೊತ್ತಾಗಿಲ್ಲವಾದರೂ ತನ್ನ ಧೋರಣೆಯಲ್ಲಿ ವಿಶೇಷ ಪರಿವರ್ತನೆಗಳನ್ನು ಮಾಡಲಾರದೆಂದೇ ಹೇಳಬಹುದು.

ಮ್ಯಾಕ ಮಹೋನ ರೇಖೆಯನ್ನೇ ಮೂಲಾಧಾರವಾಗಿಟ್ಟುಕೊಂಡು ಚೀನ ಮತ್ತು ಭಾರತಗಳ ಗಡಿಯನ್ನು ಸುಸ್ಪಷ್ಟವಾಗಿ ನಿರ್ಧರಿಸುವುದು ಅವಶ್ಯವಿದೆ; ಮತ್ತು ಇದರಿಂದಲೇ ಉಭಯ ರಾಷ್ಟ್ರಗಳ ಮೈತ್ರಿಯು ಉಳಿಯುವುದು ಸಾಧ್ಯ. ಸ್ವದೇಶ ಪ್ರೇಮಿಗಳಾದ ಭಾರತೀಯರೆಲ್ಲರೂ ಭಾರತೀಯ ಸರಕಾರದ ಈ ಧೋರಣೆಗೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡುವರೆಂಬುದರಲ್ಲಿ ಸಂದೇಹವಿಲ್ಲ. ವಿದೇಶನಿಷ್ಠರಾದ ಭಾರತೀಯ ಕಮ್ಯುನಿಷ್ಟರು ಈ ಬಗ್ಗೆ ತಾಳಿದ ನಿಲುಮೆಯೇನೂ ಸ್ಪಷ್ಟವಿಲ್ಲದಿರುವುದರಿಂದ ಅವರ ಬಗೆಗಿದ್ದ ಹಿಂದಿನ ಅಭಿಪ್ರಾಯಗಳೇ ಇಂದಿಗೂ ಸರಿಯಾಗಿವೆಯೆನ್ನಬಹುದು.

ಟಿಬೇಟದ ಸಾರ್ವಭೌಮತೆಯನ್ನು ವಿರೋಧಿಸಿ ತಮ್ಮ ಬೇಳೆಯನ್ನು ಬೇಯಿಸುವುದಕ್ಕೋಸ್ಕರ, ಅಲ್ಲಿ ತಳವೂರಿದ್ದ ಕಮ್ಯುನಿಷ್ಟ ಚೀನದ ಕೃತ್ಯವನ್ನು ರಾಕ್ಷಸೀ ಕೃತ್ಯವೆಂದು ಭಾರತದ ಎಲ್ಲ ರಾಜಕಾರಣಿಗಳೂ ಉಲ್ಲೇಖಿಸಿದಾಗ, ಭಾರತೀಯ ಕಮ್ಯುನಿಷ್ಟರು ಮಾತ್ರ ಚೀನವನ್ನು ಸಮರ್ಥಿಸುವ ಕೆಲಸ ಮಾಡಿದರು. ಭಾರತೀಯರಾಗಿ, ಭಾರತದಲ್ಲಿಯೇ ನೆಲಸಿಕೊಂಡು, ಕಮ್ಯುನಿಸ್ಟ ರಾಷ್ಟ್ರಗಳ ಏಜಂಟರಂತೆ ವರ್ತಿಸುವ ಈ ಭಾರತೀಯ ಕಮ್ಯುನಿಸ್ಟರು, ಚೀನದ ಅತಿಕ್ರಮಣದ ಬಗ್ಗೆ ತಿಳಿಯಲೂ ಕೇಳಲೂ, ಉಳಿದೆಲ್ಲರೂ ತಾಮುಂದೆ ತಾಮುಂದೆ ಎಂದು ತಹತಹಪಟ್ಟರೂ, ಯಾವ ಆಸಕ್ತಿಯನ್ನೂ ತೋರಿಸಿದಂತಿಲ್ಲ. ತಾವು ಚೀನದ ಬಾಲಮಾತ್ರ ಹಿಡಿದರೆ, ಭಾರತೀಯರ ಜನಬಲವನ್ನು ಗಳಿಸುವುದು ಸರ್ವಥಾ ಸಾಧ್ಯವಿಲ್ಲ ಎಂದು ಜನಬಲಗಳಿಸುವ ಪ್ರಜಾತಂತ್ರದ ಸೋಗು ಹಾಕಿಕೊಂಡ ಅವರಿಗೆ ಇಷ್ಟರಲ್ಲೇ ಮಂದಟ್ಟಾದೀತು; ಆದುದರಿಂದ ಇನ್ನು ಕೆಲದಿನಗಳಲ್ಲಿಯೇ ಅವರ ಅರ್ಭಟೆಯೂ ತಮ್ಮ 'ಒಡೆಯ'ರ ಅಪ್ಪಣೆಯಂತೆ ಹೊರಟೀತು—'ರಾಜಿ ಪಂಚಾತಿಕೆಯಿಂದಲೇ ತಂಟೆ ಬಗೆಹರಿಸುವ" ಎಂದು. ಆದರೆ, ಈ ಕಮ್ಯುನಿಸ್ಟರು ಸ್ವದೇಶನಿಷ್ಠರಾಗಿರುತಿದ್ದರೆ, ಇಷ್ಟನ್ನಾದರೂ ಉಚ್ಚರಿಸಲು ಇಷ್ಟೊಂದು ಕಾಲಾವಕಾಶ ಬೇಕಾಗಿರಲಿಲ್ಲ. ಇಂತಹ ಆಕ್ರಮಣಶೀಲ ವಿದೇಶಗಳಿಂದಲೂ ವಿದೇಶನಿಷ್ಟ ಸ್ವದೇಶಿಯರಿಂದಲೂ ಬಂದಿರುವ ಅಪಾಯಗಳನ್ನು ಕಣ್ಣಿಗೆ ಎಣ್ಣೆಸುರಿದು ನೋಡಿಕೊಂಡಿರಬೇಕಾಗುತ್ತದೆ, ಅವನ್ನು ಸದಾ ಪ್ರತಿಭಟಿಸಲೇ ಬೇಕಾಗುತ್ತದೆ. ಭಾರತೀಯ ಪ್ರಜಾ ಪ್ರಭುತ್ವವು ಇಂತಹ ವಂಚಕರ ಮೋಸದ ಬಲೆಗೆ ಎಂದೂ ಗುರಿಯಾಗಲಾರದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.
ಪ್ರಧಾನ ಕಾರ್ಯಾಲಯ: ಉಡುಪಿ, ಮೈಸೂರು ರಾಜ್ಯ.
ಪ್ರಕಟಣೆ
ವಿಶೇಷವಾಗಿ ಗ್ರಾಮಸ್ಥರ ಆರ್ಥಿಕ ಪ್ರಯೋಜನಕ್ಕಾಗಿ ಚಿನ್ನಾಭರಣಗಳ ಮೇಲಿನ ಸಾಲದ ಬಡ್ಡಿಯ ದರವನ್ನು ಇಳಿಸಲಾಗಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ ಹೆಚ್ಚಿನ ವಿವರಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತವಿರುವ ನಮ್ಮ ಶಾಖೆಗಳಲ್ಲಿ ವಿಚಾರಿಸಿರಿ.
ಮುಖ್ಯ ಶಾಖೆಗಳು:
ಮಂಗಳೂರು-ಹಂಪನಕಟ್ಟೆ, ಮಂಗಳೂರು-ಬಂದರ, ಮಂಗಳೂರು-ರಥಬೀದಿ, ಉಡುಪಿ-ರಥಬೀದಿ, ಉಡುಪಿ-ಲೋಕಲ್ ಆಫೀಸ್, ಕಾರ್ಕಳ, ಕುಂದಾಪುರ, ಬ್ರಹ್ಮಾವರ.
ಗ್ರಾಮೀಣ ಶಾಖೆಗಳು:
ಕಡೆಕಾರ್, ಕಾಪು, ಕಿನ್ನಿಗೋಳಿ, ಕೆಮ್ಮಣ್ಣು, ಗುರುಪುರ, ಗಂಗೊಳ್ಳಿ, ಸಿಟ್ಟಿ, ಪಲಿಮಾರು, ಪಾಣೆಮಂಗಳೂರು, ಪುತ್ತೂರು, ಪೆರ್ಡೂರು, ಬಸ್ರೂರು, ಬಂಟ್ವಾಳ, ಬಾರ್ಕೂರು, ಬೆಳ್ತಂಗಡಿ, ಬೈಲೂರು, ಬೈಂದೂರು, ಮಣಿಪಾಲ, ಮಲ್ಪೆ, ಮೂಡಬಿದ್ರಿ, ಮೂಲ್ಕಿ, ಸಾಲಿಗ್ರಾಮ, ಶಂಕರನಾರಾಯಣ, ಹೆಬ್ರಿ.
ಬೇಗನೆ ತೆರೆಯಲ್ಪಡುವ ಶಾಖೆಗಳು: ಅಕ್ಟೋಬರ 1ರಿಂದ:
ಉಪ್ಪಿನಂಗಡಿ, ಪಡುಬಿದ್ರಿ, ಬದಿಯಡ್ಕ-ಪೆರ್ಡಾಲ, ವಿಟ್ಲ, ಸುಳ್ಯ.
ಶ್ರೀ. ಟಿ ಎ. ಪೈ, ಜನರಲ್ ಮೆನೇಜರ್.

Edited, Printed & Published by K. H. Shetty, at the Navayuga Press, Udipi, S. India.

ವಾ. ಚಂದಾ ರೂ. 5-75

ಬೆಲೆ: 13 ನ.ಪೈಸೆ

ನವಯುಗ

Vol. 39. No. 4.
ವರುಷ ೩೯. ವಾರ ೪.

24-9-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ಭಾರತ-ಚೀನಗಳ ಸೀಮಾವಿವಾದದ ಮೇಲೆ ಭಾರತ ಸರಕಾರದ ಶ್ವೇತಪತ್ರ

ಚೀನೀ ಪ್ರಧಾನಿಯವರು ಮೂರು ವರ್ಷ ಹಿಂದೆ ಕೊಟ್ಟಿದ್ದ ಮಾತನ್ನಿಂದು ಅಲ್ಲಗಳೆದಿದ್ದಾರೆ; ಆದರೂ ಅವರೂ ಶಾಂತಿಯಿಂದಲೇ ಸಮಸ್ಯೆ ಬಗೆಹರಿಯಬೇಕೆನ್ನುತ್ತಾರೆ!

೧೯೫೪ರಿಂದ ಇದರ ವರೆಗೆ ಭಾರತ ಮತ್ತು ಚೀನಾ ಸರಕಾರಗಳ ಮಧ್ಯೆ ನಡೆದ ಕಾಗದ ಪತ್ರಗಳು ಮತ್ತು ಆದ ಒಪ್ಪಂದಗಳನ್ನೊಳಗೊಂಡ ಶ್ವೇತ ಪತ್ರವೊಂದನ್ನು ಪ್ರಧಾನಿ ನೆಹರೂರವರು ಸಂಸತ್ತಿನ ಮುಂದೆ ಮಂಡಿಸಿದರು.

ಭಾರತ ಮತ್ತು ಚೀನಾಗಳ ಮಧ್ಯೆ ಗಡಿ ವಿಚಾರವಾಗಿ ಅಭಿಪ್ರಾಯ ಭೇದಗಳು, ಭಾರತಕ್ಕೆ ಸೇರಿರುವ ಪ್ರದೇಶಗಳು ಕೆಲವನ್ನು ಚೀನಿ ಭೂಪಟಗಳಲ್ಲಿ ತಮ್ಮದೆಂದು ತೋರಿಸಿಕೊಂಡಿರುವುದು ಕಾಲಿಂಪಾಂಗ್‌ನಲ್ಲಿರುವ ಟಿಬೆಟ್ಟಿನ ನಿರಾಶ್ರಿತರು ಟಿಬೆಟ್‌ನಲ್ಲಿ ಇತ್ತೀಚೆಗೆ ನಡೆದ ದುರ್ಘಟನೆಗಳು, ಟಿಬೆಟ್ ಮತ್ತು ಭೂತಾನಗಳಲ್ಲಿರುವ ಭಾರತೀಯ ಪ್ರಜೆಗಳು. ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಆಗಿಂದಾಗ್ಗೆ ನಡೆದ ಪತ್ರವ್ಯವಹಾರ ಈ ಶ್ವೇತ ಪತ್ರದಲ್ಲಿ ಅಡಕವಾಗಿದೆ.

ಚೀನಿ ಭೂಪಟಗಳ ವಿಷಯವಾಗಿ ಭಾರತ ಮತ್ತು ಚೀನಾಗಳ ಮಧ್ಯೆ ಮೂರು ಪತ್ರಗಳು ವಿನಿಮಯಗೊಂಡಿರುವುದು ಕಂಡುಬರುತ್ತದೆ. ಒಂದು ಪತ್ರದಲ್ಲಿ ಪ್ರಧಾನಿ ನೆಹರೂರವರು ಭೂಪಟಗಳಲ್ಲಿ ಸೂಚಿತವಾಗಿರುವ ಗಡಿರೇಖೆತಪ್ಪಾಗಿದ್ದು ಎಷ್ಟೋ ಕಡೆಗಳಲ್ಲಿ ಭಾರತದ ಗಡಿಯನ್ನು ದಾಟಿಕೊಂಡು ಹೋಗಿರುವುದೆಂದು ಆಕ್ಷೇಪಿಸಿದ್ದಾರೆ. ಚೌ ಎನ್ ಲೈರವರು ಈ ಪತ್ರಕ್ಕೆ ಕೊಟ್ಟಿರುವ ಉತ್ತರದಲ್ಲಿ ಆ ರೇಖೆ ಸಂಪೂರ್ಣವಾಗಿ ಅಂಗೀಕೃತವಲ್ಲವೆಂದು ತಿಳಿಸಿರುವರಲ್ಲದೆ ಸಧ್ಯಕ್ಕೆ ವಾಸ್ತವವಾಗಿ ಯಾವ ಗಡಿ ರೂಢಿಯಲ್ಲಿದೆಯೋ ಆ ಗಡಿ ದಾಟಿ ಎರಡೂ ಕಡೆಯ ಸೇನೆಗಳು ಅಕ್ರಮ ಪ್ರವೇಶ ಮಾಡದಿದ್ದರೆ ಸಾಕೆಂದೂ ತಿಳಿಸಿರುವರು.

ಇನ್ನೊಂದು ಪತ್ರದಲ್ಲಿ ಪ್ರಧಾನಿ ನೆಹರೂರವರು ತಾವು ೫೪ರಲ್ಲಿ ಚೀನಾಕ್ಕೆ ಕೊಟ್ಟ ಭೇಟಿಯನ್ನು ಸ್ಮರಿಸಿಕೊಂಡಿರುವರಲ್ಲದೆ ಚೀಣಿ ಭೂಪಟಗಳಲ್ಲಿ ಸೂಚಿಸಲ್ಪಟ್ಟಿರುವ ಗಡಿರೇಖೆಯನ್ನು ಚೀಣಿ ಸರಕಾರ ತಿದ್ದುವ ಭರವಸೆಯನ್ನು ವ್ಯಕ್ತಪಡಿಸಿರುವರು. ೧೯೫೬ರಲ್ಲಿ ಚೀಣಿ ಪ್ರಧಾನಿಯವರು ಭಾರತಕ್ಕೆ ಕೊಟ್ಟ ಭೇಟಿಯನ್ನು ಸ್ಮರಿಸಿಕೊಳ್ಳಲಾಗಿದೆಯಲ್ಲದೆ ಗಡಿ ವಿಚಾರವಾಗಿ ತಾವು ಚೌ ಎನ್ ಲೈರೊಡನೆ ನಡೆಸಿದ ಮಾತುಕತೆಗಳನ್ನೂ ಪ್ರಸ್ತಾಪಿಸಿರುವರು.

ಬರ್ಮಾ ಮತ್ತು ಚೀಣಾಗಳನ್ನು ಪ್ರತ್ಯೇಕಿಸುವ ಗಡಿಯ ವಿಚಾರದಲ್ಲಿ ಮ್ಯಾಕ್ ಮಾಹನ್ ಗಡಿರೇಖೆಯನ್ನೇ ಚೌ ಎನ್ ಲೈ ರವರು ಗಡಿರೇಖೆಯೆಂದು ಒಪ್ಪಿರುವುದನ್ನು ಪ್ರಧಾನಿ ನೆಹರೂರವರು ಪ್ರಸ್ತಾಪಿಸಿರುವರಲ್ಲದೆ ಭಾರತ ಮತ್ತು ಚೀನಾಗಳ ಪರಸ್ಪರ ಸ್ನೇಹ ಸಂಬಂಧವನ್ನು ಗಮನಿಸಿ ಭಾರತದ ವಿಚಾರದಲ್ಲಿಯೂ ಮ್ಯಾಕ್ ಮಾಹನ್ ರೇಖೆಯನ್ನೇ ಗಡಿಯೆಂದು ಪರಿಗಣಿಸುವುದಾಗಿ ಚೀನಾ ಒಪ್ಪಿಕೊಂಡಿತ್ತು ಎಂದೂ ತಿಳಿಸಿರುವರು. ಚೌ ಎನ್ ಲೈ ರೊಡನೆ ತಾವು ನಡೆಸಿದ ಮಾತುಕತೆಗಳ ವರದಿಯಿಂದ ಸಂಬಂಧಪಟ್ಟ ಕೆಲವು ಭಾಗಗಳನ್ನೂ ನೆಹರೂರವರು ಸಭೆಯ ಗಮನಕ್ಕೆ ತಂದರು.



ಬ್ರಿಟಿಷ ಸಾಗರೋತ್ತರ ವಿಮಾನ ಸಾರಿಗೆಗೆ ನೂತ್ನವೊದಲಾಗಿ ಜೆಟ್ ವಿಮಾನವೊಂದನ್ನು ಸೇರಿಸಲಾಗುತ್ತಿದೆ.

ಪರಸ್ಪರ ಸಂಧಾನಗಳ ಮೂಲಕ ಗಡಿ ಸಮಸ್ಯೆಯನ್ನು ಇತ್ಯರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದರೂ ಸಹ ಈ ಸಮಸ್ಯೆ ತೃಪ್ತಿಕರವಾಗಿ ಬಗೆಹರಿಯದೆ ಉಳಿದಿರುವುದಕ್ಕಾಗಿ ಪ್ರಧಾನಿಗಳು ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು.

ಚೀಣಿ ಪ್ರಧಾನಿಗಳಿಗೆ ಪ್ರಧಾನಿ ನೆಹರೂರವರು ಬರೆದ ಎರಡನೆಯ ಪತ್ರದಲ್ಲಿ ಭಾರತ—ಚೀಣಾಗಳ ಈಗಿನ ಗಡಿಯನ್ನು ಯಾವತ್ತೂ ಮಾನ್ಯಮಾಡಿಲ್ಲವೆಂದು ಚೌ ಎನ್ ಲೈರವರು ತಿಳಿಸಿರುವ ಬಗ್ಗೆ ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ. ಗಡಿ ವಿಚಾರದಲ್ಲಿ ಆಗಿರುವ ಹಲವಾರು ಅಂತರ ರಾಷ್ಟ್ರೀಯ ಒಪ್ಪಂದಗಳನ್ನು ಈ ಸಂದರ್ಭದಲ್ಲಿ ಪ್ರಧಾನಿಗಳು ಉದಹರಿಸಿರುವರು.

೫೯ರ ಆಗಸ್ಟ್ ೨೮ರಂದು ಭಾರತದ ರಾಯಭಾರಿಗಳು ಪೆಕಿಂಗಿನಲ್ಲಿ ವಿದೇಶಾಂಗ ಕಚೇರಿಗೆ ಒಪ್ಪಿಸಿದ ಒಂದು ಸೂಚನಾ ಪತ್ರವನ್ನೂ ಶ್ವೇತ ಪತ್ರದಲ್ಲಿ ಪ್ರಕಟಿಸಲಾಗಿದೆ. ಅಂತರ ರಾಷ್ಟ್ರೀಯ ಗಡಿಯನ್ನು ಚೀಣಿ ಪಡೆಗಳು ಅತಿಕ್ರಮಿಸಿರುವುದನ್ನು ಇದರಲ್ಲಿ ಪ್ರಸ್ತಾಪಿಸಲಾಗಿದೆ.

ಚೀಣಿ ಪಡೆಗಳು ಭೂತಾನಿನ ಗಡಿ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3.
ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ....

ಕಥಾ ವಿಹಾರ

ಶಾಮಣ್ಣ ಮಾಸ್ತರರ ಗೋಕುಲಾಷ್ಟಮಿ

ಹಿಂದಿನ ತಿಂಗಳ ಅವರ ವೇತನ ಸಾಮಾನ್ಯವಾಗಿ ಆ ತಿಂಗಳ ೨೫ನೆಯ ದಿನ ದೊರೆಯಬೇಕಾಗಿತ್ತು; ಆದರೆ, ಗೋಕುಲಾಷ್ಟಮಿಯ ಸಲುವಾಗಿಯೋ ಜುಲೈ ತಿಂಗಳ ವೇತನ ಸಪ್ಟೆಂಬರ ಮೊದಲ ವಾರದಲ್ಲಿ ಸಿಕ್ಕಿತು!



ಬೆಂಗಳೂರಿನ ಹಿಂದುಸ್ಥಾನ ವಿಮಾನ ಕಾರಖಾನೆಯ ಶ್ರೀಗಳಾದ ಎಸ್. ಆರ್. ಆನಂತರಾಂ, ಡಿ. ಎಸ್. ಕೃಷ್ಣಮೂರ್ತಿ ಮತ್ತು ಎಂ. ಎಸ್. ಪದಕಿಯವರು ಫ್ಲಾರ್ನ್ ಬೋರೋವಿನ ಪ್ರದರ್ಶನವನ್ನು ನೋಡುತಿದ್ದಾರೆ.

"ಪಟ್, ಪಟ್, ಪಟ್.... " ಪೇಟ್ಲೆಗಳ ಸದ್ದು ಕೇಳಿಸುತಿತ್ತು. ಗೋಕುಲಾಷ್ಟಮಿಯ ಬರುವಿಕೆಯ ಸೂಚನೆಯನ್ನು ಅದು ಕೊಡುತಿತ್ತು. ನೆರೆಮನೆಯ ಶೀನು ಪೇಟ್ಲೆ ಹಿಡಿದುಕೊಂಡು ಬಿಡುತ್ತಿರುವುದನ್ನು ಕಂಡ ಶಾಮಣ್ಣ ಮಾಸ್ತರರ ಮಗ ರಾಮುವಿನ ಸಮಪ್ರಾಯದ ಹುಡುಗರವರು. ಇಬ್ಬರ ಚಾಪಲ್ಯ, ಬಯಕೆಗಳು ಒಂದೇ ತಾನೇ? "ನಾನೊಂದು ಬಿಡ್ತೇನೋ. ಸ್ವಲ್ಪ ಪೇಟ್ಲೆ ಕೊಡೋ" ಎಂದ ರಾಮು ಶೀನೂವಿನೊಡನೆ. ಆಫೀಸರರ ಮಗ ಶೀನೂ ರಾಮುವಿಗೆ ಪೇಟ್ಲೆ ಕೊಡಬೇಕಲ್ಲ? "ಹೋಗೋ, ನಿನ್ನಪ್ಪನ ಹತ್ತಿರ ತೆಗ್ಸಿ ಕೊಡೋಕೆ ಹೇಳೋ" ಎಂದಾತ ರಾಮೂವನ್ನು ದೂಡಿದ.

ಅಳುತ್ತಾ ರಾಮೂ ಮನೆಯ ಕಡೆಗೆ ಬಂದ. ಶಾಮಣ್ಣ ಮಾಸ್ತರರು ತಲೆಗೆ ಕೈಹಿಡಿದು ಕುಳಿತಿದ್ದರು. ಏನೋ ಆಲೋಚಿಸುವಂತಿತ್ತು ಅವರ ಮನಸ್ಸು. ಮುಖದಲ್ಲಿ ಉದ್ವಿಗ್ನತೆ, ಕಳವಳದ ಭಾವವೇ ಎದ್ದುತೋರುತಿತ್ತು. ನಾಲ್ಕೇ ದಿನದಲ್ಲಿ ಬರುವ ಗೋಕುಲಾಷ್ಟಮಿಯ ಹಬ್ಬಕ್ಕೇನು ಗತಿ? ಎಂದು ಅವರ ಮನಸ್ಸು ಚಿಂತಿಸುತಿತ್ತು. ಆಗಸ್ಟ್ ತಿಂಗಳಲ್ಲಿ ದಿನಗಳು ಇಪ್ಪತ್ತು ಉರುಳಿದರೂ ಜೂಲೈ ತಿಂಗಳ ಸಂಬಳವೇ ಇನ್ನೂ ಕೈಗೆ ಬರಲಿಲ್ಲ. ತಾರೀಕು ಇಪ್ಪತ್ತಾರಕ್ಕೇನೇ ಗೋಕುಲಾಷ್ಟಮಿ. ಇನ್ನು ಉಳಿದವುಗಳು ಕೇವಲ ಆರು ದಿನಗಳು. ಆ ಆರು ದಿನದ ಮೊದಲು ಸಂಬಳ ಬಂದರೇನೇ ಗೋಕುಲಾಷ್ಟಮಿಯಾದೀತು. ಇಲ್ಲವಾದರೆ ಗೋಕುಲಾಷ್ಟಮಿ ಉಪವಾಸದಿಲ್ಲೇ ಕಳೆದೀತೇ? ಎಂದವರು ಆಲೋಚಿಸುತಿದ್ದರು.

ಮಗ ರಾಮೂ ಅಳುತ್ತಾ ಬಂದುದೇ ಅವರ ಭಾವಸಮಾಧಿಗೆ ಅಡ್ಡಿಯಾಯಿತು. ತಲೆಗೆ ಹಿಡಿದಿದ್ದ ಕೈಯನ್ನವರು ಕೆಳಗಿಳಿಸಿ ರಾಮೂವನ್ನು ನೋಡಿದರು. "ಅಪ್ಪಾ, ನನ್ಗೊಂದು ಪೇಟ್ಲೆ ಬೇಕು" ರಾಮೂ ಅಳುತ್ತಾ ಹೇಳಿದ. "ಹೌದು, ಮಕ್ಕಳಿಗೆ ಪೇಟ್ಲೆಯ ಚಿಂತೆ. ನನಗೆ ಸಂಬಳದ ಚಿಂತೆ" ಶಾಮಣ್ಣ ಮೇಸ್ಟ್ರು ತನ್ನಲ್ಲೇ ಗುಣುಗುಟ್ಟಿದರು. ಪೇಟ್ಲೆಯ ಹೆಸರು ಕೇಳಿದುದೇ ತಡ, ಮನೆಯ ಮಕ್ಕಳೆಲ್ಲರೂ ಒಂದಾಗಿ ತಂದೆಯ ಬಳಿಗೆ ಓಡಿಬಂದರು. "ಅಪ್ಪಾ, ನನ್ಗೊಂದು ಪೇಟ್ಲೆ, ನನ್ಗೊಂದು...." ಮಕ್ಕಳೆಲ್ಲಾ ತಮ್ಮ ಬೇಡಿಕೆಯನ್ನು ಮುಂದಿಟ್ಟವು; "ಸಂಬಳ ಬರಲಿ, ಎಲ್ಲರಿಗೂ ಒಂದೊಂದು ಪೇಟ್ಲೆ ತೆಗೆಸಿಕೊಡುತ್ತೇನೆ" ಎಂದರು ಶಾಮಣ್ಣ ಮೇಸ್ಟ್ರು ಸಂಬಳ ಇನ್ನೂ ಬರಲಿಲ್ಲ ಎಂಬ ಧೈರ್ಯದಿಂದ ಆಶ್ವಾಸನ ಕೊಡುವ ಮಂತ್ರಿಯಂತೆ. "ತೆಗ್ಸಿ ಕೊಡ್ಬೇಕು, ಯುಗಾದಿಗೆ ಅಂಗಿ ಹೊಲ್ಸಿ ಕೊಡ್ತೀನೀಂತ ಹೊಲ್ಸಿಕೊಡ್ಲೇ ಇಲ್ಲ" ಮೂರು ವರ್ಷದ ರಂಗಿ ಅಪ್ಪನ ಭರವಸೆಯ ಮಾತುಗಳ ಮೇಲೆ ತನ್ನ ಅವಿಶ್ವಾಸ ಠರಾವನ್ನು ಮಂಡಿಸುತ್ತಾ ಹೇಳಿದಳು. "ಇಲ್ಲ, ಇಲ್ಲ ಈ ಬಾರಿ ಖಂಡಿತ ತೆಗ್ಸಿ ಕೊಡ್ತೀನಿ" ಶಾಮಣ್ಣ ಮೇಸ್ಟ್ರು ತುಂಬು ಭರವಸೆಯನ್ನಿತ್ತರು.

ದಿನಗಳು ಮತ್ತೂ ನಾಲ್ಕು ಉರುಳಿದುವು. ಆದರೆ ಸಂಬಳದ ಸುದ್ದಿ ಇಲ್ಲ. ಸಂಬಳ ಮಂಜೂರಾದ ಆಜ್ಞೆಯೋ ತಾರೀಕು ಇಪ್ಪತ್ತನಾಲ್ಕು ಕಳೆದರೂ ಬಂದಿಲ್ಲ. ರಾಮಣ್ಣ ಮಾಸ್ತರರಿಗೆ ಒಂದೇ ಚಿಂತೆ. ಊರೆಲ್ಲಾ ಸಂಭ್ರಮದಿಂದ ನಲಿಯುವ ದಿನ, ಹಬ್ಬದ ದಿನ ತಾನು, ತನ್ನವರು ಮಾತ್ರ ಉಪವಾಸದಿಂದ ನರಳಬೇಕೆ? ಸಂಬಳ ಕೊಡುವುದನ್ನು ಹಬ್ಬವಿದೆಯೆಂಬ ಪರಿಜ್ಞಾನದಿಂದ ಒಂದು ನಾಲ್ಕು ದಿನ ಬೇಗ ಕೊಡಬಾರದೆ? ನೆರೆಮನೆಯ ಆಫೀಸು ಕ್ಲಾರ್ಕರೊಬ್ಬರಿಗೆ ಹಬ್ಬದ ಸಲುವಾಗಿ ಸಂಬಳ ಅಡ್ವಾನ್ಸು ಕೊಡುತ್ತಾರೆ ಎಂಬುದನ್ನು ಅವರು ಕೇಳಿದ್ದರು ಈಗ ಮುಂಗಡವಂತಿರಲಿ, ಜುಲೈ ತಿಂಗಳ ಸಂಬಳವೇ ಆಗಸ್ಟ್ ತಿಂಗಳಲ್ಲಿ ಇಪ್ಪತ್ತನಾಲ್ಕು ಕಳೆದರೂ ಬರಲಿಲ್ಲ. ಶಾಮಣ್ಣನವರಿಗೆ ತುಂಬಾ ಬೇಸರವೆನಿಸಿತು. ಈ ಹಬ್ಬಗಳು ಬಾರದಿದ್ದರೇ ಚೆನ್ನಾಗಿತ್ತು ಎಂದು ಭಾವಿಸಿದರವರು. ಆದರೆ ಶಾಮಣ್ಣನವರಿಗೆ ಸಂಬಳ ಬರಲಿಲ್ಲವೆಂದು ಹಬ್ಬ ಬಾರದೆ ಉಳಿದೀತೆ?

ತಾರೀಕು ಇಪ್ಪತ್ತೈದು. ಶಾಮಣ್ಣ ಮೇಸ್ಟ್ರು ತನ್ನ ಮಕ್ಕಳಿಗೆ ಕೊಟ್ಟ ಭರವಸೆಯನ್ನು ಉಳಿಸಿಕೊಡಬೇಕಾಗಿತ್ತು. ಮರುದಿನವೇ ಗೋಕುಲಾಷ್ಟಮಿ. ಹಬ್ಬದ ದಿನ ತಿಂಡಿ ತಿನಸುಗಳ ಮಾತಂತಿರಲಿ. ಹೊಟ್ಟೆತುಂಬಾ ಅನ್ನವನ್ನಾದರೂ ಮಕ್ಕಳಿಗೆ ಬೇಯಿಸಿ ಹಾಕಬೇಕಲ್ಲ! ಅಂಗಡಿಯಲ್ಲಿ ಹಿಂದಿನ ಬಾಕಿಯೇ ಉಳಿದಿತ್ತು. ಜುಲೈ ತಿಂಗಳ ಬಾಕಿ ಇನ್ನೂ ಚುಕ್ತಾ ಮಾಡದೆ ಮತ್ತೂ ಅಂಗಡಿಯವರು ಎಷ್ಟೆಂದು ಸಾಲ ಕೊಟ್ಟಾರು? ತನ್ನ ಸಹೋದ್ಯೋಗಿಗಳೊಡನೆ ಹಣ ಕೇಳಿದರವರು. ಶಾಮಣ್ಣ ಮೇಸ್ಟರರದೇ ಪಾಡು ಅವರದಾಗಿತ್ತು. ಪರಿಚಯದ ವ್ಯಕ್ತಿಗಳೊಡನೆ ಕೈಕಡ ಕೇಳಿ ಬಾಯಿ ಹಾಳು ಮಾಡಿಕೊಂಡರು ಹೊರತು ಪ್ರಯೋಜನಕ್ಕೆ ಬರಲಿಲ್ಲ. ಜೋಲುಮೋರೆ ಹಾಕಿ ಮಧ್ಯಾಹ್ನ ಬಿಡುವಿನ ಹೊತ್ತು ಶಾಲೆಯಲ್ಲಿ ಕುಳಿತ ಶಾಮಣ್ಣನವರನ್ನು ಕಂಡ ಜೋಸಿ ಮಾಸ್ತರು ವಿನೋದವಾಗಿ ಹೇಳಿದರು "ನೀವ್ಯಾಕೆ ಹೆದರುತ್ತೀರಿ ಶಾಮಣ್ಣೋರೇ; ನಾವೂ ನೀವೂ ಕೂಡಿ ಕ್ರಿಸ್‌ಮಸ್ ಹಬ್ಬವನ್ನು ಗಡದ್ದಿನಿಂದ ಮಾಡುವ. ಅಷ್ಟಮಿ ಹೋದರೆ ಹೋಗಲಿ."

ಶಾಮಣ್ಣನವರಿಗೆ ಈ ಮಾತು ಹೌದೆಂದು ತೋರಿತು. 'ಕಾಲಿದ್ದಾಗಲೇ ಹಬ್ಬ' ಇದೇ ಸರಿ ಎಂದು ಅವರು ಒಮ್ಮೆಗೆ ಭಾವಿಸಿದರು ಸಂಬಳ ದೊರೆತಾಗಲೇ ಹಬ್ಬ! ಇದು ಸರಿಯೆ? ಎಂದವರು ಪುನಃ ಆಲೋಚಿಸಿದರು. ಊರಿಗೆಲ್ಲಾ ಗೋಕುಲಾಷ್ಟಮಿಯೇ ಹಬ್ಬವಾಗಿ. ಎಲ್ಲರೂ ನಕ್ಕುನಲಿಯುವಾಗ ತಾನು ಮಾತ್ರ 'ಊರಿಗೊಂದು ದಾರಿಯಾದರೆ ಪೋರನಿಗೊಂದು ದಾರಿ' ಎಂಬಂತೆ ಸಂಬಳ ಸಿಕ್ಕಿದಾಗ ಹಬ್ಬ ಮಾಡುವುದು ಸರಿಯೆ? ಮೊದಲೇ ಗಲಿಬಿಲಿಗೊಂಡಿದ್ದ ಅವರ ಮನಸ್ಸಿಗೆ ಪರಿಹಾರವೇ ತೋಚಲಿಲ್ಲ.

ಮಧ್ಯಾಹ್ನ ಮನೆಗೆ ಬಂದುದೂ ಆಯಿತು ಬೇಯಿಸಿಟ್ಟಿದ್ದ ಗಂಜಿ ಬಾಯಿಗೆ ಸೇರಿಸಿದ್ದೂ ಆಯಿತು. ಜೊತೆಗೇ ಮಕ್ಕಳ ಬೇಡಿಕೆ, ಕೇಳಿಕೆಗಳನ್ನು ಕೇಳಿಯೂ ಆಯಿತು. ಅಡಿಗೆ ಮನೆ ಸೇರಿ ಹೆಂಡತಿಯೊಡನೆ ಮಾತನಾಡಲು ಧೈರ್ಯ ಬರಲಿಲ್ಲ. ಬೆಳಗ್ಗೆ ಶಾಲೆಗೆ ಹೊರಡುವಾಗ ಶಾರದಮ್ಮ ಕರೆದು ಹೇಳಿದ್ದರು: "ನೋಡಿ, ನಾಳೆ ಅಷ್ಟಮಿ. ಏನಿಲ್ಲಾಂದ್ರೂ ನಿಮಿತ್ತವಾಗಿ ಒಂದು ಅನ್ನ, ಸಾರಾದ್ರೂ ಮಾಡಬೇಡ್ವೆ?" ಎಂದು ಮನೆಯಲ್ಲಿ ಅಕ್ಕಿ ಬೇಳೆ ಖರ್ಚಾದ ವಿವರವನ್ನು ಅಪ್ರತ್ಯಕ್ಷವಾಗಿ ಒಪ್ಪಿಸಿದ್ದರು. ಬೆಳಗ್ಗೆ ತಾನು ಮಲಗಿದ್ದಾಗ ಹಾಲಿನವಳು ತನಗೂ ಅಷ್ಟಮಿ ಬಂತೆಂದು ಹೆಂಡತಿಯೊಡನೆ ಹೇಳಿದುದು ಅವರಿಗೆ ಕೇಳಿಸಿತ್ತು. ಜೊತೆಗೆ ಜುಲೈ ತಿಂಗಳಿಂದ ಅವಳ ಬಾಕಿ ಸಂದಾಯವಾಗದೆ ಉಳಿದಿರುವುದೂ ತಿಳಿದಿತ್ತು. ಆಚೆಮನೆ ಸಾವಿತ್ರಮ್ಮ ಬೆಳಗ್ಗೆ ಬಾವಿಕಟ್ಟೆಯಲ್ಲಿ ತನ್ನ ಹೆಂಡತಿಯನ್ನು ಸಂಧಿಸಿದಾಗ "ಶಾರದಮ್ಮಾ, ಅಷ್ಟಮಿ ನಿಮಗೆ ಯಾವುದರಲ್ಲಿ ಬರುತ್ತೆ? ಕಡುಬಿನಲ್ಲೋ, ದೋಸೆಯಲ್ಲೋ? ಚಕ್ಕುಲಿ

(೧೧ನೇ ಪುಟ ನೋಡಿರಿ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಕಟಣೆ

ನಿರಖು ಠೇವಣಾತಿಗಳ ಮೇಲೆ ನಾವೀಗ ತೆರುತ್ತಿರುವ ಸಾ. ಸೇ. 4⅜ರಿಂದ 4½ರ ವರೆಗಿನ ಬಡ್ಡಿ ದರಗಳಲ್ಲಿ ಯಾವುದೊಂದೂ ಬದಲಾವಣೆ ಇಲ್ಲದೆ, ಅಂತಹ ಠೇವಣಾತಿಗಳನ್ನು ಅವೇ ದರಗಳಲ್ಲಿ ಸ್ವೀಕರಿಸಲಾಗುವುದೆಂದು ಪ್ರಕಟಿಸಲು ಸಂತೋಷಪಡುತ್ತೇವೆ.

ವಿಶೇಷ ಮಾಹಿತಿಗೆ
ನಿಮಗೆ ಸಮೀಪವಿರುವ ನಮ್ಮ ಯಾವುದೇ ಶಾಖೆಯನ್ನು ಸಂದರ್ಶಿಸಿರಿ.

ದಿ. ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906
ಪ್ರಧಾನ ಕಚೇರಿ : ಉಡುಪಿ (ದ. ಭಾರತ)
(ವಿಶಾಲ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ನಮ್ಮದು ಅತಿ ಹಿರಿಯ ಬೇಂಕು!)

ಕೀಟಾಣುಗಳು

ಅಪಾಯಕಾರಿ ಕೀಟ—ಗೃಹಮಕ್ಷಿಕ

ಎಲ್ಲರ ಮನೆಯಲ್ಲಿಯೂ ಕಾಡುತ್ತಿರುವ ಈ ನೊಣ ವಿಚಿತ್ರರೂಪದ್ದಿದೆ. ರೋಗವಾಹಕಗಳಾದ ಇವುಗಳನ್ನು ಬೆಳೆಯಗೊಡಬಾರದು.

ಒಂದೇ ಒಂದು ನೊಣ! ಆದರೆ, ಅದು ದಂಗು ಬಡಿಸಿ ಬಿಟ್ಟಿತು! ತಿಂಡಿಯ ತಟ್ಟೆಯಲ್ಲಿದ್ದ ನೊಣವನ್ನು ಓಡಿಸಿದರೆ, ಅದು ಹಾಲಿನ ಲೋಟೆಯಲ್ಲಿ ಕೂರಬೇಕೆ? ಅಲ್ಲಿಂದಲೂ ಓಡಿಸಿದರೆ, ಅದು ಪುನಃ ತಿಂಡಿಗೆರಗಿತು. ಯಾವ ಜನ್ಮದ ಶತ್ರುವೋ ಏನೋ, ಅಲ್ಲಿಂದಲೂ ಜಾಡಿಸಿದರೆ, ಕೈಯಲ್ಲಿ ಹಿಡಿದುಕೊಂಡ ಪುಸ್ತಕದೆಡೆ ಹಾರಿ ಕುಳಿತಿತು. ಕೊನೆಗಂತೂ ಸಿಟ್ಟು ಬಂದು ಪುಸ್ತಕ ಮುಚ್ಚಿ ಬಿಟ್ಟಾಗ, ಅದರ ಇಡುಕುರೊಳಗಿಂದಲೇ ಹಾರಿ ಪುನಃ ಹಾಲಿನ ಲೋಟೆಯೊಳಗೇನೇ ಬಿದ್ದು ಸತ್ತು ಹೋಗಬೇಕೆ? ಏನಿದು ಗ್ರಹಚಾರ!

ಸಾಮಾನ್ಯವಾಗಿ, ಎಲ್ಲೆಲ್ಲಿಯೂ ನೊಣಗಳಿರುತ್ತವೆ. ಕೆಲವೆಡೆ ಹೆಚ್ಚು; ಇನ್ನು ಕೆಲವೆಡೆ ಕಡಿಮೆಯಷ್ಟೆ. ನೊಣ ಮತ್ತು ಮಾನವನ ಸಂಬಂಧವು ಅತ್ಯಂತ ಪ್ರಾಚೀನವಾದುದು. ಪ್ರಾಚೀನ ಕಾಲದ ಮನುಷ್ಯನೂ ನೊಣವನ್ನು ಚೆನ್ನಾಗಿ ತಿಳಿದುಕೊಂಡಿದ್ದಾನೆ. ಮಾನವ ವಿಕಾಸದ ಎಲ್ಲ ಯಾತ್ರೆಗಳನ್ನೂ ಅವು ನೋಡಿವೆ. ಮಾನವನು ನಗ್ನಾವಸ್ಥೆಯಲ್ಲಿ ಪರ್ವತ ಬೆಟ್ಟಗಳ ಗುಹೆಕಂದರಗಳಲ್ಲಿ ವಾಸಿಸಿಕೊಂಡು, ಹಸಿ ಹಸಿ ಮಾಂಸವನ್ನು ತಿನ್ನುತ್ತಿರುವಾಗಂದಿನಿಂದ ಇಂದಿನ ವರೆಗೂ ನೊಣ ಮತ್ತು ಮಾನವನ ಸಂಪರ್ಕ ಬೆಳೆಯುತ್ತ ಬಂದಿದೆ. ಆದುದರಿಂದ, ಇಂತಹ ನೊಣಗಳ ಬಗ್ಗೆ ತುಸು ಅರಿತುಕೊಳ್ಳುವುದು ಅವಶ್ಯವಲ್ಲವೆ?

ಸರ್ವ ಸಾಮಾನ್ಯವಾದ ನೊಣಗಳಿಗೆ ಪತಂಗಗಳಂತೆಯೇ ಆರು ಕಾಲುಗಳಿವೆ. ಇವುಗಳ ಸಹಾಯದಿಂದಲೇ ಗೋಡೆಗಳ ಮೇಲೆ, ನಡೆಯುವ ನೊಣಗಳನ್ನು ನೀವು ಅವಶ್ಯ ಕಂಡಿರಬೇಕು. ಆದರೆ, ಏನಾದರೂ ಅಪಾಯಗಳ ಅಥವಾ ಆಹಾರದ ಅರಿವಾದೊಡನೆಯೇ ತೀವ್ರ ವೇಗದಿಂದ ಹಾರಿ ಹೋಗುತ್ತವೆ. ಹಾರುವುದಕ್ಕೋಸ್ಕರ ಇವಕ್ಕೆ ಎರಡು ರೆಕ್ಕೆಗಳಿವೆ. ಪತಂಗಾದಿಗಳಿಗೆ ನಾಲ್ಕು ನಾಲ್ಕು ರೆಕ್ಕೆಗಳಿರುವುವಾದರೂ ನೊಣ ಮತ್ತದರ ಬಂಧುಬಾಂಧವರಿಗೆ ಎರಡೆರಡೇ ರೆಕ್ಕೆಗಳಿವೆ.

ನೊಣಗಳಿಗೆ ತಲೆಯಲ್ಲಿ ಎರಡು ದೊಡ್ಡ ದೊಡ್ಡ ಕಣ್ಣುಗಳಿವೆ. ಪ್ರತಿ ಕಣ್ಣಿನಲ್ಲಿಯೂ ಚಿಕ್ಕ ಪುಟ್ಟ ನೂರಾರು ಕನ್ನಡಿಯಂತಹ ಪರೆಗಳಿವೆ. ಇವುಗಳ ಸಹಾಯದಿಂದ ಬಹಳಷ್ಟು ದೂರದಲ್ಲಿರುವ ಪದಾರ್ಥಗಳು ಅದರ ನೇತ್ರಪಟಲದಲ್ಲಿ ಅಂಕಿತವಾಗುತ್ತವೆ. ಆಗ ಅದು ಶೀಘ್ರವಾಗಿ ಅದರತ್ತ ಧಾವಿಸುವುವೆಂದು ನೀವು ಹೇಳಬಹುದು. ಆದರೆ, ಹೀಗಲ್ಲ. ಈ ಕೆಲಸದಲ್ಲಿ ಕಣ್ಣುಗಳಿಗಿಂತ ಮೂಗಿನ ಪಾತ್ರವೇ ಅಧಿಕವಾದುದು. ಹಾಲು, ಸಿಹಿ ತಿಂಡಿ, ಹಲ್ವ, ಹಣ್ಣು, ರಕ್ತಮಾಂಸ ಮೊದಲಾದ ದೆಲ್ಲವುಗಳೂ ನೊಣಗಳನ್ನು ತಮ್ಮತ್ತ ಆಕರ್ಷಿಸುತ್ತವೆ. ಈ ಮೂಗಿಗೆ ಅವುಗಳ ವಾಸನೆ ಬಡಿಯುತ್ತದೆ. ನೀವು ಎಂದಾದರೂ ನೊಣದ ಮೂಗನ್ನು ಕಂಡಿದ್ದೀರಾ? ಹೆಚ್ಚುಮಟ್ಟಿಗೆ ಎಂದೂ ಇಲ್ಲ ಎಂದೇ ಹೇಳಬಹುದು. ಏಕೆಂದರೆ, ಇವುಗಳ ಮೂಗು ಮೂಗಿನಂತಿರುವುದಿಲ್ಲ; ಬದಲು ಎರಡು ಕೊಂಬುಗಳಂತೆ ಒಂದು ರೂಪದಲ್ಲಿರುತ್ತವೆ. ಇದು ಕೇವಲ ವಾಸನೆಯನ್ನು ಮಾತ್ರ ಆಘ್ರಾಣಿಸುವುದಲ್ಲದೆ, ಅವುಗಳು ಎಂದಿಗೂ ಶ್ವಾಸೋಚ್ಛ್ವಾಸಕ್ರಿಯೆಯಲ್ಲಿ ಸಹಯೋಗ ನೀಡಲಾರವು.

ನೊಣಗಳ ಶರೀರದಲ್ಲಿ ಅವುಗಳ ಬಾಯಿಯು ವಿಚಿತ್ರವಾದ ಒಂದಂಗವಾಗಿದೆ. ತಲೆಯ ಕೆಳಗೆ ಒಂದು ಉದ್ದವಾದ ಬಗ್ಗದ ಸೊಂಡಿಲಿನ ರೂಪದಲ್ಲಿದೆ. ಎಲ್ಲಿಯಾದರೂ ನಿಮ್ಮ ಸಮೀಪದಲ್ಲಿಯೇ ಕುಳಿತುಕೊಂಡಿರುವ ನೊಣವನ್ನು ನೀವು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಆಗ, ಈ ಸೊಂಡಿಲು ಒಳಗೂ ಹೊರಗೂ ಸಂಚರಿಸುತ್ತಿರುವುದು ದೃಗ್ಗೋಚರವಾಗುವುದು. ಈ ಸೊಂಡಿಲಿನ ಸಹಾಯದಿಂದಲೇ ನೊಣವು ದ್ರವ ಪದಾರ್ಥಗಳನ್ನು ಹೀರಿಕೊಳ್ಳುವುದು. ಸೊಂಡಿಲಿನ ತುದಿಯಲ್ಲಿ ಒಂದು ಸ್ಪಂಜದಂತಹ ಪದಾರ್ಥವಿದೆ. ಇದರ ಸಹಾಯದಿಂದ ಹಣ್ಣು, ಹಾಲು ಮೊದಲಾದ ಪದಾರ್ಥಗಳಲ್ಲಿರುವ ತೀರ ತೆಳುವಾದ ದ್ರವವನ್ನು ಸ್ಪಂಜದಲ್ಲಿ ಹೀರಿಕೊಳ್ಳುತ್ತದೆ; ಅನಂತರ ಸೊಂಡಿಲಿನ ಟೊಳ್ಳಾದ ನಾಳದ ಸಹಾಯದಿಂದ ಅದನ್ನು ಹೀರುತ್ತದೆ. ಸಕ್ಕರೆ, ಬೆಲ್ಲ, ಸಿಹಿತಿಂಡಿ, ಅನ್ನ ಮೊದಲಾದ ಘನ ಪದಾರ್ಥಗಳ ಮೇಲೂ ಅದು ಕೂತಿರುತ್ತದೆ; ಅವನ್ನೇನು ಮಾಡುತ್ತದೆ ಎಂದು ನೀವು ಕೇಳಬಹುದು ಇವುಗಳ ಸೇವನೆಗೂ ನೊಣವೊಂದು ವಿಚಿತ್ರ ವಿಧಾನವನ್ನು ಕಂಡು ಹಿಡಿದಿದೆ. ನೊಣಗಳಿಗೆ ದವಡೆಗಳಿರುವುದಿಲ್ಲವಾದುದರಿಂದ ಆಹಾರ ಪದಾರ್ಥಗಳನ್ನು ಜಗಿಯಬೇಕೆಂಬ ಅಭ್ಯಾಸವೇ ಇರುವುದಿಲ್ಲ. ನೊಣದ ಸೊಂಡಿಲಿನಲ್ಲಿ ಎರಡು ನಾಳಗಳಿರುತ್ತವೆ—ಒಂದು ರಸ ಹೀರುವುದು ಮತ್ತು ಇನ್ನೊಂದು ಉಗುಳುವುದು ಈ ಎರಡೂ ನಾಳಗಳು ಸೊಂಡಿಲಿನ ತುದಿಯ ಸ್ಪಂಜ ಪದಾರ್ಥದ ವರೆಗೆ ಮುಟ್ಟುವುದು. ಸಕ್ಕರೆ ಮೊದಲಾದ ಘನ ಪದಾರ್ಥಗಳನ್ನು ತಿನ್ನಬೇಕಾದರೆ, ನೊಣ ಮೊದಲು, ಅದರ ಮೇಲೆ ಹಾರಿ, ತನ್ನ ಉಗುಳು ಅಥವಾ ಜೊಲ್ಲಿನ ಒಂದು ಬಿಂದುವನ್ನು ಸುರಿಸುತ್ತದೆ. ಆಗ, ಈ ಜೊಲ್ಲಿನೊಡನೆ ಆ ಪದಾರ್ಥ ತುಸು ಕರಗುತ್ತದೆ. ಆ ಮೇಲೆ ಆಹಾರದ ನಾಳದ ಮೂಲಕ ಹೀರುತ್ತದೆ. ನೊಣಗಳು ಈ ರೀತಿಯಾಗಿ ಆಹಾರವನ್ನು ಸೇವಿಸುವುದರಿಂದ ರೋಗಗಳನ್ನು ಹರಡಿಸುವುದೂ ಉಂಟು. ನೊಣಗಳು ಆಹಾರ ಪದಾರ್ಥಗಳ ಮೇಲೆ ಮಾತ್ರವಲ್ಲದೆ ಕೊಳಚೆಯಲ್ಲಿಯೂ ಮಲಮೂತ್ರಗಳಲ್ಲಿಯೂ ಎರಗುವುದೊಂದನ್ನು ನೀವು ಕಂಡಿದ್ದೀರಿ. ಇಂತಹವುಗಳ ಮೇಲೆ ಎರಗಿ, ಅಲ್ಲಿ ಹಸಿವೆಯನ್ನು ನೀಗಿಸಿದ ಮೇಲೆ ಅದು ನಮ್ಮ ಆಹಾರ ಪದಾರ್ಥಗಳ ಮೇಲೆಯೂ ಕೂರುವುದು. ಅವುಗಳ ಮೇಲೆ ಜೊಲ್ಲುರಸವನ್ನು ಸೂಸುವುದು. ಅದರಲ್ಲಿದ್ದ ಕೊಳಚೆ, ಕ್ರಿಮಿಕೀಟಾಣುಗಳೂ ಆಗ, ನಮ್ಮ ಆಹಾರ ಪದಾರ್ಥಗಳ ಮೇಲೆ ಬೀಳುವುದು. ಒಂದೆಡೆಯಿಂದ ಇನ್ನೊಂದೆಡೆಗೆ ಕೊಳಕನ್ನು ಹರಡಿಸುವ ಕೆಲಸ ನೊಣಗಳ ಸೊಂಡಿಲುಗಳಿಗಿಂತಲೂ ಕಾಲುಗಳು ಹೆಚ್ಚು ಮಾಡು

(೧೨ನೇ ಪುಟ ನೋಡಿರಿ)

ಜೀವನದ ಅವಶ್ಯಕತೆಗಳು

ನಿಮ್ಮ ವೆಚ್ಚದಲ್ಲಿ ಯಾವ್ಯಾವುದು ಅತಿ ಮುಖ್ಯ ಖರ್ಚು ಎಂಬುದನ್ನು ನೀವು ಆಲೋಚಿಸುವಿರಾ? ಆಹಾರ, ಉಡಿಗೆ ತೊಡಿಗೆ, ಮನೆ ಮತ್ತು ವಿದ್ಯಾಭ್ಯಾಸ—ಇವುಗಳನ್ನು ನೀವು ಜೀವನದ ಅವಶ್ಯಕತೆಗಳಲ್ಲಿ ಸೇರಿಸುವುದು ಸಹಜ. ಅವುಗಳೊಡನೆ ಜೀವ ವಿಮೆಯನ್ನೂ ಸೇರಿಸಿ, ನಿಮ್ಮ ಮತ್ತು ನಿಮ್ಮ ಕುಟುಂಬದ ಜೀವನದ ಅವಶ್ಯಕತೆಗಳನ್ನೇಕೆ ಪೂರ್ಣಗೊಳಿಸಬಾರದು!

ವೃದ್ಧಾಪ್ಯದಲ್ಲಿ ಸಂತುಷ್ಟ ಜೀವನಕ್ಕಾಗಿ ಜೀವ ವಿಮೆ ಹಣವನ್ನು ಒದಗಿಸುತ್ತದೆ. ಒಂದು ವೇಳೆ ದುರದೃಷ್ಟವಶಾತ್ ನೀವು ಕಣ್ಮರೆಯಾದಲ್ಲಿ, ಜೀವ ವಿಮೆ ನಿಮ್ಮ ಮಡದಿ ಮಕ್ಕಳಿಗೆ ಜೀವನ ಸಾಗಿಸಲು ಹಣವನ್ನು ಒದಗಿಸಿ ಅವರನ್ನು ಕಾಪಾಡುತ್ತದೆ.



ನಿಮ್ಮ ಸುಖಕ್ಕಾಗಿ, ನಿಮ್ಮ ಕುಟುಂಬದ ಸಂರಕ್ಷಣೆಗಾಗಿ ನೀವು ಜೀವ ವಿಮಾ ಭದ್ರತೆಯನ್ನು ತಪ್ಪದೆ ಪಡೆಯಿರಿ.

ಜೀವ ವಿಮೆ

—ಜೀವ ವಿಮೆ ಮಾಡಿದಂದಿನಿಂದ ನಿಮ್ಮ ಭವಿಷ್ಯದ ಬಗ್ಗೆ ನೀವು ನಿಶ್ಚಿಂತರಾಗಿರಬಹುದು.

ಅಭಿಪ್ರಾಯ

ಅರ್ಥಮಂತ್ರಿ ಶ್ರೀ ಮುರಾರಜಿಯವರ ವಿದೇಶಯಾತ್ರೆ ಸಫಲವಾಗುವುದು

ನೆಹರೂರವರ ಉತ್ತರಾಧಿಕಾರಿ ಎಂದು ಹಿಂದಿನ ವರ್ಷ ವಿದೇಶಗಳಲ್ಲಿ ಅವರಿಗೆ ಭವ್ಯ ಸ್ವಾಗತ ದೊರೆತಿತ್ತು.

ಭಾರತದ ಅರ್ಥಮಂತ್ರಿಗಳಾಗಿರುವ ಶ್ರೀ ಮುರಾರಜಿ ದೇಸಾಯಿಯವರು ಪಂಚವಾರ್ಷಿಕ ಯೋಜನೆಯ ಒಗ್ಗೆ ಹಣದ ಪೂರೈಕೆಯ ಉದ್ದೇಶಕ್ಕಾಗಿ ಕಳೆದ ವರ್ಷದಂತೆ ಈ ಬಾರಿಯೂ ವಿದೇಶ ಯಾತ್ರೆಯನ್ನು ಕೈಕೊಂಡಿರುವರು. ಭಾರತದ ರಾಜಕೀಯ ಹಾಗೂ ಆರ್ಥಿಕ ಪ್ರತಿನಿಧಿಯಾಗಿ ಅವರು ಅಮೇರಿಕಾ, ಬ್ರಿಟನ್ನು ಮತ್ತು ಇತರ ಮಹಾರಾಷ್ಟ್ರಗಳ ಉಚ್ಚಾಧಿಕಾರಿಗಳೊಡನೆ ಮಾತುಕತೆ ಮಾಡಲಿರುವರು. ಈ ರೀತಿ ಅವರು ಯೋಜನೆಗಳ ಸಫಲತೆಗಾಗಿ ಅಂತಾರಾಷ್ಟ್ರೀಯ ಪ್ರವಾಸವನ್ನು ಕೈಕೊಂಡಿರುವರು

ಮುರಾರಜಿಯವರು ಬಹಳ ಬಿಕ್ಕಟ್ಟಿನ ಸಮಯದಲ್ಲಿ ಅರ್ಥಮಂತ್ರಿ ಸ್ಥಾನವನ್ನು ಸ್ವೀಕರಿಸಿದರು. ಮುಂಧ್ರಾ ಪ್ರಕರಣದ ಪರಿಣಾಮವು 'ವೈಧಾನಿಕ ಉತ್ತರದಾಯಿತ್ವ'ದ ಕಾರಣಗಳಿಂದ ಆಗಿನ ಅರ್ಥಮಂತ್ರಿ ಶ್ರೀ ಟಿ ಟಿ ಕೃಷ್ಣಮಾಚಾರಿಯವರನ್ನು ಪದತ್ಯಾಗ ಮಾಡುವಂತೆ ಮಾಡಿತು. ಆ ಕಾಲ ಸ್ವತಃ ಪ್ರಧಾನ ಮಂತ್ರಿಯವರು ಕೆಲವು ದಿನಗಳ ಕಾಲ ಅರ್ಥಮಂತ್ರಿ ಖಾತೆಯನ್ನು ವಹಿಸಿಕೊಂಡರೂ ಕೊನೆಗೆ ಶ್ರೀ ಮುರಾರಜಿಯವರನ್ನೇ ಆ ಖಾತೆಗೆ ಮಂತ್ರಿಗಳಾಗಿ ಆರಿಸಿದರು. ಪ್ರಜಾಪ್ರಭುತ್ವವಾದಿ ರಾಷ್ಟ್ರಗಳ ಮಂತ್ರಿಮಂಡಲದಲ್ಲಿ ಅರ್ಥಮಂತ್ರಿಯ ಸ್ಥಾನವು ಮಹತ್ವದೆಂದು ಪರಿಗಣಿಸಲ್ಪಡುತ್ತಿದೆ ಭಾರತದಲ್ಲಿ ಅರ್ಥಮಂತ್ರಿ ಸ್ಥಾನಕ್ಕೆ ಅಷ್ಟೊಂದು ಮಹತ್ವವಿಲ್ಲದಿದ್ದರೂ, ಮುರಾರಜಿಯವರು ಆ ಹುದ್ದೆಗೇರಿಸುವದರಿಂದ ಅವರು ನೆಹರೂರವರ ಉತ್ತರಾಧಿಕಾರಿ ಎಂದು ಭಾವಿಸುತ್ತಿದ್ದವರಿಗೆ ತುಂಬಾ ಆನಂದವಾಗಿರಬೇಕು, ಪ್ರಧಾನ ಮಂತ್ರಿಯಾಗಿ ಮುರಾರಜಿಯವರನ್ನು ಕಾಣಬಯಸುವವರಿಗೆ ಇದರಿಂದ ಸಂತೋಷವೆನಿಸಿದುದರಲ್ಲಿ ಆಶ್ಚರ್ಯವಿಲ್ಲ.

ಈ ರೀತಿಯ ತಿಳುವಳಿಕೆಯು ವಿಶೇಷವಾಗಿ ಪಶ್ಚಿಮ ದೇಶಗಳಲ್ಲಿದೆ. ಆದುದರಿಂದಲೇ ಕಳೆದ ಭಾರಿ ವಿದೇಶ ಯಾತ್ರೆ ಕೈಕೊಂಡ ದೇಸಾಯಿಯವರಿಗೆ ವಿಶೇಷವಾದ ಆದರ ಸತ್ಕಾರಗಳು ಲಭಿಸಿದುವು ಅಮೇರಿಕೆಯ ಪತ್ರಿಕಾ ಪ್ರತಿನಿಧಿಗಳೊಡನೆ ಕಳೆದ ವರ್ಷ ಮುರಾರಜಿಯವರು ಮಾತುಕತೆಯಾಡಿದ್ದರು. 'ಅಮೇರಿಕನ್ ಟೈಂಸ್' ಪತ್ರಿಕೆಯ ಪ್ರತಿನಿಧಿಯೊಡನೆ ಇವರಾಡಿದ ಮಾತುಕತೆಗಳ ಕುರಿತು ಭಾರತದಲ್ಲಿ ವಿಶೇಷವಾದ ಚರ್ಚೆಯೂ ನಡೆಯಿತು. ಭಾರತ ಮತ್ತು ನೆಹರೂರವರ ಕುರಿತು ಅವರು ವ್ಯಕ್ತಪಡಿಸಿದ ವೈಯಕ್ತಿಕ ವಿಚಾರಗಳ ಕುರಿತು ಭಾರತದ ಲೋಕ ಹಾಗೂ ರಾಜ್ಯ ಸಭೆಗಳೆರಡರಲ್ಲೂ ವಿವರವಾದ ಪ್ರಶ್ನೋತ್ತರಗಳು ನಡೆದುವು. ಪ್ರಧಾನ ಮಂತ್ರಿಯವರು ಸ್ಪಷ್ಟೀಕರಣವಿತ್ತ ಬಳಿಕವೂ ಕೆಲವರು ಕೊನೆಯವರೆಗೂ ಅಸಂತುಷ್ಟರಾಗಿಯೇ ಇದ್ದರು. ಭಾರತೀಯ ಪತ್ರಿಕೆಗಳೂ ಈ ಕುರಿತು ನಿಕಷ್ಟ ಚರ್ಚೆ ನಡೆಸಿದ್ದುವು.

ಈ ಘಟನೆಗಳನ್ನು ಮರೆತು ಬಿಟ್ಟರೆ, ಕಳೆದ ವರ್ಷ ಅರ್ಥ ಮಂತ್ರಿಯಾಗಿ ಮುರಾರಜಿಯವರು ಕೈ ಕೊಂಡ ಪ್ರವಾಸವು ಯಶಸ್ವಿಯಾಗಿತ್ತು ಭಾರತಕ್ಕೆ ದೀರ್ಘ ಕಾಲದ ಸಾಲವು ಪ್ರಾಪ್ತವಾಗಲು ಮುರಾರಜಿಯವರು ಅಮೇರಿಕದಲ್ಲಿ ಕೈ ಕೊಂಡ ಯತ್ನಗಳು ಸಫಲವಾದುವು. ಕಳೆದ ವರ್ಷ ಇದೇ ಸಮಯ ಮುರಾಜಿಯವರು ನ್ಯೂಯಾರ್ಕಿನಲ್ಲಿ "ಭಾರತವು ದರಿದ್ರತೆಯೊಂದಿಗೆ ಹೋರಾಡುತ್ತಿದೆ. ಆದರೆ ಸಂಪತ್ತಿಗೆ ಆತಂಕ ತಂದೊಡ್ಡುವ ಇರಾದೆ ಅದಕ್ಕಿಲ್ಲ", ಎಂದು ಹೇಳಿದ್ದರು ಅಮೇರಿಕೆಯ ವ್ಯಾಪಾರಿಗಳಿಗೆ ಅವರು ಭಾರತದಲ್ಲಿ ಖಾಸಗಿ ಔದ್ಯೋಗಿಕ ಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ. ಮಾತ್ರವಲ್ಲ ಅದು ವಿದೇಶೀ ಖಾಸಗೀ ಸಂಸ್ಥೆಗಳನ್ನೂ ಸ್ವಾಗತಿಸುತ್ತದೆ. ಎಂಬ ವಿಶ್ವಾಸವನ್ನಿತ್ತರು.

ಶ್ರೀ|| ಮುರಾರಜಿಯವರು ದಕ್ಷಿಣ ಕಾಂಗ್ರೆಸಿನ ಒಬ್ಬರು ಪ್ರಮುಖ ನಾಯಕರೆನಿಸಿರುವರು. ದಕ್ಷ ಆಡಳಿತ ಮತ್ತು ಕಾರ್ಯದಕ್ಷಮತೆಗಳಿಗಾಗಿ ಅವರು ಆರ್ಥಿಕ ವಿಚಾರದ ದೃಷ್ಟಿಯಲ್ಲಿ ಪ್ರಗತಿಶೀಲರೆಂದು ಹೇಳಲು ಸಾಧ್ಯವಿಲ್ಲ. ಧೋರಣೆಯಲ್ಲಿ ಅವರದೊಂದು ವಿಶೇಷವಾದ ವಿಚಾರಧಾರೆ ಇದೆ. ಭಾರತದ ಇಂದಿನ ಶಾಸಕರಲ್ಲಿ ಮದ್ಯಪಾನ ನಿಷೇಧ ಕಾಯಿದೆಯನ್ನು ಮುರಾರಜಿಯಷ್ಟು ಪ್ರಬಲವಾಗಿ ಸಮರ್ಥಿಸುವವರು ಇತರರಾರೂ ಇಲ್ಲ ಅವರು ಮುಂಬಯಿಯ ಮುಖ್ಯಮಂತ್ರಿಗಳಾಗಿದ್ದ ವೇಳೆ ವಿಭಿನ್ನ ರೀತಿಯ ಬಂಧೆಗಳಿಲ್ಲದೆ ಇರುತ್ತಿದ್ದರೆ ಅಲ್ಲಿನ 'ಕುದುರೆಓಟ'ವನ್ನೂ ನಿಷೇಧಿಸುತ್ತಿದ್ದರು. ಅವರು ಶಾಕಾಹಾರಿಗಳಾಗಿದ್ದಾರೆ ಮಾತ್ರವಲ್ಲ ಅವರಿಗೆ ಚಾ, ಕಾಫಿಗಳ ಚಟವೂ ಇಲ್ಲ.

ಇಂದಿಗೆ ೬೩ ವರ್ಷಗಳ ಹಿಂದೆ ಪೂರ್ವ ಸೂರತ ಜಿಲ್ಲೆಯ ಒಂದು ಗುಜರಾತೀ ಕುಟುಂಬದಲ್ಲಿ ಶ್ರೀ|| ಮುರಾರಜಿಯವರ ಜನ್ಮವಾಯಿತು. ಅವರ ವಿದ್ಯಾಭ್ಯಾಸ ಕಾಲವು ಗೌರವಪೂರ್ಣವಾಗಿತ್ತು. ಅವರು ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ವೈಜ್ಞಾನಿಕ ಸ್ನಾತಕರಾಗಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಅವರ ಈ ಯಶಸ್ಸಿನಿಂದಾಗಿ ಅವರು ಬೊಂಬಾಯಿಯ ಪ್ರಾಂತೀಯ ಸಿವಿಲ್ ಇಲಾಖೆಯಲ್ಲಿ ಸೇರಿಕೊಳ್ಳುವಂತಾಯಿತು. ಕೆಲವು ವರ್ಷಗಳ ವರೆಗೆ ಅವರು ಆಡಳಿತಗಾರರಾಗಿ ವಿವಿಧ ಹುದ್ದೆಗಳಲ್ಲಿ ದುಡಿಯುತ್ತಿದ್ದರು.

ಈ ಅವಧಿಯಲ್ಲಿ ಮಹಾತ್ಮಾ ಗಾಂಧಿಯವರ ಚಟುವಟಿಕೆಗಳು ಅವರನ್ನು ಪ್ರಭಾವಿತರನ್ನಾಗಿ ಮಾಡಿದುವು. ಇದರ ದೆಸೆಯಿಂದ ಅವರು ತಮ್ಮ ಸರಕಾರೀ ನೌಕರಿಗೆ ರಾಜಿನಾಮೆಯಿತ್ತರು. ೧೯೩೦ರಿಂದ ಅವರು ಕಾಂಗ್ರೆಸಿನ ವಿವಿಧ ಹುದ್ದೆಗಳಲ್ಲಿ ಕಾರ್ಯಮಾಡುತ್ತಿದ್ದಾರೆ ೧೯೩೭ರಲ್ಲಿ ಕಾಂಗ್ರೆಸಿನಲ್ಲಿ ರಚಿತವಾದ ಪ್ರಥಮ ಕಾಂಗ್ರೆಸ್ ಮಂತ್ರಿ ಮಂಡಲದಲ್ಲಿ ಕಂದಾಯ ಮಂತ್ರಿಗಳಾಗಿದ್ದರು ೪೬ರಲ್ಲಿ ಮುಂಬಯಿಯ ಗೃಹ ಮಂತ್ರಿಯಾದ ಇವರು ೧೯೫೨ರಲ್ಲಿ ಅವರು ಮುಂಬಯಿಯ ಮುಖ್ಯ ಮಂತ್ರಿಯಾದರು ೧೯೫೬ರಿಂದ ಅವರು ಕೇಂದ್ರ ಸರಕಾರದ ಮಂತ್ರಿ ಸದಸ್ಯರಾಗಿರುವರು ಶ್ರೀ ಮುರಾರಜಿಯವರು ಕಾಂಗ್ರೆಸ್ ಪಾರ್ಲಿಮೆಂಟರಿ ಮಂಡಲಿಯ ಸದಸ್ಯರಾಗಿರುವರು. ಮಾತ್ರವಲ್ಲ ದೀರ್ಘಕಾಲ ಕಾಂಗ್ರೆಸಿನ ಕೋಶಾಧ್ಯಕ್ಷರಾಗಿದ್ದರು. ದ್ವಿತೀಯ ಜಾಗತಿಕ ಯುದ್ಧದ ಕಾಲದಲ್ಲಿ ಅವರು ಒಬ್ಬರು ಸೆರೆಯ ಮರೆಯ ವ್ಯಕ್ತಿಗಳಾಗಿದ್ದರು.

ಶ್ರೀ ಮುರಾರಜಿಯವರ ಪ್ರಕೃತದ ವಿದೇಶ ಸಂಚಾರದಿಂದ ಭಾರತದ ಮೇಲೆ ನಿರೀಕ್ಷಿತ ಪರಿಣಾಮವಾಗುವುದು ನಿಸ್ಸಂದೇಹ.

ಅದ್ಭುತ ಸೃಷ್ಟಿ

ಸೃಷ್ಟಿಯ ಆದಿಮಾನವ!

ಬ್ರಹ್ಮನು ಪ್ರಥಮತಃ ಮಾನವನನ್ನು ಸೃಷ್ಟಿಸುವಾಗ, ಬಹಳ ಎಚ್ಚರಿಕೆಯಿಂದ ಕಾರ್ಯಗೈದನು. ದೇವತೆಗಳಿಗಿಂತ ಕೆಳಮಟ್ಟದಲ್ಲಿ ದಾನವರಿಗಿಂತ ಸ್ವಲ್ಪ ಮೇಲ್ಮಟ್ಟದಲ್ಲಿ ಯಾವುದನ್ನು ಸೃಷ್ಟಿಸಲಾಯಿತೋ ಆ ಸೃಷ್ಟಿಗೆ 'ಮಾನವ'ನೆಂದು ನಾಮಕರಣ ಮಾಡಲಾಯಿತು!

ಸೃಷ್ಟಿಯ ಈ ಆದಿ ಮಾನವನು ಹೇಗಿರುತ್ತಿದ್ದನೆಂದರೆ, ದಾನವನೆ, ಅವನ ಸತ್ತಿರ ಸುಳಿಯುತ್ತಿರಲಿಲ್ಲ! ಮಾನವತೆಯಿಂದ ಕಂಗೊಳಿಸಿ, ತೇಜೋಮಯನಾದ ಆತನು, ತನ್ನ ಸತ್‌ಕರ್ಮ ಸದ್‌ವ್ಯವಹಾರಗಳಿಂದ, ಜೀವನ ಪಥದಲ್ಲಿ ಮೆಲ್ಲ ಮೆಲ್ಲನೆ ಮುಂದುವರಿಯುತ್ತ 'ದೇವತ್ವ'ವನ್ನು ಪಡೆದು, ದೇವನೆಂದೆನಿಸಿ, ಪೂಜ್ಯನಾಗ ತ್ತಿದ್ದನು!

ಹೀಗೇ ನಡೆಯುತ್ತಿರಲು, ಮುಂದಾಲೋಚನೆಯುಳ್ಳ ಸುರರಿಗೆ, ಸ್ವಲ್ಪ ಭಯವಾಯಿತು! "ಮಾನವನು ಈ ಪರಿಯಿಂದ, ಸದಾಚಾರ ಸಂಪನ್ನನಾಗಿ ಮುನ್ನಡೆಯುತ್ತಿದ್ದರೆ—ದೇವತ್ವವನ್ನು ಹೊಂದಿ, ಒಂದಿಲ್ಲೊಂದು ದಿನ, ಪವಿತ್ರವಾದ ತಮ್ಮ "ದೇವಪದ" ವನ್ನೂ ಆಕ್ರಮಿಸುವುದರಲ್ಲಿ ಸಂದೇಹವಿಲ್ಲ!" ಎಂದು ಚಿಂತೆಗೊಳಗಾದ ಸುರರು, ಈ ಬಗ್ಗೆ ಆಲೋಚನೆ ಮಾಡಿದರು.

ಮಾನವನು ದೇವತ್ವವನ್ನು ಸುಲಭವಾಗಿ ಪಡೆಯುವಂತೆ, ಮಾಡಿದ ಈ ಅಪರಾಧವು, ಸೃಷ್ಟಿಕರ್ತನದೇ ಆಗಿತ್ತು. ಹಸಿವೆ, ಮತ್ತು ಕಾಮಾಭಿಲಾಷೆ, ಇವೆರಡು ಪ್ರಬಲವಾದ ವ್ಯಾಧಿಗಳಿಂದ, ಸೃಷ್ಟಿಕರ್ತನು ಆದಿ ಮಾನವನನ್ನೂ ಮುಕ್ತಗೊಳಿಸಿದ್ದುದೇ ಮಾನವನ ಈ ಪರಿಯ ಮೇಲ್ಮೆಗೆ ಕಾರಣವಾಗಿದ್ದಿತು. ಆದಿ ಮಾನವನು ಸ್ವಾರ್ಥರಹಿತನಾಗಿ—ಸತ್ಕರ್ಮ ನಿರತನಾಗಿ, ಪೂಜ್ಯನಾಗಿದ್ದನು. ಇಂದ್ರಿಯ ಚಾಪಲ್ಯ ವಿಲ್ಲದುದರಿಂದ, ಈ ಮಾನವನಿಗೆ, ದೇವತ್ವವನ್ನು ಪಡೆಯುವ, ಸತ್ ಸಾಧನೆಗೆ, ಪೂರ್ಣ ಅವಕಾಶವಿರುತ್ತಿತ್ತು. ಈ ಅವಕಾಶದ ಸದುಪಯೋಗ ಮಾಡಿಕೊಳ್ಳುತ್ತಿದ್ದ ಮಾನವನು, "ದೇವ"ನಾಗಲು ಸಮರ್ಥನಾಗಿರುತ್ತಿದ್ದನು.

ಮಾನವನ ಈ ಪ್ರಗತಿಯಿಂದ ಚಿಂತಾಕ್ರಾಂತರಾದ ಸುರರು, ಸೃಷ್ಟಿಕರ್ತನಲ್ಲಿ, ಮುಂದೊದಗಲಿರುವ ಸಂಕಷ್ಟದ ವಿಚಾರದ ಕ್ಕೆ ಅರಿಕೆ ಮಾಡಿಕೊಂಡರು.

ಬಹಳ ಹೊತ್ತು ವಿಚಾರಮಂಥನ ನಡೆಯಿತು ಕೊನೆಗೆ, ಪ್ರಜಾಪತಿಗೊಂದು, ತಕ್ಕ ಪರಿಹಾರೋಪಾಯ ಹೊಳೆಯಿತು! ಆಗ ಆತನ, ದೇವತೆಗಳನ್ನು ಸಮಾಧಾನಪಡಿಸಿ, ಮಾನವನಿಗೆ, ಎರಡು ವರಗಳನ್ನು ಕರುಣಿಸಿದನು!

ಪ್ರಜಾಪತಿಯ ಈ ವರದಾನ ಮತ್ತಾವುದೂ ಆಗಿರಲಿಲ್ಲ, ಒಂದು ಹಸಿವೆ! ಮತ್ತೊಂದು ಕಾಮತೃಷೆ!

ಈ ಎರಡು ವ್ಯಾಧಿಗಳಿಂದ ಪೀಡಿತನಾದ ಮಾನವನ ಜೀವನ, ಅಂದಿನಿಂದ ಸಂಕಟಮಯವಾಯಿತು! ಅವನಿಗೆ ಜೀವನದಲ್ಲಿ ಈ ಆಸೆ, ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದರ ಹೊರತು, ಮತ್ತಾವುದಕ್ಕೂ ವಿಶೇಷ ಅವಕಾಶವೇ ಇಲ್ಲದಂತಾಯಿತು. ಅಂದಿನಿಂದ ಮಾನವನು, ದೇವತ್ವವನ್ನು ಹೊಂದುವ ಪಥ ಬಹಳ ಕಷ್ಟವಾಗಿ, ಅಸಾಧ್ಯವೆಂಬಂತೆ, ಪರಿಣಮಿಸಿತು!

(ಸಾಧಾರ)

—ಶ್ರೀ ಕೆ. ಎನ್. ಭಟ್,
ಶಿರಾಡಿಪಾಲ್.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ
ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ದೇಶ ಪರಿಚಯ

ವಿಶುದ್ಧ ಆರ್ಯರಿರುವ ದೇಶ—ಸ್ವೀಡನ್

ನಿರಾಡಂಬರತೆಯಿಂದ ಸುಯೋಗ್ಯ ಜೀವನವನ್ನು ಬದುಕುವ ಈ ಸ್ವೀಡಿಶ್ ಜನರು ಪರಿಶ್ರಮಪ್ರಿಯರು.

ಮಧ್ಯರಾತ್ರಿ ಸಮಯ ಸೂರ್ಯನನ್ನು ನೋಡಬಹುದಾದ ರಾಷ್ಟ್ರಗಳಲ್ಲಿ ಸ್ವೀಡನ್ ಒಂದಾಗಿದೆ. ಈ ರಾಜ್ಯದಲ್ಲಿ ತುಂಬಾ ಸರೋವರಗಳು, ರಭಸದ ಪ್ರವಾಹದಿಂದ ಹರಿಯುವ ನದಿಗಳು, ಕಬ್ಬಿಣದ ಗನಿಗಳು, ಕಾಗದ ಕಾರ್ಖಾನೆಗಳು ಸೂಕ್ಷ್ಮ ತರದ ವಿದ್ಯುತ್ ಯಂತ್ರೋಪಕರಣಗಳು ಇವೆ. ಸುಮಾರು ಐದು ಸಾವಿರ ವರುಷಗಳ ಹಿಂದೆ ಎತ್ತರವಾಗಿಯೂ ಬಿಳಿ ಹೊಳೆಯುವ ಮೈಬಣ್ಣದ ಆರ್ಯರು ಇಲ್ಲಿ ಬಂದು ನೆಲಸಿದರು ಈ ಆರ್ಯರೆಂಬವರು ಪರಕೀಯರ ಅಧಿಕಾರಕ್ಕೆ ಒಳಪಟ್ಟವರೇ ಅಲ್ಲ. ಬೇರೆಯವರ ಬೆರಕೆಯಿಲ್ಲದೆ ಪರಿಶುದ್ಧ ಕುಲದ ಆರ್ಯರೆನಿಸಿ ಕೊಂಡಿರುವರು.

ಸ್ವೀಡನ್ ಗೋತ್ ಜನಾಂಗದ ಮೂಲಸ್ಥಾನವಾಗಿದೆ. ಕ್ರಿ ಶಕದ ಆರಂಭದಲ್ಲಿ ಇವರ ತಂಡವು ಯುರೋಪದ ಕಡೆಗೆ ತಂಡ ತಂಡವಾಗಿ ದಂಡೆತ್ತಿ ಹೋಗಿ ತಮ್ಮ ಎದುರಾಳಿಗಳನ್ನು ಸೋಲಿಸಿತು. ಇವರು ಜನ ಸಂಖ್ಯೆಯಲ್ಲಿ ಜಾಸ್ತಿಯಿಲ್ಲದಿದ್ದರೂ ಜಾಪಾನೊಂದನ್ನು ಬಿಟ್ಟು ಇಡೀ ಏಸ್ಯಾ ಮತ್ತು ಯುರೋಪದಲ್ಲಿ ತಮ್ಮ ಕುರುಹುವನ್ನು ತೋರಿಸಿರುವರು.

ಸ್ವೀಡನ್ನಿನ ಪ್ರತಿಯೊಂದು ಒಕ್ಕಲಿಗನ ಮನೆಯಲ್ಲಿಯೂ ಒಂದು ನೂಲುವ ಕೈರಾಟ ಮತ್ತು ಮೂರು ಕಣ್ಣಿನ ಒಲೆ ಇದ್ದೇ ಇರುವದು. ಈ ಜನರು ತಮ್ಮ ಹಳೆ ಸಾಂಪ್ರದಾಯಗಳಿಗೆ ಅಂಟಿ ಕೊಂಡಿರುವರು. ಅವರಿಗೆ ವಿಸ್ತಾರವಾದ ಆಧುನಿಕ ಮನೆಬೇಕೆಂದಿಲ್ಲ. ಒಂದು ಕೋಣೆಯಿದ್ದರೆ ಅಡಿಗೆ ಮಾಡಲಿಕ್ಕೆ, ಊಟ ಮಾಡಲಿಕ್ಕೆ ಮತ್ತು ಮಲಗುವುದಕ್ಕೆ ಎಲ್ಲದಕ್ಕೂ ಸಾಕಾಗುವದು. ಅವರು ಮಲಗುವ ಹಾಸಿಗೆಯಲ್ಲಿ ಕಪಾಟಿನಂತೆ ಅಂತಸ್ತು ಇರುವುದು. ಹಗಲಿನಲ್ಲಿ ಅದಕ್ಕೊಂದು ಪರದೆಯನ್ನು ಅಡ್ಡ ಎಳೆಯುವರು. ರಾತ್ರಿ ಸಮಯ ಮೇಲಿನ ಅಂತಸ್ತಿನಲ್ಲಿ ಮಲಗುವವರು ಸಣ್ಣ ಏಣಿಯಿಂದ ಮೇಲಕ್ಕೇರುವರು. ಬರೀ ಐದು ಎಕ್ರೆ ಫಲವತ್ತಾದ ಕರಿ ಮಣ್ಣಿನ ಜಮೀನನ್ನು ಉತ್ತು ತಮ್ಮ ಜೀವನ ನಡೆಸುವರು. ಅನಾದಿಯಿಂದ ಅಂದರೆ ಸಾವಿರಾರು ವರ್ಷಗಳಿಂದ ತಮ್ಮ ಕುಟುಂಬದ ಹಿಡುವಳಿಯು ಇದಾಗಿದೆ ಯೆಂದು ಹೇಳುವರು. ಅವರ ಜಾನುವಾರು ಸಾಕಣೆಯು ಕ್ರಮವು ಅತ್ಯಾಧುನಿಕವಾಗಿ ಕಾಣುವದು. ಅಲ್ಲಿ ಪ್ರತಿಯೋರ್ವ ಗೋಪಾಲನೂ ಸಹಕಾರಿ ಸಂಘದ ಸದಸ್ಯನಾಗಿರುವನು.

ಸ್ವೀಡನ್ ಜನರ ಮುಖ್ಯ ಉದ್ಯೋಗವು ಮರಗಳನ್ನು ಕಡಿದು ವ್ಯಾಪಾರ ಮಾಡುವದು ಮತ್ತು ಕಬ್ಬಿಣದ ಉತ್ಪಾದನೆಯಾಗಿದೆ. ಅಲ್ಲಿಯ ಮರಗಳ ಪಲ್ಪು ಸಂಯುಕ್ತ ಅಮೇರಿಕಕ್ಕೆ ರಫ್ತು ಆಗುತ್ತದೆ. ಸ್ವೀಡನ್ನಿನ ಅರ್ಧಾಂಶವು ಕಾಡಿನಿಂದ ಮುಚ್ಚಿ ಕೊಂಡಿದೆ. ಮರಗಳನ್ನು ಕಡಿದು ಪುನಃ ಆ ಸ್ಥಳದಲ್ಲಿ ಗಿಡಗಳನ್ನು ನೆಟ್ಟು ಬೆಳೆಸುವರು. ಮರದ ತುಂಡುಗಳನ್ನು ಕಡಿದು ಕಾಡಿನ ಸಮೀಪದಲ್ಲಿ ವಸಂತಕಾಲದಲ್ಲಿ ಬಳಿದು ಬಿಟ್ಟು ಕೆಳಗೆ ಬಂದರಕ್ಕೆ ಸಾಗಿಸುವರು. ವಿದ್ಯುದುತ್ಪಾದನೆಯು ಹೆಚ್ಚಳದಿಂದ ಅವರ ಉದ್ದಿಮೆಗಳೆಲ್ಲಾ ಮೇಲೆ ಬಂದಿವೆ. ಈ ವಿದ್ಯುತ್ ಶಕ್ತಿಯನ್ನು ಕಬ್ಬಿಣ ಕರಗಿಸುವುದಕ್ಕೂ ಉಪಯೋಗಿಸುವರು.

ನೋರ್ವೆ ಜನರಂತೆ ಹಿಮದ ಗಡ್ಡೆಯ ಮೇಲೆ ಹಲಗೆಯ ಸಹಾಯದಿಂದ ಊರುಗೋಲನ್ನು ಹಿಡಿದು ಬಹು ಜಾಣ್ಮೆಯಿಂದ ಹಿಮದ ಗುಡ್ಡೆಯ ಒದಿಯಿಂದ ಕೆಳಗೆ ಜಾರುವರು. ಮರಕಾಲಿನಿಂದ ನಡೆದ ಹಾಗೆ ಹೋಗುವರು ಇದಕ್ಕೆ ಅವರ ರಾಷ್ಟ್ರೀಯ ಆಟ ಶೀಯಿಂಗ್ ಎನ್ನುವರು. ಅವರು ಹಳೇ ಕ್ರಮದ ದುಸ್ತು ಹಾಕುವರು. ನೃತ್ಯಮಾಡ ಜೋಲುವ ಅಲಂಕಾರಯುಕ್ತವಾದ ಅಂಗಿಯ ಬದಿಗಳನ್ನು ದಪ್ಪ ಉಣ್ಣೆಯಿಂದ ಕಟ್ಟಿದ ಸಣ್ಣ ಜಾಕೆಟು ಮತ್ತು ರಿಬ್ಬನ್ ಸುತ್ತಿದ ಟೋಪಿ ಈ ರೀತಿಯ ಉಡುಗೆಯನ್ನು ಕೆಲವು ಸಲ ಪಟ್ಟಣಗಳಲ್ಲಿ ಕಾಣಬಹುದು.

ಈ ರಾಜ್ಯದ ಮುಖ್ಯಪಟ್ಟಣವು ಸ್ಟೋಕ್ ಹೋಮು. ಈ ಹೆಸರು ಇದಕ್ಕೆ ವ್ಯಂಗ್ಯರೂಪವಾಗಿ ಬಂದುದು. ಡೇನರು ಇಲ್ಲಿಗೆ ಧಾಳಿಮಾಡಲು ಬಂದಾಗ ಒಂಭತ್ತನೆಯ ಏರಿಕ್ ಅರಸನು ತನ್ನ ಅಂಗರಕ್ಷಕರನ್ನು ಪ್ರಾರ್ಥನೆಯ ಸಮಯ ಕಡಮೆ ಮಾಡಲು ಒಪ್ಪದಕಾರಣ ಡೇನರು ಧಾಳಿ ಮಾಡಿ ಪಟ್ಟಣವನ್ನು ವಶಮಾಡಿಕೊಂಡರು. ಆದ್ದರಿಂದ ಜನರು ಡೇನರ ಧಾಳಿಯಿಂದ ಪಶುರಕ್ಷಣೆ ಮಾಡುವರೆ ಅವುಗಳನ್ನು ಒಟ್ಟುಕೂಡಿಸಿಯಿಟ್ಟ ಸ್ಥಳವೆಂಬ ಅರ್ಥದಲ್ಲಿ ವ್ಯಂಗ್ಯವಾಗಿ ಹೀಗೆ ಕರೆದರು. ಒಂಭತ್ತನೇ ಏರಿಕ್ಕನು ಡೇನರ ಯುದ್ಧದಲ್ಲಿ ಮಡಿದನು. ಕೆಲವು ಕಾಲದ ನಂತರ ಅವನನ್ನು ಸಂತನೆಂದು ಕರೆದರು.

ನದಿಗಳಲ್ಲಿ ಬಳಿಯಲು ಬಿಟ್ಟ ಮರಗಳನ್ನು ಕೆಳಗೆ ಸಂಗ್ರಹಮಾಡಿ ತರವಾರು ಪ್ರಕಾರ ಬೇರ್ಪಡಿಸಿ ಬಣ್ಣ ಕೊಟ್ಟು ವ್ಯಾಪಾರಿ ಲೀಕನ ನಂಬರುಗಳನ್ನು ಹಾಕಿ ಕೂಡಿಡುವರು.

ಸ್ವೀಡನ್ನಿನ ಸ್ತ್ರೀಯರು ಮತ್ತು ಹುಡುಗಿಯರು ತಮ್ಮ ಕೈಮಗ್ಗದಲ್ಲಿ ಯಾವಾಗಲೂ ಕೆಲಸಮಾಡುವರು. ರಿಬ್ಬನ್ ತರತರದ ಕಸೂತಿ ಕೆಲಸ ಬಣ್ಣದ ಕರವಸ್ತ್ರ ತಯಾರಿಸುವರು. ಗೆರೆಯಿರುವ ಅಂಗಿ ವಸ್ತ್ರವೆಂದರೆ ಅಲ್ಲಿಯ ಜನರಿಗೆ ಬಹಳ ಖುಷಿ.

ಸೆಖೆಕಾಲದ ಉಪಯೋಗಕ್ಕಾಗಿ ಅವರು ಗರಗಸದಿಂದ ಹಿಮಗಡ್ಡೆಯನ್ನು ಅರಿದು ದಾಸ್ತಾನು ಮಾಡುವರು. ಅಲ್ಲಿಯ ಜನರು ಅಜಾನು ಬಾಹುಗಳು. ಬಹು ರೂಪವಂತರು ಬೇರೆವರ್ಣದವರ ಬೆರಕೆಯಿಲ್ಲದ ಶುದ್ಧ ಜನಾಂಗವು ಮಾತ್ರವಲ್ಲ ಇತರ ದೇಶದ ಜನರಿಗಿಂತ ಅವರ ಆಯುಮಾನವು ಹೆಚ್ಚಿಗೆಯಾಗಿರುವದು. ಈ ದೇಶದ ಜನಸಂಖ್ಯೆ ನ್ಯೂಯೋರ್ಕ್ ಪಟ್ಟಣ ಒಂದರಲ್ಲಿದ್ದಷ್ಟು ಇಲ್ಲ. ಆದರೆ ಇಲ್ಲಿರುವ ಜನರಲ್ಲಿ ಒಟ್ಟು ಸಂಖ್ಯೆಯ ಕಾಲಂಶದಷ್ಟು ಅಮೇರಿಕದಲ್ಲಿ ವಾಸಿಸಿರುವರು. ಈ ಜನರು ದಿವಸಕ್ಕೆ ಐದು ಸಲ ಊಟ ಮಾಡುವರು.

ಲ್ಯಾಪ್ ಮಕ್ಕಳಿಗೆ ಕಾಯಂ ವಸತಿಯಿಲ್ಲ. ಅವರ ತಂದೆ ತಾಯಿಗಳು ಪಶುಗಳಿಗೆ ಹಸುರಾದ ಹುಲ್ಲುಮೇವು ಸ್ಥಳವನ್ನು ಮತ್ತು ಬೇಟೆಯಾಡಲು ಅನುಕೂಲವಾದ ಸ್ಥಳವನ್ನು ಹುಡುಕುವ ಕಾರಣ ಸಂಚಾರ ಜೀವಿಗಳಾಗಿ ಒಂದೇ ಸ್ಥಳದಲ್ಲಿ ಕಾಯಂ ನಿಲ್ಲುವುದಿಲ್ಲ. ನೋರ್ವೆಲ್ಯಾಪ್ ಜನರಂತೆ ಹುಲ್ಲುಮಾಡಿನ ಮನೆಯಲ್ಲಿ ಕೆಲವು ಸಮಯ ಉಳಕೊಳ್ಳುವರು. ಈ ಮನೆಯ ಮಾಡುಗಳ ಮೇಲೆ ಕರಡಗಳು ಹುಟ್ಟುವವು. ಅವರ ದೈವಾನುಕೂಲತೆಯ ಅಳತೆಯು ಹಣಕಾಸಿನಲ್ಲಿಲ್ಲ. ಯಾವನ ಹತ್ರ ರೈನ್‌ಡೀಯರುಗಳು ಸಾವಿರಗಟ್ಲೆಯಿರುವವೋ ಅವನು ಶ್ರೀಮಂತನೆನ್ನಿಸಿ ಕೊಳ್ಳುವನು. ಲ್ಯಾಪ್ ಹುಡುಗಿಯರು ತಲೆಗೆ ಹುಡ್ ಧರಿಸುವರು. ಹುಡುಗರು ಉಣ್ಣೆಯ ಬಣ್ಣ ಬಣ್ಣದ ಗೊಂಡೆಗಳಿರುವ ಟೋಪಿಹಾಕುವರು. ಪಶುಗಳ ಚರ್ಮದಿಂದ ವಸ್ತ್ರತೊಡುವರು. ಅವುಗಳ ಮಾಂಸ ಮತ್ತು ಹಾಲನ್ನು ಆಹಾರವಾಗಿಯೂ ಚರ್ಮದಿಂದ ಮಕ್ಕಳ ತೊಟ್ಟಿಲು ಮಾಡುವರು. ತಾಯಿಗೆ ಕೆಲಸವಿದ್ದಾಗ ಮನೆಯ ಮಾಡಿಗೆ ಕಟ್ಟಿ ತೂಗಾಡಿಸುವಳು ತಾಯಿಯು ಮಗುವನ್ನು ಹೊರಗೆ ತೆಕೊಂಡು ಹೋಗುವಾಗ ಈ ತೊಟ್ಟಿಲನ್ನು ಮಗುವಿನ ಸಮೇತ ತನ್ನ ಒಂದು ಬದಿಯಲ್ಲಿ ಸಿಕ್ಕಿಸಿಕೊಂಡು ಮಗುವು ಬೀಳದ ಹಾಗೆ ತೊಟಿಲನ್ನು ಹಗ್ಗದಿಂದ ಸುತ್ತಿಕೊಂಡು ಹೋಗುವಳು

ವಿದ್ಯುತ್ ಶಾಖ ನೆಲದಡಿ ಕೊಟ್ಟು ಋತುವಲ್ಲದ ತರಕಾರಿ ಬೆಳೆಸುವರು. ೨೩ ವರುಷದ ಸ್ತ್ರೀ ಪುರುಷರಿಗೆ ಮತದ ಹಕ್ಕಿದೆ ಘಂಟೆಪ್ರಕಾರ ತನ್ನಷ್ಟಕ್ಕೆ ಕಾರ್ಯವೆಸಗುವ ಇಲ್ಲಿನ ದೀಪಸ್ತಂಭಗಳನ್ನು ೩ ತಿಂಗಳಿಗೊಂದಾವರ್ತಿ ನೋಡಿ ಪರೀಕ್ಷಿಸಿದರೆ ಸಾಕು. ಸೂಕ್ಷ್ಮವಾದ ವಿದ್ಯುತ್ ಯಂತ್ರೋಪಕರಣಗಳಿಗೆ ಸ್ವೀಡನ್ ಹೆಸರುವಾಸಿಯಾಗಿದೆ. ಎಲನ್ ಕೀಯೆಂಬವರು ಮದುವೆಯು ಪ್ರಣಯಕ್ಕಾಗಿ ಮಾತ್ರ ಎಂದು ಪ್ರಚಾರಮಾಡಿದ್ದರಿಂದ ಇಲ್ಲಿ ವಿವಾಹ ವಿಚ್ಛೇದವು ಬಹು ಸುಲಭವಾಯಿತು. ೧೯೫೫ರಲ್ಲಿ ಪಾನನಿರೋಧ ಜ್ಯಾರಿಗೆ ತಂದು ಕಂಪೆನಿಗಳಿಗೆ ಶರಾಬು ತಯಾರಿಸುವರೆ ಲೈಸನ್ಸು ಕೊಟ್ಟು ಬ್ರೇಟ್ ಪದ್ಧತಿಪ್ರಕಾರ ಅವರವರ ಅನುಕೂಲತೆ ಅಗತ್ಯತೆ ನೋಡಿ ಅರ್ಜಿಯನ್ನು ಶಿಫಾರಸು ಮಾಡುವರು.

- ಶ್ರೀ ಸಿ. ಎಚ್. ಶೆಟ್ಟಿ.

ಪ್ರಕಟಣೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ— ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲ್ಕುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು ಇದೇ 1959ನೇ ಇಸವಿ ನವಂಬರ ತಿಂಗಳ ತಾರೀಕು 15ರಿಂದ ತಾರೀಕು 30ರ ವರೇಗೆ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ 25 ನಯೆ ಪೈಸೆಗಳಂತೆ ಫೀಸು ವಸೂಲು ಮಾಡಲಾದೀತು. ಒಂದು ತಿಂಗಳೊಳಗಿನ ಕರುಗಳನ್ನು ಸದ್ರಿ ಫೀಸಿನಿಂದ ವಿರಹಿತಪಡಿಸೋಣಾಗಿಯೇ ಯದೆ, ಸಂದರ್ಭಾನುಸಾರ, ಅವಶ್ಯ ಬಿದ್ದಲ್ಲಿ ಸದ್ರಿ ಫೀಸು ಏರಿಸಲೂ ಬಹುದು, ಯಾ ಇನ್ನಿತರ ಫೀಸನ್ನು ಜೋಡಿಸಲೂ ಬಹುದು. ಪರಂತು ಅಸಿಸ್ಟೆಂಟ್ ಕಮಿಶನರರು ಅವಶ್ಯವೆಂದು ತೋರುವ ಯಾವ ಜಾನುವಾರುಗಳನ್ನಾದರೂ ಸದ್ರಿ ಫೀಸುಗಳಿಂದ ವಿರಹಿತ ಪಡಿಸಬಹುದು.

ಸಹಿ: **ಯಸ್. ಯಂ. ಪಿ. ನಾಯಕ್,**
ಅಸಿಸ್ಟೆಂಟ್ ಕಮಿಶನರ್.

ಪುತ್ತೂರು ಅಸಿಸ್ಟೆಂಟ್ ಕಮಿಶನರರ ಕಛೇರಿ, ದಿನಾಂಕ, 3-9-1959.

ಪ್ರಣಯ ಮೋದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

S. C 361/1959

ಕೃಷ್ಣಾಚಾರ್ಯ ... ವಾದಿ

ಮತ್ತು

1. ನೀಲು ಪೂಜಾರ್ತಿ, ಅಬ್ಬಗೆ ಪೂಜಾರ್ತಿ ಮಗಳು, 2. ಕರಿಯ ಪೂಜಾರಿ, ತುಕ್ರ ಪೂಜಾರಿ ಅಳಿಯ—ಶಿವಳ್ಳಿ ಗ್ರಾಮದ ಪಣಿಯಾಡಿ ... ಪ್ರತಿವಾದಿರು

ವಾದಿಗೆ ಪ್ರತಿವಾದಿರು ತಾರೀಕು 24—5—1953ರಲ್ಲಿ ಬರಕೊಟ್ಟ ಚಾಲಗೇಣಿ ಯೆದ್ರುನುಡಿ ಪ್ರಕಾರ ವಿಳಂಬಿ ಸಂವತ್ಸರಕ್ಕೆ ಬರತಕ್ಕ ಗೇಣಿ ವ ಬಡ್ಡಿ ಕೂಡಾ ರೂಪಾಯಿ 67—6—0ಕ್ಕೆ ವಾದಿರು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 29—9—1959ಕ್ಕೆ ಪ್ರತಿವಾದಿರಿಗೆ ನೋಟೀಸ್ ಮಾಡಿಸುವ ಬಗ್ಗೆ ಇಟ್ಟಿದೆ. ಅವರಿಗೆ ಆಕ್ಷೇಪಯಿರುವುದಾದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

K. Laxminarayana Aithal,
Vakil for Plaintiff.

ಉಡುಪಿ, ತಾರೀಕು 21-9-1959.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಪರರಿಗೆ ಕಲ್ಯಾಣವಾಗ ಬೇಕೆಂದು ದುಡಿಯುವವನು ಅತಂಕಗಳನ್ನೆದುರಿಸ ಬೇಕಾದರೂ ಅಯಶಸ್ವಿಯಾಗಲಾರನು. ಆದರೆ, ಪರ ಕಲ್ಯಾಣದ ಹೆಸರಿನಲ್ಲಿ ಸ್ವಾರ್ಥಸಾಧಕನಾದವನನ್ನು ಸದಾ ಅನರ್ಥ ಪರಂಪರೆಗಳು ಕಾಡುವುವು.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೪-೯-'೫೯	೪

ಅಪೂರ್ವ ಸಂಗಮ

ಸಾಮ್ಯವಾದಿ ಸಾಮ್ರಾಜ್ಯ ರಶ್ಯದ ಪ್ರಧಾನಿ ಶ್ರೀ ನಿಕಿಟ ಕ್ರುಶ್ಚೇವರು ಬಂಡವಳಶಾಹಿ ಎಂದು ಕರೆಯಲ್ಪಡುವ ಅಮೆರಿಕೆಯ ಸಂದರ್ಶನದ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದು ಈಗಲ್ಲಿ ವಿಹರಿಸುತಿದ್ದಾರೆ. ಉತ್ತರ ದಕ್ಷಿಣ ಸಾಗರಗಳು ಒಂದನ್ನೊಂದು ಎದುರ್ಗೊಂಡಂತೆ ಪೂರ್ವ ಪಶ್ಚಿಮ ದೇಶಗಳ ಈ ಅಧಿನಾಯಕರು ಪರಸ್ಪರ ಭೇಟಿಯಾಗಲಿದ್ದು ಇಂತಹ ಸುದಿನವು ವಿಶ್ವದ ಇತಿಹಾಸದಲ್ಲಿ ಅತಿ ಪ್ರಧಾನವಾದುದೆನ್ನಬಹುದು. ಈ ಮಹಾನಾಯಕರ ಭೇಟಿಯಿಂದ ವಿಶ್ವದ ಹಲವಾರು ಸಮಸ್ಯೆಗಳಿಗೆ ಪರಿಹಾರ ಮಾರ್ಗವು ಸುಲಭವಾಗುವುದೆಂದು ನಿರೀಕ್ಷಿಸಲಾಗಿದೆ.

ದ್ವಿತೀಯ ಲೋಕ ಯುದ್ಧಾವಧಿಯಲ್ಲಿ ಮಿತ್ರ ರಾಷ್ಟ್ರಗಳ ಕೂಟದಲ್ಲಿ ರಶ್ಯವು ಅಮೆರಿಕೆ, ಬ್ರಿಟನ್ ಹಾಗೂ ಫ್ರಾನ್ಸ್‌ಗಳೊಡನೆ ಸೇರಿಕೊಂಡು ಜಯಶಾಲಿಯೆಂಬ ಕೀರ್ತಿಗೆ ಪಾತ್ರವಾಗಿದೆ. ಆಗ ಮಿತ್ರ ರಾಷ್ಟ್ರಗಳೊಡನೆ ಕೂಡಿದ್ದುದರಿಂದಲೇ ಯುದ್ಧಾನಂತರ ಸ್ಥಾಪಿತವಾದ ಸಂಯುಕ್ತ ರಾಷ್ಟ್ರ ಸಂಘದಲ್ಲಿನ ಚತುರ್ ಮಹಾರಾಷ್ಟ್ರಗಳಲ್ಲಿ ಇದೂ ಒಂದಾಯಿತು. ಯುದ್ಧಾನಂತರದ ಜಗತ್ತಿನಲ್ಲಿ ಸರ್ವತೋಮುಖ ಅಭಿವೃದ್ಧ ರಾಷ್ಟ್ರಗಳಲ್ಲಿ ರಶ್ಯ ಮತ್ತು ಅಮೆರಿಕೆಗಳು ಅಗ್ರಗಣ್ಯ ಸ್ಥಾನವನ್ನು ಗಳಿಸಿವೆ ಎಂಬುದು ಸುವಿದಿತ. ಪರಸ್ಪರ ಸ್ಪರ್ಧಾ ಮನೋವೃತ್ತಿ ಹಾಗೂ ಮೂಲಭೂತ ಧ್ಯೇಯಧೋರಣೆಗಳ ಪರಿಣಾಮವಾಗಿ ಈ ಎರಡು ರಾಷ್ಟ್ರಗಳ ಸಂಬಂಧ ದಿನೇದಿನೇ ಶಿಥಿಲವಾಗುತ್ತ ಬಂದು ಉಭಯತರ ನಡುವೆ ಭಿನ್ನಾಭಿಪ್ರಾಯವು ತಲೆದೋರಿ ಅದು ಹೆಮ್ಮರವಾಗಿ ಈಗ ಅಡ್ಡ ನಿಂತಿದೆ. ಆದರೆ, ನಿಕಿಟಾ ಕ್ರುಶ್ಚೇವರ ಅಮೆರಿಕೆಯ ಸಂಚಾರದಿಂದಾಗಿ ವಾತಾವರಣವು ತಿಳಿಗೊಳ್ಳುವ ಅವಕಾಶಗಳು ಉದ್ಭವಿಸಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಅಮೆರಿಕನರು ಕ್ರುಶ್ಚೇವರನ್ನು ತಿಳಿದುಕೊಂಡಿರುವ ವಿಧಾನದಲ್ಲಿ ಅಂತರವಿದೆ. ಇದರಿಂದಾಗಿಯೆ ಕ್ರುಶ್ಚೇವರು ಅಲ್ಲಿ ದ್ವಿಮುಖ ಮುಖದಿಂದಲೇ ಸ್ವಾಗತಿಸಲ್ಪಟ್ಟರು. ಕ್ರುಶ್ಚೇವರನ್ನು ಸ್ವಾಗತಿಸಲು ಜನಸ್ತೋಮ ನೆರೆದಿದ್ದಂತೆಯೇ ಅವರ ವಿರುದ್ಧ ಮತ ಪ್ರದರ್ಶನವೂ ನಡೆದಿತ್ತೆಂಬುದನ್ನು ಅವಶ್ಯ ಗಮನಿಸ ಬೇಕು.

ಚಂದ್ರಲೋಕವನ್ನೂ ಮುಟ್ಟುವಂತೆ ನಡೆಸಿದ ಪ್ರಯತ್ನದಲ್ಲಿ ಅಂಶತಃ ಜಯಶೀಲವಾದ ರಶ್ಯದ ಪ್ರಧಾನಿಯವರು ಅಮೆರಿಕಯಲ್ಲಿ ಹಲವಾರು ಭಾಷಣಗಳನ್ನು ಮಾಡಿದರು. ಇವೆಲ್ಲವುಗಳಲ್ಲಿಯೂ ಅಮೆರಿಕೆಯ ಬಂಡವಾಳಶಾಹಿಯನ್ನು ಅಪ್ರತ್ಯಕ್ಷವಾಗಿ ಖಂಡಿಸಿ, ತಮ್ಮ ಸಾಮ್ಯವಾದವನ್ನು ಎತ್ತಿಕೊಂಡ ಉದಾಹರಣೆಗಳಿವೆ. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಮಾಡಿದ ಭಾಷಣ ಹಾಗೂ ಅದರ ಉದ್ದೇಶಗಳು ಅತಿ ಪ್ರಧಾನವಾಗಿದೆ. ಅಮೆರಿಕೆಯ ವರ್ತಮಾನ ಪತ್ರಿಕೆಗಳಿಗೆ, ಅಲ್ಲಿನ ಆಕಾಶವಾಣಿ ಪ್ರಸಾರಕ್ಕೆ ರಶ್ಯದ ಮೇಲೆ ಆರೋಪಗಳನ್ನು ಅಮೇರಿಕೆಯು ಹೊರಿಸುವುದಾದರೂ ಆ ಬಗ್ಗೆ ಏನೆಂದೂ ಉತ್ತರಿಸಿದ ಶ್ರೀ ಕ್ರುಶ್ಚೇವರು ನಿಶ್ಯಸ್ತ್ರೀಕರಣದ ಬಗ್ಗೆ ಮಾತ್ರ ಉದ್ಬೋಧಕವಾದ ಮತ್ತು ಅತಿ ಮಹತ್ವದ ಸೂಚನೆಗಳನ್ನು ಮುಂದಿಟ್ಟರು. ಜಗತ್ತಿನ ಎಲ್ಲ ರಾಷ್ಟ್ರಗಳೂ ಮುಂದಿನ ನಾಲ್ಕು ವರ್ಷಗಳಲ್ಲಿ ಸಂಪೂರ್ಣ ನಿಶ್ಯಸ್ತ್ರೀಕರಣವನ್ನು ಸಾಧಿಸಬೇಕೆಂದೂ, ನೆಲ, ಜಲ ಮತ್ತು ವಾಯುಪಡೆಗಳೆಲ್ಲವನ್ನೂ ದೂರಮಾಡಿಸಿ, ಸೈನಿಕ ಶಿಕ್ಷಣಾಲಯಗಳನ್ನೂ ನಿಲ್ಲಿಸಿ, ಜಗತ್ತಿನ ಎಲ್ಲ ರಾಷ್ಟ್ರಗಳೂ ಬಾಹ್ಯ ಆಕ್ರಮಣದ ಬಗ್ಗೆ ಅಂಜುಗುಳಿಯಾಗುವುದನ್ನು ತಡೆಗಟ್ಟಬೇಕೆಂದು ನುಖಂತಾಗಿ ಅವರು ಸಲಹೆಯನ್ನು ಮುಂದಿಟ್ಟರು. ಸೈನಿಕ ಖಾತೆಗೆ ವೆಚ್ಚವಾಗುವ ಹಣವನ್ನು ರಾಷ್ಟ್ರೀಯ ಅಭಿವೃದ್ಧಿಗೆ ಬಳಸಿಕೊಂಡು, ಸೈನ್ಯ ಶಾಖೆಯ ಜನರ ಸೇವೆಯನ್ನು ರಾಷ್ಟ್ರೀಯ ಕಾರ್ಯಗಳಿಗೆ ಉಪಯೋಗಿಸಿ, ಸ್ವಯಂ ಅಭಿವೃದ್ಧಿಯನ್ನು ಸಾಧಿಸುವುದರಿಂದ ಎಲ್ಲ ರಾಷ್ಟ್ರಗಳೂ ಸಂಪನ್ನವಾಗುವುದು ಸಾಧ್ಯವೆಂದವರು ಹೇಳಿದರು. ಶ್ರೀಮಾನ್ ಕ್ರುಶ್ಚೇವರ ಈ ಉದ್ಗಾರ ಹಾಗೂ ಸಲಹೆಗಳು ತೋರಿಕೆಯಮಟ್ಟಿಗೆ ಅವ್ಯವಹಾರ್ಯವೆಂಬುದನ್ನು ಒಪ್ಪಿಕೊಳ್ಳಬಹುದಾದರೂ ವ್ಯವಹರಿಸುವುದೂ ಸಾಧ್ಯವಿದೆ. ವಿಶ್ವದ ಭಿನ್ನ ಬೇರೆಬೇರೆ ರಾಷ್ಟ್ರಗಳೊಡನೆ ಪರಸ್ಪರ ಬಿನ್ನಾಭಿಪ್ರಾಯ ಮತ್ತು ಅಪನಂಬಿಕೆಗಳು ಹೆಚ್ಚಿರುವ ಕಾರಣದಿಂದಲೇ ಸೈನಿಕ ಪಡೆಯು ದಿನೇದಿನೇ ಬಲಿಯುತ್ತ ಬಂದಿದೆ. ರಾಷ್ಟ್ರದ ಆಂತರಿಕ ಭದ್ರತೆಯೊಡನೆ ಬಹಿರ್ಪ್ರದೇಶದಿಂದ ಬರಬಹುದಾದ ಆಕ್ರಮಣಗಾರರನ್ನೂ ಸದೆಬಡಿದು ರಾಷ್ಟ್ರದ ಸಾರ್ವಭೌಮತೆಯನ್ನು ರಕ್ಷಿಸುವುದೂ ಅಗತ್ಯವೇ. ಆದರೆ ಇಂತಹ ಪ್ರಚ್ಛನ್ನ ಯುದ್ಧದ ಧೂಮರಾಶಿಯಿಂದ ವಿಶ್ವಶಾಂತಿ ವೃಕ್ಷವು ಫಲಕೊಡಲು ಬೇಕಾಗುವ ಆವಶ್ಯಕ ಸನ್ನಿವೇಶಗಳು ಎಂದಿಗೂ ಒದಗಿ ಬರಲಾರವೆಂಬುದನ್ನು ಗಮನಿಸಬೇಕು. ಇಂದಿನ ಜಗತ್ತಿನಲ್ಲಿ ಅಮೆರಿಕೆಗಾಗಲೀ ರಶ್ಯಕ್ಕಾಗಲೀ ಯಾವುದೇ ವಿಧದ ಯುದ್ಧವು ಅಗತ್ಯವಿಲ್ಲ. ಅಥವಾ ಯಾವ ರಾಷ್ಟ್ರವೇ ಆಗಲಿ, ಸಮರವನ್ನು ಬಯಸಿ ಸಾಮರಸ್ಯವನ್ನು ಕೆಡಿಸುವಷ್ಟು ದಾರ್ಷ್ಟ್ಯವನ್ನು ಪ್ರದರ್ಶಿಸುವುದಿಲ್ಲ. ಶಾಂತಿಬೇಕೆಂದು ಕಾತರರಾಗಿರುವ ಇಂದಿನ ವಿಶ್ವದ ಜನತೆ ಈ ನಿಶ್ಯಸ್ತ್ರೀಕರಣದ ಯೋಜನೆಯನ್ನು ವ್ಯವಹೃತಗೊಳಿಸುವತ್ತ ಆಸಕ್ತಿ ತೋರಿಸುವುದು ಸಹಜ.

ಹೀಗೆಂದ ಮಾತ್ರಕ್ಕೆ ತತ್ಕ್ಷಣವೇ ನಿಶ್ಯಸ್ತ್ರೀಕರಣವಾಗಬೇಕೆಂದು ಹೇಳುವುದು ಅಸಾಧ್ಯ. ಶ್ರೀ ಕ್ರುಶ್ಚೇವರು ಈ ಸೂಚನೆಯನ್ನು ಯಾವ ದೃಷ್ಟಿಯಲ್ಲಿಟ್ಟುಕೊಂಡು ಮುಂದಿಟ್ಟರೆಂದು ಈಗಾಗಲೇ ಊಹಿಸುವುದು ಕಷ್ಟ. ಅಣು ಅಸ್ತ್ರಗಳ ಪ್ರಯೋಗದ ಸಂಬಂಧದಲ್ಲಿಯೂ ಅವರು ಈ ಮೊದಲೇ ಅಂತಹ ಸೂಚನೆಯಿತ್ತಿದ್ದಾರೆ. ಆದರೂ ವಿಶ್ವಕ್ಷೇಮ ಶಮನಕ್ಕಾಗಿ ನಿಶ್ಯಸ್ತ್ರೀಕರಣ ಒಪ್ಪಂದವನ್ನು ವಿಶ್ವದ ಎಲ್ಲ ರಾಷ್ಟ್ರಗಳೂ ಮಾಡಿಕೊಂಡು ತಂತಮ್ಮ ರಾಷ್ಟ್ರಗಳ ಆಂತರಿಕ ಸಂಪತ್ತನ್ನು ಹೆಚ್ಚಿಸಿ ಸುಖಶಾಂತಿಗಳನ್ನು ಪಡೆಯುವಂತೆ ಮಾಡುವ ಕಾಲ ಈಗ ಸನ್ನಿಹಿತವಾಗಿದೆ. ಮಾನವ ಪ್ರಾಣಿಗಳನ್ನು ಕೊಲ್ಲುವುದಕ್ಕಾಗಿ ಈ ಪ್ರಪಂಚದಲ್ಲಿ ಜನ್ಮವೆತ್ತದೆ ಎಲ್ಲರೊಡನೆಯೂ ಸ್ನೇಹ ಮತ್ತು ಪ್ರೀತಿಯಿಂದ ವ್ಯವಹರಿಸುವುದಕ್ಕಾಗಿ ಅವತಾರವೆತ್ತಿದ್ದಾನೆ. ಅತ್ಯಮೂಲ್ಯವಾದ ಈ ರತ್ನಗಳನ್ನು ಕಲುಷಿತಗೊಳಿಸಿ ಪರಸ್ಪರ ಹೋರಾಡುವುದರಿಂದ ಶಾಂತಿಯು ಸರ್ವಥಾ ಲಭ್ಯವಾಗಲಾರದು. ಆದುದರಿಂದ ಶ್ರೀಯುತ ಕ್ರುಶ್ಚೇವರ ಈ ಸಲಹೆಯನ್ನು ಸಹಾನುಭೂತಿ ಪರವಾಗಿ ವಿವೇಚಿಸಿ, ಎಲ್ಲರೂ ಒಮ್ಮತದಿಂದ ಕಾರ್ಯರೂಪಕ್ಕೆ ತರುವುದಾದರೆ, ಪ್ರಪಂಚವೂ ಸ್ವರ್ಗಲೋಕವಾದೀತು.

ಏಕಸ್ವರದ ಘಂಟೆ

ಹಿಂದುಳಿದ ವರ್ಗಗಳನ್ನು ಮುಂದೆ ತರುವ ದೃಷ್ಟಿಯಿಂದ ರಾಜ್ಯದಲ್ಲಿನ ಸುಮಾರು ಸೇಕಡಾ ೯೫ರಷ್ಟು ಜನರನ್ನು ಹಿಂದುಳಿದವರ ಯಾದಿಯಲ್ಲಿ ಸೇರಿಸಿ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಸ್ಥಾನಗಳಲ್ಲಿ ಹಂಚುವಂತಹ ಮೈಸೂರು ಸರಕಾರ ಈ ವರ್ಷದ ಎರಡೂ ಕಮ್ಯುನಲ ಜೀವೋಗಳು ಸಂವಿಧಾನದನ್ವಯ ಅಕ್ರಮವಾದುವು ಎಂಬ ತೀರ್ಮಾನವನ್ನು ಮೈಸೂರು ಉಚ್ಚ ನ್ಯಾಯಾಲಯವು ಕೊಟ್ಟಿದೆ. ಇದೇ ಮಾದರಿಯ ಒಂದು ತೀರ್ಪನ್ನು ಕಳೆದ ವರ್ಷವೂ ಇದೇ ನ್ಯಾಯಾಲಯವಿತ್ತಿದ್ದರೂ ಈ ವರ್ಷ, ಸರಕಾರವು ಪುನಃ ಹಿಂದಿನದಕ್ಕಿಂತಲೂ ತೀವ್ರವಾದ ಹಿಂದುಳಿದವರ ಯಾದಿಯನ್ನು ಪ್ರಕಟಿಸುವ ಪರಿಶ್ರಮ ವಹಿಸಿದ್ದು ಈಗ ಅದೂ ಅಕ್ರಮವೆಂದು ಸಿಂಧುವಾಗಿದೆ. ನ್ಯಾಯಾಲಯವು ಸಕಾರಣವಾಗಿ ಈ ಜಾತಿಯಾಜ್ಞೆಯನ್ನು ಅಕ್ರಮವೆಂದು ಹೇಳಿ, ರಾಜ್ಯದ ಬಹುದೊಡ್ಡ ವರ್ಗವು ಹಿಂದುಳಿದುದೆಂದು ಹೇಳುವುದರಿಂದ ನಿಜವಾಗಿ ಹಿಂದುಳಿದ ವರ್ಗಗಳ ಹಿತರಕ್ಷಣೆಯಾಗುವುದಿಲ್ಲವೆಂದೂ ಅಲ್ಲದೇ ಮುಂದುವರಿದವರೆಂದು ಪರಿಗಣಿತರಾದ ಅಲ್ಪ ಸಂಖ್ಯಾಕರಿಗೆ ದ್ರೋಹ ಬಗೆದಂತಾಗುವುದೆಂದೂ ಅದು ತಿಳಿಸಿದೆ. ನಿಜವಾದ ಹಿಂದುಳಿದವರಿಗೆ ಅಭ್ಯಾಸ ನಡೆಸುವ ಸೌಲಭ್ಯವನ್ನು ಒದಗಿಸಬಾರದೆಂದು ಯಾವನೂ ಹೇಳುವುದಿಲ್ಲ; ಆದರೆ, ಹಿಂದುಳಿದವರ ಯಾದಿಯನ್ನು ತಯಾರಿಸುವಾಗ ಅತೀವ ಎಚ್ಚರಿಕೆಯನ್ನು ವಹಿಸ ಬೇಕೆಂದೂ ಸರಕಾರದ ಕೆಲವೊಂದು 'ಶಕ್ತಿ'ಗಳ ಸ್ವಾರ್ಥಕ್ಕಾಗಿ ಅಲ್ಲಸಲ್ಲದ ಕಾನೂನುಗಳನ್ನು ಹೊರಡಿಸಬಾರದೆಂದೂ ಇಲ್ಲಿ ಆಡಲೇ ಬೇಕಾಗಿದೆ. ಈಗ, ಈ ಎರಡು ವರ್ಷಗಳಲ್ಲಿ ತನ್ನ ಶ್ರೀಮುಖಕ್ಕೆ ಮಂಗಳಾರತಿ ಎತ್ತಿಸಿಕೊಂಡ ಮೈಸೂರು ಸರಕಾರವು ಮುಂದಿನ ವರ್ಷವೂ ಇದೇ ಮಾದರಿಯ ಕಮ್ಯುನಲ್ ಜೀವೋವನ್ನು ತರುವುದಿಲ್ಲವೆಂದು ನಂಬುವುದು ಕಷ್ಟ. ಏಕೆಂದರೆ, ಬುದ್ಧಿವಂತ ಸರಕಾರವಾದರೆ, ಮೊದಲನೆಯ ಸಲವೇ ತಿಳಿದುಕೊಂಡು ಕಾರ್ಯಪ್ರವೃತ್ತವಾಗಬೇಕಾಗಿತ್ತು; ಇಲ್ಲ, ತನ್ನದು ತಪ್ಪು ಎಂದು ನ್ಯಾಯಾಲಯ ತಿಳಿಸಿ ಹೇಳಿದ ಮೇಲಾದರೂ ತಿಳಿದುಕೊಂಡು ಪುನಃ ಅದಕ್ಕಿಂತಲೂ ದೊಡ್ಡ ತಪ್ಪನ್ನು ಮಾಡಲು ಹೋಗಬಾರದಿತ್ತು. ಆದರೆ, ನಮ್ಮ 'ಮುಂದುವರಿದ ಮೈಸೂರಿನ' ಸರಕಾರ ಬುದ್ಧಿಮತ್ತೆಯಲ್ಲಿಯೂ ನೀತಿಯಲ್ಲಿಯೂ "ಬಹಳ ಹಿಂದುಳಿದಿರುವ ಸರಕಾರ" ಆದುದರಿಂದಲೇ ಇಂತಹ ಹಿಂದುಳಿದವರ ಯಾದಿಯನ್ನು ತಯಾರಿಸಿತು. ಎರಡು ಬಾರಿ ಉಚ್ಚ ನ್ಯಾಯಾಲಯವು ಎಚ್ಚರಿಸಿದ ಮೇಲಾದರೂ ಮೂರನೆಯ ಪೆಟ್ಟು ಬೀಳುವುದಕ್ಕೆ ಮೊದಲೇ ಈ "ಮೈಸನೂರ" ಸರಕಾರ ಎಚ್ಚರವಾಗುವಂತಾದರೆ, ಸ್ವಲ್ಪವಾದರೂ ಸಮಾಧಾನವೆನಿಸೀತು.

ಸಂಕ್ಷಿಪ್ತ ಸುದ್ದಿಗಳು

• **ಪಂಜಾಬದಲ್ಲಿ ವಿನೋಬಾ**

ಕಳೆದ ನಾಲ್ಕು ತಿಂಗಳುಗಳಲ್ಲಿ ಕಾಶ್ಮೀರ ರಾಜ್ಯದಲ್ಲಿ ಪಾದಯಾತ್ರೆಯನ್ನು ಬೆಳಸಿಕೊಂಡಿದ್ದ ಭೂದಾನ ನೇತಾರ ಆಚಾರ್ಯ ವಿನೋಬಾ ಭಾವೆಯವರು ಅಲ್ಲಿಂದ ಪಂಜಾಬ ರಾಜ್ಯದಲ್ಲಿ—ಸಂಚಾರವನ್ನು ಪ್ರಾರಂಭಿಸಿದ್ದಾರೆ. ಆಚಾರ್ಯ ಭಾವೆಯವರು ಕಾಶ್ಮೀರದಲ್ಲಿ ೧೭ ಸಾವಿರ ಕನಾಲಗಳಷ್ಟು ಭೂಮಿಯನ್ನು ದಾನವಾಗಿ ಪಡೆದಿದ್ದಾರೆ. "ಜಗತ್ತಿನಲ್ಲಿಂದು ರಾಜಕಾರಣಕ್ಕೆ ಕೊಡಲಾಗುತ್ತಿರುವ ಮಹತ್ವವು ಇಲ್ಲದಂತಾಗಬೇಕು; ವಿಜ್ಞಾನದ ತೀವ್ರ ಪ್ರಗತಿಯು ಸಾಧನೆಯು ಇಂದಿನ ಯುಗದಲ್ಲಿ ರಾಜಕೀಯದ ಸ್ಥಾನವು ಕುಸ್ಪರಿಸಲೇಬೇಕು; ಪ್ರೇಮ ಮತ್ತು ವಿಶ್ವಬಂಧುತ್ವ ಇವೇ ನಮ್ಮ ಪ್ರಥಮ ಸೂತ್ರ

ನವಯುಗದ

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ಟ್ ತಿಂಗಳಾಂತ್ಯಕ್ಕೆ 'ನವಯುಗ'ದ **38**ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ **39**ನೇ ವರ್ಷಾರಂಭವಾಗಿರುವುದಷ್ಟೆ! ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ವಿ. ಪಿ. ಪಿ. ಮಾಡಿದರೆ 75 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಚಂದಾಹಣವನ್ನು ಮುಂದಾಗಿ ಕಳಿಸಿಕೊಡಬೇಕಾಗಿ ವಿನಂತಿಸುತ್ತೇವೆ.

ಮೆನೇಜರ್.

ಅಲ್ಲಲ್ಲಿಯ ಸುದ್ದಿ ಸಾರ

ಶಂಕುಸ್ಥಾಪನೆ— ಪಲಿಮಾರು ಬೋರ್ಡ್ ಹೈಸ್ಕೂಲಿನ ಹೊಸಕಟ್ಟಡದ ಶಂಕುಸ್ಥಾಪನೆಯು ಶ್ರೀ ಪಲಿಮಾರು ಮಠದ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ತಾ 18ರಂದು ಅದಮಾರು ಮಠದ ಶ್ರೀಪಾದಂಗಳವರಿಂದ ನೆರವೇರಿಸಲ್ಪಟ್ಟಿತು ಶ್ರೀ ಎಸ್. ಡಿ. ಪೆಜತ್ತಾಯರವರು ಸ್ವಾಗತಿಸಿದರು ಶ್ರೀ ಎಫ್. ಎಕ್ಸ್ ಡಿ. ಪಿಂಟೊ, ಎಂ. ಎಲ್. ಎ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರತ್ನಾಬಾಯಿ ಮೊದಲಾದವರು ಮಾತನಾಡಿದರು.

ವಾಕ್ಯಗಳಾಗಬೇಕು" ಎಂದು ಅವರು ಜನರಿಗೆ ಸಂದೇಶವಿತ್ತರು.

ಸೂರತದಲ್ಲಿ ಅತಿವೃಷ್ಟಿ

ಭಾರತದ ವಿವಿಧ ಮೂಲೆಗಳಲ್ಲಿ ಅತಿವೃಷ್ಟಿಯ ಅನಾಹುತಗಳು ಈ ವರ್ಷ ತೀವ್ರವಾಗಿರುತ್ತವೆ ಇತ್ತೀಚೆಗೆ ಸೂರತ ಜಿಲ್ಲೆಯಲ್ಲಿನ ತಾಪೀನದಿಯಲ್ಲಿ ನೀರು ಉಕ್ಕೇರಿದುದರಿಂದ ಸೂರತ ನಗರವಿಡಿ ನೀರಲ್ಲಿ ಮುಳುಗಿಹೋಗಿದೆ. ಇಲ್ಲಿನ ಸಂತ್ರಸ್ತರನ್ನು ಉಳಿಸಲು ಮತ್ತವರಿಗೆ ಅನ್ನಾಹಾರಾದಿಗಳನ್ನೊದಗಿಸಲು ಸೈನ್ಯ ಶಾಖೆಯು ಪ್ರಯತ್ನಿಸುತ್ತಿದೆ. ನಾರಿಗೆ ಸಂಪರ್ಕವೆಲ್ಲವೂ ನಿಂತುಹೋಗಿ ವ್ಯಾಪಾರ ವಹಿವಾಟುಗಳು ಸ್ಥಗಿತಗೊಂಡಿವೆ ಈ ನೆರೆಯ ಬಾಯಿಗೆ ಸುಮಾರು ೧೫೦ ಜನರು ತುತ್ತಾಗಿರುವರೆಂದೂ ಬೊಂಬಾಯಿ ಸರಕಾರವು ನಿಂರಾಶ್ರಿತರ ಸೇವೆಯನ್ನು ಯೋಗ್ಯ ರೀತಿಯಿಂದ ಮಾಡುವುದರಲ್ಲಿ ತತ್ಪರವಾಗಿದೆ ಎಂದೂ ತಿಳಿಯುತ್ತದೆ.

ಕಬ್ಬಿನ ಬೆಳೆಗೆ ಪ್ರೋತ್ಸಾಹ

ಹೊಸಪೇಟೆಯಲ್ಲಿ ಹೊಸಪೇಟೆ, ಕೊಪ್ಪಳ ಮತ್ತು ಗಂಗಾವತಿಗಳ ಕಬ್ಬಿನ ಒಕ್ಕಲಿಗರ ಸಮ್ಮೇಳನವೊಂದನ್ನು ಕೇಂದ್ರೀಯ ಆಹಾರಶಾಖೆಯ ಉಪಮಂತ್ರಿಯವರಾದ ಶ್ರೀ ಎಂ ವಿ. ಕೃಷ್ಣಪ್ಪ ಅವರು ಉದ್ಘಾಟಿಸಿದರು. ದೇಶದಲ್ಲೀಗ ಸಕ್ಕರೆಯ ಕೊರತೆಯು ಆಕಸ್ಮಿಕವಾಗಿ ತಲೆದೋರಿದ್ದು ಇದಕ್ಕೆ ಬಳಕೆಗಿಂತ ಉತ್ಪಾದನೆಯು ಕಡಿಮೆಯಾದುದೇ ಕಾರಣವೆಂದೂ, ಈ ಉತ್ಪಾದನೆಯನ್ನು ಹೆಚ್ಚಿಸಲು ಕಬ್ಬಿನ ಬೆಳೆಗೆ ಅವಶ್ಯ ಪ್ರೋತ್ಸಾಹಕೊಡಬೇಕೆಂದೂ ಅವರು ಹೇಳಿದರು. ಕಬ್ಬನ್ನು ಬೆಳೆಸಲು ಆವಶ್ಯಕವಾದ ಪದಾರ್ಥಗಳ ಬೆಲೆಯಲ್ಲಾದ ಏರಿಕೆಯನ್ನು ಗಮನಿಸಿ-ವಾಗ ಕಬ್ಬಿನ ಬೆಲೆಯಲ್ಲಿಯೂ ಏರಿಕೆಯಾಗಬೇಕು ಎಂದೂ ಅವರು ಅಭಿಪ್ರಾಯಪಟ್ಟರು ಕಬ್ಬಿಗೆ ಯೋಗ್ಯ ಬೆಲೆ ಬರುವುದಿಲ್ಲವೆಂದು ರೈತನು ಅದರ ಬದಲು ಬೇರೆ ಹಣದ ಬೆಳೆಯನ್ನು ಬೆಳೆಸತೊಡಗಿದರೆ, ಇದರಿಂದ ಅಪಾರ ಹಾನಿಯಾಗುವುದು ಎಂದವರು ಹೇಳಿದರು.

ಪ್ರಕಟಣೆ

ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ಬಾಬ್ತು ದಶಾವತಾರ ಮೇಳದ ಸಾಮಾನು ದುರಸ್ತಿ ಬಗ್ಗೆ ತಾ. 28—9—59ನೇ ದಿನ ಮಧ್ಯಾಹ್ನ ಗಂ. 2ಕ್ಕೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಶರ್ತಗಳನ್ನು ದೇವಸ್ಥಾನದ ಆಫೀಸಿನಲ್ಲಿ ಮುಂಚಿತವಾಗಿ ಬಂದು ತಿಳಿದುಕೊಂಡು ಟೆಂಡರ್ ಕೊಡತಕ್ಕದ್ದು.

(Sd) B Umesh Rao,
Executive Officer.

ಮಂದಾರ್ತಿ, ತಾ 21-9-59.

ಜಿಲ್ಲಾ ಸಮ್ಮೇಳನ— ದ ಕ. ಜಿಲ್ಲಾ ಯುವಕ ಕಾಂಗ್ರೆಸಿಗರ ಜಿಲ್ಲಾ ಸಮ್ಮೇಳನವು ಮಂಗಳೂರಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ರಾಮರಾಜ ಕಿಣಿಯವರನ್ನು ಯುವಕ ಕಾಂಗ್ರೆಸ್ಸಿನ ಜಿಲ್ಲಾ ಸಂಘಟಕರಾಗಿ ನೇಮಕಮಾಡಲಾಯಿತಲ್ಲದೆ ಪ್ರತಿಯೊಂದು ಮಂಡಳ ಕಾಂಗ್ರೆಸ್ಸಿನ ಆಶ್ರಯದಲ್ಲಿ ಯುವಕ ಕಾಂಗ್ರೆಸ್ಸ್ ವಿಭಾಗವನ್ನು ಪ್ರಾರಂಭಿಸಬೇಕೆಂದಾಯಿತು

ಜಾನುವಾರು ಪ್ರದರ್ಶನ— ಉಡುಪಿಯಲ್ಲಿ ಜಾನುವಾರು ಪ್ರದರ್ಶನವೊಂದನ್ನು ತಾ 18ರಂದು ರಥಬೀದಿಯಲ್ಲಿ ಶ್ರೀ ಪಲಿಮಾರು ಮಠದ ಶ್ರೀಪಾದಂಗಳವರು ಉದ್ಘಾಟನೆ ಮಾಡಿದರು. ಆರಂಭದಲ್ಲಿ ಪ್ರದರ್ಶನ ಸಮಿತಿಯ ಅಧ್ಯಕ್ಷರಾದ ಡಾ. ಕೆ. ಎಲ್. ಐತಾಳರು ಸ್ವಾಗತ ಭಾಷಣ ಮಾಡಿದರು. ಶ್ರೀ ಅದಮಾರು ಮಠದ ಶ್ರೀಪಾದಂಗಳವರು ಅಧ್ಯಕ್ಷತೆ ವಹಿಸಿದ್ದರು ಭಾಷಣಗಳಾದ ಮೇಲೆ ತಹಶೀಲ್ದಾರ್ ಶ್ರೀ ಕೆ ಕೊರಗಪ್ಪನವರು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರ— ಸ್ಥಳೀಯ ನವಕೇತನ ಕಲಾ ಸಮಿತಿಯವರು ಸಣ್ಣ ಕತೆಗಳ ಪೋಟಿ ಮತ್ತು ನಾಟಕ ಸ್ಪರ್ಧೆಯನ್ನು ಏರ್ಪಡಿಸಿರುವರು. ಪ್ರತಿಯೊಂದು ಸ್ಪರ್ಧೆಗೆ ಪ್ರಥಮ ಮತ್ತು ದ್ವಿತೀಯ ಬಹುಮಾನ ರೂ25 ರೂ 10 ಭಾಗವಹಿಸುವ ಲೇಖಕರು ತಾ 10.10 59ರ ಒಳಗೆ ಕೃತಿಗಳನ್ನು ಕಾರ್ಯದರ್ಶಿಗೆ ಪ್ರವೇಶ ಧನ 4 ಆಣೆ ಅಂಚೆಚೀಟಿನೊಂದಿಗೆ ಕಳುಹಿಸಬಹುದು

ಮೂಲ್ಕಿ — ಬಿಲ್ಲವರ ಯೂನಿಯನ್‌ನಲ್ಲಿ ತಾ 16—9—59ರಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಜನ್ಮದಿನವನ್ನು ಅಧ್ಯಕ್ಷ ಶ್ರೀ ಯಂ ಸೀತಾರಾಮ ಸಾಲಿಯಾನರ ಅಧ್ಯಕ್ಷತೆಯಲ್ಲಿ ಸಭೆ, ಮೆರವಣಿಗೆ, ಭಜನೆ, ರಾತ್ರಿ ಗುರುಪೂಜಾ ಇತ್ಯಾದಿಗಳನ್ನು ಬಹು ವಿಜೃಂಭಣೆಯಿಂದ ಆಚರಿಸಲಾಯಿತಲ್ಲದೆ ಪೂಜ್ಯ ಗುರುಗಳ ತತ್ವಬೋಧನೆಯು ವಿಶದವಾಗಿ ಉಚ್ಚಿಲದ ಅಣ್ಣಯ್ಯ ಮಾಸ್ತರರು ಮತ್ತು ಮೂಲ್ಕಿಯ ಯಮ್. ಬೆರ್ಮ ಪೂಜಾರಿಯವರು ಕೂಡಾ ಭಾಷಣ ಮಾಡಿದರಲ್ಲದೆ ಕಾರ್ಯದರ್ಶಿ ಶ್ರೀ ಪಿ ಪೊನ್ನಯ್ಯ ಕರ್ಕೇರರು ಧನ್ಯವಾದವಿತ್ತು ಸಭಾಂತ್ಯವಾಯ್ತು

ಶ್ರೀ. ಎಸ್ ಯು. ಪಣಿಯಾಡಿಯವರ ನಿಧನ— ಉಡುಪಿಯ ಹಿಂದಿನ ಕಾಂಗ್ರೆಸ್ ಮುಂದಾಳುಗಳೂ ಸಾರ್ವಜನಿಕ ಕೆಲಸಗಾರರೂ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸವನ್ನು ಅನುಭವಿಸಿದವರೂ ಆಗಿದ್ದ ಶ್ರೀ ಎಸ್. ಯು ಪಣಿಯಾಡಿ (ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯ) ಯವರು ಸುಮಾರು 6 ತಿಂಗಳಿಂದ ಅಸ್ವಸ್ಥರಿದ್ದು ಇದೇ ತಾ. 14ನೇ ಸಂಜೆ ಮದ್ರಾಸಿನಲ್ಲಿ ಹೃದಯಸ್ತಂಭನದಿಂದ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀ ಪಣಿಯಾಡಿಯವರು ಸಂಸ್ಕೃತ ಭಾಷೆಯ ಪ್ರಚಂಡ ಪಂಡಿತರಾಗಿದ್ದು, ಬರೋಡ ಸಂಸ್ಥಾನದ ಲೈಬ್ರೇರಿಯನರಾಗಿದ್ದರು ಅಸಹಕಾರ ಚಳವಳಿಯ ವೇಳೆ ಕೆಲಸಕ್ಕೆ ರಾಜಿನಾಮೆಯಿತ್ತು ಉಡುಪಿಯಲ್ಲಿ ಕಾಂಗ್ರೆಸಿನ ಬಲಸಂವರ್ಧನೆಯಲ್ಲಿ ತತ್ಪರರಾದರು ತುಳುನಾಡು ಚಳವಳಿಯ ಪ್ರಮುಖರಾಗಿದ್ದರು ಹಲವಾರು ತುಳು ಪ್ರಕಟಣೆಗಳನ್ನು ಪ್ರಕಟಿಸಿದ್ದರು ತುಳುನಾಡು ಭಾಷಾಖಾನೆ, ಮಣಿಪಾಲ್ ಪವರ್ ಪ್ರೆಸ್, ತುಳುನಾಡ್ ಬೇಂಕ್‌ಗಳನ್ನು ಸ್ಥಾಪಿಸಿ ಕೆಲವರ್ಷ ನಡೆಸಿದ್ದರು ಫಿನೇನ್ಸಿಯಲ್ ಎಕ್ಸ್‌ಪ್ರೆಸ್ ಎಂಬ ಆಂಗ್ಲ ಮಾಸ ಪತ್ರಿಕೆಯನ್ನು ಶ್ರೀ ಬಿ ಎನ್. ರಾಯರ ಸಂಪಾದಕತ್ವದಲ್ಲಿ ಪ್ರಕಟಿಸುತ್ತಿದ್ದರು. ಅಂತರಂಗ ಎಂಬ ಹೊಸ ಮಾದರಿಯ ವಾರ ಪತ್ರಿಕೆಯನ್ನು ಪ್ರಕಟಿಸಿ ಕನ್ನಡ ಪತ್ರಿಕಾ ಪ್ರಪಂಚದಲ್ಲಿಯೇ ಒಂದು ಕ್ರಾಂತಿಯನ್ನುಂಟು ಮಾಡಿದ್ದರು ಕೆನರಾ ಮ್ಯುಚುವಲ್ ಇನ್ಶುರೆನ್ಸ್ ಕಂಪೆನಿಯ ಡೈರೆಕ್ಟರರಾಗಿಯೂ ಕೆಲಸ ಮಾಡಿದ್ದರು. ಇವರು ಸುಧಾರಕ ಮತ್ತು ಕ್ರಾಂತಿಕಾರಕ ಮನೋವೃತ್ತಿಯವರೂ ವಾಗ್ಮಿಗಳೂ ಆಗಿದ್ದರು. ಕೆಲಸಂಗಿಯ ಪಣಿಯಾಡಿಯವರು ಯಾರಿಗೂ ತಲೆಬಾಗದ ಕೆಚ್ಚೆದೆಯವರಾಗಿದ್ದರು ದುರ್ದೈವದಿಂದ ಇವರು ತಮ್ಮ ವ್ಯಾಪಾರ ವಹಿವಾಟುಗಳಲ್ಲಿ ಅಪಜಯಿಯಾಗಿ 1940ರಲ್ಲಿ ಊರು ಬಿಡಬೇಕಾಗಿ ಬಂದಿತ್ತು ಸಿನೆಮಾ ತಾರೆ ಕು ಹರಿಣಿ ಇವರ ಹಿರಿಯ ಪುತ್ರಿ, ನಟಸಾರ್ವಭೌಮ ಇವರ ಹಿರಿಯ ಮಗ, ಕೆಲವು ವರ್ಷಗಳಿಂದ ಇವರು ಮಕ್ಕಳೊಂದಿಗೆ ಮದ್ರಾಸಿನಲ್ಲೇ ವಾಸವಾಗಿದ್ದರು

ಉಡುಪಿ ಲಾ ಕಾಲೇಜಿನಲ್ಲಿ ನಕಲಿ ಕೋರ್ಟೊಂದು ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಜಿ. ಎಸ್. ನಾಗವೋತಿಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಮ್. ಡಿ ಕಾಮತರು ಸ್ವಾಗತಿಸಿದರು ಶ್ರೀ ನಾಗವೋತಿಯವರು ನಕಲಿ ಕೋರ್ಟಿನಲ್ಲಿ ಸೆಶ್ಶನ್ಸ್ ನ್ಯಾಯಾಧಿಪತಿಗಳಾಗಿದ್ದು ಕೊನೆಯಲ್ಲಿ ನಕಲಿಕೋರ್ಟ್ ಜರಗಿದ್ದಕ್ಕೆ ಸಂತೋಷ ವ್ಯಕ್ತಪಡಿಸಿ ಮಾತನಾಡಿದರು.

ಉಡುಪಿ ರೋಟರಿ ಕ್ಲಬ್ಬಿನ ಸಭೆಯೊಂದು ಶ್ರೀ ಕೆ. ಆರ್ ಕೆ. ಭಟ್ಟರ ಅಧ್ಯಕ್ಷತೆಯಲ್ಲಿ ತಾ 15ರಲ್ಲಿ ಜರಗಿದಾಗ ಮುನ್ಸಿಪಲ್ ಹೆಲ್ತ್ ಆಫೀಸರ್ ಡಾ। ಪಿ ಎಲ್. ಪಂಡಿತರು ಮಕ್ಕಳನ್ನು ಕಾಡುವ ನಾಯಿಕೆಮ್ಮು, ಗಂಟಲು ನಾಳದ ರೋಗ, ಧನುರ್ವಾತ ರೋಗಗಳ ಪ್ರತಿಬಂಧಕ ಕಾರ್ಯಕ್ರಮಗಳ ಕುರಿತು ಭಾಷಣವಿತ್ತರು ಡಾ। ಇ. ಅನಂತರಾಯರು ಕೃತಜ್ಞತೆಗಳನ್ನು ಅರ್ಪಿಸಿದರು

ದ ಕ ಜಿಲ್ಲಾ ಸರ್ವಧರ್ಮ ಸಂಸ್ಥಾನೇತೃಗಳ ಸಮ್ಮೇಳನವು ಉಡುಪಿಯಲ್ಲಿ ತಾ 17 ಮತ್ತು 18ರಲ್ಲಿ ಸಂಸ್ಕೃತ ಕಾಲೇಜಿನ ಪ್ರಾರ್ಥನಾ ಮಂದಿರದಲ್ಲಿ ಜರಗಿತು ಹಿಂದು, ಜೈನ, ಮುಸ್ಲಿಂ, ಕ್ರೈಸ್ತ ಧರ್ಮ ಸಂಸ್ಥೆಗಳ ನೇತೃಗಳು ಭಾಗವಹಿಸಿದ್ದ ಈ ಸಮ್ಮೇಳನವನ್ನು ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀ ಎಮ್. ಪತಂಜಲಿ ಶಾಸ್ತ್ರಿಯವರು ಶ್ರೀ ಕೆ. ಬಾಲಕೃಷ್ಣ ರಾವ್, ಎಂ ಎಲ್ ಸಿ, ಇವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಶ್ರೀ ಅದಮಾರು ಮಠದ ಶ್ರೀ ಪಾದಂಗಳವರು ಸ್ವಾಗತ ಭಾಷಣವನ್ನೋದಿದರು ಶ್ರೀ ದೇವೇಂದ್ರ ಪೆಜತ್ತಾಯರು ಶ್ರೀ ರಾಜಗೋಪಾಲಾಚಾರಿ ಮೊದಲಾದವರಿಂದ ಬಂದ ಸಂದೇಶಗಳನ್ನೋದಿದರು. ಶ್ರೀ ಪತಂಜಲಿ ಶಾಸ್ತ್ರಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನೂ ಧರ್ಮಸಂಸ್ಥೆಗಳು ಮಾಡುತ್ತಿರುವ ಕಾರ್ಯಗಳನ್ನೂ ನಿರೂಪಿಸಿ ಭೂ ಶಾಯಿದೆಯನ್ನು ಧಾರ್ಮಿಕ ಸಂಸ್ಥೆಗಳ ಭೂಮಿಗೆ ಅನ್ವಯಿಸಬಾರದೆಂದೂ ಸಕಾರಣವಾಗಿ ವಿವರಿಸಿದರು ಶ್ರೀ ಶಿರೂರು ಮಠದ ಶ್ರೀಪಾದಂಗಳವರೂ ಮದ್ರಾಸ್ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನ ನಿವೃತ್ತ ಕಮಿಶನರ್ ಶ್ರೀ ವೆಂಕಟರಮಣ ಅಯ್ಯರರೂ ಮಾತನಾಡಿ ಧರ್ಮಸಂಸ್ಥೆಗಳ ಮೇಲೆ ಭೂ ಸುಧಾರಣೆಯಿಂದಾಗುವ ಕೆಟ್ಟ ಪರಿಣಾಮವನ್ನು ವಿವರಿಸಿದರು. ಅನಂತರ ಮೈಸೂರು ಭೂಸುಧಾರಣೆ ಮಸೂದೆಯನ್ನು ಧಾರ್ಮಿಕ ಸಂಸ್ಥೆಗಳಿಗೆ ಅನ್ವಯಿಸಬಾರದೆಂದೂ ನಿರ್ಣಯವಾಯಿತು ಅಧ್ಯಕ್ಷ ಶ್ರೀ ಬಾಲಕೃಷ್ಣ ರಾಯರು ಭಾಷಣವಿತ್ತ ಮೇಲೆ ಶ್ರೀ ಶ್ರೀಪತಿ ಆಚಾರ್ಯರವರು ಧನ್ಯವಾದಗಳನ್ನರ್ಪಿಸಿದರು.

ಮಾನಪತ್ರ— ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ತಾ 18ನೇ ಬೆಳಿಗ್ಗೆ ಶ್ರೀ ಪತಂಜಲಿ ಶಾಸ್ತ್ರಿಗಳಿಗೆ ಮಾನಪತ್ರವಿತ್ತು ಗೌರವಿಸಲಾಯ್ತು ಸಂಸ್ಕೃತ ವಿದ್ಯಾಲಯಗಳನ್ನು ಕೇಂದ್ರ ಸಂಸ್ಥೆಯೇ ವಹಿಸಿಕೊಳ್ಳಬೇಕೆಂದು ವಿನಂತಿಸುವ ಮಾನಪತ್ರವನ್ನು ಪ್ರಿನ್ಸಿಪಾಲ್ ಕಾಲಗಿ ವೇಣಾಚಾರ್ಯರು ಒಪ್ಪಿಸಿದರು.

ಗ್ರಾಮ ಸಹಾಯಕ ಶಿಬಿರ, ಸುರತ್ಕಲ್ — ಮೂಲ್ಕಿ ಅಭಿವೃದ್ಧಿ ಕ್ಷೇತ್ರಕ್ಕೊಳಪಟ್ಟ ಸುರತ್ಕಲ್ ಗ್ರಾಮಸೇವಕ ವಲಯದ 7 ಗ್ರಾಮಗಳಿಂದ ಆರಿಸಿದ ಗ್ರಾಮ ಸಹಾಯಕರ ಶಿಕ್ಷಣ ಶಿಬಿರವನ್ನು ತಾ. 11-9-59 ರಲ್ಲಿ ಸುರತ್ಕಲ್ ಸಮಾಜ ಮಂದಿರದಲ್ಲಿ ಶ್ರೀ ಕೆ ಕೆ. ಶೆಟ್ಟಿ, M L.C. ಇವರು ಉದ್ಘಾಟಿಸಿದರು ಶ್ರೀ ಕೆ. ಶೀನ ಶೆಟ್ಟಿ ಜಿಲ್ಲಾ ಪಂಚಾಯತ ಆಫೀಸರರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಮೂಲ್ಕಿಯ ಸಮಾಜ ಶಿಕ್ಷಣಾಧಿಕಾರಿ ಶ್ರೀ ಧರ್ಮರಾಜರು ಶಿಬಿರದ ಉದ್ದೇಶಗಳನ್ನು ವಿವರಿಸಿದ ಬಳಿಕ ಪಂಚಾಯತ ಅಧ್ಯಕ್ಷ ಶ್ರೀ ಬಾಬುರಾಯ ಕಾಮತರು ಸ್ವಾಗತ ಭಾಷಣವನ್ನಿತ್ತರು. ಶ್ರೀಗಳಾದ ದೂಮಪ್ಪ M L.A., ಮುದ್ರಾಡಿ ಕೃಷ್ಣ ಶೆಟ್ಟಿ ಮೊದಲಾದವರು ಭಾಷಣವಿತ್ತರು, ಕೊನೆಗೆ ಅಭಿವೃದ್ಧಿ ಕ್ಷೇತ್ರಾಧಿಕಾರಿ ಶ್ರೀ ವಿ. ರಮಣ್ಣನರು ನೆರೆದ ರೈತರಿಗೆ ಹಿತೋಕ್ತಿಗಳನ್ನಿತ್ತು ಧನ್ಯವಾದಗಳನ್ನಿತ್ತರು.

ತಾ 12.9.59ರಲ್ಲು ಬೆಳಿಗ್ಗೆ ಶ್ರೀ ಬಾಬುರಾಯ ಕಾಮತರ ಮುಂದಾಳುತನದಲ್ಲಿ ಧ್ವಜವಂದನಾ ಕಾರ್ಯಕ್ರಮವು ನಡೆದ ನಂತರ ಕೃಷಿ ವಿಸ್ತರಣಾಧಿಕಾರಿ ಶ್ರೀ ಮರಿಯಯ್ಯನವರು ಸುಧಾರಿತ ಕೃಷಿಯ ಕುರಿತು ವಿವರಣೆಯಿತ್ತರು

ತಾ 13.9.59ರಲ್ಲು ಬೆಳಿಗ್ಗೆ ಶ್ರೀ ಬಿ. ಶೀನ ಶೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ದೇರಣ್ಣ ರೈಯವರು ಕಂಪೋಸ್ಟು ತಯಾರಿಯ ಕುರಿತು ವಿವರಿಸಿದರು.

ಭಾಷಾಭ್ಯಾಸ ಮತ್ತು ಭಾಷಾಧ್ಯಯನ— ಕೊಡಗಿನ ಕೂಡಿಗೆಯಲ್ಲಿರುವ ಸರಕಾರಿ ಬುನಾದಿ ತರಬೇತಿ ಶಾಲೆಯ ಪ್ರಾಧ್ಯಾಪಕರಾದ ಶ್ರೀ ಕೆ ಎಸ್. ಕೃಷ್ಣಮೂರ್ತಿ, ಬಿ. ಎ (ಆನರ್ಸ್) ಇವರು ಉಡುಪಿ ಹಿಂದೀ ಪ್ರಚಾರ ಪರಿಷತಿನಲ್ಲಿ ತಾ ೨೦ರಂದು ಭಾಷಾಧ್ಯಯನ ಮತ್ತು ಭಾಷಾ ಅಧ್ಯಾಪನ ಎಂಬುದರ ಕುರಿತಾಗಿ ಉದ್ಬೋಧಕವಾದ ಭಾಷಣವನ್ನಿತ್ತರು. ಅಧ್ಯಯನಕ್ಕೆ ಸಂಸ್ಕಾರ, ವಾತಾವರಣ ಮತ್ತು ನಿರಂತರ ಅಭ್ಯಾಸಗಳೇ ಕಾರಣವೆಂದೂ ಉತ್ತಮ ಗ್ರಂಥಗಳನ್ನು ಸದಾ ಪರಿಸುವುದರಿಂದ ಮತ್ತು ಉತ್ತಮರ ಸಹವಾಸದಿಂದ ನಾವು ಕಲಿತ ವಿಷಯದಲ್ಲಿ ಪಾಂಡಿತ್ಯವು ಪ್ರಾಪ್ತಿಸುವುದೆಂದೂ ಭಾಷೆಯ ಅಧ್ಯಾಪಕರು ಪ್ರತಿ ಭಾಷೆಯನ್ನೂ ಅದೇ ಭಾಷೆಯ ಮಾಧ್ಯಮದಲ್ಲಿ ಕಲಿಸಬೇಕೆಂದೂ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಭಾವನೆಗಳನ್ನು ಉದ್ರಿಕ್ತಗೊಳಿಸಿ ಅವುಗಳ ಪ್ರಯೋಜನವನ್ನು ಅಧ್ಯಾಪಕರು ಪಡೆದುಕೊಳ್ಳಬೇಕೆಂದೂ ಅವರು ಹೇಳಿದರು ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಶ್ರೀ ಪಿ. ಹರಿದಾಸ ಆಚಾರ್ಯರು ಭಾಷಣ ಕರ್ತರ ಅಭಿಪ್ರಾಯವನ್ನು ಸಮರ್ಥಿಸಿ ವಿದ್ಯಾರ್ಥಿಗಳೂ ಅಧ್ಯಾಪಕರೂ ಈ ವಿಷಯಗಳತ್ತ ಅವಶ್ಯ ಗಮನ ಹರಿಸಬೇಕಾದ ಆವಶ್ಯಕತೆಯನ್ನು ಪ್ರತಿಬಿಂಬಿಸಿದರು

ಪ್ರಾರಂಭದಲ್ಲಿ ಪರಿಷತ್ತಿನ ಪ್ರಧಾನಾಧ್ಯಾಪಕರಾದ ಶ್ರೀ ಎಸ್ ಗೋಪೀಚಂದರಾವ್ ಇವರು ಸ್ವಾಗತಿ, ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು

ಪ್ರಚಾರ ನಾಟಕ— ತಾ 19ನೇ ರಾತ್ರೆ ಸಾಗರದ ಉದಯ ಕಲಾವಿದರು ನಮ್ಮ ಹಳ್ಳಿ ಎಂಬ ಪಂಚವಾರ್ಷಿಕ ಯೋಜನಾ ಪ್ರಚಾರ ನಾಟಕವನ್ನು ಉಡುಪಿಯ ಸಂಸ್ಕೃತ ಕಾಲೇಜಿನ ಪ್ರಾರ್ಥನಾ ಮಂದಿರದಲ್ಲಿ ನಗರ ಸಭಾಧ್ಯಕ್ಷ ಡಾ ಕೆ ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು.

ಉಡ್ಪಿ ಡಿ ಮು. ಕೋರ್ಟಿನಲ್ಲಿ

1959 ನೇ ಇಸವಿ ಓ. ಎಸ್. ನಂ. 248

ಯು ಅನಂತ ಆಚಾರ್ಯ —ವಾದಿ.

ಮತ್ತು

ಸಾವೇರ್ ದಾಲ್ಮೇದ ಕೂಡಾ ಆರು ಜನರು_ ಪ್ರತಿವಾದಿರು. — ಇವರೊಳಗೆ.

ಉಡ್ಪಿ ತಾಲೋಕು ಕೋಟೆಗ್ರಾಮದ ಕಚಕೋಡಿಯಲ್ಲಿರುವ ಜುವಾಮ ದಾಲ್ಮೇದರ ಮಕ್ಕಳು ಮೈಕಲ್ ದಾಲ್ಮೇದ ಮತ್ತು ಪೀಟರ್ ದಾಲ್ಮೇದ ಕೂಡಾ ಎರಡು ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ವಾದಿಯರು, ನೀವು ಕೂಡಾ ಆರು ಜನರ ಮೇಲೆ ಪ್ಲೆಂಟ್ ನಿವೃತ್ತಿಗೋಸ್ಕರ ಮಾಡಿದ ದಾವೆಯು ತಾ 3—10—1959ಕ್ಕೆ ಈ ಕೋರ್ಟಿನ ಮುಂದೆ ತನಿಕೆಗೆ ಇರುತ್ತದೆ. ಆದ್ದರಿಂದ ನೀವು ಆ ದಿನ 10ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಣೆ ಕೊಡಲು ತಪ್ಪಿದರೆ ಸದ್ರಿ ದಾವೆಯು ನಿಮ್ಮ ಗೈರು ಹಾಜರಿನಲ್ಲಿ ತಸ್ಕ ನಡೆಯುವುದು ತಿಳಿದಿರಲಿ.

(By Order)

N. Ramachandra Bhat,
Advocate for Plaintiff.

ಉಡ್ಪಿ 21—9—59.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಗಳು

ಇದೇ ತಾ. 13-9-59ನೇ ಆದಿತ್ಯವಾರ ಜಿಲ್ಲಾ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸಭೆಯು ಶ್ರೀ ಕೆ. ಕೆ. ಶೆಟ್ಟಿ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ, ಬೆಂಗಳೂರಿನಲ್ಲಿ ನಡೆಯಲಿರುವ ಕಾಂಗ್ರೆಸಿನ ಮಹಾಧಿವೇಶನಕ್ಕೆ ಜಿಲ್ಲೆಯಿಂದ ಹಣ ಸಂಗ್ರಹಿಸುವ ಮತ್ತು ಸ್ವಾಗತ ಸಮಿತಿಗೆ ಸದಸ್ಯರನ್ನು ಸೇರಿಸುವ ಕುರಿತು ಸ್ವಾಗತ ಸಮಿತಿಯಿಂದ ಬಂದಿರುವ ವಿನಂತಿಯ ಕುರಿತು ಅಧ್ಯಕ್ಷರು ಪ್ರಸ್ತಾಪಿಸಿ, ಈ ಮಹಾಧಿವೇಶನವು ಯಶಸ್ವಿಯಾಗಿ ಜಯಶೀಲವಾಗುವಂತೆ ಕಾಂಗ್ರೆಸಿಗರೆಲ್ಲರೂ ನೆರವಾಗುವಂತೆ ಕೇಳಿ ಕೊಂಡರು. ಪ್ರಧಾನ ಕಾರ್ಯದರ್ಶಿ ಶ್ರೀ ಟಿ. ಎ. ಪೈಯವರು ಕಾಂಗ್ರೆಸ್ ಮಹಾಧಿವೇಶನವನ್ನು ನಡೆಸುವ ಕಾರ್ಯ ಮತ್ತು ವೆಚ್ಚ, ಹಣ ಸಂಗ್ರಹ ಇತ್ಯಾದಿಗಳ ಕುರಿತು ವಿವರಿಸಿ ಮಾತನಾಡಿದರು. ಅನಂತರ 1. ಪ್ರಕೃತದ ಜಿಲ್ಲೆಯ ಪರಿಸ್ಥಿತಿಯಲ್ಲಿ ರೂ. 50,000 ಹಣ ಸಂಗ್ರಹಿಸಲು ಪ್ರಯತ್ನಿಬೇಕು, 2. ಜಿಲ್ಲೆಯ ಎಲ್ಲಾ ಮಂಡಲಗಳ 2ನೇ ಸಮ್ಮೇಳನವನ್ನು ಉಜಿರೆಯಲ್ಲಿ ಬರುವ ಅಕ್ಟೋಬರ ತಾ. 17 ಮತ್ತು 18ರಲ್ಲು ನಡೆಸಬೇಕು, 3. ದಸರಾ ಹಬ್ಬದ ಸಂದರ್ಭದಲ್ಲಿ ಉಡುಪಿ ತಾಲೂಕಿನ ಇನ್ನಂಜೆ ಹೈಸ್ಕೂಲಿನಲ್ಲಿ ಕಾಂಗ್ರೆಸ್ ಸೇವಾದಳ ಶಿಬಿರವನ್ನು ನಡೆಸಬೇಕು. 4. ಮಂಗಳೂರಲ್ಲಿ ಕಾಂಗ್ರೆಸಿನ ಆಶ್ರಯದಲ್ಲಿ ಸಂಘಟಿತವಾಗಿರುವ ಮಜೂರ ಸಂಘಟನೆಯನ್ನು ಆದಷ್ಟು ಬೇಗನೆ ರಜಿಸ್ಟ್ರು ಮಾಡಬೇಕು. 5. ಬೆಂಗಳೂರಿನಲ್ಲಿ ಕಾಂಗ್ರೆಸ್ ಅಧಿವೇಶನ ಜರಗುವ ಸ್ಥಳಕ್ಕೆ ದೇಶಭಕ್ತ ಕಾರ್ನಾಡ್ ಸದಾಶಿವರಾಯರ ಹೆಸರಿನಲ್ಲಿ "ಸದಾಶಿವ ನಗರ"ವೆಂದು ಹೆಸರಿಸಲು ಸ್ವಾಗತ ಸಮಿತಿಯನ್ನು ಕೇಳಿಕೊಳ್ಳಬೇಕು 6, ಕಾಂಗ್ರೆಸ್ ಪಕ್ಷದ ಶಾಸನ ಸಭಾ ಸದಸ್ಯರು ಒಮ್ಮತದಿಂದ ಮೈಸೂರು ಭೂಸುಧಾರಣಾ ಮಸೂದೆಯ ಕುರಿತು ಸರಕಾರಕ್ಕೆ ಮಾಡಿದ ಸೂಚನೆಗಳನ್ನು ಸರ್ವಸಾಮಾನ್ಯವಾಗಿ ಒಪ್ಪಿ, ಮಸೂದೆಯಲ್ಲಿ ನಿರ್ಧರಿಸಲ್ಪಡದ ಕನಿಷ್ಠ ಪರಿಮಿತಿಯಷ್ಟರ ಭೂಮಿಯನ್ನು ಸ್ವಂತ ಸಾಗುವಳಿಗಾಗಿ ಪಡೆಕೊಳ್ಳುವ ಹಕ್ಕು ಭೂಮಾಲಕರಿಗಿರಬೇಕು; ದ. ಕ. ಜಿಲ್ಲೆಯ ಬೇರೆ ಬೇರೆ ಖಾತೆಗಳ ಸರಕಾರೀ ನೌಕರರಿಗೆ ಆಗುತ್ತಿರುವ ಅನ್ಯಾಯ ಹಾಗೂ ಮೈಸೂರು ಸರಕಾರದವರು ತೋರಿಸುತ್ತಿರುವ ಪಕ್ಷಪಾತ ಧೋರಣೆಗಳಿಂದ ಜನತೆಯಲ್ಲುಂಟಾದ ಅತೃಪ್ತಿ ಮತ್ತು ಆಡಳಿತೆಯ ತೀವ್ರ ವಿಳಂಬದಿಂದಾಗಿ ಆಗುತ್ತಿರುವ ತೊಂದರೆ ಮೊದಲಾದುವುಗಳ ಕುರಿತು ಶ್ರೀ ಕೆ. ದೂಮಪ್ಪ, ಎಂ.ಎಲ್.ಎ. ಇವರು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಒಪ್ಪಿಸಿರುವ ಟಿಪ್ಪಣಿಯನ್ನು ಸಮರ್ಥಿಸಿ, ಇದೇ ರೀತಿಯ ಹಲವಾರು ಸಂಕಷ್ಟಗಳಿಗೆ ಪರಿಹಾರ ನೀಡುವಂತೆ ಕೇಳಿಕೊಳ್ಳಲು ಒಂದು ವರದಿಯನ್ನು ತಯಾರಿಸಲು ಉಪಸಮಿತಿಯೊಂದನ್ನು ನೇಮಿಸಬೇಕು, 7. ದ. ಕ. ಜಿಲ್ಲೆಯ ಬೇರೆ ಬೇರೆ ಖಾತೆಗಳ ನೌಕರರ ಸ್ಥಾನ, ಸಂಬಳ, ಭತ್ತೆ, ಪೆನ್‌ಶನ್, ಪ್ರೊವಿಡೆಂಟ್‌ಫಂಡ್, ಭಡ್ತಿ ಮತ್ತು ವರ್ಗಾವರ್ಗಿಯ ವಿಷಯದಲ್ಲಿ ಮೈಸೂರು ಸರಕಾರವು ನಿಶ್ಚಿತ ಧೋರಣೆಯನ್ನಾಗಲೀ, ನೀತಿಯನ್ನಾಗಲೀ ಅನುಸರಿಸದೆ ಹಲವರಿಗೆ ಅನ್ಯಾಯವಾಗಿರುವುದು ಮಾತ್ರವಲ್ಲದೆ ಜಿಲ್ಲೆಯ ನೌಕರರಲ್ಲಿ ಅತೃಪ್ತಿ ಹಬ್ಬಿ ಆಡಳಿತದ ದಕ್ಷತೆಗೆ ಬಾಧಕ ಬರುವಂತಾಗಿದೆ. ಇದು ಹೊರತು ಜಿಲ್ಲೆಯ ಸಾಂಪತ್ತಿಕ ಕೈಗಾರಿಕಾಭಿವೃದ್ಧಿಯ ಮುಖ್ಯ ಯೋಜನೆಗಳಲ್ಲಿ ಕೂಡ ಸರಕಾರದ ಕಡೆಯಿಂದ ವಿಳಂಬ ಹಾಗೂ ಅಡ್ಡಿಗಳು ತೋರಿಬರುತ್ತಿದ್ದು ಜನತೆಯಲ್ಲಿ ಅತೃಪ್ತಿಯನ್ನು ಮಾಡಿಸಿರುವುದನ್ನು ಸರಕಾರದ ಗಮನಕ್ಕೆ ತರಬೇಕು ಎನ್ನುವ ಗೊತ್ತುವಳಿಗಳು ಮಂಜೂರಾದುವು.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾಸಭೆಯು ತಾ. 13—9—59ನೇ ಆದಿತ್ಯವಾರ ಶ್ರೀ ಕೆ. ಕೆ. ಶೆಟ್ರವರ ಅಧ್ಯಕ್ಷತೆಯಲ್ಲಿ ಜರಗಿತು.

ಅಧ್ಯಕ್ಷರು ಆರಂಭದಲ್ಲಿ ಜಿಲ್ಲೆಯ ಪ್ರಕೃತದ ಪರಿಸ್ಥಿತಿಯಲ್ಲಿ ಬೇರೆ ಬೇರೆ ಶಕ್ತಿಗಳು ಕಾಂಗ್ರೆಸಿನ ಬಲವನ್ನು ಕುಂದಿಸಲು ಪ್ರಯತ್ನಿಸುತ್ತಿರುವಾಗ ಕಾಂಗ್ರೆಸಿಗರು ತಮ್ಮ ತಮ್ಮ ಸಂಘ, ಶಕ್ತಿಯನ್ನು ಬೆಳೆಸಿ ಬಲಪಡಿಸಿ ಒಗ್ಗಟ್ಟಿನಿಂದ ಕೆಲಸಮಾಡುವುದರ ಆಗತ್ಯವನ್ನು ವಿವರಿಸಿದರು. ಕಾಂಗ್ರೆಸ್ ಮಹಾಧಿವೇಶನಕ್ಕಾಗಿ ಹಣ ಸಂಗ್ರಹಿಸುವ ಜವಾಬ್ದಾರಿ, ಗ್ರಾಮ ಪಂಚಾಯತ ಮತ್ತು ತಾಲೂಕು ಬೋರ್ಡುಗಳ ಚುನಾವಣೆಗಳಲ್ಲಿ ಕಾಂಗ್ರೆಸಿನವರು ಭಾಗವಹಿಸುವ ವಿಚಾರ, ಉಜಿರೆಯಲ್ಲಿ ನಡೆಯಲಿರುವ ಮಂಡಲ ಸಮ್ಮೇಳನ, ಹಾಗೂ ತಾಲೂಕು ಕಾಂಗ್ರೆಸ್ ಸಮಿತಿಯು ಹೊಣೆ ಹೊತ್ತು ಜೀವಂತ ಸಂಸ್ಥೆಯಾಗಿ ಉಪಯುಕ್ತ ಕೆಲಸಮಾಡುವುದು ಮೊದಲಾದುವುಗಳ ವಿಷಯ ಪ್ರಸ್ತಾಪಿಸಿ ತಿಳಿಸಿದರು. ಆ ಮೇಲೆ ಶ್ರೀ ಟಿ. ಎ. ಪೈಗಳು ಕಾಂಗ್ರೆಸ್ ಅಧಿವೇಶನವನ್ನು ಜರಗಿಸುವ ಕುರಿತು ಸ್ವಾಗತ ಸಮಿತಿಯವರು ಈ ವರೆಗೆ ಕೈಕೊಂಡ ಕಾರ್ಯಕಲಾಪಗಳನ್ನು ವಿವರಿಸಿ ಜಿಲ್ಲೆಯಲ್ಲಿ ಕಾಂಗ್ರೆಸ್ ಅಧಿವೇಶನಕ್ಕಾಗಿ ಆದಷ್ಟು ಹೆಚ್ಚಿನ ಹಣವನ್ನು ಸಂಗ್ರಹಿಸಬೇಕೆಂದೂ ಅದರಲ್ಲಿ 25% ರಷ್ಟನ್ನು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಮುಂದಿನ ಚುನಾವಣೆಗಳಿಗಾಗಿ ಇರಿಸಿಕೊಳ್ಳಬಹುದೆಂದೂ ಸೂಚಿಸಿದರು. ಈ ಭಾಷಣಗಳಾದ ಮೇಲೆ ಕಾಂಗ್ರೆಸಿನ ಮಹಾಧಿವೇಶನಕ್ಕೆ ಹಣ ಸಂಗ್ರಹಿಸುವ, ಶಿಬಿರವನ್ನು ನಡೆಯಿಸುವ ಹಾಗೂ ಉಜಿರೆಯಲ್ಲಿ ಮಂಡಲ ಸಮ್ಮೇಳನವನ್ನು ಜರಗಿಸುವ ಸರಕಾರದ ಅಸಡ್ಡೆ ಹಾಗೂ ವಿಲಂಬಗಳಿಗೆ ವಿಷಾದ ಸೂಚಿಸುವ ಸಂಬಂಧದಲ್ಲಿ ಕಾರ್ಯಕಾರಿ ಸಮಿತಿಯು ಮಂಜೂರು ಮಾಡಿದ ನಿರ್ಣಯಗಳಿಗೆ ಸಮ್ಮತಿಯನ್ನೀಯಲಾಯ್ತು.

ಮೈಸೂರು ಭೂಸುಧಾರಣಾ ಕುರಿತು ಜಿಲ್ಲೆಯ ಕಾಂಗ್ರೆಸ್ ಶಾಸನಸಭಾ ಸದಸ್ಯರು ಸರ್ವ ಸಮ್ಮತಿಯಿಂದ ಸರಕಾರಕ್ಕೆ ಮಾಡಿದ ಸೂಚನೆಗಳನ್ನು ಅಧ್ಯಕ್ಷರು ಸಭೆಯ ಮುಂದಿಟ್ಟರು. ಅದು ಈ ಕೆಳಗಿನಂತಿರುತ್ತದೆ.

1. ನ್ಯಾಯಗೇಣಿ:– 1ನೇ ಮತ್ತು 2ನೇ ಕ್ಲಾಸು ನಂಜಕ್ಕೆ ಪ್ರಥಮ ಎರಡು ಬೆಳೆಗಳ ಉತ್ಪತ್ತಿಯ ಸೇಕಡಾ 25ರಷ್ಟಿರಬೇಕು. 3ನೇ ಕೊಳಕೆ ಬೆಳೆಯ ಉತ್ಪತ್ತಿಯನ್ನು ಲೆಕ್ಕಕ್ಕಿಡಬಾರದು. ಬೆಟ್ಟು ಭೂಮಿಗಳಿಗೆ ಗ್ರೋಸ್ ಪ್ರೊಡ್ಯೂಸ್ ಉತ್ಪತ್ತಿಯ ಸೇಕಡಾ 20ರಷ್ಟಿರಬೇಕು. ಅಡಿಕೆ ತೋಟ ಬಿಟ್ಟು ಇತರ ಭಾಗಾಯ್ತುಗಳಿಗೆ ಉತ್ಪತ್ತಿಯ ಸೇಕಡಾ 20ರಷ್ಟಿರಬೇಕು. ಅಡಿಕೆ ತೋಟಕ್ಕೆ ಸೇಕಡಾ 25ರಷ್ಟಿರಬೇಕು.

ಈಗ ಇರುವ ಗೇಣಿಯು ಮೇಲಿನ ನ್ಯಾಯಗೇಣಿಗಿಂತ ಕಡಿಮೆ ಇದ್ದರೆ ಅದೇ ಖಾಯಂ ಆಗಿರಬೇಕು.

2. ಒಕ್ಕಲುತನ:- ದ. ಕ. ಜಿಲ್ಲೆಯಲ್ಲಿ ಒಕ್ಕಲುಗಳ ಹಿಡುವಳಿಯು ಅತಿ ಹೆಚ್ಚಾಗಿ, ಮೂಲ ಹಿಡುವಳಿಗಿಂತಲೂ ಕಡಿಮೆಯಾಗಿರುವುದು; ಅಳಿಯ ಸಂತಾನ ಮತ್ತು ಸಂಯುಕ್ತ ಹಿಂದೂ ಕುಟುಂಬಗಳ ಅವಿಭಕ್ತವಾಗಿರುವುದು; ಹಿಡುವಳಿಗಳು ಒಮ್ಮುಖವಾಗಿ ವಿಶಾಲವಾಗಿಲ್ಲದಿರುವುದು ಮೊದಲೇ ಚಿಕ್ಕದಾಗಿರುವ ಹಿಡುವಳಿಗಳು ಮತ್ತು ತುಂಡಾಗದಂತಾಗ್ಗುವುದು ಮತ್ತು ಆಹಾರೋತ್ಪತ್ತಿಗೆ ಆಗುವ ಹಾನಿ ಮೊದಲಾದ ದ. ಕ. ಜಿಲ್ಲೆಯ ವಿಶಿಷ್ಟ ಪರಿಸ್ಥಿತಿಯ ದೃಷ್ಟಿಯಿಂದ ಜಿಲ್ಲೆಯ ಒಕ್ಕಲುಗಳಿಗೆ ಖಾಯಂ ಗೇಣಿ ಹಕ್ಕು ಕೊಡತಕ್ಕದ್ದು: ಬಡದೆ 2 ವರ್ಷಗಳೊಳಗೆ ಒಕ್ಕಲು ಗೇಣಿ ಕೊಡದಿದ್ದರೆ ಅವನ ಕೃತ ಮೊದಲಾದುವುಗಳ ಬಗ್ಗೆ ಯೋಗ್ಯ ಪರಿಹಾರಕೊಟ್ಟು ಅವನಿಂದ ಹಿಡುವಳಿಯನ್ನು ಸ್ವಾಧೀನ ಪಡಿಸುವ ಹಕ್ಕು ಭೂಮಾಲಿಕನಿಗಿರತಕ್ಕದ್ದು.

ಹಿಡುವಳಿ ಮಿತಿ:-ಹಿಡುವಳಿ ಮಿತಿಯನ್ನು ಭೂವಿಸ್ತೀರ್ಣದ ಆಧಾರದಿಂದ ನಿಶ್ಚಯಿಸತಕ್ಕದ್ದು. ಮುಂದೆ ಪಡೆಕೊಳ್ಳುವ ಆಸ್ತಿಯ ಕುರಿತು ಮಾತ್ರ ಮಿತಿ ಇರತಕ್ಕದ್ದು.

ಪರಿಹಾರ:-ಯಾರಾದರೂ ಭೂಮಾಲಕರು ಸ್ವೇಚ್ಛೆಯಿಂದ ಸರಕಾರಕ್ಕೆ ಭೂಮಿಯನ್ನು ಬಿಟ್ಟು ಕೊಡಲು ಮುಂದೆ ಒಂದಲ್ಲಿ ಅವರಿಗೆ ನ್ಯಾಯ ಬೆಲೆಯ ಸೇಕಡಾ 2[illegible]ರಷ್ಟು ಯಾ ಚಾಲ್ತಿ ವಿಕ್ರಯ ಬೆಲೆಯನ್ನು ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಕೊಡತಕ್ಕದ್ದು. ಈ ಪರಿಹಾರ ಹಣವನ್ನು 1[illegible],000ದ ವರೆಗೆ ನಗದಿಯಾಗಿಯೂ, ಆ ಮೇಲೆ ಸೇಕಡಾ 4½ಯಷ್ಟರ ಸರಕಾರದ ಬೋಂಡಿನಲ್ಲಿ 10 ವರ್ಷದ ಕಂತಿನಲ್ಲಿಯೂ ಕೊಡತಕ್ಕದ್ದು, ಇದರಿಂದಾಗಿ 20 ಕಂತುಗಳಲ್ಲಿ ನ್ಯಾಯವಾದ ಬಡ್ಡೀ ದರದಲ್ಲಿ ಭೂಮಿಯ ಮೌಲ್ಯವನ್ನು ಕೊಡುವವಕ್ಕಲಿನ ಹಕ್ಕಿಗೆ ಬಾಧಕ ಬರಬಾರದು,

ಧಾರ್ಮಿಕ ಉಂಬಳಿ ಮತ್ತು ಶಿಕ್ಷಣ ಸಂಸ್ಥೆಗಳ ಆಸ್ತಿಗಳು.-ಈ ಸಂಸ್ಥೆಗಳಿಗೆ ಕೂಡಾ ನ್ಯಾಯವಾದ ಗೇಣಿ ಮತ್ತು ಖಾಯಂ ಹಕ್ಕನ್ನಿತ್ತು, ತಮ್ಮ ಆಸ್ತಿಗಳನ್ನು ಗೇಣಿಗೆ ಕೊಡುವ ಹಕ್ಕಿರತಕ್ಕದ್ದು. ಅವುಗಳ ಸ್ವಂತ ಸಾಗುವಳಿಯ ಆಸ್ತಿಗಳನ್ನೂ ಹಾಗೇ ಬಿಡತಕ್ಕದ್ದು. ಭೂಸುಧಾರಣಾ ಮಸೂದೆಯ ಸಂಬಂಧವಾದ ವ್ಯಾಜ್ಯಗಳನ್ನು ರೆವಿನ್ಯೂ ಕೋರ್ಟುಗಳ ಬದಲು ಸಿವಿಲ್ ಕೋರ್ಟುಗಳೇ ವಿಚಾರ ಮಾಡತಕ್ಕದ್ದು ಎಂಬುದರ ಬಗ್ಗೆ ಗೊತ್ತುವಳಿ ಸ್ವೀಕರಿಸಲಾಯ್ತು.

ಜಿಲ್ಲೆಯಲ್ಲಿ ಸಕ್ಕರೆಯ ತೀವ್ರ ಅಭಾವದ ಕುರಿತು ಚರ್ಚೆ ನಡೆದು ಜಿ. ಕಾಂಗ್ರೆಸ್ ಸಮಿತಿಯ. ಅಧ್ಯಕ್ಷರು ಸಂಬಂಧವಾಗಿ ಡೆಪ್ಯುಟಿ ಕಮಿಷನರರೊಂದಿಗೆ ಮಾತಾಡಬೇಕೆಂದಾಯಿತು.

ಮೈಸೂರು ಸರಕಾರವು ಚಾಲ್ತಿ ವರ್ಷದ ದವಸಧಾನ್ಯ ಸಂಗ್ರಹದ ತನ್ನ ಹೊಣೆಯನ್ನು ಮತ್ತು ಧಾನ್ಯಗಳ ಬೆಲೆಯನ್ನು ಕೂಡಲೇ ನಿಶ್ಚಯಿಸಿ ಜಾರಿಗೆ ತಂದು ಕಳೆದ ವರ್ಷದಂತೆ ಈ ವರ್ಷ ಕೂಡಾ ಅಕ್ಕಿ ಬೆಲೆಯು ವಿಪರೀತವಾಗಿ ಏರಿ ಜನಸಾಮಾನ್ಯರಿಗೆ ಹಾನಿಯಾಗದಂತೆ ನೋಡಿಕೊಳ್ಳಬೇಕು.

ಭಾರತ ಮತ್ತು ಚೀನಾ ದೇಶವು ಸದಾ ಪರಸ್ಪರ ಮೈತ್ರಿಯಿಂದಿದ್ದು ಪಂಚಶೀಲ ತತ್ವವನ್ನೊಪ್ಪಿ ಎರಡು ರಾಷ್ಟ್ರಗಳ ಪ್ರಧಾನಿಗಳು ಒಪ್ಪಂದವಗಾಡಿಕೊಂಡು ಇಡೀ ಲೋಕಕ್ಕೇನೇ ಒಂದು ಮಾದರಿಯನ್ನು ಹಾಕಿಕೊಟ್ಟರೂ ಚೀನಾ ದೇಶವು ಏಕಾ ಏಕಿಯಾಗಿ ಭಾರತದ ಗಡಿಯ ಮೇಲೆ ಒಮ್ಮೆಯೇ ಆಕ್ರಮಣಮಾಡಿರುವುದನ್ನು ಈ ಮಹಾ ಸಭೆಯು ನಿಷೇಧಿಸುತ್ತದೆ ಮಾತ್ರವಲ್ಲದೆ ಆ ಕುರಿತು ಭಾರತದ ಕಮ್ಯುನಿಷ್ಟ್ ಪಾರ್ಟಿಯು ವಹಿಸಿರುವ ದೇಶದ್ರೋಹಿ ಧೋರಣೆಯನ್ನು ತೀವ್ರವಾಗಿ ಖಂಡಿಸುತ್ತದೆ. ವಿಟ್ಲ ಫಿರ್ಕವನ್ನು ಪುತ್ತೂರಿನಿಂದ ಪ್ರತ್ಯೇಕಿಸಿದ ವಿಷಯದಲ್ಲಿ ವಿಟ್ಲದ ಜನತೆಯಲ್ಲುಂಟಾದ ತೀವ್ರ ಅತೃಪ್ತಿಯದೃಷ್ಟಿಯಿಂದ ಮೈಸೂರು ಸರಕಾರವು ಈ ವಿಷಯವನ್ನು ಪುನರಾಲೋಚಿಸಿ, ವಿಟ್ಲವನ್ನು ಪುತ್ತೂರು ಫಿರ್ಕದೊಂದಿಗೇ ಇರಿಸಬೇಕೆಂದು ಈ ಮಹಾ ಸಭೆಯು ಒತ್ತಾಯಿಸುತ್ತದೆ. ಬಂಟ್ವಾಳ ಮತ್ತು ಪಾಣೆಮಂಗಳೂರನ್ನು ಸೇರಿಸಿ ಒಂದು ತಾಲೂಕು ಮಾಡುವುದನ್ನೂ, ಮಂಗಳೂರು ಡಿವಿಜನ್ನಿನ ರಚನೆಯನ್ನೂ ಈ ಮಹಾ ಸಭೆಯು ಸ್ವಾಗತಿಸುತ್ತದೆ. ಎಂಬ ಗೊತ್ತುವಳಿಗಳು ಸಂಬಂಧಿತ ಚರ್ಚೆಗಳ ನಂತರ ಸರ್ವಾನುಮತದಿಂದ ಸ್ವೀಕೃತವಾದುವು.

ಕೊನೆಯಲ್ಲಿ ಶ್ರೀ ಬಿ. ಆರ್. ಕರ್ಕೇರರ ಸ್ಥಾನದಲ್ಲಿ ಶ್ರೀ ಎ. ಶ್ರೀಧರರನ್ನೂ ಡಾ| ಕೆ. ನಾಗಪ್ಪಾಳ್ವರ ಸ್ಥಾನದಲ್ಲಿ ಶ್ರೀ ಹಾಲಾಡಿ ಮಹಾಬಲ ಶೆಟ್ರನ್ನೂ ಕಾರ್ಯಕಾರಿ ಸಮಿತಿಗೆ ಸೇರಿಸಿಕೊಳ್ಳಲಾಯ್ತು. ಶ್ರೀ ಗೋಪಾಲ ಕಾಲೆನ್ನರ ಸ್ಥಾನದಲ್ಲಿ ಶ್ರೀ ಕೆ. ಉಪ್ಪರರನ್ನು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ನಾಮಕರಣ ಮಾಡಲಾಯ್ತು.

ಸಭಾದ್ಯಂತದಲ್ಲಿ ಸದಸ್ಯರೆಲ್ಲರಿಗೆ ಉಪಹಾರವನ್ನಿತ್ತ ಉಪಾಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರಿಗೆ ಅಧ್ಯಕ್ಷರು ಧನ್ಯವಾದವನ್ನಿತ್ತ ಬಳಿಕ ಸಭೆಯು ಮುಕ್ತಾಯವಾಯ್ತು.

ಇದೀಗ ಪ್ರಕಟವಾಗಿದೆ!

'ಮದುವೆ ಸೀರೆ'

ಜೀವನದ ಬೇರೆ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು!

ಅಷ್ಟಮಿದಿನ ಸುಬ್ಬನ ಅಂಗಡಿಗೆ ಎಲ್ಲಾ ತರದ ವೇಷಗಳು ಬಂದಿದ್ದುವು. "ಹಾಂ ಏನು ಸುಬ್ಬರಾಯ್ರೆ?" ಹುಲಿ ವೇಷಗನವನು ಕೇಳಿದರೆ, "ಸ್ವಾಮಿ ಸುಬ್ಬಪ್ಪನವರೇ?" ಎಂದು ಕರಿವೇಷದನೊಬ್ಬ ತನಗಂದರೆ ತಿವಿದಲ್ಲಿಗೂ ಸುಬ್ಬನ ಉತ್ತರವಿಷ್ಟೆ. 'ಛೇ,ಛೇ....ಈಗೆಲ್ಲಾ ಏನಯ್ಯ? ಎಲ್ಲಾ ಚೌತಿಗೆ ನೋಡೋಣ...." ಎಂದಿದ್ದಾಗ ಬಂದ ಪಾತ್ರಧಾರಿಗಳೆಲ್ಲ ಸುಬ್ಬನಿಗೆ ನಮಸ್ಕಾರ ಹಾಕಿ ಹೋದರು. ಮುಂದೆ ಚೌತಿ ಬಂದಾಗಲೂ ಅದೇ ಪಾತ್ರಧಾರಿಗಳು ಸುಬ್ಬನ ಅಂಗಡಿಗೆ ಬಂದರು, "ಸ್ವಾಮಿ, ಮೊನ್ನೇ ತಾವಂದಿದ್ದೀರಿ.... ಈ ಹೊತ್ತು" "ಛೇ...ಛೇ. ವಿನಾಯಕನನ್ನು ಕೆರೆಗೆಸಾಯುವುದು ಸಂಧ್ಯಾ ಹೊತ್ತಿನಲ್ಲಿ ಅಲ್ಲವೆ? ಈಗೇನು ಅವಸರ? ಸಂಜೆ....ಸಂ....ಜೆ" ಎಂದು ಸುಬ್ಬ ಅವರಿಗೆ ಪ್ರತ್ಯುತ್ತರಗೊಟ್ಟ.

ಆ ದಿನ ಸಂಜೆ ಎಲ್ಲಾ ಪಾತ್ರಧಾರಿಗಳು ಸುಬ್ಬನ ಅಂಗಡಿಗೆ ಬಂದು ಏನು ಕಾಣುತ್ತಾರೆ! ಗೊತ್ತೆ? ಸುಬ್ಬ ಅಂಗಡಿಗೆ ಬೀಗ ಜಡಿದು ಕೆರೆಯ ಬಳಿ ಧಾವಿಸಿದ್ದ. "ಹೀಗೂ ಉಂಟೆ" ಎಲ್ಲರೂ ಗೊಣಗಿದರು 'ಛೇ....' ಎಂದು ಎಪ್ಪಾರ್ ಹುಲಿ ತನ್ನ ತರ್ಜನೀ ಬೆರಳನ್ನು ಎಡಕಡೆಯಿಂದ ಬಲಕಡೆಗೆ ಸರಿಸಿದ ಬೆವರೊರಸಲೋ ಸುಗ. ಅದರೆ ಬೆವರೆಲ್ಲಿಂದ?

○ ○ ○

ಅಂದು ಸುಬ್ಬನಿರುವ ತೆಂಕುಪೇಟೆಯಲ್ಲಿ ಹುಚ್ಚು ನಾಯಿಗಳ ಕಾಟ ಹೆಚ್ಚಾಯಿತು. ಮೊನ್ನೆ ಸೋಮವಾರ ಸುಮಾರು ಬೆಳಗ್ಗೆ ಆ ತಾಸಿಗೆ ಒಂದು ನಾಯಿ (ಹುಚ್ಚೆಂದು ಸ್ಪಷ್ಟವಾಗಿ ತಿಳಿದಿರಲಿಲ್ಲ) ಆ ತುದಿಯಿಂದ ಈ ತುದಿಗೂ ಓಡಿ ಓಡಿ ಓಡ ತೊಡಗಿತು. ತನ್ನ ಕೆನ್ನಾಲಿಗೆಯನ್ನು ಮಾರುತನಿಗೊಡ್ಡಿ, 'ಹ್ಹ...ಹ್ಹ... ಆ' ಶ್ವಾಸವನ್ನು ಎಳೆಯುತ್ತ, ಭೀತಿಗೊಂಡಂತೆ ಕಣ್ಣನ್ನು ತೆರೆರಿಸುತ್ತ, ಓಡುತ್ತಿದ್ದ ಈ ನಾಯಿಯನ್ನು, ದಟ್ಟ ಕಪ್ಪು ನಾಯಿಯನ್ನು ಯಾರೋ, "ಹುಚ್ಚು...ನಾಯಿ ....ದೂರ ದೂರ" ಎಂದರು. ಸುಬ್ಬ ಮತ್ತವನ ಗೆಳೆಯರೆಲ್ಲ ಕೂಡಿ ಇದನ್ನು ಕೊಲ್ಲಲು ಹವಣಿಸಿದರು. ಅದರ ಬಳಿ ಧೈರ್ಯದಿಂದ ಹೋದ. (ಸುಬ್ಬನಲ್ಲ ಎಪ್ಪಾರ್! ಸುಬ್ಬ ಎಪ್ಪಾರ್‌ಗೆ ಪ್ರೋತ್ಸಾಹ ಮಾತ್ರ ಗೊಡಲು) ಚೆನ್ನಾಗಿ ಎರಡು ಬಡಿದ. ಆದರೂ ಇನ್ನೂ ಅದು ಸಜೀವವಾಗಿರುವಂತೆ ಕಂಡಿತು. ಅದು ಮುಂದೆ ಓಡಿತು. "ಹುಚ್ಚು ನಾಯಿ....ದೂರ ದೂರ" ಸುಬ್ಬ ಮತ್ತವನ ಗೆಳೆಯರು ಬೊಬ್ಬಿಟ್ಟರು. ಅಷ್ಟರಲ್ಲಿ ತೆಂಕುಪೇಟೆಯವರು (ಎಪ್ಪಾರ್ ಇಲ್ಲಿ ತುದಿ ತೆಂಕುಪೇಟೆಯವರು) ಅದನ್ನು ತಡೆದಾಗ ಅದು ಪುನಃ ಸುಬ್ಬರಿರುವತ್ತ ತಿರುಗಿತು. ಈ ಬಾರಿಯು ಪೆಟ್ಟು ಅದನ್ನು ಕೊಲ್ಲಲು ವಿಶೇಷವಾಗಿ ಸಮರ್ಥವಾಗಿತ್ತು. ಎಲ್ಲರಿಗೂ ಆಶ್ಚರ್ಯ! "ಇಂತಹ ನಾಯಿಯನ್ನು ಕೊಂದವರಾರು? ಅವರು ನಿಜಕ್ಕೂ ಶೂರರು" ಎಂದು ಜನರಂದಾಗ ಸುಬ್ಬ, "ನಾವು, ನಾವು ಎಂದು ಮೀಸೆ (ಮೀಸೆಯಿಲ್ಲದಿದ್ದರೂ) ತಿರುಪಿಕೊಂಡ. ಕೆಲವರು ಅವನ, ಎಪ್ಪಾರನ ಬೆನ್ನು ತಟ್ಟಿದರು.

ಅದೇ ದಿನ ಮಧ್ಯಾಹ್ನ ಯಾರೋ ಒಬ್ಬರು ಆ ನಾಯಿಯ ಬಳಿ ಬಂದು ನೆರೆದಿದ್ದವರನ್ನು "ಇದೇನು? ನನ್ನ ನಾಯಿಯನ್ನ ಕೊಂದು ಹಾಕಿದವರಾರು?"

"ನಿಮ್ಮ ನಾಯಿ?"

"ಹೌದಯ್ಯ"

"ಅಲ್ಲ, ಅದಕ್ಕೆ ಸ್ವಲ್ಪ ಹುಚ್ಚು ಹಿಡಿದಿದೆ...."

"ಏನು? ಹುಚ್ಚೆ? ಆ ಟಾಮಿಗೆ (ನಾಯಿಯ ಹೆಸರು) ಹುಚ್ಚೆಂದು ಹೇಳುವವರಿಗೆ ಹುಚ್ಚಿನ್ನಲ್ಲೇ? ನಿನ್ನೆಯ ತನಕ ಸರಿಯಿದ್ದ ಟಾಮಿಗೆ?"

"ಹೊ!"

"ಕೊಂದವರಾರು?" ಸುಬ್ಬನನ್ನು ಪ್ರಶ್ನಿಸಿದರು ರಾಯರು.

"ಬೇ....ಯಾರೋ .. ಏನೋ . ನನಗೆ ಗೊತ್ತೇ ಇಲ್ಲ .ನಿಜಕ್ಕೂ ಗೊತ್ತಿಲ್ಲ ಸ್ವಾಮಿ ..." ಇಬ್ಬರ ಹೃದಯ ಬಡಿಯಿತು.

ರಾಯರು ಇನ್ನೊಮ್ಮೆ ಪ್ರಶ್ನೆ ಮಾಡುವಲ್ಲಿ ಸುಬ್ಬನೂ ಎಪ್ಪಾರನೂ ಕಾಣೆಯಾಗಿದ್ದರು.

○ ○ ○

"ಎಪ್ಪಾರ್ ನಿನಗೆ ಫಾರ್ಮಸಿಟ್ ಕಂಪನಿಯವರ ಅಡ್ರಾಸ್ ಗೊತ್ತಿದೆ?'

"ಇಲ್ಲಪ್ಪ. ನನಗೂ ಮರೆತುಹೋಗಿದೆ ಸುಬ್ಬ ...'

"ಈಗೇನು ಮಾಡೋಣ? ನನಗೆ ಅತ್ಯಗತ್ಯವಾಗಿ ಬೇಕಿತ್ತಲ್ಲ?...."

'ಹಾಂ. ಅವರಿಗೆ ಬರೆದು ಹಾಕೋಣ ದಯಮಾಡಿ ತಮ್ಮ ವಿಳಾಸ ಕೊಡಿರೆಂದು.......' ಜತೆಯವರೆಲ್ಲಾ ನಕ್ಕಾಗ ಸುಬ್ಬ ಮಾತ್ರ ಮಿಕಮಿಕ ನೋಡುತ್ತಿದ್ದ.

○ ○ ○

ಸುಬ್ಬ ಒಂದೊಂದು ಎಪ್ಪಾರನೊಂದಿಗೆ ಮಲ್ಪೆಗೆ ಹೋಗಿದ್ದ. ಸಮುದ್ರದ ಬಳಿ ಇಬ್ಬರೂ ಕುಳಿತು ಹರಟೆ ಹೊಡೆದು ಹೊಡೆದು ಕೊನೆಗೆ ಆ ಹರಟೆ ಎಲ್ಲಿ ಬಂತೂ ಅಂತ ಕೇಳಿದರೆ ಹೇಳುತ್ತೇನೆ ಕೇಳಿ ಮೊದಲು ಅರೆಬುದ್ಧಿವಂತನೆನಿಸಿದ ಎಪ್ಪಾರ್ ಕೇಳಿದ ಸುಬ್ಬನನ್ನು, "ಲೋ, ಲೋ, ಸುಬ್ಬ. ಒಂದು ವೇಳೆ...." ಸುಬ್ಬ ಸಮುದ್ರತೀರದ ದೃಶ್ಯವನ್ನು ನೋಡುವುದರಲ್ಲಿಯೇ ಮಗ್ನನಾಗಿದ್ದ. ಪುನಃ ಸುಬ್ಬನನ್ನುಎಚ್ಚರಿಸಿದ ಎಪ್ಪಾರ್. "ಅಂನಂತೆ ಸುಬ್ಬ ಒಂದು ವೇಳೆ ಈ ಸಮುದ್ರಕ್ಕೆ ಬೆಂಕಿಹಿಡಿದರೆ...?"

"ಹೌದು?'

"ಅಲ್ಲ, ಮೀನುಗಳ ಗತಿಯೇನಾಗುವುದೊ ಪಾಪ"

"ಮೀನುಗಳ ಗತಿ?"

"ಹೌದಂದೆ....'

"ಅವಕ್ಕೇನು? ಹತ್ತಿರದ ಮರವನ್ನು ಹತ್ತಿ ಕುಳಿತುಕೊಳ್ಳುತ್ತಾವೆ'

"ಅಯ್ಯೋ ಹುಚ್ಚಪ್ಪ, ಹಾಗೆ ಮರವನ್ನು ಹತ್ತಿಕೊಳ್ಳಲಿಕ್ಕೆ ಅವುಗಳು ಕರುಗಳೇನು?'

"ಹ್ಞಾಂ, ಹೌದು..'

○ ○ ○

ಸುಬ್ಬನ ತಂದೆ ಯಶವಂತರಾಯರಿಗೆ ವಾರಭವಿಷ್ಯ ನೋಡುವುದೆಂದರೆ ಬಹಳ ಆಸ್ಥೆ, ಪ್ರತಿ ವಾರವೆಂಬಂತೆ ಎಲ್ಲಾ ಪತ್ರಿಕೆಗಳನ್ನು ತರಿಸಿ, ಇಲ್ಲವೇ ಲೋಕಲ್ ಲೈಬ್ರರಿ ಅಥೋರಿಟಿಗೆ ಹೋಗಿ ಎಲ್ಲಾ ಪತ್ರಿಕೆಗಳ ತಮ್ಮ ಮಿಥುನ ರಾಶಿಯ ಫಲವನ್ನು ಕಾಣುತ್ತಿದ್ದು ಮನೆಗೆ ಹಿಂತಿರುಗುತ್ತಿದ್ದರು.

ಒಮ್ಮೆ ಮಿಥುನ ರಾಶಿಗೆ ಬರದಿತ್ತು 'ಈ ವಾರದಲ್ಲಿ ನಿಮಗೆ ಧನ ಫಲ ತುಂಬ" ಅಂತ. ಯಶವಂತರಾಯರಿಗೆ ಎಲ್ಲಿಲ್ಲದ ಸಂತಸ. ಸಂತಸದಿಂದ ಮನೆಯತ್ತ ಧಾವಿಸಿದಾಗ ಯಾರದೋ ಒಬ್ಬರ ದನ ಬಂದು ಅಂಗಳದಲ್ಲಿ ನಿಂತಿದ್ದದನ್ನು ಕಂಡರು. ಅದು ಹುಲುಸಾಗಿ ಬೆಳೆದ ಕಬ್ಬನ್ನು ತಿನ್ನುತ್ತಿದ್ದನ್ನೂ ಕಂಡರು.

"ಲೋ ಸುಬ್ಬ, ದನ ದನ...." ರಾಯರು ಗೊಣಗಿದರು. ಸುಬ್ಬ ಓಡಿಬಂದ "ಅಪ್ಪ ದನವೆ! ಈ ವಾರ ನಿಮ್ಮ ವಾರ ಭವಿಷ್ಯದಲ್ಲಿ ಧನಲಾಭ ಅಂತಿದೆ ಅದನ್ನು ನಾನು ಕಂಡಿದ್ದೇನೆ"

"ಅದಂತಿರಲಿ ಈಗ ದನವನ್ನು ಓಡಿಸು" ಎಂದಾಗ ಸುಬ್ಬ ಒಂದು ಕಬ್ಬಿನ ಗಿಡವನ್ನೇ ಮುರಿದು ಅದರಿಂದ ಓಡಿಸಿದನಂತೆ. ರಾಯರ ಕೈ ನಾಲ್ಕಾರು ಬಾರಿ ಹೆಣೆಯನ್ನು ಬಡಿಯಿತು.

—ಕೆ. ರಮೇಶ ಪೈ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 234/1959.

ಮಹಾರಾಷ್ಟ್ರ ಎಪೆಕ್ಸ್ ಕೊರ್ಪೊರೇಶನ್ ಲಿಮಿಟೆಡ್ ಉಡುಪಿ —ವಾದಿ.

ಮತ್ತು

Y. ಅಣ್ಣಣ್ಣ ಸೆಟ್ಟಿ ಕೂಡಾ —ಪ್ರತಿವಾದಿರು.

ಇವರೊಳಗೆ

3ನೇ ಪ್ರತಿವಾದಿ—ಕೆ. ಸರ್ವ ಸೆಟ್ಟಿ—ಕುಷ್ಟಪ್ಪ ಸೆಟ್ರ ಅಳಿಯ—ಕಿದಿಯೂರು ಗ್ರಾಮದ ಕಪ್ಪೆಟ್ಟು—ಇವರಿಗೆ,

ಪ್ರತಿವಾದಿರು ವಾದಿಗೆ ತಾ. 23-5-56 ರಲ್ಲಿ ರೂಪಾಯಿ 600/ ಕ್ಕೆ ಬರೆಕೊಟ್ಟ ಡಿಮಾಂಡ ನೋಟಿನ ಅಲ್ಪ ಬಾಕಿ ವ ಬಡ್ಡಿ ಕೂಡಾ ರೂಪಾಯಿ 456-06ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 29-9-1959 ಕ್ಕೆ ತನಿಖೆ ಬಗ್ಗೆ ಇಟ್ಟಿದೆ. ಆ ದಿವಸ ಸದರಿ 3ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉಡಹರಿಸದೆ ಇದ್ದರೆ ಆತನ ಗೈರಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damoder Kamath,
Advocate for Plaintiff.

ಉಡುಪಿ, 17-9-59.

ಕವಿತಾವಿತಾನ

ನನ್ನವಳ ನೆನಪು!

೧

ಏಕಾಂತವಾಸದಲಿ—ಏಕಾಂಗಿ ಕುಳಿತಿರಲು
ಚಿಂತೆಗಳ ಭೂತವದು ಬೆಂಬತ್ತಿ ಬರುವುದು!
ಎನ್ನವಳನಡೆನುಡಿಯು, ಇಲ್ಲದಿಹ ಬರಿ ಮನೆಯು,—
ಶೂನ್ಯವಾಗಿದೆ-ಬಾಳುಬದುಕು ಏಕೆಂದು!

೨

ಸುಖದ ಬಾಳ್ವೆಗೆ ಎಂದು, ಒಪ್ಪಿ ಕೈಹಿಡಿದಂದು;
ಭಾವನಾಗಗನವೇರಿ ಹಾರಿ ಹೊರಟಿದ್ದೆ.
ಮನಕೆಮೆಚ್ಚಿದ ಹುಡುಗಿ, ತುಂಬು ಚೆಲುವಿನ ಬೆಡಗಿ—
ಜೊತೆಗಿರಲು ಸತತ್ತ ಸ್ವರ್ಗವಪಡೆಯಲಿಹುದೆ?

೩

ಬಾಳರಸವೀಣೆಯದ—ನುಡಿಸಲೆಂತಹುದು ಮುದ?
ತೃಪ್ತಿಯಿಂದಿರೆ ಬಾಳಿಗೇನು ಸುಖಕಡಿಮೆ?
ಸೋಲುಗೆಲುವನು ಮರೆತು ಸುಖದುಃಖದಲಿ ಬೆರತು,—
ಬದುಕುವುದೆ ಜೀವನದ ಗುರಿಯು ಹಿರಿಮೆ!

೪

ನದಿಯುನೀರ್ ಜಡಲೊಳಗೆ ಸಿಹಿಕಳೆದು ಉಪ್ಪಾಗೆ
ಒಂದರೊಳಗೊಂದೈಕ್ಯವಾಗಿರುವುದಂತೆ!
ಸತಿಪತಿಯರೊಂದಾಗಿ ಸಿಹಿಕಹಿಯನುಣುವಾಗಿ,
ಮಾತ್ರೆಂದು ತೃಪ್ತಿಯಿಂದಿರಲುಂಟೆ-ಚಿಂತೆ?

೫

ಮಾತುಮಲ್ಲಿಗೆಯರಳು—ನೋಟ, ಒಲವಿನ ಒಸರು
ಹೃದಯಮಿಡಿತವೊಂದಾಗಲಿದುವೆ ಬಿಸುಬಿಸುಗೆ!
ಸತಿಯ ಸೌಜನ್ಯದಲಿ ಜೋಡಾದ ಬಾಳಿನಲಿ,
ಮೆಲುಕಳಿಸುತಿದೆ ನೆನಪು—ಉಳಿದು ಜೊತೆಗೆ!

೬

ಏರು ಜವ್ವನದಲ್ಲಿ ಹೃದಯಾಂತರಾಳದಲಿ,
ಮೂಡಿಗಿದ್ದ ಅನುರಾಗ ದೊಸರುಕ್ಕಿ ತಾಗಿ!
ನಲ್ಲನಲ್ಲೆಯರೊಂದು-ದೇಹ ಜೀವದ ಕಂದು
ಒಬ್ಬರನ್ನುಳಿದೆಲ್ಲಿ ಇದೆ ಸುಖದ ಭೋಗ?

೭

ಸಂಸಾರಸಾಗರದ ಆಳನೀಳವನರಿತ.
ಕಷ್ಟದೆಡೆಯೊಳೂ ಕರುಣರಸ ಒಸರಬಹುದು!
ನೀರನೆರೆಯನ್ನರಿಯಬೇಕು ಅಳಕ್ಕಿಳಿದು
ಸುಖಮುಃಖವರಿತಿರಲು ಬಾಳುಹಸನಹುದು!

೮

ಮನವೆನ್ನ ಕುದಿಯುತಿದೆ ಎನ್ನವಳ ನೆನೆನೆನೆದು—
ನಶ್ವರದ ಸಿರಿಯುಸಂಗವವೆನಗೆ ಬೇಡ!
ಹೆಣ್ಣೆಂಬ ಒಲವಿನಾಸರೆ ಎನ್ನಬಳಿಗಿರಲಿ
ಯೋಗಿ ವೈರಾಗಿಗಳಿಗಹುದೆ ಸುಖ? ನೋಡ!

—ಶ್ರೀ ಕೆ. ಜೆ. ಶೆಟ್ಟಿ

ಕುಮಾರಿ ಚಿತ್ರಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಪ್ರಶಸ್ತ.

ಬೆಲೆ ರೂ. 5/- ದೀರ್ಘ ಲವ ಬಾಧೆಗೆ ರೂ. 8/-

(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA-40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಪರಿಚಯ

ಆದರ್ಶಗೃಹಿಣಿ—ಶ್ರೀಮತಿ ಮ್ಯೆಕ್‌ಮಿಲನ್

ದಾಂಪತ್ಯಜೀವನದ ಅರುಣೋದಯಕಾಲದಿಂದಲೂ ತನ್ನ ಪತಿಯೊಡನೆ ಸಹಯೋಗದಿಂದ ಈಗ ವರ್ತಿಸಿದ್ದಾಳೆ.

ತನ್ನ ವ್ಯಸ್ತ ಜೀವನಕ್ಕಿಂತ ಶಾಂತಿಪೂರ್ಣ ಸುಖಮಯ ಜೀವನವೇ ಅಧಿಕ ಪ್ರಿಯವಾಗಿರುವಂತೆ, ಗುಲಾಬಿ ಹೂಗಳು ಚಿಕ್ಕಪುಟ್ಟ ಗಿಡಗಂಟಿ ಹಾಗೂ ಗಿಡಮರಗಳ ಮಧ್ಯದಿಂದ ಪ್ರಸನ್ನತೆ ಬೀರುವಂತೆ ಶ್ರೀಮತಿ ಡೋರೊಥಿ ಮ್ಯೆಕ್‌ಮಿಲನ್‌ಳು ಸಂಯುಕ್ತ ರಾಜ್ಯ (ಗ್ರೇಟ್ ಬ್ರಿಟನ್)ದಲ್ಲಿ ಬೆಳಗುತ್ತಿರುವಳು. ಗ್ರೇಟ ಬ್ರಿಟನ್ನದ ಈಗಿನ ಪ್ರಧಾನಿ ಶ್ರೀ ಹೆರೋಲ್ಡ್ ಮ್ಯೆಕ್‌ಮಿಲನ್‌ರ ಧರ್ಮಪತ್ನಿಯಾಗಿ ಪ್ರಫುಲ್ಲಿತ ಜೀವನದ ಮೂಲಕ ಮೆರೆಯುತ್ತಿರುವಳು.

ಬ್ರಿಟನ್ನದ ಇಂದಿನ ಪ್ರಧಾನ ಮಂತ್ರಿಗಳಾಗಿರುವ ಶ್ರೀ ಹೇರಾಲ್ಡ ಮ್ಯೆಕ್‌ಮಿಲನ್ನರ ಪ್ರೀತಿಯ ಪತ್ನಿಯಾದ ಮಿಸೆಸ್, ಡೊರೋಥಿ ಮ್ಯೆಕ್‌ಮಿಲನ್‌ಳೂ ಸಹ, ಇಂಗ್ಲಂಡಿನ ಅಂದಿನ ಮಾಜೀ ಪಂತಪ್ರಧಾನಿಗಳಾದ ಹಾಗೂ ಆಧುನಿಕ ಪ್ರಪಂಚದ ಪ್ರಥಮ ಪ್ರಸಿದ್ಧಿಗಳಾದ ಸರ್. ವಿಲ್‌ಸ್ಟನ್ ಸ್ಪೆನ್ಸರ್ ಚರ್ಚಿಲ್‌ರ ಆದರ್ಶ ಸತಿಯಾದ ಮಿ.ಸೆಸ್, ಕ್ಲೆಮೆಂಟ್ ಚರ್ಚಿಲ್‌ಳ ಹಾಗೆ, ಗೃಹಕಾರ್ಯದಲ್ಲಿ ಶಾಂತಿದಾಯಕ ಜೀವನವನ್ನು ಬಾಳಲು ಅತ್ಯಧಿಕ ಪ್ರೀತಿಸುತ್ತಾಳೆ.

ರಾಜನೀತಿ ಮತ್ತು ಸಮಾಜದಿಂದ ಅತ್ಯಂತ ನಿಕಟವಾದ ಸಂಬಂಧವಿರುತ್ತಿದ್ದರೂ, ಅವೆಲ್ಲವುಗಳಿಂದ ತಟಸ್ಥವಿರುವದೇ ಶ್ರೀಮತಿ ಡೊರೋಥಿಯವಳಿಗೆ ಅಧಿಕ ಸೇರುವದು.

ಮಿಸೆಸ್ ಡೋರೊಥಿಯವಳ ಜನ್ಮವು ೫೮ ಸಂವತ್ಸರಗಳ ಪೂರ್ವ ಅಂದರೆ, ಸನ್ ೧೯೦೦ ನೆಯ ಜುಲೈ ತಿಂಗಳ ೨೮ನೇ ಬುಧವಾರ ಮುಂಜಾನೆ ಆಯಿತು. ಇವಳು ಡೆವನ್ ಶಾಯರ್‌ದ ಒಂಬತ್ತನೆಯ ಡ್ಯೂಕರ್‌ನ ತೃತೀಯ ಪುತ್ರಿಯಾಗಿದ್ದಾಳೆ ಈಕೆಯ ಬಾಲ್ಯಾವಸ್ಥೆಯ ಕೆಲವು ದಿನಗಳು—ಲೆಂಕ್‌ಶಾಯರ್, ಲಂಡನ್ ಹಾಗೂ ವಾಟರ್ ಫೋರ್ಡ್ ಇತ್ಯಾದಿ ಪಟ್ಟಣಗಳಲ್ಲಿ ಪೂರ್ತಿಗೊಂಡವು. ಭಾಗ್ಯಶಾಲಿ ಸಾದೆ ಕನ್ಯೆಯಾದ ಡೊರೋಥಿಯು ಹದಿನಾರು ವರ್ಷದ ತರುಣಿಯಾಗುವಾಗಲೇ ಗಂಡನ ಕೈಹಿಡಿದು ವೈವಾಹಿಕ ಜೀವನವನ್ನು ಸಾಗಿಸಲು ಸಿದ್ಧಳಾದಳು!

ಈಕೆಯ ತಂದೆ, ಕೆನಡಾದ ಗವರ್ನರ್ ಜನರಲ್ ಸ್ಥಾನವನ್ನು ಅಲಂಕರಿಸಿಕೊಂಡಾಗ ಅವರ ಕುಟುಂಬವು ಇಂಗ್ಲಂಡಿನಿಂದ ಕೆನಡಾಕ್ಕೆ ಸ್ಥಳಾಂತರ ಹೊಂದಿತು. ಅಂದು ಕೆನಡಾದಲ್ಲಿರುವಾಗಲೇ ಕುಮಾರಿ ಡೊರೋಥಿಗೆ, ಕುಮಾರ ಹೆರೋಲ್ಡ ಮ್ಯೆಕಮಿಲನ್‌ನ ಪರಿಚಯವಾಯಿತು! ಈ ಆಕಸ್ಮಿಕ ಪರಿಚಯವೇ ಮುಂದೆ ಪ್ರೇಮವಿವಾಹಕ್ಕೆ ತನ್ನ ಸರ್ವಸ್ವವನ್ನೂ ಅರ್ಪಿಸಿತು! ಸನ್ ೧೯೨೦ರಲ್ಲಿ ರಾಣಿ ಎಲೆಕ್ಝಾಂಡ್ರಾ ಹಾಗೂ ಯುವರಾಜರಾಯಿಯವರ ಹಿರಿತನದಲ್ಲಿ ಇಪ್ಪತ್ತು ವರ್ಷದ ಯುವತಿ ಡೋರೋಥಿಯವಳ ವಿವಾಹವು ೨೬ನ್ನು ದಾಟಿದ ಯುವಕ ಮ್ಯೆಕ್‌ಮಿಲನ್‌ನೊಡನೆ ಬಹು ಸಡಗರದಿಂದ ಸಾಂಗವಾಯಿತು.

ಶ್ರೀಮತಿ ಮ್ಯೆಕ್‌ಮಿಲನ್ನಳ ಪ್ರಮುಖ ವಿಚಾರಗಳಲ್ಲಿ ಒಂದು ಇಂತಿದೆ—ವಿವಾಹದ ಪೂರ್ವದಲ್ಲಿ ಪ್ರತಿಯೊಬ್ಬ ಸ್ತ್ರೀಯು—"ಭವಿಷತ್ಕಾಲದ ಸಂಬಂಧದಲ್ಲಿ ತನ್ನ ಭಾವೀ ಪತಿಯ ಮಹತ್ವಾಕಾಂಕ್ಷೆಯೇನಿದೆಯೆಂಬುದು ಮೊಟ್ಟಮೊದಲು ಜ್ಞಾಪಿಸಿಕೊಳ್ಳುವದು ಅತಿ ಮಹತ್ವವಾದದ್ದು." ಯದ್ಯಪಿ ಇಂದು ಡೊರೋಥಿ ಒಬ್ಬಳಾಗಿದ್ದು ಆಕೆ ಪ್ರಧಾನಿಯ ಧರ್ಮಪತ್ನಿಯಾಗಿರುವಳು. ನಿಜವಾಗಿಯೂ ಅವಳು ಪ್ರೆಸ್ಸಿನ (ಮುದ್ರಣಾಲಯದ) ಓರ್ವ ಮುದ್ರಕನಿಗೆ ಮಡದಿಯಾಗಿದ್ದಳೆಂಬುದು ಮಾತ್ರ ಎಂದೂ ಮರೆಯದ ಸಂಗತಿಯಾಗಿದೆ. ಆದರೆ ಇಂದು ಶ್ರೀಮತಿ ಡೊರೋಥಿಯು ತನ್ನ ಪತಿಯ ಕರ್ತೃತ್ವಶಕ್ತಿಯ ಬಲದಿಂದ ಪ್ರಾಪ್ತವಾದ ಸುಖ ಮತ್ತು ವೈಭವವನ್ನು ಹೊಂದಿರುವಳು. ಆದರೆ ಇವಳನ್ನು ಬಿಟ್ಟು ಇತರೇ ಸರ್ವಸಾಧಾರಣ ಮಹಿಳೆಯರಿಗೆ ಪ್ರಾಪ್ತವಾಗುವದು ಅಸಂಭವನೀಯವಾದದ್ದು ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಉದ್ಭವಿಸುವದು.

ಸ್ವತಃ ಶ್ರೀಮತಿ ಮೆಕ್‌ಮಿಲನ್‌ಳು ಈ ವಿಷಯದಲ್ಲಿ ದೊಡ್ಡ ಅಭಿಮಾನದಿಂದ ಹೇಳುತ್ತಾಳೆ: "ನಾನು, ಓರ್ವ ಮುದ್ರಕ ವೃತ್ತಿಯ ತರುಣನೊಂದಿಗೆ ವಿವಾಹವಾದರೂ ತನ್ನ ವೈವಾಹಿಕ ಜೀವನದ ಪ್ರಭಾತಕಾಲ ಅತ್ಯಂತ ಸಾಧಾರಣ ರೂಪದಿಂದಿದ್ದರೂ ಸಂತೋಷಪೂರ್ವಕವಾಗಿ ಕಳೆದ ನಾನು, ಇಂದು ಯಾರಿದ್ದೇನೆಂಬುದು ನೋಡಿರಿ?"

ಮಿಸ್ಟರ್ ಹೆರಾಲ್ಡ್ ಮ್ಯೆಕ್‌ಮಿಲನ್ನರು ಪ್ರಾರಂಭದಲ್ಲಿ ತಮ್ಮ ಪಾರಿವಾರಿಕ ಮುದ್ರಣಾಲಯದಲ್ಲಿ ಮುದ್ರಕನ ಕಾರ್ಯಕ್ಷೇತ್ರದಲ್ಲಿ ದುಡಿಯುತ್ತ ಉಳಿದರು. ತದ್ವಿರುದ್ಧವಾಗಿ ಇವರ ರಾಜನೀತಿಕ ಜೀವನದ ಶುಭಾರಂಭವಾಗತೊಡಗಿತು. ಶ್ರೀಮತಿ ಮೆಕ್‌ಮಿಲನ್‌ಳು ಆರಂಭದಲ್ಲಿ ತನ್ನ ಪತಿಗೆ ಹೇಗೆ ಮುದ್ರಣಕ್ಷೇತ್ರದಲ್ಲಿ ಸಹಭಾಗಿಯಾಗಿದ್ದಳೋ, ಅದೇ ಪ್ರಕಾರ ಇಂದವಳು ರಾಜನೀತಿಯ ಜೀವನರಂಗದಲ್ಲಿಯೂ ತನ್ನ ಪತಿಗೆ ಆದರ್ಶ ಸಹಧರ್ಮಿಣಿಯಂತೆ ಹಾರ್ದಿಕ ಸಹಯೋಗ ಕೊಟ್ಟಳು.

ಚುನಾವಣೆಯ ಸಮಯದಲ್ಲಿ ಪತಿಯ ಉಮೇದುವಾರಿಕೆಯ ಸಮರ್ಥನದಲ್ಲಿ ಪ್ರಚಾರ ಮಾಡಲು ಅತ್ಯಧಿಕ ಕಷ್ಟಗಳನ್ನು ಎದುರಿಸಿದಳು. ಇದರ ಅತಿರಿಕ್ತವಾಗಿ ಸನ್ ೧೯೨೯ರಿಂದ ೧೯೩೧ರ ನಡುವೆ ಶ್ರೀ ಮೆಕ್‌ಮಿಲನ್‌ರು ಪಾರ್ಲಿಮೆಂಟದಿಂದ ಅನುಪಸ್ಥಿತರಿದ್ದಾಗ, ಅವರ ನಿರ್ವಾಚನ ಕ್ಷೇತ್ರದಲ್ಲಿ ಲೋಕಪ್ರಿಯತೆಯನ್ನು ಪ್ರಾಧಾನ್ಯಗೊಳಿಸುವ ಮಹಾನ್‌ಕಾರ್ಯವನ್ನೂ ಶ್ರೀಮತಿ ಮೆಕಮಿಲನ್‌ಳೇ ಪೂರ್ಣಪಡಿಸಿದಳು.

ಶ್ರೀಮತಿ ಡೊರೋಥಿಯ ಲೋಕಪ್ರಿಯತೆಯನ್ನು ಕಂಡು, ಒಮ್ಮೆ ಅವಳ ಓರ್ವ ಸ್ನೇಹಿತನು ಇವಳಿಗೆ ಪಾರ್ಲಿಮೆಂಟಿನ ನಿರ್ವಾಚನದಲ್ಲಿ ಭಾಗವಹಿಸುವ ಸಲಹೆ ಸೂಚನೆಗಳನ್ನು ಕೊಟ್ಟನು. ಆದರೆ ಅವಳು "ಪಾರ್ಲಿಮೆಂಟಿನ ಚುನಾವಣೆಯಲ್ಲಿ ತನ್ನ ಪತಿಗೆ ಸಹಾಯ ಮಾಡುವುದೇ ನನಗೆ ಪ್ರಿಯವಾಗಿದೆ" ಎಂದು ಹೇಳಿ ನಿರ್ವಾಚನದಲ್ಲಿ ಸಮಾವೇಶಹೊಂದಲು ಅಸ್ವೀಕಾರ ಮಾಡಿದಳು!

ಶ್ರೀ ಮೆಕ್‌ಮಿಲನ್‌ರ ನಿರ್ವಾಚನ ಕ್ಷೇತ್ರದಿಂದ ಅಸಂಬದ್ಧವಾದ ಕ್ಷೇತ್ರಗಳಲ್ಲಿಯೂ ಶ್ರೀಮತಿ ಡೋರೊಥಿಯು ಅತ್ಯಂತ ಲೋಕ ಪ್ರಿಯಳಾಗಿದ್ದಳು. ಉದಾರ ಹಾಗೂ ಕೋಮಲ ಹೃದಯದ ಈ ಮಹಿಳೆಯ ರೂಪದಲ್ಲಿ ಆಕೆ ಬ್ರಿಟನ್ನದ ಪ್ರತಿಯೊಬ್ಬ ಪ್ರಜೆಗೆ ಚಿರಪರಿಚಿತಳಾಗಿದ್ದಾಳೆ! ತನ್ನ ಸಮಸ್ಯೆಯ ಯಂತ್ರದ ಪ್ರಾಪ್ತಿಗಾಗಿ ಇವಳ ಹತ್ತಿರ ಹೋದವನು ಎಂದೂ ನಿರಾಶೆಯ ಭಾವನೆ ತಾಳುವದಿಲ್ಲ ಈಕೆಯ ಸಹಾಯತೆಯನ್ನು ಬಯಸುವ ಪ್ರತಿಯೊಬ್ಬನೂ ಮುಕ್ತ ಹಸ್ತದಿಂದ ಅದನ್ನು ಪಡೆಯುತ್ತಾನೆ ಅವಳ ಈ ಗುಣಗಳು ಪ್ರಶಂಸನೀಯವಾಗಿವೆ!

ರಾಜಕೀಯ ರಂಗದಲ್ಲಿ ತನ್ನ ಪತಿಗೆ ತೋರಿಸಿದ ಸಹಾನುಭೂತಿಯಂತೆ ಅವಳಿಗೂ ಕೆಲವು ಸಾಮಾಜಿಕ ಕಾರ್ಯದಲ್ಲಿಯೂ ಅಭಿರುಚಿಯಿರುವದು ಬಾಲ ಕಲ್ಯಾಣಕಾರಿ ಕಾರ್ಯಗಳಲ್ಲಿ ವಿಶೇಷವಾಗಿ ಅವಳು ಆಸ್ಥೆವಹಿಸುತ್ತಾಳೆ ಹಾಗೂ ಆ ಕಾರ್ಯಗಳಿಂದ ಸಂಬಂಧಪಟ್ಟ ಸಮಿತಿಗಳಲ್ಲಿಯ ಸಮಸ್ಯೆಗಳನ್ನೂ ಸಹ ಬಿಡಿಸುತ್ತಾಳೆ.

ಒಬ್ಬ ಮಗ ಹಾಗೂ ಮೂವರು ಹೆಣ್ಣು ಕಂದಗಿಯರಿದ್ದು, ೧೨ ಮಂದಿ ಮೊಮ್ಮಕ್ಕಳಿದ್ದಾರೆ. ಇಂದಿನ ಈ ಆಧುನಿಕ ಯುಗದಲ್ಲಿ ಪ್ರತಿಯೊಬ್ಬ ವಕ್ತಿಗೆ ಅವನ ದಾರಿಯಿಂದಲೇ ನಡೆಯುವದು ಉಚಿತವಾದದ್ದು; ಪರಿವಾರಿಕ ಈ ಮಾರ್ಗ ಪ್ರದರ್ಶಿಕೆಯು ಸ್ಪಷ್ಟವಾದ ಅಭಿಮತವಿರುತ್ತದೆ.

ಈ "ಮೂಲ ವಿಚಾರದಿಂದ ಶ್ರೀಮತಿಯು ತನ್ನ ಮೊಮ್ಮಕ್ಕಳ ಕಾರ್ಯ ಕ್ಷೇತ್ರದಲ್ಲಿಯೂ ಹಸ್ತಕ್ಷೇಪ ಮಾಡುವದಿಲ್ಲ" ಬಹುಶಃ ಇಂಥ ವಿವೇಕ ದರ್ಶನವು ಕೋಟಿಗಟ್ಟಲೆ ಅನ್ಯ ಸ್ತ್ರೀಯರಲ್ಲಿಯೂ ಕೂಡ ದೊರಕುವದು ದುಸ್ತರ.

ಇಂದಿನ ಈ ವಿಜ್ಞಾನ ಯುಗದಲ್ಲಿ ಶ್ರೀಮತಿ ಡೋರೊಥಿ ಮ್ಯೆಕಮಿಲನ್‌ಳು ಆದರ್ಶ ಮಹಿಳೆಯಾಗಿ ಉತ್ತರೋತ್ತರ ಲೋಕ ಖ್ಯಾತಿಯನ್ನು ಪಡೆದಿರುವಳು.

—ಶ್ರೀ ರಾಮಕೃಷ್ಣ ಎ. ಪೈ.
ಕಾಳರಮಠ, ಅಂಕೋಲಾ.

ಲೈಬ್ರೆರಿಗಳಿಗೆ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ. ಬರೆದವರು: ಡಾಕ್ಟರ ಜೇಮ್ಸ್ ಬಿ. ಕೊನೇಂಟ ಅನುವಾದಕ: ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೧೪೦. ಬೆಲೆ: ರೂ. ೧.೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ. ಮಾಡಿರದ ಅಪರಾಧಗಳಿಗಾಗಿ ಏಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ. ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದವರು ಕು.ಶಿ.ಹರಿದಾಸ ಭಟ್ಟರು. ಪುಟ: ೩೦೮ ಬೆಲೆ: ರೂ. ೨.೫೦.

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ. ಅನುವಾದಕರು: ಕೆ. ಬಿ. ರಾಮಕೃಷ್ಣರಾಯ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೨೫೦. ಬೆಲೆ: ರೂ ೨.೨೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ. ಪ್ರಜಾತಂತ್ರಾತ್ಮಕ ಸರಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ವಿಮರ್ಶಿಸುವ ಅಪೂರ್ವ ಗ್ರಂಥ. ಅನುವಾದಕ: ಕು. ಶಿ. ಹರಿದಾಸ ಭಟ್ಟ. ಪುಟ: ೨೫೦. ಬೆಲೆ: ರೂ. ೨,

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಬಳಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ ವರ್ಣಿಸಲಾಗಿದೆ. ಬರೆದವರು: ಯು. ರಾಘವೇಂದ್ರಾಚಾರ್ಯ. ಪುಟ: ೯೦. ಬೆಲೆ: ರೂ. ೧.೫೦

ಏಶಿಯದ ಸಂಪತ್ತು

ಏಶಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆಯ ಒಂದು ಸ್ವತಂತ್ರ ರಚನೆ. ಬರೆದವರು: ಕು. ಶಿ. ಹರಿದಾಸ ಭಟ್ಟ. ವಿ. ಸೀತಾರಾಮಯ್ಯನವರ ಮುನ್ನುಡಿ ಇದೆ. ಪುಟ: ೧೫೦. ಬೆಲೆ: ರೂ. ೨.

ಫಂಟಮಾರಾ

ಇಗ್ನೇಜಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ನಿಂತ ಹೃದಯಂಗಮ ಕಥೆ. ಅನುವಾದಕರು: ಕು ಶಿ. ಹರಿದಾಸ ಭಟ್ಟ. ಪುಟ: ೨೦೦. ಬೆಲೆ: ರೂ. ೨.

ಬರೆಯಿರಿ: **ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.**
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಥಾ ವಿಹಾರ

(೨ನೇ ಪುಟದಿಂದ)

ಯಲ್ಲೇ, ಉಂಡೆಯಲ್ಲೇ? ಎಂದು ವಿಚಾರಿಸಿದುದನ್ನು ಅವರು ಬಲ್ಲರು. ಬೆಳಗ್ಗೆ ಆವರ ತರಗತಿಯ ಒಂದು ಮಗು 'ಸಾರ್, ನಮ್ಮನೇಲಿ ಈ ದಿನಾ ಚಕ್ಕುಲಿ ಮಾಡ್ತಾರಂತೆ, ಉಂಡೆ ಮಾಡ್ತಾರಂತೆ, ಕಡುಬು ಮಾಡ್ತಾರಂತೆ ಬನ್ನೀ ಸಾರ್ ನಮ್ಮನೇಗೆ' ಎಂದು ಅವರನ್ನು ಆಹ್ವಾನಿಸಿದ್ದೂ ಅವರ ನೆನಪಿಗೆ ಬಂದಿತು. ಮಗುವಿನ ಅಕ್ಕರೆಯ ಆಹ್ವಾನಕ್ಕೆ ಅದರ ನಿಷ್ಕಲ್ಮಷ ಸರಳ ಹೃದಯ, ಹಂಚಿ ತಿನ್ನಬೇಕೆಂಬ ಆದರ ವಿಶಾಲ ಬುದ್ಧಿಯನ್ನು ಕಂಡೊಮ್ಮೆ ಮೇಷ್ಟರಿಗೆ ಆನಂದವಾಯಿತಾದರೂ, ತನ್ನ ಮನೆಯ ಸ್ಥಿತಿ ಕಂಡು ಅವರು ತುಂಬಾ ದುಃಖಿಸಿದರು. 'ಆಯ್ತು ಮಗೂ, ಬರ್‍ತೀನಿ' ಎಂದರು 'ಖಂಡಿತ ಬರ್‍ಬೇಕು ಸಾರ್' ಎಂದು ಇನ್ನೊಮ್ಮೆ ಎಚ್ಚರಿಸಿತು ಆ ಮಗು.

ಕೈತೊಳೆದು ಶಾಮಣ್ಣನವರು ಶಾಲೆಗೆ ಹೊರಡಲು ಅಂಗಿ ಸಿಕ್ಕಿಸಿದರು. ನಾಳೆ ಗೋಕುಲಾಷ್ಟಮಿ ನಾಡದು ವಿಟ್ಲಪಿಂಡಿ ಊರೆಲ್ಲಾ ಗದ್ದಲ ಆದರೆ ತನ್ನ ಮನೆಯಲ್ಲಿ ಉಪವಾಸ ಊರೆಲ್ಲಾ ಸಂಭ್ರಮವಾದರೆ ತನ್ನ ಮನೆಯಲ್ಲಿ ಗೋಳಾಟ! ಊರೆಲ್ಲಾ ವೇಷಗಳ ಹಾವಳಿಯಾದರೆ ತನ್ನ ಮನೆಯಲ್ಲಿ ಇದೇ ವೇಷ ಶಾಮಣ್ಣನವರಿಗೆ ಅದನ್ನು ಎಣಿಸಲೂ ಆಗಲಿಲ್ಲ. ಶಾಲೆಗೆ ಹೊತ್ತಾಗಿತ್ತು. ಶಾಲೆಗೆ ಹೊರಟರವರು. ಶಾರದಮ್ಮ ಏನೋ ಹೇಳಬೇಕೆಂದು ಮನೆ ಬಾಗಿಲಿನ ವರೆಗೆ ಬಂದರೂ ಗಂಡನ ಸ್ಥಿತಿ ಕಂಡು ಅವರ ಬಾಯಿಯಿಂದ ಮಾತೇ ಹೊರಡಲಿಲ್ಲ 'ಏನೋ, ಈ ಮೇಷ್ಟ್ರ ಕೈಹಿಡಿದುದೇ ತನ್ನ ತಪ್ಪು' ಎಂದವರು ಭಾವಿಸಿ ಸುಮ್ಮನಿದ್ದರೇನೋ?

ಶಾಮಣ್ಣನವರು ಶಾಲೆ ಸೇರಿ ಟೀಚರ್ಸ್ ರೂಮನ್ನು ಪ್ರವೇಶಿಸುತ್ತಲೂ ಜೋಸಿ ಮಾಸ್ತರರು ಹೇಳಿದರು "ಶಾಮಣ್ಣನವರೇ, ಸಂಬಳ ಮಂಜೂರಾದ ಆರ್ಡರು ಬಂತು ಇನ್ನು ಬಿಲ್ ಆಗಿ ದಸ್ಕತಾಗಿ, ಮರಳಿ ಬಂದು, ಕೇಶ್ ಆಗಿ, ನಿಮ್ಮ ಕೈಗೆ ಸಿಗೋವಾಗ ತಾರೀಕು ಒಂದೋ, ಎರಡೋ? ಸಂಬಳ ಬರಲಿಲ್ಲ, ಅಷ್ಟಮಿ, ವಿಟ್ಲಪಿಂಡಿ ಪೋಸ್ಟ್‌ಫೋನ್ ಮಾಡಿ ಎಂದು ಹೇಳಬಹುದಲ್ಲ" ಎಂದು ವಿನೋದವಾಗಿ ನುಡಿದರು. 'ಅಷ್ಟಮಿ ಹೋಪ್ರೆ ಹೋಗಲಿ, ಚೌತಿ ಗಡದ್ದು ಮಾಡಿ" ಎಂದೂ ಅವರು ಕಾಲೋಚಿತ ಸಲಹೆ ನೀಡಿದರು.

"ಅಷ್ಟಮಿಯ ಮುಂಚಿನ ದಿನ ಸಂಬಳ ಮಂಜೂರದ ಆರ್ಡರು ಬಂದಿತ್ತು. ಅದರ ಬದಲು ಸಂಬಳವಾದರೂ ದೊರೆತಿದ್ದರೆ!" ಶಾಮಣ್ಣನವರು ಯೋಚಿಸಿದರು 'ಹಾಳು ಮಾಸ್ಟ್ರ ಕೆಲಸ, ಪೂರ್ವಜನ್ಮದಲ್ಲಿ ಪಾಪ ಮಾಡಿದವರಿಗೆ ಮಾತ್ರ ಲಭ್ಯವಾಗುವುದು" ಎಂದವರು ತಪಿಸಿಕೊಂಡರು "ಕೂಲಿಯವನಿಗಾದರೂ ಸಂಜೆ ಕೂಲಿ ದೊರೆತೇ ತೀರುವುದು ಕಾರ್ಖಾನೆ ನೌಕರನಿಗೂ ವಾರಕ್ಕೊಮ್ಮೆಯೋ, ತಿಂಗಳಿಗೊಮ್ಮೆಯೋ ನಿಶ್ಚಿತ ದಿನ ಸಂಬಳ ಸಿಗುವುದು ಆಫೀಸು ನೌಕರರಿಗೂ ಸಂಬಳ ಸಿಗಲು ಒಂದು ನಿಶ್ಚಿತ ದಿನವಿದೆ. ಈ ದರಿದ್ರ ಮೇಷ್ಟ್ರ ಕೆಲಸಕ್ಕೆ ಸಂಬಳ ಸಿಗಲು ನಿಶ್ಚಿತ ದಿನವೆಂಬುದೂ ಇಲ್ಲವಲ್ಲ ಮೇ ಸಂಬಳ ಜೂನ್ ಇಪ್ಪತ್ತೈದಕ್ಕೆ, ಜೂನಿನದ್ದು ಜುಲೈ ಮೂವತ್ತಕ್ಕೆ, ಜುಲೈ ತಿಂಗಳಿನ ಸಂಬಳ ಸಿಗುವಾಗ ಆಗಸ್ಟ ಮೂವತ್ತೊಂದೂ ಸಾಲದೆ ಸಪ್ಟಂಬರದ ಆರಂಭ! ನಿಶ್ಚಿತ ದಿನವೆಂಬುದೇ ಇಲ್ಲ 'ಸತ್ಯಮೇವ ಜಯತೇ ನಾನೃತಂ' ಎಂಬುದರ ಅರ್ಥವನ್ನು ಮಕ್ಕಳಿಗೆ ಉಪದೇಶಿಸಬೇಕಾದ ಮಾಸ್ತರರೇ ಇದಕ್ಕೆ ವ್ಯತಿರಿಕ್ತವಾಗಿ ಅಂಗಡಿಯವರಿಗೆ, ಬಾಕಿಯವರಿಗೆ ಸುಳ್ಳು ಹೇಳಿ ದಿನ ನೂಕಬೇಕಾಗಿದೆ ಏನು ಪುಣ್ಯ!" ಶಾಮಣ್ಣನವರು ಆಲೋಚಿಸುತ್ತಾ ತರಗತಿಯಲ್ಲಿ ಕುಳಿತಿದ್ದರು.

ದೀರ್ಘ ಗಂಟೆ ಬಾರಿಸುವ ಅವರ ಭಾವನಾಧಿಗೆ ವಿಘ್ನ ತಂದೊಡ್ಡಿತು. 'ಕೋಪಿ ತೆಗೆಯಿರಿ' ಮಕ್ಕಳಿಗೆ ಹೇಳಿದರು ಪರಕರನೇ ಅವರ ಕೈಯಲ್ಲಿದ್ದ ಚೋಕು ಕಪ್ಪು ಸ್ಲೇಟಿನ ಮೇಲೆ ಓಡಾಡಿತು ಸಮಯ ಉರುಳಿತು ಕೋಪಿ ಬರೆಯಿಸಿದರು ತಿದ್ದಿದರು ಬಾಯಿ ಲೆಕ್ಕವೂ ಆಯಿತು ಅಷ್ಟಿನ ಗೀತೆ ಕಲಿಸಿಯೂ ಆಯಿತು ಕೊನೆಯ ಪಿರೇಡ "ಸಾರ್, ನಾಳೆ ರಜೆಯಿಲ್ಲವಾ ಸಾರ್" ಒಬ್ಬ ಹುಡುಗ ಕೇಳಿದ "ನಾಳೆ ರಜೆ ಇಲ್ಲ ಎಲ್ಲರೂ ಶಾಲೆಗೆ ತಪ್ಪದೆ ಬರಬೇಕು" ಶಾಮಣ್ಣನವರು ಮಕ್ಕಳಿಗೆ ಎಚ್ಚರಿಸುತ್ತಾ ಹೇಳಿದರು "ನಾಳೆ ಅಷ್ಟಮಿಗ ರಜೆ ಇಲ್ವಾ ಸಾರ್, ನಾಳೆ ಹಬ್ಬ ಅಲ್ವಾ ಸಾರ್" ಇನ್ನೊಬ್ಬ ಹುಡುಗ ಕೇಳಿದ ನಾಳೆ ಹಬ್ಬ ಯಾರಿಗೆ? ತನಗಿಲ್ಲ ಹಾಗೆಂದು ಮಕ್ಕಳಿಗೂ ಇಲ್ಲವೆ? ಸರಕಾರದವರ ಏಕರೂಪದ ರಜಾ ನಿಯಮದ ಪ್ರಕಾರ ಕೃಷ್ಣ ಜಯಂತಿಗೆ ಒಂದು ದಿನ ರಜೆ ಮಾತ್ರ ಇದೆ ಉಡುಪಿಯ ಊರಿನಲ್ಲಿ ಅಷ್ಟಮಿ ವಿಶೇಷವಾದ ಹಬ್ಬವಾಗಿರುವಾಗ, ಎರಡೂ ದಿನ ಅದರ ಸಂಭ್ರಮವಿರುವಾಗ ಒಂದು ದಿನ ರಜೆ ಎಲ್ಲಿಗೆ ಸಾಕು? ಸ್ಥಳೀಯ ರಜೆ ನಾಲ್ಕು ದಿನಗಳನ್ನು ವಿಚಾರಿಯ ವಿಶೇಷ ಮಳೆಗೆಂದು, ಬೇರೆ ಸ್ಥಳೀಯ ವಿಶೇಷಕ್ಕೆಂದು ಮೂರು ದಿನ ಕೊಟ್ಟಾಗಿತ್ತು ಇನ್ನುಳಿದ ರಜೆ ಅಷ್ಟಕಾಲಕ್ಕೆಂದು ಇಟ್ಟದು ಒಂದು ದಿನ ಮಾತ್ರ' ಹಾಗಾಗಿ ಅಷ್ಟಮಿಯ ದಿನ ಶಾಲೆ ನಡೆಸದ ಗತ್ಯಂತರವಿದೆಯೆ? 'ಇಲ್ಲ, ಎಲ್ಲರೂ ಶಾಲೆಗೆ ಬರಲೇಬೇಕು!" ಸುಗ್ರೀವಾಜ್ಞೆ ವಿಧಿಸುತ್ತಾ ಹೇಳಿದರು ಶಾಮಣ್ಣನವರು. ಆ ದಿನ ಸಂಜೆ ಶಾಲೆ ಬಿಟ್ಟು ಮನೆಗೆ ಹೋಗುವಾಗ ನೆರೆಮನೆಯಲ್ಲಿ ಮಾತನಾಡುತ್ತಿದ್ದುದು ಅವರ ಕಿವಿಗೆ ಕೇಳಿಸಿತು 'ಅಷ್ಟಮಿಯ ದಿನವೂ ಶಾಲೆ ಇದೆ! ಹಬ್ಬವೆಂದಿಲ್ಲ, ಹುಣ್ಣಿಮೆಯೆಂದಿಲ್ಲ ಏನು ಗ್ರಹಚಾರವೋ? ಬೇಡದಿದ್ದ ಹಬ್ಬಕ್ಕೆಲ್ಲಾ ರಜೆ ಕೊಡ್ತಾರಲ್ಲ ಈ ಮಾಷ್ಟ್ರಗಳೂ"

ಸಂಜೆ ಮನೆಗೆ ಭಾರವಾದ ಹೆಜ್ಜೆ ಇಕ್ಕುತ್ತಾ ಬಂದ ಶಾಮಣ್ಣನವರು 'ಗೋಕುಲಾಷ್ಟಮಿಗೆ ಉಪವಾಸವೇ ಗತಿ' ಎಂದು ನಿಶ್ಚಯಿಸಿದರು. ರಾತ್ರಿ ಕಳೆಯಿತು ಗೋಕುಲಾಷ್ಟಮಿಯ ದಿನವೂ ಬಂತು. ಬೆಳಗ್ಗೆ ಎದ್ದು ಮಕ್ಕಳಿಗೆಲ್ಲಾ ಉಪವಾಸದ ಆದೇಶವಿತ್ತರು 'ರಾತ್ರಿ ಅರ್ಘ್ಯ ಬಿಟ್ಟ ಮೇಲೆ ಊಟ' ಎಂದು ಕಟ್ಟಪ್ಪಣೆ ವಿಧಿಸಿದರು ಬೆಳಿಗ್ಗೆ ಶಾಲೆಗೂ ಹೋದರು. ಶಾಲೆಗೆ ಬಂದ ನಾಲ್ಕೈದು ಮುಸ್ಲಿಂ ಕ್ರೈಸ್ತ ಮಕ್ಕಳಿಗೆ ಪಾಠವನ್ನು ಮಾಡಿದರು ಸಂಜೆ ಮನೆಗೆ ಬಂದರು ನೆರೆಮನೆಗಳಲ್ಲಿ ಮಾಡುತಿದ್ದ ಪಕ್ವಾನ್ನ, ತಿಂಡಿಗಳ ಹೆಸರುಗಳನ್ನು ಕೇಳಿ ತಿಳಿದು ಮೇಷ್ಟ್ರ ಮಕ್ಕಳು ಅಮ್ಮನೊಡನೆ ವಿಚಾರಿಸುತಿದ್ದುವು "ಇವತ್ತು ಉಪವಾಸ, ನಾಳೆ ಮಾಡೋಣ" ಎಂದು ಆ ತಾಯಿ ಮಕ್ಕಳನ್ನು ಸಮಾಧಾನಪಡಿಸುತ್ತಿದ್ದರು. "ಇವತ್ತು ತಿಂದ್ರೆ ಕೃಷ್ಣನಿಗೆ ಸಿಟ್ಟು ಬರ್‍ತದೆ ಅವನಿಗೆ ಕೊಡದೆ ತಿನ್ಬಾರ್ದು" ಎಂದೆಲ್ಲಾ ಹೇಳುತ್ತಿದ್ದಳು. ರಾತ್ರಿಯಾಯಿತು ಮಕ್ಕಳೆಲ್ಲಾ ಹಸಿವಿನಿಂದ ಕಂಗೆಟ್ಟು ಅಲ್ಲೇ ನಿದ್ರೆಹೋದುವು ಇನ್ನು ಏಳುವುದು ಬೆಳಗ್ಗೆ ತಾನೆ? ಶಾಮಣ್ಣನವರು 'ರಾತ್ರಿ ನಿಶ್ಚಿಂತೆಯಿಂದ ಕಳೆಯಬಹುದಲ್ಲ' ಎಂದು ತತ್ಕಾಲದ ನೆಮ್ಮದಿ ತಾಳಿದರು

ಮರುದಿನ ಬೆಳಗ್ಗೆ ವಿಟ್ಲಪಿಂಡಿ ಶಾರದಮ್ಮ ನೀಲಿತ್ರಮ್ಮನವರ ಮನೆಯಿಂದ ಎರಡು ಪಾವು ಅಕ್ಕಿ ಕಡತಂದು ಗಂಜಿ ಬೇಯಿಸಿದರು ಮಕ್ಕಳಿಗೆ ಗಂಜಿಯ ಊಟವಾಯಿತು ಶಾಮಣ್ಣನವರು ಮನೆಯ ಹೊರಬಾಗಿಲಿಗೆ ಕದವಿಕ್ಕಿದರು ಮಕ್ಕಳನ್ನು ಒಂದು ಮೂಲೆಯಲ್ಲಿ ಬಾಯಿಗೆ ಕೈ ಹಿಡಿಸಿ ಕುಳಿತುಕೊಳ್ಳಿಸಿದರು ತಾನು ಕೈಯಲ್ಲೊಂದು ದೊಡ್ಡ ಬೆತ್ತ ಹಿಡಿದು ಹುಲಿವೇಷದ ದೊರೆಯಂತೆ ಮಕ್ಕಳು ಕುಳಿತಲ್ಲಿಂದ ಏಳದಂತೆ ಕಾವಲು ಕುಳಿತರು. ಹೊರಗೆ ವೇಷಗಳ ಬೊಬ್ಬೆ, ಬೇಂಡು ವಾಲಗಗಳ ವಾದನ, ಪೇಟ್ಲಿಗಳ ಸದ್ದು, ಗರ್ನಾಲಿನ ಆರ್ಬಟ ಡೋಲು ತಮಟೆಗಳ ಧ್ವನಿ ಇವೆಲ್ಲವುಗಳಿಂದ ದೂರವಾಗಿದ್ದರು ಶಾಮಣ್ಣ ಮೇಷ್ಟರರು ಗೋಕುಲಾಷ್ಟಮಿಗೆ ಅವರದೊಂದು ಹೊಸ ವೇಷವಾಗಿತ್ತು! ತಮ್ಮದೇ ಆದ ಲೋಕದಲ್ಲಿ ಗೋಕುಲಾಷ್ಟಮಿ ಆಡಿದರು ಶಾಮಣ್ಣ ಮಾಸ್ತರರು!

—ಶ್ರೀ ಎಸ್ ಸದಾಶಿವ ರಾವ್.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಲೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ 1949

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವೂ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು,
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1=25) ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ
ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ ಬೆಲೆ ರೂ ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ. ರೂ ಒಂದೂವರೆ, ಉತ್ತಮ ಪ್ರತಿ ರೂ ಎರಡು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

NAVAYUGA
REGD. NO. M. 3619

UDIPI, THURSDAY
24—9—1959

LICENSE NO. 31
Licensed to Post without Prepayment

ರಾಜಕೀಯ

(೧ನೇ ಪುಟದಿಂದ)

ಯನ್ನು ಉಲ್ಲಂಘಿಸಿರುವ ವಿಚಾರವನ್ನು ಪ್ರಸ್ತಾಪಿಸಿರುವ ಒಂದು ಸೂಚನಾ ಪತ್ರ ಸಹ ಶ್ವೇತ ಪತ್ರದಲ್ಲಿ ಅಡಕವಾಗಿದೆ. ಈ ಬಗ್ಗೆ ಚೀಣಿ ಸರಕಾರದೊಡನೆ ಪ್ರಸ್ತಾಪಿಸುವಂತೆ ಭೂತಾನಿನ ಸರಕಾರ ಭಾರತ ಸರಕಾರವನ್ನು ಕೇಳಿಕೊಂಡಿತ್ತು. ಕಳೆದ ಮೂರು ಶತಮಾನಗಳಿಗೂ ಹಿಂದಿನಿಂದ ಭೂತಾನಿನ ಆಡಳಿತಕ್ಕೊಳಪಟ್ಟಿದ್ದ ಎಂಟು ಗ್ರಾಮಗಳು ಟಿಬೆಟ್ಟಿಗೆ ಸೇರಿದುವು ಎಂದು ಚೀಣಿ ಪಡೆಗಳು ಅವುಗಳನ್ನು ಆಕ್ರಮಿಸಿಕೊಂಡಿದ್ದುವು. ಈ ಪ್ರದೇಶಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಭೂತಾನಿನ ಅಧಿಕಾರಿಗಳಿಂದ ಶಸ್ತ್ರಾಸ್ತ್ರಗಳನ್ನೂ ಮದ್ದುಗುಂಡುಗಳನ್ನೂ ಕುದುರೆಗಳನ್ನೂ ಚೀಣಿ ಪಡೆಗಳು ಕಿತ್ತುಕೊಂಡಿದ್ದರು. ಟಿಬೆಟ್ ಗಡಿಯನ್ನು ಹಾದುಕೊಂಡು ಹೋಗಬೇಕಾದ ಭೂತಾನಿ ಸಂದೇಶವಾಹಕರನ್ನು ಹಿಡಿದು ಅವರನ್ನು ಹೀನಾಯ ಮಾನವಾಗಿ ಕಂಡುಕೊಂಡ ವಿಚಾರವಾಗಿ ಭಾರತ ಸರಕಾರ ಚೀಣಿ ಸರಕಾರಕ್ಕೆ ಪ್ರತಿಭಟನೆ ಸೂಚಿಸಿತ್ತು.

ರಾಜ್ಯ ಸಭೆಯಲ್ಲಿ ಪ್ರಧಾನಿ ನೆಹರೂರವರು ಮಾತನಾಡುತ್ತಾ, ಚೀನಾ—ಭಾರತಗಳ ಗಡಿ ವಿಚಾರದಲ್ಲಿ ತಮ್ಮ ಸರಕಾರ ದೃಢವಾದ ನೀತಿಯನ್ನು ಅನುಸರಿಸುತ್ತದೆಯೆಂದೂ ಅಂತೆಯೇ ಈ ಪ್ರಶ್ನೆ ಶಾಂತಿಯುತವಾಗಿ ಬಗೆ ಹರಿಯುವಂತೆಯೂ ಪ್ರಯತ್ನಿಸುವುದಾಗಿಯೂ ಭರವಸೆ ನೀಡಿದರು.

ಆದರೆ, ಒಂದು ವಿಷಯ ಸ್ಪಷ್ಟ, ಚೀಣಿಯರು ಈ ಅತಿಕ್ರಮಿಸುವುದಕ್ಕೆ ಮೊದಲು ಯಾವ ಸ್ಥಿತಿ ಇತ್ತೋ ಆ ಸ್ಥಿತಿ ಬರಬೇಕಾದುದು ಅತ್ಯಾವಶ್ಯಕವಾಗುತ್ತದೆ. ಭಾರತ ಆ ಸ್ಥಾನಮಾನಗಳ ಆಧಾರದ ಮೇಲೆ ಮಾತ್ರ ಸಂಧಾನಗಳನ್ನು ನಡೆಸುವುದು ಎಂದೂ ಅವರು ತಿಳಿಸಿದರು.

ಕಳೆದ ಕೆಲವು ದಿನಗಳಲ್ಲಿನ ಘಟನೆಗಳು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿವೆ. ಗಡಿ ಪ್ರದೇಶದ ಚೂರುಪಾರು ಪ್ರದೇಶಗಳು ಕೈಬಿಟ್ಟು ಹೋಗಿವೆಯೆಂಬುದು ಭಾರತೀಯರಿಗೆ ಅಷ್ಟು ಮುಖ್ಯವಾಗಿಲ್ಲ; ಚೀಣೀಯರು ತಮ್ಮ ವಿಚಾರದಲ್ಲಿ ಈ ರೀತಿ ವರ್ತಿಸಿಕೊಂಡಿರುವರಲ್ಲದೆ ಬೆದರಿಕೆ ಹಾಕಲು ಪ್ರಯತ್ನಿಸುತ್ತಿರುವರಲ್ಲ ಎಂದು ಭಾರತೀಯರು ಯೋಚಿಸುವುದು ಸ್ವಾಭಾವಿಕವಾಗಿದೆ.

ದೀರ್ಘ ಕಾಲದಿಂದ ಇರುವ ಪರಿಸ್ಥಿತಿ ಹಾಗೂ ಭಾರತ ಚೀನಾಗಳ ಮೈತ್ರಿಯನ್ನು ಗಮನಕ್ಕೆ ತಂದುಕೊಂಡು ಮ್ಯಾಕ್ ಮಾಹನ್ ಗಡಿಯನ್ನೇ ಭಾರತ ಚೀನಾಗಳ ಗಡಿಯನ್ನಾಗಿ ಪರಿಗಣಿಸುವುದಾಗಿ ತಾವೇ ಕೊಟ್ಟ ಭರವಸೆಯನ್ನು ಚಾ ಎನ್ ಲೈರವರು ಇದೀಗ ನಿರಾಕರಿಸುತ್ತಿರುವ ಬಗ್ಗೆ ನೆಹರೂರವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು. ಚೀಣಾ ಕ್ರಮಕ್ರಮವಾಗಿ, ಒಂದೊಂದು ಹೆಜ್ಜೆಯಾಗಿ, ಈ ವಿಚಾರದಲ್ಲಿ ತನ್ನ ಧೋರಣೆಯನ್ನು ಬದಲಿಸಿಕೊಂಡಿದೆಯೆಂದು ಅವರು ತಿಳಿಸಿದರು. ಚೀಣಿ ಪ್ರಧಾನಿಯ ಇತ್ತೀಚಿನ ಪತ್ರವಂತೂ ತುಂಬಾ ತೀವ್ರವಾಗಿದೆ. ಒಂದು ಕಡೆ ಭಾರತಕ್ಕೆ ಸೇರಿದ ಗಡಿಪ್ರದೇಶಗಳನ್ನು ತಮ್ಮದೆಂದು ಸಾರಿರುವ ಭೂಪಟಗಳು, ಇನ್ನೊಂದು ಕಡೆ ಮ್ಯಾಕ್ ಮಾಹನ್ ಗಡಿ ರೇಖೆಯನ್ನು ತಾವು ಮಾನ್ಯ ಮಾಡುವುದಿಲ್ಲವೆಂದು ಚೀನಾ ಹೇಳುತ್ತಿರುವುದು; ಇವನ್ನು ನೋಡಿದರೆ ಚೀನಾದ ಮನಸ್ಸಿನಲ್ಲಿ ನಿಜಕ್ಕೂ ಏನಿದೆಯೆಂಬುದು ಅರ್ಥವಾಗುತ್ತಿಲ್ಲ. ಇದೊಂದು ವಿಶಿಷ್ಟ ಪರಿಸ್ಥಿತಿ; ಅದನ್ನು ಹೀಗೆ ಅನಿರ್ದಿಷ್ಟವಾಗಿ ಬಿಡುವುದು ಉಚಿತವಾಗದು, ಎಂದೂ ಪ್ರಧಾನಿಗಳು ತಿಳಿಸಿದರು.

ಕಳೆದ ೧೦ ವರ್ಷಗಳಿಂದಲೂ ತಾವು ಸಂಸತ್ತಿನಲ್ಲಿ ಭಾರತ ಚೀನಾಗಳ ಗಡಿ ವಿಚಾರವಾಗಿ ಆಗಿಂದಾಗ್ಗೆ ಹೇಳಿಕೆಗಳನ್ನು ಕೊಟ್ಟಿರುವುದಾಗಿಯೂ ಚೀಣೀಯರು ಮಾತ್ರ ಈ ವಿಷಯದಲ್ಲಿ ಮೌನಧಾರಣೆ ಮಾಡಿರುವರೆಂದೂ ೫೪ರಲ್ಲಿ ಭಾರತ ಮತ್ತು ಚೀನಾಗಳ ಮಧ್ಯೆ ಆದ ಒಪ್ಪಂದ ಟಿಬೆಟ್ ವಿಚಾರದಲ್ಲಿ ಇದ್ದ ಸಮಸ್ಯೆಗಳನ್ನು ಪರಿಹರಿಸಿತಾದರೂ ಆ ಸಮಯದಲ್ಲಿಯೇ ಗಡಿ ಪ್ರಶ್ನೆ ಚರ್ಚೆಗೆ ಬರಲು ಅವಕಾಶವಿತ್ತಾದರೂ ಚೀಣೀಯರು ಅದರ ಬಗ್ಗೆ ಹೇಗೆ ಚಕಾರವೆತ್ತಲಿಲ್ಲವೆಂಬುದನ್ನೂ ಪ್ರಧಾನಿಗಳು ವಿವರಿಸಿದರು.

ಮೂರು ವರ್ಷಗಳ ಹಿಂದೆ ಗಡಿ ವಿಚಾರದಲ್ಲಿ ಮಾತುಕತೆಗಳನ್ನು ನಡೆಸಲು ಚಾ ಎನ್ ಲೈರವರು ಬರ್ಮಾದ ಪ್ರಧಾನಿ ಯು ನೂರವರನ್ನು ಪೆಕಿಂಗಿಗೆ ಬರಮಾಡಿಕೊಂಡಿದ್ದುದು ತಮ್ಮದೇ ಸಲಹೆಯ ಪರಿಣಾಮವಾಗಿ ಎಂದೂ ಪ್ರಧಾನಿ ನೆಹರೂ ತಿಳಿಸಿದರಲ್ಲದೆ ಮ್ಯಾಕ್ ಮಾಹನ್ ರೇಖೆಯನ್ನು ಬರ್ಮಾ ಮತ್ತು ಚೀಣಾಗಳ ಮಧ್ಯೆಯ ಗಡಿ ರೇಖೆಯನ್ನಾಗಿ ಪರಿಗಣಿಸಲಾಗುವುದೋ ಅದೇ ರೀತಿ ಭಾರತದೊಡನೆಯೂ ಪರಿಗಣಿಸಲಾಗುವುದು. ಚಾ ಎನ್ ಲೈ ಆ ಸಮಯದಲ್ಲಿಯೇ ಭರವಸೆ ಕೊಟ್ಟರೆಂದೂ ತಿಳಿಸಿದರು.

ಆದರೆ ಚೀನಾದ ಇತ್ತೀಚಿನ ಪತ್ರದಲ್ಲಿ ಮ್ಯಾಕ್ ಮಾಹನ್ ಗಡಿ ರೇಖೆಯನ್ನು ಚೀನಾ ಸಂಪೂರ್ಣ ತಿರಸ್ಕರಿಸಿದೆ.

ಗಡಿ ವಿಚಾರದಲ್ಲಿ ಭಾರತ—ಚೀನಾಗಳ ಮಧ್ಯೆ ಯುದ್ಧ ನಡೆಯುವುದೆಂದರೆ ಅದು ತುಂಬಾ ಅನರ್ಥಕಾರಿಯೆಂದೇ ಶಾಂತಿಯುತ ಸಂಧಾನಗಳಿಗೆ ತಾವು ಕರೆ ಕೊಡುತ್ತಿರುವುದಾಗಿ ಅವರು ತಿಳಿಸಿದರು.

ಕೀಟಾಣುಗಳು

(೪ನೇ ಪುಟದಿಂದ)

ತ್ತವೆ. ಇವುಗಳ ಕಾಲು ಮತ್ತು ಶರೀರದಲ್ಲಿ ಅನೇಕ ತೀಕ್ಷ್ಣವಾದ ಮುಳ್ಳು ಮತ್ತು ರೋಮಗಳಿರುತ್ತವೆ. ನೊಣವು ಕೊಳಚೆಯಲ್ಲಿ ಕೂರುವಾಗ, ಅದರ ಕಣಗಳು ಇದರ ಕಾಲುಗಳಲ್ಲಿ ಮತ್ತು ಶರೀರದಲ್ಲಿ ಅಂಟಿಕೊಳ್ಳುತ್ತವೆ. ನೊಣಗಳು ನಮ್ಮ ಆಹಾರದ ಮೇಲೆ ಎರಗುವಾಗ, ಈ ಕೊಳಕು ಅಥವಾ ಕೀಟಾಣುಗಳು ನಮ್ಮ ಆಹಾರದಲ್ಲಿ ಸೇರಿಹೋಗುತ್ತವೆ. ಸಿಡುಬು ಟೈಫಾಯ್ಡ್ ಮೊದಲಾದ ಭಯಾನಕ ರೋಗಗಳು ಇವುಗಳ ಕಾರಣದಿಂದಲೇ ಹರಡುವುವು.

ನೊಣಗಳು ಗೊಬ್ಬರ ಅಥವಾ ಕುದುರೆಯ ಲದ್ದಿಯಲ್ಲಿ ತಮ್ಮ ಮೊಟ್ಟೆಗಳನ್ನಿಡುತ್ತವೆ. ಹೆಣ್ಣು ನೊಣ ಒಂದು ಬಾರಿಗೆ ಸುಮಾರು ೧೦೦—೧೫೦ರ ವರೆಗೆ ಮೊಟ್ಟೆಗಳನ್ನಿಡುತ್ತದೆ. ಇನ್ನೂ ಒಂದು ಆಶ್ಚರ್ಯದ ಸಂಗತಿ ಎಂದರೆ, ಇದು ಮಾಸಕ್ಕೆ ನಾಲ್ಕೈದು ಸಲವೂ ಮೊಟ್ಟೆಗಳನ್ನಿಡಬಲ್ಲುದು. ಈ ಮೊಟ್ಟೆಗಳು ಗಾತ್ರದಲ್ಲಿ ತೀರ ಎಳೆಯುವಾಗಿದ್ದು, ಬಿಳಿ ಬಣ್ಣದವುಗಳಾಗಿವೆ. ಒಂದು ಭೂತಗನ್ನಡಿಯ ಸಹಾಯದಿಂದ ನೋಡುವುದಾದರೆ, ಅದು ಅಕ್ಕಿಕಾಳಿನ ಆಕಾರದಲ್ಲಿವೆ. ಹೆಚ್ಚು ಕಡಿಮೆ ೧೦—೧೨ ತಾಸುಗಳಲ್ಲಿಯೇ ಮೊಟ್ಟೆಯನ್ನು ಒಡೆದುಕೊಂಡು ಉರುಳಾಡುವ ಹುಳಗಳು ಹೊರಬರುತ್ತವೆ. ಆಗ ಅವು ಚಿಕ್ಕವಾಗಿದ್ದು ಗೊಬ್ಬರದ ರಸವನ್ನೇ ಹೀರುತ್ತವೆ. ಅವು ಬೆಳೆದು ಮೂರು ಬಾರಿ ತಮ್ಮ ಆಕಾರವನ್ನೂ ಅವಸ್ಥೆಯನ್ನೂ ಬದಲಿಸಿ ಮೂರು ನಾಲ್ಕು ದಿನಗಳಲ್ಲಿ ಒಂದು ಹೊಸ ಆಕಾರವನ್ನು ಪಡೆಯುತ್ತವೆ ಇದೇ ಕೋಶಾವಸ್ಥೆ. ಕೋಶಾವಸ್ಥೆಯಲ್ಲಿರುವಾಗ, ಅವುಗಳು ಚಲಿಸುವುದಿಲ್ಲ; ಆಹಾರವನ್ನೂ ಸೇವಿಸುವುದಿಲ್ಲ. ಮುಂದೆ ನಾಲ್ಕೈದು ದಿನಗಳಲ್ಲಿ ಕೋಶವನ್ನು ಒಡೆದು ಪೂರ್ಣರೂಪದ ನೊಣಗಳಾಗಿ ಅವು ಹೊರ ಬರುತ್ತವೆ. ಕೆಲವೇ ದಿನಗಳಲ್ಲಿ ಈ ಹೊಸ ನೊಣಗಳೂ ತಮ್ಮ ತಾಯಿಯಂತೆಯೇ ಉಂಡುತಿಂದು, ಹೊಸ ಸಂತಾನಕ್ಕೆ ಜನ್ಮವೀಯಲು ಸನ್ನದ್ಧವಾಗುತ್ತವೆ. ಮಳೆಗಾಲದಲ್ಲಿ ನೊಣಗಳ ಸಂಖ್ಯೆ ವಿಪರೀತ. ಆ ಕಾಲದಲ್ಲಿ ತಿನ್ನುವ ಪದಾರ್ಥಗಳನ್ನು ಹೊರತು ಉಷ್ಣತೆಯೂ ಕಡಿಮೆಯಿರುತ್ತವೆ. ಇವುಗಳಿಗೆ ಬೇಕಾದ ಗೊಬ್ಬರ, ಕೊಳಕುಗಳು ತುಂಬ ಇರುತ್ತವೆ.

ಡಿ. ಡಿ. ಟಿ. ಮೊದಲಾದ ಕೀಟನಾಶಕಗಳ ಬಳಕೆಯಿಂದ ನೊಣಗಳನ್ನೂ ಅವುಗಳ ಮೂಲಗಳನ್ನೂ ನಾಶಮಾಡಬಹುದು. ನೊಣಗಳ ಜನನಕ್ಕೆ ಹೇತುವಾದ ಸ್ಥಳಗಳನ್ನು ಪರಿಶುದ್ಧವಾಗಿಡುವುದೇ ನೊಣಗಳ ನಿಯಂತ್ರಣದ ಸರಳೋಪಾಯ. ಎಲ್ಲ ಪ್ರಕಾರದ ಆಹಾರ ಪದಾರ್ಥಗಳನ್ನೂ ಈ ಅಪಾಯಕಾರಿಯಾದ ನೊಣಗಳ ಬಾಯಿಗೆ ದೊರೆಯದಂತೆ ಮಾಡುವುದು ಅತ್ಯಂತ ಹಿತಕಾರಿಯಾಗಿದೆ.

—ಗೋರಾ.

ಕುಟುಂಬ ಯೋಜನೆ
(ಮಿತ ಸಂತಾನ)
Family Planning

ಮಾಜಿ ಮಂತ್ರಿ ಎ. ಬಿ. ಶೆಟ್ಟರ ಮುನ್ನುಡಿಯೊಂದಿಗೆ ದ. ಕ. ಜಿಲ್ಲಾ ಕುಟುಂಬಯೋಜನಾ ಸಮಿತಿಯಪರವಾಗಿ ಪ್ರಕಟಿಸಲ್ಪಟ್ಟ ಕುಟುಂಬ ಯೋಜನೆಯ ಆವಶ್ಯಕತೆಯನ್ನೂ ಸಂತತಿಯನ್ನೂ ಒಂದು ಉಚಿತ ಪ್ರಮಾಣದಲ್ಲಿ ನಿರೋಧಿಸುವ ಸರಳ ಮಾರ್ಗವನ್ನೂ ಬೋಧಿಸುವ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಕೈಪಿಡಿಗಳು.

ಪ್ರತಿಯೊಂದರ ಬೆಲೆ 19 ನಯಾಪೈಸೆ.

ನವಭಾರತ ಬುಕ್ ಡಿಪ್ಪೊ, ಉಡುಪಿ

ಅತ್ಯುತ್ತಮ ಸೇವೆಗಾಗಿ ಸಮಾವೇಶ

ನಗರ್‌ಕಾರ್ಸ್ — ಸಿಂಡಿಕೇಟ್

ಸೆಪ್ಟಂಬರ್ ೧, ೧೯೫೯ರಿಂದ ದಿ ನಗರ್‌ಕಾರ್ಸ್ ಬೇಂಕ್, ಲಿಮಿಟೆಡ್, ಮಂಗಳೂರು, ಅವರ ಬೇಂಕಿಂಗ್ ವ್ಯವಹಾರವನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟು, ಲಿಮಿಟೆಡ್, ಉಡುಪಿ, ಅವರು ವಹಿಸಿಕೊಂಡಿರುವರು. ಮಾತ್ರವಲ್ಲದೆ, ಇನ್ನು ಮುಂದೆಯೂ ನಗರ್‌ಕಾರ್ಸ್ ಬೇಂಕಿನ ಸತ್ಸಂಪ್ರದಾಯವನ್ನು ನಡೆಸಿಕೊಂಡು ಬರುವುದರ ಜೊತೆಗೆ ತಮ್ಮ ಸುಭದ್ರ, ಸಮರ್ಥ ಹಾಗೂ ಸೌಜನ್ಯಶೀಲ ಸೇವೆಯನ್ನು ನೀಡುವರು.

ಒಟ್ಟು ಶಾಖೆಗಳು: 123

ಡಾ. ಟಿ. ಎಂ. ಎ. ಪೈ
ಮೆನೇಜಿಂಗ್ ಡೈರೆಕ್ಟರ್

ಶ್ರೀ ಟಿ. ಎ. ಪೈ
ಜನರಲ್ ಮೆನೇಜರ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ವಾ. ಚಂದಾ ರೂ. 5-75 ಬೆಲೆ: 13 ನ.ಪೈಸೆ

ನವಯುಗ

Vol 39 No 5
ವರುಷ ೩೯. ವಾರ ೫.

1-10-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ಭಾರತದಲ್ಲಿ ಹಿಂಸಾಮನೋವೃತ್ತಿ ಬೆಳೆಯಲು ಕಾರಣಪುರುಷರಾರು?

ವಿದೇಶನಿಷ್ಠ ಕಮ್ಯೂನಿಸ್ಟರಿದಕ್ಕೆ ಹೊಣೆಗಾರರಾದರೂ ಕಲ್ಯಾಣರಾಷ್ಟ್ರದಲ್ಲಿ ಹಿಂಸೆಯ ಭಾವನೆಗಳನ್ನು ನಿರ್ಮೂಲನಮಾಡುವುದು ರಾಷ್ಟ್ರೀಯರ ಕರ್ತವ್ಯ.

ರಾಜ್ಯದಲ್ಲಿನ ಶಾಸನಾಂಗದ ಮುಖ್ಯಾಂಗವಾದ ವಿಧಾನ ಸಭೆಯು ಒಂದು ಪವಿತ್ರವಾದ ಮಂದಿರವಾಗಿದೆ. ಅದರ ಪಾವಿತ್ರ್ಯಕ್ಕೆ ಕುಂದನ್ನು ತರುವುದು ಯಾರಿಗೂ ಯಾವ ಕಾಲಕ್ಕೂ ತರವಲ್ಲ. ಆದರೆ, ಪಶ್ಚಿಮ ಬಂಗಾಳದಲ್ಲಿ ವಿಧಾನ ಸಭಾ ಸದಸ್ಯರು ಪರಸ್ಪರ ಪೆಟ್ಟುಗಳನ್ನು ಎಸೆದುಕೊಂಡ ಘಟನೆಯು ವರದಿಯಾಗಿದ್ದು, ಇದು ತೀರ ವಿಮರ್ಶೆಗೆ ಕಾರಣವಾಗಿದೆ. ಪ್ರಜಾಪ್ರತಿನಿಧಿಗಳಿಂದ ಪ್ರಜೆಗಳ ಪರವಾಗಿ ಪ್ರಜೆಗಳು ಯೋಗ್ಯ ವ್ಯವಹಾರ ನಡೆಸಲು ಶಾಸನಗಳನ್ನು ವಿಧಾಯಿಸುವ ಈ ಸಭೆಯಲ್ಲಿ ಸದಸ್ಯರು ಈ ರೀತಿಯಾಗಿ ತಮ್ಮ ಕರ್ತವ್ಯವನ್ನೂ ಘನತೆಯನ್ನೂ ಸಭೆಯ ಗೌರವವನ್ನೂ ಮರೆತು ದುಷ್ಕೃತ್ಯಗಳ ಮೂಲಕ ವಿಧಾನಸಭೆಯ ಪಾವಿತ್ರ್ಯವನ್ನು ಕೆಡಿಸಿದುದು ಕೇವಲ ಕಲಕತ್ತೆಗಾಗಲೀ ಪಶ್ಚಿಮ ಬಂಗಾಳಕ್ಕಾಗಲೀ ಆದ ಅವಮಾನವಲ್ಲ, ಅದು ಭಾರತೀಯ ಪ್ರಜಾಪ್ರಭುತ್ವದ ಮುಖಕ್ಕೇನೇ ಎರಚಿದ ಕರಿನೀರು ಎಂದು ಹೇಳಬಹುದು.

ಭಾರತೀಯ ಪ್ರಧಾನಿಯವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಯೋಜನಾ ಸಂಬಂಧದ ಉಪಸಮಿತಿಯಲ್ಲಿ ಭಾಷಣಮಾಡುವವೇಳೆ, ಭಾರತದಲ್ಲಿ ಈಗೀಗ ಹರಡುತ್ತಿರುವ ಹಿಂಸಾಭಾವನೆಗಳು ಭಾರತಕ್ಕೆ ಶೋಭೆ ತರುವಂತಹವಲ್ಲವೆಂದು ಅಭಿಪ್ರಾಯಪಟ್ಟರು. ಪಶ್ಚಿಮ ಬಂಗಾಲದಲ್ಲಿನ ಈ ದುರಂತಕ್ಕೆ ಯಾವುದೇ ಪಕ್ಷವನ್ನು ಹೊಣೆಗಾರರೆಂದು ಹೇಳಲು ತಾನು ಇಷ್ಟಪಡುವುದಿಲ್ಲವಾದರೂ ಕಮ್ಯುನಿಸ್ಟ ಪಕ್ಷ ಮತ್ತು ಅದರ ಅನುಯಾಯಿಗಳೇ ಇದರ ಉತ್ತರದಾಯಿಗಳೆಂದು ಹೇಳಲೇ ಬೇಕಾಗಿದೆ ಎಂದವರು ಉದ್ಗರಿಸಿದರು. "ನಾವು ಪ್ರತಿ ವಿಧಾನಗಳಲ್ಲಿಯೂ ಪ್ರಜಾಪ್ರಭುತ್ವ ಪ್ರಣಾಲಿಗಳನ್ನು ರಚಿಸುವೆವು, ಇತರ ಪಕ್ಷಗಳಿಗೆ ಪ್ರತ್ಯೇಕ ಅವಸರಕೊಡಲು ಬಯಸುವೆವು, ಆದರೂ ಈ ರೀತಿಯ ವರ್ತನೆಗಳನ್ನು ಎಂದಿಗೂ ಸಹಿಸಲಾರೆವು" ಎಂದವರು ತುಸು ಕ್ಷುಬ್ಧರಾಗಿಯೇ ಹೇಳಿದರು. ಹಿಂಸಾವಾದಕ್ಕೆ ನಾವು ಪ್ರೋತ್ಸಾಹಿಸಲು ಅವಕಾಶವನ್ನು ಒದಗಿಸಿ ಕೊಟ್ಟರೆ, ಅದರ ಪರಿಣಾಮವು ಎಲ್ಲಿಗೆ ಬಂದು ಬಿಡಬಹುದು ಎಂದವರು ಲಂಕೆಯ ಪ್ರಧಾನಿ ಶ್ರೀ ಭಂಡಾರ ನಾಯಕೆಯವರ ಕೊಲೆಯನ್ನು ಪ್ರಸ್ತಾಪಿಸಿ, ಇದು ನಮಗೊಂದು ಎಚ್ಚರಿಕೆ ಎಂದು ತಿಳಿಸಿದರು. "ಭಾರತದಲ್ಲಿ ಈ ರೀತಿಯ ಅನಿಷ್ಟ ಘಟನೆ ನಡೆಯಲಾರದು. ಆದರೂ ಭಾರತದಲ್ಲಿ ಹಿಂಸಾ ಭಾವನೆ, ಹಿಂಸಾ ವಿಧಾನ, ಹಿಂಸಾ ಭಾಷೆ ಮತ್ತು ಹಿಂಸಾ ಪ್ರವೃತ್ತಿ ಬೆಳೆಯುತ್ತ ಕೊಂಡು ಪಸರಿಸುವುದು ಸತ್ಯವಾಗಿದೆ. ನಾನು ಈ ಭಾವನೆಯನ್ನು ಯಾವ ಒಂದು ಪಕ್ಷದ ಬಗ್ಗೆ ಮಾತ್ರ ಇಟ್ಟುಕೊಳ್ಳುವುದಿಲ್ಲ. ನಾವೂ ತುಸು ಈ ಮಟ್ಟಿಗೆ ಅಪರಾಧಿಗಳಾಗಿದ್ದೇವೆ. ಕೇರಳದ ಘಟನೆಗಳನ್ನು ನಾವು ನೋಡಿದೆವು. ಅಲ್ಲಿನ ವಾತಾವರಣವು ತೀವ್ರ ಉಗ್ರವಾಗಿತ್ತು. ಪಕ್ಷಗಳಲ್ಲಿ ಮರ್ಷಣೆಗಳಿದ್ದುದು ವು ಇದೇ ರೀತಿಯಲ್ಲಿ ರಾಜನೀತಿಯು ಬೇರೆ ಬೇರೆ ವಿಭಾಗಗಳಲ್ಲಿ ಪ್ರವೇಶಿಸಿದರೆ, ಎಲ್ಲ ಪ್ರಕಾರದ ಆಂದೋಲನವೂ ಪ್ರಾರಂಭವಾಗತೊಡಗುವುವು. ಪಂಜಾಬಕ್ಕೆ ಈ ವಿಷಯ ತಿಳಿದಿದೆ.

"ಪಶ್ಚಿಮ ಬಂಗಾಳದ ವಿಧಾನ ಸಭೆಯ ಈ ಅಶೋಭನಕಾರಕವಾದ ಘಟನೆಯು ಪ್ರಜಾಪ್ರಭುತ್ವದ ಅಂತದ ದ್ಯೋತಕವಾಗಿದೆ. ಈ ಘಟನೆಯ ಪ್ರೇರಕರು ಚರ್ಚೆಯನ್ನು ಎದುರಿಸಲು ಅಸಮರ್ಥರಾಗಿರುವರು ಎಂಬುದರ ಕುರುಹು ಇದು. ಈ ಜನರು ಮಾರ್ಗಗಳಲ್ಲಿ ಹಾಗೂ ಅನ್ಯ ಅವಕಾಶ ದೊರೆತ ಸ್ಥಳಗಳಲ್ಲಿ ಉಪದ್ರವಗಳನ್ನು ಎಳಸುತ್ತ ಇರುತ್ತಾರೆ. ಈಗ, ವಿಧಾನ ಸಭೆಯೂ ಇವರ ಕ್ರೀಡಾರಂಗವಾಗತೊಡಗಿದಂತಾಯಿತು. ನಾವು ಪ್ರಜಾತಂತ್ರ ಪ್ರಿಯರಾದರೂ ಅಶೋಭನ ವ್ಯವಹಾರಗಳನ್ನು ಸಹಿಸಲಾರೆವು. ಬಂಗಾಲದಲ್ಲಿ ಈ ಜನರು ಮೈಕ್ರೋಫೋನ್ ಮೊದಲಾದುವನ್ನು ಎಸೆದಮೇಲೂ ಕ್ಷಮಾಯಾಚನೆ ಮಾಡಲು ಮುಂದೆ ಬಾರದಿರುವಾಗ, ಇಂತಹವರೊಡನೆ ಯಾವ ರೀತಿಯ ಮಾತುಕತೆ ನಡೆಸಬಹುದು?

"ಇದು ಮತಭೇದದ ಪ್ರಶ್ನೆ ಅಲ್ಲ. ಈ ವಿಷಯದಲ್ಲಿ ಸ್ವಾತಂತ್ರ್ಯವೀಯಲು ಸಿದ್ಧನಿದ್ದೇನೆ, ಆದರೆ, ಇದು ನಮ್ಮ ಸಂವಿಧಾನಕ್ಕಾದ ಆಘಾತವಾಗಿದೆ. ಇಂತಹ ದುರ್ವ್ಯವಹಾರ ಮಾರ್ಗಗಳಲ್ಲಿ ನಡೆದರೂ ಅದು ಅಸಹನೀಯವೇ ಆಗಿರುವಾಗ, ಸಂಸದೀಯ ಸದನಗಳ ಬಗ್ಗೆ ಏನು ಹೇಳಬೇಕು? ಪಶ್ಚಿಮ ಬಂಗಾಳದ ವಿಧಾನ ಸಭೆಯು ಈ ದುಷ್ಕೃತ್ಯವನ್ನು ಹೇಗೆ ಸಹಿಸಿಕೊಂಡಿತ?" ಎಂದವರು ಪ್ರಶ್ನಿಸಿದರು.

ನಿಜವಾಗಿಯೂ ಕಮ್ಯುನಿಸ್ಟರಿಂದ ಈ ರೀತಿಯ ಅಸಹ್ಯ ವರ್ತನೆಗಳು ನಿರಂತರ

(೧೨ನೇ ಪುಟ ನೋಡಿರಿ)



ಅಮೆರಿಕೆಯ ಅಣುಶಕ್ತಿಚಾಲಿತ ವ್ಯಾಪಾರಿ ಹಡಗ "ಸವನ್ನಾ"

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ – ಮಂಗಳೂರು—3

ಸ್ಥಾಪನೆ – 1931

ಕಾಯಂ ರೇವಣಾತಿ ಬಡ್ಡಿ ದರ

I	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/ ಮ, ಹೆಚ್ಚಿನ ರೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ಸಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ

ಕಥಾ ವಿಹಾರ

ಪ್ರಥಮ ಪುರಸ್ಕಾರ ಪಡೆದ ಕಥೆ

ಜನತೆಗಾಗಿ ಕಥೆ ಬರೆದು ಸುವಿಖ್ಯಾತನಾದ ರಮೇಶನೂ ಹೃದಯಾಂತರಾಳದ ಅಭಿವ್ಯಕ್ತಿಯೆದುರು ತಲೆತಗ್ಗಿಸಬೇಕಾಯಿತು!

ನೀನಿಷ್ಟು ನೀಚಳಾಗಿರುವಿ ಎಂದು ನಾನು ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ನಾನು ಬರೇ ಬಾಹ್ಯ ಪ್ರಪಂಚವನ್ನಷ್ಟೇ ಕಂಡಿದ್ದೆ! ನನ್ನ ಮನೆಯೇ ವೇಶ್ಯಾಗಾರವೆಂದು ನಾನೆಂದೂ ಭಾವಿಸಿರಲಿಲ್ಲ. ನಾನು ನಿನ್ನನ್ನು ಸತೀಸಾವಿತ್ರಿಯೆಂದು ಪ್ರೀತಿಸಿದ್ದೆ.... ಆದರೆ.... ಆದರೆ ನೀನು...? ಆದರೆ ಅದರಲ್ಲಿ ನಿನ್ನ ತಪ್ಪೇನೂ ಇಲ್ಲ! ನಾರಿಯ ಸ್ವಭಾವವೇ ಹಾಗೆ ...ಅತಿ ಚಂಚಲ. ಚಂಚಲ ಮನಸ್ಸು ಕೆಸರುಗಂಬದಂತೆ ಯಾವಾಗ ಯಾವ ಬದಿಗೆ ವಾಲುತ್ತದೋ ತಿಳಿಯಲಸಾಧ್ಯ; ಆದರೆ ಚಂಚಲ ಮನಸ್ಸಿನ ಮೇಲೆ ಹತೋಟಿಯಿಡುವುದೇ ಸತೀ-ಧರ್ಮ. ಆದರೆ ನೀನು ಆಧುನಿಕ ಜಗತ್ತಿನ ಗಾಳಿಯಲ್ಲಿ ಹಾರಾಡಿದಿ. ನನ್ನವಳಾಗುವ ಬದಲು ಜಗತ್ತಿನವಳಾದೆ. ನಾನು ಭಾವನಾ ಲೋಕದಲ್ಲಿ ವಿಹರಿಸುತ್ತಿದ್ದೆ, ನೈಜ ಆದರ್ಶ ಇಷ್ಟು ದೂರವಿದೆಯೆಂದು ನಾನೆಂದೂ ಎಣಿಸಿರಲಿಲ್ಲ. ನನಗಿಂದು ಸಮಸ್ತ ನಾರೀಜಾತಿಯಲ್ಲೇ ತಿರಸ್ಕಾರ ಉಂಟಾಗುತ್ತದೆ........" ರಮೇಶನ ಪೆನ್ನು ಬರೆಯುತ್ತಲೇ ಸಾಗುತ್ತಿತ್ತು, ಹಲವಾರು ಪುಟಗಳುರುಳಿದವು ಆದರೂ ಅವನು ಬರೆಯುತ್ತಲೇ ಇದ್ದನು.

"ಇಂದು ಯಾವ ನಾರಿಗೆ ಪಾಪದ ಫಲವನ್ನು ಕೊಡಲಾಗುತ್ತಿದೆ? ಇಂದಾವ ಅಬಲೆಯು ನಿಮ್ಮ ಲೇಖನಿಗೆ ತುತ್ತಾಗಿದ್ದಾಳೆ?" ಬೆಚ್ಚಿಬಿದ್ದು ಹಿಂದೆ ನೋಡಿದ ರಮೇಶ, ರಾಧಾ ಹಿಂದೆ ನಿಂತು ನಗುತ್ತಿದ್ದಳು.

"ಅರೇ— ನೀನು,— ಎಷ್ಟು ಹೊತ್ತಿನಿಂದ ಹೀಗೆ ನಿಂತಿರುವಿ? ನೀನು ಇನ್ನೂ ಏಕೆ ಮಲಗಲಿಲ್ಲ?" ಎಂದೆನ್ನುತ್ತಾ ಬರೆದ ಕಾಗದವನ್ನು ಅಡಗಿಸಲು ಪ್ರಯತ್ನ ಮಾಡಿದ ರಮೇಶ.

"ನೀವಿನ್ನೂ ಮಲಗದೆ ಎಚ್ಚರವಿರುವಾಗ ನಾನು ಮಲಗಲೇ? ಅದು ನನ್ನಿಂದಾಗದು"—

"ಸರಿ, ಸರಿ, ಇನ್ನಾದರೂ ಮಲಗು, ತುಂಬಾ ಹೊತ್ತಾಯಿತು, ನನಗೆ ಗೊತ್ತೇ ಆಗಲಿಲ್ಲ" ಎಂದೆನ್ನುತ್ತಾ ಎದ್ದ ರಮೇಶ.

"ನೀವೇಕೆ ಇಂಥಾ ಕತೆಗಳನ್ನು ಬರೆಯುತ್ತೀರಿ?" ಎಂದು ಕೇಳಿಯೇಬಿಟ್ಟಳು ರಾಧಾ.

"ನೀನು ತಿಳಿಯಲಾರೆ ರಾಧಾ" ಎಂದುತ್ತರವಿತ್ತ ರಮೇಶ.

"ನನಗೆಲ್ಲವೂ ಗೊತ್ತಿದೆ,— ನೀವು ಯಾವಾಗಲೂ ನಾರಿಯು ನೀಚಳು ಎಂದೇ ಪ್ರತಿಪಾದಿಸುತ್ತೀರಿ, ಅವಳಿಗೆ ನೀಚ ಸ್ಥಾನವನ್ನೇ ಕೊಡುತ್ತೀರಿ. ಒಂದು ಬಾರಿಯಾದರೂ ನಿಮ್ಮ ಕಥೆಗಳಲ್ಲಿ ನಾರಿಯು ಶ್ರೇಷ್ಠ ಸ್ಥಾನ ಪಡೆದಿದ್ದಾಳೇನು? ಒಂದು ಬಾರಿಯಾದರೂ ನೀವು ಸ್ತ್ರೀಯನ್ನು ಮಾತೆಯ ಪಾವನ ಪ್ರೇಮದೊಡನೆ; ಸಾವಿತ್ರಿಯ ಪಾತಿವ್ರತ್ಯದೊಡನೆ ನೋಡಿದ್ದೀರೇನು? ನೀವೇಕೆ ಅವಳನ್ನು ಯಾವಾಗಲೂ ತುಚ್ಛವೆಂದು ತಿಳಿಯುತ್ತೀರಿ? ಒಂದೇ, ಎರಡೇ, ಪ್ರತಿ ಕಥೆಯಲ್ಲಿಯೂ ನಾರೀ ಜಾತಿಯ ಬಗ್ಗೆ ಆರೋಪ, ಅವಳ ಬಗ್ಗೆ ಸಂದೇಹ! ರಾಧಳ ನಾರೀ ಹೃದಯವು ಗಾಯಗೊಂಡ ಸಿಂಹಿಣಿಯಂತಾಗಿತ್ತು—ವಾಸ್ತವದಲ್ಲಿ ನಾರಿಯು ಇಷ್ಟು ಪಾಪಿಷ್ಠಳಾಗಬೇಕಾದರೆ, ಇದಕ್ಕೆ ಪುರುಷರೂ ಹೊಣೆಗಾರರಲ್ಲವೇನು? ಒಂದೇ ಕೈಯಿಂದ ಚಪ್ಪಾಳೆ ಹೊಡೆಯಲು ಎಂದೂ ಸಾಧ್ಯವಿಲ್ಲ.' ಹಾಗಾದರೆ ನೀವೊಂದು ಕತೆಯಲ್ಲಿಯೂ ಪುರುಷರನ್ನು ಆರೋಪಿಸದಿರಲು ಕಾರಣವೇನು? ನಾರಿಯು ಪುರುಷನವಾಸನಾ ಪೂರ್ತಿಯ ಸಾಧನವಾಗಿದ್ದು, ಅನಂತರ ಪಾಪಿಣಿ ಎಂದು ತಿಳಿಯಲ್ಪಡಲಿ ಎಂದು ಭಗವಂತನು ಅವಳನ್ನು ನಿರ್ಮಿಸಲಿಲ್ಲ. ಭಗವಂತನವಳನ್ನು ಪುರುಷರ ಅರ್ಧಾಂಗಿಯಾಗಿ ನಿರ್ಮಿಸಿದ್ದಾನೆ, ಅವಳಿಗೆ ತಾಯಿಯ ಪುನೀತ ಹೃದಯವಿತ್ತಿದ್ದಾನೆ, ಆದರೆ ನಿಮಗೆ ಮಾತ್ರಾ ಅದಾವುದೂ ಕಾಣುವುದಿಲ್ಲ. ಒಂದು ಕೈಯ ಎಲ್ಲಾ ಬೆರಳುಗಳೂ ಒಂದೇ ರೀತಿಯಿರುವುದಿಲ್ಲ ನೀವು ನನ್ನ ಪತಿಯಾಗಿದ್ದೀರಿ, ನಾನು ನಿಮ್ಮನ್ನು ದೇವರಂತೆ ಪ್ರೀತಿಸುತ್ತೇನೆ, ಆದರೆ ತಾವು...."

"ನನ್ನ ಮಾತನ್ನಾದರೂ ಕೇಳು ರಾಧಾ" ಎಂದು ಭಯದಿಂದ ನುಡಿದ ರಮೇಶ.

"ನೀವು ನನ್ನನ್ನು ನಿಮ್ಮ ಕಥಾನಾಯಕಿಯಂತೆ ನೀಚ ಹಾಗೂ ದುಶ್ಚರಿತ್ರಳನ್ನಾಗಿ ತಿಳಿಯುತ್ತೀರೇನು? ನಾನೂ ಸ್ತ್ರೀ, ಅವಳೂ ಸ್ತ್ರೀ, ಸ್ತ್ರೀಯು ತನ್ನ ಸರ್ವಸ್ವವನ್ನೂ ತನ್ನ ಪತಿಗೆ ಅರ್ಪಿಸುತ್ತಾಳೆ; ಏಕೆ ಗಂಡು ಹೆಂಗಸನ್ನು ಚರಿತ್ರಹೀನಳೆಂದು ಕರೆಯಲೆಂದೇನು?" ಎಂದು ದೀರ್ಘ ಶ್ವಾಸದೊಡನೆ ನುಡಿದಳು ರಾಧಾ.

"ನೀನು ಮರೆಯುತ್ತಿರುವೆ ರಾಧಾ—ಇದು ಕತೆ—ಬರೇ ಕಾಲ್ಪನಿಕ ಕತೆ!" ಎಂದು ಮೃದುವಾಗಿ ನುಡಿದ ರಮೇಶ.

'ಕಾಲ್ಪನಿಕ ಕತೆಗೆ ಇನ್ನೂ ಹಲವಾರು ವಿಷಯವಿದೆ—ನಿಮಗೆ ಮಾತ್ರ ಈ ವಿಷಯ ಒಳ್ಳೇದಾಗಿ ರುಚಿಕರವಾಗಿ ಕಾಣಲು ಕಾರಣವೇನು?' ಎಂದು ಸಜಲ ನೇತ್ರಳಾಗಿ ನುಡಿದಳು ರಾಧ.

"ನನಗಲ್ಲ ರಾಧಾ ನಾನೀ ಕತೆಗಳನ್ನು ಯಾರಿಗಾಗಿ ಬರೆಯುತ್ತಿದ್ದೇನೋ ಅವರಿಗಿಂತಹ ಕತೆ ಬೇಕಾಗಿದೆ ನಾನೋರ್ವ ಲೇಖಕ, ನಾನು ಕತೆ ಬರೆಯುತ್ತೇನೆ, ಇದೇ ನನ್ನ ಉದ್ಯೋಗ. ಒಂದು ವೇಳೆ ನನ್ನ ರಚನೆಗಳು ಸ್ವೀಕೃತವಾಗದಿದ್ದರೆ ನಮ್ಮ ಉದರಭರಣವೆಂತು ಸಾಗಬಲ್ಲದು? ನನ್ನ ಮನಬಂದಂತೆ ಅಲ್ಲ ಜನಸಾಮಾನ್ಯರಿಗೆ ರುಚಿಯಾಗುವಂತೆ ನಾನು ಕಥೆ ಬರೆಯಬೇಕಾಗುತ್ತದೆ, ಅಷ್ಟೇ ಅಲ್ಲದೆ ನಾನೀ ಕಥೆಯನ್ನು ಒಂದು ಸ್ಪರ್ಧೆಗೆ ಕಳುಹಿಸುತ್ತಿದ್ದೇನೆ ಇದು ನಾನು ಬರೆದ ಈ ವರೆಗಿನ ಎಲ್ಲಾ ಕಥೆಗಳಿಗಿಂತ ಅತ್ಯುತ್ತಮ ಎಂದೇ ನನ್ನ ಭಾವನೆ. ಪ್ರಾಯಶಃ ಇದಕ್ಕೆ ಪ್ರಥಮ ಪುರಸ್ಕಾರ ಸಿಗಲೂ ಸಾಕು. ಒಂದು ವೇಳೆ ಹಾಗಾದಲ್ಲಿ ನಿನಗೆ ಒಂದು ಒಳ್ಳೆಯ ಸೀರೆ ತರುತ್ತೇನೆ. ಆ ದಿನ ನೀನು ಆಶಿಸಿದ ಲಾಕೆಟನ್ನು ತರುತ್ತೇನೆ, ಹೂಂ.' ಎಂದವಳನ್ನು ಸಮಾಧಾನಪಡಿಸುವ ಯತ್ನ ಮಾಡುತ್ತಾ ನುಡಿದ ರಮೇಶ.

"ನಾರಿಯ ಅಪಮಾನಿತ ರೂಪವನ್ನು ನೋಡಲು ಆಶಿಸುವ ಜನತೆಗೆ ಧಿಕ್ಕಾರವಿರಲಿ. ಅಲ್ಪ ಸಂಪತ್ತಿನ ಹಿಂದೆ ನಾರಿಯ ಚರಿತ್ರೆಯು ದೂಷಿತವಾಗುವುದನ್ನು ಕಂಡು ಹಿಗ್ಗುವ ಪುರುಷನಿಗೆ ಧಿಕ್ಕಾರ! ತನ್ನ ಜನ್ಮಧಾತ್ರಿಯೂ ಓರ್ವ ಸ್ತ್ರೀ ಎಂಬುದನ್ನು ಜನತೆಯಿಂದು ಮರೆತುಬಿಟ್ಟಿದೆಯೇನು? ತನ್ನ ತಾಯಿಯೆಡೆಗೆ ಸಮಾಜ ಬೆರಳೆತ್ತುವುದನ್ನು ಯಾವ ಪುರುಷನು ಸಹಿಸಿಯಾನು? ನಾವು ನೀವು ಸಹ ಅದೇ ಜನತೆಯಲ್ಲಿ ಬೆರೆತಿಲ್ಲವೇನು?" ಎಂದು ರುಗ್ಣ ಕರ್ಕಶ ಧ್ವನಿಯಲ್ಲಿ ನುಡಿದಳು ರಾಧಾ.

"..." ರಮೇಶನು ಸುಮ್ಮನಿದ್ದ.

"ಹೇಳಿ ಈಗೇಕೆ ಸುಮ್ಮನಾದಿರಿ? ಎಲ್ಲಾ ಲೇಖಕರೂ, ಎಲ್ಲಾ ಕತೆಗಳೂ ಈ ಒಂದೇ ವಿಷಯದ ಬಗ್ಗೆ ಬರೆಯಲ್ಪಡುತ್ತವೇನು? ಎಲ್ಲಾ ಕತೆ ಕಾದಂಬರಿ, ಕವಿತೆ, ಗ್ರಂಥಗಳಲ್ಲಿ ಸ್ತ್ರೀ ಜಾತಿಯ ಅಪಮಾನಿತ ರೂಪವನ್ನೇ ಚಿತ್ರಿಸಲಾಗುತ್ತದೇನು? ದ್ರೌಪದಿಯೋರ್ವಳಿಗಾದ ಅಪಮಾನಕ್ಕಾಗಿಯೇ ಭಯಂಕರ 'ಮಹಾಭಾರತ' ಯುದ್ಧವಾಯ್ತು. —ಆದರೆ ಇಂದು ಸಮಸ್ತ ನಾರೀ ಜಾತಿಯ ಅಪಮಾನವಾಗುತ್ತಿದೆ, ಇಂದವಳ ಚಾರಿತ್ರ್ಯವೇ ನಗ್ನವಾಗುತ್ತಿರುವಾಗ, ಭಗವಾನ್ ಕೃಷ್ಣನ ಚಕ್ರವೂ ಏಳುತ್ತಿಲ್ಲ..." ಎಂದು ಕೆರಳಿ ಪುನಃ ನುಡಿದಳು ರಾಧಾ.

"ರಾಧಾ ನನ್ನನ್ನು ತಪ್ಪು ತಿಳಿಯಬೇಡ. ನಾನು ನಿನ್ನನ್ನು ಎಷ್ಟು ಪ್ರೀತಿಸುತ್ತಿರುವೆ ಎಂದು ನಿನಗೆ ತಿಳಿದೇ ಇದೆ. ಆದರೂ ನೀನು ಹೀಗೆಲ್ಲಾ ಅನ್ನುತ್ತಿರುವೆ?" ಎಂದು ತಾನು ದುಃಖಿಯಾಗಿ ನುಡಿದ ರಮೇಶ.

ರಾಧಾ ಅಳತೊಡಗಿದಳು—ನಾರಿಯ ಭಾವುಕ ಹೃದಯ ಅಳತೊಡಗಿತು. ಪತಿಯ ಭುಜಗಳಲ್ಲೇ ಆಶ್ರಯಪಡೆದಳು ಶೋಕತಪ್ತೆ ರಾಧಾ. ನಾರಿಯ ಅಭಿಮಾನ ಮತ್ತು ಪುರುಷನ ಕಠೋರತೆಯನ್ನು ಅಂತರಿಕ್ಷದಲ್ಲಿ ಮಿನುಗುವ ತಾರೆಗಳೂ, ಮುಗುಳ್ನಗುತ್ತಿರುವ ಚಂದ್ರನು ಮಾತ್ರಾ ಕಂಡರು.

ಸೂರ್ಯನು ಮೇಲೇರಿದನು, ಪಕ್ಷಿಗಳ ಕಲಕಲ ರವ ಪ್ರಾರಂಭವಾಯ್ತು, ಮಂದವಾಗಿ ಬೀಸುವ ಗಾಳಿಯು ಪ್ರಕೃತಿಯ ಮಾತೃಕತೆಯನ್ನು ದೂರೀಕರಿಸುವ ಪ್ರಯತ್ನ ಮಾಡುತ್ತಿತ್ತು. ರಾಧಾಳು ಎಚ್ಚತ್ತಳು. ಇನ್ನೂ ಮಂದರು ನಿದ್ದೆಯಲ್ಲಿದ್ದ ಅವಳು ಅತ್ತ ನೋಡುವಾಗ ರಮೇಶನನ್ನೂ ಬರೆಯುತ್ತಲೇ ಇದ್ದ.

"ಓಹ್, ಈ ವರೆಗೂ ನಿಮ್ಮ ಕಥೆ ಬರೆದು ಮುಗಿದಿಲ್ಲವೇನು?" ಎಂದು ಕೇಳಿದಳು ರಾಧಾ.

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1949

ರಾಮತೀರ್ಥ ಬ್ರಾಹ್ಮೀ ತೈಲ

ಸಿಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೪.

PHONE 203 ESTD 1926



ಸೃಷ್ಟಿಯ ರಹಸ್ಯ

ಮಾನವನಿಗೂ ಪ್ರತಿಸ್ಪರ್ಧಿ ಇರುವನೆ?

ಆ ದಿನ ಸರೋವರ ಮಧ್ಯದ ಕಮಲವರಳಿದಾಗ, ಅಹಂಕಾರದಿಂದ ನಾಲ್ಕೂ ಸುತ್ತನ್ನು ನೋಡಿ ದಿಙ್ನಾರಿಯರನ್ನು ಕುರಿತು ಹೇಳಿತು: "ಬಂಧುಗಳೇ ನನಗೆ ನಮಸ್ಕರಿಸಿರಿ. ಸರ್ವಶ್ರೇಷ್ಠನಾದವನನ್ನು ಪೂಜಿಸಬೇಕೆಂಬುದು ಸರ್ವಮಾನ್ಯವಷ್ಟೆ? ಏಳಿರಿ, ಅವನತ ಶಿರರಾಗಿ ನನ್ನನ್ನು ಗೌರವಿಸಿರಿ." ಇದನ್ನು ಕೇಳಿದ ಸೂರ್ಯನಿಗೆ ಕೋಪ ನೆತ್ತಿಗೇರಿತು: "ಇದು ಸುಳ್ಳು, ದಿಗ್ದೇವಿಯರೇ, ಈ ಕಮಲ ನನ್ನಿಂದಾಗಿ ಅರಳುತ್ತದೆ. ಆದುದರಿಂದ ಕಮಲಿನೀವಲ್ಲಭನಾದ ನನಗೆ ಪ್ರಣಾಮ ಮಾಡಿರಿ." ದಿಙ್ನಾರಿಯರು ವ್ಯಂಗ್ಯವಾಗಿ ನಕ್ಕು ಹೇಳಿದರು: "ಇಬ್ಬರೂ ಸುಳ್ಳುಗಾರರೇ. ಸರ್ವಶ್ರೇಷ್ಠನು ಇರುವಲ್ಲಿಯೇ ಇದ್ದಾನೆ. ಆತ ತನ್ನ ಬಗ್ಗೆ ಏನೂ ಹೇಳಿಕೊಳ್ಳಬೇಕಾದ ಅಗತ್ಯವೇ ಉಳಿದಿಲ್ಲ!"

—ವಲ್ಲತ್ತೋಳ್.

ರಾಮಾಯಣದ ಕಾಲದಲ್ಲಿ ಪುಷ್ಪಕ ವಿಮಾನವಿತ್ತು; ಮಹಾಭಾರತದ ವೇಳೆ ಅದ್ಭುತ ಶಕ್ತಿಯ ಬ್ರಹ್ಮಾಸ್ತ್ರಗಳಿದ್ದುವೆಂದು ಹೇಳಿದರೆ, ನಂಬದಿದ್ದ ಕಾಲವೊಂದಿತ್ತು. ಆದರೆ, ವಿಮಾನದ ನಿರ್ಮಾಣ, ಅನಂತ ಶಕ್ತಿಯ ಅಣುಜನಕ ಬಾಂಬುಗಳ ಶೋಧನೆಯಾಗಿರುವ ಈ ಕಾಲದಲ್ಲಿ ಆ ಹಿಂದಿನ ವಿಮಾನ ಮತ್ತು ಅಸ್ತ್ರಗಳ ಕಲ್ಪನೆಯನ್ನೂ ಅಲ್ಲವೆನ್ನುವುದು ಕಷ್ಟ. ಪರಮಾತ್ಮನು ಸೃಷ್ಟಿಸಿದ ಈ ಪ್ರಪಂಚದ ಅನಂತ ರಹಸ್ಯಗಳ ಸಂಬಂಧದಲ್ಲಿಯೂ ಇದೇ ರೀತಿ ತಿಳಿದುಕೊಳ್ಳಬೇಕು.

ಮಾನವನ ನಾಗರಿಕತೆಯ ಆದಿಕಾಲದಿಂದ ಇಂದಿನವರೆಗೂ ಪ್ರಕೃತಿಯ ರಹಸ್ಯಗಳನ್ನು ಭೇದಿಸಿಯೇ ಆತ ಇಂದು ಸಂಸ್ಕೃತನಾಗಿದ್ದಾನೆ. ಈ ಬ್ರಹ್ಮಾಂಡದಲ್ಲಿ ಭೂಮಿಯಂತೆಯೇ ವಿಶಾಲವಾದ ಗ್ರಹ—ಉಪಗ್ರಹಗಳ ಸಂಖ್ಯೆ ಅನೇಕವಿದೆ ಎಂದು ವೈಜ್ಞಾನಿಕ ಸಂಶೋಧನೆಗಳಿಂದ ತಿಳಿದು ಬಂದಿದೆ. ಪ್ರಪಂಚದ ಜೀವ ಜಂತುಗಳಿಗೆ ಪ್ರಾಣದಾನ ಮಾಡುವ ಸೂರ್ಯನಿಗಿಂತಲೂ ಪ್ರತಾಪಿಯಾದ ಮಹಾಸೂರ್ಯನಿದ್ದಾನೆ. ಅವನನ್ನು ಕೇಂದ್ರಬಿಂದುವನ್ನಾಗಿರಿಸಿಕೊಂಡು ಅನೇಕ ಸೃಷ್ಟಿಗಳು ಬ್ರಹ್ಮಾಂಡದಲ್ಲಿವೆ. ನಮ್ಮ ಸೌರಮಂಡಲದ ಗ್ರಹಗಳಲ್ಲಿ ಜನವಸತಿಯಿದೆಯೇ ಎಂಬುದು ನಮ್ಮ ಪ್ರಶ್ನೆಯಲ್ಲ. ಭೂಮಿಯಲ್ಲಿ ಜನವಾಸವಿರುವುದಾದರೆ ಇತರ ಕೆಲವು ಗ್ರಹಗಳಲ್ಲಿಯೂ ಏಕಿರಬಾರದು? ಮಾನವನ ಮುಂದೆ ಇಂದೊಂದು ಮಹಾ ಪ್ರಶ್ನೆ ಎದ್ದು ನಿಂತಿದೆ: ಇತರ ಸೃಷ್ಟಿಯಲ್ಲಿ ಜನ ಜೀವನ ಇದೆಯೇ ಇಲ್ಲವೇ ಎಂದು. ನಮ್ಮ ಸೌರ ಮಂಡಲದಲ್ಲಿ ಜನ ವಸತಿ ಇರುವುದಾದರೆ, ಅನ್ಯ ಸೌರ ಮಂಡಲಗಳ ಬಗ್ಗೆ ಸಂದೇಹವೇಕೆ? ಸಂಪೂರ್ಣ ಸೃಷ್ಟಿಯಲ್ಲಿ ನಾವು ಮಾತ್ರ ಜೀವಿಸಿದ್ದೇವೆಂದು ತಿಳಿದರೆ, ಇಂದಿನ ಕಾಲದಲ್ಲಿದು ಮೂರ್ಖತನದ ಪರಮಾವಧಿಯಾಗುವುದು. ಹಾಗಾದರೆ, ಆ ಸೃಷ್ಟಿಗಳ ಪ್ರಾಣಿಗಳು ಯಾವ ರೀತಿಯಲ್ಲಿರುತ್ತಾರೆ?

ಸತ್ಯವು ತಿಳಿದು ಬರುವ ವರೆಗೆ ವೈಜ್ಞಾನಿಕ ತತ್ವ ಮತ್ತು ಸಿದ್ಧಾಂತಗಳನ್ನು ಆಧರಿಸಿ ನಾವು ಈ ಬಗ್ಗೆ ಊಹಿಸಿಕೊಳ್ಳಬಹುದು. ಈ ನಮ್ಮ ಕಲ್ಪನೆಯು ಸತ್ಯವಾದುದೇ ಅಲ್ಲವೇ ಎಂದು ನಿರ್ದಿಷ್ಟವಾಗಿ ಈಗ ಹೇಳುವಂತಿಲ್ಲ.

ನಾಗರಿಕತೆಯ ಆದಿಕಾಲದಿಂದಲೂ ಪ್ರಕೃತಿಯೊಡನೆ ಹೋರಾಡಿ ಸೋತ ಮಾನವನು ತನಗಿಂತಲೂ ಬಲಯುತವಾದ ಅವ್ಯಕ್ತ ಶಕ್ತಿಯೊಂದಿದೆ ಎಂದು ಊಹಿಸಿಕೊಂಡಿದ್ದನು. ಇದರ ರಹಸ್ಯವನ್ನು ಅರಸಿದ ಅವನು ಸೃಷ್ಟಿಯ ಕೇಂದ್ರ ಬಿಂದು ಮಾನವನಲ್ಲ; ಆತ ವಾಸಿಸುವ ಭೂಮಿ ಎಂದು ಅರಿತುಕೊಂಡ. ಆದುದರಿಂದ ಈ ಭೂಮಿಯನ್ನೇ ಆತ ಸಮಸ್ತ ಸೃಷ್ಟಿಯ ಕೇಂದ್ರ ಬಿಂದು ಎಂದು ಮನ್ನಿಸಿದ. ಅನ್ಯ ಸೃಷ್ಟಿಗಳು ಮಾತ್ರ ಹರದಾರಿ ದೂರವುಳಿದಿತ್ತು; ಅಲ್ಲದೇ ಆತ ಈ ಭೂಮಿಯಾದರೂ ಕೇಂದ್ರ ಬಿಂದುವಾಗಿರದೆ ಯಾವುದೋ ಬೇರೆ ಕೇಂದ್ರ ಬಿಂದುವಿನ ಅಧೀನದಲ್ಲಿರುವ ಹಲವಾರು ಗ್ರಹ, ಉಪಗ್ರಹಗಳಲ್ಲಿ ಭೂಮಿಯೂ ಒಂದು ಎಂಬುದನ್ನೂ ಆತ ಒಪ್ಪುತ್ತಿರಲಿಲ್ಲ. ಆದರೆ, ಭೂಮಿಯನ್ನು ಕೇಂದ್ರ ಬಿಂದುವೆಂದಾತ ಭಾವಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಏಕೆಂದರೆ, ತಾನು ಭೂಮಿಯ ಅತಿ ಬಲಶಾಲಿ; ತನ್ನನ್ನೆದುರಿಸುವ ಬೇರೆ ಪ್ರಾಣಿ ಇಲ್ಲ ಎಂಬ ವಿಶ್ವಾಸ ಆತನಲ್ಲಿತ್ತು.

ಆದರೆ, ಆತನ ಈ ಸ್ವಪ್ನ ಭಂಗವಾಯಿತು. ಭೂಮಿಯು ಸೂರ್ಯನ ಸುತ್ತೂ ತಿರುಗುವ ಒಂದು ಸಾಮಾನ್ಯ ಗೋಲವೆಂದಾತ ತಿಳಿದಾಗ ದಿಗಿಲುಗೊಂಡ. ಹೀಗಾಗಿ ಭೂಮಿಯ ಮಹತ್ವ ಹಾಗೂ ಅಧಿಪತ್ಯದ ಬೆಲೆ ಇಳಿಯಿತು. ಆದರೂ ಆತ ಸೂರ್ಯನು ಸಮಸ್ತ ಸೃಷ್ಟಿಯ ಜೀವನದಾತ; ಮತ್ತು ಪ್ರಭು ಹಾಗೂ ಸೃಷ್ಟಿಯಲ್ಲಿನ ಗ್ರಹೋಪಗ್ರಹಗಳೂ ನಕ್ಷತ್ರಮಂಡಲಗಳೂ ಆತನ ದಾಸರು ಎಂದು ಕಲ್ಪಿಸಿ ಸಂತೋಷ ತಾಳಿಕೊಂಡ.

ಆದರೂ ಈ ಭ್ರಮೆಯೂ ಹೆಚ್ಚು ಕಾಲ ನಿಲ್ಲಲಿಲ್ಲ. ತನ್ನ ಕಲ್ಪನೆಯನ್ನುಳಿಸಲು ಆತ ನಾನಾ ಪ್ರಕಾರದ ಕಪೋಲಕಲ್ಪಿತ ಕಲ್ಪನೆಗಳನ್ನು ಜೋಡಿಸಿದ; ಅದರಲ್ಲಿಯೇ ತನ್ಮಯನಾದ; ಆದರೆ, ೧೬ನೆ ಶತಮಾನದ ಸುಮಾರಿಗೆ ಈ ಆಕಾಶಗೋಪುರದ ಬುನಾದಿಯೇ ಕಂಪಿಸತೊಡಗಿತು. ೨೦ನೆಯ ಶತಮಾನಕ್ಕೆ ಬಂದೊಡನೆಯೇ ಈ ವಿಶ್ವದಲ್ಲಿ ಅನಂತ ಸೂರ್ಯರಿದ್ದಾರೆ, ಸೌರಮಂಡಲಗಳಿವೆ ಎಂಬುದನ್ನು ಮಾನವ ಖಂಡಿತವಾಗಿಯೇ ತಿಳಿದುಕೊಂಡ.

ಬ್ರಹ್ಮಾಂಡ ಸಂಬಂಧದ ಈ ನವೀನತಮ ರಹಸ್ಯವನ್ನು ಉದ್ಘಾಟಿಸುವಾಗ, ಈ ಭೂಮಿಯು ಲಕ್ಷಾಂತರ ಆಕಾಶಗಂಗೆಗಳ ಒಂದು ಮೂಲೆಯಲ್ಲಿರುವ ಒಂದು ಪುಟ್ಟ ಗ್ರಹ ಎಂದು ತಿಳಿಯುತ್ತದೆ. ನಮ್ಮ ಪ್ರಗತಿಮಾರ್ಗ ಆಕಾಶಗಂಗೆಯನ್ನು ತಲುಪಿದೊಡನೆಯೇ ಮುಗಿಯುವುದಿಲ್ಲ. ಇದಕ್ಕಿಂತಲೂ ಅಧಿಕ ಜ್ಞಾನಗ್ರಹಣವು ನಮ್ಮ ಕರ್ತವ್ಯವಾಗಿದೆ.

ಬ್ರಹ್ಮಾಂಡದಲ್ಲಿ ಪ್ರಾಣಿ ಜೀವನವಿದೆಯೆ, ಇದ್ದರೆ ಅವರ ಸ್ವರೂಪವೇನು ಎಂಬುದೇ ನಮ್ಮ ಮುಖ್ಯ ಸಮಸ್ಯೆ. ಈ ಭೂಮಿಯಲ್ಲಿ ಮಾತ್ರವೇ ಜನ ಜೀವನವಿರುವುದೇ ಮತ್ತು ಅಖಂಡ ಬ್ರಹ್ಮಾಂಡದಲ್ಲಿ ಮಾನವನನ್ನು ಎದುರಿಸಬಲ್ಲ ಅನ್ಯ ಪ್ರಾಣಿ ಯಾವುದಾದರೂ ಇದೆಯೇ ಎಂಬುದನ್ನು ಅರಿಯುವ ತವಕ ಎಲ್ಲರಲ್ಲೂ ಇದೆ. ಇದಕ್ಕೆ ನಾವು ಕೆಲವೊಂದು ವಿಷಯಗಳನ್ನು ತಿಳಿದುಕೊಳ್ಳಬೇಕು.

ಮೊದಲನೆಯದಾಗಿ ಬ್ರಹ್ಮಾಂಡದಲ್ಲಿನ ನಕ್ಷತ್ರಗಳ ಒಟ್ಟು ಸಂಖ್ಯೆ ಎಷ್ಟು ಎಂದು ಅರಿತುಕೊಳ್ಳಬೇಕು. ಪ್ರಾಚೀನ ಕಾಲದಲ್ಲಿ ಜನರಿಗೆ ಕೇವಲ ಕೆಲವೇ ಸಾವಿರ ನಕ್ಷತ್ರಗಳ ಪರಿಜ್ಞಾನವಿತ್ತು. ದೂರ ದರ್ಶಕದ ಸಂಶೋಧನೆ, ಅದರ ಸುಧಾರಣೆಗಳಿಂದಾಗಿ ಈ ಸಂಖ್ಯೆ ಕೋಟ್ಯಂತರವಾಗಿದೆ. ಆದರೂ ಬ್ರಹ್ಮಾಂಡದ ಎಲ್ಲ ನಕ್ಷತ್ರಗಳನ್ನು ಗುರುತಿಸುವುದು ಮಾನವನ ಶಕ್ತಿಗೆ ಬಾಹಿರವೆಂಬುದು ಸತ್ಯ. ನಮ್ಮ ಸೌರಮಂಡಲದಲ್ಲಿ ೧೦ ಗ್ರಹಗಳಿವೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಗ್ರಹಗಳ ಸಂಬಂಧವು ಅಂಥದೇ ಅತ್ಯಂತ ಪ್ರಕಾಶಮಾನ ನಕ್ಷತ್ರಗಳೊಡನೆ ಇರುತ್ತದೆಯೆ? ಇದರಿಂದ ಗ್ರಹಗಳಲ್ಲಿ ಜೀವನ ಸಾಧ್ಯವಾಗುತ್ತದೆಯೆ? ಎಂದು ತಿಳಿಯುವುದು ಎರಡನೆಯ ಕೆಲಸ.

ಇಂದಿಗೆ ಕೆಲವು ಸಾವಿರ ವರ್ಷಗಳಿಗೆ ಮೊದಲು ಅಂತರಿಕ್ಷದಲ್ಲಿ ಪದಾರ್ಥಗಳು ಘನೀರೂಪದಲ್ಲಿದ್ದು ಈ ಪದಾರ್ಥ ಪುಂಜವು ಪರಸ್ಪರ ತಿಕ್ಕಾಡಿಕೊಂಡು ತುಂಡಾಗಿ ಅತ್ತಿತ್ತ ಹರಡಿಕೊಂಡಿರುವುದು ಸಾಮಾನ್ಯ ಮತವಾಗಿತ್ತು. ರೇಡಿಯೋ-ಸಕ್ರಿಯತೆಯ ಸಹಾಯದಿಂದ ಅಳೆದಾಗ ಭೂಮಿಯ ಮೇಲ್ಭಾಗವು ಕೋಟ್ಯಂತರ ವರ್ಷಗಳಷ್ಟು ಹಳೆಯದು ಎಂದು ತಿಳಿದು ಬಂದಿದೆ. ಆದುದರಿಂದ ಬ್ರಹ್ಮಾಂಡದ ಎಲ್ಲ ಕಲ್ಲೋಲಗಳ ಸಮಯದಲ್ಲಿ ಪೃಥ್ವಿ ಮತ್ತು ಸೌರಮಂಡಲದ ಅನ್ಯ ಗ್ರಹಗಳ ಜನ್ಮವಾಗಿರಬಹುದು. ಅದೇ ಸಮಯದಲ್ಲಿ ಲಕ್ಷಾಂತರ ಅನ್ಯ ಸೌರಮಂಡಲ ಮತ್ತು ಗ್ರಹಮಂಡಲಗಳೂ ವಿಕಾಸ ಹೊಂದಿರಬಹುದು.

ಇದರಿಂದಾಗಿ ಈ ಬ್ರಹ್ಮಾಂಡದಲ್ಲಿ ಲಕ್ಷಾಂತರ ಸೌರಮಂಡಲಗಳಿರಬೇಕೆಂದು ಒಪ್ಪಬೇಕಾಗುತ್ತದೆ. ಇವುಗಳ ಉತ್ಪತ್ತಿ ಮತ್ತು ವಿಕಾಸ ಯಾವ ರೀತಿಯಲ್ಲೇ ಆಗಲಿ, ಅವುಗಳಲ್ಲಿ ಭೂಮಿಯಂತಹ ಇಲ್ಲವೇ ಅದಕ್ಕಿಂತಲೂ ಹಿರಿದಾದ ಅಥವಾ ಕಿರಿದಾದ ಗ್ರಹೋಪಗ್ರಹಗಳಿವೆ ಎಂದು ಸಾಮಾನ್ಯತಃ ಎಲ್ಲರೂ ಒಪ್ಪಿದ್ದಾರೆ. ವಿಜ್ಞಾನ ಮತ್ತು ಭೌತಿಕ ವಿಜ್ಞಾನಗಳ ನಿಯಮಗಳು ಬ್ರಹ್ಮಾಂಡದ ಎಲ್ಲ ಭಾಗಗಳಿಗೂ ಅನ್ವಯವಾಗುತ್ತವೆ ಎಂದೂ ಹೇಳುತ್ತಾರೆ. ಹೀಗಿರುವಾಗ, ಭೂಮಿಯಂತಹ ಪರಿಸ್ಥಿತಿ ಮತ್ತು ವಾತಾವರಣವಿರುವ ಅನ್ಯ ಗ್ರಹಗಳಲ್ಲಿಯೂ ಮಾನವರು ಜೀವಿಸಿರಬೇಕೆಂಬುದು ಒಪ್ಪಬಹುದಾದ ವಿಷಯ. ಆದರೆ, ಇಂತಹ ಗ್ರಹಗಳ ಸಂಖ್ಯೆ ಎಷ್ಟು ಎಂಬುದು ಬೇರೆ ಪ್ರಶ್ನೆ.

ನಮ್ಮ ಸೌರಮಂಡಲದಲ್ಲಿನ ೧೦ ಗ್ರಹಗಳಲ್ಲಿ ಪೃಥ್ವಿಯನ್ನುಳಿದು ಬೇರೆ ಗ್ರಹಗಳಲ್ಲಿ ಮಾನವರು ಜೀವಿಸಿರುವರೇ ಎಂಬುದೂ ಒಂದು ಪ್ರಶ್ನೆ. ಇದಕ್ಕೆ ಉತ್ತರ

(೧೦ನೇ ಪುಟ ನೋಡಿರಿ)

ಗೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ಪ್ರಕಟಣೆ

ನಿರಖು ಠೇವಣಾತಿಗಳ ಮೇಲೆ ನಾವೀಗ ತೆರುತ್ತಿರುವ ಶಾ. ಸೇ. 4¼ರಿಂದ 4¾ರ ವರೆಗಿನ ಬಡ್ಡಿ ದರಗಳಲ್ಲಿ ಯಾವುದೊಂದೂ ಬದಲಾವಣೆ ಇಲ್ಲದೆ, ಅಂತಹ ಠೇವಣಾತಿಗಳನ್ನು ಅವೇ ದರಗಳಲ್ಲಿ ಸ್ವೀಕರಿಸಲಾಗುವುದೆಂದು ಪ್ರಕಟಿಸಲು ಸಂತೋಷಪಡುತ್ತೇವೆ.

ವಿಶೇಷ ಮಾಹಿತಿಗೆ
ನಿಮಗೆ ಸಮೀಪವಿರುವ ನಮ್ಮ ಯಾವುದೇ ಶಾಖೆಯನ್ನು ಸಂದರ್ಶಿಸಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906
ಪ್ರಧಾನ ಕಛೇರಿ : ಉಡುಪಿ (ದ. ಭಾರತ)
(ವಿಶಾಲ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ನಮ್ಮದು ಅತಿ ಹಿರಿಯ ಬೇಂಕು!)

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಹೆಸರಿನ ಗುಟ್ಟು

ದೇಶಗಳ ಹೆಸರಿನ ರಹಸ್ಯ ಬಲ್ಲಿರಾ?

ಒಂದೊಂದು ಹೆಸರಿನ ಹಿಂದೆ ಅನೇಕಾನೇಕ ರಹಸ್ಯಗಳು ಅಡಗಿಕೊಂಡಿರುತ್ತವೆ. ಅವುಗಳ ಸಂಸ್ಮರಣೆಯೇ ಈ ಹೆಸರುಗಳು.

ಪ್ರಪಂಚದಲ್ಲಿರುವ ವಿವಿಧ ದೇಶ-ಪಟ್ಟಣಗಳ ವಿವಿಧ ಹೆಸರಿನ ಹಿನ್ನೆಲೆಯಲ್ಲಿ ಭಿನ್ನಭಿನ್ನ ಮನೋರಂಜಕವಾದ ಇತಿಹಾಸವು ಘಟಿಸಿರುವದು! ಈ ದೇಶಗಳಿಗೆ ಆ ಹೆಸರುಗಳು ಹೇಗೆ ಬಂದವು? ಇದೊಂದು ಸೋಜಿಗದ ಪ್ರಶ್ನೆಯಾಗಿ ಬಿದ್ದಿದೆ. ಒಂದೊಂದು ದೇಶಕ್ಕೆ ಒಂದೊಂದು ವಿಶಿಷ್ಟ ಹೆಸರು ಬೀಳುವದು ಕೆಲವು ಕಾರಣಗಳ ಮೂಲಕವೇ ಆಗಿರುವದು. ಈ ಸಂಗತಿಗೆ ವಿಶ್ವದ ಕೆಲವು ದೇಶಗಳ ಹೆಸರಿನ ಉದಾಹರಣೆಗಳನ್ನು ಕೊಟ್ಟು ಸ್ಪಷ್ಟ ಪಡಿಸಬಹುದು.

೧. **ಆಯರ್ಲಂಡ** — ವಾಸ್ತವಿಕವಾಗಿ ಈ ದೇಶಕ್ಕೆ ನಾವು ಈಗಲೂ "ಆಯರ್ಲಂಡ"ವೆಂದೇ ಸಂಬೋಧಿಸುವೆವು! ಆದರೆ ಅದು ತಪ್ಪು ಇರುವದು. "ಏರಿನಲ್ಯಾಂಡ್" ಹೀಗೆ ಇರಬೇಕು. ಗ್ರೇಟ ಬ್ರಿಟನ್ (ಇಂಗ್ಲೆಂಡ)ದ ಪಶ್ಚಿಮ ದಿಕ್ಕಿಗೆ ಮತ್ತು ತುದಿಯಲ್ಲಿದ್ದ ಈ ಭೂ ಭಾಗಕ್ಕೆ ಏರಿನ್‌ಲ್ಯಾಂಡ್" ಈ ಹೆಸರು ಬೀಳಲು ಕಾರಣವೇನು? ಎಂಬುದಕ್ಕೆ ಒಂದು ಇತಿಹಾಸವೂ ಇರುವದು! ಕ್ರಿಸ್ತ ಪೂರ್ವದ ಅನೇಕ ಶತಕಗಳ ಹಿಂದೆ "ಫೊನಿಶಿಯನ್" ಈ ಜನ ಜಾತಿ ಆಗಿ ಹೋಯಿತು. ಅವರು ಹಿಂದಿನಿಂದಲೂ ನಾವಿಕರಾಗಿದ್ದರು. ಅಂತೆಯೇ ಸಮುದ್ರದಲ್ಲಿಯೇ ನೆಲೆಸಿರುವ ಇವರಿಗೆ ಆ ಜೀವನವು ತುಂಬಾ ಸೇರುತ್ತಿತ್ತು. ಅವರು ಗ್ರೇಟ ಬ್ರಿಟನ್‌ದ ಪಶ್ಚಿಮದ ಸಾಗರ ಪ್ರವಾಸಕ್ಕೆ ಪ್ರಾರಂಭ ಮಾಡಿ, ಆಯರೀಶ್ ಸಮುದ್ರ ದಾಟಿ ಮುಂದೆ ಸಾಗಿದರು.

ಅಲ್ಲಿ ಅವರಿಗೊಂದು ಭೂ ಪ್ರದೇಶವು ತಗಲಿತು. ಆ ಪ್ರದೇಶವೆಂದರೆ—ಪೃಥ್ವಿಯ ಅತೀ ಪಶ್ಚಿಮ ಕಡೆಯ ಎಲ್ಲದರಲ್ಲಿಯೂ ಕೊನೆಯ ನೆಲವೆಂದೂ ಅವರಿಗೆ ತಪ್ಪು ಕಲ್ಪನೆಯಾಯಿತು. ಬಳಿಕ ಆ ಜನರು ತಮಗೆ ತೋರಿದ ಆ ಭೂ ಪ್ರದೇಶಕ್ಕೆ "ಏರಿನಲ್ಯಾಂಡ್" ಎಂದು ಹೆಸರಿಟ್ಟರು! ಏರಿನ್‌ಲ್ಯಾಂಡ ಈ ಶಬ್ದವು ಫೋನಿಶಿಯನ್ ಜನಾಂಗದ ಭಾಷೆಯಲ್ಲಿ "ಹಾಯ್ ಬರ್ನಿಯಾ" ಈ ಶಬ್ದದಿಂದ ಬಂದಿರುವುದು. ಹಾಯ್ ಬರ್ನಿಯಾ ಇದರರ್ಥ "ಎಲ್ಲದರಲ್ಲಿಯೂ ದೂರದ ವಸ್ತು" ಎಂದು! ಹೀಗೆ ಅದು ಕಾಲ ಕ್ರಮೇಣ "ಆಯರ್ಲಂಡ" ದೇಶವಾಗಿ ಮಾರ್ಪಟ್ಟಿತು.

೨. **ಆಫ್ರಿಕಾ**— "ಆಫ್ರಿಕಾ ಖಂಡಕ್ಕೆ ಈ ಹೆಸರು ಕೊಡುವ ಕಾರ್ಯವಾದರೂ ಫೋನಿಶಿಯನ್ ಜನರೇ ಮಾಡಿದರು! ಆಫ್ರಿಕಾ ಶಬ್ದವಾದರೂ ಅವರ ಭಾಷೆಯದಿರುತ್ತದೆ. ಅದರ ಅರ್ಥ "ಅಂಧಃಕಾರ" ಇರುವದು. ಆಫ್ರಿಕಾ ಖಂಡದಲ್ಲಿ ವಾಸವಾಗಿರುವ ಕೃಷ್ಣವರ್ಣದ ನಿಗ್ರೋಗಳಿಂದ ಆ ಹೆಸರು ಅವರು ಸೂಚಿಸಿದ್ದಾರೆ. ಅದು ಇಂದಿನ ತನಕ ಹಾಗೆಯೇ ಇರುವದು.

೩. **ಅಮೇರಿಕಾ**—ಈಗಿನ ಜಗತ್ತಿನ ಬಲಾಢ್ಯ ರಾಷ್ಟ್ರಗಳಲ್ಲಿ "ಅಮೇರಿಕಾ" ಈ ಪ್ರದೇಶವು ಪ್ರಥಮವಾಗಿದೆ. ಅಮೇರಿಕಾ ಈ ಹೆಸರು ಬಂದಿದ್ದು ಓರ್ವ ನಾವಿಕನ ಹೆಸರಿನಿಂದ! "ಅಮೇರಿಗೋ ವ್ಹೇಸ್‌ಪೂಶೀ" ಇವನು ಒಬ್ಬ "ಫ್ಲೋರೇನ್ಸ"ದಲ್ಲಿಯ ನಾವಿಕನಾಗಿದ್ದನು. ೧೪೫೪ರಿಂದ ೧೫೧೨ರ ಕಾಲದಲ್ಲಿ ಅವನು ಬದುಕಿ ಬಾಳಿದನು. ಆ ನಾವಿಕನು ಸ್ವಭಾವದಿಂದ ಅತ್ಯಂತ ಧಾಡಸೀಯಾಗಿದ್ದನು. "ನವ ಜಗತ್ತು" ಶೋಧಿಸುವದರಲ್ಲಿ ತೊಡಗಬೇಕೆಂದು ದೃಢ ನಿಶ್ಚಯಿಸಿ, ಮುಂದೆ ಸಮುದ್ರದ ಮೇಲಿನ ಸಂಚಾರ ಕೈಕೊಂಡನು ಇದು ಕ್ರಿ. ಶಕ. ೧೪೯೭ರಲ್ಲಿ ಆದ ಘಟನೆ! ಇಂದು ಅಮೇರಿಕಾ ಎಂದು ಕರೆಯುವ ದೇಶಕ್ಕೆ ಬಹುಕಾಲದ ನಂತರ ಆ ನಾವಿಕನು ತಲುಪಿದನು. "ಅಮೇರಿಗೋ" ಇವನು ಆ ದೇಶದ ಶೋಧ ಮಾಡಿದ ಮೂಲಕವೇ ಅವನ ಹೆಸರನ್ನು ಕೊನೆಗೆ ಇಟ್ಟರು. ಅದೇ ಇಂದು, ಅಮೇರಿಗೋ ಬದಲಾಗಿ "ಅಮೇರಿಕಾ" ಆಗಿದೆ.

೪. **ಕೆನಡಾ**—ಈ ಹೆಸರನ್ನು ಯಾರಾದರೂ ಉಚ್ಚರಿಸಿದ ಕೂಡಲೇ ಕಿವಿಯೊಳಗೆ ಒಂದು ದೊಡ್ಡ ಮಧುರ ಶಬ್ದ ಕೇಳಿಬರುವದು. ಆದರೆ ಆ ಶಬ್ದದ ಅರ್ಥ ಅಷ್ಟೇನು ಮಧುರವಿಲ್ಲ. ಆದರರ್ಥ—"ಗುಡಿಸಲುಗಳ ಸಮೂಹ" ಈ ಶಬ್ದವು ರೆಡ್ ಇಂಡಿಯನ್ ಜನರ ಭಾಷೆಯೊಳಗಿನದಿರುವದು. ಅವರೇ ಆ ಪ್ರದೇಶಕ್ಕೆ "ಕೆನಡಾ" ಎಂಬ ಹೆಸರನ್ನು ನೀಡಿದರು. ಯಾವ ಕಾಲಕ್ಕೆ ಈ ಹೆಸರು ಕೊಟ್ಟಿರುವರೋ, ಅಂದು ಕದಾಚಿತ್ ಆ ದೇಶದಲ್ಲಿ ತಕ್ಕ ಪ್ರಗತಿಯಾಗಲಿಲ್ಲ. ಸಣ್ಣ—ಪುಟ್ಟ ಗುಡಿಸಲುಗಳನ್ನು ಕಟ್ಟಿಕೊಂಡು ಕೈಬೆರಳಿನಿಂದ ಎಣಿಕುವಷ್ಟು ಜನರು ತಮ್ಮ ದೈನಂದಿನ ವ್ಯವಹಾರ ಸಾಗಿಸುತ್ತಿದ್ದರು. ಪರಂತು ಇಂದು ಆ ಪರಿಸ್ಥಿತಿಯು ತುಂಬಾ ಪರಿವರ್ತನೆಯಾಗಿದ್ದುದು ಕಂಡುಬರುವದು. ಆದರೂ ಪೂರ್ವಕಾಲದಲ್ಲಿಟ್ಟ ಹೆಸರಿನಲ್ಲಿ ಎಳ್ಳಷ್ಟೂ ಬದಲಾವಣೆಯಾಗದೇ ಹಾಗೆಯೇ ಇರುವದು.

೫. **ಕೆನರಾ**—ಈ ಪ್ರದೇಶಕ್ಕೆ ಹೊಲುವಂತಹ ಪ್ರದೇಶವು ನಮ್ಮ ಭಾರತದ ಪಶ್ಚಿಮ ಕರಾವಳಿಯಲ್ಲಿ (ಮೈಸೂರು ರಾಜ್ಯದ ಕರಾವಳಿ) ೩೦೦ ಮೈಲು ಉದ್ದವಾದ ಒಂದು ಪ್ರದೇಶವಿರುವದು. ಈ ಪ್ರದೇಶಕ್ಕೆ ಕೆನರಾ ಎಂದಿದ್ದರೂ "ಉತ್ತರ ಕೆನರಾ" ಹಾಗೂ ದಕ್ಷಿಣ ಕೆನರಾ ಎಂಬೆರಡು ವಿಭಾಗಗಳನ್ನು ಮಾಡಿ ಎರಡು ಪ್ರತ್ಯೇಕವಾದ ಜಿಲ್ಲೆಗಳನ್ನು ನಿರ್ಮಿಸಿರುವರು. ಪೂರ್ವಕಾಲದಲ್ಲಿ ಇವೆರಡೂ ಒಂದೇ ಪ್ರದೇಶವಾಗಿದ್ದಿತ್ತು. ಇದು ಸಮುದ್ರ ಸಾನಿಧ್ಯದಲ್ಲೂ ಹಾಗೂ ಪಶ್ಚಿಮ ಘಟ್ಟದ ಅಂಚಿನಲ್ಲಿದ್ದ ಕಾರಣ ಮಳೆಯ ಪ್ರಮಾಣವಾದರೂ ಮಿತಿಮೀರಿ ಇರುವದು ಸ್ವಾಭಾವಿಕವಾದದ್ದು. ಜನರಾದರೂ ಅತಿ ಹಿಂದುಳಿದ ಬಡ ಕಷ್ಟ ಜೀವಿಗಳು. ಅಂತೆಯೇ ಇಲ್ಲಿಯ ಮನೆಗಳಾದರೂ ಹುಲ್ಲಿನ ಚಿಕ್ಕ—ಪುಟ್ಟ ಗುಡಿಸಲುಗಳಾಗಿದ್ದವು. ಆದಕಾರಣ, ಹಿಂದುಸ್ಥಾನಕ್ಕೆ ವ್ಯಾಪಾರದ ಗೋಸ್ಕರ ಬಂದ ಪೋರ್ತುಗೀಜರು, ಇಂಗ್ಲೀಷರು ಮತ್ತು ಫ್ರೇಂಚ ಹಾಗೂ ಡಚ್ಚರು ಈ ಪ್ರದೇಶವನ್ನು ಕಂಡು "ಕೆನಡಾ" (ಕೆನರಾ) ಎಂದು ಉದ್ಗರಿಸಿದರು! ಅವರಿಗೆ ಪಶ್ಚಿಮದಲ್ಲಿರುವ ಕೆನಡಾದಂತೆಯೇ ಭಾರತದಲ್ಲಿರುವ ಈ ನಮ್ಮ ಜಿಲ್ಲೆಯ ಪ್ರದೇಶಗಳು ತೋರಿಬಂದುದರಿಂದ ಮೇಲಿನಂತೆ ಉದ್ಗಾರ ತೆಗೆದರು. ಅಂದಮೇಲೆ ಅತಿ ಪ್ರಾಚೀನಕಾಲದಲ್ಲಿ ಈ ಉತ್ತರ-ದಕ್ಷಿಣ ಕಾನಡಾಗಳು, ಗುಡಿಸಲುಗಳ ಸಮೂಹದಿಂದಿರಬೇಕೆಂದು ಊಹಿಸಬಹುದು.

೬) **ಬ್ರಿಟನ್ (ಇಂಗ್ಲೆಂಡ)**— ಇಂಗ್ಲೆಂಡ, ವೇಲ್ಸ್ ಮತ್ತು ಸ್ಕಾಟಲಾಂಡ್ ಈ ಮೂರು ದೇಶಗಳನ್ನು ಕೂಡಿಸಿ "ಗ್ರೇಟ ಬ್ರಿಟನ್" ಅಥವಾ "ಯುನೈಟೆಡ್ ಕಿಂಗ್‌ಡಂಮ್"[ಇಂದಿನ ಹೆಸರು] ಎಂದು ಕರೆಯುತ್ತಾರೆ. ಗ್ರೇಟ ಬ್ರಿಟನ್ನದಲ್ಲಿಯ ಈ ಶಬ್ದ "ಬ್ರಿಟಾನಿಯಾ"ದಿಂದ ಬಂದಿರುವದು. ಇ. ಸ. ಪೂರ್ವ ೫೫ ಹಾಗೂ ೫೪ರಲ್ಲಿ ಜ್ಯೂಲಿಯಸ್ ಸೀಝರ್‌ನು ಬ್ರಿಟನ್‌ದ ಮೇಲೆ, ಮೇಲಿಂದ ಮೇಲೆ ಸವಾರಿಯನ್ನು ಮಾಡಿದನು. ಅವನ ಜೊತೆಗೆ ಯಾವ ಸೈನ್ಯವು ಇದ್ದಿತ್ತೋ ಅದು ಆ ಪ್ರದೇಶಕ್ಕೆ 'ಬ್ರಿಟಾನಿಯಾ" ಎಂದು ಸಂಬೋಧಿಸಿತು! ಅದರ ಮೇಲಿಂದಲೇ ಮುಂದೆ "ಬ್ರಿಟನ್" ಈ ಹೆಸರು ಪ್ರಸಿದ್ಧವಾಯಿತು!

ದೇಶಗಳ ಹೆಸರು ಬಹುತೇಕವಾಗಿ ಅಲ್ಲಿಯ ಮೂಲ ವಸತಿ ಮಾಡಿಕೊಂಡಿರುವ ಆದಿವಾಸಿ ಜನಾಂಗದ ಮೇಲಿಂದಲೇ ಬರುವದು. ಆದರೆ ಇಂಗ್ಲೆಂಡ ಈ ಹೆಸರು ಮಾತ್ರ ಇದಕ್ಕೆ ಅಪವಾದವಾಗಿದೆ. ಅದು ಅಲ್ಲಿಯ ಮೂಲವಾಸಿಗಳಿಂದ ಪ್ರಾಪ್ತವಾಗದೇ ಆ ದೇಶ ಗೆದ್ದು ಯಾವ ಜನರು ಅಲ್ಲಿ ತಳವೂರಿದರೋ ಅವರಿಂದ ಬಂದಿದೆ.

ಉದಾ-ಹಿಂದುಸ್ತಾನದೊಳಗೆ ಉತ್ತರ ಕಡೆಯಿಂದ ಬಂದ ಆರ್ಯಜನಾಂಗವು ಜಯಶೀಲರಾಗಿ ಅಲ್ಲಿಯೇ ವಾಸವಾಗಿ ಉಳಿದರು. ಆದಕ್ಕಾಗಿಯೇ ಭಾರತ ದೇಶಕ್ಕೆ ಮುಂದೆ "ಆರ್ಯಾವರ್ತ" ಎಂಬ ಹೆಸರು ಬಂದಿತು. ಹಾಗೆಯೇ ಕ್ರಮೇಣ ಸ್ವಲ್ಪ ಬದಲಾವಣೆಯಾಯಿತು!

ಇ. ಸ. ೪೫೦ರಿಂದ ರೋಮನ್ನ ಜನರು ಇಂಗ್ಲೆಂಡದಲ್ಲಿ ಪ್ರವೇಶಿಸಲು ಪ್ರಾರಂಭಿಸಿದರು. ಆ ಸಮಯಕ್ಕೆ "ಅಗ್ಲಿಷ' ಜನರು ಇಂಗ್ಲೆಂಡದಲ್ಲಿ ಸಂಪೂರ್ಣ ಒಕ್ಕಟ್ಟಾಗಿ ಸಂಯುಕ್ತ ಜೀವನವನ್ನು ಸಾಗಿಸಿದರು. ಈ ಜನಾಂಗಕ್ಕೆ ಇಂಗ್ಲೆಂಡದಲ್ಲಿಯ ಮೂಲ ನಿವಾಸಿಗಳಾದ "ಸಕ್ಸನ್" ಜನರು 'ಇಂಗ್ರಾಲಿಸ್' ಎಂದು ಹೇಳುತ್ತಾರೆ. ಯಾವದೇಶದಲ್ಲಿ ಇಂಗ್ಲಾಈಷ್ ಜನರು ವಾಸಿಸುವರೋ, ಆ ಪ್ರದೇಶಗಳಿಗೆ ಮುಂದೆ ಇಂಗ್ಲೆಂಡ ದೇಶ ವಾಚಕ ಹೆಸರು ಜನ್ಮವಾಯಿತು.

೭. **ಅಸ್ಟ್ರೇಲಿಯಾ** — "ಅಸ್ಟ್ರೇಲಿಯಾ"ಈ ಶಬ್ದದ ಅರ್ಥ "ದಕ್ಷಿಣ ಕಡೆಯ ಭೂಮಿ" ಎಂದಿರುವದು! ಆದರೆ "ನ್ಯೂಝಿಲಂಡ್" ಈ ಹೆಸರು ಹಾಲಂಡ್‌ದಲ್ಲಿಯ "ಝಿಲಂಡ್" ಎಂಬ ಪ್ರಾಂತದಿಂದ ಬಂದಿದೆ. "ಅಬೇಲ್‌ಜಾನ್ಸಝೂನ್ ಟಾಸ್‌ಮಾನ್" ಈತನು ಸನ್ ೧೬೦೩—೫೯ರ ಕಾಲದಲ್ಲಿ ಆಗಿಹೋದ ಒಬ್ಬ ಡಚ್ಚ ನಾವಿಕನಾಗಿದ್ದನು. ಅವನು ನ್ಯೂಝಿಲಂಡ, ಫೀಜಿ ಈ ನಡುಗಡ್ಡೆಗಳನ್ನು ಸಂಶೋಧಿಸಿದನು ಅನ್ನಲ್ಲಿಯೇ ಈತ ಇನ್ನೊಂದು ಭೂ ಪ್ರದೇಶದ ಶೋಧ ಕೈಕೊಂಡನು, ಆ ಪ್ರದೇಶಕ್ಕೆ ಮುಂದೆ ಅವನ ಹೆಸರೇ ಕೊಟ್ಟರು. ಅದೇ ಇಂದಿನ "ಟಾಸ್ಮಾನಿಯಾ" ಭೂ ಭಾಗವಾಗಿದೆ!

ರಾಮಕೃಷ್ಣ ಎ. ಪೈ, ಅಂಕೋಲಾ

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2·00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ। ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಟುಂಬ ಯೋಜನೆ
(ಮಿತ ಸಂತಾನ)

Family Planning

ಮಾಜಿ ಮಂತ್ರಿ ಎ. ಬಿ. ಶೆಟ್ಟರ ಮುನ್ನುಡಿಯೊಂದಿಗೆ ದ. ಕ. ಜಿಲ್ಲಾ ಕುಟುಂಬಯೋಜನಾ ಸಮಿತಿಯಪರವಾಗಿ ಪ್ರಕಟಿಸಲ್ಪಟ್ಟ ಕುಟುಂಬ ಯೋಜನೆಯ ಆವಶ್ಯಕತೆಯನ್ನೂ ಸಂತತಿಯನ್ನೂ ಒಂದು ಉಚಿತ ಪ್ರಮಾಣದಲ್ಲಿ ನಿರೋಧಿಸುವ ಸರಳ ಮಾರ್ಗವನ್ನೂ ಬೋಧಿಸುವ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಕೈಪಿಡಿಗಳು.

ಪ್ರತಿಯೊಂದರ ಬೆಲೆ 19 ನಯಾಪೈಸೆ.

ನವಭಾರತ ಬುಕ್ ಡಿಪ್ಪೊ, ಉಡುಪಿ

ಒಂದು ಸಂಸ್ಮರಣೆ

ರಾಮನ ಮಂದಿರದಲ್ಲಿ ಮಿಥ್ಯಾಲಾಪ!

ಬಾಪೂ ತಾನು ಕೇಳಿದ ಮಾತನ್ನು ನಿಜವೆಂದು ನಂಬಿ ಬಹಿರಂಗಪಡಿಸಿದರು; ಆದರದು ಸಟೆಯೆಂದು ತಿಳಿದಾಗ ..? ಕೆಟ್ಟವನ್ನು ನೋಡದಿರಿ, ಕೇಳದಿರಿ ಮತ್ತು ಆಡದಿರಿ ಎಂಬವರ ಉಪದೇಶಕ್ಕೆ ಈ ಘಟನೆಯೂ ಕಾರಣವಲ್ಲವೆ?

ತೀರ ಅಲ್ಪವೆನಿಸಿದ ಮಾತು; ಆದರೆ, ಹಳೆಯದೆಂದು ಭಾವಿಸಿದಷ್ಟು ಭಾರವಾಗಿ ತೋರುವುದು. ನನ್ನ ಹೃದಯವು ಇದರಿಂದ ಅಪಾಯುಕ್ತೀತಾಗಬಾರದೆಂದು ಹೇಳುತ್ತೇನೆ.

ಸ್ವರಾಜ್ಯ ಪ್ರಾಪ್ತಿಗೆ ಕೆಲವು ತಿಂಗಳುಗಳಿಗೆ ಮೊದಲು ನನ್ನ ಅದೃಷ್ಟವಶದಿಂದ ಒಂದು ಬಾರಿ ಗಾಂಧೀಜಿಯವರು ದೀರ್ಘ ವಾಸಕ್ಕಾಗಿ ಮಸ್ಸೂರಿಗೆ ಬಂದರು. ಅವರ ಆರೋಗ್ಯ ತುಸು ಕೆಟ್ಟಿತ್ತು. ಮಸ್ಸೂರಿಯ ಬಿರ್ಲಾ ಭವನದಲ್ಲಿ ತಂಗುವ ಮಾತಾಗಿತ್ತು. ನಾನು ಆ ಸಮಯದಲ್ಲಿ ಉತ್ತರ ಪ್ರದೇಶದ ವಿಧಾನ ಸಭಾ ಸದಸ್ಯನಾಗಿದ್ದ. ಗಾಂಧೀಜಿಯವರು ಬರುವರೆಂದು ತಿಳಿದೊಡನೆಯೇ ನಾನು ೨೦-೨೫ ಜನ ಸ್ವಯಂ ಸೇವಕರ ದಳವನ್ನು ಕರೆದುಕೊಂಡು ಮಸ್ಸೂರಿಗೆ ಬಂದೆ. ಬಿರ್ಲಾ ಭವನದ ಸಮೀಪದಲ್ಲಿಯೇ ಒಂದು ಶಿಬಿರ ಸ್ಥಾಪಿಸಿದೆ. ಒಂದು ಅಗ್ಗದ ಹೋಟಲಿನಲ್ಲಿ ಅನ್ನಾಹಾರದ ವ್ಯವಸ್ಥೆಯೂ ಆಯಿತು ಅಲ್ಲಿಗೆ ತೆರಳಿದ ಸ್ವಯಂ ಸೇವಕರೂ ತಾವು ಧನ್ಯರು ಎಂದು ಕೊಂಡಿದ್ದರು.

ನನಗೆ ಮೊದ ಮೊದಲು ಸ್ವಯಂ ಸೇವಕರೊಡನೆಯೇ ಇರಲು ಆಸೆಯಿತ್ತು. ಆ ಸಮಯದಲ್ಲಿ ಸಿಗರೇಟು ಸೇದಲು ಮನಸ್ಸಿದ್ದರೂ ಕೈಯಲ್ಲಿ ಕಾಸಿರಲಿಲ್ಲ; ಬೀಡಿ ಸೇದಿಯೇ ತೃಪ್ತಿಪಟ್ಟುಕೊಳ್ಳಬೇಕಾಗಿತ್ತು. ಎರಡೇ ವಸ್ತುಗಳು ನನ್ನನ್ನು ಆಕರ್ಷಿಸುತಿದ್ದುವು: ಒಂದು ಬಾಪೂ; ಇನ್ನೊಂದು ಬೀಡಿ, ಆದರೆ, ಎರಡನ್ನೂ ಒಂದೇ ಸಾರಿ ಸೇವಿಸುವುದು ಅಸಾಧ್ಯವಿತ್ತು. ಬಾಪೂವನ್ನು ಕಂಡೊಡನೆಯೇ ಬೀಡಿಯನ್ನು ಚಾಣಾಕ್ಷತೆಯಿಂದ ನಂದಿಸಿ ಎಸೆಯುತಿದ್ದೆ. ನಂದಿಸುವುದಕ್ಕೂ ಅವಕಾಶ ಸಿಗದೆ ಹೋದರೆ, ಕಿಸೆಯ ಒಳಗೇನೇ ಉಜ್ಜಿ ಬೆಂಕಿ ಆರಿಸಬೇಕಾಗುತಿತ್ತು. ಗಾಂಧೀಜಿಯವರ ಕಣ್ಣು ತಪ್ಪಿಸಿ ಬೀಡಿ ಸೇದುತಿದ್ದೆ. ಆದರೆ, ನಂದಿಸುವ ಸಮಯದ ಭಾವನೆ ಮತ್ತು ಭಕ್ತಿಗಳು ಅಗಾಧ ಮತ್ತು ಪವಿತ್ರ ದಾನ—ಬಲಿ ದಾನಗಳ ಸಮಯದಂತಿರುತಿದ್ದುವು.

ಬಾಪೂ ಮುಂಜಾನೆ ಮತ್ತು ಸಂಜೆ ತಿರುಗಾಡಲು ಹೋಗುವಾಗ, ಡಾ। ಸುಶೀಲಾ ನಾಯರ್, ಪ್ಯಾರೇ ಲಾಲಜಿ ಮತ್ತು ವ್ರಜಕೃಷ್ಣಜಿ ಚಾಂದೀವಾಲಾ ಮೊದಲಾದವರು ಅವರ ಪರಿವಾರದವರಂತೆ ಹಿಂಬಾಲಿಸುತಿದ್ದರು. ಮತ್ತು ನಾವು? ನಾವು ಅವರ ದೃಷ್ಟಿಯು ನಮ್ಮ ಮೇಲೆ ಬೀಳುವಂತಿರುವ ಮಾರ್ಗದ ಒಂದು ಪಕ್ಕದಲ್ಲಿ ನಿಂತುಕೊಂಡು ಅವರು ನಮ್ಮನ್ನು ಕಂಡೊಡನೆಯೇ ನಮಸ್ಕರಿಸುತಿದ್ದೆವು. ನಮ್ಮನ್ನೂ ಅವರು ಕರೆಯಬೇಕೆಂಬ ಅಭಿಲಾಷೆ ಮೂಡುತಿತ್ತು; ಒಮ್ಮೊಮ್ಮೆ ಕರೆಯುತ್ತಲೂ ಇದ್ದರು ಒಂದು ಬಾರಿ ನಮ್ಮನ್ನು ಕರೆದರು. ನಾವು ಹೋದೆವು. ಬಾಪೂ ನನ್ನ ಭುಜದ ಮೇಲೆ ತಮ್ಮ ಕೈಯನ್ನು ಹಾಕಿ ನಡೆಯತೊಡಗಿದರು ಐದು ನಿಮಿಷಗಳು ಕಳೆದಿವೆಯೋ ಇಲ್ಲವೋ ಒಬ್ಬಾಕೆ ಹುಡುಗಿ ಓಡಿಬಂದು ಅವರ ಕೈಯನ್ನು ಸೆಳೆದು ತನ್ನ ಭುಜದಲ್ಲಿರಿಸಿಕೊಂಡಳು.

ನಾನೂ ಬಾಪೂವನ್ನು ಕರುಣಾಭರಿತ ನೇತ್ರಗಳಿಂದ ನೋಡಿದೆ ಅವರು ಏನೂ ನಡೆಯದಿರುವಂತೆ ನಕ್ಕುಬಿಟ್ಟರು. ಒಬ್ಬಾಕೆ ಹುಡುಗಿಯಿಂದ ನನ್ನ ಪ್ರಪಂಚ ಉರುಳಿತು ಇವರು ನಗುತ್ತಾರೆ! ಬಾಪೂ ಎಷ್ಟು ಕಠೋರರು! ಆದರೂ ಇದುವರೆಗೂ ಅವರ ಕೈನೆರಳಡಿ ನಡೆಯುತ್ತಿದ್ದೇನೆ ಅವರಿಗ ನಾನು ಮೋಸ ಮಾಡಿದೆ, ಅವರು ಕ್ಷಮೆಯೂ ಮಾಡುತಿದ್ದೇನೆ ಇಂತಹ ನಿರ್ಭಾಗ್ಯ ಮಹಾ ವೀರತ್ಯಾಗಿ. ಆದರೆ, ಅವರ ಛಾಯೆ ಹಾಗೆಯೇ ಇದೆ. ಎಂತಹ ಉದಾರಿ ಬಾಪೂ!

ಸಾಯಂಕಾಲ ಪ್ರಾರ್ಥನೆಯಾಗುತಿತ್ತು. ಮೊದಲು ದೂರದ ಮೈದಾನಿನಲ್ಲಿ ಆಗುತಿತ್ತು. ನಗರದ ನಡುವೆಯಾಗಬೇಕೆಂದು ಜನರ ಇಚ್ಛೆಯಿತ್ತು. ನಾನು ಹೆದರಿಯೇ ಅಪ್ಪಣೆ ಕೇಳಿದೆ ಅವರು ಇದನ್ನು ಸ್ವೀಕರಿಸಿದರು. ಸಿಲ್ ವರ್ ಟನ್ ಹೋಟೇಲಿನ ಮೈದಾನದಲ್ಲಿ ಪ್ರಾರ್ಥನೆ ನೆರವೇರತೊಡಗಿತು ಬಾಪೂರ ಧ್ಯಾನ ರಾಮನಲ್ಲ, ನಮ್ಮ ಗಮನ ಬಾಪೂವನಲ್ಲಿತ್ತು. ಜನತೆ ಅವರ ಅಮೃತ ವಚನ ಪಾನ ಮಾಡುತಿತ್ತು. ಇಂದಿಗೂ ಅವು ಕಿವಿಯಲ್ಲಿ ಗುಯ್ ಗುಡುತ್ತಿವೆ. ನಾಲ್ಕೂ ಸುತ್ತ ನನ್ನ ಸ್ವಯಂ ಸೇವಕರು ಸಮವಸ್ತ್ರಧಾರಿಗಳಾಗಿ ನಿಂತಿದ್ದರು. ಆ ಗ್ರಾಮದ ಸ್ವಯಂಸೇವಕರು ಸರಳರೂ ನಿಷ್ಕಪಟಗಳೂ ಆಗಿದ್ದರು. ಎಲ್ಲ ಕೆಲಸಗಳಿಗೂ ಸೈನಿಕರಂತೆ ಸಿದ್ಧರು. ಅವರು ನಮಗೆ ತುಂಬ ಅನುಕೂಲರಾದರು; ನಾನು ಮಾತ್ರ ಅವರಿಗೆ ಯಾವುದಕ್ಕೂ ಬೇಡವಾದೆ. ಎಂತಹ ಅಸಮರ್ಥ ನಾಯಕ!

ಒಂದು ದಿನ ನನ್ನ ಓರ್ವ ಮಿತ್ರನು ಗ್ರಾಮದ ಕೂಲಿಗಳ ಬಟ್ಟೆ ಕೊಳಕಾಗಿರುವುದರಿಂದ ಪ್ರಾರ್ಥನೆಗೆ ಬಾರದಂತೆ ನಾನು ತಡೆಯುತ್ತಿರುವೆನೆಂದು ಗಾಂಧೀಜಿಯವರ ಕಿವಿ ಚುಚ್ಚಿದ. ಈತ ನಾನು ಗಾಂಧೀಜಿಯವರ ನಿಕಟ ಬಂದುದಕ್ಕೂ ತಾನು ಅಷ್ಟು ಸಾಮಿಪ್ಯ ಪಡೆಯದಿರುವುದಕ್ಕೂ ನೊಂದು ನನ್ನನ್ನು ತುಸು ದ್ವೇಷಿಸುತಿದ್ದ. ಗಾಂಧೀಜಿಯವರಿದನ್ನು ಕೇಳಿ ಆಘಾತಿತರಾದರು. ಅವರು ತಮ್ಮ ಪ್ರವಚನದಲ್ಲಿ ತೀವ್ರವಾಗಿ ಹೇಳಿದರು—"ಸ್ವಯಂ ಸೇವಕರು ಕೂಲಿಗಳನ್ನು ಪ್ರಾರ್ಥನೆಗೆ ಬರಲು ತಡೆದುದರಿಂದ ನನಗೆ ತೀವ್ರ ವೇದನೆಯೆನಿಸುತ್ತದೆ. ದರಿದ್ರ ನಾರಾಯಣನನ್ನು ಅವನ ಬಟ್ಟೆಯು ಮೈಲಿಗೆಯಾದುದರಿಂದ ಮಂದಿರದೊಳಗೆ ಪ್ರವೇಶಿಸಲು ತಡೆ ಮಾಡಲಾಗುತ್ತಿದೆ ......" ಇತ್ಯಾದಿ.

ನನ್ನ ಸ್ವಯಂ ಸೇವಕರಿಗೆ ಏನೆಲ್ಲಾ ಹೇಳಿದರು. ಅವರು ಸುಮ್ಮನೆ ನಿಂತು ಕೇಳುತಿದ್ದರು. ಇತ್ತ ನಾನು ಉರಿಯುತಿದ್ದೆ. ಪ್ರಾರ್ಥನೆ ಮುಗಿದೊಡನೆಯೇ ನಾನು ಗಾಂಧೀಜಿಯವರೊಡನೆ ಕಠೋರವಾಗಿಯೇ ಕೇಳಿದೆ—"ರಾಮನ ಮಂದಿರದಲ್ಲಿದ್ದುಕೊಂಡು ತಾವು ಸುಳ್ಳನ್ನೇಕೆ ಆಡಿದಿರಿ? ಒಬ್ಬ ಕೂಲಿಯನ್ನೂ ತಡೆಯಲಿಲ್ಲ. ವಿಚಾರಿಸಿದಾಗ ತಿಳಿದೀತು. ನನ್ನ ಸ್ವಯಂ ಸೇವಕರ ಮುಖಕ್ಕೆ ಕಪ್ಪೆರಚಿದಿರಿ. ನಿಮಗೆ ಈ ಶುದ್ಧ ಸುಳ್ಳನ್ನಾಡುವ ಸಾಹಸ ಹೇಗೆ ಬಂತು? ನನ್ನ ಮರ್ಯಾದೆ ತರಗೆಲೆಯ ಮೇಲೆ ತಾವು ಮಣ್ಣೆರಚಿದಿರಿ."

ನಾನು ಬಯ್ಯುತ್ತ ಹೋದಂತೆ ಗಾಂಧೀಜಿ ನಗುತ್ತ ಬಂದರು. ಬಿರ್ಲಾಭವನಕ್ಕೆ ಮುಟ್ಟಿದೊಡನೆಯೇ ವ್ರಜಕೃಷ್ಣಜಿ ಚಾಂದಿವಾಲಾ ಮತ್ತು ಪ್ಯಾರೇ ಲಾಲರಿಗೆ ಈ ವಿಷಯದ ಶೋಧನೆ ನಡೆಸಿ ಮರುದಿನ ಪ್ರಾರ್ಥನೆಗೆ ಮೊದಲು ವರದಿ ಒಪ್ಪಿಸುವಂತೆ ಹೇಳಿದರು. ಈ ಸಮಿತಿ ದಿನವಿಡಿ ಮಸ್ಸೂರಿಯಲ್ಲಿ ಸಂಚರಿಸಿತು. ಆದರೆ, ಪ್ರಾರ್ಥನೆಗೆ ಬರಲು ತಡೆಯಲ್ಪಟ್ಟ ಒಬ್ಬ ಕೂಲಿಯೂ ದೊರೆಯಲಿಲ್ಲ. ಸಮಿತಿ ನಿಜವರದಿಯನ್ನು ಗಾಂಧೀಜಿಯವರಿಗೊಪ್ಪಿಸಿತು.

ನಾನು ಗಾಂಧಿಯೆಂದರೆ ರೇಗತೊಡಗಿದ್ದೆ. ಆ ದಿನ ಅವರ ಪ್ರಾರ್ಥನೆಯಲ್ಲಿ ಅರ್ಧಮನಸ್ಸಿನಿಂದಲೇ ಭಾಗವಹಿಸಿದ್ದೆ. ದೂರದಲ್ಲಿಯೇ ಕಿವಿಕೊಡುತಿದ್ದೆ ಪ್ರಾರ್ಥನೆ ಮುಗಿದೊಡನೆಯೇ ಪ್ರವಚನ ಮೊದಲಾಯಿತು. ನನಗೆ ವಿದ್ಯುತ್ತು ಎರಗಿದಂತಾಯಿತು. ಬಾಪೂ ಹೇಳಿದರು—"ನಾನಿಂದು ಪ್ರಾಯಶ್ಚಿತ್ತ ಮಾಡಬಯಸುತ್ತೇನೆ."

"ಬಾಪೂ, ಎಲ್ಲಾದರೂ ಉಪವಾಸ ಮಾಡಿ ಕೂರಬೇಡಿ"—ಎಲ್ಲ ಜನರೂ ಏಕ ಕಂಠದಿಂದ ಕೂಗಿದರು.

ಬಾಪೂ ಹೇಳಿದರು—"ತ್ಯಾಗಿ ನನ್ನ ಮೇಲೆ ಕೋಪಗೊಂಡಿದ್ದಾನೆ. ಅವನು ನೀನು ಸುಳ್ಳುಗಾರ, ರಾಮನ ಮಂದಿರದಲ್ಲಿ ಕೂತು ಸುಳ್ಳೇಕೆ ಆಡಿದೆ ಎಂದು ಹೇಳುತ್ತಾನೆ. (ನಾನು ಬಾಪೂರವರಿಗೆ ಎಂ

(ಆನೇ ಪುಟ ನೋಡಿರಿ)

Advisory Service No. 11

ನಿಮ್ಮ ಪಾಲಿಸಿಯನ್ನು 'ಪೈಡ್-ಅಪ್' ಮಾಡುವುದರಿಂದ ನಿಮಗೆ ಪ್ರಯೋಜನವಿದೆಯೆ?

ನಿಮ್ಮ ಕುಟುಂಬಕ್ಕೆ ಆರ್ಥಿಕ ಭದ್ರತೆಯನ್ನು ಒದಗಿಸಲೋಸ್ಕರ ನೀವು ಜೀವ ವಿಮೆಯನ್ನು ಪಡೆದಿರುತ್ತೀರಿ. ನಿಮ್ಮ ಪಾಲಿಸಿಯನ್ನು 'ಪೈಡ್-ಅಪ್' ಮಾಡುವುದರಿಂದ, ನೀವು ಯಾವ ಉದ್ದೇಶದಿಂದ ಜೀವ ವಿಮೆಯನ್ನು ಪಡೆದಿರುವಿರೋ, ಆ ಉದ್ದೇಶವನ್ನೇ ನಿರ್ಮೂಲಗೊಳಿಸಿದಂತಾಗುವುದು. ಆದ್ದರಿಂದ ನಿಮ್ಮ ಪಾಲಿಸಿಯನ್ನು 'ಪೈಡ್-ಅಪ್' ಮಾಡುವುದರಿಂದ ನಿಮಗೆ ನಿಜವಾಗಿಯೂ ಪ್ರಯೋಜನವಾಗಲಾರದು.

ಒಂದು ವೇಳೆ ನಿಮ್ಮ ಉದ್ಯೋಗದಲ್ಲಿ ಬದಲಾವಣೆಯುಂಟಾದ ಪರಿಣಾಮವಾಗಿ ನಿಮ್ಮ ಜೀವ ವಿಮೆಯ ಬಗ್ಗೆ ಪುನರ್ವಿಚಾರ ಮಾಡಬೇಕಾಗುವ ಪ್ರಸಂಗ ಬರಬಹುದು. ಆ ಸಮಯದಲ್ಲಿ ಕಾರ್ಪೊರೇಷನಿನ ಸಮೀಪದ ಬ್ರಾಂಚ್ ಆಫೀಸಿಗೆ ಹೋಗಿ ಅದರ ಕುರಿತು ವಿಚಾರಿಸುವುದು ಉತ್ತಮ. ನೀವು ಪಡೆದಿರುವ ಪಾಲಿಸಿಯು ನಿಮ್ಮ ನಿಜವಾದ ಆವಶ್ಯಕತೆಗಳಿಗೆ ತಕ್ಕುದಾದ ಪಾಲಿಸಿಯಲ್ಲವೆಂದು ಅದನ್ನು 'ಪೈಡ್-ಅಪ್' ಮಾಡಲು ಯಾರಾದರು ಹೇಳಿದಲ್ಲಿ ಈ ಕುರಿತು ಕಾರ್ಪೊರೇಷನಿನ ಸಮೀಪದ ಬ್ರಾಂಚ್ ಆಫೀಸಿಗೆ ಹೋಗಿ ವಿಚಾರಿಸಿರಿ.

ನಮ್ಮ ಬ್ರಾಂಚ್ ಮೇನೆಜರ್ ನಿಮ್ಮ ಪಾಲಿಸಿಯನ್ನು ಸರಿಯಾಗಿ ಪರೀಕ್ಷಿಸಿ ನಿಮ್ಮ ಪಾಲಿಸಿಯ ಬಗ್ಗೆ ನೀವು ಪುನರ್ವಿಚಾರ ಮಾಡುವ ಅಗತ್ಯವಿದೆಯೋ ಮತ್ತು ಅದರಿಂದ ನಿಮಗೆ ಪ್ರಯೋಜನವಿದೆಯೋ ಎಂಬುದರ ಕುರಿತು ಯೋಗ್ಯ ಸಲಹೆಯನ್ನು ಕೊಡುವರು.

ನಿಮ್ಮ ಜೀವ ವಿಮಾ ಪಾಲಿಸಿಯನ್ನು ಸದಾ ಜಾರಿಯಲ್ಲಿಡಿರಿ—ಅಗತ್ಯವಿದ್ದಲ್ಲಿ ನಿಮ್ಮ ವಿಮಾ ಭದ್ರತೆಯ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿರಿ ನಿಮ್ಮ ಪಾಲಿಸಿಯನ್ನು 'ಪೈಡ್-ಅಪ್' ಮಾಡಬೇಡಿರಿ. ಇದರಿಂದ ನಿಮಗೆ ಪ್ರಯೋಜನ ದೊರೆಯಲಾರದು.

ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ಸರ್ವಮಾನ್ಯವಾದ ವಿಷಯವು ಮಗುವಿನ ಬಾಯಿಂದ ಹೊರ ಬಂದರೂ ಅದನ್ನು ಆದರಿಸ ಬೇಕು; ನಿಂದನೀಯ ವಿಷಯ ಗುರುವಿನ ನಾಲಗೆಯಿಂದ ನುಡಿಯಲ್ಪಟ್ಟರೂ ಅದನ್ನು ತೊಡೆಯ ಬೇಕು. ಒಳ್ಳೆಯದನ್ನು ಸ್ವೀಕರಿಸಲು ಕೆಟ್ಟುದನ್ನು ತಿರಸ್ಕರಿಸಲು ಯಾರೊಡನೆಯೂ ಕೇಳಬೇಕಾಗಿಲ್ಲ'

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧-೧೦-'೫೯	೫

ಪರಿಶಿಷ್ಟ ವರ್ಗಗಳ ಹಿತಸಾಧನೆ

ಪರಿಶಿಷ್ಟ ಜನಾಂಗಗಳೆಂದು ಕರೆಯಲ್ಪಡುವ ಹರಿಜನರು, ಗಿರಿಜನರು ಮೊದಲಾದವರು ಭಾರತದಲ್ಲಿ ಬಹುಕಾಲದಿಂದಲೂ ಸಮಾಜದಿಂದ ಬಹಿಷ್ಕೃತರಾಗಿದ್ದುದರಿಂದಾಗಿ ಅವರು ಇತರರಂತೆ ಸಮಾಜದಲ್ಲಿ ಮುಂದುವರಿದಿಲ್ಲ. ಈ ಕಾರಣದಿಂದ ಭಾರತೀಯರಾದ ಅವರನ್ನೂ ಇತರ ಭಾರತೀಯರ ಸಮಮಟ್ಟಕ್ಕೆ ತರಬೇಕೆಂಬ ಉಚ್ಚ ಧ್ಯೇಯವನ್ನಿಟ್ಟುಕೊಂಡು ಈ ಎರಡು ಪಂಗಡಗಳೊಳಗಿನ ಅಂತರವನ್ನು ಹೋಗಲಾಡಿಸುವ ಸಲುವಾಗಿ, ಭಾರತದ ಸಂವಿಧಾನದಲ್ಲಿಯೂ ಒಂದು ಅನುಚ್ಛೇದವನ್ನು ಸೇರಿಸಲಾಗಿದ್ದು ಇದರನ್ವಯ ಪರಿಶಿಷ್ಟ ವರ್ಗಗಳವರಿಗೆ ಸಂವಿಧಾನವು ವ್ಯವಹೃತವಾದಂದಿನಿಂದ ೧೦ ವರ್ಷಗಳ ವರೆಗೆ ಕೆಲವೊಂದು ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಈ ಅವಧಿಯು ೧೯೬೦ರ ಜನವರಿ ೨೬ಕ್ಕೆ ಮುಗಿಯುವುದು.

ಈ ಕಳೆದ ಹತ್ತು ವರ್ಷಗಳಲ್ಲಿ ಭಾರತ ಸರಕಾರ ಮಾತ್ರವಲ್ಲದೆ ಎಲ್ಲ ರಾಜ್ಯ ಸರಕಾರಗಳು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಪರಿಶ್ರಮಿಸಿವೆ; ಕೋಟಿಗಟ್ಟಲೆಯಾಗಿ ರೂಪಾಯಿಗಳನ್ನೂ ವ್ಯಯಿಸಿವೆ. ಅಸಂಸ್ಕೃತರೂ ಅವಿದ್ಯಾವಂತರೂ ಆಗಿದ್ದ ಈ ಜನಾಂಗಗಳು ಅಂಧಕಾರದಿಂದ ಹೊರ ಬರುವಂತೆ ಪ್ರೇರೇಪಣೆಯಿತ್ತಿವೆ; ಕೆಲವರನ್ನಾದರೂ ಸಮಾಜದ ಇತರ ಸ್ಥಿತಿಗತಿಗಳಿಗೆ ತಂದಿವೆ. ಆದರೆ, ಸಂವಿಧಾನ ರಚನೆಯ ಕಾಲದಲ್ಲಿ ಹತ್ತು ವರ್ಷಗಳಲ್ಲಿ ಸಾಧಿಸಬಹುದೆಂದು ಕೊಂಡಿದ್ದ ಸಾಧನೆಗಳು ಮಾತ್ರ ಇಂದಿಗೂ ಪ್ರಾರಂಭಾವಸ್ಥೆಯಲ್ಲಿವೆ ಎಂಬುದನ್ನು ನಾವು ನೋಡುವಾಗ ತಿಳಿದು ಬರುತ್ತದೆ. ಇದಕ್ಕೆ ಸ್ವಯಂ ಪರಿಶಿಷ್ಟ ವರ್ಗಗಳದ್ದೂ ದೋಷಗಳು ಕಾರಣವಾಗಿವೆ; ಮತ್ತು ಅವರ ಮಾರ್ಗದರ್ಶಕರು ತಮ್ಮ ಹೊಣೆಗಾರಿಕೆಯನ್ನು ಅರಿತು ಕಾರ್ಯನಿರ್ವಹಣೆ ಮಾಡದಿರುವುದೂ ಹೇತುವಾಗಿದೆ. ನಮ್ಮಲ್ಲಿ ಹರಿಜನರ ಸಂಖ್ಯೆ ಹೆಚ್ಚು. ಸಮಾಜದಲ್ಲಿ ಅಸಂಸ್ಕೃತರೂ ಅನಾಗರಿಕರೂ ಅನೈರ್ಮಲಿಗಳೂ ಅವಿದ್ಯಾವಂತರೂ ಬಡವರೆಂದರೆ, ಮುಖ್ಯವಾಗಿ ಇವರೇ. ಸರಕಾರವು ಇವರಿಗೆ ನಾನಾವಿಧದ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತದೆ. ಮುಖ್ಯವಾಗಿ, ವಿದ್ಯಾಭ್ಯಾಸದ ಸೌಲಭ್ಯವು ಎಲ್ಲ ಹರಿಜನ ಮಕ್ಕಳಿಗೂ ದೊರೆಯುತ್ತದೆ. ಆದರೆ, ಈ ಮಕ್ಕಳು ಶಾಲೆಗೆ ಕ್ರಮಪ್ರಕಾರ ಹೋಗುವುದಿಲ್ಲ; ಶಾಲೆಯ ಕೆಲಸಗಳನ್ನು ಸರಿಯಾಗಿ ಮಾಡುವುದಿಲ್ಲ; ಎಂಬ ದೂರುಗಳು ಆಗಾಗ ಬರುತ್ತಿವೆ. ಈ ರೀತಿಯಾಗಿ ಮುಂದುವರಿದರೆ, ಅವರು ಬುದ್ಧಿವಂತರಾಗುವುದಾದರೂ ಹೇಗೆ? ಸರಕಾರದ ಸೌಲಭ್ಯ ಪಡೆದು ಅದನ್ನು ಸಾರ್ಥಕವಾಗಿ ಉಪಯೋಗಿಸಿ, ಸಮಾಜದ ಮುಂದೆ ತಲೆಯೆತ್ತಿ ನಿಲ್ಲುವ ಲವಲವಿಕೆಯನ್ನು ಮಾತ್ರ ಅವರಲ್ಲಿ ಹುಟ್ಟಿಸಿದರೆ ಸಾಲದು; ಅದಕ್ಕಾಗಿ ಕಾರ್ಯ ಪ್ರವೃತ್ತರಾಗುವಂತೆಯೂ ಮಾಡಬೇಡವೆ? ಸಮಾಜದಲ್ಲಿ ದಂತಭಗ್ನರಾದವರೆಂದು ಹೇಳುವ ಅದೆಷ್ಟು ಕುಟುಂಬಗಳು ಇಂದಿಗೂ ಬೇಡಿ ಜೀವಿಸುತ್ತಿಲ್ಲ. ಮನೆಕಟ್ಟಲು ಭೂಮಿ, ಸಹಾಯಧನ ಇತ್ಯಾದಿಗಳನ್ನೂ ಪಡೆದು, ಹೊಟ್ಟೆ ಹೊರೆಯಲು ಸ್ಥಾನಿಕ ಸಂಸ್ಥೆಗಳಲ್ಲಿಯೂ ಉದ್ಯೋಗವನ್ನು ಪಡೆದಿರುವ ಹರಿಜನರ ಹೆಂಡತಿ ಮಕ್ಕಳು ಒಂದೂ ಬಿಡದೆ ವಾರಕ್ಕೊಂದು ದಿನ ಬೇಡುತ್ತಿರುವುದನ್ನು ನಗರಗಳಲ್ಲಿ ಕಣ್ಣಾರೆ ಕಾಣುತ್ತೇವೆ. ಬೇಡುವುದು ಒಂದು ನೀಚಕರ್ಮ. ನಾವು ಯಾರ ಉದ್ಧಾರವಾಗಬೇಕೆಂದು ಬಯಸುತ್ತೇವೆಯೋ ಅಂತಹರ ಉದ್ಧಾರ ಮಾಡುವುದೆಂದರೆ, ಈ ಕೀಳವರ ಭಿಕ್ಷುಕವೃತ್ತಿಯನ್ನು ತೊರೆಯುವಂತೆ ಪ್ರೇರೇಪಿಸುವುದು ತಾನೆ? ನಾಲ್ಕಾರು ದೇವಾಲಯಗಳಿಗೂ, ಕಾಫಿ ಹೋಟೇಲು, ಸೆಲೂನುಗಳಿಗೂ ಪ್ರವೇಶ ಪಡೆದೊಡನೆಯೇ ಇವರು ಸುಧಾರಣೆಗೊಂಡಿದಂತಾಗಲಿಲ್ಲ. ಸಾಮಾಜಿಕವಾಗಿ ಉನ್ನತನಾಗಬಯಸುವವನು ಮೊದಲು ಮಾನಸಿಕವಾಗಿ ಆದರ್ಶನಾಗಬೇಕು. ಹಾಗಾಗಿ, ಈ ಸಂಶಿಷ್ಟ ಜನಾಂಗಗಳ ಉದ್ಧಾರಕಾರ್ಯಕರ್ತರು ಈ ಹತ್ತು ವರ್ಷಗಳಲ್ಲಿ ಸಾಕಷ್ಟು ಮುತುವರ್ಜಿ ವಹಿಸಲಿಲ್ಲ ಎಂಬುದಕ್ಕೆ ನಾವು ಈ ದಿಸೆಯಲ್ಲಿ ಮಾಡಿದ ಸಾಧನೆಯೇ ಸಾಕ್ಷಿಯಾಗಿದೆ. ಇದೇ ರೀತಿ ನಾವು ನಮ್ಮ ಆಮೆಯ ನಡಿಗೆಯಲ್ಲೇ ಮುಂದುವರಿದರೆ, ಈ ಪ್ರಶ್ನೆ ಬಗೆಹರಿಯಲು ಇನ್ನೂ ಅದೆಷ್ಟು ದಶಕಗಳು ಬೇಕಾದೀತೆಂದು ಹೇಳಬರುವಂತಿಲ್ಲ. ನಿಜವಾಗಿಯೂ ಅವರು ಮುಂದುವರಿದವರಾಗುವುದೂ ಸಾಧ್ಯವೆನ್ನುವಂತಿಲ್ಲ.

ಈಗ, ಸಂವಿಧಾನದಲ್ಲಿ ಈ ಬಗ್ಗೆ ಕಲ್ಪಿಸಿದ್ದ ಅವಕಾಶವನ್ನು ಇನ್ನೂ ಮುಂದುವರಿಸುವ ಆವಶ್ಯಕತೆ ಇದೆಯೆಂಬುದು ಸರ್ವಸಮ್ಮತವಾದ ವಿಷಯವಾಗಿದೆ. ಆದುದರಿಂದ ಈ ಅವಕಾಶವನ್ನು ಇನ್ನೂ ಹತ್ತು ವರ್ಷಗಳ ವರೆಗೆ ಮುಂದುವರಿಸುವಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಯೋಚನೆಯು ಸ್ವಾಗತಾರ್ಹವೇ. ಆದರೆ, ಈ ಯೋಜನೆಯನ್ನು ಸ್ವಾಗತಿಸುವಾಗ, ಒಂದು ಮಾತನ್ನು ಹೇಳಲೇ ಬೇಕಾಗುತ್ತದೆ. ಈ ಶಾಖೆಯ ನಮ್ಮ ಅಧಿಕಾರಿಗಳೂ ಕಾರ್ಯಕರ್ತರೂ ಕೇವಲ ಸಾಮಾಜಿಕವಾಗಿ ಅಲ್ಲ, ಮಾನಸಿಕವಾಗಿಯೂ, ನೈತಿಕವಾಗಿಯೂ ಪರಿಶಿಷ್ಟ ವರ್ಗದವರು ಮುಂದುವರಿಯುವಂತೆ ನೋಡಿಕೊಳ್ಳಬೇಕು. ಹೀಗೆ ನೈತಿಕ ಮತ್ತು ಸಾಮಾಜಿಕವಾಗಿ ಮುಂದುವರಿದರೆ ಮಾತ್ರ ಪರಿಶಿಷ್ಟ ಜನಾಂಗಗಳು ಮುಂದೆ ಬರಬಹುದು; ಅದು ಹೊರತು ಹಣವನ್ನು ನೀರಿನಂತೆ ವೆಚ್ಚ ಮಾಡಿದ ಮಾತ್ರದಿಂದ ಅವರ ಸ್ಥಿತಿಗತಿಗಳು ಎಂದೆಂದಿಗೂ ತಿಳಿಯಾಗಲಾರವು. ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮತ್ತು ಇವುಗಳ ಈ ವಿಭಾಗದ ನೌಕರರು ನಿಜವಾದ ಉನ್ನತೀಕರಣದತ್ತ ಪರಿಶಿಷ್ಟ ವರ್ಗದವರನ್ನು ಕೊಂಡೊಯ್ಯಬೇಕು. ಯಾನಕಾರಣದಿಂದ ಅವರು ಉಳಿದವರಿಗಿಂತ ಭಿನ್ನರಾಗಿ ಹೋಗಿರುವರೋ ಆ ಕಾರಣಗಳನ್ನು ದೂರವಾಗಿರಿಸಲು ಹೆಣಗಬೇಕು; ಆಗ, ನಿಜವಾದ ಉದ್ಧಾರವಾಗುತ್ತದೆ; ಸಂವಿಧಾನದಲ್ಲಿ ಕೊಡಮಾಡಿದ ಸೌಲಭ್ಯವೂ ಸಾರ್ಥಕವಾಗುತ್ತದೆ; ಇದಕ್ಕಾಗಿ ಮಾಡಿದ ಮಾಡುವ ವೆಚ್ಚವೂ ಅನಾವ್ಯಯವಾದಂತಾಗುವುದಿಲ್ಲ.

ಆಂದೋಲನದ ಬಿರುಗಾಳಿ

ಕೇರಳ ಸರಕಾರದ ಮೇಲೆ ಬೀಸಿದ ಆಂದೋಲನ ಜಂಜಾವಾತವು ತೀವ್ರವಾಗಿದ್ದುದರಿಂದಲೂ ಸರಕಾರ ವೃಕ್ಷವು ಕ್ಷೀಣವಾದುದರಿಂದಲೂ ಅದು ಉರುಳಿಯೇ ಬಿತ್ತು. ಇದೇ ಮಾದರಿಯ ಬಿರುಗಾಳಿ ಪಶ್ಚಿಮ ಬಂಗಾಳದ ಮೇಲೆಯೂ ಬೀಸಿ, ಹಲವಾರು ಅನಾಹುತಗಳನ್ನುಂಟುಮಾಡಿತು. ಈಗ, ಕರ್ನಾಟಕ ಪ್ರಜಾ ಸಮಾಜವಾದಿ ಪಕ್ಷವು ಬೆಂಗಳೂರಲ್ಲಿ ಸೇರಿದ ತನ್ನ ಅಧಿವೇಶನದಲ್ಲಿ ಸ್ವೀಕರಿಸಿದ ಒಂದು ನಿರ್ಣಯದಿಂದಾಗಿ ಈ ಆಂದೋಲನದ ಸುಂಟರ ಗಾಳಿ ಮೈಸೂರು ಸರಕಾರದ ಮೇಲೂ ಬೀಸುವ ಹೆಂಚಿಕೆಯಾಗುತ್ತಿದೆ ಎಂದು ಹೇಳಬಹುದು. ಆಡಳಿತೆಯ ಕ್ರಮದಲ್ಲಿನ ಲೋಪದೋಷಗಳನ್ನು ಮೂರು ತಿಂಗಳ ಅವಧಿಯೊಳಗೆ ತಿದ್ದಿಕೊಳ್ಳದೆ ಹೋದಲ್ಲಿ ಸರಕಾರದ ವಿರುದ್ಧ ಆಂದೋಲನ ಹೂಡುವಂತೆ ಜನತೆಗೆ ಪ್ರೇರೇಪಣೆ ನೀಡಬೇಕಾಗುವುದೆಂದು ಅದು ಮೈಸೂರು ಸರಕಾರವನ್ನು ಎಚ್ಚರಿಸಿದೆ. ವಿವಿಧ ಆಡಳಿತೆಗಳ ಪ್ರದೇಶದಲ್ಲಿ ಹರಿಹಂಚಾಗಿ ಹೋಗಿ, ಈಗ ಏಕ ಘಟಕವಾದ ಈ "ಮಹಾ ಮೈಸೂರು" ರಾಜ್ಯದ ಆಡಳಿತವು ಸರಿಹೋಗಬೇಕಾದರೆ, ಐದು ಮುಖ್ಯಮಂತ್ರಿಗಳಾದರೂ ಬೇಕಾದೀತು. ಈಗಾಗಲೇ ಇಬ್ಬರು ಮುಖ್ಯಮಂತ್ರಿಗಳು ಆಗಿ ಹೋಗಿದ್ದು, ಈಗ ಮೂರನೆಯವರು ತ್ರಿಶಂಕು ಸ್ವರ್ಗದಲ್ಲಿದ್ದಾರೆಂದು ಹೇಳಲಾಗುತ್ತಿದೆ. ಈ ಅವಧಿಯಲ್ಲಿ 'ಏಕರೂಪದ' ಮಾತುಗಳು ಪದೇ ಪದೇ ಕೇಳಿಬರುತ್ತಿವೆ. ಆಡಳಿತೆ ನಡೆಸುವವರಿಗೇನೆ ಆಡಳಿತೆ ಹೇಗೆಂದು ತಿಳಿಯದೆ ಹೋದರೆ, ಲೋಪ ಯಾವುದು, ದೋಷ ಯಾವುದು ಎಂದು ಹೇಗೆ ತಿಳಿಯಬೇಕು? ತಾವು ನುಡಿದುದೇ ರೀತಿ ತಾವು ಬರೆದುದೇ ನೀತಿ ಎಂಬಂತಾದರೆ, ಕಷ್ಟವೇ. ನಮ್ಮ ಆಡಳಿತೆಯ ಯಂತ್ರವು 'ಎ' ವರ್ಗಕ್ಕೇರಿದ್ದ ರೂಪದಲ್ಲಿರುವುದು ಇನ್ನೂ 'ಬಿ' ವರ್ಗದ ಕ್ಷಮತೆ ಮಾತ್ರ. ಇದಕ್ಕೆ 'ಬಿ' ವರ್ಗದ ರಾಜ್ಯದ ಹೆಸರಾದ "ಮೈಸೂರು" ಎಂಬುದನ್ನು ಕಿತ್ತು ಹಾಕಿ 'ಕರ್ನಾಟಕ' ಎಂದೇ ಕರೆದರೆ, 'ಎ' ವರ್ಗದ ಸರಕಾರದ ಕ್ಷಮತೆ ಬಂದು ಲೋಪದೋಷಗಳು ಸರಿಯಾಗಬಹುದು ಎಂದು 'ಕರ್ನಾಟಕ ಪ್ರೇಮಿ' (ಮೈಸೂರು ಪ್ರೇಮಿಗಳಲ್ಲ!)ಗಳು ಬಯಸಬಹುದು. ಆದರೆ, ಜಂಬೂ ಸವಾರಿಯನ್ನು ಬಹುಮತದಿಂದ ಬೇಕೆಂದ ಕರ್ನಾಟಕ ಪ್ರಸವಾ ಪಕ್ಷವು ಈ "ಮಹಿಷ ಚಲನೆ"ಯನ್ನು ಮಾತ್ರ ಬೇಡವೆನ್ನುವುದು ಆಶ್ಚರ್ಯವೆಂದು ಭಾವಿಸಬೇಕೆ?

ಸಂಕ್ಷಿಪ್ತ ಸುದ್ದಿಗಳು

ಸಿಲೋನಿನ ದುರಂತ

ನಮ್ಮ ನೆರೆಯ ರಾಷ್ಟ್ರ ಸಿಂಹಳದ ಸಮಾಜವಾದೀ ಪ್ರಿಯ ಪ್ರಧಾನಿ ಶ್ರೀ ಭಂಡಾರ ನಾಯಕೆಯವರನ್ನು ಬೌದ್ಧ ಭಿಕ್ಷುವಿನ ವೇಶದಲ್ಲಿದ್ದ ಒರ್ವ ಆಯುರ್ವೇದ ತಜ್ಞನು ಪಿಸ್ತೂಲಿನಿಂದ ಹೊಡೆದುದರ ಪರಿಣಾಮವಾಗಿ ಅವರು ನಿಧನರಾದರು. ಸಿಂಹಳೀಯ ಜನತೆಯು ದಿ. ಪ್ರಧಾನಿಯವರ ಅಂತಿಮ ದರ್ಶನವನ್ನು ಪಡೆಯಲು ತಹ ತಹ ಪಡುತಿದ್ದರು. ಶ್ರೀ ಭಂಡಾರ ನಾಯಿಕೆಯವರ ಮೃತ ಶರೀರವನ್ನು ನಾಶ ಮಾಡದೆ ಕಾದಿಡಲಾಗುವುದೆಂದು ತಿಳಿದು ಬಂದಿದೆ.

ಬೌದ್ಧ ಬಿಕ್ಷುವೊಬ್ಬನಿಂದ ಪ್ರಧಾನಿಯವರು ಹತರಾದುದರಿಂದ, ಸಿಂಹಳದಲ್ಲಿ ಈ ಭಿಕ್ಷುಗಳ ಬಗ್ಗೆ ತಿರಸ್ಕಾರದ ಭಾವನೆಯು ತಲೆದೋರಿದೆ ಯೆಂದು ತಿಳಿದು ಬರುತ್ತದೆ. ಈ ಭಾವನೆಯ ಪರಿಣಾಮ ಯಾವ ರೀತಿ ನಿಲ್ಲಬಹುದೆಂಬುದು ಕುತೂಹಲಕಾರಿಯಾಗಿದೆ. ವಿದ್ಯಾ ಮಂತ್ರಿಯಾಗಿದ್ದ ಶ್ರೀ ದಹನಾಯಕೆಯವರು ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಕ್ರುಶ್ಚೇವರ ಸ್ವದೇಶಾಗಮನ

ಅಮೆರಿಕೆಯ ಸಂಚಾರದಲ್ಲಿ ತೊಡಗಿದ ರಶ್ಯನ್ ಪ್ರಧಾನಿ ನಿಕಿಟಾ ಕ್ರುಶ್ಚೇವರು ಸ್ವದೇಶಕ್ಕಾಗಮಿಸಿದರು. ಈ ಸಂದರ್ಶನದಿಂದಾಗಿ ಎರಡು ಮಹಾರಾಷ್ಟ್ರಗಳ ನಡುವೆ ಮಹತ್ವದ ಮಾತುಕತೆಗಳು ನಡೆದುವು. ಅರ್ಧದಲ್ಲಿಯೇ ಸ್ಥಗಿತಗೊಂಡಿರುವ ಬರ್ಲಿನ್ ಸಮಸ್ಯೆಯ ಬಗ್ಗೆ ಚರ್ಚೆಯ ಪುನಾರಾರಂಭ, ಎಲ್ಲ ಮಹತ್ವದ ಅಂತಾರಾಷ್ಟ್ರೀಯ ವಿಷಯಗಳನ್ನೂ ಮಾತುಕತೆಗಳಿಂದ ಬಗೆಹರಿಸುವುದು, ಸಾರ್ವತ್ರಿಕ ನಿಶ್ಶಸ್ತ್ರೀಕರಣ ಸಾಧಿಸಲು ರಚನಾತ್ಮಕ ಪ್ರಯತ್ನಗಳ ವ್ಯವಹಾರಗಳ ಬಗ್ಗೆ ಇಬ್ಬರೂ ಒಪ್ಪಿಗೆಯಿತ್ತಿರುವರು. ಅಮೆರಿಕೆಯ ಅಧ್ಯಕ್ಷ ಶ್ರೀ ಐಸನ್ ಹಾವರರು ಮುಂದಿನ ವಸಂತಕಾಲದಲ್ಲಿ ಸೋವಿಯೆತ್ ರಶ್ಯವನ್ನು ಭೆಟ್ಟಿಮಾಡಲಿರುವರೆಂದೂ ಈಗ ತಿಳಿದುಬಂದಿದೆ. ಉಭಯ ನಾಯಕರ ಸಂದರ್ಶನದಿಂದಾಗಿ ವಿಶ್ವ ತ್ವೇಷಶಮನ ಕಾರ್ಯವು ತುಸು ಹಗುರವಾಯಿತೆನ್ನಬಹುದು.

ಮೂರನೆಯ ಯೋಜನೆ

ಪಂಜಾಬದ ರಾಜಧಾನಿ ಚಂಡೀಗಡದ ಸಮೀಪ ಕಟ್ಟಿದ ನವೀನ ನಗರದಲ್ಲಿ ಎ. ಐ. ಸಿ. ಸಿ. ಯ ಕಾರ್ಯಕಾರಿ ಸಮಿತಿಯು ಸೇರಿತು. ಭಾರತ ಸರಕಾರದ ಚೀನೀಯ ಸಂಬಂಧ

ದ ನೀತಿಯನ್ನದು ಬೆಂಬಲಿಸಿ ಚೀನೀಯರು ಆಕ್ರಮಣವನ್ನು ಹಿಂದೆಗೆಯುವಂತೆ ಸೌಮ್ಯ ಪದಗಳ ಗೊತ್ತುವಳಿಯನ್ನು ಸ್ವೀಕರಿಸಿತು. ತೃತೀಯ ಯೋಜನಾ ರೂಪರೇಷೆಗಳ ಬಗ್ಗೆ ಈ ಅಧಿವೇಶನದಲ್ಲಿ ಯೋಜನಾ ಉಪಸಮಿತಿಯಿತ್ತ ವರದಿಯನ್ನಿದು ಚರ್ಚಿಸಿತು. ಕೃಷಿ ಮತ್ತು ಉದ್ಯೋಗಗಳ ಕ್ಷೇತ್ರಗಳನ್ನು ಪ್ರಧಾನವಾಗಿರಿಸಿಕೊಂಡು ಈ ಯೋಜನೆಯನ್ನು ರೂಪಿಸಲಾಗುವುದು, ಖಾಸಗಿ ಕ್ಷೇತ್ರಗಳಿಗೆ ಒಂದು ಪರಿಮಿತಿಯ ಒಳಗೆ ಕಾರ್ಯ ಸಾಧಿಸಲು ಅವಕಾಶಗಳನ್ನು ಕಲ್ಪಿಸಿ ಕೊಡುವುದು; ಯೋಜನೆಗಳ ಬಗ್ಗೆ ಕಠೋರವಾಗಿರದೆ ಅವಶ್ಯವೆನಿಸಿದಾಗಲೆಲ್ಲಾ ಬದಲಾಯಿಸುವುದೇ ಈ ಯೋಜನೆಯ ವೈಶಿಷ್ಟ್ಯವಾಗಿದೆ.

ದಕ್ಷಿಣ ಆಹಾರ ವಲಯ

ದಕ್ಷಿಣ ಆಹಾರ ವಲಯವನ್ನು ವಿಭಜಿಸಿ ಪ್ರತಿ ರಾಜ್ಯವನ್ನೂ ಒಂದು ವಲಯವನ್ನಾಗಿ ಪರಿಗಣಿಸಬೇಕೆಂಬ ಮದ್ರಾಸದ ಕೇಳಿಕೆಯನ್ನು ಕೇಂದ್ರ ಸರಕಾರವು ತಿರಸ್ಕರಿಸಿದೆ. ಇದರಿಂದಾಗಿ, ಈಗ ಇರುವಂತೆ ಆಂಧ್ರ, ಕೇರಳ, ಮದ್ರಾಸು ಮತ್ತು ಮೈಸೂರು ರಾಜ್ಯಗಳನ್ನೊಳಗೊಂಡಿರುವ ವಲಯವು ಮುಂದುವರಿಯುವುದು. ಅಲ್ಲದೇ ಈ ಆಹಾರ ವಲಯದೊಳಗೆ ಆಹಾರ ಧಾನ್ಯಗಳ ನಿರಾತಂಕ ಸಾಗಾಟಕ್ಕೆ ಅನುಮತಿಯನ್ನೂ ಕೇಂದ್ರ ಸರಕಾರವು ಇತ್ತಿದೆ.

ಬಾಕ್ರಾದಲ್ಲಿ ಶ್ರೀ ನೆಹರೂ

ಚಂಡೀಗಡದ ಕಾಂಗ್ರೆಸ್ ಅಧಿವೇಶನಕ್ಕೆ ತೆರಳಿದ್ದ ಪ್ರಧಾನಿ ನೆಹರು ಬಾಕ್ರಾ ಅಣೆಕಟ್ಟನ್ನು ಸಂದರ್ಶಿಸಿದರು. ಅಲ್ಲಿ ೫೩ ಅಡಿ ಆಳದ ನೀರಲ್ಲಿ ಮುಳುಗಿದ್ದ ಯಂತ್ರೋಪಕರಣಗಳನ್ನು ಮುಳುಗಿ ಮೇಲೆತ್ತುವ ಕೆಲಸವು ನಡೆಯುತಿತ್ತು. ಈ ಸಾಹಸದ ಕರ್ತವ್ಯಗಳನ್ನು ಪೂರೈಸುತಿದ್ದ ನೌಕರರ ಸೇವೆಯನ್ನವರು ಪ್ರಶಂಸಿಸಿದರು. ಅಲ್ಲಿಂದ ನಯಾ ನಂಗಲಿನಲ್ಲಿ ಹೊಸತಾಗಿ ಕಟ್ಟಲಾಗುತ್ತಿರುವ ಹಿಂದುಸ್ತಾನ ಫರ್ಟಿಲಾಯಿಜರ್ಸ್ ಮತ್ತು ಕೆಮಿಕಲ್ಸ್ ಕಾರಖಾನೆಗೆ ಅನಿರಿಕ್ಷಿತವಾಗಿ ಭೆಟ್ಟಿಯಿತ್ತರು ಈ ಯೋಜನೆಗೆ ೪೫ಕೋಟಿ ರೂಪಾಯಿ ವೆಚ್ಚವಾಗಲಿದ್ದು, ಮುಂದಿನ ವರ್ಷದಿಂದ ಉತ್ಪಾದನೆಗೆ ತೊಡಗುವ ನಿರೀಕ್ಷೆಯಿದೆ.

ಪಾಕಿಸ್ಥಾನದ ಅಭಿವೃದ್ಧಿ

ಪಾಕಿಸ್ತಾನದಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಸಲಹೆ ಮಾಡಲು ನೇಮಿಸಲ್ಪಟ್ಟ ಸಮಿತಿಯು ೧,೮೦೦ ಕೋಟಿ ರೂಪಾಯಿಗಳು ಬೇಕಾಗುವುದೆಂದು ಪ್ರಕಟಿಸಿದೆ. ಈ ವೆಚ್ಚವನ್ನು ಮಾಡಿದರೆ, ರಾಷ್ಟ್ರೀಯ ಆದಾಯವು ನೂರಕ್ಕೆ ೨೦ರಂತೆಯೂ ನಾಗರಿಕರ ಆದಾಯವು ನೂರಕ್ಕೆ ೧೧ರಂತೆಯೂ ಹೆಚ್ಚುವರಿಯಾಗುವುದೆಂದದು ಹೇಳಿದೆ. ಈ ಪಂಚವಾರ್ಷಿಕ ಯೋಜನೆಯು ಮುಂದಿನ ವರ್ಷದಿಂದ ಆರಂಭವಾಗಲಿರುವುದು.

ನವಯುಗದ ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ಟ್ ತಿಂಗಳಾಂತ್ಯಕ್ಕೆ 'ನವಯುಗ'ದ 38ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 39ನೇ ವರ್ಷಾರಂಭವಾಗಿರುವುದಷ್ಟೆ! ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ವಿ. ಪಿ. ಪಿ. ಮಾಡಿದರೆ 75 ನ. ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಚಂದಾಹಣವನ್ನು ಮುಂದಾಗಿ ಕಳಿಸಿಕೊಡಬೇಕಾಗಿ ವಿನಂತಿಸುತ್ತೇವೆ.

ಮೆನೇಜರ್.

ಅಲ್ಲಲ್ಲಿಯ ಸುದ್ದಿ ಸಾರ

ಅಭಿನಂದನೆಗಳು

ಉಡುಪಿಯ ಶ್ರೀ ಮಾನಂಜೆ ಶೇಷಗಿರಿ ರಾಯರ ಪುತ್ರ **ಶ್ರೀ ಎಂ. ಕೃಷ್ಣಮೂರ್ತಿ**, ಬಿ.ಎಸ್‌ಸಿ (ಟೆಕ್) ಇವರು ಅಣುಶಕ್ತಿ ಸಂಬಂಧದಲ್ಲಿ ವಿಶೇಷ ತರಬೇತಿಯನ್ನು ಪಡೆಯುವ ಸಲುವಾಗಿ ಲಂಡನ್ನಿಗೆ ತೆರಳಿರುವರು. ಶ್ರೀ ಕೃಷ್ಣಮೂರ್ತಿಯವರು ಬಿ.ಎಸ್. ಸಿ (ಟೆಕ್)ನ ಎರಡು ವರ್ಷಗಳ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿಯೂ ಮೊದಲನೆಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವುದಲ್ಲದೆ ಮೊದಲನೆಯ ಸ್ಥಾನವನ್ನೂ ಪಡೆದಿರುವರು. ೧೯೫೮ರಲ್ಲಿ ಬೊಂಬಾಯಿಯ ಸರಕಾರಿ ಅಣುಶಕ್ತಿ ಕೇಂದ್ರದಲ್ಲಿ ಒಂದು ವರ್ಷ ತರಬೇತಿಗೆ ಸೇರಿದ್ದು, ಇದರ ನಂತರ ಇಲ್ಲಿಯೇ ಸೈಂಟಿಫಿಕ್ ಆಫೀಸರರಾಗಿ ಆಗಸ್ಟ್ ೫೯ರಲ್ಲಿ ನೇಮಿತರಾಗಿದ್ದರು. ಈಗ ವಿಶೇಷ ಅಧ್ಯಯನ ತರಬೇತಿಗಾಗಿ ಭಾರತ ಸರಕಾರವು ಆರಿಸಿದವರಲ್ಲಿ ಇವರೂ ಒಬ್ಬರಾಗಿದ್ದು, ಸರಕಾರಿ ವೆಚ್ಚದಲ್ಲಿ ತರಬೇತಿ ಪಡೆಯುವರು. ಶ್ರೀಯುತರು ಸಪ್ತಂಬರ ೩೦ರಂದು ಬೊಂಬಾಯಿಂದ ತೆರಳಿ, ಅಕ್ಟೋಬರ ೨ರಂದು ಲಂಡನ್ ತಲಪುವರು. ಶ್ರೀ ಕೃಷ್ಣಮೂರ್ತಿಯವರನ್ನು "ನವಯುಗ"ವು ಹೃತ್ಪೂರ್ವಕವಾಗಿ ಅಭಿನಂದಿಸುವುದಲ್ಲದೇ, ಅವರ ಅಧ್ಯಯನದಿಂದ ಗಳಿಸಿದ ಜ್ಞಾನದ ಸದುಪಯೋಗವು ಭಾರತದ ಕೀರ್ತಿಗೆ ಕಿರೀಟಪ್ರಾಯವಾಗಲೆಂದು ಹಾರೈಸುತ್ತದೆ.

ವಾರ್ಷಿಕೋತ್ಸವ— ತಾ. 19-9-59 ರಂದು ಮಣಿಪಾಲದ ಗೀತಾಮಂದಿರದಲ್ಲಿ ದೈನಂದಿನ ಪೂಜಾನಂತರ ಲಾ ಕಾಂಗ್ರೆಸಿನ ತೃತೀಯ ವಾರ್ಷಿಕ ದಿನಾಚರಣೆಯು ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಆರ್. ಎಸ್. ಕಿಣಿಯವರು ಸ್ವಾಗತಿಸಿದ ಬಳಿಕ ಸಭಿಕರಲ್ಲಿ ಶ್ರೀಗಳಾದ ಉದ್ಯಾವರ ವಾಸುದೇವ ಶ್ಯಾನುಭಾಗ, ಟಿ ಸಂಜೀವ ಪೈ ಮತ್ತು ಬಿ. ಶ್ಯಾಮರಾಯ ಶೆಟ್ಟರು ಲಾ ಕಾಂಗ್ರೆಸಿನ ಶ್ರೇಯೋಭಿವೃದ್ಧಿಯನ್ನು ಹಾರೈಸಿದರು. ಶ್ರೀಮತಿ ಪ್ರೇಮಾ ಎ. ಪೈಯವರು ನೌಕರವೃಂದದವರಿಗೆ ನೋಷಾಕುಗಳನ್ನು ಹಂಚಿದರು ಅಧ್ಯಕ್ಷ ಶ್ರೀ ಪೈಯವರು ಶ್ರೀ ಕಿಣಿಯವರು ಹೋಟೆಲು ಉದ್ಯಮದಲ್ಲಿ ಸಾಧಿಸಿದ ಪ್ರಗತಿಯನ್ನು ಕೊಂಡಾಡಿ ಇನ್ನೂ ಹೆಚ್ಚಿನ ನವೀನತೆಯನ್ನು ತೋರಿಸಲೆಂದು ಹಾರೈಸಿದರು.

ಉದ್ಘಾಟನೆ — ಮಣಿಪಾಲ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನೆಯು ಕಳೆದ ತಾ. 24ನೇ ಸಂಜೆ ಕೆ. ಎಮ್. ಸಿ.ಯ ಶ್ರೋತೃ ಮಂದಿರದಲ್ಲಿ ಬಿಹಾರದ ಮಾಜಿ ರಾಜ್ಯಪಾಲರೂ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರೂ ಆದ ಶ್ರೀ ಆರ್ ಆರ್. ದಿವಾಕರ್ ಅವರಿಂದ ನೆರವೇರಿಸಲ್ಪಟ್ಟಿತು. ಕಾಲೇಜಿನ ಪ್ರಿನ್ಸಿಪಾಲ್, ಶ್ರೀ ಎಂ. ಎನ್. ಕಾಮತರು ಪರಿಚಯ ಭಾಷಣ ಮಾಡಿದ ಮೇಲೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಕೆ. ನಾಗೇಶ್ವರ ರಾಯರು ಸ್ವಾಗತಿಸಿದರು. ಶ್ರೀ ದಿವಾಕರರು ತಮ್ಮ ಉದ್ಘಾಟನಾ ಭಾಷಣದಲ್ಲಿ ವಿದ್ಯಾರ್ಥಿಗಳು ಸ್ವತಂತ್ರ ಭಾರತದ ಉತ್ತಮ ಪ್ರಜೆಗಳೆಂಟ ನಿರ್ಮಲ ಮನಸ್ಸಿನಿಂದ ವರ್ತಿಸಬೇಕೆಂದೂ ಸಮಾಜದ ಯಾವುದೇ ಕಲುಷಿತ ವಾತಾವರಣಕ್ಕೆ ತಲೆ ಹಾಕಬಾರದೆಂದೂ, ಇತರರ ಕಷ್ಟ ದುಃಖಗಳಲ್ಲಿ ಸಹಾನುಭೂತಿಯುಳ್ಳವರಾಗಬೇಕೆಂದೂ, ಭವಿಷ್ಯದ ಕುರಿತು ಭವ್ಯ ಕಲ್ಪನೆಯನ್ನಿರಿಸಿಕೊಳ್ಳಬೇಕೆಂದೂ ಹೇಳಿದರು. ಕಾಲೇಜಿನ ಕ್ಷಿಪ್ರ ಪ್ರಗತಿಗಾಗಿ ಸಂತೋಷವನ್ನು ವ್ಯಕ್ತಪಡಿಸಿದರು

ಸಂಘದ ಕಾರ್ಯದರ್ಶಿ ಶ್ರೀ ವಿ. ಪದ್ಮನಾಭನ್ ಅವರು ಕೃತಜ್ಞತೆಯನ್ನರ್ಪಿಸಿದರು. ಬಳಿಕ ವಿವಿಧ ವಿನೋದಾವಳಿಗಳಾದುವು.

ಮೂಲೂರು— ಬಿಲ್ಲವರ ಯೂನಿಯನ್‌ನಲ್ಲಿ ತಾ. 16-9-59ರಲ್ಲು ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿಯವರ ಜನ್ಮದಿನವನ್ನು ಅಧ್ಯಕ್ಷ ಶ್ರೀ ಯಂ. ಸೀತಾರಾಮ ಸಾಲಿಯನರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಮೆರವಣಿಗೆ, ಭಜನೆ, ರಾತ್ರಿ ಗುರುಪೂಜಾ ಇತ್ಯಾದಿಗಳನ್ನು ಬಹು ವಿಜೃಂಭಣೆಯಿಂದ ಆಚರಿಸಲಾಯ್ತಲ್ಲದೆ, ಪೂಜ್ಯ ಗುರುಗಳ ಶಿಕ್ಷಣ, ಬೋಧನೆಯ ವಿಷಯವಾಗಿ ಉಚ್ಚಿಲ ಯಂ. ಅಣ್ಣಯ್ಯ ಮಾಸ್ತರರು ಮತ್ತು ಮೂಲೂರು ಯಂ. ಬೆಮ್ಮ ಪೂಜಾರಿಯವರು ಭಾಷಣ ಮಾಡಿದ ರಲ್ಲದೆ ಕಾರ್ಯದರ್ಶಿ ಶ್ರೀ ಪಿ. ಹೊನ್ನಯ್ಯ ಕರ್ಕೇರರು ಧನ್ಯವಾದವಿತ್ತು ಸಭಾಂತ್ಯವಾಯಿತು.

ಶ್ರೀ ಸರಸ್ವತೀ ಸೇವಾ ಸಂಘ ಮೂಡುಬಿದರೆ—ಇದರ ಹೊಸ ಕಾರ್ಯಕಾರಿ ಸಮಿತಿಯ ಸಭೆಯು 21—9—59 ರಂದು ಜರಗಿ ಶ್ರೀ ಜಿ ವಾಸುದೇವ ಪೈಗಳು ಅಧ್ಯಕ್ಷರಾಗಿಯೂ, ಶ್ರೀ ಜಾನ್. ಪಿ. ಮಿರಾಂಡರು ಉಪಾಧ್ಯಕ್ಷರಾಗಿಯೂ, ಶ್ರೀ ಎಂ. ದೇವೇಂದ್ರ ಬಲ್ಲಾಳರು ಕೋಶಾಧಿಕಾರಿಗಳಾಗಿಯೂ, ಶ್ರೀ ಕೆ. ಶಾಂತ ರೈಗಳು ಕಾರ್ಯದರ್ಶಿಗಳಾಗಿಯೂ, ಶ್ರೀ ಪಿ ಮಾಧವ ಭಟ್ಟರು ಮತ್ತು ಗೋವರ್ಧನ ಹೊಸಮನಿಯವರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಈ ವರ್ಷವೂ ಎಂದಿನಂತೆ ಇದೇ ಬರುವ 8—10—59ರಿಂದ 11—10—59ರವರೆಗೆ ದಸರಾ ಸಾಹಿತ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಬೇಕಾಗಿ ನಿಶ್ಚಯಿಸಲಾಯಿತು. ದಿನಾಂಕ 8ರಂದು ಶ್ರೀ ಎಂ. ವಿ. ಇನಾಂದಾರ, ಎಂ. ಎ. ಪ್ರೊಫೆಸರ್, ಇವರು ಸಾಹಿತ್ಯೋತ್ಸವನ್ನು ಉದ್ಘಾಟಿಸುವರಾಗಿ ತಿಳಿದುಬರುತ್ತದೆ.

ದ. ಕ. ಜಿಲ್ಲಾ ಜಾನುವಾರು ಪ್ರದರ್ಶನವೊಂದು ಕಳೆದ ತಾ. 20ರಲ್ಲಿ ಮಂಗಳೂರು ತಾಲೂಕು ಆಫೀಸಿನ ವಠಾರದಲ್ಲಿ ಶ್ರೀ ಬಿ. ಸೋಮಶೇಖರ ರಾಯರ ಹಿರಿತನದಲ್ಲಿ ನೆರವೇರಿತು. ಡಾ. ಎಂ. ಎಸ್. ಶರ್ಮರು ಸ್ವಾಗತಿಸಿದರು. ಅಧ್ಯಕ್ಷರು ಸಂದರ್ಭೋಚಿತ ಭಾಷಣಮಾಡಿ ಪ್ರದರ್ಶನಕ್ಕೆ ಬಂದಿದ್ದ ಉತ್ತಮ ಜಾನುವಾರುಗಳಿಗೆ ಬಹುಮಾನ ಹಂಚಿದರು

ಮಂಗಳೂರು ಹಿಂದೀ ಪ್ರಚಾರ ಸಮಿತಿ ಇದರ ಆಶ್ರಯದಲ್ಲಿ ತಾ. 25ರಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಬಿಹಾರದ ಮಾಜಿ ರಾಜ್ಯಪಾಲರಾದ ಶ್ರೀ ಆರ್. ಆರ್. ದಿವಾಕರರು ಭಾಷಣ ಮಾಡುತ್ತಾ ಅಂತರ್ ಪ್ರಾಂತೀಯ ಭಾಷೆಯಾಗಲು ಹಿಂದಿಯೇ ಯೋಗ್ಯವೆಂಬ ಅಭಿಪ್ರಾಯಪಟ್ಟರು. ಸಭಾರಂಭದಲ್ಲಿ ಡಾ| ಯು. ಪಿ. ಮಲ್ಯರು ಸ್ವಾಗತಿಸಿದರು.

ದ. ಕ. ಜಿಲ್ಲಾ ಬೋರ್ಡ್ ಸಭೆಯು ಕಳೆದ ತಾ. 24ರಲ್ಲಿ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಲದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ 97% ಫಲಿತಾಂಶ ಪಡೆದ ಕೋಟೇಶ್ವರ ಹೈಸ್ಕೂಲಿನ ಹೆಡ್‌ಮಾಸ್ತರರಿಗೆ ಬೋರ್ಡಿನ ರೋಲಿಂಗ್ ಶೀಲ್ಡನ್ನು ಕೊಡಲಾಯಿತು. ಬೇರೆ ಬೇರೆ ನಿರ್ಧಾರಗಳನ್ನು ಕೈಗೊಳ್ಳಲಾಯಿತಲ್ಲದೆ 1958-59ನೇ ವರ್ಷದ ಆಡಳಿತ ವರದಿಯನ್ನೂ ಸ್ವೀಕರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ಬಿ. ಮಂಜಯ್ಯ ಹೆಗ್ಡೆಯವರು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವೀಯುವ ಆವಶ್ಯಕತೆಯನ್ನು ವಿವರಿಸಿದರು. ಅನಂತರ ನಡೆದ ಚರ್ಚೆಯಲ್ಲಿ ಶ್ರೀಗಳಾದ ಎಸ್.ಎಸ್. ಪರಮೇಶ್ವರಯ್ಯ, ಎ. ಕೃಷ್ಣ ಶೆಟ್ಟಿ, ಕೆ. ಕೆ. ಶೆಟ್ಟಿ, ಎಮ್. ಎಮ್. ಹೆಗ್ಡೆ, ಡಾ| ಯು. ಕೃಷ್ಣ ಮೊದಲಾದವರು ಭಾಗವಹಿಸಿ ಮಾತನಾಡಿದರು.

ಅಕ್ಕಿ ವಿತರಣೆ—ಕಳೆದ ತಾ. 27ರಂದು ಉಡುಪಿ ಸಾಂಗಾಳ ನಾಯಕ್ ಬೇಂಕಿನ ವಠಾರದಲ್ಲಿ ವಾಡಿಕೆಯಂತೆ ಶ್ರೀ ಉಪೇಂದ್ರ ಶ್ರೀನಿವಾಸ್ ನಾಯ್ಕ ಎಂ. ಎಲ್. ಎ.ಯವರು ದೊಡ್ಡವರಿಗೆ ೩ ಪಾವು ಅಕ್ಕಿ ಮತ್ತು ೩ ಆಣೆ ನಗದಿ, ಸಣ್ಣವರಿಗೆ ಒಂದು ಪಾವು ಅಕ್ಕಿ ಮತ್ತು ಒಂದಾಣೆ ನಗದಿಯಂತೆ ಧರ್ಮಾರ್ಥವಾಗಿ ಹಂಚಿರುವರು.

ಶ್ರೀ ಗೋಕರ್ಣನಾಥ ಕ್ಷೇತ್ರ ಮಂಗಳೂರು— ಇಲ್ಲಿ ವಾಡಿಕೆಯಂತೆ ಮಹಾನವಮಿಯ ಉತ್ಸವವು ತಾ. 3—10—59ರಿಂದ ತಾ. 11.10.59 ವರೆಗೆ ಜರಗಲಿರುವುದೆಂದೂ ಎಲ್ಲರೂ ಚಿತ್ತೈಸಿ ಸಹಕರಿಸಬೇಕೆಂದೂ ಆಡಳಿತ ಕಮಿಟಿಯವರು ವಿನಂತಿಸುತ್ತಾರೆ.

ಬೊಂಬಾಯಿ ದ. ಕ. ಬ್ರಾಹ್ಮಣ ಸಂಘ — ಇದರ ಆಶ್ರಯದಲ್ಲಿ ಕಳೆದ ತಾ. 20ರಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ಭುಜಂಗ ರಾಯರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಿಂದ ಉತ್ತರ ಭಾರತ ಯಾತ್ರೆಗೆ ಹೊರಟ ಉಡುಪಿಯ ಪೇಜಾವರ ಮಠದ ಶ್ರೀ ಪಾದಂಗಳವರಿಗೆ ಮಾನಪತ್ರವೊಂದನ್ನು ಅರ್ಪಿಸಿ ಗೌರವಿಸಿ ವಿದಾಯ ನೀಡಲಾಯಿತು. ಸಂಘದ ಗೌರವ ಕಾರ್ಯದರ್ಶಿ ಶ್ರೀ ಬಿ. ಸುಬ್ಬರಾಯರು ಮಾನಪತ್ರವನ್ನು ಒಪ್ಪಿಸಿದರು. ಶ್ರೀ ಸ್ವಾಮಿಜಿಯವರು ಸಂಘದ ಸದಸ್ಯರಿಗೆ ಆಭಾರ ಸೂಚಿಸುತ್ತಾ ಜ್ಞಾನಾರ್ಜನೆ ಮಾಡುವಾಗ ಧರ್ಮಬಾಹಿರರಾಗದೆ ಸಮಾಜಾಭಿವೃದ್ಧಿಗಾಗಿ ಶ್ರಮಿಸಬೇಕೆಂದರು. ಸಂಘದ ಉಪಾಧ್ಯಕ್ಷೆ ಡಾ| ಶ್ರೀಮತಿ ಲಲಿತಾ ರಾವ್ ಅವರು ಧನ್ಯವಾದಗಳನರ್ಪಿಸಿದ ಬಳಿಕ ಅಧ್ಯಕ್ಷರು ಸ್ವಾಮಿಗೆ ಒಂದು ನಿಧಿಯನ್ನು ಸಮರ್ಪಿಸಿದರು. ಅಂತ್ಯದಲ್ಲಿ ಯಕ್ಷಗಾನ ಕಾಲಕ್ಷೇಪ ನಡೆಯಿತು. ಈ ವಿದಾಯ ಸಮಾರಂಭಕ್ಕೆ ಉಡುಪಿಯಿಂದ ಅದಮಾರು ಮಠದ ಶ್ರೀ ಪಾದಂಗಳವರೂ ಚಿತ್ತೈಸಿದ್ದರು.

ಭಾರತೀಯ ಜನಸಂಘದ ಉಡುಪಿ ಮಂಡಲ ಸಮಿತಿಯ ರಚನೆ ತಾ. 19—9—59ರಂದು ಶ್ರೀ ಭೋಧ ಸೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಸ್ಥಳೀಯ ಎಂಟು ಸ್ಥಾನಿಕ ಸಮಿತಿಗಳ ಅಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಸಭೆಯು ಜರಗಿ ಮುಂದಿನ ವರ್ಷಕ್ಕೆ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು.

ಶ್ರೀಗಳಾದ ಭೋಧ ಸೆಟ್ಟಿಗಾರ (ಅಧ್ಯಕ್ಷ) ಜಪ್ಪು ಲಕ್ಷ್ಮಣ ಪೈ (ಉಪಾಧ್ಯಕ್ಷ), ಮಟ್ಪಾರ್ ವಿಟ್ಠಲ ಕಿಣಿ, (ಕಾರ್ಯದರ್ಶಿ), ನಾರಾಯಣ ಸೆಟ್ಟಿಗಾರ (ಜತೆಕಾರ್ಯದರ್ಶಿ), ಪಿ. ಮಂಜುನಾಥ ಶೆಣೈ (ಕೋಶಾಧ್ಯಕ್ಷ), ಕೋಲ್ಕಾರ ಕೇಶವ ಪ್ರಭು (ಪ್ರಾಂತೀಯ ಪ್ರತಿನಿಧಿ), ಯು. ಅನಂತಕೃಷ್ಣ, ರಘುನಾಥ ಸೆಟ್ಟಿಗಾರ, ಟಿ. ಮೋಹನದಾಸ ಪೈ, ಭೋಜ ಸೆಟ್ಟಿ, ಎಮ್. ವರದರಾಯ ಭಟ್, ಎಮ್. ಸೋಮಶೇಖರ ಭಟ್, ವಾಸು ಸೇರಿಗಾರ, ಮನಮೋಹನ ಪೈ. ರಾಮದಾಸ ನಾಯ್ಕ ಮತ್ತು ಇನ್ನಿತರರನ್ನೊಳಗೊಂಡು ಮಂಡಲ ಸಮಿತಿ ರಚಿಸಲಾಯಿತು. ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳು ಜನಸಂಘದ ಕಾರ್ಯವನ್ನು ತೀವ್ರಗತಿಯಿಂದ ಮುಂದುವರಿಸುವರೇ ಎಲ್ಲಾ ಕಾರ್ಯಕರ್ತರೂ ಸಂಪೂರ್ಣ ಸಹಕಾರ ಕೊಡುವಂತೆ ವಿನಂತಿಸಿದರು.

ಮರುದಿನ ಗಡಿ ರಕ್ಷಾ ದಿನಾಚರಣೆಯು ಕಿನ್ನಿಮೂಲ್ಕಿಯಲ್ಲಿ ಶ್ರೀ ಬೋಧ ಸೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಜರಗಿ ಹಲವರು ಭಾಷಣ ಮಾಡಿ ಚೀನಾದ ಆಕ್ರಮಣ ನೀತಿಯನ್ನು ಖಂಡಿಸಿದರು.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಕಾಲ ನಿಧನ

ಸಿಂಹಳದ ಪ್ರಧಾನಿ ಶ್ರೀ ಭಂಡಾರ ನಾಯಕೆ

ಸಮಾಜವಾದಿ ವಿಚಾರಧಾರೆಯ ಅಗ್ರಗಣ್ಯ ನಾಯಕರೆಂದಿವರು ವಿಶ್ವ ವಿಖ್ಯಾತರಾಗಿದ್ದಾರೆ; ಇವರ ಅಗಲಿಕೆಯಿಂದ ವಿಶ್ವವು ಓರ್ವ ಸಮರ್ಥ ನಾಯಕನನ್ನು ಕಳೆದುಕೊಂಡಿತು.

ಸಿಂಹಳದ ಪ್ರಧಾನ ಮಂತ್ರಿ ಶ್ರೀ ಭಂಡಾರನಾಯಕೆಯವರು ತಮ್ಮ ನಿವಾಸದಲ್ಲಿರುವಾಗಲೇ ದಿನಾಂಕ ೨೫ರಂದು ಸೋಮರಾಮ ಎಂಬವನಿಂದ ಆರು ಬಾರಿ ಗುಂಡಿನೇಟಿಗೆ ಗುರಿಯಾಗಿ, ೨೬ರಂದು ಪೂರ್ವಾಹ್ನ ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದರೆಂಬ ಸುದ್ದಿಯು ವಿಶ್ವಕ್ಕೆ ಮಾತ್ರವಲ್ಲ ಜಗತ್ತಿಗೇನೇ ಒಂದು ಉದ್ವೇಗಕಾರಕವಾದ ವರ್ತಮಾನವಾಗಿದೆ.

ಶ್ರೀ ಲಂಕೆಯ ಸಮಾಜವಾದಿ ವಿಚಾರಧಾರೆಯುಳ್ಳ ಅಗ್ರಗಣ್ಯ ನಾಯಕರಾದ ಶ್ರೀ ಭಂಡಾರ ನಾಯಕೆಯವರು ೧೮೯೯ರಲ್ಲಿ ಜನಿಸಿದ್ದರು ಸರ್ ಸೊಲೊಮನ್ ಡಾಯಸ್ ಭಂಡಾರ ನಾಯಕೆಯವರ ಏಕ ಮಾತ್ರ ಪುತ್ರ ಶ್ರೀ ಭಂಡಾರ ನಾಯಕೆಯವರು, ಮೌಂಟ್ ಲೆವಿನಿಯಾದ ಸೈಂಟ್ ಥಾಮಸ್ ಕಾಲೇಜಿನಲ್ಲಿ ಪ್ರಾರಂಭಿಕ ವಿದ್ಯಾಭ್ಯಾಸವನ್ನು ಪಡೆದರು ೧೯೧೯ರಲ್ಲಿ ಇವರು ಆಕ್ಸ್‌ಫರ್ಡಿನ ಕ್ರೈಸ್ಟ್ ಕಾಲೇಜಿನಲ್ಲಿ ಸೇರಿಕೊಂಡರು ಈ ಸಮಯದಲ್ಲಿಯೇ ಇವರು ಕುಶಾಗ್ರಮತಿಗಳೆಂದೂ ಉತ್ತಮ ವಾಗ್ಮಿಗಳೆಂದೂ ಪ್ರಸಿದ್ಧರಾಗಿದ್ದರು

ಆಕ್ಸ್‌ಫರ್ಡಿನಲ್ಲಿ ಶ್ರೀ ಭಂಡಾರ ನಾಯಕೆ ಅವರು ಹಿಂದಿನ ಬ್ರಿಟಿಷ ಪ್ರಧಾನಿಯಾಗಿರುವ ಶ್ರೀ ಅಂಥೋನಿ ಈಡನ್ನರ ಸಹಾಧ್ಯಾಯಿಯಾಗಿದ್ದರು ಶ್ರೀ ಮಾಲ್ಕೋಮ್ ಮೆಕಡೊನಾಲ್ಡರನ್ನು ಸೋಲಿಸಿ ಆಕ್ಸ್‌ಫರ್ಡ್ ಯೂನಿಯನ್ನಿನ ಕಾರ್ಯದರ್ಶಿಯಾಗಿದ್ದರು ಭಾರತೀಯ ಸಂಘದ ಅಧ್ಯಕ್ಷರೂ ಆಗಿದ್ದರು ಇವರು ಪ್ರಾಚೀನ ಭಾಷೆಗಳನ್ನು ಅಧ್ಯಯನ ನಡೆಸಿ ಅದರಲ್ಲವರು ಸ್ನಾತಕ ಪದವಿಯನ್ನು ಪಡೆದರು ಇನ್ನರ್ ಟೆಂಪಲ್‌ನಲ್ಲಿ ಬ್ಯಾರಿಸ್ಟರ್ ಪದವಿಯನ್ನೂ ಗಳಿಸಿದರು ೧೯೨೫ರಲ್ಲಿ ಇವರು ಸ್ವದೇಶಕ್ಕೆ ಮರಳಿ ಕೆಲ ಕಾಲದ ವರೆಗೆ ವಕಾಲತು ನಡೆಸಿದರು

ತದನಂತರ ಕೆಲದಿನಗಳಲ್ಲಿಯೇ ಶ್ರೀ ಭಂಡಾರ ನಾಯಕೆ ಅವರು ರಾಜಕೀಯ ರಂಗಕ್ಕೆ ದುಮುಕಿದರು ಸಿಲೋನ್ ನೇಶನಲ್ ಕಾಂಗ್ರೆಸ್‌ನಲ್ಲಿ ಸೇರಿಕೊಂಡು ಸ್ವಾಯತ್ತ ಸರಕಾರ ಸ್ಥಾಪನೆಗಾಗಿ ಚಳವಳಿ ಹೂಡಿದರು ೧೯೨೬ರಲ್ಲಿ ಕೊಲಂಬೊ ನಗರಸಭೆಯ ಸದಸ್ಯರಾಗಿ ತಮ್ಮ ಪ್ರತಿಸ್ಪರ್ಧಿ ಮಜೂರ ನೇತಾರನಾದ ಶ್ರೀ ಎ ಇ ಗುಣಸಿಂಹರನ್ನು ಪರಾಜಯಗೊಳಿಸಿದರು

ಡಾನ್ ಮೋರ್ ಶಾಸನದನ್ವಯ ಶ್ರೀ ಲಂಕೆಗೆ ೧೯೩೧ರಲ್ಲಿ ಸ್ವಾಯತ್ತ ಶಾಸನ ಪ್ರದಾನವಾದಾಗ ಶ್ರೀ ಭಂಡಾರನಾಯಕೆ ಅವರು ವೇಯಂಗೋಡಾ ಕ್ಷೇತ್ರದಿಂದ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಗೊಂಡರು. ಅಂತೆಯೇ ೧೯೩೬ರಲ್ಲಿಯೂ ಅವಿರೋಧವಾಗಿ ಆರಿಸಲ್ಪಟ್ಟರು. ೧೯೪೭ರಲ್ಲಿ ಸೋಲ್ಬರಿ ಸಂವಿಧಾನದಂತೆ ಶ್ರೀಯುತರು ಶ್ರೀ ಲಂಕೆಯ ಸರ್ವಪ್ರಥಮ ಸಂಸದ್ಸದಸ್ಯರಾದರು. ಅತ್ತನಾಗಲ್ಲದಿಂದ ಪ್ರತಿನಿಧಿ ಸಭೆಯ ಸದಸ್ಯರಾಗಿ ಈ ಸ್ಥಾನದಲ್ಲಿ ಅಂತ್ಯದ ವರೆಗೂ ವಿರಾಜಮಾನರಾಗಿದ್ದರು

ಶ್ರೀ ಭಂಡಾರ ನಾಯಕೆಯವರು ೧೯೩೬ರಿಂದ ೧೯೪೭ರ ವರೆಗೆ ಮಂತ್ರಿ ಪದವಿಯಲ್ಲಿದ್ದರು ೧೯೫೧ರಲ್ಲಿ ಮಾತ್ರ ಡಾನ್ ಸೇನಾ ನಾಯಕೆಯವರ ಸರಕಾರಕ್ಕೆ ತಮ್ಮ ತ್ಯಾಗಪತ್ರವಿತ್ತರು ೧೯೩೬ರಲ್ಲಿ ಸ್ವಾಯತ್ತ ಪ್ರಶಾಸನ ಮಂತ್ರಿಯಾಗಿ ಸಿಂಹಳದಲ್ಲಿ ಪ್ರತಿನಿಧಿ ಮೂಲಕ ಸ್ವಾಯತ್ತ ಶಾಸನ ಪ್ರಣಾಲಿಯ ವಿಕಾಸಕ್ಕೆ ಹೇತುವಾದರು ಈ ಪ್ರಣಾಲಿಯಲ್ಲಿ ಅಂತರ್ಗತವಾದ ಅನೇಕ ನಗರ ಸಭೆಗಳು, ಪಂಚಾಯತುಗಳು ಗ್ರಾಮ ಸಮಿತಿಗಳು ಮೊದಲಾದುವುಗಳ ಸ್ಥಾಪನೆಯಾದುವು ಇವರೇ ಹಲವು ವರ್ಷಗಳ ವರೆಗೆ ಗ್ರಾಮ ಸಮಿತಿಗಳ ಸಮ್ಮೇಳನದ ಅಧ್ಯಕ್ಷರಾಗಿದ್ದರು

೧೯೪೫ರಲ್ಲಿ ಅವರು ರಾಜ್ಯ ಪರಿಷತ್ತಿನಲ್ಲಿ ಸ್ಥಾನ ಪನ್ನ ಸದನದ ಮುಖಂಡರಾದರು ಆರ್ಥಿಕ ವ್ಯವಹಾರದಲ್ಲಿ ಇವರು ತುಂಬ ಅನುಭವ ಪಡೆದಿದ್ದರು ಶ್ರೀ ಲಂಕಾ ವಿಧೇಯಕದ ರೂಪರೇಖೆಗಳನ್ನೂ ಇವರು ತಯಾರಿಸಿದ್ದು ಅದರ ಮುಖ್ಯಾಂಶಗಳನ್ನು ಮುಂದೆ ಸೋಲಬರಿ ಸಂವಿಧಾನದಲ್ಲಿಯೂ ಅಂಗೀಕರಿಸಲಾಯಿತು

ಶ್ರೀ ಭಂಡಾರನಾಯಕೆಯವರು ಆರೋಗ್ಯ ಮಂತ್ರಿ ಸ್ವಾಯತ್ತ ಶಾಸನ ಮಂತ್ರಿಯಾಗಿದ್ದುದಲ್ಲದೇ ಪಾರ್ಲಿಮೆಂಟ್ ಸದನದ ನಾಯಕರಾಗಿಯೂ ಇದ್ದರು ಮಲೇರಿಯಾ ನಿರ್ಮೂಲನ ಕಾರ್ಯದಲ್ಲಿ ಇವರು ಅದ್ಭುತಯಶಸ್ವಿ ಪಡೆದರು ಶ್ರೀ ಲಂಕೆಯ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯದರ್ಶಿಯಾಗಿಯೂ ಇವರು ದುಡಿದಿದ್ದರು. ತಮ್ಮ ೩೧ನೆ ವರ್ಷದಲ್ಲಿಯೇ ಇವರು ಸಂಸ್ಥೆಯ ಅಧ್ಯಕ್ಷಪೀಠವನ್ನೂ ಏರಿದರು

ಸದನದಲ್ಲಿ ತಮಿಳು ಭಾಷೆಯವರಿಗೆ ಮತ್ತು ಸಿಂಹಳೀಯರಿಗೆ ಸಮಾನ ಪ್ರತಿನಿಧಿತ್ವದ ಬೇಡಿಕೆಯು ಮುಂದೆ ಬಂದಾಗ ಇವರು ತಮಿಳು ಕಾಂಗ್ರೆಸ್ಸನ್ನು ಎದುರಿಸಲು ಸಿಂಹಳ ಮಹಾಸಭೆಯನ್ನು ಸ್ಥಾಪಿಸಿದರು. ಯುನೈಟೆಡ್ ನೇಶನಲ್ ಪಾರ್ಟಿಯ ಸ್ಥಾಪನೆಗೂ ಇವರು ಬೆಂಬಲವಿತ್ತಿದ್ದರು; ಇದರ ಅಧ್ಯಕ್ಷರೂ ಅವರು ಈ ಪಕ್ಷವು ೧೯೪೭ರಿಂದ ೫೬ರ ವರೆಗೆ ಸತ್ತಾರೂಢವಾಗಿತ್ತು ಮೂಲಭೂತ ಮತಭೇದಗಳಿಂದಾಗಿ ಇವರು ಈ ಪಕ್ಷಕ್ಕೂ ಸರಕಾರಕ್ಕೂ ರಾಜಿನಾಮೆಯಿತ್ತರು.

೧೯೫೨ರ ಸಾರ್ವತ್ರಿಕ ಚುನಾವಣೆಯಲ್ಲಿ ಭಾಗವಹಿಸಿದ ಶ್ರೀ ಲಂಕಾ ಫ್ರೀಡಂ ಪಾರ್ಟಿಯನ್ನೂ ಇವರು ಸಂಘಟಿಸಿದರು. ಮುಂದೆ, ಪೀಪಲ್ಸ್ ಯುನೈಟೆಡ್ ಫ್ರಂಟನ್ನೂ ನಿರ್ಮಿಸಿದರು ಇದು ೧೯೫೬ರಲ್ಲಿ ಅತ್ಯಧಿಕ ಬಹುಮತದಿಂದ ರಾಜ್ಯಸೂತ್ರವನ್ನು ಹಿಡಿಯಿತು

ಈ ವಿಜಯದಿಂದಾಗಿ ಶ್ರೀ ಭಂಡಾರ ನಾಯಕೆ ಅವರು ಶ್ರೀ ಲಂಕೆಯ ಪ್ರಧಾನಿಗಳಾದರು ಇವರು ಕಠೋರ ತಟಸ್ಥ ನೀತಿಯನ್ನು ಅನುಸರಿಸಿದರು ವಿಶ್ವದ ರಾಷ್ಟ್ರಗಳೊಡನೆ ನಿಕಟ ಸಹಯೋಗವಿರುವಂತೆ ಬೆಂಬಲವಿತ್ತರು ೧೯೫೭ರಲ್ಲಿ ಲಂಡನ್ನಿನಲ್ಲಿ ಸೇರಿದ ಬ್ರಿಟಿಷ ಸಹರಾಷ್ಟ್ರ ಪ್ರಧಾನಿ ಸಮ್ಮೇಳನದಲ್ಲಿ ಭಾಗ ವಹಿಸಿದರು ಇವರು ಆಂಗ್ಲ ಮತ್ತು ಸಿಂಹಳೀ ಭಾಷೆಗಳಲ್ಲಿ ಧಾರಾ ಪ್ರವಾಹವಾಗಿಯೂ ಪ್ರಭಾವ ಶಾಲಿಯಾಗಿಯೂ ಭಾಷಣ ಮಾಡಬಲ್ಲವರಾಗಿದ್ದರು

೧೯೪೦ರಲ್ಲಿ ಕೇಂಡಿಯ ಓರ್ವ ಸರದಾರನ ಪುತ್ರಿ ಶ್ರೀ ಮಾವೋ ರತವತೆಯವರೊಡನೆ ಇವರ ವಿವಾಹವಾಯಿತು ಶ್ರೀ ಭಂಡಾರ ನಾಯಕೆಯವರು ಸ್ವತಃ ಬೌದ್ಧರಾಗಿದ್ದರೂ ಸಹ ಭಾರತದ ಪ್ರಾಚೀನ ವಿನೋದ ತಾಳುತ್ತಿದ್ದರು. ಪ್ರಾಚೀನ ಯೂನಾನಿ ಸಾಹಿತ್ಯ, ಕಾವ್ಯ, ರಾಜನೀತಿ, ಅರ್ಥಶಾಸ್ತ್ರ ಮೊದಲಾದ ಪುಸ್ತಕಗಳಲ್ಲಿ ಇವರಿಗೆ ಅಪರಿಮಿತ ಆಸಕ್ತಿ. ಪ್ರಾಯಃ ಇವರು ಟೆನ್ನಿಸ್ ಕೂಡಾ ಆಡುತ್ತಿದ್ದರು. ಶ್ರೀಲಂಕೆ ಮತ್ತು ಇಂಗ್ಲೆಂಡ್‌ಗಳಿಂದ ರಾಶಿಗಟ್ಟಲೆ ಚೆಲ್ಲಿಯ ಪತ್ರಗಳು ಬಹುಮಾನವಾಗಿ ಇವರಿಗೆ ಬಂದಿರಬೇಕು.



ಅಮೆರಿಕೆಯ ಆರನೆಯ ಉಪಗ್ರಹ 'ಪೆಡ್ಲ್ ವೀಲ್'ನ ಚಿತ್ರವಿದು ಈ ಉಪಗ್ರಹವು ವಿವಿಧಾಂಗಗಳ ಸಹಾಯದಿಂದ ಒಂದು ವರ್ಷ ಕಾಲ ಆಕಾಶದಲ್ಲಿ ಸುತ್ತುವ ನಿರೀಕ್ಷೆಯಿದೆ

ಒಂದು ಸಂಸ್ಮರಣೆ

(೫ನೇ ಪುಟದಿಂದ)

ದೂ 'ನೀನು' ಎಂದಿರಲಿಲ್ಲ ಗಾಂಧಿಯವರಿಗೆ 'ನೀನು' ಎಂದುದಕ್ಕೆ ಎಲ್ಲರೂ ನನ್ನ ಮೇಲೆ ಉರಿಯುವರೆಂದು ಹೆದರಿಕೆ ನನಗಾಯಿತು) ನನಗೊಬ್ಬ ವ್ಯಕ್ತಿ ಬಂದು ಕೂಲಿಗಳಿಗೆ ಪ್ರಾರ್ಥನೆಗೆ ಪ್ರವೇಶಿಸ ಬಿಡುವುದಿಲ್ಲ ಎಂದು ಸಿದ್ಧಿಕೊಟ್ಟ. ನಾನು ಆ ಮಾತನ್ನು ನಂಬಿ ನಿನ್ನ ಅದನ್ನು ನಿಮ್ಮೆದುರು ಇಟ್ಟೆ ಪರೀಕ್ಷಣೆಯಿಂದ ಅದು ತಪ್ಪೆಂದು ತಿಳಿಯಿತು ಆಗ, ತ್ಯಾಗಿ ಸತ್ಯ ಹೇಳಿದಂತಾಗಲಿಲ್ಲವೇ? ನಾನಾದರೋ ರಾಮಮಂದಿರದಲ್ಲಿದ್ದು ಸುಳ್ಳನಾಡಿದೆ ಇದಕ್ಕೆ ಪ್ರಾಯಶ್ಚಿತ್ತವಾಗಲೇ ಬೇಕು ನಾನು ಮಹಾತ್ಮಾ ಆಗಿದ್ದೇನೆ—ನಿಮ್ಮೆಲ್ಲರೂ ಮಹಾತ್ಮಾರಲ್ಲ ನಾನೇ ಇಂತಹ ಪಾಪಮಾಡಬಹುದಾದರೆ, ನೀವೂ ಅವಶ್ಯ ಪಾಪ ಮಾಡಲೇ ಬೇಕು ಆದರೂ ನನ್ನ ಪಾಪವನ್ನು ತೊಳೆಯಬೇಕು. ಬನ್ನಿ ನಾನೂ ನೀವೂ ಒಂದು ಸೇರಿ ಪ್ರಾಯಶ್ಚಿತ್ತ ಮಾಡೋಣ

"ಭವಿಷ್ಯದಲ್ಲಿ ಪಾಪ ಮಾಡದಿರುವುದೇ ಪ್ರಾಯಶ್ಚಿತ್ತ ಎಲ್ಲರೂ ಕಣ್ಣು ಮುಚ್ಚಿ ರಾಮಧ್ಯಾನ ಮಾಡಿರಿ ಕಣ್ಣುಗಳಿಗೆ ಕೆಡುಕು ತೋರಿದರೆ, ಅದನ್ನು ನೋಡದಿರುವ, ಹಾಗೂ ಕಿವಿಗೆ ಕೇಳಿದರ ಕೇಳದಿರುವ ಪ್ರತಿಜ್ಞೆ ಮಾಡಿರಿ ಮತ್ತೂ ಕೆಡುಕು ನಿಮ್ಮನ್ನು ಕಾಡುವುದಾದರೆ, ಬಾಯಿ ಮುಚ್ಚಿಕೊಳ್ಳಿರಿ ಹೀಗೆ ಮಾಡುವುದರಿಂದ ನೀವು ಪಾಪದಿಂದ ಮುಕ್ತರಾಗುತ್ತೀರಿ ಆದದರಿಂದ ನಾನೂ ಪ್ರತಿಜ್ಞೆ ಮಾಡುತ್ತೇನೆ, ನೀವೂ ಮಾಡಿರಿ—ಯಾವುದಾದರೂ ಒಂದು ಕೆಟ್ಟ ವಿಷಯವನ್ನು ಪರ್ಯಾಲೋಚಿಸದೆ ಪ್ರಕಟಗೊಳಿಸುವುದಿಲ್ಲ ."

ಪ್ರಾರ್ಥನೆ ಮುಗಿದೊಡನೆಯೇ ನಾನು ಸಮೀಪ ಹೋಗಿ ಬಾಪೂಗೆ ವಂದಿಸಿದೆ ಆಗ ಅವರು ಪ್ರಶ್ನಿಸಿದರು—'ಪಾಪಿಯನ್ನು ಕ್ಷಮಿಸಿರುವಿರೆ'

ನಾನು ಅತ್ತುಬಿಟ್ಟೆ ನಾನು ಬಾಪೂರವರೊಡನೆ ಕೇಳುತ್ತೇನೆ— 'ತಾವು ಪಾಪಿಯನ್ನೇನು ಮಾಡಿದಿರಿ? ಈತ ಕ್ಷಮಾರ್ಹನು ಕೂಡ ಅಲ್ಲವಲ್ಲ!"

(ಮಹಾ ವೀರತ್ಯಾಗಿಯವರ ಸಂಸ್ಮರಣೆಯೊಂದ)



ಕುಮಾರಿ ಚಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಪ್ರಶಸ್ತ,

ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/-

(ವಿ. ಪಿ ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA-40

ಸ್ಟಾಕಿಸ್ಟರು ಷಾ ಕಂಪೆನಿ, ಮಂಗಳೂರು—1.

ಅಲ್ಪಸಂಖ್ಯಾಕರ ಭಾಷೆ

ತುಳುಭಾಷೆಯ ಹಿತರಕ್ಷಣೆ ಅಗತ್ಯ

೮-೧೦ ಲಕ್ಷ ಜನರ ಈ ತುಳು ಭಾಷೆಯಲ್ಲಿ ಆಕಾಶವಾಣಿ ಕಾರ್ಯಕ್ರಮಗಳನ್ನಾದರೂ ಕೈಗೊಳ್ಳಬಹುದು.

ಈಗ ಮುಕ್ತಾಯಗೊಂಡ ಲೋಕಸಭೆಯ ಅಧಿವೇಶನದಲ್ಲಿ ಭಾಷಾ ಅಲ್ಪಸಂಖ್ಯಾಕರ ಹಿತರಕ್ಷಣಾ ಕಮಿಶನರರ ಪ್ರಥಮ ವರದಿಯ ಚರ್ಚೆಯ ವೇಳೆ ಶ್ರೀ| ಕೆ. ಆರ್. ಆಚಾರ್ ತುಳು ಭಾಷೆಯ ಹಿತರಕ್ಷಣೆಯ ಬಗ್ಗೆ ಪ್ರಸ್ತಾವಿಸಿದರು:

"ಮೈಸೂರು ರಾಜ್ಯದ ಒಂದು ವಿಶಿಷ್ಟ ಭಾಷೆಯ ಅಲ್ಪ ಸಂಖ್ಯಾಕರ ಸಮಸ್ಯೆಯನ್ನು ನಾನೀಗ ಪ್ರಸ್ತಾವಿಸುವೆನು.

'ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಸ್ಥೂಲವಾಗಿ ಕನ್ನಡಿಗರೆಂದು ಪರಿಗಣಿತವಾದರೂ, ಅಲ್ಲಿಯ ಹೆಚ್ಚಿನ ಜನರು ಆಡುವ ಭಾಷೆಯನ್ನು ಈ ಸಭೆಯ ಹೆಚ್ಚಿನ ಜನರು ಕೇಳಿರಲಾರರು ತುಳು ಭಾಷೆ ಎಂದು ಅದನ್ನು ಕರೆಯಲಾಗುತ್ತಿದೆ. ೧೩॥ ಲಕ್ಷ ಜನಸಂಖ್ಯೆ ಇರುವ ಈ ಜಿಲ್ಲೆಯ ಜನರಲ್ಲಿ ೮ರಿಂದ ೯ ಲಕ್ಷ ಜನರು ಆಡುವ ಭಾಷೆ ತುಳು. ದ್ರಾವಿಡ ಭಾಷೆಯಲ್ಲಿ ತೆಲುಗು, ತಮಿಳು, ಕನ್ನಡ ಮತ್ತು ಮಲೆಯಾಳ ಈ ನಾಲ್ಕು ಭಾಷೆಗಳನ್ನು ಎಲ್ಲರೂ ಕೇಳಿರಬಹುದು. ಆದರೆ ದ್ರಾವಿಡ ಭಾಷೆ ನಾಲ್ಕೇ ಆಗಿರದೆ ಐದು ಆಗಿವೆ. ಪಂಚ ದ್ರಾವಿಡ ಭಾಷೆಯೆಂದೇ ಇವು ಪ್ರಸಿದ್ಧವಾಗಿದೆ. ಐದನೆಯದು ತುಳು ಭಾಷೆ

(ಆ ಭಾಷೆಗೆ ಲಿಪಿ ಇದೆಯೆ? ಎಂದು ಸಭಾಪತಿಗಳಾಗಿ ಪ್ರಶ್ನಿಸಿದರು.)

"ಅದಕ್ಕೆ ಅದರದೇ ಲಿಪಿ ಇದೆ. ಅದು ಅಭಿವೃದ್ಧಿ ಹೊಂದದಿರಬಹುದು, ಸಾಹಿತ್ಯವೂ ಇಲ್ಲದಿರಬಹುದು. ಈ ಭಾಷೆಯ ಬಗೆಗಿರುವ ತಾತ್ಸಾರದಿಂದಲೇ ಅದಕ್ಕೆ ಲಿಪಿಯಿದೆಯೇ ಎಂಬ ಪ್ರಶ್ನೆ ಕೇಳಲಾಗುತ್ತಿದೆ. ಹೇಗಿದ್ದರೂ, ಎಲ್ಲ ಭಾಷೆಯೂ ಲಿಪಿ ಇದ್ದ ಭಾಷೆ ಅಥವಾ ಸಾಹಿತ್ಯವಿದ್ದ ಭಾಷೆಯೇ ಆಗಿರಬೇಕೆ?

"ರಶ್ಯದಲ್ಲಿದ್ದ ಹಲವು ಬಗೆಯ ಭಾಷೆಗಳ ಅಭಿವೃದ್ಧಿಯ ಬಗ್ಗೆ ಆ ದೇಶ ಕೈಕೊಂಡಿದ್ದ ಕಾರ್ಯಕ್ರಮಗಳ ಕುರಿತು ಒಂದು ಲೇಖನ ಇತ್ತೀಚೆಗೆ ನಾನು ಓದಿದೆ ಲಿಪಿ ಸಾಹಿತ್ಯ ಇತ್ಯಾದಿಗಳಿಲ್ಲದ ಭಾಷೆಗಳನ್ನೂ ಅವರು ಅಭಿವೃದ್ಧಿಗೊಳಿಸಿದ್ದಾರೆ. ತುಳು ಭಾಷೆ ತುಂಬ ವಿಕಾಸ ಹೊಂದಿದ ಭಾಷೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಹೇಗಿದ್ದರೂ ೮-೧೦ ಲಕ್ಷ ಮಂದಿಯ ಆಡುವ ಭಾಷೆ ಅದಾಗಿದೆ.

"ಈ ಭಾಗವು ಗತಕಾಲದಲ್ಲಿ ಯಾವುದೋ ಅರಸಾಳಿಕೆಗೆ ಒಳಪಟ್ಟಿದ್ದುದರಿಂದ ತುಳು ಬೋಧ ಭಾಷೆ ಅಥವಾ ವ್ಯವಹಾರ ಭಾಷೆಯಾಗಲಿಲ್ಲ ಕನ್ನಡವೇ ಆ ಸ್ಥಾನವನ್ನು ಪಡೆದಿತ್ತು ಈ ಬಗ್ಗೆ ನಾನೇನೂ ಆಕ್ಷೇಪಿಸುವುದಿಲ್ಲ ಕನ್ನಡ ಭಾಷೆ ಇಲ್ಲಿ ಆಡಳಿತ ಭಾಷೆಯೂ ಆಗಿದೆ. ಆದರೆ ತುಳು ಭಾಷೆಯ ಅಭಿವೃದ್ಧಿಯ ಬಗ್ಗೆಯೂ ಕಾರ್ಯಕ್ರಮ ಕೈಕೊಳ್ಳಬೇಕೆಂದು ನನಗನ್ನಿಸುತ್ತದೆ. ತುಳು ಭಾಷೆಗೆ ಅದರದೇ ಆದ ಒಂದು ನುಡಿಗಟ್ಟು ಮತ್ತು ಸಂಸ್ಕೃತಿ ಇದೆ. ಹಿಂದೆ ಭಾಷಾ ರಾಜ್ಯ ಚಳವಳಿ ಪ್ರಾರಂಭವಾದಾಗ ಈ ೧೦ ಲಕ್ಷ ಮಂದಿಗಾಗಿ ತುಳುನಾಡು ಸ್ಥಾಪನೆಯನ್ನು ಮುಂದೊಡ್ಡಿದವರೂ ಇದ್ದಾರೆ. ಈ ಬೇಡಿಕೆ ನ್ಯಾಯವಾದುದಲ್ಲ ಮತ್ತು ಅದಕ್ಕೆ ನನ್ನ ಸಮರ್ಥನೆಯೂ ಇಲ್ಲ. ಆದರೆ, ಮಾನ್ಯ ಮಂತ್ರಿಗಳ ಮತ್ತು ಭಾಷಾ ಅಲ್ಪ ಸಂಖ್ಯಾಕರ ಹಿತ ರಕ್ಷಣಾ ಕಮಿಶನರರ ಗಮನವನ್ನು ಈ ಕಡೆ ಸೆಳೆಯುವುದು ನನ್ನ ಉದ್ದೇಶವಾಗಿದೆ ಈ ಭಾಷೆಯ ಅಭಿವೃದ್ಧಿಯ ಕಡೆಗೆ ಅವರು ಗಮನಕೊಡಬೇಕು. ಉದಾಹರಣೆಗಾಗಿ ತುಳು ಭಾಷೆಯ ಅಭಿವೃದ್ಧಿಯ ಬಗ್ಗೆ ಒಂದು ರೇಡಿಯೋ ಪ್ರಸಾರ ಕೇಂದ್ರ ಸ್ಥಾಪಿಸಬಹುದು.

"ಚುನಾವಣೆಯ ಸಂದರ್ಭದಲ್ಲಿ ಜನರಿಗೆ ತಿಳಿಯುವಂತೆ ಹೇಳಬೇಕಾದಾಗ ತುಳು ಭಾಷೆಯಲ್ಲೆ ಭಾಷಣಕೊಡಲಾಗುತ್ತಿದೆ. ಆದರೆ ಇತರ ಸಂದರ್ಭಗಳಲ್ಲಿ ಕನ್ನಡ ಅಥವಾ ಇತರ ಭಾಷೆಯನ್ನು ಬಳಸಲಾಗುತ್ತಿದೆ. ಈ ಭಾಷೆಯ ಬಗ್ಗೆ ಸರಿಯಾದ ಶೋಧನೆ ನಡೆಯಲೇ ಬೇಕು. ಗೃಹ ಸಚಿವರು ಮತ್ತು ಕಮಿಸರ್ ಶ್ರೀ ಮಲ್ಲಿಕ್ ಇವರ ಮುಂದಿಡುವ ನನ್ನ ಪ್ರಥಮ ವಿನಂತಿ ಇದು."

ಪುಸ್ತಕ ವಿಮರ್ಶೆ

ನವಪ್ರಭಾತ— (ಅಶೋಕ ಕಾಲೀನ ಐತಿಹಾಸಿಕ ನಾಟಕ) ಮೂಲ ಲೇಖಕರು: ಶ್ರೀ ವಿಷ್ಣು ಪ್ರಭಾಕರ ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ ಪ್ರಕಾಶಕರು: ಶ್ರೀ ಸದ್ಗುರು ಪ್ರಕಾಶನ, ಮುಂಬಾಯಿ-೨೮. ಪುಟಗಳು ೨೪+೭೮

ಭಾರತವನ್ನು ಏಕಚಕ್ರಾಧಿಪತ್ಯದ ಶ್ವೇತಛತ್ರಛಾಯೆಯಲ್ಲಿ ನೆಲೆನಿಲ್ಲಿಸಿದ ಪ್ರಪ್ರಥಮ ಸಾಮ್ರಾಟನಾದ ಅಶೋಕನು ಆರಂಭದಲ್ಲಿ ಕ್ರೂರಿಯಾಗಿದ್ದು, ತನ್ನ ಅಣ್ಣ ಸುಸೀಮನನ್ನು ಕೊಂದು ಮಗಧದ ಪಟ್ಟವನ್ನೇರಿದ. ಚಾಣಕ್ಯ ನೀತಿಯಂತೆ ಸಾಮ್ರಾಜ್ಯ ವಿಸ್ತಾರಕ್ಕಾಗಿ ಕಳಿಂಗದ ಮೇಲೆ ಆಕ್ರಮಣ ಮಾಡಿದ. ಕಲಿಂಗದ ವಿಜಯಾನಂತರ ಆತನ ಹೃದಯದಲ್ಲಿ ಅಪರಿಗಣಿತ ಪರಿವರ್ತನೆಯಾಯಿತು-ಇದು ಇತಿಹಾಸದ ಉಲ್ಲೇಖ. ಅಶೋಕನ ಮನಸ್ಸು ಯಾವ ಕಾರಣದಿಂದ ಹೇಗೆ ಪರಿವರ್ತಿತವಾಯಿತು ಎಂಬುದನ್ನೂ ನಿರ್ಣಯಕ್ಕೆ ಬಂದಿಲ್ಲ. ಆದರೂ ಆತನ ಶಾಸನಗಳ ಆಧಾರದಿಂದ ಹಾಗೂ ಇನ್ನಿತರ ಮೂಲಗ್ರಂಥಗಳಿಂದ ವಿಷಯ ಸಂಗ್ರಹಿಸಿ ಅಶೋಕನ ಜೀವನದ "ನವಪ್ರಭಾತ"ವನ್ನು ಶ್ರೀ ವಿಷ್ಣು ಪ್ರಭಾಕರರು ಚಿತ್ರಿಸಿದ್ದಾರೆ

ಕಲಿಂಗ ಧ್ವಂಸಾನಂತರ, ಕಲಿಂಗ ರಾಜಕುಮಾರ ಕುಮಾರನನ್ನು ಸೆರೆಹಿಡಿದು ಅಶೋಕ ಅತನಿಗೆ ಮರಣದಂಡನೆ ವಿಧಿಸುತ್ತಾನೆ ಆದರೂ ಕುಮಾರನ ಕೆಚ್ಚೆದೆಯ ವೀರ ವಾಕ್ಯಗಳಿಂದ ಆತನ ಹೃದಯಾಂತರಾಳ ಮಥಿಸತೊಡಗುತ್ತದೆ ಮುಂದೆ ಕಳಿಂಗ ರಾಜಕುಮಾರಿಯೂ ಸನ್ಯಾಸಿನಿಯ ವೇಶದಲ್ಲಿ ಬಂದು ರಾಜನ ಮನಸ್ಸನ್ನು ಮತ್ತಷ್ಟು ಕಡೆಯುತ್ತಾಳೆ. ಅಶೋಕನು ತನ್ನ ಸಹೋದರಿ ಸಂಘಮಿತ್ರ ಮತ್ತು ತಮ್ಮ ಮಹೇಂದ್ರರಿಂದಲೂ ಪ್ರೇರಿತನಾಗುತ್ತಾನೆ. ಅವನ ಮನಸ್ಸಿನಲ್ಲಿ ಅಹಿಂಸೆಯ ಮಹತ್ವ, ನಿಜವಾದ ವೀರನ ವೀರ್ಯವೂ ಯಾವುದೆಂಬುದು ತಿಳಿಯುತ್ತದೆ ದಂಡನೆಗೆ ಗುರಿಯಾದ ಕುಮಾರನನ್ನು ಆತ ಕ್ಷಮಿಸಿ ಬಿಡುತ್ತಾನೆ. ಆದರೆ ಕಾಲ ಮಿಂಚಿ ಹೋಗುತ್ತದೆ, ಸಂಘಮಿತ್ರೆಯಿಂದ ಈ ಕ್ಷಮಾ ಸಮಾಚಾರ ತಿಳಿದ ಕುಮಾರ "ವೀರರೆಂದೂ ಕ್ಷಮಾಪಣೆಯನ್ನು ಅಂಗೀಕರಿಸಲಾರರು" ಎಂದು ಕಟುಕನ ಕಠಾರಿಯನ್ನು ಎಳೆದು ಹಿರಿದು ಪ್ರಾಣತ್ಯಾಗ ಮಾಡುತ್ತಾನೆ. ಅಶೋಕನ ಜೀವನದಲ್ಲಿ ನವಪ್ರಭಾತವಾಗಿ ಆತನ ಗತಿವಿಧಿಗಳು ಬದಲಿಸುತ್ತವೆ. ಕಟುಕ ಅಶೋಕ ಅಹಿಂಸಾವಾದಿ ಅಶೋಕನಾಗುತ್ತಾನೆ

ಈ ಘಟನೆಯು ಈ ನಾಟಕದ ಮೂರಂಕಗಳಲ್ಲಿ ಮರ್ಮಭೇಧಕವಾಗಿಯೂ ಹೃದಯಸ್ಪರ್ಶಿಯಾಗಿಯೂ ನಿರೂಪಿಸಲ್ಪಟ್ಟಿದೆ. ಪ್ರಸ್ತಾವನೆ ಮತ್ತು ಉಪಸಂಹಾರಗಳಲ್ಲಿ ನಡುವಿನ ಕತೆಯ ಸೂಚನೆಯನ್ನೂ ಪರಿಣಾಮವನ್ನೂ ಹೇಳಲಾಗಿದೆ. ರಾಜಕುಮಾರ ಮತ್ತು ರಾಜಕುಮಾರಿಯರ ಪಾತ್ರ "ವೀರ" ಪುರುಷ ಹಾಗೂ ಸ್ತ್ರೀಯರ ಪ್ರತಿಮಾರ್ಗಗಳಂತೆ ಚಿತ್ರಿತವಾಗಿವೆ ಆದುದರಿಂದಲೇ ಇವರ ಪ್ರತಿ ಸ್ವಾಭಿಮಾನ ಪೂರ್ಣವಾಕ್ಯ ನಿಂದಾಗಿಯೇ ಅಶೋಕನ ಕಲ್ಲೆದೆಯೂ ಕರಗಿದುದು ಸ್ವಾಭಾವಿಕವಾಗಿಯೇ ಕಂಡುಬರುತ್ತದೆ, ಅಶೋಕನ ಹೃದಯ ಪರಿವರ್ತನೆಯು ಈ ಘಟನೆಯು ಮೂಲವು ಸಾಧಾರವಾಗಿರುವುದರಿಂದ ಉತ್ಕೃಷ್ಟ ಐತಿಹಾಸಿಕ ನಾಟಕಗಳ ಶ್ರೇಣಿಯಲ್ಲಿ ನಿಲ್ಲುವ ಯೋಗ್ಯತೆ "ನವಪ್ರಭಾತ"ಕ್ಕಿದೆ; ಅಭಿನಯಕ್ಕೂ ಒಪ್ಪಿಬರುತ್ತದೆ ಅನುವಾದದಲ್ಲಿ ಅಲ್ಲಲ್ಲಿ "ಹಿಂದಿ ಭಾಷೆಯ ಛಾಯೆಯು ತೋರಿಬರುವುದರಿಂದ ಕನ್ನಡದ ವಾಚಕರಿಗೆ ತುಸು ತ್ರಾಸವಾದರೂ ನಾಟಕದ ಓಜಸ್ಸಿಗೆ ಕುಂದು ತರಲಿಲ್ಲ ಅನುವಾದಕರು ಕನ್ನಡದಲ್ಲಿ ಪ್ರಚಾರದಲ್ಲಿಲ್ಲದ "ಲಾಲಿಮತೆ" "ರಂಗಮಂಚ" ಮೊದಲಾದ ಪದಗಳನ್ನು ತಿಳಿಯಾಗಿರಿಸುತ್ತಿದ್ದರೆ, ಒಳ್ಳೆದಿತ್ತು ಶ್ರೀ ಶೆಟ್ಟರಿಂದ ಇನ್ನೂ ಉತ್ತಮವಾದ ಕೃತಿಗಳನ್ನು ನಿರೀಕ್ಷಿಸಬಹುದು,

ಗೋರಾ!

ಬ್ರಿಟನ್ನಿನ ಆರು ಜನ ಹಿಮನರ್ತಕಿಯರು ಯುರೋಪದಲ್ಲಿಯೇ ಸುಪ್ರಸಿದ್ಧರಾಗಿದ್ದಾರೆ.

ಪ್ರಣಯ ಮೂದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1=50)
ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ
ಕಳಿಸಬಹುದು.
ನವಭಾರತ ಬುಕ್ ಡಿಪೊ, ಉಡುಪಿ.

ವ್ಯಕ್ತಿತ್ವದರ್ಶನ

ಕ್ರುಶ್ಚೇವರ ಜೊತೆಗಾರ—ಹೆನ್ರಿ ಕೇಬಟ್ ಲಾಡ್ಜ್

ರಶ್ಯನರನ್ನಿವರು ಅರಿತಿದ್ದಾರೆ, ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇಟ್ಟಿದ್ದಾರೆ ಎಂಬುದರಿಂದ ಕ್ರುಶ್ಚೇವರ ಈ ಜೊತೆಗಾರರ ಆಯ್ಕೆ ಸರ್ವಪ್ರಧಾನವಾಗಿಲ್ಲವೆ?

ರಶ್ಯನ್ ಪ್ರಧಾನಿ ಶ್ರೀ ನಿಕಿಟಾ ಕ್ರುಶ್ಚೇವರು ಅಮೇರಿಕೆಯಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟು ಕೊಂಡಿದ್ದಾರೆ. ಈ ಸಂಚಾರಾವಧಿಯಲ್ಲಿ ಅವರ ಬೆಂಗಾವಲಿಗಾಗಿ ಅಧ್ಯಕ್ಷ ಐಸನ್ ಹಾವರರು ವಿಶ್ವಸಂಸ್ಥೆಯಲ್ಲಿ ಅಮೇರಿಕೆಯ ನಿಯೋಗದ ನಾಯಕರಾಗಿರುವ ಶ್ರೀ ಹೆನ್ರಿ ಕೇಬಟ್ ಲಾಡ್ಜರನ್ನು ನೇಮಿಸಿದರು. ಶ್ರೀ ಲಾಡ್ಜರು ರಶ್ಯನರನ್ನು ಮನಃಪೂರ್ವಕವಾಗಿ ಮೆಚ್ಚುವವರು, ಹಾಗೂ ಪ್ರಜಾಪ್ರಭುತ್ವ ಜೀವನ ವಿಧಾನದ ಸ್ಪಷ್ಟ ವಕ್ತಾರರಾಗಿರುವರು. ಆದುದರಿಂದ, ತನ್ನ ಸಹಗಾಮಿಯ ವಿಷಯದಲ್ಲಿ ಶ್ರೀ ಕ್ರುಶ್ಚೇವರು ಭಾಗ್ಯಶಾಲಿ ಎಂದೇ ಹೇಳಬಹುದು.

ಶ್ರೀ ಲಾಡ್ಜರು ಕೇವಲ ಯುಕ್ತ ಸಂಸ್ಥೆಯಲ್ಲಿ ಉಚ್ಚ ಪದವಿಯಲ್ಲಿರುವವರು ಮಾತ್ರವಲ್ಲ; ಅಧ್ಯಕ್ಷರ ಮಂತ್ರಿ ಮಂಡಳಿಯ ಸಮಾಲೋಚನೆಗಳಲ್ಲಿ ಕೂಡಾ ಭಾಗವಹಿಸುತ್ತಾರೆಂಬುದರಿಂದ ಶ್ರೀ ಲಾಡ್ಜರ ಬಗ್ಗೆ ಅಧ್ಯಕ್ಷ ಐಕರಲ್ಲಿ ಯಾವ ಭಾವನೆಗಳಿವೆ ಎಂಬುದನ್ನು ತಿಳಿದುಕೊಳ್ಳಬಹುದು.

ಶ್ರೀ ಲಾಡ್ಜರು ಮಾತ್ರ ಉನ್ನತ ಚರಿತ್ರರಾಗಿರುವುದಲ್ಲ, ೧೭ನೆ ಶತಮಾನದಲ್ಲಿ ಅಮೇರಿಕೆಯಲ್ಲಿ ವಲಸೆ ನಿಂತ ಅವರ ಪೂರ್ವಜರು ಕೂಡ ಸುಪ್ರಸಿದ್ಧರಾಗಿದ್ದರು. ಶ್ರೀಯುತರ ಅಜ್ಜಂದಿರೂ ಅಮೇರಿಕದ ಸಿನೇಟಿನಲ್ಲಿ ಮೆಸಚುಟೆಸ್ ಸಂಸ್ಥಾನವನ್ನು ಪ್ರತಿನಿಧೀಕರಿಸಿದ್ದರು. ಅಂತೆಯೇ ಶ್ರೀ ಲಾಡ್ಜರೂ ಇದೇ ಸಂಸ್ಥಾನದ ಪ್ರತಿನಿಧಿಯಾಗಿ ಸಿನೇಟಿನಲ್ಲಿ ದುಡಿದರು. ದ್ವಿತೀಯ ಲೋಕ ಯುದ್ಧಾವಧಿಯಲ್ಲಿ ಇವರು ತಮ್ಮ ಸಿನೇಟಿನ ಪ್ರತಿನಿಧಿತ್ವವನ್ನು ಬಿಟ್ಟುಕೊಟ್ಟು, ಸೈನ್ಯದಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿರುವರು.

೧೯೫೩ರಲ್ಲಿ ಶ್ರೀಯುತರ ವಿಶ್ವಸಂಸ್ಥೆಯಲ್ಲಿ ಅಮೇರಿಕೆಯ ಪ್ರಧಾನ ನಿಯೋಗಿಯಾಗಿ ನೇಮಿತರಾದರು. ಅಂದಿನಿಂದಲೂ ಇವರು ಪ್ರಪಂಚ ಶಾಂತಿಯ ಬೆಂಬಲಿಗರೆಂಬ ಪ್ರಶಂಸೆಗೆ ಗುರಿಯಾಗಿದ್ದಾರೆ.

ಹಂಗೆರಿಯಲ್ಲಿ ರಷ್ಯವು ಮಾಡಿದ ಅತಿಕ್ರಮಣವನ್ನು ಅವರು ಸ್ಪಷ್ಟವಾಕ್ಯಗಳಲ್ಲಿ ಖಂಡಿಸಿದ್ದಾರೆ. ಕೆಲವಾರು ನೂತನ ರಾಷ್ಟ್ರಗಳಿಗೆ ಸಂಯುಕ್ತ ಸಂಸ್ಥೆಯಲ್ಲಿ ಪ್ರವೇಶನೀಡಲು ಬೆಂಬಲವಿತ್ತಿದ್ದಾರೆ. ಈ ಸಂದರ್ಭದಲ್ಲಿ ತನ್ನ ವಿಶೇಷ "ವಿಟೋ" ಪ್ರಯೋಗ ಮಾಡಿದ ರಶ್ಯದ ನಡವಳಿಕೆಯನ್ನು ವಿರೋಧಿಸಿದ್ದಾರೆ. ಸಣ್ಣ ರಾಷ್ಟ್ರಗಳ ಹಿತಗಳನ್ನು ಅಲಕ್ಷಿಸುವ ದೊಡ್ಡ ರಾಷ್ಟ್ರಗಳ ವ್ಯವಹಾರವನ್ನು ಟೀಕಿಸಿದ್ದಾರೆ.

ವಿಶ್ವಸಂಸ್ಥೆಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ಶಸ್ತ್ರಗಳನ್ನು ಪರಿಣಾಮಕಾರಿಯಾಗಿ ತಗ್ಗಿಸುವ ಬಗ್ಗೆ ಸೋವಿಯತ್ ರಶ್ಯದೊಡನೆ ಒಡಂಬಡಿಕೆಗಳನ್ನು ಸಾಧಿಸುವ ಪ್ರಯತ್ನದಲ್ಲಿ ಇವರ ಪಾತ್ರ ಹಿರಿದು. ೧೯೫೭ರಲ್ಲಿ ನಡೆದ ಲಂಡನ್ ನಿಶ್ಶಸ್ತ್ರೀಕರಣ ಗೋಷ್ಠಿಗಳ ಅವಧಿಯಲ್ಲಿ ಯಾವುದೇ ನಿಶ್ಶಸ್ತ್ರೀಕರಣವು ಎಲ್ಲ ಮಹಾ ರಾಷ್ಟ್ರಗಳನ್ನು ಮತ್ತು ಎಲ್ಲ ರೀತಿಯ ಶಸ್ತ್ರಗಳನ್ನು ಒಳಗೊಳ್ಳಬೇಕಲ್ಲದೇ ಪ್ರತಿಯೊಂದು ಹಂತದಲ್ಲಿಯೂ ಸೂಕ್ತವಾದ ಮೇಲ್ವಿಚಾರಣೆಬೇಕು ಎಂದಿವರು ಸಾರಿದರು. ಈ ಸಮಯದಲ್ಲಿ ಸೋವಿಯತ್ ಮಂಡಿಸಿದ ನಿಶ್ಶಸ್ತ್ರೀಕರಣದ ಸಲಹೆಗಳನ್ನು ಪರಿಶೀಲಿಸಿ ಅವುಗಳು ಕೇವಲ ಪ್ರಚಾರ ಸಾಧನ ಎಂದು ಅವರು ಅಭಿಪ್ರಾಯಪಟ್ಟರು.

ಅಕಸ್ಮಾತ್ತಾದ ದಾಳಿಯನ್ನು ತಡೆಗಟ್ಟಿ ತನ್ಮೂಲಕ ಅಂತಾರಾಷ್ಟ್ರೀಯ ರಂಗದಿಂದ ಅಂಜಿಕೆಯನ್ನು ನಿವಾರಿಸಬಲ್ಲ ಐಕರ "ಅನಾಚ್ಛಾದಿತ ಗಗನ"ದ ಸಲಹೆಗೆ ಸೋವಿಯತ್ ನಾಯಕರನ್ನು ಶ್ರೀ ಲಾಡ್ಜರು ಒಪ್ಪಿಸಲು ಪ್ರಯತ್ನಿಸಿದರೂ ವಿಫಲರಾದರು. ಪೂರ್ವ ಪಶ್ಚಿಮ ಮತಭೇದಗಳಿಗೆ ಸಂಬಂಧವಿಲ್ಲದ ವಿಷಯಗಳ ಚರ್ಚೆಯಲ್ಲಿ "ಪ್ರಚ್ಛನ್ನ ಯುದ್ಧ"ದ ಪ್ರಶ್ನೆಗಳನ್ನು ಬೆರಸಿದ ಗ ಶ್ರೀ ಲಾಡ್ಜರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ನ್ಯೂ ಇಂಗ್ಲೆಂಡಿನವರಾದ ಶ್ರೀ ಲಾಡ್ಜರು ೧೯೦೨ರಲ್ಲಿ ಮೆಸಾಚುಟೆಸ್‌ನ ನಹಾಂತವೆಂಬಲ್ಲಿ ಜನಿಸಿದರು. ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿದ ಮೇಲೆ, ಇವರು ಕೆಲವು ವರ್ಷ ಪತ್ರಿಕೋದ್ಯಮಿಯಾಗಿ ಕೆಲಸಮಾಡಿದರು. ಮೆಸಚುಟೆಸ್‌ನಲ್ಲಿ ಅವರು ಎರಡು ಶಾಸನಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು. ಅವರ ಇಳಿವಯಸ್ಸಿನಲ್ಲಿ ಮೊತ್ತಮೊದಲನೆಯದಾಗಿ ಅಮೇರಿಕೆಯ ಸಿನೇಟಿಗೆ ಚುನಾಯಿತರಾದರು. ಈ ೧೩ ವರ್ಷಗಳಲ್ಲಿ ಮೊದಲ ೬ ವರ್ಷಗಳ ಕಾಲ ಅವರು ವಿದೇಶ ಸಂಬಂಧಗಳ ಸಮಿತಿಯ ಸದಸ್ಯರಾಗಿಯೂ ಇದ್ದರು.

ಸದ್ಯ ಶ್ರೀ ಲಾಡ್ಜರು ಅತಿಥಿ ಕ್ರುಶ್ಚೇವರಿಗೆ ಅಮೇರಿಕ ದರ್ಶನವನ್ನು ಮಾಡಿಸುತ್ತಿದ್ದಾರೆ. ಅವರ ಸಂಸರ್ಗದಿಂದ ಅಮೇರಿಕೆ ಮತ್ತು ರಶ್ಯಗಳ ನಡುವಿರಬಹುದಾದ ವಿವಿಧ ಪ್ರಾದೇಶಿಕ ಭಿನ್ನಾಭಿಪ್ರಾಯಗಳು ತಕ್ಕಮಟ್ಟಿಗಾದರೂ ದೂರ ಸರಿದೀತು ಎಂದು ಆಶಿಸಲು ಅವಕಾಶವಿದೆ.

ಸೃಷ್ಟಿಯ ರಹಸ್ಯ

(೩ನೇ ಪುಟದಿಂದ)

ಇದೂ ವರೆಗೂ ದೊರಕಿಲ್ಲ. ಆದರೆ, ವೈಜ್ಞಾನಿಕರು ಮಾತ್ರ ಭೂಮಿಯಲ್ಲಿ ಮಾತ್ರ ಪ್ರಾಣಿ ವಸತಿಯಿರುವುದೆಂದು ಈಗ ಒಪ್ಪುವುದಿಲ್ಲ. ಮಾನವನಿಗೆ ವಿಶಾಲ ಬ್ರಹ್ಮಾಂಡದ ಪರಿಚಯವಾದಂತೆಯೇ ಒಂದು ದಿನ ಅನ್ಯಗ್ರಹಗಳಲ್ಲಿ ಜನ ಜೀವನವಿರುವುದೆಂದು ಒಪ್ಪಿಕೊಳ್ಳಲೇ ಬೇಕಾದ ದಿನವೊಂದು ಬರಬಹುದು. ಅಂತಹ ಗ್ರಹಗಳಲ್ಲಿ ಮನುಷ್ಯ ಮಾತ್ರ ಇರುವುದಲ್ಲ, ಎಂದೂ ಕೆಲವರು ಒಪ್ಪಿದ್ದಾರೆ.

ಜೀವನಕ್ಕೆ ಅನುಕೂಲವಾದ ಪರಿಸ್ಥಿತಿ ಮತ್ತು ಅನುಕೂಲಗಳು ದೊರೆತೊಡನೆಯೇ ಜೀವನದ ಪ್ರಾದುರ್ಭಾವ ಸ್ವಯಂ ಆಗಿ ಆಗುವುದೆಂದು ಈಗ ವಿಜ್ಞಾನ ಅರಿತುಕೊಂಡಿದೆ. ಹೀಗೆ ಉದ್ಭವಿಸಿದ ಜೀವದ ಸ್ವರೂಪದ ಪ್ರಶ್ನೆ ಬೇರೆ. ಜೀವೋದ್ಭವವು ಒಂದು ಇಂದ್ರಜಾಲ ಅಲ್ಲ, ಒಂದು ವೈಜ್ಞಾನಿಕ ಕ್ರಿಯೆಯ ಪೂರ್ಣ ವಿಕಾಸವಾಗಿದೆ. ಈ ಮಾತನ್ನು ಪ್ರಯೋಗ ರೀತ್ಯಾ ಸಾಧ್ಯವೆಂದು ತಿಳಿದಿದೆ, ಆದುದರಿಂದ ಮಾನವನಂತೆಯೇ ಅಥವಾ ಅವನಿಗಿಂತಲೂ ಬುದ್ಧಿವಂತ ಪ್ರಾಣಿಗಳು ಅನ್ಯಗ್ರಹಗಳಲ್ಲಿರಬಹುದು. ಹಾಗಾಗಿ ಬ್ರಹ್ಮಾಂಡದಲ್ಲಿ ಮಾನವನಿಗಿಂತ ಬುದ್ಧಿವಂತಿಗೆಯಲ್ಲಿ ಹಿರಿದಾದ ಪ್ರಾಣಿ ಬೇರೆ ಇಲ್ಲ ಎಂದು ಹೇಳುವುದಿಂದು ಅವಿವೇಕವೆನಿಸುವುದು. ಆದರೆ, ಅಂತಹ ಪ್ರಾಣಿಯ ಆಕಾರ ಪ್ರಕಾರಗಳಲ್ಲಿ ತುಸು ಅಂತರವಿರಬಹುದು.

ಹೀಗೆ ಇಂದು ಮಾನವನ ಮುಂದೆ ನಾಲ್ಕನೆಯ ಸಮಸ್ಯೆಯೊಂದು ಎದ್ದು ನಿಂತಿದೆ. ಅಖಂಡ ಬ್ರಹ್ಮಾಂಡದ ವಿವಿಧ ಸೌರ ಮಂಡಲದಲ್ಲಿ ಇಲ್ಲವೇ ನಮ್ಮ ಸೌರ ಮಂಡಳದ ಬೇರೆ ಗ್ರಹಗಳಲ್ಲಿ ನಮಗಿಂತಲೂ ಬುದ್ಧಿವಂತನೂ ಮೇಧಾವಿಯೂ ಆದ ಮಾನವನಿರುವನೇ ಎಂಬುದೇ ಈ ಸಮಸ್ಯೆ. ಇದಕ್ಕೆ ದೊರೆಯುವ ಉತ್ತರವು ಸಕಾರಾತ್ಮಕವಾಗಿದ್ದರೆ, ಆಗ ಮಾನವನು ಈಗ ಪಟ್ಟುಕೊಂಡಿರುವ ಹೆಮ್ಮೆಯು ನಿರ್ಮೂಲವಾಗಬಹುದು. ಆಂದ್ರೆನೋವ್ ಎಂಬ ವಿಜ್ಞಾನಿಯ ಅಭಿಪ್ರಾಯದಂತೆ ಶುಕ್ರ ಗ್ರಹದಲ್ಲಿ ಮಾನವನಿಗಿಂತಲೂ ಶ್ರೇಷ್ಠ ಜೀವವಿದೆ! ಚಂದ್ರಲೋಕವನ್ನು ಮುಟ್ಟಿದಂತೆ ಆಕಾಶಬಾಣ ಹಾರಿಸಿದ ರಶ್ಯನರ ಸಾಹಸದಿಂದ, ಶುಕ್ರ ಗ್ರಹದ ಸಂಶೋಧನೆಯ ಕಾರ್ಯವನ್ನು ಮಾನವನು ಮಾಡುವುದರಲ್ಲಿ ಸಂದೇಹವಿಲ್ಲ. ಆಗ ಇದರ ಸತ್ಯಾರ್ಥ ತಿಳಿಯುತ್ತದೆ. ಮಾನವನ ಪ್ರತಿಸ್ಪರ್ಧಿ ಯಾರೆಂದು ಗೊತ್ತಾಗುತ್ತದೆ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೇರಿಕದ ಆರು ಕತೆಗಳು

ಅಮೇರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman

Price: Rs. 1 = 25. (Postage extra)

If Rs.1=50 is sent by M.O one copy will be sent by B.P.

Copies can be had from the Publishers:
Navayuga Enterprise Ltd. Udipi.
and also from:
M/s Indian Industrials & Agencies, Mangalore-1.
M/s Navabharat Book Depot, Udipi.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 197/1959.

ಪರಮೇಶ್ವರ —ವಾದಿ.

ಮತ್ತು

ಪಕೀರ ಶೆಟ್ಟಿ ಸಹಾ —ಪ್ರತಿವಾದಿರು.

3ನೇ ಪ್ರತಿವಾದಿ—ಕೊರಗಪ್ಪ ರೈ, ಸುಬ್ಬಣ್ಣ ರೈಗಳ ಅಳಿಯ ಪುತ್ತೂರು ತಾಲ್ಲೂಕು ಕೊಳ್ತಿಗೆ ಗ್ರಾಮಸ್ಥ—ಇವರೀಗೆ ಕೋರ್ಟು ಮುಖಾಂತರ ಪ್ರಕಾರ ತಿಳಿಸುವುದೇನೆಂದರೆ—

ವಾದಿಯು ನೀವು ವಗೈರರ ಮೇಲೆ ಆಸ್ತಿ ಸ್ವಾಧೀನತೆ ವಗೈರೆಗೆ ಮಾಡಿದ ಮೊಕದ್ದಮೆ ದಾವೆಯು ತಾ. 20-10-59ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದ್ರೆ ಸದ್ರಿ ದಿವಸ 11 ಗಂಟೆಗೆ ಸರಿಯಾಗಿ ಪುತ್ತೂರು ಕೋರ್ಟು ಮುಂದೆ ನೀವು ಸ್ವತಃ ವಕೀಲರ ದ್ವಾರಾ ಹಾಜರಾಗಿ ಉದಯರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

(Sd.) C. S Shastry.
Vakil for Plaintiff.

ಪುತ್ತೂರು, 22-9-59.

ಸಮರ್ಥ ಸೇನಾನಿರ್ಮಾಣ

ಭೂ ಹಾಗೂ ವಾಯು ಯುದ್ಧದ ತರಬೇತಿ ಶಾಲೆ

ಭೂ ಹಾಗೂ ವಾಯು ಯುದ್ಧದ ತರಬೇತಿ ಶಾಲೆಯ ಪ್ರಾರಂಭವು ನಮ್ಮ ದೇಶಕ್ಕಾಗಿ ಒಂದು ಸಮಗ್ರವಾದ ಹಾಗೂ ಸಮೀಕೃತ ರಕ್ಷಣಾ ಸಂಸ್ಥೆಯನ್ನು ರೂಪಿಸುವ ಗುರಿಯನ್ನು ಸಾಧಿಸುವ ಬಗ್ಗೆ ಒಂದು ಮಹತ್ವಪೂರಿತ ಹೆಜ್ಜೆಯಾಗಿದೆ.

ಭಾರತೀಯ ಭೂಸೇನೆ ಹಾಗೂ ವಾಯು ಸೇನೆಗಳು ಒಟ್ಟು ಸೇರಿ ಕಾರ್ಯಾಚರಣೆಗಳನ್ನು ಕೈಗೊಳ್ಳುವ ಪ್ರಾಮುಖ್ಯವನ್ನು ಬಹು ಹಿಂದಿನಿಂದಲೂ ಮನಗಾಣಲಾಗಿದೆ. ಆದರೆ ಕೇವಲ ಒಂದು ವರ್ಷದ ಹಿಂದೆ ಈ ಉದ್ದೇಶವು ಕೈಗೂಡಲು ಸರಕಾರದವರಿಗೆ ಸಾಧ್ಯವಾಯಿತು. ಸರಕಾರದವರು ಒಂದು ವರ್ಷದ ಹಿಂದೆ ಈ ಶಾಲೆಯನ್ನು ಸ್ಥಾಪಿಸಿದರು. ಕಳೆದ ೧೨ ತಿಂಗಳ ಅವಧಿಯಲ್ಲಿ ಈ ಶಾಲೆಯು ಪಠ್ಯ ವಿಷಯಗಳು, ಉಪನ್ಯಾಸಗಳು, ಟಿಪ್ಪಣಿ ವಸ್ತುಗಳು ಮತ್ತು ತರಬೇತಿ ಅಭ್ಯಾಸಗಳು ಈ ಮುಂತಾದುವನ್ನು ಸಂಗ್ರಹಿಸುವ ಕಾರ್ಯದಲ್ಲಿ ನಿರತವಾಗಿತ್ತು. ಸಶಸ್ತ್ರ ದಳಗಳ ತರಬೇತಿ ಸಂಸ್ಥೆಗಳಲ್ಲಿ ಒಂದು ಪ್ರಮುಖ ಅಂಗವೆನಿಸಿದ ಈ ಶಾಲೆಯನ್ನು ಖಾಯಂ ಆಗಿ ಸಿಕಂದರಾಬಾದಿನಲ್ಲಿ ಸ್ಥಾಪಿಸಲಾಗಿದೆ.

ಆಧುನಿಕ ಯುದ್ಧಗಳಲ್ಲಿ, ಭೂಸೇನೆ ಮತ್ತು ವಾಯು ಸೇನೆಗಳು ಒಟ್ಟು ಸೇರಿ ಕಾರ್ಯಾಚರಣೆ ನಡೆಸುತ್ತವೆ. ಅವು ಬೇರೆ ಬೇರೆಯಾಗಿ ಯುದ್ಧ ನಡೆಸುವುದು ವಾಸ್ತವವಾಗಿ ಒಂದು ರಾಷ್ಟ್ರದ ವಾಯು ಸೇನೆಯ ಮುಖ್ಯ ಕಾರ್ಯವೆಂದರೆ ಭೂಸೇನೆಗೆ ನೆರವು ಮತ್ತು ಬೆಂಬಲವಿತ್ತು ಸಮರ ಕಾರ್ಯಾಚರಣೆಗಳನ್ನು ನಿರ್ವಹಣ ಮಾಡುವುದು, ಈ ರೀತಿಯಾಗಿ ಭೂ ಹಾಗೂ ವಾಯು ಸೇನೆಗಳ ಸಂಯುಕ್ತ ಕಾರ್ಯಾಚರಣೆಯಿಂದಾಗಿ ಜಯಪ್ರದವಾಗಿ ಯುದ್ಧ ನಡೆಸಲು ಅನುಕೂಲ ಪ್ರದವಾದ ವಾತಾವರಣ ಕಲ್ಪಿತವಾಗುತ್ತದೆ. ಈ ಗುರಿ ಸಾಧನೆಗಾಗಿ, ಭೂ ಹಾಗೂ ವಾಯು ಸೇನೆಗಳು ಭೂ, ವಾಯು ಯುದ್ಧ ಕಾರ್ಯಾಚರಣೆಗಳಲ್ಲಿ ಒಟ್ಟು ಸೇರಿ ಹೋರಾಟ ನಡೆಸಬೇಕಾಗುತ್ತದೆ. ಯುದ್ಧದಲ್ಲಿ ಯಶಸ್ಸುಗಳಿಸಲು ಭೂ ಹಾಗೂ ವಾಯು ಸೇನೆಗಳು ಒಟ್ಟು ಸೇರಿ ಸಮರಾಭ್ಯಾಸ ಕಾರ್ಯಾಚರಣೆಗಳನ್ನು ನಡೆಸಬೇಕಾಗುತ್ತದೆ. ಭೂ ಹಾಗೂ ವಾಯು ಸೇನೆಗಳ ಕಮಾಂಡರುಗಳು ಭೂ ವಾಯು ಯುದ್ಧ ಕಾರ್ಯಾಚರಣೆಗಳನ್ನು ನಡೆಸುವ ಸಂಬಂಧವಾದ ಸೂತ್ರಗಳು, ತಂತ್ರವಿಧಾನಗಳು, ಸಂಘಟನೆ ಮತ್ತು ಯೋಜನೆ ಇವೆಲ್ಲವನ್ನೂ ಚೆನ್ನಾಗಿ ತಿಳಿದಿರಬೇಕು. ಏಕೆಂದರೆ ಯುದ್ಧ ಸಂಭವಿಸಿದಾಗ ತಮ್ಮ ಪರಿಜ್ಞಾನವನ್ನೂ ದಕ್ಷಪೂರ್ಣವಾಗಿ ಕಾರ್ಯತಃ ಉಪಯೋಗಿಸಲು ಸಾಧ್ಯವಾಗುತ್ತದೆ.

ಆದ್ದರಿಂದ ಭೂ ವಾಯು ಯುದ್ಧದ ಶಾಲೆಯ ಪಾತ್ರವು ಭೂ ಹಾಗೂ ವಾಯು ಸೇನೆಗಳು ಒಟ್ಟು ಸೇರಿ ಯುದ್ಧಕಾರ್ಯಾಚರಣೆಗಳನ್ನು ಹೂಡುವ ಬಗ್ಗೆ ಸೇನಾಧಿಕಾರಿಗಳಿಗೆ ತರಬೇತಿ ನೀಡುವುದೇ ಆಗಿದೆ. ವಾಯುಸೇನೆಯು ಭೂಸೇನೆಯವರಿಗೆ ಆಕಾಶದಿಂದ ಬೆಂಬಲ ನೀಡುವುದರಿಂದ ಭೂಸೇನೆಯವರಿಗೆ ಅಗತ್ಯವಾದ ಸರಕುಗಳನ್ನು ಸೈನಿಕರನ್ನು ವಿಮಾನಗಳಲ್ಲಿ ರವಾನಿಸುವುದು ಮತ್ತು ಆಕಾಶದಿಂದ ಸೈನಿಕರಿಗೆ ರಕ್ಷಣೆ ನೀಡುವುದು. ಈ ಶಾಲೆಗೆ ಅಗತ್ಯವಾದ ಶಿಕ್ಷಕರನ್ನು ಭೂ ಹಾಗೂ ವಾಯು ಸೇನೆಗಳಿಂದ ಪಡೆಯಲಾಗಿದೆ. ಈ ಶಾಲೆಯ ಕಮಾಂಡೆಂಟ್ ಆದ ಏರ್ ಕಮಾಂಡರ್ ಕೆ. ಎಲ್. ಸೋಂಧಿ ಅವರು ಅಂಡೋವರ್‌ನ ಆರ್. ಎ. ಎಫ್ ಸ್ಟಾಫ್ ಕಾಲೇಜ್ ಮತ್ತು ಲಾಟಿಮೋರ್‌ನ ಜಾಯಿಂಟ್ ಸರ್ವಿಸಸ್ ಸ್ಟಾಫ್ ಕಾಲೇಜುಗಳ ಪದವೀಧರರು. ಅವರು ವಾಯು ಸೇನಾ ಅಕಾಡಮಿಯ ಕಮಾಂಡೆಂಟರಾಗಿದ್ದರು. ಅವರು ವೆಲ್ಲಿಂಗ್‌ಟನ್ನಿನ ರಕ್ಷಣಾ ಸೇವಾ ಸಿಬ್ಬಂದಿ ಕಾಲೇಜಿನ ವಾಯು ಸೇನಾ ವಿಭಾಗದ ಮುಖ್ಯ ಶಿಕ್ಷಕರೂ ಆಗಿದ್ದರು. ಈ ಶಾಲೆಯ ಡೆಪ್ಯುಟಿ ಕಮಾಂಡೆಂಟ್ ಅವರು ಭೂ ಸೇನೆಯಲ್ಲಿ ಒಬ್ಬ ಕರ್ನಲ್ ಆಗಿರುತ್ತಾರೆ.

ತರಬೇತಿ ಕ್ರಮಗಳನ್ನು ನಡೆಸುವುದರ ಜೊತೆಗೆ, ಈ ಶಾಲೆಯ ಸಿಬ್ಬಂದಿಯವರು ಭೂ ಹಾಗೂ ವಾಯು ಯುದ್ಧದ ಕಾರ್ಯಾಚರಣೆಗಳ ಪ್ರಸ್ತುತ ತತ್ವಗಳನ್ನು ಸಂತತವಾಗಿ ಅಧ್ಯಯನ ಹಾಗೂ ಪರಾಮರ್ಶೆ ಮಾಡುವರು. ಅವರು ಭೂ ಹಾಗೂ ವಾಯು ಸೇನೆಗಳು ರಕ್ಷಣಾ ಸೇವೆಗಳ ಸಿಬ್ಬಂದಿ ಕಾಲೇಜ್, ಇನ್‌ಫೆಂಟ್ರಿ ಸ್ಕೂಲ್ ಮತ್ತು ಆರ್ಟಿಲರಿ ಸ್ಕೂಲ್‌ಗಳಂತಹ ಇತರ ತರಬೇತಿ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಪಡೆದಿರುವರು. ಭಾರತೀಯ ಸ್ಥಿತಿಗತಿಗಳಿಗೆ ಅನುಗುಣವಾದಂತಹ ಹೊಸ ಹೊಸ ಪದ್ಧತಿಗಳು ಮತ್ತು ಕಾರ್ಯವಿಧಾನಗಳನ್ನು ಈ ಶಾಲೆಯಲ್ಲಿ ಕಲಿಸಲಾಗುವುದು. ಉಳಿದ ದೇಶಗಳಲ್ಲಿರುವ ಇದೇ ರೀತಿಯ ಸಂಸ್ಥೆಗಳಂತೆ ಈ ಶಾಲೆಯನ್ನು ರೂಪಿಸಲಾಗಿದೆ. ಈ ಶಾಲೆಯು ದೇಶದ ರಕ್ಷಣಾ ಅಗತ್ಯತೆಗಳನ್ನು ಪೂರೈಸಲು ಸಾಧ್ಯವಾಗುವ ರೀತಿಯಲ್ಲಿ ರೂಪಿತವಾಗಿದೆ.



ಕಥಾವಿಹಾರ

(೨ನೇ ಪುಟದಿಂದ)

"ಇಷ್ಟು ಬೇಗ ಹೇಗೆ? ಅವಶ್ಯವಾಗಿಯೇ ತ್ವರಿತಮಾಡುತ್ತಿದ್ದೇನೆ. ಕತೆ ಕಳುಹಿಸಲು ಇನ್ನು ಬರೀ ಎರಡು ದಿನಗಳು ಮಾತ್ರ ಇವೆ. ನೀನೊಮ್ಮೆ ಸ್ವಲ್ಪ ಚಹ ತಯಾರಿಸಿ ಕೊಡು" ಎಂದು ಬಗ್ಗಿ ಬರೆಯುತ್ತಲೇ ನುಡಿದ ರಮೇಶ.

ರಾಧಾಳು ಎದ್ದು ಬಂದು ರಮೇಶನ ಬದಿಯಲ್ಲಿ ಕುಳಿತಳು. ಕೂಡಲೇ ಕತೆಯನ್ನಡಗಿಸುತ್ತಾ ರಮೇಶನು— "ಇಲ್ಲಪ್ಪಾ...ಇಲ್ಲ.... ಇನ್ನು ಓದಲು ಬಿಡಲಿಕ್ಕಿಲ್ಲ. ನಿನ್ನೆ ಅಷ್ಟು ಅತ್ತದ್ದು, ಸಾಲದೆಂದು ಇವತ್ತು ಪುನಃ ಬಂದಿಯೇನು?" ಎಂದನು.

"ಸರಿ, ತೋರಿಸಬೇಡಿ, ಪ್ರಕಟವಾದ ನಂತರವೇ ಓದುತ್ತೇನೆ" ಎಂದೆಂದು ರಾಧಾಳು ಚಹ ತಯಾರಿಸಲು ಹೊರಟು ಹೋದಳು, ರಮೇಶನಿನ್ನೂ ಬರೆಯುತ್ತಲೇ ಇದ್ದನು.

"ಒಮ್ಮೆಂದೊಮ್ಮೆಲೆ ಅತಿ ನಿಕಟದಲ್ಲಾದ ಸಪ್ಪಳವನ್ನು ಕೇಳಿ ರಮೇಶನು ಬೆಚ್ಚಿಬಿದ್ದನು. ರಾಧಾಳು ಚಹ ಸಮೇತ ಬಂದಿದ್ದಳು. "ಓಹ್, ಇವತ್ತು ಬಹು ಸುಂದರಳಾಗಿ ತೋರುತ್ತಿರುವೆ, ಏನು ವಿಶೇಷ?" ಎಂದ ರಮೇಶ.

ಚಹ ಕುಡಿಯುತ್ತಿರುವಾಗಲೇ ಅವಳು ಮುಗುಳ್ನಕ್ಕು "ಅಂತೂ ನಿಮ್ಮ ಕಥೆಯ ಶೀರ್ಷಿಕೆಯನ್ನಾದರೂ ತಿಳಿಸಿ" ಎಂದಳು.

"ಈಗೇಕೆ ಹೇಳಬೇಕು, ಕತೆ ಓದುವಾಗ ಅದನ್ನು ಓದಿಬಿಡು." ಎಂದು ಮರೆಸುತ್ತಾ ಹೇಳಿದ ರಮೇಶ.

"ಹೂಂ ಹುಂ, ಕನಿಷ್ಠ ಪಕ್ಷ ಶಿರೋನಾಮೆಯನ್ನಾದರೂ ಸೂಚಿಸಲೇಬೇಕು" ಎಂದು ಆಗ್ರಹ ಮಾಡಿದಳು ರಾಧಾ.

"ಹಾಗಾದರೆ ಕೇಳು 'ನಾರಿ, ಒಂದು ಅಭಿಶಾಪ' ಎಂಬ ಶೀರ್ಷಿಕೆಯನ್ನು ನಾನು ಆರಿಸಿದ್ದೇನೆ. ಈ ಕಥೆಗೆ ಅದೇ ಶೀರ್ಷಿಕೆ" ಎಂದ ರಮೇಶ. ಆದರೆ ರಾಧಾ ಗಟ್ಟಿಯಾಗಿ ನಕ್ಕು—

"ಹಾಗಿಗೆ ಬರೇ ಎರಡು ದಂತಗಳಲ್ಲಿ ಮಾತ್ರ ವಿಷವಿರುವುದು. ಆದರೆ ನೀವು ಸಮಸ್ತ ಲಾಂಛನ ತಾಡನಗಳನ್ನು ಶಿರೋನಾಮೆಯಲ್ಲೇ ಏರಚಿದ್ದೀರಿ. ಓದುತ್ತಲೇ ವಿಷವೇರತೊಡಗಬಹುದು. ನನ್ನ ಅಭಿಪ್ರಾಯವೆಂದರೆ 'ನಾರಿ, ಒಂದು ವಿಷಕನ್ಯೆ' ಎಂದು ಶೀರ್ಷಿಕೆ ಇಟ್ಟರೆ ಒಳ್ಳೆಯದು" ಎಂದಳು ರಾಧಾ ನಂತರ ಪುನಃ ಅವರೀರ್ವರೂ ನಕ್ಕು ಬಿಟ್ಟರು.

ಎರಡು ತಿಂಗಳುಗಳು ಕಳೆದುವು—

"ಅಂಚೆಯವನು ಬಂದನೇನು?" ಎಂದು ರಾಧಾ ರಮೇಶನನ್ನು ಕೇಳಿದಳು.

"ಇಲ್ಲ. ಏಕೆ? ಇವತ್ತು ಬಹಳ ಸಂತೋಷವಾಗಿರುವಂತೆ ಕಾಣುತ್ತಿದೆಯಲ್ಲಾ?" ಎಂದವಳ ಪ್ರಶ್ನೆಗೆ ಉತ್ತರವಿತ್ತ ರಮೇಶ.

"ಇವತ್ತು ಸ್ಪರ್ಧೆಯ ಕಥೆಗಳು ಪ್ರಕಟವಾಗುವ ಪತ್ರಿಕೆ ಬರಲಿವೆ, ಇವತ್ತಾದರೂ ನಿಮ್ಮ ಅತ್ಯುತ್ತಮ ಕಥೆ ಓದಬಹುದು ತಾನೇ?" ಎಂದು ನಗುತ್ತಾ ನುಡಿದಳು ರಾಧಾ.

"ಹಾಂ, ಹೌದು ನಾನು ಮರೆತೇಬಿಟ್ಟಿದ್ದೆ, ನೋಡುವ ಸ್ಪರ್ಧೆಯ ಪರಿಣಾಮ ಏನಾಗುತ್ತದೆ ಎಂದು?" ಎಂದೆಂದ ರಮೇಶನೂ ಅಂಚೆಯವನನ್ನು ಕಾಯತೊಡಗಿದನು.

ಅಂಚೆಯವನು ಬಂದ, ಪತ್ರಿಕೆಯನ್ನು ನೋಡುತ್ತಲೇ ರಮೇಶನು ಸಂತೋಷದಿಂದ ಜಿಗಿದು—" ನೋಡಿದೆಯೇನು? ರಾಧಾ, ನನ್ನ ಕಥೆಗೆ ದ್ವಿತೀಯ ಪುರಸ್ಕಾರ ಸಿಕ್ಕಿದೆ." ಎಂದೆಂದನು.

"ಓಹೋ, ಹಾಗೋ, ಆದರೆ ಪ್ರಥಮ ಪುರಸ್ಕಾರ?"

"ಪ್ರಥಮ ಬಹುಮಾನ ಯಾರೋ ನಿನ್ನ ಹೆಸರಿನ ಶ್ರೀಮತಿಯವರಿಗೆ ಸಿಕ್ಕಿದೆ. ಆದರೂ ಚಿಂತಿಲ್ಲ ಎರಡನೆಯ ಬಹುಮಾನವಾದರೂ ಸಿಕ್ಕಿತಲ್ಲ?" ರಮೇಶನ ಮಾತು ಮುಗಿಯುವ ಮುಂಚೆಯೇ ರಾಧಾಳಲ್ಲಿಂದ ಹೊರಟು ಹೋಗಿದ್ದಳು. ಹಿಂತಿರುಗಿ ಬರುವಾಗ ಅವಳ ಕೈಯಲ್ಲೊಂದು 'ಬಂಡಲ್' ಇತ್ತು. ರಮೇಶನು ನೋಡಿದನು ಅದೇ ಕಥೆ, ಅದೇ ಶೀರ್ಷಿಕೆ. ಪ್ರಥಮ ಪುರಸ್ಕಾರಗಳಿಸಿದ ಕತೆ 'ಈಶ್ವರನ ವರದಾನ, ನಾರಿ'!

"ಓಹೊ, ಹಾಗಾದರೆ ತಾವೇ ಲೇಖಕಿ ಏನು? ನನಗೀಗ ತಿಳಿಯಿತು ಪತ್ರ ಬರೆಯುವುದಾಗಿ ಸುಳ್ಳು ಹೇಳಿ ಕಥೆ ಬರೆಯಲಾಗುತ್ತಿತ್ತೇನು? ರಮೇಶನು ರಾಧಾಳನ್ನು ಬಾಹುಗಳಲ್ಲಿ ಬಂಧಿಸಿದನು. ರಾಧಾಳು ಮುಗುಳ್ನಗುತ್ತಾ—"ಈಗ ಹೇಳಿ ನಾರಿ ವರದಾನವೋ ಶಾಪವೋ?" ಎಂದಳು.

"ಎರಡೂ" ಎಂದ ರಮೇಶ. "ಕೆಲವೊಮ್ಮೆ ಅಭಿಶಾಪ ಕೆಲವೊಮ್ಮೆ ವರದಾನ!" ಎಂದು ಗಟ್ಟಿಯಾಗಿ ನಕ್ಕನು, ಆನಂದಾತಿರೇಕದಿಂದ ಅವಳನ್ನು ಎದೆಗೆ ತಬ್ಬಿಕೊಂಡ ರಮೇಶ, ಲಜ್ಜೆಯಿಂದ ಅಧೋಮುಖಳಾದಳು ರಾಧಾ.

[ಲೇಖಾದಿಂದ]

—ಶ್ರೀ ಎಸ್. ಎಂ ಶೆಟ್ಟಿ,
ಶಿಮುಂಜೆ ಪರಾರಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ಸ

NAVAYUGA
REGD. NO. M. 3619

UDIPI, THURSDAY
1-10-1959

LICENSE NO. 31
Licensed to Post without Prepayment

ಇದು ನಮ್ಮ ಭಾರತ

ಬಾಬೂಜಿ, ಇವು ದಿನಂಪ್ರತಿ ನಡೆಯುತ್ತವೆ!

ಮದ್ಯಪಾನ, ಭಿಕ್ಷಾಯಾಚನೆ; ರೋಗಿಗಳ ರೇಲುಯಾತ್ರೆ, ಭಿಕ್ಷೆಯಿಂದಲೇ ಜೀವನ— ಇವು ಭಾರತದಲ್ಲಿ ದಿನಂಪ್ರತಿ ನಡೆಯುತ್ತವೆ. ಇವನ್ನು ತಡೆಯುವವರು ಯಾರು?

ಜುಹೂವಿನಲ್ಲಿ ಮುಂಜಾವದ ಸಮಯ. ಸಮಯ ಏಳೂವರೆ. ಹೂಮಳೆಯು ಹನಿಯುತ್ತಿತ್ತು. ಒರ್ವ ಸ್ನೇಹಿತನನ್ನನ್ನು ಭೆಟ್ಟಿಯಾಗಲು ಬಂದಿದ್ದ. ಆತ ತನ್ನ ಟ್ಯಾಕ್ಸಿಯನ್ನು ಕಾಯುವಂತೆ ಹೇಳಿ ನನ್ನೊಡನೆ ಆಡಲು ತೊಡಗಿದ. ಟ್ಯಾಕ್ಸಿ ಡ್ರೈವರನು ಏನೇನೋ ಹೇಳುತಿದ್ದ. ಆಗಂತುಕನು ಜಗಲಿಯಲ್ಲಿ ಒರಗಿಕೊಂಡಿದ್ದ. ಅವರೊಳಗೆ ಅವರ ಮಾತೃ ಭಾಷೆಯಲ್ಲಿ ಸಂಭಾಷಣೆ ನಡೆಯುತಿತ್ತು. ಆಗಂತುಕ "ಆಗದು, ಆಗದು" ಎಂದು ಹೇಳುತ್ತ ನಗೆಯುತೆರೆಯನ್ನೇ ಎಳೆದ. ಟ್ಯಾಕ್ಸಿ ಡ್ರೈವರನು ತಾನು ಮುಂಜಾನೆ ಫಲಾಹಾರ ಸೇವಿಸದೆ ಬಂದಿರುವುದರಿಂದ, ಮಾರ್ಗದ ಅತ್ತಕಡೆ ತೆರಳಿ ಬಂದಿಷ್ಟು "ಬಾಯಾರಿಕೆ" ಕುಡಿದು ಬರುವೆನೆಂದು ಹೇಳುತಿದ್ದ.

ಅಪರಾಹ್ನ ದಾದರದ ನಿಲ್ದಾಣ. ಸೂರ್ಯ ತೇಜಸ್ವಿಯಾಗಿ ಪ್ರಕಾಶಿಸುತಿದ್ದ. ಒಬ್ಬ ಭಿಕ್ಷುಕ ನನ್ನನ್ನು ಎಡತಾಕಿದ, ಪ್ಲಾಟ್ ಫಾರ್ಮಿನಲ್ಲಿ. ಆತ ಊಟದ ಬಗ್ಗೆ ಕೇವಲ ಒಂದೇ ಒಂದು ಆಣೆಯನ್ನು ಬೇಡುತಿದ್ದ (ಮೊದಲೇ ಮೊತ್ತ ಒಂದು ಪೈ ಆಗಿತ್ತು. ಆತನಿಗೂ ಜೀವನ ವೆಚ್ಚ ಏರಿದುದರ ಜ್ಞಾನ ಸರಿಯಾಗಿದೆ). ನಾನು ವಿಸ್ಮಯದಿಂದಲೇ ಆತನನ್ನು ನೋಡಿದೆ. ಒಬ್ಬ ಭಿಕ್ಷುಕ ರೇಲ್ವೆ ಪ್ಲಾಟ್ ಫಾರ್ಮಿನಲ್ಲಿ ಹೇಗೆತಾನೇ ಸಂಚರಿಸಬಲ್ಲ? ಆತ ಒಬ್ಬಾಕೆ ಫಾರ್ಸಿ ಮಹಿಳೆಯ ಸೀರೆಯ ಸೆರಗನ್ನು ಬಿಡುತಿದ್ದ; ಪುನಃ ಹಿಡಿಯುತಿದ್ದ. ಆಕೆ ಹಿಂದಿರುಗಿ ನೋಡಿ, ಕರ್ಕಶ ಸ್ವರದಲ್ಲಿ ಬಯ್ಯುತಿದ್ದಳು. ಮೂರನೆಯ ನವನಾಗರಿಕ ಸಭ್ಯನು, ಧೋತಿಯನ್ನೂ ಕರಿಟೋಪಿಯನ್ನೂ ತೊಟ್ಟವನು, ತನ್ನ ವಕ್ರದೃಷ್ಟಿಯನ್ನು ದನದಂತೆ ಆ ಮಹಿಳೆಯತ್ತ ಬೀರಿ, ಭಿಕ್ಷುಕನಿಗೆ ಒಂದು ನಯಾಪೈಸವನ್ನೆಸೆದು ಜನತೆಯ ನಡುವೆ ಘೋಷಿಸಿದ— ಆಮೀರ್ ವ ಭೀ ತು ಆದ್ಮೀ ಹೈನ? (ಕೊನೆಗೆ, ಅವನೂ ಒಬ್ಬ ಮನುಷ್ಯನಲ್ಲವೆ?)

ಇದೇ ಆಂಕ, ದೃಶ್ಯ ಮಾತ್ರ ಮೂರನೆಯದು. ಸ್ಥಳ ಬಾಂದ್ರ. ನಾನು ಮೂರನೆ ವರ್ಗದ ರೇಲುಗಾಡಿಯನ್ನು ಪ್ರವೇಶಿಸುವುದರಲ್ಲಿದ್ದೆ. ಸುತ್ತಿನ ಬೀಸಣಿಗೆಗಳಡಿಯವರತ್ತ ನಾನು ನೋಡುತಿದ್ದೆ. ಆಗ ಯಾರೋ ನನ್ನ ಮೊಣಕಾಲನ್ನು ಅವುಕಲು ಪ್ರಯತ್ನಿಸುವಂತೆ ಬೋಧವಾಯಿತು. ನೋಡುವಾಗ, ಐದು ವರ್ಷದ ನಗ್ನ ಶರೀರದ ಮೈತುಂಬ ಕಜ್ಜಿಯಿಂದ ಕೂಡಿದ ಮಗುವೊಂದು ಭಿಕ್ಷೆಯ ಅಭಿಲಾಷೆಯಿಂದ ನನ್ನಲ್ಲಿ ಆಸಕ್ತಿ ತೋರುತಿತ್ತು. ನಾನು ನನ್ನನ್ನು ಬಿಡಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ನಾನು ಎಂದಂಗುಲವಾದರೂ ಹಿಂದೆ ಸರಿದರೆ, ನನ್ನ ಉಳಿಕೆಗಳನ್ನು ಹೆಕ್ಕಿಕೊಳ್ಳಲು ಅವರು ಸುತ್ತುವರಿಯುತಿದ್ದರು. ಆದುದರಿಂದ ನಾನು ಕಣ್ಣು ಕೆಂಪಗೆ ಮಾಡಿ ಆ ಮಗುವನ್ನು ದೂರ ಓಡಿಸಿದೆ. ಯಾರೋ ಇನ್ನೊಬ್ಬರು ಅವರ ಅಂಗೈಯನ್ನು ಬೆಚ್ಚಗೆ ಮಾಡಿದರು. ಇದರ ಸೋದರಿಯು ಉಳಿದರ್ಧ ಕಂಪಾರ್ಟಮೆಂಟಿನಲ್ಲಿ ತನ್ನ ಕಾರ್ಯಕ್ರಮ ಮುಗಿಸಿದರು. ತಾಯಿಯು ದೂರದ ಒಂದು ಮೂಲೆಯಲ್ಲಿ ತಮ್ಮ ಸಂಪಾದನೆಯ ಮೇಲೆ ಕಣ್ಣಿಟ್ಟು ನಿಂತು ಕೊಂಡಿದ್ದಳು. ಇನ್ನೊಂದು ನಿಲ್ದಾಣದಲ್ಲಿ ನಾನು ಹಾರಿ ಇಳಿದು ಮತ್ತೊಂದು ಕಂಪಾರ್ಟಮೆಂಟಿನಲ್ಲಿ ಸೇರಿಕೊಂಡೆ.

ಬೊಂಬೇ ಸೆಂಟ್ರಲ್—ರೋಗಿ ಮುಕ್ಕಳಿಂದ ಸಂಪೂರ್ಣ ವಿಮುಕ್ತವಾದ ಪ್ರದೇಶ! ಆದರೆ, ತನ್ನ ಸುತ್ತಮುತ್ತ ಮೂವತ್ತು ಜನರು ನಿಂತುಕೊಂಡಿರುವಾಗ ಒಬ್ಬ ಸೀಟೊಂದರಲ್ಲಿ ಮಲಗಿಕೊಂಡಿದ್ದುದನ್ನು ನಾನು ಕಂಡೆ. ಈ 'ಉದ್ಧಟನ'ಲ್ಲಿಗೆ ತೆರಳಿ ನಾನು ಮೆಲ್ಲನೆ ಆತನ ಮೈತಟ್ಟಿದೆ ಅವನು ಕುಷ್ಠ ರೋಗಿಯಂತೆ ತೋರಿ ಬರುತಿದ್ದ. "ಪೋಲೀಸ್, ಪೋಲೀಸ್" ಎಂದು ಕೂಗಿ, ನಾನು ಪ್ಲಾಟ್‌ಫಾರ್ಮನ್ನು ಇಳಿದು ಒಬ್ಬ ಪೋಲೀಸು ಸಿಗುವ ವರೆಗೂ ಓಡಿದೆ. ಆತನಿಗೆ ಈ ಕುಷ್ಠರೋಗಿಯ ವಿಷಯ ಹೇಳಿದೆ. ಆತ ನನ್ನ ಕಡೆ ಆಶ್ಚರ್ಯಚಕಿತನಾಗಿ ನೋಡತೊಡಗಿದ. "ಉದ್ವಿಗ್ನರಾಗಬೇಡಿರಿ; ಆತ ನಿಮಗೇನು ಕೇಡು ಬಗೆಯುತ್ತಾನೆ?" ಎಂದು ಕೇಳಿದ.

"ಎಂದರೆ, ನೀವು ಆತನ ಮೇಲೆ ಕಾರ್ಯಕ್ರಮ ಕೈಗೊಳ್ಳಲು ನಿರಾಕರಿಸುವಿರಿ ತಾನೆ?" ನಾನು ಆಗತಾನೇ ಮುಂದುವರಿದ ಗಾಡಿಯ ಬಗ್ಗೆ ವ್ಯಥೆಯನ್ನು ಪ್ರಕಟಿಸದೆ ಕೇಳಿದೆ.

"ಆತನು ರೋಗಿಷ್ಠನಾದರೆ, ನಾನು ಮುಟ್ಟಿ ನನ್ನ ಕೈಗಳನ್ನೇಕೆ ಮೈಲಿಗೆ ಮಾಡಿಕೊಳ್ಳಬೇಕು? ರೇಲ್ವೆಯವರು ರೋಗಿವಾಹಕ ಗಾಡಿಗೆ ಕರೆಕಳಿಸಲಿ." ಆತನು ಹೇಳಿದ. ಮತ್ತೂ ಮುಂದುವರಿದು, "ಬಾಬೂಜಿ, ಇಂತಹ ಘಟನೆಗಳು ದಿನಂಪ್ರತಿ ಸಂಭವಿಸುತ್ತವೆ; ಆದರೆ, ಜನರಿದನ್ನು ಆಕ್ಷೇಪಿಸುವುದು ಮಾತ್ರ ಅಪರೂಪ." ಎಂದು ತನ್ನ ಅನುಭವವನ್ನೂ ತಿಳಿಸಿದ.

"ಪೋಲೀಸರು ಪ್ಲಾಟ್ ಫಾರ್ಮಿನಲ್ಲಿನ ಭಿಕ್ಷುಕರು ಮತ್ತು ರೋಗಿಗಳನ್ನು ಹೊರ ಹಾಕುವುದರಲ್ಲಿ ಪ್ರವೃತ್ತರಾಗುವುದಿಲ್ಲವೆ?" ನಾನು ಪ್ರಶ್ನಿಸಿದೆ.

"ಖಂಡಿತ ನಾವೂ ಕರ್ತವ್ಯಮಗ್ನರಾಗುತ್ತೇವೆ. ಕೆಲಸಮಯದವರೆಗೆ ಅದು ವಿಭಾಜಿತನ ಯಾವುದೇ ಊರಿನಂತೆ ನಿರ್ಮಲವಾಗಿರುತ್ತದೆ. ಈ ಜನರು ಆಗ "ಸ್ಟೇಶನ್ ಗರಮ್ ಹೈ" ಎಂದು ಇದಕ್ಕೆ ಹೆಸರಿಡುತ್ತಾರೆ. ಆದರೆ, ನಾವು ಯಾವಾಗಲೂ ಇಲ್ಲಿಯೇ ನಿಲ್ಲುವುದಕ್ಕಾಗುವುದಿಲ್ಲ. ಕುಸು ಸಮಯದನಂತರ ಅವರು "ಸ್ಟೇಶನ್ ಠಂಡಾ ಹೈ" ಎಂದು ಹೇಳುತ್ತ ಒಳನುಗ್ಗುತ್ತಾರೆ. ಕ್ಯಾ ಕರೇಂಗೆ!" ಆತ ತಾತ್ವಿಕನಂತೆ ನನ್ನೊಡನೆಯೇ ಪರಿಹಾರ ಕೇಳುತ್ತಾನೆ!

ಡಿಲ್ಲಿಯ ೩,೦೦೦ ಭಿಕ್ಷುಕರು ವರ್ಷಕ್ಕೆ ೯ ಲಕ್ಷ ರೂಪಾಯಿ ಸಂಪಾದಿಸುತ್ತಾರೆ. ಯಾರಿದನ್ನು ಗಮನಿಸುತ್ತಾರೆ? ಬೊಂಬಾಯಿ—ಮದ್ಯಪಾನ ನಿರೋಧ ಕಾಯದೆಯ ಪ್ರದೇಶಯಲ್ಲಿ ಟ್ಯಾಕ್ಸಿವಾಲರು ಬೆಳಗ್ಗಿನ ಊಟ ಫಲಾಹಾರಗಳನ್ನು ಗುಡಿಕೈಗಾರಿಕೆಯ ಮೂಲಕ ತಯಾರಾದ ಲಿಕ್ಕರ್‌ನಿಂದ ಪೂರೈಸುತ್ತಾರೆ. ಏನು ಚಿಂತೆ? ಕುಷ್ಠ ರೋಗಿಗಳೂ ಅಂಟು ರೋಗಿಗಳೂ ನಮ್ಮ ರಾಷ್ಟ್ರೀಯ ರೇಲ್ವೆಗಳಲ್ಲಿ ಸುಖ ಪ್ರವಾಸ ಮಾಡುತ್ತಾರೆ. ಯಾರಿಂದ ತಡೆ? ನೀವೇ ಒಂದು ವೇಳೆ ಇದಕ್ಕೆ ಆಕ್ಷೇಪವೆತ್ತಿದರೆ, 'ಕ್ಯಾ ಕರೇಂಗೆ?" ಬಹುಸಂಖ್ಯಾಕ ಭಾರತೀಯರು ಈ ಚಿಕ್ಕಪುಟ್ಟ ವಿಷಯಗಳಿಗಾಗಿ ಅವರ ಸುಖನಿದ್ರಾಭಂಗ ಮಾಡಲು ಬಯಸುವುದಿಲ್ಲ. ಬಾಬೂಜಿ, ಇವು ದಿನಂಪ್ರತಿ ನಡೆಯುತ್ತವೆ!

—ಯೋಜನಾ.

ರಾಜಕೀಯ

(೧ನೇ ಪುಟದಿಂದ)

ವಾಗಿ ನಡೆಯುತ್ತಲೇ ಇವೆ; ಆದರೆ, ಅವಕ್ಕೂ ಒಂದು ಮಿತಿ ಇತ್ತು. ವಿಧಾನ ಸಭೆಗಳೊಳಗೆ ಈ ದುರ್ವ್ಯವಹಾರವು ಈ ಮೊದಲು ಘಟಿಸಿರಲಿಲ್ಲ. ಆದರೆ, ಸದ್ಯ ಕಮ್ಯೂನಿಸ್ಟರು ತಮ್ಮ ಶಕ್ತಿಯನ್ನು ಇಲ್ಲಿಯೂ ಪ್ರದರ್ಶಿಸಿ ಶಾಸನ ಸಭೆಯ ಗೌರವಾಭಿಮಾನಗಳಿಗೂ ಕೊರತೆಯನ್ನುಂಟುಮಾಡುವ ಪ್ರಯತ್ನ ನಡೆಸಿದ್ದಾರೆ. ತಾವು ಹುಟ್ಟಿ ಬೆಳೆದ ಭಾರತವನ್ನೇ ಮರೆತು ವಿದೇಶನಿಷ್ಠರಾಗಿರುವ ಈ ಕಮ್ಯುನಿಸ್ಟರಿಗೆ ಸ್ವದೇಶದ ರಾಜ್ಯವೊಂದರ ವಿಧಾನಸಭೆಯಾದರೇನು, ಸಂಸತ್ತೇ ಆದರೇನು, ಇವುಗಳ ಮೇಲೆ ಗೌರವವಿರುವುದಾದರೂ ಹೇಗೆ? ಇಂತಹ ರಾಷ್ಟ್ರಕ್ಕೆ ಅವಮಾನಕಾರಕವೆನಿಸುವ ಘಟನೆಗಳು ಕಮ್ಯುನಿಸ್ಟರಿಂದ ಪದೇ ಪದೇ ನಡೆಯುತ್ತಲೇ ಇರುವುವು; ಯಾವ ಪುಟ್ಟ ವಿಷಯವನ್ನೂ ಬೃಹದಾಕಾರವಾಗಿ ರೂಪಿಸಿ, ಅದಕ್ಕೆ ಬಣ್ಣ ಬಳಿದು, ತಾವು ಸಂಭಾವಿತರೆಂದು ಕರೆಸಿಕೊಳ್ಳುವ ಹಂಚಿಕೆಯ ಈ ಕಮ್ಯುನಿಸ್ಟರು ಇನ್ನೇನು ಮಾಡುವರೋ ಹೇಳಬರುವುದಿಲ್ಲ. ಹಿಂಸಾಭಾವನೆಯ ಪ್ರಸಾರದಿಂದ ಎಂದಿಗೂ ರಾಷ್ಟ್ರಕಲ್ಯಾಣವಾಗಲಾರದು; ಈ ವಿಷಯದತ್ತ ಭಾರತೀಯ ಕಮ್ಯುನಿಸ್ಟರು ಇನ್ನಾದರೂ ಗಮನಹರಿಸಿಯಾರೆಂದು ವಿಶ್ವಾಸ ಯಾರಲ್ಲಿದೆ?

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಿಂಡಿಕೇಟ್ ಬೇಂಕ್

ಸ್ಥಾಪನೆ: ೧೯೨೫

ಒಟ್ಟು ವ್ಯವಹಾರ ಸಂಪತ್ತು
ರೂ. ೧೮ ಕೋಟಿಗೂ ಮಿಕ್ಕಿದೆ

ಶಾಖೆಗಳು: ೧೨೩

ಪ್ರಧಾನ ಕಾರ್ಯಾಲಯ
ಉಡುಪಿ, ಮೈಸೂರು ರಾಜ್ಯ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಗೋವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

Edited, Printed & Published by K. H. Shetty, at the Navayuga Press, Udipi, S. India.

ವಾ. ಚಂದಾ ರೂ. 5-75

ಬೆಲೆ 13 ನ. ಪೈಸೆ

Vol. 39 No. 6.
ವರುಷ ೩೯. ವಾರ ೬

8-10-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ಸಿಂಹಳದಲ್ಲಿ ಪುನಃ ಮರಣದಂಡನೆ ವ್ಯವಹೃತಗೊಳಿಸಲಾಗುವುದು

ನೂತನ ಪ್ರಧಾನಿ ದಹ ನಾಯಕೆಯವರ ಜನ್ಮಕುಂಡಲಿಯ ಬಗ್ಗೆ ಭವಿಷ್ಯವಾಣಿ ನಿರೂಪಕ ಅನಾಮಧೇಯ ಪತ್ರಗಳು!

ಸಿಲೋನಿನ ಪ್ರಧಾನಿಯಾಗಿದ್ದ ಶ್ರೀ ಸೊಲಮನ್ ಭಂಡಾರ ನಾಯಕೆಯವರ ಮರಣದಿಂದ ಅಲ್ಲಿ ಒಂದು ವಿಶಿಷ್ಟ ವಾತಾವರಣವು ತಲೆದೋರಿದೆ. ದಿವಂಗತರಾದ ಪ್ರಧಾನಿಯವರ ಅಂತಿಮ ಸಂಸ್ಕಾರವನ್ನು ವೈಭವಪೂರ್ಣವಾಗಿ ಮಾಡಿರುವುದಲ್ಲದೇ ಮುಂದಿನ ಒಂದು ತಿಂಗಳುಗಳ ಕಾಲ ಶೋಕ ಪ್ರಕಟಿಸಲು ಸಿಂಹಳೀಯರು ನಿರ್ಧರಿಸಿದ್ದಾರೆ ಶ್ರೀ ಭಂಡಾರನಾಯಕೆಯವರ ಜನಪ್ರಿಯತೆಯನ್ನು ಈ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿದ್ದ ಪ್ರಜಾಕೋಟಿಯಿಂದಲೇ ಊಹಿಸಬಹುದು.

ದಿವಂಗತ ಭಂಡಾರನಾಯಕೆಯವರ ಕೊಲೆಗೆ ಕಾರಣವೇನು? ಇವರನ್ನು ಗುಂಡಿಟ್ಟು ಕೊಲ್ಲಬಯಸಿದ ಆ ಸೋಮರಾಮ ಎಂಬವನು ಒರ್ವ ಬೌದ್ಧ ಸನ್ಯಾಸಿ ಎಂದು ತಿಳಿಯುತ್ತದೆ ಬೌದ್ಧ ಸನ್ಯಾಸಿಯಾದ ಆತ ತನ್ನ ಧರ್ಮದ ಮೂಲಭೂತ ತತ್ತ್ವಗಳಲ್ಲಿ ಒಂದಾದ ಅಹಿಂಸೆಗೆ ತಿಲಾಂಜಲಿಯಿತ್ತು ಹಿಂಸೆಗೆ ಏಕೆ ಮನಸೋತ? ಪ್ರಧಾನಿ ಭಂಡಾರನಾಯಕೆ ಮತ್ತು ಈ ಬೌದ್ಧ ಸನ್ಯಾಸಿಗಳ ನಡುವಣ ಸಂಬಂಧವೇನು? ಯಾವ ವೈರ, ಅಥವಾ ದ್ವೇಷದಿಂದ ಅವನು ಕೊಲೆ ಮಾಡುವಷ್ಟು ಮುಂದೆ ಬಂದ?— ಎಂಬಿತ್ಯಾದಿಯಾಗಿ ನಾನಾ ಪ್ರಶ್ನೆಗಳ ಸುರಿಮಳೆ ಸುರಿಯುವುದು ಸ್ವಾಭಾವಿಕವೇ. ಆದರೆ, ಇವಕ್ಕೆ ಸಮರ್ಪಕವೆನಿಸಿದ ಉತ್ತರಗಳು ಮಾತ್ರ ಇನ್ನು ದೊರೆಯಬೇಕಷ್ಟೆ. ಆದರೂ ಪ್ರಗತಿ ವಿರೋಧಕ ಶಕ್ತಿಗಳೇ ಈ ಕೊಲೆಯ ಹಿಂದೆ ಅಡಗಿರುವ ನಿಗೂಢ ಸತ್ಯವೆಂದು ತಿಳಿದು ಬಂದಿದೆ, ಆದರೆ, ಇಷ್ಟರಿಂದಲೇ ತೃಪ್ತಿಪಟ್ಟುಕೊಳ್ಳುವಂತಿಲ್ಲ.

ಶ್ರೀ ಭಂಡಾರನಾಯಕೆಯವರ ಹತ್ಯೆಯಿಂದ ಸಿಂಹಳದಲ್ಲಿ ಈಗ ರದ್ದಾಗಿರುವ 'ಮೃತ್ಯು ದಂಡನೆ'ಯನ್ನು ಪುನಃ ವ್ಯವಹೃತಗೊಳಿಸಲು ಸಿಲೋನ ಮಂತ್ರಿ ಮಂಡಲ ನಿರ್ಧರಿಸಿದೆ ಎಂದು ವಿಶ್ವಸನೀಯವಾಗಿ ತಿಳಿದು ಬಂದಿದೆ ಮೃತ್ಯು ದಂಡನೆಯನ್ನು ಸಾಮಾನ್ಯವಾಗಿ ಉಪಯೋಗಿಸುತ್ತದಿಲ್ಲವಾದರೂ ಕೆಲವೊಂದು ಅವಶ್ಯಕ ಸಂದರ್ಭಗಳಲ್ಲಿ ಅದನ್ನು ಬಳಸಿಕೊಳ್ಳಲು ಅನುಕೂಲವಾಗುವಂತೆ ಈ ಕಾನೂನನ್ನು ಪುನಃ ತರಲಾಗುವುದು

ಸಿಂಹಳದಲ್ಲಿ ೧೯೫೬ರಲ್ಲಿ ಮರಣದಂಡನೆಯನ್ನು ವಿಧಿಸುವ ಕಾನೂನನ್ನು ತೆಗೆದು ಹಾಕಲಾಯಿತು ಅಲ್ಲಿನ ಪ್ರಧಾನ ಧರ್ಮವು ಬೌದ್ಧ ಧರ್ಮವಾದುದರಿಂದ, ಬೌದ್ಧರ ಅತಿಮುಖ್ಯ ತತ್ತ್ವವಾದ ಅಹಿಂಸೆಯನ್ನು ಪಾಲಿಸಿಕೊಳ್ಳುವುದಕ್ಕಾಗಿ ಈ ಮರಣದಂಡನೆಯನ್ನು ಪ್ರಧಾನಿ ಭಂಡಾರನಾಯಕೆಯವರು ಕಿತ್ತು ಹಾಕಲು ತುಂಬ ಪರಿಶ್ರಮಿಸಿದರು ಅಲ್ಲದೇ, ಈ ಕಾಯದೆಯನ್ನು ತೆಗೆದುಹಾಕಿದುದರ ಪರಿಣಾಮವನ್ನು ಕಂಡು ಸರಕಾರಕ್ಕೆ ವರದಿಮಾಡಲು ಗವರ್ನರ ಜನರಲ್ ಶ್ರೀ ಗುಣತಿಲಕೆ ಅವರು ಒಂದು ಸಮಿತಿಯನ್ನೂ ನೇಮಿಸಿದ್ದರು. ಆದರೆ, ಈ ಕಾಯದೆಯನ್ನು ಕಿತ್ತು ಹಾಕಿ ೫ ವರ್ಷಗಳ ನಂತರವೇ ಇದರ ಸತ್ ಅಥವಾ ದುಷ್ಪರಿಣಾಮಗಳ ಬಗೆ ನುಡಿಯಬಹುದು ಎಂದೇ ಸಮಿತಿಯು ಹೇಳಿತ್ತು.



ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯು ಸಮಾವೇಶಗೊಂಡ ಒಂದು ದೃಶ್ಯವಿದು.

ಬೌದ್ಧರ ದೇಶದಲ್ಲಿ ಬುದ್ಧನ ತತ್ತ್ವಗಳಿಗನು ಗುಣವಾಗಿ ಮರಣ ದಂಡನೆಯನ್ನು ಕಿತ್ತು ಹಾಕಲು ಪ್ರಯತ್ನಿಸಿ ಯಶಸ್ವಿಯಾದ ಪ್ರಧಾನಿ ಭಂಡಾರ ನಾಯಕೆಯವರನ್ನೇ ಒರ್ವ ಬೌದ್ಧ ಭಿಕ್ಷು ಕೊಲೆಗೈದ ಎಂಬುದು ವಿಲಕ್ಷಣ ಘಟನೆ! ಇಂತಹ ದರಂತ ಕೇವಲ ದುರಂತ ಮಾತ್ರವಲ್ಲ ಪ್ರಗತಿಪಥದತ್ತ ಸಾಗುತ್ತಿರುವ ರಾಷ್ಟ್ರವೆಲ್ಲವುಗಳಿಗೂ ಒಂದು ಪಾಠ. ಎಲ್ಲರೊಡನೆಯೂ ಸಮಭಾವದಿಂದ ವರ್ತಿಸುತಿದ್ದ ಶ್ರೀ ನಾಯಕೆಯವರನ್ನು ಅಂತ್ಯಗೊಳಿಸಬಯಸಿದ ಆ ಭಿಕ್ಷು ಯಾರು? ಆತನು ಏಕೆ ಹಾಗೆ ಮಾಡಿದನು ಎಂಬುವಕ್ಕೆ ಸಮರ್ಪಕ ಉತ್ತರ ದೊರೆಯಬೇಕಷ್ಟೆ.

ಈಗಿನ ಪ್ರಧಾನಿಯಾಗಿರುವ ಶ್ರೀ ದಹನಾಯಕೆಯವರು ಮೊದಲು ಶಿಕ್ಷಣ ಮಂತ್ರಿಯಾಗಿದ್ದವರು. ಭಂಡಾರ ನಾಯಕೆಯವರ ನಿಧನದ ವೇಳೆ ಉಪ ಪ್ರಧಾನಿ ಶ್ರೀ ಸಿಲ್ವಾರು ಅಲ್ಲಿಲ್ಲದುದರಿಂದ, ದಹನಾಯಕೆಯರೇ ಮಂತ್ರಿ ಮಂಡಳವನ್ನು ಸ್ಥಾಪಿಸಬೇಕೆಂಬುದಾ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3
ಸ್ಥಾಪನೆ - 1931

ಕಾಯಂ ರೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ರೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ ...

ಕಥಾವಿಹಾರ

ಅಮರ ಮಧುರ ಪ್ರೇಮವಿದು!

ಸಮಾನ ಶೀಲಂ ವ್ಯಸನೇಷು ಸಖ್ಯಂ ಎಂಬಂತೆ ಇಂದು ಶೇಖರರನ್ನು ಪ್ರೇಮಪಾಶವು ಬಂಧಿಸಿತು.

ಬೇವಿನ ಮಂದ ಎದುರಿನಲ್ಲಿ ಜನಕಿಕ್ಕಿರಿದು ನೆರೆದಿದ್ದರು. 'ನೇಣು ಹಾಕಿಕೊಂಡಿದ್ದಾನೆ!'—ಎಂದಿಷ್ಟೇ ನನ್ನ ಕಿವಿಗೆ ಬಿದ್ದಿತು. ಅದನ್ನು ನೋಡಿಯೇ ಬರಬೇಕೆಂದು ಕಾಲುಗಳು ತಾನೇ ಅತ್ತ ಹೆಜ್ಜೆ ಹಾಕ ತೊಡಗಿದವು'

ಆ ಶವ ಕಂಡೊಡನೆ ನನ್ನ ಮೈ ಎಲ್ಲ ನಡುಗಿತು! ಬೆವರೊಡೆಯಿತು. ಮನದ ಮೇಲೆ ಚರ್......ಎಂದು ಬರೆ ಎಳೆದಂತಾಯಿತು. ಕಣ್ಣುಗಳಲ್ಲಿ ನೀರು ಕೋಡಿ ನೂಗಿ ಹರಿಯಲಾರಂಭಿಸಿದವು.

ಆತ........!........!

ನನ್ನ ಮುದ್ದು ಗೆಳೆಯ ಶೇಖರ! ಆತ ನನ್ನ ಗೆಳೆಯನಷ್ಟೇ ಅಲ್ಲ, ನನ್ನ ಬಂಧು! ಆತನಿಗೆ ನೋವಾದರೆ ನನಗೆ ನೋವಾದಂತೆ ಆಗುತ್ತದೆ ಅದಕ್ಕೆ ನಮ್ಮ ಪವಿತ್ರ ಮಿತ್ರತ್ವವೇ ಸಾಕ್ಷಿ! ಆದರೆ ಈಗ ನನ್ನ ಬಲಗೈಯಂತಿರುವ ಶೇಖರನನ್ನು ಕಳೆದುಕೊಂಡುದಕ್ಕೆ ಎಲ್ಲರಿಗಿಂತ ನನಗೆ ಹೆಚ್ಚು ದುಃಖವಾಗಿದೆ ಆ ಪರಮಾತ್ಮನ ಸಾಕ್ಷಿಯಾಗಿ!

ಆತ ಏಕೆ ಸತ್ತ? ಎಂಬುದು ಮಾತ್ರ ಬಹಳ ಜನರಿಗೆ ಗೊತ್ತಿಲ್ಲ, ಒಟ್ಟು ಶವ ನೋಡಲಿಕ್ಕೆ ಮಾತ್ರ ಅಷ್ಟು ಜನ ನೆರೆದಿದ್ದರು ಶೇಖರನ ತೇಜೋಪೂರ್ಣವಾದ ಮುಖ ನೋಡಿದ ತಕ್ಷಣ, ಆತನು ಬಾರಿ ಬಾರಿಗೂ ಹೇಳುತಿದ್ದ ಮಾತು ತಾನೇ ನೆನಪಿಗೆ ಬಂತು.

"ಜಗತ್ತು ಶೂನ್ಯ; ನನ್ನ ದೃಷ್ಟಿಯಲ್ಲಿ ಮಾತ್ರ!" ಆತ ಹಾಗೆ ಅನ್ನಲು ಕಾರಣವಿಲ್ಲದೇ ಇಲ್ಲ. ನಾನು ಕಣ್ಣಾರೆ ಕಂಡ ಕಥೆ—"ಜಗತ್ತು ಶೂನ್ಯ, ನನ್ನ ದೃಷ್ಟಿಯಲ್ಲಿ!"—ಎಂದು ಕಳೆದ ತಿಂಗಳಿಂದಲೂ ಅನ್ನುತ್ತಲಿದ್ದ!

"ಹುಚ್ಚನಂತೆ ಹಾಗನ್ನಬಾರದು'—ಎಂದು ಎಷ್ಟು ಪರಿಪರಿಯಿಂದ ಸಮಾಧಾನ ಹೇಳುತ್ತಿದ್ದರೂ, ಆತನು ತನ್ನ ಮನದೊಳಗಿನ ವಿಷಯ ಬಿಡುತ್ತಿರಲಿಲ್ಲ. ಆದರೂ ಆತ ಏನೇ ಅಂದರೂ, ಅನ್ನಿಸಿಕೊಂಡು ಆತನ ಮನಸ್ಸಿನಲ್ಲಿರುವ ವಿಷಯ ಮರೆಯುವಂತೆ ಮಾಡುತ್ತಿದ್ದೆ. ಹಾಗೆ ಮರೆಯಿಸುವದು, ನನ್ನ ಆದ್ಯಕರ್ತವ್ಯ. ಆತ ಎಷ್ಟೇ ಅಂದರೂ ನನ್ನ ಮಿತ್ರ!

ಆತ ಏನೇ ಮಾಡಿದರೂ ನನ್ನೆದುರು ಬಡ ಬಡ ಒದರಿ ಬಿಡುತ್ತಿದ್ದ. ನನ್ನ ಹೊರತು ಆತ ಮತ್ತೊಬ್ಬರ ಎದುರು ಬಾಯಿ ಬಿಡುತ್ತಿರಲಿಲ್ಲ ಅದಕ್ಕೆ ಇಷ್ಟೇ ಕಾರಣ; ನಾವಿಬ್ಬರೂ ಕೂಡಿ, ಆಡಿ, ಕೂಡಿಯೇ ಶಾಲೆಯ ಕಟ್ಟೆಯನ್ನು ಏರಿದ್ದೆವು. ಅಲ್ಲದೇ ನಾವಿಬ್ಬರೂ ಅಣ್ಣ-ತಮ್ಮಂದಿರೆಂದೇ ತಿಳಿದು ಕೊಂಡಿದ್ದೆವು.

ಶೇಖರ ಕಾಲೇಜ ಓದಲು ಪಟ್ಟಣಕ್ಕೆ ಬಂದ. ಆತ ಮನೆ ಮಾಡಲಿಲ್ಲ. ಭೋಜನಾಲಯದಲ್ಲಿ ಊಟ ಮಾಡಿ, ನನ್ನ ರೂಮಿನಲ್ಲಿಯೇ ಇರುತ್ತಿದ್ದ. ಶೇಖರನಿಗೆ ಸಾಹಿತ್ಯ ಅಂದರೆ ತುಂಬ ಇಷ್ಟ! ಅವನ ಎದುರು ಹೊಸ ಪುಸ್ತಕ ಕಂಡರೆ ಸಾಕು, ಅದನ್ನು ಪೂರ್ಣ ಮಾಡದ ಹೊರತು, ಊಟಕ್ಕೇಳುತ್ತಿರಲಿಲ್ಲ ಅದರ ಸಲುವಾಗಿ ನಾನೊಂದೆರಡು ಸಲ ಆತನಿಗೆ ಬೈದಿದ್ದೆ. ಆದರೂ ಆತ ಆ ಚಟ ಬಿಡಲಿಲ್ಲ.

ಕಾಲೇಜಿನಲ್ಲಿಯೂ ಇವನಂತೆ ಮತ್ತೊಂದು ವ್ಯಕ್ತಿಯನ್ನು ಕಂಡೆ, ಅವಳು ಸ್ತ್ರೀ. ಅವಳ ಹೆಸರು ಇಂದುಮತಿ. ಅವಳ ಹೆಸರು ರೂಪಿಗೆ ತಕ್ಕಂತೆ ಅವಳ ತಂದೆ-ತಾಯಿಗಳು ಇಟ್ಟಿರಬಹುದೆಂದು, ನೋಡಿದವರೆಲ್ಲ, ತಟ್ಟನೆ ಅನ್ನುತ್ತಿದ್ದರು. ಅವಳು ಬಿಂಕದ ಸಿಂಗಾರಿಯಲ್ಲ. ಅವಳ ಉಡುಪು ತೊಡುಪುಗಳೆಲ್ಲ ತುಂಬ ಸಾದಾ. ಅವಳ ನಡವಳಿಕೆ ಕೂಡ ಹಾಗೇ. ಕಪಟ ಹೃದಯದವಳಲ್ಲ ಅವಳು. ಅವಳ ಮಾತನ್ನು ಕೇಳಿದವರಿಲ್ಲ ಇದೇ ಉತ್ತರವನ್ನು ಕೊಡುತ್ತಿದ್ದರು. ಅವರೂ ಪುಸ್ತಕದ ಹುಳವಾದ್ದರಿಂದ, ಶೇಖರನ, ಅವಳ ಪರಿಚಯವಾಯಿತು.

ದಿನ ದಿನಕ್ಕೆ ಅವರ ಸ್ನೇಹ ಬಲಯುತ್ತ ಹೊರಟಿತು; ವಿನಃ ಕುಂದಲಿಲ್ಲ. ಅನೇಕೂ ಮನೆಮಾಡಿಕೊಂಡಿರಲಿಲ್ಲ. ತನ್ನ ಅಡುಗೆಯನ್ನು ರೂಮಿನಲ್ಲಿಯೇ ಮಾಡಿಕೊಳ್ಳುತ್ತಿದ್ದಳು. ವಾರಕ್ಕೆ ಒಂದೆರಡು ಸಲವಾದರೂ ಇಂದುಮತಿ — ಶೇಖರನನ್ನು ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದಳು.

ಅಂದು ಶೇಖರನಿಗೆ ವಿಪರೀತ ಉರಿ! ಡಾಕ್ಟರರನ್ನು ಕರೆತಂದು ತೋರಿಸಿ ಆಯಿತು. ಡಾಕ್ಟರರು—'ಟಾಯಿಫಾಯಿಡ್' ಎಂದು ಹೆಸರಿಟ್ಟರಲ್ಲದೇ, ಆರೈಕೆ ಬಗ್ಗೆ ತುಂಬಾ ಜಾಗ್ರತೆ ಎಂದು ಹೇಳಿದರು ಊರಿನಿಂದ ಯಾರನ್ನಾದರೂ ಕರೆಸೋಣವೆಂದರ 'ಬೇಡ' ಎಂದು ಶೇಖರನಿಂದ ಉತ್ತರ!

ಮೂರನೆಯ ದಿನ ಡಾಕ್ಟರರನ್ನು ಕರೆಯಲು ಹೋದಾಗ "ಹಣ ಇಟ್ಟಾಗಲೇ ಬರುವೆ" ಎಂದರು ಆ ಡಾಕ್ಟರರು. ಪ್ರತಿ ತಿಂಗಳು ಶೇಖರನ ತಂದೆಯ ವರೇ ಬಂದು ಹಣಕೊಟ್ಟು ಹೋಗುತ್ತಿದ್ದರು. ಅವರ ಸಂಗಡವೇ ನಮ್ಮ ಮನೆಯವರೂ, ಹಣ ಕಳುಹಿಸುತ್ತಿದ್ದರು. ನದಿ ಮಹಾಪೂರ ಬಂದುದರಿಂದ ಹಳ್ಳಿಯಿಂದ ಇತ್ತ ಜನ ಬರುತ್ತಿರಲಿಲ್ಲ. ಜನ ಓಡಾಡ ಬೇಕಾದರೆ ಕನಿಷ್ಠ ಹದಿನೈದು ಇಪ್ಪತ್ತು ದಿನವಾದರೂ ಬೇಕು. ಈಗ ಸದ್ಯ ನಮ್ಮಿರ್ವರ ಹತ್ತಿರ ಒಂದು ಬಿಡಿಕಾಸೂ ಉಳಿದಿಂಲಿಲ್ಲ. ದಡ್ಡಿಲ್ಲದೇ ಡಾಕ್ಟರ್ ಬರುಂತಿಲ್ಲ. ಎಷ್ಟು ಸರಿ, ಸವಿಯಿಂದ ಹೇಳಿದರೂ ಆ ಡಾಕ್ಟರ್ ಒಂದು ತಿಂಗಳು ಸಹ ನಿಲ್ಲಲು ಒಪ್ಪಿಗೆ ಕೊಡಲಿಲ್ಲ. ಕಲ್ಲು ಹೃದಯ ಅವರದು! ಕರಗಬಹುದಾದರೆ ಹೇಗೆ? ಮುಂದೆ...? ಮುಂದೆ...?? ಏನು... ...??? ಎಂದು ಹೊರಟೆ.

"ಛಟ್‌ಽಽ ಛಟ್‌ಽಽ" ಎಂದು ಚಪ್ಪಳೆ ಸಪ್ಪಳ. ಅಲ್ಲದೇ—

"ಮಿಸ್ಟರ್ ಚಂದ್ರುಽಽ' ಎಂದು ಕೂಗ ಬೇರೆ ಕೇಳಿಸಿತು.

ಯಾರು? ಎಂದು ನೋಡಿದೆ.

ಇಂದುಮತಿ!

"ಓಽಽ ಇಂದುಮತಿ!" ಎಂದು ತಡವರಿಸುತ್ತ ಅಂದೆ.

"ಮುಖ ಬಾಡಿದೆಯಲ್ಲಾ ಚಂದ್ರುಽಽ?' ಎಂದಳು ಇಂದುಮತಿ

"ಏನೂ ಇಲ್ಲ" ಎಂದೆ.

"ನಿಮ್ಮ ಮಿತ್ರ ಶ್ರೀ ಶೇಖರ ಎಲ್ಲಿ? ಭೆಟ್ಟಿ ಇಲ್ಲವಲ್ಲ? ಊರಲ್ಲಿ ಯಾದರೂ ಇದ್ದಾರೆಯೇ?"—ಎಂದಳು ಇಂದುಮತಿ.

ನನಗಂತೂ ಸುಳ್ಳು ಹೇಳಲು ಬಾಯಿ ಬರಲಿಲ್ಲ. ಸುಳ್ಳನಂತೂ ಈ ವರೆಗೆ ನಾನು ಆಡಿಯೂ ಇರಲಿಲ್ಲ. ಆಡಿಯೂ ಗೊತ್ತಿಲ್ಲ. ಇಂದುಮತಿಯ ಎದುರು ನಿಜ, ಹೇಳಿ ಬಿಟ್ಟೆ. ನನ್ನ ಮಾತನ್ನು ಕೇಳಿ ಇಂದುಮತಿಯ ಕಣ್ಣುಗಳಲ್ಲಿ ನೀರೂರಿದವು. ನನ್ನನ್ನು ಡಾಕ್ಟರ ಮನೆಗೆ ಕರೆದುಕೊಂಡು ಹೋದಳು. ಮೊದಲು ನಾನೊಬ್ಬನೇ ಹೋಗಿದ್ದೆ. ಆದರೆ, ಈಗ ಇಬ್ಬರು ಹೋದುದರಿಂದ ಆ ಡಾಕ್ಟರ್ ಹೆದರಿರಬಹುದು! ಏನೆಂದರೇ ಇನ್ನೇನು! ಅವರು ನಮ್ಮಿಬ್ಬರನ್ನು ನುಂಗುವಂತೆ ದಿಟ್ಟಿಸಿ ನೋಡುತ್ತಿದರು.

ಆದರೆ ಏನು? ಇಂದುಮತಿ "ಚಟ್‌ಽಽ ಚಟ್‌ಽಽ" ಎಂದು ಹತ್ತು ರೂಪಾಯಿಗಳನ್ನು ಚೆಲ್ಲಿದಳು. ಆಕೆ ಹಣ ಏಕೆ ಇಟ್ಟಳು? ಎಂಬ ಕಾರಣ ಡಾಕ್ಟರರಿಗೆ ಹೊಳೆಯದೇ ಇರಲಿಲ್ಲ. ತಮ್ಮ ಪರ್ಸನ್ನೂ, ಬ್ಯಾಗನ್ನು ತೆಗೆದುಕೊಂಡು, ನಮ್ಮ ಬೆನ್ನು ಹತ್ತಿದರು, ಆಹಾಂ, ಇಲ್ಲ. ಅವರು ರೂಪಾಯಿಯ ಬೆನ್ನು ಹತ್ತಿದರು.

ನನ್ನಷ್ಟಕ್ಕೆ ನಾನೇ ಎಂದುಕೊಂಡೆ—

"ರೂಪಾಯಿಗೆ, ಮನುಷ್ಯನಿಗಿಂತ ಎಷ್ಟು ಬೆಲೆ?'

ಅಂತೂ ಮನೆ ಬಂದೇ ಬಿಟ್ಟಿತು. ಡಾಕ್ಟರರು ಶೇಖರನನ್ನು ನೋಡಿ, ಚುಚ್ಚುಮದ್ದನ್ನು ಕೊಟ್ಟು ಹೋದರು.

ಶೇಖರ ಬೇಡವೆಂದರೂ ಇಂದುಮತಿ ದಿನಾಲು ಆತನ ಸೇವೆಗಾಗಿ ಬರುತ್ತಿದ್ದಳು.

"ನನಗೆ ಚನ್ನಾಗಿದೆ ಕಾಲೇಜಿಗೆ ಹೋಗು" ಎಂದು ಶೇಖರ ಹೇಳಿದಾಗಲೇ ನಾನು ಕಾಲೇಜಿಗೆ ಹೋದೆ. ಅಂದು ಇಂದುಮತಿ ಕಾಲೇಜಿಗೆ ಬಂದಿರಲಿಲ್ಲ. ಅವಳು ಶೇಖರನ ಸಲುವಾಗಿ ಬಾರದಿರಲಿಕ್ಕಿಲ್ಲ. ಶೇಖರನಲ್ಲಿ ಹೋಗಿರಬಹುದೆಂದು ಊಹಿಸಿದೆ.

ಅಂದು ಮಧ್ಯಾಹ್ನ ಅಲ್ಲಿ ಇಂದುಮತಿ ಇರದಿದ್ದರೆ, ನನ್ನ ಶೇಖರ ಖಂಡಿತ ಉಳಿಯುತ್ತಿರಲಿಲ್ಲ ಮಧ್ಯಾಹ್ನ ನಾಲ್ಕು ಅಂಕಣದವರೆಗೂ ಉರಿ ಸಂಕಟ ತಾಳಲಾರದೇ ಕಾಟಿನ ಮೇಲೆ ಹೊರಳಾಡುತ್ತಿದ್ದ

(೧೨ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಲೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಕುಟುಂಬ ಯೋಜನೆ
(ಮಿತ ಸಂತಾನ)

Family Planning

ಮಾಜಿ ಮಂತ್ರಿ ಎ. ಬಿ. ಶೆಟ್ಟರ ಮುನ್ನುಡಿಯೊಂದಿಗೆ ದ. ಕ. ಜಿಲ್ಲಾ ಕುಟುಂಬಯೋಜನಾ ಸಮಿತಿಯ ಪರವಾಗಿ ಪ್ರಕಟಿಸಲ್ಪಟ್ಟ ಕುಟುಂಬ ಯೋಜನೆಯ ಆವಶ್ಯಕತೆಯನ್ನೂ ಸಂತತಿಯನ್ನೂ ಒಂದು ಉಚಿತ ಪ್ರಮಾಣದಲ್ಲಿ ನಿರೋಧಿಸುವ ಸರಳ ಮಾರ್ಗವನ್ನೂ ಬೋಧಿಸುವ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಕೈಪಿಡಿಗಳು.

ಪ್ರತಿಯೊಂದರ ಬೆಲೆ 19 ನಯಾಪೈಸೆ.

ನವಭಾರತ ಬುಕ್ ಡಿಪೋ, ಉಡುಪಿ

ಇತಿಹಾಸ ಪೃಷ್ಠ

ಶಸ್ತ್ರಧಾರೀ ಸಂನ್ಯಾಸಿಗಳ ಸಮರರಂಗ

*　　*　　*　　*

ರಾಬರ್ಟ ಕ್ಲೈವನು ೧೭೫೭ರಲ್ಲಿ ಭಾರತದಲ್ಲಿ ಮೊತ್ತಮೊದಲಿಗೆ ಬ್ರಿಟಿಷಸತ್ತೆಯನ್ನು ಸ್ಥಾಪಿಸಿದ ಗಳಿಗೆಯಿಂದಲೇ ಅದಕ್ಕೆ ಭಾರತೀಯರ ಪ್ರತಿಭಟನೆಯೂ ನಡೆದಿತ್ತು.

> "ಬೇಟೆಗಾರನ ಗುಂಡಿನಿಂದ ಸಿಂಹವು ಗಾಯಗೊಂಡು ಬಿದ್ದಿತ್ತು. ಸಮೀಪದಲ್ಲಿದ್ದ ನರಿಯು ಆತ್ಮೀಯತೆಯಿಂದ ಹೇಳಿತು: "ಬೇಟೆಗಾರ ಬಂದರೂ ನೀವು ಓಡಿ ಹೋಗುವುದಿಲ್ಲ. ಎಂತಹ ವಿಚಿತ್ರ ಜಾತಿಯವರು ನೀವು! ಈಗ ಮೂರ್ಖತನದ ಫಲವನ್ನು ಅನುಭವಿಸಿರಿ" ಮೃತ್ಯುಮುಖದಲ್ಲಿದ್ದರೂ ಸಿಂಹವು ತನ್ನ ಉಗುರು ಹಲ್ಲುಗಳನ್ನು ಮುಂದೆ ಚಾಚಿ, ಕ್ರುದ್ಧವಾಗಿ ಹೇಳಿತು: ಅಧಮ, ಸುಮ್ಮನಿರು; ಸ್ವಾತಂತ್ರ್ಯಕ್ಕಿಂತಲೂ ದೇಹವು ದೊಡ್ಡದೆ? ದೇಹವಾದರೋ ಬಾರಿ ಬಾರಿ ದೊರೆಯಬಲ್ಲದು; ಆದರೆ, ಸ್ವತಂತ್ರ ವಾತಾವರಣ, ಸ್ವತಂತ್ರ ಜೀವನ ಭಾಗ್ಯದಿಂದಲೇ ದೊರೆಯುವುದು."
>
> —ಭಾರತಿ.

೧೭೬೦ರಿಂದ ೧೮೦೦ರ ವರೆಗೆ ಬಂಗಾಳದಲ್ಲಿ "ಸನ್ಯಾಸಿ ಮತ್ತು ಫಕೀರ"ರ ವಿದ್ರೋಹವು ನಡೆಯಿತೆಂದೂ ಭಾರತದಿಂದ ಆಂಗ್ಲ ಶಾಸನವನ್ನು ಆಮೂಲಾಗ್ರ ಕಿತ್ತೆಸೆಯುವುದೇ ಇದರ ಪ್ರಧಾನ ಗುರಿಯಾಗಿತ್ತೆಂದೂ ಇತಿಹಾಸ ಹೇಳುತ್ತದೆ. ಭಾರತದಲ್ಲಿ ಬ್ರಿಟಿಷ ಸತ್ತೆಯ ಸಂಸ್ಥಾಪಕನೆನಿಸಿದ ಲಾರ್ಡ್ ಕ್ಲೈವ ಮತ್ತವನ ಸಹಚರಿಗಳು ಬಂಗಾಳದಲ್ಲಿ ತಮ್ಮ ಬಲವನ್ನು ಸಂವರ್ಧಿಸುತ್ತಿರುವಾಗ ಅಲ್ಲಿನ ಸನ್ಯಾಸಿಗಳು ಮತ್ತು ಫಕೀರರು ಅವರನ್ನು ತಮ್ಮ ಪ್ರಾಣವನ್ನು ಪಣವಿಟ್ಟು ವಿರೋಧಿಸಿದರು. ದುರ್ಭಾಗ್ಯದಿಂದ ಅದು ವ್ಯರ್ಥವಾಯಿತು. ಇವರೊಡನೆ ಸುವ್ಯವಸ್ಥಿತ ಕಾರ್ಯಕ್ರಮವಾಗಲೀ ಸಂಘಟನೆಯಾಗಲೀ ಇರಲಿಲ್ಲ. ಅಲ್ಲದೇ ನಾಯಕತ್ವದ ಬಗ್ಗೆ ಇವರ ಮುಖಂಡರಲ್ಲಿ ವಾದವಿವಾದಗಳೂ ಎದ್ದು ವಿದ್ರೋಹವು ವ್ಯರ್ಥವಾಗುವಂತಾಯಿತು.

ಅಕ್ಬರನ ಕಾಲದಲ್ಲಿ ಸನ್ಯಾಸಿಗಳೂ ಶಸ್ತ್ರ ಹಿಡಿಯಲು ಮೊತ್ತಮೊದಲಿಗೆ ಪ್ರಾರಂಭಿಸಿದರು. "೧೬ನೆಯ ಶತಾಬ್ದಿಯಲ್ಲಿ ಶಸ್ತ್ರಧಾರಿಗಳಾದ ಫಕೀರರು ರಣರಂಗದಲ್ಲಿ ಕಾದಾಡುತ್ತಿದ್ದರು; ಯುದ್ಧಗಳಿಲ್ಲದಿರುವಾಗ ಧಾರ್ಮಿಕೋನ್ಮಾದತೆಯಿಂದಾಗಿ ಹಿಂದೂ ಸಂನ್ಯಾಸಿಗಳ ಮೇಲೆ ಬಿದ್ದು ಅವರನ್ನು ಕೊಲ್ಲುತ್ತಿದ್ದರು. ನಿರ್ಗತಿಕರಾದ ಸಂನ್ಯಾಸಿಗಳು ತಮ್ಮ ಅಹಿಂಸಾ ವ್ರತಭಂಗವಾಗುವುದರಿಂದ ಶಸ್ತ್ರಧಾರಣೆ ಮಾಡುತ್ತಿರಲಿಲ್ಲ" ಎಂದು ಡಾ। ಫರ್ಕಹರರು ಬರೆದಿದ್ದಾರೆ.

ಅಕ್ಬರನ ಕಾಲದಲ್ಲಿ ಈ ಫಕೀರರ ಉಪದ್ರವ ಅಸಹ್ಯವೆನಿಸಿದಾಗ, ಕಾಶಿಯ ಸುಪ್ರಸಿದ್ಧ ವಿದ್ವಾನ್ ಸಂನ್ಯಾಸಿ ಮಧುಸೂದನ ಸರಸ್ವತಿಯವರು ಬಾದಶಹನಿಗೆ ಈ ಸಮಸ್ಯೆಯನ್ನು ತಿಳಿಸಲು ಆಗ್ರಾಕ್ಕೆ ತೆರಳಿದರು. ಬಾದಶಹ—ಸಂನ್ಯಾಸಿಗಳ ಮಾತುಕತೆಯ ವೇಳೆ ಬೀರಬಲ್ಲನೂ ಉಪಸ್ಥಿತನಿದ್ದನು. ಸ್ವಾಮೀಜಿಯವರು ಬಹುಸಂಖ್ಯೆಯಲ್ಲಿ ಅಬ್ರಾಹ್ಮಣ ಹಿಂದೂಗಳಿಗೆ ಸಂನ್ಯಾಸ ದೀಕ್ಷೆಯನ್ನು ಕೊಡಬೇಕು ಮತ್ತು ಇವರು ಶಸ್ತ್ರಧಾರಣೆ ಮಾಡಿ ಫಕೀರರನ್ನು ಎದುರಿಸಬೇಕು ಎಂದು ಆತ ಸಲಹೆಯಿತ್ತ. ಈ ವಿಷಯದಲ್ಲಿ ಮುಗಲ ಸರಕಾರ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ಆಶ್ವಾಸನೆಯನ್ನು ಬಾದಶಹನೂ ಇತ್ತ. ಈ ರೀತಿ ಸಶಸ್ತ್ರ ಸೈನಿಕರ ಪರಂಪರೆ ಬೆಳೆದುಬಂದಿತು.

"ಸಂನ್ಯಾಸಿಗಳು ಪ್ರಾಯಶಃ ಯುದ್ಧಗಳಲ್ಲಿ ಗೆಲ್ಲುತಿದ್ದರು. ಒಂದುಬಾರಿ, ಒರ್ವ ವೃದ್ಧನ ನಾಯಕತ್ವದಲ್ಲಿ ಸಂನ್ಯಾಸಿಗಳ ಒಂದು ಸಮೂಹವು ಅವರಂಗ ಜೇಬನ ಸೇನೆಯನ್ನೂ ಸೋಲಿಸಿಬಿಟ್ಟಿತು. ೧೭೬೪ರಲ್ಲಿ ಮೀರ ಕಾಸಿಮನನ್ನು ಪೂರ್ವಭಾರತ ಕಂಪೆನಿಯು ಬಂಗಾಳದ ನವಾಬತನದಿಂದ ಹೊರದಬ್ಬಿದಾಗ, ಆತನು ಪುನಃ ತನ್ನ ರಾಜ ಸಿಂಹಾಸನವನ್ನು ಪಡೆಯಲು ಸಂನ್ಯಾಸಿಗಳ ಸಹಾಯವನ್ನು ತೆಗೆದುಕೊಂಡನು" ಎಂದು ತನ್ನ 'ದಬಿಸ್ತಾನ್' ಎಂಬ ಗ್ರಂಥದಲ್ಲಿ ಶ್ರೀ ಮಹಮ್ಮದ ಏಹಸಾನ ಫಾನಿ ಸಾಹಬ ಬರೆದಿದ್ದಾರೆ.

ಶಸ್ತ್ರಧಾರಿ ಫಕೀರರ ಆರಂಭ ಎಂದಾಯಿತೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದರೆ, ಅವರಲ್ಲಿ ಭಾರತೀಯರೇ ಮೊದಲಿಗರೆಂದು ಗೊತ್ತಾಗಿದೆ. ತಮ್ಮ ಹೆಸರಿನ ಕೊನೆಗೆ 'ಶಹ' ಎಂಬುದನ್ನವರು ಸೇರಿಸುತಿದ್ದರು. ಇವರು ನಿಜವಾದ ಮುಸಲ್ಮಾನರಾಗಿರದೆ ಹಿಂದೂಗಳೇ ಆಗಿದ್ದರೆಂದು ಶ್ರೀ ಫಾನಿ ಹೇಳುತ್ತಾರೆ. ಫಕೀರರಲ್ಲಿರುವ 'ಮದಾರೀ" ಸಂಪ್ರದಾಯವು ಹಿಂದೂಗಳ "ಅವಧೂತ" ಸಂಪ್ರದಾಯವನ್ನೇ ಬಹುವಾಗಿ ಹೋಲುತ್ತದೆ. ಸಂನ್ಯಾಸೀ ವಿದ್ರೋಹದ ಸಮಯದ ಮಹಾ ಫಕೀರ ನೇತಾರನಾದ ಮಜನೂ ಶಾಹನು "ಮದಾರಿ" ಸಂಪ್ರದಾಯದವನೇ ಆಗಿದ್ದನು.

ಇಂಗ್ಲಿಷರು ಸಂನ್ಯಾಸಿ ಮತ್ತು ಫಕೀರರನ್ನು, ೧೭೬೦ರಿಂದ ೧೮೦೦ರ ವರೆಗೂ ಎದುರಿಸಲೇ ಬೇಕಾಗಿತ್ತು. ಆದರೆ, ೧೭೬೯–೭೦ರಲ್ಲಿ ಬಂಗಾಳದಲ್ಲಿ ಭಯಾನಕ ಬರಗಾಲ ಕಾಲಿರಿಸಿದಾಗ ಪೂರ್ವ ಭಾರತ ಕಂಪೆನಿಯು ವಿಪನ್ನಾವಸ್ಥೆಗೆ ಗುರಿಯಾಯಿತು. ವಾರೆನ್ ಹೇಸ್ಟಿಂಗ್ಸನ ದಿನಚರಿಯಿಂದ ೧೭೭೩ರಲ್ಲಿ ಸಂನ್ಯಾಸಿಗಳು ಬಾಕರಗಂಜದ ಮೇಲೆ ತಮ್ಮ ಧಾಳಿಯನ್ನೇ ಮಾಡಿದೆ ತಿಳಿಯುತ್ತದೆ. ಅದೇ ವರ್ಷ ಫಕೀರರೂ ಡಾಕ್ಕಾದ ಕಛೇರಿಯ ಮೇಲೆ ಆಕ್ರಮಣ ಮಾಡಿದ್ದರೆಂದೂ ಕಛೇರಿಯ ಪ್ರಧಾನಾಧಿಕಾರಿ ಶ್ರೀ ಲಿಸೆಸ್ಟರನು ಕಛೇರಿಯನ್ನು ರಿಕ್ತಗೊಳಿಸುವುದೇ ಉತ್ತಮವೆಂದು ಭಾವಿಸಿದ್ದನು. ಅನಂತರ, ಕೇಪ್ಟನ್ ಗ್ರಾಂಟನು ಪುನಃ ಕಛೇರಿಯ ಮೇಲೆ ಧಾಳಿ ನಡೆಸಿ, ವಶಪಡಿಸಿಕೊಂಡನೆಂದೂ ಈ ಸಮಯ ಸೆರೆಸಿಕ್ಕಿದ ಫಕೀರರನ್ನು ಕಛೇರಿಯ ಪುನರ್ನಿರ್ಮಾಣ ಕಾರ್ಯದಲ್ಲಿ ಕೂಲಿಗಾರರಾಗಿ ಉಪಯೋಗಿಸಲಾಯಿತೆಂದೂ ವಾರೆನ್ ಹೇಸ್ಟಿಂಗ್ಸನು ಬರೆದಿರುವನು.

೧೭೬೬ರಲ್ಲಿ ಕೂಚ ಬಿಹಾರದ ಪರಿಸ್ಥಿತಿಯು ತೀವ್ರ ಬಿಗಡಾಯಿಸಿತ್ತು. ರಾಮಾನಂದ ಗೋಸಾಯಿಯ ಷಡ್ಯಂತ್ರದಿಂದ ಅಲ್ಲಿನ ಬಾಲಕ ರಾಜನು ವಧಿಸಲ್ಪಟ್ಟಿದ್ದನು. ಇದರಿಂದ ಅಲ್ಲಿನ ಸೇನಾಪತಿ ನಜೀರನು ಆಂಗ್ಲೇಯರ ಸಹಾಯವನ್ನು ಯಾಚಿಸಿದನು; ಇವನ ವಿರೋಧಿಗಳು ಸಂನ್ಯಾಸಿಗಳ ನೆರವನ್ನು ಬಯಸಿದರು. ೧೭೬೬ರಲ್ಲಿ ಎರಡೂ ಪಾಳಯರ ನಡುವೆ ಹಲವಾರು ಘರ್ಷಣೆಗಳೆದ್ದುವು. ಮರುವರ್ಷವೂ ಇದು ಮುಂದುವರಿಯಿತು. ಒಂದರ ಸಮರದಲ್ಲಿ ಆಂಗ್ಲ ಸೇನಾಪತಿ ಲೆಫ್ಟಿನೆಂಟ್ ಕಿಥನು ಕೊಲೆಯಾದನು. ೧೭೬೭ರಲ್ಲಿಯೂ ಸಂನ್ಯಾಸಿಗಳು ಪ್ರಜಾಜನರಿಂದ ಚೌಥ (ಭೂಮ್ಯುತ್ಪನ್ನದಲ್ಲಿನ ಲ್ಕನೆಯ ಒಂದಂಶ) ವಸೂಲು ಮಾಡುತಿದ್ದರೆಂದು ಶ್ರೀ ಕಾಲ್ಡಸೆಲ್‌ನ ಲೇಖವೊಂದರಿಂದ ತಿಳಿಯುತ್ತದೆ.

೧೭೭೨ರಲ್ಲಿ ಮಜನೂ ಶಾಹನು ಪುನಃ ಬಂಗಾಳಕ್ಕೆ ತಿರುಗಿ ಬಂದನು. ನೈಟೋರದ ರಾಣಿ ಭವಾನಿಯನ್ನು ತನ್ನ ಪಕ್ಷಕ್ಕೆ ಒಲಿಸುವ ಪ್ರಯತ್ನ ಮಾಡಿದನು. ಆದರೆ, ಅಲ್ಲಿ ಆತನು ಸೇನೆಗಳಿಂದ ಸ್ವಾಗತಿಸಲ್ಪಟ್ಟನು. ನೈಟೋರ ರಾಜ್ಯದ ಮಂತ್ರಿಯು ಫಕೀರರನ್ನು ತಡೆಯಲು ಸೇನೆ ಕಳಿಸಿದ್ದನು. ಅಂತ್ಯದಲ್ಲಿ ಫಕೀರರು ಕೆಲವು ಗ್ರಾಮಗಳನ್ನು ಲೂಟಿಮಾಡಿ ಹಿಂದೆ ನಡೆದು ಹೋದರು.

ಕುಸುಹೊತ್ತು ಸುಮ್ಮನುಳಿದ ಫಕೀರರು ೧೭೭೨ರಲ್ಲಿ ಧೂಮಕೇತುಗಳಂತೆ ತಿರುಗಿ ಕಾಣಿಸಿಕೊಂಡರು. ೧೭೭೨ರ ದಶಂಬರ ೩೦ರಂದು ರಾಮಗಂಜದಲ್ಲಿ ಫಕೀರರು ಮತ್ತು ಆಂಗ್ಲೇಯರ ನಡುವೆ ಘರ್ಷಣೆಯೆದ್ದಿತು; ಇದರಲ್ಲಿಯೂ ಆಂಗ್ಲೇಯರ ಸೇನಾನಿ ಥಾಮಸ್‌ನು ಕೊಲೆಯಾದನು. ಯುದ್ಧದಲ್ಲಿ ಜಯಶೀಲರಾಗಿ ಫಕೀರರು ಕೂಚ ಬಿಹಾರದತ್ತ ಧಾವಿಸಿದರು. ಅಲ್ಲಿ ರಾಜ ಸಿಂಹಾಸನದ ಉತ್ತರಾಧಿಕಾರಕ್ಕಾಗಿ ನಜೀರದೇವನೊಡನೆ ಜಗಳ ನಡೆಯುತಿತ್ತು. ಸಂನ್ಯಾಸಿಗಳು ಸಂತೋಷಗಢವನ್ನು ಗೆದ್ದುಬಿಟ್ಟರು. ಕೂಚ ಬಿಹಾರದ ಸೇನಾಪತಿ ನಜೀರದೇವನು ಕಂಪೆನಿಯ ಸಹಾಯ ಬೇಡಿದನು. ಶ್ರೀ ಪುರಲಿಂಗನು ಕೂಡಲೇ ಕೂಚ ಬಿಹಾರಕ್ಕೆ ತೆರಳಿದನು. ಕೇಪ್ಟನ್ ಸ್ಟುವರ್ಟನನ್ನು ಜಲಪಾಯಿಗುಡಿಗೆ ಕಳಿಸಲಾಯಿತು. ಫೆಬ್ರುವರಿ ೩ನೆಯ ತಾರೀಕು ಬಹರಾಮಪುರದಿಂದ ಸೇನೆಯ ಒಂದು ತುಂಡೂ ಬಂದು ಸೇರಿತು. ಕೋಟೆಯನ್ನು ಗೆದ್ದುಕೊಳ್ಳಲಾಯಿತು.

ಆದರೆ, ಅದೇ ವರ್ಷ ಜನವರಿಯಲ್ಲಿ ಉತ್ತರ ಬಂಗಾಲದಲ್ಲಿ ಸಂನ್ಯಾಸಿಗಳ ಒಂದು ವಿಶಾಲ ಸೇನೆಯು ದೃಷ್ಟಿಗೋಚರವಾಗಿತ್ತು. ಜನವರಿ ೬ನೆ ತಾರೀಕಿನಂದು ಬಗಡಾದ ಕಲೆಕ್ಟರನು ಸಂನ್ಯಾಸಿಗಳು ಹಣವನ್ನು ಅಪಹರಿಸಿದರೆಂದು ಆಂಗ್ಲಾಧಿಕಾರಿಗಳಿಗೆ ತಿಳಿಸಿದನು. ಎರಡು ದಿನಗಳಲ್ಲಿಯೇ ಪುನಃ ಆತ ಬಗಡಾದಲ್ಲಿ ಎರಡು ಸಾವಿರ ಸಂನ್ಯಾಸಿಗಳ ಸೇನೆಯೊಂದು ಬಂದಿರುವುದಾಗಿಯೂ ಸೂಚನೆಯಿತ್ತನು. ಅವರೊಡನೆ ನೂರು ಕುದುರೆಗಳೂ ಎಂಬತ್ತು ಎತ್ತಿನ ಗಾಡಿ ತುಂಬ ಆಯುಧಗಳೂ ಇವೆಯೆಂದೂ ಬರೆಯಲು ಮರೆಯಲಿಲ್ಲ.

ಈ ವರ್ತಮಾನವನ್ನು ಪಡೆಯುತ್ತಲೇ ಕಂಪೆನಿಯು ಕೇಪ್ಟನ್ ಎಡ್ವರ್ಡನನ್ನು ಚಿಲಾಮಾರಿಗೆ ಕಳಿಸಿತು. ಅವನೊಡನೆ ಮೂರು ದಳಗಳಿದ್ದುವು. ೧೭೭೩ನೆ ಜನವರಿಗೆ ೧೭ರಂದು ರಂಗಪುರ ಜಿಲ್ಲೆಯ ಉಲೀಪುರವನ್ನು ಪ್ರವೇಶಿಸಿದೊಡನೆಯೇ ಆತನಿಗೆ ಸಂನ್ಯಾಸಿಗಳು ಅಲ್ಲಿಗೆ ಬಂದು ಚೌಥವನ್ನು ವಸೂಲು ಮಾಡಿದರೆಂದು ತಿಳಿಯಿತು. ಅಲ್ಲಿಂದ ಮುಂದೆ ಸಂನ್ಯಾಸಿಗಳು ಎಲ್ಲಿ ಹೋದರೆಂದು ಮಾತ್ರ ಗೊತ್ತಾಗಲಿಲ್ಲ.

ಆದರೆ ಕಲೆಕ್ಟರನಿಗೆ ಅವರ ಸುಳಿವಿನ ಪೂರ ಅರಿವಿತ್ತು. ಜನವರಿ ೨೬ಕ್ಕೆ ಆತ ಬರೆದ—"ಜಮಲಪುರದ ಸಬ್ ಡಿವಿಜನ್ನಿನಲ್ಲಿ ೫,೦೦೦ ಸಂನ್ಯಾಸಿಗಳು ಜಮೆಯಾಗಿದ್ದಾರೆಂದು ತಿಳಿದು ಬಂದಿದೆ. ದರಿಯಗೀರನು ಅವರ ನಾಯಕನೆಂದು ಹೇಳಲಾಗುತ್ತಿದೆ." ಕಲೆಕ್ಟರನಿಗೆ ಸಂನ್ಯಾಸಿಗಳು ಡಾಕ್ಕಾದ ಮೇಲೆ ದಂಡೆತ್ತಿ ಬರಬಹುದೆಂದು ಸಂದೇಹವಿತ್ತು. ಮೈಮನಸಿಂಹಕ್ಕೆ ಸಂನ್ಯಾಸಿಗಳು ಸಶಸ್ತ್ರರಾಗಿ ಬಂದಾಗ, ಅಲ್ಲಿ ಪುನಃ ೭,೦೦೦ ಶಸ್ತ್ರಧಾರಿ ಸಂನ್ಯಾಸಿಗಳು ಅವರನ್ನು ಕೂಡುವ ಸಂಭವವಿತ್ತು. ಚಿಲಮಾರಿಯ ಸಮೀಪದ ತುಂಬ ಸಂನ್ಯಾಸಿಗಳು ಕೂಡಿದ್ದಾರೆಂದು ಶೇರಪುರದಿಂದ ಸುದ್ದಿ ಬಂದಿತ್ತು. ಹದಿನೈದು ದೋಣಿಗಳಲ್ಲಿ ಇನ್ನೂ ಸಂನ್ಯಾಸಿಗಳನ್ನು ಕರೆದುಕೊಂಡು ಜುರವಾಲಗೀರನು ಬರುತಿದ್ದಾನೆಂದೂ ಗೊತ್ತುಹಚ್ಚಲಾಗಿತ್ತು.

(೧೧ನೇ ಪುಟ ನೋಡಿರಿ)

ಪ್ರಕಟಣೆ

ನಿರಖು ಠೇವಣಾತಿಗಳ ಮೇಲೆ ನಾವೀಗ ತೆರುತ್ತಿರುವ ಸಾ. ಸೇ. 4½ರಿಂದ 4¾ರ ವರೆಗಿನ ಬಡ್ಡಿ ದರಗಳಲ್ಲಿ ಯಾವುದೊಂದೂ ಬದಲಾವಣೆ ಇಲ್ಲದೆ, ಅಂತಹ ಠೇವಣಾತಿಗಳನ್ನು ಅವೇ ದರಗಳಲ್ಲಿ ಸ್ವೀಕರಿಸಲಾಗುವುದೆಂದು ಪ್ರಕಟಿಸಲು ಸಂತೋಷಪಡುತ್ತೇವೆ.

ವಿಶೇಷ ಮಾಹಿತಿಗೆ

ನಿಮಗೆ ಸಮೀಪವಿರುವ ನಮ್ಮ ಯಾವುದೇ ಶಾಖೆಯನ್ನು ಸಂದರ್ಶಿಸಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : **ಉಡುಪಿ (ದ. ಭಾರತ)**

(ವಿಶಾಲ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ ಬೇಂಕುಗಳಲ್ಲೆಲ್ಲಾ ನಮ್ಮದು ಅತಿ ಹಿರಿಯ ಬೇಂಕು!)

ಭಾರತದಲ್ಲಿ ಹತ್ತನೇ ಕ್ಷಯರೋಗ ಮೊಹರು ಮಾರಾಟ ಚಳವಳ

(2ನೇ ಅಕ್ಟೋಬರದಿಂದ 26ನೇ ಜನವರಿ ವರೆಗೆ)

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ಪ್ರಾರಂಭಿಸಲ್ಪಟ್ಟದ್ದು)

ಈ ಕೆಳಗಡೆ ಕಾಣಿಸಿದ್ದು 1959ರ ಕ್ಷಯರೋಗ ಮೊಹರು

(2ನೇ ಅಕ್ಟೋಬರದಿಂದ ಮಾರಾಟದಲ್ಲಿದೆ)

ಕ್ಷಯರೋಗ ಪ್ರತಿಬಂಧದ ಈ ಯೋಗ್ಯ ಚಳವಳಕ್ಕೆ ಬೆಂಬಲ ನೀಡುವುದಕ್ಕಾಗಿ ಕ್ಷಯರೋಗ ಮೊಹರುಗಳನ್ನು ಅಧಿಕ ಸಂಖ್ಯೆಯಲ್ಲಿ ಖರೀದಿಸಿ, ಕಾಗದಗಳು ಮತ್ತು ಪಾರ್ಸೆಲುಗಳ ಮೇಲೆ ಅಂಟಿಸಲು ಉಪಯೋಗಿಸಿರಿ.

ಒಂದು ಕ್ಷಯರೋಗ ಮೊಹರಿನ ಬೆಲೆ ಹತ್ತು ನಯೇಪೈಸೆ ಮಾತ್ರ.

ಈ ಚಳವಳವು ನಿಧಿ ಸಂಗ್ರಹದೊಂದಿಗೆ ಕ್ಷಯರೋಗ ಮತ್ತು ಅದನ್ನು ನಿರೋಧಿಸುವ ಕುರಿತು ಜನರಿಗೆ ಶಿಕ್ಷಣವನ್ನೂ ನೀಡುತ್ತದೆ.

ಲಕ್ಷ್ಯದಲ್ಲಿಡಿರಿ—
ನೀವು ಕೊಡುವ ಧನಸಹಾಯವು ಕ್ಷಯರೋಗ ನಿರೋಧದ ಜನತಾ ಹೋರಾಟಕ್ಕೆ ನೇರಾದ ಬೆಂಬಲವಾಗಿದೆ.

ಮೊಹರುಗಳು ಈ ಕೆಳಗಿನವರಲ್ಲಿ ದೊರೆಯುತ್ತವೆ—

1. ಗೌರವ ಕಾರ್ಯದರ್ಶಿ, ಮೊಹರು ಮಾರಾಟ ಸಮಿತಿ, ಗೋಪಾಲಕೃಷ್ಣ ದೇವಸ್ಥಾನ ರಸ್ತೆ, ಮಂಗಳೂರು.
2. ಜಿಲ್ಲಾ ವೈದ್ಯಾಧಿಕಾರಿ ಮತ್ತು ಗೌರವ ಕಾರ್ಯದರ್ಶಿ, ಕೊಡಗು ಜಿಲ್ಲಾ ಕ್ಷಯರೋಗ ಸಮಿತಿ, ಮಡಿಕೇರಿ (ಮೈಸೂರು ರಾಜ್ಯ).
3. ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್ಡನ್ ಟಿ. ಬಿ. ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಬೆಂಗಳೂರು ನಗರ ಮತ್ತು ರಾಜ್ಯದಲ್ಲಿನ ಇತರ ಏಜನ್ಸಿಗಳು.

ಈ ಸ್ಥಳದ ಉದಾರ ದಾತೃಗಳು—
ಮೆಸ್ಸರ್ಸ್ ಶೋ ವೆಲ್ಲೇಸ್ & ಕಂಪೆನಿ ಲಿಮಿಟೆಡ್, ಕಲ್ಕತ್ತಾ.

ದೇಶ ಪರಿಚಯ

ಉತ್ತರ ಧ್ರುವ ವಲಯದ ದೇಶಗಳು

ಗ್ರೀನ್‌ಲೇಂಡ್ ಮತ್ತು ಐಸ್‌ಲೇಂಡುಗಳು ಪ್ರಪಂಚದ ವಿಸ್ಮಯಕಾರಕ ದೇಶಗಳಾಗಿವೆ

ಸುಮಾರು ಒಂಭತ್ತನೆಯ ಶತಮಾನದಲ್ಲಿ ನಾರ್ವೆಯಿಂದ ನೋರ್ಸ್ ಜನರು ಐಸ್‌ಲೇಂಡ್ ದ್ವೀಪದಲ್ಲಿ ಬಂದು ತಂಗಿದಾಗ ಅಲ್ಲಿಯ ಒಂದು ಕೊಳ್ಳವು ನೀರುಗಡ್ಡೆಯಿಂದ ತುಂಬಿರುವದನ್ನು ಪ್ರಪ್ರಥಮ ಕಂಡ ಕಾರಣ ಅವರದಕ್ಕೆ ಐಸ್‌ಲೇಂಡ್ ಎಂದು ಕರೆದರು. ಇದು ಬರೇ ಹೆಸರಿಗೆ ಐಸ್ ಲೇಂಡ್ ಈ ದ್ವೀಪವು ನಿಜವಾಗ ಜ್ವಾಲಾ ಮುಖಿಗಳಿಂದ ತುಂಬಿರುವುದರಿಂದ ಇದಕ್ಕೆ ಅನ್ವರ್ಥದ ಹೆಸರನ್ನಿಡುವದಿಂದರೆ ಬೆಂಕಿ ದ್ವೀಪವೆಂದೇ ಕರೆಯಬೇಕಾದೀತು. ಇದರಲ್ಲಿ ಬೆಂಕಿ ಕಾರುವ ಕೆಂಡೋದಕದ ಗೈಸರ ಮತ್ತು ಬಿಸಿನೀರಿನ ಸರೋವರಹಳ್ಳಗಳು ಅನೇಕವಿರುವವು. ಈ ದೇಶದಲ್ಲಿ ನೂರಕ್ಕೂ ಮಿಕ್ಕ ಜ್ವಾಲಾಮುಖಿಗಳಿವೆ. ಭೂಮಿಯ ಜನನದ ಎಷ್ಟೋ ಕಾಲದ ನಂತರ ಭೂಮಿಯು ಬಿರುಕು ಬಿಟ್ಟು ಭೂಗರ್ಭದಿಂದುದಿಸಿದುದೆಂದು ಭೂಗರ್ಭ ಶಾಸ್ತ್ರಜ್ಞರ ಅಭಿಪ್ರಾಯ. ಇವರು ಐರಿಶ್ ಮತ್ತು ನೋರ್ಸ್ ಜನರ ಕುಲದಲ್ಲಿ ಹುಟ್ಟಿದವರು ಮತ್ತು ಕೃಷಿ ಮೀನುಗಾರಿಕೆ ಇವರ ಕಸಬು.

ಗ್ರೀನ್ ಲೇಂಡ್ ವಿಶಾಲವಾದ ದ್ವೀಪ ಅದರ ಒಳನಾಡು ನೀರುಗಡ್ಡೆಯಿಂದ ಮುಚ್ಚಿ ಕೊಂಡಿರುವದು. ಒಂದೊಂದು ಸಲ ಇದು ಒಡೆದು ಗುಡ್ಡದಾಕಾರದ ಗಡ್ಡೆಯನ್ನು ತುಂಬಿರಿಸಿ ಕಡಹಿ ಬಿಡುವದು. ಇಲ್ಲಿ ಎರಿಕ್ ದಿ ರೆಡ್ ಎಂಬವನು ಐಸ್‌ಲೇಂಡಿನಿಂದ ಸಮುದ್ರ ಮಾರ್ಗವಾಗಿ ಬಂದಿಳಿದು ವಲಸೆ ಹೋದನು. ಈಗ ಈ ದೇಶವು ಡನ್ಮಾರ್ಕಿನ ವಸಾಹುತವಾಗಿರುವದು. ಈ ದ್ವೀಪವನ್ನು ಗ್ರೀನ್ ಲೇಂಡ್ ಎಂದು ಕರೆಯಲ್ಪಡುವದಾದರೂ ಇದು ವಸಂತ ಕಾಲದ ಎರಡು ತಿಂಗಳು ಮಾತ್ರ ಅದೂ ಕರಾವಳಿ ಪ್ರದೇಶದಲ್ಲಿ ಹಸುರಾಗಿ ವದು. ಈ ದ್ವೀಪದಲ್ಲಿ ಮೀನು ಮತ್ತು ಸೀಲ್ ಮುಖ್ಯ ಆಹಾರವಾಗಿರುವ ಎಸ್ಕಿಮೊ ಜನರಿರುವರು. ಕ್ರಿ. ಶ. ೮೫೦ರ ಸಮಯ ನೋರ್ಸ್ ಜನರು ಅಲ್ಲಿ ಬಂದಾಗ ಐರಿಶ್ ಜನರು ಇವರಿಗಿಂತ ಮೊದಲಾಗಿ ಅಲ್ಲಿ ನೆಲಸಿರುವರೆಂದು ಕಂಡು ಬಂತು. ಆ ತರುವಾಯ ಮತ್ತಷ್ಟು ನೋರ್ಸ್ ಮತ್ತು ಐರಿಶ್ ಜನರು ಬಂದು ನೆಲಸಿದರು.

ಲೋಕದಲ್ಲಿ ಜ್ವಾಲಾಮುಖಿ ರಾಷ್ಟ್ರವೆಂದರೆ ಐಸ್ ಲೇಂಡ್ ಎಂದು ಬೊಟ್ಟಿಟ್ಟು ತೋರಿಸಬಹುದು. ೧೮೭೫ರಲ್ಲಿ ಒಂದು ಜ್ವಾಲಾಮುಖಿಯು ಉಕ್ಕಿ ಮೇಲಕ್ಕೆ ಬಂದಾಗ ಅದು ಕಾರಿದ ಕೆಂಡೋದಕದಿಂದ ಸುಮಾರು ೯೦೦೦ ಜನರು ಸತ್ತರು ಐಸ್ ಲೇಂಡ್‌ನಲ್ಲಿ ಅತಿದೊಡ್ಡ ಜ್ವಾಲಾಮುಖಿ ಹೆಕ್ಲ ಎಂಬುದು ಇದು ೧೯೪೭ರಲ್ಲಿ ಅತಿ ಭಯಂಕರ ರೀತಿಯಲ್ಲಿ ಉಕ್ಕಿ ಬಂದಿದೆ. ಆ ರಾಜ್ಯದ ಬಯಲು ಪ್ರದೇಶದಲ್ಲಿ ಬಿಸಿ ನೀರು ಹರಿಯುವದು ಮತ್ತು ಬಿಸಿ ನೀರಿನ ಕೆರೆಗಳಿರುವವು. ಪರ್ವತಗಳ ಶಿಖರದಿಂದ ಅನೇಕ ಸಲ ಬಿಸಿ ನೀರು ಮೇಲಕ್ಕೆ ಹಾರಿ ಹರಿದು ಬರುವದು. ಇದರ ಪೈಕಿ ಅತಿ ದೊಡ್ಡ ಗೈಸರ್ ಎಂಬುದರ ಬಾಯಿ ಹದಿನಾರು ಅಡಿ ಅಗಲವಿರುವುದು ಮತ್ತಿದು ಆಗಾಗ ಕುದಿಯುವ ನೀರನ್ನು ಹೊರ ಸೂಸುವದು. ಈ ನೀರು ಉಕ್ಕಿ ಹೊರಗೆ ಹಾರುವಾಗ ಸುಮಾರು ನೂರು ಅಡಿಗಳಷ್ಟು ಎತ್ತರಕ್ಕೆ ಮೇಲೆ ಹಾರಿ ಚೆಲ್ಲುವದಂತೆ.

ಸುಪತ್ತಿಗೆಗೆ ಬೇಕಾಗುವ ಉಣ್ಣೆಯನ್ನು ಒದಗಿಸಿ ಕೊಡುವ ಬಾತು ಕೋಳಿಗಳು ಗ್ರೀನ್ ಲೇಂಡಿನಲ್ಲಿವೆ. ಈ ಪಕ್ಷಿಗಳು ಬಹಳ ಸಾಧು ಸ್ವಭಾವದವುಗಳು ಗೂಡಿನಲ್ಲಿ ಕೂತುಕೊಂಡಾಗ ಮನುಷ್ಯರು ಅವುಗಳ ಬೆನ್ನು ತಟ್ಟಿದರೂ ಗಾಬರಿ ಪಡುವದಿಲ್ಲ. ತಮ್ಮ ಗೂಡು ಬೆಚ್ಚಗೆ ಮತ್ತು ಮೃದುವಾಗುವಂತೆ ತಮ್ಮ ಎದೆಯಲ್ಲಿರುವ ಮೃದುವಾದ ಸಣ್ಣ ಗರಿಗಳನ್ನು ಕೊಕ್ಕಿನಿಂದ ಕಿತ್ತು ಹಾಸಿಕೊಳ್ಳುವವಂತೆ ಇವುಗಳು ಮರುದಿವಸ ಬೆಳಿಗ್ಗೆ ಗೂಡಿನಿಂದ ಆಹಾರಕ್ಕಾಗಿ ಹೊರಗೆ ಹೋದ ಸಮಯ ಜನರು ಗರಿಗಳನ್ನು ಒಟ್ಟು ಮಾಡುವರು. ರಾತ್ರೆ ಸಮಯ ಪುನಃ ಇದೇ ರೀತಿ ಗೂಡುಗಳನ್ನು ಕಟ್ಟುವವು. ಇವುಗಳನ್ನು ಒಟ್ಟುಮಾಡಿ ಅಮೇರಿಕಕ್ಕೆ ಕಳುಹಿಸಿ ವಿಕ್ರಯಮಾಡುವರು.

ಐಸ್‌ಲ್ಯಾಂಡಿನ ಒಕ್ಕಲಿಗರ ಮನೆಗಳು ಹುಲ್ಲು ಮಾಡಿನವುಗಳು. ಜಾನುವಾರು ಕೊಟ್ಟಿಗೆಗಳು ಅದರ ಸುತ್ತುಮುತ್ತಲಿರುವವು. ಚಳಿಗಾಲದಲ್ಲಿ ಕಿಟಕಿಗಳೆಲ್ಲವೂ ಬಂದಾಗಿರುವದು. ಬೇಕಾದಾಗ ಮುಚ್ಚಲು ಅನುಕೂಲವಾದ ಒಂದು ತೂತು ಮಾತ್ರ ಬೆಳಕಿಗಾಗಿ ಇಡುವರು. ದೀಪಕ್ಕೆ ಸೀಮೆ ಎಣ್ಣೆಯನ್ನೂ ಅಡಿಗೆಗೆ ಲದ್ದಿದ ಕಟ್ಟಿಗೆಯನ್ನೂ ಉಪಯೋಗಿಸುವರು. ಇಡೀ ಕುಟುಂಬದವರು ಉಪ್ಪರಿಗೆ ಮೇಲಿನ ಒಂದು ದೊಡ್ಡ ಕೋಣೆಯಲ್ಲಿ ಮಲಗುವರು. ಅವರು ಮಲಗುವಲ್ಲಿ ಕಪಾಟಿನಂತೆ ಅಂತಸ್ತು ಯಿರುವದು. ಸಮುದ್ರದ ಕಳೆಹುಲ್ಲು ಪಕ್ಷಿಗಳ ಗರಿಗಳನ್ನು ಹಾಸಿಗೆಯಾಗಿ ಮಾಡಿಕೊಳ್ಳುವರು. ಇವರು ಅತಿಥಿಗಳ ಉಪಚಾರದಲ್ಲಿ ಹೆಸರುಪಟ್ಟವರು. ಸ್ಕೈರ್ ಎಂಬ ಸಕ್ಕರೆ ಮತ್ತು ಹಾಲು ಒಟ್ಟು ಆರಿಸಿ ನಮ್ಮ ದೂದಪೇಡದಂತಹ ಸಿಹಿ ತಿಂಡಿ ಬಹಳ ಪ್ರೀತಿಯ ತಿನಸು. ಅಥಿತಿಗೆ ಊಟ ಮುಗಿದೊಡನೆ ಕಾಫಿ ಕೊಡುವರು. ಅಥಿತಿಯು ಎದ್ದು ನಿಂತು ಈ ಊಟ ಕೊಟ್ಟಬಗ್ಗೆ ಎಲ್ಲರಿಗೂ ಶುಭವಾಗಲಿ ಎಂದು ಹೇಳಿ ಇದನ್ನು ಕುಡಿಯುವನು. ಇದಕ್ಕುತ್ತರವಾಗಿ ನಿನಗೆ ಒಳ್ಳೆದಾಗಲಿ ಎಂದು ಯಜಮಾನನು ಹರಸುವನು.

ಸರಕುಗಳನ್ನು ಸಾಗಿಸಲಿಕ್ಕೆ, ಉಳುವರೆ, ಹುಡುಗಿಯರು ಹಾಲು ಡಬ್ಬಿ ವೈಯುವರೆ ಸಣ್ಣ ಕುದುರೆಗಳನ್ನು ಉಪಯೋಗಿಸುವರು. ಇಂಥ ಕುದುರೆಗಳು ಎರಡು ಜನರಿಗೊಂದರಂತೆ ಅಲ್ಲಿವೆ. ಅತಿಥಿಗಳು ಮನೆಗೆ ಬಂದರೆ ತಮ್ಮ ಕುದುರೆಯನ್ನು ಮನೆಯ ಸುತ್ತಮುತ್ತಲಲ್ಲಿ ಮೇಯಲು ಬಿ

(೯ನೇ ಪುಟ ನೋಡಿರಿ.)

ಶಕ್ತ್ಯಾರಾಧನೆ

ಶಕ್ತಿಪೂಜೆಯ ಆಧ್ಯಾತ್ಮಿಕ ಸ್ವರೂಪ

ವಿಶ್ವವಂದ್ಯೆಯಾದ ಶಕ್ತಿಯ ಸ್ವರೂಪ ಬ್ರಹ್ಮಜ್ಞಾನ ಜ್ಯೋತಿ.
ಮಾನವ ಮಹಿಷಾಸುರನನ್ನು ಇದು ಕೊಂದು ವಿಜಯ ಪಡೆಯುವುದು.

ಮಹಾಶಕ್ತಿಯು ಭುವನಮೋಹಿನಿ; ಜಗಜ್ಜನನಿ ಮತ್ತು ಮಹಾ ಮಾಯೆಯಾಗಿದ್ದಾಳೆ. ವೇದ, ಶಾಸ್ತ್ರ, ಪುರಾಣ ಮತ್ತು ತಂತ್ರಗಳೆಲ್ಲವೂ ಆಕೆಯ ಚರಣವಂದನೆಯನ್ನು ಮಾಡುತ್ತವೆ. ವಿಶ್ವದ ಎಲ್ಲ ದೇಶಗಳಲ್ಲಿಯೂ ಬೇರೆ ಬೇರೆ ಹೆಸರುಗಳಿಂದ ಮತ್ತು ರೂಪಗಳಿಂದ ಆಕೆಯನ್ನು ಸೇವಿಸುತ್ತಾರೆ.

ಮಹಾಶಕ್ತಿಯು ಅನಂತ ಭೇದವುಳ್ಳವಳು. ವೇದಗಳಲ್ಲಿ ಆಕೆಯನ್ನು ಗಾಯತ್ರಿ ಎಂದು ಉಲ್ಲೇಖಿಸಲಾಗಿದೆ. ಯಜ್ಞದಲ್ಲಿ ಆಕೆಯ ಹೆಸರು ಸ್ವಾಹಾ ಎಂದು. ಪಿತೃಕರ್ಮಗಳಲ್ಲಿ ಸ್ವಧಾ ಎಂಬ ಹೆಸರು ಆಕೆಯದು. ಉಪಾಸನೆಯಲ್ಲಿ ಆಕೆ ದುರ್ಗೆ, ಲಕ್ಷ್ಮೀ ಸೀತೆ ಮತ್ತು ರಾಧೆ. ಯೋಗದಲ್ಲಿ ಕುಂಡಲಿನಿ ಎಂದು ಕರೆಯಲ್ಪಡುವ ಮಹಾಶಕ್ತಿಯನ್ನು ಯೋಗಿಯು ಜಾಗ್ರತಗೊಳಿಸಿ ಸೇವಿಸುತ್ತಾನೆ.

ಮಹಾಶಕ್ತಿಯ ಉಪಾಸನೆ ಪ್ರತಿನಿತ್ಯವೂ ನಡೆಯುತ್ತದೆ. ಆದರೂ ಚೈತ್ರ ಮತ್ತು ಆಶ್ವೀಜ ಮಾಸದ ನವರಾತ್ರಿಯ ವೇಳೆ, ಆಕೆಯ ಉಪಾಸನೆ ವಿಶೇಷವಾಗಿದೆ. ಇದಕ್ಕೆ ಕಾರಣವಿಲ್ಲದಿಲ್ಲ. ನವರಾತ್ರಿಯ ದಿನಗಳಲ್ಲಿ ಮಹಾಶಕ್ತಿಯು ಸೃಷ್ಟಿಯ ಉದ್ಭವ ಮತ್ತು ಲಯದ ವೇಳೆಯಷ್ಟು ತೀವ್ರವಾಗಿರುತ್ತಾಳೆ; ಆದುದರಿಂದ, ಆಕೆಯ ಆವಾಹನೆಯೂ ಉಪಾಸನೆಯೂ ಸುಗಮವಾಗಿದೆ. ಈ ಕಾಲದಲ್ಲಿ ವಾಯುವಿನ ಗತಿಯು ಏಕಪ್ರಕಾರವಾಗಿರುವುದರಿಂದ ಕುಂಡಲಿನಿಯ ಜಾಗರಣ ಮತ್ತು ಅದರ ಊರ್ಧ್ವಗತಿಯು ಉಳಿದ ಸಮಯಕ್ಕಿಂತ ಸರಳವಾಗುತ್ತದೆ ಆದುದರಿಂದಲೇ ಇದೇ ಸಮಯದಲ್ಲಿ ಭಗವತಿ ದುರ್ಗೆಯ ಆರಾಧನೆ ಮಾಡಬೇಕೆಂದು ನಮ್ಮ ಶಾಸ್ತ್ರಗಳು ಆದೇಶವಿತ್ತಿವೆ. ಈ ವೇಳೆ ಆಸ್ತಿಕರಾದ ಭಾರತೀಯರೆಲ್ಲರೂ ಜಗದಂಬಿಕೆಯ ಪೂಜೆ ಮಾಡುತ್ತಾರೆ. ಚಂಡಿ ರೂಪದಲ್ಲಿ ಸೇವಿಸುತ್ತಾರೆ; ಆಕೆಯ ಸ್ತೋತ್ರಪಾಠವನ್ನು ಮಾಡುತ್ತಾರೆ.

ಆದಿಕಾಲದಲ್ಲೊಮ್ಮೆ ದೇವತೆಗಳು ಮತ್ತು ಅಸುರರ ನಡುವೆ ಒಂದು ನೂರು ವರ್ಷಗಳ ವರೆಗೆ ಭೀಕರ ಕದನ ಸಂಘಟಿಸಿತು. ಇದರಲ್ಲಿ ಮಹಿಷಾಸುರನು ದೇವತೆಗಳನ್ನು ಪರಾಜಯಗೊಳಿಸಿ ಇಂದ್ರ ಸಿಂಹಾಸನವನ್ನೇರಿದನು. ಚಂಡ, ಮುಂಡ, ಶುಂಭ, ನಿಶುಂಭ ಮೊದಲಾದ ಹದಿನಾಲ್ಕು ಮಹಾ ಸೇನಾನಿಗಳು ಆತನಿಗಿದ್ದರು. ಇವರ ಅತ್ಯಾಚಾರ ಪೀಡಿತ ಸ್ವರ್ಗ ಲೋಕವು ಕಂಪಿಸ ತೊಡಗಿತು. ದೇವತೆಗಳು ತ್ರಾಹಿ ತ್ರಾಹಿ ಎಂದು ಕೂಗಿಟ್ಟರು. ಈ ವಿಪನ್ನಾವಸ್ಥೆಯಲ್ಲಿ ವಿಷ್ಣು, ಬ್ರಹ್ಮ ಮೊದಲಾದ ದೇವತೆಗಳ ತೇಜಸ್ಸಿನ ಕೂಡಿಕೆಯಿಂದ ಭಗವತಿ ದುರ್ಗೆಯ ಅವತಾರವಾಯಿತು. ಸುವರ್ಣದಂತೆ ದೇದೀಪ್ಯಮಾನವಾದ ಆಕೆಯ ವರ್ಣ ಕಂಗಳಿಗೆ ಕುಕ್ಕುತಿತ್ತು; ಆಕೆಗೆ ಮೂರು ಕಣ್ಣುಗಳಿದ್ದುವು, ಹದಿನೆಂಟು ಕೈಗಳಿದ್ದುವಲ್ಲದೇ ಸಿಂಹವು ಆಕೆಯ ವಾಹನವಾಗಿತ್ತು. ಎಲ್ಲ ದೇವತೆಗಳೂ ತಮ್ಮ ಶಸ್ತ್ರಾಸ್ತ್ರಗಳನ್ನು ಆಕೆಯ ಕೈಗೊಪ್ಪಿಸಿದರು. ಈ ನಾನಾ ಆಯುಧಪಾಣಿಯಾಗಿ ಮಹಾ ಶಕ್ತಿಯು ಲೋಕ ಕಂಟಕನಾದ ಮಹಿಷಾಸುರನನ್ನು ಗೋಳು ಹೊಯಿಸಿ ಕೊಂದಳು. ಮಹಿಷಾಸುರನು ಸುಮ್ಮನುಳಿದನೆ? ಆತ ಕೋಣನ ರೂಪವನ್ನು ಧರಿಸಿ ತನ್ನ ದಶ ಅಂಗ-ಪ್ರತ್ಯಂಗಗಳ—(ಮುಸುಡು ೧, ಉಗುರು ೪, ಬಾಲ ೧, ಕೊಂಬು ೨, ನಾದ ಮತ್ತು ನಿಶ್ವಾಸ) ಮೂಲಕ ಹೋರಾಡಿ, ನಡುವೆ ನಾಲ್ಕುಬಾರಿ ಸ್ವರೂಪವನ್ನು ಬದಲಾಯಿಸಿ ಹೋರಾಡಿದನು. ಆದರೆ, ಆತನ ಕಪಟವಿದ್ಯೆಯು ದೇವಿಯನ್ನು ಸೋಲಿಸಲು ಅಸಮರ್ಥವಾಯಿತು. ಆಕೆ ಆತನನ್ನು ಕೊಂದೇ ಬಿಟ್ಟಳು. ದೇವತೆಗಳು ಭಗವತಿಯ ಮೇಲೆ ಹೂ ಮಳೆಗರೆದರು. ಸ್ವರ್ಗದ ಆಧಿಪತ್ಯವನ್ನು ಪುನಃ ಮಾಡತೊಡಗಿದರು.

ಇದು ಆಕೆಯ ಪುರಾಣದ ಕಥೆ. ಇದರ ಆಧ್ಯಾತ್ಮಿಕ ರೂಪವು ಅತ್ಯಂತ ಭಾವಪೂರ್ಣವಾಗಿದೆ. ಮಾನವನ ಪರಮಾಯುಷ್ಯ ಒಂದುನೂರು ವರ್ಷವೆಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಈ ಅವಧಿಯಲ್ಲಿನ ಜೀವನದಲ್ಲಿ ದಿನಂಪ್ರತಿ ನಡೆಯುವ ಪಾಪ-ಪುಣ್ಯಗಳ ಸಂಘರ್ಷಣವೇ ಅಸುರ—ದೇವತೆಗಳ ನೂರು ವರ್ಷದ ಸಮರ. ಪಾಪಿ ಮಾನವ ಶರೀರವೇ ಮಹಿಷಾಸುರ. ವಾಸನೆ, ಕಾಮ, ಕ್ರೋಧ, ಲೋಭ, ಮೋಹ, ಅಹಂಕಾರ, ಮಮತ್ವ, ರಾಗ, ದ್ವೇಷ, ವೈರ, ಹಿಂಸೆ, ಶೋಕ, ಮದ ಮತ್ತು ಮತ್ಸರ ಎಂಬಿವೇ ಅಸುರನ ಹದಿನಾಲ್ಕು ಸಹಯೋಗಿಗಳು. ಈ ದಾನವರ ಸಹಾಯದಿಂದಲೇ ಮಾನವರೂಪೀ ಅಸುರನು ಸತ್ಯ, ಜ್ಞಾನ, ತಪಸ್ಸು ಮತ್ತು ಸತ್ಕರ್ಮರೂಪಿ ದೇವತೆಗಳನ್ನು ಸೋಲಿಸುತ್ತಾನೆ. ಮಹಿಷಾಸುರನು ಪಡೆದ ನಾಲ್ಕು ಪರಿವರ್ತನೆಗಳು ಮಾನವನ ಬಾಲ್ಯ ಯೌವನ, ಗೃಹಸ್ಥ ಮತ್ತು ವಾರ್ಧಕ್ಯ ಅವಸ್ಥೆಗಳಾಗಿವೆ. ಮಾನವನೇ ಸ್ವಯಂ ಕೋಣನಂತಾಗುತ್ತಾನೆ; ಮತ್ತು ಮಹಿಷದ ದಶಾಂಗಗಳೇ ಮಾನವನ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಾಗಿವೆ.

ಈ ಮಹಿಷಾಸುರನನ್ನು ವಧಿಸಲು ಉದ್ಭವವಾಗುವ ಮಹಾಶಕ್ತಿಯೇ ಬ್ರಹ್ಮಜ್ಯೋತಿ. ಬ್ರಹ್ಮ ಜ್ಯೋತಿ ಸತ್ವಗುಣಯುತವಾಗಿದೆ; ದುರ್ಗೆಯ ವರ್ಣವೂ ಕಾಂತಿಮಯವಾಗಿದೆ. ಸತ್ಯ, ಜ್ಞಾನ, ತ್ಯಾಗ, ಭಕ್ತಿ, ಪ್ರೇಮ, ಅಹಿಂಸೆ, ಕ್ಷಮೆ, ಕಲ್ಯಾಣ, ಶಕ್ತಿ, ಶಾಂತಿ ಮೊದಲಾದ ಹದಿನೆಂಟು ಗುಣಗಳೇ ಮಹಾ ಶಕ್ತಿಯ ಬಾಹುಗಳು. ಇವುಗಳಲ್ಲಿ ವಿವಿಧಾಸ್ತ್ರಗಳನ್ನು ತೊಟ್ಟು ಬ್ರಹ್ಮ ಜ್ಯೋತಿಯು ಮಾನವ ಮಹಿಷಾಸುರನೊಡನೆ ಹೋರಾಡುತ್ತದೆ. ರಜೋಗುಣವೆಂಬ ಸಿಂಹವೇ ಬ್ರಹ್ಮ ಜ್ಯೋತಿ ಮಹಾ ಶಕ್ತಿಯ ವಾಹನ ಸತ್ವಗುಣವು ರಜೋಗುಣದ ಸಹಾಯದಿಂದ ತಮೋಗುಣವನ್ನು ಸೋಲಿಸುತ್ತದೆ ಸಿಂಹವಾಹಿನಿ ಮಹಾ ಶಕ್ತಿಯಿಂದ ಮಹಿಷಾಸುರನ ವಧೆಯಾಗಲು ಇದೂ ಕಾರಣವಾಗಿದೆ. ಆತ್ಮ ತತ್ವ ವೃಷ್ಟಿಯೇ ಪುಷ್ಪ ವೃಷ್ಟಿಯಾಗಿದೆ.

ದೇವೀ ಪುರಾಣದ ಪಾವನ ಕಥೆಯ ಆಧ್ಯಾತ್ಮಿಕ ಸ್ವರೂಪವಿದು. ಇದರಲ್ಲಿ ತಮದ ಮೇಲೆ ಸತ್ಯ ಮತ್ತು ದಾನವೀ ಭಾವನೆಗಳ ಮೇಲೆ ದೈವೀ ಭಾವನೆಗಳನ್ನು ಪ್ರತಿಷ್ಠಾಪಿಸುವ ರೂಪಕ ಇರುವುದು.

ನಮ್ಮ ದೇಶದಲ್ಲಿ ಸೃಷ್ಟಿ ಮೊದಲಾದಂದಿನಿಂದಲೂ ಶಕ್ತಿಯ ಉಪಾಸನೆ ನಡೆಯುತ್ತಿದೆ. ರಾಮಾಯಣ, ಮಹಾಭಾರತ ಮತ್ತು ವಿಭಿನ್ನ ಪುರಾಣಗಳಲ್ಲಿ ಅಲ್ಲಲ್ಲಿ ಶಕ್ತಿ ಉಪಾಸನೆಯ ಉಲ್ಲೇಖವಿದೆ. ಐತಿಹಾಸಿಕ ಕಾಲದಲ್ಲಿ ರಾಜಾ ಅಸಯನ ಮುದ್ರೆಯಲ್ಲಿ, ಉದಯಗಿರಿಯ ಗುಹೆಗಳಲ್ಲಿ, ವಜ್ರಾಂತಪನ ಮೊಹರಿನಲ್ಲಿ ಎಲ್ಲೋರದ ಗವಿಗಳಲ್ಲಿ ದುರ್ಗೆಯ ಚಿತ್ರಗಳು ದೊರೆಯುತ್ತವೆ. ಪ್ರಪಂಚದ ಅನೇಕ ಸಂಶೋಧನೆಗಳು ಭಾರತದಲ್ಲಿ ಶಕ್ತಿಪೂಜೆಯ ಪ್ರಾಚೀನತೆಯನ್ನು ಪುಷ್ಟೀಕರಿಸುತ್ತವೆ.

ನಮ್ಮ ಕಲ್ಪನೆಗಳ ಆಧಾರದಿಂದಲೇ ಮತ್ತು ನಮ್ಮ ಉಪಾಸನಾ ಪದ್ಧತಿಯಂತೆಯೇ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿಯೂ ಶಕ್ತಿ ಪೂಜೆ ಪ್ರಚಲಿತವಿತ್ತು. ಇಂದಿಗೂ ಹಲವಾರು ದೇಶಗಳಲ್ಲದು ನಡೆಯುತ್ತಿದೆ.

ಬೆಬಿಲೋನಿಯಾದ ಅಮಾದೇವಿ, ಯೂನಾನಿನ ಆರ್ಗಮಿಸ್, ಈಜಿಪ್ತದ ಶೋಖಿತಾಮಾತಾ, ರೋಮದ ದೇವಿ ಡಾಯನಾ, ಜರ್ಮನಿಯ ಈಸಿಸ್ ಮತ್ತು ಚೀನದ ದೇವಿ ಕ್ವಾನ ಎಂಬುವು ನಮ್ಮ ದೇಶದ ಮಹಾಶಕ್ತಿ ದುರ್ಗೆಯ ಬೇರೆ ಬೇರೆ ಹೆಸರುಗಳು.

ಅಮಾದೇವಿಯ ಸ್ತುತಿಯು ಶುಂಭನಿಶುಂಭರೊಡನೆ ದುರ್ಗೆಯ ಹೋರಾಟವನ್ನೆ ಸಾಮಾನ್ಯವಾಗಿ ಹೇಳುತ್ತದೆ.

ಆರ್ಗಮಿಸ್ ಯೂನಾನಿನ ರಕ್ಷಕಳು; ಶೋಖಿತೆಯು ಸಿಂಹವಾಹಿನಿ ಮಾತ್ರವಲ್ಲ ಖಡ್ಗಧಾರಿಣಿಯಾಗಿರುವಳು. ಈ ದೇವಿಯ ಉಪಾಸನೆಯು ಐಗುಪ್ತದಲ್ಲಿ ಇಂದಿಗೂ ನವರಾತ್ರಿ ವೇಳೆ ನಡೆಯುತ್ತದೆ. ದೇವಿಯ ಪೂಜೆಯಲ್ಲಿ ಇಲ್ಲಿ ಉದಕಪೂರ್ಣ ಘಟವನ್ನು ಸ್ಥಾಪಿಸುತ್ತಾರೆ. ಅದರ ಮೇಲೆ ಸ್ವಸ್ತಿಕ, ತ್ರಿಕೋಣ, ತ್ರಿಖಂಡ, ತ್ರಿಶೂಲಗಳ ಗುರುತನ್ನು ಹಾಕುತ್ತಾರೆ. ರೋಮಿನ ಡಾಯನಾ ಧನುಷಧಾರಿಣಿಯಾಗಿ ಶತ್ರುನಾಶ ಮಾಡಿದವಳು. ಈಸಿಸ್ ಜರ್ಮನಿಯ ರಣಭೈರವಿ! ಈಕೆ ರಣದೇವತೆ ಹರನ ಪತ್ನಿ. ಇಲ್ಲಿನವರು ಈಗಲೂ ತಮ್ಮ ಹೆಸರಿನ ಮೊದಲು ಹರ ಶಬ್ದವನ್ನು ಹಾಕಿಕೊಳ್ಳುತ್ತಾರೆ. ಇದೊಂದವರಿಗೆ ಹೆಮ್ಮೆಯ ಹೆಸರು. ಇಂಡೋಚೀನದಲ್ಲಿ ಗೌರೀ ಮತ್ತು ಉಮಾ ಎಂಬ ಹೆಸರುಗಳಿಂದಲೇ ಶಕ್ತಿಯನ್ನು ಆರಾಧಿಸುತ್ತಾರೆ. ಪೂರ್ವ ಭಾರತ ದ್ವೀಪಗಳಾದ ಜಾವಾ, ಸುಮಾತ್ರ, ಮೊದಲಾದೆಡೆಗಳಲ್ಲಿ ಭಗವತಿ ದೇವಿಯ ಉಪಾಸನೆಯು ನಮ್ಮಂತೆಯೇ ಅಷ್ಟಭುಜೆಯ ರೂಪದಲ್ಲಿ ನಡೆಯುತ್ತದೆ. ಆಕೆಯ ಆರಾಧನೆಯಲ್ಲಿ ಭಾರತೀಯರ ಮಂತ್ರಗಳೇ ಉಚ್ಚರಿಸಲ್ಪಡುತ್ತವೆ.

ಇಂತಹ ಮಹಿಮಾಮಯಿಯೂ ವಿಶ್ವಪೂಜಿತೆಯೂ ಆದ ಭಗವತಿ ಮಹಾ ಶಕ್ತಿಯು ನಮ್ಮ ದೇವಿ. ನವರಾತ್ರಿಯ ಪಾವನ ದಿನಗಳಲ್ಲಿ "ಅಣು ಯುಗದ ಈ ಅದ್ವಿತೀಯ ಪ್ರಪಂಚದಲ್ಲಿಯೂ ನಾವು ನಿರ್ಭಯರಾಗಿ ಸಂಚರಿಸುವ ಶಕ್ತಿಯನ್ನು ದಯಪಾಲಿಸೆಂದು" ಪ್ರಾರ್ಥಿಸೋಣ.

ಮೂಲ: "ನವಭಾರತ ಟಾಯಮ್ಸ್"
ಅನುವಾದ: ಗೋರಾ.)

ಕಾಸರಗೋಡು ಮು. ಕೋರ್ಟಿನಲ್ಲಿ

S. C. No 134/1958.
R. E. P No 386/1959.

M/s ಶೋಭಾ ಸಿಲ್ಕ್ ಸದನ್ ಬಗ್ಗೆ ಪಾರ್ಟನರ್ M. ನರಸಿಂಹ ಕಿಣಿ ವಾದಿ-ಅರ್ಜಿದಾರ

ಮತ್ತು

A. K. ವಾಸುದೇವ ರಾವ್, ಕೃಷ್ಣ ಬೈಪಾಡಿತ್ತಾಯರ ಮಗ, ಕಾಸರಗೋಡು ತಾಲೂಕು ತಿರುಬಾಗಿಲು ಗ್ರಾಮದ ವ್ಯಾಪಾರಿಯಲ್ಲಿರುವವರು— ಪ್ರತಿವಾದಿ ರೆಸ್‌ಪೊಂಡೆಂಟ್ಸ್.

ಮೇಲ್ಕಂಡ ಅಪೀಲ್ ಜ್ಯಾರಿಯು ರೆಸ್‌ಪೊಂಡೆಂಟನ ಹಾಜರಾತಿಯ ಬಗೆ ತಾ. 17—10—1959ರಲ್ಲು ಸದರೀ ಕೋರ್ಟಿನಲ್ಲಿ ತನ್ನಿಗೆ ಇಟ್ಟ ಸಂಗತಿ ರೆಸ್‌ಪೊಂಡೆಂಟ್‌ನ ತಿಳುವಳಿಕೆ ಬಗ್ಗೆ ಈ ಮೂಲಕ ಪ್ರಕಟಿಸಲಾಗಿಯದೆ.

K. P. Umesh Rao.
ಅರ್ಜಿದಾರನ ಎಡ್ವಕೇಟ್.

ಕಾಸರಗೋಡು ತಾ. 3-10-1959.

ಪ್ರಕಟಣೆ

ಶ್ರೀ ಕ್ಷೇತ್ರ ಉಚ್ಚಿಲ ಮಹಾ ಲಕ್ಷ್ಮೀ ದೇವಸ್ಥಾನದಲ್ಲಿ ಮಾಮೂಲಿನಂತೆ ನಡೆಯುವ ನವರಾತ್ರಿ ಪೂಜೆಯು ತಾ 3-10-59 ರಿಂದ 10-10-59 ವರೆಗೆ ಮತ್ತು ತಾ. 11-10-59 ನೇ ಆದಿತ್ಯವಾರ ಆಶ್ವಯುಜ ಶುದ್ಧ ವಿಜಯದಶಮಿ ಯಂದು ಬೆಳಿಗ್ಗೆ ಗಂಟೆ 8ರಿಂದ ಮಧ್ಯಾಹ್ನ ಗಂಟೆ 12ರ ವರೆಗೆ ಚಂಡಿಕಾ ಹೋಮ ಪೂರ್ಣಾಹುತಿ ಆ ಮೇಲೆ ಗಂಟೆ 2ಕ್ಕೆ ದರ್ಶನ ಮತ್ತು ಪ್ರಸಾದ ವಿತರಣೆ ಭಕ್ತಾದಿಗಳು ಸಹಕರಿಸಿ ಶ್ರೀ ದೇವಿಯ ಶ್ರೀಮುಡಿ ಗಂಧ ಪ್ರಸಾದ ಪಡೆದು ಪುಣ್ಯ ಗಳಿಸಬೇಕಾಗಿ ಅಪೇಕ್ಷೆ.

ಯು. ಕೃಷ್ಣಪ್ಪ.
ಅಧ್ಯಕ್ಷರು,
ಕಾರ್ಯಕಾರಿ ಕಮಿಟಿ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. S. No 436/1959

ವೀರಣ್ಣ ಶೆಟ್ಟಿ — ವಾದಿ

ಮತ್ತು

ಸೂರಮ್ಮ ಶೆಡ್ತಿ ಕೂಡಾ — ಪ್ರತಿವಾದಿರು. 2 ನೇ ಪ್ರತಿವಾದಿ ಮಹಾಬಲ ಶೆಟ್ಟಿ—ಸೂರಮ್ಮ ಶೆಟ್ಟಿ ಮಗ ಉಡ್ಪಿ ತಾಲೋಕು ನಂಬ್ರ 62ನೆ ಹೇರೂರು ಗ್ರಾಮದ ಪೇರಂಜೆ. ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ,

ವಾದಿಯ ಹಕ್ಕಿನ ಅಸ್ತಿಯನ್ನು ಪ್ರತಿವಾದಿರು ಮೂಲಗೇಣಿಗೆ ಅನುಭವಿಸಿ ಬರುತ್ತಾ ಕಳೆದ ವಿಳಂಬಿ ಸಂವತ್ಸರದ ಬಾಕಿಗೇಣಿ ರೂಪಾಯಿ 114—00ಕ್ಕೆ ವಾದಿಯು ಸದ್ರಿ ಕೋರ್ಟಿನಲ್ಲಿ ಮಾಡಿದ ದಾವೆಯು ನಿಮ್ಮ ನೋಟೀಸು ಬಗ್ಗೆ ತಾ 29—10—1959 ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ಕೋರ್ಟಿನಲ್ಲಿ ಸದ್ರಿದಿವಸ ಹಗಲು ಗಂಟೆ 10ಕ್ಕೆ ಹಾಜರಾಗಿ ಜಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದ್ರೆ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Varadaraya Pai
Advocate for Plaintiff
ಉಡ್ಪಿ. 6—10—1959

> ಸಾಹಸ, ಬುದ್ಧಿಬಲ, ಧೈರ್ಯ ಮತ್ತು ವೀರ್ಯ ಗುಣಗಳಿರುವಲ್ಲಿ ಪರಮಾತ್ಮನು ಸ್ವಯಂ ಆವಾಸಮಾಡುತ್ತಾನೆ; ಪರಮಾತ್ಮನ ಅನುಗ್ರಹ ಅಲ್ಲಿ ಪರ್ಯಾಪ್ತವಿರುತ್ತದೆ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ಆಂಗ್ಲೇಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೮-೧೦-'೫೯	೬

ಆರೋಗ್ಯ ರಕ್ಷಣೆ

ಆರೋಗ್ಯವೇ ಭಾಗ್ಯ. ಅದಿದ್ದರೆ ಮಾತ್ರ ಮಾನವನ ಮಾತ್ರವಲ್ಲ ಸರ್ವಜೀವಿಗಳ ಬದುಕೂ ಸಾರ್ಥಕವಾಗುವ ಅವಕಾಶ ದೊರೆಯುವುದು. ಆರೋಗ್ಯವು ಕೆಟ್ಟು ಹೋದ ಪಕ್ಷದಲ್ಲಿ ಜೀವನವೇ ವಿಷಣ್ಣಾವಸ್ಥೆಗಿಳಿಯುವುದು. ವಿಶ್ವದ ಸಂಪನ್ನ ದೇಶಗಳ ಪ್ರಜೆಗಳು ತಮ್ಮ ಆಹಾರ— ವಿಹಾರಗಳಲ್ಲಿ ಒಂದು ಕ್ರಮನಿಟ್ಟುಕೊಂಡು ಅವನ್ನು ಚಾಚೂ ತಪ್ಪದೆ ಅನುಸರಿಸಿಕೊಂಡು ಬರುತ್ತಿರುವುದರಿಂದ, ಅವರ ಆರೋಗ್ಯ ಸ್ಥಿತಿಯು ಉನ್ನತವಾಗಿದೆ. ಜಗತ್ತಿನ ಅಭಿವೃದ್ಧ ರಾಷ್ಟ್ರಗಳಲ್ಲಿ ಒಂದಾದ ಭಾರತದ ಜನತೆಯ ಬಹುಭಾಗ ತೀರ ಬಡತನದ ಜೀವನವನ್ನೇ ಸಾಗಿಸುತ್ತಿರುವುದರಿಂದ ಪರಿಶ್ರಮಕ್ಕೆ ಸರಿಯಾದ ಆಹಾರಾದಿಗಳ ಕೊರತೆಯು ಕಾಣಿಸುತ್ತಿದೆ; ಮತ್ತದರಿಂದಾಗಿಯೇ ಬಹುತಃ ಅನಾರೋಗ್ಯವು ಇಲ್ಲಿ ತಾಂಡವವಾಡುತ್ತಿದೆ. ಇತಿ ಮಿತಿಯರಿಯದೆ ಆಹಾರ ಸೇವನೆಯಲ್ಲಿ ಒಂದು ವ್ಯವಸ್ಥಿತ ನಿಯಮವನ್ನು ಅನುಸರಿಸುವುದು ಬಹುತೇಕ ಭಾರತೀಯರಿಗೆ ಅಸಾಧ್ಯವಾಗಿದೆ. ಎಂತಲೇ ಇಲ್ಲಿ ಸಾರ್ವಜನಿಕ ಆರೋಗ್ಯ ಸ್ಥಿತಿಯು ಉತ್ತಮವಾಗಿಲ್ಲ.

ಭಾರತದಲ್ಲಿ ತರಬೇತಿ ಹೊಂದಿದ ಅನುಭವಸ್ಥ ವೈದ್ಯರ ಸಂಖ್ಯೆಯೂ ತೀರ ಅಲ್ಪವಾಗಿದೆ. ಭಾರತದಂತಹ ಜನನಿಬಿಡವಾದ ದೇಶದಲ್ಲಿರಬೇಕಾದ ವೈದ್ಯರ ಸಂಖ್ಯೆಯು ಈಗಿರುವುದಕ್ಕಿಂತ ಐದು-ಹತ್ತು ಪಾಲಷ್ಟು ಹೆಚ್ಚು ಬೇಕಾದ ಆವಶ್ಯಕತೆಯಿದೆ. ನಮ್ಮಲ್ಲಿ ಈಗಿರುವ ವೈದ್ಯರಾದರೂ ಹೆಚ್ಚಾಗಿ ನಗರ ಪ್ರದೇಶಗಳಲ್ಲಿಯೇ ಇರಬಯಸುವುದರಿಂದ, ಗ್ರಾಮೀಣ ಜನತೆಗೆ ವೈದ್ಯಕೀಯ ಸವಲತ್ತು ಬಹಳ ದೂರವಾಗಿ ಪರಿಣಮಿಸಿದೆ. ಇದರಿಂದಾಗಿ ಗ್ರಾಮೀಣ ಜನತೆಯ ಆರೋಗ್ಯವು ಹದಗೆಡುತ್ತಿದೆ. ಆಹಾರದ ಅಭಾವ ಅಥವಾ ತತ್ಸಂಬಂಧದ ಅಜ್ಞಾನಗಳೊಡನೆ ನಿರಕ್ಷರತೆಯೂ ದಾರಿದ್ರ್ಯವೂ ಈ ರೋಗಗಳು ಹರಡುವುದಕ್ಕೆ ಪ್ರಬಲ ಕಾರಣಗಳೆಂದು ಹೇಳಬಹುದು. ಜನತೆಯ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಂಡರೆ, ಅವರಲ್ಲಿ ನಿರ್ಮಲತೆಯ ಮಹತ್ವದ ಅರಿವಾದರೆ, ಆರೋಗ್ಯ ರಕ್ಷಣೆಯ ಬಗ್ಗೆ ಸದ್ಭಾವನೆಯುದ್ಭವಿಸಿದರೆ ಮಾತ್ರ ಜನತೆಯ ಆರೋಗ್ಯಸ್ಥಿತಿ ಸುಧಾರಿಸಬಲ್ಲುದು. ಸಾಂಕ್ರಾಮಿಕ ರೋಗಗಳು ಕೂಡ ನಮ್ಮ ದೇಶದಲ್ಲಿ ತುಂಬ ಇವುಗಳ ಬಗ್ಗೆಯೂ ಅನಾಸಕ್ತಿಯೋಗ ತಾಳುವುದರಿಂದಾಗಿಯೇ ಹಲವಾರು ಪ್ರಾಣ ಗತಿಸಿ ಹೋಗುತ್ತಿವೆ. ಕ್ಷಯ, ಆನೆಕಾಲು ಮೊದಲಾದ ಸೋಂಕು ರೋಗಗಳು ನಮ್ಮ ಜನತೆಯಲ್ಲಿ ಒಂದಂಶವನ್ನು ಸದಾ ಕಾಡುತ್ತಿವೆ. ಇವುಗಳು ಯೋಗ್ಯ ಉಪಚಾರಗಳಿಂದ ಮಾತ್ರ ವಾಸಿಯಾಗಬಲ್ಲ ಮಹಾಮಾರಿಗಳಾಗಿವೆ. ಆದರೆ, ಹೊಟ್ಟೆಗೇನೇ ಸಾಕಷ್ಟು ಹಿಟ್ಟಿಲ್ಲದ ಭಾರತೀಯನು ಇಂತಹ ರೋಗಗಳಿಗೆ ಬಲಿಬಿದ್ದರೆ, ಆತನ ಜೀವಿತ ಊರ್ಜಿತಗೊಳ್ಳುವುದೆಂದು? ಇದಕ್ಕಾಗಿ ಜನತಾ ಸರಕಾರದ ಹೊಣೆಗಾರಿಕೆಯೂ ಅತೀವವಾಗಿದೆ. ಈಗಾಗಲೇ ಸರಕಾರವು ವಿವಿಧ ಯೋಜನೆಗಳನ್ನು ಇದಕ್ಕಾಗಿ ಕೈಗೊಂಡಿರುತ್ತದೆ ಆದರೆ, ಇವೆಲ್ಲವೂ ಈಗ ಪ್ರಾರಂಭಿಕಾವಸ್ಥೆಯಲ್ಲಿಯೇ ಇವೆಯೆಂಬುದು ನಿರ್ವಿವಾದ. ಅಧಿಕಸಂಖ್ಯೆಯಲ್ಲಿ ನುರಿತ ವೈದ್ಯರ ತರಬೇತಿಯನ್ನು ಮಾಡುವುದಲ್ಲದೇ ದೇಶದ ಬಡ ಜನತೆಯ ಆರ್ಥಿಕ ಹಾಗೂ ಆರೋಗ್ಯ ಸ್ಥಿತಿಗತಿಗಳನ್ನೂ ಉನ್ನತೀಕರಿಸುವ ಯೋಜನೆಗಳು ನಮಗಿಂದು ಅಗತ್ಯವಿವೆ. ಆವಶ್ಯತೆಯಿದ್ದವರಿಗೆ ಉಚಿತವಾದ ವೈದ್ಯಕೀಯ ಸೌಕರ್ಯವನ್ನೂ ನೀಡಲು ನಾವು ಹಿಂದೆ ಮುಂದೆ ನೋಡಬಾರದು.

ಸದ್ಯ ಮೈಸೂರು ಸರಕಾರವು ಮಕ್ಕಳ ಆರೋಗ್ಯ ಪಾಲನೆಗಾಗಿ ಒಂದು ಯೋಜನೆಯನ್ನು ರೂಪಿಸಿದೆಯೆಂದು ತಿಳಿದು ಬರುತ್ತದೆ. ಇದರನ್ವಯ ಶಾಲೆಗಳಲ್ಲಿನ ಎಲ್ಲ ಮಕ್ಕಳನ್ನೂ ವೈದ್ಯಕೀಯ ಪರೀಕ್ಷೆಗೆ ಗುರಿಮಾಡಿ ರೋಗ ಗ್ರಸ್ತರಿಗೆ ಉಚಿತ ವೈದ್ಯಕೀಯ ಸೌಲಭ್ಯವನ್ನೂ ಆವಶ್ಯಕತೆಯಿರುವವರಿಗೆ ಪೌಷ್ಟಿಕ ಆಹಾರವನ್ನೂ ಒದಗಿಸಲಾಗುವುದು ಸದ್ಯ ಮಂಗಳೂರು, ಮೈಸೂರು, ಧಾರವಾಡ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಮಾತ್ರ ಈ ಯೋಜನೆಯನ್ನು ವ್ಯವಹೃತಗೊಳಿಸುವುದಾದರೂ ಕ್ರಮೇಣ ಇಡಿ ರಾಜ್ಯದಲ್ಲಿಯೂ ಇದನ್ನು ಕಾರ್ಯ ರೂಪಕ್ಕೆ ತರಲಾಗುವುದೆಂದು ತಿಳಿಯುತ್ತದೆ. ಈಗ ಯೋಜಿಸಿರುವ ಈ ಯೋಜನೆಯು ಮಕ್ಕಳ ಆರೋಗ್ಯ ರಕ್ಷಣೆಯ ಮತ್ತು ಭಾವಿ ಜನಾಂಗದ ಆರೋಗ್ಯದ ದೃಷ್ಟಿಯಿಂದ ಸ್ವಾಗತಾರ್ಹವೂ ಸತ್ತ್ವಯುತವೂ ಆದುದೆಂದು ಹೇಳಬೇಕು ಈ ಯೋಜನೆಯ ಬಗ್ಗೆ ಸರಕಾರದೊಡನೆ ಆದರ ನಾಗರರೂ ತಮ್ಮ ಹಾರ್ದಿಕ ಸಹಕಾರವನ್ನಿತ್ತು ಯೋಜನೆಯ ಫಲವನ್ನು ಮಕ್ಕಳೆಲ್ಲರೂ ಪಡೆಯುವಂತೆ ನೋಡಿಕೊಳ್ಳಬೇಕಾದುದೂ ಆವಶ್ಯಕವಿದೆ. ಈ ಯೋಜನೆಯ ಪರಿಣಾಮವು ಉತ್ತಮವಾಗುವುದೆಂದು ನಿರೀಕ್ಷಿಸಬಹುದು; ಆದರೆ, ಅದನ್ನು ವ್ಯವಹೃತಗೊಳಿಸುವಾಗ ಮುಖ್ಯ ಗ್ರಾಮೀಣ ಪ್ರದೇಶಗಳನ್ನೂ ಮರೆತುಬಿಡಬಾರದು. ಅಜ್ಞಾನ, ಅನಕ್ಷರತೆ, ನಿರಾಹಾರ, ನಿರ್ವಸತಿಗಳಿಂದ ನರಳುವ ಬಹುಸಂಖ್ಯಾಕ ಕುಟುಂಬಗಳ ಆರೋಗ್ಯ ಕಾಪಾಡಲು ನೆರವಾಗುವ ಈ ಮಹತ್ವದ ಯೋಜನೆಯು ಸಫಲವಾಗಲೆಂದು ಹಾರೈಸುತ್ತೇವೆ.

ಪ್ರಚಲಿತ ಪ್ರಸಂಗ

ಕ್ಷಯರೋಗ ಮುದ್ರಾವಿಕ್ರಯಾಂದೋಲನ

ಮಹಾಮಾರಿಯ ಪ್ರತಿಬಂಧಕ ಹಾಗೂ ನಿವಾರಣೆಯ ಪಾವನ ಕಾರ್ಯದಲ್ಲಿ ಸಹಕರಿಸುವುದು ನಾಗರಿಕ ಧರ್ಮ.

ರಾಷ್ಟ್ರಪತಿಗಳ ಸಂದೇಶ

ಕ್ಷಯರೋಗ ಮುದ್ರೆ ವಿಕ್ರಯ ಚಳವಳವು ಹಣ ಕೂಡಿಸುವುದಲ್ಲದೇ ಜನತೆಯಲ್ಲಿ ಕ್ಷಯರೋಗ ಮತ್ತು ಅದರ ಶುಶ್ರೂಷೆ ಹಾಗೂ ನಿಯಂತ್ರಣಗಳತ್ತ ಜನತೆಯನ್ನು ವಿಶೇಷ ಜಾಗ್ರತಗೊಳಿಸುವುದರಲ್ಲಿ ಸಹಾಯಕವಾಗಿದೆ ಎಂದು ತಿಳಿಯಲು ನಾನು ಸಂತೋಷಿಸುತ್ತೇನೆ. ಭಾರತೀಯ ಕ್ಷಯರೋಗ ಸಂಸ್ಥೆಯು ಈ ರೋಗ ಪ್ರತಿಬಂಧಕ ಕಾರ್ಯಕ್ರಮಗಳಲ್ಲಿ ನಿರತವಾಗಿದೆ.

ಪ್ರತಿ ವರ್ಷವೂ ಈ ಚಳವಳವು ಗಾಂಧಿ ಜಯಂತಿಯ ಸಂದರ್ಭದಲ್ಲಿ ಉದ್ಘಾಟಿತವಾಗುತ್ತದೆ. ಬಹಳ ಸಂಖ್ಯೆಯಲ್ಲಿ ಕ್ಷಯರೋಗ ಮುದ್ರೆಯನ್ನು ಕೊಳ್ಳಬೇಕೆಂದೂ ಈ ರೋಗದ ವಿರುದ್ಧ ಹೋರಾಡುವ ಸಂಸ್ಥೆಯ ಬಲವನ್ನು ಹೆಚ್ಚಿಸಲು ಸಹಾಯ ಮಾಡಬೇಕೆಂದೂ ನಾನು ಇನ್ನೊಮ್ಮೆ ವಿನಂತಿಸುತ್ತೇನೆ. ಭಾರತೀಯ ಕ್ಷಯರೋಗ ಸಂಸ್ಥೆಗೆ ನಾನು ಶುಭ ಕೋರುತ್ತೇನೆ.

—ರಾಜೇಂದ್ರ ಪ್ರಸಾದ.

೧೯೫೦ರಲ್ಲಿ ಭಾರತೀಯ ಕ್ಷಯರೋಗ ಸಂಸ್ಥೆಯು ಕ್ಷಯರೋಗ ಮುದ್ರಾವಿಕ್ರಯಾಂದೋಲನವನ್ನು ಮೊದಲುಮಾಡಿತು. ಅಕ್ಟೋಬರ ೨ (ಗಾಂಧಿ ಜಯಂತಿ) ರಿಂದ ಜನವರಿ ೨೬ (ಗಣರಾಜ್ಯ ದಿನಾಚರಣೆ) ರವರೆಗೆ ಈ ಆಂದೋಲನವು ನಡೆಯುವುದು.

ಈ ಚಳವಳವು ಸ್ವಯಂ ಸಂಸ್ಥೆಗಳ ಚಟುವಟಿಕೆಗಳ ಆರ್ಥಿಕ ಬಲವನ್ನು ಹೆಚ್ಚಿಸುವುದಲ್ಲದೇ ಕ್ಷಯರೋಗ ವಿರೋಧ ಪ್ರಚಾರ ಕಾರ್ಯಕ್ಕೆ ತುಂಬ ಸಹಾಯವಾಗುತ್ತದೆ. ರಾಜ್ಯ ಕ್ಷಯರೋಗ ಸಂಸ್ಥೆಗಳು ಮತ್ತು ಮುದ್ರಾ ವಿಕ್ರಯ ಸಂಸ್ಥೆಗಳಿಂದ ಈ ಆಂದೋಲನವು ನಡೆಸಲ್ಪಡುತ್ತದೆ. ಭಾರತೀಯ ಕ್ಷಯರೋಗ ಸಂಸ್ಥೆಯು ರಾಜ್ಯ ಸಂಸ್ಥೆಗಳಿಗೆ ಮುದ್ರೆ ಹಾಗೂ ಪ್ರಕಟಣಾ ಪದಾರ್ಥಗಳನ್ನು ಒದಗಿಸಿ ಕೊಡುತ್ತದೆ. ಒಂದು ಮುದ್ರೆಯ ಬೆಲೆ ಗಂ ನಯೇಪೈಸೆ. ಕ್ಷಯರೋಗದ ಮುದ್ರೆಗಳನ್ನು ಕೊಂಡು ಕೊಂಡು, ಕಾಗದಪತ್ರಗಳು, ಭಾಂಗಿಗಳು ಮೊದಲಾದುವುಗಳಿಗೆ ಕ್ಷಯರೋಗದ ಬಗ್ಗೆ ತಮಗಿರುವ ಸಹಾನುಭೂತಿಯುದ್ಯೋತಕವಾಗಿ ಅಂಟಿಸಬಹುದು. ಕಳೆದ ಒಂಬತ್ತು ವರ್ಷಗಳಿಂದಲೂ ಈ ಚಳವಳವು ಕ್ಷಯರೋಗ ಸಂಬಂಧದ ಅಭಿವೃದ್ಧಿ ಕಾರ್ಯಗಳಿಗೆ ಗಣನೀಯ ಪ್ರಮಾಣದಲ್ಲಿ ಸಹಾಯ ನೀಡಿವೆ. ಆರೋಗ್ಯ, ವಿದ್ಯೆಗಳಿಗೆ ನೆರವಿತ್ತುದಲ್ಲದೇ ರಾಜ್ಯಗಳಿಗೂ ಅವುಗಳ ಚಟುವಟಿಕೆಗಳಿಗಾಗಿ ತುಸು ಸಹಾಯ ಮಾಡಿದೆ,

ಭಾರತೀಯ ಕ್ಷಯ ರೋಗ ಸಂಸ್ಥೆಯು ಕ್ಷಯ ರೋಗ ಮುದ್ರಾ ವಿಕ್ರಯದಿಂದ ಬರುವ ಹಣವನ್ನು ಆರು ಮುಖ್ಯ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲು ನಿರ್ಧರಿಸಿದೆ.

(ಅ) ಮುಂದುವರಿದ ಕ್ಷಯ ರೋಗಿಗಳ ಪ್ರತ್ಯೇಕೀಕರಣಕ್ಕಾಗಿ ಹೊಸ ಮನೆ ಕಟ್ಟಿಸಲು,

(ಆ) ಬಡ ರೋಗಿಗಳಿಗೆ ಸಹಾಯ ನೀಡಲು ಲಕ್ಷ್ಯನೀಡುವ ಸಮಿತಿಗಳ ರಚನೆಗಾಗಿ,

(ಇ) ಕ್ಷಯರೋಗಿಗಳ ಆರೈಕೆಗಾಗಿ,

(ಈ) ಚಿಕಿತ್ಸಾಲಯಗಳ ಸ್ಥಾಪನೆಗಾಗಿ,

(ಉ) ಚಿಕಿತ್ಸಾಲಯಗಳ ಮೂಲಕ ಗೃಹಚಿಕಿತ್ಸಾ ಸೇವೆಯ ಪ್ರಾರಂಭೀಕರಣ ಮತ್ತು ವಿಸ್ತರಣೆಗಾಗಿ ಮತ್ತು,

(ಊ) ಸಾಮಾಜಿಕ ಕರ್ಮಚರ ಮತ್ತು ಆರೋಗ್ಯ ಸಂದರ್ಶಕರ ತರಬೇತಿಯಲ್ಲಿ ಆರ್ಥಿಕ ಸಹಾಯ ನೀಡಲು.

ಚಳವಳದ ವಿಶೇಷ ಉದ್ದೇಶವು ಕಾರ್ಯಕ್ರಮಗಳನ್ನು ಪ್ರಕಾಶಪಡಿಸುವುದಾಗಿದೆ. ರಾಷ್ಟ್ರದ ವ್ಯಾಪಾರಿ ಸಮಾಜವು ಚಳವಳಕ್ಕೆ ತುಂಬ ಬೆಂಬಲವೀಯುತ್ತಿದೆ. ಭಾರತ ಸರಕಾರದ ಬೇರೆ ಬೇರೆ ವಿಭಾಗಗಳಿಂದಲೂ ಚಳವಳವು ಸಹಾಯ ಪಡೆಯುತ್ತದೆ. ಇಂಡಿಯನ್ ಮೆಡಿ

ಅಂತರಿಕ್ಷ ಸಂಚಾರ

ರಶ್ಯನ್ ರಾಕೆಟ್ ಚಂದ್ರಲೋಕವನ್ನು ಸೇರಿದರೆ, ಚಂದ್ರನ ಸುತ್ತಲೂ ಸುತ್ತುತ್ತಿರುವ ಸ್ವಯಂಚಾಲಿತ ಅಂತರ್ಗ್ರಹ ನಿಲ್ದಾಣವನ್ನೂ ರಶ್ಯವು ಹಾರಿಸಿ ಯಶಸ್ಸು ಪಡೆದಿದೆ. ಚಂದ್ರಲೋಕದೊಡನೆ ಸಂಬಂಧ ಬೆಳೆಸುವ ಮಾನವನ ಮಹತ್ವಾಕಾಂಕ್ಷೆಗೆ ಇದೊಂದು ಆಶಾಜ್ಯೋತಿಯಾಗಿದೆ ಎಂಬುದು ನಿರ್ವಿವಾದ. ಚಂದ್ರನ ಹೊರವಲಯದ ಛಾಯಾ ಚಿತ್ರವನ್ನೂ ಈ ಯಂತ್ರವು ತೆಗೆಯುವುದಂತೆ; ಅಲ್ಲಿನ ಬಗ್ಗೆ ವಿಚಾರಗಳನ್ನು ಸಂಗ್ರಹಿಸಿ ಅದು ಭೂಮಿಗೆ ಕಳಿಸುವುದಂತೆ; ರಶ್ಯನರು ಇನ್ನೂ ಹಲವಾರು ಉಪಕರಣಗಳನ್ನು ಅಂತರಿಕ್ಷಕ್ಕೆ ಹಾರಿಸಿ ಚಂದ್ರಲೋಕದ ಪ್ರಯಾಣ ಮಾರ್ಗವನ್ನು ಸುಗಮಗೊಳಿಸುವರಂತೆ! ಒಂದು ನೂರು ವರ್ಷಗಳಿಗೆ ಮೊದಲಾದರೂ ಇವನ್ನು ಅಂತೆ ಕಂತೆಗಳ ಸಂತೆ ಎಂದು ಅಂತರಿಕ್ಷಕ್ಕೇನೇ ತೂರಬಹುದಿತ್ತು; ಆದರೆ, ವಿಜ್ಞಾನದ ಗಾಳಿ ಹರಡಿರುವ ಈ ಕಾಲದಲ್ಲಿ ಯಾವುದೇ ಒಂದು ಸಂಗತಿ ಅಸಾಧ್ಯವೆನ್ನುವುದೇ ಅಸಾಧ್ಯವಾಗಿದೆ. ಇತರ ಗ್ರಹಗಳಲ್ಲಿಯೂ ಮಾನವನಿಗಿಂತಲೂ ಬಲಶಾಲಿಯಾದ ಪ್ರಾಣಿಗಳವೆ ಎಂಬುದನ್ನು ಈಗ ನಂಬಲು ನಾವು ಸಿದ್ಧರಿರುವುದಾದರೂ ಅವನ್ನೂ ಕಣ್ಣಾರೆ ಕಾಣುವ ದಿವಸ ಅನತಿ ದೂರದಲ್ಲಿದೆ ಎಂದು ತಿಳಿಯಬಹುದು. ರಶ್ಯನರ ಸಾಹಸವು ಜಗತ್ತಿನ ಜನಕೋಟಿಗೆ ಶ್ರೇಯವಾಗಲೆಂದು ಬಯಸುವುದು ಸುಸಂಗತ ತಾನೆ?

ಕಲ್ ಎಸೋಸಿಯೇಶನ್, ಇಂಡಿಯನ್ ಲೈಸೆನ್ಸಿಯೇಟ್ಸ್ ಎಸೋಸಿಯೇಶನ್, ರೆಡ್‌ಕ್ರಾಸ್ ಸೊಸೈಟಿ, ರೋಟರಿ ಕ್ಲಬ್ಬುಗಳು ಮತ್ತಿತರ ಸಾಮಾಜಿಕ ಮತ್ತು ಸ್ವಯಂ ಸಂಸ್ಥೆಗಳು ತಮ್ಮ ಸೇವೆಯನ್ನೂ ಸಹಾಯವನ್ನೂ ಈ ಚಳವಳಿಗೆ ನೀಡುತ್ತಿವೆ. ವಿದೇಶದಲ್ಲಿರುವ ಭಾರತೀಯರು ಅಲ್ಲಿಯೂ ಕ್ಷಯ ರೋಗ ಮುದ್ರೆಯನ್ನು ಭಾರತೀಯರಿಗೂ ಇನ್ನಿತರರಿಗೂ ಮಾರುವುದರಲ್ಲಿ ಆಸಕ್ತಿಯನ್ನು ತೋರಿಸುತ್ತಾರೆ.

ಜಮೆಯಾದ ಹಣವು ರಾಜ್ಯಗಳಿಂದ ಸುಯೋಗ್ಯವಾಗಿ ಬಳಸಲ್ಪಡುತ್ತದೆ. ಬೊಂಬಾಯಿಯಲ್ಲಿ ಈ ಹಣವು ಆಗ್ನೈಸ್‌ಡ್ ಹೋಮ್ ಟ್ರೀಟ್‌ಮೆಂಟ್ ಕ್ಲಿನಿಕ್ ಮತ್ತು ಬಾಹ್ಯ ಗಮನ ಸಮಿತಿಯ ಮೂಲಕ ಕ್ಷಯ ರೋಗಿಗಳಿಗಾಗಿ ಉಪಯೋಗಿಸಲ್ಪಡುತ್ತದೆ. ಅಸ್ಸಾಮು ರಾಜ್ಯವು ಆರೋಗ್ಯ ಸಂದರ್ಶಕರನ್ನು ನೇಮಿಸಲು ಮತ್ತು ಕ್ಷಯ ವಿರೋಧ ಕಾರ್ಯಕ್ರಮಗಳನ್ನು ಕೈಗೊಳ್ಳಲು ಇದರಿಂದ ಸಹಾಯ ಪಡೆಯುತ್ತದೆ. ಆಂಧ್ರ ಪ್ರದೇಶವು ಒಂದು ರೇಡಿಯೋಗ್ರಾಫಿಕ್ ಯಂತ್ರವನ್ನು ಪಡೆದುದಲ್ಲದೇ ವಾರಂಗಲ್ಲಿನಲ್ಲಿ ಹೊಸತಾಗಿ ಕಟ್ಟಿಸಿದ ಕ್ಷಯರೋಗ ಆಸ್ಪತ್ರೆಗೆ ವಿದ್ಯುತ್ ಸೌಕರ್ಯವನ್ನು ಒದಗಿಸಿದೆ. ಮದ್ರಾಸವು ಮಂಜೂರುಮಾಡಿದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ವಿವಿಧ ಜಿಲ್ಲೆಗಳಿಗೆ ಸಹಾಯಧನ ನೀಡುತ್ತದೆ. ಮೈಸೂರು ರಾಜ್ಯವು ಕಾರ್ಪರೇಶನ್ ಡಿಸ್ಪೆನ್ಸರಿಯಲ್ಲಿ ಹೊಸತಾಗಿ ಲೆಬರಟರಿ ಮತ್ತು ಕ್ಷ—ಕಿರಣ ವಿಭಾಗವನ್ನು ಕಟ್ಟಲು ಮತ್ತು ವಿವಿಧ ಜಿಲ್ಲೆಗಳಿಗೆ ವಿತರಿಸಲು ಕ್ಷಯ ನಿರೋಧಕ ಔಷಧಿಯನ್ನು ಕೊಂಡುಕೊಳ್ಳಲು ರೂ. ೧ ಲಕ್ಷವನ್ನು ಬಳಸಿಕೊಳ್ಳಲು ನಿರ್ಧರಿಸಿದೆ. ಕೊಡಗಿನಲ್ಲಿ ಮೊದಲೆರಡು ಚಳವಳಿಗಳ ಸಂಪಾದನೆಯಿಂದ ೨೫ ಹಾಸಿಗೆಗಳ ಕ್ಷಯರೋಗ ವಿಭಾಗವೊಂದನ್ನು ಸರಕಾರಿ ಆಸ್ಪತ್ರೆಯಿಂದ ಬೇರ್ಪಡಿಸಿ ಕಟ್ಟಲಾಗಿದೆ. ಕೇರಳದಲ್ಲಿ ೧೪ ವಾರ್ಡುಗಳನ್ನು ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಕಟ್ಟಲು ನಿರ್ಧರಿಸಲಾಗಿದೆ. ಒರಿಸ್ಸದಲ್ಲಿ ಧರ್ಮಾರ್ಥ ಕ್ಷಯ ವಿರೋಧ ಔಷಧವನ್ನು ಹಂಚಲು ನಿಶ್ಚಯ ಮಾಡಿದ್ದಾರೆ. ಪಂಜಾಬದಲ್ಲಿ ಕ್ಷಯ ರೋಗಿಗಳಿಗೆ ಉಪಯುಕ್ತವಾದ ಸಲಕರಣೆ ಒದಗಿಸಲಾಗುತ್ತಿದೆ. ಬಂಗಾಳ, ಬಿಹಾರ, ಉತ್ತರ ಪ್ರದೇಶ ಮೊದಲಾದ ಎಲ್ಲ ರಾಜ್ಯಗಳೂ ತಮ್ಮದೇ ಆದ ಯೋಜನೆಗಳ ಸ್ವಯ ಈ ಮೊಬಲಗನ್ನು ಬಳಸಿಕೊಳ್ಳುತ್ತವೆ. ಅಂಡಮಾನ ನಿಕೋಬಾರಗಳಲ್ಲಿ ಕೂಡ ಈ ಕ್ಷಯ ನಿರೋಧ ಕಾರ್ಯಕ್ರಮವು ತೀವ್ರವಾಗುತ್ತಿದೆ.

ವರ್ಷ ಕಳೆದಂತೆ ಈ ಆಂದೋಲನವು ಬಲಗೊಳ್ಳುತ್ತಿದೆ; ಮತ್ತಿದನ್ನು ಬಲಪಡಿಸುವುದೂ ಅವಶ್ಯ. ಭಾರತದ ಸಹಸ್ರಾರು ಕ್ಷಯ ರೋಗಿಗಳ ಉದ್ಧಾರಕ್ಕಾಗಿ ಹಣಗಾಡುವ ಈ ಸಂಸ್ಥೆಯ ಮುದ್ರಾವಿಕ್ರಯ ಚಳವಳದಲ್ಲಿ ಪ್ರತಿ ನಾಗರಿಕನೂ ಭಾಗಿಯಾಗುವುದು ಅವಶ್ಯ.

ಸಂಕ್ಷಿಪ್ತ ಸುದ್ದಿಗಳು

ಆಕ್ರಮಣಕ್ಕೆ ಮಣಿಯೆವು

ಭಾರತ ಮತ್ತು ಚೀನಗಳ ನಡುವಣ ಗಡಿಸಮಸ್ಯೆಯ ಬಗ್ಗೆ ತಾವು ಮಾತುಕತೆಗೆ ಸಿದ್ಧನಿರುವೆನೆಂದು ಚೀನೀ ಪ್ರಧಾನಿ ಶ್ರೀ ಚಾ ಎನ್ ಲಾಯ್ ಅವರು ಶ್ರೀ ನೆಹರುರವರಿಗೆ ಪತ್ರ ಬರೆದಿದ್ದರು. ಇದಕ್ಕುತ್ತರವನ್ನು ಶ್ರೀ ನೆಹರು ಬರೆದಿದ್ದು ಅದರಲ್ಲಿ ಹಿಮಾಲಯವನ್ನು ಎಂದಿಗೂ ಚೀನಕ್ಕೆ ಬಿಟ್ಟುಕೊಡುವುದಸಾಧ್ಯವೆಂದೂ, ತಾವು ಆಕ್ರಮಿಸಿರುವ ಭಾರತೀಯ ಗಡಿಯನ್ನು ಬಿಟ್ಟು ಹಿಂದೆ ಸರಿಯುವವರೆಗೆ ಸಂಧಾನದ ಮಾತುಕತೆಯಿಲ್ಲವೆಂದೂ ಆ ಮೇಲಾದರೂ ಅಸ್ಪಷ್ಟವಾಗಿರುವ ಗಡಿಯ ಬಗ್ಗೆ ಮಾತ್ರ ಮ್ಯಾಕಮಹೋನ ರೇಖೆಯನ್ನು ಧರಿಸಿಕೊಂಡೇ ಮಾತುಕತೆ ನಡೆಯಬೇಕೆಂದೂ ಕಟುವಾಗಿ ತಿಳಿಸಲಾಗಿದ.

ಅಸ್ಸಾಮದ ರಾಜ್ಯಪಾಲರು

ಅಸ್ಸಾಮದ ರಾಜ್ಯಪಾಲರಾಗಿ ಮೇಜ। ಕಾರ್ಯಪ್ಪನವರನ್ನು ನೇಮಿಸಲಾಗುವುದೆಂದು ಪಿಸುಮಾತು ಕೇಳಿಬರುತಿದ್ದರೂ ಈಗ ಮೇ। ನಾಗೇಶರನ್ನು ಆ ಹುದ್ದೆಗೆ ನೇಮಿಸಲ್ಪಟ್ಟ ವರದಿಗಳು ಬಂದಿವೆ. ಶ್ರೀ ನಾಗೇಶರು ಚೀಫ್ ಅಫ್ ಆರ್ಮಿ ಸ್ಟಾಫ್ ಆಗಿದ್ದರು.

ಮೈಸೂರು ವಿಧಾನ ಸಭೆ

ಮೈಸೂರು ವಿಧಾನ ಸಭೆಯ ಚಳಿಗಾಲದ ಅಧಿವೇಶನವು ದಶಂಬರ ಮೊದಲನೆಯ ವಾರದಲ್ಲಿ ಪ್ರಾರಂಭವಾಗುವುವೆಂದು ತಿಳಿಯುತ್ತದೆ. ಈ ಅಧಿವೇಶನದಲ್ಲಿ ಹಲವಾರು ಮಹತ್ವದ ಮಸೂದೆಗಳು ಮುಂದೆ ಬರುವವೆಂದೂ ಹೇಳಲಾಗುತ್ತಿದೆ. ಭೂಸುಧಾರಣಾ ವಿಧೇಯಕವನ್ನು ಪರಿಶೀಲಿಸಲು ನೇಮಿತವಾದ ಸಂಯುಕ್ತ ಸಮಿತಿಯು ಇದೇ ತಿಂಗಳ ೨೭ರಂದು ಸಭೆ ಸೇರುವುದು.

ಸಂಯುಕ್ತ ಅರಬ ರಾಷ್ಟ್ರಕ್ಕೆ ಅಗೌರವ

ಕಮ್ಯುನಿಷ್ಟ ಚೀನದ ೧೦ನೆಯ ವಾರ್ಷಿಕೋತ್ಸವವು ಪೇಕಿಂಗದಲ್ಲಿ ವೈಭವಯುತವಾಗಿ ನಡೆಯಿತು. ಸೋವಿಯತ ಪ್ರಧಾನಿ ಶ್ರೀ. ಕ್ರುಶ್ಚೇವರೂ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಇದರೆ, ಈ ಸಮಾರಂಭದಲ್ಲಿ ಭಾಷಣ ಮಾಡಿದ ಇರಿಯಾದ ಕಮ್ಯುನಿಸ್ಟ ನಾಯಕ ಶ್ರೀ ಖಲೀದ ಬಕದಾಶರು ಸಂಯುಕ್ತ ಅರಬ ರಾಷ್ಟ್ರವನ್ನು ಅಮೆರಿಕೆಯ ಹಸ್ತಕರಾಷ್ಟ್ರವೆಂದು ಕರೆದುದರಿಂದ ಗುಸುಗೊಂದಲವೆದ್ದಿತು. ಅರಬ ರಾಷ್ಟ್ರದ ರಾಯಭಾರಿಯವರು ಈ ಮಾತುಗಳನ್ನು ಮೆಚ್ಚದೆ ಸಮಾರಂಭವನ್ನು ಬಹಿಷ್ಕರಿಸಿ ಹೊರನಡೆದರು. ಚೀನವು ರಾಯಭಾರಿ ಕಛೇರಿಯನ್ನು ದಿಗ್ಬಂಧನದಲ್ಲಿಟ್ಟದೆಯೆಂದೂ ಅರಬ ರಾಷ್ಟ್ರದ ಪತ್ರಿಕೆಯೊಂದು ವರದಿ ಮಾಡಿದೆ

ಮುಂಬಯಿ ವಿಭಜನೆ

ದ್ವಿಭಾಷಾ ಮುಂಬಯಿ ರಾಜ್ಯದ ವಿಭಜನೆಯ ಕುರಿತಾದ ಮಾತುಕತೆಗಳು ಪ್ರಾಸ್ತಾವಿಕವಾಗಿ ನಡೆದು ಆ ಬಗ್ಗೆ ಒಂದು ಸಮಿತಿಯನ್ನೇ ರ್ಪಡಿಸಲಾಗಿತ್ತು. ಈ ಸಮಿತಿಯು ತನ್ನ ವರದಿಯನ್ನರ್ಪಿಸಲು ನಿಶ್ಚಿತ ಅವಧಿಯನ್ನು ಕೊಟ್ಟಿಲ್ಲ ಆದರೂ ಆದು ವರದಿಯನ್ನು ಒಪ್ಪಿಸಲು ತುಂಬ ಹೊತ್ತು ತೆಗೆಯಲಾರದು ಎಂದು ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರ ಗಾಂಧಿಯವರು ಹೇಳಿದ್ದಾರೆ. ಮುಂಬಯಿಯ ವಿಭಜನೆಯ ಸಂಬಂಧದಲ್ಲಿ, ಎಲ್ಲರ ಅಭಿಪ್ರಾಯಗಳನ್ನೂ ತಿಳಿದುಕೊಂಡು ಆದಷ್ಟು ಮಟ್ಟಿಗೆ ಅವನ್ನು ಗೌರವಿಸಲಾಗುವದೆಂದೂ, ಇದಕ್ಕಾಗಿ ಮತ ಪ್ರದರ್ಶನಾದಿಗಳನ್ನು ಮಾಡಿ ವಾತಾವರಣವನ್ನು ಕೆಡಿಸಬಾರದೆಂದೂ ಪ್ರಧಾನಿ ನೆಹರುರವರು ಹೇಳಿದ್ದಾರೆ

ಭಾರತ ಸರಕಾರಕ್ಕೆ ಎಚ್ಚರಿಕೆ

ಮುಂಬಯಿಯಲ್ಲಿರುವ ಗೋವಾ ರಾಜಕೀಯ ಪರಿಷತ್ತಿನ ಅಧಿವೇಶನವು ಒಂದು ಗೊತ್ತುವಳಿಯನ್ನು ಸ್ವೀಕರಿಸಿ ಅಂತಾರಾಷ್ಟ್ರೀಯ ನ್ಯಾಯಾಲಯಕ್ಕೆ ಸ್ವತಂತ್ರ್ಯದ ಪ್ರಶ್ನೆಯ ಬಗ್ಗೆ ನಿರ್ಣಯ ಕೈಗೊಳ್ಳುವ ಅಧಿಕಾರವಿಲ್ಲವೆಂದೂ ಆದುದರಿಂದ ಅದು ಪೋರ್ಚುಗೀಸರಿಗೆ ದಾದ್ರ ಹಾಗೂ ನಗರ ಹವೇಲಿಗಳಿಗೆ ಹೋಗುವ ಹಕ್ಕಿನ ಬಗ್ಗೆ ಅದು ಸ್ವೀಕರಿಸಿದ ನಿರ್ಣಯವನ್ನು ಭಾರತ ಸರಕಾರವು ಒಪ್ಪಬಾರದೆಂದೂ. ಒಪ್ಪಿದರೆ ತಾವು ಪ್ರತಿಭಟಿಸುವುದಾಗಿಯೂ ಎಚ್ಚರಿಕೆಯಿತ್ತಿದೆ.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ಯಂ. ಜಿ ಯಂ. ಕಾಲೇಜು—ಇದರ ಅರ್ಥ ಶಾಸ್ತ್ರ ಮತ್ತು ಇತಿಹಾಸ ಸಂಘದ ವತಿಯಿಂದ ಯೋಜನಾ ದಿನಾಚರಣೆಯು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಕಳೆದ ತಾ 29ರಂದು ನೆರವೇರಿತು. ಪ್ರಿನ್ಸಿಪಾಲ್ ಶ್ರೀ ಯಚ್ ಸುಂದರರಾಯರು ಸ್ವಾಗತಿಸಿದ ಮೇಲೆ ಅರ್ಥ ಶಾಸ್ತ್ರದ ಪ್ರಾಧ್ಯಾಪಕ ಶ್ರೀ ಕು. ಶಿ. ಹರಿದಾಸ ಭಟ್ಟರು ನಮ್ಮ ದೇಶ ನಮ್ಮ ಯೋಜನೆಯ ಕುರಿತು ಉಪನ್ಯಾಸ ವಿತ್ತರು. ಶ್ರೀ ಶ್ರೀಶ ಒಲ್ಲಾಳರು ಧಾನ್ಯಗಳ ಕ್ರಯ ಏರಿಕೆಯ ಕುರಿತೊಂದು ಪ್ರಬಂಧವನ್ನೋದಿದರು. ಅಧ್ಯಕ್ಷರ ಭಾಷಣವಾದ ಮೇಲೆ ಕಾರ್ಯದರ್ಶಿ ಶ್ರೀ ಸಂಜೀವ ಸೆಟ್ಟರು ಅಭಾರ ಸೂಚಿಸಿದರು.

ಸಿಂಡಿಕೇಟನೊಡನೆ ಬೇಂಕ್ ಆಫ್ ಮಂಗಳೂರಿನ ಸೇರ್ಪಡೆ—ಇದೇ ತಾ. 3ರಂದು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟನೊಡನೆ ಬ್ಯಾಂಕ್ ಆಫ್ ಮಂಗಳೂರು ಸಂಯೋಜಿಸಲ್ಪಟ್ಟಿತು. ಈ ಸಂಯೋಜನಾ ಸಮಾರಂಭದ ಸಲುವಾಗಿ ಸಿಂಡಿಕೇಟ್ ಬೇಂಕಿನವರು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು ಶ್ರೀ ಟಿ. ಎ, ಪೈಯವರು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಪಿ ಪದ್ಮನಾಭ ರಾವ್ ಡಾ. ಎನ್ ಉಪೇಂದ್ರ ಪೈ, ಎನ್. ಶಾಂತಿರಾಜ ಅರಸು, ಎಸ್. ಮುಕುಂದ ರಾವ್ ಇವರ ಭಾಷಣಗಳಾದ ಮೇಲೆ ಅಧ್ಯಕ್ಷ ಶ್ರೀ ಹೆಗ್ಡೆಯವರು ಮಾತನಾಡಿ ಸಿಂಡಿಕೇಟಿನ ವೈಶಿಷ್ಟ್ಯವನ್ನು ವಿವರಿಸಿದರು. ಶ್ರೀ ಕೆ ಕೆ. ಪೈಗಳು ಧನ್ಯವಾದ ಗಳನ್ನರ್ಪಿಸಿದರು.

ಪಡುಕಳತ್ತೂರು—ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ 2—10—1959 ರಲ್ಲು ಮಕ್ಕಳ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು ಬೆಳಿಗ್ಗೆ ಪ್ರಭಾತ ಫೇರಿ ಧ್ವಜವಂದನೆಯ ಬಳಿಕ ಸಭೆಯು ಜರಗಿ ಸಿಹಿತಿಂಡಿ ಹಂಚೋಣದ ಕಾರ್ಯಕ್ರಮ ಮುಕ್ತಾಯವಾಯ್ತು ತಾ. 3—10—59ರಂದು ಸದ್ರಿ ಶಾಲೆಯಲ್ಲಿ ವಾಡಿಕೆಯಂತೆ ಶಾರದಾ ಪೂಜೆಯು ಯಥಾಸಾಂಗವಾಗಿ ಜರಗಿತು.

ವೈದ್ಯಕೀಯ ಪ್ರೌಢ ವ್ಯಾಸಂಗಕ್ಕಾಗಿ ಪರದೇಶಪ್ರವಾಸ



ಡಾ| ಕೆ. ರಾಮಕೃಷ್ಣ ಶೆಟ್ಟಿ G.C I.M

ಮಂಗಳೂರು ತಾಲೂಕು ಅಯ್ಯಳ ಕುರುಂಬಿಲ ಗುತ್ತು ದಿವಂಗತ ಚೆನ್ನು ಶೆಟ್ರ ಮಗ ಮತ್ತು ಅರೆಹಳ್ಳಿ ಉದೇವಾರ ಎಸ್ಟೇಟ್ ಕಾಫಿ ಪ್ಲಾಂಟರ್ ಶ್ರೀ ಕೆ. ಬಿ ಸುಬ್ಬಯ ಶೆಟ್ರ ತಮ್ಮ ಡಾ| ಕೆ. ರಾಮಕೃಷ್ಣ ಶೆಟ್ಟರು ಮದ್ರಾಸಿನಲ್ಲಿ ವೈದ್ಯಕೀಯ ಶಿಕ್ಷಣವನ್ನು ಪೂರೈಸಿ ಪ್ರೌಢ ವ್ಯಾಸಂಗಕ್ಕಾಗಿ ಕಳೆದವಾರ ಮುಂಬಯಿಯಿಂದ ಸ್ವೀಮರಿನಲ್ಲಿ ಸ್ವಿಜರ್ಲೆಂಡಿಗೆ ಪ್ರಯಾಣ ಬೆಳೆಸಿರುವರು ಡಾ| ಶೆಟ್ಟರು ಮೂಡಿಗೆರೆ ಡಾ| ಪಿ. ಎ. ಅಶ್ವಂತಾಯರ ಅಳಿಯಂದಿರು; ಮತ್ತು ಇವರ ಪತ್ನಿ ಸೌ। ವಸಂತಿಯು ಬೆಂಗಳೂರಲ್ಲಿ ಮೆಡಿಕಲ್ ಫೈನಲ್ ಪರೀಕ್ಷೆಗೆ ಕುಳಿತಿರುವರೆಂದು ತಿಳಿಯಲು ಸಂತೋಷಿಸುತ್ತೇವೆ.

NOTICE

In the Court of the District Judge of South Kanara

A. S. No. 264/1958

Between

Krishna Saralaya and another ... Appellants

and

K. Laxminarayana Saralaya and another ... Respondents.

To

1st respondent, K. Laxminarayana Saralaya, son of Subbanna alias Subraya Saralaya, residing at Kannaradi, Manipur village, Udipi Taluk.

Please take notice that the appellants have filed the above appeal, against the deciee and judgment dated 4—8—1958 in O. S. No. 50/1957 on the file of District Munsif's Court, Udipi, and now the aforesaid appeal stands posted to 21—10—1959 for hearing. Should you fail to appear before this Court on that day, at 11 A. M., either in person or through a lawyer, the case will be heard in your absence.

By order of the Court.

(Sd.) G Somashekar Rao,
Advocate for Appellant.
Mangalore, 3—10—1959.

ಕಾಸರಗೋಡು ಮು. ಕೋರ್ಟಿನಲ್ಲಿ

O. S. No 110/1951
R. E P. 113/1959.

ಕೃಷ್ಣ ಭಟ್ಟ — ವಾದಿ, ಅರ್ಜಿದಾರ

ಮತ್ತು

ಸರಸ್ವತಿ ಅಮ್ಮ ಸಹಾ—ರೈಸಾಂಡೆಂಟ್ಸು 3ನೇ ರೈಸಾಂಡೆಂಟ ಮುಹಾಬಲ ಭಟ್ಟ-ಕೃಷ್ಣ ಭಟ್ಟ ವ ಸರಸ್ವತಿ ಅಮ್ಮನ ಮಗ ಕಾಸರಗೋಡು ತಾಲೂಕು ತಲೆಕಳ ಗ್ರಾಮ ಇವರಿಗೆ ತಿಳಿಯಪಡಿಸುವುದೇನೆಂದ್ರೆ

ಮೇಲ್ಕಂಡ ಅಮ್ಲುಜಾರಿಯಲ್ಲಿ ಹಾಜರಪಡಿಸಿದ ಯೇಲಂ ಇಸ್ತಿಹಾರಿನ ಶರ್ತಗಳು ನಿರ್ಣಯಿಸುವರೇ ತಾ 17—10—1959ಕ್ಕೆ ಇಟ್ಟಿರುವುದ್ರಿಂದ ನೀವು ಆ ದಿವ್ಸ ಹಾಜರಾಗಲು ತಪ್ಪಿದ್ರೆ ನಿಮುನ್ನು ಎಕ್ಸಪಾರ್ಟಮಾಡಿ ಇತ್ಯರ್ಥಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

(sd) K P. V B. Ejman
Advocate for Petitioner
Kasaragod 1—10—59

ಹೆಸರಿನ ಗುಟ್ಟು

ಹೆಸರಿನ ಹಿಂದಿರುವ ರಹಸ್ಯ ತಿಳಿಯಿರಿ

ಇವನ್ನು ಸಂಗ್ರಹಿಸಿದರೆ, ಅದೊಂದು ಬೃಹದ್ಗ್ರಂಥವೇ ಆಗಬಹುದು; ಅಲ್ಲದೇ ಮನೋರಂಜಕವೂ ಆಗದಿರುವುದೆ?

ಏಶಿಯಾ—ನಾವಿಂದು ವಾಸಿಸುವ ಏಶಿಯಾ ಅಥವಾ ಆಸ್ಯಾ ಖಂಡದ ಹೆಸರಿಗೂ ಒಂದು ಗೂಢವಾದ ಅರ್ಥವಿದೆ. "ಏಶಿಯಾ" ಎಂದರೆ, ಅರುಣೋದಯದ ಭೂಮಿ. ಅದಕ್ಕಾಗಿ ಆಶಿಯಾ ಮೇಲಿಂದ ಇಂದಿನ ಏಶಿಯಾ ಆಗಿರುವುದು.

ಯುರೋಪ— ಈ "ಯುರೋಪ" ಖಂಡ ವಾಚಕ ಶಬ್ದವು, ಎರಡು ಗ್ರೀಕ ಶಬ್ದಗಳ ಮುಖಾಂತರ ಬಂದಿರುತ್ತದೆ. "ಯುರಾಸ್" ಅಂದರೆ "ಅಗಲ" ಮತ್ತು "ಓಪ್" ಅಂದರೆ "ಆವೃತ್ತಿ" ಎಂದಿರುತ್ತದೆ. ಈ ಉಭಯ ಶಬ್ದಗಳ ಏಕತ್ರಿತ ಅರ್ಥ (ಪೃಥ್ವಿಯ) "ಅಗಲಾವೃತ್ತಿ" ಎಂದಾಗುವದು. ಬಳಿಕ ಈ ಎರಡೂ ಶಬ್ದಗಳಿಂದ—"ಯುರೋಪ" ಎಂಬ ಶಬ್ದವು ಆ ಖಂಡಕ್ಕೆ ಪ್ರಚಲಿತವಾಯಿತು!

ಸ್ಪೇನ್—ಸ್ಪೇನ ದೇಶನಾದರೂ ಪೂರ್ವದಲ್ಲಿ "ಹಿಸ್ಪಾನಿಯಾ"ಎಂದು ಕರೆಯಿಸಿಕೊಳ್ಳುತ್ತಿತ್ತು! ಈ ಹಿಸ್ಪಾನಿಯಾವಾದರೂ ಹೇಗೆ ಬಂದಿತು? ಎಂಬ ಪ್ರಶ್ನೆ ತನ್ನಿಂದ ತಾನೆ ಉದ್ಭವಿಸುವದು ಸ್ವಾಭಾವಿಕ! ಆದೇಶದಲ್ಲಿ "ಮೊಲ"ಗಳು ಅಸಂಖ್ಯವಾಗಿದ್ದವು. ಆ ಮೊಲಗಳಿಂದಲೇ ಈ ಹೆಸರು ಉದ್ಭವಿಸಿತು!

ಅಮೇಝಾನ್ - ಬ್ರಾಝಿಲ್ ಉತ್ತರಕ್ಕೆ "ಅಮೇಝಾನ್" ಎಂಬ ದೇಶವಿದೆ. ಅಮೇಝಾನ್ ನದಿಯು ಹತ್ತಿರವಿರುವದರಿಂದಲೇ ಆ ದೇಶಕ್ಕೆ "ಅಮೇಝಾನ್" ಹೆಸರು ಬಿದ್ದಿತು. ಸಿಂಧು ನದಿಯ ಮೇಲಿಂದ "ಹಿಂದುಸ್ತಾನ" ಹೆಸರು ಬಿದ್ದಿರುವದು ಹಿಂದುಗಳಾದ ತಮಗೆ ಗೊತ್ತಿರಬಹುದು! ಅಮೇಝಾನ್ ನದಿಗೆ ಈ ಹೆಸರಾದರೂ ಯಾವ ರೀತಿಯಲ್ಲಿ ಬಿದ್ದಿತು? ಎಂಬುದಕ್ಕೆ ಒಂದು ಸ್ವಾರಸ್ಯಮಯ ಕತೆಯಿದೆ!

ಇ. ಸ. ೧೫೪೧ರಲ್ಲಿ "ಸ್ಪಾನಿಶ್" ಜನರು ಆದೇಶದಲ್ಲಿ ಒಮ್ಮೆ ಸಂಚಾರ ಕೈಕೊಂಡಾಗ ಅವರಿಗೊಂದು ದೊಡ್ಡ ಹಾಗೂ ವಿಶಾಲ ನದಿಯು ಕಣ್ಣಿಗೆ ಬಿದ್ದಿತು. ಆ ನದಿಯ ದಂಡೆಯ ಮೇಲೆ ಕೆಲವು ಆದಿವಾಸಿ ಸ್ತ್ರೀಯರು ಸ್ನಾನ ಮಾಡುವದೂ ಅವರಿಗೆ ಕಂಡಿತು! ಯಾತಕ್ಕೆ ಅಮೇಝಾನ್ ಎಂದು ಕರೆಯುವರೋ, ಅಲ್ಲಿ ಈ ಸ್ತ್ರೀಯರು ಇರಬಹುದೆಂದು ಅವರು ತರ್ಕಿಸಿದರು. ಅದಕ್ಕಾಗಿಯೇ ಅವರು ಆ ಬೃಹತ್ ಆಕಾರದ ನದಿಗೆ "ಅಮೇಝಾನ್" ಎಂಬ ಹೆಸರನ್ನಿಟ್ಟರು.

ಜಮೇಕಾ—ವೆಸ್ಟ ಇಂಡೀಜ್ ನಡುಗಡ್ಡೆಗಳಲ್ಲಿ "ಜಮೇಕಾ" ಎಂಬದೊಂದು ಸಣ್ಣ ನಡುಗಡ್ಡೆಯಿದೆ. ಅಧುನಿ ಸರ್ಗ ಸೌಂದರ್ಯಕ್ಕೋಸ್ಕರ ಅಗಣಿತ ಪ್ರಸಿದ್ಧವಿದೆ! ಅಲ್ಲಿ ಅಸಂಖ್ಯ ಪ್ರಮಾಣದಲ್ಲಿ ನೀರಿನ ಝರಿಗಳು ಇರುವವು.

ಇ. ಸನ್ ೧೮೪೫ರ ಸುಮಾರಿಗೆ ಆ ದೇಶಕ್ಕೆ ಕೆಲವು ಭಾರತೀಯ ವಸಾಹತುಗಳು ಕಂಡು ಬಂದವು. ಆಗ ಅಲ್ಲಿಯ ಅಗಣಿತ ಝರಿಗಳನ್ನು ಪ್ರತ್ಯಕ್ಷ ಕಂಡು ಒಮ್ಮೆಲೇ ಆ ಭಾರತೀಯರ ಬಾಯಿಯಿಂದ "ಜಲಮಯ" ಎಂಬ ಶಬ್ದ ಹೊರ ಬಿದ್ದಿತು! ಅದೇ "ಜಲಮಯ"ವು ಕ್ರಮೇಣವಾಗಿ ಮುಂದೆ "ಜಮೇಕಾ" ಎಂಬ ಹೆಸರಿನಿಂದ ರೂಪಾಂತರ ಹೊಂದಿತು.

ನ್ಯೂಯಾರ್ಕ— ಪ್ರಪಂಚದಲ್ಲಿಯೇ ಪ್ರಥಮ ಪಟ್ಟಣವಾದ "ನ್ಯೂಯಾರ್ಕ" ಎಂಬುದು ಯಾರಿಗೂ ಗೊತ್ತಿದ್ದಿಲ್ಲ! ಈ ನಗರವು "ಮಾನ್‌ಹಟನ್" ನಡುಗಡ್ಡೆಯ ಮೇಲೆ ಬೆಳೆದಿರುವದು. ೧೩½×೨½ ಮೈಲು ವಿಸ್ತಾರದ ನಡುಗಡ್ಡೆಯಾಗಿದೆ. ಮನಹಟನ್ ಈ ಹೆಸರು ಇತ್ತೀಚಿನದಾಗಿದೆ. ಅದರ ಮೂಲ ಹೆಸರು, "ಮನ್ನೋಆಟನ್" ಈ ರೀತಿ ಇದ್ದಿತು. ರೆಡ್ ಇಂಡಿಯನ್ನರ ಭಾಷೆಯಲ್ಲಿಯ ಈ ಶಬ್ದವಿದು; ಅದರರ್ಥ—"ನಡುಗಡ್ಡೆಯ ಮೇಲಿನ ನಗರ" ಎಂದಿರುವದು. ಅಂತೆಯೇ "ನ್ಯೂಯಾರ್ಕ" ಎಂದು ಕರೆಯುತ್ತಾರೆ.

ಲೋಸ್ ಇಂಜಿಲಿಸ್— ಈ ನಗರವು ನಿಮಗೆ ಹಾಲಿವೂಡ್‌ದ ಚಿತ್ರಪಟಗಳ ಮೂಲಕ ನೆನಪಾಗಿರಬಹುದು! ಅಮೇರಿಕೆಯ ಐದನೆಯ ದರ್ಜೆಯ ದೊಡ್ಡ ಶಹರ ಎಂದು ಅದರ ಗಣನೆಯಾಗಿದೆ! ಅದೆಷ್ಟೋ ಶತಮಾನಗಳ ಹಿಂದೆ ಸ್ಪೆನಿಶ್ ಜನರು ಅಲ್ಲಿಗೆ ಬಂದ ವೇಳೆಯಲ್ಲಿ ಅವರಿಗೆ ಕೆಲವು ಮನೆಗಳು ಕಂಡುಬಂದವು. ಆ ಸಣ್ಣ ಊರಿನ ಮನೆಗಳ ಸುತ್ತ-ಮುತ್ತಲಿನ ವಾತಾವರಣವು ಅತ್ಯಂತ ನಯನರಮ್ಯ ಹಾಗೂ ರಮಣೀಯವಾಗಿತ್ತು! ಅಲ್ಹಾದಕರ ಹವಾಮಾನ ಮತ್ತು ಆ ಹವಾಮಾನದೊಳಗಿನ ವಸತಿಯನ್ನು ಕಣ್ಣಾರೆ ಕಂಡು ಸ್ಪನಿಶ್ ಜನರು ಈ ಪುಟ್ಟ ವಸತಿ ಇದ್ದ ಊರಿಗೆ "ದೇವದೂತರ ನಾಡು" -(ಪ್ಯೂಬ್ಲೋ ಡೀಲೋಸ್ ಎಂಜಲೀಸ್) ಈ ರೀತಿ ಹೆಸರು ಕೊಟ್ಟರು. ಅದು ಹಾಗೆಯೇ ರೂಢವಾಯಿತು?

ನಾಯಗರಾ—ಕೆನಡಾ ಮತ್ತು ಅಮೇರಿಕಾ ದೇಶಗಳ ಗಡಿಯ ಮೇಲೆ ಒಂದು ಅತ್ಯಂತ ಪ್ರೇಕ್ಷಣೀಯವಾದ ನೈಸರ್ಗಿಕ ಜಲಪಾತ ಇದೆ. ಅದರ ಹೆಸರು "ನಾಯಗರಾ" ಇದ್ದು. ಈ ಹೆಸರು ರೆಡ್ ಇಂಡಿಯನ್ನರೇ ಕೊಟ್ಟ ದೇಣಿಗೆಯಾಗಿದೆ! ಅವರ ಭಾಷೆಯಲ್ಲಿ ಆ ಶಬ್ದದ ಅರ್ಥ "ನೀರಿನ ಗರ್ಜನೆ" ಎಂದಿರುವದು. ಧಬಧಬೆಯ ಸ್ರೋತದ ಪ್ರಚಂಡ ರಭಸದ ಧ್ವನಿಯನ್ನು ಮನದಲ್ಲಿ ತಂದಕೂಡಲೇ ಈ ಹೆಸರು ಎಷ್ಟು ಸಯುಕ್ತಿ ಕವಿದೆಯೆಂಬುದು ಸ್ವಾಭಾವಿಕವಾಗಿಯೇ ತಿಳಿದು ಬರುವದು.

ಶಿಕಗೋ-ಅಮೇರಿಕೆಯ "ಇಲಿನ್ವಾಯೀಸ್" ರಾಜ್ಯದಲ್ಲಿ "ಶಿಕಾಗೋ" ಎಂಬ ಹೆಸರಿನ ಪ್ರಮುಖ ನಗರ ಒಂದಿದೆ. ಅಲ್ಲಿ ಧಾನ್ಯದ ದನ—ಕುರಿಗಳ ಬಹುದೊಡ್ಡ ಪೇಟೆಯೂ ಸಹ ಇರುವದು. ಇಂದು ಅದು ಅಮೇರಿಕೆಯ ದ್ವಿತೀಯ ದರ್ಜೆಯ ನಗರವಿದ್ದರೂ, ಸನ್ ೧೮೩೦ರ ವರೆಗೆ ಅದೊಂದು ಸಣ್ಣ ಹಳ್ಳಿಯಾಗಿತ್ತು. ಈ ನಗರಕ್ಕೆ "ಶಿಕಾಗೋ" ಎಂದು ಸಂಬೋಧಿಸುವರು. ಅದು ಫ್ರೆಂಚರ ಶಬ್ದವಾಗಿದೆ. ಆದರೂ ಅದು ಶುದ್ಧ ಫ್ರೆಂಚರ ಶಬ್ದವಲ್ಲ. ಅದರ ಮೂಲ ರೆಡ್ ಇಂಡಿಯನ್ ಶಬ್ದದ ಅರ್ಥವಾಗಿದೆ. "ಸ್ಕಂಕ" (ಒಂದು ಅಮೇರಿಕನ್ ಪಶುವಿನ ಹೆಸರು) ಇಲ್ಲವೇ "ಬೆಟ್ಟದೊಳಗಿನ ಉಳ್ಳಾಗಡ್ಡೆ" ಎಂಬ ಅರ್ಥದ ಆ ನಗರವಾಗಿದೆ.

ನಾಶಿಕ—ಭಾರತದೊಳಗಿನ ಅನೇಕ ಪಟ್ಟಣಗಳ ಹೆಸರಿನ ಇತಿಹಾಸವು ಮನೋರಂಜಕವಾಗಿರುವದು. ಉದಾ—ನಾಶಿಕ ನಗರ ಇದೊಂದು ಹಿಂದುಗಳ ಪುಣ್ಯಕ್ಷೇತ್ರವಾಗಿದೆ. ಇದು ಗುಡ್ಡಗಳ ಮೇಲೆ ನಿರ್ಮಾಣವಾಗಿದೆ. ಒಂಬತ್ತು ಸಣ್ಣ ಗುಡ್ಡಗಳ ಶಿಖರದ ಮೇಲಿದ್ದ ನಗರವೆಂದರೆ-"ನವ—ಶಿಖ" ಎಂದಾಗುವದು. ಹಾಗೂ ಅಂದಿನಿಂದ "ನಾಶಿಕ" ಹೇಗೆ ಆ ಹೆಸರಿನ ಉತ್ಪತ್ತಿಯಾಯಿತೆಂದು ಬಲ್ಲವರು ಹೇಳುತ್ತಾರೆ. ಅದೇ ಮುಂದೆ ನವ—ಶಿಖ ಇದ್ದದ್ದು "ನಾಶಿಕ" ಎಂದಾಯಿತು!

ಶ್ರೀರಾಮನು ಶೂರ್ಪನಖಿಯ ನಾಶಿಕಾ (ಮೂಗು) ವನ್ನು ಕೊಯ್ದದ್ದರಿಂದ ಈ ಊರಿನ ಹೆಸರು "ನಾಶಿಕ" ಎಂದ ಬಿದ್ದಿತೆಂದು ಇನ್ನು ಕೆಲವರ ಅಂಬೋಣವಾಗಿದೆ.

ಬಿಹಾರ-ಭಾರತದಲ್ಲಿಯ ೧೪ ರಾಜ್ಯಗಳಲ್ಲಿ ಒಂದಾದ ಬಿಹಾರ ರಾಜಕ್ಕೆ "ಬಿಹಾರ" ಎಂದು ಹೆಸರು ಹೇಗೆ ಬಂದಿರುವದು ಎಂಬ ಸ್ವಾರಸ್ಯವಾದ ವಿಚಾರ ಸುಮಾರು ಕ್ರಿ. ಶ. ೧೨೦೦ರ ಹೊತ್ತಿಗೆ ಈ ಪ್ರದೇಶವನ್ನು ಆಕ್ರಮಿಸಲು ಬಂದ ಮುಸ್ಲೀಮರು ಈ ಪ್ರದೇಶದಲ್ಲಿ ಎಲ್ಲೆಡೆಯಲ್ಲೂ ಕಂಡು ಬಂದ "ಬೌದ್ಧ ವಿಹಾರ"ಗಳನ್ನು ಕಂಡು (ಬೌದ್ಧ + ವಿಹಾರ) 'ಬಿಹಾರ' ಎಂದು ಕರೆದರೆಂದು ಊಹೆ ಇದೆ! ಭಾರತದೊಳಗಿನ ಭಿನ್ನ ಭಿನ್ನ ಪ್ರದೇಶಗಳ ಮತ್ತು ನಗರಗಳ ಹೆಸರು ಹೇಗೆ ಪ್ರಚಾರದಲ್ಲಿ ಬಂದವು? ಈ ವಿಷಯದಲ್ಲಿ ಸಂಶೋಧನೆ. ಒಂದು ವೇಳೆ ಯಾರಾದರೂ ಬರೆದರೆ ಅದೊಂದು ಬೃಹತ್ ಆಕಾರದ ಗ್ರಂಥವಾಗಿ ತುಂಬಾ ಮನೋರಂಜನೆಯಾಗುವದರಲ್ಲಿ ಸ್ವಲ್ಪವೂ ಸಂದೇಹವಿಲ್ಲವೆಂದು ಧಾರಾಳವಾಗಿ ಹೇಳಬಹುದು.

—ಶ್ರೀ ರಾಮಕೃಷ್ಣ ಎ. ಪೈ,
ಶಾರದಮಠ, ಅಂಕೋಲಾ, (ಎನ್ಕೆ)

ಉಡುಪಿ. ಡಿ. ಮು. ಕೋರ್ಟಿನಲ್ಲಿ
O. S. 456/1957. R. E. P 130/1959

ದಿ. ಕೆನರಾ ಯಿಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ — ಅರ್ಜಿದಾರ.

ಮತ್ತು

ಯು. ಬಿಂದು ಮಾಧವಾಚಾರ್ಯ—ಯು. ನಾರಾಯಣ M. ಆಚಾರ್ಯರ ಮಗ—ಮೂಡನಿಡಂಬೂರು ಗ್ರಾಮದ ಬ್ರಹ್ಮಗಿರಿ—ಎದ್ರಿ.

ಸದರಿ ಎದ್ರಿಗೆ —

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು. ಸದರಿ ಅಮ್ಲಜಾರಿಯಲ್ಲಿ ಜಪ್ತು ಮಾಡೋಣಾದ ಸ್ಥಿರಾಸ್ತಿ ಮಾರಾಟದ ಬಗ್ಗೆ ಹಾಜರುಪಡ್ಡಿಸದ ವಿಕ್ರಯದ ಯಿಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸಲಿಕ್ಕೆ 1959ನೇ ಯಿಸವಿ ಅಕ್ಟೋಬರ ತಿಂಗಳು 17ನೇ ತಾರೀಕು ನಿಶ್ಚಯಿಸೋಣಾಗಿಯದೆಂತ ನಿಮಗೆ ಯಿದರಿಂದ ತಿಳಿಸೋಣಾಗುತ್ತದೆ.

M. Damoder Kamath
Advocate for Petitioner

ಉಡುಪಿ. ತಾ. 5—10—1959

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಶಿರ್ವ.

The Catholic Bank Ltd., Shirva.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು, ಕ್ರಮಪ್ರಕಾರ ರಿಜಿಸ್ಟ್ರ ನೋಟೀಸು ಕೊಟ್ಟಲ್ಲಿ ಕೂಡಾ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ, ವ ಸದ್ರಿಯವರು ಮೃತಪಟ್ಟಲ್ಲಿ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ— ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 14—10—59ರ ವಳಗೆ ಬಿಡಿಸದಿದ್ದಲ್ಲಿ 17—10—59ನೇ ಶನಿವಾರ ಮಧ್ಯಾಹ್ನ ಗಂಟೆ 12ಕ್ಕೆ ಯಾ ನಮಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
39/1260 9.7.1957	N. ಜಗನ್ನಾಥ ಶೆಟ್ಟಿ, N/o ಶ್ಯಾಮರಾಯ ಶೆಟ್ಟಿ, ಪಡುಮನೆ, ನಿಂಜೂರು P.O.	250-00
39/1736 21.8.1957	ಮೋನಪ್ಪ ಪೂಜಾರಿ, S/o ಫಕೀರ ಪೂಜಾರಿ, ಗರಡಿ ಮನೆ, ಎಲ್ಲೂರು P.O.	40-00
33/1825 29.8.1957	ಜನಾರ್ಧನ ಉಪಾಧ್ಯಾಯ, S/o ರಾಘವ ಉಪಾಧ್ಯಾಯ, ಪಡು ಬೆಳ್ಳೆ, ಕುಂಜಾರುಗಿರಿ P.O.	115-00
39/2089 26.9.1957	— Do —	70-00
34/1245 11.7.1958	ಶಂಬು ಶೆಟ್ಟಿ, S/o ಬೊಮ್ಮ ಶೆಟ್ಟಿ, ಅಟ್ಟಿಂಜೆ, ಶಿರ್ವ P.O.	45-00
34/1247 11.7.1958	ಪುಷ್ಕರ ಶೆಟ್ಟಿ, S/o ಮುದ್ದಣ್ಣ ಶೆಟ್ಟಿ, ಬೆಳ್ಳೆ, ದೊಡ್ಡ ಮನೆ, ಮೂಡು ಬೆಳ್ಳೆ P.O.	35-00
34/1869 23.9.1958	ವೆಂಕಪ್ಪ ಪೂಜಾರಿ, S/o ಕುಯಿಂಪ ಪೂಜಾರಿ, ಮಾನಿಬೆಟ್ಟು, ಮಟ್ಟಾರ್ P.O	10-00

Office of the Catholic Bank Ltd., Shirva.
5th Oct., 1959.

E. D'Cunha,
Agent.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ದೇಶ ಪರಿಚಯ

(೮ನೇ ಪುಟದಿಂದ)

ಡುವದಿಲ್ಲ. ಹಾಗೆ ಬಿಡುವುದು ನಡತೆಗೆ ವಿರೋಧ ಪ್ರತಿಯೊಂದು ಹುಲ್ಲು ಎಳೆಗೂ ಯಜಮಾನನು ಪ್ರಾಮುಖ್ಯತೆ ಕೊಡುವನು. ಈ ಮೋನಿಗಳು ಸಣ್ಣದಾದರೂ ಶಕ್ತಿಯುತವಾಗಿವೆ. ಇವುಗಳ ಕೂದಲು ಉದ್ದ. ಕುದುರೆಯ ಬಾಲಕ್ಕಿಂತ ದಪ್ಪದ ಬಾಲ ಗಾಳಿಬಂದಾಗ ಬೆನ್ನುಹಾಕಿ ಈ ಬಾಲವನ್ನು ಒಂದು ಬದಿಯ ಮೇಲೆ ಹೇರಿ ಅರೇಬಿಯಾದಲ್ಲಿ ಒಂಟೆಗಳು ಬಿರುಗಾಳಿಬಂದಾಗ ತಮ್ಮ ಕಣ್ಣು ಮತ್ತು ಮೂಗು ಮುಚ್ಚಿಕೊಂಡಂತೆ ತಮ್ಮ ರಕ್ಷಣೆ ಮಾಡಿಕೊಳ್ಳುವವು.

ಎಸ್ಕಿಮೊ ಜನರು ಮತ್ತು ಅವರ ನಾಯಿಗಳು ಬಹು ವಿಚಿತ್ರವಾದವುಗಳು. ಅವರು ತಮ್ಮ ನಾಯಿಗಳನ್ನು ಬೀಸಣಿಗೆ ಬಚ್ಚೆಯಾಕೃತಿಯಲ್ಲಿ ಸುತ್ತುಕಟ್ಟಿ ಗಾಡಿಯ ಮುಂದೆ ಕಟ್ಟುವರು. ಕೆನಡಾದಲ್ಲಿ ಒಂದರಹಿಂದೆ ಒಂದನ್ನೂ ಅಲಾಸ್ಕಾದಲ್ಲಿ ಜೊತೆಯಾಗಿಯೂ ನಾಯಿಗಳನ್ನು ಗಾಡಿಗೆ ಕಟ್ಟುವರು.

ಚಳಿಗಾಲದ ಸಮಯ ರಾತ್ರಿಯೇ ಆವರಿಸಿಕೊಂಡಿರುವದರಿಂದ ಎಸ್ಕಿಮೋ ಜನರು ನಾನಾತರದ ಕೈಗಾರಿಕೆ ಕೆಲಸ, ವಸ್ತ್ರ ನೇಯುವದು ಮೀನು ಶಿಖಾರಿಗೆ ಆಯುಧ ತಯಾರಿಸುವುದರಲ್ಲಿ ಸಮಯ ಕಳೆಯುವರು. ಅವರು ಹೀಗೆ ಕೆಲಸಮಾಡುತ್ತಿರುವಾಗ ಬೇಸರ ಕಳೆಯಲು ನಾನಾ ಬಗೆಯ ಚಿಕ್ಕ ಕಥೆಗಳನ್ನು ಹೇಳುವರುಂಟು. ಅಂಥಾ ಒಂದು ಕತೆಯು ಈ ಕೆಳಗಿನಂತಿದೆ. "ಒಂದು ದಿವಸ ಮುದುಕಿಯೊರ್ವಳು ಒಂದು ತೋಳನ ಚರ್ಮವನ್ನು ಕೆರೆಯುತ್ತಿದ್ದಳು. ಒಬ್ಬ ಅಪರಿಚಿತನು ಅಲ್ಲಿಗಾಗಮಿಸಿ ಮುದುಕಿಯು ಕೆರೆಯುವ ಚರ್ಮ ಯಂಥಾದ್ದೆಂದು ವಿಚಾರಿಸಲು ತೋಳನ ಚರ್ಮವೆಂದಳು. ಹೀಗೆಂದೊಡನೆಯೇ ಆತನು ತೋಳನಂತೆ ಗಟ್ಟಿಯಾಗಿ ಬೊಗಳುತ್ತಾ ತನ್ನ ಎರಡು ಕೈಗಳನ್ನು ಕಾಲುಗಳಂತೆ ನೆಲದಮೇಲೆ ಊರಿ ನಾಲ್ಕು ಕಾಲುಗಳಿಂದ ಹರಿದುಕೊಂಡು ಕೂಗುತ್ತಾ ಓಡಿದನು. ಈತನು ತೋಳ ಮನುಷ್ಯನು. ಮರುದಿವಸ ಮುಂಜಾನೆ ಮುದುಕಿಯ ಗುಡಿಸಲು ಸಮೀಪ ಹಲವು ತೋಳಗಳು, ಕರಡಿಗಳು ಮತ್ತು ನರಿಗಳು ಬೊಗಳುತ್ತಾ ಗುರುಗುಟ್ಟುತ್ತಾ ಇರುವದನ್ನು ಮುದುಕಿಯು ನೋಡಿ ಇವುಗಳ ರಗಳೆ ತೀರಿಸಬೇಕೆಂದು ಉಪಾಯ ಹುಡುಕಿದಳು. ತಾನು "ಬೆರ್ರೀಸ್" ಬೇಯಿಸಲು ಯಿಟ್ಟಿದ್ದೇನೆ ನಿಮಗೊಂದು ಹಿಟ್ಟು ಮಾಡಿ ತಿನ್ನಲು ಕೊಡುವೆನು ರುಚಿ ನೋಡಬಹುದು ಮನೆಯೊಳಗೆ ಎಲ್ಲರೂ ಬನ್ನಿರಿ ಎಂದು ಆಹ್ವಾನಿಸಿದಳು. ಅವುಗಳೆಲ್ಲವೂ ಮನೆಯೊಳಕ್ಕೆ ನುಗ್ಗಿದವು ಮುದುಕಿಯು ಸ್ವಲ್ಪ ನೀರನ್ನು ಬಿಸಿಮಾಡಲು ಒಲೆಯ ಮೇಲಿಟ್ಟು ಹೊಗೆ ಗಂಡಿಯನ್ನು ಮುಚ್ಚಿ ಒಲೆಯಲ್ಲಿ ಒದ್ದೆಯಾದ ಕಟ್ಟಿಗೆಯನ್ನಿಟ್ಟು ಬೆಂಕಿಮಾಡಲು ಉದ್ಯುಕ್ತಳಾದಳು. ಕೋಣೆಯೊಳಗೆ ಹೊಗೆ ಸುತ್ತಿ ಇವುಗಳಿಗೆ ಶ್ವಾಸಕಟ್ಟಿ ಹೊರಗೆ ಓಡಲು ಬಾಗಿಲಿಗೆ ಬಂದ ಹಾಗೆ ಒಂದೊಂದನ್ನೇ ಕಡಿದು ಹಾಕಿದಳು. ಹೀಗಾಗಿ ಅಷ್ಟು ಪ್ರಾಣಿಗಳ ಬೆಲೆ ಬಾಳುವ ಚರ್ಮವು ಇವಳಿಗೆ ಒಂದೇ ಸಲ ಬಹು ಸುಲಭದಿಂದ ದೊರೆಯಿತು."

ಗ್ರೀನ್‌ಲ್ಯಾಂಡು ಬಹು ವಿಸ್ತಾರವಾದ ದ್ವೀಪ. ಇದು ೮೦೦ ಮೈಲು ಅಗಲ ೧೬೦೦ ಮೈಲು ಉದ್ದವಿದೆ. ಅದರ ಜನಸಂಖ್ಯೆ ಕೇವಲ ೧೮೦೦೦. ಇವರಲ್ಲಿ ಎಸ್ಕಿಮೋ ಜನರು ಬಹುಸಂಖ್ಯಾತರು. ಭೂಮಿಯಿಂದ ಬಿಸಿ ನೀರು ಬರುವುದರಿಂದ ಬೆಟ್ಟಗಳು ಹಿಮಗಡ್ಡೆಯಿಂದ ಮುಚ್ಚಿಕೊಂಡಿರುವುದರಿಂದ ಅಲ್ಲಿ ವಾಸಿಸುವುದು ಬಹಳ ಕಷ್ಟ. ಉತ್ತರ ಧ್ರುವದಲ್ಲಿ ರಾತ್ರಿಯು ಕವಿದೊಡನೆ ಈ ರಾಷ್ಟ್ರವು ನಿಶ್ಶಬ್ದದ ಊರಾಗುವದು. ಸೆಕೆಕಾಲದ ಎರಡು ತಿಂಗಳಲ್ಲಿ ಕೆಲಸಕಾರ್ಯಗಳೆಲ್ಲಾ ತುಂಬಾ ಉತ್ಸಾಹದಿಂದ ಮತ್ತು ರಭಸದಿಂದ ಸಾಗುವದು. ಆ ಸಮಯ ಹಕ್ಕಿಗಳು ತಂದು ಹಾಕಿದ ಬೀಜದಿಂದ ಬಯಲು ಪ್ರದೇಶವು ಹುಲ್ಲು ಗಿಡಗಳು ಹುಟ್ಟಿ ಹಸುರಾಗಿ ಕಾಣುವವು. ಕರಗಿದ ನೀರುಗಡ್ಡೆಯಲ್ಲಿ ಲಕ್ಷೋಪಲಕ್ಷ ನುಸಿಗಳು ಮೊಟ್ಟೆಯಿಟ್ಟು ವೃದ್ಧಿಯಾಗುವವು. ಗ್ರೀನ್‌ಲ್ಯಾಂಡಿನ ಉತ್ತರದಲ್ಲಿ ಸುಮಾರು ೧೩೦ ದಿನಗಳ ವರೆಗೆ ಸೂರ್ಯ ಮುಳುಗುವುದೇ ಇಲ್ಲ. ಈ ಸಮಯದಲ್ಲಿ ಸೀಲ್ ಎಂಬ ಮೀನು ನಾಯಿಮರಿಗಳಂ ಅಲ್ಲಲ್ಲಿ ತಲೆಯೆತ್ತಿ ತಿರುಗುವುವು. ಇವುಗಳನ್ನು ಎಸ್ಕಿಮೊ ಜನರು ಸುರುಜಿ ಕೋಲಿನಿಂದ ಇರಿದು ಕೊಲ್ಲುವರು.

ಎಸ್ಕಿಮೊ ಜನರು ಮಂಗೋಲರ ವರ್ಣಕ್ಕೆ ಸೇರಿದವರು. ಮೀನು ಹಿಡಿದು ಜೀವಿಸುವವರಾದ ಕಾರಣ ಕರಾವಳಿ ಪ್ರದೇಶದಲ್ಲಿಯೇ ವಾಸಿಸುವರು. ಇವರ ದುಸ್ತು ಚರ್ಮದ್ದು. ಬಿಳಿಜನರ ಸಂಪರ್ಕದಿಂದ ನಾನಾ ರೋಗಗಳಿಗೆ ತುತ್ತಾಗಿರುವರು. ಅವರ ಜೀವನದ ಒಡ್ಡಾಟವೇ ಆಹಾರೋತ್ಪನ್ನಕ್ಕಾಗಿರುವದು. ಎಲ್ಲಿ ಮೀನು ಬೇಟೆಯಾಡಲನುಕೂಲವಿದೆಯೋ ಅಲ್ಲಿ ವಾಸಿಸುವರು. ಮನೆಗಳನ್ನು ಕಲ್ಲಿನಿಂದ ಕಟ್ಟುವರು. ಗೋಡೆಗಳನ್ನು ಸೀಲ್ ಚರ್ಮದಿಂದ ಮುಚ್ಚುವರು. ಕಿಟಕಿಗಳಿಗೆ ಒಣಗಿಸಿದ ಸೀಲ್ ನರಗಳನ್ನು ಮುಚ್ಚುವರು. ಕಲ್ಲಿನ ಬೆಂಚು ಇವರ ಹಾಸಿಗೆ. ಒಣಗಿದ ಹುಲ್ಲು ಇವರ ಚಾಪೆ. ಚರ್ಮವನ್ನು ಹೊದೆದುಕೊಳ್ಳುವರು. ಇವರ ದೋಣಿ ಎರಡು ನಮೂನೆಯಿರುವದು. ಈ ಎರಡಕ್ಕೂ ಸೀಲ್ ಚರ್ಮ ಕಟ್ಟುವದಾಗಿದೆ. ಬೇಟೆಗಾರರ ದೋಣಿಗೆ 'ಕಾಯಕ್' ಎನ್ನುವರು. ಇದು ಉದ್ದವಾಗಿದ್ದು ಎರಡು ತೊಲೆಗಳಿಂದ ಒತ್ತತಕ್ಕದ್ದು ಇನ್ನೊಂದು ಭರದದ್ದು ಹೆಂಗಸರುಪಯೋಗದ್ದು. ಇದರಿಂದ ಹೆಂಗಸರು ಸರಕು ಸಾಮಾನುಗಳನ್ನು ಸಾಗಿಸುವರು. ಇದನ್ನು 'ಉಮಿಯಕ್' ಎಂದು ಕರೆಯುವರು. ನೀರು ಒಳಗೆ ಪ್ರವೇಶಿಸದಂತೆ ದಿನ ಬಿಟ್ಟು ದಿನ ಇವನ್ನು ಎಣ್ಣೆಯಿಂದ ಉಜ್ಜಬೇಕು.

ಸೀಲ್, ಎಸ್ಕಿಮೋ ಜನರ ನಾನಾ ಕೊರತೆಗಳನ್ನು ಒದಗಿಸುವದಾದ್ದರಿಂದ ಇವರು ಸಾಹಸಪಟ್ಟು ಬೇಟೆಯಾಡುವರು. ಚಳಿಗಾಲದಲ್ಲಿ ಹಿಮಗಡ್ಡೆಯು ಗಟ್ಟಿಯಾದಾಗ ಉಸಿರು ಬಿಡಲಿಕ್ಕಾಗಿ ಸೀಲ್‌ಗಳು ಹಿಮಗಡ್ಡೆಯನ್ನು ಕೊರೆದು ಶ್ವಾಸ ಬಿಡುವರೆ ರಂಧ್ರ ಮಾಡಿಕೊಳ್ಳುವವು. ಎಸ್ಕಿಮೋ ಜನರು ಆ ರಂಧ್ರಗಳನ್ನು ಹುಡುಕಿ ತಮ್ಮ ಸುರುಜಿಯನ್ನು ಹಿಡಿದು ಸೀಲ್‌ಗಳು ಹೊರಗೆ ಬರುವವರೆಗೆ ಕಾದು ಕೂತು ಬಂದ ಕೂಡಲೆ ಇರಿದು ಕೊಲ್ಲುವರು. ವಸಂತಕಾಲದಲ್ಲಿ ಹಿಮಗಡ್ಡೆಯು ಕರಗಿದಾಗ ಸೀಲ್‌ಗಳು ಹೊರಗೆ ಬಂದು ಸೂರ್ಯನ ಬಿಸಿಲಿಗೆ ಮಲಗುವವು. ಆ ಸಮಯ ನೋಡಿ ಹೋಗಿ ಕೊಲ್ಲುವರು. ಹಿಮಗಡ್ಡೆಯು ಕರಗಿ ನೀರಾದ ಮೇಲೆ ಸೀಲ್‌ಗಳು ಹಾರಿ ನೀರಿಗೆ ಹೋಗುವುವು. ಇವುಗಳನ್ನು ಹಿಂಬಾಲಿಸಿ ಹೋಗಿ ಕೊಲ್ಲುವರು.

ಎಸ್ಕಿಮೊ ಜನರು ತಾವು ಕೊಂದ ಸೀಲ್ ಚರ್ಮದಿಂದ ತಮಗೆ ಬೇಕಾದ ದುಸ್ತುಗಳನ್ನು ತಯಾರಿಸುವರು. ಸ್ತ್ರೀಯರು ಗಂಡಸರಂತೆ ಇಜಾರು ಹಾಕುವರು ತಮ್ಮ ಇಜಾರಿನ ತುದಿಯ ಮೇಲೆ ಅವರ ಬೂಟ್ಸುಗಳು. ಅಲ್ಲಿ ಅವರು ಅದಕ್ಕೆ ಕಮಿಕರ ಎಂದ ಕರೆಯುವರು, ಮುಚ್ಚುವಂತೆ ಮಾಡುವರು ಬೂಟ್ಸು ತಯಾರಿಸುವ ಚರ್ಮವು ಮೃದುವಾಗುವಂತೆ ಚರ್ಮವನ್ನು ಹಲ್ಲಿನಿಂದ ಮೊದಲು ಚೆನ್ನಾಗಿ ಕಡಿಯುವರು. ಇದರಿಂದ ಅವರ ಹಲ್ಲುಗಳು ಬೇಗ ಸವೆಯುವದು. ನಾಗರಿಕರಾದ ಕೆಲವು ಪಟ್ಟಣಿಗರು ಪರದೇಶದ ವಸ್ತ್ರದಿಂದ ತಯಾರಿಸಿದ ದೊಡ್ಡ ಅಂಗಿ ಹಾಕುವರು ಮತ್ತು ತಲೆಗೆ ರಿಬ್ಬನ್ ಕಟ್ಟುವರು. ಮದುವೆಯಾಗದ ಕನ್ಯೆಯರು ಹಸುರಾದ ರಿಬ್ಬನ್ ಮತ್ತು ವಿಧವೆಯರು ಕಪ್ಪುರಿಬ್ಬನ್ ಕಟ್ಟುವ ಪದ್ಧತಿ ಅವರಲ್ಲಿದೆ. ಸ್ತ್ರೀಯರು ತಮ್ಮ ದುಸ್ತನ್ನು ಮಣಿಗಳಿಂದ ಅಥವಾ ಬಣ್ಣಕೊಟ್ಟ ಚರ್ಮದಿಂದ ಅಥವಾ ಗರಿಗಳಿಂದ ಅಲಂಕರಿಸುವರು. ಸ್ತ್ರೀಯರು ಮಕ್ಕಳನ್ನು ಹೊರೆಯುಂತೆ ಬೆನ್ನಿನಲ್ಲಿ ತೂಗಾಡಿಸಿಕೊಂಡು ಹೋಗುವ ಕ್ರಮ ಇಲ್ಲಿಯೂ ಇದೆ.

ಗ್ರೀನ್ ಲೇಂಡಿನಲ್ಲಿ ಚಳಿಗಾಲದಲ್ಲಿ ವಾಸಿಸುವರೆ ಕಲ್ಲು ಮತ್ತು ಮರಗಳಿಂದ ಮನೆಗಳನ್ನು ಕಟ್ಟುವರು. ಈ ಮನೆಯ ಕೆಲವು ಭಾಗವು ನೆಲದಡಿಯಲ್ಲಿರುವದು. ತಳಕ್ಕೆ ಕಲ್ಲು ಹಾಸಿ ಗೋಡೆಗಳಿಗೆ ಸೀಲ್ ಚರ್ಮ ಮುಚ್ಚಿ ಒಳಗೆ ಬೆಚ್ಚಗಿರಿಸುವರು. ಅಗ್ಗಿಷ್ಟಿಕೆಯ ಹೊಗೆಯು ಹೊರಗೆ ಹೋಗಲು ಮಾಡಿನಲ್ಲಿ ಒಂದು ನಳಿಗೆ ಇದುವದು. ಇಂಥ ಇಕ್ಕಟ್ಟಿನ ಮನೆಯಲ್ಲಿ ಎರಡು ಯಾ ಮೂರು ಕುಟುಂಬದವರೂ ವಾಸಿಸುವ ಪದ್ಧತಿ ಇದೆ. ಉತ್ತರ ಅಮೇರಿಕದ ಎಸ್ಕಿಮೊ ಜನರು ಆರ್ಕ್ಟಿಕ್ ರಾತ್ರಿ ಸಮಯ ವಾಸಿಸುವರೆ ಮಾಡುವ ನೀರುಗಡ್ಡೆ ಅಥವಾ ಹಿಮದ ಮನೆ "ಇಗ್ಲೂಸ್"ನ್ನು ಈ ಮನೆಗಳು ಹೋಲುವವು. ಸೆಕೆ ಕಾಲದಲ್ಲಿ ಚರ್ಮದ ಚಾಕಟ್ಟಿನ ಮನೆ ತಯಾರಿಸಿ ಉಳಕೊಳ್ಳುವರು. ಅವರ ಅಡಿಗೆಮಾಡುವ ಕ್ರಮದಲ್ಲಿ ಹೆಚ್ಚೇನು ವಿಶೇಷವಿಲ್ಲ. ಪಾಚಿ ಹುಲ್ಲಿನ ಬತ್ತಿಮಾಡಿ ಸೀಲ್ ಎಣ್ಣೆಯಲ್ಲಿ ಮುಳುಗಿಸಿ ಬೆಂಕಿಮಾಡಿ ಅಡಿಗೆ ಪಾತ್ರೆಯ ಅಡಿಯಿಡುವರು. ಈ ಅಡಿಗೆ ಪಾತ್ರೆಯನ್ನು ಮರದ ಚೌಕಟ್ಟಿನಲ್ಲಿ ತೂಗಾಡಿಸುವರು. ಬೆಂಕಿ ಸ್ವಲ್ಪ ಸಣ್ಣಗಾದ ಕೂಡಲೇ ಅಡಿಗೆಯವಳು ಬತ್ತಿಯಲ್ಲಿ ಕೂತ ಕಿಟ್ಟವನ್ನು ಎಲುಬಿನ ತುಂಡಿನಿಂದ ಅಲುಗಾಡಿಸಿ ಬೆಳಕನ್ನು ಪ್ರಕಾಶಮಾಡುವಳು.

ಆ ರಾಷ್ಟ್ರದಲ್ಲಿ ಮಂತೆ ಬಿಸಿನೀರು ಇರುವುದರಿಂದ ಆ ನೀರಿನಲ್ಲಿ ಜನರು ತಮ್ಮ ಬಟ್ಟೆ ಒಗೆಯುವರು. ಬಿಸಿನೀರಿಗೆ ಅಜಾಗ್ರತೆಯಿಂದ ಸ್ತ್ರೀಯರು ಬಿದ್ದು ಬೆಂದು ಹೋಗದಂತೆ ಬಿಸಿನೀರಿನ ಕೊಳಗಳಿಗೆ ಕಬ್ಬಿಣದ ಸರಳಿನ ಬೇಲಿಮಾಡಿಯಿಟ್ಟಿರುವರು. ಕೆಲವು ಕಡೆಗಳಲ್ಲಿ ಬಹಿರಂಗ ಸ್ನಾನ ಮಾಡುವ ಪದ್ಧತಿ ಸಹಾ ಇದೆ. ಈ ಬಿಸಿ ನೀರು ಬಹು ಸ್ವಚ್ಛವಾಗಿರುವುದರಿಂದ ಕೆಲವು ಕೆರೆಗಳ ನೀರನ್ನು, ಅಡಿಗೆ ಮತ್ತು ಚಾ, ಕಾಫಿ ಮಾಡಿಲಿಕ್ಕೆಂದು ಪ್ರತ್ಯೇಕಿಸಿಟ್ಟಿರುವರು.

—ಶ್ರೀ ಸಿ. ಎಚ್. ಶೆಟ್ಟಿ,

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೇರಿಕದ ಆರು ಕತೆಗಳು

ಅಮೇರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಮಾರಿ ಚಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಪ್ರಶಸ್ತ.

ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕನ್ನಡ ಲೈಬ್ರರಿ ಪುಸ್ತಕಗಳಿಗೆ ವಿಚಾರಿಸಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಚಾರ ವರ್ಷ—

ಪ್ರಜಾಸತ್ತೆ ಮತ್ತು ಅಹಿಂಸೆ

ಪ್ರಜಾಸತ್ತೆಯ ಕಾರ್ಯದಕ್ಷತೆ, ಪ್ರಗತಿ ಮತ್ತು ಪೂರೈಕೆಗಳು ಅಹಿಂಸೆಯ ಮೇಲೆ ನಿಂತಿದೆ; ಅಹಿಂಸಾಚರಣೆ ಮಾಡುವವರು ಪ್ರಜಾಸತ್ತಾತ್ಮಕ ವಿಧಾನವನ್ನೇ ಅನುಸರಿಸಬೇಕು; ಪ್ರಜಾಸತ್ತೆ ಮತ್ತು ಅಹಿಂಸೆಗಳು ಸೇರಿ ಸತ್ಯಕ್ಕೆ ನೆರವಾಗಬೇಕು.

'ಪ್ರಜಾಸತ್ತೆ', 'ಅಹಿಂಸೆ'—ಇವೆರಡು ಶಬ್ದಗಳು ಈವರೆಗಿನ ಇತಿಹಾಸದಲ್ಲೆಲ್ಲಾ, ಕೇವಲ ಭಾರತಕ್ಕಷ್ಟೇ ಅಲ್ಲ ಇಡೀ ವಿಶ್ವಕ್ಕೇ ಇಂದು ಅತಿ ಮಹತ್ವಪೂರ್ಣವಾಗಿ ನಿಂತಿವೆ. ಮಾನವನ ಇತಿಹಾಸದಷ್ಟೇ ಪುರಾತನವಾಗಿರುವ ಈ ಕಲ್ಪನೆಗಳು ಮತ್ತು ಶಬ್ದಗಳು ಬಹುಶಕ್ತಿಶಾಲೀ ಹಾಗೂ ಅರ್ಥಗರ್ಭಿತವಾಗಿರುವುದಷ್ಟೇ, ಮಾನವ ಸಂಸ್ಕೃತಿಯ ಶಾಂತಿಯುತ ಪ್ರಗತಿಯ ಸೂತ್ರವನ್ನೊಳಗೊಂಡಿವೆಯೆಂದರೆ ತಪ್ಪಾಗಲಾರದು.

ಶಬ್ದಗಳಿಗೂ ಜೀವವಿದೆ. ಅವುಗಳಿಗೂ ಜೀವನ, ವಿಕಾಸಗಳುಂಟು. 'ಪ್ರಜಾಸತ್ತೆ', 'ಅಹಿಂಸೆ'— ಈ ಶಬ್ದಗಳು, ಅವನ್ನು ಜೀವನದಲ್ಲಿ ಆಚರಣೆಗೆ ತರಲೆತ್ನಿಸುತ್ತಿರುವ ಮಾನವರನ್ನವಲಂಬಿಸಿ ಇಂದೂ ಸಹ ಹೆಚ್ಚು ಹೆಚ್ಚು ಅರ್ಥಪೂರ್ಣವಾಗುತ್ತಾ ವಿಕಸಿತಗೊಳ್ಳುತ್ತಿವೆ. ಶಬ್ದಗಳ ಬಾಹ್ಯ ರೂಪವು ಮೊದಲಿನಂತೆಯೇ ಉಳಿದಿದ್ದರೂ, ನಮಗೆ ಅವುಗಳ ಅರ್ಥ ಹಾಗೂ ಮಹತ್ವ ಮಾನವನ ಪ್ರಗತಿಯಾದಂತೆಲ್ಲಾ ಬೆಳೆಯುತ್ತಿರುತ್ತದೆ. ಈ ಎರಡು ಶಬ್ದಗಳೂ ತಮ್ಮ ತಮ್ಮ ವಿಶಿಷ್ಟ ದರ್ಶನ ಶಾಸ್ತ್ರ, ತತ್ವಜ್ಞಾನ ಹಾಗೂ ವೇದಾಂತಗಳನ್ನು ಹೊಂದಿವೆ. ಅವುಗಳ ಅಧ್ಯಯನವು ಮಾನವ ಶಾಸ್ತ್ರ, ಸಮಾಜಶಾಸ್ತ್ರ ಮತ್ತು ಮನೋವಿಕಾಸವನ್ನು ಅಧ್ಯಯನಮಾಡುವವರು ಮಾರುಹೋಗುವಂತಹ, ಮನಸೋಲುವಂತಹ ಮತ್ತು ಪ್ರಯೋಜನವಾಗುವಂತಹುದಾಗಿದೆ. ವಿಷಯವು ಬಹು ಗಹನವಾಗಿದ್ದು ದೀರ್ಘ ವಿಚಾರ ಯೋಗ್ಯವಾಗಿದ್ದರೂ ಸದ್ಯದಲ್ಲಿ ಸ್ಥಳ ಸಂಕೋಚದ ಕಾರಣ, ಇಂದಿನ ಪರಿಸ್ಥಿತಿಗೆ ಬೇಕಾದಂತೆ ಈ ಶಬ್ದಗಳ ವ್ಯಾವಹಾರಿಕ ಹಾಗೂ ತಿಳಿವಳಿಕೆಗೆ ಅನ್ವಯವಾಗುವಂತಹುದನ್ನು ಮಾತ್ರ ತೆಗೆದುಕೊಳ್ಳಲಾಗಿದೆ. ಇದಕ್ಕೆ ಮುನ್ನ ಪ್ರಜಾಸತ್ತೆ ಮತ್ತು ಅಹಿಂಸೆಗಳು ಸಾಧನಗಳು ಮಾತ್ರವೆಂದು ಹೇಳಬಯಸುತ್ತೇನೆ. ಶಾಂತಿಯುತ, ಸುಖಪೂರ್ಣ ಹಾಗೂ ಐಹಿಕ, ಬೌದ್ಧಿಕ, ನೈತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಪ್ರಗತಿಶೀಲವಾದುದೂ, ಪ್ರತಿಯೊಬ್ಬ ವ್ಯಕ್ತಿಯ ಶಕ್ತಿಗನುಗುಣವಾಗಿ, ಉನ್ನತತಮ ವಿಕಾಸಕ್ಕೆ ನಿರ್ಬಂಧರಹಿತ ಹಾಗೂ ಪೂರ್ಣ ಅವಕಾಶವನ್ನೊದಗಿಸುವಂತಹುದೂ ಆದ ವಿಶ್ವವ್ಯಾಪೀ ಮಾನವ ಜನಾಂಗದ ನಿರ್ಮಾಣವು ಅಂತಿಮ ಗುರಿಯಾಗಿದೆ. ಸಾಧ್ಯ—ಸಾಧನಗಳ ವಿಶಿಷ್ಟ ಸಂಬಂಧವನ್ನು ನಿರೂಪಿಸಿ ಪ್ರಜಾಸತ್ತೆ ಮತ್ತು ಅಹಿಂಸೆಗಳ ಮಧುರ ಸಮನ್ವಯವು ಸಾರ್ಥ್ಯಕಾರಿಯಾಗಿದೆಯೆಂದು ಮಾತ್ರ ಹೇಳಬಯಸುತ್ತೇನೆ. ಸಾಧನವನ್ನು ನಾವು ತೆಗೆದುಕೊಂಡರೆ ಸಾಧ್ಯವು ಅದರ ಹಿಂದೆಯೇ ಗೋಚರವಾಗುತ್ತದೆ.

ಪ್ರಜಾಸತ್ತೆ ಮತ್ತು ಅದರ ಕಲ್ಪನೆಯು ಬಹು ಪುರಾತನವಾದದ್ದು. ಅದು ಪಾಶ್ಚಾತ್ಯವೆಂದೆಣಿಸುವುದು ತಪ್ಪಾಗಿದೆ. ಕೆಲವಾರು ಪ್ರಯೋಗಗಳು ಹಾಗೂ ವಿಕಾಸಗಳ ಪರಿಣಾಮವಾಗಿ ಇಂದು ಹೊಂದಿರುವ ರೂಪ ಮತ್ತು ಕೊಡುವ ಅರ್ಥವನ್ನು ಮಾತ್ರ ಪಾಶ್ಚಾತ್ಯವೆನ್ನಬಹುದು. ಆದರೆ, ಇದೇ ಅದರ ರೂಪ, ಇದೇ ಕೊನೆಯ ರೂಪ ಅಥವಾ ಇದು ಒಂದೇ ರೂಪವೆಂದು ಹೇಳಲು ಸಾಧ್ಯವಿಲ್ಲ. ಬೌದ್ಧ ಕಾಲದಲ್ಲಿ ವೃಜ್ಜಿಗಳು ಅನುಸರಿಸಿದಂತಹ (ಕ್ರಿ. ಪೂ. ಆರನೆಯ ಶತಮಾನ) ಪ್ರಜಾಸತ್ತೆಗಳೂ, ಗಣರಾಜ್ಯಗಳೂ, ಕ್ರಿಸ್ತನ ಕಾಲಕ್ಕೆ ಅನೇಕ ಶತಮಾನಗಳ ಮುಂಚೆಯೇ ಭಾರತದಲ್ಲಿ ಆಚರಣೆಯಲ್ಲಿದ್ದವು. ಇವುಗಳಲ್ಲಿ ಕೆಲವು ಗ್ರೀಸ್ ಗಣರಾಜ್ಯಗಳಿಗಿಂತ ಪುರಾತನವಾಗಿವೆ. ಅಥರ್ವವೇದದಲ್ಲೂ ಈ ಬಗ್ಗೆ ಉಲ್ಲೇಖನಗಳಿವೆ. (ಸಭೆಗಳು, ಸಮಿತಿಗಳು). ಪ್ರಜಾಸತ್ತೆಯ ಆಧಾರದ ಮೇಲೆ ರಚಿಸಲ್ಪಟ್ಟ ಗ್ರಾಮ ಸಮುದಾಯಗಳಿದ್ದುವು. ತನ್ನ ಸ್ವಾಭಿಮಾನ, ಪವಿತ್ರತೆ, ಪ್ರಜಾತಂತ್ರ ಶಕ್ತಿ ಮೊದಲಾದವುಗಳನ್ನು ಕಳೆದು ಕೊಂಡಿದ್ದರೂ ಪುರಾತನವಾದ ಪಂಚಾಯತಿ ಪದ್ಧತಿಯು ಭಾರತದಲ್ಲಿನ್ನೂ ಉಳಿದಿದೆ. ಪ್ರಪಂಚದಲ್ಲಿ ಎಲ್ಲೆಲ್ಲಿ ಮಾನವನು ಸಾಮೂಹಿಕ ಜೀವನವನ್ನು ನಡೆಸಲು ಪ್ರಾರಂಭಿಸಿದನೋ ಅಲ್ಲೆಲ್ಲಾ ಸಾಮುದಾಯಿಕ ವಿಚಾರಕ್ಕೆ ಮನ್ನಣೆಯೀಯುವುದು ಸಾಮಾನ್ಯವಾಗಿ ಕಂಡು ಬರುತ್ತದೆ.

ಬಹುಕಾಲ ಹಿಂದೆ, ಪಾಶ್ಚಾತ್ಯ ದೇಶಗಳಲ್ಲಿ ಪ್ರಜಾಸತ್ತೆಯು ಮಾನ್ಯತೆಯೇ ಇಲ್ಲದ ವಿಚಾರವೊಂದಾಗಿತ್ತೆಂದರೆ ಸೋಜಿಗವೆನಿಸಬಹುದು. ಅದನ್ನು ಅರಿಸ್ಟಾಟಲ್ ತುಚ್ಛವಾಗಿ ಗಣಿಸಿದ್ದಕ್ಕೂ, ಪ್ಲೇಟೋ ವಿರೋಧ ವ್ಯಕ್ತಪಡಿಸಿದ್ದಕ್ಕೂ ಇದೇ ಕಾರಣವಿರಬಹುದು. ಅನಂತರದ ಆಧುನಿಕ ಕಾಲದಲ್ಲಿ ಅದರ ಉಪಯೋಗದ ಬಗ್ಗೆ ಭಿನ್ನಾಭಿಪ್ರಾಯ ಹುಟ್ಟಿತ್ತು. ಈ ಶಬ್ದಕ್ಕೆ ಹೆದರಿ, ಅಮೇರಿಕಾ ರಾಷ್ಟ್ರದ ನಿರ್ಮಾತೃಗಳು, ಅದರ ಸ್ಥಾನದಲ್ಲಿ ಗಣರಾಜ್ಯದ ತತ್ವವೆಂಬ ಶಬ್ದ ಪ್ರಯೋಗ ಮಾಡಿದ್ದರು. ಕಾಲಾನಂತರ ಪ್ರಜಾಸತ್ತೆ ಮತ್ತು ಗಣರಾಜ್ಯಗಳ ರೂಪವನ್ನು ಪ್ರತ್ಯೇಕಿಸಿ, ಪ್ರಜಾಸತ್ತೆಯೆಂದರೆ ಜನಗಳೇ ನೇರವಾಗಿ ನಡೆಸುವ ಗಣರಾಜ್ಯವೆಂದರೆ ಜನರು ತಮ್ಮ ಪ್ರತಿನಿಧಿಗಳ ಮೂಲಕ ನಡೆಸುವ ರಾಜ್ಯಕ್ರಮವೆನ್ನಲಾಯಿತು. ಇಂದು ಪ್ರಜಾಸತ್ತೆಯು ಕೇವಲ ರಾಜಕೀಯಕ್ಷೇತ್ರಕ್ಕಾಗಲಿ, ರಾಜಕೀಯ ಸಂಸ್ಥೆಗಳಿಗಾಗಲಿ ಅನ್ವಯವಾಗಿ ಉಳಿದಿಲ್ಲ, ವೈಯುಕ್ತಿಕ ಸ್ವಾತಂತ್ರ್ಯ ಹಾಗೂ ಸ್ವಯಂಸ್ಫೂರ್ತಿಗೆ ಅತಿ ಮುಖ್ಯಸ್ಥಾನ ಕೊಡುವಂತಹ ಒಂದು ಜೀವನ ಪದ್ಧತಿಯೇ ಇದಾಗಿದೆ. ಪೂರ್ಣವಕಾಶವಿದ್ದು, ದಾಸ್ಯರಹಿತ ವಾತಾವರಣದಲ್ಲಿ ಬೆಳವಣಿಗೆ ಹೊಂದಲು ಮಾನವನಲ್ಲಿರುವ ಸುಪ್ತ ಚೇತನದಲ್ಲಿ ಇದರ ನಂಬಿಕೆಯಿದೆ. ಸಮಾಜದ ಪ್ರತಿಯೊಂದು ಕಾರ್ಯವೂ, ಸ್ವಯಂಪ್ರೇರಿತ ಸಹಕಾರ, ಸಾಮೂಹಿಕ ವಿಚಾರ ಹಾಗೂ ಬಹುಸಂಖ್ಯಾ ನಿರ್ಧಾರಗಳು ಆಧಾರವಾಗಿರುವ ಈ ಪದ್ಧತಿಯು ಜೀವನದಷ್ಟೇ ಬಹುವ್ಯಾಪಕವಾಗಿದೆ.

ವಿಚಾರ ಮಂಥನದಿಂದ ನಿರ್ಧಾರ ಬಹುಸಂಖ್ಯಾನಿರ್ಧಾರದಿಂದ ಕಾರ್ಯ ಮತ್ತು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಹಿಂಸಾಮಾರ್ಗವನ್ನವಲಂಭಿಸದೆ, ಶಾಂತಿಯುತ ಹಾಗೂ ನೀತಿಯುತ ಹಾದಿಯಲ್ಲಿ ಬಹುಸಂಖ್ಯೆಯನ್ನು ತಮ್ಮದಾಗಿಸಲು ಯಾವುದೇ ಗುಂಪಿಗೆ ಅಥವಾ ವ್ಯಕ್ತಿಗೆ, ಅನುಮಾನರಹಿತ ಸ್ವಾತಂತ್ರ್ಯ—ಇದೇ ಪ್ರಜಾಸತ್ತೆಯ ಸಾರ. ಯಾವುದೇ ಕ್ಷೇತ್ರದಲ್ಲಿ ಲೋಕತಂತ್ರದ ಸೂತ್ರಗಳ

(೧೨ನೇ ಪುಟ ನೋಡಿರಿ.)

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ ವಾಶಿಂಗ್‌ಟನ್

ಲೇಖಕಿ: ಜಿನೇ ಇಯೋಟನ್.

ಅನುವಾದಕರು:

ಯು. ಎಲ್. ಆಚಾರ್ಯ, ಎಮ್. ಎ ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ— ಜಾರ್ಜ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಇತಿಹಾಸ ಪೃಷ್ಠ

(೪ನೇ ಪುಟದಿಂದ)

ಕೊಮಗಾರಿಯ ಮೇಲೆ ಫೆಬ್ರವರಿ ೪ರಂದು ಐದು ಸಾವಿರ ಸಂನ್ಯಾಸಿಗಳು ಏರಿ ಹೋದರು. ಅವರ ಗುರಿಯು ಢಾಕ್ಕಾವೇ ಆಗಿತ್ತು. ಕಲೆಕ್ಟರನು ಲಮೇಸುರ ಮತ್ತು ಯಶೋಹರದಿಂದ ಸೇನೆಗಳನ್ನು ಕರೆಸಿಕೊಂಡನು. ಜಸರಥ ಖಾನದಿಂದ ೫೦೦ ವಿಶೇಷ ಸೈನಿಕರನ್ನು ಕರೆಕಳಿಸಿದನು.

ಕೇಪ್ಟನ್ ಎಡ್ವರ್ಡನ ಸೈನಿಕರಿಗಿಂತ ಸಂನ್ಯಾಸಿಗಳ ಸಂಖ್ಯೆಯು ಅಧಿಕವಾಗಿತ್ತು. ಆದುದರಿಂದ ಕೇಪ್ಟನ್ ಸ್ಟುಅರ್ಟ್ ಮತ್ತು ಕೇಪ್ಟನ್ ಜೋನ್ಸ್‌ರಿಗೂ ಸಂನ್ಯಾಸಿ ದಮನದ ಆಜ್ಞೆ ನೀಡಲಾಯಿತು. ಎಡ್ವರ್ಡನು ಆಟಯಾದಿಂದ ಸಂನ್ಯಾಸಿಗಳನ್ನು ಓಡಿಸಿದನು. ಸಂನ್ಯಾಸಿಗಳು ಢಾಕ್ಕಾವನ್ನು ಸೇರುವ ಪ್ರಯತ್ನ ಮಾಡಿದರು. ಆದರೆ, ಎಡ್ವರ್ಡನು ಇವರ ಹಿಂದೆ ಭದ್ರ ಕಾವಲಿಟ್ಟನು. ೧೭೭೩ರ ಮಾರ್ಚಿಯಲ್ಲಿ ಈತ ಸಂನ್ಯಾಸಿಗಳನ್ನು ಎದುರಾದನು. ಅವರ ಸಂಖ್ಯೆ ೩,೦೦೦ ದಷ್ಟಿತ್ತು. ಬಾರಬಾಜೂವಿನಲ್ಲಿ ಯುದ್ಧ ನಡೆಯಿತು ಇದರಲ್ಲಿ ಹನ್ನೆರಡು ಸೈನಿಕರನ್ನುಳಿದು ಉಳಿದ ಇಡಿ ಆಂಗ್ಲ ಸೇನೆಯು ನಾಶವಾಯಿತು. ಈ ವಿಜಯದಿಂದ ಸಂತುಷ್ಟವಾದ ಸಂನ್ಯಾಸಿಗಳು ಅತ್ತ ಇತ್ತ ಚದರಿ ಹೋದರು. ಅವರ ಸೇನೆಯ ಒಂದು ದೊಡ್ಡ ಭಾಗ ಸಿಲ್‌ಹೆಟ್ ಜಿಲ್ಲೆಯನ್ನು ಸೇರಿತು. ಆಂಗ್ಲ ಶಾಸಕರನ್ನು ಹೊಡೆದೋಡಿಸಲು ಅವರು ಜಯಂತಿಯಾದ ರಾಜನ ಸಹಾಯ ಪಡೆಯಲು ತೆರಳಿದರೆಂದು ಹೇಳಲು ಸಾಕಷ್ಟು ಪ್ರಮಾಣಗಳು ದೊರೆತಿವೆ.

ಎರಡು ವರ್ಷ ನಂತರ ಮಜನೂ ಶಾಹನು ಪುನಃ ಬಂಗಾಳದಲ್ಲಿ ಪ್ರಕಟಗೊಂಡನು. ಆವನೆದುರು ಲೆಫ್ಟಿನೆಂಟ್ ರಾಬರ್ಟ್ಸನ್‌ನ ನೇತೃತ್ವದಲ್ಲಿ ಸೇನೆ ಕಳಿಸಲಾಯಿತು. ೧೭೭೬ರ ನವಂಬರ ೧೪ರಂದು ಹಲವಾರು ಜಗಳಗಳ ನಡೆದು ಮಜನೂ ಶಾಹನು ಸೋತು ಹೋದನು.

ಮಜನೂನ ಪ್ರಮುಖ ಅನುಯಾಯಿಯು ಭವಾನೀ ಪಾಠಕನಾಗಿದ್ದು, ಪರಗನಾ ಪ್ರತಾಪಬಾಜೂ ಮತ್ತು ಪಟಿಲಾಧಾಗಳು ಅವನ ಕಾರ್ಯಕ್ಷೇತ್ರನಾಗಿದ್ದುವು. ಈತನಿಗೆ ಒಬ್ಬ ಪಠಾಣನು ಮುಖ್ಯ ಸಹಾಯಕನಾಗಿದ್ದನು. ಅಂತ್ಯದಲ್ಲಿ ಪಠಾಣ, ಪಾಠಕ ಮತ್ತು ಇನ್ನಿಬ್ಬರು ನಾಯಕರು ವಧಿಸಲ್ಪಟ್ಟರು. ದೇವೀ ಚೌಧುರಾನಿ ಕೂಡಾ ಪಾಠಕನೊಡನೆ ಕೂಡಿಕೊಂಡಿದ್ದಳು. ಆಕೆ ಸ್ವಯಂ ಲೂಟಿ ಮಾಡುತ್ತಿದ್ದಳು, ಅಲ್ಲದೇ ಅದರಲ್ಲಿ ಭಾಗವನ್ನೂ ಪಡೆಯುತ್ತಿದ್ದಳು.

ಆದರೆ, ಇಷ್ಟು ಹೊತ್ತಿನಲ್ಲಿ ಫಕೀರರು ಮತ್ತು ಸಂನ್ಯಾಸಿಗಳಲ್ಲಿ ಒಡಕು ಕಾಣಿಸಿಕೊಂಡಿತ್ತು. ಇದರಿಂದಾಗಿ ಅವರು ಪರಸ್ಪರ ಹೊಡೆದಾಡುತ್ತಿದ್ದರು. ಈ ಒಳಜಗಳದಿಂದಾಗಿ ಆಂಗ್ಲೇಯರಿಗೆ ಇವರ ವಿದ್ರೋಹವನ್ನು ನಾಮಾವಶೇಷಮಾಡಲು ಬಹಳ ಸುಲಭವಾಯಿತು.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮವು ೧೮೫೭ರ ಸಿಪಾಯಿಗಳ ಅಸಹಕಾರದಿಂದ ಪ್ರಾರಂಭವಾಯಿತೆಂದು ಸಾಮಾನ್ಯವಾಗಿ ಹೇಳಲಾಗುತ್ತಿದ್ದರೂ ಭಾರತದಲ್ಲಿ ಆಂಗ್ಲೇಯ ಪ್ರಭುತ್ವಕ್ಕೆ ವಿರೋಧವು ಮೊದಲಿಗೇನೇ ತೋರುತ್ತಿತ್ತೆಂಬುದೂ, ಅದನ್ನು ಬ್ರಿಟಿಷರು ತಮ್ಮ ರಾಜಕಾರಣ ಕುಶಲತೆಯಿಂದ ಅಣಗಿಸಲು ಶಕ್ತರಾದರೆಂದೂ ಹೇಳುವುದಕ್ಕೆ ಈ ಪ್ರಾರಂಭಿಕ ವಿದ್ರೋಹವೇ ಪ್ರಬಲ ಆಧಾರವಾಗಿದೆ.

ಕಥಾವಿಹಾರ

(೨ನೇ ಪುಟದಿಂದ)

ಪಾಪ ಒಬ್ಬಳೇ ಏನು ಮಾಡಬೇಕು ಹೇಳಿ? ಆದಾಗ್ಯೂ ಅವಳು ಬಿಟ್ಟಿರಲಿಲ್ಲ. ಡಾಕ್ಟರರನ್ನು ಕರೆತಂದು ತೋರಿಸಿ, ತಣ್ಣೀರಿನ ಪಟ್ಟಿ ಹಣೆಯ ಮೇಲೆ ಹಾಕಿ ಉರಿ ತಡೆಹಿಡಿದಿದ್ದಳು. ನಾನು ಕಾಲೇಜಿನಿಂದ ಬಂದ ತಕ್ಷಣವೇ ಇಂದುಮತಿ ಎಲ್ಲವನ್ನೂ ಹೇಳಿಬಿಟ್ಟಳು ನನಗೂ ತುಂಬ ವಿಷಾದವಾಯಿತು. ಶೇಖರನ ಬಳಿಹೋಗಿ ಇಬ್ಬರೂ ನಿಂತೆವು ನಮ್ಮನ್ನು ಕಂಡು ಸಮಾಧಾನಪಡಿಸುತ್ತ ಮಾತನಾಡಲು ಪ್ರಾರಂಭಿಸಿದ.

“ಮಾತನಾಡಬೇಡ ಶೇಖರ ಆಯಾಸವಾಗುತ್ತದೆ”—ಎಂದು ಇಂದುಮತಿ ಅವನಿಗೆ ತಡೆಹಿಡಿದಳು.

ದಿನ ಕ್ರಮೇಣ ಶೇಖರ ಪೂರ್ಣ ಗುಣಹೊಂದಿದ. ಇಂದುಮತಿ ದಿನಾಲು ಸಾಯಂಕಾಲ ರೂಮಿಗೆ ಬರುತ್ತಿದ್ದಳು. ಇಂದುಮತಿಯ ಉಪಕಾರ ನಾನು—ಶೇಖರ, ಎಷ್ಟು ತೀರಿಸಿದರೂ ಕಡಿಮೆ. ಹಗಲಿರುಳೆನ್ನದೆ ಸೇವೆಮಾಡಿದಳಲ್ಲದೇ ಅವಳು, ಅವನ ಔಷಧಕ್ಕಾಗಿ ನೂರಿನ್ನೂರು ರೂಪಾಯಿಗಳನ್ನು ಆಗಲೇ ಕೊಟ್ಟಳು. ವಿಪತ್ಕಾಲದಲ್ಲಿ ಆ ಡಾಕ್ಟರರೇ ಕೇಳಲಿಲ್ಲ. ಅವಳೊಬ್ಬಳಿರದಿದ್ದರೆ, ಶೇಖರ ಬದುಕುತ್ತಿರುತ್ತಿರಲಿಲ್ಲ.

ಶೇಖರನ ತಂದೆಯವರೂ ಬಂದರು. ಶೇಖರನ ಜ್ವರ ಕೇಳಿ ತುಂಬಾ ವ್ಯಸನಪಟ್ಟರು. ವಿಪತ್ಕಾಲದಲ್ಲಿ ಹಣ ಒದಗಿಸಿಕೊಟ್ಟ, ಇಂದುಮತಿಗೂ ಬಾಯಿತುಂಬ ಹರಸಿದರು. ಹಣಕೊಟ್ಟು ಮತ್ತೆ ಬರುವದಾಗಿ ಹೇಳಿ ಹೋದರು. ಶೇಖರನ ತಂದೆ ಶಿವಪ್ಪ.

ಅವಳು ಕೊಟ್ಟ ಹಣ ತಿರುಗಿಸಲು, ನಾನು—ಶೇಖರ ಹೋದೆವು. ಅವಳು ಹಣ ಸ್ವೀಕರಿಸಲಿಲ್ಲ—

“ಜುಲುಮೆ ಮಾಡಬೇಡಿ; ಜುಲುಮೆ ಮಾಡಿ ಹಣವಿಟ್ಟು ಹೋದರೆ, ನನ್ನ ರೂಮಿಗೆ ನೀವು ಬರಬೇಡಿ; ನಿಮ್ಮ ರೂಮಿಗೆ ನಾನು ಬರುವದಿಲ್ಲ ಎಲ್ಲರೂ ಮಾತನಾಡುವ ಇಷ್ಟ ನಿಮಗಿದ್ದರೆ ಈ ಹಣ ಕೊಡಬೇಡಿ”—ಎಂದಳು ಇಂದುಮತಿ. ಅವಳು ಹಾಗೆಂದ ಕೂಡಲೇ ಶೇಖರನ ಕಣ್ಣುಗಳಲ್ಲಿ ನೀರು ಬಂದವು. “ಇಂದುಮತಿ ಬದೆಷ್ಟು ತಿಳಿ ಹೃದಯ” ಎಂದು, ಅವನು ಚಿಕ್ಕಂದಿನಿಂದಲೂ ತಾಯಿಯನ್ನು ಕಳೆಕೊಂಡಿದ್ದ. ಆ ತಾಯಿಯ ನೆನಪು ಬಂದು ಕಣ್ಣೀರಿಟ್ಟ. “ಅಳ ಬೇಡಿ, ಇಷ್ಟು ಚಿಕ್ಕವರಂತೆ ಮಾಡುತ್ತಿರಲ್ಲಾ” ಎಂದಳು ಇಂದುಮತಿ ಚಿಕ್ಕ ಮಕ್ಕಳು ತಾಯಿಯ ತೊಡೆಯ ಮೇಲೆ ಬಿದ್ದು ಅಳುತ್ತಿರುವಂತೆ, ಈ ದಿನ ನನ್ನ ಶೇಖರನು ದುಃಖಿಸುತ್ತಾ ಇಂದುಮತಿಯ ತೊಡೆಯ ಮೇಲೆ ಮಲಗಿದ್ದಾನೆ. ನಾನು, ಇಂದುಮತಿ, ಆತನಿಗೆ ಎಷ್ಟು ಸಮಾಧಾನ ಹೇಳಿದರೂ ವಿಫಲವಾಯಿತು. ಇಂದುಮತಿ, ತನ್ನ ತೊಡೆಯ ಮೇಲೆ ಮಲಗಿರುವ, ಶೇಖರನ ಕೂದಲುಗಳನ್ನು ನೇವರಿಸುವ, ದೃಶ್ಯ ಕಂಡಾಗ, ಜಗತ್ತಿನಲ್ಲಿ ಅತೀ ದೊಡ್ಡ ವಸ್ತುವೆಂದರೆ ಪ್ರೇಮ' ಎಂದು ತಿಳಿದುಕೊಂಡೆ ನಾನು.

ಅವರೀರ್ವರ ದೇಹಗಳೆರಡು ಮಾತ್ರ ಬೇರೆ ಆದರೆ, ಅವರ ಮನಸ್ಸು ಮಾತ್ರ ಒಂದೇ.

ಅಂದು ಅವಳು ಊಟಕ್ಕೆ ಇಬ್ಬರೂ ಜೊತೆಯಾಗಿ ಬರಲೇಬೇಕು ಎಂದು ಹೇಳಿದ್ದರಿಂದ ಸಾಯಂಕಾಲ ನಾನು-ಶೇಖರ ಕೂಡಿಯೇ ಹೋದೆವು.

ಸಂಪ್ರದಾಯದಂತೆ, ಊಟಕ್ಕೆ ಕುಳಿತೆವು. ಅಂದು ಅವಳೇ ಸ್ವಯಂಪಾಕ ಮಾಡಿದ್ದಳು ಮೂವರೂ ಜೊತೆಯಾಗಿ, ಊಟ ಮಾಡಿದೆವು.

ಊಟ ಮುಗಿಯಿತು, ಅವಳು ತಾಂಬೂಲ ಮಂಡಗೆ ಇಬ್ಬರ ಕೈಯಲ್ಲಿಕೊಟ್ಟಳು. ತಾಂಬೂಲ ಕೊಡುವಾಗ ಅವಳು—

“ಈ ದಿನ ವಿಶೇಷ ಊಟವೇಕೆ ಗೊತ್ತೇ?” ಎಂದಳು. ಏನೂ ಅರಿಯದ ನಾವು “ಗೊತ್ತಿಲ್ಲ” ಎಂದೆವು.



ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಮೇರಿಕ ಮತ್ತು ಥಾಯ್‌ಲೇಂಡಗಳ ನಿಯೋಗಗಳು ಮಂಡಿಸಿವೆ.

“ಇಂದು ನನ್ನ ಹುಟ್ಟುಹಬ್ಬ ಅದಕ್ಕೆ ಎಂದಳು.

“ಮೊದಲೇ ಏಕೆ ತಿಳಿಸಲಿಲ್ಲ? ನಿನ್ನ ಹುಟ್ಟುಹಬ್ಬ ಎಂದು ತಿಳಿದಿದ್ದರೆ, ಕಾಣಿಕೆ ತರುತ್ತಿದ್ದೆ! ಈಗ ಬಣಾಬಾಯಿಯಿಂದ ನಿನ್ನನ್ನು ಹರಸಬೇಕು!” ಎಂದು ಶೇಖರ ಅವಳ ತಲೆಗೆ ಮೃದುವಾದ ಪ್ರೇಮದ ಪೆಟ್ಟು ಕೊಟ್ಟ.

“ಗಿಫ್ಟ ಕೊಟ್ಟರೆ ಮಾತ್ರ ಹುಟ್ಟಿದ ದಿನವೆನ್ನುತ್ತಾರೇನು?” ಎಂದು ಚೇಷ್ಟೆ ಮಾಡಿದಳು ಅವಳು. ಚೇಷ್ಟೆಮಾಡುವಾಗ, ಇಂದುಮತಿಯು, ಶೇಖರನ ಕಣ್ಣುಗಳ ಬಳಿಗಿದ್ದ ಶೇಖರ ಮುಖ ಕೆಳಗಮಾಡಿದ. ಶೇಖರ ಬಗ್ಗಲಿ ಜಗ್ಗಿ ಹೊಗೆ ಬಿಟ್ಟ! ಅವಳು ಒಂದು ಹೆಜ್ಜೆ ಮುಂದೆ ಬಂದು, ಶೇಖರನ ಕೈಯಲ್ಲಿರುವ ಸಿಗಾರ್ ಎತ್ತಿ ಬೀಸಿದಳು. ಶೇಖರ ಅವಳನ್ನೇ ಪುನಃ ದಿಟ್ಟಿಸಿ ನೋಡಿದ.

“ಇನ್ನೊಂದುಮ್ಮೆ ಸಿಗಾರ್ ಹಿಡಿದಿರೆಂದರೆ ನನ್ನಾಣೆ!” ಎಂದಿಷ್ಟೇ ನುಡಿದಳು.

“ಇನ್ನೊಂದುಮ್ಮೆ ಹಿಡಿಯುವದಿಲ್ಲ”—ಎಂದು ಸಣ್ಣ ಹುಡುಗರ ಹಾಗೆ ತಲೆ ಅಲುಗಾಡಿಸಿದ. ಆತನ ಕಣ್ಣಲ್ಲಿ ನೀರೂರಿದವು. ‘ಎಂಥ ಅಪರಾಧಿ!’ ಎಂದು. ಆತನು ಕಣ್ಣೀರು ಸುರಿಸುವದನ್ನು ಕಂಡು ಇಂದುಮತಿ—

—“ನಾನು ಹೇಳಿದುದಕ್ಕೆ ವಿಷಾದಪಟ್ಟುಕೊಂಡಿರಾ? ನೀವು ಮೊದಲೇ ತೆಳ್ಳಗಿನ ವ್ಯಕ್ತಿ. ಸಿಗಾರ್‌ನಿಂದ ಮತ್ತಷ್ಟು ತ್ರಾಸಾಗುವದು ನಿಮಗೆ. ನಿಮಗೆ ತ್ರಾಸಾಯಿತೆಂದರೆ, ನನಗೆ ಜೀವ ಹೋದಷ್ಟು ತ್ರಾಸಾಗುತ್ತದೆ ನೀವು ಅಡ್ಡ ದಾರಿಯನ್ನು ತುಳಿದರೆ ಬಿಡಿಸುವಷ್ಟು ಅಧಿಕಾರ ನನಗಿದೆ. ದಯೆಯಿಟ್ಟು ನನಗೋಸ್ಕರವಾದರೂ ಬಿಡಿ. ನಿಮ್ಮ ಕಾಲು ಹಿಡಿದು ಬೇಡಿಕೊಳ್ಳುತ್ತೇನೆ” ಎಂದು ತನ್ನ ಸೀರೆಯ ಚಂಗಿನಿಂದ ಆತನ ಕಣ್ಣೀರು ಒರೆಸಿದಳು.

“ನಿಜವಾಗಿ ಇಂದಿರಾ, ಇನ್ನೊಂದುಮ್ಮೆ ಮುಟ್ಟುವದಿಲ್ಲ” ಎಂದ. ಅಲ್ಲದೇ, ತನ್ನ ಹಿತ ಅವಳೆಷ್ಟು ಬಯಸುತ್ತಾಳೆಂದು, ದುಃಖ ತಾಳಲಾರದೇ ಅವಳನ್ನು ಬಿಗಿದಪ್ಪಿ—‘ಒಳಿತನ್ನು ಇಂದೂ” ಎಂದು ಅವಳ ಗುಲಾಬಿಯಂತಹ ಮುಖವನ್ನು ಅಲುಗಾಡಿಸಿ ಕೇಳಿದ.

“ಒಳಿತು” ಎಂದಳು, ಇಂದುಮತಿ. ತಲೆ ತಗ್ಗಿಸಿಕೊಂಡು ಇಬ್ಬರೂ ದುಃಖಿತರಾಗಿ ಮತ್ತೊಮ್ಮೆ, ಒಬ್ಬರನ್ನೊಬ್ಬರು ತಬ್ಬಿಕೊಂಡರು. ಶೇಖರನ ಕಣ್ಣೀರು ಬಿದ್ದು, ಬಿದ್ದು, ಇಂದುಮತಿಯ ತಲೆ ತೋಯ್ದು, ತೋಯ್ದು, ಅವಳ ಮುಂದಲೆಯ ಮೇಲೆ ಬೀಳುತ್ತಿದ್ದವು.

ಆ ಸನ್ನಿವೇಶವನ್ನು ಕಂಡನಂತರ ಮತ್ತಷ್ಟು ದುಃಖವಾಯಿತು ನನಗೆ ನಾನೂ ಕೂಡ ಅರಿತುಕೊಳ್ಳಬೇಕಾದ ಪಾಠವದು, ಆ ದೃಶ್ಯವನ್ನು ಕಟುಕ ನೋಡಿದರೂ, ಆತನ ಕಣ್ಣುಗಳಲ್ಲಿ ನೀರು ಬರದೇ ಇರಲಾರವು. “ಪ್ರೇಮವು ವಾದದಲ್ಲಿ ಅಸಾಧಾರಣ ಪಾಂಡಿತ್ಯವನ್ನು ಪಡೆದಿದೆ. ಅದು ಅಸುಖಿಗಳನ್ನು, ಸುಖಿಗಳನ್ನಾಗಿಯೂ ಮಾಡಬಲ್ಲದು.” ಎಂಬುದು ನನ್ನ ನಂಬಿಕೆಗೆ ಇನ್ನಷ್ಟು ಪುಷ್ಟಿಕೊಟ್ಟಿತು. ನಿಟ್ಟುಸಿರು ಬಿಟ್ಟೆ. ಇಂದುಮತಿಗೂ, ಶೇಖರನಿಗೂ ಸಮಾಧಾನ ಹೇಳಿ ಶೇಖರನನ್ನು ಮನೆಗೆ ಕರೆದುಕೊಂಡು ಬಂದೆ. ಅವಳ ವಚನದಂತೆ, ಶೇಖರ ಸಿಗಾರ್ ಸೇದುವದನ್ನು ಬಿಟ್ಟ. (ಮುಂದುವರಿಯುವುದು.)

—ಶ್ರೀ ಚಂದ್ರಶೇಖರ ಹುಬ್ಬಳ್ಳಿ.

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2 V. P. ಮಾಡುವುದಿಲ್ಲ.
ರೂ 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೋ, ಉಡುಪಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ವಿಶೇಷ ಸಹಕಾರಿ
ಬೆಲೆ ರೂ 1-4-0 (1-25) ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ
ಮನೆ ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.
ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ: ರೂ ಒಂದೂವರೆ, ಉತ್ತಮ ಪ್ರತಿ: ರೂ ಎರಡು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA
REGD. NO. M. 3619

UDIPI, THURSDAY
8-10-1959

LICENSE NO. 31
Licensed to Post without Prepayment

ವಿಚಾರ ವರ್ಷ

(೧ನೇ ಪುಟದಿಂದ)

ನ್ನೂ ಅನ್ವಯಿಸಿದರೆ, ವ್ಯಕ್ತಿ—ವ್ಯಕ್ತಿಗಳ, ನಡುವೆ, ಪಕ್ಷ. ಪಕ್ಷಗಳನಡುವೆ ಹಾಗೂ ಬಹುಸಂಖ್ಯಾತ—ಅಲ್ಪ ಸಂಖ್ಯಾತರ ನಡುವಿನ ನಡವಳಿಕೆಯ ಮೂಲ ನಿಯಮವಾದ ಅಹಿಂಸೆಯ ಅನುಸರಣೆಯು ಅತ್ಯಾವಶ್ಯಕ. ಯಾವುದೇ ವಿವಾದಾಸ್ಪದ ಸಮಸ್ಯೆಯಾಗಲಿ ಅತ್ಯುತ್ತಮ ರೀತಿಯಲ್ಲಿ ಬಗೆ ಹರಿಯಬೇಕಾದರೆ, ತರ್ಕಬದ್ಧ ವಿಚಾರ, ಅಹಿಂಸೆ, ಸ್ನೇಹಪೂರ್ಣ ನಡವಳಿಕೆ ಹಾಗೂ ಪರಸ್ಪರ ತಿಳಿವಳಿಕೆಯಿಂದ ಸಾಧ್ಯವೇ ವಿನಹ ಪಾಶವೀ ಶಕ್ತಿ, ವಂಚನೆ, ದ್ವೇಷ್ಯಪೂರ್ಣ, ವಿನಾಶಕಾರೀ ಮಾರ್ಗದಿಂದ ಎಂದೆಂದಿಗೂ ಸಾಧ್ಯವಿಲ್ಲ.

ಇಂದು ವಿಶ್ವದ ಎಲ್ಲಚಟುವಟಿಕೆಗಳಲ್ಲೂ ಈ ರೀತಿಯ ಪ್ರಜಾಸತ್ತೆಯ ಸೂತ್ರದ ಆವಶ್ಯಕತೆಯನ್ನು ಕಾಣಬಹುದು. ಎಂದಾದರೊಂದುದಿನ ವಿಶ್ವೈಕ್ಯದ ಸ್ಥಾಪನೆಯಾಗಬೇಕಾದರೂ, ಸದಸ್ಯ ರಾಷ್ಟ್ರಗಳ ನಡುವೆ ಅಹಿಂಸಾಯುಕ್ತ ವ್ಯವಹಾರದ ಮೇಲೆ ನಿಂತ ಪ್ರಜಾಸತ್ತೆಯೇ ನಡೆಯುತಕ್ಕದ್ದು. ಮಾನವನೇ ಆಗಲಿ, ರಾಷ್ಟ್ರಗಳೇ ಆಗಲಿ, ಸಮಾನ ಸ್ವಾತಂತ್ರ್ಯ ಸಮಾನಾವಕಾಶಗಳನ್ನು ಪಡೆದು ತಮ್ಮ ಪೂರ್ಣ ವಿಕಾಸಹೊಂದಲು ಇರುವ ಒಂದೇ ಹಾದಿಯಾದ ಪ್ರಜಾಸತ್ತೆಗೆ ಹಿಂದೆಂದೂ ಇಲ್ಲದಷ್ಟು ಮಹತ್ವತೆಯು ಭವಿಷ್ಯದಲ್ಲಿದೆ.

ಅಹಿಂಸೆ ಮತ್ತು ಅದರ ಮಹತ್ವದ ಬಗ್ಗೆ ವಿಚಾರಮಾಡುವ ಮುನ್ನ, ಶಾಂತಿ-ಅಹಿಂಸೆಯ ಅವತಾರ ಪುರುಷನಾದ ಬುದ್ಧನು ಪ್ರಜಾಸತ್ತೆಯ ಧ್ಯೇಯವನ್ನೆತ್ತಿ ಹಿಡಿದು ಪ್ರಜಾಸತ್ತಾತ್ಮಕ ಕಾರ್ಯಪದ್ಧತಿಯ ಸಾರವನ್ನು ನಿರ್ದೇಶಿಸಿದ್ದನ್ನು ನೆನಪಿಗೆ ತಂದುಕೊಳ್ಳುವುದು ಯೋಗ್ಯವಾಗಿದೆ. ತನ್ನ ಕಾಲದಲ್ಲಿದ್ದ ರಾಜ್ಯಪದ್ಧತಿಗಳಿಂದ ಅನೇಕ ವಿಷಯಗಳನ್ನು ಸಂಗ್ರಹಿಸಿ ತನ್ನ ಧರ್ಮ ಸಂಘಟನೆಯಲ್ಲಿ ಅಳವಡಿಸಿಕೊಂಡಿದ್ದನು. ಅಂದಿನ ರಾಜ್ಯಗಳು ವಿಶೇಷತಃ ವೃಜ್ಜಿಗಳ ಮತ್ತು ಲಿಚ್ಛವಿಗಳ ರಾಜ್ಯಗಳು— ಚುನಾವಣೆಗಳು, ಸಮಾವೇಶಗಳು, ಕಾಯಿದೆಗಳು, ಗುಪ್ತ ಮತದಾನ ಪದ್ಧತಿ ಇತ್ಯಾದಿಗಳನ್ನೊಳಗೊಂಡ ಪ್ರಜಾಸತ್ತೆಗೆ ಪೂರ್ಣತಃ ಬದ್ಧವಾಗಿದ್ದವು. ಆಳಿತದ ಶಕ್ತಿ ಹಾಗೂ ಮುಂದುವರಿಯುವಿಕೆಯ ಬಗ್ಗೆ ತನ್ನ ಆಪ್ತ ಶಿಷ್ಯನ ಪ್ರಶ್ನೆಯೊಂದಕ್ಕೆ ಕೊಟ್ಟ ಉತ್ತರವು ಈ ರೀತಿಯಿತ್ತು:

"ವೃಜ್ಜಿಗಳು ತುಂಬಿದ ಸಾರ್ವಜನಿಕ ಸಭೆಗಳನ್ನು ಪದೇ ಪದೇ ನಡೆಸುವರೆಂದು ಕೇಳಿರುವೆಯಾ ಆನಂದ?"

"ಪ್ರಭೂ ಕೇಳಿದ್ದೇನೆ."

"ಎಂದಿನವರೆಗೆ ವೃಜ್ಜಿಗಳು ಇಂತಹ ಸಭೆಗಳನ್ನು ಪದೇ ಪದೇ ನಡೆಸುತ್ತಿರುವರೋ ಅಂದಿನವರೆಗೆ ಅವರು ಏಳಿಗೆ ಹೊಂದುವರೇ ವಿನಹ ಕ್ಷಯಿಸಲಾರರೆಂದು ತಿಳಿ."

ಸೌಹಾರ್ದಯುತ ನಡವಳಿ, ಭಿನ್ನತೆಗಳನ್ನು ಪರಸ್ಪರ ಸರಿಪಡಿಸಿ ಪರಿಹರಿಸಿಕೊಳ್ಳುವುದು, ವಿಚಾರ ವಿನಿಮಯದಿಂದ ನಿರ್ಧಾರವನ್ನು ತೆಗೆದುಕೊಳ್ಳುವುದು - ಪ್ರಜಾಸತ್ತೆಯ ಮೂಲಭೂತ ಅಂಶಗಳಾಗಿದೆ. ಇದಲ್ಲದೆ ಹಿಂಸೆ ಮತ್ತು ಭಯಗಳಿಲ್ಲದ ವಾತಾವರಣವಿರುವುದೂ ಅತ್ಯಾವಶ್ಯಕ. ಹಿಂಸೆ, ಭಯ, ಸಂಶಯಗಳು ತುಂಬಿದ ವಾತಾವರಣದಲ್ಲಿ ಯಾವುದೇ ರೀತಿಯ ವಿಚಾರ ವಿನಿಮಯವು ಸಾಧ್ಯವಾಗಲಾರದು. ಅಹಿಂಸಾಯುಕ್ತ ವಾತಾವರಣವೇ ಕಾರ್ಯಕ್ಷಮ ಪ್ರಜಾಸತ್ತೆಯ ಅಡಿಗಲ್ಲಾಗಿದೆ.

ಈ ಹಿನ್ನೆಲೆಯಲ್ಲಿ ಅಹಿಂಸೆಯ ನೈಜ ಅರ್ಥವೇನೆಂದು ನಾವು ತಿಳಿಯಬೇಕಾಗಿದೆ. 'ಅಹಿಂಸೆ'— ಈ ಶಬ್ದವು ತನ್ನ ರೂಪದಲ್ಲಿ ನಿಷೇಧಾರ್ಥವಾಗಿದ್ದರೂ, ಗುಣದಲ್ಲಿ ವಾಸ್ತವಿಕವಾಗಿ ಯಥಾರ್ಥವಾಗಿದೆ. ತನ್ನ ಅರ್ಥದಲ್ಲಿ ಪ್ರೀತಿ, ವಿಶ್ವಾಸ ಇತ್ಯಾದಿ ಗುಣಗಳನ್ನೆಲ್ಲ ಅಳವಡಿಸಿಕೊಂಡಿದೆ ಹಿಂದೆ ಅಹಿಂಸೆಯು ವೈಯಕ್ತಿಕ ಗುಣವಾಗಿ ಪರಿಗಣಿಸಲ್ಪಟ್ಟಿತ್ತು. ಅಂತೆಯೇ ಯಾವುದೇ ಸರಕಾರ, ಅಥವಾ ಸಾಮೂಹಿಕ ಪ್ರಯತ್ನಗಳಾಗಲಿ, ಶಾಂತಿ, ಹೊಂದಿಕೆಗಳ ಸ್ಥಾಪನೆಯಾಗಲಿ ಆಗ ಬೇಕಾದರೆ, ಅಹಿಂಸೆಯು ಕ್ಷಣಿಕವಾಗಲಿ, ಕೇವಲ ಬಾಹ್ಯದಲ್ಲಾಗಲಿ — ಆಧಾರವಿಲ್ಲದೆ ಸಾಧ್ಯವಿಲ್ಲ. ಯಾವುದೇ ಸಂಸ್ಥೆ, ರಾಷ್ಟ್ರ ಅಥವಾ ವಿಶ್ವದ ಪ್ರಗತಿಗೆ ಅಹಿಂಸಾತ್ಮಕ ವಾತಾವರಣವು ಪೂರ್ವಭಾವೀ ಅವಶ್ಯ ಸ್ಥಿತಿಯಾಗಿದೆ.

ವ್ಯಕ್ತಿಗಳ ಅಥವಾ ರಾಷ್ಟ್ರಗಳ ನಡುವೆ, ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಾಗಲಿ, ಎಂತಹ ಅನ್ಯಾಯ, ಕೇಡುಗಳನ್ನು ತಡೆಯಲು ಅತ್ಯಂತ ಮಹತ್ವಪೂರ್ಣ ಹಾಗೂ ಯೋಗ್ಯವಾದ ಆಯುಧದ ಗೌರವ ಸ್ಥಾನಕ್ಕೆ ಅಹಿಂಸೆಯನ್ನೇರಿಸಲು ಯೋಧಾವಿಯಾದ ಮಹಾತ್ಮಾಜೀಯವರಿಗೇ ಸಾಧ್ಯವಾಯಿತು. ಪ್ರಜಾಸತ್ತೆಯಂತೆ ಇದೂ ಒಂದು ಜೀವನ ಪದ್ಧತಿಯೇ ಆಗಿದೆ. ಎಲ್ಲ ಜೀವಗಳೂ ಒಂದೇ, ದ್ವೇಷದಿಂದ ಸಿಗುವುದು ದ್ವೇಷ ಮಾತ್ರ ಅದನ್ನು ಗೆಲ್ಲಲು ಪ್ರೀತಿಯಿಂದ ಮಾತ್ರ ಸಾಧ್ಯ — ಎಂಬ ತಿಳುವಳಿಕೆಯೇ ಅದರ ಆಧಾರ. ಪ್ರಜಾಸತ್ತೆಯ ಕಾರ್ಯಕ್ಷಮತೆ, ಪ್ರಗತಿ ಮತ್ತು ಪೂರೈಕೆ ಅಹಿಂಸೆಯ ಮೇಲೆ ಹೇಗೆ ನಿಂತಿದೆಯೋ. ಅಹಿಂಸೆಯನ್ನು ಆಚರಣೆಯಲ್ಲಿ ತರುವವರು ಪ್ರಜಾಸತ್ತಾತ್ಮಕ ವಿಧಾನವನ್ನೇ ಅನುಸರಿಸಬೇಕಲ್ಲದೆ ತಮ್ಮ ವಿರೋಧಿಗಳನ್ನು ಪ್ರೀತಿಪೂರ್ವಕ ಒಲಿಸಿಕೊಳ್ಳಬೇಕು. ಆದರೆ ಪರಿಣಾಮಕಾರೀ ಹಾಗೂ ಸಫಲಕಾರೀವಾಗಬೇಕಿದ್ದರೆ, ಪ್ರಜಾಸತ್ತೆ ಅಹಿಂಸೆಗಳೆರಡೂ ಸೇರಿ ಸತ್ಯಕ್ಕೆ ನೆರವಾಗುವಂತಿರಬೇಕು. ಇಲ್ಲವಾದರೆ ಮರಳ ಮೇಲೆ ಮನೆ ಕಟ್ಟಿದಂತಾಗುವುದು.

—ರಂ ರಾ. ದಿವಾಕರ.

(ಹಿಂದುಸ್ಥಾನ ಸಮಾಚಾರ.)

ರಾಜಕೀಯ

(೧ನೇ ಪುಟದಿಂದ)

ಗಿ ಗವರ್ನರ ಜನರಲ್ಲರ ಆದೇಶಿಸಿದರು. ಶ್ರೀ ದಹನಾಯಕೆಯವರು ಮಂತ್ರಿಯಾಗುವುದಕ್ಕೆ ಮೊದಲು ಅಧ್ಯಾಪಕರಾಗಿ ದುಡಿಯುತಿದ್ದವರು. ಈಗ, ಇವರಿಗೂ ಅನೇಕಾನೇಕ ಅನಾಮಧೇಯ ಪತ್ರಗಳು ಬರತೊಡಗಿವೆ ಎಂದೂ ಅವುಗಳಲ್ಲಿ ಅವರಿಗೆ ಪ್ರಾಣಭಯವನ್ನು ತೋರಿಸಲಾಗಿದೆ ಎಂದೂ ತಿಳಿಯುತ್ತದೆ. ಈ ಪತ್ರಗಳು ಎಲ್ಲಿಂದ ಬಂದುವು, ಇವುಗಳ ಲೇಖನಕಾರರು ಯಾರು? ಯಾವ ದುರುದ್ದೇಶದಿಂದ ಇಂತಹ ಮನೋವೃತ್ತಿಗಳಿಗೆ ಬಲಿಯಾದರು - ಎಂಬ ಸವಾಲುಗಳಿಗೆ ನಿರ್ದಿಷ್ಟ ಜವಾಬು ಕಂಡು ಹಿಡಿಯಬೇಕಷ್ಟೆ. ಆದರೂ ಇದೇ ಮಾದರಿಯ ಪತ್ರಗಳು ಭೂತಪೂರ್ವ ಪ್ರಧಾನಿಯವರಿಗೂ ಬರುತಿದ್ದು ಒಂದು ದಿನ ಆ ಪತ್ರಗಳ ಸಾರವು ಕಾರ್ಯರೂಪಕ್ಕೆ ಬಂದಿರುವುದರಿಂ ಈ ಕಡೆಗೆ ವಿಶೇಷ ಲಕ್ಷ್ಯವನ್ನಲ್ಲವಾದರೂ ತೀರ ನಿರ್ಲಕ್ಷ್ಯವನ್ನು ತೋರಿಸುವಂತಿಲ್ಲವಾದುದರಿಂದ, ಅಂಗರಕ್ಷಣೆಯನ್ನು ಬಿಗಿಗೊಳಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ. "ಟೆಂಪಲ್ ಟ್ರೀಸ್"ನಲ್ಲಿ ಈಗ ಹಗಲು ಇರುಳು ಪೋಲೀಸರ ಭದ್ರವಾದ ಪಹರೆ ನಡೆಯತೊಡಗಿದೆ.

ಹೀಗೆ ಬರುವ ಅವ್ಯಕ್ತ ನಾಮಧೇಯದ ವ್ಯಕ್ತಿಗಳ ಪತ್ರಗಳಲ್ಲಿ ಒಂದು ಬಹು ಸ್ವಾರಸ್ಯವುಳ್ಳದಾಗಿದೆ ಇಂಗ್ಲಿಷ್ ಭಾಷೆಯಲ್ಲಿ ಬರೆದ ಈ ಪತ್ರವೇ ಪೋಲೀಸು ವ್ಯವಸ್ಥೆ ಭದ್ರವಾಗಿಡಲು ಕಾರಣವಾಯಿತು. "ಶ್ರೀ ಭಂಡಾರನಾಯಕೆಯವರು ಮೂರುವರ್ಷ ಪ್ರಧಾನ ಮಂತ್ರಿಯಾಗಿ ಉಳಿದರೆ, ಶ್ರೀ ದಹನಾಯಕೆಯವರು ಕೇವಲ ಮೂರು ತಿಂಗಳವರೆಗೂ ಮುಂದುವರಿಯಲಾರರು. ಶ್ರೀ ಭಂಡಾರನಾಯಕೆಯವರನ್ನು ಒರ್ವ ಬೌದ್ಧ ಭಿಕ್ಷುವು ಗುಂಡುಹಾರಿಸಿ ಕೊಂದನು, ಒರ್ವ ಸಿಂಹಲೀ ಅಧ್ಯಾಪಕನು ಚೂರಿಯಿಂದ ಇರಿದು ದಹನಾಯಕೆಯವರನ್ನು ಕೊಲ್ಲುವನು " ಎಂದು ಭವಿಷ್ಯವನ್ನು ಈ ಪತ್ರದಲ್ಲಿ ಲಿಖಿಸಿರುವುದಲ್ಲದೇ ಶ್ರೀ ದಹನಾಯಕೆಯವರ ಜನ್ಮ ಕುಂಡಲಿಯಲ್ಲಿಯೂ ಈ ಭವಿಷ್ಯ ಲೇಖವಿದೆ ಎಂದು ಬರೆದಿರುವ ಅನಾಮಧೇಯ ಪತ್ರದಲ್ಲಿ ಬರೆದಿದ್ದಾರೆ.

ಇಷ್ಟರಲ್ಲಿಯೇ ಸ್ವಾರಸ್ಯಮುಗಿಯಲಿಲ್ಲ; ಈ ಪತ್ರದಲ್ಲಿ ಒಂದು ಚೂರಿಯ ಚಿತ್ರವನ್ನೂ ಬಿಡಿಸಲಾಗಿತ್ತೆಂದು ಹೇಳಲಾಗುತ್ತಿದೆ ಈಗ ಈ ಪತ್ರವನ್ನು ಪೋಲೀಸರ ಹಸ್ತಗಳಿಗೆ ಒಪ್ಪಿಸಲಾಗಿದೆ; ಇವರು ಇದರ ಲೇಖಕರನ್ನು ಅರಸುವ ಕೆಲಸದಲ್ಲಿ ನಿಮಗ್ನರಾಗಿದ್ದಾರೆ.

ಈ ಬಗ್ಗೆ ನೂತನ ಪ್ರಧಾನಿ ದಹನಾಯಕೆ ಅವರು ವಿಶೇಷ ಗಮನಕರಿಸಲಿಲ್ಲವಾದರೂ ಭದ್ರತೆಯನ್ನು ದೂರವಿಡದೆ ತಮ್ಮ ಮನೆಯನ್ನು ರಕ್ಷಿಸುವ ಕೆಲಸ ಮಾಡಿದ್ದಾರೆ. ಇನ್ನು ಜನ್ಮ ಕುಂಡಲಿ ಮತ್ತು ಅನಾಮಧೇಯನ ಭವಿಷ್ಯ ವಾಣಿಯ ಫಲ ಕಾಣಲು ಹೆಚ್ಚು ದಿನವಿಲ್ಲ; ಕೇವಲ ಮೂರು ತಿಂಗಳು, ಅದರಲ್ಲಿಯೂ ಕೆಲವು ದಿನಗಳು ಈಗಾಗಲೇ ಕಳೆದುವಷ್ಟೆ?

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

.... ದಿ ಬೇಂಕ್ ಆಫ್ ಮೇಂಗಳೂರ್ ಲಿಮಿಟೆಡ್, ತಾ. 3-10-1959 ರಂದು ಸಿಂಡಿಕೇಟ್ ಬೇಂಕಿನೊಡನೆ ಸಮಾವೇಶಗೊಂಡಿರುವುದು.

.... ಇದರಿಂದ ಬದಿಯಡ್ಕ, ಪಡುಬಿದ್ರಿ, ಸುಳ್ಯ, ಉಪ್ಪಿನಂಗಡಿ ಮತ್ತು ವಿಟ್ಲ ಈ ಐದು ಶಾಖೆಗಳು ಸಿಂಡಿಕೇಟ್ ಬೇಂಕಿಗೆ ಹೆಚ್ಚಿಗೆ ಸೇರ್ಪಡೆಯಾಗುವುವು.

ಒಟ್ಟು ಶಾಖೆಗಳು	128

"ಹೆಚ್ಚಿನ ಜನರಿಗೆ ಹೆಚ್ಚಿನ ಸೇವೆಗೆ"

ಸಿಂಡಿಕೇಟ್ ಬೇಂಕ್

Edited, Printed & Published by K. H. Shetty, at the Navayuga Press, Udipi, S. India.

ವಾ ಚಂದಾ ರೂ. 5-75

ಬೆಲೆ 13 ನ.ಪೈಸೆ

ನವಯುಗ

Vol. 39 No 7
ವರುಷ ೩೯ ವಾರ ೭

15-10-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ಬ್ರಿಟನ್ನದ ಸತ್ತಾರೂಢ ಪಕ್ಷಕ್ಕೆ ಜನತೆಯ ಅಧಿಕಾಧಿಕ ಬೆಂಬಲ

ಕನ್ಸರವೇಟಿವ್ ಪಕ್ಷದ ಧ್ಯೇಯಧೋರಣೆಗಳಿಗೆ ಬ್ರಿಟನ್ನಿನ ನಾಗರಿಕರ ಒಪ್ಪಿಗೆ

ಪಾರ್ಲಿಮೆಂಟರಿ ಶಾಸನ ಪ್ರಣಾಳಿಯು ಅತ್ಯುಚ್ಚ ವಿಧಾನದಲ್ಲಿ ನಡೆಸಿಕೊಂಡು ಬಂದಿರುವ ಯಶಸ್ವೀ ರಾಷ್ಟ್ರ ಬ್ರಿಟನ್ನದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶವು ಈಗ ಅಧಿಕಾರಾರೂಢವಾಗಿರುವ ಕನ್ಸರವೇಟಿವ್ ಪಕ್ಷಕ್ಕೆ ಬೆಂಬಲವಾಗಿ ಹೊರಬಿದ್ದಿದೆ ಕಳೆದ ಚುನಾವಣೆಗಳಲ್ಲಿ ಈ ಪಕ್ಷವು ಗಳಿಸಿದ್ದ ಸ್ಥಾನಗಳಿಗಿಂತಲೂ ಅಧಿಕ ಸ್ಥಾನಗಳನ್ನು ಈ ಪಕ್ಷವು ಪಡೆದಿದ್ದು, ಪಾರ್ಲಿಮೆಂಟಿನಲ್ಲಿ ವಿರೋಧೀ ಪಕ್ಷದ ಬಲವು ಕುಂದಿ ಹೋಯಿತು ಇದರಿಂದಾಗಿ ಬ್ರಿಟನ್ನದ ಜನತೆಯ ಒಲವು ಎತ್ತ ಹರಿಯುತ್ತಿದೆ ಎಂಬುದರ ಅರಿವು ನಮಗಾಗುವುದು

ಬ್ರಿಟನ್ನದ ಪ್ರಧಾನ ರಾಜಕೀಯ ಪಕ್ಷಗಳು ಕನ್ಸರವೇಟಿವ್ ಮತ್ತು ಲೇಬರ್ ಆಗಿವೆ. ಇವುಗಳ ನಡುವೆ ಚುನಾವಣೆಗೆ ಮೊದಲು ತೀವ್ರ ರೀತಿಯ ಸ್ಪರ್ಧೆಯು ನಡೆದಿದ್ದು, ಚುನಾವಣೆಯ ದಿನದ ವರೆಗೂ ಲೇಬರ ಪಕ್ಷವೇ ಗೆಲ್ಲುವ ಆಶೆಯೂ ಇತ್ತು ಆದರೆ ಪರಿಣಾಮವು ಮಾತ್ರ ತದ್ವಿರುದ್ಧವಾಗಿ ಪ್ರಕಟಗೊಂಡಾಗ, ಲೇಬರ ಪಕ್ಷದ ನಾಯಕ ಶ್ರೀ ಹ್ಯೂ ಗೇಟಸ್ಕೇಲರು ತಮ್ಮ ಸೋಲನ್ನು ಒಪ್ಪಿಕೊಳ್ಳಲೇ ಬೇಕಾಯಿತು

ಬ್ರಿಟನ್ನಿನ ಜನತೆಗೆ ಪಾರ್ಲಿಮೆಂಟರಿ ಪದ್ಧತಿಯು ರಕ್ತಗತವಾಗಿ ಒಡಮೂಡಿದೆ ಅವರು ತಮಗೆ ಬೇಕಾದ ತಾವು ಬಯಸುವ ಪಕ್ಷವನ್ನು ಅಧಿಕಾರದ ಗದ್ದುಗೆಗೇರಿಸುವಷ್ಟು ಚಾಣಾಕ್ಷರಿದ್ದಾರೆ ಕಳೆದ ಸಾರ್ವತ್ರಿಕ ಚುನಾವಣೆಯ ನಂತರ ಪ್ರಧಾನಿಗಳಾದ ಶ್ರೀ ವಿನ್‌ಸ್ಟನ್ ಚರ್ಚಿಲರು ರಾಜೀನಾಮೆಯಿತ್ತ ನಂತರ, ಶ್ರೀ ಅಂತೋನಿ ಈಡನ್ನರು ಆ ಸ್ಥಾನವನ್ನು ವಹಿಸಿದ್ದರು ಇವರ ಕಾಲದಲ್ಲಿಯೇ ಸುಯೇಜ ಕಾಲುವೆಯ ಬಗ್ಗೆ ಈಜಿಪ್ತ—ಬ್ರಿಟನ್‌ಗಳ ನಡುವೆ ಹೋರಾಟವೂ ನಡೆದಿತು. ಮುಂದೆ ತನ್ನ ಅನಾರೋಗ್ಯದ ನಿಮಿತ್ತ ರಾಜೀನಾಮೆಯಿತ್ತ ನಂತರ ಶ್ರೀ ಹೆರಾಲ್ಡ್ ಮೆಕಮಿಲನರು ಆ ಗದ್ದುಗೆಗೇರಿದರು. ಈಗ ಶ್ರೀ ಮೆಕಮಿಲನರೇ ಮುಂದಿನ ಐದು ವರ್ಷವೂ ಪ್ರಧಾನಿಯವರಾಗಿ ಮುಂದುವರಿಯುವುದು ಸಂಭವನೀಯ.

ಕಳೆದ ಐದು ವರ್ಷಗಳಲ್ಲಿ ಕನ್ಸರವೇಟಿವ್ ಪಕ್ಷದ ಸರಕಾರದ ನೇತೃತ್ವದಲ್ಲಿ ಬ್ರಿಟನ್ನು ಸಾಧಿಸಿರುವ ಪ್ರಗತಿ ಮತ್ತು ಸಂಪತ್ಸಂವೃದ್ಧಿಯೇ ಈ ವಿಜಯಕ್ಕೆ ಕಾರಣವಾಯಿತು. ಲೇಬರ ಪಕ್ಷದ ಪ್ರಧಾನ ಗುರಿಯೆಂದ ಸಮಾಜವಾದಿ ಆರ್ಥಿಕ ಧೋರಣೆಯು ಬ್ರಿಟನ್ನಿನ ಜನರಿಗೆ ಬೇಡವೆಂಬುದನ್ನಿದು ಪ್ರಕಟಗೊಳಿಸುವಂತಾಗಿದೆ.

ಬ್ರಿಟನ್ನಿನ ಬೇರೆ ಬೇರೆ ಭಾಗಗಳಲ್ಲಿಯೂ ಈ ಚುನಾವಣೆಯ ಬಗ್ಗೆ ವಿವಿಧಾಭಿಪ್ರಾಯ ವ್ಯಕ್ತವಾಗಿದೆ ಸಂವೃದ್ಧವಾದ ದಕ್ಷಿಣ ಇಂಗ್ಲೆಂಡ ಮತ್ತು ಮಿಡ್‌ಲೇಂಡ್‌ಗಳಲ್ಲಿ ಕನ್ಸರವೇಟಿವ ಪಕ್ಷವು ಹೆಚ್ಚು ಸ್ಥಾನಗಳನ್ನು ಪಡೆದಿದ್ದರೆ ಸಂವೃದ್ಧಿ ಹೊಂದದಿರುವ ಪ್ರದೇಶಗಳಲ್ಲಿ ಲೇಬರ ಪಕ್ಷವೇ ಅಧಿಕ ಬೆಂಬಲ ಪಡೆದಿದೆ

೩ ಕೋಟಿ ಬ್ರಿಟಿಷ ಮತದಾರರಲ್ಲಿ ಒಟ್ಟು ೭೮ % ಸೇಕಡಾದಷ್ಟು ಜನರು ಮತದಾನ ಮಾಡಿದ್ದರು. ಚುನಾವಣಾ ಪ್ರಚಾರ ಕಾರ್ಯದಲ್ಲಿ ಲೇಬರ ಪಕ್ಷವೇ ಅಗ್ರಗಣ್ಯವಾಗಿದ್ದಿತಾದರೂ, ಅದುವೇ ಗೆಲ್ಲುವುದೆಂಬ ನಿರೀಕ್ಷೆಯು ಕೊನೆಯ ಗಳಿಗೆಯ ವರೆಗೂ ಇದ್ದಿದ್ದರೂ ಫಲಿತಾಂಶವು ವ್ಯತಿರಿಕ್ತವಾದಾಗ, ಈ ಪಕ್ಷದ ನಾಯಕರು ತೀವ್ರ ನಿರಾಶೆಗೀಡಾದರು ಈ ಪಕ್ಷದ ನಾಯಕ ಶ್ರೀ ಗೈಟ್‌ಸ್ಕೆಲರ, "ನಾವು ಸ್ವಾಭಾವಿಕವಾಗಿ ತೀವ್ರ ನಿರಾಶೆಗೀಡಾಗಿದ್ದೇವೆ ನಾವು ಜಯಿಸುವ ಆಶೆಯಿಂದಿದ್ದೆವು, ಆದರೆ, ಜಯಿಸಲಿಲ್ಲ ನಮ್ಮ ಕಾರ್ಯಕ್ರಮದಲ್ಲಿ ಎಲ್ಲಿಯೋ ತಪ್ಪಿಬಿದ್ದಿದ್ದೇವೆ. ಆದುದರಿಂದ ನಾವು ಆತ್ಮ ಸಂಶೋಧನೆ ಮಾಡಿಕೊಳ್ಳುವೆವು ನಾವು ಇನ್ನೂ ಪ್ರಯತ್ನಿಸುವೆವು, ಮತ್ತು ಸಮಯ ಬಂದಾಗ ಅವಶ್ಯ ಗೆದ್ದೇ ತೀರುವೆವು, ಎಂದಿದ್ದಾರೆ ಅಲ್ಲ

(೧೨ನೇ ಪುಟ ನೋಡಿರಿ)

ಭಾರತೀಯ ಬೆಸ್ತರಿಬ್ಬರು ತಮ್ಮ ಉದ್ಯೋಗದಲ್ಲಿಯೇ ತತ್ಪರರಾಗಿದ್ದಾರೆ

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ -
ಮಂಗಳೂರು—3

ಸ್ಥಾಪನೆ -
1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ	5 ತಿಂಗಳ ವರೆಗೆ		$4\frac{1}{4}\%$
6	,,	12 ,,	$4\frac{1}{2}\%$
13	,,	24 ,,	$4\frac{3}{4}\%$

ರೂಪಾಯಿ 10,000/ ಮ ಹೆಚ್ಚಿನ ಠೇವಣಾತಿಗೆ $\frac{1}{4}\%$ ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:

ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ

ಕಥಾ ವಿಹಾರ

ಅಮರಪ್ರೇಮವೇ ಶಿಲುಬೆಯಾಯಿತು

ಇಂದು-ಶೇಖರರ ಪ್ರೇಮ ಪ್ರಣಯದಲ್ಲಿ ಅಂತ್ಯಗೊಳ್ಳಲಿಲ್ಲ; ಅದು ಅವರ ಸಮಾಧಿಯ ಶಿಲುಬೆಯಾಯಿತು!

(ಕಳೆದ ಸಂಚಿಕೆಯಿಂದ ಮುಂದುವರಿದುದು)

ನಾನು ಒಂದು ಸಲ ಊರಿಗೆ ಹೋದಾಗ ಶೇಖರನ ತಂದೆಯವರ ಎದುರು—ಇಂದುಮತಿ-ಶೇಖರ, ಇವರೀರ್ವರಲ್ಲಿರುವ ಸ್ನೇಹದ ಬಗೆಗೆ ಹೇಳಿದನಲ್ಲದೇ, ಅವರ ವಿವಾಹ ಮಾಡಲೇಬೇಕು. ಎಂದು ನಾನವರಿಗೆ ಕೇಳಿಕೊಂಡಾಗ ಅವರು—

—"ಅದು ಸಾಧ್ಯವಿಲ್ಲ ಚಂದ್ರು; ಆತನಿಗೆ ನನ್ನ ಸ್ನೇಹಿತ ಸಹದೇವನ ಮಗಳು ಬೇಬಿಯೇ ಗಂಟೆ! ಆತನಿಗೆ ನೀನು ಚನ್ನಾಗಿ ಬುದ್ಧಿ ಹೇಳು. ಅಲ್ಲದೇ ಆ ಇಂದುಮತಿಯೋ, ಗಿಂದುಮತಿಯೋ ಎಲ್ಲವನ್ನು ಮರೆತು, ಆ ಬೇಬಿಯ ಸಂಗಡ ಮದುವೆಯಾಗಲೇಬೇಕು! ಎಂದು ಹೇಳು. ಯಾರು ಏನು ತಾನೇ ಹೇಳಿದರೂ ನನ್ನ ಪ್ರತಿಜ್ಞೆ ಮುರಿಯುವುದಿಲ್ಲ!" ಎಂದು ಸಿಟ್ಟಿನಿಂದ ನುಡಿದರು. ಹುಬ್ಬು ಹಾರಿಸಿ ನುಡಿದರು. ಮೀಸೆ ತಿರುವಿ ನುಡಿದರು ಅವರು

ಎಂಥ ಕಟುಕ ಹೃದಯ ಇವರದು! ಭಾಗ್ಯದ ಲಕ್ಷ್ಮಿ ತಾನೇ ಮನೆಯ ಬಾಗಿಲಿಗೆ ಬಂದಾಗ ಬಾಗಿಲ ಮುಚ್ಚುತ್ತಾರೆ; ಅವಿವೇಕಿ ಜನ! ಸಾಕ್ಷಾತ್ ಸಾವಿತ್ರಿಯಂಥವಳು ಇಂದುಮತಿ; ಇಂದುಮತಿಯಂಥ ಹುಡುಗಿ ಸಿಕ್ಕುವಳೇ ಇಂಥ ಮೂರ್ಖರಿಗೆ ಅವಳು ಶೇಖರನಿಗೆ ಒಲಿಯಬೇಕಾದರೆ, ನೂರು ಜನ್ಮದ ಪುಣ್ಯ! ಎಂದು ತಿಳಿದುಕೊಳ್ಳಬೇಕು ಇವರು. ಇವರು ಒಪ್ಪಿಗೆ ಕೊಡದಿದ್ದರೂ, ಫರವಾಯಿಲ್ಲ. ಆತನ ಚಿಕ್ಕಂದಿರಿಂದಲೂ ಕೂಡ ಮಾಡಬಹುದೆಂದು ಅವರಹತ್ತಿರ ಈ ವಿಷಯ ಪ್ರಸ್ತಾಪಿಸಿದೆ. ಅವರಿಂದಲೂ ಇದೇ ಉತ್ತರ—

—"ಹಿರಿ ಅಣ್ಣನ ಮಾತು ಅಮೃತ! ಆತನ ಮಾತಿಗೆ ನಾವು ಅಡ್ಡ ಬರಬಹುದಾದರೆ ಹೇಗೆ" ಎಂದರು. ಅವರ ಈ ಮಾತಿನಿಂದ ಶೇಖರ—ಇಂದುಮತಿಯ ಸಂಗಡ, ಆನಂದದಿಂದ ಸಂಸಾರ ನಡೆಸುವದು, ಈ ಮಹಾಶಯರಿಗೆ ಬೇಡವೆಂದು ತೋರುತ್ತದೆ. ಸ್ವತಃ ತಂದೆ, ಚಿಕ್ಕಪ್ಪ, ಕೂಡ ಹೀಗೆ ಮಾತನಾಡುತ್ತಾರೆ. ಯಾವ ಸಂಬಂಧ ಸೂತ್ರವಿಲ್ಲದ ನನಗೆ, ಇವರೀರ್ವರ ಪ್ರೇಮದ ಬಾಳನ್ನು ನೋಡಬೇಕು! ಎಂದು ಆತುರ. ಶೇಖರನ ಹಿತ ಬಯಸುವದಿಲ್ಲ ಎಂದ ಮೇಲೆ ಶೇಖರನ ಪಾಲಿಗೆ ಯಾರೂ ಇಲ್ಲವೆಂದು ನನ್ನಷ್ಟಕ್ಕೆ ನಾನೇ ತಿಳಿದುಕೊಂಡೆ.

ಈ ವಿಷಯ ಕೇಳಿದೊಡನೆ, ಇಂದುಮತಿಯ ನೆನಪು ಒಂದಿತು. ಅವಳು ಬಾರಿಬಾರಿಗೂ,—

—"ಮದುವೆಯಾದರೆ ಇಬ್ಬರೂ ಜೊತೆಯಾಗಿ ಮದುವೆಯಾಗೋಣ! ನಮ್ಮ ಗ್ರಹಗತಿ ಚನ್ನಾಗಿದ್ದೇ, ಮದುವೆ ಆಗದಿದ್ದರೆ ಇಬ್ಬರೂ ಕೂಡಿ ಪ್ರಾಣ ಬಿಡೋಣ!"

—ಎಂದು ಅನ್ನುತ್ತಿದ್ದಳು ಅವಳ ಬಾಯಿಯಿಂದ ಈ ನುಡಿ ಪ್ರಾರಂಭವಾಯಿತೆಂದರೆ, ಅವಳ ಬಾಯಿಗೆ ಶೇಖರ ಕೈ ಮುಚ್ಚುತ್ತಿದ್ದ. ಅಲ್ಲದೇ—

—"ನಾನು ಕೂಡ ನಿನ್ನ ಹೊರತು ಮದುವೆ ಆಗುವದಿಲ್ಲ. ಒಂದುವೇಳೆ ಮದುವೆ ಆಗದಿದ್ದರೆ, ನಿನ್ನ ಮತಕ್ಕೆ ನನ್ನ ಒಪ್ಪಿಗೆ."

—ಎಂದು ಆತನೂ ಅನ್ನುತ್ತಿದ್ದ.

ಅವರು ಮಾತನಾಡಿದ ವಿಷಯಕ್ಕೆ, ಅವರ ತಂದೆ ಮದುವೆ ಮಾಡದಿದ್ದರೆ, ಇಂದುಮತಿ-ಶೇಖರ ಬೇರೆ ಲೋಕಕ್ಕೆ ಪ್ರಯಾಣ ಬೆಳೆಸುವದು ಖಂಡಿತ! ಶೇಖರ ....ಇಂದುಮತಿ .. ಇಂದುಮತಿ .. ಶೇಖರ ಒಬ್ಬರ ಹಿಂದೊಬ್ಬರ ಮುಖ ಛಾಯೆ ನನ್ನ ಎದುರು ಹಾದುಹೋದಂತಾಯಿತು. ಅದನ್ನು ಕಂಡ ಬಳಿಕ, ನನ್ನ ಕಣ್ಣಲ್ಲಿ ಗಂಗಾನದಿ ಹರಿಯಲಾರಂಭಿಸಿತು. ನನ್ನಷ್ಟಕ್ಕೆ ನಾನೇ ಸಮಾಧಾನ ತಂದುಕೊಂಡೆ. ಪ್ರಯತ್ನಿಸಿದರೆ, ಎಲ್ಲ ಕಾರ್ಯ ಕೈಗೂಡುತ್ತದೆ. ಇನ್ನು ಪ್ರಯತ್ನಿಸಬೇಕು. ಶೇಖರನಿಂದಲೂ, ಆತನ ತಂದೆಗೆ, ಚಿಕ್ಕಂದಿರಗೆ ಹೇಳಿ 'ಹುಂ' ಎನ್ನಿಸಿಯೇ ತೀರಬೇಕು. ಆಗ ನಿರ್ಧಾರ ಮಾಡಲು ಬರುತ್ತದೆ. ಎಂದು ತಿಳಿದುಕೊಂಡು, ಮತ್ತೆ ಮರಳಿ ಊರಿಗೆ ಬಂದೆ

ಶೇಖರನಿಗೆ ಸವಿಸ್ತಾರವಾಗಿ ವಿಷಯ ತಿಳುಹಿಸಿದೆ. ಆತನೂ ಕಣ್ಣೀರಿಟ್ಟ. ಅವರ ತಂದೆಗೆ, ಚಿಕ್ಕಂದಿರಗೆ ಇನ್ನೊಮ್ಮೆ ಹೇಳು ಎಂದು ಶೇಖರನನ್ನು ಆ ದಿನವೇ ಊರಿಗೆ ಕಳುಹಿಸಿದೆ. ಆತನಿಗೂ ಅವನ ತಂದೆ, ಚಿಕ್ಕ, ನನಗೆ ಹೇಳಿದ್ದನ್ನು ಹೇಳಿದರಂತೆ. ಮುಖದ ಮೇಲೆ ದಿನದಂತೆ ಆತನಿಗೆ ಕಳೆಯಿರಲಿಲ್ಲ. ಶೇಖರನಿಗೆ ಗೆಲುವೆಂಬ ಚಿಹ್ನೆ ಅಳಿಸಿ ಹೋಗಿದೆ. ಹುಚ್ಚರ ಆಕಾರದಂತೆ ಕಾಣುತ್ತಿದ್ದ ಆತ!

"ಪ್ರಯತ್ನಿಸೋಣ. ಪ್ರಯತ್ನಿಸಿದರೆ ಗೆಲುವು ಖಂಡಿತ! —ಎಂದು ಆತನಿಗೆ ನಾನಾ ಉದಾಹರಣೆ ಹೇಳಿ ಸಮಾಧಾನ ಹೇಳಿದೆ. ಆದಿನಿಂದ ಆತ ಬಾರಿ ಬಾರಿಗೂ ನನ್ನೆದುರು ಹೇಳುತ್ತಿದ್ದ -

"ಜಗತ್ತು ಶೂನ್ಯ; ನನ್ನ ದೃಷ್ಟಿಯಲ್ಲಿ!" ಎಂದ .

"ಹಾಗನ್ನಬೇಡ" ಎಂದು ಬೆದರಿಸಿ, ಗದರಿಸಿ ಹೇಳಿದೆ. ಆತ ಹಾಗೆಂದು ಮನಸ್ತಾಪ ಮಾಡಿಕೊಂಡರೆ, ನನಗೆ ತುಂಬ ದುಃಖವಾಗುತ್ತಿತ್ತು.

ಅವರ ತಂದೆ ಇಷ್ಟಕ್ಕೇ ತೃಪ್ತರಾಗಲಿಲ್ಲ. ಶೇಖರನ ಎದುರು, ನನ್ನ ಎದುರು. ಹೇಳಿದಂತೆ, ಇಂದುಮತಿಯ ತಂದೆ ಮನೋಹರರಿಗೆ ಸ್ವತಃ ಕಂಡು ಅವರ ಕಿವಿ ಊದಿದರಲ್ಲದೇ, ಏನೋ ಮಾಯಮಾಡಿ ಅವಳ ಮದುವೆ ಮತ್ತೊಬ್ಬನ ಸಂಗಡ ೨೫ನೇ ದಿನಾಂಕಿನಂದು ಮಾಡಿಸುವದಾಗಿ, ಬಹಳಿಂದ ಮದುವೆಯ ಪತ್ರವನ್ನು ಮುದ್ರಿಸಿ ಹಂಚಿ ಬಿಟ್ಟರು. ಈ ಸಂಗತಿ ಶೇಖರನ ತಂದೆಯ ಮಿತ್ರರೇ ನನ್ನೆದುರು ಹೇಳಿದರು. ನಾನು ಅವರ ತಂದೆ ಹಾಗೆ ಮಾಡಿದರೆಂದು, ಅಂದು ಶೇಖರನ ಎದುರು ಹೇಳಲಿಲ್ಲ. ಕಾರಣ—ಮನಸ್ತಾಪ ಮಾಡಿಕೊಳ್ಳುವನೆಂದು ಅಷ್ಟೆ!

ಇಂದುಮತಿ ಆ ಕಾರ್ಡನ್ನು ಕಂಡು, ಊರಿಗೆ ಹೋಗಿರುವಳೆಂದು, ಅವಳ ರೂಮಿಗೆ ಹೋದಾಗ ಅವಳ ಗೆಳತಿ ವಾಸಂತಿ ಹೇಳಿದಳು,

ನಾನು ರೂಮಿಗೆ ಬಂದಾಗ ಮಧ್ಯಾಹ್ನ ಗಂಟೆ ಮೂರು. ಶೇಖರ ಇನ್ನೂ ಮಲಗಿದ್ದ. ನನಗೂ ತುಂಬ ಆಯಾಸವಾದುದರಿಂದ ಮಲಗಿದೆ.

ನಾನು ಎಚ್ಚತ್ತಾಗ ಗಂಟೆ ೫. ಎದ್ದು ಶೇಖರನನ್ನು ನೋಡುವ ರೂಢಿಯಂತೆ ಆತನ ಕಾಟ್ ನೋಡಿದೆ—

ಬರಿದಾಗಿತ್ತು!

ಹೃದಯ ನಡುಗಿತು!

ಟೇಬಲ್ಲ ಮೇಲೆ ಒಂದು ಕವ್ಹರ್, ಚೀಟಿ ಇಷ್ಟೇ! ಮೊದಲು ಕವ್ಹರ್ ಓದಲು ಪ್ರಾರಂಭಿಸಿದೆ. ಅದು ಶೇಖರನದ್ದಾದರೂ ಓದಿದೆ. ನಾನು ಓದುತ್ತಿರಲಿಲ್ಲ ಅದು ಇಂದುಮತಿಯದು! ಮತ್ತೇನು ಗಡಿಬಿಡಿ ಮಾಡಿರಬಹುದು ಅವಳು ಎಂದು ಓದಲು ಮುಂದಾದೆನಷ್ಟೇ!

—ಪ್ರಿಯ ಶೇಖರ,

ನೂರು ಸಲ ನಮಸ್ಕಾರ

ನಮ್ಮ ತಂದೆಯವರು, ಅವರ ಜೊತೆ ನಿಮ್ಮ ತಂದೆಯವರೂ ಸೇರಿ ಇದೇ ದಿ. ೨೫ಕ್ಕೆ ಮದುವೆ ನಿಶ್ಚಯಿಸಿ, ಕಾರ್ಡನ್ನು ಹಂಚಿದ್ದಾರೆ. ಆದುದರಿಂದಲೇ ನಿಮಗೆ ಮುಖ ತೋರಿಸದೇ ಊರಿಗೆ ಹೋದೆ. ನನ್ನ ತಂದೆಗೆ ನಾನೆಷ್ಟು, ಹರಿ, ಹರಿಯಿಂದ ಬೇಡಿಕೊಂಡರೂ, ಅವರ ಕಲ್ಲು ಹೃದಯ ಕರಗಲಿಲ್ಲ! ಅಲ್ಲದೇ ಅವರು ಉಮೇಶನ ಸಂಗಡ ಬಲವಂತವಾಗಿಯಾದರೂ, ಮದುವೆ ಮಾಡಿಯೇ ತೀರುತ್ತೇನೆ! ಎಂದು ಜಂಭದಿಂದ ಮಾತನಾಡಿರುವರು. ನಿಮ್ಮ ಹೊರತು ನನಗೆ ಬೇರೊಬ್ಬರ ಸಂಗಡ ಮದುವೆಯಾಗಲು ಇಷ್ಟವಿಲ್ಲ. ನಿಮ್ಮ ಸಂಗಡ ಮದುವೆ ಆಗುವದೂ ಅಸಂಭವ! ಅದಕ್ಕೆ ನಿಮ್ಮ ತಂದೆಯವರೇ ಕಾರಣ! ನನಗೆ ಇಂಥವರ ಮುಖ ನೋಡಲಾಗದೇ ಇಂದೇ ಬಾವಿಯಲ್ಲಿ ಮುಳುಗಿದ್ದೇನೆ. ಸಾಯುವದಕ್ಕಿಂತ ಮುಂಚೆ ಇನ್ನೊಮ್ಮೆ ನಿಮ್ಮ ಮುಖ ನೋಡಬೇಕೆಂಬ ಆಶೆ ಬಹಳವಿತ್ತು. ಆದರೆ! ನನ್ನ ಮುಖ ನಿಮಗೆ ಹೇಗೆ ತೋರಿಸಲಿ? ನೀವೇ ಹೇಳಿ. ನಿಮ್ಮ ಭಾವ ಚಿತ್ರ ಮನ ತುಂಬುವವರೆಗೆ ನೋಡಿದೆ! ನಿಮಗೆ ದೃಷ್ಟಿಯಾಗುವದಿಲ್ಲವಲ್ಲ ತಾನೇ? ಉಮೇಶನ ಸಂಗಡ ಬಲವಂತವಾಗಿ ಈಗ ನನ್ನ ತಂದೆ ಹೇಗೆ ಮದುವೆ ಮಾಡುತ್ತಾರೆ? ನೋಡೋಣ! ಇರಲಿ ನಿಮ್ಮ ಪ್ರಕೃತಿಯ ಕಡೆಗೆ ಜೋಕೆ! ನೀವು ಮದುವೆಯಾಗಿ ಹೆಂಡತಿಯೊಡನೆ, ಸುಖವಾಗಿ ಕಾಲ ಕಳೆಯುತ್ತಿರುವಾಗ ಒಮ್ಮೆಯಾದರೂ ನನ್ನನ್ನು ನೆನಸುವಿರಾ

ಎಂದು ಬೇಸರದಿಂದ ಬರೆದು ಜಗತ್ತನ್ನು ಬಿಟ್ಟ.

—ಇಂದುಮತಿ.

ಕಾಗದ ಓದಿದ ಮೇಲೆ ಎಡೆ ಕಣ್ಣಾಗಾಯಿತು. ಕಣ್ಣೀರುಗರೆಯುತ್ತ ಚೀಟಿ ಓದಹತ್ತಿದೆ.

ಪ್ರಿಯ ಚಂದ್ರು,

—ಇಂದುಮತಿಯ ಕಾಗದ ಕಂಡರೆ ಸಾಕು, ನಿನಗೆ ತಿಳಿದೇ ತಿಳಿಯುತ್ತದೆ. ನಾನ್ಯಾಕೆ ಸತ್ತೆ ಎಂಬುದ! ಅವಳ ಮಾತು ನೆನಪಿದೆಯೇ.—

—ಇಬ್ಬರೂ ಜೊತೆಯಾಗಿ ಮದುವೆಯಾಗೋಣ! ಇಲ್ಲವಾದರೆ ಇಬ್ಬರೂ ಜೊತೆಯಾಗಿ ಸಾಯೋಣ! ಎಂಬುದು. ನಾನು ಬದುಕಿದ್ದರೆ ಅವಳ ಆತ್ಮಕ್ಕೆ ಶಾಂತಿ ದೊರೆಯದ . ನಾನು ಯಾರ ಸಲುವಾಗಿ ಬದುಕಲಿ? ಅಣ್ಣಾ! ನೀನೇ ಹೇಳು. ನಮ್ಮೀರ್ವರ ಸುಖವನ್ನು ನಮ್ಮ ಮನೆಯವರಿಗೆ ನೋಡಲಾಗಲಿಲ್ಲ. ನನ್ನ ತಾಯಿ ಆಕಾಶದಿಂದ ಕೈಮಾಡಿ ಕರೆಯುತ್ತಿರುವಳು—

—"ನೀನು— ನನ್ನ ಸೊಸೆ, ಆನಂದದಿಂದ ಕಾಲ ಕಳೆಯಬನ್ನಿರಿ. ನಿಮ್ಮ ಆನಂದದ ಸಂಸಾರ ನೋಡಬೇಕೆಂದಿದ್ದೇನೆ!"— ಎಂದು ಅವಳು ಅನ್ನುತ್ತಿದ್ದಾಳೆ. ಆದುದರಿಂದ ಹೊರಟು ಹೋದೆ. ಹೋಗುವ ಸಮಯಕ್ಕೆ ನಿನ್ನನಗಲಲು ತುಂಬ ದುಃಖವಾಯಿತು. ನಿಜವಾಗಿ ನೀನ ನನ್ನ ಅಣ್ಣಾ! ನಿನ್ನ ಉಪಕಾರ ಎಷ್ಟು ಸ್ಮರಿಸಿದರೂ ಕಡಿಮೆ! ಮುಂದಿನ ಜನ್ಮದಲ್ಲಿ ಮತ್ತೆ ಕೂಡೋಣ

—ಎಂದು ನಿನ್ನ ಸೋದರ

—ಶೇಖರ.

ಶೇಖರ ಎಲ್ಲಿ ಮೃತನಾದ ಎಂದು ಆಲೋಚಿಸುತ್ತ ಹೊರಕ್ಕೆ ಬರುವಾಗ ಕೂಕೂಗು ಕೇಳಿಸಿತು—ಅದೇ ಕೂಗು—

—"ಬೇವಿನ ಮರಕ್ಕೆ ನೇಣು ಹಾಕಿಕೊಂಡಿದ್ದಾನೆ!" ಎಂದು. ಅವಕ್ಕೆ ನಾನು ಬಂದೆ. ಎಂದು ಅವನ ಕರುಣಾಜನಕ ಕಥೆ ಹೇಳಿದಾಗ ಎಲ್ಲರೂ ಕಣ್ಣೀರಿಟ್ಟರು.

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೪.

ಜ್ಞಾನ-ಕಿರಣ

ನಾವು ಕುಡಿಯುವ ನೀರು

ಬಾಹ್ಯದೃಷ್ಟಿಗೆ ನೀರು ಕ್ಷುಲ್ಲಕವೆಂದು ಕಂಡುಬರಬಹುದು; ಆದರೂ, ನಾವೆಲ್ಲರೂ ತಿಳಿದುಕೊಂಡಿರುವಷ್ಟು ನೀರಿನ ಮಹತ್ವ ಕಡಿಮೆಯಲ್ಲ.

ನಾವು ಪ್ರತಿಕ್ಷಣವೂ ಸೇವಿಸುವ ವಾಯು ಮತ್ತು ಯಾವಾಗಲೂ ಕುಡಿಯುವ ನೀರುಗಳ ಬಗ್ಗೆ ಮತ್ತು ಅವುಗಳ ಮಹತ್ವದ ಬಗ್ಗೆ ನಾವು ಹೆಚ್ಚಾಗಿ ತಿಳಿದಿಲ್ಲವೆಂಬುದನ್ನು ಗಮನಿಸಬೇಕು. ಪ್ರಕೃತಿ ಮಾತೆ ಮತ್ತು ಪರಮಾತ್ಮನ ವರದಾನಗಳಲ್ಲಿ ಇವೂ ಸೇರಿವೆ ಎಂದು ಮಾನವನು ಸಾಮಾನ್ಯವಾಗಿ ಒಪ್ಪುತ್ತಾನೆ. ಮತ್ತು ಇವು ಸ್ವಾಭಾವಿಕವಾಗಿಯೇ ಸೃಷ್ಟಿಯಲ್ಲಿವೆ ಎಂದು ಇತ್ತ ವಿಶೇಷ ಗಮನ ಹರಿಸುವ ಗೋಜಿಗೆ ಹೋಗುವುದಿಲ್ಲ. ಆದರೆ, ಗಾಳಿ ಹರಿಯದ ಕೋಣೆಯೊಂದರಲ್ಲಿ ನಾವು ಕುಳಿತರೆ, ಅಥವಾ ಮರುಭೂಮಿಯಲ್ಲಿ ಸಂಚರಿಸಿದರೆ, ನೀರಿನಿಂದ ಮೇಲೆದ್ದ ಮೀನಿನಂತೆ ಒದ್ದಾಡುತ್ತೇವೆ. ಈ ಸಂದರ್ಭದಲ್ಲಿ ಮಾನವನು ನೀರಿನ ಒಂದು ಕಣ ಅಥವಾ ಒಂದು ಮುಂದವಾರುತಕ್ಕೋಸ್ಕರ ತನ್ನ ಜೀವನವನ್ನೇ ಕೊಡಲು ಸಿದ್ಧನಾಗುವುದೂ ಸ್ವಾಭಾವಿಕ.

ನಾವು ಕುಡಿಯುವ ಮತ್ತು ಬೇರೆ ಬೇರೆ ಕಾರ್ಯಗಳಲ್ಲಿ ಬಳಸುವ ಈ ನೀರು ನಾವು ತಿಳಿದಿರುವಷ್ಟು ಸರಳವಲ್ಲ. ನೀರಿನ ಹುಟ್ಟು ಹೇಗಾಗುತ್ತದೆ. ಇದರಲ್ಲಿ ಯಾವ ರೀತಿಯ ರಾಸಾಯನಿಕ ಕ್ರಿಯೆಗಳು ಅಥವಾ ಪ್ರತಿಕ್ರಿಯೆಗಳು ಇವೆ, ಇದರ ಮೂಲರೂಪ ಯಾವುದು ಎಂಬುವುಗಳ ಬಗ್ಗೆ ವೈಜ್ಞಾನಿಕರು ಸಾಕಷ್ಟು ಸಂಶೋಧನೆಗಳನ್ನು ಮಾಡಿದ್ದಾರೆ, ಮಾಡುತ್ತಿದ್ದಾರೆ. ಆದರೆ, ನೀರಿನ ರಾಸಾಯನಿಕ ಪ್ರಕ್ರಿಯೆಗಳು ಅತಿ ಅಸಾಮಾನ್ಯವಾಗಿವೆ; ಮತ್ತು ಇದುವರೆಗೆ ಯಾವ ವೈಜ್ಞಾನಿಕನಾದರೂ ನೀರಿನ ಬಗ್ಗೆ ಸರಿಯಾದ ಉತ್ತರವನ್ನು ಕಂಡುಹಿಡಿಯಲು ಸಮರ್ಥನಾಗಲಿಲ್ಲ.

"ಕೆಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ"ಯ ವೈಜ್ಞಾನಿಕರು ಅನೇಕ ವರ್ಷಗಳಿಂದ ನೀರಿನ ರಾಸಾಯನಿಕ ಪ್ರಕ್ರಿಯೆಗಳು, ಅವುಗಳ ಆವಿರ್ಭಾವ ಮತ್ತು ಅವುಗಳ ಮೌಲಿಕ ಸ್ವರೂಪಗಳ ಬಗ್ಗೆ ತಿಳುವಳಿಕೆಯನ್ನು ಪಡೆಯಲು ಸದಾ ಪ್ರಯತ್ನ ನಡೆಸುತ್ತಿದ್ದಾರೆ. ಈ ಉದ್ದೇಶಕ್ಕಾಗಿ ಇನ್ಸ್ಟಿಟ್ಯೂಟಿನಲ್ಲಿ ಒಂದು ವಿಶೇಷ ಪರೀಕ್ಷಣ ಶಾಲೆಯನ್ನೂ ಪ್ರಾರಂಭಿಸಲಾಗಿತ್ತು. ವೈಜ್ಞಾನಿಕರ ಅಭಿಪ್ರಾಯದಂತೆ ನೀರಿನಲ್ಲಿ ಜನಿಸುವ ಬುದ್ಬುದಗಳು (ನೀರ್ಗುಳ್ಳೆಗಳು) ಹೆಚ್ಚೆಂದರೆ ಕೇವಲ ೨೪ ನಿಮಿಷಗಳ ಕಾಲ ಮಾತ್ರ ಉಳಿಯುವುವು. ಈ ಪ್ರಯೋಗ ಶಾಲೆಯಲ್ಲಿ ತೆಗೆಯಲಾದ ನೀರ್ಗುಳ್ಳೆಯ ಚಿತ್ರವೊಂದು ಬಹು ಸ್ವಾರಸ್ಯಮಯವಾದುದು. ಇದರಲ್ಲಿ ಒಂದು ಸೆಕೆಂಡು ಸಮಯಾವಕಾಶದಲ್ಲಿ ಬುದ್ಬುದದ ೨೦ ಸಾವಿರ ಚಿತ್ರಗಳನ್ನು ತೆಗೆಯಲಾಗಿದೆ. ಹೀಗೆ ನೀರ್ಗುಳ್ಳೆಯ ಜನ್ಮದಿಂದ ಅಂತ್ಯದ ವರೆಗಿನ ಜೀವಸ್ಥಿತಿ ಹಾಸವನ್ನು ತೆಗೆದಿರುವ ಚಿತ್ರಗಳ ಆಧಾರದಿಂದ ತಿಳಿದುಕೊಳ್ಳಲು ಸಾಧ್ಯವಾಗಿದೆ.

ನೀರಿನ ಮೇಲೆ ಅತ್ಯಧಿಕ ವೇಗವಾಗಿ ಆಘಾತವನ್ನುಂಟು ಮಾಡಿದರೆ, ಅದರಿಂದ ನೀಲ—ಬಿಳಿ ವರ್ಣದ ಮಂದ ಪ್ರಕಾಶವು ಉತ್ಪನ್ನವಾಗುವುದು. ವಿದ್ಯುದಣುನೇತ್ರಗಳ ಸಹಾಯದಿಂದ ನೀಲಿ-ಬಿಳಿ ಪ್ರಭೆಯು ವಿದ್ಯುತ್ ತರಂಗಗಳ ರೂಪವನ್ನು ಪಡೆಯುವುದು. ಈ ವಿದ್ಯುತ್ ತರಂಗಗಳು ಗಾಮಾಕಿರಣದಿಂದ ಕೂಡಿವೆ. ಈ ವಿಧದ ವಿಕಿರಣವನ್ನು ಅಪಾರದರ್ಶಕಗಳು ಬಹುಕಾಲ ಉಳಿಯುವಂತೆ ಇಡಲು ಬಳಸಿಕೊಳ್ಳಬಹುದು.

ನೀರಿನಲ್ಲಿ ಬುದ್ಬುದಗಳು ಏಳುವ ಕ್ರಿಯೆಯ, ವಸ್ತುತಃ ತೀರ ಹಾನಿಕರವಾಗಿದೆ. ಈ ಪ್ರಕ್ರಿಯ ಫಲವಾಗಿ ನೀರಿನ ನಲಿಕೆಗಳಲ್ಲಿ ಬಿರುಕು ಕಾಣುತ್ತವೆ. ಹಡಗಗಳ ಪಂಖಗಳು ನಿರುಪಯೋಗಿಯಾಗುತ್ತವೆ. ದೊಡ್ಡ ದೊಡ್ಡ ಒಡ್ಡುಗಳಲ್ಲಿ ಹಾಕಿದ ಕಬ್ಬಿಣದ ಸರಳುಗಳೂ ಕರಗಿ ಹೋಗುವುದುಂಟು. ಕೆಲಿಫೋರ್ನಿಯಾದ ಪ್ರಯೋಗ ಶಾಲೆಯಲ್ಲಿನ ಪರೀಕ್ಷಣೆಯಲ್ಲಿ ಇಂಥ ಬುದ್ಬುದಗಳ ಬಗ್ಗೆ ಹಲವಾರು ವರ್ಷಗಳಿಂದ ಪ್ರಯೋಗಗಳು ನಡೆಯುತ್ತಲಿವೆ. ಇಲ್ಲಿನ ಪರೀಕ್ಷಣೆಯಿಂದ ಕೆಲವೊಂದು ವಿಷಯಗಳು ತಿಳಿದು ಬಂದಿವೆ. ಸಾಮಾನ್ಯ ನೀರಿನಲ್ಲಿ ಜಲಕಣಗಳು ಪರಸ್ಪರ ಸಂಪೂರ್ಣವಾಗಿ ಕೂಡಿಕೊಂಡಿರುವುದಿಲ್ಲ; ಇವುಗಳ ನಡುವೆ ಬಹಳ ಸೂಕ್ಷ್ಮವಾದ ಬಿರುಕು ಅಥವಾ ಸಂಧಿಗಳು ಇವೆ. ನೀರಿನಲ್ಲಿ ಅತಿವೇಗವಾಗಿ ಹರಿದಾಡುವ ವಸ್ತುಗಳು ಸಂಚರಿಸುವಾಗ, ಈ ಸಂಧಿಗಳು ಇನ್ನೂ ಅಗಲವಾಗಿ ಹೋಗುತ್ತವೆ. ಈ ಸಂದುಗಳಲ್ಲಿ ನೀರಿನ ಆವಿಯಿಂದಾಗಿ ಬುದ್ಬುದಗಳು ಹುಟ್ಟುತ್ತವೆ. ನೀರಿನಲ್ಲಿ ಯಾವುದೇ ಪದಾರ್ಥದ ಸೂಕ್ಷ್ಮಾತಿಸೂಕ್ಷ್ಮ ಕಣವು ಸೇರಿಕೊಂಡರೆ, ಅದು ನೀರಕಣಗಳ ಸಮ್ಮಿಳನದಲ್ಲಿ ಆತಂಕವೊಡ್ಡುತ್ತವೆ. ಆದರೆ ಯಾವುದೇ ಪದಾರ್ಥವು ನೀರಿನಲ್ಲಿ ಕರಗಿದ್ದರೆ, ಅಥವಾ ನೀರನ್ನು ಎಲ್ಲ ಬಾಹ್ಯತತ್ವಗಳಿಂದ ಮುಕ್ತಗೊಳಿಸಿದರೆ, ಬುದ್ಬುದಗಳ ಅಸ್ತಿತ್ವ ಇನ್ನೂ ಹೆಚ್ಚುವುದು.

ಈ ಬುದ್ಬುದಗಳ ಬಗ್ಗೆ ಬಹು ವರ್ಷಗಳಿಂದ ವೈಜ್ಞಾನಿಕರು ತತ್ಪರರಾಗಿದ್ದಾರೆ. ಇದರಿಂದ ನೀರಿನ ಬಗ್ಗೆ ಸಂಪೂರ್ಣ ಸಂಶೋಧನೆ ನಡೆಸಲು ಎಷ್ಟು ಸಮಯ ಬೇಕೆಂದು ತಿಳಿಯಬಹುದು. ತೀವ್ರ ವೇಗದಿಂದ ಹಾರುವ ಜೆಟ್ ವಿಮಾನಗಳ ಉಪಯೋಗಾರ್ಥಕ್ಕಾಗಿ ಮಳೆಯ ನೀರಿನ ದುಷ್ಪರಿಣಾಮ ಬೀಳದ ಒಂದು ರಾಸಾಯನಿಕ ಪದಾರ್ಥವನ್ನು ಕಂಡುಹಿಡಿಯಲು ಡಾ| ಪ್ಲಾಸ್ಟಿಂಗ್ ಡಿ. ಸ್ಟೇಲನಿಗೆ ನಾಲ್ಕು ವರ್ಷಗಳ ಕಾಲ ಹಿಡಿಯಿತು!

ಹಿಮಕಣ, ಜಲಸ್ವರೂಪ, ವಿದ್ಯುಗಿಕಕ್ಷೇತ್ರದ ನೀರಿನಲ್ಲಿರುವ ವಿಚಿತ್ರಸ್ವಾದ, ಗಂಧ ಮತ್ತು ಹಸಿವು ಇವುಗಳ ಬಗ್ಗೆ ವಿಜ್ಞಾನಿಗಳಿಗೆ ಸಾಕಷ್ಟು ಅನುಭವವಿಲ್ಲವೆಂದೇ ಹೇಳಬಹುದು. ಹಲವು ದಶಕಗಳಿಂದ ಪ್ರಯತ್ನವನ್ನು ಅವಿರತವಾಗಿ ಮುನ್ನಡೆಸುತ್ತ ಹೋಗಲಾಗುತ್ತಿದ್ದರೂ ನೀರಿನ ಸ್ವರೂಪದ ಬಗ್ಗೆ ಸುಸ್ಪಷ್ಟ ಜ್ಞಾನ ವಿಜ್ಞಾನಿಗಳಿಗಿಲ್ಲ. ನಿಜವಾಗಿಯೂ ಜನರು ತಿಳಿದುಕೊಂಡಿರುವಷ್ಟು ನೀರು ಸದರವಾದ ಪದಾರ್ಥವಲ್ಲ. ಕೆಲವರು ನೀರನ್ನು ಜಲಜನಕ ಮತ್ತು ಆಮ್ಲಜನಕಗಳ ಸಂಯೋಗವೆಂದು ಹೇಳುತ್ತಾರೆ. ಆದರೆ ಆಮ್ಲಜನಕ-ಜಲಜನಕಗಳು ಯಾವ ಪ್ರಮಾಣದಲ್ಲಿ ಮಿಶ್ರವಾದರೆ, ನೀರು ಉತ್ಪತ್ತಿಯಾಗುವುದೆಂಬ ವಿಷಯದಲ್ಲಿ ಮಾತ್ರ ಪ್ರಸಿದ್ಧ ವೈಜ್ಞಾನಿಕರಲ್ಲಿಯೇ ಭಿನ್ನಾಭಿಪ್ರಾಯವಿದೆ.

ಜಲಕಣಗಳಿಗೆ ಪ್ರತ್ಯೇಕ ಅಸ್ತಿತ್ವವಿದೆಯೆ?, ಅಥವಾ ಅವು ಯಾವುದೋ ಒಂದು ವಸ್ತುವಿನ ಪೂರಕಾಂಶಗಳೇ? ಎಂಬುದನ್ನು ಅವರಿನ್ನೂ ನಿರ್ಧರಿಸಿಲ್ಲ.

ಸಮುದ್ರದ ಉಪ್ಪುನೀರಲ್ಲಿ ಮುಳುಗಿದ್ದ ಮನುಷ್ಯನು ಜೀವಿಸಬಲ್ಲನೆ ಎಂಬುದನ್ನೂ ವಿಜ್ಞಾನಿಗಳು ಸಂಶೋಧಿಸುತ್ತಿದ್ದಾರೆ. ಉಪ್ಪುನೀರು ಮಾನವ ಶರೀರದ ಮೇಲೆ ಮಾಡಬಹುದಾದ ಪ್ರಕ್ರಿಯೆಗಳ ಕುರಿತೂ ಅವರು ಪರೀಕ್ಷೆ ನಡೆಸುತಿದ್ದಾರೆ. ಫ್ರಾನ್ಸಿನ ನೌಕಾಸೇನೆಯು ಈ ಬಗ್ಗೆ ಒಂದು ಪರೀಕ್ಷಣೆಯನ್ನು ನಡೆಸಿತ್ತು. ಈ ಬಗ್ಗೆ ಡಾ| ಎಲಿಯನ್ ಬೋಮ್ಬಾರ್ಡನು ೧೯೫೨ರಲ್ಲಿ ಕೆನಾರಿ ದ್ವೀಪದಿಂದ ವರವೊಡಾಸ್ ದ್ವೀಪದವರೆಗೆ ಮರದ ತೆಪ್ಪದಲ್ಲಿ ಸಂಚಾರ ಮಾಡಿದ್ದನು. ಅಮೆರಿಕೆ ಮತ್ತು ಬ್ರಿಟನ್ನಿನ ವೈಜ್ಞಾನಿಕರೂ ತುಂಬ ಪರೀಕ್ಷಣೆ ನಡೆಸಿದ್ದಾರೆ.

ಇದರೊಡನೆ ಉಪ್ಪು ನೀರನ್ನು ಶುದ್ಧ ಮಾಡಿ ಕುಡಿಯಲು ಬಳಸುವ ಸಾಧ್ಯಾಸಾಧ್ಯತೆಯ ಒಂದು ಪ್ರಶ್ನೆಯೂ ಇದೆ. ಏಕೆಂದರೆ, ಕೆಲವೆಡೆ ಕುಡಿಯುವ ನೀರಿನ ಅಭಾವವಿರುತ್ತದೆ

ಅಮೆರಿಕೆಯೇ ಮೊದಲಾದ ಕೆಲವಾರು ದೇಶಗಳು ಉಪ್ಪು ನೀರನ್ನು ಸಿಹಿ ನೀರನ್ನಾಗಿ ಮಾರ್ಪಡಿಸುವ ಬಗ್ಗೆ ನಿರಂತರ ಪರೀಕ್ಷಣೆಯಲ್ಲಿ ತತ್ಪರವಾಗಿವೆ. ಕೇವಲ ಅಮೆರಿಕೆಯಲ್ಲಿಯೇ ೩ ಖರಬ ೬೨ ಅರಬ ಗೆಲನ್ ನೀರು ಇದಕ್ಕಾಗಿ ಖರ್ಚಾಗುತ್ತಿದೆ. ೧೯೭೫ರಲ್ಲಿ ಈ ನೀರಿನ ಮೊತ್ತವು ದ್ವಿಗುಣವಾಗುವುದು. ಸಿಹಿ ನೀರಿನ ಅಭಾವದಿಂದ ಪೀಡಿತವಾಗಿರುವ ಪ್ರದೇಶಗಳ ಉಪಯೋಗಾರ್ಥಕ್ಕೋಸ್ಕರ ಸಮುದ್ರದ ಈ ಉಪ್ಪುನೀರನ್ನು ಸಿಹಿಯಾಗಿ ಪರಿವರ್ತಿಸುವ ಸುಲಭ ಹಾಗೂ ಸರಳವಾದ ವಿಧಾನವೊಂದನ್ನು ಕಂಡುಹಿಡಿಯುವ ಅವಶ್ಯಕತೆಯಿದೆ.

ಅಮೆರಿಕೆಯಲ್ಲಿ ಒಂದು ಸಾವಿರ ಗೆಲನ್ ನೀರನ್ನು ಶುದ್ಧೀಕರಿಸಲು ಸುಮಾರು ೨೦ ಸೆಂಟು ವೆಚ್ಚಬರುವುದು. ಉಪ್ಪು ನೀರನ್ನು ಸಿಹಿ ನೀರನ್ನಾಗಿ ಮಾರ್ಪಡಿಸುವ ಕಾರಖಾನೆಗಳಲ್ಲಿ ಪ್ರತಿ ಸಾವಿರ ಗೆಲನುಗಳಿಗೆ ಒಂದೂವರೆಯಿಂದ ಎರಡು ಡಾಲರ್ ವಸೂಲು ಮಾಡುತ್ತಾರೆ (ಸುಮಾರು ರೂ ೭॥ ಯಿಂದ ೧೦) ಆದುದರಿಂದ, ಈ ಮಹಾಕಾರ್ಯದಲ್ಲಿ ಬರುವ ವೆಚ್ಚವನ್ನು ಯಾವ ರೀತಿ ಕಡಿಮೆ ಮಾಡಬಹುದು. ಎಂಬ ಪ್ರಶ್ನೆ ಈಗ ಎಲ್ಲ ವೈಜ್ಞಾನಿಕರ ತಲೆಯನ್ನು ಬಿಸಿಮಾಡುತ್ತಿದೆ.

ಇನ್ನು ಆರು ವರ್ಷಗಳೊಳಗೆ ಉಪ್ಪು ನೀರನ್ನು ಸಿಹಿ ಮಾಡುವ ಒಂದು ಹೊಸ ಯಂತ್ರವನ್ನು ಅಮೆರಿಕೆಯು ಸಿದ್ಧಪಡಿಸುವುದು. ಇದರಲ್ಲಿ ಆಳವಾದ

(೧೦ನೇ ಪುಟ ನೋಡಿರಿ)

ಪ್ರಕಟಣೆ

ನಿರಖು ಠೇವಣಾತಿಗಳ ಮೇಲೆ ನಾವೀಗ ತೆರುತ್ತಿರುವ ಸಾ ಸೇ. 4¾ರಿಂದ 4¼ರ ವರೆಗಿನ ಬಡ್ಡಿ ದರಗಳಲ್ಲಿ ಯಾವುದೊಂದೂ ಬದಲಾವಣೆ ಇಲ್ಲದೆ, ಅಂತಹ ಠೇವಣಾತಿಗಳನ್ನು ಅವೇ ದರಗಳಲ್ಲಿ ಸ್ವೀಕರಿಸಲಾಗುವುದೆಂದು ಪ್ರಕಟಿಸಲು ಸಂತೋಷಪಡುತ್ತೇವೆ.

ವಿಶೇಷ ಮಾಹಿತಿಗೆ

ನಿಮಗೆ ಸಮೀಪವಿರುವ ನಮ್ಮ ಯಾವುದೇ ಶಾಖೆಯನ್ನು ಸಂದರ್ಶಿಸಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : ಉಡುಪಿ (ದ. ಭಾರತ)

(ವಿಶಾಲ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ನಮ್ಮದು ಅತಿ ಹಿರಿಯ ಬೇಂಕು!)

Notice

In the Court of the Subordinate Judge of S. K. II Addl

O. S. No. 35/1959

Between:

Narsi Bai — Plaintiff.

and

Achmu Shedthi and others — Defendants.

To

10th defendant:- Sundara, s/o Kamalu Shedthi, Hejmadi Village Mangalore Taluk.

Take notice that the plaintiff has filed the above suit for recovery of the mortgage amount due to her as per mortgage deed executed by defendants, and the said suit stands posted to 26—10—59 for your appearance.

(By order of Court)

(Sd-) P. Shridhara Rao

Advocate for Plaintiff.

Mangalore, 6-10-59.

<u>ಅಭಿಪ್ರಾಯ</u>

ಶ್ರೀ ನಾಗೇಶರ ನೂತನ ಹುದ್ದೆಯಿಂದ ಭಾರತೀಯರಲ್ಲಿ ಸಮಾಧಾನ

ಸೀಮಾಪ್ರದೇಶದ ಆಕ್ರಮಣಗಳ ಗೊಂದಲದಲ್ಲಿ ಸವ್ಯದ ನೇಮಕವು ಮಹತ್ವಪೂರ್ಣವಾಗಿದೆ

ಭಾರತದ ಈಶಾನ್ಯ ಗಡಿ ಪ್ರದೇಶದ ಅಸ್ಸಾಮ ರಾಜ್ಯದ ರಾಜ್ಯಪಾಲ ಫಜಲ್ ಅಲಿಯವರ ನಿಧನದಿಂದ ತೆರವಾದ ಪದವಿಯ ಮೇಲೆ ಟಿಬೇಟಿನ ಮೇಲೆ ಮತ್ತು ಭಾರತದ ಉತ್ತರ ಸೀಮಾ ಪ್ರದೇಶದಲ್ಲಿ ಚೀನಾವು ಮಾಡಿದ ಅತಿಕ್ರಮಣವು ತುಂಬ ಪ್ರಭಾವ ಬೀರಿದುದರಿಂದ ಇದನ್ನು ಯಾರಿಗೆ ಒಪ್ಪಿಸಲಾಗುವುದೆಂಬ ಊಹಾಪೋಹ ನಡೆದಿದ್ದು ಈ ಬಗ್ಗೆ ನಿವೃತ್ತ ಸೇನಾನಿ ಜ| ಕಾರ್ಯಪ್ಪನವರ ಹೆಸರೂ ಕೇಳಿಬಂದಿತ್ತು ಆದರೆ ಈಗ, ಮಾಜಿ ಭೂಸೇನಾ ದಂಡನಾಯಕ ಶ್ರೀ ಎಸ್. ಎಂ ನಾಗೇಶರ ನೇಮಕದಿಂದ ಈ ಊಹಾಪೋಹಗಳಿಗೆ ಪೂರ್ಣ ವಿರಾಮ ಬಿದ್ದಂತಾಯಿತು. ಜನಸಾಧಾರಣರಲ್ಲಿ ರಾಜ್ಯಪಾಲ ಪದವಿಯೆಂದರೆ, ಶಾಸನಿಕ ಪಕ್ಷದ ವಯೋವೃದ್ಧ ನಾಯಕರಿಗೆ ನಿವೃತ್ತಿ ವೇತನವಿದ್ದಂತೆ, ಅವರನ್ನು ರಾಜಕೀಯ ಜೀವನದಿಂದ ನಿವೃತ್ತರಾಗಿಸುವ ಸಾಧನಮಾತ್ರವೆಂದಿದ್ದ ಭಾವನೆಯು ಜ| ನಾಗೇಶರ ನೇಮಕದಿಂದ ದೂರವಾಗುವಂತಾಯ್ತು. ಇವರ ನೇಮಕದಿಂದ ರಾಜ್ಯಪಾಲ ಪದವಿಯ ಮಹತ್ವ ಹೆಚ್ಚಿದಂತಾಯಿತು. ಇದು ಕೇವಲ ಅಲಂಕಾರಪ್ರಾಯ ಪದವಿ ಮಾತ್ರವಲ್ಲ ಎಂದು ಬಹಿರಂಗವಾದಂತಾಯಿತು. ದೇಶದ ಸೀಮೆಯ ಮೇಲೆ ವಿದೇಶಗಳಿಂದ ಆಕ್ರಮಣ ನಡೆಯುವಾಗ, ಶ್ರೀ ಫಜಲ ಅಲಿಯವರ ನಿಧನವಾದಾಗ, ಸೀಮಾ ರಕ್ಷಣೆಗಾಗಿ ಸಾಮರಿಕ ದೃಷ್ಟಿಯಿಂದಲೂ ದೇಶದ ರಕ್ಷಣೆಗೋಸ್ಕರ ಪನ್ನ ಮಂತ್ರಿಮಂಡಳಕ್ಕೆ ಅಭಿಪ್ರಾಯ ನೀಡಬಲ್ಲ ಓರ್ವ ಉಚ್ಚ ಅಧಿಕಾರಿಯ ಅವಶ್ಯಕತೆ ಕಂಡುಬಂತು. ಪ್ರಾಯಃ ಕೇಂದ್ರ ಸರಕಾರವೂ ಈ ವಿಚಾರವನ್ನು ವಿಮರ್ಶಿಸಿಯೇ ಈ ಬಗ್ಗೆ ಜನರಲ್ ಕಾರ್ಯಪ್ಪನವರ ಹೆಸರನ್ನೂ ಎತ್ತಿಕೊಂಡಿತ್ತು. ಪ್ರಾಯಃ ಭಾರತದ ಈ ಪ್ರಥಮ ಮಹಾ ದಂಡನಾಯಕರು ತನ್ನ ಅಸಮರ್ಥತೆಯನ್ನು ಪ್ರಕಟಿಸಿದ್ದರಿಂದಲೇ ಶ್ರೀ ನಾಗೇಶರು ನಿಯುಕ್ತರಾಗಿರಬೇಕು

ಕೆಲಸಮಯದ ವರೆಗೆ ನಾರ್ಥ ಸ್ಟೆಫೋರ್ಡ್ ಶಾಯರ್ ರಜಿಮೆಂಟಿನಲ್ಲಿ ಇದ್ದ ನಂತರ ಇವರು ಮದ್ರಾಸ್ ಪಯೋನಿಯರ್ಸ್ ಸೈನಿಕ ದಳದಲ್ಲಿ ನಿಯುಕ್ತರಾದರು. ಸೇನಾಧಿಕಾರಿಯ ಶ್ರೇಣಿಯಿಂದ ಇವರು ಮಲಯಾ ಮತ್ತು ಬರ್ಮಾಗಳ ಯುದ್ಧಗಳಲ್ಲಿ ಭಾಗವಹಿಸಿದರು ೧೯೪೫ರಲ್ಲಿ ಇವರು ಡೆಹರಾಡೂನಿನ ಭಾರತೀಯ ಸೈನಿಕ ಶಿಕ್ಷಣಾಲಯದ ಪ್ರಾಧ್ಯಾಪಕರಾಗಿದ್ದರು ೧೯೪೬ರಲ್ಲಿ ಭಾರತೀಯ ಸೇನಾ ಪ್ರತಿನಿಧಿಮಂಡಳದ ಉಪ ನಾಯಕರಾಗಿ ಇವರು ಜರ್ಮನಿಗೆ ಹೋಗಿದ್ದರು

ಲೆಫ್ಟಿನೆಂಟ್ ಜನರಲ್ ಶ್ರೀ ನಾಗೇಶರು ೩೪ ವರ್ಷಗಳ ಕಾಲಾವಧಿಯಲ್ಲಿ ಭಾರತೀಯ ಸೇನೆಯ ಬೇರೆಬೇರೆ ಶ್ರೇಣಿಗಳಲ್ಲಿ ಸೇವೆ ಸಲ್ಲಿಸಿ ಪದವಿಗಳಲ್ಲಿ ವಿಂ... ಜಿಸಿದ್ದರು ೧೯೫೨ರಲ್ಲಿ ಇವರು "ಕಮಾಂಡರ್"ಆದರು. ಹೈದರಾಬಾದದ ನಿಜಾಮರ ಖಾಸಗಿ ಚಿಕಿತ್ಸಕರಾಗಿದ್ದ ಶ್ರೀ ನಾಗೇಶ ವಲ್ಲಭರ ಜ್ಯೇಷ್ಠ ಪುತ್ರರಾಗಿ ೧೯೦೩ರಲ್ಲಿ ಕೊಲ್ಲಾಪುರದಲ್ಲಿ ಶ್ರೀ ಸತ್ಯವಂತ ಮಲ್ಲಣ್ಣಾ ನಾಗೇಶರ ಜನ್ಮವಾಯಿತು ಇಂಗ್ಲೆಂಡಿನ ಪಬ್ಲಿಕ್ ಸ್ಕೂಲಿನಲ್ಲಿ ಶಿಕ್ಷಣವನ್ನು ಪಡೆದರು ೧೯೨೧ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯವನ್ನು ಪ್ರವೇಶ ಮಾಡಿದರು ಅದೇ ವರ್ಷ ಅವರು ಸ್ಯಾಂಡ್ ಹರ್ಸ್ಟ್ ಸೈನಿಕ ವಿದ್ಯಾಲಯದಲ್ಲಿ ಭರ್ತಿಯಾದರು ಭಾರತೀಯ ವಿದ್ಯಾರ್ಥಿಗಳಲ್ಲಿ ಸರ್ವೋತ್ತಮ ಶಸ್ತ್ರ ಸಂಚಾಲಕರಾಗಿದ್ದುದರಿಂದ ಇದರಿಗೆ ಕ್ವೀನ್ ಟ್ರೋಫಿ ಕೂಡಾ ದೊರೆತಿತ್ತು.

ಸಪ್ಟಂಬರ ೧೯೪೮ರಲ್ಲಿ ಇವರು ಜಮ್ಮೂ ಮತ್ತು ಕಾಶ್ಮೀರದ ಸೇನೆಗಳಿಗೆ ಮುಖ್ಯ ಸೇನಾಪತಿಯಾಗಿ ನಿಯುಕ್ತರಾದರು ಯುದ್ಧವಿರಾಮವಾಗುವ ವರೆಗೂ ಅವರು ತಮ್ಮ ಈ ಪದವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಿದರು ೧೯೪೯ರಲ್ಲಿ ಜನರಲ್ ಕಾರ್ಯಪ್ಪನವರ ನಂತರ ಇವರು ಪಶ್ಚಿಮ ಸೇನಾ ವಿಭಾಗದ ಸೇನಾಪತಿಯಾದರು ೧೯೫೩ರಲ್ಲಿ ಜನರಲ್ ರಾಜೇಂದ್ರಸಿಂಹರ ಸ್ಥಾನದಲ್ಲಿ ದಕ್ಷಿಣ ವಿಭಾಗದ ಸೇನಾಪತಿಯಾದರು. ಎರಡು ವರ್ಷಗಳ ನಂತರ ಜ| ರಾಜೇಂದ್ರ ಸಿಂಹರು ಭೂ ಸೇನೆಯ ಮಹಾದಂಡನಾಯಕತನದಿಂದ ನಿವೃತ್ತರಾದ ಮೇಲೆ ಇವರು ಈ ಪದವಿಗೇರಿದರು ಎರಡು ವರ್ಷ ಈ ಹುದ್ದೆಯಲ್ಲಿದ್ದು ೧೯೫೭ರಲ್ಲಿ ನಿವೃತ್ತರಾದ ನಂತರ ಹೈದರಾಬಾದದ ಸಾಂಸನಿಕ ಸ್ಟಾಫ್ ಕಾಲೇಜಿನ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸುತ್ತಿದ್ದರು

ಶ್ರೀ ಶ್ರೀನಾಗೇಶರು—ಶಾಂತ ಪತ್ತು ವಿನಮ್ರ ಸ್ವಭಾವದವರು. ಚಿಂತನಶೀಲ ವ್ಯಕ್ತಿಗಳು ಕುದುರೆ ಸವಾರಿಯಲ್ಲಿ ಇವರಿಗೆ ಅತೀವ ಆಸಕ್ತಿ. ಇಂದಿಗೂ ಇವರು ಪ್ರತಿ ದಿನ ೧ ತಾಸು ಕುದುರ ಸವಾರಿ ಮಾಡುತಿದ್ದಾರೆ. ತನಗೆ ಸೈನಿಕನಾಗಬೇಕೆಂಬ ಇಚ್ಛೆಯಿದ್ದು ಅದು ಪೂರ್ಣವಾದುದಕ್ಕೆ ಅವರು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ ಆದರೆ, ಇವರು ಎಂದೂ ರಾಜ್ಯಪಾಲ ಪದವಿಯನ್ನು ಬಯಸಿರಲಿಲ್ಲ

ಭೂಸೇನಾಧಿಪತಿಯಾಗಿದ್ದಾಗ, ಇವರು ಸೇನೆ ಮತ್ತು ಜನತೆಯೊಡನೆ ಸೌಹಾರ್ದಪೂರ್ಣ ಸಂಬಂಧವನ್ನಿಟ್ಟುಕೊಂಡಿದ್ದರು, ರಾಜನೀತಿಯಿಂದ ದೂರವಿದ್ದು ದೇಶದ ಸುರಕ್ಷಣೆಯನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಿದ್ದರು ಭಾರತ ಸರಕಾರವು ಈ ಸುಯೋಗ್ಯ ಅಧಿಕಾರಿಯನ್ನು ದೇಶದ ಒಂದು ಗಡಿಪ್ರಾಂತ್ಯದ ಸೀಮಾ ರಕ್ಷಣೆಯ ಕಾರ್ಯದಲ್ಲಿ ತೊಡಗಿಸಿ, ಜನತೆಯಲ್ಲಿ ಭದ್ರತೆಯ ಮನೋಭಾವನೆಯನ್ನುಂಟು ಮಾಡಿರುವುದು ಸಂತೋಷಜನಕ ವಾರ್ತೆಯಾಗಿದೆ

— —

ಕ್ಷಯರೋಗದ ಕುರಿತು ನಿಮಗೇನು ತಿಳಿದಿದೆ?

ಈ ಪ್ರಶ್ನೋತ್ತರಗಳನ್ನು ಓದಿರಿ—

1	ಕ್ಷಯರೋಗದ ಕಾರಣಗಳೇನು?	1.	ಒಂದು ಕ್ರಿಮಿಯೇ ಕ್ಷಯರೋಗಕ್ಕೆ ಕಾರಣವಾಗಿದೆ.
2	ಕ್ಷಯರೋಗವು ಅಂಟಿಕೊಳ್ಳಲು ಸಾಧ್ಯವಿದೆಯೆ?	2	ಕ್ಷಯರೋಗವು ಅಂಟಿಕೊಳ್ಳುತ್ತದೆ
3	ಕ್ಷಯರೋಗವು ನಿಮ್ಮ ಹೆತ್ತವರಿಂದ ನಿಮಗೆ ವಂಶಪಾರಂಪರ್ಯವಾಗಿ ಬರುವುದೆ?	3.	ಕ್ಷಯರೋಗವು ನಿಮ್ಮ ಹೆತ್ತವರಿಂದ ನಿಮಗೆ ವಂಶಪಾರಂಪರ್ಯವಾಗಿ ಬರಲಾರದು
4	ಅಸೌಖ್ಯವೆಂದು ತಿಳಿಯದೆಯೇ ನಿಮಗೆ ಕ್ಷಯರೋಗ ತಗಲಬಹುದೇ?	4	ಅಸೌಖ್ಯವೆಂದು ತಿಳಿಯದೆಯೇ ನಿಮಗೆ ಕ್ಷಯರೋಗ ತಗಲುತ್ತದೆ.
5	ನಿಮಗೆ ಕ್ಷಯರೋಗ ತಗಲಿದೆಯೋ ಇಲ್ಲವೋ ಎಂಬುದನ್ನು ಡಾಕ್ಟರರು ಹೇಗೆ ಹೇಳುತ್ತಾರೆ?	5	ನಿಮಗೆ ಕ್ಷಯರೋಗ ತಗಲಿದ್ದರೆ ಎಕ್ಸರೇ ಮತ್ತು ಇತರ ಪರೀಕ್ಷೆಗಳಿಂದ ಡಾಕ್ಟರರು ಹೇಳುತ್ತಾರೆ,
6	ಕ್ಷಯರೋಗವನ್ನು ಗುಣಪಡಿಸಬಹುದೆ?	6	ಸಾಮಾನ್ಯವಾಗಿ, ಬೇಗನೆ ಕಂಡುಹಿಡಿಯಲ್ಪಟ್ಟರೆ ಮತ್ತು ಸರಿಯಾದ ಚಿಕಿತ್ಸೆ ನಡೆಸಿದರೆ ಕ್ಷಯರೋಗವನ್ನು ಗುಣಪಡಿಸಬಹುದು.
7	ರೋಗಿಗಳನ್ನು ಅವರವರ ಮನೆಗಳಲ್ಲಿಯೇ ಚಿಕಿತ್ಸೆಗೊಳಿಸಬಹುದೇ?	7.	ಹೌದು ಹಾಗೆ ಮಾಡಬಹುದು ಮತ್ತು ಹಾಗೆ ಮಾಡುತ್ತಲೇ ಇದೆ ಅದನ್ನು ಗೃಹಚಿಕಿತ್ಸೆ ಎನ್ನುತ್ತಾರೆ ಗೃಹಚಿಕಿತ್ಸೆಯು ಒಂದು ಕ್ಷಯ ಆಸ್ಪತ್ರೆಯ ಸಹಾಯದಿಂದ ನಡೆಸಲ್ಪಡಬೇಕು

ಹೆಚ್ಚಿನ ಸಲಹೆಗಾಗಿ ನಿಮ್ಮ ವೈದ್ಯರನ್ನು ವಿಚಾರಿಸಿರಿ

ಯೋಗ್ಯ ಸಲಹೆ ಪಡೆಯಲು ಒಂದು ಕ್ಷಯ ಆಸ್ಪತ್ರೆಯು ಅತ್ಯುತ್ತಮ ಸ್ಥಳವಾಗಿದೆ.



ಟಿ. ಬಿ. ಮುದ್ರೆಗಳನ್ನು ಕೊಂಡುಕೊಂಡು ಕ್ಷಯರೋಗ ನಿರೋಧ ಹೋರಾಟಕ್ಕೆ ಸಹಾಯಮಾಡಿರಿ.

ಒಂದು ಟಿ. ಬಿ. ಮುದ್ರೆಯ ಕ್ರಯ ಹತ್ತು ನಯೇಪೈಸೆ ಮಾತ್ರ

ಮುದ್ರೆಗಳು ದೊರೆಯುವ ಸ್ಥಳಗಳು:

1. ಗೌರವ ಕಾರ್ಯದರ್ಶಿ, ಮೊಹರು ಮಾರಾಟ ಸಮಿತಿ, ಗೋಪಾಲಕೃಷ್ಣ ದೇವಸ್ಥಾನ ರಸ್ತೆ, ಮಂಗಳೂರು
2. ಜಿಲ್ಲಾ ವೈದ್ಯಾಧಿಕಾರಿ, ಮಡಿಕೇರಿ, ಕೊಡಗು.
3. ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್ಡನ್ ಟಿ ಬಿ ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಬೆಂಗಳೂರು ನಗರ ಮತ್ತು ರಾಜ್ಯದಲ್ಲಿನ ಇತರ ಏಜನ್ಸಿಗಳು.

ಹತ್ತನೇ ಕ್ಷಯರೋಗ ಮೊಹರು ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ಪ್ರಾರಂಭಿಸಲ್ಪಟ್ಟದ್ದು)

Space kindly donated by

Messrs Forbes, Ewart & Figgis (Private) Limited, Cochin.

ಅಭಿಪ್ರಾಯ

ಶ್ರೀ ನಾಗೇಶರ ನೂತನ ಹುದ್ದೆಯಿಂದ ಭಾರತೀಯರಲ್ಲಿ ಸಮಾಧಾನ

ಸೀಮಾಪ್ರದೇಶದ ಆಕ್ರಮಣಗಳ ಗೊಂದಲದಲ್ಲಿ ಸದ್ಯದ ನೇಮಕವು ಮಹತ್ವಪೂರ್ಣವಾಗಿದೆ.

ಭಾರತದ ಈಶಾನ್ಯ ಗಡಿ ಪ್ರದೇಶದ ಆಸಾಮ ರಾಜ್ಯದ ರಾಜ್ಯಪಾಲ ಫಜಲ್ ಅಲಿಯವರ ನಿಧನದಿಂದ ತೆರವಾದ ಪದವಿಯು ಮೇಲೆ ಟಿಬೇಟದ ಮೇಲೆ ಮತ್ತು ಭಾರತದ ಉತ್ತರ ಸೀಮಾ ಪ್ರದೇಶದಲ್ಲಿ ಚೀನಾವು ಮಾಡಿದ ಅತಿಕ್ರಮಣವು ತುಂಬ ಪ್ರಭಾವ ಬೀರಿರುವದರಿಂದ ಇದನ್ನು ಯಾರಿಗೆ ಒಪ್ಪಿಸಲಾಗುವುದೆಂದು ಊಹಾಪೋಹ ನಡೆದಿದ್ದು. ಈ ಬಗ್ಗೆ ನಿವೃತ್ತ ಸೇನಾನಿ ಫೀ| ಜ| ಕಾರ್ಯಪ್ಪನವರ ಹೆಸರೂ ಕೇಳಿಬಂದಿತ್ತು. ಆದರೆ, ಈಗ, ಮಾಜಿ ಭೂಸೇನಾ ದಂಡನಾಯಕ ಶ್ರೀ ಎಸ್. ಎಂ. ನಾಗೇಶರ ನೇಮಕದಿಂದ ಈ ಊಹಾಪೋಹಗಳಿಗೆ ಪೂರ್ಣ ವಿರಾಮ ಬಿದ್ದಂತಾಯಿತು. ಜನಸಾಧಾರಣವಾಗಿ ರಾಜ್ಯಪಾಲ ಪದವಿಯೆಂದರೆ, ಶಾಸನಿಕ ಪಕ್ಷದ ವಯೋವೃದ್ಧ ನಾಯಕರಿಗೆ ನಿವೃತ್ತಿ ವೇತನವನ್ನಿತ್ತು ಅವರನ್ನು ರಾಜಕೀಯ ಜೀವನದಿಂದ ನಿವೃತ್ತರಾಗಿಸುವ ಸಾಧನಮಾತ್ರವೆಂದಿದ್ದ ಭಾವನೆಯು ಜ| ನಾಗೇಶರ ನೇಮಕದಿಂದ ದೂರವಾಗುವಂತಾಯ್ತು. ಇವರ ನೇಮಕದಿಂದ ರಾಜ್ಯಪಾಲ ಪದವಿಯ ಮಹತ್ವ ಹೆಚ್ಚಿದಂತಾಯಿತು. ಇದು ಕೇವಲ ಅಲಂಕಾರಪ್ರಾಯ ಪದವಿ ಮಾತ್ರವಲ್ಲ ಎಂದು ಬಹಿರಂಗವಾದಂತಾಯಿತು. ದೇಶದ ಸೀಮೆಯ ಮೇಲೆ ವಿದೇಶಗಳಿಂದ ಆಕ್ರಮಣ ನಡೆಯುವಾಗ, ಶ್ರೀ ಫಜಲ ಅಲಿಯವರ ನಿಧನವಾದಾಗ, ಸೀಮಾ ರಕ್ಷಣೆಗಾಗಿ ಸಾಮರಿಕ ದೃಷ್ಟಿಯಿಂದಲೂ ದೇಶದ ರಕ್ಷಣೆಗೋಸ್ಕರ ತನ್ನ ಮಂತ್ರಿಮಂಡಳಕ್ಕೆ ಅಭಿಪ್ರಾಯ ನೀಡಬಲ್ಲ ಓರ್ವ ಉಚ್ಚ ಅಧಿಕಾರಿಯ ಅವಶ್ಯಕತೆ ಕಂಡಬಂತು. ಪ್ರಾಯಶಃ ಕೇಂದ್ರ ಸರಕಾರವೂ ಈ ವಿಚಾರವನ್ನು ವಿಮರ್ಶಿಸಿಯೇ ಈ ಬಗ್ಗೆ ಜನರಲ್ ಕಾರ್ಯಪ್ಪನವರ ಹೆಸರನ್ನೂ ಎತ್ತಿಕೊಂಡಿತ್ತು; ಪ್ರಾಯಶಃ ಭಾರತದ ಈ ಪ್ರಥಮ ಮಹಾ ದಂಡನಾಯಕರು ತನ್ನ ಅಸಮರ್ಥತೆಯನ್ನು ಪ್ರಕಟಿಸಿದ್ದರಿಂದಲೇ ಶ್ರೀ ನಾಗೇಶರು ನಿಯುಕ್ತರಾಗಿರಬೇಕು.

ಕೆಲಸಮಯದ ವರೆಗೆ ನಾರ್ಥ ಸ್ಟೆಫೋರ್ಡ್ ಶಾಯರ್ ರೆಜಿಮೆಂಟಿನಲ್ಲಿ ಉಳಿದ ನಂತರ ಇವರು ಮದ್ರಾಸ್ ಸಪೋರ್ನಿಯರ್ಸ್ ಸೈನಿಕ ದಳದಲ್ಲಿ ನಿಯುಕ್ತರಾದರು. ಸೇನಾಧಿಕಾರಿಯ ಪ್ರೇರೇಪಣೆಯಿಂದ ಇವರು ಮಲಯಾ ಮತ್ತು ಬರ್ಮಾಗಳ ಯುದ್ಧಗಳಲ್ಲಿ ಭಾಗವಹಿಸಿದರು. ೧೯೩೯ರಲ್ಲಿ ಇವರು ಡೆಹರಾಡೂನಿನ ಭಾರತೀಯ ಸೈನಿಕ ಶಿಕ್ಷಣಾಲಯದ ಪ್ರಾಧ್ಯಾಪಕರಾಗಿದ್ದರು. ೧೯೪೫ರಲ್ಲಿ ಭಾರತೀಯ ಸೇನಾ ಪ್ರತಿನಿಧಿಮಂಡಳದ ಉಪ ನಾಯಕರಾಗಿ ಇವರು ಜರ್ಮನಿಗೆ ಹೋಗಿದ್ದರು.

ಲೆಫ್ಟಿನೆಂಟ್ ಜನರಲ್ ಶ್ರೀ ನಾಗೇಶರು ೩೪ ವರ್ಷಗಳ ಕಾಲಾವಧಿಯಲ್ಲಿ ಭಾರತೀಯ ಸೇನೆಯ ಬೇರೆಬೇರೆ ಹೊಣೆಗಾರಿಕೆಯ ಪದವಿಗಳಲ್ಲಿ ನಿಂತಿದ್ದರು. ೧೯೨೩ರಲ್ಲಿ ಇವರು "ಕಮೀಶಂಡ್" ಆದರು. ಹೈದರಾಬಾದದ ನಿಜಾಮರ ಖಾಸಗಿ ಚಿಕಿತ್ಸಕರಾಗಿದ್ದ ಶ್ರೀ ನಾಗೇಶ ಮಲ್ಲಣ್ಣರ ಜ್ಯೇಷ್ಠ ಪುತ್ರರಾಗಿ ೧೯೦೩ರಲ್ಲಿ ಕೊಲ್ಲಾಪುರದಲ್ಲಿ ಶ್ರೀ ಸತ್ಯವಂತ ಮಲ್ಲಣ್ಣ ನಾಗೇಶರ ಜನ್ಮವಾಯಿತು. ಇಂಗ್ಲೆಂಡಿನ ಪಬ್ಲಿಕ್ ಸ್ಕೂಲಿನಲ್ಲಿ ಶಿಕ್ಷಣವನ್ನು ಪಡೆದರು. ೧೯೨೧ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯವನ್ನು ಪ್ರವೇಶ ಮಾಡಿದರು. ಅದೇ ವರ್ಷ ಅವರು ಸ್ಯಾಂಡ್ ಹರ್ಸ್ಟ್ ಸೈನಿಕ ವಿದ್ಯಾಲಯದಲ್ಲಿ ಭರ್ತಿಯಾದರು. ಭಾರತೀಯ ವಿದ್ಯಾರ್ಥಿಗಳಲ್ಲಿ ಸರ್ವೋತ್ತಮ ಶಸ್ತ್ರ ಸಂಚಾಲಕರಾಗಿದ್ದದರಿಂದ ಇದರಿಗೆ ಕ್ವೀಟಾಕಪ್ ಕೂಡಾ ದೊರೆತಿತ್ತು.

ಸಪ್ಟಂಬರ ೧೯೪೮ರಲ್ಲಿ ಇವರು ಜಮ್ಮೂ ಮತ್ತು ಕಾಶ್ಮೀರದ ಸೇನೆಗಳಿಗೆ ಮುಖ್ಯ ಸೇನಾಪತಿಯಾಗಿ ನಿಯುಕ್ತರಾದರು. ಯುದ್ಧವಿರಾಮವಾಗುವ ವರೆಗೂ ಅವರು ತಮ್ಮ ಈ ಪದವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಿದರು. ೧೯೪೯ರಲ್ಲಿ ಜನರಲ್ ಕಾರ್ಯಪ್ಪನವರ ನಂತರ ಇವರು ಪಶ್ಚಿಮ ಸೇನಾ ವಿಭಾಗದ ಸೇನಾಪತಿಯಾದರು. ೧೯೫೩ರಲ್ಲಿ ಜನರಲ್ ರಾಜೇಂದ್ರಸಿಂಹರ ಸ್ಥಾನದಲ್ಲಿ ದಕ್ಷಿಣ ವಿಭಾಗದ ಸೇನಾಪತಿಯಾದರು. ಎರಡು ವರ್ಷ ೧೯೫೫ರ. ಜ| ರಾಜೇಂದ್ರಸಿಂಹರು ಭೂ ಸೇನೆಯ ಮುಖಂಡ ನಾಯಕತನದಿಂದ ನಿವೃತ್ತರಾದ ಮೇಲೆ. ಇವರು ಈ ಪದವಿಗೇರಿದರು ಎರಡು ವರ್ಷ ಈ ಹುದ್ದೆಯಲ್ಲಿದ್ದು ೧೯೫೭ ರಲ್ಲಿ ನಿವೃತ್ತರಾದ ನಂತರ ಹೈದರಾಬಾದದ ಶಾಸನಿಕ ಸ್ಟಾಫ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಿಸಲ್ಪಡುತ್ತಿದ್ದರು.

ಶ್ರೀ ಶ್ರೀನಾಗೇಶರು—ಶಾಂತ ಮತ್ತು ವಿನಮ್ರ ಸ್ವಭಾವದವರು. ಚಿಂತನಶೀಲ ವ್ಯಕ್ತಿಗಳು ಕುದುರೆ ಸವಾರಿಯಲ್ಲಿ ಇವರಿಗೆ ಅತೀವ ಆಸಕ್ತಿ. ಇಂದಿಗೂ ಇವರು ಪ್ರತಿ ದಿನ ೧ ತಾಸು ಕುದುರೆ ಸವಾರಿ ಮಾಡುತಿದ್ದಾರೆ. ತನಗೆ ಸೈನಿಕನಾಗಬೇಕೆಂಬ ಇಚ್ಛೆಯಿದ್ದು ಅದು ಪೂರ್ಣವಾದುದಕ್ಕೆ ಅವರು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಇವರು ಎಂದೂ ರಾಜ್ಯಪಾಲ ಪದವಿಯನ್ನು ಬಯಸಿರಲಾರರು.

ಭೂಸೇನಾಧಿಪತಿಯಾಗಿದ್ದಾಗ, ಇವರು ಸೇನೆ ಮತ್ತು ಜನತೆಯೊಡನೆ ಸೌಹಾರ್ದಪೂರ್ಣ ಸಂಬಂಧವನ್ನಿಟ್ಟುಕೊಂಡಿದ್ದು; ರಾಜನೀತಿಯಿಂದ ದೂರವಿದ್ದು ದೇಶದ ಸುರಕ್ಷಣೆಯನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಿದ್ದರು. ಭಾರತ ಸರಕಾರವು ಈ ಸುಯೋಗ್ಯ ಅಧಿಕಾರಿಯನ್ನು ದೇಶದ ಒಂದು ಗಡಿಪ್ರಾಂತ್ಯದ ಸೀಮಾ ರಕ್ಷಣೆಯ ಕಾರ್ಯದಲ್ಲಿ ತೊಡಗಿಸಿ, ಜನತೆಯಲ್ಲಿ ಭದ್ರತೆಯ ಮನೋಭಾವನೆಯನ್ನುಂಟು ಮಾಡಿರುವುದು ಸಂತೋಷಜನಕ ವಾರ್ತೆಯಾಗಿದೆ.

ಕ್ಷಯರೋಗದ ಕುರಿತು ನಿಮಗೇನು ತಿಳಿದಿದೆ?

ಈ ಪ್ರಶ್ನೋತ್ತರಗಳನ್ನು ಓದಿರಿ—

1. ಕ್ಷಯರೋಗದ ಕಾರಣಗಳೇನು?	1. ಒಂದು ಕ್ರಿಮಿಯೇ ಕ್ಷಯರೋಗಕ್ಕೆ ಕಾರಣವಾಗಿದೆ.
2. ಕ್ಷಯರೋಗವು ಅಂಟಿಕೊಳ್ಳಲು ಸಾಧ್ಯವಿದೆಯೆ?	2. ಕ್ಷಯರೋಗವು ಅಂಟಿಕೊಳ್ಳುತ್ತದೆ.
3. ಕ್ಷಯರೋಗವು ನಿಮ್ಮ ಹೆತ್ತವರಿಂದ ನಿಮಗೆ ವಂಶಪಾರಂಪರ್ಯವಾಗಿ ಬರುವುದೆ?	3. ಕ್ಷಯರೋಗವು ನಿಮ್ಮ ಹೆತ್ತವರಿಂದ ನಿಮಗೆ ವಂಶಪಾರಂಪರ್ಯವಾಗಿ ಬರಲಾರದು.
4. ಅಸೌಖ್ಯವೆಂದು ತಿಳಿಯದೆಯೇ ನಿಮಗೆ ಕ್ಷಯರೋಗ ತಗಲಬಹುದೇ?	4. ಅಸೌಖ್ಯವೆಂದು ತಿಳಿಯದೆಯೇ ನಿಮಗೆ ಕ್ಷಯರೋಗ ತಗಲುತ್ತದೆ.
5. ನಿಮಗೆ ಕ್ಷಯರೋಗ ತಗಲಿದೆಯೇ, ಇಲ್ಲವೇ ಎಂಬುದನ್ನು ಡಾಕ್ಟರರು ಹೇಗೆ ಹೇಳುತ್ತಾರೆ?	5. ನಿಮಗೆ ಕ್ಷಯರೋಗ ತಗಲಿದರೆ ಎಕ್ಸ್‌ರೇ ಮತ್ತು ಇತರ ಪರೀಕ್ಷೆಗಳಿಂದ ಡಾಕ್ಟರರು ಹೇಳುತ್ತಾರೆ.
6. ಕ್ಷಯರೋಗವನ್ನು ಗುಣಮಾಡಬಹುದೆ?	6. ಸಾಮಾನ್ಯವಾಗಿ, ಬೇಗನೆ ಕಂಡುಹಿಡಿಯಲ್ಪಟ್ಟರೆ ಮತ್ತು ಸರಿಯಾದ ಚಿಕಿತ್ಸೆ ನಡೆಸಿದರೆ ಕ್ಷಯರೋಗವನ್ನು ಗುಣಪಡಿಸಬಹುದು.
7. ರೋಗಿಗಳನ್ನು ಅವರವರ ಮನೆಗಳಲ್ಲಿಯೇ ಚಿಕಿತ್ಸೆಗೊಳಿಸಬಹುದೇ?	7. ಹೌದು. ಹಾಗೆ ಮಾಡಬಹುದು ಮತ್ತು ಹಾಗೆ ಮಾಡುತ್ತಲೇ ಇವೆ. ಇದನ್ನು ಗೃಹಚಿಕಿತ್ಸೆ ಎನ್ನುತ್ತಾರೆ. ಗೃಹಚಿಕಿತ್ಸೆಯು ಒಂದು ಕ್ಷಯ ಆಸ್ಪತ್ರೆಯ ಸಹಾಯದಿಂದ ನಡೆಸಲ್ಪಡಬೇಕು.

ಹೆಚ್ಚಿನ ಸಲಹೆಗಾಗಿ ನಿಮ್ಮ ವೈದ್ಯರನ್ನು ವಿಚಾರಿಸಿರಿ

ಯೋಗ್ಯ ಸಲಹೆ ಪಡೆಯಲು ಒಂದು ಕ್ಷಯ ಆಸ್ಪತ್ರೆಯು ಅತ್ಯುತ್ತಮ ಸ್ಥಳವಾಗಿದೆ.

ಟಿ. ಬಿ. ಮುದ್ರೆಗಳನ್ನು ಕೊಂಡುಕೊಂಡು ಕ್ಷಯರೋಗ ನಿರೋಧ ಹೋರಾಟಕ್ಕೆ ಸಹಾಯಮಾಡಿರಿ.

ಒಂದು ಟಿ. ಬಿ. ಮುದ್ರೆಯ ಕ್ರಯ ಹತ್ತು ನಯೇಪೈಸೆ ಮಾತ್ರ

ಮುದ್ರೆಗಳು ದೊರೆಯುವ ಸ್ಥಳಗಳು:

1. ಗೌರವ ಕಾರ್ಯದರ್ಶಿ, ಮೊಹರು ಮಾರಾಟ ಸಮಿತಿ, ಗೋಪಾಲಕೃಷ್ಣ ದೇವಸ್ಥಾನ ರಸ್ತೆ, ಮಂಗಳೂರು.
2. ಜಿಲ್ಲಾ ವೈದ್ಯಾಧಿಕಾರಿ, ಮಡಿಕೇರಿ, ಕೊಡಗು.
3. ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್ಡನ್ ಟಿ. ಬಿ. ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಬೆಂಗಳೂರು ನಗರ ಮತ್ತು ರಾಜ್ಯದಲ್ಲಿನ ಇತರ ಏಜನ್ಸಿಗಳು.

ಹತ್ತನೇ ಕ್ಷಯರೋಗ ಮೊಹರು ಮಾರಾಟ ಚಳವಳಿ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯಿಂದ ಪ್ರಾರಂಭಿಸಲ್ಪಟ್ಟದ್ದು.)

Space kindly donated by:

Messrs Forbes, Ewart & Figgis (Private) Limited, Cochin.

ದೇಶ ಪರಿಚಯ

ಸಹಕಾರದ ನೆಲೆವೀಡು—ಡೆನ್ಮಾರ್ಕ್

ಯುರೋಪಿನ ಕಿರಿಯ ದೇಶ ಡೆನ್ಮಾರ್ಕವು ಸಹಕಾರಿ ಪದ್ಧತಿಯಿಂದಲೇ ಸಂಪನ್ನರಾಷ್ಟ್ರವಾಗಿದೆ.

ಜಟ್‌ಲ್ಯಾಂಡಿನ ಉತ್ತರ ಭಾಗದಲ್ಲಿರುವ ಡೆನ್ಮಾರ್ಕ್ ಎಂಬ ರಾಜ್ಯವು ಉತ್ತಮ ತರದ ಕ್ರಮವಾದ ಸಾಗುವಳಿ ಮತ್ತು ಶಿಸ್ತಿನ ಕೃಷಿಕರ ಸಹಕಾರಿ ಸಂಘವಿದ್ದು ಯುರೋಪ್ಯ ಹಾಲಿನ ಭಂಡಾರವೆಂದೇ ಹೇಳಬಹುದು. ಈ ದೇಶದ ಮುಕ್ಕಾಲು ಪಾಲು ಭೂಮಿಯು ಆಧುನಿಕ ಕ್ರಮದ ಸಾಗುವಳಿ ಜಮೀನು.

ಸ್ವಲ್ಪ ಜಮೀನನ್ನು ಉತ್ಕೃಷ್ಟ ರೀತಿಯಿಂದ ಸಾಗುವಳಿ ಮಾಡಿ ಲಭಿಸಿದ ಉತ್ಪತ್ತಿಯನ್ನು ಸಹಕಾರಿ ಸಂಘಗಳಿಗೆ ಮಾರಾಟ ಮಾಡಿ ಮಿತವ್ಯಯದಿಂದ ಹೇಗೆ ಜೀವಿಸಬಹುದೆಂಬುದರ ಬಗ್ಗೆ ಲೋಕಕ್ಕೆ ಒಂದು ಮೇಲ್ಪಂಕ್ತಿ ಹಾಕಿಕೊಟ್ಟಿರುವರು. ಡೇನರ ಹಿಡುವಳಿಯು ಸಾಗುವಳಿಗೆ ಸಿದ್ಧವಾದ ಸುಮಾರು ನಲವತ್ತು ಎಕ್ರೆಗಳಷ್ಟು ಜಮೀನಾಗಿರುವದು. ತಮ್ಮ ಸೊತ್ತುಗಳನ್ನು ವಿಕ್ರಯಿಸುವರೆ ಲಂಡನ್ನಿನಲ್ಲಿ ಒಂದು ಮಾರುಕಟ್ಟೆಯನ್ನು ಸ್ಥಾಪಿಸಿ ವ್ಯಾಪಾರ ವೃದ್ಧಿ ಮಾಡಿರುವರು. ಅವರ ಮನೆ ಬಿಳಿ ಗಾರೆ ಹಾಕಿದ್ದು ಹಟ್ಟಿ ಕೊಟ್ಟಿಗೆ ಸಮೀಪವಿರುವುದು. ಇವುಗಳಿಗೆ ಹೆಂಚು ಅಥವಾ ಹುಲ್ಲು ಚಾವಣಿ ಮಾಡುವರು. ಈ ಕಟ್ಟಡಗಳು ಸಾಲಾಗಿಯೂ ಇರಬಹುದು ಇಲ್ಲವೇ ಮಧ್ಯ ಒಂದು ಅಂಗಳವಿದ್ದು ಕಟ್ಟಡಗಳನ್ನು ಸುತ್ತ ಕಟ್ಟಲೂಬಹುದು. ಆ ಊರಿನಲ್ಲಿ ಕೊಕ್ಕರೆ ಜಾತಿಯ ದೊಡ್ಡ ಪಕ್ಷಿಗಳು ಹೆಚ್ಚಾಗಿರುವವು. ಜನರು ಅವುಗಳಿರುವುದು ಶುಭಲಕ್ಷಣಗಳೆಂದು ಭಾವಿಸಿ ಅವುಗಳ ಆಶ್ರಯಕ್ಕಾಗಿ ಮನೆಯ ಮಾಡಿನಲ್ಲಿ ಅವುಗಳು ಗೂಡು ಕಟ್ಟಲೆಂದು ಮರದ ಚಾಕಟ್ಟು ಇಡುವರು. ಪೌರ್ವಾತ್ಯ ದೇಶಗಳಲ್ಲಿ ಗುಬ್ಬಿ ಮತ್ತು ಪಾರಿವಾಳಗಳಿಗೆ ಆಶ್ರಯ ಕೊಟ್ಟಂತೆ ಇವರು ಈ ಸ್ಟೋರ್ಕ್‌ಗಳಿಗೆ ಆಶ್ರಯಕೊಡುವರು.

ಡೆನ್ಮಾರ್ಕಿನಲ್ಲಿ ದನಗಳಿಗೆ ಮೇಯಲು ಪ್ರತಿಯೊಂದಕ್ಕೂ ಪ್ರತ್ಯೇಕ ಸ್ಥಳವಿದೆ. ಮಳೆ ಬಂದಾಗ ಅವುಗಳ ಮೊಣಕಾಲಿನ ವರೇಗೆ ಮುಚ್ಚುವಂಥ ಕೆನ್ವಾಸಿನ ದೊಡ್ಡ ಹಚ್ಚಡವು ರೈನ್ ಕೋಟಿನಂತೆ ಇರುವದು. ಅವುಗಳು ರಾತ್ರಿ ಸಮಯ ಸಿಮೆಂಟು ಹಾಕಿದ ಮತ್ತು ನಿತ್ಯದಲ್ಲೂ ತೊಳೆಯಲ್ಪಟ್ಟ ಬೆಚ್ಚಗಾದ ಕೊಟ್ಟಿಗೆಯಲ್ಲಿ ಮಲಗುವವು. ಪ್ರತಿ ಕೊಟಡಿಯ ಎದುರ್ಗಡೆಯಲ್ಲಿ ಆ ಕೊಟ್ಟಡಿಯಲ್ಲಿದ್ದ ಜಾನುವಾರು ಸಂಖ್ಯೆ ಎಷ್ಟೆಷ್ಟು ಹಾಲು ಕೊಡುವವು ಮತ್ತು ಸೇಕಡ ಎಷ್ಟೆಷ್ಟು ಬೆಣ್ಣೆ ಬರುವದು ಎಂಬುದೇ ಮೊದಲಾದವನ್ನು ತಿಳಿಯುವರೆ ಕಾರ್ಡ್ ಬೋರ್ಡ್ ತೂಗಾಡಿಸಿರುವರು. ಪ್ರತಿದಿನ ಬೆಳಿಗ್ಗೆ ಹಾಲುಗಾಡಿಗಳು ಬಂದು ಈ ಹಾಲನ್ನು ಒಟ್ಟುಮಾಡಿ ಕೆನೆ ತೆಗೆಯುವ ಕಾರ್ಖಾನೆಗೆ ಕೊಂಡುಹೋಗುವವು. ಈ ರೀತಿ ಹಾಲಿನ ಕೆನೆ ತೆಗೆಯುವ ೧೨೦೦ ಸಹಕಾರಿ ಸಂಘಗಳು ಅಲ್ಲಿವೆ. ಕೆನೆ ತೆಗೆದು ಬೆಣ್ಣೆಯನ್ನು ಪರದೇಶಗಳಿಗೆ ಕಳುಹಿಸಲು ಇಟ್ಟುಕೊಂಡು ಉಳಿದ ಕೆನೆ ಹಾಲು ಮತ್ತು ಮಜ್ಜಿಗೆಯನ್ನು ಮ್ಹಾಲೀಕರಿಗೆ ವಾಪಾಸು ಕೊಡುವರು. ಇದನ್ನವರು ಹಂದಿ ಸಾಕಣೆಯ ಬಗ್ಗೆ ಉಪಯೋಗಿಸುವರು.

ಈ ಹಂದಿಗಳನ್ನು ಇಲೆಕ್ಟ್ರಿಕ್ ದೀಪ ಇರುವ ಒಂದು ಕಟ್ಟಡದೊಳಗೆ ಕೂಡಿಸುವರು. ಇವುಗಳನ್ನು ಮಾಂಸ ಮಾರಾಟ ಮಾಡುವಲ್ಲಿ ಬೇಗಾಗಿ ವಿಕ್ರಯಿಸುವರು. ಮರಿಗಳನ್ನು ಹುಲ್ಲು ಇರುವ ಸ್ಥಳದಲ್ಲಿ ಬಾಲುಪಾಲಾಗಿ ಓಡಾಡಲು ಬಿಡುವರು. ಹುಲ್ಲುಗಾವಲಿನ ಮಧ್ಯಸ್ಥಳದಲ್ಲಿ ಕೋಳಿಮನೆಯನ್ನು ಕಟ್ಟುವರು. ಇಲ್ಲಿರುವ ಪ್ರತಿಯೊಂದು ಹೇಂಟೆಗೂ ಅದರ ಕಾಲು ಗಂಟಿನಲ್ಲಿ ಒಂದು ನಂಬರು ಇದೆ. ಅವುಗಳ ರಿಕಾರ್ಡ್ ಒಂದು ರಿಪೋರ್ಟ್ ಕಾರ್ಡಿನ ಮೇಲಿದೆ. ಡೆನ್ಮಾರ್ಕಿನಲ್ಲಿ ಮೊಟ್ಟೆ ತಜ್ಞರ ಸಮಿತಿಯೊಂದಿದೆ. ಈ ಸಮಿತಿಗೆ ೫೦೦ ಉಪಸಂಘಗಳಿವೆ. ಪ್ರತಿಯೊಂದು ಸಂಘಕ್ಕೂ ಮೊಟ್ಟೆಗಳನ್ನು ಪ್ಯಾಕ್ ಮಾಡುವ ಕಾರ್ಖಾನೆಯಿದೆ. ಪ್ರತಿ ಸಂಘದ ಮೊಟ್ಟೆಗಳಿಗೂ ಮೋಹರ್ ಮತ್ತು ನಂಬರುಯಿದೆ. ಒಂದು ವಾರಕ್ಕಿಂತ ಹೆಚ್ಚಿಗೆ ದಿನ ಕಳೆದ ಮೊಟ್ಟೆಗಳನ್ನು ಕೊಟ್ಟವರಿಗೆ ದಂಡ ಹೇರುವರು. ಈ ದೇಶದಿಂದ ವಾರಕ್ಕೆ ಹಲವು ಸಲ ಜಟ್‌ಲ್ಯಾಂಡಿನ ಪಶ್ಚಿಮ ಕರಾವಳಿಯ ಎಸ್ಬರ್ಗ್ ಬಂದರಿಂದ ಪರದೇಶಗಳಿಗೆ ಮೊಟ್ಟೆ, ಮಾಂಸ, ಬೆಣ್ಣೆ ವಗೈರೆಯನ್ನು ರಫ್ತುಮಾಡುವರು. ಲಂಡನ್ ಮತ್ತು ಡೆನ್ಮಾರ್ಕ್ ಮಧ್ಯೆ ಸಾಗಿಸುವ ದೋಣಿಗಳು ಜನರದ್ದೇ ಅಂದರೆ ಸಹಕಾರಿ ಸಂಘದ್ದೇ ಆಗಿರುವದು. ಇಂಥಾ ನೂರು ದೋಣಿಗಳು ತಿರುಗಾಡುವವು.

ಅಲ್ಲಿ ಬೆಳೆದ ಗೋದಿಯನ್ನು ಕುಟ್ಟಲು ಸಣ್ಣ ಮೆಶಿನ್ನುಗಳಿವೆ. ಅವುಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುಲಭವಾಗಿ ಒಯ್ಯಲಿಕ್ಕಾಗುವವು. ಡೆನ್ಮಾರ್ಕಿನಲ್ಲಿ ಯಾವ ಸೊತ್ತು ಉಪಯೋಗಕ್ಕೆ ಬಾರದೆ ಹಾಳಾಗುವದೆಂಬುದೆ ಇಲ್ಲ. ಜ್ವಾಲಾಮುಖಿಗಳಿಂದ ಹೊರಬಿದ್ದ ದೂಳು ನಾರ್ವೆ ಮತ್ತು ಸ್ವೀಡನ್ನು ಕಡೆಯಿಂದ ಆದಿಯುಗಗಳಲ್ಲಿ ದೋಚಿಬಂದವುಗಳನ್ನು ಒಟ್ಟುಮಾಡಿ ಬಹು ಅಂದವಾದ ಪಾತ್ರೆಗಳನ್ನು ತಯಾರಿಸುವರು. ಸರಕಾರದ ಕಾಡು ಇರುವದಾದರೂ ಅವರ ಉತ್ಪನ್ನದಿಂದಲೇ ಅದರ ಕರ್ಚನ್ನು ಭರ್ತಿಮಾಡಿಕೊಳ್ಳುವರು. ಖಾಸಗಿ ಸ್ಥಳದಲ್ಲಿರುವ ಮರವನ್ನು ಕಡಿಯಬೇಕಾದರೆ ಒಂದೊಂದಕ್ಕೆ ಒಂದು ಸಸಿ ಅಥವಾ ಗಿಡವನ್ನು ನೆಡಲೇಬೇಕೆಂಬ ಧರ್ಮನಿಯಮವನ್ನಿಟ್ಟುಕೊಂಡಿರುವರು. ಹಳ್ಳಿಯ ರಸ್ತೆಗಳಿಗೆ ಇಟ್ಟಿಗೆ ಹಾಸಿಟ್ಟಾರೆ. ಇದರ ಎರಡೂ ಕಡೆಗಳಲ್ಲಿ ಸೈಕಲ್ ದಾರಿಗಳಿವೆ. ಕಾಲುದಾರಿಯವರಿಗಾಗಿ ಸ್ಪ್ರಿಂಗ್ ಕಾಲ ದಾರಿ ಪ್ರತ್ಯೇಕಿಸಿಟ್ಟಿರುವರು ಮತ್ತು ಇಲೆಕ್ಟ್ರಿಕ್ ತಂತಿ ಬಗ್ಗೆ ಪ್ರತ್ಯೇಕ ಜಾಗವಿದೆ.

ಸುಮಾರು ೧೮೭೦ರವರೆಗೆ ಡೇನ್ ಒಕ್ಕಲಿಗನು ತನ್ನ ಸಾಗುವಳಿಯ ಜತೆಗೆ ಜಾನುವಾರು ಸಾಕಣೆಯನ್ನು ಜೊತೆ ಕಸಬಾಗಿ ಮಾಡುತ್ತಿದ್ದನು. ಆ ತರುವಾಯ ಡೈರಿಫಾರ್ಮ್ ಕ್ರಮವು ರೂಢಿಗೆ ಬರಲು ಜನರ ಮುಖ್ಯ ಉದ್ಯೋಗವೆ ಡೈರಿಫಾರ್ಮ್ ಆಗಿ ಪರಿಗಣಿಸಲ್ಪಟ್ಟಿತು. ಇತರ ಯಾವ ಸ್ವಾಭಾವಿಕ ಸಂಪತ್ತು ಇಲ್ಲದೆ ಬರೇ ಕಪ್ಪು ಮಣ್ಣು ಭೂಮಿಯೊಂದರಲ್ಲಿ ಸಾಕಷ್ಟು ಗೊಬ್ಬರಗಳನ್ನು ಹಾಕಿ ತೆಗೆಯುವ ಉತ್ಪನ್ನಕ್ಕಿಂತ ಮಾಂಸ, ಬೆಣ್ಣೆ ಮತ್ತು ಮೊಟ್ಟೆ ಮೊದಲಾದವುಗಳಿಂದ ಗಳಿಸುವ ಆದಾಯೋತ್ಪನ್ನವು ಹೆಚ್ಚೆಂದು ಅವರು ಮನಗಂಡರು. ಆದ್ದರಿಂದ ಅಲ್ಲಿಯ ಒಕ್ಕಲಿಗನು ಬೆಳೆಸುವ ಧಾನ್ಯವು ಅವನ ಜಾನುವಾರುಗಳಿಗೆ ಸಾಕಾಗದೆಂದು ಹೇಳಿದರೆ, ತಪ್ಪಾಗದು. ಅವನಿಗೆ ಬೇಕಾದ ಧಾನ್ಯಗಳೆಲ್ಲವೂ ಆತನ ಮೊಟ್ಟೆ, ಮಾಂಸ, ಬೆಣ್ಣೆ ಇನ್ನಿತರ ಉತ್ಪನ್ನಗಳ ಮಾರಾಟದಿಂದ ಪರದೇಶದಿಂದಲೇ ಆಮದು ಆಗಬೇಕೆಂಬುದು ಸ್ಪಷ್ಟ.

ತನ್ನ ಉತ್ಪತ್ತಿಯನ್ನು ನಷ್ಟವಾಗದ ರೀತಿಯಲ್ಲಿ ಮಾರಾಟಮಾಡಲೋಸುಗ ಪ್ರತಿಯೊಬ್ಬನು ಧಾನ್ಯದ ಸಹಕಾರಿ ಸಂಘದ ಸದಸ್ಯನಾಗುವನು. ಇಲ್ಲಿಯ ಪ್ರತಿಯೊಂದು ಉತ್ಪನ್ನಕ್ಕೂ ಒಂದೊಂದು ಸಂಘ ಬೇರೆ ಬೇರೆಯಿದೆ. ಮೊಟ್ಟೆ, ಮಾಂಸ, ಹಾಲು, ಬೆಣ್ಣೆ, ಚೀಸ್ ಮತ್ತು ಕ್ರೀಮು ಜೇನುತುಪ್ಪ, ಗೋದಿ ಇವುಗಳಿಗೆ ಪ್ರತ್ಯೇಕ ಸಂಘಗಳಿವೆ. ಕೇಂದ್ರ ಸಂಘವು ಇವುಗಳಿಗೆ ಮಾಹಿತಿ, ಅನುಭವ ಮಾತ್ರ ಕೊಡುವದೇ ಹೊರತು ಯಾವತರದ ಒತ್ತಾಯ ಮಾಡುವುದಿಲ್ಲ. ಇವುಗಳೆಲ್ಲವೂ ಖಾಸಗಿ ಸಂಸ್ಥೆಗಳಾದರೂ ಮಧ್ಯಸ್ಥರಿಲ್ಲ ಡಿವಿಡೆಂಡಾಗಿ ಇವರು ಮಾಡಿದ ವ್ಯಾಪಾರ ಮತ್ತು ಸಂಘದಲ್ಲಿ ದಾಸ್ತಾನಾಗಿಯಿಟ್ಟ ಸೊತ್ತುಗಳನ್ನು ಹೊಂದಿ ಅವರವರ ಹಿಸ್ಸೆಗೆ ಬರುವದನ್ನು ಹಂಚುವರು. ಪ್ರತಿಯೊಬ್ಬನಿಗೂ ಒಂದೇ ಮತವಿರುವದು. ಇವರ ಸಭೆಯು ಒಟ್ಟು ಕೂಡಿ ಮಾತನಾಡಿ ಎಲ್ಲರ ಒಳಿತೆ ಮಾಡಿಕೊಂಡು ವ್ಯಾಪಾರದ ಸ್ಥಿತಿಗತಿಯನ್ನು ಚರ್ಚಿಸುತ್ತದೆ ಮತ್ತು ಜವಾಬ್ದಾರಿಕೆಯನ್ನು ನಿರ್ಣಯಿಸುವದು ಈ ಸಹಕಾರಿ ಸಂಘಗಳು ನಿಪುಣರಿಂದ ನಡೆಸಲ್ಪಡುವದು. ಸೊತ್ತು ತರವಾರು ದರವಾರು ಪ್ರಕಾರ ಟ್ರೇಡ್ ಮಾರ್ಕ್ ಮಾಡುವರು. ಸದಸ್ಯರಿಗೆ ಪ್ರತಿ ತಿಂಗಳಲ್ಲಿಯೂ ಪಾವತಿ ಮಾಡುವರು. ಡೇನರ ಸಹಕಾರಿ ಸಂಘವೆಂಬುದು ಒಂದು ಮಾದರಿ ಉದ್ಯೋಗವು ಪ್ರತಿಯೊಂದು ಪಟ್ಟಣವೂ ಕೃಷಿಕರ ಸಹಕಾರಿ ವಹಿವಾಟಿನ ಕೇಂದ್ರವಾಗಿರುವದು.

ಸಹಕಾರಿ ಕ್ರೀಮರಿ ಸ್ಥಾಪನೆಯ ದೆಸೆಯಿಂದ ಡೆನ್ಮಾರ್ಕಿನಿಂದ ಪೇಶ್ಚರೈಜು ಆಗದ ಬೆಣ್ಣೆಯು ರಫ್ತು ಆಗದಂತಾಗಿಯದೆ. ಹಾಲನ್ನು ಕ್ರಿಮಿನಾಶವಾಗುವ ವರೆಗೆ ಇಲೆಕ್ಟ್ರಿಕ್ ಶಾಖದಿಂದ ಬಿಸಿ ಮಾಡುವುದಕ್ಕೆ ಪೆಶ್ಚರೈಜ್ ಎನ್ನುವುದಾಗಿದೆ. ಡೆನ್ಮಾರ್ಕಿನಿಂದ ರಫ್ತಾಗುವ ಮಾಂಸಕ್ಕೆ ಸರಕಾರದ ಮೊಹರು ಮುದ್ರೆಯಿಲ್ಲದೆ ಹೋಗಗೊಡುವುದಿಲ್ಲ ಮಾಂಸ ಮಾರಾಟ ಮಾಡುವ ಸ್ಥಳವು ಸರಕಾರದ ಅಧಿಕಾರದಲ್ಲಿದ್ದು ಅವರ ಕ್ರೀಮರಿಯಷ್ಟೇ ಚೊಕ್ಕಟವಾಗಿರುವದು. ಗೊಬ್ಬರ ಹುಲ್ಲು ಜಾನುವಾರುಗಳಿಗಾಗುವ ಇತರ ತಿನಸುಗಳು, ಬೀಜ ಮತ್ತು ಕೃಷಿಗೆ ಬೇಕಾದ ಸಲಕರಣೆಗಳು, ಕಲ್ಲಿದ್ದಲು, ಸಿಮೆಂಟು ಇವುಗಳೆಲ್ಲಾ ಸಹಕಾರಿ ಸಂಘದಿಂದ ನಗದು ಕ್ರಯಕ್ಕೆ ದೊರೆಯುವವು. ವಿಪರೀತ ಮಳೆ, ನೆರೆ, ಮತ್ತು ಮಳೆಬಾರದೆ ಅಥವಾ ಸುಂಟರ ಗಾಳಿಯಿಂದ ಕೃಷಿಕನಿಗೆ ಆಗುವ ನಷ್ಟದ ಬಗ್ಗೆ ಇನ್ಶ್ಯೂರು ಮಾಡುವ ಸಹಕಾರಿ ಸಂಘಗಳಿವೆ. ಕೃಷಿಕನಿಗೆ ತಾತ್ಕಾಲಿಕ ಸಾಲವದಗಿಸಿ ಉತ್ಪನ್ನಕ್ಕೆ ಸಹಾಯ ಮಾಡುವರು. ಕೃಷಿಕನ ಅಡಚಣೆ ತೀರಿಸುವ ಯೂನಿಯನ್ನುಗಳಲ್ಲದೆ ಸಹಕಾರಿ ಬ್ಯಾಂಕುಯಿರುವದು.

ಕೇಂದ್ರ ಇಲೆಕ್ಟ್ರಿಕ್ ಬೆಳಕಲ್ಲದೆ ಅಲ್ಲಿ ಹಳ್ಳಿಗಳಲ್ಲಿ ಸುಮಾರು ೨೫೦ ಸಹಕಾರಿ ಇಲೆಕ್ಟ್ರಿಕ್ ದೀಪದ ಸಂಘಗಳಿವೆ. ಇವೆ

(೮ನೇ ಪುಟ ನೋಡಿರಿ)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. No, 187/1959.

ಬಿ. ಕಿನ್ನಣ್ಣ ರೈ — ವಾದಿ.

ದುಗ್ಗಣ್ಣ ಗೌಡ, ಸೋಮಪ್ಪ ಗೌಡರ ಮಗ, ಪುತ್ತೂರು ತಾಲೂಕು ಪಳಮೊಗ್ರು ಗ್ರಾಮದ ಕಲ್ಲಡ್ಕ — ಪ್ರತಿವಾದಿ.

— ಪ್ರತಿವಾದಿಗೆ ತಿಳಿಸುವುದೇನೆಂದರೆ.

ಡಿ ಪ್ರೊ. ನೋಟು ಪ್ರಕಾರ ಬರಬೇಕಾದ ಹಣದ ವಸೂಲಿಗೆ ವಾದಿಯು ದಾಖಲು ಮಾಡಿದ ಈ ದಾವೆಯು ತಾ. 23-10-59 ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉಪಸರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು

B Chidananda Rao.
Vakil for Plaintiff.

ಪುತ್ತೂರು, ತಾ 26—9—59

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ್ ವಾಶಿಂಗ್‌ಟನ್

ಲೇಖಕ: ಜಿನೇ ಇಯೋಟೆನ್.

ಅನುವಾದಕರು:

ಯು. ಎಲ್. ಆಚಾರ್ಯ, ಎಮ್. ಎ ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ - ಜಾರ್ಜ್ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಹತ್ತು ಪಾಲು ಆತ್ಮಪ್ರೇರಣೆ ಮತ್ತು ಉಳಿದ ತೊಂಬತ್ತು ಪಾಲು ಪರಿಶ್ರಮ ಕೂಡಿಯೇ ಸಾಫಲ್ಯ ರೂಪಿಸಲ್ಪಡುತ್ತದೆ. ಆದುದರಿಂದ, ಸಾಫಲ್ಯದ ಮೂಲ ರಹಸ್ಯವನ್ನು ಪರಿಶ್ರಮಪಟುಗಳೇ ಬಲ್ಲರು.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೫-೧೦-'೫೯	೭

ವಿಕೇಂದ್ರೀಕರಣ ಪ್ರಶ್ನೆ

ಭಾರತದಂತಹ ಸುವಿಶಾಲವಾದ ಒಂದು ರಾಷ್ಟ್ರದ ಆಡಳಿತವೆಲ್ಲವೂ ಕೇಂದ್ರೀಕರಣ ನೀತಿಯನ್ನನುಸರಿಸಿ ಆಗಬೇಕೆಂದು ಹೇಳುವವರಿರಬಹುದು. ಆದರೆ ಶಾಸನವು ಸುಲಭವೂ ಸರಳವೂ ಆಗಿ ಮಾರ್ಪಟ್ಟು ಆಯಾ ವಿಭಾಗಗಳ ವೈಶಿಷ್ಟ್ಯಗಳನ್ನೂ ಉನ್ನತೀಕರಿಸುವ ಸಲುವಾಗಿಯೇ ಬ್ರಿಟಿಷರ ಶಾಸನಾವಧಿಯಲ್ಲಿಯೂ ಭಾರತವು ವಿವಿಧ ರಾಜ್ಯಗಳಾಗಿ ವಿಭಜಿತವಾಗಿದ್ದು, ಇದೇ ಮಾದರಿಯು ಇಂದಿಗೂ ಮುಂದುವರಿಯುತ್ತಿದೆ; ತುಸು ಪರಿವರ್ತನೆ ಮಾತ್ರ ನಡೆದಿರಬಹುದು. ಆದರೆ, ಈಗೀಗ ಸ್ವಾತಂತ್ರ್ಯದ ಸತ್ಫಲವನ್ನನುಭವಿಸಬೇಕಾದರೆ, ಅಧಿಕಾರವು ಈಗಿನಗಿಂತಲೂ ವಿಕೇಂದ್ರೀಕರಣವಾಗಬೇಕು ಎಂಬ ಮಾತು ಪ್ರಾಶಸ್ತ್ಯವನ್ನು ಪಡೆದಿರುವುದು ಮಾತ್ರವಲ್ಲ, ಈ ಬಗ್ಗೆ ಪ್ರಾಥಮಿಕ ಪ್ರಯತ್ನಗಳನ್ನೂ ನಡೆಸುವ ಚೇಷ್ಟೆಯು ದೃಗ್ಗೋಚರವಾಗುತ್ತಿದೆ. ಸಾಮಾನ್ಯವಾಗಿ ಒಂದು ಪ್ರದೇಶದ ಪರಿಸ್ಥಿತಿಯು ವಿಶಿಷ್ಟವಾಗಿರುವುದರಿಂದ, ಇಡಿ ರಾಜ್ಯಕ್ಕೆ ಇಲ್ಲವೇ ದೇಶಕ್ಕೆ ಸಂಬಂಧಪಟ್ಟ ಪ್ರಶಾಸನ ಸೂತ್ರವನ್ನು ಅನ್ವಯಿಸುವಾಗ ಅದು ಕೆಲವೆಡೆ ಅಸ್ವಾಭಾವಿಕವಾಗಿ ಕಂಡುಬರಬಹುದು. ಇದಕ್ಕಾಗಿಯೇ ಅಧಿಕಾರ ವಿಕೇಂದ್ರೀಕರಣದತ್ತ ಜನತೆಯು ಆಸಕ್ತಿ ಧಾವಿಸುತ್ತಿದೆ. ನಮ್ಮ ರಾಷ್ಟ್ರ ನೇತಾರರಾದರೂ ಗ್ರಾಮ ಸ್ವರಾಜ್ಯವನ್ನು ಕಟ್ಟುವ ಆಲೋಚನೆ ಮಾಡುತಿದ್ದಾರೆ. ರಾಷ್ಟ್ರಪಿತ ಮಹಾತ್ಮಾಗಾಂಧಿಯವರ ಕನಸಿನ ರಾಮರಾಜ್ಯದಲ್ಲಿಯೂ ಭೂದಾನ ಆಂದೋಲನದ ಪ್ರವರ್ತಕ ಆಚಾರ್ಯ ವಿನೋಬಾ ಭಾವೆಯವರ ಗ್ರಾಮ ಸ್ವರಾಜ್ಯದಲ್ಲಿಯೂ ಈ ಅಧಿಕಾರ ವಿಕೇಂದ್ರೀಕರಣದ ಪ್ರಶ್ನೆಗಳೇ ಮಹತ್ವದವಾಗಿವೆ.

ಸದ್ಯ, ನಮ್ಮ ದೇಶದ ಎಲ್ಲ ರಾಜ್ಯಗಳಲ್ಲಿಯೂ ನಗರ ಸಭೆ, ಜಿಲ್ಲಾ ಬೋರ್ಡು ಮತ್ತು ಪಂಚಾಯತ ಬೋರ್ಡುಗಳು ಕಾರ್ಯಮಗ್ನವಾಗಿವೆ. ಇವುಗಳೆಲ್ಲವುಗಳಿಗೂ ಅವುಗಳ ಸಂಸ್ಥಾಪನಾ ಮಸೂದೆಗೆ ವಿರೋಧವೆನಿಸದ ರೀತಿಯಲ್ಲಿ ತಮ್ಮ ತಮ್ಮ ಸೀಮೆಯೊಳಗಣ ನಗರ ಯಾ ನೇ ಊರುಗಳ ಅಭಿವೃದ್ಧಿಯನ್ನು ಸಾಧಿಸುವ ಅಧಿಕಾರವಿದೆ. ಅಂತೆಯೇ ಆರೋಗ್ಯ, ಶಿಕ್ಷಣ, ಸಂಪರ್ಕ ಮೊದಲಾದ ಆವಶ್ಯಕ ಕಾರ್ಯಕ್ರಮಗಳತ್ತ ತೀವ್ರಾಸಕ್ತಿ ತರುವ ಅವಕಾಶಗಳಿವೆ. ತಮ್ಮ ಅಧಿಕಾರಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡು, ನಾಗರಿಕರಿಗೆ ಸರ್ವ ಪ್ರಕಾರದ ಸೌಲಭ್ಯಗಳನ್ನೊದಗಿಸುವುದೂ ಈ ಸ್ಥಳೀಯ ಸಂಸ್ಥೆಗಳ ಕರ್ತವ್ಯವೆನ್ನಬೇಕು. ಆದರೆ, ಈಗ ಈ ಸ್ಥಾನಿಕ ಸಂಸ್ಥೆಗಳ ಅಧಿಕಾರ ಕಕ್ಷೆಯು ಸೀಮಿತವಿರುವುದಾಗಿಯೂ ತಮಗೆ ಈಗಿರುವುದಕ್ಕಿಂತ ಹೆಚ್ಚು ಅಧಿಕಾರಗಳನ್ನು ಬದಗಿಸಿಕೊಡಬೇಕೆಂದೂ ಈ ಸಂಸ್ಥೆಗಳು ಆಗಾಗ ಹೇಳುತ್ತಿರುತ್ತಿವೆ. ನಮ್ಮ ರಾಷ್ಟ್ರನಾಯಕರು ಗ್ರಾಮ ಪಂಚಾಯತುಗಳಿಗೆ ಅಧಿಕಾಧಿಕ ಜವಾಬುದಾರಿಯುತ ಕಾರ್ಯಗಳನ್ನು ಒಪ್ಪಿಸಲು ಸಿದ್ಧರಿರುವಾಗ; ಸ್ಥಳೀಯ ಸಂಸ್ಥೆಗಳಾದರೂ ಅಂತಹ ಹೊಣೆಗಾರಿಕೆಯನ್ನು ಹೊರಲು ಉತ್ಸಾಹವನ್ನೂ ಪ್ರದರ್ಶಿಸುವುದು ಆಶಾಜನಕವಾಗಿದೆ.

ಆದರೆ, ಸರಕಾರದವರು ಹೊಸ ಉತ್ತರದಾಯಿತ್ವದ ಕರ್ತವ್ಯಗಳನ್ನು ಈ ಸಂಸ್ಥೆಗಳಿಗೆ ಒಪ್ಪಿಸಿಕೊಡುವುದಕ್ಕೆ ಮೊದಲು; ತುಸು ದೀರ್ಘಾಲೋಚನೆ ಮಾಡಬೇಕಾಗಿದೆ. ಹೊಸ ಕೆಲಸಗಳನ್ನು ಮಾಡಲು ಹೇಳುವುದಕ್ಕೆ ಮೊದಲು, ಆತನಿಗೆ ಮಾಡಲು ಹೇಳಿದ ಕೆಲಸಗಳನ್ನು ಯಶಸ್ವಿಯಾಗಿ ಪೂರೈಸಿರುವನೇ ಎಂದು ಎಲ್ಲರೂ ಕಂಡುಕೊಳ್ಳುತ್ತಾರೆ. ಒಂದು ವೇಳೆ ಆತ ಈ ಮೊದಲೇ ತನ್ನ ಮೇಲೆ ಹೊತ್ತುಕೊಂಡ ಭಾರವನ್ನು ಹೊರಲು ಅಸಮರ್ಥನಾಗಿದ್ದರೆ, ಆಗ ಮತ್ತೂ ಮತ್ತೂ ಹೊರೆ ಹೊರಿಸಿದರೆ, "ಕೂಸಿನ ತಲೆಯೊಳ್ ಬೆಣ್ಣೆಯರೆಯ ನಿರಿಸಿದ ಪೋಲ್" ಆದೀತು. ಆದುದರಿಂದ ಈ ವಿಷಯದಲ್ಲಿ ನಿಜವಾಗಿಯೂ ದೀರ್ಘಾಲೋಚನೆಯು ಆವಶ್ಯಕತೆಯಿರುವುದು. ಸರ್ವ ಸಾಧಾರಣವಾಗಿ ಯಾವ ಸ್ಥಳೀಯ ಸಂಸ್ಥೆಯೇ ಆಗಲೀ ತನ್ನ ಸೀಮೆಯೊಳಗೆ ಬರುವ ಎಲ್ಲವನ್ನೂ ಸಂಪೂರ್ಣ ಯಶಸ್ವಿಯಾಗಿ ಪೂರೈಸಿವೆ ಎಂದು ಧೈರ್ಯದಿಂದ ಹೇಳುವುದು ಸಾಧ್ಯವಿಲ್ಲ. ಇದಕ್ಕೆ ಅವುಗಳ ಆರ್ಥಿಕ ದುಸ್ಥಿತಿಯೇ ಕಾರಣವೆಂದು ಹೇಳಬಹುದು. ಏನಿದ್ದರೂ, ಇಂತಹ ಸ್ಥಳೀಯ ಸಂಸ್ಥೆಗಳ ನೇತೃತ್ವದಲ್ಲಿಯೇ ಭಾವಿ ಸಹಕಾರಿ ವ್ಯವಸಾಯದ ಕ್ಷೇತ್ರಗಳನ್ನೂ ನಡೆಸಿಕೊಂಡು ಹೋಗುವುದೆಂದು ಸಾಮಾನ್ಯವಾಗಿ ಹೇಳಲಾಗುತ್ತಿದೆ. ಈಗಿರುವ ಕರ್ತವ್ಯಗಳಿಗೇನೇ ಚ್ಯುತಿ ತಂದುಕೊಳ್ಳುತ್ತಿರುವ ಈ ಸಂಸ್ಥೆಗಳಿಗೆ ಹೊಸ ಅಧಿಕಾರಗಳನ್ನು ಒಪ್ಪಿಸುವಾಗ ಎಷ್ಟು ಜಾಗ್ರತೆ ವಹಿಸಿದರೂ ಸಾಲದು. ಗ್ರಾಮ ಪಂಚಾಯತುಗಳ ಮತ್ತು ಇನ್ನಿತರ ಸ್ಥಳೀಯ ಸಂಸ್ಥೆಗಳ ಅಧಿಕಾರ ವಲಯವನ್ನು ವಿಸ್ತೃತಗೊಳಿಸುವುದು ಎಷ್ಟು ಉತ್ತಮ ಹಾಗೂ ಆದರ್ಶಯುತವಾಗಿರುವುದಾದರೂ, ಆಡಳಿತ ವಿಕೇಂದ್ರೀಕರಣವನ್ನು ಎಲ್ಲರೂ ಬೆಂಬಲಿಸುವುದು ಮತ್ತು ಪ್ರೋತ್ಸಾಹಿಸುವುದು ಅನಿವಾರ್ಯವಾದರೂ, ಇದರ ಪರಿಣಾಮವನ್ನು ಊಹಿಸುವಾಗ ಪ್ರಕೃತ ಈ ಪಥದಲ್ಲಿ ಅವಸರದ ಹೆಜ್ಜೆಯನ್ನಿಡಬಾರದೆಂದೇ ಹೇಳಬೇಕಾಗುತ್ತದೆ. ಗ್ರಾಮ ಸ್ವರಾಜ್ಯವು ನಮ್ಮ ಚರಮಧ್ಯೇಯವೆಂಬುದನ್ನೂ ಆದರಿಂದಲೇ ಬಾಪೂ ಕಂಡ ಕನಸಿನ ರಾಮರಾಜ್ಯವು ಸ್ಥಾಪಿತವಾಗುವುದೆಂಬುದನ್ನೂ ಮರೆಯದಿರುವುದಾದರೂ ನಮ್ಮ ಸ್ಥಾನಿಕ ಸಂಸ್ಥೆಗಳು ಈ ಗುರುತರ ಜವಾಬುದಾರಿಯನ್ನು ಹೊರುವಷ್ಟು ಶಕ್ತಿಶಾಲಿಯಾಗಿಲ್ಲವೆಂಬುದನ್ನು ಬಿಚ್ಚು ಮನಸ್ಸಿನಿಂದ ಒಪ್ಪಬೇಕು. ಹಾಗಿರುವಾಗ ವಿಕೇಂದ್ರೀಕರಣಕ್ಕಾಗಿ ವಿಕೇಂದ್ರೀಕರಣವನ್ನು ಮಾಡದೆ, ಅದರ ಸತ್ಫಲಗಳು ರಸಭರಿತವಾಗಬೇಕು, ನಾಗರಿಕರಿಗೆ ಅದರಿಂದ ಪರಮಾವಧಿ ಪ್ರಯೋಜನ ದೊರೆಯಬೇಕು; ಆಗ ಮಾತ್ರ ಗ್ರಾಮ ಸ್ವರಾಜ್ಯದ ಆದರ್ಶ ವಾಸ್ತವಿಕ ರೂಪಕ್ಕೆ ಬರಬಲ್ಲುದು. ಆದುದರಿಂದ ಮೊತ್ತಮೊದಲು ನಮ್ಮ ಈ ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಒಪ್ಪಿಸಲ್ಪಟ್ಟಿರುವ ಕರ್ತವ್ಯಗಳನ್ನು ಸಂಪೂರ್ಣವಾಗಿ ಪೂರೈಸುವಂತೆ ಆವಶ್ಯಕವಾದ ಆರ್ಥಿಕ ಸಹಾಯವನ್ನು ಕೊಟ್ಟು, ಇವುಗಳ ಯಶಸ್ವಿಯತೆಯ ಮಾನದಂಡದಿಂದ ಅವುಗಳ ಕಾರ್ಯಕ್ಷಮತೆಯನ್ನು ಅಳೆದು ಮುಂದೆ ಸಮಯ ಪರಿಪಕ್ವವಾದಾಗ ಮಾತ್ರ ಅವುಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಡಲು ಮುಂದೆ ಬರಬೇಕಷ್ಟೆ. ಈ ದಿಸೆಯಲ್ಲಿ ಅವಸರ ಮಾಡಿದರೆ, ಅದರಿಂದ ಸತ್ಫಲ ದೊರೆತೀತೆಂದು ಹೇಳುವುದು ಕಷ್ಟ.

ಕಾಸರಗೋಡು ಕನ್ನಡಿಗರು

ದಕ್ಷಿಣ ಕನ್ನಡ ಜಿಲ್ಲೆಯೊಡನೆ ಶತಮಾನಗಳಿಂದ ಸಂಬಂಧವಿಟ್ಟುಕೊಂಡಿದ್ದ ಕಾಸರಗೋಡು ತಾಲೂಕು ಕೇರಳ ರಾಜ್ಯದೊಡನೆ ವಿಲೀನಗೊಂಡುದು ಅನ್ಯಾಯವೆಂದು ಎಲ್ಲರೂ ಒಪ್ಪುತ್ತಾರೆ; ಈ ಅನ್ಯಾಯವನ್ನು ಸರಿಪಡಿಸಿ ಮೈಸೂರಿನೊಡನೆ ಸೇರಿಸುವ ಬಗ್ಗೆಯೂ ಆಸಕ್ತಿ ವಹಿಸುವುದರಲ್ಲಿ ಹಿಂದೆಮುಂದೆ ನೋಡುವುದಿಲ್ಲ. ಆದರೆ, ಕಾಸರಗೋಡಿನ ಕನ್ನಡಿಗರ ದುಃಖ ಮಾತ್ರ ದೂರವಾಗಲಿಲ್ಲ. ಕಳೆದ ಬಾರಿ ಸಾರ್ವತ್ರಿಕ ಚುನಾವಣೆಯ ವೇಳೆಯಲ್ಲಿ, ಎಲ್ಲ ರಾಜಕೀಯ ಪಕ್ಷಗಳ ನಾಯಕರೂ ಕಾಸರಗೋಡನ್ನು ಮೈಸೂರಿಗೆ ವರ್ಗಾಯಿಸಲು ಪ್ರಯತ್ನಿಸುವ ಭರವಸೆಯನ್ನಿತ್ತರು. ಅದು ಕಳೆದು ಎರಡೂ ಮುಕ್ಕಾಲು ವರ್ಷ ಕಳೆದರೂ ಇನ್ನೂ ಈ ಬಗ್ಗೆ ಯಾವ ಕಾರ್ಯಾಚರಣೆಯೂ ನಡೆದಿಲ್ಲ. ಕಳೆದವಾರ ನಡೆದ ಕಾಸರಗೋಡು ಕರ್ನಾಟಕ ವಿಲಯನ ಪರಿಷತ್ತಿನ ದ್ವಿತೀಯ ಸಮ್ಮೇಳನದಲ್ಲಿ ಎಂ ಪಿ. ಗಳಾದ ಶ್ರೀ ಕೆ. ಆರ್. ಅಚಾರ್ ಮತ್ತು ಬಿ. ಶಿವರಾಯರು ಅನ್ಯಾಯವಾಗಿ ಕೇರಳಕ್ಕೆ ಸೇರಿದ ಕಾಸರಗೋಡನ್ನು ಮೈಸೂರಿಗೆ ವಿಲಯನಗೊಳಿಸುವ ಆವಶ್ಯಕತೆಯನ್ನು ಪುನಃ ಪ್ರತಿಬಿಂಬಿಸಿದ್ದಾರೆ. ಇಡಿ ಕಾಸರಗೋಡು ತಾಲೂಕಲ್ಲವಾದರೂ ಚಂದ್ರಗಿರಿ ನದಿಯ ಉತ್ತರ ಭಾಗವಂತೂ ಮೈಸೂರಿಗೆ ಸೇರಬೇಕಾದುದು ನ್ಯಾಯ ಸಮ್ಮತವೆಂದು ನಾವು ಈ ಮೊದಲೇ ಪ್ರತಿಪಾದಿಸಿದ್ದೇವೆ. ಈಗಲೂ ಇದೇ ಮಾತನ್ನು ಪುನರುಚ್ಚರಿಸುವುದಲ್ಲದೇ ಕಾಸರಗೋಡಿನ ಕನ್ನಡಿಗರ ಸಂಕಷ್ಟವು ದೂರವಾಗುವಂತೆ ರಾಜಕಾರಣಿಗಳು ತೀವ್ರ ಪ್ರಯತ್ನ ಮುನ್ನಡೆಸಲೆಂದು ಬಯಸುತ್ತೇವೆ. ಬೊಂಬಾಯಿ ರಾಜ್ಯದ ವಿಭಜನೆ, ಬೊಂಬಾಯಿ-ಮೈಸೂರು ರಾಜ್ಯಗಳ ಸೀಮಾ ಪ್ರಶ್ನೆಗಳೊಂದಿಗೆ ಕೇರಳ—ಮೈಸೂರು ರಾಜ್ಯಗಳ ಸೀಮೆಯ ಪ್ರಶ್ನೆಯೂ ಪರಿಷ್ಕಾರ ಮುಂದೆ ಬಂದು ನ್ಯಾಯೋಚಿತವಾಗಿ ಪರ್ಯವಸಾನಗೊಳ್ಳುವಂತೆ ಪ್ರೇರೇಪಣೆಯೊಯ್ಯುವುದು ಕನ್ನಡಿಗರೆಲ್ಲರ ಕರ್ತವ್ಯವಾಗಿದೆ. ಸದ್ಯವೇ ಕಾಸರಗೋಡಿನಲ್ಲಿ ರಾಜ್ಯ ವಿಧಾನ ಸಭೆಗೆ ಚುನಾವಣೆಗಳು ನಡೆಯಲಿರುವುವು. ಈ ಸಂದರ್ಭದಲ್ಲಿ ಯಾವ ರಾಜಕೀಯ ಪಕ್ಷಗಳ ಬಣ್ಣದ ಮಾತಿಗೂ ಮರುಳಾಗದೆ, ಕನ್ನಡಿಗನೊಬ್ಬನನ್ನೇ ತನ್ನ ಪ್ರತಿನಿಧಿಯಾಗಿ ಆರಿಸಿಕೊಂಡು, ತಮಗೊದಗಿದ ಕುತ್ತದಿಂದ ಮುಕ್ತರಾಗಲು ಶಾಂತ ರೀತಿಯಿಂದ ಪ್ರಜಾಪ್ರಭುತ್ವ ವಿಧಾನಕ್ಕನುಗುಣವಾಗಿ ಕಾಯೋನ್ಮುಖರಾಗಿ ನಮ್ಮ ಸಹೋದರರು ಯಶಸ್ವಿಯಾಗಲೆಂದೂ ಭಾರತದ ಪಾರ್ಲಿಮೆಂಟು ಕಾಸರಗೋಡಿನ ಕನ್ನಡಿಗರ ದುರವಸ್ಥೆಯನ್ನೂ ಬವಣೆಗಳನ್ನೂ ಮನಗಂಡು ಅವರನ್ನು ಕೇರಳದಿಂದ ಅಗಲಿಸಿ ಮಾತೃ ಕರ್ನಾಟಕದೊಡನೆ ಸೇರಿಸುವುದು ಅವಶ್ಯವೆಂದು ಹೇಳುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಟಿಬೇಟ ಪ್ರಶ್ನೆಯ ಚರ್ಚೆ

ಸಂಯುಕ್ತ ರಾಷ್ಟ್ರಸಂಘವು ಟಿಬೇಟದ ಪ್ರಶ್ನೆಯನ್ನು ಚರ್ಚೆಗೆತ್ತಿಕೊಳ್ಳಬೇಕೆಂಬ ಶ್ರೀ ದಲಾಯಿ' ಲಾಮಾರ ಅಭಿಪ್ರಾಯವನ್ನು ಮಲಯಾ ಮತ್ತು ಸ್ವೀಡನ್ನಗಳು ಮುಂದೆ ತರುವುವೆಂದು ನಿಶ್ಚಿತವಾಗಿದೆ. ಇದಕ್ಕೆ ಮೊದಲೇ ಭಾರತವು ಈ ಪ್ರಶ್ನೆಯನ್ನು ಸಭೆಯಲ್ಲಿ ಮಂಡಿಸಲು ಒಪ್ಪಿರಲಿಲ್ಲ. ಏಕೆಂದರೆ, ಟಿಬೇಟದ ಪ್ರಶ್ನೆಯು ಕಮ್ಯುನಿಸ್ಟ ಚೀನಕ್ಕೆ ಸಂಬಂಧಿಸಿರುವುದರಿಂದ ಈ ಕಮ್ಯುನಿಸ್ಟ ಚೀನಕ್ಕೆ ಸಂಯುಕ್ತ ರಾಷ್ಟ್ರಸಂಘದಲ್ಲಿ ಪ್ರಾತಿನಿಧ್ಯವಿಲ್ಲದುದರಿಂದ ಸಂಯುಕ್ತ ರಾಷ್ಟ್ರ ಸಂಘದ ಯಾವುದೇ ಗೊತ್ತುವಳಿಯು ಚೀನದ ಮೇಲೆ ಪರಿಣಾಮಗೆಯ್ಯಲು ಅಸಾಧ್ಯವಾದುದಾಗಿದೆ. ಆದುದರಿಂದ ಈ ಪ್ರಶ್ನೆಯನ್ನು ಎಷ್ಟೇ ದೀರ್ಘವಾಗಿ ಚರ್ಚಿಸಿದರೂ ಯಾವುದೇ ನಿರ್ಧಾರವನ್ನು ಮಾಡಿದರೂ ಅದರಿಂದ ಪ್ರಚ್ಛನ್ನ ಯುದ್ಧಗಳು ಹೆಚ್ಚುವುವು. ಅಲ್ಲದೇ ಜಗತ್ತಿನ ಶಾಂತಿಸ್ಥಾಪನೆಯ ಮಾರ್ಗ ಮತ್ತಷ್ಟು ಕಂಟಕಾಕೀರ್ಣವಾಗುವುದು. ಇವೇ ಮಾತುಗಳನ್ನು ಶ್ರೀ ವಿ. ಕೆ. ಕೃಷ್ಣ ಮೆನನ್ನರು ತಮ್ಮ ಟೆಲಿವಿಜನ್ ಸಂದರ್ಶನದಲ್ಲಿ ಇನ್ನೊಮ್ಮೆ ಸ್ಪಷ್ಟಗೊಳಿಸಿದರು.

ಅನೈತಿಕ ವ್ಯವಹಾರ ನಿರೋಧ

ಚಂಡಿಗಡದಲ್ಲಿ ಸೇರಿದ್ದ ನೈತಿಕ-ಸಾಮಾಜಿಕ ಆರೋಗ್ಯ ಸಂಸ್ಥೆಯ ಏಳನೆಯ ಅಖಿಲ ಭಾರತ ಪರಿಷತ್ತು ಒಂದು ಗೊತ್ತುವಳಿಯನ್ನು ಸ್ವೀಕರಿಸಿ ವೇಶ್ಯಾವೃತ್ತಿಯ ಎಲ್ಲ ಪ್ರಕಾರಗಳೂ ಅಕ್ರಮವೆಂದು ಸಾರಲು ಬರುವಂತೆ ಸ್ತ್ರೀಯರ ಮತ್ತು ಬಾಲಿಕೆಯರ ಅನೈತಿಕ ವ್ಯವಹಾರ ತಡೆಗಟ್ಟುವ ಕಾಯದೆಯಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಲು ಸರಕಾರವನ್ನು ಕೇಳಿಕೊಂಡಿದೆ. ಮಹಿಳೆಯರ ಮತ್ತು ಮಕ್ಕಳ ರಕ್ಷಣಾಗೃಹಗಳ ಮೇಲ್ವಿಚಾರಣೆ ಮತ್ತು ತಪಾಸಣೆ ಸರಿಯಾಗಿ ನಡೆಯಲನುಕೂಲವಾಗುವಂತೆ, ಈ ಗೃಹಗಳವರಿಗೆ ಲೈಸನ್ಸ್ ಕೊಡುವ ಪದ್ಧತಿಯು ಬರಬೇಕು ಎಂದು ಪರಿಷತ್ತು ಶಿಫಾರಸು ಮಾಡಿದೆ. ವೇಶ್ಯಾವೃತ್ತಿಯಿಂದ ಬಿಡುಗಡೆ

ಹೊಂದಿದ ಮಹಿಳೆಯರಿಗೆ ವಸತಿಗೃಹ ಸೌಕರ್ಯ, ಗುಪ್ತರೋಗ ನಿಯಂತ್ರಣ, ಶಿಶು ರಕ್ಷಣಾಕಾರ್ಯ, ಬಾಲಕರಿಗೆ ಬಾಲ್ಯದಲ್ಲಿಯೇ ಲೈಂಗಿಕ ಶಿಕ್ಷಣ ಪ್ರದಾನ ಮೊದಲಾದ ಸಂಬಂಧದಲ್ಲಿಯೂ ಹಲವಾರು ಶಿಫಾರಸುಗಳನ್ನು ಪರಿಷತ್ತು ಮಾಡಿತ್ತು.

ವಸಾಹತು ವಾದಕ್ಕೆ ಬೆಂಬಲ

ಬ್ರಿಟನ್ನಿನ ಅಧಿಕಾರಿಪಕ್ಷ ಕನ್ಸರವೇಟಿವ್ ಅಥವಾ ಟೋರಿ ಪಕ್ಷವು ಮೊನ್ನೆ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಪ್ರಚಂಡ ಬಹುಮತವನ್ನು ಪಡೆದಿದೆ. ಕಾಮನ್ಸ ಸಭೆಯ ಬಲಾಬಲಗಳು ಈ ರೀತಿ ಇವೆ: ಕನ್ಸರವೇಟಿವ್—೩೬೫, ಲೇಬರ—೨೫೮ ಮತ್ತು ಲಿಬರಲ್—೬. ಕನ್ಸರವೇಟಿವ್ ಪಕ್ಷಕ್ಕೆ ೧೦೦ ಬಹುಮತವಿದ್ದು ಇದು ಹಿಂದಿನ ಬಾರಿಗಿಂತ ಸಾಮಾನ್ಯ ಇಮ್ಮಡಿಯಾಗಿರುತ್ತದೆ. ಬ್ರಿಟಿಷ ಸರಕಾರದ ವಸಾಹತು ವಾದವು ನಿಯಮಬದ್ಧ ಒಪ್ಪಿಗೆಯನ್ನು ಇದರಿಂದ ಅಲ್ಲಿನ ಜನರಿಂತ್ತ್ರಂತ್ರಾಯಿತು.

ಅಲ್ಲಲ್ಲಿಯ ಸುದ್ದಿ ಸಾರ

ಕುಂದಾಪುರ—ಬಂಟ್ವಾಡಿ ದಿ ನ್ಯೂ ಏಡೆಡ್ ಎಲಿಮೆಂಟರಿ ಶಾಲೆಯಲ್ಲಿ ಗಾಂಧಿ ಜಯಂತಿಯು ಶ್ರೀ ಜಿ. ನಾರಾಯಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಿ ಎಮ್. ನಾಯ್ಕ್ B. A, ಬೊಂಬಾಯಿ ಇವರು ದಾನವಾಗಿತ್ತ ಮಹಾತ್ಮಾಜಿಯವರ ಭಾವ ಚಿತ್ರ ಅಧ್ಯಕ್ಷರಿಂದ ಅನಾವರಣ ಮಾಡಿದ ನಂತರ ಶ್ರೀ ಜಿ. ರಾಜೀವ ಸೆಟ್ಟರ ಹಿತವಚನ, ಅಧ್ಯಕ್ಷರ ಭಾಷಣ ಮಕ್ಕಳ ಚಟುವಟಿಕೆಗಳಿಂದ ಬಹು ವಿಜೃಂಭಣೆಯಿಂದ ಮುಕ್ತಾಯವಾಯ್ತು.

ಕಿನ್ನಿಗೋಳಿ—ಗ್ರಾಮ ಸಹಾಯಕ ಶಿಕ್ಷಣ ಶಿಬಿರವು ತಾ. 25-9-59ರಿಂದ 27-9-59ರ ವರೆಗೆ ಸೈಂಟ್ ಮೇರಿ ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಜರಗಿತು. ಈ ಶಿಬಿರವನ್ನು ಮೂಲ್ಕಿ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಕೆ. ವಿಟ್ಠಲ ಶೆಣೈಯವರು ಉದ್ಘಾಟಿಸಿದರು. ಜಿಲ್ಲಾ ಪಂಚಾಯತ ಆಫೀಸರ್ ಶ್ರೀ ಕೆ. ಶೀನ ಸೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಶಿಬಿರದ ಸಮಾರೋಪ ಸಮಾರಂಭವು ಡಾ. ಯಸ್. ಚಂಪಾ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಐ. ವಿ. ಅಸ್ರಣ್ಣ ಬಿ. ರಮ್ಜಾನ್, ಯು. ಆನಂದ, ರಮೇಶ ಸೆಟ್ಟಿ, ಎಚ್ ಕೃಷ್ಣ ಆಳ್ವ, ಮೊದಲಾದವರು ಸಮಾರಂಭಗಲ್ಲಿ ಭಾಗವಹಿಸಿ ಭಾಷಣಗಳನ್ನಿತ್ತರು.

ಬೇಲಂಪಾಡಿ—ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ. 6ನೇ ರಾತ್ರಿ, ಶ್ರೀ ಕೃಷ್ಣ ಪೂಜೆಯಾಗಿ ಶ್ರೀರಾಮ ಪಟ್ಟಾಭಿಷೇಕ' ಎಂಬ ಪ್ರಸಂಗದ ಯಕ್ಷಗಾನ ಕೂಟವು ಜರಗಿತು. ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ಅಧ್ಯಕ್ಷತೆಯನ್ನು ವಹಿಸಿದ್ದರು ಕೂಟದಲ್ಲಿ ಶ್ರೀಗಳಾದ ಕೀ. ವ. ಕೇಶವ, ಕೆ. ಗುಡ್ಡಪ್ಪ ಗೌಡ ಮೇಶ ಧಾರಿ, ಡಿ. ಶಂಕರ್, ಕೆ. ವಿ. ನಾರಾಯಣ ರೈ, ಬಿ. ಎ. ಪಾಟಾಳಿ, ಡಿ. ಮಹಾಲಿಂಗ, ಬಾಬು ರೈ, ಯಂ. ಕೃಷ್ಣ ಭಟ್, ಎಂ ಎಸ್. ರೈ ಮತ್ತು ಪಿ. ರಾಮ—ಇವರು ಭಾಗ ವಹಿಸಿದ್ದರು. ವ್ಯವಸ್ಥಾಪಕ ಶ್ರೀ ನಾರಾಯಣ ರೈಗಳಿಂದ ಧನ್ಯವಾದ ಸಮರ್ಪಣೆಯಾಯಿತು.

ಸುರತ್ಕಲ್—ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನಲ್ಲಿ ದಿನಾಂಕ 9ರಂದು ನಾಡಹಬ್ಬವು ಲೋಕ ಸಭಾ ಸದಸ್ಯರಾದ ಶ್ರೀ ಕೆ. ಆರ್. ಆಚಾರ್, ಎಂ.ಎ.ಯಲ್.ಯಲ್.ಬಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸೇಡಿಯಾಪು ಸೀತಾರಾಮಾಚಾರ್ಯರು "ಹಬ್ಬಗಳ ಆಧ್ಯಾತ್ಮಿಕ ಶ್ರೇಷ್ಠತೆ"ಯ ಕುರಿತು ಭಾಷಣವನ್ನಿತ್ತರು. ಸಭಾಧ್ಯಕ್ಷರು ನಾಡಹಬ್ಬವು ರಾಷ್ಟ್ರೀಯ ಉತ್ಸವವಾಗಿ ರಾಷ್ಟ್ರದ ಏಕತಾಭಾವನೆಗೆ ಹೇಗೆ ದೊಡ್ಡ ಸಾಧನವಾಗಿದೆ ಎಂಬುದನ್ನು ವಿವರಿಸಿದರು. ಇ. ವಿ ಹಾಯರ್ ಎಲಿಮೆಂಟರೀ ಶಾಲಾ ಮಕ್ಕಳ ವಿವಿಧ ವಿನೋದಾವಳಿ, ಶ್ರೀ ಶಾರದಾ ಪೂಜೆ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳ ಯಕ್ಷಗಾನ—ಇವುಗಳಿಂದ ಸಮಾರಂಭವು ಕೊನೆಗೊಂಡಿತು.

ಅಂದು ಬೆಳಗ್ಗೆ ಮತ್ತು ಅಪರಾಹ್ನ ಕ್ರಿಕೆಟ್ ಮತ್ತು ವಾಲಿಬಾಲ್ ಪಂದ್ಯಾಟಗಳು ನಡೆದು ಮೊದಲನೆಯದರಲ್ಲಿ ಶಾಲಾ ಹಳೇ ವಿದ್ಯಾರ್ಥಿ ಪಂಗಡವೂ, ಎರಡನೆಯದರಲ್ಲಿ ಹೈಸ್ಕೂಲ್ ಪಂಗಡವೂ ಜಯಗಳಿಸಿದುವು. ಬೆಳಗ್ಗೆ ಭಜನೆಯೊಂದಿಗೆ ಶ್ರೀ ಶಾರದಾ ಪೂಜೆಯೂ ಅತಿ ವಿಜೃಂಭಣೆಯಿಂದ ನೆರವೇರಿತು.

ಕುತ್ಯಾರು—ವಿದ್ಯಾದಾಯಿನಿ ಶಾಲೆಯಲ್ಲಿ ಗಾಂಧಿಜಯಂತಿಯು ಶ್ರೀ ದೇಜು ಅರಸರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ, ಮೆರವಣಿಗೆ ಭಾಷಣಾದಿ ಕಾರ್ಯಕ್ರಮಗಳಿಂದ ನೆರವೇರಿತು.

ಉಡುಪಿಯ ಯಕ್ಷಗಾನ ಕಲಾ ಮಂಡಳಿಯಲ್ಲಿ—ನವರಾತ್ರಿಯ ಉತ್ಸವದ ಅಂಗವಾಗಿ ತಾ. 8ರಿಂದ ತಾ. 10ರ ವರೆಗೆ ಶ್ರೀ ಪಾ. ಲಾ. ನಾ. ಉಪಾಧ್ಯಾಯರಿಂದ ಭಾರತವಾಚನವಾಗಿ ಶಾರದಾ ಪೂಜೆ ನಡೆಯಿತು. ಶ್ರೀ ಕೆ. ನಾರಾಯಣ ಶೆಟ್ಟರ ಹಾಡುಗಾರಿಕೆ, ಕೆ. ಜನಾರ್ಧನ ಆಚಾರ್ಯರ ಮೃದಂಗವಾದನದೊಂದಿಗೆ ಪಂದುಬೆಟ್ಟು ಶೀನ ಸೆಟ್ಟಿ, ಜಿ. ಗೋಪಾಲ ಸೆಟ್ಟಿ, ಜಿ. ಎಲ್. ಪ್ರಭು, ವೆಂಕಪ್ಪ ಸೆಟ್ಟಿ, ಮೊದಲಾದ ಕಲಾವಿದರ ಕೂಡುವಿಕೆಯಿಂದ ಸುಧನ್ವ ಮುಕ್ತಿ ಎಂಬ ಯಕ್ಷಗಾನ ಕಥಾ ಕಾಲಕ್ಷೇಪವೂ ನಡೆಯಿತು.

ದ. ಕ. ಜಿಲ್ಲಾ ಸಹಕಾರಿ ಪರಿಷತ್ತು—ಪುತ್ತೂರಲ್ಲಿ ಇದೇ ತಾ 31ನೆ ಶನಿವಾರ ಪುತ್ತೂರು ಕೋ-ಓಪರೆಟಿವ್ ಟೌನ್ ಬೇಂಕಿನ ಜುಬಿಲಿ ಹೋಲಿನಲ್ಲಿ ಜರಗಲಿರುವುದು. ಪರಿಷತ್ತನ್ನು ಮೈಸೂರಿನ ಸಹಕಾರ ಮಂತ್ರಿ ಶ್ರೀ ಮೂಲಿ ಮರಿಯಪ್ಪನವರು ಉದ್ಘಾಟಿಸುವರು. ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಶ್ರೀ ಟಿ. ವಿ. ರೆಡ್ಡಿಯವರು ಅಧ್ಯಕ್ಷತೆ ವಹಿಸುವರು.

ಉಡುಪಿ ಶ್ರೀ ಕೃಷ್ಣ ಮಠದಲ್ಲಿ ನವರಾತ್ರಿ ಮಹೋತ್ಸವವು—ಪರ್ಯಾಯ ಶ್ರೀ ಕೃಷ್ಣಾಪುರ ಸ್ವಾಮಿಯವರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು. ಪ್ರತಿದಿನ ರಾತ್ರಿ ವಸಂತ ಮಹಲಿನಲ್ಲಿ ನಾಟಕಾದಿ ಮನರಂಜನೆಯ ಕಾರ್ಯಕ್ರಮಗಳನ್ನೂ ಏರ್ಪಡಿಸಲಾಗಿತ್ತು.

ಸುರತ್ಕಲ್—ಅಗ್ಗಿದಕಳಿ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವೂ ದಸರಾ ಹಬ್ಬವೂ ತಾ. 9ರಂದು ಡಾ| ಸಂಜೀವನಾಥರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಬಾಲಚಂದ್ರ ಅವರು ಕೊಟ್ಟ ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಶ್ರೀ ಮಹಾಬಲ ಶೆಟ್ಟರು ಅನಾವರಣಗೈದರು. ಅಧ್ಯಕ್ಷರು ಉದಯ ಹಸ್ತ ಪತ್ರಿಕೆಯನ್ನು ಉದ್ಘಾಟಿಸಿ ಬಹುಮಾನ ಹಂಚಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದ ಮೇಲೆ ಮಕ್ಕಳಿಂದ ವಿವಿಧ ವಿನೋದಾವಳಿ ಜರಗಿತು.

ಇಲ್ಲಿಯ ಮುಕ್ಕ ಮಿತ್ರ ಪಟ್ಟಣ ಸೊಗವೀರ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ತಾ. 9ರಂದು ವಿವಿಧ ಕಾರ್ಯಕ್ರಮಗಳಿಂದ ದಸರಾ ಹಬ್ಬ ನೆರವೇರಿತು.

ದ. ಕ. ಜಿಲ್ಲಾ ಕಾಂಗ್ರೆಸ್ ಸಮ್ಮೇಳನ ತಾ 25-10-59ಕ್ಕೆ ಮುಂದು ವರಿದಿದೆ—ಇದೇ ತಾ. 17 ಮತ್ತು 18ರಲ್ಲು ಉಜಿರೆಯಲ್ಲಿ ಜರಗಲಿದ್ದ ದ. ಕ. ಜಿಲ್ಲಾ ಕಾಂಗ್ರೆಸ್ ಮಂಡಲಗಳ ಸಮ್ಮೇಳನವು ಮುಂದುವರಿಸಲ್ಪಟ್ಟು ತಾ 25—10—59ನೇ ಆದಿತ್ಯವಾರ ನಡೆಯಲಿರುವುದು. ಆದಿತ್ಯವಾರ ಬೆಳಗ್ಗೆ ಘಂಟೆ 8 30ಕ್ಕೆ ಧ್ವಜವಂದನೆ, 10 30ಕ್ಕೆ ಮೈಸೂರಿನ ಮುಖ್ಯಮಂತ್ರಿಯಿಂದ ಸಮ್ಮೇಳನದ ಉದ್ಘಾಟನೆ ಮತ್ತು ವಿಷಯ ನಿಯಾಮಕ ಸಮಿತಿಯ ಸಭೆ ಜರಗಲಿರುವುದು. ಮಧ್ಯಾಹ್ನ ಘಂಟೆ 3ರಿಂದ ನಿರ್ಣಯಗಳ ಚರ್ಚೆ ನಡೆಯುವುದು. ಶ್ರೀ ಕೆ. ಹನುಮಂತಯ್ಯನವರನ್ನು ಅಧ್ಯಕ್ಷತೆವಹಿಸಲು ಕೇಳಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಶ್ರೀ ಕೆ ಕೆ. ಶೆಟ್ಟರು ತಿಳಿಸುತ್ತಾರೆ.

ದಸರಾ ಸಾಹಿತ್ಯ ಗೋಷ್ಠಿ—ಅಂಬಲಪಾಡಿ ಗೀತಾಭವನದಲ್ಲಿ ದಸರಾ ಸಾಹಿತ್ಯ ಗೋಷ್ಠಿಯು ಶ್ರೀ ಎ. ಸೀತಾರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ತಾ ೧೧ ರಂದು ಜರಗಿತು. ಎಂ. ಜಿ. ಎಂ. ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀಪತಿ ಆಚಾರ್ಯರು 'ಆಧುನಿಕ ಕನ್ನಡ ಸಾಹಿತ್ಯ' ಎಂಬ ವಿಷಯದ ಕುರಿತು ಮಾತನಾಡಿ, ಕನ್ನಡ ಸಾಹಿತ್ಯವು ಆರಂಭದಿಂದಲೂ ಆಧುನಿಕತೆಯಿಂದಲೇ ಕೂಡಿದೆ ಎಂದು ಹೇಳಿದರು. ೨೦ನೆಯ ಶತಮಾನದ ಕನ್ನಡ ಸಾಹಿತ್ಯವನ್ನು ಮಥನಮಾಡುತ್ತಾ, ಇಲ್ಲಿ ಸಮಾಜದ ನಗ್ನದರ್ಶನ ದತ್ತ ವಿಶೇಷ ಗಮನ ಹರಿಯುತ್ತಿದೆ ಎಂದೂ ಆದರೆ, ಇಂತಹ ಕೃತಿಗಳಿಂದ ಸಮಾಜಕ್ಕೆ ಯಾವ ಆದರ್ಶವೂ ದೊರೆತಂತಾಗುವುದಿಲ್ಲವೆಂದೂ ಅಭಿಪ್ರಾಯಿಸಿದರು. ಇಂದು ಕನ್ನಡದ ಬರೆಹಗಾರರು ಸಾಹಿತ್ಯದ ಎಲ್ಲ ಕ್ಷೇತ್ರಗಳಲ್ಲೂ ಆದರ್ಶ ಮತ್ತು ಉತ್ಸಾಹಪೂರ್ಣ ಕೃತಿಗಳು ಬೇಕೆಂದು ಹೇಳಿದರು. ತದನಂತರ ಸಂಸ್ಕೃತ ಕಾಲೇಜಿನ ಸಾಹಿತ್ಯ ಪ್ರಾಧ್ಯಾಪಕರಾದ ಶ್ರೀ ಎಂ ರಾಜಗೋಪಾಲಾಚಾರ್ಯರು ಕುಮಾರ ವ್ಯಾಸಭಾರತ ಗೀತಗೋವಿಂದ ಮತ್ತು ಬೇಂದ್ರೆಯವರ ಕೃತಿಗಳಿಂದ ಕೆಲವೊಂದು ಭಾಗಗಳನ್ನು ಸುಶ್ರಾವ್ಯವಾಗಿವಾಚಿಸಿದರು. ಅಧ್ಯಕ್ಷರು ಮಾತನಾಡುತ್ತ, ಸಾಹಿತ್ಯದ ಅಭ್ಯುತ್ಥಾನವು ಆಗ ಬೇಕೆಂದೂ ಕಲಿಯುಗದಲ್ಲಿ ಯಾಂತ್ರಿಕ ಶಕ್ತಿಯ ಪ್ರಭಾವದಿಂದ ಜನಜೀವನ ಹಾಗೂ ಅವರ ನಡೆನುಡಿಗಳು ಶಿಥಿಲವಾಗುತ್ತ ನಡೆದಿವೆಯೆಂದೂ ಹೇಳಿ, ಸಂಸ್ಕೃತಿ ಪ್ರಚಾರಕಾರ್ಯದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಗೀತಾ ಭವನದ ಕಾರ್ಯಕ್ರಮಗಳಿಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಭವನದ ಉಪಾಧ್ಯಕ್ಷ ಶ್ರೀ ಕೆ. ಎಲ್. ಎನ್. ಉಪಾಧ್ಯಾಯರು ಸಮಾರೋಪ ಭಾಷಣವನ್ನು ಮಾಡಿ ಧನ್ಯವಾದಗಳನ್ನಿತ್ತರು.

ಶಾರದಾ ಪೂಜೆ—ಶ್ರೀ ಬ್ರಹ್ಮ ಬೈದ್ಯರ್ಕಳ ಗಣಪತಿ ಯಕ್ಷಗಾನ ಸಂಘದಲ್ಲಿ ದಸರಾದ ನಿಮಿತ್ತ ಶಾರದಾ ಪೂಜೆಯು ತಾ. 11ರಂದು ಶ್ರೀ ಕುಮಾರ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಅಧ್ಯಕ್ಷ ಶ್ರೀ ಸಂಜೀವ ಕೋಟ್ಯಾನರು ನವರಾತ್ರಿಯ ಅಂಗವಾಗಿ ಸಂಘದಿಂದ ನಡೆದ ಯಕ್ಷಗಾನ ಕಲಾಕ್ಷೇಪದಲ್ಲಿ ಭಾಗವಹಿಸಿದ ಕಲಾವಿದರ ಉದಾರ ಸಹಕಾರವನ್ನು ಪ್ರಶಂಸಿಸಿ ಅಧ್ಯಕ್ಷರ ಹಸ್ತದಿಂದ ಬಹುಮಾನ ಕೊಡಿಸಿದರು. ಸಭಿಕರ ಪರವಾಗಿ ಶ್ರೀಗಳಾದ ಜಿ. ರಾಮಕೃಷ್ಣ ರಾವ್, ಸಂಜೀವ ಮೆಂಡನ್ ಮತ್ತು ಮಾಧವ ಸುವರ್ಣರು ಸಮಯೋಚಿತವಾಗಿ ಮಾತನಾಡಿದ ತರುವಾಯ ಅಧ್ಯಕ್ಷರು ಯಕ್ಷಗಾನ ಕಲಾಭಿಮಾನಿಗಳ ಉತ್ಸಾಹವನ್ನು ಪ್ರಶಂಸಿಸಿದರು "ಕೃಷ್ಣ ಸಂಧಾನ, ತಾಳಮದ್ದಳೆಯು ಬಳಿಕ ಜರಗಿ ಶಾರದಾ ಪೂಜೆ, ಪ್ರಸಾದವಿತರಣೆಗಳಾದ ತರುವಾಯ ಸಂಘದ ಉಪಾಧ್ಯಕ್ಷ ಶ್ರೀ ಎ. ಮಾಧವ ಶೆಟ್ಟಿಯವರು ಧನ್ಯವಾದವಿತ್ತರು.

ಮದ್ಯಪಾನ ನಿಷೇಧ ಸಪ್ತಾಹವು ತಾ. 2ರಿಂದ 8ರ ತನಕ ಜರಗಿತು. ಮುಕ್ತಾಯ ಸಮಾರಂಭವು ಉಡುಪಿ ವಿಕ್ಟೋರಿಯಾ ಜ್ಯುಬಿಲಿ ಕಟ್ಟಡದಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ನೆರವೇರಿ ಡಾ| ವಿ ಎಲ್. ಪಂಡಿತರಿಂದ ಸ್ವಾಗತ ಭಾಷಣವಾಯ್ತು. ಪಾನನಿರೋಧದ ಕುರಿತು ಭಾಷಣವಾದ ಮೇಲೆ ವಿನೋದ ಪ್ರದರ್ಶನಗಳಾದುವು ತಹಶೀಲ್ದಾರ್ ಕೆ. ಕೊರಗಪ್ಪನವರು ಕೃತಜ್ಞತೆಯನ್ನರ್ಪಿಸಿದ್ದರು.

ಮೂಡಬಿದಿರೆಯಲ್ಲಿ ದಸರಾ ಸಾಹಿತ್ಯ ಮತ್ತು ಸಾಂಸ್ಕೃತಿಕೋತ್ಸವವು—ಶ್ರೀ ಸರಸ್ವತೀ ಸೇವಾ ಸಂಘದ ಆಶ್ರಯದಲ್ಲಿ ತಾ. 7ರಿಂದ 11ರ ತನಕ ಸಮಾಜ ಮಂದಿರದಲ್ಲಿ ಜರಗಿತು. ತಾ 7ರಲ್ಲಿ ಶ್ರೀ ಸೋಮಪ್ಪ ರೈಗಳಿಂದ ಧ್ವಜಾರೋಹಣವಾಗಿ ಸರಸ್ವತೀ ಪ್ರತಿಷ್ಠೆ ವಿವಿಧ ಸ್ಪರ್ಧೆಗಳು ಭಜನೆ ಹರಿಕತೆಗಳು ಜರಗಿದವು.

ತಾ 8ರಂದು ಸಾಹಿತ್ಯ ಮತ್ತು ಸಾಂಸ್ಕೃತಿಕೋತ್ಸವದ ಉದ್ಘಾಟನೆಯು ಶ್ರೀ ವಿ. ಎಂ. ಇನಾಂದಾರ್ ಇವರಿಂದ ಜರಗಿಸಲ್ಪಟ್ಟಿತು. ಶ್ರೀ ಕೆ. ಆರ್. ಆಚಾರ್ ಎಂ. ಪಿ. ಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜಿ. ವಾಸುದೇವ ಪೈಗಳು ಸ್ವಾಗತಿಸಿದ ಮೇಲೆ ಶ್ರೀ ಕೆ. ಶಾಂತ ರೈಗಳು ಪರಿಚಯ ಭಾಷಣಮಾಡಿದರು ಶ್ರೀ ವಿ. ಎಂ. ಇನಾಂದಾರ್, ವೈದ್ಯಗಾರು ಎಂ. ಆರ್. ಭಟ್ ಮತ್ತು ಅಧ್ಯಕ್ಷರ ಭಾಷಣಗಳಾಗಿ ರಾತ್ರಿ ವಿವಿಧ ವಿನೋದಾವಳಿಗಳಾದುವು. ತಾ 9ರಲ್ಲಿ ಮಹಿಳಾಗೋಷ್ಠಿಯು ಕುಮಾರಿ ವತ್ಸಲಾ ಎಚ್. ಧುಪೇಲಿ ಇವರ ಅಧ್ಯಕ್ಷತೆಯಲ್ಲಿ ಜರಗಿ ಸಂಗೀತ, ವೀಣೆ, ಮತ್ತು ವೇಣುವಾದನವಾಗಿ ಶ್ರೀಮತಿ ಕೊನ್ನಮ್ಮನವರಿಂದ ಭಾಷಣವಾಯ್ತು. ರಾತ್ರಿ ಶ್ರೀ ಮಂಗೇಶರಾವ್ ಗೋವೆಕರ್ ಇವರ ಸಂಗೀತ ಕಚೇರಿ ನಡೆಯಿತು. ತಾ 10ರಲ್ಲಿ ರಾಜಕೀಯ ಗೋಷ್ಠಿ 11ರಲ್ಲಿ ಸಾಹಿತ್ಯಸಭೆಗಳು ನೆರವೇರಿತು.

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸಲು ವ ಬಡ್ಡಿಯನ್ನು ಈ ವರೆಗೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ ಕೆಲವರು ವಾಸಸ್ಥಾನದಲ್ಲಿ ಇಲ್ಲವೆಂಬುದಾಗಿ ನಮಗೇನೇ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ತಾರೀಕು 29-10-1959ನೇ ಗುರುವಾರ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಎಂಬುದನ್ನು ಈ ಮೂಲಕ ತಿಳಿಸೋಣಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	30-9-59ರ ವರೆಗೆ ಬಡ್ಡಿ ಸೇರಿ ಮೊಬಲಗು
102/57	ಎಚ್. ಮೋನಪ್ಪ ಸಟ್ಟಿ, ಕೆ. ವಿಟ್ಠಣ್ಣ ಸೆಟ್ರ ಮಗ, ಹುಯ್ಯಾರು ಗ್ರಾಮ ಪೋಸ್ಟ್ ಹೈಕಾಡಿ, ದ. ಕ.	318 . 05
146/57	ಲೂಸಿ ಸೋಜ, ಗಾಬ್ರಿಲ್ ಸೋಜರ ಹೆಂಡತಿ, ಆನಗಳ್ಳಿ ಗ್ರಾಮ, ಪೋಸ್ಟ್ ಆನಗಳ್ಳಿ, ದ. ಕ.	46 . 40
267/57	ಬಿ. ಗೋವಿಂದರಾಜ ಹೆಗ್ಡೆ, ಕೊಳ್ಕೆಬೈಲು ಸಂಕಯ್ಯ ಹೆಗ್ಡೆಯವರ ಮಗ, ಶಿರಿಯಾರ ಗ್ರಾಮ, ಪೋಸ್ಟ್ ಸಾಯ್ಬ್ರಕಟ್ಟೆ, ದ. ಕ.	39 . 10

Office of the Vijaya Bank, Ltd.,
Coondapoor, S. K.
Dated 12th October 1959.

For the Vijaya Bank, Ltd.,
B. R. Adyanthaya,
Agent, Coondapoor.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ.

ದೇಶ ಪರಿಚಯ

(೫ನೇ ಪುಟದಿಂದ)

ಲ್ಲವುಗಳೂ ಡೆನ್ಮಾರ್ಕಿನ ಕೇಂದ್ರ ಸಹಕಾರಿ ಕಮಿಟಿಯ ಅಧಿಕಾರಕ್ಕೆ ಒಳಪಟ್ಟವುಗಳು.

ಭೂಮಿಯನ್ನು ಒಕ್ಕಲಿಗರಿಗೆ ಹಂಚಿ ವಿತರಣೆ ಮಾಡಿದ್ದರಿಂದ ಇಡೀ ರಾಜ್ಯದಲ್ಲಿ ೧೦೦೦ ಎಕ್ರೆಗಳಿಗೆ ಮೇಲ್ಪಟ್ಟು ಭೂಮಿ ಇರುವ ಮಾಲೀಕರು ಬರೀ ೪೦೦ ಮಾತ್ರ. ಇವರು ಮಾಮೂಲ ಹಕ್ಕಿನವರು ಪರಂಪರೆಯಾಗಿ ಅನುಭವಿಸಿ ಬಂದ ಶ್ರೀಮಂತ ಕುಟುಂಬದವರು. ಇವರು ಸರ್ವಜನರ ಏಳಿಗೆಗೆ ಸಹಾಯಕರಾಗಿ ಕಾಡನ್ನು ಬೆಳೆಸುವದು ಮತ್ತು ಉತ್ತಮ ತರದ ಜಾನುವಾರು ಸಾಕುವದು ಇವೇ ಮೊದಲಾದ ಸಾರ್ವಜನಿಕ ಪ್ರಯೋಜನದ ಕೆಲಸ ಮಾಡುವರು. ಮಧ್ಯಮ ತರಗತಿಯ ಕೃಷಿಕರು ಸುಮಾರು ಮೂರರಲ್ಲೆರಡು ಅಂಥ ಭೂಮಿಯ ಸ್ವಾಧೀನಗಾರರಾಗಿರುವರು ಹಲವು ಚಿಕ್ಕ ಹಿಡುವಳಿಗರು ತಮ್ಮ ಜೀವನವನ್ನು ಅವರ ಉತ್ಪನ್ನದಿಂದಲೇ ನಡೆಸುವರು. ೧೯೧೯ರಲ್ಲಿ ಅರಮನೆಯ ಜಮೀನನ್ನು ಸರಕಾರಕ್ಕೆ ಒಪ್ಪಿಸಿರುವರು. ಪಾರ್ಲಿಮೆಂಟು ಮಾಮೂಲು ಭೂಮಿಯ ಪೈಕಿ ಕಾಲಂಶವನ್ನು ವಶಪಡಿಸಿ ಸಣ್ಣ ಹಿಡುವಳಿಯಾಗಿ ತುಂಡರಿಸಿ ಜನರಿಗೆ ವಿತರಣೆ ಮಾಡಿರುವರು. ದೊಡ್ಡ ಜಮೀನುಗಳಲ್ಲಿ ಗೇಣಿದಾರರೂ ಇರುವರು. ಡೆನ್ಮಾರ್ಕಿನ ಕೃಷಿಕರ ಪೈಕಿ ಶೇಕಡ ೨ರಷ್ಟು ಮಾತ್ರ ಗೇಣಿ ಒಕ್ಕಲುಗಳು. ಆದ್ದರಿಂದ ಒಕ್ಕಲು ಸಮಸ್ಯೆ ಎಂಬುದೇ ಆ ರಾಜ್ಯದಲ್ಲಿಲ್ಲವೆನ್ನಬಹುದ. ಡೇನರು ದಿವಸಕ್ಕೆ ಆರು ಊಟ ಮಾಡುವರು. ಅವರ ಮೇಜಿನ ಮೇಲೆ ೪-೫ ಸ್ಮೀಯುರ್ದ್ ಬ್ರೆಡ್ ನಾನಾ ಬಗೆಯ ಪರಿಮಳದ ತಿನಸು ಇಡುವರು. ಕಾಫಿಯು ಅವರ ರಾಷ್ಟ್ರೀಯ ಪಾನವು ಮಧ್ಯಾಹ್ನದ ಸಮಯ ಅತಿಥಿಗಳು ಮನೆಗೆ ಬಂದಾಗ ಹಲವು ಸಲ ಕಾಫಿ ಕುಡಿಯುವರು. ವಿದೇಶೀಯ ಪ್ರಯಾಣಿಕರು ಅವರ ಭಾಷೆಯನ್ನು ಕಂಡು ವಿಸ್ಮಯಪಡಬೇಕಾಗುವದು. ಅವರ 'ರ' ಕಾರವೆಲ್ಲವೂ ಗಂಟಲಿನೊಳಗೆ ಮತ್ತು ಅವರ "ಸ್ಟ್"ಕಾರವು ಕಿವಿಗೆ ಕರ್ಕಶವಾಗಿ ಕೇಳುವದು. ಬರೇ ೮೦೦ ಜನರು ಶ್ರೀಮಂತರಿದ್ದು ಸಾಮಾನ್ಯ ಜನರೆಲ್ಲರೂ ವಿದ್ಯಾವಂತರಾಗಿರುವ ಈ ಚಿಕ್ಕ ದೇಶವು ಬಹುವಿಶೇಷ ತರದ ಪ್ರಜಾಸತ್ತಾತ್ಮಕ ರಾಜ್ಯವಾಗಿರುವದು. ನಮ್ಮ ದೇಶದಲ್ಲಿ ಗುಜರಾತಿಗಳು ಮನೆಯ ಅಡಿಗೆ ಮಾಡುವವನಿಗೆ ಬಹು ಮರ್ಯಾದೆ ಕೊಟ್ಟು "ಮಹಾರಾಜ" ಎಂದು ಕರೆದಂತೆ ಡೆನ್ಮಾರ್ಕಿನವರು ಮನೆ ಕೆಲಸದ ಹುಡುಗಿಯನ್ನು ನೋಡಿದೊಡನೆಯೇ ತಮ್ಮ ಟೋಪಿಯನ್ನು ಎತ್ತಿ "ಮಿಸ್ ಫ್ರೋಕಾ" ಎಂದು ಕರೆಯುವರು. ಡೇನರಲ್ಲಿ ಕೆಲಸದ ಜನವೆಂಬುದೇ ಇಲ್ಲ. ನೆರೆಮನೆಯ ಯಜಮಾನನ ಮಗಳಾದರೂ ಮನೆಯ ಕೆಲಸಕ್ಕೆ ಬಂದು ಸಹಾಯಕಳಾಗುವದುಂಟು. ಊಟದ ಸಮಯ ಮೇಜಿನಲ್ಲಿ ಒಟ್ಟು ಕೂತು ಊಟ ಮಾಡುವಳು.

ಸ್ತ್ರೀಯರಿಗೆ ಮತದ ಹಕ್ಕಿರುವುದರಿಂದ ವಿಧಾನಸಭೆಯಲ್ಲಿ ಭಾಗವಹಿಸಬಹುದು. ಲೋಕದಲ್ಲಿ ಪ್ರಪ್ರಥಮವಾಗಿ ಸ್ತ್ರೀಯರಿಗೆ ಮತದ ಹಕ್ಕು ಕೊಟ್ಟದ್ದು ಡೆನ್ಮಾರ್ಕ್ ಎಂಬುದನ್ನು ಮರೆಯಬಾರದು. ಹುಡುಗಿಯರು ತಮ್ಮ ಜೀವನೋಪಾಯಕ್ಕಾಗಿ ಅನುಸರಿಸುತ್ತಿದ್ದ ಉದ್ಯೋಗವನ್ನು ಮದುವೆಯಾದನಂತರ ಬಿಡಬೇಕೆಂದಿಲ್ಲ. ಅನೇಕ ರೀತಿ ಸಾಮಾಜಿಕ ಶಾಸನಗಳು ಇವರಲ್ಲಿ ಜ್ಯಾರಿಯಿವೆ. ವಿವಾಹವಿಚ್ಛೇದವು ಅಪೇಕ್ಷಿಸಲ್ಪಟ್ಟರೆ, ತಾನು ಬೇರಾಗಿ ನಿಲ್ಲುವೆನೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ ಯಾವ ಪ್ರಕಟನೆಯಿಲ್ಲದೆ ವಿವಾಹವಿಚ್ಛೇದವಾಗುವದು. ಆದರೆ ಅವರ ಆಸ್ತಿಪಾಸ್ತಿಗಳ ಮತ್ತು ಮಕ್ಕಳಿದ್ದರೆ ಅವುಗಳ ಮೇಲಣ ಹಕ್ಕಿನ ಕುರಿತು ತೀರ್ಮಾನವಾಗುವನ್ನು ಸಮಯ ಬೇಕಾಗುವದು. ಒಂದು ಕನ್ಯೆಯು ಮದುವೆಯಾಗುವಾಗ ಅವಳ ತಂದೆ ತಾಯಿಗಳು ಆಕೆಗೆ ಒಂದು ಮನೆ ಮತ್ತು ಗೃಹಕೃತ್ಯಕ್ಕೆ ಬೇಕಾಗುವ ಸಂಗ್ರಹಗಳನ್ನು ಒದಗಿಸಿ ಕೊಡುವನು. ಮದುಮಗನು ಆಭರಣಗಳನ್ನು ವಧುವಿಗೆ ಕೊಡುವನು. ವಧು ಹಸುರಾಗಿರುವ ಮರ್ಟಲ್ ಮಾಲೆಯನ್ನು ಧರಿಸುವಳು. ಇತರ ದೇಶಗಳಲ್ಲಿ ಕಿತ್ತಳೆ ಬಣ್ಣದ ಮಾಲೆ ಧರಿಸುವರು. ನಿಶ್ಚಯ ತಾಂಬೂಲದ ಸಮಯ ಒಬ್ಬರಿಗೊಬ್ಬರು ಉಂಗುರ ಕೊಡುವದೇ ಹೊರತು ಮದುವೆ ಕಾಲದಲ್ಲಿ ಕೊಡುವ ಪದ್ಧತಿ ಅವರಲ್ಲಿಲ್ಲ. ಈ ಉಂಗುರವನ್ನು ಅವರ ಮೂರನೇ ಬೆರಳಲ್ಲಿ ಧರಿಸುವರು.

ಕ್ರಿಸ್‌ಮಸ್ ಹಬ್ಬವು ಬಹು ವಿಶೇಷ. ಬಡವರಾದರೂ ಕ್ರಿಸ್‌ಮಸ್ ಮರವನ್ನು ಮುಂಜಾನೆಯೇ ಮೇಜಿನ ಮೇಲಿಟ್ಟು ಬೆಳಕು ಮಾಡಿ ಉಡುಗೊರೆಗಳನ್ನು ಕೊಡುವರು. ಬಾತು ಕೋಳಿಯನ್ನು ಆ ದಿನ ಹುರಿಯುವ ಪದ್ಧತಿಯಿದೆ. ಸಾಯಂಕಾಲದ ಸಮಯ ನರ್ತನ ಮಾಡುವರು. ಹೊಸ ವರುಷದ ದಿವಸ ಸಿಡಿಮದ್ದು ಸುಡುವರು. ಸೆಖೆ ಕಾಲದ ಹಬ್ಬಕ್ಕೆ ರಾಜ್ಯದಾದ್ಯಂತ ದೀಪೋತ್ಸವ ಮಾಡುವರು ಅನೇಕ ಜನ ಪ್ರೇಕ್ಷಕರು ಬರುವರು. ಹಳ್ಳಿಗಳಲ್ಲಿ ನೀರಾಟವಾಡುವರು. ಮಕ್ಕಳ ಹಬ್ಬವು ಮೇ ತಿಂಗಳಲ್ಲಿ ಬರುವದು. ಚಿಕ್ಕ ಮಕ್ಕಳಿಗೆ ಪುರಾತನದ ರಾಷ್ಟ್ರೀಯ ದುಸ್ತು ಹಾಕಿ ಮಕ್ಕಳ ಆಸ್ಪತ್ರೆ ವಗೈರೆಗೆ ಹಣ ಬೇಡಿ ಒಟ್ಟು ಮಾಡುವರು. ಕೋಪನ್ ಹೇಗನ್ನಿನಲ್ಲಿ ಇದು ವಿಜೃಂಭಣೆಯಿಂದ ಜರಗುವದು. ದೋಣಿ ವಾಹನ ಕುದುರೆಗಳನ್ನು ಶೃಂಗರಿಸುವರು. ವೇಷಧಾರಿಗಳು ಮತ್ತು ಹೂವು ಮಾರಾಟ ಮಾಡುವ ಹುಡುಗಿಯರು ಹಣ ಸಂಗ್ರಹಿಸುವರು.

— ಸಿ. ಎಚ್. ಶೆಟ್ಟಿ.

ಕವಿತಾ ವಿತಾನ

ಹಾಡಿದನು ವೈಣಿಕ!

೧

ಹಾಡಿದನಹಹಾ ವೈಣಿಕನು!
ಜೀವನ ವನದಲಿ ವೈಣಿಕನು.
ಭಾವತರಂಗವ
ಹಂಚಿಸಿ ಹಾಡಿದ!
ಜೀವನ ವೀಣೆಯ ನುಡಿಸಿದನು.

೨

ಯುಗಗಳ ಹಾಳೆಯ ತಿರುವಿದನು.
ಕಾಲದ ತಂತಿಯ ಮೀಂಟಿದನು.
ನಿಶಿ, ದಿವ, ವರ್ಷವ;
ಜೀವ ಕೋಟಿಗಳ;
ಜೀವಿತ ಚಕ್ರವ ತಿರುವಿದನು!

೩

ಆತನ ಗೀತಾಲಹರಿಯಲಿ,
ಉಕ್ಕಿತು ಮಧುರ ನಿನಾದದಲಿ;
ಗಗನ, ದಿಗಂಗದಿ,
ನೆಲ, ಜಲ ದಾಳದಿ,
ಸ್ಥಾವರ, ಜಂಗಮ ಕೋಟಿಯಲಿ,

೪

ಹೃದಯದ ತಂತಿಯು ಸ್ಪಂದಿಸಿತು!
ಪುಲಕದಿ ದೇಹವು ಕಂಪಿಸಿತು.
ಮೋಹಕ, ಚುಂಬಕ,
ಜೀವಾಕರ್ಷಕ,
ಗೀತೆ ಸಮಸ್ತವ ಗಾಡಿಸಿತು!

೫

ಕಡಿಯಿತು ನಾದಕೆ ಸಂಕೋಲೆ;
ಗಾನ ತರಂಗವು ಶತಮಾಲೆ!
ಜೀವನ ಚೇತನ,
ಮಧುರ ಚಿರಂತನ,
ಸೃಷ್ಟಿಯ ನರ್ತನ ಉಯ್ಯಾಲೆ!

೬

ಋಷಿ ಕವಿಗಳ ನವ ಕಾವ್ಯದಲಿ,
ಗಾನ ಸರಸ್ವತಿ ವೀಣೆಯಲಿ,
ಸಂಚಲಿಸಿತು ಅಲೆ,
ನೊರೆಯಿತು ಅಲೆ ಅಲೆ;
ಲೀನವು ವೀಣಾಗಾನದಲಿ.

೭

ಗೀತಾ ಕಾವ್ಯಕೆ ಕಳೆಯೊಟ್ಟಿ,
ಗೀತಾ ಕವಿಗಳ ಎದೆ ತಟ್ಟಿ,
ಮೋಹಿಸಿ, ಹಾಡಿಸಿ;
ಆಹ, ಸವಿಯೆನ್ನಿಸಿ;
ಹರಿಯಿತು ದೇವನ ಬೆಂಬಟ್ಟಿ!

೮

ವಿಧಿಯನು ಶಯನನಿ ಎಬ್ಬಿಸಿತು!
ಹರನನು ತಾಂಡವ ವಾಡಿಸಿತು!
ಸುರನರ ನರ್ತನ,
ಭುವಿನಭ ಸ್ಪಂದನ!
ರಸ—ನವಚೇತನ ತುಂಬಿಸಿತು,

೯

ಕಾಲನೆ ವೈಣಿಕನೆನುವಂತೆ,
ಜೀವನ ವೀಣೆಯಿದೆನುವಂತೆ,
ಹಾಡಿದ ವೈಖರಿ—
ಗಾನವ ವೈಣಿಕ
ಬಾಸಿಳೆ ನರ್ತಿಸಿ ನಲಿವಂತೆ!

— ಕೆ. ತಿಮ್ಮಪ್ಪ ಗಟ್ಟಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವೂ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು
(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ: ರೂ. ಒಂದೂವರೆ, ಉತ್ತಮ ಪ್ರತಿ: ರೂ. ಎರಡು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಕಾಸರಗೋಡು

ಮುನ್ಸಿಫ್ ಕೋರ್ಟಿನಲ್ಲಿ

O. P. No 47/1959

S. ಶಂಕರ ಆಳ್ವ — ಅರ್ಜಿದಾರ

S. ಬಾಬು ರಾವ್ ರಾಮಚಂದ್ರ ರಾಯರ ಮಗ. ಬ್ರಾಹ್ಮಣರ ಕಾಫಿ ಕ್ಲಬ್ಬಿನ ಪ್ರೋಪ್ರೈಟರ್ ನಂಬ್ರ4. ಸಿಲ್ವರ್ ಜ್ಯುಬ್ಲಿ ಪಾರ್ಕ ರೋಡು ಬೆಂಗಳೂರು 2.— ರೆಸ್ಪೊಂಡೆಂಟ

ಕೇರಳಾ 31/58ನೇ ಆಕ್ಟಿನ ಪ್ರಕಾರ 1ನೇ ಕಂತಿನ ಬಾಬ್ತು ರೆಸ್ಪೊಂಡೆಂಟಗೆ ಸಲತಕ್ಕ ಪ್ರೋನೋಟಿನ ಹಣಕಟ್ಟಿ ದಾಖಲು ಮಾಡಿದ ಈ ಅರ್ಜಿಯು ರೆಸ್ಪೊಂಡೆಂಟನ ಹಾಜರಾತಿ ಬಗ್ಗೆ ತಾ 21-10-59 ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟ ಸಂಗ್ತಿ ಅವರ ತಿಳುವಳಿಕೆ ಬಗ್ಗೆ ಈ ಮೂಲಕ ಪ್ರಕಟಿಸೋಣಾಗಿಯದೆ.

K. Ganesh Rao.
ಅರ್ಜಿದಾರನ ವಕೀಲ್

ಕಾಸರಗೋಡು. ತಾ. 12-10-59.

ವಿನೋದ ವಿಹಾರ

ಓದುವಿರಾದರೆ ನಕ್ಕುನಲಿಯಬಹುದು!

ಸಿಲೋನ್ ಬಂಡಾರನಾಯಿಕೆ

ಅಂದು ಸುಬ್ಬನಿಗೆ ಕನ್ನಡದಲ್ಲಿ ಪರೀಕ್ಷೆ. ಸುಬ್ಬ ಬೇಗನೇ ಊಟ ತೀರಿಸಿ ಶಾಲೆಯತ್ತ ಧಾವಿಸುತ್ತಿದ್ದ, 'ಉಸ್ ಉಸ್' ಶ್ವಾಸ ಒಂದೇ ಸಮನೆ ಹೊರ ಸೂಸುತ್ತಿತ್ತು. ಬೆವರು ಕಪಾಲದಿಂದ ಓತಪ್ರೋತವಾಗಿ ಹೊರಹರಿದು ಬಂದು ಗಲ್ಲವನ್ನು ತೊಯ್ಸುತ್ತು. "ಓ ಸುಬ್ಬ..." ಯಾರೋ ಸುಬ್ಬನನ್ನು ಕೂಗಿ ಕರೆದರು, ಸುಬ್ಬ ಮನಸ್ಸಿಲ್ಲದೆ ಹಿಂದೆ ನೋಡುತ್ತಾನೆ ಕರೆದವರಾರೆಂದು. ಜನ್ನರ ಅಂಗಡಿಯ ವಿಠ್ಠಲ ನಾಯಕರವರು. "ಏನು? ಏನು?" ಸುಬ್ಬ ಪ್ರಶ್ನಿಸಿದ.

"ನಿನಗೆ ಗೊತ್ತಿತ್ತೇನು?"

"ಏನಂತೆ?"

"ಸೆಲೂನಲ್ಲಿ ಬಂಡಾರಿ, ನಾಯ್ಕರಿಗೆ ಗುಂಡು ಹೊಡೆದರಂತೆ."

"ಸೆಲೂನಲ್ಲಿ? ಗುಂಡು?" ಸುಬ್ಬ ಕೇಳಿ, ಮತ್ತೆ ಕೂಡಲೇ ಧಾವಿಸಿದ ಎಲ್ಲಿಗೆ ಗೊತ್ತೇ? ಹತ್ತಿರದ ಸೆಲೂನಿಗೆ! ಅಲ್ಲಿ ಹೋಗಿ ನೋಡುತ್ತಾನೆ ಗುಂಡೂ ಇಲ್ಲ, ಬಂಡಾರಿಯಿಲ್ಲ ಆ ದಿನ ಅಲ್ಲಿಗೆ ರಜೆಯಾಗಿತ್ತು! ಸುಬ್ಬ ಬಂದು ವಿಠ್ಠಲ ನಾಯಕರನ್ನು ಕೇಳಿದ:—ಕತೆಯೇನೆಂದು.

"ಅಯ್ಯೋ ನೀನು ಸೆಲೂನಿಗೆ ಯಾಕಪ್ಪ ಹೋದದ್ದು?"

"ಮತ್ತೆ, ನೀನೇ ಅಂದಿದ್ದಿಯಲ್ಲ?"

"ಸುಳ್ಳೇನು?"

"ಅಲ್ಲ, ಮಹಾರಾಯಾ ನಾನಂದದ್ದು ಸಿಲೋನ್ ಇದೆಯಲ್ಲ"

"ಯಾವ ಸೆಲೂನ್?" "ಹ್ಹಾಂ ಸಿಲೋನ್‌ನಲ್ಲಿ ಭಂಡಾರಿ ನಾಯ್ಕೆಯನ್ನು ಗುಂಡಿಕ್ಕಿದುದೆ?"

"ಮತ್ತೆ?"

"ನಾನೆಣಿಸಿದೆ ಸೆಲೂನಲ್ಲಿ ಭಂಡಾರಿ (ಕ್ಷೌರ ತೆಗೆಯುವ) ನಾಯ್ಕ (ಕೌರ ತೆಗೆಯಲು ಬಂದ)ರಿಗೆ ಗುಂಡು ಹೊಡೆದರೋ ಎಂದು"

"ಹ್ಹ....ಹ್ಹ...."

"ಹೋಗುತ್ತೇನೆ." ಸುಬ್ಬ ಬೀದಿಯುದ್ದಕ್ಕೂ ನಗುತ್ತ ಹೋದ. ಅಂದು ಕನ್ನಡಕ್ಕೆ ಪ್ರಬಂಧವಾಗಿ ಬಂದಿತ್ತು 'ನೀನು ಮೆಚ್ಚಿದ ಹಾಸ್ಯದ ಸನ್ನಿವೇಶ' ಸುಬ್ಬ ಅತ್ತಿತ್ತ ನೋಡದೇ "ಸಿಲೋನ್ ಭಂಡಾರ್ ನಾಯಕೆ" ಎಂದು ಸುಬ್ಬ ಶಿರೋನಾಮೆ ಬರೆದೇ ಬಿಟ್ಟ.

ೊ ೊ ೊ

"ಸಕ್ಕರೆ ಇಲ್ಲ"

ಸುಬ್ಬನಿಗೆ ½ ಪೌಂಡು ಸಕ್ರೆ ತರಲು ಆಜ್ಞೆಯಾಯಿತು. ಕೈಯ್ಯಲ್ಲಿ 7 as. ಹಿಡಿದುಕೊಂಡು ಜನ್ನರ ಅಂಗಡಿಗೆ ಹೋದ ಹೋಗಿ, 'ರಾಯ್ರೆ ½lb ಸಕ್ರೆಯಿದ್ದರೆ ಕೊಡಿರಿ' ರಾಯರು ಮಾತಾಡಿದರೆ ಶ್ವಾಸ ಖರ್ಚಾದೀತೋ ಎಂಬಂತೆ ಹೆದರಿ ತಮ್ಮ ತರ್ಜನಿಯನ್ನು ಅಲ್ಲೇ ತೂಗು ಹಾಕಲ್ಪಟ್ಟ 'ಬೋರ್ಡಿ'ಗೆ ತೋರಿಸಿದರು. 'ಸಕ್ರೆಯಿಲ್ಲ' ಯಾಕಾರಾಗಮ ಸಂಧಿ ಮಾಡಿಕೊಂಡ. ಬರೆದ 'ಬೋರ್ಡ್' ತೂಗು ಹಾಕಲ್ಪಟ್ಟಿತ್ತು. ಸುಬ್ಬ ಮುಂದುವರಿದ. ಇನ್ನೊಂದೆಡೆಯಲ್ಲೂ ಅದೇ ಬೋರ್ಡು 'ಸಕ್ರೆ ಇಲ್ಲಾ' 'ಅಂಗಡಿಯೊಳಗೂ ಹೊರಗೂ?' ಸುಬ್ಬ ಮುಂದುವರಿದ. ಹೇಗೆ ಬಂದಿದ್ದನೋ ಹಾಗೆ ಹಿಂದೆ ಬಂದಾಗ ಆತ ಅಂದುಕೊಂಡ, "ಬೆಳಿಗ್ಗೆ ಯಾರ ಮುಖಾರವಿಂದ (?) ಕಂಡಿದ್ದೇನೊ? ಥೂ..." ಅಷ್ಟರಲ್ಲಿ ಜನ್ನರ ಅಂಗಡಿಯಿಂದ ಸುಬ್ಬನನ್ನು ಕುರಿತೇ ಒಂದು ಮಾತು ಹೊರಡಿತು, "ಏನ್ರಿ? ದೊರೆತಿತೇನು?" "ಛೇ! ಎಲ್ಲಾ ಕಡೆಯಲ್ಲೂ ದೊರೆಯಿತು ಸ್ವಾಮಿ... 'ಸಕ್ರೆಯಿಲ್ಲಾ' ಎಂಬ ಶನಿರಾಯ ಬೋರ್ಡು" "ಅಲ್ಲ ಮಾರಾಯ್ರೆ, ಎಲ್ಲೆಡೆಗಳಲ್ಲೂ ಬ್ಲಡ್‌ಪ್ರೆಶ್ಶರ್, ಡಯಾಬಿಟಿಸ್ ಬಂದು ಅದಕ್ಕೆ ಸಮರ್ಪಕವಾಗಿ ಡಾ|| ರುಗಳಲ್ಲಿ ಮದ್ದಿಲ್ಲದೆ ಅವರು ಸರಕಾರಕ್ಕೆ ಸಲ್ಲಿಸಿದ್ದಾರೆ ಮನವಿಯನ್ನು" ಎಂದರು ರಾಯರು. ಸುಬ್ಬ ಅಲ್ಲಿಂದ ಸೀದಾ Post Officeಗೆ ಧಾವಿಸಿದ. 5nP ಕೊಟ್ಟು ಕಾರ್ಡೊಂದನ್ನು ಪಡೆದುಕೊಂಡ; ಬರೆದೇ ಬಿಟ್ಟ-'ಸಂಪಾದಕರಿಗೆ ಪತ್ರ'.

ೊ ೊ

ಏನು ನಾಚಿಗೆ

ಸುಬ್ಬ ಶಾಲೆಯಿಂದ ಆಟವಾಡಿ ಮನೆಗೆ ಏಕಾಂಗಿಯಾಗಿ ಹಿಂತೆರಳುತ್ತಿದ್ದ, ಮಧ್ಯದಲ್ಲಿ ಎಪ್ಸಾರ ದೊರೆತ. ಇಬ್ಬರೂ ಕೂಡಿ ಮನೆಯತ್ತ (ಇಬ್ಬರ ಮನೆ ಬಹಳ ಹತ್ತಿರ, ಹತ್ತಿರ)ಸಾಗಿದರು. ಏತನ್ಮಧ್ಯೆ ಸುಬ್ಬ, ಕವಿಸುಬ್ಬ (ಕೆಲವೊಮ್ಮೆ ಸುಬ್ಬನಿಗೆ ಕವಿ (ವಿ? ಪಿ?) ಯಂತಹ ಭಾವನೆ ಬಂದು ಆತ ಕವಿ (ಪಿ? ವಿ?) ಯಂತೆ ವರ್ತಿಸುವುದಿದೆ.) ಹತ್ತಿರದ ಪ್ರೊಡೆಯು ಬಳಿ ಹಾಯಾಗಿ ನಿದ್ರಿಸುತ್ತಿದ್ದ ಪ್ರೋ ಎಂಬಂತೆ ಸುಖ ಸಾಗರದಲ್ಲಿ ತೇಲಾಡುವ, ಓಲಾಡುವ ನಾಚಿಗೆ ಮುಳ್ಳಿನ ಗಿಡಗಳನ್ನು ತಾನು ಹಿಡಿದಿದ್ದ ಹೊಸ ಕೊಡೆಯಿಂದ ಅಲುಗಾಡಿಸಿದ. ಎಲ್ಲವೂ ನಾಚಿಗೆಯಿಂದ ಮುದುಡಿಕೊಂಡವು. ಸುಬ್ಬ ಈಗ ಕವಿಯ ಭಾವನೆಯನ್ನು ಹೊರಗೆಡವಿದ, "ಆಹಾ! ಏನು ಸೊಗಸು? ಲಲನೆಗದೆಷ್ಟು ನಾಚಿಕೆ? ಅಪಾರವಾದುದು,ಅಪರಿಮಿತವಾದುದು..."

"ಲೋ ಸುಬ್ಬ...." ಎಪ್ಸಾರ ಬೊಬ್ಬಿಟ್ಟ. "ಹಿಂಗಡೆಯಿಂದ ಓರ್ವ ಹೆಂಗುಸು ತನ್ನ ಪತಿ (ರಿಜಿಸ್ಟರ್ಡ್ ಹಸ್‌ಬೆಂಡ್) ಯೊಂದಿಗೆ ಬರುತ್ತಿದ್ದಳು. ಸುಬ್ಬ ಹಿಂದುಗಡೆ ನೋಡಿದ ಆ ಯುವಜನವ್ರಾನ ತನ್ನ ಬೂಟ್ಸುಗಳನ್ನು, ತನ್ನ ಎಡಗೈಯ್ಯನ್ನು ಅವಳ ಬಲಭುಜದ ಮೇಲಿಟ್ಟು ಸಡಿಲಿಸುತ್ತಿದ್ದ. ಸುಬ್ಬ ಎಣಿಸಿದ ತಾನು ಇಷ್ಟರ ತನಕ ಮಾಡಿದ ಬಣ್ಣನೆ ಅವಳಿಗೆ ನಾಟಿತೇ ದಿನ ನವ ನಾಚೆಯನ್ನು ಹಲಸುವ ತನಕ ಸುಬ್ಬನು ಹಿಂದೆ ನೋಡಲಿಲ್ಲ, ಒಂದೆಡೆ ನಿಲ್ಲಲೂ ಇಲ್ಲ.

ಕ್ಲಾಸ್ ಮೊನಿಟರ್

'ಸುಬ್ಬ, ನೀನು ಓದುವುದು ಯಾವಾಗ? ಮೂರ್ಖ, ಒಂದೇ ಸಮನೆ ಕ್ರಿಕೆಟ್ ಆಡುತ್ತಿಯಲ್ಲೊ ?"

"ಅಮ್ಮಾ ಬೇಸರಪಡಬೇಡ, ಪರೀಕ್ಷೆಯ ನಂತರ ಎರಡೂವರೆ ತಿಂಗಳು ರಜೆಯಿದೆ. ಆಗ ಹಾಯಾಗಿ ಓದಿ ...."... ಇನ್ನೊಂದು ವರುಷ ಅದೇ ಕ್ಲಾಸಿನ ಮೊನಿಟರ್ ಆಗುವುದು ಅಲ್ಲೇನು? ,,

ಒಂದು ಶತಮಾನದ ಅಂತರ

ಅಂದು ಎಂದಿನಂತೆ ಸುಬ್ಬನ ಕ್ಲಾಸಿಗೆ Inspector ಬಂದಿದ್ದರು. ಆ ಹೊತ್ತು ಸಾಮಾಜಿಕ ಅಧ್ಯಯನ. ಪಾಠವಾಗಿತ್ತು ಇನ್ಸ್‌ಪೆಕ್ಟರ್ ಬಂದವರೇ ಸರಸರನೆ ಪ್ರಶ್ನೆಗಳ ಸುರಿಮಳೆ ಮಾಡಿದರು.

"ಮೊಂಟೆಗ್ಯೂ ಚೆಮ್ಸ್ ಫರ್ಡ್ ಸುಧಾರಣೆ ಭಾರತದಲ್ಲಿ ಯಾವ ಇಸವಿಯಲ್ಲಿ ಬಂದಿತ್ತು ?" ಎಂಬುದೇ ಮೊದಲ ಪ್ರಶ್ನೆ ಸುಬ್ಬ 'ಆನ್ಸರ್'. ರೆಡೀ ಮಾಡಿಟ್ಟ ಎಲ್ಲಾ ದರೂ ಕೇಳಿದ್ರೇ ಅವರೆ ಆವಾಗ ನಾನು ಹಟ್ಟಿಯೇ ಇದ್ದವೆಂದು ಬಿಡುವುದೆಂದು. ಪಟ್ಟಿಯಲ್ಲಿ ಪ್ರಶ್ನೆ ಯಾರಿಗೋ ಜೇರೊಬ್ಬರಿಗೆ ಕೇಳಲ್ಪಟ್ಟಿತು. "ಕ್ರಿ. ಶ. ೧೯೧೯ರಲ್ಲಿ ಸಾರ್' ಒಬ್ಬ ಉತ್ತರವಿತ್ತ. ಇನ್ನೊಬ್ಬ '೧೮೧೯ ಕ್ರಿ. ಶ. ಸಾರ್' ಎಂದು ಉತ್ತರ ಕೊಟ್ಟ, ಇವರಲ್ಲಿ ಯಾವುದು ಸರಿಯಾಗಿದ್ದಿರಬೇಕೆಂದು ಪರೀಕ್ಷಿಸಲು ಸುಬ್ಬನನ್ನು ಕುರಿತು ಇನ್:— "ಯಾವುದು ಸರಿಯೋ ಸುಬ್ಬ"

"ಇಬ್ಬರೂ ಕರೆಕ್ಟ್ ಸರ್"

"ಇಬ್ಬರೂ? ಹೇಗೋ ಅದು ಅವ ಅಂದಿದ್ದಾನೆ ೧೯೧೯ ಅಂತ. ಇವ ಅಂದಿದ್ದಾನೆ ೧೮೧೯....ಅಂತ...."

"ಹೌದು, ಸರ್ ಒಂದೇ ಶತಮಾನದ ವ್ಯತ್ಯಾಸವಲ್ಲವೆ?"

ೊ ೊ ೊ

ಅತೀ ವಿಚಿತ್ರ

ಸುಬ್ಬ ಆಫೀಸಿಗೆ ಹೋಗಿ ಪುನಃ ಅಂದರೆ ಮಧ್ಯಾಹ್ನ ೧-೨ ಕಾಲು ಘಂಟೆಗೆ ಮನೆಗೆ ಮರಳುತ್ತಿದ್ದ. ಅರೇ! ದಾರಿಯಲ್ಲಿ ನಡೆಯುವಾಗ ಸುಬ್ಬ ಕುಂಟೆ ಕುಂಟೆ ನಡೆಯುತ್ತಿದ್ದ. ಸುಬ್ಬನಿಗೂ ಎದೆ ಡಬಕ್ ಎಂದಿತು. "ಅತ, ಇದೇನು?" ಸುಬ್ಬನ ಮಟ್ಟಿಗೆ ಹೇಳುವುದಾದರೆ ಆತ ಹೊರಡುವಾಗ ಚೆನ್ನಾಗಿ ನಡೆದುಕೊಂಡು ಹೋಗಿದ್ದ, ಆದರೆ ಬರುವಾಗ ಯಾವ ಪಂಚರ್ ಬಂದು ಕಾಟವಿತ್ತಿತೊ ಎಂದು ಸುಬ್ಬ ವಿಶೇಷವಾಗಿ ಆಲೋಚಿಸಿದ. ಕಾಲನ್ನು ನಾಲ್ಕಾರು ಬಾರಿ ಬಡಿದು ನೋಡಿದ ನೆಲೆಮ ನೋಡಿದ ಉತ್ತರ ವಿಫಲತೆಯ ಫಲವೇ ಆಗಿತ್ತು. ಅಷ್ಟರಲ್ಲಿ XXX 36 ನಂಬರಿನ, ಕರ್ಣಕಠೋರ ಹಾರ್ನ್‌ವುಳ್ಳ ಅಂಬೆಸಡರ್ ಕಾರ್ ಹಿಂದಿನಿಂದ ಬಂದಾಗ ಸುಬ್ಬನಿಗೆ ಅನಿವಾರ್ಯವಾಗಿ ಕಾಲ್ದಾರಿಯ ಮೇಲೆ ನಡೆದು ಬರಬೇಕಾಗಿ ಬಂತು. "ಅರೇ, ಇದು ಆಶ್ಚರ್ಯ" ಎಂದು ಸುಬ್ಬ ಈಗ ಇನ್ನೊಂದು ಬಗೆಯ ಸಾಶ್ಚರ್ಯಭಾವ ತೋರ್ಪಡಿಸಿದ. ಈಗ ಸುಬ್ಬ ಕುಂಟೆ ನಡೆಯುತ್ತಿಲ್ಲ. ಸುಬ್ಬನಿಗೆ ಫಕ್ಕನೆ ಜ್ಞಾಪಕಕ್ಕೆ ಬಂದ. ಹೋಗಿ ಬಿಟ್ಟಿತು. ಆತನ ಮಂಕು ಮತಿಗೆ ಆತನೇ ಕೊರಗಿದ. ಎಂದರೆ ಸುಬ್ಬ ತನ್ನ ಎಡಗಾಲನ್ನು ಟಾರ್ ರಸ್ತೆಯ ಮೇಲೂ ಬಲಗಾಲನ್ನು ಕಾಲ್ದಾರಿಯ ಮೇಲೂ ಇಟ್ಟುಕೊಂಡು ಬರುತ್ತಿದ್ದ.. ಇದರಿಂದ ಸಮತೆ ತಪ್ಪಿತು. ಇದರಿಂದ ಕುಂಟೆ ಬರುತ್ತಿದ್ದಂತೆ ಆತನಿಗೆ ಭಾಸವಾಗುವಾಗ ನಮಗೆ ಮಾತ್ರ ನಗೆ!

ೊ ೊ ೊ

ಬಾಲಕ್ಕೆ ಅಂಕುಶ

"ನಾಯಿ, ತನ್ನ ನಾಲಗೆಯನ್ನು ಓಡುವಾಗ ಹೊರತಳ್ಳುತ್ತಿರುತ್ತದೆ ಏಕಂತೆ?"

"ಬಾಲವನ್ನು ಹಿಡಿತದಲ್ಲಿರಿಸಲು"

—ಕೆ. ರಮೇಶ ಷೈ.

ನವೀನ ಕಾದಂಬರಿ ಹೊಸ ಪುಸ್ತಕ

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು: ವೀರಪ್ಪ ಯಗಟಿ, ಬಿ. ಎ., ಎಲ್‌ಎಲ್. ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸತ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅವನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು.

ಬಿಳಿ ಕಾಗದ. ಬೆಲೆ: ರೂ. 1—12—0 (1·75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.

ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ಪ್ರಗತಿಪಥ

ಜೀವ ವಿಮಾ ಕಾರ್ಪರೇಶನ್‌ನ ಪ್ರಗತಿ

ಆಶಾದಾಯಕ ಪ್ರಗತಿ ಸಾಧಿಸಿದೆ ಎಂದು ಕಾರ್ಪರೇಶನ್‌ನ ಅಧ್ಯಕ್ಷರ ಅಭಿಪ್ರಾಯ.

ಲೈಫ್ ಇನ್‌ಶೂರೆನ್ಸ್ ಕಾರ್ಪೋರೇಶನಿನ ಮೂರನೇ ವಾರ್ಷಿಕ ಸಭೆಯಲ್ಲಿ ಶ್ರೀ ಪಿ. ಎ. ಗೋಪಾಲಕೃಷ್ಣನ್, ಚೇರ್‌ಮೆನ್‌ರು ಕಾರ್ಪೋರೇಶನ್ ಮೂರನೇ ವರ್ಷ ಸಾಧಿಸಿದ ಪ್ರಗತಿಯನ್ನು ವಿವರಿಸಿದರು. ೧೯೫೮ರಲ್ಲಿ ಕಾರ್ಪೋರೇಶನ್ ರೂ. ೩೪೩.೦೫ ಕೋಟಿ ಬೆಲೆಯ ೯.೩೫ ಲಕ್ಷ ಪಾಲಿಸಿಗಳನ್ನು ಮಾರಾಟ ಮಾಡಿರುತ್ತದೆ. ೧೯೫೭ರಲ್ಲಿ ರೂ. ೨೮೧.೯೦ ಕೋಟಿ ಬೆಲೆಯ ೭.೯೫ ಲಕ್ಷ ಪಾಲಿಸಿಗಳನ್ನು ಮಾರಾಟ ಮಾಡಲಾಗಿತ್ತು. ೧೯೫೭ರ ವರೆಗೆ ಜಾರಿಯಲ್ಲಿರುವ ಒಟ್ಟು ಜೀವ ವಿಮಾ ವ್ಯವಹಾರ ರೂ. ೧೪೭೩ ಕೋಟಿ ಬೆಲೆಯ ೫೬.೮೩ ಲಕ್ಷ ಪಾಲಿಸಿಗಳಾಗಿದ್ದರೆ, ೫೮ರಲ್ಲಿ ಈ ವ್ಯವಹಾರ ರೂ. ೧೬೮೧ ಕೋಟಿ ಬೆಲೆಯ ೬೩.೩೦ ಲಕ್ಷ ಪಾಲಿಸಿಗಳಿಗೆ ಏರುತ್ತದೆ. ೫೭ರಲ್ಲಿ ಜೀವ ವಿಮಾ ನಿಧಿ ರೂ. ೪೧೦.೮೧ ಕೋಟಿಗಳಾಗಿದ್ದರೆ, ೫೮ರಲ್ಲಿ ಈ ನಿಧಿ ರೂ. ೪೭೭.೮೧ ಕೋಟಿಗಳಿಗೆ ಏರಿರುತ್ತದೆ. ೫೭ರಲ್ಲಿ ರಿನೀವಲ್ ಖರ್ಚಿನ ವೆಚ್ಚದ ಪರಿಮಾಣ ಸೇಕಡಾ ೧೫.೮೯ ಆಗಿದ್ದರೆ, ೧೯೫೮ರಲ್ಲಿ ಈ ವೆಚ್ಚ ಸೇಕಡಾ ೧೩.೪೬ಕ್ಕೆ ಇಳಿದಿರುತ್ತದೆ, ಜಮಾ ಖರ್ಚಿನ ಬಗ್ಗೆ ಅವಷ್ಟು ಜಾಗ್ರತೆಯನ್ನು ವಹಿಸಿರುವುದರಿಂದ ೧೯೫೯ರಲ್ಲಿ ಮತ್ತು ಮುಂದಿನ ವರ್ಷಗಳಲ್ಲಿ ಖರ್ಚಿನ ವೆಚ್ಚದ ಪರಿಮಾಣ ಇನ್ನಷ್ಟು ತಗ್ಗಲಿರುವುದೆಂದು ಚೇರ್‌ಮೆನ್ ಹೇಳಿದರು.

೫೯ರ ಮೊದಲ ಎಂಟು ಮಾಸಗಳಲ್ಲಿ ಕಾರ್ಪೋರೇಶನ್ ೧೪೮.೧೬ ಕೋಟಿ ರೂಪಾಯಿಗಳ ಹೊಸ ವ್ಯವಹಾರವನ್ನು ಪೂರ್ತಿಗೊಳಿಸಿದೆ. ಇದು ೫೮ರ ಮೊದಲ ಎಂಟು ತಿಂಗಳ ವ್ಯವಹಾರಕ್ಕಿಂತ ಸೇಕಡಾ ೨೩ರಷ್ಟು ಹೆಚ್ಚಾಗಿರುತ್ತದೆ. ಇದೇ ರೀತಿಯಲ್ಲಿ ಮುಂದುವರಿದಲ್ಲಿ ಕಾರ್ಪೋರೇಶನಿನ ಪಂಚವಾರ್ಷಿಕ ಯೋಜನೆಯ ಪ್ರಥಮ ವರ್ಷದ ಗುರಿ—೪೧೫ ಕೋಟಿ ರೂಪಾಯಿಗಳ ವ್ಯವಹಾರವನ್ನು ಪೂರ್ತಿಗೊಳಿಸಲು ಕಷ್ಟವಾಗಲಾರದೆಂದು ತಿಳಿಯಲಾಗಿದೆ. ೫೮ರಲ್ಲಿ ೧೪ ಬ್ರಾಂಚ್ ಮತ್ತು ೬೮ ಸಬ್ ಆಫೀಸುಗಳನ್ನು ತೆರೆಯಲಾಗಿತ್ತು. ೫೯ರ ಮೊದಲ ೮ ತಿಂಗಳುಗಳಲ್ಲಿ ಒಂದು ಡಿವಿಜನಲ್ ಆಫೀಸು ೧೨ ಬ್ರಾಂಚ್ ಮತ್ತು ೩ ಸಬ್ ಆಫೀಸುಗಳನ್ನು ತೆರೆಯಲಾಗಿರುತ್ತದೆ. ಇದರಲ್ಲಿ ಕೆಲವು ಆಫೀಸುಗಳನ್ನು ಹಿಂದೆಂದೂ ಜೀವ ವಿಮಾ ಆಫೀಸುಗಳು ಇಲ್ಲದ ಸ್ಥಳಗಳಲ್ಲಿ ತೆರೆಯಲಾಗಿರುತ್ತದೆ, ಚಿಕ್ಕ ಚಿಕ್ಕ ಗ್ರಾಮಗಳಲ್ಲಿಯೂ ಈಗ ಜೀವ ವಿಮಾ ಸೌಲಭ್ಯಗಳನ್ನು ದೊರಕಿಸುವ ಕಾರ್ಯ ಬಹಳ ಭರದಿಂದ ಸಾಗುತ್ತಿದೆ. ರಾಜಸ್ಥಾನ್, ಬಿಹಾರ್, ಆಂಧ್ರ ಪ್ರದೇಶ, ಆಸ್ಸಾಮ ರಾಜ್ಯ ಸರಕಾರಗಳು ಜೀವ ವಿಮಾ ಸಂದೇಶವನ್ನು ಪಸರಿಸುವ ಕಾರ್ಯದಲ್ಲಿ ಸಾಕಷ್ಟು ಸಹಕಾರವನ್ನು ನೀಡಿರುತ್ತವೆ.

ಆಫೀಸರು ಪದವಿಗಳು, ನೌಕರರಿಗೆ ಬೋನಸ್, ಮುಂತಾದ ಹೆಚ್ಚಿನ ಕಾರ್ಪೋರೇಶನಿನ ಸಮಸ್ಯೆಗಳನ್ನು ತೃಪ್ತಿಕರವಾಗಿ ಪರಿಹರಿಸಲಾಗಿರುತ್ತದೆ. ಏಜನ್ಸೀ ಬಲದಲ್ಲಿಯೂ ಬಹಳ ಸುಧಾರಣೆಯಾಗಿರುತ್ತದೆ. ಅದಲ್ಲದೆ ವಿಮಾ ಉದ್ಯೋಗಸ್ಥರನ್ನು ವಿಮಾ ಕ್ಷೇತ್ರದಲ್ಲಿ ತರಬೇತುಗೊಳಿಸುವ ಕಾರ್ಯಕ್ರಮವನ್ನೂ ಕೈಗೊಳ್ಳಲಾಗಿದೆ ಈಗಿರುವ ೧೨ ಶಿಕ್ಷಣ ಕೇಂದ್ರಗಳು ಸುಮಾರು ೧೫೦೦ ಫೀಲ್ಡ್ ಆಫೀಸರರನ್ನು ಇಷ್ಟರಲ್ಲಿಯೇ ತರಬೇತುಗೊಳಿಸಿರುತ್ತವೆ. ಸ್ವಲ್ಪ ಸಮಯದಲ್ಲಿಯೇ ಆಡಳಿತಾ ವಿಭಾಗದ ನೌಕರರನ್ನೂ ತರಬೇತುಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗುವುದು. ವಿಸ್ತರಿಸುತ್ತಿರುವ ವಿಮಾ ವ್ಯವಹಾರದ ಆವಶ್ಯಕತೆಗಳಿಗಾಗಿ ಹೊಸ ಕಟ್ಟಡಗಳನ್ನ ಕಟ್ಟಲಾಗುವುದು. ಆಫೀಸುಗಳಿಗಾಗಿ ಕಟ್ಟಡಗಳನ್ನು ಕಟ್ಟುವುದು ಮಾತ್ರವಲ್ಲದೆ, ನೌಕರರಿಗೆ ಮನೆಗಳನ್ನು ಒದಗಿಸುವ ಯೋಜನೆಯನ್ನೂ ಇದರಲ್ಲಿ ಸೇರಿಸಲಾಗಿರುವುದು.

೧೯೫೮ರ ಕೊನೆಯಲ್ಲಿ ಸಾರ್ವಜನಿಕ ವಿಭಾಗದಲ್ಲಿ ಸೇಕಡಾ ೭೮.೩ ಮತ್ತು ಖಾಸಗಿ ವಿಭಾಗದಲ್ಲಿ ಸೇಕಡಾ ೨೧.೭ ರಷ್ಟು ಹಣವನ್ನು ಕಾರ್ಪೋರೇಶನ್ ತೊಡಗಿಸಿರುತ್ತದೆ. ೧೯೫೭ರಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಸೇಕಡಾ ೭೭.೯ ಮತ್ತು ಖಾಸಗಿ ಕ್ಷೇತ್ರದಲ್ಲಿ ಸೇಕಡಾ ೨೨.೧ರಷ್ಟು ಹಣವನ್ನು ತೊಡಗಿಸಲಾಗಿತ್ತು. ಸ್ಟೋಕ್ ಮಾರ್ಕೆಟ್‌ಗಳಲ್ಲಿ ಕುಂದಿಲ್ಲದ ಶೇರುಗಳು ಸಾಕಷ್ಟು ದೊರೆಯದಿರುವುದರಿಂದ ಸರಕಾರದಲ್ಲಿ ಮತ್ತು ಮಂಜೂರು ಮಾಡಿರುವ ಭದ್ರತಾ ಪತ್ರಗಳಲ್ಲಿ ಮಾತ್ರ ಈಗ ಇನ್‌ವೆಸ್ಟ್ ಮಾಡಲು ಅನುಕೂಲವಿರುತ್ತದೆ ಎಂದು ಶ್ರೀ ಗೋಪಾಲಕೃಷ್ಣನ್‌ನವರು ತಿಳಿಸಿದರು. ಇತ್ತೀಚೆಗೆ ಆಸ್ತಿಗಳ ಮೇಲೆ ಸಾಲಕೊಡುವ ಪದ್ಧತಿಯನ್ನು ತಿರಿಗಿ ಜಾರಿಗೆ ತಂದಿರುವುದರಿಂದ ಸ್ವಲ್ಪಮಟ್ಟಿಗೆ ಪ್ರೈವೇಟ್ ಸೆಕ್ಟರ್‌ನಲ್ಲಿ ಹೆಚ್ಚಿಗೆ ಇನ್‌ವೆಸ್ಟ್‌ಮೆಂಟ್ ಮಾಡಲು ಅನುಕೂಲವಾಗುವುದೆಂದು ಚೇರ್‌ಮೆನ್‌ನವರು ತಿಳಿಸಿದರು. ೧೯೫೮ರಲ್ಲಿ ಜೀವವಿಮಾ ನಿಧಿಯ ಮೇಲೆ ಸೇಕಡಾ ೩.೫೨ರಂತೆ ಬಡ್ಡಿಯನ್ನು ಸಂಗ್ರಹಿಸಲಾಗಿದೆ. ೧೯೫೭ರಲ್ಲಿ ಬಡ್ಡಿಯ ದರ ಸೇಕಡಾ ೩.೭೪ ಆಗಿತ್ತು. ಈ ಬಡ್ಡಿಯ ದರದಲ್ಲಿ ಇಳಿತಕ್ಕೆ ಕಾರಣವೇನೆಂದರೆ, ಹಿಂತಿರುಗಿ ಸಿಗಬೇಕಾದ ತೆರಿಗೆಯ ಹಣ ಇನ್ನು ಸಿಗಬೇಕಾಗಿದೆ. ಈ ಹಿಂತಿರುಗಿ ಬರುವ ತೆರಿಗೆಯ ಹಣವನ್ನೂ ಲೆಕ್ಕಕ್ಕೆ ತೆಗೆದುಕೊಂಡಲ್ಲಿ ೫೮ರ ಬಡ್ಡಿಯ ದರಕೂಡಾ ಕಳೆದ ವರ್ಷದಷ್ಟೇ ಆಗುವದು.

ಕಾರ್ಪೋರೇಶನಿನ ಕಾರ್ಯಸಾಫಲ್ಯತ್ವದಲ್ಲಿ ಬಹಳ ಸುಧಾರಣೆಯಾಗಿರುವುದರಿಂದ, ವಿಮಾ ನೌಕರರ ಹೆಚ್ಚಿನ ಸಮಸ್ಯೆಗಳನ್ನು ತೃಪ್ತಿಕರವಾಗಿ ಪರಿಹರಿಸಿರುವುದರಿಂದ, ಈಗ ಕಾರ್ಪೋರೇಶನ್ ಅದರ ಪಂಚವಾರ್ಷಿಕ ಯೋಜನೆಯ ಪ್ರಥಮ ವರ್ಷದ ಗುರಿಯನ್ನು ಸಾಧಿಸುವ ಕಾರ್ಯದಲ್ಲಿ ತೊಡಗಿರುವುದೆಂದು ಶ್ರೀ ಗೋಪಾಲಕೃಷ್ಣನವರು ತಿಳಿಸಿದರು.

ಕ್ಷೀರ-ಕಿರಣ

(೪ನೇ ಪುಟದಿಂದ)

'ಟ್ರೇ'ಯಲ್ಲಿ ಉಪ್ಪುನೀರನ್ನು ತುಂಬಿಸಬೇಕು. ಇದರಡಿಯಲ್ಲಿ ಉಗಿಯ ಸಹಾಯದಿಂದ ಟ್ರೇಯನ್ನು ಬಿಸಿಮಾಡುತ್ತಾರೆ. ಆಗ, ಉಪ್ಪುನೀರು ಬಿಸಿಯಾಗಿ, ಅದರಲ್ಲಿನ ನೀರಿನಂಶವು ಆವಿಯ ರೂಪದಲ್ಲಿ ಕೊಳವೆಗಳ ಮೂಲಕ ಬೇರೆಡೆಗೆ ಹೋಗಿ ಜಮೆಯಾಗಿ, ತಣಿದ ಬಳಿಕ ನೀರಾಗುತ್ತದೆ. ಈ ರೀತಿ ನೀರನ್ನು ತಯಾರಿಸಲು ಒಂದು ಸಾವಿರ ಗೇಲನ್ ಉಪ್ಪುನೀರಿಗೆ ೩೦ ಸೆಂಟು ವೆಚ್ಚ ಬರಬಹುದು.

ಇನ್ನು ಕೇ:ವು ವೈಜ್ಞಾನಿಕರು ಸೂರ್ಯತಾಪವನ್ನು ಉಪ್ಪುನೀರಿನ ಶುದ್ಧೀಕರಣಕಾರ್ಯದಲ್ಲಿ ಬಳಸಬಲ್ಲ ಯಂತ್ರಗಳ ನಿರ್ಮಾಣದ ಆಲೋಚನೆಯಲ್ಲಿಯೂ ಇದ್ದಾರೆ.

ಉಪ್ಪುನೀರನ್ನು ಗಡ್ಡೆಯಾಗಿಸಿ ಅನಂತರ ಸಿಹಿನೀರನ್ನಾಗಿ ಮಾಡುವ ಇನ್ನೊಂದು ವಿಧಾನವಿದೆ. ಈ ಕಾರ್ಯದಲ್ಲಿ "ಬೆಟಲೆ ಮೆಮೋರಿಯಲ್ ಸಂಶೋಧನಾಲಯ"ದಲ್ಲಿ ಈ ಬಗೆ ಪ್ರಯೋಗ ನಡೆದು, ಸಮುದ್ರ ಜಲವನ್ನು ಪೇಯ ಜಲವಾಗಿ ಮಾಡುವುದರಲ್ಲಿ ಸಫಲತೆ ಹೊಂದಿದ್ದಾರೆ

ಪ್ರಪಂಚದ ಸರ್ವತ್ರವೂ ನೀರ ಸಂಶೋಧನೆಯು ತೀವ್ರವಾಗುತ್ತಿದೆ. ಮರುಭೂಮಿಯಡಿಯ ನೀರ ನಿಕ್ಷೇಪವನ್ನು ಕಂಡು ಹಿಡಿಯಲು ಕಾಹಿರಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸೈಯದ ಮಿಶ್ರರು ಒಂದು ಹೊಸ ವಿಧಾನವನ್ನು ಸಂಶೋಧಿಸಿದ್ದಾರೆ. ವಿಶೇಷ ಯಂತ್ರಗಳ ಸಹಾಯದಿಂದ ರೇಡಿಯೋ ಧ್ವನಿತರಂಗಗಳನ್ನು ಭೂಗರ್ಭಕ್ಕೆ ಕಳಿಸಲಾಗುತ್ತದೆ. ಇವುಗಳಲ್ಲಿ ಕೆಲವು ಭೂಮಿಯ ಒಳಭಾಗವನ್ನು ಹೊಕ್ಕು ಅಲ್ಲಿನ ನೀರ ನಿಕ್ಷೇಪಕ್ಕೆ ತಾಗಿ, ಅಲ್ಲಿ ಧ್ವನಿಯನ್ನುಂಟು ಮಾಡುವುದು ಮಾತ್ರವಲ್ಲದೆ, ಈ ಶಬ್ದವು ಭೂಮಿಯ ಮೇಲೆ ಹಿಂತಿರುಗಿ ಬರುತ್ತದೆ. ಇವನ್ನು ರೇಡಿಯೋ ಟ್ರಾನ್ಸ್ ಮಿಟರುಗಳ ಸಹಾಯದಿಂದ ಮುದ್ರೀಕರಿಸಿಕೊಂಡು, ನೀರ ನಿಕ್ಷೇಪವೆಲ್ಲಿದೆ ಎಂದು ಪ್ರೊ| ಸೈಯದರು ಕಂಡುಕೊಳ್ಳಬಲ್ಲರು.

ಉಪ್ಪು ನೀರನ್ನು ಸಿಹಿಯಾಗಿಸುವುದರೊಡನೆ ನೀರಿನ ಸುಲಭ ಭಂಡಾರವನ್ನು ಕಡಿಮೆಯಾಗುವದಕ್ಕೂ ಬಿಡಬಾರದೆಂದು ವೈಜ್ಞಾನಿಕರ ಆಶೆ. ನೀರಿನ ಮೇಲೆ ಹೆಕ್ಸಾಡಿ ಕೆನೋಲ್ ಎಂಬ ರಾಸಾಯನಿಕ ದ್ರವ್ಯವನ್ನೆರಚಿದರೆ, ಆಗ, ಆವಿಯಾಗುವ ನೀರಿನ ಬಹ್ವಂಶ ಉಳಿಸಬಹುದೆಂದು ವಿಜ್ಞಾನಿಗಳ ದೃಷ್ಟಿಕೋಣವಿದೆ. ಈ ರಾಸಾಯನಿಕ ಪದಾರ್ಥ ನೀರಿನ ಮೇಲೆ ಎಣ್ಣೆಯಂತೆ ತೇಲಿಕೊಂಡಿದ್ದು ಜಲಕಣವು ಆವಿಯಾಗದಂತೆ ನೋಡುತ್ತವೆ. ಆದರೆ, ಆಗ ಮಳೆಯ ಅಭಾವವಾಗದಂತೆಯೂ ಬೇರೆ ಮಾರ್ಗವನ್ನರಸಬೇಕಾಗುವುದು.

ವೈಜ್ಞಾನಿಕರು ಇನ್ನೂ ಒಂದು ಮಹತ್ವದ ಸಂಶೋಧನೆಯಲ್ಲಿ ತೊಡಗಿದ್ದಾರೆ. ಅಣವಿಕ ಶಸ್ತ್ರಾಸ್ತ್ರಗಳ ಪ್ರಯೋಗಗಳಿಂದ ಅಶುದ್ಧವಾದ ನೀರನ್ನು ಪುನಃ ಶುದ್ಧೀಕರಿಸುವ ಸಾಧ್ಯಾಸಾಧ್ಯತೆಗಳ ಬಗ್ಗೆಯೂ ಇವರು ತಲೆ ಕೆರೆದುಕೊಂಡಿದ್ದಾರೆ.

ಹೀಗೆ ನಾವು ಕುಡಿಯುವ ನೀರು ನಾವೆಲ್ಲ ತಿಳಿದುಕೊಂಡಿರುವಷ್ಟು ಸದರವಲ್ಲ; ಅದು ರಾಸಾಯನಿಕ ಪ್ರಯೋಗ ಸಂಶೋಧನೆಗಳಿಗೆ ಗುರಿಯಾಗಲು ಸಮರ್ಥವಾದ ಯೌಗಿಕ ಪದಾರ್ಥವಾಗಿವೆ.

(ವಿವಿಧ ಮೂಲಗಳಿಂದ)

—ಗೋರಾ.

ಉಡುಪಿ. ಡಿ. ಮು. ಕೋರ್ಟಿನಲ್ಲಿ

S: C. S. No 378/1959.

U ರಾಮಪ್ಪಯ್ಯ ಶ್ಯಾನಭಾಗ —ವಾದಿ.

ಮತ್ತು

ವಿೂನಕ್ಕ ಶೆಡ್ತಿ (dead) ಕೂಡಾ —ಪ್ರತಿವಾದಿರು.

೪ನೇ ಪ್ರತಿವಾದಿ ವಾಸು ಶೆಟ್ಟಿ, ಶೇಷ ಶೆಡ್ತಿ ಮಗ ಉಡ್ಪಿ ತಾಲೂಕು ಮಜೂರು ಗ್ರಾಮ. ಇವರೀಗೆ ಈ ಮೂಲ್ಕ ತಿಳಿಸುವುದೇನಂದ್ರೆ—

ವಾದಿಯ ಹಕ್ಕಿನ ಆಸ್ತಿಯನ್ನು ಪ್ರತಿವಾದಿರು ನಿಗ್ದಿ ಗೇಣಿಗೆ ಅನುಭವಿಸಿ ಬರುತ್ತಾ ಕಳೆದ 6 ವರ್ಷಗಳ ಗೇಣಿ, Half cess enhanced assessment ಮತ್ತು ಬಡ್ಡಿ ಕೂಡಾ ರೂಪಾಯಿ 15—20ಕ್ಕೆ ವಾದಿಯು ಸದ್ರಿ ಕೋರ್ಟಿನಲ್ಲಿ ಮಾಡಿದ ದಾವೆಯು ನಿಮ್ಮ ನೋಟೀಸು ಬಗ್ಗೆ ತಾ. 5—11—1959ಕ್ಕೆ ಇಟ್ಟಿರುವದ್ರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ಕೋರ್ಟಿನಲ್ಲಿ ಸದ್ರಿ ದಿವಸ ಹಗಲು ಘಂಟೆ 10ಕ್ಕೆ ಹಾಜ್ರಾಗಿ ಜಾಹೀರು ಮಾಡಿ ಕೊಳ್ಳಲಿಕ್ಕೆ ತಪ್ಪಿದ್ರೆ ದಾವೆಯು ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Varadaraya Pai
Advocate for Plaintiff
ಉಡ್ಪಿ. 9—10—1959.



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ಸಂಸ್ಕಾರ ಮಹತ್ವ

ಮಾನವನ ಭಾವನೆ ಮತ್ತು ಜೀವನ ಸಂಸ್ಕಾರ

ಎಳೆಯ ಮನಸ್ಸಿನಲ್ಲಿ ಉತ್ತಮ ಸಂಸ್ಕಾರವನ್ನು ಬಿತ್ತಿದರೆ ಮಾತ್ರ ಜನಾಂಗ ಉನ್ನತವಾಗಲು ಸಾಧ್ಯ.

ಶಿಕ್ಷಣದ ದೃಷ್ಟಿಕೋಣ—ಮಾನವನ ಸ್ವಭಾವದಲ್ಲಿ ಭಾವನೆಗೆ ಅತ್ಯಂತ ಮಹತ್ವದ ಸ್ಥಾನವಿದೆ, ಸಮಗ್ರ ಕಾರ್ಯಗಳ, ಸಾಮಾಜಿಕ, ರಾಜನೈತಿಕ ಯಾ ಇತರ ವ್ಯವಹಾರಗಳ ಚಾಲಕ ಶಕ್ತಿಯು ಭಾವನೆಯೇ. ಮಾನವನ ಪ್ರಾರಂಭಿಕ ಸಂಸ್ಕಾರಗಳಿಗೂ, ಭಾವನೆಗೂ ನಿಕಟ ಸಂಬಂಧವಿದೆ, ಅಬೋಧ ಬಾಲಕನ ಮನಸ್ಸಿನ ಮೇಲೆ ಅಭ್ಯಾಸ, ಪರಿಸ್ಥಿತಿ ಪುನರಾವೃತ್ತಿಗಳ ಮೂಲಕ ಯಾವ ಭಾವನೆಗಳ ಸಂಪರ್ಕವಾಗುವುದೋ, ಅವುಗಳನ್ನನುಸರಿಸಿ ಅವನ ಗುಪ್ತ ಮನದಲ್ಲಿ ಸಂಸ್ಕಾರಗಳ ನಿರ್ಮಾಣವಾಗುವುದನ್ನು ನಾವು ನೋಡಬಹುದು. ಭಾವನೆಯೇ ವ್ಯಕ್ತಿ. ನಾವು ಯಾವ ಭಾವನೆಗಳ ಪ್ರಭಾವಕ್ಕೆ ಒಳಗಾಗಿರುವೆವೋ ಅವುಗಳನ್ನು ತ್ಯಜಿಸುವುದು ಬಹು ಕಷ್ಟ. ನಮ್ಮ ಪ್ರತಿಯೊಂದು ಕಾರ್ಯ, ವಿಚಾರ, ಆಲೋಚನೆಗಳ ಹಿಂದೆ ಯಾವುದಾದರೊಂದು ಭಾವನೆಯು ಪ್ರಕಾಶಿಸುವುದು.

ಭಾವನೆಗಳ ವ್ಯಾಪಕತ್ವ—ತರ್ಕ, ವಿಚಾರ, ಆಲೋಚನೆ ಇತ್ಯಾದಿಗಳೆಲ್ಲಾ ಮನಸ್ಸಿನ ಮಹತ್ವಪೂರ್ಣ ವ್ಯಾಪಾರಗಳಾದರೂ, ಭಾವನೆಯು ಇವೆಲ್ಲಕ್ಕಿಂತ ಶ್ರೇಷ್ಠವಾಗಿದೆ. ಭಾವನೆಯು ಮನಸ್ಸಿನ ಕೊನೆಯ ಹಂತವಾದ ಬುದ್ಧಿಯ ಮೇಲೂ ತನ್ನ ಪ್ರಭಾವವನ್ನು ಬೀರುವುದು. ನಾವು ಯಾವ ಭಾವನೆಯ ಪ್ರಭಾವಕ್ಕೊಳಗಾಗಿರುವೆವೋ, ಅದಕ್ಕನುಸರಿಸಿ ನಮ್ಮ ತರ್ಕ, ವಿಚಾರ ಶಕ್ತಿಗಳು ಕಾರ್ಯ ಮಾಡುವುವು. ಭಾವನೆಯ ಸಂಬಂಧವು ಮನಸ್ಸಿಗಿಂತಲೂ ಹೆಚ್ಚಾಗಿ ಹೃದಯಕ್ಕೆ ಇದೆ.

ಒಂದು ವ್ಯಕ್ತಿಯ ಹೃದಯದಲ್ಲಿ ದೇಶಪ್ರೇಮ, ಮಾತಾಪಿತೃ ಪ್ರೇಮಗಳ ಭಾವನೆಯಿದ್ದರೆ ಆ ವ್ಯಕ್ತಿಯ ತರ್ಕ ಶಕ್ತಿಯು "ಈ ದೇಶ ನಮ್ಮದು. ಇದು ನಮ್ಮ ಸಂಸ್ಕೃತಿಯ ಆದಿ ಸ್ರೋತವಾಗಿದೆ. ಪ್ರತಿಷ್ಠೆಯ ಸೋಪಾನವಾಗಿದೆ. ನಾವು ಇದರ ರಕ್ಷಣೆಯನ್ನು ಮಾಡಬೇಕು. ಜಗತ್ತಿನಲ್ಲಿ ಅತ್ಯುತ್ಕೃಷ್ಟ ದೇಶವನ್ನಾಗಿ ಮಾಡಬೇಕು" ಇತ್ಯಾದಿ ವಿಚಾರಗಳನ್ನು ಉಪಸ್ಥಿತಗೊಳಿಸುವುದು. ಆದೇ ಸ್ವದೇಶ ಪ್ರೇಮವಿಲ್ಲದ ವ್ಯಕ್ತಿಯು ತರ್ಕಶಕ್ತಿಯು "ದೇಶವು ಹೇಗೇ ಇರಲಿ. ನಮಗೇನು? ನಾವು ಇಲ್ಲಿ ಇರುವಷ್ಟು ಕಾಲ ದೇಶವೆಂದು ಏಕೆ ತಲೆ ಚಚ್ಚಿಕೊಳ್ಳಬೇಕು. ನಾವು ತಿಂದುಂಡು ಸುಖದಿಂದಿರುವ ದಾರಿ ನೋಡುವ ಇತರರು ಬೇಕಾದರೆ ಸಾಯಲಿ" ಇತ್ಯಾದಿ ವಿಚಾರಗಳನ್ನೇ ಸ್ಮರಿಸುವುದು.

ಜಗತ್ತಿನ ಎಲ್ಲಾ ರಾಷ್ಟ್ರಗಳಿಗಿಂತಲೂ ಜರ್ಮನ್ ರಾಜ್ಯವು ಈ ವಿಷಯದಲ್ಲಿ ತುಂಬಾ ಮುಂದುವರಿದಿದೆ ಎನ್ನಬಹುದು. ಕಾರಣ ಹಿಟ್ಲರನು ಚಿಕ್ಕ ಮಕ್ಕಳಿಗೇ "ನೀವು ಶ್ರೇಷ್ಠರು, ವೀರರು, ಸಾಹಸಿಗಳು, ಜರ್ಮನ್ ಜಾತಿಯು ಜಗತ್ತಿನ ಎಲ್ಲಾ ಜಾತಿಗಳಿಗಿಂತಲೂ ಶ್ರೇಷ್ಠ. ಇತರರು ನಿಮ್ಮ ಗುಲಾಮರು. ನೀವು ಅವರನ್ನು ಆಳಬೇಕು" ಎಂಬಿತ್ಯಾದಿ ವಿಚಾರಗಳನ್ನು ಕಲಿಸಿ, ಅವರ ಭಾವನೆಗಳೇ ಆ ರೀತಿ ಇರುವಂತೆ ಮಾಡಿದನು. ಈ ಭಾವನೆಗಳೇ ಸಂಸ್ಕಾರಗಳಾಗಿ ವಿಕಸಿತ ಹೊಂದಿ ಜರ್ಮನ್ ಜನಾಂಗವು ಉತ್ಸಾಹ, ವೀರ, ಧೈರ್ಯ, ಸಾಹಸಗಳ ಪ್ರತಿಮೂರ್ತಿಯಾಯಿತು.

ಇಂದಿನ ಶಿಕ್ಷಣ ಕ್ರಮದಲ್ಲಿ, ಭಾವನೆಗಳು ಉತ್ತಮ ರೀತಿಯಿಂದ ವಿಕಸಿತವಾಗುವಂತೆ ಮಾಡಿ, ಅವುಗಳಿಗೆ ತಕ್ಕ ವಾತಾವರಣವನ್ನು ನಿರ್ಮಿಸುವುದು ಅತಿ ಅಗತ್ಯ. ಪ್ರಾರಂಭದಿಂದಲೇ ಚಿಕ್ಕ ಮಕ್ಕಳಿಗೆ ಮಾತಾಪಿತೃ ಪ್ರೇಮ, ದೇಶಭಕ್ತಿ, ಸಮಾಜ ಸೇವೆ, ವಿಶ್ವ ಪ್ರೇಮ, ಭ್ರಾತೃತ್ವ, ಇತ್ಯಾದಿಗಳ ಶಿಕ್ಷಣವನ್ನು ಕೊಟ್ಟಲ್ಲಿ ಮುಂದೆ ಅವುಗಳು ವಿಕಾಸಹೊಂದಿ ಉತ್ತಮ ಸಂಸ್ಕಾರಗಳಾಗಿ ಪರಿವರ್ತನೆಗೊಂಡು ಜನಾಂಗವು ಶ್ರೇಷ್ಠವಾಗುವುದರಲ್ಲಿ ಸಂಶಯವಿಲ್ಲ.

ಭಾವನಾ ಪ್ರಕಾಶದ ನಿಯಮಗಳು:—ಪ್ರಾರಂಭದಲ್ಲಿ ಭಾವನೆಯು ಮಾರ್ಗದರ್ಶನಕ್ಕೆ ಕೆಲವು ವಸ್ತುಗಳ ಜೋಡಣೆಯು ಅಗತ್ಯ. ಇದನ್ನು ಅಂಧ ಭಕ್ತಿ ಎನ್ನಬಹುದು. ಮಕ್ಕಳ ಸಮ್ಮುಖದಲ್ಲಿ ಯಾರಾದರೂ ಮಹಾಪುರುಷ, ಗುರು, ವಿದ್ವಾಂಸರಾಗಲೀ ಧರ್ಮ ಗ್ರಂಥಗಳಾಗಲೀ ಬಂದರೆ-ಆ ವಿಷಯದಲ್ಲಿ ಪೂಜ್ಯ ಭಾವನೆಯನ್ನು ಹುಟ್ಟಿಸುವುದು ನಮ್ಮ ಕರ್ತವ್ಯ. ತಂದೆ ತಾಯಿಗಳಲ್ಲಿ ಭಕ್ತಿ, ಗುರುವಿನಲ್ಲಿ ಶ್ರದ್ಧೆ, ಸ್ವದೇಶ ಪ್ರೇಮ, ದೈವಭಕ್ತಿಗಳ ಅಂಕುರವನ್ನು ಬಾಲ್ಯದಲ್ಲೇ ನಡಬೇಕು.

ಬೀಜದಂತೆ ವೃಕ್ಷ. ನಮ್ಮ ಭಾವನೆಗಳಲ್ಲಿ ನೈತಿಕತೆ, ಶ್ರೇಷ್ಠತೆ, ಪವಿತ್ರತೆಗಳ ಬೀಜವನ್ನು ಬಿತ್ತದಿದ್ದಲ್ಲಿ, ನಾವು ಹೇಗೆ ಉತ್ತಮ ಚಾರಿತ್ರ್ಯವುಳ್ಳ ವ್ಯಕ್ತಿ, ಸಮಾಜ, ಯಾ ದೇಶದ ಸೃಷ್ಟಿಯಾದೀತು. ಇದಕ್ಕಾಗಿ ಶಿಕ್ಷಣ ಕ್ರಮದಲ್ಲಿ ಬದಲಾವಣೆಗಳಾಗಬೇಕು. ಶಿಕ್ಷಕರಲ್ಲಿ ಬದಲಾವಣೆಗಳಾಗಬೇಕು. ಇಲ್ಲದಿದ್ದರೆ ದೇಶದ ಉನ್ನತಿಯಾಗಲಾರದು.

ಮಕ್ಕಳ ಹೃದಯದಲ್ಲಿ ಉಚಿತ ಭಾವನೆಗಳ ಸೃಷ್ಟಿ:—ಮೊತ್ತ ಮೊದಲು ತಂದೆ ತಾಯಿಗಳು ಸ್ವಯಂ ಪವಿತ್ರತೆ, ಶ್ರದ್ಧೆ, ಭಕ್ತಿ, ಪ್ರೇಮ, ಸಹಾನುಭೂತಿ, ಆದರದ ಭಾವನೆಗಳನ್ನು ಮಕ್ಕಳು ಚಿಕ್ಕವರಿರುವಾಗಲೇ, ಅವರಿಗೆ ಕಲಿಸಿಕೊಡಬೇಕು. ತಾವು ಸ್ವತಃ ಉತ್ತಮ ಭಾವನೆಗಳ, ಆದರ್ಶಗಳ ಪ್ರತಿ ಮೂರ್ತಿಗಳಾಗಿರಬೇಕು. ಪ್ರಾರಂಭದಲ್ಲಿ ಮಕ್ಕಳ ತರ್ಕಶಕ್ತಿಯು ವೃದ್ಧಿಹೊಂದಿರುವುದಿಲ್ಲ. ಹೀಗಾಗಿ ಉತ್ತಮ ಭಾವನೆಗಳ ಪ್ರಭಾವವು ಚಿಕ್ಕ ಮಕ್ಕಳ ಮೇಲೆ ಬಹು ಬೇಗನೇ ಆಗುವುದು. ಮಕ್ಕಳು ಅನುಕರಣ ಪ್ರಿಯರು. ವೀರ ಪೂಜಕರು. ಮಾತಾಪಿತೃಗಳೂ, ಅಧ್ಯಾಪಕರೂ ಮಕ್ಕಳಿಗೆ ಆದರ್ಶರಾಗಿರುವರು. ಅವರ ಇರುವಿಕೆ, ಆಚಾರ ವ್ಯವಹಾರ, ಸತ್ಯ, ಪವಿತ್ರತೆಗಳೆಲ್ಲವೂ ಅವರಿಗೆ ಅನುಕರಣೀಯವೇ. ಆದ್ದರಿಂದ ಮಕ್ಕಳಿಗೆ ಆದರ್ಶಪ್ರಾಯರಾಗಿರುವ ಈ ವ್ಯಕ್ತಿಗಳು ಚಾರಿತ್ರ್ಯ, ನೈತಿಕ ಬಲವುಳ್ಳವರೂ, ಉಚ್ಚ ಸಂಸ್ಕಾರಿಗಳೂ ಆಗಿರುವುದವಶ್ಯ.

ಇನ್ನು ವಾತಾವರಣದ ಪ್ರಭಾವವೂ ಕಡಿಮೆ ಇಲ್ಲ. ಮಕ್ಕಳ ಬೆಳೆಯುವ ಮನಸ್ಸು ತನಗೆ ಸಿಕ್ಕಿದ ಪ್ರತಿ ವಿಷಯವನ್ನೂ ಗ್ರಹಣಮಾಡುವುದು. ತನ್ನ ಸುತ್ತುಮುತ್ತಲಿನ ವಾತಾವರಣವು ಚೆನ್ನಾಗಿದ್ದರೆ ಮಗುವೂ ಒಳ್ಳೆಯ ಬುದ್ಧಿಯನ್ನು ಕಲಿಯುವುದು. ನಮ್ಮ ಪ್ರತಿ ಮಾತೂ, ಅಂಗ ಸಂಚಾಲನೆಯೂ, ಉಡುಗೆ ತೊಡಿಗೆಗಳೂ ಮಗುವಿನ ಅನುಕರಣೆಗೆ ಸಾಧನವಾಗುವುವು. ಮನೆಯಲ್ಲಿ ಹಿರಿಯರು ಅವಾಚ್ಯ ಶಬ್ದಗಳಿಂದ ಬೈಯ್ಯುವುದನ್ನು ಕೇಳಿದ ಮಕ್ಕಳು ತಾವೂ ಅದನ್ನೇ ಕಲಿಯುವುದರಲ್ಲಿ ಆಶ್ಚರ್ಯವೇನು.

ಹಿರಿಯರು ಸತತ ಪ್ರಯತ್ನದಿಂದ ತಮ್ಮ ಮಕ್ಕಳು ದಯೆ, ಕೋಮಲತೆ, ಮಾನವತೆ, ಸತ್ಯ, ಪ್ರೇಮ, ಸಹಾನುಭೂತಿ ಇತ್ಯಾದಿ ಗುಣಗಳನ್ನು ಕಲಿಯುವಂತೆ ಮಾಡಬೇಕು. ಉತ್ತಮ ಗೀತೆಗಳನ್ನು ಕಲಿಸಬೇಕು. ಹಿರಿಯರೊಡನೆ ನಮ್ರತೆ, ಕಿರಿಯರೊಡನೆ ಸ್ನೇಹ, ದಯೆ, ಸಮ ವಯಸ್ಕರೊಡನೆ ಮೈತ್ರಿ, ಪ್ರೇಮ ಸಂಘಟನೆ, ಸಹಯೋಗಗಳನ್ನು ಮಕ್ಕಳಿಗೆ ತಿಳಿಸಿ ಅವರ ಮನದಲ್ಲಿ ಅಚ್ಚೊತ್ತುವಂತೆ ಮಾಡಬೇಕು. ಉಚಿತ ನಿರ್ದೇಶನದಿಂದ ಈ ಕಾರ್ಯವನ್ನು ಮಾತಾಪಿತೃಗಳಾಗಲೀ, ಶಿಕ್ಷಕರಾಗಲೀ ಮಾಡಲು ಸಾಧ್ಯವಿದೆ.

ಋಗ್ವೇದದಲ್ಲಿ 'ಮಾತೃಭಾಷೆ, ಮಾತೃ ಸಭ್ಯತೆ, ಮಾತೃಭೂಮಿ, ಈ ಮೂವರು ದೇವಿಯರು ಕಲ್ಯಾಣದಾಯಕಿಯರು. ಅವರು ಮರೆಯದೆ ನಮ್ಮ ಅಂತಃಕರಣದಲ್ಲಿ ನೆಲಸಲಿ" ಎಂದಿದೆ. ಅಂತೇ ಮಕ್ಕಳಲ್ಲಿ ಈ ರೀತಿಯ ಉತ್ತಮ ಭಾವನೆಗಳು ನೆಲೆಗೊಳ್ಳುವಂತೆ ಮಾಡಿದರೆ, ವಯಸ್ಕರಾದೊಡನೆ ಅವರು ರಾಷ್ಟ್ರದ ಉತ್ತಮ ಪ್ರಜೆಗಳಾಗುವುದರಲ್ಲಿ ಸಂದೇಹವಿಲ್ಲ.

—ಕೆ. ಪುರುಷೋತ್ತಮ ಮಲ್ಯ.

ಕಥಾವಿಹಾರ

(೨ನೇ ಪುಟದಿಂದ)

ಕಾಲೇಜ ವಿದ್ಯಾರ್ಥಿಗಳೆಲ್ಲರೂ ಬಂದಿದ್ದರು. ಶೇಖರನ ತಂದೆ, ತಕ್ಕಂದಿರೂ ಬಂದಿದ್ದರು. ಅವರು ಗೋಳೋ ಎಂದು ಅಳುತ್ತಿದ್ದರು. ನಿಂತವರೆಲ್ಲ ಬಾಯಿಗೊಬ್ಬರಾಗಿ ಆವರ ಮನೆಯವರಿಗೆ ಶಪಿಸುತ್ತಿದ್ದರು. ಪ್ರೊಫೆಸರರೂ ಕಣ್ಣೀರಿಟ್ಟರು.

ಇಂದೂ—ಶೇಖರರು ಪ್ರೇಮದ ಸಲುವಾಗಿ ಆತ್ಮಹತ್ಯಮಾಡಿಕೊಂಡರು. ಆದುದರಿಂದ ಶೇಖರನ ಶವವನ್ನು ಊರಿಗೆ ತೆಗೆದುಕೊಂಡು ಹೋಗಿ, ಎರಡೂ ಮೃತ ಶರೀರಗಳನ್ನು ಅಲ್ಲಿಯೇ ಸಂಸ್ಕಾರ ಮಾಡಬೇಕೆಂದು ಕಾಲೇಜದ ವಿದ್ಯಾರ್ಥಿಗಳು ದುಂಬಾಲು ಬಿದ್ದುದರಿಂದ ಶೇಖರನ ಶವವನ್ನು ಊರಿಗೆ ತೆಗೆದುಕೊಂಡು ಹೋಗಬೇಕಾಯಿತು.

ಆ ಎರಡೂ ಮೃತಶರೀರ ಸಂಸ್ಕಾರ ಮಾಡಿ ಆಯಿತು. ಸ್ಮಶಾನದಿಂದ ಬರುವ ಕಾಲಕ್ಕೆ ಇಂದೂ—ಶೇಖರರನ್ನು ಕುರಿತು, ಕೆಲ ಹುಡುಗರು— "ಲೈಲಾ—ಮಜನು" ಎಂದರು. ಮತ್ತಷ್ಟು ಕೆಲ ಹುಡುಗರು "ನೋ, ನೋ, ರೋಮಿಯೋ ಆ್ಯಂಡ ಜುಲೆಟ್" ಎಂದರು. ಅವರೆಲ್ಲರೂ ಶೇಖರ-ಇಂದುಮತಿಯ ಬಾಳಿಗೆ ಕಣ್ಣೀರಿಟ್ಟರೇ ವಿನಃ, ಆವರ ತಂದೆಯೊಡನೆ ಯಾರೂ ಮಾತನ್ನಾಡಲಿಲ್ಲ. ಮಾತನಾಡುವ ಗೋಜಿಗೂ ಹೋಗಲಿಲ್ಲ. ಸುಮ್ಮನೇ ಸ್ಮಶಾನವನ್ನು ಬಿಟ್ಟು, ಹಜ್ಜೆ ಹಾಕಲಿಕ್ಕೆ ಹತ್ತಿದರು.

ಅವರಲ್ಲಿ ಎಲ್ಲರಗಿಂತ ಚಂದ್ರಾನಿಗೆ ಹೆಚ್ಚು ದುಃಖವಾಗಿದೆ ಎಂದು ಮತ್ತೆ ಬೇರೆ ಹೇಳಬೇಕಾಗಿಲ್ಲ. ಆತನೂ ಶೇಖರನ ತಂದೆಯನ್ನೂ, ಇಂದುಮತಿಯ ತಂದೆಯನ್ನೂ ನೋಡಿ ಮುಖ ತಿರುವಿದ. "ಪ್ರೇಮದ ವಿಷಯವನ್ನರಿಯದ ಮೂರ್ಖರು". ಎಂದು ಶಪಿಸಿದ. ಉಗುಳಿದ. ಕಣ್ಣೀರುಗರೆಯುತ್ತ, ಶೇಖರನನ್ನು ನೆನೆಸುತ್ತ, ಹುಚ್ಚನಂತೆ ಯಾವದೋ ದಾರಿ ಹಿಡಿದು, ಏನೇನೋ ಗೊಣಗುತ್ತ ಹೊರಟ. ಆತನನ್ನು ಕಂಡು "ಇವರೀರ್ವರದೂ ಎಷ್ಟು ಮಿತ್ರತ್ವ" ಎಂದು ತಮ್ಮಷ್ಟಕ್ಕೆ ತಾವೇ ಅಂದರು.

—ಶ್ರೀ ಚಂದ್ರಶೇಖರ ಹುರಳಿ,
ಧಾರವಾಡ.

(ಇದು ಇಂದು ಸ್ನೇಹ ಬಳಗದವರಕಥೆ)



ರಾಜಕೀಯ

(೧ನೇ ಪುಟದಿಂದ)

ದೇ ಜನ ಕೋಟಿಯಿತ್ತ ಈ ತೀರ್ಮಾನವನ್ನು ನಾವು ಸ್ವೀಕರಿಸುವುದಾಗಿ ಹೇಳಿದ್ದಾರೆ ಇದು ನಿಜವಾದ ಪಾರ್ಲಿಮೆಂಟರಿ ಪದ್ಧತಿಯ ಶಾಸನದಲ್ಲಿ ಅಪಜಯಗೊಂಡ ಪಕ್ಷವು ವಹಿಸಬೇಕಾದ ಧೋರಣೆಯಾಗಿದೆ. ಇದೇ ವೇಳೆ ಚುನಾವಣೆಯಲ್ಲಿ ಗೆದ್ದ ಕನ್ಸರ್ವೇಟಿವ್ ನಾಯಕ ಶ್ರೀ ಮೆಕಮಿಲನರು ನಾವು ಒಂದೇ ಜನತೆ: ಸಮಾಜಾಭಿವೃದ್ಧಿಗಾಗಿ ಪರಮಾವಧಿ ಪ್ರಯತ್ನ ಮಾಡುವುದು ನಮ್ಮ ಕರ್ತವ್ಯವೆಂದು ಸರಕಾರಿ ಪಕ್ಷದ ನಾಯಕನ ಆಶಯವನ್ನು ಹೊರಗೆಡಹಿದ್ದಾರೆ.

ಚುನಾವಣೆಯಲ್ಲಿ ಈಗಿನ ಸರಕಾರದ ಧ್ಯೇಯ ಧೋರಣೆಗಳಿಗೆ ಬ್ರಿಟಿಷ ಮತದಾರರು ತಮ್ಮ ಸಂಪೂರ್ಣ ಅನುಮತಿಯನ್ನಿತ್ತಂತಾಗಿದೆ ವರಿಷ್ಠ ಸಮ್ಮೇಳನವೊಂದನ್ನುಳಿದರೆ, ವಿದೇಶ ನೀತಿಯು ಈ ಚುನಾವಣೆಯ ಮೇಲೆ ಪರಿಣಾಮ ಬೀರಲಿಲ್ಲ ಎಂದು ರಾಜಕೀಯ ತಜ್ಞರ ಅಂಬೋಣವಿದೆ ಮುಂದಿನ ಮಂತ್ರಿ ಮಂಡಳಿಯ ಸದಸ್ಯರ ಬಗ್ಗೆ ಊಹಾಪೋಹಗಳು ನಡೆಯುತ್ತಿವೆ ಯಾವರೂ ಈಗಿನ ಮಂಡಳಿಯಲ್ಲಿ ವಿಶೇಷ ಬದಲಾವಣೆಯಾಗುವ ಸಂಭವವಿಲ್ಲವೆಂದು ತಿಳಿಯುತ್ತದೆ. ಸದ್ಯ ವಿದೇಶ ಮಂತ್ರಿಯಾಗಿರುವ ಶ್ರೀ ಸೆಲ್ವಿನ್ ಲಾಯ್ಡರು ನಾಮಾನ್ಯವಾಗಿ ಎರಡು ತಿಂಗಳೊಳಗೆ ನಡೆಯಬಹುದಾದ ವರಿಷ್ಠ ಸಮ್ಮೇಳನಾನಂತರ ಬೇರೆ ಖಾತೆಯನ್ನು ಪಡೆಯುವರೆಂದು ಹೇಳಲಾಗುತ್ತಿದೆ. ಇದೇನೇ ಇದ್ದರೂ ಬ್ರಿಟನ್ನಿನ ವಿದೇಶ ಧೋರಣೆಯಲ್ಲಾಗಲೀ ಆಂತರಿಕ ಧೋರಣೆಯಲ್ಲಾಗಲೀ ಯಾವ ವಿಶೇಷ ಪರಿವರ್ತನೆಯೂ ಸಂಭಾವ್ಯವಿಲ್ಲವಾದುದರಿಂದ ಬ್ರಿಟನ್ನಿನ ಪ್ರಚಲಿತ ನೀತಿಯೇ ಇನ್ನೂ ಐದು ವರ್ಷ ಮುಂದುವರಿಯುವುದು.

ಚುನಾವಣೆಯಲ್ಲಿ ಯಾರು ಗೆದ್ದರು ಅಥವಾ ಯಾರು ಸೋತರು ಎಂಬುದು ಬ್ರಿಟನ್ನದಲ್ಲಿ ಅಷ್ಟು ಪ್ರಧಾನವಲ್ಲ. ಅಲ್ಲಿರುವ ಎರಡು ಪ್ರಧಾನ ಪಕ್ಷಗಳಲ್ಲಿ ಗೆದ್ದ ಪಕ್ಷಕ್ಕೆ ಪ್ರಬಲವಾದ ವಿರೋಧೀ ಪಕ್ಷವೊಂದು ಉಳಿದೇ ತೀರುವುದು. ಆದುದರಿಂದಲೇ ಅಲ್ಲಿ ಪ್ರಜಾಪ್ರಭುತ್ವ ಉಚಿತ ರೀತಿಯಲ್ಲಿ ಯಶಸ್ವಿಯಾಗಿ ನಡೆಯುತ್ತದೆ. ಬ್ರಿಟನ್ನದ ಗೆದ್ದ ಮತ್ತು ಸೋತ ಪಕ್ಷಗಳ ನಾಯಕರು ವ್ಯಕ್ತಪಡಿಸಿರುವ ಆಶಯಗಳು ನಿಜವಾಗಿಯೂ ಅವರವರ ಸ್ಥಾನಕ್ಕೆ ಅರ್ಹವಾಗಿದೆ; ಇದನ್ನು ಉಳಿದ ಪ್ರಜಾಸತ್ತೆಯ ರಾಜಕೀಯ ಪಕ್ಷಗಳು ಮನವರಿಕೆ ಮಾಡಿಕೊಳ್ಳಬೇಕು.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುಸ್ತಕ ವಿಮರ್ಶೆ

ದಾರಾ—(ಇತಿಹಾಸ ಕಥನ) ಸಂಪಾದಕರು. ಕೊ. ಅ. ಉಡುಪ ಮತ್ತು ಅ. ಗೌ. ಕಿನ್ನಿಗೋಳಿ. ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕ. ಪುಟಗಳು: ೭೦. ಬೆಲೆ: ರೂ. ೧ ೦೦

ಬಾಬರನಿಂದ ಸಂಸ್ಥಾಪಿಸಲ್ಪಟ್ಟು ಅಕ್ಬರನಿಂದ ಪರಿಪೋಷಿತವಾದ ಭಾರತದ ಮೊಗಲ ಸಾಮ್ರಾಜ್ಯವು ಶಾಹಜಹಾನನ ಕಾಲದಲ್ಲಿ ವೈಭವಪೂರ್ಣವಾಗಿ ಮೆರೆದಾಡಿತ್ತು. ಈತನ ಅಂತ್ಯಕಾಲದಲ್ಲಿ ಆತನ ಮಗ ಅವರಂಗಜೇಬನ ಕಾಲಾನಂತರ ಅದು ಪತನದತ್ತ ಧಾವಿಸಿತೆಂದು ಇತಿಹಾಸ ಹೇಳುತ್ತದೆ. ಶಾಹಜಹಾನನು ವೃದ್ಧಾಪ್ಯಾವಧಿಯಲ್ಲಿ ತನ್ನ ಹಿರಿಯ ಮಗ ದಾರಾನನ್ನು ಮೊಗಲಾಧಿಪತ್ಯದಲ್ಲಿ ನಿಯೋಜಿಸಿದರೂ ಅವರಂಗಜೇಬನ ರಾಜನೀತಿಯೇ ಮೇಲುಗೈಯಾಗಿ ದಾರಾನು ಮೃತ್ಯುದಂಡವನ್ನು ಅನುಭೋಗಿಸಬೇಕಾಗಿ ಬಂತು.

ಭಾರತದ ಹಿಂದೂಜನರನ್ನು ಪ್ರೀತಿಸಿಯೇ ಇಲ್ಲಿ ಸಾಮ್ರಾಜ್ಯವಾಳಬೇಕೆಂಬ ಅಕ್ಬರನ ನೀತಿಯಲ್ಲೇ ನಂಬಿಕೆಯಿಟ್ಟು ಬೆಳೆದು ಬಂದ ಶಾಹಜಹಾನನು ದಾರಾನಿಗೂ ಇದೇ ನೀತಿಯಲ್ಲಿ ನಂಬಿಕೆ ಹುಟ್ಟುವಂತೆ ಮಾಡಿದ್ದನು. ಆದರೆ, ಅವರಂಗಜೇಬನ ಕಪಟ ರಾಜಕಾರಣದಲ್ಲಿ "ಇಸ್ಲಾಂ ಧರ್ಮ"ದ ಹೆಸರಿನಲ್ಲಿ ದಾರಾನ ಮುಕುಟ ಹಾರಿಹೋದುದು ಮಾತ್ರವಲ್ಲದೇ ಅವನ ವಂಚನೆಯ ಪರಿಣಾಮವಾಗಿ ದೈವದ್ರೋಹಿ, ದೇಶದ್ರೋಹಿ ಎಂಬ ಅಪವಾದಗಳಿಗೆ ಈಡಾಗಿ ಮೃತ್ಯುದಂಡನೆಗೀಡಾದನು.

ಈ ಕಥೆಯನ್ನು 'ದಾರಾ' ಎಂಬ ಸಣ್ಣ ಪುಸ್ತಕದಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಶಹಜಹಾನನ ನಾಲ್ವರು ಗಂಡು ಮಕ್ಕಳು ಮಾತ್ರವಲ್ಲ ಇರ್ವರು ಹೆಣ್ಣುಮಕ್ಕಳ ರಾಜಕಾರ್ಯ ಧುರಂಧರತೆಯೂ ಇದರಲ್ಲಿ ಪ್ರಕಟವಾಗಿದೆ. ಆದಿಯಿಂದ ಹಿಂದೂ ಮುಸಲ್ಮಾನ ಐಕ್ಯದಿಂದಲೇ ಭಾರತದ ಉದ್ಧಾರವೆಂದು ಸಾರುತ್ತಿದ್ದ ಹಿರಿಯ ಮಗ ದಾರಾನಿಗೆ ಜಹನಾರಾ ಸಹಕಾರಿಯಾಗಿದ್ದರೆ, ಇಸ್ಲಾಂನ ಹೆಸರಿನಲ್ಲಿ ಅನರ್ಥ ಪರಂಪರೆಗಳಿಗೆ ಹೇತುವಾದ ಅವರಂಗಜೇಬನಿಗೆ ರೋಶನಾರಾಳೇ ಪ್ರೇರಕಿಯಾಗಿ ಈ ರಕ್ತವರ್ಷಕ್ಕೆ ಹೇತುವಾದಳು. ಅವರಂಗಜೇಬನ ಮುತ್ಸದ್ದಿತನ ಮತ್ತು ರಾಜನೀತಿಗಳ ಹಾಗೂ ದಾರಾನ ಮಾನವತಾಪ್ರೇಮ, ಉದಾರತೆಗಳ ಅರಿವನ್ನು ಈ ಕಥನವು ನಮ್ಮ ಮುಂದೆ ಸ್ಪಷ್ಟವಾಗಿ ಇರಿಸುತ್ತದೆ. ಕಾಸೀಮ ಖಾನ, ಮಲಿಕರಂತಹ ಕೃತಘ್ನರು, ಜಸವಂತಸಿಂಹ, ಪ್ರಕಾಶರಂತಹ ವೀರ ಮಾನವವಾದಿಗಳ ಪಾತ್ರಗಳು ಮೂಲಕಥೆಗೆ ಅಂಗಿಕವಾಗಿ ಬಂದು ಮೆರಗನ್ನಿತ್ತಿವೆ.

ಇತಿಹಾಸದ ಮರೆಯಲ್ಲಿರುವ ಈ ದಾರಾನ ಜೀವನ ಚಿತ್ರ ಕನ್ನಡಿಗರಿಗೆ ಹೊಸತೆಂದೇ ಹೇಳಬಹುದು. ಇದರಿಂದ ಸಂಪಾದಕದ್ವಯರು ಕನ್ನಡಿಗರಿಗಿತ್ತ ಕಾಣಿಕೆಯು ಅಮೋಘವಾಗಿದ್ದು, ಇದನ್ನು ಆದರ ಪೂರ್ವಕವಾಗಿ ಅವರು ಸ್ವೀಕರಿಸ ಬರೆಂಬುದು ನಿಸ್ಸಂಶಯ.

ತ್ಯಾಗರಾಜರ ಕೃತಿಗಳು—ಪ್ರಕಾಶಕರು: ಉಪಾಧ್ಯಾಯ ಪ್ರಕಟಣಾಲಯ, ಬೆಂಗಳೂರು ಸಿಟಿ. ಅಧಿಕೃತ ಮಾರಾಟಗಾರರು: ಹೆಚ್ ಎಸ್ ರಾವ್ ಬ್ರದರ್ಸ್, ಬೆಂಗಳೂರು ಪುಟಗಳು: ೧೨೦ ಬೆಲೆ ರೂ. ೧-೫೦

ದಕ್ಷಿಣ ಭಾರತದಲ್ಲಿ ಮಾತ್ರವಲ್ಲ ಅಖಿಲ ಭಾರತದಲ್ಲಿಯೇ ಸಂಗೀತ ಸಾರ್ವಭೌಮರೆಂದು ಸುವಿಖ್ಯಾತರಾಗಿರುವ ಶ್ರೀ ತ್ಯಾಗರಾಜರ ಕೀರ್ತನೆಗಳನ್ನು ಕೇಳದಿರುವವರು ಅಪರೂಪವೆಂದು ಹೇಳಬಹುದು ಸಂಗೀತದ ಸುಧೆಯನ್ನು ಶ್ರೋತ್ರೇಂದ್ರಿಯಕ್ಕೆ ಸುರಿಯುವ ಇವರ ಸ್ಮೃತಿ ಅಪಾರ. ಇವರ ಕೀರ್ತನೆಗಳು ಹೃದಯಂಗಮವಾಗಿದ್ದು ಮನಸೆಳೆಯುವಂತಿವೆ. ತಮ್ಮ ಜೀವನದಲ್ಲಿ ಇವರು ಶ್ರೀ ರಾಮನಾರದ ಮಹರ್ಷಿ ಮೊದಲಾದ ಮಹಾತ್ಮರನ್ನೂ ಪ್ರಸನ್ನೀಕರಿಸಿಕೊಂಡಿರುವರೆಂದು ಪ್ರತೀತಿಯಿದೆ ಕನ್ನಡದ ದಾಸವರ್ಯರಂತೆಯೇ ಶ್ರೀ ತ್ಯಾಗರಾಜರು ಕೀರ್ತನೆಗಳನ್ನು ರಚಿಸಿದ್ದಾರೆ ಇವುಗಳಲ್ಲಿ ತತ್ವವಿದೆ, ವೇದಾಂತ ದರ್ಶನವಿದೆ, ಸಂಗೀತಶಾಸ್ತ್ರಕ್ಕೆ ಪೋಷಣಾಂಶಗಳಿವೆ. ದಕ್ಷಿಣಾದಿ ಅಥವಾ ಕರ್ನಾಟಕ ಸಂಗೀತದ ಅಭ್ಯುತ್ಥಾನಕ್ಕೆ ಶ್ರೀ ತ್ಯಾಗರಾಜರು ಸಲ್ಲಿಸಿದ ಸೇವೆ ಅನುಪಮವಾಗಿದೆ.

ವಸ್ತುತಃ ತಮಿಳುನಾಡಿನ ಶ್ರೀ ತ್ಯಾಗರಾಜರ ಕೀರ್ತನೆಗಳಲ್ಲಿ ಉತ್ತಮವೆನಿಸಿದ ಸುಮಾರು ಕೃತಿಗಳನ್ನು ಆರಿಸಿ ಉಪಾಧ್ಯಾಯ ಪ್ರಕಟಣಾಲಯದವರು ಕನ್ನಡ ಲಿಪಿಯಲ್ಲಿ ಕನ್ನಡಿಗರಿಗೆ ಒದಗಿಸಿದ್ದಾರೆ. ಇದರಿಂದ, ತಮಿಳು ಲಿಪಿ ಅರಿಯದಿರುವವರಿಗೆ ಪ್ರಯೋಜನವಾದೀತು. ಈಗಾಗಲೇ ಕನ್ನಡದ ಹಲವಾರು ದಾಸವರ್ಯರ ಕೃತಿಗಳನ್ನು ಬೆಳಕಿಗೆ ತಂದ ಈ ಪ್ರಕಾಶಕರ ಸದ್ಯದ ಕೃತಿಯನ್ನೂ ಕನ್ನಡಿಗರು ಸ್ವಾಗತಿಸದಿರಲಾರರು

ತೆಂಗಿನ ಬುಲ್ಲೆಟಿನ್ (ಸ್ವಾತಂತ್ರ್ಯ ಸಂಚಿಕೆ) ಸಂಪಾದಕರು: ಡಾ| ಸಿ. ಜೆ. ಗ್ರಿಗರಿ ಪ್ರಕಾಶಕರು: ಭಾರತದ ಕೇಂದ್ರ ತೆಂಗಿನ ಕಮಿಟಿ, ಎರ್ನಾಕುಳಂ. ದ. ಭಾರತ.

ಭಾರತ ಸರಕಾರದ ಆಹಾರ ಮತ್ತು ವ್ಯವಸಾಯ ಮಂತ್ರಿ ಶಾಖೆಯಿಂದ ಪ್ರಕಟವಾಗುತ್ತಿರುವ ಈ ತೆಂಗಿನ ಬುಲ್ಲೆಟಿನ್ (ಕನ್ನಡ)ನ ಸ್ವಾತಂತ್ರ್ಯ ಸಂಚಿಕೆಯನ್ನು ಆತ್ಯಾದರದಿಂದ ಸ್ವೀಕರಿಸುತ್ತೇವೆ ಈ ಸಂಚಿಕೆಯಲ್ಲಿ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ತೆಂಗನ್ನು ಬೆಳೆಸುವ ವಿಧಾನ ಮತ್ತು ವರಿಂದ ಅವುಗಳು ಪಡೆದಿರುವ ಗುಣಗಳನ್ನು ವಿವರಿಸುವ ವಿದ್ವಾಂಸರ ಲೇಖನಗಳು ತೆಂಗಿನ ಕೃಷಿಕರಿಗೆ ತಮ್ಮ ತೋಟವನ್ನು ಅಭಿವೃದ್ಧಿಗೊಳಿಸಲು ಪ್ರೇರಣೆಯೀಯುವಂತಿವೆ ಆಯಾ ಪ್ರದೇಶದ ತೆಂಗಿನ ಕೃಷಿಯ ಕುರಿತು ಆಯಾ ಪ್ರದೇಶದಲ್ಲಿ ಇದೇ ಕ್ಷೇತ್ರದಲ್ಲಿ ದುಡಿಯುತ್ತಿರುವ ಅಧಿಕಾರಿಗಳ ಸ್ವಾನುಭವವು ಈ ಲೇಖನಗಳಲ್ಲಿ ಮೂಡಿರುವುದರಿಂದ ಕೃಷಿಕ ಜನರಿಗೆ ಪ್ರಯೋಜನಕಾರಿಯಾಗಿದೆ. ಎಂದಿನಂತೆಯೇ ಈ ಬಾರಿಯೂ ಸಂಗ್ರಾಹ್ಯ ವಿಶೇಷಾಂಕವನ್ನು ಅಚ್ಚುಕಟ್ಟಾಗಿ ಸಂಪಾದಿಸಿರುವ ಸಂಪಾದಕರ ಶ್ರಮವು ಸಾರ್ಥಕವಾಗಿದೆ. ಈ ಬುಲ್ಲೆಟಿನ್‌ನ ಉಪಯೋಗವನ್ನು ಎಲ್ಲರೂ ಮಾಡಿಕೊಳ್ಳಬಹುದು.

—ಗೋರಾ.

ಅಮೆರಿಕೆಯ ಉಪಾಧ್ಯಕ್ಷ ನಿಕ್ಸನ್ನರು ಘಾನಕ್ಕೆ ಭೇಟಿಕೊಟ್ಟಾಗ ಅಲ್ಲಿಯ ಪ್ರಧಾನಿ ಡಾ| ನುಖ್ರೂಮರೊಡನೆ ಕಾಣಬಹುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಕಚೇರಿ: ಮುಕುಂದ ನಿವಾಸ, ಉಡುಪಿ.

ಸ್ಥಾಪನೆ: 1925

- ವಿದೇಶಗಳಲ್ಲಿ ಶಿಕ್ಷಣ
- ವೈದ್ಯಕೀಯ ವೃತ್ತಿ
- ಸಣ್ಣ ವ್ಯಾಪಾರ

ಇವುಗಳಿಗೆ ಸುಲಭ ಶರ್ತಗಳಲ್ಲಿ ಮತ್ತು ಕಡಿಮೆ ಬಡ್ಡಿಯಲ್ಲಿ ವೈಯಕ್ತಿಕ ಸಾಲವನ್ನು ಕೊಡುವ ಯೋಜನೆಯನ್ನು ಸಿಂಡಿಕೇಟ್ ಬೇಂಕ್ ಪ್ರಾರಂಭಿಸಿದೆ

ಸಂಪೂರ್ಣ ವಿವರಗಳಿಗೆ ಸಿಂಡಿಕೇಟಿನ 128 ಶಾಖೆಗಳ ಪೈಕಿ ಯಾವುದೇ ಶಾಖೆಯಲ್ಲಿ ವಿಚಾರಿಸಿರಿ.

The Canara Industrial & Banking Syndicate Ltd.,

H. O. Mukund Nivas, UDIPI.

ಗೋವಿಜಯ

(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾನೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ವಾ ಚಂದಾ ರೂ. 5-75

ಚಿಲ್ಲರೆ 13 ನ.ಪೈಸೆ

Vol. 39. No. 8.
ವರುಷ ೩೯. ವಾರ ೮.

22-10-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಕ್ಷ-ಕಿರಣ

ಬಾಕ್ರಾ ಅಣೆಕಟ್ಟಿನ ಅನಾಹುತಕ್ಕೆ ಮೂಲಕಾರಣವೇನು?

ಮೂರು ದಿನಗಳಿಗೆ ಮೊದಲೇ ಮುನ್ಸೂಚನೆ ದೊರೆತಿದ್ದರೂ ರಕ್ಷಣೆಯಲ್ಲಿ ನಿಧಾನವೇಕಾಯಿತು?

ಇತ್ತೀಚೆಗೆ ಮಹಾಪೂರದ ಕಾರಣದಿಂದ ಭಾಕ್ರಾ ಅಣೆಕಟ್ಟು ಬಿರುಕು ಬಿಟ್ಟು ಅತ್ಯಂತ ವೇಗವಾಗಿ ಪ್ರವಾಹವು ಹರಿದುದರಿಂದ ಭಾರತದ ೧೧ ಜನ ಕರ್ಮಚಾರಿಗಳು ಪ್ರಾಣವನ್ನು ಕಳೆದುಕೊಂಡಿರುವುದಲ್ಲದೇ ಅಪಾರ ಧನನಷ್ಟವೂ ಆಗಿರುವುದು ಚಿಂತಾಜನಕ ವಿಷಯವಾಗಿದೆ. ಈಗಲೂ ಈ ಅನಾಹುತದಿಂದ ಆದ ನಷ್ಟದ ಸರಿಯಾದ ಅಂಕೆಸಂಖ್ಯೆಗಳು ದೊರೆತಿರುವುದಿಲ್ಲವಾದರೂ ಅಣೆಕಟ್ಟನ್ನು ಯಥಾಪೂರ್ವ ಸ್ಥಿತಿಗೆ ತರಲು ಇದರಿಂದ ೧೦ ಕೋಟಿ ರೂಪಾಯಿಗಳು ಬೇಕಾಗಬಹುದೆಂದು ನಿರೀಕ್ಷಿಸಲಾಗಿದೆ. ಪ್ರಪಂಚದ ದೊಡ್ಡ ಅಣೆಕಟ್ಟುಗಳಲ್ಲಿ ಒಂದಾದ ಈ ಬಾಕ್ರಾ ನಂಗಲ್‌ಗೆ ಒದಗಿಬಂದ ಗಂಡಾಂತರವು ಪ್ರಪಂಚದಲ್ಲಿಯೇ "ನಭೂತೋನಭವಿಷ್ಯತಿ" ಎಂಬಂತಾಗಿದೆ. ಇಷ್ಟು ಮಹತ್ವಪೂರ್ಣ ಕಟ್ಟೆಯೊಂದಕ್ಕೆ ಇಷ್ಟೊಂದು ಅಧಿಕ ಹಾನಿ ತಟ್ಟಿದುದು ವಿಸಂಚನೆಯುಂಟುಮಾಡಲು ಪ್ರಬಲ ಕಾರಣವಾಗಿದೆ.

ಬಾಕ್ರ ನಂಗಲ ಅಣೆಕಟ್ಟನ್ನು ಸಟ್ಲೆಜ್ ನದಿಗೆ ಅಡ್ಡವಾಗಿ ಹಾಕಲಾಗಿದೆ. ಇದರಿಂದ ಪಂಜಾಬ ಹಾಗೂ ರಾಜಸ್ತಾನಗಳಿಗೆ ಸಾಕಷ್ಟು ನೀರಾವರಿ ಸೌಕರ್ಯವನ್ನು ಒದಗಿಸಲು ಸಾಧ್ಯವಾಗಿದೆ. ವಿದ್ಯುಚ್ಛಕ್ತಿಯ ಉತ್ಪಾದನೆಗೂ ಇದು ಹೇತುವಾಗಿದೆ. ಸುಮಾರು ಒಂದು ಅರಬದ ಮೇಲೆ ೭೪ ಕೋಟಿ ರೂಪಾಯಿ ವೆಚ್ಚದಿಂದ ಈ ಅತ್ಯಂತ ದೊಡ್ಡದಾದ ಮತ್ತು ವಿಶ್ವಗಣನೀಯವಾದ ಕಟ್ಟೆಯನ್ನು ಕಟ್ಟಲಾಗುತ್ತಿದೆ. ಭಾರತದ ಬೆಂಗಾಡೆನಿಸಿದ ರಾಜಸ್ತಾನಕ್ಕೆ ಸಾಕಷ್ಟು ನೀರನ್ನೊದಗಿಸಿ, ಅಲ್ಲಿನ ಮರಳುಗಾಡನ್ನು ಸಸ್ಯ ಸಂಪನ್ನಗೊಳಿಸಲು ಈ ಯೋಜನೆಯಿಂದ ಸಾಧ್ಯವಾಗಿದೆ. ಇಂದು ಇಷ್ಟೊಂದು ದೊಡ್ಡ ಮೊತ್ತವನ್ನು ಬಂಡವಾಳವಾಗಿ ತೊಡಗಿಸಿದ ಈ ಅಣೆಕಟ್ಟಿನಿಂದ ಮುಂದಿನ ೫೦೦ ವರ್ಷಗಳ ಕಾಲ ಪ್ರಯೋಜನ ಪಡೆಯುವ ಆಶೆಯನ್ನು ಇಟ್ಟುಕೊಳ್ಳಲಾಗಿದೆ. ನಿಜವಾಗಿಯೂ ಇಷ್ಟು ದೀರ್ಘಕಾಲ ಉಪಯೋಗಕ್ಕೆ ಬರುವ ಈ ಅಣೆಕಟ್ಟಿಗೆ ಇಷ್ಟು ಹೆಚ್ಚು ಹಣವನ್ನು ವೆಚ್ಚ ಮಾಡಿದರೆ ದುಃಖಿತರಾಗಬೇಕಾಗಿಲ್ಲ.

ನೆರೆಯ ಅನಾಹುತದಿಂದ ಆದ ಹಾನಿಯನ್ನು ಸರಿಪಡಿಸಲು ಇನ್ನು ಎಷ್ಟು ಸಮಯಬೇಕೆಂದು ಹೇಳುವುದು ಅಸಾಧ್ಯ. ಬಾಕ್ರಾದಲ್ಲಿ ಉಂಟಾದ ಯಂತ್ರಕ್ಷತಿ, ಬಿರುಕುಗಳ ಸಂಯೋಜನೆ ಮೊದಲಾದುವುಗಳನ್ನು ತುಂಬಿಕೊಡಲು ಕಡಿಮೆಪಕ್ಷ ೬ ಕೋಟಿ ರುಪಾಯಿಗಳು ಬೇಕಾಗಬಹುದೆಂದು ಹೇಳಲಾಗುತ್ತಿದೆ. ಅದೇನೇ ಇದ್ದರೂ ಇದರ ಸ್ಥಿರತೆ ಮತ್ತು ಉಪಯೋಗಿತೆಗಳು ಹಲವಾರು ತಲೆಮಾರುಗಳ ವರೆಗಿನದಿರುವುದರಿಂದ ಈ ಬಗ್ಗೆ ನಾವು ಚಿಂತೆಗೀಡಾಗಬೇಕಾದ ಪ್ರಮೇಯವಿಲ್ಲ.



ಅಕ್ಟೋಬರ ೨೪ ಸಂಯುಕ್ತ ರಾಷ್ಟ್ರ ಸಂಸ್ಥೆಯ ಜನ್ಮದಿನ ಈ ಸಂಸ್ಥೆಯ ಸದಸ್ಯರಾಷ್ಟ್ರಗಳ ಧ್ವಜಮಾಲೆಯನ್ನಿಲ್ಲಿ ಕಾಣಿರಿ.

ಆದರೆ, ನಾವು ಇಷ್ಟರಿಂದಲೇ ತೃಪ್ತರಾಗಲಾರದು. ಇದೊಂದು ದುರ್ಘಟನೆ ಎಂಬುದನ್ನು ಒಪ್ಪಲೇಬೇಕು. "ಹೈಯುಸ್ಟ್ ಚೇಂಬರ್ ಉರುಳಿದುದರಿಂದ ಅಲ್ಲಿ ಕೆಲಸದಲ್ಲಿ ತೊಡಗಿದ್ದ ಇಂಜಿನಿಯರರು ಸ್ತಬ್ಧರಾಗಿ ಹೋದರು. ವಿಮರ್ಶಾತ್ಮಕ ಅಸಫಲತೆಗಳ ಪರಿಣಾಮವಾಗಿ ಈ ದುರ್ಘಟನೆಯು ಉಂಟಾಯಿತೆಂದು ಇವರು ಸಾಮಾನ್ಯವಾಗಿ ಹೇಳಿದರು. ಈ ಚೇಂಬರ್ ಉರುಳುವುದಕ್ಕೆ ಮೂರು ದಿನಗಳಿಗೆ ಮೊದಲು ಕರ್ಕಶ ಧ್ವನಿಯು ಕೇಳಿಸಿತ್ತು. ಇಂಜಿನಿಯರರೂ ಇದನ್ನು ಆಲಿಸಿದ್ದರು. ಇದನ್ನವರು ಸಾಧಾರಣದ್ದೆಂದು ತಿಳಿದು ಬಿಟ್ಟರು. ಇದರ ಕಾರಣವನ್ನು ಕಂಡುಕೊಳ್ಳುವುದು ಸುಲಭದ ಕೆಲಸವಾಗಿರಲಿಲ್ಲ. ಮೊದಲಿಗೆ ಅವರಿಗೆ ಸಂಕಟಕಾಲೀನ ದ್ವಾರಗಳಿಗೆ ಕಲ್ಲು ಬಂಡೆಗಳು ಬಡೆಯುತ್ತಿರುವುದು ಅನುಭವಕ್ಕೆ ಬಂದಿತು. ಸಂರಕ್ಷಣೋಪಾಯವನ್ನು ಯೋಚಿಸುತ್ತಿರುವಂತೆಯೇ "ಗೋವಿಂದ ಸಾಗರ"ದ ನೀರು ಹೈಯುಸ್ಟ್ ಚೇಂಬರದ ಗೋಡೆಗಳಿಂದ ಹೊರದುಮುಕಲು ಆರಂಭಿಸಿತು. ಅಣೆಕ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ – ಮಂಗಳೂರು—3

ಸ್ಥಾಪನೆ – 1931

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯ್ 10,000/ ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ..ಇತ್ಯಾದಿ .

ಕಥಾವಿಹಾರ

ಪತಿದ್ರೋಹಿ ಪತಿವ್ರತೆಯಾದಾಳೆ?

ರಾಜಪುರದ ರಾಣಿ ಚಂದ್ರಾವತಿ ತನ್ನ ಪತಿಯನ್ನೇ ಗುಂಡಿಕ್ಕಿ ಕೊಂದಳು— ದೇಶದ ಭದ್ರತೆಗಾಗಿ. ರಾಷ್ಟ್ರವೆಂಬುದು ಪತಿಪತ್ನಿಯರಿಗಿಂತಲೂ ಶ್ರೇಷ್ಠವೆಂಬುದನ್ನು ವಿಶ್ವಕ್ಕೇನೇ ತೋರಿಸಿದಳು.

ಶತಮಾನಗಳ ಮೇಲೆ ಶತಮಾನಗಳು ಉರುಳಿದುವು. ಆದರೆ ಬಲಿದಾನಗಳ ಸಂಖ್ಯೆ ಕಡಿಮೆಯಾಗಲೇ ಇಲ್ಲ. ದೇಶದ ಗೌರವ, ಧರ್ಮದ ಗೌರವ, ಸಮಾಜದ ಗೌರವಗಳನ್ನುಳಿಸುವುದಕ್ಕಾಗಿ ಇದಲ್ಲದೇ ಇನ್ನೆಷ್ಟೋ ಉದ್ದೇಶಗಳಿಗಾಗಿ ಭಾರತವು ಬಲಿದಾನ ಮಾಡುತ್ತಲೇ ಬಂದಿದೆ. ಒಂದು ದೃಷ್ಟಿಯಿಂದ ಭಾರತದ ಇತಿಹಾಸವು ಬಲಿದಾನದ ಇತಿಹಾಸವಾಗಿದೆ. ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಬಲಿದಾನದ ಕತೆಗಳೇ ಕಂಡುಬರುತ್ತಿವೆ; ಅವುಗಳ ಹಾಡು ಹಾಡಲ್ಪಡುತ್ತಿವೆ ಪ್ರಾಯಶಃ ಭಾರತದಂತೆ ಆತ್ಮಾಹುತಿಯ ಚರಿತ್ರೆ ಸ್ಥಾಪಿಸಿದ ಬೇರಾವ ದೇಶ-ವ-ರಾಷ್ಟ್ರವೂ ಇರಲಿಕ್ಕಿಲ್ಲ! ಭಾರತೀಯ ಸಂಸ್ಕೃತಿಯ ಮೂಲಾಧಾರವೇ ಆತ್ಮಾರ್ಪಣೆಯಾಗಿದೆ ಇದೇ ಕಾರಣದಿಂದಾಗಿಯೇ ಶತಮಾನಗಳ ಕಲ್ಲೋಲದ ಕಾಲದಲ್ಲಿಯೂ ಭಾರತವು ಜಗತ್ತಿನಲ್ಲಿ ತಲೆಯೆತ್ತಿ ನಿಂತು ಜಗತ್ತಿಗೇ ಮಾರ್ಗದರ್ಶನ ಮಾಡುತ್ತ ಸಾಗುತ್ತಿದೆ. ಕಾಲದ ನೆಟನಾಟಕ್ಕೆ ಮಣಿದು ಅದೆಷ್ಟೋ ರಾಷ್ಟ್ರಗಳು ಉರುಳಿ ಮಣ್ಣಿನಲ್ಲಿ ಬೆರೆತುಹೋದುವು. ಆದರೆ ಭಾರತವು ಎಂದೂ ಸತ್ಯನಾಶದ ಬೇಟೆಯ ಮೃಗವಾಗಲಿಲ್ಲ! ಅದರ ಸಂಸ್ಕೃತಿ ಮತ್ತು ಉಪದೇಶಗಳು ಬಲಿದಾನದ ಪುಷ್ಪಾಂಜಲಿಯಾಗಿ ಮೇಲೆದ್ದು ಕೊನೆಯತನಕ ದೇಶವನ್ನು ಕೆಳಗುರುಳುವುದರಿಂದ ಉಳಿಸಿದುವು.

o o o

ಗತ ಶತಮಾನಗಳ ಮಾತು: ಆ ದಿನಗಳಲ್ಲಿ ಭಾರತದ ಆಕಾಶದಲ್ಲಿ ವಿಪತ್ತಿನ ಮೋಡಗಳು ಕವಿದುಕೊಂಡಿದ್ದುವು.

ಭಾರತದ ವಾಯುವ್ಯ ದಿಕ್ಕಿನ ಆ ಚಿಕ್ಕ ರಾಜ್ಯವೇ 'ರಾಜಪುರ'. ಅಲ್ಲಿಯ ಅರಸ ರಾಜಾ ಅನೂಪಸಿಂಹ—ತನ್ನ ರಾಜ್ಯದ್ದೊಂದೇ ಅಲ್ಲ—ಇಡೀ ಜಗತ್ತಿನ ಆಗುಹೋಗುಗಳನ್ನೆಲ್ಲ ಸಂಪೂರ್ಣವಾಗಿ ಮರೆತು ಸುಖ ವಿಲಾಸಗಳಲ್ಲಿ ಮಗ್ನನಾಗಿದ್ದ. ಪ್ರಜೆಗಳ ರಕ್ತಹೀರಿ ತಾನು ಎಷ್ಟು ಸುಖ ಸಂತೋಷ ಹೊಂದಬಹುದೋ ಅಷ್ಟು ಪಡೆಯುತ್ತಿದ್ದ. ರಾಜನ ಅತ್ಯಾಚಾರದಿಂದ ನಿರ್ಜೀವರಾಗಿದ್ದ ಪ್ರಜೆಗಳಿಂದ ತಮ್ಮ ಭಾಗ್ಯವನ್ನು ಹಳಿದುಕೊಳ್ಳುವುದಕ್ಕಿಂತ ಹೆಚ್ಚಿನ ಕ್ರಮ ಕೈಕೊಳ್ಳಲು ಅಸಾಧ್ಯ. ಅನೂಪಸಿಂಹ ಯಾವುದನ್ನೂ ಗಣನೆಗೆ ತೆಗೆದುಕೊಳ್ಳುವ ಮನುಷ್ಯನಲ್ಲ. ಆತನಿದ್ದನು; ಮತ್ತಾತನೊಂದಿಗೆ ಅವನ ಸುಖ ವಿಲಾಸವಿತ್ತು. ವಿಶ್ವಕ್ಕೆ ವಿಶ್ವವೇ ಕಲಕಿಕೆಳಗಾದರೂ ತನ್ನ ವಿಲಾಸದ ವಿಶ್ವದಿಂದ ಹೊರಬರುವ ವ್ಯಕ್ತಿ ಅವನಲ್ಲ

ಅನೂಪಸಿಂಹನ ಪತ್ನಿ ಚಂದ್ರಾವತಿ ಭಾರತದ ಆದರ್ಶನಾರೀ ಮಣಿಗಳಲ್ಲೊಬ್ಬಳು; ರಜಪೂತ ವೀರಾಂಗನೆ. ಆದರೆ ಆಕೆಯ ಭಾಗ್ಯದಲ್ಲಿ ಹೇಡಿ, ಅತಿವಿಲಾಸಿ ಮತ್ತು ದುರಾಚಾರಿಯಾದ ಅನೂಪಸಿಂಹನ ಸಂಬಂಧ ಬರೆಯಲ್ಪಟ್ಟಿತ್ತು. ಆಕೆ ತನ್ನ ಪತಿಯ ಅತ್ಯಾಚಾರಗಳಿಂದ ವ್ಯಾಕುಲಳಾಗುತ್ತಿದ್ದಳು. ಪ್ರಜೆಗಳ ಕಣ್ಣೀರು ನೋಡಿಕೊಂಡು ಆಕೆಯೂ ಮರುಗಿ ಕಣ್ಣೀರು ಸುರಿಸುತ್ತಿದ್ದಳು. ಅವಳಿಂದ ಪತಿಯ ದುರ್ನಡತೆ ನೋಡಿ ಸಹಿಸಲಾಗುತ್ತಿರಲಿಲ್ಲ. ಹಲವಾರು ಬಾರಿ ಅವಳು ತನ್ನ ಪತಿಗೆ 'ಪ್ರಜೆಗಳ ದುರವಸ್ಥೆಯೆಡೆಗೆ ದೃಷ್ಟಿ ಹರಿಸುವಂತೆ ಮತ್ತು ತನ್ನ ದುರ್ನಡತೆಯನ್ನು ತಿದ್ದಿಕೊಳ್ಳುವಂತೆ ಬಿನ್ನವಿಸಿದಳು. ಆದರೆ ಆ ಮಾತುಗಳಿಂದ ನಿರೀಕ್ಷಿಸಿದ ಫಲ ದೊರೆಯುವ ಬದಲು ರಾಜ ತಾನು ಕಂಡುಕೊಂಡ ಮಾರ್ಗದಲ್ಲಿ ಮುನ್ನಡೆಯುತ್ತಲೇ ಇದ್ದ. ಚಂದ್ರಾವತಿ ಗಂಡನನ್ನು ಸರಿದಾರಿಗೆ ಹಚ್ಚುವ ಪ್ರಯತ್ನದಲ್ಲಿ ಸೋತುಹೋದಳು ಕೊನೆಗೆ ಬೇರೆದಾರಿ ಕಾಣದೇ ತಾನು ಸ್ವತಃ ರಾಜ್ಯದ ವ್ಯವಸ್ಥೆ

ಸಂಯುಕ್ತ ರಾಷ್ಟ್ರಸಂಸ್ಥೆಯ ಪ್ರಧಾನಾಂಗವಾದ ಸಾಮಾನ್ಯ ಸಭೆಯಲ್ಲಿ ಮತದಾನ ನಡೆಯುತ್ತಿರುವುದನ್ನು ಈ ಚಿತ್ರದಲ್ಲಿ ನೋಡಬಹುದು.

ಕೈಗೊಂಡಳು. ಅವಳು ಪ್ರಜೆಗಳ ಸಂಕಷ್ಟಗಳನ್ನು ವಿಚಾರಿಸಿ, ಸಮಾಧಾನ ಹೇಳಿ ಅವರನ್ನು ಶಾಂತಗೊಳಿಸಲೆತ್ನಿಸಿದಳು. ಜನರು ಅನೂಪಸಿಂಹನ ಕರಭಾರ ಮತ್ತು ದಂಡ ಪ್ರಯೋಗದಿಂದ ಕಂಗೆಟ್ಟಿದ್ದರೆ ರಾಣಿಯ ಪ್ರೇಮಪೂರ್ಣ ಮಾತುಗಳಿಂದ ವಾತ್ಸಲ್ಯದ ಆಸ್ವಾದನೆ ಹೊಂದುತ್ತಿದ್ದರು. ಪ್ರಜೆಗಳಿಗೆ ಆಕೆ ಬರೇ ರಾಣಿಯಾಗಿರದೇ ತಾಯಿಯೂ ಆಗಿದ್ದಳು. ತಂದೆಯ ಬೆದರಿಕೆಯಿಂದಾಗಿ ಅಂಜಿದ ಬಾಲಕರು ಹೇಗೆ ತಾಯಿಯ ತೊಡೆಯೇರಿ ಅಭಯ ಮತ್ತು ವಾತ್ಸಲ್ಯ ಹೊಂದುವರೋ ಅಂತೆಯೇ ರಾಜನ ಭಯದಿಂದ ಕಂಪಿತರಾದ ಜನರು ಚಂದ್ರಾವತಿಯೆಡೆಗೆ ಶರಣು ಹೋಗಿ ತಮ್ಮ ಸಂಕಷ್ಟಗಳನ್ನು ಮರೆಯುತ್ತಿದ್ದರು.

ಅದೊಂದು ದುರ್ದಿನ. ಅಂದು ನೆರೆಯ ಮೊಗಲರಾಜನ ರಾಜಭವನದಿಂದ ಒಂದು ಓಲೆಯನ್ನು ಅನೂಪ ಸಿಂಹನಿಗೆ ತಂದಿತ್ತು. ರಾಜ್ಯವನ್ನೇ ಗಂಡಾಂತರಕ್ಕೆ ಸಿಲುಕಿಸುವ ವರ್ತಮಾನವನ್ನೊಳಗೊಂಡ ಆ ಪತ್ರದ ಸಾರಾಂಶವಿಷ್ಟು—

"ರಾಜಾ ಅನೂಪಸಿಂಹರು ನಮ್ಮ ಸಾಮಂತರಾಗಬೇಕು. ಹೀಗೆ ನಮ್ಮ ಅಧೀನತೆಯನ್ನು ಸ್ವೀಕರಿಸಿದರೆ ರಾಜರಿಗೆ ಐವತ್ತು ಲಕ್ಷ ಮೊಹರುಗಳು ಪಾರಿತೋಷಕವಾಗಿ ಕೊಡಲ್ಪಡುವುವು. ಇದಕ್ಕೆ ವಿರೋಧವಾಗಿ ವರ್ತಿಸುವುದಾದರೆ ರಾಜ್ಯವನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳಲಾಗುವುದು."

ಈ ಸುದ್ದಿ ಕೇಳಿದ ಚಂದ್ರಾವತಿ ಭಯಭೀತಳಾದಳು. ಮೊಗಲ ರಾಜನ ಅಧೀನತೆಯನ್ನು ಸ್ವೀಕರಿಸಲೊಪ್ಪದಿದ್ದರೆ ಬಲಶಾಲಿಯಾದ ಆತ ಖಂಡಿತವಾಗಿ ರಾಜಪುರವನ್ನು ವಶಪಡಿಸಿಕೊಳ್ಳುವನು. ಹಾಗೆಂದು ಆತನ ಸಾಮಂತತೆಯನ್ನು—ಓರ್ವ ಮುಸಲ್ಮಾನನ ಒಡೆತನವನ್ನು ಒಪ್ಪಿಕೊಳ್ಳಲು ಚಂದ್ರಾವತಿಯ ಮನಸ್ಸು ಒಡಂಬಡಲಿಲ್ಲ. ಆಕೆಯ ನರಗಳಲ್ಲಿ ಹರಿಯುತ್ತಿದ್ದುದು ಸ್ವಾಭಿಮಾನಿ—ಸ್ವಾತಂತ್ರ್ಯಪ್ರಿಯ ರಜಪೂತ ರಕ್ತ! ವೀರಮಾತೆ, ರಜಪೂತ ಸಾಧ್ವಿಯಾದ ಆಕೆಗೆ ಅದಕ್ಕಾಗಿ ಹೆದರಿ ಕೂರುವ ಆವಶ್ಯಕತೆಯಿರಲಿಲ್ಲ. ಅವಳ ಸಂಜ್ಞಾಮಾತ್ರದಿಂದಲೇ ಸಮಸ್ತ ಪ್ರಜೆಗಳೂ ಪ್ರಾಣ ಅರ್ಪಿಸಲು ಸಿದ್ಧರಿದ್ದರು. 'ಆತಹನೊಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಮೌನವಾಗಿರುವುದರಿಂದ ಕೆಲಸ ಕೆಡುವುದು.'—ಅವಳು ಯೋಚಿಸಿದಳು. 'ಒಂದು ಕ್ಷಣದ ನಿರ್ಲಕ್ಷ್ಯವು ದೇಶದ ಘಾತುಕತೆಯನ್ನು ಸ್ವಾಗತಿಸುವುದು. ಪ್ರಜೆಗಳಿಂದು ನನ್ನ ಹೇಳಿಕೆಯೊಂದರಿಂದಲೇ ಯಾವುದೇ ಕೆಲಸಕ್ಕೂ ಸಿದ್ಧರಿರುವಾಗ ಅವರನ್ನೇ ಕೂಡಿಸಿ ನಾನೇಕೆ ದೇಶದ ರಕ್ಷಣೆ ಮಾಡಬಾರದು?'

ಕೊನೆಗಾಕೆ ನಿಶ್ಚಯಿಸಿದಳು—'ನಾನು ದೇಶದ ರಕ್ಷಣೆ ಕೈಗೊಳ್ಳುವೆನು; ಕೊನೆಯತನಕವೂ ನನ್ನ ರಾಜ್ಯವನ್ನು ಸ್ವತಂತ್ರವಾಗಿ ಇರಗೊಡಿಸುವೆನು."

ತನ್ನೀ ದೃಢ ನಿರ್ಧಾರವನ್ನು ಕೈಗೂಡಿಸಲು ರಾಣಿ ಚಂದ್ರಾವತಿ 'ರಾಜಪುರ'ದ ಹಳ್ಳಿಹಳ್ಳಿಗಳನ್ನು ಸಂಚರಿಸಿ ಪ್ರಚಾರಗೈಯಲು ಆರಂಭಿಸಿದಳು. ರಾಣಿ ಪ್ರಜೆಗಳಿಗೆಲ್ಲ ಪರಿಸ್ಥಿತಿಯ ಪರಿಚಯಮಾಡಿ ಕೊಡುತ್ತ ತಿಳಿಸುತ್ತಿದ್ದಳು—

"ಈಗ ನಮ್ಮೆದುರು ಎರಡು ದಾರಿಗಳಿವೆ. ಮೊಗಲರ ಅಧೀನತೆಯನ್ನು ಸ್ವೀಕ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ದಿ| ಕಿಲ್ಲೆಯವರ ಮೂರು ಪುಸ್ತಕಗಳು
ಪ್ರಾಚೀನ ತುಳುನಾಡು
(ಎಸ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ ಬೆಲೆ: ರೂ. 2 00.
ಭಾರತದ ಕರ್ಣ
"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು." (ಪ್ರೊ| ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.
ಮುರಲಿ
ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜೀವನ ಪರಿಚಯ

ಭಾರತದ ಭಾಗ್ಯರವಿ—ದಿ| ಬೆನೆಗಲ್

ತನ್ನ ಪ್ರಭೆಯಿಂದ ಮಾತೃಭೂಮಿಯನ್ನೂ ವಿಶ್ವವನ್ನೂ ಬೆಳಗಿಸಿದ ಮೇಧಾವಿ ಬೆನೆಗಲ್ ನರಸಿಂಗ ರಾವ್

ನಮ್ಮ ದೇಶ ಸ್ವತಂತ್ರವಾದಂದಿನಿಂದ ಇಂದಿನ ತನಕ ಸಾಧಿಸಿದ ಪ್ರಗತಿಯನ್ನು ಅನ್ಯ ರಾಷ್ಟ್ರಗಳೊಂದಿಗೆ ತುಲನಾತ್ಮಕವಾಗಿ ವಿಮರ್ಶಿಸಿದಲ್ಲಿ, ಈ ಅವಧಿಯುಲ್ಲಾದ ಸಾಧನೆ ನಿಜವಾಗಿಯೂ ಪ್ರಶಂಸಾರ್ಹವೆಂಬುದು ನಿಸ್ಸಂದೇಹ. ಸ್ವತಂತ್ರವಾದ ತಕ್ಷಣದಲ್ಲೇ ಜಾಗತಿಕ ಸಂಸ್ಥೆಯಲ್ಲಿ ಸದಸ್ಯತ್ವವನ್ನು ಹೊಂದಿ ವಿಶ್ವಶಾಂತಿ ಸಾಧನೆಗಾಗಿ ಶಕ್ತಿ ಮೀರಿ ದುಡಿ. ಅಂತಾರಾಷ್ಟ್ರೀಯ ರಂಗದಲ್ಲಿ ಶಾಂತಿಪ್ರಿಯ ರಾಷ್ಟ್ರವೆಂದು ಪ್ರಸಿದ್ಧಿ ಪಡೆದಿದೆ, ಭರತಖಂಡ ಜಗತ್ತಿನ ಮಹಾ ರಾಷ್ಟ್ರಗಳಲ್ಲೊಂದಾಗಿ ಜಗತ್ತಿನ ಮಹಾ ಸಮಸ್ಯೆಗಳನ್ನು ಯಶಸ್ವಿಯಾಗಿ ಬಗೆಹರಿಸಲು ನೆರವೀಯುತ್ತಿರುವ ಯಶಸ್ಸು ಭಾರತಕ್ಕೆ ಸಲ್ಲತಕ್ಕದ್ದು ತಮ್ಮ ನಾಡಿನ ಕೀರ್ತಿಯನ್ನು ಅಂತಾರಾಷ್ಟ್ರೀಯ ರಂಗದಲ್ಲಿ ಬೆಳಕಿಗೆ ತಂದ ಹಲವಾರು ಮಹಾನ್ ವ್ಯಕ್ತಿಗಳಿಗೆ ಜನತೆ ಇಂದಿಗೂ ಕೃತಜ್ಞವಾಗಿದೆ ಅವರಲ್ಲಿ ಕೆಲವರಿಂದು ಕಣ್ಮರೆಯಾಗಿದ್ದರೂ, ಅವರ ಕೀರ್ತಿ ಆಚಂದ್ರಾರ್ಕವಾಗಿ ಉಳಿಯುವುದರಲ್ಲಿ ಅನುಮಾನಕ್ಕೆಡೆಯಿಲ್ಲ ಅಂತಹ ಪುತ್ರರತ್ನಗಳು ನಮ್ಮ ನಾಡಿನ ಮಕ್ಕಳೆನ್ನುವುದರಲ್ಲಿ ನಮಗೆ ಅದೆಷ್ಟು ಹೆಮ್ಮೆ ಚಿರಸ್ಥಾಯಿಯಾಗಿ ಬೆಳಗುವ ಅಂತಹ ಹೆಸರುಗಳಲ್ಲಿ ದಿವಂಗತ ಬೆನೆಗಲ್ ನರಸಿಂಗ ರಾಯರದೂ ಒಂದು ಕೊನೆಯುಸಿರಿನ ತನಕವೂ ತನ್ನ ದೇಶವನ್ನು ರಾಷ್ಟ್ರಸೇವೆಯಲ್ಲಿಯೇ ಸವೆಸಿ ನಮ್ಮನ್ನಗಲಿದ ಧನ್ಯವ್ಯಕ್ತಿ ಶ್ರೀ ರಾಯರು ಇಂತಹ ಜಗದ್ವಿಖ್ಯಾತ ವಿದ್ವನ್ಮಣಿಗಳಿಗೆ ಜನ್ಮವಿತ್ತ ತಾಯ್ನೆಲ ಅದೆಷ್ಟು ಪವಿತ್ರ!

ನರಸಿಂಗ ರಾಯರ ತಂದೆ ಬೆನೆಗಲ್ ರಾಘವೇಂದ್ರ ರಾಯರು ಪ್ರಖ್ಯಾತ ಡಾಕ್ಟರರಾಗಿದ್ದರಲ್ಲದೇ ಸಾಮಾಜಿಕ ಕಾರ್ಯಕರ್ತರೂ ಆಗಿದ್ದರು ಹರಿಜನೋದ್ಧಾರಕ್ಕಾಗಿ ಅವರು ಸಲ್ಲಿಸಿದ ಸೇವೆ ಸರ್ವಶ್ರುತವಿದೆ ಇಂತಹ ಮಹಾನ್ ವ್ಯಕ್ತಿತ್ವವುಳ್ಳ ಪಿತನ ಪುತ್ರನಾಗಿ, ಜಗತ್ಪ್ರಸಿದ್ಧ ಬೆನೆಗಲ್ ಸಹೋದರರಲ್ಲಿ ಎರಡನೆಯವರಾಗಿ ನರಸಿಂಗರಾಯರು ಜನಿಸಿದರು ಅವರ ಹುಟ್ಟೂರು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ಈ ಬೆನೆಗಲ್ ಮನೆತನದ ಚಿತ್ರಾಪುರ ಸಾರಸ್ವತ ಮತೀಯರಿಗೆ ಸೇರಿದ ಪ್ರಖ್ಯಾತ ಮನೆತನಗಳಲ್ಲೊಂದು ನರಸಿಂಗರಾಯರು ತಮ್ಮ ವಿದ್ಯಾಭ್ಯಾಸದ ಕೆಲವಂಶವನ್ನು ಭಾರತದಲ್ಲಿ ಮುಗಿಸಿದ ಮೇಲೆ ಮುಂದಿನ ಅಧ್ಯಯನಕ್ಕಾಗಿ ಇಂಗ್ಲಂಡಿಗೆ ತೆರಳಿದರು ವಿದೇಶದಲ್ಲಿಯೂ ತನ್ನ "ಭಾರತೀಯತ್ವ"ವನ್ನು ಕಾಯ್ದುಕೊಂಡು ಅಲ್ಲಿನ ಪ್ರತಿಭಾವಂತ ವಿದ್ವಾಂಸರಲ್ಲೊಬ್ಬರೆನಿಸಿಕೊಂಡರು ಮಾತ್ರವಲ್ಲ ಗಣಿತದಲ್ಲಿ ತುಂಬಾ ಅಭಿರುಚಿಯುಳ್ಳ ಅವರು ಗಣಿತ ಪ್ರೌಢ ಪಾಂಡಿತ್ಯದ ಪರೀಕ್ಷೆಯಲ್ಲಿ ಅತ್ಯುತ್ತಮ ಸ್ಥಾನ ಗಳಿಸಿ "Wrangler in Mathematics" ಎನಿಸಿಕೊಂಡರು ೧೯೦೯ರ ಅಕ್ಟೋಬರದಲ್ಲಿ ಇಂಡಿಯನ್ ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಉತ್ಕೃಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಮಾತೃಭೂಮಿಗೆ ಮರಳಿದಾಗ, ವಿದೇಶದಲ್ಲಿ ವಿಜಯದುಂದುಭಿಯನ್ನು ಮೊಳಗಿ ಹಿಂದಿರುಗಿದ ತನ್ನ ಧೀಮಂತ ಪುತ್ರನ ಸ್ವಾಗತಕ್ಕಾಗಿ ಭಾರತಾಂಬೆ ಕಾದಿದ್ದಳು ಅವರು ಮಾತೃಭೂಮಿಯನ್ನು ತಲಪುವ ದಿನವನ್ನೇ ಕರೆಗಾರಿ ನೌಕರಿ ಅವರಿಗಾಗಿ ಕಾದಿತ್ತು ೧೯೧೦ರಿಂದ ೧೯೩೫ರ ತನಕ ಬಂಗಾಲದ ಜಿಲ್ಲೆಯೊಂದರಲ್ಲಿ ಅಸಿಸ್ಟೆಂಟ್ ಕಲೆಕ್ಟರರಾಗಿ ಕೆಲಸ ಮಾಡಿದ ತರುವಾಯ ಕೆಲಕಾಲ ಅಸ್ಸಾಮಿನಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ದುಡಿದರು ಆಗಲೇ ಅವರ ಸಾರ್ವಜನಿಕ ಜೀವನಕ್ಕಾರಂಭವಾದುದು ತನ್ನ ಸ್ವಂತ ನಿಧಿಯಿಂದಲೇ ಕುಷ್ಠರೋಗಿಗಳ ಆರೈಕೆಗಾಗಿ ಚಿಕಿತ್ಸಾಲಯವೊಂದರ ಸ್ಥಾಪನೆಗೈದರು ಹೀಗೆ ಒಂದಲ್ಲ ಒಂದು ಸಾರ್ವಜನಿಕ ಹಿತಾರ್ಥ ಅವರು ಮಾಡಿದ ಕೆಲಸಗಳಿಂದಾಗಿ ಅವರ ಕೀರ್ತಿ ಬೆಳೆಯಲಾರಂಭಿಸಿತು

ಕಲ ಕಾಲದಲ್ಲೇ ರಾಯರನ್ನು ಹಿಂದೂ ನ್ಯಾಯಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು, ಭಾರತ ಸರಕಾರ ಅತಿ ಕಠಿಣವೆನಿಸಿದ ಮಾರೀಸು ದಾರಿಕೆಯ ನಿಯಮವನ್ನು 'ಸುಲಿದ ಬಾಳೆಯ ಹಣ್ಣಿನಂದದಿ' ಅತಿ ಸುಲಭರೀತಿಯಲ್ಲಿ ಸಂಗ್ರಹಿಸಿದರು. ಇದರಿಂದ ಅವರ ಪ್ರತಿಭೆ ಇನ್ನಷ್ಟು ಬೆಳೆಯಿತು

ಸ್ವಾತಂತ್ರ್ಯಪೂರ್ವದ ಭಾರತ ಸರಕಾರ ಹಾಗೂ ದೇಶಕ್ಕಿಂತಲೂ ಸ್ವಾತಂತ್ರ್ಯೋತ್ತರ ಭಾರತ ಸರಕಾರ ಹಾಗೂ ಜನತೆ ರಾಯರಿಂದ ತುಂಬಾ ಪ್ರಯೋಜನಹೊಂದಿದೆ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು ೧೯೪೭ರಲ್ಲಿ ಘಟನಾ ಸಮಿತಿಯು ರಚನೆಯಾದಾಗ ಅದರ ಪ್ರಧಾನ ಸಲಹೆಗಾರರೇ ಶ್ರೀ ನರಸಿಂಗರಾಯರಾಗಿದ್ದರು ಈ ಕಾಲದಲ್ಲಿ ಅವರು ಸಲ್ಲಿಸಿದ ಸೇವೆ ಸ್ತುತ್ಯರ್ಹವಾಗಿದೆ. ಪ್ರಪಂಚದ ಪ್ರಮುಖ ಪ್ರಜಾರಾಜ್ಯಗಳ ಘಟನೆಗಳ ಪೃಥಕ್ಕರಣದಿಂದ ಸಿದ್ಧಪಡಿಸಿದ ಕೈಪಿಡಿಯೊಂದ ಜನರಿಂದ ಘಟನಾಸಮಿತಿಯ ಅಧ್ಯಕ್ಷರಿಗೆ ಕೊಡಲ್ಪಟ್ಟಿತು ಅವರ ಆಳವಾದ ವ್ಯಾಸಂಗ ಹಾಗೂ ಅದ್ಭುತ ಪ್ರತಿಭೆಯ ಅಪೂರ್ವ ಫಲವಾಗಿದೆ, ಆ ಅಮೂಲ್ಯ ಕೈಪಿಡಿ ಇದನ್ನು ನೋಡಿ ಅಂದಿನ ವ್ಯೈಸ್‌ರೋಯ್ ಲೇಡಿ ಲೂಯಿ ನಿಕಲಸ್ ಮೌಂಟ್‌ಬೇಟನ್ ಕೂಡ ತಲೆದೂಗಿದ್ದರೆಂದ ಮೇಲೆ ಅವರ ಅಗಾಧ ಪಾಂಡಿತ್ಯದ ಅರಿವು ಯಾವನಿಗೂ ಆಗದಿರದು

ಪ್ರಖ್ಯಾತ ಆಡಳಿತಗಾರರಾಗಿದ್ದಂತೆಯೇ ಸಮರ್ಥ ರಾಜಕಾರಣಿಯೂ ಆಗಿದ್ದರು, ರಾಯರು ಪಾಕಿಸ್ತಾನ ಹಾಗೂ ಪಾಶ್ಚಾತ್ಯರ ಪಾಲಿಗೆ ಇಂದಿಗೂ ಸಮಸ್ಯೆಯೆನಿಸಿಕೊಂಡಿರುವ "ಕಾಶ್ಮೀರ ಸಮಸ್ಯೆ"ಯ ಬಗ್ಗೆ ಪಾಶ್ಚಾತ್ಯರೆದುರಿಗೆ ಭಾರತೀಯರ ಧೋರಣೆಯನ್ನು ಸತ್ವಭರಿತವಾಗಿಯೂ ಸತ್ಯಪೂರ್ಣವಾಗಿಯೂ ಮಂಡಿಸಿದವರು ನರಸಿಂಗರಾಯರೇ ಹೈದರಾಬಾದ್ ಪ್ರಕರಣವೊಂದನ್ನು ನೆನಪನ್ನಾಗಿರಿಸಿಕೊಂಡು, ಅದನ್ನು ಜಾಗತಿಕ ಸಂಸ್ಥೆಗೊಯ್ದು, ಅಲ್ಲಿ ಒಪ್ಪಣ ಮಾಡುವುದರಲ್ಲಿ ಜಾಗತಿಕ ದಾಖಿಲೆಯನ್ನೇ ಮುರಿದ, ಇಂದು ಅಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ರಾರಾಜಿಸುತ್ತಿರುವ ಪಾಕಿಸ್ತಾನದ ಸರ್ ಝಫರುಲ್ಲಾ ಖಾನರ ಎರಡೂವರೆ ದಿನಗಳ ದೀರ್ಘ ಕಂಠಶೋಷಣೆಗೆ ಭಾರತೀಯ ಪ್ರತಿನಿಧಿ ಬನೆಗಲ್‌ರು ಕೊಟ್ಟ ವಿದ್ವತ್ಪೂರ್ಣ ಉತ್ತರ ಬರೇ ಹತ್ತು ನಿಮಿಷಗಳದ್ದು ಅವರ ಈ ಉತ್ತರಕ್ಕೆ ಇಡೀ ವಿಶ್ವಸಂಸ್ಥೆಯೇ ವಿಸ್ಮಯ ಹೊಂದಿತೆಂದ ಮೇಲೆ ಅವರ ಯೋಗ್ಯತೆಯೇನೆಂಬುದನ್ನು ನಾವು ವಿಮರ್ಶಿಸಬೇಕಾದ ಅವಶ್ಯಕತೆಯೇ ಇಲ್ಲ

ರಾಯರು ಯಾವಾಗಲೂ ಒಂದಲ್ಲ ಒಂದು ತರದ ಅಸ್ವಸ್ಥತೆಯಿಂದ ಬಳಲುತ್ತಲಿದ್ದರು ಅಂತಹ ಸಮಯದಲ್ಲೂ ತನ್ನ ಆರೋಗ್ಯದೆಡೆಗೆ ಸರಿಯಾದ ಲಕ್ಷ್ಯ ಹರಿಸಿದವರಲ್ಲ, ಅವರು ನಿರಂತರವೂ ತನ್ನ ತಾಯ್ನಾಡಿನ ಕುರಿತಾಗಿಯೇ ಅವರ ಚಿಂತೆ ನಿಜವಾದ ಅರ್ಥದಲ್ಲಿ ಅವರೋರ್ವ ಕರ್ಮಯೋಗಿಯಾಗಿದ್ದರು ಸ್ಥಿರ ಪ್ರಜ್ಞತೆ ಅವರಲ್ಲಿ ಮೂರ್ತೀಭವಿಸಿತ್ತು ಭಾರತದ ತರುಣ ಜನಾಂಗಕ್ಕವರೇ ಅವರು ಆದರ್ಶಪ್ರಾಯರಾಗಿದ್ದರು ಕಾರಣ ಅವರ ನಿರಂತರ ಶ್ರಮ ಹೆತ್ತೊಂಭತ್ತರ ಹರೆಯದ ತರುಣರನ್ನೂ ನಾಚಿಸುವಂತಿತ್ತು ಇಂತಹ ಮಹಾನ ವ್ಯಕ್ತಿತ್ವವನ್ನು ಪಡೆದಿದ್ದರೂ, ಅವರಲ್ಲ ತಿಲಮಾತ್ರ ಅಹಂಕಾರವನ್ನು ಕಂಡವರಿಲ್ಲ ಪ್ರಧಾನಿ ನೆಹರೂರವರಿಗೆ ಅವರ ಮೇಲೆ ಅಪಾರ ಪ್ರೇಮಾದರಗಳಿದ್ದವು ವಿದೇಶ ನೀತಿಯನ್ನು ರೂಪಿಸುವುದರಲ್ಲಿ ಬೆನೆಗಲ್‌ರು ಅವರ ಬಲಗೈಯಂತಿದ್ದರೆಂದರೆ ತಪ್ಪಿಲ್ಲ ಹೀಗೆ ಅವರು ಸಕಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು

ರಾಯರು ಕೆಲಕಾಲ ವಿಶ್ವಸಂಸ್ಥೆಯಲ್ಲಿ ಭಾರತವನ್ನು ಪ್ರತಿನಿಧೀಕರಿಸಿದ್ದರು. ಮಾತ್ರವಲ್ಲ, ೧೯೫೦ರಲ್ಲಿ ಯುಕ್ತ ರಾಷ್ಟ್ರ ಸಂಸ್ಥೆಯ ಅಧಿವೇಶನ ಮೇಳೈಸಲ್ಲಿ ಸೇರಿದ್ದಾಗಲೇ ಅವರು ಹನ್ನೊಂದು ರಾಷ್ಟ್ರಗಳ ಅಂತಾರಾಷ್ಟ್ರೀಯ ಅಣುಶಕ್ತಿ ನಿಯಂತ್ರಣ ಉಪಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು ಆಗ ಅವರು ಜಗತ್ತಿನ ನಾಶಕ್ಕಾಗಿ ಹಾತೊರೆಯುವ ದುಷ್ಟ ಶಕ್ತಿಗಳ ನಿರ್ಮೂಲನಕ್ಕಾಗಿ ಜಗತ್ತಿಗ ಮಾಡಿಕೊಂಡ ಮನವಿಯಂತೂ ಶಾಂತಿಪ್ರಿಯ ಭಾರತದ ಧೋರಣೆಯ ಪುನರುಚ್ಚಾರವೇ ಆಗಿತ್ತು ಇನ್ನೂ ಕೆಲವು ಕಾಲದಲ್ಲಿಯೇ ಅಂತಾರಾಷ್ಟ್ರೀಯ ನ್ಯಾಯ ಸಮಿತಿಯ ಸದಸ್ಯರಾಗಿಯೂ, ಕೊನೆಗೆ ಅದರ ಉಪಾಧ್ಯಕ್ಷರಾಗಿಯೂ ತುಂಬಾ ಸೇವೆ ಸಲ್ಲಿಸಿದರು ಮಾತ್ರವಲ್ಲ ೧೯೫೭ರಲ್ಲಿ ಪ್ರಪಂಚ ಸಭೆಗೆ ಭಾರತದ ಕಾಯಂ ರಾಯಭಾರಿಯಾಗಿ ಭಾರತ ಸರಕಾರ ಅವರನ್ನು ನೇಮಿಸಿತು ೧೯೫೦ರಲ್ಲಿ ರಾಯರು ಭದ್ರತಾ ಮಂಡಲಿಯ ಅಧ್ಯಕ್ಷರಾಗಿಯೂ ಚುನಾಯಿತರಾದರು ಲಂಡನಿನ ಪ್ರಸಿದ್ಧ "Daily Mirror" ಪತ್ರಿಕೆಯ ನ್ಯೂಯೋರ್ಕ್ ವರದಿಗಾರ ಮಿ ಜೋನ್ ವಲ್ಟರ್ಸ್‌ರವರು ಮಹಾನ್ ವ್ಯಕ್ತಿತ್ವದ ಈ ಭಾರತೀಯ ಪ್ರತಿನಿಧಿಯ ಕುರಿತು ಹೀಗೆಂದು ಉದ್ಗರಿಸಿದ್ದರು:—

(೧೦ನೇ ಪುಟ ನೋಡಿರಿ)

ಸೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಪ್ರಕಟಣೆ

ನಿರಖು ಠೇವಣಾತಿಗಳ ಮೇಲೆ ನಾವೀಗ ತೆರುತ್ತಿರುವ ಸಾ ಸೇ 4½ರಿಂದ 4¾ರ ವರೆಗಿನ ಬಡ್ಡಿ ದರಗಳಲ್ಲಿ ಯಾವುದೊಂದೂ ಬದಲಾವಣೆ ಇಲ್ಲದೆ, ಅಂತಹ ಠೇವಣಾತಿಗಳನ್ನು ಅದೇ ದರಗಳಲ್ಲಿ ಸ್ವೀಕರಿಸಲಾಗುವುದೆಂದು ಪ್ರಕಟಿಸಲು ಸಂತೋಷಪಡುತ್ತೇವೆ

ವಿಶೇಷ ಮಾಹಿತಿಗೆ

ನಿಮಗೆ ಸಮೀಪವಿರುವ ನಮ್ಮ ಯಾವುದೇ ಶಾಖೆಯನ್ನು ಸಂದರ್ಶಿಸಿರಿ

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : ಉಡುಪಿ (ದ ಭಾರತ)

(ವಿಶಾಲ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ನಮ್ಮದು ಅತಿ ಹಿರಿಯ ಬೇಂಕು!)

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು ರಾಘವೇಂದ್ರ ಆಚಾರ್ಯ,ಎಂ ಎ)

ಸಾಮಾನ್ಯ ರೋಗಗಳು

(ಡಾ ಕೆ ಎಲ್ ಐತಾಳ,ಎಂ ಬಿ ಬಿ ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ

ಪ್ರತಿಗಳು ಸಿಗುವ ಮುಖ್ಯ ಸ್ಥಳ.

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಚಾರ ವೀಚಿ

ನಮ್ಮ ರಾಷ್ಟ್ರೀಯ ಸಮಸ್ಯೆಗಳ ಸ್ಥಾನಮಾನ

ಮೂರು 'ಉ'ಗಳಲ್ಲಿ ರಾಷ್ಟ್ರವು ಸ್ವಾವಲಂಬಿಯಾಗಿ ಅದರ ಉಪಯೋಗ ವನ್ನು ಪ್ರಜೆಗಳೆಲ್ಲರೂ ಪಡೆಯದೆ ಹೋದರೆ, ಉಳಿದ ಯಾವ ಆದರ್ಶಗಳೂ ಫಲಪ್ರದವಾಗಲಾರವು.

ಸ್ವತಂತ್ರ ಭಾರತವನ್ನು ಸುಖಸಂಪದ್ಭರಿತವಾದ ನಾಡನ್ನಾಗಿ ಜ್ಞಾನಿ ವಿಜ್ಞಾನಿಗಳ ತವರೂರನ್ನಾಗಿ ಕಟ್ಟುವ ಮಹಾ ಸಾಹಸವನ್ನು ನಾವೂ ನಮ್ಮ ನಾಯಕರೂ ಮಾಡುತ್ತಿದ್ದೇವೆ. ಮೊದಲೇ ಅಶಕ್ತವಾಗಿರುವ ಈ ನಮ್ಮ ಹೊಂಡಕ್ಕೆ ಅದೆಷ್ಟು ಮಣ್ಣು ಸುರಿದರೂ ಅದು ನೆಲಸಮವಾಗುವ ಸಲ್ಲಕ್ಷಣಗಳು ನಮಗೆ ಗೋಚರಿಸುವುದಿಲ್ಲ. ತಾಳಿದವನು ಬಾಳಿಯಾನು ಎಂಬ ಮಾತನ್ನು ನಾವು ನಂಬುವುದಾದರೆ, ನಾವಿನ್ನೂ ಎಷ್ಟುಕಾಲ ತಾಳಿಕೊಂಡಿರಬೇಕು ಎಂಬುದಿನ್ನೂ ಅಸ್ಪಷ್ಟವಿದೆ. ಕೈಗೆ ಸಿಕ್ಕಿದುದರಲ್ಲೇ ತೃಪ್ತಿ ಪಟ್ಟುಕೊಳ್ಳಬೇಕೆಂಬ ವೇದಾಂತದ ಉಕ್ತಿಯನ್ನು ಕಡೆಗಣಿಸುವಷ್ಟು ದಾಷ್ಟ್ಯ್ರ ನಮಗಿರಬಾರದಾದರೂ ಅದನ್ನೇ ನೆಮ್ಮಿ ಕೂರುವುದು ಇಂದಿನ ಸಂಘರ್ಷ ಯುಗದಲ್ಲಿ ಸರಿಯೆನ್ನುವಂತಿಲ್ಲ. ಆದುದರಿಂದಾಗಿ, ನಾವು ಸಾಧಿಸಿದ ಸಾಧನೆ, ಗಳಿಸಿದ ಗಳಿಕೆಗಳಿಂದ ತೃಪ್ತರಾಗಲೂ ಬೇಕು; ಜತೆಗೆ ಇನ್ನೂ ದುಡಿಯುವ, ದೇಶದ ಪುನಾರಚನಾಕಾರ್ಯದಲ್ಲಿ ಅಧಿಕಾಧಿಕ ಪರಿಶ್ರಮ ವಹಿಸುವ ಪ್ರತಿಜ್ಞಾಬದ್ಧರಾಗಲೂ ಬೇಕು.

ಭಾರತವಿಂದು ಎದುರಿಸಬೇಕಾದ ಬಾಹ್ಯಸಮಸ್ಯೆಗಳು ಕೆಲವಿವೆಯೆಂಬುದನ್ನು ಒಪ್ಪಬೇಕು; ಆದರೆ, ಕೇವಲ ಇವುಗಳ ಕಡೆಗೇನೇ ತಮ್ಮ ಶಕ್ತಿಯನ್ನೆಲ್ಲ ಭಾರತೀಯರು ಕೇಂದ್ರೀಕರಿಸಬೇಕೆಂಬ ವಾದವನ್ನು ಹೆಚ್ಚಿನವರು ಒಪ್ಪಲಾರರು. ಬಾಹ್ಯಸಮಸ್ಯೆಗಳಿಗಿಂತಲೂ ಆಂತರಿಕ ಸಮಸ್ಯೆಗಳು ಅಸಾಧಾರಣ ಪರಿಣಾಮವನ್ನುಂಟುಮಾಡುವಷ್ಟು ಬಲಶಾಲಿಗಳು. ಕಿವಿಯೊಳಗೆ ನೀರು ಹೊಕ್ಕರೆ, ಅಪರಿಮಿತ ಪೀಡೆಯೊದಗುವಂತೆಯೇ, ದೇಹದ ಆರೋಗ್ಯಕ್ಕೆ ಅಂತರಿಕಾಂಗಗಳ ಆರೋಗ್ಯವೇ ಕಾರಣವಾಗಿರುವಂತೆಯೇ ದೇಶದ ಆರೋಗ್ಯಕ್ಕೆ ದೇಶದ ಆಂತರಿಕ ಆರೋಗ್ಯದತ್ತ ವಿಶೇಷ ಮಹತ್ವವೀಯುವುದು ಅಗತ್ಯವಿದೆ. ನಮ್ಮವರು ಭಾರತದಿಂದ ಹೊರಗಣ ವಿಷಯಗಳಿಗೂ ಭಾರತದ ಬಾಹ್ಯ ಸಮಸ್ಯೆಗಳಿಗೂ ಕೊಡುವಷ್ಟು ಆಸಕ್ತಿಯನ್ನು ದೇಶದ ಆಂತರಿಕ ಸಮಸ್ಯೆಗಳತ್ತ ತೋರಿಸುವ ಕಷ್ಟ ವಹಿಸುವುದಿಲ್ಲ. ನಮ್ಮಲ್ಲಿ ರಾಷ್ಟ್ರೀಯ ಭಾವನೆಯು ಉತ್ಪನ್ನವಾಗಿಲ್ಲ ಎಂಬ ಕಾರಣವನ್ನು ಇದಕ್ಕೆ ಮುಂದೊಡ್ಡುವವರೂ ಇದ್ದಾರೆ; ನಾವು ಭಾರತೀಯರು ಎಂಬ ಅಭಿಮಾನ ನಮಗಿರಬೇಕು; ನಮ್ಮ, ನಮ್ಮವರ, ನಮ್ಮ ಊರಿನ, ನಮ್ಮ ಜಿಲ್ಲೆಯ, ನಮ್ಮ ರಾಜ್ಯದ ಹಾಗೂ ನಮ್ಮ ದೇಶದ ಬಗ್ಗೆ ವಿಶೇಷ ಅಭ್ಯಾಸ ಮಾಡಬೇಕು; ನಮ್ಮಂತೆ ಪರರ ಬಗೆಯಬೇಕು. ವಿಶ್ವವು ಸಂಕುಚಿತವಾಗುತ್ತ ಬರುತ್ತಿರುವ ಈ ಸಮಯದಲ್ಲಿ ನಾವು ಇನ್ನೂ ಸಂಕುಚಿತರಾಗಿ ಕೂತರೆ ಅದು ಹಾಸ್ಯಾಸ್ಪದವೆನಿಸೀತು; ಆದುದರಿಂದ, ನಾವು "ನಮ್ಮ" ಬಗ್ಗೆ ವಿಶೇಷಾಭ್ಯಾಸ ನಡೆಸಬೇಕು; ನಮ್ಮ ಆಂತರಿಕ ಶಕ್ತಿಯನ್ನು ವರ್ಧಿಸಿ, ಆಂತರಿಕ ಸಮಸ್ಯೆಯನ್ನು ಬಗೆಹರಿಸಿ, ಆ ಮೇಲೆ ಮುಂದಿನ ವಿದ್ಯಮಾನಗಳಿಗೆ ತಲೆಕೊಡಬೇಕು.

"ಉದಾರ ಚರಿತಾನಾಂ ವಸುಧೈವ ಕುಟುಂಬಕಂ" ಎಂಬ ಮಾತನ್ನು ಹೀಗೆ ಹೇಳಿದುದರಿಂದ ಅಲ್ಲಗಳೆಯುವ ಸಾಹಸ ಮಾಡಿದಂತಾಗಲಿಲ್ಲ. ಮೊದಲು ನಮ್ಮ ಮನೆಯಲ್ಲಿ ದೀಪಹಚ್ಚಿ, ಅನಂತರ ದೇವಾಲಯದಲ್ಲಿ ಹಚ್ಚಬೇಕು ತಾನೆ? ಅದು ಹೊರತು, "ವಸುಧೈವ ಕುಟುಂಬಕಂ" ಎಂದು ವಾಸ್ತವವಾಗಿ ತಿಳಿಯಬಲ್ಲ ಉದಾರ ಚರಿತರ ಸಂಖ್ಯೆ ಭಾರತೀಯರಲ್ಲಿ ಎಷ್ಟಿದೆ? ೪೦ ಕೋಟಿ ಭಾರತೀಯರಲ್ಲಿ ಇಂತಹ ವಿಶಾಲ ಮನೋಭಾವನೆಯ ವ್ಯಕ್ತಿಗಳೇನೋ ವಿಶಾಲ ಸಾಗರದ ಕೆಲವೊಂದು ನೀರ ಬಿಂದುಗಳಂತೆ ಅಲ್ಪವೇ ಅಲ್ಪ.

ನಮ್ಮ ಸಮಸ್ಯೆಗಳಲ್ಲಿ ಅನ್ನ ಮತ್ತು ಬಟ್ಟೆಗಳ ಹಾಗೂ ವಸತಿಯ ಸಮಸ್ಯೆ ನಮ್ಮನ್ನು ಸದಾ ಕಾಡುತ್ತಿವೆ. ದೇಶದ ಆಹಾರ ಧಾನ್ಯಗಳ ಉತ್ಪನ್ನ ದೇಶದ ಜನರಿಗೆ ಸಾಕಾಗುವದು ಅಪರೂಪವಾಗಿದೆ. ಪ್ರಥಮ ಹಾಗೂ ದ್ವಿತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ಕೆಲವೊಂದು ಅಭಿವೃದ್ಧಿಗಳು ಈ ಕ್ಷೇತ್ರದಲ್ಲಿ ಕಂಡು ಬಂದರೂ ನಾವು ಆಹಾರಸ್ವಾವಲಂಬಿಗಳಾಗುವುದು ಅಸಾಧ್ಯವಾಯಿತು. ಇದರಿಂದಾಗಿ ಆಹಾರಧಾನ್ಯಗಳ ಬೆಲೆಯಲ್ಲಿ ಏರಿಕೆಯಾದುದು ಮಾತ್ರವಲ್ಲದೇ ಕೆಲವೆಡೆ ಅಭಾವವೂ ತೋರಿಬಂದು ಜನಕ್ಷೋಭೆಗೆ ಕಾರಣವಾಗಿರುವುದನ್ನು ನೆನಸುವಾಗ, ನಮ್ಮ ಅಶಕ್ತತೆಯ ಅರಿವು ನಮಗಾಗುತ್ತದೆ; ಸಾಧನೆಯ ಸಾಧನೆ ಎಷ್ಟು ಎಂಬುದೂ ವ್ಯಕ್ತವಾಗುತ್ತದೆ. ಸದ್ಯ ಎದ್ದಿರುವ ಸಕ್ಕರೆಯ ಅಭಾವವನ್ನೂ ಎತ್ತಿಕೊಳ್ಳುವುದಾದರೆ; ಮತ್ತು ಈ ಬಗ್ಗೆ ನಮ್ಮ ನಾಯಕಸ್ಥಾನದಲ್ಲಿರುವವರು ಉದ್ಗರಿಸುವ ಮಾತುಗಳನ್ನು ಸ್ಮರಿಸುವುದಾದರೆ, ಆಹಾರಧಾನ್ಯಗಳ ಬೆಲೆಯೇರಿಕೆಗೆ ಜನತೆಯ ಜೀವನ ಮಟ್ಟವು ಏರಿದುದೇ ಮೂಲ ಕಾರಣ! ಆದರೆ, ನಮ್ಮ ಪ್ರಗತಿ ಸಾಧನೆಯಿಂದ ಆರ್ಥಿಕಸ್ತರವು ಎಲ್ಲ ಜನತೆಯುಲ್ಲೂ ವಿಕಸವಾಗಿ ಏರಿಲ್ಲವೆಂಬುದಕ್ಕೆ ಪ್ರತ್ಯಕ್ಷವೇ ನಿದರ್ಶನ- ಅಂಕೆಸಂಖ್ಯೆಗಳಿಂದ ರಾಷ್ಟ್ರೀಯ ಆದಾಯವು ಏರಿದೆ; ರಾಷ್ಟ್ರೀಯ ಸಂಪಮಾನವು ಹೆಚ್ಚಿದೆ; ಆದರೆ ಜನತೆಯ ಜೀವನಸ್ಥಿತಿ ಮತ್ತೂ ಮತ್ತೂ ಕ್ಷೀಣವಾಗುತ್ತ ಹೋಗುತ್ತಿದೆ ಎಂಬುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ!

ರಾಷ್ಟ್ರದಲ್ಲಿ ಬಟ್ಟೆಯ ಸಮಸ್ಯೆ ಇನ್ನೊಂದು. ಈ ಮೊದಲು ವಿದೇಶೀ ಬಟ್ಟೆಗಳು ಭಾರತಕ್ಕೆ ಹೇರಳವಾಗಿ ಬರುತಿದ್ದವು; ಈಗಲೂ ಬರುತ್ತದೆ ಎನ್ನುವ ದೇಶದಲ್ಲಿ ಬಟ್ಟೆಯ ಗಿರಣಿಗಳೂ ತಮ್ಮ ಕರ್ತವ್ಯಗಳಲ್ಲಿ ನಿರತವಾಗುತ್ತಿವೆ. ಜತೆಗೆ ಕೈಮಗ್ಗಗಳಿಗೂ ಸರಕಾರ ನಾನಾ ಪ್ರಕಾರದ ಪ್ರೋತ್ಸಾಹವೀಯುವುದನ್ನು ಇಲ್ಲವೆನ್ನುವಂತಿಲ್ಲ. ಖಾದಿ ಬೋರ್ಡ್, ಕೈಮಗ್ಗಗಳ ಸಂಘಗಳು ತಾವು ಬಟ್ಟೆಗಳನ್ನು ತಯಾರಿಸಿ ಅವುಗಳನ್ನು ಜನಪ್ರಿಯಗೊಳಿಸಲು ಹೆಣಗುತ್ತಿವೆ. ಹೀಗೆ ವಸ್ತ್ರೋತ್ಪಾದನೆಯಲ್ಲಿಯೂ ನಾವು ಪ್ರಗತಿಪಥ ಭ್ರಮಣ ಮಾಡಿದ್ದೇವೆ. ಅಂಕೆಸಂಖ್ಯೆಗಳೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತವೆ. ಆದರೆ, ವರ್ಷಕ್ಕೊಂದು ಹೊಸ ಬಟ್ಟೆಯನ್ನು ಕೊಂಡುಕೊಳ್ಳದೆ ಹರಕು ಚಿಂದಿಗಳಿಗೇನೇ ತೇಪೆಹಚ್ಚಿ ದಿನದೂಡುವ ಭಾರತ ರಾಷ್ಟ್ರೀಯರೂ ನಮ್ಮ ಕಣ್ಣ ಮುಂದೆ ತಿರುಗಾಡುತ್ತಿರುವುದನ್ನು ಕಂಡೂ ಇಲ್ಲವೆನ್ನುವುದು ಸಾಧ್ಯವೆ?

ಮೂರನೆಯದು ವಸತಿಯ ಪ್ರಶ್ನೆ. ಸ್ವಂತ ಮನೆಯಿರುವವರ ಸಂಖ್ಯೆ ಮತ್ತು ಬಾಡಿಗೆಗೋ ಗೇಣಿಗೋ ಕುಳಿತಿರುವವರ ಸಂಖ್ಯೆಯನ್ನು ಬಿಟ್ಟುಬಿಡೋಣ. ನಮ್ಮಲ್ಲಿ ಎಲ್ಲರಿಗೂ ಉಳಕೊಳ್ಳುವ ಮನೆಗಳು ದೊರೆಯುತ್ತಿವೆಯೆ? ಕೆಲವೆಡೆ ಬೇಕೆಂದರೂ ಮನೆ ದೊರೆಯಲಾರದು; ದೊರೆತರೂ ವಾಸ್ತವ್ಯಕ್ಕೆ ಅನುಕೂಲವೆನಿಸುವ ಮನೆಗಳು ಇಲ್ಲವೆನ್ನಬಹುದು! ಶಾಲಾ ಪಠಾರದಿಂದ ಹೊರಗೆ ವಾಸ್ತವ್ಯ ನಡೆಸುವ ಅಧ್ಯಾಪಕರು ಶಾಲಾ ಪಠಾರದಲ್ಲಿಯೇ ವಾಸಿಸಬೇಕೆಂದು ಶಾಲಾ ಪರಿಶೀಲನಾಧಿಕಾರಿಗಳು ಬಯಸುತ್ತಾರೆ. ಇದು ಅಗತ್ಯ ಮತ್ತು ಅವಶ್ಯವೆಂದು ಎಲ್ಲರೂ ಒಪ್ಪುತ್ತಾರೆ ಆದರೆ, ಆ ಶಾಲಾ ಪಠಾರದಲ್ಲಿ ಅಧ್ಯಾಪಕರ ವಾಸ್ತವ್ಯಕ್ಕೆ ಅನುಕೂಲವೆನಿಸುವ ಮನೆಗಳನ್ನು ಯಾರು ಕಟ್ಟಿಸಿಟ್ಟಿದ್ದಾರೆ, ಇಲ್ಲವೆ ಯಾರು ಕಟ್ಟಿಸಿಕೊಡುತ್ತಾರೆ ಎಂದು ಯಾರೂ ಹೇಳುವುದಿಲ್ಲ! ನಮ್ಮಲ್ಲಿ ಹಲವಾರು ನಿಮ್ನವರ್ಗದ ಕುಟುಂಬಗಳು ಇಂದಿಗೂ "ಕೋಳಿಗೂಡು"ಗಳಂತಹ 'ಮನೆಯ ಆಭಾಸ'ಗಳಲ್ಲಿ ದಿನದೂಡುತಿದ್ದಾರೆ! ಅಜ್ಞಾನ ಅನೈರ್ಮಲ್ಯಗಳ ಗುಂಗಿನಲ್ಲಿಯೇ ದಿನದೂಡುತ್ತಾರೆ. ನಮ್ಮ ಸರಕಾರ ವಸತಿಯ ಸಮಸ್ಯೆಯನ್ನು ಬಿಡಿಸಲು, ಹೆಣಗಾಡುತ್ತಿದೆ. ಆದರೆ, ದಿನಗಳೆದಂತೆ ಈ ಸಮಸ್ಯೆ ಜಟಿಲವಾಗುತ್ತಲೇ ಹೋಗುತ್ತಿದೆ!

ನಾಲ್ಕನೆಯದು ಆರೋಗ್ಯದ ಪ್ರಶ್ನೆ. ಸರಕಾರವು ಧರ್ಮಾಸ್ಪತ್ರೆಗಳಲ್ಲಿ ರೋಗರುಜಿನಗಳಿಗೆ ಉತ್ತಮ ವಿದ್ಯಾವಂತ ವೈದ್ಯರ ಮೂಲಕ ಔಷಧಿಗಳನ್ನು ಪುಕ್ಕಟೆಯಾಗಿ ಒದಗಿಸುತ್ತದೆ; ಯೋಗ್ಯ ಚಿಕಿತ್ಸೆ ದೊರೆಯಬೇಕೆಂಬ ಉತ್ಕಟೇಚ್ಛೆಯಿಂದ

(೯ನೇ ಪುಟ ನೋಡಿರಿ)

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ

ಸಂಭಾಷಣ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:00.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

ನಮ್ಮ ಭಾರತ

ಸ್ವದೇಶಿ ವಿದೇಶಿಗಳ ತುಮುಲಯುದ್ಧ

ಪೇಟೆಯಲ್ಲಿ ದೊರೆಯದಿರುವ ವಸ್ತುಗಳೆಲ್ಲ ಸ್ವದೇಶಿಯಾಗಿರಬೇಕು, ದೊರೆಯುವಂತಹವೆಲ್ಲ "ಇಂಡಿಯನ್ ಮೇಡ್" ಆಗದು— ಈ ಮನೋಭಾವನೆಯಿಂದ ಶ್ರೇಯಸ್ಸು ದೊರೆತೀತೆ?

ಅಂದು ಭಾನುವಾರವಾಗಿತ್ತು. ಬಿಡುವಿನ ದಿನವೆಂತಲೇ ಸಂಜೆ ತಿರುಗಾಟಕ್ಕಾಗಿ ಮನೆಯಿಂದ ಹೊರಬಿದ್ದೆ. ಸಾಮಾನ್ಯವಾಗಿ ರಜಾದಿನಗಳಲ್ಲಿ ಮನೆಯಲ್ಲಿಯೇ ಕಾಫಿ ಕುಡಿದು ಹೊರಗೆ ಕಾಲಿಡುವುದು ವಾಡಿಕೆಯಾಗಿದ್ದುದರಿಂದ, ಎಂದಿಗಿಂತ ತುಸು ಹೆಚ್ಚಾಗಿಯೇ ಹೊಟ್ಟೆ ತುಂಬಿಸಿಕೊಂಡು ಭಾರವಾದ ಹೆಜ್ಜೆಗಳನ್ನಿಕ್ಕುತ್ತ ಬೀದಿಗಿಳಿದೆ. ನಾಲ್ಕು ಹೆಜ್ಜೆ ನಡೆಯುವಷ್ಟರಲ್ಲೇ ನನ್ನ ಮಿತ್ರನೊಬ್ಬ ಹಿಂದಿನಿಂದ ಕೂಗಿ ಕರೆದ; ಸ್ವರಶ್ರವಣದಿಂದಲೇ ಪರಿಚಯ ಪ್ರಾಪ್ತಿಯಾದುದರಿಂದ ನಿಂತು ಮುಂದೆ ಇಬ್ಬರೂ ದಾರಿಗುಂಟ ನಡೆಯತೊಡಗಿದೆವು.

ಪಾರ್ಕಿಗೆ ಹೋಗಿ, ಅಲ್ಲಿನ ಶಿಲಾಸನಗಳಲ್ಲಿ ಮಂಡಿಸಿ, ಸುಖಸಲ್ಲಾಪಗಳನ್ನು ಮಾಡುವುದು, ಆ ವಾರದ ಗತವರದಿಯನ್ನು ಪರಸ್ಪರ ಒಪ್ಪಿಸುವುದು; ಮುಂದಿನವಾರದ ಕಾರ್ಯಕ್ರಮ, ಕರ್ತವ್ಯ, ಹಾಗೂ ಕೆಲಸಗಳ ಹೊರೆಯಬಗ್ಗೆ ಸ್ಥೂಲ ಪರಿಚಯ ಮಾಡಿಕೊಳ್ಳುವುದು ನಾಲ್ಕು ವರ್ಷಗಳ ಪ್ರತಿ ಭಾನುವಾರ ದಿನವೂ ನಡೆದುಬಂದ ದಾರಿ. ದಾರಿಯಲ್ಲಿ ಎದುರಾಗುವ ದೇವಾಲಯದೊಳಗೆ ಮಂಡಿಸಿ ನಮ್ಮನ್ನೇ ಓರೆಕಣ್ಣುಗಳಿಂದೀಕ್ಷಿಸುವ ದೇವರಿಗೆ ಕೈಮುಗಿಯುವುದಕ್ಕೆ ಕೆಲವೊಮ್ಮೆ, ಏಕೆ ಹಲವುಬಾರಿ, ಮರೆತುಹೋದ್ದರೂ ಈ ನಮ್ಮ ಕಾರ್ಯಕ್ರಮಕ್ಕೆ ಅದಾವ ಕಾರಣದಿಂದಲೂ ವ್ಯತಿರೇಕವಾಗಿರಲಿಲ್ಲ. ಮಳೆ, ಚಳಿ, ಬಿಸಿಲೆನ್ನದೆ ಭಾನುವಾರದ ಆ ಎರಡು ತಾಸುಗಳಲ್ಲೇ ನಾವು ಸ್ವರ್ಗಸುಖ ಅನುಭವಿಸುತ್ತಿದ್ದೆವು. ಪ್ರಾಯಃ ಸಾಕ್ಷಾತ್ ಯಮರಾಜನೇ ಬಂದು, ಆ ನಮ್ಮ ರಸನಿಮಿಷಗಳೆಡೆಯಲ್ಲಿ ಯಮಪುರಿಗೆ ಹೊರಟುಬಾ, ಸ್ವರ್ಗವಾಸದ ಲೈಸನ್ಸ್ ಕೊಟ್ಟುಬಿಡುತ್ತೇನೆ ಎಂದಿದ್ದರೂ ನಾವಿಬ್ಬರೂ ಆತನಿಗೆ ಎರಡು ಕೈ ಮುಗಿದು, ಈ ಭೂ ವೈಕುಂಠದಲ್ಲೇ ಇರಿಸುವ ಕೃಪೆ ಮಾಡಬೇಕು ಪ್ರಭೋ ಎಂದು ಅತಿ ದೈನ್ಯಭಾವದಿಂದ ನಮ್ರರಾಗಿ ದಮ್ಮಯ್ಯ ಹಾಕುತ್ತಿದ್ದೆವು.

ಆದರೆ, ಅಂದು ನಾವು ಮನೆಬಿಟ್ಟಗಳಿಗೆ ವಿಷಮಯವಿರಬೇಕು. ಎಂತಲೇ ಅರ್ಧ ದಾರಿಯಲ್ಲಿ ಕಿಟ್ಟಿ, ತನ್ನ ಅಂಗಡಿಯ ಬಾಗಿಲು ತೆಗೆದುಕೊಂಡಿದ್ದು ನಮ್ಮನ್ನಲ್ಲ, ಗಿರಾಕಿಗಳನ್ನು ಇದಿರು ನೋಡುತಿದ್ದ. ದುರ್ದೈವ ವಶಾತ್, ಅವನ ಗೃಧ್ರ ದೃಷ್ಟಿಗೆ ನಾವು ಬಲಿಯಾಗಬೇಕೆ? ಕೂಗಿದ. ನಾವು ಕೇಳದರೂ ಮುಂದಡಿಯಿಟ್ಟೆವು. ಕಿಟ್ಟನ ಕೈಗೆ ಸಿಕ್ಕಿ ಬಿಟ್ಟರೆ, ಅಂದಿನ ರಸ ನಿಮಿಷ ಕೆಟ್ಟಂತೆಯೇ ಎಂಬುದು ನಮಗಿಬ್ಬರಿಗೂ ಅನುಭವವೇದ್ಯವಾಗಿತ್ತು. ಆತ ಮತ್ತೂ ಗಟ್ಟಿಯಾಗಿ ಕರೆದು ಕೈಚಪ್ಪಾಳೆ ಬಡೆದ, ಹೆಸರೆತ್ತಿ ಕೂಗಿದ. ಇನ್ನೂ ಕೇಳಗಿವಿಗೇಳ್ವ, ಅಪಹಾಸ್ಯಕ್ಕೆ ಗುರಿಯಾಗುವುದು ತರವಲ್ಲವೆಂದು ಮನಸ್ಸಿಲ್ಲದ ಮನಸ್ಸಿನಿಂದ ಅಂಗಡಿ ಮೆಟ್ಟಲೇರಿ ಕುಳಿತೆವು.

ಅನಂತರ ಈ ಮಾತು ನಡೆಯಿತು. ಅಷ್ಟರಲ್ಲಿ ಒಬ್ಬ ಅಂಗಡಿಗೆ ಗಿರಾಕಿ ಬಂದ. ಆತನ ವೇಶಭೂಷಣ, ಹಾವಭಾವಗಳಿಂದಲೇ ಆತ ಓರ್ವ ಆದರ್ಶವಾದಿ ಎಂದು ತಿಳಿಯುವಂತಿತ್ತು. ಬಂದವನೇ 'ಟೂತ್ ಪೇಸ್ಟ್' ಇದೆಯೆ? ಎಂದನವ. ಕಿಟ್ಟಿ ಕೋಲ್ಗೇಟ್, ಮ್ಯಾಕ್ಲೀನ್ ಮೊದಲಾದ ನಾಲ್ಕಾರು ವಿಧದ ಚಿಕ್ಕ ದೊಡ್ಡ ಪೆಟ್ಟಿಗೆಗಳನ್ನು ಹೊರಹಾಕಿದ. ಬಂದ ಗಿರಾಕಿ "ಇದೆಲ್ಲ ಬೇಡ; ನೀಮ್ ಇದೆಯೆ?" ಎಂದು ಕೇಳಿದ. ಕಿಟ್ಟನ ಆಶೆ ಕುಂದಿಹೋಯಿತು. ಅದು ಇರಲಿಲ್ಲ. ಆತ ನೀಮಿನ ಕಥೆ ಹೇಳತೊಡಗಿದ. ಅದರ ಪರಿಮಳ, ಬಣ್ಣಗಳು ಆಕರ್ಷಕವಿಲ್ಲದುದರಿಂದ ಅದಕ್ಕೆ ಡಿಮಾಂಡ್ ಕಡಿಮೆ. ಆದರ ಕಂಪೆನಿಯನ್ನೇ ಈಗ ಮುಚ್ಚಿ ಹೊಸ ರೀತಿಯ ಪ್ಲಾನ್ ಹಾಕುತಿದ್ದಾರೆ ಇತ್ಯಾದಿ ಇತ್ಯಾದಿ.

"ನೀಮ್ ಸ್ವದೇಶಿ ಟೂತ್ ಪೇಸ್ಟ್. ಅದನ್ನು ಕೊಂಡುಕೊಂಡರೆ, ಸಂದ ಹಣ ಸ್ವದೇಶದಲ್ಲಿಯೇ ಉಳಿಯುವುದು. ಉಳಿದುವೆಲ್ಲಾ ವಿದೇಶೀ ಏಜಂಟರಂತಿವೆ. ಆದುದರಿಂದ ಅವು ಬಾಯಸಿಲ್ಲ.'—ಗಿರಾಕಿಯ ವಾದ ಸರಣಿಯಿದು.

ಕಿಟ್ಟಿ ಮಾತಿಗೆ ತೊಡಗಿದರೆ ಪೂರ್ಣ ವಿರಾಮ ಹಾಕುವ ಕ್ರಮವೇ ಇಲ್ಲ. ಆತ ಮಾರ್ನುಡಿದ, "ನನ್ನ ದೇಶದ ವಸ್ತುಗಳಿಗೂ ಇದೇ ರೀತಿ ವಿದೇಶಿಗಳಲ್ಲಿ ವಿದೇಶಿ ಎಂದು ಬೇನ್ ಹಾಕಿದರೆ ಹೇಗೆ? ಸ್ವದೇಶಿ—ವಿದೇಶಿ ಎಂಬುದೆಲ್ಲಾ ಇಂದು ಸಾಧ್ಯವೆ? ವಿಶ್ವವೇ ಸಂಕುಚಿತವಾಗುತ್ತಿರುವ ಈ ಕಾಲದಲ್ಲಿ ಇನ್ನೊಂದು ಸಂಕುಚಿತ ಮನೋಭಾವನೆಯಿದ್ದರೆ ಹೇಗೆ? ನೋಡಿ ನಾವೆಲ್ಲ ಸ್ವದೇಶಿ—ಸ್ವದೇಶಿಯೆಂದು ಕೈಮಗ್ಗ, ಖಾದಿ, ನೀಮ್ ಹೀಗೆಲ್ಲಕೊಂಡು ದುಡ್ಡು ಮಾಡಿ ಸರಕಾರಕ್ಕೆ ಕೊಡುವುದು, ಅವರು ಅದನ್ನೆಲ್ಲಾ ಅಮೇರಿಕಕ್ಕೊ, ರಶ್ಯಕ್ಕೊ ಸುರಿದು ಬಿಡುವುದು! ಇದೇ ತಾನೇ ನಮ್ಮ ಸ್ವದೇಶಿ? ನಮ್ಮ ದೇಶದ ಎಲ್ಲ ಯಂತ್ರಗಳೂ ವಿದೇಶಿಯೇ; ನಾವು ಉಣ್ಣುವ ಆಹಾರದಲ್ಲೂ ವಿದೇಶಿಯ ಪಾಲಿರಬೇಕು; ವಿದ್ಯೆ ವಿದೇಶಿ, ಆರೋಗ್ಯ ವಿಧಾನ ವಿದೇಶೀ. ಇನ್ನೇನು, ಎಳೆಯುವ ಸಿಗರೇಟೂ ವಿದೇಶಿತಾನೆ? ನಮ್ಮ ಅಭ್ಯಾಸ, ನಡೆನುಡಿಗಳಲ್ಲಿ ಸ್ವದೇಶಿಯೆಷ್ಟಿದೆ?...."

ಗಿರಾಕಿಗೆ ನಾಚಿಗೆಯೆನಿಸಿರಬೇಕು ಆತ ಸಾವರಿಸಿ ಹೇಳಿದ—"ಹಾಗಲ್ಲ, ನಾವು ಸಾಧ್ಯವಾದಷ್ಟು ಸ್ವದೇಶಿಗೆ ಪ್ರೋತ್ಸಾಹ ನೀಡಬೇಕು. ಮತ್ತೆ ಏನು?"

ಕಿಟ್ಟಿ ಬಿಡುತ್ತಾನೆಯೇ? "ನಿಮ್ಮ ಊರಲ್ಲೇ ತಯಾರಾಗುವ ಸಾಬೂನು ನೋಡಿ, ಅದಕ್ಕೆ ಬೇಕಾದ ಯಂತ್ರಗಳಂತೂ ವಿದೇಶಿಯೆ ಇನ್ನು ಸುರಿಯುವ ಎಣ್ಣೆಗಳಲ್ಲಿ ಯಾವ ಊರಿನದ್ದು ಇದೆ ಎಂದು ಕಾರ್ಖಾನೆಯವರು ನಿಮಗೆ ಹೇಳುತ್ತಾರೆಯೆ? ನೀವು ಕೊಂಡ ಕೊಳ್ಳುವ ಪೆಪ್ಪರಮಿಂಟು ಸಂಪೂರ್ಣ ವಿದೇಶೀಯ ಕಂಪೆನಿಯದ್ದು! ಹೆಚ್ಚೇಕೆ, ನೀವು ನಿಜವಾಗಿಯೂ ಸ್ವದೇಶೀ ಪ್ರೇಮಿಗಳಾಗಿರುವುದಾದರೆ, ಪೇಸ್ಟ್ ಏಕೆ ಸ್ವಾಮಿ?, ಮಾವಿನ ಎಲೆಯೋ ಗೇರು ಎಲೆಯೋ, ಅದೂ ವಿದೇಶೀಯರ ಮೂತ್ರ ಕುಡಿದಿವೆಯೋ ಏನೋ...." ಏನೇನೋ ಮುಂದುವರಿಸಿದ. ಗಿರಾಕಿಯ ಮುಖ ಅವನತವಾದುದನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ ದನಾನು ಮಾತು ತಿರುಗಿಸಿದೆ—"ಅವರಿಗೆ ನೀಮ್ ಬೇಕಂತೆ; ನಿಮ್ಮಲ್ಲಿಲ್ಲ ತಾನೆ? ಪುರಾಣ ಏಕೆ? ಅವರು ಬೇರೆಲ್ಲಾದರೂ ಹುಡುಕಿಕೊಳ್ಳಲಿ."

"ಛೆ, ಛೆ, ಇಲ್ಲಿ ಬಿಡಿ, ಎಲ್ಲಿಯೂ ಅದಿಲ್ಲ. ಹಾಗಾದರೆ, ಹಲ್ಲು ಉಜ್ಜದೆಯೇ ಕೂರುತ್ತೀರಾ? ಹಾಗೆ ಮಾಡಿದರೆ, ನೀವು ಸ್ವದೇಶೀ ಪ್ರೇಮಿಗಳು..." ಗಿರಾಕಿಯು ಪಾಪ, ನಾಚಿಗೆಯಿಂದ "ಬರುತ್ತೇನೆ ಸ್ವಾಮಿ" ಎಂದು ತಿರುಗಿಹೋದ. ನಾವು ಕಿಟ್ಟನಿಗೆ ಗದರಿಸಿದೆವು. "ಏನಯ್ಯಾ, ಅಂಗಡಿಗೆ ಬಂದ ಗಿರಾಕಿಗಳನ್ನು ಅಳಿಸಿಕಳಿಸುತ್ತೀಯ? ಹೀಗೆ ಮಾಡಿದರೆ, ವ್ಯಾಪಾರವೇನು, ಮಣ್ಣು?"

ಕಿಟ್ಟಿ ಗಹಗಹಿಸಿ ನಕ್ಕ— 'ಹಾಗಲ್ಲ, ರಾಮು, ಈ ಜನಗಳ ಕಥೆಯೇ ಬೇರೆ. ಇವರು ತೊಡುವುದು ಬಿನ್ನಿಮಿಲ್ ಬಟ್ಟೆ, ಉಣ್ಣುವುದು ಮಿಲ್ಲಿನ ಅಕ್ಕಿ, ಕುಡಿಯುವುದು ಯುರೋಪಿನ ವಿಸ್ಕಿ, ಎಳೆಯುವುದು ಗೋಲ್ಡನ್ ಫ್ಲೇಕ್ ಸಿಗರೇಟು, ಉಪಯೋಗಿಸುವರು ಫೋರ್ಡ್ ಮೋಟಾರುಕಾರು ಹೇಳುವುದು ಮಾತ್ರ ಸ್ವದೇಶಿ ಸ್ವದೇಶಿ-ಟೂತ್ ಪೇಸ್ಟ್ ಮಾತ್ರ! ಓದುವುದು ಶಾಸ್ತ್ರ ಇಕ್ಕುವುದು ಗಾಳ! ನೀಮ್ ಇಲ್ಲವೆಂಬ[?] ಖಾತ್ರಿಯಾಗಿಯೇ ಇಲ್ಲಿ ಬಂದಿದೆ. ಮತ್ತೇನು? ಎಲ್ಲರಿಗೂ ಹೀಗೆ ಮಾಡಿದರೆ, ನಾವು ರಶ್ಯಕ್ಕೊ ಅಮೆರಿಕೆಗೊ ಚಂದ್ರ ಲೋಕಕ್ಕೋ ಹೋಗಬೇಕಾದೀತ!"

ಈ ಸವಾಲಿಗೆ ಏನುತ್ತರವೂ ಹೊಳೆಯದುದರಿಂದ ಬರುತ್ತೇವೆ ಎಂದು ನಾವು ಅಲ್ಲಿಂದ ಹೇಗಾದರೂ ಪಾರಾಗಿ ಹೊರಬಿದ್ದೆವು ನಮ್ಮ ಮನಸ್ಸಿನಲ್ಲಿ ಆ ಪಾಪದ ಗಿರಾಕಿಯ ದಯಾರ್ದ್ರ ಪರಿಸ್ಥಿತಿಯೇ ಗುಯ್ ಗುಡುತಿತ್ತು.

ದಾರಿಯಲ್ಲಿ ನಮ್ಮೂರಿನ ಖಾದಿ ಬೋರ್ಡಿನ ಅಧ್ಯಕ್ಷರು ಮೋಟರ್ ಕಾರು ಹತ್ತುತ್ತಿದ್ದರು. ಅವರ ಗುರುತು ಅಷ್ಟು ಶೀಘ್ರ ಹತ್ತುವಂತಿರಲಿಲ್ಲ. ಕಾರಣ ಬಿನ್ನಿ ಬಟ್ಟೆಯ ಪೇಂಟ್, ಶರ್ಟುಗಳು ಖಾದಿ ಬಟ್ಟೆ, ಜುಬ್ಬಗಳ ಸ್ಥಾನಾಕ್ರಮಣ ಮಾಡಿದ್ದುವು! ಅವರನ್ನು ಬಿಟ್ಟು ಇನ್ನೂ ಕೆಲ[?] ಮುಂದೆ ಬರುವಷ್ಟರಲ್ಲಿ ನಮ್ಮೂರಿನ ಕಾಂಗ್ರೆಸ್ ಭಕ್ತರೊಬ್ಬರು ರಾಜಾಜೀ ಪಕ್ಷವನ್ನು ಪ್ರಶಂಸಿ ಭಾಷಣವನ್ನೇ ಬಿಗಿಯುತಿದ್ದರು. ಹೀಗೆ ನಾನಾ ಪ್ರಕಾರದ ಜನರನ್ನು ದೂರಮಾಡಿ ದೇವಾಲಯದೊಳಗೆ ಹೋಗುವಾಗ ಶುಭ್ರ, ಚೀನೀ ಪೀತಾಂಬರವುಟ್ಟ ದೇವರು ಕಾಣಬೇಕೆ? ಆಗ, ನನ್ನ ಮನಸ್ಸಿಲ್ಲಿ ಒಂದು ವಿಚಿತ್ರ ಸಂವೇದನೆಯುಂಟಾಯಿತು. ವಿಶುದ್ಧ ಭಾರತೀಯನಾದ ಈ "ವಿಷ್ಣು ಪರಮಾತ್ಮನೇ ಕಮ್ಯುನಿಸ್ಟರ ಪೀತಾಂಬರ ಧರಿಸಬೇಕೆಂದಿರುವಾಗ, ಆತನ ಭಕ್ತರು ನುತ್ತಾರನ್ನು[?] ಅನುಸರಿಸಬೇಕು?" 'ಯಥಾ ದೇವಃ ತಥಾ ಜನಾಃ" ಅಲ್ಲವೆ?

ಸ್ವದೇಶೀಯ ಮತ್ತು ವಿದೇಶೀಯಗಳ ಸ್ಥಾನಮಾನಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡವರು ನಮ್ಮ ಭಾರತದಲ್ಲಿ ಎಷ್ಟು ಜನ? ಕೈಮಗ್ಗಗಳಿಗೆ ಪ್ರೋತ್ಸಾಹ ನೀಡಬೇಕೆನ್ನುವ ಕಮ್ಯುನಿಸ್ಟ ನಾಯಕರೆಲ್ಲರೂ ಮಿಲ್‌ಬಟ್ಟೆದಾರಿಗಳು, ಖಾದಿ, ಕೈಮಗ್ಗಗಳ ಇಲಾಖೆಯ ಅಧಿಕಾರಿಗಳಿಗೆ ಖಾದಿ ಕೈಮಗ್ಗ ಬಟ್ಟೆಗಳೆಂದರೆ ಎಂದಿಗೂ ಆಗದು. "ಇಂಡಿಯನ್ ಮೇಡ್" ಎಂದರೆ, "ಈಗ ಬೇಡ, ಹತ್ತು ವರ್ಷದ ನಂತರ ನೋಡುವ. ಸದ್ಯ, ಯು. ಎಸ್. ಎ. ಯೋ ಇಂಗ್ಲೆಂಡೋ ಕೊಡಿ" ಎನ್ನುವ ನಾಗರಿಕ ಸಂದೋಹ! ಹೀಗೆಲ್ಲಾ ಏತರಿಂದ? ಭಾರತ ಸ್ವತಂತ್ರವಾಗಿ ಹನ್ನೆರಡು ವರ್ಷಗಳೆದರೂ ನಮ್ಮ ಸ್ಥಿತಿ ಸುಧಾರಿಸಿದಂತಿಲ್ಲ.

—ರಾಶಿ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

NAVAYUGA' WEEKLY is in the list of periodicals and Newspapers approved for use in Secondary School as per proceedings Roc. No 466 N/50 date 2-12-1950 of the Director of public Instruction, Madras.

ಸತ್—ಸಂಕಲ್ಪವನ್ನು ಮಾಡುವವನು ದುಷ್ಟನಾದರೂ ಶಿಷ್ಟನೇ ಹೌದು; ಅಸತ್ ಸಂಕಲ್ಪವನ್ನು ಮಾಡುವ ಶಿಷ್ಟನೂ ದುಷ್ಟನೇ ಸರಿ. ಸಂಕಲ್ಪಿಯನ್ನು ನೋಡಿ ಸದಸತ್‌ಗಳ ನಿಷ್ಕರ್ಷೆ ಮಾಡುವುದಲ್ಲ; ಸಂಕಲ್ಪವನ್ನು ನೋಡಿಯೇ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೨-೧೦-'೫೯	೮

ಮಧ್ಯಾವಧಿ ಚುನಾವಣೆ

ಕಮ್ಯುನಿಸ್ಟ ಸರಕಾರವನ್ನು ರಾಷ್ಟ್ರಾಧ್ಯಕ್ಷರು ತಮಗೆ ಸಂವಿಧಾನ ಮೂಲಕ ದೊರೆತಿರುವ ವಿಶೇಷಾಧಿಕಾರದಿಂದ ಕೇರಳದಲ್ಲಿ ಮನೆಗೆ ಕಳಿಸಿದುದರ ಕಾರಣವಾಗಿ ನಡೆಯಲಿರುವ ಮಧ್ಯಾವಧಿ ಚುನಾವಣೆಗಳ ಬಗ್ಗೆ ತುರುಸಿನ ತಯಾರಿಯು ನಡೆಯುತ್ತಿರುವುದು ಸಹಜವೇ. ಈ ಚುನಾವಣೆಯಲ್ಲಿ ಸಮಸ್ತ ಪಕ್ಷಗಳೂ ಒಂದು ಸೇರಿ, ರಾಷ್ಟ್ರವಿಘಾತಕರೆನಿಸಿದ ಕಮ್ಯುನಿಸ್ಟ್ ಪಕ್ಷವನ್ನು ಸೋಲಿಸಿಬಿಡಲು ದೃಢ ನಿರ್ಧಾರವನ್ನು ಮಾಡಿವೆ. ಕೇರಳದಲ್ಲಿ ಪ್ರಜಾಸತ್ತೆಯನ್ನೂ ಸಂವಿಧಾನವನ್ನೂ ಮೂಲೆಗೆ ತಳ್ಳಿ ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಿ ಬಹುಜನರಿಗೆ ಅಪ್ರಿಯವೆನಿಸಿದ ಕಮ್ಯುನಿಸ್ಟ ಸರಕಾರವನ್ನು ವಿರೋಧಿಸುವ ಆಂದೋಲನದಲ್ಲಿ ಅಲ್ಲಿನ ವಿವಿಧ ರಾಜಕೀಯ ಪಕ್ಷಗಳೂ ಒಮ್ಮತದಿಂದ ಕಾರ್ಯತತ್ಪರರಾದುದರಿಂದಲೇ ಅವರು ಯಶಸ್ವಿಯಾದರು; ಕಮ್ಯುನಿಸ್ಟರ ಕಪಿಮುಷ್ಟಿಯಿಂದ ಕೇರಳೀಯರು ಮುಕ್ತರಾದರು. ಇಂದು ಪುನಃ ಇದೇ ಮಾದರಿಯ, ಇದಕ್ಕಿಂತಲೂ ಬಲವತ್ತರವಾದ ಸಂಘಟನೆ ಇದ್ದರೆ ಮಾತ್ರ ಕಮ್ಯುನಿಸ್ಟರನ್ನು ಸದ್ಯ ನಡೆಯಲಿರುವ ಮಧ್ಯಾವಧಿ ಚುನಾವಣೆಗಳಲ್ಲಿ ಸೋಲಿಸುವುದು ಸಾಧ್ಯವಾಗಿದೆ.

ಕಮ್ಯುನಿಸ್ಟ ಚೀನವು ಭಾರತದ ಸೀಮಾಪ್ರದೇಶದಲ್ಲಿ ತೊಡಗಿರುವ ಆಕ್ರಮಣಗಳ ಬಗ್ಗೆ ಸಮಸ್ತ ಭಾರತೀಯರಲ್ಲಿಯೂ ವಿಪಂಚನೆಯ ಭಾವವು ಹುಟ್ಟಿರುವುದು ಸ್ವಾಭಾವಿಕವೇ. ಕೇರಳದ ಚುನಾವಣೆಗಳ ಮೇಲೆ ಕಮ್ಯುನಿಸ್ಟ ಚೀನಾದ ಆಕ್ರಮಣವು ದುಷ್ಪರಿಣಾಮ ಬೀರಬಹುದಾದುದೂ ವಿಚಿತ್ರವಲ್ಲ. ಆದರೆ, ಸದ್ಯ ಚೀನಾ ಸರಕಾರವೂ ಈ ಬಗ್ಗೆ ಕಟು ಉತ್ತರವನ್ನು ಈಯುವ ಮನಸ್ಸು ಮಾಡದೆ, ಸಮಾಧಾನದಿಂದಲೇ ಸಮಸ್ಯೆಯನ್ನು ಇತ್ಯರ್ಥಗೊಳಿಸಬಹುದೆಂದು ಹೇಳುತ್ತಿದೆ. ಈ ವಿಚಾರದ ದುರುಪಯೋಗವನ್ನು ಕೇರಳದ ಕಮ್ಯುನಿಸ್ಟರು ಪಡೆದುಕೊಳ್ಳಲು ಎಂದಿಗೂ ಹಿಂದ ಮುಂದೆ ನೋಡುವವರಲ್ಲ. ತಮ್ಮ ಶಾಸನದ ವೇಳೆಯಲ್ಲಿ ತಪ್ಪುತಡೆಗಳು, ದೌರ್ಬಲ್ಯ, ಕರ್ತವ್ಯ ಚ್ಯುತಿಗಳು ನಡೆದಿದೆ ಎಂಬುದನ್ನೀಗ ಕಮ್ಯುನಿಸ್ಟರೇ ಅಲ್ಲಿ ಒಪ್ಪಿಕೊಳ್ಳುವಷ್ಟು ಮುಂದೆ ಬಂದಿದ್ದಾರೆ. ಇದಕ್ಕೆ ಅನನುಭವ, ಅಜಾಗರೂಕತೆಗಳೇ ಕಾರಣವೆಂದು ಅವರೀಗ ಹೇಳುತ್ತಾರೆ. ಹೀಗೆ ಹೇಳಿ, ಕೇರಳದಲ್ಲಿ ತಾವು ಕಳೆದುಕೊಂಡಿದ್ದ ವಿಶ್ವಾಸವನ್ನು ಪುನಃ ಪಡೆದು ಚುನಾವಣೆಗಳಲ್ಲಿ ಹೇಗಾದರೂ ಮಾಡಿ ಗೆದ್ದುಬಿಡುವ ಹಂಚಿಕೆಯನ್ನವರು ಮಾಡುತಿದ್ದಾರೆ. ಚುನಾವಣೆಯಲ್ಲಿ ಗೆಲ್ಲಬೇಕು ಎಂಬ ಆಶೆಯಿಟ್ಟುಕೊಳ್ಳುವುದೂ ಅದಕ್ಕಾಗಿ ಪರಿಶ್ರಮಿಸುವುದೂ ತಪ್ಪೆಂದು ಯಾರೂ ಹೇಳುವದಿಲ್ಲ. ಚುನಾವಣೆಗಾಗಿ ಜನತೆಯನ್ನು ವಂಚಿಸುವುದು ಮಾತ್ರ ಯಾರಿಗೂ ಸಲ್ಲದ ಕೆಲಸ. ತಾವು ಈ ಗಾಗಲೇ ಆಡಳಿತದಲ್ಲಿ ಅನುಭವ ಪಡೆದಿದ್ದೇವೆ; ಇನ್ನುಮುಂದೆ ತಾವು ಅಂತಹ ತಪ್ಪುಗಳನ್ನು ಮಾಡಲಾರೆವು. ಕರ್ತವ್ಯದಲ್ಲಿ ಚ್ಯುತಿಯನ್ನು ತೋರಿಸೆವು ಎಂದು ಕೇರಳದ ಕಮ್ಯುನಿಸ್ಟರು ಹೇಳುವುದು ಅವರ ದೃಷ್ಟಿಯಿಂದ ಸರಿಯೆನಿಸೀತು: ಆದರೆ, ಕಮ್ಯುನಿಸ್ಟರ ಶಾಸನದಲ್ಲಿ ಕೇವಲ ಶಾಸನ ಪ್ರಣಾಳಿಯ ಕುಂದುಕೊರತೆಗಳು ಮಾತ್ರವಲ್ಲ, ಪ್ರಜಾಸತ್ತೆಯ ಚ್ಯುತಿಯೂ ನಡೆದಿದೆ ಎಂಬುವದನ್ನು ಎಲ್ಲರೂ ಬಲ್ಲರು. ಸಂವಿಧಾನಕ ಸುಗಣವಾಗಿ ಅದು ಆಡಳಿತೆಯನ್ನು ನಿರ್ವಹಿಸಲು ಅಶಕ್ತವೆಂದೇ ರಾಷ್ಟ್ರಪತಿಗಳು ಅಲ್ಲಿ ಹಸ್ತಕ್ಷೇಪನಡೆಸಿದರು. ಇದು ಜಗಜ್ಜನಿತವಾದ ತಥ್ಯಾಂಶ ಆದುದರಿಂದ ಕಮ್ಯುನಿಸ್ಟರು ಪುನಃ ಚುನಾವಣೆಗಳಲ್ಲಿ ಗೆದ್ದರೆ ಆಗ ಅರ್ಧದಲ್ಲಿಯೇ ತಡೆನಿಂತ, ಪ್ರಜಾಸತ್ತೆಯ ಹತ್ಯಾಕಾಂಡವು ಪುನಃ ಪ್ರಾರಂಭವಾಗುವುದು ನಿಸ್ಸಂಶಯ. ಏಕೆಂದರೆ, ಭಾರತೀಯ ಕಮ್ಯುನಿಸ್ಟರಿಗೆ ಪ್ರಜಾಸತ್ತೆಯಲ್ಲಿಯೂ ಸ್ವದೇಶದಲ್ಲಿಯೂ ಎಂದೆಂದಿಗೂ ವಿಶ್ವಾಸವಿಲ್ಲವೆಂಬುದು ಈಗಾಗಲೇ ಪ್ರಕಟವಾಗಿದೆ; ಬಹಿರಂಗಗೊಂಡಿದೆ. ಸ್ವದೇಶಪ್ರೇಮವೆಳ್ಳಿನಿತೂ ತೋರದ ಈ ಕಮ್ಯುನಿಸ್ಟರು ಪುನಃ ಕೇರಳದಲ್ಲಿ ಅಧಿಕಾರ ಗ್ರಹಣ ಮಾಡಿದರೆ, ಆಗ ಒದಗುವ ಸಂಕಷ್ಟಗಳನ್ನು ಕಲ್ಪಿಸಿಕೊಳ್ಳುವುದೂ ಪ್ರಯಾಸ

ಇದಕ್ಕಾಗಿ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಪ್ರಜಾಸತ್ತಾತ್ಮಕ ಪಕ್ಷಗಳು ಸುಸಂಘಟಿತವಾಗಿ ಸೋಲಿಸಲೇಬೇಕು. ಜನತೆಯ ಪ್ರೀತಿ ವಿಶ್ವಾಸಗಳನ್ನು ಈಗಾಗಲೇ ಪಡೆದುಕೊಂಡಿರುವ ಈ ಪಕ್ಷಗಳು ಪ್ರಜಾಸತ್ತೆಯ ರಕ್ಷಣೆಗೋಸ್ಕರ, ಕೇರಳೀಯರ ಒಳಿತಿಗೋಸ್ಕರ ಕಮ್ಯುನಿಸ್ಟ ಘಟಸರ್ಪವು ಗದ್ದುಗೆಯೇರದಂತೆ ಮಾಡಲೇ ಬೇಕಾಗಿದೆ. ನ್ಯಾಯಸಮ್ಮತವಾದ, ಪ್ರಜಾಸತ್ತೆಗನುವಾದ ರೀತಿಯಲ್ಲಿ ನಡೆದುಕೊಂಡು, ತಮ್ಮಲ್ಲಿರಬಹುದಾದ ಕುಂದುಕೊರತೆಗಳನ್ನು ದೂರೀಕರಿಸಿ ಲೋಪದೋಷಗಳನ್ನು ಸರಿಪಡಿಸಿ, ಒಗ್ಗಟ್ಟನ್ನು ಬಲಪಡಿಸಿ ಒಮ್ಮತದಿಂದ ಹೋರಾಡಬೇಕು. ಪ್ರಜಾಸತ್ತೆಯನ್ನು ಉಳಿಸಬೇಕು. ಕಮ್ಯುನಿಸ್ಟರ ಬಣ್ಣಬಣ್ಣದ ರಂಗಿನ ಪ್ರಚಾರಕಾರ್ಯವು ಸಾಗುತ್ತಿರಬಹುದಾದರೂ ಅದರ ನಿಜಬಣ್ಣವನ್ನು ತಿಳಿಯಾಗಿ ತೋರಿಸುವ ಹೊಣೆಗಾರಿಕೆ ಈ ಪಕ್ಷಗಳಿಗಿದೆ. ಕೇರಳದ ಜನತೆಯು ಕಮ್ಯುನಿಸ್ಟರ ಜಂಭ ಹಾಗೂ ದುರಹಂಕಾರದ ಕೃತಿಗಳ ದುಷ್ಫಲಗಳನ್ನು ರುಚಿಸಿರುವ ದುರ್ಭಾಗ್ಯಶಾಲಿಗಳೇ ಆದುದರಿಂದ, ಇರುಳು ಕಂಡ ಬಾವಿಯಲ್ಲಿ ಹಗಲು ಬೀಳಲು ಮುಂದಾಗಲಾರರು; ಸರ್ವಾಧಿಕಾರೀ ಮನೋಭಾವನೆಯ ಕಮ್ಯುನಿಸ್ಟರು ಪುನಃ ಅಧಿಕಾರದ ಸಿಂಹಾಸನವನ್ನೇರಲು ಹೂಡುವ ಸಂಚುಗಳಿಗೆ ಬಲಿಬೀಳುವಷ್ಟು ಅಜ್ಞಾನಿಗಳಾಗಲಾರರು ಎಂದು ಹಾರೈಸಬಹುದು.

ಸೌಹಾರ್ದ ಸಂವರ್ಧನೆ

ಮೈಸೂರು ಪ್ರದೇಶ ಕಾಂಗ್ರೆಸ ಸಮಿತಿಯು ಸಭೆ ಸೇರಿ ಸರಕಾರದ ಆಡಳಿತೆಯ ನೀತಿಗೆ ಸಂಬಂಧಪಟ್ಟ ಹಲವಾರು ವಿಷಯಗಳನ್ನು ಪರಿಶೀಲಿಸಿತೆಂದೂ, ತದನಂತರ ಸರಕಾರ ಮತ್ತು ಪಕ್ಷಗಳ ನಡುವೆ ಇನ್ನೂ ಅಧಿಕ "ಒಕ್ಕಟ್ಟು ಸೌಹಾರ್ದ ಹಾಗೂ ಸ್ನೇಹ"ಗಳನ್ನು ಬೆಳೆಸಲು ಅನುಕೂಲವಾಗುವಂತೆ ಆರು ಜನರುಳ್ಳ ಒಂದು 'ನಿಯೋಗ'ವನ್ನು ನೇಮಿಸಿದೆ ಎಂದೂ ವರದಿಗಳು ಬಂದಿವೆ. ಹೀಗೆ ನೇಮಿತವಾದ ಸಮಿತಿಯಲ್ಲಿ ಸದ್ಯದ ಮುಖ್ಯಮಂತ್ರಿ ಶ್ರೀ ಜತ್ತಿ, ಸದ್ಯದ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣ ಗೌಡ, ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪ ಮತ್ತು ಹನುಮಂತಯ್ಯ ಹಾಗೂ ಮೈಸೂರು ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀ ಸಾಹುಕಾರ ಚೆನ್ನಯ್ಯನವರೂ ಸೇರಿಕೊಂಡಿದ್ದಾರೆ. ಇವರೆಲ್ಲರಿಗಿಂತ ಮೇಲೆ, ರಾಜಕೀಯ ಚದುರಂಗದಲ್ಲಿ ನಿಸ್ಸೀಮರಾದ ಶ್ರೀ ಯು. ಎಸ್. ಮಲ್ಯರೂ ಈ ನಿಯೋಗದಲ್ಲಿದ್ದು ಅದರ ಸಂಚಾಲಕರಾಗುವರೆಂದು ತಿಳಿದು ಬಂದಿದೆ. ಮೈಸೂರಿನ ಕಾಂಗ್ರೆಸ್ ಸಂಸ್ಥೆ ಮತ್ತು ಸರಕಾರಗಳ ನಡುವೆ ಇರುವ ಭಿನ್ನಾಭಿಪ್ರಾಯಗಳು ಇಂದು ನಿನ್ನೆಯವಲ್ಲ ಕಾಂಗ್ರೆಸ್ ಪಕ್ಷದಲ್ಲಿ ಹಲವಾರು ಒಳಪಂಗಡಗಳಿರುವುದರಿಂದ, ಅವೆಲ್ಲವುಗಳ ವಿಶ್ವಾಸವನ್ನು ಪಡೆಯದೆ ಮಂತ್ರಿಮಂಡಳಿ ಹೂವಿನ ಮೇಲೆ ಕಾಲಿಡುವುದು ಸಾಧ್ಯವಿಲ್ಲದೆಂಬುದಕ್ಕೆ ಪ್ರತ್ಯಕ್ಷವೇ ನಿದರ್ಶನ. ಆದುದರಿಂದ, ಸರಕಾರವು ನಿಸ್ಸಂಕೋಚದಿಂದ ಜನಹಿತ ಕಾರ್ಯಪ್ರವೃತ್ತವಾಗಬೇಕಾದರೆ, ಅದಕ್ಕೆ ಕಾಂಗ್ರೆಸ್ ಸಂಸ್ಥೆಯಲ್ಲಿನ ಎಲ್ಲರ ಸಹಕಾರವು ಬೇಕು. ಮೈಸೂರಿನಲ್ಲಿರುವ ಕೊರತೆಯಾದರೂ ಅದೇನೇ. ಈ ಲೋಪದೋಷವನ್ನು ಸರಿಪಡಿಸದೆ ಉತ್ತಮ ರೀತಿಯಲ್ಲಿ ಆಡಳಿತೆ ನಡೆಯುವುದು ಸಾಧ್ಯವಿಲ್ಲ ಈ ಅಭಿಪ್ರಾಯವು ಕೆಲವು ಸಮಯ ಪೂರ್ವದಲ್ಲಿಯೇ ಹೊರಪಟ್ಟಿತ್ತಾದರೂ ಇದನ್ನು ಯಾವರೀತಿ ಮುಂದುವರಿಸಬೇಕೆಂದು ಹೆಚ್ಚಿನವರಿಗೆ ತೋಚಲಿಲ್ಲವಾಗಿರ ಬಹುದು; ಅಥವಾ ಅನಗತ್ಯವೆಂದು ಕೆಳಗಿಳಿಸಲ್ಪಟ್ಟಿರಬಹುದು. ಆದರೆ, ಮೈಸೂರು ಸರಕಾರದ ಕಮ್ಯುನಲ ಜೀವೋದ ಮೇಲೆ ಉಚ್ಚ ನ್ಯಾಯಾಲಯವು ಬಹಿರಂಗವಾಗಿ ಸುಸ್ಪಷ್ಟ ವಾಕ್ಯಗಳಿಂದ ತೀರ್ಮಾನವಿತ್ತ ಮೇಲೆ, ಇದೇ "ಮಾದರಿ" ಮುಂದುವರಿದರೆ ಬೆಂಗೋಲು ಮುರಿದೀತೆಂಬ ಅಂಜಿಕೆಯು ಹುಟ್ಟಿ ಈ ರೀತಿ ಸೌಹಾರ್ದ ನಿಯೋಗದ ರಚನೆಗೆ ತೀವ್ರ ಪ್ರೇರೇಪಣೆಯಿತ್ತಿತೆನ್ನಲೂ ಬಹುದು ಈ ನಿಯೋಗದಲ್ಲಿ ಅಧಿಕಾರ ಸ್ಥಾನದಲ್ಲಿರುವವರು, ಇದ್ದವರು, ಅಧಿಕಾರಿಗಳನ್ನು ನೇಮಿಸುವುದರಲ್ಲಿಯೂ ನಿವೃತ್ತಿಗೊಳಿಸುದರಲ್ಲಿಯೂ ಅನುಭವವಿರುವವರೂ ಸೇರಿಕೊಂಡಿದ್ದಾರೆ. ಎಲ್ಲರೂ ಮೈಸೂರಿನ ಚದುರಂಗದ ರಾಜಕಾರಣದ ಫಲವನ್ನು ಅನುಭವಿಸುವವರು ಮತ್ತು ಅನುಭವಕ್ಕೆ ತರುವವರು. ಹಾಗಾಗಿ ಈ ಆರು ಮಂದಿ ಶ್ರೇಷ್ಠ ವರ್ಗದ ನಾಯಕರು ಮೈಸೂರು ಕಾಂಗ್ರೆಸ್-ಸರಕಾರಗಳ ನಡುವಣ ಬಿರುಕನ್ನು ಬೆಸೆಯಲು ಕಂಡುಹಿಡಿಯುವ ಲೋಹ ಯಾವುದೆಂದು ಎಲ್ಲರೂ ನಿರೀಕ್ಷಿಸುತಿದ್ದಾರೆ.

ಸಂಕ್ಷಿಪ್ತ ಸುದ್ದಿಗಳು

ಸಹಜೀವನಬೇಕು

ಭಾರತದ ಸಂರಕ್ಷಣಾ ಮಂತ್ರಿ ಶ್ರೀ ಕೃಷ್ಣ ಮೆನನ್ನರು ಒಂದು ಟೆಲಿವಿಜನ್ ಸಂದರ್ಶನದಲ್ಲಿ ಚೀನದ ದುರಹಂಕಾರ ಮತ್ತು ಬೆದರಿಕೆಗಳಿಗೆ ಭಾರತವೆಂದೂ ತಲೆ ತಗ್ಗಿಸದು ಎಂದು ಎಚ್ಚರಿಕೆಯಿತ್ತಿದ್ದಾರೆ ಚೀನವು ಭಾರತದ ಮೇಲೆ ಆಕ್ರಮಣ ನಡೆಸಲು ಯಾವುದೇ ಆರ್ಥಿಕ ಕಾರಣಗಳಿಲ್ಲವೆಂದೂ ಚೀನೀಯರ ಈ ಕೃತಿಗೆ ವಲಯ ಕಟ್ಟುವ ಅವರ ನೀತಿಯೇ ಕಾರಣವೆಂದೂ ಯುವಕರ ಚಟುವಟಿಕೆಗಳೂ ಪ್ರೇರಕವಾಗಿವೆ ಎಂದೂ ಅವರು ಅಭಿಪ್ರಾಯಪಟ್ಟರು. ಅನ್ಯರು ನಮ್ಮ ಮೇಲೆ ಹಸ್ತಕ್ಷೇಪ ನಡೆಸಬಾರದು ಮತ್ತು ನಾವು ಅನ್ಯರ ಮೇಲೆ ಹಸ್ತಕ್ಷೇಪ ಮಾಡಬಾರದು ಎಂಬುದೇ ರಾಷ್ಟ್ರೀಯ ಸಹಜೀವನದ ಸಿದ್ಧಾಂತ ಎಂದು ಅವರು ಹೇಳಿದರು.

ಆಕ್ರಮಣ ಬೇಕಾಗಿಲ್ಲ

ಕಮ್ಯುನಿಸ್ಟ ಚೀನಾದ ೧೦ನೆಯ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ತೆರಳಿದ ನಿಯೋಗದ ನಾಯಕ ಶ್ರೀ ಅಜಯ ಘೋಷರು ಮೋಸ್ಕೋವಿಗೆ ತೆರಳಿ ಅಲ್ಲಿಂದ ಹಿಂತಿರುಗಿದ್ದಾರೆ. ಚೀನ ಹಾಗೂ ರಶ್ಯಗಳು ಭಾರತ-ಚೀನಾ ಸೀಮಾ ಪ್ರಶ್ನೆಯನ್ನು ಆದಷ್ಟು ಬೇಗನೆ ಪರಿಹರಿಸಿಕೊಳ್ಳಲು ಉತ್ಸುಕವಾಗಿದೆಯೆಂದು ತಿಳಿಸಿದ್ದಾರೆ. ತಾನು ಚೀನೀ ಕಮ್ಯುನಿಸ್ಟ ಅಧ್ಯಕ್ಷ ಕಮ್ಯುನಿಸ್ಟ ಚೀನದ ಅಧ್ಯಕ್ಷ ಮತ್ತು ಪ್ರಧಾನಿಗಳನ್ನು ಭೆಟ್ಟಿಮಾಡಿದಾಗ, ಉಭಯರಾಷ್ಟ್ರಗಳ ನಡುವೆ ಸಂಧಾನ ಕಾರ್ಯಕ್ರಮವಾಗಬೇಕು ಎಂದವರು ತಿಳಿದುಕೊಂಡಿರುವರೆಂದು ಕಂಡುಕೊಂಡಿರುವುದಾಗಿ ಹೇಳಿದರು. ಭಾರತ ಮತ್ತು ಚೀನೀ ಸರಕಾರಗಳಿಗೆ ಆಕ್ರಮಣ ನಡೆಸುವ ಇಚ್ಛೆಯಿದೆಯೆಂದು ನಾನು ನಂಬಿಲ್ಲವೆಂದೂ ಅವರು ವ್ಯಕ್ತಪಡಿಸಿದರು.

ಪಾಕ್-ಭಾರತ ಸೀಮಾವಿವಾದ

ಭಾರತ ಮತ್ತು ಪಾಕಿಸ್ತಾನಗಳ ಪೂರ್ವಗಡಿಯಲ್ಲಿ ನಡೆಯುತ್ತಿರುವ ದುರ್ಘಟನೆಗಳ ಬಗ್ಗೆ ಮಂತ್ರಿಮಟ್ಟದ ಮಾತುಕತೆಗಳು ನಡೆಯ ತೊಡಗಿವೆ ಭಾರತದ ನಿಯೋಗದ ನಾಯಕ ಸ್ವರ್ಣಸಿಂಗರೂ ಪಾಕ್ ನಿಯೋಗದ ನಾಯಕ ಲೆ| ಜ| ಕೆ. ಎಂ. ಶೇಖರೂ ಇದರಲ್ಲಿ ಭಾಗವಹಿಸಿದ್ದಾರೆ. ತಾ ೧೫ ರಂದು ನವದೆಹಲಿಯಲ್ಲಿ ಸೇರಿದ ಈ ಸಭೆಯನಂತರ, ತಾ. ೧೮ ರಂದು ಢಾಕ್ಕಾದಲ್ಲಿ ಕೂಡಿತು. ತಾ ೨೨

ಅಲ್ಲಲ್ಲಿಯ ಸುದ್ದಿಸಾರ

ಮೈಸೂರಿನ ಮುಖ್ಯಮಂತ್ರಿ ಶ್ರೀ ಜತ್ತಿಯವರ ಕಾರ್ಯಕ್ರಮ— ಮೈಸೂರಿನ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಇದೇ ತಾ. 24ನೇ ಶನಿವಾರ ರಾತ್ರಿ ಮಂಗಳೂರಿಗೆ ಬಂದು ಮರುದಿನ ಬೆಳಿಗ್ಗೆ ನಗರ ಸಭಾಪತಿ ಶ್ರೀ ಮಾರ್ಸೆಲ್ ಶ್ರೀನಿವಾಸ್ ನಾಯ್ಕರ ಸತ್ಕಾರ ಕೂಟದಲ್ಲಿ ಭಾಗವಹಿಸಿ ಬೆಳಿಗ್ಗೆ 8 ಗಂಟೆಗೆ ಜಿಲ್ಲಾ ಬೋರ್ಡ್ ಸಭಾ ಸದನದಲ್ಲಿ ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷರೂ ಈಗಿನ ಆರೋಗ್ಯ ಮಂತ್ರಿಗಳೂ ಆದ ಡಾ| ಕೆ. ಕೆ. ಹೆಗ್ಡೆಯವರ ಭಾವಚಿತ್ರವನ್ನು ಅನಾವರಣಗೊಳಿಸಿ ಬಳಿಕ ಬೆಳಿಗ್ಗೆ ಗಂಟೆ 10–30ಕ್ಕೆ ಜಿಲ್ಲಾ ಕಾಂಗ್ರೆಸ್ ಮಂಡಳಿಗಳ ಸಮ್ಮೇಳನವನ್ನು ಉದ್ಘಾಟಿಸುವರು. ಸ್ವಲ್ಪ ಸಮಯ ಸಮ್ಮೇಳನದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉಜಿರೆಯಲ್ಲಿಯೇ ಮಧ್ಯಾಹ್ನದ ಊಟ ತೀರಿಸಿ ಅಪರಾಹ್ನ 3 ಗಂಟೆಗೆ ಮೈಸೂರಿಗೆ ಹಿಂತಿರುಗುವರು.

ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಉಜಿರೆಯ ಕಾಂಗ್ರೆಸ್ ಮಂಡಳಿ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಒಪ್ಪಿರುವರು.

ಧರ್ಮಾರ್ಥ ಶಸ್ತ್ರ ಚಿಕಿತ್ಸೆ:– ಕುಟುಂಬಯೋಜನೆಯ ಸೌಕರ್ಯವು ಸಾಮಾನ್ಯ ಜನರಿಗೆ ಸಹ ದೊರೆಯುವಂತಾಗಲು ತಿಂಗಳಿಗೆ 200 ರೂಪಾಯಿಗಳಿಗಿಂತ ಕಡಿಮೆ ಆದಾಯ ಇರುವವರಿಗೆ ಕುಟುಂಬ ಯೋಜನೆಗೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಯನ್ನು ಧರ್ಮಾರ್ಥವಾಗಿ ಮಾಡಲಾಗುವುದೆಂದೂ ಈ ಬಗ್ಗೆ ಮಂಗಳೂರಿನ ಡಾ| ಎಮ್. ವೇಣುಗೋಪಾಲ ಸೆಟ್ಟಿ ಮತ್ತು ಡಾ| ಎಮ್. ದೇವದಾಸ್ ಆದಪ್ಪ ಇವರನ್ನು ಸರಕಾರವು ನೇಮಿಸಿರುವುದೆಂದೂ ತಿಳಿದುಬರುತ್ತದೆ.

ಶಿರ್ವ— ಇದೇ ತಾ. 8ರಿಂದ ತಾ. 11ರ ವರೆಗೆ ಅಲ್ಲಿಯ ಕಲಾರಾಧನಾ ಸಂಘದವರಿಂದ ನಿತ್ಯಾನಂದ ಸದನದಲ್ಲಿ ಶ್ರೀ ಶಾರದಾ ಪೂಜೆ, ಭಜನೆ, ಸಂಗೀತ, ನೃತ್ಯ ಭಾಷಣಾದಿ ವಿವಿಧ ಕಾರ್ಯಕ್ರಮಗಳೊಂದಿಗೆ ದಸರಾ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು.

ಅಲ್ಲದೆ ತಾ. 9ನೇ ಶುಕ್ರವಾರ ರಾತ್ರಿ ಬಾಲಕರಿಂದ "ಕೃಷ್ಣಜನ್ಮ", ತಾ. 10ನೇ ಶನಿವಾರ ರಾತ್ರಿ ಬಾಲಿಕೆಯರಿಂದ "ಕೃಷ್ಣಲೀಲಾ" ಮತ್ತು ತಾ. 11ನೇ ರವಿವಾರ ಯುವಜನರಿಂ

ರಂದು ಪುನಃ ದಿಲ್ಲಿಯಲ್ಲಿ ಮಾತುಕತೆ ಅಂತಿಮಘಟ್ಟವನ್ನು ತಲಪುವುದು. ನೆಹರೂ–ನೂನ ಒಡಂಬಡಿಕೆಯನ್ನು ಆಧಾರವಾಗಿಟ್ಟುಕೊಂಡು ಎರಡು ರಾಷ್ಟ್ರಗಳ ನಡುವಣ ಸಂಬಂಧವನ್ನು ಬಿಗಿಗೊಳಿಸುವುದು, ಪೂರ್ವದ ಗಡಿಯನ್ನು ನಿರ್ಧರಿಸುವುದು, ವ್ಯಾಪಾರ ಬೆಳೆಸುವುದೇ ಮೊದಲಾದ ವಿಷಯಗಳು ಈ ಮಾತುಕತೆಗಳಲ್ಲಿ ಅಡಕವಾಗಿವೆ.

ಆಹಾರ ಧಾನ್ಯ ಸಂಗ್ರಹ

ಮೈಸೂರು ರಾಜ್ಯದಲ್ಲಿ ಸರಕಾರವು ಈ ವರ್ಷ ಆಹಾರ ಧಾನ್ಯಗಳನ್ನು ಶೇಖರಿಸುವುದೇ ಅಥವಾ ಇಲ್ಲವೇ ಎಂದು ಇನ್ನೂ ನಿರ್ಧಾರಕ್ಕೆ ಬರಲಾಗಿಲ್ಲವೆಂದು ಮುಖ್ಯಮಂತ್ರಿ ಜತ್ತಿಯವರು ಹೇಳಿದರು. ಈ ಪ್ರಶ್ನೆಯ ಬಗ್ಗೆ ಕೇಂದ್ರ ಆಹಾರ ಮಂತ್ರಿ ಶ್ರೀ ಎಸ್. ಕೆ. ಪಾಟೀಲರೊಡನೆ ಪ್ರಸ್ತಾಪಿಸಿರುವುದಾಗಿಯೂ ಅವರು ತೀವ್ರವಾಗಿ ಉತ್ತರ ಕಳಿಸಲಿರುವುದಾಗಿಯೂ ಅದು ಕೈಗೆ ದೊರೆತ ಬಳಿಕ ಈ ಬಗ್ಗೆ ಮಂತ್ರಿಮಂಡಳಿಯು ಒಂದು ನಿಶ್ಚಿತ ನಿರ್ಧಾರಕ್ಕೆ ಬರುವುದಲ್ಲದೆ, ಶೇಖರಿಸುವ ಧೋರಣೆಯನ್ನೂ ನಿಶ್ಚಯಿಸುವುದೆಂದೂ ಅವರು ತಿಳಿಸಿದರು.

ದ "ಭೂಕೈಲಾಸ"ವೆಂಬ ನಾಟಕಗಳೂ ಈ ಕಾರ್ಯಕ್ರಮಗಳೊಂದಿಗೆ ಯಶಸ್ವಿಯಾಗಿ ಜರಗಿದುವು.

ಮೊಗವೀರ ಫ್ರೀ ನೈಟ್ ಹೈಸ್ಕೂಲ್, ಮುಂಬಾಯಿ.

ಸುವರ್ಣ ಮಹೋತ್ಸವ ಸಮಾರಂಭ

ಮೊಗವೀರ ವ್ಯವಸ್ಥಾಪಕ ಮಂಡಳಿಯು ಕಳೆದ 50 ವರ್ಷಗಳಿಂದ ನಡೆಯಿಸುತ್ತಿರುವ "ಮೊಗವೀರ ಧರ್ಮಾರ್ಥ ರಾತ್ರಿ ಪ್ರೌಢಶಾಲೆ"ಯ ಸುವರ್ಣ ಮಹೋತ್ಸವ ಸಮಾರಂಭವು ತಾ. 10 ಮತ್ತು 11–10–59ರಲ್ಲಿ ಸರ್ ಕವಾಸ್ಜಿ ಜಹಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಮುಂಬಾಯಿ ಸರಕಾರದ ಕಾರ್ಮಿಕ ಮತ್ತು ಕಾಯಿದೆ ಮಂತ್ರಿ, ಮಾನ್ಯ ಶ್ರೀ ಶಾಂತಿಲಾಲ್ ಯಚ್. ಶಹಾ—ಅವರು ಪ್ರಥಮ ದಿನದ ಅಧ್ಯಕ್ಷತೆಯನ್ನೂ, ಪ್ರಮುಖ ಉದ್ದಿಮೆಗಾರ ಹಾಗೂ ವ್ಯಾಪಾರಸ್ಥರಾದ ಶ್ರೀ ಮುರಾರ್ಜಿ ಜೆ. ವೈದ್ಯ—ಅವರು ದ್ವಿತೀಯ ದಿನದ ಅಧ್ಯಕ್ಷತೆಯನ್ನೂ ವಹಿಸಿದ್ದರು. ಶ್ರೀಮಾನ್ ಶಾಂತಿಲಾಲ್ ಶಹಾರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮಂಡಳಿಯು ಕಳೆದ 50 ವರ್ಷಗಳಿಂದ ಮೊಗವೀರ ಧರ್ಮಾರ್ಥ ರಾತ್ರಿ ಹೈಸ್ಕೂಲನ್ನು ಬಡಜನರ ವಿದ್ಯಾಭ್ಯಾಸಕ್ಕಾಗಿ ಈ ಮುಂಬಾಯಿ ನಗರದಲ್ಲಿ ನಡೆಯಿಸಿಕೊಂಡು ಬರುತ್ತಿರುವುದು ತುಂಬಾ ಶ್ಲಾಘನೀಯವಾಗಿದೆಯೆಂದು ಹೇಳಿದರಲ್ಲದೆ, ಮಂಡಳಿಯು ತಾಂತ್ರಿಕ ಶಾಲೆ ಮತ್ತು ಚಿಕ್ಕ ಉದ್ಯೋಗಿಕ ಸಹಕಾರ ಸಂಘವನ್ನು ಸ್ಥಾಪಿಸುವ ಆವಶ್ಯಕತೆಯನ್ನೂ ವಿವರಿಸಿ, ಅವುಗಳನ್ನು ಆರಂಭಿಸಿದರೆ ಸರಕಾರವು ಅವುಗಳಿಗೆ ಹೆಚ್ಚಿನ ಬೆಂಬಲ ಕೊಡುವುದೆಂದರು. ಶ್ರೀ ಮುರಾರ್ಜಿ ಜೆ. ವೈದ್ಯರವರು ತಮ್ಮ ಭಾಷಣದಲ್ಲಿ ಮಂಡಳಿಯ ವಿವಿಧ ಕಾರ್ಯಗಳನ್ನು ಕೊಂಡಾಡಿ, ವಿದ್ಯಾಕ್ಷೇತ್ರದಲ್ಲಿಯೂ ಸಾಮಾಜಿಕ ಕ್ಷೇತ್ರದಲ್ಲಿಯೂ 56 ವರ್ಷಗಳಿಂದ ದುಡಿದಂತೆಯೇ ಮುಂದೆಯೂ ತನ್ನ ಕಾರ್ಯವನ್ನು ಸುಸೂತ್ರವಾಗಿ ಸಾಗಿಸಿಕೊಂಡು ಹೋಗಲು ಶಕ್ತವಾಗಬೇಂದು ಆಶಿಸಿದರು. ಶ್ರೀಮತಿ ಭಾನುಮತಿ ವೈದ್ಯರವರು ವಿದ್ಯಾರ್ಥಿಗಳಿಗೂ ಮಂಡಳಿಯ ಕಾರ್ಯಕರ್ತರಿಗೂ ಬಹುಮಾನ ವಿತರಣ ಮಾಡಿದರು. ಮಂಡಳಿಯ ಅಧ್ಯಕ್ಷರಾದ ಶ್ರೀ ಯಸ್. ಸಿ. ಪಡುಬಿದ್ರಿಯವರು ಮಾನ್ಯ ಶ್ರೀ ಶಾಂತಿಲಾಲ್ ಯಚ್. ಶಹಾರವರನ್ನೂ, ಮುರಾರ್ಜಿ ಜೆ. ವೈದ್ಯರವರನ್ನೂ ಸ್ವಾಗತೀಕರಿಸಿ, ಅವರ ಪರಿಚಯಗೊಳಿಸಿದರು.

ರಾಷ್ಟ್ರಪತಿ ಡಾಕ್ಟರ್ ರಾಜೇಂದ್ರ ಪ್ರಸಾದ್, ಉಪರಾಷ್ಟ್ರಪತಿ ಡಾಕ್ಟರ್ ರಾಧಾಕೃಷ್ಣನ್, ಪ್ರಧಾನಮಂತ್ರಿ ಶ್ರೀ ಜವಹಾರಲಾಲ್ ನೆಹರು, ರಾಜ್ಯಸಭೆಯ ಉಪಾಧ್ಯಕ್ಷ ಶ್ರೀ ಯಸ್. ವಿ. ಕೃಷ್ಣಮೂರ್ತಿ ರಾವ್, ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿ, ಕೇಂದ್ರ ಮಂತ್ರಿಗಳಾದ ಶ್ರೀ ಯಸ್. ಕೆ ಪಾಟೀಲ್, ಕೆ. ಸಿ. ರೆಡ್ಡಿ, ಡಿ. ಪಿ ಕರಮರಕರ, ಅಮೇರಿಕದಲ್ಲಿ ಹಿಂದುಸ್ಥಾನದ ರಾಯಭಾರಿಯಾಗಿರುವ ಶ್ರೀ ಯಂ. ಸಿ ಚಗ್ಲಾ, ಡೆಲ್ಲಿ ಯುನಿವರ್ಸಿಟಿಯ ವೈಸ್ ಚಾನ್ಸೆಲರಾದ ಡಾ. ವಿ ಕೆ. ಆರ್. ವಿ. ರಾವ್, ಜನರಲ್ ಕೆ. ಯಸ್. ತಿಮ್ಮಯ್ಯ ಮೊದಲಾದ ಅಧಿಕ ಮಹನೀಯರಿಂದಲೂ ಸಂಘಸಂಸ್ಥೆಗಳಿಂದಲೂ ಬಂದಿದ್ದ ಶುಭ ಸಂದೇಶಗಳನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಯಚ್. ಕೆ. ಪುತ್ರನರೂ, ಜತೆ ಕಾರ್ಯದರ್ಶಿ ಶ್ರೀ ಆರ್. ಯಸ್. ಕರ್ಕೇರರೂ ಎರಡು ದಿನಗಳಲ್ಲಿ ಓದಿದರು.

ಶ್ರೀಗಳಾದ ಕೆ. ಯಸ್. ಧಾರಿಯಾ, ಎಂ. ಎಲ್. ಎ., ಆರ್. ವಿ. ಮೂರ್ತಿ, ಯಂ. ಆರ್. ಶ್ರೀಧರ್, ಬಿ. ಎನ್. ವೈದ್ಯ, ನಾಗೇಶ ಆರ್. ಕೋಟ್ಯಾನ್, ಜೆ ಕೆ. ಜೋಶಿ, ಎಲ್. ಎಂ. ಯಚ್. ಡಿಸೋಜ, ಕೆ. ಜಿ. ವೈದ್ಯನಾಥನ್ ಮೊದಲಾದವರು ಮಂಡಳಿಯ ಮತ್ತು ಮೊಗವೀರ ಜಾತಿಯ ಚಟುವಟಿಕೆಗಳನ್ನು ಪ್ರಶಂಸಿಸಿ, ಅವುಗಳ ಪ್ರಗತಿ ಹಾರೈಸಿದರು.

ಶ್ರೀ ಯನ್. ಸಿ. ಶೆಟ್ಟಿ ಮತ್ತು ಟಿ. ಪಿ. ಕೋಟಿಂಕಾರರು ಎರಡುದಿನಗಳಲ್ಲಿ ಉಪಕಾರ ಸ್ಮರಣೆಗೈದರು.

ಎರಡು ದಿನಗಳಲ್ಲಿಯೂ ಶಾಲಾ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳೂ, ನೃತ್ಯವೂ, ಹಿಂದಿ ನಾಟಕವೂ, ಕರ್ನಾಟಕ ನೂತನ ಸಂಗೀತ ಸಭೆಯವರ "ಬಾಣಗ್ರಹಣ" ನಾಟಕವೂ ಪ್ರೇಕ್ಷಕರ ಮೆಚ್ಚುಗೆ ಪಡೆದಿದ್ದವು.

ಕುಂದಾಪುರ— ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಸ್ಥಳೀಯ ಶಾಖೆಯ ರಜತಮಹೋತ್ಸವವು ಕೆನರಾ ಬೇಂಕಿಂಗ್ ಕಾರ್ಪೋರೇಶನಿನ ಚೇರ್‌ಮೇನ್ ಡಾ| ಸುಂದರ್ ರಾಮ ಪೈಗಳವರ ಅಧ್ಯಕ್ಷತೆಯಲ್ಲಿ ತಾ. 15ನೇ ಸಂಜೆ ಬೋರ್ಡ್ ಹೈಸ್ಕೂಲಿನ ಕಲಾ ಮಂದಿರದಲ್ಲಿ ನೆರವೇರಿತು. ಬೇಂಕಿನ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣಮಾಡಿ ಬೇಂಕಿನ ಪ್ರಗತಿ, ದೇಶೋನ್ನತಿಯ ಕಾರ್ಯದಲ್ಲಿ ಬೇಂಕಿನ ಸ್ಥಾನಾದಿಗಳ ಕುರಿತು ಮಾತನಾಡಿದರು. ರೆವ. ಸಿ. ಪಿ. ನಜರೆತ್, ಶ್ರೀ ವೈ. ಮಂಜಯ್ಯ ಸೆಟ್ಟಿ ಎಂ. ಎಲ್. ಎ. ಶ್ರೀಮತಿ ಉಮಾ ವಿ. ಕಾಮತ್ ಮೊದಲಾದವರು ಸಿಂಡಿಕೇಟಿನ ಸೇವೆಯನ್ನು ಪ್ರಶಂಸಿಸಿ ಮಾತನಾಡಿದರು. ಅಧ್ಯಕ್ಷ ಡಾ| ಪೈಗಳು ಮಾತನಾಡಿ ಸಿಂಡಿಕೇಟಿನ ವೈಶಿಷ್ಟ್ಯವನ್ನು ವಿವರಿಸಿದರು. ಶ್ರೀ ಕೆ. ಕೆ. ಪೈಗಳು ಧನ್ಯವಾದಗಳನ್ನಿತ್ತರು.

ಶ್ರೀ ಟಿ. ಎ. ಪೈಗಳ ಗೌರವಾರ್ಥವಾಗಿ 15ನೇ ಮಧ್ಯಾಹ್ನ ಕಾಮತ್ಸ್ ಹಂಚಿನ ಕಾರ್ಖಾನೆಯಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಲಾಗಿತ್ತು. ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಆರ್. ರಘುರಾಜರವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು.

ಸ್ಥಳೀಯ ಸೈಂಟ್ ಜೋಸೆಫ್ಸ್ ಗರ್ಲ್ಸ್ ಹೈಸ್ಕೂಲಿನವರು ಮೈಸೂರು ಸೆಕೆಂಡರಿ ವಿದ್ಯಾಭ್ಯಾಸ ಬೋರ್ಡಿನ ಮೆಂಬರರಾದ ಶ್ರೀ ಟಿ. ಎ. ಪೈಯವರಿಗೆ ಒಂದು ಮಾನಪತ್ರವನ್ನು ಅರ್ಪಿಸಿ ಗೌರವಿಸಿದರು.

ಸಿಂಡಿಕೇಟಿನ ಜನರಲ್ ಮೆನೇಜರರಿಗೂ, ಡೈರೆಕ್ಟರ್ ಮಂಡಳಿಗೂ ಶ್ರೀ ಕೆ. ವೆಂಕಪ್ಪ ಸೆಟ್ರ ಅಧ್ಯಕ್ಷತೆಯಲ್ಲಿ ಗೀತಾ ಟಾಕೀಸ್‌ನಲ್ಲಿ ಕುಂದಾಪುರ ತಾಲೂಕು ವ್ಯಾಪಾರಿ ಸಂಘದವರು ಮಾನಪತ್ರವನ್ನಿತ್ತು ಗೌರವಿಸಿದರು

ಶ್ರೀ ನಾಗಪ್ಪ ಡಿ. ಕೆಮ್ತೂರರ ನಿಧನ— ನಿವೃತ್ತ ಫಿಶ್ಶರೀಸ್ ಅಸಿಸ್ಟಂಟ್ ಡೈರೆಕ್ಟರರೂ ಮೊಗವೀರ ಸಮಾಜದ ಮುಂದಾಳುಗಳಲ್ಲೊಬ್ಬರಾಗಿ ಸಮಾಜ ಸೇವೆಯನ್ನು ಸಲ್ಲಿಸಿದವರೂ ಆಗಿದ್ದ ಶ್ರೀ ನಾಗಪ್ಪ ಡಿ. ಕೆಮ್ತೂರರವರು ಇದೇ ತಾ ೧೨ನೇ ಮುಂಜಾನೆ ತಮ್ಮ ೬೬ನೇ ವರ್ಷದಲ್ಲಿ ಉಡುಪಿಯಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಅವರು ಇತ್ತೀಚೆಗೆ ಸ್ವಲ್ಪ ಅಸ್ವಸ್ಥರಾಗಿದ್ದು ಕೊನೆಗೆ ಹೃದಯಸ್ತಂಭನದಿಂದ ನಿಧನರಾದರೆಂದು ತಿಳಿದುಬರುತ್ತದೆ. ದಿವಂಗತರು ಮೊಗವೀರ ಸಮಾಜದಲ್ಲಿ ಪ್ರಥಮ ಪದವೀಧರರಾಗಿದ್ದರು. ಮೀನುಗಾರಿಕೆ ಉದ್ಯಮದಲ್ಲಿ ನಿರತರಾದವರ ವಿದ್ಯೆ ಮತ್ತು ಆರ್ಥಿಕ ಪ್ರಗತಿಗಾಗಿ ತುಂಬ ದುಡಿದಿದ್ದರು.

ಇವರಿಗೆ ಮೂವರು ಗಂಡುಮಕ್ಕಳು ಮತ್ತು ಮೂವರು ಹೆಣ್ಣುಮಕ್ಕಳಿರುವರು. ಹಿರಿಯ ಮಗಳು ಶ್ರೀಮತಿ ಲೀಲಾ, B Sc.(Hons) L.T. ಇವರು ಉಡುಪಿಯ ಸೈಂಟ್ ಸಿಸಿಲೀಸ್ ಹೈಸ್ಕೂಲಿನಲ್ಲಿ ಅಧ್ಯಾಪಿಕೆಯರಾಗಿದ್ದಾರೆ ಹಿರಿಯ ಮಗ ಶ್ರೀ ಜ್ಯೋತೀಶ್ಚಂದ್ರರು ಮಂಗಳೂರಿನ ಏಸ್ ಫೆಕ್ಟರಿಯಲ್ಲಿ ಅಸಿಸ್ಟಂಟ್ ಡ್ರಾಫ್ಟ್ಸ್‌ಮನರಾಗಿದ್ದಾರೆ.

ಅಮೇರಿಕೆಯ ಜನಜೀವನದ ಉಚಿತ ಚಲಚ್ಚಿತ್ರಪ್ರದರ್ಶನೆ— "ಅಮೇರಿಕದ ಜನಸಾಮಾನ್ಯರು" ಎಂಬ ಸಂಚಾರೀ ಪ್ರದರ್ಶನವು ಅಮೇರಿಕದ ವಾರ್ತಾಸಂಸ್ಥೆಯ ಆಶ್ರಯದಲ್ಲಿ, ಉಡುಪಿಯಲ್ಲಿ ಈ ತಿಂಗಳು 30ನೇ ದಿನಾಂಕ ಸಂಜೆ 5-30ಕ್ಕೆ ಪ್ರಾರಂಭವಾಗುವುದು.

ಛಾಯಾ ಚಿತ್ರ ಸಂಕಲನ, ವಾಕ್ಚಿತ್ರಪ್ರದರ್ಶನ ಮತ್ತು ಉಪನ್ಯಾಸಗಳಿರುವ ೨ದಿನಗಳ ಈ ಪ್ರದರ್ಶನ ಎಂ. ಜಿ. ಎಂ ಕಾಲೇಜಿನಲ್ಲಿ ಜರುಗುವುದು. ಈ ಪ್ರದರ್ಶನದ ಸ್ಥಳೀಯ ಸಹ ವ್ಯವಸ್ಥಾಪಕರು ಉಡುಪಿ ರೋಟರಿ ಕ್ಲಬ್ಬಿನವರು ಈ ಪ್ರದರ್ಶನದ ಅಂಗವಾಗಿ ಅನೇಕ ಚಲಚ್ಚಿತ್ರಗಳನ್ನು ತೋರಿಸಲಾಗುವುದು.

ಮದರಾಸಿನಲ್ಲಿರುವ ಅಮೇರಿಕದ ವಾರ್ತಾಸಂಸ್ಥೆಯ ಸಹಾಯಕ ವಾರ್ತಾಧಿಕಾರಿಗಳಾದ ಜಾನ್. ಡಿ. ಕ್ಲೇಬನ್ ಅವರು ಮಡಿಕೇರಿ, ಮಂಗಳೂರು, ಮತ್ತು ಉಡುಪಿಗಳಲ್ಲಿ ಈ ಪ್ರದರ್ಶನದ ಜೊತೆಗೆ ಸಂಚರಿಸುವರು. ಮಿ| ಕ್ಲೇಬನ್ ಅವರು ಈ ಪ್ರದರ್ಶನದ ವಿಷಯವನ್ನು ಮತ್ತು ಸಂಬಂಧಿಸಿದ ವಿಷಯಗಳನ್ನು ಕುರಿತು ಭಾಷಣಗಳನ್ನು ಮಾಡುವರು. ಬೆಳಿಗ್ಗೆ 9ರಿಂದ 12 ಸಂಜೆ 4 ಗಂಟೆಯಿಂದ 8 ಗಂಟೆಯವರೆಗೆ ಈ ಪ್ರದರ್ಶನಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ.

ಶ್ರೀ ವಿರಾಡ್ವಿಶ್ವಕರ್ಮ ಬ್ರಾಹ್ಮಣ ಶಿಲ್ಪಕಲಾಸಂಘ ಉಡುಪಿ— ಈ ಸಂಘದ ವಾರ್ಷಿಕೋತ್ಸವವು ಶ್ರೀ ಯು. ಬಿ. ಭಾಸ್ಕರಾಚಾರ್ಯರ ಅಧ್ಯಕ್ಷತೆಯಲ್ಲಿ ತಾ 11–10–59ರಲ್ಲು ಅಂಬಲಪಾಡಿ ಕಿರಿಯ ಬುನಾದಿ ಶಾಲಾ ಕಟ್ಟಡದಲ್ಲಿ ಜರಗಿತು ಪ್ರಾರಂಭದಲ್ಲಿ ಪಂಚಾಯುಧ ಪೂಜೆಯು ವೇದಮೂರ್ತಿ ಬ್ರ| ಶ್ರೀ ಯು. ಶಂಕರಾಚಾರ್ಯರಿಂದ ನೆರವೇರಿತು. ಸಭಿಕರಲ್ಲಿ ಶ್ರೀಗಳಾದ ಯು. ಕೆ. ದಾಮೋದರಾಚಾರ್ಯ, ವೇ| ಬ್ರ| ಪುರೋಹಿತ ಜನಾರ್ಧನಾಚಾರ್ಯ ಎ. ಪುಟ್ಟಯ್ಯಾಚಾರ್ಯ, ಶಿಲ್ಪಿ ಗಂಗಾಧರಾಚಾರ್ಯ, ಕಪ್ಪೆಟ್ಟು ಜನಾರ್ಧನಾಚಾರ್ಯರು ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಿಲ್ಪದ ಮಹತ್ವ ಹಾಗೂ ಋಗ್ವೇದ ವಿಶ್ವಕರ್ಮಸೂಕ್ತದ ವ್ಯಾಪಕಾರ್ಥವನ್ನು ವಿವರಿಸಿ, ಸಮಾಜದಲ್ಲಿನ ಪ್ರಸ್ತುತ ಭೇದಭಾವಗಳ ನಿವಾರಣೋಪಾಯವನ್ನು ತಿಳಿಯಪಡಿಸುತ್ತಾ, ಇದರ ತೀರ್ಮಾನಕ್ಕೆ ಸಮಾಜದ ಧಾರ್ಮಿಕ ಗುರುಗಳನ್ನು ನಮ್ಮ ಜಿಲ್ಲೆಗೆ ಆಹ್ವಾನಿಸಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕಾರ್ಯದರ್ಶಿ ಪಮ್ಮಯ್ಯಾಚಾರ್ಯರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಕಟಪಾಡಿ— ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವಸ್ಥಾನದಲ್ಲಿ 'ನವರಾತ್ರಿ ಮಹೋತ್ಸವವು ತಾ 2—10–59 ರಿಂದ 10–10—59ರ ತನಕ ಶಾಸ್ತ್ರೋಕ್ತ ವಿಧಿಪ್ರಕಾರ ವಿಜೃಂಭಣೆಯಿಂದ ನೆರವೇರಿತು. ತಾ 9ರಲ್ಲು ದೇವಸ್ಥಾನದ ಕಮಿಟಿ ಮೆಂಬರರ ಸಭೆಯು ಜರಗಿ, ತಾ 23–11–59ರಲ್ಲು ಜರಗಲಿರುವ ಶ್ರೀ ಆನೆಗುಂದೀ ಜಗದ್ಗುರು ಶ್ರೀ ಶ್ರೀ ನಾಗಧರ್ಮೇಂದ್ರ ತೀರ್ಥ ಮಹಾಸ್ವಾಮಿಗಳವರ ಪೂಜಾರಾಧನೆ ಹಾಗೂ ತಾ. ೮–12—59ರಿಂದ 10-12 59ರ ವರೆಗೆ ಜರಗಲಿರುವ ಶ್ರೀ ದೇವರ ಪ್ರತಿಷ್ಠಾ ವರ್ಧಂತ್ಯುತ್ಸವದ ಕುರಿತೂ ಪರ್ಯಾಲೋಚಿಸಲಾಯಿತು.

ರಾಜ್ಯಮಟ್ಟದ ಧಾರ್ಮಿಕ ನೇತೃ ಸಮ್ಮೇಳನ— ಸಮಾಜವನ್ನು ಸುಭದ್ರವಾಗಿ ಕಟ್ಟಲು ಆಧ್ಯಾತ್ಮಿಕ ಮತ್ತು ಆರ್ಥಿಕ ಉನ್ನತಿಯಾಗಬೇಕಾಗಿದೆ ಆರ್ಥಿಕ ಉನ್ನತಿಗಾಗಿ ಸರಕಾರವು ಪ್ರಯತ್ನಿಸಿದರೆ, ಆಧ್ಯಾತ್ಮಿಕೋನ್ನತಿಗೆ ಧಾರ್ಮಿಕ ಸಂಸ್ಥೆಗಳು ಶ್ರಮಿಸುತ್ತಿವೆ. ಇಂತಹ ಧಾರ್ಮಿಕ ಸಂಸ್ಥೆಗಳ ಶಕ್ತಿಯನ್ನು ಪ್ರಕೃತದ ಭೂವಿಧೇಯಕವು ಬಹುಮಟ್ಟಿಗೆ ಇಲ್ಲದಂತೆ ಮಾಡುವುದರಿಂದ, ಭೂ ವಿಧೇಯಕದಿಂದ ಧಾರ್ಮಿಕ ಸಂಸ್ಥೆಗಳನ್ನು ಸಂಪೂರ್ಣ ಹೊರಪಡಿಸುವಂತೆ ಕೇಳಿಕೊಳ್ಳಬೇಕಾಗಿದೆ. ಇದಕ್ಕಾಗಿ ಉಡುಪಿಯಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಧಾರ್ಮಿಕ ನೇತೃಗಳ ಸಮ್ಮೇಳನದಲ್ಲಿ ನಿರ್ಧರಿಸಿದಂತೆ ಇಡಿ ರಾಜ್ಯದ ಧಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳೂ ಧರ್ಮಾಭಿಮಾನಿಗಳೂ ಸೇರಿ ವಿಚಾರ ವಿನಿಮಯ ಮಾಡಿ ಧಾರ್ಮಿಕಸಂಸ್ಥೆಗಳನ್ನು ಉಳಿಸಲು ಯೋಗ್ಯ ಮಾರ್ಗಗಳನ್ನು ಚಿಂತಿಸಲು ನವಂಬರ ೭ ಮತ್ತು ೮ನೇ ತಾರೀಕುಗಳಲ್ಲಿ ಬೆಂಗಳೂರಿನ ಲಾಲ್‌ಬಾಗದಲ್ಲಿ ಮೈಸೂರು ರಾಜ್ಯದ ಅಖಿಲ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾಭಿಮಾನಿಗಳ ಸಮ್ಮೇಳನವನ್ನು ಜರಗಿಸಲು ನಿರ್ಧರಿಸಲಾಗಿದೆ ಎಂದು ಸ್ವಾಗತ ಸಮಿತಿಯ ಪರವಾಗಿ ಉಡುಪಿ ಅದಮಾರು ಮಠದ ಶ್ರೀಪಾದಂಗಳವರು ತಿಳಿಸುತ್ತಾರೆ.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಅಭಿಪ್ರಾಯ

ಮೈಕಮಿಲನರ ಅಪೂರ್ವ ಯಶಸ್ಸು

ವಿರೋಧಿ ಮತ್ತು ತಟಸ್ಥ ರಾಷ್ಟ್ರಗಳೊಡನೆ ನಿಕಟ ಸಂಪರ್ಕವಿರಿಸಿದುದೇ ಮೈಕಮಿಲನರು ಅಭೂತಪೂರ್ವ ಯಶಸ್ವಿಯಾಗಲು ಕಾರಣವಾಯಿತು.

ಶ್ರೀ ಹೆರಾಲ್ಡ್ ಮೈಕಮಿಲನರ ನೇತೃತ್ವದಲ್ಲಿ ಬ್ರಿಟಿಷ ಕನ್ಸರವೇಟಿವ್ ಪಕ್ಷವು ಪ್ರಚಂಡ ಬಹುಮತದಿಂದ ವಿಜಯವನ್ನು ಪಡೆದುದರಿಂದ, ಈ ಪಕ್ಷದ ಹಿಂದಿನ ನಾಯಕರಿಗಿಂತ ಇವರು ಜನತೆಯ ವಿಶ್ವಾಸವನ್ನು ಪಡೆದಿರುವರೆಂಬುದಕ್ಕೆ ಒಂದು ಪ್ರತ್ಯಕ್ಷ ಪ್ರಮಾಣವಾಯಿತು. ವಿರೋಧಿ ಮತ್ತು ತಟಸ್ಥ ರಾಷ್ಟ್ರಗಳಲ್ಲಿ ಮೈಕಮಿಲನರಿಗೆ ದೊರೆತಿರುವ ಆದರವು ಶ್ರೀ ಚರ್ಚಿಲರಿಗೂ ಲಭಿಸಿಲ್ಲ. ಶ್ರೀ ಮೈಕಮಿಲನರು ಮಧ್ಯಮ ಮಾರ್ಗಗಾಮಿಗಳಾದುದೇ ಈ ಯಶಸ್ಸಿನ ಏಕ ಮಾತ್ರ ರಹಸ್ಯವಾಗಿದೆ.

ಸುಯೇಜ ಕಾಲುವೆಯ ಗೊಂದಲಾನಂತರ ಸರ್ ಅಂಥೋನಿ ಈಡನ್ನರ ಪ್ರಧಾನಿ ಪಟ್ಟವು ಕೊನೆಗೊಂಡಾಗ, ಬ್ರಿಟನ್ನಿನ ರಾಜಕೀಯ ದುರಂಧರರೆಲ್ಲರೂ ಶ್ರೀ ರಿಚಾರ್ಡ ಬಟ್ಲರರೇ ಮುಂದಿನ ಪ್ರಧಾನಿ ಎಂದು ಭಾವಿಸಿದ್ದರು. ಆದರೆ ಶ್ರೀ ಚರ್ಚಿಲ್ ಮತ್ತು ಸರ್ ಈಡನ್ನರ ದೃಷ್ಟಿಯಲ್ಲಿ ಶ್ರೀ ಮೈಕಮಿಲನರೇ ಶ್ರೀ ಬಟ್ಲರರಿಗಿಂತ ಅಧಿಕ ಪರಂಪರಾನುಕೂಲರಾಗಿದ್ದರು. ಈ ಮಹಾಶಯದ್ವಯರ ಅಭಿಪ್ರಾಯದಂತೆಯೇ ಶ್ರೀ ಮೈಕಮಿಲನರನ್ನು ಪ್ರಧಾನಿಯಾಗಿ ನೇಮಿಸಲಾಯಿತು. ಈ ನೇಮಕದ ಘೋಷಣೆಯು ಹೆಚ್ಚಿನವರನ್ನು ಆಶ್ಚರ್ಯದಿಂದ ದಂಗುಗೊಳಿಸಿತ್ತು.

ಅರ್ಧ ಅಮೆರಿಕನ (ಶ್ರೀ ಚರ್ಚಿಲರ ತಾಯಿಯಂತೆಯೇ ಶ್ರೀ ಮೈಕಮಿಲನರ ತಾಯಿಯೂ ಅಮೆರಿಕನಳು.) ರಾದ, ಐಕರ ಯುದ್ಧಕಾಲೀನ ಮಿತ್ರರಾದ, ಈಟನ್ ಮತ್ತು ಆಕ್ಸಫರ್ಡಗಳ ಪದವೀಧರರಾದ ಶ್ರೀ ಹೆರಾಲ್ಡ ಮೈಕಮಿಲನರು ಪ್ರಸಿದ್ಧ ಪುಸ್ತಕ ಪ್ರಕಾಶನ ಸಂಸ್ಥೆಯಾದ ಮೈಕಮಿಲನ್ ಕಂಪೆನಿಯ ಒಡೆಯರಲ್ಲೊಬ್ಬರು. ಈ ಕಂಪೆನಿಯನ್ನು ಇವರ ಪಿತಾಮಹರು ಸ್ಥಾಪಿಸಿದ್ದರು. ಶ್ರೀ ಮೈಕಮಿಲನರ ತಂದೆ ಸ್ಕಾಟಿಷರು. ಸ್ಕಾಟ್‌ಲೇಂಡಿನ ಗ್ಲೇನ್ ಸೆನೆಕ್ಸ್ ಎಂಬಲ್ಲಿ ೧೮೯೪ರಲ್ಲಿ ಶ್ರೀ ಮೈಕಮಿಲನರ ಜನ್ಮವಾಯಿತು ಆಕ್ಸಫರ್ಡ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆಸಿ ಪ್ರಥಮ ಶ್ರೇಣಿಯಲ್ಲಿ ಸ್ನಾತಕ ಪ್ರಶಸ್ತಿ ಪಡೆದರು. ಪ್ರಥಮ ಲೋಕಯುದ್ಧದ ಸಮಯದಲ್ಲಿ ಇವರು ರಣರಂಗದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ್ದರು; ಮೂರು ಬಾರಿ ಗಾಯಗೊಂಡಿದ್ದರು; ವೀರತೆಯ ಪ್ರದರ್ಶನಕ್ಕಾಗಿ ಪದಕವನ್ನೂ ಪಡೆದಿದ್ದರು. ಡೇವನ್ ಶಹರ್‌ನ ಡ್ಯೂಕರ ಮಗಳು ಡೊರೋಥಿಯೊಡನೆ ಇವರ ವಿವಾಹವು ೧೯೨೦ರಲ್ಲಾಯಿತು. ಈ ವೈವಾಹಿಕ ಸಂಬಂಧವೇ ಶ್ರೀ ಮ್ಯಾಕಮಿಲನರನ್ನು ಕನ್ಸರವೇಟಿವ್ ಪಕ್ಷದತ್ತ ಸೆಳೆದು ಕೊಂಡಿತು.

೧೯೨೪ರಲ್ಲಿ ಇವರು ಕನ್ಸರವೇಟಿವ್ ಪಕ್ಷದ ಟಿಕೇಟಿನಿಂದ ಸಂಸತ್ ಸದಸ್ಯರಾದರು. ಇವರು ಬಹಳ ಕಾಲದ ವರೆಗೆ ತಮ್ಮ ಪಕ್ಷದಲ್ಲಿ ವಿದ್ರೋಹಿಯೆನಿಸಿಕೊಂಡಿದ್ದರು. ೧೯೩೦ರಲ್ಲಿ ನಿರುದ್ಯೋಗ ಪ್ರಶ್ನೆಯನ್ನು ಇವರು ಮುಂದಿಟ್ಟು ತಮ್ಮ ಸರಕಾರದ ನೀತಿಯನ್ನು ಖಂಡಿಸಿದರು. ೧೯೩೬ರಲ್ಲಿ ಆರ್ಥಿಕ ಮುಂದಿಯ ಪ್ರಶ್ನೆಯ ಮೇಲೆ ತಮ್ಮ ವಿರೋಧೀ ಲೇಬರ ಪಕ್ಷದೊಡಗೂಡಿ ಆ ಸಮಯದ ಟೋರಿ ಸರಕಾರದ ವಿರುದ್ಧ ಮತವಿತ್ತರು. ಇಷ್ಟೇ ಅಲ್ಲ, ಅದೇ ವರ್ಷ ಹಿಟ್ಲರ ಮತ್ತು ಮುಸಲೋನಿಯರ ಮೇಲೆ ಟೋರಿ ಸರಕಾರದ ಮಂದ ಘೋರಣೆಯನ್ನು ವಿರೋಧಿಸಿ ತಮ್ಮ ಪಕ್ಷದ ಸಂಬಂಧವನ್ನೂ ಕಡಿದು ಕೊಂಡಿದ್ದರು. ೧೯೪೦ರಲ್ಲಿ ಚರ್ಚಿಲರು ಗದ್ದುಗೆಯೇರಿದೊಡನೆಯೇ ಮೈಕಮಿಲನರೂ ಪಕ್ಷವನ್ನು ಕೂಡಿಕೊಂಡರು.

೧೯೪೨ರಲ್ಲಿ ಮಧ್ಯಪೂರ್ವದ "ರೆಸಿಡೆಂಟ್ ಮಿನಿಸ್ಟರ್" ಆಗಿ ನೇಮಿತರಾದಾಗ ಅವರ ಕೂಟ ನೀತಿಯ ಪರಿಚಯವಾಗತೊಡಗಿತು. ೧೯೫೧ರ ಟೋರಿ ಪಕ್ಷದ ಮಂತ್ರಿಮಂಡಳದಲ್ಲಿ ಇವರು ಗೃಹನಿರ್ಮಾಣ ಮತ್ತು ಸ್ವಶಾಸನ ಮಂತ್ರಿಯಾದರು. ಒಂದೇ ವರ್ಷದೊಳಗೆ ಅವರು ಮೂರು ಲಕ್ಷ ಮನೆಗಳನ್ನು ಕಟ್ಟಿಸಿ ತನ್ನ ಕಾರ್ಯಕ್ಷಮತೆಯನ್ನು ಪ್ರದರ್ಶಿಸಿದರು. ೧೯೫೪ರಲ್ಲಿವರು ರಕ್ಷಣಾಮಂತ್ರಿಯಾದರು. ಶ್ರೀ ಈಡನ್ನರ ಮಂತ್ರಿಮಂಡಳದಲ್ಲಿ ಸ್ವಲ್ಪಸಮಯ ವಿದೇಶ ಮಂತ್ರಿಯಾಗಿದ್ದು ಮುಂದೆ ಅರ್ಥಮಂತ್ರಿಯಾದರು. ವಿದೇಶ ಶಾಖಾ ಮಂತ್ರಿಯಾಗಿರುವಾಗ, ಇವರು ಅನೇಕ ಉಚ್ಚ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. ಅರ್ಥಮಂತ್ರಿಯಾಗಿ, ರಾಷ್ಟ್ರೀಯ ಉಳಿತಾಯ ಆಂದೋಲನವನ್ನು ಪ್ರೋತ್ಸಾಹಿತಗೊಳಿಸಲು "ಪ್ರೈಸ್ ಬಾಂಡ್" ಯೋಜನೆಯನ್ನು ಆರಂಭಿಸಿದರು.

ಶ್ರೀ ಮೈಕಮಿಲನರು ಪ್ರಧಾನಮಂತ್ರಿ ಪದವಿಗೇರಿದ ಮೇಲೆ, ವಿರೋಧಿ ಮತ್ತು ತಟಸ್ಥ ರಾಷ್ಟ್ರಗಳೊಡನೆ ಮೈತ್ರಿ ಬೆಳೆಸುವ ಪ್ರಯತ್ನ ನಡೆಸಿದರು ಈ ವರ್ಷಾರಂಭದಲ್ಲಿ ಅವರು ಭಾರತಕ್ಕೂ ಬಂದಿದ್ದರು. ಕೆಲವು ತಿಂಗಳ ಮೊದಲು ರಶ್ಯ ಯಾತ್ರೆಯನ್ನೂ ಕೈಗೊಂಡಿದ್ದರು. ಈ ಎರಡೂ ದೇಶಗಳಲ್ಲಿ ಅವರಿಗೆ ದೊರೆತ ಸ್ವಾಗತಕ್ಕೆ ರಾಜಕೀಯ ಮಹತ್ವವಿದೆ.

ಶ್ರೀ ಮೈಕಮಿಲನರು ನಾಯಕರು ಮಾತ್ರವಲ್ಲ, ಲೇಖಕರೂ ಹೌದು. ಇವರು ಬರೆದ ಹಲವಾರು ಪುಸ್ತಕಗಳಲ್ಲಿ "ಮಿಡ್ಲ್ ವೇ" ಎಂಬುದು ಸುಪ್ರಸಿದ್ಧವಿದೆ, ರಾಜಕಾರಣದಲ್ಲಿವರು ಸಕ್ರಿಯವಾಗಿ ಭಾಗವಹಿಸುವುದಕ್ಕೆ ಮೊದಲು ಇವರು ತಮ್ಮ ಮೈಕಮಿಲನ್ ಮತ್ತು ಕಂಪೆನಿಯ ಮುಖ್ಯ ಸಂಪಾದನ ನಿರ್ದೇಶಕರಾಗಿದ್ದರು. ಈ ಅವಧಿಯಲ್ಲಿ ಕಂಪೆನಿಯು ಉಚ್ಚಶ್ರೇಣಿಯ ಸಾಹಿತ್ಯಕಾರರ ಕೃತಿಗಳನ್ನು ಪ್ರಕಾಶಿಸಿದೆ.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯುವಿರಿ!

ಸುಬ್ಬ ಆಲೋಚನೆ ಮಾಡಹತ್ತಿದಂತೆ ತನ್ನಷ್ಟಕ್ಕೇ ಆತನ ಕೈಬೆರಳು ಗಲ್ಲವನ್ನು ಸವರಿಸಿತು. "ಹೋ ಗಡ್ಡ? ನೆನಪೇ ಇಲ್ಲ" ಎಂದು ಸುಬ್ಬ ಓಡಿದವನೇ ಬ್ಲೇಡಿನ ಶಾಪಿಗೆ. ಒಂದು ಬ್ಲೇಡ್ ಖರೀದಿಮಾಡಿದ. ಮನೆಯತ್ತ ತೆರಳಿ ಗಡ್ಡವೆಲ್ಲವನ್ನೂ ತೆಗೆದ. ಧಳ ಧಳನೆ ರಕ್ತದ ಹೊನಲು ಹರಿದು ಹೊರ ಬಂದಿತು. ಸುಬ್ಬನಿಗೂ ಕೊನೆಗೂ ಬೇಸರವಿಲ್ಲ [ಏಕೆ ?] ಅಲ್ಲೇ ಬರೆದಿತ್ತು 'ಸಮ್ಮೇಳಕ್ಕಾಗಿ ರಕ್ತ ಸುರಿಸಿರಿ ಎಂದು. "ಕೊನೆಗಾದರೂ ಸತ್ಯಸ್ಥಿತಿಯು ದೆಯಲ್ಲ "ಎಂದುಕೊಂಡ ಸುಬ್ಬ. "ರಕ್ತ ಹರಿದರೂ ಚಿಂತಿಲ್ಲ ಅಷ್ಟೇ ತೃಪ್ತಿ" ಎಂದೂ ಕೊಂಡನು.

ಸುಬ್ಬನ ಮನೆ ಪುರೋಹಿತ ಗೋವಿಂದ ಭಟ್ಟರೊಮ್ಮೆ ಕಾರ್ಯಾರ್ಥ ಎಲ್ಲೋ ತೆರಳಿದ್ದರು. ಸುಬ್ಬ ಅವರನ್ನು ನೋಡಿದವನೇ ಕಡೆದು "ಎಲ್ಲಿಗಯ್ಯ ಭಟ್ರೆ ತೆರಳೋದು?" ಎಂದು ಅರ್ಧದಾರಿಯಲ್ಲಿ ಅವರನ್ನು ಪ್ರಶ್ನಿಸಿಯೇ ಬಿಟ್ಟ "ನೋಡು ಹಾಗೆಲ್ಲ ಕೇಳೋದು ಅಸಮಂಜಸ, ಅಪಶಕುನ, ಅವಹೇಳನ!" ಎಂದರವರು ಅದಕ್ಕೆ ಸುಬ್ಬ:—

'ಅಯ್ಯೋ ಗೋವಿಂದ ಭಟ್ಟರ್ ಮಾಯ್ (ಸುಬ್ಬನ ಚೇಷ್ಟೆಯ ಧ್ವನಿ) ನಿಮಗೆ ನನ್ನ ಮೇಲೆ ಮಾತ್ರ ದ್ವೇಷ ಅಲ್ವೆ? ನೀವು ಈಗ ಬಸ್ಸು ಹತ್ತಿ ಹೋಗುವುದಾದರೆ ನಮ್ಮ ಕಂಡೆಕ್ಟರ್ ಸಾಬ್ ನಿಮಗೆ...."

"ಹ್ಞಾಂ...."

"ಅಲ್ಲ ನಿಮಗೆ, 'ಎಲ್ಲಿಗೆ' ಅಂತ ಕೇಳಿದಲ್ಲಿ ಏನುತ್ತರ ಗೊಡುವಿರಿ? ಆಗ ಇದೇ ಮಾತನ್ನೂ ಅವನೊಡಗೆ ಹೇಳಿದಲ್ಲಿ 'ಏಯ್ ಕೆಳಗಿಳಿಯಯ್ಯಾ' ಎನ್ನಲಾರನೆ ಆತ?.

' ಹ್ಞಾಂ, ಏನೆಂದೆ?"

, ಸುಬ್ಬ ಇದಕ್ಕೆ ಉತ್ತರಗೊಡುವಾಗ ಭಟ್ರು ೨॥ ಫರ್ಲಾಂಗ ದೂರದಲ್ಲಿದ್ದರು. ಅಷ್ಟು ವೇಗವೆ?

o o o

ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಸಾಬ್ ತನ್ನ ರೂಮಿನಲ್ಲಿ ಕುಳಿತಿದ್ದರು. (ನೋಡಿ ಪತ್ತೇದಾರಿ ಕಾದಂಬರಿ [ಕೆಲವರು ಇದನ್ನು ತೇವೆದಾರಿ ಕೊತ್ತಂಬರಿ ಎನ್ನುವುದು ನಿಮಗೆ ಗೊತ್ತೇ ಇದೆ] ಯಲ್ಲ ನೋಡಿ.) ಸುಬ್ಬ ಒಳಗೆ ಬಂದು:—

"ಸರ್, ನನಗೆ ಪೋಲೀಸ್‌ ವೇನ್‌ ಆಗಲಿಚ್ಛೆಯಿದೆ"

"ನೀನು ಯಾರು? ಎಲ್ಲಿಂದ ಬಂದವ?"

"ನಾನು ಸುಬ್ಬ. ಕಾಸಿನಿಂದ ಬಂದವ"

"ನಿನಗೆ ನಮ್ಮ ಡಿಪಾರ್ಟ್‌ಮೆಂಟಲ್ಲಿ ಸೇರಲಾಶೆ?"

"ಹೌದು ಸರ್...."

' ನೋಡೀಗ, ಕಳ್ಳನನ್ನು ಹಿಡಿಯಲು ಹೋದ ನಿನ್ನ ಕಿವಿಗಳನ್ನು ಆ ಕಳ್ಳರೇ ಒಮ್ಮೆ ಕತ್ತರಿಸಿ ಹಾಕಿದರೆ?"

"ಸರ್, ನನ್ನ ಕಿವಿ ಹೋಗುತ್ತೆ, ಜತೆಗೆ ಕಣ್ಣೂ...."

"ಕಣ್ಣು ಹೇಗೊ?'

' ಕಿವಿ ಹೋಯ್ತು ಅಂದಮೇಲೆ ಅದರ ಮೇಲಿಟ್ಟ ಕಂಪು ಟೋಪಿ ಕೆಳಗೆ ಜಾರಿತು; ಜಾರಿ ಕಣ್ಣಿಗಡ್ಡ ಬಾರದೆ?"

'ಶಹಭಾಷ್"

o o o

ಎಪ್ಪಾರ್‌ಗೊಮ್ಮೆ ಚಳಿ ಜ್ವರ ಹಿಡಿದಿತ್ತು. ಏನೇನು ಮಾಡಿದರೂ ರೋಗ ವಾಸಿಯಾದುದು ಏನೇನೂ ಲೇಸಾಗಿರಲಿಲ್ಲ. ಕೊನೆಗೆ ಸುಬ್ಬನನ್ನು ಸಂಧಿಸಿದಾಗ ಆತ ಈ ರೀತಿ ಉತ್ತರವಿತ್ತ.

"ಹರಹರ! ಮುರಹರ! ಎಪ್ಪಾರ್ಗೆ ಚಳಿಜ್ವರ

ಇದಕೇನಂತೆ ಪರಿಹಾರ?"

"........?" – ಎಪ್ಪಾರ್

"ಕೋಳಿ ಮೊಟ್ಟೆ, ಗಂಗಸರ" ಮುಂದುವರಿಸಿದನೋ ಇಲ್ಲವೋ ಎಪ್ಪಾರನ ನಗು ಹತ್ತಿರದಲ್ಲಿ ಪಡದನಿಗೊಂಡಿತು.

o o o

ಸುಬ್ಬ ವಾಚ್ ಅಂಗಡಿಯವನೊಡನೆ 'ಎಷ್ಟಪ್ಪಾ, ಈ ನಿಮ್ಮ ವಾಚಿಗೆ?'

೨೦೦-೦೦ ಅಷ್ಟೇ. ತಾಜಾ ಮಾಲು'

'ಜಗತ್ತಿನಲ್ಲಿ ಒಂದಲ್ವೇ ತಾಜಮಹಾಲು?"

"ಅಲ್ಲ, ಒಳ್ಳೆಯ ವಸ್ತು ಅಂದೆ'

'ಹ್ಞಾಂ, ಇರಲಿ ಕೊನೆಗೇನೂ ಹೆಚ್ಚಿಲ್ಲವೆ?'

'೧೫೦–೦೦ ಕೊಡ್ರಿ"

'ಬೇಡ, ಬೇಡ. ರೂ. ೨೫ಕ್ಕೆ ಆದರೆ ಕೊಡಿ ಇಲ್ಲದಿದ್ದರೆ ಬ್ಯಾಡ್ರಿ"

"ಹ್ಞಾಂ ಕೊಡ್ರಿ" ಎಂದೇ ಬಿಟ್ಟ ಅಂಗಡಿಯವ. ಆತ ತಿಳಿದ ಬಾದ ಗಿರಾಕಿಗೆ ನೂರಕ್ಕೆ ೧೫ ಎಸ್‌ಪಿ ಎಂದು ಸುಬ್ಬ ವಾಚ್ ಕಿವಿಗೆ ತಾಗಿಸಿ, "ಹ್ಞಾಂ ಇದು ಚಲಿಸುವ ವಾಚು. ನನಗೆ ಬೇಡ, ಚಲಿಸಿ ಚಲಿಸಿ ತೋಟಗಿಳಿದರೆ?'

'ಹ್ಞಾಂ ಪೂರ್ಣ ಹುಚ್ಚು' ಎಂದ ಮ್ಹಾಲಿಕ

ಎಲ್ಲಾಗರ್ಗೂ ಹುಚ್ಚು ನಂಗೆ ಮಾತ್ರ ಹೆಚ್ಚು" ಸುಬ್ಬ.

—ಕೆ. ರಮೇಶ ಪೈ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ–
ನವಯುಗ ಪ್ರೆಸ್, ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ
ಬುಕ್‌ವರ್ಕನ್ನೂ ಚಲೋದಾಗಿ ಮಾಡಿ ಕೊಡಲಾಗುವುದು.
NAVAYUGA PRESS, UDIPI
Printers & Publishers
Santhekatte — UDIPI.

ವಿಚಾರ ವೀಚಿ

(೪ನೇ ಪುಟದಿಂದ)

ಕಾರ್ಯತತ್ಪರವಾಗಿದೆ. ಆಸ್ಪತ್ರೆಗಳಲ್ಲಿ ದೊರೆಯುವ ಸೌಲಭ್ಯಗಳನ್ನೂ ವಿಸ್ತರಿಸಿದೆ; ಆಸ್ಪತ್ರೆಗಳ ಸಂಖ್ಯೆಯನ್ನೂ ಹೆಚ್ಚಿಸಿದೆ. ಸ್ವಾತಂತ್ರ್ಯಪೂರ್ವದಲ್ಲಿ ಇಲ್ಲಿಗೆ ಬರುತಿದ್ದ ರೋಗಿಗಳ ಸಂಖ್ಯೆಗಿಂತ ಈಗ ಇದು ಅಧಿಕಾಧಿಕವಾಗಿದೆ. ಇದರೊಡನೆ ಖಾಸಗಿ ವೈದ್ಯರೂ ಬೆಳೆದಿದ್ದಾರೆ ಸ್ವತಂತ್ರ ಭಾರತದಲ್ಲಿ ಸಾಕಷ್ಟು ವೈದ್ಯರು ಇಲ್ಲವೆಂಬುದನ್ನು ಒಪ್ಪಿಕೊಳ್ಳುವುದರೊಡನೆ ಹಿಂದಿಗಿಂತ ಈಗ ವೈದ್ಯರ ಸಂಖ್ಯೆ ಬಹಳಷ್ಟು ಹೆಚ್ಚಿದೆ ಎಂಬುದನ್ನೂ ನಿರಾಕರಿಸುವುದು ಸಾಧ್ಯವಿಲ್ಲ. ಮಲೇರಿಯಾ ನಿರೋಧ, ಆನೆಕಾಲು ನಿರೋಧ ಮೊದಲಾದ ಕಾರ್ಯಕ್ರಮಗಳೂ ಈ ಕ್ಷೇತ್ರದಲ್ಲಿ ಕಾರ್ಯಮಗ್ನವಾಗಿವೆ. ಆದರೆ, ಇವುಗಳಲ್ಲಿ ಪ್ರಗತಿಯಾದಂತೆಯೇ ರೋಗಗಳಲ್ಲಿಯೂ ರೋಗಿಗಳ ಸಂಖ್ಯೆಯಲ್ಲಿಯೂ ಪ್ರಗತಿಯಾಗುತ್ತಲೇ ಬಂದಿದೆ ಎಂಬುದನ್ನು ಅಲ್ಲಗಳೆಯುವುದಕ್ಕೆ ಆಧಾರ ಸಾಲದು ಈಗ ಜನರೆಲ್ಲರೂ ಬುದ್ಧಿವಂತರಾಗಿದ್ದಾರೆ; ಹಿಂದೆ ಅವರು ಔಷಧೋಪಚಾರಗಳತ್ತ ಗಮನ ಹರಿಸುತ್ತಿರಲಿಲ್ಲ; ಈಗಲಾದರೋ ಅವುಗಳ ಬೆಲೆಯನ್ನು ಕಂಡುಕೊಂಡಿದ್ದಾರೆ ಎಂದು ಸಮಾಧಾನ ಪಡುವುದರಿಂದಲೇ ತೃಪ್ತಿಪಟ್ಟುಕೊಳ್ಳುವುದು ಸರಿಯಲ್ಲ.

ವಿದ್ಯಾಕ್ಷೇತ್ರಕ್ಕೆ ಪಂಚಮ ಸ್ಥಾನ ಕೊಡಬೇಕು. ವಿದ್ಯೆಯು (ಇಂದಿನ ಅಕ್ಷರಾಭ್ಯಾಸ ವಿದ್ಯೆ) ಮಾನವನ ಅವಶ್ಯಕತೆಗಳಲ್ಲಿ ಒಂದೆಂಬುದನ್ನು ಅಲ್ಲಗಳೆಯುವುದು ದುಸ್ಸಾಧ್ಯವಾದರೂ ಅದೇ ಚರಮಧ್ಯೇಯವೆಂದು ತಿಳಿಯುವುದು ಅಸಂಬದ್ಧವಾಗಿದೆ. ವಿದ್ಯಾಭ್ಯಾಸವಿಲ್ಲದೆ ಹೋದರೆ ಮಾನವನ ಜೀವನವೇ ವ್ಯರ್ಥವೆಂದು ತಿಳಿಯುವುದು ಶುದ್ಧ ಅವಿವೇಕದ ಮಾತು. ಅನಾದಿಯಲ್ಲಿ ಆವಶ್ಯಕತೆ, ಆಸಕ್ತಿ, ಶಕ್ತಿ ಇದ್ದವರು ಮಾತ್ರ ವಿದ್ಯಾವಂತರಾಗಿದ್ದರು; ಸುಪ್ರಸಿದ್ಧರಾಗಿದ್ದರು. ಇಂದು ನಾವು ಲಕ್ಷಗಟ್ಟಲೆಯ ವಿದ್ಯಾವಂತರನ್ನು ಕಾಣುತ್ತೇವೆ, ಆದರೂ ಒಬ್ಬನೇ ಒಬ್ಬ ವಾಲ್ಮೀಕಿಗೆ, ವ್ಯಾಸನಿಗೆ, ಕಾಲಿದಾಸನಿಗೆ, ತುಲಸೀದಾಸನಿಗೆ, ಪಂಪನಿಗೆ, ನನ್ನಯನಿಗೆ ಸಮಜೋಡಿಯಾಗಬಲ್ಲ ಯಾವ ವಿದ್ಯಾವಂತನಿದ್ದಾನೆ? ಚಾಣಕ್ಯನನ್ನು ಹಿಮ್ಮೆಟ್ಟಿಸುವ ರಾಜಕಾರಣಿ ಯಾರಿದ್ದಾನೆ? ಹಿಂದಿನ ಕಾಲದಲ್ಲಿದ್ದ ಉದಾರಿಗಳೂ ನ್ಯಾಯತತ್ಪರರೂ ಮಾನವತಾವಾದಿಗಳೂ ವಿನಯಿಗಳೂ ಆದ ಅಧಿಕಾರಿಗಳು ಎಲ್ಲಿದ್ದಾರೆ? "ವಿದ್ಯಾ ದದಾತಿ ವಿನಯಂ"—ಆದರೆ, ಇಂದಿನ ವಿದ್ಯೆಯಿಂದ ವಿನಯಕ್ಕಿಂತಲೂ ಅವಿನಯವನ್ನೇ ವಿದ್ಯಾರ್ಥಿಗಳು ಕಲಿಯುತ್ತಿರುವುದಕ್ಕೆ ವಿದ್ಯಾರ್ಥಿಗಳಲ್ಲಿ ಅಶಿಸ್ತು ಬೆಳೆಯುತ್ತಿದೆ ಎಂಬ ವಾದವೇ ಸಾಕ್ಷಿ. ಎಲ್ಲರನ್ನೂ ಅಕ್ಷರಸ್ಥರನ್ನಾಗಿ ಮಾಡುವ ನಮ್ಮ ನಾಯಕರ ಅಭಿಲಾಷೆಯಿಂದ ವಿದ್ಯಾಮಟ್ಟವು ಕುಂಠಿತವಾಗುವುದು ನಿಸ್ಸಂದೇಹವೇ. ಎಲ್ಲ ಮಕ್ಕಳಿಗೂ ವಿದ್ಯಾಭ್ಯಾಸದ ಸೌಕರ್ಯವನ್ನು ಒದಗಿಸಬೇಕಾದರೆ, ನಮ್ಮ ಸರಕಾರ ತುಂಬ ವೆಚ್ಚವನ್ನು ಮಾಡಬೇಕಾಗುತ್ತದು. ಆದರೆ, ನಮ್ಮ ರಾಷ್ಟ್ರದ ಆರ್ಥಿಕ ಸ್ಥಿತಿಗತಿಗಳು ಉತ್ತಮವಿಲ್ಲದುದರಿಂದ ಅಲ್ಪ ವೆಚ್ಚದಲ್ಲಿ ಅತ್ಯಧಿಕ ವಿದ್ಯಾರ್ಥಿಗಳಿಗೆ ಶಿಕ್ಷಣ ಸೌಕರ್ಯವೀಯುವ ಯೋಜನೆ ಮಾಡಿದೆ ಇದರಿಂದಾಗಿ ಪ್ರಾಥಮಿಕಶಾಲೆಗಳಲ್ಲಿ ಒಬ್ಬ ಅಧ್ಯಾಪಕನು ೪೦ ವಿದ್ಯಾರ್ಥಿಗಳಿಗೆ ಕಲಿಸಬೇಕೆಂದು ಭಾರತ ಸರಕಾರದ ಅಪೇಕ್ಷೆ. ಈ ಸಂಖ್ಯೆ ೬೦ ಆಗಲೂ ಸಾಕು ಆದರೆ, ಹೀಗೆ ಕಲಿತ ವಿದ್ಯಾರ್ಥಿಗಳು ಅಕ್ಷರಸ್ಥರಾದರೆಂಬ ಒಂದು ಗೌರವನ್ನು ಬಿಟ್ಟರೆ, ಮತ್ತೇನನ್ನು ಅವರಿಂದ ನಿರೀಕ್ಷಿಸಬಹುದು? ವಿದ್ಯಾರ್ಥಿಗಳು ಜಾಣರಾಗಬೇಕಾದರೆ, ಅವರತ್ತ ಅಧ್ಯಾಪಕರು ವೈಯಕ್ತಿಕ ಗಮನ ಹರಿಸಬೇಕು; ೪೦—೫೦ ಮಕ್ಕಳತ್ತ ನಿಯಮಿತ ವಾರಪಟ್ಟಿಯನ್ನು ಅನುಲಕ್ಷಿಸಿಕೊಂಡು ವೈಯಕ್ತಿಕ ಗಮನವೀಯುವ ಸರ್ವತೋಮುಖ ಮೇಧಾವೀ ಅಧ್ಯಾಪಕರನ್ನು ಯಾವ ಕಾರಖಾನೆಯಲ್ಲಿ ಸಿದ್ಧಮಾಡಬೇಕು? ಹಾಗಾದರೆ, ಈ ಯೋಜನೆ ಅವ್ಯವಹಾರ್ಯವೆಂದಲ್ಲ. ಉಚಿತ ಅನಿವಾರ್ಯ ಶಿಕ್ಷಣವನ್ನು ನಾವು ಕೊಡಮಾಡವಷ್ಟು ಉದಾರ ಬುದ್ಧಿಯನ್ನು ತೋರಿಸಿದ್ದೇವೆ ಇದರೊಂದಿಗೆ ವಿದ್ಯಾಮಟ್ಟವೂ ಕುಂಠಿತವಾಗಬಾರದೆಂದು ಹೇಳುತ್ತೇವೆ ವಿದ್ಯಾರ್ಥಿಗಳಲ್ಲಿ ಶಿಸ್ತು ಬೆಳೆಯಬೇಕು; ಅವರು ಸ್ವತಂತ್ರಭಾರತದ ಭವ್ಯ ಸುನಾಗರಿಕರಾಗಬೇಕೆಂದು ಬಯಸುತ್ತೇವೆ; ಆದರೆ, ಇದಕ್ಕೆ ಮೂಲಕಾರಣ "ವೈಯಕ್ತಿಕ ಗಮನ"ವೆಂಬುದನ್ನು ಮರೆಯುತ್ತೇವೆ. ಕೇವಲ ಅಕ್ಷರಸ್ಥರನ್ನಾಗಿಸುವುದರಿಂದ ಅಂಕೆಸಂಖ್ಯೆಗಳಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚೀತು ವಿದ್ಯೆಯ ನಿಜವಾದ ಗುರಿ ಈಡೇರಿದಂತಾಗಲಿಲ್ಲ

ಇನ್ನೂ ಹಲವಾರು ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ನಮ್ಮ ನಾಯಕರೂ ಅಧಿಕಾರಿಗಳೂ ಸಮಸ್ಯೆಯನ್ನು ಬಗೆಹರಿಸಲು ಅಪಾರ ಪರಿಶ್ರಮ ವಹಿಸಿದಂತೆ ತೋರಿಸಿಕೊಳ್ಳುತ್ತಾರೆ. ಆದರೆ, ಅದರ ಪರಿಣಾಮವು ನಾವು ನಿರೀಕ್ಷಿಸುವಷ್ಟು ಫಲಪ್ರದವಾಗಿಲ್ಲ; ಯಶಸ್ವಿಯಾಗಿಲ್ಲವೆಂಬುದು ಸೂರ್ಯನ ಬೆಳಕಿನಷ್ಟು ಸ್ಪಷ್ಟ ಮೂಲಭೂತ ಸಮಸ್ಯೆಗಳಲ್ಲಿ ಅಶನ, ವಸನ ಮತ್ತು ವಸತಿಗಳು ಪ್ರಧಾನ ಸ್ಥಾನವನ್ನು ಪಡೆಯುತ್ತವೆ. ಉಳಿದ ಆರೋಗ್ಯ ಮತ್ತು ವಿದ್ಯೆಗಳು ದ್ವಿತೀಯ ಸ್ಥಾನಕ್ಕೆ ಅರ್ಹವಾಗಿವೆ. ಒಂದು ದೇಶದಲ್ಲಿ ಮೊದಲನೆ ವರ್ಗದ ಆವಶ್ಯಕತೆಗಳು ಪೂರ್ತಿಯಾಗಿ ಪೂರೈಸಲ್ಪಟ್ಟರೆ, ಆರೋಗ್ಯ ಸ್ಥಿತಿಯೂ ನೆಟ್ಟಗಾಗುವುದು; ವಿದ್ಯಾಭ್ಯಾಸದಲ್ಲೂ ಆಸಕ್ತಿ ಹುಟ್ಟುವುದು. ಹಸಿದಿರುವವನಿಗೆ ಮದ್ದಿನ ನೀರನ್ನು ಕುಡಿಸಿದರೆ, ಅಥವಾ ಅಕ್ಷರಾಭ್ಯಾಸವನ್ನು ಕಲಿಸಿದರೆ, ಅದರಿಂದ ಅಶನದ ಪ್ರಶ್ನೆ ನೀಗುವುದೆ? "ಜ್ಞಾನ"ವೆಂಬುದು ಜೀವನದ ಕೈದೀಪ ನಿಜವೆ, ಆದರೆ, "ಜೀವನ"ವೇ ಇಲ್ಲದವನಿಗೆ ಕೈದೀಪದಿಂದ ಪ್ರಯೋಜನವೇನು? "ಬುಭುಕ್ಷಿತಃ ಕಿಂ ನ ಕರೋತಿ ಪಾಪಂ?" ಎಂಬ ಆರ್ಯೋಕ್ತಿ ಪ್ರಾಚೀನ ತಮವಾದುದು ಹಸಿವೆಯಿಂದ ಕಂಗೆಟ್ಟ ವಿಶ್ವಾಮಿತ್ರನಂತಹ ರಾಜರ್ಷಿಯೇ ನಾಯಿಯ ಮಾಂಸವನ್ನೂ ಬೇಡಿ ತಿಂದ ಎಂದು ಹೇಳುವಾಗ, ವಿದ್ಯಾಭ್ಯಾಸದ ಸ್ಥಾನಗಳು ಅಷ್ಟು ಪ್ರಬಲವೆಂದ ಹೇಳುವಂತಿಲ್ಲ ಆದುದರಿಂದ, ಅನಿವಾರ್ಯ ಶಿಕ್ಷಣದ ನಮ್ಮ ಗುರಿಯನ್ನು ಸಾಧಿಸುವುದರಲ್ಲಿ ಹೇಗೂ ಈಗಾಗಲೇ ನಿಧಾನವಾಗಿದೆ, ಇನ್ನೂ ಹತ್ತು ವರ್ಷ ಕಳೆದರೂ ಅದರಿಂದ ಕೇಡು ಸಂಭವಿಸಲಾರದು, ಆದರೆ, ಆಹಾರ, ವಸ್ತ್ರ ಮತ್ತು ವಸತಿಗಳ ಸ್ವಾವಲಂಬನೆಯತ್ತ ನಾವು ತೀವ್ರ ಗಮನ ಹರಿಸಬೇಕಾಗಿದೆ. ಉಣ್ಣಲು, ಉಡಲು ಮತ್ತು ಉಳಕೊಳ್ಳಲು ವ್ಯವಸ್ಥೆಯಿಲ್ಲದ ರಾಷ್ಟ್ರದ ಏಳಿಗೆ ಎಂದಿಗೂ ಆಗಲಾರದು. ಪುರಂದರದಾಸರು "ಉಂಡುಳಿಯಲಿಕ್ಕಿರದ ಅರಸನೋಲಗಕಿಂತ ತುಂಬಿದೂರೊಳಗೆ ತಿರಿದುಂಬುವುದೇಲೇಸು" ಹೀಗೆ ಹಾಡಿರುತ್ತಾರೆ ಆದುದರಿಂದ ನಮ್ಮ ಜನಹಿತ ಸರಕಾರ ಭಾರತೀಯನು ಉಳಿಯುವಂತೆ ಮಾಡಲು ಈ ಮೂರು "ಉ" ಗಳನ್ನು ಉಂಟಾಗಿಸಿಕೊಂಡು ಮುಂದೆ ತನ್ನ ಆದರ್ಶಗಳನ್ನು ವ್ಯವಹೃತಗೊಳಿಸಲು ಯೋಜಿಸುವುದು ಅವಶ್ಯ. ಅದು ಬಿಟ್ಟು ಅಂಕೆಸಂಖ್ಯೆಗಳಿಂದಲೇ ತೃಪ್ತಿಪಟ್ಟುಕೊಳ್ಳುವುದಾದರೆ, ವಿದೇಶಗಳಲ್ಲಿ ಪ್ರಶಂಸೆಗೆ ಪಾತ್ರವಾಗಬಹುದು; ಸ್ವದೇಶದಲ್ಲಿ ಮಾತ್ರ ಭರ್ತ್ಸನೆಗೆ ಈಡಾಗುವುದು ನಿಸ್ಸಂಶಯ.

—ಗೋರಾ, ಉಡುಪಿ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಕವಿತಾವಿತಾನ—

ಶುಭಭವಿತವ್ಯ—

ತಿಳಿಕೆಗೊಂಡಿಸಿದ ಸೋಲಾಪದ್ಯಂ
ಒಲಿದು ನೆಹರೂ ಪ್ರಸಾದ ಮುಖಂಡರು
ತಿಳಿಸಿದಂತೆ ಮುಂದರಿದು ಜನಂಗಳು
ತಿಳಿಬೆಳಕಾಗಲಿ ಭಾರತ ಭುವಿಯೊಳ್

ಗಾಂಧಿಮಹಾತ್ಮರ ಮೋಘದಸ್ತ್ರದಿಂ
ಭಾರತಪುತ್ರರ ಐಕಮತ್ಯದಿಂ
ಸ್ವತಂತ್ರವಾದೀ ಭೂಮಿಗೆ ಸತ್ಯದ
ಸ್ವತಂತ್ರ ಬರಲಿದೆ ಬರಲಿದೆ ಬರಲಿದೆ

ಮೆಲ್ಲಡಿಯಿಂಬಹ ಭಾಗ್ಯಲಕ್ಷ್ಮಿಯೋಲ್
ದಿಲ್ಲಿಕೇಂದ್ರ ದೈದೈದು ವರ್ಷಗಳ
ಕಾರ್ಯಪ್ರಣಾಳಿಕೆ ಸಾಗುತೆ ಕ್ರಮದಿಂ
ಭಾರತ ಭಾಗ್ಯದಿ ಬೆಳಗಲಿ ಬೆಳಗಲಿ

ವನಗಳು ಗಿರಿಗಳು ಮಳೆಯಿಂಬರಿಸಲಿ
ದನಗಳು ಜನಗಳು ಸೊಂಪಿಂಬಾಳಲಿ
ನದಿಗಳು ಪೂರ್ಣ ಪ್ರಯೋಜನವಾಗಲಿ
ಜನರೆಲ್ಲಾ ಕರ್ಮಶೀಲರಾಗಲಿ

"ಹಜ್ಜೇಮೋಲೇ ಹಜ್ಜೇನಿಕ್ಕುತ
ಗೆಜ್ಜೇಕಾಲಾ ನಾದವ ತೋರುತ"
ಮೆಲ್ಲಡಿಯಿಂಬಹ ಭಾಗ್ಯಲಕ್ಷ್ಮಿಯೋಲ್
ಒಳ್ಳೇಕಾಲವು ಬರಲಿದೆ ಬರಲಿದೆ,

—'ನಿಸರ್ಗ'

ಕಾರ್ಕಳ ಡಿ. ಮು ಕೋರ್ಟಿನಲ್ಲಿ

O S No 342/1959.

ಡಾಕ್ಟರ್ M. ಶಿವರಾವ್ — ವಾದಿ.

ಮತ್ತು

ಮೋನು ಶೆಟ್ಟಿ ಸಹಾ —ಪ್ರತಿವಾದಿಗಳು.

ಇವರೊಳಗೆ

ಕೋರ್ಟು ಹುಕುಂ ಪ್ರಕಾರ ಸದ್ರಿ ದಾವೆಯ 4ನೇ ಪ್ರತಿವಾದಿ ಶಿವ ಶೆಟ್ಟಿ ಗಿರಿಯಣ್ಣ ಶೆಟ್ಟಿ ಅಳಿಯ, 5ನೇ ಪ್ರತಿವಾದಿಳ್ಳ, ಕೊರಪಳು ಶೆಡ್ತಿ, ಗುಡ್ಡು ಶೆಡ್ತಿರ ಮಗಳು, ಕಾರ್ಕಳ ತಾಲ್ಲೂಕು ಕಡಂದಲೆ ಗ್ರಾಮದಲ್ಲಿರುವವರು. ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ವಾದಿಗೆ ಪ್ರತಿವಾದಿರಿಂದ ತಾರೀಕು 31-5-1959ಕ್ಕೆ ಬರಬೇಕಾದ ಮೂಲಗೇಣಿ ಗೇಣಿ ಬಾಕಿ ಬಗ್ಗೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದ್ರಿ ದಾವೆಯು ಸದ್ರಿ 4-5ನೇ ಪ್ರತಿವಾದಿರ ಆಕ್ಷೇಪಣೆ ಬಗ್ಗೆ ತಾರೀಕು 28-10-1959ಕ್ಕೆ ಇಟ್ಟದ್ರಿಂದ ಸದ್ರಿ ದಾವೆ ಕುರಿತು 4-5ನೇ ಪ್ರತಿವಾದಿರ ಉದಾಹರಣೆ ಇದ್ದರೆ ಸದ್ರಿ ತಾ. 28-10-1959ನೇ ದಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

(Sd) H. K Gopalkrishna Rao.
Vakil for Plaintiff.

Karkala, 15-10-1959.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ನುಡಿಚಿತ್ರ

ತೆಲುಗಿನ ಭಕ್ತಕವಿ ಬಮ್ಮೇರು ಪೋತನಾ

ಯಾವ ರಾಜ ಮಹಾರಾಜರ ಆಶ್ರಯವನ್ನೂ ಬಯಸದ ಸ್ವತಂತ್ರ ಕವಿಯಿತ.

ಸಂಸ್ಕೃತ ಸಾಹಿತ್ಯದಲ್ಲಿ ಕಾಳಿದಾಸನಿಗೂ ಹಾಗೂ ಹಿಂದೀ ಸಾಹಿತ್ಯದಲ್ಲಿ ಸೂರದಾಸನಿಗೂ ಇರುವ ಸ್ಥಾನ ತೆಲುಗು ಸಾಹಿತ್ಯದಲ್ಲಿ ಬಮ್ಮೇರು ಪೋತನಾರಿಗಿದೆ.

ಪೋತನಾರು ತೆಲುಗು ಸಾಹಿತ್ಯದ ಭಕ್ತ ಕವಿಗಳಲ್ಲಿ ಅಗ್ರಗಣ್ಯರು. ಇವರು ಸನ್ ೧೩೭೦ರಲ್ಲಿ ಆಂಧ್ರ ರಾಜ್ಯದ ಯೋರಗಲ್ಲ್ ಎಂಬ ಹೆಸರಿನ ಹಳ್ಳಿಯಲ್ಲಿ ಹುಟ್ಟಿದರು. ಇಂದು ಈ ಹಳ್ಳಿ 'ವರಂಗಲ್' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಒಕ್ಕಲತನವೇ ಪ್ರಧಾನ ವೃತ್ತಿಯಾಗುಳ್ಳ ಬ್ರಾಹ್ಮಣ ಪರಿವಾರದಲ್ಲಿ ಇವರು ಹುಟ್ಟಿದರು. ದೀನತೆ ಮತ್ತು ದುಃಖದ ಕಾರಣದಿಂದಾಗಿ ಇವರ ಓದುವಿಕೆ ಯಾವುದೇ ಪಾಠಶಾಲೆಯಲ್ಲಾಗಲಿಲ್ಲ. ಆದರೂ ಇವರು ಯಾವುದೇ ಗುರುವಿನ ಸಹಾಯವಿಲ್ಲದೆ ಸರಸ್ವತಿಯ ಅನುಗ್ರಹಕ್ಕೆ ಪಾತ್ರರಾದರು. ದೇವಿಯೇ ವರ ಕೊಟ್ಟದುದರಿಂದ ಸಹಜವಾಗಿಯೇ ಇವರು ಪಾಂಡಿತ್ಯದಲ್ಲಿ ಪೂರ್ಣ ಅಧಿಕಾರ ಪಡೆದರು ಎಂದು ಇವರ ಕುರಿತಾಗಿ ಹೇಳಲಾಗುತ್ತದೆ.

ಪಾಂಡಿತ್ಯ ಪ್ರಾಪ್ತವಾದ ಬಳಿಕ ಪೋತನಾರು ಆ ಸಮಯದ ಓರ್ವ ರಾಜನಾದ ಸರ್ವಜ್ಞಸಿಂಹ ಮಹಿಪಾಲನ ದರ್ಬಾರಿಗೆ ಹೋದರು. ಅಲ್ಲಿ ಇವರನ್ನು ಸನ್ಮಾನಿಸಲಾಯಿತು. ರಾಜನು ಇವರಿಗೆ ರಾಜವೇಶ್ಯೆಯ ಗುಣಗಾನ ಮಾಡುವ ಕಾವ್ಯ ಗ್ರಂಥವನ್ನು ಬರೆಯಲು ಆಜ್ಞಾಪಿಸಿದ. ಪೋತನಾರಿಗೆ ಈ ಮಾತು ಹಿಡಿಸಲಿಲ್ಲ. ಆದರೂ ರಾಜನ ಆಜ್ಞೆಯನ್ನು ಪಾಲಿಸಿದರು. ಇದೇ ಇವರ ಸರ್ವಪ್ರಥಮ ಗ್ರಂಥವಾಗಿದೆ. ಈ ಗ್ರಂಥ ಬರೆದ ಬಳಿಕ ಇವರು ಮುಂದೆಂದೂ ರಾಜ ದರ್ಬಾರಿಗೆ ಹೋಗಲಿಲ್ಲ. ಇವರಿಗೆ ರಾಜರುಗಳ ಕುರಿತು ತಿರಸ್ಕಾರ ಉಂಟಾಯಿತು. ಆದುದರಿಂದ ಸ್ವತಂತ್ರಪೂರ್ವಕವಾಗಿ ತಮ್ಮ ಹಿರಿಯರ ಕಸುಬಾದ ವ್ಯವಸಾಯವನ್ನು ಮಾಡುತ್ತಾ ಕವಿತೆಗಳನ್ನು ಬರೆಯ ತೊಡಗಿದರು.

ಪೋತನಾರು ಮೊದಲಿನಿಂದಲೂ ಭಕ್ತ ಕವಿಯಾಗಿರಲಿಲ್ಲ. ಒಂದು ದಿನ ಸ್ವಪ್ನದಲ್ಲಿ ಪರಮಾತ್ಮನು ಬಂದು ಕಾಣಿಸಿಕೊಂಡು 'ಭಾಗವತ'ವನ್ನು ತೆಲುಗು ಕಾವ್ಯದಲ್ಲಿ ಬರೆಯಲು ಆಜ್ಞಾಪಿಸಿದ ಆ ಸಮಯದಿಂದ ಪೋತನಾರು ಭಕ್ತರಾಗಿ, ತನ್ನ ಕಾವ್ಯ ಪ್ರತಿಭೆಯನ್ನು ಪರಮಾತ್ಮನ ಗುಣಗಾನದಲ್ಲೇ ವ್ಯಯಿಸಿದರು. ಒಂದು ಕಡೆ ಪೋತನಾರು ಹೀಗೆ ಹೇಳುತ್ತಾರೆ:—

"ನಾನು ಹೇಳುತ್ತಿರುವುದು 'ಭಾಗವತ'ವಾಗಿದೆ ಇದನ್ನು ಹೇಳಿಸುವವ ಸ್ವಯಂ ಶ್ರೀ ಪರಮಾತ್ಮನೇ. ಈ ಗ್ರಂಥವನ್ನು ಓದಿದಾಗ ದುಃಖ ಹಾಗೂ ಭಯ ನಾಶ ಹೊಂದುವುದರಿಂದ ನಾನು ಬೇರೆ ಕತೆ ಏಕೆ ಬರೆಯಲಿ?"

ಪೋತನಾರು ಭಾಗವತ ಬರೆಯುತ್ತಿದ್ದಾಗ ಇದರ ಕುರಿತಾದ ಚರ್ಚೆ ಬಹಳ ದೂರ-ದೂರದ ಊರುಗಳಲ್ಲಿ ನಡೆಯತೊಡಗಿತು. ರಾಜನು ಪೋತನಾರವರನ್ನು ತನ್ನ ದರ್ಬಾರಿಗೆ ಸನ್ಮಾನದೊಡನೆ ಕರೆಸಿ, ರಾಜ ಕವಿಯನ್ನಾಗಿ ಮಾಡಬೇಕೆಂದು ಇಚ್ಛಿಸಿದ. ಆದರೆ ಪೋತನಾರು ರಾಜನ ಎಲ್ಲಾ ಕಾಣಿಕೆಗಳನ್ನು ತಿರಸ್ಕರಿಸಿದರು. ಭಾಗವತ ಪೂರ್ತಿಯಾದ ಬಳಿಕ ಅದನ್ನು ರಾಜನಿಗೆ ಅರ್ಪಿಸಬೇಕೆಂದೂ, ಆದರಿಂದಾಗಿ ಇವರ ಬಡತನ ದೂರವಾಗಿ ಇವರು ರಾಜಕವಿಗಳಾಗುವರೆಂದೂ ಬಹಳ ಜನರು ಇವರಿಗೆ ತಿಳಿಸಿದರು.

ಪೋತನಾರ ಓರ್ವ ಸಂಬಂಧಿಕ ಶ್ರೀನಾಥನು ಕೂಡಾ ಈ ಕುರಿತು ಅವರಿಗೆ ಹೇಳಿದ. ಇವರಿಗೆ ಏನು ಉತ್ತರ ಹೇಳಬೇಕೆಂದು ಪೋತನಾರು ಯೋಚಿಸುತ್ತಿದ್ದರು. ಆಗ ಸರಸ್ವತಿ ಇವರ ಎದುರು ಅಳುತ್ತಾ ಬಂದು 'ನನ್ನನ್ನು ಜೀರೆಯುವರ ಕೈಗೆ ಒಪ್ಪಿಸಬೇಡ' ಎಂದು ಹೇಳಿದಳೆಂದು ಕೆಲವರು ಹೇಳುತ್ತಾರೆ. ಇದನ್ನು ನೋಡಿ ಪೋತನಾರವರಿಗೆ ಬಹಳ ಗ್ಲಾನಿಯಾಯಿತು. ಸರಸ್ವತಿಗೆ ವಿಶ್ವಾಸ ಕೊಡುತ್ತಾ ಅವರು ಒಂದು ಪದ್ಯ ಹೇಳಿದರು. ಆ ಪದ್ಯದ ಅರ್ಥ ಹೀಗಿದೆ:—

"ಕಾಡಿಗೆಯಿಂದ ಕೂಡಿರುವ ಕಣ್ಣೀರಿನಿಂದ ನೀನೇಕೆ ನಿನ್ನ ಸೀರೆಯ ಸೆರಗನ್ನು ಒದ್ದೆಗೊಳಿಸುತ್ತಿರುವೆ? ಹೇ ಸರಸ್ವತೀ ಮಾತೆಯೇ. ಹೇ ಬ್ರಹ್ಮರಾಣೀ! ನಾನು ನಿನ್ನನ್ನು ಎಂದಿಗೂ ಆ ಅಧಮ ರಾಜರುಗಳ ಕೈಗೆ ಒಪ್ಪಿಸಲಾರೆ. ನನ್ನ ಮಾತಿನ ಮೇಲೆ ವಿಶ್ವಾಸವಿಡು."

ಇದನ್ನು ಕೇಳಿ ಪೋತನಾರು ಶ್ರೀನಾಥನನ್ನು ಸಂಬೋಧಿಸುತ್ತ ಹೀಗೆ ಉತ್ತರವೀಯುತ್ತಾರೆ: "ಆಮ್ರವೃಕ್ಷದ ನವ ಕೋಮಲ ಕಿಸಲಯ ಸದೃಶ್ಯ ಕಾವ್ಯ ಕನ್ಯೆಯನ್ನು ಬೇರೆಯವರ ಕೈಗಿತ್ತು, ಸುಖ ಭೋಗಿಸುವುದು ಓರ್ವ ಉತ್ತಮ ಕವಿಗೆ ಹೇಳಿಸಿದ ಮಾತಲ್ಲ ಇದಕ್ಕಿಂತ ರೈತನಾಗುವುದು ಉತ್ತಮ. ಅನ್ನ ಸಿಗದಿದ್ದರೆ ಕಂದ-ಮೂಲ ತಿಂದು ಜೀವಿಸುವುದು ಒಳ್ಳೇಯದು. ಏಕೆಂದರೆ ಇದರಲ್ಲಿ ನಾವು ನಿಜವಾದ ರೀತಿಯಿಂದ ಜೀವನ ಸಾಗಿಸಬಲ್ಲೆವು."

ಇದರ ಬಳಿಕ ಮತ್ತೆಂದೂ ಇವರಿಗೆ ರಾಜ ದರ್ಬಾರಿನ ಲೋಭವನ್ನು ತೋರಿಸಲು ಬರಲಿಲ್ಲ. ಭಾಗವತ ಪೂರ್ತಿಯಾದ ಬಳಿಕ ಇವರು ಆ ಗ್ರಂಥವನ್ನು ಪರಮಾತ್ಮನ ಹೆಸರಲ್ಲಿ ಅಂಕಿತಗೊಳಿಸಿ, ಪರಮಾತ್ಮನಿಗೇ ಸಮರ್ಪಣೆ ಮಾಡಿದರು.

ಪೋತನಾರು ಬಡವರಾಗಿದ್ದರೂ ರಾಜ-ಮಹಾರಾಜರುಗಳಿಗೆ ಹೆದರಲಿಲ್ಲ. ಇವರು ತನ್ನ ಗ್ರಂಥದಲ್ಲಿ "ನಾನು ಈ ಪುಸ್ತಕವನ್ನು ಪಾಪಿ ಹಾಗೂ ಅಧಮರಾದ ರಾಜರುಗಳ ಕೈಗೆ ಒಪ್ಪಿಸಿದ್ದರೇ ನಿಶ್ಚಯವಾಗಿಯೂ ನಾನು ಯಮರಾಜನ ಯಾತನೆಯನ್ನು ಅನುಭೋಗಿಸಬೇಕಾಗಿತ್ತು, ಆದುದರಿಂದಲೇ ನಾನೀ ಗ್ರಂಥವನ್ನು ಪರಮಾತ್ಮನ ಹೆಸರಿನಲ್ಲಿ ಅಂಕಿತ ಮಾಡುತ್ತಿದ್ದೇನೆ" ಎಂದು ಹೇಳಿದ್ದಾರೆ.

ಪೋತನಾರ ಮೂರು ಗ್ರಂಥಗಳು— ಭೋಗಿನಿ ದಂಡಕವು, ಶ್ರೀ ಮಹಾಂಧ್ರ ಭಾಗವತವು ಮತ್ತು ವೀರಭದ್ರ ವಿಜಯವು-ಬಹಳ ಪ್ರಸಿದ್ಧವಾಗಿವೆ.

ಇಂದಿಗೂ ನಾವು ಇವರ ಸಾಹಿತ್ಯವನ್ನು ಓದಿದರೆ ಈ ದೀನ ಭಕ್ತನಾದ ಕವಿಯ ಕಾವ್ಯ ಪ್ರತಿಭೆ ಹಾಗೂ ಸಾಹಸನ್ನು ನೋಡಿ ನಾವು ನತಮಸ್ತಕರಾಗಬೇಕಾಗುತ್ತದೆ.

["ಭಾರತಿ" ಹಿಂದೀ ಮಾಸಿಕದಲ್ಲಿ ಪ್ರಕಟವಾದ ಶ್ರೀ ಎ. ಕೆ. ಪಾಠಕರ ಲೇಖನದ ಅನುವಾದ]

—ಉಡುಪಿ ನಾರಾಯಣ ಬಲ್ಲಾಳ, ಹಾಸನ.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS).

(Written by An Experienced Teacher.)

Useful to one and all, the teacher, the student and the layman.

Price: Rs. 1=25. (Postage extra)

If Rs.1=50 is sent by M O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

ಜೀವನ ಪರಿಚಯ

(೩ನೇ ಪುಟದಿಂದ)

"For sheer brilliance in the United Nations, India's Rau is far a head of Britain's whimsical Sir Gladwyn Jebb or America's excitable Warren Austin."

ಅಲ್ಲದೇ ರಷ್ಯದ ಪ್ರತಿನಿಧಿಯಾಗಿದ್ದ ಆಂಡ್ರಾಡೆ ವಿಶಿನ್‌ಸ್ಕೀಯವರು ಕೂಡ ಅವರನ್ನು 'a saint among the U. N. Delegates" ಎಂದು ಸಂಬೋಧಿಸಿದ್ದರು, ಅವರು ನಿಧನ ಹೊಂದಿದ ಸಂದರ್ಭದಲ್ಲಿ. ಅವರ ಅಂತಾರಾಷ್ಟ್ರೀಯ ಕೀರ್ತಿ ಇದರಿಂದ ವ್ಯಕ್ತವಾಗುತ್ತದೆ. ಅವರಿಂದಾಗಿ ಭಾರತವು ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಗೌರವಾನ್ವಿತ ಸ್ಥಾನ ಪಡೆಯಿತೆಂಬುದರಲ್ಲಿ ಸಂದೇಹವಿಲ್ಲ. ಇದಕ್ಕಾಗಿ ಭಾರತ ಅವರಿಗೆ ಚಿರಋಣಿಯಾಗಿದೆ. ಒಮ್ಮೆ ಕಾಶ್ಮೀರ ಪ್ರಧಾನಿಪಟ್ಟವೂ ಅವರಿಗೆ ಅರ್ಪಿತವಾಗಿತ್ತು. ಅದನ್ನವರು ಸ್ವೀಕರಿಸಿಕೆಲಕಾಲದಲ್ಲೇ ಅದಕ್ಕೆ ತಿಲಾಂಜಲಿಯಿತ್ತರು. ೧೯೫೨ರ ನೊಬೆಲ್ ಪಾರಿತೋಷಕ ಶಾಂತಿಗಾಗಿ)ಕ್ಕೆ ಅವರ ಹೆಸರು ಸೂಚಿತವಾದುದು ಗಮನಾರ್ಹವಾಗಿದೆ.

೧೯೫೨ನೆಯ ವರ್ಷದ ಕೊನೆಯಲ್ಲಿ ಹೊಲ್ಲೆಂಡಿನ ಹೇಗ್ ನಗರದಲ್ಲಿರುವ ಜಾಗತಿಕ ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯಾಗಿ ಚುನಾಯಿತರಾದರು, ರಾಯರು. ಇದು ಭಾರತದ ಪಾಲಿಗೆ ಬಹುಮಾನಿಸಲ್ಪಟ್ಟ ರಾಷ್ಟ್ರೀಯ ಗೌರವ. ಈ ಸ್ಥಾನದಿಂದಾಗಿ ಭಾರತದ ಘನತೆ ಇನ್ನೂ ಹೆಚ್ಚಿತು.

ರಾಷ್ಟ್ರಕ್ಕಾಗಿ ಅವಿಶ್ರಾಂತ ಪರಿಶ್ರಮದಿಂದ ರಾಯರ ದೇಹಸ್ಥಿತಿ ಕ್ಷೀಣಿಸುತ್ತ ಬಂದಿತು. ಕೊನೆಗೊಮ್ಮೆ ಭಾರತಕ್ಕೆ ಮಾತ್ರವಲ್ಲ, ಅಖಿಲ ಜಗತ್ತಿಗೇ ಮಹಾಘಾತವನ್ನೊಡ್ಡಿದ ಆ ದುರ್ದಿನ ಬಂದೇ ಬಂದಿತು. ೧೯೫೩ರ ನವೆಂಬರ್ ೩೦ರಂದು ಪ್ರಾತಃಕಾಲ ತನ್ನೀರ್ವರು ಸಹೋದರರಿದಿರಿನಲ್ಲೇ ಝೂರಿಚಿನ್ ಆಸ್ಪತ್ರೆಯೊಂದರಲ್ಲಿ ನರಸಿಂಗರಾಯರು ಪರಂಧಾಮವನ್ನೈದಿದರು. ತನ್ನ ಪ್ರಭಾವದ ಕಿರಣಗಳಿಂದ ನಾಡನ್ನು ಬೆಳಗಿಸಿದ ಭಾಗ್ಯರವಿ ಅಂದು ತನ್ನ ನಾಡಿನಿಂದ ಅದೆಷ್ಟೋ ದೂರದಲ್ಲಿ ಅಸ್ತಂಗತನಾದನಲ್ಲವೇ, ಜಗತ್ತಿನ ಶಾಂತಿಪ್ರಿಯ ಜನತೆಯನ್ನಗಲಿ ಬಹುದೂರ ಹೋದನು. ಆ ಮಹಾತ್ಮನಿಂದು ಜೀವಿಸಿಲ್ಲವಾದರೂ, ಅವನ ಚರಿತ್ರ ಜೀವನ ಭಾರತದ ತರುಣ ಪೀಳಿಗೆಗೆ ಆದರ್ಶಮಯವಾಗಲೆಂದೇ ಹಾರೈಸಬೇಕಾಗಿದೆ. ಇಂತಹ ವಿದ್ವನ್ಮಣಿಗಳನ್ನು ಹೆತ್ತು ಜಗತ್ತಿನ ಸೇವೆಗಾಗಿ ಅವರನ್ನು ಜನತೆಗರ್ಪಿಸಿದ ದಕ್ಷಿಣ ಕನ್ನಡ ಜಿಲ್ಲೆ ಅದೆಷ್ಟು ಧನ್ಯ!

—ಎಮ್. ರಘುನಂದನ ರಾವ್, ಬೆಂಗಳೂರು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಚಿತ್ರದಲ್ಲಿ ಎಡಕ್ಕೆ ಪ್ರಾಚೀನ ಪದ್ಧತಿ ಅನುಸರಿಸಿ ಸಾಗರದಲ್ಲಿ ಮುಳುಗಿ ವಸ್ತುಗಳನ್ನು ತೆಗೆದವನೊಬ್ಬನನ್ನು ಕಾಣಬಹುದು. ಬಲಕ್ಕೆ ಸಾಗರದಲ್ಲಿ ಮುಳುಗುವವರನ್ನು ನೌಕೆಯು ಸಾಗರದ ಪೃಷ್ಠಕ್ಕೆ ಕರೆದೊಯ್ಯುತ್ತಿರುವುದು

ಕಥಾವಿಹಾರ

(೨ನೇ ಪುಟದಿಂದ)

ರಿಸಿಕೊಂಡು ನಮ್ಮ ಸ್ವಾತಂತ್ರ್ಯವನ್ನು ಒತ್ತೆಯಿಡುವುದು ಒಂದು. ಅವರೊಡನೆ ಕೆಚ್ಚೆದೆಯಿಂದ ಹೋರಾಡಿ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆಗೈಯುವುದು ಎರಡನೆಯದು. ಇವುಗಳಲ್ಲಿ ನನ್ನ ಆಕಾಂಕ್ಷೆಯೇನೆಂದರೆ ದೇಶದ ಸ್ವಾತಂತ್ರ್ಯಕ್ಕಾಗಿ ನಾವೆಲ್ಲರೂ ಆಹುತಿಗೊಳ್ಳುವ ದಾರಿಯನ್ನೇ ಆರಿಸುವುದು. ನಮ್ಮ ಬಲಿದಾನದಿಂದ ವೈರಿಗಳ ಶಿರ ಮಣಿಯುವಂತೆ ಮಾಡಬಹುದು. ಇದರಲ್ಲಿಯೇ ನಮ್ಮ ಗೌರವವಿದೆ. ಇಂದಿನ ತನಕ ರಜಪೂತರು ಜೀವದ ಮೇಲೆ ಆಶೆಪಟ್ಟು, ರಣಹೇಡಿಗಳಾಗಿ, ತಮ್ಮ ಸ್ವಾತಂತ್ರ್ಯವನ್ನು ಪರರೊಡನೆ ಒತ್ತೆಯಿಟ್ಟ ದಾಖಲೆ ನಡೆದುದಿಲ್ಲ. ನೀವೂ ರಜಪೂತರ ಈ ವಂಶ ಗೌರವಕ್ಕೆ ಕುಂದು ತರಬಾರದೆಂಬುದೇ ನನ್ನ ಹಿರಿಯಾಸೆ. ಇನ್ನು ನಿಮ್ಮಿಚ್ಛೆ........"

ಪ್ರಜೆಗಳ ಮೇಲೆ ರಾಣಿಯ ಈ ಮಾತಿನಿಂದ ವಿದ್ಯುತ್ ಸಂಚಾರವಾದಂತಾಯಿತು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪ್ರಾಣವನ್ನರ್ಪಿಸುವ ಮಾರ್ಗವನ್ನು ಆರಿಸಲಾಯಿತು. ಅದಕ್ಕೆ ಸಿದ್ಧರಿದ್ದ ಅಸಂಖ್ಯ ಜನರಿಂದ ಕೂಡಿದ ದೊಡ್ಡ ಸೈನ್ಯವೊಂದು ಸುಸಜ್ಜಿತವಾಗಿ ಸಿದ್ಧವಾಯಿತು. ಮತ್ತು ಬಹಳ ಬಿರುಸಿನಿಂದ ಯುದ್ಧದ ತಯಾರಿ ಕೈಗೊಳ್ಳಲಾಯಿತು.

ಇತ್ತ ಈ ವಿಚಾರಗಳಿಂದೆಲ್ಲ ಅನಭಿಜ್ಞನಾಗಿದ್ದ ಅನೂಪಸಿಂಹ, ಮೊಗಲ ರಾಜನ ಪತ್ರದ ಕುರಿತಾಗಿ ತನ್ನ ದರ್ಬಾರಿನವರೊಡನೆ ಯಾವ ತರದ ಸಲಹೆ, ವಿಚಾರ ವಿನಿಮಯಗಳನ್ನೂ ಕೈಗೊಳ್ಳಲಿಲ್ಲ. ಆತ ಮುಸಲ್ಮಾನರ ಅಧೀನತೆಯನ್ನು ಸ್ವೀಕರಿಸಿ, ಯಾವ ಗೊಡವೆಗೂ ಹೋಗದೆ, ಸಿಗುವ ವರ್ಷಾಸನದಿಂದ ತನ್ನ ಸುಖೋಪಭೋಗಗಳಿಂದ ಮೆರೆಯುವ ಹೊಸ ಯೋಜನೆಯೊಂದನ್ನು ತಯಾರಿಸಿಕೊಂಡು, ಅದರ ಹಗಲುಗನಸು ಕಾಣುತ್ತಲಿದ್ದ. ಆತನು ನಡೆಸಿದ ಸುದೀರ್ಘ ವಿಲಾಸಜೀವನದ ಪರಿಣಾಮವಾಗಿ ಜೀವದ ಹಂಗು ತೊರೆದು ಕಾದಾಡುವ, ರಜಪೂತ ರಕ್ತ ಪಾರಂಪರ್ಯವಾಗಿ ಬಂದ ಆ ಶಕ್ತಿಯನ್ನೆಂದೋ ಕಳೆದುಕೊಂಡಿದ್ದ. ಆ ಸ್ಥಾನವನ್ನಿಂದು ವಿಲಾಸಭೋಗ ಮತ್ತು ಸುರಾಪಾನಗಳು ಆಕ್ರಮಿಸಿ ತಮ್ಮ ಅಧಿಕಾರ ಚಲಾಯಿಸುತ್ತಿದ್ದುವು. ಈ ಕಾರಣದಿಂದಲೇ— ಅಚ್ಚ ರಜಪೂತನಾಗಿದ್ದರೂ— ಅನೂಪಸಿಂಹನಿಗೆ ಮೊಗಲರ ಅಧೀನನಾಗಿರುವುದು ಲಜ್ಜೆಯೆನಿಸಲಿಲ್ಲ. ಆತ ಮೊಗಲರ ಎಲ್ಲ ಶರ್ತುಗಳನ್ನೂ ಸ್ವೀಕರಿಸಿದ. ಆದರೆ ಮೊಗಲರಾಜ ಅನೂಪಸಿಂಹನಂತೆ ಅಜಾಗರೂಕನಲ್ಲ. ರಾಣಿಯ ಕಾರಬಾರೆಲ್ಲ ರಾಜಕೀಯಪಟುವಾದ ಆತನಿಗೆ ತಿಳಿದಿತ್ತು. ಅದರಿಂದಾಗಿ ಆತ ಪುನಃ ಅನೂಪಸಿಂಹನಿಗೆ "ರಾಜಪುರ ಸಂಸ್ಥಾನವನ್ನು ನಿಶ್ಶರ್ತವಾಗಿ ತನಗೆ ಒಪ್ಪಿಸತಕ್ಕದೆಂದು ಹೇಳಿ ಕಳುಹಿದ. ಈ ಮಾತು ಕೇಳಿ ಅನೂಪಸಿಂಹನ ಪ್ರಜ್ಞೆಯೇ ತಪ್ಪಿದಂತಾಯಿತು. ಬಾಣ ಕೈಯಿಂದ ಜಾರಿ ಹಾರಿ ಹೋಗಿತ್ತು. ಈಗ ಏನು ಮಾಡಲೂ ಅಸಾಧ್ಯ. ಹೀಗಾಗಿ ಅವನು ಮೊಗಲರೊಡನೆ ಯುದ್ಧ ಮಾಡುವುದರ ಬದಲಾಗಿ ಅವರನ್ನು ಸ್ವಾಗತಿಸುವುದೇ ಉತ್ತಮವೆಂದರಿತು ಅವರನ್ನು ಭೇಟಿಯಾಗಲು ಹೊರಟ. ದುರ್ಗದ ಹೊರಗೆ ಮೊಗಲ ಸೈನ್ಯ ಯಾವಾಗ ರಾಜಪುರವನ್ನು ಆಕ್ರಮಿಸುವುದೆಂದು ಪ್ರತೀಕ್ಷೆಗೈಯುತ್ತಾ ಬಾಯಿ ತೆರೆದು ಕಾಯುತ್ತಿತ್ತು. ರಾಣಿ ಚಂದ್ರಾವತಿ ಆ ಎಲ್ಲಾ ವಿಚಾರಗಳನ್ನು ಸಂಪೂರ್ಣವಾಗಿ ಅರಿತು, ಬಹಳ ಸಾವಧಾನವಾಗಿ ಕೆಲಸ ಸಾಧಿಸುತ್ತಿದ್ದಳು. ಅನೂಪಸಿಂಹ ಮೊಗಲರನ್ನು ಸ್ವಾಗತಿಸಲು ದುರ್ಗದ ದ್ವಾರದೆಡೆಗೆ ನಡೆದ. ದ್ವಾರ ಮುಚ್ಚಿತ್ತು. ಆತ ದ್ವಾರ ಪಾಲಕನೊಡನೆ ಆಜ್ಞಾಪಿಸಿದ—

"ಬಾಗಿಲನ್ನು ತೆರೆದು ಬಿಡು."

ದ್ವಾರಪಾಲಕ ರಾಜನಿಗೆ ನಮಸ್ಕರಿಸಿ ಅತೀ ನಮ್ರತೆಯಿಂದ ನುಡಿದ—

"ದ್ವಾರ ತೆರೆಯಲು ಅಪ್ಪಣೆಯಿಲ್ಲ ಪ್ರಭೋ".

"ನಾನು ಆಜ್ಞಾಪಿಸುತ್ತಿದ್ದೇನೆ—ಬಾಗಿಲು ತೆರೆ"—ಅನೂಪಸಿಂಹ ಅಸಹನೆಯಿಂದ ಸಿಟ್ಟಿಗೆದ್ದು ಗದರಿದ.

"ನಾನು ದ್ವಾರ ತೆರೆಯಲಾರೆ ಪ್ರಭೂ; ನನಗೆ ಅದೇ ಆಜ್ಞೆ ಕೊಡಲಾಗಿದೆ".

"ನಾನಿರುವಾಗ ಮತ್ತಾರಿರುವರು ಅಂತಹ ಅಪ್ಪಣೆ ಕೊಡುವವರು?"— ರಾಜ ಗುಡುಗಿದ. ಚಂದ್ರಾವತಿ, ಅಲ್ಲೇ ಎಲ್ಲೋ ಅಡಗಿಕೊಂಡವಳು—ರಾಜನ ಹತ್ತಿರ ಬಂದು ಹೇಳಿದಳು—

"ಪ್ರಭೂ, ನಾನು ಆ ಆಜ್ಞೆಯಿತ್ತವಳು. ರಾಜಪುರವನ್ನು ಮೊಗಲರ ಸ್ವಾಧೀನಕ್ಕೆ ಒಪ್ಪಿಸಲಾಗದು."

"ಯಾರ..? ಚಂದ್ರಾ!......ನೀನು ಈ ವಿದ್ರೋಹದಲ್ಲಿ!........ನೀನು ನನ್ನ ಮಾರ್ಗದಲ್ಲಿ ಬಂಡೆಯಂತೆ ಅಡ್ಡವಾಗುವಿಯೆಂದು ನಾನು ಕನಸಿನಲ್ಲಿಯೂ ನೆನಸಿರಲಿಲ್ಲ"

"ಆದರೆ ಇದು ಕರ್ತವ್ಯದ ಹಾದಿ. ಇದರಲ್ಲಿ ಪತಿ-ಪತ್ನಿ, ಸೋದರ-ಸೋದರಿ, ತಂದೆ-ಮಕ್ಕಳು ಇತ್ಯಾದಿ ಯಾವ ಸಂಬಂಧವೂ ಹತ್ತಿರ ಸುಳಿಯಲಾರವು. ಯಾವಾಗ ದೇಶದ ಸ್ವಾತಂತ್ರ್ಯದ ಮೇಲೆ ವಿಪತ್ತಿನ ಮೋಡ ಗುಡುಗ ಹತ್ತುವುದೋ ಆಗ ಸುಮ್ಮನೆ ಕುಳಿತಿರುವುದು ನಮ್ಮ ಕರ್ತವ್ಯವಲ್ಲ. ದೇಶವನ್ನು ಆಪತ್ತಿನಿಂದ ಬಚಾಯಿಸುವ ಬಗ್ಗೆ ಎಲ್ಲ ವಿಧದ ಮೋಹಗಳನ್ನು ಬಿಟ್ಟುಕೊಟ್ಟು ಮೃತ್ಯುವನ್ನು ಪಣವಾಗಿಟ್ಟು ಹೋರಾಡುವುದು ನಮ್ಮ ಕರ್ತವ್ಯ. ತಮಗೆ ದುರ್ಗದಿಂದ ಹೊರ ಹೋಗಲು ನಾನಿಂದು ಬಿಡಲಾರೆ. ಪ್ರಜೆಗಳ ಮುಂದೆ ಎಲ್ಲಿಯ ತನಕ ನೀವು ನಿಮ್ಮ ಸರ್ವ ಅಪರಾಧಗಳ ಬಗ್ಗೆ ಕ್ಷಮೆ ಬೇಡುವುದಿಲ್ಲವೋ ಅಲ್ಲಿಯ ತನಕ ನಿಮ್ಮನ್ನು ನನ್ನ ಆಜ್ಞೆಯ ಮೇರೆಗೆ ಬಂಧನದಲ್ಲಿಡಲಾಗುವುದು."—ಚಂದ್ರಾವತಿ ತನ್ನೆಲ್ಲ ಸಾಹಸವನ್ನು ಒಂದುಗೂಡಿಸಿ ಹೇಳಿದಳು.

"ನನ್ನ ರಾಜ್ಯದಲ್ಲಿ ನಾನು ಪ್ರಜೆಗಳ ಕ್ಷಮೆ ಕೇಳಬೇಕೇ? ಹಾಗಾದರೆ ಧಿಕ್ಕಾರವಿರಲಿ ಈ ರಾಜ್ಯಕ್ಕೆ. ರಾಜಪುರವು ಮೊಗಲರ ಆಕ್ರಮಣದಿಂದ ಧ್ವಂಸವಾಗುವ ವರೆಗೆ ನಾನು ಇಲ್ಲಿ ಪಾದ ಊರುವುದಿಲ್ಲ. ಇದೋ—ಹೊರಟೆ........"— ಇಷ್ಟು ನುಡಿದ ಅನೂಪಸಿಂಹ ವೇಗವಾಗಿ ಮುಂದಡಿಯಿಟ್ಟು ಹೊರಟ.

"ಎಲ್ಲಿಗೆ ತೆರಳುವಿರಿ ತಾವು? ಮೊಗಲರೊಡನೆ ಕೂಡಿಕೊಳ್ಳಲೇನು? ಒಂದು ಹೆಜ್ಜೆಯನ್ನಾದರೂ ಮುಂದಿಟ್ಟರೆ - ಜಾಗ್ರತೆ! ನನ್ನ ತುಪಾಕಿಯ ಗುಂಡು ನಿಮ್ಮ ಎದೆಯನ್ನು ಸೀಳಿ ಸಾಗುವುದು."— ಚಂದ್ರಾವತಿ ಆವೇಶ ಹೊಂದಿ ನುಡಿದಳು.

"ಹಿಂದೂ ನಾರಿಯಾಗಿದ್ದುಕೊಂಡು ಪತಿಹತ್ಯೆ ಮಾಡಲು ನಿನಗೆ ನಾಚಿಕೆಯಾಗುವುದಿಲ್ಲವೇನು?"—ಅನೂಪಸಿಂಹ ಪತ್ನಿಯನ್ನು ಹೀಯಾಳಿಸಿ ಹೇಳಿದ.

"ಇಲ್ಲ. ತನ್ನ ಪತಿ ತಪ್ಪುದಾರಿ ಹಿಡಿದು ಸಾಗುತ್ತಿರುವುದನ್ನು ಅರಿತು ಆತನನ್ನು ಸುದಾರಿಗೆ ಹಚ್ಚುವುದು ಹಿಂದೂ ನಾರಿಯ ಆದ್ಯ ಕರ್ತವ್ಯ. ಆದರೆ ಪತಿ, ಪತ್ನಿಯ ವಿವೇಕಪೂರ್ಣ ಮಾತುಗಳನ್ನು ಕೇಳದೇ ಅದೇ ದಾರಿಯಲ್ಲಿ ಮುನ್ನಡೆಯಲಿಚ್ಛಿಸಿದರೆ ಮತ್ತು ದೇಶವನ್ನು ಸರ್ವನಾಶದ ಕಡೆಗೆ ನಡೆಸುವ ದುಸ್ಸಾಹಸವನ್ನು ಕೈಗೊಂಡರೆ ಆತನನ್ನೂ ಹತಿಸಿ ದೇಶದ ಮರ್ಯಾದೆ ಉಳಿಸುವುದು ನಾರಿಯ, ಪತ್ನಿಯ ಪರಮ ಕರ್ತವ್ಯ, ಪತಿಯ ಹತ್ಯೆಮಾಡಿದರೂ ಪತ್ನಿ ಆದರ್ಶ ಭಾರತೀಯ ನಾರಿಯೆಂದು ಕರೆಯಲ್ಪಡಲು ಸಾಧ್ಯವಿದೆ— ಇಂತಹ ಸಂದರ್ಭಗಳಲ್ಲಿ."

"ಹಾಗಾದರೆ ನಾನು ಗತಿಸಿದ ಅನಂತರವೂ ನಿನ್ನ ಆದರ್ಶ ಕಲಂಕಗೊಳ್ಳುವುದಿಲ್ಲವೇನು? ಆಗ ನೀನೇನು ಮಾಡುವೆ?"

"ಪತಿಯ ಸಂಗಡ ಸಹಗಮನ ಮಾಡುವೆ. ಆದರೆ ಆತನನ್ನು ದೇಶದ್ರೋಹಿಯಾಗಲು ಬಿಡಲಾರೆ."

"ಬದುಕಿರುವಾಗ ನನ್ನವಳಲ್ಲದ ನೀನು ಸತ್ತನಂತರ ಸಹ ನನ್ನವಳಾಗಲಾರೆ"

—ಎಂದು ನುಡಿಯುತ್ತ ಅನೂಪಸಿಂಹ ಸ್ವತಃ ದ್ವಾರ ತೆರೆದು ಹೊರಹೋಗಲೆತ್ನಿಸಿದ. ಒಂದರೆಕ್ಷಣ ಚಂದ್ರಾವತಿ ಅಪ್ರತಿಭಳಾಗಿ ನಿಂತು ನೋಡುತ್ತಿದ್ದಳು. ಆದರೆ ಮರುಕ್ಷಣದಲ್ಲಿಯೇ ರಾಣಿ ಕೋವಿಯೆತ್ತಿ ಗುಂಡು ಹಾರಿಸಿದಳು. ಅನೂಪಸಿಂಹ ಗುಂಡಿನಾಘಾತದಿಂದ ನೆಲಕ್ಕುರುಳಿದ. ಆತನ ಪ್ರಾಣಪಕ್ಷಿ ಹಾರಿಹೋಯಿತು. ಕೂಡಲೇ ಚಂದ್ರಾವತಿ ಕೋವಿ ಬಿಸುಟು, ಓಡಿ ಪತಿಯ ಶವದ ಮೇಲೆ ಬಿದ್ದು ಮೂರ್ಛೆಹೋದಳು. ಈ ಘಟನೆಗಳನ್ನೆಲ್ಲ ನೋಡುತ್ತಿದ್ದ ಸೈನಿಕರು ಅವರೀರ್ವರನ್ನು ದುರ್ಗದ ಒಳಗೆ ಸಾಗಿಸಿದರು.

ಈ ಘಟನೆ ಪ್ರಜೆಗಳ ಮೇಲೆ ಅಸಾಮಾನ್ಯ ಪ್ರಭಾವ ಬೀರಿತು. ರಾಣಿಯ ಕರ್ತವ್ಯನಿಷ್ಠೆಯಿಂದ ಸ್ಫೂರ್ತಿ ಹೊಂದಿದ ಅವರು ಆವೇಶದಿಂದ ಯುದ್ಧ ಮಾಡಿದರು. ಸಮರದಲ್ಲಿ ರಾಜಪುರವು ಜಯ ಪಡೆಯಿತು.

ತನ್ನ ರಾಜ್ಯದ ವಿಜಯದ ಸುದ್ದಿ ತಿಳಿದ ನಂತರ ರಾಣಿ ಚಂದ್ರಾವತಿ ಪತಿಯೊಡನೆ ಸತಿ ಹೋದಳು. ದೇಶಕ್ಕಾಗಿ ಪತಿ ಹತ್ಯೆಯನ್ನೂ ಮಾಡುವ ನಾರಿಯನ್ನು ಭಾರತದ ಆದರ್ಶ ನಾರಿಯಲ್ಲವೆನ್ನಲಾದೀತೇ?

(ಆಧಾರದಿಂದ)

'ಜನ್ನ', ಮರವಂತೆ.



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ

ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
REGD. NO. M. 3619

UDIPI, THURSDAY
22—10—1959

LICENSE NO. 31
Licensed to Post without Prepayment

ವಿಚಾರ ವೀಚಿ

ಪಶುಪಕ್ಷಿಗಳಲ್ಲಿಯೂ ಭಾವೋತ್ಪನ್ನವಾಗುತ್ತದೆ!

ಮಾನವರಲ್ಲಿ ಏಳುವ ಸರ್ವವಿಧ ಮನೋವಿಕೃತಿಗಳು ಪಶುಪಕ್ಷಿಗಳಲ್ಲಿಯೂ ಉದ್ಭವಿಸುತ್ತವೆ.

ಪಶು ಪಕ್ಷಿಗಳು ಎಂದೂ ಅವಶ್ಯಕತೆಗಿಂತ ಅಧಿಕವಾಗಿ ಆಹಾರ ಸೇವಿಸುವುದಿಲ್ಲವೆಂದೂ ಭಾವನೆಗಳ ಅಲ್ಲಕಲ್ಲೋಲಗಳು ಅವುಗಳಿಗಿರುವುದಿಲ್ಲವೆಂದೂ ಕೆಲವು ಪ್ರಕೃತಿ ಭಕ್ತರು ಹೇಳುವುದಿದೆ. ಈ ವಿಚಾರಗಳು ಅಜ್ಞಾನಪೂರಿತವಿವೆ ಎಂದು ಇತ್ತೀಚೆಗೆ ನಡೆದ ಪ್ರಯೋಗಗಳಿಂದ ವ್ಯಕ್ತಪಟ್ಟಿದೆ.

ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ಪ್ರಯೋಗ ಶಾಲೆಯಲ್ಲಿ ಒಂದು ಗಂಡು ಮಂಗವು ಒಂದು ಹೆಣ್ಣು ಮಂಗದಲ್ಲಿ ಅನುರಕ್ತವಾಗಿತ್ತು. ಮೂರು ವರ್ಷಗಳವರೆಗೆ ಈ ದಂಪತಿಗಳು ಸುಖ ಜೀವನವನ್ನು ಸಾಗಿಸಿದವು. ಆ ಮೇಲೆ ಈ ಹೆಣ್ಣು ಮಂಗವನ್ನು ಅಲ್ಲಿಂದ ಬೇರ್ಪಡಿಸಿ ಬೇರೊಂದು ಹೆಣ್ಣುಮಂಗವನ್ನು ಜೊತೆಗಿರಿಸಲಾಯಿತು. ಈಗಲೂ ಗಂಡು ಮಂಗ ತನ್ನ ಹೊಸ ಸಂಗಾತಿಯೊಡನೆ ಸ್ನೇಹಪೂರ್ಣ ವ್ಯವಹಾರಗಳನ್ನು ಮುಂದುವರಿಸಿತು.

ಒಂದು ದಿನ ಈ ಗಂಡು ಮಂಗನಿಗೆ ಅದರ ಮೊದಲನೆಯ ಪ್ರೇಯಸಿಯನ್ನು ತೋರಿಸಲಾಯಿತು. ಆಗ ಅದು ಒಂದು ಬಾರಿ ಹಳೆಯ ಮತ್ತೊಂದು ಬಾರಿ ಹೊಸ ಪ್ರೇಯಸಿಯರನ್ನು ಅನಿಶ್ಚಿತ ದೃಷ್ಟಿಯಿಂದ ನೋಡ ತೊಡಗಿತು. ಅದರ ಮನಸ್ಸು ಉದ್ವಿಗ್ನವಾಯಿತು. ತನ್ನ ಬಾಲವನ್ನೂ ಶರೀರವನ್ನೂ ಕಚ್ಚಿ ಪರಚಿ ಗಾಯ ಮಾಡಿಕೊಂಡಿತು. ತತ್‍ಕ್ಷಣ, ಅದಕ್ಕೆ ಪಟ್ಟಿ ಹಚ್ಚದೆ ಹೋಗಿದ್ದರೆ, ಮಂಗವು ಯಮನೂರಿಗೆ ಪ್ರಯಾಣಿಸುತಿತ್ತು!

ಪಟ್ಟಿ ಹಾಕಿದ ಮೇಲೆ, ಈ ಗಂಡಿನೊಡನೆ ಅದರ ಮೊದಲ ಪ್ರೇಯಸಿಯನ್ನೇ ಇರಿಸಲಾಯಿತು. ಆ ಹೆಣ್ಣು ಮಂಗವಾದರೂ ಪತ್ನೀಸಹಜವಾದ ಪ್ರೇಮದಿಂದ ಉಪಚಾರ, ಶುಶ್ರೂಷೆಗಳನ್ನು ಮಾಡಿತು. ಆದರೆ, ಇವರಿಬ್ಬರ ಮನೋಸ್ಥಿತಿ ಮೊದಲಿನಂತಾಗಲು ಹದಿನೆಂಟು ತಿಂಗಳುಗಳು ಹಿಡಿದುವು!

ಭಯಾನಕ ಏಕಾಂತತೆಯು ಮಾನವನನ್ನು ವಿಚಲಿತಗೊಳಿಸುವಂತೆಯೇ ಇತರ ಪ್ರಾಣಿಗಳನ್ನೂ ಗಲಿಬಿಲಿಗೀಡು ಮಾಡುವುದು. ಇದರಿಂದಾಗಿ ಅವುಗಳಲ್ಲಿ ಕೆಲವು ಅಸ್ವಾಭಾವಿಕ ಪ್ರವೃತ್ತಿಗಳೂ ಉಂಟಾಗುವುವು. ಒರ್ವ ಪ್ರಯೋಗಕಾರನು ಆಗ ತಾನೆ ಹುಟ್ಟಿದ ಏಳು ಕೋಳಿಯ ಮರಿಗಳನ್ನು ಒಂದಕ್ಕಿನ್ನೊಂದು ಕಾಣದಂತೆ ಬೇರೆ ಬೇರೆಯಾಗಿರಿಸಿದ; ಮಾತ್ರವಲ್ಲ, ಅವಕ್ಕೆ ನೀರಾಹಾರಗಳನ್ನೀಯುವವನೂ ಕಾಣದಂತೆ ವ್ಯವಸ್ಥೆ ಮಾಡಿದ. ಏಕಾಂತವಾಸಿ ಕೋಳಿಮರಿಗಳು ಸ್ವಾಭಾವಿಕವಾದುವುಗಳಿಗಿಂತ ಹೆಚ್ಚಾಗಿ ಕೂಗುತ್ತಿರುವುದು ಕಂಡು ಬಂತು. ಮೊದಲನೆ ವಾರದಲ್ಲಿ ಅವು ಬಹಳ ಚಾಂಚಲಗೊಂಡಿದ್ದವು. ಅವು ನೊಣಗಳನ್ನು ಬೆನ್ನಟ್ಟುತಿದ್ದುವು; ತನ್ನ ಧಾನ್ಯಪಾತ್ರೆಯಲ್ಲಿ ಕೊಕ್ಕು ಹಾಕಿ, ನಾಲ್ಕು ಕಡೆಗೆ ಕಾಳುಗಳನ್ನು ಚೆಲ್ಲುತಿದ್ದುವು. ಒಂದು ಕೋಳಿಮರಿಯಂತೂ ಗಡಿಯಾರದ ಪೆಂಡುಲಮಿನತ್ತ ಹಾರಲು ತೊಡಗಿತು. ಇದನ್ನು ಇತರ ಕೋಳಿಮರಿಗಳೊಡನೆ ಸೇರಿಸಿದಾಗ, ಭಯಭೀತವಾಗಿ ಓಡಲು ಆರಂಭಿಸಿತು, ಧಾವಿಸುವ ಗಡಿಬಿಡಿಯಲ್ಲಿ ಒಂದರ ಮೇಲೆಂದು ರೆಕ್ಕೆ ಬಡೆದು ತಾಗಿಕೊಳ್ಳುತಿದ್ದುವು. ಬೀಳುತಿದ್ದುವು.

ಇದೇ ರೀತಿಯಲ್ಲಿ ಒಂದು ಗಿಳಿಯನ್ನೂ ಸಾಕಲಾಯಿತು. ಅದಕ್ಕೊಂದು ಚೆಂಡನ್ನು ಆಟಿಕೆಯಾಗಿ ನೀಡಲಾಗಿತ್ತು ಅದು ಚೆಂಡನ್ನು ತನ್ನ ಕೊಕ್ಕಿನಿಂದ ಕಚ್ಚುತಿತ್ತು; ರೆಕ್ಕೆಗಳಿಂದ ಆಡಿಸುತಿತ್ತು; ಅದೂ ಒಂದು ಗಿಳಿ ಎಂಬಂತೆ ವರ್ತಿಸುತಿತ್ತು. ಚೆಂಡಿನ ಸಮೀಪ ಮಲಗಿದೊಡನೆಯೇ ಅದಕ್ಕೆ ನಿದ್ದೆ ಬರುತಿತ್ತು. ಆಗಾಗ ಅದು ಚೆಂಡಿನ ಮುಂದೆ ತನ್ನ ಕುತ್ತಿಗೆಯನ್ನು ನೀಡಿ, ಅದು ಕಚ್ಚುವುದನ್ನೇ ಕಾಯುತಿತ್ತು. ಒಂದು ಗಿಳಿಯು ಈ ಗಿಳಿಯ ಆದರಾತಿಥ್ಯಗಳಿಗೆ ಪಾತ್ರವಾಗಿರುವ ಬದಲು ಈ ಚೆಂಡು ಅಂತಹ ಭಾಗ್ಯಪಡೆದಿತ್ತು.

ಈ ಚೆಂಡನ್ನು ಗಿಳಿಯು ಯಾವಾಗಲೂ ತನ್ನ ತಲೆಯ ಮೇಲೆ ಇಟ್ಟುಕೊಳ್ಳ ಬಯಸುತಿತ್ತು, ಎಲ್ಲಾದರೂ ಅದು ತುಸು ಕೆಳಗಿಳಿದರೆ, ಗಿಳಿ ದಿಙ್ಮೂಢವಾಗುವುದು. ಎಲ್ಲಾದರೂ ಪಂಜರದ ನೆಲದಲ್ಲಿ ಚೆಂಡು ಹೋಗಿ ಬಿದ್ದುಬಿಟ್ಟರೆ, ಈ ಗಿಳಿಯು ತನ್ನ ಸಹ ಶುಕ ಅಥವಾ ಸಾರಿಕೆಯು ಮೃತ್ಯುಮುಖವಾದರೆ, ಬಾಯಿಮುಚ್ಚಿ ಕುಳಿತುಕೊಳ್ಳುವಂತೆ ಪಂಜರದ ಒಂದು ಮೂಲೆಯಲ್ಲಿ ಮ್ಲಾನಮುಖದಿಂದ ನುಂಡಿಸುವುದು.

ಬ್ರೂಕ್ಸ್ ಪಶುಶಾಲೆಯ ಅಧ್ಯಕ್ಷ ಶ್ರೀ ಲೀ ಕ್ರೈಂಡಲ್‍ರು ಈಗಲ್ ಬೀಕ್ ಎಂಬ ಹೆಸರಿನ ಪಾರಿವಾಳವನ್ನು ಸಾಕಿದ್ದರು. ಅದರ ಬುದ್ಧಿಯೂ ಶರೀರವೂ ಪ್ರಾರಂಭಾಸ್ಥೆಯಿಂದಲೂ ವಿಕಸಿತವಾಗಿರಲಿಲ್ಲ. ಅದು ರಾಜಕಪೋತದ ಜಾತಿಗೆ ಸೇರಿದ್ದು ಉತ್ತಮ ರೀತಿಯಲ್ಲಿ ಹಾರಬೇಕಾಗಿದ್ದರೂ ಎತ್ತ ಹಾರಬೇಕೆಂಬದಕ್ಕೆ ಹೊಳೆಯುತ್ತಿರಲಿಲ್ಲ. ಎಲ್ಲಿಯಾದರೂ ಅದನ್ನು ಹಾರಿಸಿದರೆ, ಆಗ ಅದು ದಪ್ಪೆಂದು ಭೂಮಿಗೆ ಬೀಳುತಿತ್ತು. ಆಹಾರವನ್ನು ಸಮೀಪ ಮಡಗಿದರೆ, ತಿನ್ನುತಿತ್ತು; ಆದರೆ ಅದನ್ನರಸುವ ಗೋಜಿಗೆ ಎಂದೂ ಹೋಗುತ್ತಿರಲಿಲ್ಲ. ಜೀವನವಿಡಿ ಯಾವ ಕಪೋತಿಯಾದರೂ ಅದರ ಮೇಲೆ ಪ್ರೇಮವರ್ಷವನ್ನು ಸುರಿಸಲಿಲ್ಲ. ಒಂದೊಂದು ಬಾರಿ ಅದು ಕಪೋತಿಯೊಡನೆ ಪ್ರಣಯಸಿವೇದನ್ನು ಮಾಡಿತ್ತು. ಆದರೆ, ಯಾಚನೆಯ ಪದ್ಧತಿಯೂ ಅಸ್ವಾಭಾವಿಕವಾಗಿತ್ತು. ಸ್ವಾಭಾವಿಕವಾಗಿದ್ದರೂ ಅದು ಅಸಫಲವೇ ಆಗಿತ್ತು.

ಮೆದುಳು ಮತ್ತು ಸ್ನಾಯು ಸಂಸ್ಥಾನಗಳ ಹೊಡೆತಗಳೂ ಅವ್ಯವಸ್ಥೆಗಳೂ ಪಶುಪಕ್ಷಿಗಳಲ್ಲಿಯೂ ಕಂಡು ಬರುತ್ತವೆ. ಒಂದು ಸತ್ತ ಇರುವೆಯ ಹೆಣವನ್ನು ಪರಿಶೀಲಿಸಿದಾಗ, ಮೆದುಳಿನಲ್ಲಿ ವ್ರಣ-ಗ್ರಂಥಿಯಾಗಿ ಅದು ಸತ್ತುಹೋದುದು ತಿಳಿಯಿತು. ಸಹಜ ಕಾಮವಾಸನೆಯ ತೃಪ್ತಿಯಿಲ್ಲದಿರುವುದರಿಂದ ಮನುಷ್ಯರಂತೆಯೇ ಪಶುಗಳಲ್ಲಿ ಕೂಡ ಮನೋವಿಕೃತಿಗಳುಂಟಾಗುವುವು. ಗಂಡು ಪಕ್ಷಿಗಳು ಗೋಬಿಯ ಹೂ ಮತ್ತು ಶರಾಬಿನ ಶಟ್ಟಿಗಳ ಎದುರು ಪ್ರಣಯ ನಿವೇದನ ಮಾಡುವುದು ಇದೆ. ಒಂದು ಪಕ್ಷಿಯು ಹದಿನೈದು ದಿನಗಳ ಪ್ರಣಯದರ್ಶನವನ್ನು ಮರದ ಕಾಂಡವೊಡನೆ ಮಾಡಿತು. ಮನುಷ್ಯರಂತೆಯೇ ಪಶುಪಕ್ಷಿಗಳಲ್ಲಿಯೂ ನಾನಾ ವಿಧದ ಕಾಮಕ್ರೀಡೆಗಳಿವೆ.

ಹೀಗಿರುವಾಗ, ಮಾನವರ ಮತ್ತು ಪಶುಪಕ್ಷಿಗಳಲ್ಲಿ ಸಾಮಾನ್ಯ ಪ್ರವೃತ್ತಿಗಳಿಲ್ಲವೆಂದು ಹೇಳುವುದು ಹೇಗೆ?

ಕ್ಷ-ಕಿರಣ

(೧ನೇ ಪುಟದಿಂದ)

ಟ್ಟಿನ ಒಳಗಿನ ೬-೭ ಗ್ಯಾಲರಿಗಳಲ್ಲಿ ನೀರು ತುಂಬಿ ಹರಿದಿತ್ತು! ಇದನ್ನು ತಿಳಿದ ನಿರೀಕ್ಷಣೆ ಮತ್ತು ನಿಯಂತ್ರಣ ವಿಭಾಗದ ಸಂಚಾಲಕ ಶ್ರೀ ಆರ್. ಎಸ್. ಗಿಲಕೊ ಅವರು ಮುಂದಿನ ಸರದಿಯ ಕರ್ಮಚಾರರನ್ನು ದೂರವಿರುವಂತೆ ಮಾಡಿದರು; ಇಲ್ಲವಾದರೆ, ೩—೪ ನೂರು ಜನರು ಸತ್ತು ಹೋಗುತಿದ್ದರು!

ಈ ದುರ್ಘಟನೆಯಲ್ಲಿ ಪ್ರಾಣತ್ಯಾಗ ಮಾಡಿದ ೧೧ ವ್ಯಕ್ತಿಗಳನ್ನು ಈ ಅಣೆಕಟ್ಟಿನ ಸ್ಮರಣೆಯೊಡನೆ ಗೌರವಾಭಿಮಾನಗಳಿಂದ ಉಚ್ಚರಿಸಬೇಕು. ಮೂರು ದಿನಗಳ ಮೊದಲೇ ಸೂಚನೆ ದೊರೆತಿದ್ದರೂ ಈ ಜನರನ್ನು ಉಳಿಸಲು ಅಸಾಧ್ಯವಾಗಲಿದ್ದ ಮೂಲ ಕಾರಣವೇನೆಂಬುದಿನ್ನೂ ಸ್ಪಷ್ಟವಾಗಿಲ್ಲ. ದೇವರ ಕೃಪೆಯಿಂದ ಹನ್ನೊಂದು ಜನರ ಬಲಿಯನ್ನಷ್ಟೇ ಪಡೆದು ಈ ದುರ್ಘಟನೆ ಶಾಂತವಾಯಿತು. ಎಲ್ಲಿ ಯಾದರೂ ಅಣೆಕಟ್ಟೇ ಒಡೆದು ಹೋಗುತಿದ್ದರೆ, ಕೇವಲ ಹಣ ಮಾತ್ರವಲ್ಲ; ಪಂಜಾಬ ಮತ್ತು ರಾಜಸ್ಥಾನಗಳ ಬಹಳ ವಿಶಾಲ ಪ್ರದೇಶದ ಜೀವ ಜಂತುಗಳನ್ನೇ ಇದು ಆಹುತಿಯಾಗಿ ಪಡೆಯುತಿತ್ತು! ಬಾಕ್ರಾದಲ್ಲಿನ ದುರ್ಘಟನೆಯು ಅರಿವಾದೊಡನೆಯೇ ನಂಗಲಕ್ಕೆ ನೀರು ಅತೀವ ವೇಗವಾಗಿ ಹರಿಯುತ್ತಿರುವುದರ ಸೂಚನೆಯನ್ನು ಕೊಡಲಾಯಿತು. ಯೋಜನೆಯು ಪೂರ್ಣವಾಗುವುದಕ್ಕೆ ಮೊದಲೇ ಬಾಕ್ರಾ ಜಲಾಶಯವನ್ನು ತುಂಬಿಸಿದುದರಿಂದಾಗಿ ಈ ಅನಾಹುತವಾಯಿತೆಂಬ ವಿಷಯ ವಿವಾದಗ್ರಸ್ತವಾಗಿದೆಯಾದರೂ ವಿಶೇಷಜ್ಞರ ಅಭಿಪ್ರಾಯದಲ್ಲಿ ಇದು ಅಪ್ರಾಸಂಗಿಕವಾಗಿದೆ. ಗೋವಿಂದ ಸಾಗರ ಜಲಾಶಯವನ್ನು ನೀರಿನಿಂದ ತುಂಬಿಸುವ ಬಗ್ಗೆ ಅಣೆಕಟ್ಟಿನ ಮಧ್ಯಭಾಗವನ್ನು ಇನ್ನೂ ಎತ್ತರಿಸುವ ವಿಷಯವಾಗಿ ಮಾತುಕತೆಗಳು ನಡೆಯುತ್ತಿವೆ.

ಬಾಕ್ರಾದ ದುರ್ಘಟನೆಯ ಬಗ್ಗೆ ತಿಳಿದುಬಂದ ಸಾಮಾನ್ಯ ವಿಚಾರವಿದು. ಪ್ರಧಾನಿ ನೆಹರೂರವರು ಚಂಡೀಗಡದಲ್ಲಿ ಕಾಂಗ್ರೆಸ್ ಸಮಿತಿಯ ಸಭೆ ಸೇರಿದಾಗ ಬಾಕ್ರ ನಂಗಲಿಗೆ ಭೇಟಿಯಿತ್ತು ಅಣೆಕಟ್ಟನ್ನು ಪರಿಶೀಲಿಸಿದರು ಅವರ ಅಭಿಪ್ರಾಯ, "ನಾನು ತಂತ್ರಜ್ಞನಲ್ಲ; ಆದರೂ ಅಣೆಕಟ್ಟು ಸುರಕ್ಷಿತವಿದೆ ಎಂದು ಹೇಳಬಲ್ಲೆ?" ಎಂದು. ಅವರೇ ಹೇಳುವಂತೆ ದೈವಾನುಗ್ರಹದಿಂದಾಗಿ ರಾಜಸ್ಥಾನ....ಪಂಜಾಬಗಳ ವಿಶಾಲ ಪ್ರದೇಶಕ್ಕೆ ಒದಗ ಬಹುದಾಗಿದ್ದ ಹಾನಿ ಹನ್ನೊಂದೇ ಜನರ ಬಲಿ ತೆಗೆದುಕೊಂಡು ದೂರವಾಯಿತು, ಇದೇ ಸದ್ಯ, ಸಮಾಧಾನಕ್ಕೆ ಸ್ಫೂರ್ತಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಕಚೇರಿ: ಮುಕುಂದ ನಿವಾಸ, ಉಡುಪಿ.

ಸ್ಥಾಪನೆ: 1925

- ವಿದೇಶಗಳಲ್ಲಿ ಶಿಕ್ಷಣ
- ವೈದ್ಯಕೀಯ ವೃತ್ತಿ
- ಸಣ್ಣ ವ್ಯಾಪಾರ

ಇವುಗಳಿಗೆ ಸುಲಭ ಶರ್ತಗಳಲ್ಲಿ ಮತ್ತು ಕಡಿಮೆ ಬಡ್ಡಿಯಲ್ಲಿ ವೈಯಕ್ತಿಕ ಸಾಲವನ್ನು ಕೊಡುವ ಯೋಜನೆಯನ್ನು ಸಿಂಡಿಕೇಟ್ ಬೇಂಕ್ ಪ್ರಾರಂಭಿಸಿದೆ.

ಸಂಪೂರ್ಣ ವಿವರಗಳಿಗೆ ಸಿಂಡಿಕೇಟಿನ 123 ಶಾಖೆಗಳ ಪೈಕಿ ಯಾವುದೇ ಶಾಖೆಯಲ್ಲಿ ವಿಚಾರಿಸಿರಿ.

The Canara Industrial & Banking Syndicate Ltd.,
H. O. Mukund Nivas, UDIPI.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‍ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

5-75

ಬೆಲೆ 13 ನ ಪೈಸೆ

Vol 39 No 9
ವರುಷ ೩೯ ವಾರ ೯

29-10-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ಹಾವಿನೊಡನೆ ವಿರಸ ಬೇಡ ಜತೆಗೆ ಸರಸವೂ ಕೂಡದು

ಭಾರತ-ಚೀನಗಳ ಮೈತ್ರಿ ಪರಂಪರೆ ಇತಿಹಾಸ ಪೂರ್ವಕಾಲದ್ದಿದ್ದರೂ ಚೀನಾದ ಅತಿಕ್ರಮಣದಿಂದ ಭಾರತ ಹೊಸ ಪಾಠವೊಂದನ್ನು ಕಲಿಯಬೇಕಾಗಿ ಬಂದಿದೆ

ಭಾರತದ ೦ ಜಕಾರ್ಣದಲ್ಲಿ ಒಂದು ಸಸಲತೆಯೊಡನೆ ಪತ್ರಿಂದು ಅಸಲತೆಯು ಕಾಣಿಸಿಕೊಂಡಿದೆ ಎಂದೇ ನಾವು ಹೇಳಬೇಕಾದ ಕಾಲ ಸನ್ನಿಹಿತವಾದಂತಿದೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಆದಿಯಿಂದಲೂ ನಡೆದುಬಂದಿರುವ ಪೂರ್ವ ಗಡಿಯ ವಿವಾದಗಳ ಬಗ್ಗೆ ಉಭಯ ಸರಕಾರಗಳ ನಿಯೋಗಗಳು ಒಂದು ಸೇರಿ ಚರ್ಚಿಸಿ, ಸಾಮಾನ್ಯವಾಗಿ ಒಂದು ನಿರ್ಧಾರಕ್ಕೆ ಬಂದಿವೆ ಎಂದೂ ಇಕ್ಕಡೆಯವರಲ್ಲೂ ಸಾಮಾನ್ಯವಾಗಿ ಒಮ್ಮತವಾಗಿರುವುದೆಂದೂ ವರದಿಗಳು ಬಂದಿವೆ ನೆಹರೂ-ನೂನರ ಒಪ್ಪಂದವನ್ನು ಆಧಾರವಾಗಿಟ್ಟುಕೊಂಡ, ನಡೆದ ಈ ಮಾತುಕತೆಯ ಪರಿಣಾಮವು ಉತ್ತಮ ರೀತಿಯಲ್ಲಿ ಹೊರಬೀಳುವಂತಾದುದು ಸಂತೋಷದ ಸಂಗತಿ ಭಾರತದ ಪಂಚಶೀಲಗಳಿಗೆ ಶಾಂತಿಸೌಹಾರ್ದವಯ ವಿದೇಶಿ ಧೋರಣೆಗಳಿಗ ಅಭಿಮಾನಾಸ್ಪದ ಘಟನೆ,

ಈ ಚರ್ಚೆಯು ನಡೆಯುತ್ತಿರುವಂತೆಯೇ ಭಾರತದ ಗಡಿಯನ್ನು ಮೀರಿ ಸುಮಾರು ೫೦ ಮೈಲಿಗಳಷ್ಟು ಒಳಒಂದು ಭಾರತೀಯ ಅಲ್ಪ ಪೋಲಿಸಪಡೆಯ ಮೇಲೆ ಗುಂಡ ಹಾರಿಸಿ, ಅವರಲ್ಲಿ ೧೭ ಜನರು ಕೊನೆಯುಸುರು ಎಳೆಯುವಂತೆ ಮಾಡಿದ ಚೀನೀಯರ ಆಕ್ರಮಣವೆಂಬುದು ಭಾರತಕ್ಕೆ ಒಂದು ಅಗೌರವವೆಂದೇ ಹೇಳಬೇಕು ಚೀನೀಯ ಸರಕಾರವು ತಾನು ಭಾರತದೊಡನೆ ಮೈತ್ರಿಯನ್ನು ಬಯಸುವನೆಂದೂ, ಭಾರತದ ಗಡಿಯನ್ನು ಮೀರುವುದಿಲ್ಲವೆಂದೂ ಇನ್ನೂ ನಿರ್ಧಾರವಾಗದೆ ಉಳಿದಿರುವ ಸೀಮಾ ವಿವಾದಗಳನ್ನು ಶಾಂತಿಮಯವಾಗಿಯೇ ಬಗೆಹರಿಸುವ ಇಚ್ಛೆ ತನಗಿದೆ ಎಂದೂ ಹಲವಾರು ಪತ್ರಗಳಲ್ಲಿ ಲಿಖಿಸಿಹೇಳಿದರೂ ಇತ್ತೀಚೆಗೆ ಕ್ರಾಂತಿಯ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ತೆರಳಿದ್ದ ಭಾರತೀಯ ಕಮ್ಯೂನಿಸ್ಟ ನಿಯೋಗದೊಡನೆ ಸಹಜೀವನದತತ್ತ್ವಗಳಿಗೆ ಮನ್ನಣೆಯೀಯುವ ತನ್ನ ಇಚ್ಛೆಯನ್ನು ಪ್ರಕಟಗೊಳಿಸಿದರೂ ಲಡಖ್ ಪ್ರದೇಶದಲ್ಲಾದ ಈ ಆಕ್ರಮಣ ಹತ್ಯಾಕಾಂಡದ ಅರ್ಥವೇನೆಂದೂ ಇದರ ಅಂತಿಮ ಬಿಂದು ಎಲ್ಲಿ ಎಂದೂ ಹೇಳ ಬರುವುದಿಲ್ಲ ಕೆಂಪು ಚೀನೀ ಸರಕಾರದ ಬಣ್ಣ ಬಣ್ಣದ ಮಾತುಗಳು ರಂಗಿನ ಒಡ ಬುಡಿಕೆ ಎಂದು ಇಷ್ಟರಲ್ಲಿಯೇ ಸಾಕಷ್ಟು ವ್ಯಕ್ತಪಟ್ಟಿದೆ ಮುಂದುಗಡೆ ಅಣ್ಣತಮ್ಮಾ ಎಂದುಕೊಂಡು ಹಿಂದಿನಿಂದ ಗುಂಡಿಡುವ ಈ "ಮಿತ್ರದ್ರೋಹ"ದಿಂದ ಭಾರತೀಯರಲ್ಲಿ ಎಲ್ಲರಲ್ಲಿಯೂ ವಿವಂಚನೆಯುಂಟಾಗುವುದು ಸ್ವಾಭಾವಿಕವೇ ನಾವು ನಮ್ಮ ದೇಶವನ್ನು ಬ್ರಿಟಿಷರೊಡನೆ ಹೋರಾಡಿ ರಕ್ತ ಹರಿಸದೇನೇ ಮರಳಿ ಪಡೆದವಾದರೂ, ಇದರ ರಕ್ಷಣೆಯ ಮಹಾ ಕಾರ್ಯವನ್ನು ವಿಶೇಷವಾಗಿ ಚಿಂತಿಸಿದಂತೆ ತೋರುವದಿಲ್ಲ ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತಲೂ ಸ್ವಾತಂತ್ರ್ಯ ರಕ್ಷಣೆಯು ಪ್ರಯಾಸಕರವಾದದೆಂದು ನಾವು ಎಲ್ಲರೂ ತಿಳಿದಿದ್ದೇವೆ ಒ ರತದ ರಾಷ್ಟ್ರೀಯ ರಾದ ನಾವು ನಮ್ಮ ಕೊನೆಯ ಸುರಿರುವವರೆಗೂ ಭಾರತದ ಭದ್ರತೆಗಾಗಿ ಹೋರಾಡುವೆವೆಂದು ಪ್ರಧಾನಿ ನೆಹರೂ ಘೋಷಿಸಿದ್ದಾರೆ ಸಂದರ್ಭ ಬಂದಾಗ, ಜಾತತವು ಈ ದಿಸೆಯಲ್ಲಿ ಹಿಂದುಳಿಯಲಾರದೆಂದು ಭರವಸೆಯಿತ್ತು. ಭಾವೋದ್ರೇಕಗೊಳ್ಳಬಾರದೆಂದೂ, ಭಾವೋದ್ರೇಕದಿಂದ ಯಾವುದೇ ಕೆಲಸವನ್ನು ಮಾಡಿದರೆ, ಅದರಿಂದ ಹಾನಿಯೆಂದೂ ಅವರು ಎಚ್ಚರಿಕೆಯಿತ್ತಿದ್ದಾರೆ.

ಉಪಗ್ರಹಗಳನ್ನು ಆಕಾಶದಲ್ಲಿ ಹಾರಿಸ ಪ್ರದಕ್ಷೆ ಮೊದಲು ಅದರ ಅಂಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆ ಅಮೇರಿಕೆಯು ಹಾರಿಸಿದ್ದ ಒಂದು ಉಪಗ್ರಹವನ್ನು ತಜ್ಞರೊಬ್ಬರು ಪರೀಕ್ಷಿಸುವುದನ್ನಿಲ್ಲಿ ಕಾಣಬಹುದು

ಸಾವಧಾನ, ತಾಳ್ಮೆಗಳು ಬೇಕೆಂಬುದನ್ನು ಎಲ್ಲರೂ ಒಪ್ಪಬೇಕು. ರಾಷ್ಟ್ರದ ಬಹು ಭಾಗವನ್ನು ಚೀನವು ಆಕ್ರಮವಾಗಿ ತನ್ನದೆಂದು ಹೇಳಹೊರಟಿರುವಾಗ ನಾವು ತಾಳ್ಮೆ ತೋರಿಸಿದ್ದೇವೆ ಅವರು ಗಡಿಯನ್ನು ಮೀರಿ ಆಕ್ರಮಣಗಳನ್ನೂ ಮಾಡಿದಾಗ ಈ ತಾಳ್ಮೆ ತುಸು ದೂರವಾಯಿತು ಆದರೆ, ಚೀನೀ ಸರಕಾರದ ವಿಶ್ವಾಸದಾನ ಸಹೋದರತೆ, ಮೈತ್ರಿ ಮೊದಲಾದುವೆಲ್ಲ ಕೇವಲ ಲೇಖನ ರೂಪದಲ್ಲಿ ಇದ್ದು ವ್ಯವಹಾರದಲ್ಲಿ ಆಕ್ರಮಣ ಮನೋವೃತ್ತಿಯೊಂದೇ ತೋರುವಾಗ, ನಾವಿನ್ನೂ ಎಷ್ಟು ಸಮಯ ತಾಳಬೇಕು, ಭಾರತದ ಸೀಮೆಯನ್ನು ದಾಟಿ ಸುಮಾರು ೫೦ ಮೈಲುಗಳಷ್ಟು ದೂರ ಈಗಾಗಲೇ ಬಂದಿದ್ದಾರೆ, ಇನ್ನು ಡಿಲ್ಲಿಯ ತನಕ ಬರುವ ವರೆಗೂ ಸಾವಧಾನ, ನಿಧಾನ, ಸೌಹಾರ್ದ ಮಿತ್ರತ್ವಗಳ ಮಂತ್ರವನ್ನುಚ್ಚರಿಸುತ್ತ, 'ಆಕ್ರಮಣಕ್ಕೆ ಬಗ್ಗಲಾರೆವು, ಭಾರತವನ್ನು ರಕ್ಷಿಸಲು ಬದ್ಧಕಂಕಣರಾಗುವೆವು" ಎನ್ನುತ್ತ ತಾಳಿಕೊಳ್ಳಬೇಕೇ ಎಂಬ ವಿವಂಚನೆಯೇಳುತ್ತದೆ ಆದರೆ, ಕೇವಲ ಭಾವೋ

(೯ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ - ಮಂಗಳೂರು—3

ಸ್ಥಾಪನೆ - 1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 , 4½%
13 ,, 24 , 4¾%

ರೂಪಾಯಿ 10,000/ ಮ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ .

ಕಥಾವಿಹಾರ

ಮರೆಯಲಾಗದ ದೀಪಾವಳಿ

ಮೂರು ವರ್ಷಗಳಿಗೆ ಹಿಂದೆ, ತನ್ನ ಕಣ್ಣೊಂದನ್ನು ಕೆಗೆದ ದೀಪಾವಳಿಯೇ ಈಗ ಆಕೆಯ ತೆಗೆದಕಣ್ಣನ್ನು ತುಂಬಿಕೊಟ್ಟಿತು.

"ಇನ್ನು ನಿನ್ನ ಮದುವೆಯನ್ನು ಮುಂದುವರಿಸಲು ಸಾಧ್ಯವೇ ಇಲ್ಲ. ಈ ವರ್ಷದ ದೀಪಾವಳಿ ಸಮಯಕ್ಕೆ ನೀನು ಮಾವನ ಮನೆಗೆ ಹೊಸ ಅಳಿಯನಾಗಿ ಹೋಗಲೇ ಬೇಕು...."

ತಂದೆಯಿಂದ ಬಂದ ಈ ಖಂಡಿತಾಭಿಪ್ರಾಯದ ಪತ್ರವು ರಾಜನನ್ನು ತೀವ್ರ ಯೋಚನೆಗೀಡುಮಾಡಿತು. ಕಳೆದ ವರ್ಷದಿಂದಲೇ ಪ್ರಾರಂಭವಾಗಿತ್ತು ಅವನ ಮದುವೆಯ ಮಾತು. ತಂದೆಯ ಅಭಿಪ್ರಾಯ ಸುಳ್ಳಲ್ಲ. ಅವರು ವೃದ್ಧಾಪ್ಯಕ್ಕೆ ಕಾಲಿಕ್ಕಿದ್ದಾರೆ. ರಾಜ ಕಲಿತು ಪದವೀಧರನಾದವ. ಶ್ರೀಮಂತ ಮನೆತನ. ವರದಕ್ಷಿಣೆಯೊಂದಿಗೆ ಧನಲಕ್ಷ್ಮಿಯಾಗಿ ಬರುವ ಸುಂದರ ಕನ್ಯೆಯರಿಗೇನೂ ಕಷ್ಟವಿರಲಿಲ್ಲ. ಅಂತಹ ಒಂದು ಸುಕನ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಅವನ ತಂದೆ ಪತ್ರ ಬರೆದಿದ್ದರು.

ರಾಜ ಏನೋ ನಿರ್ಧರಿಸಿಕೊಂಡು "ನಾನು ಊರಿಗೆ ಬರುತ್ತೇನೆ. ನೀವು ಮೇಲೆ ಮದುವೆ ನಿಶ್ಚಯಮಾಡಿದರೆ ಸಾಕು." ಎಂದು ತಂದೆಗೆ ಪ್ರತ್ಯುತ್ತರ ಬರೆದು ಹಾಕಿದ.

ಂ ಂ ಂ

ಊರಿಗೆ ಬಂದ ರಾಜ ತನ್ನ ಹಾಸಿಗೆ ಪೆಟ್ಟಿಗೆಗಳನ್ನು ಆಳಿನೊಂದಿಗೆ ಮನೆಗೆ ಕೊಟ್ಟು ಕಳುಹಿಸಿ, ತಾನು ಸೀದಾ ಹೋಗಿ ಒಂದು ಕಿರಿಯ ಗುಡಿಸಿಲನ್ನು ಹೊಕ್ಕನು. ಬಡ ಇಂದಿರಮ್ಮನ ಗುಡಿಸಲದು. ವಿಧವೆ ಇಂದಿರಮ್ಮ ತನ್ನ ಮೂವರಿಂದಿ ಮಕ್ಕಳೊಂದಿಗೆ ಅಲ್ಲಿ ಬಡತನದ ಬಾಳುವೆಯನ್ನು ಸಾಗಿಸುತ್ತಿದ್ದಳು. ಆಕಸ್ಮಿಕವಾಗಿ ತನ್ನ ಗುಡಿಸಲಿಗೆ ಬಂದ ರಾಜೇಂದ್ರನನ್ನು ನೋಡಿ ಅವಳಿಗೆ ಆಶ್ಚರ್ಯ! ದಿಗಿಲು! ಆಕಲು ಮೊದಲು ಅವನಾರೆಂದೇ ಅವಳಿಗೆ ತಿಳಿಯಲಿಲ್ಲ.

"ನನ್ನ ಗುರುತಿದೆಯೆ ಇಂದಿರಮ್ಮ?" ಎಂದು ಕೇಳುತ್ತ ಜಗಲಿಯನ್ನೇರಿದ್ದ ರಾಜ, ಸೂಟುಧಾರಿಯಾದಾತನನ್ನು ಕಂಡು ಇಂದಿರಮ್ಮ ಗಡಿಬಿಡಿಯಿಂದ 'ಆ-ಆ' ಎಂದು ಬಾಯಿ ತೆರೆದಳು. ಯಾರೋ ಏನೋ ಎಂದುಕೊಂಡು ಹರಿದುಹೋದ ಬಣ್ಣದ ಚಾಪೆಯನ್ನು ತಂದು ಜಗಲಿಯಲ್ಲಿ ಹಾಸಿದಳು. ತಾಯಿಯ ಗಡಿಬಿಡಿಯನ್ನು ಕಂಡು ಮಗಳು ಲಲಿತೆ ಅವಳ ಕಿವಿಯಲ್ಲಿ "ಅವರಮ್ಮಾ, ನಮ್ಮ ರಾಜೇಂದ್ರ ಪ್ರಭು!" ಎಂದು ಪಿಸುಗುಟ್ಟಿದಳು. ಅದು ರಾಜನ ಕಿವಿಗೂ ಬಿತ್ತು.

"ನೋಡಿದಿರಾ ಇಂದಿರಮ್ಮ, ನಿಮಗಿಂತಲೂ ನಿಮ್ಮ ಮಗಳ ದೃಷ್ಟಿ ಚುರುಕು!" ಎಂದ ರಾಜ.

ಈ ಮಾತು ಇಂದಿರಮ್ಮನನ್ನು ವೇದನೆಗೊಳಿಸಿತು. ಮಗಳ ಒಕ್ಕಣ್ಣನ್ನು ನೋಡಿದಳು.

ಹೌದು, ಅವಳು ಒಕ್ಕಣ್ಣೆ ಲಲಿತಾ. ಉಳಿದ ಅಂಗಭಂಗಿ ಬಣ್ಣಗಳಲ್ಲಿ ಅವಳು ಸುರೂಪಿಯಾದರೂ, ಒಕ್ಕಣ್ಣೆಯಾದುದರಿಂದ ಅವಳು ಕುರೂಪಿಯೆಂದೇ ಎಲ್ಲರ ತೀರ್ಮಾನ.

ರಾಜನೆಂದ: "ನನಗೆ ಗೊತ್ತು ಇಂದಿರಮ್ಮ, ಎಂದೂ ನಿಮ್ಮ ಮನೆಗೆ ಬಾರದ ನಾನು ಇಂದು ಇಲ್ಲಿಗೆ ಬಂದದ್ದು ನಿಮಗಾಶ್ಚರ್ಯವಾಗಿದೆ ಹೌದು? ಇನ್ನು ಮುಚ್ಚುಮರೆ ಬೇಡ. ಕಾಲವು ಬೆನ್ನ ಮೇಲೆಯೇ ಹತ್ತಿಕೊಂಡಿದೆ. ನಾನೀಗ ಮನೆಗೂ ಹೋಗದೆ ರೈಲಿನಿಂದ ನೇರಾಗಿ ಇಲ್ಲಿಗೇ ಬಂದಿದ್ದೇನೆ ನಿಮ್ಮ ಮಗಳು ಲಲಿತೆಯನ್ನು ನೋಡಬೇಕೆಂತಲೇ ಬಂದೆ. ಏನು ಮಾಡುತ್ತಿದ್ದಾಳೀಗ ಇವಳು?"

ಗದ್ಗದ ಕಂಠದಿಂದ ಇಂದಿರಮ್ಮನೆಂದಳು: "ಕಲಿಯುತ್ತಿದ್ದಾಳೆ. ಕಲಿತು ಏನಾದರೂ ಉದ್ಯೋಗಕ್ಕೆ ಸೇರಿದರೆ, ಇವಳ ಕಾಲಮೇಲೆ ಇವಳು ನಿಲ್ಲುವ ಹಾಗಾಗುತ್ತೆ."

ಈ ಮಾತಿನ ಗೂಢಾರ್ಥ ರಾಜನಿಗೆ ಗೊತ್ತಾಯಿತು. "ಒಳ್ಳೇ ಕೆಲಸ ಮಾಡಿದಿರಿ ಬಿಡಿ ಕಲಿಯುವುದು ಒಳ್ಳೇದು ತಾನೇ? ಹೌದು, ಇವಳನ್ನು ಕೇಳಲಿಕ್ಕೆ ಯಾರೂ ಬರಲಿಲ್ಲಾಂತ ಕಾಣುತ್ತೆ, ಅಲ್ಲವೆ?"

"ಯಾರು ತಾನೇ ಬಂದಾರು? ಇವಳ ......" ಇಂದಿರಮ್ಮನ ಕಂಠ ಅಲ್ಲಿಗೇ ರುದ್ಧವಾಯಿತು.

"ಅದಿರಲಿ ಇಂದಿರಮ್ಮಾ; ಈಗ ನನ್ನ ಮದುವೆಗೆ ಒತ್ತಾಯ ನಡೆಯುತ್ತಾ ಇದೆ. ನಿಮ್ಮ ಲಲಿತೆಗೆ ಮದುವೆಯಾದರೇ ನೇ ನನ್ನ ಮದುವೆಯೆಂದು ನಾನು ಆ ದಿನವೇ ಪ್ರತಿಜ್ಞೆ ಮಾಡಿಕೊಂಡಿದ್ದೇನೆ. ಅದು ಯಾರಿಗೂ ಗೊತ್ತಿಲ್ಲ ಬಿಡಿ"

"ಅಯ್ಯೋ! ಯಾಕೆ ರಾಜಾ? ಇವಳ ಗ್ರಹಚಾರಕ್ಕೆ ನೀನು ಹೊಣೆಯೆ?" ಎಂದಳು ಇಂದಿರಮ್ಮ. ಆದರೆ ರಾಜನು ತನ್ನ ಹೊಣೆಗಾರಿಕೆಯನ್ನು ಮರೆಯಲಾರದೆ ಹೋಗಿದ್ದ. ಮೂರು ವರ್ಷಗಳ ಹಿಂದಿನ ಮಾತು. ಅಂದು ದೀಪಾವಳಿ ಸಮಯ. ರಾಜ ಬಗೆ ಬಗೆಯಾದ ದುರುಸುಬಾಣ ಪಟಾಕಿಗಳನ್ನು ತಂದಿದ್ದ. ರಾತ್ರಿಯಲ್ಲಿ ಅಂಗಳದಲ್ಲಿ ಅವುಗಳನ್ನು ಸುಡುವಾಗ ಊರಿನ ಬಡ ಜನರೆಲ್ಲ ಸುತ್ತುಕೂಡಿ ತಮಾಷೆ ನೋಡಿ ಆನಂದಿಸುತ್ತಿದ್ದರು. ಇಂದಿರಮ್ಮನ ಮಕ್ಕಳೂ ಬಂದಿದ್ದರು. ಆಗ ಪಟಾಕಿಯ ಕಿಡಿಯೊಂದು ಲಲಿತೆಯ ಕಣ್ಣಿಗೆ ಹಾರಿತು. ಹಾರಿದ ಆದು ಮಾರಿಯಾಗಿ ಒಂದು ತಿಂಗಳವರೆಗೆ ಬಾಧೆಪಡಿಸಿ ಅವಳ ಒಂದು ಕಣ್ಣನ್ನು ಕುರುಡುಮಾಡಿ ಹಾಕಿತು. ಯಾರೇನು ಮಾಡುವರು?

ಇನ್ನು ಲಲಿತೆಯ ಜೀವನದಲ್ಲಿ ಮದುವೆಯ ಯೋಗವು ಬಾರದೆಂದು ಇಂದಿರಮ್ಮ ನಿರಾಶೆಯಾದಳು. ಇದ್ದುದರಲ್ಲಿ ಒದ್ದಾಡಿಕೊಂಡು ಹೇಗೋ ಮಗಳಿಗೆ ಕಲಿಸುತ್ತಿದ್ದಳು. ದಿಕ್ಕಿಲ್ಲದ ಈ ಬಡ ಹುಡುಗಿಯನ್ನು ಕುರಿತು ರಾಜೇಂದ್ರ ಪ್ರಭು ಹಾಗೊಂದು ಪ್ರತಿಜ್ಞೆ ಮಾಡಿಕೊಂಡಾನೆಂದು ಆಕೆ ಕನಸಿನಲ್ಲಿಯೂ ಎಣಿಸಿದವಳಲ್ಲ. ಆ ಘಟನೆ ಅಷ್ಟೊಂದು ಆಳವಾಗಿ ಅವನ ಮನಸ್ಸಿನಲ್ಲಿ ನೆಟ್ಟು ಹೋಗಿರುವುದೆಂದು ಈಗತಾನೇ ತಿಳಿದು ಆಶ್ಚರ್ಯವೂ ಆನಂದವೂ ಒಟ್ಟಿಗೇ ಉಂಟಾಯಿತು.

ಲಲಿತೆಗೆ ಒಪ್ಪಿಗೆಯಿದ್ದರೆ ತಾನೇ ಅವಳನ್ನು ಮದುವೆ ಮಾಡಿಕೊಳ್ಳುವೆನೆಂದು ನಿರ್ಧಾರವಾಗಿ ರಾಜೇಂದ್ರನು ಹೇಳಿದಾಗ ಆನಂದದಿಂದ ಇಂದಿರಮ್ಮನ ದೇಹ ಅತ್ಯಂತ ಹಗುರಾಯಿತು.

ಂ ಂ

ರಾಜೇಂದ್ರನ ನಿರ್ಧಾರದ ಮುಂದೆ ಅವನ ತಂದೆತಾಯಿಗಳ ಪ್ರತಿಭಟನೆಗಳೊಂದೂ ನಿಲ್ಲಲಿಲ್ಲ. ಮದುವೆ ಮಾಡಿಕೊಳ್ಳುವ ವಿಷಯದಲ್ಲಿ ತನಗೆ ಸರ್ವಸ್ವಾತಂತ್ರ್ಯವೂ ಇದೆ ಎಂದು ವಾದಮಾಡಿ ಜಯ ಗಳಿಸಿಕೊಂಡನು ಅವನ ನ್ಯಾಯವಾದಕ್ಕೆ ಹೆತ್ತವರು 'ಅಸ್ತು' ಎನ್ನಲೇಬೇಕಾಯ್ತು. ಈ ಸಂದರ್ಭದಲ್ಲಿ ಬಡತನ ಪ್ರೊಂದರ ಹೊರತು, ಮತ್ತಾವ ಅನುಮಾನಪವೂ ಕಾಣಲಿಲ್ಲ; ಒಕ್ಕಣ್ಣೆಯ ಮೇಲೆ ಮೋಹಾವಿಷ್ಟನಾದ ಮೇಲೆ ಅದಕ್ಕೆ ಅಭ್ಯಂತರ ಹೇಳಲು ಯಾರಿಗೇನು ಹಕ್ಕಿದೆ?

ಂ ಂ

ಮದುವೆಯ ಚಪ್ಪರದಲ್ಲಿ ಕಲ್ಯಾಣ ಮಂಟಪದಲ್ಲಿ ಕುಳಿತ ವಧೂವರರು ಒಕ್ಕಣ್ಣೆ ಲಲಿತೆಯೆಂದು ಯಾರಿಗೂ ಗೊತ್ತಾಗಲಿಲ್ಲ. ರಾಜನು ಲಲಿತೆಯನ್ನು ಚತುರ ಡಾಕ್ಟರಲ್ಲಿಗೆ ಕರೆದೊಯ್ದು ಕೃತ್ರಿಮ ಕಣ್ಣನ್ನಿಡಿಸಿದ್ದ. ಆದರ ಮೇಲೆ ಸುಂದರ ಕನ್ನಡಕ. ಪದವೀಧರ ರಾಜೇಂದ್ರನಿಗೆ ತಕ್ಕ ವಧೂಮಣಿಯಾಗಿಯೇ ಲಲಿತೆ ಕಂಗೊಳಿಸಿದಳು. ಎಲ್ಲರ ಶಂಕೆಯೂ ಸರಿಯಿತು.

ದೀಪಾವಳಿಯಂದು ನಡೆದ ಆ ಘಟನೆಯೇ ಈ ಬಗೆಯ ಬ್ರಹ್ಮಘಟನೆಗೆ ಕಾರಣವಾಯಿತು. ಹೊಸ ದೀಪಾವಳಿಗೆ ಹೊಸ ಮಾವನ ಮನೆಗೆ ಹೊಸ ಅಳಿಯನಾಗಿ ಹೋಗಿ ಉಪಚಾರ ಕೈಗೊಳ್ಳುವ ಭಾಗ್ಯಕ್ಕಿಂತ ಸಾವಿರಪಾಲು ಮಿಗಿಲಾದ ಸಂತೋಷವೇ ರಾಜನ ಹೃದಯಕ್ಕಾಯಿತು. ಲಲಿತೆಯನ್ನು ಕೇಳಿದರೆ "ಕಣ್ಣು ಕಳೆದ ಆ ದೀಪಾವಳಿಯೇ ಕಣ್ಣು ಕೊಟ್ಟಿತು ನನಗೆ" ಎಂದು ಹೇಳುತ್ತಾಳೆ. ಇಂತಹ ದೀಪಾವಳಿಯನ್ನು ಆ ದಂಪತಿಗಳು ಎಂದಿಗಾದರೂ ಮರೆತಾರೆ?

—"ನವಗಿರಿನಂದ."

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು. ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ: ರೂ. ಒಂದೂವರೆ, ಉತ್ತಮ ಪ್ರತಿ: ರೂ. ಎರಡು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಮಾಜ ಸುಧಾರಣೆ

ಧರ್ಮಾತೀತ ರಾಷ್ಟ್ರದಲ್ಲಿ ಸಮಾಜ ಸುಧಾರಣೆ

ಸುಧಾರಣೆ ಸ್ವಾಭಾವಿಕವಾಗಿ ಆಗುವುದಿಲ್ಲ; ಅದರ ಹಿಂದೆ ಬಲವಾದ ಆರ್ಥಿಕ ಕಾರಣಗಳಿರುತ್ತವೆ. ಸರಕಾರವೂ ಒಂದು ಮಿತಿಯಲ್ಲಿ ಸಮಾಜ ಸುಧಾರಣೆಯ ಬಗ್ಗೆ ಒತ್ತಾಯ ಹೇರಬಹುದು.

ನಮ್ಮ ಇಂದಿನ ಸಮಾಜದಲ್ಲಿ ಕೆಲವೊಂದು ಕುಂದು-ಕೊರತೆಗಳಿರುವುವೆಂದೂ ಅವನ್ನು ದೂರೀಕರಿಸಬೇಕೆಂದೂ ಹೇಳುವುದರಲ್ಲಿ ಸಂದೇಹವಿಲ್ಲ. ಆದರೆ, ಸಮಾಜ ಸುಧಾರಣೆಯ ಕಾರ್ಯದಲ್ಲಿ ಸರಕಾರವು ಹಸ್ತಕ್ಷೇಪ ನಡೆಸಬಾರದೆಂದೂ ಹೇಳುವವರಿದ್ದಾರೆ. ತುಸು ಆಳವಾಗಿ ವಿಚಾರ ಮಾಡುವುದಾದರೆ, ಅದು ಸರಿಯಲ್ಲವೆಂದು ನಮಗೆ ತಿಳಿದುಬರದಿರದು. ಬ್ರಿಟಿಷ ಸರಕಾರದ ಮಾತು ದೂರವಿರಲಿ; ಏಕೆಂದರೆ, ಕ್ರೈಸ್ತಧರ್ಮವನ್ನು ಪ್ರಚಾರಮಾಡುವುದೇ ಅವರ ಚರಮ ಉದ್ದೇಶವಾಗಿರಲಿಲ್ಲವಾದರೂ ಅವರು ಕ್ರೈಸ್ತಧರ್ಮದತ್ತ ಪಕ್ಷಪಾತಪೂರ್ಣ ದೃಷ್ಟಿಯನ್ನು ಹರಿಸುತ್ತಿದ್ದರೆಂಬುದನ್ನು ಮರೆಮಾಚಬೇಕಾಗಿಲ್ಲ. ಅವರ ಆಡಳಿತೆಯ ಸಮಯದಲ್ಲಿ ಇಗರ್ಜಿಗಳಿಗೆ ಸಹಾಯವು ದೊರೆಯುತ್ತಿದ್ದರೂ ಮಸೀದಿ ಅಥವಾ ಮಂದಿರಗಳಿಗೆ ಇದೇ ಮಾದರಿಯ ಸಹಾಯವು ಕೊಡಲ್ಪಡುತ್ತಿದ್ದಿಲ್ಲ.

ಕೆಲವು ಮನುಷ್ಯರು ಸುಧಾರಣೆಯು ತನಗೆ ತಾನಾಗಿಯೇ ನಡೆಯುತ್ತದೆ ಎನ್ನುತ್ತಾರೆ. ಆದರೆ, ನಿಜವಾಗಿಯೂ ತನಗೆ ತಾನಾಗಿ ಏನೂ ನಡೆಯುವುದಿಲ್ಲ. ಸ್ವಾಭಾವಿಕವಾಗಿ ಆಯಿತೆಂದು ತೋರುವ ಸುಧಾರಣೆಯ ಹಿಂದೆ ಬಲವಾದ ಆರ್ಥಿಕ ಕಾರಣಗಳಿರುತ್ತವೆ ಒಂದು ಸಣ್ಣ ಉದಾಹರಣೆಯನ್ನೇ ಇದಕ್ಕೆ ಕೊಡಬಹುದು. ಹುಡುಗಿಯರಿಗೆ ಪ್ರಾಯ ಬಂದ ನಂತರವೇ ವಿವಾಹ ಮಾಡುವ ಕ್ರಮವೀಗ ವ್ಯವಹಾರಕ್ಕೆ ಬಂದಿದೆ. ಮೊದಮೊದಲು "ಅಷ್ಟ ವರ್ಷಾ ಭವೇತ್ ಗೌರೀ" ಇತ್ಯಾದಿ ಅಭಿಪ್ರಾಯವು ಜನತೆಯಲ್ಲಿತ್ತು. ೧೯ನೆ ಶತಮಾನದ ಅಂತಿಮ ದಶಕಗಳಲ್ಲಿ ಈ ಪದ್ಧತಿಯು ತೀರ ಅನರ್ಥಕಾರಿ, ಬಾಲ ವಿವಾಹ ಕೆಟ್ಟದೆಂಬ ಕೂಗನ್ನು ಸುಧಾರಕರೆಬ್ಬಿಸಿದರೂ ಏನೂ ಪರಿಣಾಮವಾಗಲಿಲ್ಲ. ಆದರೆ, ಇಂದಿನ ದಿನಗಳಲ್ಲಿ ಅಂತಹ ಪ್ರಚಾರ ಕಾರ್ಯವು ಎಲ್ಲಿಯೂ ಕೇಳಿ ಬರುವುದಿಲ್ಲ; ಆದರೂ ಪ್ರತಿ ಮನೆಯಲ್ಲಿಯೂ ಪ್ರಾಯಸ್ಥ ಅವಿವಾಹಿತ ಕನ್ಯೆಯರೇ ಕಂಡು ಬರುತ್ತಾರೆ!

ಪಾಶ್ಚಾತ್ಯರಲ್ಲಿಂದು ಸಮಾಜಶಾಸ್ತ್ರಗಳು ತಮ್ಮ ಚಕ್ರಗಳನ್ನು ಹಿಂದೆ ತಿರುಗಿಸಬೇಕಾದ ಸ್ಥಿತಿ ತಲೆದೋರಿದೆ. ಯೋನ ವಿಜ್ಞಾನವನ್ನು ಆಧಾರವಾಗಿಟ್ಟುಕೊಂಡು ಅವರು ಈಗ ಕುಮಾರಿಯರಿಗೆ ಬೇಗನೇ ವಿವಾಹ ಮಾಡಿಬಿಡಬೇಕೆಂದು ಹೇಳುತ್ತಾರೆ. ವೈಜ್ಞಾನಿಕ ರೀತಿಯ ಅನುಭವ ಮತ್ತು ಕುಸಂಸ್ಕಾರ ರೀತಿಯ ಅನುಭವಗಳು ಬೇರೆಬೇರೆ. ಕಿನ್ಸೆ ಸಾಹೇಬರು ಕುಮಾರಿಯರನ್ನು ವೈಜ್ಞಾನಿಕ ದೃಷ್ಟಿಯಿಂದ ಬೇಗನೇ ವಿವಾಹಿತ ಜೀವನಕ್ಕೆ ಅಂಟಿಸಬೇಕೆನ್ನುತ್ತಾರೆ ಆದರೆ, ಅವರೆಂದೂ ಎಂಟು ವರ್ಷದ ಹುಡುಗಿಗೆ ಮದುವೆ ಮಾಡಬೇಕೆಂದು ಹೇಳುವುದಿಲ್ಲ.

ಭಾರತದಲ್ಲಿನ ಸಮಾಜ ಸುಧಾರಣೆಯತ್ತ ದೃಷ್ಟಿಹರಿಸುವುದಾದರೆ, ರಾಜಾರಾಮ ಮೋಹನರಾಯರ ಪರಿಶ್ರಮದ ಫಲವಾಗಿ ಸಿಂತ ಸತೀ-ಕ್ರಮವನ್ನು ಮೊತ್ತಮೊದಲನೆ ಬಾರಿಗೆ ಗಣಿಸಬಹುದು. ಆ ಕಾಲದವುಕ್ಕು ಅನಂತರದ ಸರಕಾರವು ಇದನ್ನು ನಿಲ್ಲಿಸಲು ಯಾವುದೇ ಕ್ರಮವನ್ನು ಕೈಗೊಳ್ಳದಿರುತ್ತಿದ್ದರೆ, ಈ ಪದ್ಧತಿಯು ಸ್ವಾಭಾವಿಕವಾಗಿ, ತನಗೆ ತಾನಾಗಿಯೇ ಕೊನೆಗೊಳ್ಳುತ್ತಿತ್ತೆಂದು ಹೇಳುವುದು ಸಾಧ್ಯವಿಲ್ಲ. ಅಂಧಾನುಕರಣೆಯಿಂದ ಜನತೆಯು ಇಂದಿಗೂ ಇದೇ ರೂಢಿಯಲ್ಲಿ ಮುಂದುವರಿಯುತ್ತಿತ್ತು; ನಾವಿಂದು ನಮ್ಮ ಕೆಲವೊಂದು ಅನುಕರಣೆ ಮತ್ತು ಅನುಷ್ಠಾನಗಳಲ್ಲಿರುವ ಆಚರಣೆಗಳಲ್ಲಿ ಯಾವುದೇ ತತ್ತ್ವವು ಹುದುಗಿಲ್ಲವೆಂಬುದನ್ನು ಕಂಡುಹಿಡಿಯಬಹುದು. ನಮ್ಮ ಮನಸ್ಸನ್ನೂ ಈ ಪದ್ಧತಿಗಳು ಮುಟ್ಟುತ್ತಿಲ್ಲ; ಆದರೂ ನಾವವನ್ನು ಹಿಂಬಾಲಿಸುತ್ತ ಹೋಗುತ್ತೇವೆ. ಯಾರೂ ಅವನ್ನು ಮೀರಲು ಮುಂದುವರಿಯುವುದಿಲ್ಲ.

ನ ಗಣಸ್ಯಾಗ್ರತೋ ಗಚ್ಛೇತ್
ಸಿದ್ಧೇ ಕಾರ್ಯೇ ಸಮಂ ಫಲಂ
ಯದಿ ಕಾರ್ಯೇ ವಿಪತ್ತಿಃ ಸ್ಯಾತ್
ಮುಖರಸ್ತತ್ರ ಹನ್ಯತೇ ॥

ಎಂಬ ಒಂದು ಲೋಕೋಕ್ತಿಯಿದೆ. ಜನರ ಗುಂಪಿಗೆ ನಾಯಕನಾಗಿ ಜಯಶೀಲನಾದರೆ, ಎಲ್ಲರಂತೆಯೇ ಫಲವನ್ನು ಅನುಭವಿಸುತ್ತಾನೆ; ಎಲ್ಲಾದರೂ ಅಸಫಲನಾದರೆ, ನಾಯಕನೇ ತನ ಜೀವನ್ನು ಕಳೆದುಕೊಳ್ಳುತ್ತಾನೆ! ಈ ರೀತಿ ನಾವು ನಂಬಿಕೊಂಡು ನಮ್ಮ ಸತ್ತ್ವ ಸಾಹಸಗಳನ್ನು ಮೂಲೆಗೆ ತಳ್ಳಿದ್ದೇವೆ. ಆದುದರಿಂದಲೇ "ನೀವುಂದೆ, ನಾನಿನ್ನ ಹಿಂದೆ" ಎಂಬ ಪಲ್ಲವಿಯನ್ನೇ ನಾವು ಹಾಡುವುದರಲ್ಲಿ ತನ್ಮಯರಾಗಿದ್ದೇವೆ.

ಬ್ರಿಟಿಷ ಸರಕಾರದ ಶಾಸನದ ವಿಚಾರ ಈಗ ಅಪ್ರಾಸಂಗಿಕ. ಇಂದು ಭಾರತವು ಪ್ರಜಾಪ್ರಭುತ್ವವೆನಿಸಿದೆ. ಆದುದರಿಂದ ಸಮಾಜ ಸುಧಾರಣೆಯಲ್ಲಿ ಹಸ್ತಕ್ಷೇಪವನ್ನು ಮಾಡುವುದೂ ನಮ್ಮ ಸರಕಾರದ ಕರ್ತವ್ಯಗಳಲ್ಲಿ ಒಂದಾಗಿದೆ ಸ್ವಾತಂತ್ರ್ಯ ನಂತರ ಈ ದಿಸೆಯಲ್ಲಿ ತುಸು ಕಾರ್ಯಗಳೂ ನಡೆದಿವೆ. ಇಂದು ಯಾವನೇ ಒಬ್ಬ ಹಿಂದೂ ಎರಡು ವಿವಾಹಗಳನ್ನು ಮಾಡಿಕೊಳ್ಳಲಾರನು; ಒಂದು ವೇಳೆ ಮಾಡಿಕೊಂಡರೂ ಎರಡನೆಯದು ಕಾನೂನು ರೀತ್ಯಾ ಅಸಿಂಧುವಾಗುವುದು.

ಇಷ್ಟರಿಂದಲೇ ತೃಪ್ತಿಪಟ್ಟುಕೊಳ್ಳುವುದು ಸಾಧ್ಯವಿಲ್ಲ. ನಮ್ಮದು ಧರ್ಮನಿರಪೇಕ್ಷ ರಾಷ್ಟ್ರ ಅಥವಾ ನಮ್ಮಲ್ಲಿ ಹಿಂದು, ಮುಸಲ್ಮಾನ, ಕ್ರೈಸ್ತ ಎಲ್ಲರಿಗೂ ಸಮಾನಾಧಿಕಾರವಿದೆ ಎಂದು ಹೇಳಿ ನಾವೆಂದೂ ದಣಿಯುವುದಿಲ್ಲ. ಆದರೆ, ನಮ್ಮ ಸ್ವತಂತ್ರ ಭಾರತ ಸರಕಾರ ಇದುವರೆಗೆ ವ್ಯವಹಾರಕ್ಕೆ ತಂದ ಎಲ್ಲ ಸಮಾಜ ಸುಧಾರಣೆಯ ಕಾನೂನುಗಳು ಕೇವಲ ಹಿಂದೂ ಧರ್ಮಕ್ಕೆ ಸಂಬಂಧಿಸಿದುದೇ ಏಕೆ? ಒಬ್ಬ ಹಿಂದೂ ಸ್ತ್ರೀಯನು ವಿವಾಹಿತನೊಡನೆ ವಿವಾಹ ಮಾಡುವುದನ್ನು ತಪ್ಪಿಸುವುದಾದರೆ, ಇಂತಹ ರಕ್ಷಣೆಯನ್ನು ಪಡೆಯದಿರಲು ಮುಸ್ಲಿಂ ನಾರಿ ಮಾಡಿದ ಅಪರಾಧವೇನು? ಅವರ ಕ್ರಮಾನುಸಾರ ಪುರುಷರು ನಾಲ್ಕು ನಾಲ್ಕು ವಿವಾಹ ಮಾಡಿಕೊಳ್ಳಬಹುದು; ಆದರೆ, ಧರ್ಮನಿರಪೇಕ್ಷ ರಾಷ್ಟ್ರದಲ್ಲಿ ಇದು ಯಾವ ನ್ಯಾಯ?

ಧರ್ಮನಿರಪೇಕ್ಷ ರಾಷ್ಟ್ರದಲ್ಲಿ ಬೌದ್ಧಿಕ ಮತ್ತು ವೈಜ್ಞಾನಿಕ ಆಧಾರದ ಮೇಲೆ ಸಮಾಜದ ಆದರ್ಶವನ್ನು ರೂಪಿಸಿ, ಅದನ್ನು ತ್ವರಿತಗತಿಯಲ್ಲಿ ಎಲ್ಲರಿಗೂ ಅನ್ವಯಿಸುವುದು ಉಚಿತವೆನಿಸಬಹುದು. ಇಂತಹ ಧರ್ಮದ ಜನರು ಇನ್ನೂ ಹಿಂದುಳಿದಿದ್ದಾರೆ; ಆದುದರಿಂದ ಹೊಸ ಕಲ್ಪನೆಗಳನ್ನು ಸ್ವೀಕೃತಗೊಳಿಸುವುದು ಅನುಚಿತ ಎಂಬ ನೆಪವು ನಿಷ್ಪ್ರಯೋಜಕವಾಗಿದೆ. ಮುಂದುವರಿದ ಇಸ್ಲಾಂ ರಾಷ್ಟ್ರಗಳಲ್ಲಿ ಏಕಪತ್ನೀವ್ರತದ ಕಾನೂನು ಜಾರಿಗೊಳಿಸಲ್ಪಟ್ಟಿದೆ. ಸರಕಾರವು ಸಮಾಜ ಸುಧಾರಣೆಯ ಕಾಯದೆಗಳನ್ನು ಕೇವಲ ಹಿಂದುಗಳಿಗೆ ಮಾತ್ರ ಅನ್ವಯಿಸುತ್ತ ಹೋದರೆ, ತತ್ಪರಿಣಾಮವಾಗಿ ಹಿಂದುಗಳೇ ಇನ್ನೂ ಮುಂದುವರಿಯುತ್ತ ಹೋಗುವರು. ಉಳಿದವರು ಮುಂದುವರಿಯಲಾರರು; ಇದರಲ್ಲಿ ಅವರ ಅಪರಾಧವೇನೂ ಇರುವುದಿಲ್ಲ. ಒಂದು ಸಮಾಜದ ಬಹಳಷ್ಟು ಭಾಗ ಹಿಂದುಳಿದದ್ದೇ ಆದರೆ, ಅದು ಮುಂದುವರಿದ ಭಾಗವನ್ನೂ ಹಿಂ

(೯ನೇ ಪುಟ ನೋಡಿರಿ)

ASP-LIC-AS-12 A KN

1959 ಬೋನಸ್ ವರ್ಷ

ಒಂದು ಲಾಭಸಹಿತ ಪಾಲಿಸಿಯನ್ನು ಈಗಲೇ ಪಡೆಯಿರಿ

ಎರಡನೇ ವೇಲ್ಯುವೇಶನ್ ಬೇಗನೆ ಆಗಲಿದೆ

ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನಿನ 31.12.1959 ರ ವರೆಗಿನ ಎರಡನೇ ವೇಲ್ಯುವೇಶನ್ ಬೇಗನೆ ಆಗಲಿದೆ. ಈ ವೇಲ್ಯುವೇಶನ್ ತಾರೀಕಿನಂದು ಜಾರಿಯಲ್ಲಿರುವ ಎಲ್ಲಾ ಯೋಗ್ಯ ಪಾಲಿಸಿಗಳಿಗೆ ವೇಲ್ಯುವೇಶನಿನ ಫಲವಾಗಿ ತೋರಿಬಂದ ಲಾಭದಲ್ಲಿ ಭಾಗವಹಿಸುವ ಹಕ್ಕು ಇರುತ್ತದೆ.

ಕಾರ್ಪೊರೇಷನಿನ 31.12.1957 ರ ವರೆಗಿನ ಪ್ರಥಮ ವೇಲ್ಯುವೇಶನಿನ ಫಲವಾಗಿ ಸಾಕಷ್ಟು ಲಾಭ ತೋರಿಬಂದಿದ್ದು, ಕಾರ್ಪೊರೇಷನ್ ಮಾರಾಟ ಮಾಡಿದ ಲಾಭಸಹಿತ ಪಾಲಿಸಿಗಳಿಗೆ ಕೆಳಗೆ ಕಾಣಿಸಿರುವ ದರದಲ್ಲಿ ಬೋನಸ್ ಪ್ರಕಟಿಸಲಾಗಿತ್ತು:

ಎಂಡೋಮೆಂಟ್ ಎಶುರನ್ಸಸ್: ವಿಮಾ ಹಣ ರೂ. 1000 ದ ಮೇಲೆ ವರ್ಷಕ್ಕೆ ರೂ. 14

ಹೋಲ್ ಲೈಫ್ ಎಶುರನ್ಸಸ್: ವಿಮಾ ಹಣ ರೂ. 1000 ದ ಮೇಲೆ ವರ್ಷಕ್ಕೆ ರೂ. $17\frac{1}{2}$

ವಿಶೇಷ ಸೂಚನೆ: 31.12.1959 ರ ಮುಂಚೆ ಕಡಿಮೆ ಹಣಕ್ಕೆ ರೂಪಾಂತರ ಗೊಳಿಸಿದ ಪೈಡ್-ಅಫ್ ಪಾಲಿಸಿಗಳಿಗೆ ಮತ್ತು ಲ್ಯಾಪ್ಸ್ ಆದ ಪಾಲಿಸಿಗಳಿಗೆ ಬೋನಸ್ ಪಡೆಯುವ ಹಕ್ಕು ಇರಲಾರದು.

ನಿಮ್ಮ ಪಾಲಿಸಿಯನ್ನು ಭದ್ರವಾಗಿಡಿರಿ. ಕ್ರಮವಾಗಿ ಪ್ರೀಮಿಯಮ್ಸ್ ಕಟ್ಟಿ ನಿಮ್ಮ ಪಾಲಿಸಿಯೂ ಎರಡನೇ ವೇಲ್ಯುವೇಶನ್‌ನಿಂದಾಗಿ ತೋರಿಬರುವ ಲಾಭದಲ್ಲಿ ಭಾಗವಹಿಸುವಂತೆ ನೋಡಿರಿ.

ನೆನಪಿನಲ್ಲಿಡಿರಿ: 1959 ಬೋನಸ್ ವರ್ಷ

ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ಅಭಿಪ್ರಾಯ

ಶ್ರೀಮತಿ ವಿಜಯವರ್ಧನೆಯವರ ಉಚ್ಚಾಟನೆಗೆ ಕಾರಣವೇನು?

ಸಿಂಹಳದ ಸ್ಥಳಾಯತ್ತ ಶಾಸನ ಮತ್ತು ಗೃಹನಿರ್ಮಾಣ ಶಾಖೆಗಳ ಮಂತ್ರಿಣಿಯವರನ್ನು ಸಚಿವ ಸಂಪುಟದಿಂದ ಕಿತ್ತೆಸೆಯಲಾಯಿತು. ಆಯುರ್ವೇದದೊಡನವರಿಗಿದ್ದ ಸಂಬಂಧವೇ ಇದಕ್ಕೆ ಮೂಲಕಾರಣವೆ?

ಆದು ಸಿಂಹಳದಲ್ಲಿ ಶ್ರೀ ಭಂಡಾರ ನಾಯಕೆಯವರು ಪ್ರಧಾನಿಯಾಗಿದ್ದ ಕಾಲ. ಆಗ ಮಂತ್ರಿ ಮಂಡಳಿಯಲ್ಲಿ ಆಹಾರ ಮಂತ್ರಿಯಾಗಿ ಶ್ರೀ ಫಿಲಿಪ ಗುಣವರ್ಧನೆ ಅವರು ಸೇವೆ ಸಲ್ಲಿಸುತಿದ್ದರು. ಅದಾವ ಕಾರಣದಿಂದಲೋ ಶ್ರೀ ಫಿಲಿಪರ ಮೇಲೆ ಮಂತ್ರಿ ಮಂಡಳಿಯಲ್ಲಿ ಅವಿಶ್ವಾಸ ತೋರಿ ಬಂತು. ಅವರು ರಾಜೀನಾಮೆ ಕೊಡುವಂತೆ ಮಾಡಬೇಕೆಂದು ಮಂತ್ರಿ ಮಂಡಳಿಯು ಪ್ರಧಾನಿ ಭಂಡಾರ ನಾಯಕೆಯವರನ್ನು ಕೇಳಿ ಕೊಂಡಿತು. ಫಿಲಿಪರು ರಾಜಿನಾಮೆಯಿತ್ತು ಮಂತ್ರಿ ಮಂಡಳಿಯಿಂದ ಹೊರ ಬಂದರು.

ಶ್ರೀ ಫಿಲಿಪರ ರಾಜಿನಾಮೆಯನ್ನು ಬೇಡಿದವರಲ್ಲಿ ಸ್ಥಳಾಯತ್ತ ಶಾಸನ ಮತ್ತು ಗೃಹ ನಿರ್ಮಾಣ ಮಂತ್ರಿಣಿಗಳಾಗಿರುವ ಶ್ರೀಮತಿ ವಿಮಲಾ ವಿಜಯ ವರ್ಧನೆಯವರೂ ಒಬ್ಬರು. ಈಗ, ಇದೇ ವಿಜಯವರ್ಧನೆಯವರ ಬಗ್ಗೆಯೂ ಶ್ರೀ ದಹನಾಯಕೆಯವರ ಮಂತ್ರಿ ಮಂಡಳಿಯಲ್ಲಿ ಅವಿಶ್ವಾಸವು ಹುಟ್ಟಿದುದರಿಂದ ಪ್ರಧಾನಿಯವರು ಶ್ರೀಮತಿಯವರನ್ನು ಸಚಿವ ಪದವಿಯಿಂದ ದೂರಮಾಡಿ ಬಿಟ್ಟರು. ಶ್ರೀಮತಿವಿಜಯ ವರ್ಧನೆಯವರು ಸಿಂಹಳೀಯ ಮಂತ್ರಿ ಮಂಡಳದ ಏಕ ಮಾತ್ರ ಸ್ತ್ರೀ ಸದಸ್ಯರಾಗಿದ್ದರು. ೧೯೫೬ರ ಸಾರ್ವತ್ರಿಕ ಚುನಾವಣಾ ನಂತರ ದಿವಂಗತ ಭಂಡಾರನಾಯಕೆ ಅವರ ಮಂತ್ರಿ ಮಂಡಳಿಯಲ್ಲಿ ಸೇರಿಸಲ್ಪಟ್ಟರು.

ಶ್ರೀಮತಿ ವಿಜಯ ವರ್ಧನೆಯವರು ಮಂತ್ರಿ ಮಂಡಳಿಯ ದಕ್ಷಿಣ ಪಂಥದ ಪಕ್ಷದಲ್ಲಿದ್ದು, ಸಚಿವ ಸಂಪುಟದಲ್ಲಿನ ವಾಮ ಪಕ್ಷೀಯ ಮತ್ತು ದಕ್ಷಿಣ ಪಕ್ಷೀಯ ಮಂತ್ರಿಗಳಲ್ಲೇಳುತಿದ್ದ ಸಂಘರ್ಷಣೆಗಳಲ್ಲಿ ಭಾಗ ವಹಿಸುತಿದ್ದರು. ಶ್ರೀ ಫಿಲಿಪ ಗುಣ ವರ್ಧನೆಯವರ ಉಚ್ಚಾಟನೆ ಶ್ರೀಮತಿ ಮತ್ತವರ ಪಕ್ಷದವರಿಗೊಂದು ದೊಡ್ಡ ವಿಜಯವೇ ಆಗಿತ್ತು. ಆದರೆ, ಇಂದು ಮಂತ್ರಿಮಂಡಳಿಯಲ್ಲಿ ತನ್ನ ಕುರಿತಾಗಿ ಎದ್ದ ಅಸಮಾಧಾನ, ತನ್ನ ಮೇಲೆ ಹೇರಲಾದ ಆರೋಪ ಮತ್ತು ಇವುಗಳಿಂದ ತಾನು ಸಂಪುಟದಿಂದಲೇ ಹೊರಬೀಳಬೇಕಾಗ ಬಹುದೆಂಬ ವಿಷಯಗಳ ಬಗ್ಗೆ ಶ್ರೀಮತಿಯವರಿಗೆ ಪೂರ್ವಕಲ್ಪನೆ ಎಳ್ಳಷ್ಟೂ ಇರಲಿಲ್ಲ. ತನ್ನ ಸಹಯೋಗಿಗಳ ಬಹುಮತಾಭಿಪ್ರಾಯದಂತೆ ಶ್ರೀಮತಿಯವರೊಡನೆ ಪ್ರಧಾನಿ ದಹನಾಯಕರು ರಾಜಿನಾಮೆಯೀಯುವಂತೆ ಕೇಳಿಕೊಂಡರೂ ಅವರು ಅದಕ್ಕೆ ನಿರಾಕರಿಸಿದುದೂ ಮಾತ್ರವಲ್ಲದೆ, ಸಚಿವ ಸಂಪುಟದಿಂದ ತನ್ನನ್ನು ಉಚ್ಚಾಟನೆ ಮಾಡಿಸಿಕೊಂಡರೇನೇ ಗೌರವವೆಂದು ತಿಳಿದ ಅವರ ವರ್ತನೆ ಮಾತ್ರ ಒಂದು ಒಗಟಾಗಿದೆ.

ಆರಂಭದಲ್ಲಿ, ೧೯೫೭ರಲ್ಲಿ ಶ್ರೀಮತಿ ವಿಜಯವರ್ಧನೆ ಅವರು ಆರೋಗ್ಯ ಮಂತ್ರಿಯಾಗಿಯೂ ಇದ್ದರು ಆ ಸಮಯದಲ್ಲವರು ಭಾರತವನ್ನೂ ಸಂದರ್ಶಿಸಿದ್ದರು. ಮಂತ್ರಿ ಮಂಡಳಿಯಲ್ಲಿದ್ದಷ್ಟು ಸಮಯ ಅವರು ಪತ್ರಿಕಾಕರ್ತರಿಂದ ಅಡಗಿಕೊಳ್ಳುವ ಪ್ರಯತ್ನ ಮಾಡಿದ್ದರು. ಆದರೆ, ಆರೋಗ್ಯ ಸಂಬಂಧದ ಆಸ್ಪತ್ರೆಯಲ್ಲಿ ಪುರುಷರಿಗಿಂತ ಸ್ತ್ರೀಯರೇ ಉಪಯುಕ್ತರಾದವರೆಂಬ ತಮ್ಮ ಅಭಿಪ್ರಾಯವನ್ನು ಮಾತ್ರ ಅವರೆಂದೂ ಮರೆಮಾಚಲಿಲ್ಲ. ಆಯುರ್ವೇದ ಪ್ರಣಾಲಿಯಲ್ಲಿ ಅವರಿಗಿರುವ ವಿಶ್ವಾಸ ಬಹಳ. ಆದುದರಿಂದ, ತಾವು ಆರೋಗ್ಯ ವಿಭಾಗದ ಮಂತ್ರಿಯಾಗಿರುವಾಗ, ಆಯುರ್ವೇದದ ವಿಕಾಸ ಮತ್ತು ಪ್ರಗತಿಯ ಸಲುವಾಗಿ ತುಂಬ ಶ್ರಮಿಸಿದರೆಂದು ಹೇಳಲಾಗುತ್ತಿದೆ.

ವಿಶ್ವದ ಇಂದಿನ ಸಂಕ್ಷೋಭೆಯ ಸಮಸ್ಯೆಗಳಿಗೆ ಮೂಲ ಭೂತ ಪರಿಹಾರವು ಕೇವಲ ಬೌದ್ಧ ಧರ್ಮದಿಂದ ಮಾತ್ರ ದೊರೆಯಬಲ್ಲದೆಂದು ಶ್ರೀಮತಿ ವಿಜಯವರ್ಧನೆಯವರ ಅಚಲ ನಿರ್ಧಾರ. "ಇಂದಿಗೆ ಎರಡೂವರೆ ಸಾವಿರ ವರ್ಷಗಳಿಗ ಮೊದಲು ವಿಶ್ವದ ಸಮಾಜವಾದ ಶಿಕ್ಷಕನಾದ ಬುದ್ಧನ ಜನ್ಮವಾಯಿತು; ನಮಗೆ ಆರ್ಥಿಕ ಸುಧಾರಣೆ ಮತ್ತು ನಿಯೋಜಿತ ಅರ್ಥವ್ಯವಸ್ಥೆಗಳ ಆವಶ್ಯಕತೆಯಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ, ಇಷ್ಟೇ ಅಲ್ಲದೆ ಇದಕ್ಕಿಂತಲೂ ಅಮೂಲ್ಯವಾದ ಇನ್ನೊಂದು ವಸ್ತುವಿನ ಆವಶ್ಯಕತೆ ನಮಗಿದೆ ಈ ವಸ್ತುವೇ "ಆತ್ಮವಿಕಾಸ" ಎನ್ನುತ್ತಾರೆ, ಶ್ರೀಮತಿ ವಿಜಯವರ್ಧನೆ.

ದಕ್ಷಿಣ ಪಕ್ಷದ ವಿಚಾರತರಲ್ಲಿ ಸುಪ್ರಸಿದ್ಧರಾದ ಶ್ರೀಮತಿ ವಿಜಯವರ್ಧನೆ ಅವರು ಸಿಂಹಳದ ಜಮೀನದಾರರೊಬ್ಬರ ಮಗಳು; ಈ ವಾಮಪಕ್ಷೀಯ ಮಹಿಳೆಯು ಆಂದೋಲನಗಳಲ್ಲಿ ಭಾಗವಹಿಸಿ ರಾಜಕೀಯರಂಗವನ್ನು ಪ್ರವೇಶಿಸಿದರು. ೧೯೪೮ರಲ್ಲಿ ಸಂಸ್ಥಾಪಿತವಾದ "ಏಕ್ಸಾಥ್ ಲಂಥಾ ಪೆರಮುನಾ"ದ ಸಕ್ರಿಯ ಸದಸ್ಯೆಯರಲ್ಲಿವರೊಬ್ಬರು; ಮತ್ತು ಆ ವೇಳೆ ಮಂತ್ರಿಣಿಯೂ ಆದರು. "ಕಟಾನಾ ಬುದ್ಧಿಸ್ಟ್ ಮಿಕ್ಸೆಡ್ ಸ್ಕೂಲ್"ನಲ್ಲಿ ಪ್ರಾರಂಭಿಕ ಶಿಕ್ಷಣವೂ ವಿಶಾಖಾ ವಿದ್ಯಾಲಯ (ಕೊಲಂಬೊ)ದಲ್ಲಿ ಮುಂದಿನ ವಿದ್ಯಾಭ್ಯಾಸವೂ ನಡೆಯಿತು. ಇವರೊಂದು ಪುಸ್ತಕವನ್ನೂ ಬರೆದಿರುವರು. ಸಿಂಹಳೀಯ ಕವಿತೆ ಮತ್ತು ಸಾಹಿತ್ಯಗಳಲ್ಲಿ ಇವರ ಅಭಿರುಚಿ ಸಾಕಷ್ಟಿದೆ.

ಶ್ರೀಮತಿಯವರ ಬಗ್ಗೆ ಮಂತ್ರಿ ಮಂಡಳಿಯಲ್ಲಿ ಭಿನ್ನಾಭಿಪ್ರಾಯ ಮತ್ತು ಅವಿಶ್ವಾಸಗಳು ಏಕೆ ಹುಟ್ಟಿದುವು ಎಂಬ ವಿಷಯ ಮಾತ್ರ ಇನ್ನೂ ಸ್ಫೋಟಗೊಂಡಿಲ್ಲ ದಿವಂಗತ ಪ್ರಧಾನಿ ಭಂಡಾರನಾಯಕೆಯವರ ಕೊಲೆಗೂ ಆಯುರ್ವೇದಕ್ಕೂ ನಿಕಟ ಸಂಬಂಧವಿರುವುದರಿಂದ, ಆಯುರ್ವೇದ—ಶ್ರೀಮತಿ ವಿಜಯವರ್ಧನೆಯವರ ಸಂಬಂಧವೇ ಅವರ ಉಚ್ಚಾಟನೆಗೆ ಕಾರಣವಾಯಿತೆಂದು ಈಗ ಹೇಳುವಂತಿಲ್ಲ

ನಿಮ್ಮನ್ನು ಮತ್ತು ನಿಮ್ಮ ಕುಟುಂಬವನ್ನು ಕ್ಷಯರೋಗದಿಂದ ಸಂರಕ್ಷಿಸಿಕೊಳ್ಳಿರಿ.

ನೀವಿಂದು ಆರೋಗ್ಯವಂತರಾಗಿರಬಹುದು, ಆದರೆ, ಕ್ಷಯರೋಗವು ರೋಗಿಯಿಂದ ಆರೋಗ್ಯವಂತನಿಗೆ ಸೋಂಕುವುದೆಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಿರಿ. ಕ್ಷಯರೋಗವು ಒಂದು ಅಂಟುರೋಗವಾಗಿದೆ. ಭಾರತದಲ್ಲಿ ಈ ರೋಗದಿಂದ ನರಳುವವರು 25,00,000ಕ್ಕಿಂತಲೂ ಹೆಚ್ಚಾಗಿದ್ದಾರೆ. ಅವರಲ್ಲಿ ಹಲವರು ತಮಗೆ ಈ ರೋಗವಿದೆಯೆಂಬುದನ್ನು ತಿಳಿದಿರುವುದಿಲ್ಲ. ಅವರು ಪೇಟೆ, ಶಾಲೆ, ದೇವಾಲಯ, ಆಫೀಸು, ಸಿನೆಮಾಗಳು ಮೊದಲಾದ ಕಡೆಗಳಲ್ಲಿ ಕೆಮ್ಮುತ್ತ, ಸೀನುತ್ತ, ಉಗುಳುತ್ತ ತಿರುಗಾಡುತ್ತಿರುತ್ತಾರೆ ಮತ್ತು ಈ ರೋಗವನ್ನು ಅನ್ಯರಿಗೆ ಅರಿವಿಲ್ಲದೆ ಹರಡಿಸುತ್ತಾರೆ. ನೀವು ಯಾವದೇ ಸಮಯದಲ್ಲಿ ಈ ಯಾವನೊಬ್ಬನಿಂದ ಕ್ಷಯರೋಗವನ್ನು ಸೋಂಕಿಸಿಕೊಳ್ಳಬಹುದು. ನಿಮ್ಮ ಪಟ್ಟಣದಲ್ಲಿರುವ ಅತಿ ಸಮೀಪದ ಟಿ. ಬಿ. ಆಸ್ಪತ್ರೆಗೆ ರೋಗ ಪರೀಕ್ಷೆಗೆ ತೆರಳಿರಿ.

ನಿಮ್ಮ ರಾಜ್ಯದ ಕ್ಷಯರೋಗ ಸಮಿತಿಯೊಡನೆ ಕ್ಷಯರೋಗ ನಿರೋಧ, ಹತೋಟಿ, ಚಿಕಿತ್ಸೆ ಮತ್ತು ಬಿಡುಗಡೆಯ ಹೆಚ್ಚಿನ ವಿವರಗಳನ್ನು ಕೇಳಿರಿ.

ಟಿ. ಬಿ ಮುದ್ರೆಗಳನ್ನು ಪಡಕೊಂಡು ನಿಮ್ಮ ಪತ್ರಗಳಿಗೆ ಅಂಟಿಸಿರಿ. ಹೀಗೆ ಮಾಡುವುದರಿಂದ ನಿಮ್ಮ ರಾಜ್ಯದ ಕ್ಷಯರೋಗ ಸಮಿತಿಯವರಿಗೆ ತಮ್ಮ ವಿವಿಧ ಕ್ಷಯರೋಗ ನಿರೋಧ ಚಟುವಟಿಕೆಗಳಿಗೆ ನಿಧಿಯನ್ನು ವೃದ್ಧಿಪಡಿಸಲು ನೀವು ಸಹಾಯಮಾಡಿದಂತಾಗುವುದು.

ಒಂದು ಕ್ಷಯರೋಗ ಮುದ್ರೆಯ ಬೆಲೆ ಹತ್ತು ನಯೇಪೈಸೆ ಮಾತ್ರ.

ಮುದ್ರೆಗಳು ದೊರೆಯುವ ಸ್ಥಳಗಳು: ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್ಡನ್ ಟಿ. ಬಿ. ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಕೆಂಪೇಗೌಡ ರೋಡ್, ಬೆಂಗಳೂರು–9.

2) ಜಿಲ್ಲಾ ವೈದ್ಯಾಧಿಕಾರಿ, ಕೊಡಗು, ಮಡಿಕೇರಿ.

ಹತ್ತನೇ ಕ್ಷಯರೋಗ ಮೊಹರು ಮಾರಾಟ ಚಳವಳ

(ದಿ ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಡಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟದ್ದು)

ಈ ಸ್ಥಳದ ದಾತೃಗಳು:

ಮೆಸರ್ಸ್ ಅಮೃತ್‌ಲಾಲ್ ಮತ್ತು ಕಂಪೆನಿ ಪ್ರೈವೇಟ್ ಲಿಮಿಟೆಡ್, ಬೊಂಬಾಯಿ

ಸಫಲ ಜೀವನ

ಡಾ ಮೋದಿಯವರ ಅನುಪಮ ಸೇವಾಜೀವನ

ಮಾನವ ಶರೀರವೇ ದೇಗುಲ; ಆತನ ಸೇವೆಯೇ ದೇವಾರ್ಚನೆ. ಇದರಿಂದಲೇ ಆನಂದತುಂದಿಲರಾಗುವ ಮೋದಿಯವರು ಜಗಜನಿತರಿರುವರು.

ನಾನು ಕಂಡ ವ್ಯಕ್ತಿಗಳಲ್ಲಿ ವಿಶೇಷವಾಗಿ ಉಲ್ಲೇಖಾರ್ಹರಾದವರಲ್ಲಿ ಮೋದಿ ಎಂಬವರೂ ಒಬ್ಬರು. ಅವರ ಸಂಪೂರ್ಣ ಹೆಸರು ಮುರುಗಪ್ಪ ಚೆನ್ನವೀರಪ್ಪ ಮೋದಿ ಎಂಬುದನ್ನು ಕೆಲವೇ ಜನರು ತಿಳಿದಿರುವರು; ಆದರೆ, ದಕ್ಷಿಣ ಭಾರತದ ನಾಲ್ಕೂ ರಾಜ್ಯಗಳ ಪ್ರಜೆಗಳೆಲ್ಲರೂ ತಮಗೆ "ಕಣ್ಣುಗಳನ್ನು ಕೊಡುವವ" (ನಯನದಾನಿ) ಇವರು ಎಂದು ಅರಿತಿರುವರು.

ನಲುವತ್ತೊಂದು ವರ್ಷ ಪ್ರಾಯದ ಮೋದಿಯವರು ಹಳ್ಳಿಯಿಂದ ಹಳ್ಳಿಗೆ ತಿರುಗುತ್ತಿರುವ ಒಂದು ಚಿಕಿತ್ಸಾಲಯವನ್ನಿಟ್ಟುಕೊಂಡಿರುವರು ದಕ್ಷಿಣ ಭಾರತೀಯರೆಲ್ಲರಿಗೂ ಚಿರಪರಿಚಿತರಾಗಿರುವ ಇವರು ಒಬ್ಬ ಅನುಭವಿಗಳು. ಅವರು ತಮ್ಮ ಪ್ರಾಯಕ್ಕಿಂತಲೂ ಎಳೆಯರಾಗಿಯೇ ತೋರುತ್ತಾರೆ ಅವರು ಸದಾ ಹಸನ್ಮುಖಿಗಳು, ಸುಲಭ ಪರಿಚಿತರು, ಉದಾರ ಹೃದಯಿಗಳು ಮತ್ತು ದಯಾಶೀಲರು ಮೋದಿಯವರೊಬ್ಬ ಬಡ ಜನರ ಡಾಕ್ಟರು, ಅವರಂತೆಯೇ ಸ್ವಯಂ ಅತಿಸರಳವೆನಿಸಿದ ಉಡಿಗೆಗಳನ್ನು ತೊಡುವವರು ಅವರ ವೈಯಕ್ತಿಕ ಸಾಮಾನುಗಳನ್ನು ಕೇವಲ ಎರಡೇ ಪುಟ್ಟ ಪೆಟ್ಟಿಗೆಗಳಲ್ಲಿ ತುಂಬಿಸಿಡಬಹುದು, ಯಾವುದಾದರೂ ಒಂದೇ ವಿಧದ ಆಹಾರಕ್ಕೆ ಅಂಟಿಕೊಂಡವರಲ್ಲ ತಾನು ಸಂದರ್ಶಿಸಿದ ಹಳ್ಳಿಗಳಲ್ಲಿ ತನಗೆ ಒದಗಿಸಲಾಗುವ ಯಾವುದೇ ಆಹಾರವನ್ನು ಸಂತೋಷದಿಂದ ಸ್ವೀಕರಿಸುತ್ತಾರೆ.

ಮೋದಿಯವರು ಹೋದಾಗಲೆಲ್ಲಾ ನೂರಾರು ಕುರುಡರನ್ನೂ ಅರೆ ಕುರುಡರನ್ನೂ ಪರೀಕ್ಷಿಸುತ್ತಾರೆ ಬಹಳ ಸಂಖ್ಯೆಯ ಶಸ್ತ್ರ ಚಿಕಿತ್ಸೆಯನ್ನೂ ಅವರು ಮಾಡುತ್ತಾರೆ ಅವರ ದಾಖಲೆಯನ್ವಯ ಇಷ್ಟರವರೆಗೆ ಸುಮಾರು ೭೫,೦೦೦ ಆಪರೇಶನ್‌ಗಳನ್ನು ಅವರು ಯಶಸ್ವಿಯಾಗಿ ಮಾಡಿದ್ದಾರೆ, ಜತೆಗೆ ಎರಡು ಲಕ್ಷಕ್ಕೂ ಮಿಕ್ಕಿದ ಜನರಿಗೆ ಸಲಹೆಯಿತ್ತಿದ್ದಾರೆ!

"ಮಾನವನು ತನ್ನನ್ನು ಹೊರತು ಮತ್ತೇನನ್ನೂ ಕೊಡಲಾರ" ಎಂಬ ಮಾತಿನಲ್ಲಿ ಮೋದಿಯವರು ವಿಶ್ವಾಸವಿಟ್ಟಿದ್ದಾರೆ. ಆದುದರಿಂದ ಅವರು ಭಾರತದ ಅಂಧರೆಲ್ಲರ ಆಹ್ವಾನವನ್ನು ಉಲ್ಲೇಖಾರ್ಹ ವಿಧಾನದಿಂದ ಎದುರಿಸುತ್ತಾರೆ ಬೆಂಗಳೂರು ಕಾರ್ಪರೇಶನ್‌ನ ಉಡುಗೊರೆಯಾದ ಒಂದು ಗಾಡಿ, ಒಂದು ವಿದ್ಯುತ್ಪಾದಕ, ವೈದ್ಯಕೀಯಕ್ಕೆ ಸಂಬಂಧಿಸಿದ ಒಂದು ದೊಡ್ಡ ಹೊರೆ, ಮತ್ತು ೧೫ ವಿಶ್ವಾಸಪಾತ್ರರಾದ ಸಹಾಯಕರಿಂದ ಕೂಡಿಕೊಂಡು ಡಾ| ಮೋದಿಯವರು ಗ್ರಾಮೀಣ ಪ್ರದೇಶದಲ್ಲಿ ಸಂಚರಿಸುತ್ತಿರುತ್ತಾರೆ. ಅವರು ಹಳ್ಳಿಗಳಲ್ಲಿ ಸಭೆಗಳನ್ನು ಕರೆಯುತ್ತಾರೆ, ಪ್ರಭಾವಶಾಲೀ ಸ್ಥಳೀಯ ಸಮಿತಿಗಳನ್ನು ಏರ್ಪಡಿಸುತ್ತಾರೆ, ಇವು ಸ್ವೇಚ್ಛೆಯ ಸಹಾಯ ನಿಧಿಯನ್ನು ಅವರ ಅಸ್ಥಿರ ಚಿಕಿತ್ಸಾಲಯದ ನಿತ್ಯ ಔಷಧಿಗಳ ಉಚಿತ ವಿತರಣೆಗೆ ಒಟ್ಟುಗೂಡಿಸುತ್ತವೆ

ಗ್ರಾಮಕ್ಕೆ ಡಾ| ಮೋದಿ ಬಂದ ದಿನ ಸ್ಥಳೀಯ ಶಾಲೆಯನ್ನೋ ಧರ್ಮಶಾಲೆಯನ್ನೋ ತನ್ನ ಉಪಯೋಗಕ್ಕೆ ಬಳಸಿಕೊಳ್ಳುತ್ತಾರೆ ಕಟ್ಟಡವು ನಿರ್ಮಲಗೊಳಿಸಲ್ಪಡುತ್ತದೆ ಶಾಲೆಯ ಮಂದ ವಸ್ತುಗಳು ವಾರ್ಡು ನಿರ್ಮಾಣಕ್ಕೆ ಉಪಯೋಗವಾಗುತ್ತವೆ ಇವುಗಳಿಂದಲೇ ಆಪರೇಶನ್ ಥಿಯೇಟರ್ ಕೂಡ ಸಿದ್ಧವಾಗುತ್ತದೆ. ಆ ಊರಲ್ಲಿ ವಿದ್ಯುಚ್ಛಕ್ತಿಯಿದ್ದರೆ, ಒಳ್ಳೆಯದೇ ಇಲ್ಲವಾದರೆ, ಜತೆಯಲ್ಲೇ ವಿದ್ಯುಜ್ಜನಕವಿದೆ ತಾನೆ?

ಶಾಲೆಯ ಹುಡುಗರು ಮತ್ತು ಹುಡುಗಿಯರು ಹಾಗೂ ಇನ್ನಿತರ ಸ್ಥಳೀಯ ಸ್ವಯಂಸೇವಕರು ಗಂಟೆ ನಲವತ್ತೆಂಟು ದುಡಿಯುತ್ತಿರ ಬಹುದು ನೆರವು ತಾಸುಗಳೊಳಗೆ ಆ ಸ್ಥಳವು ಪವಿತ್ರವಾದ ದೇವಾಲಯದಂತೆ ಕಂಡುಬರುತ್ತದೆ ಆ ಮೇಲೆ, ಡಾಕ್ಟರರು ಸ್ವಯಂಸೇವಕರನ್ನು ಉದ್ದೇಶಿಸಿ ಒಂದು ಭಾಷಣ ಮಾಡುತ್ತಾರೆ, ಅವರು ತಮ್ಮನ್ನು ಹೇಗೆ ಹೊಂದಿಸಿಕೊಂಡು ಹೋಗಬೇಕು, ಕರ್ತವ್ಯದ ಕಡೆಗೆ ಎಂತಹ ಭಕ್ತಿಭಾವನೆಯನ್ನಿಡಬೇಕು ಎಂದು ಮುಂಚಿತವಾಗಿ ತಿಳಿಸಿ, "ನಮ್ಮ ರೋಗಿಗಳೇ ನಮ್ಮ ದೇವರು ಈ ಸ್ಥಳದಲ್ಲಿ ನಾವು ಅವರಿಗೆ ನೀಡುವ ವೈದ್ಯಕೀಯ ಸಹಾಯವೇ ನಮ್ಮ ಅರ್ಚನೆಯ ರೂಪವಾಗಿದೆ" ಎಂದವರು ಕೊನೆಗೆ ಹೇಳುತ್ತಾರೆ

ಹಳ್ಳಿಯ ಕಟ್ಟಡದಲ್ಲಿ ಇಷ್ಟೆಲ್ಲ ಏರ್ಪಾಡಾಗುವಾಗ ಆ ವಾರದಲ್ಲಿ ರೋಗಿ ಜನಜಂಗುಳಿಯು ಕಂಡುಬರುತ್ತದೆ ಅವರು ಒಬ್ಬರ ಹಿಂದೊಬ್ಬರಾಗಿ ಸಾಲಾಗಿ ನಿಂತಿರುತ್ತಾರೆ ಅವರಲ್ಲಿ ಹೆಚ್ಚಿನವರ ಕಾಲದೂಳು ಇನ್ನೂ ಹೊಸತಾಗಿರುತ್ತದೆ ಏಕೆಂದರೆ, ಅವರೆಲ್ಲರೂ ತಮ್ಮ ಸಂಬಂಧಿಕರೋ ಮಿತ್ರರೋ ಹೊತ್ತು ತಂದುದರಿಂದಲೇ ಡಾ| ಮೋದಿಯವರ ಚಿಕಿತ್ಸಾಲಯದಲ್ಲಿ ಸೇರಿದ್ದಾರೆ ಕೆಲವರು ಬಸ್ಸುಗಳಲ್ಲಿಯೂ ಹಲವರು ಎತ್ತಿನ ಗಾಡಿಯಲ್ಲಿಯೂ ಪ್ರಯಾಣಿಸಿ ಬಂದಿರುತ್ತಾರೆ

ಡಾಕ್ಟರರೊಂದು ಮುಗುಳ್ನಗೆಯಿಂದ ಅವರೆಲ್ಲರನ್ನೂ ಒಂದು ಬಾರಿ ಸ್ವಾಗತಿಸುತ್ತಾರೆ ಅವರ ಕೈಯಲ್ಲೊಂದು ಪ್ರಕಾಶ ಬೀರುವ ಬ್ಯಾಟರಿ ಇರುತ್ತದೆ ಸಾಲಾಗಿ ನಿಂತಿರುವವರನ್ನು ಅತಿ ಶೀಘ್ರಗತಿಯಲ್ಲಿ ಪರಿಶೀಲಿಸುತ್ತ ಅವರು ಮುಂಬರಿಯುತ್ತಾರೆ ಕೆಲವರಿಗೆ ಆಪರೇಶನಾಗ ಬರಿಯಾಗುವಂತೆ ಒಂದೆರಡು ವಾರ ಬಿಟ್ಟು ಬರಲು ಹೇಳುತ್ತಾರೆ, ಇನ್ನು ಕೆಲವರಿಗೆ ಔಷಧಿ ದೊರೆಯುತ್ತದೆ, ಅವರೆ, ಹೆಚ್ಚಿನವರು ಆಪರೇಶನ್ನಿಗಾಗಿ ಉಳಿಯುತ್ತಾರೆ

ಮರುಜಾವದ ಏಳು ಗಂಟೆಯ ಸಮಯ ಮೋದಿಯವರು ಆಪರೇಶನ್ ಥಿಯೇಟರ್‌ನಲ್ಲಿ ಕಾಣಿಸಿಕೊಳ್ಳುತ್ತಾರೆ ಒಬ್ಬ ನೆರವಿಗ ಅನವರತ ಧಾವಿಸುತ್ತಾನೆ, 'ಸರ್ಜನ್ ಟಾಂಗ್ಸ್' ಹಾಕಿಕೊಳ್ಳುವುದರಲ್ಲಿ ನೆರವಾಗುತ್ತಾನೆ ಇನ್ನೊಬ್ಬನು ಮುಂಬಂದು ಅವರಿಗೆ 'ಹೈಪೊಡರ್ಮಿಕ್' ಕೊಡುತ್ತಾನೆ

ವರ್ಗಕೋಣೆಯ ನಾಲ್ಕು ಮೇಜುಗಳಲ್ಲಿ ನಾಲ್ವರು ರೋಗಿಗಳು ಮಲಗಿರುತ್ತಾರೆ, ಸಮೀಪದ ಬೆಂಚುಗಳಲ್ಲಿ ಹದಿನಾರು ಮಂದಿ ಕಾಯುತ್ತಿರುತ್ತಾರೆ ಸ್ವಾಭಾವಿಕ ತಜ್ಞತೆ ಮತ್ತು ವೇಗಗಳಿಂದ ಡಾಕ್ಟರರು ರೋಗಿಯ ಕಣ್ಣಿನ ತುಸು ಕೆಳಗಡೆಯ ಕೆನ್ನೆಯಲ್ಲಿ ಹೈಪೊಡರ್ಮಿಕ್ ಸೂಜಿಯಿಂದ ಚುಚ್ಚುತ್ತಾರೆ ಗ್ರಾಮಸ್ಥರು ತಮ್ಮ ತಲೆಯೆತ್ತಿ, ಈ ಇಂಜೆಕ್ಷನ್ ತೆಗೆಯುಕೊಳ್ಳುತ್ತಾರೆ ಒಂದಿಷ್ಟೂ ಕೂಗು, ಶಬ್ದ ಇಲ್ಲ ತಾವು ಇಲ್ಲಿರುವುದೇ ದೊಡ್ಡ ಉಪಕಾರವೆಂದವರು ತಿಳಿಯುತ್ತಾರೆ!

ಈಗ, ಮೋದಿಯವರು ಮೊದಲನೆಯ ರೋಗಿಯ ಬಳಿ ಒಗ್ಗುತ್ತಾರೆ. ಅವರ ಕೈ ವಿಸ್ಮಯಕಾರಿಯಾಗಿ ಚಲಿಸತೊಡಗುತ್ತದೆ. ಐವತ್ತು ಸೆಕೆಂಡುಗಳೊಳಗೆ ಒಂದು ಆಪರೇಶನ್ ಮುಗಿಯುತ್ತದೆ

ಡಾಕ್ಟರರು ಎರಡನೆಯ ಮೇಜಿನ ಬಳಿ ಹೋಗುತ್ತಾರೆ ಇನ್ನೊಂದು ಆಪರೇಶನೂ ಇಷ್ಟೇ ಶೀಘ್ರವಾಗಿ ಕೊನೆಗೊಳ್ಳುತ್ತದೆ ವೇಗ ಮತ್ತು ಕೆಲಸಗಳಲ್ಲಿ ಮನುಷ್ಯ ಅಸಾಧಾರಣರು ಮೇಜುಗಳ ನಡುವೆ ಚಲಿಸುವ ಅವರ ಸಂಗಿಯೇ ರೋಮಾಂಚನಕಾರಿ ಒಬ್ಬ ರೋಗಿಯನ್ನು ಜೋಡಿಸಿ ಮತ್ತೊಬ್ಬನನ್ನು ಮಲಗಿಸಲು ಹೆಚ್ಚು ಸಮಯಾವಕಾಶವೂ ಬೇಕಾಗಿಲ್ಲ.

ರೋಗಿಗಳನ್ನು ಸೇವಾದಳದ ಸ್ವಯಂಸೇವಕರ ಮತ್ತಾಗಿ ಕರೆದುಕೊಂಡು ಹೋಗಿ ವಾರ್ಡುಗಳಲ್ಲಿ ಮಲಗಿಸುತ್ತಾರೆ ಇಲ್ಲಿ ರೋಗಿಗಳು ಹತ್ತು ದಿವಸಗಳವರೆಗೆ ಇರುತ್ತಾರೆ ಆ ಮೇಲೆ ಡಾಕ್ಟರರು ಆಪರೇಶನೋತ್ತರ ಚಿಕಿತ್ಸೆಯನ್ನು ನಡೆಸುತ್ತಾರೆ ಈ ಅವಧಿಯಲ್ಲಿ ಯಾವುದೇ ತೊಂದರೆಯಾಗದಂತೆ ಬಹಳ ಲಕ್ಷ್ಯವಹಿಸಲಾಗುತ್ತದೆ ಆಪರೇಶನ್‌ಗಳು ಮೂರೇ ದಿನಗಳಲ್ಲಿ ಮುಗಿಯುತ್ತದ ವರೂ ಅವರ ಚಿಕಿತ್ಸಾಲಯವು ಎರಡು ವಾರಗಳಲ್ಲಿ ಕೊನೆಗೊಳ್ಳುತ್ತದೆ ಈ ನಡುವೆ ಆಪರೇಶನ್ ಮಾಡಿಸಿಕೊಂಡವರು ಸಂಪೂರ್ಣ ಸೌಖ್ಯರಾಗುತ್ತಾರೆ ಆ ಮೇಲೆ ಅವರನ್ನು ಅವರವರ ಮನೆಗಳಿಗೆ ಕಳಿಸಲಾಗುತ್ತದ

ರೋಗಿಗಳ ಕಣ್ಣಿಗೆ ಕಟ್ಟಿದ ಬಾಂಡೇಜನ್ನು ತೆಗೆಯುವ ದಿನ ನೀವು ಅವರ ಮುಖವನ್ನೂ ಭಾವನೆಯನ್ನೂ ಒಮ್ಮೆ ನೋಡಬೇಕು, ಅಂದು ಅವರು ಈ ಪ್ರಪಂಚವನ್ನು ಕಾಣಬಲ್ಲರು. ಗ್ರಾಮೀಣ ಜನರು ಮೋದಿಯವರನ್ನು ಅಪ್ಪಿಕೊಳ್ಳುವರು, ಮುದ್ದಾಡುವರು. ಕೆಲವರು ಅವರ ಕರವನ್ನು ಹಿಡಿದುಕೊಳ್ಳುವರು ಇನ್ನು ಕೆಲವರು ಭಕ್ತಿಭಾವದಿಂದ ಪಾದಗಳನ್ನು ಮುಟ್ಟಿ ತಮ್ಮ ಕೃತಜ್ಞತೆಯನ್ನು ಸಮರ್ಪಿಸುವರು ಮೋದಿಯವರೂ ಗ್ರಾಮಗಳಲ್ಲಿ ತಮ್ಮ ಚಿಕಿತ್ಸೆ ಪೂರೈಸುವುದರಲ್ಲಿ ತೃಪ್ತರಾಗುತ್ತಾರೆ ತಮ್ಮ ಕರ್ತವ್ಯ ತೃಪ್ತಿಕರವಾಗಿ ನಿರ್ವಹಣೆಯಾದುದನ್ನು ಖಾತ್ರಿಮಾಡಿಕೊಂಡು, ಅವರು ಇನ್ನೊಂದು ಗ್ರಾಮಕ್ಕೆ ಕಂಬಿ ಕೀಳುತ್ತಾರೆ.

೧೯೪೩ರಲ್ಲಿ ಗುಜರಾತದ ಪಟಣವೆಂಬಲ್ಲಿ ಮೋದಿಯವರು ಮೊತ್ತಮೊದಲು ಉಚಿತನೇತ್ರ ಚಿಕಿತ್ಸೆಯ ಶಿಬಿರ ಮಾಡಿದರು ಅಂದಿನಿಂದ ಇಂದಿನವರೆಗೂ ಅವರು ಸಂಚರಿಸುತ್ತಲೇ ಇದ್ದಾರೆ ಇದಕ್ಕೆ ಮೊದಲು ಅವರು ಬೊಂಬಾಯಿಯ ನೇತ್ರ ಚಿಕಿತ್ಸಾಲಯದಲ್ಲಿ ಸರ್ಜನರಾಗಿದ್ದು ತಮ್ಮ ನಿಪುಣತೆ ಮತ್ತು ತೀವ್ರತೆಗಳಿಂದ

(ಆನೇ ಪುಟ ನೋಡಿರಿ)

ಉಡುಪಿ ಡಿ ಮು ಕೋರ್ಟಿನಲ್ಲಿ

O S No 276/1959

ಕೆ ಸುಧಾಕರ ರಾವ್ ಕೊಡಾ — ವಾದಿಯು

ಮತ್ತು

1 ಆನಂದ ನಾ. ಕ ಬೆಳ್ಳಂಪಳ್ಳಿ ಮೂಡ ಬೈಲು ತಿಮ್ಮಪ್ಪ ಸ್ಯಾಕರ ಸಂಗ —

2 ನೀಲು ಬಯ 1 ನೇ ಪ್ರತಿವಾದಿಯ ಹೆಂಡತಿ ಮತ್ತು ಕೊಡಕೊಳ್ಳಿ ವೆಂಕಪ್ಪಯರ ಮಗಳು — ಪ್ರತಿವಾದಿ

ಉಡುಪಿ ತಾಲೂಕು ಬೆಳ್ಳಂಪಳ್ಳಿ ಗ್ರಾಮದಲ್ಲಿರುವವರು ಯಿವರಿಗೆ

ದಾವಾ ಅಸ್ತಿಯ ... ಪ್ರತಿವಾದಿಯಿಂದ ವಾದಿಗೆ ಬರಬೇಕಾದ ... ವರೆಗಿನ ವರುಷಗಳ ಬಾಬ್ತು ... ಅಸಲು ಬಡ್ಡಿ ಕೂಡಿ ರೂ 1076—48ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದ್ರಿ ವ್ಯಾಜ್ಯವು ತಾ 5—11—1959ಕ್ಕೆ ತನಿಖೆ ಬಗ್ಗೆ ಯಿಟ್ಟಿದೆ ಆ ದಿವಸ ನಡೆಯುವ ಪ್ರತಿವಾದಿಯು ಸ್ವತಹಾ ವಕೀಲರ ಮುಖಾಂತರ ಕೋರ್ಟಿಗೆ ಹಾಜರಾಗಿ ಉತ್ತರಿಸದೆಯಿದ್ದರೆ ಅವರ ಗೈರ್ ಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸಲಾಗಿದೆ

M Damoder Kamath
Advocate for Plaintiff
Udipi Date 24—10—1959

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು

ಪ್ರಕಾಶಕರು **ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ.**

ಮಾರಾಟಗಾರರು. **ನವಭಾರತ ಬುಕ್ ಡಿಪೊ, ಉಡುಪಿ.**

ಸುಗಂಧಯುಕ್ತವಾದ ಹೂ ಮರದಲ್ಲಿ ಅರಳಿದ್ದರೆ. ಗಾಳಿಯಲ್ಲಿ ಅದರ ಪರಿಮಳ ಹರಡುವುದು; ಈ ಪುಷ್ಪ ಮರದಿಂದರುಳಿ ಪಶುಗಳ ಕಾಲಡಿ ಬಿದ್ದು ಮೆಟ್ಟಲ್ಪಟ್ಟಾಗ, ಅದರ ಪರಿಮಳ ಮತ್ತಷ್ಟು ಹೆಚ್ಚುವುದು.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೯-೧೦-'೫೯	೯

ಭಾರತದ ವಿದೇಶ ನೀತಿ

ಚೀನವು ತನ್ನ ಅತ್ಯುತ್ತಮ ಹಾಗೂ ಸಂಭಾವಿತನಾದ ಒಂದು ರಾಷ್ಟ್ರದ ಸ್ನೇಹಕ್ಕೆ ಚ್ಯುತಿಯನ್ನು ತಂದುಕೊಳ್ಳುವ ಬಯಕೆಯಲ್ಲಿರುವಂತೆ ಅದರ ಇತ್ತೀಚಿನ ವರ್ತನೆಗಳು ಸಾರಿ ಹೇಳುತ್ತಿರುವುವೆಂಬುದು ಎಲ್ಲರೂ ಅರಿತಿರುವ ವಿಚಾರ ತಾನಾಗಿ ಭಾರತದ ಗಡಿಯನ್ನು ಉಲ್ಲಂಘಿಸಿ ಆಕ್ರಮಣವನ್ನು ನಡಸಿ, ಕೊನೆಗೆ ಬೆಣ್ಣೆ ತಿಂದ ನರಿ ಆಡಿನ ಮುಖಕ್ಕೆ ಕೈ ಒರಸಿದಂತೆ, ಭಾರತವೇ ಆಕ್ರಮಣ ನಡೆಸಿದೆ ಎಂದು ಪ್ರಚಾರ ನಡೆಸಿ, ಭಾರತದ ಸ್ನೇಹವನ್ನು ಮಾತ್ರ ಕಳೆದುಕೊಳ್ಳುವುದಲ್ಲದೆ ಪರರಾಷ್ಟ್ರಗಳಲ್ಲೂ ಭಾರತದ ಕೀರ್ತಿಯನ್ನು ಮಲಿನಗೊಳಿಸಲು ಹವಣಿಸುವಂತಿದೆ. ಎದುರು ಶಾಂತಿ, ಸೌಹಾರ್ದ, ಮಾತುಕತೆ, ಸಂಧಾನವೆಂದು ಮುಂತಾಗಿ ಹೇಳಿ ಹಿಂದಿನಿಂದ ಅಶಾಂತಿ, ಅಸೌಹಾರ್ದ, ಗುಂಡಿನ ಹಿಡಿದಾಟ ಸಂಗ್ರಾಮಗಳನ್ನು ಮುಂದೂಡುವುದರಲ್ಲಿ ಅಗ್ರಗಣ್ಯ ರಾಷ್ಟ್ರವಾಗಿ ಕೆಂಪು 'ಚೀನಾ' ಕಾರ್ಯನಡೆಸುತ್ತಿದೆ; ವಿಶ್ವಾಸ ದ್ರೋಹ ಬಗೆಯುತ್ತಿದೆ. ಭಾರತ ಮಾತ್ರ ತನ್ನ ಪಂಚಶೀಲಗಳಿಗೆ ಹೊಂದಿಕೊಳ್ಳುವಂತಹ ರೀತಿಯಲ್ಲೇ ವರ್ತಿಸುತ್ತಿದೆ. ಆದರೆ, ಈ ರೀತಿಯ ಧೋರಣೆ ಯಶಸ್ವಿಯಾಗಿದೆಯೆ? ಎಂದರೆ, ಚೀನದ ವಿಷಯದಲ್ಲದು ಬೆಕ್ಕಿನ ತಲೆಯ ಮೇಲಿನ ದೀಪದಂತೆಯೇ ಇದೆ ಎಂದು ಹೇಳಬೇಕು.

ಭಾರತಕ್ಕೆ ಸೀಮಾ ಸಮಸ್ಯೆಯಿರುವುದು ಚೀನಾದೊಡನೆ ಮಾತ್ರವಲ್ಲ; ಪಾಕಿಸ್ತಾನದೊಡನೆಯೂ ಇತ್ತು; ಇನ್ನೂ ತುಸು ಇದೆ. ಈ ಗಡಿಗಳಲ್ಲಿಯೂ ಆಗಾಗ ದುರ್ಘಟನೆಗಳು ನಡೆಯುತಿದ್ದುವು. ಆದರೆ, ಚೀನಾ ಭಾರತಗಳ ವಿವಾದ ಇಷ್ಟು ಹಗುರವಾಗಿಲ್ಲ. ಇಲ್ಲಿ ಆಕ್ರಮಣದ ಪ್ರಶ್ನೆಯಿದೆ. ಭಾರತದ ಸುಮಾರು ೫೦ ಸಾವಿರ ಚದರ ಮೈಲುಗಳ ಭಾಗವನ್ನು ತನ್ನ ನಕ್ಷೆಯಲ್ಲಿ ಮೊದಲಾಗಿ ಸೇರಿಸಿ, ಅದು ಕೈತಪ್ಪಿದ್ದೆಂದು ಆಗ ಹೇಳಿ, ಈಗ ಆ ಪ್ರದೇಶಗಳೆಲ್ಲವೂ ತಮ್ಮದು ಎನ್ನುವ ಕಮ್ಯುನಿಸ್ಟ ಚೀನದ ಈದುರ್ನಡತೆಯು ಆಕ್ರಮಣವು ಅನ್ಯಾಯದ್ದಿರುವುದರಿಂದ, ಅದನ್ನು ಪ್ರತಿಯೊಬ್ಬ ಭಾರತೀಯನೂ ವಿರೋಧಿಸಿಯೇ ತೀರುತ್ತಾನೆ. ಆದರೆ, ಈ ಪ್ರಶ್ನೆ ಇಲ್ಲಿಗೇನೇ ನಿಲ್ಲುವುದಿಲ್ಲ. ಚೀನೀಯ ಆಕ್ರಮಣಕಾರರು ಇನ್ನೂ ಮುಂದುವರಿಯುತ್ತ ಬಂದರೆ, ಆಗಲೂ ಭಾರತ ಪ್ರತಿಭಟನೆಯನ್ನೇ ಸೂಚಿಸಿ ತೃಪ್ತಿಪಟ್ಟುಕೊಳ್ಳುವುದು ಸಮಂಜಸವೆನ್ನಬಾರದು. ಭಾರತವು ಇದುವರೆಗೆ ಕಳಿಸಿದ ಯಾವುದೇ ಪ್ರತಿಭಟನಾ ಪತ್ರಕ್ಕೆ ಕೊಟ್ಟ ಉತ್ತರದಲ್ಲಿ ಚೀನವು ತನ್ನ ತಪ್ಪನ್ನು, ಮಿತ್ರಭೇದವನ್ನು ಎಲ್ಲಿಯೂ ಒಪ್ಪಿಕೊಂಡಿಲ್ಲ ಮಾತ್ರವಲ್ಲ, ಭಾರತದ ಮೇಲೆಯೇ ಪ್ರತ್ಯಾರೋಪವನ್ನು ಹೊರಿಸಲು ಬಯಸುತ್ತಿರುವುದು. ಭಾರತ ಸರಕಾರವೂ ತುಸು ಎಚ್ಚರವಾಗುವ ಕಾಲ ಸನ್ನಿಹಿತವಾಗಿದೆ. ವಿಶ್ವ ಪ್ರೇಮವನ್ನು ಬಯಸುವುದು, ತನ್ಮೂಲಕ ವಿಶ್ವಶಾಂತಿಯನ್ನು ಸ್ಥಾಪಿಸುವುದು ಅವಶ್ಯವೇ. ಆದರೆ, ಈ ಗುಂಗಿನಲ್ಲಿ ಸ್ವದೇಶ ರಕ್ಷಣೆಯ ಕಡೆಗೆ ಇದುವರೆಗಿನಂತೆ ಮಂದ ಗಮನ ಹರಿಸಿದರೆ ಸಾಲದು. ಸ್ವದೇಶ ರಕ್ಷಣೆಯು ರಾಷ್ಟ್ರೀಯರೆಲ್ಲರ ಮೊದಲ ಕರ್ತವ್ಯವಾಗಿದೆ. ಭಾರತದ, ಕಮ್ಯುನಿಸ್ಟೇತರ ಪಕ್ಷಗಳೆಲ್ಲರೂ ಒಕ್ಕೊರಲಿನಿಂದ ಚೀನದ ಆಕ್ರಮಣವನ್ನು ಖಂಡಿಸಿ ವಿವಂಚನೆಯನ್ನು ವ್ಯಕ್ತಪಡಿಸಿದೆ. ತೀವ್ರಗಾಮಿಗಳು ಭಾರತದ ವಿದೇಶಿ ಧೋರಣೆಯು ಅಸಫಲತೆಯ ಕುರುಹೆಂದು ಎಂದು ಹೇಳಬಹುದು ಆದರೆ, ಅಷ್ಟು ಮುಂದುವರಿಯುವುದು ದಾಷ್ಟ್ರ್ಯತನವೆಂಬುದು ನಿಶ್ಚಯ. ಭಾರತ ಸರಕಾರ ಈಗಾಗಲೇ ಉತ್ತರದ ಗಡಿಯ ಬಗ್ಗೆ ವಿಶೇಷಗಮನ ಹರಿಸತೊಡಗಿದೆ; ಆಗ್ನೇಯಗಡಿಯನ್ನು ಸೇನೆಯವಶಕ್ಕೆ ಕೊಟ್ಟಿದೆ; ಅಸ್ಸಾಮದಲ್ಲಿ ಸೇನಾದಂಡನಾಯಕರನ್ನೇ ರಾಜ್ಯಪಾಲರಾಗಿ ನೇಮಿಸಿದೆ. ಸಾಮಾನ್ಯವಾಗಿ, ಪೂರ್ವ ಭಾವಿ ಸಿದ್ಧತೆಗಳನ್ನು ಕೈಗೊಂಡಿವೆ; ಆದರೂ ಇಷ್ಟರಿಂದ ಎಲ್ಲರಿಗೂ ತೃಪ್ತಿಯಾಗುವುದು ಸಾಧ್ಯವಿಲ್ಲ.

ಭಾರತ ಸರಕಾರದ ವಿದೇಶ ನೀತಿಯಲ್ಲಿ ತುಸು ಪರಿವರ್ತನೆಯಾಗಬೇಕೆಂದು ಕೆಲವರು ಹೇಳುತ್ತಾರೆ. ಈ ಪರಿವರ್ತನೆಯು ಅವಶ್ಯಕವೇ ಎಂದು ಹೇಳುವುದು ಮಾತ್ರ ಸಾಧ್ಯವಿಲ್ಲ. ಏಕೆಂದರೆ, ಸ್ವದೇಶ ರಕ್ಷಣೆಗೆ ಇದರಿಂದ ಆತಂಕಬರಲಾರದು. ಟಿಬೇಟಿನ ಪ್ರಶ್ನೆಯ ಬಗ್ಗೆ ಭಾರತದ ನೀತಿಯನ್ನು ಟೀಕಿಸಿದವರಿದ್ದಾರೆ. ಆದರೆ, ಒಂದೊಂದು ಪುಟ್ಟ ವಿಷಯಗಳಿಗೊಮ್ಮೆ ನೀತಿಯನ್ನು ಬದಲಿಸುತ್ತ ಹೋಗುವುದು ಸಮಂಜಸವಾಗಲಾರದು. ಆದರೂ, ಚೀನಾದ ಆಕ್ರಮಣವು ಪುಟ್ಟ ವಿಷಯವೆಂದಿಗೂ ಅಲ್ಲ. ಭಾರತೀಯ ಕಮ್ಯುನಿಸ್ಟರಲ್ಲಿ ಕೂಡಾ, ಕೇರಳದಲ್ಲಿ ಮತಗಟ್ಟಿಸುವ ಅಭಿಲಾಷೆಯಿಂದಿರಬಹುದು, ನಂಬೂದಿರಿಪಾದ ಮತ್ತು ಕಂಪೆನಿಯವರು ಈ ಸತ್ಯ ಸಂಗತಿಯನ್ನು ಒಪ್ಪುವಷ್ಟರ ಮಟ್ಟಿಗೆ ಸ್ವದೇಶಪ್ರೇಮಿಗಳಾಗಿದ್ದಾರೆ ಹಾಗಿರುವಾಗ, ಚೀನದ ಕಡೆಗೆ ಸದಾ ಸಚೇತರಾಗಿರಬೇಕು ಭಾರತದ 'ಶಾಂತಿ'ಯನ್ನು ಚೀನವು 'ಅಶಕ್ತಿ' ಎಂದು ಅಪಾರ್ಥ ಮಾಡಿಕೊಳ್ಳದಂತೆ ನೋಡಬೇಕು; ಭಾರತದ ಭದ್ರತೆಗಾಗಿ, ಈ ಸಮಸ್ಯೆಯನ್ನು ಕಣ್ಣಲ್ಲಿ ಎಣ್ಣೆ ಸುರಿದು ಪರಿಶೀಲಿಸಬೇಕು. ಚೀನದ ಬಗ್ಗೆ ಇರುವ ಭಾರತದ ವಿದೇಶ ನೀತಿಯ ಕುರಿತು ಕಾಂಗ್ರೆಸ್ಸಿನಲ್ಲೂ ಭಿನ್ನಾಭಿಪ್ರಾಯವಿದೆ. ಆದುದರಿಂದ ಇದರ ಮಟ್ಟಿಗೆ ಮಾತ್ರ ವಿದೇಶೀಯ ಧೋರಣೆಯನ್ನು ಪುನರ್ವಿಮರ್ಶಿಸುವುದು ಅಪ್ರಾಸಂಗಿಕ ಮಾತ್ರ ಆಗಲಾರದು

ಪಂಚಾಯತ ರಾಜ್ಯ

ಗ್ರಾಮ ಸ್ವರಾಜ್ಯ ಅಥವಾ ಪಂಚಾಯತ ರಾಜ್ಯದಿಂದಲೇ ರಾಮರಾಜ್ಯವೆಂಬ ಮಾತನ್ನು ಯಥಾರ್ಥಮಾಡಲು ಅನುಕೂಲವಾಗುವಂತೆ ಮೈಸೂರು ರಾಜ್ಯವು 'ಪಂಚಾಯತು ರಾಜ್ಯ'ವನ್ನು ಸ್ಥಾಪಿಸಲು ನಿರ್ಧರಿಸಿದೆ. ಇದೇ ನವಂಬರ ಮೊದಲನೆ ದಿನದಿಂದ ಜಿಲ್ಲಾ ಬೋರ್ಡುಗಳ ರದ್ಧತಿಯೊಡನೆ ಈ ಯೋಜನೆಯು ಪ್ರಾರಂಭಗೊಳ್ಳುವುದು. ಮುಂದಿನ ಎಪ್ರಿಲ್ ತಿಂಗಳ ಒಳಗೆ ತಾಲೂಕು ಬೋರ್ಡುಗಳೂ ಜನಸಂಖ್ಯೆ ೧,೫೦೦ಕ್ಕಿಂತ ಹೆಚ್ಚಿರುವಲ್ಲೆಲ್ಲ ಗ್ರಾಮ ಪಂಚಾಯತುಗಳೂ ರೂಪಿತಗೊಂಡು ಅಧಿಕಾರವು ವಿಕೇಂದ್ರೀಕೃತವಾಗುವುದು. ಅಲ್ಲದೇ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಲಹಾ ಮಂಡಳಿವು ಡಿಪ್ಯುಟಿ ಕಮಿಶನರ ನೇತೃತ್ವದಲ್ಲಿದ್ದು ಸಲಹೆ ಸೂಚನೆಗಳನ್ನೀಯುವುದು. ಗ್ರಾಮದ ಶಾನುಭೋಗರ ಹುದ್ದೆಯು ದೂರವಾಗಿ, ಪಂಚಾಯತಿನ ಕಾರ್ಯದರ್ಶಿಯು ಈ ಕೆಲಸವನ್ನೂ ಹೊತ್ತುಕೊಳ್ಳುವನು. ತಾಲೂಕು ಬೋರ್ಡಿಗೆ ಬ್ಲಾಕ್ ಡೆವಲೆಪ್‌ಮೆಂಟ್ ಆಫೀಸರ ಅಥವಾ ತಹಶೀಲದಾರರು ಮುಖ್ಯಾಧಿಕಾರಿ ಯಾಗುವರು. ಈ ವ್ಯವಸ್ಥೆಯು ಮುಂದಿನ ಮಾರ್ಚಿಯೊಳಗೆ ರೂಪುಗೊಂಡು ಎಪ್ರಿಲ್‌ನಿಂದ ಜ್ಯಾರಿಯಲ್ಲಿ ಬರುವುದೆಂದು ಮೈಸೂರು ಸರಕಾರ ಆಜ್ಞಾಪಿಸಿದೆ. ಪಂಚಾಯತುಗಳ ಸ್ಥಾನಮಾನ ಬೆಳೆಯಬೇಕು, ಅವುಗಳ ಬಲ ಹೆಚ್ಚಬೇಕು, ಇದರಿಂದ ಅಭಿವೃದ್ಧಿ ಸರಳವೆಂಬುದು ನಿಜವೆ. ಆದರೆ, ಅಧಿಕಾರ ವಿಕೇಂದ್ರೀಕರಣವಾದಾಗ ಈ ಸ್ಥಳೀಯ ಸಂಸ್ಥೆಗಳು ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ಪೂರೈಸುವಂತೆ ನೋಡುವುದೂ ಅವಶ್ಯ. ಇಂದು ಅನೇಕಾನೇಕ ಗ್ರಾಮ ಪಂಚಾಯತುಗಳು ಬೇರೆ ಬೇರೆ ಕಾರಣಗಳಿಂದ ಕರ್ತವ್ಯಚ್ಯುತವಾಗಿ ಬಿದ್ದಿರುವಾಗ, ಈ ಹೊಸ ರೀತಿಯಿಂದ, ಅಧಿಕಾರವೂ ಹೊಣೆಗಾರಿಕೆಯೂ ಹೆಚ್ಚಿದಾಗ, ಅವುಗಳು ಸಮರ್ಪಕವಾಗಿ ದುಡಿಯುವಂತೆ ಮೇಲಧಿಕಾರಿಗಳು ಎಚ್ಚರ ವಹಿಸಬೇಕು. ಇದರೊಡನೆ, ವಿಕೇಂದ್ರೀಕರಣವೆಂದು ಹೇಳಿ, ಸಿಫಾರಸ್ ಮಾಡುವ ಅಧಿಕಾರವನ್ನು ಮಾತ್ರ ಇವುಗಳಿಗಿತ್ತು ಪ್ರತಿಯೊಂದು ಪತ್ರವೂ ಮಂಗಳೂರು, ಮೈಸೂರು, ಬೆಂಗಳೂರೆಂದು ಸಂಚಾರ ಮಾಡದಂತೆ ವ್ಯವಸ್ಥೆಯೂ ಬೇಕು. ಗ್ರಾಮ ಸ್ವರಾಜ್ಯದ ಕನಸು ನನಸಾಗ ಬೇಕಾದರೆ, ಗ್ರಾಮದ ಸಂಸ್ಥೆಗಳೂ ಸುವ್ಯವಸ್ಥಿತವಾಗಿರಬೇಕು. ಸುಸಮರ್ಥವಾಗಿರಬೇಕು. ಪ್ರವಂಚನೆಯಿಂದ ಸೇವೆಸಲ್ಲಿಸುತ್ತಿರಬೇಕು ಸರಕಾರ ಹೊಸ ಹೆಜ್ಜೆಯಿಟ್ಟುದು ಸ್ವಾಗತಾರ್ಹ, ಮುಂದಿಟ್ಟ ಹೆಜ್ಜೆಯಡಿ ಕಲ್ಲುಮುಳ್ಳುಗಳಿಲ್ಲದಂತೆ ನೋಡಿಕೊಳ್ಳುವುದೂ ಅದರ ಕರ್ತವ್ಯ.

ಸಂಕ್ಷಿಪ್ತ ಸುದ್ದಿಗಳು

ಭಾರತದ ಮೇಲೆ ಪ್ರತ್ಯಾರೋಪ

ಇತ್ತೀಚೆಗೆ ಪೂರ್ವ ಲಡಖದಲ್ಲಿ ಭಾರತ-ಚೀನಾ ಪೋಲೀಸು ಪಡೆಗಳೊಳಗೆ ನಡೆದ ಘರ್ಷಣೆಯಲ್ಲಿ ಪ್ರಾರಂಭದಲ್ಲಿ ೧೭ ಭಾರತೀಯ ಪೋಲೀಸರು ಮೃತಗೊಂಡಿರುವರೆಂದು ಭಾರತವು ಹೇಳಿತ್ತು. ಈ ಬಗ್ಗೆ ಚೀನೀ ಸರಕಾರದ ಪತ್ರವೊಂದು ಭಾರತದ ರಾಜಧಾನಿಗೆ ಬಂದಿದ್ದು ಇದರಲ್ಲಿ ಸತ್ತವರು ಕೇವಲ ೯ ಜನರೆಂದೂ ಹತ್ತು ಜನರನ್ನು ತಾನು ಬಂಧಿಸಿರುವುದಾಗಿಯೂ ಈ ಬಂಧಿತರನ್ನೂ ಮೃತರ ಶವಗಳನ್ನೂ ಬೇಕಾದಾಗ ಕೊಂಡೊಯ್ಯಬಹುದೆಂದೂ ಸೂಚಿಸಲಾಗಿದೆ. ಮಾತ್ರವಲ್ಲದೇ ಭಾರತವು ಚೀನವು ಈ ಘರ್ಷಣೆಗೆ ಮೂಲಕಾರಣವೆಂದು ಹೇಳಿದ್ದರೆ, ಚೀನವು ಆ ಆರೋಪವನ್ನು ಭಾರತದ ಮೇಲೆ ಹೊರಿಸಿದೆ.

ನಾಯಕತ್ವ ಧೋರಣೆ ಪರಿವರ್ತನೆ

ನವದೆಹಲಿಯಲ್ಲಿ ಭಾರತೀಯ ಕಮ್ಯುನಿಷ್ಟಪಕ್ಷದ ಧೋರಣೆ ಮತ್ತು ನಾಯಕತ್ವಗಳಲ್ಲಿ ಬದಲಾವಣೆಗಳುಂಟಾಗುವ ಲಕ್ಷಣಗಳು ತೋರಿ ಬರುತ್ತಿವೆ ಎಂದು ಹೇಳಲಾಗುತ್ತಿದೆ. ಚೀನವು ಭಾರತೀಯ ಗಡಿಯನ್ನು ಅತಿಕ್ರಮಿಸಿದುದು ಇದಕ್ಕೊಂದು ಕಾರಣವಾದರೆ, ಭಾರತೀಯ ಕಮ್ಯುನಿಸ್ಟ ಪಕ್ಷದ ಕಾರ್ಯದರ್ಶಿ ಶ್ರೀ ಅಜಯ ಘೋಷರ ಪೇಕಿಂಗ್ ಯಾತ್ರೆ ನಿಷ್ಫಲವಾದುದು ಇನ್ನೊಂದು ಪ್ರಬಲ ಕಾರಣವಾಗಿದೆ. ಡಾಂಗೆ ಮತ್ತು ಘೋಷ ಪಂಗಡಗಳು ಮೀರತ್‌ನಲ್ಲಿ ಸದ್ಯವೇ ಸೇರಲಿರುವ ರಾಷ್ಟ್ರೀಯ ಸಭೆಯಲ್ಲಿ ತಂತಮ್ಮ ಬಲಾಬಲಗಳ ಪರಿಚಯ ಮಾಡಿಕೊಳ್ಳುವ ಸಂಭವವಿದೆಯೆಂದೂ ಕೇರಳದ ಮಾಜಿ ಮುಖ್ಯ ಮಂತ್ರಿ ಶ್ರೀ ನಂಬೂದರಿಪಾದರು ಡಾಂಗೆ ಪಂಗಡದ ಬೆಂಬಲಿಗರೆಂದೂ ಹೇಳಲಾಗುತ್ತಿದೆ. ಈ ವಿಚಾರದ ಸಾಧ್ಯಾಸಾಧ್ಯತೆಗಳು ಪ್ರತ್ಯಕ್ಷದಲ್ಲಿಯೇ ಗೋಚರಕ್ಕೆ ಬರಬೇಕಷ್ಟೆ

ರಾವಲ್ಪಿಂಡಿಗೆ ಸ್ಥಾನಾಂತರ

ಪಾಕಿಸ್ತಾನದ ರಾಜಧಾನಿಯನ್ನು ಕರಾಚಿಯಿಂದ ರಾವಲಪಿಂಡಿಗೆ ಸ್ಥಾನಾಂತರಿಸುವ ಕಾರ್ಯಗಳು ಯಶಸ್ವಿಯಾಗಿ ಮುನ್ನಡೆಯುತ್ತಿವೆ. ಸ್ಥಾನಾಂತರೀಕರಣದ ಹೆಜ್ಜೆಯಾಗಿ ಪಾಕ್ ಅಧ್ಯಕ್ಷರು ತಮ್ಮ ಕಾರ್ಯಾಲಯವನ್ನು ರಾವಲಪಿಂಡಿಗೆ ಸ್ಥಳಾಂತರಿಸಿರುವರು. ಇದೇ ರೀತಿಯಲ್ಲಿ ಕ್ರಮೇಣ, ಕರಾಚಿಯಿಂದ ಎಲ್ಲ ಕಾರ್ಯಾಲಯಗಳು ಈ ಹೊಸ ರಾಜಧಾನಿಯಲ್ಲಿ ತೊಡಗುವುವು.

ಇನ್ನು ಬುನಾದಿ ಶಾಲೆಗಳಿಲ್ಲ

ಮೈಸೂರು ಸರಕಾರವು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣದ ಬಗ್ಗೆ ೩೨ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲು ನಿರ್ಧರಿಸಿದೆ. ಇದರಿಂದಾಗಿ ೬ರಿಂದ ೧೧ ವರ್ಷ ಪ್ರಾಯದ ಮಕ್ಕಳಿಗೆ ಶಿಕ್ಷಣ, ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಭೋಜನದ ವ್ಯವಸ್ಥೆಗಳು ನಡೆಯುವುವು. ಮಾತ್ರವಲ್ಲದೆ ತಾಂತ್ರಿಕ ಶಿಕ್ಷಣದ ಕಡೆಗೂ ಗಮನ ಹರಿಯಬಲ್ಲುದೆಂದು ತಿಳಿಯುತ್ತದೆ. ಪ್ರಾಥಮಿಕ ಶಾಲೆಗಳನ್ನು

ಅಲ್ಲಲ್ಲಿಯ ಸುದ್ದಿ ಸಾರ

ಮಂಡಲ ಕಾಂಗ್ರೆಸ್ ಸಮ್ಮೇಳನ

ದ. ಕ. ಜಿಲ್ಲಾ ಮಂಡಲ ಕಾಂಗ್ರೆಸ್ ಸಮ್ಮೇಳನವು ತಾ ೨೫ರಂದು ಉಜಿರೆಯಲ್ಲಿ ಜರಗಿತು. ಮೈಸೂರಿನ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿ ಅವರು ಈ ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೀ ಕೆ ಹನುಮಂತಯ್ಯ, ಎಂ ಎಲ್ ಎ ಅವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾರಂಭದಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷ ಶ್ರೀ ಕೆ ಕೆ. ಶೆಟ್ಟಿ ಎಂ. ಎಲ್. ಸಿ. ಅವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದನಂತರ, ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಜಿ. ಎನ್. ಬಿಡೆ ಅವರು ಸ್ವಾಗತ ಭಾಷಣವನ್ನು ಮಾಡುತ್ತ, ಕಾಂಗ್ರೆಸ್‌ನ ಗತೇತಿಹಾಸದ ಬಗ್ಗೆ ಅಭಿಮಾನವನ್ನು ವ್ಯಕ್ತಪಡಿಸಿ, ಈಗೀಗ ಕಾಂಗ್ರೆಸ್ ಸದಸ್ಯರಲ್ಲಿ ಅಂತಃಕಲಹ, ಸ್ವಾರ್ಥ ಹಾಗೂ ಅಧಿಕಾರ ಲೋಲುಪತೆಗಳು ಬೆಳೆದಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು. ಜನತೆ–ಪಕ್ಷ–ಸರಕಾರಗಳ ಸಹಕಾರದಿಂದಲೇ ಪರಿಸ್ಥಿತಿಯು ಉತ್ತಮಗೊಳ್ಳುವುದೆಂದೂ ಈ ಬಗ್ಗೆ ಎಲ್ಲರೂ ಗಮನಹರಿಸಬೇಕೆಂದೂ ಅವರು ತಿಳಿಸಿದರು.

ಮುಖ್ಯಮಂತ್ರಿ ಜತ್ತಿ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹಳ್ಳಿಗಳ ಅಭಿವೃದ್ಧಿಯನ್ನೇ ರಾಜ್ಯದ ಅಭಿವೃದ್ಧಿಯು ಹೊಂದಿಕೊಂಡಿರುವುದರಿಂದ, ಗ್ರಾಮೀಣ ಪ್ರದೇಶದ ಕಾಂಗ್ರೆಸಿಗರು ಗ್ರಾಮ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸರಕಾರಕ್ಕೆ ಸೂಕ್ತ ಸಲಹೆಯನ್ನೂ ಮಾರ್ಗದರ್ಶನವನ್ನೂ ನೀಡಬೇಕೆಂದರು. ನ್ಯಾಯ, ಅವಕಾಶಗಳು ಎಲ್ಲರಿಗೂ ದೊರೆಯುವಂತೆ „ಪಂಚಾಯತ ರಾಜ್ಯ" ಸ್ಥಾಪನೆಯನ್ನವರು ಪ್ರಸ್ತಾಪಿಸಿ ಕಾಂಗ್ರೆಸಿಗರು ಒಗ್ಗಟ್ಟಾಗಿ ಪಕ್ಷದ ಗೌರವ ಮತ್ತು ಸರಕಾರದ ಕರ್ತವ್ಯ ನಿರ್ವಹಣೆಯಲ್ಲಿ ಸಹಕರಿಸಬೇಕು ಎಂದು ವಿನಂತಿಸಿದರು. ಮಧ್ಯಪಾನ ನಿರೋಧದ ಬಗ್ಗೆ ಹೊರಡಿಸಿದ ಶಾಸನವು ಅಯಶಸ್ವಿಯಾಗಿದೆ ಎಂದು ಹೇಳಲಾಗುತ್ತಿದೆ. ಯಾಕೆ ಹಾಗಾಯಿತೆಂದು ಪರಿಶೀಲಿಸಿ ಸರಕಾರಕ್ಕೆ ಸೂಕ್ತ ಸಲಹೆ ನೀಡಬೇಕೆಂದವರು ಕೇಳಿಕೊಂಡರು. ಸಹಕಾರಿ ವ್ಯವಸಾಯ ಪದ್ಧತಿಯನ್ನು ಒತ್ತಾಯದಿಂದ ಹೇರಲಾಗುವುದಿಲ್ಲವೆಂದೂ ಸೇವಾ ಸಹಕಾರಿ ಸಂಘಗಳ ಮೂಲಕ ಪ್ರೋತ್ಸಾಹ ಮಾತ್ರ ನೀಡಲಾಗುವುದೆಂದೂ ಇದರಿಂದ ಮಧ್ಯಮ ವರ್ಗಕ್ಕೆ ಪ್ರಯೋಜನ ದೊರೆಯುವುದೆಂದೂ ಅವರು ತಿಳಿಸಿದರು.

ಸಹಕಾರಿ ವ್ಯವಸಾಯವು ಎಲ್ಲಿಯೂ ಯಶಸ್ವಿಯಾಗಿಲ್ಲ ಕೆಲವು ಜನರು ಹೇಳಿದುದನ್ನು ಪರಿಶೀಲಿಸದೆ ಒಪ್ಪಿಕೊಳ್ಳುವುದರಿಂದ ಇದರ ಗಾಳಿ ಕಾಂಗ್ರೆಸಿಗೆ ಸೋಕಿತೆಂದೂ, ಭಾರತದ ಮಟ್ಟಿಗೆ ಈ ಕ್ರಮ ಪ್ರೋತ್ಸಾಹದಾಯಕವಲ್ಲವೆಂದೂ, ತಾತ್ವಿಕವಾಗಿ ಉತ್ತಮವೆಂದು ಕಂಡುಬಂದರೂ ವ್ಯಾವಹಾರಿಕವಾಗಿ ಜಟಿಲವಿದು ಎಂದು ಶ್ರೀ ಹನುಮಂತಯ್ಯನವರು ಅಭಿಪ್ರಾಯ ವ್ಯಕ್ತಪಡಿಸಿದರು. ನಡೆನುಡಿಗಳಲ್ಲಿ ಸಮರಸ ಬಯಸುವ ಕಾಂಗ್ರೆಸಿಗರು ಇದನ್ನು ಯಶಸ್ವಿಗೊಳಿಸಿದರೆ, ಜನರ ಬಾಳಿಗೆ ಶರಣುಹೋಗುವುದಾಗಿ ಅವರು ಹೇಳಿದರು. ಕಾಂಗ್ರೆಸಿಗರು ಮುಖ್ಯವಾಗಿ ತ್ಯಾಗಶೀಲರೂ ವಿಚಾರಪರರೂ ಆಗಬೇಕೆಂದವರು ಬಯಸಿದರು. ಯೋಜನೆಯ ಪ್ರಚಾರಕ್ಕಾಗಿಯೇ ವಿಪುಲ ಧನ ವ್ಯಯವಾಗುವುದನ್ನು ಖಂಡಿಸಿ, ಈ ಹಣವೂ ಕಾರ್ಯಕ್ರಮದ ಯೋಜನೆಯ ಬಗ್ಗೆ ಖರ್ಚಾಗಬೇಕೆಂದವರು ಹೇಳಿದರು. ಭಾರತದ ಆವಶ್ಯಕತೆಗಳತ್ತ ಹೊರಳಿ, ಅಧಿಕ ರಾಜಕೀಯ ಪಕ್ಷಗಳ ಬದಲು ಅಧಿಕ ಉತ್ಪಾದನೆಯಾಗಬೇಕು. ಇದಕ್ಕಾಗಿ ಎಲ್ಲರೂ ದುಡಿಯಬೇಕೆಂದು ಶ್ರೀ ಕೆಂಗಲ್ಲರು ಹೇಳಿದರು. ಆಸ್ತಿಕತೆ ಮತ್ತು ನಾಸ್ತಿಕತೆಗಳ ಸಮನ್ವಯವಾಗುವ ಆವಶ್ಯಕತೆಯನ್ನವರು ಪ್ರತಿಬಿಂಬಿಸಿ, ನ್ಯಾಯದಾನದಲ್ಲಿ ಬ್ರಿಟಿಷರು ಮಾಡಿಟ್ಟುದನ್ನೆ ಈಗ ಸ್ವತಂತ್ರರಾದ ನಾವೂ ಅನುಸರಿಸುವ ಕ್ರಮ ಸರಿಯಲ್ಲವೆಂದೂ, ಇಂದಿನ ಕಲ್ಯಾಣರಾಷ್ಟ್ರಕ್ಕೆ ಸರಿಹೊಂದುವ ನ್ಯಾಯದಾನ ಕ್ರಮ ಬೇಕೆಂದೂ, ದರಿದ್ರ ಶ್ರೀಮಂತರಲ್ಲಿ ಆರ್ಥಿಕ ಅಂತರವು ಅಧಿಕವಿರಬಾರದೆಂದೂ ಬಡವರಿಗೆ ಇದ್ದವರು ನೆರವು ನೀಡಬೇಕೆಂದೂ ಅವರು ವಿನಂತಿಸಿದರು. ಕಾಂಗ್ರೆಸಿಗರಲ್ಲಿ ಆತ್ಮಗೌರವ ಮತ್ತದಕ್ಕೆ ಬೇಕಾದ ವಿಚಾರಪರತೆಗಳು, ಸ್ವತಂತ್ರಾಭಿಪ್ರಾಯ ವ್ಯಕ್ತಪಡಿಸಲು ಕೆಚ್ಚು ಮತ್ತು ಶಿಸ್ತುಗಳು ಮೂಡಿಬರುವಂತಾಗಲೆಂದವರು ಹಾರೈಸಿದರು.

ತದನಂತರ, ಕಾಂಗ್ರೆಸ್ ಸಂಘಟನೆ, ಪ್ರಚಲಿತ ಸಮಸ್ಯೆಗಳು, ಸರಕಾರಿ ಆಡಳಿತೆಗಳಿಗೆ ಸಂಬಂಧಪಟ್ಟ ಹಲವಾರು ಗೊತ್ತುವಳಿಗಳು ಸ್ವೀಕೃತವಾದುವು. ಇವುಗಳಲ್ಲಿ ಭೂಸುಧಾರಣೆ ಮತ್ತು ಮದ್ಯಪಾನ ನಿರೋಧಗಳಿಗೆ ಸಂಬಂಧಿಸಿದ ಗೊತ್ತುವಳಿಗಳ ಮೇಲೆ ದೀರ್ಘಕಾಲ ಚರ್ಚೆಗಳು ನಡೆದುವು. ದ. ಕ. ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿನ ಖಾಸಗಿ ಶಾಲೆಗಳಿಗೆ ಇತ್ತೀಚೆಗೆ ಎದುರಿಸಬೇಕಾಗಿ ಬಂದ ಸಮಸ್ಯೆಗಳ ಬಗ್ಗೆಯೂ ಒಂದು ಗೊತ್ತುವಳಿಯು ಮಂಡಿಸಲ್ಪಟ್ಟಿತು. ಬೇರೆ ಬೇರೆ ಗೊತ್ತುವಳಿಗಳ ಮೇಲೆ ನಡೆದ ಚರ್ಚೆಯಲ್ಲಿ ಶ್ರೀಗಳಾದ ಟಿ. ಎ ಪೈ, ಕೆ ಬಾಲಕೃಷ್ಣ ರಾವ್, ಎಂ. ಎಲ್. ಸಿ., ಕೆ ಕೆ ಶೆಟ್ಟಿ ಎಂ. ಎಲ್. ಸಿ., ನರ್ಸಪ್ಪಯ್ಯ ಎಂ ಎಲ್ ಸಿ, ಕೆ ಆರ್. ಆಚಾರ್ ಎಂ. ಪಿ ಕೆ ಜತ್ತಪ್ಪ ರೈ, ಬಿ ಪಟ್ಟಬಿರಾಮ ಶೆಟ್ಟಿ, ಕೆ ಮೊಮ್ಮಪ್ಪ ಎಂ ಎಲ್ ಎ, ಜಿ ಕುಶಲ ಹೆಗ್ಡೆ, ಕುಕ್ಕಿಲ ಗಣಪಯ್ಯ ಶೆಟ್ಟಿ, ಬಾಲಕೃಷ್ಣ ರೈ ಮೊದಲಾದವರು ಭಾಗವಹಿಸಿದರು. ಶ್ರೀಗಳಾದ ಕೆ. ಕೆ ಶೆಟ್ಟಿ, ಟಿ ಎನ್ ಬಿಡೆ, ಕೆ ಸೂರ್ಯನಾರಾಯಣ ಅಡಿಗ ಇವರು ಧನ್ಯವಾದ ಅರ್ಪಿಸಿದರು. ಆರೋಗ್ಯ ಸಚಿವ ಡಾ| ಕೆ ಕೆ. ಹೆಗ್ಡೆಯವರೂ ಶ್ರೀ ಯು. ಎಸ್ ಮಲ್ಯ ಎಂ ಪಿ. ಯವರೂ ಶಾಸನ ಸಭಾ ಸದಸ್ಯರೂ ಸಭೆಯಲ್ಲಿ ಉಪಸ್ಥಿತರಿದ್ದರು.

ಸಮ್ಮೇಳನಕ್ಕೆ ಜಿಲ್ಲೆಯ ಎಲ್ಲೆಡೆಗಳಿಂದಲೂ ಅತ್ಯಧಿಕ ಸಂಖ್ಯೆಯಲ್ಲಿ ಪ್ರತಿನಿಧಿಗಳು ಸಮಾಗಮಿಸಿದ್ದರು. ಅಲ್ಲದೇ ಪ್ರೇಕ್ಷಕರೂ ಕಿಕ್ಕಿರಿದು ನೆರೆದಿದ್ದರು.

ಕಾಸರಗೋಡು ಮೈಸೂರಿಗೆ ಸೇರಲಿ

ಕಾಸರಗೋಡು ತಾಲೂಕು ನಿಜವಾಗಿಯೂ ಕನ್ನಡನಾಡಿನ ಅಂಗವಾಗಿರುವುದರಿಂದ, ಅದನ್ನು ಮೈಸೂರು ರಾಜ್ಯದ ದಕ್ಷಿಣಕನ್ನಡ ಜಿಲ್ಲೆಗೆ ತತ್‌ಕ್ಷಣ ಸೇರಿಸಲು ಆವಶ್ಯಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮೈಸೂರು ಮುಖ್ಯಮಂತ್ರಿ ಶ್ರೀ ಜತ್ತಿಯವರಿಗೆ ಕಾಸರಗೋಡು ಕರ್ನಾಟಕ ಸಮಿತಿಯ ಶಿಷ್ಟಮಂಡಳಿಯು ಒಂದು ಮನವಿಯನ್ನರ್ಪಿಸಿತು. ಈ ನಿಯೋಗವು ಶ್ರೀ ಬಿ ಶ್ರೀಧರ ಕಕ್ಕಿಲ್ಲಾಯರ ನೇತೃತ್ವದಲ್ಲಿ ಬಂದಿತ್ತು. ಮುಖ್ಯಮಂತ್ರಿಯವರೂ ಅಲ್ಲಿ ಉಪಸ್ಥಿತರಿದ್ದ ಶ್ರೀ ಯು ಎಸ್. ಮಲ್ಯ, ಎಂ ಪಿ ಅವರೂ ಈಗ ಈ ಬಗ್ಗೆ ಅನುಕೂಲಾಭಿಪ್ರಾಯವಿರುವುದೆಂದು ತಿಳಿಸಿ ಸಾಧ್ಯವಿರುವ ಪ್ರಯತ್ನ ನಡೆಸುವ ಆಶ್ವಾಸನೆಯಿತ್ತರು.

ಕಲಾವೃಂದದ ವಾರ್ಷಿಕೋತ್ಸವ

ಉಡುಪಿ ಕಲಾವೃಂದದ ವಾರ್ಷಿಕೋತ್ಸವವು ದಿನಾಂಕ ೨೪ರಂದು ಉಡುಪಿ ನಗರ ಸಭಾಪತಿ ಡಾ| ಕೆ ಎಲ್ ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವಿಷ್ಣುಮೂರ್ತಿ ಭಟ್ಟರು ಕುಮಾರ ವ್ಯಾಸ ಭಾರತದ ದ್ರೌಪದೀ ವಸ್ತ್ರಾಪಹರಣ ಭಾಗವನ್ನು ವಾಚಿಸಿದನಂತರ, ಶ್ರೀಗಳಾದ ಕನ್ಯಾಣ ಧೀಮ ಭಟ್ಟ ಮತ್ತು ಪೇಜಾವರ ಸೀತಾರಾಮಾಚಾರ್ಯರು ಸಾಹಿತ್ಯ ಮತ್ತು ಕಲೆಗಳ ವಿಚಾರವಾಗಿ ಮಾತನಾಡಿ, ಸಾಹಿತ್ಯ ಕಲೆಗಳು ಮಾನವನ ಉನ್ನತಿಗೆ ಕಾರಣವೆಂದೂ ಶೀಲ ಸಂವರ್ಧಕ ಸಾಹಿತ್ಯ ಮತ್ತು ಕಲೆಗಳನ್ನು ಪ್ರೋತ್ಸಾಹಿಸಬೇಕೆಂದೂ ಹೇಳಿದರು. ಅಧ್ಯಕ್ಷರು ಸಾಹಿತ್ಯಸೇವೆಯ ಸದುಪಯೋಗವನ್ನು ವಿವರಿಸಿದರು. ವೃಂದದ ಅಧ್ಯಕ್ಷ ಶ್ರೀ ಕೆ ಸುಬ್ರಾಯ ಪುರಾಣಿಕರು ಧನ್ಯವಾದ ಸಮರ್ಪಿಸಿದನಂತರ, ವೃಂದದ ಅಭಿಮಾನಿಗಳಿಂದ ನಾಟಕ ಪ್ರದರ್ಶನವು ನಡೆಯಿತು.

ಡಾ| ಹೆಗ್ಡೆಯವರ ಭಾವಚಿತ್ರ ಅನಾವರಣ

ಡಾ| ಹೆಗ್ಡೆಯವರ ಭಾವಚಿತ್ರ ಅನಾವರಣ—ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಈಗ ಮೈಸೂರು ರಾಜ್ಯದ ಆರೋಗ್ಯ ಮಂತ್ರಿಗಳಾಗಿರುವ ಡಾ| ಕೆ ಕೆ ಹೆಗ್ಡೆಯವರ ತೈಲಚಿತ್ರವನ್ನು ಮೈಸೂರು ಮುಖ್ಯಮಂತ್ರಿ ಶ್ರೀ ಬಿ ಡಿ ಜತ್ತಿ ಅವರು ಜಿಲ್ಲಾ ಬೋರ್ಡು ಕಾರ್ಯಾಲಯದಲ್ಲಿ ಅನಾವರಣ ಮಾಡಿದರು. ಡಾ| ಹೆಗ್ಡೆಯವರು ಉತ್ತಮ ರೀತಿಯ ಸೇವೆ ಸಲ್ಲಿಸುತ್ತಿರುವರೆಂದೂ ರಾಜ್ಯದ ಆರೋಗ್ಯ ಮತ್ತು ವೈದ್ಯಕೀಯ ವಿಭಾಗಗಳನು ಸಂಯೋಜಿತಗೊಳಿಸಿ ರಾಜ್ಯದಲ್ಲಿ ರೋಗರುಜಿನಗಳನ್ನು ತಡೆಗಟ್ಟುವತ್ತ ಪ್ರಥಮ ಪ್ರಾಶಸ್ತ್ಯ ನೀಡುತ್ತಿರುವರೆಂದೂ ಶ್ರೀ ಜತ್ತಿಯವರು ಪ್ರಶಂಸಿಸಿದರು. ಜನತೆಯ ಪ್ರೀತಿ, ವಿಶ್ವಾಸಗಳನ್ನು ಪಡೆಯಬೇಕಾದಲ್ಲಿ ಆತ ಸತ್ಯಸಂಧತೆ ನ್ಯಾಯಪರಿಪಾಲನೆಗಳನ್ನು ತೋರಿಸಬೇಕೆಂದವರು ಹೇಳಿದರು. ಆರಂಭದಲ್ಲಿ ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯವರು ಸ್ವಾಗತಿಸಿ ಡಾ| ಹೆಗ್ಡೆಯವರು ಸಲ್ಲಿಸಿದ್ದ ಸೇವೆಯನ್ನು ಕೊಂಡಾಡಿದರು. ಅಂತ್ಯದಲ್ಲಿ ಉಪಾಧ್ಯಕ್ಷ ಶ್ರೀ ಎನ್ ಎಸ್ ಪರಮೇಶ್ವರಯ್ಯನವರು ಆಭಾರ ಮನ್ನಿಸಿದರು.

ಉಡುಪಿಗಲ್ಲಿ ಪಶು ಇಲಾಖಾ ಡೈರೆಕ್ಟರರು

ಉಡುಪಿಗಲ್ಲಿ ಪಶು ಇಲಾಖಾ ಡೈರೆಕ್ಟರರು—ಡಾ ಕೆ. ಎಸ್ ಶೆಟ್ಟಿ, ಡೈರೆಕ್ಟರ್ ಒಫ್ ಎನಿಮಲ್ ಹಸ್ಬೆಂಡರಿ ಸರ್ವಿಸಸ್ ಮೈಸೂರು ಇವರು ಕಾರ್ಕಳದ ಗೋ ಆಸ್ಪತ್ರೆ ಮತ್ತು ಕೃತಕ ಗರ್ಭಧಾರಣಾ ಕೇಂದ್ರವನ್ನು ಪರಿಶೀಲಿಸಿ ತಾ. ೨೨ರಲ್ಲಿ ಉಡುಪಿಗೆ ಆಗಮಿಸಿದರು. ಮರುದಿನ ಅವರು ಉಡುಪಿ ಸಮೀಪದ ಬೈಲೂರಲ್ಲಿ ಹೊಸತಾಗಿ ಕಟ್ಟಿಸಿದ ಗೋ ಆಸ್ಪತ್ರೆ ಹಾಗೂ ಕೃತಕ ಗರ್ಭಧಾರಣಾ ಕೇಂದ್ರವನ್ನು ಸಂದರ್ಶಿಸಿ ಅಲ್ಲಿಯ ಅಭಿವೃದ್ಧಿಯನ್ನು ಪರಿಶೀಲಿಸಿದರು. ಈ ಕೃತಕ ಗರ್ಭಧಾರಣಾ ಕೇಂದ್ರವು ಜನಪ್ರಿಯವಾಗುತಿದ್ದು ಈಗಾಗಲೇ ರೈತರೂ ಜಾನುವಾರು ಉಳ್ಳವರೂ ಈ ಸುಧಾರಿತ ರೀತಿಯ ಪಶು ಸಂವರ್ಧನೆಯ ಅನುಕೂಲತೆಯನ್ನು ಕಂಡುಕೊಂಡಿರುವರು. ಇಷ್ಟರಲ್ಲೇ 783 ಪಶುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗಿದೆ. ಉಡುಪಿಗೆ ಒಂದು ಮೂರೆಯಸ್ಥಿರವ ಈ ಗೋ ಆಸ್ಪತ್ರೆಗೆ ಒಂದು ಮಾರ್ಗವು ಅತ್ಯಾವಶ್ಯಕವಿದ್ದು ನಗರ ಅಲ್ಲಿಗೆ ಅಸ್ವಸ್ಥ ಪಶುಗಳನ್ನು ಚಿಕಿತ್ಸೆಗಾಗಿ ಒಯ್ಯುವುದು ತುಂಬಾ ಕಷ್ಟವಾಗಿದೆ. ಈಗಾಗಲೇ ಎಸ್ಟಿಮೇಟ್ ತಯಾರಿಸಿರುವ ಸಾರ್ವಜನಿಕ ಕಾಮಗಾರಿ ಇಲಾಖೆಯವರು ಈ ರಸ್ತೆಯನ್ನು ಬೇಗನೆ ಮಾಡಿಕೊಡುವಂತಾಗಿ ನಿರೀಕ್ಷಿಸಲಾಗಿದೆ. ನೌಕರವರ್ಗಕ್ಕೆ ವಸತಿಗೃಹಗಳನ್ನು ರಚಿಸುವ ವ್ಯವಸ್ಥೆಯನ್ನೂ ಮಾಡಲಾಗುವುದೆಂದು ತಿಳಿದುಬರುತ್ತದೆ. ಡಾ| ಶೆಟ್ಟರು ಜಾನುವಾರು ಸಂವರ್ಧನೆಯ ಕುರಿತು ಉಡುಪಿಯ ಅನೇಕ ಪ್ರಮುಖರೊಡನೆ ವಿಚಾರವಿನಿಮಯ ನಡೆಸಿ ಕುಂದಾಪುರಕ್ಕೆ ತೆರಳಿದರು.

ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ ಉಡುಪಿ ಶಾಖೆಯ ವಾರ್ಷಿಕ ಸಭೆಯು

ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ ಉಡುಪಿ ಶಾಖೆಯ ವಾರ್ಷಿಕ ಸಭೆಯು—ಇದೇ ತಾ 18ರಂದು ಮಣಿಪಾಲದಲ್ಲಿ ಡಾ| ಸುಂದರ್‌ರಾಮ್ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಮುಂದಿನ ವರ್ಷಕ್ಕೆ ಈ ಕೆಳಗಿನ ಅಧಿಕಾರಿ ವರ್ಗದ ಆಯ್ಕೆಯಾಗಿದೆ.

ಡಾ| ಸುಂದರ್‌ರಾಮ ಪೈಗಳು ಅಧ್ಯಕ್ಷ; ಡಾ| ಪಿ ಆರ್. ನಾಯ್ಕರು ಉಪಾಧ್ಯಕ್ಷರು; ಡಾ| ವಿ ಎಲ್. ಪಂಡಿತರು ಕಾರ್ಯದರ್ಶಿ ಮತ್ತು ಖಜಾಂಚಿ; ಡಾ| ಎ. ಕೃಷ್ಣರಾವ್, ಡಾ| ಕೆ ಕೃಷ್ಣಸ್ವಾಮಿ, ಡಾ| ಬಿ ಬಿ. ಶೆಟ್ಟಿ ಡಾ| ಕೆ ಎಲ್ ಐತಾಳ್ ಸದಸ್ಯರು. ಅಲ್ಲದೆ ಡಾ| ಕೆ ಮೋಹನದಾಸ ಪೈಯವರು ಪ್ರದೇಶ ಕೌನ್ಸಿಲಿನ ಪ್ರತಿನಿಧಿಗಳಾಗಿಯೂ ಡಾ| ಟಿ. ಎಂ. ಎ. ಪೈಗಳು ಕೇಂದ್ರ ಕೌನ್ಸಿಲಿನ ಪ್ರತಿನಿಧಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಸ್ವತಂತ್ರ ಪಕ್ಷದ ಸಮ್ಮೇಳನ

ಸ್ವತಂತ್ರ ಪಕ್ಷದ ದ. ಕ ಜಿಲ್ಲೆಯ ಸಮ್ಮೇಳನವು ಮಂಗಳೂರಲ್ಲಿ ತಾ ೨೫ ರಂದು ಶ್ರೀ ಮಿನೂ ಮಸಾನಿ ಎಂ ಪಿ. ಅವರಿಂದ ಉದ್ಘಾಟಿತವಾಯಿತು. ಶ್ರೀ ಜೆ ಎಂ. ಲೋಬೋಪ್ರಭು ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಆರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಸ್ವಾಗತಿಸಿದರು. ಶ್ರೀ ಮಸಾನಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಭಾರತ ಚೀನಾ ಸಂಬಂಧದಲ್ಲಿನ ಭಾರತದ ಧೋರಣೆಯನ್ನೂ ಕಾಂಗ್ರೆಸಿನ ಆಡಳಿತೆಯನ್ನೂ ಖಂಡಿಸಿದರು. ಕಾಂಗ್ರೆಸ್ ದೇಶದ ಭೂ, ಕೈಗಾರಿಕೆ ವಿದ್ಯೆ, ವ್ಯಾಪಾರ ಎಲ್ಲ ಕ್ಷೇತ್ರಗಳಲ್ಲಿಯೂ ಹಸ್ತಕ್ಷೇಪ ನಡೆಸುವ ಧೋರಣೆಯನ್ನಿಟ್ಟುಕೊಂಡಿರುವುದನ್ನು ಅಧ್ಯಕ್ಷರು ಪ್ರತಿಭಟಿಸಿ, ಮಾನವನ ಸ್ವಾತಂತ್ರ್ಯ ರಕ್ಷಣೆಗಾಗಿ ಸ್ವತಂತ್ರಪಕ್ಷ ಹುಟ್ಟಿಕೊಂಡಿದೆ ಎಂದು ಹೇಳಿದರು. ಮೈಸೂರಲ್ಲಿ ಭೂ ಮಸೂದೆಯು ಬದಲು ನ್ಯಾಯಾಂಗೀಯವನ್ನು ವ್ಯವಹಾರಕ್ಕೆ ತರಬೇಕೆಂಬ, ಚೀನದ ಆಕ್ರಮಣವನ್ನು ಖಂಡಿಸುವ ಟಿಬೇಟಿನ ಬಗ್ಗೆ ಯುಕ್ತರಾಷ್ಟ್ರಸಂಘದಲ್ಲಿ ತೋರಿದ ಭಾರತ ಸರಕಾರದ ನಿಲುವಿಗೆ ವಿಷಾದ ಸೂಚಿಸುವ, ಕಾಸರಗೋಡನ್ನು ಮೈಸೂರಿಗೆ ಸೇರಿಸಬೇಕೆಂಬ ಮೊದಲಾದ ಗೊತ್ತುವಳಿಗಳು ಸ್ವೀಕೃತವಾದುವು. ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ ಕೆ ಉಗ್ಗಪ್ಪ ಶೆಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ಉನ್ನತ ಫಲಿತಾಂಶ

ಮೈಸೂರು ಹಿಂದಿ ಪ್ರಚಾರ ಪರಿಷತ್ತಿನವರು ಕಳೆದ ಸಪ್ಟಂಬರ ತಿಂಗಳಲ್ಲಿ ಜರಗಿಸಿದ ಹಿಂದೀ ಪರೀಕ್ಷೆಗಳಲ್ಲಿ ಉಡುಪಿ ಹಿಂದೀ ಪ್ರಚಾರ ಪರಿಷತ್ತಿನಿಂದ ಪ್ರಥಮಾ ಪರೀಕ್ಷೆಗೆ ಕುಳಿತ ೧೭ ಜನರಲ್ಲಿ ೬ ಜನರು ಪ್ರಥಮ ಶ್ರೇಣಿಯಲ್ಲೂ ೪ ಜನರು ದ್ವಿತೀಯ ಶ್ರೇಣಿಯಲ್ಲೂ ೬ ಜನರು ತೃತೀಯ ಶ್ರೇಣಿಯಲ್ಲೂ ಉತ್ತೀರ್ಣರಾಗಿರುವರು. ಹಾಗೆಯೇ ಮಧ್ಯಮಾ ಪರೀಕ್ಷೆಯ ೧೨ ವಿದ್ಯಾರ್ಥಿಗಳಲ್ಲಿ ಐವರು ದ್ವಿತೀಯ ಶ್ರೇಣಿಯಲ್ಲೂ ನಾಲ್ವರು ತೃತೀಯ ಶ್ರೇಣಿಯಲ್ಲೂ ಉತ್ತೀರ್ಣರಾಗಿರುವರೆಂದೂ ತಿಳಿಯುತ್ತದೆ.

ಬುನಾದಿ ಶಾಲೆಗಳಾಗಿ ಪರಿವರ್ತಿಸುವ ಚಟವನ್ನು ಮುಂದುವರಿಸದೆ ಈಗಾಗಲೇ ಪರಿವರ್ತನೆ ಹೊಂದಿದ ಶಾಲೆಗಳ ಉತ್ಕೃಷ್ಟತೆಗೆ ಅವನ್ನು ತರುವ ಪ್ರಯತ್ನವನು ಮಾಡುವುದು.

ದಕ್ಷತೆ ತರುವ ಪ್ರಯತ್ನ

ಆಡಳಿತೆಯಲ್ಲಿ ದಕ್ಷತೆಯಿಲ್ಲ ಎಂಬುದು ಮೈಸೂರು ಸರಕಾರವು ದಿನಂಪ್ರತಿ ಕೇಳುವ ದೂರು. ಇದಕ್ಕಾಗಿ ಮೈಸೂರಿನ ಮಂತ್ರಿ ರಾಚಯ್ಯನವರು ಒಂದು ಹೊಸ ಯೋಜನೆಯನ್ನ ಮಾಡಿದ್ದಾರೆ. ತಾವು ಜಿಲ್ಲೆಯಲ್ಲಿ ಸಂಚರಿಸುವ ವೇಳೆ ಮನವಿಗಳನ್ನು ಸ್ವೀಕರಿಸುವ ಬದಲು, ಮನವಿಗಾರರ ಪಕ್ಷದ ವಾದವನ್ನೂ ಅಧಿಕಾರಿಗಳ ವಾದವನ್ನೂ ಒಂದೇ ಕಡೆ ಕೇಳುವ ವ್ಯವಸ್ಥೆಯನ್ನು ಮಾಡುವುದಕ್ಕೆ ಇವರು ನಿರ್ಧರಿಸಿದ್ದಾರೆ. ಇದರಿಂದ ತತ್‌ಕ್ಷಣ ನಿರ್ಧಾರಕ್ಕೆ ಬರಲು ಸಹಾಯವಾಗುವುದೆಂದವರು ಹೇಳಿದ್ದಾರೆ.

ನಿವೃತ್ತಿಯೂ ಒಂದು ವೃತ್ತಿಯೊ?

ನಿವೃತ್ತ ಗವರ್ನರ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರು ತಾವು ಪಡೆಯುತ್ತಿರುವ ನಿವೃತ್ತ ವೇತನದ ಮೇಲೆ ವೃತ್ತಿ ತೆರಿಗೆ ಹೇರಿಸಿದ ಮದ್ರಾಸ್ ಮುನಿಸಿಪಲ್ ಕಾರ್ಪೊರೇಶನ್ನಿನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಅದನ್ನು ಸ್ವೀಕರಿಸಲಾಗಿದೆ.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ, 1 25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುಸ್ತಕ ವಿಮರ್ಶೆ

ಕಾಮಧೇನು—(ಆಗಸ್ಟ ವಿಶೇಷ ಸಂಚಿಕೆ) ಸಂಪಾದಕರು: ಶ್ರೀ ರಂಗನಾಥ ದಿವಾಕರರು, ಧಾರವಾಡ. ವಾರ್ಷಿಕ ಚಂದಾ: ರೂ. ೫

ಕೌಜಲಗಿ ಹನುಮಂತರಾಯರ ಸ್ಮಾರಕ ನಿಧಿಯಿಂದ ಪ್ರಗತಿ, ಸಮೃದ್ಧಿ ಮತ್ತು ಸಂಸ್ಕೃತಿಗಳನ್ನು ಅಗ್ರಗಣ್ಯವೆಂದು ಗಣಿಸಿ, ಪ್ರಕಾಶ ಹೊಂದುವ “ಕಾಮಧೇನು”ವಿನ ಈ ಸ್ವಾತಂತ್ರ್ಯ ಸಂಚಿಕೆಯಲ್ಲಿ ಸಾಮಾಜಿಕ ಜೀವನದ ಬಹುಮುಖ ಕ್ಷೇತ್ರಗಳ ಕುರಿತಾದ ಅನುಭವಸಿದ್ಧ ಲೇಖನಗಳು ಇವೆ, ಸಂಚಿಕೆ ಸಂಗ್ರಾಹ್ಯವಿದೆ.

ವಿಜಯವಾಣಿ-(ದಸರಾ ವಿಶೇಷ ಸಂಚಿಕೆ) ಸಂಪಾದಕರು: ಶ್ರೀ ಹೆಚ್. ಆರ್. ಗುಂಡೂರಾವ್, ತುಮಕೂರು, ಬೆಲೆ. ೦ ೫೫.

ತುಮಕೂರಿನ ಸಾಪ್ತಾಹಿಕ ಪತ್ರಿಕೆ “ವಿಜಯವಾಣಿ”ಯು ಈ ಬಾರಿ ದಸರಾ ಸಂಚಿಕೆಯನ್ನು ಹೊರಡಿಸಿದೆ. ‘ಬಿಡುಗಡೆ’ ಎಂಬ ಕಥೆ “ಭಾಸನ ಭರತ” ಎಂಬ ಭರತ ಚಿತ್ರ, ಸ್ವತಂತ್ರ ಪಕ್ಷ, ಗೀತ ಗೋವಿಂದ ಬಸವಣ್ಣನವರ ಸಾಹಿತ್ಯಗಳ ಮೇಲೆ ದೃಷ್ಟಿ ಬೀರುವ ಲೇಖನಗಳೂ ಇವೆ ಒಟ್ಟಿನಲ್ಲಿ ವಿವಿಧ ಅಭಿರುಚಿಯವರಿಗೆ ರೋಚಕವೆನಿಸುವ ಲೇಖನ ವೈವಿಧ್ಯ ಇಲ್ಲಿದೆ

ವಿಕ್ರಮ—(ವಿಜಯ ದಶಮಿ ವಿಶೇಷಾಂಕ) ಸಂಪಾದಕರು. ಶ್ರೀ ಬಿ ಎಸ್. ಎನ್. ಮಲ್ಯ, ಬೆಂಗಳೂರು ಬೆಲೆ: ರೂ. ೧—೦೦

ಕನ್ನಡದ ರಾಜಧಾನಿ ಬೆಂಗಳೂರಿನಿಂದ ಬೆಳಕು ಕಾಣುವ ಸಾಪ್ತಾಹಿಕ “ವಿಕ್ರಮ”ದ ವಿಜಯ ದಶಮಿಯ ಶುಭದಿನದ ಬೃಹತ್ ಸಂಚಿಕೆಯನ್ನು ಹೃತ್ಪೂರ್ವಕ ಸ್ವಾಗತಿಸುತ್ತೇವೆ. ಭಾರತದಲ್ಲಿ ತಮ್ಮ ಪ್ರಚಾಸದಿಂದ ಇಲ್ಲಿನ ಜನತೆಯ ಮೇಲೆ, ಇತಿಹಾಸದ ಪೌರ್ಣಿಮೆ ಪೂರ್ಣಚಂದ್ರನನ್ನು ರಾಹು ಮುಸುಕಿದಂತೆ ದಬ್ಬಾಳಿಕೆ ನಡೆಸಿದ್ದು, ಅವರನ್ನು ನಾವೆಲ್ಲರೂ ಒಗ್ಗೂಡಿ ಹೊರಗೋಡಿಸಿ ಇಂದು ಸ್ವತಂತ್ರರೆನಿಸಿಕೊಳ್ಳುವೆವಾದರೂ ಶ್ರೀ ವೆಂಕಟೇಶ್ವರ ಗೋವಿಂದ ಪೈಯವರ ರಾಹುವನು ತೊಲಗಿಸಿದೋ ಕೇತುವನು ತಂದೆ ಎಂಬ ಉಕ್ತಿಯಾಗ ಚೀನಾದ ಆಕ್ರಮಣದಿಂದ ಇನ್ನಷ್ಟು ಸಾರ್ಥಕವೆನಿಸುವಂತಾಗಿದೆ ಈ ವಿಶೇಷಾಂಕದಲ್ಲಿ ರಾಷ್ಟ್ರೀಯ ಪ್ರಶ್ನೆ ಹಾಗೂ ಕಾರ್ಯಕ್ರಮಗಳ ಬಗ್ಗೆ ವಿವಿಧ ತಜ್ಞರಿಂದ ಬರೆಸಲ್ಪಟ್ಟ ಬರಹಗಳು ನಮ್ಮ ನಾಡಿಗರಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸಲು ಸಹಕಾರಿಯಾಗುವುದು ನಿಸ್ಸಂದೇಹ ನಿವೃತ್ತ ಮಹಾದಂಡನಾಯಕ ಕಾರ್ಯಪ್ಪ, ಡಾ। ಬಿ ಆರ್. ಶೆಣೈ, ಮೊದಲಾದವರ ಲೇಖನಗಳು ಜನತೆಯ ವಿಚಾರ ಶಕ್ತಿಯನ್ನು ಕೆರಳಿಸುವುದರಲ್ಲಿ ಸಂದೇಹವಿಲ್ಲ ಮುಖಚಿತ್ರ ಆಕರ್ಷಕವಿದೆ.

ಯುಗಪುರುಷ—(ದಸರಾ ವಿಶೇಷಾಂಕ) ಸಂಪಾದಕರು: ಕೊಡತ್ತೂರು ಅನಂತ ಪದ್ಮನಾಭ ಉಡುಪ, ಕಿನ್ನಿಗೋಳಿ. ಬೆಲೆ: ರೂ. ೧ ೫೦.

ಮೇಲ್ತರಗತಿಯ ಸಾಹಿತ್ತಿಕ ಲೇಖನಗಳಿಂದ ಪ್ರಕಾಶಗೊಳ್ಳುವ ಮಾಸಪತ್ರಿಕೆಯ ಈ ಸಂಚಿಕೆಯು ಸರ್ವಾಂಗ ಸುಂದರವಾಗಿದೆ ಭಿನ್ನ ಭಿನ್ನ ಅಭಿರುಚಿಯನ್ನು ಕೆರಳಿಸಿ ಸಮಾಜದ ಎಲ್ಲ ಕ್ಷೇತ್ರಗಳವರಿಗೂ ಉಪಯುಕ್ತ ಫಲವೀಯ ಬಹುದಾದ ಲೇಖನಗಳು ಈ ವಿಶೇಷ ಸಂಚಿಕೆಯಲ್ಲಿ ರಸದೌತಣವನ್ನೀಯುತ್ತಿವೆ. ಶ್ರೀಗಳಾದ ಮಿರ್ಜಿ ಅಣ್ಣಾರಾಯ, ಕೆ. ಆರ್ ಉಡುಪ, ಕೆ. ಎಸ್ ಕರ್ಪೂರ ರಂ. ಶ್ರೀ ಮುಗಳಿ ಡಾ ಗೋಪಾಲಕೃಷ್ಣ ರಾವ್ ಮೊದಲಾದವರ ಲೇಖನಗಳೂ, ಚನ್ನವೀರ ಕಣವಿ, ಸೇಡಿಯಾಪ್ಪ, ಬಿ ಹೆಚ್. ಶ್ರೀಧರರ ಕವನಗಳೂ ವಿಚಾರ ಭಾವ ಪ್ರಚೋದಕವಿವೆ. ಮುಖಪೃಷ್ಠವನ್ನು ಶ್ರೀ ಟಿ ಕೃಷ್ಣರಾಯರ ಕಲಾಕೃತಿಯು ಅಲಂಕರಿಸಿದೆ.

Divine Life- 73rd Birthday number) Editor: Sri Shivaprem Reshikesh Price Rs 2.

ಸಫಲ ಜೀವನ

(೫ನೇ ಪುಟದಿಂದ)

ಎಲ್ಲರ ಗೌರವಾಭಿಮಾನಗಳಿಗೆ ಪಾತ್ರರಾಗಿದ್ದರು. ತದನಂತರ ಅವರು ಅಮೆರಿಕೆಗೆ ತೆರಳಿ ಅಲ್ಲಿ ನೇತ್ರಸಂಬಂಧದ ಸ್ನಾತಕೋತ್ತರ ಅಭ್ಯಾಸಮಾಡಿದರು ಅಲ್ಲಿಂದ ಸಫಲರಾಗಿ ಮರಳಿದನಂತರ ಅವರ ಸಂಬಂಧಿಕರು ಬೊಂಬಾಯಿಯಲ್ಲಿಯೆ ಪ್ರಾಕ್ಟೀಸ್ ಮಾಡಬೇಕೆಂದು ಸಲಹೆಯಿತ್ತರು. ಆದರೆ, ಅವರು ಅಮೆರಿಕೆಯಲ್ಲಿರುವಾಗ, ತಾನೇನುಮಾಡಬೇಕೆಂದು ಅವರು ನಿರ್ಧರಿಸಿದ್ದರು. ಭಾರತಕ್ಕೆ ಹಿಂದಿರುಗಿ, ಅವರು ದೊಡ್ಡ ಆಸ್ಪತ್ರೆಗಳನ್ನೂ ಕಿಕ್ಕಿರಿದ ನಗರಗಳನ್ನೂ ತ್ಯಜಿಸಿ, ತನ್ನ ಸಹಾಯಕರ ಪಂಗಡವೊಂದಿಗೆ ಹಳ್ಳಿಗಳತ್ತ ಸರಿದರು.

ಮೋದಿಯವರು ತನ್ನ ರೋಗಿಗಳೊಡನೆ ಮಾತ್ರವಲ್ಲ, ತನ್ನ ಕೀರ್ತಿ ದಿಗ್ದೇಶಗಳಲ್ಲಿ ಹರಡುತ್ತಿರುವುದನ್ನು ಕಂಡು ಈರ್ಷ್ಯೆಯಿಂದ ಕೂಡಿದ ಸಂಕುಚಿತ ಮನೋವೃತ್ತಿಯ ಜನರೊಡನೆಯೂ ಬಹಳವಾಗಿ ಹೋರಾಡಬೇಕಾಯಿತು. ಕೆಲವರು 'ಡಾಂಬಿಕ' ಎಂದವರನ್ನು ಹೆಸರಿಸಿದರು 'ನಾನು ಒಬ್ಬನೇ ಆಗಿದ್ದರೆ, ಇದು ತನಕ ಉಳಿಯುತಿದ್ದಿಲ್ಲ; ಈ ಮೊದಲೇ ಯಾವಾಗಲೊ ಕೊಲೆಯಾಗಿ ಹೋಗುತಿದ್ದೆ” ಎಂದೊಮ್ಮೆ ಅವರು ಉದ್ಗರಿಸಿದ್ದರು. ಕೊನೆಗೆ ಮೋದಿಯವರು ಅಸಂಖ್ಯಾತ ಜನರನ್ನೂ ಉನ್ನತ ಮಟ್ಟದ ವೈದ್ಯರನ್ನೂ ಕರೆದು, ತನ್ನ ಚಿಕಿತ್ಸೆಯ ಸ್ಥಳವನ್ನು ಸಂದರ್ಶಿಸುವಂತೆ ಕೇಳಿ ಕೊಂಡರು. ಹೀಗೆ ಆಹ್ವಾನವನ್ನು ಸ್ವೀಕರಿಸಿ ತೆರಳಿದವರು ಅವರ ನೈಪುಣ್ಯ ಮತ್ತು ಕೌಶಲಕ್ಕೆ ಬೆರಗಾಗಿ ದಿಗ್ಭ್ರಾಂತರಾದರು. ಇತ್ತೀಚೆಗೆ ಅವರು ಅಮೆರಿಕೆ ಮತ್ತು ಸೋವಿಯತ್ ರಶ್ಯಗಳಿಗೆ ಭೇಟ್ಟಿಇತ್ತಾಗ, ತನ್ನ ನಿಪುಣತೆಯಲ್ಲಿ ಪುನಃಗೆದ್ದುಬಂದರು.

ಕೊನೆಗೆ, ಅವರ ಸೇವೆಯ ಸತ್ಯಸಂಗತಿಯನ್ನು ಎಲ್ಲರೂ ಕಂಡುಕೊಂಡರು. ಮೈಸೂರು ಸರಕಾರವು ಮೋದಿಯವರ ಸಂಚಾರಿ ಚಿಕಿತ್ಸಾಕೇಂದ್ರವನ್ನು ತನ್ನ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಲ್ಲಿ ಸೇರಿಸಿಕೊಂಡು ಅವರಿಗೆ ಆರ್ಥಿಕ ಸಹಾಯವನ್ನೀಯುತ್ತಿದೆ. ಆಂಧ್ರ ಸರಕಾರವು ಡಾ ಮೋದಿಯವರು ನಗರ ಅಥವಾ ಹಳ್ಳಿಗಳಿಗೆ ಕಾಲಿರಿಸಿದಾಗ, ಅಲ್ಲಿನ ಶಾಲೆಯನ್ನು ಅವರಿಗೆ ತೆರವು ಮಾಡಿ ಕೊಡಬೇಕೆಂದು ಆಜ್ಞೆಯಿತ್ತಿದೆ (ಹೀಗೆ ಕೊಡಲಾದ ರಜೆಯ ದಿನವನ್ನು ಇತರ ರಜಾದಿನಗಳಲ್ಲಿ ಕೆಲಸಮಾಡಿ ಭರ್ತಿ ಮಾಡಿಕೊಳ್ಳಲಾಗುತ್ತದೆ) ಗ್ರಾಮೀಣ ಜನತೆಗೆ ಮೋದಿಯವರು ಸಲ್ಲಿಸಿದ ಸೇವೆಯನ್ನು ಅನುಲಕ್ಷಿಸಿ, ೧೯೫೭ರ ಗಣರಾಜ್ಯ ದಿನದಂದು ಭಾರತ ಸರಕಾರವು ತನ್ನ ಅಭಿಮಾನವನ್ನು ಪ್ರದರ್ಶಿಸಿದೆ. ಆ ದಿನ ಭಾರತ ಗಣರಾಜ್ಯದ ಅಧ್ಯಕ್ಷ ಡಾ। ರಾಜೇಂದ್ರ ಪ್ರಸಾದರು ಅವರಿಗೆ “ಪದ್ಮಶ್ರೀ” ಬಿರುದನ್ನುದಯಪಾಲಿಸಿದ್ದಾರೆ ಡಾ। ಮೋದಿಯವರು ದಿನ ಒಂದರ ಹದಿನಾರು ತಾಸು ದುಡಿಯುತ್ತಾರೆ ಆದ್ದರಿಂದ, ತನ್ನ ಕುಟುಂಬದೊಡನೆ ಇರಲು ಸಾಕಷ್ಟು ಸಮಯ ಅವರಿಗೆ ಲಭಿಸುವುದಿಲ್ಲ. ಭಾರತದ ಅಂಧರಸಲುವಾಗಿ ಏನನ್ನಾದರೂ ತ್ಯಾಗಮಾಡಲು ಸಿದ್ಧರಾಗಿರುವ ಮೋದಿಯವರು “ನಾನು ನನ್ನ ಪಾಲಿಗೆ ಜೀವನ ಅಥವಾ ಧರ್ಮದಲ್ಲಿ ಇಷ್ಟು ಹುದುದಿಲ್ಲ ಧರ್ಮವೆಂಬುದೊಂದು ಊರುಗೋಲು. ನೀವು ನಡೆಯಲು ಕಲಿತಿರೆಂದರೆ, ಅನಂತರ ಊರುಗೋಲಿನ ಆವಶ್ಯಕತೆ ಇರುವುದಿಲ್ಲ ನರಳುವ ಮಾನವ ಶರೀರವೇ ದೇವಾಲಯ. ಅವರ ಸೇವೆ ಸಲ್ಲಿಸುವುದೇ ದೇವಾರ್ಚನೆಯ ಅಮೋಘ ವಿಧಾನ. ನಾನು ಈ ಬಗೆಯ ಸೇವೆಯಿಂದ ಅಪರಿಮಿತ ಸಂತ ತುಂಬಿಲನಾಗುತ್ತೇನೆ. ನನಗ ಹೆಂಡತಿ ಮತ್ತು ಒರ್ವ ಮಗ ಇದ್ದಾರೆ ಅವರು ಧಾರವಾಡದಲ್ಲಿ ನನ್ನ ಸಂಬಂಧಿಕರೊಡನೆ ವಾಸಿವಾಗಿದ್ದಾರೆ ನನ್ನಂತೆ ಗ್ರಾಮದಿಂದ ಗ್ರಾಮಕ್ಕೆ ಸಂಚರಿಸುತ್ತ ಹೋಗುವುದು ಅವರಿಗೆ ಅತೀವ ಪ್ರಯಾಸವಾಗಬಹುದು. ಅವರೂ ತ್ಯಾಗ ಮಾಡುತ್ತಾರೆ ಎಂದು ಒಬ್ಬ ಸಾಮಾನ್ಯ ಮನುಷ್ಯ ಹೇಳಬಹುದು.” ಎಂದು ಹೇಳುತ್ತಾರೆ

ಮೂಲ: ಸತ್ಯನ್

ಅನುವಾದ: ಗೋರಾ.

ಸ್ವಾಮಿ ಶಿವಾನಂದರ ೭೩ನೆಯ ಜನ್ಮದಿನದ ಸಂಸ್ಮರಣೆಗಾಗಿ ಪ್ರಕಟಗೊಂಡ ಈ ಮಾಸಪತ್ರಿಕೆಯ ವಿಶೇಷಾಂಕವು ಧಾರ್ಮಿಕ ವಿಷಯದ ಬಗ್ಗಿರುವ ಒಂದು ಕೈಪಿಡಿಯಂತಿದೆ ವಿಶ್ವದ ಬೇರೆ ಬೇರೆ ದೇಶಗಳ ಪಂಡಿತರ ಚಿಕ್ಕದೊಡ್ಡ ಕೃತಿಗಳಿಂದ ಅಲಂಕೃತಗೊಂಡಿರುವ ಈ ಬೃಹತ್ ಸಂಚಿಕೆಯ ವಿಷಯ ವೈವಿಧ್ಯವು ಧರ್ಮವನ್ನು ತಿಳಿಯ ಬಯಸುವವರಿಗೆ ಮತ್ತು ಅದರ ಬಗ್ಗೆ ವಿಶೇಷ ಜ್ಞಾನವನ್ನು ಪಡೆಯಬಯಸುವವರಿಗೆ ಜ್ಞಾನ ಪ್ರದರ್ಶಿಕೆಯಾಗಿದೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿನ ಸ್ವಾಮಿ ಶಿವಾನಂದರ ಅನುಭಾವಿಗಳೂ ಅಧಿಕ ಸಂಖ್ಯೆಯಲ್ಲಿ ಈ ವಿಶೇಷ ಸಂಚಿಕೆಗೆ ತಮ್ಮ ಅಮೂಲ್ಯ ಕೃತಿಗಳನ್ನಿತ್ತು ಕಳುಹಿಸಿದ್ದಾರೆ ಸಂಚಿಕೆಯ ಬಹು ವಿಷಯಗಳು ಬಹುಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ ಸಂಪಾದಕರ ಪರಿಶ್ರಮವೂ ಸ್ವಾಮಿ ಶಿವಾನಂದರ ಅಭೀಷ್ಟವೂ ಈಡೇರಿವೆಯೆಂದು ಹೇಳಬಹುದು

— ಗೋರಾ

ಉತ್ತರ ಪ್ರದೇಶದ ಲಕ್ನೋದಲ್ಲಿರುವ ರಾಜ್ಯ ವಸ್ತು ಸಂಗ್ರಹಾಲಯವು ೧೮೬೩ರಲ್ಲಿ ಸ್ಥಾಪನೆ ಗೊಂಡಿತ್ತು ಇಲ್ಲಿ ಪ್ರಾಚ್ಯ ವಸ್ತುಗಳು, ನಾಣ್ಯಗಳು, ಮೊದಲಾದವುಗಳ ನಾನಾ ಸಂಗ್ರಹಗಳಿವೆ, ಸುಮಾರು ೧೫ನೆಯ ಶತಮಾನದಿಂದ ೧೯ನೆಯ ಶತಮಾನದ ಮಧ್ಯಾವಧಿಯವರೆಗಿನ ವರ್ಣಚಿತ್ರಗಳ ಸಂಗ್ರಹವೂ ಇಲ್ಲಿದೆ. ಈ ಚಿತ್ರವು ೧೭ನೆ ಶತಮಾನದಲ್ಲಿ ರಚಿತವಾಗಿದ್ದು ಈ ಸಂಗ್ರಹಾಲಯದಲ್ಲಿರುವ ವರ್ಣ ಚಿತ್ರದ ಪ್ರತಿರೂಪವಿದೆ

ಹರಿವಂಶ ಪುರಾಣವೆಂಬ ಪುರಾಣ ಗ್ರಂಥವು ಭಾರತೀಯರಿಗೆ ಪ್ರಿಯವಾಗಿದೆ ಇದು ೧೬ನೆಯ ಶತಮಾನದಲ್ಲಿ ಆಗಿನ ಮೊಗಲ ಅರಸರ ಉದಾರತೆಯಿಂದ ಪಾರಸಿ ಭಾಷೆಗ ಅನುವಾದಗೊಂಡಿತು ಈ ಅನುವಾದದ ಹಸ್ತ ಪ್ರತಿಯಲ್ಲಿರುವ ಬಲಿ ಮತ್ತು ವಾಮನರೂಪಿ ವಿಷ್ಣು ಇವರ ನಡುವಿನ ಭೇಟಿಯೊಂದನ್ನು ಚಿತ್ರಿಸಿರುವುದನ್ನು ಇಲ್ಲಿ ನೋಡಬಹುದು. ಇದೇ ಬಗೆಯ ವಿವಿಧ ಕಲಾಚಿತ್ರಗಳು ಭಾರತದ ಬೇರೆ ಬೇರೆ ವಸ್ತು ಸಂಗ್ರಹಾಲಯಗಳಲ್ಲಿವೆ ಭಾರತೀಯರ ಕಲಾರಾಧನೆಯ ಆಳ ನಮಗಿದರಿಂದ ವ್ಯಕ್ತವಾಗುವುದಿಲ್ಲವೆ?

‘ನವಯುಗ’ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ
ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ

ರಾಜಕೀಯ

(೧ನೇ ಪುಟದಿಂದ)

ದ್ರೇಕದಿಂದ ವರ್ತಿಸಿ ಪ್ರಯೋಜನವಿಲ್ಲ ಅದು ಅವಿವೇಕವೂ ಆಗುತ್ತು.

ಪ್ರಧಾನಿ ನೆಹರೂ ವಿಧಾನಸಭೆಯ ಒಂದು ಭಾರಿ ಸಭೆಯಲ್ಲಿ ಚೀನಾ-ಭಾರತಗಳ ನಡುವಿನ ಶತಶತಮಾನಗಳ ಬಾಂಧವ್ಯದ ವಿವರಣೆ ನೀಡಿತ್ತು, ಈಗಿನ ಚೀನೀ ಸರಕಾರದ ವಕ್ರಮಾರ್ಗವನ್ನು ಖಂಡಿಸಿದರು. ಆದರೆ, ಖಂಡನೆ ಮಂಡನೆಗಳಿಂದ, ದೇಶದ ರಕ್ಷಣೆಯಾಗುವಂತಿಲ್ಲವೆಂಬುದು ಈಗಾಗಲೇ ಅನುಭವಕ್ಕೆ ಬಂದಿದೆ "ಶಠಸ್ಯ ಪ್ರತಿ ಶಾಠ್ಯಂ" ಎಂಬಂತೆ ಕಮ್ಯುನಿಸ್ಟ ಚೀನದ ವಿಶ್ವಾಸದ್ರೋಹದ ಗುಂಡಿನೇಟಿಗೆ ಗುಂಡಿನೇಟಿನಿಂದಲೇ ಉತ್ತರಕೊಡಬೇಕಾದ ಕಾಲ ಬರುವುದಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಪಂಚಕಜ್ಜಾಯ ಹಂಚಹೋದವನಿಗೇನೇ ಕೊನೆಗೆ ಕಜ್ಜಾಯ ಉಳಿಯದಿಲ್ಲ ಎಂಬ ಮಾತೊಂದು ನಮ್ಮತ್ತ ಪ್ರಚಲಿತವಿದೆ ಹಾಗೆಯೇ ಪಂಚಶೀಲವನ್ನು ಜಗತ್ತಿಗೆ ಸಾರಿದ ಭಾರತವೇ ಪಂಚಶೀಲಗಳನ್ನು ಬಿಟ್ಟುಕೊಡಬೇಕಾದ ಕಾಲ ಸನ್ನಿಹಿತವಾದಂತೆ ತೋರುತ್ತಿದೆ. ಭಾರತ—ಚೀನಾಗಳ ಮೈತ್ರಿಯು ಕಥೆ ಪುರಾತನ ಕಾಲದ್ದು, ಅಂದು ಹಾಗಿದ್ದ ಮಾತ್ರಕ್ಕೆ ಇಂದೂ ಹಾಗಿರಲೇಬೇಕೆಂಬುದಿಲ್ಲ ಶೀಘ್ರಗತಿಯಿಂದ ಬದಲಾಗುತ್ತಿರುವ ಈ

ಸಮಾಜ ಸುಧಾರಣೆ

(೩ನೇ ಪುಟದಿಂದ)

ವಕ್ಕೆ ಸೆಳೆದುಕೊಳ್ಳುವುದು ಅದುದರಿಂದ ಸರಕಾರವು ಕಾನೂನುಗಳನ್ನು ಸಮಾಜದ ಎಲ್ಲ ಅಂಗಗಳಿಗೂ ಏಕ ರೀತಿಯಲ್ಲಿ ಅನ್ವಯಿಸಬೇಕು. ಧರ್ಮನಿರಪೇಕ್ಷ ರಾಷ್ಟ್ರ ಸಮಾಜ ಸುಧಾರಣೆಯನ್ನು ಅವಶ್ಯ ಮಾಡುತ್ತದೆ, ಅದರ ಫಲವನ್ನು ಎಲ್ಲರೂ ಅನುಭವಿಸಬೇಕಾದುದು ಅತ್ಯವಶ್ಯ

ಶಿಕ್ಷಣವು ವಿಕಾಸಗೊಂಡಂತೆ ಕುಸಂಸ್ಕಾರಗಳು ದೂರವಾಗುತ್ತವೆ ಎಂಬುದು ಶುದ್ಧ ಮೂರ್ಖತನ ಕುಸಂಸ್ಕಾರಗಳು ದೂರವಾಗುವುದರ ಬದಲು ರೂಪಮರೆಸಿಕೊಂಡೇ ಇರುತ್ತವೆ. ತಾಯಿಯ ಹಾಲು, ಅಧ್ಯಾಪಕರ ಬೆತ್ತಗಳೊಡನೆ ಪಡೆದ ಸಂಸ್ಕಾರಗಳು ಸುಲಭವಲ್ಲಿ ಮಾಸಿ ಹೋಗಲಾರವು ಪರರ ಕುಸಂಸ್ಕಾರಗಳು ತೀವ್ರವಾಗಿ ದೃಷ್ಟಿಗೋಚರವಾಗುವುವಾದರೂ ತನ್ನವು ಎಂದಿಗೂ ತಿಳಿದು ಬರಲಾರವು.

ಪ್ರಪಂಚದಲ್ಲಿ ಏನು ಘಟಿಸುವುದಿಲ್ಲವೆಂದಿಂದು ಹೇಳುವಂತಿಲ್ಲ. ಚೀನವು ಭಾರತದ ಬಗ್ಗೆ ತುಸು ಬಿಗುಧೋರಣೆಯನ್ನು ವಹಿಸಿದ ಎಂಬುದಕ್ಕೆ ಇತ್ತೀಚಿನ ಸೀಮಾತಿಕ್ರಮಣವೇ ಸಾಕ್ಷಿ ಮತ್ತು ಅದು ಈ ಕಿರುಕುಳವನ್ನು ಬಿಟ್ಟುಕೊಡುವುದೆಂದು ಹೇಳುವುದೂ ಸಾಧ್ಯವಿಲ್ಲ ಭಾರತೀಯನಾದ ಗೌತಮ ಬುದ್ಧನನ್ನೇ ಸಾಮ್ರಾಜ್ಯಶಾಹಿಯೆಂದು ಉಲ್ಲೇಖಿಸಿದ ಕೆಂಪು ಚೀನಾ, ಒಂದು ದಿನ ಪಂಚಶೀಲಗಳ ಪ್ರವರ್ತಕ ನೆಹರೂರವರನ್ನೇ ಅದರ ಆಂತಕನೆಂದು ಕರೆದು ಭಾರತದ ಮೇಲೆ ದಾಳಿ ನಡೆಸಲು ಹಿಂದೆ ಮುಂದೆ ನೋಡತ್ತದೆ ಎಂದು ನಂಬುವುದು ಸಾಧ್ಯವಿಲ್ಲ ಇದಕ್ಕೆ ಈಗ ನಡೆದ ಲಡಕ್ ಪ್ರದೇಶದ ದುರ್ಘಟನೆಯೇ ಆಧಾರ. ಇದೇ ರೀತಿ ಕೆಂಪು ಚೀನೀಯರ ಅತ್ಯಾಚಾರ ನಿರರ್ಗಳವಾಗಿ ನಡೆಯುತ್ತ ಹೋದರೆ, ಭಾರತವು ಶಾಂತಿ ಮಂತ್ರ ಪಠಿಸುತ್ತ ಕುಳಿತರೆ ಇದರ ಪರಿಣಾಮ ಗಂಭೀರವಾಗದುಳಿಯದು, ಹಾನಿನೊಡನೆ ವಿರಸ ಬೇತವಾದರೂ ರೂ ಸರಸ ಸಲ್ಲದು ವಿಭಿನ್ನ ತಿಳುವಳಿಕೆಯ ವಿಭಿನ್ನ ಮತಗಳ ವಿಭಿನ್ನ ಮಾರ್ಗಗಾಮಿಗಳ ಸ್ನೇಹಚಿರಕಾಲ ಬಾಳುವುದಿಲ್ಲವೆಂಬುದಕೆ ಭಾರತ-ಚೀನಾಗಳು ಒಂದು ನಿದರ್ಶನ

ಭಾರತವ ಭದ್ರತೆಗಾಗಿ ಈಗಿಂದೀಗಲೇ ಮುಂಜಾಗ್ರತೆ ತೆಗೆದುಕೊಳ್ಳುವ ಅಗತ್ಯವಿದೆ ಕೇವಲ ಪ್ರತಿಭಟನಾ ಪತ್ರ ವ್ಯವಹಾರಗಳಿಂದ ಸಮಸ್ಯೆಗೆ ಪೂರ್ಣವಿರಾಮ ಬೀಳುವಂತಾಗಲಿಲ್ಲ, ಆಗುವುದೂ ಸಾಧ್ಯವಿಲ್ಲ ಆದುದರಿಂದ ಭಾರತ ಸರಕಾರ ಈ ಬಗ್ಗೆ ಇನ್ನೂ ನೇರವಾದ ಮತು ನ್ಯಾಯವಾದ ಮಾರ್ಗವನ್ನು ಅನುಸರಿಸುವುದು ಅಗತ್ಯವಿದೆ ಭಾರತದ ಸಂರಕ್ಷಣೆಯ ಬಗ್ಗೆ ಎಲ್ಲ 'ಭಾರತೀಯ'ರೂ ನೆರವಾಗುವುದರಲ್ಲಿ ಸಂದೇಹವಿಲ ಪ್ರಧಾನಿ ನೆಹರೂರವರು ಇನ್ನೂ ಧ್ಯಾನಪೂರ್ವಕವಾಗಿ ಚೀನೀಯ ಆಕ್ರಮಣವನ್ನು ತಡೆಗಟ್ಟಲು ಯೋಗ್ಯ ಕಾರ್ಯಕ್ರಮಗಳನ್ನು ತತ್‌ಕ್ಷಣವೇ ರೂಪಿಸುವ ಆವಶ್ಯಕತೆಯಿದೆ ಕಟ್ಟೆ ಒಡೆಯುವುದಕ್ಕೆ ಮೊದಲೇ ಮುಂಜಾಗ್ರತೆ ವಹಿಸಬೇಕಾಗಿದೆ

(೧೨ನೇ ಪುಟದಿಂದ)

ದಾಗಬಾರದು ನಾವು ಇದುವರೆಗೆ ಮಾಡಿದ ತಪಸ್ಸಿನ ಫಲ, ಇಂದು ವ್ರತಭಂಗವಾಗಿ ಹಾಳಾಗಕೂಡದು ಕೇರಳದ ಆಡಳಿತಸೂತ್ರ ಮುಂದೆ ಯಾರ ಕೈಗೆ ಹೋಗುತ್ತದೆಂಬ ಬಗ್ಗೆ ನಾವು ಚಿಂತಿಸಿ ಏನೂ ಫಲವಿಲ್ಲ ನಮ್ಮ ಬಡುಗಡೆ—ಕೇರಳದಿಂದ ಕಾಸರಗೋಡಿನ ಬಿಡುಗಡೆ—ಎಷ್ಟು ಬೇಗ ಆದೀತೋ—ಎಂದಿಗೆ ನಾವು ನಮ್ಮ ಕನ್ನಡ ಬಾಂಧವರೊಡನೆ ಒಂದು ಗೂಡಿ ಬಾಳಿಯೇವೂ—ಈ ಧ್ಯಾನವೇ ನಮಗೆ ನಿರಂತರವಾಗಿರಲಿ ಅಂತಹ ಆ ವ್ರತಬದ್ಧರಾಗಿ ನಾವಿಂದು ಹೋರಾಟಕ್ಕೆ ಇಳಿಯೋಣ.

ಇದು ನಮ್ಮ ಕೊನೆಯ ಜಯಶಾಲಿಯಾದ ಹೋರಾಟವಾಗಲಿ. ಕಾಸರಗೋಡಿನಲ್ಲಿ ಕನ್ನಡಿಗರು ಆಳಿಯುತ್ತಾರೋ ಉಳಿಯುತ್ತಾರೋ ಎಂಬುದು ಕೊನೆಯಬಾರಿ ಈ ಸಲ ನಿಶ್ಚಯವಾಗಿ ಹೋಗಲಿ. ಕನ್ನಡಿಗನ ಕೊನೆಯ ಉಸಿರು ಉಳಿವತನಕ ಇಂದಿನ ಹೋರಾಟವನ್ನು ಮುಂದುವರಿಸೋಣ, ನಮ್ಮ ತಾಯ್ನೆಲವನ್ನು ಹೊನ್ನ ಕನ್ನಡ ನಾಡನ್ನು ಮರಳಿ ಸೇರೋಣ ಅದೋ—ಆ ದಿಗಂತದಾಚೆ—ಉನ್ನತ ಪರ್ವತ ಮಾಲೆಯ ಮರೆಯಲ್ಲಿ—ನಮ್ಮ ತಾಯಿ—ಕನ್ನಡ ತಾಯಿ ನಮ್ಮನ್ನು ಕೋಕಿಲ ಕಂಠದಿಂದ ಕರೆಯುತ್ತಿದ್ದಾಳೆ ನಾಡಗುಡಿಯ, ಕನ್ನಡಗಡಿಯ ರಕ್ಷಣೆಗಾಗಿ ಬಲಿದಾನ ಕೇಳುತ್ತಿದ್ದಾಳೆ, ಕನ್ನಡ ತಾಯಿ ಭುವನೇಶ್ವರಿಯು ವರದ ಹಸ್ತವನ್ನೆತ್ತಿ ಹರಸಿ ನಿಂತಿದ್ದಾಳೆ ಆ ತಾಯ ಮಕ್ಕಳು—ಕಾಸರಗೋಡಿನ ಕನ್ನಡಿಗರು ಎಲ್ಲರೂ ಒಮ್ಮೆ ಒಕ್ಕೊರಲಿನ ಜಯಘೋಷಮಾಡಿರಿ

"ಕಾಸರಗೋಡು ಕನ್ನಡನಾಡು."

"ಕನ್ನಡ ಮಾತೆಗೆ ಜಯವಾಗಲಿ!'

—ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

ಏಕೆಂದರೆ, ನಾವು ನಮ್ಮಲ್ಲಿರುವ ಕುಸಂಸ್ಕಾರಗಳನ್ನು ಆದರಿಸುತ್ತೇವೆ, ಅವುಗಳೊಡನೆ ಸಂಸಾರ ಮಾಡುತ್ತೇವೆ, ಆಗ ನಾವು ಅಸ್ವಾಭಾವಿಕ ವಾತಾವರಣದಲ್ಲಿರುವುದರ ಅರಿವೇ ಆಗಲೊಲ್ಲದ

ನಾವು ಒಂದಡೆ ವೈಜ್ಞಾನಿಕ ದೇಣಿಗೆಗಳಾದ ವಿದ್ಯುದ್ದೀಪ, ಟೆಲಿಫೋನ್ ಮೊದಲಾದವನ್ನು ಬಳಸಲು ಕಲಿತಿದ್ದೇವೆ ಆದರೆ, ನಮ್ಮ ಕುಸಂಸ್ಕಾರ ಮತ್ತು ಅನುಷ್ಠಾನಗಳಲ್ಲಿ ಯಾವ ಪರಿವರ್ತನೆಯೂ ನಡೆದಿಲ್ಲ ಸರಕಾರವು ಸಮಾಜವನ್ನು ಉನ್ನತೀಕರಿಸಬೇಕೆಂದರೆ ಅದು ಸಮಾಜ ಸುಧಾರಣೆಗೆ ಕೈ ಹಾಕಲೇಬೇಕಾಗಿದೆ ಕಲ್ಲಿನಲ್ಲಿ ಸೂಜಿಯಿಂದ ತೂತು ಕೊರೆಯುವುದಸಾಧ್ಯ ಅದರೂ ಗುರುತನ್ನು ಹಾಕಬಹುದು ಸಮಾಜ ಸುಧಾರಣೆಯನ್ನು ಮಾಡಲು ಸಮಾಜದ ಮಾನಸಿಕ ಸ್ಥಿತಿಗತಿಯನ್ನೂ ಬದಲಿಸಬೇಕಾಗುತ್ತದೆ ಒಂದು ಆದಿವಾಸಿಗಳ ಸಮಾಜದಲ್ಲಿ ಕಬ್ಬಿಣದ ಕಾರ್ಖಾನೆ ತರೆದರೆ, ಅದನ್ನು ನಡೆಸುವುದು ಎಂದಿಗೂ ಸಾಧ್ಯವಿಲ್ಲ, ಏಕೆಂದರೆ, ಕಾರಖಾನೆಯ ಅವಶ್ಯಕತೆಗಳಿಗೆ ಆದಿವಾಸಿಗಳಿಂದ ಪೂರೈಕೆಯಾಗದು

ಜನತೆಯ ಸರಕಾರ ಜನತಾಕಲ್ಯಾಣಕ್ಕಾಗಿ ದುಡಿಯುವದು ಸ್ವಾಭಾವಿಕವೆ. ಇಂದಿನ ಜನತಾಕಲ್ಯಾಣಗಳಲ್ಲಿ ಸಮಾಜ ಸುಧಾರಣೆಯೇ ಅಗ್ರಗಣ್ಯವಾಗಿದ

ಸಮಾಜ ಸುಧಾರಣೆಯು ಹೆಸರಿನಲ್ಲಿ ಜನತೆಯ ಮೇಲೆ ಸರಕಾರ ಒತ್ತಾಯ ಹೇರಬೇಕ? ನಿಜವಾಗಿಯೂ ಒಂದು ಮಿತಿಯಲ್ಲಿ ಒತ್ತಾಯ ಬೇಕಾಗುತ್ತದೆ ಎಲ್ಲ ವ್ಯಕ್ತಿಗಳೂ ಸದ್ಭಾವನೆಯಿಂದ ವರ್ತಿಸುವವರೆಗೆ ಸಮಾಜ ಸುಧಾರಣೆಯ ಫಲ ದೊರೆಯಲಾರದು ರಾಜಾರಾಮ ಮೋಹನರಾಯರಂತೆ ಸಮಾಜದ ಸಾಮಾಜಿಕ ಕುಂದುಕೊರತೆಗಳನ್ನು ಮೊದಲಾಗಿ ಕಂಡುಕೊಂಡು ಅವನ್ನು ದೂರೀಕರಿಸುವ ಸುಧಾರಣೆಯ ಕೆಲಸವಿಂದು ಅತ್ಯಗತ್ಯವಿದೆ. ಇದಕ್ಕೆ ಯಾವ ಭಾರತೀಯನೂ ಹೊರಗಾಗಬಾರದು ಭೇದಭಾವನೆಗಳನ್ನು ದೂರೀಕರಿಸುವ ನಮ್ಮ ಸುಧಾರಣೆಗಳು ಅವನ್ನು ಮತ್ತೂ ಬೆಳೆಯುವಂತೆಂದಿಗೂ ಮಾಡಬಾರದು.

—ನವಭಾರತ ಟಾಯಿಮ್ಸ್

Life Insurance Corporation of India

(Western Zone)

Notice having been given of the loss of Policy Numbered 7814527 4 on the life of Sri M Janardhana Rao, issued by Unit The Bombay Life Assurance Company, Duplicate Policy will be issued unless objections is lodged with us within one month from this date

V. H Vora,
Zonal Manager

Bombay, Dated 21st October 1959

ಕುಂದಾಪುರ ಡಿ ಮು. ಕೋರ್ಟಿನಲ್ಲಿ

ಕಮ್ಯನಂಬ್ರ 275/1959.

ಸೀತಮ್ಮ—ಸಿದ್ಧನ್ಯಾಕರ ಹೆಂಡ್ತಿ ಕುಂದಾಪುರ ಕಸಬಾ ಗ್ರಾಮದಲ್ಲಿರುವವಳು —ವಾದಿ

ಸದಿಯಣ್ಣ ಶೆಟ್ಟಿ ದಾಸರಬೆಟ್ಟು ಕೃಷ್ಣಯ್ಯ ಶೆಟ್ರ ಅಳಿಯ ಕುಂದಾಪುರ ಕಸಬಾ ಗ್ರಾಮದಲ್ಲಿರುವವರು. —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ತಿಳಿಯಪಡಿಸಿದ್ದು ಸದ್ರಿವಾದಿಯು ನಿಮ್ಮ ಮೇಲೆ ತಾ.6-9 1942 ನೇ ರಿಜಿಸ್ಟ್ರಿಯ ದಸ್ತಾವೇಜಿನ ಪ್ರತಿಫಲದ ಪೈಕಿ ಬಾಕಿ ರೂಪಾಯಿ75-0 ವ ಬಡ್ಡಿ ರೂ 67 ನಯಾಪೈಸೆ52 ಕೂಡಾ ರೂ142-52 ಬರಮಾಡಿ ಕೊಳ್ಳುವರೇ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ಮೇಲಿನ ದಾವೆಯು ತಾ 8-11-1959ಕ್ಕೆ ತನಿಖೆಗೆ ಯಿಡಲ್ಪಟ್ಟಾಗಿರುತ್ತದೆ ಆ ಬಗ್ಗೆ ನಿಮ್ಮದೇನಾದರೂ ಆಕ್ಷೇಪಣೆಇದ್ದರೆ ಸದ್ರಿದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಜ್ವಾಹೀರು ಮಾಡತಕ್ಕದ್ದು ತಪ್ಪಿದ್ರೆ ನಿಮ್ಮನ್ನು ಎಕ್ಸಪಾರ್ಟಿಮಾಡಿ ನಿಮ್ಮ ಗೈರ್‌ಹಾಜ್ರಿಯಲ್ಲಿ ಮೇಲಿನದಾವೆ ತೀರ್ಮಾನಿಸಲಾಗುವುದೆಂತ ಈ ಮೂಲಕ ತಿಳಿಸಲಾಗುತ್ತದೆ

M M Hebbar
Advocate for Plaintiff

ಮೊಕ್ಕಾಂ ಕುಂದಾಪುರ ತಾ 12 10 59

ಉಡುಪಿ ಡಿ ಮು ಕೋರ್ಟಿನಲ್ಲಿ

O S No 35/58 R E P No 410/59

ಶೀನಪ್ಪ ಶೆಟ್ಟಿ —ಅರ್ಜಿದಾರ

ಮತ್ತು

ಕೊರಗಯ್ಯ ಹೆಗ್ಗಡೆ ಕೂಡಾ — ಯೆದ್ರಿರುಯವರೊಳಗೆ

2ನೆ ಯೆದ್ರಿ ಕೃಷ್ಣಯ ಹೆಗ್ಗಡೆ ಗೋವಿಂದ ಶೆಟ್ರ ನು 3ನೆ ಯೆದ್ರಿ ರಾಮಣ್ಣ ಹೆಗ್ಡೆ—ಗಿರಿಯಮ್ಮ ಹೆಗ್ಗಡ್ತಿ ಮಗ ಮೈಸೂರು ಸ್ಟೇಟ್ ತೀರ್ಥಹಳ್ಳಿ ತಾಲ್ಲೂಕು ತುಡೂರು ಕಟ್ಟೆಯಲ್ಲಿರುವವರು

ಮೇಲ್ಕಂಡ ಅಮ್ಲಿಜ್ಯಾರಿಯಲ್ಲಿ ಸದ್ರಿ ಯೆದ್ರಿಗೆ ಆಗತಕ್ಕ ಸ್ಪೆಶಾಲಿ ಜಪ್ತು ಪ್ರೊಹಿಬಿಟರಿ ಆರ್ಡರ್ ನೋಟೀಸು ತಾ 8-11-59 ಕ್ಕೆಯಿಟ್ಟಿರುವುದರಿಂದ ಆ ದಿನ ಸದ್ರಿ ಯೆದ್ರಿಯು ತನ್ನ ಆಕ್ಷೇಪ ಹೇಳುವುದನ್ನು ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು

P Padmanabha Rao
Vakil for Petitioner

Udipi Date 21—10—1959

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್ ಪ್ರೊಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ 1949

ಅಭಿವೃದ್ಧಿಪಥ

ಆರು ಗಂಟೆಗಳಿಗೆ ಒಂದು ರೇಲು ಡಬ್ಬಿ

ಪೆರಂಬೂರಿನ ರೇಲುಗಾಡಿ ಕಾರಖಾನೆಯು ತನ್ನ ಗುರಿಯನ್ನು ಮೀರಿ ಮುಂದುವರಿಯುತ್ತಿದೆ. ಇಲ್ಲಿ ಸಿದ್ಧವಾದ ಗಾಡಿಗಳು ಗುಣದಲ್ಲಿ ವಿದೇಶೀಯಷ್ಟೇ ಸತ್ತ್ವಯುತವಾಗಿವೆ.

ವ್ಯಾಪಾರೋದ್ಯಮದ ಕಚೇರಿಯೇ ಆಗಲಿ, ಸರ್ಕಾರ ಕಚೇರಿಯೇ ಆಗಲಿ ಯಂತ್ರ ಸಲಕರಣೆಗಳು ಅಥವಾ ಬಂಡವಾಳವಷ್ಟೇ ಮುಖ್ಯವಾಗಲಾರದು. ಅಲ್ಲಿ ಕೆಲಸ ಮಾಡುವ ಜನ ಮುಖ್ಯವಾಗುತ್ತಾರೆ.

೧೯೫೫ರ ಅಕ್ಟೋಬರ್ ತಿಂಗಳಲ್ಲಿ ಪೆರಂಬೂರಿನಲ್ಲಿ ಸರ್ಕಾರ ಸಮಗ್ರ ರೈಲು ಗಾಡಿ ಕಾರ್ಖಾನೆಯನ್ನು ಸ್ಥಾಪಿಸಿದಲಾಗಾಯಿತು ಈ ಅಂಶವು ಮುಖ್ಯವಾಗಿ ಆಡಳಿತ ವರ್ಗದ ಗಮನಕ್ಕೆ ಬಂದಿದೆ.

ಕಾರ್ಖಾನೆಗೆ ಕೆಲಸಗಾರರನ್ನು ನೇಮಿಸಿಕೊಳ್ಳುವಾಗ ಅನುಸರಿಸಿದ ಆಯ್ಕೆ ವಿಧಾನ ತುಂಬಾ ಜಾಗರೂಕತೆಯದಾಗಿದ್ದಿತು. ಆಯ್ಕೆ ಮಾಡಿದ ಮೇಲೆ ತರಬೇತಿ ಶಾಲೆಯಲ್ಲಿ ಅವರಿಗೆ ಉತ್ತಮ ತರಬೇತಿಯನ್ನು ಒದಗಿಸಲಾಯಿತು. ಕಾರ್ಖಾನೆಯಲ್ಲಿ ಉತ್ತಮ ದರ್ಜೆಯ ಕಾರ್ಯನಿರ್ವಹಿಸಲು ಅಗತ್ಯವಾದಷ್ಟು ಉನ್ನತ ಮಟ್ಟದಲ್ಲಿತ್ತು ಈ ತರಬೇತಿ.

ಅವರ ಕಾಲಾನುಕ್ರಮದ ಒಡ್ಡಿಗೆ ಯೋಗ್ಯ ವ್ಯವಸ್ಥೆ ಸೌಕರ್ಯ ಸೌಲಭ್ಯಗಳ ಕಲ್ಪನೆ. ಕಾರ್ಮಿಕರ ಬಗ್ಗೆ ಹಿರಿಯ ಅಧಿಕಾರಿಗಳು ತೋರುವ ಹಿತಚಿಂತನೆ ಇವೇ ಮೊದಲಾದುವುಗಳ ಪರಿಣಾಮವಾಗಿ ಕಾರ್ಮಿಕರು ತಮ್ಮ ಕಾರ್ಯನಿರ್ವಹಣೆಯಲ್ಲಿ ಶ್ರದ್ಧೆ ಹಾಗೂ ಆಸಕ್ತಿಗಳನ್ನು ತೋರುವುದಕ್ಕೆ ಅವಕಾಶವಾಗಿದೆ.

ಈ ಒಂದು ಮುಖ್ಯ ಅಂಶದ ಜೊತೆಗೆ ಕಾರ್ಖಾನೆಯಲ್ಲಿ ಅತ್ಯಂತ ಉನ್ನತ ಮಟ್ಟದ ಯಂತ್ರೋಪಕರಣಗಳು ಮತ್ತಿತರ ಎಲ್ಲ ಸೌಕರ್ಯಗಳೂ ಇವೆ. ಇದರ ಪರಿಣಾಮವಾಗಿ ಕಾರ್ಖಾನೆಯಲ್ಲಿ ತಯಾರಾಗುತ್ತಿರುವ ರೈಲು ಗಾಡಿಗಳ ದರ್ಜೆ ಸಹ ತುಂಬಾ ಉತ್ತಮವಾಗಿದೆ.

ಕಾರ್ಖಾನೆ ಸ್ಥಾಪಿತವಾದ ಮೊದಲನೆಯ ವರ್ಷದಿಂದಲೇ ಗುರಿಗಳನ್ನು ದಾಟಿ ಮುನ್ನಡೆಯುತ್ತಿರುವುದು ಕಂಡು ಬರುತ್ತದೆ. ಮೊದಲನೆಯ ವರ್ಷದಲ್ಲಿ ಗುರಿ ಕೇವಲ ೨೦ ರೈಲು ಗಾಡಿಗಳ ಉತ್ಪನ್ನವಾಗಿತ್ತಾದರೂ ತಯಾರಾದ ಗಾಡಿಗಳ ಸಂಖ್ಯೆ ೪೩. ಎರಡನೆಯ ವರ್ಷದಲ್ಲಿ ಇದ್ದ ಗುರಿ ೧೨೦. ಆದರೆ ತಯಾರಾದ ಡಬ್ಬಿಗಳ ಸಂಖ್ಯೆ ೧೫೦. ಮೂರನೆಯ ವರ್ಷದಲ್ಲಿ ಇದ್ದ ಗುರಿ ೨೪೦; ಆದರೆ, ತಯಾರಾದ ಡಬ್ಬಿಗಳ ಸಂಖ್ಯೆ ೩೦೮.

ಈ ವರ್ಷದ ಮೇ ತಿಂಗಳಿಂದ ಈ ಕಾರ್ಖಾನೆಯಲ್ಲಿ ಪ್ರತಿ ತಿಂಗಳು ೩೫ ಡಬ್ಬಿಗಳು ತಯಾರಾಗುತ್ತಿವೆ ಕಾರ್ಯನಿರತ ಆರು ಗಂಟೆಗಳಿಗೆ ೧ ವರ್ಷಕ್ಕೆ ೪೨೦.

ತಯಾರಿಕಾ ಕಾರ್ಯಯೋಜನೆಯನ್ನು ರೂಪಿಸುವಾಗ ಸಹ ಅದರ ಮೇಲೆ ಖರ್ಚು ಮಾಡಲ್ಪಡುವ ಪ್ರತಿಯೊಂದು ರೂಪಾಯಿಗೂ ತಕ್ಕ ಪ್ರತಿಫಲ ದೊರಕುವ ರೀತಿಯಲ್ಲಿ ಕ್ರಮಬದ್ಧವಾಗಿ ಮತ್ತು ದೂರ ದೃಷ್ಟಿಯಿಂದ ಹಣವನ್ನು ಖರ್ಚು ಮಾಡಲಾಗಿರುವುದು ಕಂಡು ಬರುತ್ತದೆ. ಪೂರ್ಣ ಸುಸಜ್ಜಿತವಲ್ಲದ ೩೫೦ ರೈಲು ಗಾಡಿಗಳನ್ನು ಮಾಡುವುದಕ್ಕೆ ಸಾಧ್ಯವಾಗುವಷ್ಟು ಯಂತ್ರೋಪಕರಣಗಳನ್ನು ಜೋಡಿಸಿಕೊಳ್ಳುವುದಷ್ಟೇ ಪ್ರಾರಂಭದ ಉದ್ದೇಶವಾಯಿತು. ಅಷ್ಟು ಯಂತ್ರೋಪಕರಣಗಳ ಸಹಾಯದಿಂದ ಎಷ್ಟು ಗಾಡಿಗಳನ್ನು ತಯಾರಿಸಲು ಸಾಧ್ಯವಾಗುತ್ತದೆಯೆಂಬುದರ ಅಂದಾಜು ನೋಡಿಕೊಂಡು ಮುಂದೆ ನಿರ್ಧಾರಕ್ಕೆಗೊಳ್ಳುವುದು ಉಚಿತವೆಂಬ ವಿವೇಚನೆಯಿಂದ ವರ್ತಿಸಿಕೊಂಡಿರುವುದು ಕಂಡು ಬರುತ್ತದೆ.

ಇಂತಹ ಒಂದು ವಿವೇಚನೆಯಿಂದ ವರ್ತಿಸಿಕೊಂಡ ಪರಿಣಾಮವಾಗಿ ಇದೀಗ ವರ್ಷಕ್ಕೆ ೪೨೦ ಗಾಡಿಗಳ ತಯಾರಿಕೆ ಸಾಧ್ಯವಾಗಿದೆ ಎಂದು ಹೇಳಬಹುದು. ರೈಲು ಗಾಡಿಗಳ ತಯಾರಿಕೆ ಹೆಚ್ಚಿಸುವುದಷ್ಟೇ ಅಲ್ಲ. ತಯಾರಿಕಾ ವೆಚ್ಚ ಸಹ ಕಡಿಮೆಯಾಗಿರುವುದು ಇಲ್ಲಿ ಗಮನಾರ್ಹ. ಆಯಾತ ಮಾಡುವ ಒಂದು ರೈಲು ಡಬ್ಬಿಗೆ ಆಗುವ ವೆಚ್ಚದಲ್ಲಿ ಅರ್ಧದಷ್ಟು ಮಾತ್ರ, ಇಲ್ಲಿ ತಯಾರಾಗುವ ರೈಲು ಡಬ್ಬಿಗೆ ಆಗುತ್ತದೆ. ಕಾರ್ಖಾನೆಯಲ್ಲಿ ಈಗ ತಯಾರಾಗುತ್ತಿರುವ ಒಂದು ಡಬ್ಬಿಯ ವೆಚ್ಚ ೮೫,೦೦೦ ರೂ.ಗಳು. ಅದೇ ಮಾದರಿಯ ಒಂದು ಡಬ್ಬಿಯನ್ನು ಸ್ವಿಜರ್ಲೆಂಡಿನಿಂದ ತರಿಸುವುದು ಎಂದಾದರೆ ಒಟ್ಟು ವೆಚ್ಚ ಸುಮಾರು ೧.೦೭ ಲಕ್ಷ ರೂ.ಗಳು. ದರ್ಜೆಯ ಮಟ್ಟಿಗೆ ಹೇಳುವುದಾದರೂ ಆಯಾತ ಮಾಡಿಕೊಳ್ಳುವ ಡಬ್ಬಿಯಷ್ಟೇ ಚೆನ್ನಾಗಿವೆ. ಪೆರಂಬೂರಿನಲ್ಲಿ ತಯಾರಾಗುವ ಡಬ್ಬಿಗಳು.

ನಾಲ್ಕನೆಯದಾಗಿ ೧,೨೦೦ ಬಿಡಿ ಭಾಗಗಳನ್ನು ಸೇರಿಸಿ ಒಂದು ಡಬ್ಬಿ ತಯಾರಿಸಬೇಕಾದರೆ ೯,೦೦೦ ದುಡಿತದ ಗಂಟೆಗಳು ಬೇಕಾಗುತ್ತವೆ. ಹಿಂದೆ ಈ ಕಾಲಮಿತಿ ೧೯,೬೦೦ ಗಂಟೆಗಳಷ್ಟಿತ್ತು. ಇದೀಗ ಕೈಗೊಳ್ಳಲಾಗುತ್ತಿರುವ ಕ್ರಮಗಳ ಪರಿಣಾಮವಾಗಿ ಈ ಕಾಲಮಿತಿ ೭,೫೦೦ಕ್ಕೆ ಇಳಿಯುವ ನಿರೀಕ್ಷೆ ಇದೆ. ಸ್ವಿಸ್ ಕಾರ್ಖಾನೆಯಲ್ಲಿ ಅಗತ್ಯವಿರುವ ಕಾಲಾವಕಾಶ ಸಹ ಇಷ್ಟೇ ಆಗಿದೆ.

ಕೇವಲ ಎರಡೂವರೆ ವರ್ಷಗಳ ಕಾಲಾವಧಿಯಲ್ಲಿ ಕಾರ್ಖಾನೆಯ ಬೆಳವಣಿಗೆ ಬಾಬಿನಲ್ಲಿ ಆಗುತ್ತಿದ್ದ ೭೯ ಲಕ್ಷ ರೂ.ಗಳ ವೆಚ್ಚವನ್ನು ತೊಡೆದು ಹಾಕಲಾಗಿದೆ.

ಮೊದಲಿನ ಪ್ರತಿಯೊಂದು 'ಕೋಚ್'ಗೆ ೩೭,೦೦೦ ರೂ.ಗಳಷ್ಟು ಬೆಲೆ ಬಾಳುವ ಕಚ್ಚಾ ಮಾಲುಗಳನ್ನೂ ಜೋಡಣೆ ಭಾಗಗಳನ್ನೂ ಹೊರ ದೇಶಗಳಿಂದ ತರಿಸಿಕೊಳ್ಳಲಾಗುತ್ತಿತ್ತು. ಆದರೀಗ ಹೀಗೆ ಆಯಾತವಾಗುವ ಭಾಗಗಳ ಪ್ರಮಾಣದಲ್ಲಿ ಪ್ರತಿ ಕೋಚಿಗೆ ೧೫,೦೦೦ ರೂ.ಗಳಷ್ಟು ಉಳಿತಾಯವಾಗಿದೆ.

ಹೀಗೆ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಂಖ್ಯೆ ೬,೪೦೦ ಕಾರ್ಖಾನೆ ಆರಂಭವಾದ ಲಾಗಾಯಿತು ಯಾವುದೇ ರೀತಿಯ ಕಾರ್ಮಿಕ ತೊಂದರೆ ಅನುಭವಕ್ಕೆ ಬರದೆ ಇರುವುದೂ ಗಮನಾರ್ಹ. ಕಾರ್ಮಿಕರೆಲ್ಲ ಇಲ್ಲಿ ಒಂದೇ ಕುಟುಂಬಕ್ಕೆ ಸೇರಿದವರೆಂಬ ಮನೋಭಾವದಿಂದ ಕೆಲಸ ಮಾಡುತ್ತಾರೆ ತಮ್ಮ ಕಾರ್ಖಾನೆಯೆಂದರೆ ಅವರಿಗೊಂದು ಹೆಮ್ಮೆ. ಕಾರ್ಖಾನೆಯನ್ನು ನೋಡಹೋಗುವ ಪ್ರತಿಯೊಬ್ಬರೂ ಇದನ್ನು ಗಮನಿಸಬಹುದಾಗಿದೆ.

೧೯೫೭ರಲ್ಲಿ ಬೆಂಗಾಡಿನಂತಿದ್ದ ಈ ಕಾರ್ಖಾನೆಯ ಪ್ರದೇಶದಲ್ಲೀಗ ಉತ್ತಮ ರಸ್ತೆಗಳು ನಿರ್ಮಾಣವಾಗಿವೆ. ಇಕ್ಕೆಲಗಳಲ್ಲಿ ಹೂವಿನ ಗಿಡಗಳಿರುವ ಪಾತಿಗಳು ರಸ್ತೆಗಳ ಪಕ್ಕದಲ್ಲಿ ಬಣ್ಣ ಬಣ್ಣದ ಹೂವುಗಳಿಂದ ತುಂಬಿ ನಿಂತಿರುವ ಮರಗಳು, ಅಲ್ಲೆಲ್ಲ ಹಾದುಹೋಗಿರುವ ಹೂ ಬಳ್ಳಿಗಳು ನೋಡುವುದಕ್ಕೆ ಅದೊಂದು ಆಹ್ಲಾದಕರ ದೃಶ್ಯ.

ಆವರಣದ ಶುಚಿತ್ವದ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕೆಲಸ ನಡೆಯುವ ವರ್ಕ್‌ಷಾಪ್ ಷೆಡ್‌ಗಳ ಶುಚಿತ್ವ ನಿಜಕ್ಕೂ ಯಾವ ಕಾರ್ಖಾನೆಗೇ ಆಗಲಿ ಮಾದರಿಯಾಗಬೇಕು.

ಈ ಕಾರ್ಖಾನೆಗಳಲ್ಲಿ ತಯಾರಾಗುವ ರೈಲು ಡಬ್ಬಿಗಳದೂ ಒಂದು ವೈಶಿಷ್ಟ್ಯ. ಹದವಾದ ಓಟ, ಭಾರ ಕಡಿಮೆ, ತುಂಬಾ ಗಟ್ಟಿ-ಇಷ್ಟೂ ಗುಣಗಳಿರುವುದರಿಂದ ಪ್ರಯಾಣಿಕರ ಸೌಕರ್ಯ ಹೆಚ್ಚಲು ಅವಕಾಶವಾಗಿದೆ.

ಈ ಡಬ್ಬಿಗಳು ತಯಾರಾಗುವ ಸಮಗ್ರ ವಿಧಾನ ಇಡೀ ಡಬ್ಬಿಯ ಮೇಲೆ "ಶ್ರಮ"ವೆಲ್ಲ ಹರಡಿಕೊಂಡಂತಾಗಿದೆ. ತಳಭಾರ ಮೇಲ್ಭಾಗದಿಂದ ಪ್ರತ್ಯೇಕವಾಗಿಲ್ಲ. ಎಲ್ಲಾ ಒಂದೇ ಮುದ್ದೆ—ಒಂದೇ ಚೌಕಟ್ಟು. ಹಿಂದೆ ಮರದ ರೈಲುಡಬ್ಬಿಗಳು ಅಪಘಾತಕ್ಕೆ ಒಳಗಾದರೆ ಕಿಟಕಿಗಳು ಪುಡಿಪುಡಿಯಾಗುತ್ತಿದ್ದುವು, ಹಾಗೆ ಈಗ ಆಗುವುದಿಲ್ಲ. ಅಷ್ಟೇ ಅಲ್ಲ ಕಾರುಗಳಿಗಿರುವಂತೆ ಕಿಟಕಿಗಳ ಚೌಕಟ್ಟುಗಳಿಗೆ ರಬ್ಬರ್ 'ಪ್ಯಾಡಿಂಗ್' ಇದ್ದು ಧೂಳು ತೂರಿಬರಲು ಅವಕಾಶವಿರುವುದಿಲ್ಲ. ಮಳೆ ಸಹ ಒಳಗೆ ಹಿಂದಿನಂತೆ ತೂರಿಬರುವುದಿಲ್ಲ.

ಹಿಂದೆ ತಯಾರಾಗುತ್ತಿದ್ದ ಡಬ್ಬಿಗಳ ತೂಕ ೪೨ ಟನ್‌ಗಳಷ್ಟು ಇರುತ್ತಿತ್ತು. ಈಗ ತಯಾರಾಗುತ್ತಿರುವ ಈ ಡಬ್ಬಿಗಳ ತೂಕ ೩೫ ಟನ್‌ಗಳಷ್ಟರ ಹೆಚ್ಚು ಇದರಿಂದಾಗಿ ಹೆಚ್ಚು ಡಬ್ಬಿಗಳನ್ನು ಎಂಜಿನ್‌ಗೆ ಲಗತ್ತುಮಾಡಿ ಓಡಿಸಲು ಸಾಧ್ಯವಾಗುತ್ತದೆ; ಹೆಚ್ಚುತ್ತಿರುವ ಜನಸಂದಣಿ ಸಮಸ್ಯೆಯ ನಿವಾರಣೆಗೆ ಹೀಗಾಗಿ ಇದು ಸಹಕಾರಿ.

ಮೊದಲು ಮೂರನೆಯ ತರಗತಿಯ ಡಬ್ಬಿಗಳನ್ನಷ್ಟೇ ತಯಾರಿಸುತ್ತಿದ್ದ ಈ ಕಾರ್ಖಾನೆಯಲ್ಲಿ ಲಗ್ಗೇಜ್ ವ್ಯಾನ್‌ಗಳೂ ತಯಾರಾಗುತ್ತಿವೆ. ಸದ್ಯದಲ್ಲೇ ಮೊದಲನೆಯ ತರಗತಿ ಕೋಚ್‌ಗಳೂ ಸಹ ತಯಾರಾಗುತ್ತವೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಕೊನೆಯ ಎರಡು ವರ್ಷಗಳಲ್ಲಿ ೩೫೫ ಲಗ್ಗೇಜ್ ವ್ಯಾನ್‌ಗಳಿರುವ ಮೂರನೆಯ ತರಗತಿ ಡಬ್ಬಿಗಳ ತಯಾರಿಕೆ ಸಾಧ್ಯವಾಗುವ ನಿರೀಕ್ಷೆ ಇದೆ. ೬೦ ಮೊದಲನೆ ತರಗತಿ ಕೋಚ್‌ಗಳೂ ತಯಾರಾಗಲಿವೆ. ಯೋಜನೆಯ ಕೊನೆಯ ಹೊತ್ತಿಗೆ ಯೋಜನೆಯ ಅವಧಿಯಲ್ಲಿ ಒಟ್ಟು ೧,೦೨೨ ಕೋಚ್‌ಗಳನ್ನು ತಯಾರಿಸಿದಂತಾಗುತ್ತದೆ, ಗೊತ್ತುಮಾಡಿಕೊಂಡಿದ್ದ ಗುರಿ ಮಾತ್ರ ೧,೧೩೭.

ಲಗ್ಗೇಜ್ ವ್ಯಾನ್ ಇರುವ ಮೂರನೆ ತರಗತಿ ಡಬ್ಬಿಗಳನ್ನು ಈ ವರ್ಷದ ಆದಿ ಭಾಗದಲ್ಲಿ ಮೊತ್ತ ಮೊದಲನೆಯದಾಗಿ ತಯಾರಿಸಲಾಯಿತು.

ತಾಂತ್ರಿಕ ತರಬೇತಿ ಶಾಲೆಯಲ್ಲಿ ದೊರಕಿಸಿರುವ ಸೌಲಭ್ಯಗಳ ಪ್ರಶ್ನೆ ಸಹ ಅಷ್ಟೆ. ಅವುಗಳನ್ನು ಹೆಚ್ಚಿಸುವ ಪ್ರಯತ್ನ ನಡೆಯುತ್ತಿದೆ ಇದರ ಪರಿಣಾಮವಾಗಿ ತಾಂತ್ರಿಕ ತಜ್ಞರ ಅಭಾವ ಸಹ ಹೋಗಲಿದೆ.

ಕಾರ್ಮಿಕರ ಹಿತಚಿಂತನೆ ಕಾರ್ಯದಲ್ಲಿ ನಡೆದಿರುವ ಪ್ರಗತಿಸಹ ಗಮನಾರ್ಹವಾಗಿದೆ. ವಸತಿ ಕ್ಷೇತ್ರದ ವಿಸ್ತಾರ ಕಾರ್ಯ ಸಾಧ್ಯವಾಗಿದೆ; ಇತರ ಸೌಲಭ್ಯಗಳೂ ಅದೇ ರೀತಿ ಹೆಚ್ಚಿವೆ. ಸ್ವಾತಂತ್ರ್ಯದಿನೋತ್ಸವದ ಹೊತ್ತಿಗೆ ೨,೦೦೦ ಕಾರ್ಮಿಕರನ್ನು ಖಾಯಂಗೊಳಿಸಲಾಗಿದ್ದು ಅವರಿಗೆ ನೌಕರಿಯಲ್ಲಿ ನೀಡಬೇಕಾದ ರಕ್ಷಣೆಯ ಭರವಸೆಯನ್ನು ನೀಡಲಾಗಿದೆ.

ಅಂತೆಯೇ ಸಮಗ್ರ ರೈಲುಗಾಡಿ ಕಾರ್ಖಾನೆಯ ಕಾರ್ಮಿಕರು ನಾಡಿನ ಇತರ ಯಾವ ಕಾರ್ಖಾನೆಯ ಕಾರ್ಮಿಕರಿಗೂ ಯಾವುದೇ ವಿಷಯದಲ್ಲಿ ಹಿಂದೆ ಬಿದ್ದಿಲ್ಲ.

ತಮ್ಮೆಲ್ಲರ ಸೌಹಾರ್ದ-ಸಹಕಾರಗಳಿಂದ ದಿನೇ ದಿನೇ ಸರ್ವಾಂಗ ಸುಂದರವಾಗಿ ಬೆಳೆದು, ನಿಮ್ಮ ಆರ್ಥಿಕ ಅಭ್ಯುದಯಕ್ಕಾಗಿ ಸತತವಾಗಿ ಶ್ರಮಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : ಉಡುಪಿ (ದ. ಭಾರತ)

54 ವರುಷಗಳ ಅನುಭವಪೂರ್ಣ ಹಾಗೂ ಸರ್ವೋತ್ಕೃಷ್ಟ ಬೇಂಕು ಸೇವೆಯನ್ನು ಸರ್ವರಿಗೂ ಸರ್ವಕಾಲಕ್ಕೂ ಸರಿಸಮಾನವಾಗಿ ಸಲ್ಲಿಸಬೇಕೆಂಬುದೇ ಈ ಬೇಂಕಿನ ಸಾಧನೆ!

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಸೆರೆಯ ಮೊರೆ:

ಕನ್ನಡವೆ ಪಕ್ಷ—ಬಿಡುಗಡೆಯ ಪಂಥ!

ಕೇರಳ ಭರಣದಿಂದ ವಿಮೋಚನೆಗೊಳ್ಳಲು ಕಾಸರಗೋಡು ಕನ್ನಡಿಗರ ಕೊನೆಯ ಹೋರಾಟ

ಜನತೆಯ ಇಚ್ಛೆಗೆ ವಿರೋಧವಾಗಿ, ಅನ್ಯಾಯವಾಗಿ, ಕೇರಳಕ್ಕೆ ತಳ್ಳಲ್ಪಟ್ಟ ಕಾಸರಗೋಡಿನ ಕನ್ನಡ ನೆಲವನ್ನು ಮರಳಿ ಮೈಸೂರು ಪ್ರಾಂತಕ್ಕೆ ಸೇರಿಸಬೇಕೆಂಬ ಪ್ರಬಲವಾದ ಉದ್ದೇಶದಿಂದ ಅಲ್ಲಿನ ಜನತೆ ಹಾಗೂ ಜನತಾ ಧುರೀಣರು, ತಮ್ಮ ರಾಜಕೀಯ ಪಕ್ಷಪಂಗಡಗಳ ಬೇಧಭಾವನೆಗಳನ್ನೆಲ್ಲಾ ತೊರೆದು, ತಮ್ಮ ತಾಯ್ನೆಲಕ್ಕೆ ಆದ ಅನ್ಯಾಯವನ್ನು ನಿವಾರಿಸುವರೆ, ಒಗ್ಗಟ್ಟಾಗಿ, ಸ್ತ್ರೀಪುರುಷರೆನ್ನದೆ, ಬಾಲವೃದ್ಧರೆನ್ನದೆ, ಇಡೀ ಕಾಸರಗೋಡಿನ ಕನ್ನಡಿಗರೆಲ್ಲರೂ ಒಂದು ಮಹಾಶಕ್ತಿಯ ದಿವ್ಯಜ್ಯೋತಿಯಾಗಿ ನೆಟೆದು ನಿಂತು, ಅಧಿಕಾರದ ಮರ್ದನಗಳನ್ನು ಎದುರಿಸಿ, ನೆರೆಮನೆಯ ಸಂಕಷ್ಟಗಳನ್ನು ಸಹಿಸಿ, ಪಡಬಾರದ ಬವಣೆಗಳನ್ನೆಲ್ಲಾ ಪಟ್ಟು, ಇಂತು ಹೂಡಿದ ಸಾಹಸಮಯ ಹೋರಾಟ, ಮಾಡಿದ ಅನುಪಮ ತ್ಯಾಗ — ಇವು ನಮ್ಮ ನಾಡಿನ ಇತಿಹಾಸದಲ್ಲಿ ಚಿರಸ್ಮರಣೀಯ ಘಟನೆಗಳಾಗಿವೆ. ಸಮಸ್ತ ಜನತೆ ಇಂತಹ ತ್ಯಾಗಬಲಿದಾನಗಳನ್ನು ಮಾಡಿದರೂ, ಅಗ್ನಿಪರೀಕ್ಷೆಗೆ ಒಳಗಾಗಿ ಸಂಕಷ್ಟ ಸಾವಿರಗಳನ್ನು ಅನುಭವಿಸಿದರೂ, ಇನ್ನೂ ನಮ್ಮೆಲ್ಲರ ಉದ್ದೇಶವು — ಕಾಸರಗೋಡು ಕನ್ನಡನಾಡಿನೊಡನೆ ಸೇರುವ ಪವಿತ್ರೋದ್ದೇಶವು — ನೆರವೇರಲಿಲ್ಲವೆಂಬ ಕೊರಗು, ನಮ್ಮಲ್ಲಿ ಗಾಢವಾಗಿರುವುದು ಸಹಜವೇ ಆಗಿದೆ. ಆದರೆ, ನಮ್ಮ ಆ ನಿಶ್ಚಿತ ಧ್ಯೇಯವನ್ನು ಸಾಧಿಸುವಲ್ಲಿ, ಆ ಮಹಾಸಿದ್ಧಿಯನ್ನು ಕೈಗೂಡಿಸುವಲ್ಲಿ, ಇದವರೆಗಿನ ನಮ್ಮ ಹೋರಾಟದ ಫಲದಿಂದಾಗಿ ಕೆಲವು ಆಶಾಕಿರಣಗಳು ಕಂಡುಬರುತ್ತವೆಯೆಂಬುದನ್ನು ಸಹ ನಾವು ಗಮನಿಸಬೇಕಾಗಿದೆ.

ಒಂದು ಸಿಂಹಾವಲೋಕನ

ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಪೂರ್ಣ ವಿಶ್ವಾಸವುಳ್ಳ ಕಾಸರಗೋಡಿನ ಕನ್ನಡಿಗರಾದ ನಾವು, ನಮಗೆ ಒದಗಿದ ಆಘಾತದ ದೆಸೆಯಿಂದ ಕೆರಳಿ ಉದ್ವಿಗ್ನರಾಗದೆ, ದೇಶದ ಇತರ ಹಲವಾರು ಕಡೆಗಳಲ್ಲಿ, ಮುಖ್ಯವಾಗಿ ಬೊಂಬಾಯಿ ಮೊದಲಾದ ಕಡೆಗಳಲ್ಲಿ ನಡೆದಂತೆ—ಹಿಂಸಾಚಾರಕ್ಕೆ ಇಳಿಯದೆ, ಕೇವಲ ಘಟನಾತ್ಮಕವಾದ ಮಾರ್ಗವನ್ನೇ ನಂಬಿ ನಮ್ಮ ಇಷ್ಟಾರ್ಥವನ್ನು ಈಡೇರಿಸಲು ಹೋರಾಡಿದೆವು. ಆದರೆ, ನಾವು ಸಾಧಿಸಿರುವುದೆಲ್ಲವೂ ನಮ್ಮ ಉದ್ದೇಶಸಾಧನೆಯ ಹೋರಾಟದ ಸಂದರ್ಭದಲ್ಲಿ ನಮಗೆ ಕಂಡುಬಂದ ಆಶಾಕಿರಣಗಳು ಮಾತ್ರ, ಅಲ್ಲದೆ ಅವೇ ನಮ್ಮ ಸಿದ್ಧಿಯೆಂದು ಯಾರೂ ತಿಳಿಯಬಾರದು. ನಮ್ಮ ಘನವೂ ಪವಿತ್ರವೂ ಆದ ಕಾಸರಗೋಡು ವಿಲೀನೀಕರಣದ ಉದ್ದೇಶವು ಸಂಪೂರ್ಣವಾಗುವ ವರೆಗೆ ನಾವು ಖಂಡಿತವಾಗಿ ವಿರಮಿಸಲಾರೆವು. ಅದಕ್ಕಾಗಿ ಇನ್ನು ಮುಂದೆಯೂ ಅವಿಶ್ರಾಂತವಾದ ಹೋರಾಟ ಹೂಡಿ ನಮ್ಮ ತಾಯ್ನೆಲದೊಡನೆ ಮರಳಿ ಒಂದುಗೂಡುವೆವೆಂದೂ ದೃಢಸಂಕಲ್ಪವುಳ್ಳವರಾಗಿರುವೆವು.

ನಮ್ಮ ನೈತಿಕ ಜಯ

ಇದು ವರೆಗೆ ನಾವು ನಮ್ಮ ಧ್ಯೇಯದತ್ತ ದೃಷ್ಟಿಯಿಟ್ಟು ನಡೆದ ಬಂದದಾರಿ ಕಂಟಕಮಯವಾಗಿದ್ದರೂ ರೋಮಾಂಚಕಾರಿಯೆಂಬುದನ್ನು ನಾವು ಬಲ್ಲೆವು. ಕಾಸರಗೋಡು ಕನ್ನಡ ನಾಡಿನೊಂದಿಗೆ ಸೇರ್ಪಡೆಯಾಗುವುದು ವಿಳಂಬವಾಗುತ್ತಿದ್ದರೂ ಅಖಿಲ ಭಾರತದ ಹಲಕೆಲವು ಗಡಿ ವಿವಾದಗಳಲ್ಲಿ ನಮ್ಮ ಕಾಸರಗೋಡು ಪ್ರಶ್ನೆ ಬಹಳ ಪ್ರಾಮುಖ್ಯವಾಗಿ ಇಂದು ಗಣಿಸಲ್ಪಡುತ್ತಿದೆಯೆಂದು ನಾವು ತಿಳಿದಿರಬೇಕಾಗಿದೆ. ಕಾಸರಗೋಡು ಇಷ್ಟು ಪ್ರಾಮುಖ್ಯ ಪ್ರಶ್ನೆಯಾಗಿ ಎದ್ದು ನಿಲ್ಲಲು ನಮ್ಮ ಕನ್ನಡಿಗರ ಒಗ್ಗಟ್ಟು, ನಮ್ಮ ಮುಂದಾಳುಗಳ ಸಾಮರ್ಥ್ಯ—ಎಲ್ಲದಕ್ಕಿಂತಲೂ ಮಿಗಿಲಾಗಿ ಭಗವದನುಗ್ರಹವೂ ಕಾರಣವೆಂದು ನಾವು ನಂಬಿದ್ದೇವೆ. ನಮ್ಮ ಕಾಸರಗೋಡಿಗೆ, ಮೊದಲಿಂದ ಇದ ವರೆಗೂ ದೊರೆತ ನೈತಿಕ ವಿಜಯವೆಂದರೆ ಇಲ್ಲಿನ ಕನ್ನಡಿಗರು ಕನ್ನಡ ದೇಶಕ್ಕೆ ಸೇರಬೇಕೆಂದು ಹೂಡಿದ ವಾದವನ್ನು ಕೇಳಿಯೂ, ನಾನಾ ಪಕ್ಷಗಳವರು, ಪಕ್ಷಗಳ ಮುಂದಾಳುಗಳು ಚುನಾವಣಾ ಸಂದರ್ಭಗಳಲ್ಲೂ ಇತರ ಅನೇಕ ಸಂದರ್ಭಗಳಲ್ಲೂ ಅಂತತಃ ಒಪ್ಪುತ್ತಾ ಬಂದದು. ಅದೇ ನಮ್ಮ ನಿಲುವು ನ್ಯಾಯವಾದುದೆಂಬುದಕ್ಕೆ ಜಗಜ್ಜಾಹೀರವಾದ ಸಾಕ್ಷಿಯಾಗಿದೆ. ಕನ್ನಡಿಗರು ಒಲ್ಲದ ಕೇರಳ ಭರಣವು ಆದಷ್ಟು ಬೇಗ ನಿವಾರಣೆಯಾಗುವುದು ಉಭಯತರಿಗೂ ಕೇಂದ್ರ ಸರಕಾರಕ್ಕೂ ಕ್ಷೇಮ. ಅಲ್ಲದೆ ಇದ್ದರೆ ಅದರಿಂದಾಗುವ ದುಷ್ಪರಿಣಾಮದ ಹೊಣೆಯನ್ನು ಆಡಳಿತದ ಜವಾಬ್ದಾರಿ ಹೊತ್ತವರು ಅನುಭವಿಸಲೇಬೇಕಾಗುವುದೆಂದು ನಾವು ಎಚ್ಚರಿಸಬೇಕಾಗಿದೆ.

ಕಾಸರಗೋಡಿನ ಕುರುಕ್ಷೇತ್ರದಲ್ಲಿ

ಇಂತಹ ಸಂದರ್ಭದಲ್ಲಿ ನಾವು ಕಾಸರಗೋಡಿನ ಕನ್ನಡಿಗರು ಮುಂದೇನು ಮಾಡತಕ್ಕದ್ದು ಎಂಬ ವಿಷಯವು ಪೂರ್ಣ ಪ್ರಕಾಶದಷ್ಟು ಸ್ಪಷ್ಟವೇ ಆಗಿದೆ. ಕಾಸರಗೋಡು ಕನ್ನಡ ನಾಡಿನಲ್ಲಿ ವಿಲೀನಗೊಳ್ಳುವ ತನಕ ಹಲವು ಸನ್ನಿವೇಶಗಳಲ್ಲೂ ಒಮ್ಮನಸ್ಸಿನಿಂದಲೇ ನಮ್ಮ ಹೋರಾಟ ತಡೆಯಿಲ್ಲದೆ ನಡೆಯಲೇಬೇಕು. ಆದರೆ, ಈ ಸಂದರ್ಭದಲ್ಲಿ ಇಡೀ ರಾಷ್ಟ್ರದ ಗಮನವನ್ನು ಕೇರಳದತ್ತ ಸೆಳೆದ ಒಂದು ಮಹಾಘಟನೆ—ವಿಮೋಚನಾ ಸಮರ ಸಮಿತಿಯ ಹೋರಾಟ—ಕಮ್ಯೂನಿಸ್ಟ್ ಸರಕಾರದ ಪದಚ್ಯುತಿ—ಮುಂಬರುವ ಚುನಾವಣೆ—ಅದರಲ್ಲಿ ಕಮ್ಯೂನಿಸ್ಟ್ ಪಕ್ಷ ಒಂದು ಕಡೆಯಲ್ಲಿಯೂ, ಕಮ್ಯೂನಿಸ್ಟ್ ಹೊರತಾದ ಇತರ ಎಲ್ಲಾ ರಾಜಕೀಯ ಪಂಗಡಗಳು ಐಕ್ಯರಂಗವಾಗಿಯೂ ಒಂದೆಡೆಯಲ್ಲಿಯೂ ನಿಂತು ನಡೆವ ಇಂದಿನ ಚುನಾವಣಾಸಿದ್ಧತೆ — ಇಂತಹ ಕುತೂಹಲಕಾರೀ ಘಟನೆಯ ಪ್ರಭಾವವು ಕನ್ನಡಿಗರ ಮೇಲೂ ಪ್ರಭಾವವನ್ನು ಬೀರುವುದರಲ್ಲಿ ಆಶ್ಚರ್ಯವೂ ಅಸಹಜವೂ ಆದದ್ದು ಏನೂ ಇಲ್ಲ. ಕಮ್ಯೂನಿಸ್ಟ್, ಕಮ್ಯೂನಿಸ್ಟ್ ವಿರೋಧಿಗಳು ಕೇರಳದಲ್ಲಿ ಪರಸ್ಪರ ಹೋರಾಡುತ್ತಿದ್ದರೂ ಕ್ಷೇತ್ರ ಧರ್ಮದಂತೆ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಸಂಗ್ರಾಮಸನ್ನದ್ಧನಾಗಿ ಬಂದು ನಿಂತ ವೀರಾರ್ಜುನನಿಗೆ ಒಮ್ಮೆಗೆ ತನ್ನ ಗೋತ್ರದ ಬಂಧುಬಾಂಧವರ ನೆನಪು ಉಂಟಾಗಿ ಮನಸ್ಸು ಅಧೀರನಾದರೂ, ಮರುಕ್ಷಣದಲ್ಲಿಯೇ ತನ್ನ ಕರ್ತವ್ಯಬೋಧನವಾದಾಗ, ಆತನು ತನ್ನ ಹೃದಯ ದೌರ್ಬಲ್ಯವನ್ನು ಬಿಟ್ಟು ವೀರಾವೇಶಪೂರ್ಣವಾಗಿ ದ್ವಿಗುಣೋತ್ಸಾಹದಿಂದ ಹೋರಾಡಿ ಧರ್ಮಸಂಸ್ಥಾಪನೆಗೆ ನೆರವಾದಂತೆ, ಇಂದು ಕಾಸರಗೋಡಿನ ಕುರುಕ್ಷೇತ್ರದಲ್ಲಿ ಬಿಡುಗಡೆಯ ಹೋರಾಟಕ್ಕಾಗಿ ಸಿದ್ಧರಾದ ಕನ್ನಡ ವೀರರು ತಮ್ಮ ಕರ್ತವ್ಯ ಕರ್ಮದ ಕಡೆಗೆ ಕಣ್ಣಿಟ್ಟು, ನಿಂತನೆಲೆಯಿಂದ ಚಲವಿಚಲಿತರಾಗದೆ, ನಮ್ಮ ಹೋರಾಟವು ಪರಮಾತ್ಮಪ್ರೇರಣೆಯೆಂದು ನಂಬಿ, ಪೂರ್ಣೋತ್ಸಾಹದಿಂದ ಹೋರಾಡಿ ಕಾಸರಗೋಡನ್ನು ಕೇರಳ ಭರಣದ ನೊಗದಿಂದ ತಪ್ಪಿಸಿ, ಆ ಮೂಲಕ ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ಸಂಸ್ಥಾಪನೆಗೆ ನೆರವಾಗುವರೆ ಇಂದೇ ಸನ್ನದ್ಧರಾಗುವರೆಂದು ನಾವು ಬಯಸೆಯುಳ್ಳವರಾಗಿ ದ್ವೇಷ ಕಮ್ಯುನಿಸ್ಟ್—ಕಮ್ಯುನಿಸ್ಟ್ ವಿರೋಧಿಗಳು ಕೇರಳವನ್ನು ಆಳುವುದಕ್ಕಾಗಿ ಹೋರಾಡುತ್ತಿರುವಾಗ ನಾವು ತದ್ವಿರುದ್ಧವಾಗಿ ಅದನ್ನು ಬೇಗನೇ ಬಿಡುಗಡೆಹೊಂದಬೇಕೆಂಬ ನಿಶ್ಚಲವಾದ ಧ್ಯೇಯವುಳ್ಳವರು, ಇಂತಹ ನಮ್ಮ ಧ್ಯೇಯ ಸಾಧನೆಯ ಸಂದರ್ಭದಲ್ಲಿ—ನಾವು ಕೇರಳದ ಅಧಿಕಾರಲಾಲಸೆಯುಳ್ಳ ಈ ಇಬ್ಬಣಗಳ ಘರ್ಷಣೆಯಲ್ಲಿ ಸಿಕ್ಕಿ ನುಚ್ಚುನೂರಾದರೆ—"ಎರಡು ಕೋಣಗಳು ಹೋರಲು ನಡುವೆ ಸಿಕ್ಕಿದ ಗಿಡವು ಪುಡಿಯಾಯಿತು" ಎಂಬಂತೆ ಆದೀತು; ಯಾವುದೇ ಪಕ್ಷಕ್ಕೆ ನಾವು ವಾಲಿದರೂ ಕನ್ನಡಿಗರು ಆತ್ಮಘಾತವನ್ನು ಮಾಡಿಕೊಂಡಂತಾಗುವುದು; ನಾವು ದಾರಿತಪ್ಪಿ ಧಾವಿಸಿದಂತಾದೀತೆಂಬುದನ್ನು ಸರಿಯಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು.

ನಮ್ಮ ಜಯವೇ ಪ್ರಜಾಪ್ರಭುತ್ವದ ಜಯ

ರಾಷ್ಟ್ರವನ್ನು ಕಮ್ಯೂನಿಸಂ ಕಬಳಿಸುತ್ತಿದೆಯೆಂದೂ, ಪ್ರಜಾಪ್ರಭುತ್ವ ತತ್ತ್ವಕ್ಕೆ ಗಂಡಾಂತರ ಬಂದಿದೆಯೆಂದೂ, ಇಂತಹ ರಾಷ್ಟ್ರೀಯ ಗಂಡಾಂತರದ ಕಾಲದಲ್ಲಿ ಕನ್ನಡಿಗರು ಕಮ್ಯುನಿಸಮನ್ನು ವಿರೋಧಿಸದೆ ಇದ್ದರೆ ರಾಷ್ಟ್ರಾಭಿಮಾನಶೂನ್ಯರೆನಿಸುವರೆಂದು ಒಂದು ಪಕ್ಷದವರಿಂದಲೂ, ಕಮ್ಯೂನಿಸ್ಟರು ಚುನಾವಣೆಯ ಮೂಲಕ ಅಧಿಕಾರಕ್ಕೆ ಬಂದವರೆಂದೂ, ಅವರಿಗೆ ಶಾಸನ ಸಭೆಯ ನಿಶ್ಚಿತ ಬಹುಮತವು ಇದ್ದು ಸರಕಾರವನ್ನು ಯೋಗ್ಯ ರೀತಿಯಿಂದ ನಿರ್ವಹಿಸುತ್ತಿದ್ದರೂ, ಅವರನ್ನು ಪುಂಡಾಟಿಕೆ ಮಾಡಿ ಅಧಿಕಾರದಿಂದ ತಳ್ಳಹಾಕಿದರೆಂದೂ, ಹಾಗಾಗಿ ಘಟನೆಯ ತತ್ವಕ್ಕೇ ವಿರೋಧವೂ, ಪ್ರಜಾಪ್ರಭುತ್ವ ತತ್ವಕ್ಕೆ ಗಂಡಾಂತರವೂ ಸಂಯುಕ್ತರಂಗದಿಂದ ಬಂದಿರುವಾಗ, ಕಮ್ಯುನಿಸ್ಟ್ ಪಕ್ಷವನ್ನು ಬೆಂಬಲಿಸದ ಇದ್ದರೆ ಕನ್ನಡಿಗರು ಜನತಾ ದ್ರೋಹಿಗಳೆಂದೂ ಹೀಗೆ ಎರಡು ಕಡೆಗಳಿಂದಲೂ ಅವರವರ ಮಿದುಳಿನ ಓಟಕ್ಕೆ ಸರಿಯಾಗಿ ನಮ್ಮ ಮೇಲೆ ಆರೋಪಗಳು ಅಲ್ಲಲ್ಲಿ ಎದ್ದುಬರುತ್ತಿವೆ. ಭಾರತ ದೇಶವು 1942ರಲ್ಲಿ ಬಿಡುಗಡೆಗಾಗಿ ಕುದಿಯುತ್ತಿರಲು, ಗಾಂಧೀಜಿ 'ಕ್ವಿಟ್ ಇಂಡಿಯಾ' ಎಂದು ಘೋಷಿಸಿದಾಗ, ಗಾಂಧೀಜಿ ಮುಂತಾದ ರಾಷ್ಟ್ರನಾಯಕರನ್ನು ಫೇಸಿಸ್ಟ್ ಪಕ್ಷಪಾತಿಗಳೆಂದು ಆರೋಪಿಸಿ, ಅವರನ್ನೆಲ್ಲಾ ಗಲ್ಲಿಗೇರಿಸಬೇಕೆಂದು ಸಾರುವಂತಹ ಮೂರ್ಖತ್ವಕ್ಕೂ ಕೆಲವರು—ಕೆಲವು ಪಕ್ಷದವರು ಮನಸ್ಸು ಮಾಡಿದ್ದರು. ಆದರೆ ದೈವಕೃಪೆಯಿಂದ ಸತ್ಯಸಂಕಲ್ಪವು ನೆರವೇರಿ. ಭಾರತವು ಅಂದಿನ ಆ ಅಗ್ನಿ ಪರೀಕ್ಷೆಯಲ್ಲಿ ಶುಭ್ರವಾಗಿ ಬೆಳಗಿ ಬಂದು, ಸ್ವಾತಂತ್ರ್ಯವನ್ನು ಸಹ ಗಳಿಸಿಕೊಂಡಂತೆ, ಇಂದಿನ ಈ ಸಂದರ್ಭದಲ್ಲಿ ಕಾಸರಗೋಡಿನ ಕನ್ನಡ ಜನತೆಯ ಸತ್ಯಸಂಕಲ್ಪವು ನೆರವೇರಿ, ಅವರು ನಡೆಸಿದ ಈ ಹೋರಾಟದ ಜಯವೇ ಪ್ರಜಾಪ್ರಭುತ್ವದ ಜಯವೆಂಬ ದಿವ್ಯ ಸಂದೇಶವನ್ನು ಸಾರುವ ಸುವರ್ಣ ಸಂದರ್ಭವು ಭವಿಷ್ಯದ ಗರ್ಭದಲ್ಲಿ ಅಡಗಿದೆಯೆಂದು ನಾವು ನಂಬಿದ್ದೇವೆ. ಆದಕಾರಣವೇ ಕೇರಳದ ಇಂದಿನ ಈ ಇಬ್ಬಣಗಳಲ್ಲಿಯೂ ನಾವು ಸೇರದೆ, ನಮ್ಮ ಧ್ಯೇಯದಿಂದ ವಿಚಲಿತರಾಗದೆ, ಹೋರಾಟವನ್ನು ಮುಂದೊತ್ತುವರೆ ನಾವು ದೃಢಸಂಕಲ್ಪ ಮಾಡಬೇಕಾಗಿದೆ.

ಕನ್ನಡವಲ್ಲದೆ ಅನ್ಯ ರಾಜಕೀಯವಿಲ್ಲ

ಕಾಸರಗೋಡು ಕನ್ನಡ ಪ್ರಾಂತಕ್ಕೇ ಸೇರಬೇಕಾದುದೆಂಬ ನಮ್ಮ ಧ್ಯೇಯದ ವಿಚಾರದಲ್ಲಿ, ಅವರವರ ರಾಜಕೀಯ ಪಕ್ಷಗಳ ನಿಲುವೇನೇ ಇದ್ದರೂ, ಅನೇಕ ಕನ್ನಡ ಮಹನೀಯರು, ಅವರವರ ಪಕ್ಷಗಳಲ್ಲಿ ಇದ್ದುಕೊಂಡೂ, ಪಕ್ಷಗಳಿಂದ ಹೊರಬಂದೂ ಸಹ ಮನಃಪೂರ್ವಕ ನಮ್ಮ ಧ್ಯೇಯವನ್ನು ಬೆಂಬಲಿಸುವವರು ಇದ್ದಾರೆಂದು ನಾವು ಬಲ್ಲೆವು. ನಮ್ಮ ಧ್ಯೇಯವನ್ನು ಸಾಧಿಸುವ ತನಕ ಕಾಸರಗೋಡಿನ ಕನ್ನಡಿಗರಿಗೆ ಕನ್ನಡವೊಂದೇ ಪಕ್ಷವಲ್ಲದೆ ಬೇರೆ ರಾಜಕೀಯ ಜೀವನವಿಲ್ಲವೆಂದು ದೃಢಸಂಕಲ್ಪವುಳ್ಳವರಾಗಬೇ

ಕುಮಾರಿ ಜಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & CO. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619

UDIPI, THURSDAY
29-10-1959

LICENSE NO. 31
Licensed to Post without Prepayment

ಕು, ಅಥವಾ ನಮ್ಮ ಮನೆಯನ್ನು ಕಟ್ಟುವ—ಕನ್ನಡದ ಭವ್ಯ ರಾಷ್ಟ್ರವನ್ನು ರೂಪುಗೊಳಿಸುವ ಈ ರಾಜಕೀಯಕ್ಕಿಂತ ಬೃಹತ್ತಾದ ಮಹತ್ತಾದ ರಾಜಕೀಯವಾದರೂ ನಮಗೆ ಬೇರೇನಿದೆ? ನಮ್ಮ ಕನ್ನಡತನವೆಂಬುದು ಈ ನಮ್ಮ ತಾಯಿಯ ಋಣ—ಇದು ಸಾಮಾನ್ಯಾರ್ಥದ ರಾಜಕೀಯವಲ್ಲ. ಎಲ್ಲಾ ರಾಜಕೀಯ ತತ್ವಗಳಿಗಿಂತಲೂ ಶ್ರೇಷ್ಠವಾದ ಮತ್ತು ಪವಿತ್ರವಾದ, ನಮ್ಮ ಜನ್ಮದಿಂದಲೇ ನಮ್ಮ ರಕ್ತಗತವಾಗಿ ಹರಿದುಬಂದು ನಾವು ಕೊನೆಯುಸಿರೆಳೆಯುವ ತನಕ ನಮ್ಮಲ್ಲಿ ನೆಲೆನಿಲ್ಲುವ ಪರಮಪೂಜ್ಯವಾದ ತತ್ವವಿದಾಗಿದೆ. ಈ ತತ್ವವನ್ನು —ನಮ್ಮ ಕನ್ನಡತನವನ್ನು ನಾವು ಮರೆತಲ್ಲಿ ನಮ್ಮ ಜನ್ಮವನ್ನೇ ಮರೆತಂತೆ; ನಮ್ಮ ಅಸ್ತಿತ್ವವೇ ನಾಶವಾದಂತೆ, ಹೆತ್ತ ತಾಯನ್ನೇ ಅಲ್ಲಗಳೆದಂತೆ—ಎಂಬೀ ವಿಚಾರಗಳನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಅದು ಮಾತ್ರವಲ್ಲದೆ, ರಾಜಕೀಯವೆಂಬ ತತ್ವಗಳು ಕೆಲವೊಮ್ಮೆ ಬದಲಾವಣೆಯಾಗುವುದೂ ಉಂಟು, ಬದಲಾವಣೆಯಾದರೂ ಅದರಲ್ಲಿ ಆಶ್ಚರ್ಯವೇನೂ ಇಲ್ಲ ಒಂದು ಕಾಲದಲ್ಲಿ ಹಿತವಾದುದೇ ಇನ್ನೊಂದು ಸಮಯದಲ್ಲಿ ಅಹಿತವಾದರೆ ವಿಶೇಷವಿಲ್ಲ. ಆದರೆ ನಮ್ಮ ಕನ್ನಡತನ—ಅದು ನಮಗೆ ದೇವರ ದಯೆಯಿಂದ ಜನ್ಮತಃ ಬಂದಿರುವುದರಿಂದ ಕಾಲಕಾಲಕ್ಕೆ ಬದಲಾಗುವುದು ಸಾಧ್ಯವಿಲ್ಲ. ಕನ್ನಡ ತಾಯಿಯಲ್ಲದೆ ನಮಗೆ ಅನ್ಯ ಮಾತೆಯಿಲ್ಲ. ಆದರಿಂದಾಗಿ ನಮ್ಮ ಧ್ಯೇಯದತ್ತ ನಿಶ್ಚಲವಾದ ದೃಷ್ಟಿಯಿಟ್ಟು ಕಾಸರಗೋಡನ್ನು ಕನ್ನಡ ನಾಡಿಗೆ ಸೇರುವ ತನಕ, ಅದು ಹೊರತು, ನಮಗೆ ಅನ್ಯ ರಾಜಕೀಯ ಜೀವನ ಇಲ್ಲವಾಗಿದೆ— ಬೇಡವಾಗಿದೆ

ಮೊದಲು ಮಜೂರಿ-ಮತ್ತೆ ಗಂಟು

ಇಂದು ಕೇರಳದಲ್ಲಿ ಪುನಃ ಚುನಾವಣೆಯೊಂದು ಸಮೀಪಿಸಿರೆಯೆಂಬುದರಿಂದಲೂ ಕಾಸರಗೋಡಿನ ಕನ್ನಡಿಗರು ಧ್ಯೇಯದಿಂದ ವಿಚಲಿತರಾಗದೆ ದೃಢನಿರ್ಧಾರದಿಂದ ಇರಬೇಕೆಂದು ಒತ್ತಿ ಹೇಳುತ್ತೇವೆ. ಕೇರಳದ ಪ್ರಮುಖ ರಾಜಕೀಯ ಪಕ್ಷಗಳು ಹಿಂದೊಮ್ಮೆ ಚುನಾವಣೆಯ ಸಂದರ್ಭದಲ್ಲಿ ಕನ್ನಡಿಗರ ಬಗ್ಗೆ ಸಹಾನುಭೂತಿ ತೋರಿಸಿ ಗೆದ್ದುಬಂದಿವೆ. ಸದ್ಗೃಹಸ್ಥರ ಮಾತನ್ನು ಯಾರಾದರೂ ನಂಬಬೇಕಾದಂತೆ ಕನ್ನಡಿಗರಾದರೂ ಒಮ್ಮೆ ನಂಬಿ ನಡೆದರು. ನಂಬಿಸಿದವರು ಚುನಾವಣೆಯಲ್ಲಿ ಗೆದ್ದೂ ಬಂದರು ಗೆದ್ದು ಬಂದ ಮೇಲೆ ಚುನಾವಣೆಯ ಕಾಲದಲ್ಲಿ ಕೊಟ್ಟ ಭರವಸೆಗಳನ್ನು ಸಂಪೂರ್ಣ ಅಲ್ಲಗಳೆಯುವುದು ಅವರಿಗೆ ಸಾಧ್ಯವಾಗದಿದ್ದರೂ ಅಂತಹ ಭರವಸೆಗಳ ಗಾಂಭೀರ್ಯ ಶಿಥಿಲವಾಗುತ್ತಾ ಬಂದುದನ್ನು ನಾವು ಗಮನಿಸಿದ್ದೇವೆ. ಕೇರಳದಲ್ಲಿ ಅಧಿಕಾರಕ್ಕೇರಿದ ಕಮ್ಯೂನಿಸ್ಟ್ ಪಕ್ಷವಾಗಲಿ ಕೇಂದ್ರದಲ್ಲಿ ತನ್ನ ಪಕ್ಷದ ಅಧಿಕಾರವುಳ್ಳ ಕಾಂಗ್ರೆಸ್ ಆಗಲಿ ಆಯಾಯ ದಿಶೆಯಲ್ಲಿ ಆಯಾಯ ಪಕ್ಷದವರು ನೆರವೇರಿಸಬಹುದಾದ ಕಾರ್ಯಗಳನ್ನು ಮನಃಪೂರ್ವಕವಾಗಿ ಮುಂದೊತ್ತಲಿಲ್ಲವೆಂದು ನಾವು ವಿಷಾದಪೂರ್ವಕ ಹೇಳಬೇಕಾಗಿದೆ. ಆದರಿಂದಾಗಿಯೇ ಆಯಾಯ ಪಕ್ಷಗಳ ಕಡೆಯಿಂದ ನಮಗೆ ಆಗಬೇಕಾದ ಕೆಲಸ ಇನ್ನೂ ಆಗದೆ ಉಳಿದಿವೆ ಪುನಃ ಈಗ ಚುನಾವಣೆಯ ಸಂದರ್ಭ ಸಮೀಪಿಸಿದೆ. ಪುನಃ ಅಲ್ಲಲ್ಲಿ ನಮಗೆ ಭರವಸೆ ಕೊಡುವ ಮಾತುಗಳು ಸಹ ಕೇಳಿ ಬರುತ್ತವೆ. ಆದರೆ ಈಗ, ಕನ್ನಡಿಗರು ಹಿಂದಿನ ಪಾಠದಿಂದ ಅನುಭವಶಾಲಿಗಳಾಗಿರುವರು. ಹಿಂದೆ ಮಾತು ಕೊಟ್ಟು ಅದನ್ನು ನೆರವೇರಿಸಲು ಅಸಮರ್ಥರಾದವರು ಪುನಃ ಇಂದು ಮಾತು ಕೊಟ್ಟರೂ ನೆರವೇರಿಸಲಾರರೆಂದು ನಾವು ಗತಚರಿತ್ರೆಯನ್ನೇ ಎತ್ತಿ ಹೇಳುವುದಿಲ್ಲ ಆದರೆ, ಇಂದು ಕೇವಲ ಮಾತುಕೊಟ್ಟು ನಮಗೇನೂ ಪ್ರಯೋಜನವಿಲ್ಲ. ನಮ್ಮ ನ್ಯಾಯವಾದ ಕೇಳಿಕೆಯನ್ನು ನೆರವೇರಿಸಿದ ನಂತರವೇ ನಮ್ಮ ಸಹಾಯವೆಂದು ಸ್ಪಷ್ಟೋಕ್ತಿಯಿಂದ ಸಾರಬೇಕಾಗಿದೆ ಹಿಂದೆ, ದ್ವಿತೀಯ ಮಹಾಯುದ್ಧಕ್ಕೆ ಬ್ರಿಟಿಷ್ ಸರಕಾರ ಇಳಿದಾಗ, ಅದು ಭಾರತದ ಜನತೆಯ ನೆರವನ್ನು ಕೇಳಲು, ಆಗ ಕೇಂದ್ರ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಮುಂದಾಳುವೂ, ಭಾರತದ ಹಿರಿಯ ನೇತಾರರಗಳಲ್ಲೊಬ್ಬರೂ ಆದ ಶ್ರೀ ಭುಲಾಭಾಯಿ ದೇಸಾಯಿಯವರು ಅಂದಿನ ಬ್ರಿಟಿಷ್ ಸರಕಾರಕ್ಕಿತ್ತ ಉತ್ತರವನ್ನೇ, ನಾವು ಕಾಸರಗೋಡಿನ ಕನ್ನಡಿಗರು, ಇಂದು ಈ ಚುನಾವಣೆಯ ಸಂದರ್ಭದಲ್ಲಿ ನಮಗೆ ಭರವಸೆ ನೀಡುತ್ತಿರುವ ಕೇರಳದ ರಾಜಕೀಯ ಪಕ್ಷಗಳಿಗೂ ಹೇಳುತ್ತೇವೆ.

ಟ್ರೈನಿಗೆ ಹೋಗಬೇಕಾದ ಪ್ರಯಾಣಿಕನ ಗಂಟನ್ನು ಕೂಲಿಯೊಬ್ಬನು ಹೊತ್ತು ತಂದನು ಪ್ರಯಾಣಿಕನಿಗೆ ಟ್ರೈನು ಸಿಕ್ಕಿತು, ಗಂಟೂ ತಲುಪಿತು ಆದರೆ ಗಂಟು ಹೊತ್ತುತಂದ ಕೂಲಿಯವನು ಮಜೂರಿ ಕೇಳಿದಾಗ ಮಜೂರಿ ಕೊಡದೆ ಆತನನ್ನು ಗದರಿಸಿ ಟ್ರೈನು ಹತ್ತಿ ಆ ಪ್ರಯಾಣಿಕನು ಹೊರಟುಹೋದನು. ಈಗ ಅದೇ ಪ್ರಯಾಣಿಕನಿಗೆ ಪುನಃ ಒಮ್ಮೆ ಹಿಂದಿನಂತೆ ಟ್ರೈನಿಗೆ ಹೋಗಬೇಕಾಗಿದೆ, ಆತನ ಗಂಟು ಹೊರಲು ಕೂಲಿಯವನ ಅವಶ್ಯವೂ ಬಿದ್ದಿದೆ ನಾನು ಅದೇ ಹಿಂದಿನ ಕೂಲಿಯವನು. ಗಂಟು ಹೊತ್ತುಕೋ, ಮತ್ತೆ ಕೂಲಿಕೊಡೋಣವೆಂದರೆ ನಾನು ಒಪ್ಪುವುದಿಲ್ಲ. ಹಿಂದಿನ ಅನುಭವದಿಂದ ನಾನು ಈಗ ಹೇಳುತ್ತೇನೆ. ನಿನ್ನ ಗಂಟು ಹೊರಲು ತೊಂದರೆಯಿಲ್ಲ, ನನ್ನ ಮಜೂರಿಯನ್ನು ಮೊದಲೇ ಕೊಟ್ಟುಬಿಡು". ಕೇರಳದ ರಾಜಕೀಯ ಪಕ್ಷಗಳು ನಮಗೀಯುವ ಭರವಸೆಯ ಕುರಿತು ಕನ್ನಡಿಗರು ಇಂದು ಇದೇ ಮಾತುಗಳನ್ನು ಅವರಿಗೆ ಮುಖತಃ ಹೇಳಬೇಕಾಗಿದೆ. ಕಳೆದ ಚುನಾವಣೆಯಲ್ಲಿ ಕಲಿತ ಪಾಠದಿಂದ ನಾವು ಈ ಕಹಿ ಅನುಭವ ಪಡೆದಿದ್ದೇವೆ. ಮಾಡಿದ ಕೃತಘ್ನತೆಯನ್ನು—ನಡೆಸಿದ ವಂಚನೆಯನ್ನು—ಅದೇ ಶಬ್ದಗಳಿಂದ, ಅದೇ ಭಾಷೆಯಿಂದ ಹೇಳಿದರೆ ಅದು ತೀಕ್ಷ್ಣವೂ ಆಗಬಹುದು; ಕೆಲವೊಮ್ಮೆ ಧಾರ್ಷ್ಟ್ಯವೂ ಎನಿಸೀತು. ಆದರೆ ಕೃತಘ್ನತೆ ವಂಚನೆಗಳಿಂದಾಗಿ ನಾವು ಪಾಠ ಕಲಿತು ಜಾಗರೂಕತೆ ವಹಿಸಿದರೆ ಅದನ್ನು ಯಾರೂ ತಪ್ಪೆಣಿಸುವುದು ಸಾಧ್ಯವಿಲ್ಲ ತಪ್ಪಾಗುವುದೂ ಇಲ್ಲ.

ಪುನಃ ಕನ್ನಡಿಗರ ಸತ್ವಪರೀಕ್ಷೆ

ಕಾಸರಗೋಡಿನ ಕನ್ನಡ ನೆಲವನ್ನು ಮರಳಿ ಮೈಸೂರಿಗೆ ಸೇರಿಸುವ ಹೊಣೆಗಾರಿಕೆಯ ಕಾರ್ಯ ಇಂದು ಆಗಬೇಕಾಗಿದೆ ಅದಕ್ಕಾಗಿ ನಮಗೆ ಭರವಸೆ ಸಾಲದು, ಕಾರ್ಯಬೇಕು. ಇಂತಾಗಬೇಕಾದರೆ ಕನ್ನಡಿಗರಲ್ಲಿ ಐಕ್ಯವೂ ದೃಢನಿರ್ಧಾರವೂ ಇರಬೇಕು ವೈನ್ಯರಣತೆಯಿಂದ ನಮ್ಮ ಕೆಲಸವು ಕೈಗೂಡಲಾರದು. ನಮ್ಮಲ್ಲಿ ಯೋಗ್ಯತೆಯಿದ್ದಲ್ಲಿ ನಾವು ನಮ್ಮ ಕಾರ್ಯವನ್ನು ಸಾಧಿಸಿಯೇ ಸಾಧಿಸುವೆವು ಅಂತಹ ಸಾಧನೆಗೆ ನಮಗಿಂದು ಯೋಗ್ಯ ಸಂದರ್ಭ ದೊರಕಿದೆ ಹಿಂದೆ ಹಲವಾರು ಸಲ, ಹಲವು ಸಂಘ ಸಂಸ್ಥೆಗಳ ಬೇಡಿಕೆಗಳ ಮೂಲಕ, ಜನಪ್ರತಿನಿಧಿಗಳ ಕೇಳಿಕೆಯ ಮೂಲಕ, ಚುನಾವಣೆಯ ಸತ್ವಪರೀಕ್ಷೆಯ ಮೂಲಕವೂ ಸಹ ನಾವು ಕಾಸರಗೋಡು ಕನ್ನಡನಾಡೆಂದು ಸಿದ್ಧಪಡಿಸಿದೆವು ನಮ್ಮ ಉದ್ಘೋಷವು ಹಳ್ಳಿಯಿಂದ ಡಿಲ್ಲಿಯ ತನಕವೂ ಮುಗಿಲು ಮುಟ್ಟುವಂತೆ ಮಾಡಿದೆವು ಪುನಃ ಇಂದು ಚುನಾವಣೆ ಸಮೀಪಿಸಿದಾಗ ನಮಗೆ ಇನ್ನೊಮ್ಮೆ ಸುವರ್ಣಸಂಧಿ ಬಂದಿದೆ ನಮ್ಮ ಕಾಸರಗೋಡಿನ ಜನತೆ ಕನ್ನಡದ ಪರವಾಗಿ ಇದೆಯೆಂಬುದನ್ನು ಇನ್ನೊಮ್ಮೆ ಸಹ ಸಿದ್ಧಪಡಿಸಬೇಕಾಗಿದೆ ಕನ್ನಡಿಗರು, ತಮ್ಮೊಳಗಿನ ಯಾವುದೇ ಭೇದಭಾವನೆಯನ್ನು ಮರೆತು, ಕಾಂಗ್ರೆಸ್, ಪ್ರಜಾಸೋಶಿಯಲಿಸ್ಟ್, ಕಮ್ಯೂನಿಸ್ಟ್, ಮುಸ್ಲಿಂಲೀಗ್, ಜನಸಂಘ—ಎಂಬಿತ್ಯಾದಿ ಯಾವುದೇ ಪಕ್ಷಪಂಗಡದ ವ್ಯತ್ಯಾಸವನ್ನು ಗಣಿಸದೆ, ಕನ್ನಡವೊಂದೇ ನಮ್ಮ ಪಕ್ಷವೆಂಬ ಧ್ಯೇಯವನ್ನು ಧ್ರುವ ತಾರೆಯಂತೆ ನಮ್ಮ ಕಣ್ಣ ಮುಂದೆ ನಿಚ್ಚಳವಾಗಿಟ್ಟುಕೊಂಡು ಕಾಸರಗೋಡು ಮತ್ತು ಕುಂಬಳೆ ಮಂಜೇಶ್ವರ ಎರಡು ಮತದಾರ ಕ್ಷೇತ್ರಗಳಲ್ಲಿಯೂ ಪ್ರಾಂತೀಕರಣ ಸಮಿತಿಯ ಉಮೇದ್ವಾರರೇ ಆಯ್ಕೆಯಾಗಿ ಬರುವಂತೆ ಸರ್ವಶಕ್ತಿಯನ್ನು ಉಪಯೋಗಿಸಬೇಕಾಗಿದೆ.

ಇದು ಕೊನೆಯ ಹೋರಾಟ

ಪ್ರಾಂತ ಪುನರ್ವಿಭಜನೆಯಲ್ಲಿ ಅತ್ಯಂತ ವಿವಾದಕ್ಕೊಳಗಾದ ಮುಂಬಯಿಯ ವಿಚಾರ, ಇಂದು ಕೇಂದ್ರ ಸರಕಾರವು ತನ್ನ ಹಿಂದಿನ ನಿಲುಮೆಯನ್ನು ಅಲ್ಲಿನ ಜನತೆಯ ಅಪೇಕ್ಷೆಯಂತೆ ಬದಲಾಯಿಸುವ ಯೋಚನೆ ಮಾಡುತ್ತಿರುವ ಸುದ್ದಿಯನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ ಆದರಿಂದಾಗಿ ಪ್ರಾಂತ ಪುನರ್ವಿಭಜನಾ ವಿಚಾರದಲ್ಲಿ ಆಗಿಹೋದ ಪ್ರಮಾದಗಳನ್ನು ಸರಿಪಡಿಸಲು ಕೇಂದ್ರ ಸರಕಾರವು ಸಮ್ಮತಿಸುವುದೆಂದು ರುಜುವಾದಂತಾಯಿತು. ಇದೇ ಸಂದರ್ಭದಲ್ಲಿ, ನಮ್ಮ ಕೇಂದ್ರದ ನಾಯಕರಿಗೆ ಇದ ಮೊದಲೇ ನ್ಯಾಯವೆಂದು ಉಚಿತವಾದ ನಮ್ಮ ಕಾಸರಗೋಡಿನ ಬೇಡಿಕೆಯನ್ನು ಸಹ ಮೈಸೂರು ಪ್ರಾಂತದ ಹನ್ನೆರಡು ಪಾರ್ಲಿಮೆಂಟು ಮೆಂಬರರ ಸಹಿ ಸಮೇತ ಸನ್ಮಾನ್ಯರಾದ ಶ್ರೀ ಬಿ. ಶಿವರಾಯರು ಮತ್ತು ಶ್ರೀ ಕೆ. ಆರ್ ಆಚಾರರವರು ಗೃಹಮಂತ್ರಿಗಳಿಗೆ ಒಪ್ಪಿಸಿರುವರೆಂದೂ, ಆ ಕುರಿತು ಅವರು ಸಹಾನುಭೂತಿ ವ್ಯಕ್ತಪಡಿಸಿರುವರೆಂದೂ ನಾವು ತಿಳಿದಿರುವೆವು ಇಂತಹ ಸದವಕಾಶದಲ್ಲಿ ಕನ್ನಡಿಗರು ಹೆಚ್ಚಿನ ಜಾಗರೂಕತೆಯಿಂದಲೂ, ಜಾಣ್ಮೆಯಿಂದಲೂ ಐಕ್ಯದಿಂದಲೂ ದುಡಿಯುವುದು ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. 'ರಾಗಬಂದಾಗ ತಂತಿಕಡಿಯಿತು' ಎಂಬ ದುರವಸ್ಥೆ ನಮ್ಮ

(೯ನೇ ಪುಟ ನೋಡಿರಿ)

ಸುಪ್ತಧನದ ಸದ್ವಿನಿಯೋಗಕ್ಕೆ
"ಲಕ್ಷ್ಮಿ"ಯ ಆಹ್ವಾನ

ನಿಮ್ಮಲ್ಲಿರುವ ಹಂದನಾಳಕ್ಕೆ ಅತ್ಯಧಿಕ ಪ್ರತಿಫಲ ದೊರೆಯಬೇಕಾದರೆ ಸಿಂಡಿಕೇಟ್ ಬೇಂಕಿನ "ಲಕ್ಷ್ಮಿ ಕೇಶ್ ಸರ್ಟಿಫಿಕೇಟು'ಗಳನ್ನು ಕೊಂಡು ಶೇಕಡಾ 4¼ರಷ್ಟು ಚಕ್ರಬಡ್ಡಿಯ ಲಾಭವನ್ನು ಪಡೆಯಿರಿ

ಸಾಮಾನ್ಯ ಜನರ ಕೈಗೂ ಎಟಕುವಂತೆ ಈ ಯೋಜನೆಯನ್ನು ಸಿದ್ಧಪಡಿಸಲಾಗಿದೆ ರೂ 8 10ರಿಂದ ಮೇಲ್ಪಟ್ಟು ರೂ 81, ರೂ 405 ಹಾಗೂ ರೂ 810ರ ವರೆಗಿನ ಮೊತ್ತಗಳಲ್ಲಿ ಕೊಂಡುಕೊಳ್ಳುವ ಸೌಕರ್ಯವಿದೆ.

ಲಕ್ಷ್ಮಿ ಕೇಶ್ ಸರ್ಟಿಫಿಕೇಟಿನಲ್ಲಿ ಅತ್ಯಧಿಕ ಬಡ್ಡಿಯ ಜೊತೆಗೆ ಅತಿ ಭದ್ರ ಸೇವೆಯೂ ಸೇರಿಕೊಂಡಿದೆ

ಹೆಚ್ಚಿನ ವಿವರಗಳನ್ನು ನಮ್ಮ ೧೨೦ ಶಾಖೆಗಳ ಮೂಲಕ ತಿಳಿದುಕೊಳ್ಳಬಹುದು

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಪ್ರಕಟಣೆ

ಕಾಪು ಸೀಮೆಗೆ ಒಳಪಟ್ಟ ಶ್ರೀ ಹೊಸ ಮಾರಿಗುಡಿಯ ಕಡೆಯಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಇಷ್ಟರ ವರೆಗೆ ಸದ್ರಿ ಸ್ಥಾಪನೆಯ ಮೆನೇಜರಾಗಿದ್ದ ಶ್ರೀ ಕೆ ಸದಾಶಿವ ಹೆಗ್ಡೆಯವರು ಇದೇ ಕಳೆದ ತಾ. 4—10—1959ರಲ್ಲು ರಾಜಿನಾಮೆ ಕೊಟ್ಟು ತಮ್ಮ ಕೆಲಸದಿಂದ ನಿವೃತ್ತರಾಗಿರುವುದರಿಂದ ಇನ್ನು ಮುಂದೆ ಭಕ್ತಾದಿಗಳು ಪೋಸ್ಟು ದ್ವಾರಾ ಕಳುಹಿಸುವ ಎಲ್ಲಾ ಹರಕೆ ಬಾಬ್ತು ಮನಿಯಾರ್ಡರು, ಇನ್ಸೂರ್ಡು, ಪಾರ್ಸೆಲ್ ವ ಇತರ ಪತ್ರವ್ಯವಹಾರಗಳನ್ನು ಸದರೀ ಶ್ರೀ ಕೆ ಸದಾಶಿವ ಹೆಗ್ಡೆಯವರ ಹೆಸರಿಗೆ ಮಾಡದೆ, ಬರೇ "ಮೆನೇಜರ್ ಶ್ರೀ ಹೊಸ ಮಾರಿಗುಡಿ, ಕಾಪು" ಯೆಂಬ ವಿಳಾಸಕ್ಕೇನೇ ಕಳುಹಿಸಬೇಕು

ಕೆ ಯಸ್ ಸೆಟ್ಟಿ,
ಪ್ರೆಸಿಡೆಂಟ್, ಬೋರ್ಡ್ ಆಫ್ ಟ್ರಸ್ಟೀಸ್,
ಶ್ರೀ ಹೊಸ ಮಾರಿಗುಡಿ ಕಾಪು.

ಕಾಪು, ತಾ. 20—10 1959

Edited, Printed & Published by K. H. Shetty, at the Navayuga Press, Udipi, S. India.

ಗಾ. ಚಂದಾ ರೂ. 5-75

ಬೆಲೆ: 13 ನ.ಪೈಸೆ

ನವಯುಗ

Vol. 39. No. 10.
ವರುಷ ೩೯. ವಾರ ೧೦.

5-11-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಸಹಕಾರಿ ಪರಿಷತ್ತು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರ ಚಳವಳಿ ಯಶಸ್ವಿಯಾಗಿದೆ

ರಾಜ್ಯದ ಎಲ್ಲ ಗ್ರಾಮಗಳೂ ಸಹಕಾರಿ ಸಂಘಗಳಿಂದ ಪ್ರಯೋಜನ ಹೊಂದಬೇಕು.

ಪುತ್ತೂರಿನಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಸಹಕಾರಿ ಪರಿಷತ್ತು ಕಳೆದವಾರ ನಡೆಯಿತು. ಈ ಪರಿಷತ್ತನ್ನು ಮೈಸೂರು ರಾಜ್ಯದ ಸಹಕಾರಿ ಸಚಿವರಾದ ಶ್ರೀ ಮಾಲಿ ಮರಿಯಪ್ಪನವರು ಉದ್ಘಾಟಿಸಿ ಸಹಕಾರ ಸಂಘ–ಬೇಂಕು ಮತ್ತು ಸದ್ಯವೇ ಸ್ಥಾಪಿತವಾಗಲಿರುವ ಸಹಕಾರಿ ಸೇವಾ ಸಂಸ್ಥೆ ಮೊದಲಾದುವುಗಳ ಬಗ್ಗೆ ಸುದೀರ್ಘವಾಗಿ ಭಾಷಣ ಮಾಡಿದರು. ಸಹಕಾರ ತತ್ವವನ್ನು ಸರಿಯಾಗಿ ಅರ್ಥಮಾಡಿಕೊಂಡು, ಅದಕ್ಕೆ ಸರಿಯಾಗಿ ಜನತೆಯು ಹೊಂದಿಕೊಂಡು ಹೋಗಬೇಕಾದ ಆವಶ್ಯಕತೆಯನ್ನವರು ಪ್ರತಿಬಿಂಬಿಸಿದರು.

ಸಹಕಾರ ಚಳವಳವು ಬಲಯುತವೂ ಶಕ್ತಿಶಾಲಿಯೂ ಆಗಿ ಮುನ್ನಡೆಯ ಬೇಕಾದರೆ, ಸರಕಾರದ ಹಸ್ತಕ್ಷೇಪವು ಕಡಿಮೆಯಿರಬೇಕೆಂದು ಕೆಲವರು ಅಭಿಪ್ರಾಯಪಡುತ್ತಿರುವುದನ್ನು ಕುರಿತಾಗಿ ಪ್ರಸ್ತಾಪಿಸಿ ಅವರು ಸರಕಾರ ಮತ್ತು ಸಹಕಾರ ಕ್ಷೇತ್ರದ ಅಧಿಕಾರಿಗಳೂ ನಾಗರಿಕರೂ ಒಂದುಸೇರಿ ದುಡಿಯಬೇಕು; ಇದರಿಂದ ಉನ್ನತಿಯು ಸಾಧ್ಯವಾಗಬಹುದು. ಸಹಕಾರಿ ಮನೋಧರ್ಮವನ್ನು ಪ್ರತಿಯೊಬ್ಬ ನಾಗರಿಕನಲ್ಲಿಯೂ ಮೊಳೆಯುವಂತೆ ಮಾಡಿ, ಉತ್ತಮ ಸಹಕಾರಿ ಕಾರ್ಯಕರ್ತರನ್ನು ಸಹಕಾರಿ ಸಂಘಗಳು ನಿರ್ಮಿಸಬೇಕು ಎಂದರು.

ಮುಂದುವರಿದು ಅವರು ಹೀಗೆ ಹೇಳಿದರು: "ರಿಸರ್ವ ಬೇಂಕು ಉತ್ಪಾದನಾ ಧನಸಹಾಯವನ್ನು ಮಾಡುವ ಸೇವೆಯನ್ನು ಪ್ರಾರಂಭಿಸಿದುದರಿಂದ ರೈತವರ್ಗದ ಅಭಿವೃದ್ಧಿ ಸೂಚನೆಯು ತೋರಿಬರುತ್ತಿದೆ. ಹೀಗೆ ಪಡೆದ ಸಾಲವನ್ನು ರೈತರು ಸದುಪಯೋಗಪಡಿಸಬೇಕಾಗಿದೆ. ಎಲ್ಲಾದರೊಂದು ಕಡೆ ಈ ಸಾಲದ ಮೊತ್ತವು ದುರುಪಯೋಗವಾಯಿತೆಂದು ಈ ಯೋಜನೆಯನ್ನೇ ತಿರಸ್ಕರಿಸುವುದು ಒಳ್ಳೆಯದಲ್ಲ. ಮಧ್ಯಕಾಲೀನ ಸಾಲದ ವ್ಯವಸ್ಥೆಯನ್ನೂ ಒದಗಿಸಿದರೆ, ರೈತರ ಬಡತನವು ಸಾಧ್ಯವಾದಷ್ಟು ಉತ್ತಮಗೊಳ್ಳುವ ನಿರೀಕ್ಷೆಯಿದೆ.

"ಆಹಾರೋತ್ಪಾದನೆಯಲ್ಲಿ ಹೆಚ್ಚಳವಾಗಬೇಕಾದುದು ದೇಶದ ಭದ್ರತೆಯ ದೃಷ್ಟಿಯಿಂದ ಅತಿ ಮುಖ್ಯವಾದುದು. ಈ ಆಹಾರವನ್ನು ರೈತರು ಬೆಳೆಸಬಲ್ಲರೇ ಹೊರತು, ಘೋಷಣೆ ಮಾಡುವವರಲ್ಲ. ಆದುದರಿಂದ, ರೈತರು ಬೇಸಾಯಕ್ಕಾಗಿ ಪಡುವ ಆರ್ಥಿಕ ಅಡಚಣೆಗಳನ್ನು ದೂರಮಾಡಲು ಅವರಿಗೆ ನಾವು ಹಲವಾರು ವಿಧಾನಗಳಿಂದ ಸಾಲವೀಯುವ ವ್ಯವಸ್ಥೆಯನ್ನು ಮಾಡಿದರೆ, ಆಗ, ಅವರು ದ್ವಿಗುಣಿತ ಉತ್ಸಾಹದಿಂದ ಕಾರ್ಯಪ್ರವೃತ್ತರಾಗುವರು. ಈ ಕೆಲಸದಲ್ಲಿ ಸಹಕಾರಿ ಸಂಘಗಳ ಪಾತ್ರವೂ ಹಿರಿದು. ದೊಡ್ಡದೊಡ್ಡ ಸಹಕಾರಿ ಸಂಘಗಳನ್ನು ಸ್ಥಾಪಿಸಬಾರದೆಂದು ಕೆಲವರು ಹೇಳುತ್ತಾರೆ. ಇದು ಪರಿಶೀಲನಾರ್ಹ. ಆದರೆ, ಇದುವರೆಗಿರುವ ದೊಡ್ಡದೊಡ್ಡ ಸಂಘಗಳು ಯಶಸ್ವಿಯಾಗಿ ಕಾರ್ಯಮಗ್ನವಾಗಿದೆಯೆಂದು ಗೊತ್ತಾಗಿದೆ.

"ಇಂದು ಎಲ್ಲೆಲ್ಲಿಯೂ ಸಹಕಾರಿ ಕೃಷಿಯ ಬಗ್ಗೆ ಕೂಗು ಕೇಳಿಸುತ್ತದೆ. ಅಮಿತ ಉತ್ತರದಾಯಿತ್ವದ ಸಂಘಗಳ ಕುರಿತಾದ ವಾದನೇ ಸಹಕಾರ ಚಳವಳದ ಆದಿಭಾಗದಲ್ಲಿ ಮನ್ನಣೆ ಪಡೆದಿದ್ದರೂ ಈಗ ಗ್ರಾಮ ಸಹಕಾರಿ ಸಂಘಗಳನ್ನು ಮಿತ ಹೊಣೆಗಾರಿಕೆಯ ತಳಹದಿಯಲ್ಲಿ ವ್ಯವಸ್ಥೆಗೊಳಿಸಲು ನಿರ್ಧರಿಸಲಾಗಿದೆ. ಸಾಲವೀಯಲು ಇಂದು ಆಸ್ತಿಯಿದೆ ಎಂಬುದು ಕಾರಣವಾಗಿದೆ. ಇದನ್ನು ಬೆಳೆ ಬೆಳೆದೀತು ಎಂಬುದಾಗಿಸಬೇಕೆಂದು ಸೂಚನೆಯಿದೆ.

"ಸಹಕಾರಿ ಪದ್ಧತಿಯು ಹಲವಾರು ಕ್ಷೇತ್ರದಲ್ಲಿ ಯಶಸ್ಸುಪಡೆದಿದೆ ಎಂಬುದಕ್ಕೆ ಇಂದು ನಮ್ಮಲ್ಲಿರುವ ಹಲವಾರು ವಿಧದ ಸಹಕಾರಿ ಸಂಸ್ಥೆಗಳೇ ಉದಾಹರಣೆಯಾಗಿವೆ. ಹಾಗೆಯೇ ಕೃಷಿಕ್ಷೇತ್ರದಲ್ಲೂ ಸಹಕಾರಿ ತತ್ತ್ವವನ್ನು ಅನುಸರಿಸಿ, ಅದರಲ್ಲಿಯೂ ಯಶಸ್ವಿಯಾಗಲು ಸಾಧ್ಯವೆಂಬುದನ್ನು ನಾವು ತೋರಿಸಿಕೊಡಬೇಕು. ಕೆಲವೆಡೆ ಈ ಧೋರಣೆಗೆ ಪ್ರತಿಯಾಗಿ ಕೂಗುಗಳು ಕೇಳಿಬರುತ್ತಿವೆ. ಆದರೆ. ಇದಕ್ಕೆಲ್ಲ ನಾವು ಕಿವಿಗೊಡಬೇಕಾದುದಿಲ್ಲ. ಕೆಲವೊಂದು ವರ್ಗಗಳವರು ತಮ್ಮ ಸ್ವಲಾಭಕ್ಕಾಗಿ ಆರ್ಭಟಿಸುತಿದ್ದಾರೆ. ನಾವು ಮೌನರಾಗಿದ್ದು, ನಮ್ಮ ಮುಂದಿನ ಕಾರ್ಯಕ್ರಮಗಳನ್ನು ನಿರೂಪಿಸುತ್ತ ಮುಂದುವರಿಯುವ. ಆಗ, ಈ ವಿರುದ್ಧ ಆಂದೋಲನವು ತನಗೆ ತಾನಾಗಿಯೇ ನಿಲ್ಲುವುದು ಶ್ರೀ ನಿಜಲಿಂಗಪ್ಪ ಸಮಿತಿಯು ಈ ಬಗ್ಗೆ ಬೋಧಕವಾದ ವರದಿಯನ್ನು ಕೊಟ್ಟೀತು. ನಾವು ಸಹಕಾರಿ ಕೃಷಿಗೆ ಅವಕಾಶವನ್ನೇ ಕೊಡದೆ ಕೈಗೊಳ್ಳುವ ಇಲ್ಲವೇ ನಿರ್ಧರಿಸುವ ಸಿದ್ಧಾಂತಗಳು ಅಪಕ್ವವಾದವು.

(೧೨ನೇ ಪುಟ ನೋಡಿರಿ)



೧೯೫೫ರಲ್ಲಿ ಜಿನೇವಾದಲ್ಲಿ ಸೇರಿದ ವರಿಷ್ಠ ಸಮ್ಮೇಳನದ ಪ್ರತಿನಿಧಿಗಳ ಚಿತ್ರವಿದು. ಎಡದಿಂದ ಬಲಕ್ಕೆ: ಶ್ರೀಗಳಾದ ಬುಲ್ಗಾನಿನ್, ಐಸನ್ ಹಾವರ್, ಇಡ್ಗರ್ ಫೌರೆ ಆಂಥೋನಿ ಈಡನ್. ಈಗ ಇನ್ನೊಂದು ಶೃಂಗಸಮ್ಮೇಳನದ ಮಾತು ಕೇಳಿಬರುತ್ತಿದೆ.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:–
ಮಂಗಳೂರು—3.

ಸ್ಥಾಪನೆ:–
1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ	5 ತಿಂಗಳ	ವರೆಗೆ	$4\frac{1}{4}\%$
6 ,,	12	,,	$4\frac{1}{2}\%$
13 ,,	24	,,	$4\frac{3}{4}\%$

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ $\frac{1}{4}\%$ ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ....ಇತ್ಯಾದಿ....

ಕಥಾವಿಹಾರ

ಮರೆಯಲಾರದ ಗೆಳೆಯ

ಅನಿರೀಕ್ಷಿತವಾಗಿ ಅವರ ಭೇಟಿಯಾಯಿತು; ಅನಿರೀಕ್ಷಿತ ಪ್ರಮಾಣದ ಅವರ ಸತ್ಕಾರ ಸ್ವೀಕರಿಸಿಯೂ ಆಯಿತು; ಮೊದಲು ಅವರು ಅಪರಿಚಿತರಿದ್ದರೂ ಈಗವರು ಚಿರಪರಿಚಿತರಿರುವರು.

ಮಂಗಳೂರಿನಲ್ಲಿ ನಾವು ನಾಲ್ವರು ಗೆಳೆಯರು ತಂಗಿದ್ದೆವು. ಪ್ರವಾಸಮಾಡಿ ಮರಳಿಬಂದ ನಾವು ವಿಶ್ರಾಂತಿಗಾಗಿ ಮಂಗಳೂರಿನ ಹೋಟೇಲೊಂದನ್ನು ಆಶ್ರಯಿಸಿದ್ದೆವು. ನಗರ ಸುತ್ತಾಡುತ್ತಿದ್ದ ನಮಗೆ ಪರಿಚಿತರನೇಕರು ಸಿಕ್ಕಿದರು. ಅವರಿಗೆಲ್ಲ ದೂರದಲ್ಲೇ ನಮಸ್ಕಾರ ಹೊಡೆದು ನಾವು ಮುಂದುವರಿಯುತ್ತಿದ್ದೆವು. ರೂಪವಾಣಿ ರೆಸ್ಟೋರೆಂಟಿನಲ್ಲಿ ಕಾಫಿ ಹೀರಲೆಂದು ಕುಳಿತ ನಮಗೆ ಹಿಂದಿನಿಂದ 'ನಮಸ್ಕಾರ' ಎಂಬ ಶಬ್ದ ಕೇಳುತ್ತಲೇ ನಾವು ಹಿಂದಿರುಗಿ ನೋಡಿದೆವು. ನಮ್ಮೂರಿನವರೊಬ್ಬರು ಇರಬೇಕು, ನಮಗೆ ನಮಸ್ಕಾರ ಅನ್ನುತ್ತಿದ್ದರು ಕಾಫಿ ಕುಡಿಯುತ್ತಾ. ಹಾಗೆಯೇ ನಮಗೂ ಕಾಫಿ ಕೊಡುವಂತೆ ಸಪ್ಲೈಯರಿಗೆ ಹೇಳಿಯೂ ಬಿಟ್ಟರು "ಅರರೇ, ಬೇಡ, ಬೇಡ" ಎಂದು ನಾವೆಷ್ಟು ಒತ್ತಾಯಿಸಿದರೂ ಆ ವ್ಯಕ್ತಿ ಕೇಳಲಿಲ್ಲ. ಕಾಫಿ ಕುಡಿದು ಹೊರಗೆ ಬರುವಾಗ ಬಿಲ್ಲುಕೊಟ್ಟು 'ಸಿಗ್ರೇಟ್ ನೀಡಿ' ಎಂದು ಸಿಗ್ರೇಟ್ ಪೇಕ್ ಮುಂದೊಡ್ಡಿತು. ಈ ಆತಿಥ್ಯದ ಅರ್ಥ ನಮಗಾಗಲಿಲ್ಲ. ಕಣ್ಣಿನಲ್ಲಿ ಆ ವ್ಯಕ್ತಿಯನ್ನು ನೋಡಿರಬಹುದಷ್ಟೆ, ಮಾತನಾಡಿದ್ದೂ ಇಲ್ಲ. ಇಂತಹ ವ್ಯಕ್ತಿ ನಮಗೆ ಯಾಕೆ ಹೀಗೆ ಸತ್ಕಾರ ಮಾಡುತ್ತಿದ್ದಾನೆಂಬುದರ ಅರ್ಥವೇ ನಮಗಾಗಲಿಲ್ಲ.

ಸಿಗ್ರೇಟಿಗೆ ಬೆಂಕಿ ಹೊತ್ತಿಸಿ ನಾವು ಮುಂದೆ ಸಾಗುತ್ತಲೂ ಆ ವ್ಯಕ್ತಿ ಕೇಳಿತು "ಸಿನೆಮಾಗೆ ಹೋಗೂವವರು? ಫಿಲ್ಮಿಗೆ ಹೋಗುತ್ತೀರಾ?" ಹೌದೆಂದು ನಾವು ಉತ್ತರಿಸಿದೆವು. 'ನಾನೂ ಬರುತ್ತೇನೆ. ಇಲ್ಲೇ ನಿಂತಿರಿ' ಎಂದು ಆ ವ್ಯಕ್ತಿ ಹೇಳಿ ಹತ್ತಿರದ ಓಣಿಯೊಂದನ್ನು ಹೊಕ್ಕು ಎರಡು ನಿಮಿಷದಲ್ಲೇ ಮರಳಿಬಂದಿತು. 'ಏನಪ್ಪಾ ಇದ? ಈ ವ್ಯಕ್ತಿ ನಮ್ಮ ಪರವಾಗಿ ಯಾಕೆ ಹೀಗೆ ತೊಂದರೆ ತೆಗೆದುಕೊಳ್ಳುತ್ತಿದೆ?" ಎಂದು ನಾವು ತುಸು ಬೇಸರಪಟ್ಟೆವು. "ಅಂದಹಾಗೇ, ರಾತ್ರಿ ಮನೆಗೆ ಬರುವಾಗ ಹೊತ್ತಾಗಬಹುದೂಂತ ಹೇಳಿ ಬಂದೆ" ಎಂದಿತು ಆ ವ್ಯಕ್ತಿ ಮರಳುತ್ತ. 'ಯಾರಮನೆ ಇದೆ ಇಲ್ಲಿ' ಎಂದು ಕೇಳಿದೆ ನಾನು. 'ಇಲ್ಲೇ ನನ್ನ ಭಾವನವರ ಮನೆ ಇದೆ ನಾಲ್ಕು ದಿನದ ಹಿಂದೆ ನಾನು ಬಂದಿದ್ದೆ. ಇನ್ನು ಎಂಟು ದಿನ ಇಲ್ಲೇ ಇರುತ್ತೇನೆ' ಎಂದಿತು ಆ ವ್ಯಕ್ತಿ. 'ನಿಮ್ಮ ಭಾವನವರೆಂದರೆ?' ನಾನು ಪ್ರಶ್ನಿಸುತ್ತಾ ಕೇಳಿದೆ. 'ಭಾವ ಅಂದರೆ ನನ್ನ ಅಕ್ಕನ ಗಂಡ. ನನ್ನ ದೊಡ್ಡಕ್ಕನನ್ನು ಇಲ್ಲಿಗೇ ಕೊಟ್ಟದ್ದು'. ಎಂದಿತು ಆ ವ್ಯಕ್ತಿ ತನ್ನ ಸಂಸಾರ ಚಿತ್ರ ಈಯುತ್ತಾ. "ನಿಮ್ಮ ಭಾವನವರಿಗೆ ಏನು ಉದ್ಯೋಗ?" ನಾನು ಕೇಳಿದೆ. "ಅವರು ಇಲ್ಲಿ ಬಂದರಿನಲ್ಲಿ ಒಬ್ಬರು ಹೋಲ್‌ಸೇಲ್ ವ್ಯಾಪಾರಿ. ಅಕ್ಕನನ್ನು ಕರಕೊಂಡು ಹೋಗುವಾಂತ ನಾನು ಬಂದವ. ಇನ್ನೂ ನಿಲ್ಲಬೇಕೆಂದು ಒತ್ತಾಯಿಸುತ್ತಿದ್ದಾರೆ" ಎಂದಿತು ಆ ವ್ಯಕ್ತಿ.

ಮಾತನಾಡುತ್ತಾ ಬಂದಂತೆ ದಾರಿ ಸಾಗಿದುದು ನಮಗೆ ತಿಳಿಯಲಿಲ್ಲ. ಜ್ಯೋತಿ ಟಾಕೀಸಿನ ಬಳಿಗೆ ಬಂದೂ ಆಯಿತು. "ಅಂದ ಹಾಗೇ, ನಿಮ್ಮನ್ನು ಇಲ್ಲಿಗೇ ಕರಕಂಡೆ. ಯಾವ ಸಿನಿಮಾ ನೋಡೋಣಾಂತ ಕೇಳ್ಲೇ ಇಲ್ಲ" ಎಂದಿತು ಆ ವ್ಯಕ್ತಿ. 'ಪರವಾ ಇಲ್ಲ ಇದು ಒಳ್ಳೇ ಥೇಟರಲ್ಲವೆ' ಕನ್ನಡ ಚಿತ್ರ ನೋಡೋಣ" ಎಂದರು ನನ್ನ ಗೆಳೆಯರು. "ಅಲ್ದೆ ಮತ್ತೆ, ಕನ್ನಡಿಗರಾದ ನಾವೇ ಕನ್ನಡ ಚಿತ್ರಕ್ಕೆ ಪ್ರೋತ್ಸಾಹ ಕೊಡದಿದ್ದರೆ ಹೇಗೆ?" ಎಂದಿತು ಆ ವ್ಯಕ್ತಿ ತನ್ನ ಕನ್ನಡ ಭಿಮಾನವನ್ನು ಪ್ರದರ್ಶಿಸುತ್ತಾ. ನಮಗೆಲ್ಲಾ ಬಾಲ್ಕನಿ ಟಿಕೇಟು ತೆಗೆಸಿಕೊಟ್ಟು, ನಮ್ಮ ಜೊತೆಗೇನೇ ಬಂದು ಕುಳಿತಿತು ಆ ವ್ಯಕ್ತಿ. ಸಿನಿಮಾ ಪ್ರಾರಂಭವಾಗಲು ಇನ್ನೂ ಸ್ವಲ್ಪ ಸಮಯವಿತ್ತು "ನೋಡಿ ಮಿಸ್ಟರ್, ಅಂದ ಹಾಗೇ ನಿಮ್ಮ ಹೆಸರು?" ಪ್ರಶ್ನಿಸಿತು ಆ ವ್ಯಕ್ತಿ. "ಸದಾಶಿವ ರಾವ್" ಅಂದೆ ನಾನು. "ಹಾಂ, ನೋಡಿ ಮಿಸ್ಟರ್ ಸದಾಶಿವರಾವ್, ನನಗೆ ನಮ್ಮೂರವರನ್ನು ಎಲ್ಲಿ ಕಂಡರೂ ಬಹಳ ಪ್ರೀತಿ ನಾನು ಅವರನ್ನು ಎಲ್ಲಿ ಸಿಕ್ಕಿದರೂ ಮಾತಾಡಿಸಿಯೇ ಬಿಡ್ತೇನೆ ನನ್ನ ಸ್ವಭಾವವೇ ಹಾಗೆ" ಎಂದು ತನ್ನ ಸ್ವಜನಾಭಿಮಾನವನ್ನೊಂದಷ್ಟು ಕೊಚ್ಚಿಕೊಂಡಿತು. ಪ್ರದರ್ಶನದ ಮಧ್ಯೆ ನಮಗೆ ಸಿಗರೇಟು ದಾನ, ಕಡಲೆ ದಾನ, ಚೊಕಲೇಟು ದಾನವೂ ಆಯಿತು. 'ಬೇಡ, ಬೇಡ, ತೊಂದರೆ ಬೇಡ' ಅಂದರೂ ಆ ವ್ಯಕ್ತಿ ನಮ್ಮ ಮಾತು ಕೇಳುತ್ತಿರಲಿಲ್ಲ ನಾವಾದರೂ, ಆ ವ್ಯಕ್ತಿಯ ಆತಿಥ್ಯವನ್ನು ನಿರಾಕರಿಸುವ ಮನ ಮಾಡಲಿಲ್ಲ.

ಸಿನಿಮಾ ಪ್ರದರ್ಶನ ಮುಗಿದು ನಾವು ಹೊರಬಂದೆವು. 'ಬನ್ನಿ, ಒಂದು ಕೋಲ್ಡ್ ಡ್ರಿಂಕ್ ಕುಡಿಯೋಣ' ಎಂದು ನಮ್ಮನ್ನು ಸ್ಟಾಲಿನ ಬಳಿಗೆ ಕರೆದೊಯ್ದಿತು ಸ್ವತಃ ಹಣ ಕೊಟ್ಟು ಪುನಃ ನಮಗೆ ಕೋಲ್ಡ್ ಡ್ರಿಂಕ್ ಪಾನವಾಯಿತು. 'ಗಂಟೆ ಒಂಭತ್ತು. ಈಗ ಬಸ್ಸು ಬರುತ್ತದೆ ಬಸ್ಸಿನಲ್ಲಿ ಹೋದರಾಗದ?" ಆ ವ್ಯಕ್ತಿ ಪ್ರಶ್ನಿಸಿತು 'ಯಾಕೆ, ಏನು ಮೈಲು ದೂರ ಇದೆಯೆ? ನಡೆದೇ ಹೋಗೋಣ' ಎಂದೆ ನಾನು. 'ಬೇಡ, ಬೇಡ ಇನ್ನು ಒಂದು ನಿಮಿಷ, ನಡೆದ್ಕೊಂಡು ಹೋದ್ರೆ ಸೆಕೆಂಡ್ ಶೋಗೆ ಲೇಟಾಗುತ್ತೆ' ನಮಗೆ ಮಾತಾಡಲು ಅವಕಾಶವಿರಲಿಲ್ಲ. ಅಷ್ಟರಲ್ಲೇ ಬಸ್ಸು ಬಂದಿತು. ನಾವು ಅನಿವಾರ್ಯವಾಗಿ ಬಸ್ಸು ಹತ್ತಬೇಕಾಯಿತು. ಬಸ್ಸು ಹಂಪನಕಟ್ಟೆ ಮುಟ್ಟುತ್ತಲೇ ನಾವು ಬಸ್ಸಿನಿಂದಿಳಿದೆವು. "ಅಂದ ಹಾಗೆ, ನಾವೆಲ್ಲ ಊಟ ಮಾಡೋಣ? ತಾಜ್ ಮಹಾಲಿನಲ್ಲೋ, ಕೃಷ್ಣ ಭವನದಲ್ಲೋ?' ಆ ವ್ಯಕ್ತಿಯೇ ಪುನಃ ವಿಚಾರಿಸಿತು.

"ನೀವ್ಯಾಕೆ ನಮ್ಮನ್ನು ಹೀಗೆ ಉಪಚರಿಸುತ್ತೀರಿ? ನಿಮಗೆ ತುಂಬಾ ತೊಂದರೆ ವೃಥಾ ನಮಗಾಗಿ ಖರ್ಚ ಮಾಡುತ್ತಿದ್ದೀರಿ ನೀವ್ಯಾರೋ? ನಾವ್ಯಾರೋ?' ಎಂದು ನನ್ನ ಗೆಳೆಯರಲ್ಲೊಬ್ಬರು ಹೇಳಿದರು. 'ಏನಂದಿರಿ, ನೀವ್ಯಾರೋ ನಾವ್ಯಾರೋ ಅನ್ನುತ್ತೀರಾ? ನೋಡಿ ಮಿಸ್ಟರ್, ನನಗೆ ನಮ್ಮೂರಿನವರನ್ನು ಕಂಡರೆ ಅಷ್ಟು ಪ್ರೀತಿ ಇದರಲ್ಲಿ ಕಷ್ಟವೇನು ಬಂತು? ಮಾತಾಡಲು ಅವಕಾಶವಿಲ್ಲ ಬನ್ನಿ' ಎಂದು ನಮ್ಮನ್ನು ನೆಳೆದೊಯ್ದಿತು ತಾಜಮಹಾಲ್ ಹೋಟೆಲಿಗೆ. ಟಿಕೇಟು ತೆಗೆದುಕೊಂಡು ಟೇಬಲಿನೆದುರು ಕುಳಿತು ಊಟ ಮಾಡಿಯೂ ಆಯಿತು. ನಮಗೆಲ್ಲಾ ಹೊರಗೆ ಬರುತ್ತಲೂ ಬೊಂಬಾಯಿ ಬೀಡಾ ತೆಗೆಸಿಕೊಡುತ್ತಾ ಆ ವ್ಯಕ್ತಿ ಹೇಳಿತು "ಸೆಂಟ್ರಲಿನಲ್ಲಿ ಒಳ್ಳೆ ಹಿಂದಿ ಪಿಕ್ಚರಿದೆ. ಹೋಗೋಣ'.

"ಛೆ ಛೆ, ರಾತ್ರಿ ಇಡೀ ನಿದೆ ಬಿಟ್ಟರೆ ಹೇಗೆ? ಬೇಡಪ್ಪ, ಸಾಕು ಒಂದು ಸಿನಿಮಾ' ಎಂದರು ನಮ್ಮ ಸಂಗಡದ ಹರಿಕಥಾ ಪ್ರಿಯರೊಬ್ಬರು. "ನಿದ್ರೆ ನಾಳೆ ಮಾಡ್ಬಹುದು. ಬನ್ನಿರಲ್ಲ" ಎಂದಾತ ತಾನೇ ಫೈನಲ್ ತೀರ್ಪಿತ್ತ. ನಾವು ಸಮೀಪದ ಸೆಂಟ್ರಲ್ ಥಿಯೇಟರಿಗೆ ಹೋದಾಗ ನಾನೇ ಟಿಕೆಟು ತರಲು ಮುಂದಾದೆ. "ನೋಡಿ ಮಿಸ್ಟರ್, ಹಾಂ, ಸದಾಶಿವ ರಾವ್, ಈ ಒಂದು ಸಲದ ಟಿಕೇಟು ನಾನು ಕೊಡ್ತೇನೆ. ಇನ್ನೆಲ್ಲಾ ಖರ್ಚ ನಿಮ್ಮದೇ ಸುಮ್ನೆ ಕುಳಿತಿರಿ' ಎಂದಾತ ನನ್ನನ್ನು ಹಿಂದೆದೂಡಿ ತಾನೇ ಟಿಕೆಟ್ಟು ತೆಗೆದುಕೊಳ್ಳಲು ಕ್ಯೂ ನಿಂತ. ಕ್ಯೂ ಬಹಳ ಉದ್ದವಿತ್ತು. ಆತನಿಗೆ ಟಿಕೆಟ್ಟು ಸಿಗಲು ಸ್ವಲ್ಪ ಸಮಯವೇ ತಗಲಿತು ನಾವು ನಮ್ಮೊಳಗೆ ಚರ್ಚೆ ನಡೆಸಲಾರಂಭಿಸಿದೆವು. ನಮ್ಮೆಲ್ಲರಿಗೂ ಈತನೊಬ್ಬ ವಿಚಿತ್ರ ವ್ಯಕ್ತಿಯೆನಿಸಿದ್ದ. ಈ ರೀತಿ ನಮಗಾಗಿ ನೀರಿನಂತಲ್ಲವಿದ್ದರೂ ಉಗುಳಿನಂತೆ ಹಣ ವೆಚ್ಚ ಮಾಡುವ ಈ ಭೂಪನೇಕೆ ನಮಗೆ ಗಂಟು ಬಿದ್ದ? ಈತನ ಈ ಉದಾರತೆಯ ಉದ್ದೇಶವೇನು? ಎಂಬುದು ನಮಗೆ ಅರ್ಥವಾಗಲಿಲ್ಲ.

ನನ್ನ ಗೆಳೆಯರೊಬ್ಬರು ಈತನ ಕುರಿತು ತುಸು ಸಂಶಯ ತಾಳಿ, ಈತನೊಬ್ಬ ರಾತ್ರಿ ಚೋರನಿರಬೇಕೆಂದು ಊಹಿಸಿದಾಗ ಈ ಠರಾವಿಗೆ ನಾವು ಇತರರು ವಿರುದ್ಧಮತ ಕೊಟ್ಟು ಈತನೊಬ್ಬ ವಿಶ್ವಬಂಧು' ಎಂದು ನಿರ್ಣಯಿಸಿದೆವು. ಇತರರ ಕಿಸೆಯಿಂದಲೇ ಕಾಫಿ ಕುಡಿದ ನನ್ನ ಇನ್ನೊಬ್ಬ ಗೆಳೆಯರು ಈ ಅತಿಥ್ಯವನ್ನು ವಿಶೇಷ ಮೆಚ್ಚಲಿಲ್ಲವಾದರೂ "ಇಂತಹವರೂ ಇರುತ್ತಾರಯ್ಯ' ಎಂದು ನಮ್ಮಲ್ಲಿ ವಿಶ್ವಾಸ ಬೆಳೆಸಿದರು. ಅಂತೂ ನಮ್ಮ ಹೊಸ ಗೆಳೆಯ ಯೋಗ್ಯನೆಂದೇ ನಮ್ಮ ತೀರ್ಮಾನವಾಗಿತ್ತು.

ಟಿಕೇಟು ತಂದು ಆತ ನಮ್ಮ ಬಳಿ ಬಂದು 'ಬನ್ನಿ' ಎಂದು ಕೂಗಿದುದೇ ನಮ್ಮ ಮಾತುಕತೆಗೆ ಬ್ರೇಕ್ ಆಯಿತು. ಥೇಟರು ಹೊಕ್ಕು ಆಯಿತು. ಪುನಃ ಸಿಗರೇಟ್, ಬೀಡಾ, ಸೋಡಾ ಕಡ್ಲೆಗಳ ಸೇವನೆಯೂ ಜೊತೆಗೆ ಮಾತುಕತೆಯೂ ನಡೆಯಿತು. ಹಿಂದಿ ಚಿತ್ರ ಪ್ರಪಂಚದ ಕುರಿತು ಇಂಟರ್‌ವೆಲ್‌ನಲ್ಲಿ ಆತ ಒಂದು ಲೆಕ್ಚರನ್ನೇ ಕೊಟ್ಟುಬಿಟ್ಟ "ಅಶೋಕ್ ಕುಮಾರ್ ಇನ್ನು ಮೀನಾ ಕುಮಾರಿಯೊಡನೆ ನಟಿಸಬಾರದು. ಮಧು ಬಾಲಾಳಿಗೆ ಇನ್ನು ಡಾನ್ಸ್ ಮಾಡುವುದು ಚಂದವೆನಿಸುವುದಿಲ್ಲ ಕಿಶೋರ್ ಕುಮಾರನ ಕಿರುಚಾಟ ಕಮ್ಮಿಯಾಗಬೇಕು. ನಿರೂಪಾರಾಯ್ ಇನ್ನು ಅಪರೂಪವಾದರೆ ಲೇಸು" ಎಂದೆಲ್ಲಾ ತನ್ನ ವಿಮರ್ಶೆಯನ್ನು ಈಯುತ್ತ ಇದ್ದ. ಜೊತೆಗೆ 'ಏನ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ 8,000/ ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಲೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ. 1920

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ವಿಚಾರವೀಚಿ

ಮೂರನೆಯ ಯೋಜನೆಯಲ್ಲಿ ಕೃಷಿಗೆ ಪ್ರಾಧಾನ್ಯ

ದೊಡ್ಡ ಮತ್ತು ಚಿಕ್ಕ ನೀರಾವರಿ ಯೋಜನೆಗಳೆರಡಕ್ಕೂ ಸಮಾನ ಸ್ಥಾನವನ್ನು ಒದಗಿಸುವುದು ಅವಶ್ಯ. ಖಾದಿ ಉದ್ಯೋಗಕ್ಕಿಂತ ವ್ಯವಸಾಯೋಪಕರಣಗಳ ಉದ್ಯೋಗಕ್ಕೆ ಪ್ರೋತ್ಸಾಹ ಬೇಕು.

ಕೃಷಿಯ ಅಭಿವೃದ್ಧಿಯೇ ೧೯೬೧–೬೬ರ ತೃತೀಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಸರಕಾರದ ಮೂಲ ಗುರಿಯಾಗಿರಬೇಕು. ನಾವು ಕಾಣುವ ಆಹಾರದ ಕೊರತೆ ಮತ್ತು ಮಾಡುವ ಆಹಾರ ಧಾನ್ಯಗಳ ನಿರ್ಯಾತಗಳು ದೇಶದಲ್ಲಿ ಆಹಾರೋತ್ಪಾದನೆಯು ಸಾಕಷ್ಟು ಆಗಿಲ್ಲವೆಂಬುದನ್ನು ಎತ್ತಿ ತೋರಿಸುತ್ತವೆ. ಆದುದರಿಂದ ಆಹಾರೋತ್ಪಾದನೆಯೇ ಅಗ್ರಗಣ್ಯ ಸ್ಥಾನವನ್ನು ಪಡೆಯಬೇಕಾಗಿದೆ. ಇದಕ್ಕೆ ನಾಲ್ಕು ಕಾರಣಗಳನ್ನು ಮುಖ್ಯವೆಂದು ಪರಿಗಣಿಸಬಹುದು. ಮೊದಲನೆಯದಾಗಿ, ಬೆಳೆಯುತ್ತಿರುವ ನಮ್ಮ ಜನ ಸಂಖ್ಯೆಗೆ ಸರಿಯಾಗಿ ಆಹಾರವನ್ನು ಒದಗಿಸಬೇಕಾಗಿದೆ; ಎರಡನೆಯದಾಗಿ, ಕೈಗಾರಿಕೆಗಳನ್ನು ಬೆಳೆಸಲು ಕಚ್ಚಾ ವಸ್ತುಗಳನ್ನು ಕಂಡುಕೊಳ್ಳಬೇಕಾಗಿದೆ; ಮೂರನೆಯದಾಗಿ, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳನ್ನು ಸಾಧ್ಯವಿದ್ದಷ್ಟು ಹೆಚ್ಚಿಸಬೇಕಾಗಿದೆ ಮತ್ತು ನಾಲ್ಕನೆಯದಾಗಿ, ಕೃಷಿಯು ಭಾರತದ ಹಿರಿಯ ವ್ಯವಸಾಯವಾದುದರಿಂದ, ಆಹಾರಕ್ಕಾಗಿ ನಾವು ಸುರಿಸುವ ವಿದೇಶ ವಿನಿಮಯ ನಾಣ್ಯಗಳನ್ನು ಉಳಿಸಬೇಕಾಗಿದೆ.

ನಮ್ಮ ದುರದೃಷ್ಟದಿಂದ ಭಾರತೀಯ ಕೃಷಿಕ್ಷೇತ್ರವು ತನಗೆ ಒಪ್ಪಿಸಿದ ಅಂಶವನ್ನು ಪೂರ್ಣಗೊಳಿಸಲು ಅಸಮರ್ಥವಾಗಿದೆ. ಏರುತ್ತಿರುವ ಕೃಷಿ ಪದಾರ್ಥಗಳ ಬೆಲೆಯು ನಮ್ಮ ಅಭಿವೃದ್ಧಿಯೋಜನೆಗಳಲ್ಲಿ ವ್ಯವಸಾಯ ಕ್ಷೇತ್ರಕ್ಕೆ ಸಾಕಷ್ಟು ಗಮನ ಹರಿಸಲಿಲ್ಲವೆಂಬುದನ್ನು ಸಾಧಿಸಿದೆ. ದ್ವಿತೀಯ ಯೋಜನಾ ವೇಳೆಯಲ್ಲಿ ಯೋಜನಾ ಆಯೋಗವು ಕೃಷಿಗೆ ಅಗ್ರಸ್ಥಾನ ನೀಡಲು ಹಲವಾರು ಕಾರಣಗಳಿದ್ದುವು. ಆದರೆ, ಯೋಜನಾ ಆಯೋಗದ ತಪ್ಪು ಗ್ರಹಿಕೆಯನ್ನು ಕಾಲವು ತೋರಿಸಿಕೊಟ್ಟಿದೆ.

ದ್ವಿತೀಯ ಯೋಜನೆಯಲ್ಲಿ ನಾವು ಮಾಡಿದ್ದ ಅಪರಾಧವನ್ನು ತಿದ್ದಿಕೊಳ್ಳುವ ಸಮಯವಿನ್ನೂ ಮಿಂಚಿಹೋಗಿಲ್ಲ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಕೃಷಿಗೆ ಮೊತ್ತಮೊದಲ ಸ್ಥಾನನೀಯಬೇಕು. ಭಾರತದಲ್ಲಿನ ವ್ಯವಸಾಯಾಭಿವೃದ್ಧಿಗೆ ಸಾಕಷ್ಟು ನೀರಿನ ಪೂರೈಕೆ, ಕೃಷಿ ಪದ್ಧತಿಯ ಸುಧಾರಣೆ ಗೊಬ್ಬರಗಳ ಬಳಕೆ ಮತ್ತು ಸಾಲದ ಸೌಕರ್ಯಗಳು ನೆರವಾಗುವುವು. ಈ ಎಲ್ಲವುಗಳಲ್ಲಿ ನಾವಿಂದು ಎಲ್ಲಿ ವರೆಗೆ ಬಂದು ಮುಟ್ಟಿದ್ದೇವೆ ಎಂಬುದನ್ನು ತಿಳಿದುಕೊಳ್ಳುವುದರಿಂದ ತುಂಬ ಪ್ರಯೋಜನವಾಗುವುದು.

ಭಾರತೀಯ ರೈತರು ನೀರಿಗಾಗಿ ಮಳೆ ನೀರನ್ನೇ ಹೊಂದಿಕೊಂಡಿರುವುದನ್ನು ಅದನ್ನು ತಪ್ಪಿಸಲು ಮತ್ತು ದ್ವಿತೀಯ ಯೋಜನೆಗಳಲ್ಲಿ ಚಿಕ್ಕ ಹಾಗೂ ದೊಡ್ಡ ನೀರಾವರೀಯೋಜನೆಗಳಿಗೆ ಪ್ರಾಧಾನ್ಯ ನೀಡಲಾಯಿತು. ಆದರೆ, ಈ ನೀರಾವರಿ ಯೋಜನೆಗಳಲ್ಲಿ ತೊಡಗಿಸಿದ ಬಂಡವಲ ಮತ್ತು ಗಳಿಸಿದ ಲಾಭವನ್ನು ತುಲನೆ ಮಾಡಿ ನಾವು ಆಶ್ಚರ್ಯಗೊಳ್ಳಬೇಕಾಗಿದೆ. ದ್ವಿತೀಯ ಯೋಜನೆಯಲ್ಲಿ ರೂ. ೩೭೬ ಕೋಟಿ ದೊಡ್ಡ ನೀರಾವರಿಯೋಜನೆಗಳಿಗೂ ರೂ. ೯೬ ಕೋಟಿ ಚಿಕ್ಕ ನೀರಾವರಿ ಯೋಜನೆಗಳಿಗೂ ವಿನಿಯೋಗಿಸಲಾಗಿದೆ. ಹಿರಿಯ ನೀರಾವರಿ ಯೋಜನೆಗಳ ಪ್ರಯೋಜನವನ್ನು ಅಲ್ಲಗಳೆಯುವಂತಿಲ್ಲ. ಆದರೆ, ಇದೇ ಮೊತ್ತವು ನೀರಿನ ಸೌಕರ್ಯವೊದಗಿಸುವ ಅನ್ಯ ವಿಧಾನಗಳಲ್ಲಿ ತೊಡಗಿಸಲ್ಪಡುತ್ತಿದ್ದರೆ, ಲಾಭಾಂಶವು ಹೆಚ್ಚುತ್ತಿತ್ತು ಎಂಬುದು ಸತ್ಯ.

ಭಾರತದ ಅನೇಕ ಭಾಗಗಳಲ್ಲಿ ಸಾಧಿಸಿದ ನೀರಾವರಿ ಕೆಲಸಗಳಿಂದ ದೊರೆಯುವ ನೀರನ್ನು ಉಪಯೋಗಿಸದೆ ಬಿಟ್ಟಿರುವುದು ಕಣ್ಣಿಗೆ ಕಟ್ಟಿ ತೋರುತ್ತದೆ. "ಎ. ಐ. ಸಿ. ಸಿ. ಇಕನೊಮಿಕ್ ರಿವ್ಯೂ" ನಲ್ಲಿ ಸಾದಿಕ ಅಲಿಯವರು ಈ ರೀತಿ ಹೇಳಿದ್ದಾರೆ—, ಇಷ್ಟೊಂದು ವೆಚ್ಚದಿಂದ ನಿರ್ಮಿಸಿದ ನೀರಾವರಿಯ ಪ್ರಯೋಜನವು, ಯೋಜನೆಯ ಲೋಪದೋಷಗಳಿಂದ, ಆಡಳಿತೆಯ ಅಸಮರ್ಥತೆಯಿಂದ ಅಥವಾ ನೀರಿನ ಏರಿಕೆಯ ಬೆಲೆಗಳಿಂದ ಮತ್ತು ಕೆಳಮಟ್ಟದಲ್ಲಿ ಸಹಕಾರಿತೆಯ ಅಭಾವದಿಂದಾಗಿ ಸಂಪೂರ್ಣ ಉಪಯೋಗಿಸಲ್ಪಡುವುದಿಲ್ಲ." ನೀರು ಉಪಯೋಗವಾಗದಿರುವುದಕ್ಕೆ ಇದೇ ಕಾರಣವಾಗಿರದೆ ಇದರ ಪೂರಕಗಳಾದ ಸುಧಾರಿತ ಸಲಕರಣೆ, ಗೊಬ್ಬರ ಮತ್ತು ಸಾಲದ ಸೌಕರ್ಯಗಳು ದೊರೆಯದಿರುವುದೂ ಕಾರಣವಾಗಿರುತ್ತದೆ. ಒಟ್ಟಿನಲ್ಲಿ, ನಮ್ಮ ಅಮೂಲ್ಯ ಉತ್ಪಾದನೆಯು ವ್ಯರ್ಥವಾಗಿ ಹೋಗುತ್ತಿದೆ; ಮತ್ತು ಭಾರತವು ಅದನ್ನು ತಡೆಗಟ್ಟಲೂ ಅಸಮರ್ಥವಾಗಿದೆ.

ಸಣ್ಣ ನೀರಾವರಿ ಯೋಜನೆಗಳು ತಮ್ಮ ಉಪಯುಕ್ತತೆಯಿಂದ ಮಾತ್ರವಲ್ಲ, ದೊಡ್ಡ ಯೋಜನೆಗಳನ್ನು ಪೂರ್ತಿ ಮಾಡುವುದರಲ್ಲಿಯೂ ಅತಿಮಹತ್ವಪೂರ್ಣವಾಗಿವೆ. ಬಾವಿ ತೋಡುವುದು, ತೂತು ಬಾವಿಗಳ ರಚನೆ, ಕೆರೆಗಳನ್ನು ಆಳ ಮಾಡುವುದು, ಹಳೆಯ ಕೆರೆಗಳನ್ನು ಪುನಾರಚಿಸುವುದು ಮೊದಲಾದವುಗಳು "ಸಣ್ಣ ನೀರಾವರಿ"ಯಲ್ಲಿ ಸೇರುತ್ತವೆ. ದೊಡ್ಡ ಯೋಜನೆಗಳಿಗಿಂತ ಇವು ಭಿನ್ನವಾಗಿ, ಭಾರತದ ಎಲ್ಲೆಡೆಯಲ್ಲೂ ಬೇಸಾಯಗಾರರಿಗೆ ನೀರಾವರಿ ಸೌಕರ್ಯವನ್ನು ಒದಗಿಸಿಕೊಡುತ್ತವೆ. ಈ ಚಿಕ್ಕ ನೀರಾವರಿ ಯೋಜನೆಗಳು ವಿದೇಶ ವಿನಿಮಯವನ್ನೂ ಹೆಚ್ಚಾಗಿ ಅಪೇಕ್ಷಿಸುವುದಿಲ್ಲ.

ಇಷ್ಟು ಹೇಳಿದುದರಿಂದ ದೊಡ್ಡ ನೀರಾವರಿ ಯೋಜನೆಗಳು ನಿಷ್ಪ್ರಯೋಜಕವೆಂದು ಅಭಿಪ್ರಾಯಪಟ್ಟಂತಾಗಲಿಲ್ಲ. ನೀರಾವರಿ, ವಿದ್ಯುಚ್ಛಕ್ತಿ ಮತ್ತು ಪ್ರವಾಹ ನಿಯಂತ್ರಣಗಳಿಗೆ ಇವು ನೀಡಿದ ಸಹಾಯವನ್ನು ನಿರಾಕರಿಸುವಂತಿಲ್ಲ. ಆದರೆ, ಅವಕ್ಕೆ ನೀಡಲಾಗಿರುವ ಅಗ್ರಗಣ್ಯ ಸ್ಥಾನವನ್ನು ಮಾತ್ರ ಪ್ರಶ್ನಿಸುವಂತಾಗಿದೆ.

ಈ ಎಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು, ಮೂರನೆಯ ಯೋಜನೆಯಲ್ಲಿ ಹಿರಿಯ ಮತ್ತು ಕಿರಿಯ ಯೋಜನೆಗಳೆರಡಕ್ಕೂ ಸಮಾನ ಸ್ಥಾನವನ್ನು ಕಲ್ಪಿಸಿಕೊಡುವುದು ಯೋಜನಾ ಆಯೋಗಕ್ಕೆ ಸೇರಿದ ಕೆಲಸವಾಗಿದೆ.

ನೀರಿನ ಪೂರೈಕೆಯಿಂದ ಒಂದಲ್ಪ ಮಟ್ಟಿಗೆ ಮಾತ್ರ ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಬಹುದು. ಇದಕ್ಕೆ ಗೊಬ್ಬರ ಮತ್ತು ಆರ್ಥಿಕ ಸ್ಥಿತಿಗಳತ್ತ ಗಮನಹರಿಸಬೇಕು. ನಾವು ಗ್ರಾಮೀಣ ಪ್ರದೇಶದ ಕೃಷಿ ಪದ್ಧತಿಯ ಸುಧಾರಣೆಯತ್ತವೂ ಲಕ್ಷ್ಯ ಪೂರೈಸಬೇಕು. ಕೃಷಿಯಲ್ಲಿ ಸುಧಾರಣೆಯಾಗಬೇಕೆಂದಾಕ್ಷಣ ಯಾಂತ್ರಿಕೋಪಯೋಗವಾಗಬೇಕೆಂಬ ತತ್ತ್ವಗಳನ್ನಂಗೀಕರಿಸಬೇಕಾಗಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಭಾರತದ ರೈತರು ಟ್ರಾಕ್ಟರುಗಳನ್ನೋ ಕೊಯ್ಯುವ ಯಂತ್ರವನ್ನೋ ಬಳಸಲು ಅಸಮರ್ಥರಿರುವರು. ಈಗ ಬೇಕಾದುದೆಂದರೆ, ಸಣ್ಣ ಪ್ರಮಾಣದ ಸುಧಾರಿಸಿದ ಯಂತ್ರಗಳು ಮಾತ್ರ. ಸಮಾಜ ವಿಕಾಸಯೋಜನೆಯ ಪ್ರದೇಶದಲ್ಲಿ ಕೂಡ ಹೆಚ್ಚಿನ ರೈತರು ಇಂದಿಗೂ ಮರದ ನೇಗಿಲುಗಳನ್ನೇ ಉಪಯೋಗಿಸುತ್ತಾರೆ. ರಾಷ್ಟ್ರೀಯ ವಿಸ್ತರಣಾಯೋಜನೆಗಳವರು ಈ ಮರದ ನೇಗಿಲಿನ ಬದಲು ಕಬ್ಬಿಣದ ನೇಗಿಲುಗಳನ್ನು ಒದಗಿಸಬೇಕು. ಸಣ್ಣ ಕೈಗಾರಿಕೆಯ ಅಭಿವೃದ್ಧಿ ಯೋಜನೆಗಳಲ್ಲಿ ಕೃಷಿಗೆ ಬೇಕಾದ ಉಪಕರಣಗಳನ್ನು ತಯಾರಿಸುವುದಕ್ಕೆ ಪ್ರಾಧಾನ್ಯವೀಯಬೇಕು. ಖಾದಿ ಉದ್ದಿಮೆಗಿಂತ ಇಂತಹ ಕುಟೀರೋದ್ಯೋಗಗಳು ತೀರ ಆವಶ್ಯಕವಾಗಿವೆ.

ಉತ್ತಮ ರೀತಿಯಲ್ಲಿ ನೀರಿನ ಪೂರೈಕೆ, ಉಳುಮೆ ಮತ್ತು ಗೊಬ್ಬರ ಹಾಕುವಿಕೆಗಳು ಆದರೆ, ಭೂಮಿಯು ಹೆಚ್ಚು ಉತ್ಪತ್ತಿ ಕೊಡಬಹುದು. ಅಧಿಕೋತ್ಪಾದನೆಗೆ ಬಳಸುವ ಸಾಧನಗಳಲ್ಲಿ ವೈಜ್ಞಾನಿಕ ಗೊಬ್ಬರಗಳು ಪ್ರಧಾನ ಸ್ಥಾನವನ್ನು ಪಡೆದಿವೆ. ಉತ್ಪಾದನೆಗೆ ನೆರವಾಗುವ ರಾಸಾಯನಿಕ ಗೊಬ್ಬರಗಳ ಅಭಾವವಿನ್ನೂ ಇದೆ. ಸಿಂಧ್ರಿಯ ಗೊಬ್ಬರ ಕಾರಖಾನೆಯೊಂದು ಏನೂ ಸಾಲದು. ಮೂರನೆಯ ಯೋಜನೆಯಲ್ಲಿ ಇನ್ನೂ ಹೆಚ್ಚಿನ ಗೊಬ್ಬರದ ಕಾರಖಾನೆಗಳನ್ನು ನಿರ್ಮಿಸುವತ್ತ ಗಮನ ಹರಿಸುವುದು ಶ್ರೇಯಸ್ಕರ. ರಾಸಾಯನಿಕ ಗೊಬ್ಬರಗಳನ್ನು ಹೇಗೆ ಬಳಸಬೇಕು ಎಂದು ರೈತರಿಗೆ ತಿಳಿಸಿ ಹೇಳುವುದೂ ಅಷ್ಟೆ ಆವಶ್ಯವಾದ ಕೆಲಸವಾಗಿದೆ.

ಕೃಷಿ ಆರ್ಥಿಕ ಸ್ಥಿತಿಯ ಬಗ್ಗೆ ಸಹಕಾರದ ತತ್ತ್ವಗಳಿಗೆ ಬಲವೀಯಬೇಕು. ರೈತರು ಸಹಕಾರಿ ಸಂಘಗಳನ್ನು ಮಾಡಿಕೊಂಡು ಪರಸ್ಪರ ಸಹಾಯ ಸಲ್ಲಿಸುವುದು ಒಳ್ಳೆಯದು. ಗ್ರಾಮಗಳಲ್ಲಿ ಸ್ವೇಚ್ಛೆಯಿಂದ ಸಹಕಾರಿ ಸಂಘಗಳು ಸ್ಥಾಪಿತವಾಗುವಂತೆ ಸಮಾಜ ವಿಕಾಸ ಯೋಜನಾಧಿಕಾರಿಗಳು ಗಮನಹರಿಸುವುದು ಅಗತ್ಯ.

ಈ ಎಲ್ಲ ವಿಧಾನಗಳನ್ನು ಬಳಸಿಕೊಂಡರೆ ಮೂರನೆಯ ಯೋಜನಾವಧಿಯಲ್ಲಿ ಆಹಾರೋತ್ಪಾದನೆಯು ಗಣನೀಯವಾಗಿ ಹೆಚ್ಚಲೇಬೇಕು. ಮಿಗಿಲಾದ ಕೊರತೆ ಧನ ವಿನಿಯೋಗವನ್ನೂ ಸಾಕಷ್ಟು ಆಹಾರೋತ್ಪಾದನೆಯು ಹಗುರ ಮಾಡುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಆಹಾರದಲ್ಲಿ ನಾವು ಸ್ವಾವಲಂಬಿಗಳಾದರೆ, ಭಾರತವು ಆರ್ಥಿಕ ದೃಷ್ಟಿಯಲ್ಲಿಯೂ ಒಂದು ಹೆಜ್ಜೆ ಮುಂದುವರಿದಂತಾಗುವುದು; ಮತ್ತದು ಮೂರನೆಯ ಪಂಚವಾರ್ಷಿಕ ಯೋಜನೆಯ ಸಾಫಲ್ಯಕ್ಕೂ ಹೇತುವಾಗುವುದು.

—ಯೋಜನಾ.

ಪ್ರಕಟಣೆ

ಕಾಪು ಸೀಮೆಗೆ ಒಳಪಟ್ಟ ಶ್ರೀ ಹೊಸ ಮಾರಿಗುಡಿಯ ಕಡೆಯಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಇಷ್ಟರ ವರೆಗೆ ಸದ್ರಿ ಸ್ಥಾಪನೆಯ ಮೆನೇಜರಾಗಿದ್ದ ಶ್ರೀ ಕೆ. ಸದಾಶಿವ ಹೆಗ್ಡೆಯವರು ಇದೇ ಕಳೆದ ತಾ. 4—10—1959ರಲ್ಲಿ ರಾಜಿನಾಮೆ ಕೊಟ್ಟು ತಮ್ಮ ಕೆಲಸದಿಂದ ನಿವೃತ್ತರಾಗಿರುವುದರಿಂದ ಇನ್ನು ಮುಂದೆ ಭಕ್ತಾದಿಗಳು ಪೋಸ್ಟ್‌ದ್ವಾರಾ ಕಳುಹಿಸುವ ಎಲ್ಲಾ ಹರಕೆ ಬಾಬ್ತು ಮನಿಯಾರ್ಡರು, ಇನ್ಶೂರ್ಡು, ಪಾರ್ಸೆಲ್ ವ ಇತರ ಪತ್ರವ್ಯವಹಾರಗಳನ್ನು ಸದರೀ ಶ್ರೀ ಕೆ. ಸದಾಶಿವ ಹೆಗ್ಡೆಯರ ಹೆಸರಿಗೆ ಮಾಡದೆ, ಬರೇ "ಮೆನೇಜರ್ ಶ್ರೀ ಹೊಸ ಮಾರಿಗುಡಿ, ಕಾಪು" ಯೆಂಬ ವಿಳಾಸಕ್ಕೇನೇ ಕಳುಹಿಸಬೇಕು.

ಕೆ. ಯಸ್. ಸೆಟ್ಟಿ,
ಪ್ರೆಸಿಡೆಂಟ್, ಬೋರ್ಡ್ ಆಫ್ ಟ್ರಸ್ಟೀಸ್,
ಶ್ರೀ ಹೊಸ ಮಾರಿಗುಡಿ, ಕಾಪು

ಕಾಪು, ತಾ. 20—10—1959.

ತಮ್ಮೆಲ್ಲರ ಸೌಹಾರ್ದ-ಸಹಕಾರಗಳಿಂದ ದಿನೇ ದಿನೇ ಸರ್ವಾಂಗ ಸುಂದರವಾಗಿ ಬೆಳೆದು, ನಿಮ್ಮ ಆರ್ಥಿಕ ಅಭ್ಯುದಯಕ್ಕಾಗಿ ಸತತವಾಗಿ ಶ್ರಮಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : ಉಡುಪಿ (ದ. ಭಾರತ)

54 ವರುಷಗಳ ಅನುಭವಪೂರ್ಣ ಹಾಗೂ ಸರ್ವೋತ್ಕೃಷ್ಟ ಬೇಂಕು ಸೇವೆಯನ್ನು ಸರ್ವರಿಗೂ ಸರ್ವಕಾಲಕ್ಕೂ ಸರಿಸಮಾನವಾಗಿ ಸಲ್ಲಿಸಬೇಕೆಂಬುದೇ ಈ ಬೇಂಕಿನ ಸಾಧನೆ!

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇತಿಹಾಸ ಪೃಷ್ಠ

ಆನಂದ ಮಠ ನಿರ್ಮಾಣದ ಅದ್ಭುತ ಕಥೆ

ಭಾರತ-ಬರ್ಮಾಗಳ ನಡುವಣ ಸ್ನೇಹ-ಪ್ರವಾಹದ ಒಂದು ಪ್ರಾಚೀನ ಸಾಕ್ಷಿಯಾಗಿ ಅರಿದಮನಪುರದ ಆನಂದ ಮಠ ನಿಂತಿದೆ. ಇದರ ನಿರ್ಮಾತನ ಚರಿತ್ರೆ ಅದ್ಭುತವಿದೆ.

ದೇಶ ವಿದೇಶಗಳ ಕಲಾಪ್ರೇಮಿಗಳನ್ನು ಬರ್ಮದತ್ತ ಆಕರ್ಷಿಸುವ ವಿಶ್ವವಿಖ್ಯಾತವಾದ ಒಂದು ಸಂಸ್ಕೃತಿ ಪ್ರತೀಕ "ಆನಂದ ಮಠ" ವಾಗಿದೆ. ಇದರ ಪಶ್ಚಿಮಾರ್ಧದಲ್ಲಿ ಎರಡು ಕನ್ನೆ ಮಾನವ ಮೂರ್ತಿಗಳು, ಶಾಂತಸ್ಥಿತಿಯಲ್ಲಿ ಮಂಡಿಸಿದ ಬುದ್ಧನ ಪ್ರತಿಮೆಗಳು ಸಾವಿರ ವರ್ಷಗಳಿಂದಲೂ ಮೊಣಕಾಲೂರಿ ಭಕ್ತಿಭಾವವನ್ನು ಪ್ರದರ್ಶಿಸುವ ಆಲಂಬನ ವಿಭಾವಗಳಾಗಿವೆ. ಮಠದ ಅದ್ಭುತ ಶಿಲ್ಪ ಚಾತುರ್ಯದಂತೆಯೇ ಈ ಮೂರ್ತಿಗಳ ಅಂಗ ಸೌಷ್ಠವ ಮತ್ತು ಉದಾತ್ತ ಭಾವಭಂಗಿಗಳು ಯಾರ ಮನಸ್ಸನ್ನು ತನ್ನತ್ತ ಆಕರ್ಷಿಸವು? ಇದು ಬರ್ಮಾದೇಶದಲ್ಲಿರುವುದಾದರೂ ಮೂರ್ತಿಗಳ ಮುಖವು ಬರ್ಮೀಯ ಮಾದರಿಯಂತಿಲ್ಲದೇ ಶುದ್ಧ ಭಾರತೀಯ ರೂಪದಲ್ಲಿರುವುದು ಎಲ್ಲರನ್ನೂ ವಿಸ್ಮಿತವದನರನ್ನಾಗಿ ಮಾರ್ಪಡಿಸುತ್ತದೆ.

ಈ ಮಾನವ ಮೂರ್ತಿಗಳಲ್ಲಿ ಒಂದು ಆನಂದ ಮಠವನ್ನು ಕಟ್ಟಿಸಿದ ರಾಜ ಕ್ಯಾಂಜಿತ್‌ನದು. ಈತನು ಭಾರತೀಯ ಮಾತೆಯ ಉದರದಿಂದ ಜನಿಸಿ ಬಂದವನು. ಇವನು ಇರಾವದಿ ನದಿಕಣಿವೆಯನ್ನು ಗೆದ್ದು ತಾಲೇಂಗೋನಿನಲ್ಲಿ ಆಧಿಪತ್ಯವನ್ನು ಸಂಸ್ಥಾಪಿಸಿದನು. ಇನ್ನೊಂದು ಪ್ರತಿಮೆಯು ಈ ಕಲಾರಾಧಕನ ಗುರುವಾದ ಸೀನ—ಅರಹಾನನದು

ಕ್ಯಾಂಜಿತ್ ಮತ್ತು ಆನಂದ ಮಠಗಳು ಬರ್ಮಾದ ಕಲೆ ಮತ್ತು ಸಾಹಿತ್ಯ ಸಂವೃದ್ಧಿಯ ಅರುಣೋದಯವನ್ನು ಸೂಚಿಸುತ್ತದೆ. ಆನಂದ ಮಠದ ನಿರ್ಮಾತನಾದ ಕ್ಯಾಂಜಿತ್‌ನ ಜೀವನವು ಅತ್ಯಂತ ಆಶ್ಚರ್ಯಕಾರಿಯಾಗಿರುತ್ತದೆ; ಅಂತೆಯೇ ಈತನ ಮೇರುಕೃತಿಯಾದ ಆನಂದ ಮಠದ ಶಿಲ್ಪ ಕಲೆಯ ಕೌಶಲವು ಅಷ್ಟೇ ಅದ್ಭುತವಾಗಿದೆ. ಪಗಾನ (ಅರಿದಮನಪುರ)ದ ರಾಜ್ಯ ಶಾಸನದಲ್ಲಿ ಹೆಸರುವಾಸಿಯಾದ ರಾಜ ಕ್ಯಾಂಜಿತನು ಕ್ರಿಸ್ತಾಬ್ಧ ೧೦೮೪ರಿಂದ ೧೧೧೨ರ ವರೆಗೆ ರಾಜ್ಯವಾಳಿದನು. ಈತನು ಉತ್ಥಾನದ ಉನ್ನತಗಿರಿ ಶೃಂಗಗಳಲ್ಲಿಯೂ ವಿಹರಿಸಿದ್ದನು; ಜತೆಗೆ ಅಧಃಪತನದ ಪಾತಳಿಯ ಧೂಳಿನಲ್ಲಿಯೂ ಹೊರಳಾಡಿದನು.

ಕ್ಯಾಂಜಿತನಿಗೆ ಪೂರ್ವದ ಬರ್ಮಾದ ಇತಿಹಾಸ ತುಂಬ ವಿಚಿತ್ರ ಮತ್ತು ಸಮಸ್ಯಾಪೂರ್ಣವಾಗಿದೆ. ಆಗ, ದೇಶದಲ್ಲಿ ಮೋನ, ತಿಬೇಟು, ಬರ್ಮಾ ಮತ್ತು ತಾಯಿ ಜಾತಿಯ ಜನರು ಅಲ್ಲಲ್ಲಿ ಚಿಕ್ಕಪುಟ್ಟ ಸಂಸ್ಥಾನಗಳನ್ನು ಸ್ಥಾಪಿಸಿ, ಅಧಿಕಾರಕ್ಕಾಗಿ, ರಾಜ್ಯ ವಿಸ್ತಾರಕ್ಕಾಗಿ ಪರಸ್ಪರರೊಳಗೆ ಹೋರಾಡಿಕೊಳ್ಳುತ್ತಿದ್ದರು. ವ್ಯಾಪಾರದ ಸೌಕರ್ಯಗಳು ಅವಿಕಸಿತವಾಗಿದ್ದುವು; ಮಾರ್ಗಗಳು ಒರಟಾಗಿಯೂ, ಹರಕುಮುರುಕಲಾಗಿಯೂ ಅರಕ್ಷಿತವಾಗಿಯೂ ಇದ್ದುವು. ಗ್ರಾಮಗಳು ಒಂದು ರೀತಿಯಿಂದ ಸ್ವತಂತ್ರವಾಗಿದ್ದು ಕಳ್ಳಕಾಕರಿಗೆ ಮತ್ತು ದರೋಡೆಗಾರರಿಗೆ ಮುಕ್ತದ್ವಾರವಾಗಿದ್ದುವು. ಪ್ರೋಮ್ ಎಂಬುದು ಆ ಕಾಲದ ಅತ್ಯಂತ ಹಿರಿಯ ರಾಜ್ಯವಾಗಿತ್ತು. ಕ್ರಿಸ್ತಶಕ ೯೭೦ರಲ್ಲಿ ಅದರ ರಾಜ ಸಿಂಹಾಸನದ ಮೇಲೆ 'ನಾನಚಾ' ವಂಶದವರು ಅಧಿಕಾರ ಸ್ಥಾಪಿಸಿಕೊಂಡರು.

ಆ ಕಾಲದಲ್ಲಿ ಅರಿದಮನಪುರದಲ್ಲಿ ನೂಅಂಗ್—ಊ—ಸ್ವರಾಹನನು ಆಳಿಕೊಂಡಿದ್ದನು. ಕಾಲಕ್ರಮದಲ್ಲಿ ಕುನಾಶಾ ಎಂಬ ಒಬ್ಬ ಗುಲಾಮನು ಆತನನ್ನು ಸಿಂಹಾಸನದಿಂದ ತಳ್ಳಿಹಾಕಿ ತಾನೇ ರಾಜನಾದನು. ಈತನ ಪುತ್ರ ಅನವೃಥ ಎಂಬವನು. ಸಿಂಹಾಸನವನ್ನು ಆಕ್ರಮಿಸಿದೊಡನೆಯೇ ಈತನು ನೂಅಂಗ್‌ನ ಮಗನು ಸೇನೆಯನ್ನು ಕೂಡಿಸಿ ಆಕ್ರಮಣಮಾಡುವ ಸಿದ್ಧತೆಯಲ್ಲಿರುವುದನ್ನು ಕಂಡು, ಅವನನ್ನು ಮುಕ್ತಸಮರದಲ್ಲಿ ಸೋಲಿಸಿ ಕೊಂದುಬಿಟ್ಟನು.

ಶತ್ರುವಿನ ಆಮೂಲ ನಾಶವಾದ ನಂತರ, ಅನವೃಥನ ಸುಪ್ತವಾಗಿದ್ದ ವಿವಾಹ ಕಾಮನೆಯು ಬಲಿಯಿತು. ದೂತರು ಆತನಿಗಾಗಿ ವೈಶಾಲಿ (ಅರಕಾನ್) ದೇಶದ ಓರ್ವ ಭಾರತೀಯ ಕುಮಾರಿಯಾದ ಪಂಚಕಲ್ಯಾಣಿಯನ್ನು ಕರಿಯೆಂದು ಶೋಧಿಸಿದರು. ಪಂಚಕಲ್ಯಾಣಿಯು ತನ್ನ ಎಂಬತ್ತು ದಾಸಿಯರೊಡನೆ ಅರಿಮನಪುರದತ್ತ ಪ್ರಯಾಣ ಹೊರಟಿರುವಾಗ ಆ ಊರಿನ ರಾಜನು ಆಕೆಯ ಮೇಲೆ ಬಲಾತ್ಕಾರವನ್ನು ಹೇರಿ ಅಲ್ಲಿದ್ದ ನೌಕರರೆಲ್ಲರನ್ನೂ ದೂರದೂರದ ಊರಿನಲ್ಲಿ ನಿರ್ವಾಸಿತರನ್ನಾಗಿ ಮಾಡಿದನು. ವಿವಾಹನಂತರ ಈ ಸತ್ಯಸಂಗತಿಯು ಹೊರಪಟ್ಟುದರಿಂದ ಪಂಚಕಲ್ಯಾಣಿಯು ರಾಣಿಯಾಗುವುದು ಅಸಂಭವವಾಯಿತು. ಅನವೃಥನು ಆಕೆಯನ್ನು ಒಂದು ನಿರ್ಜನಪ್ರದೇಶದಲ್ಲಿ ಇರಿಸಿದನು. ಅಲ್ಲಿಯೇ ಆಕೆಯ ಉದರದಿಂದ ಕ್ಯಾಂಜಿತನ ಜನ್ಮವಾಯಿತು. ನಿರ್ಭಾಗಿಯಾದ ಈ ರಾಜಕುಮಾರನು ಏಕಾಂತದಲ್ಲಿಯೇ ಬೆಳೆದು ಬಂದನು. ಆದರೆ, ಮುಂದೆ ಅನವೃಥನು ಅವರನ್ನು ಕಾಡಿನಿಂದ ಹಿಂದೆ ಕರೆಸಿ ಉನ್ನತಪದವಿಯಲ್ಲಿ ಇಟ್ಟನು.

ಲಾವೋಸಾನನು ಆಕ್ರಮಣವನ್ನು ಮಾಡಿದಾಗ ಅನವೃಥನ ಆಜ್ಞೆಯಿಂದ ಕ್ಯಾಂಜಿತನು ಭಾರತೀಯ ಸೈನಿಕರನ್ನು ಒಯ್ದು ಪೇಗೂವಿನಲ್ಲಿ ಅವನನ್ನು ಸಂಪೂರ್ಣ ಪರಾಜಿತನನ್ನಾಗಿ ಮಾಡಿದನು. ತಾಲೇಂಗೋನು ವಿಜಯಿಯಾದ ರಾಜನಿಗೆ ನಾಲ್ಕು ಅಮೂಲ್ಯ ಉಪಹಾರಗಳನ್ನಿತ್ತನು. ಇವರಲ್ಲಿ ಪೇಗೂವಿನ ರಾಜನ ಏಕಮಾತ್ರ ಪುತ್ರಿ ಹಕೀನ್—ಯೂ ಒಬ್ಬಳು. ಬರ್ಮೀಯ ಪ್ರಥಾನುಸಾರವಾಗಿ ಮುಂದೆ ಈಕೆಯು ನಾಲ್ಕು ರಾಜರ ರಾಣಿಯಾಗಿ ಹೋದಳು.

ಪಾಗಾನ್ (ಅರಿದಮನಪುರ)ದತ್ತ ಸಾಗುವ ದಾರಿಯಲ್ಲಿಯೇ ಕ್ಯಾಂಜಿತನು ತರುಣಿಯಾದ ಹಕೀನ-ಯೂವಿನ ಮೇಲೆ ಆಸಕ್ತನಾದನು. ಈ ಸಂಗತಿ ಅನವೃಥನಿಗೆ ತಿಳಿದು ಬಂದಾಗ, ಆತನು ಕೋಪಾರುಣನೇತ್ರನಾಗಿ ಕ್ಯಾಂಜಿತನನ್ನು ಈಟಿಯಿಂದ ಇರಿದನು. ಕ್ಯಾಂಜಿತನು ತಪ್ಪಿಸಿಕೊಂಡು ಅಲ್ಲಿಂದ ಕಾಲುಕಿತ್ತನು; ಕಾಡುಗಳನ್ನೂ ಪರ್ವತ ಶಿಖರಗಳನ್ನೂ ದಾಟುತ್ತ ಆತನು ಸೇಗಂಗೆಗೆ ಬಂದು ಅಲ್ಲಿ ಓರ್ವ ಸಾಧುವಿನ ಪುತ್ರಿ ಥಂಬುಲೆಯೊಡನೆ ಇರತೊಡಗಿದನು.

ಕ್ರಿಸ್ತಶಕ ೧೦೭೭ರಲ್ಲಿ ಅನವೃಥನು ಮಡಿದನಂತರ ಆತನ ಮಗ ಸಾವಲೂ ಎಂಬವನು ಸಿಂಹಾಸನವನ್ನು ಏರಿದನು. ಇವನು ತನ್ನ ತಂದೆಯ ರಾಣಿಯಾದ ಹಕೀನ್-ಯೂ ವನ್ನು ತನ್ನ ಪಟ್ಟದ ರಾಣಿಯನ್ನಾಗಿ ಮಾಡಿಕೊಂಡನು. ಪ್ರಾಚೀನ ಬರ್ಮೀಯ ಸಂಪ್ರದಾಯದಂತೆ ರಾಣಿಯು ರಾಜ ಚಿಹ್ನೆಯಂತಿರುತ್ತಿದ್ದಳಾದುದರಿಂದ ರಾಜನ ಉತ್ತರಾಧಿಕಾರಿಗೆ ಆಕೆಯ ಮೇಲೆ ಸಂಪೂರ್ಣ ಅಧಿಕಾರವಿರುತ್ತಿತ್ತು. ಮಮನಖಾನ ತಾಲೇಂಗನು ಸಾವಲೂವಿನ ಮೇಲೆ ಆಕ್ರಮಣ ಮಾಡಿದಾಗ ಸಾವಲೂ ಕ್ಯಾಂಜಿತನನ್ನು ಕರೆಕಳಿಸಿ ಆತನನ್ನು ಸೇನಾಪತಿಯಾಗಿ ನೇಮಿಸಿದನು. ಆದರೆ, ಸಾವಲೂವಿಗೆ ಆತನ ವರ್ತನೆಯ ಬಗ್ಗೆ ಸಂದೇಹ ಹುಟ್ಟಿದುದರಿಂದ, ಕ್ಯಾಂಜಿತನು ಪುನಃ ದೂರ ಹೋಗಬೇಕಾಯಿತು. ಇಂತಹ ಸಂದರ್ಭವನ್ನು ಕಾದುಕೊಂಡಿದ್ದ ಮಮನಖಾನನು ಸಾವಲೂವನ್ನು ಕೊಂದು ಹಾಕಿದನು.

ಆದರೆ, ಕ್ಯಾಂಜಿತನು ಹೊರಗಿನಿಂದಲೇ ಸುದೃಢವಾದ ಸೇನೆಯನ್ನು ಏಕತ್ರಿತಗೈದು, ತಾಲೇಂಗೂವಿನ ಮೇಲೆ ಆಕ್ರಮಣ ಮಾಡಿಯೇ ಬಿಟ್ಟನು. ಮಮನಖಾನನು ತನ್ನ ವಜ್ರ ಮುತ್ತುಗಳನ್ನು ದೊಡ್ಡ ನಾವೆಯಲ್ಲಿ ಹೇರಿ ಇರಾವದಿಯ ಮಾರ್ಗದಲ್ಲಿ ಮುಂದುವರಿದನು. ದಾರಿಯಲ್ಲಿ ಒಂದು ಸ್ಥಳದಲ್ಲಿ ಒಂದು ಕೋಗಿಲೆಯ ಮನಮೋಹಕವಾದ ಕೂಕೂ ಕೇಳಿಸಿತು. ಈ ನಾದ ಎಲ್ಲಿಂದ ಬರುತ್ತಿದೆ ಎಂದು ನೋಡುವ ಕುತೂಹಲದಿಂದಾಗಿ, ಅತ್ತ ತಿಳಿದುಕೊಳ್ಳಲು ತಲೆಯೆತ್ತಿದುದೇ ತಡ ಒಂದು ಬಾಣವು ಸರ್ರನೆ ಬಂದು ಆತನ ಕಣ್ಣಿನಲ್ಲಿ ನಾಟಿಬಿಟ್ಟಿತು. ಅದು ತಲೆಯನ್ನೂ ಹೊಕ್ಕುಬಿಟ್ಟಿತು. ತತ್‌ಕ್ಷಣವೇ ಮಮನಖಾನನ ಹೆಣವು ಬಿದ್ದುಬಿಟ್ಟಿತು. ಈ ಬಾಣವು ಕ್ಯಾಂಜಿತನ ಸೇನಾನಿಯಾಗಿದ್ದ ಗಾಂ-ಸಿಂಗೂವಿನ ಬಿಲ್ಲಿನಿಂದ ಹೊರಟಿತ್ತು. ಕೋಗಿಲೆಯ ನಾದವೂ ಅದೇ ಕಂಠದಿಂದ ಹೊರಟಿತ್ತು.

ರಾಜನಾದ ಬಳಿಕ ಕ್ಯಾಂಜಿತನು ತನ್ನ ಪ್ರಾಚೀನ ಪ್ರೇಯಸಿ ಹಕೀನ್-ಯೂವನ್ನು ವಿವಾಹವಾಗಲು ಬಹು ಪ್ರಯಾಸಪಟ್ಟನು. ಆಗ ಒಂದು ದೊಡ್ಡ ಜಗಳವೇ ಒಡೆಯಿತು. ಈತನು ತನ್ನ ಧೈರ್ಯದಿಂದ ತನ್ನ ವಿರೋಧಿಗಳನ್ನು ಸದೆಬಡೆದು, ತನ್ನ ಕಾಮನೆಯನ್ನು ಪೂರ್ತಿಗೊಳಿಸಿದನು. ಹಕೀನ್-ಯೂ ಕ್ಯಾಂಜಿತನ ಪಟ್ಟದ ರಾಣಿಯಾದಳು. ರಾಜಪುರೋಹಿತರು ಸಾಂಪ್ರದಾಯಿಕವಾಗಿ ರಾಜ್ಯಾಭಿಷೇಕವನ್ನು ಮಾಡಿದರು. ಆನಂದ ಮಠದಲ್ಲಿ ಈ ರಾಜಗುರು ಸೀನ-ಅರಹಾನರ ಮೂರ್ತಿಯೂ ಕ್ಯಾಂಜಿತನ ವಿಗ್ರಹವೊಂದಿಗಿರುವುದು.

ಈ ಕ್ಯಾಂಜಿತನು ಒಂದು ಹೊಸ ಅರಮನೆಯನ್ನು ಕಟ್ಟಿಸಿದನು. ಮನೆಯ ಗೋಡೆಗಳಲ್ಲಿ ಹಲವಾರು ಲೇಖಗಳನ್ನು ಕೆತ್ತಿಸಿರುವನು; ಇವು ಇಂದಿಗೂ ಬರ್ಮಾ ಸಾಹಿತ್ಯದಲ್ಲಿ ಪ್ರಧಾನ ಸ್ಥಾನವನ್ನು ಪಡೆದಿವೆ. ರಾಜ್ಯದಲ್ಲಿ ಶಾಂತಿಯೂ ನೆಲಸಿತ್ತು.

(೯ನೇ ಪುಟ ನೋಡಿರಿ)



ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2 00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು." (ಪ್ರೊ। ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ.

ಕ್ಷ-ಕಿರಣ

ನೀವು ಸೀನುವ ಸೀನು—ಒಂದು ವಿವೇಚನೆ

ಜಗತ್ತಿನ ಎಲ್ಲ ನಾಗರಿಕ ದೇಶಗಳಲ್ಲೂ ಸೀನುವುದು ಶುಭಲಕ್ಷಣವೆಂದು ತಿಳಿಯಲಾಗುತ್ತದೆ; ಅದರ ಮನೋರಂಜಕ ಕಥೆಗಳನ್ನೂ ಅವುಗಳ ವಾಸ್ತವಾಂಶಗಳನ್ನೂ ಓದಿ ತಿಳಿದುಕೊಳ್ಳಿರಿ.

ಸೀನಿನ ಪುರಾಣ ಬಹಳ ಪುರಾಣವಾದುದು ಮಾತ್ರವಲ್ಲ ಅಷ್ಟೇ ಮನೋರಂಜಕವಾದುದೂ ಹೌದು. ಶುಭ ಅಶುಭಗಳೆರಡಕ್ಕೂ ಸೀನು ಕಾರಣವಾಗಬಹುದು. ಅಶುಭ ಸೀನು ಮಾನವನು ಜಯಿಸಿದಾಗ ಬರುವುದೇ ಅಲ್ಲ; ಹಾಗೆಯೇ ಶುಭಸೂಚಕ ಸೀನೂ ಬರುವುದು ಅಪರೂಪವೇ ಸರಿ. ಗರುಡ ಪುರಾಣದಲ್ಲಿ ಈ ಸೀನಿನ ಮಹಿಮೆಯ ಕುರಿತು ವಿಸ್ತಾರವಾದ ಚರಿತ್ರೆಯು ದೊರೆಯುತ್ತದೆ.

ಒಬ್ಬ ಮನುಷ್ಯ ಯಾವುದಾದರೊಂದು ಶುಭಕಾರ್ಯಕ್ಕೆ ತೆರಳಿದ್ದಾನೆ ಎನ್ನುವ ಅರ್ಧದಾರಿಯಲ್ಲೇ ಅವನಿಗೆ ಸೀನು ಬಂದು ಬಿಟ್ಟಿತು ಎಂದರೆ, ಆತ ಒಂದರೆ ಹೊತ್ತು ಅಲ್ಲಿಯೇ ಸ್ತಂಭೀಭೂತನಾಗಿ ನಿಲ್ಲುತ್ತಾನೆ. ತತ್‌ಕ್ಷಣ ಇನ್ನೊಂದು ಬಂತೂ ಆತ ಮುಂದುವರಿಯುತ್ತಾನೆ. ಇಲ್ಲವಾದರೆ... ಈ ಪದ್ಧತಿ ನಮ್ಮ ದೇಶದಲ್ಲಿ ಮಾತ್ರವಲ್ಲ. ವಿದೇಶಿಗಳಲ್ಲಿಯೂ ಇದೆಎನ್ನುವಾಗ, ನಾವು ನಮ್ಮ ಪೂರ್ವಜರ ಅಂಧಾನುಕರಣೆಮಾಡುತ್ತೇವೆಎಂದು ನೀವು ಹೇಳಲಾರಿರಿ. ಬಾಗಿಲ ನಡುವೆ ನಿಂತಿರುವಾಗ ಸೀನು ಬಂದು ಬಿಟ್ಟರೆ ಕೆಲವರು ಅಲ್ಲಿ ನೀರಿನ ಹನಿಯನ್ನು ಸುರಿಯುತ್ತಾರೆ. ಮಾತಾಡುವ ವೇಳೆ ಸೀನು ಕೇಳಿಸಿದರೆ, "ಸರಿಯಂತೆ" "ಸತ್ಯವಂತೆ", "ಖಂಡಿತಕ್ಕೂ ಸತ್ಯ' ಎಂಬ ಉದ್ಗಾರ ನಮ್ಮ ಬಾಯಿಂದ ತಾನಾಗಿಯೇ ಹೊರ ಬರುತ್ತದೆ. ಹಿರಿಯ ಮುದುಕರು ಇಂತಹ ಸಂದರ್ಭಗಳಲ್ಲಿ "ಶತಂಜೀವ" "ಶತಾಯುರ್ಭವ" ಅಥವಾ ದೀರ್ಘಾಯುರ್ಭವ' ಎಂದು ಮಂತ್ರಾಗಿ ಅನಾಯಾಸವಾಗಿ ಆಡಿಬಿಡುತ್ತಾರೆ. ಸೀನು ಬರುವಾಗ ಏನೂ ಆಡದೆ ಹೋದರೆ, ಆತ ಪಾಪ ಭಾಜನನಾಗುತ್ತಾನೆ ಎಂದು ನಮ್ಮ ಧರ್ಮಶಾಸ್ತ್ರಗಳು ಉಪದೇಶಿಸಿವೆ.

ಪ್ರತಿಯೊಬ್ಬ ಪರ್ಸಿಯನನೂ ಸೀನು ಬಂದೊಡನೆಯೇ "ಅಹುಂ ವೈರಯೋ" ಮತ್ತು "ಆಶೀನ ವೋಹೂ" ಎಂಬೆರಡು ಮಂತ್ರಗಳನ್ನು ಉಚ್ಚರಿಸಬೇಕೆಂದು ಪಾರ್ಸಿಯರ ಧರ್ಮಗ್ರಂಥ "ಸದ್ದರ್"ನಲ್ಲಿ ಹೇಳಿದೆ. ಶರೀರದಲ್ಲಿ ದುಷ್ಟಾತ್ಮನು ವಾಸಿಸಿಕೊಂಡಿದ್ದಾನೆ; ಮತ್ತು ಆತನು ಅಗ್ನಿಯಿಂದ ಪರಾಜಿತನಾಗಿ ಶರೀರದಿಂದ ಹೊರಗೆ ಹೋಗಲು ಬಯಸುವಾಗ ಸೀನಿನ ರೂಪದಲ್ಲಿ ಓಡುತ್ತಾನೆ ಎಂದು ಪರ್ಸಿಯನರ ಕಲ್ಪನೆಯಿದೆ. ಆದುದರಿಂದ ಈ ಮಂತ್ರಗಳ ಸಹಾಯದಿಂದ ವಿಜಯಿಯಾದ ಅಗ್ನಿಯನ್ನು ಪ್ರಸನ್ನೀಕರಿಸಿ, ಆತನನ್ನು ಪ್ರಶಂಶಿಸಲಾಗುತ್ತಿದೆ.

ಇರಾನಿನಲ್ಲಿ ಒಂದೇ ಸಲ ಎರಡು ಸೀನು ಬರುವುದು ಶುಭಚಿಹ್ನೆಯೆಂದು ತಿಳಿಯಲಾಗುತ್ತದೆ. ಪ್ರಾಚೀನ ಮೆಸೊಪೊಟೆಮಿಯಾದಲ್ಲಿ ಸೀನಿಗಿರುವ ಆದರಸಮ್ಮಾನಗಳು ಅತ್ಯದ್ಭುತವಿವೆ. ಅಲ್ಲಿನ ದೊರೆ ಸೀನುವಾಗ ಆತನ ದರಬಾರಿಗಳೆಲ್ಲರೂ ಗಟ್ಟಿಯಾಗಿ ಆತನನ್ನು ಹೊಗಳಲು ಪ್ರಾರಂಭಿಸುತ್ತಿದ್ದರು. ಇವರ ಹೊಗಳಿಕೆಯನ್ನು ಕೇಳಿ ಅರಮನೆಯ ಅನ್ಯ ಪ್ರದೇಶಗಳಲ್ಲಿದ್ದ ಇತರ ಕರ್ಮಚರರೂ ಅರಸನನ್ನು ಗಟ್ಟಿಯಾಗಿ ಅಭಿವಾದಿಸತೊಡಗುತಿದ್ದರು. ರಾಜಸೇವಕರ ಧ್ವನಿಯನ್ನು ಕೇಳಿ ಅರಮನೆಯ ಪಕ್ಕದಲ್ಲಿ ಸಂಚರಿಸುವ ದಾರಿಗರೂ ಅವರನ್ನು ಅನುಕರಿಸುತಿದ್ದರು. ಈ ನಾದವು ಸಮೀಪದ ಮಾರ್ಗಗಳಿಗೂ ಹಂಡಿ ಅಲ್ಲಿಯೂ ಇದೇ ಪ್ರತಿಕ್ರಿಯೆಯು ಮೂಡಿಬರುತಿತ್ತು. ಇದೇ ರೀತಿಯಲ್ಲಿ ನಡೆನಡೆದು ರಾಜಧಾನಿಯ ಎಲ್ಲ ಮಾರ್ಗ ಓಣಿಗಳ ಎಲ್ಲ ಜನರೂ ರಾಜಸ್ತುತಿಯಲ್ಲೇ ತಲ್ಲೀನರಾಗಿ ಎಂಟು ದಿಕ್ಕುಗಳನ್ನೂ ಪ್ರತಿಧ್ವನಿಸುವಂತೆ ಮಾಡುತಿದ್ದರು. ಒಂದರ್ಧ ತಾಸು ಇದೇ ಗುಂಗಿನಲ್ಲಿ ಕಳೆಯುತಿತ್ತು!

ಯೆಹೂದಿಯರು ಸೀನು ಬಂದೊಡನೆಯೇ, "ಪರಮಾತ್ಮಾ, ಕರುಣಿಸು" ಅಥವಾ "ಸುಖಿಯಾಗು" ಎಂಬ ಶಬ್ದಗಳನ್ನು ಉಚ್ಚರಿಸುತ್ತಾರೆ. ಮುಸ್ಲಿಮರ ಸೃಷ್ಟಿ ಪುರಾಣದಂತೆ ಅಲ್ಲಾನು ಆದಮನ ಕಿವಿಯಲ್ಲಿ ಗಾಳಿ ಊದಿದಾಗ, ಮಣ್ಣಿನ ಆ ಜಡಗೊಂಬೆಯು ಗಟ್ಟಿಯಾಗಿ ಸೀನು ಬಿಟ್ಟಿತು. ಜತೆಗೆ ಬಾಯಿಂದ "ಅಲ್ಹಾಹ್ಮಹ-ಉಲ್ಲಾಹ" ಎಂಬ ಮಾತೂ ಹೊರಬಂತು. ಸೀನು ಬಂದೊಡನೆಯೇ ಈ ಪದಗಳನ್ನು ಉಚ್ಚರಿಸಿದರೆ, ಹಗುರವಾಗುವುದೆಂದು ಹಜರತ ಮಹಮ್ಮದರು ತಮ್ಮ ಶಿಷ್ಯರಿಗೆ ಉಪದೇಶಿಸಿದ್ದಾರೆ. ಇಷ್ಟು ಮಾತ್ರವಲ್ಲ ಇದರಿಂದ ಶರೀರದ ರೋಮಕೂಪಗಳ ಬಾಯಿ ತೆರೆಯುತ್ತವೆ; ಇದರಿಂ ಹಲವು ಪ್ರಕಾರದ ಚಿಕ್ಕದೊಡ್ಡ ರೋಗಗಳೂ ತಡೆಯಲ್ಪಡುತ್ತವೆಯಂತೆ!

ಯೂನಾನೀ ಜನರು ಸೀನು ಬರುವುದು ಶುಭಪ್ರದವೆಂದು ತಿಳಿಯುತ್ತಾರೆ. ಅವರು ಸೀನಿಗೆ ಮೂರು ವಿಧದಲ್ಲಿ ಅರ್ಥ ಮಾಡುತ್ತಾರೆ: (೧) ಮಾತುಕತೆಯ ನಡುವೆ ಸೀನು ಬಂದರೆ, ಆ ಮಾತು ಸತ್ಯವೆಂದು ತಿಳಿಯಬೇಕು. (೨) ಶತ್ರುಗಳ ವಿಷಯ ಮಾತಾಡುವಾಗ ಸೀನು ಬಂದರೆ, ಅವರಿಂದ ಅಪಾಯ ತಪ್ಪಿದೆಂದು ತಿಳಿಯಬೇಕು ಮತ್ತು (೩) ಯಾರಾದರೂ ರೋಗಿಯು ಸೀನಿದರೆ, ಆತನು ನೀರೋಗಿಯಾಗುವ ಚಿಹ್ನೆಗಳು ತಲೆದೋರುತ್ತವೆ ಎಂದು ತಿಳಿಯಬೇಕು.

ಕ್ರಿ. ಶ. ೬ಶಕ್ಕೆ ಮೊದಲು ಯುರೋಪಿನ ಜನರು ಸೀನುಬಂದರೆ, ಎರಡೂ ಕೈಗಳನ್ನು ಕಟ್ಟಿಕೊಳ್ಳುತಿದ್ದರು. ಹೀಗೆ ಮಾಡುವುದರಿಂದ ಸಂಕಟ ದೂರವಾಗುವುದೆಂದವರ ವಿಶ್ವಾಸವಾಗಿತ್ತು. ಇಂದಿಗೂ ಇಲ್ಲಿ ಪ್ರವಾಸಕ್ಕೆ ತೊಡಗುವಾಗ ಬರುವ ಸೀನು ತುಂಬ ಅಪಾಯಕಾರಿಯೆಂದು ತಿಳಿಯಲಾಗುತ್ತದೆ.

ಪ್ರಪಂಚದ ಸಭ್ಯ ಹಾಗೂ ನಾಗರಿಕರು ಸೀನಿನ ಬಗ್ಗೆ ಕಟ್ಟಿಕೊಂಡಿರುವ ವಿಶ್ವಾಸವನ್ನು ಮೇಲೆ ನಿರೂಪಿಸಲಾಯಿತು. ಇನ್ನು ಆದಿವಾಸಿಗಳಲ್ಲಿ ಈ ಬಗ್ಗೆ ಯಾವ ಕಲ್ಪನೆಯಿರುವುದೆಂದು ತಿಳಿಯುವ.

ಶರೀರದಲ್ಲಿ ಪ್ರೇತಾತ್ಮ ಇರುತ್ತದೆ; ಅದು ಸೀನಿನ ರೂಪದಲ್ಲಿ ಶರೀರದಿಂದ ಓಡಿಹೋಗುತ್ತದೆ ಎಂಬ ಭಾವನೆ ಆದಿವಾಸಿಗಳಲ್ಲಿ ಇಂದಿಗೂ ಇದೆ. ಆದರೆ, ಆಫ್ರಿಕೆಯ ಕಾಂಗೋ ನದೀ ಪ್ರದೇಶದ ಜನರಲ್ಲಿ ತದ್ವಿರುದ್ಧವಾದ ಕಲ್ಪನೆಯಿದೆ. ಸೀನಿನ ನೆವನದಲ್ಲಿ ಶರೀರದಲ್ಲಿರುವ ಆತ್ಮವೇ ಹೊರಗೆ ಹೋಗುತ್ತದೆ; ಈ ಆತ್ಮ ಪುನಃ ಶರೀರವನ್ನು ಪ್ರವೇಶಿಸದೆ ಬಿಟ್ಟರೆ, ಮಾನವನು ಮೃತ್ಯುಮುಖನಾಗುತ್ತಾನೆ ಎಂದವರು ತಿಳಿಯುತ್ತಾರೆ. ಆದುದರಿಂದ, ಸೀನು ಬಂದೊಡನೆಯೇ ಅವರು "ಮರಳಿ ಬಾ ನೀನು; ಮರಳಿ ಬಾ ನೀನು" ಎಂದು ಕೂಗುತ್ತಾರೆ. ಹೀಗೆ ಕೂಗುವುದರಿಂದ ಹೊರಗೆ ಹೋದ ಆತ್ಮ ತತ್‌ಕ್ಷಣವೇ ಪುನಃ ಶರೀರವನ್ನು ಪ್ರವೇಶಿಸುತ್ತದೆ ಎಂದವರು ವಿಶ್ವಾಸ ತಾಳಿದ್ದಾರೆ.

ಮಕ್ಕಳು ಸೀನುವುದು ಅಶುಭ, ದೊಡ್ಡವರು ಸೀನುವುದು ಶುಭವೆಂದು ಪಶ್ಚಿಮ ಆಫ್ರಿಕೆಯ ಜನರು ಭಾವಿಸುತ್ತಾರೆ. ಜುಲುವೆಂಬ ವಿಚಿತ್ರ ಮಾನವ ಜಾತಿಯವರು ಸೀನುವುದರಿಂದ ಅವರ ಹಿರಿಯರ ಆತ್ಮವು ಅವರ ಶರೀರವನ್ನು ಪ್ರವೇಶಿಸುವುದು ಎಂದು ನಂಬುತ್ತಾರೆ!

ಪೇಂಜರ ಎಂಬವರು ಸೀನಿನ ಬಗ್ಗೆ ಸಂಶೋಧನೆ ನಡೆಸಿದವರಲ್ಲಿ ಮೊತ್ತಮೊದಲಿಗರು. ತನ್ನ ಶೋಧನೆಗೆ ಪುಷ್ಟಿಯನ್ನು ತಂದೀಯಲು ಅವರು "ಕಥಾ ಸರಿತ್ಸಾಗರ"ದ ಆಂಗ್ಲ ಅನುವಾದದ ಉಪಯೋಗ ಮಾಡಿಕೊಂಡರು. ಹೇಸ್ಟಿಂಗ್ಸ್ ಎಂಬವರು ಬರೆದಿರುವ "ಧರ್ಮ ಮತ್ತು ನೀತಿ ಶಾಸ್ತ್ರಗಳ ವಿಶ್ವಕೋಶ" ಎಂಬ ಪುಸ್ತಕದಲ್ಲಿ ಈ ಸೀನಿನ ಬಗ್ಗೆ ತುಂಬ ಮನೋರಂಜಕವೆನಿಸಿದ ಐತಿಹಾಸಿಕ ವಿವರಣೆಗಳಿವೆ.

ಇವೆಲ್ಲವನ್ನೂ ಮಥಿಸುವಾಗ, ಪ್ರಪಂಚದ ಸಭ್ಯ ಮತ್ತು ಅಸಭ್ಯಜನರಲ್ಲಿ ಸೀನಿನ ಬಗ್ಗೆ ಹೊಂದಾಣಿಕೆಯ ಅಭಿಪ್ರಾಯಗಳಿವೆಯೆಂದು ತಿಳಿಯುತ್ತದೆ. ಒಂದಲ್ಲ ಒಂದು ರೀತಿಯಿಂದ ಪರಮಾತ್ಮನ ನಾಮೋಚ್ಚಾರವು ಈ ಅಭಿಪ್ರಾಯದ ಹಿಂದೆಯಿರುವುದು.

ಬಹುರೂಪಿಯಾದ ಈ ಸೀನು ಇಂದಿನ ಕಾಲದಲ್ಲಿಯೂ ತಿರಸ್ಕರಿಸಿ ಬಿಡುವ ಉಪೇಕ್ಷಣೀಯವಲ್ಲ. ಮುಂಜಾನೆ ಎದ್ದೊಡನೆಯೇ ಹೊರಬರುವ ಸೀನ ಆರೋಗ್ಯದ ಕುರುಹು ಎಂದು ಕೆಲವು ಪ್ರಖ್ಯಾತ ಡಾಕ್ಟರರ ಅಭಿಪ್ರಾಯವಾಗಿದೆ. ಒಂದು ಸಾಮಾನ್ಯವಾದ ಸೀನಿನಿಂದ ಲಕ್ಷಾಂತರ ರೋಗಾಣುಗಳು ಶರೀರದಿಂದ ಹೊರಗೆ ಹೋಗುತ್ತವೆ ಎಂದು ಹಲವು ಡಾಕ್ಟರರು ಘೋಷಿಸುತ್ತಾರೆ. ಆದುದರಿಂದ ತಮ್ಮನ್ನೂ ತಮ್ಮ ಸುತ್ತಲಿರುವವರನ್ನೂ ಹೀಗೆ ಹೊರಬಿದ್ದ ರೋಗಜಂತುಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಸೀನುವಾಗ ತುಂಬ ಎಚ್ಚರಿಕೆ ವಹಿಸಬೇಕಾಗುತ್ತದೆ. ಸಾಮಾನ್ಯವಾಗಿ ಒಂದು ವಸ್ತ್ರವನ್ನು ಮೂಗಿಗೆ ಎದುರಾಗಿ ಇಟ್ಟುಕೊಳ್ಳುವುದರಿಂದ ಈ ರೋಗಾಣುಗಳ ಶರೀರ ಪ್ರವೇಶವನ್ನು ನಾವು ತಡೆಗಟ್ಟಬಹುದು.

ನಾಗಾ ಜನರಲ್ಲಿ ಒಂದು ಕತೆ ಪ್ರಚಲಿತವಿದೆ. ಆಕಳಿಕೆ ಸೈತಾನನ ತಾಯಿ, ಮತ್ತು ಸೀನು ಆತನ ಅಜ್ಜಿ. ಒಂದು ಬಾರಿ ಸೈತಾನನಿಂದ ಪೀಡಿತರಾದ ಜನರೆಲ್ಲರೂ ದೇವರಿಗೆ ಆತನ ಉಪದ್ರವದಿಂದ ಬಿಡುಗಡೆ ಮಾಡಬೇಕೆಂದು ಮೊರೆಯಿಟ್ಟರು. ಆಗ ದೇವರು ವಜ್ರಾಯುಧವನ್ನು ಜಳಪಿಸುತ್ತ ಸೈತಾನನನ್ನು ಕೊಲ್ಲಲು ಉರವಣಿಸಿದರು. ಹೆದರಿಕೆಯಿಂದ ಕಂಗಾಲಾದ ಸೈತಾನನು ಆತ್ಮರಕ್ಷಣೆಗಾಗಿ ತನ್ನ ಮಾತೃಶ್ರೀ ಆಕಳಿಕೆಯ ಆಶ್ರಯ ಬೇಡಿದನು. ಆದರೆ, ಆಕೆ ಆಶ್ರಯ ನಿರಾಕರಿಸಲು ಸೈತಾನನು ಓಡಿಹೋಗಿ ಅಜ್ಜಿ ಸೀನಿನ ಮರೆಯಲ್ಲಿ ಅಡಗಿಕೊಂಡನು. ದೇವರು ವಿಚಾರಿಸಿದಾಗಲೂ ಮೊಮ್ಮಗನ ವ್ಯಾಮೋಹದಿಂದ ಸೀನು ಸೈತಾನನ ಇರವನ್ನು ಹೇಳದಿರಲು ಕುಪಿತರಾಗಿ ಆಕೆಯ ಮೂಗನ್ನು ಕತ್ತರಿಸಿದರು. ಅಂದಿನಿಂದ ಸೀನು ಅಶುಭವಾಗಿ ಪರಿಣಮಿಸಿತು. ಆದುದರಿಂದ ಸೀನು ಶರೀರದಿಂದ ಹೊರಗೆ ಹೋದರೆ, ಶರೀರಕ್ಕೆ ಕ್ಷೇಮಕರವೆಂದು ತಿಳಿಯಲಾಗುತ್ತದೆ.

(ವಿವಿಧ ಮೂಲಗಳಿಂದ)

— ಗೋರಾ.

ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ
ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್‌ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕಾಸ್ರಗೋಡ ಮುನ್ಸಿಫ ಕೋರ್ಟಿನಲ್ಲಿ

O. S. No: 191/1959.

M. ನಾಗೇಂದ್ರ ರಾವ್ —ವಾದಿ.

ಮತ್ತು

ಉಗ್ಗಪ್ಪ ಶೆಟ್ಟಿ-ಗಂಗು ಹೆಂಗ್ಸಿನ ಮಗ, ಮೂಡಂಬೈಲು ಗ್ರಾಮ —ಪ್ರತಿವಾದಿ.

ಇವರಿಗೆ ತಿಳಿಸುವದೇನಂದರೆ—

ವಾದಿಗೆ ನಿಂಮಿಂದ ಬರಬೇಕಾದ ಬಾಕಿಗೇಣಿ ಕುರಿತು ವಾದಿಯು ನಿಂಮ ಮೇಲೆ ದಾಕ್ಲುಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 26—11—1959ಕ್ಕೆ ಇಟ್ಟಿರುವದರಿಂದ ಆ ದಿನ್ನ ನೀವು ಹಾಜರಾಗಲು ತಪ್ಪಿದ್ರೆ ನಿಮ್ಮನ್ನು ಎಕ್ಸಪಾರ್ಟಿಮಾಡೋಣಾದೀತೆಂಬ ಸಂಗ್ತಿ ತಿಳಿಸೋಣಾಗಿಯದೆ.

(Sd) K.P.V.B. Ejman,
Advocate for Plaintiff.

Kasaragod, 30—10—1959.

ಮಕ್ಕಳ ಮಗ್ಗಿ ಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

> ಪರಿಮಳ ಸಹಿತವಾದ ಹೂವು ತನ್ನ ಪ್ರಶಂಸೆಯನ್ನು ಹೇಳಿಕೊಂಡು ಹೋಗುವುದಿಲ್ಲ, ಎಲ್ಲರೂ ಅಂತಹ ಹೂವನ್ನು ಬಯಸುತ್ತಾರೆ, ನಿರಹಂಕಾರಿ ಮಾನವನು ಎಂದಿಗೂ ತನ್ನ ಬಗ್ಗೆ ಏನನ್ನೂ ಹೇಳಿಕೊಳ್ಳುವುದಿಲ್ಲ, ಜನತೆಯೇ ಆತನನ್ನು ಗೌರವಿಸುತ್ತದೆ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೩-೧೧-'೫೯	೧೦

ಡಾ| ಸುಂದರರಾಮ ಪೈ

"ಉದಾರ ಚರಿತಾನಾಮ್ ವಸುಧೈವ ಕುಟುಂಬಕಮ್" ಎಂಬೊಂದು ಉಯೋಕ್ತಿ ಬಹುಕಾಲದಿಂದಲೂ ಪ್ರಚಲಿತವಿದೆ. ಆದರೆ, ವಸುಧೆಯನ್ನೇ ಕುಟುಂಬವಾಗಿ ತಿಳಿದುಕೊಳ್ಳುವ ಉದಾರ ಚರಿತರ ಸಂಖ್ಯೆ ಮಾತ್ರ ಬೆರಳೆಣಿಕೆಯಷ್ಟು. ಉದಾರ ಚರಿತರಾಗಲು ಅವಶ್ಯವಾದ ತಿಳಿಮನಸ್ಸಾಗಲಿ, ಆದರ್ಶ ಜೀವನವಾಗಲಿ, ನಡೆನುಡಿಯಾಗಲೀ ಲೌಕಿಕ, ಆಧ್ಯಾತ್ಮಿಕ, ಧಾರ್ಮಿಕ ಶ್ರದ್ಧೆಯಾಗಲಿ, ಸೇವಾಭಾವವಾಗಲಿ ಕರಗತವಾಗುವುದು ಅಷ್ಟು ಸುಲಭವಲ್ಲ. ಆದರೆ, ಉಡುಪಿಯ ಸುಪ್ರಸಿದ್ಧ ಡಾಕ್ಟರರಲ್ಲಿ ಒಬ್ಬರಾದ ಡಾ| ಯು. ಸುಂದರ ರಾಮ ಪೈ ಇವರು ಇವುಗಳಲ್ಲಿ ಎಲ್ಲವಕ್ಕೂ ಪಾತ್ರರಾಗಿರುವರೆಂದು ಸಾಮಾನ್ಯವಾಗಿ ಹೇಳಬಹುದು.

೧೮೯೭ರ ಅಕ್ಟೋಬರ ೧೭ರಂದು ಉಡುಪಿಯಲ್ಲಿ ಜನಿಸಿ, ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಪ್ರಾರಂಭಿಕ ವಿದ್ಯಾಭ್ಯಾಸವನ್ನು ಗಳಿಸಿ, ಮುಂದೆ, ಮಂಗಳೂರು ಮತ್ತು ಮದ್ರಾಸುಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆದು, ೧೯೨೧ರಲ್ಲಿ ಪದವೀಧರರಾಗಿ ಶ್ರೀಯುತರು ವೈದ್ಯಕೀಯ ವೃತ್ತಿಯನ್ನು ಕೈಗೊಂಡರು, ಕೊನೆಯವರೆಗೂ ಮುಂದುವರಿಸಿಕೊಂಡು ಬಂದರು. ದೀಪಾವಳಿಯ ಪ್ರಕಾಶವನ್ನು ಕಂಡು ಹಿಗ್ಗಬೇಕಾಗಿದ್ದ ಉಡುಪಿಯ ನಾಗರಿಕರು ಡಾ| ಸುಂದರ ರಾಮ ಪೈ ಅವರ ಆಕಸ್ಮಿಕ ನಿಧನದಿಂದಾಗಿ ಕರಿ ದಿನಾಚರಣೆಯನ್ನಾಚರಿಸಬೇಕಾಗಬಹುದೆಂದು ಯಾರೂ ಕನಸಿನಲ್ಲಿಯೂ ಭಾವಿಸಿರಲಿಲ್ಲ. ವೈದ್ಯಕೀಯ ವೃತ್ತಿಯಲ್ಲಿ ನಿರಂತರವಾಗಿ ತೊಡಗಿ ಪಡೆದ ಅನುಭವ ಹಾಗೂ ನೈಪುಣ್ಯಗಳಿಂದಾಗಿ ಉಡುಪಿಯ ಮಾತ್ರವಲ್ಲ, ಜಿಲ್ಲೆಯ ಜನರೆಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದು, ಜನಸೇವೆಯೇ ಜನಾರ್ದನ ಸೇವೆ ಎಂದು ಭಾವಿಸಿ ತಮ್ಮ ವೃತ್ತಿಯನ್ನು ಅತ್ಯಂತ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ನಿರ್ವಹಿಸಿ ಕೀರ್ತಿಶೇಷರಾದರು. ಉಡುಪಿಯ ಡಾಕ್ಟರುಗಳಲ್ಲಿ ಇವರು ಅತ್ಯಂತ ಹಿರಿಯರಿದ್ದು, ರೋಗಿಗಳ ಹಿತಚಿಂತನೆಯಲ್ಲಿ ಅಮಿತ ಆಸಕ್ತಿಯನ್ನು ವಹಿಸಿದುದರಿಂದ ಸಾವಿರಾರು ಕುಟುಂಬಗಳ ಹಿತೈಷಿಯೆನ್ನಿಸಿಕೊಂಡಿದ್ದರು; ಜನಸಾಮಾನ್ಯರ ಪ್ರೀತಿ ವಿಶ್ವಾಸವನ್ನೂ ಗಳಿಸಿಕೊಂಡಿದ್ದರು.

ಡಾ| ಸುಂದರರಾಮ ಪೈಯವರದು ಬಹುಮುಖ ಜೀವನವಾಗಿತ್ತು. ತಾನು ವೃತ್ತಿಯಲ್ಲಿ ವೈದ್ಯರಾಗಿದ್ದರೂ ಯಮರಾಜ ಸಹೋದರರಾಗಿರಲಿಲ್ಲ; ಶೈಕ್ಷಣಿಕ ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿಯೂ ಇವರು ಪಾದಾರ್ಪಣ ಮಾಡಿದ್ದಾರೆ. ಉಡುಪಿಯ ಕೀರ್ತಿ ಕಿರೀಟಕ್ಕೆ ನವಿಲು ಗರಿ ಏರಿಸಿದ ಇಲ್ಲಿನ ಎಕೆಡೆಮಿ ಕಾಲೇಜುಗಳ ಸ್ಥಾಪನೆಗಾಗಿ ಡಾ| ಮಾಧವ ಪೈಯವರಿಗೆ ಬಲಗೈಯಂತಿದ್ದು ನೆರವಿತ್ತವರಲ್ಲಿ ಡಾ| ಸುಂದರರಾಮ ಪೈಯವರೂ ಒಬ್ಬರಾಗಿದ್ದರು. ಕೆನರಾ ಬೇಂಕಿಂಗ್ ಕಾರ್ಪೋರೇಷನ್ನಿನ ಅಧ್ಯಕ್ಷರಾಗಿ ಹಲವು ವರ್ಷಗಳಿಂದ ಬೇಂಕಿನ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸಿರುವರು. ಇದೇ ರೀತಿಯಲ್ಲಿ ಇತರ ಹಲವಾರು ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಮಹತ್ವದಿಂದ ಭಾಗವಹಿಸಿದ್ದರು. ಮಧ್ವಮುನಿ ಸೇವಾ ಸಂಘ, ಗೌಡ ಸಾರಸ್ವತ ಬ್ರಾಹ್ಮಣರ ಸಮಾಜ ಸಮಿತಿ ಮೊದಲಾದ ಸಂಸ್ಥೆಗಳಲ್ಲಿಯೂ ಅವರ ಉತ್ಸಾಹೀ ಕಾರ್ಯಪಟುತ್ವವು ತತ್ಪರವಾಗುತಿತ್ತು. ಧರ್ಮ, ಸಂಸ್ಕೃತಿ, ಕಲೆಗಳಲ್ಲಿ ಅಪಾರ ಶ್ರದ್ಧೆಯನ್ನಿಟ್ಟುಕೊಂಡವರು ಇವರು ಒಳಿತನ್ನು ಎಲ್ಲಿದ್ದರೂ ಹೆಕ್ಕಿಕೊಳ್ಳುವ ನಿರಹಂಕಾರತೆ, ಉದಾರತೆಯ ತವರ್ಮನೆಯೇ ಇವರು ಯಾವ ಪಕ್ಷಪಂಗಡಗಳ ಜಂಜಾಟಕ್ಕೆ ಸಿಲುಕದೆ, ನಿರ್ಭಯರಾಗಿ, ತಾನಿಟ್ಟುಕೊಂಡಿರುವ ನಿಜವಾದ ಜೀವನದ ಉದ್ದೇಶವನ್ನು ಮರೆಯದೆ, ಆದರಿಂದ ವಿಚಲಿತರಾಗದೆ, ಬಹು ಜನಹಿತ ಮತ್ತು ಸುಖಕ್ಕಾಗಿ ಶ್ರಮಿಸಿದ ಆದರ್ಶ ಪುರುಷ ಡಾ| ಸುಂದರ ರಾಮ ಪೈ ಅವರು

ಉಡುಪಿ ನಾಗರಿಕರು ತಾ ೩೧ ರಂದು ಪೂರ್ವಾಹ್ನ ಪರಂಧಾಮವನೈದಿದ ತಮ್ಮ ನೆಚ್ಚಿನ ಮುಂದಾಳುವಿನ ಅಂತಿಮ ದರ್ಶನವನ್ನು ಮಾಡಿದುದಲ್ಲದೇ ಅವರ ಅಂತಿಮ ಸಂಸ್ಕಾರದಲ್ಲೂ ಭಾಗವಹಿಸಿ ತಮ್ಮ ಕೃತಜ್ಞತೆಗಳನ್ನು ಅರ್ಪಿಸಿದರು. ಇಷ್ಟು ಮಾತ್ರವಲ್ಲದೇ, ರಥಬೀದಿಯಲ್ಲಿ ಸೋದೆ ವಾದಿರಾಜ ಮಠದ ಶ್ರೀ ಪಾದಂಗಳವರ ಹಿರಿತನದಲ್ಲಿ ಸಭೆ ಸೇರಿ, ದಿವಂಗತರ ಗುಣಗಾನವನ್ನು ಮಾಡಿ ಹೃತ್ಪೂರ್ವಕವಾಗಿ ಗೌರವಾರ್ಪಣೆ ಮಾಡಿದುದಲ್ಲದೇ ಅವರ ಚಿರಸ್ಮರಣೆಗಾಗಿ ಒಂದು ಸ್ಮಾರಕವನ್ನೂ ನಿರ್ಮಿಸಲು ನಿರ್ಧರಿಸಿದೆ. ಶ್ರೀಗಳಾದ ಕೆ. ಆರ್. ಕೆ. ಭಟ, ಶೀನಪ್ಪ ಹೆಗ್ಗಡೆ, ಜಿ. ಸಿ. ರೇಗೋ, ಟಿ. ಎ. ಪೈ, ಶ್ರೀಮತಿ ಆಶಾ ಭಟ್ ಮೊದಲಾದವರು ದಿವಂಗತರ ಬಹುಮುಖ ಸೇವೆಯ ಕುರಿತಾಗಿ ಪ್ರಶಂಸಿಸಿದರು. ಡಾ| ಸುಂದರರಾಮ ಪೈ ಅವರು ನಿಸ್ವಾರ್ಥ ಸಮಾಜ ಸೇವಕರಾಗಿದ್ದು, "ಆಳಾಗ ಬಲ್ಲವನು ಆಳುವನು ಅರಸಾಗಿ" ಎಂಬ ಮಾತನ್ನು ತಮ್ಮ ೬೩ ವರ್ಷಗಳ ಸಫಲ ಜೀವನಾವಧಿಯಲ್ಲಿ ತೋರಿಸಿ ಕೊಟ್ಟಿದ್ದಾರೆ. ಉಡುಪಿಯವರೇ ಆಗಿ, ಉಡುಪಿಯಲ್ಲೇ ಬೆಳೆದು, ಉಡುಪಿಯ ನಾಗರಿಕರ ಸೇವೆಯಲ್ಲೇ ತತ್ಪರರಾಗಿ ಉಡುಪಿಯಲ್ಲೇ ತಮ್ಮ ಅಂತಿಮ ಉಸುರನ್ನು ಎಳೆದ ಉಡುಪಿಯ ಸುಂದರರಾಮ ಪೈಯವರ ಕುಟುಂಬದ ದುಃಖದೊಡನೆ ಉಡುಪಿಯ ನಾಗರಿಕರು ಸಹಭಾಗಿಗಳಾಗುವರು. ಇಂತಹ ಆದರ್ಶ ಸಫಲ ಚರಿತ್ರರ ಪವಿತ್ರಾತ್ಮವು ಚಿರಶಾಂತಿಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ.

ಸಂಕ್ಷಿಪ್ತ ಸುದ್ದಿಗಳು

ಜಾನ್ ಮಥಾಯ್‌ಯವರ ನಿಧನ

ಸುವಿಖ್ಯಾತ ಆರ್ಥಿಕ ತಜ್ಞರಾಗಿದ್ದ ಡಾ| ಜಾನ್ ಮಥಾಯ್ ಅವರು ಲಿವರಿಗೆ ಸಂಬಂಧಿಸಿದ ಕೇನ್ಸರ ರೋಗದಿಂದಾಗಿ ತಮ್ಮ ೭೨ನೆಯ ವಯಸ್ಸಿನಲ್ಲಿ ನಿಧನರಾದರು. ದಿವಂಗತರು ವಕೀಲರಾಗಿ, ಸರಕಾರಿ ಅಧಿಕಾರಿಗಳಾಗಿ, ಅಧ್ಯಾಪಕರಾಗಿ ಸುಂಕಮಂಡಲದ ಅಧ್ಯಕ್ಷರಾಗಿ, ವ್ಯಾಪಾರ ವಿಜ್ಞಾನ ಹಾಗೂ ಅಂಕೆ ಸಂಖ್ಯೆಗಳ ಡೈರೆಕ್ಟರ ಜನರಲ್ ಆಗಿ, ದುಡಿದು ನಿವೃತ್ತರಾದರು. ತದನಂತರ, ಸ್ವತಂತ್ರ ಭಾರತದ ದ್ವಿತೀಯ ಅರ್ಥಮಂತ್ರಿಯಾಗಿ, ಕರ ವಿಚಾರಣಾ ಆಯೋಗದ ಅಧ್ಯಕ್ಷರಾಗಿ, ಮುಂಬಯಿ ಮತ್ತು ಕೇರಳ ವಿಶ್ವವಿದ್ಯಾಲಯಗಳ ಉಪಕುಲಪತಿಯಾಗಿ ಸ್ಟೇಟ್ ಬೇಂಕ್ ಆಫ್ ಇಂಡಿಯಾದ ಅಧ್ಯಕ್ಷರಾಗಿಯೂ ಕೆಲಸಮಾಡಿದ್ದರು ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿದ ಮುತ್ಸದ್ದಿಯೊಬ್ಬರಾದ ಮಥಾಯ್ ಅವರ ನಿಧನಕ್ಕಾಗಿ ಭಾರತೀಯರೆಲ್ಲರೂ ಶೋಕಿಸುವಂತಾಗಿದೆ.

ಪ್ರಾಥಮಿಕ ಶಾಲೆಗಳು ಸರಕಾರಕ್ಕೆ

ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯ ಜಿಲ್ಲಾ ಬೋರ್ಡು ಮತ್ತು ಸಣ್ಣ ಪಂಚಾಯತ ಬೋರ್ಡುಗಳು ನಡೆಸುತಿದ್ದ ಪ್ರಾಥಮಿಕ ಶಾಲೆಗಳ ಆಡಳಿತೆಯನ್ನು ಈಗ ನೇರವಾಗಿ ಸರಕಾರವೇ ವಹಿಸಿರುವದೆಂದು ಒಂದು ಆಜ್ಞೆಯನ್ನು ಮೈಸೂರು ಸರಕಾರ ಹೊರಡಿಸಿದೆ.

ದಹನಾಯಕೆಯವರಲ್ಲಿ ವಿಶ್ವಾಸ

ಸಿಂಹಳದ ಪ್ರಧಾನಿ ದಹನಾಯಕೆಯವರ ವಿರುದ್ಧವಾಗಿ ವಿರೋಧಿ ಪಕ್ಷಗಳ ಸದಸ್ಯರು ಪಾರ್ಲಿಮೆಂಟಿನಲ್ಲಿ ತಂದಿರುವ ಅವಿಶ್ವಾಸ ಗೊತ್ತುವಳಿಯನ್ನು ಸಿಂಹಳದ ಪಾರ್ಲಿಮೆಂಟು ತಿರಸ್ಕರಿಸಿತು. ಪ್ರಧಾನಿಯಾಗಿದ್ದ ದಿವಂಗತ ಭಂಡಾರ ನಾಯಕೆಯವರ ಕೊಲೆಯ ಕಟ್ಲೆಯನ್ನು ಸಮರ್ಪಕವಾದ ರೀತಿಯಲ್ಲಿ ಮುಂದುವರಿಸುವುದಕ್ಕೆ ಈ ಮಂತ್ರಿ ಮಂಡಳಿಯು ಅಧಿಕಾರದಲ್ಲಿದ್ದರೆ, ಆತಂಕವೊದಗುವುದು ಎಂದು ಮುಖ್ಯವಾಗಿ ಆರೋಪಗಳನ್ನು ಅವರ ಮೇಲೆ ಹೊರಿಸಲಾಗಿತ್ತು.

ಹಿಂದುಳಿದವರು ಯಾರು?

ಸಂವಿಧಾನದಲ್ಲಿ ಪರಿಶಿಷ್ಟ ವರ್ಗ ಮತ್ತು ಜನಾಂಗಗಳಿಗೂ ಅದೇ ಪರಿಸ್ಥಿತಿಯಲ್ಲಿರುವ ಇನ್ನು ಕೆಲವು ಜಾತಿಗಳಿಗೂ ವಿಶೇಷ ಸೌಲಭ್ಯಗಳನ್ನು ಒದಗಿಸಿ ಸರಕಾರಿ ನೌಕರಿಗೆ ಸೇರಿಸಿಕೊಳ್ಳುವಾಗ ಸ್ಥಳಗ

ಸ್ವರಾಷ್ಟ್ರ ರಕ್ಷಣೆ

ಭಾರತದ ಉತ್ತರಗಡಿಯಲ್ಲಿ ಚೀನೀಯ ಸೈನಿಕರು ಧಾಳಿಮಾಡಿ ಆಕ್ರಮಿಸುತ್ತಿರುವುದು ಜಗಜ್ಜನಿತವಿದೆ. ಇದರ ಬಗ್ಗೆ ಭಾರತ ಸರಕಾರವು ವಹಿಸಿದ್ದ ಧೋರಣೆಯು ತೀರಾ ಸೌಮ್ಯವಾಗಿದ್ದುದರಿಂದ ರಾಷ್ಟ್ರದ ಒಂದಂಶವು ಅಸಮಾಧಾನವನ್ನು ವ್ಯಕ್ತಪಡಿಸಿರುವುದೂ ಗೊತ್ತು. ರಾಜ್ಯಪಾಲರ ಸಮ್ಮೇಳನದಲ್ಲಿಯೂ ಚೀನಾ ಧಾಳಿಯ ಬಗ್ಗೆ ಆಸಕ್ತಿಯುತ ಚರ್ಚೆಯು ನಡೆದಿದ್ದು, ಭಾರತದ ವಿದೇಶ ನೀತಿಯಲ್ಲಿ ಚೀನದ ಬಗ್ಗೆ ವಹಿಸಿರುವ ಧೋರಣೆಯಲ್ಲಿ ಪರಿವರ್ತನೆಯಾಗ ಬೇಕೆಂಬುದಾಗಿಯೂ ಭಾರತ ಸೀಮಾರಕ್ಷಣೆಯ ಬಗ್ಗೆ ತೀವ್ರ ಕ್ರಮ ಕೈಗೊಳ್ಳಬೇಕೆಂದೂ ಸೂಚಿಸಿರಲೂ ಬಹುದು. ಜೇ| ಜ| ತಿಮ್ಮಯ್ಯನವರು ಸೇನೆಯು ಕೈಗೊಂಡಿರುವ ಕಾರ್ಯಕ್ರಮಗಳನ್ನು ಇಲ್ಲಿ ವಿವರಿಸಿದರೆಂದು ಗೊತ್ತಾಗಿದೆ. ಪ್ರಧಾನಿ ನೆಹರೂರವರೂ ಸರಕಾರವು ಯೋಗ್ಯ ಕಾರ್ಯಕ್ರಮವನ್ನು ವಹಿಸುವುದೆಂದೂ ಈ ಕಾರ್ಯಕ್ಕೆ ಸಾಕಷ್ಟು ಬಲ ನಮ್ಮಲ್ಲಿರುವುದೆಂದೂ ಹೇಳಿ. ಭಾರತ ಸರಕಾರವು ಕೈಗೊಂಡ ಕ್ರಮ ಏನೆಂದು ಬಹಿರಂಗಪಡಿಸಲಿಲ್ಲ. ರಾಜಕಾರಣದಲ್ಲಿ ಈ ವರ್ತನೆಯು ಚತುರತಾಪೂರ್ಣವೆಂದು ಹೇಳಬಹುದಾದರೂ ಈ ಬಗ್ಗೆ ಇಷ್ಟರಿಂದಲೇ ಭಾರತೀಯರು ತೃಪ್ತರಾಗಲು ಸಾಧ್ಯವಿಲ್ಲ. ನಿವೃತ್ತ ಮೇ| ಜ| ಕಾರಿಯಪ್ಪನವರು ಹೇಳುವಂತೆ ಈಗಾಗಲೇ ಬಹಳಷ್ಟು ಪ್ರದೇಶದಲ್ಲಿ ತಳವೂರಿರುವ ಚೀನೀಯರನ್ನು ಈಗಿಂದೀಗಲೇ ಹೊರ ತಳ್ಳುವ ಕಾರ್ಯವನ್ನು ಕೈಗೊಳ್ಳದೆ ಹೋದರೆ. ಮುಂದಕ್ಕೆ ಇನ್ನೂ ಮುಂದುವರಿದು ಬರುವ ಅವರನ್ನು ಅಷ್ಟು ಸುಲಭದಲ್ಲಿ ಓಡಿಸುವುದು ಅಸಾಧ್ಯವಾಗಬಹುದು, ಭಾರತ-ಚೀನಾಗಳ ಗಡಿಯನ್ನು ಮೀರಿ, ಭಾರತಕ್ಕೆ ಬಂದಿರುವ ಚೀನೀ ಸೇನೆಯನ್ನು, ಅದೂ ನೂರಾರು ಮೈಲುಗಳ ದೂರ!, ಹೊರಗೋಡಿಸುವುದು ರಾಷ್ಟ್ರ ಭದ್ರತೆಯಿಂದ ಅವಶ್ಯವಾದುದೆಂದವರ ಅಭಿಪ್ರಾಯ. ಪ್ರಧಾನಿ ನೆಹರು ಕೈಗೊಂಡಿರುವ ಮತ್ತು ಜೇ| ಜ| ತಿಮ್ಮಯ್ಯನವರು ರಾಜ್ಯಪಾಲರ ಸಭೆಯಲ್ಲಿ ವಿವರಿಸಿದ ಸೀಮಾರಕ್ಷಣೆಯ ಕಾರ್ಯಕ್ರಮ ಇದೇ ಆಗಿರಲೂ ಎಡೆಯಿರುವುದು ಇಂದಿನ ರಾಜಕಾರಣದಲ್ಲಿ ಸಾಧ್ಯವಿದೆ.

ಪ್ರಕಟಣೆ

ಉಡುಪಿ ಡಿ ಮು. ಕೋರ್ಟಿನಲ್ಲಿ

S. C. No 363/59.

ಉಡುಪಿ ಅದಮಾರು ಮಠದ ಶ್ರೀ ಕಾಳಿಯ ಮರ್ದನ ಶ್ರೀ ಕೃಷ್ಣ ದೇವರ ಟ್ರಸ್ಟಿ ಶ್ರೀ ವಿಭುದೇಶ ತೀರ್ಥ ಸ್ವಾಮಿಯವರು — ವಾದಿಯು.

ಮತ್ತು

ಮೆಣ್ಣ ಸೇರಿಗಾರ—ದೂಜಿ ಸೇರಿಗಾರನ ಅಳಿಯ—ಉಡುಪಿ ತಾಲ್ಲೂಕು ಪುಲ್ಲೂರ ಗ್ರಾಮ —ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲ್ಕ ತಿಳಿಯ ಪಡಿಸುವದೇನೆಂದರೆ —

ಮೇಲ್ಕಂಡ ಪ್ರತಿವಾದಿಯಿಂದ ಬರತಕ್ಕ ಬಾಲಗೇಣಿ ಬಾಕಿ ಅಸಲು ಬಡ್ಡಿಗೆ—ವಾದಿಯು ದಾಖಲು ಮಾಡಿದ—ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿಯು ಅಪ್ಪೆರೆನೋಟೀಸಿನ ಬಗ್ಗೆ ತಾ. 19-11-1959ಕ್ಕೆ ಇಡೋಣವಾಗಿಯದೆಂತಲೂ ಪ್ರತಿವಾದಿಗೆ—ಆಕ್ಷೇಪ ಹೇಳತಕ್ಕದ್ದು ಇದ್ರೆ ಆ ದಿವ್ಸ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಅಂತ ಸಹಾ ತಿಳಿಸೋಣವಾಗಿಯದೆ—

V. R. Kidiyoor.
Advocate for Plaintiff.

ಳನ್ನು ಇವರಿಗಾಗಿ ಕಾಯ್ದಿಡುವುದೇ ಹೊರತು ಭಡ್ತಿ ಕೊಡುವಾಗ ಅಲ್ಲ. ಮುಂಬಯಿಯಲ್ಲಿ ವಾರ್ಷಿಕ ರೂ. ೯೦೦ಕ್ಕಿಂತ ಕಡಿಮೆ ಆದಾಯವಿರುವವರು ಹಿಂದುಳಿದವರೆಂದು ಜಾರಿಯಲ್ಲಿದೆ. ಕೇಂದ್ರ ಸರಕಾರವು ಜಾತಿಯನ್ನು ಬಿಟ್ಟು ಉಳಿದ ಯಾವುದಾದರೊಂದು ವಿಧಾನದಲ್ಲಿ ಹಿಂದುಳಿದವರ ವರ್ಗಗಳನ್ನು ವರ್ಗೀಕರಿಸಬಹುದೆಂದು ರಾಜ್ಯ ಸರಕಾರಗಳ ಸಲಹೆ ಕೇಳಿದೆ, ಮತ್ತು ಕ್ರಮೇಣ ಯೋಗ್ಯ ನಿರ್ಧಾರವನ್ನು ಕೈಗೊಳ್ಳುವ ನಿರೀಕ್ಷೆಯಿದೆ.

ಪಾವಟೆಯವರ ವಜ್ರಮಹೋತ್ಸವ

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಡಿ. ಸಿ. ಪಾವಟೆಯವರ ವಜ್ರಮಹೋತ್ಸವವು ಧಾರವಾಡದಲ್ಲಿ ನವಂಬರ ೭ನೇ ತಾರೀಕು ನಡೆಯಲಿದ್ದು, ಆ ಸಮಾರಂಭದಲ್ಲಿ ಅವರಿಗೊಂದು ಅಭಿನಂದನಾ ಪತ್ರವನ್ನೂ ೧| ಲಕ್ಷ ರೂಪಾಯಿಗಳ ನಿಧಿಯನ್ನೂ ಅರ್ಪಿಸಲಾಗುವುದು. ಈ ನಿಧಿಯನ್ನು ವಜ್ರಮಹೋತ್ಸವದ ವೆಚ್ಚ ಸುಮಾರು ರೂ. ೫ ಸಾವಿರವನ್ನುಳಿದು ಉಳಿದ ಹಣವನ್ನು ವಿಶ್ವವಿದ್ಯಾಲಯದಲ್ಲಿ ಬಹುಮಾನ ಮತ್ತು ಪದಕಗಳನ್ನು ಸ್ಥಾಪಿಸಲು ಬಳಸಲಾಗುವುದೆಂದೂ ಉತ್ತರ ಕರ್ನಾಟಕದ ಸಹಕಾರಿ ಬೇಂಕುಗಳಿತ್ತಿರುವ ನಿಧಿಯಿಂದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಹಕಾರ ತತ್ವದ ಬಗ್ಗೆ ಪ್ರತ್ಯೇಕ ಪೀಠವೊಂದನ್ನು ಸ್ಥಾಪಿಸುವ ವಿಚಾರವಿದೆಯೆಂದೂ ತಿಳಿಯುತ್ತದೆ. ಈ ಉತ್ಸವದಲ್ಲಿ ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿ ಭಾಗವಹಿಸುವರು.

ನೀರಾವರಿಗೆ ಪ್ರಾಧಾನ್ಯ

ಮೈಸೂರು ರಾಜ್ಯವು ರೂಪುಗೊಂಡ ನಂತರದ ಮೊದಲ ಯೋಜನೆಯಾಗಿ ತೃತೀಯ ಪಂಚವಾರ್ಷಿಕ ಯೋಜನೆಯ ಕರಡು ಈಗ ಸಿದ್ಧವಾಗಿದ್ದು ಇದರಲ್ಲಿ ೨೭೫ ಕೋಟಿ ರೂಪಾಯಿಗಳ ವೆಚ್ಚವನ್ನು ತೋರಿಸಲಾಗಿದೆ. ಈ ಮೊತ್ತದಲ್ಲಿ ರೂ. ೬೦ ಕೋಟಿ ನೀರಾವರಿ ಮತ್ತು ರೂ ೫೦ ಕೋಟಿ ವಿದ್ಯುಚ್ಛಕ್ತಿಗಾಗಿ ಮೀಸಲಿಡಲಾಗುವುದು. ಪ್ರತಿಯೊಂದು ಹಳ್ಳಿಗೂ ಒಂದು ಕುಡಿಯುವ ನೀರಿನ ಬಾವಿ, ಒಂದು ಶಾಲೆ ಮತ್ತು ಆ ಹಳ್ಳಿಗೆ ಹೋಗಲು ಒಂದು ರಸ್ತೆಯನ್ನೂ ನಿರ್ಮಿಸುವ ಮತ್ತು ಒಂದು ಹಳ್ಳಿಯಲ್ಲಿ ಕನಿಷ್ಠ ಒಂದಾದರೂ ಕೃಷಿ ಸೇವಾ ಸಂಘ ಸ್ಥಾಪಿಸುವ ಗುರಿಯನ್ನಿಟ್ಟುಕೊಂಡು ಈ ಯೋಜನೆಯ ಕರಡನ್ನು ರೂಪಿಸಲಾಗಿದೆ

ಅಲ್ಲಲ್ಲಿಯ ಸುದ್ದಿ ಸಾರ

ಈ ಮೂರು ಮಹಾರೋಗಗಳಿಂದ ನಿಮ್ಮ ಮಕ್ಕಳನ್ನು ಕಾಪಾಡಿರಿ— ಹೆಚ್ಚಾಗಿ ಚಿಕ್ಕ ಮಕ್ಕಳನ್ನೇ ಬಲಿ ತೆಗೆದುಕೊಳ್ಳುತ್ತಿರುವ ಮೂರು ಕಾಯಿಲೆಗಳೆಂದರೆ ಕಂಠನಾಳ ರೋಗ (ಡಿಫ್ತೀರಿಯಾ) ಧನುರ್ವಾತ (ಟಿಟೆನಸ್) ಮತ್ತು ನಾಯಿಕೆಮ್ಮು (ವೂಫಿಂಗ್ ಕಾಫ್) ಇಂತಹ ಭಯಂಕರ ಅಂಟು ರೋಗಗಳು ಬಂದು ಮಕ್ಕಳನ್ನು ಪೀಡಿಸುವ ಮೊದಲೇ ಅವುಗಳು ಬಾರದಂತೆ ತಡೆಗಟ್ಟಲು ಈಗಾಗಲೇ ವೈದ್ಯಕೀಯ ಸಂಶೋಧನೆಗಳಾಗಿವೆ. ಅದರ ಪರಿಣಾಮವಾಗಿ ಮೂರು ದಾಕುಗಳು (ಟ್ರಿಪಲ್ ವೆಕ್ಸಿನ್) ಎಂಬುದಾಗಿ ಒಂದು ಚಿಕಿತ್ಸಾಕ್ರಮವು ಈಗ ಬಳಕೆಯಲ್ಲಿದೆ. ಇಂತಹ ಕ್ರಮವನ್ನು ಇದೀ ನಗರದಲ್ಲಿಯೇ ಕಾರ್ಯಾಚರಣೆಗೆ ತರಬೇಕೆಂದು ಈಗಾಗಲೇ ಉಡುಪಿ ನಗರ ಸಭೆಯು ನಿರ್ಧಾರ ಮಾಡಿದೆ. ಆದರೆ ಈ ಚಿಕಿತ್ಸೆ ನಡೆಯಿಸಲು ಹಣದ ಅಭಾವವು ಒಂದು ಕಡೆ ತಲೆಯೆತ್ತಿರುವುದರಿಂದ ನಮ್ಮ ಅಲ್ಪ ಆದಾಯದ ಚಿಕ್ಕ ಮುನ್ಸಿಪಾಲಿಟಿಯಲ್ಲಿ ಅಷ್ಟೊಂದು ನಿಧಿಯನ್ನು ಮಂಜೂರು ಮಾಡುವ ಅವಕಾಶವಿಲ್ಲ. ಆದುದರಿಂದ ನಗರ ನಿವಾಸಿಗಳೂ ನಗರ ಸಭೆಯೂ ಪರಸ್ಪರ ಸಹಕರಿಸಿಕೊಂಡು ಇಂತಹ ಯೋಗ್ಯವಾದುದೊಂದು ಚಿಕಿತ್ಸಾ ಕ್ರಮವನ್ನು ನಡೆಯಿಸುವುದರಿಂದ ನಮ್ಮೆಲ್ಲರ ಹಿತಚಿಂತನೆಯಿದೆ.

ಇದರ ಸಲುವಾಗಿ ಇದೇ ತಾ. 7—11—1959ನೇ ಶನಿವಾರ ರಾತ್ರಿ 9—30ಕ್ಕೆ ಉಡುಪಿ ನಾಟ್ಯಕೂಟದವರು ನುರಿತ ಕಲಾವಿದರ, ಅರಿತ ಅಭಿನಯದ ಪರಮ ಪವಿತ್ರ ಚಾರಿತ್ರಿಕ ಹಿನ್ನೆಲೆಯ ದ್ವಿಜೇಂದ್ರ ಲಾಲ್ ರವರ ಅನುರಕ್ತಿ

ಸಾಮ್ರಾಟ್ ಷಾಜಹಾನ್

ನಾಟಕವನ್ನು ಸ್ಥಳೀಯ ಶ್ರೀ ಮಹೇಂದ್ರ ಕಲಾಮಂದಿರದಲ್ಲಿ ಇಂಡಿಯನ್ ಮೆಡಿಕಲ್ ಅಸೋಸಿಯೇಶನಿನ ಉಡುಪಿ ಶಾಖೆಯ ಆಶ್ರಯದಲ್ಲಿ ಅಭಿನಯಿಸುವರು. ನಾಟ್ಯರಂಗದಲ್ಲಿ ಷಾಜಹಾನ್ ನಾಟಕಕ್ಕೊಂದು ಸ್ಥಾನವಿದೆ. ಚರಿತ್ರೆಯಲ್ಲಿ ಈ ಕಥೆಗೊಂದು ವೈಶಿಷ್ಟ್ಯವಿದೆ ಇದನ್ನು ಅಭಿನಯಿಸುವವರಲ್ಲಿ ಅತ್ಯುಚ್ಚ ಕಲಾಕೌಶಲ್ಯವಿದೆ.

ಇದನ್ನು ನೋಡುವ ತಮ್ಮಲ್ಲಿ ವಿಶಾಲ ಹೃದಯವಿದೆ, ಸರಸವಿದೆ, ಸಂತೃಪ್ತಿಯಿದೆ ಉದಾರ ಬುದ್ಧಿಯಿದೆ ಸಹಕರಿಸಿರಿ. ಟಿಕೇಟಿನ ದರ ರೂ. 10.00, 5.00, 3.00

ಅಧ್ಯಕ್ಷ, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಉಡುಪಿ ಶಾಖೆ.

ಅಮೇರಿಕದ ಜನಸಾಮಾನ್ಯರು– ಈ ಕುರಿತು ಯು. ಎಸ್. ಐ. ಎಸ್. ನವರು ಚಿತ್ರ ಮತ್ತು ಚಲಚಿತ್ರವನ್ನು ಕಳೆದ ತಾ 30ರಲ್ಲಿ ಉಡುಪಿ ಎಂ. ಜಿ. ಎಮ್ ಕಾಲೇಜಿನಲ್ಲಿ ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಪ್ರದರ್ಶಿಸಿದರು. ಇದನ್ನು ಶ್ರೀ ಟಿ ಎ. ಪೈಗಳು ಉದ್ಘಾಟಿಸುತ್ತಾ ಅಮೆರಿಕನರು ಇತರರಿಗೆ ನೀಡುವ ಸಹಕಾರವನ್ನು ಪ್ರಶಂಸಿಸಿ, ಇಲ್ಲಿಯ ಕಾಲೇಜುಗಳ ಕುರಿತು ಅವರು ವಹಿಸಿರುವ ಆಸಕ್ತಿಯನ್ನು ವಿವರಿಸಿ, ಡಾ. ಟಿ. ಎಂ. ಎ. ಪೈಗಳಿಗೆ ಮಿಯಾಮಿ ನಗರಾಧಿಪತಿಗಳು ನೀಡಿದ ಅಭೂತಪೂರ್ವ ಸ್ವಾಗತವನ್ನು ಪ್ರಸ್ತಾಪಿಸಿದರು. ಆರಂಭದಲ್ಲಿ ರೋಟರಿಕ್ಲಬ್ಬಿನ ಉಪಾಧ್ಯಕ್ಷ ಡಾ. ಸುಂದರ ರಾಮ ಪೈಗಳು ಸ್ವಾಗತ ಭಾಷಣ ಮಾಡಿದರು. ಮಿ| ಕ್ಲೆಟನ್ನರು ಎಲ್ಲೆಡೆಯೂ ವಿದ್ಯಾ ಚಟುವಟಿಕೆಗಳು ಅಮೇರಿಕನರಲ್ಲಿ ಒಳ್ಳೆಯ ಅಭಿಪ್ರಾಯವನ್ನುಂಟುಮಾಡಿರುವುದೆಂದು ಹೇಳಿ ಪ್ರದರ್ಶನದ ಉದ್ದೇಶಗಳನ್ನು ನಿರೂಪಿಸಿದರು. ಬಳಿಕ ಚಲಚಿತ್ರಪ್ರದರ್ಶನ ನಡೆಯಿತು.

ರೆಡ್‌ಕ್ರಾಸ್ ಸೊಸೈಟಿಯ ಉಡುಪಿ ಶಾಖೆಯ ಸಭೆಯು— ಕಳೆದ ತಾ. 30ರಲ್ಲಿ ಶ್ರೀಮತಿ ಮೀನಾ ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಯದರ್ಶಿ ಡಾ ಅನಂತರಾಯರು ರೆಡ್‌ಕ್ರಾಸ್ ಸೊಸೈಟಿಯಿಂದ ಬಂದಿದ್ದ ಸದಸ್ಯರ ಚಂದಾ ಮತ್ತು ಹಣ ಸಂಗ್ರಹದ ಕುರಿತಾದ ಪತ್ರವನ್ನು ಓದಿದರು. ಬಳಿಕ ನಿಧಿ ಸಂಗ್ರಹಕ್ಕಾಗಿ ಉಪಸಮಿತಿಯೊಂದು ರಚಿಸಲ್ಪಟ್ಟಿತು.

ಆರೋಗ್ಯ ಸಚಿವ ಡಾ. ಕೆ. ಕೆ. ಹೆಗ್ಡೆಯವರು ಕಳೆದ ತಾ. 26ನೇ ಸಂಜೆ ಉಡುಪಿಗೆ ಆಗಮಿಸಿ ಪೋರ್ಟ್‌ಲೆಂಡ್ ಬಂಗ್ಲೆಯಲ್ಲಿ ಸಾರ್ವಜನಿಕರಿಗೆ ಭೇಟಿಯಿತ್ತರು ನಗರ ಸಭಾಪತಿ ಡಾ ಕೆ. ಎಲ್. ಐತಾಳ, ಶ್ರೀ ಯು. ಎಸ್. ನಾಯಕ್, ಎಂ. ಎಲ್. ಎ., ಮೊದಲಾದವರು ಉಡುಪಿಯ ಕೆಲವು ಆವಶ್ಯಕತೆಗಳ ಕುರಿತು ಮಾತುಕತೆ ನಡೆಸಿದರು. ಡಾ. ಹೆಗ್ಡೆಯವರು ಮಣಿಪಾಲದಲ್ಲಿ ಶ್ರೀ ಟಿ. ಎ. ಪೈಗಳು ಏರ್ಪಡಿಸಿದ ಸತ್ಕಾರಕೂಟದಲ್ಲಿ ಭಾಗವಹಿಸಿ ಶ್ರೀಕೃಷ್ಣ ದರ್ಶನವನ್ನು ಮಾಡಿ ಮರುದಿನ ಹಿಂತೆರಳಿದರು.

ಸ್ವದೇಶಾಗಮನ— ಅಮೆರಿಕಕ್ಕೆ ತೆರಳಿದ್ದ ಡಾ| ಟಿ. ಎಂ. ಎ ಪೈಗಳು ತಾ. 3ನೇ ಬೆಳಿಗ್ಗೆ ಉಡುಪಿಗೆ ಸುಖವಾಗಿ ಬಂದಿರುವರು. ಬಜ್ಪೆ ವಿಮಾನ ನಿಲ್ದಾಣದಲ್ಲಿ ಡಾ| ಪೈಗಳನ್ನು ನೂರಾರು ಸನ್ಮಿತ್ರರೂ ಮೆಡಿಕಲ್ ವಿದ್ಯಾರ್ಥಿಗಳೂ ಸ್ವಾಗತಿಸಿ ಹಾರ ತುರಾಯಿಗಳನ್ನರ್ಪಿಸಿ ಗೌರವಾದರ ಸೂಚಿಸಿದರು

ಹರಿಜನ ದಿನಾಚರಣೆ— ಮಲ್ಪೆಯ ಹರಿಜನ ಮಂದಿರದಲ್ಲಿ ತಾ, 25.10.59 ರಂದು ಉಡುಪಿ ತಹಶೀಲ್ದಾರ್ ಶ್ರೀ ಕೆ. ಕೊರಗಪ್ಪ, ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಹರಿಜನ ದಿನಾಚರಣೆಯು ಆಚರಿಸಲ್ಪಟ್ಟಿತು. ಅಧ್ಯಕ್ಷರು ತಮ್ಮ ಮುನ್ನುಡಿಯಲ್ಲಿ 1959-60ನೇ ವರ್ಷದಲ್ಲಿ ಹರಿಜನ ಹಾಗೂ ಗಿರಿಜನರ ಅಭಿವೃದ್ಧಿಗಾಗಿ ಸರಕಾರದಿಂದ ಮಂಜೂರಾದ ಯೋಜನೆಗಳನ್ನು ತಿಳಿಸಿದರು. ಸಭಿಕರಲ್ಲಿ ಶ್ರೀಗಳಾದ ಯು. ರಾಮಚಂದ್ರ, ಎಂ. ಸುಂದರ, ಬಿ ಸುಂದರ ಇವರು ಹರಿಜನರ ಅಭಿವೃದ್ಧಿಗಾಗಿ ಕೆಲವು ಸೂಚನೆಗಳನ್ನಿತ್ತರು) ವೆಲ್‌ಫೇರ್ ಇನ್ಸ್‌ಪೆಕ್ಟರ್ ಶ್ರೀ. ಬಿ. ಭಾಸ್ಕರಾಚಾರ್ಯರು ಪ್ರಾಚೀನ ಕಾಲದಲ್ಲಿ ಅಸ್ಪೃಶ್ಯ ಜಾತಿಯು ಇರಲಿಲ್ಲವೆಂತಲೂ, ಪುರಾಣ ಕಾಲದಿಂದೀಚೆಗೆ ಜಾತೀಯತೆಯ ವಿಷದ ಬೀಜವು ಬೆಳೆಯಿತೆಂದೂ ಹೇಳಿ ಹರಿಜನರ ವಿದ್ಯಾಸೌಕರ್ಯಗಳನ್ನು ವಿವರಿಸಿದರು. ಅಧ್ಯಕ್ಷರು ಈ ದಿನಾಚರಣೆಯ ಮಹತ್ವ ಉದ್ದೇಶಗಳನ್ನು ವಿವರಿಸಿ ಸಾರ್ವಜನಿಕರ ಸಹಕಾರಗಳನ್ನು ಕೋರಿ ಧನ್ಯವಾದಗಳನ್ನರ್ಪಿಸಿದರು.

ಕಡಿಯಾಳಿ— ಹಿರಿಯ ಬುನಾದಿ ಶಾಲೆಯ ಸಂಯುಕ್ತ ವಾಗ್ವರ್ಧಿನಿ ಸಭೆಯು ಕಳೆದ ತಾ. 29ರಂದು ಶ್ರೀ. ಬನ್ನಂಜೆ ಗೋವಿಂದಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತಿಸಿದರು ಮನರಂಜನೆಯ ಕಾರ್ಯಕ್ರಮಗಳಾದ ಬಳಿಕ ಯಂತ್ರ ಕೈಗಾರಿಕೆ ಮತ್ತು ಗುಡಿಕೈಗಾರಿಕೆ ಎಂಬ ವಿಷಯದಲ್ಲಿನ ಚರ್ಚೆಯಲ್ಲಿ ವಿದ್ಯಾರ್ಥಿಗಳು ಭಾಗ ವಹಿಸಿದರು. ನಂತರ ಶಾಲಾ ಸರಕಾರದ ಪಾರ್ಲಿಮೆಂಟಿನ ಅಧಿವೇಶನವು ಜರಗಿ ಪ್ರಶ್ನೋತ್ತರಗಳಾದುವು. ಅಧ್ಯಕ್ಷರ ಭಾಷಣದ ಬಳಿಕ ಸಭಾಂತ್ಯವಾಯಿತು

ನಿಧನ— ಕುಕ್ಕೆಹಳ್ಳಿ ದೊಡ್ಡಬೀಡು ಜೊನ್ನಯ್ಯ ಹೆಗ್ಡೆಯವರು ತಾ. 11 10—59 ನೆಯ ರಾತ್ರಿ ತಮ್ಮ 80ನೆಯ ವಯಸ್ಸಿನಲ್ಲಿ ನಿಧನರಾದುದು ವಿಷಾದಕರವಿದೆ.

"Dust to the dust! But the pure spirit shall flow back to the burning fountain whence it came, a portion of the eternal."

IN MEMORIAM

DR. U. SUNDER RAM PAI, *M B., & B. S.,*

Chairman,

CANARA BANKING CORPORATION LIMITED

(1-1-1935 —— 31—10—1959)

Born on 17–10–1897

Died on 31–10–1959

Inserted by

The Canara Banking Corporation Limited

(Estd. 1906)

HEAD OFFICE: **UDIPI, S. I.**

ಪ್ರಗತಿ ಪಥ

ಗಾಜು ಮತ್ತು ಸಿರಾಮಿಕ್ ತಯಾರಿಕೆ

ವಿದೇಶ ವಿನಿಮಯಗಳನ್ನು ಉಳಿಸುವಲ್ಲಿ, ದೇಶೀಯ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವಲ್ಲಿ ಕೇಂದ್ರ ಗಾಜು ಮತ್ತು ಸಿರಮಿಕ್ ಸಂಸ್ಥೆ ಉಲ್ಲೇಖಾರ್ಹ ಪಾತ್ರ ವಹಿಸಿದೆ.

ದೆಹಲಿಯಲ್ಲಿ ನಡೆದ "ಭಾರತ—೧೯೫೫" ಪ್ರದರ್ಶನದಲ್ಲಿ ವಿಜ್ಞಾನದ ವಿಭಾಗದಲ್ಲಿ ಎಲ್ಲರ ಗಮನವನ್ನು ಸೆಳೆಯುತ್ತಿದ್ದ ಒಂದು ವಸ್ತುವೆಂದರೆ ಕನ್ನಡಕಗಳಿಗೆ ಬಳಸುವ ಗಾಜಿನ ಆ ಒಂದು ತುಂಡು; ಶುಭ್ರವಾಗಿ ಹೊಳೆಯುತ್ತಿದ್ದ ಈ ತುಂಡು ಒಂದು ದೊಡ್ಡ ಸೈಜಿನ ವಜ್ರವೋ ಅಥವಾ ಆಕಾಶದಿಂದ ಕಳಚಿ ಬಿದ್ದಿರುವ ಒಂದು ನಕ್ಷತ್ರವೋ ಎಂಬ ಕುತೂಹಲವನ್ನು ಕೆರಳಿಸುತ್ತಿತ್ತು.

ಜನಸಾಮಾನ್ಯರಿಗೆ ಈ ಹೊಳಪು ಮುಖ್ಯವಾಗಿದ್ದರೆ ಈ ವಸ್ತು ಬೇರೊಂದು ದೃಷ್ಟಿಯಿಂದಲೇ ಇತರರ ಗಮನವನ್ನು ಸೆಳೆಯುತ್ತಿತ್ತು. ಭಾರತದಲ್ಲಿ ಕನ್ನಡಕಗಳನ್ನು ತಯಾರಿಸುವ ಕಾರ್ಯದಲ್ಲಿ ಈ ಗಾಜಿನ ವಸ್ತು ಒಂದು ಪ್ರಮುಖ ಹೆಜ್ಜೆಯನ್ನು ಸೂಚಿಸುತ್ತಿತ್ತು. ಭಾರತದಲ್ಲಿ ಪ್ರಪ್ರಥಮ ಬಾರಿಗೆ ಕನ್ನಡಕದ ಗಾಜಿನ ತಯಾರಿಕೆ ಸಾಧ್ಯವಿತ್ತು!

ಈ ಮಹತ್ಸಾಧನೆಯ ಕೀರ್ತಿ ಭಾರತದಲ್ಲಿ ಪ್ರಮುಖ ರಾಷ್ಟ್ರೀಯ ಪ್ರಯೋಗಶಾಲೆಗಳ ಪೈಕಿ ಒಂದಾದ "ಸೆಂಟ್ರಲ್ ಗ್ಲಾಸ್ ಅಂಡ್ ಸಿರಾಮಿಕ್ಸ್ ಇನ್‌ಸ್ಟಿಟ್ಯೂಟ"ಗೆ ಸಲ್ಲುತ್ತದೆ.

ಕಲ್ಕತ್ತೆಯ ಉಪನಗರವಾದ ಜಾಧವ್‌ಪುರದಲ್ಲಿ ಈ ಸಂಸ್ಥೆ ೧೯೫೦ರಲ್ಲಿ ಸ್ಥಾಪಿತವಾಯಿತು. ಭಾರತದಲ್ಲಿ ಗಾಜು ಮತ್ತು ಸಿರಾಮಿಕ್‌ಗಳ ಕೈಗಾರಿಕೆ ಬೆಳೆಯಲು ಇದು ಸಲ್ಲಿಸುತ್ತಿರುವ ಸೇವೆ ಅಪಾರವಾದುದು. ಇತ್ತೀಚೆಗೆ ಈ ವಸ್ತುಗಳ ಬೇಡಿಕೆ ಭಾರತದಲ್ಲಿ ಹೆಚ್ಚುತ್ತಿದೆ. ಪ್ರತಿ ವರ್ಷ ಭಾರತದಲ್ಲಿ ೩·೫ ಕೋಟಿ ರೂ.ಗಳ ಬೆಲೆ ಬಾಳುವ ಗಾಜಿನ ಸಾಮಾನುಗಳೂ ೧·೩ ಕೋಟಿಗಳಷ್ಟು ಬೆಲೆ ಬಾಳುವ ಪಿಂಗಾಣಿ ಹಾಗೂ ಬಿಳಿಮಣ್ಣಿನ ಸಾಮಾನುಗಳೂ ತಯಾರಾಗುತ್ತಿವೆ. ಇಷ್ಟಾದರೂ ಜನರ ಬೇಡಿಕೆಯನ್ನು ಸಂಪೂರ್ಣ ಪೂರೈಸಲು ಸಾಧ್ಯವಾಗುತ್ತಿಲ್ಲ. ಅಂತೆಯೇ ಈ ಕೈಗಾರಿಕೆಯ ಬೆಳವಣಿಗೆಗೆ ವಿಶೇಷ ಗಮನ ಕೊಡಬೇಕಾದ ಅಗತ್ಯ ಕಂಡುಬರುತ್ತಿದೆ. ಸಿರಾಮಿಕ್ ಇನ್‌ಸ್ಟಿಟ್ಯೂಟಿನಲ್ಲಿ ನಡೆಯುತ್ತಿರುವ ವಿಶೇಷ ಪ್ರಯೋಗಗಳು ಮತ್ತು ಸಂಶೋಧನೆಗಳು ಈ ದೃಷ್ಟಿಯಿಂದ ತುಂಬಾ ಪ್ರಯೋಜನಕಾರಿ.

ಈ ಪ್ರಯೋಗ ಶಾಲೆಯಲ್ಲಿ ನಡೆಯುತ್ತಿರುವ ಕೆಲಸದ ಪ್ರಾಮುಖ್ಯ ಹಾಗೂ ಅದರಿಂದ ಕೈಗಾರಿಕೆಗೆ ಆಗುತ್ತಿರುವ ಪ್ರಯೋಜನ ತಿಳಿಯಲು ಇತ್ತೀಚಿನ ಎರಡು ನಿದರ್ಶನಗಳನ್ನು ತೆಗೆದುಕೊಂಡರೆ ಸಾಕು.

ಕೆಂಪು ಬಳೆಗಳನ್ನು ತಯಾರಿಸುವ ಗೃಹ ಕೈಗಾರಿಕೆ ಭಾರತದಲ್ಲಿ ತುಂಬಾ ಪುರಾತನವಾದುದು; ಉತ್ತರ ಪ್ರದೇಶದ ಫಿರೋಜಾಬಾದಿನಲ್ಲಂತೂ ಇದೊಂದು ದೊಡ್ಡ ಗೃಹ ಕೈಗಾರಿಕೆ. ವರ್ಷಕ್ಕೆ ಈ ಕೈಗಾರಿಕೆ ಮೂರರಿಂದ ನಾಲ್ಕು ಕೋಟಿಯಷ್ಟು ರೂಪಾಯಿ ಆದಾಯ ಕೊಡುತ್ತದೆ, ೭೦ ಸಹಸ್ರಕ್ಕೂ ಹೆಚ್ಚು ಜನ ಇದನ್ನು ಆಶ್ರಯಿಸಿ ಜೀವಿಸುತ್ತಿದ್ದಾರೆ. ಇತ್ತೀಚಿನವರೆಗೂ "ಸಲಿನಿಯಂ" ಎಂಬ ಒಂದು ರಸಾಯನಿಕ ವಸ್ತು ಈ ಉದ್ಯಮಕ್ಕೆ ಒಂದು ಮುಖ್ಯ ಅವಶ್ಯಕತೆಯಾಗಿತ್ತು. ಬಳೆಗಳಿಗೆ ಕೆಂಪು ಬಣ್ಣ ಕೊಡುವ ಈ ವಸ್ತು ಫಿರೋಜಾಬಾದಿನಲ್ಲಿ ಪ್ರತಿವರ್ಷ ೧೫ ಲಕ್ಷ ರೂಗಳ ಬೆಲೆ ಬಾಳುವಷ್ಟು ಪ್ರಮಾಣದಲ್ಲಿ ಇಂದು ಬಳಕೆಗೆ ಬರುತಿತ್ತು. ಕೈಗಾರಿಕೆಗೆ ಇದರ ಪೂರೈಕೆಯೇ ಒಂದು ದೊಡ್ಡ ಕೊರೆಯಾಗಿತ್ತಲ್ಲದೆ ಹೊರದೇಶಗಳಿಂದ ಇದನ್ನು ತರಿಸಿಕೊಳ್ಳಲು ವಿದೇಶಿ ವಿನಿಮಯದ ಮೂಲಕ ಸಹ ಒಂದು ದೊಡ್ಡ ಹೊರೆಯಾಗಿತ್ತು.

ಈ ಸಮಸ್ಯೆ ಸಿರಾಮಿಕ್ ಇನ್‌ಸ್ಟಿಟ್ಯೂಟಿನ ಪರಿಶೀಲನೆಗೆ ಬಂತು. ಹೊರದೇಶಗಳಿಂದ ತರಿಸಬೇಕಾಗಿರುವ ಈ ವಸ್ತುವಿಗೆ ಬದಲಾಗಿ ನಮ್ಮ ದೇಶದಲ್ಲಿಯೇ ಈ ಗುಣವುಳ್ಳ ಇನ್ನೊಂದು ವಸ್ತು ಸಿಗದೇ ಎಂಬುದೇ ಮುಖ್ಯ ಪ್ರಶ್ನೆಯಾಯಿತು. 'ಸೆಲಿನಿಯಂ' ಗೆ ಬದಲಾಗಿ ಬೇರೊಂದು ವಸ್ತುವನ್ನು ಹುಡುಕಲು ಪ್ರಯೋಗಗಳು ನಡೆದುವು. ಆವರೆ ಯಶಸ್ಸು ದುರ್ಲಭವೆನಿಸತೊಡಗಿತು. ಯಾವ ಪ್ರಯೋಗದಿಂದಲೂ 'ಸೆಲಿನಿಯಂ' ಸಹಾಯದಿಂದ ಕೊಡಬಹುದಾಗಿದ್ದ ಬಣ್ಣ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಎಡೆಬಿಡದೆ ನಡೆದ ಪ್ರಯತ್ನಗಳ ಫಲವಾಗಿ ಕೊನೆಗೆ ಒಂದು ಪ್ರಯೋಗ ತುಂಬಾ ಆಶಾಜನಕವಾಯಿತು. ತಾಮ್ರವನ್ನು ಬಣ್ಣ ಕೊಡುವ ಕಾರ್ಯಕ್ಕೆ ಉಪಯೋಗಿಸಿದ ಪ್ರಯತ್ನ ಸಫಲವಾಯಿತು. ಈ ಪ್ರಯೋಗದ ಫಲವಾಗಿ ವಿದೇಶಿ ವಿನಿಮಯದ ಪ್ರಶ್ನೆ ಬಗೆಹರಿದ ಜೊತೆಗೆ ಕಡಿಮೆ ವೆಚ್ಚದಲ್ಲಿ ಕೆಂಪು ಬಳೆಗಳ ತಯಾರಿಕೆ ಸಾಧ್ಯವಾಗಿದೆ. ಫಿರೋಜಾಬಾದಿನ ಗೃಹ ಕೈಗಾರಿಕೆ ಇದೀಗ ಈ ಪ್ರಯೋಗವನ್ನು ರೂಢಿಸಿಕೊಂಡಿದೆ. ಗಾಜಿನ ವಸ್ತುಗಳ ತಯಾರಿಕೆಯಲ್ಲಿ ಈ ಪ್ರಯೋಗ ತುಂಬಾ ಪ್ರಯೋಜನಕಾರಿಯಾಗಿ ಫಲಿಸಿವೆ.

ಇದು ಹಳೆಯ ಒಂದು ಕೈಗಾರಿಕೆಗೆ ದೊರೆತ ಪ್ರೋತ್ಸಾಹದ ಮಾತಾಯಿತು. ಇಲ್ಲಿನಡೆಯುವ ಪ್ರಯೋಗಗಳು ಭಾರತದಲ್ಲೀಗ ಒಂದು ಹೊಸ ಕೈಗಾರಿಕೆಯ ಸ್ಥಾಪನೆಗೆ ಹೇಗೆ ಸಹಾಯಕವಾಗಿದೆ, ಎಂಬುದಕ್ಕೆ ರಾಜಸ್ಥಾನದ ಭಿಲ್ವಾರಾದಲ್ಲಿ ಸ್ಥಾಪಿತವಾಗಿರುವ ಅಭ್ರಕದ-ಇಟ್ಟಿಗೆಗಳ ತಯಾರಿಕೆಯ ಕಾರ್ಖಾನೆ ಒಂದು ನಿದರ್ಶನ.

ಕೈಗಾರಿಕಾ ಕುಲುಮೆಗಳಲ್ಲಿ ಶಾಖವನ್ನು ಸಂಗ್ರಹಿಸುವುದಕ್ಕೆ ಈ ಇಟ್ಟಿಗೆಗಳು ತುಂಬಾ ಪ್ರಯೋಜನಕಾರಿ. ಈ ತನಕ ಇಂತಹ ಶಾಖ—ಸಂಗ್ರಹ ಗುಣವುಳ್ಳ ಇಟ್ಟಿಗೆಗಳ ತಯಾರಿಕೆಗೆ ವಿದೇಶಗಳಿಂದ ಆಯಾತವಾಗುತ್ತಿದ್ದ 'ವೆರ್ಮಿಕ್ಯುಲೈಟ್' ಉಪಯೋಗಕ್ಕೆ ಬರುತ್ತಿತ್ತು. ಅಭ್ರಕದ ಇಟ್ಟಿಗೆಗಳ ತಯಾರಿಕೆ ಇದೀಗ ಸಾಧ್ಯವಾಗಿರುವುದರಿಂದ ನಮ್ಮ ದೇಶದಲ್ಲಿ ಸ್ಥಾಪಿತವಾಗುತ್ತಿರುವ ಉಕ್ಕಿನ ಕಾರ್ಖಾನೆಗಳಿಗೆಲ್ಲ ಅವುಗಳನ್ನೇ ಬಳಸುವುದು ಸಾಧ್ಯವಾಗಿದೆ.

ಕೈಗಾರಿಕೆಗಳಿಗೆ ತುಂಬಾ ಪ್ರಯೋಜನಕಾರಿಯಾದ ಇನ್ನೂ ಹಲವಾರು ಯಶಸ್ವಿ ಪ್ರಯೋಗಗಳು ಇಲ್ಲಿ ನಡೆದಿವೆ ಮತ್ತು ನಡೆಯುತ್ತಿವೆ. ಭಾರತೀಯ ಜೇಡಿಮಣ್ಣುಗಳನ್ನು ವಿಧವಿಧವಾಗಿ ವಿಂಗಡಿಸಿ ಅವುಗಳ ಗುಣವಿಶೇಷಗಳನ್ನು ಪತ್ತೆಹಚ್ಚಿ ಅವುಗಳನ್ನು ಬೇರೆ ಬೇರೆ ರೀತಿಯಲ್ಲಿ ಬಳಕೆಗೆ ಬರುವಂತೆ ಮಾಡುವ ಕಾರ್ಯ ಇಲ್ಲಿ ನಡೆದಿದೆ. ಬಿಳಿ ಎನಾಮೆಲ್ ತಯಾರಿಕೆಯಲ್ಲಿ ಆಂಟಿಮೊನಿಗೆ ಬದಲಾಗಿ ಬೇರೊಂದು ವಸ್ತುವನ್ನು ಕಂಡುಹಿಡಿದಿರುವ ಯಶಸ್ವಿ ಪ್ರಯತ್ನ ಸಹ ಈ ಇನ್‌ಸ್ಟಿಟ್ಯೂಟಿನ ಪಾಲಿನದು. ಬಣ್ಣಗಳು, ಟ್ರಿಟಾನಿಯಾ ಗ್ಲಾಸ್ ಇತ್ಯಾದಿಗಳ ತಯಾರಿಕೆಯು, ಅಭ್ರಕದ ಉಪಯೋಗ ಇಲ್ಲದೆ ಗಾಜಿನ ವಸ್ತುಗಳ ತಯಾರಿಕೆಯನ್ನು ಉತ್ತಮಗೊಳಿಸುವುದು 'ಫೈರ್ ಬ್ರಿಕ್ಸ್", "ಗ್ಲಾಸ್ ಮೌಲ್ಡ್ಸ್" ಪ್ಲಾಸ್ಟರ್ ಆಫ್ ಪ್ಯಾರಿಸ್—ಇವೇ ಮೊದಲಾದುವುಗಳ ಗುಣಮಟ್ಟ ಹೆಚ್ಚಿಸುವ ಕಾರ್ಯದಲ್ಲಿಯೂ ಯಶಸ್ವಿ ಪ್ರಯೋಗಗಳು ನಡೆದಿವೆ.

ಭಾರತದಲ್ಲಿ ತುಂಬಾ ಬೇಡಿಕೆ ಇರುವ ಸಿರಾಮಿಕ್ ತಯಾರಿಕೆಗಳ ಮಟ್ಟ ಸಹ ಉತ್ತಮವಾಗಲು ಈ ಸಂಸ್ಥೆಯಲ್ಲಿ ನಡೆದಿರುವ ಪ್ರಯೋಗಗಳು ಸಹಕಾರಿಯಾಗಿವೆ. ವಿದ್ಯುತ್ ಸಲಕರಣೆಗಳ ತಯಾರಿಕೆಯಲ್ಲಂತೂ ಇವು ತುಂಬಾ ಪ್ರಯೋಜನಕಾರಿಯೆನಿಸಿವೆ.

ಇಲ್ಲಿಯ ಪ್ರಯೋಗಗಳೂ ಇನ್ನೂ ಹೊಸ ಹೊಸ ರೀತಿಯಲ್ಲಿ ವೈವಿಧ್ಯಪೂರ್ಣತೆಯಿಂದ ನಡೆಯುತ್ತಿವೆ. ಗೋಡೆಯ ಅಲಂಕಾರ ವಸ್ತುಗಳು, ಹೊದಿಕೆಗಳು ಲ್ಯಾಂಪ್ ಷೇಡುಗಳು, ಇತ್ಯಾದಿಗಳ ತಯಾರಿಕೆಯಲ್ಲಿ ಬಳಕೆಗೆ ಬರುವ ಗಾಜಿನ ವಿಶಿಷ್ಟ ರೂಪಗಳು ಒಂದು ಮುಖ್ಯ ಸಾಧನೆ. ಬಟ್ಟೆಯ ರೂಪದಲ್ಲಿ ಇಳಿಬಿಡಬಹುದಾದ ಗಾಜಿನ ಪರದೆ ಹಾಗೂ ಇನ್ನಿತರ ಅಲಂಕಾರ ವಸ್ತುಗಳನ್ನು ತಯಾರಿಸುವ ಕ್ರಮ ಒಂದು ಮಹತ್ಸಾಧನೆ; ಆಶ್ಚರ್ಯಪಡುವಂತಹ ಸಾಧನೆ. ಭವಿಷ್ಯದ ಇನ್ನೂ ಹೆಚ್ಚಿನ ಸಾಧನೆಗಳಿಗೆ ಇವು ಒಂದು ಉತ್ತಮ ದಾಖಲೆ.

ತನ್ನ ಕಾರ್ಯಸಾಧನೆಗಳನ್ನು ಕೈಗಾರಿಕಾ ಕ್ಷೇತ್ರಕ್ಕೆ ಪರಿಚಯಮಾಡಿಕೊಡಲು ಮತ್ತು ಕೈಗಾರಿಕಾ ಕ್ಷೇತ್ರದೊಡನೆ ಹೆಚ್ಚಿನ ನಿಕಟ ಸಂಬಂಧ ಬೆಳೆಸಲು ಸಹಾಯಕವಾಗುವಂತಹ ಒಂದು ತ್ರೈಮಾಸಿಕ ಪ್ರಚಾರ ಪತ್ರಿಕೆ ಸಹ ಈ ಸಂಸ್ಥೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ.

ಕವಿತಾವಿತಾನ

ದೀಪಾವಳಿ

೧

ದೀಪಾವಳಿಯಲಿ
ದೀಪಾವಳಿ ಮೆರೆದಿತ್ತಾ ||
ಬೆಳ್ಳಗೆ ಬೆಳಗಿತ್ತಾ | ಜಗ
ಕೊಳ್ಳೆಯು ಕಳೆಯಿತ್ತಾ || ಪ ||

೨

ತೇಜ ಪೆರ್ಚುವ
ನೇಹ ವೃಕ್ಷವ
ಜ್ಯೋತಿಯುರಿದಿತ್ತಾ | ಬಾನ್-
ಬಯಲದು ಬೆಳಗಿತ್ತಾ ||

೩

ಶಶಿಯು ನುಳಿದಾ
ಮಿಂಗಳಾರ್ಪ
ಬಾಂಗೆ ಪಡಿಯಿತ್ತಾ | ಇದೇ—
ಆಗಸವಾಗಿತ್ತಾ ||

೪

ಲೋಕವಿಂತಿದು
ನಾಕವಾಯಿತೋ
ಎಂಬಂತೆಸೆದಿತ್ತಾ | ಬಲ್—
ಸಂಶಯ ಕಡೆದಿತ್ತಾ ||

೫

ಬಲಿಯೊಲಿ ನೀಂ,
ಹೊಲಿಯಿತ್ತೆಂ,
ಬಾಲಿ ಬಲಿದಿತ್ತಾ | ಕೂಕೂ
ರವಮಿಂಗೆಯ್ದಿದಿತ್ತಾ ||

೬

ಪೊಸ ಆವಲಿನ
ಕಾಯ್ ಹೋಳಿನ
ಕಾಣಿಕೆಯಿಕ್ಕಿತಾ | ಧನಿ
ಬಲಿರಾಯಗೆ ನೀಡಿತ್ತಾ ||

೭

ನಲಿನಲಿಯುವ
ಮರ್ತ್ಯರ ರೀತಿ
ಬಲು ಸೊಗಸಿತ್ತಾ | ಬಲು
ಸಂಭ್ರಮವೆಸೆದಿತ್ತಾ ||

೮

ತಿರೆಯಂತಿರೆ
ದಿವಿಜರನುರೆ
ಯಚ್ಚರಿವಡಿಸಿತ್ತಾ || ಮೂಗ್
ಬೆರಳನು ಕೂಡಿತ್ತಾ ||

೯

ಮರು ಗಳಿಗೆಗೆ
ನಿಶೆ ಮೊರೆದಿರೆ
ಕ್ಷಣಿಕವು ಆಗಿತ್ತಾ | ದೀಪಾ—
ವಳಿಯದು ಮುಗಿದಿತ್ತಾ ||

೧೦

ಚಣ ಬೆಳಗಿದ
ಹಣ ತೆಗೆಳೇ
ಅಮರತೆ ಪಡೆದಿತ್ತಾ | ಶುಭ—
ಸಂದೇಶವ ನೀಡಿತ್ತಾ ||

—ವಿ. ಮಂಜುನಾಥ ಐತಾಳ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ ಬುಕ್‌ವರ್ಕನ್ನೂ ಚಲೋದಾಗಿ ಮಾಡಿ ಕೊಡಲಾಗುವುದು.
NAVAYUGA PRESS, UDIPI
Printers & Publishers
Santhekatte — UDIPI.

ಸಂಸ್ಕೃತಿದರ್ಶನ

ಪಾಂಡವರ ರಾಜಧಾನಿ—ಕೌಶಾಂಬಿ

ಹರಪ್ಪಾದ ದ್ರಾವಿಡರ ಸಂಸ್ಕೃತಿ ಕೌಶಾಂಬಿಯ ಸಂಸ್ಕೃತಿಯ ಮೇಲೆ ತೀವ್ರ ಪ್ರಭಾವ ಬೀರಿದೆ.

ಅಲಹಾಬಾದಿನಿಂದ ನೈರುತ್ಯಕ್ಕೆ ೩೨ ಮೈಲು ದೂರದಲ್ಲಿ ಜಮುನಾ ನದಿಯ ದಡದಲ್ಲಿಯೇ ಪಾಂಡವರ ಪುರಾತನ ರಾಜಧಾನಿಯಾದ ಕೌಶಾಂಬಿ ಇದ್ದುದು. ಈ ಪ್ರದೇಶದಲ್ಲಿ ನಡೆಸಿರುವ ಭೂಶೋಧನೆ ಕಾರ್ಯಗಳ ಫಲವಾಗಿ ಪುರಾತನ ಕಾಲದಲ್ಲಿ ಕಟ್ಟಲಾಗುತ್ತಿದ್ದ ಕೋಟೆಗಳ ಬಗ್ಗೆ ಹೊಸ ವಿಚಾರಗಳು ಕೆಲವು ಬೆಳಕಿಗೆ ಬಂದಿವೆ.

ಮಧ್ಯ ಪ್ರದೇಶದ ಜನ ಕ್ರಿ. ಪೂ. ೧೦೦೦ ವರ್ಷಗಳಷ್ಟು ಹಿಂದೆಯೇ ಕೋಟೆಗಳನ್ನು ಕಟ್ಟುವ ಕಾರ್ಯದಲ್ಲಿ ಪ್ರವೀಣರಾಗಿದ್ದರು ಎಂದು ಮೇಲಿನ ಭೂಶೋಧನೆಗಳಿಂದ ತಿಳಿದು ಬಂದಿದೆ. ಮತ್ತು, ಗಂಗಾ ನದಿಯ ತೀರದಲ್ಲಿ ಆಗ ನಿರ್ಮಿಸಲ್ಪಟ್ಟಿದ್ದ ನಗರಗಳು ಮತ್ತು ಅವುಗಳ ಸುತ್ತಲಿನ ಕೋಟೆಗಳು ಹರಪ್ಪದ ಮಾದರಿಯಲ್ಲಿ ನಿರ್ಮಿಸಲ್ಪಟ್ಟಿದ್ದು ಹೊಸ ಹೊಸ ಸುಧಾರಣೆಗಳನ್ನೂ ಮೈಗೂಡಿಸಿಕೊಂಡಿದ್ದುದೂ ಕಂಡುಬರುತ್ತದೆ

೧೯೫೭—೫೮ರಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಈ ಸಂಶೋಧನೆಗಳು ನಡೆದವು. ಪ್ರೊಫೆಸರ್ ಜಿ. ಆರ್. ಶರ್ಮಾರವರು ಈ ಸಂಶೋಧನೆಗಳ ನಿರ್ದೇಶಕರಾಗಿದ್ದರು ಶ್ರೀಯುತರು ಇತಿಹಾಸ ಹಾಗೂ ಪ್ರಾಚೀನ ವಸ್ತು ಶಾಸ್ತ್ರದ ಶಾಖೆಯ ಪ್ರಾಧ್ಯಾಪಕರು.

ಕೌಶಾಂಬಿಯ ಕೋಟೆ ಕೊತ್ತಲಗಳ ಮುಖ್ಯ ಲಕ್ಷಣಗಳು ಈ ರೀತಿ ಇವೆ: ಮುಖ್ಯವಾಗಿ ಕೋಟೆಗಳೆಲ್ಲ ಮಣ್ಣಿನಿಂದಲೇ ಕಟ್ಟಲ್ಪಟ್ಟಿದ್ದುವು ಎರಡೂ ಕಡೆ ಇಳಿಜಾರುವಾಟದ ಮೈಕಟ್ಟು ಮಣ್ಣಿನ ಗೋಡೆಗಳ ಹೊರ ಆವರಣದಲ್ಲಿ ಸುಟ್ಟ ಇಟ್ಟಿಗೆಗಳ ಒಂದು ಭದ್ರವಾದ ಕವಚದಿಂದ ರಕ್ಷಿಸಲ್ಪಟ್ಟಿದ್ದವು. ಇಟ್ಟಿಗೆಗಳನ್ನು ಕೂಡಿಸಿರುವ ವಿಧಾನ ವಿಶೇಷ ರೀತಿಯದು. 'ಕಾರ್ಬೆಲ್ಡ್ ಆರ್ಚ್'ಮಾದರಿಯಲ್ಲಿ ಒಳಗಿನ ಸುರಂಗ ಮಾರ್ಗಗಳು

ಕೌಶಾಂಬಿಯ ಕೋಟೆಗಳ ಈ ವಿಶೇಷ ಲಕ್ಷಣಗಳೆಲ್ಲ ತದ್ವತ್ ಸಿಂಧೂ ನದಿಯ ದಡದಲ್ಲಿನ ನಗರಗಳ ಕೋಟೆಗಳ ಲಕ್ಷಣಗಳಂತೆಯೇ ಎಂದು ಹೇಳಬಹುದು. ಅಂತೆಯೇ ಸಿಂಧೂ ನದಿಯ ಪ್ರದೇಶದ ಪ್ರಭಾವ ಗಂಗಾ ನದಿಯ ಪ್ರದೇಶದ ನಗರಗಳ ಮೇಲೆ ಇತ್ತೆಂಬುದು ಸ್ಪಷ್ಟ.

ಆದರೆ ಕೌಶಾಂಬಿಯ ಕೋಟೆಗಳ ಮಟ್ಟಿಗೆ ಹೇಳುವುದಾದರೆ ಸಿಂಧೂ ನದಿ ಪ್ರದೇಶದ ನಗರಗಳಿಗಿಲ್ಲದ ಕೆಲವು ವಿಶೇಷ ಲಕ್ಷಣಗಳನ್ನು ಕಾಣಬಹುದು. ಕೋಟೆಯ ಸುತ್ತಲೂ ತುಂಬ ಆಳವಾದ ಕಂದಕ—ಸುಮಾರು ೨೮ ಅಡಿಗಳಷ್ಟು ಆಳದ ಜೊತೆಗೆ ಸುಮಾರು ೪೦೦ ಅಡಿಗಳಷ್ಟು ಅಗಲ. ಮುಖದ್ವಾರದ ಮುಂಭಾಗದಲ್ಲಿ ಒಂದು ರಸ್ತೆ ಕಂದಕವನ್ನು ಮೂರು ಭಾಗವಾಗಿ ವಿಂಗಡಿಸುವ ನಮೂನೆ. ಕಂದಕಕ್ಕೂ ಮುಖ್ಯ ರಕ್ಷಣಾ ಗೋಡೆಗೂ ಮಧ್ಯೆ ಇನ್ನೊಂದು ಮಣ್ಣು ದಿಬ್ಬ. ಹೀಗೆ ಅದರ ರಚನೆ. ಈ ಪ್ರದೇಶದಲ್ಲಿ ಅತ್ಯಂತ ಹಳೆಯ ಕೋಟೆ ಹಾಗೂ ಮಣ್ಣು ದಿಬ್ಬಗಳೆಂದರೆ ಕ್ರಿ. ಪೂ. ೮೦೦ ಶತಮಾನಕ್ಕೆ ಸೇರಿದುವು.

ಕೌಶಾಂಬಿಯಲ್ಲಿ ಈ ವರ್ಷ ನಡೆದ ಭೂಶೋಧಗಳು ಕೋಟೆಗಳ ನಿರ್ಮಾಣ ಕಲೆಯಲ್ಲಿ ಕ್ರಿ. ಪೂ. ೩ ಮತ್ತು ೨ನೆಯ ಶತಮಾನಗಳು ಹೊಸ ಹೊಸ ಭಾವನೆಗಳ ಉದಯಕ್ಕೆ ಕಾರಣವಾದುವು ಎಂಬ ಅಂಶ ಸ್ಪಷ್ಟಪಡುತ್ತದೆ. ಹಳೆಯ ಹರಪ್ಪಾದ ಮಾದರಿಯನ್ನು ಕೈಬಿಟ್ಟು ಎತ್ತರದ ಎದುರು ಬದರಿನ ಗೋಡೆಗಳು, ಅಲ್ಲಿ ಒಂದೊಂದು ಮೂಲೆಯಲ್ಲೂ ಕಾವಲುಗಾರರ ಕೋಣೆಗಳು ಅಲ್ಲಿಗೆ ಹತ್ತಿ ಹೋಗಲು ಮೆಟ್ಟಲುಗಳು—ಇವುಗಳಿಂದ ಕೂಡಿದ ಹೊಸ ನಮೂನೆಗಳನ್ನಿಲ್ಲಿ ಕಾಣಬಹುದು ಕೌಟಿಲ್ಯ ವರ್ಣಿಸಿರುವ ನಮೂನೆಗೆ ಇವು ಹೊಂದಿಕೊಂಡಿರುವುದು ಕಂಡು ಬರುತ್ತದೆ.

ಮನುಷ್ಯರನ್ನು ಬಲಿ ಕೊಡುವ ಪುರುಷಮೇಧ ಪದ್ಧತಿ ಜಾರಿಯಲ್ಲಿದ್ದುದರ ದಾಖಲೆಗಳೂ ಭೂಶೋಧನದಿಂದ ಕಳೆದ ವರ್ಷ ಬೆಳಕಿಗೆ ಬಂದಿವೆ ಈ ವರ್ಷದ ಭೂಶೋಧನೆಗಳು ಈ ಬಗ್ಗೆ ಇನ್ನಷ್ಟು ವಿವರಗಳನ್ನು ಬೆಳಕಿಗೆ ತಂದಿವೆ ಅಗ್ನಿ ಕುಂಡ ಮತ್ತು ಅದರಲ್ಲಿ ಪ್ರಥಮ ದಿನ ಬಲಿಕೊಟ್ಟ ಪ್ರಾಣಿಗಳ ಮೂಳೆಗಳು ದೊರಕಿವೆ ಅಲ್ಲದೆ ಅಗ್ನಿ ಕುಂಡದ ಮೇಲೆ ಪಕ್ಷಿಯಾಕಾರದ ಒಂದು ಪ್ರಾಕಾರವನ್ನು ಕಟ್ಟಲಾಗಿದ್ದು ಅದರ ಹೊಟ್ಟೆ ಅಥವಾ ದೇಹದ ಐದು ಭಾಗಗಳಲ್ಲೂ ಅದರ ಪಕ್ಕದ ಭಾಗದಲ್ಲೂ ಪ್ರಾಣಿಗಳ ಮತ್ತು ಮನುಷ್ಯರ ಮೂಳೆಗಳು ಪತ್ತೆಯಾಗಿವೆ. ಪುರಾತನ ಗ್ರಂಥಗಳಲ್ಲಿ ಕೊಟ್ಟಿರುವ ವಿಧಾನಗಳಿಗೆ ಹೋಲುವ ದಾಖಲೆಗಳನೇಕವು ದೊರಕಿವೆ

ಕೋಟೆಯ ಬದಿಯಲ್ಲಿ ಭೂಶೋಧ ನಡೆದಾಗ ದೊರೆತ ವರ್ಣದ ಪಾತ್ರೆಗಳು ಗಂಗಾನದಿಯ ಈ ಪ್ರದೇಶದ ಸಂಸ್ಕೃತಿಯ ಮೇಲೆ ವಿಶೇಷವಾಗಿ ಬೆಳಕು ಚೆಲ್ಲುತ್ತವೆ ಈ ವರ್ಣದ ಪಾತ್ರೆಗಳನ್ನು ಮುಖ್ಯವಾಗಿ ನಾಲ್ಕು ವಿಧವಾಗಿ ವಿಂಗಡಿಸಬಹುದು ಒಂದು ವರ್ಗದ ಪಾತ್ರೆಗಳು ಬಣ್ಣದಲ್ಲಿ ಕಂದು ಅವುಗಳ ಮೇಲೆ ಕಪ್ಪು ಚಿತ್ರಗಳು ಇನ್ನೊಂದು ವರ್ಗದ ಪಾತ್ರೆಗಳೆಂದರೆ ಕಂದು ಮತ್ತು ಕಪ್ಪು ಮಿಶ್ರ ಬಣ್ಣದ ಪಾತ್ರೆಗಳು ಮೂರನೆಯದು ಚಿತ್ರಗಳನ್ನು ಬಿಡಿಸಿರುವ ಕಂದುಬಣ್ಣದ ಪಾತ್ರೆಗಳು ನಾಲ್ಕನೆಯ ವರ್ಗಕ್ಕೆ ಸೇರಿದ ಪಾತ್ರೆಗಳೆಂದರೆ, ಕೌಶಾಂಬಿಯ ಸ್ಥಳೀಯ ಕೆಂಪು ಬಣ್ಣದ ಪಾತ್ರೆಗಳು.

ಕ್ರಿ. ಪೂ. ದ್ವಿತೀಯ ಶತಮಾನದ ಅಂತ್ಯ ಹಾಗೂ ಪ್ರಥಮ ಶತಮಾನದ ಆದಿಭಾಗದ ಮಧ್ಯೆ ಗಂಗಾನದಿ ತೀರದ ಸಂಸ್ಕೃತಿ ಒಂದು ಸಮಗ್ರ ಸಂಸ್ಕೃತಿಯಾಗಿ ಸಿಂಧೂ ನದಿ ತೀರದ ಸಂಸ್ಕೃತಿಯ ಪರಂಪರೆಯಲ್ಲಿ ಬೆಳೆದು ಬಂದಿತ್ತು ಎಂಬ ಅಂಶವನ್ನು ಕೌಶಾಂಬಿಯಲ್ಲಿ ದೊರೆತಿರುವ ವರ್ಣದ ಪಾತ್ರೆಗಳು ಸ್ಪಷ್ಟಪಡಿಸುತ್ತವೆ.

ಇತಿಹಾಸ ಪೃಷ್ಠ

(೪ನೇ ಪುಟದಿಂದ)

ಆದರೆ, ಈ ಜನಕಥೆಯು "ಆತನು ಸುಖದಿಂದ ರಾಜ್ಯ ಪಾಲಿಸಿದನು" ಎಂದು ಹೇಳಿದರೆ ಮುಗಿಯುವುದಿಲ್ಲ ಈತನಿಗೆ ಸ್ವೆ-ಐಂಧಿ ಎಂಬ ಮಗಳಿದ್ದಳು. ಚೀನೀಪರ್ವತ ಪ್ರದೇಶದ ಒಬ್ಬ ರಾಜನು ಆಕೆಯನ್ನು ತಾನು ಮದುವೆಯಾಗ ಬಯಸುವುದಾಗಿ ಹೇಳಿಕಳಿಸಿದನು. ಆದರೆ, ಕ್ಯಾಂಜಿರನು ಚೀನೀ ರಕ್ತಸಂಬಂಧ ಬಯಸದ ದರಿಂದ, ಮೃತರಾಜನಾದ ಸಾವಲೂವಿನ ಕುಂಟ ಮಗನೊಡನೆ ಆಕೆಯ ವಿವಾಹವನ್ನು ಏರ್ಪಡಿಸಿದನು ಆಶಾಭಗ್ನನಾದ ಚೀನೀಯ ರಾಜನು ಆತ್ಮಹತ್ಯೆ ಮಾಡಿಕೊಂಡನು. ಸ್ವೇ-ಐಂಧಿಯು ಆಲಿಂಗ-ಸಿಥೂ ಎಂಬವನ ತಾಯಿಯಾದಳು ಕ್ಯಾಂಜಿರನು ನಾಬಲಿಗ ನಾತಿಯನ್ನು ತನ್ನ ಉತ್ತರಾಧಿಕಾರಿಯಾಗಿ ಆರಿಸಿದನು

ಆಗ, ಒಂದ ದಿನ ಒಬ್ಬ ಹೆಂಗಸು ಒಂದು ಎಳೆಯ ಬಾಲಕನ ಕೈಹಿಡಿದು, ರಾಜಭವನದ ದ್ವಾರದಲ್ಲಿ ಕಾಣಿಸಿಕೊಂಡಳು. ಕ್ಯಾಂಜಿರನು ಆಕೆಯು ಥಂಬೂಲ ಎಂದು ಅರಿತನು. ನೇಗಂಗೆಯಲ್ಲಿ ತಾನು ಸುಖಮಯವಾಗಿ ದಿನಕಳೆದುದರ ಸ್ಮಾರಕವಾಗಿದ್ದ ಬಾಲಕನು ಆಕೆಯೊಡನಿದ್ದನು ಹಳೆಯ ಸ್ನೇಹವೂ ತುಂಬಿಬಂತು ಥಂಬೂಲಳನ್ನು ತನ್ನ ನಾಲ್ಕನೆಯ ರಾಣಿಯನ್ನಾಗಿ ಮಾಡಿ ಆಕೆಗೆ "ತ್ರಿಭುವನ ಸುಂದರಿ" ಎಂಬ ಬಿರುದನ್ನೂ ದಯಪಾಲಿಸಿದನು. ಪಗಾನ ರಾಜ್ಯವನ್ನೇನೋ ಆಲಿಂಗ ಸಿಥೂವಿಗೆ ಕೊಟ್ಟಾಗಿತ್ತು. ಆದುದರಿಂದ ಥಂಬೂಲಳ ಮಗನಿಗೆ ಅರಕಾನದ ಏಳು ಪರ್ವತ ರಾಜ್ಯವನ್ನು ಕೊಟ್ಟನು.

ಕ್ಯಾಂಜಿರನ ರಾಜ್ಯಾಡಳಿತೆಯಲ್ಲಿ ಬರ್ಮದಲ್ಲಿ ಬೌದ್ಧಧರ್ಮದ ಪ್ರಭಾವವು ಬೆಳೆಯುತ್ತ ಹೋಯಿತು. ಬೌದ್ಧ ಭಿಕ್ಷುಗಳು ಪಗಾನದಲ್ಲಿ ತಿರುಗಾಡತೊಡಗಿದರು. ಬೌದ್ಧ ಭಿಕ್ಷುಗಳಿಂದ ಉದಯಗಿರಿಯ ಬೌದ್ಧ ವಿಹಾರ ಹಾಗೂ ಚೈತ್ಯಗಳನ್ನು ಕುರಿತು ಕ್ಯಾಂಜಿರನು ತಿಳಿದುಕೊಂಡಾಗ, ತಾನೂ ಅಂತಹ ಬೌದ್ಧ ಮಂದಿರವೊಂದನ್ನು ಕಟ್ಟಿಸಿ ತನ್ನ ಕೀರ್ತಿಯನ್ನು ಆಚಂದ್ರಾರ್ಕವಾಗಿ ಇರಗೊಳಿಸಬಾರದೇಕೆ ಎಂದು ಯೋಚಿಸಿದನು ಈ ಅಭಿಲಾಷೆಯ ಮೂರ್ತಸ್ವರೂಪವೇ "ಆನಂದ ಮರ" ಉದಯಗಿರಿಯ ಪ್ರಭಾವವು ಗಾಢವಾಗಿ ಇಲ್ಲಿ ಬಿದ್ದಿರುವುದರಿಂದ ವಾಸ್ತು ಶಿಲ್ಪಕಲೆಯೂ ಇದೇ ಮಾದರಿಯಲ್ಲಿದೆ

ಆನಂದ ಮರ ಮಾತ್ರವಲ್ಲದೆ ಇನ್ನೂ ನಲವತ್ತು ಚಿಕ್ಕದೊಡ್ಡ ಪಗೋಡಗಳನ್ನು ಕಟ್ಟಿಸಿದನು ಇವುಗಳಲ್ಲಿ ಒಂದು ಈತನ ಜನ್ಮಸ್ಥಾನದಲ್ಲಿದೆ. ಇನ್ನೊಂದು ಅವನು ಆಪತ್ಕಾಲದಲ್ಲಿ ಅಡಗಿದ್ದ ನೇಗಂಗೆಯಲ್ಲಿದೆ. ತನ್ನ ತಂದೆಯು ಕಟ್ಟಿಸಿ ಅರ್ಧದಲ್ಲೇ ಬಿಟ್ಟಿದ್ದ ಪಗೋಡವೊಂದನ್ನು ಈತನು ಪೂರ್ಣಗೊಳಿಸಿದನು. ಬುದ್ಧಗಯೆಯ ಭಗ್ನ ವೇದಿಕೆಗಳನ್ನು ರಿಪೇರಿ ಮಾಡಿಸಿದ ಬರ್ಮ ರಾಜರಲ್ಲಿ ಕ್ಯಾಂಜಿರನೇ ಮೊದಲಿನವನು.

ಬೌದ್ಧ ಧರ್ಮದ ಕರುಣೆಯ ಮಹಾಮಂತ್ರವನ್ನು ಕೇಳಿದರೂ ಕ್ಯಾಂಜಿರನ ಹೃದಯದಲ್ಲಿ ಮಾತ್ರ ಕರುಣೆಯು ನೆಲೆಯೂರಲಿಲ್ಲ "ಆನಂದ ಮರ"ವು ಸಂಪೂರ್ಣವಾದ ಮೇಲೆ ಅದನ್ನು ಕಟ್ಟಿದ ಎಲ್ಲ ಶಿಲ್ಪಿಗಳನ್ನು ಮೃತ್ಯು ದಂಡಕ್ಕೇರಿಸಲಾಯಿತು ಇಂತಹ ಕಠೋರ ಕೃತ್ಯದ ಮೂಲಕಾರಣವೆಂದರೆ ಆನಂದ ಮರಕ್ಕೆ ಸಮಜೋಡಿಯಾದ ಇನ್ನೊಂದು ಮಂದಿರವು ಎಂದಿಗೂ ನಿರ್ಮಾಣವಾಗಬಾರದು. ಎಂಬುದು ಕ್ಯಾಂಜಿರನ ಅಂತರಾಳದ ಅಪೇಕ್ಷೆಯಾಗಿತ್ತು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಪುಟ್ಟದಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು ೧೨೪. ಬೆಲೆರೂ ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ ಭಾ

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

NAVAYUGA' WEEKLY is in the list of periodicals and Newspapers approved for use in Secondary School as per proceedings Roc. No 466 N/50 date 2-12-1950 of the Director of public Instruction Madras.

ಅಂಕೆಸಂಖ್ಯೆಗಳು

ಇವನ್ನು ನೀವು ಅವಶ್ಯ ತಿಳಿದಿರಬೇಕು

ಈ ಅಂಕೆಸಂಖ್ಯೆಗಳು ಇಂದಿನ ಸ್ಥಿತಿಗತಿಗಳನ್ನು ಪ್ರದರ್ಶಿಸುತ್ತವೆ!

೧ **ಚುನಾವಣೆಯ ವೆಚ್ಚ**—ಭಾರತದಲ್ಲಿ ಈ ಹಿಂದೆ ಎರಡು ಸಲ ಸಾರ್ವತ್ರಿಕ ಮಹಾ ಚುನಾವಣೆಗಳು ನಡೆದಿವೆಯಷ್ಟೇ! ಅವುಗಳಲ್ಲಿ ಪ್ರಥಮ ಸಾರ್ವತ್ರಿಕ ಮಹಾ ಚುನಾವಣೆ (೧೯೫೨)ಗೆ ೧೦,೦೦,೦೦ ೦೦೦ರೂ ಗಳ ವೆಚ್ಚ ಬಂದಿರುವದೆಂದು ಅಧಿಕೃತವಾಗಿ ತಿಳಿದುಬಂದಿದೆ ಬಳಿಕ ದ್ವಿತೀಯ ಮಹಾಚುನಾವಣೆಯಲ್ಲಿ (೧೯೫೭) ೫,೯೦ ೦೦,೦೦೦ ರೂಗಳು ಖರ್ಚಾಗಿವೆ ಅಂತೂ ಮೊದಲಿನಗಿಂತ ದ್ವಿತೀಯ ಚುನಾವಣೆಯ ವೆಚ್ಚ ತುಂಬಾ ಕಡಿಮೆಯಾದದ್ದು ತೋರಿಬರುವದು. ಆದರೆ ಮುಂಬರುವ (೧೯೬೧) ಮಹಾ ಚುನಾವಣೆಯಲ್ಲಿ ಈ ವೆಚ್ಚದ ಪ್ರಮಾಣವನ್ನು ಇನ್ನಿಷ್ಟು ಇಳಿಸಲು, "ಚುನಾವಣೆ ಮಂಡಳಿ" ಪ್ರಯತ್ನಿಸುವದೆಂದು ವಿಶ್ವಸನೀಯವಾಗಿ ವರದಿಯಾಗಿದೆ!

ಮೇಲಿನ ಪ್ರಥಮ ಹಾಗೂ ದ್ವಿತೀಯ ಚುನಾವಣೆಗಳಿಂದ ಭಾರತ ಸರಕಾರಕ್ಕೆ ಕೆಲವಷ್ಟು ರೂ. ಗಳ ಲಾಭವಾದದ್ದೂ ಇರುವದು.

ಚುನಾವಣೆಗೋಸ್ಕರ ಕೆಲವು ಹುರಿಯಾಳುಗಳ ಇಟ್ಟ 'ಇಡಗಂಟು' ಜಪ್ತವಾಗುವದು. ಈ ರೀತಿಯಿಂದ ಸರಕಾರಕ್ಕೆ ಮೊದಲಿನ ಚುನಾವಣೆಯಿಂದ ೪೯,೦೦,೦೦೦ ರೂ ಗಳ ಸಂಪಾದನೆಯಾಗಿದೆ! ದ್ವಿತೀಯ ಚುನಾವಣೆಯಲ್ಲಿ ದೊರಕಿದ ಠೇವಿನ ಸಂಖ್ಯೆಯು, ಮೊದಲಿನ ಠೇವಿನ ಸಂಖ್ಯೆಗಳಿಗೆ ಅತಿ ಸಮೀಪವಿದೆಯೆಂದು ತಿಳಿಯುತ್ತದೆ!

೨ **ವಿಕಿರಣದಿಂದ ಪೀಡೆ**—ಸನ್ ೧೯೪೫ರಲ್ಲಿ ಅಣ್ವಸ್ತ್ರ ಸ್ಫೋಟ ಒದಗಿತ್ತು. ಅದರ ವಿಕಿರಣದಿಂದಾಗಿ ಸುಮಾರು ೧,೪೦,೦೦೦ ಹುಡುಗರು ಮಾನಸಿಕ ಹಾಗೂ ಶಾರೀರಿಕ ಪೀಡೆಗೆ ತುತ್ತಾಗಿರುವರೆಂದು ನೊಬೆಲ್ ಬಹುಮಾನ ಪಡೆದ ಜಾಗತಿಕ ಪ್ರಸಿದ್ಧ "ಅಮೇರಿಕೆಯ ಶಾಸ್ತ್ರಜ್ಞರಾದ ಡಾ| ಪೋಲಿಂಗ್"ರು ಪ್ರಸಿದ್ಧಿಸಿರುವರು.

೩ **ಬರಗಾಲ**—ಮುಂಬರುವ ೨ನೆ ವರ್ಷದಲ್ಲಿ ಭಾರತಕ್ಕೆ ಅತಿದೊಡ್ಡ ಬರಗಾಲ ಒದಗುವದೆಂದು, ಆಗ್ರಾ ವಿದ್ಯಾಪೀಠದ ಡಾ| ಡಿ ಎಸ್ ಚೌಹ್ವಾಣರು ಭಾರತದೊಳಗಿನ ಬರಗಾಲದ ವಿಷಯದಲ್ಲಿ ಸಂಶೋಧಿಸಿ ಅಭಿಪ್ರಾಯ ಪಟ್ಟಿರುವರು— ಬರಗಾಲದ ಈ ಚಕ್ರ ನಿರ್ದಿಷ್ಟಗತಿಯಿಂದ ತಿರುಗುತ್ತಿದ್ದು, ಸನ್ ೧೯೬೦ನೇ ಇಸ್ವಿಯಲ್ಲಿ ಭಾರತಕ್ಕೆ ಅತಿದೊಡ್ಡ ಬರಗಾಲದಸಂಕಟವಿದೆಯೆಂದು ಹೇಳಿದಾರೆ ಹಾಗೂ ೩೦೦ವರ್ಷಗಳಲ್ಲಿ ಭಾರತದಲ್ಲಿ ಅತಿದೊಡ್ಡಪ್ರಮಾಣದ ೨೬ ಬರಗಾಲಗಳು ಒದಗಿದವು ಮತ್ತು ೭೦೦ ವರ್ಷಗಳಲ್ಲಿ ೧೯ ಅತ್ಯಂತ ಭಯಂಕರ ರೀತಿಯ ಬರಗಾಲಗಳು ಉದ್ಭವಿಸಿದವು ಪ್ರಪಂಚದಲ್ಲಿ ಆಗಿರುವ ಒಟ್ಟು ೩೪ ಭೀಕರ ಸ್ವರೂಪದ ಬರಗಾಲಗಳಲ್ಲಿ ೧೬ ಬರಗಾಲಗಳು ನಮ್ಮ ಭಾರತದಲ್ಲಿ ಆದವು.

೪ **ಮನಿಯಾರ್ಡರ್‌ಗಳು** ಅಂಚೆ ಹಾಗೂ ತಂತಿ ಇಲಾಖೆಯ ಮುಖಾಂತರ ೧೯೫೮—೫೯ರ ಸಾಲಿನಲ್ಲಿ ಭಾರತವಾಸಿಗಳು, ೬,೯೦,೦೦,೦೦೦ ಮನಿಯಾರ್ಡರ್‌ಗಳ ಮೂಲಕ,೨,೯೦ ೦೦೦೦೦೦೦ ರೂ ಗಳನ್ನು ದೇಶ ವಿದೇಶಗಳಲ್ಲಿ ಒಂದು ಸ್ಥಳದಿಂದ ಇನ್ನೊಂದ ಸ್ಥಳಕ್ಕೆ ರವಾನಿಸಿರುವರು, ಎಂದು ವರದಿಯಾಗಿದೆ.

ಇದೇ ಕಾಲ-ವಧಿಯಲ್ಲಿ೩೪೦೦೦೦೦೦ ದೂರ ಸಂದೇಶಗಳನ್ನು ಕಳಿಸಿರುವರೆಂದೂ ಮತ್ತು ೨,೫೦,೦೦,೦೦೦ "ದೂರಕರೆ" ಗಳನ್ನು ಮಾಡಿರುವರೆಂದು ಸುದ್ದಿಯಾಗಿದೆ

೫ **ಹೃದಯ ವಿಕಾರಕ್ಕೆ ತುತ್ತಾದವರು**—ಕಳೆದ ವರ್ಷ ಇಂಗ್ಲೆಂಡ್ ಮವೇಲ್ಸ್ (ಗ್ರೇಟ ಬ್ರಿಟನ್)ದಲ್ಲಿ ಹೃದಯ ವಿಕಾರಕ್ಕೆ ಗುರಿಯಾಗಿ ೮೪,೦೮೬ ಜನರು ಮರಣಕ್ಕೀಡಾಗಿದ್ದಾರೆ ಇದಕ್ಕಿಂತ ಮೊದಲಿನ ವರ್ಷದಲ್ಲಿ ಈ ಸಂಖ್ಯೆಯು ೭೪,೭೯೦ ಇದ್ದಿತ್ತು

ಮರಣ ಹೊಂದಿದವರಲ್ಲಿ ಪುರುಷರು ಹಾಗೂ ಸ್ತ್ರೀಯರ ೫,೩ರ ಪ್ರಮಾಣದಲ್ಲಿರುವರು.

೬ **ಕೇನ್ಸರ್ ಮತ್ತು ಅಪಘಾತ**—೧೯೫೭ರ ಸಾಲಿನಲ್ಲಿ ಲಂಗ್ ಕೆನ್ಸರ್‌ದಿಂದ ೧೯,೮೦೯ ಜನರು ತೀರಿಕೊಂಡರು. ಅದರಲ್ಲ ೧೭೦೦೦ ಗಂಡಸರು ಇರುವರು

ನೀರಿನ ಮಹಾಪೂರ ಇತ್ಯಾದಿಗಳಿಂದ ಸನ್ ೧೯೫೮ರಲ್ಲಿ ೫೪೦೮ ಜನರು ಅಪಘಾತಕ್ಕೆ ಬಲಿಯಾದರು

ಒಂದು ವರ್ಷದ ವಯಸ್ಸಿನ ಬಾಲಕರ ಮೃತ್ಯುವಿನ ಸಂಖ್ಯೆಯ ಪ್ರಮಾಣವು ಸಾವಿರಕ್ಕೆ ೨೨ ರಷ್ಟಿರುವದು

೭ **ರಾಜ್ಯಗಳು**—ಭಾರತದ ೧೪ ರಾಜ್ಯಗಳಲ್ಲಿ ವಿಸ್ತಾರದಿಂದ ಅತಿ ದೊಡ್ಡ ರಾಜ್ಯವೆಂದರೆ ಮುಂಬೈ (೧,೯೦,೯೧೯ ಚದರ ಮೈಲು) ಹಾಗೂ ಜನವಸತಿಯಿಂದ ಅತಿ ದೊಡ್ಡ ರಾಜ್ಯವೆಂದರೆ ಉತ್ತರ ಪ್ರದೇಶ (೬,೩೨,೧೫,೭೪೨ ಜನರು)

೮ **ಭಾರತದಲ್ಲಿ ಮೆಡಿಕಲ್ ಕಾಲೇಜುಗಳು**—ಇಂದು ಭಾರತದಲ್ಲಿ ೫೪ ಮೆಡಿಕಲ್ ಕಾಲೇಜುಗಳು ಇದ್ದು, ಕೇಂದ್ರ ಸರಕಾರವು ತನ್ನ ಅಧೀನಕ್ಕೊಳಪಟ್ಟ ರಾಜ್ಯಗಳಲ್ಲಿ ೩ ಕಾಲೇಜುಗಳನ್ನು ಸ್ಥಾಪಿಸಿದೆ. ಅವು ಈ ರೀತಿಗಳಿವೆ- ಮೈಸೂರು ೪, ಆಂಧ್ರ ಪ್ರದೇಶ ೭, ಆಸಾಮ ೧, ಬಿಹಾರ ೩ ಮುಂಬಯಿ ೯, ದಿಲ್ಲಿಯಲ್ಲಿ ೩, ಕೇರಳದಲ್ಲಿ ೨, ಮಧ್ಯಪ್ರದೇಶ ೪, ಮದ್ರಾಸ ೫, ಒರಿಸ್ಸಾದಲ್ಲಿ ೧ ಪಂಜಾಬಿನಲ್ಲಿ ೬ ಪಾಂಡಿಚೇರಿಯಲ್ಲಿ ೧, ರಾಜಸ್ಥಾನ ೨, ಉತ್ತರ ಪ್ರದೇಶ ೩, ಪಶ್ಚಿಮ ಬಂಗಾಲ ೫, ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ೧ ಮೆಡಿಕಲ್ ಕಾಲೇಜಗಳಿದ್ದು, ಮೇಲಾಗಿ ಕೇಂದ್ರ ಸರಕಾರವು ದಿಲ್ಲಿಯಲ್ಲಿ-೨ ಮತ್ತು ಪಾಂಡಿಚೇರಿಯಲ್ಲಿ ೧ ಸ್ಥಾಪಿಸಿದ್ದಾರೆ.

೯ **ಮೈಸೂರು ರಾಜ್ಯದ ಪಶುಗಳ ಸಂಖ್ಯೆ**—ಸನ್ ೧೯೫೬ರ ಪಶು ಗಣತಿಯ ಮುಖಾಂತರ ಈ ರೀತಿ ನವ ಮೈಸೂರು ರಾಜ್ಯದಲ್ಲಿ ಪಶುಗಳು ಇರುವವು ಎಂದು ತಿಳಿದಿದೆ. ದನಗಳು-೯೦,೦೦,೦೦೦, ಎಮ್ಮೆಕೋಣಗಳು—೨೦,೦೦,೦೦೬, ಕುರಿಗಳು—೪೦,೦೦,೦೦೦ ಆಡುಗಳು—೨೦,೦೦,೦೦೬, ಕೋಳಿಗಳು—೭೦,೦೦ ೦೦೭ ಹಾಗೂ ಈ ರಾಜ್ಯದಲ್ಲಿ ಹಣ್ಣುಹಂಪಲ ಬೆಳೆಯುವ ಒಟ್ಟು ಕ್ಷೇತ್ರವು-೧,೨೦,೦೦೦ ಎಕರೆಯಿದೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1=25) ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ ರೂ ಒಂದೂವರೆ, ಉತ್ತಮ ಪ್ರತಿ ರೂ ಎರಡು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ಚಂದಾದಾರರು

ತಮ್ಮ ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರುಗಳಿಗೆ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಕಥಾವಿಹಾರ

(೨ನೇ ಪುಟದಿಂದ)

ತೀರಿ' ಎಂದು ನಮ್ಮ ಅಭಿಪ್ರಾಯವನ್ನು ಕೇಳುತ್ತಿದ್ದ. 'ಅಲ್ರೈಟ್, ವೆರಿ ನೈಸ್, ಹೌ ಪ್ಲೆಸೆಂಟ್' ಅಂದೆಲ್ಲಾ ನಾನು ಉತ್ತರ ಕೊಡುತ್ತಿದ್ದೆ.

ಚಿತ್ರ ಮುಗಿದ ನಾವು ಥೇಟರಿನಿಂದ ಹೊರಗೆ ಬಂದೆವು. ಕಣ್ಣು ತಿಕ್ಕುತ್ತಾ, ಆಕಳಿಸುತ್ತಾ ಉಪ್ಪರಿಗೆ ಮೆಟ್ಟಲು ಇಳಿಯುತ್ತಿದ್ದ ನಮ್ಮವರಲ್ಲೊಬ್ಬರು ನಿದ್ದೆಯ ಗುಂಗಿನಿಂದ ತೂಗಾಡುತ್ತಾ ಇಳಿಯುತ್ತಿದ್ದರು. "ಅರೆ! ಏನು ನೀವು ತೂಗುತ್ತಿದ್ದೀರಿ. ಒಂದು ಪೀಸ್ ಚೋಕಲೇಟ್ ತಿಂದರೆ ನಿದ್ದೆ ತಾನಾಗಿಯೇ ಬಿಡುವುದು' ಎಂದಂದು ಆ ವ್ಯಕ್ತಿ ಸಿನಿಮಾ ಸ್ಟಾಲಿನೊಳಗೆ ನುಗ್ಗಿ ನಮಗೆಲ್ಲಾ ಚೋಕ್ಲೇಟ್ ತಂದುಕೊಟ್ಟಿತು. ಸಿನಿಮಾದ ಕುರಿತು ದಾರಿಯುದ್ದಕ್ಕೂ ಆ ವ್ಯಕ್ತಿ ತನ್ನ ವಿಮರ್ಶಾತ್ಮಕ ಅಭಿಪ್ರಾಯಗಳನ್ನು ಕೊಡುತ್ತಾ ಇತ್ತು. ನಿದ್ದೆಯಿಂದ ಚಡಪಡಿಸುತ್ತಿದ್ದ ನಮಗೆ ರೂಮಿಗೆ ಹೋಗಿ ಬಿದ್ದರೆ ಸಾಕಾಗಿತ್ತು. ಅಂತೂ ನಮ್ಮ ಮೇಲೆ ಇಷ್ಟು ಅಭಿಮಾನ ತೋರಿದ ಈ ವ್ಯಕ್ತಿಯ ಮಾತಿಗೆ ಉತ್ತರವಂತಿರಲಿ. 'ಹೂಂ, ಹಾಂ, ಎಂದಾದರೂ ಎನ್ನಬೇಡವೆ? ಅನಿವಾರ್ಯವಾಗಿ ನಮ್ಮೆಲ್ಲರ ಪರವಾಗಿ ನಾನು ಅಜ್ಜಿಯ ಕತೆಗೆ ಹೂಂಗುಟ್ಟುವ ಮೊಮ್ಮಗನಂತೆ ಹೂಂ ಗುಟ್ಟುತಿದ್ದೆ.

ನಾವು ತಂಗಿದ್ದ ಹೋಟೇಲು ಸಮೀಪಿಸುತ್ತಲೂ ಆ ವ್ಯಕ್ತಿ ಔಪಚಾರಿಕವಾಗಿ "ನಾಳೆ ಬೆಳಿಗ್ಗೆ ನಿಮ್ಮ ರೂಮಿಗೇ ಬರುತ್ತೇನೆ. ಮಾತಾಡೋಣ. ನಿಮ್ಮ ರೂಂ ನಂಬರ್? ಎಂದಿತು. ಮಧ್ಯ ರಾತ್ರಿ ದಾಟಿತ್ತು ಈ ರಾತ್ರಿ ನಮ್ಮ ಬಂಧುವನ್ನು. ನಮಗೆ ಇಷ್ಟೆಲ್ಲಾ ಆದರ ಸತ್ಕಾರ ಮಾಡಿದ ಒಬ್ಬನನ್ನು ನಮ್ಮ ರೂಂನಲ್ಲೇ ನಿಲ್ಲಿರೆಂದು ಒತ್ತಾಯಿಸುವುದು ಸೂಕ್ತ ಎಂದು ನನಗೆ ಹೊಳೆಯಿತ್ತು. ಆ ರಾತ್ರಿ ಸಂಬಂಧಿಕರ ಮನೆಗೆ ಅವರನ್ನು ತಲ್ಪಿಸುವುದು ಉಪದ್ರ. ಅಂತೂ ನಮಗಾಗಿ ಇಷ್ಟು ತೊಂದರೆ ತೆಗೆದುಕೊಂಡದಕ್ಕೆ ರಾತ್ರಿ ನಮ್ಮೊಡನೆ ನಮ್ಮ ರೂಮಿನಲ್ಲಿ ನಿಲ್ಲಿರೆಂದಾದರೂ ಹೇಳುವ ಸೌಜನ್ಯತೆ ನಮ್ಮಲ್ಲಿರಬೇಕೆನಿಸಿತು ನನಗೆ. ಹಾಗಾಗಿ ಆ ವ್ಯಕ್ತಿಯೊಡನೆ ಹೇಳಿದೆ. "ನೋಡಿ ಮಿಸ್ಟರ್, ಇನ್ನು ರಾತ್ರಿಯಾಯಿತಲ್ಲ, ನೀವು ಮನೆಗೇಕೆ ಹೋಗುವಿರಿ? ನಮ್ಮ ರೂಮಿನಲ್ಲೆ ಈ ರಾತ್ರಿ ಇದ್ದುಬಿಡಿ. ಧಾರಾಳ ಮಾತಾಡಬಹುದು.

"ಛೆ ಛೆ, ಬೇಡ, ಬೇಡ. ನಿಮಗೇಕೆ ತೊಂದರೆ. ಅದೂ ಈ ಹೋಟೇಲಿನಲ್ಲಿ ಐದು ಜನ ಡಬ್ಬಲ್ ರೂಮಿನಲ್ಲಿರುವುದೂ ಅಸಾಧ್ಯ. ಮಾತ್ರವಲ್ಲ ಮಾಲಿಕರು ಒಬ್ಜೆಕ್ಷನ್ ಎತ್ತುತ್ತಾರೆ. ಬೇಡ ಬೇಡ" ಎಂದಿತು ನಾನು ಮತ್ತೂ ಒತ್ತಾಯಿಸಿದೆ. ನನ್ನವರಲ್ಲಿ ಕೆಲವರು ಚೇರಿಂಗ್ ಮಾಡಿದರು ಕೊನೆಗೆ ಒತ್ತಾಯಕ್ಕೆ ಕಟ್ಟುಬಿದ್ದು ಆ ವ್ಯಕ್ತಿ ನಮ್ಮೊಡನೆ ರೂಂನಲ್ಲಿರಲು ಒಪ್ಪಿತು.

ರೂಂ ಸೇರಿ, ಅಂಗಿ ಕಳಚಿ ಪರ್ಸು, ಪೆನ್ನುಗಳನ್ನು ಮೇಜಿನ ಒಳಗಿಟ್ಟುದೂ ಆಯಿತು. ಮುಖ ತೊಳೆದು ನಾವು ಪುನಃ ರೂಂ ಸೇರಿದವು. ಎರಡು ಮಂಚಗಳನ್ನು ಜೋಡಿಸಿ ಮೂವರೂ, ನೆಲದ ಮೇಲೆ ಇಬ್ಬರೂ ಮಲಗಿದೆವು ಮಂಗಳೂರಿನ ಸಮೃದ್ಧ ನುಸಿಗಳ ಸಂಗೀತಕ್ಕೆ ನಮಗೆ ಥಕ್ಕನೆ ನಿದ್ದೆ ಒದಗದಿದ್ದರೂ, ಆಯಾಸಗೊಂಡಿದ್ದ ನಮ್ಮ ದೇಹಕ್ಕೆ ಆ ನುಸಿಗಳ ಹೊಡೆತವೂ ಕೊನೆ ಕೊನೆಗೆ ನಾಟಲಿಲ್ಲ ಅಂತೂ ನಾವೆಲ್ಲಾ ನಿದ್ರಾಧೀನರಾದೆವು.

ಬೆಳಿಗ್ಗೆ ಗಂಟೆ ಎಂಟಾದರೂ ನಾವ್ಯಾರೂ ಎದ್ದಿರಲಿಲ್ಲ. ಹಂಪನಕಟ್ಟೆಯ ಬಸ್ಸುಗಳ ಓಡಾಟ, ಕಿರುಚಾಟ, ಸದ್ದು ಗದ್ದಲ ಎಲ್ಲವೂ ಕೇಳಿಸುತಿತ್ತು. ಗಂಟೆ ಎಂಟಾಗುತ್ತಲೇ ನಾನು ಎಚ್ಚತ್ತೆ. ಎಚ್ಚತ್ತು ಪಕ್ಕಕ್ಕೆ ಹೊರಳುತ್ತೇನೆ ನಮ್ಮ ಹೊಸ ಮಿತ್ರರು ಮಲಗಿದಲ್ಲಿಲ್ಲ. "ಪ್ರಾಯಶಃ ಬೇಗನೇ ಎದ್ದಿರಬೇಕು. ನಮ್ಮಂತಹ ಕುಂಭಕರ್ಣರೇ ಅವರು?" ಎಂದು ನಾನು ನೆನಸಿ ಎದ್ದೆ ಅವರೆಲ್ಲೋ ಹೋಗಿರಬೇಕೆಂಬ ಭಾವನೆಯಿಂದ ಗೆಳೆಯರನ್ನೂ ಎಬ್ಬಿಸಿ ಮುಖ ಮಾರ್ಜನ ತೀರಿಸಿದೆವು. ನಮ್ಮ ಗೆಳೆಯರು ಕಾಣೆ. ನಾನು ಹೋಟೇಲಿಡೀ ಸುತ್ತಿಬಂದೆ. ರಸ್ತೆಯ ಕಡೆಗೂ ಇಣಕಿದ. ಆ ವ್ಯಕ್ತಿ ಇರಲಿಲ್ಲ ಆ ವ್ಯಕ್ತಿಯ ಚಪ್ಪಲಿಗಳಾದರೂ ಇವೆಯೇ? ಎಂದು ನಾನು ರೂಮಿನ ಮೂಲೆ ನೋಡುತ್ತೇನೆ ಚಪ್ಪಲಿಗಳಿಲ್ಲ. "ಪ್ರಾಯಶಃ ಏನೋ ಅವಸರದ ಕೆಲಸ ಇದ್ದಿರಬೇಕು. ಹೋಗುವಾಗ ಹೇಳಿ ಹೋಗಲು ನಿದ್ದೆ ಮಾಡುತಿದ್ದವಲ್ಲ ನಾವು. ಯಾಕೆ ಎಬ್ಬಿಸುವುದೆಂದು ಸೀದಾಗಿ ಹೋದರೇನೋ! ಛೆ, ಛೆ, ಎಂತಹ ಹಾಳು ನಿದ್ದೆ." ಎಂದು ನಾವು ನಮ್ಮನ್ನೇ ಶಪಿಸಿಕೊಂಡೆವು.

ಬೆಳಗ್ಗಿನ ಕಾಫಿ ಕುಡಿಯದೆ ಹೊಟ್ಟೆ ಚುರ್ ಎನ್ನುತಿತ್ತು. "ಡ್ರಿಂಕ್ ಬಾರ್‌ಗಾದರೂ ಹೋಗಿ ಕಾಫಿ ಕುಡಿದು ಮುಂದಿನ ಆಲೋಚನೆ" ಎಂದು ನೆನಸಿ ಅಂಗಿ ಸಿಕ್ಕಿಸಿದೆವು. ಪರ್ಸಿಗಾಗಿ ಮೇಜಿನ ಡ್ರಾವರನ್ನು ನಾನು ಎಳೆದಾಗಲೇ ನನಗೆ ಗೊತ್ತಾಯಿತು ನಮ್ಮ ಅಪರಿಚಿತ ಮಿತ್ರರ ನಮ್ಮ ಪರ್ಸುಗಳ ಪ್ರಿಯರ ಎಂದು ನಮ್ಮೆಲ್ಲರ ಪರ್ಸುಗಳು ಪೆನ್ನುಗಳು ಕಾಣೆಯಾಗಿದ್ದುವು ಜೊತೆಗೆ ನಮ್ಮ ಮಿತ್ರರೂ ಸಹ. ನಮಗಾಗಿ ಹತ್ತು ಹದಿನೈದು ರೂಪಾಯಿ ವ್ಯಯಿಸಿದ ಆ ವ್ಯಕ್ತಿ ಅದಕ್ಕೆ ಪ್ರತಿಯಾಗಿ ನಮ್ಮ ನಾಲ್ವರ ಪರ್ಸನ್ನೆಲ್ಲಟ್ಟಿ, ನೂರಕ್ಕೂ ನಿಕ್ಕಿ ರೂಪ್ಯಗಳನ್ನು ಲಪಟಾಯಿಸಿದ್ದ. ಪೋಲಿಸ್ ಕಂಪ್ಲೈಂಟ್ ಕೊಡೋಣವೆಂದರೆ, ಅಷ್ಟು ಮಾತಾಡಿದ್ದರೂ ಅವನ ಹೆಸರನ್ನೇ ನಾನು ಕೇಳಿರಲಿಲ್ಲ. ನಮ್ಮ ತಲೆಗೆ ಕಲ್ಲು ಹೊತ್ತು ಹಾಕಿದಂತಾಯಿತು. ಇನ್ನು ಮಂಗಳೂರಿನಿಂದ ಊರು ಸೇರುವ ಬಗೆ? ಅದಕ್ಕೆ ನಾವು ಹೊಸ ಮಿತ್ರರನ್ನು ಹುಡುಕಬೇಕಾಯಿತು. ಅಂತೂ 'ಆ ವ್ಯಕ್ತಿ' ನಮ್ಮ ಮರೆಯಲಾಗದ ಮಿತ್ರನಾದ.

— ಶ್ರೀ ಯಸ್. ಸದಾಶಿವರಾವ್,
ಉಡುಪಿ

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯುವಿರಿ!

ಕ್ಲಾರ್ಕ್ ಸುಬ್ಬನನ್ನು ಕಂಡಾಗಲೆಲ್ಲ ಏಜೆಂಟ್ ನಾಣ್ಣು ಉರಿದೇಳುತ್ತಿದ್ದ. ಸುಬ್ಬನ ಅಪೂರ್ವ ಓಜಸ್ಸು (ಅಂದರೆ ಅಂತಹ ಓಜಸ್ಸು ಪೂರ್ವದಲ್ಲಿ ಯಾರಿಗೂ ಇದ್ದಿರಲಿಲ್ಲ) ಅವನ ನ್ಯಾಯವಾದ ಇವೆಲ್ಲವೂ ಏಜೆಂಟರಿಗೆ ಸಿಟ್ಟು ಬರಿಸಿದ್ದುವು. ಸುಬ್ಬನಿಗೆ ಇದು ಸಹಿಸಲಾಗಲಿಲ್ಲ. ಆತ ಇತರ ಸಹೋದ್ಯೋಗಿಗಳೊಡನೆ ಕಲೆತು ಏಜೆಂಟರಿಗೆ ಬುದ್ಧಿ ಕಲಿಸಲು ಹವಣಿಸಿದ; ಹಣತೊಟ್ಟ.

ದೈವವಶಾತ್ ಸುಬ್ಬನಿಗೊಂದು ವಿಷಯ ಹೊಳೆಯಿತು. ಏಜೆಂಟರಿಗೆ ಯಾವಾಗಲೂ ಸೋಡ್ತಿ ಹಚ್ಚೊಂದಿತ್ತು. ಅದಕ್ಕಾಗಿ ಸುಬ್ಬ ಏಜೆಂಟರೊಡನೆ ಛಟ್ಟಿ ಮಾಡಿ ಹೇಳಿದ, 'ನೋಡು ನಾಣ್ಣು; ನೀನೂ, ನಾವು ಕೆಲವು ಕ್ಲಾರ್ಕ್ಸ್‌ಗಳೂ ಸೇರಿ ಕೆಲವೊಂದು ಚೀಟಿಗಳನ್ನು ಎತ್ತುವುದು. ಅಂತಹ ಚೀಟಿಲ್ಲಿ ಯಾವಾತಂಗೆ 'ಸೋಡ್ತಿ' ಎಂದು ಬರೆದಿರುವ ಚೀಟು ಬರುವುದೋ ಆತ ಇತರ ಎಲ್ಲಾ ಜನಕ್ಕೆ ಎಂಟರ್‌ಟೇನ್ (ಎಂಟರ್‌ಟೇನ್‌ಮೆಂಟ್ ಎಂದ. ಲಿಷ್ಟ್ ಮಂತಿಲ್ಲ ಅವರು ಹೊಟ್ಟೆ ತುಂಬಿತು ಎನ್ನುವಷ್ಟರ ವರೆಗೆ ಅವರಿಗೆ ತಿನ್ನಗೊಡಬೇಕಿತ್ತು) ಕಾಫಿ ಕುಡಿಸಬೇಕು. ಆಗಬಹುದೇನು?"

'ಆಗಬಹುದಂತೆ; ಅದಕ್ಕೇನು? ಈಗಲೇ ಏರ್ಪಾಡು ಮಾಡಿಸು.'

ಸುಬ್ಬ ಏರ್ಪಾಡು ಮಾಡಿದ. ಹಾಂ ಈಗ ಎಲ್ಲರೂ ಕಲೆತರು ಹತ್ತು ಮಂದಿ (ಒಂಬತ್ತು ಕ್ಲಾರ್ಕ್ಸ್ ಒಬ್ಬ ಏಜೆಂಟ್ ಹತ್ತು ಚೀಟಿತೆತ್ತಿದ್ದರು). 'ಹ್ಹಾಂ ನನಗಿಲ್ಲ' 'ನನಗಿಲ್ಲ' 'ನನಗಂತಿಲ್ಲವೇ ಇಲ್ಲ' 'ನನಗೂ ಅಂತೆಯೇ' 'ನನ್ನದು ಛಾನ್ಸ್' ಎಲ್ಲರೂ ಬೊಬ್ಬಿಟ್ಟರು. ಏಜೆಂಟ್ ನಾಣ್ಣನ ಮುಖ ರಾಹುಗ್ರಸ್ತಕ್ಕೆ ಒಳಗಾದ ಚಂದ್ರನಂತಿತ್ತು, ನಿರಾಶದ ಎಳತಾದ ಒತೆಯಾತೆ ಬಂದಿ ಹೋಗಿತ್ತು. 'ಅಯ್ಯೋ ಈ ಸಾರಿ ನನಗೆ……ಇರಲಿ? ಏಜೆಂಟ್ ನಾಣ್ಣು ಹಲುಬಿದ

ಹ್ಹಾಂ, ಈಗ ಶರ್ತದ ಮೇರೆ ಏಜೆಂಟ್ ಎಲ್ಲಾ ಕ್ಲಾರ್ಕ್ಸ್‌ಗಳಿಗೂ ತನ್ನ ಹಣದ ಸಹಾಯದಿಂದ ಕಾಫಿ ಕುಡಿಸಿದ. ಉತ್ತರವಾಗಿ ಐವರ ಒಂದು, ಎರಡರ ಎರಡು ನೀಲಿ, ನೀಳ ನೋಟು ಗರ್ಭಿಣಿ ಪರ್ಸಿನಿಂದ ಹೊರ ಹಾರಿದುವು.

ಇನ್ನೊಮ್ಮೆ ಛಾನ್ಸ್‌ವಾರವೂ ಇದೇ ಕತೆಯಾಯಿತು ಏಜೆಂಟರಿಗೇ 'ಸೋಡ್ತಿ' ಎಂದು ಉಲ್ಲೇಖಿತವಾದ ಚೀಟು ಕರಗತವಾಗಲ್ಪಟ್ಟಿತು. ಆವರೇ ದ್ವಿತೀಯ ವೇಳೆಯಲ್ಲೂ ಎಲ್ಲರಿಗೆ ಕಾಫಿ ಕುಡಿಸಿ ಶರ್ತ ಪೂರ್ತಿಸಿದರು ಏಜೆಂಟರಿಗೊಟ್ಟು ನಷ್ಟವೇ ನಷ್ಟ. ಮೂರನೆಯ ರವಿವಾರವೂ ಏಜೆಂಟರಿಗೆ ಆ ಚೀಟು ಬರಬೇಕೆ? 'ಛೇ ಏನೋ ಶನಿ...' ಏಜೆಂಟ್ ಏಕ್ದಂ ಬೊಬ್ಬೆ ಹಾಕಿದ. ಏಕೆಂದರೆ ಅವನ ನಷ್ಟ ದುಃಸಹ ತಾನೆ?

ಅಂದಿನಿಂದ ನಾಣ್ಣನ ಮನ ಕಸಿವಿಸಿಗೊಂಡುದು ಮಾತ್ರವಲ್ಲದೆ ಆತ ಆಗನಿಂದ ಸುಬ್ಬ, ಇತರ ಕ್ಲಾರ್ಕ್ಸ್‌ಗಳೊಡನೆ ಕಲೆಯಲುಎಪಾದೆಆದರೆ ಸುಬ್ಬ ಮಾಡಿದ ಉಪಾಯ ಗೊತ್ತೇನು? ಪ್ರತೀ ಆದಿತ್ಯವಾರ ಹತ್ತು ಚೀಟುಗಳನ್ನು ತಂದು ಅದರಲ್ಲಿ (ಹತ್ತು ಚೀಟಿಗಳಲ್ಲೂ) 'ಸೋಡ್ತಿ, ಸೋಡ್ತಿ ಅಂತ ಬರೆಯೋದು. ನಂತರ ಚೀಟುಎತ್ತಿದಾಗ ಏಜಂಟರಿಗೂ ಸುಬ್ಬನಿಗೂ ಇತರರಿಗೂ 'ಸೋಡ್ತಿ' ಎನ್ನುವ ಚೀಟು ಬರುವುದು, ಆದರೆ ಎಲ್ಲರೂ ಅನ್ನುವುದು. 'ಹಾಂ ನನಗಿಲ್ಲ, 'ನನಗೆ ಬಂದಿಲ್ಲ, ನನಗಂತಿಲ್ಲವೇಯಿಲ್ಲ, ನನಗೂ ಹಾ

ಗಮನಿಸಿರಿ!



ನಮ್ಮ ಟ್ರೇಡ್‌ಮಾರ್ಕಿನ ಅನುಕರಣೆಯನ್ನು ಮಾಡುವ ಇತರ ನಕಲಿ ಬೀಡಿಗಳಿಗೆ ಮೋಸಹೋಗದಿರಿ.

ಮೇಲಿನ ಎಸ್. ಆರ್. ಟ್ರೇಡ್‌ಮಾರ್ಕ್ ಇರುವ ಬೀಡಿಗಳು ಮಾತ್ರ ನಿಮಗೆ ಖಾತ್ರಿದಾಯಕವಾದುದು.

S.R.BEEDI WORKS, UDIPI, S.K.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಪ್ರತಿಗಳು ಸಿಗುವ ಮುಖ್ಯ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗೆಯೋ" ನನ್ನದು ಛಾನ್ಸ್ ಎಂದು ಚೀಟು ಹರಿದು ಕಸದಬುಟ್ಟಿಗೆಸೆಯುವುದು. ಆದರೆ ಎಜಂಟರಿಗೆ ಅದೇನು ಗೊತ್ತೇನು? ಇದೇ ಸುಬ್ಬ ಮತ್ತು ಪಾರ್ಟಿ ಯತ್ನಿಸಿದ ಯತ್ನ

ಸುಬ್ಬ ಪ್ರಖ್ಯಾತ ಸಿನೇಮಾ ನಟನಾಗಿದ್ದ (ಯಾವ ಜನ್ಮದಲ್ಲಿ? ಎಂದು ಕೇಳಬೇಡಿ) ಒಮ್ಮೆ ಆತ ಡೈರೆಕ್ಟರರೊಡನೆ ಅಂದು ಬಿಟ್ಟ, "ಡಿಯರ್ ಡೈರೆಕ್ಟರ್, ಯಾವುದೋ ಒಂದು ಅಂಕದಲ್ಲಿ ನನಗೆ ಕುಡುಕನ ಪಾತ್ರ ಇದ್ದಂತಿದೆ'

"ಹೌದು ಸುಬ್ಬ"

"ಆದರೆ ನೋಡಿ ಸರ್"

'ಹೌದು ?'

"ನನಗೆ ಮಾತ್ರ (ತಲೆತುರಿಸುತ್ತ) ಕುಡುಕನ ಪಾತ್ರ ವಹಿಸೋಕೆ ಚೆನ್ನಾಗಿ ಬರುವುದಿಲ್ಲ"

"ಅದಕ್ಕೆ ?"

"ನಿಜಕ್ಕೂ ಒಂದು ಬಾಟ್ಲಿಕೊಟ್ಟಿದ್ದರೆ ಎಷ್ಟೋ ಚೆನ್ನಾಗಿತ್ತು."

ಹಾಗಾದರೆ ಮುಂದೆ ನಿನಗೆ ಎಷ್ಟಾರ್ ಶೂಟ್ ಮಾಡುವುದಿದೆ, ಆಗ ಪಿಸ್ತೂಲಲ್ಲಿ ನಿಜಕ್ಕೂ ಮದ್ದು ತುಂಬುವ ವ್ಯವಸ್ಥೆ ಮಾಡಬಹುದೆ?

ಇದಕ್ಕೆ ಸುಬ್ಬ ......

oo ooo

ಎಂದಿನಂತೆ ಅಂದೂ ಸುಬ್ಬ ಲೋಕಲ್ ಲ್ಯಾಬ್ರರಿ-ಒಧೋರಿಟಗೆ ಭೇಟ್ಟಿ ಕೊಟ್ಟಿದ್ದ. ಅಲ್ಲಿ ಇಲ್ಲಿ ಹಲವೊಂದು ಕೆಲವೊಂದು ಪತ್ರಿಕೆ ಮಗುಚಿಹಾಕಿ ಒಂದು ಪತ್ರಿಕೆಯ ಒಂದೂ ಪುಟದ ಒಂದು ಮೂಲೆಯಲ್ಲಿ ಒಂದು ಜಾಹೀರಾತನ್ನು ಒಮ್ಮೆಗೆ ಕಂಡ, ಅಲ್ಲಿ ಬರೆದಿತ್ತು "ಸುಸಂದರ್ಭ! ನೋಡಿ ನಮ್ಮ ಹೇರ್ ಒಯಿಲ್ ಬಾಟ್ಲಿ ತೆಗೆದುಕೊಂಡ ಪ್ರತಿಯೊಬ್ಬರಿಗೂ ಒಂದು Wrist Watch ಹಾಗೂ 100 ಇತರ ಸಾಮಾನುಗಳನ್ನು ಉಚಿತವಾಗಿ ಕಳುಹಿಸಲಾಗುವುದು. V. P. ಚಾರ್ಜು ಸಮೇತ 10 ರೂ. ಬೀಳುವುದು." ಎಂದು ಸುಬ್ಬ ಕೂಡಲೇ ಕಾರ್ಡು ಬರೆದುಹಾಕಿ ತರಿಸಿದ ವಿ. ಪಿ. ಒಡೆದು ನೋಡಿದ ನೋಡುವುದೇನು? ಒಂದು ಪ್ಲಾಸ್ಟಿಕ್ ವಾಚ್, ¼ oz ಬಾಟ್ಲಿ, 100 ಗುಂಡುಸೂಜಿಗಳು ಸುಬ್ಬನಿಗೆ "ಅಯ್ಯೋ" ಎನ್ನಿಸಿತು. ಎಲ್ಲರಿಗೂ ತಿಳಿಸಿದ ಅವರು ಒಳ್ಳೆಯ ರಿಸ್ಟ್ ವಾಚ್‌ನ್ನೂ 100 ಬೇರೆ ಬೇರೆ ಅತ್ಯಮೂಲ್ಯ ಬೆಲೆಬಾಳುವ ವಸ್ತುಗಳನ್ನು ಕಳುಹಿಸಿಕೊಟ್ಟಿದ್ದಾರೆಂದು ಮುಂದೆ ಎಲ್ಲರೂ ಕಾರ್ಡು ಬರೆದುಹಾಕಿದರು. ಅವರಿಗೆ ಬಂದ.ದೇನಂತೆ?

oo oo

ಸುಬ್ಬ ಒಬ್ಬಾಕೆಯನ್ನು ಪ್ರಶ್ನಿಸಿದ:- ಅಮ್ಮಾ ನಿನಗೆ ಈಗಾಗಲೇ ಒಂದೂಕಾಲು ಡಜನ್ ಮಕ್ಕಳಿದ್ದಾವೆ. ಈಗಲೂ ಗರ್ಭಿಣಿಯೇನು? ನೀನಂತೂ ಬಡವೆ. ಹಾಗಾದರೆ ಗತಿಯೇನು?

ಅದಕ್ಕೆ ಆಕೆ:—"ಅಯ್ಯೋ ಇಷ್ಟರ ತನಕ ೧೫ ಮಕ್ಕಳು ಉಂಡು ಉಳಿದುದನ್ನು ತಿನ್ನುತ್ತಿದ್ದೆ. ಈಗಲಂತೂ ೧೬ ಮಕ್ಕಳು ಉಂಡು ಉಳಿದುದನ್ನು ತಿನ್ನುವ ಯೋಗ ಬಂತಂತೆ ಅದಕ್ಕೇನು?"

—ಕೆ. ರಮೇಶ ಶೈ

ಸಹಕಾರಿ ಪರಿಷತ್ತು

(೧ನೇ ಪುಟದಿಂದ)

"ಕೈಗಾರಿಕೆಯ ಸಹಕಾರ ಸಂಘಗಳಲ್ಲಿ ಕೆಲವೊಂದು ಅಡಚಣೆಗಳಿವೆ. ಇವನ್ನು ಆದಷ್ಟು ಬೇಗನೇ ದೂರ ಮಾಡುವ ಪ್ರಯತ್ನ ನಡೆಯುತ್ತಿದೆ. ಉದ್ಯಮ ಮತ್ತು ನೀರಾಭವನಗಳ ಕಡೆಗೆ ಸರಕಾರದ ಕಷ್ಟತರವಾದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಅವುಗಳ ಬಾಹ್ಯ ರೂಪದಲ್ಲಿ ನೋಡದೆ ಅವುಗಳ ಹಿಂದಿರುವ ಸರಕಾರದ ಮಹಾ ಉದ್ದೇಶಗಳನ್ನು ಮುಂದಿಟ್ಟುಕೊಂಡು ನೋಡಬೇಕಾಗಿದೆ.

"ಸಹಕಾರದ ತತ್ತ್ವವನ್ನು ಒಪ್ಪಿರುವವರು ಈ ಸಹಕಾರಿ ಸಂಸ್ಥೆಗಳಿಗೆ ಅಧಿಕಾಧಿಕವಾಗಿ ಸೇರಬೇಕು; ಜನತೆಯಲ್ಲಿ ಯಶಸ್ವಿಯಾದ ಸಹಕಾರಿ ಜೀವನವನ್ನು ಬಾಳುವಂತೆಯೂ ವಿಶೇಷವಾಗಿ ತರುಣವರ್ಗದಲ್ಲಿ ಸಹಕಾರಿ ತತ್ತ್ವಗಳಲ್ಲಿ ಆಸಕ್ತಿಯೂ ಹುಟ್ಟುವಂತೆ ಮಾಡಬೇಕು. ಜನಬೆಂಬಲದಿಂದಲೇ ಸಹಕಾರಿ ಸಂಘಗಳು ಯಶಸ್ವಿಯಾಗಿವೆ; ಇನ್ನು ಸ್ಥಾಪಿತವಾಗುವ ಸೇವಾ ಸಹಕಾರಿ ಸಂಘಗಳೂ ಈ ಜನ ಬೆಂಬಲದಿಂದಲೇ ಯಶಸ್ವಿಯಾದಾವು.

"ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಚಳವಳಿಯು ಉತ್ತಮ ಸಹಕಾರಿಗಳ ಮಾರ್ಗದರ್ಶನದಿಂದ ಯಶಸ್ವಿಯಾಗಿದೆ. ಸಾಮಾನ್ಯವಾಗಿ ಜಿಲ್ಲೆಯ ಎಲ್ಲ ಹಳ್ಳಿಗಳೂ ಸಹಕಾರಿ ಸಂಘಗಳ ಸೀಮೆಯೊಳಗೆ ಬರುತ್ತವೆ. ಸಹಕಾರಿ ತತ್ತ್ವಾನುಯಾಯಿಗಳ ಸಂಖ್ಯೆಯು ಇಲ್ಲಿ ವಿಶೇಷವಿರುವುದು ಸಂತೋಷದ ಸಂಗತಿ. ಸಹಕಾರಿ ತತ್ತ್ವದ ಮತ್ತು ಚಳವಳದ ಸಾಫಲ್ಯವು ಆಯಾ ಊರಿನ ಮುಂದಾಳುಗಳು ಕೈಗೊಳ್ಳುವ ಕಾರ್ಯಾಚರಣೆಗಳನ್ನೇ ಹೊಂದಿಕೊಂಡಿದೆ ಎಂದು ಹೇಳಬೇಕು. ಮಾನವನ ಬುದ್ಧಿಶಕ್ತಿಯೇ ಉತ್ತಮವಾದ ಉತ್ಪನ್ನತಾರಕ ಸ್ಥಿತಿಯನ್ನುಂಟುಮಾಡುವುದೆಂದು ಸರ್ವವಿದಿತವಿದೆ.

"ಮೈಸೂರಿನಲ್ಲಿ ಇನ್ನುಮುಂದೆ ದೊಡ್ಡ ಸಹಕಾರಿ ಸಂಸ್ಥೆಗಳನ್ನು ರಚಿಸಬಾರದೆಂದು ನಿರ್ಧರಿಸಲಾಗಿದೆ. ಹಾಗೆಂದರೆ, ಈಗಿರುವ ದೊಡ್ಡ ಸಂಸ್ಥೆಗಳನ್ನೂ ಗ್ರಾಮೀಣ ಬೇಂಕುಗಳನ್ನೂ ಕಿತ್ತುಬಿಡುವುದೆಂದರ್ಥವಲ್ಲ. ಹೊಸ ವ್ಯವಸ್ಥೆಯು ಈ ಸಂಸ್ಥೆಗಳನ್ನು ಮತ್ತಷ್ಟು ಬಲಪಡಿಸಲು ನೆರವಾಗುವುದು. ಗ್ರಾಮ ಸಹಕಾರ ಸಂಘಗಳೂ ಹೊಸಕಾರ್ಯ ವ್ಯವಸ್ಥೆಯ ಪರಿಮಿತಿಗೆ ಹೊಂದಿಕೊಂಡು ಪುನರ್ವ್ಯವಸ್ಥೆ ಹೊಂದಬೇಕು. ಇದುವರೆಗೆ ಅಡಿಯಿಡದ ಎಡೆಗಳಲ್ಲಿ ಸಹಕಾರ ಪದ್ಧತಿ ಹೆಜ್ಜೆಯಿಡಬೇಕು. ಇನ್ನುಮುಂದೆ ಸೇವಾಪದ್ಧತಿಯ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗುವುದು. ನಮ್ಮ ರಾಜ್ಯದಲ್ಲಿ ಈ ವರ್ಷ ೩,೫೦೦ ಇಂತಹ ಸಂಘಗಳನ್ನು ಸ್ಥಾಪಿಸಲು ನಿರ್ಧಾರಮಾಡಿದ್ದೇವೆ. ಈಗಿರುವ ಗ್ರಾಮ ಸಹಕಾರ ಸಂಘಗಳನ್ನು ಸೇವಾ ಸಹಕಾರಿ ಸಂಘಗಳಾಗಿ ಪರಿವರ್ತಿಸಲಾಗುವುದು. ೧,೫೦೦ ಜನರಿರುವ ಪ್ರತಿಯೊಂದು ಹಳ್ಳಿಗೂ ಸಹಕಾರಿ ಸಂಘಗಳ ಪ್ರಯೋಜನ ದೊರೆಯಬೇಕೆಂಬುದೇ ಸರಕಾರದ ಉದ್ದೇಶವಾಗಿದೆ. ಈಗ ಇಂತಹ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಸಂಸ್ಥೆಗಳು ಕೆಲಸ ಮಾಡುತ್ತಿರುವುವಾದರೆ, ಅವುಗಳು ಸ್ವೇಚ್ಛೆಯಿಂದಲೇ ವಿಲೀನಗೊಳ್ಳಬೇಕೆಂದು ಸಹಕಾರ ಇಚ್ಛಿಸುತ್ತದೆ

"ನಾವು ಆಹಾರದ ಉತ್ಪನ್ನವನ್ನು ಹೆಚ್ಚಿಸಲು ಸಮರಸನ್ನದ್ಧರಾಗಲೇಬೇಕು. ಸಹಕಾರಿ ಬೇಸಾಯವನ್ನು ಪ್ರೋತ್ಸಾಹಿಸಬೇಕು. ಸಹಕಾರಿ ಸಂಘಗಳು ಅಧಿಕ ಉತ್ಪಾದನೆಯನ್ನು ಸಾಧಿಸಲು ವ್ಯವಸ್ಥಿತವಾದ ಉತ್ಪಾದನಾ ಕಾರ್ಯಕ್ರಮವನ್ನೂ ಆರ್ಥಿಕ ಮತ್ತಿತರ ಸಹಾಯಗಳನ್ನೂ ಪಡೆದುಕೊಂಡು ಮುಂದುವರಿಯಬೇಕು ಇದಕ್ಕಾಗಿ ರಿಸರ್ವ ಬೇಂಕ್ ಅಥವಾ ಸರಕಾರಗಳನ್ನೇ ನಂಬಿಕೂರಬೇಕೆಂದಿಲ್ಲ. ಸಹಕಾರಿ ಸಂಸ್ಥೆಗಳು ಎಲ್ಲ ಪ್ರಕಾರದಿಂದಲೂ ವೆಚ್ಚವನ್ನು ಕಡಿಮೆ ಮಾಡುವ ವಿಧಾನಗಳನ್ನು ಅನುಸರಿಸಿ ಸರ್ವ ವಿಧದ ಉಳಿತಾಯಗಳನ್ನು ಸಾಧಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಸ್ಥಳೀಯ ಸಂಪತ್ತನ್ನು ಸಂಗ್ರಹಿಸಿ ಸ್ವಂತ ನಿಧಿಯನ್ನು ಬೆಳೆಸಿ ಅಭಿವೃದ್ಧಿ ಹೊಂದುವುದು ಸಹಕಾರಿ ವ್ಯವಸ್ಥೆಯ ಉದ್ದೇಶವಾಗಿರಬೇಕು.

"ಕಾರ್ಯ ವೈವಿಧ್ಯವಿಲ್ಲದಾಗ ಸಂಸ್ಥೆಗಳು ಹೆಚ್ಚು ಬೇಕಾದ ಅಗತ್ಯವಿಲ್ಲ. ಈಗಿರುವ ಸಂಸ್ಥೆಗಳೂ ಒಂದರೊಡನೊಂದು ಸೇರಿಕೊಳ್ಳಬಹುದಾಗಿದೆ. ಆದರೆ, ಇದರಲ್ಲಿ ಒತ್ತಾಯವನ್ನು ಹೇರಲಾಗದು. ಸಂಸ್ಥೆಗಳನ್ನು ಕಡಿಮೆಮಾಡಬೇಕು; ಹೆಚ್ಚಳವನ್ನು ತಡೆಯಬೇಕೆಂಬ ಅಭಿಪ್ರಾಯವು ಜನತೆಯಿಂದಲೇ ಬರಬೇಕು; ಸರಕಾರವು ಅವರ ಪ್ರಯತ್ನಗಳಿಗೆ ಸಹಾಯ ಮಾತ್ರ ನೀಡುವುದು.

"ಸಾಲಕ್ಕೆ ಒದಗಿಸುವ ಜವಾಬ್ದಾರಿಯನ್ನು ಸ್ಥಿರಸೊತ್ತುಗಳ ಮೇಲಿನಿಂದ ನಿರೀಕ್ಷಿತ ಬೆಳೆಗೆ ದಾಟಿಸಿದಾಗ ಸಾಲದ ಮರುಪಾವತಿಯನ್ನು ಸಾಲಕೊಟ್ಟ ಸಂಸ್ಥೆಗಳು ಪದಾರ್ಥರೂಪದಲ್ಲಿಯೇ ಪಡೆಯುವ ಸ್ಥಿತಿ ಬರುತ್ತದೆ. ಗ್ರಾಮೀಣ ಸಾಲ ಪರಿಶೀಲನಾ ಸಮಿತಿಯ ಸಲಹೆಯಂತೆ ಹಾಗೂ ಹೊಸ ಕಾರ್ಯವ್ಯವಸ್ಥೆಯ ನಿರ್ಧಾರದಂತೆ ಸಾಲವ್ಯವಸ್ಥೆ ಮತ್ತು ಮಾರಾಟ ವ್ಯವಸ್ಥೆಗಳೊಳಗೆ ಯೋಗ್ಯ ಸಂಯೋಜನೆಯಿರಬೇಕಾಗುತ್ತದೆ. ಈ ರೀತಿಯ ಸಂಬಂಧದಿಂದ ರೈತನು ತನ್ನ ಸಾಲವನ್ನು ಯೋಗ್ಯಕಾಲದಲ್ಲಿ ಕೊಡಲು ಸಾಧ್ಯವಾಗುತ್ತದೆ. ತಾವು ಕೊಟ್ಟ ಹಣದ ಸದುಪಯೋಗವಾದುದನ್ನು ಕಂಡು ಸಂಸ್ಥೆಗಳೂ ಸಂತೋಷಗೊಳ್ಳುವುವು. ಮಧ್ಯವರ್ತಿ ವರ್ತಕನ ತಡೆಯನ್ನೂ ಈ ಪದ್ಧತಿಯಿಂದ ಮಾಡಬಹುದು."

ಪ್ರಾರಂಭದಲ್ಲಿ ಸ್ವಾಗತಾಧ್ಯಕ್ಷ ಬಿ. ಪ್ರಭಾಕರ ರಾಯರು ಸ್ವಾಗತಿಸಿದ್ದರು. ಶ್ರೀ ಎ ಭೀಮ ಭಟ್ಟರು ಸಂದೇಶ ವಾಚಿಸಿದ್ದರು. ಶ್ರೀಮತಿ ಬಿ. ಸುನಂದ ಬಾಳಿಗರು ೫೦ ವರ್ಷಗಳ ಸಫಲ ಜೀವನವನ್ನು ವಿವರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯದ ಸಹಕಾರಿ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಟಿ. ವಿ. ರೆಡ್ಡಿಯವರು ವಹಿಸಿದ್ದು ಶ್ರೀ ಮೊಳಹಳ್ಳಿ ಶಿವರಾಯರು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿದರು. ಕೊನೆಗೆ ಶ್ರೀ. ಎಚ್. ಸೀತಾರಾಮ ಭಟ್ಟರು ಕೃತಜ್ಞತೆಗಳನ್ನರ್ಪಿಸಿದರು ಶ್ರೀ. ಮುಗುಳಿ ರಾಮಕೃಷ್ಣ ಭಟ್ಟರು ಸಹಕಾರಿ ಪ್ರತಿನಿಧಿಗಳಿಗೊಂದು ಭೋಜನ ಕೂಟವನ್ನೂ ಏರ್ಪಡಿಸಿದ್ದರು.

ಕಾಸರಗೋಡು ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 233/1959

ಕೊರಗು ಯಾನೆ ಸುವಸಾಳ್ವ —ವಾದಿ

ಮತ್ತು

ದೂಮ ಕರ್ಸ —ಪ್ರತಿವಾದಿ

ಕಾಸರಗೋಡು ತಾಲೂಕು ಚಿಪ್ಪಾರು ಗ್ರಾಮದಲ್ಲಿರುವ ಸರೋಳಿಗುತ್ತು ಕೊರಗ ಶೆಟ್ರ ಆಳಿಯವ ದೇಯಿಂಬಾ ಮಗ ಪ್ರತಿವಾದಿ ದೂಮ ಕರ್ಸರಿಗೆ ಈ ಮೂಲಕ ತಿಳಿಸುವುದೇನಂದ್ರೆ —

ಮೇಲ್ಕಂಡ ವ್ಯಾಜ್ಯದ ವಾದಿಗೆ ನೀವು ಬರೆಕೊಟ್ಟ ರಿಜಿಸ್ಟ್ರ ವ್ಯಾಪಾರೀ ಚೀಟು ಪ್ರಕಾರ ಸಿಕ್ಕುವ ಬರತಕ್ಕ ಗೇಣಿಬಾಕಿಗೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 13—11—1959ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುವುದರಿಂದ ಆದಿನ ಹಗಲು ಗಂಟೆ 11ಕ್ಕೆ ನೀವು ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸಲು ತಪ್ಪಿದರೆ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕಳ್ಳಿಗೆ ಮಹಾಬಲ ಭಂಡಾರಿ
ಎಂ ಎ, ಎಲ್. ಎಲ್. ಬಿ
ವಾದಿಕಡೆ ಎಡ್ವಕೇಟ್

ಕಾಸರಗೋಡು 30—10—59

2
ಯೋಜನೆಗಳು
ಪಿಗ್ಮಿ
ದೈನಿಕ ಉಳಿತಾಯ
(೨೫ ನಯೇ ಪೈಸೆಯಿಂದ ಮೇಲ್ಪಟ್ಟು)
ಕ್ಯುಮ್ಯುಲೆಟಿವ್
ಮಾಸಿಕ ಉಳಿತಾಯ
(೫ ರೂಪಾಯಿಯ ಗುಣಕಗಳಲ್ಲಿ)
ವಿವರಗಳನ್ನು ತಿಳಿಯಲು ಬೇಂಕಿನ ಶಾಖೆಗೆ
ಬನ್ನಿರಿ ಅಥವಾ ಬರೆಯಿರಿ
ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

Edited, Printed & Published by K. H. Shetty, at the Navayuga Press, Udipi, S. India.

ವಾ. ಚಂದಾ ರೂ. 5-75

ಬೆಲೆ: 13 ನ.ಪೈಸೆ

Vol. 39. No. 11.
ವರುಷ ೩೯. ವಾರ ೧೧

12-11-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ಚೀನೀಯರನ್ನು ಭಾರತದಿಂದ ಹೊರದಬ್ಬಲು ಕಾಲವಂಚನೆ ಬೇಡ

ಪರಸ್ಪರ ದೋಷಾರೋಪಣೆ ಮಾಡುವ ಭಾರತ-ಚೀನಾಗಳಲ್ಲಿ ದೋಷಿಗಳಾರೆಂದು ಯಾರು ಸತ್ಯ ಹೇಳುವವರು?

ಇತ್ತೀಚೆಗೆ ಭಾರತದ ಒಳಗಡೆ ಭಾರತೀಯ ವಿದೇಶ ನೀತಿಯು ವಿಮರ್ಶೆಗೆ ಗುರಿಯಾಗಿರುವಂತೆ ಮತ್ತಾವುದೂ ಟೀಕಿಸಲ್ಪಟ್ಟಿದ್ದಿಲ್ಲ. ಪಂಚಶೀಲ ತತ್ವಗಳಿಗೆ ಹೊಂದಿಕೊಂಡು ಅವುಗಳ ಆಧಾರದಿಂದಲೇ ರೂಪಿತವಾಗಿರುವ ವಿದೇಶ ನೀತಿಯ ಬಗ್ಗೆ ವಿದೇಶಗಳಲ್ಲಿಯೂ ಸ್ವಲ್ಪ ಮಟ್ಟಿನ ಕುತೂಹಲವು ತೋರ್ಪಟ್ಟಿತ್ತು. ಶಾಂತಿಯ ದೂತರೆಂಬ ಹೆಸರನ್ನು ಪಡೆದ ಪ್ರಧಾನಿ ಜವಾಹರಲಾಲರು ರೂಪಿಸಿಕೊಂಡಿರುವ ಈ ಪಂಚಶೀಲವು ಅವರೇ ಹೇಳುವಂತೆ ಜಗತ್ತಿನಲ್ಲೆಲ್ಲಾ ಪರಿಣಾಮಕಾರಿಯಾಗಿ ಪ್ರಶಂಸೆಗೆ ಈಡಾಗಿದ್ದರೂ ಚೀನದ ವಿಷಯದಲ್ಲಿ ಮಾತ್ರ ಅಸಫಲವಾಗಿದೆ ಮಾತ್ರವಲ್ಲ, ಚೀನೀಯರ ಇತ್ತೀಚೆಗಿನ ನಡವಳಿಕೆಯಿಂದ ಸಂಪೂರ್ಣ ನಿಷ್ಫಲವಾಗಿದೆ ಎಂದು ಹೇಳಿದರೆ, ಅತಿಶಯೋಕ್ತಿಯಾಗದು.

ಏಶ್ಯಾದ ಹಿರಿಯ ರಾಷ್ಟ್ರವೊಂದು ಅಂಥದೇ ಇನ್ನೊಂದು ರಾಷ್ಟ್ರವನ್ನು ಆಕ್ರಮಣ ನಡೆಸುವುದೆಂದರೆ ಕೇವಲ ನೋಣದ ಕಚ್ಚಾಟದಂತಲ್ಲ. ಇದನ್ನು ಎಂದಿಗೂ ಮರೆಯಗೊಡಬಾರದು. ಚೀನದ ಆಕ್ರಮಣವನ್ನು ಹಿಂದೆ ತೆಗೆಯುವಂತೆ ಮಾಡಬೇಕು ಎಂದು ಎಲ್ಲರೂ ಹೇಳುತ್ತಾರೆ. ಅನ್ಯಾಯವಾಗಿ ಚೀನವು ಭಾರತದ ಗಡಿಯನ್ನು ಅತಿಕ್ರಮಿಸಿರುವುದೆಂದು ಭಾರತೀಯರು ಹೇಳುತ್ತಾರೆ. ಭಾರತದ ಸೀಮೆಯೊಳಗಣ ಚೀನೀ ಸೇನೆಯನ್ನು ಮರಳಿ ಕರೆಯಲು ಚೀನಾ ಸರಕಾರವನ್ನು ಭಾರತ ಸರಕಾರ ಕೇಳಿಕೊಂಡಿದೆ. ಆದರೆ, ಚೀನಾವು ತಾನು ಆಕ್ರಮಣ ಮಾಡಿರುವುದನ್ನೇ ಒಪ್ಪಿಕೊಳ್ಳುವುದಿಲ್ಲ. ಹಾಗಿರುವಾಗ, ಅದು ಸೇನೆಯನ್ನು ಹಿಂದೆ ಕರೆಯುವುದಾದರೂ ಹೇಗೆ? ಅಷ್ಟೇ ಅಲ್ಲದೇ ಚೀನದ ಅಭಿಪ್ರಾಯದಂತೆ ಭಾರತವೇ ಗಡಿಯನ್ನು ಉಲ್ಲಂಘಿಸಿ ಚೀನಾದ ಪ್ರದೇಶದಲ್ಲಿ ಸಂಚರಿಸುತ್ತಿದೆ ಎಂದಿರುವಾಗ, ಅದು ತನ್ನ ತಪ್ಪನ್ನು ಎಂದಾದರೂ ಒಪ್ಪಿಕೊಳ್ಳುವುದಿದೆಯೆ?

ಆಕ್ರಮಣಗಾರರು ಯಾರು ಎಂದು ಪರಸ್ಪರ ದೋಷಾರೋಪಣೆಯನ್ನು ಮಾಡುತ್ತ ಕಾಲಹರಣ ಮಾಡುವುದರಿಂದ ಯಾವ ಲಾಭವೂ ನಮಗಾಗುವುದಿಲ್ಲ. ಬಲಶಾಲಿಗಳು ಈ ಕಾಲದ ಸದುಪಯೋಗವನ್ನು ಪಡೆದು ತಮ್ಮ ಬಲವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಅವಕಾಶ ಮಾತ್ರ ದೊರಕೀತು. ಕಳೆದ ಎಂಟು ಹತ್ತು ವರ್ಷಗಳಿಂದಲೂ ಚೀನೀಯರು ಸೀಮೆಯ ಬಳಿ ಗುಡ್ಡಕಾಡುಗಳ ಮಧ್ಯೆ ಮಾರ್ಗಗಳನ್ನು ರಚಿಸುತ್ತ ಬಂದಿರುವಾಗ, ನಾವು ಆ ಬಗ್ಗೆ ಯಾವ ವಿಶೇಷ ಕಾರ್ಯಕ್ರಮಗಳನ್ನೂ ಕೈಗೊಳ್ಳದಿರುವುದೂ ಖೇದನೀಯವೇ. ಹಾಗಿದ್ದರೂ ನಾವಿಂದು ನಮ್ಮ ಇದ್ದ ಶಕ್ತಿಯನ್ನು ನಮ್ಮ ಭದ್ರತೆಗಾಗಿ, ಆತ್ಮರಕ್ಷಣೆಗಾಗಿ ಬಳಸಿಕೊಳ್ಳಲೇ ಬೇಕಾಗಿದೆ.

ಭಾರತದ ಗಡಿಪ್ರದೇಶದ ಮಾರ್ಗಗಳನ್ನು ಸೇನೆಯ ವಶಕ್ಕೆ ಕೊಡಲಾಗಿದೆ. ಚೀನೀಯರು ಅಪಹರಿಸಿದ ಭಾರತದ ಭಾಗಗಳನ್ನು ಅವರಿಂದ ಮರಳಿ ಪಡೆಯುವುದು ತೀರ ಅವಶ್ಯವಾಗಿದೆ. ಚೀನೀಯರು ಪ್ರತಿಭಟನಾ ಪತ್ರ, ಸಮಾಧಾನಗಳಿಗೆ ತಲೆತಗ್ಗಿಸುವರೆಂದು ಇನ್ನೂ ನಂಬಿಕೊಂಡಿರುವುದಕ್ಕೆ ಧೈರ್ಯ ಸಾಲದು. ನಮ್ಮದಾಗಿರುವ ಭೂಮಿಯನ್ನು ನಮಗೆ ಪಡೆಯಲು ಚೀನೀಯರ ಅನುಮತಿಯೂ ನಮಗೆ ಅಗತ್ಯವಿರುವುದಿಲ್ಲ. ಭೂಪಟದಲ್ಲಿಯೇ ಸೀಮೆಯನ್ನು ತಪ್ಪಾಗಿ ಗುರುತಿಸಿ ಮುಂದೆ ಅದು ಕೈತಪ್ಪೆಂದು ಹೇಳಿ, ಈಗ ಅದನ್ನೇ ಸರಿಯೆನ್ನುವ ಕಮ್ಯುನಿಷ್ಟ ಚೀನೀ ಸರಕಾರದ ಮಾತುಗಳು ಬಣ್ಣಬಣ್ಣದವಾಗಿದ್ದರೂ ಅದು ಕೈಗೊಳ್ಳುವ ಕಾರ್ಯಕ್ರಮ ಮಾತ್ರ ವಿಶ್ವಾಸಘಾತಕತನದ್ದೆಂದು ಸಂಪೂರ್ಣ ವ್ಯಕ್ತಪಟ್ಟಿದೆ. ಹಾಗಿರುವಾಗ ಇನ್ನೂ ಪ್ರತಿಭಟನೆಯ ಪತ್ರಗಳ ಮೂಲಕ ಈ ವಾದವು ತೀರ್ಮಾನವಾಗುವುದೆಂದು ನಂಬಿದರೆ, ಅದು ಎಂದಿಗೂ ಫಲಕಾರಿಯಾಗುವುದೆಂದು ಹೇಳಬರುವಂತಿಲ್ಲ. ಆದುದರಿಂದ ಪಂಚಶೀಲವನ್ನು ಮುರಿಯದೇನೇ ನಮ್ಮ ರಾಷ್ಟ್ರದ ಭದ್ರತೆಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು ಅವಶ್ಯವಿದೆ.

ನಿವೃತ್ತ ಮಹಾದಂಡನಾಯಕ ಮೇ| ಜ| ಕಾರ್ಯಪ್ಪ ಅವರು ಭಾರತವು ಪಾಕಿ

(೧೨ನೇ ಪುಟ ನೋಡಿರಿ)

ಅಮೆರಿಕೆಯ ಸುಪ್ರಸಿದ್ಧ ಕ್ರೀಡಾಪಟು ಕುಮಾರಿ ಅಂಡರ್‌ಸನ್ ಏಶ್ಯನ್ ರಾಷ್ಟ್ರಸಂಚಾರದ ನಂತರ ಎಡ್ವರ್ಡ್ ಮೋರೋರೊಡನೆ ಈ ಕುರಿತು ಚರ್ಚಿಸುತ್ತಿದ್ದಾಳೆ.

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ - ಮಂಗಳೂರು—3

ಸ್ಥಾಪನೆ - 1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ ...

ಕಥಾವಿಹಾರ

ಅವರು ಪರಲೋಕವಾಸಿಗಳಾದರು!

ಹಿಂದಿನ ರಾತ್ರೆ ನಾನು ಕಂಡ ಸ್ವಪ್ನ ಮರುದಿನ ಮುಂಜಾನೆಯೊಳಗೆ ಸತ್ಯವಾಗಿ ಪರಿಣಮಿಸಿತು.

ಮುದುಕಿ ಗಟ್ಟಿಯಾಗಿ ಪ್ರಲಾಪಿಸುತ್ತಿದ್ದಳು ಕಲ್ಲೇ ಕರಗುವ ಹಾಗೆ, ನೋಡಿದವರ ಕಣ್ಣಿನಿಂದ ಪಳಪಳನೆ ನೀರಿಳಿಯುವ ಹಾಗೆ, ಎದೆ ಬಿರಿವ ಹಾಗೆ, ಎದೆ ಎದೆ ಬಡಿದುಕೊಳ್ಳುತ್ತ, ತಲೆಯನ್ನು ನೆಲಕ್ಕೆ ಜಜ್ಜಿಕೊಳ್ಳುತ್ತ, ಜೀವ ಹೋಗುವಂತೆ ಕೂಗುತ್ತ, ಶೋಕಿಸುತ್ತಿದ್ದಳು. ಬಾಷ್ಪವೃಷ್ಟಿಯಿಂದಾಗಿ ಮುಖವೆಲ್ಲಾ ತೊಯ್ದು ಹೋಗಿತ್ತು. ಕೂದಲೆಲ್ಲಾ ಕೆದರಿಕೊಂಡಿತ್ತು. ದುಃಖಭಾರದಿಂದ ಮುಖವು ಕಂದಿ ಕುಂದಿ, ಬಸವಳಿದು ಹೋಗಿತ್ತು. ತನ್ನ ಜೀವನಾಧಾರನಾದೊಬ್ಬ ಅಳಿದುಹೋದನೆಂದ ಮೇಲೆ, ತಾನಿನ್ನು ಬದುಕಿ ಫಲವೇನೆಂಬ ದೃಢ ನಿಶ್ಚಯ ಕೈಕೊಳಗಾಗಿ, ಹೆಜ್ಜೆ ಹೆಜ್ಜೆಯಿಡುತ್ತ ಬಾವಿ ಬಳಿಗೆ ಬಂದಳು, ನಿರ್ಮಾನುಷ ಪ್ರದೇಶವಾದುದರಿಂದ ಯಾರೂ ಅವಳನ್ನು ತಡೆಯಲು ಸಾಧ್ಯವಿರಲಿಲ್ಲ. ಇನ್ನೇನು ಹಾರಬೇಕು........ಅಷ್ಟರಲ್ಲಿ "ಅಮ್ಮಾ" ಎಂದು ಚಿಟ್ಟನೆ ಚೀರಿದೆ. ನನ್ನ ತಾಯಿ ಹಲವಾರು ಬಾರಿ ನನ್ನ ಹೆಸರು ಹಿಡಿದು ಕರೆದ ಕೂಡಲೇ, ಘೋರ ಸ್ವಪ್ನ ಜಗತ್ತಿನಿಂ ನೈಜ ಸ್ಥಿತಿಗೆ ಬಂದೆ. ನಾನು ಕಂಡದ್ದು ಕನಸು ಎಂಬುದು ತಿಳಿದಾಗ ನನಗೇ ನಾಚಿಕೆಯಾಯಿತು—ನಾನು ಮಾಡಿದ ಕೆಲಸವನ್ನು ನೆನೆದು.

ನಿದ್ರಾಭಂಗವಾದುದರಿಂದ ನಾನು ಪುನಃ ಬೇಗನೆ ನಿದ್ದೆ ಮಾಡುವ ಸ್ಥಿತಿಯಲ್ಲಿರಲಿಲ್ಲ ಹಾಗೇ ಯೋಚಿಸತೊಡಗಿದಾಗ, ಹಿಂದೆ ನಡೆದ ಒಂದೊಂದೇ ಘಟನೆಗಳು ನೆನಪಿಗೆ ಬರಹತ್ತಿದುವು. ಆ ಮುದುಕಿ ಮತ್ತು ಅವಳ ತಮ್ಮ ಬಂದ ದಿನದ ಕಡೆಗೆ ನನ್ನ ಮನಸ್ಸು ಓಡಿತು.

ನಮ್ಮ ಮನೆಯ ಹತ್ತಿರ ಒಂದು ಪಾಳುಬಿದ್ದ ಮನೆಯಿದೆ. ಅಲ್ಲಿ ನೆಲಸಿ ಎಷ್ಟೋ ಕುಟುಂಬಗಳು ಕೈಸಾಗದೆ ಪಲಾಯನ ಸೂತ್ರ ಪಠಿಸಿದ್ದುವು. ಅಲ್ಲಿದ್ದ ನಾಗ, ರಕ್ತೇಶ್ವರಿಗಳಿಗೆ ನಿತ್ಯ ಪೂಜಾವಿಧಿಗಳು ಸಂದು ಬಹಳ ವರ್ಷಗಳಾದುದರಿಂದ, ಯಾರು ಬಂದು ವಾಸಿಸಿದರೂ ಕಷ್ಟ ತಪ್ಪಿದ್ದಲ್ಲವೆಂದು ಜನರು ಕಾರಣವನ್ನು ತಲ್ಪಸುತ್ತಿದ್ದರು. ಕ್ರಮೇಣ, ಯಾವ ಕುಟುಂಬವೂ ವಾಸಿಸಲಿಕ್ಕೆ ಬರದೆ, ಮನೆ ಪಾಳುಬಿದ್ದು, ಜುಗಾರಿಯಾಡುವವರಿಗೆ ಅದೊಂದು ಕೇಂದ್ರಸ್ಥಾನವಾಗಿ ಪರಿಣಮಿಸಿತ್ತು. ಎಲ್ಲಿ ನೋಡಿದರೂ ತುಂಡು ಬೀಡಿಗಳು, ಕಸ ಕಡ್ಡಿಗಳು ದೃಗ್ಗೋಚರವಾಗುತ್ತಿದ್ದುವು ಇಂತಹ ಮನೆಗೆ ಇಬ್ಬರು ವೃದ್ಧ–ವೃದ್ಧೆಯರು ವಾಸಿಸಲಿಕ್ಕೆ ಬಂದರು—ಒಂದು ಸಾಯಂಕಾಲದ ಸಮಯದಲ್ಲಿ.

ಆ ದಿನ ಆ ಮನೆಯ ಸಮೀಪದಲ್ಲೇ ದನ ಕರುಗಳನ್ನು ಬಿಟ್ಟುಕೊಂಡು, ನಾನು ಎ. ಕೃ. ಗೋಕಾಕರ 'ಇಜ್ಜೋಡ'ನ್ನೋದುತ್ತಾ ಕುಳಿತಿದ್ದೆ. ಥಟ್ಟನೆ ನಾನು ಹಿಂದಿರುಗಿ ನೋಡಿದಾಗ, ಇಬ್ಬರು ವೃದ್ಧ – ವೃದ್ಧೆಯರು ತಮಗಿಂತ ಭಾರವಾದ ಸಾಮಾನುಗಳನ್ನು ಹೊತ್ತುಕೊಂಡು ಬರುತ್ತಿರುವುದು ಕಣ್ಣಿಗೆ ಬಿತ್ತು. ಅವರ ಬಟ್ಟೆಗಳಾದರೋ ಚಿಂದಿ ಚಿಂದಿಯಾಗಿದ್ದುವು; ನೂರಾರು ತೂತುಗಳು ಎದ್ದುಕಾಣುತ್ತಿದ್ದುವು. ನೋಡಿದರೆ ಹೆಚ್ಚುಕಡಿಮೆ ಅರವತ್ತರ ಮೇಲ್ಪಟ್ಟು ವರ್ಷಗಳಾಗಿರಬಹುದೆಂದು ಎಂಥವನೂ ಹೇಳಬಹುದಾಗಿತ್ತು. ಇಬ್ಬರೂ ದೊಣ್ಣೆಗಳ ಸಹಾಯವಿಲ್ಲದೆ ನಡೆಯಲಶಕ್ಯರೆನ್ನುವಷ್ಟು ಮುದುಕರಾಗಿದ್ದರು. ಬಂದವರೇ ಮನೆಯನ್ನು ಪ್ರವೇಶಿಸಿ, ಉಸ್ಸೆಂದು ಆಯಾಸ ಸೂಚಕ ನಿಟ್ಟುಸಿರು ಬಿಟ್ಟು, ಕಾಲುಚಾಚಿ ಕುಳಿತರು. ನಾನು ಇದನ್ನೆಲ್ಲಾ ನೋಡುತ್ತಾ ನಿಂತಿದ್ದೆ. ಸ್ವಲ್ಪ ಸಮಯದ ಮೇಲೆ ಮುದುಕಿ ಕಸ ರಾಶಿಯನ್ನೆಲ್ಲ ನೋಡಿ, ಅದನ್ನು ಉಡುಗುವುದು ಹೇಗೆಂಬ ವಿಚಾರಗೊಂದಲದಲ್ಲಿ ಬಿದ್ದು, ನನ್ನ ಕಡೆಗೆ ಕರುಣಾದೃಷ್ಟಿ ಬೀರಿದಳು. ಅವಳ ಸಂಕಷ್ಟದ ತಿಳುವಳಿಕೆಯುಂಟಾದ ತಕ್ಷಣವೇ, ನಾನು ಮನೆಗೆ ನಾಗಾಲೋಟ ಹೂಡಿದೆ. ಬಿದ್ದುಕೊಂಡಿದ್ದ ಒಂದು ಕಸಬರಿಗೆಯನ್ನು ಕೈಗೆತ್ತಿಕೊಂಡು ಬಂದು ಮುದುಕಿಗೆ ನೀಡಿದೆ. ಆಗ ಮುದುಕಿಯು ನನ್ನತ್ತ ನೋಡಿದಾಗ, "ದೇವರಂತೆ ಬಂದೆಯಪ್ಪಾ" ಎಂಬ ಸಂದೇಶವನ್ನು ಆ ಕಣ್ಣುಗಳು ಸಾರುತ್ತಿರುವಂತೆ ನನಗೆ ಭಾಸವಾಯಿತು. ಮುದುಕಿಯು ಕಸವನ್ನೆಲ್ಲಾ ಉಡುಗಿ ಸ್ವಚ್ಛಮಾಡಿದ ಮೇಲೆ ತಾವು ತಂದಿದ್ದ ಗಂಟನ್ನು ಬಿಚ್ಚಿದಳು. ಅವರು ತಂದಿದ್ದ ಸಾಮಾನುಗಳೆಂದರೆ, ನಾಲ್ಕೈದು ಮಡಿಕೆಗಳು, ಕೆಲವು ಚೂರುಪಾರಾದ ವಸ್ತ್ರಗಳು, ಒಂದು ದಿನಕ್ಕೆ ಸಾಕಾಗುವಷ್ಟು ಅಕ್ಕಿ—ಇವಿಷ್ಟೇ. ಅವರ ಕಡು ಬಡತನವನ್ನು ಹರವಿದ ಸಾಮಾನುಗಳು ಸೂಚಿಸುತ್ತಿದ್ದುವು. "ಇವೇ ಅವರ ಸಂಪತ್ತು!" ಎಂಬ ಯೋಚನೆ ನನಗೆ ಹೊಳೆದಾಗ "ಅಯ್ಯೋ, ಪಾಪ" ಎಂದು ಎನಿಸದೆ ಹೋಗಲಿಲ್ಲ.

ಮುದುಕಿಯ ಮಾತಿನಿಂದ, ಅವರಿಬ್ಬರೂ ಅಕ್ಕ–ತಮ್ಮರೆಂದು ನನಗೆ ತಿಳಿಯಿತು. ಎಲ್ಲಿಯೂ ನೆಲೆಗಾಣದೆ, ಮರದ ಕೆಳಗೆ ಅನ್ನ ಬೇಯಿಸಿಕೊಂಡು ತಿನ್ನುತ್ತಿದ್ದ ಈ ಬಡಪಾಯಿಗಳನ್ನು ನೋಡಿ, ಯಾರೋ ಕರುಣೆಯಿಂದ ಈ ಮನೆಯನ್ನು ತೋರಿಸಿದರೆಂದು ಹಿಂದಿನಿಂದ ಗೊತ್ತಾಯಿತು.

ಅಷ್ಟು ಹೊತ್ತಿಗೆ ಮಳೆಯು ಧಾರಾಕಾರವಾಗಿ ಗುಡುಗುಡು ಎನ್ನುತ್ತಿರಲು, ಮಿಂಚು ಕಣ್ಣು ಕುಕ್ಕುವಂತೆ ಮಿಂಚುತ್ತಿರಲು, ಸಿಡಿಲಿನ ಗರ್ಜನೆ ಮೊಳಗುತ್ತಿರಲು ಸುರಿಯತೊಡಗಿತು. ಮುದುಕಿಯು ತಲೆಯ ಮೇಲೆ ಎರಡು ಕೈಗಳನ್ನಿಟ್ಟುಕೊಂಡು ಕುಳಿತದ್ದನ್ನು ಕಂಡು, 'ಕೂಳು ಬೇಯಿಸಲಿಕ್ಕೇನು ಹಾದಿ?' ಎಂದು ಚಿಂತಿಸುತ್ತಿರಬೇಕೆಂದು ಬಗೆದು, ನನಗೆ ಎಲ್ಲಿಲ್ಲದ ಕರುಣೆಯೆಲ್ಲಾ ಉಕ್ಕಿಬಂದು ಮನೆಯವರೆಗೆ ಓಟಬಿಟ್ಟೆ. ಎರಡು ಮೂರು ದಿವಸಕ್ಕಾಗುವಷ್ಟು ಕಟ್ಟಿಗೆ ಮತ್ತು ಬೆಂಕಿಯುರಿಸಲಿಕ್ಕೆಂದು ಒಂದು ಬೆಂಕಿಪೆಟ್ಟಿಗೆ ತೆಗೆದುಕೊಂಡು ಬಂದು ಮುದುಕಿಯ ಬಳಿಯಲ್ಲಿಟ್ಟೆ. ಅದನ್ನು ನೋಡಿ ಮುದುಕಿಯ ಕಣ್ಣಿನಿಂದ ಆನಂದಾಶ್ರುಗಳು ಮಿಡಿದುವು. "ಸಾವಿರ ವರ್ಷ ಕಾಲ ಹಾಯಾಗಿ ಬಾಳು ನನ್ನಪ್ಪಾ ನಿನ್ನ ಹೊಟ್ಟೆ ತಣ್ಣಗಿರಲಿ" ಎಂದು ಯುಕ್ತ ಹೃದಯದಿಂದ ನನಗೆ ಆಶೀರ್ವಾದ ಮಾಡಿದಳು. ಆಗ ನನಗುಂಟಾದ ಹೆಮ್ಮೆ ಹೇಳತೀರದು. 'ನನ್ನ ಜೀವಿತದಲ್ಲಿ ಒಂದಾದರೂ ಪುಣ್ಯ ಕಟ್ಟಿಕೊಂಡೆ' ಎಂಬ ಹಿಗ್ಗಿನಿಂದ ನಾನು ತುಂಬಿದೆ. ಆ ದಿನ ನಾನು ಮಾಡಿದ ಸುಖನಿದ್ರೆಯ ಹಾಗೆ ಹಿಂದೆಂದೂ ಮಾಡಿರಲಿಲ್ಲ.

ಮರುದಿನದಿಂದ ಆ ವೃದ್ಧ-ವೃದ್ಧೆಯರ ಭಿಕ್ಷಾ ಜೀವನವು ಪ್ರಾರಂಭವಾಯಿತು. ವೃದ್ಧೆಯ ತಮ್ಮ, ಈಗ ಸಾಯುವನೋ ಇನ್ನೊಂದರೆಗಳಿಗೆಯಲ್ಲಿ ಸಾಯುವನೋ ಎಂಬಂತಿದ್ದವನು, ದಿನಕ್ಕೆ ಹತ್ತಾರು ಮನೆಗಳಲ್ಲಿ ಬೇಡಿ, ಎರಡು ಹೊತ್ತಿಗಾಗುವಷ್ಟು ಅಕ್ಕಿ ತರುತ್ತಿದ್ದ. ಮುದುಕಿಯು ಅದನ್ನು ಬೇಯಿಸಿ ಹಾಕುತ್ತಿದ್ದಳು. ದಂಟೆಯೂರಿ, ಗೋರಬನ್ನು ತಲೆಗೆ ಕವಚಿಕೊಂಡು, ಕಟ್ಟಿಗೆ ತರಲಿಕ್ಕೆ ಹೋಗುತ್ತಿದ್ದ ಮುದುಕಿಯನ್ನು ನೋಡಿ ನನ್ನ ಕಣ್ಣಂಚಿನಲ್ಲಿ ನೀರಾಡುತ್ತಿತ್ತು, ವೃದ್ಧಾಪ್ಯದಲ್ಲಿ ಅವಳ ಪಾಡನ್ನು ಯೋಚಿಸಿ.

ಆಗಾಗ ಅವರ ಬಿಡಾರಕ್ಕೆ ನಾನು ಹೋಗುತ್ತಿದ್ದೆ. ಹೋಗುವಾಗ ಬರಿಗೈಯಲ್ಲಿ ಹೋಗದೆ, ಏನಾದರೂ ತೆಗೆದುಕೊಂಡೇ ಹೋಗುತ್ತಿದ್ದೆ. ಮುದುಕಿಯನ್ನು ನಾನು "ಅಜ್ಜಿ" ಎಂದು ಕರೆಯುತ್ತಿದ್ದೆ. ಆಗ ಮುದುಕಿಯು, "ನಾವು ಯಾರೋ, ನೀವು ಯಾರೋ? ಇದು ಯಾವ ಋಣಾನುಬಂಧವೋ ದೇವರಿಗೇ ಗೊತ್ತು" ಎಂದು ಪಠಿಸುಡಿಯುತ್ತಿದ್ದಳು. ಅವಳ ಮಾತಿನಿಂದ ನನಗೆ ಎಲ್ಲಿಲ್ಲದ ಸಮಾಧಾನವಾಗುತ್ತಿತ್ತು.

ಕ್ರಮೇಣ ವೃದ್ಧ ದುರ್ಬಲನಾಗುತ್ತ ನಡೆದನು. ಭಿಕ್ಷೆ ಬೇಡುವಷ್ಟು ಸಹ ಅವನಲ್ಲಿ ಶಕ್ತಿಯಿರಲಿಲ್ಲ. ಬರೇ ಅಸ್ಥಿಪಂಜರ ಮಾತ್ರ ಉಳಿದಿತ್ತು. ಎಲುಬುಗಳೆಲ್ಲಾ ಎದ್ದು ಕಾಣುತ್ತಿದ್ದುವು ಮುಖವು ಕಾಂತಿಹೀನವಾಗತೊಡಗಿತ್ತು. ಮುಖದಲ್ಲಿ ಪ್ರೇತ ಕಳೆ ನರ್ತಿಸುತ್ತಿತ್ತು. ಒಂದು ದಿನ ನಮ್ಮ ಮನೆಗೆ ಬಂದವನು ನಾನು ಬೇಡ ಬೇಡವೆಂದರೂ ಕೇಳದೆ ಒಂದು ಚೆಂಬು ನೀರನ್ನು ಗಟಗಟನೆ ಕುಡಿದು ಬಿಟ್ಟು, ಎಳೆಂಟು ಉಪ್ಪಿನಕಾಯಿಗಳನ್ನು ತಿಂದು. ಅವನ ದೇಹಸ್ಥಿತಿ ನೋಡಿ, "ಇವನು ಬದುಕುವುದು ಕಷ್ಟಸಾಧ್ಯ"ವೆಂಬ ಯೋಚನೆ ನನಗೆ ಬಂದು ಹೋಯಿತು. ಕೊನೆಗೆ ಅದು ನಿಜವೇ ಆಯಿತು.

ವೃದ್ಧನು ನಮ್ಮಲ್ಲಿ ಯಥೇಷ್ಟ ನೀರು ಕುಡಿದು ಹೋದ ಮರುದಿನ ಭಿಕ್ಷೆಗೆ ಹೋದವನ ಪತ್ತೆಯೇ ಆಗಲಿಲ್ಲ. ಮುದುಕಿ ಅವನು ಹೋಗಿ ಬರುತ್ತಿದ್ದ ಮನೆಗಳಿಗೆಲ್ಲಾ ಹೋಗಿ ಕೇಳಿಬಂದಳು. "ಇವತ್ತು ಬರಲಿಲ್ಲ"ವೆಂಬ ಸೊಲ್ಲಿನ ಹೊರತು ಬೇರೇನೂ ಅವಳಿಗೆ ಕೇಳಿಸಲಿಲ್ಲ. ಸಾಯಂಕಾಲ ನಾನು ಸುದ್ದಿ ತಿಳಿದು ಅವಳ ಬಿಡದಿಗೆ ಧಾವಿಸಿದಾಗ, ನನ್ನೊಡನೆ ಹೇಳಿಕೊಂಡು ಗೋಳೋ ಎಂದು ಅತ್ತಳು. ನನಗೂ ಅವಳ ಅತಿಶಯ ಸಂತಾಪದಿಂದ ಕಣ್ಣೀರು ಉಕ್ಕಿ ಹರಿಯಿತು. "ಎಲ್ಲಿಗೆ ಹೋದರೂ ನಾಳೆ ಬಂದೇ ಬರುತ್ತಾನೆ" ಎಂದು ಮುಂತಾಗಿ ಸಾಂತ್ವನಪಡಿಸಿದೆ. ಆದರೆ, ನನಗೇ ಮುದುಕನು ಬದುಕಿರುವನೆಂಬುದರ ಬಗ್ಗೆ ಸಂಶಯವಿತ್ತು.

ಮುದುಕಿಯ ಮನೆಯಿದ್ದ ಉತ್ತರ ದಿಕ್ಕಿನಲ್ಲಿ ನಾವು ಬೇಸಾಯ ಮಾಡಿದ ಗದ್ದೆಗಳಿದ್ದುವು. ಹುಲ್ಲು ತರಲಿಕ್ಕಾಗಿ ಹೋದ ನಮ್ಮ ತಾಯಿಗೆ, ಒಂದು ಗದ್ದೆಯ ಮಧ್ಯದಲ್ಲೊಬ್ಬ ವ್ಯಕ್ತಿ ನಿಂತುಕೊಂಡಿರುವುದು ಕಂಡುಬಂತು. ನೋ

(೧೧ನೇ ಪುಟ ನೋಡಿರಿ)

ಗೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ತಮ್ಮೆಲ್ಲರ ಸೌಹಾರ್ದ–ಸಹಕಾರಗಳಿಂದ ದಿನೇ ದಿನೇ ಸರ್ವಾಂಗ ಸುಂದರವಾಗಿ ಬೆಳೆದು, ನಿಮ್ಮ ಆರ್ಥಿಕ ಅಭ್ಯುದಯಕ್ಕಾಗಿ ಸತತವಾಗಿ ಶ್ರಮಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : ಉಡುಪಿ (ದ. ಭಾರತ)

54 ವರುಷಗಳ ಅನುಭವಪೂರ್ಣ ಹಾಗೂ ಸರ್ವೋತ್ಕೃಷ್ಟ ಬೇಂಕು ಸೇವೆಯನ್ನು ಸರ್ವರಿಗೂ ಸರ್ವಕಾಲಕ್ಕೂ ಸರಿಸಮಾನವಾಗಿ ಸಲ್ಲಿಸಬೇಕೆಂಬುದೇ ಈ ಬೇಂಕಿನ ಸಾಧನೆ!



ಸಾಹಿತ್ಯ ಕ್ಷೇತ್ರ:

ಅನಾತೋಲೆ ಫ್ರಾನ್ಸನ ವ್ಯಂಗ್ಯ ಬಾಣಗಳು

ನಮ್ಮನ್ನು ನಗಿಸಿ ಜೀವಿಸಬೇಕೆಂದು ವ್ಯಂಗ್ಯವು ಉಪದೇಶವೀಯುತ್ತದೆ; ಕಣ್ಣೀರಿನಿಂದ ತೊಳೆದು ಕರುಣೆಯು ಜೀವನವನ್ನು ಪುನೀತಗೊಳಿಸುತ್ತದೆ —ಅನಾತೋಲೆಯ ೮೦ ವರ್ಷಗಳ ಅನುಭವನಿದು!

ಮಾನವನ ಜೀವನವನ್ನು ನಾವು ಆಳವಾಗಿ ಪರಿಶೀಲಿಸುವುದಾದರೆ, ಆತನು ವ್ಯಂಗ್ಯ ಮತ್ತು ಕರುಣೆಗಳಿಲ್ಲದೆ ಬದುಕುವುದು ಕಷ್ಟವೆಂದು ತಿಳಿಯಬಹುದು. ವ್ಯಂಗ್ಯ ಮತ್ತು ಕರುಣೆಗಳು ಉತ್ತಮ ಸಲಹೆಗಾರರ ಕೆಲಸವನ್ನು ಮಾಡುತ್ತವೆ. ನಮ್ಮನ್ನು ನಗಿಸಿ ತನ್ಮೂಲಕ ಜೀವಿಸಬೇಕು ಎಂದು ನಮಗೆ ವ್ಯಂಗ್ಯ ಬೋಧಿಯುತ್ತದೆ, ಕರುಣೆ ಕಣ್ಣೀರಿನಿಂದ ತೊಳೆದು ಜೀವನವನ್ನು ಪುನೀತಗೊಳಿಸುತ್ತದೆ.

ಜೀವನದ ವ್ಯಾಖ್ಯಾನ ಭೂತಿಯಿಂದ ಕೂಡಿದ ಈ ಮಾತು ಸಾಹಿತ್ಯಕಾರ ಅನಾತೋಲೆ ಫ್ರಾನ್ಸನದು. ಆತನ ಗ್ರಂಥಗಳು ನೈತಿಕ ದೃಷ್ಟಿಯಿಂದ ಸಮಾಜಕ್ಕೆ ಅತ್ಯಂತ ಹಾನಿಕಾರಿಗಳಾಗಿವೆ ಎಂದು ಹೇಳಿ, ತನ್ನ ಕೋಟ್ಯನುಕೋಟಿ ಅನುಯಾಯಿಗಳಿಂದ ಅವುಗಳಿಗೆ ಬಹಿಷ್ಕಾರವನ್ನೂ ಪೋಪನು ಹಾಕಿಸಿದ್ದಾನೆ. ಜೀವನವನ್ನು ವ್ಯಂಗ್ಯ ಚಿತ್ರಗಾರನಂತೆ ಕಾಣುವ ಮತ್ತು ಅದರ ಕಟಿಕಿಮಾತನ್ನು ಶಿಷ್ಟಭಾಷೆಯಲ್ಲಿ ಬರೆಯುವ ಕಾರ್ಯಗಳಲ್ಲಿ ಅನಾತೋಲೆಯದು ಎತ್ತಿದ ಕೈ. ಯಾವುದೇ ವಸ್ತುವನ್ನು ವ್ಯರ್ಥವಾಗಿ ಆತನು ಎಂದೂ ಪೂಜಿಸುತ್ತಿರಲಿಲ್ಲ. ಆವನು ಪ್ರತಿವಸ್ತುವಿನಲ್ಲಿರುವ ಅಂತರ್ವಿರೋಧಿಯಾಗಿರುವ ಸ್ವರೂಪವನ್ನು ಹುಡುಕುತ್ತಿದ್ದನು. ಭೂತ ಪಿಶಾಚಿಗಳು ಹಾಗೂ ಅರ್ಥಹೀನ ರೂಢಿ-ಮರ್ಯಾದೆಗಳ ಮೇಲೆ ಆತನು ತನ್ನ ಕತ್ತಿಯನ್ನೆತ್ತಲು ಇದೇ ಕಾರಣವಾಗಿತ್ತು. ಇದರಿಂದಾಗಿ ಆತನು ಕೆಲವರಿಂದ ವಿಧ್ವಂಸಕರೆಯ ಭಯಂಕರ ಎಂದ ಅಪನಾಮವನ್ನೂ ಪಡೆಯಬೇಕಾಯಿತು.

ಅನಾತೋಲೆಯು ವ್ಯಂಗ್ಯಕ್ಕಾಗಿ ವ್ಯಂಗ್ಯವನ್ನು ಮಾಡುವ ಸಾಹಿತಿಯಾಗಿಲ್ಲ. ಆತ ವಿನೋದವಮಾಡುತಿದ್ದ, ಆದರೆ, ಅದರ ಹಿಂಬದಿಯಲ್ಲಿ ಒಂದು ದುಃಖದ ಸೆಲೆಯೂ ಇರುತ್ತಿದೆ. ಆದರ ಮುಖದಿಂದ ವ್ಯಂಗ್ಯದ ಮುಗುಳ್ನಗು ಹೊರಸೂಸುತ್ತಿತ್ತು; ಆದರೆ ಅದರಲ್ಲಿ ಅನುಭೂತಿಯೂ ತುಂಬಿ ತುಳುಕಾಡುತಿತ್ತು. ವ್ಯಂಗ್ಯ ಮತ್ತು ಕರುಣೆಗಳು ಅಥವಾ ಕರುಣಾಮೂಲಕ ವ್ಯಂಗ್ಯವೇ ಅನಾತೋಲೆಯ ಸಾಹಿತ್ಯಕೃತಿಗಳ ಮೂಲ ಸೆಲೆಯೆಂಬುದು ವಿದಿತವಾಗುವುದು. ಅವನು ಮಿಥ್ಯಾ ಮೂರ್ತಿ ಭಂಜಕನೂ ಅಲ್ಲ; ಮಿಥ್ಯಾ ಮೂರ್ತಿ ಪೂಜಕನೂ ಅಲ್ಲ. ನಿಜವಾದ ದೇವಪ್ರತಿಮೆಯನ್ನು ಶೋಧಿಸಿ ಕಂಡುಹಿಡಿಯುವುದು ಮತ್ತು ಅದಕ್ಕೆ ತನ್ನ ಬಾಷ್ಪವಾರಿ ಬಿಂದುಗಳಿಂದ ಅರ್ಘ್ಯ ಸಮರ್ಪಿಸುವುದೇ ಅನಾತೋಲೆಯ ಸಾಹಿತ್ಯದ ಪರಮೋದ್ದೇಶವಾಗಿತ್ತು.

ಅನಾತೋಲೆ ಫ್ರಾನ್ಸನು ೧೮೪೪ರಲ್ಲಿ ಜನಿಸಿ ೧೯೨೪ರಲ್ಲಿ ಇಹಲೋಕವನ್ನು ತ್ಯಜಿಸಿದನು. ತನ್ನ ೮೦ ವರ್ಷಗಳ ಸುದೀರ್ಘ ಜೀವನದಲ್ಲಿ ಆವನು ಅನೇಕಾನೇಕ ಸಾಹಿತ್ಯ ಕೃತಿಗಳನ್ನು ರಚಿಸಿದನು. ಮೊತ್ತಮೊದಲ ಹಂತದಲ್ಲಿ ಅವನು ಪದ್ಯಗಳನ್ನು ಬರೆದನು; "ತಾಯಾ" ಮತ್ತು "ಲಾರೂಸ್" ಎಂಬವು ಅವನ ಅನುಪಮ ಕೃತಿಗಳೆಂದು ತಿಳಿಯಲಾಗುತ್ತವೆ. ಆದರೆ, "ಜಾನ್ ದ ಆರ್ಕ್" ಮತ್ತು "ಹಿಸ್ಟ್ರಿ ಆಫ್ ಕಾಂತೊಮೊರೆನ್" ಎಂಬಿವು ತನ್ನ ಅಸದೃಶ ರತ್ನಗಳೆಂದು ಅವನು ಹೇಳುತ್ತಾನೆ. ೧೯೨೧ರಲ್ಲಿ ಅನಾತೋಲೆ ಫ್ರಾನ್ಸನಿಗೆ ಸಾಹಿತ್ಯ ಸಂಬಂಧದ ನೋಬೆಲ್ ಪಾರಿತೋಷಕವೂ ಲಭಿಸಿತ್ತು.

"ಮೋಶಿಯೋ ಜೆರೊ'ಮ್ ಕ್ವಾನ್ಯಾ" ಎಂಬುದು ಅವನ ಜೀವನ ದೃಷ್ಟಿ ಬನ್ನೆಯಲು ಉಪಯೋಗಿಯಾಗಿದೆ. ಇದರಲ್ಲಿ ಆತ ತನ್ನ ಚಿಂತನೆಯ ಸಾರವನ್ನು ತುಂಬಿಸಿಂತ್ತಾನೆ. ಇದರ ಕೆಲವು ವಿಚಾರಗಳು ಈ ರೀತಿಯಿವೆ:

ಕುಸಂಸ್ಕಾರ

ಕುಸಂಸ್ಕಾರಗಳ ಎದುರು ಹೋರಾಡುವ ಜನರ ಪ್ರಶಂಸೆಯು ಶತಮುಖವಾಗಬೇಕು, ಅವರನ್ನು ಹೊಗಳುವುದು ಸುಲಭವೇ; ಆದರೆ ಅನುಕರಿಸುವುದು ಮಾತ್ರ ಕಷ್ಟ. ಆ ಜನರು ನೋಡಗಳಂತೆ ದೂರ ದೂರದಲ್ಲಿ ತಿರುಗಾಡುತ್ತಿರುತ್ತಾರೆ. ತಮ್ಮ ಸಮಕಾಲೀನ ಕುಸಂಸ್ಕಾರಗಳಿಂದ ದೂರವಿರುವ ಜನರು ಅತಿ ವಿರಳರಾಗಿದ್ದಾರೆ. ಇದ್ದರೂ ಅವರ ಪರಿಚಯವುಳ್ಳವರು ಅಪರೂಪವೇ.

ಭ್ರಾಂತಿ

ವಂಚಕ ಭ್ರಾಂತಿಗಳನ್ನು ನಾಶಮಾಡಿದವನೂ ಮೋಹನಿದ್ರೆಯಿಂದ ನಮ್ಮನ್ನೆಂದೂ ಎಚ್ಚರವಾಗಿರಿಸದ ಭ್ರಾಂತಿಯನ್ನು ಸೃಷ್ಟಿಸಿದವನೂ ಮಹಾತ್ಮರೆಂದೇ ಹೇಳಬೇಕು.

ವಿಜ್ಞಾನ

ಅನುಭೂತಿಯು ಭ್ರಾಂತಿ ಎನ್ನಲಿದ ಪ್ರಕೃತಿ ಜ್ಞಾನವೇನಿದೆ? ಆಧುನಿಕ ವೈಜ್ಞಾನಿಕ ವಸ್ತು ನಮ್ಮ ಅನುಭೂತಿಗೆ ಎರವಾಗಿದೆಯೇ? ನಿತ್ಯನೂತನ ರೂಪಗಳು ನಮ್ಮನ್ನು ಮೋಜಿನಲ್ಲಿ ಸಿಕ್ಕಿಸಿವೆ. ನಾವು ನಿಷ್ಪಕ್ಷತೆಯ ಸೋಗನ್ನು ಎಷ್ಟೇ ಹಾಕಿಕೊಂಡರೂ ನಮಗಿಂತ ಹೊರಗೆ ಎಂದೂ ಹೋಗಲಾರೆವು. ನಾನು ವಿಜ್ಞಾನವನ್ನು ತಿರಸ್ಕರಿಸುತ್ತೇನೆ ಏಕೆಂದರೆ, ನಾನದನ್ನು ಬಹಳವಾಗಿ ಮೆಚ್ಚುತ್ತೇನೆ. ವಿಜ್ಞಾನದ ಸಹಾಯದಿಂದ ಈ ಪ್ರಪಂಚವೆಲ್ಲವನ್ನೂ ಅರಿತುಕೊಳ್ಳಬೇಕೆಂಬ ಅಭಿಲಾಷೆ ನನಗಿತ್ತು; ಆದರೆ, ಇಂದು ನಾನು ಅಜ್ಞತೆಯಿಂದಲೇ ಕೊರಗುತ್ತಿದ್ದೇನೆ.

ಪ್ರತಿಭೆ

ಪ್ರತಿಭಾವಂತನು ಸಾಮಾಜಿಕನಾಗಿರುವುದಿಲ್ಲ. ಮಹಾ ಪ್ರತಿಭಾವಂತನಿಗೆ ಮಿತ್ರರೂ ಪರಿಚಿತರೂ ಇರುವುದು ಬಹಳ ಅಪರೂಪ. ಪ್ರತಿಭಾವಂತರಲ್ಲಿ ದೋಷವಿದೆ, ಇದರಿಂದಾಗಿ ಅವರು ಜೀವನದಲ್ಲಿ ಅಪಮಾನ ಮತ್ತು ತಿರಸ್ಕಾರಗಳಿಗೆ ಒಂದಲ್ಲ ಒಂದು ದಿನ ಗುರಿಯಾಗಿಯೇ ತೀರುತ್ತಾರೆ.

ರಾಜದ್ರೋಹ

ಅಸಫಲನಾದಾಗ ಮನುಷ್ಯ ದ್ರೋಹಿಯೆನಿಸಿಕೊಳ್ಳುತ್ತಾನೆ. ಸಫಲನಾದ ವ್ಯಕ್ತಿಯನ್ನು ಯಾರೂ ವಿದ್ರೋಹಿಯೆಂದು ಕರೆಯುವ ಧೈರ್ಯಸ್ಥರಾಗಲಾರರು.

ಈ ವಿಚಾರಗಳಿಂದ ನಮಗೆ ಒಂದು ಪ್ರತಿಭಾಪೂರ್ಣ ವ್ಯಕ್ತಿತ್ವದ ಅರಿವಾಗುತ್ತದೆ. "ನನ್ನ ವಿಚಾರದಲ್ಲಿ ಯಾವುದೇ ಮಾತಿನಿಂದ ಚಿಂತಿತನಾಗಿ ಮರಳಿ ಹೋಗುವಂತಿಲ್ಲ" ಎಂದು ಸ್ವಯಂ ಅನಾತೋಲೆ ಹೇಳಿದ್ದಾನೆ. ಮುಂದುವರಿಯುತ್ತ ಆತ, "ಬುದ್ಧಿ ಸಂಶೋಧಿಸಿದ ಸತ್ಯ ಭಾರವಾಗುತ್ತದೆ; ಕೇವಲ ಹೃದಯದ ಸಹಾಯತೆಯೇ ಸ್ವಪ್ನಗಳನ್ನು ಕಾಣಿಸುತ್ತದೆ. ಭಾವುಕತೆಯಿಂದ ಉತ್ತಮತೆ, ಶುಭಕರ್ಮಗಳ ಬೀಜವನ್ನು ಬಿತ್ತಬಹುದು; ಬುದ್ಧಿಯಿಂದಲ್ಲ. ಎಚ್ಚರವಿರಲಿ" ಎಂದೂ ಘೋಷಿಸಿದ್ದಾನೆ.

ಪುನರ್ನಿವೇಶನ ಎಂದರೇನು?

ಯಾವುದೇ ಕಾಯಿಲೆಗೆ ಚಿಕಿತ್ಸೆ ಮಾಡುವ ಉದ್ದೇಶವು ಅದನ್ನು ಗುಣಪಡಿಸುವುದು ಅಥವಾ ನಿರೋಧಿಸುವುದಾಗಿದೆ. ಆದರೆ ಕ್ಷಯರೋಗದ ವಿಷಯದಲ್ಲಿ ಕಟ್ಟಕಡೆಯ ಗುರಿಯು ರೋಗಿಗೆ ಯೋಗ್ಯವಾದ ಕೆಲಸ ಮಾಡಲು ಆವನನ್ನು ತರಬೇತಿಗೊಳಿಸುವುದು ಮತ್ತು ಅವನನ್ನು ಪ್ರಯೋಜನಕಾರಿ ನಾಗರಿಕನನ್ನಾಗಿ ಸಮಾಜಕ್ಕೆ ತಿರುಗಿ ಕೊಡುವುದಾಗಬೇಕು. ಇದುವೇ ಪುನರ್ನಿವೇಶನದ ದೃಷ್ಟಿ.

ಸರಕಾರಗಳಾಗಲೀ ಇತರ ಯಾವುದೇ ಏಜನ್ಸಿಗಳಾಗಲೀ ಹಣ ಸಂಗ್ರಹವಿಲ್ಲದೆ ಕ್ಷಯ ರೋಗಿಗಳ ಪುನರ್ನಿವೇಶನದ ಕಾರ್ಯ ಕೈಗೊಳ್ಳುವುದು ಕಷ್ಟದಾಯಕವಿದೆ. ನಿಮ್ಮ ರಾಜ್ಯ ಸಮಿತಿಗೆ ಹಿಂದಿನ ರೋಗಿಗಳನ್ನು ಪುನರ್ನಿವೇಶನಗೊಳಿಸುವ ಯೋಜನೆಗಳಿವೆ.

ಕ್ಷಯರೋಗ ಮುದ್ರೆ ಮಾರಾಟ ಚಳವಳವು ನಿಧಿ ಎತ್ತಲು ಸಹಾಯ ಮಾಡುತ್ತದೆ. ಆದುದರಿಂದ ಈ ಚಳವಳವು ಜನರ ಹೃತ್ಪೂರ್ವಕ ಸಹಕಾರವನ್ನು ಆಹ್ವಾನಿಸುತ್ತದೆ.

ದಯಮಾಡಿ ಕ್ಷಯರೋಗ ಮುದ್ರೆಗಳನ್ನು ಅಧಿಕ ಸಂಖ್ಯೆಯಲ್ಲಿ ಖರೀದಿಸಿರಿ ಮತ್ತು ಉಪಯೋಗಿಸಿರಿ. ಇವು ಸಿಗುವ ಸ್ಥಳಗಳು:

ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್‌ಡನ್ ಟಿ. ಬಿ. ಕ್ಲಿನಿಕ್ ಮತ್ತು ಡಿಸ್ಪೆನ್ಸರಿ, ಕೆಂಪೇ ಗೌಡ ರೋಡ್, ಬೆಂಗಳೂರು ಸಿಟಿ. (2) ಮಹಿಳಾಮಂಡಲ; ಶ್ರೀ ಬಸವೇಶ್ವರ ದೇವಸ್ಥಾನ ಪಂಚ್ ಕಮಿಟಿ, ಕಲ್ಯಾಣಿ; ಗ್ರೈನ್ ಮರ್ಚಂಟ್ಸ್ ಎಸೋಸಿಯೇಶನ್; ಮತ್ತು ಭಾರತ್ ಸಮಾಜ, ಬಿಡಾರ್; (3) ದೈವಜ್ಞ ವೆಲ್‌ಫೇರ್ ಸೆಂಟರ್, ಶ್ರೀ ಲಕ್ಷ್ಮೀನಾರಾಯಣ ಟೆಂಪಲ್ ಕಂಪೌಂಡ್, ಬಸವನ ಗುಡಿ, ಮಂಗಳೂರು.

ಭಾರತದಲ್ಲಿ ಹತ್ತನೇ ಕ್ಷಯರೋಗ ಮುದ್ರೆ ಮಾರಾಟ ಚಳವಳ

(ದಿ ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ ನ್ಯೂ ಡಿಲ್ಲಿ. ಇವರಿಂದ ಪ್ರಾರಂಭಿಸಲ್ಪಟ್ಟದ್ದು.)

ಈ ಸ್ಥಳದ ದಾತೃಗಳು:

ಮೈಸೂರ್ ಸ್ಟೇಟ್ ಇಲೆಕ್ಟ್ರಿಸಿಟಿ ಬೋರ್ಡ್, ಬೆಂಗಳೂರು.

ಶಿಕ್ಷಣ ರಂಗ

ಶೈಕ್ಷಣಿಕ ಸಂಪತ್ತು—ಶ್ರೀ ಪಾವಟೆ

ವಜ್ರ ಮಹೋತ್ಸವವನ್ನಾಚರಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಪಾವಟೆಯವರ ಸೇವೆಯು ಕನ್ನಡಿಗರಿಗೆ ಬಹುಕಾಲ ದೊರೆಯಲಿ.

ಮರೆಯಲಾಗದ ದಿನ

ನವೆಂಬರ ತಿಂಗಳಿನ ಏಳನೆಯ ತಾರೀಕು ಕನ್ನಡ ಶಿಕ್ಷಣ ರಂಗದ ಸುವರ್ಣ ಸಂಪುಟದಲ್ಲಿ ಚಿರಸ್ಮರಣೀಯವಾಗಿ ಉಳಿಯುವುದು. ಅಂದು ನಮ್ಮ ನಾಡಿನ ಶಿಕ್ಷಣ ಪ್ರಪಂಚಕ್ಕೆ ಅಪಾರವಾದ ಸೇವೆಗೈದ್ದ ಕನ್ನಡ ಕುಲ ಪುರುಷನೊಬ್ಬನ ವಜ್ರ ಮಹೋತ್ಸವವು ಭರತ ವರ್ಷದ ಹಿರಿಯ ಪ್ರಾಚಾರ್ಯರ ನೇತೃತ್ವದಲ್ಲಿ ನಡೆಯಿತು. ಆ ಶುಭ ಮುಹೂರ್ತದಲ್ಲಿ ಶ್ರೀ ಪಾವಟೆ ವಜ್ರ ಮಹೋತ್ಸವ ನಿಧಿ ಸಮಿತಿಯವರು ಅಂದಿನ ಅತಿಥಿ ಶ್ರೀ ಪಾವಟೆಯವರಿಗೆ ನಿಧಿ ಅರ್ಪಿಸಿದರು. ನಾಡಿನ ಎಂಟೂ ದಿಕ್ಕಿನಿಂದ ಆಗಮಿಸಿದ ಆಚಾರ್ಯರು ಮುತ್ತಿನ ತೋರ ಹಾರವನ್ನು ಅರ್ಪಿಸಿದರು. ವಿಶ್ವದ ಸಾರಸ್ವತ ಪ್ರಪಂಚದಲ್ಲಿಯೇ ಖ್ಯಾತರೆಂದೆನ್ನಿಸಿಕೊಂಡವರೆಲ್ಲ ಬರೆದು ಕಳಿಸಿದ ಲೇಖನದ ಸುಂದರ ಸಂಪುಟವೊಂದರ 'ಬಾಗಿನ' ಕೊಟ್ಟರು! ಈ ಕಾಲದಲ್ಲಿ ಹತ್ತಿರದಲ್ಲಿಯೂ, ದೂರದಲ್ಲಿಯೂ ಇದ್ದು ಉತ್ಸವದ ವಾರ್ತೆಯನ್ನೂ, ವಿವರವನ್ನೂ ಓದುವವರ, ಕೇಳುವವರ ಮನಸ್ಸಿನಲ್ಲಿ ಒಂದು ಪ್ರಶ್ನೆ ಬಂದು ನಿಲ್ಲುವುದು ಸಹಜವಿದೆ. ಪಾವಟೆ ಅಂದರೆ ಯಾರು? ಒಬ್ಬ ವ್ಯಕ್ತಿಗೋಸುಗ ಇಂಥ ಉತ್ಸವ ನಡೆಯಬೇಕಾದುದು ಏಕೆ?

ಅವರ ಕಥೆ ನಾಡಿನ ಕಥೆ!

ನಿಮಿತ್ತಕ್ಕೆ ಶ್ರೀ ಪಾವಟೆ ಒಬ್ಬ ವ್ಯಕ್ತಿ ನಿಜ! ೧೮೯೯ನೆಯ ಆಗಸ್ಟ ಎರಡನೇಯ ತಾರೀಕಿನಂದು ಬೆಳಗಾವಿ ಜಿಲ್ಲೆಗೆ ಸೇರಿರುವ ಮಮದಾಪುರ ಹಳ್ಳಿಯಲ್ಲಿ, ಪಾವಟೆ ಮನೆತನವೊಂದರಲ್ಲಿ ಶಿಶುವೊಂದು ಜನ್ಮೋದಯವಾಯಿತು. ಮನೆಯ ಹಿರಿಯ ಚಿಂತಪ್ಪನವರಿಗೆ ಆ ಹೊತ್ತಿಗೆ ಹಿರಿಯ ಸಂಸಾರದ ಭಾರವಿದ್ದಿತು. ಹುಟ್ಟಿದ ಹೊಸ ಮಗುವಿಗೆ, ನಾಲ್ಕನೆಯ ಮಗುವಿಗೆ, ಚಿಂತಪ್ಪ "ದಾದಾ" ಎಂದು ನಾಮಕರಣ ಮಾಡಿದರು. ಅಂದು "ದಾದಾ" ಎಂಬ ನಾಮಕರಣ ಮಾಡಿದ ತಂದೆಗೆ ತಮ್ಮ ಮಗುವಿನ ಭಾಗ್ಯ "ನಾಳೆ ಕನ್ನಡದ ಭಾಗ್ಯ ಆದೀತು" ಎಂದು ಊಹಿಸುವುದಕ್ಕೂ ಸಾಧ್ಯವಿರಲಿಲ್ಲ! ಐದು ಎಕರೆ ಭೂಮಿಯನ್ನು ಆಸ್ತಿಯನ್ನಾಗಿ ಮಾಡಿಕೊಂಡು, ನಾಲ್ಕು ಮಕ್ಕಳನ್ನೂ, ಬಂಧುಗಳನ್ನು ಕಟ್ಟಿಕೊಂಡು ದೊಡ್ಡ ಸಂಸಾರದ ಭಾರ ಹೊತ್ತಿದ್ದ ಚಿಂತಪ್ಪನವರಿಗೆ ಅರುವತ್ತು ವರುಷಗಳಾಚೆ ದಾದಾ "ಕನ್ನಡದ ದಾದಾ" ಆಗುತ್ತಾರೆ. ಮಗನ ಅರವತ್ತು ವರುಷದ ಕಥೆ ಕನ್ನಡ ಶಿಕ್ಷಣ ಪ್ರಪಂಚದ ಕಥೆ ಆಗುತ್ತದೆ ಎಂದು ಕಲ್ಪಿಸುವುದು ಹೇಗೆ ಸಾಧ್ಯವಾದೀತು.

"ದಾದಾ" ಅವರಿಗೆ ಈಗ "ದಾದಾ ಸಾಹೇಬ" ಎಂದು ಅನ್ನುತ್ತಾರೆ. ಆದರೆ ೧೯೦೧ರಲ್ಲಿ ತಾಯಿ ಪ್ಲೇಗ ಬೇನೆಯಿಂದ ತೀರಿಕೊಳ್ಳುವ ಮುನ್ನ ಎರಡು ವರ್ಷದ "ದಾದಾ"ನನ್ನ ಬಿಟ್ಟು ಹೋಗುವ ಮುನ್ನ ಚಿಂತಪ್ಪನವರಲ್ಲಿ ಕಿರು ಆಶಯವೊಂದನ್ನು ವ್ಯಕ್ತಪಡಿಸಿದ್ದಳು: ಮಗುವನ್ನು ಓದಿಸಿರಿ

ಆದರೆ ರೆಕ್ಕೆ ಮುರಿದ ಪಕ್ಷಿ ಆಗಸದಲ್ಲಿ ಎಷ್ಟು ಎತ್ತರಕ್ಕೆ ಹಾರೀತು? ಚಿಂತಪ್ಪ ಲೆಕ್ಕ ಹಾಕಿಯೇ ಹಾಕಿದರು: ಬಹಳವಾದರೆ ಮಗನನ್ನು ಮುಲಕೀ ಓದಿಸಲಿಕ್ಕೆ ಆದೀತು! ಹೆಚ್ಚೆಂದರೆ ಕನ್ನಡ ಶಾಲೆಯ ಮಾಸ್ತರ ಆದಾನು ಇದಕ್ಕಿಂತ ಹೆಚ್ಚಿನ ಎತ್ತರ ಮುಟ್ಟುವುದಕ್ಕೆ ಹೇಗದು ಸಾಧ್ಯ?

ಸಾಧ್ಯವಾಯಿತು ಕೊಲ್ಲಾಪುರದ ರಾಜಾರಾಮ್ ಹೈಸ್ಕೂಲಿನಲ್ಲಿ ಓದಿದರು, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ವ್ಯಾಸಂಗ ಮುಂದರಿಸಿದರು. ಕೇಂಬ್ರಿಜಿನ 'ಕಿಂಗ್ಸ್'ನಲ್ಲಿ? ಪಾರ ಮುಂದರಿಸಿ ಯಶಸ್ವೀ ರೀತಿಯಲ್ಲಿ ಓದು ಮುಗಿಸಿದರು. ಇಟ್ಟ ಹೆಜ್ಜೆ ಮುಂದಕ್ಕೆ ಇಟ್ಟರಲ್ಲದೆ ಜೀವನದಲ್ಲಿ ಸೋಲೆಂಬುದನ್ನೇ ಅರಿಯಲಿಲ್ಲ. ಜೀವನದ-ದ್ದಕ್ಕೂ ಬೆನ್ನ ರಕ್ಷೆಯಾಗಿ ಬಾದ "ಬಳವಳಿ" ಎರಡೇ ಎಂದು! ತಾಯಿ ಅಭೀಷ್ಟೆ, ವಿದ್ಯಾನಿಲಯಗಳ ಶಿಷ್ಯವೇತನ! ಒಂದೆಡೆ ತಾಯಿ ಆಶೀರ್ವಾದ, ಇನ್ನೊಂದೆಡೆ ಸರಸ್ವತಿಯ ಅನುಗ್ರಹ!

೧೯೨೪ರಲ್ಲಿ ಕೇಂಬ್ರಿಜಿನ ಓದು ಮುಗಿಸಿ ಮನೆಗೆ ಮರಳಿ ಬಂದಾಗ ಆಗ ಭಾರತದ ಪ್ರಖ್ಯಾತ ವಿಶ್ವವಿದ್ಯಾ ನಿಲಯವೆಂದು ಮನ್ನಣೆ ಪಡೆದ ಬನಾರಸ ವಿಶ್ವವಿದ್ಯಾನಿಲಯದಲ್ಲಿ ಗಣಿತ ಪ್ರೊಫೆಸರರೆಂದು ನೇಮಕಗೊಂಡರು. ಮುಂದೆರಡು ವರುಷಗಳಲ್ಲಿ ಮುಂಬಯಿ ಸರಕಾರದ ಶಿಕ್ಷಣ ಕ್ಷೇತ್ರಕ್ಕೆ ಅಸಿಸ್ಟಂಟ ಡಿ. ಪಿ. ಆಯ್. ಆದರು. ೧೯೪೭ರಲ್ಲಿ ಅದೇ ಖಾತೆಯ ಮುಖ್ಯಾಧಿಕಾರಿಗಳಾದರು. ೧೯೫೪ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದರು.

ನಾವೇ ನಮ್ಮ ಭಾಗ್ಯದ ಶಿಲ್ಪಿಗಳು

ಸಂಕ್ಷಿಪ್ತವಾದ ಈ ಕಥನದ ಹಿನ್ನೆಲೆಯಲ್ಲಿ ಸತ್ಯದ ವಿವರಣೆಯೊಂದು ತನ್ನಷ್ಟಕ್ಕೆ ತಾನೇ ಮೂಡಿ ನಿಲ್ಲುವುದು! ಅದೆಂದರೆ, ನಮ್ಮ ಆತ್ಮೋದ್ಧಾರ ನಮ್ಮಿಂದಲೇ! ನಮ್ಮ ಭಾಗ್ಯದ ಶಿಲ್ಪಿಗಳು ನಾವೇ ಆಗಬಲ್ಲೆವು.

ಪಶ್ಚಿಮದ ರಾಷ್ಟ್ರಗಳಲ್ಲಿ ಜೀವನದ ತೀರ ಕಡಿಮೆ ಅಂತಸ್ತಿನ (Statur) ಕುಟುಂಬದಲ್ಲಿ ಹುಟ್ಟಿ ಬೆಳೆದಿದ್ದರೂ ಜೀವನದ ತುತ್ತ ತುದಿಯ ನಿಲವನ್ನು ಮುಟ್ಟುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತಾರೆ. ಕುಂಬಾರನ ಮಗ ನಿಕಿತಾ ಕ್ರುಶ್ಚಾವ್ ರಶಿಯದ ಮುಖ್ಯಮಂತ್ರಿಯಾದ, ಪಶ್ಚಿಮ ಯುರೋಪಿನ ನಿರಾಶ್ರಿತನೊಬ್ಬ ಹಾಲಿವುಡ್ಡಿನ ಚಿತ್ರೋತ್ಪಾದನಾ ಸಂಸ್ಥೆಯ ಒಡೆಯನಾದ. ರೈತನ ಮಗನೊಬ್ಬನು ಹಾಲಂಡಿನ ಮುಖ್ಯಮಂತ್ರಿಯಾದ. ಇಂತಹ ದೃಷ್ಟಾಂತವನ್ನು ಹೇಳುವವರು

(೯ನೇ ಪುಟ ನೋಡಿರಿ)

ತಂಡಿಯನ್ನು ಅನಾನುಷನನ್ನಾಗಿ ಮಾಡುವ ನೂತನ ಬಟ್ಟೆಬರೆಗಳು ತಯಾರಾಗುತ್ತಿವೆ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2¼%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಪ್ರಣಯ ಮೂದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

In the High Court of Mysore at Bangalore.

R. A. (M) No. 18/1956.

Rukmini Heggadthi & others—
Appellants

Vs.

Jagannatha Hegde & others—
Respdts.

To

Somayya Hegde, S/o Koosamma Heggadthi, residing at Kukkehalli village, Udipi Taluk, South Kanara Dt.—6th Respondent.

Please take notice that the above appeal has been filed by the abovesaid appellants against you in the Madras High Court and the same is transferred to the Mysore High Court at Bangalore and you are directed to appear before the Mysore High Court at Bangalore either in person or through an advocate within seven days from the date of publication of this notice in the paper. Failing which the appeal will be heard exparte.

M. Gopalakrishna Shetty,
Counsel for appellants.

Bangalore, 7—11—1959.

ವಿದೇಶಾನುಭವ

ಉದ್ದಿಮೆದಾರರು ವಿದೇಶಪ್ರವಾಸ ಮಾಡಲಿ

ಡಾ| ಮಾಧವ ಪೈ ಅವರು ತಮ್ಮ ಸಂಚಾರಾವಧಿಯಲ್ಲಿ ಕಂಡುಕೊಂಡ ವಿದೇಶೀಯ ವೈಶಿಷ್ಟ್ಯಗಳು.

ಆಗಸ್ಟ್ ೬ರಂದು ಭಾರತವನ್ನು ಬಿಟ್ಟ ನಾವು ಪ್ರಥಮವಾಗಿ ಜಗತ್ತಿನ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ, ಕಲಾತ್ಮಕ ಚಟುವಟಿಕೆಗಳ ಒಂದು ಪ್ರಮುಖ ಕೇಂದ್ರವಾದ ರೋಮ್ ನಗರವನ್ನು ತಲುಪಿದೆವು. ರೋಮ್ ನಗರದಲ್ಲಿ ವಸ್ತು ಸಂಗ್ರಹಾಲಯ, ಕಟ್ಟಡಗಳಲ್ಲಿನ ಶಿಲ್ಪಕಲೆ ಮತ್ತು ವರ್ಣರಂಜಿತ ಚಿತ್ರಗಳು, ಈ ದೇಶದ ಪುರಾತನ ಹಿನ್ನೆಲೆಗೆ ಪ್ರತೀಕಗಳಾಗಿದ್ದುವು.

ರೋಮ್ ನಗರದಿಂದ ನಿಯೋಗದವರು ಜಗತ್ತಿನಲ್ಲಿ ಪ್ರಕೃತಿ ಸೌಂದರ್ಯದ ನೆಲೆವೀಡಾದ ನೇಪಲ್ಸ್ ನಗರಕ್ಕೆ ತಲುಪಿದೆವು. ದೈವನಿರ್ಮಿತ ಪ್ರಕೃತಿ ಸೌಂದರ್ಯವನ್ನು ಮಾನವನು ತನ್ನ ಸೌಂದರ್ಯೋಪಾಸನೆಗಾಗಿ ಯಾವ ರೀತಿಯಲ್ಲಿ ಅಳವಡಿಸಿಕೊಳ್ಳಬಹುದು ಎಂಬುದಕ್ಕೆ ಸಾದೃಶ್ಯ ನಿದರ್ಶನವನ್ನು ನೇಪಲ್ಸ್ ನಗರ ಒದಗಿಸಿ ಕೊಟ್ಟಿತು. 'ನೇಪಲ್ಸ್ ನಗರವನ್ನು ನೋಡಿ ಸಾಯಬೇಕು" ಎಂಬ ನಾಣ್ಣುಡಿಯ ಸತ್ಯತೆಯ ಅನುಭವವು ನಮಗಾಯಿತು.

ನೇಪಲ್ಸ್‌ನಿಂದ ನಾವು ವೇನಿಸ್ ನಗರಕ್ಕೆ ಆಗಮಿಸಿದೆವು. ಇಷ್ಟೊಂದು ದೊಡ್ಡ ನಗರದಲ್ಲಿ ಮೋಟಾರು ಕಾರುಗಳು ಓಡುವುದಕ್ಕೆ ಆಗುವ ರಸ್ತೆಗಳು ಬಹಳ ಕಡಮೆ. ಎಲ್ಲಿ ನೋಡಿದರೂ ಓಣಿಗಳೇ. ಹೆಚ್ಚಾಗಿ ಕಾಣಸಿಗುವುದು ಕಾಲುವೆಗಳು. ಅಲ್ಲಿನ ಜನರಿಗೆ ದೋಣಿಗಳಲ್ಲಿ ಪ್ರಯಾಣ ಮಾಡುವುದೆಂದರೆ ಬಹಳ ಇಷ್ಟ. ಅಲ್ಲಿ ಪೇಗಾಜಿನಿಂದ ತಯಾರಾಗುವ ಹಲವು ಚಿಕ್ಕ ಸಾಮಾನುಗಳ ಕೈಗಾರಿಕೆಯು ಗುಡಿಕೈಗಾರಿಕೆಯಾಗಿ ಬಹಳ ಅಭಿವೃದ್ಧಿಯನ್ನು ಪಡೆದಿದೆ.

ವೇನಿಸ್ ನಗರದಿಂದ ನಮ್ಮ ನಿಯೋಗ ಒಂದಾವರ್ತಿ ಆಸ್ಟ್ರಿಯಾದ ರಾಜಧಾನಿಯಾಗಿದ್ದ ವಿಯೆನ್ನಾ ನಗರಕ್ಕೆ ಆಗಮಿಸಿದ್ದು ಅಲ್ಲಿ ತಲುಪಿದಾಗ ರಾತ್ರಿಯಾಗಿತ್ತು. ಸುಂದರವಾದ ವರ್ಣರಂಜಿತವಾದ ದೊಡ್ಡ ದೊಡ್ಡ ಕಟ್ಟಡಗಳಿಂದ ಶೋಭಿಸುವ ವಿಯೆನ್ನಾ ನಗರವೇ ನಮಗೆ ಸುಸ್ವಾಗತವನ್ನು ಬಯಸಿದಂತಾಯಿತು. ದೊಡ್ಡ ದೊಡ್ಡ ಕಟ್ಟಡಗಳಿಂದೊಡಗೂಡಿದ ವಿಶಾಲ ನಗರವಿದು. ವೈದ್ಯಕೀಯ ಕ್ಷೇತ್ರದಲ್ಲಿ ಇದು ಸಾಧಿಸಿದ ಪ್ರಗತಿ ಬಹಳ. ೩೦೦೦ ಮಂಚಗಳಿಂದೊಡಗೂಡಿದ ಆಸ್ಪತ್ರೆಯು ಇಲ್ಲಿದೆ. ಇಲ್ಲಿ ವೈದ್ಯಕೀಯ ಶಿಕ್ಷಣಕ್ಕಾಗಿ ಒಬ್ಬ ವಿದ್ಯಾರ್ಥಿ ವರ್ಷಕ್ಕೆ ಸುಮಾರು ೧೫೦೦೦ ದಿಂದ ೨೦೦೦೦ ರೂಪಾಯಿಗಳಷ್ಟರವರೆಗೆ ವ್ಯಯಿಸಬೇಕಾಗುವುದು. ವಿದೇಶಗಳಿಂದ ಬಂದ ವೈದ್ಯಕೀಯ ತಜ್ಞರಿಗೆ ಇಲ್ಲಿ ಮೂರು ತಿಂಗಳ ಕಾಲದಷ್ಟು ತಜ್ಞ ಶಿಕ್ಷಣವನ್ನು ಕೊಡುವ ವ್ಯವಸ್ಥೆಯೂ ಇದೆ. ಇದಕ್ಕಾಗಿ ಆತ ರೂ. ೪೦೦೦ಗಳಷ್ಟು ವ್ಯಯಿಸಬೇಕಾಗಿದೆ. ಆದರೆ ವ್ಯಯಿಸಿದ ಈ ಹಣದ ಸಂಪೂರ್ಣ ಸದುಪಯೋಗ ಆತನಿಗೆ ದೊರಕುವುದರಲ್ಲಿ ಸಂಶಯವಿಲ್ಲ. ವೈದ್ಯಕೀಯ ಶಿಕ್ಷಣದಲ್ಲಿ ಯಾವದೇ ರೀತಿಯ ತಜ್ಞ ಶಿಕ್ಷಣ ಬೇಕಾದಲ್ಲಿ ಜಗತ್ತಿನಲ್ಲಿ ವಿಯೆನ್ನಾಕ್ಕೆ ಹೋಗಬೇಕೆಂದು ಓರ್ವ ವ್ಯಕ್ತಿ ಹೇಳಿದ ಮಾತು ಅಕ್ಷರಶಃ ನಿಜವೆನ್ನಬಹುದು. ಭಾರತವು ಈ ದಿಸೆಯಲ್ಲಿ ಪ್ರಗತಿ ಸಾಧಿಸಬೇಕಾದುದು ಬಹಳಷ್ಟು ಇದೆ.

ವಿಯೆನ್ನಾವನ್ನು ಬಿಟ್ಟ ನಾವು ಜರ್ಮನಿ ದೇಶಕ್ಕೆ ಹೊರಟೆವು. ಯುದ್ಧ ಕಾಲದಲ್ಲಿ ಯುದ್ಧದ ಕರಾಳತೆಗೆ ತುತ್ತಾಗಿ ನಿರ್ನಾಮವಾಗಿ ಜರ್ಮನ್ ದೇಶವಿಂದು ಜನತೆಯ ಸಾಹಸದಿಂದಾಗಿ ಪುನಃ ತಲೆ ಎತ್ತಿ ನಿಂತಿದೆ. ಯುದ್ಧಕಾಲದ ಅನಾಹುತದ ಯಾವುದೇ ದೃಶ್ಯಗಳು ಅಲ್ಲೀಗ ನೋಡ ಸಿಗುವುದು ದುರ್ಲಭ. ಜಗತ್ತಿಗೆ ಬೇಕಾದ ದೈನಂದಿನ ಉಪಯೋಗಕ್ಕೆ ಅವಶ್ಯಕವಾದ ವಸ್ತುಗಳನ್ನು ಒದಗಿಸುವುದಕ್ಕೆ ಜರ್ಮನರೀಗ ಪಣತೊಟ್ಟಂತಿದೆ. ಯುದ್ಧವೀಗ ಅವರಿಗೆ ಬೇಡವಾಗಿದೆ.

ವಿಯೆನ್ನಾದಿಂದ ಹೊರಟ ನಾವು ಝೂರಿಕ್‌ಗೆ ಬಂದೆವು. ಇದು ಪ್ರೇಕ್ಷಕರ ವೀಕ್ಷಣೆಗೊಂದು ಕೇಂದ್ರ. ಇಲ್ಲಿನ ಸರೋವರ ಪ್ರಕೃತಿ ಸೌಂದರ್ಯವನ್ನು ನೋಡುವುದಕ್ಕೆ ವರ್ಷಕ್ಕೆ ೯ ಲಕ್ಷ ಪ್ರೇಕ್ಷಕರು ಈ ನಗರಕ್ಕೆ ಆಗಮಿಸುತ್ತಿದ್ದಾರೆ. ಒಬ್ಬ ಪ್ರೇಕ್ಷಕನಿಗೆ ದಿನವೊಂದಕ್ಕೆ ಕನಿಷ್ಟಪಕ್ಷ ರೂ. ೧೦೦ರಿಂದ ರೂ ೧೫೦ಗಳಷ್ಟು ಖರ್ಚು ತಗಲುವುದು. ಇಲ್ಲಿ ಹೀಗಾಗಿ ಎಷ್ಟೊಂದು ಹಣವು ಚಲಾವಣೆಗೆ ಬರುವುದು, ನಗರಕ್ಕೆ ಅದರಿಂದ ಲಾಭವೆಷ್ಟು ಎಂಬುದನ್ನು ಗಮನಿಸಿದಲ್ಲಿ ಭಾರತದ ಯಾವುದೇ ನಗರವು ಇದನ್ನು ಊಹಿಸುವುದಾದರೂ ಸಾಧ್ಯವೇ? ಎಂದು ನಮಗನಿಸಿತು. ಇಲ್ಲಿ ಗೋಸಂಪತ್ತು ಅಧಿಕವಾಗಿದೆ. ನೇ. ೮೫ ಮಂದಿ ತಮ್ಮಲ್ಲಿ ಒಂದು ದನವನ್ನು ಸಾಕುತ್ತಿರುವರು. ವಿಶಾಲವಾದ ಚರಾವು ಸ್ಥಳಗಳೂ ಇಲ್ಲಿರುವುವು. ಇಲ್ಲಿನ ನೇಕಡಾ ೭೫ ಮಂದಿ ಕೃಷಿಯಿಂದ ಜೀವಿಸುವವರು. ವಿಶಾಲವಾದ ಕ್ಷೇತ್ರವನ್ನಿಟ್ಟುಕೊಂಡು ಯಂತ್ರಸಜ್ಜಿತವಾದ ಕೃಷಿ ವಿಧಾನಗಳನ್ನು ಅನುಸರಿಸಿ ತಮ್ಮ ಕೃಷಿ ಉತ್ಪನ್ನವನ್ನು ಹೆಚ್ಚಿಸುತ್ತಿದ್ದಾರೆ.

ಭಾರತದ ರಾಷ್ಟ್ರೀಯ ಆದಾಯದ ಅರ್ಧದಷ್ಟು ಕೃಷಿ ಉತ್ಪಾದನೆಯಿಂದ ಜರಗುವುದು. ನಾವು ವಿದೇಶೀಯರಿಂದ ಏನಾದರೂ ಕಲಿಯ ತಕ್ಕುದಿದ್ದಲ್ಲಿ ಅದು ಕೃಷಿ ಕ್ಷೇತ್ರದಲ್ಲಿ ಯಂತ್ರ ಸಜ್ಜಿತವಾದ ವಿಧಾನಗಳಿಂದ ನಾವು ನಮ್ಮ ಕೃಷಿ ಉತ್ಪಾದನೆಯನ್ನು ಉತ್ತಮಗೊಳಿಸಿದಲ್ಲಿ, ಉತ್ತಮ ಬೀಜಗಳಿಂದ ನಮ್ಮ ಗೋಸಂಪತ್ತು ಊರ್ಜಿತಪಡಿಸಿದಲ್ಲಿ ದೇಶದ ಆದಾಯ ಹೆಚ್ಚಾಗಿ ನಮ್ಮ ಜನಜೀವನದ ಮಟ್ಟ ಉತ್ತಮವಾಗುವಲ್ಲಿ ಸಂಶಯವಿಲ್ಲ.

ಜಗತ್ತು ಇತರ ಕ್ಷೇತ್ರಗಳಲ್ಲಿ ಬಹಳಷ್ಟು ಮುಂದುವರಿದಿರಬಹುದು. ಆದರೆ ನಮ್ಮ ಬಡ ದೇಶವು ಇತರರಿಂದ ಬೇರೆ ಕ್ಷೇತ್ರ ಕಲಿಯಬೇಕಾದುದು ಅಲ್ಪ ಮತ್ತು ಅಸಮಂಜಸ. ನಾವು ನಮ್ಮ ಜನರ ಮೂಲ ಬೇಡಿಕೆಗಳಾದ ವೈದ್ಯಕೀಯ ಸವಲತ್ತು, ಸಾರಿಗೆ ವ್ಯವಸ್ಥೆ, ವಿದ್ಯಾಭ್ಯಾಸ, ಪಾಕರ್ಯ ಮತ್ತು ಆಹಾರವನ್ನು ಒದಗಿಸದೆ ನಾವು ಬೇರೆಯವರನ್ನು ಇತರ ಕ್ಷೇತ್ರಗಳಲ್ಲಿ ಅನುಕರಣೆ ಮಾಡಿದಲ್ಲಿ ಅದು ಅಸಮಂಜಸ.

ಝೂರಿಕ್‌ನ್ನು ಬಿಟ್ಟ ನಾವು ಡೆನ್ಮಾರ್ಕ್‌ಗೆ ತೆರಳಿದೆವು. ಡೆನ್ಮಾರ್ಕ್ ರಾಜಮನೆತನದ ಅವರೂ ಯುರೋಪ್ಯ ರಾಷ್ಟ್ರಗಳ ಅರಮನೆಗಳಿಗೊಂದು ಮಾದರಿ ಊರು. ನಮ್ಮ ದೇಶದ ಕೆಲವು ರಾಜರ ಅರಮನೆಗಳನ್ನು ನೋಡುವಾಗ ಇಲ್ಲಿನ ಅರಮನೆಗಳಗವು ಸದೃಶ್ಯವಾಗಿವೆಯೆಂದು ತೋರುವುದು. ಡೆನ್ಮಾರ್ಕ್ ಗೋಸಂಪತ್ತಿಗೂ ಒಂದು ತವರೂರು.

ಡೆನ್ಮಾರ್ಕಿನಿಂದ ನಮ್ಮ ನಿಯೋಗ ಫ್ರಾನ್ಸ್ ದೇಶದ ಮುಖ್ಯ ಪಟ್ಟಣವಾದ ಪೇರಿಸ್‌ಗೆ ತಲುಪಿತು. ಅಲ್ಲಿನ ಸಾಮಾಜಿಕ ಜೀವನ ನಮ್ಮ ನಿಯೋಗದವರನ್ನು ಬೆರಗುಗೊಳಿಸುವಂತಹ ಲೈಂಗಿಕ ಜೀವನಾಕರ್ಷಣೆಗಾಗಿ ಗಂಡು-ಹೆಣ್ಣುಗಳು ಒಬ್ಬರಿಗೊಬ್ಬರು ಸ್ಪರ್ಧಿಸುತ್ತಿರುವಂತೆ ಕಾಣುತ್ತಿತ್ತು. ದಯೆ, ಕಾರುಣ್ಯ, ಮರ್ಯಾದೆಗೆ, ಹೆಸರಾದ ಭಾರತೀಯರು ಹೆಂಗಸಿಗೆ ಇಂತಹ ಜೀವನವು ಕನಸಿನಲ್ಲೂ ಎಣಿಸಲಾಗದಷ್ಟು ಕಠಿಣವಾದುದು.

ಪೇರಿಸಿನಿಂದ ನಾವು ಲಂಡನ್‌ಗೆ ಬಂದೆವು. ಜಗತ್ತು ಬಹಳ ವೇಗದಿಂದ ಬದಲಾಗುತ್ತಿದ್ದರೂ ಬದಲಾಗದೆ ಉಳಿದಿರುವ ನಗರವೆಂದರೆ ಲಂಡನ್. ಅದಿನ್ನೂ ತನ್ನ ಪುರಾತನ ಘನತೆ, ಗೌರವ ಸ್ಥಾನವನ್ನು ಬಿಟ್ಟು ಕೊಟ್ಟಿಲ್ಲ. ಅಲ್ಲಿನ ಜನತೆಗೆ ರಾಜಮನೆತನದ ಮೇಲಿರುವ ಗೌರವ ಅಷ್ಟಿಷ್ಟಲ್ಲ. ರಾಜಮನೆತನದವರಿಗೂ ಅದೇ ರೀತಿ ಪ್ರಜಾಪ್ರಭುತ್ವದ ಮೇಲೆ ಬಹಳಷ್ಟು ಗೌರವ ಭಾವನೆ ಇದೆ. ಇವೆರಡೂ ಇಲ್ಲಿ ಪರಸ್ಪರ ಸೌಮ್ಯತೆಯಿಂದ ಇಂದಿಗೂ ಬಾಳಿ ಬದುಕಿವೆ.

ಡಾ| ಮಾಧವ ಪೈ

ಅಲ್ಲಿಂದ ಹೊರಟ ನಾವು ಡೆನ್ಮಾರ್ಕಿನ ಮುಖ್ಯ ಪಟ್ಟಣವಾದ ಕೋಪನ್ ಹೆಗೆನ್‌ಗೆ ಬಂದೆವು. ಇದೊಂದು ಸುಂದರ ನಗರ. ಹಾಲು ಮತ್ತು ಹಾಲಿನಿಂದ ತಯಾರಾದ ವಸ್ತುಗಳಿಗೊಂದು ಕೇಂದ್ರ ಸ್ಥಾನ. ಇಲ್ಲಿಯೂ ಮಹಿಳೆಯರಿಗೆ ಬಹಳವಾದ ಹೆಚ್ಚಿನ ಸ್ವಾತಂತ್ರ್ಯವಿದೆ. ಅಲ್ಲಿಂದ ನಾವು ಹೊಲ್ಲೆಂಡಿನ ಮುಖ್ಯ ಪಟ್ಟಣವಾದ ಎಮ್‌ಸ್ಟರ್‌ಡೆಮ್‌ಗೆ ತಲುಪಿದೆವು. ಇದು ಸಮುದ್ರ ಮಟ್ಟಕ್ಕಿಂತ ಬಹಳ ತಗ್ಗಿರುವ ಪ್ರದೇಶ. ಆದರೂ ಜನರಲ್ಲಿ ಉತ್ತಮ ಕೃಷಿ ವಿಧಾನಗಳನ್ನನುಸರಿಸಿ ಕೃಷಿ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದಾರೆ. ಅಲ್ಲಿ ವಜ್ರ ಕತ್ತರಿಸುವ ಕಾರ್ಖಾನೆಯೂ ಇದೆ. ವಜ್ರಗಳಿಗೆ ಹೆಸರುವಾಸಿಯಾದ ಕೇಂದ್ರವಿದು. ಅಲ್ಲಿಂದ ಬೆಲ್ಜಿಯಮ್‌ನ ಬ್ರಸೆಲ್ಸ್‌ಗೆ ತೆರಳಿ ಅಲ್ಲಿಂದ ಜರ್ಮನಿಯ ಮುಖ್ಯ ಪಟ್ಟಣ ಬೋನ ನಗರಕ್ಕೆ ತಲುಪಿದೆವು. ಯುದ್ಧದ ಬಳಿಕ ತಮ್ಮ ಸಾಹಸದಿಂದ ಇಲ್ಲಿನ ಜನತೆ ತಮ್ಮ ಪಟ್ಟಣವನ್ನು ಪುನರ್ರಚಿಸಿದ್ದಾರೆ.

ಬೋನ್‌ನಿಂದ ನಾವು ಫ್ರೆಂಕ್ ಫರ್ಟ್‌ಗೆ ತೆರಳಿದೆವು. ಅಲ್ಲಿನ ಒಂದು ಮೋಟಾರು ಕಾರು ತಯಾರಿ ಕಾರ್ಖಾನೆ ನಮಗೆ ಆಶ್ಚರ್ಯವನ್ನಿತ್ತಿತು. ಪ್ರತಿ ಮೂರು ನಿಮಿಷಕ್ಕೊಂದು ಹೊಸ ಕಾರು ಇಲ್ಲಿ ತಯಾರಾಗುತ್ತಿದೆ.

ಫ್ರೆಂಕ್ ಫರ್ಟ್‌ನಿಂದ ಹೊರಟ ನಾವು ಸ್ವಿಜರ್‌ಲೆಂಡಿಗೆ ಬಂದೆವು. ಈ ರಾಷ್ಟ್ರವು ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ಬಹಳ ವಾಗಿ ಮಿತ್ರ ರಾಷ್ಟ್ರ. ಎಲ್ಲರೂ ಈ ರಾಷ್ಟ್ರವನ್ನು ಮೆಚ್ಚುತ್ತಾರೆ. ಅಲ್ಲಿ ನಾವು ಅಂತರ್‌ರಾಷ್ಟ್ರೀಯ ಮಹತ್ವದ ಜಿನೇವಾಕ್ಕೆ ತೆರಳಿದೆವು. ಇಲ್ಲಿನ ಆರ್ಥಿಕ ಸಂಸ್ಥೆಗಳು ನಮ್ಮ ದೇಶಕ್ಕೊಂದು ಮಾದರಿ. ನಮ್ಮ ಇಡೀ ರಾಷ್ಟ್ರದ ಬೇಂಕುಗಳ ಸಾಧನ ಸಂಚಯಗಳನ್ನು ಒಟ್ಟು ಮಾಡಿದಲ್ಲಿ ಒಂದೆರಡು ಬೇಂಕುಗಳಷ್ಟು ಮಾತ್ರವಾಗಿರುವುದು.

ನಮ್ಮ ಜನತೆ ಹಣವನ್ನು ಹುದುಗಿಡದೆ ಬೇಂಕುಗಳ ಮೂಲಕವಾಗಲೀ ಪೋ

(ಪನೇ ಪುಟ ನೋಡಿರಿ)

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ.

ಮಾರಾಟಗಾರರು ನವಭಾರತ ಬುಕ್ ಡಿಪೋ, ಉಡುಪಿ.

ಅತ್ಯಂತ ಸ್ವಾದವಾಗಿರಬೇಡ; ಜನರು ನಿನ್ನನ್ನು ಆಸ್ವಾದಿಸಿ ಜಗಿದು ತಿಂದುಬಿಟ್ಟಾರು; ಹಾಗೆಂದು, ಅತ್ಯಂತ ಕಠೋರನಾಗಿರಬೇಡ; ಜನರು ನಿನ್ನ ಹೆಸರು ಮತ್ತು ಗುಣಗಳನ್ನು ಕೇಳಿದೊಡನೆಯೇ ದೂರ ಓಡಿ ಹೋದಾರು

NAVAYUGA

Founder —

A B SHETTY,

Former Minister for Public Health
Govt of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೨-೧೧-'೫೯	೧೧

ಪ್ರಸವಾ ಸಹಕಾರ ಹಸ್ತ

ಕಾಂಗ್ರೆಸ್ ಪಕ್ಷದಿಂದ ಸಿಡಿದು ಹೋದ ಮೇಧಾವಿ ವ್ಯಕ್ತಿಗಳು ಬೇರೆ ಬೇರೆ ರಾಜಕೀಯ ಪಕ್ಷಗಳನ್ನು ಕಟ್ಟಿಕೊಂಡು ಇಂದು ಕಾಂಗ್ರೆಸ್‌ನ ನೀತಿಯನ್ನು ಖಂಡಿಸುತ್ತಿರುವುದು ಕಂಡುಬರುತ್ತಿದೆ ಕಾಂಗ್ರೆಸ್‌ನಿಂದ ಅವರು ಸಿಡಿದು ಹೋಗಲು ಹಲವಾರು ಕಾರಣವಿರಬಹುದು ಅವುಗಳ ಪರಿಶೀಲನೆಯು ಇಂದು ಅನಗತ್ಯ. ಹೀಗೆ ಸಿಡಿದುಹೋದ ನಾಯಕರೇ ಅಗ್ರಗಣ್ಯರಾಗಿರುವ ಪ್ರಜಾಸಮಾಜವಾದಿ ಪಕ್ಷವೂ ಕಾಂಗ್ರೆಸ್‌ನ ವಿರೋಧಿಗಳಲ್ಲಿ ಒಂದಾಗಿದೆ ಪ್ರಜಾಸಮಾಜವಾದಿ ಪಕ್ಷದ ಸುವರ್ಣ ಮಹೋತ್ಸವವು ಬೊಂಬಾಯಿಯಲ್ಲಿ ಬಹಳ ಸಂಭ್ರಮದಿಂದ ನಡೆಯಿತು ಪಕ್ಷದ ಧ್ಯೇಯಧೋರಣೆಗಳನ್ನು ವಿಮರ್ಶಿಸಿತು ಇವೆಲ್ಲವೂ ಸರ್ವಸಾಮಾನ್ಯವಾಗಿಯೇ ಇದ್ದುವೆನ್ನಬಹುದು ಕಾಂಗ್ರೆಸಿನೊಡನೆ ಸಹಕರಿಸುವ ಸಂಬಂಧದ ಗೊತ್ತುವಳಿಯೊಂದು ಮಾತ್ರ ಸುವರ್ಣ ಮಹೋತ್ಸವ ಸಂಭ್ರಮದ ಒಂದು ಅತಿ ಪ್ರಧಾನವಾದ ವಿಷಯವಾಗಿದೆ

ಕಾಂಗ್ರೆಸ್ ಮಂದಗಾಮಿಯಾಗಿದ್ದುದರಿಂದ, ತೀವ್ರಗಾಮಿಗಳು ಒಂದಾಗಿ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು ಕಾಂಗ್ರೆಸ್ಸಿನಿಂದ ಹೊರಬಂದು ಕೃಪಲಾನಿಯವರು ಪ್ರಜಾಪಕ್ಷವೊಂದನ್ನು ಪ್ರಾರಂಭಿಸಿದರು. ಕೆಲ ವರ್ಷಗಳಲ್ಲಿಯೇ ಇವೆರಡು ವಿಲೀನಗೊಂಡು ಪ್ರಜಾ ಸಮಾಜವಾದಿ ಪಕ್ಷವಾಗಿ ಕಾಂಗ್ರೆಸ್‌ಗೆ ವಿರೋಧಿ ಪಕ್ಷವಾಗಿ ಈಗ ನಿಂತಿದೆ ಆದರೆ, ಕಾಂಗ್ರೆಸ್ಸು ತನ್ನ ಧ್ಯೇಯ ಧೋರಣೆಗಳಲ್ಲಿ ತುಸು ಪರಿವರ್ತನೆಯನ್ನು ಮಾಡಿಕೊಂಡು, ಯುಗವಾಣಿಯ ಕರೆಗೆ ಓಗೊಟ್ಟಿದೆ. ಭಾರತವನ್ನು ಸಮಾಜವಾದ ಮಾದರಿಯ ಕಲ್ಯಾಣ ರಾಷ್ಟ್ರವನ್ನಾಗಿ ರೂಪಿಸುವ ಆದರ್ಶ ಮತ್ತು ಆವಶ್ಯಕ ಗುರಿಯನ್ನು ಕಾಂಗ್ರೆಸ್ ಇಂದು ಹೊತ್ತುಕೊಂಡಿದೆ ಅದಕ್ಕಾಗಿ ಅಹೋರಾತ್ರಿ ದುಡಿಯುತ್ತದೆ. ಕಳೆದೆರಡು ಸಾರ್ವತ್ರಿಕ ಚುನಾವಣೆಗಳಲ್ಲಿಯೂ ಲೋಕಸಭೆಯಲ್ಲಿ ಮಾತ್ರವಲ್ಲ, ಹೆಚ್ಚಿನ ರಾಜ್ಯಗಳಲ್ಲಿಯೂ ನಿಚ್ಚಳ ಬಹುಮತವನ್ನು ಪಡೆದು ಆಡಳಿತೆಯನ್ನು ನಡೆಸುತ್ತಿದೆ ಪ್ರಚಂಡ ಬೆಂಬಲವನ್ನು ಪಡೆದ ಕಾಂಗ್ರೆಸ್‌ನ ತತ್ತ್ವಗಳನ್ನು ಭಾರತೀಯರು ಒಪ್ಪಿರುತ್ತಾರೆ ಎಂದು ಹೇಳಬಹುದು.

ಪ್ರಜಾ ಸಮಾಜವಾದಿ ಮತ್ತು ಕಾಂಗ್ರೆಸ್ ಪಕ್ಷಗಳ ಮೂಲಭೂತ ಧ್ಯೇಯ ಧೋರಣೆಗಳು ಒಂದೇ ಆಗಿರುವುದಿಲ್ಲವಾದರೂ ಇವುಗಳಲ್ಲಿ ಸಾಕಷ್ಟು ಹೊಂದಾಣಿಕೆಗಳವೆಎಂಬುದನ್ನು ಅಲ್ಲಗಳೆಯುವಂತಿಲ್ಲ ಎರಡರ ಗುರಿಯೂ ನಡೆವ ದಾರಿಯೂ ಒಂದೇ ಆಗಿದೆ ಎಂದೂ ಹೇಳಬಹುದು ಹಾಗಿರುವಾಗ, ಇವೆರಡೂ ಪಕ್ಷಗಳು ಪರಸ್ಪರ ಸಹಕಾರದಿಂದ ವರ್ತಿಸಿದರೆ, ಕಾಂಗ್ರೆಸ್ ಇರಿಸಿರುವ ಕಲ್ಯಾಣ ರಾಷ್ಟ್ರ ರಚನೆಯ ಕಾರ್ಯಕ್ಕೊಂದು ಹೊಸ ಹುಮ್ಮಸ್ಸು ಬಂದು ಧ್ಯೇಯವನ್ನು ಸಫಲವಾಗಿ, ತೀವ್ರವಾಗಿ ಪೂರೈಸಬಹುದಿತ್ತು. ಆದರೆ, ಪ್ರಜಾಸಮಾಜವಾದಿ ಪಕ್ಷವು ಈ ಅಧಿವೇಶನದಲ್ಲಿ ಸ್ವೀಕರಿಸಿದ ಗೊತ್ತುವಳಿಯಲ್ಲಿ "ಧೋರಣೆ ಹಾಗೂ ಅವುಗಳ ಕಾರ್ಯಾಚರಣೆಯ ಬಗ್ಗೆ ಭಿನ್ನಾಭಿಪ್ರಾಯವಿರುವ ವರೆಗೆ ನೀಡುವ ಸಹಕಾರದಿಂದ ಕೇವಲ ವಿನಾಶಕ ಶಕ್ತಿಗಳನ್ನು ಬಲಪಡಿಸಿದಂತೆಯೂ ಜನತೆಯಲ್ಲಿರುವ ನಿರಾಶೆಯನ್ನು ಹೆಚ್ಚಿಸಿದಂತೆಯೂ ಆಗುವುದು' ಎಂದು ಹೇಳಿ ಸಹಕಾರ ಹಸ್ತ ನೀಡಲು ನಿರಾಕರಿಸಲಾಗಿದೆ. ಈ ಗೊತ್ತುವಳಿಯಲ್ಲಿನ ವಾಸ್ತವಿಕಾಂಶ ತುಸು ಅಲ್ಪವೇ ಎಂದು ಹೇಳಬೇಕು ತನ್ನ ಸಿದ್ಧಾಂತವನ್ನು ಸಮರ್ಥಿಸಿಕೊಳ್ಳಲು ಕಾಂಗ್ರೆಸ್ ಪಕ್ಷದ ಆಡಳಿತೆಯಲ್ಲಿ ಕಾರ್ಯಕ್ಷಮತೆಯ ಅಭಾವ, ಲಂಚಂಗೂಳಿತನ, ಸಂಕೋಚಿತ ಮನೋವೃತ್ತಿಗಳು ಜನತೆಯನ್ನು ಸಂಪೂರ್ಣ ನಿರಾಶರನ್ನಾಗಿ ಮಾಡಿರುವುದೆಂದು ಸೇರಿಸಲಾಗಿದೆ

ಜನತೆಯ ಹಿತ ಸಾಧಿಸುವ ಒಂದು ಆಡಳಿತೆಯು ಎಷ್ಟು ಕಾರ್ಯಕ್ಷಮತೆಯಿಂದ ಕೂಡಿದ್ದರೂ ಸಾಲದು ತಂದೆಗೆ ತನ್ನ ಮಗು ಬಹಳಷ್ಟು ಬುದ್ಧಿವಂತನಾಗಬೇಕೆಂಬ ಅಭಿಲಾಷೆಯಿರುವುದನ್ನು ಅಲ್ಲಗಳೆಯುವುದ ಸಾಧ್ಯವಿಲ್ಲ ಹಾಗಿರುವಾಗ, ಸರಕಾರಗಳೂ ಹೆಚ್ಚು ಕಾರ್ಯಕ್ಷಮತೆಯಿಂದ ಕೂಡಿರಬೇಕೆಂಬುದು ಯಾವ ಪಕ್ಷದ ಆಡಳಿತೆಯ ಬಗ್ಗೆಯೂ ಹೇಳಬಹುದಾದುದೇ. ಇನ್ನು ಸಂಕುಚಿತ ಮನೋವೃತ್ತಿ ಹಾಗೂ ಲಂಚಗೂಳಿತನಗಳು ಅಧಿಕಾರಿಗಳ ದೋಷವೇ ಹೊರತು ಪಕ್ಷದ್ದೆಂದು ಹೇಳುವಂತಿಲ್ಲ ಇಂತಹ ಅನಪೇಕ್ಷಣೀಯ ಪ್ರವೃತ್ತಿಗಳನ್ನು ತಡೆಹಿಡಿಯುವುದು ಸರಕಾರಿ ಪಕ್ಷಕ್ಕೆ ಮಾತ್ರ ಸೇರಿದ ಕೆಲಸವೆಂದು ತಿಳಿದರೆ, ತಪ್ಪಾಗುವುದು, ಇದು ಸಮಸ್ತ ಜನತೆಯ ಕರ್ತವ್ಯವಾಗಿದೆ ಇಂತಹ ಪ್ರವೃತ್ತಿಗಳನ್ನು ತಡೆಯಲು ವಿಧಾಯಕ ಸೂಚನೆಗಳನ್ನು ಮಾಡದೇ ಕೇವಲ ಅಸಹಕಾರಕ್ಕೆ ಇವೇ ಕಾರಣವೆಂದು ಹೇಳುವುದು ಸಮಂಜಸವೆಂದು ಹೇಳ ಬರುವಂತಿಲ್ಲ. ಹಾಗಿರುವಾಗ ಪ್ರ. ಸ ವಾ ಪಕ್ಷದ ಈ ನಿರ್ಧಾರದಿಂದ ಯಾವ ಪುರುಷಾರ್ಥವನ್ನೂ ಸಾಧಿಸಿಕೊಂಡಂತಾಗಲಿಲ್ಲ.

ಇಂದು ನಮ್ಮ ದೇಶದಲ್ಲಿರುವಷ್ಟು ರಾಜಕೀಯ ಪಕ್ಷಗಳು ಪ್ರಪಂಚದ ಯಾವ ನಾಗರಿಕ ರಾಷ್ಟ್ರದಲ್ಲಿಯೂ ಇಲ್ಲವೆಂದು ಹೇಳಬಹುದು. ಒಂದು ಕೋಪಕ್ಕೆ ಒಂದು ಬಾವಿ ತೋಡುವವರಂತೆ ಒಂದೊಂದು ಧ್ಯೇಯಕ್ಕಾಗಿ ಒಂದೊಂದು ಪ್ರತ್ಯೇಕ ಪಕ್ಷವನ್ನು ಕಟ್ಟುವುದರಿಂದ ರಾಷ್ಟ್ರದ ಕಲ್ಯಾಣವಾಗುವಂತಿಲ್ಲ ನಮ್ಮಲ್ಲಿ ಅನೇಕ ನಾಯಕರು ಇದ್ದಾರೆ, ಅವರೆಲ್ಲರ ಶಕ್ತಿಗಳು ಬೇರೆ ಬೇರೆಯಾಗಿ ಹರಿಯುತ್ತಿವೆ ಇದಕ್ಕಿಂತ, ಧ್ಯೇಯಧೋರಣೆಯಲ್ಲಿ ಸಮತೆಯಿರುವ ಪಕ್ಷಗಳು ಪರಸ್ಪರ ಸಹಕಾರ ಕೊಡುವುದರಿಂದ ಈ ಶಕ್ತಿಗಳು ಸಂಮಿಲಿತವಾಗುವುದು ಸಾಧ್ಯ. ನಮಗಿಂದು ಬೇಕಾದುದು ಪಕ್ಷಗಳು ಎಂದಿಗೂ ಅಲ್ಲ, ಐಕ್ಯವೆಂಬುದನ್ನು ಅವಶ್ಯ ಗಮನಿಸಬೇಕು ಈ ದೃಷ್ಟಿಯಿಂದ, ಪ್ರಜಾ ಸಮಾಜವಾದಿ ಪಕ್ಷದ ಗೊತ್ತುವಳಿಯು ನಿರುತ್ಸಾಹಿಯಾಗಿದೆಯೆಂಬುದು ನಿಸ್ಸಂದೇಹ

ಅಜಾದ ಚೀನ (?)

ಚೀನಾ—ಭಾರತದ ಸೀಮಾ ವಿವಾದಗಳು ದಿನೇದಿನೇ ಉಲ್ಬಣಾವಸ್ಥೆಗೇರುತ್ತಿವೆಯೆಂಬುದು ಶೋಚನೀಯ ಮೊನ್ನೆ ಮೊನ್ನೆ ಚೀನೀಯ ಪ್ರಧಾನಿಗಳಿಂದ ಭಾರತೀಯ ಪ್ರಧಾನಿಯವರಿಗೆ ಬಂದಿರುವ ಒಂದು ಪತ್ರದಲ್ಲಿ ಮ್ಯಕಮೋಹನ ರೇಖೆಯಿಂದ ಇಕ್ಕಡೆಗಳವರೂ ೧೨ ಮೈಲು ದೂರದ ಒಳಗಿರುವ ಸೇನೆಯೆಲ್ಲವನ್ನೂ ಹಿಂದೆಗೆದುಕೊಳ್ಳಬೇಕೆಂದೂ ಗಡಿ ವಿವಾದಗಳನ್ನು ಸೌಹಾರ್ದದಿಂದ ಪೂರೈಸುವ ವರೆಗೆ ಈ ಪ್ರದೇಶವನ್ನು ನಿಶ್ಶಸ್ತ್ರೀಕರಿಸಿ ಉಳಿಸಬೇಕೆಂದೂ ತಿಳಿಸಿದೆ ಈ ಪತ್ರದ ಬಗ್ಗೆ ಪ್ರಧಾನಿ ನೆಹರೂರವರ ಸ್ಪಷ್ಟಾಭಿಪ್ರಾಯ ಇದುವರೆಗೆ ವ್ಯಕ್ತಪಟ್ಟಿಲ್ಲ ಚೀನೀಯ ಪ್ರಧಾನಿಯವರ ಪತ್ರದಲ್ಲಿದ್ದ ಸೂಚನೆಗಳನ್ನು ಸ್ವೀಕರಿಸುವುದೆಂದರೆ, ವಿವಾದವನ್ನು ಮತ್ತಷ್ಟು ಬೆಳೆಸುವುದೆಂದೇ ಅರ್ಥ. ಕಾಶ್ಮೀರದಲ್ಲಿ ಪಾಕಿಸ್ತಾನಿ ಸೇನೆಗಳು ಹೊಕ್ಕಾಗ, ಭಾರತದ ಶಾಂತಿಪ್ರಿಯತೆಯಿಂದಾಗಿ, ಕಾಶ್ಮೀರದೊಳಗೊಂದು ಅಜಾದ ಕಾಶ್ಮೀರವು ರೂಪುಗೊಂಡು ಅದು ಇಂದಿಗೂ ಉಳಿದುಕೊಂಡಿರುವುದನ್ನೂ ಕಾಶ್ಮೀರ ಸಮಸ್ಯೆಯಿನ್ನೂ ಪರಿಹಾರಗೊಳ್ಳದೆ ಇರುವುದನ್ನೂ ನೆನಪಿಸಿಕೊಳ್ಳಬೇಕು. ಮ್ಯಕಮಹೋನ ರೇಖೆಯಿಂದ ಭಾರತವು ಹಿಂದೆ ಸರಿದರೆ, ಆ ಪ್ರದೇಶವು ಚೀನದ ಪ್ರದೇಶವಾಗಿಯೇ ಶಾಶ್ವತವಾಗಿಯೂ ಉಳಿಯುವುದಿಲ್ಲವೆಂದು ಹೇಳುವುದು ಹೇಗೆ? ನಮ್ಮ ದೇಶದ ಸೀಮೆಯು ಹಾಲಿನಷ್ಟು ಬೆಳ್ಳಗಿರುವಾಗ, ಅದರಲ್ಲಿ ಸಂದೇಹಪಟ್ಟುಕೊಳ್ಳುವ ಅಗತ್ಯವಿಲ್ಲ. ಈಗಾಗಲೇ ಖಚಿತವಿರುವ ಗಡಿಯನ್ನು ಇರಿಸಿಕೊಂಡು ನಿರ್ಧಾರವಾಗದಿರುವುದನ್ನು ಮಾತ್ರ ಅವಶ್ಯಗುರುತಿಸಬೇಕಾಗಿದೆ. ಕುಟಿಲ ವಿಷಸರ್ಪನಂತಹ ಚೀನವು ದುರುದ್ದೇಶ ಪ್ರೇರಿತವಾಗಿಯೆ ಶಾಂತಿಮಂತ್ರವನ್ನು ಮುಂದೊಡ್ಡಿರುವುದಕ್ಕೆ ಬಂಧಿತರ ಬಿಡುಗಡೆ ಮಾಡದಿರುವುದೂ ಒಂದು ಕಾರಣವಾಗಿದೆ ಅಜಾದ ಕಾಶ್ಮೀರವೊಂದೇ ನಮಗೆ ಸಾಕು, ಅದರ ಬಗ್ಗೆ ವಿಚಾರಿಸಲು ಯುಕ್ತ ರಾಷ್ಟ್ರ ಸಂಘವಾದರೂ ಇದೆ; ಇನ್ನು ಅಜಾದ ಚೀನವೊಂದು ರೂಪುಗೊಂಡರೆ, ಚೀನದ ಬಗ್ಗೆ ಯಾರೊಡನೆ ನಾವು ದೂರಿಕೊಳ್ಳಬೇಕು?

ಸಂಕ್ಷಿಪ್ತ ಸುದ್ದಿಗಳು

ಐಸನ್‌ಹಾವರ ಭಾರತ ಸಂಚಾರ

ಅಮೆರಿಕೆಯ ಅಧ್ಯಕ್ಷ ಶ್ರೀ ಐಸನ್‌ಹಾವರರು ದಶಂಬರ ೩ನೆದಿನಾಂಕದಿಂದ ಸುಮಾರು ೩½ ವಾರಗಳ ವರೆಗೆ ರೋಮ, ತುರ್ಕಸ್ಥಾನ, ಇರಾಣ, ಪಾಕಿಸ್ತಾನ, ಅಫಘಾನಿಸ್ತಾನ ಭಾರತ ಮತ್ತು ಫ್ರಾನ್ಸ್‌ಗಳನ್ನು ಸಂದರ್ಶಿಸುವರೆಂದು ಅಧಿಕೃತವಾಗಿ ತಿಳಿದುಬಂದಿದೆ ಭಾರತಕ್ಕೆ ತಾರೀಕು ಒಂದು ಮುಂದೈದು ದಿನಗಳವರೆಗೆ ಇಲ್ಲಿ ತಂಗುವರೆಂದೂ ತಿಳಿದುಬಂದಿದೆ ತಾ ೧೧ರಂದು ನವದೆಹಲಿಯಲ್ಲಿ ನಡೆಯಲಿರುವ ಜಾಗತಿಕ ಕೃಷಿ ಪ್ರದರ್ಶನವನ್ನು ಇವರು ಉದ್ಘಾಟಿಸುವರು ಭಾರತವನ್ನು ಸಂದರ್ಶಿಸುವ ಅಮೆರಿಕನ್ ಅಧ್ಯಕ್ಷರಲ್ಲಿ ಶ್ರೀ ಐಸನ್‌ಹಾವರರೇ ಮೊದಲಿಗರಾಗಿದ್ದಾರೆ. ಇವರ ಸ್ವಾಗತಕ್ಕಾಗಿ ತಕ್ಕ ಸಿದ್ಧತೆಗಳು ಭಾರತದ ರಾಜಧಾನಿಯಲ್ಲಿ ಭರದಿಂದ ನಡೆಯುತ್ತಿವೆ

ಸೀಮಾ ವಿವಾದದಲ್ಲಿ ಸಾಂತ್ವನ

ಚೀನ—ಭಾರತಗಳ ನಡುವೆ ಇರುವ ಸೀಮಾ ವಿವಾದವನ್ನು ಶಾಂತ ರೀತಿಯಿಂದ ಬಗೆಹರಿಸಲು ರಶ್ಯನ್ ಪ್ರಧಾನಿ ಶ್ರೀ ನಿಕೀಟಾ ಕ್ರುಶ್ಚೇವರು ಉತ್ಸಾಹ ಪ್ರದರ್ಶಿಸಿದ್ದಾರೆ. ವಿವಾದ ಗ್ರಸ್ತವಾಗಿರುವ ಪ್ರದೇಶವು ನಿರ್ಜನವಾಗಿರುವುದೆಂದು ಅವರು ತಿಳಿಸುತ್ತ, ಇಂದಿನ ಆಧುನಿಕ ಕಾಲದಲ್ಲಿ, ಸೇನಾಪತಿಯನ್ನು ಎಲ್ಲಿ ನಿಲ್ಲಿಸಿದರೂ ಅತನು ತನ್ನ ಶೌರ್ಯವನ್ನು ತೋರಿಸಬಲ್ಲನು; ಅದರದು ನನಗ ಸೇರುವುದಿಲ್ಲ ಎಂದು ತಿಳಿಸಿದರು.

ಚೀನ ರಶ್ಯಗಳ ಮೈತ್ರಿಯು ಅಭೇದ್ಯವಾದುದೆಂದೂ ಇದನ್ನು ಮುರಿಯ ಬಯಸುವವರನ್ನು ತಾವೆಂದೂ ಸಹಿಸಲಾರೆವೆಂದೂ ಚೀನೀಯ ಉಪಾಧ್ಯಕ್ಷ ಇತ್ತೀಚೆಗೆ ಹೊರಡಿಸಿರುವ ಘೋಷಣೆಯೊಂದರ ಮೂಲಕ ತಿಳಿಸಿದ್ದಾರೆ ಪ್ರಧಾನಿ ನೆಹರೂರವರ ರಶ್ಯದ ಮಾತನ್ನಾದರೂ ಚೀನ ಕೇಳುವುದೆಂಬ ವಿಶ್ವಾಸವನ್ನು ತೋರ್ಪಡಿಸಿಲ್ಲ

ಪಾಕ್ ಭಾರತ ವಿವಾದಗಳು

ಪೂರ್ವ ಪಾಕಿಸ್ತಾನ ಮತ್ತು ಭಾರತಗಳ ನಡುವಣ ಪೂರ್ವಗಡಿಯ ವಿವಾದಗಳ ಕುರಿತಾಗಿ ಚರ್ಚಿಸಲು ಉಭಯ ಸರಕಾರಗಳ ಪ್ರತಿನಿಧಿಗಳು ಶಿಲ್ಲಾಂಗದಲ್ಲಿ ಸಭೆ ಸೇರಿದ್ದರು ಪೂರ್ವ ಪಾಕಿಸ್ತಾನದ ಪರವಾಗಿ ಶ್ರೀ ಎಂ ಎ ಮಜಿದರೂ ಭಾರತ ಪರವಾಗಿ ಶ್ರೀ ಎಲ್. ಶರ್ಮಾರವರೂ ಈ ಮಾತುಕತೆಗಳಲ್ಲಿ ಭಾಗವಹಿಸಿದ್ದರು

ಇದೇ ರೀತಿಯಲ್ಲಿ ಭಾರತ—ಪಾಕ್ ಸಮಸ್ಯೆಗಳನ್ನು ಸಂಪೂರ್ಣ ಶಾಂತಿಯುತವಾಗಿಯೇ ಬಗೆಹರಿಸಿಕೊಳ್ಳುವ ಆಶಯವನ್ನು ಎರಡೂ ರಾಷ್ಟ್ರಗಳ ಮುಖಂಡರು ಇಟ್ಟುಕೊಂಡಿದ್ದು ಅದನ್ನು ಮುಂದುವರಿಸಲು ನಿರ್ಧರಿಸಿದ್ದಾರೆ ಇದರಿಂದ ಸಂಬಂಧವು ಉಭಯತರರೊಳಗೆ ನಿಕಟವಾಗುವುದೆಂಗೂ ಹೇಳಲಾಗಿದೆ.

ಕರ್ನಾಟಕ ಸಂಚಾರ

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಡಿ ಸಿ ಪಾವಟೆಯವರ ಷಷ್ಠ್ಯಬ್ದಿಪೂರ್ತಿ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು. ರಾಷ್ಟ್ರಪತಿ

ಡಾ| ರಾಜೇಂದ್ರ ಪ್ರಸಾದರು ಈ ಅರಮ ನೆ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು ಈ ಸಂದರ್ಭದಲ್ಲಿ ಶ್ರೀ ಪಾ ಪಟೆಯವರಿಗೆ ೧೧ ಲಕ್ಷ ರೂಪಾಯಿ ಯ ನಿಧಿಯೊಂದನ್ನು ಸಂಗ್ರಹಿಸಿ ಅರ್ಪಿ ಸಲಾಯಿತು. ರಾಷ್ಟ್ರಪತಿಯವರು ಉ ತ್ತರ ಕರ್ನಾಟಕದ ಗೋಕರ್ಣ, ಹುಬ್ಬ ಳ್ಳಿ, ಧಾರವಾಡ ಕುಮಟ, ಕಾರವಾರ ಮೊದಲಾದೆಡೆಗಳಿಗೆ ಭೆಟ್ಟಿಯಿತ್ತರು

ಕಾಂಗ್ರೆಸ್ ಅಧಿವೇಶನ

ಮುಂದಿನ ಜನವರಿಯಲ್ಲಿ ಕಾಂಗ್ರೆಸ್ ಅಧಿವೇಶನವು ಬೆಂಗಳೂರಲ್ಲಿ ಸಮಾವೇಶ ಗೊಳ್ಳುವುದು ಈ ಅಧಿವೇಶನ ನಡೆಯುವ ಮಂಟಪಕ್ಕೆ 'ಸದಾಶಿವ ನಗರ' ಎಂಬ ಹೆಸ ನ್ನು ಇಡಲಾಗುವುದೆಂದು ತಿಳಿಯುತ್ತದೆ ದಿವಂಗತ ಕಾರ್ನಾಡು ಸದಾಶಿವರಾಯ ರು ಕರ್ನಾಟಕದ ಹಿರಿಯ ಕಾಂಗ್ರೆಸ್ ಧುರೀಣರಾಗಿದ್ದು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ಸದಾಶಿ ವ ನಗರದ ಮಹಾದ್ವಾರಕ್ಕೆ ದಿವಂಗತ ಕೆ. ಟಿ ಭಾಷ್ಯಂ ಅಯ್ಯಂಗಾರರ ಹೆಸರ ನ್ನು ಇಡಲು ಸ್ವಾಗತಸಮಿತಿಯು ನಿರ್ಧರಿ ಸಿದೆ.

ಅಲ್ಲಲ್ಲಿಯ ಸುದ್ದಿ ಸಾರ

ಉಚಿತ ಡಿ ಡಿ. ಟಿ ಚುಮುಕಿಸುವಿಕೆ— ರಾಷ್ಟ್ರೀಯ ಮಲೇರಿಯಾ ನಿ ಮೂರ್ಲನಾ ಇಲಾಖೆಯವರು ಉಡುಪಿ ನಗ ರ ಸಭೆಯ ಕ್ಷೇತ್ರದಲ್ಲಿರುವ ಎಲ್ಲಾ ಮನೆಗಳಿ ಗೂ ಇತರ ಕಟ್ಟಡಗಳಿಗೂ ಉಚಿತವಾಗಿ ಡಿ ಡಿ ಟಿ ಯನ್ನು ಇದೇ ತಾ. 16ರಿಂದ ಚು ಮುಕಿಸಲಿಕ್ಕಿರುವರು ಈ ಚುಮುಕಿಸುವಿಕೆ ಯಿಂದ ಸೊಳ್ಳೆ ಆಕ್ಕಳೆ ಮುಂತಾದುವುಗಳ ಕಾಟವು ಕಡಿಮೆಯಾಗುವುದು,

ಸೂಚನೆಗಳು— ಈ ಸಿಬ್ಬಂದಿಯವರು ಚುಮುಕಿಸಲು ಬರುವಾಗ ಪ್ರತಿಯೊಂದು ಮ ನೆಯವರೂ ಈ ಕೆಳಗಿನ ಸೂಚನೆಗಳನ್ನು ಅ ನುಸರಿಸುವಂತೆ ನಗರ ಸಭಾಧ್ಯಕ್ಷ ಡಾ| ಕೆ ಯಲ್ ಐತಾಳರೂ ಆರೋಗ್ಯಾಧಿಕಾರಿ ಡಾ| ವಿ. ಎಲ್ ಪಂಡಿತರೂ ಅಪೇಕ್ಷಿಸುತ್ತಾರೆ.

ಗೋಡೆಯಲ್ಲಿ ತೂಗಹಾಕಿದ ಫೊಟೊ, ಬಟ್ಟೆ ವಗೈರೆಗಳನ್ನು ತೆಗೆದಿಡಬೇಕು, ಗೋಡೆ ಯ ಬದಿಯಲ್ಲಿರತಕ್ಕ ಮೇಜು ಕುರ್ಚಿ ಮಂಚ ಇತ್ಯಾದಿಗಳನ್ನು ತೆಗೆದು ಕೋಣೆಯ ಮಧ್ಯ ಭಾಗದಲ್ಲಿ ಇರಿಸುವುದು, ಉಗ್ರಾಣದಲ್ಲಿರುವ ಧವಸಧಾನ್ಯಾದಿ ಆಹಾರ ಸಾಮಾಗ್ರಿಗಳನ್ನು ಭದ್ರವಾಗಿ ಮುಚ್ಚಿಡುವುದು, ಜಾನುವಾರುಗಳ

ಉಡ್ಪಿ. ಡಿ. ಮು ಕೋರ್ಟಿನಲ್ಲಿ

S C No 507/1959

ನಾದು ಯೂಸೆ ಮುತ್ತಪ್ಪ ಕೋಟ್ಯಾನ್-ವಾದಿ

ಮತ್ತು

ಕೊರಗ ಸೇರ್ವೆಗಾರ ದೊಂಬ ಸೇರ್ವೆಗಾರರ ಮಗ ಉಪ್ಪೂರು ಗ್ರಾಮದ ಕುದ್ರುಬೆಟ್ಟು— ಪ್ರತಿವಾದಿ

ಯಿವರೊಳಗೆ

ವಾದಿಗೆ ಪ್ರತಿವಾದಿಯು ರೂ 200/ ಕ್ಕೆ ತಾ 19-5-54ರಲ್ಲು ಬರೆ ಕೊಟ್ಟ ಡಿಮಾಂ ಡ್ ನೋಟಿನ ಪ್ರಕಾರ ಬರತಕ್ಕ ಬಾಕಿ ಅಸ ಲು ಬಡ್ಡಿ ಕೂಡಾ ರೂಪಾಯಿ 194 57 ಕ್ಕೇಳಿ ದಾಖಿಲು ಮಾಡಿದ ಮೇಲಿನ ದಾವೆಯು ಪ್ರತಿ ವಾದಿಯ ನೋಟೀಸಿನ ಬಗ್ಗೆ 18-11 59ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿದೆ. ಪ್ರತಿವಾ ಯು ಸದರಿ ದಿವಸ ಸದ್ರಿ ವ್ಯಾಜ್ಯದಲ್ಲಿ ಮೇ ಲ್ಕಂಡ ಕೋರ್ಟಿನಲ್ಲಿ ಪೂರ್ವಾಹ್ನ ಘಂಟೆ10 ಕ್ಕೆ ಹಾಜರಾಗುವದೆ ತಪ್ಪಿದಲ್ಲಿ ಪ್ರತಿವಾದಿ ಯ ಗೈರು ಹಾಜರಿಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

(Sd) Gratian C Rego
Vakıl foı Plamtıff

Udıpı Date 6—11—59

ನ್ನು ಪಟ್ಟಿಯ ಹೊರಗಡೆ ಕಟ್ಟಿಹಾಕುವುದು, ಹಟ್ಟಿ ಕೊಟ್ಟಿಗೆಗಳಿಗೂ ಅಡಿಗೆ ಮತ್ತು ಬಚ್ಚ ಲು ಕೋಣೆಗಳಿಗೂ ಸಹಾ ಡಿ ಡಿ ಟಿ ಚುಮು ಕಿಸಲಾಗುವುದು ಡಿ ಡಿ ಟಿ ಚುಮುಕಿಸಿದ ನಂತರ ಚುಮುಕಿಸಿದ ಭಾಗವನ್ನು 8 ತಿಂಗಳ ವರೆಗೆ ಒರೆಸಬಾರದು. ತೊಳೆಯಬಾರದು ಮ ತ್ತು ಸುಣ್ಣ ವಗೈರೆ ಹಚ್ಚಬಾರದು.

ಕಾರ್ಯಕ್ರಮ—

ತಾ 16-11 59—ಕಸ್ತುರಬಾಡಿ, ಅಜ್ಜ ರಕಾಡು, ಕಾಡಬೆಟ್ಟು ವಾರ್ಡುಗಳು.

17-11 59 – ಕಿನ್ನಿಮೂಲ್ಕಿ, ಬೈಲೂರು ಒಳಕಾಡು, ತೆಂಕುಪೇಟೆ ವಾರ್ಡುಗಳು

18-11-59—ಗುಂಡಿಬೈಲು, ಕಡಿಯಾ ಳಿ, ಕುಂಜಿಬೆಟ್ಟು ವಾರ್ಡುಗಳು

19-11-59—ಟೆಂಪ್ಲ್, ಸೆಂಟ್ರಲ್, ಸಿ ರಿಬೀಡು ವಾರ್ಡುಗಳು

20-11 59—ಪಣಿಯಾಡಿ, ಮೂಡನಿ ಡಂಬೂರು, ಬನ್ನಂಜೆ, ಅಂಬಲಪಾಡಿ ವಾರ್ಡು ಗಳು ಅಲ್ಲದೆ ತಾ 21ಕ್ಕೆ ನಗರ ಸಭೆಯ ಹೊರಗಿನ ಬಡಗಬೆಟ್ಟು, ಅಂಬಲಪಾಡಿ, ತಾ 23ಕ್ಕೆ ಶಿವಳ್ಳಿ... ಕಡೆಕಾರು, ಕುತ್ಪಾಡಿ, 24 ಮತ್ತು 25ಕ್ಕೆ ಶಿವಳ್ಳಿ, ಹೆರ್ಗ ಮೊದಲಾ ದ ಗ್ರಾಮಗಳ ಮನೆಗಳಿಗೆ ಡಿ ಡಿ ಟಿ ಚು ಮುಕಿಸಲಾಗುವುದು. (ಮುಂದಿನ ಕಾರ್ಯಕ್ರ ಮಗಳನ್ನು ಹಿಂದಿನಿಂದ ಕೊಡಲಾಗುವುದು)

ಅಖಿಲ ಭಾರತ ಕೆಥೊಲಿಕ್—ಕ್ರಿಶ್ಚನ್ ಪರಿಷತ್ತೊಂದು ಇದೇ ತಾ 14-15ರಲ್ಲಿ ಬೊಂಬಾಯಿಯ ಎಪೊಲ್ಲೊ ಸ್ಟ್ರೀಟಿನ ಲ್ಲಿರುವ Cama Hallನಲ್ಲಿ ಜರಗಲಿರು ವುದು

ಡಾ. ಮಾಧವ ಪೈಗಳ ವಿದೇಶಾ ನುಭವ— ಇಂಡಿಯನ್ ಮೆಡಿಕಲ್ ಎಸೋ ಸಿಯೇಶನಿನ ಸದಸ್ಯರಲ್ಲೊಬ್ಬರಾಗಿ ಯುರೋಪ್ಯ ರಾಷ್ಟ್ರಗಳಲ್ಲಿ ಎರಡುವರೆ ತಿಂಗಳು ಪ್ರವಾಸ ಮಾಡಿ ಇದೇ ತಾ 3ರಂದು ಸ್ವದೇಶಕ್ಕೆ ಹಿಂ ದಿರುಗಿ ಬಂದ ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನಿನ ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈಗಳು ತಾ 7ನೇ ಸಂಜೆ ಮಂಗಳೂರಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ತಮ್ಮ ವಿದೇಶ ಯಾತ್ರೆಯ ಅನುಭವವನ್ನು ವಿವರಿಸಿ ಭಾಷಣವಿತ್ತರು (ಅದರ ಸಾರಾಂಶವನ್ನು ನೇರೆಡೆಯಲ್ಲಿ ಸಂಗ್ರಹಿಸಿ ಕೊಡಲಾಗಿದೆ)

ಶ್ರೀ ಬಿ ಎನ್. ಹೆಗ್ಡೆಯವರ ಆಕಸ್ಮಿಕ ನಿಧನ— ದ ಕ ಜಿಲ್ಲಾ ಡಿಪ್ಯುಟಿ ಕಮಿಶನರರ ಆಪ್ತ ಸಹಾಯಕರಾಗಿದ್ದ ಶ್ರೀ ಬಿ ನಾರಾಯಣ ಹೆಗ್ಡೆಯವರು ಇದೇ ತಾ 4ನೇ ಸಂಜೆ ಆಕಸ್ಮಿಕವಾಗಿ ಹೃದಯ ಸ್ತಂಭ ನದಿಂದ ನಿಧನರಾದುದು ಶೋಚನೀಯವಿದೆ ನಿಧನದ ವೇಳೆ ಅವರ ಪ್ರಾಯ ಸುಮಾರು ೫೫ ವರ್ಷವಾಗಿದ್ದು ಇನ್ನು ಕೆಲವೇ ತಿಂಗಳು ಗಳಲ್ಲಿ ತಮ್ಮ ಉದ್ಯೋಗದಿಂದ ನಿವೃತ್ತಿ ಹೊಂದುವವರಿದ್ದರು

ಶ್ರೀ ಹೆಗ್ಡೆಯವರು ತಾ ४ರಲ್ಲಿ ಸಂಜೆಯ ವರೆಗೂ ತಮ್ಮ ಆಫೀಸಿನಲ್ಲಿ ಕೆಲಸ ಮಾಡು ತ್ತಿದ್ದರೆಂದೂ ಹಾಗೆ ಕೆಲಸ ಮಾಡುತ್ತಿರುವಾಗ ಎದೆಯಲ್ಲಿ ಒಂದು ತರದ ವೇದನೆಯುಂಟಾ ಯಿತೆಂದೂ ತಿಳಿದು ಬರುತ್ತದೆ ಬಳಿಕ ಅವ ರನ್ನು ಸರಕಾರಿ ಆಸ್ಪತ್ರೆಗೆ ಸಾಗಿಸಿ ಯೋಗ್ಯ ಚಿಕಿತ್ಸೆಗೆ ಅನುಮಾಡುವಾಗಲೇ ಅವರ ಪ್ರಾಣ ಪಕ್ಷಿಯು ಹಾರಿ ಹೋಯಿತು

ಈ ವರ್ತಮಾನವನ್ನು ಕೇಳಿದೊಡನೆ ಡಿ ಪ್ಯುಟಿ ಕಮಿಶನರ್ ಶ್ರೀ ಜೆ. ಪದ್ಮನಾಭ, ಜಿಲ್ಲಾ ಮೆಡಿಕಲ್ ಆಫೀಸರ್ ಡಾ| ಎ ತಿ ಮ್ಮಪ್ಪಯ್ಯ ಮೊದಲಾದ ಸರಕಾರಿ ಅಧಿಕಾರಿಗ ಳೂ ನಗರದ ಪ್ರಮುಖರೂ ಅಧಿಕ ಸಂಖ್ಯೆ ಯಲ್ಲ ಧಾವಿಸಿ ಬಂದು ತಮ್ಮ ಅಂತಿಮ ಗೌರ ವವನ್ನು ಸಲ್ಲಿಸಿದರು,

ಆ ಮೇಲೆ ಅವರ ಮೃತ ಶರೀರವನ್ನು ಅ ವರ ನಿವಾಸಕ್ಕೆ ಒಯ್ಯಲಾಯಿತು ಅವರ ಹಿ ರೇ ಮಗನು ಬೆಂಗಳೂರಿಂದ ಬರಬೇಕಾಗಿದ್ದು ದರಿಂದ ದಿವಂಗತರ ಸ್ಮಶಾನ ಯಾತ್ರೆಯು ಮರುದಿನ ಸಂಜೆ ನಡೆಯಿತು. ಈ ಸ್ಮಶಾನ ಯಾತ್ರೆಯಲ್ಲಿ ಉನ್ನತಾಧಿಕಾರಿಗಳೂ ಅಶ್ಯ ಮಹನೀಯರೂ, ಬಂಧುಮಿತ್ರರೂ ಸೇರಿ ಸು ಮಾರು ಎರಡು ಸಾವಿರ ಜನರು ಭಾಗವಹಿಸಿ ದ್ದರು.

ಶ್ರೀ ಹೆಗ್ಡೆಯವರು ಉಡುಪಿ ತಾಲೂಕಿನ ಬಡಗಬೆಟ್ಟಿನವರಾಗಿದ್ದು ಜಿಲ್ಲೆಯ ರೆವಿನ್ಯೂ ಇಲಾಖೆಯಲ್ಲಿ ವಿವಿಧ ಸ್ಥಾನಗಳಲ್ಲಿ ಕೆಲಸ ಮಾಡುತ್ತಿದ್ದರು. ೧೯೪೫ರಿಂದ ತಹಸಿಲ್ದಾರ ರಾಗಿಯೂ ೧೯೫೪ರಿಂದ ಅಸಿಸ್ಟೆಂಟ್ ಕಮಿ ಶನರರಾಗಿಯೂ ಸೇವೆ ಸಲ್ಲಿಸಿದ್ದಾರೆ. ರೆವಿನ್ಯೂ ಇಲಾಖೆಯ ಅಧಿಕಾರಿಗಳಾಗಿ ಜಿಲ್ಲೆಯ ಎಲ್ಲ ಕಡೆಗಳಲ್ಲಿ ಕೆಲಸಮಾಡಿರುವ ಶ್ರೀ ಹೆಗ್ಡೆಯವ ರು ಅಧಿಕಾರಿಗಳ ಸಿಬ್ಬಂದಿಯವರ ಸಾರ್ವಜ ನಿಕರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು ಇವರೊಬ್ಬ ಸರ್ವಜನಪ್ರಿಯ ಪ್ರಾಮಾಣಿಕ ಹಾಗೂ ಆದರ್ಶ ಅಧಿಕಾರಿಯಾಗಿದ್ದರು

ದಿವಂಗತ ಹೆಗ್ಡೆಯವರಿಗೆ ಎರಡು ಗಂಡು ಎರಡು ಹೆಣ್ಣು ಮಕ್ಕಳು ಹಿರೇ ಪುತ್ರ ಶ್ರೀ ಮೋಹನ ಹೆಗ್ಡೆ ಬಿ ಎ. ಬಿ. ಎಲ್ ಅವರು ಬೆಂಗಳೂರಲ್ಲಿ ಬ್ಲೋಕ್ ಡೆವಲಪ್‌ಮೆಂಟ್‌ನ ಲ್ಲಿ ಆಫೀಸರರಾಗಿದ್ದರು ಹಿರೇ ಮಗಳಿಗೆ ಇ ದೇ ಕಳೆದ ಜೂನ್ ತಿಂಗಳಲ್ಲಿ ವೈಭವದಿಂದ ವಿವಾಹವಾದುದನ್ನು ಇಲ್ಲಿ ಜ್ಞಾಪಿಸಬಹುದು ಮೃತರ ದುಃಖೀ ಕುಟುಂಬಕ್ಕೆ ನವಯುಗವು ತನ್ನ ಸಹತಾಪವನ್ನು ಸೂಚಿಸುತ್ತದೆ

ಸಂತಾಪ ಸೂಚಕ ಸಭೆಗಳು— ಡಾ| ಸುಂದರ ರಾಮ ಪೈಗಳ ಆಕಸ್ಮಿಕ ನಿಧನದ ದುಃಖ ಸೂಚನಾರ್ಥವಾಗಿ ತಾ 3ರಲ್ಲಿ ಉಡು ಪಿ ವಿಕ್ಟೋರಿಯಾ ಜ್ಯುಬಿಲಿ ಕ್ಲಬ್ಬಿನಲ್ಲಿ ಡಾ| ಕೆ. ಎಲ್ ಐತಾಳರ ಅಧ್ಯಕ್ಷತೆಯಲ್ಲಿ ಸಭೆ ಜ ರಗಿತು (ದಿವಂಗತರು ಕ್ಲಬ್ಬಿನ ಅಧ್ಯಕ್ಷರಾಗಿ ದ್ದರು) ಎಮ್ ಜಿ ಎಮ್ ಕಾಲೇಜಿನ ಉ ತ್ತಮ ಎಸ್ ಸಿ ಸಿ ಕೆಡೆಟ್ಟಿಗೆ ಡಾ| ಪೈಗ ಳ ಹೆಸರಲ್ಲಿ ಪಾರಿತೋಷಕ ಕೊಡಲು ರೂ 300-00 ಕೊಡಬೇಕೆಂದೂ ಕ್ಲಬ್ಬಿನ ಪರಾರ ದಲ್ಲಿ ದಿವಂಗತರ ಹೆಸರಲ್ಲಿ ಬಯಲು ರಂಗ ಭೂಮಿ ನಿರ್ಮಿಸ ಬೇಕೆಂದೂ ನಿರ್ಣಯಿ ಸಲಾಯಿತು

ಎಂ ಜಿ ಎಂ ಕಾಲೇಜಿನ ವಿದ್ಯಾರ್ಥಿ ಹಾಗೂ ಸಿಬ್ಬಂದಿಯವರ ಸಭೆಯೊಂದು ತಾ ೩ರಲ್ಲಿ ಸೇರಿ ಕಾಲೇಜಿನ ಆಡಳಿತ ಮಂಡ ಳಿಯ ಸದಸ್ಯರಾಗಿದ್ದ ಡಾ ಸುಂದರ ರಾಮ ಪೈಗಳ ನಿಧನಕ್ಕಾಗಿ ದುಃಖ ಸೂಚಿಸಲಾಯಿತು ಪ್ರಿನ್ಸಿಪಾಲ್ ಎಚ್ ಸಾಂಬಮೂರ್ತಿಯವರು ದುಃಖ ಸೂಚಕ ಠರಾವನ್ನು ಸಭೆಯ ಮುಂದಿಟ್ಟು ದಿವಂಗತರ ಗುಣ ಕಥನ ಮಾಡಿದರು ಡಾ| ಗಳ ಸ್ಮರಣಾರ್ಥವಾಗಿ ಆದಿನ ಕಾಲೇಜಿಗೆ ರ ಜೆ ಕೊಡಲಾಯಿತು

ಉಡುಪಿ ರೋಟರಿ ಕ್ಲಬ್ಬಿನಲ್ಲಿ ತಾ ४ರಲ್ಲಿ ಡಾ| ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರ ಗಿದ ಸಭೆಯಲ್ಲಿ ಡಾ| ಸುಂದರರಾಮ ಪೈಗಳ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು ಡಾ| ಮಾಧವ ಪೈಗಳು ಭಾಷಣ ಮಾಡುತ್ತಾ ಡಾ| ಸುಂದರರಾಮ ಪೈಗಳ ನಿಧನದಿಂದುಂ ಟಾದ ತುಂಬಲಾರದ ನಷ್ಟವನು ವಿವರಿಸಿ ಅ ವರ ಗುಣನಡತೆಗಳನ್ನು ಸ್ತುತಿಸಿದರು ಶ್ರೀ ಕೆ ಆರ್. ಕೆ ಭಟ್ಟರು ಮೃತರ ಕುರಿತಾದ ಕವನ ಒಂದನ್ನು ವಾಚಿಸಿದರು (ಅದನ್ನ ಇದೇ ಪುಟದಲ್ಲಿ ಪ್ರಕಟಿಸಲಾಗಿದೆ)

ಇದೇ ರೀತಿ ಸಿಂಡಿಕೇಟ್ ಬ್ಯಾಂಕಿನ ಪ್ರ ಧಾನ ಕಚೇರಿಯಲ್ಲಿ ತಾ ೨ರಲ್ಲಿಯೂ ಉಡು ಪಿನ್ಯಾಟ್‌ಹ್ಯಾಸ್ಕೂಲ್‌ನಲ್ಲಿ ತಾ ४ರಲ್ಲಿ ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿಯೂ, ತಾ ೨ರಲ್ಲಿ ಶ್ರೀ ವಿ ಆರ್. ಕಾಮತರ ಅಧ್ಯಕ್ಷತೆಯಲ್ಲಿ ಕೊರ್ಪೊರೇಶನ್ ಬ್ಯಾಂಕಿನಲ್ಲಿಯೂ ಅದೇ ದಿನ ಡಾ| ಕೆ. ಎಲ್ ಐತಾಳರ ಅಧ್ಯಕ್ಷತೆ ಯಲ್ಲಿ ಸಿ ಬಿ ಸಿ ಗೋಲ್ಡನ್ ಜ್ಯುಬಿಲಿ ಸ್ಮಾರಕ ಶಾಲೆಯಲ್ಲಿಯೂ ಸಂತಾಪ ಸೂಚಕ ಸಭೆಗಳು ಜರಗಿದುವು.

ಅಖಿಲ ಪ್ರಾಂತೀಯ ಧಾರ್ಮಿಕ ಸಂಸ್ಥೆಗಳ ಸಮ್ಮೇಳನ — ಇದೇ ತಾ. ೫ರಲ್ಲಿ ಉಡುಪಿಯ ಅದಮಾರು ಮಠಾಧೀಶ ರಾದ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂ ಗಳವರು ಪತ್ರಿಕಾ ಪರಿಷತ್ತು ಜರಗಿಸಿ ಇದೇ ತಾ ೨೧ ಮತ್ತು ೨೨ರಂದು ಬೆಂಗಳೂರು ಗಾ ಜಿನ ಮನೆಯಲ್ಲಿ ಜರಗಲಿರುವ ಧಾರ್ಮಿಕ ಸಂ ಸ್ಥೆಗಳ ಸಮ್ಮೇಳನದ ವಿಚಾರವಾಗಿ ಮಾಹಿತಿ ಯನ್ನಿತ್ತರು ಶ್ರೀ ಆರ್ ಆರ್ ದಿವಾಕರ ರು ಸಮ್ಮೇಳನವನ್ನು ಉದ್ಘಾಟಿಸಲಿರುವರೆಂ ದೂ ಮಾಜಿ ಮುಖ್ಯಮಂತ್ರಿ ಶ್ರೀ ಕೆ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಲಿ ರುವರೆಂದೂ ತಿಳಿಸಿದರಲ್ಲದೆ ಜಿಲ್ಲೆಯ ಧರ್ಮಾ ಭಿಮಾನಿಗಳೆಲ್ಲರೂ ಸಮ್ಮೇಳನಕ್ಕೆ ಬಂದು ಅ ದನ್ನು ಯಶಸ್ವಿಗೊಳಿಸಬೇಕೆಂದೂ ಹೇಳಿದರು

ನಾಟಕ ಪ್ರದರ್ಶನ— ತಾ 7ರಂದು ಉಡ್ಪಿ ನಾಟ್ಯಕೂಟದ ಕಲಾವಿದರು ಮೊದಲೇ ಪ್ರಕಟವಾದಂತೆ 'ಸಾಮ್ರಾಟ ಷಾಜಹಾನ' ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು ಡಾ ಕೆ ಎಲ್ ಐತಾಳರು ಧನ್ಯವಾದವಿತ್ತರು.

"SERVICE ABOVE SELF"

Rotarian Dr. Sundar Ram Pai--

departed on 31—10—1959

A Condolence Memoir from R›tary Club of Udipi

'**U**' -dıpı has lost her finest gentleman,
'**S**' ıncere and social and a godly man,
'**U**' ıban and kınd, a peıfect fııend and guıde,
'**N**' -ever moved by passıon, power or prıde

'**D**' ıd his best foı poor men s paıns and ılls,
'**A**' -t all tımes followıng Rotary prıncıples
'**R**' -otaıy ıdeals be upheld, keepıng seıvıce before self,
'**R**' enderıng service to ınstıtutıons, not for pelf,

'**A**' -lways mındful of his fellowmen, wıthout rank.
'**M**' -onuments of hıs selfless seıvıce are Venkatra-
mana temple and Corporatıon Bank
'**P**' ıous lıfe he led, unmoved by praıse or blame,
'**A** -ttachment none he had for money and name
'**I** ' -t was a lıfe of servıce, glory and fame

Udıpi Rotaıy pays trıbute to Rtn Dr Pai,
All Glory to hım, all peace unto hıs soul.
Rotarıans' hearts shall find a place for Dr Pai
And hıs name shall be high on our Honour Roll.

— *By* Rtn K. R. K Bhat.

ದ್ವಿಮುಖದರ್ಶನ

ಆದರ್ಶ ತತ್ತ್ವಗಳು—ವಿಪರೀತ ಪರಿಣಾಮ!

ಕಾನೂನುಗಳಿಂದಲೂ ತಪ್ಪಿಸಿಕೊಳ್ಳಲು ಕಾನೂನುಗಳೇ ದಾರ ಹೇಳಿ ಕೊಡುವಾಗ, ಶಾಸ್ತ್ರೀಯ ಮತ್ತು ವ್ಯಾವಹಾರಿಕ ದೃಷ್ಟಿಗಳು ಏಕಮತ ಹೊಂದುವಂತೆ ಮಾಡುವ ಪೆನ್ಸಿಲಿನ್ ಯಾರೊಡನೆ ಇದೆ?

೧

ಎರಡು ಹೊಸ ರೋಗಗಳು!

ಭಾರತವು ಪರತಂತ್ರದಲ್ಲಿದ್ದಾಗ ಇಲ್ಲಿ ಪ್ಲೇಗು ಮತ್ತು ಸಿಡುಬುಗಳೆಂಬ ಸುಖ ಮಾರಿ ರೋಗಗಳು ಹರಡುತಿದ್ದುವು. ಇವು ಆ ಯುಗದ ಭಯಾನಕ ರೋಗಗಳು. ಭಾರತವು ಸ್ವಾತಂತ್ರ್ಯವನ್ನು ಹೊಂದಿದ ನಂತರ ಬಹಳಷ್ಟು ಪ್ರಯತ್ನಗಳನ್ನು ನಡೆಸಿ ಈ ಎರಡು ರೋಗಗಳ ಪ್ರತಿಬಂಧನ ಕಾರ್ಯದಲ್ಲಿ ಸ್ವಲ್ಪ ಯಶಸ್ವಿಗಳಾಗಿದ್ದೇವೆ. ಆದರೆ, ಈಗ ಎರಡು ಹೊಸ ಮಾದರಿಯ ರೋಗಗಳು ಅಂಟಿಕೊಂಡಿವೆ ಇವು ಶರೀರದ ರೋಗಗಳೇ, ಮನೋರೋಗಗಳೇ ಕಣ್ಣಿನ ರೋಗಗಳೇ ಎಂದು ಹೇಳುವುದು ಇನ್ನೂ ಸಾಧ್ಯವಾಗಿಲ್ಲ, ಆದರೆ, ಇವು ಹರಡುತ್ತಿವೆ ಎಂಬುದಂತೂ ಸತ್ಯ.

ಮೊದಲನೆ ರೋಗ ನಾಟಿದವರಿಗೆ ದೇಶದ ಉನ್ನತಿ, ಅವನತಿ, ಒಳಿತು ಕಡುಕುಗಳೊಂದೂ ಕಣ್ಣಿಗೆ ಕಾಣುವುದಿಲ್ಲ ಎಲ್ಲಿಯೂ ಒಳ್ಳೆಯ ಕಾರ್ಯ ನಡೆಯುವುದಿಲ್ಲ. ಆಗುವುದೆಲ್ಲಾ ವಿಪರೀತವೇ, ದೇಶ ಹಾಳಾಗಿ ಹೋಗುತ್ತಿದೆ ಎಂದಿವರು ಗೊಣಗುತಿದ್ದಾರೆ ಎರಡನೆಯ ರೋಗ ಅಂಟಿದವರಿಗೆ ದೇಶದಲ್ಲಿ ಯಾವ ಕೊರತೆಯೂ ಕಾಣಿಸುವುದಿಲ್ಲ. ಅವರು ಯಾವ ಕಾಲದಲ್ಲೂ ದೇಶದ ಕುರಿತಾಗಿ ಮಾತಾಡುತ್ತಿರುತ್ತಾರೆ; ಎಲ್ಲೆಲ್ಲಿಯೂ ಹುಣ್ಣಿಮೆಯ ಚಂದ್ರಕಿರಣ ಹರಿಯುತ್ತದೆ, ಉತ್ಸಾಹದ ಕುದುರೆ ಓಡುತ್ತದೆ

ಸರಿಯಾಗಿ ವಿಚಾರ ಮಾಡುವುದಾದರೆ, ಬಹಳಷ್ಟು ಪ್ರಯತ್ನಿಸಿದರೂ ಒಂದು ಯೋಗ್ಯ ಪದವಿ ದಕ್ಕಿಸಿಕೊಳ್ಳಲಾರದವರು ಮೊದಲನೆಯ ರೋಗಕ್ಕೂ ಪದವಿ ಸಂಪಾದಿಸಿಕೊಂಡವರು ಎರಡನೆಯ ರೋಗಕ್ಕೂ ಆಹುತಿಯಾಗಿದ್ದಾರೆಂದೂ ಮೊದಲನೆಯವರು 'ಪರಿವರ್ತನೆ, ಪರಿವರ್ತನೆ" ಎಂದೂ ಎರಡನೆಯ ವರ್ಗದವರು "ಮುಂದುವರಿಯಿರಿ, ಮುಂದೆ ನಡೆಯಿರಿ" ಎಂದೂ ಸ್ವಪ್ನದಲ್ಲಿ ಕೂಗಾಡುತ್ತಾರೆ ಎಂಬುದು ತಿಳಿದುಬರುತ್ತದೆ

ಮೊದಲನೆಯ ವರ್ಗದ ಜನರು ಎರಡನೆಯ ವರ್ಗಕ್ಕೆ ಸೇರಿದರೆ, ಆಗವರಿಗೆ ಮೊದಲನೆಯ ರೋಗವೂ ಎರಡನೆಯ ವರ್ಗದವರು ಮೊದಲನೆಯ ವರ್ಗಕ್ಕೆ ಸೇರಿ ಬಿಟ್ಟರೆ ಅವರು ಮೊದಲನೆಯ ರೋಗಕ್ಕೂ ಗುರಿಯಾಗುವರೆಂದೂ ಗೊತ್ತಾಗಿದೆ. ಈ ರೋಗಗಳಿಗೆ ಚಿಕಿತ್ಸೆಯೇನು? ಪ್ರಶ್ನೆಯೇನೋ ಗಂಭೀರವಾಗಿದೆ; ಆದರೆ ಇದರ ಉತ್ತರ ಇಂದು ಯಾರೊಡನೆಯೂ ಇರಲಾರದು: ಕೆಲವರು ಇದು ಅಸಾಧ್ಯವೆಂದೂ ಇನ್ನೂ ಕೆಲವರು ಪರಿಸ್ಥಿತಿಗನುಸಾರವಾಗಿ ಮುಂದೆ ಕ್ರಮೇಣ ಇದು ಜೀರ್ಣವಾಗುವುದು ಎಂದೂ ಹೇಳುತ್ತಾರೆ.

೨

ಜಲಂಧರಿನ ಕೆಲವು ವಕೀಲರು ಪಂಜಾಬ ಸರಕಾರದೊಡನೆ, ಸ್ತ್ರೀಯರ ಅಪಹರಣ ಮತ್ತು ಬಲಾತ್ಕಾರದ ಮೊಕದ್ದಮೆಯನು ಮಹಿಳಾ ಮೆಜಿಸ್ಟ್ರೇಟರಲ್ಲಿ ಕಳಿಸಿದರೆ ತವಗೆ ಬಿಚ್ಚು ಮನಸ್ಸಿನಿಂದ ವಾದಿಸಲಾಗುವುದಿಲ್ಲವೆಂದು ಪ್ರಾರ್ಥನೆ ಸಲ್ಲಿಸಿ, ಅಲ್ಲಿಗೆ ಕಳಿಸಬಾರದೆಂದು ವಿನಂತಿಸಿದರು. ಪಂಜಾಬು ಸರಕಾರವು ಇದನ್ನು ಒಪ್ಪಿ ತಕ್ಕ ಆಜ್ಞೆಯನ್ನಿತ್ತಿತು. ವಿಷಯ ಮುಗಿಯಿತು ಆದರೂ ವಿಷಯ ಮುಗಿದೊಡನೆ ಎಲ್ಲ ಮುಗಿಯುವುದಿಲ್ಲ ನಾವೂ ಈ ಬಗ್ಗೆ ತುಸು ವಿಚಾರ ಮಾಡಬೇಕು, ಮಾತಿಗೆ ಬಂದ ಮಾತಿನಲ್ಲಿ ನಮ್ಮ ಪ್ರಶ್ನೆಗೆ ಉತ್ತರ ಎಲ್ಲಿರಬೇಕು?

ಕೊಳಲನ್ನೇ ಮುರಿದು ಬಿಟ್ಟರೆ ಬಾರಿಸುವುದಾದರೂ ಏನನ್ನು? ಎಂಬಂತೆ ಪಂಜಾಬ ಸರಕಾರದ ಕಾರ್ಯಕ್ರಮವನ್ನು ಅನುಸರಿಸಬೇಕು ಇದರಿಂದ ಸಮಸ್ಯೆ ಬಗೆಹರಿಯಿತು, ಆದರೆ ಈಗಿನ ಚಿಕಿತ್ಸಾ ಪದ್ಧತಿಯಲ್ಲಿ ಒಂದು ಔಷಧಿ ಒಂದು ರೋಗವನ್ನು ತತ್ಕ್ಷಣಗುಣ ಮಾಡುತ್ತದ ಕೆಲವು ದಿನಗಳ ನಂತರ ಮತ್ತೊಂದು ರೋಗಕ್ಕೆ ಜನ್ಮವೀಯುತ್ತದೆ ಈ ರೋಗ ಯಾವ ಮದ್ದಿನಿಂದಲೂ ಗುಣಮುಖವಾಗುವಂತಿಲ್ಲ. ಈ ವಿಧಾನ ಅಂತಹುದೇನೂ ಅಲ್ಲವೆಂಬುದನ್ನು ಖಾತ್ರಿಮಾಡಬೇಕು

ಬಲತ್ಕಾರದ ಮೊಕದ್ದಮೆಯಲ್ಲಿ ಅತ್ಯಾಚಾರಿಯೊಬ್ಬ ಅತ್ಯಾಚಾರ ಪೀಡಿತನೊಬ್ಬ ಇರಲೇಬೇಕು. ಅತ್ಯಾಚಾರಿಯ ವಕೀಲ ನಾನಾ ವಕ್ರ ಪ್ರಶ್ನೆಗಳನ್ನು ಕೇಳಿ ಪೀಡಿತನನ್ನು ಅಸ್ತವ್ಯಸ್ತನನ್ನಾಗಿ ಮಾಡುವುದರಿಂದ ಅತ್ಯಾಚಾರಿಯು ನಿರ್ದೋಷಿಯಾಗುತ್ತಾನೆ. ಈ ರೀತಿ ಪೀಡಿತನು ಇನ್ನೊಂದು ಅತ್ಯಾಚಾರವನ್ನು ಗಳಿಸಿಕೊಂಡು ಹೊರ ಬರುತ್ತಾನೆ, ಇದು ವರ್ಷಗಳ ವರೆಗೆ ಜನರ ಚರ್ಚೆಯ ವಿಷಯವಾಗುತ್ತದೆ. ಮಹಿಳಾ ಮೆಜಿಸ್ಟ್ರೇಟರೆದುರು ವಕೀಲರಿಗೆ ಪೀಡಿತರೊಡನೆ ಈ ಪ್ರಶ್ನೆಗಳನ್ನು ಕೇಳಲಾಗುವುದಿಲ್ಲವಾದರೆ, ಕಾನೂನಿನ ಸ್ವಾತಂತ್ರ್ಯವನ್ನು ಒಪ್ಪಿ ಈ ಪ್ರಶ್ನೆಯನ್ನು ಮರ್ಯಾದಿತಗೊಳಿಸಲಾರವೆ? ಎಂದು ನೋಡಬೇಕು.

೩

ಇನ್ನೂ ಒಂದು ಸಮಸ್ಯೆಯಿದೆ ೧೯೩೦ರಲ್ಲಿ ಗಾಂಧೀಜಿ ತೊಡಗಿದ ಆಂದೋಲನದಲ್ಲಿ ಮಹಿಳೆಯರು ವಿಶೇಷ ಶಕ್ತಿ ಮತ್ತು ಉತ್ಸಾಹಗಳಿಂದ ಮುಂದೆ ಬಂದರು, ಪ್ರಮಾಣಾಧಿಕಾರ ಕಾನೂನುಗಳಲ್ಲದೇನೇ ಕಾಂಗ್ರೆಸ್ ಸಮಿತಿಗಳಲ್ಲಿ ನಗರ ಸಭೆ ಮೊದಲಾದುವುಗಳಲ್ಲಿಯೂ ಸ್ತ್ರೀಯರು ಉಚಿತ ಸ್ಥಾನವನ್ನು ಪಡೆದರು ಭಾರತವು ಸ್ವಾತಂತ್ರ್ಯವನ್ನು ಪಡೆದ ಮೇಲೆ, ಸ್ತ್ರೀಯರ ಸಂಖ್ಯೆಯು ನಗಣ್ಯವಾಗಿದೆ ನಾರಿಯು ತನ್ನ ಶಾಲೀನತೆಯೊಡನೆ ಸಂಘ ಸಂಸ್ಥೆಗಳಲ್ಲಿ ಸೇರಬೇಕು; ಅಥವಾ ಆದರಿಂದ ದೂರವಿದ್ದು ನಾರಿಯು ಶಾಲೀನತೆಯನ್ನು ನಿಮೆಯಿಳಿಸಬೇಕು—ಎಂಬ ವುಗಳಲ್ಲಿ ನಮ್ಮ ಪದ್ಧತಿಯಾವುದು ಎಂಬುದೂ ಒಂದು ಪ್ರಶ್ನೆ.

೪

ಅಮೆರಿಕೆಯ ನೀಗ್ರೋ ವರ್ಗದವರ ಒಂದು ದೊಡ್ಡ ಸಮ್ಮೇಳನ ನಡೆಯುತಿತ್ತು. ಸಮ್ಮೇಳನದಲ್ಲಿ ಸಚಿವ ಶ್ರೀ ವಿಲ್ಕಿಂನ್ಸರವರು ಮಾತನಾಡುತ್ತ, "ಅಧ್ಯಕ್ಷ ಐಸನ್ ಹಾವರರಿಗೆ ನಾಗರಿಕ ಅಧಿಕಾರಗಳ ಬಗ್ಗೆ ಮೂರು ವರ್ಷದ ಒಂದು ನೀಗ್ರೋ ಮಗುವಿಗಿರುವಷ್ಟು ಜ್ಞಾನವಿಲ್ಲ" ಎಂದು ಹೇಳಿಬಿಟ್ಟರು.

ಸುಯೋಗ್ಯ ಪ್ರತಿನಿಧಿ ಮತ್ತು ಪತ್ರಕಾರರು ಆಶ್ಚರ್ಯದಿಂದ ಅವರೆಡೆಗೆ ನುಡಿದರು—ರಾಷ್ಟ್ರಪತಿಯವರ ವಿದ್ವತ್ತಿನ ಬಗ್ಗೆ ನಮಗೆಲ್ಲರಿಗೂ ತಿಳಿದಿದೆ. ಆದರೆ, ನೀವೆಂದಂತೆ ಯಾರೂ ಅಭಿಪ್ರಾಯ ಕೈಬರಲಿಲ್ಲ ಎಂದು ಹೇಳಿದರು ನಾಗರಿಕ ಅಧಿಕಾರಿಗಳ ಜ್ಞಾನವೆಷ್ಟು ಎಂಬುದು ಇದರಿಂದ ನಾವು ತಿಳಿಯಬಹುದು.

೫

ಲಜ್ಜಾಶೀಲರನ್ನು ಮೂರ್ಖರೆಂದು, ಪ್ರತ್ಯೋಪವಾಸ ಮಾಡುವವರನ್ನು ವೇಷಗಾರರೆಂದು, ಪವಿತ್ರ ಜೀವನ ನಡೆಸುವವರನ್ನು ಧೂರ್ತರೆಂದು, ಶೂರವೀರರನ್ನು ನಿರ್ದಯರೆಂದು, ಮೌನಿಗಳನ್ನು ಬುದ್ಧಿಹೀನರೆಂದು; ಮಧುರ ಭಾಷಿಗಳನ್ನು ದೀನರೆಂದು, ತೇಜಸ್ವಿಗಳನ್ನು ಅಹಂಕಾರಿಗಳೆಂದು, ಭಾಷಣಕಾರರನ್ನು ಬೊಗಳು ನಾಯಿಗಳೆಂದು, ಸಹನಾ ಶೀಲರನ್ನು ಅಸಮರ್ಥರೆಂದು ಹೇಳುವ ದುಷ್ಟ ಪುರುಷರು ಗುಣಿಯ ಎಲ್ಲ ಗುಣಗಳಿಗೂ ಒಂದೊಂದು ಉಪನಾಮವಿಟ್ಟಿದ್ದಾರೆ ಎಂದು ಭರ್ತೃಹರಿಯೊಂದೆಡೆ ಹೇಳಿದ್ದಾನೆ.

ಗುಣಿಯು ಈ ಉಪನಾಮಗಳಿಂದ ಪ್ರಭಾವಿತನಾಗುತ್ತಾನೆಯೆ? ಅನುಭವದಿಂದ ಹೌದು ಎಂದು ಹೇಳಬಹುದು; ಆದರೆ, ಜೀವನದ ಯಥಾರ್ಥವಿದು—ಮಾನವ ಈ ದುಷ್ಟರಿಗೆಲ್ಲಾ ಅಂಜಬಾರದು ಹಾಗಾದರೆ, ಇದೇಕೆ ಹೀಗೆ?

(ಸಂಗ್ರಹಿತ)

ವಿದೇಶಾನುಭವ

(೫ನೇ ಪುಟ ನೋಡಿರಿ)

ಸ್ಕಾಲರ್‌ಶಿಪ್ಪುಗಳ ಮೂಲಕವಾಗಲೀ ಬಾಲನೆಗೆ ಬರುವುದಕ್ಕೆ ಪ್ರಯತ್ನ ಪಡಬೇಕು.

ಜಿನೇವಾದಿಂದ ನಮ್ಮ ವೈದ್ಯಕೀಯ ಎಸೋಸಿಯೇಶನಿನ ನಿಯೋಗವು ಮುಂಬಯಿಗೆ ಮರಳಿತು.

ಆದರೆ ಇಂಡಿಯನ್ ಮೆನುಫೆಕ್ಚರರ್ಸ್ ಎಸೋಸಿಯೇಶನಿನ ಬೇಡಿಕೆ ಮೇರೆಗೆ ಅವರ ಪ್ರತಿನಿಧಿಯಾಗಿ ನಾನು ಅಮೇರಿಕಾಕ್ಕೆ ತೆರಳಿದೆನು. ಅಮೇರಿಕಾದಲ್ಲಿ ಅಲ್ಲಿನ ಉತ್ಪಾದಕರು ಒಂದು ಸಮ್ಮೇಳನವನ್ನು ಕರೆದಿದ್ದರು ಭಾರತದ ಆರ್ಥಿಕ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರೂ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ವಿದೇಶಗಳಲ್ಲಿ ತಮ್ಮ ಭಂಡವಾಳವನ್ನು ವಿನಿಯೋಗಿಸುವುದಕ್ಕೆ ಬೇಕಾದ ಅನುಭವವನ್ನು ಪಡೆಯುವುದಕ್ಕೆ ಬೇಕಾಗಿ ಈ ಸಮ್ಮೇಳನವನ್ನೂ ಅವರು ಕರೆದಿದ್ದರು. ಜಗತ್ತಿನ ವಿವಿಧ ರಾಷ್ಟ್ರಗಳು ತಮ್ಮಲ್ಲಿಗೆ ಬಂದು ಭಂಡವಾಳವನ್ನು ವಿನಿಯೋಗಿಸಬೇಕೆಂದು ಅಮೇರಿಕಾವನ್ನು ಕೇಳಿಕೊಂಡವು ಅವರಿಗೆ ದೇಶದ ಸರಕಾರವು ಭದ್ರತೆಯನ್ನು ಒದಗಿಸಿದಲ್ಲಿ ಅವರು ತಮ್ಮ ಭಂಡವಾಳವನ್ನು ವಿನಿಯೋಗಿಸುವುದಕ್ಕೆ ಉತ್ಸುಕರೇ ಆಗಿದ್ದಾರೆ

ಇಂತಹ ಸಮ್ಮೇಳನವನ್ನು ನಾವು ನಮ್ಮ ದೇಶದಲ್ಲಿಯೂ ನಡೆಸಬಹುದು. ಒಂದು ರಾಜ್ಯದಲ್ಲಿದ್ದ ಅಧಿಕ ಭಂಡವಾಳವನ್ನು ಇನ್ನೊಂದು ರಾಜ್ಯದಲ್ಲ ಉಪಯೋಗಿಸುವುದಕ್ಕೆ ಅಸ್ಪದವಿದ್ದಲ್ಲಿ ಅದಕ್ಕೆ ಇಂತಹ ಸಮ್ಮೇಳನಗಳು ಸಹಾಯಕವಾಗುವುವು

ಭಾರತದ ಬಗ್ಗೆ ಆತುರ

ನನ್ನ ಇಡೀ ಪ್ರವಾಸದಲ್ಲಿ ಹೆಚ್ಚಿನ ಕಡೆಗಳಲ್ಲಿ ಜನರು ನನಗೆ ಕೇಳಿದ ಪ್ರಶ್ನೆಗಳಲ್ಲಿ ಒಂದು ನಮ್ಮ ದೇಶದ ಮಹಿಳೆಯರಿಗೆ ಸಂಬಂಧಪಟ್ಟದು, ಇನ್ನೊಂದು ನಮ್ಮ ವಿದೇಶ ಧೋರಣೆಗೆ ಸಂಬಂಧಪಟ್ಟದು ನಮ್ಮಲ್ಲಿನ ಮಹಿಳಾ ಸಂಪ್ರದಾಯಗಳು ಅವರಿಗೆ ಆಶ್ಚರ್ಯ ಉಂಟುಮಾಡಿವೆ "ಕೃಷ್ಣ ಮೆನೋನರನ್ನು ಏತಕ್ಕಾಗಿ ನೀವಿನ್ನು ಇಟ್ಟಿರುವಿರಿ" ಎಂಬುದು ಇನ್ನೊಂದು ಪ್ರಶ್ನೆ ಆಗ ನನವರಿಗೆ ನಮ್ಮ ವಿದೇಶ ಧೋರಣೆಯ ಮಹತ್ವವನ್ನು ವಿವರಿಸಿ ಹೇಳಬೇಕಾಗಿ ಬಂದಿತು

ದೇಶದ ಪ್ರತಿಯೊಂದು ದೊಡ್ಡ ಉದ್ದಿಮೆಗಳ ಪ್ರತಿನಿಧಿಗಳು ತಮ್ಮ ಖರ್ಚಿನಿಂದ ಖುರ ವರೆಗೆ ವರುಷಕ್ಕೊಮ್ಮೆ ಒಮ್ಮೆಯಾದರೂ ವಿದೇಶ ಪ್ರವಾಸವನ್ನು ಕೈಕೊಂಡ, ತಮಗೆ ದೊರಕಿದ ಅನುಭವಗಳನ್ನು ತಮ್ಮ ಉದ್ದಿಮೆ ಅಭಿವೃದ್ಧಿಗಾಗಿ ಸದುಪಯೋಗಗೊಳಿಸಬಹುದು.

ಅಮೇರಿಕಾದಲ್ಲಿ ಕಟ್ಟಡ ನಿರ್ಮಾಣ ಇಂಜಿನಿಯರಿಂಗ್ ಖಾಸಗಿ ಕಾಲೇಜೊಂದನ್ನು ನಡೆಸುತ್ತಲಿರುವ ವೂರ್ಸವಿಟ್ಜ ಎಂಬ ಇಂಜಿನಿಯರೊಬ್ಬರು ಗಾಂಧೀಜಿಯವರ ನಾಡಾದ ಭಾರತದಲ್ಲಿ ಬಂದು ನೆಲಸಲು ಇಚ್ಛೆ ವ್ಯಕ್ತಪಡಿಸಿದರು ಇನ್ನು ಎಂಟು ತಿಂಗಳಲ್ಲಿ ತನ್ನ ಈಗಿನ ಕಾರ್ಯ ಮುಗಿಯುವುದರಿಂದ ಆ ಬಳಿಕ ತನ್ನ ಕಾಲೇಜಿನ ಎಲ್ಲಾ ಉಪಕರಣಗಳು ಮತ್ತು ಪುಸ್ತಕಾಲಯದ ಎಲ್ಲಾ ಪುಸ್ತಕಗಳನ್ನು ಉಚಿತವಾಗಿ ಕಾಲೇಜಿಗೆ ಕೊಟ್ಟು ತಾನೂ ಅಲ್ಲಿಗೆ ಬಂದು ಧರ್ಮಾರ್ಥವಾಗಿ ಕೆಲಸ ಮಾಡುವ ಆಶೆಯನ್ನೂ ವ್ಯಕ್ತಪಡಿಸಿದರು. ಭಾರತ ಸರಕಾರವು ಇಂತಹ ಮಹನೀಯರಿಗೆ ಭಾರತಕ್ಕೆ ಬರಲು ಅಸ್ಪದ ಕಲ್ಪಿಸಿಕೊಡುವುದೆಂಬುದಾಗಿ ಆಶಿಸುತ್ತೇನೆ.

(ಡಾ। ಮಾಧವ ಪೈ ಅವರು ಮಂಗಳೂರಲ್ಲಿ ತಾ. ೭ರಂದು ಪತ್ರಿಕಾ ಪರಿಷತ್ತಿನಲ್ಲಿ ಮಾಡಿದ ಭಾಷಣದ ಸಾರ.)

ಗೋವಿಜಯ

ಗೋಪಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ

ಶಿಕ್ಷಣರಂಗ

(೪ನೇ ಪುಟದಿಂದ)

ಇನ್ನೊಂದು ಮಾತು ಹೇಳುತ್ತಾರೆ ಅದೆಂದರೆ: ಸಂಪ್ರದಾಯಬದ್ಧವೂ, ಪ್ರಾಚೀನವೂ ಮತ್ತು ಔದ್ಯೋಗಿಕ ಪ್ರಗತಿಯೂ ಇಲ್ಲದ ನಾಡಿನಲ್ಲಿ ವ್ಯಕ್ತಿ ತನ್ನ ಜೀವನದ ಅಭ್ಯುದಯವನ್ನು ತನ್ನ ಜೀವಿತಾವಧಿಯಲ್ಲಿ ಸಾಧಿಸುವುದು ಸಾಧ್ಯವಿಲ್ಲ. ಹೀಗೆನ್ನುವವರಿಗೆ ದಂಡಾಸಾಹೇಬ ಪಾವಟೆಯವರ ಜೀವನ ವೃತ್ತಾಂತವು ಒಂದು ನಿದರ್ಶನವಾಗಿದೆ ಹೆಚ್ಚೆಂದರೆ ಮಗನು ಮಾಸ್ತರನಾಗಬಹುದೆಂಬ ತಂದೆಯ ಆಶಯವನ್ನು ಅಲ್ಲಗಳೆದು, ಒಂದು ಪ್ರಾಂತ್ಯದ ಶಿಕ್ಷಣಾಧಿಕಾರಿಯಾಗಿ, ಒಂದು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ಭಾರತದ ಶಿಕ್ಷಣ ಕ್ಷೇತ್ರದಲ್ಲಿಂದು ಮೇಧಾವಿಕ ಶಕ್ತಿಯಾಗಿ ನಿಂತಿದ್ದಾರೆ!

ಬಾಳಿನಲ್ಲಿ ನಂಬುಗೆ, ಜೀವನದಲ್ಲಿ ಆದರ್ಶ

ತೀರ ಸಾಮಾನ್ಯ ಕುಟುಂಬವೊಂದರಲ್ಲಿ ಜನಿಸಿದರೂ ಇಂದು ಕನ್ನಡ ಶಿಕ್ಷಣ ರಂಗದ ಅಧಿದೈವವಾಗಿ ನಿಂತಿರುವ ಪಾವಟೆಯವರ ವ್ಯಕ್ತಿತ್ವದ ತಿರುಳು ಅವರು ಬಾಳಿನಲ್ಲಿಟ್ಟಿರುವ ನಂಬುಗೆಯಲ್ಲಿಯೂ ಜೀವನದಲ್ಲಿ ತಳೆದಿರುವ ಆದರ್ಶದಲ್ಲಿಯೂ ಅಡಕವಾಗಿದೆ ಕೈಹಿಡಿದ ಕಾರ್ಯದಲ್ಲಿ ಅಚಲ ಶ್ರದ್ಧೆ ಇಲ್ಲದೆ ಹೋದಲ್ಲಿ ಗುರಿಯು ಸಿದ್ಧಿ ಸಾಧಿಸಲಾರದು ಸಾಧಿಸಬೇಕಾಗಿರುವ ಸಿದ್ಧಿಯನ್ನು ಯೋಚಿಸಿಕೊಂಡು ಅನಪೇಕ್ಷಿತ ಬುದ್ಧಿಯಿಂದಲೂ, ತದೇಕ ಚಿತ್ತದಿಂದಲೂ ಮುಂದರಿದಲ್ಲಿ ಗುರಿಯು ಸಿದ್ಧಿ ಅನಿವಾರ್ಯವೆಂಬುದನ್ನು ಪಾವಟೆಯವರ ಜೀವಿತ ವಿವರ ಸ್ಥಿರಗೊಳಿಸುತ್ತದೆ. ಬಡ ರೈತರ ಮಗುವಾಗಿದ್ದರೂ, ನಕ್ಷತ್ರ ಗುರಿಯಿರಿಸಿಕೊಂಡು ನಿಶ್ಚಲಚಿತ್ತದಿಂದ ಮುಂದರಿದ ಹಳ್ಳಿಯ ಮಗುವೂ ನಮ್ಮ ನಾಡಿನ ಭಾಗ್ಯ ಶಿಲ್ಪಿಯಾಗಬಲ್ಲನೆಂಬುದಕ್ಕೆ "ಪಾವಟೆ ವಜ್ರ ಮಹೋತ್ಸವ ಅಪೂರ್ವ ದೃಷ್ಟಾಂತವಾಗಿದೆ.

ವ್ಯಕ್ತಿಯ ಅಭ್ಯುದಯಕ್ಕೆ ಬಾಳಿನಲ್ಲಿ ನಂಬುಗೆಯಷ್ಟೇ ಸಾಲದ, ಜೀವನದಲ್ಲಿ ಆದರ್ಶವೂ ಅಷ್ಟೇ ಅವಶ್ಯ! ಶ್ರೀ ಪಾವಟೆಯವರು ಶಿಕ್ಷಣ ಪ್ರಪಂಚಕ್ಕೆ ಸೇರಿದ್ದು ನೌಕರಿ ಸಿಕ್ಕಿತೆಂಬ ಕಾರಣದಿಂದಲ್ಲ, ಶಿಕ್ಷಣವನ್ನುಳಿದೆನಗೆ ಅನ್ಯ ಜೀವನವಿಲ್ಲವೆಂಬ ಕಾರಣದಿಂದಾಗಿ! ಈ ಆದರ್ಶವನ್ನು ಮುಂಬಯಿ ಪ್ರಾಂತದ ಶಿಕ್ಷಣಾಧಿಕಾರಿಗಳಾಗಿದ್ದಾಗಲೂ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿರುವ ಈ ಕಾಲದಲ್ಲಿಯೂ ಅವರು ಕಾಯ್ದುಕೊಂಡು ಬಂದಿದ್ದಾರೆ, ಅದೇ ಪರಂಪರೆಯಲ್ಲಿ ಮುಂದುವರಿಯುತ್ತಲಿದ್ದಾರೆ!

ಅರುವತ್ತೊಂದರ ದಾರಿಯಲ್ಲಿ

"ಎಂ ಎ ಸಮಾಜ ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಪರೀಕ್ಷೆಗೋಸುಗ ಒಂದು ರಿಸರ್ಚ ಪೇಪರ್ ಇರಬೇಕೆಂದಿದ್ದೇನೆ. ಎಂದರೆ, ಪರೀಕ್ಷೆಯ ಹೊತ್ತಿಗೆ ೫೦ ಪುಟದ ಒಂದು ಪ್ರಬಂಧ ಒಪ್ಪಿಸಿದರೆ ಸಾಕು ವಿದ್ಯಾರ್ಥಿ ಆ ಪ್ರಬಂಧ ಬರೆಯುವಾಗ ಮಾರ್ಗದರ್ಶನ ಮಾಡುವುದಕ್ಕೂ ಅವಕಾಶವಾಗುತ್ತದೆ, ಅಷ್ಟೊತ್ತಿಗೆ ಅಧ್ಯಾಪಕನಿಗೆ ವಿದ್ಯಾರ್ಥಿಯ ಗುಣಗ್ರಹಣಶಕ್ತಿಯ ಮಟ್ಟವೂ ತಿಳಿಯುತ್ತದೆ" ಎಂದು ನಾನೊಮ್ಮೆ ಶ್ರೀ ಪಾವಟೆಯವರ ಬಳಿಗಿಂದು ಸಮಸ್ಯೆಯನ್ನು ತೆಗೆದುಕೊಂಡು ಹೋದಾಗ ಹೇಳಿದ ಅವರ ಮಾತು ಅವರ ಜೀವನಾದರ್ಶದ ದ್ಯೋತಕವಾಗಿದೆ. ಪರೀಕ್ಷೆಗಳಿಗೆ ನಾನು ಅಷ್ಟೊಂದು ಮಹತ್ವವನ್ನು ಕೊಡುವುದಿಲ್ಲ. ವಿದ್ಯಾರ್ಥಿಯ ವ್ಯಕ್ತಿತ್ವದ ಸರ್ವತೋಮುಖವಾದ ಪ್ರಗತಿಗೆ ಅನುಗುಣವಾದ ಅಧ್ಯಯನದ ರೀತಿಯನ್ನು ನಾನು ಒಪ್ಪುತೇನೆ ಆಗಬಹುದು ಎಂದರು ಶ್ರೀ ಪಾವಟೆ ಇದನ್ನೇ ಶ್ರೀಯುತರು ಡಾಲ್ಟನ್ ಸಿದ್ಧಾಂತವೆನ್ನುತ್ತಾರೆ! ಈ ಸಿದ್ಧಾಂತದ ತಿರುಳೆಂದರೆ ವಿದ್ಯಾರ್ಥಿ ತನ್ನ ಗುರಿಯನ್ನು ತಾನೇ ಕಂಡುಕೊಳ್ಳಬೇಕ, ಶಿಕ್ಷಣ ಕೇವಲ ಮಾರ್ಗದರ್ಶಕವಾಗಿರಬೇಕು!

ಅರುವತ್ತೊಂದರ ವಯಸ್ಸಿನಲ್ಲಿ ಈ ನಿಷ್ಠೆ ಹಿಡಿದು ಬಾಳನ್ನು ನಡೆಸುತ್ತಿರುವರು ಶ್ರೀ ದಾದಾಸಾಹೇಬ ಚಿಂತಪ್ಪ ಪಾವಟೆ ಅವರ ನಿಷ್ಠೆ, ನಂಬುಗೆ ಫಲವಾಗಿ ಕನ್ನಡನಾಡಿಂದು ತನ್ನದೆಯ ವಿಶ್ವವಿದ್ಯಾಲಯವನ್ನು ಪಡೆದು ಪ್ರಗತಿಯ ದಾರಿಯಲ್ಲಿ ಮುನ್ನಡೆದಿದೆ

ಶ್ರೀ ಪಾವಟೆ ಮುಂಬೈ ಪ್ರಾಂತ್ಯದ ಶಿಕ್ಷಣಾಧಿಕಾರಿಯಾಗಿ ನಿವೃತ್ತಿಯನ್ನು ಹೊಂದುವ ಸಮಯದಲ್ಲಿಯೇ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಯ ಸ್ಥಾನ ತೆರವಾಗಿತ್ತು. ಅವರು ಆ ಸ್ಥಾನಕ್ಕೆ ಚುನಾಯಿತರಾಗಿ ಬಂದು ಇಂದು ಉಪಕುಲಪತಿಗಳಾಗಿದ್ದರೆಂದು ಈ ವಜ್ರ ಮಹೋತ್ಸವ ನಡೆಯುವುದಿಲ್ಲ! ಅಂದು ಫೋಟೊ ಮಹಬಳೇಶ್ವರದಲ್ಲಿ ಕನ್ನಡ ಸರಸ್ವತಿಯ ಮಂದಿರದಲ್ಲಿ ಹಚ್ಚಿದ ದೀವಿಗೆ ಮಂದ ಮಂದವಾಗಿ ಉರಿಯುತ್ತ 'ಈಗ ಆರುತ್ತದೋ, ಇನ್ನೆಷ್ಟು ಹೊತ್ತಿಗೆ ಆರುತ್ತದೊ, ಎಂಬ ಸ್ಥಿತಿಯಲ್ಲಿದ್ದಾಗ, ಶ್ರೀ ಪಾವಟೆ ಬಂದ, ಅದನ್ನ ನಂದಾದೀಪವಾಗಿರಿಸಿದರು ಮಾತ್ರವೇ ಅಲ್ಲ 'ಭರತ ಚಕ್ರೇಶ್ವರಿಯ ಹೆಮ್ಮೆಯ ಕನ್ನಡದ ಶಾರದೆ' ಎಂಬ ಕೀರ್ತಿಯನ್ನೂ ನಮಗೆ ತಂದುಕೊಟ್ಟರು ಆ ಕಾರಣದಿಂದಾಗಿ ನಾವವರಿಗೆ ಹೂ ಅರ್ಪಿಸಿದೆವು ಈ ವಜ್ರಮಹೋತ್ಸವದ ನೆವ ಮಾಡಿಕೊಂಡು.

—ಶ್ರೀ ಹಿರೇಮಲ್ಲೂರ ಈಶ್ವರನ್

('ವಿಶ್ವವಾಣಿ'ಯ ಸೌಜನ್ಯದಿಂದ)

ಕಾರ್ಕಳ ಡಿ ಮು ಕೋರ್ಟಿನಲ್ಲಿ

O P No 44/1959

Y ವಾಸುದೇವ ರಾವ್ — ಅರ್ಜಿದಾರ

ಮತ್ತು

1 ಸರಸ್ವತಿ ಅಮ್ಮ 2 ದೇವ ರಾವ್, 3 ವೆಂಕಟ್ರಮಣ ರಾವ್ 4 ಶ್ರೀನಿವಾಸ್ ರಾವ್ 5 ನಾರಾಯಣ ರಾವ್ 6 ಇಂದಿರಾ ದೇವಿ 7 ಲಕ್ಷ್ಮಿಯಮ್ಮ 8 ಶಿವರಾಯ—ಯಾನೆ—ಗೋವಿಂದ ರಾವ್ 9 ಶಟಿ ದೇವಿ 1 ನೇ ಯವಳು ರಾಮ ರಾಯರ ವಿಧವೆ ಮ. ಪಿಕ್ಕವರು ಸದ್ರಿಯವರ ಮಕ್ಕಳು ಪೈಕಿ 9ನೇಯವಳು ಮ್ಯಾನರಳು ಬಗ್ಗೆ ಗಾರ್ಡಿಯನ್ ಗಂಡ S ಶ್ರೀನಿವಾಸ ರಾವ್ — ಎದ್ರಿರು

ಯವರೊಳಗೆ

1 8 ನೇಯವರು ಉಡ್ಪಿ ತಾಲ್ಲೂಕು ಎಲ್ಲೂರು ಗ್ರಾಮ 2, 4 5 -9 ನೇಯವರು ಕ್ರಮವಾಗಿ—Royal Cold Drink-House, Gajanana Restuarant, New Bombay Restuarant, Jai Shankar Parvathi Boarding & Lodging House Lonavada, North Satara, 3ನೇ ಯವನು Krishna Bhavan Londa Belgaum, 6 ನೇಯವಳು ಉಡ್ಪಿ ತಾಲ್ಲೂಕು ಹೇರಾಡಿ ಗ್ರಾಮದ ಮಕ್ಕಿಬೈಲು 7ನೇ ಯವಳು Gajanana Resturant Alnavar Dharwar, ಎಂಬಲ್ಲಿರುವವರು—

ಸದ್ರಿ ಅರ್ಜಿಯ 1ನೇ ಎದ್ರಿಳ ಗಂಡ ಮ ಪಿಕ್ಕವರ ತಂದೆ ಯಿತ್ತಲಾಗಿ ಮೃತಪಟ್ಟ ರಾಮರಾಯರಿಗೆ ಅರ್ಜಿಯಲ್ಲಿ ಕಾಣಿಸಿದಂತೆ ಬರಬೇಕಾಗಿರುವ ಸಾಲಗಳನ್ನು ವಸೂಲು ಮಾಡುವರೇ— ತಾ 4—4—1959ರಲ್ಲು ರಿ ಸಿತೀ ಅಪಡಿಲುಪಟ್ಟ ಶರ್ತ ಪ್ರಕಾರ ಅರ್ಜನಾದ ಅರ್ಜಿದಾರನ ಹೆಸರಿಗೆ ಒಂದು ವಾರಿಸಿ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲ್ಲು ಮಾಡಿದ ಅರ್ಜಿ ಕುರಿತು ಆಕ್ಷೇಪ ಉಳ್ಳವರು ತಾರೀಕು 30—11—1959ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ 10ಘಂಟೆಗೆ ಹಾಜರಾಗಿ ಉದಪಡಿಸ ತಕ್ಕದ್ದು ಎಂತ ಈ ಮಾಲಿನ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗಿಯದೆ

(Sd) V. V Upadhyaya.

ಅರ್ಜಿದಾರನ ಕಡೆ ಎಡ್ವಕೇಟು

ಕಾರ್ಕಳ. ತಾ 6—11—1959

ಚಂದಾದಾರರು

ತಮ್ಮ ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಜಾಮತಿ ಮಾಡಬಹುದಾಗಿದೆ ಏಜಂಟರಾಗಲಿ ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಜಾಮತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವೂ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ
ಬೆಲೆ ರೂ 1-4-0 (1=25) ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ ಬೆಲೆ ರೂ ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಾ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ, ರೂ ಒಂದೂವರೆ, ಉತ್ತಮ ಪ್ರತಿ ರೂ ಎರಡು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರಕಿರಣ

ಸರ್ವ ಲೋಕಚಕ್ಷು ಭಗವಾನ್ ಭಾಸ್ಕರ

ಸೂರ್ಯನ ಕಿರಣಗಳೇ ನಾವು ಕಾಣುವ ಬೇರೆ ಬೇರೆ ವರ್ಣ ವಿವರ್ಣಗಳಿಗೆ ಮೂಲಕಾರಣವಾಗಿವೆ ಪ್ರಕೃತಿಯ ವಿವಿಧ ಮನಚೇತೋಹಾರಿ ದೃಶ್ಯಗಳನ್ನು ಇವು ನಿರ್ಮಿಸಲು ಸಹಾಯವಾಗುತ್ತವೆ

ನಮ್ಮಲ್ಲಿ ಕಣ್ಣುಗಳಿಗೆ ಕನ್ನಡಕ ಮತ್ತು ಕಿವಿಗಳಿಗೆ ಧ್ವನಿ ಯಂತ್ರಗಳನ್ನು ಏರಿಸದಿರುವ ಸೌಭಾಗ್ಯ ಶಾಲಿಗಳು ತಮ್ಮ ನೇತ್ರ ಮತ್ತು ಕರ್ಣಗಳ ಅಕು ರಿತ ಶಕ್ತಿಯ ಬಗ್ಗೆ ಅಭಿಮಾನಪಟ್ಟುಕೊಳ್ಳಬಹುದು ಯಾವುಸೇ ಒಂದು ವಸ್ತುವು ತಮ್ಮ ಕಣ್ಣಿಗೆ ತೋರದಿರುವುದಿಲ್ಲವೆಂದೂ ಶಬ್ದವು ಕಿವಿಗೆ ಬಿಳದಿರುವುದಿಲ್ಲವೆಂದೂ ನಾವು ತಿಳಿದುಕೊಳ್ಳುತ್ತೇವೆ. ಆದರೆ, ಇದು ಕೇವಲ ಭ್ರಮಾತ್ಮಕವಾದುದು ನಮ್ಮ ಕಿವಿ ಮತ್ತು ಕಣ್ಣುಗಳ ರಚನೆಯು ಎಲ್ಲ ಶಬ್ದಗಳನ್ನು ಕೇಳುವಂತೆ ಮತ್ತು ಎಲ್ಲ ದೃಶ್ಯಗಳನ್ನು ಕಾಣುವಂತೆ ನಿರ್ಮಿಸಲ್ಪಟ್ಟಿಲ್ಲವೆಂದು ಹೇಳಿದರೆ, ನೀವು ವಿಸ್ಮಿತ ನೇತ್ರರಾಗುತ್ತೀರಿ ನಮ್ಮ ಕಿವಿಯು ಬಹಳ ಕ್ಷೀಣ ಸ್ವರವನ್ನಾಗಲಿ ಅತಿ ಕರ್ಕಶ ಧ್ವನಿಯನ್ನಾಗಲೀ ಆಕರ್ಷಿಸಲಾರದು ಒಂದು ಮಧ್ಯಮಸ್ತರದ ಧ್ವನಿಯ ಅಲೆಗಳನ್ನು ಮಾತ್ರ ಗ್ರಹಿಸಿಕೊಳ್ಳಲು ನಮ್ಮ ಕಿವಿಯು ಸಮರ್ಥವಾಗಿದೆ ಇದರ ಮೇಲಿನದನ್ನಾಗಲೀ ಕೆಳಗಿನದನ್ನಾಗಲೀ ನಮಗೆ ತಿಳಿಯುದೇ ಇಲ್ಲ.

ಇದೇ ರೀತಿಯಲ್ಲಿ ಬೇರೆ ಬೇರೆ ವರ್ಣಗಳು ಬೇರೆ ಬೇರೆ ಆಕೃತಿಯ ಅಲೆಗಳನ್ನು ಪಸರಿಸುತ್ತವೆ ಈ ಅಲೆಗಳನ್ನು ನಮ್ಮ ಕಣ್ಣು ಗ್ರಹಿಸಿಕೊಳ್ಳುವುದರಿಂದಲೇ ನಾವು ಆ ವರ್ಣವನ್ನು ಕಾಣುವಂತಾಗುತ್ತದೆ ಯುವತಿಯ ಕಪೋಲದ ಆ ರಕ್ತವರ್ಣವನ್ನು, ಆಕಾಶದಲ್ಲಿ ವ್ಯಾಪಿಸಿರುವ ನೀಲವರ್ಣವನ್ನು, ಹೃದಯ ಹಾರಿಯಾದ ಹಸುರು ವರ್ಣವನ್ನು ನಮ್ಮ ಕಣ್ಣಿನವರೆಗೆ ತಂದುಮುಟ್ಟಿಸುವ ಕೆಲಸವು ಈ ವರ್ಣ ತರಂಗಗಳದ್ದಾಗಿದೆ ನಸು ನೀಲಿ ಬಣ್ಣದ ಅಲೆಗಳು ಅತಿ ಸಣ್ಣವಾಗಿರುತ್ತವೆ, ಆಕಾಶ, ನೀಲ, ಹಸುರು, ಹಳದಿ ಕಿತ್ತಳೆ ಮತ್ತು ಕೆಂಪು—ಇವು ಕ್ರಮವಾಗಿ ಉದ್ದುದ್ದವಾದ ಅಲೆಗಳನ್ನು ಹೊರಡಿಸುತ್ತವೆ ನಸು ನೀಲಿಗಿಂತ ಕಳಪಟ್ಟದ ಮತ್ತು ಕೆಂಪಿಗಿಂತ ಮೇಲ್ತರದ ಬಣ್ಣದ ಅಲೆಗಳನ್ನು ನಮ್ಮ ಕಣ್ಣುಗಳು ಎಂದೆಂದಿಗೂ ಗ್ರಹಿಸಿಕೊಳ್ಳಲಾರವು

ಪ್ರಕೃತಿ ಮಾತೆಯಲ್ಲಿ ಅನಂತ ವರ್ಣಗಳಿವೆ. ಇವುಗಳು ಬಹು ರಹಸ್ಯವಾಗಿಯೂ ಇದ್ದು ಊಹನಾತೀತವಾಗಿವೆ. ಉದಾಹರಣೆಗೆ ನಾವು ನಿತ್ಯವೂ ಕಾಣುವ ಆಕಾಶವನ್ನೇ ತೆಗೆದುಕೊಳ್ಳಿರಿ ನಮಗದು ನೀಲಿಯಾಗಿ ಕಾಣುತ್ತದೆ, ಮತ್ತಿದರಿಂದ ಆಕಾಶದ ವರ್ಣ ನೀಲ ಎಂದು ಡಣಾಡಂಗುರ ಹೊಡೆಯುತ್ತೇವೆ ಆಕಾಶದ ಬಣ್ಣವು ನಿಜವಾಗಿಯೂ ನೀಲಿಯೇ ಇರುವುದಾದರೆ, ಅದು ರಾತ್ರಿಕಾಲದಲ್ಲಿಯೂ ನೀಲಿಯಾಗಿಯೇ ತೋರಬೇಕಿತ್ತು ಆದರೆ, ನಮ್ಮ ಅನುಭವವು ತದ್ವಿಪರೀತವಾದುದು. ವಸ್ತುತ ನಾವು ಕಾಣುವ ನೀಲವರ್ಣವು ಆಕಾಶದ್ದಲ್ಲ; ಸೂರ್ಯನು ನೀಲ, ಹಸುರು, ಹಳದಿ, ಕಿತ್ತಳೆ, ಕೆಂಪು ನೇರಳೆ, ನಸು ನೀಲಿ ಬಣ್ಣಗಳನ್ನು ಪ್ರಸಾರಮಾಡುತ್ತಾನೆಂದು ನೀವು ತಿಳಿದಿರುವಿರಿ ಈ ಸಪ್ತವರ್ಣಗಳ ಮಿಶ್ರಣವೇ ಬಿಳಿ ನಾವು ಕಾಣುವ ಸೂರ್ಯನು. ಈ ಸಪ್ತವರ್ಣಗಳ ಸಮ್ಮಿಶ್ರಣದಿಂದಾಗಿಯೇ ಶ್ವೇತನಾಗಿ ತೋರುತ್ತಾನೆ. ಇವುಗಳಲ್ಲಿ ಅತಿ ಉದ್ದವಾದ ಕೆಂಪು ಬಣ್ಣದ ಅಲೆಗಳು ವಾತಾವರಣವನ್ನು ಪಾರು ಮಾಡಿ ದೂರ ವೇಗಕ್ಕೆ ಓಡುತ್ತವೆ ಆದರೆ ಕೆಳಪಟ್ಟದ ನೀಲಿ ಬಣ್ಣದ ಅಲೆಗಳು ದೂರ ಸಂಚರಿಸಲಾರದೆ, ಗಾಳಿಯಲ್ಲಿರುವ ಪರಮಾಣುಗಳಿಗೆ ಡಿಕ್ಕಿ ಹೊಡೆಹೊಡೆದು, ನಮ್ಮತ್ತ ಕಡೆ ನಡೆದು ಬರುತ್ತವೆ. ಇದರಿಂದಾಗಿ ಆಕಾಶದ ಬಣ್ಣ ನೀಲವಾಗಿ ನಮಗೆ ತೋರುವುದು

ಸೂರ್ಯನು ನಮ್ಮ ನೆತ್ತಿಯ ಮೇಲೆ ಬರುವಾಗ ನೀವು ನಿಮ್ಮ ದೃಷ್ಟಿಯನ್ನು ಅತ್ತಿತ್ತ ಸಂಚಲಿಸಿರಿ. ಮುಂಜಾವ ಅಥವಾ ಸಂಜೆಯದಲ್ಲಿ ನಿಮಗೆ ಕಂಡಿದ್ದ ನಾನಾ ವರ್ಣಗಳ ಸಮ್ಮಿಶ್ರಣವನ್ನು ನೀವಾಗ ಎಂದಿಗೂ ಕಾಣಲಾರಿರಿ ಆಕಾಶದ ಬಣ್ಣ ನೀಲವೇ ಆಗಿದ್ದರೆ, ಅದೆಲ್ಲಿ ಮಾಯವಾಯಿತು? ನಮಗೇಕೆ ಮಧ್ಯಾಹ್ನ ತೋರುವುದಿಲ್ಲ? ಗಾಬರಿಯಾಗಬೇಕಾಗಿಲ್ಲ ಮಧ್ಯಾಹ್ನದ ಸೂರ್ಯನು ತನ್ನ ಬೆಳಕಿನ ವರ್ಣಕಿರಣಗಳನ್ನು ನೇರವಾಗಿ ಕೆಳಗಡೆ ರವಾನಿಸುತ್ತಾನೆ. ಈ ವರ್ಣದ ಅಲೆಗಳು ವಾತಾವರಣದಲ್ಲಿರುವ ವಿವಿಧ ಪದಾರ್ಥಗಳನ್ನು ದಾಟಿ, ಹೋಗುತ್ತವೆ. ಮೂಡುವ ಅಥವಾ ಮುಳುಗುವ ಸಮಯದಲ್ಲಿ ಸೂರ್ಯನ ಕಿರಣಗಳು ದಿಗಂತಸಮಯದಲ್ಲಿ ಹೂರ ಬೀಳುವುದರಿಂದ ಅವು ಬಹಳ ದಪ್ಪಗಾದ ವಾತಾವರಣದ ಪರಮಾಣುಗಳನ್ನು ಹಾದು ಬರಬೇಕಾಗುವುದು ಈ ಸಮಯದಲ್ಲಿ ಮಂದಗತಿಯ ನೀಲಿ ವರ್ಣದ ಅಲೆಗಳು ವಿವಿಧ ಪದಾರ್ಥಗಳೊಡನೆ ಹೋರಾಡಿ ಪುಡಿಪುಡಿಯಾಗಿ ಸತ್ತು ಮುತ್ತ ಹರಡಿ ಹೋಗುತ್ತವೆ. ಆದರೆ, ಕೆಂಪಿನ ಉದ್ದವಾದ ತೀವ್ರಗತಿಯ ಅಲೆಗಳು ಎಲ್ಲವನ್ನೂ ಪಾರುಮಾಡಿ ನಮ್ಮ ಕಣ್ಣಿಗೆ ತೋರುತ್ತವೆ ಇದರಿಂದಾಗಿಯೇ ಸೂರ್ಯೋದಯ ಮತ್ತು ಸೂರ್ಯಾಸ್ತದ ವೇಳೆಗಳಲ್ಲಿ ನಯನ ಮನೋಹರವಾದ ಅರುಣ ವರ್ಣವು ಆಕಾಶ ತುಂಬ ನಮಗೆ ಕಂಡು ಬರುತ್ತದೆ ಆಕಾಶದಲ್ಲಿ ಧೂಳು ಮತ್ತು ಇತರ ಜಲಕಣಗಳ ಸಾಂದ್ರತೆಯು ಹೆಚ್ಚಿದಂತೆ ವೇಗವಾಗಿ ಓಡುವ ಕೆಂಪು ಬಣ್ಣದ ಅಲೆಗಳಿಗೆ ತಡೆಯು ಹೆಚ್ಚಾಗಿ ಅವು ಬಹುದೂರ ಹೋಗದೆ ನಮಗೆ ಗೋಚರವಾಗುವುದು.

ಪ್ರಕೃತಿಭವನದ ಸರ್ವಸುಂದರ ದೃಶ್ಯಗಳಲ್ಲಿ ಮುಂಜಾವವು ಅಗ್ರಗಣ್ಯ ಸ್ಥಾನ ಪಡೆದಿದೆ ಎಂಬುದು ಸರ್ವಮಾನ್ಯವಾಗಿದೆ. ಪ್ರಾತಃಕಾಲ ಮತ್ತು ಸಂಧ್ಯಾಕಾಲದಲ್ಲಾಗುವ ಪ್ರಕಾಶ ಮತ್ತು ಅಂಧಕಾರಗಳ ಸಮ್ಮಿಶ್ರಣವು ಸಂಮೋಹಕವಾಗಿದೆ. ನಮಗೆ ಇಂತಹ ಒಂದು ಅವರ್ಣನೀಯ ದೃಶ್ಯವನ್ನು ಒದಗಿಸುವ ಸಂಧ್ಯಾಕಾಲಗಳಿಗೆ ನೀವು ಚಿರಋಣಿಯಾಗಿರಬೇಕೆಂದು ನಿಶ್ಚಯಿಸಬಹುದು, ಆದರೆ ಅವಸರವಾಗಬೇಡಿರಿ ನಾವು ಕೃತಜ್ಞರಾಗಬೇಕಾದುದು ಸಂಧ್ಯಾಕಾಲಕ್ಕಲ್ಲ, ವಾತಾವರಣದಲ್ಲಿ ತೇಲಾಡುವ ಅನಂತಾನಂತ ಧೂಳಿ ಕಣಗಳಿಗೆ! ಪೃಥ್ವಿಯ ಸುತ್ತುಮುತ್ತಲಿರುವ ವಾತಾವರಣದಲ್ಲಿ ಧೂಳಿನ ಕಣಗಳಾಗಲೀ ಅನ್ಯ ತೇಲಾಡುವ ಪದಾರ್ಥಗಳಾಗಲೀ ಇಲ್ಲದೆ ಹೋಗುತ್ತಿದ್ದರೆ, ಉಷೆಯು ತನ್ನ ಪತಿ ಸೂರ್ಯನನ್ನು ಸ್ವಾಗತಿಸುವ ಮತ್ತು ಅರುಣನು ಉದಯನಾಗಿ ರಥ ಸಜ್ಜುಗೊಳಿಸುವ ದೃಶ್ಯವಾಗಲೀ ಸಂಧ್ಯೆಯು ಸೂರ್ಯನನ್ನು ಬೀಳ್ಕೊಡುವ ಅಥವಾ ಅರುಣನು ಕುದುರೆ ಬಿಚ್ಚುವ ನೋಟವಾಗಲೀ ಎಂದೆಂದಿಗೂ ದೃಗ್ಗೋಚರವಾಗಲಾರದು ಸೂರ್ಯ ಪ್ರಕಾಶವು ಏಕಾಏಕಿಯಾಗಿ ಭೂಮಿಯ ಮೇಲೆ ಬೀಳುತಿತ್ತು, ಅಂತೆಯೇ ಏಕಾಏಕಿಯಾಗಿ ಮಾಯವಾಗುತಿತ್ತು.

ಬಣ್ಣದ ತೆರೆಗಳ ಪ್ರಸಾರದಲ್ಲಿ ಇಂದ್ರಧನು ಅಥವಾ ಕಾಮನಬಿಲ್ಲು ಬಹಳ ರೋಚಕವಾದ ರೂಪವಾಗಿದೆ ವಾಯುಮಂಡಲದಲ್ಲಿರುವ ಜಲಕಣಗಳು ಪ್ರಕಾಶದ ಏಳೂ ವರ್ಣಗಳ ಅಲೆಗಳನ್ನೂ ಗ್ರಹಿಸುವಷ್ಟು ಸಮರ್ಥವಿವೆ ಕೆಲವೊಮ್ಮೆ ಕೆಲವು ವಿಶೇಷ ಸ್ಥಾನಗಳಲ್ಲಿ ಈ ಜಲಕಣಗಳು ವಿಶೇಷ ರೀತಿಯಿಂದ ನಿರ್ಮಿಸಲ್ಪಟ್ಟಿವೆ. ಇದರಿಂದಾಗಿ ಇವುಗಳ ಬೇರೆ ಬೇರೆ ಭಾಗಗಳು ಬೇರೆ ಬೇರೆ ವರ್ಣಗಳ ಅಲೆಗಳನ್ನು ಗ್ರಹಿಸುತವೆ. ಮತ್ತು ಈ ಅಲೆಗಳೆಲ್ಲವೂ ಒಂದ ನೇರ ಸಪ್ತವರ್ಣಗಳನ್ನು ಪ್ರಸಾರಿಸುತ್ತವೆ ಕಾರಂಜಿಯ ನೀರಿನ ಧಾರೆಗಳಂತೆ ಈ ಜಲಕಣಗಳು ಯಾವಾಗಲೂ ರೂಪ ಬದಲಿಸುತ್ತವೆ ಏನಿದ್ದರೂ ಈ ಕಣಗಳು ಆ ಸ್ಥಾನವಿಶೇಷದಲ್ಲಿ ವಿಚರಿಸುತ್ತಿರುವಷ್ಟು ಸಮಯ ಈ ಅಲೆಗಳನ್ನು ಆಕರ್ಷಿಸಿ, ನಮಗದರ ಸೌಂದರ್ಯವನ್ನು ತೋರಿಸುತ್ತವೆ.

ವಾತಾವರಣದಲ್ಲಿ ಭೂಮಿಯ ಧೂಳಿಯ ಕಣಗಳು ತೇಲಾಡುತ್ತಿರುತ್ತವೆ ಮಾತ್ರವಲ್ಲದೇ ಸೂರ್ಯನು ಕೂಡ ತಾನಾಗಿಯೇ ಕೆಲವು ಸೂಕ್ಷ್ಮಾತಿಸೂಕ್ಷ್ಮ ಕಣಗಳನ್ನೂ ಭೂಮಿಯತ್ತ ಚೆಲ್ಲುತ್ತಾನೆ ಈ ಕಣಗಳು ಕೂಡ ಕೆಲವೊಮ್ಮೆ ಆಶ್ಚರ್ಯಕರವಾದ ದೃಶ್ಯಗಳನ್ನು ನಿರ್ಮಿಸುವುದುಂಟು. ಇದು ಧ್ರುವ ಪ್ರದೇಶದಲ್ಲಿ ಪ್ರಕಾಶ-ಧಾರೆಯ ರೂಪದಲ್ಲಿ ತೋರುವುದು. ಈ ಪ್ರಕಾಶ ಧಾರೆಯ ಸೌಂದರ್ಯವು ಅತ್ಯಂತ ಮನೋಹರವಾದ ಸೂರ್ಯಾಸ್ತದಂತೆಯೇ ನೇತ್ರಹಾರಿಯಾಗಿದೆ. ಉತ್ತರ ಧ್ರುವ ವೃತ್ತದಲ್ಲಿ ಉತ್ತರ ಪ್ರಕಾಶ—ಧಾರೆ ಮತ್ತು ದಕ್ಷಿಣ ಧ್ರುವ ವೃತ್ತದಲ್ಲಿ ದಕ್ಷಿಣ ಪ್ರಕಾಶ—ಧಾರೆಯು ತೋರುತ್ತದೆ ಉತ್ತರದ ಪ್ರಕಾಶ ಧಾರೆಯು ಪರ್ವತ ಮೂಲೆಯಲ್ಲಿ ಉರಿಯುತ್ತಿರುವ ಬೆಂಕಿಯಂತೆ ಮೊದಲು ತೋರಿ ಬಂದು ಬೆಳೆಯುತ್ತ ವಿಶಾಲ ಅರ್ಧ ವೃತ್ತಾಕಾರವನ್ನು ಹೊಂದಿ ಕಣ್ಣಿಗೆ ತೋರುತ್ತದೆ. ಈ ವರ್ಣಾರ್ಧ ವೃತ್ತವು ಸಾಮಾನ್ಯವಾಗಿ ತೀರ ಚಂಚಲವಾಗಿದ್ದು, ಇದರ ಬಿಳಿ ಮತ್ತು ಹಳದಿ ಬಣ್ಣಗಳು ಕೆಂಪು ಅಥವಾ ಹಸುರಿನಿಂದ ಅತಿರಂಜಿತವಾಗುತ್ತವೆ ಇದರಿಂದ ಕಿರಣಗಳು ಮೇಲೇಳುತ್ತವೆ, ಕುಸಿಯುತ್ತವೆ ಪುನಃ ತಲೆಯೆತ್ತುತ್ತವೆ ಆಕಾಶದ ಉತ್ತರ ಭಾಗವಿಡಿ ಈ ರೀತಿಯ ವರ್ಣವಿವರ್ಣಗಳಿಂದಾಗಿ ಮನಸೆಳೆಯುತ್ತದೆ

ಸೂರ್ಯನಿಂದ ಹೊರಟ ಈ ಸೂಕ್ಷ್ಮ ಕಣಗಳು ನೂರಾರು ಸಾವಿರ ಮೈಲುಗಳಷ್ಟು ಪ್ರತಿ ಸೆಕುಂದಿನಲ್ಲಿ ಸಂಚರಿಸಿ ಭೂಮಿಯತ್ತ ಧಾವಿಸುತ್ತವೆ ಭೂಮಿಯ ಆಯಸ್ಕಾಂತ ಪ್ರದೇಶದ ಆಕರ್ಷಣೆಯಿಂದಾಗಿ ಇವು ಧ್ರುವ ಪ್ರದೇಶಗಳ ಕಡೆಗೆ ಓಡುತ್ತವೆ ಅಲ್ಲಿ ಹರಿಯುವ ವಿದ್ಯುದ್ಧಾರೆಗಳಿಂದ ಪ್ರಭಾವಿತವಾಗಿ ಈ ಆಕ್ರಮಣಕಾರಿಯಾದ ಪರಮಾಣು ೬೫ ಮೈಲೆತ್ತರದಲ್ಲಿ ೬೦೦ ಮೈಲುದ್ದದಷ್ಟು ಗಾಳಿಯ ಪರಮಾಣುಗಳನ್ನು ಹೊಳೆಯುವಂತೆ ಮಾಡುತ್ತವೆ

ಪ್ರಾಚೀನ ಋಷಿಗಳು ಸೂರ್ಯನನ್ನು ಸರ್ವ ಲೋಕ ಚಕ್ಷು ಎಂದು ಕರೆದಿದ್ದಾರೆ ಎಂದರೆ, ಎಲ್ಲ ಲೋಕಗಳ ಕಣ್ಣೂ ಸೂರ್ಯನೇ ಆಗಿದ್ದಾನೆ ಎಂಬ ಅರ್ಥ. ಅವೇ ಸೂರ್ಯನು ಈ ವರ್ಣಗಳ ಜನಕನೂ ಹೌದು. ತನ್ನ ಬಣ್ಣದ ಅಲೆಗಳಿಂದ ದೂಳಕಣ ಹೂವಿನ ದಳ, ಪಕ್ಷಿಗಳ ಗರಿಗಳನ್ನು ಚುಂಬಿಸಿ ಅವನು ನಿರ್ಮಿಸುವ ರೂಪರಾಶಿ ಅವರ್ಣನೀಯವಿವೆ.

(ವಿವಿಧ ಮೂಲಗಳಿಂದ)

— ಗೋರಾ.

ಸಕಾಲದಲ್ಲಿ, ಸುಲಭ ದರದಲ್ಲಿ

ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ

ಬುಕ್‌ವರ್ಕನ್ನೂ ಚಲೋದಾಗಿ ಮಾಡಿ ಕೊಡಲಾಗುವುದು.

NAVAYUGA PRESS, UDIPI

Printers & Publishers

Santhekatte — UDIPI.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ ಎ ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ

ಬೆಲೆ ರೂ. 2 V P ಮಾಡುವುದಿಲ್ಲ.

ರೂ 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡುಪಿ.

ಅಂಕೆಸಂಖ್ಯೆಗಳು

ಇವು ನಿಮಗಿದುವರೆಗೆ ಗೊತ್ತೇ?

ನಮ್ಮ ರಾಜ್ಯ, ದೇಶಗಳಿಗೆ ಸಂಬಂಧಿಸಿದ ಕೆಲವು ಅಂಕೆಸಂಖ್ಯೆಗಳ ಪಕ್ಕನೋಟ.

ಮಂಗಗಳ ನಿರ್ಯಾತ— ಭಾರತವು ಎಪ್ರಿಲ್ ೧೯೫೬ರಿಂದ ಜನವರಿ ೧೯೫೭ರ ಕಾಲಾವಧಿಯಲ್ಲಿ ೧೫೦,೦೦೦ ಮಂಗಗಳನ್ನು ಬ್ರಿಟನ್ನ, ಕೆನಡಾ, ಅಮೇರಿಕಾ ಇತ್ಯಾದಿ ರಾಷ್ಟ್ರಗಳಿಗೆ ನಿರ್ಯಾತ ಮಾಡಿತು. ಅಷ್ಟು ಮಂಗಗಳ ಮುಖಾಂತರ ಭಾರತಕ್ಕೆ ೬,೬೦,೦೦೦ ಪೌಂಡು ಲಾಭವಾಯಿತು. ಪ್ರತ್ಯೇಕ ಮಂಗನ ಬೆಲೆಯು ೪ ಪೌಂಡಿಗಿಂತ ಅಧಿಕ ಬೆಲೆ ದೊರೆಯಿತು.

ಆದರೆ ಈ ಕಾಲಾವಧಿಯ ಮಧ್ಯದಲ್ಲಿ ಒಮ್ಮೆ ಒಂದು ಮಂಗನ ಬೆಲೆಯು ೭ ಪೌಂಡಿಗೆ ಮುಟ್ಟಿತ್ತು. ಭಾರತದಿಂದ ಮಂಗಗಳನ್ನು ವಿಮಾನದಿಂದ ಇಂಗ್ಲೆಂಡ ಇತ್ಯಾದಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಕಳಿಸುತ್ತಿದ್ದರು. ಲಂಡನ ಪ್ರವಾಸವು ೨೦ ತಾಸಿನದ್ದಾಗಿರುವದು ಒಂದು ವಿಮಾನದಲ್ಲಿ ಸುಮಾರು ೧೫೭ ಪಂಜರಗಳು ಇದ್ದು ಹಾಗೂ ಅವುಗಳಲ್ಲಿದ್ದ ಮಂಗಗಳ ಸಂಖ್ಯೆಯು ೧೪೦೦ ತನಕವಿರುತ್ತದೆ.

ಚಲಚ್ಚಿತ್ರಗಳು—ಭಾರತದಲ್ಲಿ ಕಳೆದ ವರ್ಷ ಒಟ್ಟು ೨೯೩ ಚಲಚ್ಚಿತ್ರಗಳು ತಯಾರಿಸಲ್ಪಟ್ಟವು. ಚಲಚ್ಚಿತ್ರೋದ್ಯಮದಲ್ಲಿ ಇಡೀ ಜಗತ್ತಿನಲ್ಲಿ ಭಾರತವು ೨ನೇ ಸ್ಥಾನವನ್ನು ಹೊಂದಿರುವದು. ೧ನೇ ಸ್ಥಾನ ಜಪಾನಕ್ಕೆ ಲಭಿಸಿದರೆ ೩ನೇ ಸ್ಥಾನ ಹಾಲಿವುಡ್‌ಗೆ ಸಿಕ್ಕಿರುವದು.

ಸನ್ ೧೯೫೪ರಲ್ಲಿ ಪಾಕಿಸ್ತಾನದಲ್ಲಿ ೩೪ ಚಿತ್ರಗಳು ನಿರ್ಮಾಣಗೊಂಡವು. ಅವುಗಳಲ್ಲಿ ೨೮ ಚಲಚ್ಚಿತ್ರಗಳು ಲಾಹೋರಿನಲ್ಲಿ ತಯಾರಿಸಲ್ಪಟ್ಟರೆ, ಉಳಿದವುಗಳು ರಾಷ್ಟ್ರದ ರಾಜಧಾನಿ ಕರಾಚಿಯಲ್ಲಿ ನಿರ್ಮಾಣಗೊಂಡವು.

ರಾಜ್ಯದ ಚಲಚ್ಚಿತ್ರ ಮಂದಿರಗಳು—ಮೈಸೂರು ರಾಜ್ಯದಲ್ಲಿ ಚಲಚ್ಚಿತ್ರ ಮಂದಿರಗಳ ಸಂಖ್ಯೆ—೨೨೦. ಅವರೆ ಟೂರಿಂಗ ಟಾಕೀಜಗಳ ಸಂಖ್ಯೆ—೧೬೧. ಭಾರತದ ಒಟ್ಟು ಚಿತ್ರಮಂದಿರಗಳು—೧,೦೭,೧೩೫.

ರಾಜ್ಯದ ಆರೋಗ್ಯ ಇಲಾಖೆ—ನಮ್ಮ ಮೈಸೂರು ರಾಜ್ಯದಲ್ಲಿ ಆಸ್ಪತ್ರೆ ಹಾಗೂ ದವಾಖಾನೆಗಳು-೩೭೪ ಮತ್ತು ಜಿಲ್ಲಾ ಮಾದರಿಯ ಸಿವಿಲ್ ಆಸ್ಪತ್ರೆಗಳು—೨೨ ಇರುವವು. ತಾಲೂಕಿನ ಪಶುದವಾಖಾನೆಗಳು-೧೫೬ ಇದ್ದರೆ, ಗ್ರಾಮೀಣ ದವಾಖಾನೆಗಳು-೧೯೪ ಇರುವವು. ಹಾಗೂ ಪಶುವೈದ್ಯಕ ಸಂಸ್ಥೆಗಳು—೩೬೨ ಮತ್ತು ರಾಜ್ಯದ ಪಶುವೈದ್ಯ ಕಾಲೇಜುಗಳು—೧. (ಕಳೆದ ಜುಲೈ ೨೫, ೧೯೫೭ರಿಂದ ಪ್ರಾರಂಭ). ಒಕ್ಕಲುತನ ಸಹಕಾರಿ ಸಂಸ್ಥೆಗಳು—೧೨೪. ಸರಕಾರಿ ಆಸ್ಪತ್ರೆ ಮತ್ತು ಔಷಧಾಲಯಗಳು—೮೮೭ ಇದ್ದರೆ, ಮೂಲ ಆರೋಗ್ಯ ಕೇಂದ್ರಗಳು—೨೫೨.

ರಾಜ್ಯದ ಅಧಿಕಾರಿಗಳ ಸಂಖ್ಯೆ—ಇಡೀ ಮೈಸೂರು ರಾಜ್ಯದ ಸರಕಾರಿ ಅಧಿಕಾರಿಗಳ ಸಂಖ್ಯೆ—೧,೫೪,೦೦೦ ಇರುವದು. ಪದಾಧಿಕಾರಿಗಳು (ಗೆಜೆಟೆಡ್)—೨,೯೧೭ ಇದ್ದರೆ, ಸಾದಾ ಅಧಿಕಾರಿಗಳು (ನಾನ್‌ಗೆಜೆಟೆಡ್)—೧,೫೯,೦೮೩ ಇರುವರು.

ಭಾರತದ ಕರಾವಳಿ— ಭಾರತದ ಪೂರ್ವ-ಪಶ್ಚಿಮಕ್ಕೆ ಸಮುದ್ರವಿದ್ದು, ಅವೆರಡೂ ದಿಕ್ಕಿನ ಕರಾವಳಿಯು ೨೯೦೦ ಮೈಲು ವಿಸ್ತಾರವಿದೆ. ಪೂರ್ವ ಕರಾವಳಿಯು—೧೪೦೦ ಮೈಲು ವಿಸ್ತಾರವಿದ್ದರೆ, ಪಶ್ಚಿಮ ಕಡಲದಂಡೆಯು—೧೫೦೦ ಮೈಲು ವಿಸ್ತಾರವಿರುತ್ತದೆ.

ದಕ್ಷಿಣೋತ್ತರ ಮೈಸೂರು ರಾಜ್ಯ

ಕರ್ನಾಟಕ ರಾಜ್ಯವು ಎರಡು ಪ್ರಮುಖ ವಿಭಾಗಗಳಿಂದ ಕೂಡಿರುವದು. ಅದರಲ್ಲಿ ಮುಂಬೈ ಕರ್ನಾಟಕ (ಉತ್ತರ ಕರ್ನಾಟಕ)ದ ವಿಸ್ತಾರ—೨೧,೦೦೦ ಚದರ ಮೈಲು ಇದ್ದು ಜನಸಂಖ್ಯೆಯು—೫೨,೦೦,೦೦೦ ಇರುವದು. ಹಾಗೂ ಮೈಸೂರು ಕರ್ನಾಟಕ (ದಕ್ಷಿಣ ಕರ್ನಾಟಕ) ವಿಭಾಗದ ಜನಸಂಖ್ಯೆಯು—೯೨,೦೦,೦೦೦ ಇದ್ದು, ವಿಸ್ತಾರವು ೩೧,೦೦೦ ಚೌರಸ ಮೈಲುಗಳಿರುವವು. ಆದರೆ ಇಡಿ ಮೈಸೂರು ರಾಜ್ಯದ ಭೂವಿಸ್ತಾರವು—೭೩,೫೬೦ ಚದರು ಮೈಲುಗಳಿದ್ದು ಜನಸಂಖ್ಯೆಯು (೧೯೫೧ರ ಜನಗಣತಿಯ ಪ್ರಕಾರ) ೧,೯೪,೫೧,೪೭೭ ಇದ್ದರೆ ಈಗ ೩,೨೦,೦೦,೦೦೦ ಇರುವದು.

ರಾಜ್ಯದ ಹಳ್ಳಿ-ಪಟ್ಟಣಗಳು—ನವ ಮೈಸೂರು ರಾಜ್ಯದಲ್ಲಿ ೧೯. ಜಿಲ್ಲೆಗಳಿದ್ದು ಅದರಲ್ಲಿ, ೧೬೨ ತಾಲೂಕುಗಳು ಇರುವವು. ಈ ತಾಲೂಕುಗಳಲ್ಲಿ ೨೫,೮೯೭ ಹಳ್ಳಿಗಳು ಹಾಗೂ ೨೮೯ ಪಟ್ಟಣಗಳು ಇರುವವು. ಪಟ್ಟಣಗಳಲ್ಲಿ ವಾಸಿಸುವವರ ಜನಸಂಖ್ಯೆ ೪೪,೫೫,೯೮೫ ಇದ್ದು ಹಳ್ಳಿಗಳಲ್ಲಿ ವಾಸಿಸುವವರ ಜನಸಂಖ್ಯೆಯು ೧,೪೯,೮೫ ೪೯೨ ಇರುವದು. ಗ್ರಾಮಗಳಲ್ಲಿಯ ಜನಸಂಖ್ಯೆ ಪ್ರಮಾಣ ನೂರಕ್ಕೆ ೭೭ರಷ್ಟಿದ್ದರೆ, ನಗರಗಳಲ್ಲಿಯ ಜನಸಂಖ್ಯೆ ಪ್ರಮಾಣ ನೂರಕ್ಕೆ ೨೩ರಷ್ಟು ಇರುವದು.

ಭಾರತದ ಜನಸಂಖ್ಯೆ—ಭಾರತದ ಜನಸಂಖ್ಯೆಯು ಸನ್ ೧೯೦೧ ರಿಂದ ಸನ್ ೧೯೫೧ರ ವರೆಗೆ ೧,೨೧,೦೦,೦೦೦ ದಷ್ಟು ಬೆಳೆಯಿತು. ಸನ್ ೧೯೪೧ ರಿಂದ ಸನ್ ೧೯೫೧ರ ತನಕ ೪೨,೦೦,೦೦೦ ಹೀಗೆ ಭಾರತದ ಜನಸಂಖ್ಯೆ ಅಧಿಕವಾಯಿತು.

ಈಗ ಸುಮಾರು ೪೨,೦೦,೦೦,೦೦೦ ಜನಸಂಖ್ಯೆಯು ಇರುವದೆಂದು ಅಂದಾಜು ಇದೆ.

ಪ್ರಪಂಚದ ಜನಸಂಖ್ಯೆ—ಹಾಗೂ ಕ್ಷೇತ್ರಫಲ—ಜಗತ್ತಿನ ಕ್ಷೇತ್ರ ೫ ೫೦,೦೦,೦೦೦ ಚದುರ ಮೈಲ. ಇದ್ದು ಜನಸಂಖ್ಯೆ ೨೪೦ ೦೦,೦೦,೦೦೦ ಇರುವದು. ಅದರಲ್ಲಿ ಚೀನಾ ರಾಷ್ಟ್ರವು ಜನಸಂಖ್ಯೆಯಿಂದ ಪ್ರಥಮವು. ಅಲ್ಲಿ ೬೦,೦೦,೦೦,೦೦೦ ಜನರಿರುವರು ೨ನೇ ಸ್ಥಾನವು ಭಾರತಕ್ಕೆ ಅಲ್ಲಿ ೩೭,೦೦,೦೦,೦೦೦ ಹಾಗೂ ೩ನೇ ಸ್ಥಾನ ರಶಿಯಾ ದೇಶಕ್ಕೆ ಆ ದೇಶದಲ್ಲಿ ೨೨,೦೦,೦೦,೦೦೦ ಜನಸಂಖ್ಯೆ ಇರುವದು.

(ಸಂ. ಸೂ.— ಈ ಅಂಕೆ ಸಂಖ್ಯೆಗಳನ್ನೂ ಕಳೆದವಾರ "ನವಯುಗ"ದಲ್ಲಿ ಪ್ರಕಟವಾದ "ಅಂಕೆ ಸಂಖ್ಯೆಗಳು—ಇವನ್ನು ನೀವು ಅವಶ್ಯ ತಿಳಿದಿರಬೇಕು" ಎಂಬ ಲೇಖನದ ಅಂಕೆ ಸಂಖ್ಯೆಗಳನ್ನೂ ಸಂಗ್ರಹಿಸಿದವರು ಶ್ರೀ ರಾಮಕೃಷ್ಣ ಏ. ಪೈ, ಶಾಕರ ನಾಗ, ಅಂಕೋಲಾ ಇವರು.)

ಕೋಳಿ ಮರಿಗಳನ್ನು ಕಾಡುವ ರೋಗಗಳಲ್ಲಿ ಮಾಂಸಖಂಡ ಹೆಪ್ಪುಗಟ್ಟುವುದೂ ಒಂದು ಇದನ್ನು ನಿರೋಧಿಸಲು ಅಮೇರಿಕೆಯಲ್ಲಿ ಅವು ಕುಡಿಯುವ ನೀರಿಗೆ ಲಸಿಕೆಯೊಂದನ್ನು ಬೆರಸಲಾಗುತ್ತಿದೆ.

ಕಥಾವಿಹಾರ

(೨ನೇ ಪುಟದಿಂದ)

ಡುತ್ತಾರೆ, ಅವನೇ ವೃದ್ಧ! ಅವನು ಒಂದು ಜಿಗೆ ಸಸಿಯನ್ನು ಹಿಡಿದುಕೊಂಡೇ ಕೊನೆಯುಸಿರನ್ನೆಳೆದಿದ್ದ. ಭಿಕ್ಷೆ ಬೇಡಲಿಕ್ಕೆ ಆ ದಾರಿಯಲ್ಲಿ ಹೋಗುತ್ತಿದ್ದವನು, ಗದ್ದೆಗೆ ಮಗುಚಿಬಿದ್ದು ಮೇಲೇಳಲಿಕ್ಕೆ ತಾಕಿರುವರು.

ತ್ತಿ ಸಾಲದೆ, ಮಳೆಯ ಪ್ರಖರ ಹೊಡೆತಕ್ಕೆ ಸಿಲುಕಿ, ಮೃತಿಯನ್ನೈದಿದನೆಂಬುದರಲ್ಲಿ ಸಂಶಯವಿರಲಿಲ್ಲ. ಗಲಿಬಿಡಿದವರ ಹಾಗೆ ಒಂದರೆಕ್ಷಣ ನಿಂತಲ್ಲಿಯೇ ನಿಂತರು. ಕೊನೆಗೆ ಕುಲ್ಲುಮೋರೆ ಹೊತ್ತುಕೊಂಡು, ಮನೆಗೆ ಬಂದರು.

ಮುದುಕನ ದುರ್ಮರಣದ ಸುದ್ದಿ ಮಿಂಚಿನ ವೇಗದಲ್ಲಿ ಒಬ್ಬರ ಕಿವಿಯಿಂದ ಮತ್ತೊಬ್ಬರ ಕಿವಿಗೆ ತಲುಪುತ್ತ, ಇಡೀ ಊರಿಗೆ ವಾರ್ತೆ ಪ್ರಸಾರವಾಯಿತು. ಸಾಯಂಕಾಲ ಹೊತ್ತಿಗೆ ಕೊರಗರ ಮೂಲಕ ಮುದುಕನ ಕಳೇಬರನ್ನು ಹುಗಿಸಿದರು. ಮುದುಕ ಮಣ್ಣಿನೊಡನೆ ಬೆರೆತು ಹೋದ.

ಅವನು ಸತ್ತ ದಿನದ ರಾತ್ರಿಯೇ ನನಗೆ ಕನಸು ಬಿದ್ದದು. ಬೆಳಗಾಗುವರೆಗೆ ನನಗೆ ನಿದ್ರೆಯೇ ಬರದೆ, ಹಾಳು ಯೋಚನೆಯಲ್ಲೇ ಕಾಲ ಕಳೆದೆ. ಬೆಳ್ಳಂ ಬೆಳಗಾದಾಗ ಮುದುಕಿಯು ಮನೆಯತ್ತ ಕಾಲು ಹಾಕಿದೆ. ಒಳಗೆ ಹೋಗಿ ನೋಡಿದಾಗ ಮುದುಕಿಯು ಸುಳಿವಿರಲಿಲ್ಲ. ಕಸರಾಶಿ ಉಡುಗದೆ ಮೊದಲಿದ್ದ ಸ್ಥಿತಿಗೆ ಬಂದಿದ್ದವು. ಪಾತ್ರೆ ಪರಡಿಗಳು ದಿಕ್ಕಾಪಾಲಾಗಿ ಬಿದ್ದಿದ್ದುವು ಮನೆ ಎಲ್ಲಿ ಸ್ಮಶಾನ ಮೌನವೇ ಕವಿದಿತ್ತೆಂದು ಹೇಳಬೇಕು. ಹೊರ ಬಂದು ನೋಡಿದೆ. ಅಲ್ಲಿಯೂ ಮುದುಕಿಯಿರುವ ಶುಭಚಿಹ್ನೆಗಳಿರಲಿಲ್ಲ. ಆಗ ಥಟ್ಟನೆ ರಾತ್ರಿ ಕಂಡ ಕನಸಿನ ನೆನಪಾಗಿ ಅಲ್ಲೇ ಕುಸಿದು ಕುಳಿತೆ ಎರಡೂ ಕೈಗಳನ್ನು ತಲೆಯ ಮೇಲೆ ಹೊತ್ತು!

—ಉಳ್ಳೂರು ತಮ್ಮಯ್ಯ ಪಾಟಾಳಿ,
ಬಾರಕೂರು.



≈ ಕುಮಾರಿ ಬಿಲ್ಲೆಗಳು ≈

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶಲ್), ರೂ. 8/- (ಎಕ್ಸ್ಟ್ರಾ ಸ್ಪೆಶಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & CO. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
REGD. NO. M. 3619

UDIPI, THURSDAY
12-11-1959

LICENSE NO. 31
Licensed to Post without Prepayment

ಅಭಿಪ್ರಾಯ

ಶ್ರೀ ಡಾಂಗೆಯವರ ಸ್ವದೇಶನಿಷ್ಠೆ

ಮುಂಬಯಿಯ ಹತ್ತಿನೂಲಿನ ಗಿರಣಿಗಳ ಕೆಲಸಗಾರರ ಹರತಾಳದಲ್ಲಿ ಪಕ್ಷದ ಆದೇಶವನ್ನು ಮನ್ನಿಸಿದ್ದ ಶ್ರೀ ಡಾಂಗೆಯವರ ಮುಂದಿನ ಧೋರಣೆ ಏನು?

ಭಾರತೀಯ ಸೀಮೆಯ ಮೇಲೆ ಚೀನೀ ಸೇನೆಯು ಅತಿಕ್ರಮಣ ಮಾಡುತ್ತಿರುವುದು ವಾಸ್ತವವಾಗಿ ಭಾರತೀಯ ಕಮ್ಯೂನಿಸ್ಟ್ ಪಕ್ಷಕ್ಕೆ ಜೀವನ ಮರಣದ ಪ್ರಶ್ನೆಯಾಗಿ ಪರಿಣಮಿಸಿದೆ. ಈ ಪ್ರಶ್ನೆಯನ್ನು ತುಸುವಾದರೂ ವಿಶೇಷವಾಗಿ ಗಮನಿಸಿ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಪಡಿಸಿದ ಕಮ್ಯುನಿಸ್ಟ ನಾಯಕರೆಂದರೆ, ಶ್ರೀ ಎಸ್. ಎ. ಡಾಂಗೆ ಅವರು. ಚೀನಾವು ಭಾರತದ ಮೇಲೆ ಆಕ್ರಮಣ ನಡೆಸಿದೆ ಎಂದವರು ಸ್ಪಷ್ಟವಾಗಿ ಹೇಳಿದ್ದಾರೆ. ಈ ವಿಷಯದಲ್ಲವರು ತಮ್ಮ ಪಕ್ಷದ ನೀತಿಯನ್ನು ಅನುಸರಿಸಿಲ್ಲ.

ಕಳೆದ ಸಾಮಾನ್ಯ ಚುನಾವಣೆಗಳಲ್ಲಿ ದೇಶದಲ್ಲೆಲ್ಲ ಅತ್ಯಧಿಕ ಮತಗಳನ್ನು ಪಡೆದು ಸಂಸತ್ ಸದಸ್ಯರಾದ ಗೌರವವನ್ನು ಪಡೆದಿರುವ ಶ್ರೀ ಡಾಂಗೆ ಅವರು ಸ್ವಪಕ್ಷಕ್ಕಿಂತಲೂ ಸ್ವದೇಶ ರಕ್ಷಣೆಗೆ ವಿಶೇಷ ಲಕ್ಷ್ಯ ಪೂರೈಸಿದಂತೆ ಕಾಣುತ್ತದೆ ಶ್ರೀ ಡಾಂಗೆಯವರು ದೃಢತೆಯಲ್ಲಿ ತನ್ನ ಸಹಚರರಲ್ಲಿ ಪ್ರಸಿದ್ಧರಾಗಿದ್ದಾರೆ. ಆದರೂ ಮಾನವೋಚಿತವಾದ ಕೆಲವೊಂದು ದುರ್ಬಲತೆಗಳೂ ಅವರಲ್ಲಿ ಇವೆ. ದಿಲ್ಲಿಯಲ್ಲಿ ಅವರ ವಾಸಸ್ಥಾನದಲ್ಲಿ ಒಬ್ಬ ಅಜ್ಞಾತ ವ್ಯಕ್ತಿ ಅವರ ಕಿಸೆಯಿಂದ ಮುನ್ನೂರು ರೂಪಾಯಿಗಳನ್ನು ಹಾರಿಸಿಕೊಂಡು ಹೋದಾಗಲೂ ಅವರದನ್ನು ತಿಳಿದುಕೊಳ್ಳದಿರುವಾಗ ನಮಗೆ ಈ ದುರ್ಬಲತೆಯ ಅರಿವಾಗುತ್ತದೆ

ಶ್ರೀ ಶ್ರೀಪಾದ ಅಮೃತ ಡಾಂಗೆ ಅವರು ಒಂದು ವಿಶಿಷ್ಟ ರೀತಿಯಲ್ಲಿಯೇ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ರಾಷ್ಟ್ರೀಯತೆಯ ಭಾವನೆಯನ್ನಿಟ್ಟುಕೊಂಡೇ ಅವರು ರಾಜಕೀಯ ರಂಗವನ್ನು ಸೇರಿದರು. ೧೯೦೦ರಲ್ಲಿ ಜನಿಸಿದ ಇವರು ಲೋಕಮಾನ್ಯ ತಿಲಕರನ್ನು ಮೆಚ್ಚಿ ಅವರು ಕೈಗೊಂಡಿದ್ದ ಸ್ವರಾಜ್ಯ ಆಂದೋಲನದಲ್ಲಿ ಭಾಗವಹಿಸಿದರು. ಆ ಸಮಯ ಅವರ ಪ್ರಾಯ ಕೇವಲ ೧೯ ವರ್ಷಗಳಾಗಿತ್ತು. ಆಗ, ಅವಕಾಶ ಪ್ರಾಪ್ತರಾದ ಸರಕಾರಿ ಅಧಿಕಾರಿಗಳು ಈ ಯುವಕನ ರಾಜನೀತಿಕ ಗತಿಯ ಬಗ್ಗೆ ಸಂದೇಹ ವ್ಯಕ್ತಪಡಿಸುತಿದ್ದರು ಏಕೆಂದರೆ, ಅವರು ಕರ್ಮದಿಂದ ಸನ್ಯಾಸ ತೆಗೆದುಕೊಂಡ ಆ ಅಧಿಕಾರಿಗಳೇ ರಾಜನೀತಿಯಲ್ಲಿ ಅಧಿಕಾರಿಗಳಾಗಲು ಅರ್ಹರೆಂದು ತಿಳಿದುಕೊಂಡಿದ್ದರು.

ಪಶ್ಚಿಮ ಬಂಗಾಳದ ಕಮ್ಯುನಿಸ್ಟರು ಚೀನವನ್ನು ಆಕ್ರಮಣಕ ರಾಷ್ಟ್ರವೆಂದು ಶ್ರೀ ಡಾಂಗೆಯವರು ಹೇಳಿದುದಕ್ಕೆ ತಕರಾರೆ [illegible] ಪಕ್ಷದ ಅನುಶಾಸನದ ಕಾರ್ಯಕ್ರಮವನ್ನು ಕೈಗೊಳ್ಳುವ ಮಾತನ್ನು ಎತ್ತಿಹಿಡಿದಿದ್ದಾರೆ. ಶ್ರೀ ಡಾಂಗೆಯವರು ಅನುಶಾಸನವನ್ನು ಯಾವುದಕ್ಕಿಂತಲೂ ಕಡಿಮೆಯೆಂದು ತಿಳಿಯಲಾರರೆಂದು ಅವರಿಗೆ ಪ್ರಾಯಃ ತಿಳಿದಿರಲಾರದು. ೧೯೪೦ರಲ್ಲಿ ಒಮ್ಮೆ ಬೊಂಬಾಯಿಯ ಕಮ್ಯುನಿಸ್ಟ್ ಪಕ್ಷವು ಹತ್ತಿ ನೂಲಿನ ಗಿರಣಿಗಳ ಹರತಾಳ ನಡೆಸಲು ನಿರ್ಧರಿಸಿತ್ತು. ಆ ಸಮಯ ಶ್ರೀ ಡಾಂಗೆಯವರು ಹರತಾಳಕ್ಕೆ ವಿರುದ್ಧವಾಗಿದ್ದರು. ಆದರೆ, ಅವರು ತಮ್ಮ ಪಕ್ಷದ ಆದೇಶಕ್ಕೆ ತಲೆಬಾಗಿ ಹರತಾಳದ ವ್ಯವಸ್ಥೆಯನ್ನು ಮುಂದುವರಿಸಿದರು.

೧೯೨೪ರಲ್ಲಿ ಕಾನಪುರ ವಂಚನೆಯ ಮೊಕದ್ದಮೆಯಲ್ಲಿ ಇವರನ್ನು ಕೈದು ಮಾಡಲಾಯಿತು. ಇವರೊಡನೆ ಶೌಕತ್ ಉಸ್ಮಾನೀ, ಮುಜಫ್ಫರ್ ಅಹಮದ್ ಮತ್ತು ದಾಸಗುಪ್ತರು ಇದ್ದರು. ಜೇಲಿನಿಂದ ಹೊರಗೆ ಬಂದ ಮೇಲೆ ಇವರು ಮಜೂರ ಆಂದೋಲನದಲ್ಲಿ ಸೇರಿ ಹೋದರು. ೧೯೨೮ರಲ್ಲಿ ಮುಂಬಯಿಯಲ್ಲಿ ಗಿರಣಿ ಕೆಲಸಗಾರರ ಯೂನಿಯನನ್ನು ಸ್ಥಾಪಿಸಿದರು. ಶ್ರಮಿಕ ಕ್ಷೇತ್ರದಲ್ಲಿ ಪಕ್ಷೀಯ ರಾಜನೀತಿ ಸುಳಿಯುವುದಕ್ಕೆ ಅಂದಿನಿಂದಲೇ ಪ್ರಾರಂಭವಾಯಿತು.

ಈ ರೀತಿಯಾಗಿ ಶ್ರೀ ಡಾಂಗೆಯವರು ತಮ್ಮ ೬೦ ವರ್ಷದ ಜೀವನದಲ್ಲಿ ಅನೇಕ ಮಹತ್ವಪೂರ್ಣ ಕೆಲಸಮಾಡಿದ್ದಾರೆ. ಇಂದು ಚೀನಾ - ಭಾರತ ವಿವಾದದ ಬಗ್ಗೆ ಅವರಲ್ಲಿ ಎದ್ದಿರುವ ಭಾವನೆಯು ಅವರ ಪ್ರಾರಂಭಕಾಲದ ರಾಷ್ಟ್ರೀಯತೆಯ ಪ್ರಭಾವವೆಂದು ಹೇಳಬಹುದು. ಈ ಬಾರಿಯೂ ಅವರು ಪಕ್ಷದ ಆದೇಶಕ್ಕೆ ಮಣಿದು ತಲೆತಗ್ಗಿಸದೆ ಹೋದರೆ, ಕಮ್ಯುನಿಸ್ಟ ಪಕ್ಷದಲ್ಲಿ ಒಂದು ದೊಡ್ಡ ಹೋರಾಟವೇ ನಡೆಯಬಹುದು ಭಾರತ – ಚೀನಾ ವಿವಾದವಂತೆಯೇ ಈ ವಿವಾದವೂ ಬೆಳೆಯಬಹುದು ಇದರ ಪರಿಣಾಮ ಕೇರಳದಲ್ಲಿ ಸದ್ಯವೇ ನಡೆಯಲಿರುವ ಚುನಾವಣೆಗಳ ಮೇಲೆಯೂ ಬೀಳಬಹುದು.

ರಾಜಕೀಯ

(೧ನೇ ಪುಟದಿಂದ)

ಸ್ತಾನದೊಡನೆ ಪರಸ್ಪರ ರಕ್ಷಣಾ ಒಪ್ಪಂದವೊಂದನ್ನು ಮಾಡಿಕೊಂಡು, ಚೀನೀಯರನ್ನು ಹೊರದಬ್ಬಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಪಾಕಿಸ್ತಾನದೊಡನೆ ಒಪ್ಪಂದ ಮಾಡುವುದು, ಬಿಡುವುದ ವಿಷಯ ಬೇರೆ; ಆದರೆ ಚೀನಾದ ಆಕ್ರಮಣವನ್ನು ಕೊನೆಗೊಳಿಸುವುದು ಅತ್ಯವಶ್ಯ. ನಮ್ಮ ಭದ್ರತೆಯನ್ನು ಮಾಡಲ ನಮ್ಮಲ್ಲಿ ಶಕ್ತಿಯಿದೆ ಎಂದು ಡಂಗುರ ಸಾರುತ್ತ ಕುಳಿತರೆ ಪ್ರಯೋಜನವಿಲ್ಲ ಪಂಚಶೀಲವನ್ನು ಒಪ್ಪಿ ಈಗ ಅದಕ್ಕೆ ವ್ಯತಿರಿಕ್ತವಾಗಿ ನಡೆದಿರುವ ಈ ಚೀನಾವನ್ನು ಈಗಿಂದೀಗಲೇ ಹಿಮ್ಮೆಟ್ಟಿಸದಿದ್ದರೆ, ಕ್ರಮೇಣ ಅವರು ಮತ್ತು ಬಲಶಾಲಿಗಳಾಗುತ್ತ ಹೋಗುವುದರಿಂದ ನಮಗೇನೇ ಅದರಿಂದ ನಷ್ಟ.

ಚೀನಕ್ಕೆ ಅತಿಸಿಕಟವಾದ ಸ್ನೇಹಿತ ರಾಷ್ಟ್ರವೆಂದರೆ, ಅದರ ಅಣ್ಣ ರಶ್ಯ. ಈ ಚೀನವು ರಶ್ಯದ ಮಾತನ್ನಾದರೂ ಒಪ್ಪಿಕೊಳ್ಳುವಷ್ಟು ಉದಾರತೆ ಅದಕ್ಕಿದೆ ಎಂದು ಹೇಳುವುದು ಪ್ರಯಾಸವಾಗಿರುವಾಗ. ಚೀನವು ಶಾಂತಿ ಮಾರ್ಗದಲ್ಲಿಯೇ ಆಕ್ರಮಣವನ್ನು ಹಿಂತೆಗೆಯುವುದೆಂದು ಬೇರೆ ಯಾರೂ ಹೇಳಲಾರರು. ಚೀನ-ಭಾರತಗಳು ತಂತಮ್ಮ ವಾದವನ್ನು ಇನ್ನೂ ಬೆಳಸುತ್ತ ಹೋಗುವಾಗ, ಬುದ್ಧಿವಂತ ಕಮ್ಯುನಿಸ್ಟರು ತಮ್ಮ ಶಕ್ತಿಯನ್ನು ಸಂವರ್ಧಿಸಿಕೊಂಡೇ ಇರುವರು. ನಾವು ಮಾತ್ರ ಶಾಂತಿಮಂತ್ರ ಪಠಿಸುತ್ತ ಕೂರುತ್ತೇವೆ. ಹೀಗಾದರೆ, ಇದಕ್ಕ ಕೊನೆಯಲ್ಲಿ? ಆದುದರಿಂದ ಮೊ|| ಜ|| ಕಾರ್ಯಪ್ಪನವರು ಹೇಳಿದ ಮಾತು ಯಥೋಚಿತವಾಗಿದೆ. ವಿದೇಶಗಳಲ್ಲಿ ಪ್ರಶಂಸೆಗೀಡಾದ ನಮ್ಮ ಪಂಚಶೀಲ ಸ್ವದೇಶದಲ್ಲಿ ಮಾತ್ರ ಸಂಪೂರ್ಣ ಅಸಫಲಗೊಂಡುದಕ್ಕೆ ಟೀಕೆಗೆ ಗುರಿಯಾದರೆ, ಆಶ್ಚರ್ಯಪಡಬೇಕಾಗಿಲ್ಲ ಚೀನೀಯ ಆಕ್ರಮಣವನ್ನು ನಮ್ಮ ಸರ್ವಶಕ್ತಿಯನ್ನು ಪ್ರದರ್ಶಿಸಿ ಹಿಮ್ಮೆಟ್ಟಿಸಲೇ ಬೇಕು

ಈಗ ಚೀನದ ಆಕ್ರಮಣವನ್ನು ಕಂಡೂ ಕಂಡೂ ನಾವು ಕಣ್ಮುಚ್ಚಿ ಕೈಕಟ್ಟಿ ಕುಳಿತರೆ, ಅದರಿಂದ ಭಾರತದ ಕಲ್ಯಾಣವೆಂದಿಗೂ ಆಗಲಾರದು. ಕಾಶ್ಮೀರವನ್ನು ಅಂದು ಪಾಕಿಸ್ತಾನ ಆಕ್ರಮಿಸಿದಾಗ, ನಾವು ಶಾಂತ ಧೋರಣೆ ವಹಿಸಿದ್ದರಿಂದಾಗಿ, ಇಂದಿಗೂ ಅದು ಪಾಕಿಸ್ತಾನಿಗಳ ಚತುರಂಗಕ್ಕೊಂದು ಮಣೆಯಾಗಿ ಉಳಿದಿರುವಂತೆ ಭಾರತದ ಸೀಮಾ ಪ್ರದೇಶಗಳೂ ಶಾಶ್ವತವಾಗಿ ಚೀನದ ಹಸ್ತಗತವಾಗುವುದೆಂಬುದು ನಿರ್ವಿವಾದ. ಹೀಗೆ ಮಾಡಿದರೆ, ನಮ್ಮ ಬುದ್ಧಿವಂತಿಗೆಯೇನು ತೋರಿಸಿದಂತಾಯಿತು?

—ಗೋ

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ		
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೇ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರ್ಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಿನ್ದಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಚಿಗುರು	0	10
36	ಸಣ್ಣ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮಸಂಕಟ	0	6
39	ಮದುವೆ ಸೀರೆ	1	0

ರೂ38.6.0ಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ 30.0.0ಕ್ಕೆ ಕೊಡಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ

2
ಯೋಜನೆಗಳು

ಪಿಗ್ಮಿ
ದೈನಿಕ ಉಳಿತಾಯ
(೫ ನಯೇ ಪೈಸೆಯಿಂದ ಮೇಲ್ಪಟ್ಟು)

ಕ್ಯುಮ್ಯುಲೆಟಿವ್
ಮಾಸಿಕ ಉಳಿತಾಯ
(೫ ರೂಪಾಯಿಯ ಗುಣಕಗಳಲ್ಲಿ)

ವಿವರಗಳನ್ನು ತಿಳಿಯಲು ಬೇಂಕಿನ ಶಾಖೆಗೆ ಬನ್ನಿರಿ ಅಥವಾ ಬರೆಯಿರಿ

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

Printed & Published by K. H. Shetty at the Navayuga Press, Udipi, S. India,

ವಾ ಚಂದಾ ರೂ ೬-೭೫

ಬಿಡಿ 13 ನ ಪೈಸೆ

Vol. 39 No 12
ವರುಷ ೩೯. ವಾರ ೧೨

19-11-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಪ್ರಚಲಿತ ಪ್ರಸಂಗ

ಜವಾಹರಲಾಲ ನೆಹರೂ ಜನತೆಯ ಪ್ರೀತಿ ವಿಶ್ವಾಸ ಗಳಿಸಿದ್ದಾರೆ

೭೧ನೆಯ ಅರುಣೋದಯದಲ್ಲಿ ಭಾರತೀಯರು ಅವರಿಗೆ ತಮ್ಮ ಶುಭಕಾಮನೆಗಳನ್ನು ನಿರ್ವಂಚನೆಯಿಂದ ಸಲ್ಲಿಸುತ್ತಾರೆ

ಸ್ವತಂತ್ರ ಭಾರತದ ನಿರ್ಮಾತೃವೆಂಬ ಹೆಸರಿಗೆ ಪಾತ್ರರಾದ ಶ್ರೀ ನೆಹರು ಅವರು ತಮ್ಮ ಎಪ್ಪತ್ತು ವರ್ಷಗಳ ಜೀವನವನ್ನು ಯಶಸ್ವಿಯಾಗಿ ಮುಗಿಸಿದರು. ವಯಸ್ಸು ಎಪ್ಪತ್ತಾದರೂ ಜವಾಹರಲಾಲರ ಹುಮ್ಮಸ್ಸು ಮಾತ್ರ ಇಪ್ಪತ್ತು ವರ್ಷದ ನವಯುವಕನದ್ದು ಎಂದು ಯಾರಾದರೂ ಹೇಳಬಹುದು. ಭಾರತದಲ್ಲಿಯಷ್ಟೆ ಅಲ್ಲ ಅಖಂಡ ವಿಶ್ವದಲ್ಲಿ ಎಲ್ಲ ವರ್ಣದ ಎಲ್ಲ ಅಭಿಪ್ರಾಯದ ಎಲ್ಲ ರಾಜ್ಯಗಳ ಎಲ್ಲರಿಗೂ ಬೇಕಾದವರಾಗಿದ್ದು ವಿಶ್ವವಿಖ್ಯಾತರಾಗಿರುವ ಮಹಾ ಪುರುಷರಿವರೆಂದು ಹೇಳಲು ಯಾವ ಸಂಕೋಚವೂ ಇಲ್ಲ.

ಪಾಶ್ಚಾತ್ಯದಾಸ್ಯ ಶೃಂಖಲೆಯಿಂದ ಮುಕ್ತವಾದ ಭಾರತವನ್ನು, ಅದರ ಮೂವತ್ತೈದು ಕೋಟಿ ಜನತೆಯನ್ನು ಸತ್ಪಂಥದಲ್ಲಿ ಮುನ್ನಡೆಸುತ್ತಿರುವ ಶ್ರೇಯಸ್ಸು, ವಿಶ್ವದ ನಕ್ಷೆಯಲ್ಲಿ ಭಾರತವು ಗಣನೀಯ ಮಹತ್ವಪೂರ್ಣ ಸ್ಥಾನವನ್ನು ಪಡೆಯುವಂತೆ ಮಾಡಿದ ಯೋಜನೆಗಳ ಯಶಸ್ಸು ಹಾಗೂ ಭಾರತೀಯರೆಲ್ಲರ ಪ್ರೇಯಸ್ಸು ಸೇರಬೇಕಾದ ಒಂದು ಸ್ಥಾನವಿದ್ದರೆ, ಅದು ಶ್ರೀ ಜವಾಹರಲಾಲರಲ್ಲಿ ಮಾತ್ರ. ಮಹಾತ್ಮಾಗಾಂಧಿಯವರ ರಾಜಕೀಯ ನಿಕಟಶಿಷ್ಯರಾದ ಶ್ರೀ ನೆಹರು ಸ್ವಾತಂತ್ರ್ಯ ಪ್ರಾಪ್ತಿಯಾಗಳಿಗೆಯಿಂದ ಇಂದಿನವರೆಗೂ ಮಹಾ ಪ್ರಧಾನಿಯಾಗಿ ಭಾರತೀಯರ ನಾಯಕತ್ವವನ್ನು ನಿರ್ವಹಿಸುತ್ತಿರುವರೆಂದಾಗ, ಅವರ ಬಗ್ಗೆ ಭಾರತೀಯರು ಯಾವತರದ ಪ್ರೀತ್ಯಾದರಗಳನ್ನೂ ಗೌರವಾಭಿಮಾನಗಳನ್ನೂ ಪ್ರದರ್ಶಿಸುತ್ತಿರುವರೆಂದು ಬೇರೆ ಹೇಳಬೇಕಾಗಿಲ್ಲ. ನೆಹರು ಕೂಡ ಅಷ್ಟೆ ಭಾರತೀಯರೆಲ್ಲರ ಉತ್ಥಾನಕ್ಕಾಗಿ, ಸಮೃದ್ಧ ಭಾರತದ ನಿರ್ಮಾಣಕ್ಕಾಗಿ ಸುಭಿಕ್ಷೆಯ ರಾಮರಾಜ್ಯ ಸ್ಥಾಪನೆಗಾಗಿ ಅಹರ್ನಿಶಿ ದುಡಿಯುತ್ತಿರುವ ನೆಹರೂರವರ ಹೆಸರೇ ಅಮೃತಮಯವೆನಿಸಿದೆ.

ವಿಶ್ವ ಬಾಂಧವ್ಯದ ತತ್ತ್ವವನ್ನು ಮುಂದಿಟ್ಟು, ಸಮರೊಡನೆ ಸಮನಾಗಿ ತಲೆತಗ್ಗಿಸದ ಎದೆಗಾರಿಕೆಯಿಂದ ನಿಲ್ಲುವ ಭಾರತದ ವಿದೇಶನೀತಿಯು ಜವಾಹರರು ವಿಶ್ವಕ್ಕಿತ್ತ ಅಪೂರ್ವ ಕಾಣಿಕೆಯಾಗಿದೆ. ಯಾವ ಸೈನಿಕ ಬಣಗಳಿಗೂ ಬಲಿಬೀಳದೆ ಸ್ವತಂತ್ರವಾಗಿಯೇ ಒಂದು ಅನಭಿವೃದ್ಧ ರಾಷ್ಟ್ರ ಈ ಸ್ಫುಟ್ನಿಕ್ ಯುಗದಲ್ಲಿಯೂ ತಲೆಯೆತ್ತಿ ನಿಲ್ಲುವುದು ಸಾಧ್ಯವೆಂದು ವಿಶ್ವಕ್ಕೆ ತೋರಿಸಿಕೊಟ್ಟ ಕೀರ್ತಿ ಶ್ರೀ ನೆಹರು ಅವರಿಗೆ ಸೇರಿದುದು. ವಿಶ್ವವಂದ್ಯ ಮಹಾತ್ಮಾ ಗಾಂಧಿಯವರ ತತ್ತ್ವಗಳನ್ನು ಸಾಧ್ಯವಾದಷ್ಟು ಹೊಂದಿಸಿಕೊಂಡು ಆಧುನಿಕ ಭಾರತದ ಪುನಾರಚನೆಗಾಗಿ ನಿಸ್ವಾರ್ಥ ದೃಷ್ಟಿಯಿಂದ ದುಡಿಯುವ ವ್ಯಕ್ತಿ, ಜನಸೇವಕ ಶ್ರೀ ನೆಹರು. ಎಂತಲೇ ನೆಹರು ಎಂದರೆ ಇಂದು ಕೇವಲ ಒರ್ವ ಭಾರತೀಯನಾಗಿ, ಭಾರತೀಯ ಪ್ರಧಾನಿಯಾಗಿ ಉಳಿದಿಲ್ಲ, ಸ್ವಾತಂತ್ರ್ಯ ತತ್ತ್ವದ ಪ್ರತಿಪಾದಕರಾಗಿ, ವಿಶ್ವಮಾನ್ಯರಾಗಿ ರಾರಾಜಿಸುತ್ತಿದ್ದಾರೆ.

ಸ್ವತಂತ್ರ ಭಾರತದ ನಿರ್ಮಾಣವಾದಂದಿನಿಂದಲೂ ಭಾರತೀಯರಿಗೆ ಶ್ರೀ ನೆಹರು ಅಂತಹ ಒರ್ವ ನಾಯಕನು ದೊರೆತಿರುವದು ಸಹಜವಾಗಿ ಇಷ್ಟೊಂದು ದೀರ್ಘ ಕಾಲ ಒರ್ವನೇ ನಾಯಕನು ಜನಪ್ರೀತಿ ವಿಶ್ವಾಸಗಳಿಸಿದದನ್ನು ನಾವು ಬೇರೆಲ್ಲಿಯೂ ಕಾಣಲಾರೆವು. ಇನ್ನೂ ಹಲವು ವರ್ಷ ಅವರು ನಮ್ಮ ನಾಯಕರಾಗಿಯೂ ಉಳಿಯುವರು.

ಪ್ರಧಾನಿ ನೆಹರೂ ಅವರ ವಿಚಾರಧಾರೆಯನ್ನು ಇಂದು ಎಲ್ಲ ಭಾರತೀಯರೂ ಒಪ್ಪುವುದಿಲ್ಲವೆಂಬುದನ್ನು ನಾವು ಈ ಸಂದರ್ಭದಲ್ಲಿ ಮರೆಯಬಾರದು. ಕಾಂಗ್ರೆಸ್ಸು ಪಕ್ಷಕ್ಕೆ ಸಮಾಜವಾದದ ಗಾಳಿಯನ್ನು ಸೋಂಕಿಸಿದವರೂ, ಅದು ಸಮಾಜವಾದ ಮಾದರಿಯ ಕಲ್ಯಾಣ ರಾಷ್ಟ್ರವನ್ನು ಕಟ್ಟಲು ನಿರ್ಧರಿಸುವಂತೆ ಪ್ರೇರಕರಾದವರೂ ಶ್ರೀ ನೆಹರು. ಹಿಂದೂಕೋಡು ಮಸೂದೆ, ಭೂಸುಧಾರಣಾ ಮಸೂದೆಗಳ ಆದ್ಯ ಪುರಸ್ಕರ್ತರೂ ಇವರೇ. ಸಹಕಾರಿ ಪದ್ಧತಿಯನ್ನು ವ್ಯವಸಾಯ ಕ್ಷೇತ್ರದಲ್ಲಿಯೂ ವ್ಯವಸ್ಥಿತಗೊಳಿಸಬೇಕೆಂಬ ವಾದಕ್ಕೆ ಬಲಕೊಡುವವರೂ ಇವರೇ. ಟಿಬೇಟಿನ ಅನಭಿಷಿಕ್ತ ದೊರೆ ಶ್ರೀ ದಲಾಯ್ ಲಾಮಾರಿಗೆ ಭಾರತದಲ್ಲಿ ಆಶ್ರಯವಿತ್ತವರೂ, ವಿಶ್ವಸಂಸ್ಥೆಯಲ್ಲಿ ಟಿಬೇಟ ಪ್ರಶ್ನೆ ಎತ್ತಲು ಉತ್ಸಾಹ ತೋರಿಸದೆ ಇದ್ದವರೂ ಶ್ರೀ ಜವಾಹರರೇ. ಚೀನವು ಭಾರತದ ಉತ್ತರದ ಸೀಮಾಪ್ರದೇಶಗಳಲ್ಲಿ ಆಕ್ರಮಣವನ್ನು ಮಾಡುತ್ತಿರುವಾಗಲೇ ಸಂಯುಕ್ತ ರಾಷ್ಟ್ರಸಂಸ್ಥೆಯಲ್ಲಿ ಅದಕ್ಕೆ ಪ್ರಾತಿನಿಧ್ಯ ದೊರೆಯಬೇಕೆಂಬ ವಾದಕ್ಕೆ ಪುನಃ ಜೀವಕಳೆಯಿತ್ತವರೇ ನಮ್ಮ ಪ್ರಧಾನಿವರ್ಯರಾದ ಶ್ರೀ ಜವಾಹರಲಾಲ ನೆಹರೂ ಅವರೇ.



ಶ್ರೀ ಜವಾಹರಲಾಲರ ಇವೇ ಮೊದಲಾದ ನಡವಳಿಕೆಗಳಿಂದಾಗಿ ಭಾರತದ ಹೊರಗೆ ಮಾತ್ರವಲ್ಲ ಒಳಗೂ ಅವರನ್ನು ಮೆಚ್ಚದ ಪಂಗಡಗಳಿವೆ. ಭಾರತೀಯ ನಿವೃತ್ತ ಗವರ್ನರ ಜನರಲ್ ಶ್ರೀ ರಾಜಗೋಪಾಲಾಚಾರಿಯವರು ನೆಹರೂರವರ ಭೂಸುಧಾರಣೆಯ, ಸಹಕಾರಿ ವ್ಯವಸಾಯದ ಹಾಗೂ ಧಾರ್ಮಿಕ ಸಂಬಂಧ ದೋರಣೆಗೆ ವಿರುದ್ಧವಾಗಿ ಸ್ವತಂತ್ರ ಪಕ್ಷವನ್ನೇ ಕಟ್ಟಿಬಿಟ್ಟರು. ನೆಹರು ಮತ್ತು ರಾಜಾಜಿಯವರ ಪರಸ್ಪರ ವಾಗ್ವಾದಗಳು ಪತ್ರಿಕೆಯವರ ಹೊಟ್ಟೆ ಹೊರೆಯುವುದು ಮಾತ್ರವಲ್ಲದೇ ವಾಚಕರಲ್ಲಿ ಕುತೂಹಲವನ್ನೂ ಹುಟ್ಟಿಸುವುವು. ಪ್ರಜಾಸಮಾಜವಾದಿ ಪಕ್ಷದ ನಾಯಕರು ಭಾರತದ ನಾಯಕರಾಗಿ ಶ್ರೀ ನೆಹರು ಅವರೇ ಉಳಿಯಬೇಕೆಂದು ಒಮ್ಮತದಿಂದ ಅಭಿಪ್ರಾಯಪಟ್ಟಿದ್ದಾರೆ. ಭಾರತೀಯ ಕಮ್ಯುನಿಸ್ಟರು ಕಾಂಗ್ರೆಸ್ಸನ್ನು, ಅದರ ಕಾರ್ಯಕಲಾಪಗಳನ್ನು ನಿಂದಿಸಿ, ಬಂಡವಳಶಾಹಿ ಪಕ್ಷವೆಂದು ಹೆ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ - ಮಂಗಳೂರು—3

ಸ್ಥಾಪನೆ - 1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ	5	ತಿಂಗಳ ವರೆಗೆ	4¼%
6 ,,	12	,,	4½%
13 ,,	24	,,	4¾%

ರೂಪಾಯಿ 10,000/ ಮ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ.

ಕಥಾವಿಹಾರ

ಸೈತಾನನ ಪಿಶಾಚ ಕರ್ಮ

ಶ್ರಮಪಟ್ಟು ಬುಟ್ಟಿ ಹೆಣೆದು ಜಾತ್ರೆಗೆ ಮಾರಹೋದರೆ, ಬುಟ್ಟಿಗಳೆಲ್ಲಾ ಪರಾಧೀನವಾದರೂ ಒಂದು ಕಾಸು ಸಂಪಾದನೆಯಾಗಲಿಲ್ಲ ವೆಂದರೆ, ವಿಸ್ಮಯಪಡುವಿರಿ

ನಾವು ಕಡು ಬಡವರು ಹಣವನ್ನು ನಾವು ಕಾಣುತ್ತಿದ್ದುದೇ ಅಪರೂಪ ಮಾರುವಂತಹುದೇನೂ ನಮ್ಮ ಬಳಿ ಇರಲಿಲ್ಲ ನಮ್ಮ ಪರಿವಾರದವರೂ ಯಾರೂ ಯಾವ ಹಣವನ್ನೂ ಸಂಪಾದಿಸುತ್ತಿರಲಿಲ್ಲ ಮಕ್ಕಳಲ್ಲೊಬ್ಬರು ಯಾರಾದರೂ ಕಾಹಿಲೆಯಾದಲ್ಲಿ, ತಾಯಿಯು ನಮ್ಮ ಎರಡು ಕೋಳಿಗಳನ್ನು ಹುಡುಕಲು ಕಣಜಕ್ಕೋ, ಅಥವಾ ದನದ ಕೊಟ್ಟಿಗೆಯೊಳಕ್ಕೋ ಹೋಗಿ, ಕೋಳಿಯೇನಾದರೂ ತತ್ತಿ ಹಾಕಿದೆಯೋ ಎಂದು ನೋಡುತ್ತಿದ್ದಳು ಮೊಟ್ಟೆಯೇನಾದರೂ ಅಕಸ್ಮಾತ್ ಸಿಕ್ಕಿದಲ್ಲಿ ಅದನ್ನು ಆಕೆಯು ಅಡಿಗೆ ಮನೆಗೆ ವಾಪಸು ತರುತ್ತಿದ್ದಳು. ಮಕ್ಕಳೆಲ್ಲರೂ ಆಕೆಯ ಬಳಿಗೆ ಬಂದು ಸುತ್ತುಗಟ್ಟಿಕೊಂಡು, ದೂರದಿಂದಲೇ ಅದನ್ನು ಕಂಡು ಆನಂದಿಸುತ್ತಿದ್ದೆವು ಅದಕ್ಕೆ ಬಂದ ಹಣದಿಂದ ಸ್ವಲ್ಪ ಸಕ್ಕರೆಯನ್ನೂ 'ಚಾ' ಪುಡಿಯನ್ನೂ ತಂದು, ಸ್ವಲ್ಪ 'ಚಾ' ಮಾಡಿ ರೋಗಗ್ರಸ್ತ ಮಗುವಿಗೆ ಕೊಡುತ್ತಿದ್ದಳು ಮಿಕ್ಕವರು ನಾವೆಲ್ಲರೂ ಸುತ್ತಲೂ ಸುಳಿದಾಡುತ್ತ, ಉಗುಳು ನುಂಗುತ್ತ, ಬಟ್ಟಲಿನಿಂದ ಮೇಲಕ್ಕೆ ಬರುತ್ತಿದ್ದ ಆವಿಯನ್ನು ನೋಡುತ್ತಿದ್ದೆವು. ಸಿಹಿ 'ಚಾ' ಪಾನೀಯದ ರುಚಿಯನ್ನು ಸವಿಯುವ ಅವಕಾಶಕ್ಕಾಗಿ ನಾನೂ ಕಾಹಿಲೆ ಬೀಳಬೇಕೆಂದು ಕೆಲವು ವೇಳೆ ಬಯಸುತ್ತಿದ್ದೆನು. ಕೆಲವೊಮ್ಮೆ ನಾನು ಬೆಳೆಯುತ್ತಿದ್ದೇನೆಂದೂ, ಹಣವನ್ನು— ತುಂಬಾ ಹಣವನ್ನು — ಸಂಪಾದಿಸುತ್ತಿದ್ದೇನೆಂದೂ, ಕನಸು ಕಾಣುತ್ತಿದ್ದೆನು ಆಗ ಒಂದು ಚೀಲದಷ್ಟು ಸಕ್ಕರೆಯನ್ನು ನಾನು ಕೊಂಡು ತಂದು, ಮನೆಯಲ್ಲಿ ಎಲ್ಲರೂ—ರೋಗಿಷ್ಠರೂ ಮತ್ತು ನೀರೋಗಿಗಳೂ ಕೂಡ— 'ಚಾ' ಕುಡಿಯಲು ಸಾಧ್ಯವಾದಂತೆಯೂ ಕನಸು ಬರುತ್ತಿತ್ತು ನಾವು ಸ್ವಲ್ಪ ಹಣವನ್ನು ಹೇಗೆ ಗಳಿಸಬಹುದೆಂಬ ವಿಷಯದ ಕುರಿತು, ನಾನು ತಾಯಿಯ ಸಂಗಡ ಅನೇಕ ಬಾರಿ ಮಾತನಾಡಿದೆನು ನನಗೆ ಹನ್ನೊಂದು ವರ್ಷ ವಯಸ್ಸಾಗಿದ್ದಾಗ ಒಂದು ದಿನ ಬೆಳಿಗ್ಗೆ ತಾಯಿಯೊಡನೆ—

"ಅಮ್ಮಾ! ನಾನು ಏನ ಯೋಚನೆ ಮಾಡಿದ್ದೇನೆ ಗೊತ್ತೆ?"— ಎಂದು ಕೇಳಿದೆನು

"ಏನಪ್ಪ ಆ ಯೋಚನೆ?"—ಎಂದು ತಾಯಿ ಕೇಳಿದಳ.

"ನಾನು ಕೆಲವು ಬುಟ್ಟಿಗಳನ್ನು ಹೆಣೆದು ಮಾರಿದರೆ ನಿನಗೆ ಸ್ವಲ್ಪ ಹಣ ಸಿಕ್ಕುತ್ತದೆ' - ಎಂದು ನಾನು ಹೆಮ್ಮೆಯಿಂದ ಹೇಳಿದೆನು

ತಾಯಿಯು ನನ್ನ ತಲೆಯನ್ನು ನೇವರಿಸುತ್ತಾ, ನನ್ನ ಹಣೆಯನ್ನು ಮುದ್ದಿಸುತ್ತಾ ಇಂತೆಂದಳು.

'ಅದು ಒಳ್ಳೇ ಯೋಚನೆಯಪ್ಪ ಆದರೆ, ನಮಗೆ ಕಡ್ಡಿಗಳೆಲ್ಲಿ ಸಿಕ್ಕುತ್ತವೆ? ನಮ್ಮ ಸಣ್ಣ ಮೈದಾನದಲ್ಲಿಲ್ಲಾ ಮೆದು ಕಡ್ಡಿಯ ಪೊದೆಗಳಿಲ್ಲ.'

ಆದರೆ ನದಿಯ ದಂಡೆಯಲ್ಲಿ, ನಮ್ಮ ನೆರೆಯವರ ಮೈದಾನಗಳಲ್ಲಿ, ಮೆದು ಕಡ್ಡಿಯ ಪೊದೆಗಳಿದ್ದುವು. ಆದರೂ ಅವರು ಯಾರೂ ಅವುಗಳಿಂದ ಬುಟ್ಟಿ ಹೆಣೆಯುವ ಯೋಚನೆ ಮಾಡಿರಲಿಲ್ಲ ಬೆಟ್ಟಗಳಲ್ಲಿ ಕುರಿ ಮೇಯಿಸಿಕೊಂಡು ವಾಪಸು ಬಂದೊಡನೆಯೇ ಕಪ್ಪು ರೊಟ್ಟಿ ಮತ್ತು ಈರುಳ್ಳಿ ಸ್ವಲ್ಪ ತಿಂದುಕೊಂಡು ನಮ್ಮ ನೆರೆಹೊರೆಯವರ ಮೈದಾನಗಳಿಗೆ ಹೋಗುತ್ತಿದ್ದೆನು ಅಲ್ಲಿಯ ಹಳ್ಳಗಳಲ್ಲಿ ಆಡುವುದಕ್ಕಾಗಲೀ, ಅಥವಾ ಮೀನು ಹಿಡಿಯುವುದಕ್ಕಾಗಲೀ ಇತರ ಹುಡುಗರಂತೆ ನನಗೆ ಅವಕಾಶವಿರಲಿಲ್ಲ ನಾನು ಮೆದು ಕಡ್ಡಿಗಳನ್ನು ಕತ್ತರಿಸಿಕೊಳ್ಳುತ್ತಿದ್ದೆನು ಅವುಗಳನ್ನು ಮನೆಗೊಯ್ದು, 'ಪ್ಲಮ್' ಹಣ್ಣಿನ ಮರದ ನೆರಳಲ್ಲಿ ಕುಳಿತು ತೊಗಟೆ ಸುಲಿಯುತ್ತಿದ್ದೆನು ಆ ವೇಳೆ ಬಿಸಿಲಿನಲ್ಲಿ ಒಣಗಿಸಿ, ಮತ್ತೆ ನೀರಿನಲ್ಲಿ ನೆನೆಸಿಟ್ಟು ಮೆದುಗೊಳಿಸಿ, ಬುಟ್ಟಿಗಳನ್ನು ಹೆಣೆಯ ತೊಡಗುತ್ತಿದ್ದೆನು.

ಬಗೆ ಬಗೆಯ ಬುಟ್ಟಿಗಳನ್ನು ನಾನು ತಯಾರಿಸಿದೆನು ನಮ್ಮ ನೆರೆಹೊರೆಯ ಜನರು ದೊಡ್ಡ ಹೊಟ್ಟೆಯ ಬುಟ್ಟಿಗಳನ್ನು ತುಂಬಾ ಮೆಚ್ಚಿಕೊಂಡರು ಏಕೆಂದರೆ ಅವರು ತಮ್ಮ ಉಣ್ಣೆಯ ಚೆಂಡುಗಳನ್ನು ಹಾಕಿಡುವುದಕ್ಕೆ ಅವು ಅನುಕೂಲವಾಗಿದ್ದುವು ಶರತ್ಕಾಲದಲ್ಲಿ ಅವರು 'ಪ್ಲಮ್' ಹಣ್ಣುಗಳನ್ನು ಕಿತ್ತು ಈ ದೊಡ್ಡ ಬುಟ್ಟಿಗಳಲ್ಲಿಯೇ ತುಂಬಿಸಿಕೊಳ್ಳುತ್ತಿದ್ದರು. ನನಗೇನೋ ಈ ಬುಟ್ಟಿಗಳು ರುಚಿಸುತ್ತಿರಲಿಲ್ಲ ಹಳೆಯ ನಮೂನೆಯವೆಂದೆನಿಸುತ್ತಿತ್ತು ದೀರ್ಘ ಅಂಡ ಕಾರದ ತಳವನ್ನೂ ಮತ್ತು ಮುಚ್ಚಳ ಪಟ್ಟಿಯನ್ನೂ ಹೊಂದಿದ್ದ ಬುಟ್ಟಿಯೊಂದನ್ನು ನಾನು ತಯಾರಿಸಿದೆನು ತಾಯಿಯು ಅದನ್ನು ಎಲ್ಲ ಕಡೆಗಳಲ್ಲೂ ತಿರುಗಿಸಿ ನೋಡಿ, ಆಶ್ಚರ್ಯಪಟ್ಟಳು. ಈ ಬುಟ್ಟಿಯನ್ನೆತ್ತಿಕೊಂಡು, ಅದರ ತಾಳಿಕೆಯನ್ನು ಪರೀಕ್ಷಿಸಲು ಕೈಯಲ್ಲೊತ್ತಿದಳು. ತರುವಾಯ ಅದನ್ನು ಮೊಗಸಾಲೆಯ ಬಳಿಗೊಯ್ದು, ಬೆಳಕಿನಲ್ಲಿ ಮತ್ತೊಮ್ಮೆ ಚೆನ್ನಾಗಿ ನೋಡಿದಳು. ಪಟ್ಟಿಯ ಮೇಲೆ ಕೈಸವರುತ್ತ, ಬಣ್ಣದ ನಮೂನೆಯನ್ನು ದಿಟ್ಟಿಸಿ ನೋಡುತ್ತ, ತನ್ನ ತಲೆ ತಿರುಗಿಸಿ, ನಾಲಗೆ ಹೊರಸೂಸಿ, ತುಂಬುಗೆನ್ನೆಯಿಂದ ನನ್ನನ್ನಪ್ಪಿಕೊಂಡಳು ಆಕೆಯ ಬಿಸಿ ಕಣ್ಣೀರಿನಿಂದ ನನ್ನ ಕೆನ್ನೆಗಳು ತಪ್ತವಾದುವು. ತಾಯಿಯು ಸಂತಸದಿಂದ ಅಳುತ್ತಿದ್ದಳು ಇಂತಹ ನಿಪುಣನಾದ 'ಬುಟ್ಟಿ—ಮೇದ' ನಾನು ಹೇಗಾದೆ?

'ನನ್ನ ಪುಟ್ಟ 'ಬುಟ್ಟಿ–ಮೇದ' ನನ್ನ ಜಾಣ ಚಿಣ್ಣ' —ಎಂದಾಕೆ ಕೂಗಿದಳು

ಬುಟ್ಟಿಯನ್ನು ನಾವು ಮೊಗಸಾಲೆಯಲ್ಲಿ ತೂಗಹಾಕಿದೆವು ದಾರಿಹೋಕರೆಲ್ಲರೂ ಅದರ ಕಡೆ ನಿಂತು ನೋಡಿಯೇ ಮುಂದೆ ಸಾಗುತ್ತಿದ್ದರು

"ಸ್ವಾಮಿ, ಆ ಬುಟ್ಟಿಗಳನ್ನೆಲ್ಲ ಎಲ್ಲಿಂದ ತಂದಿರಿ?"—ಎಂದು ಮಹಿಳೆಯರು ತಾಯಿಯನ್ನು ಕೇಳುತ್ತಿದ್ದರು

"ನಿಮಗದು ಚೆನ್ನಾಗಿದೆಯೋ? ಅದು ಕೊನೆಯ ಕುಶಲ ಕೆಲಸ" –ಎನ್ನುತ್ತಿದ್ದಳಾಕೆ

ಬುಟ್ಟಿಯೊಂದನ್ನು ತೆಗೆದುಕೊಂಡು ನೆರೆಯ ಮಹಿಳೆಗೆ ಕೊಡುತ್ತಾ,—

'ಇದನ್ನೆತ್ತಿಕೊಂಡು ನೋಡಿ ಇದು ನಿಮಗೆ ಸರಿಹೋಗುತ್ತದೆಯೋ'—ಎಂದು ಹೇಳುತ್ತಿದ್ದಳು

ಆ ಮಹಿಳೆಯು ತನ್ನ ತೋಳನ್ನು ಹಿಡಿಕೆಯಲ್ಲಿ ತೂರಿಸಿ, ಅದನ್ನು ಹಿಂದು ಮುಂದು ತಿರುಗಿಸಿ ಚೆನ್ನಾಗಿ ನೋಡಿ, ಕೈಯಿಂದ ಮುಟ್ಟಿನೋಡುತ್ತಾ,—

"ಇದು ನನಗೆ ಸರಿಹೋಗುತ್ತೆ, ಅಲ್ಲವೆ?"—ಎನ್ನುತ್ತಿದ್ದಳು

'ಅದು ನಿಮಗೆ ಸರಿಹೋಗುತ್ತದೆ ತೆಗೆದುಕೊಂಡು ಹೋಗಿ ಇನ್ನೊಂದು ಮಾಡಿದರೆ ಅವನ ಕೈಯೇನೂ ನೋಯುವುದಿಲ್ಲ"

ಈ ಮಾತು ಕೇಳಿ ನೆರೆಯಾಕೆಯು ನಮ್ಮ ಕಡೆ ಸಂತಸದ ದೃಷ್ಟಿಬೀರಿ ನನ್ನನ್ನು ಆಶೀರ್ವದಿಸಿ ನನಗೆ ಆಯುರಾರೋಗ್ಯ ಸುಖಗಳನ್ನು ಬಯಸುತ್ತಾ, ದೊಡ್ಡವನಾಗಿ ಬೆಳೆದು ತುಂಬಾ ಸಂಪಾದಿಸಿ, ಒಳ್ಳೆಯ ಮಡದಿಯನ್ನು ಪಡೆದು, ನನಗೆ ಕರೆತರಬೇಕು ಇತ್ಯಾದಿಯಾಗಿ ಹಾರೈಸುತ್ತಿದ್ದರು ಮಹಿಳೆಯರು ತಾಯಿಗೆ ಒಂದು ಹಿಡಿ ಉಣ್ಣೆಯನ್ನು ಬಾಡಿಗೆ ಕೆಲವು ಒಣ 'ಪ್ಲಮ್' ಹಣ್ಣುಗಳನ್ನು ಅಥವಾ ಒಂದು ಬಟ್ಟಲು ಹರಿಕೆಯ ಕಾಳುಗಳನ್ನು ತಂದು ನನಗೆ ಸಂತ ನಿಕೋಲಾಸ್ ಪುಣ್ಯದಿನದಂದು ಹಬ್ಬದೂಟಕ್ಕಾಗಿ ಕೊಡುತ್ತಿದ್ದರು.

ಮಿಷೀತಸ್ಸಿ ಎಂಬಾಕೆಯಂತೂ ಇನ್ನೂ ಮುಂದುವರಿದು, ಒಂದು ಬುಟ್ಟಿ ತೆಗೆದುಕೊಂಡು, ನನ್ನ ಜೇಬಿನಲ್ಲಿ ಒಂದು ಲೆವ್ ನಾಣ್ಯ ತುರುಕುತ್ತಾ,—

"ಅವನ ಕೈಗಳು ಚಿನ್ನವಾಗಲಿ! ನಮ್ಮ ಹಳ್ಳಿಯಲ್ಲಿ ಹೊಳೆ ಇಲ್ಲ ಆದುದರಿಂದ ಮೆದು ಕಡ್ಡಿಗಳೂ ಇಲ್ಲ ಇನ್ನು ಬುಟ್ಟಿಗಳೆಲ್ಲಿಂದ ಬರಬೇಕು? ನಮ್ಮ ಹೆಂಗಸಿಗೆ ಇದು ಕಂಡು ತುಂಬಾ ಸಂತೋಷವಾಗುತ್ತೆ ಹೊಲಕ್ಕೆ ಹೋದಾಗ ಅವಳ ಹೆಣಿಗೆ ಸಾಮಾನು ಇಟ್ಟುಕೊಳ್ಳುವುದಕ್ಕೆ ನಮ್ಮ ಮನೆಯಲ್ಲಿ ಏನೂ ಇರಲಿಲ್ಲ"–ಎಂದು ಹೇಳಿದಳು.

ಆಕೆಯು ಹೊರಟು ಹೋದ ಮೇಲೆ ನಾವು ಆ ನಾಣ್ಯವನ್ನು ಬಹಳ ಹೊತ್ತಿನ ವರೆಗೆ ಈಕಡೆ ಆಕಡೆ ತಿರುಗಿಸಿ ನೋಡಿದೆವು ಅದರಿಂದ ಏನು ಕೊಂಡುಕೊಳ್ಳಬೇಕೆಂದೂ ನಾವು ಬಹಳ ಯೋಚಿಸಿದೆವು ಹಣ ನಮಗೆ ದೊರೆತುದೂ— ಅದೂ ಒಂದು ಬುಟ್ಟಿಗಾಗಿ ಸಿಕ್ಕಿದುದೂ ವಿಚಿತ್ರವೆನಿಸುತ್ತಿತ್ತು. ಅದು ನಮಗೆ ಅತ್ಯಂತ ಅಸಾಧಾರಣ ಘಟನೆಯಾಗಿತ್ತು.

ಒಂದು ದಿನ ನಮ್ಮ ನೆರೆಯ ನಿಕೋಲಾ ಮಾವನು ತಾಯಿಯನ್ನು ಕಂಡು ಮಾತನಾಡುತ್ತಾ—

"ಈ ಬುಟ್ಟಿಗಳನ್ನೆಲ್ಲ ಏನು ಮಾಡುತ್ತೀರಿ? ಇವನ್ನೆಲ್ಲಾ ಮಾರಿದರೆ ದುಡ್ಡು ಬರುತ್ತೆ ಸಂತ-ಪೀಟರ್ ದಿನೋತ್ಸವಕ್ಕೆ ಕೋರಿತೆನ್ ಜಾತ್ರೆ ನಡೆಯುತ್ತೆ. ಆ ವೇಳೆಗೆ ಈ ಬುಟ್ಟಿಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಅಲ್ಲಿಗೆಷ್ಟೋ ಜನ ಬರುತ್ತಾರೆ ಅಲ್ಲಿ ನಿಮ್ಮ ಬುಟ್ಟಿಗಳೆಲ್ಲಾ ಖಂಡಿತ ಖರ್ಚಾಗುತ್ತವೆ"— ಎಂದು ಹೇಳಿದನು

ಎರಡು ರಾತ್ರಿ ಆ ಮೇಲೆ ನಮಗೆ ನಿದ್ದೆಯೇ ಬರಲಿಲ್ಲ– ಆ ಪಟ್ಟಣದಲ್ಲಿ ಕೋರಿತೆನ್ ಜಾತ್ರೆ ಸಮೀಪಿಸುತ್ತಿತ್ತು ನನ್ನ ಹತ್ತಿರ ಸುಮಾರು ಐವತ್ತು ಬುಟ್ಟಿಗಳಿದ್ದುವು. ಅವುಗಳನ್ನು ಅಲ್ಲಿಗೆ ಸಾಗಿಸುವುದಾದರೂ ಹೇಗೆ?

ಕಡೆಗೆ ನಿಕೋಲಾ ಮಾವನೇ ತನ್ನ ಕುದುರೆ ಕೊಟ್ಟನು. ಕುದುರೆಯ ಮರದ ಜೀನಿನ ಇಕ್ಕೆಲಗಳಲ್ಲಿಯೂ ನಾವು ಬುಟ್ಟಿಗಳನ್ನು ಹೇರಿದೆವು ಕುದುರೆಯ ಮೇಲೆ ಹೇರುವುದಕ್ಕಾಗದ ಬುಟ್ಟಿಗಳನ್ನು ದಾರದಿಂದ ಕಟ್ಟಿ ನಾವೇ ನಮ್ಮ ಹೆಗಲುಗಳ ಮೇಲೆ ಹಾಕಿಕೊಂಡು ನಡೆದೆವು

ಅದು ಬೆಚ್ಚನೆಯ ಜೂಲೈ ತಿಂಗಳದೊಂದು ದಿನ ಹೊಲಗಳಲ್ಲಿ ಗೋಧಿಯು ಪಕ್ವಕ್ಕೆ ಬರುತ್ತಿತ್ತು. ಕಾನನವು ಹಸುರಾಗಿ ಕಂಗೊಳಿಸುತ್ತಿತ್ತು. ನಾವು ರಾತ್ರಿಯನ್ನು ಕಳೆದುಕೊಂಡು ಬ್ಯಾಲು ವದಾ ಪಕ್ಕದಲ್ಲಿರುವ ರಸ್ತೆಯ ಮೂಲಕ ಹೊರಟು, ಗೋರಿನಿ ಓರ್ಲಿಟ್ಸ್ ಯನ್ನು ದಾಟಿ, ಹೈದುಕ್ ಗಡ್ಡವನ್ನೇರಿದೆವು ಕುದುರೆಯು ಹೆಜ್ಜೆ ಹಾಕುತ್ತಿದ್ದಂತೆ ಬುಟ್ಟಿಗಳು ಚರ–ಪಟಪಟಿ ಶಬ್ದ ಮಾಡುತ್ತಿದ್ದುವು ನಾವು ಹಾಗೆಯೇ ಅವಸರಪಡುತ್ತಾ

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 4—0—0

ಸಣ್ಣ ಬಾಟ್ಲಿಗೆ ರೂ. 2—0 –0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸಂಟ್ರಲ್ ರೈಲ್ವೆ) ಮುಂಬಯಿ ೧೪

ಪರಿಚಯ

ಹರಿಜನಸೇವಕ—ಥಕ್ಕರ ಬಾಪ್ಪಾ

ಮಹಾತ್ಮಾ ಗಾಂಧಿಯವರ ಹರಿಜನ ಸೇವಾಕಾರ್ಯದಲ್ಲಿ ಅವರಿಗೆ ಬಲಗೈಯಾಗಿ ಅಮರರಾದ ಅಮೃತಲಾಲರ ಜೀವನ ಅನ್ಯೂತವಯವಾಗಿದೆ.

ಮಹಾತ್ಮಾಜೀಯವರು ನಮಗೆ ಸತ್ಯ, ಅಹಿಂಸೆ ಮತ್ತು ಪ್ರೇಮ ಇವುಗಳ ಶಿಕ್ಷಣವನ್ನು ಬೋಧಿಸಿದರು. 'ಸ್ವಾತಂತ್ರ್ಯವು ನನ್ನ ಜನ್ಮಸಿದ್ಧ ಹಕ್ಕು", ಎಂದು ಲೋಕಮಾನ್ಯ ತಿಲಕರು ಗರ್ಜಿಸಿ ಭಾರತೀಯ ಜನತೆಯ ಹೃದಯದಲ್ಲಿ ಸ್ವಾತಂತ್ರ್ಯ ಪ್ರೇಮಕ್ಕೆ ಸ್ಫೂರ್ತಿಯ ಬೀಜವನ್ನು ಬಿತ್ತಿದರು. ಸನಾತನಿಗಳ ಅತಿ ಪ್ರಖರವಾದ ವಿರೋಧವನ್ನು ಸಹಿಸಿ ಮಹರ್ಷಿ ಕರ್ವೆಯವರು ಸ್ತ್ರೀ-ಶಿಕ್ಷಣ ಮತ್ತು ವಿಧವಾ ವಿವಾಹಗಳಿಗೆ ಲೋಕಮಾನ್ಯತೆಯನ್ನು ಪ್ರಾಪ್ತಿಗೊಳಿಸಿ ಕೊಟ್ಟರು. ಅದರಂತೆ ಹಿಂದು ಸಮಾಜದಿಂದ ಅಸ್ಪೃಶ್ಯತೆಯು ಬೇರು ಸಹಿತ ನಿರ್ಮೂಲವಾದ ಹೊರತು ದೇಶಕ್ಕೆ ತರುಣೋಪಾಯವಿಲ್ಲ, ಎಂದು ತಮ್ಮ ಮನಸ್ಸಿಗೆ ಗಂಟಿಕ್ಕಿಕೊಂಡು ಶ್ರೀ ಥಕ್ಕರ ಬಾಪ್ಪಾ ಇವರು ಅಸ್ಪೃಶ್ಯತೆಯ ವಿರುದ್ಧ ತಮ್ಮ ಆಯುಷ್ಯದ ಕೊನೆಯ ಗಳಿಗೆಯ ವರೆಗೂ ಆಂದೋಲನವನ್ನು ನಡೆಸಿದರು.

ಶ್ರೀ ಥಕ್ಕರ ಬಾಪ್ಪಾರವರ ದಿವ್ಯ ಜೀವನವು ಸಾಮಾನ್ಯ ಮಾನವರಿಗೆ ನಿಲುಕದ ಜೀವನವಲ್ಲ. ಅಸಾಮಾನ್ಯರ ಸ್ವಪ್ನವಲ್ಲ ಸಾಮಾನ್ಯರು ಸಾಧಿಸಬೇಕಾದ ಜೀವನವದು. ಸಾಮಾನ್ಯರ ಜೀವನದಲ್ಲಿ ಈಗ ಕಂಡು ಬರುತ್ತಿರುವ ಸಮಸ್ಯೆಗಳು ಸಮರ್ಥ ರೀತಿಯಲ್ಲಿ ಪರಿಹಾರವಾಗಬೇಕಾದರೆ ಇಂದಿನ ನಮ್ಮ ಜೀವನದ ರೀತಿ-ನೀತಿ ಬದಲಾಗ ಬೇಕಾದುದು ಅವಶ್ಯವ ಎಂದೂ ಆ ಬದಲಾವಣೆ ಸಾಧ್ಯವಾಗಬೇಕಾದರೆ ಮನುಷ್ಯನಲ್ಲಿ ಹುದುಗಿರುವ ಅಸ್ಪೃಶ್ಯತೆಯ ಕಳಂಕದ ಪ್ರಕಟನೆ ಅವಶ್ಯವೆಂದೂ ಶ್ರೀ ಥಕ್ಕರ ಬಾಪ್ಪಾರವರು ಕಂಡರು. ಪೂಜ್ಯ ಬಾಪ್ಪಾ ಇವರು ಇಂದು ದೇಹ ಸಹಿತವಾಗಿ ನಮ್ಮಲ್ಲಿ ಕೂಡಿರದಿದ್ದರೂ ತಮ್ಮ ಅದ್ಭುತ ಕಾರ್ಯಗಳಿಂದಲೇ ಅವರು ಅಮರರಾಗಿದ್ದಾರೆ. "ಯಾವ ಸರಿಯಾಗಿ ಸಾಯಲಿ, ಕೀರ್ತಿ ಮಾತ್ರ ಏಕರೂಪವಾಗಿರಲಿ", ಎಂಬ ಉಕ್ತಿಯನ್ನು ಅವರು ತಮ್ಮ ಕೃತಿಗಳಿಂದಲೇ ಸಾರ್ಥಕಗೊಳಿಸಿದ್ದಾರೆ.

ಥಕ್ಕರ ಬಾಪ್ಪಾರ ಮೂಲ ಹೆಸರು ಅಮೃತಲಾಲ. ಸನ್ ೧೮೬೯ ನವ್ಹಂಬರ ೨೯ನೆಯ ದಿನಾಂಕ ಭಾವನಗರ ಎಂಬಲ್ಲಿ ಒಂದು ಬಡಕಾಯಸ್ಥ ಕುಟುಂಬದ ಅಕ್ಕಸಾಲಿಗರ ಸಮಾಜದಲ್ಲಿ ಇವರು ಜನ್ಮತಾಳಿದರು. ಅವರ ತಂದೆ ಶ್ರೀ ವಿಠ್ಠಲದಾಸರು ಒಂದು ಅಂಗಡಿಯಲ್ಲಿ ಗುಮಾಸ್ತರಾಗಿದ್ದು ೨೦ ರೂ ಮಾಸಿಕ ವೇತನದ ಮೇಲೆ ಕೆಲಸ ಮಾಡುತ್ತಿದ್ದರು. ಹೀಗಿದ್ದರೂ ಕೂಡ ಅವರಿಗೆ ಸಮಾಜದಲ್ಲಿ ಅತಿ ಗೌರವದ ಸ್ಥಾನವಿತ್ತು. ಥಕ್ಕರ ಬಾಪ್ಪಾರು ತಮ್ಮ ತಂದೆಯವರನ್ನು ಪರೋಪಕಾರಿ, ಸತ್ಯವಂತ ಮ ಸತ್ವಶೀಲರಂತ ವರ್ಣಿಸಿದ್ದಾರೆ. ಇವೇ ಸದ್ಗುಣಗಳು ಥಕ್ಕರ ಬಾಪ್ಪಾರಲ್ಲಿ ಅಳವಡಿಸಿಕೊಂಡಿದ್ದವು.

ಮನೆಯಲ್ಲಿ ಅತಿ ಬಡತನವಿದ್ದ ಮೂಲಕ ವಿಠ್ಠಲದಾಸರು ಇಂಗ್ಲಿಷ ಶಿಕ್ಷಣ ಪಡೆಯಲು ಅಸಮರ್ಥರಾದರು. ಆದರೆ ತನ್ನ ಮಕ್ಕಳಿಗೆ ಮಾತ್ರ ಹೇಗಾದರೂ ಮಾಡಿ ಇಂಗ್ಲೀಷ ವಿದ್ಯಾಭ್ಯಾಸದ ಲಾಭ ಮಾಡಿಕೊಡಬೇಕು ಎಂದು ಅವರು ದೃಢ ನಿಶ್ಚಯಿಸಿದರು. ಕೊನೆಗೆ ಸಾಲವಾಗಿ ಹಣ ಪಡೆದು, ಅಮೃತಲಾಲರಿಗೆ ಪುಣೆಯ 'ಇಂಜನಿಯರಿಂಗ್ ಕಾಲೇಜ'ಗೆ ಸೇರಿಸಿದರು. ಅಲ್ಲಿ ಅವರು ತಮ್ಮ ಮೂರು ವರ್ಷಗಳ ವಾಸ್ತವ್ಯದಲ್ಲಿ ಅತಿ ಕಠಿಣ ಪರಿಸ್ಥಿತಿಯನ್ನು ಎದುರಿಸಿ ತಮ್ಮ ಧ್ಯೇಯ ಪೂರ್ಣಗೊಳಿಸಿದರು. ವಿದ್ಯಾರ್ಥಿ ಜೀವನದಲ್ಲಿರುವಾಗಲೇ ಅವರು ನ್ಯಾಯಮೂರ್ತಿ ರಾನಡೇ ಮತ್ತು ಅವರ ಶಿಷ್ಯನಾದ ಧಾರೆ ಗೋಖಲೆಯವರನ್ನು ಪ್ರಥಮವಾಗಿ ನೋಡಿದರು. ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಅಮೃತಲಾಲರಿಗೆ ವಿವಾಹವಾಯಿತೆಂದು ಹೇಳಿದರೆ ಜನಸಾಮಾನ್ಯರಿಗೆ ಆಶ್ಚರ್ಯವೆನಿಸದಿರಲಾರದು. ಆಗ ಅವರ ವಯಸ್ಸು ಕೇವಲ ಇಪ್ಪತ್ತು. ಈ ವಿವಾಹದಿಂದ ಬಹುಬೇಗನೆ ಅವರಿಗೆ ಒಬ್ಬ ಹುಡುಗನು ಜನಿಸಿದನು. ಆದರೆ ಅವನು ಕೆಲಕಾಲ ಬಾಳದೇ ಐದಾರು ವರ್ಷದವನಾಗಿ ಮರಣಕ್ಕೀಡಾದನು. ಅಂದಿನಿಂದ ಅವರ ಪ್ರೀತಿಯ ಪತ್ನಿಯ ದೇಹ ಪ್ರಕೃತಿಯೂ ಕ್ಷೀಣವಾಗುತ್ತ ನಡೆಯಿತು ಸನ್ ೧೯೦೨ರಲ್ಲಿ ಥಕ್ಕರ ಬಾಪ್ಪಾರವರು ಮುಂಬೈಯ ನಗರ ಸಭೆಯಲ್ಲಿ ನೌಕರಿ ಮಾಡುತ್ತಿರುವಾಗ ಪತ್ನಿಯೂ ಕೂಡ ಕೈಬಿಟ್ಟಳು. ತದನಂತರ ಅವರಿಗೆ ದ್ವಿತೀಯ ಲಗ್ನ ಮಾಡುವದು ಅವರ ತಂದೆಯವ ಪಾಲಿಗೆ ಬಂದಿತು. ಈ ಎರಡನೆಯ ಪ್ರಿಯತಮೆಯೂ ಕೂಡ ಬಹುದಿನ ಪತಿಯೊಡನೆ ಸಮರಸವಿಂದಿರದೇ ಒಂದೆರಡು ವರ್ಷದ ಅವಧಿಯಲ್ಲಿಯೇ ಮೃತಳಾದಳು.

ಮುಂಬಯಿ ನಗರ ಸಭೆಯ ನೌಕರಿ ಸ್ವೀಕರಿಸುವ ಮೊದಲು ಅವರು ಸಾಂಗಲಿ ಸಂಸ್ಥಾನದಲ್ಲಿ ಕೆಲಸಕ್ಕಿದ್ದರು. ಅಲ್ಲಿರುವಾಗ ನಾಮದಾರ ಗೋಖಲೆ ಮತ್ತು ಮಹರ್ಷಿ ಕರ್ವೆಯವರೊಂದಿಗೆ ಅವರ ಪರಿಚಯವಾಯಿತು. ಥಕ್ಕರ ಬಾಪ್ಪಾರು ಶ್ರೀ ಕರ್ವೆಯವರನ್ನು ತಮ್ಮ ಗುರುವೆಂದು ಮನ್ನಿಸಿದರು. ಸಾಂಗಲಿ ಸಂಸ್ಥಾನದಲ್ಲಿ ನೌಕರಿ ಮಾಡುತ್ತಿರುವಾಗ ಅಲ್ಲಿಯ ಕೆಲ ಇಂಗ್ಲೀಷ ಅಧಿಕಾರಿಗಳೊಡನೆ ಅವರಿಗೆ ಮತ—ಭೇದ ಉಂಟಾಗಿದ್ದರಿಂದ ನೌಕರಿ ಬಿಟ್ಟು ಮುಂಬೈಯ ನಗರ ಸಭೆಯ ನೌಕರಿಯನ್ನು ಪಡೆದರು. ಆ ವರ್ಷದಲ್ಲಿ ನಗರಸಭೆಯ ಗಾಡಿಗಳ ಮೇಲೆ ನಿರೀಕ್ಷಣೆ ಮಾಡುವ ಕೆಲಸ ಅವರಿಗೆ ದೊರಕಿತು. ಅದಕಾರಣ ಅವರು ಸಹಜವಾಗಿ ಭಂಗಿ ಸಮಾಜದ ನಿಕಟವರ್ತಿಗಳಾದರು. ಅತಿ ಸೂಕ್ಷ್ಮವಾಗಿ ಆ ಸಮಾಜದ ನಿರೀಕ್ಷಣೆಯನ್ನೂ ಮಾಡಿದರು. ಈ ನಿರೀಕ್ಷಣೆಯಿಂದಲೇ ಅವರಿಗೆ ದೊಡ್ಡ ಧಾಡೆಯಾಯಿತು. ತತ್ ಪರಿಣಾಮವಾಗಿ ದಲಿತರ ಬಗ್ಗೆ ಅವರ ಹೃದಯದಲ್ಲಿ ಅತಿ ಕನಿಕರ ಹುಟ್ಟಿತು. ಯೋಗಾಯೋಗದಿಂದ ಇದೇ ಸಮಯದಲ್ಲಿ ಮಹರ್ಷಿ ವಿಠ್ಠಲ ರಾಮಜೀ ಶಿಂಧೆ ಇವರ ಸಹವಾಸದಲ್ಲಿ ಅವರೂ, ಕೂಡಿಕೊಂಡರು ಶ್ರೀಯುತರು ದಲಿತರ ಸೇವೆಮಾಡಲು ಥಕ್ಕರ ಬಾಪ್ಪಾರಿಗೆ ಉದ್ಯುಕ್ತಗೊಳಿಸಿದರು ಬಾಪ್ಪಾಜಿಯವರು ತಮ್ಮ ಗುರುಗಳೆಂದು ಮನ್ನಿಸಿದ ನಾಲ್ವರು ಸತ್ಪುರುಷರಲ್ಲಿ ಮಹರ್ಷಿ ಶಿಂಧೆಯವರು ಒಬ್ಬರಾಗಿದ್ದರು ಮೆಲ್ಲ-ಮೆಲ್ಲನೇ ಥಕ್ಕರ ಬಾಪ್ಪಾರು ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಪಾದಾರ್ಪಣ ಮಾಡಿದರು ಅವರ ಮೊದಲಿನ ದೃಶ್ಯದ ಪರಿಣಾಮವೆಂದರೆ ಗೋಖಲೆಯವರು ಸ್ಥಾಪಿಸಿದ "ಸರ್ವ್ಹಂಟ್ಸ ಆಫ್ ಇಂಡಿಯಾ ಸೊಸಾಯಿಟಿ"ಗೆ ಅವರು ಸಭಾಸದರಾದುದು ಮತ್ತು ಅದೇ ಸಮಯದಿಂದ ಸಣ್ಣ—ಪುಟ್ಟ ದೇಶಕಾರ್ಯಗಳನ್ನು ಬಹು ಉತ್ಸುಕತೆಯಿಂದ ಪ್ರಾರಂಭಿಸಿದರು ಮಥುರಾ, ಕಚ್ಛ ಮೊದಲಾದ ಕಡೆಗಳಲ್ಲಿ ಬರಗಾಲಬಿದ್ದಾಗ ಥಕ್ಕರ ಬಾಪ್ಪಾರು ತಮ್ಮ ಸಹಕಾರಿಗಳೊಂದಿಗೆ ಬರಗಾಲ ಪೀಡಿತರ ಅನುಕೂಲ್ಯ ಸೇವೆ ಮಾಡಿದರು ಭಿಲ್ಲ ಸೇವಕ ಸಮಾಜದ ಒಬ್ಬ ಸೇವಕ ಶ್ರೀ ಸುಖದೇವ ಭಾಯಿ ಅವರೊಂದಿಗೆ ಇದ್ದರು.

ಸನ್ ೧೯೧೮ರಲ್ಲಿ ಶ್ರೀ ವಿಠ್ಠಲ ಭಾಯಿ ಪಟೇಲರು ಮುಂಬೈ ವಿಧಾನ ಸಭೆಯಲ್ಲಿ ಮಂಡಿಸಿದ ಶಿಕ್ಷಣ ವಿಷಯದ ವಿಧೇಯಕವನ್ನು ತಯಾರಿಸಲು ಥಕ್ಕರ ಬಾಪ್ಪಾರವರ ಮೇಲೆ ಹೆಚ್ಚಿನ ನಿರ್ವಹಣೆ ಬಿದ್ದಿತ್ತು. ಇಂದಿನ ತನಕವೂ ಥಕ್ಕರ ಬಾಪ್ಪಾರು ಒಂದು ವಿಶಿಷ್ಟ ಕಾರ್ಯಕ್ಕೆ ವಹಿಸಿಕೊಂಡಿದ್ದಿಲ್ಲ ಕೂಲಿಕಾರರ ಜೀವನ ಸುಧಾರಿಸುವದಕ್ಕೋಸ್ಕರ ಅವರು ಜಮಶೇಟಪುರದ 'ಟಾಟಾ ಕಂಪನಿಯ' ಕೆಲಸಗಾರರ ಜೀವನದ ಅಭ್ಯಾಸ ಮಾಡಿದರು. ಅವರ ಕಷ್ಟದಾಯಕ ಜೀವನವನ್ನು ಸುಧಾರಿಸಲು ಶ್ರೀಯುತರು ಕೆಲವು ಯೋಜನೆಗಳನ್ನು ಯೋಚಿಸಿದರು ಸನ್ ೧೯೨೦ರಲ್ಲಿ ಮಹಾತ್ಮಾಜೀಯವರ ನೇತೃತ್ವದಲ್ಲಿ ಪ್ರಾರಂಭವಾದ ಪರದೇಶಿ ಬಟ್ಟೆಗಳ ಮೇಲೆ ಬಹಿಷ್ಕಾರ ಮತ್ತು ಸ್ವದೇಶಿ ಬಟ್ಟೆಯ ಬಗ್ಗೆ ಪ್ರಚಾರ ಕಾರ್ಯದಲ್ಲಿ ಬಾಪ್ಪಾಜೀಯವರು ಬಹುದೊಡ್ಡ ಧೈರ್ಯವನ್ನು ಮಾಡಿ ಭಾಗವಹಿಸಿದರು. ಖಾದಿ ಮತ್ತು ಚರಖಾದ ಪ್ರಚಾರಕೂಡ ಅವರು ಮಾಡಲು ಪ್ರಾರಂಭಿಸಿದರು. ಇದೇ ಸಮಯಕ್ಕೆ ಓರಿಸಾ ಪ್ರಾಂತದಲ್ಲಿ ಭೀಷಣ ಬರಗಾಲ ಉದಯಿಸಿತು ಆಗ ಥಕ್ಕರ ಬಾಪ್ಪಾರವರು ಕೈಕೊಂಡ ಉತ್ಕೃಷ್ಟವಾದ ಕಾರ್ಯನಿರ್ವಹಣೆಯನ್ನು ನೋಡಿ ಮಹಾತ್ಮಾ ಗಾಂಧಿಯವರು ಕೂಡ ವಿಸ್ಮಯರಾದರು ಓರಿಸ್ಸಾ ರಾಜ್ಯದಲ್ಲಿ ಹರಿಜನ ಮೊದಲಾದ ದಲಿತ ಜನತೆಯು ಇಂದಿಗೂ ಥಕ್ಕರ ಬಾಪ್ಪಾರವರಿಗೆ ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತಾರೆ ಬರಗಾಲ ಪೀಡಿತರ ಸೇವೆಮಾಡಿ, ಅಷ್ಟಕ್ಕೆ ನಿಲ್ಲಲಿಲ್ಲ ಪಾಂಚಮಹಲ ಜಿಲ್ಲೆಯ ಭಿಲ್ಲ ಜನಾಂಗದ ಶೋಚನೀಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಅವರ ನಿರ್ಮಲ ಹೃದಯ ಒಮ್ಮೆಲೇ ವ್ಯಾಕುಲಗೊಂಡಿತು. ಆ ಜನಾಂಗದ ಉನ್ನತಿಗಾಗಿ ಅವರು ಕಂಕಣಬದ್ಧರಾದರು ಅದಕ್ಕಾಗಿಯೇ ಅವರು ಆಶ್ರಮವನ್ನು ತೆರೆದರು ಥಕ್ಕರ ಬಾಪ್ಪಾರವರು ಅತಿ ನಿರಲಸತೆಯಿಂದ ಭಿಲ್ಲ ಸಮಾಜದ ಸೇವೆ ಕೈಕೊಂಡರು. ಬಹುದೊಡ್ಡ ಪ್ರಮಾಣದಲ್ಲಿ ಜಾಗೃತಿಯನ್ನು ಈ ಸಮಾಜದಲ್ಲಿ ಉಂಟುಮಾಡಿದರು. ಭಿಲ್ಲ ಸಮಾಜದಲ್ಲಿ ಕುಡಿತದ ದುಷ್ಟ ವ್ಯಸನವು ಬೇರೂರಿ ಹಬ್ಬಿತ್ತು. ಅದಕ್ಕೆ ಬಾಪ್ಪಾಜೀಯವರು ಪ್ರತಿಬಂಧನ ಹಾಕಿದರು. ಸನ್ ೧೯೩೨ರ ತನಕ ಬಾಪ್ಪಾರವರು ಮುಖ್ಯತಃ ಹರಿಜನ ಸೇವೆಯನ್ನು ಸ್ವತಃ ವಹಿಸಿಕೊಂಡಿದ್ದರೂ, ಭಿಲ್ಲ ಸಮಾಜದ ಸೇವೆ ಮಾತ್ರ ಅವರು ಮರಣಾಂತ ಸಮಯದವರೆಗೂ ಅಖಂಡ ರೀತಿಯಿಂದ ಮಾಡುತ್ತಿದ್ದರು.

ಗುಜರಾಥದಲ್ಲಿ ಮಹಾತ್ಮಾಜೀಯವರ ಪ್ರೇರಣೆಯಿಂದ ಶ್ರೀ ಮಾಮಾ ಸಾಹೇಬ ಫಡಕೇ ಇವರು ಹರಿಜನ ಸೇವೆಗಾಗಿ ಒಂದು ಆಶ್ರಮವನ್ನು ಸ್ಥಾಪಿಸಿದರು. ಶ್ರೀ ಥಕ್ಕರ ಬಾಪ್ಪಾರವರು ಈ ಕಾರ್ಯದಲ್ಲಿಯೂ ಸಹಭಾಗಿಗಳಾದರು ಶ್ರೀ ಪರೀಕ್ಷಿತ ಲಾಲ ಮುಜುಮುದಾರ ಇವರು ಈ ಆಶ್ರಮದ ಪ್ರಮುಖ ಕಾರ್ಯದರ್ಶಿಗಳಾದರು. ಅದರ ಸಹಾಯದಿಂದ ಬಾಪ್ಪಾರು ಗುಜರಾಥದಲ್ಲಿ ಅನೇಕ ಶಾಖೆ—ಉಪಶಾಖೆಗಳನ್ನು ತೆರೆದರು. ಥಕ್ಕರ ಬಾಪ್ಪಾ

(೧೦ನೇ ಪುಟ ನೋಡಿರಿ)

ತಮ್ಮೆಲ್ಲರ ಸೌಹಾರ್ದ—ಸಹಕಾರಗಳಿಂದ ದಿನೇ ದಿನೇ ಸರ್ವಾಂಗ ಸುಂದರವಾಗಿ ಬೆಳೆದು, ನಿಮ್ಮ ಆರ್ಥಿಕ ಅಭ್ಯುದಯಕ್ಕಾಗಿ ಸತತವಾಗಿ ಶ್ರಮಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : ಉಡುಪಿ (ದ. ಭಾರತ)

೫4 ವರುಷಗಳ ಅನುಭವಪೂರ್ಣ ಹಾಗೂ ಸರ್ವೋತ್ಕೃಷ್ಟ ಬೇಂಕು ಸೇವೆಯನು ಸರ್ವರಿಗೂ ಸರ್ವಕಾಲಕ್ಕೂ ಸರಿಸಮಾನವಾಗಿ ಸಲ್ಲಿಸಬೇಕೆಂಬುದೇ ಈ ಬೇಂಕಿನ ಸಾಧನೆ!

ಸಾಹಿತ್ಯಕ್ಷೇತ್ರ

ಬಯಸಿದುದನ್ನೇ ದಾನವೀಯಬೇಕು

ದಾನ ಬುದ್ಧಿಯು ಮೇಲೆ ಒರೆಗಲ್ಲಿ ತಿಕ್ಕುವ ಸಂದರ್ಭದಲ್ಲಿ ಗೆದ್ದುಬಿಟ್ಟರೆ, ಅವನೇ ಮಹಾದಾನಿಯಾಗುತ್ತಾನೆ

"ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿ ಸಂತತಿ; ಮುಟ್ಟುಗೆ ಮುಟ್ಟದಿರ್ಕೆ ವಾಮನಕ್ರಮಂ ಮುಗಿಲಂ, ಹರನಂ ನರ ನಿಕ್ಕಿ ಗಂಟಲಂ ಮುಟ್ಟುಗೆ ಮುಟ್ಟದಿರ್ಕೆ, ಕವಿಗಳ್ ಬಂಧದೊಳ್ ಕಟ್ಟದರ್, ಮುಟ್ಟದರ್ ಇಕ್ಕಿ ಮುಟ್ಟದರ್" ಎಂಬುದಾಗಿ ಹೇಳಿ ತನ್ನ ಶೃಂಗಾರ ಕಾವ್ಯ "ಕವಿಕುಂಜರ ಲೀಲಾವತಿ"ಯಲ್ಲಿ ಮಹಾಕವಿ ನೇಮಿಚಂದ್ರನು ಕಥೆಗೆ ಪೂರಕವಾಗಿ, ಕಥಾನಾಯಕನ ಗುಣ ಪ್ರದರ್ಶನಕ್ಕಾಗಿ ಹಲವಾರು ಸನ್ನಿವೇಶಗಳನ್ನು ತಂದು ಹಾಕಿದ್ದಾನೆ. ಆತನ "ಲೀಲಾವತಿ" ಪ್ರಬಂಧದಿಂದ ಅಂತಹ ಒಂದು ಸನ್ನಿವೇಶವನ್ನು ತಿಳಿಸುವುದೇ ಪ್ರಕೃತ ಲೇಖನದ ಉದ್ದೇಶ.

ಮಾನವ ಮದನನಾದ ರಾಜಕುಮಾರ ರೂಪಕಂದರ್ಪದೇವನು ತನ್ನ ಸ್ವಪ್ನದಲ್ಲಿ ಕಾಣಿಸಿಕೊಂಡು ತನ್ನ ಚಿತ್ತಾಪಹಾರ ಗೈದ ಸ್ವಪ್ನಸುಂದರಿಯನ್ನರಸುತ್ತ ಮಂತ್ರಿಕುಮಾರ ಮಕರಂದನೊಡನೆ ಒಂದು ಪ್ರಾತಃಕಾಲದಲ್ಲಿ ಪೂರ್ವದಿಶೆಯತ್ತ ಪ್ರಯಾಣ ಹೊರಟು ಹಲವಾರು ದೂರ ಗಮಿಸಿ, ಕೆಲವಾರು ದಿನಗಳನ್ನು ಕಳೆದು, ಒಂದು ಗೊಲ್ಲರ ಗೊಟ್ಟಿಯನ್ನು ಅಕ್ರಮಿಸಿದ ಹಂದಿಯನ್ನೋಡಿಸಿಕೊಂಡು ಕಾಡನ್ನು ಪ್ರವೇಶಿಸಿದನು. ಅಲ್ಲಿ ಬಹುವಿಧ ವೃಕ್ಷಲತೆಗಳ ಸೌಂದರ್ಯವನ್ನಾಸ್ವಾದಿಸುತಿದ್ದಂತೆಯೇ ಆತನಿಗೆ ನೀರಡಿಕೆಯಾಗಲು, ನೀರನ್ನರಸುತ್ತ ದುಃಖಮೇಂ ನೀಯುಮುಂಟೇ ಎಂದುಕೊಳ್ಳುತ್ತ ಸಚಿವಪುತ್ರನ ಆದರೋಪಚಾರಗಳಿಂದ ಮೆಲ್ಲ ಮೆಲ್ಲನೆ ಹೆಜ್ಜೆಯಿಕ್ಕುತ್ತ ಬರಲು ಆತನ ಪಿಪಾಸೆಯು ಅವವನಿಳದುಹೋಯಿತು. ಅಲ್ಲಲ್ಲಿ ಕೆಲವೆಡೆ ಪಲ್ವಲಗಳಲ್ಲಿ ನೀರು ತೋರಿಬಂದರೂ ತನ್ನ ಪಾವಿತ್ರ್ಯ, ಅಹಿಂಸೆ, ಅನುಚ್ಛಿಷ್ಟ ಭಕ್ಷಣ, ನಿರ್ಮಲತೆ ಮೊದಲಾದ ಉತ್ತಮ ಗುಣಗಳಿಗೆರವಾಗ ಬಯಸದೆ ಪಾನೀಯವನ್ನು ಅರಸುವ ಉಪಾಯವಾವುದೆಂದು ಕಿಂಕರ್ತವ್ಯತಾ ಮೂಢನಾಗಿ ದಿಗವಲೋಕನ ಮಾಡುತ್ತಿರುವಾಗ, ದಿಕ್ಕು ದಿಕ್ಕುಗಳಲ್ಲಿಯೂ ತನ್ನ ಕಾಂತಿಯನ್ನು ಹರಡಿಸುತ್ತ ಬರುವ ಒರ್ವಳು ಕನ್ಯೆಯು ಕಾಣಿಸಿದಳು. ಪಾದದ ಕೆಂಪು ಹೊಸ ಚಿಗುರನ್ನು, ಪೆರ್ಮಾಲೆಗಳು ಗೊನೆಯನ್ನು, ನಳಿತೋಳು ಕೊಂಬೆಯನ್ನು, ಕೇಶವು ತಮಾಲವನ್ನು, ವದನವು ಪದ್ಮಾಕರವನ್ನು ಮೆಯ್ ಬಳ್ಳಿಯನ್ನು ತೊಡೆ ಬಾಳೆ ಗಿಡವನ್ನು ಹೋಲುವಂತಿರಲು ಆ ಕಾಂತೆಯು ಮಾರ್ಗಶ್ರಾಂತನಾದ ರೂಪಕಂದರ್ಪ ದೇವನಿಗೆ ಉದ್ಯಾನ ಲಕ್ಷ್ಮೀ ವಧುವಿನಂತೆ ಕಣ್ಣಿಗೆ ತೋರಿದಳು.

ಆಕೆಯು ಲಾವಣ್ಯಾಮೃತ ಸೇಕದಿಂದಲೇ ಆತನ ಬಾಯಾರಿಕೆಯು ಇಂಗಿ ಹೋದಂತಾಗಿ, ಅವನು ಆಕೆಯನ್ನೇ ನೋಡತೊಡಗಿದನು. ಆಕೆಯು ಹಿಂದೆ, ಎಳಗೆಂಪಿನಿಂದಾಗಿ ಕೆಂಗಲ್ಲ ಕಲಶದಂತೆ ತೋರುವ ಸ್ಫಟಿಕದ ತಂಬಿಗೆಯನ್ನು ಹೊತ್ತುಕೊಂಡು ಒಬ್ಬಳೆಯು ಬಂದಳು. ಆಕೆಯ ಮುಖಪ್ರಭೆಯು ಸೂರ್ಯನ ಬಳನೆಂದು ತಿಳಿದು ತಂಬಿಗೆಯೊಳಗೆ ಆತನನ್ನು ಬಂಧಿಸಿದಂತೆ ಒಳಗೆ ನಿರ್ಮಲಜಲವು ಅಲ್ಲಾಡುತಿತ್ತು. ಈ ಸೇವಕಿಯಿಂದ ಕೂಡಿದ ಆ ಕಾಂತೆ ಮುಂಬಂದು ತೃಷಾಸಕ್ತನಾದವನಿಗೆ ಅಮೃತವನ್ನು ಸುರಿಸುವಂತೆ, ಉರಿಬಿಸಿಲಿನ ಬೇಗೆಯಿಂದ ಬಳಲಿದವನಿಗೆ ಚಂದನಾದಿ ಗಂಧಗಳನ್ನು ಪೂಸುವಂತೆ, ಈ ರಾಜಕುಮಾರನನ್ನು ಈಕ್ಷಿಸಿ, ತನ್ನ ಪರಿಚಾರಕಿಯೊಡನೆ ಈತನು ಬಾಯಾರಿದಂತೆ ಕಾಣಿಸುತ್ತಿರುವನು; ಈ ಕಲಶದ ನೀರಿನಿಂದ ಕುಲಕಲಶರತ್ನನ ನೀರಡಿಕೆಯನ್ನು ತೊಳೆದು ಕಳೆ ಎಂದು ಅಜ್ಞಾಪಿಸಲು, ಕೆಳದಿಯು ಕಳಶವನ್ನು ನೀಡಲು, ಮಕರಂದನು ಅದನ್ನು ತೆಗೆದುಕೊಂಡನು.

ರೂಪಕಂದರ್ಪನು ತನ್ನ ಸಹಚರಿಯಿಂದ ಆ ಕಂಪಾದ ಜಲಕಲಶವನ್ನು ಎತ್ತಿಕೊಂಡಾಗ, ಆತನ ಶರೀರವೂ ತಣ್ಣಗಾಯಿತು. ಪುಲಕಿತವಾಯಿತು. ಆತನು ಆ ಕೋಮಲೆಯು ಕಲಶದಲ್ಲಿ ಇಳಿಸಿಟ್ಟಿದ್ದ ಕಮಲ ನಾಳವನ್ನು ಕಳೆಯುವುದರಲ್ಲಿ ತೊಡಗಿದನು.

ಅಷ್ಟರಲ್ಲಿ, ಬತ್ತಿದ ಕೆನ್ನೆ, ಸುಕ್ಕುಗಟ್ಟಿದ ಕುತ್ತಿಗೆ, ಹುಣ್ಣುಗಳೆದ್ದ ಅಡ್ಡತಿಡ್ಡವಾಗಿ ಬೆಳೆದ ಹಲ್ಲು, ಹೊತುಹೋದ ಕಣ್ಣು, ಕುರುಳಿಗೊಂಡು ಅರೆಬತ್ತಿದ ಬಾಯಿ, ಬಳಲಿದ ಮೆಯ್, ಬೆನ್ನಿಗೆ ಅಂಟಿಹೋದ ದೊಡ್ಡ ಹೊಟ್ಟೆಗಳಿಂದ ವಿಲಕ್ಷಣ ನೋಟವನ್ನುಂಟುಮಾಡುತ್ತ, ಮುಖದಿಂದ ಇಳಿದುಬರುವ ಕಪ ಬೆವರನ್ನು ತುದಿನಾಲಗೆಯಿಂದ ನೆಕ್ಕುತ್ತ ಬರುತ್ತಿರುವ ಒರ್ವ ಬ್ರಾಹ್ಮಣನು ಕಾಣಿಸಿಕೊಂಡನು.

ಆ ಹಾರುವನ ಬರವನ್ನು ಕಂಡ ಅರಸನು ಈ ದ್ವಿಜನು ಬಾಲದ್ವಿಜದಂತೆ ನೀರಡಸಿ ಬಾಯನ್ನು ಬಿಡುತ್ತ ಬಂದಿರುವನು; ನನ್ನಮುಖವನ್ನು ದೀನದೃಷ್ಟಿಯಿಂದನೋಡುವುದಕ್ಕೆ ಕೃಪಣೋಕ್ತಿಗಳನ್ನು ಕೇಳಿಸುವುದಕ್ಕೆ, ಮೊದಲೇ ಆತನನ್ನು ಕರೆದು ಅವನ ತೃಷಾಗ್ನಿಯನ್ನು ದೂರಮಾಡು ಎಂದು ಹೇಳಲು ಆರ್ಯ ಪುತ್ರನು ಹಾಗೆ ಮಾಡಲು ಸಿದ್ಧನಾಗುವಷ್ಟರಲ್ಲಿಯೇ ಆ ಹಾರುವನು ಬೇಡದೆ ಬೆಸಗೊಳ್ಳದೆ ಬಂದು ಮುಂದೆ ಕುಕ್ಕರಿಸಿ ಕುಳಿತು ಕೊರಳನ್ನು ನೀಡಿ ಸಿಕ್ಕುಗಟ್ಟಿದ್ದ ಗಡ್ಡವನ್ನೂ ಮೀಸೆಯನ್ನೂ ಅಗಲವಾಗಿ ನೂಕಿ, ಬಾಯಲ್ಲಿ ಕೈಗಳನ್ನು ಅಂಜಲಿಯಾಗಿ ಹಿಡಿದು ಬಿಟ್ಟನು.

ಆಗ ಮಕರಂದನು ಆ ತಣ್ಣೀರನ್ನು ಸೀರ್ಪನಿಯಂತೆ ಆ ಅಂಜಲಿಗೆ ಹೊಯ್ಯಲು, ಅಗಲಿಸಿದ ಕಣ್ಣುಗಳಿಂದ ನೋಡುತ್ತ ಕಲಶದಲ್ಲಿದ್ದ ನೀರೆಲ್ಲವನ್ನೂ ಒಂದೂ ತಟಕು ಬಿಡದೆ ವ್ಯೆಯನ್ನು ಒರಗಿಸಿ, ರೋಮಾಂಚಗೊಂಡು, ಮೂಗು ಅರಳಿಸಿ ಹೀರಿ ಬಿಟ್ಟನು. ನೀರೆಲ್ಲವನ್ನೂ ಕುಡಿದು ತೇಗಿ ತಲೆಯನ್ನು ತೂಗಿ ತಾಂಬೂಲವನ್ನು ಯಾಚಿಸಿದ ನಂತರ ಹೃಷ್ಟನೂ ಸಂತುಷ್ಟನೂ ಆಗಿ ರಾಜ ಕುಮಾರನನ್ನು ಹಲವು ಬಾರಿ ಹರಸಿದನು. ಮತ್ತು "ಅವಶ್ಯಕತೆಯಿದ್ದಾಗ ಅದನ್ನು ಕೊಟ್ಟುದು ಅತ್ಯಮೂಲ್ಯವಾದುದು" ಎಂದು ಶಾಸ್ತ್ರಗಳು ಹೇಳುತ್ತವೆ. ಅಂತಹ ತ್ಯಾಗಕ್ಕೆ ಸಮವಾದುದು ಯಾವುದೂ ಇಲ್ಲ. ಆದುದರಿಂದ ನನಗೆ ಅವಶ್ಯಕತೆಯಿದ್ದ ನೀರನ್ನು ನಾನು ಕೇಳುವುದಕ್ಕೆ ಮೊದಲೇ ಇತ್ತ ನೀನು ದಾನಿ. ಇತರ ಜನರು ಮೆಚ್ಚದಿದ್ದರೆ ಏನು? ಮೆಚ್ಚದ ಹೆಣ್ಣು ಮೆಚ್ಚಿದರೆ ಸೊಬಗೆನಿಸುತ್ತದೆ. ಶತ್ರುಗಣಗಳು ಮೆಚ್ಚಿದರೆ, ಕಲಿಯೆನಿಸುತ್ತಾನೆ. ಬೇಡುವವನು ಮೆಚ್ಚಿ ಬಿಟ್ಟರೆ, ಮಹಾದಾನಿಯೆನಿಸುತ್ತಾನೆ ಎಂದು ಹೇಳಿ, ಆಶೀರ್ವದಿಸಿ ಹೊರಟು ಹೋದನು. ಅನಂತರ ಇನ್ನೂ ತುಸು ದೂರಕ್ಕೆ ರಾಜ

(೯ನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು
(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ: ರೂ. ಒಂದೂವರೆ, ಉತ್ತಮ ಪ್ರತಿ: ರೂ. ಎರಡು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಕೂಟನೀತಿ

ವಿಷಕನ್ಯೆಯರ ಮಹತ್ವ ಹಾಗೂ ಪ್ರಭಾವ

ಶತ್ರುಗಳನ್ನು ಸೋಲಿಸುವ ಸಾಧನಗಳಲ್ಲಿ ವಿಷಕನ್ಯಕಾಸೇನೆಯೂ ಒಂದಾಗಿದ್ದು, ಇದರಿಂದ ಅನೇಕಾನೇಕ ವೀರರು ಮೃತ್ಯುಮುಖರಾಗಿದ್ದಾರೆ.

ಬಿಕಾನೀರದ ರಾಜನಾದ ಜಸವಂತ ಸಿಂಹನಿಗೆ ಅವರಂಗಜೇಬನು ರಾಜೋಚಿತ ಉಡಿಗೆಗಳನ್ನು ಉಡುಗೊರೆಯಾಗಿ ಇತ್ತುದೂ ಅರಸನು ಅವನ್ನು ತೊಟ್ಟುಕೊಂಡೊಡನೆಯೇ ಅವನ ಸಂಪೂರ್ಣ ಶರೀರವು ಉರಿಯುವಂತೆ ಭಾಸವಾಗಿ ಆತನು ವ್ಯಾಕುಲಚಿತ್ತನಾದುದೂ ಇತಿಹಾಸ ಪ್ರಸಿದ್ಧ ಘಟನೆಯಾಗಿದೆ. ವಿಷಪ್ರಯೋಗದ ಒಂದು ವಿಚಿತ್ರ ವಸ್ತು ರೋಮಾಂಚಕಾರಿ ಉದಾಹರಣೆಯೊಂದು ಪುಸ್ತಕಗಳಲ್ಲಿ ಬರುತ್ತದೆ. ಒಂದು ಬಾರಿ ಆ ಕಾಲದ ರಾಜನೊಬ್ಬನು ಯುನಾನಿ ಋಷಿಯಾಗಿದ್ದ ಡರಬನೆಂಬವನ ಮೇಲೆ ಮಿಥ್ಯಾರೋಪವನ್ನು ಹೊರಿಸಿ ಆತನಿಗೆ ಮೃತ್ಯುದಂಡನೆಯನ್ನೂ ಇತ್ತುಬಿಟ್ಟಿದ್ದನು. ಕೊನೆಯಲ್ಲಿ ಈ ಋಷಿಯು ಒಂದು ವಿಲಕ್ಷಣವಾದ ಪ್ರಯೋಗವನ್ನು ಮಾಡಿ, ಜನರೆಲ್ಲರನ್ನೂ ವಿಸ್ಮಿತರನ್ನಾಗಿ ಮಾಡಿದ್ದು ಮಾತ್ರವಲ್ಲ; ಸೇಡನ್ನೂ ತೀರಿಸಿಕೊಂಡನು. ಅವನು ರಾಜನಿಗೆ ಒಂದು ಪುಸ್ತಕವನ್ನು ಬಹುಮಾನವಾಗಿ ಇತ್ತು, "ನೀನು ನನಗೆ ಮರಣ ಶಿಕ್ಷೆಯನ್ನಿತ್ತಿರುವೆ; ನಾನು ನಿನಗೆ ಒಂದು ಪುಸ್ತಕವನ್ನು ಉಡುಗೊರೆಯಾಗಿ ಕೊಡುತ್ತೇನೆ. ಇದರ ಮೂರು ಪುಟಗಳನ್ನು ತೆರೆದು, ಎಡಗಡೆಯ ಮೂರು ಪಙ್ತಿಗಳನ್ನು ಓದು. ನನ್ನ ತುಂಡರಿಸಿದ ತಲೆಯು ನಿನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರ ಹೇಳುವುದು." ಎಂದನು.

ಋಷಿಯ ತುಂಡರಿಸಲ್ಪಟ್ಟ ತಲೆಯನ್ನೊಂದು ಹರಿವಾಣದಲ್ಲಿಡಲಾಯಿತು. ರಕ್ತ ಪ್ರವಾಹವನ್ನು ತಡೆಯಲು ಅದರ ಮೇಲೆ ಒಂದು ವಿಧದ ವಸ್ತುವನ್ನೂ ಚೆಲ್ಲಲಾಯಿತು. ತಲೆಯು ರಾಜನೊಡನೆ ಕೇಳಿತು: "ಈಗ ನೀನು ಪುಸ್ತಕದ ಪುಟಗಳನ್ನು ತೆರೆ.' ರಾಜನು ಪುಸ್ತಕವನ್ನು ತೆರೆಯಬೇಕೆಂದು ತೊಡಗಿದಾಗ ಹಾಳೆಗಳು ಒಂದಕ್ಕೊಂದು ಅಂಟಿಕೊಂಡಿರುವುದು ಭಾಸವಾಯಿತು. ಬೆರಳುಗಳಿಗೆ ಅಂಟು ತಾಗಿಸಿ ಬಹು ಪ್ರಯತ್ನದೊಡನೆ ಪುಟಗಳನ್ನು ತೆರೆದನು. ಅಲ್ಲಿ ಏನೂ ಬರೆದಿರಲಿಲ್ಲ. ಈ ವಿಚಾರವನ್ನು ತಿಳಿಸಿದಾಗ ತಲೆಯು ಪುನಃ ಹೇಳಿತು—"ಇನ್ನೂ ಕೆಲವು ಪುಟಗಳನ್ನು ತೆರೆ." ರಾಜನು ಪುನಃ ಹೇಳಿದಂತೆ ಮೂರು ಪುಟ ತಿರುವಿದನು. ಪುಸ್ತಕದ ಪುಟಗಳು ವಿಷಮಯವಾಗಿದ್ದುವು; ಮೆಲ್ಲಮೆಲ್ಲನೆ ರಾಜನ ಶರೀರದಲ್ಲಿ ವಿಷದ ತೀವ್ರ ಪ್ರಭಾವವು ಬಿದ್ದು ಆತನನ್ನೇ ಆಹುತಿಗೊಂಡಿತು.

ಜಯಪುರದ ರಾಜ ಮಾಧೋಸಿಂಹನ ದತ್ತಪುತ್ರ ಸವಾಯಿ ಮಾಧೋ ಸಿಂಹನೊಡನೆ ಎರಡು ಪಾತ್ರೆಗಳಿದ್ದುವು. ಆಹಾರಕ್ಕಾಗಿ ತಂದಿರುವ ಆಹಾರ ಪದಾರ್ಥಗಳನ್ನು ಈ ಪಾತ್ರೆಗಳ ಸಹಾಯದಿಂದ ಪರಿಶೀಲಿಸಲಾಗುತಿತ್ತು. ಬಟ್ಟಲಿನಲ್ಲಿ ಆಹಾರಪದಾರ್ಥಗಳನ್ನೂ ಲೋಟೆಯಲ್ಲಿ ದ್ರವ ಪದಾರ್ಥವನ್ನೂ ಹಾಕಿ ಒಂದು ಸ್ವಲ್ಪ ಹೊತ್ತು ಇಟ್ಟು, ಅವು ಸ್ವೀಕರಿಸಲು ಯೋಗ್ಯವೇ ಅಯೋಗ್ಯವೇ ಎಂಬುದನ್ನು ಹೇಳುತಿದ್ದರು.

ಇದೇ ರೀತಿಯಲ್ಲಿ ರಾಣಾರ ಅಧಿಕಾರದ ವೇಳೆ ನೇಪಾಳದಲ್ಲಿ ಪೂಜಾರಿ ಜನರು ರಾಣಾರಿಗೆ ಚರಣಾಮೃತವನ್ನೀಯುತಿದ್ದರು. ಈಗಿನ ರಾಜನ ಅಜ್ಜಿಯ ಮೇಲೂ ಇಂತಹ ಪ್ರಯೋಗವೊಮ್ಮೆ ಆಗಿತ್ತಂತೆ. ಚರಣಾಮೃತ ಕುಡಿದೊಡನೆಯೇ ಆಕೆ ಇಹಲೋಕ ತ್ಯಜಿಸಿದಳು. ಅಂದಿನಿಂದ ಇವರು ಚರಣಾಮೃತವನ್ನು ತಲೆಗೆ ಮಾತ್ರ ಚಿಮುಕಿಸಿಕೊಳ್ಳುತ್ತಾರೆ.

ಅಮೇರಿಕೆಯ ಕವಿ ಹಾಥೋರ್ನನು ತನ್ನ ರೆಪಿಸ್ಸೀಸ್ ಡಾಕ್ಟರ್ ಎಂಬ ಪುಸ್ತಕದಲ್ಲಿ ವಿಷ ಕನ್ಯೆಯರ ವರ್ಣನೆ ಮಾಡಿದ್ದಾನೆ. ಅವನು ಒಬ್ಬ ಡಾಕ್ಟರರನ್ನು ವರ್ಣಿಸುತ್ತ ಅವರು ಹಲವಾರು ಬಾರಿ ವಿಷಪ್ರಯೋಗ ನಡೆಸಿದ ಓರ್ವ ನಾರಿಯನ್ನೂ ವಿವರಿಸುತ್ತಾನೆ. ಆದರೆ, ಡಾಕ್ಟರರ ಒಬ್ಬ ಮಿತ್ರ ಈ ವಿಷವೆಲ್ಲವನ್ನೂ ಏಕಕ್ಷಣದಲ್ಲಿ ನಾಶಮಾಡಬಲ್ಲ ಒಂದು ಔಷಧಿಯನ್ನೂ ತಯಾರಿಸಿಬಿಟ್ಟನು.

ಮತ್ಸ್ಯ ದೇಶದ ರಾಜನ ಸಂಬಂಧದ ಕಥೆಯೊಂದು ಕಥಾ ಸರಿತ್ಸಾಗರದಲ್ಲಿ ಬಂದಿದ್ದು ಅದು ಉಲ್ಲೇಖನೀಯವೂ ರೋಚಕವೂ ಆಗಿದೆ. ರಾಜಮಂತ್ರಿ ಯೌಗಂಧರಾಯಣನು ರಾಜನಿಗೆ ಮೊದಲು ವಾರಣಾಸಿಯ ರಾಜನಾದ ಬ್ರಹ್ಮದತ್ತನ ಮೇಲೆ ಆಕ್ರಮಣ ನಡೆಸಲು ಸಲಹೆಯೀಯುತ್ತಾನೆ ತನ್ನ ಹಲವಾರು ಗುಪ್ತಚಾರರನ್ನು ಮೊದಲು ವೇಶಾಂತರದಿಂದ ವಾರಣಾಸಿಗೆ ಕಳುಹಿಸುತ್ತಾನೆ. ಅಲ್ಲಿ ಅವರು ಜ್ಯೋತಿಷಿಗಳ ರೂಪದಲ್ಲಿ ಸೇರಿಬಿಡುತ್ತಾರೆ. ವತ್ಸ ರಾಜನು ದಂಡೆತ್ತಿಹೋದಾಗ, ಬ್ರಹ್ಮದತ್ತನ ಮಂತ್ರಿಯು ಶತ್ರುಗಳ ಮಾರ್ಗದಲ್ಲಿ ಜಾಲಹರಡಿಸುತ್ತಾನೆ. ದಾರಿಯ ಎಲ್ಲ ಮರಗಿಡ ಬಳ್ಳಿಹೂ ಹಣ್ಣುಹುಲ್ಲು ನೀರುಗಳೆಲ್ಲವುಗಳನ್ನೂ ವಿಷಾಸಕ್ತವನ್ನಾಗಿ ಮಾಡುತ್ತಾನೆ. ಅಲ್ಲದೇ ವಿಷಕನ್ಯೆಯರನ್ನು ಕರೆದು ನೃತ್ಯ ಮಾಡುವಂತೆ ಆಜ್ಞಾಪಿಸಿ ಕಳಿಸುತ್ತಾನೆ. ಆದರೆ, ಗುಪ್ತಚಾರರು ಈ ರಹಸ್ಯವನ್ನು ಭೇದಿಸುತ್ತಾರೆ; ಯೌಗಂಧರಾಯಣ ಬದುಕಿಕೊಳ್ಳುತ್ತಾನೆ.

ಇದೇ ರೀತಿಯಲ್ಲಿ ಓರ್ವ ವಿಷಕನ್ಯೆಯನ್ನು ಸಿಕಂದರನಲ್ಲಿಗೆ ಕಳುಹಿಸಿ, ಆತನು ಆಕೆಯಲ್ಲಿ ಆಸಕ್ತನಾಗುವಂತೆ ಮಾಡಿ ಕೊಲ್ಲುವ ಹಂಚಿಕೆ ನಡೆಯಿತೆಂದೂ ಅರಿಸ್ಟಾಟಲನು ಆತನನ್ನು ಉಳಿಸಿದನೆಂದೂ ಒಂದು ಕಥೆಯಿದೆ.

ಚಾಣಕ್ಯನ ಸಮಯದಲ್ಲಿ ವಿಷಕನ್ಯೆಯರ ಪ್ರಯೋಗ ಉಚಿತ ರೀತಿಯಿಂದಲೂ ಚಾಣಾಕ್ಷತೆಯಿಂದಲೂ ನಡೆಯುತಿತ್ತು. ವಿಶಾಖದತ್ತ ರಚಿತವಾದ ಮುದ್ರಾರಾಕ್ಷಸದಲ್ಲಿ ವಿಷಕನ್ಯೆಯ ಉಲ್ಲೇಖವಿದೆ. ಚಾಣಕ್ಯನೇ ಚಂದ್ರಗುಪ್ತನ ಮೂಲಕ ಮಲಯಕೇತುವೆಂಬ ಒಬ್ಬ ಪರ್ವತರಾಜನಲ್ಲಿಗೆ ವಿಷಕನ್ಯೆಯನ್ನು ಕಳಿಸಿದ್ದನು. ಮಧ್ಯಪ್ರದೇಶದಲ್ಲಿ ಪ್ರಚಲಿತವಿರುವ ಕಥೆಗಳಲ್ಲಿ ವಿಷಕನ್ಯೆಯರ ಯೋನಿಯಲ್ಲಿ ವಿಷದ ಹಲ್ಲು ಅಡಗಿದೆ ಎಂದು ಹೇಳಲಾಗಿದೆ. ಮಾವ ಕಂಸನಿಂದ ಕೃಷ್ಣನನ್ನು ಕೊಲ್ಲಲು ಕಳುಹಿಸಲ್ಪಟ್ಟ ರಾಕ್ಷಸಿಯಾದ ಪೂತನಿಯು ಕೂಡ ಒಂದು ರೀತಿಯ ವಿಷಕನ್ಯೆಯೇ ಆಗಿದ್ದಳು. ವಿಷಕನ್ಯೆಯರ ಮೊಲೆಯಲ್ಲಿ ವಿಷದ ಪ್ರಭಾವವಿದ್ದಿರಬಹುದು. ವಾತ್ಸಲ್ಯದ ಸೋಗಿನಲ್ಲಿ ಸಂಹಾರಕವೆನಿಸುವ ಈ ಪ್ರಯೋಗವು ರೋಮಾಂಚಕಾರಿಯೂ ಹೃದಯವಿದ್ರಾವಕವೂ ಆಗಿದೆ ಎಂದು ಹೇಳುವುದು ಅತಿಶಯೋಕ್ತಿಯಲ್ಲ.

ನಮ್ಮ ಪೂರ್ವಜರು ಹಲವಾರು ವಿದ್ಯಾಕಲೆಗಳಲ್ಲಿ ವಿಜ್ಞಾನಿಗಳಾಗಿದ್ದಂತೆಯೇ ವಿಷವಿಜ್ಞಾನದಲ್ಲಿಯೂ ಪಾರಂಗತರಾಗಿದ್ದರು. ಆದರೆ, ಇವರು ಸ್ವಾಭಾವತಃ ಶಾಂತಿಪ್ರಿಯರಾದುದರಿಂದ ಸಂಹಾರಾತ್ಮಕ ಪುರುಷಾರ್ಥವನ್ನು ತ್ಯಜಿಸಿ ರಚನಾತ್ಮಕ ಪುರುಷಾರ್ಥಗಳಲ್ಲಿಯೇ ತೊಡಗುತಿದ್ದರು. ಸಂಹಾರಾತ್ಮಕ ಪ್ರಯೋಗಗಳ ಉಲ್ಲೇಖ ಮಾಡಿರುವಲ್ಲೆಲ್ಲಾ ಅದಕ್ಕೆ ಪ್ರತಿಕಾರವನ್ನೂ ತೋರಿಸಿ ಬಿಟ್ಟಿದ್ದಾರೆ ಪನ್ನಗಾಸ್ತ್ರ (ಸರ್ಪಾಸ್ತ್ರ) ಪ್ರಯೋಗಕ್ಕೆ ವಿರುದ್ಧವಾಗಿ ಗರುಡಾಸ್ತ್ರ ಮತ್ತು ನಕುಲಾಸ್ತ್ರಗಳ ಪ್ರಯೋಗವೂ ಇವೆ. ಇದರಿಂದ ವಿಷಪ್ರಯೋಗ ಕೌಶಲದೊಡನೆ ವಿಷನಿರೋಧಕ ಶಕ್ತಿಯನ್ನೂ ಅವರು ಅಂಕೆಯಲ್ಲಿಟ್ಟುಕೊಳ್ಳುತಿದ್ದರೆಂದು ತಿಳಿಯಬಹುದು. ಇಂತಹ ಭಯಂಕರ ಪ್ರಯೋಗಗಳ ಉಪಯೋಗವನ್ನು ಜನರು ಮಾಡಬಾರದು; ಎಂಬ ಉದ್ದೇಶದಿಂದ ಈ ರೀತಿ ವರ್ತಿಸಿ ಪ್ರಪಂಚವನ್ನು ಸರ್ವನಾಶದಿಂದ ಉಳಿಸಿದರು.

ಪ್ರಾಚೀನಕಾಲದಲ್ಲಿ ನಮ್ಮ ದೇಶದಲ್ಲಿಯೂ ಸುಂದರಿಯರಾದ ವಿಷಕನ್ಯೆಯರ ಪ್ರಭಾವ ತುಂಬ ಇತ್ತು. ಭಾರತದಿಂದಲೇ ಈ ಹಾವಳಿಯು ಯೂರೋಪಿಗೂ ಪಸರಿಸಿತು. ಸರ್ಪಗಳಿಂದಲೂ ವಿಷಕನ್ಯೆಯರನ್ನು ಸಿದ್ಧಗೊಳಿಸಲಾಗುತ್ತಿತ್ತು. ಇವರು ಗರ್ಭಾವಸ್ಥೆಯಿಂದಲೇ ವಿಷಸಂಸ್ಕಾರಗಳ ಮೂಲಕ ಹುಟ್ಟಿಸಲ್ಪಡುತ್ತಿದ್ದರು. ಋತುಕಾಲಕ್ಕೆ ಮೊದಲು ಇವರ ತಾಯಿಗೆ ಕ್ರಮಯೋಗಾನುಸಾರವಾಗಿ ಅತಿ ತೀಕ್ಷ್ಣವಾದ ವಿಷವನ್ನು ಕುಡಿಸುತಿದ್ದರು. ಇದರಿಂದ ಅವರ ರಜಸ್ಸು ಪರಮ ವಿಷಮಯಿಯಾಗುತಿತ್ತು. ಗರ್ಭಸ್ಥಿತಿಯ ನಂತರ ಗರ್ಭಾವಸ್ಥೆಯೂ ಆ ಸ್ತ್ರೀಗೆ ವಿಷವನ್ನು ಕುಡಿಸುತಿದ್ದರು. ಈ ರೀತಿ ಗರ್ಭಿಣಿಯು ತೀವ್ರ ವಿಷಮಯಿಯಾಗಿ ಬಿಡುತಿದ್ದಳು. ಆಕೆಯ ಸ್ಪರ್ಶ ಮಾತ್ರದಿಂದಲೇ ಮರಣವು ಸಂಭವಿಸುವಂತಿತ್ತು.

ಹೆಚ್ಚಾಗಿ ಶತ್ರುಗಳ ನಾಶಕ್ಕಾಗಿಯೇ ಈ ವಿಷಕನ್ಯೆಯರನ್ನು ಉಪಯೋಗಿಸುತಿದ್ದುದರಿಂದ ಆ ಕಾಲದಲ್ಲಿ ಕೇವಲ ರಾಜಮಹಾರಾಜರಲ್ಲಿ ಇವರ ಪಡೆಯಿತ್ತು. ಶತ್ರುಗಳ ಸಮೀಪಕ್ಕೆ ಸುಂದರಿಯರಾದ ಈ ವಿಷಕನ್ಯೆಯರನ್ನು ಕಳುಹಿಸುವಾಗ, ಕಾಮಾಂಧರಾದ ಶತ್ರುಗಳು ಇವರ ಸ್ವೇದ ಸ್ಪರ್ಶದಿಂದಲೇ ಸತ್ತು ಹೋಗುತಿದ್ದರು. ಕೂಟನೀತಿ ವಿಶಾರದರಲ್ಲಿಯೂ ವಿಷಕನ್ಯೆಯರನ್ನು ಸಾಕಲಾಗುತಿತ್ತು. ಇವರ ಪ್ರಭಾವವು ಮನುಷ್ಯರ ಮೇಲೆ ಮಾತ್ರವಲ್ಲ ಮರಗಿಡಗಳು, ವನಸ್ಪತಿಗಳು ಹಾಗೂ

(೮ನೇ ಪುಟ ನೋಡಿರಿ)

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2 00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ.ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ. ಡಿ. ಮು. ಕೋರ್ಟಿನಲ್ಲಿ
S. C. 380/1959.

B. ಹಸನ್ ಸಾಹೇಬ —ವಾದಿ.

ಮತ್ತು

ಗಣಪ ಪಿ. ಬಂಗೇರ— ಪುಟ್ಟು ಮರಕಾಲನ ಮಗ, ಉಡುಪಿ ತಾಲ್ಲೂಕು ಕೋಡಿ ಗ್ರಾಮದ ಬೇಂಗ್ರೆ — ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ವಾದಿಗೆ ಪ್ರತಿವಾದಿಯು ತಾ. 18-7-56 ರಲ್ಲಿ ರೂಪಾಯಿ 350/-ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಆವೇಜು ಕೇಳಿ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾ. 26—11—59ಕ್ಕೆ ನಿಮ್ಮ ನೋಟೀಸು ಬಗ್ಗೆಯಿಟ್ಟಿದೆ. ಆ ಕುರಿತು ಉದಾಹರಿಸುವಂತಾದಿದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು.

(By Order of the Court)
P. N. Krishnamurthi Rao.
Advocate for Plaintiff.
Udipi Dated 16—11—59.

ನಾವು ಬಹಳಷ್ಟು ಓದಬಹುದು; ಆದರೆ ಕೇವಲ ಓದಿದೊಡನೆಯೇ ಎಂದಿಗೂ ವಿದ್ವಾಂಸರಾಗಲಾರೆವು; ನಾವು ತಿಳಿದುಕೊಂಡಿರುವುದರ ಮೊತ್ತವು ಅತ್ಯಧಿಕವಾಗಿದ್ದರೆ ಮಾತ್ರ ವಿದ್ವಾಂಸರಾಗಬಲ್ಲೆವು.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ತಾರೀಕು	ವಾರ
೩೯	೧೯-೧೧-'೫೯	೧೨

ಖಾಸಗಿ ಶಿಕ್ಷಣ ಸಂಸ್ಥೆಗಳು

ಕೇಂದ್ರ ಸರಕಾರದ ಶಿಕ್ಷಣ ಮಂತ್ರಿ ಡಾ| ಕೆ. ಎಲ್. ಶ್ರೀಮಾಲಿಯವರು ಜಲಂಧರದ ಒಂದು ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತ ಸೆಕೆಂಡರಿ ಶಿಕ್ಷಣವು ಖಾಸಗಿ ಆಡಳಿತೆಯಲ್ಲಿಯೇ ಉಳಿಯುವಂತಾಗಲು ಯಾವ ಕ್ರಮವನ್ನಾದರೂ ಕೈಗೊಳ್ಳಲು ಸರಕಾರವು ಇಚ್ಛಿಸುತ್ತಿದೆ ಎಂಬುದಾಗಿ ತಿಳಿಸಿರುವರು. ಇಂತಹ ಖಾಸಗಿ ಸಂಸ್ಥೆಗಳಿಗೆ ಸರಕಾರವು ಉದಾರ ಸಹಾಯಧನವನ್ನು ನೀಡಬೇಕೆಂದವರು ಹೇಳಿ, ಸರಕಾರಿ ಸಂಸ್ಥೆಗಳಿಗಿಂತ ಖಾಸಗಿ ಶಿಕ್ಷಣ ಸಂಸ್ಥೆಗಳು ಉತ್ತಮ ರೀತಿಯಲ್ಲಿ ನಡೆಸಲ್ಪಡುತ್ತಿವೆ ಎಂದೂ ಅಭಿಪ್ರಾಯಪಟ್ಟರು. ಪತ್ರಿಕಾಕರ್ತರೊಡನೆ ಮಾತನಾಡುತ್ತಿದ್ದ ಮಾನ್ಯ ಮಂತ್ರಿವರ್ಯರು ಸರಕಾರದ ನೀತಿಯೊಡನೆ ತನ್ನ ಸ್ವಂತಾಭಿಪ್ರಾಯವನ್ನೂ ವ್ಯಕ್ತಪಡಿಸಿದ್ದರೂ ಈ ಅಭಿಪ್ರಾಯವು ಸ್ವಾಗತಾರ್ಹವಾಗಿದೆ ಮತ್ತು ವ್ಯವಹೃತಗೊಳಿಸಲೂ ತಕ್ಕುದಾಗಿದೆ.

ಪ್ರಾಥಮಿಕ ಶಿಕ್ಷಣವನ್ನು ಕೊಡುವ ಹೊಣೆಗಾರಿಕೆಯನ್ನು ಸರಕಾರವೇ ತಾನಾಗಿ ವಹಿಸಿಕೊಂಡಿದೆ. ೬ರಿಂದ ೧೧ ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣವನ್ನು ಅನಿವಾರ್ಯವಾಗಿ ಈಯುವ ಗುರಿಯನ್ನಿಟ್ಟುಕೊಂಡು ಇದಕ್ಕಾಗಿ ಹೇರಳ ಧನವನ್ನು ಈಗ ವಿನಿಯೋಗಿಸುತ್ತಿದೆ. ಮಾಧ್ಯಮಿಕ ಶಿಕ್ಷಣವು ಕಡ್ಡಾಯವಾಗಿಲ್ಲದಿರುವುದರಿಂದ, ಈ ಸಂಬಂಧದ ಉತ್ತರದಾಯಿತ್ವವನ್ನು ಸರಕಾರವು ಹೊರಬೇಕಾಗಿಲ್ಲ. ಇಂದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಇಡಿ ಭಾರತದಲ್ಲಿಯೇ ಶೈಕ್ಷಣಿಕ ಕ್ಷೇತ್ರದಲ್ಲಿ ಖಾಸಗಿ ವಿಭಾಗದ ಸೇವೆಯು ಉತ್ತಮ ರೀತಿಯಲ್ಲಿ ನಡೆಯುತ್ತಿರುವುದಕ್ಕೆ ಕೇಂದ್ರೀಯ ವಿದ್ಯಾಸಚಿವರ ಅಭಿಪ್ರಾಯವೇ ಸಾಕ್ಷಿಯಾಗಿದೆ. ಸರಕಾರಿ ವಿದ್ಯಾಸಂಸ್ಥೆಗಳಿಗಿಂತ ಖಾಸಗಿ ವಿದ್ಯಾಸಂಸ್ಥೆಗಳ ವಿದ್ಯಾಭ್ಯಾಸದ ಮಟ್ಟವು ಉತ್ತಮವಾಗಿದೆ ಎಂಬುದು ಅನುಭವ ವೇದ್ಯವಾಗಿದೆ. ಹಾಗಿರುವಾಗ ಇಂತಹ ಉಪಯುಕ್ತ ಸೇವೆಯನ್ನು ಸಲ್ಲಿಸುವ ಖಾಸಗಿ ವಿಭಾಗವನ್ನು ಸರಕಾರವು ನಿಜವಾಗಿಯೂ ಪ್ರೋತ್ಸಾಹಿಸುವುದು ಅಗತ್ಯ. ನೂರಕ್ಕೆ ನೂರರಷ್ಟು ಸಹಾಯವನ್ನು ಸರಕಾರವೇ ನೀಡುವುದಾದರೂ ಆಡಳಿತೆಯನ್ನು ಖಾಸಗಿ ಕ್ಷೇತ್ರಕ್ಕೇನೇ ಕೊಡುವುದರಿಂದ ಉತ್ತಮ ಪರಿಣಾಮ ದೊರೆಯಬಹುದಾದುದರಿಂದ ಮಾಧ್ಯಮಿಕ ಶಾಲೆಗಳನ್ನು ಖಾಸಗಿ ಕ್ಷೇತ್ರದಲ್ಲಿಯೇ ಉಳಿಯಲು ಆಸ್ಪದವನ್ನು ಕಲ್ಪಿಸಿಕೊಡಬೇಕೆಂಬುದೇ ಡಾ| ಶ್ರೀಮಾಲಿಯವರ ಮಾತಿನ ಅರ್ಥವಾಗುತ್ತದೆ. ವಿದ್ಯಾಭ್ಯಾಸದ ಹೊಣೆಗಾರಿಕೆಯು ರಾಜ್ಯಸರಕಾರಕ್ಕೆ ಸೇರಿರುವುದರಿಂದ, ಎಲ್ಲ ರಾಜ್ಯಸರಕಾರಗಳೂ ಈ ಮಾತಿನ ಸತ್ಯಾಸತ್ಯತೆಯನ್ನು ಗಮನಿಸಬೇಕು. ಮುಖ್ಯವಾಗಿ ಸರಕಾರವೇ ಹೆಚ್ಚಾಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಮತ್ತು ನಡೆಸಲು ಹವಣಿಸುತ್ತಿರುವ ಮೈಸೂರಿನ ಸರಕಾರವು ಇದನ್ನು ಲಕ್ಷ್ಯಪೂರ್ವಕವಾಗಿ ಅಭ್ಯಸಿಸಬೇಕು. ಹೊಸತಾಗಿ ತೆರೆಯಬಹುದಾದ ಪ್ರಾಥಮಿಕ ಶಾಲೆಗಳನ್ನು ಬೇಕಾದರೆ, ಸರಕಾರವೇ ನಡೆಸಿಕೊಂಡು ಬರಲಿ; ಈಗ ಹಲವಾರು ವರ್ಷಗಳಿಂದ ಉತ್ತಮ ರೀತಿಯಲ್ಲಿ ನಡೆಸಲ್ಪಡುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಸರಕಾರವು ಪ್ರೋತ್ಸಾಹವನ್ನು ಕೊಡಬೇಕು. ಶಾಲೆಗಳನ್ನು ಅವು ಪ್ರಾಥಮಿಕವಿರಲಿ ಅಥವಾ ಮಾಧ್ಯಮಿಕವೇ ಸರಕಾರವು ನಡೆಸುವುದಕ್ಕಿಂತ ಉನ್ನತ ಮಟ್ಟದಲ್ಲಿ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗಳು ಈಗ ನಡೆಸಿಕೊಂಡು ಬರುತ್ತಿರುವುದನ್ನು ನಾವು ನೋಡುತ್ತೇವೆ. ಮೈಸೂರು ಸರಕಾರವು ಸಹಾಯಧನ ನಿಯಮಗಳನ್ನು ಪುನಾರಚಿಸುವಾಗ ಇಂತಹ ಖಾಸಗಿ ಸಂಸ್ಥೆಗಳಿಗೆ ನೀಡುವ ಸಹಾಯಧನದ ಮೊತ್ತವು ನೂರಕ್ಕೆ ನೂರಾಗಿಡುವುದಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಆದುದರಿಂದ ಈ ಸಂದರ್ಭದಲ್ಲಿ ಈ ಸಹಾಯಧನದ ಮೊತ್ತವನ್ನು ನೂರಕ್ಕೆ ನೂರಾಗಿಡುವುದು ಅವಶ್ಯವೆಂದೂ ಇಲ್ಲವಾದರೆ, ಈಗ ಸುವ್ಯವಸ್ಥಿತ ರೀತಿಯಲ್ಲಿ ನಡೆದುಕೊಂಡು ಬರುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಬಲವಾದ ಪೆಟ್ಟು ಬಿದ್ದು, ಅವುಗಳನ್ನೂ ಸರಕಾರವೇ ನೋಡಿಕೊಳ್ಳಬೇಕಾಗಿ ಬರುವುದು ಸಂಭವನೀಯವೆಂದೂ ಸೂಚಿಸಬಯಸುತ್ತೇವೆ. ಸುಧಾರಣೆ, ನವೀನತೆ ಅಭಿವೃದ್ಧಿಯ ಹೆಸರಿನಲ್ಲಿ ಈಗಿರುವ ಉತ್ತಮ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀಳದಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯವಾಗಿದೆ.

ಖಾಸಗಿ ಶಿಕ್ಷಣಸಂಸ್ಥೆಗಳ ವ್ಯವಸ್ಥಾಪಕರು, ಅಧ್ಯಾಪಕರ ಶೋಷಣೆ ಮತ್ತು ಅವರ ಹಕ್ಕುಗಳ ಬಗ್ಗೆ ಅಮಾನ್ಯತೆಯಲ್ಲಿ ನಿರತರಾಗದಂತೆ ಮತ್ತು ಇದರಿಂದಾಗಿ ಅಧ್ಯಾಪಕರಿಗೆ ಯಾವ ರೀತಿಯ ಅಭದ್ರತೆ ಮತ್ತು ಶೋಷಣೆಯು ಅನುಭವವಾಗದಂತೆ ಸರಕಾರವು ಕಟ್ಟುನಿಟ್ಟಿನ ನಿಯಂತ್ರಣವನ್ನಿಡುವುದು ಮಾನ್ಯ ಮಂತ್ರಿವರ್ಯರೆಂದಂತೆ ಉಚಿತವಾದುದು. ಆದರೆ, ಇಷ್ಟು ಹೇಳಿದ ಮಾತ್ರಕ್ಕೆ ಸರಕಾರವೇ ಶಿಕ್ಷಣ ಸಂಸ್ಥೆಗಳನ್ನು ನಡೆಸಬೇಕೆಂದೂ ಈಗ ಖಾಸಗಿ ಕ್ಷೇತ್ರದಲ್ಲಿರುವ ಸಂಸ್ಥೆಗಳೆಲ್ಲವನ್ನೂ ಸರಕಾರವೇ ವಹಿಸಬೇಕೆಂದೂ ಎಂದಿಗೂ ಅರ್ಥ ಹುಟ್ಟಲಾರದು. ಶಾಲೆಗಳ ವ್ಯವಸ್ಥಾಪಕರು ಉತ್ತಮ ರೀತಿಯಲ್ಲಿ ತಮ್ಮ ಶಾಲೆಗಳನ್ನು ನಡೆಸಲು ಅಸಮರ್ಥರಾದರೆ, ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಹಿತಚಿಂತನೆಗೆ ವ್ಯತ್ಯಯವನ್ನು ತೋರಿಸಿದರೆ, ತಾನು ಅದನ್ನು ಉತ್ತಮ ಹಾಗೂ ಸಮರ್ಥ ರೀತಿಯಲ್ಲಿ ನಡೆಸುವ ಧೈರ್ಯವಿದ್ದರೆ, ಸರಕಾರವು ಅಂತಹ ಶಾಲೆಗಳನು ತನ್ನ ಕೈಗೆ ತೆಗೆದುಕೊಳ್ಳಬಹುದು. ಅದು ಹೊರತು, ರಾಷ್ಟ್ರಕ್ಕೆ ಉದಾತ್ತವಾದ ಮತ್ತು ಅತ್ಯಂತಾವಶ್ಯಕವಾದ ಸೇವೆಯನ್ನು ಯಥಾಯೋಗ್ಯವಾಗಿ ನಿರ್ವಹಿಸುವ ಖಾಸಗಿ ವಿದ್ಯಾಸಂಸ್ಥೆಗಳ ಬೆನ್ನಿಗೆ ಗುದ್ದುವ ಹಂಚಿಕೆಯನ್ನು ಮಾತ್ರ ಮಾಡದಿರಲಿ.

ಸಂಕ್ಷಿಪ್ತ ಸುದ್ದಿಗಳು

ಹಿಮಾಲಯವೇ ಭಾರತ ಸೀಮೆ.

ಚೀನಾ–ಭಾರತ ಸೀಮಾ ಪ್ರಶ್ನೆಯ ಬಗ್ಗೆ ಭಾರತ ಸರಕಾರವು ಈಗ ದ್ವಿತೀಯ ಶ್ವೇತ ಪತ್ರವೊಂದನ್ನು ಪ್ರಕಟಿಸಿದ್ದು ಇದರಲ್ಲಿ ಸಪ್ತಂಬರ ಮತ್ತು ಅಕ್ಟೋಬರ ತಿಂಗಳಲ್ಲಿ ಉಭಯ ಸರಕಾರಗಳ ನಡುವೆ ನಡೆದ ಪತ್ರವ್ಯವಹಾರಾದಿಗಳನ್ನು ಪ್ರಕಟಿಸಲಾಗಿದೆ. ಈ ಶ್ವೇತಪತ್ರದಲ್ಲಿ ಭಾರತದ ಉತ್ತರ ಸೀಮೆಯು ಹಿಮಾಲಯ ಪರ್ವತವೇ ಆಗಿದೆ ಎಂದೂ ಇದಕ್ಕೆ ಪುರಾಣ ಮತ್ತು ಚರಿತ್ರೆಯ ಆಧಾರವಿರುವುದೆಂದೂ ಪ್ರತಿಪಾದಿಸಲಾಗಿದೆ.

ಪೋಲೀಸರ ಬಿಡುಗಡೆ

ಚೀನವು ತಾನು ಬಂಧಿಸಿದ್ದ ಭಾರತೀಯ ಪೋಲೀಸರನ್ನು ಇದೀಗ ಬಿಡುಗಡೆಗೊಳಿಸಿದೆ. ಅಕ್ಟೋಬರ ೨೧ರಂದು ನಡೆದಿದ್ದ ದುರ್ಘಟನೆಯ ಕೆಲವೇ ದಿನಗಳಲ್ಲಿ ಚೀನಿ ಸರಕಾರವು ಅವರನ್ನು ಬಿಟ್ಟುಬಿಡಲು ಒಪ್ಪಿದ್ದರೂ ಭಾರತ ಸರಕಾರದ ಶಿಷ್ಟಮಂಡಳವು ಒಂದು ವಾರಕ್ಕೆ ಮೊದಲೇ ತೆರಳಿದ್ದರೂ ಬಂಧಿತರನ್ನು ಒಪ್ಪಿಸುವಾಗ ಮಾತ್ರ ತುಂಬ ತಡವಾಗಿರುತ್ತದೆ.

ಮುಂಬಯಿ ರಾಜ್ಯ ವಿಭಜನೆ

ಮುಂಬಯಿ ದ್ವಿಭಾಷಾರಾಜ್ಯವನ್ನು ಎರಡು ಏಕಭಾಷಾ ಘಟಕಗಳಾಗಿ ವಿಭಜಿಸುವ ಯೋಜನೆಯು ತೀವ್ರವಾಗಿ ಮುಂದುವರಿಯುತ್ತಿವೆ; ಮುಂದಿನ ಎಪ್ರಿಲ್ ತಿಂಗಳ ಒಳಗೆ ಈ ರಾಜ್ಯಗಳು ಪ್ರತ್ಯೇಕಿಸಲ್ಪಡುವುವೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಇದಕ್ಕೆ ಬೇಕಾದ ಕಾರ್ಯಕ್ರಮಗಳು ತೀವ್ರವಾಗಿ ನಡೆಯುತ್ತದೆ.

ಜನಸಂಖ್ಯಾ ಸಮಸ್ಯೆ

ಕೊಲಂಬೋ ಯೋಜನೆಯ ೧೧ ರಾಷ್ಟ್ರಗಳ ಪ್ರತಿನಿಧಿಗಳ ಪರಿಷತ್ತು ಜೋಗ್ಜಕಾರ್ತದಲ್ಲಿ ಸಭೆ ಸೇರಿ ಯೋಜನೆಯ ಕಾರ್ಯಕಲಾಪಗಳನ್ನು ವಿಮರ್ಶಿಸಿದರು. ಆಗ್ನೇಯ ಏಷ್ಯದಲ್ಲಿ ಜನಸಂಖ್ಯೆಯು ಹೆಚ್ಚುವಳಿಯು ಒಂದು ದೊಡ್ಡ ಸಮಸ್ಯೆಯಾಗಿದ್ದು ಇದನ್ನು ಯಶಸ್ವಿಯಾಗಿ ಎದುರಿಸುವುದು ಅತ್ಯಗತ್ಯ ಎಂದು ಇದು ಅಭಿಪ್ರಾಯಪಟ್ಟಿದೆ.

ಶಿಸ್ತು ಭಂಗಿಸಿದರು!

ಚೀನ ಗಡಿ ಸಮಸ್ಯೆಯ ಸಂಬಂಧದಲ್ಲಿ ಸಾರ್ವಜನಿಕವಾಗಿ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದ ಶ್ರೀ ಎಸ್. ಎ. ಡಾಂಗೆ ಅವರೂ ಮಹಾರಾಷ್ಟ್ರ ಘಟಕದ ಕಾರ್ಯದರ್ಶಿಯವರಾದ ಶ್ರೀ ಎಸ್. ಬಿ. ಸರದೇಸಾಯಿ ಅವರೂ ಶಿಸ್ತುಭಂಗ ಮಾಡಿರುವರೆಂದು ಭಾರತೀಯ ಕಮ್ಯುನಿಸ್ಟ ಪಕ್ಷದ ರಾಷ್ಟ್ರೀಯ ಮಂಡಳವು ಒಂದು ನಿರ್ಣಯವನ್ನು ಸ್ವೀಕರಿಸಿ, ಅವರ ಮೇಲೆ ನಿಂದ್ಯಾವ್ಯಂಜನೆ ಮಾಡಿತು. ಇವ

ಸಫಲ ಸಂಚಾರ

ಬೇಂಕಿಂಗ್ ಮತ್ತು ವಿದ್ಯಾಕ್ಷೇತ್ರಗಳಲ್ಲಿ ಅತ್ಯದ್ಭುತ ಸಾಹಸಕಾರ್ಯವನ್ನು ಮಾಡಿ ತೋರಿಸಿದ ಡಾ| ಟಿ. ಮಾಧವ ಪೈ ಅವರು ಇತ್ತೀಚೆಗೆ ಇಂಗ್ಲೆಂಡ್, ಅಮೆರಿಕೆ, ಜರ್ಮನಿ, ಫ್ರಾನ್ಸ್, ಇಟಲಿ ಮೊದಲಾದ ಹಲವು ದೇಶಗಳನ್ನು ಸಂಚರಿಸಿ, ತಾಯೂರಿಗೆ ಮರಳಿ ಬಂದಿದ್ದಾರೆ. ಡಾ| ಮಾಧವ ಪೈ ಅವರು ತಮ್ಮ ಸಂಚಾರಾವಧಿಯಲ್ಲಿ ಹಲವಾರು ಮಾದರಿಯ ಹಲವಾರು ಮುಖಗಳ ಪರಿಚಯವನ್ನು ಮಾಡಿಕೊಂಡಿದ್ದು, ಅಲ್ಲಿನ ವಿವಿಧ ವರ್ಗದ ಜನತೆಯ ಜೀವನವನ್ನೂ ಅಭ್ಯಸಿಸಿ ಬಂದಿರುವರು; ಸಮಾಜ ಜೀವನದ ಕುರಿತಾಗಿ ಒಂದೇ ಮಾತು ಹೇಳುವುದಾದರೆ, "ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನರು ಉದ್ಯಮಶೀಲರಾಗಿದ್ದಾರೆ, ವಿಶೇಷವಾಗಿ ಭೌತಿಕ ಅಭಿವೃದ್ಧಿಯನ್ನು ಸಾಧಿಸಿಕೊಂಡಿದ್ದಾರೆ; ನಾವು ಉಚಿತ ರೀತಿಯಲ್ಲಿ ಮತ್ತು ಪ್ರಮಾಣದಲ್ಲಿ ಈ ಭೌತಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬಹುದು; ಆ ದೇಶಗಳ ಜನರು ಭೌತಿಕವಾಗಿ ಸಂಪನ್ನರಾಗಿದ್ದರೂ ಆಧ್ಯಾತ್ಮಿಕವಾಗಿ ನಾವೇ ಸಂಪನ್ನರು!"— ಡಾ| ಮಾಧವ ಪೈಯವರು ತಾವು ವಿದೇಶಗಳಲ್ಲಿ ಕಂಡುಕೊಂಡ ವಿಶೇಷತೆಯಲ್ಲಿ ಜೊಳ್ಳನ್ನು ಬಿಟ್ಟು ಉತ್ತಮವಾಗಿರುವುದನ್ನು ನಮ್ಮಲ್ಲಿಯೂ ಕಾರ್ಯರೂಪದಲ್ಲಿ ತರಲು ಸಮರ್ಥರು ಎಂಬುದು ನಿಸ್ಸಂಶಯ. ತಮ್ಮ ಪ್ರಕೃತದ ವಿದೇಶ ಸಂಚಾರಾನುಭವದ ಪ್ರಯೋಜನವನ್ನು ನಮಗೆಲ್ಲರಿಗೂ ಉಣಿಸಲು ಡಾ| ಪೈ ಸಮರ್ಥರೇ ಎಂಬುವನ್ನು ಬೇರೆ ಹೇಳಬೇಕಾಗಿಲ್ಲ.

ಉಡ್ಪಿ. ಡಿ. ಮು. ಕೋರ್ಟಿನಲ್ಲಿ

O. S. 156/1959

ಪರಮೇಶ್ವರ ಶೆಟ್ಟಿ —ವಾದಿ.

ಮತ್ತು

1. ಶೇಷಿ ಶೆಡ್ತಿ-ಸಂಕಮ್ಮ ಶೆಡ್ತಿ ಮಗಳು—
2. ದೂಮಂಣ ಶೆಟ್ಟಿ 3. ರಾಧಮ್ಮ ಶೆಡ್ತಿ
4. ಜಲಜ ಶೆಡ್ತಿ–ಶೇಷಿ ಶೆಡ್ತಿ ಮಕ್ಕಳು— ಉಡ್ಪಿ ತಾಲ್ಲೂಕು ನಾಲ್ಕೂರು ಗ್ರಾಮದ ಮೂಡಹರಿಮಕ್ಕಿಯಲ್ಲಿರುವವರು.

— ಪ್ರತಿವಾದಿರು

ಸದ್ರಿ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದ್ರೆ:

ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿರು ವಾದಿಗೆ ಸಲತಕ್ಕ ಮನ್ಮಥ ಸಂ|ರದ ಲಾಗಾಯ್ತು ಹೇವಿಳಂಬಿ ಸಂ|ರದವರೇಗಿನ ಗೇಣಿ ಬಾಕಿ ಮಾಡಿಕೊಂಡಿರುವುದರಿಂದ ಆ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾ. 25.11.59 ರಲ್ಲು ತನ್ಖಿ ಬಗ್ಗೆ ಯಿಟ್ಟಿದೆ. ಆ ಕುರಿತು ನಿಮಗೇನಾದರೂ ಉಜಾಹರಿಸುವಂತ್ಯದಿದ್ದರೆ ಆ ದಿವಸ ಈ ಕೋರ್ಟಿನ ಮುಂದೆ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲ್ಪಡುವುದು.

(By Order of the Court)

P. N. Krishnamurthi Rao.
Advocate for Plaintiff
Udipi Dated 16—11—59

ರಿಬ್ಬರೂ ತಪ್ಪು ಅಪರಾಧವನ್ನು ಒಪ್ಪಿಕೊಂಡಿರುವರೆಂದು ತಿಳಿಯುತ್ತದೆ.

ನೆಹರೂ— ಒಂದು ಅಧ್ಯಯನ

ನೆಹರು ಜಯಂತಿಯ ಸಂದರ್ಭದಲ್ಲಿ ಶ್ರೀ ಪಂಡಿತ ನೆಹರೂರವರ ಕುರಿತಾಗಿ ಹಲವಾರು ವಂದನೀಯ ಲೇಖಕರಿಂದ ಬರೆಯಲ್ಪಟ್ಟ ಲೇಖನ ಮಾಲೆಯನ್ನು ಸಂಪಾದಿಸಿ ದಿ ಟಾಯ್ಸ್ಸ್ ಆಫ್ ಇಂಡಿಯಾ ಪತ್ರಿಕಾ ಗುಂಪಿನವರು 'ಎಸ್ಟಡಿ ಆಫ್ ನೆಹರು' ಎಂಬ ಹೆಸರಿನಲ್ಲಿ ಪ್ರಸಿದ್ಧಿಸಿರುವರು. ಈ ಗ್ರಂಥಕ್ಕೆ ಡಾ। ರಾಜೇಂದ್ರ ಪ್ರಸಾದರು ಮುನ್ನುಡಿಯನ್ನು ಬರೆದಿದ್ದು ರಾಣಿ ಎಲಿಜಬೆಥರಿಗೆ ಅರ್ಪಿಸಲಾಗಿತ್ತು.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ತಾಲೂಕು ಸಹಕಾರ ಮಾರಾಟ ಸಂಘದ ಸಭೆ— ನಿಯೋಜಿತ ಉಡುಪಿ ತಾಲೂಕು ಸಹಕಾರ ಮಾರಾಟ ಸಂಘದ ಪ್ರಾಥಮಿಕ ಸಭೆಯೊಂದು ತಾ. 14 ರಂದು ಉಡುಪಿ ಸಹಕಾರಿ ಯೂನಿಯನಿನ ಸಭಾಂಗಣದಲ್ಲಿ ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ತಾಲೂಕಿನ ಕೃಷಿಕರ ಸಹಕಾರ ಸಂಘದ ಪ್ರತಿನಿಧಿಗಳು ಮತ್ತು ಇನ್ನಿತರ ಕೃಷಿಕರು ಸೇರಿದ್ದರು. ಆ ರಂಭದಲ್ಲಿ ಶ್ರೀ ಕೆ. ಗಣಪಯ್ಯ ಶೆಟ್ಟರು ಮತ್ತು ಸಹಕಾರ ಸಂಘಗಳ ಸಬ್ ರಿಜಿಸ್ಟ್ರಾರರು ಸಂಘದ ಉದ್ದೇಶಗಳನ್ನು ವಿವರಿಸಿದರು. ಸಹಕಾರಿ ಸಂಘಗಳ ಎಡ್‌ಮಿನಿಸ್ಟ್ರೇಟಿವ್ ಇನ್ಸ್‌ಪೆಕ್ಟರ್ ಶ್ರೀ ಎಚ್. ಡಿ. ಶೆಣೈಯವರು ಉಪನಿಬಂಧನೆಗಳನ್ನು ಓದಿ ಹೇಳಿದರು. ಶ್ರೀ ಟಿ. ಎ. ಪೈಗಳು ಉಡುಪಿ ತಾಲೂಕಿಗೊಂದು ಸಹಕಾರ ಮಾರಾಟ ಸಂಘವು ಅವಶ್ಯಕವೆಂದೂ ಸಹಕಾರಿಗಳು ಆ ಸಂಸ್ಥೆಯ ಉಪಯೋಗವನ್ನು ಪಡೆಯಬೇಕೆಂದೂ ಹೇಳಿದರು. ಸಹಕಾರಿ ಸಂಘಗಳ ರಿಜಿಸ್ಟ್ರಾರರು ಈ ಮಾರಾಟ ಸಂಘಕ್ಕೆ ಅಕ್ಕಿ ಮಿಲ್‌ನ್ನು ತೆರೆಯಲು ಸಹಾಯಧನ ಕೊಡುವ ಆಶ್ವಾಸನೆ ಇತ್ತಿರುವುದಾಗಿಯೂ ಶ್ರೀ ಪೈಗಳವರು ತಿಳಿಸಿದರು.

ನಿಯೋಜಿತ ಮಾರಾಟ ಸಂಘದ ಬಗ್ಗೆ ಎಂಟು ಮಂದಿಯುಳ್ಳ ಒಂದು ತಾತ್ಕಾಲಿಕ ಸಮಿತಿಯನ್ನು ರಚಿಸಲಾಯಿತು. ಪಾಲು ಹಣವನ್ನು ವಸೂಲು ಮಾಡುವರೆ ಕನ್‌ವೀನರ್ ಶ್ರೀ ಪಿ. ವಿಠಲ ಶೆಟ್ಟರಿಗೆ ಅಧಿಕಾರ ಕೊಡಲಾಯಿತು. ಕೊನೆಗೆ ಶ್ರೀ ಕೆ. ಗಣಪಯ್ಯ ಶೆಟ್ಟರು ಧನ್ಯವಾದವಿತ್ತರು.

ಉಡುಪಿ ಯಕ್ಷಗಾನ ಕಲಾ ಮಂಡಲದ ಪ್ರಧಾನ ಕಾರ್ಯಾಲಯದಲ್ಲಿ ಲಕ್ಷದೀಪದ ಅಂಗವಾಗಿ ತಾ. 12_11_59ರಿಂದ 15_11_59ರ ವರೆಗೆ ಜರಗಿದ ಯಕ್ಷಗಾನ ಗೋಷ್ಠಿಯಲ್ಲಿ ಹಲವು ಯಕ್ಷಗಾನ ಸಂಘಗಳು ಭಾಗ ವಹಿಸಿದ್ದವು ತಾ. 12_11_59 ರಲ್ಲಿ ಉಡುಪಿಯ ಯಕ್ಷಗಾನ ಕಲಾಮಂಡಲದವರಿಂದ ಶ್ರೀ ಕೃಷ್ಣ ಸಂಧಾನವೂ ತಾ. 13_11_59ರಲ್ಲಿ ಪಕ್ಕಾರಿನ ಯಕ್ಷಗಾನ ಸಂಘದವರಿಂದ ಅಂಗದ ಸಂಧಾನವೂ ತಾರೀಕು 14_11_59ರಲ್ಲಿ ಗುಂಡಿಬೈಲು ಶ್ರೀ ಯು. ರಾಮದಾಸಾಚಾರ್ಯರ ಜಯಲಕ್ಷ್ಮೀ ಭವನದಲ್ಲಿ ಯಕ್ಷಗಾನ ಕಲಾಮಂಡಲದ ಪ್ರಧಾನ ಅರ್ಥಧಾರಿಗಳಿಂದ ಕೃಷ್ಣಾರ್ಜುನ ಕಾಳಗ ಮತ್ತು ವಾಲಿಮುಕ್ತಿಯೆಂಬ ಯಕ್ಷಗಾನ ಕೂಟವೂ ತಾ. 15_11_59ರಲ್ಲಿ ಸಂಘದ ಪ್ರಧಾನ ಕಾರ್ಯಾಲಯದಲ್ಲಿ ಅಂಬಲಪಾಡಿ ಸಂಘದವರಿಂದ ಶಶಿಪ್ರಭಾಪರಿಣಯವೆಂಬ ಯಕ್ಷಗಾನ ಕೂಟವೂ ಯಕ್ಷಗಾನ ಕಲಾಮಂಡಲದ ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಶೆಟ್ಟಿಯವರ ಮುಂದಾಳುತನದಲ್ಲಿ ಜರಗಿದ ಈ ಯಕ್ಷಗಾನ ಗೋಷ್ಠಿಯಲ್ಲಿ ಹಲವು ಹಿರಿಯ ಮತ್ತು ಕಿರಿಯ ಕಲಾವಿದರು ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಯ ದಿನದಲ್ಲಿ ಯಕ್ಷಗಾನ ಕಲಾಮಂಡಲದ ಅಧ್ಯಕ್ಷರಾದ ಪೊಲ್ಯ ದೇಜು ಶೆಟ್ಟಿಯವರು ಲಕ್ಷದೀಪದ ಪುಣ್ಯ ದಿನಗಳಲ್ಲಿ ಭಾಗ ವಹಿಸಿದ ಕಲಾವಿದರು ಯಕ್ಷಗಾನ ಕಲೆಯ ಅಭಿವೃದ್ಧಿಗಾಗಿ ದುಡಿದು ಭಾರತ ಸಂಸ್ಕೃತಿಯ ಪ್ರತೀಕವಾದ ರಾಮಾಯಣ ಭಾರತ ಭಾಗವತವನ್ನೊಳಗೊಂಡ ಈ ಯಕ್ಷಗಾನದ ಮೂಲ ತತ್ವಗಳನ್ನು ಬಿಡದೆ ಅದರ ಉದ್ಧಾರಕ್ಕಾಗಿ ಶ್ರಮಿಸಬೇಕಾಗಿ ವಿನಂತಿಸಿ ಸಹಕರಿಸಿದವರೆಲ್ಲರಿಗೂ ಧನ್ಯವಾದಗಳನ್ನಿತ್ತರು.

ಕುಂದಾಪುರ— ಅಲೂರು ಶಾರದಾ ಎಲಿಮೆಂಟರಿ ಪಂಚಾಯತ್ ಶಾಲೆಯಲ್ಲಿ ಮಕ್ಕಳ ದಿನಾಚರಣೆಯು ಶ್ರೀ ಶ್ರೀನಿವಾಸ ಜ್ಯೋಸರ ಅಧ್ಯಕ್ಷತೆಯಲ್ಲಿ ಜರಗಿತು. ಆಟೋಟಗಳ ಸ್ಪರ್ಧೆ ನಡೆದು ಗೆದ್ದವರಿಗೆ ಬಹುಮಾನ ವಿತರಣೆಯಾಯಿತು. ಆ ವೇಳೆ ಅಧ್ಯಕ್ಷರಿಂದಲೂ ಸಭಿಕರಿಂದಲೂ ಕಾರ್ಯಕ್ರಮದ ಅಂಗವಾಗಿ ಭಾಷಣಗಳಾದ ನಂತರ ಶ್ರೀ ಅಲೂರು ಲಕ್ಷ್ಮೀನಾರಾಯಣ ಜ್ಯೋಸರಿಂದ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು. ಮುಖ್ಯೋಪಾಧ್ಯಾಯ ಶ್ರೀ ಎ. ಎಸ್. ದತ್ತಾತ್ರೇಯ ಮೂರ್ತಿಗಳು ಆಭಾರ ಮನ್ನಿಸಿದರು.

ವಸಂತ ಮಹಲಿನ ಜೀರ್ಣೋದ್ಧಾರ— ಜೀರ್ಣವಾಗಿದ್ದ ಉಡುಪಿ ಶ್ರೀ ಕೃಷ್ಣ ಮಠದ ವಸಂತ ಮಹಲನ್ನು ಶಿರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರು ಸುಮಾರು ರೂ. 20,000 ವ್ಯಯಿಸಿ ನವೀನ ರೀತಿಯಲ್ಲಿ ಜೀರ್ಣೋದ್ಧಾರ ಮಾಡಿ ಅದನ್ನು ತಾ. 12ರಂದು ಶ್ರೀಕೃಷ್ಣನಿಗೆ ಸಮರ್ಪಿಸಿರುವರು.

ದುಃಖ ಸೂಚಕ ಸಭೆ— ಡಾ। ಯು. ಸುಂದರ ರಾಮ ಪೈಗಳ ಆಕಸ್ಮಿಕ ನಿಧನಕ್ಕಾಗಿ ಸಂತಾಪ ಸೂಚಿಸಲು ಉಡುಪಿ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಸಭೆಯೊಂದು ತಾ. 10ರಂದು ವರದೇಂದ್ರ ಕಲಾಮಂದಿರದಲ್ಲಿ ಡಾ। ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ। ಪಿ. ಆರ್. ನಾಯಕ್, ಶ್ರೀಗಳಾದ ಟಿ. ಎ. ಪೈ, ಎ. ಸುಂದರಲೀಕ್ ಶೆಣೈ, ಕವಿರಾಜ ಯಂ. ಟಿ. ಶೆಣೈ, ಎನ್. ಪಿ. ಕಾಮತ್, ಸಾಂಗಾಳ ಲಕ್ಷ್ಮೀನಾರಾಯಣ ನಾಯಕ್ ಮೊದಲಾದವರು ದಿವಂಗತರ ವ್ಯಕ್ತಿತ್ವದ ಕುರಿತು ಮಾತನಾಡಿದರು. ಅಧ್ಯಕ್ಷರ ಭಾಷಣದ ನಂತರ ದುಃಖ ಸೂಚಕ ಠರಾವು ಅಂಗೀಕೃತವಾಯಿತು.

ಅಕ್ಕಿ ವಿತರಣೆ— ಡಾ। ಯು. ಸುಂದರ ರಾಮ ಪೈಗಳ ನಿಧನದ ನೆನಪಿಗಾಗಿ ತಾ. 12 ರಂದು ಶ್ರೀ ವೆಂಕಟ್ರಮಣ ದೇವಸ್ಥಾನದ ವಠಾರದಲ್ಲಿ ದೊಡ್ಡವರಿಗೆ ¼ ಸೇರು ಅಕ್ಕಿ ಮತ್ತು 2 ಆಣೆ, ಸಣ್ಣವರಿಗೆ ½ ಸೇರು ಅಕ್ಕಿ ಮತ್ತು 1 ಆಣೆಯಂತೆ ಶ್ರೀ ಯು. ವಾಸುದೇವ ಪೈಗಳ ನೇತೃತ್ವದಲ್ಲಿ ಧರ್ಮಾರ್ಥವಾಗಿ ವಿತರಣೆಗೊಳಿಸಲಾಯಿತು.

ಮಕ್ಕಳ ದಿನಾಚರಣೆ

ನೆಹರು ಜನ್ಮದಿನದಂದು ನಡೆಯುವ ಮಕ್ಕಳ ದಿನಾಚರಣೆಯು ತಾ. ೧೪ರಂದು ಉಡುಪಿಯಲ್ಲಿ ಜರಗಿತ್ತು. ಪ್ರಾತಃಕಾಲ ಡಾ। ಕೆ. ಎಲ್. ಐತಾಳರು ಗಾಂಧಿ ಮೈದಾನದಲ್ಲಿ ಧ್ವಜಾರೋಹಿಸಿದರು. ಪರ್ಯಾಯ ಮಠದವರು ಸಿಹಿತಿಂಡಿಯನ್ನು ಹಂಚಿದರು. ಸಂಜೆ ವಿಕ್ಟೋರಿಯಾ ಜುಬಿಲಿ ಕ್ಲಬ್ಬಿನಲ್ಲಿ ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫರಾದ ಶ್ರೀ ಡಿ. ಎನ್. ನಾಗನೋತಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಡಾ। ಐತಾಳರು ಸ್ವಾಗತ ಭಾಷಣ ಮಾಡಿದರು. ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ಮನರಂಜನಾ ಕಾರ್ಯಕ್ರಮಗಳಿದ್ದವು. ಇವುಗಳಲ್ಲಿ ಉತ್ತಮ ಪ್ರದರ್ಶನವನ್ನು ತೋರಿಸಿದವರಿಗೆ ಬಹುಮಾನ ನೀಡಲಾಯಿತು. ಅಧ್ಯಕ್ಷರು ಮಾತನಾಡುತ್ತ ದೇವರ ಸೃಷ್ಟಿಯಲ್ಲಿ ಮಕ್ಕಳು ಚಂದ. ಅವರೇ ಮುಂದಿನ ಜನಾಂಗವಾಗಿರುವಾಗ ಅವರನ್ನು ತರಬೇತಿಗೊಳಿಸುವ ಹೊಣೆಗಾರಿಕೆಯನ್ನು ಮಕ್ಕಳ ಹಿರಿಯರು ಅರಿತುಕೊಳ್ಳಬೇಕು ಮಕ್ಕಳ ಮನಸ್ಸು ನಿರ್ಮಲವಾಗಿದ್ದು ಅವರಿದ್ದರೆ ದೇವರಿದ್ದ ಹಾಗೆ ಎಂಬ ಮಾತು ಸತ್ಯವೆಂದು ಹೇಳಿದರು. ಕೊನೆಗೆ ಶ್ರೀ ಎ. ಜೆ. ಆಲ್ವೆ ಧನ್ಯವಾದಗಳನ್ನು ಸಮರ್ಪಿಸಿದರು.

ವಿವಾಹ ಮಂಗಳೂರಿನ ದಿವಂಗತ ಮೊಕಲಂ ತ್ಯಾಂಪನ್ನ ಪುತ್ರ ಸುಂದರನು ಸರ್ಜನ್ ಯಸ್ ಗಂಗಯ್ಯ ಮೊಸ್ತರರ ಪುತ್ರಿ ಸೌ। ಪ್ರಭಾವತಿಯನ್ನು ಮಂಗಳೂರಿನ ನ್ಯೂ ಚಿತ್ರಾ ಟಾಕೀಸಿನಲ್ಲಿ ತಾ 4 11-59ರಂದು ವಿಜೃಂಭಣೆಯಿಂದ ವಿವಾಹವಾದರು.

ಉಚಿತ ಡಿ ಡಿ ಟಿ ಚಿಮುಕಿಸುವಿಕೆ- ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಇಲಾಖೆಯವರು ಇದೇ ತಾ 26, 27, 28 ಕ್ಕೆ ತೋನ್ಸೆ, 30ಕ್ಕೆ ಪುತ್ತೂರು ಮತ್ತು ಕೆಳಾರ್ಕಳಬೆಟ್ಟು. ಡಿಸೆಂಬರ 1ಕ್ಕೆ ಬಡನಿಡಿಯೂರು ಮತ್ತು ತೆಂಕ ನಿಡಿಯೂರು. 2ಮತ್ತು 3ಕ್ಕೆ ಮಲ್ಪೆ. 4, 5ಕ್ಕೆ ಉದ್ಯಾವರ ಗ್ರಾಮಗಳಲ್ಲಿ ಡಿ ಡಿ ಟಿ ಯನ್ನು ಚಿಮುಕಿಸುವರು.

ಲಕ್ಷದೀಪೋತ್ಸವವು— ಉಡುಪಿ ಶ್ರೀಕೃಷ್ಣ ಮಠದಲ್ಲಿ ತಾ 12ರಿಂದ 15ರ ತನಕ ಪರ್ಯಾಯ ಶ್ರೀಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು.

1. ಕ್ಷಯರೋಗದೊಡನೆ ಹೋರಾಟ.
2. ಕ್ಷಯರೋಗದ ಕುರಿತು ನೀವೇನು ತಿಳಿದಿರತಕ್ಕದ್ದು?

ನೀವು ಈ ಬುಕ್‌ಲೆಟ್‌ಗಳನ್ನು ಧರ್ಮಾರ್ಥವಾಗಿ— ದಿ. ಸೆಕ್ರಿಟರಿ, ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, 3, ರೆಡ್ ಕ್ರೋಸ್ ರೋಡ್, ನ್ಯೂ ಡೆಲ್ಲಿ ಇವರಿಂದ ಪಡೆಯಬಹುದು. ದಯಮಾಡಿ ನೀವು ನಿಮ್ಮ ಕಾಗದದ ಮೇಲೆ ಒಂದು ಟಿ. ಬಿ. ಮುದ್ರೆಯನ್ನು ಅಂಟಿಸಿ ಅವರಿಗೆ ಬರೆಯಿರಿ.

ಒಂದು ಟಿ. ಬಿ. ಮುದ್ರೆಯ ಬೆಲೆ ಹತ್ತು ನಯೇಪೈಸೆ ಮಾತ್ರ.

ಮುದ್ರೆಗಳುವ ಮಾರಾಟಕ್ಕೆ ಸಿಗುವ ಸ್ಥಳಗಳು— ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್‌ಡನ್ ಟಿ. ಬಿ. ಕ್ಲಿನಿಕ್ ಮತ್ತು ಡಿಸ್ಪೆನ್ಸರಿ, ಕೆಂಪೇ ಗೌಡ ರೋಡ್, ಬೆಂಗಳೂರು ಸಿಟಿ. (2) ಮಹಿಳಾಮಂಡಲ; ಶ್ರೀ ಬಸವೇಶ್ವರ ದೇವಸ್ಥಾನ, ಪಂಚ್ ಕಮಿಟಿ, ಕಲ್ಯಾಣ್; ಗ್ರೈನ್ ಮರ್ಚಂಟ್ಸ್ ಎಸೋಸಿಯೇಶನ್; ಮತ್ತು ಭಾರತ ಸಮಾಜ, ಬಿಡಾರ್; (3) ದೈವಜ್ಞ ವೆಲ್‌ಫೇರ್ ಸೆಂಟರ್, ಶ್ರೀ ಲಕ್ಷ್ಮೀನಾರಾಯಣ ಟೆಂಪಲ್, ಬಸವನಗುಡಿ, ಮಂಗಳೂರ.,

ಭಾರತದಲ್ಲಿ ಹತ್ತನೇ ಕ್ಷಯರೋಗ ಮುದ್ರೆ ಮಾರಾಟ ಚಳವಳ

(ದಿ ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಡಿಲ್ಲಿ. ಇವರಿಂದ ಪ್ರಾರಂಭಿಸಲ್ಪಟ್ಟದ್ದು)

ಈ ಸ್ಥಳದ ದಾತೃಗಳು:

ದಿ ಇಂಡಿಯನ್ ಅಲುಮಿನಿಯಮ್ ಕೊ. ಲಿಮಿಟೆಡ್, ಕಲ್ಕತ್ತ.

ಜ್ಞಾನನಿಧಿ

ಅಭಿವೃದ್ಧಿ ಕರಾಕರಣೆ ಎಂದರೇನು?

ಭಾರತವು ಪಂಚವಾರ್ಷಿಕ ಯೋಜನೆಗಳಿಂದ ಅಭಿವೃದ್ಧಿ ಹೊಂದುತ್ತ ಬರುತ್ತಿದ್ದು ಸರ್ವಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲೂ ಅಭಿವೃದ್ಧಿ ತೆರಿಗೆಯನ್ನು ಆಕರಿಸಲಾಗುತ್ತದೆ. ಇದರ ಉದ್ದೇಶ, ಕ್ರಮಗಳು ಯಾವುವು?

ಒಂದು ನೀರಾವರಿ ಯೋಜನೆ ಸುತ್ತಮುತ್ತ ವಾಸವಿರುವ ಹಾಗೂ ನೀರು ಬಳಸುವ ಜನರಿಗೆ ಮಾತ್ರ ಸಹಾಯಕ ಎಂದು ಭಾವಿಸುವುದು ತಪ್ಪಾಗುತ್ತದೆ. ಆ ಇಡೀ ಪ್ರದೇಶದ ಆರ್ಥಿಕ ಸ್ಥಿತಿಗತಿಗಳು ಸುಧಾರಿಸುವುದಕ್ಕೇ ಅದು ಹಾದಿಮಾಡುತ್ತದೆ. ಇದರ ಪರಿಣಾಮವಾಗಿ ಆ ಪ್ರದೇಶದ ಜಮೀನುಗಳ ಬೆಲೆ ಏರುತ್ತದೆ. ನೀರಾವರಿ ವ್ಯವಸ್ಥೆಗೆ ಒಳಪಟ್ಟಿರುವ ಜಮೀನಿನ ಬೆಲೆಯಷ್ಟೇ ಅಲ್ಲ. ಸನಿಹದಲ್ಲಿರುವ ಜಮೀನುಗಳ ಬೆಲೆ ಸಹ ಹೀಗೆ ತಾನೇ ತಾನಾಗಿ ಹೆಚ್ಚುತ್ತದೆ. ಜಮೀನಿನ ಮಾಲೀಕನಾದವನು ಇದಕ್ಕೆ ಯಾವುದೇ ರೀತಿಯ ವಿಶೇಷ ಪ್ರಯತ್ನ ನಡೆಸುವುದಿಲ್ಲ.

ಹೀಗೆ ಸರ್ಕಾರ ಕೈಗೊಳ್ಳುವ ಯಾವುದೇ ಯೋಜನೆ ಫಲವಾಗಿ ಜಮೀನುಗಳ ಬೆಲೆ ತಾನಾಗಿಯೇ ಏರುತ್ತದೆ ತಾನೆ? ಹೀಗೆ ಏರುವ ಬೆಲೆಯಲ್ಲ ಒಂದು ಅಂಶವನ್ನು ಕರ ಹೇರಿ ವಸೂಲು ಮಾಡುವ ಕ್ರಮವೊಂದಿದೆ. ಅದಕ್ಕೆ "ಅಭಿವೃದ್ಧಿ ತೆರಿಗೆ" ಎಂದು ಕರೆಯುತ್ತಾರೆ. ಜಮೀನಿನ ಮೌಲ್ಯ ಹೆಚ್ಚಲು ರೈತನಾದವನು ಯಾವುದೇ ವಿಶೇಷ ಕ್ರಮ ಕೈಗೊಂಡಿರುವುದಿಲ್ಲ; ಆದಕ್ಕಾಗಿಯೇ ಈ ತೆರಿಗೆ.

ಇದನ್ನು ಸಾಮಾನ್ಯವಾಗಿ ೧೦ರಿಂದ ೨೦ ವರ್ಷಗಳ ಅವಧಿಯಲ್ಲಿ ವಸೂಲು ಮಾಡಲಾಗುತ್ತದೆ. ಬೇಸಾಯಗಾರನ ಶಕ್ತಿ ನೋಡಿಕೊಂಡು ವರ್ಷಕ್ಕಿಷ್ಟು ಎಂಬ ಕಂತಿನಲ್ಲಿ. ಯಾವುದೇ ಯೋಜನೆಯ ಮೇಲೆ ಸರ್ಕಾರ ಹಾಕುವ ಹಣವನ್ನು ಹೀಗೆ ಹಿಂದಕ್ಕೆ ವಸೂಲು ಮಾಡಿ ಅದನ್ನು ಮತ್ತೆ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವುದು ಈ ಕ್ರಮದ ಹಿಂದಡಗಿರುವ ತತ್ತ್ವವಾಗಿದೆ.

ಎಷ್ಟೋ ರಾಜ್ಯಗಳು ಈಗಾಗಲೇ ಇಂತಹ ಕರ ಹಾಕಲು ಅಗತ್ಯವಿರುವ ಶಾಸನಗಳನ್ನು ಅಂಗೀಕರಿಸಿವೆ. ೧೫ಅಲರಷ್ಟು ಹಿಂದೆಯೇ "ಕಾಂಟ್ರಿಬ್ಯೂಷನ್" (ಬೇಸಾಯಗಾರರ ಕಡೆಯ ಕಾಣಿಕೆ) ಎಂಬ ಹೆಸರಿನಲ್ಲಿ ಪ್ರಥಮ ಬಾರಿಗೆ ಹಳೇ ಮೈಸೂರು ರಾಜ್ಯದಲ್ಲಿ ಇಂತಹ ತೆರಿಗೆ ಹಾಕಲಾಯಿತು.

ಇತ್ತೀಚೆಗೆ ಆಂಧ್ರ ಪ್ರದೇಶ, ಅಸ್ಸಾಂ, ಮುಂಬಯಿ, ಕೇರಳ, ಮಧ್ಯ ಪ್ರದೇಶ, ಮದರಾಸ್, ಮೈಸೂರು, ಪಂಜಾಬ್ ರಾಜಸ್ತಾನ್ ಮತ್ತು ಕೇಂದ್ರದ ನೇರ ಆಳಿತಕ್ಕೊಳಪಟ್ಟಿರುವ ಹಿಮಾಚಲ್ ಪ್ರದೇಶ್—ಈ ರಾಜ್ಯಗಳು ಈ ವಿಷಯದಲ್ಲಿ ಅವಶ್ಯಕ ಶಾಸನಗಳನ್ನು ಅಂಗೀಕರಿಸಿವೆ.

ಬಿಹಾರ್ ಸಹ ಈ ಬಗ್ಗೆ ಕ್ರಮ ಕೈಗೊಳ್ಳುತ್ತದೆ. ಮತ್ತು, ಜಮ್ಮು ಮತ್ತು ಕಾಶ್ಮೀರ, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳ ಈ ರಾಜ್ಯಗಳೂ ಸಹ ಈ ವಿಷಯವನ್ನು ಪರಿಶೀಲಿಸುತ್ತಿವೆ.

ಕೇಂದ್ರದ ನೇರ ಆಡಳಿತದಲ್ಲಿರುವ ದೆಹಲಿ ಸಹ ಈ ವಿಷಯವನ್ನು ಪರಿಶೀಲಿಸುತ್ತಿದೆ. ಕೇಂದ್ರದ ನೇರ ಆಡಳಿತಕ್ಕೊಳಪಟ್ಟಿರುವ ಇತರ ಪ್ರದೇಶಗಳಲ್ಲಿ ದೊಡ್ಡ ನೀರಾವರಿ ಯೋಜನೆಗಳ ಪ್ರಶ್ನೆಯೇ ಇಲ್ಲ; ಅಂತೆಯೇ ಅಲ್ಲಿ "ಅಭಿವೃದ್ಧಿ ತೆರಿಗೆ"ಯ ಪ್ರಶ್ನೆಯೇ ಬಾರದು.

ಈ ತೆರಿಗೆಯನ್ನು ವಿಧಿಸುವಾಗ ಗಮನಕ್ಕೆ ತೆಗೆದುಕೊಳ್ಳುವ ಕೆಲವಂಶಗಳು ಈ ರೀತಿ ಇವೆ:

೧. ಯೋಜನೆ ಪ್ರಾರಂಭವಾಗುವುದಕ್ಕೆ ಮೊದಲು ಜಾರಿಯಲ್ಲಿದ್ದ ಜಮೀನಿನ ಬೆಲೆಯೇನು ಮತ್ತು ನೀರಾವರಿ ಸೌಕರ್ಯ ಲಭಿಸಿದ ಮೇಲೆ ಈ ಬೆಲೆ ಎಷ್ಟು ಮಟ್ಟಿಗೆ ಹೆಚ್ಚಿತು?

೨. ನೀರಾವರಿ ಸೌಕರ್ಯ ದೊರೆತ ಮೇಲೆ ನೀರಾವರಿ ಸೌಕರ್ಯ ಪಡೆದ ಜಮೀನ ಬೆಲೆಗೂ ಅಂತಹ ಸೌಕರ್ಯವಿಲ್ಲದ ಜಮೀನಿನ ಬೆಲೆಗೂ ಇರುವ ವ್ಯತ್ಯಾಸವೇನು? ಗದ್ದೆಯ ಬೆಲೆಗೂ ಹೊಲದ ಬೆಲೆಗೂ ಇರುವ ವ್ಯತ್ಯಾಸವೇನು? ಈ ವಿಷಯದಲ್ಲಿ ಯೋಜನೆ ಜಾರಿಗೆ ಬರುವುದಕ್ಕೆ ಮೊದಲು ಇದ್ದ ವ್ಯತ್ಯಾಸವೇನು?

೩. ಒಂದು ವರ್ಷದಲ್ಲಿ ಜಮೀನಿನ ಬೆಲೆಯಲ್ಲಿ ಕಂಡು ಬಂದ ಹೆಚ್ಚಳ ಮತ್ತು ಬೆಳೆಯ ಪ್ರಮಾಣದಲ್ಲಿ ಕಂಡು ಬಂದ ಹೆಚ್ಚಳ.

೪. ಮುಖ್ಯ ಬೆಳೆಗಳ ಮಟ್ಟಿಗೆ ಕಂಡು ಬಂದ ಹೆಚ್ಚಳ.

೫. ಯೋಜನೆಗೆ ಬಂಡವಾಳವಾಗಿ ಹಾಕಿದ ಹಣವನ್ನು ಹಿಂದೆ ಪಡೆಯಬೇಕಾದ ಅವಶ್ಯಕತೆ.

೬. ಈ ನೀರಾವರಿ ಸೌಕರ್ಯ ಎಂತಹುದು ಮತ್ತು ನೀರನ್ನು ಒದಗಿಸಲು ಇರುವ ಕ್ರಮ ಏನು?

ನೆಲದ ಗುಣ, ಹೊಲವನ್ನು ಗದ್ದೆಯಾಗಿ ಪರಿವರ್ತಿಸಲು ಆದ ವೆಚ್ಚ, ಇತ್ಯಾದಿ ಹಲವಾರು ಅಂಶಗಳನ್ನು ಗಮನಕ್ಕೆ ತಂದುಕೊಂಡು ಈ ಅಭಿವೃದ್ಧಿ ತೆರಿಗೆಯನ್ನು ವಿಧಿಸಬೇಕಾಗುತ್ತದೆ.

ಈ ತೆರಿಗೆಯ ಪ್ರಮಾಣ ಹಾಗೂ ಎಷ್ಟು ಕಾಲದ ವರೆಗೆ ಕೊಡಬೇಕೆಂಬ ನಿಷ್ಕರ್ಷೆ ಒಂದೊಂದು ರಾಜ್ಯದ ಮಟ್ಟಿಗೆ ಒಂದೊಂದು ರೀತಿಯಲ್ಲಿದೆ. ಸಾಮಾನ್ಯವಾಗಿ ೧೫ ಅಥವಾ ೨೦ ಕಂತುಗಳಲ್ಲಿ ಇದು ಮುಗಿಯುತ್ತದೆ. ಹಣದ ರೂಪದಲ್ಲಾದರೂ ಇದನ್ನು ಕೊಡಬಹುದು ಅಥವಾ ಆ ಮೌಲ್ಯದಷ್ಟು ಜಮೀನನ್ನು ಬಿಟ್ಟುಕೊಡುವುದರ ಮೂಲಕವಾದರೂ ಅದನ್ನು ಪಾವತಿಮಾಡಬಹುದು. ಪಂಜಾಬಿನಲ್ಲಿ ಇಂತಹ ಕಂತುಗಳ ಸಂಖ್ಯೆ ೩೦; ಕೆಲವು ರಾಜ್ಯಗಳಲ್ಲಿ ಇದನ್ನು ನಿಷ್ಕರ್ಷಿಸಿಯೇ ಇಲ್ಲ.

ತೆರಿಗೆಯನ್ನು ಎಂದಿನಿಂದ ಕೊಡಬೇಕೆಂಬ ಬಗ್ಗೆಯೂ ಒಂದು ನಿಷ್ಕರ್ಷೆ ಇಲ್ಲ. ಆಂಧ್ರದಲ್ಲಿ ಯೋಜನೆ ಮುಗಿದ ಮೂರು ವರ್ಷಗಳಿಂದಾಚೆಗೆ ಇದು ಪ್ರಾರಂಭವಾದರೆ ಕೇರಳದಲ್ಲಿ ನೀರಾವರಿ ಸೌಕರ್ಯ ದೊರೆತ ಎರಡು ವರ್ಷಗಳ ನಂತರ ಇದು ಆರಂಭವಾಗುತ್ತದೆ. ಮದರಾಸಿನಲ್ಲಿ ಯೋಜನೆ ಮುಗಿದ ಎರಡು ವರ್ಷಗಳಲ್ಲಿ ನಂತರ. ಹೀಗೆ ಒಂದೊಂದು ಪ್ರಾಂತದಲ್ಲಿ ಒಂದೊಂದು ಕ್ರಮವು ವ್ಯವಹಾರದಲ್ಲಿದೆ.

ಕೂಟನೀತಿ

(೫ನೇ ಪುಟದಿಂದ)

ಪ್ರಾಣಿಗಳ ಮೇಲೂ ಬೀಳುತಿತ್ತು. ಜೊತೆಗೆ ಅವರು ಮುಟ್ಟುವುದರಿಂದಲೂ ಕೆಲವೊಮ್ಮೆ ಅವರ ಶ್ವಾಸಸ್ಪರ್ಶದಿಂದಲೂ ಮೃತ್ಯು ಸಂಭವಿಸುವುದುಂಟು. ಏಕೆಂದರೆ, ವಿಷಕನ್ಯೆಯರ ಪ್ರತ್ಯೇಕ ಅಂಗವೂ ವಿಷಮಯವಾಗಿರುತಿತ್ತು.

"ಅಷ್ಟಾಂಗ ಸಂಗ್ರಹ"ದಲ್ಲಿ ವಿಷಕನ್ಯೆಯ ಪರಿಚಯ ನಮಗೆ ಸುಸ್ಪಷ್ಟವಾಗಿ ದೊರೆಯುತ್ತದೆ. ಜನ್ಮಾರಂಭದಿಂದ ಮೃತ್ಯು ಪರ್ಯಂತ ಆಕೆಗೆ ವಿಷಸೇವನೆ ಮಾಡಿಸಲಾಗುತ್ತದೆ; ಯುವತಿಯಾಗುತ್ತ ಬಂದಂತೆ ಆಕೆ ಸಾಕ್ಷಾತ್ ವಿಷಕನ್ಯೆಯೇ ಆಗುತ್ತಾಳೆ. ಈಕೆಯ ಸ್ಪರ್ಶ ಹಾಗೂ ಶ್ವಾಸಪ್ರಶ್ವಾಸಗಳ ಸಂಪರ್ಕಗಳಿಂದ ಮನುಷ್ಯನು ಬದುಕಿ ಬರುವುದಿಲ್ಲ. ಇನ್ನು, ಈಕೆಯ ಕೈ ಅಥವಾ ಕೂದಲುಗಳ ಸ್ಪರ್ಶದಿಂದ ಹೂಗಳು, ಚಿಗುರುಗಳು ಬಾಡಿ ಹೋಗುತ್ತವೆ; ಹಾಳಾಗಿ ಕೆಟ್ಟು ಹೋಗುತ್ತವೆ. ವಿಷಕನ್ಯೆಯ ಹಾಸಿಗೆಯಲ್ಲಿ ನುಸಿ ಅಥವಾ ಇದೇ ಜಾತಿಯ ಬೇರೆ ಕೀಟಾಣುಗಳಿದ್ದರೆ; ಅವು ಸತ್ತೇ ಹೋಗುತ್ತವೆ. ಸ್ನಾನ ಮಾಡಿದ ನೀರಿನ ವಿಷದಿಂದಾಗಿ ನೊಣ, ಇರುವೆ ಮೊದಲಾದ ಜೀವಗಳೂ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತವೆ.

ಆಚಾರ್ಯ ಕೌಟಿಲ್ಯರು ಅತಿ ಕುಶಲರಾದ ಮನೀಷಿಗಳು. ಅವರು ಶತ್ರುಗಳು ತಮಗೆ ಮಾಡಿದ ಬಹುಪ್ರಕಾರದ ವಿಷಪ್ರಯೋಗಗಳಿಗೆ ತಕ್ಕ ಪ್ರತಿಕಾರವನ್ನು ಮಾಡಿದುದನ್ನು ವರ್ಣಿಸಿದ್ದಾರೆ. ಇವರ ಅತ್ಯದ್ಭುತ ಗ್ರಂಥ ಅರ್ಥಶಾಸ್ತ್ರದಲ್ಲಿ ಹಲವಾರು ವಿಷಪ್ರತಿಕಾರ ಪ್ರಯೋಗದ ಉಲ್ಲೇಖಗಳಿವೆ.

ಮನುಸ್ಮೃತಿಯಲ್ಲಿಯೂ ಈ ವಿಷಕನ್ಯೆಯರ ವರ್ಣನೆಯಿದೆ. ಆಹಾರವನ್ನು ಸೇವಿಸುವುದಕ್ಕೆ ಮೊದಲು ಅದನ್ನು ಪರೀಕ್ಷಿಸಬೇಕು; ಪರೀಕ್ಷಿಸುವ ಸಾಧನಗಳ ಅಭಾವವಿದ್ದರೆ ವಿಷನಾಶಕ ಪದಾರ್ಥಗಳ ಮೂಲಕ ಅದನ್ನು ಪರೀಕ್ಷಿಸಬೇಕು. ಪುರುಷರಿಗಿಂತ ಸ್ತ್ರೀಯರನ್ನು ರಾಜರು ಅತ್ಯವಶ್ಯವಾಗಿ ಪರಿಶೀಲಿಸಬೇಕು. ಆವಶ್ಯಕತೆಯಿದ್ದರೆ, ಆಕೆಯ ಯೋನಿಯನ್ನು ವಿಷನಾಶಕ ದ್ರವ್ಯ ಅಥವಾ ಔಷಧಿಗಳಿಂದ ತೊಳೆಯಬೇಕು; ಧೂಪ ಹಾಕಿದ ವೇಳೆಯೇ ಸಂಪರ್ಕ ಮಾಡಬೇಕು ಎಂದು ಮನುಸ್ಮೃತಿಯಲ್ಲಿ ಹೇಳಿದೆ. ಅಲ್ಲದೆ ವಿಷಪೂರ್ಣವಾದ ರತ್ನ ಹಾಗೂ ಮಣಿಗಳನ್ನು ರಾಜರು ಧರಿಸಬಾರದೆಂದೂ ಮನುವು ಆದೇಶಿಸಿದ್ದಾನೆ.

ಮಹಾಭಾರತದ ಕಾಲದಲ್ಲಿಯೂ ಈ ವಿಷಕನ್ಯೆಯರು ಇದ್ದರು. ಅಶ್ವಮೇಧಯಾಗದ ಕುದುರೆಯ ಬೆಂಗಾವಲಿಗೆ ಹೊರಟ ಅರ್ಜುನನು ಸ್ತ್ರೀ ರಾಜ್ಯದ ಒಡತಿ ಪ್ರಮೀಳೆಯನ್ನು ಎದುರಿಸಬೇಕಾಗಿ ಬಂತು. ಆಕೆಯು ಅರ್ಜುನನಕುರಿತು ತನ್ನನ್ನು ಮದುವೆಯಾಗು ನಿನ್ನ ಕುದುರೆಯನ್ನು ಬಿಡುವೆನು ಎಂದಾಗ, "ವಿಷಯೋಪಭೋಗಮಂ ಬಯಸಿ ನಿನಗಾನೊಲಿಯೆ ವಿಷಯೋಗ ಮಾಗದಿರ್ದಪುದೆ ಪೇಳ್ ಪುರುಷರೀ ವಿಷಯೋದ್ಭವ ಸ್ತ್ರೀಯರಂ ಬೆರಸಿ ಬಾಳ್ದಪರೆ' ಎಂದು ಆಕೆಯು ವಿಷಕನ್ಯೆ ಎಂಬುದನ್ನು ತಿಳಿದು ಹೇಳುತ್ತಾನೆ. ಅರ್ಜುನನ ಮಾತನ್ನೇ ಸಮರ್ಥಿಸಿ ಪ್ರಮೀಳೆಯು ತಾನು ವಿಷಕನ್ಯೆ ಎಂಬುದನ್ನು ಒಪ್ಪಿಕೊಳ್ಳುತ್ತಾಳೆ: "ಕಾದಲಂಬಿಂದೆ ಕೊಂದಪೆನೀಗಳಲ್ಲದೊಡೆ ಕಾದಲಂ ನೀನಾಗೆ ಸುರತ ಮೋಹಕೆ ಪಶ್ಚಾದಲಂಪಿನ ಸೌಖ್ಯಮಂ ತಳೆದ ಬಳಿಕಹುದು ಮೃತಿ ತಪ್ಪದು ಎಂತುಂ ಅಳಿವು'. ಎಂದು ಹೇಳಿ ಸುರತ ಭೋಗಾನಂದವನ್ನನುಭವಿಸಿಯೇ ಸಾಯಲು ಹೇಳುತ್ತಾಳೆ.

ಆ ಸ್ತ್ರೀ ರಾಜ್ಯದಲ್ಲಿರುವವರೆಲ್ಲರೂ ವಿಷಕನ್ನಿಕೆಯರು. ಕಂಡ ಮಾತ್ರದೊಳೆ ಆಕರ್ಷಿಸುವರು. ಬೆರಸಿದೊಡೆ ಪುರುಷರ ಆಯುಷ್ಯವನ್ನು ಅಪಹರಿಸುವರು. ಆದುದರಿಂದಲೇ ಅಲ್ಲಿ ಪುರುಷರೊಬ್ಬರೂ ವಾಸಿಸಲಾರರು ಅರ್ಜುನನು ಪ್ರಮೀಳೆಯನ್ನು ಆಕೆಯ ಶರೀರ ವಾಂಛೆಯನ್ನು ಪೂರೈಸಲಾರದೆ, ಧರ್ಮರಾಯನ ಅಶ್ವಮೇಧಯಾಗದಲ್ಲಿ ಭಾಗ ವಹಿಸಿ ಶ್ರೀಕೃಷ್ಣನ ದರ್ಶನ ಲಾಭದಿಂದ ವಿಷಕಳೆಯುವಂತೆ ಸಲಹೆ ನೀಡುತ್ತಾನೆ.

ಇವೆಲ್ಲವುಗಳಿಂದ ವಿಷಕನ್ಯೆಯರ ಮಹತ್ವವು ಪ್ರಭಾವವೂ ತಿಳಿಯುತ್ತದೆ.

(ವಿವಿಧ ಮೂಲಗಳಿಂದ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ
ಉಡುಪಿ.

ವಿಚಾರವಾಹಿನಿ

ಮಾನವ ಕಪಾಲದ ಆದಿಮಪ್ರರೂಪ

ಉತ್ತರ ಪ್ರಾಚೀನ ಯುಗದ ಮಂಗೋಲಿಯನ್ ಕಪಾಲವೊಂದು ಕಳೆದ ವರ್ಷ ಚೀನದಲ್ಲಿ ದೊರಕಿತ್ತು. ಅದು ಇಂದಿನ ಮಾನವನ ಕಪಾಲವನ್ನು ಬಹುಮಟ್ಟಿಗೆ ಹೋಲುತ್ತದೆ.

ಆಧುನಿಕ ಮಾನವನ ಉತ್ಪತ್ತಿಯ ಸಂಬಂಧದಲ್ಲಿ ನಡೆಯುತ್ತಿರುವ ಅಧ್ಯಯನದಲ್ಲಿ ಅತ್ಯಂತ ಮಹತ್ವದ ಒಂದು ಘಟನೆಯು ಕಳೆದ ವರ್ಷ ನಡೆಯಿತು. ಆಧುನಿಕ ಮಾನವನ ಅತಿ ಪ್ರಾಚೀನವೆಂದು ತಿಳಿಯಲಾದ ಅವಶೇಷಗಳು ದಕ್ಷಿಣ ಚೀನಾದ ಕ್ವಾಂಗ್ಸಿಯಲ್ಲಿ ದೊರೆತುದರಿಂದ ಮಾನವೋತ್ಪತ್ತಿಯ ವಿಷಯದ ಮೇಲೆ ವಿಶೇಷ ಪ್ರಕಾಶ ಬೀರುವಂತಾಗಿದೆ.

ಕಳೆದ ವರ್ಷ ಸಪ್ಟಂಬರ ತಿಂಗಳಿನ ಮಧ್ಯಕಾಲದಲ್ಲಿ ಶಿನಶಿಂಗ ಫಾರ್ಮಿನ ಕೆಲವು ಮಜೂರರು ಕ್ವಾಂಗ್ಸೀ ಚುವಾಂಗ ಪ್ರದೇಶದಲ್ಲಿ ಫಾಸ್ಫೊರಸನ್ನು ಅಗೆಯಲು ತುಂಗತಿಯನಯೇನ ಗುಹೆಗಳಿಗೆ ಹೋದರು. ಅವರಿಗೆ ಒಂದು ಮಾನವ ಕಪೋಲವು ಇತರ ಕೆಲವು ಪದಾರ್ಥಗಳೊಡನೆ ಅಲ್ಲಿ ದೊರೆಯಿತು. ಆ ಕೂಡಲೇ ಅವರು ಸ್ಥಾನೀಯ ಅಧಿಕಾರಿಗಳಿಗೆ ಈ ಸಂಗತಿಯನ್ನು ತಿಳಿಸಿದರು. ಸ್ವಲ್ಪ ಸಮಯದಲ್ಲಿಯೇ ಪುರಾಜೀವ ವಿಜ್ಞಾನ ಸಂಸ್ಥಾನದ ವಿಜ್ಞಾನಿಗಳು ಅಲ್ಲಿಗೆ ಪರಿಶೀಲನೆಗಾಗಿ ಆಗಮಿಸಿದರು.

ಲಿವುಚವೂನಿಂದ ೧೬ ಮೈಲುಗಳಷ್ಟು ದೂರದಲ್ಲಿ ತುಂಗತಿ ಏನಯೇನ ಗುಹೆಗಳಿವೆ. ಇದು ಒಂದು ಪರ್ವತದ ಮೇಲಿವೆ. ಲಿಉಚಾವೂ ಶಿಲುಂಗ ಸರ್ವತವು ರಾಜಮಾರ್ಗದಿಂದ ಪಶ್ಚಿಮಕ್ಕಿದೆ. ಈ ಆ ಪೂರ್ವ ಮಾನವನ ಅಸ್ತಿಗಳು ಈ ಮೊದಲೊಮ್ಮೆ ಭೀಮಕಾಯವಾಗಿದ್ದ ಪಾಂಡಾವೊಂದರ ಸಂಪೂರ್ಣ ಅಸ್ಥಿಪಂಜರವು ದೊರೆತಿದ್ದಲ್ಲಿಯೇ ಸಿಕ್ಕಿತ್ತು. ಕಪಾಲವು ಕಲ್ಲುಗಳ ರಾಶಿಯಲ್ಲಿ ಮುಳುಗಿಕೊಂಡಿತ್ತು. ವಿಜ್ಞಾನ ಶಾಸ್ತ್ರವು ಈ ಕಪಾಲವು ಉತ್ತರ ಪ್ರಾಚೀನ ಯುಗಕ್ಕೆ ಸೇರಿದುದು ಎಂದು ಕಂಡುಹಿಡಿದರು. ಈ ಗುಹೆಗಳಲ್ಲಿ ಮಾನವನಿಂದ ನಿರ್ಮಿತವಾದ ಯಾವುದೇ ಇತರ ವಸ್ತುಗಳು ಸಿಗಲಿಲ್ಲ.

ದೊರೆತಿರುವ ಕಪಾಲವು ಸರ್ವಸಾಮಾನ್ಯವಾಗಿ ಸರ್ವಾಂಗಪರಿಪೂರ್ಣವಾಗಿದೆ. ಕರ್ಣಪಟ್ಟಿಯ ಎಲುಬಿನ ಕೆಲವೊಂದು ಭಾಗಮಾತ್ರ ಇರುವುದಿಲ್ಲ. ಕೆಳಗಿನ ದವಡೆ ಕೂಡ ಕಾಣುವುದಿಲ್ಲ. ಇಲ್ಲಿದೊರೆತಿರುವ ಮುಂಡದಲ್ಲಿ ಕೆಳಗಿನ ನಾಲ್ಕು ಉರಕ ಕಶೇರುಕಗಳೂ ಐದೂ ಕಟಿಕಶೇರುಕಗಳೂ ಇವೆ. ಈ ಎಲುಬುಗಳಲ್ಲಿ ಕಂದು ಬಣ್ಣದಿವೆ. ಉಪಾಂಗ ಮುಂಡದ ಬಲ ಭಾಗವೂ ಸಾಮಾನ್ಯ ಸುರಕ್ಷಿತವಾಗಿದ್ದು ಇದರಲ್ಲಿ ಕೇವಲ ನಿತಂಬದ ಪೂರ್ವಭಾಗ ಇದೆ. ಇದೂ ಕಂದು ಬಣ್ಣವಿದೆ. ಇವರಲ್ಲಿ ಬಲ ಮತ್ತು ಎಡ ಜಂಘಾಸ್ಥಿಗಳ ಎರಡು ತುಂಡುಗಳಿದ್ದು ಈ ಪ್ರದೇಶದಲ್ಲಿ ದೊರಕಿರುವ ಅನ್ಯ ಮಾನವ ಅವಶೇಷಗಳಿಗಿಂತ ಅಧಿಕತರದಾಗಿದೆ.

ಕಪೋಲವು ಮಧ್ಯಮಾಕಾರದ್ದಿದ್ದು ಮೇಲಿನಿಂದ ನೋಡುವಾಗ ಅಂಡಾಕಾರವಾಗಿದೆ. ಅದು ೧೮೯. ೩ ಮಿಲ್ಲಿ ಮೀಟರ್‌ಗಳಷ್ಟು ಉದ್ದವೂ ೧೪೨.೩ ಮಿಲ್ಲಿ ಮೀಟರ ಗಳಷ್ಟು ಅಗಲವೂ ಇದೆ. ಹುಬ್ಬು ಸಾಕಷ್ಟು ದೊಡ್ಡದಿದ್ದು, ಹಣೆಯು ತುಸು ಮುಂದಕ್ಕೆ ನಿಲ್ಲುತ್ತದೆ. ಭ್ರೂಮಧ್ಯ ಭಾಗವು ದಪ್ಪವಾಗಿದೆ. ಮಾಂಸ ಖಂಡಗಳು ಕ್ಷೀಣವಾಗಿವೆ. ಕಿವಿಯ ಹಿಂಭಾಗದ ಗಂಡಾಸ್ಥಿಯು ವಿಶಾಲವಾಗಿವೆ. ಎಲ್ಲ ಮುಖ್ಯ ಜೋಡಣೆಯು ಮುಚ್ಚಿಕೊಂಡಿದೆ. ಹಲ್ಲುಗಳು ಹೂತುಕೊಂಡಿವೆ. ಗಟ್ಟಿನಲ್ಲಿ ಇದು ಸಾಮಾನ್ಯ ೪೦ ವರ್ಷದ ಪುರುಷನಕ ಪಾಲವೆಂದು ಹೇಳಬಹುದು.

ಇದರೊಡನೆ ದೊರೆತ ಮುಂಡದ ಕಶೇರುಕಗಳು ತೀರ ಚಿಕ್ಕವಿವೆ. ತ್ರಿಕಾಸ್ಥಿಯು ಸಾಕಷ್ಟು ಅಗಲವಿದೆ. ಹಾಗೆಯೇ ಈ ಮುಂಡದೊಡನೆ ದೊರೆತಿರುವ ಕಪೋಲದೊಡನೆ ಜಂಘಾಸ್ಥಿಯು ಕೂಡುವುದರಿಂದ ಮತ್ತು ಇವೆರಡೂ ಒಂದೇ ಕಡೆ ದೊರೆತಿರುವುದರಿಂದ ಇವು ಒಬ್ಬನೇ ಮನುಷ್ಯನಿಗೆ ಸೇರಿದುದೆನ್ನುವುದು ಸರಿಯೇ.

ಲ್ಯೂಚಾಂಗ—ಕಪಾಲದ ಈ ವರ್ಣನೆಯನ್ನು ತಿಳಿದನಂತರವೂ ಇದಕ್ಕೆ ಸರಿಯಾಗಿ ಸಿದ್ಧಾಂತವು ಮಾತ್ರ ಹುಟ್ಟುವುದಿಲ್ಲ. ದಕ್ಷಿಣ ಆಫ್ರಿಕೆಯ ರೊಡೇಶಿಯನರ ಕಪಾಲವೂ ದೊಡ್ಡದಿದ್ದು, ಅವುಗಳ ತ್ರಿಕಾಸ್ಥಿಯು ಸಣ್ಣದಿತ್ತು. ಲ್ಯೂಚಾಂಗ—ಮಾನವನ ಮುಖವು ಅಗಲವಾಗಿಯೂ ಚಿಕ್ಕದಾಗಿಯೂ ಇತ್ತು. ಅದಕ್ಕೆ ಸರಿಯಾಗಿಯೇ ಅಕ್ಷಿಕೂಪವು ವಿಸ್ತಾರವಾಗಿಯೂ ಕೆಳಗಡೆಯೂ ಇದೆ. ಪ್ರಪಂಚದ ಅನೇಕ ಭಾಗಗಳಲ್ಲಿ ಪೂರ್ವ ಶಿಲಾಯುಗದ ಮಾದರಿಗಳಲ್ಲಿಯೂ ಇದೇ ರೀತಿಯ ಆಕಾರವನ್ನು ನಾವು ಕಾಣಬಹುದು. ಆಸ್ಟ್ರೇಲಿಯಾ, ಜಾವಾ, ಯುರೋಪು, ಆಫ್ರಿಕಾ ಮತ್ತು ಚಾವುಕಾಉತಿಯೇನದ ಕಪಾಲಗಳಲ್ಲಿಯೂ ಇದೇ ಮಾದರಿಯಿರುವುದನ್ನು ಅವಶ್ಯಗಮನಿಸಬೇಕು. ನೀಯಂಡರ್ಥಲ್ ಮಾನವರ ಮುಖವು ಬಟ್ಟನಲ್ಲಿ ಎತ್ತರವಿದ್ದು ಅಕ್ಷಿಕೂಪವೂ ತದನುಸಾರವಿದೆ. ಆದರೆ, ಪಿಡೆನ್ನಿಯ ಪ್ಲಾಸ್ಟರಿನ ಮಾದರಿಯಂತೆ ಜಾವಾ ಮತ್ತು ಪೆಕಿಂಗ್ ಮಾನವರ ಮುಖಗಳು ಬಹಳ ಸಣ್ಣವು.

ಲ್ಯೂಚಾಂಗದಲ್ಲಿ ದೊರೆತಿರುವ ಕಪೋಲದಲ್ಲಿ ಅನೇಕ ಆದಿಜಾತೀಯ ವೈಶಿಷ್ಟ್ಯಗಳು ಅಡಕವಾಗಿದ್ದರೂ ಮಂಗೋಲಿಯನ್ ಜಾತಿಗೆ ಸ್ಪಷ್ಟ ಸಮಾನತೆಯು ತೋರುತ್ತದೆ. ಗಡ್ಡದ ಎಲುಬುಗಳು ದೊಡ್ಡವಾಗಿದ್ದು ಸಾಕಷ್ಟು ಉಬ್ಬಿಕೊಂಡಿವೆ. ಮೂಗಿನ ಎಲುಬು ಚಪ್ಪಟೆಯಾಗಿಯೂ ಅಗಲವಾಗಿಯೂ ಇದೆ. ಮೂಗಿನ ಸೇತು ತುಸು ಎತ್ತರವಾಗಿದೆ ಮೂಗಾದರೂ ಮೂಲದಲ್ಲಿ ಹೂತು ಹೋದಂತಿಲ್ಲ. ಮೂಗಿನ ತೂತಿನ ಕೆಳಕಿನಾರೆಯು ಮೊನಚಾಗಿಲ್ಲ; ದವಡೆಯ ದಂತ ಗಹ್ವರಗಳು ಸಾಧಾರಣ ಉಬ್ಬಿವೆ. ಇವೆಲ್ಲವೂ ಮಂಗೋಲಿಯನ್ ಮಾನವನ ನಿಶ್ಚಿತ ವೈಶಿಷ್ಟ್ಯಗಳು.

ರಚನೆ ಮತ್ತು ಆಕಾರದ ವೈಶಿಷ್ಟ್ಯಗಳ ದೃಷ್ಟಿಯಿಂದ ವಿಚಾರಮಾಡುವಾಗ, ಲ್ಯೂಚಾಂಗ ಕಪಾಲವು ಹೋಮೋ ಸೇಪಿಯನ್ಸ್‌ನ ಪ್ರಾರಂಭಿಕ ರೂಪವನ್ನು ಪ್ರತಿನಿಧಿಸುತ್ತದೆ ಎಂದು ಹೇಳಬಹುದು. ಚಾಉಕಾ ಉತಿಯೇನದ ಊಪರಲೀ ಗುಹೆಗಳಲ್ಲಿನ ನಿವಾಸಿಗಳಿಗಿಂತ ಮತ್ತು ಪಶ್ಚಾತ್ಯದ ತ್ಸೇಯಾಂಗ ಮಾನವರಿಗಿಂತಲೂ ಇದು ಹಿಂದಿನದಿರುತ್ತದೆ ಆದುದರಿಂದ ಲ್ಯೂಚಾಂಗದಲ್ಲಿ ದೊರೆತಿರುವ ಈ ಮಾನವ ಕಪಾಲವು ಚೀನಾದಲ್ಲಿ ಮಾತ್ರವಲ್ಲ; ಸಮಸ್ತಪೂರ್ವ ಏಶ್ಯದಲ್ಲಿಯೇ ದೊರೆತಿರುವ ಆಧುನಿಕ ಮಾನವನ ಪ್ರಾಚೀನತಮ ರೂಪವೆಂದು ಹೇಳಬೇಕು.

ಈ ವಿವರಣೆಯಿಂದಾಗಿ ಲ್ಯೂಚಾಂಗ ಮಾನವನು ವಿಕಾಸವಾದ ಮಂಗೋಲಿಯನ್‌ನ ಪ್ರಾರಂಭಿಕ ಪ್ರಕಾರವಾದ ಹೋಮೋ ಸೇಪಿಯನ್ಸ್‌ದ ಒಂದು ಅತಿ ಪ್ರಾಚೀನ ಮತ್ತು ಆದಿಮವಾದ ರೂಪವೆಂಬುದನ್ನೂ ನಾವು ಒಪ್ಪಬೇಕಾಗುತ್ತದೆ.

ಹೀಗಾಗಿ ಚೀನಾದ ಕ್ವಾಂಗಸೀ ಪ್ರದೇಶದಲ್ಲಿ ದೊರಿತ ಆದಿ ಮಂಗೋಲಿಯಾನ ವೈಶಿಷ್ಟ್ಯಯುಕ್ತ ಲ್ಯೂಚಾಂಗ ಕಪಾಲ ಮತ್ತು ೧೯೫೧ರಲ್ಲಿ ನೈರುತ್ಯ ಸ್ಜೆಚ್ವಾನ ಪ್ರಾಂತದಲ್ಲಿ ಲಭಿಸಿದ ತ್ಜೇಯಾಂಗ ಕಪಾಲಗಳು ಮಂಗೋಲಿಯಾನ ಜಾತಿಯು ಉತ್ಪತ್ತಿಯಾದ ಪ್ರದೇಶಕ್ಕೆ ಚೀನಾದ ಈ ಭಾಗಗಳು ಸೇರಿದ್ದುವು ಎಂಬುದನ್ನು ಸಿದ್ಧಾಂತೀಕರಿಸುತ್ತವೆ. ಮಂಗೋಲಿಯಾನ ಜಾತಿಯ ಉತ್ಪತ್ತಿ ಮತ್ತು ಪ್ರಸಾರಗಳ ಉತ್ತರ ಪ್ರಾಚೀನಯುಗದಲ್ಲಿ ಅವರ ಆರ್ಥಿಕ ಮತ್ತು ಸಾಮಾಜಿಕ ಆವಶ್ಯಕತೆಗಳ ಕಾರಣದಿಂದಾಗಿ ಆಯಿತು ಎಂಬುದನ್ನೂ ನಾವು ತಿಳಿದುಕೊಳ್ಳಬಹುದು.

(ವಿವಿಧ ಮೂಲಗಳಿಂದ)

ಸಾಹಿತ್ಯಕ್ಷೇತ್ರ

(೯ನೇ ಪುಟದಿಂದ)

ಸುತ್ರ ಮತ್ತು ಮಂತ್ರಿ ಪುತ್ರರು ನಡೆದು ಒಂದು ದೊಡ್ಡ ಸರೋವರವನ್ನು ಕಂಡು, ಅದರಲ್ಲಿ ತಮ್ಮ ನೀರಡಿಕೆಯನ್ನು ದೂರ ಮಾಡಿದರು.

ಇಲ್ಲಿ ರಾಜಕುಮಾರನ ದಾನ ಮತ್ತು ತ್ಯಾಗಬುದ್ಧಿಗಳ ಸ್ಪಷ್ಟ ಉಲ್ಲೇಖವಿದೆ. ಇದೇ ಮಾದರಿಯ ತ್ಯಾಗದ ಕಥೆಗಳು ಭಾರತೀಯ ಪುರಾಣಗಳಲ್ಲಿಯೂ ಇವೆ. ರಂತಿದೇವನು ಪುರಾಣಕಾಲದವನಾದರೆ, ಪ್ರತಾಪ ಸಿಂಹ, ಕನಕದಾಸರು ಇತಿಹಾಸಕಾಲದವರು. ಆದರೆ, ಇವರು ಆಹಾರ ಪದಾರ್ಥಗಳನ್ನು ದಾನಮಾಡಿದವರು. ಹಸಿವೆಯನ್ನಾದರೂ ತುಸುಕಾಲ ತಡೆದುಕೊಳ್ಳಬಹುದು; ಆದರೆ, ನೀರಡಿಕೆಯನ್ನು ಸಹಿಸುವುದು ಸುತರಾಂ ಪ್ರಯಾಸವಾಗಿರುವಾಗ, ಉದಾರ ಮನಸ್ಸಿನಿಂದ ಈ ರೀತಿ ದಾನಮಾಡಿದ ರಾಜಕುಮಾರನ ತ್ಯಾಗದ ಬಗ್ಗೆ ವಾಚಕರಲ್ಲಿ ತುಂಬ ಅಭಿಮಾನ ಹುಟ್ಟುವುದು. ಇಂತಹ ಉದಾರ ಚರಿತ್ರೆಯು ಕಾಲ್ಪನಿಕವಾದುದಾದರೂ ಸಮಾಜಕ್ಕೆ ಉತ್ತಮ ಪಾಠವನ್ನು ಕಲಿಸಿಕೊಡುವ ಶಕ್ತಿ ಇವುಗಳಲ್ಲಿ ಇದೆ; ಶೀಲ ಸಂವರ್ಧಕ ಸಾಹಿತ್ಯದ ಮಾದರಿಯೂ ಇದಾಗಿದೆ.

— ಗೋರಾ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 „ 12	„	4½%
13 „ 24	„	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಲೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ್ ವಾಶಿಂಗ್‌ಟನ್

ಲೇಖಕಿ: ಜಿನೇ ಇಯೋಟೆನ್.

ಅನುವಾದಕರು:

ಯು. ಎಲ್. ಆಚಾರ್ಯ, ಎಮ್. ಎ ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ್ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಪರಿಚಯ

(೩ನೇ ಪುಟದಿಂದ)

ರ ನಿರ್ಮಲ ಜೀವನ ಹರಿಜನ ಸೇವಾಮಯವಾಗಿ ಹೋಗಿತ್ತು.

ಆದಕಾರಣವೇ ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ೧೯೩೨ರ "ಐತಿಹಾಸಿಕ ಉಪವಾಸ'ದ ಸಮಾಪ್ತಿಯ ನಂತರ 'ಅಸ್ಪೃಶ್ಯತಾನಿವಾರಣ ಸಂಘ"ವು ಮುಂದೆ ಕ್ರಮೇಣ 'ಹರಿಜನ ಸಂಘ" ಎಂದು ಎಂದು ನಾಮಾಂಕಿತ ಹೊಂದಿತು. ಅದರ ಯಾವತ್ತು ಜೋಣೆಗಾರಿಕೆಯನ್ನು ಮಹಾತ್ಮಾಜೀಯವರು ಶ್ರೀ ಥಕ್ಕರ ಬಾಪ್ಪರವರಿಗೆ ನಿರ್ವಹಿಸಿದರು. ಸುಪ್ರಸಿದ್ಧ ಪುಣೇಕರಾರು ಕಾರ್ಯಗತಗೊಳಿಸುವ ಕೆಲಸ ಮತ್ತು ಇದೇ ರೀತಿಯಲ್ಲಿ ಮಹಾತ್ಮಾ ಗಾಂಧಿಯವರ ಪ್ರಾಣರಕ್ಷಣೆಯ ಕೆಲಸದಲ್ಲಿ ಬಾಪ್ಪಾಜೀಯವರು ಅತಿ ಅಮೂಲ್ಯ ಸೇವೆ ಸಲ್ಲಿಸಿ ಧನ್ಯರಾದರು.

'ಹರಿಜನ ಸೇವಕ ಸಂಘ'ದ ಹೊಣೆಯನ್ನು ನಿರ್ವಹಿಸಲು ಬಾಪ್ಪಾರಿಗೆ ವಿನಂತಿಸಿಕೊಂಡಾಗ ಭಿಲ್ಲ ಸೇವಕ ಸಮಾಜದ ಕಾರ್ಯ ಹೇಗಾಗಿರುವುದೆಂಬ ವಿಷಯದಲ್ಲಿ, ಅವರು ಚಿಂತಾಮಗ್ನರಾದರು. ಆಗ ಗಾಂಧೀಜೀಯವರು ಅವರಿಗೆ ಹೇಳಿದ್ದೇನೆಂದರೆ—"ಭಿಲ್ಲ ಸಮಾಜದ ಕಾರ್ಯವಂತೂ ಬಹಳ ಮಹತ್ವದ್ದಾಗಿದೆ, ಆದರೆ ಅದರೊಂದಿಗೆ ದೇಶದ ಮತ್ತು ಹಿಂದು ಸಮಾಜದ ದೃಷ್ಟಿಯಿಂದ ಈ ಕಾಲಕ್ಕೆ ಹರಿಜನ ಸೇವೆಯ ಕಾರ್ಯ ಅಧಿಕ ಮಹತ್ವದ್ದಾಗಿದೆ." ಶ್ರೀಯುತರು ಮಹಾತ್ಮರ ವಿನಂತಿಗೆ ಮನ್ನಣೆಯನ್ನು ಕೊಟ್ಟು, ಹರಿಜನ ಸೇವಕ ಸಂಘದ ಜವಾಬದಾರಿಯನ್ನು ವಹಿಸಿಕೊಂಡರು. ಈ ಜವಾಬದಾರಿಯನ್ನು ವಹಿಸಿಕೊಂಡ ತರುವಾಯ, ದೇಶದಲ್ಲಿಯ ಹರಿಜನರ ಸ್ಥಿತಿಗತಿಯನ್ನು ತಿಳಿದುಕೊಳ್ಳಲು, ರಾಷ್ಟ್ರದ ಮೂಲೆಮೂಲೆಗಳಿಗೂ ಸಿಕ್ಕಸಿಕ್ಕ ವಾಹನಗಳಿಂದ, ಪ್ರಸಂಗದಲ್ಲಿ ಕಾಲ್ನಡಿಗೆಯಿಂದಲೂ ಪ್ರವಾಸ ಕೈಕೊಂಡರು. ಈ ಪ್ರಕಾರ ದಲಿತರ ಸೇವೆ ಮಾಡುತ್ತಿರುವಾಗ ಅವರಿಗೊಂದು ಹೊಸ ವಿಚಾರ ಹೊಳೆದೋರಿತು. ಒಂದಾನುವೇಳೆ ಮಹಾತ್ಮಾಜೀಯವರು ಅಸ್ಪೃಶ್ಯತಾ ನಿವಾರಣೆ ಕಾರ್ಯಕ್ಕಾಗಿ ತಮ್ಮ ಆಶೀರ್ವಾದ ಕೊಟ್ಟರೆ ಮತ್ತು ಇಡಿ ದೇಶದಲ್ಲಿ ಇದರ ಪ್ರೀತ್ಯರ್ಥ ಅವರು ಪ್ರಯಾಣ ಕೈಕೊಂಡರೆ, ಅಸ್ಪೃಶ್ಯತೆಯ ಆನಿಷ್ಟ ರೂಢಿ ನಿರ್ನಾಮವಾಗುವದು. ಆ ವಿಚಾರಾನುಸಾರ ಬಾಪ್ಪಾರವರು ಗಾಂಧೀಜೀಯವರನ್ನು ಕೇಳಿಕೊಂಡರು. ಮಹಾತ್ಮಾಜೀಯವರಾದರೂ ಬಾಪ್ಪಾಜೀಯವರ ವಿನಂತಿಗೆ ಆಹ್ವಾನಕೊಟ್ಟರು. ಇದನ್ನು ನೋಡಿ ಅವರ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಅನಂತರ ಗಾಂಧೀಜೀಯವರು ದೇಶದಲ್ಲಿ ಸಂಚರಿಸುತ್ತಿರುವಾಗಲೇ ಜನತೆಯ ಹೃದಯ ಪರಿವರ್ತನೆ ಹೊಂದಿ ಹರಿಜನರಿಗೆ ಮಂದಿರ, ಬಾವಿ ಇತ್ಯಾದಿಗಳು ತೆರೆಯಲ್ಪಟ್ಟವು. ಇದೇ ಸ್ಥಿತಿಯಲ್ಲಿ ಕೆಲವು ಸನಾತನಿಗಳು ಮಹಾತ್ಮಾಜೀಯವರಿಗೆ ಜೀವಗಿಂದ ಹೊಡೆಯುವ ಬೆದರಿಕೆ ತೋರಿಸಹತ್ತಿದರು. ಅವರು ಆ ಮಾತಿಗೆ ಸೊಪ್ಪು ಹಾಕದೇ ತಮ್ಮ ನಿಶ್ಚಯದಿಂದ ಎಳ್ಳಷ್ಟು ಕದಲಲಿಲ್ಲ. ಮಹಾತ್ಮಾಜೀಯವರ ಈ ಸಂಚಾರ ಸುಮಾರು ಆರು ತಿಂಗಳು ನಾಗಿತ್ತು. ಈ ಅವಧಿಯಲ್ಲಿ ಸುಮಾರು ಆರು ಲಕ್ಷ ರೂ.ಗಳು ಹರಿಜನರ ಫಂಡಿಗೆ ಜಮಾ ಆದವು. ಥಕ್ಕರ ಬಾಪ್ಪಾರ ಹರಿಜನ ಸೇವೆ ಹಾಗೆಯೇ ಸಾಗಿತ್ತು.

"ಹರಿಜನ ಸೇವಕ ಸಂಘಕ್ಕೆ ಹರಿಜನ ಸೇವೆಯು ಏನಾದರೊಂದು ಶ್ರೇಯಸ್ಸು ದೊರಕಿರುವುದಾದರೆ ಅದು ಕೇವಲ ಮಹಾತ್ಮಾಜೀಯವರ ಪ್ರೇರಣೆ ಮತ್ತು ಶ್ರೀ ಕೈ. ಥಕ್ಕರ ಬಾಪ್ಪಾರ ತಪಸ್ಸಿಗೆ ಸೇರಿದ್ದು."

ಬಂಗಾಲದ ಭೀಷಣ ಬರಗಾಲದಲ್ಲಿ ಥಕ್ಕರ ಬಾಪ್ಪಾರು ಕೈಕೊಂಡ ಉಜ್ವಲ ಸೇವೆಯು ಚಿರಸ್ಮರಣೀಯವಾಗಿರುವದು. ಶ್ರೀಮತಿ ರಾಮೇಶ್ವರಿ, ನೆಹರೂರೊಂದಿಗೆ ಅವರು ಬಂಗಾಲ ಮತ್ತು ಓರಿಸ್ಸಾ ರಾಜ್ಯದಲ್ಲಿ ಪ್ರವಾಸ ಕೈಕೊಂಡು ಬರಗಾಲ ಪೀಡಿತರಿಗೆ ಸಹಾಯ ಸಲ್ಲಿಸಿದರು.

'ಕಸ್ತೂರಬಾ ನಿಧಿ' ಕೂಡಿಸುವದರಲ್ಲಿ ಬಾಪ್ಪಾಜೀಯವರ ದೊಡ್ಡ ಕೈವಾಡವಿದೆ. ನಿಧಿಯಿಂದ ದೇಶದಲ್ಲಿ ಅನೇಕ ಕಲ್ಯಾಣಕಾರಕ ಕಾರ್ಯಗಳು ಜರಿಗಿವೆ. ೧೯೪೬ರಲ್ಲಿ ನೌಖಾಲಿಯಲ್ಲಿ ಹತ್ಯಾಕಾಂಡದ ಪ್ರಚಂಡ ಜ್ವಾಲೆ ಎದ್ದಾಗ ಅದನ್ನು ಸಮಾಪ್ತಿಗೊಳಿಸಲು ಬಾಪ್ಪಾಜೀಯವರು ಮಹಾತ್ಮಾಜೀಯವರೊಂದಿಗೆ ಪ್ರವಾಸ ಕೈಕೊಂಡಿದ್ದರು.

ಸೋಮವಾರ ೧೯ ಜನೇವರಿ ೧೯೫೧ರಂದು ಹರಿಜನ ನಿಜ ಸೇವಕ ಇಹಲೋಕ ಬಿಟ್ಟು ತೆರಳಿದರು. ತಮ್ಮ 'ಅಮೃತ' ಹೆಸರನ್ನು ತಮ್ಮ ಅಮರ ಕೃತಿಗಳಿಂದ ಸಿದ್ಧಮಾಡಿ ತೋರಿಸಿದ್ದಾರೆ. ಶ್ರೀ ಥಕ್ಕರ ಬಾಪ್ಪಾ (ಅಮೃತಲಾಲ)ರವರ ತರುವಾಯ 'ಹರಿಜನ ಸೇವಕ ಸಂಘ'ದ ಹೊಣೆಯನ್ನು ಶ್ರೀ ವಿಯೋಗಿ ಹರಿಯವರು ವಹಿಸಿಕೊಂಡಿರುವರು. ಇಂದು ಥಕ್ಕರ ಬಾಪ್ಪಾರವರು ಕಣ್ಮರೆಯಾದರೂ ಅವರ ಚಿರಸ್ಮರಣೆಯ ಕೃತಿಗಳು ನಮ್ಮ ಕಣ್ಮುಂದಿರುವವು. ಅಂಥ ಮಹಾಪುರುಷರ ಪುಣ್ಯಸ್ಮರಣೆಯಾಗೋಸ್ಕರ ಅವರು ದೇಶಕ್ಕಾಗಿ ಮಾಡಿದ ಬಗೆಬಗೆಯ ಕಾರ್ಯಗಳನ್ನು ಸ್ಮರಿಸುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.

—ರಾಮಕೃಷ್ಣ ಎ. ಪೈ, ಅಂಕೋಲೆ.

ಉಡ್ಪಿ. ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 318/59.

J. ವಾಮನ ಕಿಣಿ ಕೂಡಾ —ವಾದಿರು.

ಮತ್ತು

ರುಕ್ಮಿಣಿ ಹೆಗ್ಗಡ್ತಿ—ವೆಂಕಪ್ಪ ಶೆಟ್ರ ಹೆಂಡ್ತಿ—ಉಡ್ಪಿ ತಾಲ್ಲೂಕು ಶಿರ್ವ ಗ್ರಾಮದ ಕೋಡಿನಲ್ಲಿರುವವರು —ಪ್ರತಿವಾದಿಳು.

ಇವರೊಳಗೆ

ಪ್ರತಿವಾದಿಳಿಗೆ ಈ ಮೂಲಕ ತಿಳಿಸುವದೇನೆಂದರೆ ವಾದಿಯು ಪ್ಲೆಂಟ್ ಸಿವ್ವತ್ತಿ ಬಗ್ಗೆ ನಿಮ್ಮ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 30—11—59ಕ್ಕೆ ನಿಮ್ಮ ಹಾಜರಾತಿಗೆ ಇಟ್ಟಿರುವುದರಿಂದ ಮೇಲಿನ ದಾವೆಯಲ್ಲಿ ವ್ಯವಹರಿಸುವುದಿದ್ದರೆ ಸದ್ರಿ ತಾರೀಖು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

By order of the court.

P. R. Shenoy,

Adocate for Plaintiffs.

Udipi Date 10—11—59.

ಪುಸ್ತಕ ವಿಮರ್ಶೆ

ನ್ಯಾಯ ಚಂದ್ರಿಕಾ ಆನಂದ ಪೂರ್ಣ ಮುನೀಂದ್ರ ಪ್ರಣೀತ ಸ್ವರೂಪಾನಂದ ಮುನೀಂದ್ರ ಕೃತ ನ್ಯಾಯ ಪ್ರಕಾಶಿಕಾ ಸಹಿತ—ಸಂಪಾದಕರು: ಮಹಾಮಹೋಪಾಧ್ಯಾಯ ಎನ್. ಎಸ್. ಅನಂತ ಕೃಷ್ಣ ಶಾಸ್ತ್ರಿ ಮತ್ತು ಕೆ. ರಾಮ ಮೂರ್ತಿ ಶಾಸ್ತ್ರಿ, ಪ್ರಕಾಶಕರು: ಮದ್ರಾಸು ಸರಕಾರದ ಪ್ರಾಚ್ಯ ಹಸ್ತ ಪ್ರತಿ ಪುಸ್ತಕಾಲಯ ಮದ್ರಾಸು. ಪುಟಗಳು: X+IV+149+80+563+116+15. ಬೆಲೆ ರೂ. ೧೪-೭೫.

ಪ್ರಕರಣ ಪ್ರಸ್ಥಾನ, ಭಾಷ್ಯ ಪ್ರಸ್ಥಾನ ಮತ್ತು ವಾದ ಪ್ರಸ್ಥಾನ ವೆಂದು ವೇದಾಂತ ಗ್ರಂಥಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿದ್ದಾರೆ. ಆನಂದ ಪೂರ್ಣ ಮುನಿಯಿಂದ ಬರೆಯಲ್ಪಟ್ಟ ನ್ಯಾಯ ಚಂದ್ರಿಕೆಯು ಅದ್ವೈತ ಮೀಮಾಂಸೆಗೆ ಸಂಬಂಧಿಸಿದವಾದ ಪ್ರಸ್ಥಾನದಲ್ಲಿ ಸೇರಬಹುದಾದ ಒಂದು ಸ್ವತಂತ್ರ ಕೃತಿಯಾಗಿದೆ. ಚಿತ್ಸುಖಾಚಾರ್ಯರ ತತ್ತ್ವ ಪ್ರದೀಪಿಕೆಯ ನಂತರದ ಅದ್ವೈತ ಪ್ರತಿಪಾದಕವಾದ ಸ್ವತಂತ್ರ ಗ್ರಂಥವೆಂದರೆ, ಇದೇ ಆಗಿದೆ. ಜಯ ತೀರ್ಥರ ನ್ಯಾಯ ಸುಧಾದಲ್ಲಿ ಕಂಡು ಬರುವ ಅದ್ವೈತ ತತ್ತ್ವ ನಿರಸನಕ್ಕೆ ಉತ್ತರರೂಪವಾಗಿ ಈ ಗ್ರಂಥರಚನೆಯಾಗಿದೆ. ವೈಶೇಷಿಕ ದರ್ಶನದ ತತ್ತ್ವಗಳ ತಳಹದಿಯಲ್ಲಿ ಅದ್ವೈತದ ಪ್ರತಿ ಸ್ಥಾಪನೆಯೇ ನ್ಯಾಯ ಚಂದ್ರಿಕೆಯ ಉದ್ದೇಶವಾಗಿದೆ. ಗ್ರಂಥಕರ್ತನು "ಖಂಡನ ಖಂಡ ಖಾದ್ಯ"ದಲ್ಲಿ ಸೇರಿಸದಿರುವ ಎಲ್ಲ ವಿಚಾರವನ್ನೂ ಮುಖ್ಯವಾಗಿ ಆತ್ಮವಿಚಾರವನ್ನು ಸ್ವತಂತ್ರವಾಗಿ ಇಲ್ಲಿ ಮೂಡಿಸಿದ್ದಾನೆ. ಚಿತ್ಸುಖಿಯನ್ನು ವ್ಯಾಸರಾಯರು ತಮ್ಮ ನ್ಯಾಯಾಮೃತದಲ್ಲಿ ಖಂಡಿಸಿದ್ದರೂ, ನ್ಯಾಯ ಚಂದ್ರಿಕೆಯ ಬಗ್ಗೆ ಆವರಾಗಲೀ ಇತರ ದ್ವೈತಿಗಳಾಗಲೀ ಖಂಡನೆಯನ್ನು ಮಾಡಿರುವುದಿಲ್ಲ. ಇದರಿಂದಾಗಿ ಈ ಗ್ರಂಥದ ಹಿರಿಮೆಯೂ ಗರಿಮೆಯೂ ವೇದ್ಯವಾಗುವುದು.

ವೈಶೇಷಿಕ ದರ್ಶನದೊಡನೆ ಗ್ರಂಥಕರ್ತನು ಭಾಸ್ಕರರ ದ್ವೈತಾದ್ವೈತ ಮತ್ತು ಬ್ರಹ್ಮ ಪರಿಣಾಮ ವಾದಗಳನ್ನೂ ಜಯತೀರ್ಥರ ಭೇದವಾದವನ್ನೂ ವಿಮರ್ಶಿಸಿ ಅವುಗಳನ್ನು ಅಲ್ಲಗಳೆಯುತ್ತಾನೆ. ಚಿತ್ಸುಖಿಯು ಪ್ರಸ್ತಾಪಿಸಿದ್ದ ಅಧ್ಯಾಯಗಳನ್ನೇ ಈತನು ಮತ್ತಷ್ಟು ವಿವರಿಸಿ ಅವನ್ನು ಮುಂದುವರಿಸಿ ಒಯ್ದಿರುವನು. ಗ್ರಂಥಕರ್ತನು ಉದಾರ ಹೃದಯನಾದುದರಿಂದಲೇ ಇತರ ಸಾಮಾನ್ಯ ಎಲ್ಲ ಅದ್ವೈತಿಗಳು ಹೇಳಿದ ಅಭಿಹಿತಾನ್ವಯವಾದವನ್ನು ಬಿಟ್ಟುಬಿಟ್ಟು ಅನ್ವಿತಾಭಿಧಾನವಾದವನ್ನು ಮನ್ನಿಸಿದ್ದಾನೆ. ಆನಂದಪೂರ್ಣ ಮುನಿಯು ಮಂಡನ ಮಿಶ್ರ, ವಾಚಸ್ಪತಿಮಿಶ್ರ ಹಾಗೂ ಇಷ್ಟಸಿದ್ಧಿಯ ಕರ್ತೃವಿನ ಅಭಿಪ್ರಾಯಗಳನ್ನೂ ಅನುಸರಿಸಿದ್ದಾನೆ. ಜೀವನ್ಮುಕ್ತಿಯನ್ನು ಅಲ್ಲಗಳೆದು ಇಷ್ಟಸಿದ್ಧಿಯಲ್ಲಿ ನಿರೂಪಿಸಿರುವಂತೆ ಪಂಚಮ ಪ್ರಕಾರ ಅವಿದ್ಯಾನಿವೃತ್ತಿಯನ್ನು ಒಪ್ಪಿಕೊಂಡಿದ್ದಾನೆ. ಪ್ರಮಾಣಗಳ ಕುರಿತು ವಿಚಾರ ಮಾಡುತ್ತಾ ಈ ಬಗ್ಗೆ ದ್ವೈತಿಗಳ ವಾದವನ್ನು ತಿರಸ್ಕರಿಸುವನು ಆದರೆ, ಅವಿದ್ಯಾವೃತ್ತಿಯೇ ಶಶಶೃಂಗ ಜ್ಞಾನವೆಂಬುದರಲ್ಲಿ ದ್ವೈತಿಗಳ ಮತವನ್ನು ಎತ್ತಿಹಿಡಿದಿರುವನಾದರೂ ಬ್ರಹ್ಮನ್ ಎಂದರೆ ಆಸರ್ತ ಖ್ಯಾತಿಯೆಂಬುದನ್ನೂ ಸ್ಮೃತಿಯು ಪ್ರಮಾ ಎಂಬುದನ್ನೂ ಒಪ್ಪುವುದಿಲ್ಲ.

ಈ ಗ್ರಂಥವು ಸಮನ್ವಯ, ಅವಿರೋಧ, ಸಾಧನ ಮತ್ತು ಫಲ ಎಂಬ ನಾಲ್ಕು ಪಾದಗಳಾಗಿ ವಿಂಗಡಿಸಲ್ಪಟ್ಟಿದೆ. ಪ್ರತಿಯೊಂದೂ ಪರಿಚ್ಛೇದವು ವಿಷಯಕ್ಕನುಗುಣವಾಗಿ ಹಲವಾರು ಅಧ್ಯಾಯಗಳಾಗಿ ಪುನರ್ವಿಂಗಡಿಸಲ್ಪಟ್ಟಿದೆ. ಅದ್ವೈತ ತತ್ತ್ವದ ಬಗ್ಗೆ ಮತ್ತು ಇತರ ತತ್ತ್ವಾನುಯಾಯಿಗಳ ಅದ್ವೈತ ಖಂಡನೆಗೆ ಸರಿಯಾದ ಉತ್ತರಗಳನ್ನು ತಿಳಿದುಕೊಳ್ಳ ಬಯಸುವವರಿಗಿದು ಉಪಯುಕ್ತವಾದ ಪುಸ್ತಕ ನಾಲ್ಕನೆಯ ಪರಿಚ್ಛೇದದಲ್ಲಿ ಕರ್ತೃವು ಚಾರ್ವಾಕನಿಂದ ಹಿಡಿದು ವೇದಾಂತಿಗಳ ವರೆಗಿನವರ 'ಮೋಕ್ಷ'ದ ಬಗ್ಗಿರುವ ವಿವಿಧ ಅಭಿಪ್ರಾಯಗಳನ್ನು ಚರ್ಚಿಸಿದ್ದಾನೆ. ಊರ್ಧ್ವಗಮನದ ಬಗ್ಗಿರುವ ವಿಮರ್ಶೆಯು ಅಭಿರುಚಿ ಪ್ರಚೋದಕವಿರುತ್ತದೆ.

ಶ್ರೀ ಅಭ್ಯಾನಂದ ಸರಸ್ವತಿಯವರ ಶಿಷ್ಯನಾದ ಆನಂದಪೂರ್ಣ ಮುನೀಂದ್ರನು ಕ್ರಿ. ಶ ೧೪ನೆಯ ಶತಮಾನಕ್ಕೆ ಸೇರಿದವನಿವನು ಪ್ರಕೃತ ಗ್ರಂಥವಲ್ಲದೇ ವಿದ್ಯಾಸಾಗರೀಯ ಮೊದಲಾದ ಏಳು ವ್ಯಾಖ್ಯಾನಗಳನ್ನು ಬರೆದಿದ್ದಾನೆ. ಇವನ ಪೂರ್ವಾಶ್ರಮದ ಹೆಸರು ವಿದ್ಯಾಸಾಗರವೆಂದಿದ್ದಿತೆಂದೂ ಗೋಕರ್ಣದ ನಿವಾಸಿಯೆಂದೂ ಮಹಾ ಶಿವಭಕ್ತನೆಂದೂ ತಿಳಿಯುತ್ತದೆ. ಈತನಿಂದ ಪ್ರಾರಂಭಿಸಲ್ಪಟ್ಟ ಪರಂಪರೆಯು ೧೬ನೆಯ ಶತಮಾನದ ವರೆಗೂ ಮುಂದುವರಿಯುತ್ತ ಬಂದಿರುತ್ತದೆ.

ನ್ಯಾಯ ಚಂದ್ರಿಕೆಯ ವ್ಯಾಖ್ಯಾನಕಾರನಾದ ಸ್ವರೂಪಾನಂದನು ಗೋವಿಂದಾನಂದನ ಶಿಷ್ಯನು. ಈ ವ್ಯಾಖ್ಯಾನದಿಂದ ಮೂಲ ಚಂದ್ರಿಕೆಯ ಮೇಲೆ ಪ್ರಕಾಶವು ಬೀಳುವುದು.

ಈ ಗ್ರಂಥವು ಮದ್ರಾಸು ಸರಕಾರಿ ಪ್ರಾಚ್ಯ ಪುಸ್ತಕಾಲಯದ ಮತ್ತು ಅಡ್ಯಾರು ಪುಸ್ತಕಾಲಯಗಳಲ್ಲಿನ ಎರಡು ತಾಡಯೋಲೆಯ ಪ್ರತಿಗಳ ಆಧಾರದಿಂದ ವಿದ್ವಾಂಸರಾದ ಸಂಪಾದಕರಿಂದ ಸಂಪಾದಿಸಲ್ಪಟ್ಟಿದೆ. ಗ್ರಂಥಾದಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ವಿಸ್ತಾರವಾದ ಭೂಮಿಕೆಯನ್ನು ಬರೆಯುತ್ತ ಶ್ರೀ ಅನಂತಕೃಷ್ಣ ಶಾಸ್ತ್ರಿಗಳು ಗ್ರಂಥದ ಪೂರ್ಣ ವಿಮರ್ಶೆಯನ್ನು ಸೋದಾಹರಣವಾಗಿ ಮಾಡಿದ್ದಾರೆ ದ್ವೈತಾದ್ವೈತ ಪ್ರಸ್ಥಾನಗಳು ಬೆಳೆದು ಬಂದ ವಿಧಿಯನ್ನೂ ವಿವರಿಸಿದ್ದಾರೆ ಮಾತ್ರವಲ್ಲದೆ, ಗ್ರಂಥಾಂತ್ಯದಲ್ಲಿ ಅದ್ವೈತ ವೇದಾಂತಾಭ್ಯಾಸಿಗಳಿಗೆ ಮಹಮುಖ ಕಾರವಾದಂತಾಗಿದೆ.

ಮದ್ರಾಸು ಸರಕಾರದ ಪ್ರಾಚ್ಯ ಹಸ್ತಪ್ರತಿ ಪುಸ್ತಕಾಲಯದ ಕ್ಯುರೇಟರರಾದ ಶ್ರೀ ಟಿ. ಚಂದ್ರಶೇಖರರು ಸಂಪಾದಕತ್ವದಲ್ಲಿ ಈ ಗ್ರಂಥ ಮಾಲೆಯು ಅಮೂಲ್ಯವಾದ ಗ್ರಂಥಗಳನ್ನು ಬೆಳಕಿಗೆ ತರುತ್ತಿರುವುದು ಸಂತೋಷದ ಸಂಗತಿ. ಮದ್ರಾಸು ಸರಕಾರವು ಈ ಬಗ್ಗೆ ಹಣವನ್ನು ವೆಚ್ಚ ಮಾಡಲು ಮುಂದೆ ಬಂದಿದ್ದು ಅನ್ಯರಾಜ್ಯ ಸರಕಾರಗಳಿಗೊಂದು ಮಾದರಿಯಾಗಿ ನಿಂತಿದೆ. ಇತರ ರಾಜ್ಯ ಸರಕಾರಗಳೂ ಅಪ್ರಕಟಿತ ಪ್ರಾಚೀನ ಹಸ್ತಪ್ರತಿಗಳ ಪ್ರಕಟಣೆಗೆ ನೆರವನ್ನೀಯುವುದು ಅಗತ್ಯವೆಂಬುದನ್ನು ಕಂಡುಕೊಳ್ಳಬೇಕು. ಗೋರಾ.

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

ಕಥಾವಿಹಾರ

(೨ನೇ ಪುಟದಿಂದ)

ಮುಂದೆಮುಂದೆ ಧಾವಿಸಿ ನಡೆಯುತಿದ್ದೆವು—ಜಾತ್ರೆಗೆ ಸರಿಯಾಗಿ ತಲಪಬೇಕೆಂದು. ಬುಟ್ಟಿಗೊಂದು ಶಿಲ್ ಮಾತ್ರವೇ ಬಂದರೂ ಅದು ಐವತ್ತು ಲೇವಾ ಆಗುತ್ತದೆಂಬ ಕಲ್ಪನೆಯಿಂದ ನಮ್ಮ ಹೃದಯಗಳು ಸಂತೋಷಭರಿತವಾಗಿದ್ದುವು. ಇಂತಹ ಭಾರೀ ಹಣವನ್ನು ನಾನೆಂದೂ ಕಂಡಿರಲಿಲ್ಲ. ಸ್ವಪ್ನಲೋಕದಿಂದ ಹೊರಬಿದ್ದವನಂತೆ ನಾನು ಆಗಾಗ ಬೆಚ್ಚಿಬೀಳುತ್ತಿದ್ದೆನು. ಎಲ್ಲಾ ತುಂಬಾ ಚೆನ್ನಾಗಿ ನಡೆಯುತ್ತಿದ್ದರೆ, ಬಹುಕಾಲದ ವರೆಗೆ ಅದು ಅಷ್ಟೇ ಚೆನ್ನಾಗಿ ಮುಂದುವರಿಯುವುದಿಲ್ಲವೆಂದು ತಾಯಿ ಅನೇಕ ಸಲ ಹೇಳಿದ್ದಳು. ಸೈತಾನನೊಬ್ಬ ಸೋಮಾರಿ; ಕೆಲಸವಿಲ್ಲದವನು. ನಿಮ್ಮ ಆಲೋಚನೆಗಳನ್ನು ಕೂಡಾ ಅವನು ಹಿಂಬಾಲಿಸುತ್ತಿರುತ್ತಾನೆ. ಆದುದರಿಂದ ಮೊದಲು ಬರಬಹುದಾದ ಕೇಡಿನ ವಿಷಯ ಆಲೋಚಿಸುವುದೇ ಒಳ್ಳೆಯದು. ಒಳ್ಳೆಯದೇ ಸಂಭವಿಸಿದ ಪಕ್ಷದಲ್ಲಿ ಅದು ತುಂಬಾ ಸ್ವಾಗತಾರ್ಹವೇ ಸರಿ. ಆದರೆ ಆಗ ನಾನು ಕೇವಲ ಸ್ವಪ್ನಲೋಕದಲ್ಲಿ ಹಾರಾಡುತ್ತಿದ್ದೆನು. ನಾವು ಗುಡ್ಡವನ್ನೇರಿ ಹೋಗುತ್ತಿದ್ದೇವೆಂದಾಗಲೀ, ನಮ್ಮ ಹೆಗಲುಗಳ ಮೇಲೆ ಹೊಣೆಗಳಿವೆಯೆಂದಾಗಲೀ, ಅಥವಾ ಬೇಸಗೆಯ ಸೆಕೆಯಿದೆಯೆಂದಾಗಲೀ, ನನಗೆನಿಸಲಿಲ್ಲ.

ಕುರಿಗಾಹಿಯಾಗಿ ನಾನು ಅನೇಕಸಲ ಪೈರುಕ್ ಗುಡ್ಡದ ಮೇಲಕ್ಕೆ ಹೋಗಿದ್ದೆನು. ಪ್ಲಾಸೊನೊವೊ ಬಾಚಿಷ್ತೆ ಮತ್ತು ಸ್ಟೇಡ್ನಿ ರಿವರ್‌ಗಳನ್ನು ಸುತ್ತುವರಿಯುವ ಪಟ್ಟಣದ 'ಬೀಟ್' ಕಾಡನ್ನೂ ನಾನು ಅನೇಕಸಲ ನೋಡಿದ್ದೆನು. ಗುಡ್ಡಗಳ ಮೇಲೆ ಸಣ್ಣ ಜೇನುಗೂಡುಗಳಂತೆ ತೋರುವ ನಮ್ಮೂರಿನ ಸಣ್ಣ ಕೈಮನೆಗಳೂ, ಮತ್ತು ಹಸಿರು ಮೈದಾನಗಳಿಗೂ, ಕಣ್ಣಿನ ತೋಟಗಳಿಗೂ ಮಧ್ಯೆ ಹಾವಿನಂತೆ ಹೊಳೆಯುತ್ತಿದ್ದ ನದಿಯೂ, ನನಗೆ ಸುಪರಿಚಿತವಾಗಿದ್ದುವು. ಆದರೆ ಅವೆಲ್ಲವೂ ನನಗೆ ಈಗಿನಷ್ಟು ಸುಂದರವಾಗಿ ಎಂದೂ ಕಾಣಿಸಿರಲಿಲ್ಲ. ನನ್ನ ತಾಯಿಯನ್ನು ಮಾತ್ರವಷ್ಟೇ ಅಲ್ಲದೆ, ನನ್ನ ಪುಟ್ಟ ತಮ್ಮನನ್ನೂ ತಂಗಿಯರನ್ನೂ ಮತ್ತು ಇಡೀ ಹಳ್ಳಿಯನ್ನೂ ಕೂಡ ಅಪ್ಪಿಕೊಳ್ಳಬೇಕೆನಿಸಿತು. ಅಪರಿಚಿತ ಪಕ್ಷಿಯೊಂದು ನನ್ನ ಹೃದಯದಲ್ಲಿ ಹಾಡುತ್ತಿತ್ತು. ಅದರ ಉನ್ನತ ಪ್ರಸನ್ನ ಸ್ವರವು ಅಡವಿಯ ಇನ್ನಿತರ ಮಧುರ ಸ್ವರಗಳನ್ನು ಮುಳುಗಿಸಿತು. ನನಗೆ ಹಣ ದೊರೆಯುವುದು; ಕೋರಿತೆನ್ ಜಾತ್ರೆಯ ನೆನಪಿಗಾಗಿ, ಅವರ ಅಣ್ಣ ಕೊನೇ ಬುಟ್ಟಿಗಳನ್ನು ಮಾರಿದ ನೆನಪಿಗಾಗಿ, ನಮ್ಮ ಮಕ್ಕಳಿಗೆ ಪ್ರತಿಯೊಬ್ಬರಿಗೂ ಒಂದೊಂದು ಸಿಳ್ಳಿಯನ್ನು ತೆಗೆದುಕೊಡುವೆನು. ಅಮ್ಮನ ಕಾಲಿನ ಹರಕು ಚಪ್ಪಲಿಗಳನ್ನೂ, ಆಕೆಯ ಕೊಳಕಾದ, ಬಣ್ಣಗೆಟ್ಟ ವಸ್ತ್ರವನ್ನೂ ನಾನು ನೋಡಿದೆನು. ಧನಿಕ ರೈತ ಮಹಿಳೆಯರಂತೆ, ಬೆಳ್ಳಿಗುಂಡಿಗಳ ಹೊಸ ಕಂದು ಚಪ್ಪಲಿಗಳನ್ನು ತೊಟ್ಟರೆ ಹಿಮಕಣಗಳಂತೆ ಬೆಳ್ಳಗೆ ಹೊಳೆಯುವ ವಸ್ತ್ರವನ್ನು ಧರಿಸಿದರೆ, ಆಕೆಯ ತೆಳು ಮುಖ ಹೇಗೆ ವಿಕಸಿತವಾಗಬಹುದು? ನನ್ನ ಹತ್ತಿರ ಹಣವಿದ್ದಿದ್ದರೆ ನನಗೆ ಬೇಕಾದುದನ್ನೆಲ್ಲಾ ಕೊಳ್ಳುತ್ತಿದ್ದೆ. ನನ್ನ ಹರಕು ಜೇಬಿನಲ್ಲಿ ಕೈಹಾಕಿ, ಅದನ್ನು ಗಟ್ಟಿಯಾಗಿ ಹಿಸುಕಿ ತಾಯಿಗೆ ಕಾಣದಂತೆ ನನ್ನ ಕಡೆ ನಾನೇ ಕಣ್ಣುಸನ್ನೆ ಮಾಡಿಕೊಂಡೆನು! ಆ ಶರತ್ಕಾಲದಲ್ಲಿ ನಾನು ಹಣವನ್ನು ಹೊರತೆಗೆದು ತ್ರೈಕ್ಲ್ಯಾನೋ ಪುಸ್ತಕದಂಗಡಿಗೆ ಹೋಗಿ "ನನಗೆ ಬೇಕಾದ ಶಾಲಾ ಪುಸ್ತಕಗಳನ್ನು ಕೊಡಿ ನನಗೊಂದು ಪುಸ್ತಕ ಕೊಡಿ ಓದೋದಕ್ಕೆ ಆದರೆ ಆ ಪುಸ್ತಕ ಅತ್ಯುತ್ತಮವಾಗಿರಬೇಕು. ಅತಿ ಸ್ವಾರಸ್ಯಕರವಾಗಿರಬೇಕು —ಕೇಳುವೆನು....

ನಾವು ಗುಡ್ಡದ ಇಳಿಜಾರಿನಲ್ಲಿಳಿಯುತ್ತಿದ್ದೆವು ಮೇಲಿನ ಮತ್ತು ಕೆಳಗಿನ ಕೋರಿತೆನ್ ಹಳ್ಳಿಗಳು ಕಂಡುಬಂದುವು. ಅಲ್ಲಿ ಜಾತ್ರೆ ನಡೆಯಲಿದ್ದ ಸ್ಥಳವು ಹುಲ್ಲು ಹಸುರಿನ ಬಯಲಾಗಿತ್ತು.

ಗುಡ್ಡ ಇಳಿಯುವುದು ಸುಲಭ, ಕಲ್ಲು ಕೂಡ ಗುಡ್ಡದಿಂದ ಕೆಳಗುರುಳುವುದು —ಎಂದು ತಾಯಿಯು ತಿಳಿಸಿದಳು.

ನಾವು ಮಧ್ಯಾಹ್ನಕ್ಕೆ ಮುಂಚಿತವಾಗಿಯೇ ಅಲ್ಲಿಗೆ ತಲಪಿದೆವು. ಎಲ್ಲ ರಸ್ತೆಗಳಿಂದಲೂ ಜನರು ಜಾತ್ರೆಗೆಂದು ಬರುತ್ತಿದ್ದರು ಹೊಸ ಉಡುಪುಗಳನ್ನೂ, ರೇಶ್ಮೆ ವಸ್ತ್ರಗಳನ್ನೂ ಧರಿಸಿದ ಹುಡುಗಿಯರು, ಬಿಗಿಯಾದ ಬಿಳಿಷರಾಯಿ ಮತ್ತು ಕೆಂಪು ನಡುಕಟ್ಟು ಧರಿಸಿದ್ದ ಯುವಕರು, ಬೆನ್ನ ಮೇಲೆ ಬಣ್ಣ ಬಣ್ಣದ ಚೀಲಗಳಲ್ಲಿ ಮಕ್ಕಳನ್ನು ಹೊತ್ತುಕೊಂಡಿದ್ದ ವಿವಾಹಿತ ಸ್ತ್ರೀಯರು—ಎಲ್ಲರೂ ಜಾತ್ರೆಗೆ ಬರುತ್ತಿದ್ದರು, ಪಿಟೀಲು ವಾದ್ಯಗಾರರು ಸಂಗೀತ ನುಡಿಸುತ್ತಿದ್ದರು, ಅವರ ಸುತ್ತಲೂ ಜನರು ನಮ್ಮ ಜನಪದ ನೃತ್ಯಗಳನ್ನು ಕುಣಿಯುತ್ತಿದ್ದರು. ಪಟ್ಟಣದ ವ್ಯಾಪಾರಿಗಳು ಎಲ್ಲ ಬಗೆಯ ಸರಕುಗಳನ್ನೂ ಇಲ್ಲಿಗೆ ತಂದಿದ್ದರು. ಅಂಗಡಿಗಳಿಟ್ಟುಕೊಂಡು ಗಿರಾಕಿಗಳನ್ನು ಒಬ್ಬರಿಗಿಂತ ಒಬ್ಬರು ಜೋರಾಗಿ ಕರೆಯುತ್ತಿದ್ದರು—ಅವರ ಗಂಟಲು ಕಟ್ಟುವಂತೆ ಆ ಜಾತ್ರೆಯಲ್ಲಿ ಮದ್ಯದಂಗಡಿಯ ತೋಟಗಳೂ, ಮಡಕೆಗಳ ಜಾಡಿಗಳು ಮತ್ತಿತರ ಸಾಮಾನುಗಳ ಅಂಗಡಿಗಳೂ ಇದ್ದುವು.

"ಎಲ್ಲಾ ತರದ ಜನ"—ಎಂದಳು ತಾಯಿ.

'ಓಕ್' ಮರಗಳ ತೋಪಿನ ಬಳಿ ನಿಂತು, ಕುದುರೆ ಕಟ್ಟಿಹಾಕಿ, ಬುಟ್ಟಿಗಳನ್ನಿಳಿಸಿ ಕೊಂಡೆವು. ವ್ಯಾಪಾರಿಗಳೆಲ್ಲರಿದ್ದೆಡೆಗೆ ಜಾತ್ರೆಯ ಕೆಳ ತುದಿಗೆ, ನಾವು ಅವುಗಳನ್ನು ಕೊಂಡೊಯ್ದೆವು. ಬುಟ್ಟಿಗಳ ಬಳಿಯಲ್ಲಿ ನಾವು ನಿಂತಿದ್ದೆವು. ನಮ್ಮ ಬುಟ್ಟಿಗಳ ಬಗ್ಗೆ ಜನರಿಗೆ ಕೂಗಿ ಹೇಳಲು ಮೊದಲಿನ್ಮೊದಲು ನಮಗೆ ನಾಚಿಕೆಯಾಯಿತು. ನಾನು ನಮ್ಮ ತಾಯಿಗೆ ಮಾತ್ರವೇ ಕೇಳಿಸುವಂತೆ ಮೆಲ್ಲಮೆಲ್ಲನೆ ಹೇಳಲಾರಂಭಿಸಿ, ತರುವಾಯ ಗಟ್ಟಿಯಾಗಿಯೇ ಕೂಗಲಾರಂಭಿಸಿದೆನು.

'ಬುಟ್ಟಿಗಳು, ಒಳ್ಳೆಯ ಬುಟ್ಟಿಗಳು!'

"ಅದು ಸರಿ, ಹೇಳು ಹಾಗೆಯೇ"—ಎಂದು ತಾಯಿ ನನ್ನ ಬೆನ್ನು ತಟ್ಟಿದಳು, ನನಗೆ ಪ್ರೋತ್ಸಾಹ ನೀಡುತ್ತಾ.

ಕೆಲವರು ಬುಟ್ಟಿಗಳ ಕಡೆ ನೋಡಿ, ಬೆಲೆ ಕೇಳಿ, ತಮ್ಮ ದಾರಿ ಹಿಡಿದು ಹೊರಟು ಹೋದರು. ಆ ಮೇಲೆ ಕೆಲವರು ಬಂಧುಗಳೂ, ತಾಯಿಯ ತವರೂರಿನ ಮಹಿಳೆಯರೂ ಬಂದರು. ಬುಟ್ಟಿಗಳನ್ನು ಮಾಡಿದವರು ಯಾರೆಂದು ಎಲ್ಲರೂ ಕೇಳಿದರು. ತಾಯಿಯು ನನ್ನ ಕಡೆಗೆ ತಿರುಗಿ—

"ಇಲ್ಲಿ ತಾನೆ ನೋಡಿ, ಕಸಬುದಾರ" ಎನ್ನುತ್ತಿದ್ದಳು.

"ಎಷ್ಟು ಒಳ್ಳೆಯ ಕೆಲಸ ಕಲಿತಿದ್ದಾನೆ ನಿನ್ನ ಮಗ ಸ್ಟಾನ್ಕಾ! ನಾವು ಕುರ್ನೆಸಿತ್ಸಾದುದ್ದಕ್ಕೂ ಕುರಿ ಮೇಯಿಸುತ್ತಿದ್ದುದು ನಿನಗೆ ನೆನಪಿದೆಯೆ?"

"ಇಲ್ಲಿ ನೋಡು ವೇನಾ! ಹುಡುಗಿಯರಾಗಿದ್ದಾಗ ಸ್ಟಾನ್ಕಾ ಮತ್ತು ನಾನೂ ಒಟ್ಟಿಗೇ ಆಡುತ್ತಿದ್ದೆವು. ನನ್ನ ಹತ್ತಿರ ಹಣವಿದ್ದಿದ್ದರೆ, ಒಂದು ಬುಟ್ಟಿ ತಗೊಳ್ಳುತ್ತಿದ್ದೆ. ಆದರೆ........," ಎಂದು ಇನ್ನೊಬ್ಬಾಕೆ ಮಧ್ಯೆ ಮಾತನಾಡಿದಳು.

"ಯಾರದು ನೇವ್ಕಾನೇ?" -ಎಂದು ತಾಯಿ ಕೇಳಿದಳ, ತನ್ನ ಬಾಲ್ಯದ ಗೆಳತಿಯನ್ನು ಗುರುತಿಸುತ್ತಾ. "ನಾವಿಬ್ಬರೂ ಒಟ್ಟಿಗೇ ಕೊಯ್ಲು ಕೆಲಸ ಮಾಡಿದ್ದೇವೆ, ಹಾಡುಗಳು ಹಾಡಿದ್ದೇವೆ ಬುಟ್ಟಿ ತಗೋ, ನಿನಗೆ ಅದು ಚೆನ್ನಾಗಿದ್ದರೆ. ಊರಿಗೆ ನಾನೆಂದಾದರೂ ನಮ್ಮವರನ್ನು ನೋಡಲು ಬಂದಾಗ್ಗೆ. ನನಗೇನಾದರೂ ಕೊಡುವಿಯಂತೆ"— ಎಂದು ಹೇಳುತ್ತಾ, ತಾಯಿಯು ಆಕೆಗೆ ಹತ್ತು ಬುಟ್ಟಿಗಳನ್ನು ಕೊಟ್ಟುಬಿಟ್ಟಳು.

ಆದರೂ ಕೂಡ, ಇನ್ನೂ ಬೇಕಾದಷ್ಟು ಮಿಕ್ಕಿತ್ತು ಮಾರಾಟಕ್ಕೆ. ಆ ಮೇಲೆ, ದಪ್ಪದ ಉಣ್ಣೆಯ ಬಟ್ಟೆಯ ಕಪ್ಪು ಮೇಲಂಗಿಯನ್ನು ತೊಟ್ಟಿದ್ದ ನರೆತ ಕೂದಲಿನ ವಯೋವೃದ್ಧೆಯೊಬ್ಬಾಕೆಯು ಬುಟ್ಟಿಗಳನ್ನು ನೋಡುತ್ತ ನಿಂತುಕೊಂಡಳು. ಆಕೆಗೆ ಬೇಕಾಗಿದ್ದ ಬುಟ್ಟಿಗಾಗಿ ಚೌಕಾಸಿ ನಡೆದು, ಕಡೆಗೆ ಅದನ್ನು ಎರಡು ಲೇವಾಗಳಿಗೆ ಮಾರಲೊಪ್ಪಿಕೊಂಡೆವು. ಆಕೆಯು ತನ್ನ ನಡುಕಟ್ಟಿನಿಂದ ಗೀರುಗಳ ಕರವಸ್ತ್ರವೊಂದನ್ನು ಹೊರತೆಗೆದಳು. ಆಕೆಯು ಅದರಲ್ಲಿ ಹಣವನ್ನು ಕಟ್ಟಿಕೊಂಡಿದ್ದಳು. ಆದರೆ ಆಗ, ಅದೇ ಹೊತ್ತಿಗೆ ಸರಿಯಾಗಿ, ಕೋರಿತೆನ್ನಿನ ತೆರಿಗೆ ವಸೂಲು ಮಾಡುವಾತನು ತನ್ನ ಸಂಗಡ ಅಡವಿ ಕಾವಲುಗಾರನೊಬ್ಬನನ್ನು ಕರೆದುಕೊಂಡು, ಅಲ್ಲಿಗೆ ಬಂದನು. ಆತನೊಬ್ಬ ಸ್ಥೂಲಕಾಯನು. ಬಿಳಿಗೂದಲು. ಮಚ್ಚೆ ಮುಖ. ನಿಡುಮೂಗು—ಆತನಿಗಿದ್ದುವು. ಪಟ್ಟಣದ ಬಟ್ಟೆಗಳನ್ನು ಆತನು ತೊಟ್ಟಿದ್ದನು. ಗಂಜಿಮಾಡಿದ ಕೊರಳುಪಟ್ಟಿಯನ್ನೂ. ಕಪ್ಪು ಚುಕ್ಕೆಗಳ ಹಸುರು ಕೊರಳ್ಪಟ್ಟಿನ್ನೂ ಧರಿಸಿದ್ದನು. ತನ್ನ ತೋಳತೆಕ್ಕೆಯಲ್ಲಿ ಪತ್ರಕೋಶವೊಂದನ್ನು ಹಿಡಿದುಕೊಂಡಿದ್ದನು.

"ನಿಮ್ಮ ವ್ಯಾಪಾರದ ಪರವಾನೆ ಎಲ್ಲಿ?"—ಎಂದಾತನು ಕೇಳಿದನು.

ವ್ಯಾಪಾರದ ಪರವಾನೆ ಎಂದರೇನಿರಬಹುದು? ನಾವೇನೂ ವ್ಯಾಪಾರಿಗಳಾಗಿರಲಿಲ್ಲ. ಮಾತನಾಡದೆ ತಾಯಿಯೂ, ನಾನೂ ಒಬ್ಬರನ್ನೊಬ್ಬರು ನೋಡಿಕೊಂಡೆವು.

ಆರಡಿ ಎತ್ತರವಿದ್ದ ಅಡವಿ ಕಾವಲುಗಾರನು ಹಸುರು ಸಮವಸ್ತ್ರ ಧರಿಸಿದ್ದನು. ಹೆಗಲಿಗೆ ಕೋವಿಯನ್ನು ಜೋಲಿಸಿಕೊಂಡು, ತೆರಿಗೆ ವಸೂಲಿಯ ಅಧಿಕಾರಿಯ ಹಿಂದೆ ನಿಂತು ನೋಡುತ್ತ, ತನ್ನ ಕೆಂಪು ಮೀಸೆಯನ್ನು ತೀಡಿಕೊಂಡು, ನಾಲಗೆಯನ್ನು ಹೊರಚಾಚಿ ಚಪ್ ಚಪ್ಪೆನ್ನುತ್ತಿದ್ದನು. ಅವರಿಬ್ಬರೂ ನಿಂತು ತೂಗಾಡುತ್ತಿದ್ದರು. ಅವರ ಕಡೆಯಿಂದ 'ಬ್ರಾಂದಿ' ಸೇವನೆಯ ವಾಸನೆ ಹೊರಸೂಸುತ್ತಿತ್ತು. ಈ ಗಡಿಬಿಡಿಯಲ್ಲಿ, ಬುಟ್ಟಿ ಕೊಳ್ಳಲು ಬಂದಿದ್ದಾಕೆಯು ಹೊರಟೇ ಹೋಗಿದ್ದಳು. ಆಕೆಗೆ ಹೆದರಿಕೆಯಾಯಿತೆನಿಸುತ್ತದೆ. ಆಕೆ ಹೋದುದನ್ನು ಗಮನಿಸದಿರುವಷ್ಟು ಮಟ್ಟಿಗೆ ನಾವೂ ದಿಗ್ಭ್ರಾಂತರಾಗಿದ್ದೆವು.

"ಯಾವ ಪರವಾನೆ ಅದು?"— ಎಂದು ತಾಯಿ ಕೇಳಿದಳು, ನಿಸ್ಸಹಾಯಕಳಾಗಿ.

"ಪರವಾನೆ ಅಂದರೆ ಪರವಾನೆ. ಕಪ್ಪಲ್ಲ, ಕೆಂಪಲ್ಲ. ಹಸುರು ಪರವಾನೆ; ಮಸಿಯಲ್ಲಿ ಬರೆದು ಮುದ್ರೆ ಹಾಕಿದ್ದು. ಹಾಗಾದರೆ ನಿನ್ನ ಹತ್ತಿರ ಇಲ್ಲವೆಂದಾಯಿತು. ಹ್ಞೂ, ಬಿಲಿ ಇನ್ನು ಜುಲ್ಮಾನೆ, ಕೊಡು, ಜಾತ್ರೆ ವ್ಯಾಪಾರ ಹೇಗೆ ಮಾಡಬೇಕೋ, ಕಲಿತುಕೋ"-ಎಂದು ಆ ತೆರಿಗೆ ವಸೂಲಿಯ ಅಧಿಕಾರಿಯು ಕಟುವಾಗಿಯೇ ನುಡಿದನು.

"ಜುಲ್ಮಾನೆ ಏಕೆ ಕೊಡಬೇಕು?"— ಎಂದು ಕೇಳಿದಳು ತಾಯಿ ತನ್ನ ಕೈಗಳನ್ನು ಹಿಸುಕಿ, ಹಿಂಡಿಕೊಳ್ಳುತ್ತಾ, ಆಕೆ

ಗಮನಿಸಿರಿ!

ನಮ್ಮ ಟ್ರೇಡ್ ಮಾರ್ಕಿನ ಅನುಕರಣೆಯನ್ನು ಮಾಡುವ ಇತರ ನಕಲಿ ಬೀಡಿಗಳಿಗೆ ಮೋಸಹೋಗದಿರಿ.

ಮೇಲಿನ ಎಸ್. ಆರ್. ಟ್ರೇಡ್ ಮಾರ್ಕ್ ಇರುವ ಬೀಡಿಗಳು ಮಾತ್ರ ನಿಮಗೆ ಖಾತ್ರಿದಾಯಕವಾದುದು.

S.R.BEEDI WORKS, UDIPI,S.K.

NAVAYUGA
REGD. NO. M. 3619

UDIPI, THURSDAY
19-11-1959

LICENSE NO. 31
Licensed to Post without Prepayment

ಯು ಅಳಲಾರಂಭಿಸಿದಳು. ಆಕೆಯು ಮುಖವು ಅರಕ್ತವಾಗಿ ತೀರಾ ಬಿಳಚಿಕೊಂಡು ಹೋಯಿತು, ಆಕೆಯು ತಲೆಗೂದಲಿನಂತೆ. ಆ ಮುಖದಲ್ಲಿ ಆ ವೇಳೆಗಾಗಲೇ ಅನೇಕ ಸುಕ್ಕುಗಳಿದ್ದುವು; ಅದುವರೆಗೆ ನಾನು ಅವುಗಳನ್ನು ಎಂದೂ ಕಂಡಿರಲಿಲ್ಲ.

"ನಮಗಿನ್ನೂ ಒಂದು ಚಿಕ್ಕಾಸೂ ಸಿಕ್ಕಿಲ್ಲ. ನಾವಿನ್ನೂ ವ್ಯಾಪಾರವೇ ಮಾಡಿಲ್ಲ. ಜುಲ್ಮಾನೆ ಹಾಕಬಯಸುತ್ತೀರಲ್ಲಾ, ನೀವು! ಜುಲ್ಮಾನೆ ಹಣ ನಾನೆಲ್ಲಿಂದ ತರಲಿ?"

"ನಿನ್ನಲ್ಲಿ ಹಣವಿಲ್ಲದಿದ್ದರೆ, ನಿನ್ನ ಸಾಮಾನುಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೇವೆ. ದಾಕೋ, ತಗೋ ಆ ಬುಟ್ಟಿಗಳನು"—ಎಂದು ಆ ವನರಕ್ಷಕನಿಗೆ ಅಧಿಕಾರಿ ಹೇಳಿದನು.

"ಅವುಗಳನ್ನೆಲ್ಲಿಗೆ ತಗೊಂಡು ಹೋಗುತ್ತೀರಿ? ಪಾಪ, ; ಮಗು ಅವುಗಳನ್ನು ಹೆಣೆಯುವುದಕ್ಕಾಗಿ ಇಡೀ ವಸಂತಕಾಲವನ್ನೆಲ್ಲ ಕಳೆದಿದ್ದಾನೆ ಅವನು ಕೈಗಳನ್ನು ಕತ್ತರಿಸಿಕೊಂಡಿದ್ದಾನೆನ್ನಬಹುದು. ನಿದ್ರೆ-ಆಹಾರ ಇಲ್ಲದೆ ಮೈಮರೆದು ಕೆಲಸಮಾಡಿದ್ದಾನೆ. ದಿನವೂ ಬೆಳಗಾಗುವ ಮೊದಲೇ, ಕತ್ತಲಲ್ಲೇ ಎದ್ದೇಳುತ್ತಿದ್ದ. ದಯವಿಟ್ಟು ನಮ್ಮನ್ನು ಬಿಟ್ಟುಬಿಡಿ ನಾವು ಜಾತ್ರೆಗೆ ಬುಟ್ಟಿ ತಂದದ್ದು ಇದೇ ಮೊದಲು. ನಮಗೇನೂ ತಿಳಿಯದು"

"ಮಗು ನಿದ್ರಿಸಿದನೋ, ಇಲ್ಲವೋ ಅದನ್ನು ಕಟ್ಟಿಕೊಂಡು ನನಗೇನು? ಆ ಹುಚ್ಚು ಮಾತುಗಳೆಲ್ಲಾ ನನಗೆ ಹೇಳಬೇಡ ನೀನಿರೋದು ಈಗ ನಮ್ಮ ಭೂಮಿಯಲ್ಲಿ, ಕೋರೇತೀನ್ನಿನಲ್ಲಿ ನಮಗೇನು ಗೊತ್ತು? ನೀನು ಅದನ್ನೆಲ್ಲ ಕದ್ದಿದ್ದರೂ ಕದ್ದಿರಬಹುದು."

"ಏನಂತೀರಿ? ಕದ್ದದ್ದೇ?!'—ಎಂದು ತಾಯಿಯು ಚೀರಿದಳು. ತನ್ನನ್ನು ಯಾರೋ ಚಾಕುವಿನಿಂದ ತಿವಿದಂತಾಯಿತು, ಆಕೆಗೆ, ಯಾರೋ ಅತ್ಯಂತ ಮಾದಕ ಮುಖಭಂಗವನ್ನು ಮಾಡಿದಂತೆ ಆಕೆಗೆ ಭಾಸವಾಯಿತು. "ಇಂತಹ ಅಪಶಬ್ದವನ್ನು ನೀವು ಹೇಳುತೀರಾದರೂ ಹೇಗೆ?!"-ಎಂದು ಆಕೆ ದಿಟ್ಟತನದಿಂದ ಕೇಳಿದಳು.

ನಮ್ಮ ಸಹಾಯಕ್ಕೆ ನಾವು ಕರೆಯುವುದಾದರೂ ಯಾರನ್ನು? ನಮ್ಮ ಬಂಧುಗಳು ಹೊರಟು ಹೋಗಿ ತುಂಬಾ ಹೊತ್ತಾಗಿತ್ತು ಅವರು ಜನಸಂದಣಿಯಲ್ಲಿ ಬೆರೆತು ಹೋಗಿದ್ದರು. ಇಬ್ಬರು ಅಧಿಕಾರಿಗಳು ಮಾತ್ರ ತುಂಬಾ ಅವಸರಪಡಿಸುತ್ತಿದ್ದರು. ರೇಷ್ಮೆ ಕರವಸ್ತ್ರಗಳನ್ನೂ ಮತ್ತು ಜೇಂಬುಗನ್ನಡಿಗಳನ್ನೂ ಮಾರುತ್ತಿದ್ದವನೊಬ್ಬಾತನು ನಮ್ಮ ಕಡೆ ನೋಡುತ್ತ, ತಲೆ ತಿರುಗಿಸಿಕೊಂಡು ನಗುತ್ತಿದ್ದನು.

ವನರಕ್ಷಕನು ಆ ವೇಳೆಗಾಗಲೇ ಬುಟ್ಟಿಗಳನ್ನು ಹೆಗಲಿಗೇರಿಸಿಕೊಂಡಿದ್ದನು. ಅವನನ್ನು ತಡೆಗಟ್ಟಲು ತಾಯಿಯು ಪ್ರಯತ್ನಿಸಿದಳು. ಆದರೆ ಅವನು ಹೃದಯಹೀನನಾಗಿ ತಾಯಿಗೆ ಬಲವಾದ ಒದೆಯೊಂದನ್ನು ಕೊಟ್ಟನು, ಆಕೆಯು ಆ ಹುಲ್ಲು ಮೈದಾನದಲ್ಲಿ ಹಿಂದಕ್ಕೆ ಬಿದ್ದಳು ನಾನು ದಿಗ್ಭ್ರಾಂತನಾಗಿ, ಮಂಕು ಬಡಿದವನಂತೆ ಹಾಗೆಯೇ ನಿಂತು ಕೊಂಡಿದ್ದೆನು.

"ಈ ವಿರೋಧ ಪ್ರದರ್ಶನಕ್ಕಾಗಿ ನಾವು ನಿನ್ನನ್ನು ಕೈದು ಮಾಡಬಲ್ಲೆವು ರಾತ್ರಿಗೆ ಬಂದೀಖಾನೆಯಲ್ಲಿ ತೂಕಡಿಸಬೇಕಾಗುತ್ತೆ ನೀನು!'—ಎಂದು ಆ ತೆರಿಗೆ ವಸೂಲಿ ಅಧಿಕಾರಿಯು ಕೂಗಾಡಿದನು. ಆಗ ತನ್ನ ಕೋವಿಯನ್ನು ಕೈಯಲ್ಲೆತ್ತಿ ಹೆದರಿಸಲು ಪ್ರಯತ್ನಿಸಿದನು

ಇನ್ನೂ ಕೆಲವರು ವನರಕ್ಷಕರೂ ಮತ್ತು ಹಳ್ಳಿಯ ದನ ಕಾಯುವವನೂ ಆ ವೇಳೆಗೆ ಎಲ್ಲಿಂದಲೋ ಬಂದರು. ಅವರೂ ಮಿಕ್ಕಿದ್ದ ಬುಟ್ಟಿಗಳನ್ನು ಹೆಗಲಿಗೇರಿಸಿಕೊಂಡು ಹಳ್ಳಿಗೆ ತೆಗೆದುಕೊಂಡು ಹೋದರು. ತಾಯಿಯು ಕಣ್ಣೀರು ಸುರಿಸುತ್ತ ಅವರ ಹಿಂದೆ ಓಡಿದಳು, ಆಕೆಗೆ ಉಸಿರು ಕಟ್ಟಿದಂತಾಗಿತ್ತು. ನಾನು ಆಕೆಯ ಲಂಗಕ್ಕೇ ಅಂಟಿಕೊಂಡಿದ್ದೆನು. ಜಾತ್ರೆಯ ಮೇಲ್ತುದಿಯಲ್ಲಿ ನಾವಿಬ್ಬರೂ ಮಾತ್ರವೇ ಉಳಿದಿದ್ದೆವು ನಮ್ಮ ಸುತ್ತಲೂ ಎಲ್ಲವೂ ಕತ್ತಲು ಗಟ್ಟಿದಂತೆನಿಸುತ್ತಿತ್ತು. ಹುಡುಗಿಯರ ಬಣ್ಣ ಬಣ್ಣದ ವಸ್ತ್ರಗಳೂ ಹಿಂದೆ ನಾನು ಸುಂದರವೆಂದು ಭಾವಿಸುತ್ತಿದ್ದ ಸರಿಗೆಯ ಅಂಚಿನ ನಡು ಪಟ್ಟಿಣಗಳೂ, ನಮಗೆ ಕಾಣದಾದುವು ತಿಡಿಗೊಳಲುಗಳ ಸಂಗೀತವಾಗಲೀ, ತಮ್ಮ ಸರಕುಗಳ ಬಗ್ಗೆ ವ್ಯಾಪಾರಿಗಳು ಕೂಗಾಡುತ್ತಿದ್ದುದಾಗಲೀ ಆಗ ನಮಗೆಷ್ಟು ಮಾತ್ರವೂ ಕೇಳಿಸುತ್ತಿರಲಿಲ್ಲ ನನ್ನ ಹೃದಯದಲ್ಲಿ ಉಲಿಯುತ್ತಿದ್ದ ಪಕ್ಷಿಯು ಮೌನವನ್ನು ತಳೆಯಿತು, ನಮ್ಮ ಸುತ್ತಲೂ ಎಲ್ಲವೂ ಇದ್ದಕ್ಕಿದ್ದಂತೆಯೇ ನಿರ್ಜನ ಪ್ರದೇಶವಾದಂತೆನಿಸಿತು. ಅಧಿಕಾರಿಗಳ ಬಗ್ಗೆ ನಮ್ಮ ಹೃದಯವು ದ್ವೇಷಭರಿತವಾಗಿತ್ತು ಮಾತ್ರ ನನ್ನಲ್ಲಿ ಬಲವಿದ್ದಿದ್ದರೆ, ನಾನು ಅವರನ್ನು ಇರುವೆಗಳನ್ನು ತುಳಿಯುವಂತೆ ತುಳಿದು ಹಾಕಿ ಬಿಡುತ್ತಿದ್ದೆ; ಅವರು ನಮ್ಮ ಸುಂದರ ಭೂಮಿಯ ಮೇಲೆ ಇನ್ನೆಷ್ಟು ಮಾತ್ರವಾದರೂ ಅಡಿಯಿಡದಿರುವಂತೆ ಅವರನ್ನೊಂದು ಗುಂಡಿಯಲ್ಲಿ ಕೆಡವಿ ಬಿಡುತ್ತಿದ್ದೆ.

(ಬಲ್ಗೇರಿಯನ್ ಕಥೆ)

—ಕ್ರುಂಗ್ರಿಗೊರೋವ್.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಸರಿಸಿದರೂ ಅದರ ನಾಯಕ ಶ್ರೀ ನೆಹರೂರವರ ಮೇಲೆ ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ ಕೇರಳದಲ್ಲಿ ಕೇಂದ್ರೀಯ ಹಸ್ತಕ್ಷೇಪ ಮಾಡುವಂತೆ ಕಲಹೆಯಿತ್ತುದನ್ನು ವಿರೋಧಿಸಿದ ಈ ಕಮ್ಯುನಿಸ್ಟರು ಭಾರತದ ಮೇಲೆ ಚೀನಾ ಮಾಡಿರುವ ಆಕ್ರಮಣದ ಬಗ್ಗೆ ನೆಹರು ದೋರಣೆಯ ಬಗ್ಗೆ ಡೋಲಾಯಮಾನ ಪರಿಸ್ಥಿತಿಯನ್ನೆದುರಿಸುತಿದ್ದಾರೆ. ಜನಸಂಘ, ಹಿಂದೂಮಹಾಸಭೆಗಳು ಶ್ರೀ ನೆಹರುರವರನ್ನು ವೈಯಕ್ತಿಕವಾಗಿ ತುಸುಮಟ್ಟಿಗೆ ಮೆಚ್ಚುತ್ತಾರೆ.

ವಿದೇಶಗಳಲ್ಲಿ ಕೂಡ, ಶ್ರೀ ನೆಹರು ಎಂದರೆ, ಯಾರಿಗೂ ಅನಾದರವೇಬುದಿಲ್ಲ. ಅವರ ನಾಯಕತ್ವದಲ್ಲಿ ಭಾರತ ಸಮೃದ್ಧಿ ಪಥದತ್ತ ಸಾಗುತ್ತಿದೆ ಎಂದೆಲ್ಲರೂ ತಿಳಿದಿದ್ದಾರೆ. ಬ್ರಿಟನ್, ಅಮೆರಿಕೆ, ರಶ್ಯಗಳವರೂ ಭಾರತೀಯ ನಾಯಕನ ಬಗ್ಗೆ ಗೌರವ ಭಾವನೆಯನ್ನಿಟ್ಟುಕೊಂಡಿದ್ದಾರೆ. ರಶ್ಯ ಮತ್ತು ಬ್ರಿಟನ್ನಿನ ಪ್ರಧಾನಿಗಳು ಭಾರತವನ್ನು ಸಂದರ್ಶಿಸಿದ್ದಾರೆ; ಅಮೆರಿಕೆಯ ಅಧ್ಯಕ್ಷರು ಸದ್ಯ ಬರಲಿದ್ದಾರೆ ಆಫ್ರಿಕನ್ ಹಾಗೂ ಆಗ್ನೇಯ ಏಶ್ಯದ ವಿವಿಧ ಎಳೆಯ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ನೆಹರೂರವರ ಬಗ್ಗೆ ಕೃತಜ್ಞತೆ ಮಾತ್ರವಲ್ಲದೆ ಗೌರವಾಭಿಮಾನಗಳು ತುಂಬಿತ ತುಳುಕಾಡುತ್ತಿವೆ. ಭಾರತೀಯ ವಿದೇಶನೀತಿಯಿಂದಾಗಿ ಎಲ್ಲರೊಡನೆಯೂ ಸ್ನೇಹಸಂಬಂಧವನ್ನಿಟ್ಟುಕೊಂಡು ಎಲ್ಲರಿಗೂ ಬೇಕಾದ ರಾಷ್ಟ್ರವಾಗಿ ಬಾಳುವ ಸಂದರ್ಭವನ್ನು ಭಾರತಕ್ಕೆ ಒದಗಿಸಿದ ಕೀರ್ತಿಗೆ ಶ್ರೀ ನೆಹರೂ ಒಬ್ಬರೇ ಕಾರಣಪುರುಷರು.

ಇತ್ತೀಚೆಗೆ ಶ್ರೀ ನೆಹರು ಅವರ ವಿದೇಶ ನೀತಿಯು ಅಸಫಲಗೊಂಡಿರುವುದೆಂಬ ಮಾತು ಬೆಳೆಯುತ್ತ ನಡೆದಿದ್ದರೂ ಅವರ ನಾಯಕತ್ವದ ಬಗ್ಗೆ ಯಾವ ಪ್ರಶ್ನೆಯೂ ಉದ್ಭೂತವಾಗಿಲ್ಲ ಇದರಿಂದಲೇ ನೆಹರುವರ ನಾಯಕತ್ವವು ಎಷ್ಟು ಸಮರ್ಥವೆಂಬುದನ್ನು ತಿಳಿಮಕೊಳ್ಳಬಹುದು. ನಲುವತ್ತು ಕೋಟಿ ಭಾರತೀಯರ ಕಣ್ಮಣಿಯಾಗಿ ಇನ್ನೂರೈವತ್ತು ಕೋಟಿ ವಿಶ್ವಪ್ರಜೆಗಳ ಕೈವಾರಿಯಾಗಿ ವಿರಾಜಮಾನರಾಗುತ್ತಿರುವ ಶ್ರೀ ಜವಾಹರರು ಭಾರತರತ್ನರೇ ಎಂದು ಬೇರೆ ಹೇಳಬೇಕಾಗಿಲ್ಲ. ಶ್ರೀ ಜವಾಹರಲಾಲ ನೆಹರೂ ಭಾರತೀಯರಿಗೆ ಬೇಕು, ಅವರು ಮಾರ್ಗದರ್ಶನದ ಮೂಲಕವೇ ಭಾರತದ ಉನ್ನತಿಯೆಂಬುದನ್ನು ಜನತೆ ಕಂಡುಕೊಂಡಿವೆ. ಭಾರತದಲ್ಲಿ ಸರ್ವಜನಪ್ರಿಯನಾದ ನಾಯಕನೊಬ್ಬನಿರುವುದಾದರೆ, ಅದು ಶ್ರೀ ಜವಾಹರಲಾಲರೊಬ್ಬರೇ ಶ್ರೀ ನೆಹರು ಕಾಲುವೆಯ ನೀರಿನಂತೆ ಸರ್ವಜನ ಮನೋಹ್ಲಾದಕಾರಕರಾಗಿದ್ದಾರೆ.

ತಮ್ಮ ನೆಚ್ಚಿನ ನಾಯಕರಾದ ಶ್ರೀ ಜವಾಹರಲಾಲ ನೆಹರು ಅವರ ಜನ್ಮದಿನದಂದು ಅವರ ಸಮರ್ಥನಾಯಕತ್ವದ ಭಾಗ್ಯ ತಮಗೆ ಇನ್ನೂ ಬಹುಕಾಲ ದೊರೆಯುವಂತಾಗಲೆಂದೂ ಶ್ರೀ ನೆಹರೂರವರಿಗೆ ಶುಭವಾಗಲೆಂದೂ ಭಾರತದ ನಲುವತ್ತು ಕೋಟಿ ಜನತೆ ಒಕ್ಕೊರಲಿನಿಂದ ಬೇಡಿಕೊಂಡಿತು. ಅವರ ಆಶೆಯು ಈಡೇರುವುದೆಂದು ಎಲ್ಲರೂ ಹಾರೈಸಬೇಕಾಗಿದೆ

—ರಾಶಿ.

ಉಡ್ಪಿ. ಡಿ ಮು ಕೋರ್ಟಿನಲ್ಲಿ

S C No 539/1959

ಕಲ್ಸಂಕ ವೆಂಕಟ್ರಾಯ ಪೈ ಎಂಡ್ ಸನ್ಸ್. ವಾದಿ.

ಮತ್ತು

ಗೋಪಾಲ ಕೋಟ್ಯಾನ್ ತನ್ನ ತಂದೇಲರ ಮಗ ಉಡ್ಪಿ ತಾಲ್ಲೂ ಉದ್ಯಾವರ ಗ್ರಾಮ— — ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ವಾದಿರ ಅಂಗಡಿಯಲ್ಲಿ ಪ್ರತಿವಾದಿಯು ನಡ್ಸಿದ ಲೇವಾ ದೇವಿ ಬಾಬ್ತು ವಾದಿರಿಗೆ ಪ್ರತಿವಾದಿಯಿಂದ ಬರತಕ್ಕದ್ದಾದ ರೂಪಾಯಿ 230.45ಕ್ಕೆ ವಾದಿರು ದಾಖ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 28-11-1959 ಕ್ಕೆ ಪ್ರತಿವಾದಿಗೆ ನೋಟಿಸು ಬಗ್ಗೆ ಇಟ್ಟಿರುವುದ್ರಿಂದ ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಉದಾಹರಣೆ ದಾಖ್ಲು ಮಾಡಿ ವ್ಯವಹರಿಸುವುದಿದ್ದಲ್ಲಿ ಸದ್ರಿ ತಾ 28.11.59ನೇ ದಿವ್ಸ ಬೆಳಗ್ಗೆ 10 ಗಂಟೆಗೆ ಸ್ವತಹಾ ವ ವಕೀಲರ ಮುಖಾಂತರ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ಶಿಫಾರಸು ಮಾಡಿ ಸದ್ರಿ ವ್ಯಾಜ್ಯವು ಫೈಸಲು ಮಾಡಲಾದೀತು.

P. V. Acharya.
Vakil for Plaintiff.
Udipi Date 12-11-59.

2

ಯೋಜನೆಗಳು

ಪಿಗ್ಮಿ

ದೈನಿಕ ಉಳಿತಾಯ

(೨೫ ನಯೇ ಪೈಸೆಯಿಂದ ಮೇಲ್ಪಟ್ಟು)

ಕ್ಯುಮ್ಯುಲೆಟಿವ್

ಮಾಸಿಕ ಉಳಿತಾಯ

(೫ ರೂಪಾಯಿಯ ಗುಣಕಗಳಲ್ಲಿ)

ವಿವರಗಳನ್ನು ತಿಳಿಯಲು ಬೇಂಕಿನ ಶಾಖೆಗೆ ಬನ್ನಿರಿ ಅಥವಾ ಬರೆಯಿರಿ

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ ಎ ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2 V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ವಾ ಚಂದಾ ರೂ. 5-75

ಬೆಲೆ 13 ನ ಪೈಸೆ

Vol. 39 No 13
ವರುಷ ೩೯ ವಾರ ೧೩

26-11-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ನಾಗರನ ಕನ್ನಡಕ ಭಾರತೀಯರಿಗೆ ಬೇಡ

ನಾಗರನ ಕನ್ನಡಕ ಬಯಸಿ ಅಪ್ಪಿಕೊಂಡರೆ ಅದು ಕಚ್ಚಿಯೇ ಕಚ್ಚುವುದು
ಆದುದರಿಂದ ನಾಗರವನ್ನು ಕಂಡೊಡನೆಯೇ ದೂರವೋಡಿಸಬೇಕು

ಅಮೇರಿಕೆಯ ವಾಯುಪಡೆಯು ಎಟ್ಲಾಸ್ ಆಕಾಶಬಾಣವನ್ನು ಹಾರಿಸುವಾಗ ತೆಗೆದ ಚಿತ್ರವಿದು

ಭಾರತೀಯ ಕಮ್ಯೂನಿಸ್ಟ್ ಪಕ್ಷದ ಕಾರ್ಯಕ್ರಮ ಮತ್ತು ಸ್ಥಿತಿಯನ್ನು ಭಾರತೀಯರೆಲ್ಲರೂ ಸುಸ್ಪಷ್ಟವಾಗಿ ಈಗ ಕಂಡುಕೊಳ್ಳಬಹುದು. ಸ್ವಾತಂತ್ರ್ಯಪ್ರಾಪ್ತ್ಯನಂತರ ಪ್ರಪ್ರಥಮ ಬಾರಿಗೆ ಅವರು ಕೇರಳದಲ್ಲಿ ಅಧಿಕಾರವನ್ನು ಪಡೆದು ಗದ್ದುಗೆ ಏರಿದಂದಿನಿಂದ ತಮ್ಮ ವಿಜಯ ಪತಾಕೆಯನ್ನು ಹಾರಾಡಿಸುವ ಭರದಲ್ಲಿ ತುಸು ಎಡವಿಬಿದ್ದುದರಿಂದಲೇ, ತಾವಾಡಿದ ರಾಜಕೀಯ ಚದುರಂಗದಾಟದಲ್ಲಿ ಯಶಸ್ವಿಯಾಗುವುದಕ್ಕೆ ಮೊದಲೇ ಅಧಿಕಾರತ್ಯಾಗ ಮಾಡಬೇಕಾಗಿ ಬಂತು. ಈ ಸಂದರ್ಭದಲ್ಲಿ ಕಮ್ಯೂನಿಸ್ಟರ ಬಗ್ಗೆ, ಅವರ ಆಚರಣೆ ಹಾಗೂ ಆಡಳಿತೆ ಮತ್ತು ಧ್ಯೇಯ ಧೋರಣೆಯ ಕಡೆಗೆ ಕೇವಲ ಕೇರಳದಲ್ಲಿ ಮಾತ್ರವಲ್ಲ, ಅಖಂಡ ಭಾರತದಲ್ಲಿಯೇ ತಿರಸ್ಕಾರ ಹಾಗೂ ಜಿಗುಪ್ಸೆಯ ಮನೋಭಾವನೆಯು ತಲೆದೋರಿದ್ದುದರಿಂದ ಅಲ್ಲಿ ಅವರು ಪುನಃ ಗೆದ್ದುಬರಬೇಕಾದರೆ ಮತ್ತಷ್ಟು ಪ್ರಯಾಸಪಡಬೇಕಾಗಿತ್ತು. ಕೇರಳದ ಚುನಾವಣೆಗೆ ಪೂರ್ವಭಾವಿ ಸಿದ್ಧತೆಯನ್ನು ಮಾಡುತ್ತಿರುವಂತೆಯೇ ಭಾರತೀಯ ಕಮ್ಯೂನಿಸ್ಟರು ಇನ್ನೊಂದು ಬಲವಾದ ಪ್ರಹಾರವನ್ನು ತಿನ್ನಬೇಕಾಗಿ ಬಂತು. ಇದೇ ಚೀನೀ-ಭಾರತ ಸೀಮಾ ವಿವಾದದ ಬಗ್ಗೆ ಅವರ ನಿಲುವು.

ಯಾವನೇ ಸ್ವದೇಶನಿಷ್ಠ ರಾಷ್ಟ್ರೀಯನೇ ಇರಲಿ, ಆತನು ಪಕ್ಷಭೇದವನ್ನು ಗಣನೆಗೆ ತಾರದೆ ರಾಷ್ಟ್ರೀಯತೆಯ ಪುರಸ್ಕರ್ತನಾಗಿ, ಭಾರತವು ಎದುರಿಸಬೇಕಾದ ಈ ಗಂಡಾಂತರದ ಪರಿಸ್ಥಿತಿಯಲ್ಲಿ ರಾಷ್ಟ್ರದ ರಕ್ಷಣೆ ಹಾಗೂ ಭದ್ರತೆಯ ಕಡೆಗೆ ತೀವ್ರ ಗಮನ ಹರಿಸುತ್ತಿದ್ದನು. ಕಮ್ಯೂನಿಸ್ಟೇತರ ಪಕ್ಷಗಳೆಲ್ಲವೂ ಈ ವಿವಾದದ ಬಗ್ಗೆ ವಿವೇಚನೆಯನ್ನು ವ್ಯಕ್ತಪಡಿಸಿರುವುದಲ್ಲದೇ ರಾಷ್ಟ್ರದ ಅಖಂಡತೆಗಾಗಿ ಶ್ರಮಿಸುವ, ಸರಕಾರಕ್ಕೆ ಈ ಬಗ್ಗೆ ಹೃತ್ಪೂರ್ವಕ ಬೆಂಬಲ ನೀಡುವ ನಿರ್ಧಾರವನ್ನು ಮಾಡಿವೆ. ಆದರೆ, ಭಾರತೀಯ ಕಮ್ಯೂನಿಸ್ಟ್ ಪಕ್ಷವು ಈ ಬಗೆ ಮೊದಮೊದಲು ಯಾವುದೇ ಅಭಿಪ್ರಾಯವನ್ನೂ ವ್ಯಕ್ತಪಡಿಸಿಲ್ಲ. ಶ್ರೀ ಎಸ್. ಎ. ಡಾಂಗೆ, ಶ್ರೀ ನಂಬೂದರಿಪಾದ, ಮೊದಲಾದವರು ಈ ವಿಷಯದಲ್ಲಿ ಚೀನವನ್ನು ಖಂಡಿಸಿ ಮಾತಾಡಿದರೂ ಮುಂದಕ್ಕೆ ಪಕ್ಷದ ಶಿಸ್ತಿಗೆ ತಲೆ ತಗ್ಗಿಸಲೇ ಬೇಕಾಯಿತು. ಸ್ವತಂತ್ರಾಭಿಪ್ರಾಯವನ್ನು ವ್ಯಕ್ತಪಡಿಸುವ ಅಧಿಕಾರವನ್ನು ಪಕ್ಷವು ಯಾರಿಗೂ ಕೊಡುವುದಿಲ್ಲ ಎಂಬುದಕ್ಕೆ ಇದೂ ಒಂದು ನಿದರ್ಶನವಾಯಿತು.

ಭಾರತ-ಚೀನಾ ವಿವಾದದ ಬಗ್ಗೆ ಭಾರತದ ನಿಲುವು ದೃಢವಾದುದು ಮತ್ತು ನ್ಯಾಯೋಚಿತವಾದುದು. ಭಾರತವು ಹೇಳುವಂತೆ ಸೃಷ್ಟಿಯೇ ಭಾರತ ಮತ್ತು ಚೀನಾಗಳನ್ನು ಬೇರ್ಪಡಿಸಿದೆ. ಈ ಗಡಿಯು ಈಗ ಅಲ್ಲ, ಬಹು ಹಿಂದಿನಿಂದಲೂ ಇದ್ದಿದ್ದು ಈಗದನ್ನು ಮ್ಯಾಕಮೋಹನ ರೇಖೆಯೆಂದು ಕರೆಯಲಾಗುತ್ತಿದೆ. ಈ ರೇಖೆಯೇ ಭಾರತ-ಚೀನಾಗಳ ಗಡಿಯಾಗಿದ್ದು, ಇದನ್ನು ಯಾರೊಬ್ಬರು ಅತಿಕ್ರಮಿಸಿದರೂ ಅದು ಆಕ್ರಮಣವೆಂದಾಗುವುದು. ಈಗ ಭಾರತದ ಈಶಾನ್ಯ ಸೀಮಾಪ್ರಾಂತದಲ್ಲಿ ಲಡಾಖ ಭಾಗದಲ್ಲಿ ಹಾಗೂ ಇನ್ನು ಕೆಲವೆಡೆ ಚೀನವು ತನ್ನ ಆಕ್ರಮಣ ನೀತಿಯನ್ನು ಪ್ರದರ್ಶಿಸುವಾಗ, ಯಾರೂ ಅದನ್ನು ಒಪ್ಪಿ ಕೊಳ್ಳುವುದು ಸಾಧ್ಯವಿಲ್ಲ. ಮ್ಯಾಕಮೋಹನ ರೇಖೆಯನ್ನು ಬಿಟ್ಟು ಎರಡೂ ಕಡೆಯವರು ೧೨ ಮೈಲು ಹಿಂದಕ್ಕೆ ಸರಿದು ಆ ಪ್ರದೇಶವನ್ನು ನಿಶ್ಶಸ್ತ್ರಪ್ರದೇಶವನ್ನಾಗಿ ಮಾಡಿ ತದನಂತರ ಸೀಮಾವಿವಾದವನ್ನು ಶಾಂತಿಯುತವಾಗಿ ಮಾತುಕತೆಗಳ ಮೂಲಕ ಬಿಡಿಸಬಹುದೆಂದು ಚೀನವು ಭಾರತಕ್ಕೆ ಒಂದು ಪತ್ರದಲ್ಲಿ ತಿಳಿಸಿದ ಮಾತ್ರವಲ್ಲದೇ ಗಡಿಪ್ರದೇಶದಲ್ಲಾಗುತ್ತಿರುವ ದುರಂತಗಳಿಗೆ ಮೊಸಳೆಕಣ್ಣೀರನ್ನೂ ಸುರಿಸಿದೆ.

ಮೀರತ್ತಿನ ಕಮ್ಯೂನಿಸ್ಟ್ ಅಧಿವೇಶನವು ಅವರನ್ನುವಂತೆ ಇತಿಹಾಸಪ್ರಸಿದ್ಧವಾದುದು. ಮ್ಯಾಕಮೋಹನ ರೇಖೆಯನ್ನೇ ಭಾರತ—ಚೀನಾಗಳ ಗಡಿಯೆಂಬುದನ್ನು ತಾತ್ತ್ವಿಕವಾಗಿ ಒಪ್ಪಿಕೊಂಡ ಒಂದು ಕಾರ್ಯವನ್ನು ಬಿಟ್ಟರೆ, ಈ ಅಧಿವೇಶನದಲ್ಲಿ ಮತ್ತೇನೂ ಲಾಭವದಂತೆ ತೋರುವುದಿಲ್ಲ. ಚೀನೀ ಸರಕಾರವು ಸಮಸ್ಯೆಯನ್ನು ಬಗೆಹರಿಸಲಿತ್ತ ಸಲಹೆಯನ್ನು ಈ ಅಧಿವೇಶನವು ಸ್ವಾಗತಿಸಿರುವುದನ್ನು ಕಾಣುವಾಗ ಆಶ್ಚರ್ಯದಲ್ಲಿ ಆಶ್ಚರ್ಯವುಂಟಾಗುತ್ತಿದೆ. ಅಂತೆಯೇ ಕಾಂಗ್ರೆಸ್ ಸರಕಾರದ ನೀತಿಯನ್ನೂ ಧೋರಣೆಯನ್ನೂ ನಖಶಿಖಾಂತವಾಗಿ ದೂರಿ ಬರುತ್ತಿದ್ದ ಕಮ್ಯೂನಿಸ್ಟ್ ಪಕ್ಷವು ಈಗ ಇತರ ರಾಜಕೀಯ ಪಕ್ಷಗಳೊಡನೆ ಸಂಬಂಧ ಬೆಳೆಸುವುದು ಅಗತ್ಯವೆಂದು ಸಾರಿಕೊಂಡಿರುವುದು ರಾಜಕೀಯ ದುರುದ್ದೇಶದಿಂದಲೇ ಎನ್ನಬೇಕು. ಭಾರತದ ಯಾವ ಬೇರೆ ರಾಜ್ಯದಲ್ಲಿಯೂ ಅಧಿಕಾರಗ್ರಹಣ ಮಾಡುವ ಆಸೆಯಿಲ್ಲದಿರುವಾಗ, ಕೈಯಲ್ಲಿದ್ದು ಕಳೆದುಕೊಂಡ ಕೇರಳದ ಅಧಿಕಾರವನ್ನು ಪುನಃ ಪಡೆಯುವುದು ಸಮೀಪದ ಅವರ ಧ್ಯೇಯವಾಗಿದ್ದರೆ, ಅಖಂಡ ಭಾರತದಲ್ಲಿಯೇ ತಮ್ಮ ಕಾರುಬಾರುಗಳನ್ನು ಪಸರಿಸುವ ಹವಣಿ

(೧೩ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ – ಮಂಗಳೂರು—3

ಸ್ಥಾಪನೆ – 1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/ ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ .

ಕಥಾ ವಿಹಾರ

ಕೃತಘ್ನರು ಕೃತಜ್ಞರಾದಾಗ......

ತನಗೆದುರಾಗಿದ್ದ ಹಕ್ಕಿಯನ್ನು ಗಿಡುಗನೆಂದು ದೇ. ಭ. ವಂಚಿಸಿದರು. ಇದರಿಂದ ಜನತೆ ಪಾತಕಲಿಯಿತೇನೋ ಸರಿ; ಹಕ್ಕಿ ಮಾತ್ರ ಪಂಜರದಿಂದ ಹಾರಿ ಹೋಗಿತ್ತು!

"ಕೃತಘ್ನರು....ಎಲ್ಲರೂ ಕೃತಘ್ನರು; ಮಾಡಿದ ಉಪಕಾರವನ್ನೇ ಮರೆತ ಕೃತಘ್ನರು."

—ತಲೆಯ ಮೇಲೆ ಕೈ ಹೊತ್ತು ಕುಳಿತ ನಾಗೇಶರಾಯರ ಮುದುಡಿದ ಮುಖಮುದ್ರೆ ಅವರ ಆ ಕಹಿ ಅನುಭವದ ಪರಿಣಾಮವನ್ನು ಪ್ರತಿಬಿಂಬಿಸುತ್ತಿತ್ತು. ಬುದ್ಧಿ ಹೊಯ್ದಾಟವಾಡುತ್ತಿತ್ತು.

"ಅಲ್ಲ.. ಅವರು ಕೃತಘ್ನರಲ್ಲ. ತಮಗೆ ಬೇಕಾದವರನ್ನು, ತಮ್ಮ ಒಳಿತಿಗಾಗಿ ದುಡಿಯುವವರನ್ನು ತಮ್ಮ ಧುರೀಣರಾಗಿ ಆರಿಸುವ ಹಕ್ಕು ಪ್ರತಿಯೊಬ್ಬ ಪ್ರಜೆಗಿದೆ. ಒಡವನ ನಾಯಕತ್ವ ಅವರಿಗೆ ಬೇಡವಾಯಿತು. ಜನತೆಗೇ ಬೇಡವಾದದ್ದು ತನಗೇಕೆ? ನನ್ನ ಧುರೀಣತ್ವ ನನಗಾಗಿಯೇನು? ಅದು ಜನತಾ ಸೇವೆಗೆಂದೇ ಆಗಿತ್ತು. ಅವರೇ ನನಗಾ ಸಂದರ್ಭವನ್ನೊದಗಿಸಲಿಲ್ಲ. ಅವರಿಗೆ ಬೇಕಾದವರನ್ನೇ ಅವರು ಆರಿಸಿದರು. ಅದಕ್ಕಾಗಿ ಜನರನ್ನು ದೂರುವುದು ಸ್ವಾರ್ಥ ಸಾಧನೆ.

— ನಾಗೇಶರಾಯರು ತಮ್ಮ ಮನೋದೌರ್ಬಲ್ಯವನ್ನು ಹಳಿದುಕೊಂಡು ಮನಸ್ಸನ್ನು ಸ್ಥಿರಗೊಳಿಸಲೆತ್ನಿಸಿದರು. ಅವರು ತಮ್ಮ ಸೋಲಿಗಾಗಿ ಅಳುತ್ತಿರಲಿಲ್ಲ. ಜನನಾಯಕನಾಗಿ ಜನರ ಸೇವೆ ಮಾಡುವ ಭಾಗ್ಯ ತಪ್ಪಿದ್ದಕ್ಕಾಗಿ ಮರುಗುತ್ತಿದ್ದರು.

"ಜನಸೇವೆ ಮಾಡಲು ನಾಯಕನೇ ಆಗಬೇಕೇ? ಎಷ್ಟೋ ಮಾರ್ಗಗಳು ಇದಕ್ಕಿವೆ. ಚುನಾವಣೆಯಲ್ಲಿ ಗೆದ್ದು ಜನತಾಸೇವೆ ಮಾಡುವೆನೆಂಬುದು ಸೇವೆಯ ಸೋಗು; ಬಾಹ್ಯಾಡಂಬರ ಮಾತ್ರ. ನಿಜವಾಗಿ, ಸೇವೆ ಮಾಡಲಿಚ್ಛಿಸುವವ ಚುನಾವಣಾರಂಗಕ್ಕಿಳಿಯುವುದಿಲ್ಲ."

—ಮುಗುಳುನಗೆ ಅವರ ಮುಖದಲ್ಲಿ ತೇಲಿತು. ತಮ್ಮದು ಅಜ್ಞಾನವೆಂದೇ ಅವರ ಎಣಿಕೆಯಾಯಿತು.

"ಆದರೂ...

"ಜನತೆ ತಮ್ಮ ನಾಯಕನನ್ನಾಗಿ ಯಾರನ್ನು ಆರಿಸಿಬಿಟ್ಟಿತು ...! ಇಂದು ಜನತಾಸೇವಕನ ಮುಖವಾಡ ಧರಿಸಿದ, ಧರ್ಮರತ್ನಾಕರ ಬಿರುದಾಂಕಿತರಾದ, ಜನನಾಯಕರಾಗಿ ಆರಿಸಲ್ಪಟ್ಟ ದಾಮೋದರರಾಯರು...ಅಂದು....!"

ನಾಗೇಶರಾಯರು ಹತ್ತು ವರ್ಷದ ಹಿಂದಿನ ನೆನಹನ್ನು ನೆನೆದಾಗ ಅವರಿಗೆ ಅಸಹ್ಯವೆನಿಸಿತು. ಜನತೆಯ ಅಜ್ಞಾನಕ್ಕಾಗಿ ಮರುಗಿದರು.

"ಅಂದು....

ಬಡತನದ ಬೇಗೆಯಿಂದಾಗಿ ಬರೇ ಒಂದು ಬಿ. ಎ. ಮುಗಿಸುವುದು ಕಷ್ಟವಾದ ಆ ಕಾಲದಲ್ಲಿ ನಾಗೇಶರಾಯರು ಏನೇನೋ ಮಾಡಿ ಆ 'ಡಿಗ್ರಿ'ಯನ್ನು ಪಡೆದರು. ಕಾಲೇಜಿನಿಂದ ಹೊರ ಬರುತ್ತಿದ್ದಂತೆಯೇ ನಲವತ್ತೆರಡರ ಚಳವಳಿ ಅವರನ್ನಾಕರ್ಷಿಸಿತು; ಅದರ ಪರಿಣಾಮವಾಗಿ ಜೈಲುವಾಸ. ಜೈಲಿನಿಂದ ಹೊರಬಿದ್ದಾಗ ಎಲ್ಲೆಡೆಯಲ್ಲೂ ಬರಗಾಲದ ಭೀಕರತೆ ಬಡಜನತೆಯನ್ನಾವರಿಸಿತ್ತು. ಹೊಟ್ಟೆಗೆ ಅನ್ನ, ಉಡಲು ಬಟ್ಟೆಗಳಿಲ್ಲದೇ ಕಣ್ಣೀರಿಡುತ್ತಿದ್ದ ಜನರನ್ನು ಕಂಡು ನಾಗೇಶರಾಯರ ಅಂತಃಕರಣ ಕರಗಿತು. ಬಡಜನತೆ ಕೂಳಿಲ್ಲದೇ ಗೋಳಿಡುತ್ತಿದ್ದಾಗ ಸಿರಿವಂತರು ಸಂಪದದ ತಾಂಡವವಾಡುತ್ತಿದ್ದರು. ಅವರೆಲ್ಲರ 'ಬಂಗ್ಲೆ'ಗಳೆದುರು ತುತ್ತು ಹಿಟ್ಟಿಗಾಗಿ ಕೈಯೊಡ್ಡುತ್ತಿದ್ದವರ ಕತ್ತು ಹಿಡಿದು ನೂಕಲು 'ಗೂರ್ಖ' ಕಾವಲುಗಾರ ಸಿದ್ಧನಾಗಿರುತ್ತಿದ್ದ. ಅಂತಹ ಸಿರಿವಂತರಲ್ಲಿ ದಾಮೋದರರಾಯರೂ ಒಬ್ಬರು.

ಜನರೆಲ್ಲ ಈ ರೀತಿ ಸಾಯುವ ಸ್ಥಿತಿಯಲ್ಲಿದ್ದಾಗ, ಹಸಿದ ಹೊಟ್ಟೆಯನ್ನು ತುಂಬಿಸಲು ಅಸಹ್ಯವೆಂಬುದನ್ನೂ ಮರೆತು ಕೊಳೆತು ನಾರುತ್ತಿರುವ ಪದಾರ್ಥಗಳನ್ನು ತಿನ್ನಲೂ ಬಾಯ್ದೆರೆಯುತ್ತಿದ್ದಾಗ, ನಾಗೇಶರಾಯರು ತಮ್ಮ ಜೀವವನ್ನೂ ಲೆಕ್ಕಿಸದೇ, ಬಿಸಿಲು—ಬೆಂಕಿಯೆನ್ನದೇ ಅಲೆದು, ಹಲವಾರು ಕಷ್ಟನಿಷ್ಟುರಗಳಿಗೊಳಗಾಗಿ 'ಬರಗಾಲ ನಿಧಿ'ಯನ್ನು ಕೂಡಿಸಿ ಆ ಊರ 'ಬರೇ ಹೊಟ್ಟೆ'ಯವರನ್ನು 'ಅರೆಹೊಟ್ಟೆ'ಯ ಸ್ಥಿತಿಗೆ ತಂದು ನಿಲ್ಲಿಸಿದರು. ಅಂದೊಮ್ಮೆ ತಮ್ಮ ಮಿತ್ರರೊಡನೆ ದಾಮೋದರರಾಯರ ಮನೆಗೆ ನಿಧಿಗೆ ಸಹಾಯವಪೇಕ್ಷಿಸಿ ಬಂದ ನಾಗೇಶರಾಯರನ್ನು ಕತ್ತು ಹಿಡಿದು ದಬ್ಬಿಸಿದ್ದರು. ಅಂದು ಈ ದೃಶ್ಯವನ್ನು ಕಣ್ಣಾರೆ ಕಂಡ ಜನತೆ ಇಂದು ಅದನ್ನೆಲ್ಲ ಮರೆತಿತ್ತು. ರಾತ್ರಿ ಕಂಡ ಬಾವಿಗೇ ಹಗಲಿನಲ್ಲಿಯೇ ಹಾರಿಬಿಟ್ಟಿತ್ತು!

ನಾಗೇಶರಾಯರು ಜನರಿಗಾಗಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಕೊಲೆಂಬೇನೆ ಊರನ್ನೇ ನುಂಗುವೆನೆಂದು ಬಂದಿದ್ದಾಗ ಸ್ವಯಂ ಸೇವಕರನ್ನು ಕೂಡಿಸಿ, ತಾನೂ ಜನತಾ ಸೇವಕನಾಗಿ ದುಡಿದು ಜನಾರ್ಧನನ ಪ್ರೀತಿಗೆ ಪಾತ್ರರಾಗಿದ್ದರು. ತಾವು ಜನ್ಮತಃ ಬಡವರಾದರೂ, ಬಡವರೆಂದು ಬೇಡಿದವರಿಗಾಗಿ ತನ್ನ ದುಡಿಮೆಯ ಬಹುಭಾಗವನ್ನೇ ಧಾರೆಯೆರೆದವರು. ಹಳ್ಳಿಗಳಲ್ಲಿ ವಿದ್ಯಾಪ್ರಸಾರತೆಯ ಮೂಲಕ ಜನರನ್ನು ನಾಗರಿಕರನ್ನಾಗಿಸಿದುದಲ್ಲದೇ ತನ್ಮೂಲಕ ತಾವು ಕಲಿತ ವಿದ್ಯೆಯ ಸಾರ್ಥಕ್ಯ ಪಡೆದರು. ಜನತೆಗಾಗಿ ಇಷ್ಟನ್ನು ಮಾಡಿದ ನಾಗೇಶರಾಯರನ್ನು ಅವರ ಮಿತ್ರರನೇಕರು ಮುಂದೆಯೂ ಅವರ ಸೇವೆಯನ್ನು ಬಯಸಿ ಜನತಾ ಪಕ್ಷದಿಂದ ಆಧಾರಿಯ ಸಾರ್ವತ್ರಿಕ ಚುನಾವಣೆಗೆ ಹುರಿಯಾಳಾಗಿ ನಿಲ್ಲಿಸಿದರು. ಆದರೆ.... ಇಂದು....?

oo oo oo

"ದೇಶಭಕ್ತ ದಾಮೋದರರಾಯರೇ ...ಜೈ". ತಾಲೂಕು ಕಚೇರಿಯ ಹೊರಗೆ ಗುಂಪು ಕೂಡಿದ್ದ ಜನರು ಒಕ್ಕೊರಲಿನಿಂದ ಘೋಷಿಸಿದರು. ಘೋಷಣೆಯ ಧ್ವನಿ ದಿಕ್ಕು ದಿಕ್ಕುಗಳಲ್ಲಿ ಪ್ರತಿಧ್ವನಿಸುತ್ತಿದ್ದಂತೆಯೇ, ವಿಜಯ ಮಾಲೆಯನ್ನು ಧರಿಸಿ, ತಮ್ಮ ಬೆಂಗಾವಲಿನವರೊಡನೆ ಹೊರ ಬಂದರು—ದೇಶಭಕ್ತ ದಾಮೋದರರಾಯರು! ಅವರ ಪ್ರಸನ್ನವದನವನ್ನು ಕಂಡೊಡನೆಯೇ ಜನರು ಗುಂಪು ಮೊದಲಿಗಿಂತ ಗಟ್ಟಿಯಾಗಿ ಜಯಕಾರ ಗೈದಿತು. ನೂರುಗಟ್ಟಲೆ ಕರಗಳು ತಮ್ಮಲ್ಲಿದ್ದ ಹಾರಗಳನ್ನು ಅವರ ಕೊರಳಿಗೆ ತೊಡಿಸಿದುವು, 'ಛಾಯಾ ಚಿತ್ರಗ್ರಾಹಿ'ಗಳು ತಮ್ಮ ಕರ್ತವ್ಯ ನಿರ್ವಹಿಸಿದುವು. ಜನತೆ ತಮಗೆ ಗೈದ ಉಪಕಾರದ ಕೃತಜ್ಞತಾ ಸೂಚನೆಯೋ ಎಂಬಂತೆ, ಕೊರಳ ಸರಗಳನ್ನುಬ್ಬಿಸಿ, ಕಣ್ಣೀರಿಡುವ ನಟನೆಯೂ ದಾಮೋದರರಾಯರಿಂದ ನಡೆದು ಹೋಯಿತು! ಅನಂತರ ಅವರಿಗಾಗಿ ಸಿಂಗರಿಸಿಟ್ಟಿದ್ದ ಕಾರೊಂದನ್ನು ರಾಯರು ಏರಿದರು. ಸಹಸ್ರಾರು ಮಂದಿ ಬೆಂಬಲಿಗರೊಡಗೂಡಿ ಊರ ರಾಜಬೀದಿಯಲ್ಲಿ ರಾಯರು ತಮ್ಮ ವಿಜಯದ ಸಂಕೇತವನ್ನು ವಿಜೃಂಭಣೆಯಿಂದ ಸಾರಿದರು.

oo oo oo

ಆ ಊರ ಜನರು ನಿರೀಕ್ಷಿಸಿದ್ದ ದಾಮೋದರರಾಯರ ವಿಜಯ ನಾಗೇಶರಾಯರಿಗೂ, ಅವರ ಮಿತ್ರರಿಗೂ ಅನಿರೀಕ್ಷಿತವಾಗಿತ್ತು. ಜನರಿಗೆ ನನ್ನ ಸೇವೆ ಬೇಕಿದ್ದರೆ ನನ್ನನ್ನಾರಿಸುವರೆಂಬ ನಾಗೇಶರಾಯರ ಮಾತಿಗೆ ಎದುರಾಡಲಾರದೇ ಅವರ ಮಿತ್ರರು ಅವರ ಪರವಾಗಿ ಹೆಚ್ಚಿನ ಯಾವ ಪ್ರಚಾರವನ್ನೂ ಕೈಗೊಳ್ಳಲಿಲ್ಲ. ಅವರ ಘನ ವ್ಯಕ್ತಿತ್ವ, ಸೇವಾಕಾಂಕ್ಷೆಗಳನ್ನು ಕಂಡ, ಅವರ ಹಿಂದಿನ ಉಪಕಾರಗಳನ್ನು ಕಂಡ ಜನತೆ, ತಮ್ಮನ್ನು ತಾವೇ ಹೊಂಡಕ್ಕೆ ದೂಡಿಕೊಳ್ಳಲಾರರೆಂದೇ ಅವರೆಲ್ಲರ ಅಭಿಪ್ರಾಯವಾಗಿತ್ತು. ಆದರೆ ಇಂದು ಹೀಗೇಕಾಯಿತೆಂಬುದೇ ಅವರಾರಿಗೂ ಬಿಡಿಸಲಾರದ ಸಮಸ್ಯೆ.

ವಿಷಯ ಪ್ರಾಮುಖ್ಯವಾದರೂ ಅಷ್ಟೊಂದು ಗಹನವಾಗಿಲ್ಲ. "ಸಮ್ಮರ್ದವನ್ನು ಮುಚ್ಚುವುದಕ್ಕೆ ದಾನಧರ್ಮದಂತಹ ಮುಸುಕು ಬೇರೊಂದಿಲ್ಲ".—ಶರಚ್ಚಂದ್ರರ ಈ ಮಾತನ್ನು ಚುನಾವಣೆ ಹತ್ತಿರವಾಗುತ್ತಲೇ ದಾಮೋದರರಾಯರು ನಡೆಯಿಸ ತೊಡಗಿದರು. ಆಗ ರಾಯರು ಸ್ವತಃ ಧರ್ಮದೇವತೆಯೆನಿಸಿದರು. ಸ್ವಾರ್ಥಸಾಧಕರ; ಜನತೆಯನ್ನು ಬಲೆಗೆ ಬೀಳಿಸುವ ಎಲ್ಲಾ ಮಾತುಗಳೂ ರಾಯರ ಬಾಯಿಯಿಂದ ವೈವಿಧ್ಯದಿಂದ ಹೊರಬಿತ್ತು! ಹಿಂದೆ ನಾಗೇಶರಾಯರು ಗೈದ ಸೇವೆಗಳು ಸ್ವಾರ್ಥ ಸಾಧನೆಯೆಂದರು. ದಾನಧರ್ಮಗಳು ಸತ್ಯದ ಕಣ್ಣನ್ನು ಮುಚ್ಚಿಸಿ ಬಿಟ್ಟವು. ಜನತೆ ಅವರ ಮಾತನ್ನು ನಂಬಿ ಬಿಟ್ಟಿತು. ಧರ್ಮದೇವತೆಯ ಬಾಯಿಯಿಂದ ಅಸತ್ಯ ಸಂಗತಿಗಳು ಹೊರಬರಲಾರವೆಂದು ಮೂಢರು ನಂಬಿ ಬಿಟ್ಟರು. ಆಗಿಹೋದ ಕಾರ್ಯಗಳನ್ನು ಅವರ ಧನದ ರಾಶಿ ಮುಚ್ಚಿಬಿಟ್ಟಿತು. ಹಣಕ್ಕಾಗಿ ಹೊಲಸನ್ನೂ ತಿನ್ನಲೂ ಹೊರಟ ಈ ಯುಗದ ಜನತೆ ಕೃತಜ್ಞತೆಯ ಬದಲಾಗಿ ನಾಗೇಶರಾಯರಿಗೆ ಕೃತಘ್ನತೆಯನ್ನೆಸಗುವುದು ದೊಡ್ಡ ಸಂಗತಿಯಲ್ಲ. ದೇಶದ್ರೋಹಿಯನ್ನು ದೇಶಭಕ್ತರೆಂದು ಘೋಷಿಸುವುದು ವಿಶೇಷವಲ್ಲ; ಜನಸೇವಕರನ್ನೂ ಸ್ವಾರ್ಥಸಾಧಕರೆಂದು ಹಳಿಯುವುದು ಹೊಸದಲ್ಲ!

oo oo oo

ಅದೀಗ ಮೂರು ವರ್ಷಗಳ ಹಿಂದಿನ ಹಳೆಯ ಮಾತು. ಕಾಲಕಳೆದಂತೆ, ನಾಗರಿಕರಾಗುತ್ತಿದ್ದೇವೆನ್ನುವ ಜನತೆ ಮತ್ತೂ ಮುಂದುವರಿದು ಪಾಶವೀ ವರ್ತನೆಗಿಳಿದುದನ್ನು ಪ್ರತಿಬಿಂಬಿಸುತ್ತಿದ್ದ ಸಮಯವದು. ಚುನಾವಣೆ ಕಳೆದು ಮೂರು ವರ್ಷವಾಯಿತು; ದಾಮೋದರರಾಯರು 'ಮಂತ್ರಿವರ್ಯ'ರಾಗಿ ಮೆರೆಯುತ್ತಿದ್ದಾರೆ! ಅಂದು—ಚುನಾವಣೆಯ ಕಾಲದಲ್ಲಿ ನಡೆದ ದಾನಧರ್ಮಗಳು ಇಂದು 'ಭಾಷಣದ ಬೋಧನೆ'ಯ ವಿಷಯವಾಗಿ ಮಾರ್ಪಟ್ಟಿತ್ತು! ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅವರು ಮಾಡಿದ ಸೇವಾಕಾರ್ಯಗಳ ವರದಿಯನ್ನು ಅವರ ತುಂಬಿದ ಧನದ ತಿಜೋರಿ ಸಾರುತ್ತಿತ್ತು! ಆ ಸೇವೆಯ ಸಾರಾಂಶಗಳು ಇನ್ನೂ ಆ ಕರಪತ್ರದಲ್ಲಿ ಹಾಗೆಯೇ ಉಳಿದಿದ್ದುವು!

ಆದರೂ ನಾಗೇಶರಾಯರು ಇವುಗಳಿಗೆ ಕಾರಣರಾದ ಜನರನ್ನು ಒಮ್ಮೆಯೂ ಹಳಿಯಲಿಲ್ಲ; ಅವರ ಅವಿವೇಕಕ್ಕೆ ಮರುಗಿದರು. ದಾಮೋದರರಾಯರ ಅನ್ಯಾಯವನ್ನು ಬಹಿರಂಗವಾಗಿ ಖಂಡಿಸಿದರು... ಕೊನೆಗೊಮ್ಮೆ ಜನತೆ ಎಚ್ಚತ್ತಿತು.... ಆದರೆ... ಆ ಎಚ್ಚರದ ಮುನ್ನ ರಾಷ್ಟ್ರಭಕ್ತನೋರ್ವನ ಬಲಿ ಅನಿವಾರ್ಯವಾಯಿತು. ಜನತೆ ತಮ್ಮ ಗಾಢನಿದ್ದೆಯಿಂದೇಳುವುದರೊಳಗಾಗಿ ಅವರ ಪಾಲಿನ ಭಾಸ್ಕರ ಮುಳುಗಿದ್ದ. ತನ್ನ ಹಾದಿಯಲ್ಲಿ ಕಂಟಕದಂತಿದ್ದ ನಾಗೇಶರಾಯರನ್ನು ಮಧ್ಯರಾತ್ರಿಯ ಸಮಯ ಅವರ ಮನೆಗೆ ಬೆಂಕಿಯಿಟ್ಟು ಕೊಲೆಗೈಸಿದರು—ದೇ. ಭ. ದಾಮೋದರ ರಾಯರು. ಅನಂತರವೇ ಜನತೆ ಅರಿತಿತು—ತಾವು ಕೃತಘ್ನರೆಂಬುದನ್ನು. ಆದರೂ....ಮರಣಶಯ್ಯೆಯಲ್ಲಿ ಮಲಗಿದ್ದ ನಾಗೇಶರಾಯರು — "ನಿಮ್ಮ ಸೇವೆಯ ಮಹಾಭಾಗ್ಯವನ್ನು ಕಳೆದುಕೊಂಡ ನಾನೆ ನಿರ್ಭಾಗ್ಯ"ನೆಂದೇ ಹೇಳುತ್ತಿದ್ದರು!

—"ಜನ್ನ", ಮಂಗಳೂರು.

ತಮ್ಮೆಲ್ಲರ ಸೌಹಾರ್ದ–ಸಹಕಾರಗಳಿಂದ ದಿನೇ ದಿನೇ ಸರ್ವಾಂಗ ಸುಂದರವಾಗಿ ಬೆಳೆದು, ನಿಮ್ಮ ಆರ್ಥಿಕ ಅಭ್ಯುದಯಕ್ಕಾಗಿ ಸತತವಾಗಿ ಶ್ರಮಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : **ಉಡುಪಿ** (ದ. ಭಾರತ)

54 ವರುಷಗಳ ಅನುಭವಪೂರ್ಣ ಹಾಗೂ ಸರ್ವೋತ್ಕೃಷ್ಟ ಬೇಂಕು ಸೇವೆಯನ್ನು ಸರ್ವರಿಗೂ ಸರ್ವಕಾಲಕ್ಕೂ ಸರಿಸಮಾನವಾಗಿ ಸಲ್ಲಿಸಬೇಕೆಂಬುದೇ

ಈ ಬೇಂಕಿನ ಸಾಧನೆ!

ಪ್ರಕೃತಿ ವೈಚಿತ್ರ್ಯ

ದಕ್ಷಿಣಧ್ರುವದ ಶ್ವೇತಾಂಧಕಾರ ಪ್ರದೇಶ

ಹಗಲಿರುಳುಗಳು ಉರುಳುತ್ತಿರುವಂತೆಯೇ ಈ ಹಿಮಪ್ರದೇಶಗಳೂ ಆಗಾಗ ಪರಿವರ್ತನೆಹೊಂದುತ್ತವೆ ಸೃಷ್ಟಿಯ ರಚನೆಯ ಅದ್ಭುತ ಕೌಶಲವೇ ಇದು!

ಇದೊಂದು ಕೇವಲ ಕಾಲ್ಪನಿಕ ಚಿತ್ರವಾದರೂ ಒಂದೇ ಬಾರಿ ೨೫—೩೦ ಸಾವಿರ ಅಣುಬಾಂಬುಗಳನ್ನು ದಕ್ಷಿಣ ಧ್ರುವ ಪ್ರದೇಶದಲ್ಲಿ ಸಿಡಿಸಿಬಿಟ್ಟರೆ; ಆಗ ಏನಾಗಬಹುದೆಂಬುದನ್ನು ನೀವು ತಿಳಿದುಕೊಳ್ಳಬಲ್ಲಿರಾ? ಬಹುಶಃ, ಈ ಬಾಂಬುಗಳ ಸಿಡಿತದಿಂದ ಆ ಪ್ರದೇಶವನ್ನು ಆಚ್ಛಾದಿಸಿಕೊಂಡಿರುವ ಹಿಮವೆಲ್ಲವೂ ಕರಗಿ ಹೋಗಿ, ಅದರ ಅಡಿಯಲ್ಲಿರುವ ಕೋಟಿಗಟ್ಟಲೆ ವರ್ಷ ಪೂರ್ವಕಾಲದ ಲತಾವಿತಾನಗಳೂ ಹೂಹಣ್ಣುಗಳೂ ಆಹಾರ ಧಾನ್ಯಗಳೂ ಕಂಡುಬಂದು, ಅದು ಸಸ್ಯಶ್ಯಾಮಲವಾಗಿ ಪರಿವರ್ತನೆಗೊಳ್ಳುತ್ತಿತ್ತು. ಈ ಧ್ರುವಪ್ರದೇಶವು ಬಹಳಷ್ಟು ಪೂರ್ವಕಾಲದಲ್ಲಿ ಇದೇ ರೀತಿಯಾಗಿ ಸಸ್ಯಸಮೃದ್ಧವಾಗಿತ್ತು ಎಂದು ವೈಜ್ಞಾನಿಕರು ಹೇಳುತ್ತಾರೆ. ಅತ್ಯಧಿಕ ಶೀತದಿಂದ ಬಿಳಿ ಹಿಮರಾಶಿಯು ಬೀಳುವಿಕೆ ಹಾಗೂ ಶೀತೋಷ್ಣ ಋತುವಿನ ಹಸುರು ಮೂಡುವಿಕೆಗಳು ಪ್ರಪಂಚದ ಉತ್ತರ, ದಕ್ಷಿಣ ಮತ್ತು ಮಧ್ಯ ಭಾಗಗಳಲ್ಲಿ ಪದೇ ಪದೇ ಆಗುತ್ತಾ ಬರುತ್ತಿವೆ. ಕೋಟ್ಯಂತರ ವರ್ಷಗಳಿಗೆ ಮೊದಲು ಸಸ್ಯರಾಶಿಗಳಿದ್ದಲ್ಲಿ ಈಗ ಹಿಮರಾಶಿಯಿದೆ; ಈಗ ನಾಗರಿಕ ಮಾನವನಿರುವಲ್ಲಿ ಅಂದು ಹಿಮದಾನವನಿದ್ದನು. ಈ ರೀತಿಯಲ್ಲಿ ಪರಿವರ್ತನೆ ಮಾಡಬೇಕಾದರೆ, ಪ್ರಕೃತಿಗೆ ಹಲವು ಕೋಟಿ ವರ್ಷಗಳು ಬೇಕಾಗಬಹುದು; ಒಂದು ವೇಳೆ ಇದೇ ಕೆಲಸವನ್ನು ಇಂದಿನ ಅಣುಬಾಂಬು ಕೆಲವೇ ಗಳಿಗೆಗಳಲ್ಲಿ ಮಾಡಿ ತೋರಿಸಿದರೆ? ಆಗ, ಧ್ರುವ ಪ್ರದೇಶದ ಹಿಮಗಿರಿ ಶಿಖರಗಳೆಲ್ಲವನ್ನೂ ಒಂದು ಸಲಕ್ಕೆ ಅದು ಸಂಪೂರ್ಣ ನಾಶಮಾಡಿ ಬಿಡುವುದು; ಕಾಲಕ್ರಮದಲ್ಲಿ ಪುನಃ ಪ್ರಕೃತಿಯು ಈಗಿರುವ ರೂಪವನ್ನೇ ಪಡೆದೀತು.

ಈಗಂತೂ ಈ ದಕ್ಷಿಣ ಧ್ರುವ ಪ್ರದೇಶವು ಸಂಪೂರ್ಣ ಬಿಳಿಯಾಗಿದೆ ಮತ್ತು ತಂಪಾಗಿದೆ. ಆಕಾಶ ಕೂಡ ಬಿಳಿ ಮತ್ತು ಹಿಮಕಣ ಮಿಶ್ರಿತವಾಗಿರುವುದರಿಂದ ವಾತಾವರಣವೂ ಬಿಳಿಯಾಗಿದೆ. ಉಷ್ಣತೆಯು ಸಾಮಾನ್ಯವಾಗಿ ನೂರು ಡಿಗ್ರಿಯಷ್ಟು ಕಡಿಮೆಯೇ. ಇಷ್ಟೊಂದು ಶೀತದಲ್ಲಿ ಯಾವುದೇ ಒಂದು ವಸ್ತು ನಾಶವಾಗಲಾರದು. ರೆಫ್ರಿಜರೇಟರಿನಲ್ಲಿಟ್ಟ ವಸ್ತುಗಳು ಸಾಮಾನ್ಯವಾಗಿ ಒಂದುವಾರ ಕೆಡದಿರುವಂತೆಯೇ ಈ ಪ್ರಕೃತಿಯ ರೆಫ್ರಿಜರೇಟರಿನಲ್ಲಿಟ್ಟ ವಸ್ತುಗಳು ಸಾವಿರಾರು ವರ್ಷಗಳವರೆಗೆ ಹಾಳಾಗಲಾರವು. ಪದಾರ್ಥಗಳನ್ನು ಕೆಡಿಸುವ ಕೀಟಾಣುಗಳೇ ಆ ಧ್ರುವಪ್ರದೇಶದಲ್ಲಿಲ್ಲ ಎಂದರೆ, ಅವು ಕೆಡುವುದಾದರೂ ಹೇಗೆ? ಅಲ್ಲಿ ೨೫—೩೦ ವರ್ಷಗಳಿಗೆ ಮೊದಲು ಧ್ರುವಾನ್ವೇಷಣೆಗಾಗಿ ಹೊರಟ ಯಾತ್ರಿಕರು ಬಿಟ್ಟುಬಂದಿರುವ ಆಹಾರ ಪದಾರ್ಥಗಳು ನೋಡಲು ಸಿಕ್ಕಿವೆ; ಈಗ ತಾನೇ ಕತ್ತರಿಸಿದಂತೆ ತೋರುವ ಮೃಗಗಳ ಶವಗಳೂ ದೊರಕಿವೆ. ಆದರೆ, ದಕ್ಷಿಣ ಧ್ರುವವನ್ನು ಪ್ರಪಂಚದ ವಸ್ತುಸಂಗ್ರಹಾಲಯವನ್ನಾಗಿ ಮಾರ್ಪಡಿಸುವಾಗ ಮಾತ್ರ ನಾವು ಅದರ ಅದ್ಭುತ ಗುಣಗಳ ವಾಸ್ತವಿಕ ಲಾಭವನ್ನು ಪಡೆದುಕೊಂಡಂತಾಗುತ್ತದೆ. ಚಂದ್ರಲೋಕ, ಮಂಗಳಲೋಕ ಯಾತ್ರೆಯಲ್ಲಿ ತೊಡಗಿ ಯಶಸ್ವಿಯಾಗುತ್ತಿರುವ ಇಂದಿನ ವಿಜ್ಞಾನಿಗಳು ತಾವು ವಾಸಿಸುತ್ತಿರುವ ಭೂಮಿಯ ಒಂದು ಭಾಗವನ್ನು ಉಪಯುಕ್ತ ಸಂಗ್ರಹಾಲಯವನ್ನಾಗಿ ರೂಪಿಸುವಲ್ಲಿ ಅಸಮರ್ಥರಾಗುವರೆಂದು ಹೇಳುವುದು ಸರಿಯಲ್ಲ. ಇಂದಿನ ಪ್ರಗತಿಪರ ವಿಜ್ಞಾನವು ಅಸಾಧ್ಯವೆಂದು ಪರಿಗಣಿಸೀತೆಂದು ಎಂದಿಗೂ ಹೇಳುವಂತಿಲ್ಲ.

ದಕ್ಷಿಣ ಧ್ರುವಪ್ರದೇಶವು ಶ್ವೇತಾಂಧಕಾರದ ದೇಶವಾಗಿದೆ. ಅತ್ಯಧಿಕವಾದ ಬಿಳಿಯಿಂದ ಕೂಡಿಸಲ್ಪಟ್ಟ ಅಲ್ಲಿನ ವಾತಾವರಣವು ಕಣ್ಣುಗಳಿಗೂ ಹಲವು ಬಾರಿ ಅಭೇದ್ಯವೆಂದು ಕಾಣುವುದು. ನಮ್ಮೊಡನೆಯೇ ನಡೆದು ಬರುವ ನಮ್ಮ ಸಹಚರನೂ ಕೆಲವೊಮ್ಮೆ ಬಿಳಿ ಮಂಜಿನಲ್ಲಿ ಅಡಗಿ ಹೋಗುತ್ತಾನೆ. ಆತನ ಧ್ವನಿಯಿಂದ ಮಾತ್ರ ಆತನಿರುವನೆಂದು ನಾವು ಭಾವಿಸಬೇಕಾಗುತ್ತದೆ. ದಿಕ್ಕುಗಳನ್ನು ತಿಳಿದುಕೊಳ್ಳುವ ಒಂದು ಸಾಧನವೂ ಅಲ್ಲಿರುವುದಿಲ್ಲ. ಕೆಲವೊಮ್ಮೆ ಅತ್ತ ತಿರುಗಿ ಇತ್ತ ನೋಡುವಷ್ಟರಲ್ಲಿಯೇ ಅಲ್ಲಿನ ಹಿಮಪರ್ವತಗಳ ರೂಪವೇ ಬದಲಾಯಿಸಲ್ಪಡುತ್ತದೆ. ಆ ಶ್ವೇತಾಂಧಕಾರದಲ್ಲಿ ನೆರಳು ಬೀಳುವುದಿಲ್ಲ. ಎತ್ತಿದ ಪಾದಕೆಳಗಿನ ಹಿಮವನ್ನು ಸರಿಯಾಗಿ ತಿಳಿದುಕೊಳ್ಳುವುದಿಲ್ಲ; ನಡೆಯುವವನೂ ಬಲತ್ಕಾರದಿಂದಲೆಂಬಂತೆ ಕೆಸರು ಗದ್ದೆಯಲ್ಲಿ ಕಾಲಿಳಿಯುವಂತೆ ಮುಂಬರಿಯಬೇಕಾಗುತ್ತದೆ. ಹಿಮದಡಿಯಲ್ಲಿ ಏನಿದೆ ಎಂದು ಯಾರೂ ತಿಳಿದಿಲ್ಲ. ಆದದರಿಂದಲೇ ಇಟ್ಟ ಹೆಜ್ಜೆಯಡಿ ಸಾವಿರ ಅಡಿ ಆಳದ ಕಂದಕವೂ ಇರಬಹುದು!

ದಕ್ಷಿಣ ಧ್ರುವದಲ್ಲಿ ಬೇಸಗೆಯ ಕಾಲ ಬರುವಾಗ, ಸೂರ್ಯನು ಕ್ಷಿತಿಜದಲ್ಲಿ ದಿನದ ೨೪ ತಾಸೂ ಸುತ್ತುತ್ತಿರುತ್ತಾನೆ. ಬಲದಿಂದ ಎಡಕ್ಕೆ ಭ್ರಮಿಸುತ್ತಿರುವ ಈ ಸೂರ್ಯನನ್ನೇ ಆಧಾರವಾಗಿಟ್ಟುಕೊಂಡು ಅಲ್ಲಿ ತಿರುಗಬೇಕಾಗುತ್ತದೆ. ಆದರಲ್ಲಿಯೂ ಕೆಲವೊಮ್ಮೆ ಸ್ವಾರಸ್ಯ ನಡೆದಿದೆ. ಈ ಶ್ವೇತಾಂಧಕಾರದಲ್ಲಿ ಸೂರ್ಯನನ್ನೇ ಅನುಸರಿಸಿ ತಿರುಗಿ ತಾನು ಹೊರಟ ಸ್ಥಳಕ್ಕೇನೇ ಮರಳಿ ಬಂದವರೂ ಅನೇಕರಿದ್ದಾರೆ. ಇನ್ನೂರು ಹದಿನಾರು ಮೈಲು ಹಿಮದಲ್ಲಿ ನಡೆಯುವ ಪ್ರಯಾಣವನ್ನು ಹೊತ್ತಿದ್ದೇ ಬಂತು. ಉತ್ತರಧ್ರುವದಲ್ಲಿ ಎಡದಿಂದ ಬಲಕ್ಕೆ ತಿರುಗುವ ಸ್ವಾಭಾವಿಕ ಪ್ರವೃತ್ತಿಯಿರುವುದು. ದಕ್ಷಿಣ ಹಾಗೂ ಉತ್ತರ ಧ್ರುವಗಳ ಎಡ ಮತ್ತು ಬಲಗಳಿಗೆ ತಿರುಗುವ ಈ ಸ್ವಾಭಾವಿಕ ಪ್ರವೃತ್ತಿಯು ಅಲ್ಲಿನ ಹಿಮದಲ್ಲಿಯೂ ಕಂಡುಬರುವುದು.

ದಕ್ಷಿಣಧ್ರುವದ ಈ ಸಂಪೂರ್ಣ ಶ್ವೇತ ವಾತಾವರಣದಲ್ಲಿ ಆಗಾಗ ಹಸುರು ಕಂಡು ತೋರಿಬರುವುದುಂಟು. ಸೂರ್ಯನು ಕ್ಷಿತಿಜದಲ್ಲಿ ಸುತ್ತುತ್ತಿರುವಾಗ ಇದು ದೃಗ್ಗೋಚರವಾಗುವುದು. ಆ ಸಮಯದಲ್ಲಿ ಕ್ಷಿತಿಜದಿಂದ ಭೂಮಂಡಲದವರೆಗಿನ ಶೋಭಾವಿಸ್ತಾರವು ಸೂರ್ಯಾಸ್ತದ ಸಮಯದಂತಿರುತ್ತದೆ. ಸೂರ್ಯಾಸ್ತದ ಸಮಯದಲ್ಲಿ ಅರುಣ, ಗುಲಾಬಿ, ಕಂದು ಬಣ್ಣಗಳಿರುವುವಾದರೆ, ಈ ಸೂರ್ಯಾಸ್ತದ ವೇಳೆ ಕೇವಲ ಹಸುರು ಬಣ್ಣ ಮಾತ್ರ ಕಣ್ಣಿಗೆ ಕಾಣುವುದು. ಒಂದು ಬಾರಿ ಈ ಹಸುರು ಕ್ಷಿತಿಜದಿಂದ ೫೦ ಮೈಲು ಉದ್ದ ಹಾಗೂ ೧೦ ಮೈಲು ಎತ್ತರಕ್ಕೆ ಹರಡಿಕೊಂಡಿದ್ದುದನ್ನು ನೋಡಿದ್ದಾರೆ. ಆಕಾಶದಲ್ಲಿ ಒಂದು ವಿಸ್ತಾರವಾದ ಹಸುರು ಮೈದಾನದಂತೆ ಇದು ತೋರಿತ್ತು. ಪ್ರಕೃತಿಯ ಆಟಗಳಲ್ಲಿ ಇದೂ ಒಂದು ಎಂದು ನಾವು ತಿಳಿದುಕೊಳ್ಳಬೇಕು.

ದಕ್ಷಿಣ ಧ್ರುವಪ್ರದೇಶವು ಇಂದು ತನ್ನ ಶೀತಯುಗದ ಮಧ್ಯಕಾಲದಲ್ಲಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಇದನ್ನು ಮುಚ್ಚಿರುವ ಹಿಮವನ್ನು ಒಡೆದು ಒಳಹೊಕ್ಕರೆ, ಅಲ್ಲಿನ ಭೂಭಾಗ ಸುಮಾರು ಒಂದುಕೋಟಿ ವರ್ಷಗಳಿಗೆ ಹಿಂದಿನದು ಎಂದು ಹೇಳಬಹುದು. ಉತ್ತರಧ್ರುವ ಪ್ರದೇಶವೂ ಮೊದಲು ಸಂಪೂರ್ಣ ಹಿಮಾಚ್ಛಾದಿತವಾಗಿತ್ತು; ಆದರೆ, ಅಲ್ಲಿನ ಪ್ರಾಣಿಗಳಿಗೆ ಪದೇ ಪದೇ ಅದನ್ನು ಸಹಿಸಿಕೊಳ್ಳುವ ಅಥವಾ ರೂಪಬದಲಿಸಿಕೊಳ್ಳುವ, ಅಥವಾ ಬೇರೆ ಭೂಭಾಗಗಳಿಗೆ ಓಡಿಹೋಗುವ ಸಂದರ್ಭವು ದೊರಕಿತ್ತು. ದಕ್ಷಿಣ ಧ್ರುವದಲ್ಲಿ ಮಾತ್ರ ಇಂತಹ ಅವಕಾಶ ಒದಗಿಬರಲಿಲ್ಲ. ಏಕೆಂದರೆ, ಈ ಧ್ರುವದ ಸುತ್ತಲೂ ಸಮುದ್ರವಿರುವುದು. ಕೋಟ್ಯಂತರ ವರ್ಷಗಳಿಗೆ ಮೊದಲು ಭೂಮಧ್ಯರೇಖೆಯ ಮೇಲೆ ಒಟ್ಟುಸೇರಿದ್ದ ಹಿಮವು ಕರಗಿ ದಕ್ಷಿಣ ಧ್ರುವದತ್ತ ಧಾವಿಸಿರಬೇಕು. ಇದಕ್ಕೆ ಮೊದಲು ಈ ಪ್ರದೇಶವು ಉಷ್ಣದಿಂದ ಕೂಡಿದ್ದು ಹಸುರಾಗಿದ್ದಿರಬೇಕು. ಈಗ ಹಿಮವು ಅಲ್ಲಿ ಜಾರಲು ತೊಡಗಿರುವ ಲಕ್ಷಣಗಳು ಮೂಡಲು ಪ್ರಾರಂಭವಾಗಿರುವುದರಿಂದ, ಇನ್ನು ಕೋಟ್ಯಂತರ ವರ್ಷಗಳಲ್ಲಿ ಅಲ್ಲಿನ ಹಿಮವೆಲ್ಲವೂ ದೂರಸರಿದು, ಅಲ್ಲಿ ಪುನಃ ಹಸುರು ಹುಲ್ಲು ಗೋಚರಿಸುವ ಸಂಭವವಿರುವುದು.

ಆದರೆ, ಹೀಗಾದ ಪಕ್ಷದಲ್ಲಿ ಇಂದಿನ ಈ ಪ್ರಪಂಚವು ಪ್ರಳಯಕ್ಕೆ ತುತ್ತಾಗುವುದು. ದಕ್ಷಿಣ ಧ್ರುವ ಪ್ರದೇಶದ ಹಿಮವು ಕರಗುವಾಗ, ಅದರಿಂದ ಸಮುದ್ರದ ನೀರು ಬಹಳಷ್ಟು ಏರುವುದು; ಮತ್ತು ಈ ರೀತಿ ಸಮುದ್ರದ ಉಬ್ಬರದ ಪರಿಣಾಮವನ್ನು ನಾವು ಊಹಿಸಬಹುದು. ಈಗ ಬೊಂಬಾಯಿ, ಲಂಡನ್, ನ್ಯೂಯಾರ್ಕಗಳೊಂದೂ ಉಳಿಯದೆ ಅವು ದ್ವಾರಕೆಗಳಾಗಿ ಹೋಗುವುವು!

ಆದರೆ, ಈ ಜಲಪ್ರಳಯದ ಹೆಸರನ್ನು ಕೇಳಿ ನಾವು ಚಿಂತಿತರಾಗಬೇಕಾದ ಪ್ರಮೇಯವಿಲ್ಲ. ಕೋಟಿ—ಎರಡು ಕೋಟಿ ವರ್ಷಗಳು ಇನ್ನೂ ದೂರವಿವೆ. ಒಂದೊಮ್ಮೆ ಹಿಮಾಚ್ಛಾದಿತ ಭೂಮಿಯು ಇಂದು ಮಾನವನಿಗೆ ಸುಖಮಯವಾಗಿ ಪರಿಣಮಿಸಿದಂತೆಯೇ ಅಂದೂ ಇಂದಿನ ಹಿಮಾಚ್ಛಾದಿತ ಪ್ರದೇಶವು ಇನ್ನೂ ಅಧಿಕ ಸುಖಮಯವಾದ ವಾಸಕ್ಕೆ ಯೋಗ್ಯವಾಗುವುದು ನಿಸ್ಸಂದೇಹ. ಇಂದು ದ್ವಾರಕಾನಗರವೇನೋ ಇಲ್ಲ ಹೌದು; ಆದರೆ, ನವದೆಹಲಿಯು ಇದೆ ತಾನೆ? ಅದೇ ರೀತಿಯಲ್ಲಿ ಅಂದು ಈಗಿನ ಮಹಾದ್ವೀಪವಿರದೆ ಹೋದರೂ ಹೊಸದಾದೊಂದು ಮಹಾದ್ವೀಪವು ವಾಸಿಸುವುದಕ್ಕೆ ದೊರೆಯುವುದು ಖಂಡಿತ. ಪ್ರಳಯ ಮತ್ತು ಸೃಷ್ಟಿಗಳ ಕ್ರಮವೇ ಇದು!

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಲೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಅದೃಷ್ಟಶಾಲಿ ರಾಷ್ಟ್ರನಾಯಕ
ಜಾರ್ಜ್ ವಾಶಿಂಗ್‌ಟನ್
ಲೇಖಕಿ ಜಿನೇ ಇಯೋಟನ್.

ಅನುವಾದಕರು:
ಯು ಎಲ್ ಆಚಾರ್ಯ, ಎಮ್. ಎ ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

ಪ್ರತಿಗಳಿಗೆ ಬರೆಯಿರಿ:

1. ನವಯುಗ ಪ್ರೆಸ್, ಉಡುಪಿ
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಆದರ್ಶ ಜೀವನ

ಸಮಾಜ ಜೀವಿ—ವೇಬ ದಂಪತಿಗಳು

ಬ್ರಿಟಿಷ ಸಮಾಜವಾದಕ್ಕೆ ಸೇವೆಯನ್ನರ್ಪಿಸಿದ ವೇಬ ದಂಪತಿಗಳ ಸ್ವಾತ್ಮ ಸ್ಮರಣೀಯರಾಗಿದ್ದಾರೆ. ಇವರ ಜೀವನವೂ ವಿಚಿತ್ರ ರೀತಿಯಲ್ಲಿ ಪ್ರಾರಂಭವಾಯಿತು.

ದಿನಾಂಕ ೧೩ ಜುಲೈ ೧೯೫೯ನೇ ದಿವಸ ಸಿಡನೇ ಮತ್ತು ಬಿಯೇಟ್ರಿಸ ವೇಬ ಈ ಮಹಾನ್ ದಂಪತಿಗಳ ಶತಸಾಂವತ್ಸರಿಕ ಜನ್ಮದಿನವನ್ನು ಬಹು ಸಡಗರದಿಂದ ಬ್ರಿಟಿಶರು ನೆರವೇರಿಸಿದರು!

ವಸ್ತುತಃ ತಾರೀಕು ೧೩ ಜುಲೈ ಸಿಡನೇಯ ಜನ್ಮದಿನವು. ನೂರುವರ್ಷಗಳ ಪೂರ್ವದಲ್ಲಿ ಇದೇ ತಾರೀಕಿಗೆ ಸಿಡನೇಯ ಜನ್ಮವಾಯಿತು. ಬಿಯೇಟ್ರಿಸ ವೇಬ ಇವಳ ಆವನಿಗಿಂತ ವಯಸ್ಸಿನಿಂದ ಸ್ವಲ್ಪ ದೊಡ್ಡವಳು. ಆದರೆ ವಯಸ್ಸಿನ ೧೭ನೇ ವರ್ಷದಿಂದ ಅವರಿಬ್ಬರೂ ತಮ್ಮ ಜನ್ಮದಿನವನ್ನು ತಾರೀಕು ೧೩ ಜುಲೈಯೆಂದು ಠರಾಯಿಸಿದರು. ಮತ್ತು ಅದೇದಿವಸ ಅವರು ಜನ್ಮದಿನವನ್ನು ಆಚರಿಸಲಿಕ್ಕೆ ಪ್ರಾರಂಭಿಸಿದರು. ದಿನಾಂಕ ೧೩ ಜುಲೈ ೧೯೫೯ನೇ ದಿನವು ಅವರ ನೂರನೆಯ ಜನ್ಮದಿನವಾಗಿದ್ದು ಅದನ್ನು ಅಂತಾರಾಷ್ಟ್ರೀಯ ಪ್ರಮಾಣದ ಮೇಲೆ ಅತಿ ವಿಜ್ರಂಭಣೆಯಿಂದ ನೆರವೇರಿಸಿದ್ದರು.

ಕೂಲಿಕಾರ ಚಳವಳಿಯ ಇತಿಹಾಸದಲ್ಲಿ ವೇಬ ದಂಪತಿಗಳಿಗೆ ಎಷ್ಟು ಪ್ರಭಾವೀ ಸ್ಥಾನವಿದೆಯೆಂದು ಪ್ರತ್ಯೇಕವಾಗಿ ಹೇಳುವದು ಬೇಡ. ಗತ ನೂರು ವರ್ಷಗಳಲ್ಲಿ ಅದೆಷ್ಟೋ ಕೂಲಿಕಾರ ಧುರೀಣರು ಹುಟ್ಟಿದರು, ಅವರಲ್ಲಿ ವೇಬ ದಂಪತಿಗಳಿಗೆ ಮಾನ ಮರ್ಯಾದೆಯ ಸ್ಥಾನವು ಇರುವದು; ಇಷ್ಟೇ ಅಲ್ಲ ಜಗತ್ತಿನ ಇತಿಹಾಸದೊಳಗಿನ ಕಳೆದ ನೂರು ವರ್ಷಗಳಲ್ಲಿಯ ೧೦—೧೨ ಮಹಾನ್ ಧುರೀಣರನ್ನು ಆರಿಸಿತೆಗೆದರೂ ಅವರಲ್ಲಿ ಈ ಜಗತ್ಪ್ರಸಿದ್ಧ ವೇಬ ದಂಪತಿಗಳು ಸಮಾವೇಶವಾಗುವರು. ಅವರಿಗೊಂದು ಸ್ಥಾನ ಕಾದಿಟ್ಟಿದ್ದೇ. ಸಮಾಜವಾದಿ ಚಳವಳಿಯ ಪ್ರಾರಂಭದಿಂದಲೂ ಅವರು ಆಧಾರಸ್ತಂಭರಾಗಿದ್ದರು.

ಸಿಡನೇ ವೇಬ ಇವನ ಜನ್ಮವು ಒಂದು ಹಳ್ಳಿಯ ರೈತರ ಸಮಾಜದಲ್ಲಿ ಆಯಿತು. ಅವನ ಮನೆತನವು ಅತಿದೊಡ್ಡ ಶ್ರೀಮಂತವೂ ಅಲ್ಲ ಅಥವಾ ಅತಿ ಬಡತನದ್ದೂ ಅಲ್ಲ. ಅಂತೂ ಒಂದು ಮಧ್ಯಮತರಗತಿಯ ಕುಟುಂಬವು ಆಗಿತ್ತು. ಆದರೆ ಸಿಡನೇ ಚಿಕ್ಕಂದಿನಿಂದಲೂ ಅತ್ಯಂತ ಕುಶಾಗ್ರ ಬುದ್ಧಿಯವನಾಗಿದ್ದನು. ವಿಶೇಷತಃ ಅವನ ಸ್ಮರಣಶಕ್ತಿ ಅಸಾಮಾನ್ಯವಿದ್ದಿತ್ತು. ಅದರ ಬಲದಿಂದಲೇ ಅವನು ತನ್ನ ಅಭ್ಯಾಸ ಕ್ರಮದಲ್ಲಿ ಒಂದರಹಿಂದೆ ಒಂದರಂತೆ ಬಹುಮಾನಗಳನ್ನು ಸಂಪಾದಿಸುತ್ತಿದ್ದನು. ಸಿಡನೇ ವಿಷಯವಾಗಿ ಬರ್ನಾರ್ಡ ಶಹಾರು, "ವಾದ—ವಿವಾದದಲ್ಲಿಯ ವಿಷಯಗಳ ಸಂಬಂಧವಾಗಿ ಅವನ ಜ್ಞಾನವು ಸರ್ವಾಂಗೀಣವಿದೆ. ಅವನು ಅದಕ್ಕೋಸ್ಕರ ಎಷ್ಟು ಒರೆದಿರುವನೋ, ಅಷ್ಟೇ ಓದಿ ಹಾಗೂ ಅದರ ಮೇಲೆ ಸರ್ವ ಮಾಹಿತಿಯನ್ನು ಸ್ಮರಣಶಕ್ತಿಯಲ್ಲಿ ಸಂಗ್ರಹಮಾಡಿ ಇಟ್ಟುಕೊಳ್ಳುವನು!" ಎಂದು ಬರೆದಿರುವರು. ಆರಂಭದಲ್ಲಿ ಅವನು, ಇತಿಹಾಸ, ರಾಜಕಾರಣ ಮತ್ತು ಅರ್ಥಶಾಸ್ತ್ರ, ಈ ವಿಷಯಗಳ ಪ್ರಾಧ್ಯಾಪಕ ಎಂಬ ಪದವಿಯಿಂದ ತನ್ನ ಜೀವನ ಕ್ರಮವನ್ನು ಪ್ರಾರಂಭಿಸಿದನು.

ಇದರ ವಿರುದ್ಧ ಬಿಯೇಟ್ರಿಸ ವೇಬ ಇವಳು ಒಂದು ಶ್ರೀಮಂತ ಕುಲದವಳಾಗಿದ್ದಳು. ಅವಳ ಮೊದಲಿನ ಹೆಸರು ಬಿಯೇಟ್ರಿಸ ಪಾಟರ್ ಎಂದಿತ್ತು. ವೃತ್ತಿಯಿಂದ ಧಾರ್ಮಿಕಳಿದ್ದ ಅವಳು ಅಂಧಶ್ರದ್ಧೆ ಇಲ್ಲವಾಗಿದ್ದಳು. ಒಂಬತ್ತು ಸಹೋದರಿಯರಲ್ಲಿ ಇವಳು ಆರನೇಯವಳಾಗಿದ್ದಳು. ಅವಳ ತಂದೆಯು, ಪ್ರಖ್ಯಾತ ತತ್ವಜ್ಞಾನಿ. ಹರ್ಬರ್ಟ ಸ್ಪೇನ್ಸರ್ ಇವರ ಕಕ್ಷಿದಾರರಾಗಿದ್ದರು. ಆಗ ಬಿಯೇಟ್ರಿಸ ಪಾಟರ್ ಮೇಲೆ ಸ್ಪೇನ್ಸರ್‌ರ ಶೈಕ್ಷಣಿಕ ತತ್ವಗಳ ಪ್ರಭಾವ ಬೀರಿತು. ಪ್ರಾರಂಭದಲ್ಲಿ ಅವಳು ಸಹಕಾರಿ ಚಳವಳಿಯನ್ನು ಅಂಗೀಕರಿಸಿದಳು. ಆದರೆ ಮುಂದೆ ಅವಳಿಗೆ ನಿಜವಾಗಿಯೂ ಸಹಕಾರಿ ಚಳವಳಿಕ್ಕಿಂತ ಕೂಲಿಕಾರ ಚಳವಳಿ ಇದು ಅಧಿಕ ಮಹತ್ವದ್ದಾಗಿದೆ. ಎಂದಾಕೆ ತಿಳಿದಳು ಮತ್ತು ಅದೇ ಶ್ರದ್ಧೆಯಿಂದ ಅವಳು ಮುಂದೆ ಪ್ರಾಮುಖ್ಯವಾಗಿ ಕೂಲಿಕಾರ ಚಳವಳಿಗೆ ಬೆಂಬಲವನ್ನೀಡಿದಳು.

ಸಿಡನೇ ಮತ್ತು ಬಿಯೇಟ್ರಿಸ ಇವರ ಪರಿಚಯವು ಬಹು ಸ್ವಾರಸ್ಯಮಯ ರೀತಿಯಲ್ಲಿ ಆಯಿತು! ಬಿಯೇಟ್ರಿಸಳಿಗೆ ೧೯ನೇ ಶತಮಾನದ ಕೂಲಿಕಾರ ಚಳವಳಿಯ ಸವಿಸ್ತಾರ ಮಾಹಿತಿಯು ಅವಶ್ಯಬೇಕಿತ್ತು. ಇದರ ಬಗ್ಗೆ ಯಾರನ್ನೂ ಕೇಳಿದರೂ ಅವರು "ಸಿಡನೇ ಕಡೆಗೆ ಹೋಗು. ಅವನು ನಿನಗೆ ಮಾಹಿತಿಯ ಸಮುದ್ರದಲ್ಲಿ ಅಕ್ಷರಶಃ ಮುಳುಗಿಸಿ ತೆಗೆಯುವನು." ಎಂದು ಹೇಳುತ್ತಿದ್ದರು. ಕೊನೆಗೆ ಅವಳು ಸಿಡನೇ ಈತನಿಗೆ ಮಾಹಿತಿಯಗೋಸ್ಕರ ಪತ್ರ ಬರೆದಳು. ಆಗ ಅವನು ಸಮಯ ಕಳೆಯದೇ ಸುವಾಚ್ಯ ಅಕ್ಷರಗಳಿಂದ ಅವಳಿಗೆ ಅವಶ್ಯವಿದ್ದ ಆ ಮಾಹಿತಿಯನ್ನು ಪತ್ರದ ಮೂಲಕ ಕಳಿಸಿದನು. ಹಾಗೂ ಆ ಪತ್ರದ ಜೊತೆಗೆ ತನ್ನ ಅಧ್ಯಯನದ ಪುಸ್ತಕವನ್ನು ಅವಳಿಗೆ ರವಾನಿಸಿದನು. ಈ ಸಂದರ್ಭದಲ್ಲಿ ಸಿಡನೇ 'ಇವನಿಗೆ ಪಾಟರ್‌ಳ ಮನೆಗೆ ಭೋಜನದ ಆಮಂತ್ರಣವು ಬಂದಿತು.

ಅಂದು ಅವರಿಬ್ಬರಿಗೆ ತುಂಬಾ ಪರಿಚಯವಾಯಿತು. ಈ ಗಾಢ ಪರಿಚಯು, ಶಾಶ್ವತ ಪರಿಚಯವಾಗಿ ರೂಪಾಂತರ ಹೊಂದಿತು. ಅಲ್ಲಿಂದಲೇ ಅವರಿಬ್ಬರ ಪ್ರಣಯ ನಿರ್ಮಾಣವಾಯಿತು! ಸಿಡನೇ ಇವನಿಗೆ ಲಗ್ನವಾಗುವ ಆತುರತೆಯು ಆಯಿತು ಆದರೆ ಬಿಯೇಟ್ರಿಸಳೊಡನೆ ವಿವಾಹವಾಗುವದು ಎಂದು ನಿರ್ಣಯಿಸಿದನು. ಈ ರೀತಿ ಅವನು ತನ್ನ ಮನಸ್ಸಿನ ನಿರ್ಧಾರವನ್ನು ಅಕಸ್ಮಾತ್ ಮಾಡಿಕೊಂಡರೂ, ಬಿಯೇಟ್ರಿಸಳಿಗೆ ತನ್ನ ಆತ್ಮ ನಿರ್ಧಾರ ಮಾಡುವದಕ್ಕೆ ೧೮ ತಿಂಗಳುಗಳು ತಗಲಿದವು. ಬಿಯೇಟ್ರಿಸ್ ನೋಡಲು ಅತಿ ಸುಂದರ ತರುಣಿಯಾಗಿದ್ದಳು. ಅವಳು ಶ್ರೀಮಂತ ಮನೆತನದ ಕುಡಿಯಾಗಿಯೂ ಆಗಿದ್ದಳು. ಆದರೆ ಸಿಡನೇಯಂಥ-ಕುರೂಪ, ಗಿಡ್ಡ, ವಿಶಾಲವಾದ ಕಣ್ಣುಗಳು, ಕರ್ಕಶ ಧ್ವನಿಯ ಮಾತುಗಳು, ಉದ್ದವಾದ ಕೂದಲುಗಳಿದ್ದ ಗಡ್ಡವು ಭಿಕ್ಷುಕನ ರೂಪಕ್ಕೆ ಹೋಲುವ ಈ ಗಂಡನನ್ನು ಮಾಡಿಕೊಳ್ಳುವದು ಹೇಗೆ? ಈ ಬಹು ಜಟಿಲ ವಿಚಾರಕ್ಕೆ ಅವಳಿಗೆ ೧೨ ತಿಂಗಳುಗಳು ತಲೆಯನ್ನು ಕೆಡಿಸಿ ಬಿಟ್ಟವು. ಕೊನೆಗೆ ಸಿಡನೇ ಇವನ ಬಾಹ್ಯರೂಪಕ್ಕಿಂತ ಅವನ ಬುದ್ಧಿಮತ್ತೆಯಿಂದ ಅವಳ ಮೇಲೆ ವಿಶೇಷ ಪ್ರಭಾವ ಬಿದ್ದಿತ್ತು. ಅವನ ಧಿರೋದಾತ್ತತನ, ಪ್ರೇಮಲ ಸ್ವಭಾವ, ಅನಾಸಕ್ತಿ ಮತ್ತು ಶಾಂತ ಸ್ವಭಾವ ಇವುಗಳ ಮೇಲೆ ಅವಳು ಸಂಪೂರ್ಣ ಒಲಿದಳು! ಮತ್ತು ದಿನಾಂಕ ೨೩ ಜೂನ ೧೮೯೨ರಂದು ಸಿಡನೇವೇಬ ಹಾಗೂ ಬಿಯೇಟ್ರಿಸ ಪಾಟರ್ ವಿವಾಹ ಬದ್ಧವಾದ ಸಂತೋಷದ ಸುದ್ದಿಯು ಎಲ್ಲ ವರ್ತಮಾನ ಪತ್ರಿಕೆಯಲ್ಲಿ ಭಾವ ಚಿತ್ರಗಳ ಜೊತೆಗೆ ಪ್ರಸಾರವಾಯಿತು. ಅವರ ವಿವಾಹವೆಂದರೆ ಕುರುಡು ಪ್ರೇಮವಲ್ಲ, ಅದು ಶಾಶ್ವತ ಕಟ್ಟೆ ಹಾಕಿದ ಲಗ್ನಗಂಟು ಸಹ ಅಲ್ಲವಾಗಿತ್ತು. ಬರ್ನಾರ್ಡ ಶಾರ ಶಬ್ದಗಳಲ್ಲಿ ಹೇಳುವದಾದರೆ ಅದು

(೯ನೇ ಪುಟ ನೋಡಿರಿ)

೩ ಕ್ಕೆ 100 ರಷ್ಟು
ಉಪಯುಕ್ತವಾದ 3 ಪುಸ್ತಕಗಳು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು
(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ: ರೂ. ಒಂದೂವರೆ, ಉತ್ತಮ ಪ್ರತಿ: ರೂ. ಎರಡು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಚಾರವರ್ಷ

ಎಲ್ಲರೂ ಪ್ರೀತಿಸುವ ನಿದ್ರಾದೇವಿ

ನಿದ್ರೆ ಬರಲಿಲ್ಲ ಎಂದು ಚಿಂತಿಸುತ್ತ ಕುಳಿತರೆ, ಆ ಚಿಂತೆಯೇ ನಿದ್ರೆಗೆ ಮಾರಕವಾಗಬಹುದು; ನಿದ್ರೆಯ ಬಗ್ಗೆ ನೀವು ತಿಳಿದುಕೊಂಡಿರುವುದೆಷ್ಟು?

“ಸಿಸೇರೊ ಮಲಗಿದ್ದನು. ನಿಶ್ಚಿಂತನಾಗಿ ನಿದ್ರಾಸಾಗರದಲ್ಲಿ ಮುಳುಗೇಳುತ್ತಿದ್ದ ಈತನ ಬಳಿಗೆ ರೋಮು ಸಾಮ್ರಾಟನು ಬಂದನು; ಆತನನ್ನು ಎಚ್ಚರಿಸಿದನು. ಸಿಸೇರೊ ಏಳಲಿಲ್ಲ. ಸಾಮ್ರಾಟನು ಮರಳಿದನು. ಸಿಸೇರೊನಿಗೆ ಮೃತ್ಯುದಂಡನಾಗಬೇಕೆಂದು ದರಬಾರಿಗಳು ಯೋಚಿಸಿದರು. ಸಿಸೇರೊ ನಿದ್ರೆ ಪೂರೈಸಿ ಮಹಾರಾಜನಲ್ಲಿಗೆ ಬಂದಾಗ, ಸಾಮ್ರಾಟನು ಆತನೊಡನೆ ಹೇಳಿದನು:—ಸಿಸೇರೊ, ನೀನು ಸಾಮ್ರಾಜ್ಯವನ್ನು ತೆಗೆದುಕೊಳ್ಳು; ಮತ್ತು ನಿನ್ನ ನಿದ್ದೆಯನ್ನು ನನಗೆ ಕೊಡು.” — ಇದೊಂದು ದಂತಕತೆ. ಈ ಘಟನೆಯಲ್ಲಿ ವಾಸ್ತವಿಕಾಂಶವಿದೆಯೋ ಇಲ್ಲವೋ ಹೇಳುವುದು ಅಸಾಧ್ಯ. ಆದರೆ, ಚಿಂತೆಯು ನಿದ್ರೆಗೆ ಮಾರಕವೆಂಬುದನ್ನಿದು ಸರ್ವತಃ ಸಮರ್ಥಿಸುತ್ತದೆ.

‘ಅಯ್ಯೋ, ನಿದ್ದೆ ಬರುವುದಿಲ್ಲ” ಎಂದು ಹೇಳಿ ಸಿಡಿಮಿಡಿಗೊಳ್ಳುವವರ ಮುಖವನ್ನು ನೀವು ಎಂದಾದರೂ ಸರಿಯಾಗಿ ಲಕ್ಷ್ಯವಿಟ್ಟು ನೋಡಿದ್ದೀರಾ? ಅವರ ಮುಖದಲ್ಲಿ ದೈನ್ಯ ಮತ್ತು ಕರುಣೆಗಳು ತುಂಬಿಕೊಂಡಿದ್ದು, ನೋಡುವವರ ಹೃದಯ ಕೂಡ ಕರುಣಾಭರಿತವಾಗಿ ಹೋಗುವುದು. ನಿಜವಾಗಿಯೂ ನಿದ್ದೆಯು ನಮಗೆ ಅತ್ಯಂತ ಪ್ರೀತಿ ಪಾತ್ರವಾಗಿದೆ ಮಾತ್ರವಲ್ಲದೆ ಬಹಳ ಆಸ್ವಾದನೀಯವೂ ಹೌದು. ಆದರೆ, ಇಷ್ಟೊಂದು ನಾವು ಮೆಚ್ಚಿರುವ ನಿದ್ದೆಯ ಬಗ್ಗೆ ಹೆಚ್ಚೇನೂ ತಿಳಿದಿರುವುದಿಲ್ಲ. ನಿದ್ರೆಯು ಒಂದು ನಿಯಮಿತ ರೂಪದಲ್ಲಿ ನಮ್ಮನ್ನು ಆಲಿಂಗಿಸುತ್ತದೆ; ನಮ್ಮ ಆಯಾಸವನ್ನು ದೂರೀಕರಿಸಿ ನಮ್ಮಲ್ಲಿ ಹೊಸ ಹುಮ್ಮಸ್ಸನ್ನು ತುಂಬಿಸುತ್ತದೆ. ನಮ್ಮ ಜೀವನದ ಮೂರರಲ್ಲೊಂದು ಭಾಗವನ್ನು ನಾವು ನಿದ್ರೆಯಲ್ಲಿಯೇ ಕಳೆಯುತ್ತೇವೆ. ನಿದ್ರಾದೇವಿಯ ತೋಳ ತೆಕ್ಕೆಯಲ್ಲಿ ನಿಶ್ಚಿಂತರಾಗಿ ಕಳೆಯುತ್ತೇವೆ. ಹೀಗಿದ್ದರೂ ಅದರ ರಹಸ್ಯವನ್ನು ನಾವು ಅರಿತುಕೊಂಡಿಲ್ಲ. ಈಗ ವಿಜ್ಞಾನಿಗಳು ಈಕಡೆಯೂ ತಮ್ಮ ದೃಷ್ಟಿಯನ್ನು ಹರಿಸಿ, ನಿದ್ರೆಯ ಸಂಬಂಧದ ಕೆಲವಾರು ರಹಸ್ಯಗಳನ್ನು ಹೊರಚೆಲ್ಲಿದ್ದಾರೆ.

ನಿದ್ರಾವಸ್ಥೆ ಮತ್ತು ಜಾಗ್ರತಾವಸ್ಥೆಗಳೆಂಬೆರಡು ಅವಸ್ಥೆಗಳು ನಮ್ಮ ಶರೀರಕ್ಕಿವೆ. ನಮ್ಮ ಮೆದುಳಿನ ಎರಡು ಸಣ್ಣ ಸಣ್ಣ ಅಂಗಗಳು ಇವುಗಳ ನಿಯಂತ್ರಣವನ್ನು ಮಾಡುತ್ತಿವೆ. ಶರೀರದ ಎಲ್ಲ ಅಂಗಗಳೂ ಸ್ನಾಯುಗಳ ಮೂಲಕ ಮೆದುಳಿಗೆ ಜೋಡಿಸಲ್ಪಟ್ಟಿವೆ. ಈ ಸ್ನಾಯುಗಳು ಮೆದುಳಿಗೆ ಒಂದಲ್ಲ ಒಂದು ಸೂಚನೆಯನ್ನು ಯಾವಾಗಲೂ ಕೊಡುತ್ತಿರುತ್ತವೆ. ಜಾಗ್ರತಾವಸ್ಥೆಯಲ್ಲಿ ಈ ಸ್ನಾಯುಗಳು ಅತಿ ತೀವ್ರವಾಗಿ ಕೆಲಸದಲ್ಲಿ ಮಗ್ನವಾಗಿರುವುದರಿಂದ ಮೆದುಳು ತನ್ನ ನಿರ್ಣಯವನ್ನೂ ಶೀಘ್ರವಾಗಿ ಮಾಡಬಲ್ಲುದು.

ಕೆಲವು ತಾಸು ಕಾರ್ಯನಿರತರಾದ ಮೇಲೆ ಸ್ನಾಯುಗಳ ನಿಯಂತ್ರಣಾಂಗಗಳು ಕೈಕಟ್ಟಿ ಮೌನವಾಗುತ್ತವೆ. ಆಗ, ಸ್ನಾಯುಗಳು ಅತಿ ಕ್ಷೀಣವಾಗಿ ತಮ್ಮ ಸಂದೇಶವನ್ನು ಮೆದುಳಿಗೆ ಮುಟ್ಟಿಸುವುದು. ಆದರೆ, ಮೆದುಳು ಈ ಬಗ್ಗೆ ಅತಿ ತ್ವರಿತಗತಿಯಲ್ಲಿ ಆದೇಶವೀಯದೆ ಬಹಳ ನಿಧಾನ ಮಾಡುತ್ತದೆ. ಇಂತಹ ಅವಸ್ಥೆಗೆ ನಿದ್ರಾವಸ್ಥೆ ಎಂದು ಹೇಳುತ್ತೇವೆ.

ಮನುಷ್ಯನು ನಿದ್ರಾವಸ್ಥೆಯಲ್ಲಿ ಅಚೇತನನಾಗಿರುವನೆಂದು ಸಾಮಾನ್ಯವಾಗಿ ಹೇಳುತ್ತಾರೆ. ಆದರೆ ನಿಜವಾಗಿಯೂ ಹಾಗಿರುವುದಿಲ್ಲ. ಅದ್ವೈತ ದರ್ಶನದಲ್ಲಿ ನಿದ್ರೆಯನ್ನು ಚೈತನ್ಯದ ಒಂದು ಅವಸ್ಥೆಯೆಂದು ತಿಳಿಯಲಾಗಿದೆ. ನಿಜವಾಗಿಯೂ ನಿಯಂತ್ರಣಾಂಗಗಳು ಕಾರ್ಯಮಾಡದೆ ಹೋದರೆ, ಮೆದುಳು ಮತ್ತು ಸ್ನಾಯುಗಳ ಸಂಬಂಧವು ಸಂಪೂರ್ಣ ಕಡಿದು ಹೋಗುವುದಿಲ್ಲ. ನಿಯಂತ್ರಣಾಂಗಗಳಾದರೂ ಪೂರ್ಣವಿರಾಮ ಪಡೆಯುವುದಿಲ್ಲ. ಅಲ್ಲಿ ಯಾರಾದರೊಬ್ಬ ಕರ್ಮಚರ ಕೆಲಸ ಮಾಡುತ್ತಿರುತ್ತಾನೆ. ನಾವು ಮಲಗಿರುವಾಗ ನಮ್ಮನ್ನು ಯಾರಾದರೂ ಕರೆದರೆ ಅಥವಾ ನಮ್ಮ ಯಾವುದಾದರೂ ಅಂಗಕ್ಕೆ ಬಡಿದರೆ, ನಾವು ಅತ್ತಿತ್ತ ಹೊರಳಾಡಿ ಕೊನೆಗೆ ಏಳುತ್ತೇವೆ. ಹಾಗಾದರೆ, ನಿಯಂತ್ರಣಾಂಗಗಳು ಸಂಪೂರ್ಣ ಸುಪ್ತವಾಗಿರುವುದಿಲ್ಲವೆಂಬುದು ಸ್ವಯಂಸಿದ್ಧ. ಒಂದು ವೇಳೆ ಈ ರೀತಿಯ ಮಧ್ಯಾವಧಿ ವ್ಯವಸ್ಥೆಯು ಇಲ್ಲದಿರುತ್ತಿದ್ದರೆ, ನಿದ್ರೆಯೆಂಬುದು ಬಹು ಅಪಾಯಕಾರಿಯಾದುದಾಗುತ್ತಿತ್ತು.

ಲಘು ನಿದ್ರೆಯ ವೇಳೆ ನಮ್ಮ ನಿಯಂತ್ರಣಾಂಗಗಳು ವಿಶೇಷ ಪ್ರಕಾರದ ಸಂವೇದನೆ ಅಥವಾ ಸೂಚನೆಗಳನ್ನು ಮಾತ್ರ ಮೆದುಳಿಗೆ ಸಾಗಿಸುವ ವ್ಯವಸ್ಥೆಯನ್ನು ಮಾಡುತ್ತವೆ ಎನ್ನಬಹುದು. ರೇಲ್ವೆ ಡಬ್ಬಿಗಳಲ್ಲಿ ಯಾವಾಗಲೂ ಸಂಚಾರ ಮಾಡುತ್ತಿರುವವರು ಗಾಡಿ ಸಾಗುತ್ತಿರುವಾಗ ನಿದ್ರಿಸುತ್ತಿರುವುದನ್ನೂ ತಾವಿಳಿಯಬೇಕಾದ ನಿಲ್ದಾಣ ಬಂದೊಡನೆಯೇ ಇಳಿದು ಹೋಗುತ್ತಿರುವುದನ್ನೂ ನೋಡಿರಬಹುದು. ಬಸ್ಸುಗಳ ದೀರ್ಘ ಪ್ರಯಾಣದ ವೇಳೆಯೂ ಈ ರೀತಿಯ ಜನರನ್ನು ನಾವು ಕಾಣಬಹುದು. ‘ನಿದ್ರೆಯ ಮೇಲೆ ನನಗೆ ಸಂಪೂರ್ಣ ಅಂಕಿತವಿದೆ. ನಾನು ಏಳಬೇಕೆಂದು ನಿರ್ಧರಿಸಿದ ಹೊತ್ತಿಗೆ ಸರಿಯಾಗಿ ಎದ್ದೇಬಿಡುತ್ತೇನೆ” ಎಂದು ಇಂತಹರು ಅಭಿಮಾನದಿಂದ ಅನ್ನುವುದುಂಟು. ಆದರೆ, ವಾಸ್ತವಿಕವಾಗಿ ಹೇಳುವುದಾದರೆ, ಅವರಲ್ಲಿ ಯಾವುದೇ ಅಸಾಮಾನ್ಯ ಶಕ್ತಿಯಿರುವುದಿಲ್ಲ. ಅವರ ತಮ್ಮ ನಿಯಂತ್ರಣಾಂಗಗಳಿಗೆ ಇಂತಿಷ್ಟು ತಾಸಿಗೆ ಎಚ್ಚರಿಸಬೇಕೆಂದು ಮೊದಲೇ ಸೂಚನೆಯೀಯುತ್ತಾರೆ.

ಇವೆಲ್ಲ ಬಾಹ್ಯ ಜಗತ್ತಿನ ಸೂಚನೆಗಳ ವಿಷಯವಾಯಿತು. ನಮ್ಮ ಶರೀರದ ವಿವಿಧಾಂಗಗಳ ಸೂಚನೆಯು ಕೂಡ ಇದೇ ರೀತಿ ಮೆದುಳಿಗೆ ಮುಟ್ಟಿಸಲ್ಪಡುತ್ತದೆ. ಶರೀರಕ್ಕೆ ಸಾಕಷ್ಟು ವಿಶ್ರಾಂತಿಯು ದೊರೆಯಿತೆಂದೊಡನೆಯೇ, ಮೆದುಳಿಗೆ ಈ ಸಂದೇಶವು ತಲುಪಿದೊಡನೆಯೇ ನಿಯಂತ್ರಣಾಂಗಗಳು ಜಾಗ್ರತಗೊಳ್ಳುತ್ತವೆ. ಇದೇ ಜಾಗ್ರತಾವಸ್ಥೆ. ಮೂರ್ಛೆ ಮತ್ತು ನಿದ್ರೆಗಳಲ್ಲಿಯೂ ಅಂತರವಿದೆ. ಮೂರ್ಛಾವಸ್ಥೆಯಲ್ಲಿ ಅದೆಷ್ಟೇ ತೀವ್ರವಾದ ಸಂವೇದನೆಯಾದರೂ ಮೆದುಳಿಗೆ ಮುಟ್ಟುವುದೇ ಇಲ್ಲ.

ನಮ್ಮ ಪ್ರೀತಿಪಾತ್ರವಾದ ನಿದ್ರೆಯ ಮಹಾಶತ್ರು ಎಂದರೆ ಚಿಂತೆ. ಚಿಂತೆಯು ಕೇವಲ ಮಾನಸಿಕ ಕ್ರಿಯೆಯಲ್ಲ; ಇದು ಶಾರೀರಿಕ ಸಮಸ್ಯೆಯೂ ಆಗಿದೆ. ಚಿಂತೆಯು ಸ್ನಾಯುಗಳನ್ನು ನೋಯಿಸುತ್ತದೆ. ಸ್ನಾಯುಗಳನ್ನು ಶಿಥಿಲಗೊಳಿಸಿದರೆ, ಆಗ ಚಿಂತೆಯು ನಾಮಾವಶೇಷವಾಗುವುದು. ಸಂಕೋಚವು ನಿದ್ರೆಗೆ ಎದುರಾಡುವ ವೈರಿ. ಹಾಸಿಗೆಯಲ್ಲಿ ಒರಗಿ ತಾಸುಗಟ್ಟಲೆಯೂ ನಿಮಗೆ ನಿದ್ರೆ ಬಾರದೆ ಹೋದರೆ, ನಿಮ್ಮ ಸ್ನಾಯುಗಳು ಸಂಕುಚಿತವಾಗಿವೆ ಎಂದು ತಿಳಿಯಬೇಕು. ನಿಯಂತ್ರಣಾಂಗಗಳಿಂದ ನಿಮ್ಮ ಸಂಕೋಚತೆಯ ಚಿತ್ರವನ್ನೂ ತೆಗೆಯುವುದು ಸಾಧ್ಯವಿದೆ. ಒಂದು ಯಂತ್ರವನ್ನು ಈ ಕೆಲಸಕ್ಕೆ ಉಪಯೋಗಿಸಬಹುದು. ನೀವು ಅತೀವ ಚಿಂತಾಮಗ್ನರಾಗಿರುವಾಗ, ನಿಮ್ಮ ಮಾಂಸ ಪೇಶಿಗಳು ಅತೀವ ಆಯಾಸ ಹೊಂದುತ್ತವೆ.

ಸ್ವಪ್ನಗಳಲ್ಲಿಯೂ ನಮ್ಮ ಮಾಂಸಪೇಶಿಗಳು ಆಯಾಸಗೊಂಡು ಸಂಕುಚಿತವಾಗುತ್ತವೆ. ಕಾಲ್ನಡೆಯಾಗಿ ನಡೆಯುತ್ತಿರುವ ಸ್ವಪ್ನವನ್ನು ನೀವು ಕಾಣುವಾಗ, ನಿಮ್ಮ ನಿಯಂತ್ರಣಾಂಗವನು ಪರಿಶೀಲಿಸಿದರೆ ನಿಮ್ಮ ಪಿಂಡಲಿಗಳು ಮತ್ತು ತೊಡೆಗಳಲ್ಲಿ ಸಂಕುಚಿತತೆಯು ಕಾಣಿಸಿಕೊಳ್ಳುವುದೂ ಮೇರುದಂಡವು ನೇರಾಗಿಯಿರುವುದೂ ಗೋಚರಿಸುತ್ತದೆ. ಕೆಲವು ವೇಳೆ ಸ್ವಪ್ನಗಳಲ್ಲಿ ಈ ಸಂಕುಚಿತತೆಯು ಮತ್ತಷ್ಟು ಹೆಚ್ಚಿ, ಎದೆ ಬಡಿತವು ತೀವ್ರಗೊಳ್ಳುವುದು; ಐವತ್ತು ಮೆಟ್ಟಲುಗಳನ್ನು ಒಂದೇ ಸವನೆ ಏರಿದಂತೆ ದೀರ್ಘ ಶ್ವಾಸವನ್ನು ಬಿಡುತ್ತೇವೆ. ಹೀಗೆ ನಿದ್ರೆಯಲ್ಲಿ ಎದೆ ಬಡಿತವು ಸಾಮಾನ್ಯವಾಗಿ ಮಿನಿಟಿಗೆ ೫೪ ಇರುತ್ತದೆ. ಕೆಲವರ ಎದೆಯು ಇದರಷ್ಟು ಕಡಿಮೆ ಬಡಿಯುವುದುಂಟು. ಆಳವಾದ ನಿದ್ರೆಯಲ್ಲಿ ಮನುಷ್ಯ ಆಳವಾಗಿ ಗೊರಕೆ ಹೊಡೆಯುವುದೂ ಇದೆ. ಆಗ ಆತನ ರಕ್ತಚಾಪವೂ ಕಡಿಮೆಯಾಗುವುದು.

ನಿದ್ರೆಯಿಂದ ಎಚ್ಚತ್ತನಂತರ ಎದೆಯ ಬಡಿತವೂ ರಕ್ತವಾಹಿನಿಗಳಲ್ಲಿ ರಕ್ತ ಪರಿಚಾಲನೆಯ ವೇಗವೂ ಕ್ರಮೇಣ ಹೆಚ್ಚುತ್ತ ಹೋಗುವುವು. ಇವರ ಜತೆಗೆ ಶರೀರದ ಉಷ್ಣತೆಯೂ ಏರುವುದು. ಈ ಉಷ್ಣತೆಯು ಮನುಷ್ಯನ ಸಾಮಾನ್ಯ ಉಷ್ಣತೆಯ ಪ್ರಮಾಣವನ್ನು ಮುಟ್ಟಿದೊಡನೆಯೇ ಆತ ಸಕ್ರಿಯನಾಗುತ್ತಾನೆ. ಶರೀರವು ಯಾವಾಗ ಎಷ್ಟು ಹೊತ್ತಿನಲ್ಲಿ ಸಾಧಾರಣ ಉಷ್ಣತೆಯನ್ನು ಪಡೆಯುತ್ತದೆ ಎಂಬುದನ್ನು ತಿಳಿಯಲು ಬೇಗ ಅಥವಾ ತಡವಾಗಿ ಮಲಗುವ ಮತ್ತು ಏಳುವುದರೊಡನಿರುವ ಸಂಬಂಧವನ್ನು ಅರಿಯಬೇಕು. ದೇಹದ ಉಷ್ಣತೆಯು ಏರುತ್ತ ಬಂದು ಮಧ್ಯದಿನದಲ್ಲಿ ತನ್ನ ಸೀಮೆಯನ್ನು ಮುಟ್ಟಿದರೆ, ಅಂತಹರು ಬೇಗನೇ ಏಳುತ್ತಾರೆ. ಮೆಲ್ಲ ಮೆಲ್ಲನೆ ಉಷ್ಣತೆಯೇರುವ ದೇಹಿಗಳು ನಿಧಾನವಾಗಿ ಎಚ್ಚರಗೊಳ್ಳುತ್ತಾರೆ. ಬ್ರಾಹ್ಮೀ ಮುಹೂರ್ತದಲ್ಲಿ ಏಳುವುದಕ್ಕೂ ಇದಕ್ಕೂ ಏನೇನೂ ಸಂಬಂಧವಿಲ್ಲ.

ಚಿಕಾಗೊ ವಿಶ್ವವಿದ್ಯಾಲಯದ ನಿದ್ರಾ ವಿಶೇಷಜ್ಞರಾದ ಡಾ| ನೈಥಾನೀಲ ಕ್ಲೀಟಮನರು ಮನುಷ್ಯರನ್ನು ಎರಡು ವರ್ಗಗಳಲ್ಲಿ ವಿಭಜಿಸಿದ್ದಾರೆ. ಪ್ರಭಾತಪ್ರಿಯರು ಮತ್ತು ಸಂಧ್ಯಾಪ್ರಿಯರೆಂದವರನ್ನು ಕರೆಯಬಹುದು. ಪ್ರಭಾತಪ್ರಿಯರು ಮುಂ

(೮ನೇ ಪುಟ ನೋಡಿರಿ)

The Vijaya Bank, Ltd., Udipi.

ದಿ ವಿಜಯಾ ಬೇಂಕ್, ಲಿಮಿಟೆಡ್, ಉಡುಪಿ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು, ಕ್ಲುಪ್ತ ಮಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನು ಇದೇ ಬರುವ ತಾರೀಕು 12_12_1959ನೇ ಶನಿವಾರ ಮಧ್ಯಾಹ್ನ ಘಂಟೆ 3ಕ್ಕೆ ಸರಿಯಾಗಿ, ಅಥವಾ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 30—9—59ರ ವರೆಗೆ
		Rs. nP.
341/57 14-9-57	ಶ್ರೀ ಯಂ. ಗೋಪಾಲ, ಕೊರಗ ಪೂಜಾರಿಯ ಅಳಿಯ, ಪೋಸ್ಟ್ ಮುಲ್ಕಿ.	90 - 69
34/58 5-2-58	ಶ್ರೀ ರಾಮಚಂದ್ರ ನಾಯ್ಕ, ವೆಂಕಟ್ರಮಣ ನಾಯ್ಕರ ಮಗ, ಹಾವಂಜೆ ಗ್ರಾಮ, ಪೋಸ್ಟ್ ಕೊಳಲಗಿರಿ.	71 _ 97
93/58 29-3-58	ಶ್ರೀ ಎ. ಸರ್ವೋತ್ತಮ ಶೆಟ್ಟಿ, ಯಂ. ವಿಟ್ಠಲ ಶೆಟ್ರ ಮಗ, ಬೇಕಾರ್ಡಿ ಗ್ರಾಮ, ಪೋಸ್ಟ್ ಬೇಕಾರ್ಡಿ.	93 - 50
195/58 8-7-58	ಶ್ರೀ ಐತಪ್ಪ. C o ಕೃಷ್ಣ ಲೋಂಡ್ರಿ, ಕೋರ್ಟ ರೋಡ್, ಉಡುಪಿ.	85 - 37
274/58 18-9-58	ಬೈಕ್ಲ ಬೆಲ್ಚಡ, ವೀರಪ್ಪ ಬೆಲ್ಚಡರ ಅಳಿಯ, ಪೋಸ್ಟ್ ಕೊರಂಗ್ರಪಾಡಿ.	88 _ 93

Office of the Vijaya Bank, Ltd., Udipi. 23—11—1959.

K. Bhaskara Hegde
Agent.

> ಮೂರ್ಖನೂ ಮುಳ್ಳೂ ಸಮಾನಗುಣವುಳ್ಳವರು. ಇವರಿಂದ ದೂರವಿರುವುದರಿಂದ ಇಲ್ಲವೇ ಮೆಟ್ಟಿ ನಿರ್ನಾಮ ಮಾಡುವುದರಿಂದ ಮಾತ್ರ ನಾವು ಬದುಕಿ ಕೊಳ್ಳುವುದು ಸಾಧ್ಯ!

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೬-೧೧-'೫೯	೧೩

ರಾಷ್ಟ್ರದ್ರೋಹದ ಪರಮಾವಧಿ.

ದೇಶಪ್ರೇಮಿಗಳಾದ ಭಾರತೀಯರ ನೆಮ್ಮದಿಗೆ ಇತ್ತೀಚೆಗೆ ಭಾರತ—ಚೀನಗಳ ಸೀಮಾಪ್ರದೇಶದಲ್ಲಿ ನಡೆದಿರುವ ದುರ್ಘಟನೆಗಳು ಸೀಮಾವಿವಾದಗಳು, ಭಾರತದ ಬಗ್ಗೆ ಚೀನದಲ್ಲಿಯೂ ಭಾರತದಲ್ಲಿರುವ ಚೀನೀಯ ರಾಯಭಾರ ಕಚೇರಿಯಲ್ಲಿಯೂ ನಡೆಯುತ್ತಿರುವ ಅಪಪ್ರಚಾರಗಳು ಮಾರಕವಾಗಿ ಕಂಡುಬಂದರೆ, ಈಗ ಸ್ವದೇಶೀಯರೆಂದು ಹೇಳಿಕೊಂಡು ವಿದೇಶೀಯರನ್ನೇ ಯಾವಾಗಲೂ ಬೆಂಬಲಿಸುತ್ತಿರುವ ಭಾರತೀಯ ಕಮ್ಯುನಿಸ್ಟ ಪಕ್ಷದ ವಿಚಿತ್ರ ಧೋರಣೆ ಹಾಗೂ ಕಾರ್ಯಕ್ರಮಗಳ ಯೋಜನೆಯಿಂದ ನಿಜವಾಗಿಯೂ ಭಾರತೀಯರ ಆತ್ಮಸತ್ವಕ್ಕೇನೇ ಕೊಡಲಿಯೇಟು ಬೀಳುವಂತಾಗಿದೆ. ಭಾರತೀಯ ಕಮ್ಯುನಿಸ್ಟರ ಕೆಲವೇ ಬಲವಾದ ಕೋಟೆಗಳಲ್ಲಿ ಅತಿ ಪ್ರಮುಖ ಸ್ಥಾನವನ್ನು ಗಳಿಸಿರುವ ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ ಪಕ್ಷವು ಈಗ ಕೈಗೊಂಡಿರುವ ಸ್ವದೇಶ ದ್ರೋಹದ ಕಾರ್ಯಾಚರಣೆಯನ್ನು ಒರ್ವ ದೇಶಪ್ರೇಮಿಯು ಒಪ್ಪುವುದಂತೂ ದೂರವಿರಲಿ, ಕೇಳುವುದಕ್ಕೂ ಸಿದ್ಧನಿಲ್ಲ. ಭಾರತ ಮತ್ತು ಚೀನಗಳ ಸೈನ್ಯಗಳು ಭಾರತವು ತನ್ನ ಸೀಮೆಯೆಂದು ಹೇಳುತ್ತಿರುವ ಗಡಿಯಿಂದ ೧೨ ಮೈಲಿಗಳಷ್ಟು ಹಿಂದೆ ಸರಿದು ಆ ನಡುವಿನ ಪ್ರದೇಶವನ್ನು ನಿಶ್ಶಸ್ತ್ರೀಕೃತಗೊಳಿಸಿ ಮುಂದೆ, ಈ ಬಗ್ಗೆ ಎದ್ದಿರುವ ವಿವಾದವನ್ನು ಶಾಂತ ವಿಧಾನಗಳಿಂದ ತೀರ್ಮಾನಿಸಿಕೊಳ್ಳಬಹುದು ಎಂದು ಚೀನೀಯ ಪ್ರಧಾನಿ ಶ್ರೀ ಚೌ ಎನ್. ಲಾಯರು ಸೂಚಿಸಿದರೆ, ಭಾರತದ ಪ್ರಧಾನಿಯವರು ಇದನ್ನು ಅಕ್ಷರಶಃ ಸ್ವೀಕರಿಸಲಿಲ್ಲ. ನಮ್ಮ ಪ್ರಧಾನಿಯವರ ನಿಲುಮೆಯನ್ನು ಖಂಡಿಸಿ, ಅದನ್ನು ವಿರೋಧಿಸಿ ಉಭಯ ಪ್ರಧಾನಿಗಳೂ ಒಂದೆಡೆ ಸೇರುವುದು ಮಾತ್ರವಲ್ಲದೇ ಶ್ರೀ ನೆಹರು ಶ್ರೀ ಲಾಯ್ ಅವರ ಸೂಚನೆಯನ್ನು ನಿಶ್ಶರ್ತವಾಗಿ ಒಪ್ಪಿಕೊಳ್ಳಬೇಕು ಎಂತ ಆರ್ಭಟೆ ಎಬ್ಬಿಸಿದ ಈ ಕಮ್ಯುನಿಸ್ಟರ ವರ್ತನೆಯನ್ನು ಅರ್ಥಮಾಡಿಕೊಂಡರೆ, ಅವರ ಆಸಕ್ತಿ ವಾಸ್ತವವಾಗಿ ಎಲ್ಲಿರುವುದು ಎಂಬುದರ ಅರಿವಾಗುವುದು.

ಅತ್ಯಂತ ಪ್ರಾಚೀನ ಕಾಲದಿಂದಲೂ ಭಾರತ-ಚೀನಾಗಳ ಗಡಿಯಾಗಿ ನಿಂತುಕೊಂಡಿದ್ದರೂ ಈ ಬಗ್ಗೆ ಬಹು ದೀರ್ಘಾವಧಿಯಲ್ಲೂ ಒಂದೇ ಒಂದು ತಂಟೆ ಏಳದೆ ಹೋದರೂ ಇಂದು ಮಾತ್ರ ಚೀನೀಯ ಆಕ್ರಮಣ ಮನೋವೃತ್ತಿಯಿಂದಾಗಿ ಅಲ್ಲಸಲ್ಲದ ಗೊಂದಲಗಳು ಉದ್ಭವಿಸಿವೆ. ಇಂತಹ ಸಂದರ್ಭದಲ್ಲಿ ಯಾರೂ ಯುದ್ಧ ಹೂಡಬೇಕೆಂಬುದು ಸರಿಯಾಗಲಾರದು. ಆದರೆ, ವಸ್ತುಸ್ಥಿತಿಯನ್ನು ಸರಿಯಾಗಿ ಅರ್ಥವಿಸಿಕೊಂಡ ಯಾರೇ ಆದರೂ ಚೀನವೇ ಭಾರತದ ಗಡಿಯೊಳಗೆ ತಂದಿರುವ ಸೇನೆಯನ್ನು ಮೊದಲು ಹಿಂದಕ್ಕೆ ಕರೆದು, ಮೂಲ ತತ್ತ್ವವನ್ನು ಮನ್ನಿಸಿ, ಬಗೆಹರಿಯದಿರುವ ಚಿಕ್ಕಪುಟ್ಟ ವಿವಾದಗಳನ್ನು ಸೌಹಾರ್ದಮಯ ವಾತಾವರಣದಲ್ಲಿ ಬಗೆ ಹರಿಸುವುದನ್ನೇ ಸಮಂಜಸವೆನ್ನಬೇಕು; ಅದನ್ನು ಬಿಟ್ಟು ಭಾರತವು ತನ್ನದೇ ಆದ ಪ್ರದೇಶದಿಂದ ಮತ್ತಷ್ಟು ದೂರ ಹೋಗಬೇಕು ಎಂದು ಹೇಳುವುದು ಸರ್ವಥಾ ನ್ಯಾಯವಾಗಲಾರದು. ಆದರೆ, ಭಾರತೀಯ ಕಮ್ಯುನಿಸ್ಟರು ಭಾರತದ ರಕ್ಷಣೆಗಾಗಿ ಅದರ ನ್ಯಾಯಪರ ಧೋರಣೆಗೆ ಬೆಂಬಲವೀಯುವುದನ್ನು ಬಿಟ್ಟು ಚೀನಾದ ಬಾಲ ಬಡಕರಾಗಿ, ಅವರ ಪ್ರತಿನಿಧಿಗಳಾಗಿ ಭಾರತದಲ್ಲಿ ಕಾರ್ಯಮಗ್ನರಾಗುತ್ತಿರುವುದು ಖೇದನೀಯ ಮಾತ್ರವಲ್ಲ; ಖಂಡನಾರ್ಹವೂ ಸಹ ನಾಚಿಕೆಗೇಡಿತನವೂ ಆಗಿದೆ ಎಂದು ಹೇಳದೆ ಗತ್ಯಂತರವಿಲ್ಲ. ಕಲಕತ್ತೆಯಲ್ಲಿ ಬಹುಕಾಲದಿಂದ ವಿಚಾರಮಾಡಿ ಏರ್ಪಡಿಸಿದ ಕಮ್ಯುನಿಸ್ಟರ ಮತಪ್ರದರ್ಶನವೊಂದರಲ್ಲಿ ಚೀನಾದ ಅಭಿಪ್ರಾಯವನ್ನು ಸಮರ್ಥಿಸಿ ಉದ್ರೇಕ ಪೂರಿತ ಘೋಷಣೆಗಳನ್ನು ಮಾಡಿದುದು ಮಾತ್ರವಲ್ಲ, ಭಾರತದ ನಿಲುಮೆಯನ್ನು ಹಾಸ್ಯಾಸ್ಪದವಾದ ರೀತಿಯಲ್ಲಿ ಕಾಣುವ, ಚೀನೀ ಸೂಚನೆಗಳನ್ನು ಮನ್ನಿಸದೆ ಹೋದರೆ ಯಾವಗತಿಯಾಗಬಹುದೆನ್ನುವ ಬೆದರಿಕೆಯ ಘೋಷಣೆಗಳನ್ನೂ ಮಾಡಿರುವರೆಂದು ವರದಿಯಾಗಿದೆ. ಇಂತಹ ಕಠೋರ ಹಾಗೂ ಸಹನಾತೀತ ಕೃತ್ಯಗಳನ್ನು ಗೈದ ಭಾರತೀಯ ಕಮ್ಯುನಿಸ್ಟರ ವರ್ತನೆಯು ಭಾರತೀಯರನ್ನು ಸಾರ್ವಜನಿಕವಾಗಿ ಅಪಮಾನಿಸಿದಂತೆ ಎಂದು ತಿಳಿದರೆ ತಪ್ಪಾಗಲಾರದು. ದೇಶವಿಘಾತಕ ಚಟುವಟಿಕೆಗಳಲ್ಲಿಯೇ ನಿರತರಾಗುತ್ತಿರುವ ಈ ಕಮ್ಯುನಿಸ್ಟರ ಈ ತೆರದ ವರ್ತನೆಯನ್ನು ಭಾರತೀಯರೆಲ್ಲರು ಖಂಡಿಸಲೇಬೇಕು.

ಇಂದು ಪಶ್ಚಿಮ ಬಂಗಾಳದಲ್ಲಿ ಇಂತಹ ಭಾರತ ವಿರೋಧಿ ಮತಪ್ರದರ್ಶನ ನಡೆಯಿತು; ಭಾರತ-ಚೀನ ಸೀಮಾ ಪ್ರದೇಶದಲ್ಲಿರುವ ರಾಜ್ಯಗಳಲ್ಲಿ ಇದೂ ಒಂದೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಮತ್ತು ಈ ಪ್ರದರ್ಶನದ ಪ್ರಭಾವವು ಚೀನದ ಮೇಲೂ, ಇದರ ಸೋಂಕು ಭಾರತೀಯ ರಾಜ್ಯಗಳಲ್ಲಿಯೂ ಹರಡುವುದೆಂಬುದನ್ನು ಗಮನಿಸಬೇಕು. ಈ ತೆರದ ದೇಶ ವಿರೋಧಿಯಾದ ಮತ್ತು ರಾಷ್ಟ್ರದ ಐಕ್ಯ ಹಾಗೂ ಭದ್ರತೆಗೆ ಗಂಡಾಂತರಕಾರಿಯಾದ ವರ್ತನೆಯನ್ನು ತತ್‌ಕ್ಷಣವೇ ಹತ್ತಿಕ್ಕದೆ ಹೋದರೆ, ಇಂತಹ ಅಪಪ್ರಚಾರಕ್ಕೆ ಪೂರ್ಣವಿರಾಮವಿಲ್ಲ ಎಂದು ಹೇಳಬರುವುದಿಲ್ಲ. ರಾಷ್ಟ್ರದಲ್ಲಿ ಕೇವಲ ಒಂದೇ ಒಂದಾದರೂ ವಿದ್ರೋಹಿ ಪಕ್ಷವಿರುವುದರಿಂದ ರಾಷ್ಟ್ರದ ಕಲ್ಯಾಣವಾವುದಕ್ಕೆ ಗುರುತರವಾದ ತಡೆಯುಂಟಾಗುವುದು. ಒರಿಸ್ಸದ ಮುಖ್ಯ ಮಂತ್ರಿ ಡಾ| ಹರೆಕೃಷ್ಣ ಮೆಹತಾಬರು ಕಮ್ಯುನಿಸ್ಟ ಪಕ್ಷವನ್ನೂ ಅದರ ಕಾರ್ಯಗಳನ್ನೂ ನಿಯಂತ್ರಿಸುವ ಆವಶ್ಯಕತೆಯನ್ನು ಪ್ರತಿಬಿಂಬಿಸಿರುವರು. ಒಂದು ದೃಷ್ಟಿಯಿಂದ ಪ್ರಜಾಪ್ರಭುತ್ವಕ್ಕಿದು ಅಸಮಂಜಸವೆಂಬು ತೋರಿಬರಬಹುದಾದರೂ ಈ ಕಮ್ಯುನಿಸ್ಟರ ರಾಷ್ಟ್ರದ್ರೋಹಿ ಚಟುವಟಿಕೆಗಳನ್ನಾದರೂ ಸಂಪೂರ್ಣ ನಿಯಂತ್ರಿಸುವ ಆವಶ್ಯಕತೆ ಈಗ ಎದ್ದುತೋರುತ್ತದೆ. ದೇಶದ ಇತರ ಎಲ್ಲ ರಾಜಕೀಯ ಪಕ್ಷಗಳು ಚೀನದ ಕೃತ್ಯ ಸರಿಯಲ್ಲವೆನ್ನುವಾಗ ಈ ಕಮ್ಯುನಿಸ್ಟರು ಮಾತ್ರ ಅದನ್ನು ಸಮರ್ಥಿಸುವುದಾದರೆ, ಇವರು ತಪ್ಪಿರುವರೆನ್ನಬೇಕೆ, ಅಥವಾ ಉಳಿದವರು ಜಾರಿಬಿದ್ದಿರುವರೆನ್ನಬೇಕೆ? ಕಮ್ಯುನಿಸ್ಟರ ಈ ಚೀನ ಸಮರ್ಥಕ ಮತಪ್ರದರ್ಶನದಿಂದ ಅವರ ನಿಜಸ್ವರೂಪ ಇನ್ನೊಮ್ಮೆ ಬಯಲಾಯಿತು. ಇದನ್ನು ತಿಳಿಸೂ ತಿಳಿದೂ ನಾವು ಮೌನವಾಗಿ ಕುಳಿತರೆ, ಇದನ್ನು ವಿವೇಕವೆಂದು ಎಂದಿಗೂ ಯಾರೂ ಹೇಳುವಂತಿಲ್ಲ. ಕಮ್ಯುನಿಸ್ಟ್ ಪಕ್ಷದ ಬಗ್ಗೆ ಭಾರತವು ತುಸು ಬಿಗಿಯ ಧೋರಣೆಯನ್ನಿಟ್ಟುಕೊಳ್ಳುವ ಕಾಲವೀಗ ಸನ್ನಿಹಿತವಾಗಿದೆ. ಭಾರತ ಸರಕಾರದ ಗಮನವಿತ್ತ ಅವಶ್ಯ ಹರಿಯಬೇಕು.

ರಾಜ್ಯಸೀಮಾ ವಿವಾದ

ಮದ್ರಾಸ ಮತ್ತು ಆಂಧ್ರ ಪ್ರದೇಶಗಳ ಗಡಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಯನ್ನು ಮಾಡಲು ಈ ಎರಡೂ ರಾಜ್ಯಗಳು ಒಮ್ಮತದಿಂದ ನಿರ್ಧರಿಸಿದ್ದು, ಈ ಬಗ್ಗೆ ಆವಶ್ಯಕವಾದ ಮಸೂದೆಯೊಂದು ಲೋಕಸಭೆಯಲ್ಲಿ ಸ್ವೀಕಾರವಾಯಿತು. ಇವರನ್ವಯ ಕೆಲವೊಂದು ಗ್ರಾಮಗಳನ್ನು ಪರಸ್ಪರ ಹಸ್ತಾಂತರಗೊಳಿಸಲಾಗುವುದು. ರಾಜ್ಯ ಪುನರ್ಘಟನೆಯಾಗಿ ಮೂರು ವರ್ಷಗಳು ಸಂದುಹೋಗಿರುವುದಾದರೂ ಮೈಸೂರು ರಾಜ್ಯದ ಗಡಿ ಪ್ರದೇಶದ ಬಗ್ಗೆ ಈ ಮೂರು ವರ್ಷವೂ ವಿಚಾರ ನಡೆಯುತ್ತ ಬಂದಿದ್ದರೂ ಇದುವರೆಗೆ ಈ ಬಗ್ಗೆ ಯಾವುದೇ ಸ್ಪಷ್ಟ ರೂಪವನ್ನಿದು ಪಡೆದಿಲ್ಲವೆಂಬುದನ್ನು ಅತೀವ ದುಃಖದಿಂದ ಉಚ್ಚರಿಸಬೇಕಾಗಿದೆ. ಕೇರಳಕ್ಕೆ ಸೇರಿರುವ ಕಾಸರಗೋಡು ಕನ್ನಡ ಭಾಗವನ್ನು ಕರ್ನಾಟಕಕ್ಕೆ ಸೇರಿಸುವ ಕುರಿತಾಗಿ ತುಂಬ ಚಳವಳ ನಡೆದರೂ ನಡೆಯುತ್ತಿದ್ದರೂ ಈ ಬಗ್ಗೆ ಯಾವುದೇ ಒಮ್ಮತದ ನಿರ್ಧಾರಕ್ಕೆ ಬರುವುದು ಇದುವರೆಗೂ ಸಾಧ್ಯವಾಗಲಿಲ್ಲ. ಬೊಂಬಾಯಿ ಮತ್ತು ಮೈಸೂರು ರಾಜ್ಯದ ಗಡಿಯಲ್ಲಿನ ಗುಲ್ಲನ್ನು ಹೋಗಲಾಡಿಸುವುದೂ ಅಸಾಧ್ಯವಾಗಿದೆ. ಗ್ರಾಮಗಳನ್ನು ಮುಖ್ಯ ಘಟಕಗಳಾಗಿ ಇಟ್ಟುಕೊಂಡು ಇಕ್ಕಡೆಯವರೂ ಬೇಗನೇ ಒಂದು ತೀರ್ಮಾನಕ್ಕೆ ಬಂದರೆ, ಆಗ ಎಲ್ಲರಿಗೂ ಕ್ಷೇಮವಾಗುವುದೆಂಬುದನ್ನು ಅಲ್ಲಗಳೆಯುವಂತಿಲ್ಲ. ಹೀಗೆ ಈ ಪ್ರಶ್ನೆಗಳನ್ನು ಹೆಚ್ಚು ದೀರ್ಘಕಾಲ ಹೀಗೆಯೇ ಬೆಳೆಯಗೊಡುವುದರಿಂದ ಇಲ್ಲದ ಅನಾಹುತಗಳಿಗೆ ಅವ್ಯಕ್ತ ಪ್ರೇರೇಪಣೆ ಹಾಗೂ ಪ್ರೋತ್ಸಾಹಗಳನ್ನೇ ಇತ್ತಂತಾಗುವುದರಿಂದ ಮೈಸೂರು ನಾಮಧೇಯದ ಕರ್ನಾಟಕ ಸರಕಾರ ಈ ಸೀಮಾ ವಿವಾದವನ್ನು ತ್ವರಿತಗತಿಯಲ್ಲಿ ನ್ಯಾಯೋಚಿತವಾದ ವಿಧಾನದಲ್ಲಿ ಬಗೆಹರಿಸಲು ಉತ್ಸಾಹವನ್ನು ತಂದುಕೊಂಡು ಸಂಬಂಧಪಟ್ಟ ರಾಜ್ಯ ಸರಕಾರಗಳೊಡನೆ ನಡೆಸುತ್ತಿರುವ ವಿಚಾರವಿನಿಮಯವನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸಿ, ಸರಿಪಡಿಸಿಕೊಳ್ಳಬೇಕಾದುದು ಅವಶ್ಯವಿದೆ. ಈ ದಿಸೆಯಲ್ಲಿ ಮದ್ರಾಸು—ಆಂಧ್ರ ಸರಕಾರಗಳು ನಮ್ಮ ರಾಜ್ಯಕ್ಕೆ ಮಾರ್ಗದರ್ಶನ ಮಾಡಿದಂತಾಗಿವೆ. ಇದನ್ನು ನಾವು ಅವಶ್ಯ ತಿಳಿದುಕೊಳ್ಳಬೇಕು.

ಸಂಕ್ಷಿಪ್ತ ಸುದ್ದಿಗಳು

ಭಾರತಕ್ಕೆ ನಸ್ಸೇರರು

ಸಂಯುಕ್ತ ಅರಬ ರಾಷ್ಟ್ರದ ಅಧ್ಯಕ್ಷರಾದ ಶ್ರೀ ನಸ್ಸೇರರು ದಶಂಬರ ತಿಂಗಳಲ್ಲಿ ಭಾರತವನ್ನು ಸಂದರ್ಶಿಸುವರೆಂದು ಮೊದಲು ತಿಳಿದುಬಂದಿದ್ದರೂ ಭಾರತಕ್ಕೆ ಅಮೆರಿಕೆಯ ಅಧ್ಯಕ್ಷರು ದಶಂಬರದ ಆದಿಭಾಗದಲ್ಲಿ ಬರಲಿರುವುದರಿಂದ ಶ್ರೀ ನಸ್ಸೇರರ ಸಂದರ್ಶನವನ್ನು ಮುಂದುವರಿಸಿದೆ. ಜನವರಿ ತಿಂಗಳ ಅಂತ್ಯದಲ್ಲಿ ಅವರು ಭಾರತಕ್ಕಾಗಮಿಸುವ ನಿರೀಕ್ಷೆಯಿದೆ. ಶ್ರೀಯುತರನ್ನು ಬರ್ಮಾ, ಸಿಂಹಳ, ಇಂಡೊನೇಸ್ಯ ಮತ್ತು ಕಾಂಬೋಡಿಯಾಗಳು ಆಮಂತ್ರಿಸಿದ್ದರೂ, ತಮ್ಮ ಕಾರ್ಯಭಾರದ ನಿಮಿತ್ತದಿಂದಾಗಿ ಅವರು ಅವುಗಳ ಆಮಂತ್ರಣವನ್ನು ಮನ್ನಿಸುವುದಿಲ್ಲವೆಂದು ತಿಳಿಯುತ್ತದೆ.

ಚೀನ ಅನ್ಯಾಯವೆಸಗುತ್ತದೆ

ಭಾರತ—ಚೀನ ಸೀಮಾ ವಿವಾದದಲ್ಲಿ ಅಮೆರಿಕೆಯು ಆಸಕ್ತಿ ತೋರಿಲ್ಲವೆಂಬುದನ್ನು ವಿದೇಶಾಂಗ ಮಂತ್ರಿ ಶ್ರೀ ಹರ್ಟರರು ಬಹಿರಂಗಪಡಿಸಿದ್ದಾರೆ. ಸೋವಿಯತ್ ಪ್ರಧಾನಿಗಳು ಈ ವಿವಾದವೆದ್ದುದಕ್ಕೆ ನಿರಾಶಿಸಿ, ಶಾಂತಿಯಿಂದಲೇ ಇವು ಬಗೆಹರಿಯುವಂತೆ ತಾನೂ ಪ್ರಯತ್ನಿಸುವುದಾಗಿ ಘೋಷಿಸಿದ್ದಾರೆ. ಈಗ, ಯುಗೊಸ್ಲಾವಿಯದ ಅಧ್ಯಕ್ಷರಾದ ಶ್ರೀ ಮಾರ್ಷಲ್ ಟಿಟೋ ಅವರು ಈ ಕುರಿತಾಗಿ ಚೀನವು ವಹಿಸುತ್ತಿರುವ ಧೋರಣೆಯನ್ನು ಖಂಡಿಸಿ, ತಮಗದರಿಂದ ನಿರಾಶೆಯಾಗಿರುವುದಾಗಿ ಹೇಳಿದರು. ಚೀನವು ಗಡಿತಂಟೆಯ ಸಂಬಂಧದಲ್ಲಿ ತಪ್ಪು ಮಾರ್ಗವನ್ನು ಹಿಡಿದಿರುವುದೆಂದವರು ಹೇಳಿ, ಅದು ಸರಿದಾರಿಯಲ್ಲಿ ಮುನ್ನಡೆಯುವುದೆಂದವರು ಹಾರೈಸಿದರು.

ನಿಯಂತ್ರಣ ಹೇರಬೇಕು

ಒಡಿಸ್ಸಾದ ಮುಖ್ಯ ಮಂತ್ರಿ ಡಾ| ಹರೆಕೃಷ್ಣ ಮೆಹತಾಬರು ಕಟ್ಟಕದಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಮಾತಾಡುತ್ತ ಭಾರತೀಯ ಕಮ್ಯುನಿಸ್ಟ್ ಪಕ್ಷವು ಹೊರಗಿನ ಕಮ್ಯುನಿಸ್ಟ್ ರಾಷ್ಟ್ರಗಳಿಗೆ ನಿಷ್ಠವಾಗಿದೆ ಎಂದು ಎಲ್ಲರಿಗೂ ತಿಳಿದಿದೆ. ಯಾವ ಕಮ್ಯುನಿಸ್ಟ್ ರಾಷ್ಟ್ರವೂ ತಪ್ಪುಮಾಡುವುದಿಲ್ಲವೆಂಬುದೇ ಅದರ ಮೂಲತತ್ತ್ವವಾಗಿದೆ. ಚೀನ—ಭಾರತಗಡಿಯ ಸಂಬಂಧದಲ್ಲಿ ಭಾರತೀಯ ಕಮ್ಯುನಿಸ್ಟರ ವಿದೇಶನಿಷ್ಠೆ ತನ್ನ ಚ

ರವು ಬಿಂದುವನ್ನೇರಿದೆ ಎಂದು ಹೇಳಿ, ಇಂತಹ ಪರಿಸ್ಥಿತಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲೆ, ಅದರ ಕಾರ್ಯಚಟುವಟಿಕೆಗಳ ಮೇಲೆ ನಿಯಂತ್ರಣ ಹೇರುವುದು ಅತ್ಯವಶ್ಯವೆಂಬವರು ಅಭಿಪ್ರಾಯಪಟ್ಟರು

ಶ್ರೀಮತಿ ಇಂದಿರಾ ಗಾಂಧಿ

ಕಾಂಗ್ರೆಸ್‌ನ ಅಧ್ಯಕ್ಷೆ ಶ್ರೀಮತಿ ಇಂದಿರ ಗಾಂಧಿ ಯವರು ಕರ್ನಾಟಕ ಸಂಚಾರವನ್ನ ತೊಡಗಿದ್ದಾರೆ ಶ್ರೀಮತಿಯವರು ಇಲ್ಲಿನ ಹಲವಾರು ಸ್ಥಳಗಳನ್ನು ಸಂದರ್ಶಿಸಿದರು ಭಾರತವು ಚೀನದ ಬಗ್ಗೆ ವಹಿಸುತ್ತಿರುವ ಧೋರಣೆಯನ್ನವರು ಎಂಬ ಲಿಸತ್ತ, ದೇಶದ ಅಭಿವೃದ್ಧಿಗಾಗಿ ದುಡಿಯಬೇಕು, ಕಾಂಗ್ರೆಸಿಗರು ಕಾಂಗ್ರೆಸ್ ತತ್ವಗಳನ್ನು ಜನತೆಗೆ ತಿಳಿಯುವಂತೆ, ಪ್ರಚಾರ ಮಾಡಬೇಕು, ಕಾಂಗ್ರೆಸಿಗರು ಸಣ್ಣ ಸಣ್ಣ ವಿಷಯಗಳಿಗೆ ದೊಡ್ಡ ಮಾಡ್ಡ ಗುಲ್ಲೆಬ್ಬಿಸುವುದು ಸರಿಯಲ್ಲ ಎಂದು ಪಂಡಿತವಾಗಿ ಉಪದೇಶಿಸಿದರು

ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ರೆಡ್ಡಿ

ಅಖಿಲ ಭಾರತ ಕಾಂಗ್ರೆಸ್‌ನ ಅಧ್ಯಕ್ಷ ಪಟ್ಟದ ಬಗ್ಗೆ ನಾನಾ ಬಗೆಯಾಗಿ ಊಹಾಪೋಹಗಳು ನಡೆದಿದ್ದು ಇಷ್ಟರಲ್ಲಿಯೇ ಭಾವಿ ಅಧ್ಯಕ್ಷರ ಹೆಸರು ಬಹಿರಂಗಗೊಳ್ಳಲಿರುವುದು ಶ್ರೀಮತಿ ಇಂದಿರಾ ಗಾಂಧಿಯವರೇ ಇನ್ನೊಂದು ಅವಧಿಯಲ್ಲಿಯೂ ಅಧ್ಯಕ್ಷೆಯಾಗಬೇಕೆಂಬ ವಾದವಿದ್ದರೂ ಶ್ರೀಮತಿಯವರು, ಮುಖ್ಯವಾಗಿ ಅವರ ಪಿತರರು ಇದಕ್ಕೆ ಅನುಕೂಲಾಭಿಪ್ರಾಯವಿಲ್ಲವಾದುದರಿಂದ ಇದನ್ನು ನಿರಾಕರಿಸಿದಾರೆ ಹೀಗಾಗಿ ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಸಂಜೀವ ರೆಡ್ಡಿ ಅವರ ಹೆಸರನ್ನು ಹಲ್ಲಿನ ರಾಜ್ಯಗಳ ಕಾಂಗ್ರೆಸ್ ನಾಯಕರು ಸೂಚಿಸಿರುವರೆಂದೂ ಶ್ರೀ ರೆಡ್ಡಿಯವರಿಗೆ ಕಾಂಗ್ರೆಸ್ ವರಿಷ್ಠರ ಬೆಂಬಲವಿರುವುದೆಂದೂ ತಿಳಿದು ಬಂದಿದೆ ಬೇರೆ ನಾಮ ಪತ್ರಗಳು ಸಲ್ಲಿಸಲ್ಪಡುವ ನಿರೀಕ್ಷೆಯಿಲ್ಲದುದರಿಂದ ಶ್ರೀ ರೆಡ್ಡಿಯವರೇ ಮುಂದಿನ ಕಾಂಗ್ರೆಸ್ ಅಧ್ಯಕ್ಷರಾಗಿ ಅವಿರೋಧವಾಗಿ ಆರಿಸಲ್ಪಡುವ ನಿರೀಕ್ಷೆ ಅತ್ಯಧಿಕವಿದೆ.

ಪುತ್ತೂರು ಡಿ ಮು ಕೋರ್ಟಿನಲ್ಲಿ

O S 294/1959

N ಅನಂತರಾಜ ಅರಿಗ— ವಾದಿ

A S ವೆಂಕಟ ಸುಬ್ಬಯ್ಯ— ಸುಬ್ಬರಾಯರ ಮಗ— ನಲ್ಲೂರು ಕೆಮ್ರಾಜೆ ಗ್ರಾಮದ ಕಂಪೂರು ಹೌಸ್— ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನಂದರೆ —

ಶ್ರೀ ಗೋಪಾಲಕೃಷ್ಣ ಪ್ರೊಡಕ್ಷನ್ಸ್ ಎಂಬ ಸಿನೇಮ ಕಂಪೆನಿಯನ್ನು ಸುರುಮಾಡುತ್ತೇನೆಂತ ಹೇಳಿ ವಾದಿಯನ್ನು ನಂಬಿಸಿ ವಾದಿಯಿಂದ ತಾ 21—2 59ರಲ್ಲಿ Share ಪಡಕೊಳ್ಳುವ ಬಗ್ಗೆಂತ ನೀವು ತೆಗೆದುಕೊಂಡ ರೂಪಾಯಿ 1000/ ವನ್ನು ಬರಮಾಡಿಕೊಳ್ಳುವರೇ ವಾದಿಯು ಮಾಡಿದ ಮೇಲ್ಕಂಡ ದಾವೆಯನ್ನು ಮತ್ತು ಇದೇ ದಾವೆಯಲ್ಲಿ ಡಿಕ್ರಿಗೆ ಮುಂಚಿತವಾದ R.I A 891/59ರಲ್ಲಿ ಸ್ಥಿರಾಸ್ತಿಯನ್ನು ಜಪ್ತಿ ಮಾಡಿದ್ದರ ಬಾಬ್ತು ನೋಟೀಸಿನ ಬಗ್ಗೆ ತಾ 28—11—59 ಕ್ಕೆ ಇಟ್ಟಿರುತ್ತದೆ ಆ ದಿವಸ ನೀವು ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾಯಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು

(Sd) M Radhakrishna Rao,

Advocate for Plaintiff

ಪುತ್ತೂರು, ತಾ 20–11–59

ಅಲ್ಲಲ್ಲಿಯ ಸುದ್ದಿ ಸಾರ

ದ ಕ ದಲ್ಲಿ ಇಂದಿರಾಗಾಂಧಿಯವರ ಕಾರ್ಯಕ್ರಮ—ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ತಾ 27ರಂದು ಒಂದು ದಿನ ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸ ಕೈಗೊಳ್ಳಲಿರುವರು

ತಾ 27ರಂದು ಬೆಳಿಗ್ಗೆ 7—30ಕ್ಕೆ ಮಡಿಕೇರಿಯಿಂದ ಹೊರಟು 9—30ಕ್ಕೆ ಪುತ್ತೂರಿಗೆ ತಲಪಿ 9—15ರ ವರೆಗೆ ಪುತ್ತೂರಲ್ಲಿ 10—15ರಿಂದ 10—30ರ ವರೆಗೆ ಬಂಟ್ವಾಳ, ಮತ್ತು ಪಾಣೆಮಂಗಳೂರಲ್ಲಿ, 11—5 ರಿಂದ 11—25ರ ವರೆಗೆ ಮೂಡಬಿದ್ರೆಯಲ್ಲಿ, 11 45ರಿಂದ 12—00ರ ವರೆಗೆ ಕಾರ್ಕಳ 12—30ರಿಂದ 2—30 ಮಣಿಪಾಲದಲ್ಲಿ ಊಟ ಮತ್ತು ವಿಶ್ರಾಂತಿ 2—20ಕ್ಕೆ ಮಣಿಪಾಲದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ಶಂಕುಸ್ಥಾಪನೆ 3 30ಕ್ಕೆ ಎಂ ಜಿ ಎಂ ಕಾಲೇಜಿನ ಪಂಗಡದಲ್ಲಿ ಸಾರ್ವಜನಿಕ ಭಾಷಣ 4 30ಕ್ಕೆ ಅಲ್ಲಿಂದ ಹೊರಟು ಉಡುಪಿಯ ಕಲ್ಸಂಕ, ಮಸೀದಿ ರಸ್ತೆ ಸಂತೆಕಟ್ಟೆ ಇನ್ನರ್ ರಸ್ತೆ, ತಾಲೂಕು ಆಫೀಸು ರಸ್ತೆಯಾಗಿ ಕರಾವಳಿ ಮಾರ್ಗವಾಗಿ 6ಕ್ಕೆ ಮಂಗಳೂರಿಗೆ ಆಗಮನ 6ರಿಂದ 7 ಸಾರ್ವಜನಿಕ ಸಭೆಯಲ್ಲಿ ಭಾಷಣ, 8 30ಕ್ಕೆ ಊಟ ರಾತ್ರಿ ಮಂಗಳೂರಲ್ಲಿ

ತಾ 28ರಂದು ಬೆಳಿಗ್ಗೆ 8ರಿಂದ 9 30 ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ 9 30ಕ್ಕೆ ವಿಶೇಷ ವಿಮಾನ ಮೂಲಕ ಮುಂಬಯಿಗೆ ಪ್ರಯಾಣ

ಮಂಗಳೂರಲ್ಲಿ ಮಂತ್ರಿ ರಾಚಯ್ಯನವರು ಮೈಸೂರು ರಾಜ್ಯದ ವಿಧಾನ ಗಾರಿಕೆ, ಕೃಷಿ ಇಲಾಖೆ ಮತ್ತು ಸಮಾಜ ಕಲ್ಯಾಣ ಖಾತೆಗಳ, ಸಾಸನಸಭಾ ವ್ಯವಹಾರ ಮಂತ್ರಿ ಶ್ರೀ ಎನ್ ರಾಚಯ್ಯನವರು ತಾ 21ನೇ ಬೆಳಿಗ್ಗೆ ಮಂಗಳೂರು ಮೀನುಗಾರಿಕಾ ತರಬೇತಿ ಕೇಂದ್ರದ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡಿದರಲ್ಲದೆ ಮಂಗಳೂರಿನ ದೋಣಿ ಕಟ್ಟುವ ಕೇಂದ್ರದಲ್ಲಿ ನಿರ್ಮಾಣವಾದ ಮೂರು ಯಾಂತ್ರಿಕ ದೋಣಿಗಳನ್ನೂ ಉದ್ಘಾಟಿಸಿದರು

ಮೈಸೂರು ರಾಜ್ಯದ ಫಿಶರೀಸ್ ಡೈರೆಕ್ಟರ್ ಶ್ರೀ ವಿ ವಿ ಕಲ್ಯಾಣಿಯವರು ಸ್ವಾಗತ ಭಾಷಣ ಮಾಡಿದರು ಶ್ರೀ ಎಚ್ ಕೆ ತಿಂಗಳಾಯರು ಮಂತ್ರಿಗಳಿಗೆ ಮನವಿಯೊಂದನ್ನ ಅರ್ಪಿಸಿದರು ಶ್ರೀ ಕೆ ಕೆ ಶೆಟ್ಟಿ, ಎಂ ಎಲ್ ಸಿ ಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು

ಮಂತ್ರಿಗಳು ಗೋಕರ್ಣನಾಥ ದೇವಸ್ಥಾನಕ್ಕೆ ಭೇಟಿಯಿತ್ತಾಗ ಜಿಲ್ಲಾ ಬಿಲ್ಲವ ಸಂಘದ ಕಡೆಯಿಂದ ಶ್ರೀ ಕೆ ದೂಮಪ್ಪ, ಎಂ ಎಲ್ ಎ ಯವರು ಒಂದು ಮನವಿಯನ್ನ ಅರ್ಪಿಸಿದರು

ಮಂತ್ರಿಗಳು ತಾ 21ನೇ ಮಧ್ಯಾಹ್ನ ಜಿಲ್ಲಾ ಅಧಿಕಾರಿಗಳ ಕೋರ್ಟ್ ಸದನದಲ್ಲಿ ಕರೆಯಲಾದ ಅಧಿಕಾರಿಗಳು ಮತ್ತು ಸಾರ್ವಜನಿಕ ಮುಖಂಡರ ಸಭೆಯಲ್ಲಿ ಮಾತನಾಡುತ್ತ ರೈತರು ತಮ್ಮ ಕೃಷಿಕ್ಷೇತ್ರದಲ್ಲಿ ಹೆಚ್ಚು ಸುಧಾರಣೆಗಳನ್ನು ಮಾಡಿಕೊಳ್ಳಬೇಕೆಂದೂ ಸಂಘಟಿತರಾಗಬೇಕೆಂದೂ ಹೇಳಿದರು ಜಿಲ್ಲಾ ಕೃಷಿ ಅಧಿಕಾರಿ ಶ್ರೀ ಆನಂದನವರು ಜಿಲ್ಲೆಯಲ್ಲಿನ ಕೃಷಿ ಪ್ರಗತಿಯನ್ನು ವಿವರಿಸಿದರು ಶ್ರೀಗಳಾದ ಎಂ ಡಿ ಅಧಿಕಾರಿ, ಕೆ ಜಿ ಸೋನ್ಸ್, ಜತ್ತಪ್ಪ ರೈ ಕೆ ಪಿ ಮುಕುಂದ ಪ್ರಭು, ಎನ್ ರಾಮರಾವ್, ಯು ಮಂಜಪ್ಪ, ಎಸ್ ಎಕ್ಸ್ ಡಿ ಸಿಂಟೋ, ಕೆ ಕೆ ಶೆಟ್ಟಿ ಮೊದಲಾದವರು ಕೆಲವೊಂದು ಸೂಚನೆಗಳನ್ನಿತ್ತರು ಜಿಲ್ಲಾಧಿಕಾರಿ ಶ್ರೀ ಸಿ. ಜಿ ಪದ್ಮನಾಭನವರು ಧನ್ಯವಾದಗಳನ್ನರ್ಪಿಸಿದರು

ಸಂಜೆ ಜೆಪ್ಪು ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಂತ್ರಿಗಳು ಭಾಷಣಮಾಡುತ್ತ ಕಾಂಗ್ರೆಸ್ಸನ್ನು ಬಲಪಡಿಸುವ ಕುರಿತು ಮಾತನಾಡಿದರು ಶ್ರೀ ಕೆ ಕೆ ಶೆಟ್ಟರು ಸಭಾಧ್ಯಕ್ಷತೆಯನ್ನು ವಹಿಸಿದ್ದರು

ಸತ್ಕಾರ—ಇತ್ತೀಚೆಗೆ ವಿದೇಶ ಪ್ರವಾಸ ಮಾಡಿ ಬಂದ ಶ್ರೀ ಟಿ ರಮೇಶ ಪೈ ಮತ್ತು ಅಮೇರಿಕದಲ್ಲಿ ಎರಡು ವರ್ಷಗಳ ವ್ಯಾಸಂಗ ಮುಗಿಸಿ ಬಂದ ಶ್ರೀ ಬಿ ಮೋಹನದಾಸ ಬಾಳಿಗ ಇವರಿಗೆ ಇದೇ ತಾ 13ರಂದು ಮುಕುಂದ ನಿವಾಸದಲ್ಲಿ ಸಿಂಡಿಕೇಟ್ ಬ್ಯಾಂಕ್ ಮತ್ತಿತರ ಸಂಸ್ಥೆಗಳು ಸೇರಿ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು ನವೀನ ಪದ್ಧತಿಯಲ್ಲಿ ಉಪಾಹಾರವಾದ ಮೇಲೆ ಶ್ರೀ ಟಿ ಎ ಪೈಗಳು ಸ್ವಾಗತ ಭಾಷಣಮಾಡಿದರು ಶ್ರೀ ಟಿ ರಮೇಶ ಪೈಗಳು ತನ್ನ ವಿದೇಶ ಪ್ರವಾಸಾನುಭವಗಳನ್ನು ಸಾರವತ್ತಾಗಿ ವಿವರಿಸಿದರು ಶ್ರೀ ಬಾಳಿಗರು ತನ್ನ ಅನುಭವಗಳನ್ನು ವಿವರಿಸಿದ ಮೇಲೆ ಸಭಿಕರು ಕೇಳಿದ ಪ್ರಶ್ನೆಗಳಿಗೆ ಅತಿಥಿಗಳು ಉತ್ತರವಿತ್ತರು ಸಭಾಂತ್ಯದಲ್ಲಿ ಶ್ರೀ ಟಿ ಎ. ಪೈಗಳು ಧನ್ಯವಾದಗಳನ್ನರ್ಪಿಸುತ್ತ ಎಲ್ಲರೂ ಪರಿಶ್ರಮ ಪೂರ್ವಕ ದುಡಿದು ಘನತೆಯ ಹೆಚ್ಚಿಸಿಕೊಂಡು ಅಭಿವೃದ್ಧಿ ಹೊಂದಬೇಕೆಂದರು ಈ ಸತ್ಕಾರ ಸಮಾರಂಭದಲ್ಲಿ ಅತಿಥಿಗಳಲ್ಲೊಬ್ಬರಾಗಿ ಭಾಗವಹಿಸಬೇಕಾಗಿದ್ದ ಡಾ ಟಿ ಎಂ ಎ ಪೈಗಳು ಸ್ವಲ್ಪ ಅನಾರೋಗ್ಯದಿಂದಾಗಿ ಭಾಗವಹಿಸಲಿಲ್ಲ

ಎಂ ಜಿ ಎಂ ಕಾಲೇಜಿನಲ್ಲಿ ಮುದ್ದಣ ಸ್ಮಾರಕ ಸಾಹಿತ್ಯೋತ್ಸವವು

ತಾ ೨೧ ಮತ್ತು ೨೨ರಲ್ಲಿ ಕನ್ನಡ ಸಂಘದ ಆಶ್ರಯದಲ್ಲಿ ನೆರವೇರಿತು ಮೊದಲದಿನ ಕವಿ ದ ರಾ ಬೇಂದ್ರೆಯವರು "ಸಾಹಿತ್ಯದಲ್ಲಿ ಧಾರಣೆ" ಎಂಬ ಕುರಿತು ರಸವತ್ತಾಗಿ ಉಪನ್ಯಾಸ ಮಾಡಿದರು

ಸಭಾಧ್ಯಕ್ಷತೆ ವಹಿಸಿದ್ದ ಪ್ರಿನ್ಸಿಪಾಲ ಶ್ರೀ ಎಚ್ ಸುಂದರರಾಯರು ಉತ್ತಮ ಸಾಹಿತ್ಯ ನಿಂಪರೇಖೆಯನ್ನು ವಿವರಿಸಿದರು ಶ್ರೀ ಎಸ್ ಕೆ ಶ್ರೀಪತಿ ಆಚಾರ್ಯರು ಆರಂಭದಲ್ಲಿ ಸ್ವಾಗತಿಸಿದರು ಶ್ರೀ ಬೇಂದ್ರೆ ಚಂದ್ರಶೇಖರ್, ತೀರ್ಥಹಳ್ಳಿ ಇವರು ಬೇಂದ್ರೆಯವರ ಕೆಲವು ಕವನಗಳನ್ನೋದಿದರು ಶ್ರೀ ಕೃಷ್ಣಮೂರ್ತಿ ಪೂಲ್ಯ ಧನ್ಯವಾದವಿತ್ತರು

ಎರಡನೇ ದಿನ ಬೆಳಿಗ್ಗೆ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಕವಿ ಸಮ್ಮೇಳನ ನೆರವೇರಿತು ಇದರಲ್ಲಿ ಶ್ರೀಗಳಾದ ಎಸ್ ವೆಂಕಟರಾಜ ಕಯ್ಯಾರ ಕಿಞ್ಞಣ್ಣ ರೈ, ಬನ್ನಂಜೆ ಗೋವಿಂದಾಚಾರ್ಯ, ಜಿ ಎಸ್ ಶಿವರುದ್ರಪ್ಪ, ಸಾಂತ್ಯಾರು ತಿರುಮಲೇಶ್ವರ ಭಟ್ಟ ಇವರು ಭಾಗವಹಿಸಿದ್ದರು

ಎರಡನೇ ದಿನ ಸಂಜೆ ಶ್ರೀ ಪಿ ನಾರಾಯಣ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಸಮಾರಂಭ ಜರಗಿತು ಶ್ರೀ ದ ಬಾ ಕುಲಕರ್ಣಿಯವರು ಶಾಕುಂತಲ ಎಂಬ ಕುರಿತೂ ಶ್ರೀ ವಿ ಎ ಇನಾಂದಾರರು ಭವಭೂತಿಯ ಕಾವ್ಯದ ಕುರಿತೂ ಭಾಷಣ ಮಾಡಿದರು ಶ್ರೀ ದ ರಾ ಬೇಂದ್ರೆಯವರೂ ಶ್ರೀ ದೇವಂ ಚಂದ್ರಶೇಖರನವರೂ ಕಾವ್ಯವಾಚನ ಮಾಡಿದರು ಎರಡೂ ದಿನ ರಾತ್ರಿ ಮನರಂಜನೆಯ ಕಾರ್ಯಕ್ರಮಗಳಿದ್ದುವು

ವಿದಾಯ ಸತ್ಕಾರ—ಉಡುಪಿಯ ಸರಕಾರಿ ಆಸ್ಪತ್ರೆಯ ಡಾ ಎ ಎಸ್ ಶಾಂತರಾಜ ಸೆಟ್ಟಿ ಇವರಿಗೆ ಮಂಗಳೂರಿಗೆ ವರ್ಗವಾಗಿದ್ದು ಅವರನ್ನು ಬೀಳ್ಕೊಳ್ಳುವ ಸಮಾರಂಭ ವೊಂದು ಆಸ್ಪತ್ರೆಯಲ್ಲಿ ನೆರವೇರಿತು ಡಾ ಪಿ ಆರ್ ನಾಯಕ್, ಡಾ ಬಿ ಬಿ ಸೆಟ್ಟಿ, ಡಾ ಲೋಕನಾಥ ರಾವ್ ಇವರು ಅತಿಥಿಗಳ ಕುರಿತು ಮಾತನಾಡಿದರು ಇಲ್ಲಿಗೆ ಮಂಗಳೂರಿನಿಂದ ಡಾ ಎನ್ ಎಲ್ ಪೂಂಜರು ವರ್ಗವಾಗಿ ಬಂದಿರುವರು

ಮೂಗ ಸತ್ರ—ಉಡುಪಿಯ ಶಿರೂರು ಮಠದ ಮುಂಭಾಗದಲ್ಲಿ ಧರ್ಮಾರ್ಥವಾಗಿ ದಂತಯಜ್ಞದ ಶಿಬಿರ ಹೂಡಿದ ಹುಬ್ಬಳ್ಳಿಯ ವಿಖ್ಯಾತ ದಂತ ವೈದ್ಯ ಡಾ| ಪಿ ವಿ ಜಾಯಡೆ ಅವರಿಗೆ ತಾ 16 ರಂದು ಡಾ| ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಶಿರೂರು ಶ್ರೀ ಪಾದಂಗಳವರು ಮಾನಪತ್ರವಿತ್ತು ಅನುಗ್ರಹಿಸಿದರು

ಡಿ ಡಿ ಟಿ ಚಿಮುಕಿಸುವಿಕೆಯ ಉದ್ಘಾಟನೆಯು ಉಡುಪಿ ನಗರ ಸಭಾ ಕಾರ್ಯಾಲಯದಲ್ಲಿ ತಾ ೧೬ನೇ ಬೆಳಿಗ್ಗೆ ಡಾ ಟಿ ಎಂ ಎ ಪೈಗಳಿಂದ ನೆರವೇರಿಸಲ್ಪಟ್ಟಿತು ಶ್ರೀ ಕೆ ಎಲ್ ಬಾಳರು ಸಭಾಧ್ಯಕ್ಷತೆ ವಹಿಸಿದ್ದರು ಆರಂಭದಲ್ಲಿ ಡಾ ಪಿ ಎಲ್ ಪಂಡಿತರು ಪ್ರಾಸ್ತಾವಿಕ ಮಾತುಗಳನ್ನಾಡಿದರು ಅಂತ್ಯದಲ್ಲಿ ಡಾ| ಪಿ ಜಿ ಆಚಾರ್ಯರು ಧನ್ಯವಾದಗಳನ್ನಿತ್ತರು

ಟ್ರಿಪಲ್ ವ್ಯಾಕ್ಸಿನ್ ದಾಕಿನ ಕಾರ್ಯಕ್ರಮದ ಉದ್ಘಾಟನೆಯು ಉಡುಪಿ ನಗರ ಸಭೆಯವರು ಮಕ್ಕಳಿಗೆ ಉಚಿತವಾಗಿ ಕೊಡುವ ಟ್ರಿಪಲ್ ದಾಕಿನ ಕಾರ್ಯಕ್ರಮವು ನಗರ ಸಭೆಯ ಆಫೀಸಿನಲ್ಲಿ ತಾ ೨೩ ನೇ ಬೆಳಿಗ್ಗೆ ಶ್ರೀ ಟಿ ಎ ಪೈಗಳಿಂದ ಉದ್ಘಾಟಿಸಲ್ಪಟ್ಟಿತು ಮಾಜಿ ನಗರ ಸಭಾಪತಿ ಶ್ರೀ ಕೆ ಕೆ ಪೈಗಳ ಸಭಾಧ್ಯಕ್ಷತೆ ವಹಿಸಿದ್ದರು

ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿ ಉಡುಪಿ ಇದರ ವತಿಯಿಂದ ನಡೆಸಲ್ಪಡುವ ಹಿಂದೀ ತರಗತಿಗಳಿಂದ ಕಳೆದ ಆಗೋಸ್ತು 1959ರಲ್ಲಿ ಪರೀಕ್ಷೆಗಳಿಗೆ ಕುಳಿತ 65ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ 63ಮಂದಿ ಉತ್ತೀರ್ಣರಾಗಿ ಶೇಕಡಾ 97 ಫಲಿತಾಂಶವನ್ನು ತಂದಿರುತ್ತಾರೆ ಅಲ್ಲದೆ ಪ್ರವೇಶಿಕಾ ಪರೀಕ್ಷೆಯಲ್ಲಿ ಇಡೀ ದಕ್ಷಿಣ ಭಾರತದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಇಬ್ಬರಲ್ಲಿ ಉಡುಪಿಯ ಶ್ರೀಮತಿ ಯಾಮೋಹಿನಿ ಶೆಣೈಯವರು ಒಬ್ಬರಾಗಿರುತ್ತಾರೆ

ಸುಬ್ರಹ್ಮಣ್ಯ--ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆಯು ಇದೇ ತಾ ೨೭ರಿಂದ ಡಿಸಂಬರ ೬ರ ತನಕ ಜರಗಲಿರುವುದರಿಂದ ಭಕ್ತಾದಿಗಳು ಗಂಧ ಪ್ರಸಾದಾದಿಗಳನ್ನು ಸ್ವೀಕರಿಸ ಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ

ಪೊಳಲಿಯಲ್ಲಿ ಜಾನುವಾರು ಜಾತ್ರೆಯೊಂದು ಮಾರ್ಚ 1ರಿಂದ 10ರ ತನಕ ಜರಗಲಿರುವುದು ಈ ಜಾತ್ರೆಯು ಕಳೆದ ಗುಂಡಿ ಜಾತ್ರೆಯ ನಂತರ ಆದರೆ 5 ತಾರೀಖಿನ ಜಾತ್ರೆಯು ಮೊದಲು ನಡೆಯುವುದು ಉತ್ತಮ ಜಾನುವಾರಿಗೆ ರೂ 50 00ನ್ನು ಬಹುಮಾನ ಕೊಡಲಿದೆ ಎಂದು ಮಂಗಳೂರಿನ ಅಸಿಸ್ಟೆಂಟ್ ಕಲೆಕ್ಟರ್ ಶ್ರೀ ವಿ ಇ ಎಡ್ವಿನ್ ಇವರು ತಿಳಿಸುತ್ತಾರೆ

ನೀರುಮಾರ್ಗಕ್ಕೆ ವಿದ್ಯುತ್ ವಿತರಣೆ—ಮಾರ್ಗದ ಹನ್ನೊಂದು ನೀರುಮಾರ್ಗ ಪಂಪ್ ಸೆಟ್ಟುಗಳ ವಿದ್ಯುತ್ ವಿತರಣಾ ಕಾರ್ಯಾರಂಭವು ತಾ 18 11–59ರಲ್ಲಿ ಉಡುಪಿ ಇಲೆಕ್ಟ್ರಿಕಲ ಆಸಿಸ್ಟೆಂಟ್ ಇಂಜಿನಿಯರ್ ಎಚ್ ಎಸ್ ನಾಯಕ್ ಮತ್ತು ಜೂನಿಯರ್ ಇಂಜಿನಿಯರ್ ಗಣಪತಿಯವರ ನೇತೃತ್ವದಲ್ಲಿ ಜರಗಿತು ಅತ್ಯಂತ ಶೀಘ್ರದಲ್ಲಿ [illegible] ಯೋಜನೆಯನ್ನು ಪೂರ್ತಿಗೊಳಿಸಿದ ಅಧಿಕಾರಿ ವರ್ಗ ಮತ್ತು ಸಿಬ್ಬಂದಿಯವರ ಕಾರ್ಯವು ತುಂಬಾ ಶ್ಲಾಘನೀಯ

ಪುತ್ತೂರು ಡಿ ಮು ಕೋರ್ಟಿನಲ್ಲಿ

O S 283/59

ಚೆನ್ನಮ್ಮ ಸಹಾ— ವಾದಿರು

ತ್ಯಾಂಪಣ್ಣ ರೈ – ದೆಯ್ಯಕ್ಕ ಹೆಂಗ್ಸರ ಮಗ— ಕೊಡ್ಯಾಲ ಗ್ರಾಮದ ಅಜ್ರಂಗಳ ಯೆಂಬಲ್ಲಿರುತ್ತಾರೆ— ಪ್ರತಿವಾದಿ

ನಿಮಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ನಿಮ್ಮಿಂದ ವಾದಿರಿಗೆ ತಾ 19—6—58 ಕ್ಕೆ ಮತ್ತು 19—6—59ಕ್ಕೆ ಬರಬೇಕಾದ 2 ವರ್ಷಗಳ ಜೀವನಾಂಶ ಬಾಕಿ ಬಗ್ಗೆ ವಾದಿರು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯನ್ನು ತಾ 10 11—59ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ ಆ ದಿವಸ ಈ ಕೋರ್ಟಿನಲ್ಲಿ ಹಾಜರಾಗಿ ಉದಹರಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾಯಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು

(Sd) M Radhakrishna Rao,

Advocate for Plaintiffs,

ಪುತ್ತೂರು, ತಾ 14 11.59

ನವಯುಗ ವಾರ ಪತ್ರಿಕೆಗೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಅಭಿಪ್ರಾಯ

ಶ್ರೀ ಹರ್ಟರರ ಅನಾಸಕ್ತಿಯೋಗ

ಆಫ್ರೇಸ್ಯಗಳ ಕಡೆಗೆ ಸಹೃದಯತೆ ವ್ಯಕ್ತಪಡಿಸಿದ್ದ ಶ್ರೀ ಹರ್ಟರ್ ಚೀನಾ ಭಾರತ ಸೀಮಾ ವಿವಾದದಲ್ಲಿ ಅನಾಸಕ್ತರಾದುದೇಕೆ?

ಶ್ರೀ ಕ್ರಿಶ್ಚಿಯನ್ ಹರ್ಟರರು ಈಗ ಅಮೇರಿಕದ ವಿದೇಶ ಮಂತ್ರಿ ಅಥವಾ ರಾಜ್ಯಾಂಗ ಕಾರ್ಯದರ್ಶಿಯಾಗಿದ್ದಾರೆ. ಡಲ್ಲೆಸರ ಅನಂತರ ಅಧಿಕಾರಕ್ಕೆ ಬಂದ ಇವರು ಭಾರತ—ಚೀನಾಗಳ ಸೀಮಾ ವಿವಾದದ ಬಗ್ಗೆ ವ್ಯಕ್ತಪಡಿಸಿದ ವಿಚಾರಗಳಿಂದಾಗಿ ಅವರ ಮೇಲೆ ಭ್ರಮೆ ಹುಟ್ಟುವ ಪ್ರಮೇಯವೀಗ ಬಂದಿದೆ, ಭಾರತ ಸರಕಾರವು ಈ ಸಂಬಂಧದ ಸತ್ಯಾಂಶಗಳನ್ನು ಪಾಶ್ಚಾತ್ಯ ರಾಷ್ಟ್ರಗಳ ಗಮನಕ್ಕೆ ತಾರದೆ ಇದ್ದುದರಿಂದ ಈ ಸಂಬಂಧದಲ್ಲಿ ಭಾರತವೂ ಅಲ್ಪ ಮಟ್ಟಿನ ದೋಷಿ ಎಂದು ಕೆಲವು ಪಾಶ್ಚಾತ್ಯ ರಾಷ್ಟ್ರಗಳು ಅಭಿಪ್ರಾಯ ಪಡುತ್ತವೆ. ಇನ್ನು ಕೆಲವರು ಅಸ್ಪಷ್ಟವಾಗಿ ಈ ಬಗ್ಗೆ ಅಭಿಪ್ರಾಯವನ್ನು ತಿಳಿಸಿದ ಶ್ರೀ ಹರ್ಟರರನ್ನೂ ದೋಷಿಯೆನ್ನುತ್ತಾರೆ. ಸದ್ಯವೇ ಆಗಲಿರುವ ಅಮೇರಿಕೆಯ ಅಧ್ಯಕ್ಷರ ಸಮಾಗಮನದ ಮೇಲೆ ವಿದೇಶ ಮಂತ್ರಿ ಶ್ರೀ ಹರ್ಟರರ ಅಭಿಪ್ರಾಯವು ಪ್ರಭಾವಬೀರದೆ ಉಳಿಯುವುದು ಮಾತ್ರ ಎಂದಿಗೂ ಸಾಧ್ಯವಿಲ್ಲವೆಂಬುದು ನಿಸ್ಸಂದೇಹ.

ಶ್ರೀ ಹರ್ಟರರು ಹಿಂದೆಯೂ ಅಧಿಕಾಂಶವಾಗಿ ಜನ ಸಂಪರ್ಕದ ಕಾರ್ಯಗಳಲ್ಲಿಯೇ ದಿನಗಳೆದವರು. ರಾಯಭಾರಿಯಾಗಿ ಹೋದಾಗ ಅವರು ಪ್ರತಿನಿಧಿ ಸಭೆಯ ಸದಸ್ಯರೂ ಆಗಿ; ಸಹಾಯಕ—ಪ್ರಕಾಶಕರಾಗಿ ತೆರಳಿದಲ್ಲಿ ಸಮಾಚಾರ ಪತ್ರ ಸಂಪಾದಕರಾಗಿ; ಸರಕಾರದ ಒಬ್ಬ ಅಧಿಕಾರಿಯಾಗಿ ಹೋದಾಗ, ರಾಜ್ಯಪಾಲರಾಗಿ ದುಡಿದಿದ್ದರು.

ಬಿಳಿ ವರ್ಣದ, ಉದ್ದ ದೇಹದ, ಸೌಮ್ಯ ಮುಖದ ಶ್ರೀ ಹರ್ಟರ್ ತಮ್ಮ ಈಗಿನ ಹುದ್ದೆಗೆ ಬರುವುದಕ್ಕೆ ಮೊದಲು ಉಪವಿದೇಶ ಮಂತ್ರಿಯಾಗಿದ್ದರು. ಮಾರ್ಶಲ್ ಯೋಜನೆಯು ಅನಭಿವೃದ್ಧ ದೇಶಗಳಿಗೆ ಸಹಾಯ ನೀಡುವ ಅಮೇರಿಕೆಯ ಒಂದು ಉತ್ತಮ ಕಾರ್ಯಕ್ರಮವಾಗಿದ್ದು, ಇದರ ಜನ್ಮಕ್ಕೆ ಪೃಷ್ಠಭೂಮಿಯನ್ನು ಹಾಕಿ ಕೊಟ್ಟವರು ಶ್ರೀ ಕ್ರಿಶ್ಚಿಯನ್ ಹರ್ಟರೆಂದು ಅಭಿಮಾನದಿಂದ ಹೇಳಬೇಕು. ಶ್ರೀಯುತರು ರೂಪಿಸಿದ ಈ ಯೋಜನೆಯಿಂದ ಏಶ್ಯದ ಮಾತ್ರವಲ್ಲ, ಪ್ರಪಂಚದ ಹಲವಾರು ಅನಭಿವೃದ್ಧ ರಾಷ್ಟ್ರಗಳು ಸಹಾಯವನ್ನು ಪಡೆಯುತ್ತಿವೆ; ತನ್ಮೂಲಕ ಪ್ರಗತಿ ಪಥದತ್ತ ಸಾಗುವಂತಾಗಿವೆ.

ಫ್ರಾನ್ಸಿನ ರಾಜಧಾನಿ ಪೇರಿಸ್‌ನಲ್ಲಿ ಶ್ರೀ ಹರ್ಟರರ ಜನನವಾಯಿತು. ಇವರ ತಾಯ್ತಂದೆಯರು ಅಮೇರಿಕೆಯಲ್ಲಿ ಹುಟ್ಟಿದ್ದರು. ಇವರಿಬ್ಬರೂ ಕಲಾವಿದರಾಗಿದ್ದರು. ಚಿತ್ರಕಲೆಯೆಂದರೆ, ಇಬ್ಬರಿಗೂ ಆಸಕ್ತಿಯಿತ್ತು. ಅವರ ಅಜ್ಜ ಜರ್ಮನಿಯಿಂದ ಅಮೇರಿಕೆಗೆ ಹೋಗಿದ್ದರು. ಇವರು ಭವನ ನಿರ್ಮಾಣ ಕಲೆಯಲ್ಲಿ ನಿಪುಣರಾಗಿದ್ದರು. ಹೀಗೆ ಶ್ರೀ ಹರ್ಟರರ ರಕ್ತದಲ್ಲಿ ಕಲೆಯು ಸಮಾವೇಶಗೊಂಡಿರುವಂತೆ ಜರ್ಮನಿ, ಫ್ರಾನ್ಸ್ ಮತ್ತು ಅಮೇರಿಕೆಗಳೂ ಅವರಲ್ಲಿ ರಕ್ತಗತವಾಗಿವೆ.



ಮೊದಲು ಶ್ರೀ ಹರ್ಟರರು ತಮ್ಮ ಪರಂಪರೆಯಂತೆ ಒಂದು ಕಲೆಯನ್ನೇ ಜೀವನೋದ್ಯೋಗವಾಗಿ ಆರಿಸಿದರೂ ಕಾಲಕ್ರಮದಲ್ಲಿ ರಾಜಕಾರಣವು ಅವರ ಮನಸ್ಸನ್ನು ಆಕರ್ಷಿಸಿತು. ಜರ್ಮನಿಯಲ್ಲಿರುವ ಅಮೇರಿಕೆಯ ರಾಯಭಾರಿ ಕಚೇರಿಯಲ್ಲಿ ಹೊತ್ತ ಮೊದಲಿಗೆ ಇವರು ಓರ್ವ ಸಹಕಾರಿಯಾಗಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ಇದು ನಡೆದುದು ಪ್ರಥಮ ಮಹಾಯುದ್ಧದ ಪೂರ್ವದಲ್ಲಿ. ಯುದ್ಧಾವಧಿಯಲ್ಲಿ ಅವರು ಬ್ರಸೆಲ್ಸ್ ಹಾಗೂ ಜರ್ಮನಿಗಳಲ್ಲಿ ತಮ್ಮ ಕರ್ತವ್ಯ ನಿರ್ವಹಿಸಿದರು. ಯುದ್ಧಾನಂತರ ನಡೆದ ಕೈದಿಗಳ ಬಿಡುಗಡೆಯ ವಿಷಯದಲ್ಲಿ ಅವರೊಂದು ಸಮಿತಿಯ ನಾಯಕರಾಗಿಯೂ ಶಾಂತಿಯ ಒಪ್ಪಂದದಲ್ಲಿ ತನ್ನ ರಾಜ್ಯದ ಪ್ರತಿನಿಧಿಯಾಗಿಯೂ ಕೆಲಸಮಾಡಿದ್ದರು.

ಅಮೇರಿಕೆಯ ಆಡಳಿತೆ, ವ್ಯಾಪಾರ ಕಾರ್ಯಗಳಲ್ಲಿ ಈ ಯುದ್ಧಾನಂತರವೇ ಶ್ರೀ ಹರ್ಟರರಿಗೆ ಅವಕಾಶ ದೊರೆಯಿತು. ೧೯೨೪ರಿಂದ ೨೮ರ ವರೆಗೆ ಅವರು ಪತ್ರಿಕಾವ್ಯವಸಾಯದಲ್ಲಿ ತೊಡಗಿದ್ದರು. ೧೯೨೪ರಲ್ಲಿ ಒಂದು ದಿನಪತ್ರಿಕೆಯ ಸಹಪ್ರಧಾನ ಸಂಪಾದಕರಾಗಿ ದುಡಿದಿದ್ದರು. ೧೯೩೦ರಲ್ಲಿ ಪಕ್ಷೀಯ ರಾಜನೀತಿಯಲ್ಲಿ ಭಾಗವಹಿಸಿ ಚುನಾವಣೆಗೆ ನಿಂತರು. ೧೯ ವರ್ಷ ವಿಧಾನ ಸಭಾ ಸದಸ್ಯರಾದ ಮೇಲೆ ಅವರು ಸಭೆಯ ಅಧ್ಯಕ್ಷರಾಗಿ ಆಯ್ಕೆಗೊಂಡರು. ಈಗಿರುವ ವಿದೇಶಮಂತ್ರಿ ಸ್ಥಾನಕ್ಕೆ ಬರುವುದಕ್ಕೆ ಮೊದಲು ಅವರು ಬೇರೆ ಬೇರೆ ಪದವಿಗಳಲ್ಲಿ ಅಲಂಕೃತರಾಗಿದ್ದರು. ತಾವು ಕಲಾವಿದರಾಗಿದ್ದರೂ ಕೈಗೆ ಬಂದೊದಗಿದ ಯಾವುದೇ ಸಂದರ್ಭವನ್ನು ಒಂದು ತತ್ತ್ವ ಅಥವಾ ಉದ್ದೇಶಕ್ಕಾಗಿ ತ್ಯಜಿಸುವುದು ಅವರಿಗೆ ಸರಿಬರಲಿಲ್ಲ. ಇದರಿಂದಾಗಿಯೇ ಅವರು ತಮ್ಮೆಲ್ಲ ಕಾರ್ಯಗಳಲ್ಲೂ ಸಫಲರಾಗಿದ್ದಾರೆ.

ಜನಾಂಗ ಸಂಘದ ಬಲಸಂವರ್ಧನೆಗಾಗಿ ದುಡಿಯುತ್ತಿದ್ದ 'ಇಂಡಿಪೆಂಡೆಂಟ್' ಎಂಬ ಪತ್ರಿಕೆಯನ್ನಿವರ ನಡೆಸುತಿದ್ದಂದಿನಿಂದ ಅಂತಾರಾಷ್ಟ್ರೀಯ ಕ್ಷೇತ್ರದಲ್ಲೂ ಶ್ರೀ ಹರ್ಟರರು ಸುವಿಖ್ಯಾತರಾಗಿದ್ದಾರೆ. ಸಹಾಯ ಮಾಡುವ ಮೂಲೋದ್ದೇಶದಿಂದ ಮಾರ್ಶಲ್ ಯೋಜನೆಯೆಂಬ ಉದಾರ ಸಂಸ್ಥೆಯೂ ಶ್ರೀಯುತರು ಹಾಕಿಕೊಟ್ಟ ದಾರಿಯಲ್ಲೇ ಮುಂಬರಿದು ಯಶಸ್ವಿಯಾಗುತ್ತಿದೆ. ಏಶ್ಯ — ಆಫ್ರಿಕೆಗಳ ಹಿಂದುಳಿದ ರಾಷ್ಟ್ರಗಳ ಕಡೆಗೆ ಅವರಿಗಿರುವ ಸಹೃದಯತೆ ಇದರಿಂದ ನಮಗೆ ವ್ಯಕ್ತವಾಗುವುದು.

ವಿಚಾರವರ್ಷ

(೫ನೇ ಪುಟದಿಂದ)

ಜಾನೆ ಬೇಗನೆ ಎದ್ದು ತಮ್ಮ ದೈನಂದಿನ ಕಾರ್ಯಕ್ರಮಗಳನ್ನು ತೀವ್ರ ಆಸಕ್ತಿಯಿಂದ ಮಾಡುತ್ತಾರೆ. ಇವರ ದೇಹವು ಬೇಗನೇ ಬಿಸಿಯಾಗುತ್ತ ಹೋಗುತ್ತದೆ. ಅಂತೆಯೇ ಸಂಜೆಯ ನಂತರ ಬೇಗನೇ ತಣ್ಣಗಾಗತೊಡಗುತ್ತವೆ. ಸಂಧ್ಯಾಕಾಲವಾಗುತ್ತಲೆ ಅವರ ರೆಪ್ಪೆಗಳು ಕೂರತೊಡಗುತ್ತವೆ. ಅವರು ಬೇಗನೆ ಉಂಡು ಹಾಸಿಗೆ ಬಿಡಿಸಿ ಮಲಗಿ ಬಿಡುತ್ತಾರೆ. ಸಂಧ್ಯಾಪ್ರಿಯರ ದೇಹವು ನಿಧಾನವಾಗಿ ಬಿಸಿಯೇರುವುದು. ಸಂಧ್ಯಾಸಮಯದಲ್ಲಿ ಇವರು ಅತ್ಯಧಿಕ ಸಕ್ರಿಯರಾಗುತ್ತಾರೆ. ರಾತ್ರಿ ಹೊತ್ತು ಅವರ ಮೆದುಳು ಬಹಳವಾಗಿ ಮುಂದುವರಿಯುತ್ತದೆ.

ನೀವು ಪ್ರಭಾತಪ್ರಿಯರೋ, ಅಥವಾ ಸಂಧ್ಯಾಪ್ರಿಯರೋ ಎಂದು ತಿಳಿಯಲು ನೀವು ಉತ್ಸುಕರಾಗಿರಬಹುದು. ನೀವು ಎದ್ದೊಡನೆಯೇ ಏಳು ದಿನಗಳ ವರೆಗೆ, ನಿಮ್ಮ ಆರಂಭದ ಉಷ್ಣತೆ ಮತ್ತದು ತುತ್ತತುದಿಯನ್ನು ಮುಟ್ಟುವ ಸಮಯ ಮೊದಲಾದುವನ್ನು ಬರೆದಿಡಿರಿ. ಅಲ್ಲದೇ ಈ ಚರಮಬಿಂದುವಿನಲ್ಲಿ ಅದು ಎಷ್ಟು ಸಮಯ ಸ್ಥಿರವಾಗಿ ನಿಲ್ಲುವುದು ಹಾಗೂ ಎಂದು ಇಳಿಯತೊಡಗುವುದು ಎಂಬುದನ್ನೂ ಅಂಕಿಸಿರಿ. ದಿನದ ೧೧ರಿಂದ ೩ ತಾಸಿನ ವರೆಗೆ ನಿಮ್ಮ ಉಷ್ಣತೆಯು ಚರಮಬಿಂದುವಿನಲ್ಲಿರುವುದಾದರೆ, ನೀವು ಪ್ರಭಾತಪ್ರಿಯರೆಂದು ತಿಳಿಯಿರಿ. ನೀವು ತುಸು ಬೇಗ ಏಳಬೇಕು, ಹಾಗೂ ಅತ್ಯಧಿಕ ಅಮೂಲ್ಯ ಕೆಲಸಗಳನ್ನು ೧೧ರಿಂದ ೩ ತಾಸುಗಳೊಳಗೆ ಮಾಡಬೇಕು. ೪॥ಯಿಂದ ೮ರ ವರೆಗೆ ನಿಮ್ಮ ಉಷ್ಣತೆಯು ಏರಿರುವುದಾದರೆ, ನೀವು ನಿಜವಾಗಿಯೂ ಸಂಧ್ಯಾಪ್ರಿಯರಾಗಿರುವಿರಿ. ನಿಮ್ಮ ಮಹತ್ವಪೂರ್ಣ ಕಾರ್ಯಭಾರವನ್ನು ಈ ಸಮಯದಲ್ಲೇ ಮಾಡುವುದು ಉತ್ತಮ.

ಸ್ವಾಭಾವಿಕವಾಗಿ ಏಳುವ ಪ್ರಕ್ರಿಯೆಯು ಉದ್ಭವವಾಗುತ್ತದೆ. ನೀವು ಏಳುವ ನಿರ್ದಿಷ್ಟ ಸಮಯದಲ್ಲಿ ಮೊದಮೊದಲು ಶರೀರದ ವಿವಿಧ ಅಂಗಗಳು ಜಾಗೃತವಾಗತೊಡಗುತ್ತವೆ. ಮಲಗುವ ಪ್ರಕ್ರಿಯೆಗಿಂತ ವಿಪರೀತವಾಗಿ ಈ ಕೆಲಸವು ನಡೆಯುತ್ತದೆ. ಮೆದುಳು ಎಲ್ಲವುಗಳಿಗಿಂತ ಮೊದಲು ಮಲಗುವುದರಿಂದ ಬಹಳ ತಡವಾಗಿ ಏಳುತ್ತದೆ. ಶರೀರದ ದೊಡ್ಡ ದೊಡ್ಡ ಮಾಂಸ ಪೇಶಿಗಳು, ಕಾಲು, ಬೆನ್ನು ಮತ್ತು ಕುತ್ತಿಗೆಯ ಸ್ನಾಯುಗಳು ತಡವಾಗಿ ಮಲಗುವುದರಿಂದ ಬೇಗನೆ ಜಾಗ್ರತವಾಗುತ್ತವೆ. ಬೆರಳು ಮೊದಲಾದುವು ಅಷ್ಟು ತೀವ್ರವಾಗಿ ಎಚ್ಚರಾಗುವುದಿಲ್ಲ. ಆದುದರಿಂದ ಮನುಷ್ಯ ಎದ್ದೊಡನೆಯೇ ಮೊದಲು ಕೈಕಾಲು ಆಡಿಸತೊಡಗುತ್ತಾನೆ. ಬೆರಳುಗಳಿಂದ ಅಷ್ಟು ತೀವ್ರವಾಗಿ ಕೆಲಸಮಾಡುವುದು ಅಸಾಧ್ಯವಾಗುತ್ತದೆ.

ಇಂದ್ರಿಯಗಳೂ ಮೆಲ್ಲಮೆಲ್ಲನೆ ಎಚ್ಚರಗೊಳ್ಳುತ್ತವೆ. ಮೊತ್ತಮೊದಲು ಸ್ಪರ್ಶಶಕ್ತಿ ಬರುತ್ತದೆ. ಆ ಮೇಲೆ ಕಿವಿ ಶಬ್ದಗಳನ್ನು ಕೇಳಲು ತೊಡಗುತ್ತದೆ. ಕಣ್ಣು ಇದರನಂತರ ನೋಡುವುದಕ್ಕೆ ಶಕ್ತವಾಗುತ್ತದೆ. ಮತ್ತು ಎಲ್ಲಕ್ಕಿಂತ ಕೊನೆಗೆ ಮೂಗು ಕಾರ್ಯಮಾಡಲು ಪ್ರಾರಂಭಮಾಡುತ್ತದೆ. "ಹೊಗೆಯ ವಾಸನೆಯಿಂದಲೇ ನನಗೆ ಎಚ್ಚರವಾಯಿತು" ಎಂದು ಕೆಲವರು ಅನ್ನುವುದುಂಟು. ಆದರೆ ನಿಜವಾಗಿ ಈ ಹೊಗೆಯ ವಾಸನೆಯು ಬಹಳ ತಡವಾಗಿ ಬೋಧವಾಗುವುದು ಮೊದಲು ಈ ಹೊಗೆಯು ನಿದ್ರಿಸಿರುವ ನಿಮ್ಮ ಚರ್ಮವನ್ನು ಸ್ಪರ್ಶಿಸುವುದರಿಂದಲೇ ನಿಮಗೆ ಎಚ್ಚರವಾಗುವುದೆಂದು ಹೇಳಬಹುದು. ಆದರ ವಾಸನೆಯು ನೀವು ಎಚ್ಚತ್ತ ಅನಂತರವೇ ತಿಳಿಯುವುದು.

ಮಲಗುವ ಮತ್ತು ಏಳುವ ಸಾಮಾಜಿಕ ಹಾಗೂ ಪಾರಿವಾರಿಕ ಸಮಸ್ಯೆಯಿರುವುದು ನೀವು ಬಹಳ ತಡವಾಗಿ ಮಲಗಿ ತಡವಾಗಿ ಏಳುವಿರಾದರೆ, ನಿಮಗೆ ನಿಮ್ಮ ಮನೆಯ ಮಕ್ಕಳುಮರಿಗಳೊಡನೆಯೂ ಇತರ ಜನರೊಡನೆಯೂ ಕೂಡಿಕೊಳ್ಳುವ ಸಂದರ್ಭಗಳು ಅತ್ಯಲ್ಪ. ಅವರು ಮಲಗಿರುವಾಗ ನೀವು ಎಚ್ಚರಿರುವುದೂ ಅವರು ಎಚ್ಚರಿರುವಾಗ ನೀವು ಮಲಗಿರುವುದೂ ಇದಕ್ಕೆ ಕಾರಣವಾಗಿದೆ. ಮಕ್ಕಳೊಡನೆ ಮಾತಾಡಲೇ ಇಲ್ಲ ಎಂದು ದುಃಖಿಸುವವರು ಸ್ವಲ್ಪ ಬೇಗನೆ ಮಲಗಿ, ತುಸು ಮೊದಲೇ ಎದ್ದು, ಆ ಸಮಯದಲ್ಲಿ ಮಾತನಾಡಿದರೆ, ಅವರ ಜೀವನವೆಲ್ಲ ಉಲ್ಲಾಸಮಯವಾಗುವುದೆಂಬುದರ ಸತ್ಯಸ್ಥಿತಿಯು ಮನವರಿಕೆಯಾಗುವುದು.

(ವಿವಿಧ ಮೂಲಗಳಿಂದ)

—ಗೋರಾ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ
ಬುಕ್‌ವರ್ಕನ್ನೂ ಚಲೋದಾಗಿ ಮಾಡಿ ಕೊಡಲಾಗುವುದು.
NAVAYUGA PRESS, UDIPI
Printers & Publishers
Santhekatte — UDIPI.

ಆದರ್ಶ ಜೀವನ

(೪ನೇ ಪುಟದಿಂದ)

"ಪೂರ್ಣವಿವಾಹ"ವಾಗಿತ್ತು! ಈ ರೀತಿಯಲ್ಲಿ ಸನ್ ೧೮೯೨ರಿಂದ ಮಾನವೀ ಇತಿಹಾಸದಲ್ಲಿ ಒಂದು ಮಹಾನ್ ಕ್ರಾಂತಿಯ ಅಧ್ಯಾಯವು ಪ್ರಾರಂಭವಾಯಿತು! ವಿವಾಹ ಪೂರ್ವದಲ್ಲಿ ಸಿಡನೀ ಮತ್ತು ಬಿಯೇಟ್ರಿಸ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತುಂಬಾ ಪ್ರಸಿದ್ಧಿ ಹೊಂದಿರುವರು. ಉಭಯತರೂ ಸ್ವತಂತ್ರ ರೀತಿಯಲ್ಲಿ ಪುಸ್ತಕಗಳನ್ನು ಬರೆದಿರುವರು. ಹಾಗೂ ಅವರಿಬ್ಬರೂ ಸಮಾಜದಲ್ಲಿ ಅತ್ಯುನ್ನತ ಸ್ಥಾನವನ್ನು ಆಕ್ರಮಿಸಿಕೊಂಡಿದ್ದರು. ಆದರೆ ಅವರ ವಿವಾಹವಾದ ಬಳಿಕ ಅವರು ಲೇಖಕ ಈ ಮಾನದಿಂದ ನೂತನ ಚಳವಳಿಯ ಅಧ್ಯಾಯಗಳನ್ನು ಆರಂಭಿಸಿದರು. ಲಗ್ನವಾದ ಕೂಡಲೇ ಅವರು ಒಮ್ಮೆಲೇ ಡಬ್ಲಿನ್ ಮತ್ತು ಗ್ಲಾಸಗೋ ಇಲ್ಲಿ ಹೊರಟಿದ್ದರು. ಆದರೆ ಆ ಕಾಲದಲ್ಲಿ ಅವರು ಸಮಾಜವಾದದ ಮಹತ್ವದ ಸಂಗತಿಗಳನ್ನು ಸಂಗ್ರಹಿಸಿ ಉಪಯೋಗಿಸಿಕೊಂಡರು. ಅಲ್ಲಿಯ ಪ್ರಮುಖ ಕ್ರಾಂತಿಕಾರರನ್ನು ಭೆಟ್ಟಿಯಾಗಿ ತಮ್ಮ ಮುಂದಿನ ವಿಚಾರದೊಂದಿಗೆ ಚರ್ಚಿಸಿದರು.

ಸನ್ ೧೮೯೪ರಲ್ಲಿ ಅವರ "ಹಿಸ್ಟರೀ ಆಫ್ ಟ್ರೇಡ್ ಯೂನಿಯನಿಝಮ್" ಎಂಬ ಅಸಾಧಾರಣ ಗ್ರಂಥವು ಪ್ರಸಿದ್ಧವಾಯಿತು. ಈ ಅಮೋಘ ಗ್ರಂಥವೆಂದರೆ, ಕೂಲಿಕಾರ ಚಳವಳಿಯ ಗೀತೆಯನ್ನು ನಮೂದಿಸಿದ ಬಹುಮೂಲ್ಯದ ಪುಸ್ತಕವಾಗಿತ್ತು. ಈ ಗ್ರಂಥವನ್ನು ಬರೆದ ನಂತರ ಸನ್ ೧೮೯೭ರಲ್ಲಿ ತಮ್ಮ "ಇಂಡಸ್ಟ್ರಿಯಲ್ ಡೆಮೊಕ್ರಸಿ" ಎಂಬ ಇನ್ನೊಂದು ಗ್ರಂಥವನ್ನು ಎರಡು ಭಾಗಗಳಲ್ಲಿ ಪ್ರಕಟಿಸಿದರು. ಅದಾದನಂತರ ಈ ದಂಪತಿಗಳು ಒಂದರ ಹಿಂದೆ ಒಂದರಂತೆ ಅತಿ ಶ್ರೇಷ್ಠ ಗ್ರಂಥಗಳನ್ನು ಬರೆದು ಪ್ರಕಟಿಸಿದರು. "ಇಂಡಸ್ಟ್ರಿಯಲ್ ಡೆಮೊಕ್ರಸಿ"ಯ ನಂತರ ಅವರು ಸಹಕಾರಿ ಚಳವಳಿಯ ಮೇಲೆ ಒಂದು ಉದ್ಬೋಧಕ ಗ್ರಂಥ ಬರೆದು ಪ್ರಸಿದ್ಧಿಗೊಳಿಸಿದರು. ಮತ್ತು ಸನ್ ೧೯೦೬ರಿಂದ ೧೯೨೫ರ ಕಾಲದಲ್ಲಿ "ಸ್ಥಾನಿಕ ಸ್ವರಾಜ್ಯ" ಈ ವಿಷಯದ ಮೇಲೆ ಹತ್ತು ಭಾಗಗಳಲ್ಲಿ ಪುಸ್ತಕ ಬರೆದು ಪ್ರಕಟಿಸಿದರು! ಅವರ ಕೊನೆಯ ದೊಡ್ಡ ಹಾಗೂ ಅತಿ ಶ್ರೇಷ್ಠ ಗ್ರಂಥ "ಸೋವ್ಹಿಯೇಟ್ ಕಮ್ಯುನಿಜಮ್" ಎಂಬ ಎರಡು ವಿಭಾಗದ ಗ್ರಂಥವು ಪ್ರಪಂಚದಲ್ಲಿ ಅಗಣಿತ ಕೀರ್ತಿಯನ್ನು ಗಳಿಸಿಕೊಂಡಿರುವದು. ಸಿಡನೀ ಇವನು ವಯಸ್ಸಿನ ೭೬ನೇ ವರ್ಷದ ವರೆಗೆ ವಿವಿಧ ಗ್ರಂಥಗಳನ್ನು ಬರೆದನೆ, ಅವನಿಗಿಂತ ಹೆಚ್ಚು ವಯಸ್ಸಿನವಳಾದ ಶ್ರೀಮತಿ ಬಿಯೇಟ್ರಿಸಳು ಅನೇಕ ಸಣ್ಣ-ದೊಡ್ಡ ಗ್ರಂಥಗಳನ್ನು ಬರೆದು ಕೀರ್ತಿಹೊಂದಿದ್ದಾಳೆ ಇದಕ್ಕಿಂತ ಅಧಿಕ ಕೌತುಕದ ಸಂಗತಿ ಮತ್ತಾವುದು?

ವೇಬ ದಂಪತಿಗಳು ಮಾಡಿದ ಕಾಮಗಿರಿಯ ಸವಿಸ್ತಾರ ಇತಿಹಾಸವನ್ನು ಬರೆದರೆ ಅದೊಂದು ಮಹಾಭಾರತವೇ ಆಗುವದು! ಆದರೆ ಅವರು ಪ್ರಪಂಚಕ್ಕೆ ಕೊಟ್ಟ ಎಲ್ಲ ದೇಣಿಗೆಗಳಲ್ಲಿ ಅತಿ ದೊಡ್ಡ ದೇಣಿಗೆಯೆಂದರೆ, ಲಂಡನದಲ್ಲಿ "ಲಂಡನ ಸ್ಕೂಲ ಆಫ್ ಇಕೊನೊಮಿಕ್ಸ" ಮತ್ತು "ಪಾಲಿಟಿಕ್ಸ" ಇವೇ ಪ್ರಮುಖವಾಗಿರುವವು. ಸಮಾಜಶಾಸ್ತ್ರದ ನಿಷ್ಪಕ್ಷಪಾತದಿಂದ ಅಭ್ಯಾಸ ಮಾಡುವ ವಿಶೇಷ ಆಸಕ್ತಿ ಹುಟ್ಟಿತು. ಮತ್ತು ಈ ಅವಶ್ಯಕತೆಯ ಮೂಲಕವೇ ಆ ಸಂಸ್ಥೆಯು ಜನ್ಮತಾಳಿತು ಆರಂಭದಲ್ಲಿ ಈ ಸಂಸ್ಥೆಗಳ ಉತ್ಪನ್ನ ೨೫೦೦ ಪೌಂಡುಗಳದ್ದವು. ಇಂದು ಅದೇ ಉತ್ಪನ್ನವು ವರ್ಷಕ್ಕೆ ಆರು ಲಕ್ಷ ಪೌಂಡುಗಳ ಮೇಲೆ ಹೋಗಿರುವದು.

ಇಂದು ವಿವಿಧ ದೇಶಗಳಲ್ಲಿ ಆರೋಗ್ಯ ವಿಮಾ ಯೋಜನೆಯು ಬಂದಿರುವದು. ಕೆಲವು ವೇತನ ನಿರ್ಧರಿಸುವದರಲ್ಲಿ ಬಾದಿವೆ-ಬರುತ್ತಲಿದೆ. ಆದರೆ ಈ ವಿಷಯದಲ್ಲಿ ಮೂಲ ಪ್ರವರ್ತಕರೆಂದರೆ, ವೇಬ-ದಂಪತಿಗಳೇ ಆಗಿರುವರು. ರಾಷ್ಟ್ರೀಯ ವೇತನಗಳ ಕೆಲವು ತತ್ವಗಳನ್ನು ಬಿಯೇಟ್ರಿಸಳು ತನ್ನ "ಅವರ್ ಪಾರ್ಟನರ್‌ಶಿಪ್" ಈ ಗ್ರಂಥದಲ್ಲಿ ನಮೂದಿಸಿದ್ದಾಳೆ.

ವೇಬ ದಂಪತಿಗಳ ಕಾಮಗಿರಿಯ ಇತಿಹಾಸವು ಮೇಲೆ ಹೇಳಿದಂತೆ ಮಹಾಭಾರತದಂತೆ ಇರುವದು. ಅದು ಒಂದು ಸಣ್ಣ ಲೇಖನದಲ್ಲಿ ಕೊಡಲು ಅಸಾಧ್ಯವಾಗಿರುವದು. ಆದರೆ ಅವರ ಶರೀರದ ಲೌಕಿಕ ಗುಣಗಳ ಉಲ್ಲೇಖ ಮಾಡಬಹುದು. ಅವರ ದೊಡ್ಡ ಗುಣವೆಂದರೆ, ಅವರಲ್ಲಿಷ್ಟು ಉದ್ಯೋಗಿ ದಾಂಪತ್ಯ ಕ್ವಚಿತವಾಗಿ ಎದ್ದು ಕಾಣುವದು. ಉದಾಹರಣಾರ್ಥ—ಅವರು, "ಸ್ಥಾನಿಕ-ಸ್ವರಾಜ್ಯ ಸಂಸ್ಥೆಗಳಲ್ಲಿಯ ಅಧಿಕಾರಿಗಳಿಗೆ ಪರಿಪತ್ರಗಳನ್ನು ಕಳಿಸಿದರು. ಮತ್ತು ಪೋಸ್ಟ್‌ಮನ್ನ ದಿನಂಪ್ರತಿ ಒಂದು ಸಾವಿರ ಆ ಪತ್ರಗಳ ಉತ್ತರಗಳನ್ನು ತೆಗೆದುಕೊಂಡು ಬರುತ್ತಿದ್ದನು. ವೇಬ ದಂಪತಿಗಳು ಆ ಪೂರ್ತಿ ಪತ್ರಗಳನ್ನು ವ್ಯವಸ್ಥಿತವಾಗಿ ಓದಿಕೊಳ್ಳುತ್ತಿದ್ದರು. ಹಾಗೂ ಅದಕ್ಕನುಸರಿಸಿ ಕಾರ್ಯವನ್ನು ಕೈಕೊಳ್ಳುತ್ತಿದ್ದರು. ಈ ರೀತಿ ವೇಬ ದಂಪತಿಗಳ ದಿನಚರಿಯು ಕಾರ್ಯಮಯವಾಗಿತ್ತು.

ಸಿಡನೀ ಮತ್ತು ಬಿಯೇಟ್ರಿಸ ಇವರೀರ್ವರೂ ಕರ್ತೃತ್ವಶಾಲಿಗಳಾಗಿದ್ದರು, ಆದರೆ, ಅವರ ವಿವಾಹದ ಮೂಲಕ ಅಂದಿನ ಕರ್ತೃತ್ವವು ಇಂದು ಹತ್ತುಪಟ್ಟು ಅಧಿಕವಾಗಿ ಬೆಳೆಯಿತು! ಸಿಡನೀಯ ಕಾರ್ಯಕ್ಷಮತೆಗೆ ಯಾವಾಗ ಬಿಯೇಟ್ರಿಸಳ ಆತ್ಮವಿಶ್ವಾಸದ ಬೆಂಬಲ ದೊರಕಲಿಲ್ಲವಾದರೂ ಅವರ ಕೈಗಳಿಂದ ಇಷ್ಟು ಕಾಮಗಿರಿಗಳು ಘಟಿಸಲಿಲ್ಲವಾಗಿದ್ದುವು ಎಂಬುದು ತೆರೆದೇ ಇರುವದು. ಒಮ್ಮೆ ಬರಟ್ರಾಂಡ ರಸೇಲ ಇವರು— "ನನ್ನ ತಾರುಣ್ಯದಲ್ಲಿ ನಿನ್ನಲ್ಲಿ ಯಾವಾಗಲೂ ಲಜ್ಜೆಯುವೃತ್ತಿ ಇದ್ದಿತ್ತೋ ಏನು?" ಎಂದು ಬಿಯೇಟ್ರಿಸಳಿಗೆ ಕೇಳಿದನು. ಆಗ ಅವಳು ಈ ರೀತಿ ಉತ್ತರ ಕೊಟ್ಟಳು—, "ಯಾವಾಗಲೂ ಇಲ್ಲವಾಗಿತ್ತು. ಜನತೆಯ ಮುಂದೆ ಹೋಗುವಾಗ ಕೆಲವು ಸಲ ಭಯವಾದರೂ ನಾನು, ಮನಸ್ಸಿನಲ್ಲಿ ವಿಚಾರ ಮಾಡುತ್ತ, ನೀನು ಜಗತ್ತಿನ ಅತ್ಯಂತ ಬುದ್ಧಿವಂತ ರಾಷ್ಟ್ರದೊಳಗಿನ, ಅತ್ಯಂತ ಜಾಣ ಸಮಾಜದೊಳಗಿನ ಅತ್ಯಂತ ಚುರುಕು ಕುಟುಂಬದಲ್ಲಿಯ ಎಲ್ಲರಲ್ಲಿಯೂ ಜ್ಞಾನವಂತ ಸ್ತ್ರೀಯಾಗಿರುತ್ತಿ. ನೀನು ಯಾಕೆ ಭಯಪಡುವದು?" ಈ ರೀತಿ ತಾನೇ ತನ್ನನ್ನು ವಿಚಾರಿಸುತ್ತಿದ್ದಳು. ಅಂದ ಮೇಲೆ ಇವಳ ಬುದ್ಧಿ ಮತ್ತೆಯು ಹೇಗಿರಬೇಕೆಂಬುದು ವಾಚಕರೇ ಊಹಿಸಿಕೊಳ್ಳಲಿ.

ವೇಬ ದಾಂಪತ್ಯದ ದೃಷ್ಟಿಕೋನ ಅತ್ಯಂತ ಮಾನವೀಯವಾಗಿತ್ತು. ಅವರಿಗೆ ಸಮಾಜದೊಳಗಿನ ಸರ್ವಪದರಿನ ಮಾನವರ ವಿಷಯದಲ್ಲಿ ಕಳಕಳಿಯು ಹುಟ್ಟಿತ್ತು. ಮಾನವತೆಯ ಸೇವೆ ಇದೇ ಅವರ ವ್ರತವಾಗಿತ್ತು. ಒಂದು ಕಾಲದಲ್ಲಿ ಬರ್ನಾರ್ಡ ಶಾ ಹಾಗೂ ಸಿಡನೀ ಈ ಇಬ್ಬರು ಮಹಾ ವ್ಯಕ್ತಿಗಳು ಕೂಡಿಕೊಂಡು ಉಗಿಬಂಡಿಯಿಂದ ಹೋಗುತ್ತಿದ್ದರು. ಮಧ್ಯ ಮಧ್ಯದಲ್ಲಿ ಅವರಿಬ್ಬರು ತಮ್ಮ-ತಮ್ಮಲ್ಲಿದ್ದ ಡಬ್ಬಿಯೊಳಗಿನ ಬಿಸ್ಕೇಟ್‌ಗಳನ್ನು ತಿನ್ನುತ್ತಿದ್ದರು. ಅಷ್ಟರಲ್ಲಿ ಸಂಕೋಲೆ (ಬೇಡಿ) ಹಾಕಿದ ಓರ್ವ ಕೈದಿಯನ್ನು ತೆಗೆದುಕೊಂಡು, ಪೋಲೀಸ್ ಕಾನ್‌ಸ್ಟೇಬಲ್‌ರು ಅವರು ಕುಳಿತ ರೇಲ್ವೆ ಡಬ್ಬಿಯೊಳಗೆ ಬಂದರು. ಆಗ ಅಲ್ಲಿ ಕುಳಿತ ಎಲ್ಲ ಪ್ರಯಾಣಿಕರ ಮೈಮೇಲಿನ ರೋಮವು ಹೆದರಿ ಸೆಟೆದು ನಿಂತಿತು! ಆದರೆ ಸಿಡನೀ ಇವನು ಹೆದರದೇ ಪಕ್ಕದಲ್ಲಿ ಕುಳಿತ ಕೈದಿಯ ಸಮೀಪಕ್ಕೆ ಹೋಗಿ ಅನುತಾಪವನ್ನು ವ್ಯಕ್ತಮಾಡಿದನು. ಮತ್ತು ಅವನಿಗೆ ತನ್ನಲ್ಲಿದ್ದ ಕೆಲವು ಬಿಸ್ಕೀಟ್ಸಗಳನ್ನು ತಿನ್ನಲು ಪ್ರೀತಿಯಿಂದ ಕೊಟ್ಟನು. ಹೀಗೆ ಸಿಡನೀ ವರ್ತಿಸಿದ ಬಗ್ಗೆ ಇನ್ನುಳಿದ ಪ್ರವಾಸಿಕರು ವಿಶೇಷತಃ ಅವನ ಜೊತೆಯಾಗಿ ಬಂದ ಬರ್ನಾರ್ಡ ಶಾ ಒಮ್ಮೆಲೇ ಚಕಿತನಾಗಿ ಒಂದೇ ದೃಷ್ಟಿಯಿಂದ ಈ ಪ್ರೇಮದ ಕೆಲಸವನ್ನು ನೋಡಲಿಕ್ಕೆ ಹತ್ತಿದನು.

ರಾಜಕೀಯ ದೃಷ್ಟಿಯಿಂದ ಅವರು (ದಂಪತಿಗಳು) ಮಾಡಿದ ಉತ್ಕ್ರಾಂತಿಯು ಅತಿ ಮನನೀಯವಾಗಿರುವದು. ಸನ್ ೧೯೦೬ರಿಂದ ಅವರು ಮಜೂರ ಪಕ್ಷದ ಸಹಕಾರ್ಯ ಮಾಡುವದರಲ್ಲಿ ಅವಿರತ ಪ್ರಯತ್ನಪಟ್ಟರು. ಆದರೆ ಕೊನೆಗೆ ಆ ದಂಪತಿಗಳಿಗೆ, "ಸಮಾಜವಾದವೇ ನಿಜವಾದ ಮಾರ್ಗ" ಇದೆ ಎಂದು ಸಂಪೂರ್ಣ ಖಾತ್ರಿಯಾಯಿತು! ಮತ್ತು ಅದಕ್ಕೋಸ್ಕರ ಮಜದೂರ—ಪಕ್ಷದಿಂದ ತಮ್ಮ ಅಮೋಘ ಕೆಲಸವನ್ನು ಮಾಡಲಿಕ್ಕೆ ಹತ್ತಿದ್ದರು. ಅಷ್ಟೇ ಅಲ್ಲ ಈ ಜಗತ್ಪ್ರಸಿದ್ಧ ವೇಬ ದಂಪತಿಗಳು ತಮ್ಮ ಆಯುಷ್ಯದ ಉತ್ತರಾರ್ಧವನ್ನು ಮಜೂರ ಪಕ್ಷದ ಸೇವೆಯಲ್ಲಿ ಮುಳುಗಿಸಿದರು!

ಅದಕ್ಕಾಗಿಯೇ ಪ್ರಸಿದ್ಧ ಬರ್ಟ್ರಾಂಡ್ ರಸೇಲರು—, "ಬ್ರಿಟಿಶ ಸಮಾಜವಾದಕ್ಕೆ ಬೌದ್ಧಿಕ ಬೈಠಕವನ್ನು ಕೊಡಲು, ಈ ಮಹಾನ್ ಕಾರ್ಯವನ್ನು ಜಗತ್ಪ್ರಸಿದ್ಧ ವೇಬ ದಂಪತಿಗಳು ಮಾಡಿದರು! ಅದಕ್ಕೆ ಈತನಕ ಬಂದ ಅಗಣಿತ ಕೀರ್ತಿಗೆ ಇವರೇ ಶ್ರೇಯಸ್ಕರರು. ಹಾಗೂ ವೇಬ ದಂಪತಿಗಳಿಂದ ಬ್ರಿಟಿಶ ಮಜೂರ—ಪಕ್ಷವು ವ್ಯವಸ್ಥಿತ ಮತ್ತು ಸ್ಥಿರವಾಗಿ ನಿಲ್ಲುವದರಲ್ಲಿ ಸಂದೇಹವಿಲ್ಲ"! ಎಂದು ಉದ್ಗಾರ ತೆಗೆದಿದ್ದಾರೆ.

ಸನ್ ೧೯೪೩ರಲ್ಲಿ ಅಲ್ಪಾವಧಿಯ ವಿಶ್ರಾಂತಿಯನ್ನು ಹೊಂದಿದ ನಂತರ, ಬಿಯೇಟ್ರಿಸಳು ಇನ್ನೂ ಶಾಶ್ವತ ವಿಶ್ರಾಂತಿಯನ್ನು ಭೂಲೋಕವಲ್ಲಿ ಪಡೆದಳು. ಇವಳು ತೀರಿ ಕೊಂಡ ಕೆಲವು ದಿವಸಗಳಲ್ಲಿ ಈ ಮಹಾನ್ ದಂಪತಿಗಳ ಅಮೋಘ ಕಾರ್ಯಗಳ ಗೌರವ ನೀಡುವದಕ್ಕೋಸ್ಕರ ಅಂದಿನ ಬ್ರಿಟಿಶ ಸರಕಾರವು ಆದರ್ಶ ಪತಿಯ ಆದರ್ಶಪತ್ನಿಯಾದ ಸಿಡನೀಗೆ "ಆರ್ಡರ್ ಆಫ್ ಮೇರಿಟ್" ಈ ಅತ್ಯುತ್ತಮ ಪತ್ರವನ್ನು ಅರ್ಪಿಸಿತು! ಕೊನೆಗೆ, ಬಹು ಆನಂದದಿಂದ ಸರಕಾರದ ಆ ಅತ್ಯುನ್ನತ ಸನದನ್ನು ಸ್ವೀಕರಿಸಿದ ನಾಲ್ಕೇ ವರ್ಷಗಳಲ್ಲಿ (೧೯೪೭) ಕೂಲಿಕಾರ ಚಳವಳಿಯ ಹಿರಿಯ ಧುರೀಣನಾದ ಸಿಡನೀ ಈತನು ಬಹುಸಂತೋಷಭರಿತನಾಗಿ ಪ್ರಪಂಚದ ಕೊನೆಯ ನಿರೋಪವನ್ನು ತೆಗೆದುಕೊಂಡನು.

—ಕೆ. ರಾಮಕೃಷ್ಣ ಎ. ಪೈ,
ಅಂಕೋಲಾ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ.ಇನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ
ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಆತ್ಮಪ್ರಕಾಶ

ದೇದೀಪ್ಯಮಾನ ಜ್ಯೋತಿರ್ಲೋಕ

ದೀಪವುರಿಸಿದೊಡನೆಯೇ ನಮ್ಮ ಕರ್ತವ್ಯ ಪೂರ್ಣವಾಗಲಿಲ್ಲ;
ಅದನ್ನು ಚಿರಂತನವಾಗಿ ಉಳಿಸುವುದೂ ನಮ್ಮ ಭಾರ.

ರಃಪ್ರಭಯಂಕರವಾದ ರಾತ್ರಿಯಾಗಿತ್ತು. ದಟ್ಟವಾದ ಕಾಡೊಂದರ ದೊಡ್ಡದಾದ ಮರದ ಕೆಳಗಡೆ ಒಬ್ಬ ಯಾತ್ರಿಕನು ಮಲಗಿದ್ದನು. ಅಷ್ಟರಲ್ಲಿಯೇ ಅಲ್ಲಿಗೆ ಒಬ್ಬ ದಾರಿಗನು ಬಂದನು. ಅವನು ಮಲಗಿದವನೊಡನೆ ಪ್ರಶ್ನಿಸಿದನು—ನಿನಗೆಲ್ಲಿಗೆ ಹೋಗಬೇಕಾಗಿದೆ?

ಮಲಗಿದವನು ತುಸು ವಿವರ್ಣನಾದನು; ಮತ್ತೆ ಹೇಳಿದನು—ಅದು ನನಗರಿಯದು; ನನಗೆ ಮಲಗಬೇಕಾಗಿದೆ; ಮಲಗುತ್ತೇನೆ.

ಪಥಿಕನು ವಿಸ್ಮಯ ಚಕಿತ ನೇತ್ರನಾಗಿ ಮೌನವಾಗಿ ತನ್ನ ದಾರಿ ಹಿಡಿದನು.

ಮರಳಿ ಮತ್ತೊಬ್ಬ ದಾರಿಗ ಆ ದಾರಿಯಾಗಿ ಬಂದನು. ಇವನೂ ಮಲಗಿದವನೊಡನೆ ಕೇಳಿದನು—ಅಯ್ಯಾ, ನಿನಗೆಲ್ಲಿ ಹೋಗಬೇಕಾಗಿದೆ? ಈ ಭಯಾನಕವಾದ ಅರಣ್ಯ ಮಧ್ಯದಲ್ಲಿ ಏಕಾಕಿಯಾಗಿ ಯಾಕೆ ಮಲಗಿರುವಿ? ಎಲ್ಲಿಯಾದರೂ ಕ್ರೂರ ಪ್ರಾಣಿಗಳು ಆಕ್ರಮಿಸಿಬಿಟ್ಟರೆ ನಿನ್ನ ಗತಿಯೇನು?

ಈ ಪ್ರಶ್ನೆಯನ್ನು ಕೇಳಿ ಯಾತ್ರಿಕನು ತುಸು ಆಲೋಚನಾಪರನಾದನು. ಆತನ ಮನಸ್ಸು ಚಂಚಲವಾಯಿತು— ನಾನು ಎಲ್ಲಿಂದ ಬಂದಿದ್ದೇನೆ? ಎಲ್ಲಿಗೆ ಹೋಗುತ್ತಿದ್ದೇನೆ?

ಅವನು ಈ ಯೋಚನೆಯಲ್ಲಿಯೇ ತತ್ಪರನಾದನು. ಉತ್ತರವನ್ನು ನಿರೀಕ್ಷಿಸಿ ಸೋತುಹೋದ ಆ ಎರಡನೆಯ ದಾರಿಗನು ನಿರಾಶೆಗೊಂಡು ಮುನ್ನಡೆದನು.

ಕೆಲವು ಹೊತ್ತಾದ ಮೇಲೆ ಮೂರನೆಯ ದಾರಿಗನು ಅಲ್ಲಿ ಕಾಣಿಸಿಕೊಂಡನು. ಕಾಡಿನ ನಡುವೆ ವಿಚಾರಮಗ್ನನಾಗಿ ಬಿದ್ದಿರುವ ಯಾತ್ರಿಕನನ್ನು ನೋಡಿ ದಿಗ್ಭ್ರಮೆಗೊಂಡು ಆವನು ಕೇಳಿದನು—ಅಯ್ಯಾ, ನಿನಗೆಲ್ಲಿ ಹೋಗಬೇಕಾಗಿದೆ?"

ಪ್ರಶ್ನೆಯನ್ನು ಕೇಳಿದ ಯಾತ್ರಿಕನ ಮನಸ್ಸು ವಿಹ್ವಲಗೊಂಡಿತು — ನನಗೆ, ದೂರ....ದೂರ....ಬಹಳ ದೂರ....ಹೌದು ಅತ್ಯಂತ ದೂರ ಹೋಗಬೇಕಾಗಿದೆ. ಎಲ್ಲಿಯೋ ಅನಂತ ದೂರದಲ್ಲಿ ಒಂದು ದೇದೀಪ್ಯಮಾನವಾದ ಲೋಕವೊಂದಿದೆ; ಅಲ್ಲಿಗೆ ನಾನೀಗ ಹೋಗಬೇಕಾಗಿದೆ.

ಸರಿಯೇ, ನಾನೂ ಅಲ್ಲಿಗೆ ಹೊರಟಿದ್ದೇನೆ. ಏಳು, ಇರ್ವರೂ ಜತೆಯಾಗಿ ತೆರಳೋಣ—ದಾರಿಗ ಹೃಷ್ಟನಾಗಿ ವಿನಂತಿಸಿದನು.

ಇಲ್ಲ, ಇಲ್ಲ. ನನ್ನಿಂದ ನಡೆಯಲಾಗದು. ನನ್ನ ಪಾದದಡಿಯಲ್ಲಿ ಮುಳ್ಳು ನಾಟಿಬಿಟ್ಟಿದೆ — ಯಾತ್ರಿಕ ವ್ಯಸ್ತಚಿತ್ತನಾಗಿಯೇ ಹೇಳಿದ.

ದಾರಿಗ ವ್ಯಥಿತನಾಗಿ ಹೇಳಿದ — ರಾಮ್, ರಾಮ್. ಇಗೋ. ಈ ಮುಳ್ಳು ತೆಗೆದುಕೊ. ಕಂಟಕೇನೈವ ಕಂಟಕಂ ಎಂದು ಕೇಳಿಲ್ಲವೆ? ಮುಳ್ಳಿನಿಂದಲೇ ಮುಳ್ಳನ್ನು ಕೊರಕೆಗೆಯಬಹುದು ಎಂದು ಹೇಳಿ, ಈ ಮೂರನೆಯವನೂ ನಡೆದುಬಿಟ್ಟನು.

ಯಾತ್ರಿಕನು ಮುಳ್ಳುತೆಗೆಯುವುದರಲ್ಲಿ ತಲ್ಲೀನನಾದನು. ಸ್ವಲ್ಪ ಸಮಯದಲ್ಲಿಯೇ ಆವನು ತನ್ನ ಪಾದದಲ್ಲಿ ಹುದುಗಿದ್ದ ಮುಳ್ಳನ್ನು ಹೊರತೆಗೆದನು.

ಹಿಂದಿನಿಂದ ಇನ್ನೂ ದಾರಿಗರು ಬರುತ್ತಿದ್ದರು. ಅವರಲ್ಲಿ ಒಬ್ಬ ಹೇಳಿದನು— ಏನು ಸ್ವಾಮಿ ನಮ್ಮೊಡನೆ ಬರುವಿಯೇನು?

"ಇಲ್ಲಿ ಇಲ್ಲ. ನನಗೆ ನಡೆಯಲಾಗುವುದಿಲ್ಲ. ಬಹಳಷ್ಟು ದಿನಗಳಿಂದ ನಾನು ಅನ್ನ ನೀರು ಕಂಡಿಲ್ಲ" - ಯಾತ್ರಿಕ ಭಗ್ನಹೃದಯದಿಂದ ಉತ್ತರವಿತ್ತನು:

ಇನ್ನೊಬ್ಬ ದಾರಿಗನು ವ್ಯಸನಪಟ್ಟು ಸಲಹೆಯಿತ್ತನು— ಇಗೋ ಈ ದೊಣ್ಣೆ. ಇದರ ಸಹಾಯದಿಂದ ಹಣ್ಣು ಉದುರಿಸಿ ತಿನ್ನು. ನಿನ್ನ ಕ್ಷುಧಾಬಾಧೆಯನ್ನು ದೂರೀಕರಿಸು.

ಯಾತ್ರಿಕನು ಹಣ್ಣುಕೊಯ್ಯುವುದರಲ್ಲಿಯೇ ಮಗ್ನನಾದನು; ದಾರಿಗರು ಮುಂಬರಿದರು.

ಅಷ್ಟರಲ್ಲಿ ಯಾತ್ರಿಕರ ಇನ್ನೊಂದು ಸಂಗಡವು ಆ ದಾರಿಯಾಗಿ ಬಂದಿತು. ಈ ದಳದ ನಾಯಕನು ಕೇಳಿದನು —ಹೊರಡು, ನಮ್ಮೊಡನೆ ಬಂದುಬಿಡು.

ಯಾತ್ರಿಕ ಬೇಸರದಿಂದ ಹೇಳಿದನು- ಇಲ್ಲ ಸ್ವಾಮಿ, ನಾನು ಬರಲಾರೆ. ನನಗೆ ವಿಪರೀತವಾದ ನೀರಡಿಕೆಯಾಗಿದೆ. ನಾನು ಹೊರಡಲಾರೆ.

ಇನ್ನೊಬ್ಬ ದಾರಿಗನು ಉತ್ತರಿಸಿದನು —ಇಲ್ಲಿಂದ ದಕ್ಷಿಣಕ್ಕೆ ಒಂದು ಫರ್ಲಂಗ್ ದೂರದಲ್ಲಿ ಒಂದು ಕಾಡಿನ ಅಬ್ಬಿಯು ಹರಿಯುತ್ತಿದೆ. ಅಲ್ಲಿಗೆ ಹೋಗಿ ನಿನ್ನ ಬಾಯಾರಿಕೆಯನ್ನು ಪರಿಹರಿಸಿಕೊಳ್ಳು.

ಯಾತ್ರಿಕನು ಬಹಳ ವೇಗದಿಂದ ಅತ್ತ ನಡೆದನು. ನೀರು ಕುಡಿದುದರಿಂದ ಆತನ ಮುಖಚ್ಛಾಯೆಯಲ್ಲಿ ಉತ್ಸಾಹವು ತೋರಿಬಂತು.

ಯಾತ್ರಿಕನು ಆ ಭಯಾನಕವಾದ ಅರಣ್ಯದಲ್ಲಿ ಮುಂಬರಿದನು. ಕೆಲವೆಡೆ ಕ್ರೂರ ವನ್ಯ ಪಶುಗಳನ್ನು ಕಂಡು ಆತನು ಹೆದರಿ ಕಂಗಾಲಾಗಿ ಹೋದನು. ಇದರಿಂದ ಅವನು ಮರಳಿ ಬರುವ ಮನಸ್ಸು ಮಾಡಿದನು. ಆದರೆ, ಅಷ್ಟರಲ್ಲಿ ಅವನಿಗೆ 'ದೂರ, ಒಂದು ದೇದೀಪ್ಯಮಾನ ಲೋಕ" ಎಂಬ ಮಾತು ಸ್ಫುರಿಸಿತು. ಮನಸ್ಸಿನ ಚಂಚಲತೆಯನ್ನು ದೂರಮಾಡಿ ದೃಢೀಕೃತ ಚಿತ್ತನಾಗಿ ಅವನು ಮುಂದೆ ನಡೆದನು.

ಇದೇ ರೀತಿ ಹಲವಾರು ಆಪತ್ತುಗಳನ್ನು ಆತ ಪಾರು ಮಾಡಬೇಕಾಗಿ ಬಂತು

ತುಸು ಹೊತ್ತಿನ ಅನಂತರ, ದೂರ ಕ್ಷಿತಿಜದ ಕಡೆಯಲ್ಲಿ ಪ್ರಕಾಶದ ಒಂದು ಮಂದಕಿರಣವು ಆತನಿಗೆ ದೃಷ್ಟಿಗೋಚರವಾಯಿತು. ಗದ್ದೆಗಳಲ್ಲಿ ತಮ್ಮ ಕಾರ್ಯದಲ್ಲಿ ತತ್ಪರರಾಗಿರುವ ರೈತಜನರ ಮಧುರ ತಾನವಿತಾನಗಳು ಸುಸ್ಪಷ್ಟವಾಗಿ ಕಿವಿದೆರೆಗೆ ಬಡಿಯತೊಡಗಿದುವು. ಸ್ವಲ್ಪ ಸಮಯ ಆತ ಅಲ್ಲಿಯೇ ನಡೆದು ನಿಂತುಬಿಟ್ಟನು— ಆ ದೇದೀಪ್ಯಮಾನವಾದ ಲೋಕವು ಹೇಗಿರಬಹುದು? ಈ ಪ್ರಶ್ನೆಗೆ ತಕ್ಕ ಉತ್ತರವನ್ನಾತ ತನ್ನ ಒಳಗಿನ ಕಣ್ಣಿನಲ್ಲಿ ಚಿತ್ರಿಸಿ ಕಂಡುಕೊಳ್ಳಲು ಬಯಸಿದನು.

ಆ ಲೋಕದಲ್ಲಿ ಧನಧಾನ್ಯಗಳ ಕಣಜ ಕಣಜಗಳೇ ತುಂಬಿ ಹೋಗಿರಬೇಕು. ಪ್ರತಿ ಮನೆಯಲ್ಲೂ ಸುಖಶಾಂತಿಗಳು ತಾಂಡವವಾಡುತ್ತಿರಬೇಕು. ನೈತಿಕತೆಯನ್ನು ದೂರಮಾಡುವ ನಗರಗಳು ಇಲ್ಲಿ ಇಲ್ಲದಿರಬಹುದು. ಸ್ವಾತಂತ್ರ್ಯದವಿಯು ಅಲ್ಲಿ ಸ್ವೇಚ್ಛೆಯಿಂದ ವಿಹರಿಸುತ್ತಿರಬಹುದು. ಈ ಲೋಕದಲ್ಲಿ ವಾಸಿಸುತ್ತಿರುವ ಪ್ರಾಣಿಗಳು ಸುಖ ಸಂತೋಷದಿಂದ ನಲಿದಾಡುತ್ತಿರಬಹುದು ಅವರಲ್ಲಿ ಪರಸ್ಪರ ಪ್ರೇಮ, ಐಕ್ಯಬುದ್ಧಿಗಳು ಇರಬಹುದು ಅವರು ಎಲ್ಲರೂ ತಮ್ಮ ಧ್ಯೇಯವನ್ನು ಪೂರ್ಣಮನಸ್ಸಿನಿಂದ ಸಾಧಿಸುತ್ತಿರಬಹುದು....ಆಹಾ! ಆ ದೇದೀಪ್ಯಮಾನವಾದ ಲೋಕದ ಸಂಪತ್ತೆ!

ಯಾತ್ರಿಕನು ಇಮ್ಮಡಿ ಉತ್ಸಾಹಗೊಂಡು ಮತ್ತೂ ಮುನ್ನಡೆದನು. ದಾರಿ ಪೂರ್ಣವಾಯಿತು. ಮಾರ್ಗದಲ್ಲಿ ಆತನು ಕಂಡಿದ್ದ ದಾರಿಗರೂ ಅಲ್ಲಿ ಸೇರಿದ್ದರು. ಅವರು ಈತನನ್ನು ಮನಃಪೂರ್ವಕವಾಗಿ ಸ್ವಾಗತಿಸಿದರು— ದೇದೀಪ್ಯಮಾನ ಲೋಕದ ನೂತನ ನಾಗರಿಕನೇ, ನಿನಗೆ ಮಂಗಳವಾಗಲಿ ಈ ಲೋಕದ ಅಸಾಧಾರಣ ದೀಪ್ತಿಯಿಂದ ನೀನು ಪ್ರಕಾಶಮಾನನಾಗು. ಇದು ಆತ್ಮ ಜ್ಯೋತಿ ಅಲ್ಲ ಎಂಬ ಸತ್ಯವನ್ನು ಮಾತ್ರ ನೀನೂ ಮರೆಯಬಾರದು. ಇದನ್ನು ಕೆಡದಂತೆ ನೋಡಿಕೊಳ್ಳುವ ಭಾರವು ಇಲ್ಲಿನ ನಿವಾಸಿಗಳದ್ದು. ರಕ್ಷಿಸುವ ಕೆಲಸ ನಮ್ಮದು. ಈ ದೀಪವಿಲ್ಲವೆ ಹೋದರೆ, ಈ ಲೋಕದಲ್ಲಿಯೂ ಅಂಧಕಾರವು ಆವರಿಸುವುದು. ಈ ದೀಪ್ತಿಯನ್ನು ಆ ಜೀವನ ಉರಿಸುವೆ ಎಂದ ಮಾತು ಕೊಡು. ಈ ದೀಪ್ತಿಯು ಪರಿಶ್ರಮದ ಮಗಳು".

(ಶ್ರೀ ಶಿ. ರಾ ಘಾಟೆಕರ ಒಂದು ಕಥೆ)

ಉಡುಪಿ ಡಿ. ಮು. ಕೋರ್ಟಿನಲ್ಲಿ
O. S. No. 301/1959

ದಿ. ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್ ಉಡುಪಿ. ಯಿದ್ರ ಯೇಜಂಟ್ ಪಿ. ಪುರುಶೋತ್ತಮ ನಾಯ್ಕ — ವಾದಿ.

ಮತ್ತು

A. ಪದ್ಮನಾಭ ಶಿಣೈ ಕೂಡಾ
— ಪ್ರತಿವಾದಿರು.

ಯಿವರೊಳಗೆ.

3ನೇ ಪ್ರತಿವಾದಿ:— ಸಿ. ಯನ್. ಹರಿದಾಸ ನಾಮಕ. ರಾಮಣ್ಣ ಭಟ್ಟ ಮಗ, ಉಡುಪಿತಾಲ್ಲೂಕು ಅಲೆವೂರು ಗ್ರಾಮದಲ್ಲಿರುವವ. ಯಿವರೀಗೆ ಈ ಮೂಲ್ಕ ತಿಳಿಯಪಡಿಸುವದೇನೆಂದ್ರೆ: -

ವಾದಿ ಬೇಂಕಿಗೆ ಪ್ರತಿವಾದಿರು ತಾ. 21—1—1958ದಲ್ಲು ರೂ. 10,000ಕ್ಕೆ ಬರಕೊಟ್ಟ ದಿಮಾಂಡ ನೋಟಿನ ಬಾಕಿ ಅಸಲು ಬಡ್ಡಿ ರೂ. 5005-39ಕ್ಕೆ ವಾದಿರು ಪ್ರತಿವಾದಿರ ಮೇಲೆ ಮಾಡಿದ ಮೇಲಿನ ದಾವೆಯು ತಾ. 30—11—1959ಕ್ಕೆ 3ನೇ ಪ್ರತಿವಾದಿಯ ಅಪ್ಪೆರೆ ನೋಟೀಸಿನ ಬಗ್ಗೆ ಯಿಡೋಣಾಗಿಯದೆ ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗುತ್ತದೆ.

By order of the Court.

H. Ramanatha Pai,
Advocate for Plaintiff.

Udipi, Dated 20—11—59

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮುಂಗಡವಾಗಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕಾಸರಗೋಡು ಡಿ ಮು. ಕೋರ್ಟಿನಲ್ಲಿ
R. C. O. P. No 10/1959.

M. K. ಮಹಮ್ಮದ್ ಕುಂಞಿ—
ವಾದಿ—ಅರ್ಜಿದಾರ.

ಮತ್ತು

The Durga Bhavan by its partners—
ಗೋಪಾಲ ಕೃಷ್ಣಯ್ಯ ಕೂಡಾ
—ರೆಸ್ಪಾಂಡೆಂಟ.

1ನೇ ರೆಸ್ಪಾಂಡೆಂಟ, ಗೋಪಾಲ ಕೃಷ್ಣಯ್ಯ ಕಿಳಿಂಗಾರು ಶಂಕರಯ್ಯನವರ ಮಗ ಕಾಸರಗೋಡು ತಾಲೂಕು ಪಾಡಿ ಗ್ರಾಮದ ಎಡನೀರು ಎಂಬಲ್ಲಿರುವವ.

ಮೇಲ್ಕಂಡ ಅರ್ಜಿಯು ತಾ. 3-12-59ಕ್ಕೆ 1ನೇ ರೆಸ್ಪಾಂಡೆಂಟಿನ ಹಾಜರಾತಿ ಬಗ್ಗೆ ಇಟ್ಟಿರುವ ಸಂಗ್ತಿ ತಿಳಿಸೋಣಾಗಿಯದೆ,

(Sd.) P. Ahmad,
Advocate for Petitioner.

ಕಾಸರಗೋಡು, 14-11-59.



ಅಭಿಪ್ರಾಯ

ಶ್ರೀ ಅಶೋಕ ಮೆಹತಾರ ಆಯ್ಕೆ ಅತಿಯೋಗ್ಯವಾಗಿದೆ

ಶ್ರೀ ಮೆಹತಾರನ್ನು ಆರಿಸಿ ಪ್ರಸವಾ ಪಕ್ಷವು ತನ್ನ ರಾಷ್ಟ್ರೀಯ ಮನೋಭಾವನೆಯನ್ನು ಪ್ರದರ್ಶಿಸಿದೆ

• ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಶ್ರೀ ಅಶೋಕ ಮೆಹತಾರವರು ಆರಿಸಲ್ಪಟ್ಟರು. ಶ್ರೀಯುತರು ಪಕ್ಷದೊಳಗಿನ ಅಲ್ಪ ಸಂಖ್ಯೆಯ ಒಂದು ಪಂಗಡದಲ್ಲಿದ್ದರೂ ಇವರ ವಿಚಾರಧಾರೆ ಮತ್ತು ಅಧ್ಯಯನ ಶೀಲಮನೋವೃತ್ತಿಗಳ ಪ್ರಭಾವವು ಪಕ್ಷದ ಮೇಲೆ ಸ್ಪಷ್ಟವಾಗಲೂ ಬೀಳುತಿತ್ತು. ಭಾರತೀಯ ಸಂಸತ್ತಿನಲ್ಲಿ ಯಾವುದೇ ಒಂದು ವಿಚಾರ ಮಾಡದೆ ವಿರೋಧಿಸುವುದನ್ನು ಮೆಚ್ಚದೆ ಯೋಗ್ಯ ರೀತಿಯಲ್ಲಿ ನ್ಯಾಯವನ್ನೆತ್ತಿ ಹಿಡಿಯುವ ಕೆಲವೇ ಸರಕಾರಿ ವಿರೋಧಕರಲ್ಲಿ ಇವರೂ ಒಬ್ಬರು. ಇದರಿಂದಾಗಿಯೇ ಶ್ರೀ ಮೆಹತಾ ಮಾತಾಡಲು ಎದ್ದು ನಿಂತರೆಂದರೆ, ಸರಕಾರಿ ಪಕ್ಷದ ಎಲ್ಲ ಸದಸ್ಯರೂ ತಮ್ಮ ಕಿವಿಗಳನ್ನು ನಿಮಿರಿಸಿ ಆವರತ್ತ ಕೊಡುವರು

ಅನ್ನ ಬಟ್ಟೆಗಳಲ್ಲಿ ಎಲ್ಲರಿಗೂ ಆಸಕ್ತಿಯಿರುವಂತೆ ಶ್ರೀ ಮೆಹತರಿಗೆ ಓದುವ ಹುಚ್ಚಿದೆ. ಅವರ ಈ ಅಧ್ಯಯನ ಶೀಲವೃತ್ತಿಯು ಅವರ ಆರೋಗ್ಯವನ್ನೆಂದಿಗೂ ಕೆಳಯ ಬಿಟ್ಟಿಲ್ಲ. ರಾತ್ರಿ ಹೊತ್ತು ಏನಾದರೂ ಒಂದು ಸ್ವಲ್ಪ ಓದದೆ ಹೋದರೆ ಅವರಿಗೆ ನಿದ್ರೆಯೇ ಬಾರದು. ದಿನದಲ್ಲಿ ೬-೭ ತಾಸುಗಳಷ್ಟನ್ನು ತಮ್ಮ ಓದಿನಲ್ಲಿಯೇ ಕಳೆಯುವುದು ಶ್ರೀ ಮೆಹತರಿಗೆ ರಕ್ತಗತವಾಗಿ ಬಂದಿರುವ ಒಂದು ಅಭ್ಯಾಸ.

೧೧ ವರ್ಷಗಳಿಗೆ ಮೊದಲು ಭಾರತ ಸರಕಾರವು ಭಾರತೀಯ ಆಹಾರ ಸ್ಥಿತಿಯನ್ನು ಪರಿಶೀಲಿಸಲು ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದಾಗ, ಪ್ರಧಾನಿ ನೆಹರು ಅವರು ಶ್ರೀಯುತರ ತಥ್ಯ ಶೋಧಕ ಸ್ಥಿತಿಯನ್ನು ಆದರಿಸಿರೆಂದು ತಿಳಿಯಲಾಗಿತ್ತು. ಸರಕಾರವು ವಿರೋಧಿಪಕ್ಷದ ನಾಯಕರಿಗೆ ಇಂತಹ ಜವಾಬ್ದಾರಿಯುತವಾದ ಕಾರ್ಯವನ್ನೊಪ್ಪಿಸಿದ ಸಂದರ್ಭಗಳಲ್ಲಿ ಇದೇ ಮೊದಲಾಗಿತ್ತು. ಶ್ರೀ ಮೆಹತಾ ವರದಿಯಲ್ಲಿ ಸೂಚಿಸಲಾದ ಎಲ್ಲ ವಿಚಾರಗಳನ್ನೂ ಸರಕಾರವು ವ್ಯವಸ್ಥಿತಗೊಳಿಸದೆ ಹೋದರೂ ಆವಶ್ಯಕತೆ ಕಂಡುಬಂದಲ್ಲಿ ಆದರಲ್ಲಿನ ಹಲವುಗಳನ್ನು ಸ್ವೀಕರಿಸಿಕೊಂಡಿದೆ.

ಈಗ, ಪ್ರಜಾಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಆಯ್ಕೆಗೊಳ್ಳುವಂತೆ ಆ ಪಕ್ಷದೊಳಗೆ ಸಾಮಾಜಿಕ ಕಾರ್ಯಗಳಿಂತ ರಚನಾತ್ಮಕ ಕಾರ್ಯಕ್ರಮಗಳಿಗೆ ಪ್ರಾಧಾನ್ಯವೀಯುವ ಒಂದು ಪಂಗಡವೇ ಮೂಲಕಾರಣವಾಗಿದೆ. ಡಾ| ಲೋಹಿಯಾ ಅವರ ಮೌಖಿಕ ನೇತೃತ್ವ ಪ್ರಶ್ನೆಗಳಿಗೆ ರಚನಾತ್ಮಕವಾಗಿ ಉತ್ತರಿಸುವ ಧೋರಣೆಯನ್ನಿವರು ಇರಿಸಿಕೊಂಡಿದ್ದರೆ. ಭಾರತ—ಚೀನಗಳ ಸೀಮಾ ವಿವಾದವು ಭಾರತೀಯ ಸಾಮ್ಯವಾದಿ ಪಕ್ಷವನ್ನು ಡೋಲಾಯಮಾನ ಪರಿಸ್ಥಿತಿಗೆ ತಂದಿರುವ ಈ ಸಂಧಿ ಸಮಯದಲ್ಲಿ ಅಶೋಕಮೆಹತರವರು ಪ್ರಸವಾ ಪಕ್ಷದ ಅಧ್ಯಕ್ಷರಾಗಿ ಆಯ್ಕೆಗೊಂಡುದು ಪ್ರಸವಾ ಪಕ್ಷವು ಅಧಿಕ ರಾಷ್ಟ್ರೀಯ ಪಕ್ಷವಾಗಿ ರೂಪುಗೊಳ್ಳುತ್ತಿರುವುದರ ಸಂಕೇತವಾಗಿದೆಂದು ಹೇಳಬಹುದು.

ಪ್ರಸವಾ ಪಕ್ಷದ ಹಿಂದಿನ ಅಧ್ಯಕ್ಷರು ಬುದ್ಧಿ ರೀತಿಯಿಂದ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದರೆ, ಶ್ರೀ ಮೆಹತಾ ಅವರು ಇದಕ್ಕೆ ವ್ಯತಿರಿಕ್ತವಾದ ರೀತಿಯಲ್ಲಿ ಲೋಕಪ್ರಿಯರಾಗಿದ್ದಾರೆ. ಉತ್ತರ ಪ್ರದೇಶದ ಪ್ರಜಾಸಮಾಜವಾದಿ ಪಕ್ಷವು ಶ್ರೀ ಮೆಹತಾರವರಲ್ಲಿ ವಿಶ್ವಾಸವನ್ನು ಎಷ್ಟು ಮಟ್ಟಿಗೆ ಇಡಬಲ್ಲದೆಂಬುದೊಂದು ವಿಷಯವನ್ನು ಬಿಟ್ಟರೆ, ಅಖಿಲಭಾರತ ದೃಷ್ಟಿಯಿಂದ ಶ್ರೀ ಮೆಹತಾರ ಸ್ಥಾನವು ಉಚ್ಚವಾಗಿದೆ ಎಂಬುದು ನಿಸ್ಸಂದೇಹ.

ಪ್ರಜಾಸಮಾಜವಾದಿ ಪಕ್ಷದ ಉದ್ದೇಶಗಳಲ್ಲಿ ಕಾಂಗ್ರೆಸ್‌ನೊಡನೆ ಸಹಯೋಗ ನೀಡುವುದೂ ಒಂದಾಗಬಹುದು. ಈ ಉದ್ದೇಶ ಸಾಧನೆಗೆ ಯಾರಾದರೂ ಒಬ್ಬ ನಾಯಕನ ಆವಶ್ಯಕತೆಯಿರುವುದಾದರೆ, ಆ ಸ್ಥಾನಕ್ಕೆ ಶ್ರೀ ಅಶೋಕ ಮೆಹತಾರವರೇ ಇತರ ನಾಯಕರಿಗಿಂತ ಅತಿಯೋಗ್ಯರೆನ್ನಬಹುದು. ಆಹಾರ ಸಮಸ್ಯೆಯಲ್ಲಿ ಸರಕಾರದೊಡನೆ ಸಹಕರಿಸಿದ ಒರ್ವ ವ್ಯಕ್ತಿ ಸರಕಾರಿ ಪಕ್ಷದೊಡನೆಯೂ ಸಹಕರಿಸದಿರಲಾರರು ಎಂದು ಸಾಮಾನ್ಯವಾಗಿ ನಂಬುವುದು ತಪ್ಪಾಗುವುದು

ಇಂದು ಭಾರತದಲ್ಲಿ ಒದಗಿ ಬಂದಿರುವ ಗತಿಯಿಂದಾಗಿ ತೀರ ವಿಪಂಚನಾತ್ಮಕವಾದ ಪರಿಸ್ಥಿತಿ ತಲೆದೋರಿದೆ. ಈ ಪರಿಸ್ಥಿತಿಯಲ್ಲಿ ನಮ್ಮಲ್ಲಿ ರಾಷ್ಟ್ರೀಯತೆಯ ಆಧಿಕ್ಯ ಇದುವರೆಗಿಂತಲೂ ಅತಿ ಮಹತ್ವವಾಗಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆದುದರಿಂದ ರಾಷ್ಟ್ರೀಯ ಭಾವನೆಯಿಂದ ತುಂಬಿ ತುಳುಕಾಡುವ ರಾಜಕೀಯ ಪಕ್ಷಗಳು ಮಾತ್ರ ಈ ಕಾಲದಲ್ಲಿ ಬಲಗೊಳ್ಳುವುದು ಸಾಧ್ಯವೆಂದು ಪ್ರಸವಾ ಪಕ್ಷವೂ ತಿಳಿದುಕೊಂಡಿದ್ದರೆ, ಅದು ವಿಸ್ಮಯ ಜನಕ ಸಂಗತಿಯಾಗಲಾರದು ಇದರಿಂದಾಗಿಯೇ ಶ್ರೀ ಅಶೋಕ ಮಹತಾರವರನ್ನು ಅಧ್ಯಕ್ಷರನ್ನಾಗಿ ಆರಿಸಿ, ತನ್ನ ರಾಷ್ಟ್ರೀಯ ಮನೋವೃತ್ತಿಯನ್ನು ತೋರಿಸಿಕೊಟ್ಟಂತಾಗಿದೆ

ಕರಿಗಡ್ಡ, ಉದ್ದನೆಯ ಶರೀರ, ತಗ್ಗಿದ ಕನ್ನಡಕಗಳ ಕಣ್ಣುಗಳಿರುವ ಶ್ರೀ ಮೆಹತಾ ಯಾವಾಗಲೂ ಒರ್ವ ಮಧ್ಯಮಸ್ತರದ ಭಾರತೀಯನು ತೊಡುವ ವೇಶಭೂಷಣಗಳನ್ನೇ ತೊಟ್ಟುಕೊಳ್ಳುತ್ತಾರೆ ಇವರ ಬಟ್ಟೆಬರೆಗಳು ಎಂದೂ ಉಚ್ಚವರ್ಗದವಾಗುವುದಿಲ್ಲ ಸಾಮಾನ್ಯ ಭಾರತೀಯ ನಾಗರಿಕನಂತೆ ತೋರಿಬರುತ್ತಿರುವ ಶ್ರೀ ಅಶೋಕ ಮೆಹತಾ ಅವರು ಸರಳ ಭವನದ ಉನ್ನತಾಸನದಲ್ಲಿ ಕೂರುತ್ತಿರುವುದನ್ನು ನಾವು ನೋಡಬಹುದು. ಇನ್ನು ಕೆಲವೊಮ್ಮೆ ಬೀದಿಯ ಮುಚ್ಚಿದಂಗಡಿಯ ಜಗಲಿಯಲ್ಲಿ ಒರಗಿರುವುದನ್ನೂ ಕಾಣಬಹುದು. ತಮ್ಮ ಈ ಸರಳತೆಯಿಂದ ಅವರು ಕೀರ್ತಿಯ ಶಿಖರವನ್ನೂ ಏರುತಿದ್ದಾರೆ, ಶಿಖರಾರೋಹಣ ಕಾರ್ಯದಲ್ಲಿ ಅವರಿಗಿರುವ ಪ್ರಧಾನ ಆತಂಕವು ದುರೂ ಇದೇ ಆಗಿದೆ.

ಮೈಸೂರಿನಲ್ಲಿ ಕಾಗದ ಕಾರಖಾನೆ

ಮೈಸೂರು ರಾಜ್ಯದ ಮಂಡ್ಯದಲ್ಲಿನ ನೇಶನಲ್ ಪೇಪರ್ ಮಿಲ್ಸ್, ಲಿಮಿಟೆಡ್ ಒಂದು ಕಾಗದವನ್ನು ತಯಾರಿಸುವ ಕಾರಖಾನೆಯನ್ನು ತೆರೆಯಲು ನಿರ್ಧರಿಸಿದೆ ಸಾಮಾನ್ಯವಾಗಿ ಕಬ್ಬಿನ ಸಿಪ್ಪೆಯನ್ನು ಇದಕ್ಕೆ ಕಚ್ಚಾ ಪದಾರ್ಥವಾಗಿ ಬಳಸಿಕೊಳ್ಳಲಾಗುವುದು. ಮೈಸೂರಿನ ಕೃಷ್ಣರಾಜ ಸಾಗರದ ಸಮೀಪ ಈ ಕಾರಖಾನೆಯನ್ನು ಸ್ಥಾಪಿಸಲಾಗುವುದೆಂದೂ ಇದು ದಿನವೊಂದಕ್ಕೆ ೩೫ ದೀರ್ಘ ಟನ್ನುಗಳಷ್ಟು ಕಾಗದವನ್ನು ಉತ್ಪಾದಿಸುವ ಗುರಿಯನ್ನಿಟ್ಟುಕೊಂಡಿದೆ ಎಂದೂ ತಿಳಿಯುತ್ತದೆ

ಈ ಕಾರಖಾನೆಯ ಸ್ಥಾಪನೆಗೆ ಅಮೇರಿಕೆಯ ನ್ಯೂಯಾರ್ಕಿನ 'ಪಾರ್ಸನ್ಸ್ ಎಂಡ್ ವಿಟ್‌ಮೋರ್'ನವರು ಸಹಾಯ ನೀಡಲಿದ್ದಾರೆ. ಯಂತ್ರ ಸಮುದಾಯ ಮತ್ತು ತಾಂತ್ರಿಕ ಜ್ಞಾನವನ್ನು ಮಾತ್ರವಲ್ಲದೇ ೭೨ ಲಕ್ಷ ರೂಪಾಯಿಗಳ ಬಂಡವಲವನ್ನೂ ಇವರು ನಿಯೋಜಿಸಿದ್ದಾರೆಂದೂ ತಿಳಿಯುತ್ತದೆ ಭಾರತದಲ್ಲಿ ಅಮೇರಿಕೆಯ ಸಹಾಯದೊಡನೆ ಸ್ಥಾಪಿತಗೊಳ್ಳುವ ಕಾಗದದ ಕಾರಖಾನೆಗಳಲ್ಲಿ ಈ ಯೋಜನೆಯ ಮಾತ್ರ ಮೊದಲನೆಯದಾಗಿದೆ.

ಭಾರತದ ಟೆಲಿಫೋನ್ ಕಾರಖಾನೆ



೧೯೪೮ರಲ್ಲಿ ಬೆಂಗಳೂರಿನ ಭಾರತೀಯ ಟೆಲಿಫೋನ್ ಉದ್ಯಮವು ಮೊದಲ ಟೆಲಿಫೋನನ್ನು ತಯಾರಿಸಿತು. ೮೪ ಸಾವಿರ ಟೆಲಿಫೋನ್ ಮತ್ತು ೨೪,೦೦೦ ವಿನಿಮಯ ತಂತಿಗಳನ್ನು ತಯಾರಿಸುವ ಗುರಿಯನ್ನಿದು ೧೯೫೮—೫೯ರಲ್ಲಿಟ್ಟುಕೊಂಡಿದೆ. ಈ ಹತ್ತು ವರ್ಷಗಳಲ್ಲಿ ಈ ಕಾರಖಾನೆಯು ಸಾಕಷ್ಟು ಪ್ರಗತಿಯನ್ನು ಪಡೆದಿದೆ.

ಮೊದಲಿಗೆ ವಿದೇಶಗಳಿಂದ ಟೆಲಿಫೋನಿನ ಕೆಲವೊಂದು ಭಾಗಗಳನ್ನು ಆಮದು ಮಾಡಿದ್ದರೂ ಈಗ ಇಲ್ಲಿಯೇ ಹೆಚ್ಚಿನವನ್ನು ತಯಾರಿಸಲಾಗುತ್ತದೆ. ವಿನಿಮಯ ತಂತ್ರಿ ಸಾಧನಗಳ ಕ್ಷೇತ್ರದಲ್ಲಿಯೂ ಆಸ್ಟೇ ಟ್ರಾನ್ಸ್‌ಮಿಟರ್‌ಗಳನ್ನೂ ಈಗ ಇಲ್ಲಿಯೇ ಸಿದ್ಧಪಡಿಸಲಾಗುವುದು. ಬೆಂಗಳೂರು ಟೆಲಿಫೋನ್ ಕಾರಖಾನೆಯ ಒಳಗಿನ ಒಂದು ದೃಶ್ಯವನ್ನಿಲ್ಲಿ ಕಾಣಬಹುದು.

NAVAYUGA
REGD. NO. M. 3619

UDIPI, THURSDAY
26—11—1959

LICENSE NO. 31
Licensed to Post without Prepayment

<u>ಅಧಿಕೋತ್ಪಾದನೆ</u>

ಅಧಿಕ ಬೆಳೆ ಬೆಳೆಯುವ ರಹಸ್ಯ

ವೈಜ್ಞಾನಿಕ ರೀತಿಯಿಂದ ಬೆಳೆ ಬೆಳೆಸಿ ಯಶಸ್ಸು ಪಡೆದ ನೂರಾರು ರೈತರ ಕಥೆಯಿಲ್ಲಿದೆ ನೀವೂ ಈ ವಿಧಾನವನ್ನೇಕೆ ಅನುಸರಿಸಬಾರದು?

ಆಧುನಿಕ ಬೇಸಾಯ ವಿಧಾನಗಳಲ್ಲಿ ಒಮ್ಮೆ ನಂಬಿಕೆ ಹುಟ್ಟಿದರೆ ಸಾಕು ಎಂತಹ ಕಷ್ಟಗಳನ್ನು ಬೇಕಾದರೂ ಎದುರಿಸಿಕೊಂಡು ಮುನ್ನಡೆದು ಉತ್ತಮ ಬೆಳೆ ತೆಗೆದು ಜಯಶೀಲರಾಗಿರುವ ರೈತರ ಸಂಖ್ಯೆಗೆ ಇಂದು ಕೊರತೆ ಇಲ್ಲದಂತಾಗಿದೆ ಅಂತಹ ಹಲವರ ಕಥೆ ಇದೀಗ ಇಲ್ಲಿದೆ.

ಹರಬನ್ಸ್‌ಲಾಲ್ ಗುಪ್ತಾ ಪಟ್ಟಣದಲ್ಲಿ ಹುಟ್ಟಿ ಬೆಳೆದವ ಒಬ್ಬ ಸಣ್ಣ ಕೈಗಾರಿಕೋದ್ಯಮಿಯಾಗಬೇಕೆಂಬುದು ಆತನ ಇಚ್ಛೆಯಾಗಿತ್ತು ಆದರೆ ಅವನ ಒಲವು ಕೊನೆಗೆ ವ್ಯವಸಾಯದ ಕಡೆಗೆ ಹೊರಳಿತು ಬೇಸಾಯದಲ್ಲಿ ಕಾರ್ಯಸಾಧಿಸಬೇಕೆಂಬ ಛಲ ಉಂಟಾಯಿತು

ಅಮೃತಸರ ಜಿಲ್ಲೆಗೆ ಸೇರಿದ ತರನ್ ತರನ್ ಎಂಬ ಊರಿನಿಂದ ಆರುಮೈಲಿಗಳಿಂದಾಚೆ ಬಾಲಾಚಕ್ ಎಂಬಲ್ಲಿ ಆತ ಒಂದಿಷ್ಟು ಜಮೀನನ್ನು ಕೊಂಡಿದ್ದ ಅದು ಪಾಳು ಜಮೀನು ಒಂದು ಸಣ್ಣ ಕಾರ್ಖಾನೆ ಸ್ಥಾಪಿಸಲೆಂದು ಕೊಂಡಿದ್ದ ಈ ಜಮೀನಿನಲ್ಲಿಯೇ ಏಕೆ ಬೇಸಾಯ ಮಾಡಬಾರದೆಂದು ಆತನಿಗೆ ಮನಸ್ಸಾಯಿತು. ಎಲ್ಲರೂ ಆತನ ಈ ಯೋಜನೆಯನ್ನು ಕೇಳಿ ಅಪಹಾಸ್ಯ ಮಾಡಿದರು ಭೂಮಿಯಲ್ಲಿ ಉಪ್ಪಿನ ಅಂಶ ವಿಪರೀತವಿದ್ದ ಕಾರಣ ಅದು ಬೇಸಾಯಕ್ಕೆ ಯೋಗ್ಯವೆನಿಸಲಿಲ್ಲ ಆದರೂ ನಿರಾಶಗೊಳ್ಳದೆ ಆತ ಬ್ಲಾಕ್ ಅಧಿಕಾರಿಗಳ ಬಳಿಗೆ ಹೋಗಿ ಸಲಹೆ ಕೇಳಿದ ಸಲಹೆಯೂ ದೊರಕಿತು ಒಂದಿಷ್ಟು ಹಣ ಸಹಾಯವೂ ಲಭಿಸಿತು.

ಹೀಗೆ ಸರ್ಕಾರದಿಂದ ದೊರೆತ ಹಣಸಹಾಯವನ್ನು ತನ್ನ 50 ಎಕರೆ ಜಮೀನಿನಲ್ಲಿ ಕೊಳವೆ ಬಾವಿ ಹಾಕಲು ವಿನಿಯೋಗಿಸಿದ. ಹೀಗೆ ನೀರಾವರಿ ಸೌಕರ್ಯ ಲಭಿಸಿತು ಅನಂತರ ಬ್ಲಾಕ್ ಅಧಿಕಾರಿಗಳ ಸಲಹೆಯಂತೆ ಗೊಬ್ಬರವನ್ನು ಜಮೀನಿಗೆಲ್ಲ ಹಾಕಿದ ಚೆನ್ನಾಗಿ ಕಂಪೋಸ್ಟ್ ಆದ ಗೊಬ್ಬರದ ಜೊತೆಗೆ ನಿರ್ದಿಷ್ಟ ಪ್ರಮಾಣದಲ್ಲಿ ನೈಟ್ರೋಜಿನಸ್, ಪೊಟಾಸಿಕ್ ಮತ್ತು ಫಾಸ್ಫೇಟು ರಾಸಾಯನಿಕ ಗೊಬ್ಬರಗಳನ್ನು ಸೇರಿಸಿ ಹಾಕಿದ ಎಲೆ ಗೊಬ್ಬರಕ್ಕಾಗಿ ಒದಗಿಬರುವ ಧೈಂಚಾ ಇತ್ಯಾದಿಗಳ ಬೆಳೆಯನ್ನೂ ತೆಗೆದ. ಕೊಳೆಯುವ ಹಸಿರೆಲೆಗಳು ಭೂಮಿಯಿಂದ ಲವಣದ ಅಂಶವನ್ನು ತೆಗೆಯಲು ಸಹಾಯಕವಾಗುತ್ತವೆ ಮತ್ತು ಅದರ ದುಷ್ಪರಿಣಾಮವನ್ನೂ ತಗ್ಗಿಸುತ್ತವೆ.

೧೯೫೪ರಲ್ಲಿ ಹೀಗೆ ಆರಂಭವಾದ ಬೇಸಾಯ ಪ್ರಯತ್ನಗಳ ಪರಿಣಾಮವಾಗಿ ಒಮ್ಮೆ ಬಂಜರು ಬಿದ್ದಿದ್ದ ಭೂಮಿ ಫಲವತ್ತಾದ ಭೂಮಿಯಾಗಿ ಪರಿಣಮಿಸಿತು. ಇದೇ ಭೂಮಿಯಲ್ಲಿ ಆತ ಹತ್ತಿ ಮತ್ತು ಕಬ್ಬು ಎರಡನ್ನೂ ಬೆಳೆಯುತ್ತಾನೆ.

ಈ ಜಮೀನಿನಲ್ಲಿ ಇಂದು ಎಕರೆಗೆ ೪೧ ಮಣಗಳಷ್ಟು ಭತ್ತ ಬೆಳೆಯಲ್ಪಡುತ್ತಿದೆ ಎಕರೆಗೆ ೧,೦೦೦ ಮಣಗಳಷ್ಟು ಕಬ್ಬಿನ ಬೆಳೆ ಬರುವ ನಿರೀಕ್ಷೆ ಸಹ ಇದೆ

ಹೆಚ್ಚು ಪ್ರಮಾಣದಲ್ಲಿ ಕಬ್ಬಿನ ಫಸಲು

ಆಧುನಿಕ ಬೇಸಾಯ ವಿಧಾನಗಳನ್ನು ಅನುಸರಿಸುವುದರ ಮೂಲಕ ಲಾಭಗಳಿಸಿರುವ ಇನ್ನೊಬ್ಬ ರೈತನೆಂದರೆ ದೆಹಲಿಯ ನಾಜಫ್ ಘರ್ ಬ್ಲಾಕಿನಲ್ಲಿರುವ ಮಿತ್ರಾಂತ್ ಗ್ರಾಮದ ನಿವಾಸಿ ಚೌಧುರಿ ಮಾಮ್ ಚಂದ್ ಒಂದು ಎಕರೆ ಜಮೀನಿನಲ್ಲಿ ಬೆಳೆದ ಕಬ್ಬಿನಿಂದ ೧೨೫ ಮಣಗಳಷ್ಟು ಬೆಲ್ಲ ತೆಗೆಯುವ ಸಾಹಸ ಅವನದು

ಇದಕ್ಕಾಗಿ ಅವನು ಅನುಸರಿಸುವ ವಿಧಾನ ವೈಜ್ಞಾನಿಕವಾದುದು ಅದು ಅವನು ವಹಿಸಿದ ಶ್ರದ್ಧೆಯ ಪ್ರತೀಕವಾಗಿದ್ದಿತು ಇದರ ಫಲವಾಗಿ ನಾಲ್ಕು ಎಕರೆ ಜಮೀನಿನ ಫಸಲು ಅವನಿಗೆ ೩,೨೦೦ ರೂಗಳ ಲಾಭವನ್ನು ಒದಗಿಸಿತು

ದ್ರಾಕ್ಷಿಯ ಬೆಳೆಯಲ್ಲಿ ಸಾಧನೆ

ಮಧುರೈ ಜಿಲ್ಲೆಯಲ್ಲಿರುವ ಕುಮಾಯುಗೌಂಡನ ತಟ್ಟಿಗ್ರಾಮದ ಕೆ. ಪಳನಿವೇಲು ಇನ್ನೊಬ್ಬ ಸಾಹಸಿ ರೈತ. ದ್ರಾಕ್ಷಿಯ ತೋಟದಲ್ಲಿ ಅವನ ಆಸಕ್ತಿ ಒಂದೇ ಒಂದು ಎಕರೆ ಫಸಲಿನಲ್ಲಿ ಆತ ವರ್ಷಕ್ಕೆ ೭,೦೦೦ ರೂಗಳ ಸಂಪಾದನೆ ಮಾಡುತ್ತಿದ್ದಾನೆ

ಗೊಬ್ಬರವನ್ನು ತುಂಬಾ ಹದವಾಗಿ ಉಪಯೋಗಿಸುವುದೇ ಅವನ ಉಪಾಯ ಹಂತ ಹಂತದಲ್ಲೂ ಅವನು ಸಾಕಷ್ಟು ಎಚ್ಚರಿಕೆ ವಹಿಸಿ ಕೆಲಸಮಾಡುತ್ತಾನೆ ವ್ಯಾಪಾರದ ದೃಷ್ಟಿ ಮತ್ತು ಉತ್ತಮ ಬೆಳೆ ತೆಗೆಯುವ ವೈಜ್ಞಾನಿಕ ವಿಧಾನಗಳು— ಎರಡೂ ಸೇರುವುದರಿಂದ ಅವನ ಸಾಧನೆ ತುಂಬಾ ಲಾಭದಾಯಕವೂ ಹೌದು

ರಾಜಕೀಯ

(೧ನೇ ಪುಟದಿಂದ)

ಕೆ ದೂರ ಧ್ಯೇಯವಾಗಿದೆ ಇದಕ್ಕಾಗಿಯೇ ಅವರು ಬಹು ವಿಧದ ಆಟಗಳನ್ನು ಆಡುವ ಸೋಗನ್ನು ಧರಿಸಿದ್ದಾರೆ

ಈ ಸಂದರ್ಭದಲ್ಲಿ ರಶ್ಯದಲ್ಲಿ ಲೆನಿನ್ ಮಹಾಶಯನೆಸಗಿದ ಸಾಹಸವನ್ನು ತುಸು ಸ್ಮರಿಸಿಕೊಳ್ಳಬೇಕಾಗುತ್ತದೆ ಅಲ್ಲಿನ ಸೋಷಿಯಲ್ ಡೆಮೊಕ್ರೆಟಿಕ್ ಪಕ್ಷವನ್ನು ಪ್ರತ್ಯಕ್ಷ ಮಾರ್ಗದಲ್ಲಿ ಸೋಲಿಸುವುದು ದುಸ್ತರವೆನಿಸಿದಾಗ, 'ಸೈನ್ಯ', ಸಹಕಾರ—ಮೈತ್ರಿ ಎಂಬ ಪದಗಳ ಮಾಯೆಯನ್ನು ಬೀರಿ, ಆ ಪಕ್ಷದೊಡನೆ ಕೂಡಿಕೊಂಡು ಮುಂದೆ ಕಮ್ಯೂನಿಸ್ಟೇತರ ಪಕ್ಷಗಳನ್ನೂ ಮೂಲೆಗೆ ತಳ್ಳಿ ಮೆಟ್ಟಿಬಿಟ್ಟನೆಂಬ ಸತ್ಯಘಟನೆಯನ್ನು ಜ್ಞಾಪಿಸಿಕೊಂಡರೆ, ಭಾರತೀಯ ಕಮ್ಯೂನಿಸ್ಟರು ಈಗಾಗಲೇ ಎಷ್ಟು ದೂರ ನಡೆದಿದ್ದಾರೆಂದು ಊಹಿಸಿಕೊಳ್ಳಬಹುದು ಇಂತಹ ಮಂಕುಬೂದಿಯನ್ನೆರಚಿ ಸುಲಭದಲ್ಲಿ ಭಾರತೀಯ ಜನತೆಯನ್ನು ವಂಚಿಸಿಬಿಡಬಹುದೆಂದವರು ಭಾವಿಸಿಕೊಂಡಿದ್ದಾರೆ ಕೇರಳದಲ್ಲಿಯೂ ತಳವೂರಲು ಇದರಿಂದ ಆಸ್ಪದ ದೊರೆಯುವುದು ಇಂದು ರಾಜಗದ್ದುಗೆಯಲ್ಲಿ ವಿರಾಜಿಸುತ್ತಿರುವ ಕಾಂಗ್ರೆಸ್ಸನ್ನು ಮೋಸದಿಂದ ಒಳಗುಮಾಡಿಕೊಂಡು ತಮ್ಮ ಬೇಳೆಯನ್ನು ಬೇಯಿಸಿ ಮುಂದೆ ರಶ್ಯನ್ ಅಥವಾ ಚೀನೀ ಸಾಮ್ರಾಜ್ಯದಂತೆ 'ಕೆಂಪು ಭಾರತ'ವನ್ನೇ ಕಟ್ಟಬಹುದೆಂದವರು ಯೋಚಿಸಿದಂತೆ ತೋರುತ್ತದೆ

ಕಮ್ಯೂನಿಸ್ಟರ ನಿಜಬಣ್ಣವನ್ನು ಅವರೇ ಬಯಲುಮಾಡಿಕೊಂಡಿದ್ದಾರೆ ತಮಗೆ ರಾಷ್ಟ್ರೀಯತೆ ಮುಖ್ಯವಲ್ಲ, ಭಾರತದ ಐಕ್ಯವಾಗಲಿ, ಸಮೃದ್ಧಿಯಾಗಲಿ ಅಪೇಕ್ಷಣೀಯವಲ್ಲ ಎಂಬುದನ್ನವರು ತಮ್ಮ ಕೃತ್ಯಗಳಲ್ಲಿಯೇ ಇದುವರೆಗೆ ತೋರಿಸಿದ್ದಾರೆ ತಮ್ಮ ವಿದೇಶನಿಷ್ಠೆಯನ್ನೇ ಪದೇ ಪದೇ ಪ್ರದರ್ಶಿಸುತ್ತಿರುವ ಈ ಕಮ್ಯೂನಿಸ್ಟರ ಬಣ್ಣದ ಮಾತಿಗೆ ಮೊದಮೊದಲು ಪ್ರಧಾನಿ ನೆಹರೂ ತುಸು ಕಿವಿಗೊಡುತ್ತಿದ್ದರೂ ಇಂದಿಗೆ ಅವರಲ್ಲಿಯೂ ಅಂತಹ ಬುದ್ಧಿ ಇರಲಾರದು ಹಿಂದೀ ಚೀನೀ ಭಾಯಿಭಾಯಿ ಎಂದು ಘೋಷಿಸಿಹೋದ ಚೀನೀಯ ಪ್ರಧಾನಿ ಚೌ ಎನ್ ಲಾಯ್ ಅವರು ಈಗ ಅದೇ ಬಾಯಿಯಿಂದ ಸೀಮಾತಿಕ್ರಮಣಕ್ಕೆ ಪ್ರೋತ್ಸಾಹವಿತ್ತು ಭಾರತದ ಮೇಲೆ ನಡೆಯುತ್ತಿರುವ ದರೋಡೆಗೆ ಕಾರಣೀಭೂತರಾಗಿರುವಾಗ ಯಾರನ್ನು ತಾನೇ ನಂಬುವುದು ಸಾಧ್ಯ? ಅಮೃತಸರದ ತಮ್ಮ ಅಧಿವೇಶನದಲ್ಲಿ ಪ್ರಜಾಪ್ರಭುತ್ವತತ್ತ್ವಗಳಲ್ಲಿ ವಿಶ್ವಾಸವನ್ನು ಪ್ರದರ್ಶಿಸಿದ ಈ ಕಮ್ಯೂನಿಸ್ಟರು ಮುಂದೆ ಕೇರಳದಲ್ಲಿ ಅಧಿಕಾರ ಗ್ರಹಣಗೈದಾಗ ಪ್ರಜಾಪ್ರಭುತ್ವವನ್ನೇ ಮೂಲೆಗೆ ತಳ್ಳಿ ತಮ್ಮ ಆಡಳಿತೆಯಿಂದ ರಾಜ್ಯದಲ್ಲಿಯೇ ಅರಾಜಕತೆಯನ್ನು ಪಸರಿಸಿದುದನ್ನು ಎಲ್ಲರೂ ತಿಳಿದಿರುವಾಗ, ಭಾರತೀಯರು ಈ ಕಮ್ಯೂನಿಸ್ಟರ ಮಾತಿನಲ್ಲಿ ವಿಶ್ವಾಸವಿಟ್ಟರೆಂದರೆ, ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದಂತೆಯೇ ಸರಿ ಮಾಯಾಜಾಲಕ್ಕೆ ಸಿಕ್ಕಿ ಬೀಳುವಷ್ಟು ಮೂರ್ಖರು ಭಾರತೀಯರೆಂದೂ ಅಲ್ಲವೆಂಬುದನ್ನು ಅವರು ತಿಳಿದುಕೊಳ್ಳಬೇಕು.

ಇತಿಹಾಸ ಪ್ರಸಿದ್ಧ ಮೀರತ್ ಅಧಿವೇಶನವು ಕಮ್ಯೂನಿಸ್ಟರ ಮನಸ್ಸಿನ ಇಂಗಿತದ ಇನ್ನೊಂದು ಪುಟವನ್ನು ತೆರೆದು ಭಾರತೀಯರೆದುರು ಇಟ್ಟಿದೆ. ಈ ಚಿತ್ರ ನೋಡುವುದಕ್ಕೂ ಕೇಳುವುದಕ್ಕೂ ಊಹಿಸುವುದಕ್ಕೂ ರುದ್ರ ಭಯಾನಕವಿರುವುದು. ರಾಷ್ಟ್ರೀಯತೆ ಹಾಗೂ ಪ್ರಜಾಪ್ರಭುತ್ವತತ್ತ್ವಗಳ ಸಮಾಧಿಯ ಸ್ಮಶಾನ ಸಮಾನವಾದ ಚಿತ್ರವದು! ಈ ಚಿತ್ರವು ಬಾಹ್ಯಪ್ರೇಕ್ಷಣೆಗೆ ಸೊಗಸಾಗಿ ಕಂಡೀತು, ಆದರೆ, ನಾಗರಹಾವಿನ ಕನ್ನಡಕವನ್ನು ಬಯಸಿ, ಅದರ ಹೆಡೆಯನ್ನು ಮುಟ್ಟುವುದು ಮಾತ್ರ ಎಂದೆಂದಿಗೂ ಅಪೇಕ್ಷಣೀಯವಲ್ಲ, ಅದರ ಸೌಂದರ್ಯವನ್ನಷ್ಟೇ ದೂರದಿಂದಲೇ ನೋಡಿ, ನಮ್ಮತ್ತ ಅದು ಹರಿದು ಬಾರದಂತೆ ನೋಡಿಕೊಳ್ಳುವುದು ಮಾತ್ರ ಕೊಲ್ಲುವುದು ಆವಶ್ಯಕವೆಂದು ನಾವು ನಂಬಿಕೊಂಡಿರುವುದಾದರೆ, ದೂರದ ಹುತ್ತಕ್ಕೆ ಅಜ್ಞಾತವಾಸಕ್ಕೆ ಅದನ್ನು ರವಾನಿಸಿಬಿಡಬೇಕು ಭಾರತೀಯ ಕಾಂಗ್ರೆಸ್ ಹಾಗೂ ಇತರ ಪ್ರಜಾಪ್ರಭುತ್ವತತ್ತ್ವದಲ್ಲಿ ವಿಶ್ವಾಸವಿಟ್ಟಿರುವ ಪಕ್ಷಗಳು ಈ ಸತ್ಯಸಂಗತಿಯನ್ನು ತಿಳಿದುಕೊಳ್ಳಬೇಕು, ಭಾರತವನ್ನು ಕೆಂಪು ಭಾರತವಾಗುವಂತೆ ಎಂದೆಂದಿಗೂ ಆಸ್ಪದ ಕೊಡದೆ ಹಚ್ಚಹಸುರಾಗಿಯೇ ಇರಿಸಲು ಶಕ್ತಿಮೀರಿ ಪ್ರಯತ್ನಿಸಬೇಕು, ಈ ಪ್ರಯತ್ನದಲ್ಲಿ ಅವರು ಎಂದೆಂದಿಗೂ ಸೋತು ಹೋಗಲಾರರೆಂದು ಭಾರತೀಯ ಕಮ್ಯೂನಿಸ್ಟರ ಅಂತರಾಳವೂ ಮಾರ್ನುಡಿಯುತ್ತಿರಬಹುದು

ಸೊರಬ

ಸಿಂಡಿಕೇಟ್ ಬೇಂಕಿನ ೧೫೧ನೆಯ ಶಾಖೆಯು ಶಿವಮೊಗ್ಗ ಜಿಲ್ಲೆಯ ಸೊರಬದಲ್ಲಿ ತೆರೆಯಲ್ಪಟ್ಟಿದೆ ನವೆಂಬರ್ ೧೭, ೧೯೫೯ರಂದು

ಕೆ ರಾಜಾ ರಾವ್
ಮೆನೇಜರ್, ಸೊರಬ ಶಾಖೆ

ಟಿ ಎ ಪೈ
ಜನರಲ್ ಮೆನೇಜರ್

ಟಿ ಎಂ ಎ ಪೈ
ಮೆನೇಜಿಂಗ್ ಡೈರೆಕ್ಟರ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ವಾ. ಚಂದಾ ರೂ. 5-75

ಬೆಲೆ: 13 ನ.ಪೈಸೆ

ನವ ಯುಗ

Vol. 39. No. 14.
ವರುಷ ೩೯. ವಾರ ೧೪.

3-12-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಪ್ರಚಲಿತ ಪ್ರಸಂಗ

ಪ್ರಜಾಪ್ರಭುತ್ವದಲ್ಲಿ ಖಾಸಗಿ ವಿಭಾಗದ ಕರ್ತವ್ಯ

ಖಾಸಗಿ ಸಂಸ್ಥೆಗಳು ಪ್ರಜಾಪ್ರಭುತ್ವದಲ್ಲಿ ಜನತೆಯ ಕರ್ತವ್ಯವೇನೆಂಬುದನ್ನು ತೋರಿಸುತ್ತವೆ.

ಅಖಿಲ ಭಾರತ ಕಾಂಗ್ರೆಸ್‍ನ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ಕರ್ನಾಟಕದ ಸಂಚಾರದ ಅವಸರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂದರ್ಶಿಸಿದರು. ಮುಖ್ಯವಾಗಿ ಉಡುಪಿ ಮತ್ತು ಮಂಗಳೂರುಗಳಲ್ಲಿ ಅವರು ಪ್ರಧಾನವಾದ ಕಾರ್ಯಕ್ರಮಗಳನ್ನಿಟ್ಟುಕೊಂಡಿದ್ದರು.

ಮಣಿಪಾಲದಲ್ಲಿ ಭಾರತೀಯ ವೈದ್ಯಕೀಯ ಸಹಾಯಕ ಸಂಸ್ಥೆಯ ಆಶ್ರಯದಲ್ಲಿ ಕಟ್ಟಲಿರುವ ಶ್ರೀ ವಿಶ್ವೇಂದ್ರ ತೀರ್ಥ ಸ್ಮಾರಕವಾದ ಹೆಂಗಸರ ಮತ್ತು ಮಕ್ಕಳ ಚಿಕಿತ್ಸಾಲಯದ ಶಂಕುಸ್ಥಾಪನೆಯನ್ನು ಶ್ರೀಮತಿ ಗಾಂಧಿಯವರು ಮಾಡಿದರು. ಕಾಂಗ್ರೆಸ್ ಅಧ್ಯಕ್ಷೆಯಾದ ಶ್ರೀಮತಿ ಗಾಂಧಿಯವರು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಪ್ರಥಮವಾಗಿ ಭೇಟಿಯಿತ್ತಿರುವರು.

ಮಹಾತ್ಮಾ ಗಾಂಧಿ ಸ್ಮಾರಕ ಕಲಾಶಾಲೆಯಲ್ಲಿ ಈ ಬಗ್ಗೆ ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ಶ್ರೀಮತಿ ಗಾಂಧಿಯವರಿಗೆ ಜಿಲ್ಲೆಯ ಉತ್ತರ ವಿಭಾಗದ ಮೂರು ತಾಲೂಕುಗಳ ಕಾಂಗ್ರೆಸ್ ಸಮಿತಿಗಳ ಪರವಾಗಿ ಶ್ರೀ ಟಿ. ಎ. ಪೈ ಅವರು ಹೂಮಾಲೆಯನ್ನರ್ಪಿಸಿದರು. ಅಲ್ಲದೇ ಮುಂಬರುವ ಕಾಂಗ್ರೆಸ್‍ನ ಬೆಂಗಳೂರು ಅಧಿವೇಶನದ ಯಶಸ್ಸನ್ನು ಬಯಸಿ ಅದರ ವೆಚ್ಚಕ್ಕಾಗಿ ಒಂದು ನಿಧಿಯನ್ನೂ ಸಹಾಯವಾಗಿ ಅರ್ಪಿಸಿದರು. ತದನಂತರ ಎಕೆಡೆಮಿ ಆಫ್ ಜನರಲ್ ಎಜುಕೇಶನ್‍ನ ರಿಜಿಸ್ಟ್ರಾರರಾದ ಡಾ। ಮಾಧವ ಪೈ ಅವರು ಎಕೆಡೆಮಿಯು ಉಡುಪಿ ಹಾಗೂ ಮಣಿಪಾಲಗಳಲ್ಲಿ ವೃತ್ತಿಪರ ಹಾಗೂ ಕಲಾ ಶಾಲೆಗಳನ್ನು ತೆರೆದು ಭಾರತದ ನಕ್ಷೆಯಲ್ಲಿಯೇ ಅವನ್ನು ಚಿರಸ್ಥಾಯಿಗೊಳಿಸಿದ ಬಗೆಯನ್ನು ವಿವರಿಸಿದರು. ಆಮೇಲೆ ಶ್ರೀಮತಿ ಪ್ರೇಮಾ ಎ. ಪೈ ಅವರು ಶ್ರೀಮತಿ ಗಾಂಧಿಯವರ ಉದಾರತೆ ಹಾಗೂ ಸೇವೆಯನ್ನು ಸ್ಮರಿಸಿಕೊಂಡು, ವಿಶ್ವೇಂದ್ರತೀರ್ಥ ಸ್ಮಾರಕ ನಾರೀಶಿಶು ಚಿಕಿತ್ಸಾಲಯದ ಶಂಕುಸ್ಥಾಪನೆಯನ್ನು ಮಾಡುವಂತೆ ಕೇಳಿಕೊಂಡರು.

ಶ್ರೀಮತಿ ಗಾಂಧಿಯವರು ಈ ಕೆಲಸವನ್ನು ನಿರ್ವಹಿಸುತ್ತ, ಎಕೆಡೆಮಿಯಂತಹ ಸಂಸ್ಥೆಯು ಮಾಡಿದ ಮತ್ತು ಮಾಡುತ್ತಿರುವ ಸೇವೆಯನ್ನು ಪ್ರಶಂಸಿಸಿದರು. ಇಲ್ಲಿ ಉತ್ಸಾಹಿಗಳೂ ಮೇಧಾವಿಗಳೂ ಇದ್ದೀರಿ. ಆದುದರಿಂದಲೇ ಪ್ರಜಾಪ್ರಭುತ್ವದಲ್ಲಿ ಖಾಸಗಿ ಸಂಸ್ಥೆ ಅಥವಾ ವ್ಯಕ್ತಿಗಳು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಸುಯೋಗ್ಯ ರೀತಿಯಲ್ಲಿ ಮುನ್ನಡೆಸಿಕೊಂಡು ಬರುತ್ತೀರಿ. ವಿದ್ಯಾಕ್ಷೇತ್ರದಲ್ಲಿ ಮಾತ್ರವಲ್ಲದೇ ಶಿಶು ಸಂರಕ್ಷಣಾ ಕೇಂದ್ರ ಹಾಗೂ ಪ್ರಸೂತಿಕಾಲಯಗಳನ್ನೂ ನೀವು ನಡೆಸಿಕೊಂಡು ಬಂದಿದ್ದೀರಿ. ಸ್ತ್ರೀಯರು ಉತ್ತಮರಾದರೆ, ಸಮಾಜವೇ ಉತ್ತಮವಾದಂತೆ. ಆದುದರಿಂದ ನೀವು ಆದರ್ಶ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದೀರಿ ಎಂದು ಎಕೆಡೆಮಿಯ ಕಾರ್ಯವನ್ನು ಹೊಗಳಿದರು. ನಾವು ವಿಶೇಷಣ ಪದಗಳನ್ನು ಅನ್ಯ ಪದಗಳ ಮೂಲಕ ಅಭಿಪ್ರಾಯವನ್ನು ಪ್ರಕಟಪಡಿಸಲು ಅಸಮರ್ಥರಾದಾಗ ಬಳಸುತ್ತೇವೆ. ಅಲ್ಲಿ ಇಂತಹ ವಿಶೇಷಣಪದಗಳಿಗೆ ತಕ್ಕ ಪಾತ್ರರಾಗಿದ್ದೀರಿ ಎಂದವರು ಹೇಳಿದರು.

ಕಾಂಗ್ರೆಸ್ಸು ದೇಶವನ್ನು ಸತ್ಪಥದಲ್ಲಿ ನಡೆಸಲು ಸೊಂಟ ಕಟ್ಟಿದೆ; ಭಾರತವು ಅನೇಕಾನೇಕ ಅಭಿವೃದ್ಧಿಯ ಯೋಜನೆಗಳನ್ನು ಕೈಗೊಂಡಿದೆ; ಯಶಸ್ವಿಯಾಗಿದೆ. ಭಾರತವಾದರೂ ಪ್ರಗತಿಪಥದಲ್ಲಿ ಸಾಗುತ್ತಿದೆ. ಆದರೆ, ರಾಜಕೀಯ ಪ್ರಚಾರವೇ ನಮ್ಮಲ್ಲಿ ಅತ್ಯಧಿಕವಾದುದರಿಂದ ಜನತೆಯಲ್ಲಿ ಈ ಯೋಜನೆಗಳ ಬಗ್ಗೆ ಅಭಿರುಚಿ ಬೆಳೆದಿಲ್ಲ. ವಿರೋಧಿ ಪಕ್ಷಗಳು ಕಾಂಗ್ರೆಸ್‍ನ್ನು ದೂರುವುದರಲ್ಲಿಯೇ ತಮ್ಮ ಆಯುಷ್ಯವನ್ನು ಸವೆಯಿಸುತ್ತವಲ್ಲದೆ ದೇಶದ ಅಭಿವೃದ್ಧಿಯನ್ನು ಸಾಧಿಸಲು ವಿಧಾಯಕ ಕಾರ್ಯಕ್ರಮಗಳನ್ನು ಅವು ಇಟ್ಟುಕೊಂಡಿಲ್ಲ. ಕಳೆದ ಕೆಲವು ವರ್ಷಗಳಿಂದಲೂ ರಾಷ್ಟ್ರದ ಆಡಳಿತೆಯನ್ನು ನಿರ್ವಹಿಸುತ್ತಿರುವ ಕಾಂಗ್ರೆಸ್ ರಾಷ್ಟ್ರ ಪುನಾರಚನೆಯ ಕಾರ್ಯದಲ್ಲಿ ತತ್ಪರವಾಗಿದೆ. ಈ ಪುನಾರಚನೆಯ ಯೋಜನೆಯನ್ನು ನಾವು ಕಾರ್ಯಗತಗೊಳಿಸುವಾಗ ಕೆಲವೆಡೆ ತಪ್ಪಿಬಿದ್ದಿರಬಹುದು. ಆದರೆ, ಕೇವಲ ಅಷ್ಟಕ್ಕಾಗಿಯೇ ರಂಪಾಟವೆಬ್ಬಿಸುವುದು ಸರಿಯಲ್ಲ. ನಾವು ಮಾಡಿದ ತಪ್ಪುಗಳನ್ನು ಯಾವಾಗಲೂ ತಿದ್ದಿ ಸರಿಪಡಿಸಿಕೊಳ್ಳಲು ಸಿದ್ಧರಿದ್ದೇವೆ. ಹೀಗೆ ಆಗಿರುವ ತಪ್ಪುಗಳೆಲ್ಲವೂ ಕೇವಲ ಕಾರ್ಯಗತಗೊಳಿಸುವ ವಿಧಾನದಿಂದಲೇ ಘಟಿಸಿರುವುವಲ್ಲದೇ ಮೂಲ ತತ್ತ್ವ ಅಥವಾ ಧೋರಣೆಗಳಿಂದಲ್ಲ ಎಂದು ಶ್ರೀಮತಿ ಇಂದಿರಾ ಗಾಂಧಿಯವರು ತಿಳಿಸಿದರು.

ಭಾರತ-ಚೀನ ಸೀಮಾ ವಿವಾದವನ್ನು ಎತ್ತಿಕೊಂಡು ಶ್ರೀಮತಿ ಗಾಂಧಿಯವರು ಭಾರತದ ನಿಲುವೆಯನ್ನು ಸಂಪೂರ್ಣವಾಗಿ ಸಮರ್ಥಿಸಿದರು. ಭಾರತವು ಮತ್ತಾವ ದಾರಿಯನ್ನೂ ಹಿಡಿಯುವುದು ಅಸಾಧ್ಯವೆಂದವರು ಹೇಳಿ, ಇದಕ್ಕಾಗಿ ಗುಲ್ಲೆಬ್ಬಿಸುವ ಆವಶ್ಯಕತೆಯಿಲ್ಲ ಎಂದರು. ನಮ್ಮ ಭದ್ರತೆಯನ್ನು ಕಾಪಾಡುವ ಶಕ್ತಿ ನಮ್ಮಲ್ಲಿದೆ; ಇಡಿ ಗಡಿ ರಕ್ಷಣೆಯ ಹೊಣೆಗಾರಿಕೆಯನ್ನು ಸೇನೆಯ ಕೈಗೆ ಒಪ್ಪಿಸಲಾಗಿದೆ. ನಾವು ಈ ಬಗ್ಗೆ ವಿಶೇಷ ಕಳವಳವನ್ನು ಹೊಂದಬೇಕಾದ ಪ್ರಮೇಯವಿಲ್ಲ. ಆದರೂ ರಾಷ್ಟ್ರದ ಉನ್ನತಿಗಾಗಿ, ದೇಶದ ರಕ್ಷಣೆಗಾಗಿ ಐಕ್ಯವನ್ನು ಕಾಪಾಡಿಕೊಂಡು ಬರುವತ್ತ ನಾವು ಅತ್ಯಧಿಕ ಗಮನವೀಯಬೇಕು. ಇದನ್ನು ಬಿಟ್ಟು ಉದ್ರಿಕ್ತರಾಗಿ ಗೊಂದಲವೆಬ್ಬಿಸಿದರೆ ಪ್ರಯೋಜನವಿಲ್ಲ ಎಂದು ಶ್ರೀಮತಿ ಗಾಂ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3.
ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ.... ಇತ್ಯಾದಿ ...

ಕಥಾವಿಹಾರ

ಅವಳ ಎರಡು ಪತ್ರಗಳು

ಗಂಡು ಸಬಲ; ಹೆಣ್ಣು ಅಬಲೆ. ಗಂಡಿನೆದಿರು ಸಬಲೆಯಾಗಿ ನಿಂತು ನ್ಯಾಯವಾದುದನ್ನು ವಾದಿಸುವ ಹಕ್ಕು ಹೆಣ್ಣಿಗಿಲ್ಲ. ಈ ಅಧಿಕಾರ ಹೆಣ್ಣಿಗೆ ದೊರೆಯಬೇಕು; ಅಥವಾ ಗಂಡು ಹೆಣ್ಣಿನ ನ್ಯಾಯವಾದ ವನ್ನು ಗೌರವಿಸಬೇಕು. ಇಲ್ಲದೆ ಹೋದರೆ ....?

ನಲ್ಮೆಯ ಸೋದರ,

ನಮ್ಮ ಪರೀಕ್ಷೆ ಮುಗಿದು ಇಂದಿಗೆ ಇಪ್ಪತ್ತೆರಡು ದಿನಗಳು ಉರುಳಿದುವು. ನಾನು ಪರೀಕ್ಷೆಯಲ್ಲಿ ಸಾಧಾರಣ ಮಟ್ಟಿಗೆ ಮಾಡಿದ್ದೇನೆ. ನೀನು ಉತ್ತಮವಾಗಿಯೇ ಮಾಡಿರಲಿಕ್ಕೆ ಸಾಕೆಂದು ಭಾವಿಸುತ್ತೇನೆ. ನನಗೆ ತೇರ್ಗಡೆಹೊಂದುವ ಧೈರ್ಯವಿಲ್ಲ. ಆದರೂ ಈಗ ಸಂತೋಷದಿಂದಲೇ ಇದ್ದೇನೆ! ಈ ಪರೀಕ್ಷೆ ಮುಗಿಯುವುದರೊಳಗೆ ನನ್ನ ಅಗ್ನಿಪರೀಕ್ಷೆಯೋ ಎಂಬಂತೆ ನಡೆದ ಘಟನೆಯೊಂದರಿಂದ ಬಹಳ ಬೇಸತ್ತ ನಾನು ಈಗ ಅದನ್ನು ಜಯಿಸಿ ಆ ಕೊಳಕು ಪ್ರದೇಶದಿಂದ ದೂರಾದುದರಿಂದ ಪಂಜರದಿಂದ ಹೊರ ಬಿಡಲ್ಪಟ್ಟ ಗಿಳಿಯಂತೆ ಸುಖವಾಗಿ ಕಾಲ ಕಳೆಯುತ್ತಿದ್ದೇನೆ. ಆ ದುರ್ಘಟನೆ— ಅದರ ವಿಚಾರ ನಿನಗೆ ತಿಳಿದಿರಲಿಕ್ಕಿಲ್ಲ. ಅದಷ್ಟೇ ಅಲ್ಲ, ಅದಕ್ಕೂ ಮೊದಲು ಹಾಗೂ ಅದರ ನಂತರ ನಡೆದ ಎಷ್ಟೋ ವಿಚಾರಗಳನ್ನು ನಿನಗೆ ನಾನು ತಿಳಿಸಿಲ್ಲ. ಅವನ್ನೆಲ್ಲ ಇಲ್ಲಿ ಬರೆಯುತ್ತಿದ್ದೇನೆ.

ನನ್ನ ಹೈಸ್ಕೂಲು ವಿದ್ಯಾಭ್ಯಾಸದ ಕೊನೆಯ ಒಂದು ವರ್ಷದ ಅವಧಿಯನ್ನು ನಾನು, ನೀನು ಮತ್ತು ನಿನ್ನ ಮಿತ್ರರೀರ್ವರು ಒಂದೇ ಮನೆಯಲ್ಲಿ, ಒಡಹುಟ್ಟಿದ ಸಹೋದರ, ಸಹೋದರಿಯರಂತೆ ಕಳೆದೆವು. ಈಗಿಲ್ಲದ ಆ ಜೀವನದ ನೆನಪು ನನ್ನನ್ನೀಗ ದುಃಖಕ್ಕೀಡುಮಾಡುತ್ತಿದೆ. ಆಗ ನಾವಾಡಿದ ಆಟಗಳು, ಮಾತುಕತೆಗಳು—ಚಲಚ್ಚಿತ್ರದ ಸುರುಳಿಯಂತೆ ಕಣ್ಣೆದುರು ಹಾಯ್ದುಹೋದಂತೆ ಭಾಸವಾಗುತ್ತಿದೆ. ಅವುಗಳ ನೆನಪಿನಿಂದ ದುಃಖಹೊಂದುವಂತೆ, ಆ ತೆರದ ಜೀವನ— ನನ್ನ ಅದೃಷ್ಟವೆಂದು ಭಾವಿಸಿದಾಗ ಸಂತೋಷಹೊಂದುತ್ತೇನೆ. ಆದರೆ ಅವೆಲ್ಲವುಗಳ ಮಧ್ಯೆ ಆ ಘಟನೆ ಬೆಲ್ಲದೊಳಿಲ್ಲುವಾಗ ಅದರೊಳಗೆ ಅಡಗಿದ್ದ ವಿಷದಂತೆ ಭಾಸವಾಗುತ್ತದೆ. ಆದರೂ ಅದರಿಂದ ಪಾರಾಗಿ ಬಂದಿರುವೆನೆಂಬುದೇ ಮನಸ್ಸಿಗೊಂದು ನೆಮ್ಮದಿ.

ನೆಮ್ಮದಿಯಲ್ಲೂ ಆ ನೆನಪು ನನ್ನನ್ನು ಆಗಾಗ ಕಾಡುತ್ತಲೇ ಇದೆ. ಆ ಘಟನೆಯನ್ನು ನೆನಸಿದರೇ ನನ್ನ ಮೈ ನಡುಗುತ್ತಿದೆ. ಆತ—ಅವನ ಹೆಸರೆತ್ತಲೂ ನನಗೆ ಅಸಹ್ಯವೆನಿಸುತ್ತಿದೆ ಮೊದಮೊದಲು ಅವನು ನಿಮ್ಮೆಲ್ಲರೊಡನೆ ಸ್ನೇಹಭಾವದಿಂದ ವರ್ತಿಸುತ್ತಿದ್ದುದರಿಂದ ಆತನ ಗುಣ ನಡತೆ ಕೂಡಾ ನಿಮ್ಮೆಲ್ಲರಂತೆ ನಿಷ್ಕಲ್ಮಷವಾದುದೆಂದು ನಾನರಿತಿದ್ದೆ. ಆದರೆ ಆತ ಹಾಗಿರಲಿಲ್ಲ— ಆತ ಚಂದನದ ತೋಟದೊಳಗೆ ಬೆಳೆದ ಕಾಸರಕನ ಮರ. ಈ ಸತ್ಯ ಅರಿಯಲು ನನಗೆ ಬಹಳ ದಿನ ಬೇಕಾಗಲಿಲ್ಲ.

ಅಂದು—ರಾತ್ರಿ ನೀವೆಲ್ಲ ಬಯಲಾಟಕ್ಕೆ ತೆರಳಿದ್ದೀರಿ ನೋಡಿ— ನನಗೆ ನಿದ್ದೆಗೆಡುವಂತಾಗದ ಕಾರಣ ನಾನು ಕೋಣೆಯಲ್ಲಿಯೇ ಉಳಿದೆ. ನಾನು ನಿದ್ದೆಯಲ್ಲಿದ್ದಾಗ ಯಾರೋ ಬಾಗಿಲು ಬಡಿದುದರಿಂದ ಎಚ್ಚತ್ತೆ. ಅಲ್ಲಿಗೆ ಬಂದುದು ಮತ್ತಾರಲ್ಲ: ಆತನೇ— ನಿನ್ನ ಮಿತ್ರ ಬಸ್ ಕಂಡಕ್ಟರ್ ಸುಂದರ. ತನ್ನೊಡನಿದ್ದ ಬೆಂಕಿಕಡ್ಡಿ ತೀರಿದುದರಿಂದ ನನ್ನೊಡನೆ ಕೇಳಿದ. ನಾನು ಎದ್ದು ಕೋಣೆಯ ಬಾಗಿಲು ತೆರೆದು ಆತನಿಗೆ ಬೆಂಕಿಪೆಟ್ಟಿಗೆಯನ್ನಿತ್ತೆ. ಪೆಟ್ಟಿಗೆಯ ಬದಲಾಗಿ ನನ್ನ ಕೈಯನ್ನೇ ಹಿಡಿದುಬಿಟ್ಟ. ಆದರೆ ನಾನು ಕೂಡಲೇ ಕೈ ಕೊಸರಿಕೊಂಡೆ. ಬೆಂಕಿಪೆಟ್ಟಿಗೆ ತೆಗೆದುಕೊಂಡು ಆತ ತನ್ನ ಕೋಣೆಗೆ ತೆರಳಿದ.

ಅಂದು ರಾತ್ರಿ ನನಗರಿವಾಗಲಿಲ್ಲ— ಥಟ್ಟನೆ ಕತ್ತಲೆಯಲ್ಲಿ ಕಾಣದೇ ಆತನು ನನ್ನ ಕೈಹಿಡಿದಿರಬಹುದೆಂದೆಣಿಸಿ ನಾನು ಸುಮ್ಮನುಳಿದೆ ನೀವೆಲ್ಲರೂ ನನ್ನ ಸೋದರರು— ನಿಮ್ಮ ನಡತೆಯ ಮೇಲೆ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಅಂತೆಯೇ ನಿಮ್ಮೊಡನೆ ಏಕ ಮತದಿಂದ, ಎಲ್ಲರೊಳಗೊರ್ವನಾಗಿ ಓಡಾಡಿಕೊಂಡಿದ್ದ ಆತನ ಮೇಲೆ ಅಂತಹ ಸಂಶಯದ ಕಲ್ಪನೆಯೂ ನನ್ನಲ್ಲಿ ಮೂಡಲಿಲ್ಲ. ಹಾಗಾಗಿ ನಾನು ನಿಮ್ಮೆಲ್ಲರೊಡನೆ ನಡೆದುಕೊಂಡಂತೆಯೇ ಅವನೊಡನೆಯೂ ವ್ಯವಹರಿಸುತ್ತಿದ್ದೆ. ಆತನೊಡನೆ ಎಂದಿನಂತೆ ಅವಶ್ಯವಿದ್ದ ಮಾತುಕತೆಯಾಡುತ್ತಿದ್ದೆ. ಅವನೂ ಆಗಾಗ ನನ್ನೊಡನೆ ಲೈಬ್ರರಿ ಪುಸ್ತಕ ಕೇಳಲು ಬರುತ್ತಿದ್ದ; ನಾನು ಕೊಡುತ್ತಿದ್ದೆ. ಆದರೆ ಆತನ ವರ್ತನೆಯಲ್ಲಿ ಮಾತ್ರ ದಿನ ಹೋದಂತೆ ಏನೋ ಬದಲಾವಣೆಯಾಗುತ್ತಿದ್ದುದು ಅವನ ನಡತೆಯ ಸಂಪೂರ್ಣ ಪರಿಚಯವಾದ ನಂತರ ನನಗೆ ತಿಳಿಯಿತು. ನನ್ನೊಡನೆ ಮಾತನಾಡುವಾಗ ನನ್ನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದ. ಆ ನೋಟ.... ಅದರಲ್ಲೇನೋ ವಿಶೇಷತೆಯಿತ್ತು. ಅದು ಆಗ ನನಗೆ ತಿಳಿದಿರಲಿಲ್ಲ ಪುಸ್ತಕಗಳನ್ನು ಹಿಂತಿರುಗಿಸುವಾಗ ಬೇಕೆಂದೇ ನನ್ನ ಕೈಗೆ ತನ್ನ ಬೆರಳು ಸೋಂಕಿಸಿ ನಂತರ sorry' ಎಂದು ಬಿಡುತ್ತಿದ್ದ. ಆಗ ನಾನು ಸುಮ್ಮನೆ ನಕ್ಕು ಬಿಡುತ್ತಿದ್ದೆ. ನನ್ನ ಆ ನಗುವಿಗೆ ಅವನು ಅಪಾರ್ಥ ಕಲ್ಪಿಸಿಕೊಂಡನೆಂಬುದು ನನಗಾತ ಬರೆದ ಪತ್ರವೊಂದರಿಂದ ಅರಿತೆ. ಆ ಪತ್ರ....ನನ್ನ ಜೀವನದಲ್ಲಿ ಅಂತಹ ಪತ್ರವೊಂದು ನನ್ನ ಕೈ ಸೇರುವುದು ಅದು ಹೊಸತು ಕಾದಂಬರಿಗಳಲ್ಲಿ ಬರುವಂತಹ ಪ್ರೇಮ ಪತ್ರಗಳಿವೆ ಎಲ್ಲಾ— ಅಂತಿತ್ತದು. ಅದರಲ್ಲಿ ಆತ ಬರೆದಿದ್ದ;ಅವನಿಗೆ ನನ್ನ ಮೇಲೆ ಪ್ರೇಮವಿತ್ತಂತೆ. ನನಗೂ ಅವನ ಮೇಲೆ ಪ್ರೇಮವಿರಬಹುದೆಂದು—ನಾನು ಆಗಾಗ ಅವನನ್ನು ನೋಡಿ ನಗುವುದರಿಂದಲೇ ಅವನಿಗೆ ತಿಳಿದು ಹೋಗಿತ್ತಂತೆ! ಅಹಾ...ಎಂತಹ ಪ್ರೇಮಪತ್ರ. ಆತ ಅಷ್ಟಕ್ಕೇ ನಿಲ್ಲಿಸಿರಲಿಲ್ಲ. 'ನಾನು ಯಾವುದಾದರೊಂದು ರಾತ್ರಿ ಏಕಾಂತದಲ್ಲಿ ಆತನನ್ನು ಸಂಧಿಸಬೇಕಿತ್ತಂತೆ....ಎಷ್ಟೋ ಗುಪ್ತ ವಿಚಾರಗಳನ್ನು ಮಾತನಾಡಲಿದ್ದಿತಂತೆ....ಮತ್ತೆ....ಇನ್ನೇನೋ....' ಆ ಪತ್ರಕ್ಕೆ ನಾನು ಯಾವ ಉತ್ತರವನ್ನೂ ಕೊಡಲಿಲ್ಲ ಆ ಪತ್ರವೊಂದರಿಂದ 'ಬಿಳಿಯದೆಲ್ಲವೂ ಹಾಲು' ಎಂದರಿತಿದ್ದ ನನ್ನ ಮನಸ್ಸೊಂದು ಪಾಠ ಕಲಿತಂತಾಯಿತು. ಅದರ ನಂತರ ಅವನೂ ನನ್ನೊಡನೆ ಮಾತನಾಡಲಿಲ್ಲ. ನಾನಾತನ ಪತ್ರಕ್ಕೆ ಉತ್ತರಿಸಲಿಲ್ಲವೆಂಬುದೇ ಆತನ ಬೇಸರಕ್ಕೆ ಕಾರಣವಿರಬೇಕು ಪುಸ್ತಕಗಳನ್ನು ಕೇಳಲು ಮಾತ್ರ ನಮ್ಮ ಹೋಟೆಲ್ ಮಾಲಕರ ಚಿಕ್ಕ ಹುಡುಗಿಯನ್ನು ಅಟ್ಟುತ್ತಿದ್ದ;ನಾನು ಕಳುಹಿಸುತ್ತಿದ್ದೆ. ಪ್ರತಿ ಪುಸ್ತಕದಲ್ಲಿ ಅವನ್ನು ಹಿಂತಿರುಗಿಸುವಾಗ ಅಂತಹ ಪತ್ರಗಳಿರುತ್ತಿದ್ದುವು. ಕೊನೆಗೆ ಇದರಿಂದ ಬೇಸರಹೊಂದಿದ ನಾನು 'ಪುಸ್ತಕವಿಲ್ಲ'ವೆನ್ನತೊಡಗಿದೆ. ಅವನೂ ಕೇಳುವುದನ್ನು ನಿಲ್ಲಿಸಿದ.

ಒಂದು ಬಾರಿ ಅಧ್ಯಾಪಕರಿಗೆ ಲೈಬ್ರರಿ ಹಿಂತಿರುಗಿಸುವಾಗ ಪುಸ್ತಕದಲ್ಲಿ ಅವನ ಪತ್ರವಿದ್ದುದನ್ನು ಮರೆತು ಹಾಗೆಯೇ ಕೊಡ ಹೋಗಿದ್ದೆ. ಆದರೆ, ಅಷ್ಟರಲ್ಲಿ ನೆನಪಾಗಿ ಅದನ್ನು ತೆಗೆದಿರಿಸಿಕೊಂಡೆ. ರೂಮಿಗೆ ಬಂದ ಕೂಡಲೇ, ಅಂತಹ ಅಚಾತುರ್ಯ ಮುಂದಾಗದಂತೆ—ಅಷ್ಟರ ತನಕ ಆತನಿಂದ ಬಂದ ಎಲ್ಲಾ ಪತ್ರಗಳನ್ನು ಒಂದೊಂದಾಗಿ ಅಗ್ನಿಗಾಹುತಿ ಮಾಡಿಬಿಟ್ಟೆ.

ನಾನು ಈ ಬಗ್ಗೆ ಅವನಿಗೆ ಯಾವ ಕ್ರಮ ಕೈಗೊಳ್ಳಲೂ ಯೋಚಿಸಲಿಲ್ಲ. ಹಾಗೆ ಯೋಚಿಸಿದ್ದರೆ ಕಷ್ಟವೂ ಇರಲಿಲ್ಲ. ಇದರ ವಿಚಾರವಾಗಿ ಒಂದೇ ಒಂದು ಮಾತನ್ನು ನಮ್ಮ ಹೋಟೆಲ್ ಯಜಮಾನ ಐತಾಳರಿಗೆ ತಿಳಿಸಿದ್ದರೆ ಸುಂದರನೀಗ ಬೀದಿಯವನಾಗಿ ಅಲೆಯಬೇಕಿತ್ತು. ಆದರೆ ನನ್ನ ಮನಸ್ಸು ಅದಕ್ಕೊಪ್ಪಲಿಲ್ಲ. ನಾನೂ ಎಲ್ಲರಂತೆ ರಾಗದ್ವೇಷಾದಿಗಳಿಗೊಳಗಾದ ಮಾನವಳಾದರೂ ನನ್ನಲ್ಲಿ ಧ್ಯೇಯವೆಂಬುದೊಂದಿತ್ತು. ನನ್ನಿಂದಾಗಿ ಇನ್ನೊಬ್ಬರಿಗೆ ತೊಂದರೆ ಯಾಗುವುದಾಗಲೀ, ಅವರ ಮರ್ಯಾದೆಗೆ ಧಕ್ಕೆ ತರುವುದಾಗಲೀ ನನ್ನ ಒಡಲೊಪ್ಪದ ಕೆಲಸವದು. ನನ್ನ ಈ ಒಂದು ಧ್ಯೇಯದಿಂದ ನಾನಂದು ಹೊರಗಾಗಿದ್ದರೆ. ಸುಂದರನಿಂದು ತನ್ನ ಹೊಟ್ಟೆಯ ಪಾಡಿಗಾಗಿ ಕೈಕೊಂಡ ಈ ವೃತ್ತಿಯಿಂದಲೇ ದೂರಾಗಬೇಕಿತ್ತು. ಆತನೂ ಬಡವ; ವಿದ್ಯೆ ಕಲಿತ. ನೌಕರಿಗಾಗಿ ಅಲೆದೆದು, ಬೇರೆ ದಾರಿಗಾಣದೇ ಈ ವೃತ್ತಿ ಹಿಡಿದಿದ್ದ. ಅವನ್ನೆಲ್ಲ ಯೋಚಿಸಿಯೇ ನಾನಂದು ತಡೆದಿದ್ದೆ. ಆದರೆ ಇಂದು ಮಾತ್ರ ಅಂದೇ ಆತನ ವಿಚಾರದಲ್ಲಿ ಯೋಗ್ಯಕ್ರಮ ಕೈಕೊಳ್ಳಬೇಕಿತ್ತೆಂದು ತೋರುತ್ತಿದೆ ಹೌದು....ನಾನು ಅಂದೇ ಹಾಗೆ ಮಾಡಬೇಕಿತ್ತು, ಇಲ್ಲವಿದ್ದರೆ ಪುನಃ ನಾನೊಮ್ಮೆ ಅಂತಹ ಅಗ್ನಿ ಪರೀಕ್ಷೆಗೆ ಒಳಗಾಗಬೇಕಿದ್ದಿರಲಿಲ್ಲ. ಆ ಪರೀಕ್ಷೆ ನಡೆದೇ ನಡೆಯಿತು........ಆದರೆ—ದೈವವನ್ನೆಡೆಗಿತ್ತು. ನಾನು ವಿಜಯಿಯಾದೆ....

ಆ ದಿನ.... ...

ನನ್ನ ಜೀವಮಾನದಲ್ಲಿ ನಾನೊಂದು ಅತೀವ ಯಾತನೆಯನ್ನು ಅನುಭವಿಸಿದ ದಿನ.......

ಅಂದು ನಡೆದ ಆ ಘಟನೆ....ನೆನಸಿದರೆ ಈಗಲೂ ನಾನೊಂದು ಅಸಹ್ಯ ಸಂಕಟಕ್ಕೊಳಗಾಗುತ್ತಿದ್ದೇನೆ.

ಅಂದು ನನ್ನ ಅದೃಷ್ಟ ಕೆಟ್ಟಿದ್ದರೆ... ಆ ಕೆಟ್ಟ ಘಳಿಗೆಯಲ್ಲಿ— ನನ್ನ ಬಾಳಿನ ಕತ್ತಲಲ್ಲಿ ಮೂಡಿಬಂದ ಸೂರ್ಯನಂತೆ ನೀನಲ್ಲಿಗಾಗಮಿಸದಿದ್ದರೆ.. . ..ನಾನಿಂದು ....ನಾನಿಂದು....

........ಅದನ್ನು ನನ್ನಿಂದ ಎಣಿಸಲೂ ಆಗದು.

ನೀನು ನನ್ನ ಪಾಲಿನ ದೇವರಂತೆ ಸಂದರ್ಭಕ್ಕೊದಗಿಬಂದೆ. ನನ್ನ ಪೂರ್ವಜನ್ಮದ ಪುಣ್ಯವೇ ನಿನ್ನನ್ನಲ್ಲಿಗೆ ಕರೆತಂದಿರಬೇಕು. ಇಲ್ಲವಾದರೆ ಊರಿಗೆಂದು ಹೊರಟ ನೀನು ಊರಿಗೆ ತೆರಳದೇ ಹಿಂತಿರುಗಬೇಕೆಂದರೆ—ಅದು ವಿಧಿಯ ವೈಚಿತ್ರ್ಯವಲ್ಲದೇ ಬೇರೇನಲ್ಲ.

ಅಂದು........

ನೀವೆಲ್ಲ ವಾರದ ಎರಡು ದಿನಗಳ ರಜೆಗೆಂದು ಊರಿಗೆ ಹೊರಟಿರಿ ಪರೀಕ್ಷೆಗೆ ಆಗ ಉಳಿದುದು ಬರೇ ಒಂದು ತಿಂಗಳಾದ ಕಾರಣ ಮನೆಯಲ್ಲಿ ಓದು ಸಾಗದೆಂದು ನಾನು ಹೋಟೆಲಿನಲ್ಲಿಯೇ ಉಳಿದಿದ್ದೆ ನಷ್ಟೆ ನನಗೂ ಮನೆಗೆ ಹೋಗಬೇಕೆಂಬ ಬಯಕೆಯಿತ್ತು.

ಮನೆ—ನನ್ನ ಪಾಲಿಗೆ ಮನೆಯೆಂದೇ ಅಲ್ಲ—ದೇವಾಲಯ—ಮನೆಯಲ್ಲಿದ್ದ ನನ್ನ ತಾಯಿ—ನನ್ನ ಭಾಗದ ದೇವತೆ. ನಿನಗೆ ಇವೆಲ್ಲ ಅರ್ಥವಾಗದು. ನಾನು

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ಪರಿಚಯ

ಕಲಾವಿದ ರಾಜಕಾರಣಿ—ಐಸನ್ ಹಾವರ್

ಆತ್ಮಸಂತೋಷ ಹಾಗೂ ನಿಶ್ಚಿಂತೆಗಾಗಿ ಕಲಾಸಕ್ತರಾದ ರಾಜಕಾರಣಿ ಐಕರು ನುರಿತ ಕಲಾಕಾರರಾಗಿದ್ದಾರೆ.

ದಶಂಬರ ತಿಂಗಳ ಮೊದಲ ವಾರದಲ್ಲಿ ಭಾರತಕ್ಕೆ ಸೌಹಾರ್ದ ಸಂದರ್ಶನವನ್ನೀಯಲಿರುವ ಅಮೆರಿಕದ ಅಧ್ಯಕ್ಷರಾದ ಶ್ರೀ ಐಸನ್ ಹಾವರರು ಯಶಸ್ವೀ ಶಾಸನಾಧಿಕಾರಿಗಳೂ ಸೈನ್ಯಾಧಿಕಾರಿಗಳೂ ಆಗಿರುವಂತೆಯೇ ಕುಶಲ ಕಲಾವಿದರೂ ಹೌದು. ಅಮೆರಿಕೆಯ ಸೈನ್ಯಶಾಖೆಯಲ್ಲಿ ಉನ್ನತಾಧಿಕಾರಿಗಳಾಗಿ ಶ್ರೀ ಐಸನ್ ಹಾವರರು ದುಡಿಯುತ್ತಿದ್ದ ಸಮಯದಲ್ಲಿ ದ್ವಿತೀಯ ಲೋಕಯುದ್ಧವು ಸಂಘಟಿಸಿತ್ತು. ಈ ಅವಸರದಲ್ಲಿ ತಮ್ಮ ಬಿಡುವಿಲ್ಲದ ನಿರಂತರ ಚಟುವಟಿಕೆಗಳಿಂದ ಅವಿಶ್ರಾಂತರಾದ ಶ್ರೀ ಐಕರು ವಿಶ್ರಾಂತಿಯನ್ನು ಬಯಸಿದರು. ಈ ವಿಶ್ರಾಂತಿಯು ಯಾವ ರೀತಿಯಲ್ಲಿ ದೊರೆಯುವುದು ಎಂದು ಆಲೋಚಿಸುವಾಗ ಅಂದಿನ ಬ್ರಿಟನ್ನದ ಪ್ರಧಾನಿಯಾಗಿದ್ದ ಶ್ರೀ ವಿಂಸ್ಟನ್ ಚರ್ಚಿಲ್ಲರು ಕುಂಚವನ್ನು ಹಿಡಿದು ಕಲಾಕೃತಿಯನ್ನು ರಚಿಸುವಂತೆ ಸಲಹೆಯಿತ್ತರು. ಶ್ರೀ ಚರ್ಚಿಲ್ಲರಾದರೋ ಏಕಾಂಗಿಯಾಗಿ ಚಿತ್ರ ಬಿಡಿಸುವ ಹವ್ಯಾಸದಲ್ಲಿ ಆತ್ಮಸಂತೋಷವನ್ನು ಅದಕ್ಕೆ ಮೊದಲೇ ಕಂಡುಕೊಂಡಿದ್ದುದರಿಂದ ಅವರು ತಮ್ಮ ಅಮೆರಿಕನ್ ಮಿತ್ರರಿಗೆ ಈ ಆತ್ಮಸಂತುಷ್ಟತೆಯ ರಹಸ್ಯವನ್ನು ಭೇದಿಸಿಕೊಟ್ಟರು. ಈ ಸಲಹೆಯು ಶ್ರೀ ಐಕರಿಗೆ ಸರಿಯೆಂದು ಕಂಡು ಬಂತು. ಅವರದನ್ನು ಕಾರ್ಯಗತಗೊಳಿಸುವ ಸಂದರ್ಭವನ್ನರಸುತ್ತ ಕುಳಿತಿದ್ದರು. ಆದರೆ, ೧೯೪೭ಕ್ಕೆ ಮೊದಲು ಶ್ರೀ ಐಕರ ಅಭಿಲಾಷೆಯು ಈಡೇರುವುದು ಸಾಧ್ಯವೆನಿಸಲಿಲ್ಲ.



ಶ್ರೀ ಐಸನ್ ಹಾವರರು ಕುಂಚದತ್ತ ಕೈ ಹರಿಸುವಷ್ಟರಲ್ಲಿ ದ್ವಿತೀಯ ಜಾಗತಿಕ ಸಮರವೇ ಮುಕ್ತಾಯಗೊಂಡಿತ್ತು. ಆ ಮೇಲೆ ಅವರು ತಮ್ಮ ಸ್ವದೇಶವಾದ ಅಮೆರಿಕೆಗೆ ಮರಳಿದರು. ಆಗ, ಅವರ್ರ ಸೈನ್ಯದ ಚೀಫ್ ಆಫ್ ಸ್ಟಾಫ್ ಆಗಿದ್ದರು ಈ ಹೊತ್ತಿನಲ್ಲಿ ಕುಶಲ ಕಲಾವಿದರಾದ ಶ್ರೀ ಥಾಮಸ್ ಇ. ಸ್ಟೀವನ್ಸನ್‌ರವರಿಂದ ತಮ್ಮ ಚಿತ್ರವನ್ನು ಬಿಡಿಸಿಕೊಳ್ಳಲು ಅಪೇಕ್ಷಿಸಿದರು. ಶ್ರೀ ಸ್ಟೀವನ್ಸನರ ಕುಶಲ ಕರವು ಕುಂಚವನ್ನು ಲೀಲಾಜಾಲವಾಗಿ ಹರಿಡಿಸುತ್ತಿರುವ ಮೋಜು ಶ್ರೀ ಐಕರಿಗೆ ಚರ್ಚಿಲ್ಲರ ಸಲಹೆಯನ್ನು ಜ್ಞಾಪಕಕ್ಕೆ ತಂದಿತು. ಆಗ, ಕಲಾವಿದರ ಕರಕೌಶಲ, ಅವರ ಕರಕುಂಚಗಳ ಚಲನವಲನಗಳನ್ನು ತದೇಕಚಿತ್ತದಿಂದ ಈಕ್ಷಿಸತೊಡಗಿದ ಐಕರು, "ನಾನೂ ಕುಂಚವನ್ನು ಕೈಗೆತ್ತಿಕೊಳ್ಳಬಯಸುತ್ತೇನೆ" ಎಂದು ಉದ್ಗರಿಸಿಯೇ ಬಿಟ್ಟರು. ಕಲಾವಿದನೂ ಶ್ರೀ ಐಕರನ್ನು ಆಹ್ವಾನಿಸಿಯೇ ಬಿಟ್ಟನು.

ಐಸನ್ ಹಾವರರ ಪ್ರಥಮ ಚಿತ್ರವನ್ನು ಕುರಿತಾಗಿ ನುರಿತ ಕಲಾಗಾರ ಶ್ರೀ ಸ್ಟಿವನ್‌ಸನರು ಈ ರೀತಿ ಹೇಳಿದ್ದಾರೆ; "ನನಗೂ ತುಸು ವಿಶ್ರಾಂತಿ ಬೇಕಾಗಿತ್ತು. ಜನರಲ್ ಐಸನ್ ಹಾವರರ ಚಿತ್ರಣ ಬಹು ಕಷ್ಟಕರವಾಗಿತ್ತು. ಅವರ ಮುಖದ ಅಭಿವ್ಯಕ್ತಿಯು ಬಹು ಬೇಗನೇ ಬದಲಾಯಿಸಿಬಿಡುತಿತ್ತು. ಶ್ರೀ ಐಕರು ತಮ್ಮ ಪತ್ನಿಯನ್ನೇ ಕಲಾಮಾದರಿಯಾಗಿ ಕುಳಿತುಕೊಳ್ಳಬೇಕೆಂದು ಆಹ್ವಾನಿಸಿದರು. ನನ್ನಿಂದ ಯಾವುದೇ ಬಗೆಯಲ್ಲಿ ಯಾವ ಸೂಚನೆಯನ್ನೂ ಬಯಸದೆ ಅತ್ಯಂತ ತೀವ್ರವಾದ ಆಸಕ್ತಿಯಿಂದ ಕೆನ್‌ವಾಸಿನ ಮೇಲೆ ಅನೇಕ ತಾಸುಗಳವರೆಗೆ ಕುಂಚವನ್ನು ಓಡಿಸಿದರು. ತತ್ಪರಿಣಾಮವಾಗಿ ಶ್ರೀಮತಿ ಐಸನ್ ಹಾವರರ ರೂಪವೊಂದು ಅತ್ಯಂತ ವಿಸ್ಮಯಕಾರಕವಾದ ರೀತಿಯಲ್ಲಿ ತೆರೆಯ ಮೇಲೆ ಮೂಡಿಯೇ ಬಿಟ್ಟಿತು. ಈ ಚಿತ್ರವು ಮೂಲವನ್ನು ಹೋಲದೆ ಹೋದರೂ ಆ ಮುಖದ ಭಾವಗಳ ಅಭಿವ್ಯಂಜನೆಯು ಮಾತ್ರ ಸುಂದರವಾಗಿಯೂ ಸುಸ್ಪಷ್ಟವಾಗಿಯೂ ಅಭಿವ್ಯಕ್ತವಾಗಿತ್ತು."

ಹೀಗೆ ಆರಂಭವಾದ ಐಕರ ಕಲಾಭಿವ್ಯಕ್ತಿಯು ದಿನದಿಂದ ದಿನಕ್ಕೆ ಬೆಳೆಯುತ್ತ ಬಂದಿತು. ಇಂದವರು ವಿಶ್ವದಲ್ಲಿ ಸರ್ವಸಂಪನ್ನ ರಾಷ್ಟ್ರವೊಂದರ ಅಧ್ಯಕ್ಷರಾಗಿರುವರಾದರೂ ತಮ್ಮ ಸಂಚಾರಾವಧಿಯಲ್ಲಿ ತಮ್ಮ ಜೊತೆಯಲ್ಲಿ ಚಿತ್ರಣದ ಸಾಮಗ್ರಿಗಳನ್ನು ಕೊಂಡೊಯ್ಯುತ್ತಾರೆ. ಅವರು ಶ್ವೇತಭವನದಲ್ಲಿನ ಶಯನಾಗಾರದ ನಿಕಟದಲ್ಲಿಯೇ ಒಂದು ಚಿತ್ರಶಾಲೆಯನ್ನೂ ಇಟ್ಟುಕೊಂಡಿದ್ದಾರೆ. ಅವರು ವಿಶ್ರಾಂತಿ ಪಡೆಯುವ ದಕ್ಷಿಣ ಜಾರ್ಜಿಯಾ ಸಂಸ್ಥಾನದ ಆಗಸ್ಟಾದಲ್ಲಿನ ಕುಟೀರದಲ್ಲಿಯೂ ಒಂದು ಚಿತ್ರಶಾಲೆಯನ್ನವರು ತೊಡಗಿಸಿದ್ದಾರೆ. ಚಿತ್ರಶಾಲೆಯಲ್ಲಿರಲಿ, ಅಥವಾ ಇನ್ನೆಲ್ಲಿಯೇ ಇರಲಿ, ಇವರು ಚಿತ್ರಕಲೆಯ ಹವ್ಯಾಸವನ್ನು ಬಿಡುವುದಿಲ್ಲ. ಕೊಲರೆಡೊ ಸಂಸ್ಥಾನದಲ್ಲಿರುವ ಪರ್ವತದ ಮರೆಯ ಕೊರಡಿ, ಪೂರ್ವ ಪೆನ್ಸಿಲ್ವೇನಿಯಾದ ವ್ಯವಸಾಯ ಕ್ಷೇತ್ರದ ಮನೆಯಲ್ಲಿ ಮಾತ್ರವಲ್ಲದೆ, ಇನ್ನೂ ಅನೇಕಾನೇಕ ಸ್ಥಳಗಳಲ್ಲಿಯೂ ಬಯಲುಗಳಲ್ಲಿಯೂ ಫ್ರಾನ್ಸಿನ ಅರಮನೆಯೊಂದರ ಕಿಟಕಿಯಲ್ಲಿಯೂ ಶ್ರೀ ಐಕರು ತಮ್ಮ ಕಲಾಭಿರುಚಿಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ಇವರ ಚಿತ್ರಣ ಕಾರ್ಯಕ್ಕೆ ಪ್ರಕೃತಿಯು ಮಾದರಿಯಾಗುವಂತೆಯೇ ಇನ್ನೊಂದು ಚಿತ್ರವೂ ಮಾದರಿಯಾಗಿ ಪರಿಣಮಿಸುತ್ತದೆ. ಆತ್ಮಸಂತೋಷ, ನಿಶ್ಚಿಂತೆಗಳೇ ಶ್ರೀ ಐಕರ ಚಿತ್ರಣದ ಮೂಲೋದ್ದೇಶವಾಗಿವೆ. ತಾವು ರಚಿಸಿದ ಚಿತ್ರಗಳನ್ನು ಕೂಡಿಡುವ ಅಭ್ಯಾಸ ಶ್ರೀ ಐಕರಿಗಿರುವುದು ಕಡಿಮೆಯೆನ್ನಬೇಕು.

ಇಂದಿಗೂ ಶ್ರೀ ಐಕರು ತಮ್ಮ ಚಿತ್ರಗಳನ್ನು ಉಳಿಸುವುದಿಲ್ಲ. ಇವರು ವಿಲಾಸಿ ಚಿತ್ರಗಾರರೆಂದು ಅವರ ಮಿತ್ರರ ಕಿವಿಗೆ ತಿಳಿದುಬಂದಾಗ, ಅವರೆಲ್ಲರೂ ಶ್ರೀ ಐಕರೊಡನೆ ತಮ್ಮ ಕೃತಿಯನ್ನು ಕೊಡುವಂತೆ ಕೇಳತೊಡಗಿದರು. ತಮ್ಮ ಚಿತ್ರವನ್ನು ಯಾಚಿಸಿದವರೆಲ್ಲರಿಗೂ ಶ್ರೀ ಐಕರು ಅವನ್ನು ಅರ್ಪಿಸಿದ್ದಾರೆ. ಇನ್ನು ಕೆಲವನ್ನು ಶ್ವೇತಭವನದಲ್ಲಿ ಇಟ್ಟಿದ್ದಾರೆ. ಈ ಚಿತ್ರಗಳಲ್ಲಿ ಕೆಲವು ಪ್ರಾಕೃತಿಕ ಚಿತ್ರಗಳೊಡನೆ ತಮ್ಮ ಮೊಮ್ಮಕ್ಕಳಿಬ್ಬರ ಚಿತ್ರವೂ ಇರುವವು.

ಶ್ರೀ ಐಸನ್ ಹಾವರರ ಕಲಾಕೌಶಲ ಅದ್ಭುತಪ್ರಕಾರವಾದುದು. ಶ್ರೀಯುತರ ಚಿತ್ರದ ತಂತ್ರ ನೇರವಾದುದು ಹಾಗೂ ಅದರ ಫಲ ಅತಿಸರಳವೆನಿಸಿದರೂ, ಮೊದಲು ಗೆರೆಗೀರುಗಳನ್ನೆಳೆದು ಮಾದರಿಯನ್ನಿವರು ತಯಾರಿಸುವುದೇ ಇಲ್ಲ; ನೇರಾಗಿ ಚಿತ್ರಣಕ್ಕೇನೇ ತೊಡಗುವಷ್ಟಿವರು ಮುಂದುವರಿದಿದ್ದಾರೆ. ಕುಂಚವನ್ನು ಕೈ ಹಿಡಿಯಿತೆಂದರೆ, ಅದು ಗಾಳಿಯಂತೆ ಓಟಕ್ಕೆ ತೊಡಗುತ್ತದೆ. ಚಿತ್ರಣದ ಕೆಲಸವೆಲ್ಲವೂ ಸರಿಯಾಗಿ ಮುಕ್ತಾಯಗೊಂಡಿತೆಂದರೆ ಅವರ ಮುಖದಲ್ಲಿ ನಿಶ್ಚಿಂತೆಯ ಅಪೂರ್ವ ಕಳೆಯೊಂದು ನಲಿಯತೊಡಗುತ್ತವೆ ಆತ್ಮಸಂತೋಷದ ಅಪೂರ್ವ ಆನಂದವನ್ನು ಹೊಂದುತ್ತಾರೆ. ಆದರೆ, ಕೆನ್‌ವಾಸಿನಲ್ಲಿ ಮೂಡಿದ ಚಿತ್ರವು ಅವರ ಮನಸ್ಸಿಗೆ ಒಪ್ಪಿಬಂದಿದ್ದರೆ, ಅದನ್ನು ತೀಕ್ಷ್ಣ ದೃಷ್ಟಿಯಿಂದ ಅವಲೋಕಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಕಲಾವಿದ ಶ್ರೀ ಸ್ಟಿವನ್ಸನರು ಅವರಿಗೆ ಹಲವಾರು ಸೂಚನೆಯನ್ನು ಈಯ ಬಯಸುವರಾದರೂ ಶ್ರೀ ಐಕರು ಪಾಠಗಳನ್ನು ಹೇಳಿಸಿಕೊಳ್ಳಲು ಎಂದಿಗೂ ಇಚ್ಛಿಸುವುದಿಲ್ಲ.

ಅಮೆರಿಕೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಮೇಲೆ ಶ್ರೀ ಐಸನ್ ಹಾವರರು ತಮ್ಮ ಈ ಹವ್ಯಾಸಕ್ಕೆ ಪೂರ್ಣವಿರಾಮವಿಟ್ಟು, ತಮ್ಮ ಹೊಸ ಪದವಿಯ ಹೊರೆಯನ್ನು ನಿರ್ವಹಿಸುವುದರಲ್ಲಿಯೇ ಆಸಕ್ತಿವಹಿಸಲು ಪ್ರಯತ್ನಿಸಿದರು. ಆದರೆ, ಕಾರ್ಯಭಾರದ ರಭಸದಲ್ಲಿ ಅತ್ಯಲ್ಪವಾದರೂ ವಿಶ್ರಾಂತಿ ದೊರೆಯುವುದು ಆವಶ್ಯವೆನಿಸಿತು. ಇದರಿಂದಾಗಿ ಅವರು ಪುನಃ ತಮ್ಮ ಹವ್ಯಾಸವನ್ನು ಮುಂದುವರಿಸಿದರು. ಈಗ ಹಿಂದಿಗಿಂತಲೂ ಹೆಚ್ಚಿನ ಉತ್ಸಾಹದಿಂದ ಚಿತ್ರಣ ಕಾರ್ಯವನ್ನು ಮುಂದುವರಿಸುತಿದ್ದಾರೆ. ಕಾಲಾವಕಾಶವಿದ್ದರೆ, ಶ್ವೇತಭವನದ ಚಿತ್ರಶಾಲೆಯಲ್ಲಿ ವಾರದಲ್ಲಿ ಒಂದೆರಡು ಸಂಜೆ ಅನೇಕ ಗಂಟೆಗಳ ಕಾಲ ಕುಂಚ ಹಿಡಿಯುತ್ತಾರೆ. ರಜಾದಿನಗಳಲ್ಲಿ ಕುಂಚವನ್ನು ಆಸಕ್ತಿಯಿಂದ ಹಿಡಿಯುತ್ತಾರೆ. ಇದರಿಂದಾಗಿ, ಅಧ್ಯಕ್ಷ ಐಸನ್ ಹಾವರರ ಕಲಾಭಿರುಚಿಯು ವೇದ್ಯವಾಗುತ್ತವೆ.

ಸೈನಿಕ ಅಧಿಕಾರಿಗಳಿಗೂ ರಾಜಕಾರಣಿಗಳಿಗೂ ಕಲೆಯ ಸಂಬಂಧ ಜೋಡಿಸಲ್ಪಟ್ಟಿರುವುದು ವಿಚಿತ್ರವಾಗಿ ಕಂಡುಬರಬಹುದು. ಆದರೆ, ಇಂತಹವರೂ ಕಲಾಸಕ್ತರಾಗಿರುವಾಗ ಕಲೆಯು ಎಲ್ಲರನ್ನೂ ಆಕರ್ಷಿಸಬಲ್ಲುದೆಂಬುದನ್ನು ನಾವು ತಿಳಿಯಬಹುದು. ರಾಷ್ಟ್ರಕನಾದವನಿಗೆ ಇಂತಹ ಒಂದು ಹವ್ಯಾಸವಿರುವುದರಿಂದ ಅವನ ಮನಸ್ಸು ಸದಾ ಪ್ರಫುಲ್ಲಿತವಾಗಿರಲು ಒಂದು ಸಾಧನವಾಗುವುದು.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ತಮ್ಮೆಲ್ಲರ ಸೌಹಾರ್ದ-ಸಹಕಾರಗಳಿಂದ ದಿನೇ ದಿನೇ ಸರ್ವಾಂಗ ಸುಂದರವಾಗಿ ಬೆಳೆದು, ನಿಮ್ಮ ಆರ್ಥಿಕ ಅಭ್ಯುದಯಕ್ಕಾಗಿ ಸತತವಾಗಿ ಶ್ರಮಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : ಉಡುಪಿ (ದ. ಭಾರತ)

54 ವರುಷಗಳ ಅನುಭವಪೂರ್ಣ ಹಾಗೂ ಸರ್ವೋತ್ಕೃಷ್ಟ ಬೇಂಕು ಸೇವೆಯನ್ನು ಸರ್ವರಿಗೂ ಸರ್ವಕಾಲಕ್ಕೂ ಸರಿಸಮಾನವಾಗಿ ಸಲ್ಲಿಸಬೇಕೆಂಬುದೇ ಈ ಬೇಂಕಿನ ಸಾಧನೆ!

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಶಾಂತಿಸಾಧನೆ

ವಿಜ್ಞಾನಿಯು ಪತಂಜಲಿ ಮಹರ್ಷಿಯಾದಾಗ

ವಿಜ್ಞಾನದ ಮೇಲೆ, ವಿಜ್ಞಾನಿಯ ಮೇಲೆ ರಾಷ್ಟ್ರದ ಅಂಕಿತವಿರಬಾರದು; ಅವರ ಮೇಲೆ ಅಖಂಡ ವಿಶ್ವದ ಪ್ರಭುತ್ವವಿದ್ದರೆ ಮಾತ್ರ ವಿಜ್ಞಾನವು ಮಾರಕವಾಗದೆ ತಾರಕವೆನಿಸುವುದು ಸಾಧ್ಯ.

"ಮನುಷ್ಯ ನಿಜವಾಗಿಯೂ ಸುಖ ಶಾಂತಿಯನ್ನು ಬಯಸುತ್ತಾನೆಯೇ?" ಎಂದು ಕೇಳಿದರೆ, "ಇಲ್ಲ" ಎಂಬ ಉತ್ತರದಿಂದ ಆಶ್ಚರ್ಯವಾಗಬಹುದು. ಆದರೂ ಈ ಮಾತು ಸತ್ಯ. ಇಂದು ಮನುಷ್ಯ ಕೇವಲ ತನ್ನ ಸುಖವನ್ನು ಮಾತ್ರ ಬಯಸುತ್ತಿಲ್ಲ; ಬೇರೆಯವರಿಗೆ ಸುಖಶಾಂತಿ ಸಿಗದಿರಲಿ ಎಂದೂ ಹಾರೈಸುತ್ತಾನೆ ಈ ದೆಸೆಯಿಂದಲೇ ಈಗ ಪ್ರಪಂಚ ಗೊಂದಲಕ್ಕೀಡಾಗಿರುವುದು. ರಾಷ್ಟ್ರ ರಾಷ್ಟ್ರಗಳಲ್ಲಿ ವೈಷಮ್ಯ ಉಂಟಾಗಿರುವುದಕ್ಕೆ ಇದೇ ಹೇತುವಾಗಿದೆ.

ಈಗ ವಿಜ್ಞಾನವು ದಿನೇ ದಿನೇ ಮುಂದುವರಿಯುತ್ತಿದೆ. ಹೆಜ್ಜೆ ಹೆಜ್ಜೆಗೂ ಜನರು ವೈಜ್ಞಾನಿಕ ಉಪಕರಣಗಳ ಪ್ರಯೋಜನವನ್ನು ಪಡೆಯುತ್ತಿದ್ದಾರೆ ಮತ್ತು ಇನ್ನೂ ಹೆಚ್ಚು ಹೆಚ್ಚಾಗಿ ಬಯಸುತ್ತಿದ್ದಾರೆ ಹೀಗೆ ವಿಜ್ಞಾನದಿಂದ ಒಂದು ಮುಖದಲ್ಲಿ ಜನತೆ ಪ್ರಯೋಜನವನ್ನು ಪಡೆಯುತ್ತಿದ್ದರೆ, ಇನ್ನೊಂದು ಮುಖದಲ್ಲಿ ಅದರ ವಿನಾಶಕಾರೀ ಕಾರ್ಯಕ್ಕೆ ಬೆದರಿ ನಡುಗುತ್ತಿದೆ. ಇಂತಹ ಸನ್ನಿವೇಶದ ವಿಷಮತೆ ದಿನದಿನಕ್ಕೂ—ಕ್ಷಣ ಕ್ಷಣಕ್ಕೂ—ಹೆಚ್ಚುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಜಗತ್ತಿಗೆ ಆ ವಿಜ್ಞಾನದಿಂದ ಶಾಂತಿ ಸಿಗಲು ಸಾಧ್ಯವೇ? ಸಾಧ್ಯವಾಗುವುದಾದರೆ ಎಂತು?

ಪ್ರತಿಯೊಂದು ರಾಷ್ಟ್ರವೂ ತನ್ನಲ್ಲಿರುವ ವಿಜ್ಞಾನಿಗಳನ್ನು ಒಂದು ದೊಡ್ಡ ನಿಧಿ ಎಂಬಂತೆ ಭಾವಿಸುತ್ತಿದೆ. ವಿಜ್ಞಾನಿಗಳ ಹೊಸ ಹೊಸ ಸಂಶೋಧನೆಗಳಿಂದ ತಮ್ಮ ರಾಷ್ಟ್ರ ಜಗತ್ತಿನ ಇತರ ರಾಷ್ಟ್ರಗಳಿಗಿಂತ ಉನ್ನತ ಸ್ಥಾನಕ್ಕೇರಬೇಕು; ಇತರ ರಾಷ್ಟ್ರಗಳನ್ನು ಹಿಮ್ಮೆಟ್ಟಿಸಬೇಕು—ಎಂಬ ಸ್ಪರ್ಧಾಭಾವದಿಂದ ಪ್ರೇರಿತವಾಗಿದೆ. ಇಂತಹ ದುಸ್ಥಿತಿಯು ಇಂದು ವಿಜ್ಞಾನಕ್ಕೆ ಬಂದಿದೆ. ಇದರಿಂದ ವಿಶ್ವಶಾಂತಿ ಸಾಧ್ಯವೇ ಇಲ್ಲ.

ವಸ್ತುತಃ ವಿಜ್ಞಾನ ಹಾಳಲ್ಲ. ಅದು ಬೆಂಕಿಯ ಜ್ವಾಲೆಯಂತೆ. ಲೋಕವನ್ನು ಬೆಳಗಲೂ ಬಹುದು; ಸುಟ್ಟು ಧ್ವಂಸಗೊಳಿಸಲೂ ಬಹುದು. ಅದನ್ನು ಬಳಸಿಕೊಂಡಂತಿದೆ. ಮಗುವಿನ ಕೈಯಲ್ಲಿ ಚೂರಿಯನ್ನು ಕೊಟ್ಟರೆ ಖಂಡಿತ ಕೈಯನ್ನು ಕೊಯ್ದುಕೊಳ್ಳದೆ ಇರಲಾರದು. ಸ್ಪರ್ಧಿ - ಪ್ರತಿಸ್ಪರ್ಧಿಗಳ ಹಸ್ತಕ್ಷೇಪಕ್ಕೊಳಗಾದ ವಿಜ್ಞಾನ ಇಂದೊಂದು ಮಾರಕ ವಿದ್ಯೆಯಾಗಿ ಪರಿಣಮಿಸಿದೆ.

೧೯೧೪ರ ಮಹಾ ಯುದ್ಧದಲ್ಲಿ ಜಗತ್ತು ಶಾಂತಿಯ ಮಹತ್ವವನ್ನರಿಯಿತು. ವಿಶ್ವಶಾಂತಿಯ ಪ್ರಯೋಜನವನ್ನು ಕಂಡುಕೊಂಡಿತು. ಯುದ್ಧದ ಹಾನಿಯನ್ನೆಣಿಸಿ, "ಇನ್ನು ಜಗತ್ತಿನಲ್ಲಿ ಇಂತಹ ಗೊಂದಲಗಳೇಳಬಾರದು" ಎಂಬೆಣಿಕೆಯಿಂದ ಜನಾಂಗ ಸಂಘದ ಸ್ಥಾಪನೆಯಾಯಿತು ಆದರೆ ಅದರ ಈ ಅಭಿಲಾಷೆ ಮುಂದೆ ನಡೆಯದೇ ಹೋಯಿತು. ೧೯೩೯ರಲ್ಲಿ ಪುನಃ ಜಾಗತಿಕ ಯುದ್ಧವು ನಡೆದು ಜನತೆ ಮತ್ತಷ್ಟು ಕ್ಷೋಭೆಗೊಂಡಿತು. ಆಗಲೂ ಮುಂಚಿನಂತೆಯೇ ಎಲ್ಲಾ ರಾಷ್ಟ್ರಗಳೂ ವೈರಾಗ್ಯ ತಾಳಿದುವು. ಆಗ ಸ್ಥಾಪಿತವಾದ "ಯುನೋ" ಜಗತ್ತಿನ ಹಲ ಕೆಲವು ಸಮಸ್ಯೆಗಳನ್ನು ಬಗೆಹರಿಸುತ್ತಾ ಇಂದಿಗೂ ಬದುಕಿಯುಳಿದಿದೆ

ಆದರೆ ಎಲ್ಲಿಯೋ ಹೊಗೆಯಾಡುತ್ತಿದ್ದ ಜ್ವಾಲೆ ಒಮ್ಮಿಂದೊಮ್ಮೆಗೇ ಪ್ರಬಲಿಸಿದರೆ "ಯುನೋ" ಕೂಡಾ ಏನೂ ಮಾಡಲಾರದು ಎಂಬ ವಿಚಾರ ಎಲ್ಲರಿಗೂ ತಿಳಿದೇ ಇದೆ ಹಾಗಾಗಿಯೇ ಇಂದಿನ ಜನತೆ ವೈಜ್ಞಾನಿಕ ಮಾರಕಾಸ್ತ್ರಗಳಿಗೆ ಬೆದರುತ್ತಿದೆ.

"ವಿಶ್ವದ ಶಾಂತಿಯನ್ನು ನಾವು ಬಯಸುತ್ತಿಲ್ಲ" ಎಂದು ಯಾರೂ ಹೇಳಲಾರರು. ಕಾರಣ, ಎಲ್ಲರೂ ಪೆಟ್ಟು ತಿಂದವರೇ! ಅದಕ್ಕಾಗಿಯೇ ಎರಡು ಸಂಸ್ಥೆಗಳು ಸ್ಥಾಪಿಸಲ್ಪಟ್ಟುವು. ಆದರೆ ನಿಜವಾದ ವಿಶ್ವಶಾಂತಿ ಈ ಸಂಸ್ಥೆಗಳಿಂದ ಸಿಕ್ಕುತ್ತದೆ ಎಂಬ ಆಶೆ ಮಾತ್ರ ನಿರಾಧಾರವಾದುದು.

ಶಾಂತಿಯ ವಿಚಾರಕ್ಕೆ ಭಾರತವು ಕೊಟ್ಟಷ್ಟು ಪ್ರಾಧಾನ್ಯ ಬೇರಾವ ರಾಷ್ಟ್ರಗಳೂ ಈ ಹಿಂದೆ ಕೊಟ್ಟಿಲ್ಲ ಎನ್ನಬಹುದು. ಪತಂಜಲಿ ಯೋಗಸೂತ್ರಗಳ ಒಟ್ಟು ತಾತ್ಪರ್ಯವೇ ಶಾಂತಿ. ಆದರೆ ಅದು ಕೇವಲ ವೈಯುಕ್ತಿಕ ವಿಚಾರವಾಯಿತು. ಒಬ್ಬ ಯೋಗಿ ಯೋಗಸಾಧನೆಯಿಂದ ಸಂಪೂರ್ಣ ಶಾಂತಿಯನ್ನು ಪಡೆದಾನು. ಆದರೆ ಈ ದಾರಿಯಲ್ಲಿ ಪ್ರತಿಯೊಬ್ಬನೂ ಹೋಗುವುದು ಸಾಧ್ಯವಿಲ್ಲ.

ವಿಜ್ಞಾನಿ ಒಬ್ಬ ಯೋಗಿಯಂತೆಯೇ. ಭಾರತೀಯ ತತ್ತ್ವಶಾಸ್ತ್ರದಲ್ಲಿ ದೇಹ ಮತ್ತು ವಿಶ್ವ ಇವುಗಳಿಗೆ ನಿಕಟವಾದ ಹೋಲಿಕೆಯಿದೆಯೆಂದು ಕಂಡುಬರುತ್ತದೆ. ಸಂಪೂರ್ಣ ಜ್ಞಾನವನ್ನು ಸಾಧಿಸಬೇಕಾದರೆ ಇವೆರಡನ್ನೂ ತಿಳಿಯಬೇಕೆಂದಿಲ್ಲ. ಯಾವುದಾದರೂ ಒಂದನ್ನು ತಿಳಿದರೆ ಜ್ಞಾನದರ್ಶನವಾಗುವುದು. ಯೋಗಿ ದೇಹದ ಸಂಪೂರ್ಣ ಜ್ಞಾನವನ್ನು ಪಡೆದು ಶಾಂತಿಯನ್ನು ಪಡೆಯುತ್ತಾನೆ. ಆದರೆ ವಿಜ್ಞಾನಿ ಬ್ರಹ್ಮಾಂಡದ ಜ್ಞಾನವನ್ನು ಪಡೆಯಹೊರಟಿದ್ದಾನೆ ಅದರ ಫಲ— ವಿಶ್ವಶಾಂತಿ. ಯೋಗಿ, ವಿಜ್ಞಾನಿ—ಇಬ್ಬರ ಗುರಿಯೂ ಒಂದೇ. ಯೋಗಿ ಒಂದೇ ತಲೆಮಾರಿನಲ್ಲಿ ಶೀಘ್ರವಾಗಿ ಫಲಸಿದ್ಧಿಯನ್ನು ಹೊಂದಿದರೆ, ವಿಜ್ಞಾನಿ ಹಲವು ಶತಮಾನಗಳ ಪರಿಶ್ರಮದಿಂದ ತನ್ನ ಸಿದ್ಧಿಯನ್ನು ಹೊಂದಿಯಾನು. ಒಟ್ಟಿನಲ್ಲಿ "ಶಾಂತಿ" ಎಂಬ ಒಂದೇ ಗುರಿಯನ್ನು ಸಾಧಿಸಲು ಇವು ಎರಡು ದಾರಿಗಳು. ಒಂದು ದಾರಿಯಲ್ಲಿ ಈಗಾಗಲೇ ಸಿದ್ಧಿಯನ್ನು ಪಡೆದವರಿದ್ದಾರೆ; ಇನ್ನೊಂದು ದಾರಿಯಲ್ಲಿ ಫಲಪ್ರಾಪ್ತಿ ಇನ್ನೂ ಆಗಬೇಕಷ್ಟೆ!

ಒಂದು ಆತ್ಮ ಚಿರಶಾಂತಿಯನ್ನು ಪಡೆಯಲು "ದೇಹ" ಎನ್ನುವ ಸೂಕ್ಷ್ಮ ವಸ್ತುವಿನ ಪರಿಜ್ಞಾನ ಸಾಕಾದೀತು. ಆದರೆ ಇಡಿ ವಿಶ್ವದ ಸಂಪೂರ್ಣ ಶಾಂತಿಯ ಉದಯವು ವಿಜ್ಞಾನದ ಬೃಹಚ್ಛಕ್ತಿಯ ಸಹಾಯದಿಂದಲೇ ಆಗಬೇಕಲ್ಲದೆ ಬೇರೆ ಯಾವುದರಿಂದಲೂ ಸಾಧ್ಯವಿಲ್ಲ. ಇದು ತ್ರಿಕಾಲ ಸತ್ಯವಾದುದು.

ಆದರೆ ಇಂದು ವಿಜ್ಞಾನ—ಶಾಂತಿಯನ್ನು ಬಯಸದ, ಪ್ರಭುತ್ವವನ್ನು ಅಪೇಕ್ಷಿಸುವ, ಸ್ವಾಭಿಮಾನದ ದುರ್ಮಾನಕ್ಕೆ ಸಿಕ್ಕಿಬಿದ್ದ—ಒಂದು ಬಲವಾದ ಶಕ್ತಿಗೆ ಒಳಪಟ್ಟಿದೆ. ಆಯಾ ರಾಷ್ಟ್ರಗಳಲ್ಲಿರುವ ವಿಜ್ಞಾನಿಗಳ ವಿಜ್ಞಾನ ಆಯಾ ರಾಷ್ಟ್ರಗಳ ಸರಕಾರಕ್ಕೆ ಸೇರಿದುದಾಗಿದೆ! ಹಾಗಾಗಿ ವಿಜ್ಞಾನ ತನ್ನ ದಾರಿಯನ್ನು ಬಿಟ್ಟು, ಗುರಿಯನ್ನು ಮರೆತು ಎತ್ತೆತ್ತಲೋ ಸಾಗುತ್ತಿದೆ—ವಿನಾಶದ ರುದ್ರಭೂಮಿಯನ್ನು ತುಳಿಯುತ್ತ ಮುಂದೆ ಸಾಗುತ್ತಿದೆ!

ಯೋಗವು ಶಾಂತಿಗೆ ಕಾರಣವಾದರೂ, ಮುಕ್ತಿಯನ್ನೀಯುವುದಾದರೂ ಅದರ ಸಾಧನೆಯನ್ನು ಗುರುಮುಖದಿಂದಲೇ ಮಾಡಬೇಕೆನ್ನುತ್ತಿದೆ ಯೋಗಶಾಸ್ತ್ರ. ವಿಜ್ಞಾನ ಇಂದು ಹೊಂದಿರುವ ದುರಂತದ ಮುಖ ಯೋಗಕ್ಕೂ ಇದೆ. ಗುರುವಿನ ಸಹಾಯವಿಲ್ಲದಿದ್ದರೆ, ತಪ್ಪಿದಲ್ಲಿ ತಿದ್ದಿ ದಾರಿ ತೋರಿಸದಿದ್ದರೆ, ಸಾಧಕ ದಿಕ್ಕುಕಾಣದೆ ಹುಚ್ಚನಾಗಿ ಬಿಡುತ್ತಾನೆ! ವಿಜ್ಞಾನದಿಂದಾಗಬಹುದಾದ—ಆಗುತ್ತಿರುವ—ದುರಂತದಷ್ಟೇ ದುರಂತವನ್ನು ಅನುಭವಿಸುತ್ತಾನೆ ಆತ! ಇಲ್ಲಿದೆ ಸ್ವಾರಸ್ಯ. ಇದೇ ಧರ್ಮವನ್ನು ವಿಜ್ಞಾನಿಗೂ ಅನ್ವಯಿಸಬೇಕು. ಈ ಪ್ರಸಂಗದಲ್ಲಿ ವಿವೇಚನಾ ಬುದ್ಧಿಯೇ ಗುರುವಾಗಿರುತ್ತದೆ. ವಿವೇಚನೆಯಿಂದ ಚಿಂತಿಸಿ, ಒಳಿತು ಹಾನಿಗಳನ್ನು ತಿಳಿದು ಒಳಿತನ್ನು ಸಾಧಿಸ ಹೊರಟರೆ ಮಾತ್ರ ವಿಜ್ಞಾನಿ ವಿಜಯಿಯಾಗುತ್ತಾನೆ ಇಲ್ಲವಾದರೆ ಆತ —ಯೋಗಭ್ರಷ್ಟನಂತೆ— ಪರಾಜಿತನಾಗುತ್ತಾನೆ. ತನ್ಮೂಲಕ ಜಗತ್ತೇ ವಿನಾಶಗೊಳ್ಳಲಿದೆ!

ಈಗಿನ ಪರಿಸ್ಥಿತಿಯಂತೂ ಇಷ್ಟರಲ್ಲೇ ಮುಗಿದಿಲ್ಲ ಯೋಗಭ್ರಷ್ಟನಿಗೆ ಸೈತಾನನೇ ಗುರುವಾಗಿ ದೊರಕಿದ್ದಾನೆ! ಸಾಧಕನನ್ನು ತಪ್ಪುದಾರಿಗೆಳೆದು ದುರಂತದ ಕಡಲಿನಲ್ಲಿ ಮುಳುಗಿಸುವ ದುಷ್ಟ ಶಕ್ತಿಗಳು ವಿಜ್ಞಾನವನ್ನು ಎಲ್ಲೆಲ್ಲಿಗೋ ಸೆಳೆಯುತ್ತಿವೆ! ಕೇವಲ ಹನ್ನೆರಡೇ ಬಾಂಬುಗಳಿಂದ ಇಡೀ ಭೂಮಂಡಲವನ್ನೇ ಗಾಜಿನ ಉಂಡೆಯನ್ನಾಗಿ ಮಾಡುವ ಮಾರಕಾಸ್ತ್ರಗಳನ್ನು ವಿಜ್ಞಾನಿ ಕಂಡುಹಿಡಿದಿದ್ದಾನೆ! ಇದರರ್ಥವೇನು? ಬರೇ ಎರಡು ಔನ್ಸು ವಿಷದ್ರವ್ಯದಿಂದ ಪ್ರಪಂಚವನ್ನೇ ಧ್ವಂಸ ಮಾಡಬಲ್ಲಂಥ ಕಾಳಕೂಟದ ಆವಿಷ್ಕಾರವಾಗುತ್ತಿದೆ! ಯಾಕಾಗಿ? ಇದನ್ನು ಪ್ರತಿಭಟಿಸಿ, ವಿಶ್ವಶಾಂತಿಯ ಉದ್ದೇಶವನ್ನಿಟ್ಟುಕೊಂಡು ವಿಜ್ಞಾನವನ್ನು ನಿಯಂತ್ರಿಸುವ ಮತ್ತೊಂದು ಶಕ್ತಿ ಜಗತ್ತಿನಲ್ಲಿಲ್ಲ; ಅಂದರೆ ವಿಶ್ವಶಾಂತಿ ಸಾಧ್ಯವಿಲ್ಲ....? ಇದಕ್ಕೆ ಪರಿಹಾರವೇನು?

ಇಂದು ವಿಜ್ಞಾನ ರಾಷ್ಟ್ರದ ಸೊತ್ತಾಗಿ ಹೋದುದುವೇ ಇದಕ್ಕೆ ಕಾರಣ. ಅದು ರಾಷ್ಟ್ರದ ಸೊತ್ತಲ್ಲ; ವಿಶ್ವದ ನಿಧಿಯೆನಿಸಬೇಕು! ಯಾವ ರಾಷ್ಟ್ರದಲ್ಲೇ ವಿಜ್ಞಾನಿಯಿರಲಿ; ಆತನ ಯಾವತ್ತೂ ಕಾರ್ಯಭಾರಗಳಲ್ಲಿ ರಾಷ್ಟ್ರದ ಹಸ್ತಕ್ಷೇಪ ಸಲ್ಲದು! ವಿಜ್ಞಾನಿಗಳದ್ದೇ ಒಂದು ಜಗತ್ತಿರಲಿ. ಅದಕ್ಕೆ ಅನ್ಯರ ಯಾವ ತರದ ಪ್ರವೇಶವೂ ಸಿಗಬಾರದು! ವಿಜ್ಞಾನಿ ತೀರ ಸ್ವತಂತ್ರ. ವಿಜ್ಞಾನಿ ತನ್ನ ದೇಶದ ಸರಕಾರಕ್ಕೆ ತಲೆಬಾಗಬಾರದು. ಆತನ ಸಂಶೋಧನೆಗಳಿಗೆ ಆಯಾ ರಾಷ್ಟ್ರಗಳ ಯಾವ ತರದ ಪ್ರೋತ್ಸಾಹವೂ ಬೇಕಿಲ್ಲ; ಇಡಿ ವಿಶ್ವದ ಸಹಕಾರ ಸಾಕು. ವಿಜ್ಞಾನಿಯ ಸಂಶೋಧನೆಯ ಫಲ ಒಂದು ರಾಷ್ಟ್ರದ ಉಪಭೋಗಕ್ಕೆನಿಸಬಾರದು. ಇಡಿ ವಿಶ್ವಕ್ಕೆ ಅದರ ಹಕ್ಕಿದೆಯೆಂದಾಗಬೇಕು. ಸರಕಾರಕ್ಕೆ ಬೆದರಿ ವಿಜ್ಞಾನಿಗಳ ಮನಸ್ಸು ಮಾರಕಾಸ್ತ್ರಗಳತ್ತ ಒಲಿಯದಿರಲಿ. ಒಲಿದರೂ ಅದನ್ನು ಮುಂದುವರಿಸದಂತೆ ತಡೆಯಲು ವಿಶ್ವದ ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳಿಂದ ಕೂಡಿದ ಮಹಾ ಪರಿಷತ್ತೊಂದು ಮೇಲ್ವಿಚಾರಣೆಗಿರಲಿ. ಅಥವಾ ಹೆಚ್ಚು ಅವಶ್ಯ ಬೀಳದ ಈ ಮೇಲ್ವಿಚಾರಣೆಯ ಭಾರವನ್ನು "ಯುನೋ" ವಹಿಸಿಕೊಳ್ಳಲಿ. ಅಂತೂ ರಾಷ್ಟ್ರ ರಾಷ್ಟ್ರಗಳ ದುರಭಿಮಾನದ ಕೈವಾಡ ವಿಜ್ಞಾನಿಗಳ ಮೇಲೆ ಖಂಡಿತ ಬೇಡ. ಇಲ್ಲವಾದರೆ ವಿಶ್ವಶಾಂತಿ ದುರಂತದಲ್ಲಿ ಪರ್ಯವಸಾನವಾದೀತು!

(೯ನೇ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟಿನಲ್ಲಿ

R. I. A. No. 1309/59 in O. S. 405/59.

ರಾಜು ಸೆಟ್ಟಿ—ಇವರ ಜನರಲ್ ಪವರ್ ಆಫ್ ಎಟೋರ್ನಿ ಹೋಲ್ಡರ್— ಸದಾಶಿವ ಸೆಟ್ಟಿ — ವಾದಿ.

ಮತ್ತು

1. ಶೇಖರ ಸೆಟ್ಟಿ, 2. ಸುಶೀಲ ಸೆಡ್ತಿ— ಕಮಲ ಸೆಡ್ತಿ ಮಕ್ಕಳು— ಉಡುಪಿ ತಾಲ್ಲೂಕು ಕಡೇಕಾರು ಗ್ರಾಮದಲ್ಲಿರುವವರು — ಪ್ರತಿವಾದಿ.

ನೀವು ಸದ್ರಿ ವಾದಿಯಿಂದ ಈಡಿನ ಮೇಲೆ ಸಾಲವಾಗಿ ಪಡೆದ ಆ್ಯವೇಜನ್ನು ಕೇಳಿ ನಿಮ್ಮ ಮೇಲೆ ಮೇಲಿನ ಕೋರ್ಟಿನಲ್ಲಿ ವಾದಿರು ದಾವಾ ದಾಖಲ್ಲು ಮಾಡಿರುತ್ತಾರೆ. ಸದ್ರಿ ನಂಬ್ರವು ತಾ. 16-12-59ಕ್ಕೆ ತನಿಖೆಗೆ ಇಟ್ಟಿರುತ್ತದೆ. ನೀವು ಆ ದಿವಸ ಖುದ್ದಾಗಿಯಾಗಲೀ, ವಕೀಲರ ಮುಖಾಂತರವಾಗಿಯಾಗಲೀ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸದ್ರಿ ನಂಬ್ರವು ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆ.

(By the Order of the Court)

Perody Vittal Shetty

B. A., LL. B.,

Advocate for Plaintiff.

ಉಡುಪಿ, ತಾ 26-11-59.



≈ ಕುಮಾರಿ ಬಿಲ್ಲೆಗಳು ≈

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಪುಷ್ಪವಾಟಿಕೆ

ಮನಮೋಹಕಾಕಾರದ ಸೇವಂತಿಗೆ

ಉದ್ಯಾನಲಕ್ಷ್ಮಿ, ಗೃಹಲಕ್ಷ್ಮಿಯರ್ವರ ತುರುಬಿನಲ್ಲಿಯೂ ಸೇವಂತಿಗೆ ಕಂಡುಬಂದರೆ ಇರ್ವರೂ ಆಕರ್ಷಕರೆನಿಸುತ್ತಾರೆ.

ಸೇವಂತಿಗೆಯ ಪುಷ್ಪವನ್ನು ನೋಡದೆ ಇರುವವರು ಯಾರೂ ಇರಲಾರರು. ಅದರ ಹಳದಿ ಅಥವಾ ಬಿಳಿ ವರ್ಣಗಳು ನಮ್ಮೆಲ್ಲರ ಮನಸ್ಸನ್ನೂ ತನ್ನತ್ತ ಆಕರ್ಷಿಸಿಕೊಳ್ಳದಿರುವುದು ತೀರ ಅಪರೂಪವೇ. ಶರತ್ಕಾಲದಲ್ಲಿನ ಮೇಘರಹಿತ ಆಕಾಶದಲ್ಲಿ ಸುಪ್ರಭೆಯೊಡನೆ ಜಗಜಗಿಸುವ ಚಂದ್ರನ ಶುಭ್ರ ಚಂದ್ರಿಕೆಯಂತೆ ತೋರುವ ಬಿಳಿ ಸೇವಂತಿಗೆಯ ಹೂ ಮನೆಯ ತೋಟದಲ್ಲಿರ ಬೇಕಾದ ಪ್ರಮುಖ ಪುಷ್ಪಗಳಲ್ಲಿ ಒಂದು. ಇದಿಲ್ಲವೆಂದಾದರೆ, ನಿಮ್ಮ ಉದ್ಯಾನದ ಸೌಂದರ್ಯದ ಅರ್ಧಾಂಶದಷ್ಟು ನಷ್ಟವಾದಂತೆಯೇ ಸರಿ. ಚಂದ್ರಮಲ್ಲಿಗೆ, ಸೇವಂತಿಗೆ ಮೊದಲಾದ ಉತ್ತಮ ಹಾಗೂ ಪ್ರಸಿದ್ಧವಾದ ಹೂಗಳು ತಮ್ಮ ಕೆಂಪು, ಹಳದಿ ಅಥವಾ ಬಿಳಿ ಬಣ್ಣಗಳಿಂದ ಕೂಡಿಕೊಂಡು ನವಂಬರದಿಂದ ಜನವರಿ ತಿಂಗಳುಗಳ ಕಾಲಾವಧಿಯಲ್ಲಿ ಎಲ್ಲ ಉತ್ತಮವಾದ ಉದ್ಯಾನದಲ್ಲಿಯೂ ದೃಷ್ಟಿಗೋಚರವಾಗುತ್ತವೆ. ಇವುಗಳಲ್ಲಿಯೂ ಚೀನೀ, ಜಪಾನೀ ಮತ್ತು ಕೋರಿಯಾಯಿ ವಿಧಗಳಲ್ಲಿ ಬೇರೆ ಬೇರೆ ವರ್ಣ, ರೂಪ, ಆಕಾರ, ಪ್ರಕಾರಗಳು ಎಲ್ಲ ದೃಷ್ಟಿಯಿಂದಲೂ ಮನಮೋಹಕವಾಗಿರುವುವಲ್ಲದೇ ಆಕರ್ಷಕವಾಗಿಯೂ ಇರುತ್ತವೆ.

ಸೇವಂತಿಗೆಯು ಗುಲಾಬಿಯಂತೆ ಸುಗಂಧಭರಿತವಾಗಿಲ್ಲದೆ ಈಷತ್ (ಸ್ವಲ್ಪ) ಸುಗಂಧಿತವಾಗಿದೆ. ಇದರಲ್ಲಿ ಮುಖ್ಯವಾಗಿ ಎರಡು ವರ್ಗಗಳಿವೆ. ಒಂದನೆಯ ಜಾತಿಯಲ್ಲಿ ಹೂವಿನ ಪಕ್ಕಗಳಲ್ಲಿ ತೆಳುವಾದ ಮತ್ತು ಉದ್ದವಾದ ಎಲೆಗಳಿದ್ದು ನಡುವೆ ಸಾಮಾನ್ಯ ಕುಸುಮಗಳಿವೆ. ಇನ್ನೊಂದರಲ್ಲಿ ಇಡಿ ಹೂವಿನಲ್ಲಿಯೂ ಎಳೆಯ ಕುಸುಮಗಳನ್ನು ನಾವು ಕಾಣಬಹುದು.

ಸೇವಂತಿಗೆಗೆ ಮೃದು ಮಣ್ಣಿನ ಆಗತ್ಯವಿಲ್ಲ. ಜೊಯ್ಗೆಯ ಅಂಶ ಅಧಿಕವಿರುವ ಮಣ್ಣು ಇದರ ಬೆಳವಣಿಗೆಗೆ ತುಂಬ ಸಹಾಯಕಾರಿ. ಹರಳು ಮಣ್ಣುಗಳಡಿಯಲ್ಲಿ ನೀರು ಇಂಗಿಹೋಗುವುದರಿಂದ ಬೇರು ಯಾವಾಗಲೂ ಒದ್ದೆಯಾಗಿಯೇ ಇರುವುದಿಲ್ಲ. ಜಿಗುಟು ಮಣ್ಣನ್ನು ಮರಳು ಮಣ್ಣನ್ನಾಗಿ ಪರಿವರ್ತಿಸುವ ಸಲುವಾಗಿ, ಅದಕ್ಕೆ ಗೊಬ್ಬರವನ್ನು ಹಾಕಬೇಕಾಗುತ್ತದೆ. ಇದರಿಂದ ಮಣ್ಣಿನ ಶಕ್ತಿಯು ಹೆಚ್ಚುತ್ತದೆ; ಮತ್ತು ಹೂವಿನ ಗಿಡವು ತನಗೆ ಬೇಕಷ್ಟೇ ಆಹಾರವನ್ನು ಹೀರಿಕೊಂಡು ದಟ್ಟಪುಷ್ಟವಾಗಿ ಬೆಳೆಯುತ್ತದೆ.

ಸೇವಂತಿಗೆಯ ಗಿಡವು ಬೀಜದಿಂದ ಹುಟ್ಟುವುದಲ್ಲ; ಮೊಳಕೆಗಳಿಂದ ತಯಾರಿಸಲ್ಪಡುವುದು. ಹೂಗಳು ಅರಳುವ ಕಾಲ ಕಳೆದೊಡನೆಯೇ ಗಿಡದ ತಲೆಯನ್ನು ಕಡಿದು ಬಿಟ್ಟರೆ, ಅದರ ಬುಡದಲ್ಲಿ ಹಲವಾರು ಮೊಳಕೆಗಳು ಏಳುತ್ತವೆ. ನಾಲ್ಕಾರು ವಾರಗಳಲ್ಲಿ ಇವು ಗಿಡದಷ್ಟೇ ದೊಡ್ಡದಾಗುತ್ತವೆ. ಫೆಬ್ರುವರಿ ತಿಂಗಳ ಅಂತ್ಯದಲ್ಲಿ ಅವುಗಳನ್ನು ಮೂಲಗಿಡದ ಪಕ್ಕದಿಂದ ಪ್ರತ್ಯೇಕಿಸಿ, ನೀರು ಹಾಕುತ್ತಾರೆ. ಎಪ್ರಿಲ್ ಮಾಸದಲ್ಲಿ ಇವು ಸ್ವತಂತ್ರಗಿಡಗಳೇ ಆಗುತ್ತವೆ. ಮೇ-ಜೂನ್ ತಿಂಗಳಲ್ಲಿ ಇವನ್ನು ಪುನಃ ಒಂದೊಂದಾಗಿ ನೆಡುತ್ತಾರೆ.

ಮಳೆಗಾಲವು ಬಂದ ಮೇಲೆ, ಅವನು ನಿಯತಸ್ಥಾನದಲ್ಲಿ ನೆಡಲು ಕೀಳಿರಿ. ಸಾಕಷ್ಟು ಉತ್ತಮವಾದ ಗೊಬ್ಬರಗಳನ್ನು ಹಾಕಿ ತಯಾರಿಸಿದ ಅಂಕಣಗಳಲ್ಲಿ ನೆಟ್ಟಿರಿ. ಎಂದಿಗೂ ಅವುಗಳಿಗೆ ನೀರು ಮತ್ತು ಗೊಬ್ಬರಗಳು ಕಡಿಮೆಯಾಗದಂತೆ ಎಚ್ಚರಿಕೆ ವಹಿಸಿರಿ. ಅವು ಬೆಳೆ ಬೆಳೆದು ಸಾಮಾನ್ಯ ಒಂದಡಿ ಎತ್ತರವಾದೊಡನೆಯೇ ಗಾಳಿಗೆ ಅಲುಗಾಡಿ ಬಗ್ಗದಂತೆ ಅವಕ್ಕೆ ಮರದ ಆಧಾರ ಕಂಬಗಳನ್ನು ಕೊಡಿರಿ.

ಮಳೆಗಾಲದಲ್ಲಿ ಉತ್ತಮ ರೀತಿಯ ಗೊಬ್ಬರವು ಅದಕ್ಕೆ ದೊರೆಯುವ ವ್ಯವಸ್ಥೆ ಮಾಡಬೇಕು. ಶರತ್ಕಾಲದ ಪ್ರಾರಂಭದಲ್ಲಿಯೇ ಮೊಗ್ಗುಗಳು ತೋರಿ ಬರಲು ಪ್ರಾರಂಭವಾಗುವುವು. ಆಗ, ಗೊಬ್ಬರದ ನೀರನ್ನು ಮಾಡಿ ವಾರಕ್ಕೆರಡಾವರ್ತಿ ಗಿಡಗಳ ಬುಡಕ್ಕೆರೆಯಿರಿ. ಚಳಿಯು ಹೆಚ್ಚಾಗಿ ಬಿಟ್ಟರೆ, ಕೆಲವು ರಾಸಾಯನಿಕ ದ್ರವ್ಯಗಳನ್ನು ಅವುಗಳ ಮೇಲೆ ಎಸೆದರೆ ಸರಿ. ಆದರೆ, ಎಲೆಗಳ ಮೇಲೆ ಮಾತ್ರ ಏನೂ ಬೀಳದಂತೆ ಎಚ್ಚರಿಕೆ ವಹಿಸಬೇಕು.

ಸೇವಂತಿಗೆಗೆ ನೀರು ಆವಶ್ಯಬೇಕು. ಆದರೆ, ಇದರ ಬೇರುಗಳು ಯಾವಾಗಲೂ ಒದ್ದೆಯಾಗಿಯೇ ಇರಬಾರದು. ನೀರು ಹೊಯ್ಯುವಾಗ, ಅದು ಗಿಡಗಳ ಬುಡದಲ್ಲಿ ನಿಲ್ಲದಂತೆ ಎಚ್ಚರಿಕೆ ವಹಿಸಿ. ಬುಡದಲ್ಲಿ ನೀರು ನಿಂತುಬಿಟ್ಟರೆ, ಗಿಡವೇ ಸತ್ತುಹೋಗುವುದು. ಅತ್ಯಧಿಕ ಮಳೆ ಸುರಿದರೂ, ನೀರು ಅದರಡಿ ನಿಲ್ಲದಂತೆ ನೋಡಿಕೊಳ್ಳಬೇಕು.

ಸೇವೆ ಮಾಡಿದಷ್ಟೇ ಪ್ರತಿಫಲವನ್ನು

ಟೆನ್ನಿಸ್ ಆಟಗಾರರಲ್ಲಿ ಜಯಶೀಲೆಯಾದ ನೀಗ್ರೋ ಶ್ರೀಮತಿ ಅಲ್ತಿಯಾ ಗಿಬ್ಸನರು ತೆರೆದ ಕಾರಿನಲ್ಲಿ ನ್ಯೂಯಾರ್ಕಿಗೆ ಬಂದಾಗ, ಜನರು ಅವರನ್ನು ಜಯಕಾರದೊಡನೆ ಸ್ವಾಗತಿಸಿದ್ದರು.

ಸೇವಂತಿಗೆಯು ಕೊಡುವುದು. ನವಂಬರ ತಿಂಗಳಲ್ಲಿ ಕಾಣಿಸಿದ ಮೊಗ್ಗೆಗಳು ನೀವು ಪಟ್ಟ ಪರಿಶ್ರಮದಷ್ಟೆ ದೊಡ್ಡವಾಗಿ ಬೆಳೆಯುವುವು. ಅವುಗಳ ಆಕೃತಿಯನ್ನು ನೀವು ಮಾಡಿರುವಂತೆಯೇ ಅವು ನಿಮಗೆ ತಮ್ಮ ಪುರಸ್ಕಾರವನ್ನು ಅರ್ಪಿಸುವುವು.

ನಿಮಗೆ ತುಂಬ ಹೂಗಳು ಬೇಕಾಗಿದ್ದರೆ, ಮೊಗ್ಗೆಗಳನ್ನು ಕೊಯ್ಯಬೇಡಿರಿ; ಅವು ಅರಳಬಿಡಲಿ. ಅವುಗಳಲ್ಲಾದ ಒಂದೊಂದು ದೊಡ್ಡ ಹೂವನ್ನು ಎಪ್ರಿಲ್ ತಿಂಗಳತನಕ ಉಳಿಸಬೇಕಾಗುವುದು. ಗಿಡದ ಪ್ರಧಾನ ಶಾಖೆಯೊಂದನ್ನುಳಿದು ಮಿಕ್ಕೆಲ್ಲ ಗೆಲ್ಲುಗಳನ್ನೂ ಕಡಿಯಿರಿ. ಮಳೆಗಾಲದ ನಂತರ ಅವುಗಳ ಎಲೆಗಳನ್ನೂ ಕೀಳಿರಿ. ನವಂಬರದ ಮೊದಲಲ್ಲಿಯೇ ಗಿಡದ ಪ್ರಧಾನ ಮೊಗ್ಗೆಯನ್ನು ಬಿಟ್ಟು ಉಳಿದುವೆಲ್ಲವನ್ನೂ ನೀವು ಕೊಯ್ಯಬಹುದು. ಗೊಬ್ಬರ ಮತ್ತು ನೀರಿನ ಪಸನೀಡಲು ಮರೆಯದಿರಿ. ಹೀಗೆ ಮಾಡುತ್ತ ಬಂದರೆ, ನಿಮಗೆ ಬೇಕಾದಷ್ಟು ಹೂವು ದೊರೆಯಬಲ್ಲುದು. ೬-೮ ಇಂಚು ವ್ಯಾಸವಿರುವ ಸೇವಂತಿಗೆಯ ಹೂಗಳೂ ಇರುವುವೆನ್ನುವಾಗ, ಅವುಗಳ ಸೌಂದರ್ಯದಿಂದಲೇ ನಾವು ತೃಪ್ತಿಪಟ್ಟುಕೊಳ್ಳಬಹುದು.

ಗಿಡದ ಆಕೃತಿಯ ಕಡೆಗೆ ವಿಶೇಷಗಮನವನ್ನು ಹರಿಸಬೇಕೆಂಬುದನ್ನು ಮರೆಯಬಾರದು. ಆಗಾಗ ಇವಕ್ಕೆ ಒಂದು ತರದ ಕೊಳೆ ರೋಗವೂ ತಗಲುವುದುಂಟು. ಗಿಡದ ಎಲೆಗಳಲ್ಲಿ ಒಂದು ವಿಧದ ಧೂಳು ಅಂಟಿಕೊಂಡಿರುವುದು ನಮಗೆ ಗೋಚರಿಸುತ್ತದೆ. ಕ್ರಮೇಣ ಎಲೆಯೆಲ್ಲವೂ ಕೊಳೆತು ಹೋಗಿ ಗಿಡವು ಸಾಯುತ್ತದೆ. ಬಟ್ಟೆ ಒಗೆಯುವ ಸಾಬೂನಿನ ನೀರನ್ನು ಮಾಡಿ, ಗಿಡಗಳ ಎಲೆಗಳಿಗೆ ಚಿಮುಕಿಸಿದರೆ, ಈ ರೋಗವು ದೂರವಾಗುವುದು.

ಸೇವಂತಿಗೆಯಲ್ಲಿಯೂ ಹಲವಾರು ಜಾತಿಗಳಿವೆ. ಕೆಲವು ೭-೮ ಅಂಗುಲ ವ್ಯಾಸವುಳ್ಳವುಗಳಾದರೆ, ಬೇರೆ ಕೆಲವು ಒಂದಿಂಚು ವ್ಯಾಸವಿರುವುದೂ ಕಷ್ಟ. ಆದರೂ ಎರಡು-ಮೂರಂಗುಲ ವ್ಯಾಸದ ಹೂವುಗಳು ಸಾಮಾನ್ಯವಾಗಿದೆ. ಇತರ ಹೂಗಿಡಗಳಂತೆಯೇ ಸೇವಂತಿಗೆಯನ್ನೂ ಕಸಿ ಮಾಡುವುದು ಸಾಧ್ಯ. ಹೀಗೆ ಕಸಿ ಮಾಡಿದ ಗಿಡಗಳಿಂದ ನಮಗೆ ಪ್ರತಿಫಲವು ಧಾರಾಳವಾಗಿ ದೊರೆಯುತ್ತದೆ.

ಪ್ರತಿ ಮನೆಯಲ್ಲೂ ಸೇವಂತಿಗೆಯ ಗಿಡಗಳಿದ್ದರೆ ಅದು ಉದ್ಯಾನಲಕ್ಷ್ಮಿಯ ತುರುಬಿನಲ್ಲಿ ರಾರಾಜಿಸುವುದು ಮಾತ್ರವಲ್ಲ, ಗೃಹ ಲಕ್ಷ್ಮಿಯ ತುರುಬಿನಲ್ಲೂ ಕಂಗೊಳಿಸುವುದು ಸಾಧ್ಯ. ಒಂದಲ್ಪಶ್ರಮದಿಂದ ಬಹಳಷ್ಟು ಲಾಭ ಪಡೆಯಬಹುದಾದ ಉದ್ದಿಮೆಗಳಲ್ಲಿ ಈ ಸೇವಂತಿಗೆ ಮಾರುವ ಉದ್ಯೋಗವೂ ಒಂದೆಂಬುದನ್ನು ಮರೆಯಬಾರದು.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ವಿಚಾರಿಸಿರಿ.—

ನವಯುಗ ಪ್ರೆಸ್, ಉಡುಪಿ.

ನೂತನ ಪ್ರಕಟಣೆ

ಒಸಗೆ

ಶ್ರೀ ಸೇಡಿಯಾಪು ಕೃಷ್ಣ ಭಟ್ಟರವರಿಗೆ

ತಾ. 28—11—1959ರಲ್ಲು ಸೈಂಟ್ ಎಲೋಸಿಯಸ್ ಕಾಲೇಜಿನ ಕರ್ಣಾಟಕ ಸಂಘದಿಂದ ಅರ್ಪಿಸಲಾಗುವ ಅಭಿನಂದನಾ ಗ್ರಂಥ

ಶ್ರೀ ಸೇಡಿಯಾಪುರವರ ವ್ಯಕ್ತಿತ್ವ-ವರ್ಣನ ಮತ್ತು ಕೃತಿಗಳ ರಸಗ್ರಹಣ ಲೇಖನಗಳು ಮತ್ತು ಸೇಡಿಯಾಪುರವರ ಸ್ವಂತ ಲೇಖನಗಳನ್ನೊಳಗೊಂಡ ಹೊತ್ತಗೆ.

ಕ್ರೌನ್ ⅛ 16+256 ಪುಟಗಳು. ಬೆಲೆ: ರೂ. 3-50.

ಪ್ರತಿಗಳಿಗೆ:—

ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸೀಸ್

ಕಾರ್ನಾಡು ಸದಾಶಿವ ರಾವ್ ರಸ್ತೆ, ಮಂಗಳೂರು-1.

'NAVAYUGA' WEEKLY is in the list of periodicals and Newspapers approved for use in Secourday School as per proceedings Roc· No· 466 N/50 date 2-12-1950 of the Director of public Instruction Madras·

ಕರ್ಮಶೀಲನಾದವನಿಗೆ ಪ್ರೋತ್ಸಾಹವೇ ಅಮೂಲ್ಯ ಪ್ರತಿಫಲ; ಪ್ರಶಂಸೆಯಲ್ಲ. ಈ ಪ್ರೋತ್ಸಾಹದಿಂದ ಅವನ ಉತ್ಸಾಹ ದ್ವಿಗುಣಿತವಾಗಿ ತನ್ನ ಕರ್ಮಶೀಲತೆಯ ಪ್ರಯೋಜನವನ್ನು ನಾಡಿಗೆ ಉಣಿಸುತ್ತಾನೆ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೩-೧೨-'೫೯	೧೪

ಆದರ್ಶ ಉದಾತ್ತ ಸೇವೆ

ಭಾರತವು ತನ್ನ ಪರದಾಸ್ಯ ಶೃಂಖಲೆಯಿಂದ ಮುಕ್ತವಾಗಿ ಹನ್ನೆರಡು ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ಭಾರತದ ರಾಷ್ಟ್ರನಾಯಕರು ನಾನಾ ಪ್ರಕಾರವಾದ ಯೋಜನೆಗಳನ್ನು ಕಾರ್ಯಗತಗೊಳಿಸಿ ಸಮೃದ್ಧ ಭಾರತವನ್ನು ಕಟ್ಟಲು ಪ್ರಯತ್ನಗಳನ್ನು ನಡೆಸುತಿದ್ದಾರೆ. ಆದರೆ, ಒಂದು ಜನತಾ ಪ್ರಭುತ್ವ ರಾಷ್ಟ್ರದಲ್ಲಿ ಜನತೆಗಾಗಿಯೇ ಸರಕಾರವೂ ಅದರ ಆಡಳಿತೆಯೂ ಇರುವುದೆಂಬುದನ್ನು ಅಕ್ಷರಶಃ ಒಪ್ಪಿಕೊಂಡರೂ ಜನತೆಯೂ ಉತ್ಸಾಹದಿಂದ ತನ್ನ ಉದಾರ ಸಹಾಯ ಹಸ್ತವನ್ನು ರಾಷ್ಟ್ರದ ಪ್ರಗತಿಯ ಸಲುವಾಗಿ ನೀಡುವುದು ಅತ್ಯವಶ್ಯ. ಶಕ್ತಿ ಇದ್ದವರು, ಧೈರ್ಯವಿರುವವರು, ಯೋಗ್ಯತೆ ಹೊಂದಿದವರು ಇಂತಹ ಮಹಾಕಾರ್ಯಕ್ಕೆ ಇಳಿಯುವುದು ನ್ಯಾಯೋಚಿತವಾಗಿದೆ.

ಮೊನ್ನೆ ಮೊನ್ನೆ ಉಡುಪಿಯನ್ನು ಸಂದರ್ಶಿಸಿದ ಭಾರತೀಯ ಕಾಂಗ್ರೆಸ್‌ನ ಅಧ್ಯಕ್ಷೆ ಶ್ರೀಮತಿ ಗಾಂಧಿಯವರು ಉದ್ಗರಿಸಿದ ಒಂದು ಮಾತನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. "ನೀವು ಇಲ್ಲಿ ಮಾಡಿರುವ ಅತ್ಯುದಾತ್ತವಾದ ಕಾರ್ಯವನ್ನು ನೋಡಲು ನನಗೆ ನಿಜವಾಗಿಯೂ ಸಂತೋಷವೆನಿಸುತ್ತದೆ. ಆಶ್ಚರ್ಯಕರವೆನಿಸಿದ ಸಾಧನೆಯನ್ನು ಓರ್ವನು ಕಾಣುವಾಗ, ಸಾಮಾನ್ಯವಾಗಿ ಆತನಿಗೆ ತನ್ನ ಆನಂದವನ್ನು ವ್ಯಕ್ತಪಡಿಸಲು ಸರಿಯಾದ ಶಬ್ದಗಳೇ ದೊರೆಯಲಾರವು. ಉತ್ಸಾಹ, ಸಾಧನೆ, ಕಲ್ಪನೆಗಳ ದಿವ್ಯ ವ್ಯಕ್ತಿಯ ಕರ್ಮ ಎಂದು ಮಾತ್ರ ನಾನು ಹೇಳಬಲ್ಲೆ; ಇದೇ ಭಾರತದ ಇಂದಿನ ಅವಶ್ಯಕತೆಯಾಗಿದೆ" ಎಂದು ಹೇಳಿದ ಶ್ರೀಮತಿ ಗಾಂಧಿಯವರು ಮುಂದುವರಿದ, "ಇಂತಹ ವ್ಯಕ್ತಿಗಳು ಇತರರಂತೆ ಪ್ರಕಾಶಕ್ಕೆ ಬಾರದಿರುವುದು ದುರದೃಷ್ಟ. ಆಧುನಿಕ ಕಾಲದಲ್ಲಿ ಮಾಡಿದ ತಪ್ಪುಗಳೇ ಪ್ರಚಾರಕ್ಕೆ ಮಹಾಸಾಧನಗಳಾಗುವುವಲ್ಲದೇ ನಿಮ್ಮಂಥಹರು ಇಲ್ಲಿ ಮಾಡಿರುವಂತಹ ಅನೇಕ ವಿಘ್ನ ವಿಡ್ಡೂರಗಳನ್ನು ಎದುರಿಸಿ ಸಾಧಿಸಿದಂತಹ ಅಮೂಲ್ಯ ಸಾಧನೆಗಳಲ್ಲವೆಂಬುದು ತೀರ ಸಾಮಾನ್ಯವಾದ ಮಾತು ಆದುದರಿಂದ ನಮ್ಮ ಜ್ಞಾನ ಮೌಲ್ಯದಲ್ಲಿಯೇ ಗಣನೀಯ ಪರಿವರ್ತನೆಯಾಗುವುದು ಅವಶ್ಯ ಎಂದು ಅಂದರು.

ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಸಂಸ್ಥೆಯು ಕಳೆದ ಕೆಲವಾರು ವರ್ಷಗಳಿಂದ ವಿದ್ಯಾಕ್ಷೇತ್ರದಲ್ಲಿ ಆಕಾಶ ಪಾತಾಳಗಳನ್ನೊಂದು ಮಾಡುವಂತಹ ಸಾಹಸ ಕೃತ್ಯಗಳನ್ನು ಮಾಡಿದೆ ಎಂಬುದನ್ನು ಕಂಡೂ ನಾವು ಕುರುಡರಂತೆ ಕೂರಬಿಡುವುದು ವಿವೇಕ ದರ್ಶನವಾಗಲಾರದು. ಸ್ವತಂತ್ರ ಭಾರತಕ್ಕೆ ಅತ್ಯಾವಶ್ಯಕವಾದ ವೈದ್ಯಕೀಯ ಹಾಗೂ ಯಾಂತ್ರಿಕ ಕಾಲೇಜುಗಳನ್ನು ತೆರೆಯಲು ಎಕೆಡೆಮಿಯು ಮಾಡಿದ ಭಗೀರಥ ಪ್ರಯತ್ನದಿಂದಾಗಿ ನಮ್ಮ ಜಿಲ್ಲೆ ರಾಜ್ಯಗಳ ಎಲ್ಲೆಯನ್ನು ಮೀರಿ ಅಖಿಲಭಾರತದ ವಿದ್ಯಾರ್ಥಿಗಳಿಗೆ ಅನುಕೂಲತೆಯನ್ನು ಮಾಡಿಕೊಟ್ಟಂತಾಗಿದೆ. ಮುಖ್ಯವಾಗಿ, ವೈದ್ಯಕೀಯ ಸೌಲಭ್ಯವನ್ನು ಭಾರತದ ೪೦ ಕೋಟಿ ಜನತೆಗೆ ಒದಗಿಸಬೇಕಾದರೆ, ಅದೆಷ್ಟು ಜನ ವೈದ್ಯರು ಬೇಡ? ಎಕೆಡೆಮಿಯ ಕಸ್ತೂರ್ಬಾ ಕಾಲೇಜಿನಿಂದ ಈಗ ವರ್ಷಂಪ್ರತಿ ೧೦೦ ಜನ ಸುಶಿಕ್ಷಿತ ವೈದ್ಯರು ತಯಾರಾಗಿ ಜನತೆಯ ಸೇವೆಗೆ ಸಿದ್ಧರಾಗುತ್ತಾರೆ. ಈ ಕಾಲೇಜಿಲ್ಲದೆ ಹೋದರೆ ಇಷ್ಟೇ ವೈದ್ಯರ ಸಂಖ್ಯೆಯೂ ಕಡಿಮೆಯಾಗುತಿತ್ತು. ಕಾಲೇಜಿನ ಶೈಕ್ಷಣಿಕ ಸ್ತರ, ಕಟ್ಟಡ, ವ್ಯವಸ್ಥೆ ಮೊದಲಾದ ಆಂತರಿಕ ಹಾಗೂ ಬಾಹ್ಯ ವಿಷಯಗಳಲ್ಲೂ ಈ ಕಾಲೇಜುಗಳು ಪರಿಪೂರ್ಣವಿವೆ. ಮೆಡಿಕಲ್ ಕೌನ್ಸಿಲು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಶಿಕ್ಷಣ ಕ್ರಮದ ಬಗ್ಗೆ ಸಮಾಧಾನವನ್ನು ವ್ಯಕ್ತಪಡಿಸಿರುವುದಲ್ಲದೆ, ಪ್ರಥಮ ವರ್ಷದಲ್ಲಿಯೇ ಕಾಲೇಜಿಗೆ ಮನ್ನಣೆ ನೀಡುವ ಔದಾರ್ಯವನ್ನು ತೋರಿಸಿದೆ. ಇಂದು ಮೈಸೂರು ಸರಕಾರವು ನೇರವಾಗಿ ತನ್ನ ಅಂಕಿತದಲ್ಲಿ ನಡೆಸುತ್ತಿರುವ ಹುಬ್ಬಳ್ಳಿಯ ಮೆಡಿಕಲ್ ಕಾಲೇಜಿನ ಶೈಕ್ಷಣಿಕ ಸ್ತರವು ತೃಪ್ತಿಕರವಿಲ್ಲದುದರಿಂದಾಗಿ ಇಂಡಿಯನ್ ಮೆಡಿಕಲ್ ಕೌನ್ಸಿಲು ಪರೀಕ್ಷೆಗಳನ್ನು ಮುಂದುವರಿಸುವಂತೆ ಸಲಹೆ ಮಾಡಿರುವುದನ್ನು ಗಮನಿಸುವಾಗ, ಎಕೆಡೆಮಿಯು ತನ್ನ ಕಾಲೇಜಿನ ಗೌರವವನ್ನೂ ವಿದ್ಯಾರ್ಥಿಗಳ ಹಿತಚಿಂತನೆಯನ್ನೂ ಯಾವ ಪ್ರಮಾಣದಲ್ಲಿ ಮಾಡುತ್ತಿದೆ ಎಂದು ಸುಲಭದಲ್ಲಿ ತಿಳಿಯಬಹುದು. ಸರಕಾರದಂತಹ ಬಹುಜನರ ಸಂಸ್ಥೆಗೇನೇ ನಡೆಸಲು ಪ್ರಯಾಸವೆಂದು ಕಂಡುಬರುವ ಮೆಡಿಕಲ್ ಕಾಲೇಜುಗಳ ಸ್ಥಾಪನೆ ಹಾಗೂ ಆಡಳಿತೆಯನ್ನು ಕೆಲವೇ ಜನರ ಒಂದು ಸಂಸ್ಥೆ ಉತ್ಸಾಹದಿಂದ ತನ್ನ ಕೃತ್ತಿತ್ವ ಶಕ್ತಿಯಿಂದ ಯೋಗ್ಯ ರೀತಿಯಿಂದ ಸಾಗಿಸಿಕೊಂಡು ಹೋಗುವುದು ನಮಗೆ ಮಾತ್ರವಲ್ಲ; ಅಖಿಲ ಭಾರತಕ್ಕೇನೇ ಒಂದು ಭೂಷಣವಾಗಿದೆ. ಎಕೆಡೆಮಿಯ ಕಾರ್ಯಕರ್ತರಂತಹ ಉತ್ಸಾಹೀ ಸಾಹಸಿಗರು ಭಾರತದ ಬೇರೆ ಬೇರೆ ಕಡೆಗಳಲ್ಲಿರುವುದರಿಂದಲೇ ಸರಕಾರವು ಹೊರಬೇಕಾದ ಭಾರವು ತುಸುವಾದರೂ ಲಘುವೆನಿಸೀತು.

ಆದರೆ, ಮಣಿಪಾಲ -- ಉಡುಪಿಗಳು ತೀರ ಎಳೆಯದಾದ ನಗರವಾದುದರಿಂದ, ಭಾರತದ ಒಂದು ಮೂಲೆಯಲ್ಲಿರುವುದರಿಂದ ಹಾಗೂ ಇಲ್ಲಿ ವಿಮಾನ ನಿಲ್ದಾಣ, ರೇಲು ನಿಲ್ದಾಣ, ಬಂದರ, ಆಕಾಶವಾಣಿ ಕೇಂದ್ರ ಜಿಲ್ಲೆಯ ಪ್ರಧಾನ ಕಾರ್ಯಾಲಯ ಒಂದೂ ಇಲ್ಲದಿರುವುದರಿಂದ ಅಜ್ಞಾತವಾಗಿರುವಂತೆ ಹೊರಗಿನವರಿಗೆ ಕಾಣಬಹುದು. ಹಾಗಿರುವಾಗ ದೋಷಗಳನ್ನೇ ಎಡೆಬಿಡದೆ ಸಾಧಿಸಿ ಪ್ರಚಾರ ಸಾಧನಗಳನ್ನಾಗಿ ಬಳಸಿಕೊಳ್ಳುವ ಕುಶಕ್ತಿಗಳ ಪ್ರಭಾವವನ್ನು ಗುಣಗಳು ಎಂದೆಂದಿಗೂ ಪಡೆಯದೆ ಈ ಕಾಲದಲ್ಲಿ ದೋಷಗಳೇ ಪ್ರಚಾರಕ್ಕೆ ಬರುವುದು ಸುಲಭ ಮತ್ತು ಸಾಮಾನ್ಯವೆ. ಆದರೆ, ಇಂತಹ ದುಶ್ಶಕ್ತಿಗಳ ಅಪಪ್ರಚಾರಕ್ಕೆ ಕಿವಿಗೊಟ್ಟು ಸುಮ್ಮನೆ ಕುಳಿತರೆ, ಸತ್ಯ ದರ್ಶನವಾಗುವುದಿಲ್ಲ. ಎಕೆಡೆಮಿಯು ತೋರಿಸಿದ, ತೋರಿಸುತ್ತಿರುವ ಈ ಅದ್ಭುತ ವಿಸ್ಮಯಕಾರಿ ಕಾರ್ಯಕ್ರಮಗಳನ್ನು ಇಲ್ಲಿ ಬಂದು ಕಣ್ಣಾರೆ ಕಂಡ ಪ್ರತಿಯೊಬ್ಬನೂ ತನ್ನ ತೃಪ್ತಿಯನ್ನೂ ಆಶ್ಚರ್ಯವನ್ನೂ ವ್ಯಕ್ತಪಡಿಸಿರುವುದನ್ನು ಸ್ಮರಿಸಿಕೊಂಡರೆ, 'ಪ್ರಚಾರ'ದ ವೈಖರಿಯು ಸ್ವಯಂ ವೇದ್ಯವಾಗುವುದು. ಪ್ರಜಾ ಪ್ರಭುತ್ವದಲ್ಲಿ ಶಕ್ತಿವಂತ ಸಂಸ್ಥೆ ಮತ್ತು ವ್ಯಕ್ತಿಗಳು ಇಂತಹ ಸೇವೆಯನ್ನು ಸಲ್ಲಿಸುತ್ತಿರುವುದು ದೇಶದ ಅದೃಷ್ಟವೆನ್ನಬೇಕು. ಶ್ರೀಮತಿ ಗಾಂಧಿಯವರೆನ್ನುವಂತೆ ಇಲ್ಲಿ ಸಾಧಿಸಿದ ಕಾರ್ಯಗಳು ಅಸಾಧಾರಣವಾದುವುಗಳು ಮಾತ್ರವಲ್ಲ. ಅತ್ಯುಪಯುಕ್ತವಾದುವುಗಳು ಆದುದರಿಂದ ಖಾಸಗಿ ಸಂಸ್ಥೆ ಅಥವಾ ವ್ಯಕ್ತಿಗಳು ಸಲ್ಲಿಸುವ ಅಮೋಘ ಸೇವೆಯ ಬಗ್ಗೆ ಜನತೆಯು ಕೃತಜ್ಞತೆಯನ್ನು ಸೂಚಿಸಬೇಕೇ ಹೊರತು ದೋಷವನ್ನೇ ಕಡೆತನಕ ಸಾಧಿಸಿಕೊಂಡು ಬರುವುದು ಸರಿಯಲ್ಲ. ಬದಲು ಅವರಿಗೆ ಹೊಗಳಿಕೆಯಲ್ಲ, ಪ್ರೋತ್ಸಾಹದ ನಾಲ್ಕು ಮಾತುಗಳನ್ನು ಹೇಳಿ, ಅವರಿಂದ ಇನ್ನೂ ಉತ್ತಮವಾದ ಕೆಲಸಗಳನ್ನು ಮಾಡಿಸಿಕೊಳ್ಳಬೇಕು. ಎಕೆಡೆಮಿಯ ರಿಜಿಸ್ಟ್ರಾರರಾದ ಡಾ। ಮಾಧವ ಪೈ ಅವರು ಬಯಸುವುದಾದರೂ ಇಷ್ಟನ್ನೇ ಎಂದು ನಂಬುತ್ತೇವೆ.

ಸರಕಾರಿ ನೌಕರರ ವೇತನ

ನ್ಯಾಯಮೂರ್ತಿ ಜಗನ್ನಾಥ ದಾಸರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ಕೇಂದ್ರ ಸರಕಾರಿ ನೌಕರರ ವೇತನ ಪುನರ್ವಿಮರ್ಶನಾ ಸಮಿತಿಯು ಮಾಡಿದ ಹಲವಾರು ಸಲಹೆಗಳನ್ನು ಸರಕಾರವು ಸ್ವೀಕರಿಸಿದೆ ಎಂದು ತಿಳಿಯುತ್ತದೆ. ಕೇಂದ್ರ ನೌಕರರ ಕನಿಷ್ಠ ಮೂಲ ವೇತನವು ಮಾಸಿಕ ೭೫ ಇದ್ದುದನ್ನು ಇದರನ್ನು ೮೦ಕ್ಕೆ ಏರಿಸಲಾಗುವುದು. ಎಲ್ಲ ಸಂಬಳ ಗುಂಪುಗಳ ಸದ್ಯದ ತುಟ್ಟಿ ಭತ್ತೆಯ ಪ್ರಮಾಣವನ್ನು ಮೂಲ ಸಂಬಳದಲ್ಲಿ ಸಮಾವೇಶಗೊಳಿಸಲಾಗುವುದು. ಇದರಿಂದಾಗಿ, ಕಡಿಮೆ ವೇತನ ಪಡೆಯುವ ನೌಕರರಿಗೆ ತುಂಬ ಉಪಕಾರ ಮಾಡಿದಂತಾಯಿತು. ಜೀವನದ ವೆಚ್ಚವು ದಿನದಿಂದ ದಿನಕ್ಕೆ ಏರುತ್ತ ಹೋಗುತ್ತಿರುವಾಗ ಇಂತಹ ಸುಧಾರಣೆಯು ಸ್ವಾಗತಾರ್ಹವೇ. ಕೇಂದ್ರ ಸರಕಾರಕ್ಕೆ ಇದರಿಂದಾಗಿ ವರ್ಷಂಪ್ರತಿ ೧೬ ಕೋಟಿ ರೂಪಾಯಿಗಳು ಹೆಚ್ಚು ಬೇಕಾಗುವುದಂತೆ. ರಾಜ್ಯ ಸರಕಾರಗಳ ಸ್ಥಳೀಯ ಸಂಸ್ಥೆಗಳು ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಕೆಲಸಗಾರರ ವೇತನವು ಇಂದಿನ ವೆಚ್ಚದ ಮತ್ತು ಕೇಂದ್ರ ವೇತನ ಮಟ್ಟದ ಮುಂದೆ ಏನೂ ಹೊಂದಿಕೊಳ್ಳಲಾರವೆಂಬುದನ್ನು ಇಲ್ಲಿ ಅವಶ್ಯ ಸೂಚಿಸಲೇ ಬೇಕಾಗಿದೆ. ಮೈಸೂರು ಸರಕಾರವೂ ಕೇಂದ್ರ ವೇತನ ಸಮಿತಿಯ ಸಿಫಾರಸುಗಳು ಹೊರ ಬಂದನಂತರ, ತನ್ನ ನೌಕರರ ವೇತನಗಳ ಕುರಿತು ಪುನರ್ವಿಮರ್ಶೆ ನಡೆಸುವುದೆಂಬ ಮಾತು ಕೆಲವು ತಿಂಗಳು ಹಿಂದೆ ಕೇಳಿಬಂದಿತ್ತು. ಆದರದು ಇಂದಿಗೂ ಅಂತಹ ಪುನರ್ವಿಮರ್ಶೆಗಾಗಿ ಸಮಿತಿಯನ್ನು ನೇಮಿಸಿಲ್ಲ. ಈಗ ಕೇಂದ್ರ ಸರಕಾರವು ವೇತನಸ್ತರವನ್ನು ಪುನರ್ವಿಮರ್ಶಿಸಿತೆಂದಾದ ಮೇಲೆ ಇನ್ನಾದರೂ ಈ ಸಮಿತಿಯನ್ನು ನಿಯೋಜಿಸಿ, ರಾಜ್ಯಸರಕಾರದ ಪ್ರತ್ಯಕ್ಷ ಹಾಗೂ ಪರೋಕ್ಷ ನೌಕರರಿಗೆ ನ್ಯಾಯದಾನ ಮಾಡುವುದು ಅವಶ್ಯ. ಕೆಲಸಗಾರರಿಗೆ ನ್ಯಾಯವಾಗಿ ಸಲ್ಲಬೇಕಾದುದಕ್ಕೆ ಹಣವಿಲ್ಲ ಎಂಬ ಉತ್ತರ ಎಂದಿಗೂ ಬರಬಾರದು. ಇದರೊಂದಿಗೆ ಆದಾಯದಲ್ಲಿಯೂ ಹೆಚ್ಚಳವನ್ನು ಯಾವರೀತಿ ಸಾಧಿಸಬಹುದೆಂಬುದನ್ನೂ ಅವಶ್ಯ ಪರಿಶೀಲಿಸಿ, ಆದಾಯದಲ್ಲಿ ಹೆಚ್ಚಳ ಸಾಧಿಸಿ, ಅನಾವಶ್ಯಕ ವೆಚ್ಚಗಳನ್ನು ಕಡಿಮೆಮಾಡಿ, ತನ್ನ ನೌಕರರ ಸ್ಥಿತಿಗತಿಯನ್ನು ಉನ್ನತೀಕರಿಸಬೇಕಾದುದು ಅವಶ್ಯವೆಂಬುದನ್ನು ಸೂಚಿಸ ಬಯಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ನಂಬಿಗೆಯೇ ಪ್ರಧಾನ

ಆದಾಯಕರ ಕೊಡುವವರು ತಮ್ಮ ಆದಾಯದ ಬಗ್ಗೆ ಕೊಡುವ ಹೇಳಿಕೆಗಳನ್ನು ಸ್ವೀಕರಿಸಿ, ಅವರನ್ನೇ ನಂಬಿ ಕರವನ್ನು ವಸೂಲು ಮಾಡುವುದರಿಂದ ತೆರಿಗೆದಾರ--ಹಾಗೂ ಕರ ವಸೂಲಿ ಮಾಡುವ ಅಧಿಕಾರಿಗಳ ನಡುವೆ ಮೈತ್ರಿ ಬೆಳೆಯುವುದೆಂದೂ, ಇದರಿಂದ ಕರವನ್ನು ಯಾರೂ ತಪ್ಪಿಸಲಾರರಾದುದರಿಂದ ಕರದಿಂದ ಬರುವ ಆದಾಯವು ಹೆಚ್ಚುವುದೆಂದೂ ಶ್ರೀ ಮಹಾವೀರತ್ಯಾಗಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಕರ ವಸೂಲಿ ಪರಿಶೀಲನಾ ಸಮಿತಿಯು ಸಿಫಾರಸು ಮಾಡಿದೆ. ಆದರೆ; ಕರ ತೆರುವವರು ಕೊಡುವ ನಾಲ್ಕು ವರ್ಷದ ಹೇಳಿಕೆಗಳಲ್ಲಿ ಯಾವುದಾದರೂ ಒಂದನ್ನು ಸಂಪೂರ್ಣ ವಿಚಾರಣೆಗೊಳಪಡಿಸಬೇಕೆಂದೂ ಇದು ಹೇಳಿದೆ.

ನಾಣ್ಯ ಚಲಾವಣೆ

ಹಳದಿ ಒಂದಾಣೆ ಮತ್ತು ಅರ್ಧಾಣೆಯ ಪಾವಲಿಗಳನ್ನು ಮುಂದಿನ ಜನವರಿ ೧ನೆ ದಿನಾಂಕದಿಂದ ಚಲಾವಣೆಯಿಂದ ಹಿಂತೆಗೆದುಕೊಳ್ಳಲಾಗುವುದಲ್ಲದೇ ದಶಂಬರ ೧ರಿಂದ ೨೫ ನಯೇ ಪೈಸೆಯ ಹೊಸ ಪಾವಲಿಯನ್ನು ಪ್ರಥಮಬಾರಿಗೆ ಚಲಾವಣೆಗೆ ತರಲಾಗಿದೆ. ಈ ಇಪ್ಪತ್ತೈದು ನಯೇ ಪೈಸೆಯ ಪಾವಲಿಯು ನಾಲ್ಕಾಣೆಯ ಉರುಟು ಪಾವಲಿಯಂತಿದ್ದು ನೂರಕ್ಕೆ ನೂರರಷ್ಟು ನಿಕ್ಕೆಲ್ ಲೋಹದಿಂದ ತಯಾರಿಸಲ್ಪಟ್ಟಿದೆ. ಇದರೊಂದಿಗೆ ಹಿಂದಿನ ನಾಲ್ಕಾಣೆಯ ಪಾವಲಿಯೂ ಚಾಲ್ತಿನಲ್ಲಿರುವುದು.

ಕಾಂಗ್ರೆಸ್ ಅಧ್ಯಕ್ಷರು

ಕಾಂಗ್ರೆಸ್‌ನ ಅಧ್ಯಕ್ಷಸ್ಥಾನಕ್ಕೆ ನಾಲ್ಕಾರು ನಾಮಪತ್ರಗಳು ಬಂದಿದ್ದರೂ ಇಷ್ಟರಲ್ಲೇ ಹೆಚ್ಚಿನವರು ಹಿಂತೆಗೆದುಕೊಂಡಿದ್ದಾರೆ. ಇವರಲ್ಲಿ ಈಗಿನ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರೂ ಒಬ್ಬರು

ಅಲ್ಲಲ್ಲಿಯ ಸುದ್ದಿ ಸಾರ

ಶ್ರೀ ಧನ್ವಂತರೀ ಜಯಂತಿಯು ಉಡುಪಿಯ ಕವಿರಾಜ ದವಾಖಾನೆಯಲ್ಲಿ ಕಳೆದ ತಾ. 26ನೇ ರಾತ್ರಿ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಕವಿರಾಜ ಎಂ. ಜೆ. ಶೆಟ್ಟಿಯವರು ಸ್ವಾಗತಿಸಿದ ನಂತರ ಸಭಿಕರ ಭಾಷಣಗಳಾದುವು. ದಿ. ಡಾ. ಸುಂದರರಾವ ಪೈಗಳ ಭಾವಚಿತ್ರವನ್ನು ಡಾ. ಪಿ. ಆರ್. ನಾಯಕರು ಅನಾವರಣಗೊಳಿಸಿದರು. ಶ್ರೀ ಟಿ ರಮೇಶ ಪೈಗಳು ವಿದೇಶ ಪ್ರವಾಸದ ಕುರಿತಾಗಿ ಮಾತನಾಡಿದರು. ನಿಯೋಜಿತ ಅಧ್ಯಕ್ಷ ಡಾ. ಟಿ. ಎಂ. ಎ.

ಇನ್ನು ಶ್ರೀ ನೀಲಂ ಸಂಜೀವ ರೆಡ್ಡಿ ಮತ್ತು ಕೆಂಗಲ್ ಹನುಮಂತಯ್ಯನವರ ನಾಮಪತ್ರಗಳಷ್ಟೇ ಉಳಿದಿವೆ. ಈ ಇರ್ವರಲ್ಲಿ ಶ್ರೀ ರೆಡ್ಡಿಯವರಿಗೆ ಬಹಳ ರಾಜ್ಯಗಳ ಬೆಂಬಲ ಮಾತ್ರವಲ್ಲದೇ ಕೇಂದ್ರ ಪರಿಸ್ಥರ ಕೃಪಾಕಟಾಕ್ಷವೂ ಇರುವುದೆಂದು ಹೇಳಲಾಗುತ್ತಿರುವುದರಿಂದ, ಶ್ರೀ ಹನುಮಂತಯ್ಯನವರು ತಮ್ಮ ನಾಮಪತ್ರವನ್ನು ಹಿಂದೆಗೆಯುವರೆಂದು ನಿರೀಕ್ಷಿಸಬಹುದು.

ದೂರು ಪರಿಶೀಲನಾ ಸಮಿತಿ

ಕಾಂಗ್ರೆಸ್ ಪಕ್ಷದ ಅಧಿಕಾರಿಗಳ ಮೇಲೆ ಹೊರಿಸಲಾಗುವ ವ್ಯಕ್ತಿಗಳಿಂದ ಬರತಕ್ಕ ದೂರುಗಳನ್ನು ಪರಿಶೀಲಿಸಲು ಮತ್ತು ನ್ಯಾಯೋಚಿತವಾಗಿ ವರ್ತಿಸಲು ನಿಷ್ಪಕ್ಷಪಾತಿಗಳಾದ, ಕಾಂಗ್ರೆಸ್ಸಿಗರಿಂದ ಕೂಡಿದ ಒಂದು ಸಮಿತಿಯನ್ನು ರಚಿಸಬೇಕೆಂದೂ, ದೂರುಗಳ ಬಗ್ಗೆ ಅದರ ನಿರ್ಣಯವೇ ಕೊನೆಯದಾಗಿರಬೇಕೆಂದು ಈ ಬಗ್ಗೆ ನೇಮಿಸಿದ ಸಮಿತಿಯ ಅಧ್ಯಕ್ಷ ಶ್ರೀ ರಾಮಜಿ ಭಾಯಿ ಶರ್ಮರು ಹೇಳಿದ್ದಾರೆ. ಕಾಂಗ್ರೆಸಿಗರಲ್ಲಿರುವ ನಿಷ್ಕ್ರಿಯತೆಯಿಂದಾಗಿ ಸದ್ಯದ ಲೋಪದೋಷಗಳು ತೋರಿಬಂದಿವೆಯೆಂದೂ ಜಾಡ್ಯವನ್ನು ಹೊಡೆದೋಡಿಸಿದರೆ ಎಲ್ಲವೂ ಸರಿಯಾಗುವುದೆಂದೂ ಶ್ರೀ ಎಸ್. ಎನ್. ಮಿಶ್ರರ ಸಮಿತಿಯು ಅಭಿಪ್ರಾಯಪಟ್ಟಿದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 50/1959.

1. K. ಶ್ರೀನಿವಾಸ ಉಪಾಧ್ಯ, 2. ಜಲಜಾಕ್ಷಿ. 3. ಸೀತಾಲಕ್ಷ್ಮಿ. 4. ಚಂದ್ರಾವತಿ.- 1ನೇಯವ ಪುಬ್ಬಳ್ಳಿಯಲ್ಲಿಯೂ 2ರಿಂದ 4ನೇಯವರು ಕೊಡವೂರು ಗ್ರಾಮದಲ್ಲಿಯೂ ಇರುವವರು. —ಅರ್ಜಿದಾರರು

ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಮೇಲ್ಕಂಡ ಅರ್ಜಿಯ 1ರಿಂದ 3ನೇ ಅರ್ಜಿದಾರರ ತಂದೆ ಮತ್ತು 4ನೇ ಅರ್ಜಿದಾರಳ ಗಂಡ ತಾ. 24-7-56ರಲ್ಲು ಮೃತ ಪಟ್ಟ ಗೋಪಾಲ ಉಪಾಧ್ಯರ ವಾರೀಸುದಾರರಾಗಿ ಅರ್ಜಿಯ ಶೆಡ್ಯೂಲಿನಲ್ಲಿ ವಿವರಿಸಿದ ಆವೇಜುಗಳನ್ನು ಪಡಿಯುವರೆ ಎಲ್ಲಾ ಅರ್ಜಿದಾರರ ಬಗ್ಗೆ 4ನೇ ಅರ್ಜಿದಾರಳ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ವಗೈರೆ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 9—12—59ಕ್ಕೆ ಇಟ್ಟಿದೆ ಆ ಕುರಿತು ಯಾರಿಗಾದರೂ ಆಕ್ಷೇಪವಿದ್ದರೆ ಆ ದಿವಸ ಹಗಲು ಗಂಟೆ 11ಕ್ಕೆ ಸರಿಯಾಗಿ ಈ ಕೋರ್ಟಿನ ಮುಂದೆ ಬಂದು ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬುದನ್ನು ತಿಳಿಯಪಡಿಸೋಣಾಗಿದೆ.

(By the Order of the Court)
P. N. Krishnamurthi Rao.
Advocate for Petitioner.
ಉಡುಪಿ, ತಾ. 28-11-59.

ಪೈಗಳು ಅನಾರೋಗ್ಯದ ನಿಮಿತ್ತ ಬಾರದ್ದರಿಂದ ಅವರ ಧ್ವನಿಮುದ್ರಿತ ಭಾಷಣವು ಬಿತ್ತರಿಸಲ್ಪಟ್ಟಿತು.

ಕಾಂಗ್ರೆಸ್ ಕಾರ್ಯಕರ್ತರಿಗೆ ಸಲಹೆ— ಕರ್ನಾಟಕದ 6 ದಿನಗಳ ಪ್ರವಾಸವನ್ನು ಮುಗಿಸಿ ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ತಾ. 28ನೇ ಬೆಳಿಗ್ಗೆ ಮುಂಬಯಿಗೆ ವಿಶೇಷ ವಿಮಾನದಲ್ಲಿ ಪ್ರಯಾಣಿಸಿದರು. ಆ ದಿನ ಬೆಳಿಗ್ಗೆ ಮಂಗಳೂರಲ್ಲಿ ಜಿಲ್ಲಾ ಕಾಂಗ್ರೆಸ್ ಆಫೀಸಿನ ಪಠಾರದಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಶ್ರೀಮತಿಯವರು ಭಾಷಣ ಮಾಡುತ್ತಾ ಕಾಂಗ್ರೆಸ್ಸಿನ ಕಾರ್ಯಕರ್ತರು ಪಕ್ಷದ ಧೋರಣೆ ಮತ್ತು ಕಾಂಗ್ರೆಸ್ ಸರಕಾರವು ಸಾಧಿಸಿದ ಪ್ರಗತಿಯ ಜ್ಞಾನವನ್ನು ಪಡಕೊಳ್ಳಬೇಕೆಂದೂ, ಕಾಂಗ್ರೆಸ್ ಪಕ್ಷ ಮತ್ತು ಅಖಿಲ ದೇಶದಲ್ಲಿ ಐಕ್ಯತೆ ಇರಬೇಕಾದುದು ಅತ್ಯಗತ್ಯವೆಂದೂ ಮುಂತಾಗಿ ಹೇಳಿದರು. ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯಚ್. ಕೆ. ವೀರಣ್ಣ ಗೌಡರು ಧನ್ಯವಾದವಿತ್ತರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಕೆ. ಕೆ. ಶೆಟ್ಟರು ಸ್ವಾಗತಿಸಿದರು.

ಕೆನರಾ ಬೇಂಕಿಂಗ್ ಕಾರ್ಪೋರೇಶನಿನ ಚೇರ್‌ಮೆನರಾಗಿ ಡಾ. ಯು. ಪಿ. ಮಲ್ಯರು ತಾ. 29ರಲ್ಲಿ ಜರಗಿದ ಡೈರೆಕ್ಟರರ ಸಭೆಯಲ್ಲಿ ಚುನಾಯಿತರಾಗಿರುವರು ಇವರು ಸುಮಾರು 18 ವರ್ಷಗಳಿಂದಲೂ ಬ್ಯಾಂಕಿನ ಡೈರೆಕ್ಟರರಾಗಿ ಕ್ರಿಯಾಸಮಿತಿಯಲ್ಲಿದ್ದರು.

ಪೆರ್ಲಂಪಾಡಿ— ಕೊಳ್ತಿಗೆ— ತಾ. 26—11—59ರಂದು ಸ್ಥಳೀಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವನಿತಾ ಸಮಾಜದ ಸಭೆಯೊಂದು ಶ್ರೀಮತಿ ಸೋಮಕ್ಕೆ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪುತ್ತೂರು ರಾ. ವಿ. ಯೋಜನೆಯ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಗಂಗಾಧರನ್, ಗ್ರಾಮಸೇವಕ ಬಿ. ಎಲ್. ಆನಂದ ರೈ, ಮುಖ್ಯ ಸೇವಿಕೆ ಕುಮಾರಿ ಯಮುನಾ ಮೊದಲಾದವರು ಮಹಿಳಾ ಸಂಘದ ಆವಶ್ಯಕತೆಯ ಕುರಿತು ಮಾತನಾಡಿದರು. ಸಭಿಕರ ಭಾಷಣಗಳಾದ ಮೇಲೆ ಶ್ರೀಮತಿ ಲಕ್ಷ್ಮಿ ಅಧ್ಯಕ್ಷೆ, ಶ್ರೀಮತಿ ಸೀತಮ್ಮ ಉಪ—ಅಧ್ಯಕ್ಷೆ, ಶ್ರೀಮತಿ ಕೆಮ್ಮಾರ ಕಮಲ ಕಾರ್ಯದರ್ಶಿನಿ, ಶ್ರೀಮತಿ ಕಾವೇರಮ್ಮ ಕೆದಿಲಾಯ ಕೋಶಾಧಿಕಾರಿಣಿಯರಾಗಿ ಆರಿಸಲ್ಪಟ್ಟರು.

ಧನ್ವಂತರಿ ಪೂಜಾ ಸಮಾರಂಭ— ಉಡುಪಿಯ ಆಯುರ್ವೇದ ಕಾಲೇಜಿನಲ್ಲಿ ಧನ್ವಂತರಿ ಪೂಜಾ ಸಮಾರಂಭವು ಕಳೆದ ತಾ 28ರಂದು ನಗರ ಸಭಾಧ್ಯಕ್ಷ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ. ನಾಗೇಶರಾಯರು ಸ್ವಾಗತಿಸಿದ ಮೇಲೆ, ಶ್ರೀ ಬೈಲೂರು ವಾಸುದೇವರಾಯರು ಅತಿಥಿಗಳ ಪರಿಚಯ ಭಾಷಣ ಮಾಡಿದರು, ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ ಮತ್ತು ಯಸ್. ಪಿ. ಆಚಾರ್ಯ ಇವರಿಂದ ಗಮಕವಾಚನವಾದ ಮೇಲೆ ಪ್ರೊ. ಕೆ. ಗುರುರಾಜ ಆಚಾರ್ಯರು ಕಾಲೇಜಿನಲ್ಲಿ ನಡೆಸುತ್ತಿರುವ ಧರ್ಮಾರ್ಥ ಚಿಕಿತ್ಸಾಲಯದ ವರದಿಯನ್ನು ವಿವರಿಸಿದರು. ಶ್ರೀ ಶಂಭುಶರ್ಮ, ಪ್ರೊ. ಎಚ್. ಟಿ. ರಾಮಚಂದ್ರಾಚಾರ್ಯ, ಶ್ರೀ ಆರ್. ವೈಕುಂಠ ಶೆಟ್ಟಿ ಮೊದಲಾದವರು ಭಾಷಣಗಳನ್ನಿತ್ತರು. ಅಧ್ಯಕ್ಷ ಡಾ. ಐತಾಳರು ಆಯುರ್ವೇದವು ಚಿಕಿತ್ಸೆಯ ಮಾತೃಸ್ಥಾನದಲ್ಲಿದೆಯೆಂದೂ ಅದರ ಸಂಶೋಧನೆಮಾಡಿ ಅದರ ಪ್ರಯೋಜನ ಜನತೆಗೆ ಲಭಿಸುವಂತೆ ಮಾಡಬೇಕೆಂದೂ ಹೇಳಿದರು.

ಕಟಪಾಡಿ— ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ಸೇವಾದಳದ ವಾರ್ಷಿಕೋತ್ಸವವು ತಾ. 29—11—59ರಂದು ಶ್ರೀ ಎಚ್. ಅನಂತಯ್ಯ, ಬಿ.ಎ., ಎಲ್.ಟಿ. ಇವರ ಹಿರಿತನದಲ್ಲಿ ಜರಗಿತು. ಪ್ರಾರಂಭದಲ್ಲಿ ಶ್ರೀ ಪಿ. ಬಿ. ಆಚಾರ್ಯರು ವಿಶ್ವಕರ್ಮ ಧ್ವಜಾರೋಹಣ ಮಾಡಿದರು. ಗೌ| ಕಾರ್ಯದರ್ಶಿ ಶ್ರೀ ಯು. ಬಿ. ಭಾಸ್ಕರಾಚಾರ್ಯರು ಗತ ವರ್ಷದ ವರದಿಯೊಪ್ಪಿಸಿ, ಶ್ರೀಗಳಾದ-ನಾ. ಭಾ. ಚಂದ್ರಶೇಖರಾಚಾರ್ಯ, ಕೆ. ಎಸ್. ಆಚಾರ್ಯ, ಪಿ. ಗಂಗಾಧರಾಚಾರ್ಯ ಇವರಿಂದ ಬಂದ ಶುಭ ಸಂದೇಶಗಳನ್ನು ಓದಿ ಹೇಳಿದರು. ಸಭಿಕರಲ್ಲಿ ವಿದ್ವಾನ್ ಶ್ರೀ ಕೆ ದೇವಪ್ಪಾಚಾರ್ಯ (ಸಾಹಿತ್ಯ ಶಿರೋಮಣಿ), ಬ್ರ| ರುದ್ರಯ್ಯಾಚಾರ್ಯ, ಮತ್ತು ಪಿ. ಮಾಧವಾಚಾರ್ಯರು ಸೇವಾದಳದ ಆವಶ್ಯಕತೆಯ ಕುರಿತು ಉಪನ್ಯಾಸವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿಶ್ವಬ್ರಾಹ್ಮಣ ಸಮಾಜದ ದುಸ್ಥಿತಿಯನ್ನು ವಿವರಿಸಿ, ಅದರ ನಿವಾರಣೆಗಾಗಿ ಮುಂದಿನ ಜನಾಂಗವಾಗಿರುವ ಇಂದಿನ ಮಕ್ಕಳೆಲ್ಲರಿಗೆ ವಿದ್ಯಾಭ್ಯಾಸ ಕೊಟ್ಟು ಸುಶಿಕ್ಷಿತರನ್ನಾಗಿ ಮಾಡಲು, ಸಮಾಜ ಬಾಂಧವರು ಪಣತೊಡತಕ್ಕದೆಂದಲೂ, ಈ ಮಹಾಕಾರ್ಯದಲ್ಲಿ ಸೇವಾದಳವು ಮಾಡಬಹುದಾದ ಕರ್ತವ್ಯಗಳನ್ನು ವಿವರಿಸಿದರು.

ದಳನಾಯಕ ಶ್ರೀ ಯು. ಕೃಷ್ಣಾಚಾರ್ಯರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಶ್ರೀ ಆನೆಗುಂದೀ ಜಗದ್ಗುರು ಶ್ರೀ ಶ್ರೀ ನಾಗಧರ್ಮೇಂದ್ರತೀರ್ಥ ಶ್ರೀ ಪಾದಂಗಳವರ ಆರಾಧನೆಯು, ಕಟಪಾಡಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ ಶ್ರೀ ಶ್ರೀಗಳವರ ಸಮಾಧಿಯಲ್ಲಿ ಲಿಂಗಾಭಿಷೇಕ, ಮಧ್ಯಾಹ್ನ ಮಹಾಪೂಜೆ, ವಿಶ್ವಬ್ರಾಹ್ಮಣ ಸಂತರ್ಪಣೆ, ರಾತ್ರಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವರ ದೀಪೋತ್ಸವ, ಭಜನಾಮಂಗಲೋತ್ಸವ ಜರಗಿತು

ಗ್ರಂಥ ಸಮರ್ಪಣೆ — ತಾರೀಕು 28 11-59ರಂದು ಮಂಗಳೂರಿನ ಸ್ಯಂಟ್ ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಂಘದವರು ಶ್ರೀ ಸೇಡಿಯಾಪು ಕೃಷ್ಣ ಭಟ್ಟರಿಗೆ „ಬಸಗೆ" ಎಂಬ ಸಂಭಾವನಾ ಗ್ರಂಥವನ್ನು ಜಿಲ್ಲಾ ಸಬ್ ಜಡ್ಜ ಶ್ರೀ ಆರ್ ಬಿ ನಾಯಕರ ಅಧ್ಯಕ್ಷತೆಯಲ್ಲಿ ಸಮರ್ಪಿಸಿ ಗೌರವಿಸಿದರು. ಶ್ರೀಗಳಾದ ಕಡೆಂಗೋಡ್ಲು ಶಂಕರ ಭಟ್, ಬಿ. ಭುಜಂಗರಾವ್, ಬಿ. ವಿ ಕೆದಿಲಾಯರು ಶುಭಾಶಯ ಕೋರಿ ಭಾಷಣಗಳನ್ನಿತ್ತರು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.**

ಮಾರಾಟಗಾರರು: **ನವಭಾರತ ಬುಕ್ ಡಿಪೊ, ಉಡುಪಿ.**

ಕಾಸರಗೋಡು— ಇಲ್ಲಿ ಕೃಷ್ಣ ನಗರದಲ್ಲಿ ಕೂಡಿರುವ ರಾ. ಸ್ವ. ಸೇವಕರ ಶಿಬಿರಕ್ಕೆ ಆಗಮಿಸಿರುವ ಶ್ರೀ ಗುರೂಜಿಯವರು ದಿನಾಂಕ 26 (ನವಂಬರ್)ರಂದು ಸಂಜೆ ಜರಗಿಸಲಾದ ಸಾರ್ವಜನಿಕ ಸಭೆಯಲ್ಲಿ ತಮ್ಮ ಚಟುವಟಿಕೆಗಳ ಕುರಿತು ದೀರ್ಘವಾದ ಸಂದೇಶವಿತ್ತರು. ಪ್ರಾರಂಭದಲ್ಲಿ ಸ್ವಯಂ ಸೇವಕರ, ಶಾರೀರಿಕ ಪ್ರದರ್ಶನಗಳು, ಗೀತಾ ಗಾಯನ, ಮುಂತಾದ ಕಾರ್ಯಕ್ರಮಗಳಿದ್ದುವು. ಬೆಳಗ್ಗೆ ನಗರದ ಸುತ್ತು ವಲಯಗಳಲ್ಲಿ ನಡೆಸಿದ ಪಥ ಸಂಚಲನ ಕಾರ್ಯಕ್ರಮದಲ್ಲಿ ಸಾವಿರಕ್ಕೂ ಮಿಕ್ಕಿದ ಸ್ವಯಂ ಸೇವಕರು ಭಾಗವಹಿಸಿದ್ದರು. ಬಂದ ಅತಿಥಿಗಳಿಗಾಗಿ . ವಾಹನ, ವಸತಿ, ಭೋಜನಾದಿ ಸೌಕರ್ಯಗಳನ್ನೂ ಏರ್ಪಡಿಸಲಾಗಿತ್ತು.

ನಂದಳಿಕೆ ಕವಿವರ ಮುದ್ದಣ್ಣ ಸ್ಮಾರಕ ಸಂಘ, ನಂದಳಿಕೆ— ಕರ್ನಾಟಕದ ಹೆಮ್ಮೆಯ ಕವಿಶ್ರೇಷ್ಠರಲ್ಲಿ ಒಬ್ಬನಾಗಿ ಕೀರ್ತಿಪಡೆದಿರುವ ಮುದ್ದಣನ ಹುಟ್ಟೂರಾದ ನಂದಳಿಕೆಯಲ್ಲಿ ಆತನ ನೆನಪಿಗೆ ಸ್ಮಾರಕ ಮಂದಿರವೊಂದನ್ನು ಕಟ್ಟಿಸಬೇಕೆಂಬ ಸದಿಚ್ಛೆ ಊರಿನ ಕಲಾಭಿಮಾನಿಗಳಿಗೆ ಬಹು ಸಮಯದಿಂದಲೂ ಇದ್ದಿತು. ಆದರೆ ಈ ಬಯಕೆಯನ್ನು ಕೈಗೂಡಿಸುವ ಮೊದಲ ಕಾರ್ಯನಡೆದುದು ದಿನಾಂಕ 24-1-59ರಲ್ಲಿ—ಶ್ರೀ ಟಿ. ಎ ಪೈಗಳು ಈ ಸ್ಮಾರಕ ಮಂದಿರದ ಶಂಕುಸ್ಥಾಪನೆ ಮಾಡಿದಾಗ. ಈ ಕಟ್ಟಡ ಸಂಪೂರ್ಣವಾದಾಗ ಇಲ್ಲಿ ಒಂದು ಪುಸ್ತಕಾಲಯ, ವಾಚನಾಲಯಗಳನ್ನು ಆರಂಭಿಸುವ ಯೋಜನೆ ಸಿದ್ಧವಾಗಿದೆ

ಕವಿ ಮುದ್ದಣನ ಕಾಲಾಪ ತಿಳಿಗೊಪ್ಪುವಂಥ ಸ್ಮಾರಕ ಮಂದಿರವನ್ನು ಕಟ್ಟುವ ಹೊಣೆಗಾರಿಕೆ ಎಲ್ಲಾ ಕನ್ನಡಿಗರ ಪಾಲಿಗಿದೆ. ಏಕೆಂದರೆ ಆತನಿಂದು ಕೇವಲ ನಂದಳಿಕೆಯ ಸೊತ್ತಲ್ಲ. ಇಡೀ ಕರ್ನಾಟಕದ ಸೊತ್ತು; ಕನ್ನಡಿಗರೆಲ್ಲರ ಸೊತ್ತು.

ನಿಮ್ಮೆಲ್ಲರ ಉದಾರ ಸಹಾಯದಿಂದ ಈ ಸ್ಮಾರಕ ಮಂದಿರ ಕಟ್ಟಿ ಪೂರ್ಣವಾಗಬೇಕು. ಆಗ ಕನ್ನಡಿಗರಾದ ನಾವು ಈ ಮಹಾಕವಿಯ ಪಾಲಿನ ಋಣವನ್ನು ಒಂದಿಷ್ಟಾದರೂ ತೀರಿಸಿದಂತಾಗುತ್ತದೆ.

ಈ ಕಟ್ಟಡವನ್ನು ಕಟ್ಟಿಸಲೆಂದು ನಂದಳಿಕೆ ಚಾವಡಿ ಮನೆ ಶ್ರೀಮತಿ ಸೀತಮ್ಮ ಹೆಗ್ಗಡ್ತಿಯವರು ಸ್ಥಳದಾನ ಮಾಡಿರುತ್ತಾರೆ. ಮಹಾಜನರು ಶಕ್ತ್ಯಾನುಸಾರ ಸಹಾಯ ಕೊಟ್ಟು, ಈ ಸ್ಮಾರಕ ಮಂದಿರವನ್ನು ಕಟ್ಟಿ ಮುಗಿಸುವ ಕಾರ್ಯಕ್ಕೆ ನೆರವಾಗಬೇಕಾಗಿ ವಿನಂತಿ.

ಎಸ್. ವಿ. ಎಸ್. ಶಾಲಾ ಹಳೆ ವಿದ್ಯಾರ್ಥಿಗಳ ಸಂಘ, ಕಟಪಾಡಿ— ಇದೇ ಒಕ್ಟೋಬರ ತಿಂಗಳಿನಲ್ಲಿ ನಿವೃತ್ತರಾದ ಎಸ್. ವಿ. ಎಸ್. ಹೈಸ್ಕೂಲಿನ ಮುಖ್ಯ ಅಧ್ಯಾಪಕ ಶ್ರೀ ಪಿ. ರಾಮದಾಸ ನಾಯಕ್, ಬಿ ಎ ಎಲ್. ಟಿ. ಅವರನ್ನು ಸತ್ಕರಿಸುವರೆ ಸಮಾರಂಭವನ್ನು ಜರಗಿಸಬೇಕಾಗಿಯೂ, ಅವರ ದೀರ್ಘಕಾಲದ ಸೇವೆಯ ಸ್ಮಾರಕವಾಗಿ ಅವರ ತೈಲಚಿತ್ರವನ್ನು ಮತ್ತು ಈ ಮೊದಲು ನಿವೃತ್ತರಾದ ಶ್ರೀ ಕೆ. ಚರ್ನಪ್ಪ ಶ್ಯಾನುಭಾಗ, ದಿ| ಶ್ರೀ ಎಮ್. ದಾಮೋದರ ಶೆಣೈ ಮತ್ತು ದಿ| ಶ್ರೀ ಮಾರ್ಸೆಲ್ ಆಲ್ವ-ಅವರ ತೈಲಚಿತ್ರಗಳನ್ನು ಹೈಸ್ಕೂಲಿನಲ್ಲಿ ಇಡಬೇಕಾಗಿಯೂ, ಅವರೆಲ್ಲರ ಹೆಸರಿನಲ್ಲಿ ಬಡ ವಿದ್ಯಾರ್ಥಿಗಳಿಗೆ ಧರ್ಮಾರ್ಥ ವೇತನವನ್ನು ಕೊಡುವರೆ ಬೇಕಾಗುವ ಕಾಯಂ ನಿಧಿಯನ್ನು ಏರ್ಪಡಿಸಬೇಕಾಗಿಯೂ ನಮ್ಮ ಸಂಘವು ನಿಶ್ಚಯಿಸಿರುತ್ತದೆ. ಈ ಕಾರ್ಯಗಳನ್ನು ನೆರವೇರಿಸುವರೆ ಕನಿಷ್ಠ ಪಕ್ಷ ರೂ. 10,000ದ ಮೊಬಲಗು ಬೇಕಾಗಿರುವುದರಿಂದ ಹಳೇ ವಿದ್ಯಾರ್ಥಿಗಳೂ, ಹಿತೈಷಿಗಳೂ ಉದಾರ ಧನ ಸಹಾಯವನ್ನು ನೀಡಿ ಈ ಕಾರ್ಯಗಳನ್ನು ಯಶಸ್ವಿಗೊಳಿಸಬೇಕಾಗಿ ಸಂಘದ ಅಧ್ಯಕ್ಷ ಡಾಕ್ಟರ್ ಕೆ. ಜಿ. ಕಿಣಿಯವರು ವಿನಂತಿಸುತ್ತಾರೆ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ,

ಕಲಾದರ್ಶನ

ತಾಹಿತಿಯಾನರ ಜಾನಪದ ನೃತ್ಯ

ನಟನೂ ಸಭಾಸದನೂ ವಿಚಿತ್ರ ಲೋಕವೊಂದರಲ್ಲಿರುವಂತೆ ಮಾಡುವ ಈ ನೃತ್ಯವು ಜನಮನಮೋಹಕವಿರುವುದು.

ತಾಹಿತಿಯಾ ನೃತ್ಯವು ಇಂದಿನ ಪ್ರಪಂಚದಲ್ಲೆಲ್ಲಾ ಅತ್ಯಧಿಕ ಆಕರ್ಷಕವೂ ಅದ್ಭುತತಮವೂ ಮನೋಹಾರಿಯೂ ಆದ ನರ್ತನಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಕೇವಲ ಪ್ರೇಕ್ಷಕನಿಗೆ ಮಾತ್ರವಲ್ಲ, ನೃತ್ಯದಲ್ಲಿ ಭಾಗ ವಹಿಸುವವನಿಗೂ ಇದು ಆತ್ಮಾನಂದವನ್ನು ತಂದೀಯಬಲ್ಲುದು. ಹಿಂದಿನ ಸಾಂಪ್ರದಾಯಿಕ ಓರಿ—ತಾಹಿತಿ ನೃತ್ಯವು ನಾಟಕೀಯತೆ,ಮೂಕಾಭಿನಯಗಳಿಂದ ಕೂಡಿ ಗಂಡಸು ಮತ್ತು ಹೆಂಗಸರ ನಡುವಣ ಪ್ರೇಮಪ್ರಣಯಗಳಿಗೆ ಸಂಬಂಧಪಟ್ಟ ವಿವಿಧ ಕಥೆಗಳಿಂದ ಪರಿಪೋಷಕವಾಗಿದೆ. ವಾಸ್ತವಿಕವಾಗಿ ಇದು ಶೃಂಗಾರ ಪ್ರಧಾನವಾದ ನೃತ್ಯವಾಗಿದ್ದು ಇದರ ಹೆಚ್ಚಿನ ವೈಶಿಷ್ಟ್ಯಗಳೆಂದು ಮೂಲೆಪಾಲಾಗಿರುವುವಾದರೂ ಇಂದಿಗೂ ಇದರ ಪ್ರಾಥಮಿಕ ಪರಂಪರೆಯು ಕಂಡುಬರುತ್ತದೆ.

"ಓರಿ ತಾಹಿತಿ"ಯು ವೈಶಿಷ್ಟ್ಯಪೂರ್ಣವಾದುದು. ಇದರ ವಿಶೇಷ ಪ್ರಕಾರದ ಅಂಗಾಭಿನಯಗಳು ಶರೀರದಲ್ಲಿ ಬಲವೂ ಸ್ನಾಯುಗಳಲ್ಲಿ ದಾರ್ಢ್ಯವೂ ಉತ್ಪಾದಿತವಾಗುವುದು. ದೇಹದ ಮೇಲ್ಭಾಗವು ಸ್ತಬ್ಧವಾಗಿರುವಂತೆಯೇ ಸೊಂಟದ ಕೆಳಗಿನ ಭಾಗವು ಅತ್ಯಧಿಕವಾದ ವೇಗದಿಂದಲೂ ಚಾಲಾಕಿನಿಂದಲೂ ಸಂಚರಿಸುವುದು. ಜಘನ ಪ್ರದೇಶವು ಪಕ್ಕದಿಂದ ಪಕ್ಕಕ್ಕೆ ತಿರುಗುವ ಕೌಶಲವನ್ನು ನೋಡುವಾಗ ಆಶ್ಚರ್ಯಚಕಿತರಾಗುತ್ತೇವೆ. ಸೊಂಟಕ್ಕೆ ಕಟ್ಟಿಕೊಂಡ ಹುಲ್ಲಿನ ಉಡುಗೆಯು ಆಗ, ಹರಿದಾಡುವ ಕ್ರಮವು ಮನಮೋಹಕವೆನಿಸಿದೆ. ಪ್ರೇಕ್ಷಕರಿಗೆ ಈ ರೀತಿ ನರ್ತಿಸುವುದು ಬಹಳ ಸುಲಭವೆಂದು ತೋರಿದರೂ ವಾಸ್ತವಿಕವಾಗಿ ನರ್ತನಕಾರನು ತನ್ನ ಶರೀರದ ಸ್ನಾಯುಗಳೆಲ್ಲವನ್ನೂ ತನ್ನ ಅಂಕಿತದಲ್ಲಿಟ್ಟುಕೊಳ್ಳದ ಹೋದರೆ, ಈ ನೃತ್ಯವನ್ನು ಅಭಿನಯಿಸುವುದು ಸಾಧ್ಯವಿಲ್ಲ.

ಡೋಲು ಮತ್ತು ಒಂದು ಸಾಮಾನ್ಯವಾದ ಮಿಂಟುವಾದ್ಯಗಳು ಈ ನೃತ್ಯದ ಸಾರ್ವತ್ರಿಕ ಹಿಮ್ಮೇಳಗಳಾಗಿವೆ. ಕೇವಲ ಒಂದೇ ವೀಣೆಯೂ ಸಾಕಾಗುವುದು. ಆದರೆ ಇದು ತಹಿತಿಯಾನವೆನಿಸಿದ ವಿಶಿಷ್ಟ ರೀತಿಯಲ್ಲಿ ತಾರಕ ಸ್ವರದಲ್ಲಿ ಮಿಂಟಲ್ಪಡಬೇಕಾಗುವುದು. ಅಭಿನಯದ ತೀವ್ರತೆಗನುಕೂಲವಾಗುವಂತೆ ಸಂಯೋಜಿತವಾದ ಸಂಗೀತವು ಒರಟಾಗಿಯೂ ವೇಗವಾಗಿಯೂ ನೆಗೆದಾಡುವಂತೆ ಇರುವುದು.

ತಹಿತಿಯಾನ ಡೋಲು ತೀರ ಸರಳವಾಗಿದೆ. ತೆಂಗಿನ ಮರದ ತುಂಡೊಂದರಿಂದ ಕಳಸಿಗೆಯ ಬಾಯಿಗಳಿಗೆ ಆಡಿನ ಚರ್ಮವನ್ನು ಬಿಗಿದು ಇದನ್ನು ತಯಾರಿಸುತ್ತಾರೆ. ಇದು ಅತ್ಯಂತ ಏರಿಕೆಯ ಧ್ವನಿಯನ್ನುಂಟು ಮಾಡುತ್ತದೆ. ಅಲ್ಲದೆ ಅದನ್ನು ಪ್ರತಿಧ್ವನಿತಗೊಳಿಸುತ್ತದೆ. ಇದನ್ನು ಓಲೆಯ ದಂಟಿನಿಂದ, ಅಂಗೈಯಿಂದ ಬೆರಳ ತುದಿಗಳಿಂದ, ತೋಳುಗಳಿಂದ ಮತ್ತು ಇನ್ನು ಕೆಲವೊಮ್ಮೆ ತೊಡಗಂಟು ಇಲ್ಲವೇ ಮೊಣಕಾಲುಗಳಿಂದಲೂ ಬಾರಿಸಬಹುದು. ಆಗ ನಾನಾ ಪ್ರಕಾರದ ನಾದವು ಕಳಸಿಗೆಯಿಂದ ಹೊರಡುವುದು. ಮಿಂಟು ವಾದ್ಯವು ಬುಡದಲ್ಲಿ ಸೋರೆಯಂತೆ ಅಗಲವಾಗಿಯೂ ಮೇಲ್ಗಡೆ ಸಪೂರವಾಗಿಯೂ ಇರುವ ಒಂದು ಟೊಳ್ಳು ವಾದ್ಯ. ಇದರ ಸ್ವರವು ಯಾವಾಗಲೂ ಏರಿಕೆಯಲ್ಲಿಯೇ ಇರುತ್ತದೆ. ಈ ಎರಡು ವಿಶಿಷ್ಟತಾಪೂರ್ಣ ಹಿಮ್ಮೇಳಗಳಿಂದಾಗಿ ಅವುಗಳ ತಮ್ಮವೇ ಆದ ಒಂದು ಗತ್ತುಗಾರಿಕೆಯಿಂದಾಗಿ ತಹಿತಿಯಾನ ನೃತ್ಯಕ್ಕೆ ತನ್ನದೇ ಆದ ಒಂದು ಬೆಡಗು ಬರುತ್ತದೆ. ಈ ಬೆಡಗನ್ನು ಸರ್ವರೂ ಕಂಡು ಮೆಚ್ಚಿ ತಲೆದೂಗುತ್ತಾರೆ.

ತಾಹಿತಿಯಲ್ಲಿ ಈ ನೃತ್ಯವನ್ನು ಬಿಟ್ಟರೆ ಬೇರೆ ವಿಹಾರವೆಂಬುದಿಲ್ಲ. ಶರೀರವನ್ನು ದೃಢವನ್ನಾಗಿ ಮಾಡಿ, ಶತ್ರುಗಳು ಮತ್ತು ಉಪದ್ರವಗಳನ್ನು ಸೂರ್ಯನು ಮಳೆಬಿಂದುವನ್ನು ದೂರೀಕರಿಸುವಂತೆ ದೂರ ಮಾಡಿ ಬಿಡುವ ಈ ನೃತ್ಯವು ಸರ್ವಮೋಹಕವಿರುವುದು. ಸ್ತ್ರೀಯರು ಮಾತ್ರವಲ್ಲ ಪುರುಷರು ಕೂಡ ಈ ಹುಲ್ಲಿನ ಕೆಳ ಅಂಗಿಯನ್ನೂ ಕಿರೀಟವನ್ನೂ ತೊಟ್ಟು ಆಡುವ ಈ ನೃತ್ಯವು ವಿಶ್ವದ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.

(ಸಂಗ್ರಹಿತ)

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ ಎ)

ಸಾಮಾನ್ಯ ರೋಗಗಳು
(ಡಾ ಕೆ ಎಲ್. ಐತಾಳ, ಎಂ ಬಿ ಬಿ ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್ ಎಲ್. ಬಿ

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ

ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಆಡಳಿತೆ ಮಂಡಳಿಯ ಸಭೆಯು—

ತಾ 22—11—59ರಲ್ಲು ಸಂಘದ ಅಧ್ಯಕ್ಷ ಶ್ರೀ ಟಿ ಎ ಪೈಯವರ ಅಧ್ಯಕ್ಷತೆಯಲ್ಲಿ ಉಡುಪಿ ಮುಕುಂದ ನಿವಾಸದಲ್ಲಿ ಜರಗಿತು. ಕಾರ್ಯದರ್ಶಿಯವರು ಗತಸಭೆಯ ಪ್ರೊಸಿಡಿಂಗ್ಸನ್ನು ಓದಿದರು. ಅಧ್ಯಕ್ಷರು ತಾ 25-10 59 ರಲ್ಲು ಉಜ್ರೆಯಲ್ಲಿ ಜರಗಿದ ಜಿಲ್ಲಾ ಮಂಡಲ ಕಾಂಗ್ರೆಸ್ ಸಮ್ಮೇಳನದಲ್ಲಿ ಮೆನೇಜರರ ಸಂಘದ ಮನವಿಗಳನ್ನು ಮುಖ್ಯಮಂತ್ರಿ ಶ್ರೀ ಬಿ ಡಿ. ಜತ್ತಿ, ಸಭಾಧ್ಯಕ್ಷ ಶ್ರೀ ಕೆ. ಹನುಮಂತಯ್ಯ, ಆರೋಗ್ಯಮಂತ್ರಿ ಶ್ರೀ ಕೆ ಕೆ ಹೆಗ್ಡೆ ಮಗ್ಯರೆಯರಿಗೆ ಅರ್ಪಿಸಿದ ವಿಚಾರವನ್ನೂ, ಸದ್ರಿ ಪರಿಷತ್ತಿನಲ್ಲಿ ಪಾಸುಮಾಡಿದ ನಿರ್ಣಯಗಳನ್ನೂ, ತಾನು ಬೆಂಗಳೂರಲ್ಲಿ ಡೈರೆಕ್ಟರರ ಹತ್ತಿರ ಮಾತಾಡಿದ ವಿಚಾರವನ್ನೂ ಸಭೆಯಲ್ಲಿ ತಿಳಿಸಿದರು. ಕಾರ್ಯದರ್ಶಿಯಾದ ಶ್ರೀ ಕುರುಕಾಲು ಗಣಪಯ್ಯ ಸೆಟ್ಟರು ಜಿಲ್ಲಾ ಪರಿಷತ್ತಿನ ಮನವಿಗಳನ್ನು ಕಳುಹಿಸಿದ ಬಗ್ಗೆ ಮುಖ್ಯಮಂತ್ರಿ ಮಗ್ಯರ ಹಲವು M L A ಯವರಿಂದ ಬಂದ ಉತ್ತರಗಳನ್ನೂ, ಸಂಘದ ನಿಬಂಧನೆಗಳನ್ನು ಜಿಲ್ಲಾ ರಿಜಿಸ್ಟ್ರಾರರ ಸೂಚನೆಯ ಪ್ರಕಾರ ಸರಿಪಡಿಸಿ ತಾ 20 11.59 ರಲ್ಲು ರಿಜಿಸ್ಟ್ರೀ ಬಗ್ಗೆ ದಾಖಲು ಮಾಡಿಬಂದಿರುವ ವಿಚಾರವನ್ನೂ, ಮತ್ತು ಇತ್ತೀಚೆಗೆ ಹೊಸತಾಗಿ ಜ್ಯಾರಿಗೊಳಿಸಲ್ಪಟ್ಟ ರೂಲುಗಳಿಂದ ತಮ್ಮ ಶಾಲೆಗಳಿಗೆ ಉಂಟಾದ ತೊಂದರೆಗಳ ಕುರಿತು ಹಲವು ಮೆನೇಜರರಿಂದ ಬಂದ ಪತ್ರಗಳನ್ನೂ ಸಭೆಯ ಮುಂದೆ ವಿವರಿಸಿದರು. ಅಳಿಕ್ಕ ಈ ಕೆಳಗಿನ ನಿರ್ಣಯಗಳನ್ನು ಮಂಜೂರು ಮಾಡಲಾಯ್ತು.

೧) ದ ಕ ಜಿಲ್ಲಾ ವಿದ್ಯಾಧಿಕಾರಿಗಳ ಬಳಿಗೆ ತಾ 21—9 59ರಲ್ಲಿ ಸಂಘದ ಅಧ್ಯಕ್ಷರ ಮುಂದಾಳುತನದಲ್ಲಿ ಹೋದ ನಿಯೋಗಕ್ಕೆ ತಾ 31—5—59ರ ವರೆಗಿನ ಕ್ಲಾಸು ವ, ಡಿವಿಜನುಗಳ ಬಗ್ಗೆ ನೇಮಿಸಲ್ಪಟ್ಟ ಅಧ್ಯಾಪಕರ ಪೈಕಿ ೧ ವರ್ಷಕ್ಕೆ ಕಡಿಮೆ ಸರ್ವಿಸಿನ ಅಧ್ಯಾಪಕರ ಗ್ರಾಂಟನ್ನು ತಾ 1—6—59ರ ಲಾಗಾಯ್ತು ತಡೆಹಿಡಿಯಲ್ಪಟ್ಟಿರುವುದನ್ನು ಕೊಡುವ ಭರವಸೆ ದೊರಕಿದ್ದರೂ ಹಲವು ಶಾಲೆಗಳಿಗೆ ಹೀಗೆ ತಡೆಹಿಡಿಯಲ್ಪಟ್ಟ ಗ್ರಾಂಟು ಈ ವರೆಗೂ ದೊರೆಯಲಿಲ್ಲವೆಂಬ ವಿಚಾರವು ತಿಳಿದು ಬಂದಿರುವುದರಿಂದ ಸದ್ರಿ ಗ್ರಾಂಟನ್ನು ಅವಷ್ಟು ಬೇಗನೇ ಕೊಡಿಸುವಂತೆ ಪುನಹ D E O ರವರಿಗೆ ಬರಕೊಳ್ಳುವುದು,

೨) ಶಾಲೆಯಲ್ಲಿ ದೀರ್ಘ ರಜೆ ಕೊಡುವ ಕುರಿತು D E O ರವರಿಂದ ಇತ್ತೀಚೆಗೆ ಬಂದ ಸರ್ಕ್ಯುಲಾರನ್ನು ಪರಿಶೀಲಿಸಿ ಈ ಕೆಳಗಿನ ತಿದ್ದುಪಡಿಯನ್ನು ಮಂಜೂರು ಮಾಡುವಂತೆ D. E O ರವರಿಗೆ ಬರಕೊಳ್ಳುವುದು. a ಹಳ್ಳಿಯ ಶಾಲೆಗಳಲ್ಲಿ ಬೇಸಗೆ ರಜೆಯನ್ನು ಮೇ ತಿಂಗಳ ತಾ 22ಕ್ಕೆ ಶಾಲೆ ಆರಂಭವಾಗುವಂತೆ ಬರೇ 3ವಾರ ಮಾತ್ರ ಕೊಡತಕ್ಕದ್ದು. ಉಳಿದ 7ವಾರಗಳ ರಜೆಯ ಪೈಕಿ ಜೂನ್, ಜುಲೈ ತಿಂಗಳುಗಳ ಜಡಿಮಳೆ, ನ, ಎಣೆಲು ಬೇಸಾಯದ ರಜೆಯನ್ನು 4 ವಾರವೂ ಒಕ್ಟೋಬರ, ನವಂಬರ ತಿಂಗಳ ಬೆಳೆಕರಾವು ವ ಸುಗ್ಗಿ ಬೇಸಾಯದ ರಜೆಯನ್ನು 2 ವಾರವೂ, ಕ್ರಿಸ್‌ಮಸ್ ರಜೆಯನ್ನು 1 ವಾರವೂ ಕೊಡತಕ್ಕದ್ದು. b ಅದರೆ ಆಗತ್ಯ ಬಿದ್ದಲ್ಲಿ D E O ರವರು ಸೂಚಿಸಿದ ಮೇರೆಗೆ ಕ್ರಿಸ್‌ಮಸ್ ರಜೆಯನ್ನು ಮನ್ನಾ ಮಾಡಿ ಸದ್ರಿ ರಜೆಯನ್ನು ನೆರೆಹಾವಳಿ—ವ, ಸುಗ್ಗಿ ಬೇಸಾಯದ ಬಗ್ಗೆ ಉಪಯೋಗಿಸುವಂತಾಗಬೇಕು. C ಮಾತ್ರವಲ್ಲದೆ ವಾರ್ಷಿಕ ಶಾಲಾ ದಿನಗಳು 220ಕ್ಕೆ ಕಡಿಮೆಯಾಗದಂತೆ ಆಯಾಯ ಸ್ಥಳೀಯ ಆವಶ್ಯಕತೆಗನುಸರಿಸಿ ಇತರ ಐಚ್ಛಿಕ ರಜೆಗಳನ್ನು 4ಕ್ಕೆ ಮಿಕ್ಕಿ ಉಪಯೋಗಿಸುವ ಅಧಿಕಾರವು ಸಹಾ ಶಾಲಾ ಆಡಳಿತೆಯವರಿಗಿರತಕ್ಕದ್ದು.

೩) ಜಿಲ್ಲಾಧಿಕಾರಿಗಳಿಂದ ಶಾಲಾ ಮೆನೇಜರುಗಳಿಗೆ ಬರತಕ್ಕ ಸರ್ಕ್ಯುಲಾರುಗಳ ಒಂದು ಪ್ರತಿಯನ್ನು ಈ ಸಂಘಕ್ಕೆ ಕಳುಹಿಸುವಂತೆ D E O ರವರನ್ನು ಕೇಳಿಕೊಳ್ಳುವುದು.

ಈ ನಿರ್ಣಯಗಳನ್ನು ಸಂಘದ ಅಧ್ಯಕ್ಷರು ಜಿಲ್ಲಾ ವಿದ್ಯಾಧಿಕಾರಿಗಳಿಗೆ ಕಳುಹಿಸ ಬೇಕಾಗಿ ನಿರ್ಣಯಿಸಲಾಯ್ತು.

೪) ಜಿಲ್ಲಾ ಸಮ್ಮೇಳನದಲ್ಲಿ ಅಂಗೀಕರಿಸಲ್ಪಟ್ಟ ನಿರ್ಣಯಗಳ ಕುರಿತು ಸರಕಾರಕ್ಕೆ ಮನವಿ ಮಾಡಿಕೊಳ್ಳುವರೆ ಅಧ್ಯಕ್ಷರ ಮುಂದಾಳುತನದಲ್ಲಿ ಇದೇ ದಶಂಬರ ಪ್ರಥಮ ವಾರದಲ್ಲಿ ಬೆಂಗಳೂರಿಗೆ ಹೋಗುವ ನಿಯೋಗದಲ್ಲಿ ಈ ಹಿಂದೆ ಆರಿಸಲ್ಪಟ್ಟ ಪ್ರತಿನಿಧಿಗಳಲ್ಲದೆ ಶ್ರೀಗಳಾದ ಯು. ರಾಮಚಂದ್ರ ಹೆಗ್ಡೆ, ಬಿ ಸುಬ್ಬಣ್ಣ ಹೆಗ್ಡೆ, ಕೆ ರಮೇಶ ರಾವ್, ಇವರನ್ನು ಸಹಾ ಸೇರಿಸಿಕೊಳ್ಳಲಾಯಿತು.

೫) ಇತ್ತೀಚೆಗೆ ಜ್ಯಾರಿಗೆಬಂದ ಹೊಸ ರೂಲುಗಳಿಂದಾಗಿ ಜಿಲ್ಲೆಯ ಖಾಸಗೀ ಶಾಲೆಗಳಿಗೆ ಉಂಟಾದ ತೊಂದರೆಗಳ ಕುರಿತು ಸಂಬಂಧಪಟ್ಟ ಶಾಲೆಯವರು ಈ ನಿಯೋಗದವರ ಅನುಭವಕ್ಕಾಗಿ ಸಂಘದ ಕಾರ್ಯದರ್ಶಿಯವರಿಗೆ ಕೂಡಲೇ ಬರಕೊಳ್ಳುವಂತೆ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿ ನಿರ್ಣಯಿಸಲಾಯ್ತು.

ಕುರುಕಾಲು ಗಣಪಯ್ಯ ಸೆಟ್ಟಿ,
ಕುಂಜಾರುಗಿರಿ
ಸೆಕ್ರೆಟರಿ
ದ. ಕ ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘ ಉಡುಪಿ.

ಪ್ರಕಟಣೆ

ಜಾನುವಾರು ಜಾತ್ರೆ

ದಕ್ಷಿಣ ಕನ್ನಡ ಜಿಲ್ಲಾ, ಕಾರ್ಕಳತಾಲೂಕು, ಸೋಮೇಶ್ವರದ ಬಳಿ ಸೀತಾನದಿ ಎಂಬಲ್ಲಿ ಈ ಜಿಲ್ಲೆಯ ರೈತರ ಅನುಕೂಲತೆಯ ಬಗ್ಗೆ ಜಾನುವಾರು ಜಾತ್ರೆಯು ವರ್ಷಂಪ್ರತಿ ಜರಗುವಂತೆ ಈ ವರ್ಷ ತಾ 10—12 59 ರಿಂದ 21—12 59ರ ವರೆಗೆ ಜರಗುವುದು.

ಈ ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರೆಯುವಂತೆ ಎಲ್ಲಾ ಏರ್ಪಾಡುಗಳನ್ನು ಕ್ರಮದಂತೆ ಮಾಡಲಾಗುವುದು. ಜಾತ್ರೆಗೆ ಬರುವ ಜಾನುವಾರುಗಳಲ್ಲಿ ಅತ್ಯಂತ ಉತ್ಕೃಷ್ಟವೆಂದು ನಿರ್ಣಯಿಸಲಾಗುವ ಜಾನುವಾರುಗಳ ಬಗ್ಗೆ ಯೋಗ್ಯ ಬಹುಮಾನ ಕೊಡುವ ಏರ್ಪಾಡು ಮಾಡಲಾಗಿದೆ.

ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಿ ಈ ಜಾತ್ರೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ವಿ. ಇ. ಎಡ್‌ವಿನ್,
ಅಸಿಸ್ಟೆಂಟ್ ಕಮಿಶನರ್, ಮಂಗಳೂರು.
ಇನ್ ಚಾರ್ಜ್ ಕುಂದಾಪುರ ಡಿವಿಜನ್
ಕುಂದಾಪುರ, ತಾ 21.11 59

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ
ಬುಕ್‌ವರ್ಕನ್ನೂ ಚಲೋದಾಗಿ ಮಾಡಿ ಕೊಡಲಾಗುವುದು

NAVAYUGA PRESS, UDIPI
Printers & Publishers
Santhekatte — UDIPI.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

ಅಭಿಪ್ರಾಯ

ಆಂಧ್ರ ಕಾಂಗ್ರೆಸ್‌ನ ಶಕ್ತಿ—ಸಂಜೀವ ರೆಡ್ಡಿ

ಪಕ್ಷದ ಹಿತಕ್ಕಾಗಿ ವ್ಯಕ್ತಿಗತ ಅಭಿಪ್ರಾಯಕ್ಕೆ ಅಂಟಿ ಕೂರದ ಪ್ರವೃತ್ತಿಯಿಂದಾಗಿ ಇವರಿಗೆ ಉನ್ನತೋನ್ನತ ಪದವಿಗಳು ಲಭಿಸುತ್ತಿವೆ.

ಈಗಿನ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ಈಗಿನ ಹುದ್ದೆಯಲ್ಲಿರಲು ತಮ್ಮ ಅಸಮರ್ಥತೆಯನ್ನು ಪ್ರಕಟಿಸಿರುವುದರಿಂದ ಆಂಧ್ರ ಪ್ರದೇಶದ ಕಾಂಗ್ರೆಸ್ ನೇತಾರರೂ ಮುಖ್ಯಮಂತ್ರಿಯೂ ಆಗಿರುವ ಶ್ರೀ ನೀಲಂ ಸಂಜೀವ ರೆಡ್ಡಿಯವರನ್ನು ಆ ಗದ್ದುಗೆಗೆ ಏರಿಸುವ ಹವಣಿಕೆ ನಡೆದಂತೆ ಭಾಸವಾಗುತ್ತಿದೆ. ಶ್ರೀ ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾಗಬೇಕೆಂದು ದೇಶದ ಹೆಚ್ಚಿನ ಪ್ರದೇಶಗಳವರು ಬಯಸಿದ್ದಾರೆಂದೂ ಕಾಂಗ್ರೆಸ್ ವರಿಷ್ಠರ ಕೃಪಾಕಟಾಕ್ಷವೂ ಇವರ ಮೇಲಿರುವುದೆಂದೂ ವಿಶ್ವಸನೀಯವಾಗಿ ತಿಳಿದು ಬಂದಿದೆ. ಇಷ್ಟು ಮಾತ್ರವಲ್ಲ, ಕಾಂಗ್ರೆಸ್ ಅಧ್ಯಕ್ಷಪದಕ್ಕೆ ಒಂದು ರಾಜ್ಯದ ಸರಕಾರವನ್ನು ನಡೆಸುತ್ತಿರುವವನು ಅಥವಾ ನಡೆಸಿದ ಅನುಭವಗಳಿಸಿರುವವನು ಬರಬೇಕೆಂದೂ ಇದರಿಂದಾಗಿ ಸರಕಾರವು ಎದುರಿಸಬೇಕಾದ ಸಮಸ್ಯೆಗಳು ಎದ್ದಾಗ, ಆತನು ಅವನ್ನು ಬಗೆಹರಿಸಲು ಸಮರ್ಥನಾಗುವನೆಂದೂ ಹೇಳುವ ಭಾವನೆಯು ಕೆಲವರಲ್ಲಿ ಹುಟ್ಟಿಕೊಂಡಿದೆ ಎಂದು ಕೇಳಿಬರುತ್ತದೆ.

ಇಂದು ಕಾಂಗ್ರೆಸ್ ಅಧ್ಯಕ್ಷಪದಕ್ಕೆ ಹಲವರ ನಾಮಪತ್ರಗಳು ಸಲ್ಲಿಸಲ್ಪಟ್ಟಿವೆ. ಇದರಲ್ಲಿ ಶ್ರೀ ಸಂಜೀವ ರೆಡ್ಡಿಯವರ ಮಾತ್ರವಲ್ಲದೇ ಶ್ರೀಮತಿ ಇಂದಿರಾ ಗಾಂಗಾಂಧಿಯವರದ್ದೂ ಇರುವುದೆಂದು ತಿಳಿದಿದೆ. ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರ ಹೆಸರೂ ಸೂಚಿಸಲ್ಪಟ್ಟಿದೆಯೆಂದು ವರದಿಯಾಗಿದೆ;

ಕಾಂಗ್ರೆಸ್‌ನ ಅಧ್ಯಕ್ಷಪದವಿಗೆ ಸರ್ವಾಧಿಕ ಪ್ರಭಾವಶಾಲಿಯೂ ಜನಪ್ರಿಯನೂ ಆದ ಒಬ್ಬ ವ್ಯಕ್ತಿಯನ್ನೇ ಆರಿಸುತಿದ್ದ ಕಾಲವೊಂದಿತ್ತು. ಆದರೆ, ಇತ್ತೀಚೆಗಿನ ಕೆಲವು ವರ್ಷಗಳಿಂದ ಈ ಪದ್ಧತಿಯು ತಪ್ಪಿ ಹೋಗಿ, ಶ್ರೀ ನೆಹರು ಅವರ ಪ್ರಯತ್ನದಿಂದ ಸರಳತೆ, ಸತ್ಯಸಂಧತೆ ಮತ್ತು ಸೇವಾ ವೃತ್ತಿಯಿಂದ ಆದರ್ಶನಾದವನನ್ನು ಕರೆದು ತರುವುದು ಕ್ರಮವಾಯಿತು. ಒಂದು ವೇಳೆ ಇಷ್ಟು ಇಲ್ಲವೆಂದಾದರೆ, ಕಾಂಗ್ರೆಸ್ ವರಿಷ್ಠರ ಮಾತುಗಳನ್ನು ಒಪ್ಪಿ ಅದರಂತೆ ನಡೆಯ ಬಲ್ಲವನೂ ಕಾಂಗ್ರೆಸ್ ಅಧ್ಯಕ್ಷನಾಗುತ್ತಾನೆ. ಏಕೆಂದರೆ, ಕಾಂಗ್ರೆಸ್ ಅಧ್ಯಕ್ಷಪದವಿಯಲ್ಲಿ ಶ್ರೀ ನೆಹರು ಇರುವುದಿಲ್ಲವಾದರೂ ಕಾಂಗ್ರೆಸ್ ಅಧ್ಯಕ್ಷರು ಪ್ರಧಾನಿ ನೆಹರು ಅವರ ಸಲಹೆಯಂತೆಯೇ ನಡೆಯಬೇಕಾಗುತ್ತದೆ; ಶ್ರೀ ನೆಹರು ಅವರ ಅನುಭವವನ್ನು ದೂಷಿಸುವ ಸಂದರ್ಭ ಇದರಿಂದಾಗಿ ಎಂದಿಗೂ ಬರಲಾರದು. ಹೀಗಾಗಿ ಇಂದು ಕಾಂಗ್ರೆಸ್ ಅಧ್ಯಕ್ಷ ಪಟ್ಟದ ಸ್ಥಾನಮಾನ ಮತ್ತು ಗೌರವಗಳು ಶಿಥಿಲಗೊಂಡಿವೆ. ಅದು ಪ್ರಧಾನಿ ನೆಹರು ಅವರು ಪ್ರಸನ್ನರಾದುದನ್ನು ಮಾತ್ರ ಪ್ರದರ್ಶಿಸುವಂತಿದೆ.

೧೯೧೩ರ ಮೇ ೧೯ರಂದು ಶ್ರೀ ನೀಲಂ ಸಂಜೀವ ರೆಡ್ಡಿಯವರ ಜನ್ಮವಾಯಿತು. ರಾಷ್ಟ್ರೀಯ ಸಂಗ್ರಾಮದತ್ತ ಅವರ ಮನಸ್ಸು ಹರಿಯಲು ೧೯೩೦ರಲ್ಲಿ ತಮ್ಮ ವಿದ್ಯಾರ್ಥಿ ಜೀವನದಿಂದ ಮುಕ್ತರಾಗಿ ರಾಷ್ಟ್ರೀಯ ಜೀವನಕ್ಕೆ ತೊಡಗಿದರು. ಆಗ ಅವರು ಕೇವಲ ೧೮ ವರ್ಷದವರು. ಅಂದಿನಿಂದ ಅವರು ಕಾಂಗ್ರೆಸ್‌ನ ಪ್ರತಿಯೊಂದು ಕಾರ್ಯದಲ್ಲೂ ತೀವ್ರ ಆಸಕ್ತರಾಗಿದ್ದು ಕಾರ್ಯತತ್ಪರರೆನಿಸಿದುದರಿಂದಲೇ ತಮ್ಮ ಚಿಕ್ಕ ವಯಸ್ಸಿನಲ್ಲೇ ಅವರು ಆಂಧ್ರ ಪ್ರಾದೇಶಿಕ ಕಾಂಗ್ರೆಸ್‌ನ ಕಾರ್ಯದರ್ಶಿಯಾಗಿಬಿಟ್ಟರು. ಇದರ ನಂತರ ಅವರಿಗೆ ಎರಡು ಬಾರಿ ಜೇಲು ಯಾತ್ರೆ ಮಾಡಬೇಕಾಗಿ ಬಂದಿತ್ತು.

೧೯೪೬ರಲ್ಲಿ ಮದ್ರಾಸು ಸರಕಾರದ ಮಂತ್ರಿಮಂಡಳದಲ್ಲಿ ಸೇರಿಸಲ್ಪಟ್ಟರು. ಅವರು ಮದ್ಯನಿಷೇಧ ಮಂತ್ರಿಯಾಗಿ ದಕ್ಷತೆಯಿಂದ ಕರ್ತವ್ಯಗಳನ್ನು ನಿರ್ವಹಿಸಿದರು. ೧೯೫೧ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅವರ ಆವಶ್ಯಕತೆಯಿದ್ದುದರಿಂದ ಅವರು ಮಂತ್ರಿಮಂಡಳವನ್ನು ಬಿಟ್ಟು ಆಂಧ್ರ ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದರು.

೧೯೫೨ರಲ್ಲಿ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಂತಿದ್ದರೂ ಅವರು ಅದರಲ್ಲಿ ತಮ್ಮ ಸ್ಥಾನವನ್ನು ಕಳೆದುಕೊಂಡರು. ಮುಂದಿನ ವರ್ಷ ನಡೆದಿದ್ದ ಒಂದು ಉಪಚುನಾವಣೆಯಲ್ಲಿ ಮಾತ್ರ ಇವರು ಗೆದ್ದು ಬಂದರು. ಇದಾದನಂತರ ಆಂಧ್ರ ರಾಜ್ಯದ ನಿರ್ಮಾಣವಾಯಿತು. ಶ್ರೀ ರೆಡ್ಡಿಯವರು ರಾಜ್ಯವಿಧಾನಸಭೆಯ ನಾಯಕರಾಗಿ ಆರಿಸಲ್ಪಟ್ಟು ಈ ಪದವಿಯನ್ನು ಸ್ವರ್ಗೀಯ ಪ್ರಕಾಶಂರಿಗವರು ಕೊಟ್ಟು ಬಿಟ್ಟರು. ಇದರಿಂದಾಗಿ ಶ್ರೀ ಪ್ರಕಾಶಂರು ಮುಖ್ಯ ಮಂತ್ರಿಯಾಗಿಯೂ ಶ್ರೀ ರೆಡ್ಡಿಯವರು ಉಪಮುಖ್ಯ ಮಂತ್ರಿಯಾಗಿಯೂ ಆರಿಸಲ್ಪಟ್ಟರು. ಶ್ರೀ ರೆಡ್ಡಿಯವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು.

ಶ್ರೀ ಪ್ರಕಾಶಂರ ನಂತರ ಶ್ರೀ ಗೋಪಾಲ ರೆಡ್ಡಿ ಹಾಗೂ ಶ್ರೀ ಸಂಜೀವ ರೆಡ್ಡಿಯವರ ನಡುವೆ ಮುಖ್ಯ ಮಂತ್ರಿ ಪದವಿಗೆ ಪೈಪೋಟಿ ನಡೆದು ಸ್ವಲ್ಪ ಸಮಯ ಶ್ರೀ ಸಂಜೀವ ರೆಡ್ಡಿಯವರು ದೂರವುಳಿಯಬೇಕಾಯಿತು. ಆದರೆ, ಮುಂದೆ ಶ್ರೀಯುತರೇ ಮುಖ್ಯ ಮಂತ್ರಿ ಪದವಿಯಲ್ಲಿ ವಿರಾಜಿಸತೊಡಗಿದ್ದಾರೆ. ಆಂಧ್ರ ಪ್ರದೇಶವು ಮದ್ರಾಸದಲ್ಲಿ ವಿಲೀನಗೊಂಡಿರುವಾಗಲೂ ಪ್ರತ್ಯೇಕವಾದ ನಂತರವೂ ಶ್ರೀ ಸಂಜೀವ ರೆಡ್ಡಿ ಆಂಧ್ರದ ಜನತೆಯ ನಡುವೆ ಕಲೆತುಕೊಂಡಿದ್ದು ಜನಪ್ರಿಯರಾಗಿದ್ದಾರೆ. ಇದರ ಪರಿಣಾಮವಾಗಿಯೇ ಅವರು ಬಿದ್ದಿದ್ದಾರೆ; ಆದರೆ, ಪುನಃ ಎದ್ದಿದ್ದಾರೆ.

ಶ್ರೀ ರೆಡ್ಡಿಯವರು ಸರಳ ಸ್ವಭಾವದ ಸೇವಾಭಾವನಾಯುತರಾದ ವ್ಯಕ್ತಿ. ಕಾಂಗ್ರೆಸ್ ಪಕ್ಷದ ಉತ್ಥಾನಕ್ಕಾಗಿ ಇವರು ಯಾವುದೇ ಸಂದರ್ಭದಲ್ಲಿಯೂ ತನ್ನ ವ್ಯಕ್ತಿಗತ ಅಭಿಲಾಷೆಯನ್ನು ಮೂಲೆಗೆ ತಳ್ಳಿದ ಕೆಲವೇ ಜನರಲ್ಲಿ ಇವರೂ ಒಬ್ಬರು. ಈ ಕಾರಣದಿಂದಲೇ ಒಂದರ ಮೇಲೊಂದು ಉತ್ತಮವಾದ ಪದವಿಯು ಅವರನ್ನು ಕಾದುಕೊಂಡಿರುತ್ತದೆ.

ಮದ್ರಾಸಿನ ಅನಭಿಷಿಕ್ತ ದೊರೆ ಕಾಮರಾಜ ನಾಡಾರರಾದರೆ, ಆಂಧ್ರ ಪ್ರದೇಶದಲ್ಲಿ ಶ್ರೀ ಸಂಜೀವ ರೆಡ್ಡಿಯವರ ಸ್ಥಾನಮಾನಗಳೂ ಅವೇ. ಆದುದರಿಂದ, ಶ್ರೀ ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾಗಿ ದೂರಹೋದರೆ, ಆಂಧ್ರದ ಕಾಂಗ್ರೆಸ್‌ನಲ್ಲಿ ಪರಿಣಾಮಕಾರಿಯಾದ ನಾಯಕತ್ವದ ಕೊರತೆಯು ಕಾಣಿಸುವುದು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಉತ್ತರ ಪ್ರದೇಶದಲ್ಲಿ ಪಂಡಿತ ಗೋವಿಂದ ವಲ್ಲಭ ಪಂತರನ್ನು ಕೇಂದ್ರ ಮಂತ್ರಿ ಮಂಡಳಿಗೆಳೆಯುವ ಸಂದರ್ಭದಲ್ಲಿಯೂ ಇದೇ ರೀತಿ ಹೇಳಲಾಗುತಿತ್ತು. ಆದರೂ ಇದಕ್ಕೆ ಸಮರ್ಪಕವಾದ ಬೇರೆ ವ್ಯವಸ್ಥೆಯನ್ನು ಮಾಡುವುದು ತುಸು ಪ್ರಯಾಸವಾದರೂ ಅಸಂಭವವೇನಲ್ಲ. ಶ್ರೀ ರೆಡ್ಡಿಯವರು ಈ ಬಗ್ಗೆ "ನಾನು ಕಾಂಗ್ರೆಸ್ ಅಧ್ಯಕ್ಷನಾಗಿ ಆಯ್ಕೆಗೊಂಡರೂ ಕೊಂಚಕಾಲ ಆಂಧ್ರದ ಮುಖ್ಯ ಮಂತ್ರಿ ಪದವಿಯನು ತ್ಯಜಿಸುವುದಿಲ್ಲ" ಎಂದಿರುವ ಮಾತುಗಳ ನ್ನಿಲ್ಲಿ ಸ್ಮರಿಸಿಕೊಂಡರೆ, ಅಪ್ರಾಸಂಗಿಕವಾಗಲಾರದು.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿವೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ: ರೂ. ಒಂದೂವರೆ, ಉತ್ತಮ ಪ್ರತಿ: ರೂ. ಎರಡು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ಶಾಂತಿಸಾಧನೆ

(೪ನೇ ಪುಟದಿಂದ)

ನಿಜವಾಗಿಯೂ ಜಗತ್ತು ಇಂದು ವಿಶ್ವಶಾಂತಿಯನ್ನು ಬಯಸುವುದೇ ಸತ್ಯವಾದರೆ ಈ ಉಪಾಯದ ಹೊರತು ಬೇರೆ ಮಾರ್ಗವೇ ಇಲ್ಲ. ಎಲ್ಲ ಜನರ ಬುದ್ಧಿ ನೇರ ಬಾಗಬೇಕು ಎಂದರೆ ಸಾಧ್ಯವಿಲ್ಲ. ಎಲ್ಲ ರಾಷ್ಟ್ರಗಳು ಒಮ್ಮನಸ್ಸಿನಿಂದ ನಡೆಯಬೇಕು ಅಂದರೆ ನಡೆಯಲಾರವು. ಹಾಗಾಗಿಯೇ ಇಂದು ವಿಶ್ವವಿನಾಶದ ದಾರಿ ರಚಿಸಲ್ಪಡುತ್ತಿದೆ. ಅವಕ್ಕೆ ಇಷ್ಟೇ ಉಪಾಯ; ವಿಜ್ಞಾನಿಗಳನ್ನು ಒಂದು ಕಡೆ ಪ್ರತ್ಯೇಕ ಮಾಡಿ ಇರಿಸಿ ಪ್ರತಿಯೊಂದು ರಾಷ್ಟ್ರಗಳೂ ತಣ್ಣಗೆ ಕುಳಿತಿರಬೇಕು. ವಿಜ್ಞಾನಿಗಳು ಕಂಡು ಹುಡುಕಿದ ಸಂಶೋಧನೆಗಳು ಲೋಕ ಹಿತಕಾರಿಯಾಗಿದ್ದರೆ "ಯುನೋ" ಅದನ್ನು ಪರಿಶೋಧಿಸಿ ವಿಶ್ವಕ್ಕೆ ಅರ್ಪಿಸಲಿ—ಕಾಡಿನ ಮೂಲೆಯಲ್ಲಿದ್ದುಕೊಂಡು ಸತ್ಯ ಸಂದೇಶಗಳನ್ನು ವಿಶ್ವಕ್ಕೆ ಸಾರಿ ಹೇಳುವ ಮಹರ್ಷಿಗಳ ತತ್ವ ಡಿಂಡಿಮಗಳಂತೆ!

ಹಾಗಿದ್ದಲ್ಲಿ ಮಾತ್ರ ವಿಶ್ವಶಾಂತಿ ಸಾಧ್ಯ!

ಆದರೆ ಇಂದು ಜಗತ್ತಿನ ಎಲ್ಲಾ ರಾಷ್ಟ್ರಗಳು ಇದಕ್ಕೆ ಒಪ್ಪುವುವೇ? ಕಷ್ಟ! ಅದರೂ ಜನಾಂಗ ಸಂಘ, ಯುನೋಗಳಂತೆ ವಿಶ್ವಶಾಂತಿಗೋಸ್ಕರ ಇನ್ನೊಂದು ಸಂಸ್ಥೆಯ ಜನನವಾಗುವ ಪ್ರಸಂಗ ಬಂದಲ್ಲಿ ಅದು ವ್ಯರ್ಥ ಎಂಬುದನ್ನು ತಿಳಿದಾದರೂ ಮೇಲಿನ ವ್ಯವಸ್ಥೆಗೆ ಕೈಹಾಕುವುದು ಒಳಿತು.

ಈ ವ್ಯವಸ್ಥೆಯನ್ನು ಜಗತ್ತು ಎಲ್ಲಿಯವರೆಗೆ ಒಪ್ಪುವುದಿಲ್ಲವೋ ಅಲ್ಲಿಯವರೆಗೆ ವಿಶ್ವಕ್ಕೆ ಶಾಂತಿ ಎಷ್ಟು ಮಾತ್ರಕ್ಕೂ ಲಭಿಸಲಾರದು!

ವಿಚಾರವರ್ಷ

ಮರಗಿಡಗಳ ವಿಚಿತ್ರ ಕಥೆಗಳು

ಪ್ರತಿ ಮರದ ಜನನ, ರೂಪಗಳ ಬಗ್ಗೆ ಆದಿವಾಸಿಗಳಲ್ಲಿ ಒಂದೊಂದು ಕಥೆಯಿರುತ್ತದೆ. ಇವು ವಿಚಿತ್ರವೆನಿಸಿದರೂ ಮನಮೋಹಕವಾಗಿವೆಯೆಂಬುದನ್ನು ಕಂಡುಕೊಳ್ಳಬಹುದು.

'ಸಾವರಾ" ಎಂಬ ಜಾತಿಯ ಪುರಾಣದಲ್ಲಿ ಮೊತ್ತಮೊದಲು ಕಿತ್ತುಂಗ ದೇವಿಯು ಪ್ರಪಂಚದಲ್ಲಿ ಕೇವಲ ಫಲವೀಯುವ ಮರಗಳನ್ನು ಮಾತ್ರ ನೆಟ್ಟಳೆಂದು ತಿಳಿಸುತ್ತದೆ., ಆಗ ಎಲ್ಲ ಜನರೂ ಆ ಹಣ್ಣುಗಳನ್ನು ತಿಂದು ಜೀವಿಸುತ್ತಿದ್ದರು. ಕ್ರಮೇಣ ಜನಸಂಖ್ಯೆಯು ಹೆಚ್ಚತೊಡಗಿತು. ಜನರು ಕೃಷಿಗಾಗಿ ಕಾಡುಗಳನ್ನು ಕಡಿಯತೊಡಗಿದರು; ಉರುವಲಿಗಾಗಿ ಮರಗಳನ್ನು ತುಂಡರಿಸತೊಡಗಿದರು. ಇದರಿಂದ ಕಿತ್ತುಂಗಳಿಗೆ ಅತೀವ ದುಃಖವಾಯಿತು. ಆಕೆಯೊಂದು ಬಂಡಕಲ್ಲಿನಲ್ಲಿ ಕುಳಿತು ರೋದಿಸತೊಡಗಿದಳು. ಏಕೆಂದರೆ, ಆಕೆಗೆ ಮರಗಳ ಮೇಲೆ ಅತೀವ ಮೋಹವಿತ್ತು. ಆಕೆಯು ಕೊನೆಗೆ ಜನರಿಗೆ ಹೊಸ ಮರಗಳ ಬೀಜವನ್ನಿತ್ತು, "ಈ ಹೊಸ ಮರಗಳಲ್ಲಿ ಹಣ್ಣುಗಳಾಗುವುದಿಲ್ಲ; ಈಗ ಉಳಿದಿರುವ ಮರಗಳೂ ನಿಷ್ಫಲಗಳಾಗುತ್ತವೆ" ಎಂದು ಹೇಳಿದಳೆಂದು ಈ ಕಥೆಯು ಹೇಳುತ್ತದೆ.

ಮರಗಳ ಉತ್ಪತ್ತಿಯ ಬಗ್ಗೆ ಬೇರೆ ಬೇರೆ ಕಾರಣಗಳನ್ನು ವಿವರಿಸುವ ಕಥೆಗಳು ಆದಿವಾಸಿ ಜಾತಿಗಳಲ್ಲಿ ಪ್ರಚಲಿತವಿವೆ. ಅವರ ಅದೆಷ್ಟೋ ಕಥೆಗಳು ಮರವು ಅಪ್ರಾಕೃತಿಕ ವಿಧಾನಗಳಿಂದ ಮರಣಗೊಂಡವರ ಹೆಣದಿಂದ ಹುಟ್ಟಿತು ಎಂದೂ ದೂ ಹೇಳುತ್ತವೆ. ಉದಾಹರಣೆಗಾಗಿ ಒಂದು ಕಥೆಯನ್ನಿಲ್ಲಿ ಎತ್ತಬಹುದು: ಇಬ್ಬರು ಪ್ರೇಮಿಗಳು ಅತ್ಯಂತ ಎಳೆ ಪ್ರಾಯದಲ್ಲಿಯೇ ಮೃತ್ಯುಮುಖರಾದರು. ಅತ್ಯಂತ ದಾರುಣಾವಸ್ಥೆಯಲ್ಲಿ ತೀರಿ ಹೋದ ಇವರ ಶರೀರದಿಂದ ಹರಿದು ಬಂದ ರಕ್ತಧಾರೆಯು ಮೊದಲು ಭಿನ್ನ ಧಾರೆಯಾಗಿ ಹರಿದಿದ್ದು ಮುಂದೆ ಒಂದಾಗಿ ಸೇರಿಕೊಂಡಿತು. ಇದರಿಂದ ಒಂದು ಮರವು ಹುಟ್ಟಿತು. ಇದರಲ್ಲಿ ಯುವಕನಿಗೆ ಕೆಂಪು ಹೂ ಮತ್ತು ಯುವತಿಗೆ ಹಸುರು ಹೂವು ಅರಳುತಿತ್ತು. ಇಲ್ಲಿ ಹಸುರು ಹೂ ಎಂದರೆ, ಹೂವಿನ ಪುಷ್ಪಪಾತ್ರ ಎಂದು ತಿಳಿದುಕೊಳ್ಳಬೇಕು.

ಇನ್ನು ಕೆಲವು ಕಥೆಗಳಲ್ಲಿ ಪಶುಗಳು ಮರಗಳಾಗಿ ರೂಪಾಂತರಹೊಂದಿದ ಸಂಗತಿ ಬರುತ್ತದೆ. ಹಂದಿಗಳ ಸಮೂಹವು ಹಲಸಿನ ಮರವಾಗಿ ಪರಿವರ್ತನೆಗೊಂಡಿತು. ಇಂತಹ ಕಲ್ಪನೆಗಳಿಗೆ ಸಾದೃಶ್ಯವೇ ಮೂಲಾಧಾರವೆನ್ನಬಹುದು; ಅಲ್ಲದೆ ಬೇರೇನೂ ಇಲ್ಲ.

ಆದಿಮ ಜಾತಿಯಲ್ಲಿನ ವೃಕ್ಷಪುರಾಣಗಳಲ್ಲಿ ನೆಲ್ಲಿ ಮರಕ್ಕೆ ಅತ್ಯಧಿಕ ಮಹತ್ವದ ಸ್ಥಾನವಿದೆ. ಇದರ ಎಲೆಗಳು ಅತೀವ ಸಣ್ಣದಾಗಿರುವುದಕ್ಕೆ ಹಲವಾರು ಚಂತ ಕಥೆಗಳು ಇವೆ. ಈ ಬಗ್ಗೆ ಮುಂಡ ಜನಾಂಗದವರು ಹೀಗೆ ಹೇಳುತ್ತಾರೆ: ವೀರರಾದ ಇರ್ವರು ಸೋದರರಿದ್ದರು. ಅವರೊಂದು ಖಾರಿವಾಳ್, ಬಂಗಾರದ ಗದೆ ಮತ್ತು ಬಂಗಾರದ ಬುಟ್ಟಿಯನ್ನು ಹಿಡಿದುಕೊಂಡು ಬೇಟೆಗೆ ತೆರಳುತಿದ್ದರು. ಒಂದು ದಿನ ಅವರು ವಿಪರೀತವಾದ ಮಳೆಯ ನಡುವೆ ಸಿಕ್ಕಿ ಬಿದ್ದರು. ಇದರಿಂದ ತಪ್ಪಿಸಿಕೊಳ್ಳಲು ಅವರು ನೆಲ್ಲಿ ಮರದಡಿಯ ಮರೆ ಹೊಕ್ಕರು. ಆ ಕಾಲದಲ್ಲಿ ಅದರ ಎಲೆಗಳು ದೊಡ್ಡವಾಗಿದ್ದುವು. ಆದರೆ, ಮಳೆ ನೀರು ಅವುಗಳನ್ನೂ ಹಾದ ಸುರಿಯುತಿತ್ತು. ಇದರಿಂದ ಕುಪಿತರಾದ ಆ ಸಹೋದರರು ತಮ್ಮ ಗದೆಯಿಂದ ಆ ಎಲೆಯೆಲ್ಲವೂ ಪುಡಿಪುಡಿಯಾಗುವಂತೆ ಹೊಡೆದು ಬಿಟ್ಟರು.

ಬಿರೋಡಿಯವರ ನೆಲ್ಲಿ—ಗಾದೆಯು ಕೂಡ ಇದೇ ಕಥೆಯನ್ನು ಹೋಲುತ್ತದೆ. ಆದರೆ, ಇದರಲ್ಲಿ ಒಂದು ವೈಚಿತ್ರ್ಯವಿದೆ. ರಾಮ, ಲಕ್ಷ್ಮಣ ಮತ್ತು ಸೀತೆಯರು ಅರಣ್ಯವಾಸದಲ್ಲಿರುವಾಗ, ಒಂದು ನೆಲ್ಲಿಯ ಮರದಡಿಯಲ್ಲಿ ಪರ್ಣಶಾಲೆಯೊಂದನ್ನು ರಚಿಸಿದರು. ನೆಲ್ಲಿಯ ದೊಡ್ಡದಾದ ಎಲೆಗಳು ಅವರನ್ನು ಮಳೆಬಿಸಿಲುಗಳಿಂದ ರಕ್ಷಿಸುತಿದ್ದುವು ಒಂದು ದಿನ ರಾಮನಿಗೆ ತನ್ನ ವನಜೀವನವು ಅತಿ ಸುಖಮಯವಾಗಿದೆಯೆಂದು ಭಾಸವಾಯಿತು. 'ನಮಗೆ ವಿಪತ್ತುಗಳನ್ನು ಎದುರಿಸುವುದಕ್ಕಾಗಿ ವನವಾಸವು ಪ್ರಾಪ್ತವಾಗಿತ್ತು. ಆದರೆ, ಈ ನೆಲ್ಲಿ ಎಲೆಗಳು ನಮ್ಮನ್ನು ಬಿಸಿಲು ಮಳೆಗಳಿಂದ ರಕ್ಷಿಸುತ್ತಿವೆ. ಆದುದರಿಂದ, ನಿನ್ನ ಬಿಲ್ಲುಬಾಣಗಳಿಂದ ಇವುಗಳನ್ನು ಕತ್ತರಿಸು" ಎಂದಾತ ಲಕ್ಷ್ಮಣನಿಗೆಂದನಂತೆ. ಸಹೋದರರ ವಾಕ್ಯವನ್ನು ಪರಿಪಾಲಿಸುವ ಲಕ್ಷ್ಮಣನು ಬಾಣ ಪ್ರಯೋಗಿಸಿ, ಆ ಎಲೆಗಳನ್ನೆಲ್ಲಾ ಚೂರು ಚೂರಾಗಿಸಿದನಂತೆ. ಮುಂದೊಮ್ಮೆ ಬಿರುಗಾಳಿ ಮಳೆ ಬಿಸಿಲುಗಳು ಬಂದಾಗ ರಾಮ ಲಕ್ಷ್ಮಣ ಸೀತೆಯರು ಬಹಳಷ್ಟು ಪ್ರಯಾಸಪಟ್ಟರಂತೆ.

"ಬೈಗಾ'' ಕಥೆಯೊಂದು ಈ ಕಥೆಯನ್ನು ಒಂದು ದೈವೀ ಪರೀಕ್ಷೆಯೊಡನೆ ಸಂಬಂಧಿಸುತ್ತದೆ. ಒಬ್ಬಾಕೆ ದೇವಿಗೆ ಸುಂದರಿಯೂ ರೂಪವತಿಯೂ ಆಗಿದ್ದ ಮಗಳಿದ್ದಳು. ಆಕೆಯನ್ನು ವಿವಾಹವಾಗಲು ಹಲವಾರು ತರುಣರು ನಾನು ಮೇಲು ನಾನು ಮೇಲು ಎಂದು ಮುಂಬರಲು, ಈ ದೇವಿಯು ನೆಲ್ಲಿಯ ಎಲೆಗಳೆಷ್ಟೆಂದು ಲೆಕ್ಕಮಾಡುವವರಿಗೆ ಮಾತ್ರ ತನ್ನ ಪುತ್ರಿಯನ್ನು ವೈವಾಹದಲ್ಲಿ ಕೊಡುವೆನೆಂದು ಹೇಳಿದಳು. ಆ ದಿನಗಳಲ್ಲಿ ಈ ಪರೀಕ್ಷೆಯೇನೂ ಕಠಿನವೆನಿಸಿರಲಿಲ್ಲ. ಏಕೆಂದರೆ, ನೆಲ್ಲಿಯ ಎಲೆಗಳು ಆಕಾರದಲ್ಲಿ ದೊಡ್ಡವೂ ಸಂಖ್ಯೆಯಲ್ಲಿ ಚಿಕ್ಕವೂ ಆಗಿದ್ದುವು ಒಂದು ದಿನ ಅಕಸ್ಮಾತ್ತಾಗಿ ಓರ್ವ ಅನಪೇಕ್ಷಿತ ಪ್ರಾರ್ಥಿಯು ಬಂದುಬಿಟ್ಟ. ಹೆದರಿಕೆಯಿಂದ ಕಂಗಾಲಾದ ದೇವಿಯು ತನ್ನ ಕೈಯ ತಾಳ ಬಡಿದಳು; ತತ್‍ಕ್ಷಣ ಪ್ರತಿ ಎಲೆಯೂ ಇಪ್ಪತ್ತು ಇಪ್ಪತ್ತು ಭಾಗವಾಗಿ ಹೋಯಿತು. ಯುವಕನು ಮಾಯಾವಿಯಾಗಿದ್ದ. ಆತನ ಮಾಯೆ ಇದಕ್ಕಿಂತಲೂ ದೊಡ್ಡದಿತ್ತು ಆವನು ಈ ಚಿಕ್ಕ ಚಿಕ್ಕ ಎಲೆಯನ್ನೂ ಪ್ರಯಾಸದಿಂದ ಗಣಿಸಿಬಿಟ್ಟು ವಧುವನ್ನು ಒಯ್ದೇಬಿಟ್ಟ.

ಮರಗಿಡಗಳ ಕಥೆಗಳಲ್ಲಿ ಹೆಚ್ಚಿನವು ರಾಮಲಕ್ಷ್ಮಣರ ವನವಾಸ ಮತ್ತು ಸಂಚಾರದ ಸಂಬಂಧವನ್ನಿಟ್ಟುಗೊಂಡಿವೆ. ಲಕ್ಷ್ಮಣನೊಮ್ಮೆ ಖರ್ಜೂರದ ಮರಕ್ಕೆ ಬಾಣ ಜೋಡಿಸಿದಾಗಲೇ ಅದುವರೆಗೆ ಗಿಡ್ಡವೂ ಅಗಲವೂ ಆಗಿದ್ದ ಅದರ ಎಲೆಯು ಉದ್ದವೂ ಸಪುರವೂ ಆಯಿತಂತೆ. ಮುಳ್ಳಿನ ಗಿಡದ ಮೇಲೆ ರಾಮನ ಕೃಪೆ ತೋರುತ್ತದೆ. ಸೀತಾಪಹರಣಾನಂತರ, ರಾಮನು ದುಃಖದಿಂದ ವೃಕ್ಷಗಳೊಡನೆ, ಪಶುಗಳೊಡನೆ ಸೀತೆಯನ್ನು ವಿಚಾರಿಸಿದನಷ್ಟೆ? ಆಗ ಈ ಮುಳ್ಳಿನ ಗಿಡದೊಡನೆಯೂ "ನೀನು ಸೀತೆಯನ್ನು ಕಂಡಿದ್ದೀಯಾ?" ಎಂದು ಆತ ಪ್ರಶ್ನಿಸಿದನಂತೆ. ಆಗ, ಆ ಗಿಡವು, "ಹೌದು, ನೋಡು, ಇದು ಆಕೆಯದೇ ವಸ್ತ್ರ' ಎಂದು ತನ್ನಲ್ಲಿ, ಸಿಕ್ಕಿಕೊಂಡಿದ್ದ ಒಂದು ತುಂಡು ಬಟ್ಟೆಯನ್ನು ತೋರಿಸಿತಂತೆ. ಇದರಿಂದ ಸಂತುಷ್ಟನಾದ ರಾಮನು ಆ ಗಿಡವನ್ನು ಹೀಗೆ ಆಶೀರ್ವದಿಸಿದನು: 'ಶಹಬಾಸ್' ಮಿತ್ರನೆ, ನೀನು ಅಮರನಾಗು. ನೀನು ಬಹಳಷ್ಟು ತುಂಡಾಗಿಕಡಿಯಲ್ಪಟ್ಟರೂ ಒಂದು ಬೇರು ಮಾತ್ರ ಜೀವಿಸಿದ್ದರೆ, ಪುನಃ ಚಿಗುರುವಂತೆ ಆಶೀರ್ವಾದವಿತ್ತಿದ್ದೇನೆ." ಅಂದಿನಿಂದ ಈ ಮುಳ್ಳಿನಜಾತಿಯ ಗಿಡಗಳನ್ನುನಾಶಮಾಡುವುದುಅತ್ಯಂತ ಪ್ರಯಾಸ. ಕೋಡವ ಎಂಬ ಜಾತಿಯ ಜನರು ಬಾದಾಮಿ ವೃಕ್ಷದಡಿಯಲ್ಲಿ ದಂಡಕಾರಣ್ಯದಲ್ಲಿ ರಾಮ ಲಕ್ಷ್ಮಣ ಸೀತೆಯರು ಸುತ್ತುತ್ತಿರುವಾಗ ಬಿಡಾರ ಹೂಡಿರುವುದರಿಂದದು ಅತೀವ ಭಾಗ್ಯಶಾಲಿಯೆನಿಸಿದ ಮರವೆಂದು ಹೇಳುತ್ತಾರೆ.

ಆದಿವಾಸಿಗಳ ಕಥೆಗಳಲ್ಲಿ ಬಾಳೆಯ ಕಥೆವು ಬಹಳ ವಿಮರ್ಶೆಗೆ ಗುರಿಯಾಗಿದೆ. ಅದರ ಅಗಲವಾದ ಎಲೆ ಮತ್ತು ಒಂದು ಬಾರಿ ಫಲವಿತ್ತನಂತರ ಅದಕ್ಕೆ ಬರುವ ಸಾವು ಈ ಎರಡು ಸಂಗತಿಗಳು ವಿಶೇಷ ಗಮನವನ್ನು ಹರಿಸಿದಂತೆ ತೋರುತ್ತದೆ. ಈ ವೈಶಿಷ್ಟ್ಯದಿಂದಾಗಿ ಒಂದೇ ಮಗುವಿನ ತಾಯಿಯನ್ನು "ಬಾಳೆಗಿಡ" ಎಂಬ ವಕ್ರನಾಮದಿಂದ ಕರೆಯುವುದುಂಟು. ಒಡಿಸ್ಸದ ಪರ್ವತ ಪ್ರದೇಶದಲ್ಲಿ ವಾಸಿಸುತ್ತಿರುವ ಗಿರಿಜನರಲ್ಲಿ ಪ್ರಚಲಿತವಿರುವ ಬಾಳೆಯ ಸಂಬಂಧದ ಕಥೆಯನ್ನು ಈ ರೀತಿಯಾಗಿ ಸಂಗ್ರಹಿಸಬಹುದು.

ಮಾವು, ನೆಲ್ಲಿ, ಅಂಜೂರ, ನೇರಳೆ, ಮತ್ತು ಬಾಳೆಗಳು ಹಿಂದಿನ ಕಾಲದಲ್ಲಿ ಸಹೋದರಿಯರಾಗಿದ್ದುವು. ತಮತಮಗೆ ಪತಿಗಳನ್ನರಸುತ್ತ ಅವರು ಗ್ರಾಮ ಗ್ರಾಮಗಳಲ್ಲಿ ನೃತ್ಯ ಮಾಡುತ್ತ ಸಾಗುತಿದ್ದರು. ಆದರೆ, ಯಾರೊಬ್ಬರೂ ಇವರನ್ನು ವಿವಾಹವಾಗಲು ಮುಂದೆ ಬರುತ್ತಿರಲಿಲ್ಲ. ಕೊನೆಗೆ ಪರಮಾತ್ಮನು ಅವರ ಮುಂದೆ ಕಾಣಿಸಿಕೊಂಡು, ನಿಜವಾಗಿಯೂ ನಿಮಗೇನು ಬೇಕು ಎಂದವರೊಡನೆ ಬೇರೆ ಬೇರೆಯಾಗಿ ಕೇಳಿದನು. ಮಾವು, ನೆಲ್ಲಿ, ಅಂಜೂರ ಮತ್ತು ನೇರಳೆ ವೃಕ್ಷಗಳು "ನಮಗೆ ಒಬ್ಬ ಪತಿ ಮತ್ತು ಹಲವು ಮಕ್ಕಳು ಬೇಕಾಗಿವೆ'' ಎಂದುವು. ಆದರೆ,

(೧೨ನೇ ಪುಟ ನೋಡಿರಿ)

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ್ ವಾಶಿಂಗ್‌ಟನ್

ಲೇಖಕಿ: ಜಿನೇ ಇಯೋಟೆನ್.

ಅನುವಾದಕರು:

ಯು. ಎಲ್. ಆಚಾರ್ಯ, ಎಮ್. ಎ ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ್ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

ಪ್ರತಿಗಳಿಗೆ ಬರೆಯಿರಿ:

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1919

ಕಥಾವಿಹಾರ

(೨ನೇ ಪುಟದಿಂದ)

ಹುಟ್ಟಿ ಪದಿನೆಂಟು ವರ್ಷಗಳನ್ನು ಕಳೆದರೂ ಒಂದು ದಿನವೂ ಸುಖವಾಗಿ ನಕ್ಕು ನಲಿದು ದಿನಕಳೆದುದಿಲ್ಲ ಆದರೆ ಮನೆಯಲ್ಲಿದ್ದರೆ ನಾನಿದನ್ನೆಲ್ಲ ಸಹಿಸಿಕೊಳ್ಳಬಲ್ಲೆ. ನಿನಗೆ ನನ್ನ ಜೀವನದ ಕತೆಯೆಲ್ಲ ಗೊತ್ತಿರಲಿಕ್ಕಿಲ್ಲ ಬಾಲ್ಯದಲ್ಲಿ - ನನಗಾಗ ಎಂಟೊಂಭತ್ತು ವರ್ಷವಿರಬಹುದು — ಶಾಲೆಗೆ ಹೋಗುತ್ತಿದ್ದೆ. ನನ್ನ ಪೂಜ್ಯ ತಂದೆಯವರು ದೈವಾಧೀನರಾದರು. ಒಳ್ಳೆಯ ರೀತಿಯಲ್ಲಿ ಸಂಸಾರ ಸಾಗಿಸಿಕೊಂಡು, ಸುಖದಿಂದ ಬದುಕಬೇಕೆಂಬ ಅವರ ಇಚ್ಛೆ ಸಾಯುವ ತನಕವೂ ಇಚ್ಛೆಯಾಗಿಯೇ ಉಳಿದಿತ್ತು. ಸ್ವರ್ಗಸ್ಥರಾಗುವ ಹದಿನೈದು ದಿನಗಳ ಮೊದಲು, ತಮ್ಮ ಇಚ್ಛೆಯು ಅಸ್ತಿವಾರವೆಂಬಂತೆ ಹೊಸಮನೆಯ ಕಟ್ಟಡ ಮುಗಿಸಿ ಪ್ರವೇಶೋತ್ಸವ ಮಾಡಿಸಿದ್ದರಷ್ಟೆ. ಬಾಲ್ಯದಲ್ಲಿಯೇ ತಂದೆಯವರನ್ನು ಕಳೆದುಕೊಂಡ ನಾನು ಪರರ ಹಂಗಿನಲ್ಲಿ— ಈಗಲೂ ನನ್ನ ಮನಸ್ಸಿನ ವಿರುದ್ಧವಾಗಿ, ಜೀವನ ನಡೆಸಬೇಕಾಗಿದೆ. ನನ್ನ ಒಡಹುಟ್ಟಿದವರು ಒಟ್ಟಿಗೆ ಮೂವರು— ಒಬ್ಬಳು ಅಕ್ಕ, ಇಬ್ಬರು ತಮ್ಮಂದಿರು. ನನ್ನ ಚಿಕ್ಕತಂದೆಯವರು ಮದ್ರಾಸಿನಲ್ಲಿ ತಿಂಗಳಿಗೆ 800/- ರೂಪಾಯಿ ಪಡೆಯುವ ಹುದ್ದೆಯಲ್ಲಿದ್ದರೂ, ನಮ್ಮ ತಾಯಿ ನಮ್ಮನ್ನು ಸಲಹಲು ಸಾಲ, ಅಡವನ್ನೇ ಮಾಡಬೇಕಾಯಿತು. ತಂದೆ ತೀರಿದ ಎರಡು ತಿಂಗಳೊಳಗೆ ಹೇಗೋ ನನ್ನ ಅಕ್ಕನ ಲಗ್ನವೂ ನೆರವೇರಿತು.

ನನ್ನ ವಿದ್ಯಾಭ್ಯಾಸದ ಪ್ರಥಮ ಹಂತ ಎಂಟನೇ ತರಗತಿ ಮುಗಿಸಿದಾಗ ಮುಂದಿನ ಮಾರ್ಗ ಒಂದು ತೊಡಕಿನದಾಗಿಯೇ ಇದಿರುನಿಂತಿತು. ಚಿಕ್ಕ ತಂದೆಯವರಿಂದ ನಿರೀಕ್ಷಿಸಿದ್ದ ನೆರವು ದೊರೆಯಿತು. ಉಳಿದ ಸಂಬಂಧಿಕರೆಲ್ಲರೂ 'ಅಶಕ್ತರಾದ ಆಪ್ತ ಬಂಧುಗಳೇ ವೈರಿಗಳು' ಎಂಬ ಸಾರ ವಚನವನ್ನು ಸತ್ಯಗೊಳಿಸಿದರು. ಮುಂದಿನ ವಿದ್ಯಾಸದೆಡೆಗೆ ನನ್ನಲ್ಲಿದ್ದ ಉತ್ಕಟೇಚ್ಛೆ ಕಂಡು ನನ್ನ ತಾಯಿಯೇ ನನ್ನನ್ನು ಹೈಸ್ಕೂಲು ಸೇರಿಸಿದರು. ಅದರಿಂದಾಗಿಯೇ ಆಕೆ ಪಡಬಾರದ ಕಷ್ಟ ಪಡಬೇಕಾಯಿತು ನನ್ನ ಹೈಸ್ಕೂಲು ವಿದ್ಯಾಭ್ಯಾಸದ ಪ್ರಥಮ ವರುಷವನ್ನು ಮಂಗಳೂರಿನಲ್ಲಿ ಕಳೆದೆ. ಆದರೆ ಅಲ್ಲಿಯೂ ನನಗೆ ಸುಖವಿರಲಿಲ್ಲ— ನೋಡದ ಊರು, ಪರಿಚಯವಿಲ್ಲದ ಜನರು. ಸಂಬಂಧಿಕರಿಲ್ಲ-ಬಂಧುಬಳಗದವರಿಲ್ಲ. ನಮ್ಮ ಜಾತಿಯವರೆಷ್ಟೋ ಮಂದಿ ಅಲ್ಲಿದ್ದರೂ ನಾನು ಅವರೊಟ್ಟಿಗಿರದೆ ನನ್ನ ತಾಯಿಯ ಪರಿಚಯದವರೊಬ್ಬರಲ್ಲಿದ್ದೆ. ಮೊದಲು ಒಂದೆರಡು ತಿಂಗಳ ತನಕ ನನಗಲ್ಲಿ ತುಂಬಾ ಪೇಚಾಟವಾಯಿತು; ಅಂತೂ ಒಂದು ವರ್ಷ ಕಳೆದೆ. ಒಂದೂಟವಿದ್ದರೆ, ಒಂದೂಟವಿಲ್ಲದೇ— ನಾನುಳಿದುಕೊಂಡಿದ್ದ ಮನೆಯವರ ಅನುಕೂಲಕ್ಕೆ ಸರಿಯಾಗಿ ದಿನದೂಡಿದೆ. ಮರುವರ್ಷ ಮಾತ್ರ ನಾನಲ್ಲಿಗೆ ಹೋಗಲು ಸಮ್ಮತಿಸಲಿಲ್ಲ; ಯಾರೆಷ್ಟು ಹೇಳಿದರೂ ಕೇಳಲಿಲ್ಲ. ನನ್ನದೇ ಹುಟ್ಟಿದ ಊರಿಗೆ ಹೋಗಿ ಶಾಲೆ ಸೇರಿದೆ. ಅಲ್ಲಿ ಮಂಗಳೂರಿಗಿಂತ ಸುಖವಾಗಿ ಇರಬಹುದೆಂದು ಬಯಸಿದೆ. ....ಹಾಗೇ ನನ್ನ ಹಳೆಯ ಫಲವಾಗಿ ಅಲ್ಲಿ ದೊರೆತ ಸುಖ (?)ವನ್ನು ಅನುಭವಿಸಿದೆ. ಅಂದಿನಿಂದ ಇಂದಿನ ತನಕವೂ ಆ ಊರಿನ ಕೆಲವಂದಿ— ಸುಂದರನ ಮಿತ್ರರು - ನನ್ನ ಮೇಲೆ ಇಲ್ಲಸಲ್ಲದ ಅಪಪ್ರಚಾರ ಹಬ್ಬಿಸಿದರು. ಕೇಳಬಾರದಂತಹ ಮಾತುಗಳನ್ನು ನನ್ನ ಬಗೆಗೆ ಆಡಿದರು. ನಾನು ಈ ತನಕ ಅಂತಹ ಮಾತುಗಳನ್ನು ಕೇಳಿರಲಿಲ್ಲ. ಆ ಹೊಲಸು ಊರಿನಲ್ಲಿ ಅದನ್ನೆಲ್ಲ ಕೇಳಬೇಕಾಗಿ ಬಂತು ಕೆಲವೊಮ್ಮೆ ಇದನ್ನೆಲ್ಲ ನೆನಪಾಗ ನನಗೆ ಕಣ್ಣೀರು ಬರುತ್ತಿತ್ತು; ಈಗಲೂ ಬರುತ್ತದೆ. ಇವೆಲ್ಲ ಘಟನೆಗಳು ನನ್ನ ತಾಳ್ಮೆಯನ್ನು ಪರೀಕ್ಷಿಸಿ ಬಿಟ್ಟವು. ಅದರಲ್ಲಿಯೂ ನಾನು ಸೋಲಲಿಲ್ಲ! ನಾನು ತಪ್ಪಿತಸ್ಥಳಾದರೆ ಮಾತ್ರ ಅಂತಹ ಹೊಲಸು ನುಡಿಗಳನ್ನು ಕೇಳಿ ರೇಗುವುದಷ್ಟೆ. ಹಾಗೆಂದುಕೊಂಡು ನಾನು ಸುಮ್ಮನೆ ಉಳಿದು ಬಿಟ್ಟೆ.

ಆ ವರುಷ ದಶಂಬರ ತಿಂಗಳಲ್ಲಿ ನನ್ನ ಅತ್ಯಂತ ಪ್ರೀತಿ ಪಾತ್ರನಾದ ಏಳು ವರ್ಷದ ತಮ್ಮ ಕಠಿಣ ಕಾಹಿಲೆಗೊಳಗಾದ. ನಾನು ಮತ್ತು ನನ್ನ ತಾಯಿ, ಆತನನ್ನು ಸರಕಾರಿ ಆಸ್ಪತ್ರೆಗೆ ಕೊಂಡೊಯ್ದು ನಮ್ಮ ಶಕ್ತಿ ಮೀರಿ ಚಿಕಿತ್ಸೆ ಮಾಡಿಸಿದೆವು. ವಿಧಿಯ ಲೀಲೆ, ನನ್ನ ದುರಾದೃಷ್ಟ ಬೇರೆಯೇ ಇತ್ತು; ನಾವೆಷ್ಟು ಯತ್ನಿಸಿದರೂ ಆತನನ್ನು ಉಳಿಸಿಕೊಳ್ಳಲಾಗಲಿಲ್ಲ. ಸಾಯುವ ಕೊನೆಯ ಘಳಿಗೆಯಲ್ಲೂ 'ಅಕ್ಕಾ ....ಅಕ್ಕಾ....' ಎನ್ನುತ್ತಲೇ ಇದ್ದ. ಆತನಿಗಾಗಿ ನಾನು ಆಗಾಗ ಹಂಬಲಿಸಿ ಕಣ್ಣೀರಿಡುತ್ತಿದ್ದೆ. ನನ್ನ ಜೀವನದಲ್ಲಿ ಯಾವುದು ಕಡಿಮೆಯಾದರೂ ಕಣ್ಣೀರಿಗೆ ಮಾತ್ರ ಈ ತನಕ ಕೊರತೆಯಾಗಲಿಲ್ಲ!

ಇದಾದ ನಂತರ ಹಣದ ಅಭಾವದಿಂದ ಪ್ರತಿದಿನ ನಾನು ಮನೆಯಿಂದ ಆರು ಮೈಲು ನಡೆದೇ ಬರುತ್ತಿದ್ದೆ. ಅದಕ್ಕೆ ಸರಿಯಾಗಿ — ನಿನಗೆ ಗೊತ್ತಿದೆಯಷ್ಟೆ — ನಮ್ಮ ಹೋಟೆಲ್ ಮಾಲಿಕರು ಹೋಟೆಲ್ ಮುಚ್ಚಿಬಿಟ್ಟರು. ಆ ಊರಿನಲ್ಲಿ ನನಗೆ ಬೇರೆ ಯಾವ ಹೋಟೆಲ್ಲೂ ಸರಿಯಾಗದಿದ್ದ ಕಾರಣ ಮಧ್ಯಾಹ್ನ ಊಟ ಮಾಡದೇ ಹಸಿದಿರುತ್ತಿದ್ದೆ ಆದರೆ ಹದಿನೈದೇ ದಿನಗಳಲ್ಲಿ ಅವರು ಪುನಃ ಹೋಟೆಲು ತೆರೆದುದರಿಂದ ನನ್ನ ಸಂಕಷ್ಟ ಮತ್ತೆಯೂ ಮುಂದುವರಿಯಲಿಲ್ಲ. ಅಂತೂ ಆ ಬಾರಿಯ ಪರೀಕ್ಷೆ ಮುಗಿದು ರಜೆಯಲ್ಲಿ ಊರು ಸೇರಿದವಳು ಶಾಲೆ ಆರಂಭವಾದೊಡನೆಯೇ ಮರಳಿ ಬಂದೆ.

ನನ್ನ ವಿದ್ಯಾಭ್ಯಾಸದಲ್ಲಿ ಒಂದು ಉದ್ದೇಶವಿತ್ತು: ಉಳಿದ ನನ್ನ ಒಬ್ಬನೇ ತಮ್ಮನನ್ನು ನನ್ನ ಶೈಲಿಯ ಮಟ್ಟಿಗೆ ಓದಿಸಬೇಕೆಂದು ನನ್ನದೊಂದು ಸಂಕಲ್ಪ. ಅಲ್ಲದೇ ನನ್ನ ಜೀವನವೂ ಮುಂದೆ ಪರರನ್ನು ಹೊಂದಿಕೊಂಡಿರಬಾರದೆಂದೂ ಇಚ್ಛಿಸಿದ್ದೇನೆ. ನನಗೊಬ್ಬ ಅಣ್ಣನಿರುತ್ತಿದ್ದರೆ ನಾನೀ ತೊಂದರೆಗೊಳಗಾಗಬೇಕಿರಲಿಲ್ಲ. ಅಂತೆಯೇ ನಾಳೆ ನನ್ನ ತಮ್ಮನೂ ಹಾಗೆ ಭಾವಿಸಿಕೊಳ್ಳಬಾರದೆಂದು, ನಾನು ಆತನ ಅಣ್ಣನ ಸ್ಥಾನದಲ್ಲಿ ನಿಲ್ಲಬೇಕೆಂದು ನನ್ನ ಹೆಬ್ಬಯಕೆ. ಈ ಮಹೋದ್ದೇಶದ ಸಾಧನೆಗಾಗಿ ನಾನು ಓದಬೇಕಿತ್ತು. ಮನೆಯ ದೈನಂದಿನ ಅಡೆತಡೆಗಳ ಮಧ್ಯೆ ಓದು ಸಾಗದೆಂದೆಣಿಸಿ ನನ್ನ ವಿದ್ಯಾಭ್ಯಾಸದ ಕೊನೆಯ ವರ್ಷದಲ್ಲಾದರೂ ಸರಿಯಾಗಿ ಓದಿ ಪಾಸಾಗಬೇಕೆಂಬ ಆಸೆಯಿಂದ ನಾನು ಅಲ್ಲಿಯೇ ಹೋಟೆಲಿನಲ್ಲಿ ನಿಲ್ಲಹತ್ತಿದೆ. ಇದರಿಂದಾಗಿ ನನಗೆ ದೊರೆತುದು ಸುಖದುಃಖ ಮಿಶ್ರವಾದ ಫಲ. ಸುಖಕ್ಕಿಂತ ಹೆಚ್ಚಾಗಿ ಅಲ್ಲಿ ನಡೆದ ದುಃಖಕರವಾದ ಘಟನೆಗಳು ನನ್ನ ಆತ್ಮಕ್ಕೆ ಅಳಿಸಲಾರದ ಆಘಾತ ಮಾಡಿದುವು. ನಾನು ನಿಮ್ಮೊಂದಿಗೆ—ನಿಮ್ಮ ಕೋಣೆಗೆ ಹೊಂದಿಕೊಂಡೇ ಇರಹತ್ತಿದ ನಂತರ ನಡೆದ ಕತೆಯೆಲ್ಲವೂ ಸಾಮಾನ್ಯವಾಗಿ ನಿನಗೆ ತಿಳಿದಿರಲಿಕ್ಕೆ ಸಾಕು...

ಓಹ್ —ಎಲ್ಲಿಯೋ ಆರಂಭಿಸಿ ಎಲ್ಲೆಲ್ಲಿಯೋ ಕತೆಯನ್ನೆಲ್ಲ ಬರೆದು ಬಿಟ್ಟೆ ...ನಾನು ಯಾವುದನ್ನು ಕುರಿತು ಬರೆಯುತ್ತಿದ್ದೆನೆಂದರೆ.... ಹೌದು 'ಆ' ಘಟನೆಯ ಕುರಿತು ...ಅಂದು ನಡೆದ 'ಆ' ದುರಂತದ ಕುರಿತು...

ನೀವೆಲ್ಲಾ ಎರಡು ದಿನಗಳ ರಜೆಗೆಂದು ಮನೆಗೆ ಮರಳಿದ್ದಿರಷ್ಟೆ ಅಂದು. ನನಗೂ ಮನೆಗೆ ಹೋಗಬೇಕೆಂಬ ಲವಲವಿಕೆಯಿದ್ದಿತು. ತಾಯಿಯ ಕಷ್ಟಗಳೆಲ್ಲಕ್ಕೂ ನಾನು ಭಾಗಿಯಾಗದಿದ್ದರೂ, ಅವನ್ನು ಕೇಳಿಯಾದರೂ ತಿಳಿದು ನನ್ನ ಮನಸ್ಸು ಹಗುರಾಗುತ್ತಲಿತ್ತು. ಅದಕ್ಕಿಂತ ಇನ್ನೊಂದು ದೊಡ್ಡ ಆಕರ್ಷಣೆ-ಸುಖದುಃಖಗಳರಿವಿಲ್ಲದೆ, ಏನೂ ಅರಿಯದ ಮುಗ್ಧ ಜೀವಿ ನನ್ನ ತಮ್ಮ—ನಾನು ಮನೆ ಮುಟ್ಟಿದಾ ಕ್ಷಣವೇ ಓಡಿ ಬಂದು ನನ್ನನ್ನಪ್ಪಿ ತನ್ನ ಶಾಲೆಯ ಕತೆ, ಆಟಪಾಠಗಳ ವರದಿಯನ್ನೊಪ್ಪಿಸುತ್ತಿದ್ದ. ಆ ಒಂದು ಕ್ಷಣ — ನನ್ನ ದುಃಖವೆಲ್ಲ ಮಾಯವಾಗುತ್ತಿತ್ತು. ಅದಕ್ಕಾಗಿ ನಾನು ಮನೆಗೆ ಹೋಗಬೇಕೆಂದು ಯೋಚಿಸಿದೆ. ಆದರೆ ಪರೀಕ್ಷೆ ಸಮೀಪಿಸಿದ್ದ ಕಾರಣ, ನನ್ನ ಓದು ಇನ್ನೂ ಏನೂ ಸಾಗದಿದ್ದ ಕಾರಣ ಅಲ್ಲಿಯೇ ಉಳಿದಿದ್ದೆ ಆ ದಿನ....ಆ ದುರಂತ ನಡೆಯಲು ತನ್ನೆಲ್ಲ ಸಹಕಾರವನ್ನೂ ಕೊಟ್ಟಿತು.

ಅಂದು ನಮ್ಮ ಹೋಟೆಲ್ ಯಜಮಾನರು ಏನೋ ಕಾರ್ಯನಿಮಿತ್ತ ಪರಊರಿಗೆ ತೆರಳಿದ್ದರು ಶಾಲೆಗಳಿಗೆ, ಕಛೇರಿಗಳಿಗೆಲ್ಲ ರಜೆಯಾದ್ದರಿಂದ, ಹೋಟೆಲಿನ ನೌಕರರೆಲ್ಲ, ಊಟಕ್ಕೆ ಹೆಚ್ಚು ಮಂದಿಯಿಲ್ಲದ್ದರಿಂದ ರಾತ್ರಿಯ ಅಡುಗೆ ಮಾಡಿಟ್ಟು ಸಿನೆಮಾಕ್ಕೆ ತೆರಳಿದ್ದರು.

ರೂಮಿನಲ್ಲಿ ನಾನೊಬ್ಬಳೇ, ದೀಪ ಹೊತ್ತಿಸಿ ಓದುವುದರಲ್ಲಿ ತಲ್ಲೀನಳಾಗಿದ್ದೆ. ಸಾಧಾರಣ ಗಂಟೆ ಎಂಟಿರಬಹುದು. ಸುಂದರ ಥಕ್ಕನೆ ನನ್ನ ರೂಮಿನಲ್ಲಿ ಬಂದು ನಿಂತ. ನಾನು ಬೆಚ್ಚಿಬಿದ್ದು ಆತನತ್ತ ತಿರುಗಿದೆ. ಆತನ ಕಣ್ಣುಗಳೆರಡು ನನ್ನತ್ತಲೇ ನೋಡುತ್ತಿದ್ದುವು. ಮುಖದಲ್ಲಿ ಒಂದು ತರದ ಕ್ರೌರ್ಯದ ಭಾವ ಕಾಣುತ್ತಿತ್ತು. ಕೋಣೆಯ ಚಿಕ್ಕದೀಪದ ಮಸುಕು ಬೆಳಕು ಆತನ ಮೋರೆಯ ಮೇಲೆ ಬಿದ್ದು ಸುಸ್ಪಷ್ಟವಾಗಿ ಕಾಣದ ಆತನ ಮುಖದ ಕಾಂತಿಯನ್ನು ಇನ್ನೂ ಹೆಚ್ಚಿಸಿತ್ತು. ಒಂದರೆ ಕ್ಷಣ ಹಾಗೇ ನಿಂತು ಆತ ನನ್ನತ್ತ ನೋಡುತ್ತಿದ್ದ; ನಾನೂ ಅವನನ್ನು ನೋಡಿದೆ. ಅದು ಒಂದೇ ಒಂದರೆಕ್ಷಣ ಮಾತ್ರ... ಹಾಗೇ ಥಕ್ಕನೆ ಮುಂದೆಬಂದು ನನ್ನ ಕೈ ಒತ್ತಿದ...ನಾನು ಕೂಗಬೇಕೆಂದು ಬಾಯ್ದೆರೆದೆ; ಆತನ ಇನ್ನೊಂದು ಕೈ ನನ್ನ ಬಾಯನ್ನು ಮುಚ್ಚಿತು. ಆತನ ಆ ಪಿಶಾಚ ಶಕ್ತಿಯೆದುರು ನಾನು ಅಸಹಾಯಳಾದೆ. ನನ್ನ ತಲೆ ಸುತ್ತಿಬಂದಂತಾಯಿತು... ಅವನ ಹೊಳೆಯುವ ಆ ಕ್ರೂರ ಕಣ್ಣುಗಳೆರಡು ಆತ ಏನುಮಾಡಬಯಸುತ್ತಿದ್ದನೆಂಬುದನ್ನು ಸೂಚಿಸುತ್ತಿದ್ದುವು. ಆ ಕಣ್ಣುಗಳು - ನನ್ನನ್ನೇ ನೋಡುತ್ತಿದ್ದುವು. ಅವನ್ನು ಇದಿರಿಸಲಾರದೇ ನಾನು ಕಣ್ಮುಚ್ಚಿದೆ... ಅಷ್ಟರಲ್ಲಿ ಯಾರೋ ನಮ್ಮ ಉಪ್ಪರಿಗೆ ಏರಿಬರುವ ಸದ್ದಾಯಿತು. ಆತ ಒಮ್ಮೆಲೇ, ಹೆದರಿದವನಂತೆ ನನ್ನನ್ನು ಹಿಡಿದ ಹಿಡಿತವನ್ನು ಬಿಟ್ಟು ಗಡಿಬಿಡಿಯಿಂದ ಕೋಣೆಯಿಂದ ಹೊರಹೊರಟು ಹೋದ ನಾನೊಮ್ಮೆ ಗಂಡಾಂತರದಿಂದ ಪಾರಾಗಿ ನಿರಾಳವಾಗಿ ಉಸಿರೆಳೆದಿದ್ದೆ-ಆಗತಾನೇ ನೀನು ನನ್ನ ಕೋಣೆ ಪ್ರವೇಶಿಸಿದ್ದೆ ಈ ಅನಿರೀಕ್ಷಿತ ಆಕ್ರಮಣದಿಂದ ನನ್ನ ಮನಸ್ಸು ತಲ್ಲಣಿಸಿ ಹೋಗಿತ್ತು-ನಿನ್ನನ್ನು ನೋಡಿದೊಡನೇ—ಅದೇಕೋ ಅಷ್ಟರ ತನಕ ತಡೆದಿದ್ದ ನನ್ನ ದುಃಖದ ಕಟ್ಟೆಯೊಡೆದುಹೋಯಿತು.; ನಾನು ಮಗುವಿನಂತೆ ಅತ್ತುಬಿಟ್ಟೆ.... ಅಂದು.... ಆ ಸಮಯಕ್ಕೆ ಸರಿಯಾಗಿ ನನ್ನ ಭಾಗದ ದೇವರಾಗಿ ನೀನು ಬಂದೆ.... ಆದರೆ... ಆದರೆ... ನೀನು ಬಾರದಿರುತ್ತಿದ್ದರೆ.... ಅಯ್ಯೋ ನನ್ನಿಂದ ಅದನ್ನು ಎಣಿಸಲೂ ಅಸಾಧ್ಯ...

(ಮುಂದುವರಿಯುವುದು)

ಜನ್ನ ಮರವಂತೆ.

NAVAYUGA
REGD. NO. M. 3619

UDIPI, THURSDAY
3–12–1959

LICENSE NO. 31
Licensed to Post without Prepayment

ವಿಚಾರವರ್ಷ

(೧ನೇ ಪುಟದಿಂದ)

ಬಾಳೆಯು ಉತ್ತರಿಸಿತು—"ನನಗೆ ಪತಿಯೊದರೂ ಅವಶ್ಯವಿಲ್ಲ, ನನಗೆ ತುಂಬ ಮಕ್ಕಳಿರಬೇಕು, ಅದೂ ಏಕಕಾಲದಲ್ಲಿ ಆಗಬೇಕು ನಾನು ಬೇಗನೇ ಮುದುಕಿಯಾಗಬಯಸುತ್ತೇನೆ" ಭಗವಂತನು ಅದಕ್ಕೆ, 'ನೀನು ಬಯಸಿದಂತೆಯೇ ಆಗಲಿ' ಎಂದು ಆಶೀರ್ವಾದವಿತ್ತನು ಅಂದಿನಿಂದ ಬಾಳೆಗೆ ಪತಿಯೂ ಇಲ್ಲ; ಅದು ಒಂದೇ ವರ್ಷದಲ್ಲಿ ಮುದುಕಿಯಾಗುತ್ತದೆ, ಮತ್ತು ಫಲವತಿಯಾದೊಡನೆಯೇ ಸಾಯುತ್ತದೆ.

ಸ್ವಲ್ಪವೇ ಸಮಯದಲ್ಲಿ ಬಾಳೆಯ ಉಳಿದ ಸಹೋದರಿಯರಿಗೆಲ್ಲಾ ಪತಿಗಳು ದೊರೆತರು. ಅವರಿಗೆ ಅನೇಕ ಮಕ್ಕಳೂ ಹುಟ್ಟಿದರು. ಆದರೆ, ಸಹೋದರಿಯರಲ್ಲಿ ಒಂದೇ ಒಂದು ಮಗು ಉಳಿಯಲಿಲ್ಲ. ಅವರ ಪತಿಗಳು ಹೆದರಿ ಓಡಿಹೋದರು ಈ ಮಕ್ಕಳು ಪಿಶಾಚಿಗಳಾಗಿ ತಮ್ಮನ್ನು ಕೊಂದುಬಿಡಬಹುದೆಂದು ಅವರೂ ಅಂಜಿದರು. ಆಗ, ಪರಮಾತ್ಮನು ಐದೂ ಸಹೋದರಿಯರನ್ನೂ ವೃಕ್ಷಗಳನ್ನಾಗಿ ಪರಿವರ್ತಿಸಿದನು ಅವರ ತಲೆಗೂದಲು ಶಾಖೆಗಳಾದುವು ಮಕ್ಕಳು ಹಣ್ಣುಗಳಾದುವು ಆಗ ಪರಮಾತ್ಮನು ಕೇಳಿದನು— 'ನಿಮ್ಮ ಪತಿಯಂದಿರನ್ನು ಏನು ಮಾಡುವಿರಿ?" ಇದಕ್ಕೆ ಆ ಮರಗಳು, 'ಯಾರು ನಮ್ಮನ್ನು ಬಿತ್ತಿ ಬೆಳೆಸಿ ಸಾಕುವನೋ ಅವನೇ ನಮ್ಮ ಪತಿ" ಎಂದುತ್ತರಿಸಿದುವು ಹೀಗೆ ಮನುಷ್ಯನು ವೃಕ್ಷಗಳ ಪತಿಯಾಗಿ ಬಿಟ್ಟನು.

ಭಾರತದಲ್ಲಿ ಅಶ್ವತ್ಥದ ಮರವನ್ನು ಪರನು ಪವಿತ್ರವೆಂದು ತಿಳಿಯಲಾಗುತ್ತದೆ. ಅದರ ಮೂಲವು ಬ್ರಹ್ಮ, ಮಧ್ಯವು ವಿಷ್ಣು ಮತ್ತು ತುದಿಯು ಮಹಾದೇವ ಎಂದು ಭಾವಿಸಲಾಗುತ್ತದೆ "ಸಾವಂತ" ವರ್ಗದ ಜನರು ಈ ಮರದ ಬಗ್ಗೆ ಒಂದು ವಿಚಿತ್ರ ಕಥೆಯನ್ನು ಆಡಿಕೊಂಡಿರುತ್ತಾರೆ ಸೃಷ್ಟಿಯ ಆರಂಭಕಾಲದಲ್ಲಿ ಎಲ್ಲೆಲ್ಲಿಯೂ ನೀರೇ ನೀರು ಇದ್ದಾಗ ಕಿತ್ತುಂಗ ದೇವಿ ಮತ್ತಾಕೆಯ ಸಹೋದರಿ ಒಂದು ಪಡುವಲಕಾಯಿಯ ಸೋರೆಯೊಳಗೆ ವಾಸಿಸುತಿದ್ದರು ನೀರಿಳಿದಾಗ ಅವರೂ ಹೊರಬಂದು ಪರ್ವತ ಪ್ರದೇಶಕ್ಕೆ ಹೊರಟುಹೋದರು ಆ ಕಾಲದಲ್ಲಿ ಪ್ರಪಂಚದಲ್ಲಿ ಮರಗಳಿಲ್ಲದ್ದರಿಂದ ವಿಶಾಲ ಆಕಾಶದಡಿಯಲ್ಲಿಯೇ ಅವರು ಮಲಗಬೇಕಾಯಿತು ಒಂದು ರಾತ್ರಿ ಅವರು ಮಲಗಿರುವಾಗ ಯಾರೋ ಕಿತ್ತುಂಗಳ ಕೈಯ ನಾಲ್ಕು ಬೆರಳುಗಳನ್ನು ಕತ್ತರಿಸಿ ಹಾಕಿದರು. ನಡುಬೆರಳು ಮಾತ್ರ ಉಳಿದಿತ್ತು. ನೋವಿನಿಂದ ಕಂಗೆಟ್ಟ ಕಿತ್ತುಂಗಳು ಎಚ್ಚರಗೊಂಡು ಕೂಗಿದಳು, ಗ್ರೀಷ್ಮಋತು ಬಂದೊಡನೆಯೇ ಸಹೋದರಿ ಹೇಳಿದಳು —"ಈ ಬಿಸಿಲಿನಲ್ಲಿ ಎಂತು ಜೀವಿಸಲಿ? ಇಲ್ಲಿ ನೆರಳು ಸಹ ಇರುವುದಿಲ್ಲ" ಸಹೋದರಿಯ ಪೀಡೆಯಿಂದ ದಯಾರ್ದ್ರಗೊಂಡು ಕಿತ್ತುಂಗಳು ತನ್ನ ಮೋಟು ಕೈಯನ್ನು ತುಂಡರಿಸಿದಳು ಅದು ಆ ಕ್ಷಣದಲ್ಲಿಯೇ ಬೆಳೆದು ಮರವಾಯಿತು. ನೆರಳನ್ನೂ ಕೊಟ್ಟಿತು ಇದೇ ಅಶ್ವತ್ಥದ ಮರ. ಇದರ ಪ್ರತಿ ಎಲೆಯ ನಡುವೆ ಒಂದು ಬೆರಳು ಇರುತ್ತದೆ.

ಇದೇ ರೀತಿ ಮುಳ್ಳುಗಳ ಉತ್ಪತ್ತಿಯನ್ನು ವರ್ಣಿಸುವ ಕೆಲವಾರು ರೋಚಕ ಪೌರಾಣಿಕ ಕಥೆಗಳಿವೆ. ರಾಜನ ಮೇಲೆ ಕುಪಿತನಾದ ದಾನವನೊಬ್ಬ ಶಕ್ತಿಯನ್ನರಸುತ್ತ ತನ್ನ ಹಲ್ಲನ್ನು ಕಿತ್ತು ಒಂದು ಮರಕ್ಕೆ ನಾಟಿಸಿ, ಆದರ ಮೇಲೇರಿ ಕೂತ ಕೊಳ್ಳುತ್ತಾನೆ ಅಷ್ಟರಲ್ಲಿಯೇ ಒಬ್ಬಾಕೆ ಹುಡುಗಿ ತನ್ನ ಪತಿಯೊಡನೆ ಹಣ್ಣುತರ ಹೇಳುತ್ತಾಳೆ ಆದರೆ ಮರ ಆತಿ ಎತ್ತರವಿದ್ದುದರಿಂದ ಆತ ತನ್ನ ವೀರಬಳೆಯನ್ನು ತುಂಡರಿಸಿ ಮರಕ್ಕೆ ಹೊಡೆಯುತ್ತಾನೆ. ಕಾಲಕ್ರಮದಲ್ಲಿ ಈ ಹಲ್ಲು ಮತ್ತು ಬಳೆಯ ತುಂಡುಗಳು ಬೆಳೆದು ಮುಳ್ಳುಗಳಾದುವು ಹೀಗೆ ಮುಳ್ಳಿನ ಮರಗಳು ನಿರ್ಮಾಣಗೊಂಡುವು

ವನಸ್ಪತಿ ಶಾಸ್ತ್ರದ ದೃಷ್ಟಿಯಲ್ಲಿ ಇವೆಲ್ಲ ಕೇವಲ ಕಥೆಗಳು ಮಾತ್ರ ಆದರೆ, ಆದಿವಾಸಿ ಸಂಸ್ಕೃತಿಯ ವಿದ್ಯಾರ್ಥಿಗೆ ಜನಪದ ಕಥೆಗಳೆಂದರೂ ಒಂದು ಮಹಾ ಕಾವ್ಯಕ್ಕೆ ಸಮಾನವಾಗಿವೆ ಅವರ ಬೇರುಗಳು ಎತ್ತ ಹರಿಯುತ್ತದೆ, ಅವರ ಕಲ್ಪನೆ ಯಾವರೀತಿ ಮುಂದುವರಿಯುತ್ತವೆ ಎಂಬುವನ್ನಿವು ಸೂಚಿಸುತ್ತವೆ.

(ವಿವಿಧ ಮೂಲಗಳಿಂದ)

— ಗೋರಾ



ಅಮೆರಿಕೆಯ ರಕ್ಷಣಾ ವಿಭಾಗದ ನೂತನ ಮಾದರಿಯ ವಿಮಾನಗಳು.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಧಿಯವರು ಭಾರತೀಯ ಜನತೆಗೆ ಕರೆಯಿತ್ತರು.

ತದನಂತರ ಮಣಿಪಾಲದಲ್ಲಿ ಕಟ್ಟಲಿರುವ ಆಸ್ಪತ್ರೆಗಾಗಿ ಒಂದು ಲಕ್ಷ ರೂಪಾಯಿಗಳನ್ನು ದಾನವಿತ್ತ ಶ್ರೀ ಸೋದೆ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಮಾತನಾಡಿ ಆರೋಗ್ಯವೇ ಭಾಗ್ಯವಾದುದರಿಂದ ಇಂತಹ ಆಸ್ಪತ್ರೆಗಳ ನಿರ್ಮಾಣ ಅವಶ್ಯವೆಂದು ಅಭಿಪ್ರಾಯಪಟ್ಟರು ಮುಖ್ಯಾಮಣಿಯಾದ ಜನಸೇವಾತತ್ಪರೆಯಾದ ಶ್ರೀಮತಿ ಇಂದಿರಾ ಗಾಂಧಿಯವರು ಆ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ಮಾಡುವುದು ನ್ಯಾಯೋಚಿತವೆಂದವರು ವ್ಯಕ್ತಪಡಿಸಿದರು

ಶ್ರೀಮತಿ ಗಾಂಧಿಯವರು ಅಲ್ಲಿಂದ ಶ್ರೀಕೃಷ್ಣ ಮಠವನ್ನು ಸಂದರ್ಶಿಸಿ ಅಲ್ಲಿ ತನಗಿತ್ತ ಅಭಿನಂದನಾಪತ್ರವನ್ನು ಸ್ವೀಕರಿಸಿ ಕರಾವಳಿ ಮಾರ್ಗವಾಗಿ ಮಂಗಳೂರಿಗೆ ತೆರಳಿದರು ಅವರು ತೆರೆದ ಮೋಟಾರು ಕಾರಿನಲ್ಲಿ ನಿಧಾನವಾಗಿ ಬರುತ್ತಿರುವಾಗ ಮಾರ್ಗದ ಇಕ್ಕಡೆಗಳಲ್ಲಿ ಜನಸ್ತೋಮವು ಜಯಕಾರದೊಂದಿಗೆ ಸ್ವಾಗತಿಸಿತು. ಅಲ್ಲಲ್ಲಿ ಅವರಿಗೆ ಹಾರಗಳನ್ನೂ ಅರ್ಪಿಸಲಾಗುತಿತ್ತು. ಶ್ರೀಮತಿಯವರೊಡನೆ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಚ್ ಕೆ ವೀರಣ್ಣ ಗೌಡರೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಕೆ. ಶೆಟ್ಟರೂ ಇದ್ದರು ಶ್ರೀಮತಿ ಗಾಂಧಿಯವರು ಪ್ರಯಾಣಿಸಿದ ದಾರಿಯನ್ನು ತಳಿರುತೋರಣಗಳಿಂದ ಅಲಂಕರಿಸಲಾಗಿತ್ತು ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲೂ ಅತ್ಯಧಿಕ ಜನರು ನೆರೆದಿದ್ದು ಶ್ರೀಮತಿಯವರನ್ನು ಸ್ವಾಗತಿಸಿದ್ದರು.

— —

ಆಭರಣಗಳ ಏಲಂ

ಕೊಲ್ಲೂರು, ಶ್ರೀ ಮೂಕಾಂಬಿಕಾ ದೇವಸ್ಥಾನದ ಕೆಲವು ಬಂಗಾರದ ಆಭರಣಗಳನ್ನು ತಾರೀಕು 1[illegible]-12-1959 ರಂದು ಬೆಳಿಗ್ಗೆ ಘಂಟೆ 8ರಿಂದ ಸಂಜೆ ಘಂಟೆ 5ರ ತನ್ಮಧ್ಯೆ ಕುಂದಾಪುರ ಟ್ರಾವಲರ್ಸ್ ಬಂಗ್ಲೆಯಲ್ಲಿ, ಮಂಗಳೂರು H R. & C E ಡಿಪಾರ್ಟ್‌ಮೆಂಟಿನ ಅಸಿಸ್ಟೆಂಟ್ ಕಮಿಶನರ ಸಮಕ್ಷಮ ಏಲಂ ಮಾಡಲಾಗುವುದು ಏಲಮ್ಮಿನ ಶರ್ತಗಳ ಬಗ್ಗೆ ಸದ್ರಿ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರಿಗೆ ಬರೆದು ತಿಳಿಯಬಹುದು.

(Sd.) B. Narayana Shetty,
Executive Officer

Dated 26—11—59

ಹೊಸ ಪುಸ್ತಕ

ಅಮೇರಿಕದ ಆರು ಮುಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು,
ಕು. ಶಿ ಹರಿದಾಸ ಭಟ್ಟ, ಎಂ ಎ

ಪ್ರಕಾಶಕರು
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ ರೂ. 1=75, ಬಿಳಿ ಕಾಗದ
ರೂ.2ನ್ನು M O ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು;
ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ನಿಮ್ಮ ಆಯ್ಕೆ

ಯಾವುದು? ? ಯಾವುದು?

ಸಿಂಡಿಕೇಟ್ ಬೇಂಕ್

ಯಾಕೆ? ? ಯಾಕೆ?

ಉತ್ತಮ ಬೇಂಕಿಂಗ್ ಸೌಲಭ್ಯಗಳಿಗೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

ಪ್ರಧಾನ ಕಾರ್ಯಾಲಯ ಉಡುಪಿ, ಮೈಸೂರು ರಾಜ್ಯ
ದಕ್ಷಿಣ ಭಾರತದಾದ್ಯಂತ ಒಟ್ಟು ಶಾಖೆಗಳು 129

Edited, Printed & Published by K. H Shetty, at the Navayuga Press, Udipi, S. India.

ವಾ. ಚಂದಾ ರೂ. 5-75

ಬೆಲೆ: 13 ನ.ಪೈಸೆ

Vol. 39 No. 15.
ವರುಷ ೩೯. ವಾರ ೧೫.

10-12-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಪ್ರಚಲಿತ ಪ್ರಸಂಗ

ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಬೇಕು

ಏರುತ್ತಿರುವ ಜೀವನ ಮಟ್ಟಕ್ಕೆ ಅಧಿಕೋತ್ಪಾದನೆಯೇ ಕಾರಣವಾಗ ಬಹುದಲ್ಲದೆ ಅಧಿಕ ವೇತನದಿಂದ ಸಮಸ್ಯೆ ಬಗೆಹರಿಯದು

ಕೇಂದ್ರ ಸರಕಾರದ ನೌಕರರ ವೇತನ ಸ್ತರವನ್ನು ಪರಿಶೀಲಿಸಲು ನೇಮಿಸಿದ್ದ ಸಮಿತಿಯ ಶಿಫಾರಸುಗಳಲ್ಲಿ ಹೆಚ್ಚಿನವನ್ನು ಸರಕಾರವು ಅಂಗೀಕರಿಸಿಕೊಂಡಿರುವುದು ಇದರಿಂದಾಗಿ ಕೇಂದ್ರ ಸರಕಾರದ ನೌಕರರ ಕನಿಷ್ಠ ವೇತನವನ್ನು ೮೦ ರೂಪಾಯಿಗಳೆಂದು ಪರಿಗಣಿಸಲಾಗುವುದು ಇತ್ತೀಚಿಗಿನ ದಿನಗಳಲ್ಲಿ ಪ್ರಜಾಜನರ ಜೀವನ ವೆಚ್ಚವು ದಿನೇದಿನೇ ಹೆಚ್ಚುತ್ತಿರುವುದು ಕಣ್ಣಿಗೆ ತೋರುವ ಸಂಗತಿ ಜೀವನಕ್ಕೆ ಅವಶ್ಯಕವಾದ ಎಲ್ಲ ಪದಾರ್ಥಗಳ ಬೆಲೆಯೂ ಏರುತ್ತಿರುವುದರಿಂದ ನೌಕರರ ವೇತನದಲ್ಲಿ ಅದೆಷ್ಟು ಏರಿಕೆಯಾದರೂ ವೆಚ್ಚದ ಬಾಯಿಕೂಡಿಸುವುದು ಪ್ರಯಾಸವಾಗಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ

ಜೀವನದ ವೆಚ್ಚವು ಏರುವುದಕ್ಕೆ ಕಾರಣ ಪದಾರ್ಥಗಳ ಬೆಲೆಯ ಹೆಚ್ಚಳವೆಂಬುದು ನಿಸ್ಸಂಶಯವೇ ಆದರೆ, ಇತ್ತೀಚೆಗೆ ಆಹಾರ ಪದಾರ್ಥಗಳ ಬೆಲೆಯೇರಿಕೆಗೆ ಕಾರಣ, ಜನರಲ್ಲಿ ಕೊಳ್ಳುವ ಶಕ್ತಿ ಹಿಂದಿಗಿಂತ ಹೆಚ್ಚಾದುದೆಂದು ಓರ್ವ ಮಂತ್ರಿ ಮಹಾಶಯರು ಉದ್ಗರಿಸಿದ್ದಾರೆ. ಆಹಾರ ಸಮಸ್ಯೆಯನ್ನು ದೂರೀಕರಿಸುವ ಸಲುವಾಗಿ ಕೋಳಿ, ಮೀನು ಮೊದಲಾದುವುಗಳನ್ನು ತಿನ್ನಬೇಕೆಂದು ನಮ್ಮ ರಾಜ್ಯಮಂತ್ರಿಯೊಬ್ಬರು ಸಲಹೆಯಿತ್ತಿದ್ದಾರೆ. ಜನಸಂಖ್ಯೆಯನ್ನು ಏರದಂತೆ ನೋಡಲು ಜನನ ನಿಯಂತ್ರಣದ ಪ್ರಚಾರ ಸಾಗುತ್ತಿದೆಯಷ್ಟೆ? ಆದರೆ, ಇವೆಲ್ಲವುಗಳಿಂದ ನಿಯೋಜಿತ ಪ್ರತಿಫಲದೊರೆಯುವುದು ಸಾಧ್ಯವೇ ಎಂಬುದನ್ನು ಈಗ ಹೇಳುವುದು ಸಾಧ್ಯವಿಲ್ಲ ಮಂತ್ರಿಗಳ ಮಾತುಗಳಲ್ಲಿ ಸತ್ಯಾಂಶವೆಷ್ಟೆಂದು ತಿಳಿಯುವುದೂ ಕಷ್ಟವೇ. ಜೀವನ ಮಟ್ಟ ಏರಿದುದರಿಂದ ಬೆಲೆ ಹೆಚ್ಚಾಯಿತೇ ಅಥವಾ ಬೆಲೆ ಹೆಚ್ಚಾದುದರಿಂದಲೇ ಜೀವನಸ್ತರ ಏರಿತೆ ಎಂಬುದು ಒಗಟಾಗಿದ್ದರೂ ಸಾಮಾನ್ಯವಾಗಿ, ಬೇಡಿಕೆಗೆ ಸರಿಯಾಗಿ ಉತ್ಪಾದನೆಯ ಅಭಾವವೇ ಬೆಲೆಯೇರುವುದಕ್ಕೂ ಬೆಲೆಯೇರಿದುದೇ ಜೀವನ ವೆಚ್ಚದ ಹೆಚ್ಚಳಕ್ಕೂ ಮುಖ್ಯ ಕಾರಣವೆಂದು ಯಾರಾದರೂ ಹೇಳಬಹುದು.

ಉದಾಹರಣೆಗಾಗಿ ಸದ್ಯ ಕಾಣಿಸುತ್ತಿರುವ ಸಕ್ಕರೆಯ ಅಭಾವವನ್ನೇ ಎತ್ತಿಕೊಂಡರೆ, ಈ "ಅಭಾವ"ವೆಂಬುದರಿಂದಲೇ ಕಳ್ಳ ಮಾರುಕಟ್ಟೆಗೆ ಪ್ರೋತ್ಸಾಹಕೊಟ್ಟಂತಾಗಿದೆ. ಇದರಿಂದಾಗಿ ಸಕ್ಕರೆಯು ಬೆಲೆ ಹಿಂದಿನ ಬಾಗಿಲಿಂದ ಏರಿದೆ; ಮುಂದಿನ ಬಾಗಿಲಿನಲ್ಲಿ ದೊರೆಯುವ ಸಕ್ಕರೆ ಏನೇನೂ ಸಾಲದಾಗಿದೆ ಆಗ ಅನಿವಾರ್ಯವಾಗಿ ಹೆಚ್ಚು ಬೆಲೆ ತೆತ್ತಾದರೂ ಸಕ್ಕರೆಯ ಆವಶ್ಯಕತೆ ಉಳ್ಳವರು ಕೊಂಡುಕೊಳ್ಳುತ್ತಾರೆ, ಆದರೆ ಮಾರ್ಗ ಯಾವುದೆಂದು ಹೆಚ್ಚು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಹಾಗಾದರೆ, ಸಕ್ಕರೆಯ ಅಭಾವಕ್ಕೆ ಹೆಚ್ಚು ಹೆಚ್ಚು ಜನರು ಸಕ್ಕರೆ ಕೊಳ್ಳುವ ಶಕ್ತಿಸಂಪನ್ನರಾಗಿದ್ದಾರೆ ಎಂದು ಹೇಳಿದರೆ, ಈ ಮಾತಿನಲ್ಲಿ ವಿಶ್ವಾಸವಿಡುವುದು ಪ್ರಯಾಸವೇ. ಏಕೆಂದರೆ ಹೆಚ್ಚು ಬೆಲೆ ಕೊಟ್ಟರೆ ಸಕ್ಕರೆ ಇಲ್ಲದೆ ಇಲ್ಲ ಜೀವನ ವೆಚ್ಚವು ದಿನೇದಿನೇ ಏರುವುದಕ್ಕೆ ಹಣದುಬ್ಬರವು ಒಂದು ಕಾರಣವಾದರೆ, ಉತ್ಪಾದನೆ ಬೇಡಿಕೆಗಳ ನಡುವೆ ಸಮತೋಲನೆಯಿಲ್ಲದಿರುವುದೂ ಪ್ರಬಲ ಕಾರಣವೆನಿಸಿವೆಯೆಂಬುದು ನಿರ್ವಿವಾದ



ಅಮೆರಿಕೆಯ ಸುವಿಖ್ಯಾತ ಹಾಡುಗಾರ್ತಿ ಮೇರಿಯನ್ ಆ್ಯಂಡರ್‌ಸನ್‌ರವರಿಗೆ ಗೌ। ಡಾಕ್ಟರೇಟ್ ಪದವಿಯನ್ನಿತ್ತು ಮೋರ್ಗನ್ ಸ್ಟೇಟ್ ಕಾಲೇಜು ಗೌರವಿಸಿತು. ಎಡಗಡೆಯಲ್ಲಿ ಆ್ಯಂಡರ್‌ಸನ್‌ರವರನ್ನೂ ಬಲಗಡೆಯಲ್ಲಿ ಕಾಲೇಜಿನ ಅಧ್ಯಕ್ಷ ಮಾರ್ಟಿನ್ ಡಿ. ಜಂಕಿನ್ಸರನ್ನೂ ಕಾಣಬಹುದು

ವೇತನವನ್ನು ಜೀವನ ವೆಚ್ಚವನ್ನನುಸರಿಸಿ ನೀಡುವುದು ಅಸಮಂಜಸವೆನ್ನಬಾರದು; ಅದು ನ್ಯಾಯೋಚಿತವೇ ಆದರೆ, ವೇತನವನ್ನು ಏರಿಸಿದೊಡನೆಯೇ ನೌಕರರ ದುಃಖ ಅಥವಾ ಕಷ್ಟ ದೂರವಾಯಿತೆಂದು ಇಂದು ಹೇಳುವಂತಿಲ್ಲ ಪ್ರತಿಯೊಂದು ವಿಷಯದಲ್ಲಿಯೂ ಭಾರತವು ಪರಾವಲಂಬಿಯಾಗಿರುವಷ್ಟು ಸಮಯ ಜೀವನಾವಶ್ಯಕ ಪದಾರ್ಥಗಳ ಬಗ್ಗೆ ರಾಷ್ಟ್ರವು ಕೊರತೆಯ ರಾಷ್ಟ್ರವಾಗಿರುವಷ್ಟು ಕಾಲ, ಆಯಾತದ ನಿಯಮಗಳು ಬಿಗಿಯಾಗಿರುವಷ್ಟು ಹೊತ್ತು ಜೀವನ ಮಟ್ಟವು ಏರುತ್ತಲೇ ಹೋಗುವುದು. ಜೀವನದ ವೆಚ್ಚವನ್ನು ಕಡಿಮೆಮಾಡುವುದಂತೂ ದೂರವಿರಲಿ, ಅದನ್ನು ಸ್ಥಿಮಿತದಲ್ಲಿರಿಸುವುದಕ್ಕೆ ಸ್ವದೇಶದ ಉತ್ಪಾದನೆಯನ್ನು ಹೆಚ್ಚಿಸುವುದೇ ಮೊದಲ ಹೆಜ್ಜೆಯಾಗಿದೆ. ಒಟ್ಟು ಭಾರತೀಯನ ಆದಾಯದಲ್ಲಿ ಬಹ್ವಂಶ ಆಹಾರಕ್ಕಾಗಿಯೇ ವಿನಿಯೋಗವಾಗುವುದರಿಂದ, ಆಹಾರ ಪದಾರ್ಥಗಳ ಬಗ್ಗೆ ಸ್ವಾವಲಂಬನೆಯನ್ನು ನಾವು ಸಾಧಿಸಿಕೊಂಡರೆ, ಅದರಿಂದ ಜೀವನ ವೆಚ್ಚವು ಏರುವುದು ನಿಧಾನವಾಗಬಹುದೆಂದು ಹೇಳಬಹುದು.

ಭಾರತವು ಮೊದಲೇ ಕೊರತೆ ಧನವನ್ನು ವಿನಿಯೋಗಿಸುತ್ತಿರುವ ರಾಷ್ಟ್ರ. ನಮ್ಮ ರೂಪಾಯಿಯ ಮೌಲ್ಯವೂ ಮೊದಲಿನಷ್ಟು ಭದ್ರವಾಗಿಲ್ಲವೆಂದು ಹೇಳಲಾಗುತ್ತಿದೆ. ಹಾಗಿರುವಾಗ, ವೆಚ್ಚದ ಬಾಬ್ತುಗಳನ್ನು ನಾವು ಇನ್ನೂ ಇನ್ನೂ ಏರಿಸುತ್ತ ಹೋಗುವಾಗ ಅವಶ್ಯವಾ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ - ಮಂಗಳೂರು—3.
ಸ್ಥಾಪನೆ - 1931

ಕಾಯಂ ಠೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	$4\frac{1}{4}\%$
6	,,	12	,,	$4\frac{1}{2}\%$
13	,,	24	,,	$4\frac{3}{4}\%$

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ $\frac{1}{4}\%$ ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ..

ಕಥಾ ವಿಹಾರ

ಅವಳ ಎರಡು ಪತ್ರಗಳು

ಹೆಣ್ಣನ್ನು ಗೋಳುಹೊಡಿಸುವುದರಲ್ಲಿಯೇ ಆತ್ಮಾನಂದವನ್ನು ಪಡೆಯುವ ಗಂಡಿನಿದಿರು ತಲೆತಗ್ಗಿಸಿಯೂ ನಿಲ್ಲುವುದು ಅಸಾಧ್ಯ. ಗಂಡು-ಹೆಣ್ಣುಗಳ ಸಾಮಾಜಿಕ ನಿಯಮಗಳಿಂದ ಹೆಣ್ಣಿಗೆ ಅನ್ಯಾಯವಾಗುತ್ತಿದೆ.

(ಕಳೆದ ಸಂಚಿಕೆಯಿಂದ ಮುಂಬರಿದುದು)

ನೀನು ಬಂದವನು ನನ್ನ ಅಳುವಿನ ಕಾರಣ ವಿಚಾರಿಸಿದೆಯಷ್ಟೆ. ಆಗ ನಾನು ನನ್ನ ಅಗಲಿದ ತಮ್ಮನ ನೆನಪಾಯಿತೆಂದು ಸುಳ್ಳುಹೇಳಿ ಬಿಟ್ಟೆ. ಅಷ್ಟು ಕೇಳಿ ನೀನು ಹೊರಹೋದೆ. ನೀನು ಮನೆಗೆಂದು ಹೊರಟವನು ಮನೆಗೆ ಹೋಗದೇ ಮರಳಿದೆಯೇಕೆಂದು ನಾನು ವಿಚಾರಿಸಲಿಲ್ಲ. ಆದರೆ ನೀನಾಗಿಯೇ ನನಗೆ ಮರುದಿನ ಹೇಳಿದೆಯೆಂದು ನೆನಪಿದೆ—'ಮಹಾ ಶಿವರಾತ್ರಿಯ ಗೋಕರ್ಣ ಯಾತ್ರಾರ್ಥಿಗಳು ಹಿಂತಿರುಗುತ್ತಿರುವುದರಿಂದ ಕೊನೆಯ ಬಸ್ಸಿನ ತನಕ ಕಾದರೂ ಜಾಗ ಸಿಗಲಿಲ್ಲ'ವೆಂದು. ಅದು ಹೇಗೂ ಇರಲಿ. ನನ್ನ ಗೋಳಿನೆಡೆಗೆ ಕನಿಕರಿಸಿ ದೇವರೇ ನಿನ್ನನ್ನು ಕಳುಹಿಸಿರಬಹುದೆಂದು ನಾನು ನಂಬುತ್ತೇನೆ.

ಈ ಘಟನೆಯಿಂದ ನನ್ನ ಮನಸ್ಸು ಬಲವಾದ ಆಘಾತ ಹೊಂದಿತೆಂದು ಬರೆದೆನಷ್ಟೆ. ಹೌದು—ನನ್ನ ಧ್ಯೇಯಪೂರಿತ ಜೀವನದಲ್ಲಿ ಇಂತಹದೊಂದು ದುರ್ಘಟನೆಯನ್ನು ನಾನು ನಿರೀಕ್ಷಿಸಿರಲಿಲ್ಲ ಅದರ ನಂತರ ನನ್ನ ಪರೀಕ್ಷೆಯ ತಯಾರಿ ಸಾಗಲಿಲ್ಲ. ಪುಸ್ತಕ ಹಿಡಿದು ಕುಳಿತರೆ ಕಣ್ಣಿಗೆ ಅಕ್ಷರಗಳೇ ಕಾಣಿಸುತ್ತಿರಲಿಲ್ಲ. ಬದಲಾಗಿ, ನಾನು ಸಾಗಿಬಂದ ಪವಿತ್ರವಾದ ದಾರಿಯಲ್ಲಿ ನನ್ನನ್ನು ಕದಲಿಸಲೆಂದು ಯಾರೋ ಹಾರಿಸಿದ ಕೋವಿಯ ಗುಂಡು....

....ಆ ಗುಂಡು ನನ್ನನ್ನು ಸೋಂಕದೇ ಹಾರಿ ಹೋಯಿತಾದರೂ 'ಅದು ನನ್ನನ್ನು ತಗಲಿದ್ದರೆ?... ಅದರ ಪರಿಣಾಮ?...'

ಆ ಕಂಟಕವೆಂದೋ ಪಾರಾಗಿ ಹೋಗಿದ್ದರೂ ಆ ಯೋಚನೆ ಈಗಲೂ ಆಗಾಗ ನನ್ನನ್ನು ಕಾಡುತ್ತಲೇ ಇದೆ. ಆ ಯೋಚನೆ ಬಂದಾಗಲೆಲ್ಲ ನನ್ನ ಮೈ 'ಝುಂ' ಎನ್ನುತ್ತಿದೆ. ನಾನೀಗ ಜೀವನದಲ್ಲಿ ಸಾಗಿಬಂದ ದೂರ ಅತಿ ಚಿಕ್ಕದು; ಸಾಧಿಸಿದ ಕಾರ್ಯ—ಸೊನ್ನೆ. ನಾನು ಸಾಧಿಸಬೇಕೆಂದಿರುವುದು ಬಹಳವಿವೆ; ನನ್ನ ಬದುಕಿನ ಅವಧಿ ಕಳೆದುದರ ಮುಮ್ಮಡಿಯಾದರೂ ಇದ್ದೀತು. ಈ ಚಿಕ್ಕ ಅವಧಿಯಲ್ಲಿಯೇ ನಾನು ಅನುಭವಿಸಬೇಕಾಗಿ ಬಂದ ದುರಂತಗಳೆಷ್ಟು? ಆ ದೀರ್ಘಾವಧಿಯಲ್ಲಿ ಇನ್ನು ಇದಿರಿಸಬೇಕಾದುದೆಷ್ಟು!

ಈ ಪ್ರಶ್ನೆಯಿಂದ ನಾನು ನಿರಾಶಾವಾದಿಯಾದೆನೆಂದು ಎಣಿಸಬೇಡ. ನಾನೀಗಲೂ ಆಶಾವಾದಿಯಾಗಿಯೇ ಇದ್ದೇನೆ. ಭವಿಷ್ಯತ್ತಿನಲ್ಲಿಯ ಸುಖದ ಭರವಸೆಯನ್ನು ನಾನಿನ್ನೂ ಬಿಟ್ಟುಕೊಟ್ಟಿಲ್ಲ; ಅದರಿಂದಲೇ ನಾನು ಇನ್ನೂ ಜೀವಿಸಿದ್ದೇನೆ!

ನಾನು ಪರೀಕ್ಷೆಯಲ್ಲಿ ಅಷ್ಟು ಉತ್ತಮವಾಗಿ ಮಾಡಿಲ್ಲವೆಂದು ಮೊದಲೇ ಬರೆದಿದ್ದೆನಷ್ಟೆ. ಅಷ್ಟು ಉತ್ತಮವಲ್ಲವೆಂದರೆ—ತೇರ್ಗಡೆಯಾಗುವ ಭರವಸೆಯಿಲ್ಲವೆಂದರ್ಥ. ಅದು ಹೇಗಿದ್ದರೂ ನನ್ನ ಶಾಂತಿವೃತ್ತದ ಪರೀಕ್ಷೆಯಲ್ಲಿ ನಾನು ತೇರ್ಗಡೆಯಾದೆನಲ್ಲಾ ಎಂಬುದೇ ನನಗೆ ಆತ್ಮಶಾಂತಿಯಿತ್ತಿದೆ.

ಬರೆಯುತ್ತ ಸಾಗಿದರೆ ಮುಗಿಯದ ಕತೆ ನನ್ನದು. ಈಗ ಆ ಹೊಲಸು ವಾತಾವರಣದಿಂದ ದೂರವಾಗಿ ಉಳಿದಿದ್ದೇನೆ. ಇಲ್ಲಿ, ಅಲ್ಲಿ ಕಳೆದ ದಿನಗಳ ವಿಚಾರಗಳು ಮಾತ್ರ ಮನಸ್ಸನ್ನು ಆಗಾಗ ಕಾಡುತ್ತಿವೆಯಲ್ಲದೇ, ಬೇರೆ ತೊಂದರೆಗಳಿಲ್ಲವಾದುದರಿಂದ ಈಗಿನದು ಒಂದು ತರದ ಸುಖ ಜೀವನವೇ ಸರಿ.

ನೀನು ಮೊದಲಿನಿಂದಲೂ ನನ್ನಲ್ಲಿ ಸೋದರೀ ಭಾವವನ್ನು ತಳೆದಿದ್ದೆ. ನಿನ್ನಲ್ಲಿ ನಾನೆಂದೂ ದುರ್ವರ್ತನೆಯ ಛಾಯೆಯನ್ನೂ ಕಂಡುದಿಲ್ಲ. ಎಲ್ಲಕ್ಕೂ ಮಿಗಿಲಾಗಿ 'ಅಂದು' ನಿನ್ನಿಂದ ನಾನು ಹೊಂದಿದ ಮಹೋಪಕಾರವನ್ನು ನಾನೆಂದೂ ಮರೆಯಲಾರೆ—ಹಾಗೆ ನಿನ್ನನ್ನೂ ಮರೆಯಲಾರೆ. ನೀನು ಪ್ರಾಯಶಃ ನನ್ನ ಹಿಂದಿನ ಜನ್ಮದಲ್ಲಿ—ಜನ್ಮಗಳೆಂಬುದು ಸತ್ಯವಾದರೆ—ನನ್ನ ತಮ್ಮನಾಗಿ ಜನಿಸಿದ್ದಿರಬೇಕು. ಆದರ ಋಣ ಇಂದು ತೀರಿಸಿದೆ—ನಿನ್ನಿಂದ ಹೊಂದಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡಲು ಅಸಹಾಯಳಾದ್ದರಿಂದ ಹಾಗೆ ತಿಳಿದುಬಿಟ್ಟರಾಯಿತು. 'ಅಂದು' ನಡೆದ ಕತೆ ಮತ್ತು ನನ್ನ ನೈಜ ಜೀವನದ ಬಗೆಗೆ ನಿನಗೆ ತಿಳಿಸದೇ ನಾನೊಂದು ತಪ್ಪು ಮಾಡಿದೆನೆಂದು ನನಗೆ ಕಂಡು ಬಂತು. ಆದಕ್ಕಾಗಿ ಎಲ್ಲವನ್ನೂ ನಿನ್ನೆದುರು ತೋಡಿಕೊಂಡು ಬಿಟ್ಟೆ. ಈಗ ನನ್ನ ಹೃದಯವೆಷ್ಟೋ ಹಗುರಾಗಿದೆ.

ನಾನೀಗ ಹಗಲು ಹೊತ್ತಿನಲ್ಲಿ ತಾಯಿಯ ಮನೆಗೆಲಸಗಳಲ್ಲಿ ನೆರವಾಗುತ್ತಿದ್ದೇನೆ. ಸಮಯ ದೊರೆತಾಗ ಕಸೂತಿ, ಕೈಗೆಲಸಗಳನ್ನು ಮಾಡುತ್ತಿದ್ದೇನೆ. ರಾತ್ರಿ ತಮ್ಮನಿಗೆ ಪಾಠ ಹೇಳಿ ಕೊಡುವೆ; ಅವನ ಮುನ್ನಡೆಗಾಗಿ ಅವಶ್ಯವಿದ್ದ ತರಬೇತಿಯನ್ನೂ ಕೊಡುತ್ತಿದ್ದೇನೆ. ಇವೆಲ್ಲವುಗಳ ಮಧ್ಯೆ ಅಂತೂ ನನ್ನ ಜೀವನ ಪ್ರಕೃತಕ್ಕೆ ಸುಗಮವಾಗಿದೆಯೆನ್ನಬಹುದು. ನಿನಗೆ ನಿನ್ನ ಹಳ್ಳಿಯ ಸಂಗಾತಿಗಳೊಂದಿಗೆ ಹೊತ್ತು ಹೋದುದೇ ಗೊತ್ತಾಗಲಿಕ್ಕಿಲ್ಲ. ಅಥವಾ ಹುಚ್ಚು ಹುಚ್ಚಾಗಿ ಕತೆಯನ್ನೋ, ಕವಿತೆಯನ್ನೊ ಗೀಚುತ್ತ ಹೊತ್ತು ಕಳೆಯುತ್ತಿರಬಹುದಲ್ಲವೇ? ಪರೀಕ್ಷೆಯ ಫಲಿತಾಂಶ ಬರುವುದೇ ತಡ; ನೀನು ಕಾಲೇಜು ಸೇರಬಹುದಲ್ಲವೇ? ಕಾಲೇಜು ಸೇರಿದ ನಂತರ—ಹೊಸ ಊರು, ಹೊಸ ಮಿತ್ರಕೂಟ ಸಿಕ್ಕಿದ್ದು ನನ್ನನ್ನು ಮರೆತು ಬಿಡಬೇಡ ಮಾರಾಯಾ!

ಮತ್ತೇನು ಬರೆಯಲಿ? ನಿನ್ನಿಂದ ಆಗಾಗ ಪತ್ರ ನಿರೀಕ್ಷಿಸುತ್ತಿರಬಹುದಲ್ಲವೇ?

ಇತಿ ನಿನ್ನೋಲವಿನ ಅಕ್ಕ.

೦೦ ೦೦ ೦೦

ಒಲುಮೆಯ ಸೋದರಾ,

ನಿನ್ನ ಪತ್ರ ಅಂದೇ ತಲ್ಪಿತ್ತು. ಆದರೆ ನಾನು ಮತ್ತೊಮ್ಮೆ ಮಾಗದೊಂದು ಸಂಕಟದಲ್ಲಿ ಸಿಲುಕಿದೆನಾದ್ದರಿಂದ ಕೂಡಲೇ ಉತ್ತರಿಸಲಾಗಲಿಲ್ಲ. ಬೇಸರವಿಲ್ಲ ತಾನೇ? ನೀನೇನೋ ನನ್ನ ಹಿಂದಿನ ಪತ್ರ ಓದಿ ಸುಂದರನ ಮೇಲೆ ತುಂಬಾ ಸಿಟ್ಟುಗೊಂಡು ಬರೆದಿರುವಿ. ನನಗೆ ಆಗಲೇ ತಿಳಿಸಿದ್ದರೆ ಅವನಿಗೆ ತಕ್ಕ ಶಾಸ್ತಿಯನ್ನು ಮಾಡುತ್ತಿದ್ದೆಯಾಗಿ ಹೇಳಿರುವಿ. ಅಂತಹ ಶಾಸ್ತಿ" ಮಾಡುವುದಾದರೆ ಅದು ನನ್ನೊಬ್ಬಳಿಂದ ಸಾಧ್ಯವಿದ್ದಿತು. ಯಾವ ಕಾರಣದಿಂದ ನಾನು ಹಾಗೆ ಮಾಡಲಿಚ್ಛಿಸಲಿಲ್ಲವೆಂಬ ಕುರಿತು ನನ್ನ ಹಿಂದಿನ ಪತ್ರದಲ್ಲಿಯೇ ಬರೆದಿದ್ದೆನೆಂದು ಕಾಣುತ್ತವೆ. ಅದಿರಲಿ. ನೀನು ಬರೆದ ಮತ್ತೊಂದು ವಿಚಾರ ಓದಿ ನನಗೆ ತುಂಬಾ ಬೇಸರವಾಯಿತು. ನೀನು ಬರೆದಿರುವಿ—"ಸುಂದರನಿಗೆ ನನ್ನ ಕೋಣೆಯಲ್ಲಿ ಸ್ಥಾನ ಕೊಟ್ಟವನು ನಾನೇ. ಆತನ ಗುಣ ಅರಿಯದೇ ನಾನು ಅವನೊಂದಿಗೆ ಮಿತ್ರತ್ವ ಬೆಳಸಿದೆ. ನನ್ನಿಂದಾಗಿಯೇ ಸುಂದರನಿಗೆ ನಿನ್ನ ಪರಿಚಯವಾಯಿತು. ಹೀಗೆ ಆತನಿಂದ ನಿನಗೊದಗಿದ ಸಂಕಷ್ಟಗಳಿಗೆ ನಾನೇ ಕಾರಣ.... ಆ ಬಗ್ಗೆ ನನ್ನನ್ನು ಕ್ಷಮಿಸು...." ನಾನು ನಿನ್ನ ಬಗೆಗೆ ಕನಸು ಮನಸ್ಸಿನಲ್ಲಿ ಸಹ ಹಾಗೆಂದೂ ಎಣಿಸಿದುದಿಲ್ಲ. ನೀನು ಆ ರೀತಿ ಭಾವಿಸಿಕೊಂಡರೆ ನನಗೆ ತುಂಬಾ ದುಃಖವಾಗುತ್ತದೆ. ನಿನಗರಿವಿಲ್ಲದಂತೆ ನೀನು ಮಹೋಪಕಾರವೊಂದನ್ನು ಮಾಡಿರುವೆ. ಆದಕ್ಕಾಗಿ ನಾನು ಚಿರಕೃತಜ್ಞಳು. ನನ್ನ ಈ ಅವಧಿಯ ಜೀವನದಲ್ಲಿ ನಡೆದ ಮಹತ್ವಪೂರ್ಣ ಘಟನೆಯೊಂದರೆ ನಿನ್ನೊಡನೆ ನನ್ನ ಪರಿಚ

(೧೧ನೇ ಪುಟ ನೋಡಿರಿ)

ASP-LIC-AS-12 A KN

1959

ಬೋನಸ್ ವರ್ಷ

ಒಂದು ಲಾಭಸಹಿತ ಪಾಲಿಸಿಯನ್ನು ಈಗಲೇ ಪಡೆಯಿರಿ

ಎರಡನೇ ವೇಲ್ಯುವೇಶನ್ ಬೇಗನೆ ಆಗಲಿದೆ

ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನಿನ 31.12.1959 ರ ವರೆಗಿನ ಎರಡನೇ ವೇಲ್ಯುವೇಶನ್ ಬೇಗನೆ ಆಗಲಿದೆ. ಈ ವೇಲ್ಯುವೇಶನ್ ತಾರೀಕಿನಂದು ಜಾರಿಯಲ್ಲಿರುವ ಎಲ್ಲಾ ಯೋಗ್ಯ ಪಾಲಿಸಿಗಳಿಗೆ ವೇಲ್ಯುವೇಶನಿನ ಫಲವಾಗಿ ತೋರಿಬಂದ ಲಾಭದಲ್ಲಿ ಭಾಗವಹಿಸುವ ಹಕ್ಕು ಇರುತ್ತದೆ.

ಕಾರ್ಪೊರೇಷನಿನ 31.12.1957 ರ ವರೆಗಿನ ಪ್ರಥಮ ವೇಲ್ಯುವೇಶನಿನ ಫಲವಾಗಿ ಸಾಕಷ್ಟು ಲಾಭ ತೋರಿಬಂದಿದ್ದು, ಕಾರ್ಪೊರೇಷನ್ ಮಾರಾಟ ಮಾಡಿದ ಲಾಭಸಹಿತ ಪಾಲಿಸಿಗಳಿಗೆ ಕೆಳಗೆ ಕಾಣಿಸಿರುವ ದರದಲ್ಲಿ ಬೋನಸ್ ಪ್ರಕಟಿಸಲಾಗಿತ್ತು:

ಎಂಡೋಮೆಂಟ್ ಎಶುರನ್ಸ್ : ವಿಮಾ ಹಣ ರೂ. 1000 ದ ಮೇಲೆ ವರ್ಷಕ್ಕೆ ರೂ. 14

ಹೋಲ್ ಲೈಫ್ ಎಶುರನ್ಸ್ : ವಿಮಾ ಹಣ ರೂ. 1000 ದ ಮೇಲೆ ವರ್ಷಕ್ಕೆ ರೂ. 17½

ವಿಶೇಷ ಸೂಚನೆ: 31.12.1959 ರ ಮುಂಚೆ ಕಡಿಮೆ ಹಣಕ್ಕೆ ರೂಪಾಂತರಗೊಳಿಸಿದ ಪೈಡ್-ಅಪ್ ಪಾಲಿಸಿಗಳಿಗೆ ಮತ್ತು ಲ್ಯಾಪ್ಸ್ ಆದ ಪಾಲಿಸಿಗಳಿಗೆ ಬೋನಸ್ ಪಡೆಯುವ ಹಕ್ಕು ಇರಲಾರದು.

ನಿಮ್ಮ ಪಾಲಿಸಿಯನ್ನು ಭದ್ರವಾಗಿಡಿರಿ. ಕ್ರಮವಾಗಿ ಪ್ರೀಮಿಯಮನ್ನು ಕಟ್ಟಿ ನಿಮ್ಮ ಪಾಲಿಸಿಯೂ ಎರಡನೇ ವೇಲ್ಯುವೇಶನ್‌ನಿಂದಾಗಿ ತೋರಿಬರುವ ಲಾಭದಲ್ಲಿ ಭಾಗವಹಿಸುವಂತೆ ನೋಡಿರಿ.

ನೆನಪಿನಲ್ಲಿಡಿರಿ: 1959 ಬೋನಸ್ ವರ್ಷ

ಲೈಫ್ ಇನ್‌ಷೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ಪಂಚಶೀಲ

ಭಾರತದ ಆದರ್ಶ ವಿದೇಶ ನೀತಿ

ರಾಜಕಾರಣದಲ್ಲಿ ಕೂಟ ನೀತಿಯ ಬದಲು ಧರ್ಮ ನೀತಿಯು ಕಾಣಿಸಿಕೊಂಡರೆ ಮಾತ್ರ ಶಾಂತಿ ಸರ್ವತ್ರ ವ್ಯಾಪಿಸಬಲ್ಲುದು.

"ಪಂಚಶೀಲ" ಎಂಬುದು ಭಾರತದ ಸಾಂಸ್ಕೃತಿಕ ಸಂಪತ್ತಿಯ ಒಂದಂಗವಾಗಿದೆ. ಹಿಂದೂ ಮತ್ತು ಬೌದ್ಧ ಸಾಹಿತ್ಯಗಳೆರಡರಲ್ಲೂ ಶೀಲಪ್ರತಿಷ್ಠೆಯಾಗಿದೆ. ಹದಿಮೂರು ಶೀಲಗಳು ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟಿವೆ. ಮನುಸ್ಮೃತಿಯ ಟೀಕಾಕಾರನಾದ ಕಲ್ಲೂಕನೂ ಹದಿಮೂರು ಶೀಲಗಳನ್ನು ಮನ್ನಿಸಿದ್ದಾನೆ. ಬೌದ್ಧರು ದಶ-ಪರಿಮಿತಿಗಳೊಡನೆ ಐದು ಶೀಲಗಳಿಗೂ ಮನ್ನಣೆಯಿತ್ತಿದ್ದಾರೆ. ಹಿಂಸಾ ನಿಷೇಧ, ಕಳ್ಳತನದ ನಿಷೇಧ, ವ್ಯಭಿಚಾರ ನಿಷೇಧ, ಅಸತ್ಯದ ನಿಷೇಧ, ಮತ್ತು ಮಾದಕದ್ರವ್ಯ ನಿಷೇಧಗಳೇ ಈ ಐದು ಶೀಲಗಳು. ಈ ಶೀಲಗಳನ್ನು ಭಿಕ್ಷುಗಳೂ ಗೃಹಸ್ಥರೂ ಅನುಸರಿಸಿಕೊಂಡಿದ್ದರು. ಇವುಗಳನ್ನಲ್ಲದೆ ಭಿಕ್ಷುಗಳು ಇನ್ನೂ ಐದು ಶೀಲಗಳನ್ನು ಅನುಸರಿಸುತ್ತಿದ್ದರು. ಅಕಾಲ ಭೋಜನ ನಿಷೇಧ; ಆಭೂಷಣ, ಪುಷ್ಪಹಾರ ಮತ್ತು ಸುಗಂಧಿತ ದ್ರವ್ಯ ನಿಷೇಧ; ಎತ್ತರವಾದ ಅಥವಾ ಅಗಲವಾದ ಪಲ್ಲಂಗ ನಿಷೇಧ; ನೃತ್ಯ, ಗಾನ, ವಾದ್ಯ ಆದಿಗಳ ನಿಷೇಧ ಮತ್ತು ಚಿನ್ನ, ಬೆಳ್ಳಿ ಮೊದಲಾದುವುಗಳ ಸ್ವೀಕಾರ ನಿಷೇಧ. ಇವುಗಳಲ್ಲಿ ಮೊದಲ ಪಂಚಶೀಲಗಳು ಪ್ರಾಧಾನ್ಯವನ್ನು ಪಡೆದಿವೆ. ಇವುಗಳನ್ನು ಜೈನರು ಐದು ಅಣುವ್ರತಗಳಲ್ಲಿಯೂ ಹಿಂದೂಗಳು ಯೋಗ ಶಾಸ್ತ್ರದ ಐದು ಯಮಗಳಲ್ಲಿ ಮನ್ನಿಸಿದ್ದಾರೆ. ವೈಯಕ್ತಿಕ ಜೀವನದಲ್ಲಿ ಸಂಘರ್ಷವನ್ನು ಕಡಿಮೆ ಮಾಡಿ ಸಾಮಾಜಿಕ ಸ್ಥಿತಿಯನ್ನು ಉನ್ನತೀಕರಿಸಲು ಈ ಶೀಲಗಳು ನೆರವಾಗುತ್ತವೆ. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸ್ತೇಯ ಮತ್ತು ಅಪರಿಗ್ರಹಗಳನ್ನು ಮಹಾತ್ಮಾ ಗಾಂಧಿಯವರು ರಾಷ್ಟ್ರೀಯ ಮಹಾವ್ರತಗಳನ್ನಾಗಿ ಸ್ವೀಕರಿಸಿದರು.

ಜಾತೀಯ ಭೇದಭಾವ, ಆಕ್ರಮಣ ನೀತಿ ಮತ್ತು ವಸಾಹತು ವಾದಗಳನ್ನು ವಿರೋಧಿಸುವ ಭಾರತದ ವಿದೇಶ ನೀತಿಯು ಸ್ವಾತಂತ್ರ್ಯಾನಂತರ ಅಂತಾರಾಷ್ಟ್ರೀಯ ರಂಗದಲ್ಲಿ ತನ್ನ ಜಯಭೇರಿಯನ್ನು ಬಾರಿಸಿತು. ಭಾರತವು ಕೋರಿಯದ ಯುದ್ಧವಿರಾಮ ಸಂಧಿ ಹಾಗೂ ಕೈದಿಗಳ ವಿನಿಮಯ ಕಾರ್ಯದಲ್ಲಿ ಅಗ್ರಗಣ್ಯವಾಗಿ ಭಾಗವಹಿಸಿತು. ಕಮ್ಯುನಿಸ್ಟ ಚೀನಕ್ಕೆ ಯುಕ್ತರಾಷ್ಟ್ರ ಸಂಸ್ಥೆಯಲ್ಲಿ ಇದುವರೆಗೆ ಪ್ರಾತಿನಿಧ್ಯ ದೊರೆಯದೆ ಹೋದರೂ ಭಾರತವು ಈ ಬಗ್ಗೆ ಮಾಡುವ ಪ್ರಯತ್ನವನ್ನು ಬಿಟ್ಟುಕೊಟ್ಟಿಲ್ಲ. ಟಿಬೇಟಿನ ಬಗ್ಗೆ ಚೀನಾ-ಭಾರತಗಳ ನಡುವೆ ಒಂದು ಒಪ್ಪಂದವಾಗಿದ್ದು ಅದು ಭಾರತದ ಶಾಂತಿಪ್ರಿಯ ದ್ಯೋತಕವೇ ಆಗಿತ್ತು. ಚೀನೀಯರ ತತ್ವವನ್ನು ಒಪ್ಪಿಕೊಂಡು, ಪರರ ಸಂಬಂಧದಲ್ಲಿ ಹಸ್ತಕ್ಷೇಪ ಮಾಡದಿರುವ ಭಾರತದ ನೀತಿಗೆ ಟಿಬೇಟವೇ ನಿದರ್ಶನ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸಣ್ಣಪುಟ್ಟ ರಾಷ್ಟ್ರಗಳಿಗೂ ಸ್ಥಾನ ಕೊಡಿಸುವುದರಲ್ಲಿ ಮಹಾ ಪಾತ್ರವಹಿಸಿದ್ದ ಭಾರತವು ಅವುಗಳಿಗೂ ಮನ್ನಣೆಯಿತ್ತುದನ್ನು ಸಾರುತ್ತದೆ.

ಸರ್ವೇ ಸುಖಿನಃ ಭವಂತು ಸರ್ವೇ ಸಂತು ನಿರಾಮಯಾಃ, ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖ ಭಾಗ್ಭವೇತ್ ‖ ಎಂದು ಪ್ರತಿನಿತ್ಯವೂ ಉಚ್ಚರಿಸುವ ಶಾಂತಿ ಮಂತ್ರವನ್ನೇ ಭಾರತದ ವಿದೇಶ ನೀತಿ ಸಾರುತ್ತದೆ. ಬುದ್ಧ ಮತ್ತು ಮಹಾವೀರರ ಅಹಿಂಸಾ ಭಾವನೆ, ವೈಷ್ಣವರ ಕ್ಷಮೆ ಮತ್ತು ಕರುಣೆ ಇವುಗಳಿಂದ ಪರಿಪೋಷಿತವಾದ ಭಾರತೀಯ ವಿದೇಶ ನೀತಿಯು ಶಾಂತಿಪರಂಪರೆಯ ಪ್ರತೀಕವಾಗಿದೆ. ಯುದ್ಧದಿಂದನೊಂದ ಜನರಿಗೆ ಭಾರತವು ಶಾಂತಿ ಮಂತ್ರದಿಂದ ಕೂಡಿರುವ ಪಂಚಶೀಲವನ್ನು ದೇಣಿಗೆಯಾಗಿತ್ತರೆ ವಿಸ್ಮಿತರಾಗಬೇಕಾಗಿಲ್ಲ. ಪರಸ್ಪರ ರಾಷ್ಟ್ರೀಯ ಐಕ್ಯ, ಪ್ರಭುತ್ವಗಳ ಆದರ; ಅನಾಕ್ರಮಣ ನೀತಿ, ಆಂತರಿಕ ಹಸ್ತಕ್ಷೇಪವರ್ಜನ, ಸಮಾನತೆಯ ಭಾವ ಹಾಗೂ ಪಾರಸ್ಪರಿಕ ಲಾಭ ಮತ್ತು ಶಾಂತಿಪೂರ್ಣ ಸಹಅಸ್ತಿತ್ವಗಳೇ ಭಾರತದ ಪಂಚಶೀಲಗಳಾಗಿವೆ. ಇವುಗಳಲ್ಲಿ ಭಾರತದ ವಿದೇಶ ನೀತಿಯ ಸಾರವು ಅಡಕವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಮೇಲೆ ಹೇಳಿದವುಗಳಲ್ಲಿ ಮೊದಲ ನಾಲ್ಕು ಕೊನೆಯ ಸೂತ್ರಕ್ಕೆ ಪೂರಕವಾಗಿದೆ. ಏಕೆಂದರೆ, ಪ್ರಾರಂಭದ ನಾಲ್ಕು ನೀತಿಗಳಿಲ್ಲದೆ ಹೋದರೆ ಐದನೆಯದು ಅಸಂಭವವೆನಿಸುತ್ತದೆ. ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ತನ್ನ ಪ್ರಭುತ್ವವನ್ನಲ್ಲದೆ ಬೇರೆಯವರದನ್ನೂ ಮನ್ನಿಸಿದರೆ ಮಾತ್ರ ಅನಾಕ್ರಮಣವಾಗುವುದು. ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರವು ತನ್ನ ಪ್ರಭುತ್ವವಿದೆಯೆಂದು ತಿಳಿದರೆ ಮಾತ್ರ ಆಗ ಆಕ್ರಮಣವು ಸುರುವಾಗುವುದು. ಅನಾಕ್ರಮಣವೆಂಬುದು ಪರಸ್ಪರ ಸಾರ್ವಭೌಮತ್ವದ ಕುರುಹು. ಮೊದಲನೆ ಶೀಲದ ವ್ಯಾಖ್ಯೆಯೇ ಮೂರನೆಯದು. ಬೇರೆಯವರ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಕೆಲವೊಮ್ಮೆ ಮಾನವತೆಯ ಹೆಸರೆತ್ತಲ್ಪಟ್ಟರೂ ಅದು ಕೇವಲ ತೋರಿಕೆಗಾಗಿದೆ. ಬೇರೆಯವರನ್ನು ಉದ್ಧಾರಮಾಡುವೆವೆಂದು ಹೋಗುವವರೆಲ್ಲರೂ ಗೋಮುಖ ವ್ಯಾಘ್ರರೇ ಆಗಿದ್ದಾರೆ. ಆದುದರಿಂದ ಆಂತರಿಕ ಹಸ್ತಕ್ಷೇಪ ನಿಷೇಧವೆಂಬುದು ಆಕ್ರಮಣಕಾರಿ ನೀತಿಗೊಂದು ನಿಶ್ಚಿತವಾದ ಅಂಕುಶವಾಗಿರುತ್ತದೆ.

ಪರಸ್ಪರ ಹೀನಭಾವ ಅಥವಾ ತಿರಸ್ಕಾರವು ಯುದ್ಧಕ್ಕೆ ಹೇತುವಾಗಬಲ್ಲುದು. ಬಿಳಿಯರ ನೈತಿಕ ಭಾವವು ಆಕ್ರಮಣದ ರೂಪವನ್ನು ಪಡೆದಿದ್ದು, ಜಾತೀಯ ಭೇದಭಾವಗಳನ್ನು ಬೆಳೆಸಿದೆ. ಇದರಿಂದಾಗಿಯೇ ವಸಾಹತು ವಾದದ ಪ್ರಾರಂಭವಾಗುತ್ತದೆ. ಸಮಾನಾಪೇಕ್ಷೆಯನ್ನಿತ್ತು "ಇರು, ಇರಗೊಡು" ಎಂಬ ಸಾಧು ತತ್ವವನ್ನು ಅಳವಡಿಸದೆ ಹೋದರೆ, ಇಂದು ಪ್ರಪಂಚಕ್ಕೆ ಉಳಿವಿಲ್ಲ. ಪಾರಸ್ಪರಿಕ ಲಾಭವಾದರೂ ಸಮಾನತೆಯ ತತ್ವವನ್ನೆ ಸಾರಿಹೇಳುತ್ತವೆ. ಉಪಕಾರ ತೆಗೆದುಕೊಂಡವನಲ್ಲಿ ಹೀನತೆಯ ಭಾವ ಉದ್ಭವಿಸದಂತೆ ನೋಡುವುದೇ ಮಾನವತೆಯ ಲಕ್ಷಣ. ರಾಷ್ಟ್ರೀಯ ಆತ್ಮಸಮ್ಮಾನ ಭಾವಕ್ಕೆ ಸಮಾನತಾ ಭಾವವು ಪರಿಪೋಷಕವಾಗಿದೆ. ಪಾರಸ್ಪರಿಕ ಲಾಭವು ರಾಷ್ಟ್ರಗಳಲ್ಲಿ ಸೌಹಾರ್ದವನ್ನು ಹುಟ್ಟಿಸಿ ಯುದ್ಧಗಳನ್ನು ದೂರೀಕರಿಸುತ್ತದೆ. ಸಹ ಅಸ್ತಿತ್ವದ ಸಿದ್ಧಾಂತ ಸರ್ವ ಶ್ರೇಷ್ಠವಾಗಿದೆ. ಪ್ರಪಂಚದ ಎಲ್ಲ ವಿಚಾರ ಧಾರೆಗಳು ಮತ್ತು ಸಾಮಾಜಿಕ ವ್ಯವಸ್ಥೆಯ ಜನರೆಲ್ಲರೂ ಶಾಂತಿಪೂರ್ವಕ ಬದುಕಬೇಕೆಂಬುದೇ ಈ ತತ್ವದ ಅರ್ಥ. ಇದು ಇರು, ಇರಗೊಡು ಮತ್ತು ಭಿನ್ನತೆಯಲ್ಲಿ ಅಭಿನ್ನತೆಯ ತತ್ವಗಳನ್ನೇ ಹೊಂದಿಕೊಂಡಿದೆ. ಈ ತತ್ವಗಳನ್ನು ಸ್ವೀಕರಿಸದಿದ್ದುದಾದರೆ, ಅಂತಹ ರಾಷ್ಟ್ರವು ಒಂದೇ ವಿಚಾರಧಾರೆಯಲ್ಲಿ ಮುನ್ನಡೆಯಲು ವಿರುದ್ಧ ವಿಚಾರಧಾರೆಯ ಜನರೊಡನೆ ವಿರೋಧ, ಏಕತೆಯ ಬದಲು ಹತ್ತೆ ಕತ್ತರಿಸಾಮವಾಗಿ ಯುದ್ಧ ಮತ್ತು ಅಂತ್ಯದಲ್ಲಿ ಜಗತ್ತಿನ ಪ್ರಳಯವನ್ನೇ ಬಯಸುತ್ತಿವೆ ಎಂದಾಗುವುದು. ಇವುಗಳನ್ನು ಒಪ್ಪಿಕೊಂಡರೆ ಪ್ರಪಂಚದಲ್ಲಿ ಮುನ್ನಡೆಯುವ ಜನರಿಗೆ—ರಾಷ್ಟ್ರಗಳ ಬಣಗಳಲ್ಲಿ ನಡೆಯುತ್ತಿರುವ ಪರಸ್ಪರ ಎಳೆದಾಟವನ್ನು ನೀಗಿಸುವುದು ಎಂದರ್ಥ. ಹೀಗಾಗಿ ಈ ಪಂಚಶೀಲಗಳು ಜಗತ್ತಿನ ರಾಷ್ಟ್ರಗಳನ್ನು ಮೈತ್ರಿಯ ಸೂತ್ರದಿಂದ ಬಂಧಿಸಿ ಜಾಗೃತಗೊಳಿಸಿ ಸಂಪನ್ನ

(೧೦ನೇ ಪುಟ ನೋಡಿರಿ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಸಾದಾ ಪ್ರತಿ ಬೆಲೆ: ರೂ ಒಂದೂವರೆ, ಉತ್ತಮ ಪ್ರತಿ: ರೂ. ಎರಡು.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಆಭರಣಗಳ ಏಲಂ.

ಕೊಲ್ಲೂರು: ಶ್ರೀ ಮೂಕಾಂಬಿಕಾ ದೇವಸ್ಥಾನದ ಕೆಲವು ಬಂಗಾರದ ಆಭರಣಗಳನ್ನು ತಾರೀಕು 19-12-1959 ರಂದು ಬೆಳಗ್ಗೆ ಘಂಟೆ ೪ರಿಂದ ಸಂಜೆ ಘಂಟೆ ೫ರ ತನ್ಮಧ್ಯೆ ಕಂದಾಪುರ ಟ್ರಾವೆಲರ್ಸ್ ಬಂಗ್ಲೆಯಲ್ಲಿ, ಮಂಗಳೂರು H. R. & C. E. ಡಿಪಾರ್ಟ್‌ಮೆಂಟಿನ ಅಸಿಸ್ಟೆಂಟ್ ಕಮಿಶನರ ಸಮಕ್ಷಮ ಏಲಂ ಮಾಡಲಾಗುವುದು. ಏಲಮ್ಮಿನ ಶರ್ತಗಳ ಬಗ್ಗೆ ಸದ್ರಿ ದೇವಸ್ಥಾನದ ಎಕ್ಸಿಕ್ಯುಟಿವ್ ಆಫೀಸರರಿಗೆ ಬರೆದು ತಿಳಿಯಬಹುದು.

(Sd.) B. Narayana Shetty,
Executive Officer.
Dated 26—11—59.

ಅಭಿಪ್ರಾಯ

ನೇಪಾಲದ ಧೋರಣೆ ಯಾವುದು?

ಚೀನಕ್ಕೆ ಸಂದರ್ಶನನೀಯುವ ನೇಪಾಳೀಯ ಪ್ರಧಾನರು ತಮ್ಮ ಧೋರಣೆಯಲ್ಲಿ ಪರಿವರ್ತನೆ ಮಾಡುವರೆ?

ಭಾರತದ ಪ್ರಧಾನಮಂತ್ರಿ ಶ್ರೀ ಜವಾಹರಲಾಲ ನೆಹರುಗಳು 'ನೇಪಾಲದ ಮೇಲೆ ಆದ ಆಕ್ರಮಣವನ್ನು ಭಾರತದ ಮೇಲಾದ ಆಕ್ರಮಣವೆಂದು ತಿಳಿದುಕೊಳ್ಳಲಾಗುವುದು' ಎಂದು ಹೇಳಿದಂದಿನಿಂದ ನೇಪಾಳದ ಕೆಲವು ಕಮ್ಯುನಿಸ್ಟ್ ಪತ್ರಿಕೆಗಳು ಭಾರತವಿರೋಧೀ ವಿಷವನ್ನು ಕಾರುವುದಕ್ಕೆ ಪ್ರಾರಂಭಿಸಿದುವು. ನೇಪಾಳದ ಪ್ರಧಾನಮಂತ್ರಿ ಶ್ರೀ ಬಿ. ಪಿ. ಕೊಯಿರಾಲಾರು ಪತ್ರಿಕಾ ಪ್ರತಿನಿಧಿಗಳಿಗೆ ಇತ್ತ ಹೇಳಿಕೆಯಲ್ಲಿ ಚೀನದ ಸಂಭಾವ್ಯ ಆಕ್ರಮಣದ ಕಡೆಗೆ ಸಂಪೂರ್ಣ ಸಮಾಧಾನವು ತೋರಿಬರುತ್ತಿರುವುದರಿಂದ ಭಾರತ ಸರಕಾರಕ್ಕೂ ಏನೂ ಸಂತೋಷವಾದಂತೆ ತೋರುವುದಿಲ್ಲ. ನೇಪಾಲದ ಯಾವುದೇ ಕಡೆಯಲ್ಲಿ ಆಕ್ರಮಣವಾಗಿಲ್ಲ ಎಂದು ಶ್ರೀ ಕೊಯಿರಾಲಾ ಹೇಳುತ್ತಾರೆ. ಒಂದು ಕಾಲದಲ್ಲಿ ಭಾರತವಸ್ಥಿತಿಯೂ ಇದೇ ಆಗಿದ್ದರೂ ಆಕ್ರಮಣದ ಅನುಭವವಾದುದು ತೀರಇತ್ತೀಚೆಗೆ ಎಂದು ಪ್ರಾಯಃ ಅವರು ಮರೆತು ಬಿಟ್ಟಿರಬೇಕು ಇದೇ ರೀತಿ ನೇಪಾಳದ ಮೇಲೆಯೂ ಆಕ್ರಮಣ ನಡೆಯಬೇಕಾದರೆ ವಿಶೇಷ ಪ್ರಯಾಸವಿಲ್ಲ. ನೇಪಾಲವನ್ನು ಶೀತಲ ಯುದ್ಧಕ್ಕೆ ತೊಡಗಿಸುವ ಕುಶಕ್ತಿಗಳು ಏನು ಮಾಡುವುವು ಮತ್ತು ವನ್ನು ಶ್ರೀ ಕೊಯಿರಾಲಾರು ಹೇಗೆ ಎದುರಿಸುವರೆಂಬುದನ್ನು ಮುಂದೆ ಕಾಣಬೇಕಾಗಿದೆ. ಈ ಚರ್ಚೆಯಿಂದಾಗಿ ಶ್ರೀ ಕೊಯಿರಾಲಾರ ಕೀರ್ತಿ ಹಾಗೂ ಪ್ರತಿಷ್ಠೆಗಳು ಹರಡಿದುವು. ವಿಶ್ವವು ತೆರೆದ ಕಣ್ಣಿನಿಂದ ಅವರನ್ನೇ ನೋಡ ತೊಡಗಿತು.

ನೇಪಾಲದ ಪ್ರಧಾನ ಮಂತ್ರಿ ಶ್ರೀ ಕೊಯಿರಾಲಾರು ಎಂದೂ ಭಾರತದ ವಿರೋಧಿಯಾದ ಅಭಿಪ್ರಾಯವನ್ನು ಪ್ರಕಟಿಸಿರುವುದಿಲ್ಲ; ಭಾರತದ ಪಕ್ಷದಲ್ಲಿದ್ದುಕೊಂಡೇ ಅವರಹಲವಾರು ಬಾರಿ ಹೇಳಿಕೆ ಕೊಟ್ಟಿದ್ದಾರೆ ಶ್ರೀಯುತರು ಭಾರತದ ಕಡೆಗಿರುತ್ತಾರೆನ್ನುವುದು ಪ್ರಯೋಸಕರವಾಗಿರುವಂತೆಯೇ ಚೀನಾದ ಪಕ್ಷದಲ್ಲಿದ್ದಾರೆನ್ನುವುದೂ ಪ್ರಮೋದವಾಗುವುದು. ಚೀನಾದ ಪ್ರಧಾನಿಯವರ ಆಮಂತ್ರಣವನ್ನು ಮನ್ನಿಸಿ ಕೆಲವೇ ತಿಂಗಳುಗಳಲ್ಲಿ ಅವರು ಪೇಕಿಂಗ್‌ಗೆ ತೆರಳಲಿರುವರು. ಆದರೆ, ಅದಕ್ಕೆ ಮೊದಲು, ಪ್ರಾಯಃ ೭ಂನೆ ಜನವರಿಯಲ್ಲಿ ಪ್ರಧಾನಿ ನೆಹರು ಅವರನ್ನೂ ಭೇಟಿಯಾಗಲಿರುವರು. ಇಲ್ಲಿ ಉಭಯತರ ಮಿಥ್ಯಾ ಕಲ್ಪನೆಗಳಿಗೆ ಪರಿಹಾರವೂ ದೊರೆಯಬಹುದು. ಇದಾದನಂತರ ಅವರು ಮಾಡುವ ಚೀನ ಸಂದರ್ಶನವು ನಿಜವಾಗಿಯೂ ಅತಿ ಮಹತ್ವಪೂರ್ಣವಾಗುತ್ತದೆ. ಏಕೆಂದರೆ, ಶ್ರೀಯುತರು ಭಾರತದ ನಿಲುವುಯನ್ನರಿತುಕೊಂಡೇ ಚೀನಕ್ಕೆ ತೆರಳಲಿರುವರು. ಚೀನದಿಂದ ಮರಳಿ ಬಂದ ನಂತರ ಶ್ರೀ ಕೊಯಿರಾಲಾರು ನೇಪಾಲ–ಚೀನ; ನೇಪಾಲ—ಭಾರತಗಳ ನಡುವಣ ಪ್ರಕೃತವಿರುವ ಸಂಬಂಧವನ್ನು ಪರಿವರ್ತನೆಗೊಳಿಸುವರೇ ಎಂಬುದನ್ನು ಈಗಲೇ ಹೇಳುವುದು ಸಾಧ್ಯವಿಲ್ಲ.

ಶ್ರೀ ಕೊಯಿರಾಲಾರವರು ನೇಪಾಳದಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ವಿಜಯಧ್ವಜ ಹಾರಿಸಿದ ನೇಪಾಳೀ ಕಾಂಗ್ರೆಸ್‌ನ ಪ್ರಮುಖ ನಾಯಕರಿರುವರು. ಭಾರತದಲ್ಲಿ ಪಂಡಿತ ನೆಹರೂ ಗಳಿಸಿದ ಸ್ಥಾನವನ್ನೇ ಅಲ್ಲಿ ಶ್ರೀ ಕೊಯಿರಾಲಾ ಪಡೆಯುತ್ತಾರೆ ಎಂದು ಕೆಲವರು ಹೇಳುತ್ತಾರೆ. ನೇಪಾಲೀ ಕಾಂಗ್ರೆಸ್‌ನ ಅಧ್ಯಕ್ಷರಾಗಿರುವಾಗ ಇವರು ಭಾರತ ವಿರೋಧಿಯಾಗಿ ಭ್ರಮಾತ್ಮಕ ಅಪಪ್ರಚಾರ ಮಾಡುತ್ತಿರುವುದನ್ನು ವಿರೋಧಿಸುತಿದ್ದರು. ೧೯೫೩ರಲ್ಲಿ ಈ ಬಗ್ಗೆ ಅವರೊಂದು ಸ್ಪಷ್ಟೀಕರಣವನ್ನಿತ್ತಿದ್ದರು. ಆದರ ನಂತರ ೧೯೫೫ರಲ್ಲಿ ಪುನಃ ಅದನ್ನು ಉಚ್ಚರಿಸಬೇಕಾಯಿತು. ಭಾರತದ ಭೂಮಿಯಲ್ಲಿ ಶಿಕ್ಷಣವನ್ನು ಪಡೆದು ಬೆಳೆದ ಕೊಯಿರಾಲಾರಿಗೆ ಭಾರತ—ನೇಪಾಲಗಳ ಮೈತ್ರಿಯ ಬಗ್ಗೆ ಎಷ್ಟೊಂದು ಅಭಿಮಾನವಿದೆ ಎಂಬುದು ತಿಳಿಯಬಹುದು. ಅವರು ನೇಪಾಲ—ಭಾರತಗಳ ಮೈತ್ರಿಯು ಬೆಳೆಯಬೇಕೆಂದು ಹೇಳುವವರು. ಇದಕ್ಕೆ ಎರಡು ಕಾರಣಗಳೂ ಇವೆ. ಮೊದಲನೆಯದಾಗ ರಾಜಕೀಯ ದೃಷ್ಟಿಯಿಂದ ಇವು ಎರಡು ರಾಜ್ಯಗಳೇ ಆಗಿರುವುದು ಸಹಜವಾದರೂ ಸಂಸ್ಕೃತಿ, ಧರ್ಮ ಮತ್ತು ಇತಿಹಾಸಗಳ ದೃಷ್ಟಿಯಿಂದ ಒಂದೇ ಆಗಿರುತ್ತವೆ. ಎರಡನೆಯದಾಗಿ, ನೇಪಾಳವು ಸಾರ್ವಭೌಮ ರಾಷ್ಟ್ರವಾದರೂ ಅನುಚೀತದಂತಹ ರಾಷ್ಟ್ರದೊಡನೆ ಹೋರಾಡಿದರೆ, ಭಾರತದ ಸಹಾಯವಿಲ್ಲದೆ ಎಂದಿಗೂ ಉಳಿಯುವುದು ಅಸಾಧ್ಯ.

ಶ್ರೀ ಕೊಯಿರಾಲಾ ಮೂರು ವರ್ಷಗಳಿಗೆ ಹಿಂದೆ ಸಮಸ್ತ ಯುರೋಪಿನಲ್ಲಿ ಸಂಚರಿಸಿದರು. ಅಲ್ಲವರು ಅಲ್ಲಿನ ರಾಜಕೀಯ ಪರಿಸ್ಥಿತಿಯನ್ನೂ ಅಭ್ಯಸಿಸಿದರೆನ್ನಬಹುದು. ಇದರಿಂದಾಗಿ ಇಂದಿನ ಪ್ರಪಂಚವು ಸಹಯೋಗಕ್ಕೆ ಎಷ್ಟು ಬೆಲೆ ಕಟ್ಟುತ್ತದೆ ಮತ್ತು ಅತ್ಯಂತ ಸಂಪನ್ನ ರಾಷ್ಟ್ರವಾದರೂ ಅನ್ಯರ ಸಹಕಾರವಿಲ್ಲದೆ ಬದುಕಲು ಏಕೆ ಅಸಮರ್ಥವಾಗಿದೆ ಎಂಬುದನ್ನವರು ಸ್ವಾಭಾವಿಕವಾಗಿ ತಿಳಿದುಕೊಂಡಿರಬೇಕು.

ಎರಡು ವರ್ಷಗಳಿಗೆ ಮೊದಲು ನೇಪಾಳೀಯ ಕಮ್ಯುನಿಸ್ಟ್ ಪಕ್ಷವೊಂದು ವಿದ್ರೋಹವನ್ನೆಬ್ಬಿಸುವ ಸಂಚು ನಡೆಸಿತು. ಅದನ್ನು ನೇಪಾಳೀಯ ಕಾಂಗ್ರೆಸ್ ನಾಯಕರು ಹತ್ತಿಕ್ಕಿದರು. ಆ ಸಮಯದಲ್ಲಿ ಶ್ರೀ ಕೊಯಿರಾಲಾರು ಸ್ವಯಂ ಪರಿಸ್ಥಿತಿಯನ್ನರಿತುಕೊಂಡು, ಕಮ್ಯುನಿಸ್ಟರ ಅಪಾಯದಿಂದುಳಿದುಕೊಳ್ಳುವಂತೆ ಜನತೆಗೆ ಕರೆಯಿತ್ತಿರುವರು. ಆದಾದ ನಂತರ ಕೆಲವೇ ದಿನಗಳಲ್ಲಿ ಅವರು ತಮ್ಮ ಮಿತ್ರರೊಡನೆ ಜನಕಪುರದಲ್ಲಿ ಕೈದು ಮಾಡಲ್ಪಟ್ಟರಾದರೂ ಕೂಡಲೇ ಮುಕ್ತರಾದರು.

ಭಾರತ ವಿರೋಧಿ ಪ್ರಚಾರ ಕಾರ್ಯವನ್ನು ಮಾಡುತಿದ್ದ ನೇಪಾಳೀಯ ಕಮ್ಯುನಿಸ್ಟ್ ಪಕ್ಷವು ೮ ವರ್ಷಗಳಿಗೆ ಮೊದಲು ಆ ಕಾಲದ ನೇಪಾಳೀಯ ಸರಕಾರವನ್ನು ಉರುಳಿಸುವ ಷಡ್ಯಂತ್ರವನ್ನು ಮಾಡಿತ್ತು. ಆದರೆ, ಆಗ ಗೃಹಮಂತ್ರಿಯಾಗಿದ್ದ ಶ್ರೀ ಕೊಯಿರಾಲಾರವರು ಈ ಷಡ್ಯಂತ್ರವನ್ನು ಭೇದಿಸಿಬಿಟ್ಟಿದ್ದರು. ೧೯೫೩ರಲ್ಲಿ ಶ್ರೀ ಕೊಯಿರಾಲಾರ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರೊಳಗೆ ವಿರಾಟ ನಗರದ ಶ್ರಮಿಕ ಸ್ಥಿತಿಯ ಸಂಬಂಧದಲ್ಲಿ ಒಪ್ಪಂದವೂ ಆಗಿತ್ತು. ಆ ಸಮಯದಲ್ಲಿ ಅವರು ಇತರರೊಡನೆ ಪೋಲೀಸರಿಂದ ತಡೆಯಲ್ಪಟ್ಟಿದ್ದರು

(೮ನೇ ಪುಟ ನೋಡಿರಿ)

ಕ್ಷಯರೋಗ ಮುದ್ರೆಗಳನ್ನು ಪಡಕೊಂಡು

ಕ್ಷಯರೋಗ ಪೀಡಿತರಿಗೆ ಸಹಾಯಮಾಡಿರಿ.

ಮುದ್ರೆಗಳನ್ನು ನಿಮ್ಮ ದಿನವಹಿ ಟಪ್ಪಾಲಿನ ಮೇಲೆ ಉಪಯೋಗಿಸಿರಿ. ಇದು ಆದನ್ನು ಕಳುಹಿಸುವವರಿಗೂ ಮತ್ತು ಅದನ್ನು ತೆಗೆದುಕೊಳ್ಳುವವರಿಗೂ ಸಂತೋಷವನ್ನುಂಟುಮಾಡುತ್ತದೆ. ಮೈಸೂರು ರಾಜ್ಯದಲ್ಲಿ ಕ್ಷಯರೋಗ ಮುದ್ರೆಗಳು ಈ ಕೆಳಗಿನ ವಿಳಾಸದಲ್ಲಿ ದೊರೆಯುತ್ತವೆ.

1. ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್‌ಡನ್ ಟಿ. ಬಿ. ಕ್ಲಿನಿಕ್ ಮತ್ತು ಡಿಸ್ಪೆನ್ಸರಿ, ಕೆಂಪೇ ಗೌಡ ರೋಡ್, ಬೆಂಗಳೂರು ಸಿಟಿ,
2. ಮಹಿಳಾ ಮಂಡಲ ಮತ್ತು ಶ್ರೀ ಬಸವೇಶ್ವರ ದೇವಸ್ಥಾನ, ಪಂಚ್ ಕಮಿಟಿ, ಕಲ್ಯಾಣಿ, ಗ್ರೈನ್ ಮರ್ಚಂಟ್ಸ್ ಎಸೋಸಿಯೇಶನ್ ಮತ್ತು ಭಾರತ್ ಸಮಾಜ, ಬೀದರ್,
3. ದೈವಜ್ಞ ವೆಲ್‌ಫೇರ್ ಸೆಂಟರ್, ಶ್ರೀ ಲಕ್ಷ್ಮೀನಾರಾಯಣ ಟೆಂಪ್ಲ್ ಕಂಪೌಂಡ್, ಬಸವನಗುಡಿ, ಮಂಗಳೂರು,
4. ಗೌರವ ಕಾರ್ಯದರ್ಶಿ ದಕ್ಷಿಣ ಕನ್ನಡ ಜಿಲ್ಲಾ ಟಿ.ಬಿ. ಸಮಿತಿ, ಗವರ್ನಮೆಂಟ್ ವೆನ್‌ಲೊಕ್ ಹೊಸ್ಪಿಟಲ್, ಮಂಗಳೂರು,
5. ಶ್ರೀ. ಯಲ್. ಎಸ್. ಕಾಮತ್, ವ್ಯವಸ್ಥಾಪಕ, ಭಾರತ ಸೇವಕ ಸಮಾಜ, ಕೆನರಾ ಕಾಲೇಜ, ಕುಮಟಾ,
6. ಅಧ್ಯಕ್ಷರುಗಳು, ಮಹಿಳಾ ಸಮಾಜ, ಕಾರವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ದಾಪುರ, ಹಳಿಯಾಳ್, ಸುಪಾ ಮತ್ತು ಯಲ್ಲಾಪುರ.

ಭಾರತದಲ್ಲಿ ಹತ್ತನೇ ಕ್ಷಯರೋಗ ಮುದ್ರೆ ಮಾರಾಟ ಚಳವಳ

(ದಿ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಡಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟಿದು)

Space kindly donated by: **THE BRAITHWAITE & CO. INDIA LTD., CALCUTTA.**

ಇತಿಹಾಸಸ್ಪೃಷ್ಟ

ಕ್ರಾಂತಿಜ್ವಾಲೆಯ ಪ್ರಥಮ ಅಗ್ನಿಕಣ

೧೮೫೭ರ ಭಾರತೀಯ ಸ್ವಾತಂತ್ರ್ಯಸಂಗ್ರಾಮದ ಪೂರ್ವಭಾವೀ ಸಿದ್ಧತಾ ವೇಳೆಯಲ್ಲಿ ನಡೆದ ಒಂದು ರೋಚಕ ಘಟನೆ.

ಡಾಲ್ ಹೌಸಿಯ ಕಾಲಾವಧಿಯಲ್ಲಿ ಉತ್ತರ ಪ್ರದೇಶ, ಬಿಹಾರ ಮತ್ತು ಡಿಲ್ಲಿಯ ಸುತ್ತುಮುತ್ತಲೂ ಇದ್ದ ಹಿಂದೂ ಮತ್ತು ಮುಸಲ್ಮಾನರಲ್ಲಿ ಅಸಂತೋಷ ವನ್ನೆಬ್ಬಿಸುವ ಹಲವಾರು ಕಾನೂನುಗಳು ರಚಿತವಾಗಿದ್ದುವು ಅಖಂಡ ಭಾರತದಲ್ಲಿ ಅಸಂತೋಷ ಜ್ವಾಲೆಯು ಉರಿಯತೊಡಗಿತ್ತು. ಆದರೆ, ನಾನಾ ಫಡ್ನವೀಸ, ತಾಂತ್ಯಾ ಟೋಪೆ, ನವಾಬ ಬಹಾದೂರ ಶಾಹ ಮೊದಲಾದವರು ಈ ಬೆಂಕಿಗೆ ತುಪ್ಪವನ್ನೆರೆದರು. ಇದರಿಂದಾಗಿ ಪ್ರಜ್ವಲಿತವಾದ ಈ ಅಸಂತೋಷಾಗ್ನಿ ೧೮೫೭ರ ಸ್ವಾತಂತ್ರ್ಯ ಸಂಗ್ರಾಮವಾಗಿ ಪರಿಣಮಿಸಿತೆನ್ನುವುದನ್ನು ಸರ್ವರೂ ಅರಿತುಕೊಂಡಿದ್ದಾರೆ. ಈ ಕದನದಲ್ಲಿ ಪಂಜಾಬವನ್ನುಳಿದ ಉತ್ತರ ಭಾರತವಿಡಿ ಸಮಾವೇಶಗೊಂಡಿತ್ತು.

ಈ ವಿಪ್ಲವದ ಕರ್ಣಧಾರರು, ನಿಶ್ಶಸ್ತ್ರ ಜನತೆಯು ಆಂಗ್ಲೇಯರ ತಲೆಕೂದಲನ್ನೂ ಕೊಂಕಿಸಲಾರದು; ಕೇವಲ ಸಶಸ್ತ್ರ ಸೈನ್ಯದಿಂದ ಮಾತ್ರ ರಾಜ್ಯಭಾರದಲ್ಲಿ ಸಿಲ್ಲಿಗೊಳ್ಳಬಹುದೆಂದು ಅವಶ್ಯ ತಿಳಿದಿದ್ದರು. ಆದುದರಿಂದಲೇ ಅವರು ಭಾರತೀಯ ಸೇನೆಯಲ್ಲಿ ನಾನಾ ಪ್ರಕಾರದ ಉಪಾಯಗಳಿಂದ ವಿದ್ರೋಹದ ಬೀಜವನ್ನು ಬಿತ್ತಿದ್ದರು. ಹೀಗೆ ಈ ಬಿತ್ತನೆಯ ಕಾರ್ಯದಲ್ಲಿ ಪಂಡಿತರು ಮತ್ತು ಮುಸಲ್ಮಾನ ಮುಂದಾಳುಗಳು ಅಪೂರ್ವ ಸೇವೆಯನ್ನು ಸಲ್ಲಿಸಿದ್ದಾರೆ. ಹಿಂದೂ ಸೇನೆಗಳಲ್ಲಿ ರಾಮಾಯಣದ ಕಥೆಯನ್ನು ಮುಂದಿಟ್ಟು, ಅದರ ಪ್ರಚಾರ ಕಾರ್ಯದೊಡನೆ "ಪರಾಧೀನತೆಯು ಸ್ವಪ್ನದಲ್ಲಿಯೂ ಸುಖವಲ್ಲ" ಎಂಬುದನ್ನು ಸಾರಲಾಗುತಿತ್ತು. ರಾಜನು ಪ್ರಿಯನಾಗಿ, ಪ್ರಜೆಗಳು ದುಃಖಿಗಳಾಗಿದ್ದರೆ, ಆಗ ಅರಸನು ನರಕ ಭಾಜನನಾಗುವನು ಎಂದು ಮುಂತಾಗಿ ಹಾಡಲಾಗುತಿತ್ತು. ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ನಿತ್ಯ ನೂತನ ಕಾಯದೆಗಳಿಂದಾಗಿ ಮೆಟ್ಟಲ್ಪಡುತ್ತಿವೆ ಎಂದು ಹೇಳಲಾಗುತಿತ್ತು.

ಇಂತಹ ವಾತಾವರಣದಲ್ಲಿ ಜೈಲುಗಳಲ್ಲಿ ಕೈದಿಗಳ ವರ್ತನೆಯಲ್ಲಿ ತುಸು ಏರುಪೇರುಗಳನ್ನು ಮಾಡಲಾಯಿತು. ಆಗಲೇ ಉತ್ತರ ಪ್ರದೇಶ ಮತ್ತು ಬಿಹಾರದ ಅನೇಕ ಸೆರೆಮನೆಗಳಲ್ಲಿ ವಿದ್ರೋಹವು ಎದ್ದು ಬಿಟ್ಟಿತು. ಪ್ರಚಾರ ವೈಖರಿಯಿಂದಾಗಿ ರೇಲ್ವೆಯ ರಚನೆಯೂ ಭಾರತೀಯರ ಅಳಿವಿಗೋಸ್ಕರ ಆಯಿತೆಂದು ಜನರು ತಿಳಿದುಕೊಂಡಿದ್ದರು. ಗ್ರಾಮಗಳಲ್ಲಿ ಶಾಲೆಗಳನ್ನು ತೆರೆಯುವ ಕಾರ್ಯಕ್ರಮವೂ ಟೀಕೆಗೆ ಗುರಿಯಾಗದಿರಲಿಲ್ಲ. ಆಂಗ್ಲೇಯರು ಕ್ರೈಸ್ತಮತ ಪ್ರಚಾರಕ್ಕಾಗಿಯೇ ಈ ತಂತ್ರವನ್ನು ಬಳಸಿಕೊಳ್ಳುತ್ತಾರೆಂದು ಜನತೆ ಭಾವಿಸಿತು. ಅದಕ್ಕೆ ಸರಿಯಾಗಿ ಇಂಗ್ಲಿಷ್ ಭಾಷೆಯನ್ನರಿತವರಿಗೆ ಉದ್ಯೋಗ ನೀಡುವಾಗ ಪ್ರಥಮ ಪ್ರಾಶಸ್ತ್ಯ ಕೊಡಲಾಗುವುದೆಂದು ಸರಕಾರ ಪ್ರಕಟಿಸಿದಾಗ, ಜನತೆಯಲ್ಲಿ ಹಾಹಾಕಾರವೆದ್ದಿತು. ಪಂಡಿತರೂ ಮೌಲ್ವಿಗಳೂ ಕಿಡಿಕಿಡಿಯಾದರು. ರಾಜಭಾಷೆ ಮತ್ತು ರಾಜಧರ್ಮಗಳ ಮಾನ್ಯತೆಯನ್ನು ಕಿತ್ತುಹಾಕಿ ಆಂಗ್ಲರು ಮುಸಲ್ಮಾನೀಯ ಪ್ರಭುತ್ವವನ್ನು ಎಂದೋ ದೂರಮಾಡಿದ್ದರು; ಇದರಿಂದ ಮುಸಲ್ಮಾನರಲ್ಲಿಯೂ ಆಂಗ್ಲೇಯರ ವಿರುದ್ಧ ಘೋರ ಅಸಂತೋಷ ಹಾಗೂ ತಿರಸ್ಕಾರ ಭಾವನೆಯು ಮೂಡಿತ್ತು. ಬಿಹಾರದ ಮುಸಲ್ಮಾನರು ೧೮೫೫ರಲ್ಲಿ ಒಂದು ಘೋಷಣೆಯನ್ನೂ ಮಾಡಿಬಿಟ್ಟರು. ಇದು ಬಂಗಾಳದ ಲೆಫ್ಟಿನೆಂಟ ಗವರ್ನರ ಸರ್ ಹ್ಯಾಲಿಡೆನ ಕೈಗೂ ಸೇರಿತು. ಈ ಘೋಷಣೆಯು ಈ ರೀತಿಯಾಗಿತ್ತು:

"ಹಿಂದುಸ್ತಾನದ ನಿವಾಸಿಗಳನ್ನು ವಂಚಿಸುವುದಕ್ಕೋಸ್ಕರ, ಸರಕಾರವು ಘಾರಸಿಯಲ್ಲಿ ಒಂದು ಪ್ರತಿ ಘೋಷಣೆಯನ್ನು ಹೊರಡಿಸಿ ಅದರಲ್ಲಿ ಸರಕಾರವು ಹಿಂದೂ ಮತ್ತು ಮುಸಲ್ಮಾನ ಧರ್ಮಗಳನ್ನು ನಾಶಮಾಡ ಬಯಸುವುದಿಲ್ಲ ಎಂದು ಹೇಳಿದೆ. ಈ ಎರಡೂ ಧರ್ಮಗಳು ಪ್ರಾಚೀನ ಕಾಲದಿಂದಲೂ ಭಾರತದಲ್ಲಿವೆ. ಸರಕಾರವು ನಮ್ಮನ್ನು ಅಜ್ಞಾನಿಗಳೆಂದು ತಿಳಿಯಬಹುದು; ಆದರೆ, ಭಾರತ ವಾಸಿಗಳು ಅವೆಲ್ಲವನ್ನೂ ಕಂಡುಕೊಂಡಿದ್ದಾರೆ ಎಂದು ನಾವು ಹೇಳಬಯಸುತ್ತೇವೆ.... ಹಿಂದೂ ಮತ್ತು ಮುಸಲ್ಮಾನ ಧರ್ಮಗಳನ್ನು ಕೊನೆಗೊಳಿಸಲು ಸರಕಾರವು ಬೇರೆ ಬೇರೆ ಉಪಾಯಗಳನ್ನು ಕೈಗೊಳ್ಳಲಿಲ್ಲವೆ? ನೋಡಿರಿ: (೧) ಸಾಹೇಬಗಂಜ ಸೆರೆಮನೆಯಲ್ಲಿನ ಕೈದಿಗಳ ಧರ್ಮವು ಒಂದೇ ಇರಬೇಕೆಂದು ಆಜ್ಞೆ ಇತ್ತಿದೆ. ಇದರ ಪರಿಣಾಮವಾಗಿ ಅಲ್ಲಿ ಭಯಂಕರ ದಂಗೆಯೆದ್ದಿತು. (೨) ಹೊಸ-ಹೊಸ ಶಾಲೆಗಳನ್ನು ತೆರೆದು ಅನೇಕರನ್ನು ನಿರುದ್ಯೋಗಿಗಳನ್ನಾಗಿ ಮಾಡಿವೆ. (೩) ಆರಾ ಮತ್ತು ಮುಜಾಫರಾಬಾದದ ಜೇಲುಗಳಲ್ಲಿ ಕೈದಿಗಳ ಒಟ್ಟಲುಗಳನ್ನು ಬದಲಾಯಿಸಲಾಯಿತು. ಅಲ್ಲಿಯೂ ಕೈದಿಗಳು ವಿದ್ರೋಹವನ್ನೆಬ್ಬಿಸಿದರು; ಇದರಿಂದಾಗಿ ಸರಕಾರದ ಮಾತೇನೂ ನಡೆಯಲಿಲ್ಲ. (೪) ಇಲ್ಲಿ ಬಂದನಂತರ ಲೆಫ್ಟಿನೆಂಟ್ ಗವರ್ನರರು ಈ ಕೆಳಗಿನ ಹೊಸ ಯೋಜನೆಯನ್ನು ಮಾಡ ಬಯಸಿದ್ದಾರೆ: (೧) ಗ್ರಾಮಗ್ರಾಮಗಳಲ್ಲಿ ಶಾಲೆಗಳನ್ನು ತೆರೆಯುವುದು. (೨) ಪರ್ದಾವಂತರ ಮರ್ಯಾದೆಯನ್ನು ದೂರೀಕರಿಸುವಂತಹ ಕಾಯದೆಗಳನ್ನು ಮಾಡುವುದು. (೩) ದೇಶೀಯ ಹಕೀಮರ ಹೆಸರಿನಲ್ಲಿ ಅವರು ಆಂಗ್ಲ ಶಿಕ್ಷಣ ಮತ್ತು ಕ್ರೈಸ್ತ ಧರ್ಮವನ್ನು ಪ್ರಶಂಸಿಸಬೇಕೆಂದ, ಗುಪ್ತ ಪತ್ರಗಳನ್ನು ಬರೆಯುವುದು. (೪) ಪುಸ್ತಕಾಲಯ ಮತ್ತು ವಾಚನಾಲಯಗಳನ್ನು ಎಲ್ಲೆಲ್ಲೂ ತೆರೆದು, ಹಿಂದೂ ಮತ್ತು ಮುಸಲ್ಮಾನರನ್ನು ತಂತಮ್ಮ ಧರ್ಮದಿಂದ ವಂಚಿತರನ್ನಾಗಿ ಮಾಡುವುದು. ಅರಬಿ, ಪಾರ್ಸಿ ಹಾಗೂ ಅನ್ಯದೇಶೀಯ ಭಾಷೆಗಳನ್ನು ಮೂಲೆಗೆ ತಳ್ಳಿ, ಅವುಗಳ ಮೇಲೆ ಆಂಗ್ಲಭಾಷೆಯನ್ನು ಹೇರಿ, ಅದಕ್ಕೆ ಪ್ರಾಶಸ್ತ್ಯವೀಯುವುದು ವಂಚನೆಯಲ್ಲವೆ? ಈ ಆಜ್ಞೆಗಳಿಂದಾಗಿ, ಹಿಂದೂ ಮತ್ತು ಮುಸಲ್ಮಾನ ಧರ್ಮಗಳನ್ನು ಅಂತ್ಯಗೊಳಿಸಲು ಬಯಸುವುದಿಲ್ಲವೆ? ಇವನ್ನು ಬಿಟ್ಟುಬಿಡಿ. ೧೮೫೫ರಲ್ಲಿ ಹೆಂಗಸರ ಮೇಲೆ ಮೊಕದ್ದಮೆ ಹೇರಿದಾಗ, ಅವರನ್ನೇ ನ್ಯಾಯಾಲಯದಲ್ಲಿ ಉಪಸ್ಥಿತಗೊಳಿಸಬೇಕೆನ್ನುವ ಶಾಸನ ತಯಾರಿಸಲಾಯಿತು. ಇದರಿಂದ ಉತ್ತಮ ವಂಶದವರ ಮಾನಮರ್ಯಾದೆಗೆ ಕುಂದು ಬರುವುದಿಲ್ಲವೆ? ಇಂತಹ ದುರ್ಗತಿಯಲ್ಲಿ ನಾವು ಬದುಕುವುದಕ್ಕಿಂತ ಸಾಯುವುದೇ ಮೇಲಲ್ಲವೇ?"

ಈ ಪ್ರಕಾರದ ವಿಚಾರಗಳು ಆ ಸಮಯದ ಧಾರ್ಮಿಕ ಜನತೆಯ ಮನಸ್ಸನ್ನು ಕದಡುತಿದ್ದುವು ನಮ್ಮ ದೃಷ್ಟಿಕೋಣ ಮತ್ತು ವಿಚಾರಧಾರೆಯು ಕಾಲ ಮತ್ತು ಪ್ರಗತಿಯ ಕಾರಣದಿಂದ ಪರಿವರ್ತನೆಗೊಂಡಿದೆ ಮೇಲೆ ಹೇಳಿದ ಕಾರಣಗಳಲ್ಲಿ ಹಲವಾರನ್ನು ಇಂದು ನಾವು ಸ್ವಾಗತಿಸುತ್ತೇವೆ. ಸ್ಪೃಶ್ಯಾಸ್ಪೃಶ್ಯತೆಗಳ ಭೇದವು ದೂರವಾಗುತ್ತಿದೆ. ಸ್ತ್ರೀಯರೂ ಪುರುಷರ ಸಮಾನ ನಿಲ್ಲುತಿದ್ದಾರೆ. ಶಾಲೆ ಮತ್ತು ಕಾಲೇಜುಗಳಲ್ಲಿ ಹುಡುಗಿಯರು ಹುಡುಗರಿಗಿಂತಲೂ ಮುಂದುವರಿದಿದ್ದಾರೆ. ನೌಕರಿಗಳಲ್ಲಿ ಸ್ತ್ರೀಯರು ಪುರುಷರಿಗಿಂತ ಹಿಂದುಳಿಯಲು ಬಯಸುವುದಿಲ್ಲ. ಧರ್ಮಕ್ಕೆ ಮಹತ್ವವೆಂಬುದೇ ಉಳಿದಿಲ್ಲ. ಪುಸ್ತಕಾಲಯಗಳನ್ನು ತೆರೆಯುವುದು ತನ್ನ ಕರ್ತವ್ಯವೆಂದು ಸರಕಾರ ತಿಳಿದಿದೆ. ಆದರೆ, ನೂರು ವರ್ಷಗಳಿಗೆ ಮೊದಲು ಇವೆಲ್ಲವೂ ಭಾರತೀಯರಲ್ಲಿ ಆಂದೋಲನವನ್ನೇ ಎಬ್ಬಿಸಿ ಬಿಟ್ಟಿತು. ಆಂಗ್ಲೇಯರ ಈ ಕಾರ್ಯಕ್ರಮಗಳನ್ನು ವಿರೋಧಿಸುವ ಸಲುವಾಗಿ ಕೋಟಿಗಟ್ಟಲೆಯ ಜನರು ಸನ್ನದ್ಧರಾದರು. ಪರಂಪರೆಯನ್ನು ಉಳಿಸುವ ಸಲುವಾಗಿ ಪ್ರಾಣದಾನ ಮಾಡುವುದು ಬಹಳ ಪ್ರಧಾನಕರ್ಮವೆನಿಸಿಕೊಂಡಿತ್ತು. ಇದರಿಂದಾಗಿ ಅಧಿಕಾಂಶ ಸೈನಿಕರು ಭಾರತದಲ್ಲಿನ ಆಂಗ್ಲೇಯರನ್ನು ಅಟ್ಟಿಬಿಡಲು ಆತುರ ತೋರಿಸಿದರು. ಕೆಲವರಂತೂ ೧೮೫೭ರ ವರೆಗೆ ಕಾಯುವುದಕ್ಕೂ ಸಿದ್ಧರಿರಲಿಲ್ಲ.

೧೮೫೭ರ ಚಳಿಗಾಲದ ಕಥೆಯಿದು. ಒಬ್ಬ ಆಂಗ್ಲ ನ್ಯಾಯಾಧೀಶ ಒಂದು ದಿನ ಸಂಜೆ ಚಡಪಡಿಸುತ್ತಿದ್ದ: ತಾನು ನಿರ್ವಹಿಸುವ ಕೆಲಸವನ್ನು ನೋಡಲು ದೈನಿಕ ಕಾರ್ಯಕ್ರಮ ಪಟ್ಟಿಯನ್ನು ಪ್ರತೀಕ್ಷಿಸುತ್ತಿದ್ದನು. ಎರಡು ತಿಂಗಳುಗಳಿಂದ ತಾನು ಸೆರೆಮನೆಗೆ ಹೋಗಲಿಲ್ಲ ಎಂದಾತನಿಗೆ ಹೊಳೆಯಿತು. ಮರುದಿನ ಕಛೇರಿಯಲ್ಲಿ ತನಗೆ ಜೇಲನ್ನು ನೋಡಬೇಕಾಗಿದೆ ಎಂದು ಹೇಳಿದನು. ಎಲ್ಲ ವ್ಯವಸ್ಥೆಗಳೂ ನಡೆದುವು. ಅವನೊಡನೆ ಸೇನೆಯ ಕೆಲವು ಸಶಸ್ತ್ರ ಸೈನಿಕರೂ ಇದ್ದರು. ಸುಬೇದಾರ, ಪೋಲೀಸ್ ಸುಪರಿಂಟೆಂಡೆಂಟ್, ಕಲೆಕ್ಟರು ಮೊದಲಾದವರೂ ಹೋದರು ನ್ಯಾಯಾಧೀಶರು ಪರಿವಾರದೊಂದಿಗೆ ೫ ಗಂಟೆಗೆ ಜೇಲು ಮುಟ್ಟಿದರು. ಒಳಗಿನ ಎಲ್ಲ ಕೈದಿ ಮತ್ತು ನರ ನಿವಾಸ ಸ್ಥಾನಗಳನ್ನು ಕಂಡರು. ಜವಗೆ ಅನ್ನದಲ್ಲಿ ಕಲ್ಲುಗಳು ದೊರೆಯುತ್ತಿರುವುದರಿಂದ ಕಷ್ಟವಾಗುತ್ತಿದೆ ಎಂದು ಕೆಲವು ಕೈದಿಗಳು ಮೊದಲು ವಿನಂತಿ ಮಾಡಿಕೊಂಡಿದ್ದರು. ಜೇಲಿನ ನಿಯಮಗಳಿಗನುಸಾರವಾಗಿ ಸರಿಯಾದ ಆಹಾರವು ಅವರಿಗೆ ದೊರೆಯುತ್ತವೆ ಎಂದು ವಿಚಾರಿಸಿದಾಗ ತಿಳಿದು ಬಂತು. ಕೈದಿಗಳು ತಮ್ಮ ಜಾತಿಗೆ ಸರಿಯಾಗಿ ಬೇರೆಬೇರೆ ಪಂಕ್ತಿಗಳಲ್ಲಿ ಕೂರುತಿದ್ದರು. ಜೇಲು ಪರಿಶೀಲನೆಯಾದನಂತರ ಅವರು ಮುಂಗೇಟಿನ ಬಳಿ ಬಂದು ಜೇಲರನಿಗೆ ಏನೋ ಆಜ್ಞೆಯಿತ್ತರು.

ಐದರ ಮೇಲೆ ಹತ್ತು ಮಿನಿಟಾದ ಕೂಡಲೇ ಸೈನಿಕರು ಜೇಲಿಗೆ ಬಂದರು. ಜೇಲಿನ ಬಾಗಿಲಿನ ಸುತ್ತಲೂ ನಿಂತು ಬಿಟ್ಟರು. ಅವರಲ್ಲಿ ಇಬ್ಬರು ಅಲ್ಲಿಂದ ದೂರ

(ಆನೇ ಪುಟ ನೋಡಿರಿ)

ತಮ್ಮೆಲ್ಲರ ಸೌಹಾರ್ದ-ಸಹಕಾರಗಳಿಂದ ದಿನೇ ದಿನೇ ಸರ್ವಾಂಗ ಸುಂದರವಾಗಿ ಬೆಳೆದು, ನಿಮ್ಮ ಆರ್ಥಿಕ ಅಭ್ಯುದಯಕ್ಕಾಗಿ ಸತತವಾಗಿ ಶ್ರಮಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ : ಉಡುಪಿ (ದ. ಭಾರತ)

54 ವರುಷಗಳ ಅನುಭವಪೂರ್ಣ ಹಾಗೂ ಸರ್ವೋತ್ಕೃಷ್ಟ ಬೇಂಕು ಸೇವೆಯನ್ನು ಸರ್ವರಿಗೂ ಸರ್ವಕಾಲಕ್ಕೂ ಸರಿಸಮಾನವಾಗಿ ಸಲ್ಲಿಸಬೇಕೆಂಬುದೇ ಈ ಬೇಂಕಿನ ಸಾಧನೆ!

ಉಡ್ಪಿ. ಡಿ. ಮು. ಕೋರ್ಟಿನಲ್ಲಿ

S. C. 499/59.

ಟಿ. ರಘುನಾಥ ಕಿಣಿ ಕೊಡಾ — ವಾದಿಯು

ಮತ್ತು

ಬಿ. ರಾಮಚಂದ್ರ ಶೆಟ್ಟಿ—ಮರ್ಚಂಟ್ ಉಡ್ಪಿ ಕಸಬಾ ಕೋಳದಪೇಟೆ ವಾರ್ಡಿನ ಪೋಸ್ಟ್ ಆಫೀಸ್ ರೋಡ್ — ಪ್ರತಿವಾದಿ.

ಇವರೊಳಗೆ

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಗೆ ಪ್ರತಿವಾದಿಯಿಂದ ಬರುವ ದೇವಿ ಬಾಬ್ತು ಬಗ್ಗೆ ಹಣ ವಸೂಲಿಗೆ ವಾದಿಯು ಮಾಡಿದ ಮೇಲಿನ ದಾವೆಯು ತಾರೀಕು 23-12-59ಕ್ಕೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಉದಾಹರಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಪ್ರತಿವಾದಿಯ ಗೈರುಹಾಜರಿಯಲ್ಲಿ ಮೇಲಿನ ದಾವೆಯು ತೀರ್ಮಾನಿಸಲ್ಪಡುವುದು.

P R. Shenoy
Advocate for Plaintiff.
ಉಡ್ಪಿ. ತಾ. 3-12-59.

ತನ್ನ ಜನ್ಮವನ್ನು ಸಾರ್ಥಕಪಡಿಸಿದವನು, ತನ್ನ ಮರಣಾನಂತರವೂ ಜನತೆಯ ಸ್ಮರಣೆಯಲ್ಲಿ ಉಳಿದುಕೊಳ್ಳುವಂತೆ ಉಪಯುಕ್ತ ಕಾರ್ಯವೆಸಗಿದವನು ಪ್ರಪಂಚದ ಜನಮನ ಮಂದಿರದಲ್ಲಿ ಪೂಜಾರ್ಹನಾಗಿರುವವನೇ ಧನ್ಯನು

NAVAYUGA

Founder —

A B SHETTY,
Former Minister for Public Health
Govt of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೧-೧೨-'೫೯	೧೫

ನೀಲಂರವರ ಆಯ್ಕೆ

ಹಲವಾರು ವರ್ಷಗಳ ನಂತರ ಇದೀಗ ದಕ್ಷಿಣ ಭಾರತದ ಓರ್ವ ನಿಷ್ಠಾವಂತ ಕಾಂಗ್ರೆಸ್ಸಿಗರು ಅಖಿಲ ಭಾರತೀಯ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನಕ್ಕೆ ಆರಿಸಲ್ಪಟ್ಟಿದ್ದಾರೆ ಮುಂದಿನ ಎರಡು ವರ್ಷದ ಅವಧಿಯ ಈ ಅಧ್ಯಕ್ಷ ಸ್ಥಾನಕ್ಕೆ ಬೇರೆ ಹೆಸರುಗಳು ಸೂಚಿಸಲ್ಪಟ್ಟಿದ್ದರೂ ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ನೀಲಂ ಸಂಜೀವ ರೆಡ್ಡಿಯವರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ, ಉಳಿದವರೆಲ್ಲರೂ ತಮ್ಮ ನಾಮ ಪತ್ರಗಳನ್ನು ಹಿಂದೆ ತೆಗೆದುಕೊಂಡಿದ್ದಾರೆ ಕೇವಲ ಐವತ್ತರ ಗಡಿಯಲ್ಲಿರುವ ಶ್ರೀ ಸಂಜೀವ ರೆಡ್ಡಿಯವರ ಈ ಆಯ್ಕೆಯನ್ನು ರಾಷ್ಟ್ರದ ಎಲ್ಲ ಕಡೆಗಳಲ್ಲೂ ಸ್ವಾಗತಿಸಲಾಗಿದೆಯೆಂಬುದನ್ನು ನಾವು ಅವಶ್ಯ ಗಮನಿಸಬೇಕು. ಮೊದಲಿಗೇನೇ ಶ್ರೀ ರೆಡ್ಡಿಯವರಿಗೆ ಕಾಂಗ್ರೆಸ್ ವರಿಷ್ಠರ ಬೆಂಬಲವಿರುವುದೆಂದು ಹೇಳಲಾಗಿದ್ದುದರಿಂದ ಆಗಲೇ ಅವರ ಆಯ್ಕೆಯು ನಿಶ್ಚಿತವೆಂದು ಊಹಿಸಲಾಗಿತ್ತು ಆದರೂ ಶ್ರೀಮತಿ ಇಂದಿರ ಗಾಂಧಿಯವರ ನಾಮಪತ್ರವೂ ಸಲ್ಲಿಸಲ್ಪಟ್ಟಾಗ ತುಸು ಆಶ್ಚರ್ಯವೆನಿಸಿದರೂ ಮುಂದೆ ಎಲ್ಲವೂ ಸರಿಹೋಯಿತು.

ಅಖಿಲ ಭಾರತ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನವು ಅತ್ಯಂತ ಮಹತ್ವಪೂರ್ಣವಾದುದೂ ಪವಿತ್ರವಾದುದೂ ಉತ್ತರದಾಯಿತ್ವವಾದುದೂ ಆಗಿದೆ ಹಿಂದೆ ಹಿರಿಯರಿಗೆ ಮಾತ್ರ ಮೀಸಲಾಗಿಡುತ್ತಿದ್ದ ಈ ಸ್ಥಾನವು ಈಗ ಕರ್ತೃತ್ವಶಕ್ತಿ ಉಳ್ಳವರಿಗೆ ಸಲ್ಲುವುದೆಂಬುದಕ್ಕೆ ಇತ್ತೀಚೆಗಿನ ಕೆಲವು ವರ್ಷಗಳ ಇತಿಹಾಸವೇ ಸಾಕ್ಷಿಯಾಗಿದೆ ಸ್ವಾತಂತ್ರ್ಯಕ್ಕೆ ಮೊದಲು ಭಾರತದಲ್ಲಿಯೇ ಅತೀವ ಹಿರಿದಾಗಿರುವ ಕಾಂಗ್ರೆಸ್ ಸ್ವದೇಶೀಯರಲ್ಲಿ ಸ್ವಾತಂತ್ರ್ಯದ ಭಾವನೆಯನ್ನ ಕೆರಳಿಸಿ ವಿಮೋಚನಾ ಚಳವಳದ ಕರ್ಣಧಾರತ್ವವಹಿಸಬೇಕಾಗಿತ್ತು ಆದರೆ, ಇಂದು ಕಾಲ ಪರಿವರ್ತಿತವಾಗಿದೆ ಭಾರತವನ್ನು ಕಲ್ಯಾಣ ರಾಷ್ಟ್ರವಾಗಿ ಕಟ್ಟುವ ಮಹಾ ಪವಿತ್ರ ಕಾರ್ಯದಲ್ಲಿ ಸರಕಾರಿ ಪಕ್ಷವಾದ ಕಾಂಗ್ರೆಸ್ಸು ಅಹೋರಾತ್ರಿ ದುಡಿಯಬೇಕಾಗಿದೆ; ಭಾರತದ ಪುನಾರಚನೆಗಾಗಿ ಹೆಣಗಬೇಕಾಗಿದೆ ಜನತೆಯ ಆಶೆ ಆಕಾಂಕ್ಷೆಗಳನ್ನರಿತುಕೊಂಡು ಸರಕಾರಕ್ಕೆ ಸೂಕ್ತ ಮಾರ್ಗದರ್ಶನ ಮಾಡಬೇಕಾಗಿದೆ ಇಂತಹ ಕರ್ತವ್ಯಭಾರವನ್ನು ಹೊತ್ತಿರುವ ಕಾಂಗ್ರೆಸ್‌ನ ಅಧ್ಯಕ್ಷ ಪಟ್ಟವು ಸರಳ ಮಂಚದಷ್ಟು ಶೀವ್ರತರವಾದುದು ಅಶಾಂತಿಯ ತವರ್ಮನೆಯೂ ದುದು. ಕಾಂಗ್ರೆಸ್ ಪಕ್ಷದ ಬಲಸಂವರ್ಧನೆಯೊಡನೆ ರಾಷ್ಟ್ರ ಕಲ್ಯಾಣದ ವಿವಿಧ ಹಂತಗಳಲ್ಲಿಯೂ ಕಾಂಗ್ರೆಸ್ಸು ಸಲಹೆ ನೀಡುವ ಆವಶ್ಯಕತೆಯಿದ್ದು ಕಾಣುತ್ತದೆ ಈ ರೀತಿಯ ಹೊಣೆಗಾರಿಕೆಯನ್ನು ಹೊರಲು ಸಮರ್ಥ ವ್ಯಕ್ತಿಯನ್ನು ಆರಿಸುವಲ್ಲಿ ಕಾಂಗ್ರೆಸ್ಸು ಸಫಲವೆನಿಸಿದೆ ಒಂದು ದೃಷ್ಟಿಯಿಂದ, ಕಾಂಗ್ರೆಸ್ ವರಿಷ್ಠರು ಹೇಳಿದುದನ್ನೆಲ್ಲ ಕಾಂಗ್ರೆಸ್ ಅಧ್ಯಕ್ಷರು ಸಮರ್ಥಿಸಿಕೊಂಡು ಒಂದರಾಯಿತು, ಈ ಅಧ್ಯಕ್ಷಸ್ಥಾನವು ಕೇವಲ ಅಲಂಕಾರಕ್ಕೆ ಮಾತ್ರ ಎಂಬ ಅಭಿಪ್ರಾಯಗಳು ಪ್ರಕಟಗೊಂಡರೂ, ಇವನ್ನು ಸಂಪೂರ್ಣವಾಗಿ ಒಪ್ಪುವಂತಿಲ್ಲ ಸರಕಾರದ ಧೋರಣೆಯನ್ನು ಪಕ್ಷವು ನಿರ್ಧರಿಸುವಾಗ ಆ ಪಕ್ಷದ ಹೊಣೆಗಾರಿಕೆಯೂ ಗುರುತರವಾಗಿದೆ ಎಂಬುದು ನಿಸ್ಸಂಶಯ. ಶ್ರೀ ಸಂಜೀವ ರೆಡ್ಡಿಯವರು ತಮ್ಮ ಹಿಂದಿನ ಶ್ರೀಮತಿ ಇಂದಿರ ಗಾಂಧಿ ಮತ್ತು ಶ್ರೀ ಯು ಎನ್ ಡೇಭರರಂತೆಯೇ ನಡ ಹರೆಯದವರು, ನಿಷ್ಠಾವಂತ ಕಾಂಗ್ರೆಸಿಗರು ಮತ್ತು ಉತ್ತಮ ಕರ್ತೃತ್ವ ಶಕ್ತಿಸಂಪನ್ನರು ಇಂತಹವರಿಂದ ಕಾಂಗ್ರೆಸ್ ಪಕ್ಷದಲ್ಲಿ ಐಕ್ಯ ಹಾಗೂ ಹೊಸ ಹುಮ್ಮಸ್ಸು ಕಾಣಿಸಿಕೊಳ್ಳುವುದು ಸ್ವಾಭಾವಿಕವೇ

ಹಿಂದೊಮ್ಮೆ ಮದ್ರಾಸ ರಾಜ್ಯದ ಮಂತ್ರಿಗಳ ಗಿದ್ದಾಗ ಶ್ರೀ ರೆಡ್ಡಿಯವರು ಶಿಥಿಲಗೊಂಡ ಆಂಧ್ರ ಕಾಂಗ್ರೆಸ್ಸನ್ನು ಬಲಪಡಿಸುವ ಸಲುವಾಗಿ ಮಂತ್ರಿಪದಕ್ಕೆ ರಾಜಿನಾಮೆಯಿತ್ತು ಆಂಧ್ರ ಪ್ರಾದೇಶಿಕ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಅಲ್ಲಿ ಕಾಂಗ್ರೆಸ್ ಪಕ್ಷವನ್ನು ಯೋಗ್ಯರೀತಿಯಲ್ಲಿ ಮುನ್ನಡೆಸಿ ಅದರಲ್ಲಿ ಯಶಸ್ವಿಯಾಗಿರುವ ವ್ಯಕ್ತಿಯಾಗಿದ್ದಾರೆ ಇದೀಗ, ಆಂಧ್ರಪ್ರದೇಶದ ಮುಖ್ಯಮಂತ್ರಿ ಪದವಿಗೆ ತಿಲಾಂಜಲಿಯಿತ್ತು ಅವರು ಅಧಿಕಜವಾಬ್ದಾರಿಯುತ ಅಖಿಲ ಭಾರತೀಯ ಕಾಂಗ್ರೆಸ್‌ನ ಅಧ್ಯಕ್ಷ ಪಟ್ಟವನ್ನೇರಿ, ಕಾಂಗ್ರೆಸಿನ ಬಲಸಂವರ್ಧನೆಯನ್ನು ಗೆಯ್ದು ರಾಷ್ಟ್ರಕಲ್ಯಾಣಕ್ಕಾಗಿ ದುಡಿಯಲು ಸಿದ್ಧರಾಗಿದ್ದಾರೆ ಬಹಳದೊಡ್ಡ ಪಕ್ಷವಾದ ಕಾಂಗ್ರೆಸ್ಸಿನಲ್ಲಿಯೂ ಹಲವಾರು ಅಭಿಪ್ರಾಯಭೇದ ಜನರಿರುವುದು ಸ್ವಾಭಾವಿಕವಾದರೂ ಅವರೆಲ್ಲರನ್ನೂ ಕೂಡಾಣಿಸಿ ಮುಂದೊತ್ತುವುದು ಅವಶ್ಯವಾಗಿದೆ ಎಲ್ಲ ಅಭಿಪ್ರಾಯಗಳನ್ನೂ ಮಥಿಸಿ, ಅದರಿಂದ ಉತ್ಕೃಷ್ಟವೆನಿಸುವ ನವನೀತವನ್ನು ತೆಗೆದು ರಾಷ್ಟ್ರಕ್ಕೆ ಅರ್ಪಿಸುವುದೂ ಅಗತ್ಯವೆ ಆಳುವ ಪಕ್ಷದ ಮುಖ್ಯಾಧಿಕಾರಿಯೆನಿಸಿದರೂ ವಿರೋಧಿ ಪಕ್ಷಗಳನ್ನೂ ಗೌರವದಿಂದ ಕಾಣುವುದರಿಂದ ಈ ಪದವಿಯು ಶೋಭೆ ಹೆಚ್ಚುವುದು. ಶ್ರೀ ನೀಲಂ ಸಂಜೀವ ರೆಡ್ಡಿಯವರಲ್ಲಿ ಇವೆಲ್ಲವನ್ನೂ ಆ ಸ್ಥಾನಕ್ಕೆ ತಕ್ಕ ತಕ್ಕ ಸಾಮರ್ಥ್ಯವಿದೆ, ಇದರಿಂದಾಗಿ ಶ್ರೀ ರೆಡ್ಡಿಯವರ ಆಯ್ಕೆಯನ್ನ ಸರ್ವರೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ ಶ್ರೀ ರೆಡ್ಡಿಯವರಿಗೆ ಎಲ್ಲ ಕಾಂಗ್ರೆಸಿಗರೂ ತಮ್ಮ ಆತ್ಯಧಿಕ ಸಹಕಾರವನ್ನಿತ್ತು ಕಾಂಗ್ರೆಸ್ ಪಕ್ಷವು ತನ್ನ ಕುಂದುಕೊರತೆಗಳೆಲ್ಲವನ್ನೂ ನೀಗಿ ಸುದೃಢ ಹಾಗೂ ಸುಯೋಗ್ಯ ಮತ್ತು ಸುಸಮರ್ಥ ಪಕ್ಷವಾಗಿ ಬೆಳೆಯುವಂತೆ ಮಾಡಬೇಕಾದುದು ಅಗತ್ಯವಿದೆ. ಶ್ರೀ ರೆಡ್ಡಿಯವರ ನಾಯಕತ್ವದಲ್ಲಿ ಕಾಂಗ್ರೆಸ್ಸು ತನ್ನ ಮುಂದೆ ಬರಲಿರುವ ಗಂಡಾಂತರಗಳೆಲ್ಲವನ್ನೂ ಸಾವಧಾನದಿಂದ ಎದುರಿಸಿ ರಾಷ್ಟ್ರಹಿತ ಸಾಧಿಸುವಲ್ಲಿ ಎಂದಿಗಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಲಿ ಎಂದು ಹಾರೈಸುತ್ತೇವೆ

ಐಕರಿಗೆ ಸ್ವಾಗತ

ಅಮೆರಿಕೆಯ ಅಧ್ಯಕ್ಷ ಶ್ರೀ ಐಸೆನ್ ಹಾವರರು ತಮ್ಮ ೨೦,೦೦೦ ಮೈಲುಗಳ ವಿದೇಶ ಸಂಚಾರದ ವೇಳೆ ವಿಶ್ವದ ಬಹು ರಾಷ್ಟ್ರಗಳಿಗೆ ಭೆಟ್ಟಿಯೀಯುತ್ತಿರುವರು ಈ ಸಂದರ್ಭದಲ್ಲಿ ಅವರು ಭಾರತವನ್ನೂ ಸಂದರ್ಶಿಸಲಿರುವರು ಭಾರತಕ್ಕೆ ಸೌಹಾರ್ದಮಯ ಭೆಟ್ಟಿಯನ್ನು ನೀಡುತ್ತಿರುವ ಅಮೆರಿಕನ್ ಅಧ್ಯಕ್ಷರಲ್ಲಿ ಶ್ರೀ ಐಸನ್ ಹಾವರರೇ ಪ್ರಪ್ರಥಮರೆಂದು ತಿಳಿಯುತ್ತದೆ ಹೀಗಾಗಿ, ಅಮೆರಿಕೆ ಹಾಗೂ ಭಾರತಗಳ ಇತಿಹಾಸದಲ್ಲಿ ಮಾತ್ರವಲ್ಲ, ವಿಶ್ವದ ಚರಿತ್ರೆಯಲ್ಲಿಯೇ ಈ ಭೆಟ್ಟಿಯು ಉಲ್ಲೇಖನೀಯ ಮಾತ್ರವಲ್ಲದೆ ಮಹತ್ವದ್ದೂ ಆಗಿರುತ್ತದೆ ಎಂದು ಹೇಳಬಹುದು ಅಮೆರಿಕೆಯು ಸಂಪನ್ನ ಮತ್ತು ಅಭಿವೃದ್ಧಿಹೊಂದಿರುವ ರಾಷ್ಟ್ರ ಅದು ವಿಶ್ವದ ಅನಭಿವೃದ್ಧ ರಾಷ್ಟ್ರಗಳಿಗೆ ನೆರವನ್ನು ನೀಡುವ ಯೋಜನೆಯನ್ನಿಟ್ಟುಕೊಂಡಿದ್ದು ಇದರಿಂದ ಭಾರತಕ್ಕೂ ತುಂಬ ಸಹಾಯವಾದದ್ದಿದೆ ಅಮೆರಿಕೆ ಮತ್ತು ಭಾರತಗಳ ನಡುವ ಇರುವ ಧೋರಣೆಗಳಲ್ಲಿ ಎಲ್ಲವೂ ಒಂದಕ್ಕೊಂದು ಒಪ್ಪಿಗೆಯಾಗುವುದಿಲ್ಲವೆನ್ನುವುದನ್ನು ಒಪ್ಪಬೇಕು ಆದರೂ ಎರಡೂ ರಾಷ್ಟ್ರಗಳ ಮುಖ್ಯ ಧ್ಯೇಯವು ವಿಶ್ವಶಾಂತಿಯೇ ಎಂಬುದು ಖಚಿತವಿದೆ ಅಧ್ಯಕ್ಷ ಐಕ್ ಮತ್ತು ಪ್ರಧಾನಿ ನೆಹರು ಅವರಿಬ್ಬರೂ ವಿಶ್ವಶಾಂತಿಯ ಪುರಸ್ಕರ್ತರೆಂಬುದನ್ನು ನಾವು ಮರೆಯುವಂತಿಲ್ಲ. ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿ ಶ್ರೀ ಕ್ರಿಶ್ಚಿಯನ್ ಹರ್ಟರರು ಭಾರತ—ಚೀನಾ ಸೀಮಾ ವಿವಾದದ ಮಾತೊಂದನ್ನು ಬಿಟ್ಟರೆ, ಭಾರತವು ತನ್ನ ಸೀಮೆಯ ಕುರಿತಾಗಿ ತಾಳಿದ ನಿರ್ಧಾರವನ್ನು ಅಮೆರಿಕನರು ಈಗ ಒಪ್ಪಿರುವರೆಂದೂ ಸಮರ್ಥಿಸುವರೆಂದೂ ತಿಳಿಯುತ್ತದೆ ಹಾಗಿರುವಾಗ, ಪ್ರಧಾನಿ ನೆಹರು ಮತ್ತು ಅಧ್ಯಕ್ಷ ಐಕರ ಮಾತುಕತೆಯ ನಡುವೆ ಪ್ರಸಂಗವಶದಿಂದ ಈ ಸೀಮಾ ವಿವಾದವೂ ಮುಂದೆ ಬರುವುದು ಸ್ವಾಭಾವಿಕ ಮತ್ತು ಆಗ, ಶ್ರೀ ಹರ್ಟರರ ನಿರಾಸಕ್ತಿಯ ಬಗ್ಗೆ ಒಂದು ಖಚಿತ ನಿರ್ಧಾರವೂ ಹೊರಬೀಳಬಹುದು ಇವರಿರು ನಾಯಕರೂ ವಿಶ್ವಶಾಂತಿಯ ಬಗ್ಗೆ ಇಟ್ಟಿರುವ, ಇಡುತ್ತಿರುವ ಮತ್ತು ಇಡಬೇಕಾಗಿರುವ ಹೆಜ್ಜೆಯ ಕುರಿತಾಗಿಯೂ ವಿಚಾರ ವಿಮರ್ಶೆ ಮಾಡುವರೆಂಬುದು ನಿರ್ವಿವಾದ ಭಾರತಕ್ಕೆ ಸಮಾಗಮಿಸುವ ಅಧ್ಯಕ್ಷ ಐಕರನ್ನು ಸಮಸ್ತ ಭಾರತೀಯರು ಹೃತ್ಪೂರ್ವಕವಾಗಿ ಸ್ವಾಗತಿಸುವರಲ್ಲದೇ ಉಭಯ ರಾಷ್ಟ್ರಗಳಿಗೂ ಈ ಭೆಟ್ಟಿಯ ಸದುಪಯೋಗ ದೊರೆಯಲೆಂದು ಆಶಿಸುತ್ತಾರೆ,

---

ಸಂಕ್ಷಿಪ್ತ ಸುದ್ದಿಗಳು

ಪೂನದಲ್ಲಿ ಕ್ಷಯ ಕರ್ಮಚರರು

ಭಾರತೀಯ ಕ್ಷಯರೋಗ ನಿರೋಧ ಸಂಸ್ಥೆಯಿಂದ ಏರ್ಪಡಿಸಲಾಗುವ ಕ್ಷಯ ರೋಗ ಕರ್ಮಚಾರಿಗಳ ಹದಿನಾರನೆಯ ಸಮ್ಮೇಳನವು ಪೂನದ ಆರ್ಮ್‌ಡ್ ಫೋರ್ಸಸ್ ಮೆಡಿಕಲ್ ಕಾಲೇಜಿನಲ್ಲಿ ೧೯೬೦ನೆ ಜನವರಿ ೧೯ರಿಂದ ೨೨ರ ವರೆಗಿನ ನಾಲ್ಕು ದಿನಗಳಲ್ಲಿ ಸೇರುವುದು. ಸಂಸ್ಥೆಯ ಅಧ್ಯಕ್ಷೆಯಾದ ಶ್ರೀಮತಿ ರಾಜಕುಮಾರಿ ಅಮೃತ ಕೌರರು ಈ ಸಮ್ಮೇಳನವನ್ನು ಉದ್ಘಾಟಿಸುವರು ಸಮ್ಮೇಳನದಲ್ಲಿ ಕೇಂದ್ರ ಆರೋಗ್ಯಮಂತ್ರಿಗಳು ಹಾಗೂ ಬೊಂಬಾಯಿಯ ಮುಖ್ಯ ಮತ್ತು ಆರೋಗ್ಯಮಂತ್ರಿಗಳು ಭಾಷಣಮಾಡುವ ನಿರೀಕ್ಷೆಯಿದೆ ಕಲಕತ್ತೆಯ ಡಾ| ಪಿ ಕೆ ಸೆನ್ನರು ಅಧ್ಯಕ್ಷತೆ ವಹಿಸುವರು. ಈ ಸಮ್ಮೇಳನವು ಕ್ಷಯರೋಗ ಮತ್ತಿತರ ಶ್ವಾಸಕೋಶ ರೋಗಗಳ ಕುರಿತಾಗಿ ಚರ್ಚೆ ನಡೆಸುವುದು

ನವದೆಹಲಿಯಲ್ಲಿ ಸಡಗರ

ನವದೆಹಲಿಯಲ್ಲಿ ಅಮೆರಿಕದ ಅಧ್ಯಕ್ಷ ಶ್ರೀ ಐಸೆನ್ ಹಾವರರ ಸ್ವಾಗತದ ಬಗ್ಗೆ ಸಕಲ ಸನ್ನಾಹಗಳೂ ನಡೆಯುತ್ತಿವೆ ಅಂತೆಯೇ ೧೨ರಂದು ಜಾಗತಿಕ ಕೃಷಿ ಪ್ರದರ್ಶನದ ಬಗ್ಗೆಯೂ ಏರ್ಪಾಡುಗಳು ಮುಗಿದಿವೆ ಈ ಕೃಷಿ ಪ್ರದರ್ಶನವನ್ನು ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಉದ್ಘಾಟಿಸುವರು ಅಧ್ಯಕ್ಷ ಐಕರೂ ಈ ಸಮಾರಂಭದಲ್ಲಿ ಉಪಸ್ಥಿತರಿದ್ದು, ಅಮೆರಿಕೆಯ ಪ್ರದರ್ಶನದ ಡೇರೆಗಳನ್ನು ಕತ್ತರಿಸುವರು ಶ್ರೀ ಐಕರು ಆಗ್ರಾಕ್ಕೆ ತೆರಳಿ ಅಲ್ಲಿನ ವಿಶ್ವವಿಖ್ಯಾತ ತಾಜಮಹಲನ್ನು ಕಾಣುವರೆಂದೂ ಗೊತ್ತಾಗಿದೆ ನವದೆಹಲಿಯಲ್ಲಿ ಇಂದು ಒಂದು ಅಪೂರ್ವ ರೀತಿಯ ಉತ್ಸಾಹ, ಚಟುವಟಿಕೆಗಳು ಕಂಡುಬರತೊಡಗಿವೆ

ಸಿಂಹಳ ಸಂಸತ್ತ್ವಿಸರ್ಜನೆ

ದಿವಂಗತ ಭಂಡಾರ ನಾಯಕೆಯವರ ವಧೆಯ ಅನಂತರ ಅಲ್ಲಿನ ಪ್ರಧಾನಿಯಾಗಿ ಆಯ್ಕೆ ಹೊಂದಿದ ಶ್ರೀ ದಹನಾಯಕೆಯವರು ಮಂತ್ರಿ ಮಂಡಲವನ್ನು ಮುಂದುವರಿಸಲು ಅಸಮರ್ಥರಾಗಿದ್ದಾರೆ. ಇದರಿಂದಾಗಿ ಪ್ರಧಾನಿಯವರ ಸಲಹೆಯ ಮೇರೆಗೆ ಗವರ್ನರ ಜನರಲ್ ಶ್ರೀ ಗುಣವರ್ಧನೆಯವರು ಸಿಂಹಳದ ಸಂಸತ್ತನ್ನು ವಿಸರ್ಜಿಸಿ ಬಿಟ್ಟಿರುವರು. ಮುಂದಿನ ಸಾರ್ವತ್ರಿಕ ಚುನಾವಣೆಯು ಮಾರ್ಚ, ೬೦ರಲ್ಲಿ ನಡೆಯುವುದೆಂದೂ ಅದುವರೆಗೆ ಶ್ರೀ ದಹನಾಯಕೆಯವರ ಮಂತ್ರಿ ಮಂಡಳಿಯೇ ಜೋಪಾಸನೆಯ ಮಂತ್ರಿ ಮಂಡಳವಾಗಿ ಮುನ್ನಡೆಯಬೇಕೆಂದೂ ಈಗ ಹೊರಡಿಸಿದ ಆಜ್ಞೆಯಲ್ಲಿ ಹೇಳಲಾಗಿದೆ ಪ್ರಧಾನಿ ದಹನಾಯಕೆಯವರು ತನ್ನ ಲಂಕಾ ಫ್ರೀಡಂ ಪಾರ್ಟಿಯ ಸದಸ್ಯತನಕ್ಕೆ ರಾಜಿನಾಮೆ ಇತ್ತಿರುವರೆಂದೂ ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ

ಒಂದು ನೂತನ ಪಕ್ಷವನ್ನು ಸ್ಥಾಪಿಸಿ ಸ್ಪರ್ಧಿಸುವರೆಂದೂ ಗೊತ್ತಾಗಿದೆ.

ವಿದರ್ಭದ ಬಗ್ಗೆ ನಿರ್ಧಾರ

೧೯೬೦ನೆ ಎಪ್ರಿಲ್ ಮೊದಲನೆ ದಿನದಿಂದ ಈಗಿನ ದ್ವಿಭಾಷಾ ಮುಂಬಯಿ ರಾಜ್ಯವನ್ನು ಗುಜರಾಥ ಮತ್ತು ಮಹಾರಾಷ್ಟ್ರಗಳೆಂಬ ದಾಗಿ ವಿಭಜಿಸುವ ಕುರಿತು ಇನ್ನಾವ ಸಂಶಯವನ್ನೂ ತಾಳಬೇಕಾಗಿಲ್ಲ. ಆದರೆ, ವಿದರ್ಭದ ಕುರಿತಾಗಿ ಪ್ರೋತ್ಸಾಹದಾಯಕವೆನಿಸಿದ ಅಭಿಪ್ರಾಯ ಕಾಂಗ್ರೆಸ್ ವರಿಷ್ಠರಲ್ಲಿ ಕಂಡುಬರುತ್ತಿಲ್ಲ ಆದುದರಿಂದ ಪ್ರತ್ಯೇಕ ವಿದರ್ಭ ರಾಜ್ಯದ ಬೇಡಿಕೆಯನ್ನು ಮುಂದಿಟ್ಟಿರುವ ಈ ಪ್ರದೇಶದ ವಿಧಾನಸಭಾ ಸದಸ್ಯರಲ್ಲಿ ಸುಮಾರು ೩೫ ಜನರು ಸಾಮೂಹಿಕ ರಾಜಿನಾಮೆ ಯೀಯಲು ನಿರ್ಧರಿಸಿದ್ದು ಕಾಂಗ್ರೆಸ್ ಅಧ್ಯಕ್ಷೆಯವರಿಗೆ ತಮ್ಮ ಇಂಗಿತವನ್ನು ತಿಳಿಸಿದ್ದಾರೆ ಆದರೆ, ಅವರು ವೈಯಕ್ತಿಕವಾಗಿ ಪತ್ರ ಬರೆದು, ರಾಜಿನಾಮೆ ಕೊಡು ಬಾರದೆಂದ ಆದೇಶಪತ್ರಿರುವರು ಶಾಸನ ಸಭಾ ಸದರು ಈ ಆದೇಶಕ್ಕೆ ತಲೆಬಾಗುವರೆ ಎಂಬುದು ಸ್ಪಷ್ಟವಿಲ್ಲ.

ಸ್ಥಾನಗಳನ್ನು ಕಾಯ್ದಿಡಲು...

೧೯೭೦ರ ವರೆಗೆ ಪರಿಶಿಷ್ಟ ವರ್ಗ ಮತ್ತು ಜನಾಂಗಗಳಿಗೆ ಸಂಸತ್ತು ಹಾಗೂ ವಿಧಾನ ಮಂಡಳದಲ್ಲಿ ಸ್ಥಾನಗಳನ್ನು ಕಾಪ್ಟರಿಸಲು ಈಗಿನ ವ್ಯವಸ್ಥೆಯನ್ನೇ ಮುಂದುವರಿಸುವ ಸಲುವಾಗಿ ಸಂವಿಧಾನಕ್ಕೆ ಮಾಡಿದ ತಿದ್ದುಪಡಿ ಮಸೂದೆಯು ಸಂಸತ್ತಿನ ಎರಡೂ ಸಭೆಗಳಲ್ಲಿ ಆವಶ್ಯಕ ಬಹುಮತದೊಡನೆ ಸ್ವೀಕೃತವಾಯಿತು. ಆದರೆ ಆಂಗ್ಲೊ ಇಂಡಿಯನ್ನರಿಗೆ ಕೆಲವೊಂದು ಸ್ಥಾನಗಳನ್ನು ಕಾಯ್ದಿಡುವ ಇದೇ ಮಸೂದೆಯ ಎರಡನೆ ಅನುಚ್ಛೇಧವು ಮಾತ್ರ ಸಂಸತ್ತಿನಲ್ಲಿಯೇ ಆವಶ್ಯಕ ಬಹುಮತ ಪಡೆಯದಿರುವುದರಿಂದ ಬಿದ್ದು ಹೋಯಿತು

ಕಮ್ಯೂನಿಸ್ಟರು ಗೆಲ್ಲುವರು!

ಸೂರತ್ತಿನ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತಿದ್ದ ಶ್ರೀ ಎ. ಕೆ. ಗೋಪಾಲನ್ನರು ತಮ್ಮ ಕಮ್ಯುನಿಸ್ಟ್ ಪಕ್ಷವು ಮುಂಬರುವ ಕೇರಳದ ಮಧ್ಯಾವಧಿ ಚುನಾವಣೆಗಳಲ್ಲಿ ಗೆದ್ದು ಬರುವುದೆಂದು ವಿಶ್ವಾಸ ಪ್ರದರ್ಶಿಸಿದರು.

ಉಡುಪಿ ಡಿ ಮು. ಕೋರ್ಟಿನಲ್ಲಿ

O. S No 301/1959.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್ ಉಡುಪಿ, ಯಿದ್ರ ಯೇಜಂಟ್ ಪಿ ಪುರುಶೋತ್ತಮ ನಾಯ್ಕ — ವಾದಿ.

ಮತ್ತು

A. ಪದ್ಮನಾಭ ಶೆಣೆ ಕೂಡಾ

— ಪ್ರತಿವಾದಿರು.

ಯಿವರೊಳಗೆ

3ನೇ ಪ್ರತಿವಾದಿ — ಸಿ. ಯಚ್. ಹರಿದಾಸ ನಾಮಕ, ರಾಮಣ್ಣ ಭಟ್ರ ಮಗ, ಉಡುಪಿ ತಾಲ್ಯು ಅಲೆವೂರು ಗ್ರಾಮದಲ್ಲಿರುವವ ಯಿವರೀಗೆ ಈ ಮೂಲ್ಕ ತಿಳಿಯಪಡಿಸುವದೇನೆಂದ್ರೆ: —

ವಾದಿ ಬೇಂಕಿಗೆ ಪ್ರತಿವಾದಿರು ತಾ. 21—1—1958ರಲ್ಲು ರೂ 10,000ಕ್ಕೆ ಬರಕೊಟ್ಟ ಡಿಮಾಂಡ ನೋಟಿನ ಬಾಕಿ ಅಸಲು ಬಡ್ಡಿ ರೂ. 3005—39ಕ್ಕೆ ವಾದಿರು ಪ್ರತಿವಾದಿರ ಮೇಲೆ ಮಾಡಿದ ಫಿರ್ಯಾದಿನ ದಾವೆಯು ತಾ. 21—12 59ಕ್ಕೆ 3ನೇ ಪ್ರತಿವಾದಿಯ ಹಾಜ್ರಿರು ನೋಟೀಸಿನ ಬಗ್ಗೆ ಯಿಡೋಣಾಗಿಯದೆ ಎಂಬ ಸಂಗ್ತಿ ಈ ಮೂಲ್ಕ ತಿಳಿಸೋದಾಗುತ್ತದೆ.

(By Order of the Court)

H. Ramanatha Pai,

Advocate for Plaintiff.

Udipi, Dated 20—11—59.

ಅಲ್ಲಲ್ಲಿಯ ಸುದ್ದಿ ಸಾರ

ಉಡುಪಿಗೆ ಪೋಪ್ ರಾಯಭಾರಿಗಳ ಆಗಮನ — ಇದೇ ತಾ. 4ನೇ ಬೆಳಿಗ್ಗೆ ಭಾರತದಲ್ಲಿ ಪೋಪರ ರಾಯಭಾರಿಗಳಾಗಿರುವ ರೆ. ಜೇಮ್ಸ್ ರೋಬರ್ಟ್ ನೋಕ್ಸ್ ಇವರು ಉಡುಪಿ ರೋಮನ್ ಕೆಥೋಲಿಕ್ ಚರ್ಚಿಗೆ ಸಂದರ್ಶನವಿತ್ತಾಗ ರೆ ಫಾ ಜಿ ನೋರೋನ್ಹಾ, ರೋಕ್ಕಿ ಫೆರ್ನಾಂಡಿಸ್ ಮೊದಲಾದವರು ಸ್ವಾಗತಿಸಿದರು. ಶ್ರೀ ಬಿ ಎಸ್. ಉಪಿಸರು ಸ್ವಾಗತ ಭಾಷಣ ಮಾಡಿದರು. ಇಲ್ಲಿಗೆ ಸಂದರ್ಶನನೀಯುವಂತಾದುದಕ್ಕಾಗಿ ಅತಿಥಿಗಳು ಸಂತೋಷವನ್ನು ಸೂಚಿಸಿ ಆಶೀರ್ವಾದ ನೀಡಿದರು. ಬಳಿಕ ಅಧ್ಯಕ್ಷರಿಗೂ ನಾಗರಿಕರಿಗೂ ಚಹ ಸತ್ಕಾರ ನಡೆಯಿತು ಶ್ರೀ ರೋಕ್ಕಿ ಫೆರ್ನಾಂಡಿಸರು ಸಭಿಕರ ಪರಿಚಯಮಾಡಿ ಕೊಟ್ಟರು.

ಅ ಬಳಿಕ ಉಡುಪಿ ನಗರ ಸಭೆಯವರು ರೆ. ಜೇಮ್ಸ್ ರೋಬರ್ಟ್ ನೋಕ್ಸ್‌ರವರಿಗೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮಾನಪತ್ರ ನನ್ನಿತ್ತು ಗೌರವಿಸಿದರು. ನಗರ ಸಭಾಧ್ಯಕ್ಷ ಡಾ. ಕೆ. ಎಲ್. ಐತಾಳರು ಅತಿಥಿಗಳನ್ನು ಸ್ವಾಗತಿಸಿ ಮಾನಪತ್ರವನ್ನರ್ಪಿಸಿದರು. ಇದರಲ್ಲಿ ಉಡುಪಿಯ ಚಾರಿತ್ರಿಕಹಿನ್ನೆಲೆ, ಇಂದಿನ ಶಿಕ್ಷಣ ಸಂಸ್ಥೆಗಳು, ದೇಶದಲ್ಲೂ ಜಿಲ್ಲೆಯ ಕ್ರೈಸ್ತ ಬಂಧುಗಳು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮಾಡುತ್ತಿರುವ ಸೇವೆ ಮೊದಲಾದುವುಗಳನ್ನು ಪ್ರಸ್ತಾವಿಸಲಾಗಿತ್ತು. ಅತಿಥಿಗಳು ದೇಶದ ಉನ್ನತಿಗೆ ಕೈಗಾರಿಕೆಗಳು ಪ್ರಾಮುಖ್ಯವೆಂದೂ ಇಲ್ಲಿ ತಾಂತ್ರಿಕ ವಿದ್ಯಾಭ್ಯಾಸದ ಅನುಕೂಲ್ಯವಿರುವುದು ಸಂತೋಷವೆಂದೂ ಭಾರತಕ್ಕೆ ಜಗತ್ತಿನಲ್ಲಿಯೇ ಉತ್ತಮ ಸ್ಥಾನವಿದೆಯೆಂದೂ ಮುಂತಾಗಿ ತಮ್ಮ ಉತ್ತರದಲ್ಲಿ ಹೇಳಿದರು. ಶ್ರೀ ಎ. ಜಿ ಅಲ್ಮೆಯವರು ಧನ್ಯವಾದಿಸಿದರು.

ಮಹಿಳಾ ಸಮಾಜ ಉಡುಪಿ — ಇದರ ವಾರ್ಷಿಕೋತ್ಸವವು ಇದೇ ತಾ. 11ನೇ ಶುಕ್ರವಾರ ಸಂಜೆ ಡಾ| ಟಿ ಎಂ. ಎ ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಲಿದೆ ಇದೇ ಸಂದರ್ಭದಲ್ಲಿ ನೂತನ ಶಿಶು ವಿಹಾರದ ಉದ್ಘಾಟನೆಯನ್ನು ಮಂಗಳೂರಿನ ಶ್ರೀಮತಿ ಕಲ್ಯಾಣಿ ಡಿ ಸೆಟ್ಟಿಯವರು ನೆರವೇರಿಸಲಿರುವರು

ಕಾರಂತರ 'ಯಕ್ಷಗಾನ ಬಯಲಾಟ'ಕ್ಕೆ ಪಾರಿತೋಷಕ — ಡಿಲ್ಲಿಯ ಸಾಹಿತ್ಯ ಎಕೇಡೆಮಿಯವರು ಭಾರತೀಯ ಭಾಷೆಗಳಲ್ಲಿ 1956—58ರ ಅವಧಿಯಲ್ಲಿ ಪ್ರಕಟವಾದ ಉತ್ತಮ ಪುಸ್ತಕಗಳಿಗೆ 1959ರ ಅವಧಿಯಲ್ಲಿ ನೀಡುವ ಪಾರಿತೋಷಕಗಳನ್ನು ಇತ್ತೀಚೆಗೆ ಪ್ರಕಟಿಸಿರುತ್ತಾರೆ ಇವುಗಳಲ್ಲಿ ಶ್ರೀ ಶಿವರಾಮ ಕಾರಂತರು ಬರೆದ 'ಯಕ್ಷಗಾನ—ಬಯಲಾಟ'ವೆಂಬ ಗ್ರಂಥವು ಒಂದಾಗಿದೆ. ಪ್ರತಿ ಗ್ರಂಥಕ್ಕೆ ರೂ 5,000 ಪಾರಿತೋಷಕ ಸಿಗುವುದು. ಇದನ್ನು ಫೆಬ್ರವರಿ 13ರಂದು ಡಿಲ್ಲಿಯಲ್ಲಿ ಪ್ರಧಾನಮಂತ್ರಿ ನೆಹರೂರವರು ವಿಶೇಷ ಸಮಾರಂಭದಲ್ಲಿ ವಿತರಣೆ ಮಾಡಲಿರುವರು.

ಭಾರತೀಯ ಸಂಸ್ಕೃತಿ ಪರಂಪರೆಗೆ ದಕ್ಷಿಣ ಭಾರತೀಯರ ಕೊಡುಗೆ — ಇದೇ ತಾ. 5ರಂದು ಸುಪ್ರಸಿದ್ಧ ತತ್ವ ಶಾಸ್ತ್ರಜ್ಞರೂ, ಮದ್ರಾಸ್ ಯುನಿವರ್ಸಿಟಿಯ ತತ್ವಶಾಸ್ತ್ರ ವಿಭಾಗದ ಪ್ರಾಧ್ಯಾಪಕರೂ ಆದ ಪ್ರೊ. ಟಿ. ಯಮ್. ಪಿ. ಮಹದೇವನ್ ಅವರು ಮಂಗಳೂರಿನ ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಸಭಾ ಭವನದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುತ್ತಾ ಭವ್ಯವಾದ ಭಾರತೀಯ ಸಂಸ್ಕೃತಿ ಪರಂಪರೆಗೆ ದಕ್ಷಿಣ ಭಾರತೀಯರ ಕೊಡುಗೆ ವಿಶೇಷ ಮಹತ್ತರವಾದುದೆಂದೂ ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಮತಗಳ ಸಂಸ್ಥಾಪಕರು ಜನ್ಮವೆತ್ತಿದುದು ದಕ್ಷಿಣ ಭಾರತದಲ್ಲೇ ದೂ ದಕ್ಷಿಣ ಭಾರತೀಯರು ಈ ಸ್ಥಾನಕ್ಕೆ ಅನುಗುಣವಾಗಿ ಭಾರತದ ಈ ಪರಂಪರೆಯು ಶಾಶ್ವತವಾಗಿರಿಸಲು ದುಡಿಯಬೇಕೆಂದೂ ಹೇಳಿದರು. ಅಲ್ಲದೆ ಶಂಕರಾಚಾರ್ಯರು ಹಿಂದೂ ಧರ್ಮಕ್ಕೆ ಸಲ್ಲಿಸಿದ ಸೇವೆಯನ್ನೂ ವಿವರಿಸಿದರು. ಗೀತಾಯಜ್ಞ ಸಮಿತಿಯ ಅಧ್ಯಕ್ಷ ಡಾ. ಡಿ. ಎಸ್ ಐಯ್ಯರರು ಸಭಾರಂಭದಲ್ಲಿ ಸ್ವಾಗತಿಸಿದರಲ್ಲದೆ, ಅಂತ್ಯದಲ್ಲಿ ಧನ್ಯವಾದಿಸಿದರು.

ಗೀತಾಯಜ್ಞ ಪ್ರಾರಂಭ — ತಾ. 6ರಂದು ಉತ್ತರಕಾಶಿಯ ಸ್ವಾಮಿ ಚಿನ್ಮಯಾನಂದಜಿಯವರು ಗವರ್ನ್‌ಮೆಂಟ್ ಕಾಲೇಜಿನ ಮೈದಾನದಲ್ಲಿ ಗೀತಾಯಜ್ಞವನ್ನು ಪ್ರಾರಂಭಿಸಿದ್ದಾರೆ. ಈ ಯಜ್ಞವನ್ನು ಮದ್ರಾಸ್ ವಿಶ್ವವಿದ್ಯಾಲಯದ ಪ್ರೊ ಟಿ. ಎಮ್. ಪಿ. ಮಹದೇವನ್ ಅವರು ಉದ್ಘಾಟಿಸಿದರು ಸ್ವಾಮಿ ಚಿನ್ಮಯಾನಂದರು ತಾ. 6ರಿಂದ 21 ದಿನಗಳ ವರೆಗೆ ಉಪನ್ಯಾಸಗಳನ್ನು ಮಾಡಲಿರುವರು.

ಹರಿಕಥಾ ಕಾಲಕ್ಷೇಪ — ಕಳೆದ ತಾ. 30ನೇ ರಾತ್ರಿ ಬಾರಕೂರು ಮೂಡುಕೇರಿ ಸೋಮೇಶ್ವರ ದೇವಸ್ಥಾನದಲ್ಲಿ ದೀಪೋತ್ಸವದ ಅಂಗವಾಗಿ ಶ್ರೀ ಬಿ ಎಲ್ ಎಸ್ ಅಡಿಗರು, ಶ್ರೀ ಬಿ ಶಿವರಾಮ ಶಾಸ್ತ್ರಿಗಳ ಹಾರ್ಮೋನಿಯಂ, ಬಿ. ಸುಬ್ರಹ್ಮಣ್ಯ ಶಾಸ್ತ್ರಿಗಳ ತಬಲಾ ವಾದನದೊಂದಿಗೆ ಚಂದ್ರಹಾಸ ಎಂಬ ಹರಿಕಥಾ ಕಾಲಕ್ಷೇಪ ಮಾಡಿದರು.

ಉದ್ಘಾಟನೆ — ಸರ್ಕಳ ಶ್ರೀ ಶಾರದಾ ಯಕ್ಷಗಾನ ಕಲಾಮಂಡಳಿಯ ವತಿಯಿಂದ ಭಜನಾಮಂಡಳಿಯೊಂದು ತಾ. 5ರಂದು ಶ್ರೀ ಕೆ ಆನಂದ ಸೆಟ್ಟರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟದೆ. ಯಕ್ಷಗಾನ ಕಾಲಕ್ಷೇಪವೂ ಇತ್ತು.

ಕೆಲ್ಲೂರುಕಟ್ಟೆ—ಶಿಶಿಲ ಮೋಟರು ಸರ್ವಿಸು — ಬೆಳ್ತಂಗಡಿ ತಾಲೂಕು ಬಂಗಾಡಿಯ ಕೆಲ್ಲೂರು ಕಟ್ಟೆಯಿಂದ ಬೆಳ್ತಂಗಡಿ, ಧರ್ಮಸ್ಥಳ, ನಿಡ್ಲೆ, ಕೊಕ್ಕಡ, ಅರಸಿನಮಕ್ಕಿ ಗಾಗಿ ಶಿಶಿಲಕ್ಕೆ ಒಂದು ಬಸ್ಸು ಸರ್ವಿಸನ್ನು ಮಂಜೂರು ಮಾಡಬೇಕಾಗಿ ಮಲೆನಾಡಿನ ಜನರ ಪರವಾಗಿ ಒಂದು ಮನವಿಯನ್ನು ಸರಕಾರಕ್ಕೆ ಮಾಡಿರುತ್ತದೆ ಆದರೆ ಬಸ್ಸು ಲೈನ್ ಮಂಜೂರುಮಾಡುವ ಮೊದಲು ಆರ್ ಟಿ. ಒ. ಇಲಾಖೆಯ ಪ್ರತಿನಿಧಿಗಳು ಈ ರಸ್ತೆಯು ಬಸ್ಸು ಚಲಾವಣೆಗೆ ಯೋಗ್ಯವೇ ಎಂದು ಪರೀಕ್ಷಿಸಲು ಬರುವರಿವಾರೆ ಆದುದರಿಂದ ಸದ್ರಿ ರಸ್ತೆಯು ಹಾದು ಹೋಗುವ ಗ್ರಾಮಗಳ ಪಂಚಾಯತಗಳೂ ಊರ ಮಹನೀಯರೂ ಈ ರಸ್ತೆಯನ್ನು ಬಸ್ಸು ಸಂಚಾರಕ್ಕೆ ಯೋಗ್ಯವಾಗುವಂತೆ ದುರುಸ್ತಿ ಮಾಡಿಸಿ ಅಧಿಕಾರಿಗಳ ಶಿಫಾರಸಿಗೆ ಅರ್ಹವಾಗುವಂತೆ ಮಾಡಿ ಈ ಮಲೆನಾಡಿಗೆ ಬಸ್ಸು ಸರ್ವಿಸು ಆಗುವಂತೆ ಸಹಕಾರ ನೀಡಬೇಕಾಗಿ ಸಂಬಂಧಪಟ್ಟ ಪಂಚಾಯತ ಮತ್ತು ಊರ ಮಹನೀಯರಲ್ಲಿ ಶ್ರೀ ದಂಬೆ ಸುಬ್ರಾಯರು ವಿನಂತಿಸುತ್ತಾರೆ

ಧರ್ಮಸ್ಥಳದಲ್ಲಿ ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನ — ಸುಮಾರು 26 ವರ್ಷಗಳ ಹಿಂದೆ ಪ್ರಾರಂಭಿಸಲ್ಪಟ್ಟ ಈ ಸಮ್ಮೇಳನವು ಈ ವರ್ಷ ನವಂಬರ 29 ಮತ್ತು 30ರಲ್ಲಿ ವೈಭವದಿಂದ ನೆರವೇರಿತು ಧರ್ಮ ಸಮ್ಮೇಳನವು ಕೊಲ್ಲಾಪುರದ ಡಾ. ಎ ಎನ್. ಉಪಾಧ್ಯೆ ಅವರ ಅಧ್ಯಕ್ಷತೆಯಲ್ಲಿ ಜನರಲ್ ಕೆ ಎಂ. ಕಾರ್ಯಪ್ಪನವರಿಂದ ಉದ್ಘಾಟಿಸಲ್ಪಟ್ಟಿತು. ಆರಂಭದಲ್ಲಿ ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆ ಎಂ. ಎಲ್ ಎ. ಅವರು ಸ್ವಾಗತ ಭಾಷಣಮಾಡಿದರು ಅನಂತರ ಬೇರೆ ಬೇರೆ ಧರ್ಮಗಳ ಕುರಿತು ವಿದ್ವಾಂಸರಿಂದ ಭಾಷಣಗಳಾದವು.

ಸಾಹಿತ್ಯ ಸಮ್ಮೇಳನವು ವ. ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಜರಗಿ ಸಾಹಿತಿಗಳನೇಕರ ಭಾಷಣಗಳಾದುವು ಎರಡೂ ದಿನವೂ ಪ್ರಸಿದ್ಧ ಸಂಗೀತಗಾರರ ಸಂಗೀತ ಮೇಳವೂ ಇತ್ತು, ದಿವಂಗತ ಮಂಜಯ್ಯ ಹೆಗ್ಗಡೆಯವರು ಪ್ರಾರಂಭಿಸಿದ ಈ ಸಮ್ಮೇಳನವನ್ನು ಈಗಿನ ಪಟ್ಟಾಂಕಿತರಾದ ಶ್ರೀ ರತ್ನವರ್ಮ ಹೆಗ್ಗಡೆಯವರು ಯಥಾವತ್ತಾಗಿ ಮುಂದುವರಿಸಿಕೊಂಡು ಹೋಗುತ್ತಿರುವುದು ಅಭಿನಂದನೀಯವಿದೆ.

ಯಕ್ಷಗಾನ — ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ಕಳೆದ ತಾ 21 ಮತ್ತು 29ರಲ್ಲಿ ಶ್ರೀಕೃಷ್ಣ ಪೂಜೆಯೂ ಯಕ್ಷಗಾನ ಕಾಲಕ್ಷೇಪಗಳೂ ಶ್ರೀ ಕೈರಿಕ್ಕಾಡು ಮಾಸ್ತರ್ ವಿಷ್ಣುಭಟ್ಟರ ಹಿರಿತನದಲ್ಲಿ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಜರಗಿದುವು

ದ ಕ ಜಿಲ್ಲಾ ಗ್ರಾಮ ಉದ್ಯೋಗಸ್ಥರ ಸಮ್ಮೇಳನವು — ಇದೇ ತಾ 20ನೇ ಆದಿತ್ಯವಾರ ಬೆಳಿಗ್ಗೆ ಮಂಗಳೂರಲ್ಲಿ ಕೆಥೋಲಿಕ್ ಕ್ಲಬ್ ಕಟ್ಟಡದಲ್ಲಿ ಜರಗಲಿರುವುದು. ಶ್ರೀ ಟಿ. ಎಂ ರೋಟೊ [illegible] ಇವರು ಅಧ್ಯಕ್ಷತೆ ವಹಿಸುವರು ಶ್ರೀ ಜಿ ಸೋಮಶೇಖರ ರಾಯರು ಸಮ್ಮೇಳನವನ್ನು ಉದ್ಘಾಟಿಸುವರು.

ವುಡ್‌ಲ್ಯಾಂಡ್ಸ್ ಹೋಟೇಲಿನ ಕೃಷ್ಣರಾಯರಿಗೆ ಸತ್ಕಾರ — ಹೊಟೇಲು ಉದ್ಯೋಗದಲ್ಲಿ ವಿಶಿಷ್ಟ ಅನುಭವ ಪಡೆಯುವ ಉದ್ದೇಶದಿಂದ ಯುರೋಪು ಅಮೇರಿಕ ದೇಶಗಳ ಪ್ರವಾಸವನ್ನು ತೀರಿಸಿಬಂದಿದ್ದ ವುಡ್‌ಲೇಂಡ್ಸ್ ಹೊಟೇಲುಗಳ ಮಾಲಕ ಶ್ರೀ ಕೆ. ಕೃಷ್ಣರಾಯರಿಗೆ ತಾ. 7ರಂದು ದ. ಕ ಜಿಲ್ಲಾ ಹೊಟೇಲು ಮಾಲಕರ ಸಂಘದ ಕಡೆಯಿಂದ ಮಂಗಳೂರು ಕೀರ್ತಿಮಹಾಲಿನಲ್ಲಿ ಸತ್ಕಾರವಿತ್ತು ಗೌರವಿಸಲಾಯಿತು ಸಂಘದ ಕಾರ್ಯದರ್ಶಿ ಶ್ರೀ ಪೈ. ವಾಸುದೇವ ಭಟ್ಟರು ಸ್ವಾಗತಿಸಿದರು ಶ್ರೀ ಕುಪ್ಪಿ ಶ್ರೀನಿವಾಸ ಶೆಣೈಯವರು ಕೂಟದ ಅಧ್ಯಕ್ಷತೆ ವಹಿಸಿದ್ದರು

ದ. ಕ. ಜಿಲ್ಲಾ ಸ್ಕೌಟ್ ಕಮಿಶನರ — ರಾಗಿ ಶ್ರೀ ಬಿ ಎಸ್ ಬಾಸ್ಕರ ಪೈಗಳು ಆರಿಸಲ್ಪಟ್ಟಿದ್ದಾರೆಂದು ತಿಳಿದು ಬರುತ್ತದೆ

ಶ್ರೀ ಬಡಗಬೆಟ್ಟು ವಿಟ್ಠಲ ಹೆಗ್ಡೆಯವರ ನಿಧನ — ಇದೇ ತಾ 4ನೇ ಬೆಳಿಗ್ಗೆ ಶ್ರೀ ಬಡಗಬೆಟ್ಟು ವಿಟ್ಠಲ ಹೆಗ್ಡೆಯವರು ತಮ್ಮ ಉಡುಪಿಯ ನಾಯರ್‌ಕೆರೆ ಬಿಡಾರದಲ್ಲಿ ಸ್ವಲ್ಪ ರೋಗದಿಂದ ನರಳಿದ ನಂತರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ದಿವಂಗತರು ಸಾತ್ವಿಕ ಸ್ವಭಾವದವರಾಗಿ ಜನಾನುರಾಗಗಳಿಸಿದ್ದರು

ಎನ್. ಸಿ ಸಿ ದಿನಾಚರಣಾ ಸಮಾರಂಭವು — ಉಡುಪಿಯ ಅಜ್ಜರಕಾಡು ಮೈದಾನದಲ್ಲಿ ಇದೇ ತಾ 6ನೇ ಸಂಜೆ ಜರಗಿತು ಪೆರೇಡ್ ಕವಾಯತು ಆದಮೇಲೆ ನಗರ ಸಭಾಪತಿ ಡಾ ಕೆ ಎಲ್ ಐತಾಳರು ಸ್ವಾಗತ ಭಾಷಣಮಾಡಿದರು. ವರದಿ ವಾಚನವಾದ ಮೇಲೆ ವಂದನೆಗಳನ್ನು ಸ್ವೀಕರಿಸಿದ ಪೋಲೀಸು ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟ್ ಶ್ರೀ ಸಿ. ಕೆಂಪಯ್ಯ ಇವರು ಪಾರಿತೋಷಕ ಹಂಚಿ ಭಾಷಣವಿತ್ತರು

ಸುಬ್ರಹ್ಮಣ್ಯದಲ್ಲಿ ಧರ್ಮಸಮ್ಮೇಳನವು — ತಾ 4ರಂದು ಶ್ರೀ ಬಿ ಭುಜಂಗರಾಯರ ಅಧ್ಯಕ್ಷತೆಯಲ್ಲಿ ಶ್ರೀ ಆದಿದೇವಾನಂದ ಜೀ ಸ್ವಾಮಿಯವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಸುಬ್ರಹ್ಮಣ್ಯ ಗೌಡರು ಸ್ವಾಗತಿಸಿದರು. ಶ್ರೀ ಕೆ. ಕೆ ಪೈಗಳಿಂದ ಭಾಷಣ, ಶ್ರೀ ಬಿ ಎಂ ಇದಿನಬ್ಬನವರಿಂದ ಕವಿತಾ ವಾಚನಗಳಾದವು. ಸುಬ್ರಹ್ಮಣ್ಯ ದೇವಸ್ಥಾನದ ಟ್ರಸ್ಟಿಗಳಲೊಬ್ಬರಾದ ಶ್ರೀ ಬಿ ನಾರಾಯಣ ಶೇಖರು ಕೃತಜ್ಞತೆಗಳನ್ನರ್ಪಿಸಿದರು.

ವಿವಾಹ ಸಮಾರಂಭ — ಉಡುಪಿಯ ಜನಪ್ರಿಯ ವೈದ್ಯ ಶ್ರೀ ಟಿ. ಎನ್ ಕೇಳುನಂಬಿಯಾರರ ತೃತೀಯ ಪುತ್ರಿ ಕುಮಾರಿ ವತ್ಸಲಾ ನಂಬಿಯಾರ್ ಬಿ ಎ ಬಿ. ಟಿ ಇವರ ವಿವಾಹವು ವಿ| ವಿದ್ವಾನ್ ಪಿ ಕೇಳು ನಾಯರರ ಪುತ್ರ ಶ್ರೀ ವಿ. ಎಂ. ದಾಮೋದರನ್ ನಾಯರ್, ಎಂ ಎ ಬಿ ಎಲ್. ಇವರೊಂದಿಗೆ ತಾ. 6ನೇ ಮಧ್ಯಾಹ್ನ ಬ್ರಹ್ಮಗಿರಿಯ ವಧುವಿನ ಗೃಹದಲ್ಲಿ ವೈಭವದಿಂದ ಜರಗಿತು. ಊರ ಪರವೂರ ಪ್ರತಿಷ್ಠಿತ ಮಹನೀಯರು ಈ ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದರು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

ಇತಿಹಾಸಸ್ಪೃಷ್ಟ

(೫ನೇ ಪುಟದಿಂದ)

ವಿದ್ದು ಸಮೀಪದಲ್ಲೇ ಮುಖ ಬಾಡಿಸಿ ಕುಳಿತು ಬಿಟ್ಟರು. "ಏನು ಸಮಾಚಾರ? ನಿಮಗೇನಾಗಿದೆ? ಕುಶಲರಾಗಿದ್ದೀರಿ ತಾನೆ?"—ಸುಬೇದಾರನು ಪ್ರಶ್ನಿಸಿದನು.

ವಿಸೇಸರ ಶಾಹ ಎಂಬವನು ಉತ್ತರವಿತ್ತನು—ನಮ್ಮ ಆರೋಗ್ಯ ಸರಿಯಿಲ್ಲ. ಮುಂಜಾವದಲ್ಲಿ ಥಂಡಿ ಗಾಳಿ ಬೀಸಿಬಿಟ್ಟಿತು ಈಗಲೂ ಚಳಿಯಾಗುತ್ತಿದೆ ನಿಮ್ಮೊಡನೆ ಜಗಲಿಯಲ್ಲಿ ನಿಲ್ಲುವಷ್ಟು ಶಕ್ತಿ ನಮ್ಮಲ್ಲಿ ಉಳಿದಿಲ್ಲ." ಎಡಡನೆಯವನು ಮಾತಾಡಲಿಲ್ಲ ಆದರೆ, ಆತನನ್ನು ನೋಡುವಾಗ ತುಂಬ ರೋಗಗ್ರಸ್ತನೆಂದು ತೋರುತಿತ್ತು ಸುಬೇದಾರನು ಉಡುಪು ಕಳಚಿ ಕೆಲಹೊತ್ತು ಆರಾಮ ಪಡೆಯುವಂತೆ ಅವರಿಬ್ಬರಿಗೂ ಆಜ್ಞೆಯಿತ್ತನು ಸೇವಕರು ಕೋಣೆಗೆ ತೆರಳಿ ಒಪ್ಪಗಳನ್ನು ಬಿಚ್ಚಿ ಬಂದೂಕನ್ನು ಮೂಲೆಯಲ್ಲಿ ಸರಿಸಿಟ್ಟರು ಆದರೆ ವಿಸೇಸರ ಶಾಹನು ಹಾಗೆ ಮಾಡಲಿಲ್ಲ ಉಡಿಗೆ ತೊಟ್ಟು ಬಂದೂಕು ಹಿಡಿದುಕೊಂಡೇ ಇದ್ದನು ಇದನ್ನು ಕಂಡು ಅವನ ಸಂಗಾತಿ ಕೇಳಿದನು—

"ಅಣ್ಣಾ ಹೋಗು, ದುಃಖಿತನಂತೆ ಅಂಗಿ ಕಳಚಿ ಆರಾಮ ಪಡೆ ನಿನ್ನ ಮುಖ ವಿವರ್ಣವಾಗಿದೆ ಭೂತ ಒಡೆದವನಂತೆ ತೋರಿಬರುತ್ತಿ ಬಾ, ಮಲಗಿ ವಿಶ್ರಾಂತಿ ತೆಗೆದುಕೊಳ್ಳು."

'ತಮ್ಮಾ, ಈಗ ನನ್ನ ಮನಸ್ಸು ಕಟ್ಟಿದೆ ನನಗ ಕಟ್ಟ ನೆನಪು ಬರುತ್ತಿದೆ. ನನ್ನ ಮನಸ್ಸನ್ನು ಶುದ್ಧೀಕರಿಸುತ್ತಲಿದ್ದೇನೆ ನನ್ನ ಆರೋಗ್ಯ ಬೇಗನೇ ಸುಧಾರಿಸುವುದೆಂದು ನಂಬುತ್ತೇನೆ"

ಮಾತು ಇಲ್ಲಿಗೇನೇ ನಿಂತುಬಿಟ್ಟಿತು ವಿಸೇಸರ ಶಾಹನನ್ನು ಯಾರೂ ಗಮನಿಸಲಿಲ್ಲ, ಅಧಿಕಾರಿಗಳು ಎಂದು ಹೊರಟುರು, ತಮಗೆಂದು ವಿರಾಮ ದೊರೆಕೀತು ಎಂದು ಸೈನಿಕರು ಪ್ರತೀಕ್ಷಿಸುತ್ತಿದ್ದರು. ನ್ಯಾಯಾಧೀಶ, ಕಲೆಕ್ಟರ ಮೊದಲಾದವರು ಹೊರಗೆ ಹೊರಟರು, ತುಸು ಹೊತ್ತು ಮಾತಾಡುತ್ತ ನಿಂತರು ಅಷ್ಟರಲ್ಲಿಯೇ 'ಢಂ' ಎಂಬ ಧ್ವನಿ ಬಹಳ ಭಯಂಕರವಾಗಿ ಕೇಳಿತು ಒಂದು ಗುಂಡು ನೇರವಾಗಿ ನ್ಯಾಯಾಧೀಶನ ಕಿವಿಗೆ ಅತಿ ಸಮೀಪದಲ್ಲಿ ಸರಿದು ಕಬ್ಬಾಗಿಲಿನ ಮೂಲೆಗಲ್ಲಿಗೆ ಬಡೆಯಿತು

ಆ, ಇದೇನಾಯಿತು? ಎಲ್ಲರೂ ಮೌನವಾದರು ಎಲ್ಲರೂ ಒಮ್ಮೆಲೇ ಅಧಿಕಾರಿಗಳತ್ತ ನೋಡತೊಡಗಿದರು ಅವರಲ್ಲಿ ನಾಮಮಾತ್ರಕ್ಕೂ ಗಾಬರಿ ಕಾಣಿಸಿಕೊಂಡಿರಲಿಲ್ಲ ಅವರು ನಗು ನಗುತ್ತ ಮಾತಾಡಿಕೊಳ್ಳುತಿದ್ದರು.

ಈ ದುರ್ಘಟನೆಯಿಂದ ಹೊತ್ತು ಮೊದಲು ದುಃಖಿಯು ವಿಸ್ಮಿತನಾದನು ಅವನು ಚಾಪೆಯಿಂದ ಎದ್ದು ಹೊರಗೆ ಬಂದು ನೋಡುತ್ತಾನೆ! ವಿಸೇಸರ ಗುಂಡು ಹಾರಿಸಿದ್ದನೆ! ಆದರೆ ಯಾರಿಗೂ ಹಾನಿಯೊದಗಿಲ್ಲ ಆತ ವಿಸೇಸರನತ್ತ ನೆಗೆದು ಕೂಗಿದ—'ಹಿಡಿಯಿರಿ, ಹಿಡಿಯಿರಿ, ಹರೇರಾಮ್, ನೀನೇನು ಅನರ್ಥ ಮಾಡಿ ಬಿಟ್ಟೆ!" ಈ ಕೂಗಾಟವನ್ನು ಕೇಳಿದ ಕೆಳ ಅಧಿಕಾರಿಗಳೆಲ್ಲ ಅಲ್ಲಿ ಸೇರಿದರು ವಿಸೇಸರ ಪುನಃ ಗುಂಡು ತುಂಬಿಸಿ ಹಾರಿಸುವುದರಲ್ಲಿದ್ದನು ಅಷ್ಟರಲ್ಲೇ ಆತನು ಹಿಡಿಯಲ್ಪಟ್ಟನು, ಅವನ ಕೋವಿ ಎಳೆದುಕೊಳ್ಳಲ್ಪಟ್ಟಿತು ಆಂಗ್ಲ ಅಧಿಕಾರಿ ಈ ಘಟನೆಯಿಂದ ಲವಲೇಶವೂ ಅಂಜದೆ ಮುಂದುವರಿದನು.

ಆಗ ವಿಸೇಸರನ ಮುಖದಿಂದ ಅಯ್ಯೋ ಪರಮಾತ್ಮ! ಬಿಳಿಯವನನ್ನಳಿಸದ ನಾನು ಮಹಾಪರಾಧನಾಗಿಬಿಟ್ಟೆ" ಎಂಬ ವಿಷಾದವಾಕ್ಯ ಉಚ್ಚರಿಸಲ್ಪಟ್ಟಿತು

ಮಾಖಂಡನು ಹೇಳಿದನು— "ನಿನ್ನ ಈ ಕೆಲಸ ಅತೀವ ಹೀನವಾದುದು· ನೀನು ಗುಂಡನ್ನು ಪ್ರಜ್ಞೆಯಿದ್ದೇ ಹಾರಿಸಿದೆಯ?"

. 'ಹೌದು ಮಹಾಸ್ವಾಮಿ, ನ್ಯಾಯಾಧೀಶ ಮತ್ತು ಮೆಜಿಸ್ಟ್ರೇಟರಿಬ್ಬರನ್ನೂ ವಧಿಸಿ ದೇಶವನ್ನು ಬಿಳಿಜನರ ಅಧರ್ಮದಿಂದ ಉಳಿಸಬೇಕೆಂದು ಭಾವಿಸಿದ್ದೆನು. ನೇರ ಗುರಿಯನ್ನು ಹೊಡೆಯದ ಈ ನನ್ನ ಪಾಪಿ ಹಸ್ತಗಳಿಗೆ ಧಿಕ್ಕಾರವಿರಲಿ ಭಗವಂತನು ನನಗಂತೂ ವೀರಗತಿಯನ್ನು ಒದಗಿಸಿದನು." ವಿಸೇಸರನು ಉತ್ತರಿಸಿದನು.

"ಇವರಿಬ್ಬರೂ ಬಹಳ ಒಳ್ಳೆಯ ಮನುಷ್ಯರು ಎಲ್ಲೆಲ್ಲಿಯೂ ಇವರ ಪ್ರಶಂಸೆಯು ಕೇಳಿಬರುತ್ತಿದೆ. ಇಂತಹ ನ್ಯಾಯಾಧೀಶರು ಬೇರೆಲ್ಲಿ ದೊರೆಯಬಲ್ಲರು? ನಿನಗೆ ಅವರ ಮೇಲೆ ಏನಾದರೂ ಮನಸ್ತಾಪವಿದೆಯೆ? ಅವರು ನಿನಗೆಂದಾದರೂ ನಷ್ಟ ಹೊಂದಿಸಿರುವರೆ?" ನಾಯಕನು ಪ್ರಶ್ನಿಸಿದರು

"ಎಂದೆಂದೂ ಇಲ್ಲ. ಆದರೆ, ನನಗೆ ಬಿಳಿಯರನ್ನು ಕಂಡರಾಗದು. ಅವರು ನಮ್ಮನ್ನು ಧರ್ಮಭ್ರಷ್ಟರನ್ನಾಗಿ ಮಾಡುತ್ತಾರೆ ಛಲಕಪಟಗಳಿಂದ ನಮ್ಮ ದೇಶವನ್ನು ಅಪಹರಿಸಿಕೊಳುತಿದ್ದಾರೆ ಬಿಳಿಯರೂ ಅವರ ಗುಲಾಮರಾದ ಭಾರತವಾಸಿಗಳೂ ಒಟ್ಟುಸೇರಿ ನಮ್ಮ ದೇಶವನ್ನು ಹೇಳ ಹೆಸರಿಲ್ಲವಂತೆ ಮಾಡುತಿದ್ದಾರೆ ನನ್ನ ಕೈಯಲ್ಲಿ ಸ್ವರ್ಗನರಕಗಳ ಆಧಿಪತ್ಯವಿದ್ದದ್ದರೆ, ಇವರನ್ನೆಲ್ಲಾ ನರಕಕ್ಕೆ ಅಟ್ಟಿಬಿಡುತಿದ್ದೆ ಇಂತಹ ಪಾಪಿಗಳನ್ನು ಸಂಹರಿಸಿದರೆ, ಅದರಿಂದ ಪಾಪವೇನು?" ತಾನು ಮಹಾಪುಣ್ಯ ಕಾರ್ಯವೆಸಗುತ್ತಿರುವೆನೆಂಬಂತೆ ಅತ್ಯಂತೋತ್ಸಾಹದಿಂದ ಹೇಳಿದನು ತನಗೆ ಮರಣ ಭೀತಿ ಎಳ್ಳನಿತೂ ಇಲ್ಲವೆಂಬುದನ್ನು ಆತನ ಉತ್ಸಾಹ ಹಾಗೂ ಧೈರ್ಯಗಳು ಬಹಿರಂಗಗೊಳಿಸುತಿದ್ದುವು

೧೮೫೭ರ ಈ ಪ್ರಪ್ರಥಮ ದೇಶಭಕ್ತನು ಭಸರೆ ಎಂಬಲ್ಲಿನ ನಿವಾಸಿಯಾಗಿದ್ದನು ಆತನ ಮೇಲೆ ಕಟ್ಲೆ ಹಾಕಲಾಯಿತು. ಅವನು ಯಾವಾಗಲೂ ಆನಂದೋತ್ಸಾಹಗಳಿಂದಲೇ ಕೂಡಿದ್ದನು ಆಜೀವನ ಕರಿನೀರಿನ ಶಿಕ್ಷೆಯು ಆತನಿಗೆ ಕೊಡಲ್ಪಟ್ಟಿತು ಕುಂವರ ಸಿಂಹರ ಸೇನಾಪತ್ಯದಲ್ಲಿ ಆಂಗ್ಲೇಯರ ಹಲ್ಲು ಕೀಳುವ ಸಂಗಡದಲ್ಲಿ ವಿಸೇಸರನೂ ಸೇರಿಕೊಂಡಿದ್ದನು ಆದರೆ, ಈ ದೇಶಭಕ್ತ ೧೮೫೭ರ ವರೆಗೆ ಕಾಯಲು ಸಿದ್ಧನಾಗಿರಲಿಲ್ಲ ೧೮೫೭ರಲ್ಲಿಯೇ ತನ್ನ ಜೀವನವನ್ನು ಮಾತೃದೇಶಕ್ಕೋಸ್ಕರ ಅರ್ಪಿಸಿ ಎಂದೆಂದಿಗೂ ಅಗಲಿ ಹೋಗಿ ಬಿಟ್ಟನು

(ಆಧಾರ. ಡಾ| ಹೇಮಚಂದ್ರ ಜೋಶಿ)

ಕುಂದಾಪುರ ಅಸಿಸ್ಟೆಂಟ್ ಕಮಿಶನರ್ (ಟೆನೆನ್ಸಿ) ಕೋರ್ಟಿನಲ್ಲಿ

ಮೊಕ್ಕಾಂ—ಉಡ್ಪಿ,

O P No. 209/1959

ಜಗನ್ನಾಥ ಸೆಟ್ಟಿ —ಅರ್ಜಿದಾರ

ಮತ್ತು

1. ಬಿಲ್ಲ ಲಾಚ ಹೆಂಗ್ಸು—ಸೂರು ಹೆಂಗ್ಸಿನ ಮಗಳು

2. ಬಿಲ್ಲ ಹೆರಿಯ }
3. ಬಿಲ್ಲ ರಂಗ } 1ನೇ ಎದ್ರಿ ಬಿಲ್ಲ ಲಾಚ ಹೆಂಗ್ಸಿನ ಮಕ್ಕಳು—
4. ಬಿಲ್ಲ ಬಡಿಯ }

ಎದ್ರಿರೆಲ್ಲರೂ ಉಡ್ಪಿ ತಾಲ್ಲೂಕು ಮೂಡಹಾಡು ಗ್ರಾಮದಲ್ಲಿರುವವರು—ಎದ್ರಿರು.

ಮೇಲಿನ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ ಸದ್ರಿ ಅರ್ಜಿದಾರರು ನಿಮ್ಮ ಮೇಲೆ ಮೇಲಿನ ಕೋರ್ಟಿನಲ್ಲಿ ದುರ್ಮುಖಿ, ಹೇವಿಳಂಬಿ, ಮತ್ತು ವಿಳಂಬಿ ವರ್ಷಗಳ ಬಾಕಿ ಗೇಣಿಯನ್ನು ಕೇಳಿ ಇವಿಕ್ಷನ್ ಪಿಟಿಶನ್ (Eviction Petition) ದಾಖಲು ಮಾಡಿರುತ್ತಾರೆ. ಸದ್ರಿ ನಂಬ್ರವನ್ನು ತಾರೀಕು 22-12 59ಕ್ಕೆ ಉಡ್ಪಿ ಮೊಕ್ಕಾಂನಲ್ಲಿ ತನಿಖೆಗೆ ಇಟ್ಟಿರುತ್ತಾರೆ ಆ ದಿನ್ನ ನೀವು ಖುದ್ದಾಗಿಯಾಗಲೀ, ವಕೀಲ ಮೂಖಾಂತರವಾಗಿ ಯಾಗಲೀ ಮೇಲಿನ ಕೋರ್ಟಿನ ಮುಂದೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸದ್ರಿ ನಂಬ್ರವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು

(By the Order of the Court)

P Shivaji Shetty, B A LL B,
Advocate for Petitioner

ಮೊಕ್ಕಾಂ, ಉಡ್ಪಿ, ೨-12-59

ಅದೃಷ್ಟಶಾಲಿ ರಾಷ್ಟ್ರನಾಯಕ
ಜಾರ್ಜ್ ವಾಶಿಂಗ್‌ಟನ್

ಲೇಖಕಿ ಜಿನೇ ಇಯೋಟನ್.

ಅನುವಾದಕರು:

ಯು ಎಲ್ ಆಚಾರ್ಯ, ಎಮ್ ಎ ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

ಪ್ರತಿಗಳಿಗೆ ಬರೆಯಿರಿ:

1 ನವಯುಗ ಪ್ರೆಸ್, ಉಡುಪಿ
2 ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಭಿಪ್ರಾಯ

(೪ನೇ ಪುಟದಿಂದ)

ನೇಪಾಳದ ಹಿಂದಿನ ಪ್ರಧಾನಿ ಮಾತೃಕಾ ಪ್ರಸಾದ ಕೊಯಿರಾಲಾರ ನಿಕಟ ಬಂಧು ಇಂದಿನ ಪ್ರಧಾನಿ ಶ್ರೀ ಬಿ ಪಿ. ಕೊಯಿರಾಲಾ ಆದರೂ ರಾಜನೀತಿಯಲ್ಲಿ ಹಗಲು ರಾತ್ರಿಗಳಂತೆ ಇಬ್ಬರೂ ತಂತಮ್ಮ ಧೋರಣೆಯನ್ನೇ ನೆಚ್ಚುವವರು. ೧೯೫೩ರಲ್ಲಿ ಶ್ರೀ ಮಾತೃಕಾ ಪ್ರಸಾದ ಕೊಯಿರಾಲಾರು ಪ್ರಧಾನ ಮಂತ್ರಿಯಾಗಿದ್ದರು. ಆ ಸಮಯದಲ್ಲಿ ನೇಪಾಲೀಯ ಕಾಂಗ್ರೆಸ್ಸನ್ನು ಶ್ರೀ ವಿಶ್ವೇಶ್ವರ ಪ್ರಸಾದ ಕೊಯಿರಾಲಾರು ಮುನ್ನಡೆಸುತಿದ್ದರು ಅವರು ಪ್ರಧಾನಮಂತ್ರಿಗಳ ಮುಂದೆ ಹಲವು ಬೇಡಿಕೆಗಳನ್ನು ಮುಂದಿಟ್ಟಿದ್ದರು, ಆದರೆ, ಅವು ತಿರಸ್ಕೃತವಾದುವು ಬಂಧುಗಳ ರಾಜನೀತಿಕ ಮತಭೇದಕ್ಕೆ ಕಾರಣವಾಗಿ ಎಂದೂ ಇವರಿಬ್ಬರ ಮಾತುಗಳು ಪರಿಣಮಿಸಲಿಲ್ಲ ಆಗಾಗ ಇವರು ಬಂಧುಗಳ ನಡುವೆ ಮತಭೇದವು ತುಂಬ ಇರುತಿತ್ತು, ಇಬ್ಬರೂ ತಮ್ಮ ರಾಷ್ಟ್ರೀಯ ಆಕಾಂಕ್ಷೆಗಳ ಮಾರ್ಗದಲ್ಲಿ ಬಾಧಕವಾಗಿ ಕಾಣಿಸಿಕೊಂಡಿದ್ದರು ಆದರೂ ಇವರ ವಿಚಾರ ಸ್ವಾತಂತ್ರ್ಯಶೀಲರಿದ್ದು, ಸ್ವರಾಷ್ಟ್ರದ ವಿಚಾರ ಸ್ವಾತಂತ್ರ್ಯವನ್ನು ಬೇರೆ ಯಾರಿಗೂ ಬಲಿಯಾಗಿ ಕೊಡುವಷ್ಟು ಸ್ವಾರ್ಥಿರಾಗಲಿಲ್ಲ

ರಾಜಕಾರಣದಲ್ಲಿ ಪಟುಗಳಾದ ಕೊಯಿರಾಲಾ ತಮ್ಮ ರಾಷ್ಟ್ರದ ಪರಂಪರೆಯನ್ನು ರಕ್ಷಿಸಿಕೊಳ್ಳುವಲ್ಲಿ ಸಶಕ್ತರಾಗಿರುವರೆಂದು ನಾವು ಭಾವಿಸಿದರೆ ತಪ್ಪಾಗಲಾರದು.

ಕಾರ್ಕಳ ಡಿ ಮು ಕೋರ್ಟಿನಲ್ಲಿ

O S No 401/1959

ನಾಗಿ ಸೆಟ್ಟಿ —ವಾದಿಳು

ಕೂಸು ಸೆಟ್ಟಿ ಕೂಡಾ —ಪ್ರತಿವಾದಿರು.

ಇವರೊಳಗೆ–

ಪ್ರತಿವಾದಿರು

9 ಎಲ್ಲು ಸೆಟ್ಟಿ, ಚಂದು ಸೆಟ್ಟಿ ಮಗ, ಮಂಗಳೂರು ತಾಲ್ಲೂಕು ಶಿಮಂತ್ತೂರು ಗ್ರಾಮದ ಅಂಬೇಲಬೀಡು ಎಂಬಲ್ಲಿರುವವರು.

7 ದೂಜ ಸೆಟ್ಟಿ ಲಿಂಗ ಸೆಟ್ಟಿ ಮಗ, ಮಂಗಳೂರು ತಾಲ್ಲೂಕು ತಾಳಿಪಾಡಿ ಗ್ರಾಮದ ಅದಾರಗುತ್ತು ಯೆಂಬಲ್ಲಿಯಿರುವವ

ಇವರಿಗೆ–

ವಿಳಂಬಿ ಸಂವತ್ಸರದ ಮೂಲಿಗೇಣಿ ಗೇಣಿ ಬಡ್ಡಿ ಕೂಡಾ ರೂಪಾಯಿ 941/09 ಮುಂದಿನ ಬಡ್ಡಿ ಕೋರ್ಟು ಖರ್ಚು ವಗೈರೆ ಬರಮಾಡಿಕೊಳ್ಳುವರೆ ವಾದಿಳು ಮಾಡಿದ ಸದ್ರಿ ದಾವೆಯು ತಾರೀಕು 14–12 1959ಕ್ಕೆ ಇಟ್ಟಿರುವದ್ರಿಂದ ಸದ್ರಿ ದಾವೆಗೆ ನಿಮ್ಮ ಆಕ್ಷೇಪ ಇದ್ದಲ್ಲಿ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉಜರು ಹಾಕತಕ್ಕದ್ದು ತಪ್ಪಿದ್ದಲ್ಲಿ ತೀರ್ಮಾನ ಮಾಡಲಾಗುವದು

P. Ramachandra Rao,
Pleader for Plff

ಕಾರ್ಕಳ, ತಾ 6—12—1959

ಚಂದಾದಾರರು

ನಮ್ಮ ಚಂದಾ ಹಣವನ್ನು ಸಿಂಡಿಕೇಟ್' ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು

ಮೆನೇಜರ್, ನವಯುಗ, ಉಡುಪಿ.

ಪ್ರಗತಿ ಪಥ

ರೇಲುಗಾಡಿ ನಿರ್ಮಾಣ

ಪೆರಂಬೂರಿನ ಕಾರಖಾನೆಯು ಯಶಸ್ವಿಯಾಗಿ ಮುನ್ನಡೆಯುತ್ತದೆ.

ಭಾರತೀಯ ರೀಲ್ವೆಗಳು ಮೊನ್ನೆ ಮೊನ್ನೆಯವರೆಗೂ ವಿದೇಶಗಳಿಂದಲೇ ಗಾಡಿಗಳನ್ನು ಆಮದುಮಾಡಿಕೊಳ್ಳುತ್ತಿದ್ದುವು. ಸ್ವಾತಂತ್ರ್ಯಪ್ರಾಪ್ತಿಯನಂತರ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸ್ವಾವಲಂಬನ ಸಾಧಿಸುವ ಉದ್ದೇಶದಿಂದಾಗಿ, ೧೯೫೨ರಲ್ಲಿ ಮದ್ರಾಸಿನ ಸಮೀಪದ ಪೆರಂಬೂರು ಎಂಬಲ್ಲಿ ರೇಲುಗಾಡಿಗಳನ್ನು ತಯಾರಿಸುವ ಒಂದು ಕಾರಖಾನೆಯನ್ನು ಸ್ಥಾಪಿಸಲು ಶಂಕುಸ್ಥಾಪನೆ ಮಾಡಲಾಯಿತು. ಇದರ ಕಾರ್ಯವು ತೀವ್ರತರವಾಗಿ ನಡೆದುದರಿಂದ ೧೯೫೫, ಎಂದರೆ, ಕೇವಲ ಮೂರೇ ವರ್ಷಗಳಲ್ಲಿ ಈ ಕಾರಖಾನೆಯು ನಿರ್ಮಾಣವು ಪೂರ್ತಿಗೊಂಡು ಅದು ಉತ್ಪಾದನೆಗೆ ತೊಡಗಿತು.

ಕಾರಖಾನೆಯು ಉತ್ಪಾದನೆಗೆ ತೊಡಗಿದ ಮೊದಲ ವರ್ಷದಿಂದಲೇ ಇದರ ಕಾರ್ಯವು ಪ್ರೋತ್ಸಾಹದಾಯಕವಾಗಿಯೂ ನಿರೀಕ್ಷೆಗಿಂತ ಅಧಿಕವಾಗಿಯೂ ನಡೆಯಿತು. ಇದರಿಂದಾಗಿ ಈಗ ಪ್ರತಿ ಆರು ಕೆಲಸದ ಗಂಟೆಗಳಿಗೆ ಒಂದು ರೇಲು ಗಾಡಿಯನ್ನು ತಯಾರಿಸಬಹುದು, ಎಂದರೆ, ಒಂದು ವರ್ಷದಲ್ಲಿ ೪೨೦ ರೇಲು ಗಾಡಿಗಳು ನಿರ್ಮಾಣಗೊಳ್ಳುತ್ತವೆ. ಮೂರನೆಯ ದರ್ಜೆಯ ರೇಲು ಗಾಡಿಗಳನ್ನು ತಯಾರಿಸುವುದರೊಡನೆ ಪ್ರಾರಂಭವಾದ ಈ ಕಾರಖಾನೆಯು ಈಗ ಸಾಮಾನು ಹೊರುವ ಗಾಡಿಗಳನ್ನೂ ಉತ್ಪಾದಿಸುತ್ತದೆ. ಇನ್ನು ಕೆಲವೇ ಸಮಯದಲ್ಲಿ ಪ್ರಥಮ ಶ್ರೇಣಿಯ ಗಾಡಿಗಳ ತಯಾರಿಕೆಯು ಇಲ್ಲಿ ಇದು ಯಶಸ್ವಿಯಾಗುವುದೆಂದು ಹೇಳಬಹುದು. ೧೯೬೦—೬೧ರಲ್ಲಿ ವರ್ಷವೊಂದರ ೩೫೦ ಉತ್ತಮ ವರ್ಗದ ಗಾಡಿಗಳನ್ನು ತಯಾರಿಸಬೇಕೆಂಬ ಅಂದಾಜಿದೆ. ಈ ಕಾರಖಾನೆಯು ತಾನು ತಯಾರಿಸಿದ ಗಾಡಿಗಳ ಬೆಲೆಯಲ್ಲಿಯೂ ಸಾಕಷ್ಟು ಇಳಿತಾಯ ಸ್ಥಿರಸ್ಥ, ವಿದೇಶಗಳ ಗಾಡಿಗಳಿಗಿಂತ ಅಗ್ಗದರದಲ್ಲಿ ಒದಗಿಸುತ್ತದೆ. ಎಲ್ಲ ವೆಚ್ಚಗಳೂ ಸೇರಿ, ಪೆರಂಬೂರಿನ ಒಂದು ಗಾಡಿಯ ಬೆಲೆಯು ರೂ ೮೫ ಸಾವಿರ ವಾಗುವುದು. ಪ್ರಾರಂಭದಲ್ಲಿ ೧೯,೬೦೦ ಮಾನವ–ಘಂಟೆ (ಒಬ್ಬ ಮಾನವನು ೧ ತಾಸು ಕೆಲಸ ಮಾಡಿದರೆ ಅ ಅವರು ಒಂದು ಮಾನವ ಘಂಟೆ)ಗಳ ಕಾಲಾವಧಿ ಒಂದು ಗಾಡಿಯ ಉತ್ಪಾದನೆಗೆ ಬೇಕಾಗಿದ್ದರೆ, ಈಗ, ಕೇವಲ ೯ ಸಾವಿರ ಮಾನವ ಘಂಟೆಗಳು ಸಾಕಾಗುತ್ತವೆ. ಈ ಪರಿಮಾಣವನ್ನು ೭,೨೦೦ಕ್ಕೆ ಇಳಿಸಬೇಕೆಂಬ ಇಂಗಿತವಿದೆ. ಪ್ರಾರಂಭಾವಸ್ಥೆಯಲ್ಲಿ ಒಂದು ಗಾಡಿಗೆ ಬೇಕಾದ ಪ್ರತಿವ್ಯತ್ಯೇಕ ಭಾಗಗಳಲ್ಲಿ ರೂ ೩೭,೦೦೦ ಮೌಲ್ಯವನ್ನು ಪರದೇಶಗಳಿಂದ ಆಯಾತ ಮಾಡಿಕೊಳ್ಳಲಾಗುತ್ತಿದ್ದರೆ, ಈಗ ಕೇವಲ ೧೮,೦೦೦ ರೂಪಾಯಿ ಬೆಲೆ ಬಾಳುವ ಭಾಗಗಳನ್ನು ಮಾತ್ರ ತರಿಸಿಕೊಳ್ಳಲಾಗುತ್ತಿದೆ. ಉಳಿದ ಭಾಗಗಳೆಲ್ಲವೂ ಇಲ್ಲಿಯೇ ಸಿದ್ಧವಾಗುತ್ತಿವೆ.

ಕಾರಖಾನೆಯ ಅಧಿಕಾರಿಗಳು ನೌಕರರ ಕಡೆಗೆ ವಿಶೇಷ ಸಹಾನುಭೂತಿಯನ್ನು ತೋರಿಸಿರುತ್ತಾರೆ. ಮೊದಲಸಲವೇ ಜಣರಾದ ಕೆಲಸಗಾರರನ್ನು ಆರಿಸಿ, ಅವರಿಗೆ ಯೋಗ್ಯವಾದ ತರಬೇತಿಯನ್ನು ಕೊಟ್ಟು, ಕೆಲಸಕ್ಕೆ ನೇಮಿಸಿಕೊಳ್ಳಲಾಗಿದೆ. ತದನಂತರವೂ ಕೆಲಸಗಾರರಲ್ಲಿ ಸ್ವಯಂ ಯೋಚನಾಶಕ್ತಿಯನ್ನು ಬೆಳೆಸಿ ಕಾರಖಾನೆಯ ಕಾರ್ಯಪ್ರಣಾಳಿಯಲ್ಲಿ ತೀವ್ರತೆ ಮತ್ತು ಸಮರ್ಥತೆಯನ್ನು ಹೆಚ್ಚಿಸುವ ಸಲಹೆ ಸೂಚನೆಗಳನ್ನು ನೀಡಲು ಕೆಲಸಗಾರರ ಸಲಹಾಮಂಡಳವೊಂದಿರುತ್ತದೆ. ಕರ್ಮಚಾರಿಗಳ ಭಕ್ತಿಯೇ ಮೊದಲಾದ ವ್ಯಕ್ತಿಕೆ ಅವರು ಸಂಸ್ಥೆಗೆ ಸಲ್ಲಿಸಿದ ನಿಷ್ಕಳಂಕ ವಿಶ್ವಾಸಯುತ ಸೇವೆಯನ್ನೇ ವಿಶೇಷವಾಗಿ ಗಣನೆಗೆ ತಂದುಕೊಳ್ಳಲಾಗುವುದು. ಈ ಕಾರಖಾನೆಯಿಂದಾಗಿ ಭಾರತದ ರೀಲ್ವೆಗಳಿಗೆ ಭಾರತದಲ್ಲಿಯೇ ತಯಾರಿಸಲಾದ ಗಾಡಿಗಳು ದೊರಕುವುವು ಮಾತ್ರವಲ್ಲದೇ ನಮ್ಮ ಸ್ವಾವಲಂಬನೆಯ ಗುರಿಯನ್ನು ಮುಟ್ಟುವ ದಿಶೆಯಲ್ಲಿನ ಮಹತ್ವಪೂರ್ಣ ಹೆಜ್ಜೆಯಾಗುವುದು ಎಂಬುದು ನಿಸ್ಸಂಶಯ. ಇಂತಹ ಹಲವಾರು ಬೃಹದ್ಯೋಜನೆಗಳು ಸಂಪೂರ್ಣ ಕಾರ್ಯಗತವಾಗುವುದು ಭಾರತದ ಪ್ರಗತಿಗೆ ಹೇತುವಾಗುವುದು.





ಮೇಲಿನ ಚಿತ್ರ, ಸಂಪೂರ್ಣ ರೂಪಿತವಾದ ರೇಲುಗಾಡಿ

ಕೆಳಗಿನ ಎಡ ಚಿತ್ರ ಗಾಡಿಯ ಗೋಡೆಯ ಕೆಲಸ ನಡೆಯುತ್ತಿದೆ

ಕೆಳಗಿನ ಬಲ ಚಿತ್ರ ಹೊಸತಾಗಿ ತಯಾರಿಸಲಾದ ಗಾಡಿಯನ್ನು ಹೊರಗೆ ಕಳಿಸಲಾಗುತ್ತದೆ

ಪಂಚ ಶೀಲ

(೩ನೇ ಪುಟದಿಂದ)

ಗೊಳಿಸುವುದರಲ್ಲಿ ಸಹಾಯವಾಗುವುವು ಇವುಗಳ ಪ್ರಸಾರದಿಂದ ನಾವು ಭೇದದಲ್ಲಿ ಅಭೇದವನ್ನು ಸಂಸ್ಥಾಪಿಸಲು ಸಮರ್ಥರಾಗಬಲ್ಲೆವು

ಈಶಾವಾಸ್ಯೋಪನಿಷತ್ತಿನಲ್ಲಿ "ಮಾಗೃಧಃ ಕಸ್ಯಸ್ವಿದ್ಧನಮ್" ಎಂಬುದೂ ಅಪರಿಗ್ರಹ ಮತ್ತು ಅಸ್ತೇಯಗಳೂ ಇವೆ. ಬೇರೆಯವರ ಅಸ್ತಿತ್ವವನ್ನು ಮನ್ನಿಸುವುದು ಪಕ್ವದ ಅಂತರಾಷ್ಟ್ರೀಯ ಸ್ವರೂಪವಾಗಿದೆ ಮತ್ತು ಅನಾಕ್ರಮಣವೂ ಅದರ ಬುನಾದಿಯಾಗಿರುತ್ತದೆ. ಆದುದರಿಂದ ಭಾರತದ ಧರ್ಮನೀತಿಗಳ ಪ್ರಯೋಗವು ಈ ತತ್ವಗಳಲ್ಲಿ ಅಡಕವಾಗಿದೆ ಧರ್ಮ ನೀತಿಯಲ್ಲಿಯೇ ರಾಷ್ಟ್ರಗಳ ಸಂಬಂಧವು ನಿರ್ಧಾರಗೊಂಡಾಗ ಮಾತ್ರ ಅಂತರಾಷ್ಟ್ರೀಯ ಶಾಂತಿಯು ಸಾಧ್ಯವಾಗಬಹುದು ಸತ್ಯ ಮತ್ತು ಅಹಿಂಸೆಗಳನ್ನು ರಾಜಕೀಯರಂಗಕ್ಕೆ ತಂದು ಕೂಟನೀತಿಯನ್ನು ದೂರೀಕರಿಸಿದ ಶ್ರೇಯಸ್ಸು ಮಹಾತ್ಮಗಾಂಧಿಯವರಿಗೆ ಸಲ್ಲಬೇಕು. ಶ್ರೀ ಜವಾಹರಲಾಲ ನೆಹರು ಪಂಚಶೀಲದ ಪರಂಪರೆಯನ್ನು ಅಂತಾರಾಷ್ಟ್ರೀಯ ರಂಗಕ್ಕೂ ಹರಡಿಸಿದರು.

ಈ ಪಂಚಶೀಲದ ಸತ್ತ್ವ ಪರೀಕ್ಷೆಗೆ ಅದರ ಜನ್ಮದಾತ ಹಾಗೂ ಪುರಸ್ಕರ್ತ ಭಾರತವೇ ಗುರಿಯಾಗಿದೆ ಎಂಬುದು ಸೋಜಿಗವಲ್ಲವೆ?

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

ಯು ಮತ್ತು ಅಳಿಸಲಾಗದ ಸಹೋದರ ಬಾಂಧವ್ಯ ಅದಕ್ಕೆ ಮಾತ್ರ ಎಂದೆಂದಿಗೂ ಚ್ಯುತಿ ಬಾರದಿರಲೆಂದು ಪರಮಾತ್ಮನನ್ನು ಬೇಡುತ್ತಿರುವೆ.

ಅದೆಲ್ಲ ಇರಲಿ. ನಾನು ಮತ್ತೊಮ್ಮೆ ಸಂಕಟದಲ್ಲಿ ಸಿಲುಕಿರುವೆನೆಂದೆನಷ್ಟೆ. ಅದು ಮತ್ತೇನೂ ಅಲ್ಲ ನಾನು ಮೊನ್ನೆ ನಮ್ಮ ಹೋಟೆಲ್ಲಿನ ಲೆಕ್ಕಾಚಾರ ತೀರಿಸಲು ಅಲ್ಲಿಗೆ ಹೋಗಿದ್ದೆ. ನನ್ನ ಬಗೆಗೆ ಅಲ್ಲಿ ಈಗಾಗಲೇ ಒಂದು ದೊಡ್ಡ ಕತೆಯೇ ಹುಟ್ಟಿಕೊಂಡಿದೆ. ಹಿಂದಿನ ಘಟನೆಯು ನಂತರ ನಾವಾರೂ ಊಹಿಸದಿದ್ದ ಅಸಹ್ಯ ವಾತಾವರಣವೊಂದು ಉಂಟಾಗಿದೆಯೆಂದು ತಿಳಿಸಲು ಬೇಸರವಾಗುತ್ತಿದೆ. ಅದಕ್ಕೆಲ್ಲ ಕಾರಣ ಆ ಕ-ಸುಂದರ. ಆತ ಊರಲ್ಲೆಲ್ಲ ನನ್ನ ಬಗೆಗೆ ಅಪಪ್ರಚಾರ ತುಂಬಿಸಿಬಿಟ್ಟಿದ್ದಾನೆ: 'ನಾನೇ ಅವನಿಗೆ ತುಂಬಾ ಪತ್ರ ಬರೆದಿದ್ದೆನಂತೆ. ನಾನು ಎಷ್ಟೋ ಪತ್ರಗಳನ್ನು ಅವನಿಗೆ ಬರೆದ ನಂತರವೇ ಅವನು ಒಂದೆರಡು ಪತ್ರಗಳನ್ನು ಮಾತ್ರ ನನಗೆ ಬರೆದನಂತೆ. ನಾನು ಯಾವಾಗಲೂ ಅವನನ್ನು ನನ್ನ ಕೋಣೆಗೆ ಬರುವಂತೆ ಹೇಳಿ ಮಾತನಾಡುತ್ತ ಕುಳಿತುಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದೆನಂತೆ... ನಾನು ಅವನನ್ನು ಪ್ರೇಮಿಸುತ್ತಿದ್ದೆನಂತೆ.... ಹೀಗೆ.... ಇನ್ನೆಷ್ಟೋ ಅಸಹ್ಯ ಸುದ್ದಿಗಳು. ಇವೆಲ್ಲ ವಿಚಾರಗಳು ನಮ್ಮ ಹೋಟೆಲ್ ಯಜಮಾನರಿಗೂ ತಿಳಿದು ಬಂತು. ಅವರ ಒತ್ತಾಯಕ್ಕೆ ಕಟ್ಟುಬಿದ್ದು ನನ್ನ ಮೇಲಿನ ಅಪವಾದವನ್ನು ನೀಗಿಕೊಳ್ಳಬೇಕೆಂಬ ಮಹದಾಸೆಯಿಂದ ನಿಜಸಂಗತಿಯನ್ನು ಹೇಳಲೇಬೇಕಾಯಿತು. ಸತ್ಯಸಂಗತಿಯನ್ನೇನೋ ಹೇಳಿದೆ. ಯಜಮಾನರೇನೋ ನಂಬಿದರು. ನಂಬಿದರೇನು? ಅವರಿಗೆ ನನ್ನ ಮೇಲಿನ ಅಪವಾದಗಳಲ್ಲಿ ನಂಬಿಕೆಯಿರಲಿಲ್ಲವೆಂಬುದು ನನಗೆ ಗೊತ್ತು. ಅವರೊಬ್ಬರಿಗೆ ಮಾತ್ರ— ಎರಡು ವರ್ಷ ನನ್ನ ನಿಕಟ ಪರಿಚಯದಿಂದ, ನನ್ನ ಒಡಲನ್ನು ಅರಿತಿದ್ದ ಅವರೊಬ್ಬರಿಗೆ ಮಾತ್ರ —ಸುಂದರನ ಮಾತುಗಳಲ್ಲಿ ನಂಬಿಕೆಯಿಲ್ಲವಾಗಿರಬಹುದು. ಆದರೆ ಜಗತ್ತು— ನಮ್ಮ ಸಮಾಜ—ಇವಕ್ಕೆಲ್ಲ ಇದರ ಅರಿವು ಇಲ್ಲವಷ್ಟೆ. ಅವುಗಳದಿರು ನಾನಿಂದು 'ಅಪರಾಧಿ',... '........'—ಇನ್ನೇನೋ. ಬರೀ ಅಪವಾದಗಳಿಂದ ನಾನು ಕುಗ್ಗಬೇಕಿಲ್ಲ. ಆದರೆ ನಾನು ಪರಿಶುದ್ಧಾತ್ಮೆ ಉಳ್ಳವಳಾದರೂ ಜಗತ್ತು ನನ್ನ ಮಾತನ್ನಿಂದು ನಂಬಲಿಕ್ಕಿಲ್ಲ. ಕಾರಣ ಗಂಡು ಸಬಲ; ಹೆಣ್ಣು ಅಬಲೆ. ಗಂಡಿಗೆ ತಾನಿಚ್ಛಿಸಿದಂತಹ ದುಷ್ಕೃತ್ಯಗಳನ್ನು ಮಾಡಿಯೂ ಸಮಾಜದಿದಿರು ತಲೆಯೆತ್ತಿ ನಡೆಯಲು ಎಡೆಯಿದೆ; ಅಧಿಕಾರವಿದೆ. ಆತ ಅಪವಾದದ ಅವಮಾನದಿಂದೆಂದೂ ಮೂಲೆಗುಂಪಾಗಬೇಕಿಲ್ಲ. ಹೆಣ್ಣಿಗೆ ಹಾಗಲ್ಲ; ಅದರಲ್ಲೂ ಅವಿವಾಹಿತ ತರುಣಿಯರಿಗೆ ಅಪವಾದವೇ ಕದಳಿ ವೃಕ್ಷಕ್ಕೆ ಕೊಡುವ ಏಟಿನಂತೆ. ಹೆಣ್ಣು ಅಪವಾದಕ್ಕೆ ಹೆದರಲೇಬೇಕು. ಸೀತೆ, ಸಾವಿತ್ರಿಯರ ಪುರಾಣ ಕಾಲದಿಂದಲೂ ಈ ದುರಂತ ನಾಟಕ ನಡೆದೇ ಬಂದಿದೆ. ಇದಕ್ಕೆ ಈ ಯುಗದಲ್ಲಿಯೂ ಅಂತ್ಯ ಕಾಣದೆಂದೇ ನನ್ನೆಣಿಕೆ. ಸುಧಾರಿತ ಮಹಿಳೆಯರೆಂದು ಹೇಳಿಕೊಂಡು, ಗಂಡಿನಂತೆ ಹೆಣ್ಣಿಗೂ ಎಲ್ಲ ವಿಧದ ಸ್ವಾತಂತ್ರ್ಯ ದೊರೆಯಬೇಕೆಂದು ಬೊಬ್ಬಿಡುವಷ್ಟು ಸುಧಾರಿತಳು ನಾನಲ್ಲ. ಆದರೆ ಹೆಣ್ಣನ್ನು 'ಅಬಲೆ' ಯೆಂದು ಕರೆದು ಅವಳ ಮೇಲೆ ಗಂಡು ನಡೆಸುವ ಇಂತಹ ದಬ್ಬಾಳಿಕೆಯನ್ನು ಅದು ಗಂಡಿನ 'ಗಂಡಸುತನ' ವೆಂದು ಹೇಳುವುದನ್ನು ನಾನು ಸಹಿಸಲಾರೆ. ಇದನ್ನು ಸಹಿಸಲಾರೆನೆಂದಮಾತ್ರಕ್ಕೆ ನಾನು ಏಕಾಕಿಯಾಗಿ ಇವುಗಳನ್ನೆಲ್ಲ ಪ್ರತಿಭಟಿಸುವೆನೆಂದರ್ಥವಲ್ಲ; ಅದು ನನ್ನೊಬ್ಬಳಿಂದ ಸಾಧ್ಯವೂ ಇಲ್ಲ. ಅಂತವೆಲ್ಲ ದೂರಾಗಬೇಕೆಂದು ಎಲ್ಲ ಅಬಲೆಯರೆನ್ನಿಸಿಕೊಂಡವರಂತೆ, ಮನಸಾರೆ ಭಗವಂತನನ್ನೊಮ್ಮೆ ಪ್ರಾರ್ಥಿಸುವುದಕ್ಕಿಂತ ಹೆಚ್ಚಿನದೇನನ್ನೂ ನಾನು ಮಾಡಲಾರೆ

ನಾನು ಮೊನ್ನೆ ಅಲ್ಲಿ ಹೋದವಳು ಯಜಮಾನರ ಅಪೇಕ್ಷೆಯ ಮೇರೆಗೆ ಒಂದು ದಿನ ಅಲ್ಲಿಯೇ ಉಳಿಯಬೇಕಾಯಿತು. ನಾನು ಸುಂದರನೊಡನೆ ಕೇಳಿ ಇದರ ಇತ್ಯರ್ಥಮಾಡಿ ಇನ್ನಾದರೂ ಆತ ಅಂತಹ ಕೆಳಮಟ್ಟದ ಅಪಪ್ರಚಾರ ಮಾಡದಂತೆ ಹೇಳುವುದಾಗಿ ನುಡಿದಿದ್ದರು. ಆದರೆ ಆತ ಅಂದು ಅಲ್ಲಿ ಬರಲೇ ಇಲ್ಲ. ಮರುದಿನ ಬೆಳಗ್ಗೆಯೂ ಆತನ ಸುಳಿವಿಲ್ಲ. ಮತ್ತು ಒಂದು ದಿನ ನಿಂತು ಆತನೊಡನೆ ಮಾತನಾಡಿಯೇ ಹಿಂದಿರುಗೋಣವೆಂದರೆ ಮನೆಯಲ್ಲಿ ಅಗತ್ಯ ಕೆಲಸವೊಂದರಿಂದ ಅದು ಅಸಾಧ್ಯವಾಗಿದ್ದಿತು. ಆದ್ದರಿಂದ ಯಜಮಾನರ ಇಚ್ಛೆಯಂತೆ ಪುನಃ ಬರುವುದಾಗಿ ಮಾತು ಕೊಟ್ಟು ಬಂದಿದ್ದೇನೆ. ನೋಡಬೇಕು— ಏನಾಗುವುದೆಂದು. ಇದರಲ್ಲಿ ಜಯ ದೊರಕೀತೆಂದು ನನಗೆನಿಸುವುದಿಲ್ಲ. ಏಕೆಂದರೆ ನಾನು ಮೊದಲೇ ಹೇಳಿದಂತೆ ನಾನು 'ಅಬಲೆ'; ಅಲ್ಲದೇ ನಾನು ಸತ್ಯವನ್ನು ಮಾತ್ರ ಹಿಡಿದು ವಾದಿಸಬೇಕಾಗಿದೆ. ಈ ಮಿಥ್ಯ ಪ್ರಪಂಚದಲ್ಲಿ ಎಂತಹ ಸತ್ಯಕ್ಕೂ ಜಯದೊರೆಯಲಾರದೆಂದು ನಿನಗೆ ನಮ್ಮ 'ಕ್ರೈದಿ' ಎಂಬ ಪಾಠದಿಂದ ಗೊತ್ತಾಗಿದೆ ತಾನೇ? ಆದ್ದರಿಂದ ಈ ವಿಷಯದಲ್ಲಿ ನಾನು ಪುನಃ ಅಲ್ಲಿಗೆ ಹೋಗಬೇಕೋ ಬೇಡವೋ ಎಂದೇ ಶಂಕಿಸುತ್ತಿದ್ದೇನೆ. ಆತ ನನಗೆ ಮೊದಲು ಬರೆದ ಪತ್ರಗಳಾದರೂ ಇದ್ದಲ್ಲಿ ಅವನ್ನೇ ಸಮಾಜದಿದಿರು ಸಾಕ್ಷವಾಗಿ ಹಿಡಿಯಬಹುದಿತ್ತು. ಇಂತಹ ಅನುಭವವೊಂದು ನನಗೆ ಇದೇ ಹೊಸದಾದ ಕಾರಣ ಏನು ಮಾಡುವುದೆಂದೇ ತಿಳಿಯದಾಗಿದೆ. ಬಹುಶಃ ನಾನಲ್ಲಿಗೆ ಪುನಃ ಹೋಗದೇ ಇರಬಹುದೆಂದೇ ತೋರುತ್ತದೆ.

ತಮ್ಮಾ, ಹೆಣ್ಣಿನ ಜನ್ಮ ತುಂಬಾ ಕಷ್ಟಕರ. ಗಂಡಿನೆದಿರು ಸಬಲೆಯಾಗಿ ನಿಂತು ನ್ಯಾಯವಾದುದನ್ನು ವಾದಿಸುವ ಹಕ್ಕು ಅಕೆಗಿಲ್ಲ. ಹೆಂಗಸರ ಬಗೆಗೆ ನಾನು ಬಯಸುವ ಬದಲಾವಣೆಯಷ್ಟೆ. ಇದನ್ನು ನಾನು ನನ್ನ ಜೀವಿತಕಾಲದಲ್ಲಿ ಕಾಣಲಾರೆ.

ಊರಿನಲ್ಲಿಯಾದರೂ ಪಾಪದಾಗಿ ಯಾರ ಗೊಡವೆಯಿಲ್ಲದೇ ಇದ್ದರೆ ಉಂಡು, ಇಲ್ಲದಿದ್ದರೆ ಹಸಿದು, ಅದರಲ್ಲಿಯೇ ಒಂದು ತೃಪ್ತಿ ಕಾಣುವ ಹೆಬ್ಬಯಕೆಯನ್ನಿಟ್ಟುಕೊಂಡು ಪೇಟೆಯಿಂದ ಊರಿಗೆ ಕಾಲಿಟ್ಟೆ. ಆದರೆ ಅದಕ್ಕೂ ಈಗ ಸೊನ್ನೆಯಾಗಿದೆ. ಒಂದರ ಕೆಟ್ಟ ನೆನಪನ್ನು ಮರೆಯಲೆತ್ನಿಸುತ್ತಿದ್ದಂತೆ ಇನ್ನೊಂದು 'ಮತ್ತೊಂದು' ಇದಿರಾಗುತ್ತಿದೆ. ಒಂದು ಕಳೆದುಹೋದೊಡನೆಯೋ ಇನ್ನೊಂದನ್ನು, ನನ್ನ ಅದೃಷ್ಟ ಸ್ವಯಂಚಾಲಿತ ಯಂತ್ರದಂತೆ ಮುಂದೂಡುತ್ತಿದೆ. ಇವಕ್ಕೆ ಕೊನೆ, ನನ್ನ ಕೊನೆಯಲ್ಲಿಯೇ ಎಂದೇ ಈಗ ನನ್ನೆಣಿಕೆಯಾಗಿದೆ. ನಾನು ಇಟ್ಟಿದ್ದ ಆಶಾಗೋಪುರ ಗಾಳಿಗೋಪುರದಂತೆ ಕೆಳಗುರುಳಿತು.. ನನಗೀಗ ಜೀವನವೇ ಬೇಡವಾಗಿದೆ; ನನ್ನ ಸುತ್ತಲೂ ಕತ್ತಲು ಕವಿದಂತೆ ಭಾಸವಾಗುತ್ತಿದೆ. ನನ್ನ ಆತ್ಮವೀಗ ಮುಂದಿನ ಲೋಕದ ಸುಖದತ್ತ ತೆರಳಲು ಆಶಿಸುತ್ತಿದೆ ನನ್ನ ಮೊದಲಿನ ಸಹನೆ ಮತ್ತು ಧೈರ್ಯಗಳೇ ನನಗೀಗ ಈ ವಿಪತ್ತನ್ನು ತಂದೊಡ್ಡಿವೆ. ನಾನಿನ್ನೂ ಮದುವೆಯಾಗದ ಪ್ರಾಯಪ್ರಬುದ್ಧ ತರುಣಿಯಾದುದರಿಂದ ಈ ವಿಚಾರವನ್ನೆಲ್ಲ ಯೋಚಿಸಬೇಕಾಗುತ್ತದೆ. ನನ್ನ ಮದುವೆ....ಅದು ಆಗಬಹುದೆಂಬ ನನ್ನೆಣಿಕೆ ಏಕೆಂದರೆ ದೇವರೆದುರು ನಾನು ತಪ್ಪಿತಸ್ಥಳಲ್ಲ. ಕೊನೆಗಾದರೂ ನನ್ನ ಜೀವನ ಸುಖಮಯವಾದೀತೆಂಬ ಆಸೆಯನ್ನು ನಾನಿನ್ನೂ ಬಿಟ್ಟಿಲ್ಲ.

ಸೋದರಾ, ನನ್ನ ಅಂತ್ಯಕಾಣದ ದುಃಖದಲ್ಲಿ ನಿನ್ನನ್ನೂ ಭಾಗಿಯಾಗಿಸಿದೆ. ಆದರೆ ನನ್ನ ಬಗೆಗೆ ನೀನಷ್ಟು ಚಿಂತಿಸಬೇಕಾದುದಿಲ್ಲ. ನೀನು ಈ ಲೋಕದಲ್ಲಿ ಧೈರ್ಯದಿಂದಲೂ, ಸತ್ಯದಿಂದಲೂ, ಎಲ್ಲರ ಪ್ರೀತಿಗೆ ಪಾತ್ರನಾಗಿ ಮರ್ಯಾದೆಯಿಂದ ಬಾಳುವೆ ನಡೆಸು. ಇದೇ ನನ್ನ ಹಿರಿಯಾಸೆ. ನನ್ನ ಈ ಆಸೆ ಈಡೇರಿಸುವಂತೆ ಆ ದಯಾಮಯ ನಾದ ಭಗವಂತನನ್ನೊಮ್ಮೆ ಪ್ರಾರ್ಥಿಸಿ ಈ ಪತ್ರಕ್ಕೆ ಪೂರ್ಣ ವಿರಾಮವನ್ನಿಕ್ಕುವೆ.

ಇತಿ,

ಎಂದೆಂದಿಗೂ ನಿನ್ನ ಅಕ್ಕನೇ ಆದ-

....

"ಜನ್ನ", ಮರವಂತೆ.

(ಮುಗಿದುದು)

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ¼%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ, ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.

(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2 00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತನ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)

ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಳಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.

(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಡಿ ಮು. ಕೋರ್ಟಿನಲ್ಲಿ

Kaup c's 1/52.

R. E. P 354/1959.

ರಾಮಾಚಾರ್ಯ — ಅರ್ಜಿದಾರ,

ಮತ್ತು

ಶಂಕರನಾರಾಯಣ-ಬಾಲಕೃಷ್ಣಯ್ಯನ ಮಗ—ಉಡುಪಿ ತಾಲ್ಲೂಕು ಕೋಟೆ ಗ್ರಾಮ—ಎದುರು.

ಇವನೊಳಗೆ —

ಸದ್ರಿ ಎದುರಿಗೆ ಈ ಮೂಲಕ ತಿಳಿಸುವದೇನಂದರೆ—

ಮೇಲ್ಕಂಡ ಅಮಲುಜಾರಿಯಲ್ಲಿ ಎದುರಿಯ ದಕ್ಷಿಣ ಸ್ಥಿರಾಸ್ತಿ ಜಪ್ತಿಯ—ಎದುರಿಗಾಗಿ ತಕ್ಕ ಅಪ್ಪೀಲು ಸರ್ವ ಹ್ರ ಹಿಡಿದು ಅರ್ಜಿದ ತಮ್ಮೀ ಬಗ್ಗೆ ತಾ. 16—12—1959ಕ್ಕೆ ಇಶೋರ್ತಾಗಿ ಮುಕರ್ರರಲಾ ಆ ಕುರಿತು ಎದುರಿಗೆ ಆಕ್ಷೇಪ ಹೇಳತಕ್ಕದ್ದು ಇದ್ದ—ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದಂತ ಸಹಾ ಎದುರಿಗೆ ತಿಳಿಸಲಾಗಿಯದೆ.

V. R. Kidyoor,
Advocate for Petitioner.

ಉಡುಪಿ, 3—12—1959.

NAVAYUGA
REGD. NO. M. 3619

UDIPI, THURSDAY
10-12-1959

LICENSE NO. 31
Licensed to Post without Prepayment

ಪುಸ್ತಕ ವಿಮರ್ಶೆ

ಅಮೆರಿಕದ ಆರು ಕಥೆಗಳು— ಅನುವಾದಕರು: ಶ್ರೀ ಕು. ಶಿ. ಹರಿದಾಸ ಭಟ್ಟ, ಎಂ.ಎ. ಪ್ರಕಾಶಕರು: ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಉಡುಪಿ. ಪುಟಗಳು ೧೬೧ ಬೆಲೆ, ರೂ. ೧-೭೫.

ಅಮೆರಿಕದ ಸುಪ್ರಸಿದ್ಧ ಕಥಾಕಾರರಾದ ಶ್ರೀಗಳಾದ ನಾಥನ್ ಆಶ್, ಲೂಯಿ ಬ್ರೊಮ್ ಫೀಲ್ಡ್, ವಿಲ್ಲಿಯಂ ಫಾಕ್ನೇರ್, ಎಡ್ನಾ ಫರ್ಬರ್, ಶ್ರೀಮತಿ ಮೇರಿ ಇ. ವಿಲ್ಕಿನ್ಸ್ ಫ್ರೀಮ್ಯಾನ್ ಮತ್ತು ಶ್ರೀ ಜಾನ್ ಸ್ಟೀನ್ ಬೆಕ್‌ರ ಒಂದೊಂದು ಕಥೆಯನ್ನು ಇಲ್ಲಿ ಅನುವಾದಿಸಿ ಕನ್ನಡಿಗರಿಗೆ ಆಂಗ್ಲ ಸಾಹಿತ್ಯ ರತ್ನಗಳ ಬಗ್ಗೆ ಅಭಿಮಾನವನ್ನು ಹುಟ್ಟಿಸುವ ಪ್ರಯತ್ನವನ್ನು ಮಾಡಲಾಗಿದೆ. ಕಥೆ ಕಾದಂಬರಿಗಳಿಗೆಲ್ಲಾ ಜನಜೀವನವೇ ಮೂಲಾಧಾರವಾಗಿದ್ದು ಅವುಗಳಲ್ಲಿನ ಸನ್ನಿವೇಶವು ಜನಜೀವನದಿಂದ ಪ್ರತಿಬೋಧಿತವಾಗುತ್ತವೆ. ಆದುದರಿಂದ ಎಲ್ಲ ದೇಶಗಳ ಸಾಹಿತ್ಯ ಕೃತಿಯಲ್ಲೂ ಆಯಾ ದೇಶದ ಜನ ಜೀವನವು ಪ್ರತಿಬಿಂಬಿತವಾಗಿರುವುದನ್ನು ಕಾಣಬಹುದು. ಪ್ರಸ್ತುತದ ಪುಸ್ತಕದಲ್ಲಿರುವ ಆರು ಕಥೆಗಳೂ ಅಮೆರಿಕೆಯ ಜನಜೀವನದ ಆರು ಚಿತ್ರಗಳನ್ನು ನಮ್ಮ ಮುಂದೆ ಬಿಡಿಸಿ ತೋರಿಸುತ್ತವೆ.

ಈ ಸಂಗ್ರಹದಲ್ಲಿರುವ "ಹಳ್ಳಿ", "ರೈತ" ಮತ್ತು 'ಜೂಸಿಯಸ್ ಮಾಲ್ಟ್ ಬೀ' ಎಂಬಿವು ಸರ್ವ ರೀತಿಯಲ್ಲಿ ಅತ್ಯುತ್ಕೃಷ್ಟವಾದ ಕಥೆಗಳಾಗಿವೆ. ಇವುಗಳಲ್ಲಿ ಮಾರ್ದವತೆಯಿದೆ, ಮನೋವೈಜ್ಞಾನಿಕ ತಥ್ಯ ಪ್ರದರ್ಶನವಿದೆ, ಸುಂದರವಾದ ಸಮಾಜ ಚಿತ್ರಣವಿದೆ. ಉಳಿದುವುಗಳು ವಾಚನೀಯವಾಗಿವೆ, ಉತ್ತಮವಾಗಿವೆ. ಅಮೆರಿಕದ ಗ್ರಾಮ ಜೀವನದ ಸುಂದರ ಸಜೀವ ಹಾಗೂ ಮಾರ್ಮಿಕವಾದ ಚಿತ್ರಗಳನ್ನು ಒಂದೆಡೆ ಸಂಕಲಿಸಿದ ಈ ಆರು ಕಥೆಗಳ ಸಂಕಲನವನ್ನು ಕೈಗೆತ್ತಿಕೊಂಡರೆ, ಪೂರ್ಣ ಮುಗಿಯದೆ ಕೆಳಗಿಡಲು ಮನಸ್ಸೊಪ್ಪದು. ಪ್ರತಿ ಕಥಾರಂಭದಲ್ಲಿ ಆ ಕಥೆಯ ಲೇಖಕ ಅಥವಾ ಲೇಖಿಕೆಯ ಸ್ಥೂಲ ಪರಿಚಯವನ್ನೂ ಕೊಡಲಾಗಿದೆ. ಅನುವಾದದ ಕಾರ್ಯವು ಯಶಸ್ವಿಯಾಗಿದೆ. ಕೆಲವೆಡೆ ಆಂಗ್ಲಭಾಷೆಯ ಪದಗಳೇ ಉಳಿದುಕೊಂಡಿದ್ದರೂ ಅವು ಅನಿವಾರ್ಯವಾಗಿಯೇ ಅರ್ಥಪುಷ್ಟಿಗಾಗಿ ಬಂದಿವೆಯೆಂಬುದನ್ನು ಸ್ಮರಣೆಯಲ್ಲಿಟ್ಟರೆ, ಕನ್ನಡ ಜನತೆಯು ಈ ಹೊತ್ತಿಗೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ.

ಇಂದಿನ ವಿಜ್ಞಾನ ಮತ್ತು ನೀವು— ಮೂಲ ಲೇಖಕರು ಲಿನ್ ಪೂಲ್. ಅನುವಾದಕರು: ಶ್ರೀ ಜಿ. ಆರ್. ಲಕ್ಷ್ಮಣ ರಾವ್. ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು: ೧೭೯. ಬೆಲೆ. ರೂ. ೧-೫೦.

ಇಂದಿನ ಪ್ರಪಂಚದಲ್ಲಿ ಬಾಳಿಕೊಂಡಿರುವ ಪ್ರತಿಯೊಬ್ಬನೂ ವಿಜ್ಞಾನದ ಬಗ್ಗೆ ಒಂದಲ್ಪವಾದರೂ ತಿಳಿದುಕೊಳ್ಳಬೇಕಾದುದು ಅತ್ಯವಶ್ಯವಾಗಿದೆ. ಬಹಳ ತೀವ್ರವಾಗಿ ಕ್ಷಣದಿಂದ ಕ್ಷಣಕ್ಕೆ ಮುಂದುವರಿಯುತ್ತಿರುವ ಇಂದಿನ ವಿಜ್ಞಾನ ಪ್ರಪಂಚದ ಆಳವನ್ನು ಕಂಡುಹಿಡಿಯುವುದು ಪ್ರಯಾಸತಮ ಕಾರ್ಯವಾದರೂ, ವಿಜ್ಞಾನ ಸಾಗರದಲ್ಲಿ ಮುಳುಕಿ ಅಮೂಲ್ಯ ರತ್ನಗಳನ್ನು ಕಂಡುಕೊಳ್ಳುವುದು ಅವಶ್ಯ. ಇಂದಿನ ವಿಜ್ಞಾನ ಮತ್ತು ನೀವು ಎಂಬುದು "To day's Science and You" ಎಂಬ ಆಂಗ್ಲ ವೈಜ್ಞಾನಿಕ ಪುಸ್ತಕದ ಅನುವಾದವಾಗಿದೆ. ಇಂದು ವಿಜ್ಞಾನದಿಂದ ಕೊಡಮಾಡಲ್ಪಟ್ಟ ಅನೇಕಾನೇಕ ಸಾಧನಗಳನ್ನು ನಾವು ನಮ್ಮ ದೈನಂದಿನ ಬಳಕೆಯಲ್ಲಿ ತೊಡಗಿಸುತ್ತಿರುವಾಗ, ಅವುಗಳ ಬಗ್ಗೆ ಜಗತ್ತಿನ ಜನರ ಆಸಕ್ತಿ ಬೆಳೆಯುತ್ತಿರುವಾಗ, ನಾವೂ ಒಂದಲ್ಪವಾದರೂ ತಿಳಿದುಕೊಳ್ಳುವ ಅವಶ್ಯಕತೆಯಿದೆ. ಸಾಮಾನ್ಯ ಕನ್ನಡಿಗನಲ್ಲಿರಬಹುದಾದ ಈ ಆಸೆಯನ್ನು ಈಡೇರಿಸಿ ವಿಜ್ಞಾನದ ಬಗ್ಗೆ ವಿಶೇಷ ಅಧ್ಯಯನವನ್ನು ನಡೆಸುವಂತಿದು ಉತ್ತೇಜಿಸಬಲ್ಲುದು.

ಈ ಗ್ರಂಥದಲ್ಲಿ ಕ್ಷ—ಕಿರಣ, ಸೂಕ್ಷ್ಮದರ್ಶಕ, ಅಂತರಿಕ್ಷ ಪ್ರಯಾಣ, ಸೋಪ, ಮಾನವ ಶಿಲ್ಪ ಶಾಸ್ತ್ರ, ನಕ್ಷತ್ರ, ಅಲ್ಪಾಂಶ ಮೂಲ ವಸ್ತುಗಳು, ಕಲೆ ಮತ್ತು ವಿಜ್ಞಾನ ಮೊದಲಾದ ೧೧ ವಿಷಯಗಳು ಬಹಳ ತಿಳಿಯಾದ ಭಾಷೆಯಲ್ಲಿ ಸರಳವಾಗಿ ವಿವರಿಸಲ್ಪಟ್ಟಿವೆ. ಎಲ್ಲರಿಗೂ ಅರ್ಥವಾಗುವಂತೆ ಅವಶ್ಯಕತೆ ಇದ್ದಲ್ಲೆಲ್ಲಾ ಚಿತ್ರಗಳನ್ನೂ ಕೊಡಲಾಗಿದೆ. ಮೂಲ ಲೇಖಕರ ಮೂಲೋದ್ದೇಶಗಳಿಗೆ ಹೊಂದಿಕೊಳ್ಳುವಂತೆ ವಿಜ್ಞಾನದಲ್ಲಿ ಆಸಕ್ತಿಯಿರುವ ಪ್ರತಿಯೊಬ್ಬನೂ ಈ ಪುಸ್ತಕದ ಸದುಪಯೋಗ ಮಾಡಿಕೊಳ್ಳುವುದು ಸಾಧ್ಯವಾಗಿದೆ. ಅನುವಾದಕರ ಈ ಉಪಕಾರಕ್ಕಾಗಿ ಕನ್ನಡಿಗರೆಲ್ಲರೂ ಕೃತಜ್ಞರಾಗಿರುವುದರೊಡನೆ ವಿಜ್ಞಾನದ ಸಂಬಂಧದಲ್ಲಿನ ಪುಸ್ತಕವನ್ನು ಪ್ರಕಾಶಪಡಿಸಲು ಮುಂದೆ ಬಂದ ಸಾಹಿತ್ಯ ಭಂಡಾರದ ವ್ಯವಸ್ಥಾಪಕರನ್ನೂ ಪ್ರಶಂಸಿಸಬೇಕಾಗಿದೆ.

ಶ್ರೀರಂಗ— ಬರೆದವರು: ಶ್ರೀ ನೆಗಳೂರ ರಂಗನಾಥ. ಪ್ರಕಾಶಕರು: ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ. ಪುಟಗಳು ೪೭ ಬೆಲೆ. ೪೦ ನಯೇ ಪೈಸೆ.

ಕನ್ನಡ ಸಾರಸ್ವತ ಸಮಾಜದಲ್ಲಿ ಉತ್ತಮ ನಾಟಕಕಾರರೆಂದು ಹೆಸರಾಂತ ಶ್ರೀ ಆದ್ಯ ರಂಗಾಚಾರ್ಯರು ಕೇವಲ ನಾಟಕಕರ್ತರು ಮಾತ್ರವಲ್ಲ ಕಾದಂಬರಿಕಾರರೂ ವಿಮರ್ಶಕರೂ ವಿಡಂಬನಾತ್ಮಕ ಲೇಖನಗಳ ಲೇಖಕರೂ ಆಗಿದ್ದಾರೆ. ಶ್ರೀ ರಂಗರು ಬರೆದಿರುವ ಪ್ರತಿ ನಾಟಕ ಅಥವಾ ಕಾದಂಬರಿಯು ಒಂದು ಹೊಸ ದಾರಿಯನ್ನು ತುಳಿದಿದೆ. ಕನ್ನಡ ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಿಡಂಬನ ನಾಟಕ ಸಾಹಿತ್ಯದಲ್ಲಿ ಇವರು ಸೀಮಾ ಪುರುಷರು. ಶ್ರೀರಂಗರ ಏಕಾಂಕ ಅಥವಾ ಅನೇಕಾಂಕಗಳಲ್ಲಿ ಸ್ಫುಟವಾದ ಕಲೆ, ಹಾಸ್ಯ, ವಿಚಾರ ವೈಖರಿ, ಸಾಮಾಜಿಕ ವಿಡಂಬನೆಗಳು ಪ್ರಕಟವಾಗುತ್ತವೆ. ಶ್ರೀ ರಂಗರ ಬರವಣಿಗೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ತಾಳ್ಮೆ ಅವಶ್ಯ ಏಕೆಂದರೆ, ಅದರ ತಂತ್ರದಲ್ಲಿ ನಾವೀನ್ಯವಿರುವುದು. ಇಂತಹ ಸಾಹಿತಿಯೊರ್ವನನ್ನು ಒಂದು ಹೊಸ ನೋಟದಿಂದ ನೋಡಿದ ಈ ಬರಹದಿಂದ ಕನ್ನಡಿಗರಿಗೆ 'ಶ್ರೀರಂಗ'ರ ಕೃತಿವೈಶಿಷ್ಟ್ಯದ ಅರಿವಾಗುವುದು; ಶ್ರೀರಂಗರ ತಂತ್ರ ಕೌಶಲದ ಜ್ಞಾನವನ್ನು ಮೊತ್ತಮೊದಲಾಗಿ ಮಾಡಿಕೊಂಡು ಅವರ ಗ್ರಂಥಾವಲೋಕನ ಮಾಡಿಕೊಂಡರೆ, ನಿಜವಾದ ಕಾವ್ಯ ಸಾಸ್ವಾದನ ಮಾಡಲು ಸಮರ್ಥರಾಗಬಹುದು. ಈ ಉಪಯುಕ್ತ ಪುಸ್ತಿಕೆಯು ಆಕಾರದಲ್ಲಿ ಕಿರಿದಾಗಿರುವುದಾದರೂ ಪ್ರಯೋಜನದಲ್ಲಿ ಹಿರಿದಾಗಿದೆ. ಇಂತಹ ಪ್ರಚಾರೋಪನ್ಯಾಸ ಮಾಲೆಯ ಸದುಪಯೋಗವನ್ನು ಮಾಡಿಕೊಳ್ಳುವುದು ಅವಶ್ಯ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಗಿ ಕುಂಬ ವಿಚಾರ ವಿಮರ್ಶೆ ಮಾಡಬೇಕಾಗುತ್ತದೆ. ದೇಶದ ಅಭಿವೃದ್ಧಿಗಾಗಿ ಆಂತರಿಕ ಹಾಗೂ ಬಾಹ್ಯ ಸಂಪತ್ತು ಸಹಾಯಗಳನ್ನು ಪಡೆಯುವುದು ನ್ಯಾಯವೇ. ಆದರೂ ರಾಷ್ಟ್ರದೊಳಗೆ ಸಾಕಷ್ಟು ಉಳಿತಾಯ ಯೋಜನೆಯನ್ನು ಸಾಧಿಸಬೇಕಾದುದೂ ಅತಿಪ್ರಸರಣವನ್ನು ತಡೆಗಟ್ಟಬೇಕಾದುದೂ ಮುಖ್ಯವಾಗಿದೆ. ಅದಿಲ್ಲದೆ ಹೋದರೆ, ನಮ್ಮ ನೋಟಿನ ಕಾಗದ ಚೂರುಗಳ ಬೆಲೆಯೇನು ಎಂದು ಹೇಳುವುದು ಕಷ್ಟ.

ಕೇಂದ್ರ ಸರಕಾರವು ವೇತನವನ್ನು ಹೆಚ್ಚಿಸಿದುದರ ಪರಿಣಾಮ ರಾಜ್ಯಸರಕಾರ ಮೇಲೆ ಬೀಳದಿರುವುದು ಅಸಾಧ್ಯ. ರಾಜ್ಯ ಸರಕಾರಿ ನೌಕರರ ವೇತನವು ಕೇಂದ್ರ ಸರಕಾರದವರಿಗಿಂತ ಕಡಿಮೆಯಿದೆಯೆಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದುದರಿಂದ, ರಾಜ್ಯಸರಕಾರಗಳೂ ತಮ್ಮ ನೌಕರರ ವೇತನದ ಬಗ್ಗೆ ಸುಧಾರಣೆಯನ್ನು ಅವಶ್ಯ ಕೈಗೊಳ್ಳಲೇ ಬೇಕಾಗುವುದು. ನಮ್ಮ ಮೈಸೂರು ರಾಜ್ಯದ ಅರ್ಥಮಂತ್ರಿ ಶ್ರೀ ಮರಿಯಪ್ಪನವರು ಈ ಬಗ್ಗೆ ಹೇಳುತ್ತ 'ಸರಕಾರವು ಈ ಬಗ್ಗೆ ತೀವ್ರಾಲೋಚನೆ ನಡೆಸುತ್ತಿದೆ. ಅದು ಏಪ್ರಿಲ್ ವರೆಗೂ ಕಾಯುವುದು ಕಷ್ಟ' ಎಂದು ಆಡಿದ್ದಾರೆ. ಈ ಮಾತನ್ನು ನಂಬುವುದಾದರೆ, ಮೈಸೂರು ಸರಕಾರವೂ ಸದ್ಯದಲ್ಲಿಯೇ ಹೊಸ ವೇತನ ಮಟ್ಟವನ್ನು ಘೋಷಿಸಲಿದೆ ಎಂದು ಹೇಳಬಹುದು. ಮತ್ತು ಈ ರೀತಿ ಘೋಷಿಸುವುದು ಅನಿವಾರ್ಯವೆನಿಸುವುದು.

ಕೇಂದ್ರ ಸರಕಾರಕ್ಕೆ ಈ ಹೊಸ ವೇತನಗಳಿಂದಾಗಿ ವರ್ಷಂಪ್ರತಿ ೧೬ ಕೋಟಿ ರೂಪಾಯಿಗಳ ಅಧಿಕ ವೆಚ್ಚ ಬರುವುದೆಂದು ತಿಳಿಯುತ್ತದೆ. ಅಂತೆಯೇ ರಾಜ್ಯ ಸರಕಾರಗಳಿಗೂ ಇದೇ ರೀತಿಯಲ್ಲಿ ವೆಚ್ಚವು ಅಧಿಕವಾಗುವುದು ಅನಿವಾರ್ಯ. ಆದರೆ, ಈ ಹೆಚ್ಚಿನ ವೆಚ್ಚದ ಬಾಬು ಗಣಿಸುವುದಕ್ಕೆ ಯಾವ ಮಾರ್ಗವಿದೆ ಎಂಬುದು ಆಲೋಚನೀಯವೆನಿಸಿದೆ. ಈ ಹಣವೂ ಜನತೆಯಿಂದ ಕರಗಳ ಮೂಲಕವೇ ಸಂಗ್ರಹಿಸಲ್ಪಡಬೇಕೆಂಬುದು ಸ್ವಯಂ ಸಿದ್ಧವೇ. ಈಗಾಗಲೇ ಕರಭಾರವು ಹೊರಲಾರದಷ್ಟಿರುವಾಗ, ಇನ್ನು ಕರ ಭಾರ ಬಹುದಾದ ವಸ್ತುಗಳನ್ನರಸಬೇಕಾಗುತ್ತದೆ. ಆರ್ಥಿಕ ಭದ್ರತೆಯ ದೃಷ್ಟಿಯಿಂದ ಈಗಲೇ ಬಿಗಡಾಯಿಸಿದ ಭಾರತದ ಆರ್ಥಿಕ ಸ್ಥಿತಿ ಮತ್ತಷ್ಟು ಕೆಡುವ ಸಂಭವವಿದೆ. ಕೇವಲ ನೌಕರರಿಗೆ ವೇತನ ಹೆಚ್ಚಿಸುವುದರಿಂದ ಹೀಗಾಗುವುದಲ್ಲ, ಸರಕಾರದ ವೆಚ್ಚದ ಯಾವುದೇ ವಿಭಾಗವೇ ಇರಲಿ, ಎಲ್ಲವಲ್ಲಿಯೂ ಇದು ವೈದೋರುವುದು ಸಹಜವೇ. ಆದುದರಿಂದ ಯಾವ ರೀತಿಯಲ್ಲೇ ಇರಲಿ, ಆದಾಯಕ್ಕಿಂತ ವೆಚ್ಚವನ್ನು ಹೆಚ್ಚದಂತೆ ನೋಡಿಕೊಳ್ಳುವುದು ಸರಕಾರ ಮಾತ್ರವಲ್ಲ, ಪ್ರತಿ ಪ್ರಜೆಯ ಕರ್ತವ್ಯವಾಗಿದೆ.

ರಾಷ್ಟ್ರದ ಸ್ಥಿತಿ ಸುಧಾರಿಸಬೇಕಾದರೆ, ಪ್ರಜೆಗಳ ಆದಾಯದಲ್ಲಿ ಹೆಚ್ಚಳವಾಗಬೇಕು. ಪ್ರಜೆಗಳ ಆದಾಯವನ್ನು ಕಾಗದದ ಚೂರುಗಳಲ್ಲಿ ನೋಟುಗಳನ್ನು ಅಚ್ಚುಮಾಡಿ ಹೆಚ್ಚಿಸಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಆರ್ಥಿಕ ಮೂಲಗಳನ್ನು ನಾವು ಸರಿಯಾಗಿ, ಯೋಗ್ಯರೀತಿಯಲ್ಲಿ ಬಳಸಿಕೊಂಡು, ತನ್ಮೂಲಕ ಉತ್ಪಾದನೆಯನ್ನು ಹೆಚ್ಚಿಸಿದರೆ ಮಾತ್ರ ಜನರ ಜೀವನವು ಸುಖಪ್ರದವಾಗುವುದು. ಸಾಧ್ಯ ಆಂತರಿಕ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸುವುದರಿಂದಲೇ ಸಂಪತ್ತು ಶಾಶ್ವತವಾಗಿ ನಲೆನಿಲ್ಲುವುದು. ಆದುದರಿಂದ ನಮ್ಮ ಸರಕಾರವು ಈಗ ತಿರಸ್ಕರಿಸಿ ಬಿಟ್ಟಿರುವ ಪ್ರಾಕೃತಿಕ ಸಂಪತ್ತನ್ನು ಉಚಿತ ರೀತಿಯಲ್ಲಿ ಬಳಸಿಕೊಳ್ಳುವುದಲ್ಲದೇ ಉಳಿದ ಉತ್ಪಾದನೆಯಲ್ಲಿಯೂ, ಮುಖ್ಯವಾಗಿ ಕೃಷಿ ಸಮೃದ್ಧ ದೇಶವಾದ ಭಾರತದಲ್ಲಿ ಒಕ್ಕಲುತನದ ಉತ್ಪಾದನೆಯಲ್ಲಿ, ಯಶಸ್ವಿಯಾಗಿ ಮುನ್ನಡೆದರೆ ಮಾತ್ರ ಏರುತ್ತಿರುವ ಜೀವನ ವೆಚ್ಚವನ್ನು ತಡೆಗಟ್ಟಬಹುದು. ಆರ್ಥಿಕ ಸ್ಥಿತಿಯನ್ನೂ ಸುಧಾರಿಸಬಹುದು. ಕಾಗದ ಪತ್ರಗಳಲ್ಲಿ, ಭೀಷಣ ಭಾಷಣಗಳಲ್ಲಿ ಮಾತ್ರ ಉತ್ಪಾದನಾವೃದ್ಧಿಗೆ ಪ್ರೋತ್ಸಾಹ ದೊರೆಯುವುದು ನಿಂತು ಕಾರ್ಯರೂಪದಲ್ಲಿಯೂ ಅದು ಲಭಿಸಬೇಕು. ಸರಕಾರದ ಆಸಕ್ತಿ ಉತ್ಪಾದನೆಯ ಅಧಿಕತೆಯತ್ತ ಎಂದಿಗಿಂತ ಹೆಚ್ಚಾಗಿ ಇಂದು ಹರಿಯಬೇಕಾಗಿದೆ. ಇದರಿಂದಾಗಿ ನಮ್ಮ ಒಂದಲ್ಲ ಹಲವು ಪ್ರಬಲ ಸಮಸ್ಯೆಗಳೂ ಬಗೆ ಹರಿಯುವುದು ಸಾಧ್ಯವಾಗಿದೆ.

— ಗೋರಾ.

ದೀಪಾವಳಿ ಸಂಚಿಕೆಗಳು

೧ **ಉಷಾ**— ಶ್ರೀ ಪಿ. ಮೋಹನ್‌ರವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಹೊರಡುವ ಈ ಮಾಸಪತ್ರಿಕೆಯು ಪ್ರಮಾಣದಲ್ಲಿ ಎಂದಿಗಿಂತ ಹಿರಿದಾಗಿ ದೀಪಾವಳಿ ಸಂಚಿಕೆಯ ರೂಪದಲ್ಲಿ ಹೊರಬಂದಿದೆ. ಇದರಲ್ಲಿ ವಾಚನೀಯವೆನಿಸಿದ ಕೆಲವಾರು ಕಥೆಗಳಿವೆ.

೨ **ಕನ್ನಡಿಗ**— ಹುಬ್ಬಳ್ಳಿಯಿಂದ ಶ್ರೀ ಹುಚ್ಚೇಶ್ವರ ಸೋದಿಯವರು ಸಂಪಾದಕರಾಗಿರುವ ಕನ್ನಡಿಗ ಮಾಸಪತ್ರಿಕೆಯ ಈ ವಿಶೇಷ ಸಂಚಿಕೆಯು ವಿವಿಧ ಬಗೆಯ ಲೇಖನಗಳಿಂದ ಕೂಡಿದೆ. ವಿಭಿನ್ನ ಅಭಿರುಚಿಯ ಕನ್ನಡ ಜನತೆಗೆ ಉಪಯುಕ್ತವೆನಿಸುವ ಈ ಲೇಖನಗಳು ವಿಚಾರ ಪ್ರಚೋದಕವಿವೆ.

೩ **ಪ್ರಪಂಚ**— ಶ್ರೀ ಪಾಟೀಲ ಪುಟ್ಟಪ್ಪರು ಸಂಪಾದಿಸುವ 'ಪ್ರಪಂಚ' ವಾರ ಪತ್ರಿಕೆಯ ದೀಪಾವಳಿ ಸಂಚಿಕೆಯು ನಮ್ಮ ಕೈಸೇರಿದೆ. ವಾರ ಪತ್ರಿಕೆಯ ವಿವಿಧ ವಿಭಾಗಗಳಲ್ಲದೇ ವಿಶೇಷ ಲೇಖನಗಳೂ ಕೂಡಿದ ಈ ಸಂಚಿಕೆಯನ್ನು ಸ್ವಾಗತಿಸುತ್ತೇವೆ.

ಗೋರಾ.

ನಿನ್ನೆ ಕಳೆದಿದೆ.

ನಾಳೆ ಬರಲಿದೆ

ಕಳೆದ ನಿನ್ನೆಯ ಮರೆತು, ಬರುವ ನಾಳೆಯ ಕುರಿತು ಇಂದು ಎಚ್ಚರ ವಹಿಸುವುದೇ ಜಾಣತನ.

ಇಂದು ....ಹೌದು; ಇಂದಿನಿಂದಲೇ ಉಳಿತಾಯಕ್ಕೆ ತೊಡಗುವುದು ಒಳಿತು

ಸಿಂಡಿಕೇಟ್ ಬ್ಯಾಂಕ್
ಉಳಿತಾಯಗಾರರ ಸನ್ಮಿತ್ರ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ

Edited, Printed & Published by K. H. Shetty, at the Navayuga Press, Udipi, S. India.

ಪಾ. ಚಂದಾ ರೂ. 5-75 ಬೆಲೆ 13 ನ. ಪೈಸೆ

Vol. 39 No 16.
ವರುಷ ೩೯. ವಾರ ೧೬.

17-12-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ರಾಜಕೀಯ

ಚೀನವು ತನ್ನ ಮಿತ್ರರನ್ನು ಕಳೆದುಕೊಳ್ಳುತ್ತಿದೆ

ವಿಸ್ತಾರವಾದಕ್ಕನುಗುಣವಾದ ಧೋರಣೆಗಳಿಂದ ಸಹಜೀವನದ ತತ್ತ್ವವನ್ನು ಬಹಿರಂಗವಾಗಿ ಅಲ್ಲಗಳೆಯುತ್ತಿದೆ ಎಂಬುದಕ್ಕೆ ಇಂಡೋನೇಶ್ಯದ ಬಗ್ಗೆ ಇರುವ ಚೀನೀಯ ನೀತಿಯಿಂದ ಸ್ಪಷ್ಟವಾಗಿದೆ

ಭಾರತದ ಗಡಿಪ್ರದೇಶದಲ್ಲಿ ಆಕ್ರಮಣ ನಡೆಸಿರುವ ಚೀನವು ತನ್ನ ವಿಸ್ತಾರವಾದದ ಪ್ರಯೋಗವನ್ನು ಮಾಡುತ್ತ ಸಹಜೀವನ, ಸಹ ಅಸ್ತಿತ್ವಗಳ ಮಹಾ ತತ್ತ್ವವನ್ನು ಮೂಲೆಗೆ ತೂರಿದೆ. ಭಾರತದಂತೆಯೇ ಚೀನದ ಮೋಸದ ಬಲೆಗೆ ಸಿಕ್ಕಿಬಿದ್ದ ರಾಷ್ಟ್ರಗಳಲ್ಲಿ ಇಂಡೋನೇಶ್ಯವೂ ಒಂದು. ಇಂದು ಚೀನವು ತನ್ನ ವಿಸ್ತಾರವಾದದಿಂದಾಗಿ ದಿನೇದಿನೇ ಮಿತ್ರರನ್ನು ಕಳೆದುಕೊಳ್ಳುತ್ತಿದೆ ಎಂಬುದು ಸುವಿದಿತವು. ಇದೇ ರೀತಿ ನಡೆದರೆ, ದಕ್ಷಿಣ ಏಶ್ಯವೇ ಚೀನದ ಮೋಸದ ಬಲೆಗೆ ಸಿಕ್ಕಿಕೊಳ್ಳುವುದು ದುಸ್ಸಾಧ್ಯವೆನಿಸಲಾರದು.

ಇಂಡೋನೇಶಿಯಾದ ವಿದೇಶಮಂತ್ರಿ ಡಾ। ಸುಬಾಂಡ್ರಿಯೊ ಅವರು ಇತ್ತೀಚೆಗೆ ಚೀನವನ್ನು ಸಂದರ್ಶಿಸಿ ಬಂದನಂತರ ವಿಸ್ಫೋಟಾತ್ಮಕ ಘಟನೆಗಳು ಸಂಭವಿಸಿದಂತೆ ತೋರಿಬರುತ್ತಿದೆ. ಜಕಾರ್ತದಲ್ಲಿರುವ ಚೀನೀ ರಾಯಭಾರಿ ಕಚೇರಿಯು, ಜಕಾರ್ತ ಸರಕಾರವು ಪಶ್ಚಿಮ ಜಾವಾದ ಗ್ರಾಮೀಣ ಪ್ರದೇಶಗಳಲ್ಲಿ ಚೀನೀಯ ರಾಷ್ಟ್ರವಾದಿಗಳ ವ್ಯಾಪಾರದ ಮೇಲೆ ಹಾಕಿದ ನಿಯಂತ್ರಣವನ್ನು ಕಿತ್ತೊಗೆಯುವ ಬಗ್ಗೆ ಪ್ರಯತ್ನ ನಡೆಸಿತು. ಈ ಬಗ್ಗೆ ಹಲವಾರು ಮಾತುಕತೆಗಳು ನಡೆದಿವೆ. ಇವುಗಳಿಂದ ಇಂಡೋನೇಶಿಯ ಸರಕಾರವು ಚೀನೀಯರನ್ನು ಹೊರದಟ್ಟಬಯಸುತ್ತಿದೆಯೆಂದೂ ರಾಯಭಾರಿ ಕಚೇರಿಯಲ್ಲಿ ಹೀಗಾಗಬಾರದಂತೆ ನಡೆಯುವ ಪ್ರಯತ್ನ ನಡೆಸುತ್ತಿವೆಯೆಂದೂ ತಿಳಿಯಬಹುದು.

ಜಕಾರ್ತದಲ್ಲಿರುವ ಚೀನಿ ಸರಕಾರಿ ಅಧಿಕಾರಿಗಳು ಇಂಡೋನೇಶಿಯಾ ಸರಕಾರದ ವಿರುದ್ಧ ಮಾತೆತ್ತುತ್ತ ಅವಮರ್ಯಾದೆಯ ಭಾಷೆಯನ್ನು ಅವಲಂಬಿಸಿ ಹಿಡಿದು ಕೊಂಡಿದ್ದಾರೆ. ಅವರ ಆಚರಣೆಯೂ ಅಸಮಂಜಸವೆನಿಸುವಂತಿದೆ. ಸರಕಾರವು ಸಮಾಧಾನದ ಮಾತಾಡಿದರೂ ಇಂಡೋನೇಶ್ಯದ ಜನತೆಯಲ್ಲಿ ಚೀನದ ಬಗ್ಗೆ ಕುಪಿತಮನೋಭಾವನೆಯೇ ತುಂಬಿ ಹೋಗಿರುವುದು. ಪೇಕಿಂಗಿನಲ್ಲಿ ನಡೆದ ಡಾ। ಸುಬಾಂಡ್ರಿಯೊ ಹಾಗೂ ಶ್ರೀ ಚೌ ಎನ್ ಲಾಯ್ ಅವರ ಮಾತುಕತೆಯು ಇನ್ನೂ ಪ್ರಕಟವಾಗಿಲ್ಲ. ಈ ಮಾತುಕತೆಗಳು ಸುಖದವಾಗಿಲ್ಲದಿರುವುದೇ ಇದಕ್ಕೆ ಕಾರಣವೆನ್ನಬಹುದು. ಚೀನೀಯರ ತಡೆಯನ್ನು ಕಂಡು ಡಾ। ಸುಬಾಂಡ್ರಿಯೊರವರು ಚಕಿತರಾಗಿ ಹೋಗಿದ್ದರು.

ಇಂಡೋನೇಶ್ಯದಲ್ಲಿರುವ ೩೦ ಲಕ್ಷ ಚೀನೀರಾಷ್ಟ್ರವಾದಿಗಳ ಸ್ಥಿತಿ ನಿಶ್ಚಯವಾಗದಿರುವುದೇ ಈ ವಿವಾದಕ್ಕೆ ಮೂಲ ಹೇತುವಾಗಿದೆ. ಬಾಂಡುಂಗ ಸಮ್ಮೇಳನದ ಹೊತ್ತಿಗೆ ೧೯೫೫ರಲ್ಲಿ ಎರಡೂ ಸರಕಾರಗಳು ಈ ಚೀನೀಯರ ರಾಷ್ಟ್ರೀಯತೆಯನ್ನು ನಿರ್ಧರಿಸುವ ಮತ್ತವರ ಸ್ಥಿತಿ ನಿರೂಪಿಸುವ ಬಗ್ಗೆ ಮಾತುಕತೆಗೆ ತೊಡಗಿದುವು. ಎರಡೂ ರಾಷ್ಟ್ರಗಳ ರಾಷ್ಟ್ರೀಯತೆಯನ್ನು ಪಡೆಯುವುದು ಸರಿಯಲ್ಲವಾದುದರಿಂದ, ಅಲ್ಲಿರುವ ಚೀನೀಯರು ಜವಾಬುದಾರಿಯು ಇಂಡೋನೇಶ್ಯ ಸರಕಾರವನ್ನೂ ಚೀನೀಯ ರಾಷ್ಟ್ರೀಯತೆ ಬಯಸುವವರ ಹೊಣೆಗಾರಿಕೆಯನ್ನು ಚೀನವು ಹೊರಲು ಸಿದ್ಧವಿದೆಯೆಂದೂ ಶ್ರೀ ಚೌ ಎನ್ ಲಾಯ್ ಹೇಳಿರುವುದಾಗಿ ತಿಳಿಯುತ್ತದೆ.

ಆ ಸಮಯದಲ್ಲಿ ಚೀನೀಯ ರಾಷ್ಟ್ರೀಯವಾದಿಗಳ ಬಗ್ಗೆ ಯಾವುದೇ ಚಿಂತೆಯನ್ನು ಶ್ರೀ ಲಾಯ್ ಮಾಡಲಿಲ್ಲ. ಚೀನದ ಹೊರಗಿರುವ ಎಲ್ಲ ಚೀನೀಯರನ್ನೂ ಅವರು 'ಪ್ರತಿಕ್ರಿಯಾವಾದಿ' ಎಂದು ಉಲ್ಲೇಖಿಸಿದ ವಾಗ ಅವರಲ್ಲಿ ಈ ಬಗ್ಗೆ ಇದ್ದ ಉದಾಸೀನತೆಯನ್ನು ಊಹಿಸಿಕೊಳ್ಳಬಹುದು. ಈ ವಿಷಯ ಚೀನಾರ್ಥಕವಾಗಿ ಎರಡೂ ಸರಕಾರಗಳು ಮಾತುಕತೆ ನಡೆಸಲು ನಿಶ್ಚಯಿಸಿದುವು. ಆದರೆ ಅದು ಎಂದಿಗೂ ಕಾರ್ಯರೂಪಕ್ಕೆ ಬರಲೇ ಇಲ್ಲ.

ಬಾಂಡುಂಗದ ಮಾತುಕತೆಗಳಿಗೆ ಮತ್ತವನ್ನು ಕಾರ್ಯಾನ್ವಿತಗೊಳಿಸುವ ಚೀನದ ಸಲಹೆಯನ್ನು ತೆಗೆದುಕೊಳ್ಳಬೇಕು ಎಂಬ ಚೀನದ ಕೇಳಿಕೆಯೇ ಮೊತ್ತಮೊದಲ ಕಂಟಕವಾಗಿ ಇದರೆದುರು ನಿಂತುಬಿಟ್ಟಿತು. ಆನಂತರ ಒಂದುಬಾರಿ ಒಪ್ಪಂದವಾದ ಮೇಲೆ ಆವಶ್ಯಕ ನಿಯಮ ತಯಾರಿಸಲು ಚೀನಿ ಸರಕಾರ ನಡುವೆ ಪ್ರವೇಶಿಸಬಾರದು ಎಂದು ಇಂಡೋಚೀನವು ಹೇಳಿ ಈ ಕೇಳಿಕೆಯನ್ನು ತಿರಸ್ಕರಿಸಿತ್ತು.

ತನ್ನ ಆರ್ಥಿಕ ಸ್ಥಿತಿಗತಿಯ ಮೇಲೆ ಚೀನೀಯರ ನಿಯಂತ್ರಣವನ್ನು ಕೊನೆಗೊಳಿಸಿದಂದಿನಿಂದ, ಈ ವಿಪನ್ನ ಸ್ಥಿತಿ ಉಲ್ಬಣಗೊಂಡಿದೆ. ಮೊನ್ನೆ ಮೇ ತಿಂಗಳಲ್ಲಿ ಇಂಡೋ

(ಎನೇ ಪುಟ ನೋಡಿರಿ)

ಶಾಂತಿ... ಐಸನ್ ಹಾವರ್ [illegible]

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ - ಮಂಗಳೂರು—3.
ಸ್ಥಾಪನೆ - 1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,	4½%
13	,,	24	,,	4¾%

ರೂಪಾಯಿ 10,000/ ವ, ಹೆಚ್ಚಿನ ಠೇವಣಾತಿಗೆ ½% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ ಇತ್ಯಾದಿ ..

ಕಥಾವಿಹಾರ

ವಿಫಲಗೊಂಡ ಮಹಾದಾನ!

ರಸ್ತೆಯಲ್ಲಿ ಬಿಕ್ಷೆ ಬೇಡುತಿದ್ದ ಭಿಕ್ಷುಕನೋರ್ವನಲ್ಲಿ ದಯೆದೋರಿ ವಿಮಲೆ ಆತನ ಭಿಕ್ಷಾಪಾತ್ರೆಗೆ ದೊಡ್ಡ ನಾಣ್ಯವೊಂದನ್ನಿಕ್ಕಿ ಆಶೀರ್ವಾದ ಪಡೆದಳು; ಆದರೆ, ಆ ನಾಣ್ಯ ಭಿಕ್ಷುಕನ ಕೈಸೇರಲಿಲ್ಲ!

"ಸಾಮಾನು ತರಲಿಲ್ಲವೇ?"

—ಎಂದು ಬರಿಗೈಯಿಂದ ಮನೆಯ ಮೆಟ್ಟಿಲನ್ನು ಹತ್ತುತ್ತಿದ್ದ ವಿಮಲೆಯನ್ನು ಕುರಿತು ಅವಳ ತಂದೆ ಗೋವಿಂದಯ್ಯನವರು ಪ್ರಶ್ನಿಸಿದರು.

ಈ ಮಾತು ಕಿವಿಗೆ ಬಿದ್ದ ಕೂಡಲೇ ವಿಮಲೆಯು ಅಲ್ಲಿಯೇ ನಿಂತುಬಿಟ್ಟಳು. ಮನೆಯೊಳಗೆ ಪ್ರವೇಶಿಸಬೇಕೋ ಬೇಡವೋ ಎಂಬ ಅನುಮಾನದಿಂದ ತಂದೆಯ ಮುಖವನ್ನು ದಿಟ್ಟಿಸಿದಳು. ಆ ಮುಖದಲ್ಲಿ ಕುತೂಹಲದ ಚಿಹ್ನೆ ಮಿನುಗುತಿತ್ತು. ಅಂತೂ ಉತ್ತರಿಸದೆ ಉಪಾಯವಿಲ್ಲವೆಂದು ನಿರ್ಧರಿಸಿದಳು.

"... ತರಲಿಲ್ಲ ...."

—ಎಂದು ನಮ್ರಸ್ವರದಿಂದ ನಿಧಾನವಾಗಿ ವಿಮಲೆಯು ಉತ್ತರಕೊಟ್ಟಳು.

ಗೋವಿಂದಯ್ಯನವರು ಚಕಿತರಾದರು! ಇಷ್ಟರತನಕ ಸಾಮಾನು ತರಲೆಂದು ಪೇಟೆಗೆ ಹೋಗಿ ಹಿಂದೆ ಮರಳಿದ ಅವಳ ಮಾಗಳು ಹೀಗೆಂದೂ ನುಡಿದಿರಲಿಲ್ಲ ವಿಮಲೆಯು ಹನ್ನೆರಡು ವರ್ಷ ಪ್ರಾಯದ ಹುಡುಗಿಯಾಗಿದ್ದರೂ, ತನ್ನ ವಯಸ್ಸಿಗೆ ಮೀರಿದ ವ್ಯವಹಾರ ಜ್ಞಾನವು ಅವಳಲ್ಲಿತ್ತು. ಮನೆಗೆ ಅವಶ್ಯವೆನಿಸಿದ ಸಾಮಾನನ್ನು ಅತಿ ಜಾಗರೂಕತೆಯಿಂದ ತರುವ ಕೆಲಸ ಅವಳದಾಗಿತ್ತು. ಈ ಕೆಲಸದಲ್ಲಿ ಹಿರಿಯರ 'ಶಹಭಾಸ್‌ಗಿರಿ'ಯನ್ನೂ ಆಕೆ ಪಡೆದಿದ್ದಳು. ಆದರೆ ಇಂದು?

ಮನೆಯಿಂದ ಹಣ ಕೊಂಡುಹೋಗಿದ್ದರೂ ವಿಮಲೆ ಬರಿಗೈಯಲ್ಲಿ ಹಿಂದಿರುಗಿದ್ದಾಳೆ. ಗೋವಿಂದಯ್ಯನವರಿಗೆ ಇದು ಬಿಡಿಸಲಾಗದ ಒಗಟಾಯಿತು. ಕೊಟ್ಟ ಹಣವನ್ನೇನಾದರೂ ತಿಂಡಿ ತಿಂದು ಪೂರೈಸಿಬಿಟ್ಟಳೇ? .... ಅಥವಾ ದಾರಿಯಲ್ಲಿ ಹಣ ಕಳೆದು ಹೋಗಿರಬೇಕೇ? ಹೀಗೆಲ್ಲಾ ಆಲೋಚನೆಗಳನ್ನು ಮಾಡಿದ ಅವರು ಅವಳನ್ನು ಪ್ರಶ್ನಿಸಿ ತಿಳಿದುಕೊಳ್ಳುವ ನಿರ್ಧಾರಕ್ಕೆ ಬಂದರು...

"ಹಣವೇನಾಯಿತು?"—ಎಂದು ಸ್ವಲ್ಪ ಬಿರುದನಿಯಿಂದ ಪುನಃ ಕೇಳಿದರು. ಆ ಮಾತಿನಲ್ಲಿರುವ ಸಿಡುಕಿನ ಛಾಯೆಯನ್ನು ವಿಮಲೆ ಅರಿಯದಿರಲಿಲ್ಲ. ಆದರೆ ಈ ಪ್ರಶ್ನೆಗೆ ಉತ್ತರಿಸುವ ಸಿದ್ಧತೆಯಲ್ಲಿ ಆಕೆ ಇರಲಿಲ್ಲ ಪ್ರಸಂಗವೆಲ್ಲಿ ಏಕೋಕಕ್ಕೆ ತಿರುಗುವುದೋ ಎಂದು ಸಂಕಟಕ್ಕೀಡಾದಳು.

ವಿಮಲೆಯು ತನ್ನನ್ನೇ ಪ್ರಶ್ನಿಸಿಕೊಂಡಳು.

"ಹಣವೇನಾಯಿತು?.... ನಾನು ಅದನ್ನೇನು ಮಾಡಿದೆ?"

ಈ ವಿಚಾರ ಅವಳಿಗೆ ಚೆನ್ನಾಗಿ ಗೊತ್ತಿದ್ದರೂ ಅದನ್ನುಸುರುವ ಎದೆಗಾರಿಕೆ ಮಾತ್ರ ಇರಲಿಲ್ಲ. ಏನಾದರೂ ಸಬೂಬು ಹೇಳಿ ತಪ್ಪಿಸಿಕೊಳ್ಳಬೇಕೆಂದು ಯೋಚಿಸ ತೊಡಗಿದಳು. ಅಷ್ಟರಲ್ಲಿ, "ಸುಮ್ಮನೆ ಯೋಚಿಸುತ್ತಾ ನಿಂತಿಯೇಕೆ? ಹಣವನ್ನು ಕಳೆದುಕೊಂಡೆಯಾ?" ಎಂದು ಕಲ್ಲಿನ ಗೊಂಬೆಯಂತೆ ನಿಶ್ಚಲಳಾಗಿ ನಿಂತು ಆಲೋಚಿಸುತ್ತಿದ್ದ ವಿಮಲೆಯನ್ನು ಪುನಃ ಪ್ರಶ್ನಿಸಿದಾಗಲೇ ಅವಳಿಗೆ ಎಚ್ಚರವಾಯಿತು. ತಂದೆಯವರು ಸಿಟ್ಟಿಗೆದ್ದಿರುವರೆಂಬುದನ್ನು ಆಕೆ ಅರಿತು, ಕಾರಣಕೊಡಬೇಕೆಂದು ನಿಶ್ಚಯಿಸಿ

"ದಾರಿಯಲ್ಲೆಲ್ಲೋ ಹಣ ಬಿದ್ದು ಹೋಗಿದೆ" ಎಂದು ನುಡಿದಳು.

"ಆಗ ನಿನಗೆ ಮೈ ಮೇಲೆ ಎಚ್ಚರವಿರಲಿಲ್ಲವೇ?"—ಎಂದು ತಾಳ್ಮೆಗೆಟ್ಟು ಅವರು ಅಬ್ಬರಿಸಿದರು.

ಗೋವಿಂದಯ್ಯನವರು ಸ್ವಭಾವತಃ ಮುಂಗೋಪಿಗಳು. ಒಮ್ಮೊಮ್ಮೆ ಸಣ್ಣ ತಪ್ಪುಗಳನ್ನೂ ಗಂಭೀರವಾಗಿ ಪರಿಗಣಿಸುವ ಮನೋವೃತ್ತಿಯವರು. ಕಳೆದು ಹೋದ ಹಣಕ್ಕಾಗಿ ಅವರು ಪಶ್ಚಾತ್ತಾಪ ಪಡದಿದ್ದರೂ ಮಗಳ ಬುದ್ಧಿ ಹೀನತೆಯನ್ನು ಸಹಿಸುವ ಸ್ಥಿತಿಯಲ್ಲಿರಲಿಲ್ಲ. ಈ ಸಂದರ್ಭದಲ್ಲಿ ಹೆಚ್ಚು ಮಾತನಾಡದೆ ಮೌನವಾಗಿರುವುದೇ ಜಾಣತನವೆಂದು ವಿಮಲೆ ತಿಳಿದಳು. ಗೋವಿಂದಯ್ಯನವರ ಅಬ್ಬರ ಮೀರುತ್ತಿದ್ದರೂ ಆಕೆ ಪಿಟ್ಟೆನ್ನಲಿಲ್ಲ

ಕೊನೆಗೆ "ಆ ಹಣ ಹುಡುಕಿ ತರದಿದ್ದರೆ ನಿನ್ನ ಬೆನ್ನಿನ ಚರ್ಮ ಸುಲಿದೇನು" ಎಂಬ ಕೊನೆಯ ತೀರ್ಮಾನವು ಅವರ ಬಾಯಿಯಿಂದ ಹೊರಟ ಮೇಲೆ ವಿಮಲೆ ತಡಮಾಡಲಿಲ್ಲ. ಕೂಡಲೇ ಧಡ ಧಡನೆ ಮೆಟ್ಟಿಲಿಳಿದು ರಸ್ತೆಗೆ ಬಂದಳು. ಹಣವನ್ನು ಶೋಧಿಸುವ ನೆಪದಿಂದ ಜಾರಿಕೊಂಡಳು.

ಕಳೆದು ಕೊಂಡ ಹಣವನ್ನು ಹುಡುಕಿ ತರುವಳೆಂದು ಗೋವಿಂದಯ್ಯನವರಿಗೆ ಅರ್ಥವಾಗುವ ರೀತಿಯಲ್ಲಿ ಆಕೆ ಹೊರಟರೂ, ಹಣವೇನಾಗಿದೆಯೆಂದು ಅವಳಿಗೆ ಚೆನ್ನಾಗಿ ತಿಳಿದಿತ್ತು. ರಸ್ತೆಯಲ್ಲೆಲ್ಲಿಯೂ ಅದು ದೊರೆಯುವಂತಿರಲಿಲ್ಲ. ರಸ್ತೆಯಲ್ಲಿ ಬಿದ್ದಿದ್ದರಲ್ಲವೇ ಸಿಗುವುದು?

....ವಿಮಲೆಯು ಆ ಹಣವನ್ನು ತನ್ನ ಸಹಾನುಭೂತಿಗೊಳಗಾದ ಕುರುಡ ಭಿಕ್ಷುಕನಿಗೆ ದಾನವಾಗಿತ್ತಿದ್ದಳು. ಆ ದಾನವು ಅವನಿಗೆ ಬಹು ಫಲಕಾರಿಯಾಗಿ ಪರಿಣಮಿಸಲೆಂದು ಬಗೆದಿದ್ದಳು. ಆಗಲೇ ಹಣಕ್ಕೆ ಸಂಬಂಧಿಸಿ ಜರಗಿದ್ದ ಘಟನೆಯ ಸಮಗ್ರ ಚಿತ್ರವು ಆಕೆಯ ಕಣ್ಣಮುಂದೆ ನಲಿದಂತೆ ಭಾಸವಾಯಿತು.

ಂ ಂ ಂ

"ಅಮ್ಮಾ.... ... ಭಿಕ್ಷೆ ನೀಡು, ತಾಯೀ......"

ಪೇಟೆಯಿಂದ ಸಾಮಾನು ತರಲೆಂದು ಎಂಟಾಣೆ ನಾಣ್ಯವನ್ನು ಕೈಯಲ್ಲಿ ಹಿಡಿದುಕೊಂಡು ಲಗುಬಗೆಯಿಂದ ಹೆಜ್ಜೆ ಹಾಕುತ್ತಿದ್ದ ವಿಮಲೆಯು ಈ ಕ್ಷೀಣಸ್ವರವನ್ನಾಲಿಸಿದ ಕೂಡಲೇ ರಸ್ತೆಯ ಮಧ್ಯಭಾಗದಲ್ಲೇ ಗಕ್ಕನೆ ನಿಂತುಬಿಟ್ಟಿದ್ದಳು! ಆ ಧ್ವನಿಯಲ್ಲಿದ್ದ ಅಸಹಾಯತೆಯು ಅವಳ ದೃಷ್ಟಿಯನ್ನಾ ಕಡೆಗೆ ಸೆಳೆದಿತ್ತು. ಅತ್ತ ನೋಡಿದ್ದಳು... ರಸ್ತೆಯ ಒಂದು ಪಾರ್ಶ್ವದಲ್ಲಿ ಸಣ್ಣ ಮರದ ಕೆಳಗೆ ಎಳೆಪ್ರಾಯದ ಭಿಕ್ಷುಕನೊಬ್ಬನು ಕುಳಿತಿದ್ದ. ಪಾಪ!... ಕುರುಡನಾಗಿದ್ದ. ದೇವರಿಂದ ಸಕಲರಿಗೂ ದಯಪಾಲಿಸಲ್ಪಟ್ಟಿದ್ದ ಕಣ್ಣುಗಳು ಅವನ ಪಾಲಿಗೆ ನಿರುಪಯೋಗಿಯಾಗಿದ್ದುವು. ಅತನಿಗೆ ವಿಮಲೆಯಷ್ಟೇ ಪ್ರಾಯವಾಗಿದ್ದಿರಬಹುದು. ಆದರೆ ಅವನ ಮುಖವು ಒಣಗಿ ಬಿಳುಪಾಗಿತ್ತು. ಕೂದಲು ಕೆದರಿ ಹೋಗಿತ್ತು! ಕೆನ್ನೆಗಳು ಗುಳಿ ಬಿದ್ದಿದ್ದುವು! ಧೂಳುಮಿಶ್ರಿತವಾಗಿದ್ದ ಮುರುಕು ಉಡುಪನ್ನು ಧರಿಸಿದ್ದ. ಕೈಕಾಲುಗಳು ಬಿದಿರಿನಂತಿದ್ದುವು. ತನ್ನ ಮುಂದೆ ಸಣ್ಣ ತಟ್ಟೆಯೊಂದನ್ನಿಟ್ಟು ಅತ್ತಿತ್ತ ಸಂಚರಿಸುವವರಿಂದ ಭಿಕ್ಷೆ ಬೇಡುತ್ತಿದ್ದ....

ಭಿಕ್ಷುಕನ ಈ ದಾರುಣ ಅವಸ್ಥೆಯನ್ನು ಕಂಡ ವಿಮಲೆಯ ಎಳೆ ಹೃದಯವು ವ್ಯಾಕುಲಗೊಂಡು 'ಅಯ್ಯೋ' ಎಂದಿತ್ತು. ಇಂದು ಮಾತ್ರ ಅವನು ವಿಮಲೆಯ ಕಣ್ಣಿಗೆ ಬಿದ್ದಿದ್ದ. ಎಲ್ಲಿಂದಲೋ ಹೊಸದಾಗಿ ಬಂದಿರಬೇಕು. ಮಾನವನಿಗೆ ಕಣ್ಣು ಬಹು ಮುಖ್ಯವಾದ ಅಂಗವಾಗಿದೆ. ಈ ಅಂಗಹೀನ ಭಿಕ್ಷುಕನಿಗಾಗಿ ಅವಳ ನರನಾಡಿಗಳಲ್ಲಿಯೂ ಸಹಾನುಭೂತಿಯ ಸಂಚಾರವಾಗಿತ್ತು. ತನ್ನ ಹಾಗೆಯೇ ನಕ್ಕು ನಲಿದು ಸುಖದಿಂದ ಇರುವ ಭಾಗ್ಯವನ್ನು ದೇವರು ಅವನಿಗೀಯಲಿಲ್ಲವೆಂಬ ವಿಚಾರ ಅವಳ ಮನಸ್ಸನ್ನು ಹೊಕ್ಕಿಗಿತ್ತು. ಆದರೆ ಭಿಕ್ಷುಕನ ಮುಖದಲ್ಲಿ ಇದರ ಬಗೆಗೆ ಯಾವ ರೀತಿಯ ವಿಷಣ್ಣತೆಯೂ ತೋರಿಬರಲಿಲ್ಲ.

ಇಷ್ಟರಲ್ಲಿ ವಿಮಲೆಯ ಹೃದಯದ ನಾಡಿಯೂ ಮಿಡಿಯತೊಡಗಿತ್ತು....

"ಅಮ್ಮಾ .... ಭಿಕ್ಷೆ ನೀಡು, ತಾಯೀ .... "

ಅಮ್ಮ! ವಿಮಲೆಗೆ ಥಕ್ಕನೆ ಮನೆಯಲ್ಲಿರುವ ತನ್ನ ಅಮ್ಮನ ನೆನಪಾಗಿತ್ತು. ತನ್ನ ಮೇಲೆ ಅಮ್ಮನಿಗೆ ಅದೆಷ್ಟು ಅನುರಾಗವಿದೆ! ಆದರೆ ಈ ಭಾಗ್ಯಹೀನ ಭಿಕ್ಷುಕನಿಗೆ ಅಮ್ಮ ಇರುವಳೇ? ಅವನು ಎಲ್ಲರನ್ನೂ ತಾಯಿಯೆಂದೇ ಸಂಬೋಧಿಸುತ್ತಿದ್ದಾನೆ. ಎಲ್ಲರೂ ಅವನಲ್ಲಿ ತಾಯ ಮಮತೆಯನ್ನು ತೋರ್ಪಡಿಸಬೇಕೆಂದು ಆಶಿಸುತ್ತಿದ್ದಾನೆ, ಆದರೆ ಅವನ ಈ ಕರೆಯನ್ನು ಎಷ್ಟು ಜನರು ಗಮನಿಸುತ್ತಾರೆ? ಭಿಕ್ಷುಕರೆಂದರೆ ಎಲ್ಲರಿಗೂ ತಾತ್ಸಾರ! ಅವರೆಡೆಗೆ ಕೃಪಾದೃಷ್ಟಿ ಬೀರುವವರೇ ವಿರಳ...

ವಿಮಲೆಗೆ ಭಿಕ್ಷುಕನ ಆ ವಿಚಾರ ನೆನೆದಷ್ಟು ಸಾಕಾಗಲಿಲ್ಲ. ಇವನ ತಾಯಿ ತಂದೆಗಳು ಅದಾಗಿರಬಹುದು? ಅವರೆಲ್ಲಿರಬಹುದು? ಅವರಿರುತ್ತಿದ್ದರೆ ಇವನು ಹೀಗೆ ದಾರಿಯಲ್ಲಿ ಬೇಡುತ್ತ ಕುಳಿತಿದ್ದನೇ? ಇಲ್ಲ....ಇಲ್ಲ. ಪ್ರಾಯಶಃ ಇವನು ತಂದೆ ತಾಯಿಂದಿರ ಮುಖವನ್ನೇ ಕಂಡಿರಲಿಕ್ಕಿಲ್ಲ. ಮಾತಾಪಿತರ ವಾತ್ಸಲ್ಯದ ಸುಳಿಗೆ ಸಿಲುಕಿ, ಅವರ ಮಮತೆಯ ಹಾಲುಂಡು ಮೆರೆಯುವ ಭಾಗ್ಯದಿಂದ ವಂಚಿತನಾಗಿದ್ದಿರಬೇಕು. ಆಹಾ! ಅವನ ದೌರ್ಭಾಗ್ಯವೇ?

ವಿಮಲೆಗೆ ತನ್ನ ತಾಯಿಯು ತನ್ನ ಮೇಲೆ ತೋರುವ ಪ್ರೀತಿಯ ಪರಿಚಯವಿತ್ತು. ಊಟ, ಉಡುಗೆಗಳ ವಿಷಯದಲ್ಲಿ ಹೆಚ್ಚಿನ ಗಮನವೀಯುತ್ತಿದ್ದಳು. ಬಿಸಿಲು ಮಳೆಗಳಿಗೆ ತುತ್ತಾಗದಂತೆ ಅವಳ ಕಟ್ಟೆಚ್ಚರಿಕೆಯಾಗಿತ್ತು. ಏನಾದರೂ ನೋವೆಂದು ಮಲಗಿದರೆ ಅವಳು ತುಂಬಾ ನೊಂದುಕೊಳ್ಳುತ್ತಿದ್ದಳು.

ಹೀಗೆಯೇ ಒಮ್ಮೆ ವಿಮಲೆಗೆ ಜ್ವರ ಬಂದಿತ್ತು.. ಹಲವು ದಿನಗಳ ತನಕ ಹಾಸಿಗೆ ಬಿಟ್ಟೇಳಲು ಆಕೆ ಶಕ್ತಳಾಗಲಿಲ್ಲ. ಜ್ವರದ ತಾಪದಿಂದ ಏನೇನೋ ಅಬದ್ಧವಾಗಿ ಬಡಬಡಿಸಲಿಕ್ಕೂ ಆರಂಭಿಸಿದ್ದಳು. ಇದರಿಂದ ತಲ್ಲಣಗೊಂಡ ಗೋವಿಂದಯ್ಯನವರು ಓಡಿಹೋಗಿ ಡಾಕ್ಟರರನ್ನು ಕರೆದು ತಂದಿದ್ದರು. ವಿಮಲೆಯ ತಾಯಿಯಂತೂ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1923

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ಕಥಾವಿಹಾರ

ವಿಫಲಗೊಂಡ ಮಹಾದಾನ!

ರಸ್ತೆಯಲ್ಲಿ ಭಿಕ್ಷೆ ಬೇಡುತಿದ್ದ ಭಿಕ್ಷುಕನೋರ್ವನಲ್ಲಿ ದಯೆದೋರಿ ವಿಮಲೆ ಆತನ ಭಿಕ್ಷಾಪಾತ್ರೆಗೆ ದೊಡ್ಡ ನಾಣ್ಯವೊಂದನ್ನಿಕ್ಕಿ ಆಶೀರ್ವಾದ ಪಡೆದಳು: ಆದರೆ, ಆ ನಾಣ್ಯ ಭಿಕ್ಷುಕನ ಕೈಸೇರಲಿಲ್ಲ!

"ಸಾಮಾನು ತರಲಿಲ್ಲವೇ?"

—ಎಂದು ಬರಿಗೈಯಿಂದ ಮನೆಯ ಮೆಟ್ಟಿಲನ್ನು ಹತ್ತುತ್ತಿದ್ದ ವಿಮಲೆಯನ್ನು ಕುರಿತು ಅವಳ ತಂದೆ ಗೋವಿಂದಯ್ಯನವರು ಪ್ರಶ್ನಿಸಿದರು.

ಈ ಮಾತು ಕಿವಿಗೆ ಬಿದ್ದ ಕೂಡಲೇ ವಿಮಲೆಯು ಅಲ್ಲಿಯೇ ನಿಂತುಬಿಟ್ಟಳು. ಮನೆಯೊಳಗೆ ಪ್ರವೇಶಿಸಬೇಕೋ ಬೇಡವೋ ಎಂಬ ಅನುಮಾನದಿಂದ ತಂದೆಯ ಮುಖವನ್ನು ದಿಟ್ಟಿಸಿದಳು. ಆ ಮುಖದಲ್ಲಿ ಕುತೂಹಲದ ಚಿಹ್ನೆ ಮಿನುಗುತಿತ್ತು. ಅಂತೂ ಉತ್ತರಿಸದೆ ಉಪಾಯವಿಲ್ಲವೆಂದು ನಿರ್ಧರಿಸಿದಳು.

"... ತರಲಿಲ್ಲ ...."

—ಎಂದು ನಮ್ರಸ್ವರದಿಂದ ನಿಧಾನವಾಗಿ ವಿಮಲೆಯು ಉತ್ತರಕೊಟ್ಟಳು.

ಗೋವಿಂದಯ್ಯನವರು ಚಕಿತರಾದರು! ಇಷ್ಟರತನಕ ಸಾಮಾನು ತರಲೆಂದು ಪೇಟೆಗೆ ಹೋಗಿ ಹಿಂದೆ ಮರಳಿದ ಅವಳು ಹೀಗೆಂದೂ ನುಡಿದಿರಲಿಲ್ಲ. ವಿಮಲೆಯು ಹನ್ನೆರಡು ವರ್ಷ ಪ್ರಾಯದ ಹುಡುಗಿಯಾಗಿದ್ದರೂ, ತನ್ನ ವಯಸ್ಸಿಗೆ ಮೀರಿದ ವ್ಯವಹಾರ ಜ್ಞಾನವು ಅವಳಲ್ಲಿತ್ತು. ಮನೆಗೆ ಅವಶ್ಯವೆನಿಸಿದ ಸಾಮಾನನ್ನು ಅತಿ ಜಾಗರೂಕತೆಯಿಂದ ತರುವ ಕೆಲಸ ಅವಳದಾಗಿತ್ತು. ಈ ಕೆಲಸದಲ್ಲಿ ಹಿರಿಯರ 'ಶಹಭಾಸ್‌ಗಿರಿ'ಯನ್ನೂ ಆಕೆ ಪಡೆದಿದ್ದಳು. ಆದರೆ ಇಂದು?

ಮನೆಯಿಂದ ಹಣ ಕೊಂಡುಹೋಗಿದ್ದರೂ ವಿಮಲೆ ಬರಿಗೈಯಲ್ಲಿ ಹಿಂದಿರುಗಿದ್ದಾಳೆ. ಗೋವಿಂದಯ್ಯನವರಿಗೆ ಇದು ಬಿಡಿಸಲಾಗದ ಒಗಟಾಯಿತು. ಕೊಟ್ಟ ಹಣವನ್ನೇನಾದರೂ ತಿಂಡಿ ತಿಂದು ಪೂರೈಸಿಬಿಟ್ಟಳೇ? .. ಅಥವಾ ದಾರಿಯಲ್ಲಿ ಹಣ ಕಳೆದು ಹೋಗಿರಬೇಕೇ? ಹೀಗೆಲ್ಲಾ ಆಲೋಚನೆಗಳನ್ನು ಮಾಡಿದ ಅವರು ಅವಳನ್ನು ಪ್ರಶ್ನಿಸಿ ತಿಳಿದುಕೊಳ್ಳಲು ನಿರ್ಧರಿಸಿದರು...

"ಹಣವೇನಾಯಿತು?"—ಎಂದು ಸ್ವಲ್ಪ ಬಿರುಸಿನಿಂದ ಪುನಃ ಕೇಳಿದರು. ಆ ಮಾತಿನಲ್ಲಿರುವ ಸಿಡುಕಿನ ಛಾಯೆಯನ್ನು ವಿಮಲೆ ಅರಿಯದಿರಲಿಲ್ಲ. ಆದರೆ ಈ ಪ್ರಶ್ನೆಗೆ ಉತ್ತರಿಸುವ ಸಿದ್ಧತೆಯಲ್ಲಿ ಆಕೆ ಇರಲಿಲ್ಲ. ಪ್ರಸಂಗವೆಲ್ಲಿ ಬೇರೆಯೇ ಕಡೆಗೆ ತಿರುಗುವುದೋ ಎಂದು ಸಂಕಟಕ್ಕೀಡಾದಳು.

ವಿಮಲೆಯು ತನ್ನನ್ನೇ ಪ್ರಶ್ನಿಸಿಕೊಂಡಳು.

"ಹಣವೇನಾಯಿತು?.... ನಾನು ಅದನ್ನೇನು ಮಾಡಿದೆ?"

ಈ ವಿಚಾರ ಅವಳಿಗೆ ಚೆನ್ನಾಗಿ ಗೊತ್ತಿದ್ದರೂ ಅದನ್ನುಸುರುವ ಎದೆಗಾರಿಕೆ ಮಾತ್ರ ಇರಲಿಲ್ಲ. ಏನಾದರೂ ಸಬೂಬು ಹೇಳಿ ತಪ್ಪಿಸಿಕೊಳ್ಳಬೇಕೆಂದು ಯೋಚಿಸತೊಡಗಿದಳು. ಅಷ್ಟರಲ್ಲಿ, "ಸುಮ್ಮನೆ ಯೋಚಿಸುತ್ತಾ ನಿಂತಿಯೇಕೆ? ಹಣವನ್ನು ಕಳೆದುಕೊಂಡೆಯಾ?" ಎಂದು ಕಲ್ಲಿನ ಗೊಂಬೆಯಂತೆ ನಿಶ್ಚಲಳಾಗಿ ನಿಂತು ಆಲೋಚಿಸುತ್ತಿದ್ದ ವಿಮಲೆಯನ್ನು ಪುನಃ ಪ್ರಶ್ನಿಸಿದಾಗಲೇ ಅವಳಿಗೆ ಎಚ್ಚರವಾಯಿತು. ತಂದೆಯವರು ಸಿಟ್ಟುಗೆದ್ದಿರುವರೆಂಬುದನ್ನು ಆಕೆ ಅರಿತು, ಕಾರಣಕೊಡಬೇಕೆಂದು ನಿಶ್ಚಯಿಸಿ

"ದಾರಿಯಲ್ಲೆಲ್ಲೋ ಹಣ ಬಿದ್ದುಹೋಗಿದೆ" ಎಂದು ನುಡಿದಳು.

"ಆಗ ನಿನಗೆ ಮೈ ಮೇಲೆ ಎಚ್ಚರವಿರಲಿಲ್ಲವೇ?"—ಎಂದು ತುಳ್ಕೆಗಟ್ಟಿ ಅವರು ಅಬ್ಬರಿಸಿದರು.

ಗೋವಿಂದಯ್ಯನವರು ಸ್ವಭಾವತಃ ಮುಂಗೋಪಿಗಳು. ಒಮ್ಮೊಮ್ಮೆ ಸಣ್ಣ ತಪ್ಪುಗಳನ್ನೂ ಗಂಭೀರವಾಗಿ ಪರಿಗಣಿಸುವ ಮನೋವೃತ್ತಿಯವರು. ಕಳೆದು ಹೋದ ಹಣಕ್ಕಾಗಿ ಅವರು ಪಶ್ಚಾತ್ತಾಪ ಪಡದಿದ್ದರೂ ಮಗಳ ಬುದ್ಧಿ ಹೀನತೆಯನ್ನು ಸಹಿಸುವ ಸ್ಥಿತಿಯಲ್ಲಿರಲಿಲ್ಲ. ಈ ಸಂದರ್ಭದಲ್ಲಿ ಹೆಚ್ಚು ಮಾತನಾಡದೆ ಮೌನವಾಗಿರುವುದೇ ಜಾಣತನವೆಂದು ವಿಮಲೆ ತಿಳಿದಳು. ಗೋವಿಂದಯ್ಯನವರ ಅಬ್ಬರ ಮೀರುತ್ತಿದ್ದರೂ ಆಕೆ ಪಿಟ್ಟೆನ್ನಲಿಲ್ಲ.

ಕೊನೆಗೆ "ಆ ಹಣ ಹುಡುಕಿ ತರದಿದ್ದರೆ ನಿನ್ನ ಬೆನ್ನಿನ ಚರ್ಮ ಸುಲಿದೇನು" ಎಂಬ ಕೊನೆಯ ತೀರ್ಮಾನವು ಅವರ ಬಾಯಿಯಿಂದ ಹೊರಟ ಮೇಲೆ ವಿಮಲೆ ತಡಮಾಡಲಿಲ್ಲ. ಕೂಡಲೇ ಧಡ ಧಡನೆ ಮೆಟ್ಟಿಲಿಳಿದು ರಸ್ತೆಗೆ ಬಂದಳು. ಹಣವನ್ನು ಶೋಧಿಸುವ ನೆಪದಿಂದ ಜಾರಿಕೊಂಡಳು.

ಕಳೆದು ಕೊಂಡ ಹಣವನ್ನು ಹುಡುಕಿ ತರವಳೆಂದು ಗೋವಿಂದಯ್ಯನವರಿಗೆ ಅರ್ಥವಾಗುವ ರೀತಿಯಲ್ಲಿ ಆಕೆ ಹೊರಟರೂ, ಹಣವೇನಾಗಿದೆಯೆಂದು ಅವಳಿಗೆ ಚೆನ್ನಾಗಿ ತಿಳಿದಿತ್ತು. ರಸ್ತೆಯಲ್ಲೆಲ್ಲಿಯೂ ಅದು ದೊರೆಯುವಂತಿರಲಿಲ್ಲ. ರಸ್ತೆಯಲ್ಲಿ ಬಿದ್ದಿದ್ದರಲ್ಲವೇ ಸಿಗುವುದು?

...ವಿಮಲೆಯು ಆ ಹಣವನ್ನು ತನ್ನ ಸಹಾನುಭೂತಿಗೊಳಗಾದ ಕುರುಡ ಭಿಕ್ಷುಕನಿಗೆ ದಾನವಾಗಿತ್ತಿದ್ದಳು. ಆ ದಾನವು ಅವನಿಗೆ ಬಹು ಫಲಕಾರಿಯಾಗಿ ಪರಿಣಮಿಸಲೆಂದು ಬಗೆದಿದ್ದಳು. ಆಗಲೇ ಹಣಕ್ಕೆ ಸಂಬಂಧಿಸಿ ಜರಗಿದ್ದ ಘಟನೆಯ ಸಮಗ್ರ ಚಿತ್ರವು ಆಕೆಯ ಕಣ್ಣಮುಂದೆ ನಲಿದಂತೆ ಆಯಿತು.

o o o

'ಅಮ್ಮಾ...... ಭಿಕ್ಷೆ ನೀಡು, ತಾಯೀ .. ..'

ಪೇಟೆಯಿಂದ ಸಾಮಾನು ತರಲೆಂದು ಎಂಟಾಣೆ ನಾಣ್ಯವನ್ನು ಕೈಯ ಹಿಡಿದುಕೊಂಡು ಲಗುಬಗೆಯಿಂದ ಹೆಜ್ಜೆ ಹಾಕುತ್ತಿದ್ದ ವಿಮಲೆಯು ಈ ಕ್ಷೀಣಸ್ವರವನ್ನಾಲಿಸಿದ ಕೂಡಲೇ ರಸ್ತೆಯ ಮಧ್ಯಭಾಗದಲ್ಲೇ ಗಕ್ಕನೆ ನಿಂತುಬಿಟ್ಟಳು! ಆ ಧ್ವನಿಯಲ್ಲಿದ್ದ ಅಸಹಾಯತೆಯು ಅವಳ ದೃಷ್ಟಿಯನ್ನಾ ಕಡೆ ಸೆಳೆದಿತ್ತು. ಅತ್ತ ನೋಡಿದ್ದಳು... ರಸ್ತೆಯ ಒಂದು ಪಾರ್ಶ್ವದಲ್ಲಿ ಸಣ್ಣ ಮರದ ಕೆಳಗೆ ಎಳೆಪ್ರಾಯದ ಭಿಕ್ಷುಕನೊಬ್ಬನು ಕುಳಿತಿದ್ದ. ಪಾಪ! ಕುರುಡನಾಗಿದ್ದ. ದೇವರಿಂದ ಸಕಲರಿಗೂ ದಯಪಾಲಿಸಲ್ಪಟ್ಟಿದ್ದ ಕಣ್ಣುಗಳ ಅವನ ಪಾಲಿಗೆ ನಿರುಪಯೋಗಿಯಾಗಿದ್ದುವು. ಆತನಿಗೆ ವಿಮಲೆಯಷ್ಟೇ ಪ್ರಾಯವಿದ್ದಿರಬಹುದು. ಆದರೆ ಅವನ ಮುಖವು ಬಣಗಿ ಬಿಸ್ಪೆಯಾಗಿತ್ತು. ಕೂದಲು ಕೆದರಿ ಹೋಗಿತ್ತು! ಕೆನ್ನೆಗಳು ಗುಳಿ ಬಿದ್ದಿದ್ದುವು ಧೂಳುಮಿಶ್ರಿತವಾಗಿದ್ದ ಮುರುಕು ಉಡುಪನ್ನು ಧರಿಸಿದ್ದ. ಕೈಕಾಲುಗಳು ಬಿದಿರಿನಂತಿದ್ದುವು. ತನ್ನ ಮುಂದೆ ಸಣ್ಣ ತಟ್ಟೆಯೊಂದನ್ನಿಟ್ಟು ಅತ್ತಿತ್ತ ಸಂಚರಿಸುವವರಿಂದ ಭಿಕ್ಷೆ ಬೇಡುತ್ತಿದ್ದ.

ಭಿಕ್ಷುಕನ ಈ ದಾರುಣ ಅವಸ್ಥೆಯನ್ನು ಕಂಡ ವಿಮಲೆಯ ಎಳೆ ಹೃದಯವು ವ್ಯಾಕುಲಗೊಂಡು 'ಅಯ್ಯೋ' ಎಂದಿತ್ತು. ಇಂದು ಮಾತ್ರ ಅವನು ವಿಮಲೆಯ ಕಣ್ಣಿಗೆ ಬಿದ್ದಿದ್ದ. ಎಲ್ಲಿಂದಲೋ ಹೊಸದಾಗಿ ಬಂದಿರಬೇಕು. ಮಾನವನಿಗೆ ಕಣ್ಣು ಬಹು ಮುಖ್ಯವಾದ ಅಂಗವಾಗಿದೆ. ಈ ಅಂಗಹೀನ ಭಿಕ್ಷುಕನಿಗಾಗಿ ಅವಳ ನರನಾಡಿಗಳಲ್ಲಿಯೂ ಸಹಾನುಭೂತಿಯು ಸಂಚಾರವಾಗಿತ್ತು. ತನ್ನ ಹಾಗೆಯೇ ನಕ್ಕು ನಲಿದು ಸುಖದಿಂದ ಇರುವ ಭಾಗ್ಯವನ್ನು ದೇವರು ಅವನಿಗೀಯಲಿಲ್ಲವೆಂಬ ವಿಚಾರ ಅವಳ ಮನಸ್ಸನ್ನು ಹೊಕ್ಕಾಗಿತ್ತು. ಆದರೆ ಭಿಕ್ಷುಕನ ಮುಖದಲ್ಲಿ ಇದರ ಬಗೆಗೆ ಯಾವ ರೀತಿಯ ವಿಷಣ್ಣತೆಯೂ ತೋರುಬರಲಿಲ್ಲ.

ಇಷ್ಟರಲ್ಲಿ ವಿಮಲೆಯ ಹೃದಯದ ನಾಡಿಯೂ ಮಿಡಿಯತೊಡಗಿತ್ತು....

"ಅಮ್ಮಾ, . ಭಿಕ್ಷೆ ನೀಡು, ತಾಯೀ ."

ಅಮ್ಮ! ವಿಮಲೆಗೆ ಥಕ್ಕನೆ ಮನೆಯಲ್ಲಿರುವ ತನ್ನ ಅಮ್ಮನ ನೆನಪಾಗಿತ್ತು. ತನ್ನ ಮೇಲೆ ಅಮ್ಮನಿಗೆ ಅದೆಷ್ಟು ಅನುರಾಗವಿದೆ! ಆದರೆ ಈ ಭಾಗ್ಯಹೀನ ಭಿಕ್ಷುಕನಿಗೆ ಅಮ್ಮ ಇರುವಳೇ? ಅವನು ಎಲ್ಲರನ್ನೂ ತಾಯಿಯೆಂದೇ ಸಂಭೋಧಿಸುತ್ತಿದ್ದಾನೆ. ಎಲ್ಲರೂ ಅವನಲ್ಲಿ ತಾಯ ಮಮತೆಯನ್ನು ತೋರ್ಪಡಿಸಬೇಕೆಂದು ಆಶಿಸುತ್ತಿದ್ದಾನೆ. ಆದರೆ ಅವನ ಈ ಕರೆಯನ್ನು ಎಷ್ಟು ಜನರು ಗಮನಿಸುತ್ತಾರೆ? ಭಿಕ್ಷುಕರೆಂದರೆ ಎಲ್ಲರಿಗೂ ತಾತ್ಸಾರ! ಅವರೆಡೆಗೆ ಕೃಪಾದೃಷ್ಟಿ ಬೀರುವವರೇ ವಿರಳ...

ವಿಮಲೆಗೆ ಭಿಕ್ಷುಕನ ಆ ವಿಚಾರ ನೆನೆದಷ್ಟು ಸಹಿಸಲಾಗಲಿಲ್ಲ. ಇವನ ತಾಯಿ ತಂದೆಗಳು ಅದೆಂಗಿರಬಹುದು? ಅವರಿಲ್ಲದೆ ಬಹುದು? ಅವರಿರುತ್ತಿದ್ದರೆ ಇವನು ಹೀಗೆ ದಾರಿಯಲ್ಲಿ ಬೇಡುತ್ತ ಕುಳಿತಿದ್ದನೇ? ಇಲ್ಲ...ಇಲ್ಲ. ಪ್ರಾಯಶಃ ಇವನು ತಂದೆ ತಾಯಂದಿರ ಮುಖವನ್ನೇ ಕಂಡಿರಲಿಕ್ಕಿಲ್ಲ. ಮಾತಾಪಿತರ ವಾತ್ಸಲ್ಯದ ಸುಖಸವಿಯೂ ಅವರ ಮಮತೆಯ ಹಾಲನ್ನು ಸುರಿಯುವ ಭಾಗ್ಯದಿಂದ ವಂಚಿತನಾಗಿದ್ದಿರಬೇಕು. ಆಹಾ! ಅದೆಂಥ ದೌರ್ಭಾಗ್ಯವೇ?

ವಿಮಲೆಗೆ ತನ್ನ ತಾಯಿಯು ತನ್ನ ಮೇಲೆ ತೋರುವ ಪ್ರೀತಿಯು ಪರಿಚಯವಿತ್ತು. ಊಟ, ಉಡುಗೆಗಳ ವಿಷಯದಲ್ಲಿ ಹೆಚ್ಚಿನ ಗಮನವೀಯುತ್ತಿದ್ದಳು. ಬಿಸಿಲು ಮಳೆಗಳಿಗೆ ತಿರುಗಾಡದಂತೆ ಅವಳ ಕಟ್ಟಪ್ಪಣೆಯಾಗಿತ್ತು. ಏನಾದರೂ ನೋವೆಂದು ಮಲಗಿದರೆ ಅವಳು ತುಂಬಾ ನೊಂದುಕೊಳ್ಳುತ್ತಿದ್ದಳು.

ಹೀಗೆಯೇ ಒಮ್ಮೆ ವಿಮಲೆಗೆ ಜ್ವರ ಬಂದಿತ್ತು. ಹಲವು ದಿನಗಳ ತನಕ ಹಾಸಿಗೆ ಬಿಟ್ಟೇಳಲು ಆಕೆ ಶಕ್ತಳಾಗಲಿಲ್ಲ. ಜ್ವರದ ತಾಪದಿಂದ ಏನೇನೋ ಅಬದ್ಧವಾಗಿ ಬಡಬಡಿಸಲಿಕ್ಕೂ ಆರಂಭಿಸಿದ್ದಳು. ದುಃಖದಿಂದ ತಲ್ಲಣಗೊಂಡ ಗೋವಿಂದಯ್ಯನವರು ಓಡಿಹೋಗಿ ಡಾಕ್ಟರರನ್ನು ಕರೆತಂದಿದ್ದರು. ವಿಮಲೆಯ ತಾಯಿಯು ತು

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4¼%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ರೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1920

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

<u>ಶಬ್ದ ಚಿತ್ರ</u>

ಅರಾಜಕ ದೇಶದ ಬಣ್ಣಬಣ್ಣನೆಗಳು

ವಸಿಷ್ಠರ ಬಾಯಿಯಿಂದ ವಾಲ್ಮೀಕಿ ಮಹರ್ಷಿಯು ಹೇಳಿಸಿದ ಅರಾಜಕ ದೇಶದ ದುರ್ಗತಿಯ ವರ್ಣನೆ ಸುಂದರ ಶಬ್ದರೂಪೀ ಚಿತ್ರವಾಗಿದೆ

ರಾಷ್ಟ್ರದ ಉನ್ನತಿಯೇ ರಾಜನ ಶ್ರೇಯಸ್ಸೆಂದು ಆದಿಕವಿ ವಾಲ್ಮೀಕಿಯು ಘಂಟಾಘೋಷವಾಗಿ ಸಾರಿ ಹೇಳಿದ್ದಾನೆ. ನ್ಯಾಯ ಮತ್ತು ಧರ್ಮವನ್ನು ಸರಿಯಾಗಿ ಹೊಂದಿಸಿಕೊಂಡು ರಾಜ್ಯವಾಳುವುದು, ಪ್ರಜಾಜನಮನರಂಜನೆಯನ್ನು ಮಾಡುವುದು, ಅವರನ್ನು ಪರಿಪಾಲಿಸುವುದು ರಾಜನಾದವನ ಪ್ರಧಾನ ಕರ್ತವ್ಯವಾಗಿದೆ. ಶಿಷ್ಟಜನ ರಕ್ಷಣೆ ಹಾಗೂ ದುಷ್ಟಜನ ಸಂಹಾರಗಳು ರಾಜನು ಅನುಸರಿಸಬೇಕಾದ ಪರಿಪಾಲನಾಕ್ರಮವಾಗಿದೆ. ನ್ಯಾಯ ಹಾಗೂ ಶಿಕ್ಷೆಯ ಬಗ್ಗೆ ವಾಲ್ಮೀಕಿ ಮಹರ್ಷಿಯು ದೃಢವಾದ ಗೌರವವನ್ನು ತೋರಿಸಿದ್ದಾನೆ. ರಾಜ್ಯ ಹಾಗೂ ಜನತೆಯ ಮರ್ಯಾದೆಯಲ್ಲಿ ಶೈಥಿಲ್ಯವು ಲವಲೇಶದಷ್ಟಾದರೂ ಕಾಣಿಸಿಕೊಂಡರೆ, ವಾಲ್ಮೀಕಿಯು ಸಹನೆಮೀರುತ್ತಿದ್ದನು. ಅರಾಜಕವೆನಿಸಿದ ರಾಜ್ಯವು ಸ್ಮಶಾನ ಸಮಾನವೆಂದು ವಾಲ್ಮೀಕಿ ನಿಜವಾಗಿಯೂ ಭಾವಿಸಿದ್ದನು. ಅದು ಘನಘೋರ ಅರಣ್ಯದಂತೆ; ಸರ್ವರ ಮಾನಮರ್ಯಾದೆಗಳಿಗೆ ಕುಂದನ್ನುಂಟು ಮಾಡಿದಂತೆ- ಅರಾಜಕ ರಾಷ್ಟ್ರದ ಕುರಿತಾಗಿ ವಾಲ್ಮೀಕಿಯು ಸುಸ್ಪಷ್ಟ ವಾಕ್ಯಗಳಿಂದ ತನ್ನ ಅಭಿಪ್ರಾಯವನ್ನು ಪ್ರಕಟಿಸಿದ್ದಾನೆ.

ಅರಾಜಕ ರಾಜ್ಯವು ವಿನಾಶ ಹೊಂದುತ್ತದೆ; ಅರಾಜಕವೆನಿಸಿದ ದೇಶದಲ್ಲಿ ಮೋಡವು ತನ್ನ ನೀರನ್ನು ಭೂಮಿಯ ಮೇಲೆ ಸುರಿಸುವುದಿಲ್ಲ; ಮಗನು ತಂದೆಯ ಮಾತನ್ನೂ ಮನ್ನಿಸುವುದಿಲ್ಲ; ಹೆಂಡತಿಯಾದವಳು ಗಂಡನ ಮಾನಮರ್ಯಾದೆಗಳನ್ನೂ ಯಶಸ್ಸನ್ನೂ ಹಾರೈಸುವುದಿಲ್ಲ; ಆತನ ವಶೀಭೂತಳಾಗಿರದೆ ಸ್ವಚ್ಛಂದತೆಯಲ್ಲೇ ವಿಹರಿಸುತ್ತಾಳೆ. ಸಂಪತ್ತು ಅರಾಜಕ ಜನಪದದಲ್ಲಿ ನಿಲ್ಲುವುದಿಲ್ಲ. ಸತ್ಯವೆಂಬುದು ಓಡಿ ಹೋಗುತ್ತದೆ. ರಾಜನಿಲ್ಲದ ದೇಶದಲ್ಲಿ ಮನುಷ್ಯರು ಪರಸ್ಪರ ಹೋರಾಡಿಕೊಂಡೇ ತಮ್ಮ ನಾಶಕ್ಕೆ ತಾವೇ ಕಾರಣೀಭೂತರಾಗುತ್ತಾರೆ. ಜನರು ಸಂತುಷ್ಟರಾಗಿ ಮನೆಮಾರುಗಳನ್ನು ಕಟ್ಟಿಕೊಂಡು ಸುಖಿಯಾಗಿರುವುದು ಸಾಧ್ಯವಿಲ್ಲ. ಸಮಾಜದ ಸುಖಶಾಂತಿ ಸಮೃದ್ಧಿಗೆ ಪ್ರೇರಕರಾಗುವ ನಟರೂ ನರ್ತಕರೂ ತಮ್ಮ ಪ್ರದರ್ಶನಗಳನ್ನು ತೋರ್ಪಡಿಸುವುದಿಲ್ಲ. ಇವರಿಗಾಗಿ ಯಾವುದೇ ಸಮಾಜ ಇಲ್ಲವೇ ಉತ್ಸವಗಳು ಯೋಜಿಸಲ್ಪಡುವುದೂ ಇಲ್ಲ.

ಅರಾಜಕ ದೇಶಗಳಲ್ಲಿ ಸಾಯಂಕಾಲದ ಸಮಯದಲ್ಲಿ ಕುಮಾರಿಯರು ಸುವರ್ಣ ಅಲಂಕಾರಗಳನ್ನು ಧರಿಸಿ ಉದ್ಯಾನಗಳಲ್ಲಿ ಕ್ರೀಡೆಗಾಗಿ ತೆರಳುವುದಿಲ್ಲ; ಕೃಷಿ ಮತ್ತು ಗೋರಕ್ಷೆಯಿಂದ ಜೀವಿಸುವ ಶ್ರೀಮಂತರು ಸುರಕ್ಷಿತರಾಗಿ, ಮನೆಗಳ ಕಿಟಿಕಿ ಬಾಗಿಲುಗಳನ್ನು ತೆರೆದು ಚೋರಭಯದಿಂದ ದೂರವಿದ್ದು ನಿಶ್ಚಿಂತೆಯಿಂದ ಎಂದಿಗೂ ನಿದ್ರಿಸುವುದು ಸಾಧ್ಯವಿಲ್ಲ. ಶೀಘ್ರಗಾಮಿ ವಾಹನಗಳ ಮೇಲೆ ಅಥವಾ ದೋಣಿಗಳ ಮೇಲೆ ಕುಳಿತುಕೊಂಡು ಸ್ತ್ರೀ ಪುರುಷರು ಎಂದಿಗೂ ವಿಹರಿಸುವುದು ಸಾಧ್ಯವಿರುವುದಿಲ್ಲ. ದೂರ ದೂರ ಪ್ರಯಾಣ ಬೆಳೆಸುವ ವ್ಯಾಪಾರಿಗಳು ಬೆಲೆ ಬಾಳುವ ಸಾಮಗ್ರಿಗಳನ್ನು ಪಡೆದು ಕುಶಲತಾಪೂರ್ವಕವಾಗಿ ಮಾರ್ಗಗಳಲ್ಲಿ ನಿರ್ಭಯತೆಯಿಂದ ಸಂಚರಿಸುವ ಹಾಗಿಲ್ಲ; ಆತ್ಮದಲ್ಲಿ ಆತ್ಮಧ್ಯಾನ ಮಾಡುವ, ಏಕಾಂತ ಸಂಚಾರ ಮಾಡುವ, ಸಂಜೆಯಾದಲ್ಲೇ ತಂಗಿಬಿಡುವ ಸಾಧು ಸನ್ಯಾಸಿಗಳು ಕುಶಲರಾಗಿರುವುದು ಎಂದಿಗೂ ಅಸಾಧ್ಯವಾಗಿದೆ. ಇಲ್ಲಿ ಯೋಗ ಮತ್ತು ಕ್ಷೇಮಗಳು ನಾಶ ಹೊಂದುತ್ತವೆ. ಇಂತಹ ದೇಶದ ಸೇನೆಯು ಶತ್ರು ಸೇನೆಯೊಡನೆ ಸರ್ವಥಾ ಹೋರಾಡಲು ಮುಂದೆ ಹೋಗಲಾರದು. ಅಲಂಕೃತನಾದ ಮನುಷ್ಯನು ಪ್ರಸನ್ನ ಅಶ್ವದ ಮೇಲೆ ಅಥವಾ ರಥವಾಹನಗಳ ಮೇಲೆ ಕುಳಿತುಕೊಂಡು ಪ್ರಯಾಣವೆಸಗುವ ಧೈರ್ಯ ಹೊಂದಲಾರನು.

ಅರಾಜಕವೆನಿಸಿದ ದೇಶದಲ್ಲಿ ಶಾಸ್ತ್ರ ವಿಶಾರದರಾದ ಮನುಷ್ಯರು ಸಮಾಜದಲ್ಲಿ ಶಾಸ್ತ್ರ ಚಿಂತನೆಯನ್ನು ಮಾಡುತ್ತ ಒಬ್ಬರನ್ನೊಬ್ಬರು ಸೇರಲಾರರು. ಯಾವನೇ ಒಬ್ಬ ಮಾನವನಿಗೆ ತನ್ನದು, ತನ್ನವರು ಎಂಬುದು ಎಂದಿಗೂ ಇರುವುದಿಲ್ಲ. ಸಮುದ್ರದಲ್ಲಿರುವ ಮೀನುಗಳಂತೆ ಪ್ರಜೆಗಳು ಪರಸ್ಪರ ಒಬ್ಬರನ್ನೊಬ್ಬರು ಗೋಳಾಡಿಸುವುದರಲ್ಲಿಯೂ ಪೀಡಿಸುವುದರಲ್ಲಿಯೂ ಕೊಲ್ಲುವುದರಲ್ಲಿಯೂ ತತ್ಪರರಾಗಿರುತ್ತಾರೆ.

ವರ್ಣಾಶ್ರಮ ಧರ್ಮವನ್ನು ಮೀರಿ ನಡೆದುದಕ್ಕೆ ರಾಜನಿಂದ ದಂಡಿತರಾದ ನಾಸ್ತಿಕ ಜನರು ನಿರ್ಭಯರಾಗಿ ರಾಜ್ಯದಲ್ಲಿ ತಮ್ಮ ಪ್ರಭಾವವನ್ನು ಬೀರಿ, ಆಸ್ತಿಕ ಪ್ರಜಾಜನರ ವ್ಯವಸ್ಥಿತ ಜೀವನಕ್ಕೆ ಕಂಟಕಪ್ರಾಯರಾಗುತ್ತಾರೆ.

ಮಾನವ ಶರೀರಕ್ಕೆ ಕಣ್ಣುಗಳಿರುವಂತೆ ರಾಷ್ಟ್ರವೊಂದಕ್ಕೆ ರಾಜನಿರುತ್ತಾನೆ. ರಾಷ್ಟ್ರದಲ್ಲಿ ಸತ್ಯ ಮತ್ತು ಧರ್ಮವನ್ನು ಸಂಸ್ಥಾಪಿಸುವುದೂ ಸಂಪೋಷಿಸುವುದೂ ರಾಜನ ಪಾಲಿಗೆ ಸೇರಿದ ಭಾಗವಾಗಿರುವುದು. ರಾಜನೇ ಸತ್ಯವೂ ಧರ್ಮವೂ ಆಗಿದ್ದಾನೆ; ಅವನೇ ಕುಲೀನರ ಕುಲವಾಗಿದ್ದಾನೆ; ರಾಜನೇ ತಂದೆಯು, ತಾಯಿಯೂ ಕೂಡ, ಹಿತಕಾರಿ ಮಿತ್ರನೂ ಆತನೇ.

ಈ ರೀತಿಯಾಗಿ ರಾಜನ ಮಹತ್ವವನ್ನು ಹೇಳುತ್ತ ಆತನ ಕರ್ತವ್ಯವನ್ನು ಸರ್ವೋಚ್ಚ ಪದವಿಗೇರಿಸಿರುವುದಲ್ಲದೇ ಮುಂದೆ,

ಅಹೋ ತಮ ಇವೇದಂ ಸ್ಯಾನ್ನ ಪ್ರಜ್ಞಾಯೇತ ಕಿಂಚನ
ರಾಜಾ ಚೇನ್ನ ಭವೇಲ್ಲೋಕೇ ವಿಭಜನ್ಸಾಧ್ವಸಾಧುನೀ ||

ಎಂದು ಘೋಷಿಸಿದ್ದಾನೆ.

ಈ ಶ್ಲೋಕದ ಅರ್ಥವನ್ನು ಈ ರೀತಿ ಸಂಗ್ರಹಿಸಬಹುದು: ಸಾಧು-ಅಸಾಧುಗಳನ್ನು ಪ್ರತ್ಯೇಕಿಸುವ ರಾಜನು ಈ ಲೋಕದಲ್ಲಿಲ್ಲವಾದರೆ, ಹಗಲು ಕತ್ತಲೆಯಲ್ಲಿ ವಿಲೀನ ಹೊಂದುವಂತೆ ಎಲ್ಲವೂ ಅಂಧಕಾರದಲ್ಲಿ ಮುಳುಗಿಹೋಗುವುದು.

ಇದು ವಾಲ್ಮೀಕಿಯು ಬದುಕಿಕೊಂಡಿದ್ದ ತ್ರೇತಾಯುಗದ ರಾಜ ಪ್ರಭುತ್ವದ ಕಾಲದ ಚಿತ್ರವಾಯಿತು. ಇಂದಿನ ಆಧುನಿಕ ಕಾಲದ ಕರ್ಮಯುಗದಲ್ಲಿ ಜನತೆಯ ಒಲವು ಪ್ರಜಾಪ್ರಭುತ್ವದತ್ತ ಒಲಿಯುತ್ತಿರುವುದಾದರೂ ಯಾರೊಬ್ಬ ನಾಗರಿಕನೂ ಅರಾಜಕತೆಯನ್ನು ಬಯಸುವುದಿಲ್ಲವೆಂಬುದನ್ನು ಅವಶ್ಯ ಗಮನಿಸಬೇಕು. ಅಂದು ರಾಜನಲ್ಲಿ ಸರ್ವಾಧಿಕಾರಗಳೂ ಕೇಂದ್ರಿತವಾಗಿದ್ದರೆ, ಇಂದು ಆ ಒಬ್ಬನ ಬದಲಾಗಿ ಜನತೆಯಿಂದಲೇ ಚುನಾಯಿತರಾದ ಪ್ರತಿನಿಧಿ ಮಂಡಳಿಗಳಿವೆ. ಇವೇ ರಾಜ್ಯದಾಳಿತದ ಹೊಣೆಯನ್ನು ಹೊರಬೇಕಾಗುವುದು. ಧರ್ಮ ಮತ್ತು ಸತ್ಯಗಳು ರಾಜನಲ್ಲಿರಬೇಕಾದ ಆವಶ್ಯಕ ಹಾಗೂ ಪ್ರಧಾನ ಗುಣಗಳಾಗಿದ್ದುವು. ಅವೇ ಗುಣಗಳು ಇಂದಿನ ನಮ್ಮ ಶಾಸಕರಲ್ಲಿಯೂ ಇರಬೇಕಾದುವು. ಧರ್ಮವೇ ತ್ರೇತಾ ಯುಗದಿಂದ ನಾವು ಕಲಿಯುಗಕ್ಕೆ ಕಾಲಿರಿಸಿದರೂ ಮಾನವತೆಯ ಧರ್ಮ ಮತ್ತು ಸತ್ಯಗಳ ಮೂಲತತ್ವಗಳು ಇನ್ನೂ ಪರಿವರ್ತನೆಯಾಗಿಲ್ಲ. ಜನತೆಯಲ್ಲಿ ನಿರ್ಭಯತೆ ಮತ್ತು ರಾಷ್ಟ್ರದಲ್ಲಿ ಸಮೃದ್ಧಿಯನ್ನು ತೋರಿಸಿಕೊಡುವುದು, ಸಾಧುಗಳನ್ನು ರಕ್ಷಿಸಿ, ಅಸಾಧುಗಳನ್ನು ಶಿಕ್ಷಿಸುವುದು ನ್ಯಾಯಕ್ಕೆ ವಿಜಯವನ್ನು ತಂದುಕೊಡುವುದು, ಜನಸಮುದಾಯವು ನೆಮ್ಮದಿಯಿಂದ ನಿಶ್ಚಿಂತೆಯಿಂದ ಬದುಕುವುದಕ್ಕೆ ದಾರಿ ಮಾಡಿ

(೧೦ನೇ ಪುಟ ನೋಡಿರಿ)

ASP-LIC-AS-12 A KN

1959 ಬೋನಸ್ ವರ್ಷ

ಒಂದು ಲಾಭಸಹಿತ ಪಾಲಿಸಿಯನ್ನು ಈಗಲೇ ಪಡೆಯಿರಿ

ಎರಡನೇ ವೇಲ್ಯುವೇಶನ್ ಬೇಗನೆ ಆಗಲಿದೆ

ಲೈಫ್ ಇನ್ಶೂರನ್ಸ್ ಕಾರ್ಪೊರೇಷನಿನ 31.12.1959 ರ ವರೆಗಿನ ಎರಡನೇ ವೇಲ್ಯುವೇಶನ್ ಬೇಗನೆ ಆಗಲಿದೆ. ಈ ವೇಲ್ಯುವೇಶನ್ ತಾರೀಕಿನಂದು ಜಾರಿಯಲ್ಲಿರುವ ಎಲ್ಲಾ ಯೋಗ್ಯ ಪಾಲಿಸಿಗಳಿಗೆ ವೇಲ್ಯುವೇಶನಿನ ಫಲವಾಗಿ ತೋರಿಬರುವ ಲಾಭದಲ್ಲಿ ಭಾಗವಹಿಸುವ ಹಕ್ಕು ಇರುತ್ತದೆ.

ಕಾರ್ಪೊರೇಷನಿನ 31.12.1957 ರ ವರೆಗಿನ ಪ್ರಥಮ ವೇಲ್ಯುವೇಶನಿನ ಫಲವಾಗಿ ಸಾಕಷ್ಟು ಲಾಭ ತೋರಿಬಂದಿದ್ದು, ಕಾರ್ಪೊರೇಷನ್ ಮಾರಾಟ ಮಾಡಿದ ಲಾಭಸಹಿತ ಪಾಲಿಸಿಗಳಿಗೆ ಕೆಳಗೆ ಕಾಣಿಸಿರುವ ದರದಲ್ಲಿ ಬೋನಸ್ ಪ್ರಕಟಿಸಲಾಗಿತ್ತು:

ಎಂಡೋಮೆಂಟ್ ಎಶುರನ್ಸ್: ವಿಮಾ ಹಣ ರೂ. 1000 ದ ಮೇಲೆ ವರ್ಷಕ್ಕೆ ರೂ. 14

ಹೋಲ್ ಲೈಫ್ ಎಶುರನ್ಸ್: ವಿಮಾ ಹಣ ರೂ. 1000 ದ ಮೇಲೆ ವರ್ಷಕ್ಕೆ ರೂ. 17½

ವಿಶೇಷ ಸೂಚನೆ: 31.12.1959 ರ ಮುಂಚೆ ಕಡಿಮೆ ಹಣಕ್ಕೆ ರೂಪಾಂತರಗೊಳಿಸಿದ ಪೈಡ್-ಅಪ್ ಪಾಲಿಸಿಗಳಿಗೆ ಮತ್ತು ಲ್ಯಾಪ್ಸ್ ಆದ ಪಾಲಿಸಿಗಳಿಗೆ ಬೋನಸ್ ಪಡೆಯುವ ಹಕ್ಕು ಇರಲಾರದು.

ನಿಮ್ಮ ಪಾಲಿಸಿಯನ್ನು ಭದ್ರವಾಗಿಡಿ. ಕ್ರಮವಾಗಿ ಪ್ರೀಮಿಯಮ್ ಕಟ್ಟಿ ನಿಮ್ಮ ಪಾಲಿಸಿಯು ಎರಡನೇ ವೇಲ್ಯುವೇಶನಿನಿಂದಾಗಿ ತೋರಿಬರುವ ಲಾಭದಲ್ಲಿ ಭಾಗವಹಿಸುವಂತೆ ನೋಡಿರಿ.

ನೆನಪಿನಲ್ಲಿಡಿರಿ: 1959 ಬೋನಸ್ ವರ್ಷ

ಲೈಫ್ ಇನ್ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ಭಾರತದರ್ಶನ

ಮದ್ರಾಸು ಮತ್ತು ಮಹಾಬಲಿಪುರಂ

ಪಲ್ಲವ ವಂಶೀಯರ ಕುಶಲಕಲಾಪ್ರದರ್ಶನದ ಸ್ಥಳಗಳಿವು ಆದರೆ, ಆ ಪಲ್ಲವ ವಂಶೀಯರಿಂದು ಹಿಂದುಳಿದವರಿದ್ದಾರೆ.

ನಾವು ನವದೆಹಲಿಯನ್ನು ಬಿಟ್ಟು ಹದಿನೆಂಟು ಗಂಟೆಗಳು ಉರುಳಿದ್ದುವು. ಆ ಬಳಿಕ ದಿಲ್ಲಿಯಿಂದ ಮದ್ರಾಸಿಗೆ ಹೋಗುವ ದಾರಿಯಲ್ಲಿ ವಾಲ್ಟೇರ್ ನಂದನ್ನು ದಾಟಿದೊಡನೆ ನಮಗೆ ಹೊಸ ಅನುಭವವುಂಟಾಯಿತು. ಬೆಜವಾಡದೊಂದು ಸಂಕ ನೆರೆ ನೀರಿನಿಂದ ಮುಚ್ಚಿದ್ದರಿಂದ ನಾವು ಅನಿವಾರ್ಯವಾಗಿ ಈ ದಾರಿಯಲ್ಲಿ ಹೋಗಬೇಕಾಗಿತ್ತು.

ಈ ಪ್ರಯಾಣವನ್ನು ಪೂರ್ತಿಗೊಳಿಸಲು ಮೂರುವರೆ ದಿನಗಳು ನಮಗೆ ತಗಲಿದವು ಪ್ರತಿದಿನ ಬೇಗ್ಗೆ ನಾವು ನವ್ಯ ದೃಶ್ಯಗಳನ್ನು ಕಾಣುತ್ತಿದ್ದೆವು. ಭಾಷೆ, ಉಡುಗೆ ತೊಡುಗೆಗಳಲ್ಲಿ ಭಿನ್ನತೆ ಮೂಡಿ ಬರುತ್ತಿತ್ತು.

ದಿಲ್ಲಿಯ ಹೊರ ಆವರಣದ ಹೊಂಡಗಳಲ್ಲಿ ಮಳೆ ಬಂದ ದರಿಂದ ನೀರು ತುಂಬಿತ್ತು. ಆಗಲೆ ನಾವು ಮಧ್ಯಪ್ರದೇಶವನ್ನು ಬಂದು ತಲಪಿದವು. ಅಲ್ಲಿ ನಾವು ಕೆಂಪು ಹಂಚಿನ ಮಾಳಿಗೆಗಳನ್ನು, ಕಗ್ಗಾಡುಗಳಿಂದ ತುಂಬಿದ ರಮ್ಯ ಪರ್ವತಗಳನ್ನು, ತೀಕ್ಷ್ಣವಾಗಿ ಹರಿಯುವ ನದಿಯನ್ನು ಕಂಡೆವು.

ನಮ್ಮ ಪ್ರಯಾಣವಾರಂಭವಾದ ಮೂರು ದಿನಗಳ ಅನಂತರ ನಾವು ನಾವಾನ್ಯ ಕಾಡುಗಳನ್ನು ಕಂಡೆವು. ಪರ್ವತಗಳು ಇಳಿಜಾರಾಗಿದ್ದುವು ಘಾಟಿಗಳಲ್ಲಿ ಪೈರನ್ನು ಬೆಳೆಸಿದ್ದರು. ಪ್ರತಿ ಗದ್ದೆಗಳು ನೀರಿಂದ ತುಂಬಿದ್ದು ಸೂರ್ಯಕಿರಣದಿಂದ ನಳನಳಿಸಿ ಹೊಳೆಯುತ್ತಿತ್ತು. ರೈತರು ಚೀನಿ ರೈತರಂತೆ ಖರ್ಜೂರದ ಎಲೆಗಳಿಂದ ತಯಾರಿಸಿದ ಟೋಪಿಗಳನ್ನು ಧರಿಸಿದ್ದರು ಬಟ್ಟೆಗಳನ್ನು ಕಡಮೆಯಾಗಿ ತೊಟ್ಟಿದ್ದರು.

ಕೊನೆಯ ಪ್ರಾತಃಕಾಲ ನಾವು ಸಮತಲ ಭೂಮಿಯ ಮೇಲೆ ಕಾಲಿಟ್ಟೆವು. ಆ ಪ್ರದೇಶ ಸಮುದ್ರ ತಟವಾಗಿತ್ತು.

ನಮ್ಮ ರೈಲಿನ ಗಾಡಿ ಸಾಕಷ್ಟು ದೊಡ್ಡದಾಗಿತ್ತಾದರೂ ೧೦೦ ವರ್ಷಗಳ ಹಿಂದಿನದಾಗಿತ್ತು; ಬಾಗಿಲಿನ ಪಾಲಿಷ ಹೋಗಲನುವಾಗಿತ್ತು. ಗಾಡಿಯ ಮೇಲಿನ ಹಲಗೆ ಗಡಗಡನೆ ನಡುಗುತ್ತಿತ್ತು. ಇದು 'ಜನಾನಾ' ಡಬ್ಬಿಯಾಗಿದ್ದರಿಂದ ಹೆಂಗಸರು ಇದರಲ್ಲಿ ಇದ್ದರು. ಚೆಂದದ ಮೂವರು ಹೆಂಗಳೆಯರಿದ್ದರು. ಅವರಲ್ಲೊಬ್ಬರು ಡಾಕ್ಟರರಾಗಿದ್ದು ಆಂಧ್ರ ವಿಧಾನ ಸಭೆಯ ಸದಸ್ಯರಾಗಿದ್ದರು. ಎರಡನೆಯವರು ರೈಲ್ವೆ ಅಧಿಕಾರಿಗಳಾಗಿದ್ದರು. ಮೂರನೆಯವರು ಪತ್ರಿಕಾಕರ್ತರಾಗಿದ್ದರು. ಮೂವರೂ ಮದುವೆಯಾಗಿ ಕೆಲ ಮಕ್ಕಳ ತಾಯಂದಿರಾಗಿದ್ದರು ಅವರು, "ತಾವು ತಮ್ಮ ಮಕ್ಕಳ ರಕ್ಷಣೆ ಭಾರವನ್ನು ತಮ್ಮ ಗಂಡಂದಿರ ಪಾಲಿಗೆ ಬಿಟ್ಟು ಬಂದಿದ್ದೇವೆ"ಂದು ಕೊಚ್ಚಿಕೊಳ್ಳುತ್ತಿದ್ದರು. ಭಾರತದಲ್ಲಿ ಮಹಿಳೆಯರು ಹಿಂದುಳಿದವರಾಗಿದ್ದಾರೆಂಬ ವಿಚಾರವನ್ನು ಈ ಸಂಗತಿ ತಿಳಿದ ನೀವು ಒಪ್ಪುವಿರೆ?

ನಾವು ಪ್ರಾಚೀನ ನಗರವಾದ ಮದ್ರಾಸಿಗೆ ಬಂದು ತಲಪಿದೆವು. ಅದು ನವ್ಯರೀತಿಯಲ್ಲಿ ಅಭಿವೃದ್ಧಿಯಾಗಿದ್ದರೂ ತನ್ನ ಪ್ರಾಚೀನತೆಯನ್ನು ಬಿಟ್ಟುಕೊಟ್ಟಿಲ್ಲ. ಚಂಡೀಗಡದಲ್ಲಿರುವ ಕಟ್ಟಡಗಳು ಅಲ್ಲಿಲ್ಲ ಬೊಂಬಾಯಿಯಂತೆ ಗಗನ ಚುಂಬಿ ಕಟ್ಟಡಗಳೂ ಕೂಡಾ ಅಲ್ಲಿಲ್ಲ. ಪುಷ್ಪವಾಟಿಕೆಗಳಿಂದ ಕೂಡಿದ ಕಟ್ಟಡಗಳು ಅಲ್ಲಿ ರಮ್ಯವಾಗಿವೆ. ರಾಜ್ಯದ ಸಚಿವಾಲಯವು ವ್ಯಾಪಾರಿಗಳ ಆಫೀಸಿನಂತಿದೆ. ದಿಲ್ಲಿ ಸಚಿವಾಲಯದ ನೌಕರರಿಗಿಂತ ಇಲ್ಲಿ ನೌಕರರು ಕಡಿಮೆಯಿರುವರು. ನಮ್ಮ ಸಂಸತ್ ಭವನದೆದುರು 'ಎಸೆಂಬ್ಲಿ ಹಾಲ್' ಚಿಕ್ಕ ಪಾಠ ಶಾಲೆಯಂತಿದೆ. ಅಲ್ಲಿಂದು ರಾಜಾಜಿಯವರ ಬಹುದೊಡ್ಡ ಚಿತ್ರವಿದೆ.

ಮದ್ರಾಸಿಗೆ ಬಂದ ಪ್ರತಿಯೊಬ್ಬನು ಮಹಾಬಲಿಪುರಕ್ಕೆ ಅವಶ್ಯ ಹೋಗಲೇಬೇಕು. ಅದು ಮದ್ರಾಸಿನಿಂದ ೩೩ ಮೈಲು ದಕ್ಷಿಣದಲ್ಲಿದೆ. ಪಲ್ಲವರ ಯುಗದಲ್ಲಿ ಇದು ನೌಕಾ ಸೈನ್ಯದ ವಿಶ್ರಾಂತಿ ಧಾಮವಾಗಿತ್ತು. ಪ್ರಖ್ಯಾತ ಬಂದರ ಕೂಡಾ ಆಗಿತ್ತು. ಅವರು ತಮಿಳು ವಂಶಜರಾಗಿದ್ದರು. ಮೂರನೇ ಶತಮಾನದಲ್ಲಿ ಅವರವಂಶ ಸ್ಥಾಪಿತವಾಗಿತ್ತು. ಇಂದು ಈ ನಗರವು ಒಂದು ಚಿಕ್ಕ ಹಳ್ಳಿಯಾಗಿದೆ. ಅಲ್ಲಿ ಎರಡು ಸಾವಿರಕ್ಕಿಂತಲೂ ಕಡಿಮೆ ಜನರಿರುತ್ತಾರೆ. ಅಲ್ಲೊಂದು ಪಂಚಾಯತ್ ಆಫೀಸಿದೆ. ಕತ್ತಲೆಕವಿದ, ಮಣ್ಣಿನ ಗೋಡೆಯ ಮನೆಗಳೆ ಅಲ್ಲಿ ತುಂಬಿವೆ.

ಈ ಎರಡು ಸಾವಿರ ಜನರಲ್ಲಿ ೩೦೦ ಜನರು ಪಟ್ಟೇದಾರರಾಗಿರುವರು. ಪ್ರತಿಯೊಬ್ಬ ಪಟ್ಟೇದಾರರ ಹತ್ತಿರವೂ ಬೆಳೆ ಬೆಳೆಯದ, ಜಲರಹಿತ, ೨೩ ಎಕ್ರೆ ಭೂಮಿಯಿದೆ. ಇಲ್ಲಿ ಹೆಚ್ಚಿನ ಸೊಳ್ಳೆಗಳಿವೆ. ಉಳಿದ ಜನರು ಭೂಮಿ-ಹೀನರಾಗಿದ್ದಾರೆ. ಮತ್ತು ತಿಂಗಳಿಗೆ 10, 15 ರೂಪಾಯಲ್ಲಿ ಕೆಲಸಕ್ಕೆ ಹೋಗುವವರು ಆಗಿದ್ದಾರೆ ಈ ಮಜೂರಿ ಕೇವಲ ವರ್ಷದಲ್ಲಿ ಅವರಿಗೆ 9 ತಿಂಗಳು ದೊರೆಯುತ್ತದೆ. ಇಷ್ಟರಿಂದಲೇ ಅವರ ಜೀವನ ನಿರ್ವಹಣವಾಗುತ್ತದೆ ಮಹಾಬಲಿಪುರಂನಲ್ಲಿ ಒಂದು ಭವ್ಯ ಪ್ರಾಚೀನ ಮಂದಿರವಿದೆ. ಅದಕ್ಕಾಗಿಯೆ ಈ ಊರು ಪ್ರಸಿದ್ಧವಾಗಿದೆ.

ಇಲ್ಲಿ ಸಮುದ್ರದ ದಡದಲ್ಲಿ ಸುಂದರ ವಿಶ್ರಾಂತಿ ಗೃಹವಿದೆ. ಪ್ರಯಾಣಿಕರಿಗೆ ಅದನ್ನು ತೆರವುಮಾಡುತ್ತಾರೆ. ಅಲ್ಲಿಯ ಜನರು ನಮಗೆ ತೆಂಗಿನಕಾಯಿಯನ್ನು ಹೊರತು ಬೇರೇನನ್ನು ಕೊಡಲಾರರು. ನಾವಲ್ಲಿಗೆ ಹೋದ ಸಂದರ್ಭದಲ್ಲಿ ಹರಿಜನವಸತಿಯರ ಗುಡಿಸಲಿನ ಬಾಗಿಲನ್ನು ಅಬಕಾರಿ ಇಲಾಖೆಯವರು ಕಿತ್ತುಕೊಂಡು ಹೋಗಿದ್ದರು. ಹರಿಜನರು ತೆಗೆದ ಸಾಲದ ವಾಲಿನ ವಾರ್ಷಿಕ ಕಂತನ್ನು ಸಲ್ಲಿಸದಿರುವುದೆ ಇದಕ್ಕೆ ಕಾರಣವೆಂದು ವಿಚಾರಿಸಿದ ನಂತರ ನಮಗೆ ತಿಳಿದುಬಂತು. ಅವರಲ್ಲಿ ಹೆಂಗಸರು ರವಕೆ ತೊಟ್ಟುಕೊಳ್ಳುತ್ತಿರಲಿಲ್ಲ. ಗಂಡಸರು ಹೆಚ್ಚಾಗಿ ಕೌಪೀನ ಧಾರಿಗಳಾಗಿದ್ದರು. ಮಕ್ಕಳು ನಗ್ನ ಸತ್ಯದ ಪ್ರತಿಪಾದಕರಾಗಿದ್ದರು.

ಅಲ್ಲಿಯ ಜನರು ಪಲ್ಲವ ವಂಶಜರಾಗಿದ್ದಾರೆ. ಅವರೆ ಅಲ್ಲಿಯ ಮಹಾನ್ ಕಟ್ಟಡಗಳ ನಿರ್ಮಾತರಾಗಿದ್ದಾರೆ ಅವರ ಪೂರ್ವಜರೇ ನಿರ್ಭಯ ನಾವಿಕರಾಗಿದ್ದರು. ಪೂರ್ವ ಏಶಿಯಾದೊಂದಿಗೆ ಅವರೇ ಸಂಪರ್ಕವನ್ನಿಟ್ಟುಕೊಂಡಿದ್ದರು. ಹಿಂದೂ ಸಭ್ಯತೆಯ ಪ್ರಚಾರ ಅವರೇ ಮಾಡಿದ್ದರು. ಇನ್ನು ಮುಂದೆ ಅವರು ಇಂದಿಗಿಂತ ಹೆಚ್ಚು ಬಡವರಾಗಲಾರರು ಮತ್ತು ಅವರವು ಹರಕ್ ಗುಡಿಸಲಾಗಲಾರದು. ಅವರು ಮನೆಯಲ್ಲಿ ಉಪಯೋಗಿಸುವುದು ಮಣ್ಣಿನ ಪಾತ್ರೆಗಳನ್ನೆ ಹೊರತು ಹಿತ್ತಾಳೆ ಪಾತ್ರೆಗಳು ಅವರಲ್ಲಿಲ್ಲ

ಈ ಪ್ರದೇಶವೀಗ 'ತಿರುಕ್ಕಲಿಕುಂಡರಂ' ರಾಷ್ಟ್ರೀಯ ವಿಕಾಸ ಯೋಜನೆಗೆ ಸೇರಿದ ಸ್ಥಳವಾಗಿದೆ. ಪಂಚಾಯತ್ ಆಫೀಸಿನಲ್ಲಿ ನೌಕರರಿಲ್ಲವೆಂದೂ, ಜಾತೀಯ ಗಲಭೆ ಅಲ್ಲಿ ಕೊನೆಗೊಂಡಿದೆಯೆಂದು ತಿಳಿದು ಬಂದಿದೆ ಸಹಕಾರಿ ಸಂಸ್ಥೆಗಳ ಮೂಲಕ ಹೊಸ ರಸಾಯನಿಕ ಗೊಬ್ಬರ ಮತ್ತು ಬೀಜಗಳು ಇಲ್ಲಿಯ ಗದ್ದೆಗಳನ್ನು ಬಂದು ತಲಪಿವೆ. ಹರಿಜನ ವಸತಿಯ ಮಕ್ಕಳಿಗೆ ಧರ್ಮಾರ್ಥ ಮಧ್ಯಾಹ್ನದ ಊಟ ಕೊಡುತ್ತಾರೆ. ಆಸ್ಪತ್ರೆ ನಿರ್ಮಿಸಿದ್ದಾರೆ. ಅಲ್ಲಿಯ ದನಕರುಗಳ ಕೊಟ್ಟಿಗೆಯನ್ನು ಡಾಕ್ಟರರಿಗಾಗಿ ಸರಿಮಾಡುತ್ತಿದ್ದಾರೆ. ರಸ್ತೆಗಳ ನಿರ್ಮಾಣಕಾರ್ಯ ಸಾಗಿದೆ ಯಾವದೂ, ಅನೇಕ ಕಟ್ಟಡಗಳು ಇಲ್ಲವೆ ಯಾವದೂ ಇಲ್ಲಿ ಆರ್ಥಿಕ ದೃಷ್ಟಿಯಿಂದ ಗಣನೀಯ ಪ್ರಗತಿಯಾಗಿಲ್ಲ.

ಈಗ ಇಲ್ಲಿ ಪ್ರಾಚೀನ ವಿದ್ಯಾ ಪದ್ಧತಿಯನ್ನು ಜಾರಿಗೊಳಿಸುವ ಎರಡುಶಾಲೆಗಳಿವೆ. ಅದರಲ್ಲೊಂದರಲ್ಲಿ ಶಿಲ್ಪಕಲೆಯಿಂದ ಮೂರ್ತಿಗಳನ್ನು ನಿರ್ಮಿಸುವರು. ಇದರಲ್ಲಿ ಐವರು ಶಿಕ್ಷಾರ್ಥಿಗಳಿರುವರು ಇನ್ನೊಂದು ಶಾಲೆಯಲ್ಲಿ ಕಲ್ಲಿನ ಮೂರ್ತಿಗಳ ತಯಾರಿ ಕ್ರಮವನ್ನು ಹೇಳಿಕೊಡುವರು. ಇದರಲ್ಲಿ ಹದಿನಾಲ್ಕು ಶಿಕ್ಷಾರ್ಥಿಗಳಿರುವರು. ಪ್ರತಿತಿಂಗಳು ನಲ್ವತ್ತು ರೂಪಾಯಿ ವಿದ್ಯಾರ್ಥಿವೇತನ ಕೊಡುವರು. ಇದಿತನಿಕ್ಕೆನಾಡಿನಲ್ಲಿ ಇಲ್ಲಿ ಮಾತ್ರ ಇಂತಹ ಶಾಲೆಯಿದೆ ಇಲ್ಲಿಯ ಶಿಕ್ಷಕರಿಗೆ ತಮ್ಮ ಅಭ್ಯಾಸದ ವಿಷಯದ ಸಂಪೂರ್ಣಜ್ಞಾನವಿದೆ. ಸಂಸ್ಕೃತ ಪ್ರಾಚೀನ ಗ್ರಂಥ ಮತ್ತು ಶಾಸ್ತ್ರಗಳ ಪೂರ್ಣ ಪರಿಚಯವಿರುವರಿಗಿದ ಅವರು ಕಲಿಸುವ ರೀತಿ ಪ್ರಾಚೀನತರದ್ದಾಗಿದೆ ಪ್ರಾಚೀನಸಾಧನಗಳ ಸಹಾಯದಿಂದಲೇ ಹೇಳಿಕೊಡುತ್ತಿದ್ದಾರೆ. ವಿದ್ಯಾರ್ಥಿ ಚಪ್ಪರದಡಿಯಲ್ಲಿದ್ದು ನೀಲ ಬಣ್ಣದ ಕಲ್ಲುಗಳನ್ನು ಕೆತ್ತುತ್ತಾರೆ ಆ ಶಾಲೆಯ ಓವರ್ ಮಹಾಶಯರು, ಭಾರತದಲ್ಲಿ ಶಿಲ್ಪಕಾರರ ಸರ್ವೋತ್ತಮ ಪೂರ್ಣತೆಯು ನಟರಾಜನಲ್ಲಿ ತುಂಬಿದೆಯೆಂದು ಅಭಿಪ್ರಾಯಪಟ್ಟರು.

(ಯೋಜನಾದಿಂದ)

— ಕೆ. ದಾಮೋದರ ಐತಾಳ.

ಉಡುಪಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಯವರ

ನವೋದಯ ಪ್ರಚಾರ ಪುಸ್ತಕಮಾಲೆಯ ಹೊತ್ತಿಗೆಗಳು

೧. ಕಲಾವಿದ ಕೃಷ್ಣ ಹೆಬ್ಬಾರ: — ಶಿವರಾಮ ಕಾರಂತ

೨. ಬೇಂದ್ರೆ. — ಬಿ. ಎಚ್. ಶ್ರೀಧರ್

೩. ಕಾರ್ಲ್ ಮಾರ್ಕ್ಸ್: — ಕೃಷ್ಣಾನಂದ ಹೆಗ್ಗಡೆ

೪. ಶಿವರಾಮ ಕಾರಂತ: — ವಿ. ಸೀತಾರಾಮಯ್ಯ

೫. ಪ್ರ. ಶ್ರೀ. ನರಸಿಂಹಾಚಾರ್ಯ: — ಸುಬ್ಬಣ್ಣ ಎಕ್ಕುಂಡಿ

೬. ಟಿ. ಎಸ್. ಇಲಿಯಟ್: — ಬಿ. ಎಚ್. ಶ್ರೀಧರ್

೭. ಮಾಸ್ತಿ ವೆಂಕಟೇಶಯ್ಯಂಗಾರ್: — ಎಲ್. ಎಸ್. ಶೇಷಗಿರಿ ರಾವ್

೮. ಕಡೆಂಗೋಡ್ಲು ಶಂಕರ ಭಟ್ಟರು — ಬಡಕ್ಕಿಲ ಕೃಷ್ಣ ಭಟ್ಟ

೯. ಶ್ರೀರಂಗ=ಒಂದು ಹೊಸ ನೋಟ: — ನೆಗಳೂರ ರಂಗನಾಥ

ಬೆಲೆ: ಪ್ರತಿ ೧ರ 0-40 ನ. ಪೈ.

ಪ್ರತಿಗಳು ದೊರೆಯುವ ಸ್ಥಳ:

ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸೀಸ್,

ಕಾರ್ನಾಡು ಸದಾಶಿವ ರಾವ್ ರಸ್ತೆ,

ಮಂಗಳೂರು ೧

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price Rs. 1 = 25. (Postage extra)

If Rs.1=50 is sent by M O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

ಪರಿಚಯ

ಮಹಾಕವಿ ತಿರುವಲ್ಲುವಾರ್

ಜಾತಿಯಲ್ಲಿ ಅಂತ್ಯಜನಾದರೂ ತನ್ನ ವಿದ್ವತ್ತಿನ ಸಹಾಯದಿಂದ, ತನ್ನ ನೀತಿಧರ್ಮದಿಂದ 'ತಮಿಳುವೇದ'ವನ್ನು ಬರೆದು ಅಮರನಾಗಿದ್ದಾನೆ!

ಸಂಸ್ಕೃತವನ್ನು ಬಿಟ್ಟರೆ ಭಾರತೀಯ ಭಾಷೆಗಳಲ್ಲಿರುವ ಸಾಹಿತ್ಯಗಳಲ್ಲಿ ತಮಿಳು ಸಾಹಿತ್ಯವೇ ಅತ್ಯಂತ ಪ್ರಾಚೀನವಾದುದು. ಕ್ರಿಸ್ತ ಪೂರ್ವದಲ್ಲಿಯೇ ತಮಿಳು ಸಾಹಿತ್ಯವು ವಿಪುಲವಾಗಿ ಬೆಳದಿತ್ತು. ಕ್ರಿಸ್ತಶಕ ಒಂದನೆಯ ಶತಮಾನದಲ್ಲಿ ರಚಿಸಲ್ಪಟ್ಟವುಗಳೆಂದು ವಿದ್ವಾಂಸರಿಂದ ನಿರ್ಣಯಿಸಲ್ಪಟ್ಟಿರುವ ಮಹಾಕೃತಿಗಳು ತಮಿಳಿನಲ್ಲಿ ದೊರೆತಿವೆ. ಕುರಲ್, ಶಿಲಪ್ಪದಿಕಾರಮ್, ಮಣಿಮೇಖಲೈ— ಈ ಮೂರು ಗ್ರಂಥಗಳು ಪ್ರಾಚೀನ ತಮಿಳು ಸಾಹಿತ್ಯದ ಮೂರು ರತ್ನಗಳು. ಇವುಗಳಲ್ಲೆಲ್ಲ ಕುರಲ್ ಮಹಾಕಾವ್ಯವೇ ಅತ್ಯಂತ ಹಿಂದಿನದೆಂದು ಸಿದ್ಧವಾಗಿದೆ

ತಮಿಳು ಭಾಷೆಯ ಪ್ರಾಚೀನ ಸಾಹಿತ್ಯಕಾರರಲ್ಲಿ ತಿರುವಲ್ಲುವಾರ್‌ನ ಸ್ಥಾನ ಬಹಳ ಉನ್ನತವಾಗಿದೆ. ತಿರುವಲ್ಲುವಾರ್ ಹೆಚ್ಚು-ಕಡಿಮೆ ಎರಡು ಸಾವಿರ ವರ್ಷಗಳ ಹಿಂದೆ ಹುಟ್ಟಿದವನಾದರೂ, ಇಂದಿಗೂ ಜನರ ಹೃದಯದಲ್ಲಿ ಆತನ ಕೃತಿಯ ಪ್ರಭಾವ ಹಿಂದಿನಷ್ಟೇ ಪ್ರಭಾವಯುತವಾಗಿದೆ. ಎಲ್ಲ ದೇಶಗಳ ಜನರು ಆತನ ಹೆಸರನ್ನು ಬಹಳ ಆದರದಿಂದ ತೆಗೆದುಕೊಳ್ಳುತ್ತಾರೆ ತಮಿಳು ಭಾಷೆಯ ಜನರಾದರೋ ಆತನ ಗ್ರಂಥವನ್ನು ವೇದವೆಂದು ತಿಳಿದು, ಅದನ್ನು ವೇದದ ರೂಪದಲ್ಲೇ ಅಧ್ಯಯನ ಮಾಡುತ್ತಾರೆ.

ತಮಿಳು ಜನರಿಗೆ ಕುರಲ್ ವೇದಗಳಷ್ಟೇ ಪವಿತ್ರವಾದ ಗ್ರಂಥ. ತಮಿಳುವೇದ, ವಿಶ್ವವೇದ, ದೈವೀಗ್ರಂಥ ಎಂಬುದಾಗಿ ಅವರು ಈ ಕಾವ್ಯವನ್ನು ಪುರಸ್ಕರಿಸುತ್ತಾರೆ. ಅದನ್ನು ಅವರು ತಮ್ಮ ಪ್ರಾಚೀನ ಸಂಸ್ಕೃತಿಯ ಒಂದು ಶ್ರೇಷ್ಠವಾದ ನಿಧಿಯೆಂದು ಪರಿಗಣಿಸುವರು. ಇಂತಹ ಆದರ್ಶ ಕೃತಿಯ ಪರಿಚಯ ಅನ್ಯಭಾಷೆಯ ಜನರಿಗೆ ಹೆಚ್ಚಾಗಿ ತಿಳಿದಿರುವುದು ವಿಷಾದಕರ, ಫ್ರೆಂಚ್, ಇಂಗ್ಲಿಷ್—ಮೊದಲಾದ ಪಾಶ್ಚಾತ್ಯ ಭಾಷೆಗಳಿಗೆ ಈ ಕೃತಿ ಅನುವಾದಿಸಲ್ಪಟ್ಟಿದ್ದರೂ, ದೇಶಭಾಷೆಗಳಲ್ಲಿ ಅದರ ಅನುವಾದ ಬಂದಿಲ್ಲ,

ಮಹಾಕವಿ ತಿರುವಲ್ಲುವಾರ್‌ನ ಹೆಸರನ್ನು ಕೇಳದವರು ದಕ್ಷಿಣ ಭಾರತದಲ್ಲಿ ಯಾರೂ ಇಲ್ಲ. ಇವನ ಪ್ರಖ್ಯಾತ ಕೃತಿಯ ಹೆಸರು 'ತಿರುವಕ್ಕುರಲ' ಎಂದು. ತಮಿಳು ಭಾಷೆಯ ನೀತಿಬೋಧಕ ಗ್ರಂಥಗಳಲ್ಲಿ 'ತಿರುವಕ್ಕುರಲ್'ಗೆ ಒಂದು ಉತ್ತಮ ಸ್ಥಾನವಿದೆ, ಸಂಘಂ ಕಾಲದ ಕವಿಗಣವು ಕೂಡಾ ಈ ಕೃತಿಯನ್ನು ಬಾಯಿ ತುಂಬಾ ಹೊಗಳಿದೆ. ಈ ಗ್ರಂಥದಲ್ಲಿ ೧೩೩೦ ಕುರಾಲ್ ಯಾನೆ ಸಣ್ಣ ಸಣ್ಣ ಪದ್ಯಗಳಿವೆ, ಈ ಕೃತಿಯ ಇನ್ನೊಂದು ಹೆಸರು "ಸಾಮಾನ್ಯ ವೇದ ಎಂದು. ಏಕೆಂದರೆ ಇದು ಎಲ್ಲಾ ಧರ್ಮಗಳ ನೀತಿಯನ್ನು ತಿಳಿಸುತ್ತದೆ ತಮಿಳಿನಲ್ಲಿ ಮೊಟ್ಟಮೊದಲು ನೀತಿಬೋಧಕ ಗ್ರಂಥವು ಹೊರಟದ್ದು ಇದೇ ಎಂದು ಈ ಗ್ರಂಥವು ಪ್ರಸಿದ್ಧಪಡಿಸುತ್ತದೆ. ಇದು ಕೂಡಾ ವೇದಗಳ ಹಾಗೆ ಮನುಷ್ಯರಿಗೆ ಆಜ್ಞೆಯನ್ನು ಕೊಡುತ್ತದೆ. ಆದುದರಿಂದ ಇದನ್ನು 'ತಮಿಳುವೇದ" ಎಂದು ಕೂಡಾ ಹೇಳುತ್ತಾರೆ. ಇದರ ಮಹತ್ವವನ್ನರಿತು ಈ ಗ್ರಂಥವನ್ನು ಕೆಲವು ಭಾಷೆಗಳಲ್ಲಿ ತರ್ಜುಮೆ ಮಾಡಿದ್ದಾರೆ

ಕವಿ ಜನರು ರಾಜರುಗಳ ದರ್ಬಾರದಲ್ಲಿದ್ದುಕೊಂಡು ಅವರುಗಳ ಗುಣಗಾನದಲ್ಲಿ ತಮ್ಮ ಕವಿತೆಯನ್ನು ರಚಿಸುತ್ತಿದ್ದ ಕಾಲದಲ್ಲಿ ತಿರುವಲ್ಲುವಾರ್ ಹುಟ್ಟಿದನು ಆದರೆ ತಿರುವಲ್ಲುವಾರ್ ಇಂತಹ ಕವಿಯಾಗಿರಲಿಲ್ಲ ಸಮಾಜಕ್ಕೆ ಹಿತವಾದುದೇ ಉತ್ತಮ ಸಾಹಿತ್ಯವೆಂದು ಆತ ಒಪ್ಪುತ್ತಿದ್ದ. ತಿರುವಲ್ಲುವಾರ್ ತನ್ನ ಕೃತಿಗಳ ಮೂಲಕ ನಿಸ್ವಾರ್ಥ ಭಾವದಿಂದ ಸಮಾಜದ ಸೇವೆ ಮಾಡಲು ಇಚ್ಛಿಸುತ್ತಿದ. ಆದುದರಿಂದ ಆತ ನೇಕಾರ ಜೀವನವನ್ನು ತನ್ನದನ್ನಾಗಿ ಮಾಡಿಕೊಂಡು, ಬಟ್ಟೆ ಹೊಲಿದು ತನ್ನ ಜೀವನವನ್ನು ಸಾಗಿಸುತ್ತಿದ್ದನು. ಆದುದರಿಂದ ಆತನ ಹೆಸರು ತಿರುವಲ್ಲುವಾರ್ [ಆದರಣೀಯ ನೇಕಾರ] ಎಂದಾಯಿತು. ತಿರುವಲ್ಲುವಾರ್ ಎಂದರೆ, 'ವಲ್ಲುವ ಜಾತಿಯ ಭಕ್ತ' ಎಂದು ಕೂಡಾ ಅರ್ಥವಾಗುತ್ತದೆ. ವಲ್ಲುವರು ಪರಿಶಿಷ್ಟ ವರ್ಗಕ್ಕೆ ಸೇರಿದ ಒಂದು ಜಾತಿಯ ಜನರು ಈ ರೀತಿ ಆತನು ತನ್ನ ಗ್ರಂಥದಿಂದ ಮಾತ್ರವೇ ಅಲ್ಲದೆ, ತನ್ನ ಆದರ್ಶ ಜೀವನದಿಂದ ಕೂಡಾ ಜನರಿಗೆ ನಿಜವಾದ ಮಾರ್ಗವನ್ನು ತೋರಿಸಿದನು.

ತಿರುವಲ್ಲುವಾರ್‌ನ ತಂದೆಯ ಹೆಸರು ಭಗವಾನ್; ತಾಯಿ, ಆದಿ ಎಂಬ ಹೊಲತಿ ಭಗವಾನ್‌ನ ತಂದೆಯು ತನ್ನ ಮಗನ ಜಾತಕದಲ್ಲಿ ಈ ವಿವಾಹದ ಭವಿಷ್ಯವನ್ನು ತಿಳಿದ ಮನೆಬಿಟ್ಟು ಗಂಗಾಯಾತ್ರೆಗೆ ಹೋದನು ಭಗವಾನನಿಗೆ ಪ್ರಾಯ ಬಂದ ನಂತರ ತಾಯಿ-ತಂದೆಯವರು ಮನೆಬಿಟ್ಟು ಹೋದ ಕಾರಣವನ್ನು ತಿಳಿಸಲು ಆತನು ತನ್ನ ತಂದೆಯನ್ನು ಹುಡುಕಲು ಹೊರಟನು. ದಾರಿಯಲ್ಲಿ ಅವನು ಆದಿಯೆಂಬ ಹೊಲತಿಯ ರೂಪಕ್ಕೆ ಮರುಳಾಗಿ ಆಕೆಯನ್ನು ಮದುವೆಯಾದನು. ಆದರೆ ತಾನು ಮಾಡಿದ ಕೆಲಸವು ಕೆಟ್ಟದೆಂದು ತಿಳಿದು ಭಗವಾನನು ಆಕೆಯನ್ನು ಬಿಟ್ಟು, ಪುನಃ ತನ್ನ ತಂದೆಯನ್ನು ಹುಡುಕಲು ಹೊರಟನು. ಎಲ್ಲಿ ಹುಡುಕಿದರೂ ತನ್ನ ತಂದೆಯು ಸಿಕ್ಕದಿದ್ದುದರಿಂದ ಹಿಂದಕ್ಕೆ ಬಂದು ರಾತ್ರಿ ಕಾಲದಲ್ಲಿ ಒಂದು ಧರ್ಮಛತ್ರದಲ್ಲಿ ಉಳಿದುಕೊಂಡನು. ಆ ದಿನ ಆಕಸ್ಮಾತ್ತಾಗಿ ಆ ಛತ್ರಕ್ಕೆ ಆದಿಯೂ ಬಂದಿದ್ದಳು ಆಕೆ ತನ್ನ ಪತಿಯಾದ ಭಗವಾನ್‌ನನ್ನು ಗುರುತಿಸಿ, ತನ್ನನ್ನು ಸ್ವೀಕರಿಸಬೇಕೆಂದು ಒತ್ತಾಯ ಪಡಿಸಿದಳು. ಮುಂದಕ್ಕೆ ಮಕ್ಕಳಾದರೆ ಆ ಮಕ್ಕಳನ್ನು ಬಿಟ್ಟು, ತನ್ನೊಡನೆ ಬರುವುದಾದರೆ ತಾನು ಒಪ್ಪುವೆನೆಂದು ಭಗವಾನ್ ಹೇಳಲು ಆಕೆ ಒಪ್ಪಿಕೊಂಡಳು. ಈ ದಂಪತಿಗಳಿಗೆ ಏಳು ಮಕ್ಕಳು ಹುಟ್ಟಿದರು. ಹುಟ್ಟಿದ ಮಕ್ಕಳನ್ನು ಇವರು ಅಲ್ಲೇ ಬಿಟ್ಟು ಹೋದರು.

ಹೀಗೆ ತಿರುವಲ್ಲುವಾರ್‌ನು ಹುಟ್ಟಲು ಆತನನ್ನು ಕೂಡಾ ಬಿಟ್ಟು ಹೋದರು ತಿರುವಲ್ಲುವಾರ್‌ನು ರಸ್ತೆಯಲ್ಲಿ ಬಿದ್ದಿರುವುದನ್ನು ಕಂಡು, ಯಾರೋ ಒಬ್ಬನು ಆ ಮಗುವನ್ನು ಮೈಲಾಪುರಕ್ಕೆ ಕರೆದುಕೊಂಡು ಹೋಗಿ ತನ್ನ ಮಗನಂತೆ ಸಾಕಿದನು. ಪ್ರಸಿದ್ಧ ಕವಯಿತ್ರಿಯಾದ ಅವ್ವೈಯ್ಯಾರಳು ಈತನ ಸಹೋದರಿ; ಪ್ರಾಯದಲ್ಲಿ ದೊಡ್ಡವಳಾಗಿದ್ದಳು ಇವರು ಏಳು ಮಂದಿ ಸಹೋದರ—ಸಹೋದರಿಯರು ಬಾಲ್ಯದಿಂದಲೇ ಕವಿಗಳಾಗಿದ್ದರು

ತಿರುವಲ್ಲುವಾರ್‌ನು ಬಾಲ್ಯದಲ್ಲೇ ಕೆಲವು ಉತ್ತಮ ಗ್ರಂಥಗಳ ಅಧ್ಯಯನ ಮಾಡಿ ವಿದ್ವಾಂಸನಾದನು. ಈತ ವಿದ್ಯಾವಂತನಾಗಿ, ದೈವಕೃಪೆಗೆ ಪಾತ್ರನಾಗಿ ತನ್ನ ಉತ್ತಮ ಶೀಲದಿಂದ ಎಲ್ಲರನ್ನೂ ಮೆಚ್ಚಿಸಿದನು. ಎಲ್ಲರೂ ಇವನನ್ನು 'ದೈವಪುಲ್ವರ್' ಎಂದು ಕರೆದು ಪ್ರೀತಿಸಿದರು.

ಆ ಕಾಲದಲ್ಲಿ ಮಧುರಾ ನಗರವು ತಮಿಳು ಭಾಷೆಯ ಪ್ರಸಿದ್ಧ ಪಂಡಿತರ ಹಾಗೂ ಕವಿಗಳ ಕೇಂದ್ರವಾಗಿತ್ತು ಅಲ್ಲಿ ಆ ವಿದ್ವಾಂಸರುಗಳ ಒಂದು ಸಂಘವಿತ್ತು ಅದು ದೇಶವಿಡಿ ಪ್ರಸಿದ್ಧಿ ಪಡೆದ ಸಂಘವಾಗಿತ್ತು. ಮಧುರೆಯ ಸುಂದರೇಶ್ವರ ಮಂದಿರದಲ್ಲಿ ಈ ಸಂಘದ ಅಧಿವೇಶನ ಸೇರುತ್ತಿತ್ತು. ಎಲ್ಲ ವಿದ್ವಾಂಸರು ಅದರಲ್ಲಿ ಸಮ್ಮಿಲಿತರಾಗಿ ಸಾಹಿತ್ಯ ಚರ್ಚೆ ಮಾಡುತ್ತಿದ್ದರು. ತಿರುವಲ್ಲುವಾರ್‌ನ 'ತಿರುಕ್ಕುರಲ್' ಪ್ರಶಂಸೆ ಕೂಡಾ ಇವರುಗಳ ಕಿವಿಗೆ ಬಿತ್ತು. ಅವರು ತಮ್ಮ ಈ ಸಂಘದಲ್ಲಿ ಈ ಹೊಸ ಕೃತಿಯ ಚರ್ಚೆ ಮಾಡುವುದಕ್ಕೋಸ್ಕರ ತಿರುವಲ್ಲುವಾರ್‌ಗೆ ಆಮಂತ್ರಣ ಕಳುಹಿಸಿದರು. ಅದನ್ನು ಸ್ವೀಕರಿಸಿ, ತಿರುವಲ್ಲುವಾರ್ ಮಧುರೆಗೆ ಬಂದನು ತಮಿಳು ಸಂಘದ ವಿಶೇಷ ಅಧಿವೇಶನ ನಡೆಯಿತು. ಅದರಲ್ಲಿ ಸ್ವತಃ ತಿರುವಲ್ಲುವಾರ್‌ನೇ ತನ್ನ ಗ್ರಂಥದ ಕುರಿತಾಗಿ ವಿವರಣೆಯಿತ್ತನು. ವಿದ್ವತ್ತು ಮತ್ತು ಜ್ಞಾನದಲ್ಲಿ ಒಬ್ಬರಿಗಿಂತ ಮತ್ತೊಬ್ಬರು ಮಿಗಿಲೆನಿಸಿದ ಕವಿಗಳು ಆ ಸಭೆಯಲ್ಲಿ ವಿರಾಜಮಾನರಾಗಿದ್ದರು. ಪ್ರತಿಯೊಬ್ಬರೂ ಆ ಗ್ರಂಥದ ಪ್ರಶಂಸೆ ಮಾಡುತ್ತಾ, ಅಲ್ಲೇ ಒಂದೊಂದು ಕವನ ರಚಿಸಿ ಹಾಡಿದರು

ಈತ ಪ್ರಾಯ ಸಮರ್ಥನಾದ ಬಳಿಕ ಪೂಳೈಸಿಯರ್ ಕುಲದ ವಾಸುಕಿಯಾರ್ ಎಂಬ ಸುಗುಣೆಯನ್ನು ಮದುವೆಯಾದನು ಈಕೆ ತನ್ನ ಪತಿ ಹೇಳಿದಂತೆ ಮಾಡುತ್ತಿದ್ದಳು. ತನ್ನ ಪತಿಯ ವಿರುದ್ಧವಾಗಿ ಎಂದೂ ಮಾತನಾಡಿದ್ದಾಗಲೀ, ಕಾರ್ಯ ಮಾಡಿದ್ದಾಗಲೀ ಇಲ್ಲ. ಸಹನಾಶೀಲಳೂ, ಸರಳ ಹೃದಯಿಯೂ ಆದ ಈಕೆ ಭಾರತೀಯ ದೃಷ್ಟಿಯಲ್ಲಿ ಸ್ತ್ರೀತ್ವದ ಪ್ರತೀಕವಾಗಿದ್ದಳು. ಈಕೆಯ ಪಾತಿವ್ರತ್ಯದ ಕುರಿತು ಇಂದಿಗೂ ಕೆಲವು ಕತೆಗಳು ಪ್ರಚಾರದಲ್ಲಿವೆ.

ಅದೊಂದು ದಿನ ತಿರುವಲ್ಲುವಾರ್‌ನು ಊಟ ಮಾಡಲು ಕುಳಿತಿದ್ದ ವಾಸುಕಿಯು ಎಲೆಯ ಮೇಲೆ ತಂಗಳನ್ನವನ್ನು ಬಡಿಸಿದಳು. 'ಅನ್ನವು ಬಿಸಿಯಾಗಿದೆ. ಗಾಳಿ ಹಾಕಲು ಬೀಸಣಿಗೆ ತಾ' ಎಂದು ತನ್ನ ಪತ್ನಿಯನ್ನು ಪರೀಕ್ಷಿಸಲು ತಿರುವಲ್ಲುವಾರ್‌ನು ಹೀಗೆ ಹೇಳಲು, ಆಕೆ ಹೋಗಿ ಬೀಸಣಿಗೆ ತಂದು ಗಾಳಿ ಹಾಕಿದಾಗ ಆ ಅನ್ನದಿಂದ ಹೊಗೆ ಬಂತು!

ಒಂದು ದಿನ ವಾಸುಕಿಯು ಮನೆಯ ಹಿಂದುಗಡೆ ಇರುವ ಬಾವಿಯಿಂದ ನೀರು ತರಲು ಹೋದಳು. ಇದೇ ಸಮಯ ತಿರುವಲ್ಲುವಾರ್‌ನು ಆಕೆಯನ್ನು ಕೂಗಿದ. ಆಗ ವಾಸುಕಿಯು ನೀರು ತೆಗೆಯಲು ಕೊಡವನ್ನು ಅರ್ಧ ಇಳಿಸಿದ್ದಳು ತನ್ನ ಪತಿಯ ಕರೆಯನ್ನು ಕೇಳುತ್ತಲೇ ಆ ಹಗ್ಗ ಹಾಗೂ ಕೊಡವನ್ನು ಅಲ್ಲಿಂದಲ್ಲೇ ಬಿಟ್ಟು ಬಂದಳು ಆಕೆ ತನ್ನ ಪತಿಯ ಶುಶ್ರೂಷೆ ಮಾಡಿ ಬಂದು ನೋಡುತ್ತಾಳೆ. ಏನಾಶ್ಚರ್ಯ! ಕೊಡವೂ, ಹಗ್ಗವೂ ಬಾವಿಗೆ ಬೀಳುವ ಬದಲಾಗಿ, ವಾಸುಕಿಯು ಹೇಗೆ ಬಿಟ್ಟುಹೋಗಿದ್ದಳೋ ಅದೇರೀತಿಯಿತ್ತು.

ಒಂದು ಹಗಲು ತಿರುವಲ್ಲುವಾರ್ ತನ್ನ ಮಗ್ಗದಲ್ಲಿ ಕೆಲಸಮಾಡುತ್ತಿದ್ದನು. ಬೆಳಕು ಚೆನ್ನಾಗಿತ್ತು. ಆದರೂ ತನ್ನ ಹೆಂಡತಿಯನ್ನು ಕರೆದು ದೀಪ ತರಬೇಕೆಂದು ಹೇಳಿದ ಆಕೆ ಮರುಪ್ರಶ್ನೆ ಮಾಡದೆ ದೀಪ ಉರಿಸಿ ತಂದಳು

ಈ ಘಟನೆಗಳು ವಾಸುಕಿಯ ಉತ್ತಮ ಗುಣಗಳನ್ನು ಅವುಗಳಿಂದಾಗುವ ಲಾಭವನ್ನು ಪ್ರಕಟಿಸುತ್ತವೆ.

ತನ್ನ ಮದುವೆಯಾದಂದಿನಿಂದ ತಿರುವಲ್ಲುವಾರನು ಪದ್ಯಗಳನ್ನು ರಚಿಸಿ, ರಾಜನ ಆಸ್ಥಾನದಲ್ಲಿ ಕೀರ್ತಿ ಪಡೆದನು. ಈತನು ರಾಜನಿಂದ ಮರ್ಯಾದೆ ಪಡೆದರೂ, ಬಹುಮಾನಗಳನ್ನು ಅಪೇಕ್ಷಿಸಲಿಲ್ಲ. ಆ ಸಮಯ ಎಲೆಲ್ ಸಿಂಗರ್ ಎಂಬ ಒಬ್ಬ ವಸ್ತ್ರ ವ್ಯಾಪಾರಿಯಿದ್ದನು. ಈತ ಬಹಳ ಐಶ್ವರ್ಯವಂತನಾಗಿದ್ದನು ತಿರುವಲ್ಲುವಾರ್‌ನು ಈತನಿಂದ ನೂಲನ್ನು ಕ್ರಯಕ್ಕೆ ತೆಗೆದುಕೊಳ್ಳುತ್ತಿದ್ದನು. ಈ ಕಾರಣದಿಂದ ಇವರಿಬ್ಬರಲ್ಲಿ ಗಾಢವಾದ ಮೈತ್ರಿ ಬೆಳೆಯಿತು

ತಿರುವಲ್ಲುವಾರ್‌ನ ವಿದ್ವತ್ತನ್ನು ಕಂಡು ಎಲೆಲ್ ಸಿಂಗರ್‌ನು ಆತನಿಂದ ಉತ್ತಮ ಶಿಕ್ಷಣವನ್ನು ಪಡೆಯಲು ಇಚ್ಛಿಸಿ, ತಿರುವಲ್ಲುವಾರ್‌ನನ್ನು ತನ್ನ ಗುರುವನ್ನಾಗಿ ಮಾಡಿಕೊಂಡನು ಇದೇ ರೀತಿ ತಿರುವಲ್ಲುವಾರ್‌ನ ಬಳಿಗೆ ಅನೇಕ ಶಿಷ್ಯರು ಬಂದು ಶಿಕ್ಷಣ ಪಡೆಯುತ್ತಿದ್ದರು

ಎಲೆಲ್ ಸಿಂಗರ್‌ನು ತಿರುವಲ್ಲುವಾರ್‌ನೊಡನೆ ಒಂದು ನೀತಿಬೋಧಕ ಗ್ರಂಥವನ್ನು ಬರೆಯಲು ಪ್ರಾರ್ಥಿಸಿದನು. ವ್ಯಾಪಾರಿಯ ಪ್ರಾರ್ಥನೆಗನುಸಾರವಾಗಿ ತಿರುವಲ್ಲುವಾರ್‌ನು 'ತಿರುವಕ್ಕುರಲ್' ಎಂಬ ಗ್ರಂಥವನ್ನು ಬರೆದನು.

ಈ ಗ್ರಂಥದಲ್ಲಿ ಮನುಷ್ಯನ ಬಾಲ್ಯದಿಂದ ಆವನ ಅಂತ್ಯದ ವರೆಗಿನ ಕರ್ತವ್ಯಗಳ ವಿವರಣೆಗಳಿವೆ ಇದರಲ್ಲಿ ಸರಳರೀತಿಯಿಂದ ಜೀವನ ಮಾರ್ಗವನ್ನು ಕಳೆಯುವ ರೀತಿಯನ್ನು ತೋರಿಸಲಾಗಿದೆ ತಿರುವಲ್ಲುವಾರ್‌ನು ತನ್ನ ಗ್ರಂಥವನ್ನು ಧರ್ಮ, ಅರ್ಥ, ಮತ್ತು ಕಾಮ ಎಂಬ ಮೂರು— ವಿಭಾಗ ಮಾಡಿದ್ದಾನೆ ಮೊದಲನೆ ಭಾಗದಲ್ಲಿ ಸದಾಚಾರ ಮತ್ತು ಜ್ಞಾನದ ವಿಷಯ. ಎರಡನೆ ಭಾಗದಲ್ಲಿ ವ್ಯವಹಾರಿಕ ವಿಷಯಗಳು ಹಾಗೂ ಮೂರನೇ ಭಾಗದಲ್ಲಿ ಸ್ತ್ರೀ ಪುರುಷರ ಪ್ರೇಮದ ವಿಷಯಗಳು ವಿಸ್ತಾರವಾಗಿ ಹೇಳಲ್ಪಟ್ಟಿವೆ. ಈ ಮೆಟ್ಟಿಲುಗಳನ್ನು ಹತ್ತಿಯೇ ಮನುಷ್ಯನು ಮೋಕ್ಷವನ್ನು ಪಡೆಯುತ್ತಾನೆ.

'ತಿರುವಕ್ಕುರಲ್' ಒಂದು ಕಾವ್ಯವಲ್ಲ; ಅದೊಂದು ಶ್ರೇಷ್ಠ ನೀತಿಗ್ರಂಥವಾಗಿದೆ ಸಣ್ಣ ಸಣ್ಣ ಪದ್ಯಗಳಲ್ಲಿ ಮಹತ್ವಪೂರ್ಣ ವಿಷಯಗಳ ವರ್ಣನೆಯು ಮಾಡಲ್ಪಟ್ಟಿದೆ ಇದೇ ಆ ಗ್ರಂಥದ ವಿಶೇಷತೆ. ಜೀವನದ ಎಲ್ಲ ಸಮಸ್ಯೆಗಳ ಮೇಲೆ ತಿರುವಲ್ಲು

(ಆನೇ ಪುಟ ನೋಡಿರಿ)

> ದೋಷಗಳನ್ನು ಕಾಣುವುದು ಸುಲಭವಾದರೂ ಅದನ್ನು ಸಾಧಿಸುವುದು ಕಷ್ಟ; ಗುಣಗಳನ್ನು ಕಾಣುವುದು ಕಷ್ಟವಾದರೂ ಸಾಧಿಸುವುದು ಸುಲಭ, ಆದುದರಿಂದ, ಗುಣವನ್ನೇ ಅರಸಿ ಅದನ್ನು ಪ್ರಶಂಸಿಸುವುದು ಉಪಯುಕ್ತವೂ ಸುಲಭವೂ ಆಗಿದೆ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೭-೧೨-'೫೯	೧೬

ಶಾಂತಿದೂತರ ಸಮಾಗಮನ

ಐದು ದಿನಗಳವರೆಗೆ ಭಾರತದಲ್ಲಿ ಉಳಿದು, ಭಾರತದ ಮತ್ತು ಭಾರತೀಯರ ಬಗೆಗೆ ಬಹಳಷ್ಟು ತಿಳುವಳಿಕೆಯನ್ನು ಸಂಪಾದಿಸಿ, ತನ್ನ ಪೂರ್ವನಿಶ್ಚಿತ ಕಾರ್ಯಕ್ರಮದಂತೆ ಅಮೆರಿಕೆಯ ಅಧ್ಯಕ್ಷ ಶ್ರೀ ಐಸನ್ ಹಾವರ್ ಅವರು ತೆಹರಾನಿನತ್ತ ಪ್ರಯಾಣ ಬೆಳೆಸಿದರು. ಭಾರತವನ್ನು ಅಗಲುತ್ತಿರುವಾಗ, ತನ್ನ ಕೊನೆಯ ಸಂದೇಶದಲ್ಲಿ ಅವರು "ಭಾರತ ಹಾಗೂ ಅಮೆರಿಕೆಗಳ ಜನರು ತಮ್ಮ ಕಲ್ಯಾಣ ಸಾಧನೆ ಹಾಗೂ ಜಾಗತಿಕ ನ್ಯಾಯ, ಶಾಂತಿಗಳ ಸಲುವಾಗಿ ಪರಿಶ್ರಮಿಸುತ್ತಿದ್ದಾರೆಂಬ ವಿಶ್ವಾಸವನ್ನು ದೃಢಪಡಿಸಿಕೊಂಡು" ತಾನು ತೆರಳುತ್ತಿರುವುದಾಗಿ ಉಲ್ಲೇಖಿಸಿದ್ದಾರೆ. ಭಾರತ ಮತ್ತು ಅಮೆರಿಕೆಗಳ ನಡುವಣ ಸಂಬಂಧವು ಮತ್ತಷ್ಟು ಸುದೃಢವಾಗಿ ಅದರಿಂದ ಎರಡೂ ರಾಷ್ಟ್ರಗಳ ಕಲ್ಯಾಣ ಸಾಧನೆಗೆ ಹಾಗೂ ವಿಶ್ವಶಾಂತಿಗೆ ಅಮೆರಿಕನ್ ಅಧ್ಯಕ್ಷರ ಈ ಸಂದರ್ಶನೆಯು ಕಾರಣವಾಗುವುದು ನಿಸ್ಸಂದೇಹವೇ.

ಜಗತ್ತಿನ ಸಂಪತ್ಸಮೃದ್ಧ ಸಾಮ್ರಾಜ್ಯ ಅಮೆರಿಕೆಯ ಅಧ್ಯಕ್ಷರು ಭಾರತಕ್ಕೆ ಕಾಲೂರಿದಂದಿನಿಂದ ಕಾಲು ಕೀಳುವವರೆಗೂ ಭಾರತೀಯರಿಂದ ಮನಃಪೂರ್ವಕವಾಗಿ ಸ್ವಾಗತಿಸಲ್ಪಟ್ಟಿದ್ದಾರೆ. ಭಾರತೀಯರು ಅತಿಥಿ ಸತ್ಕಾರದಲ್ಲಿ ಹೆಸರಾಂತವರು; 'ಅತಿಥಿ ದೇವೋಭವ' ಎಂಬುದನ್ನು ಅಕ್ಷರಶಃ ಪಾಲಿಸಿದರು. ತಮ್ಮ ದೇಶದ ಅಭಿವೃದ್ಧಿಕಾರ್ಯದಲ್ಲಿ ಆಸಕ್ತಿಯನ್ನು ತೋರಿ ಅದಕ್ಕೆ ಸಹಾಯ ಹಸ್ತನೀಡುತ್ತಿರುವ ಅಮೆರಿಕೆಯ ಅಧ್ಯಕ್ಷರನ್ನು ಕಾಣಲು ಭಾರತದ ಎಲ್ಲ ಮೂಲೆಗಳಿಂದಲೂ ಭಾರತೀಯರು ರಾಜಧಾನಿಗೆ ತೆರಳಿ, ದರ್ಶನ ಲಾಭವನ್ನು ಪಡೆದರು. ನವದೆಹಲಿಯಲ್ಲಿ ಅವರಿಗೆ ದೊರೆತ ಸ್ವಾಗತವು ಅನ್ಯ ರಾಷ್ಟ್ರದಲ್ಲೆಲ್ಲೂ ಯಾರಿಗೂ ದೊರೆತಿಲ್ಲವೆಂದು ತಿಳಿಯುತ್ತದೆ. ಇಷ್ಟೊಂದು ವೈಭವಯುಕ್ತವಾಗಿ ಅವರ ಸತ್ಕಾರ, ಆದರಗಳಿಂದ, ಭಾರತೀಯರಲ್ಲಿ ಅಮೆರಿಕೆಯ ಕಡೆಗೆ ಯಾವ ಧೋರಣೆ ಹಾಗೂ ಮನೋಭಾವನೆಗಳಿವೆಯೆಂಬುದು ರುಜುವಾಯಿತು. ಭಾರತ ಮತ್ತು ಅಮೆರಿಕೆಗಳೆರಡೂ ವಿಶ್ವಶಾಂತಿಯನ್ನು ಸಾಧಿಸಲು ಪ್ರಯತ್ನಿಸುತ್ತಿರುವ ಎರಡು ರಾಷ್ಟ್ರಗಳು. ತೋರಿಕೆಯ ಮಟ್ಟಿಗೆ ಇವುಗಳ ನಡುವೆ ಕೆಲವೊಂದು ಮತಭೇದವಿದ್ದಿರಬಹುದಾದರೂ ಕೇವಲ ಇಷ್ಟರಿಂದಲೇ ಇವುಗಳ ನಡುವಣ ಮೈತ್ರಿಯು ಕೆಡಲಾರದು. ಯಾವುದೇ ಪ್ರಕಾರದ ಸೈನಿಕ ಬಣಗಳಿಗೆ ಸೇರಿಕೊಳ್ಳದೆ ತಟಸ್ಥ ರಾಷ್ಟ್ರವಾಗಿ ಉಳಿದುಕೊಂಡು ವಿಶ್ವಶಾಂತಿಗಾಗಿ ಭಾರತವು ಶ್ರಮಿಸುತ್ತಿದೆ. ಶ್ರಮಪ್ರಧಾನವಾದ ಪಂಚಶೀಲಗಳನ್ನು ರಾಜಕಾರಣದಲ್ಲಿಯೂ ಪ್ರಯೋಗಕ್ಕೆ ತಂದಿದೆ. ಯುಕ್ತರಾಷ್ಟ್ರ ಸಭೆಯಲ್ಲಿ ಕಮ್ಯೂನಿಸ್ಟ ಚೀನಕ್ಕೆ ಸ್ಥಾನಾವಕಾಶವನ್ನು ಕಲ್ಪಿಸಿಕೊಡುವ ನೀತಿ ಭಾರತದ್ದು; ಮತ್ತಿದನ್ನು ಅಮೆರಿಕೆಯು ವಿರೋಧಿಸುತ್ತಿದೆ. ಪಾಕಿಸ್ತಾನಕ್ಕೆ ಅಮೆರಿಕೆಯು ಸೈನಿಕ ಸಹಾಯವನ್ನೀಯುತ್ತಿರುವುದೂ ಭಾರತದ ಭದ್ರತೆಯ ದೃಷ್ಟಿಯಿಂದ ತುಸು ಕಿರುಕುಳದ್ದಾಗಿದೆ. ಇದೇರೀತಿಯ ಕೆಲವು ಕಾರಣಗಳಿಂದ ಉಭಯ ರಾಷ್ಟ್ರಗಳಲ್ಲಿ ತುಸು ವೈಮನಸ್ಯದ ಛಾಯೆ ತೋರುತಿದ್ದರೂ ಅದರಿಂದ ಬಾಂಧವ್ಯಕ್ಕೆ ಭಾದೆತಟ್ಟಲಿಲ್ಲ ಭಾತಕವಾದರೂ ತನ್ನಲ್ಲಿಗೆ ಬಂದ ಶ್ರೇಷ್ಠ ಶಾಂತಿದೂತನನ್ನು ಗೌರವಾಭಿಮಾನಸಹಿತವಾಗಿಯೇ ಸ್ವಾಗತಿಸಿತು. ಶ್ರೀ ಐಸನ್ ಹಾವರ್ ಹಾಗೂ ಭಾರತೀಯ ಪ್ರಧಾನಿ ನೆಹರು ಅವರ ನಡುವೆ ಬೇರೆ ಬೇರೆ ವಿಷಯಗಳ ಕುರಿತಾಗಿ ಮಾತುಕತೆಗಳು ನಡೆದುವೆಂದು ಗೊತ್ತಾಗಿದೆ ಭಾರತ—ಪಾಕಿಸ್ತಾನ, ಭಾರತ—ಚೀನಾಗಳ ನಡುವೆ ಎದ್ದಿರುವ ಸಮಸ್ಯೆಗಳು ಮಾತ್ರವಲ್ಲದೇ ಕಾಶ್ಮೀರ ಪ್ರಶ್ನೆಯ ಕುರಿತಾಗಿಯೂ ಪ್ರಸ್ತಾಪ ನಡೆದಿದೆಯೆಂದು ತಿಳಿಯುತ್ತದೆ. ಈ ವಿಷಯದಲ್ಲಿ ಯಾವುದೇ ನಿರ್ಧಾರಯುತವಾದ ಮಾತಾಗುವುದು ಅಸಂಭವನೀಯವಾದರೂ ಎಲ್ಲ ಸಮಸ್ಯೆಗಳನ್ನು ಶಾಂತಿ ಸಂಧಾನಗಳ ಮೂಲಕವೇ ಬಗೆಹರಿಸಿಕೊಳ್ಳಬೇಕೆಂಬ ಸಾಮಾನ್ಯ ತತ್ತ್ವವನ್ನು ಯಾರೂ ಬಿಟ್ಟುಕೊಟ್ಟಿಲ್ಲ. ಮುಖ್ಯವಾಗಿ, ತನ್ನ ಸಹೃದಯನೆಂದು ನಂಬಿದ್ದರೂ ಈಗ ಸೀಮಾತಿಕ್ರಮಣ ಮಾಡುತ್ತಿರುವ ಚೀನದ ನಡವಳಿಕೆಯ ಕುರಿತಾಗಿಯೂ ಇವರ ನಡುವೆ ವಿಚಾರವಿನಿಮಯವಾಗುವುದೂ ಅಸಂಭಾವ್ಯವಲ್ಲ. ಆದರೂ ಶಾಂತಿಪ್ರಿಯರಾದ ಉಭಯ ನಾಯಕರು ಸಂಧಾನದಿಂದಲೇ ಈ ಪ್ರಶ್ನೆಗಳು ಬಗೆಹರಿಸಲ್ಪಡುವುದು ಶ್ರೇಯಸ್ಕರವೆಂದು ಅಭಿಪ್ರಾಯ ಪಟ್ಟಿದ್ದಾರೆ ಭಾರತಕ್ಕೆ ಅಮೆರಿಕೆಯು ನೀಡುವ ಸಹಾಯದಲ್ಲಿ ಹೆಚ್ಚುವರಿಯಾಗುವ ಸಾಧ್ಯಾಸಾಧ್ಯತೆಗಳ ಕುರಿತಾಗಿಯೂ ಮಾತುಕತೆ ನಡೆದಿರಬಹುದು. ವಿಶ್ವದಲ್ಲಿ ಶಾಂತಿಯನ್ನು ಸಂಸ್ಥಾಪಿಸುವ ಸಲುವಾಗಿ ನಿಶ್ಶಸ್ತ್ರೀಕರಣ ಪ್ರಶ್ನೆಯನ್ನೂ ಪರ್ಯಾಲೋಚಿಸಿರಬಹುದು. ಹೀಗೆ ಸರ್ವ ದೃಷ್ಟಿಯಿಂದಲೂ ಐಕ್ ಮತ್ತು ನೆಹರೂ ಭೇಟಿಯೆಂಬುದು ಶಾಂತಿಮಾರ್ಗದ ಮೈಲುಗಲ್ಲಾಗಿದೆ ಎಂದು ಧೈರ್ಯದಿಂದ ಹೇಳಬಹುದು.

ಐಕರ ಸಂದರ್ಶನದ ಫಲವು ಈಗಾಗಲೇ ಕಂಡುಬಂದಿದೆ. ಅನಗೆ ಭಾರತದಲ್ಲಿ ದೊರೆತಂತಹ ಹೃದಯಪೂರ್ವಕ ಮತ್ತು ಭವ್ಯಸ್ವಾಗತ ಮತ್ತೆಲ್ಲಿಯೂ ಮತ್ತಾರಿಗೂ ದೊರೆತಿಲ್ಲವೆಂಬುದಾಗಿ ಐಕರೂ ಇತರರೂ ಅಭಿಪ್ರಾಯಪಟ್ಟಿದ್ದಾರೆ. ಸರಳ ಹೃದಯದ ಭಾರತೀಯರ ನಿಷ್ಕಪಟಮನಸ್ಸನ್ನೂ ಭಾರತೀಯ ಸಂಸ್ಕೃತಿಯ ಪ್ರಧಾನ ತತ್ತ್ವವನ್ನೂ ಐಕರು ಕಂಡುಕೊಂಡಿದ್ದಾರೆ. ನಿಜವಾಗಿ, ಅನಭಿವೃದ್ಧ ಏಶ್ಯನ್ ರಾಷ್ಟ್ರಗಳಲ್ಲಿ ಸಮೃದ್ಧಿಯನ್ನು ತರಲು ಕಮ್ಯೂನಿಜಂ ಒಂದೇ ಸಾಧನವೆಂದು ತಿಳಿದುಕೊಂಡಿದ ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಮೂಲಕವೇ ಸಮೃದ್ಧ ಭಾರತವನ್ನು ಕಟ್ಟಲು ಹೆಣಗುತ್ತಿರುವ ನಮ್ಮಲ್ಲಿ ಪ್ರಜಾಪ್ರಭುತ್ವವು ಪರೀಕ್ಷೆಗೊಳಗಾದಂತಿದೆ. ಆದುದರಿಂದ, ಅನಭಿವೃದ್ಧ ರಾಷ್ಟ್ರಗಳ ಅಭಿವೃದ್ಧಿಗೆ ಉದಾರ ಮನಸ್ಸಿನಿಂದ ಸಾಧ್ಯವಿದ್ದವರು ಸಹಾಯ ಮಾಡಿ, ಈ ಪರೀಕ್ಷೆಯಲ್ಲಿ ಭಾರತವು ಗೆದ್ದು ಬರುವಂತೆ ನೋಡಿಕೊಳ್ಳುವುದು ಎಲ್ಲ ಶ್ರೀಮಂತ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಕರ್ತವ್ಯಗಳಲ್ಲಿ ಒಂದಾಗಿದೆ. ಇದನ್ನು ಅಮೆರಿಕೆಯು ಮರೆತಿಲ್ಲವಾದರೂ, ಭಾರತದ ಕೆಲವೊಂದು ಧೋರಣೆಗಳಿಂದಾಗಿ, ತಪ್ಪು ಅಭಿಪ್ರಾಯ ಹುಟ್ಟುವುದು ಅಸ್ವಾಭಾವಿಕವಲ್ಲವಾಯುದರಿಂದ, ಸದ್ಯದ ಈ ಭೆಟ್ಟಿಯಿಂದ ಭಾರತೀಯರ ಅಂತರಾತ್ಮವನ್ನು ಸುಸ್ಪಷ್ಟವಾಗಿ ಕಂಡುಕೊಂಡ ಅಮೆರಿಕೆಯ ಅಧ್ಯಕ್ಷರು ತಮ್ಮ ಕರ್ತವ್ಯವನ್ನು ಇನ್ನೂ ಹೆಚ್ಚಿನ ಉದಾರ ಮನಸ್ಸಿನಿಂದ ಪೂರೈಸುವರೆಂದು ನಂಬಬಹುದು. ಈ ಉಭಯ ಶಾಂತಿದೂತರ ಸಂದರ್ಶನವು ವಿಶ್ವೇತಿಹಾಸದಲ್ಲಿ ಸುವರ್ಣಪೃಷ್ಠವೊಂದನ್ನು ತೆರೆಯುವುದು ಖಂಡಿತ.

ಭಾರತದ ಸಂಚಾರಾವಧಿಯಲ್ಲಿನ ತಾ. ೧೩ರ ಭಾನುವಾರ ಅಮೆರಿಕೆಯ ಅಧ್ಯಕ್ಷ ಶ್ರೀ ಐಸನ್ ಹಾವರೆರು ಭಾರತದ ಅಧ್ಯಕ್ಷ ಡಾ। ರಾಜೇಂದ್ರ ಪ್ರಸಾದರೊಡನೆ ನವದೆಹಲಿಯ ಕಥೀಡ್ರಲ್ ಚರ್ಚಿಗೆ ಸಂದರ್ಶನವಿತ್ತರು ಅವರೊಡನೆ ಐಕರ ಸೊಸೆಯೂ ಮಗನೂ ಇದ್ದಾರೆ.

ಅತಿಶಿಸ್ತಿನ ಬೀಜವೆಲ್ಲಿ?

"ವಿದ್ಯಾರ್ಥಿಗಳು ಮತ್ತು ಅತಿಶಿಸ್ತು" ಎಂಬುದೀಗ ನವೀನವೇ ಕೇಳಿಬರುವ ನೊಲ್ಲಾಗಿ ಪರಿಣಮಿಸಿದೆ. ಅವರಲ್ಲೂ ಪ್ರಾಯಪ್ರಬುದ್ಧರಾದ ವಿವೇಕಿಗಳಾದ ಜ್ಞಾನತೃಷೆಯನ್ನು ದೂರೀಕರಿಸುವ ಸಲುವಾಗಿ ತಮ್ಮ ಆಯುಷ್ಯವನ್ನು ಸವೆಯುತ್ತಿರುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಈ ಅತಿಶಿಸ್ತು ತೋರಿಬರುತ್ತಿರುವುದು ನಮ್ಮ ಭಾವಿ ಜನಾಂಗದ ಮಾನಸಿಕ ಅಧಃಪತನವನ್ನೇ ಸೂಚಿಸುತ್ತದೆಂದು ಹೇಳಬೇಕೆ? ಅವರ ಚಟುವಟಿಕೆಗಳ ಪ್ರದರ್ಶನವೆನ್ನಬೇಕೆ? ಒಬ್ಬ ವಿದ್ಯಾರ್ಥಿ ವಿಶ್ವವಿದ್ಯಾನಿಲಯದ ಮೆಟ್ಟಲೇರಿದೊಡನೆಯೇ ತಾನು ಸ್ವರ್ಗ ಸೋಪಾನವೇರುತ್ತಿರುವೆನೆಂದು ತಿಳಿದುಕೊಳ್ಳಬೇಕಾದರೆ, ಇದಕ್ಕೆ ಕಾರಣವೇನು? ಎಲ್ಲೆಲ್ಲಿಯೂ ಎಲ್ಲ ವರ್ಗದ ಅಧಿಕಾರಿಗಳೂ, ನಾಯಕರೂ ವಿದ್ಯಾರ್ಥಿಗಳಲ್ಲಿ ಅತಿಶಿಸ್ತು ತಿಳಗೇಡಿತನಗಳು ಕಂಡು ಒರುತ್ತಿವೆ, ಇವನ್ನು ಬೆಳೆಯಗೊಟ್ಟರೆ ಭಾರತದ ಭವಿಷ್ಯವೇ ಮಣ್ಣುಗೂಡುವುದು ಎಂದು ಹೇಳುತ್ತಿದ್ದರೂ ಅವರಲ್ಲಿ ಅಶಿಸ್ತು ಸಂವರ್ಧನೆಯಾಗುವ ಕಾರಣವನ್ನು ಕಂಡುಕೊಳ್ಳದಿರುವುದರಿಂದ, ಈ ಪುಂಡಾಟಿಕೆಗೆ ಲೆಕ್ಕವಿತಿಯಿಲ್ಲವೆಂಬಂತಾಗಿದೆ. ಕಳೆದ ವರ್ಷ ಬೆನರಸ್ ಹಿಂದೂ ವಿಶ್ವವಿದ್ಯಾನಿಲಯ, ಅದಕ್ಕೆ ಹಿಂದೊಮ್ಮೆ ಅಲ್ಲಾಮಲೈ ವಿಶ್ವವಿದ್ಯಾನಿಲಯಗಳನ್ನು ಅನಿವಾರ್ಯವಾಗಿ ಮುಚ್ಚಬೇಕಾಗಿ ಬಂದಿದ್ದರೆ, ಈಗ ಮೈಸೂರಿನ 'ಯುವಜನೋತ್ಸವ ಶಿಬಿರ'ಗಳಲ್ಲಿ ತಮಗೆ ಪ್ರವೇಶ ನೀಡದುದರಿಂದ ವಿ

ಅಲ್ಲಲ್ಲಿಯ ಸುದ್ದಿಸಾರ

ಬಹುಮಾನ ವಿತರಣೆ ಲೈಫ್ ಇನ್ಶ್ಯುರೆನ್ಸ್ ಕಾರ್ಪೊರೇಶನಿನ ಫೀಲ್ಡ್ ಆಫೀಸರ ಡಿವಿಜನ್‌ವಾರ್ ಹೊಸ ವಿಮಾ ವ್ಯವಹಾರ ಸ್ಪರ್ಧೆಯಲ್ಲಿ ಗೆದ್ದವರಿಗೆ ಪಾರಿತೋಷಕ ವಿತರಣೆ ಮಾಡುವ ಸಮಾರಂಭವೊಂದು ಬೊಂಬೆ ಲೈಫ್ ಕಟ್ಟಡದಲ್ಲಿ ತಾ. 14ನೇ ಸಂಜೆ ಡಿವಿಜನಲ್ ಮೆನೇಜರ್ ಶ್ರೀ ಕೆ ಆರ್ ಕೆ ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಲಘೂಪಹಾರ ಪ್ರಾರ್ಥನೆಯಾದ ಮೇಲೆ ಸಹಾಯಕ ಡಿವಿಜನಲ್ ಮೆನೇಜರ್ ಶ್ರೀ ಇ ಯು ಜಾಕೋಬ್ ಅವರು ಸ್ವಾಗತಿಸಿ ಸಮಾರಂಭದ ಉದ್ದೇಶ ಹಾಗೂ ಯುಕ್ತತೆಯನ್ನು ವಿವರಿಸಿದರು. ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್ ಕೆ ಭಟ್ಟರು ತಮ್ಮ ಭಾಷಣದಲ್ಲಿ ರಾಷ್ಟ್ರೀಕರಣವಾದ ಮೇಲೆ ವಿಮಾ ವ್ಯವಹಾರದಲ್ಲಾದ ಪ್ರಗತಿಯನ್ನು ವಿವರಿಸಿ ಉಡುಪಿ ಡಿವಿಜನು ಸಾಧಿಸಿರುವ ಉನ್ನತ ವ್ಯವಹಾರವನ್ನು ಅಂಕೆ ಸಂಖ್ಯೆಗಳೊಂದಿಗೆ ನಿವೇದಿಸಿ ವಿಜಯೀ ಫೀಲ್ಡ್ ಆಫೀಸರರಾದ ಶ್ರೀ ಎಸ್ ಅಣ್ಣಯ್ಯ ಹೆಗ್ಡೆ ಮತ್ತು ಶ್ರೀ ಬಿ ಸಚ್ಚಿದಾನಂದ ಹೆಗ್ಡೆ ಇವರ ಕಾರ್ಯದಕ್ಷತೆ ವ್ಯವಹಾರ ಚತುರತೆ ಅವಿರತ ಪರಿಶ್ರಮಗಳನ್ನು ಕೊಂಡಾಡಿದರಲ್ಲದೆ ಅತ್ಯಧಿಕ ಪೊಲಿಸಿ ಬಗ್ಗೆ ಪ್ರಥಮ ಬಹುಮಾನವಾಗಿ ಮೊದಲನೆಯವರಿಗೆ ರೂ 300, ಎರಡನೆಯವರಿಗೆ ದ್ವಿತೀಯ ಬಹುಮಾನವಾಗಿ ರೂ 100 ನಗದಿ ಬಹುಮಾನವನ್ನು ವಿತರಣೆ ಮಾಡಿ ಅವರಿಬ್ಬರನ್ನೂ ಅಭಿನಂದಿಸಿದರು. ಶ್ರೀ ಅಣ್ಣಯ್ಯ ಹೆಗ್ಡೆಯವರ ಅಖಿಲಭಾರತ ಸ್ಪರ್ಧೆಯಲ್ಲಿ 4ನೇ ಸ್ಥಾನವನ್ನು ಗಳಿಸಿದ್ದಾರೆಂದೂ ತಿಳಿಸಿದರು ಶ್ರೀ ವಿ.ಆರ್ ಶರ್ಮರು ಸಂದೇಶಗಳನ್ನೋದಿದ ಬಳಿಕ ಅಸಿಸ್ಟೆಂಟ್ ಬ್ರಾಂಚ್ ಮೆನೇಜರ್ ಶ್ರೀ ಟಿ. ಪಿ ಎನ್. ನಂಬಿಯಾರರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಲಾ ಕಾಲೇಜಿನಲ್ಲಿ—ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಇದೇ ತಾ. 12ನೇ ಸಂಜೆ ಲಾ ಗ್ರಾಜ್ಯುವೇಟರರಿಗೆ ಸತ್ಕಾರ ಸಮಾರಂಭವೊಂದು ಶ್ರೀ ಟಿ ರಮೇಶ ಪೈಗಳ ಹಿರಿತನದಲ್ಲಿ ಜರಗಿತು ಉಪಾಹಾರವಾದ ಬಳಿಕ ಶ್ರೀ ಕೆ ಕಾಶೀನಾಥ ಶೆಟ್ಟಿಯಿಂದ ಸಂಗೀತ ಶ್ರೀ ಪಣಂಬೂರ್ ಮೋಹನ್ ಅವರಿಂದ ಸ್ವರಮಾಲಿಕೆ ನಡೆಯಿತು ಕಾರ್ಯದರ್ಶಿ ಶ್ರೀ ಕೃಷ್ಣ ಶೆಟ್ಟಿಯಿಂದ ಪ್ರಾರ್ಥನೆಯಾದ ಮೇಲೆ ಪ್ರಿನ್ಸಿಪಾಲ್ ಶ್ರೀ ಬಿ. ಎಲ್ ಎನ್. ರೈಗಳು ಸ್ವಾಗತ ಭಾಷಣಮಾಡಿ ಇಂದಿನ ಭಾಷಣಕಾರ ಶ್ರೀ ಟಿ ರಮೇಶ ಪೈಗಳು ಪ್ರಾಯದಲ್ಲಿ ಕಿರಿಯರಾದರೂ ಅನುಭವದಲ್ಲಿ ಹಿರಿಯರೆಂದರು ಪ್ರಥಮ ತಂಡದ ಲಾ ಗ್ರಾಜ್ಯುವೇಟರ ಪರಿಚಯಮಾಡಿ ಕೊಟ್ಟು ಅವರೆಲ್ಲರಿಗೂ ಶುಭಕೋರಿದರು

ಯೂನಿಯನ್ ಅಧ್ಯಕ್ಷ ಶ್ರೀ ಎಸ್ ವಿ ಡಾಯಸ್‌ರು ಸ್ವಸ್ತಿವಾಚನ ಮಾಡಿದರು. ಪರೀಕ್ಷೆಯಲ್ಲಿ ಉನ್ನತ ಸ್ಥಾನಗಳಿಸಿದ ಲೋ ಗ್ರಾಜ್ಯುವೇಟರರಲ್ಲೊಬ್ಬರಾದ ಶ್ರೀ ಯಚ್. ಎನ್ ರಾಯರು ವಿಚಾರ ಪೂರ್ಣ ಉತ್ತರವಿತ್ತರು ಕಾಲೇಜ್ ಶಿಬಂದಿಯ ಯೋಗ್ಯತೆಯನ್ನೂ ಪ್ರಿನ್ಸಿಪಾಲ್ ರೈಗಳ ದಕ್ಷತೆಯನ್ನೂ ಕೊಂಡಾಡಿದರು ಅನಂತರ ಮುಖ್ಯ ಭಾಷಣಕಾರರಾದ ಶ್ರೀ ಟಿ. ರಮೇಶ ಪೈಗಳು ಸಂದರ್ಭೋಚಿತವಾಗಿ ಮಾತನಾಡುತ್ತಾ ವಕೀಲರ ಸ್ಥಾನಮಾನಗಳನ್ನು ವಿವರಿಸಿ ತಮ್ಮ ವಿದೇಶ ಪ್ರವಾಸದ ಕೆಲವೊಂದು ಅನುಭವಗಳನ್ನು ಹೇಳಿದರು ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಮಹಿಳಾ ಸಮಾಜದ ವಾರ್ಷಿಕೋತ್ಸವ—ಅಖಿಲ ಭಾರತ ಮಹಿಳಾಸಂಘದ ಶಾಖೆಯಾದ ಉಡುಪಿ ಮಹಿಳಾ ಸಮಾಜದ ಆರನೇ ವಾರ್ಷಿಕೋತ್ಸವವು ಅಜ್ಜರಕಾಡಿನಲ್ಲಿರುವ ಮಹಿಳಾ ಸಮಾಜದ ಕಟ್ಟಡದಲ್ಲಿ ಇದೇ ತಾ 11ರಂದು ಡಾ! ಟಿ ಎಂ. ಎ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು ಕುಮಾರಿ ಜನ್ನಾಬಾಯಿಯವರಿಂದ ಪ್ರಾರ್ಥನೆಯಾದ ಮೇಲೆ ಸಮಾಜದ ಗೌರವಾಧ್ಯಕ್ಷೆ ಶ್ರೀಮತಿ ಅಪಾ ಕೆ. ಆರ್. ಕೆ ಭಟ್ಟರು ಸ್ವಾಗತಭಾಷಣಮಾಡುತ್ತಾ ಮಹಿಳಾ ಸಮಾಜವು ಬೆಳೆದು ಬಂದ ಬಗೆಯನ್ನೂ ಕೈಗೊಂಡಿರುವ ಚಟುವಟಿಕೆಗಳನ್ನೂ ತಿಳಿಸಿದರು ಸಮಾಜ ಮಂದಿರಕ್ಕೆ ಆವರಣ ಗೋಡೆಯ ರಚನೆಗಾಗಿ ಜನರ ಸಹಕಾರವನ್ನೂ ಕೋರಿದರು. ಗೌರವ ಕಾರ್ಯದರ್ಶಿನಿ ಶ್ರೀಮತಿ ಅನುಸೂಯ ಬಿ ಬಿ ಸೆಟ್ಟರು ಸಮಾಜದ 58 59ನೇ ಇಸವಿಗಳ ಸಂಕ್ಷಿಪ್ತ ವರದಿಯನ್ನು ಓದಿದರು. ಸದ್ಯ ಒಟ್ಟು 60 ಸದಸ್ಯೆಯರಿದ್ದಾರೆಂದೂ ಸಮಾಜ ನಡೆಸುತ್ತಿರುವ ಗೃಹಿಣೀ ವಿದ್ಯಾಲಯ, ಅಂಬರ ಚರಕ ಪರಿಶ್ರಮಾಲಯ ಮೊದಲಾದುವುಗಳ ಚಟುವಟಿಕೆಗಳೂ ಸಮಾಜಕ್ಕೆ ಸಹಾಯಮಾಡಿದವರ ಸಹಕಾರಗಳ ವಿವರವೂ ಉಲ್ಲೇಖಿಸಲ್ಪಟ್ಟಿತ್ತು ಬಳಿಕ ಮಂಗಳೂರಿನ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ನೂತನ ಶಿಶು ವಿಹಾರದ ಉದ್ಘಾಟನೆಗೈಯುತ್ತಾ ಇಂಥ ಶಿಶುವಿಹಾರದ ಆವಶ್ಯಕತೆಯನ್ನು ವಿವರಿಸಿ ಉಡುಪಿಯ ಮಹಿಳಾ ಸಮಾಜವು ಮಾಡುತ್ತಿರುವ ಸತ್ಕಾರ್ಯಗಳನ್ನು ಮೆಚ್ಚಿ ಮಾತನಾಡಿದರು ಅಧ್ಯಕ್ಷರು ಪೈಗಳು ಬಹುಮಾನ ವಿತರಣೆಮಾಡಿ ಮಹಿಳೆಯರು ಸಾದಾ ಮತ್ತು ಸರಳ ಜೀವಿಗಳಾಗಿರಬೇಕೆಂದೂ ಅಂಗಡಿಯ ಮೋಹ ಬಿಟ್ಟು ಕಾಲಸ್ಥಿತಿಗನುಸರಿಸಿ ಮುನ್ನಡೆಯಬೇಕೆಂದೂ ಭಾರತ ಸಂಸ್ಕೃತಿಗೆ ಅನುಗುಣವಾದ ನಡವಳಿಕೆಯುಳ್ಳವರಾಗಬೇಕೆಂದೂ ಪರಕೀಯರ ಅನುಕರಣೆ ಬೇಡವೆಂದೂ ಸೀತಾ ಸಾವಿತ್ರಿಯರ ಆದರ್ಶವುಳ್ಳವರಾಗಬೇಕೆಂದೂ ಇದು ತನ್ನ ವಿದೇಶ ಪ್ರವಾಸದ ಅನುಭವವೆಂದೂ ಸಂದರ್ಭೋಚಿತವಾಗಿ ಹಿತವಚನವಿತ್ತರು ಜೊತೆಕಾರ್ಯದರ್ಶಿನಿ ಶ್ರೀಮತಿ ವಾಣಿಜಾಕ್ಷಿ ರಾಯರು ಧನ್ಯವಾದ ಸಮರ್ಪಣೆ ಮಾಡಿದರು. ಕೊನೆಗೆ ಮನರಂಜನೆಯ ಕಾರ್ಯಕ್ರಮಗಳು ಜರಗಿದವು

ಕೇಂದ್ರ ದಿನಾಚರಣಾ ಸಮಾರಂಭ—ಕಡಿಯಾಳಿ ಕೇಂದ್ರದ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ 'ಕೇಂದ್ರ ದಿನಾಚರಣಾ ಸಮಾರಂಭ'ವು ಕಳೆದ ತಾ 12ರಂದು ಶ್ರೀ ಬಿ ಎಂ. ಕುಡ್ವ, ದ ಕ ಜಿಲ್ಲಾ ವಿದ್ಯಾಧಿಕಾರಿ, ಇವರ ಅಧ್ಯಕ್ಷತೆಯಲ್ಲಿ ಜರಗಿತು ಉಡುಪಿ 'ಉತ್ತರ ಶ್ರೇಣಿ'ಯ ಹಿರಿಯ ಪರೀಕ್ಷಾಧಿಕಾರಿ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಎಸ್ ವಿಶ್ವನಾಥ್ ಇವರು ಸ್ವಾಗತ ಭಾಷಣ ಮಾಡುತ್ತಾ, ಸಂಘದ ಉದ್ದೇಶಗಳನ್ನು ವಿವರಿಸಿ ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟರು. ಕಾರ್ಯದರ್ಶಿ ಶ್ರೀ ಎಸ್ ಸದಾಶಿವರಾಯರು ಸಂಘದ ವಾರ್ಷಿಕ ವರದಿಯನ್ನೋದಿದರು ಶ್ರೀ [illegible] ಉಪಾಧ್ಯಾಯರು ಕಾವ್ಯ ವಾಚನ ಗೈದರು. ಸಂದೇಶ ವಾಚನವಾದ ಮೇಲೆ ಶ್ರೀ ಎಸ್. ದಾಂತಿಯವರು ಮಾತನಾಡುತ್ತಾ ಅಧ್ಯಾಪಕರ ಸಂಘಗಳು ಇನ್ನಷ್ಟು ರಚನಾತ್ಮಕ ಕಾರ್ಯಗಳನ್ನು ಮಾಡಬೇಕೆಂದು ಸಲಹೆ ಇತ್ತರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಹೆತ್ತವರು ಉಪಾಧ್ಯಾಯರ ಮೇಲೆ ಭರವಸೆ ಇಟ್ಟು ಅವರನ್ನು ಗೌರವಿಸುವುದಗತ್ಯ. ಹೆತ್ತವರು ಮಕ್ಕಳೆದುರು ಉಪಾಧ್ಯಾಯರ ದೂಷಣೆಮಾಡುವುದು ತಪ್ಪು. ಅಧ್ಯಾಪಕರ ಇಂದಿನ ವಿದ್ಯಾರ್ಥಿಗಳಲ್ಲಿ ಅಶಿಸ್ತು ನೆಲೆಯೂರಿದೆ. ಅದರ ಕಾರಣವು ಪ್ರಾಯಃ ಪ್ರಾಥಮಿಕ ಶಿಕ್ಷಣದ ದೋಷವೇ ಇರಬೇಕು. ಹೆತ್ತವರು ಮತ್ತು ಶಿಕ್ಷಕರು ಐಕ್ಯತೆಯಿಂದ ಈ ದೋಷವನ್ನು ನಿವಾರಿಸಬೇಕು. ಎಂದು ಹೇಳಿ ಸರ್ಕಾರದ ವಿದ್ಯಾಧಿಕಾರಿಗಳೂ ನಿವಾರಿಸದ ವಿದ್ಯಾ ಪ್ರಸಾರ ಕಾರ್ಯದಲ್ಲಿ ಸರ್ವರೂ ಸಹಕಾರ ನೀಡಬೇಕೆಂದರು

ಪಿ. ನರಸಿಂಹ ಉಪಾಧ್ಯ ಮತ್ತು ಬಳಗದವರಿಂದ ಸಂಗೀತ ಕಛೇರಿ ನಡೆದ ಬಳಿಕ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ಮನರಂಜನೆಯ ಕಾರ್ಯಕ್ರಮಗಳು ಜರಗಿದುವು ಕೇಂದ್ರದ ಅಧ್ಯಾಪಕರು ಎರಡು ಏಕಾಂಕ ಪ್ರಹಸನಗಳನ್ನು ಅಭಿನಯಿಸಿದರು ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಎಸ್. ಸದಾಶಿವರಾಯರು ಆಭಾರ ಸೂಚಿಸಿದರು

ಅದಿನ ಅಪರಾಹ್ನ ಘಂಟೆ3.30ಕ್ಕೆ ಸಂಘದ ಮಹಾಸಭೆ ಜರಗಿತು.ಶಾಲೆಗಳವರು ಏರ್ಪಡಿಸಿದ ವಿದ್ಯಾ ವಿಷಯಕ ವಸ್ತು ಪ್ರದರ್ಶನವನ್ನು ಶ್ರೀ ಎನ್. ವಿಶ್ವನಾಥ, ಬಿ ಎ, ಬಿ ಟಿ ಇವರು ಉದ್ಘಾಟಿಸಿದರು. 1960ನೇ ವರ್ಷಕ್ಕೆ ಹೊಸ ಅಧಿಕಾರಿ ವರ್ಗದ ಚುನಾವಣೆ ನಡೆದು ಶ್ರೀ ಯಸ್ ಸದಾಶಿವ ರಾಯರು ಕಾರ್ಯದರ್ಶಿಗಳಾಗಿಯೂ, ಯಸ್. ಗೋಪೀಚಂದ ರಾಯರು ಉಪಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ನಿಧನ—ಪ್ರಸಿದ್ಧ ಒವಾರ್ಡಿ ಮನೆತನದ ದುಗ್ಗಲಚ್ಚಿ ಹೆಗ್ಗಡ್ತಿಯವರು ತಾರೀಕು 29 11 59ರಲ್ಲಿ 87 ವಯಸ್ಸಿನಲ್ಲಿ ನಿಧನ ಹೊಂದಿದರು ಒವಾರ್ಡಿ ಕುಟುಂಬಗಳಲ್ಲಿ ಇವರು ಹೆಚ್ಚು ಕಾಲ ಬಾಳಿದವರು ಕುಟುಂಬದ ಮೇಲೆ ಹೆಚ್ಚು ಪ್ರೀತಿ, ದೇವರ ಮೇಲೆ ಭಕ್ತಿ ಇದ್ದವರು. ಕುಟುಂಬದ ಜೀವಂತ ಇತಿಹಾಸ ಆಗಿದ್ದರವರು ಇವರು ದಿವಂಗತ ಒವಾರ್ಡಿ ಜಗನ್ನಾಥ ಹೆಗ್ಡೆಯವರ ತಾಯಿ, ದಿವಂಗತ ಅಂಜಾರು ರಾಮಣ್ಣ ಹೆಗ್ಡೆಯವರ ಮಾವ ಆಗಿದ್ದರು

ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘ—ಪ್ರಾಥಮಿಕ ಶಾಲೆಗಳಿಗೆ ಇತ್ತೀಚೆಗೆ ಜಾರಿಯಾದ ರೂಲುಗಳಿಂದ ಉಂಟಾದ ತೊಂದರೆಗಳ ವಿಚಾರವನ್ನು, ಇಲಾಖಾಧಿಕಾರಿಗಳಿಗೆ ನಿವೇದಿಸಿಕೊಳ್ಳುವರೆ, ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಪತಿಯಿಂದ, ಅಧ್ಯಕ್ಷ ಕಾರ್ಯದರ್ಶಿ ಸಮೇತ ಶಿಷ್ಟಮಂಡಳವೊಂದು ತಾ. 14-12-59ರಲ್ಲು ಬೆಂಗಳೂರಿಗೆ ತೆರಳಿರುವುದಾಗಿ ತಿಳಿದು ಬರುತ್ತದೆ

ಕುಟುಂಬಯೋಜನಾ ದಿನವು—ಇದೇ ತಾ 18ನೇ ಶುಕ್ರವಾರ ಮಂಗಳೂರು ಗವರ್ನಮೆಂಟ್ ಆರ್ಟ್ಸ್ ಕಾಲೇಜಿನ ವಠಾರದಲ್ಲಿ ಆಚರಿಸಲ್ಪಡುವುದು. ಅಪರಾಹ್ನ ಗಂಟೆ 3ರಿಂದ 4—30ರ ತನಕ ಸಂಬಂಧಪಟ್ಟ ಪ್ರದರ್ಶನವೂ ಅನಂತರ ವಿಚಾರಗೋಷ್ಠಿ ಹಾಗೂ ಭಾಷಣಗಳೂ ಜರಗಲಿರುವುವು.

ಅದೇ ದಿನ ಉಡುಪಿಯಲ್ಲಿಯೂ ಮಹಿಳಾ ಸಮಾಜದಲ್ಲಿ ಪ್ರದರ್ಶನ ನಗರಸಭಾ ಆಫೀಸಿನಲ್ಲಿ ಭಾಷಣಗಳೊಂದಿಗೆ ಕುಟುಂಬಯೋಜನಾ ದಿನವು ಆಚರಿಸಲ್ಪಡುವುದು.

ಗೀತಾ ಜಯಂತಿ— ಮಣಿಪಾಲ ಗೀತಾ ಮಂದಿರದ ವಾರ್ಷಿಕೋತ್ಸವವೂ ಗೀತಾ ಜಯಂತಿಯೂ ತಾ 10ರಂದು ಪ್ರೊ. ಕು ಶಿ. ಹರಿದಾಸಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು.

ಉಡುಪಿ ತಾಲೂಕು ಗ್ರಾಮ ಉದ್ಯೋಗಸ್ಥರ ಸಂಘದ ಮಹಾಸಭೆಯು—ತಾ 14ರಂದು ಉಡುಪಿ ರಾಮಕೃಷ್ಣ ಹೊಟೇಲಿನಲ್ಲಿ ಜರಗಿ ಕೆಲವು ಗೊತ್ತುವಳಿಗಳನ್ನು ಅಂಗೀಕರಿಸಿದೆ (ಅವನ್ನು ಬರುವ ವಾರ ಪ್ರಕಟಿಸಲಾಗುವುದು —ಸಂ ನ.)

ವಿದ್ಯಾರ್ಥಿಗಳು ಗುಲ್ಲೆಬ್ಬಿಸಿದರು: ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳು ನಡೆಯುವುದೂ ಕಠಿನವೆನಿಸಿತು ಪ್ರಾಚೀನ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಅಲ್ಲಹಾಬಾದದಲ್ಲಿಯೂ ವಿದ್ಯಾರ್ಥಿಗಳ ಪುಂಡಾಟಿಕೆಯಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಬಾಗಿಲು ಹಾಕಬೇಕಾಯಿತು. ವಿಶ್ವವಿದ್ಯಾನಿಲಯದಂತಹ ಉಚ್ಚಸ್ತರದ ಒಂದು ಸಂಸ್ಥೆಗೆ ಅದರ ಒಂದಂಗವಾದ ವಿದ್ಯಾರ್ಥಿಗಳಿಂದ ಈ ರೀತಿಯ ಅವಮಾನವಾಗುವುದೆಂದರೆ, ವಿದ್ಯಾರ್ಥಿಗಳ ಗೌರವಕ್ಕೂ ಅವರ ವಿವೇಕತೆಗೂ ಧಕ್ಕೆಯೊದಗಿದಂತೆ: ವಿದ್ಯಾರ್ಥಿಗಳು ತಾವು ಬಂದಿರತಕ್ಕ ಅಮೂಲ್ಯ ಮತ್ತು ಆವಶ್ಯಕವಾದ ಉದ್ದೇಶವನ್ನು ಬದಿಗೊತ್ತಿ ಇಂತಹ ಪುಂಡಾಟಿಕೆಯಲ್ಲಿ ತೊಡಗುವುದೆಂದರೆ ಅವಿವೇಕದ ಪರಮಾವಧಿ. ಇದು ಅವರ ಮನೋವೃತ್ತಿಯಿಂದ ಮಾತ್ರವಲ್ಲ, ಅವರು ದೊರಕಿಸಿಕೊಂಡ ಸಹವಾಸ, ಅವರ ಆಹಾರ ವಿಹಾರ ಹಾಗೂ ಅವರು ಪಡೆದ ಶಿಕ್ಷಣಗಳಿಂದಲೂ ಪ್ರೇರಕವಾಗುತ್ತಿವೆ. ನಮ್ಮ ಶಿಕ್ಷಣ ತಜ್ಞರು ಪರಿಣಾಮಕಾರಿ ರೀತಿಯಲ್ಲಿ ವಿದ್ಯಾರ್ಥಿಯ ಸರ್ವತೋಮುಖ ಪ್ರಗತಿಗಾಗಿ ಶಿಸ್ತು ಉಳಿಸಲು ಯೋಗ್ಯ ಮಾರ್ಗದರ್ಶನಮಾಡುವ ಅವಶ್ಯವಿದೆ.

ನಿಮ್ಮ ಉತ್ತಮ ಸೇವೆಗಾಗಿ
ಕೊಯಂಬತ್ತೂರಲ್ಲಿ
ನಮ್ಮ ನೂತನ ಕಟ್ಟಡವು
15ನೇ ದಶಂಬರ 1959ರಲ್ಲಿ
ತೆರೆಯಲ್ಪಟ್ಟಿದೆ
ಸೇಫ್ ಡಿಪಾಜಿಟ್ ಲಾಕರುಗಳ ಸೌಲಭ್ಯವಿದೆ
ಕೆನರಾ ಬೇಂಕ್ ಲಿಮಿಟೆಡ್
(ಸ್ಥಾಪನೆ. 1906)
ಆಡಳಿತ ಕಚೇರಿ
ಬೆಂಗಳೂರು—2

Life Insurance Corporation of India,
Divisional Office, Udipi.

AUCTION NOTICE.

Notice is hereby given that the rights to pluck the yield of 32 coconut trees situated at the five compounds belonging to the Life Insurance Corporation of India within the Udipi Municipal Limits for the period of one year from 1—1—1960 to 31—12—1960 will be sold by public auction on 4—1—1960 at 5 P. M. at the Divisional Office Premises, Canara Mutual Building, Udipi

The terms and conditions attached to this can be had from the Office during Office hours on any working day up to 3—1—1960.

UDIPI, December 14, 1959.

K. R. K. Bhat,
Divisional Manager

ಅಭಿಪ್ರಾಯ

ಐಕರ ಸಂದರ್ಶನ—ಶಾಂತಿಯಾತ್ರೆ

ಸಪರಿವಾರವಾಗಿ ಆಗಮಿಸಿರುವ ಐಕರು ರಾಜಕಾರಣವನ್ನೇ ಪ್ರಧಾನವಾಗಿಟ್ಟು ಬಂದಿಲ್ಲ; ಶಾಂತಿಸಾಧನೆಯ ಮಾರ್ಗವರಸಿ ಆಗಮಿಸಿದ್ದಾರೆ

ಸುಮಾರು ಎರಡು ವರ್ಷಗಳಿಂದ ಅಮೆರಿಕೆಯ ಅಧ್ಯಕ್ಷ ಐಸನ್ ಹಾವರರು ಭಾರತ ಸಂದರ್ಶಿಸುವರೆಂಬ ಮಾತು ಪ್ರತಿಧ್ವನಿಸುತ್ತಿದ್ದು ಅದಿಂದು ನನಸಾಗಿ ಪರಿಣಮಿಸಿದೆಯಲ್ಲದೇ ಈ ಸಂದರ್ಶನದಿಂದ ಭಾರತದ ಮೇಲೆ, ಅದರ ಭದ್ರತೆಯ ಮೇಲೆ, ಅದರ ಆರ್ಥಿಕ ಸ್ಥಿತಿಯ ಮೇಲೆ ಯಾವ ರೀತಿಯ ಪ್ರಭಾವ ಬೀಳಬಹುದೆಂಬ ಚರ್ಚೆ ಕೇಳಿ ಬರುತ್ತಿದೆ. ಆರ್ಥಿಕವಾಗಿಯೂ ತಾಂತ್ರಿಕವಾಗಿಯೂ ಭಾರತದ ಪುನಾರಚನೆಗೆ ಸಹಾಯವನ್ನು ನೀಡಿರುವ ಅಮೆರಿಕೆಯ ಅಧ್ಯಕ್ಷರ ಸಂಚಾರದಲ್ಲಿ ಎಲ್ಲರೂ ಆಸಕ್ತಿಯನ್ನು ತೋರಿಸಿದರೆ, ಅದರಲ್ಲಿ ಅಸ್ವಾಭಾವಿಕತೆಯೆಂಬುದಿಲ್ಲ. ಐಕರು ವಿಮಾನದಿಂದ ಇಳಿದ ಪಾಲಂ ವಿಮಾನ ನಿಲ್ದಾಣದಲ್ಲಿ ಭಾರತದ ಎಲ್ಲೆಡೆಯಿಂದಲೂ ಜನರು ಬಂದಿದ್ದು, ತಮ್ಮ ರಾಷ್ಟ್ರಕ್ಕೆ ಸಹಾಯ ಹಸ್ತವನ್ನು ನೀಡಲು ಮುಂದಾಗಿರುವ ಈ ಐಕರು ಹೇಗಿದ್ದಾರೆಂದು ತಿಳಿದುಕೊಳ್ಳುವ ಮಾತ್ರವರಿಗೆ ತಮ್ಮ ಕೃತಜ್ಞತೆಗಳನ್ನು ಸಮರ್ಪಿಸುವ ಕರ್ತವ್ಯವನ್ನು ನೆರವೇರಿಸಿದ್ದೂ ನ್ಯಾಯೋಚಿತವೇ ಆಗಿದೆ.

ಭಾರತದ ಮೇಲೆ ಚೀನವು ಸೀಮಾತಿಕ್ರಮಣವನ್ನು ಮಾಡದಿರುತ್ತಿದ್ದರೆ, ಐಕರು ಈ ಸಮಯದಲ್ಲಿ ಭಾರತಕ್ಕೆ ಬರುತ್ತಿರಲಿಲ್ಲವೆಂದೂ ಅವರು ತಮ್ಮ ಹುದ್ದೆಯಿಂದ ನಿವೃತ್ತರಾದ ಮೇಲೆಯೇ ಆಗಮಿಸುತ್ತಿದ್ದರೆಂದೂ ಕೆಲವರು ಹೇಳುತ್ತಾರೆ. ಆದರೆ, ಇವರು ಐಕರ ಯಾತ್ರಾನಂತರವೇ ಸೋವಿಯತ್ ರಶ್ಯದ ರಾಷ್ಟ್ರಾಧ್ಯಕ್ಷರು ಭಾರತಕ್ಕೆ ಬರಲಿದ್ದಾರೆ, ಮತ್ತು ಮೊದಲು ಶ್ರೀ ಕ್ರುಶ್ಚೇವ-ಬುಲ್ಗಾನಿನ್‌ರೂ ಭಾರತಕ್ಕೆ ಬಂದಿದ್ದಾರೆಂಬುದನ್ನು ಮರೆತಂತಿದೆ. ನಮ್ಮ ದೇಶಕ್ಕೆ ಯಾರೇ ಆಗಲಿ ಸೈನಿಕ ಕಾರಣದಿಂದ ಬರುತ್ತಿಲ್ಲ. ಆದರೆ, ಪ್ರಪಂಚದಲ್ಲಿ ಶಾಂತಿಗೋಸ್ಕರ ಅವಿರತ ಪ್ರಯತ್ನಶೀಲವಾದ ಭಾರತಭೂಮಿಯ ಮತ್ತದರ ಜನತೆಯ ದರ್ಶನ ಲಾಭಕ್ಕಾಗಿ ಆಗಮಿಸುತ್ತಿದ್ದಾರೆ. ಈ ಕಾರಣವೊಂದಿಲ್ಲವಾದರೆ, ಪ್ರಪಂಚದ ಪಟ್ಟಣಗಳ ನಾಯಕರು ಎಂದಿಗೂ ಇಲ್ಲಿ ಪಾದಾರ್ಪಣ ಮಾಡುತ್ತಿರಲಿಲ್ಲ.

ರಾಷ್ಟ್ರಾಧ್ಯಕ್ಷ ಐಕರೊಡನೆ ಅವರ ಮಗ ಹಾಗೂ ಸೊಸೆ ಮತ್ತಿತರ ವ್ಯಕ್ತಿಗತ ಸಂಬಂಧಿಕರೂ ಬಂದಿರುತ್ತಾರೆ. ರಾಜಕೀಯ ಕಾರಣಗಳಿಂದ ಬರುವಾಗ ಇವರ ಪರಿವಾರವೇಕೆ? ಇದರಿಂದಾಗಿ, ಇವರು ಒಂದು ತೀರ್ಥಯಾತ್ರೆಗೆ ಸಪರಿವಾರವಾಗಿ ಭಾರತೀಯರು ತೆರಳುವಂತೆಯೇ ಭಾರತಕ್ಕೆ ಸಂದರ್ಶನವಿತ್ತಿರುವರೆಂದು ನಾವು ಭಾವಿಸಬಹುದು. ಒಂದು ದೃಷ್ಟಿಯಿಂದ ಹೇಳುವುದಾದರೆ, ಇದು ಶ್ರೀ ಐಕರ ಶಾಂತಿ ಸಂಶೋಧನೆಯ ಯಾತ್ರೆಯಾಗಿದೆ. ಶ್ರೀಯುತರೂ ತಮ್ಮ ಯಾತ್ರೆಯನ್ನು ಅದೇ ಹೆಸರಿನಿಂದ ಕರೆದಿರುವುದನ್ನು ನೆನಪಿಸಬಹುದು.

ರಾಷ್ಟ್ರಾಧ್ಯಕ್ಷ ಐಸನ್ ಹಾವರರು ದ್ವಿತೀಯ ಜಾಗತಿಕ ಸಂಗ್ರಾಮದ ಸಮಯದಲ್ಲಿ ಮಿತ್ರ ರಾಷ್ಟ್ರಗಳ ಪ್ರಮುಖ ಸೇನಾಧಿಕಾರಿಗಳಾಗಿದ್ದರು. ಆಗ ಜರ್ಮನಿ, ಇಟಲಿ ಮತ್ತು ಜಪಾನಗಳ ವಿರುದ್ಧವಾಗಿ ರಾಷ್ಟ್ರಗಳ ಸೇನೆಯು ಇವರ ಮಾರ್ಗದರ್ಶನದಂತೆ ತೆರಳುತಿತ್ತು. ಈ ಯುದ್ಧದಲ್ಲಿ ರಶ್ಯ ಹಾಗೂ ಅಮೆರಿಕೆಯು ಪ್ರಧಾನವಾಗಿದ್ದ ಪಾಶ್ಚಾತ್ಯ ರಾಷ್ಟ್ರಗಳಿಗೆ ವಿಜಯ ಲಭಿಸಿತ್ತು. ವಿಜಯ ಮಾಲೆಯು ಶ್ರೀ ಐಕರ ಕಂಠವೇರಿದುದು ಸ್ವಾಭಾವಿಕವೇ. ಆಗ, ಅಮೆರಿಕೆಯ ಜನತೆಯು ತಾನು ಐಸನ್ ಹಾವರರೆಂದು ಕರೆಯುತ್ತಿರುವ ವ್ಯಕ್ತಿಯು ಧೈರ್ಯ, ಸಾಹಸ, ಶಕ್ತಿ, ವ್ಯವಸ್ಥೆ ಹಾಗೂ ಮಾನವತೆಯ ರಕ್ಷಣೆಯ ಜ್ವಲಂತ ಪ್ರತೀಕವೆಂಬುದನ್ನು ಕಂಡುಕೊಂಡಿತು. ಟ್ರೂಮನರ ನಂತರ, ಅಮೆರಿಕೆಯ ಅಧ್ಯಕ್ಷಸ್ಥಾನಕ್ಕೆ ಯೋಗ್ಯನಾದವನನ್ನು ಅರಸತೊಡಗಿದಾಗ ಅವರ ದೃಷ್ಟಿಗೆ ಶ್ರೀ ಐಕರೇ ಗೋಚರಾದರು. ಅವರು ಯುದ್ಧದಲ್ಲಿ ಜಯಶೀಲರಾಗಿದ್ದ ಐಕರನ್ನೇ ಆರಿಸಿದರು. ಪ್ರಾಯಃ ಮುಂದಕ್ಕೂ ಇವರು ಜಯಗಳಿಸುವರೆಂದವರು ತಿಳಿದಿರಬೇಕು.

ಏಶ್ಯದ ಪೀಡಿತ ರಾಷ್ಟ್ರಗಳಿಗೆ ಸಹಾಯ ಹಸ್ತದ ಆವಶ್ಯಕತೆಯಿರುವುದೆಂದು ಅಧ್ಯಕ್ಷ ಐಕರು ಹಲವು ಬಾರಿ ತಿಳಿದುಕೊಂಡರು. ವಿಜಯಿಯಾದ ಸೋವಿಯತ್ ರಶ್ಯವು ಪೀಡಿತರಾಷ್ಟ್ರಗಳ ದುರ್ಬಲತೆಯನ್ನು ಕಂಡುಕೊಂಡು ಅದರಿಂದ ಅನುಚಿತ ಲಾಭವನ್ನು ಪಡೆದೀತೆಂದವರು ಯೋಚಿಸಿದರು. ಆದುದರಿಂದ ಸಹಾಯತೆಯ ಯೋಜನೆಗಳು ರೂಪಿತಗೊಂಡುವು. ಇವುಗಳ ಮೂಲಕ ಸಹಾಯವನ್ನೂ ಕೊಡಲಾಯಿತು. ಆ ಸಮಯದಲ್ಲಿ ಭಾರತದಲ್ಲಿ ಆಹಾರಧಾನ್ಯಗಳ ಕೊರತೆಯು ಅಂಕುರಿಸಿತ್ತು; ಇದನ್ನು ಆ ಸಹಾಯತೆಯಿಂದಲೇ ದೂರೀಕರಿಸಲಾಯಿತು. ತದನಂತರ ಭಾರತದ ಪಂಚವಾರ್ಷಿಕ ಯೋಜನೆಯ ಬಗ್ಗೆ ಆರ್ಥಿಕ ಸಹಾಯತಾ ಯೋಜನೆಗಳ ಆವಶ್ಯಕತೆ ತೋರಿಬಂತು. ನಮ್ಮ ಆರ್ಥಿಕ ಮಂತ್ರಿಗಳು ಆಗಾಗ ಅಮೆರಿಕೆಯ ಸಂಚಾರವನ್ನು ಕೈಗೊಂಡು ತಮ್ಮ ಅಭೀಷ್ಟವನ್ನು ಪೂರೈಸಿಕೊಂಡೇ ಮರಳಿ ಬಂದರು. ಈ ಸಫಲತೆಯ ಹಿಂದೆ ಶ್ರೀ ಐಕರ ಸದ್ಭಾವನೆಯೂ ಮೂಡಿತ್ತು. ಏಕೆಂದರೆ, ಅಮೆರಿಕೆಯ ಸಂವಿಧಾನದಲ್ಲಿ ಅಲ್ಲಿನ ರಾಷ್ಟ್ರಾಧ್ಯಕ್ಷರ ಕೈಯಲ್ಲಿಯೇ ರಾಷ್ಟ್ರದ ಸರ್ವೋಚ್ಚ ಸತ್ತೆಯಿರುವುದು.

ಭಾರತೀಯ ಪ್ರಧಾನಿ ನೆಹರು ಅವರು ವಾಶಿಂಗ್‌ಟನ್ನದ ಯಾತ್ರೆ ಕೈಗೊಂಡಿದ್ದಾಗ, ಶ್ರೀ ಐಕರೂ ಅವರನ್ನು ಆದರದಿಂದ ಗೌರವಿಸಿದ್ದರು. ಶ್ರೀ ಐಕರು ಪ್ರಧಾನಿ ನೆಹರು ಅವರೊಡನೆ ಏಕಾಂತ ವಿಚಾರವಿನಿಮಯ ಮಾಡಿದಷ್ಟನ್ನು ಬೇರಾರೊಡನೆಯೂ ಮಾಡಿಲ್ಲ. ಶ್ರೀ ಐಕರು ಆ ಸಮಯದಲ್ಲಿ ತಮ್ಮ ಗ್ರಾಮೀಣ ವಸತಿಯಲ್ಲಿ ಶ್ರೀ ನೆಹರೂರೊಡನೆ ಮಾತುಕತೆ ನಡೆಸಿದ್ದರು. ಶ್ರೀ ನೆಹರೂರವರ ಮನಸ್ಸನ್ನು ತಿಳಿಯುವ ಸಲುವಾಗಿಯೇ ಅವರೀರೀತಿ ಮಾಡಿದರೆಂದು ಹೇಳಬಹುದು. ಪ್ರಧಾನಿ ನೆಹರೂರವರ ಅಮೆರಿಕೆಯ ಯಾತ್ರಾನಂತರದಲ್ಲಿಯೇ ಐಕರೂ ಭಾರತ ಸಂದರ್ಶಿಸುವರೆಂಬ ಮಾತು ಏಳತೊಡಗಿತು. ಸಾಮಾನ್ಯವಾಗಿ ಎರಡು ವರ್ಷಗಳನಂತರ ಆ ಮಾತು ಈಗ ಸತ್ಯವಾಯಿತು.

ಶ್ರೀ ಐಕರು ಭಾರತ ಸಂದರ್ಶಿಸಿದುದು ಶಾಂತಿಸಾಧನೆಗಾಗಿಯಾಗಿರುವುದಾದರೂ ಅವರ ಸಂದರ್ಶನದ ಪ್ರಭಾವವು ಭಾರತದ ಮಾತ್ರವಲ್ಲ, ವಿಶ್ವದ ರಾಜಕಾರಣ ಕ್ಷೇತ್ರದಲ್ಲಿಯೂ ಬೀಳುವುದೆಂದು ನಂಬಬಹುದು. ಮುಖ್ಯವಾಗಿ, ಚೀನವು ಭಾರತದ ಗಡಿಯನ್ನು ಉಲ್ಲಂಘಿಸಿದ್ದು ಸದ್ಯ ಈ ಎರಡು ಏಶ್ಯದ ಮಹಾರಾಷ್ಟ್ರಗಳಲ್ಲಿ ಎದ್ದಿರುವ ಬಿರುಕು ಹಾಗೂ ತತ್ಪರಿಣಾಮವಾಗಿ ತಲೆದೋರಿರುವ ವೈಮನಸ್ಯಗಳೂ ಇವರ ಪ್ರಭಾವದಿಂದ ದೂರಸಿಲ್ಲುವುದು ಎಂದಿಗೂ ಅಸಾಧ್ಯವೇ. ಚೀನವು ಮುಂದೆ ತಂದ ವಿನಿಮಯ ಮಾತುಕತೆಯ ಬಗ್ಗೆ ಭಾರತವು ಕಳಿಸಿದ್ದ ಉತ್ತರಕ್ಕೆ ಪ್ರತ್ಯುತ್ತರವನ್ನು ಚೀನವು ಇದುವರೆಗೆ ಕೊಡದಿರಲು ಶ್ರೀ ಐಕರ ಯಾತ್ರೆಯೂ ಒಂದು ಕಾರಣವಾಗಿರಬಹುದು. ಶ್ರೀ ಐಕರು ಭಾರತ ಯಾತ್ರೆಯನ್ನು ತಾ. ೧೪ರಂದು ಮುಕ್ತಾಯಗೊಳಿಸುವವರಿಂದ, ಇಷ್ಟರಲ್ಲಿಯೇ ಚೀನದ ಪ್ರತ್ಯುತ್ತರ ಭಾರತಕ್ಕೆ ದೊರೆಯಲೂ ಸಾಕು. ಉಭಯ ನಾಯಕರಲ್ಲಿ, ಶಾಂತಿದೂತರಲ್ಲಿ ಯಾವ ಯಾವ ವಿಷಯದ ಬಗ್ಗೆ ಯಾವ ರೀತಿಯಲ್ಲಿ ಹೇಗೆ ಮಾತುಕತೆ ನಡೆಯಿತೆಂದು ತಿಳಿಯದೆ ಹೋದರೂ ಅವರು ಚರ್ಚಿಸಿದ್ದ ಹಲವಾರು ವಿಷಯಗಳಲ್ಲಿ ಚೀನದ ಆಕ್ರಮಣವೂ ಒಂದೆಂಬುದನ್ನು ಊಹಿಸಬಹುದು.

ಶ್ರೀ ಐಕರ ಸಂದರ್ಶನವು ಇತಿಹಾಸ ಪ್ರಸಿದ್ಧವಿದೆ. ಅದರಲ್ಲೂ ೧೭೭೬ರಲ್ಲಿ ಸ್ವತಂತ್ರವಾದ ಅಮೆರಿಕೆಯ ಅಧ್ಯಕ್ಷರಲ್ಲಿ ಭಾರತವನ್ನು ಸಂದರ್ಶಿಸಿದ ಮೊತ್ತಮೊದಲ ಅಧ್ಯಕ್ಷ ಐಕರ ಈ ಯಾತ್ರೆಯ ಮಹತ್ವವನ್ನು ಇತಿಹಾಸವು ಸಾರಿ ಹೇಳುವುದರಲ್ಲಿಯೂ ಈ ಯಾತ್ರೆಯ ಫಲವು ಸದ್ಯದಲ್ಲಿ ವ್ಯಕ್ತವಾಗುವುದರಲ್ಲಿಯೂ ಸಂದೇಹಪಡಬೇಕಾಗಿಲ್ಲ. ಅಮೆರಿಕೆಯ ಅಧ್ಯಕ್ಷರಿಗೆ ತಮ್ಮ ಸಹಾಯಕರೆಂದು ಮಾತ್ರವಲ್ಲ, ವಿಶ್ವಶಾಂತಿಯ ಪ್ರತಿಪಾದಕರೆಂದೂ ಶಾಂತಿದೂತರೆಂದೂ ಭಾರತೀಯರು ಆದರದ ಸ್ವಾಗತವಿತ್ತು ಗೌರವಿಸಿದರು. ಇದು ಭಾರತೀಯ ಪರಂಪರೆಗೆ ತಕ್ಕುದಾಗಿದೆ.

—ಗೋರಾ

ಪರಿಚಯ

(೫ನೇ ಪುಟದಿಂದ)

ವಾರ್ ಪ್ರಕಾಶ ಬೀರಿದ್ದಾನೆ. ಎಲ್ಲ ತರದ ಜನರು ಆತನ ಈ ಸೂಕ್ತಿಗಳಿಂದ ಲಾಭ ಪಡೆಯಬಹುದಾಗಿದೆ.

'ತಿರುವಳ್ಳುವರ್'ನ ಭಾಷೆ ಬಹಳ ದೃಢ ಹಾಗೂ ಸರಳವಾಗಿದೆ. ಈ ಗ್ರಂಥದಲ್ಲಿ ಎಲ್ಲಿಯೂ ಉಪ್ಪನಾದ ಆಡಂಬರಪೂರ್ಣ ಶಬ್ದ ದೊರಕುವುದಿಲ್ಲ. ಸರಳ ಮತ್ತು ಮಧುರ ಶಬ್ದಗಳನ್ನು ಆತ ಬಹಳ ಸುಂದರವಾದ ರೀತಿಯಿಂದ ಜೋಡಿಸಿದ್ದಾನೆ. ಇದರಿಂದಾಗಿ ಆ ಪದ್ಯಗಳನ್ನು ಮತ್ತೂ ಮತ್ತೂ ಓದುವ ಇಚ್ಛೆಯಾಗುತ್ತದೆ. ಇದೇ ಕಾರಣದಿಂದ ಆ ಗ್ರಂಥದ ಸೂಕ್ತಿಗಳು ಬಹಳ ಬೇಗನೇ ಮನಸ್ಸಿಗೆ ನಾಟುತ್ತವೆ.

ತಿರುವಳ್ಳುವರ್‌ನ ಜೀವನದ ಸಂಗಾತಿಯಾದ ವಾಸುಕಿ ಇಹಲೋಕವನ್ನು ತ್ಯಜಿಸಿದಾಗ ಕವಿಗಾದ ದುಃಖ ಅಷ್ಟಿಷ್ಟಲ್ಲ. "ಓ ಪ್ರಿಯೆ! ನನ್ನ ಮಾತನ್ನು ನಿಷ್ಠೆಯಿಂದ ಪಾಲಿಸಿ, ನನಗಾಗಿ ರುಚಿಕರವಾದ ತಿಂಡಿ-ತಿನಿಸುಗಳನ್ನು ತಯಾರಿಸಿ ಕೊಡುತ್ತಿದ್ದವಳೇ! ರಾತ್ರಿ, ಕಾಲದಲ್ಲಿ ನನ್ನ ಕಾಲುಗಳನ್ನು ಒತ್ತಿ, ನಾನು ಮಲಗಿದ ಅನಂತರ ಮಲಗಿ, ನಾನೇಳುವ ಮೊದಲು ಏಳುತ್ತಿದ್ದವಳೇ! ಓ ಸರಳ ಹೃದಯಿಯೇ! ಈಗ ನನ್ನನ್ನು ಬಿಟ್ಟು ಆಗಲುವೆಯೊ? ಇನ್ನು ಈ ಕಣ್ಣುಗಳಿಗೆ ನಿದ್ರೆಯೆಂದು?" ಎಂಬ ಮಾತುಗಳು ಕವಿಯ ಬಾಯಿಯಿಂದ ಹೊರ ಹೊರಟವಂತೆ. ಇವುಗಳಲ್ಲಿ ಕವಿ ಹೃದಯದ ಭಾರ ಅಡಗಿದೆ.

ಮದ್ರಾಸಿನಲ್ಲಿರುವ ಮೈಲಾಪುರದಲ್ಲಿ ತಿರುವಳ್ಳುವರ್‌ನ ಸ್ಮಾರಕಕ್ಕಾಗಿ ಒಬ್ಬ ರಾಜನು ಒಂದು ದೇವಾಲಯವನ್ನು ಕಟ್ಟಿಸಿ, ಕಲ್ಲಿನ ಆತನ ವಿಗ್ರಹವೊಂದನ್ನು ಸ್ಥಾಪಿಸಿರುವನು. ಮೈಲಾಪುರದ ಜನರು ಈ ವಿಗ್ರಹದ ಸುತ್ತು ಕುಳಿತು ಭಜನೆ ಮಾಡುವುದನ್ನು ಈಗಲೂ ನಾವು ಕಾಣಬಹುದು. ಜಾತಿಯಲ್ಲಿ ಅಂತ್ಯಜನಾದರೂ ಆತನು ತನ್ನ ನೀತಿ ಧರ್ಮದಿಂದ ಕೀರ್ತಿ ಪಡೆದನು

(ಆಧಾರದಿಂದ

—ಉಡುಪಿ ನಾರಾಯಣ ಬಲ್ಲಾಳ.

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ
"ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!
"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ
ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ
ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ—
ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ರಾಜಕೀಯ

(೧ನೇ ಪುಟದಿಂದ)

ನೇಶಿಯಾದ ಗವರ್ನರ ಜನರಲ್ಲರೊಂದು ಆಜ್ಞೆ ಹೊರಡಿಸಿ ಪಶ್ಚಿಮ ಜಾವಾದ ಗ್ರಾಮೀಣ ಪ್ರದೇಶಗಳಲ್ಲಿ ಮಾಡುವ ಚೀನೀಯ ವ್ಯಾಪಾರಕ್ಕೆ ತಡೆ ಹಾಕಿದರು. ಆ ವೇಳೆ ಸೇನೆಯು ಆ ಪ್ರದೇಶದ ಚೀನೀಯರನ್ನು ಸುರಕ್ಷಿತ ಸ್ಥಳಕ್ಕೆ ಕೊಂಡು ಹೋಗಲು ನಿರ್ಧರಿಸಿತು. ಇದೇ ಪ್ರಾದಿಯ ವ್ಯಾಪಾರ ಪ್ರತಿಬಂಧವನ್ನು ಅಖಿಲ ದೇಶದಲ್ಲಿ ಸಾರುವ ನಿರೀಕ್ಷೆಯಿದೆ. ಇಂಡೊನೇಶಿಯಾದಲ್ಲಿರುವ ಚೀನೀಯರು ಇದು ತಮಗೆ ವ್ಯತ್ಯಾಸಮವೆಂದು ತಿಳಿದಿದ್ದಾರೆ.

ಇಂಡೋನೇಶಿಯಾ ಸರಕಾರ ಚೀನೀಯರ ವಿರುದ್ಧವಾಗಿ ಈ ರೀತಿ ಏಕೆ ವರ್ತಿಸುತ್ತಿದೆ ಎಂದು ತಿಳಿಯುವುದು ಸುಲಭವಲ್ಲ. ಇಂಡೊನೇಶಿಯದಲ್ಲಿರುವ ಚೀನೀಯರ ದುರ್ವರ್ತನೆಯಿಂದಾಗಿ ಸರಕಾರವು ಯಾವಾಗಲೂ ಚಿಂತಿತವಾಗಿಯೇ ಇರಬೇಕಾಗಿದೆ. ಜಪಾನೀಯರು ತಮ್ಮನ್ನು ಆಳುತಿದ್ದಾಗ ಚೀನೀಯರು ಅವರೊಡನೆ ಸಹಕರಿಸಿದ್ದರು. ಡಚ್ಚರ ಮೇಲೂ ಅವರು ಉರಿಕಾರಿರಲಿಲ್ಲ; ಆದರೆ ಈಗ ಮಾತ್ರ ಇಂಡೊನೇಶ್ಯ ಸರಕಾರವನ್ನು ವಿರೋಧಿಸುವಲ್ಲಿ ತತ್ಪರರಾಗಿದ್ದಾರೆ. ಈ ಹಿಂದೆ ಸ್ವಾತ್ರದಲ್ಲಿ ಇಂಡೋನೇಶಿಯಾ ವಿದ್ರೋಹಿಗಳಿಗೂ ಚೀನೀಯರು ಸಹಾಯ ಮಾಡಿದ್ದಾರೆಂದು ಹೇಳಲಾಗುತ್ತದೆ. ಚೀನೀಯ ವ್ಯಾಪಾರಕ್ಕೆ ಹಾಕಿದ ತಡೆಯು ಸುಖದವಾಗಿ ಪರಿಣಮಿಸಿಲ್ಲ. ಚೀನೀಯರು ಇಂಡೊನೇಶಿಯಾದ ಅರ್ಥವ್ಯವಸ್ಥೆಯನ್ನು ನಿಯಂತ್ರಿಸುವುದು ಮಾತ್ರವಲ್ಲದೇ ಅವರ ಮೇಲೆ ಬರಬಹುದಾದ ಅಪಾಯಕಾರಿ ಕರ್ಮಗಳನ್ನೂ ಕೈಗೊಳ್ಳುತಿದ್ದರು. ಕಳ್ಳಮಾರುಕಟ್ಟೆ, ಕೊಟ್ಟ ನೋಟು ತಯಾರಿಯಲ್ಲಿವರು ನುರಿತವರು.

ಅರ್ಥವ್ಯವಸ್ಥೆಯ ಸಂಬಂಧದಲ್ಲಿ ಮಾತ್ರವಲ್ಲ; ರಾಷ್ಟ್ರದ ರಾಜನೀತಿಯ ದೃಷ್ಟಿಯಿಂದಲೂ ಇಂಡೊನೇಶ್ಯ ಸರಕಾರವು ಚೀನೀಯರನ್ನು ವಿರೋಧಿಸುತ್ತದೆ. ಚೀನೀಯರು ಯಾವ ದೇಶದಲ್ಲಿಯೇ ವಾಸಿಸುತ್ತಿರಲಿ, ತಮ್ಮ ದೇಶನಿಷ್ಠೆಯನ್ನವರೆಂದೂ ಬಿಟ್ಟುಕೊಡುವವರಲ್ಲವೆಂಬುದು ಪಗಜ್ಜನಿತವಿದೆ. ಜ್ಯೂ ಜನಾಂಗದಂತೆಯೇ ಚೀನೀಯ ಜನಾಂಗವೂ ತಾವು ನೆಲಸಿರುವ ದೇಶದ ಸನ್ನಿವೇಶಕ್ಕೆ ಎಂದೂ ಒಗ್ಗಿಸಿಕೊಳ್ಳುವುದಿಲ್ಲ. ಅಲ್ಲಿನ ಸಾಮಾಜಿಕ ವ್ಯವಹಾರ, ರೀತಿ ರಿವಾಜು ಮೊದಲಾದುವುಗಳು ಅವರ ಮೇಲೆ ಪ್ರಭಾವ ಬೀರುವುದಿಲ್ಲ. ಕೆಲವು ದಿನ ಮೊದಲು ಚೀನೀಯ ವ್ಯಾಪಾರಿಗಳು ಇಂಡೊನೇಶ್ಯದಲ್ಲಿದ್ದುಕೊಂಡು ತಮ್ಮ ಚೀನೀಯ ಸರಕಾರವನ್ನೇ ಬೆಂಬಲಿಸುವ ಯೋಜನೆ ಕೈಕೊಂಡಿರುವುದರಿಂದ, ಈ ವಿಷಯ ಮತ್ತಷ್ಟು ಸ್ಪಷ್ಟವಾಗುವುದು. ಅವರ ವಿಶ್ವಾಸ ತಮ್ಮ ಸರಕಾರದಲ್ಲಿಲ್ಲ; ಚೀನೀಯ ಸರಕಾರದಲ್ಲಿದೆ.

ಇಷ್ಟನ್ನು ತಿಳಿದ ಮೇಲೆ ಚೀನಾ—ಇಂಡೊನೇಶ್ಯಗಳ ಸಂಬಂಧದ ಚಿತ್ರ ಎಳೆಯುವುದು ಸುಲಭ. ಭಾರತದಂತೆಯೇ ಚೀನದೊಡನೆ ಮೈತ್ರಿಯುತ ಜೀವನ ಬಾಳಲು ಇಂಡೊನೇಶಿಯವು ಬಹು ಪ್ರಯಾಸಪಟ್ಟಿತು. ಅಧ್ಯಕ್ಷ ಸುಕರ್ಣರು ಬಹು ಪ್ರಯತ್ನ ನಡೆಸಿದರು; ಸೇನೆಯಾದರೂ ತನಗೆ ಬೇಡವಾದರೂ ಅವರ ಧೋರಣೆಯನ್ನೇ ಬೆಂಬಲಿಸಿತು. ಇದಕ್ಕನುಗುಣವಾಗಿಯೇ ಡಾ। ಸುಬಾಂಡ್ರಿಯೊರವರು ಪೇಕಿಂಗ್‌ನಲ್ಲಿ ಮಾತುಕತೆ ನಡೆಸಿದರು.

ಈಗ ಗಾಳಿ ಬೀಸುವ ದಿಕ್ಕು ಬೇರೆಯಾಗಿದೆ. ಚೀನೀಯ ಧಾಳಿಯ ನಂತರ ಭಾರತಕ್ಕೆ ದೊರೆತಿರುವಂತಹ ಉತ್ತರವೇ ಇಂದೂ ಇಂಡೊನೇಶ್ಯಕ್ಕೆ ಸಿಕ್ಕಿದೆ. ಇಂಡೊನೇಶ್ಯದ ಪತ್ರಿಕೆಗಳು ಚೀನೀಯರ ವಿರುದ್ಧ ಹೊಗೆ ಕಾರುತ್ತಿವೆ; ಆದರಿಂದಾಗಿ ಅಲ್ಲಿರುವ ಚೀನೀಯರ ಮೇಲೆ ಜನತೆಯಲ್ಲಿ ಸಂದೇಹ ಬೆಳೆಯುತ್ತಿದೆ. ಅಧ್ಯಕ್ಷ ಸುಕರ್ಣರೂ ಈಗ ಧೈರ್ಯಗೆಟ್ಟು, ಕುಪಿತರಾಗಿದ್ದಾರೆಂದು ಹೇಳಲಾಗುತ್ತಿದೆ. ಅವರ ಮನೋಭಾವ ಪ್ರಧಾನಿ ನೆಹರೂರವರಿಗಿಂತ ಎಂದಿಗೂ ಬೇರೆಯಾಗಿರದು.

ಡಾ. ಸುಬಾಂಡ್ರಿಯೊರವರು ಪೇಕಿಂಗಿನಲ್ಲಿ ವಿವಾದಾತ್ಮಕವಾಗಿ ಮಾಡಿದ್ದ ಮತ್ತು ಸಾಕಷ್ಟು ವಿವಂಚನಾತ್ಮಕವಾದ ಮಾತುಕತೆಯನ್ನು ಎಂದಿಗೂ ಪ್ರಕಟಿಸದೆ ಅಭೂತಪೂರ್ವ ಧೈರ್ಯವನ್ನೂ ಸಹಿಷ್ಣುತೆಯನ್ನೂ ತೋರಿಸಿವೆ ಎಂಬುದನ್ನು ಅಲ್ಲಗಳೆಯುವುದು ಅಸಾಧ್ಯ. ಅವರು ಸೀಮೆಯನ್ನು ಮೀರಿ ಎಂದಿಗೂ ಮಾತಾಡಿರುವುದಿಲ್ಲ.

ಇಂಡೊನೇಶ್ಯದ ಈ ಹೊಡಕಿನಲ್ಲಿ ಚೀನದೊಡನೆ ಮಿತ್ರತೆಯನ್ನು ಶಾಶ್ವತಗೊಳಿಸುವುದರೊಡನೆ ಪರರಾಷ್ಟ್ರದ ಆಕ್ರಮಣವನ್ನು ಎಂದಿಗೂ ಸಹಿಸಿಕೊಳ್ಳಲು ಅದು ಸಿದ್ಧವಿಲ್ಲವೆಂಬುದು ಸುವೇದ್ಯ. ಪೇಕಿಂಗ್‌ನಲ್ಲಿ ಲಾಯ್‌ರೊಡನೆ ಆಡಿಕೊಂಡ ಮಾತುಗಳಿಂದ ಡಾ। ಸುಬಾಂಡ್ರಿಯೊರವರು ಆಶ್ಚರ್ಯಚಕಿತರಾದರೂ ತಮ್ಮ ಬುದ್ಧಿಯನ್ನು ಕಳಗೊಳ್ಳಲಿಲ್ಲ. ಇನ್ನು ಚೀನದೊಡನೆ ಸಂಧಾನದ ಮಾತುಕತೆಗಳು ಯಶಸ್ವಿಯಾಗುವುದೆಂದು ಇಂಡೊನೇಶ್ಯ ಸರಕಾರ ಭರವಸೆ ತಾಳಿರುವುದಿಲ್ಲ. ಆದು ಸಂಧಾನದ ಬಾಗಿಲನ್ನು ಸದಾ ತೆರೆದುಕೊಂಡೇ ಇದೆ. ತನ್ನ ರಾಷ್ಟ್ರಕೆ ಹಿತವಾಗುವಂತಹ ಆದರೆ. ಉಚಿತವಾಗದಂತೆ, ಸಂಧಾನ ನಡೆಸಲು ಅವರು ಸಿದ್ಧರಿದ್ದಾರೆ. ಹಿಂದೇಶಿಯಾದಲ್ಲಿರುವ ಚೀನೀಯರು ತಮ್ಮ ಮಾತೃ ಚೀನಕ್ಕೆ ಹಿಂದಿರುಗಿ ಹೋಗದೆ ಇಂಡೊನೇಶ್ಯ ಸರಕಾರಕ್ಕೆ ಸಂತೋಷಪಡಿಸದಿದ್ದರೂ ನೆಮ್ಮದಿಯಾಗುವುದು. ಕೆಲವು ಚೀನೀಯರು ರಾಷ್ಟ್ರ ಬಿಡಲೂ ತಯಾರಿ ನಡೆಸುತಿದ್ದಾರೆ. ಆದರೆ, ಹೀಗೆ ಇಂಡೊನೇಶ್ಯವನ್ನು ಬಿಟ್ಟ ಚೀನೀಯರು ಎಲ್ಲಿ ಹೋಗುತ್ತಾರೆ ಎಂಬುದಕ್ಕೆ ಸರಿಯಾದ ಉತ್ತರವಿಲ್ಲ. ಅವರು ಚೀನಕ್ಕೆ ಮರಳುವರೆ? ಅಥವಾ ಫಾರ್ಮೋಸಾಕ್ಕೆ ಹೋಗುವರೆ? ಇದರ ಉತ್ತರವನ್ನು ಭವಿಷ್ಯವೇ ಹೇಳಬೇಕಾಗಿದೆ.

ಚೀನವು ದಿನೇ ದಿನೇ ತನ್ನ ಮಿತ್ರರ ಸಂಖ್ಯೆಯನ್ನು ಕಡಿಮೆಮಾಡಿಕೊಳ್ಳುತ್ತಿದೆಯೆಂಬುದಕ್ಕೆ ಇತ್ತೀಚೆಗೆ ನಡೆದ ಹಲವಾರು ಘಟನೆಗಳೇ ಸಾಕ್ಷಿ. ಇಂಡೊನೇಶ್ಯದ ಸೈನಿಕ ಶಕ್ತಿ ಕುಸು ಕಡಿಮೆ ಯೇ ಎಂದು ಹೇಳಿದರೂ ರಾಷ್ಟ್ರದಲ್ಲಿ ರಾಷ್ಟ್ರೀಯ ಮನೋಭಾವನೆಯು ಭಾರತೀಯರಲ್ಲಿರುವಂತೆಯೇ ಅತ್ಯಧಿಕವಿದೆ. ಇಂಡೊನೇಶ್ಯದ ನಾಯಕರು ಈಗ ಚೀನದ 'ವಿಸ್ತಾರವಾದ'ವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ; ಅವರನ್ನೀಗ ಸಮಾಧಾನ ಸಂಧಾನವಾದದಿಂದ ಬಂಧಿಸುವುದು ಸುಲಭ ಸಾಧ್ಯವಲ್ಲ.

— —

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ
ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ
ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನೋಟೀಸು.

ಪೆರ್ಡೂರು ಅನಂತಪದ್ಮನಾಭ ದೇವರ ಭಂಡಾರದ ಬಾಬ್ತು ಬತ್ತ ಮುಡಿ 400—0 (ನಾಲ್ಕು ನೂರು, ಮುಡಿ ಬತ್ತ) ಬಗ್ಗೆ ಇದೇ ತಾರೀಕು 26-12—1959ನೇ ಶನಿವಾರ ಅಪರಾಹ್ನ ಗಂಟೆ 4-30ಕ್ಕೆ ಭಂಡಾರದ ಶರ್ತಗಳಿಗೆ ಒಳಪಟ್ಟು ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಪೇಕ್ಷೆ ಉಳ್ಳವರು ಸಮಯಕ್ಕೆ ಬಂದು ಏಲಂನಲ್ಲಿ ಭಾಗವಹಿಸಬಹುದು.

K. B. Shetty,
Executive Officer,
Sri Ananthapadmanabha
Temple, Perdur.

ಪೆರ್ಡೂರು, ತಾ. 13-12-59.

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.
ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ
ಇಲ್ಲಿದೆ ನೋಡಿರಿ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.
ಹೊಸ ಮುದ್ರಣ—ಸಾದಾ ಪ್ರತಿ 1:50. ಉತ್ತಮ ಪ್ರತಿ 2:00.
ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕನ್ನಡ.
ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

ಸೈನಿಕ ಶಿಕ್ಷಣ

ಶಿಸ್ತು ಬೆಳೆಯಲು ಸೈನಿಕ ಶಿಕ್ಷಣ ಅಗತ್ಯ

ಎನ್ ಸಿ ಸಿ ಶಿಬಿರಗಳಿಂದ ವಿದ್ಯಾರ್ಥಿ ಸೈನಿಕರಲ್ಲಿ ನವಚೇತನ ಹುಟ್ಟಿಸುವುದಲ್ಲದೆ ಅವರನ್ನು ಉತ್ತಮ ನಾಗರಿಕರನ್ನಾಗಿ ತರಬೇತಿ ಮಾಡಬಹುದು.

೧೯೪೮ರಲ್ಲಿ ನಮ್ಮ ಪಾರ್ಲಿಮೆಂಟ್, ರಾಷ್ಟ್ರೀಯ ವಿದ್ಯಾರ್ಥಿ ಸೈನಿಕ ದಳದ ರಚನೆ ಬಗ್ಗೆ ಅಸ್ತು ಎಂದಾಗ ಈ ದಳವು ಯಶಸ್ವಿಯಾಗುವುದೆಂದು ಅನೇಕರು ಎಣಿಸಿರಲಿಲ್ಲ. ಈ ದಳಕ್ಕೆ ಅಲ್ಪ ಆಯುಷ್ಯವನ್ನು ಕೋರಿದವರೆಷ್ಟೋ? ನಿರಾಶಾವಾದಿಗಳ ನಿರೀಕ್ಷೆಯನ್ನು ಧಿಕ್ಕರಿಸಿ ದಿನೇದಿನೇ ವೃದ್ಧಿಸುತ್ತಿರುವ 'ಎನ್‌ಸಿಸಿ' ಎಂದು ಚಿರಪರಿಚಿತವಾಗಿರುವ ರಾಷ್ಟ್ರೀಯ ವಿದ್ಯಾರ್ಥಿ ಸೈನಿಕ ದಳವು ಡಿಸೆಂಬರ್ ೬ಕ್ಕೆ ಅಸ್ತಿತ್ವಕ್ಕೆ ಬಂದು ೧೫ ವರ್ಷಗಳಾದುವು.

ಶಾಲಾ ಕಾಲೇಜುಗಳಲ್ಲಿ ಪಾಠಪ್ರವಚನಗಳಲ್ಲಿ ನಿರತರಾಗಿರುವ ಹಾಗೂ ಸೇನಾ ಶಿಕ್ಷಣದಲ್ಲಿ ಆಸಕ್ತಿಯನ್ನೊಂದಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಎನ್ ಸಿ ಸಿಯ ನಾನಾ ವಿಭಾಗಗಳನ್ನು ಸೇರುತ್ತಿರುವರು. ಇವರಿಗೆಲ್ಲಾ ಕೆಲವು ನಿರ್ದಿಷ್ಟ ಸಮಯಗಳಲ್ಲಿ ಪಾಠಪ್ರವಚನಗಳ ಜೊತೆಗೆ ಸೇನಾಶಿಕ್ಷಣವೂ ದೊರಕುತ್ತದೆ. ಇಷ್ಟಾದರೆ ಸಾಲದು. ವಿದ್ಯಾರ್ಥಿ ಸೈನಿಕರಿಗೆ ಏಕಪ್ರಕಾರವಾದ ತರಬೇತಿ ನೀಡಲು ಶಿಬಿರಗಳನ್ನು ಏರ್ಪಡಿಸುವುದು ಅತ್ಯಾವಶ್ಯಕವೆನಿಸುತ್ತದೆ. ಪ್ರತಿವರ್ಷವೂ ಎನ್ ಸಿ ಸಿ ಗೆ ಸಂಬಂಧಿಸಿದಂತೆ ದೇಶದ ನಾನಾ ಭಾಗಗಳಲ್ಲಿ ಶಿಬಿರಗಳು ಏರ್ಪಡುತ್ತಿವೆ.

ಅಖಿಲ ಭಾರತ ಶಿಬಿರಗಳನ್ನು ನಡೆಸುವ ಉದ್ದೇಶವಾದರೂ ಏನು? ದೇಶದ ವಿವಿಧ ಭಾಗಗಳಿಂದ ಬರುವ ವಿದ್ಯಾರ್ಥಿ ಸೈನಿಕರು ನಾನಾ ಭಾಷೆಗಳು, ನಾನಾ ಜಾತಿಗಳು, ನಾನಾ ರಾಜ್ಯಗಳಿಗೆ ಸಂಬಂಧಪಟ್ಟವರು. ಅವರು ಸಮಾಜದಲ್ಲಿ ವಿವಿಧ ಸ್ಥಾನಮಾನಗಳನ್ನು ಪಡೆದವರು. ಇವರಲ್ಲಿ ಬಡವರೂ ಬಲ್ಲಿದರೂ ಎಲ್ಲರೂ ಇರುವರು. ಭಿನ್ನ ಭಿನ್ನ ಅಭಿಪ್ರಾಯಗಳನ್ನು ತಾಳಿದವರು! ಭಿನ್ನಭಿನ್ನ ರೀತಿನೀತಿ, ನಡೆನುಡಿಗಳನ್ನು ಹೊಂದಿರುವವರು. ಇಂತಹ ವೈವಿಧ್ಯದಿಂದ ಕೂಡಿದ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ ೧೪ ದಿನಗಳ ವರೆಗೆ ಸಹಬಾಳ್ವೆಯ ಜೀವನ ನಡೆಸುವಂತೆ ಮಾಡುವುದರಿಂದ ಅವರ ಮನೋವಿಕಾಸವಾಗುತ್ತದೆ. ಅವರ ಆಚಾರ, ಸಂಪ್ರದಾಯಗಳಲ್ಲಿ ಕಂಡುಬರುವ ವೈಲಕ್ಷಣಗಳು ತಿದ್ದಲ್ಪಡುತ್ತವೆ. ಒಂದು ಸಣ್ಣ ಪ್ರಮಾಣದಲ್ಲಿ ಈ ಶಿಬಿರವು ಭಾರತದ ಪೌರತನದ ತರಬೇತಿಗೆ ಅತ್ಯುತ್ತಮ ಸ್ಥಳವಾಗಿರುತ್ತವೆ.

ಎನ್ ಸಿ ಸಿ ಯ ವಾಯುಸೇನಾ ವಿಭಾಗದಲ್ಲಿ ವಿದ್ಯಾರ್ಥಿ ಸೈನಿಕರಿಗೆ ಮೂರು ವರ್ಷಗಳ ಕಾಲ ತರಬೇತಿ ನೀಡಲಾಗುತ್ತದೆ. ಮೊದಲನೆಯ ವರ್ಷ ಅವರಿಗೆ ಡ್ರಿಲ್ ಮತ್ತು ಸೇನಾಶಿಕ್ಷಣಕ್ಕೆ ಸಂಬಂಧಿಸಿದ ತರಗತಿಯ ಉಪನ್ಯಾಸಗಳಿರುತ್ತವೆ. ವಾಯುಯಾನಕ್ಕೆ ಸಂಬಂಧಪಟ್ಟ ಪಾಠಗಳನ್ನು ಕಲಿಸಲಾಗುತ್ತದೆ. ಎರಡನೆಯ ವರ್ಷ ವಿದ್ಯಾರ್ಥಿ ಸೈನಿಕರು ಗ್ಲೈಡಿಂಗ್ ಯಂತ್ರಗಳನ್ನು ಚಲಿಸುವುದು ಹೇಗೆ ಮುಂತಾದುವನ್ನು ಕಲಿತುಕೊಳ್ಳುವರು. ಮೂರನೆಯ ವರ್ಷ ವಿದ್ಯಾರ್ಥಿ ಸೈನಿಕರು ವಿಮಾನಗಳನ್ನು ನಡೆಸುವ ತರಬೇತಿಯನ್ನು ಪಡೆಯುವರು. ಪ್ರತಿಯೊಬ್ಬ ವಿದ್ಯಾರ್ಥಿ ಸೈನಿಕನೂ ಏಕಾಂಗಿಯಾಗಿ ವಿಮಾನ ಚಾಲನೆಯ ತರಬೇತಿ ಪಡೆಯುತ್ತಾನೆ. 'ಎ' ಲೈಸನ್ಸ್ ಸಿಕ್ಕುವ ವರೆಗೆ ಆತ ತರಬೇತಿ ಪಡೆಯುತ್ತಾನೆ. ವಿಮಾನ ಚಾಲನೆಯಲ್ಲಿ ವಿಶೇಷ ಅಭಿರುಚಿ ಇರುವಂತಹವರಿಗೆ ನಾಲ್ಕನೆಯ ವರ್ಷವೂ ತರಬೇತಿಕೊಡಲಾಗುತ್ತದೆ.

ಶಿಬಿರ ಜೀವನ ಕಷ್ಟತಮವಾದುದು. ಆದರೆ ಕಠಿಣತರದ ಜೀವನದ ಮಧ್ಯೆ ಮನರಂಜನೆಗೂ ಅವಕಾಶವಿರುತ್ತದೆ.

ಪ್ರಾತಃಕಾಲ ೫ ಗಂಟೆಗೆ ಕಹಳೆಯ ಕೂಗು ಕೇಳಿದಕೂಡಲೆ ವಿದ್ಯಾರ್ಥಿ ಸೈನಿಕರು ಎದ್ದು ಅಂಗಸಾಧನೆಗಾಗಿ ಸಿದ್ಧಗೊಳ್ಳುವರು. ಪ್ರಾತಃಕಾಲ ೬ರಿಂದ ೬-೩೦ ಗಂಟೆವರೆಗೆ ಅವರು ಡ್ರಿಲ್ ಮಾಡುವರು. ಅನಂತರ ಫಲಹಾರ ಮಾಡುವರು. ಪ್ರಾತಃಕಾಲ ೮ರಿಂದ ೯ ಗಂಟೆವರೆಗೆ ಅವರು ಬಂದೂಕನ್ನು ಹಿಡಿದು ಡ್ರಿಲ್ ಮಾಡುವರು. ಪ್ರಾತಃಕಾಲ ೯-೩೦ರಿಂದ ಮಧ್ಯಾಹ್ನ ೧ ಗಂಟೆಯ ವರೆಗೆ ವಾಯುಯಾನಕ್ಕೆ ಸಂಬಂಧಪಟ್ಟಂತೆ ಉಪನ್ಯಾಸಗಳಿರುತ್ತವೆ. ಅದೇ ಸಮಯದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿ ಸೈನಿಕರು ಮಾದರಿ ವಿಮಾನಗಳನ್ನು ನಿರ್ಮಿಸುವ ಕಾರ್ಯದಲ್ಲಿ ತರಬೇತಿ ಪಡೆಯುವರು. ಶಿಬಿರವಾಸಿ ವಿದ್ಯಾರ್ಥಿ ಸೈನಿಕರಿಗೆ ಬೇರೆ ಯಾವ ರೀತಿಯ ಆಲೋಚನೆಗೂ ಅವಕಾಶವೇ ಇಲ್ಲ. ಅವರಿಗೆ ಹೆಚ್ಚು ಕಡಿಮೆ ಬಿಡುವೆಂಬುದೇ ಇರುವುದಿಲ್ಲ. ಆದಾಗ್ಯೂ ಪ್ರತಿದಿನವೂ ನವಿನೆನಪುಗಳ ದಿನವೆಂಬುದರಲ್ಲಿ ಸಂದೇಹವೇ ಇಲ್ಲ.

ವಿರಾಮ ಹಾಗೂ ಮನರಂಜನೆಗೂ ಸಾಕಷ್ಟು ಕಾಲಾವಕಾಶವಿರುತ್ತದೆ. ಮಧ್ಯಾಹ್ನ ೨ರಿಂದ ೪-೩೦ ಗಂಟೆಯವರೆಗೆ ವಿದ್ಯಾರ್ಥಿ ಸೈನಿಕರು ವಿಶ್ರಮಿಸಿಕೊಳ್ಳುವರು ಅಥವಾ ತಮ್ಮ ತಮ್ಮ ಬಂಧುಮಿತ್ರರಿಗೆ ಮಾತಾಪಿತೃಗಳಿಗೆ ಪತ್ರ ಬರೆಯುವವರು ಅಥವಾ ಪುಸ್ತಕಗಳನ್ನು ಓದುವರು ಅಥವಾ ಮಿತ್ರರೊಂದಿಗೆ ಹರಟೆ ಹೊಡೆಯುವರು. ವಿದ್ಯಾರ್ಥಿ ಸೈನಿಕರು ಮತ್ತು ಅಧಿಕಾರಿಗಳಿಗಾಗಿ ಪ್ರತ್ಯೇಕವಾದ ವಸತಿ ಮತ್ತು ಭೋಜನ ವ್ಯವಸ್ಥೆ ಇರುತ್ತದೆ.

ಈ ಶಿಬಿರದಲ್ಲಿನ ಭೋಜನ ವ್ಯವಸ್ಥೆ ಸಹ ವಿನೂತನವಾದುದು. ದಕ್ಷಿಣ ಭಾರತದ ಅನ್ನಸಾರು, ದೋಸೆ, ಉತ್ತರ ಭಾರತದ ಚಪಾತಿ ಪಲ್ಯ, ಬಂಗಾಳದ ರಸಗುಲ್ಲಾ ಹೀಗೆ ವಿಧವಿಧವಾದ ಆಹಾರ ಭುಜಿಸುವ ಅಭ್ಯಾಸವಿಟ್ಟುಕೊಂಡಿರುವ ವಿದ್ಯಾರ್ಥಿ ಸೈನಿಕರು ಮತ್ತು ಅಧಿಕಾರಿಗಳು ಶಿಬಿರದಲ್ಲಿ ಒಂದೇ ವಿಧವಾದ ಆಹಾರವನ್ನು ಸ್ವೀಕರಿಸಬೇಕಾಗುವುದು ಒಂದು ವಿಶೇಷ.

ರಾತ್ರಿ ಭೋಜನಾನಂತರ ೮ರಿಂದ ೯ ಗಂಟೆಯ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಚಲಚ್ಚಿತ್ರ ಪ್ರದರ್ಶನಗಳು ಮತ್ತು ವಿವಿಧ ವಿನೋದಾವಳಿ ಕಾರ್ಯಕ್ರಮಗಳು ನಡೆಯುತ್ತವೆ. ರಾತ್ರಿ ೧೦ ಗಂಟೆಗೆ ಮತ್ತೊಮ್ಮೆ ತುತ್ತೂರಿಯ ಕೂಗು ಕೇಳಿಸಿದೊಡನೆಯೆ ದೀಪಗಳು ಆರುವುವು. ದಿನವೆಲ್ಲ ದುಡಿದ ವಿದ್ಯಾರ್ಥಿಗಳು ಮಲಗುವರು.

ಇದು ಎನ್.ಸಿ.ಸಿ. ಶಿಬಿರದ ಒಂದು ದಿನ ಕಾರ್ಯಕ್ರಮವೆನ್ನಬಹುದು.

ಶಿಬಿರವಾಸದ ಬಹುಮುಖ್ಯ ದಿವದಂದು ಪಾಸಿಂಗ್ ಔಟ್ ಪೆರೇಡ್ ನಡೆಯುತ್ತದೆ. ಹಿಂದಿನದಿನ ಶಿಬಿರಾಗ್ನಿಯನ್ನು ಹೊತ್ತಿಸಿ ಆ ರಾತ್ರಿ ಶಿಬಿರವಾಸಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ಶಿಬಿರಾಗ್ನಿ ಮುಂದೆ ನಡೆಯುವ ವಿವಿಧ ವಿನೋದಾವಳಿ ಕಾರ್ಯಕ್ರಮ ಅತ್ಯಾಕರ್ಷಕವಾಗಿರುತ್ತವೆ ಮತ್ತು ಅವು ಚಿರಕಾಲ ಮನಸ್ಸಿನಲ್ಲಿ ನಿಂತಿರುತ್ತದೆ.

ಶಿಬಿರದಲ್ಲಿ ವಿದ್ಯಾರ್ಥಿ ಸೈನಿಕರಿಗೆ ಇತ್ತೀಚಿನ ಮಾದರಿಯ ವಿಮಾನಗಳ 'ಮಾದರಿ'ಗಳನ್ನು ನಿರ್ಮಿಸುವ ಬಗ್ಗೆ ಸೂಕ್ತವಾದ ಮಾರ್ಗದರ್ಶನವೀಯಲು ಶಿಕ್ಷಕರಿರುವರು. ವಿದ್ಯಾರ್ಥಿಗಳು ಇತ್ತೀಚಿನ ಹೆಲಿಕಾಪ್ಟರ್‌ಗಳು, ಜೂವರ್ ಕ್ರಾಫ್ಟ್‌ಗಳು, ರೇಡಿಯೋ ನಿಯಂತ್ರಿತ ವಿಮಾನಗಳ ಮಾದರಿಗಳನ್ನು ಯಶಸ್ವಿಯಾಗಿ ತಯಾರಿಸಿರುವರು. ಮಾದರಿ ವಿಮಾನಗಳ ವಾಯುಯಾನ ಪ್ರದರ್ಶನಗಳನ್ನು ನೋಡುವುದೇ ಆನಂದವೆನ್ನಿಸುತ್ತದೆ. ಲೋಕಾಂಚಕಾರಿಯೂ ಹೌದು. ಏಕೆಂದರೆ ವಿದ್ಯಾರ್ಥಿಗಳು ತಾವು ಕಷ್ಟಪಟ್ಟು ನಿರ್ಮಿಸಿದ ವಿಮಾನ ಆಕಾಶದಿಂದ ಭೂಮಿಯತ್ತ ರಭಸದಿಂದ ಬರುತ್ತಿರುವಾಗ, ವಿಮಾನ ಉಳಿಯುವ ಅವಕಾಶವೇ ಇದ್ದಂತೆ ಕಾಣುವುದಿಲ್ಲ, ತನ್ನ ಹಸ್ತಚಳಕದಿಂದ ಭೂಮಿಯತ್ತ ರಭಸದಿಂದ ಬರುವ ವಿಮಾನವನ್ನು ಅನಾಹುತದಿಂದ ಪಾರುಮಾಡಬಹುದು. ಇಷ್ಟೇ ಅಲ್ಲ. ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಓದುವ ವಿಮಾನ ಅಪಘಾತಗಳು ಹೇಗೆ ಸಂಭವಿಸುತ್ತವೆ ಎಂಬುದನ್ನೂ ಅವುಗಳನ್ನು ತಪ್ಪಿಸಲು ಸಾಧ್ಯವಿರುತ್ತದೆ ಎಂಬುದನ್ನೂ ವಿದ್ಯಾರ್ಥಿ ಸೈನಿಕನು ಕಣ್ಣಾರೆ ನೋಡುವ ತಿಳಿದುಕೊಳ್ಳುವ ಅವಕಾಶವೂ ಇರುತ್ತದೆ.

ಹಣಕಾಸಿನ ಮುಗ್ಗಟ್ಟಿನಿಂದ ದೇಶದ ಪ್ರತಿ ಶಾಲಾ ಕಾಲೇಜುಗಳಿಗೆ ವ್ಯಾಪಕವಾಗದೇ ಇರುವ ಎನ್. ಸಿ. ಸಿ.ಯನ್ನು ಆದಷ್ಟು ಜಾಗ್ರತೆಯಾಗಿ ಎಲ್ಲ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸುವುದು ಅಗತ್ಯವೆಂದು ಅನೇಕ ಶಿಬಿರದ ಅಧ್ಯಾಪಕ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಈ ದಳವನ್ನು ಸೇರುವುದರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪರಿವರ್ತನೆಗೊಂಡು ಶಿಸ್ತುಪೂರ್ಣ ಪ್ರಜೆಗಳೇ ಆಗುವರಲ್ಲದೆ ಉಪಯುಕ್ತರೂ ಆಗುವರೆಂದು ಅವರು ತಮ್ಮ ಅನುಭವದಿಂದ ಹೇಳುತ್ತಾರೆ. ಇಂದು ಶಿಕ್ಷಣ ಸಂಸ್ಥೆಗಳಲ್ಲಿ ಕಾಣ ಬರುತ್ತಿರುವ ಅಶಿಸ್ತು ವಾತಾವರಣವು ವಿದ್ಯಾರ್ಥಿಗಳೆಲ್ಲರೂ ಎನ್. ಸಿ. ಸಿ.ಯಲ್ಲಿ ಸೇನಾ ಶಿಕ್ಷಣ ಪಡೆಯುವುದರಿಂದ ಮಾಯವಾಗುವುದೆಂದೂ ಅಧ್ಯಾಪಕರು ಹೇಳುತ್ತಾರೆ.

— —

ಶಬ್ದ ಚಿತ್ರ

(೩ನೇ ಪುಟದಿಂದ)

ಕೊಡುವುದು, ವಿವಿಧ ವರ್ಗದ ಕಲಾವಿದರಿಗೆ ಸನ್ಮಾನವೀಯುವುದು, ವ್ಯಾಪಾರ ವಾಣಿಜ್ಯಗಳನ್ನು ಬೆಳೆಸಲು ಪ್ರೋತ್ಸಾಹಿಸುವುದು, ಉತ್ತಮವಾದ ಫಸಲನ್ನು ತರುವಂತೆ ಕೃಷಿಕರನ್ನು ಉತ್ತೇಜಿಸುವುದು, ಅನ್ಯಾಯಗೈದವರನ್ನು ದಂಡಿಸಿ, ನಾಗರಿಕರಲ್ಲಿ ಭದ್ರತೆಯ ಭಾವನೆಯನ್ನು ಹುಟ್ಟಿಸುವುದು, ಸರ್ವವಿಧದಲ್ಲಿಯೂ ಜನರ ಮನರಂಜನೆಯಾಗುವಂತೆ ಜನಹಿತ ಕಾರ್ಯಗಳಲ್ಲಿಯೇ ತತ್ಪರರಾಗಿ ಅವನ್ನು ಯೋಗ್ಯರೀತಿಯಲ್ಲಿ ನಿರ್ವಹಿಸುವುದು. ನಾಗರಿಕರ ಮಾನರಕ್ಷಣೆ, ಶತ್ರುಗಳನ್ನು ಎದುರಿಸಿ ಜಯಶೀಲರಾಗಿ ನಾಗರಿಕರ ಜೀವಸೊತ್ತುಗಳ ರಕ್ಷಣೆ ಮಾಡುವುದು ಎಲ್ಲವೂ ಈ ಶಾಸಕರ ಕರ್ತವ್ಯವಾಗಿದೆ.

ಆದರೆ, ಈ ಶಾಸಕರೇ ಅರಾಜಕ ರಾಷ್ಟ್ರದ ದುಸ್ಥಿತಿಗೆ ಇಳಿದು ಬಿಟ್ಟರೆ, ಅವರಿಂದ ಪ್ರತಿಪಾಲಿತವಾಗಬೇಕಾಗಿರುವ ಪ್ರಜಾಜನರು ಮೊರೆಯನ್ನು ಯಾರಲ್ಲಿ ಹೇಳಿಕೊಳ್ಳಬೇಕು?

— ಗೋರಾ



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & CO. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಕಥಾವಿಹಾರ

(೨ನೇ ಪುಟದಿಂದ)

ಅವಳ ಪಕ್ಕದಲ್ಲೇ ಸದಾ ಇದ್ದಿದ್ದಳು

'ಈಗ ಏನಾಗುತ್ತಿದೆ ಮಗೂ.."

—ಎಂದು ಆಗಾಗ ಗಾಬರಿಯಿಂದ ಕೇಳುತ್ತಿದ್ದ ತಾಯಿಯ ಮಾತು ಈಗಲೂ ಅವಳಲ್ಲಿ ಪ್ರತಿಧ್ವನಿಸುತಿತ್ತು.

"ಅಮ್ಮಾ, ನನಗೇನೂ ಆಗದು. ನೀವೇನೂ ಹೆದರಬೇಡಿ" ಎಂದು ಸ್ವಲ್ಪ ಪ್ರಜ್ಞೆ ಬಂದಾಗ ಆಕೆ ನುಡಿದಿದ್ದಳು. ಆಗಲೇ ಅವಳಿಗೆ ತನ್ನ ಬಗೆಗೆ ತಾಯಿಗೆ ಅಪಾರವಾದ ಪ್ರೀತಿ ಇದೆ ಎಂದು ಅರಿವಾಗಿತ್ತು.

ಆದರೆ ತನ್ನ ಸಮವಯಸ್ಕನಾದ ಆ ಭಿಕ್ಷುಕನಿಗೂ ಈ ರೀತಿಯ ಸೌಜನ್ಯವನ್ನು ತೋರ್ಪಡಿಸುವವರಿರುವರೇ ಎಂಬುದು ವಿಮಲೆಗೆ ತಿಳಿಯದಾಯಿತು. ಅವನ ಊಟ ಉಪಚಾರದ ಕುರಿತು ಚಿಂತನೆಗೈವವರಿರುವರೇ? ಪ್ರಾಯಶಃ ಇರಲಿಕ್ಕಿಲ್ಲ. ಅತ್ತಿತ್ತ ತಿರುಗಾಡುವ ದಾರಿಹೋಕರು ಏನಾದರೂ ತಟ್ಟೆಗೆ ಎಸೆದರೆ ಅದರಿಂದಲೇ ಅವನು ಹೊಟ್ಟೆ ಹೊರೆಯಬೇಕಿತ್ತು! ಉರಿಯುವ ಬಿಸಿಲಿನ ಝಳಕ್ಕೂ, ರಾತ್ರಿಯ ಮೈ ಕೊರೆಯುವ ಚಳಿಗೂ ಮರದ ಬುಡವೇ ಅವನ ಬಿಡಾರವಾಗಿದ್ದಿರಬೇಕು. ಅವನಿಗೆ ತನ್ನವರೆಂಬವರು ಈ ಜಗತ್ತಿನಲ್ಲಿ ಯಾರೂ ಇಲ್ಲವೆಂದು ಕಾಣುತ್ತದೆ.... ಒಂದು ವೇಳೆ ಆತ ತನ್ನ ಸಹೋದರನಾಗಿ ಜನಿಸಿದ್ದರೆ...?

ಈ ರೀತಿಯ ಬನ್ನ ಪಡಬೇಕಿತ್ತೇ? ಇಲ್ಲ..ಎಂದಿಗೂ ಇಲ್ಲ. ಈ ದುರ್ಧರ ಪ್ರಸಂಗದಿಂದ ಪಾರಾಗಬಹುದಿತ್ತು!

ಇಷ್ಟರಲ್ಲಿಯೇ ಆ ಭಿಕ್ಷುಕನಿಗಾಗಿ ವಿಮಲೆಯ ಅಂತಃಕರಣವು ಉಕ್ಕಿ ಹರಿಯ ತೊಡಗಿತ್ತು. ತನ್ನಿಂದ ಏನಾದರೂ ಅವನಿಗೆ ಸಹಾಯ ಸಿಗುವಂತಾಗಬೇಕು. ತಾನೂ ಕೈಲಾದ ಮಟ್ಟಿಗೆ ದಾನಕೊಡಬೇಕೆಂದು ಆ ಮುಗ್ಧ ಮನಸ್ಸಿಗೆ ಹೊಳೆದಿತ್ತು. ಯಾವ ರೀತಿಯ ದಾನ?

ವಿಮಲೆಯ ಕೈಯಲ್ಲಿ ಸಾಮಾನಿಗೆಂದು ತಂದ ಎಂಟಾಣೆ ನಾಣ್ಯವೊಂದಲ್ಲದೆ ಬೇರೇನೂ ಇರಲಿಲ್ಲ. ಅದನ್ನೇ ತಟ್ಟೆಗೆಸೆದು ಆತ್ಮ ಸಮಾಧಾನ ಮಾಡಿಕೊಳ್ಳಬಹುದು. ಮನೆಯಲ್ಲಿ ಇದರಿಂದ ಗಬಹುದಾದ ಪರಿಣಾಮಗಳನ್ನೆಣಿಸಿದಾಗ ಮಾತ್ರ ಅವಳ ಮನವು ಹಿಂಜರಿದಿತ್ತು ..ಅಳುಕಿತ್ತು.

"ಅಮ್ಮಾ, ಭಿಕ್ಷೆ ನೀಡು ತಾಯೀ' ಎಂಬ ಧ್ವನಿ ಪುನಃ ಕೇಳಿಸಿದಾಗ ವಿಮಲೆಯು ಅಳುಕನ್ನು ತೊರೆದು ಭಿಕ್ಷುಕನ ಸಮೀಪಕ್ಕೆ ಸರಿದಿದ್ದಳು. ದೃಢ ನಿರ್ಧಾರವು ಆಕೆಯಲ್ಲಿ ಮೊಳೆತಿತ್ತು. ಯಾರೋ ತನ್ನೆಡೆಗೆ ಬರುತ್ತಿರುವರೆಂಬುದನ್ನು ಹೆಜ್ಜೆಯ ಧ್ವನಿಯಿಂದರಿತ ಭಿಕ್ಷುಕನ ಮುಖದಲ್ಲಿ ಸಣ್ಣ ನಗುವಿನ ಕಿರಣವೊಂದು ಮಿಂಚಿತು. ವಿಮಲೆ ತಟ್ಟೆಯನ್ನು ಕಂಡಳು. ಅದರಲ್ಲಿ ಕೆಲವು ಸವೆದ ನಾಣ್ಯಗಳು ಮಾತ್ರ ಇದ್ದುವು. ಅವಳು ತನ್ನ ಕೈಯಲ್ಲಿದ್ದ ಎಂಟಾಣೆ ನಾಣ್ಯವನ್ನು ಆ ತಟ್ಟೆಗೆ ಹಾಕಿಬಿಟ್ಟಳು.

"ಟಣ್" ಎಂದು ಶಬ್ದವಾಯಿತು. ಆಗಲೇ ತೃಪ್ತಿಯ ಭಾವನೆಯಿಂದ ಗೆದ್ದವಳಂತೆ ವಿಮಲೆಯ ಮೈ ಪುಳಕಿತವಾಗಿತ್ತು.

ತಟ್ಟೆಗೆ ಹಣ ಬಿದ್ದುದು ಗೊತ್ತಾದ ಕೂಡಲೇ ಭಿಕ್ಷುಕನಿಗೆ ಅಪಾರವಾದ ಹರ್ಷವಾಗಿತ್ತು. ಆದರೆ ಎಂಟಾಣೆಯ ಪಾವಲಿಯು ತನಗೆ ಇಂದು ದಾನವಾಗಿ ದೊರೆತಿದೆಂಬುದನ್ನು ಅವನು ಖಂಡಿತವಾಗಿ ಊಹಿಸಲಾರ. ನೋಡುವ ಭಾಗ್ಯವಂತೂ ಮೊದಲೇ ಇಲ್ಲವಾಗಿತ್ತು.

"ದೇವರು ನಿಮಗೆ ಮಂಗಳವನ್ನುಂಟು ಮಾಡಲಿ"—ಎಂದು ಭಿಕ್ಷುಕನು ಕೈಜೋಡಿಸಿ ಬೇಡಿಕೊಂಡ. ಇದನ್ನು ಮನಃಪೂರ್ವಕವಾಗಿ ಸ್ವೀಕರಿಸಿದ್ದ ವಿಮಲೆಯು ಇನ್ನು ಪೇಟೆಯುತ್ತ ಹೋಗುವುದರಿಂದ ಫಲವಿಲ್ಲವೆಂದು ಬಗೆಯುತ್ತಾ ಮನೆಯ ದಾರಿ ಹಿಡಿದಿದ್ದಳು. ಸಾಮಾನು ತರಲು ತಾನೊಯ್ದ ಹಣ ಭಿಕ್ಷುಕನ ತಟ್ಟೆಯಲ್ಲಾಯಿತು. ಮನೆಯಲ್ಲಿ ಏನು ಹೇಳುವುದೆಂದು ನೆನೆದು ಸಾಕಾಗಿತ್ತು!

o o

ಇಷ್ಟೆಲ್ಲ ವಿಚಾರ ತರಂಗಗಳು ಒಂದರ ಹಿಂದೆ ಒಂದು ಏಳುತ್ತಿದ್ದಾಗ ವಿಮಲೆಯು ಬಹುದೂರ ನಡೆದು ಬಂದಿದ್ದಳು. ಹಣ ಕೊಂಡುಹೋಗದೆ ತಂದೆಗೆ ಮುಖ ತೋರಿಸುವುದು ಸಾಧ್ಯವಿಲ್ಲವಾಗಿತ್ತು.

ಈಗ ಏನು ಮಾಡುವುದೆಂದು ಆಕೆಗೆ ತೋಚಲಿಲ್ಲ. ಭಿಕ್ಷುಕನ ತಟ್ಟೆಯಿಂದ ಆ ಹಣವನ್ನು ಪುನಃ ಎತ್ತಿಕೊಂಡರೆ ಹೇಗೆ? ಛಿ! ಅದು ಕೃತಘ್ನತೆಯ ಪರಮಾವಧಿಯಾದೀತು.. ಹಾಗೆಂದು ಬರಿಗೈಯಲ್ಲಿ ಮನೆಗೆ ಹೋದರೆ ತಂದೆಯ ರೌದ್ರಾವತಾರದ ದರ್ಶನ ಮಾಡಬೇಕಾದೀತು. ಇದನ್ನು ತಪ್ಪಿಸುವ ಬಗೆ ಹೇಗೆ?

ಅಂತೂ ಕೊನೆಗೆ ಭಿಕ್ಷುಕನ ತಟ್ಟೆಯಿಂದಲೇ ತಾನು ಹಾಕಿದ ಹಣವನ್ನು ತೆಗೆಯುವುದೆಂಬ ತೀರ್ಮಾನಕ್ಕೆ ಬಂದಳು. ತಂದೆಯ ಸಿಟ್ಟನ್ನು ಉಪಶಮನಗೊಳಿಸಲು ಇದಲ್ಲದೆ ಬೇರೆ ಉಪಾಯವಿದ್ದಿರಲಿಲ್ಲ. ಆದುದರಿಂದ ಭಿಕ್ಷುಕನೆಡೆಗೆ ವೇಗವಾಗಿ ಹೊರಟಳು. ಭಿಕ್ಷುಕನ ಮುಖ ಕಣ್ಣಿಗೆ ಬಿದ್ದ ಕೂಡಲೇ ತಾನವನಿಗೆ ದ್ರೋಹ ಬಗೆಯುತ್ತಿರುವೆನೆಂಬುದರ ಕಲ್ಪನೆ ಅವಳಿಗಾಯಿತು. ಆದರೆ ಈಗವಳು ನಿರುಪಾಯಳಾಗಿದ್ದಳು.

ವಿಮಲೆಯು ಭಿಕ್ಷುಕನ ತಟ್ಟೆಯ ಸಮೀಪಕ್ಕೆ ಬಂದಳು. ಪುನಃ ಯಾರೋ ತನ್ನ ಹತ್ತಿರ ಬರುತ್ತಿರುವರೆಂದು ಭಿಕ್ಷುಕನು ಆನಂದಭರಿತನಾದ. ಪಾಪ....! ವಿಮಲೆಯು ತಟ್ಟೆಯಿಂದ ಹಣ ತೆಗೆಯಲು ಬಂದಿರುವಳೆಂದು ಅವನಿಗೇನು ಗೊತ್ತು? ವಿಮಲೆ ಬಗ್ಗಿ ತಟ್ಟೆಯನ್ನು ನೋಡಿ ನಾಣ್ಯವನ್ನು ಅರಸತೊಡಗಿದಳು ... ಹಾ ... ಆ ಎಂಟಾಣೆಯ ನಾಣ್ಯ ಅಲ್ಲಿದ್ದಿರಲಿಲ್ಲ. ಅವಳು ಪರಮಾಶ್ಚರ್ಯಗೊಂಡಳು. ಅದು ಹೇಗೆ ಮಾಯವಾಯಿತೆಂದು ಗೊಂದಲಕ್ಕೀಡಾದಳು. ಅಷ್ಟು ಬೇಗನೆ ಭಿಕ್ಷುಕನು ವಿನಿಯೋಗಿಸಿರಲಿಕ್ಕಿಲ್ಲ. ಅವನು ಕುಳಿತುಕೊಂಡೇ ಇದ್ದನು. ಹಾಗಾದರೆ ಇದಾರ ಕೆಲಸ?

ತಾನು ಅಷ್ಟು ಹೆಮ್ಮೆಯಿಂದ ದಾನವಾಗಿತ್ತ ಹಣ ಕಾಣೆಯಾಗಿ ಭಿಕ್ಷುಕನಿಗೆ ನಿರಾಸೆಯಾಗಬೇಕಾಯಿತಲ್ಲಾ ಎಂದು ವಿಮಲೆಯು ತುಂಬಾ ಪಶ್ಚಾತ್ತಾಪಪಟ್ಟಳು. ಇನ್ನು ಅಲ್ಲಿ ನಿಲ್ಲುವುದು ಸರಿಯಲ್ಲವೆಂದು ಹೊರಟಳು.

ವ್ಯಗ್ರಚಿತ್ತಳಾಗಿ ಬರುತ್ತಿದ್ದಾಗ ಮಾರ್ಗದಲ್ಲಿ ಕೆಲವು ಮಕ್ಕಳು ತಮ್ಮೊಳಗೆ ಗಟ್ಟಿಯಾಗಿ ಮಾತನಾಡುವುದನ್ನು ಆಲಿಸಿದಳು. ಅವಳಿಗೆ ಆ ಮಾತುಕತೆಯನ್ನು ಕೇಳಬೇಕೆನಿಸಿತು.

'ಏ ..ಕಿಟ್ಟೂ, ಇವತ್ತು ನಿನಗೆ ಕಾಫಿ ತೆಗೆಸಿಕೊಡುತ್ತೇನೆ ಬಾರೊ...." ಎಂದು ಒಬ್ಬ ಹುಡುಗ ತನ್ನ ಗೆಳೆಯನನ್ನು ಕರೆಯುತ್ತಿದ್ದ.

"ಸುಮ್ಮನೆ ತಮಾಷೆ ಮಾಡಬೇಡ. ಹಣ ಎಲ್ಲಿಂದ ಸಿಕ್ಕಿತು?" ಎಂದ ಆ ಕೊಡುಗೆಯನ್ನು ನಂಬದೆ ಮಿತ್ರ ನುಡಿದ.

"ನೋಡು ಆ ಸಣ್ಣ ಮರದ ಬುಡದಲ್ಲಿ ಒಬ್ಬ ಭಿಕ್ಷುಕನಿದ್ದಾನಲ್ಲ....ಅವನ ತಟ್ಟೆಗೆ ಯಾರೋ ಪುಣ್ಯಾತ್ಮರು ಇಂದು ಎಂಟಾಣೆ ಹಾಕಿದ್ದರು. ಅದನ್ನು ಅವನಿಗೆ ತಿಳಿಯದಂತೆ ಲಪಟಾಯಿಸಿಬಿಟ್ಟೆ" ಎಂದು ತನ್ನ ಜಾಣ್ಮೆಯನ್ನು ಮೊದಲಿನಾತ ಪ್ರದರ್ಶಿಸಿದ.

"ಅದು ಅವನಿಗೆ ಗೊತ್ತಾಗಲಿಲ್ಲವೇ?"

"ನೋಡಲಿಕ್ಕೆ ಕಣ್ಣಿದ್ದರಲ್ಲವೇ ಗೊತ್ತಾಗುವುದು? ಬಾ. ಹೋಗೋಣ." ಎನ್ನುತ್ತಾ ಪೇಟೆಯ ಕಡೆಗೆ ಹೊರಟರು.

ತನ್ನ ದಾನವು ಪೋಲಿ ಮಕ್ಕಳ ಪಾಲಾಗಿ ನಿಷ್ಫಲಗೊಂಡಿತೆಂದು ವಿಮಲೆಗೆ ಬಹು ಖೇದವಾಯಿತು. ಅಲ್ಲದೆ ಆ ಭಿಕ್ಷುಕನ ಬಗೆಗೆ ಇದ್ದ ಸಹಾನುಭೂತಿ ಇಮ್ಮಡಿಯಾಯಿತು ಅವನ. ಕುರುಡನಾಗದೆ ಇರುತ್ತಿದ್ದರೆ ಹಾಗೆ ಹಣ ಕಳೆದುಕೊಳ್ಳುತ್ತಿದ್ದನೇ?

ಇನ್ನಾವ ಬಗೆಯೂ ತೋರದೆ ತಕೆ ಭಾರವಾದ ಮನಸ್ಸಿನಿಂದ ಮನೆಯ ಕಡೆಗೆ ಹೊರಟೇ ಬಿಟ್ಟಳು. ಯಾರೋ ಅವಳ ಕಿವಿಯ ಬಳಿಯಲ್ಲಿ 'ಅಮ್ಮಾ....ಭಿಕ್ಷೆ ನೀಡು ತಾಯೀ" ಎಂದು ಉಸುರಿದಂತೆ ಭಾಸವಾಯಿತು. ಕೂಡಲೇ ಆ ದೀನ ಭಿಕ್ಷುಕನ ನೆನಪು ಮರುಕಳಿಸಿ, ಅವಳ ಹೃದಯವನ್ನು ಕೂರಲಗಿನಿಂದ ತಿವಿದಂತಾಯಿತು. ಮನಸ್ಸಿನಲ್ಲಿ ವಿಪ್ಲವಕ್ಕಾರಂಭವಾಯಿತು.

ಮನದ ಈ ವಿಪ್ಲವವನ್ನು ಕ್ಷಣಕಾಲ ಮರೆಸಡಿಸುವ ಸಾಂತ್ವನಗೀತೆಯೋ ಎಂಬಂತೆ ದೂರದಲ್ಲಿ ನಾಯಿಯೊಂದು ವಿಕಾರ ಸ್ವರದಿಂದ ಬೊಗಳತೊಡಗಿತು....

—ಶ್ರೀ ಹೇಮನಾಥ ಶೆಟ್ಟಿ,
ಮುಂಡ್ಕೂರು.

ಕಾಡಿನ ಮರಗಳ ಏಲಂ.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಳ ಪಟ್ಟಿಗೆ ಒಪ್ಪಿದ ಕೆಳಗಣ ತಖ್ತೀಲು ಪ್ರಕಾರದ ಸ್ಥಳಗಳಲ್ಲಿರುವ ಕಾಡಿನ ಮರಗಳನ್ನು ತಾ 19-12-1959 ರಂದು ಬೆಳಿಗ್ಗೆ 8 ಘಂಟೆಯಿಂದ 5 ಘಂಟೆಯ ತನ್ಮಧ್ಯೆ ಕುಂದಾಪುರ ಟ್ರೆವಲರ್ಸ್ ಬಂಗ್ಲೆಯ ವಠಾರದಲ್ಲಿ H. R. & C. E. ಡಿಪಾರ್ಟ್‌ಮೆಂಟಿನ ಅಸಿಸ್ಟೆಂಟ್ ಕಮಿಶನರರ ಸಮಕ್ಷಮ ಏಲಂ ಮಾಡಲಾಗುವುದು. ಏಲಮಿನ ಶರ್ತಗಳ ಬಗ್ಗೆ ಎಕ್ಸಿಕ್ಯೂಟಿವ್ ಆಫೀಸರಿಗೆ ಬರೆದು ತಿಳಿಯಬಹುದು. ಸ್ಥಳ ಮತ್ತು ಮರಗಳ ವಿವರ:

ಕುಂದಾಪುರ ತಾಲೂಕಿನ ತಗ್ಗರ್ಸೆ ಗ್ರಾಮ

ಸ ನಂ.	ಸ ಡಿ.	ಮರಗಳ ಸಂಖ್ಯೆ
308 —	2 —	5
309 —	2, 4 —	54
310 —	2 —	10
311 — 312 —	2 1 —	13
154 —	2 —	1
	ಜುಮ್ಲಾ	83

(Sd.) B. Narayana Shetty,
Executive Officer.

In the Court of the District Munsiff of Kasaragod

R. E. P. No 582/1959
S. C. No. 566/1959

Between

Vithalji & Co. (Private Ltd.) Petitioners

and

K. M. Abdulla Kunhi . Respondent

To

Respondent K. M. Abdulla Kunhi, Cloth merchant, residing at Nekraje Parka, Nekraje village, Kasaragod Taluk.

Please take notice that the above execution petition filed against you stands posted to 21—12—1959 and that you are to appear before the court at 11 A. M. on that day. Failing which, the petition will be proceeded with exparte.

P. V. K. Nambudiri,
Advocate for Petitioners.

Kasaragod, D/ 9-12-1959.

NAVAYUGA
REGD. NO. M. 3619

UDIPI, THURSDAY
17-12-1959

LICENSE NO. 31
Licensed to Post without Prepayment

ಅನುಭವಾಮೃತ

ವಿಧವೆಯ ಮುಖ ನೋಡಬಾರದೆ?

ಅಂದು ನಾನು ವಿಧವೆಯ ಮುಖವನ್ನು ಎದ್ದವನೇ ಕಂಡುಬಿಟ್ಟೆ; ಆ ದಿನವೇ ಅದರ ಸತ್ಫಲವನ್ನೂ ಅನುಭವಿಸಿಯೇ ತೀರಿದೆ.

"ಬೆಳಗ್ಗೆ ಎದ್ದು ಒಳ್ಳೇ ಮುಖ ನೋಡು ಮಂಕೆ!" ಎಂದು ನನ್ನ ತಾಯಿ ಚಿಕ್ಕಂದಿನಲ್ಲಿ ಆಗಾಗ ಹೇಳುತಿದ್ದುದು ಜ್ಞಾಪಕಕ್ಕೆ ಬರುತ್ತದೆ. ಒಳ್ಳೆ ಮುಖವೆಂದರೆ ಸುಂದರ ಮುಖವೆಂದಲ್ಲ—ತೆಂಗಿನ ಮರ (ಕಲ್ಪವೃಕ್ಷ)ದ ತಲೆ, ದೇವರ ಫೋಟೋ ಇವುಗಳನ್ನು ಎದ್ದವರೆ ಪ್ರಪ್ರಥಮವಾಗಿ ನೋಡಿದಲ್ಲಿ ಆ ದಿನ ಸರ್ವ ಸುಖವಂತೆ! ಇವೆಲ್ಲ ಹಿಂದಿನವರ ರಿವಾಜುಗಳು!

ಇನ್ನು ವಿಧವೆ ಮುಖ, ನಾಯಿ ಮೋತಿ, ಕಾಗೆ ಮೋತಿ, (ಇನ್ನೂ ಕೆಲವಿವೆ) ಇವುಗಳನ್ನು ನೋಡಿದವರಿಗೆ ಆದಿನ ಏನಾದರೊಂದು ಅಪಶಕುನವಿದ್ದೇ ಇದೆ, ಎಂಬುದು ನಮ್ಮ ಹಿಂದಿನವರ ನಂಬುಗೆ. ಇದಕ್ಕೆ ನಿದರ್ಶನಗಳು ಇಲ್ಲದಿಲ್ಲ. ಈ ಹುರುಳಿಲ್ಲದ ಸಂಪ್ರದಾಯಗಳಿಗೆ ಶರಣಾಗುವಷ್ಟು ಅನಾಗರಿಕನಾನಲ್ಲವಾದರೂ, ಅವುಗಳನ್ನು ನಂಬಲೇ ಬೇಕಾದ ಕಾಲವೊಂದು ನನ್ನ ಜೀವನದಲ್ಲಿ ಸುಳಿದ್ಹೋಗಿತ್ತು! ಅದೇ......

........ಮಳೆಗಾಲ ಕೊಡೆ ಇಲ್ಲದೆ ಶಾಲೆಗೆ ಹೋಗುವುದೇ ದೊಡ್ಡ ಸಮಸ್ಯೆಯಾಗಿತ್ತು-ಇದ್ದೊಂದು ಕೊಡೆಯು ನಿನ್ನೆಯ ಗಾಳಿ ಮಳೆಗೆ ರಿಪ್ಯೇರ್ ಉಪಗ್ರಹದಂತಾಗಿತ್ತು! ಬೆಳಗ್ಗೆ ಶಾಲೆಗೆ ಹೋಗುವ ನನ್ನ ಅವಸ್ಥೆಯನ್ನು ನೆನೆದು ಮಲಗಿದೆ.

"ಏಳುಟ್ಟೊ...... ಗಂಟೆ ಏಳಾಯ್ತು ಶಾಲೆಗೆ ಹೊತ್ತಾಗುದಿಲ್ವೇನೊ? ..." ಎಂಬ ತಂದೆಯವರ ಗದ್ದರಿಕೆಗೆ, ದಢ, ಬಢ, ನೆದ್ದು, ಗಡಿಬಿಡಿಯಲ್ಲಿ ಕಣ್ಣುಜ್ಜುತ್ತಾ, ಹೊರಬಂದೆ, ದೇವರ ಫೋಟೋ ನೋಡೆಂದು ಅಮ್ಮ ಎಚ್ಚರಿಸಿದರು. "ಹೈಸ್ಕೂಲ್ ಮಗ ಬಂದಿದ್ನಾ?" ಎಂಬ ನಾರೀ ಸ್ವರವು ದೇವರ ಫೋಟೋಗೆ ಬಿಡುವ ದೃಷ್ಟಿಯನ್ನು ಅತ್ತ ಸೆಳೆಯಿತು! ರಕ್ತವರ್ಣದ ಸೀರೆ! .. ಬೋಳು ತಲೆಯ ವಿಕೃತಾಕರ್ಷಕ ಮೋರೆ!....ನಮ್ಮ ಭಾಷೆಯಲ್ಲಿ ಅಂಥವರನ್ನು 'ಅಪಾಯ ವರ್ಣ'! ವೆಂದು ಕರೆಯುತಿದ್ದೆವು ಅವರೇ ನಮ್ಮ ನೆರೆಮನೆ ಕಾವೇರಮ್ಮ. ಬೆಳಗ್ಗೆ ಎದ್ದು ಆ ಅಮ್ಮನನ್ನು ಕಣ್ತುಂಬ ಕಂಡೆ! ..

ಅವರು ಹೊರಟು ಹೋದ ನಂತರ "ಇಂದು ಶಾಲೆಗೆ ಹೋದಂಗೆ ಬಿಡು, ಯಾರಿಂದ ಏನಿದೆಯೋ ಬೆಪ್ಪ!" ಎಂದು ಮುಂದೊದಗಬಹುದಾದ ಇಷ್ಟಾನಿಷ್ಟಗಳನ್ನು ಅಮ್ಮ ಸವಿಸ್ತಾರವಾಗಿ ತಿಳಿಸಿದರು. ಆ ಚರ್ಚಾಕೂಟ, ಭಾಷಣ, ಉಪಾಧ್ಯಾಯರ ಬೆದರಿಕೆ ಇವುಗಳಿಲ್ಲದಿದ್ದರೆ ನಾನಂದು ಶಾಲೆಗೆ ಹೋಗುತ್ತಿರಲಿಲ್ಲ. ನನ್ನ ಪುಣ್ಯಕ್ಕೆ ಮಳೆ ನಿಂತಿತ್ತು. ಅಮ್ಮನ ಬೆದರಿಕೆಗಳನ್ನು ಲಕ್ಷಿಸದೆ ಶಾಲೆಗೆ ಹೊರಟೆ!

ನಮ್ಮ ಮನೆಯಿಂದ ಎರಡೂವರೆ ಮೈಲು ದೂರ ಹೋಗಿರಬಹುದು. ಬಗಲಲ್ಲಿ ಮೂರು ಅಡಿ ಉದ್ದದ ಪಂಚೆಯ ಕಟ್ಟಿರುವ ನಡುಹರೆಯದ ವ್ಯಕ್ತಿಯೊಂದು ನನ್ನನ್ನು ಹಿಂಬಾಲಿಸಿತು. ಸ್ವಲ್ಪ ಸಮಯದಲ್ಲೇ ಆತ ನನ್ನನ್ನು ಸಂಧಿಸಿ, "ಎಲ್ಲಿಗೆ ಹೋಗ್ತಿಯಪ್ಪಾ?" ಎಂದ. "ಶಾಲೆಗೆ" ಎಂದೆ ಚುಟುಕಾಗಿ "ಬಾರಕನ್ಯಾಪುರ ಶಾಲೆಗಾ?" ಎಂದು ಪುನಃ ಪ್ರಶ್ನಿಸಿದ "ಹೂ .!" ಎಂದು ಹೂಗುಟ್ಟಿದೆನಷ್ಟೆ. 'ನಾನೂ ಬರ್‍ತೇನೆ ಒಟ್ಟಿಗೆ ಹೋಗುವ ..' ಎಂದು ದಾರಿಯಲ್ಲಿ ಆಸ್ತಿ, ಮನೆಮಾರ, ತಂದೆ-ತಾಯಿ, ಬಂಧುಬಳಗ .... ಎಲ್ಲವನ್ನು ವಿಚಾರಿಸಿದ. ಆಗ ನನಗವನೊಬ್ಬ ಮಾತಿನ ಯಂತ್ರದಂತೆ ಕಾಣುತಿದ್ದ.

ನಾವಿಬ್ಬರೂ ಒಂದು ಮೈಲಿ ನಡೆದಿರಬಹುದು. 'ಆಗಲಿ..., ನಿಮ್ಮಿಂದ ನನಗೊಂದು ಉಪಕಾರವಾಗಬೇಕಲ್ಲ...... .' ಎಂದರಾಗವಾಗಿ, ತಲೆ ತುರಿಸಿಕೊಳ್ಳುತ್ತ ಥಕ್ಕನೆ 'ಉಪಕಾರ'ವೆಂಬ ಮಾತು ಕಿವಿಗೆ ಬಿದ್ದೊಡನೆ, ನಿಂತು ಆತನನ್ನೊಮ್ಮೆ ಆಪಾದ ಮಸ್ತಕವಾಗಿ. ಅನುಮಾನದಿಂದ ನೋಡಿದೆ. "ಮತ್ತೇನಲ್ಲ.... ಒಂದು ಒಳ್ಳೆ ಕೊಡೆ ಇದೆ, ತೆಗೆದುಕೊಳ್ತೀರಾ?...."—ಎಂದನನ್ನಲ್ಲಿ ಕೊಡೆ ಇಲ್ಲದಿರುವುದನ್ನು ತಿಳಿದ ಆತನು ನಮ್ರನಾಗಿ, ಕೊಡೆ ತೋರಿಸುತ್ತಾ, ನನ್ನ ಅನುಮಾನವನ್ನು ಹೋಗಲಾಡಿಸುತ್ತ! ಅವನ ಮಾತಿನ ಸತ್ಯಾಸತ್ಯತೆಯ ಶೋಧೆಯು ನನ್ನ ಬಾಲಬುದ್ಧಿಗೆ ಎಟಕಲಿಲ್ಲವೋ; ಅಥವಾ ಕೊಡೆ ಇಲ್ಲದ ನನಗೆ ಆ ಬಗ್ಗೆ ಹೆಚ್ಚಿಗೆ ವಿಚಾರಿಸಲು ಸಹನಾವಕಾಶವಿಲ್ಲವೋ—; ಹನ್ನೆರಡು ರೂಪಾಯಿ ಬೆಲೆ ಬಾಳುವ ಆ ಹೊಸ ಕೊಡೆಯನ್ನು ಕಂಡೊಡನೆ ನನ್ನಲ್ಲಿ ಕಿರು ಆಸೆ ಚಿಗುರಿತ್ತು!

ಬಹಳ ಸಮಯದ ವರೆಗೆ ನಮ್ಮಲ್ಲಿ ಚರ್ಚೆ ನಡೆಯಿತು. ಹಣದ ಅಗತ್ಯವುಳ್ಳ ಆತನು ಹದಿನೈದು ರೂಪಾಯಿಯಿಂದ, ಐದು ರೂಪಾಯಿಗೆ ಬಂದಿಳಿದ. ನನ್ನ ಯೋಜನೆ, ಆಶೆ, ಪ್ರಯತ್ನಗಳು, ಶಾಲೆಯ ಮಾಸಿಕ ವೇತನಕ್ಕಾಗಿ ತಂದೆಯವರು ಕೊಟ್ಟಿದ್ದ ಕೇವಲ ಮೂರು ರೂಪಾಯಿಯನ್ನೇ ಆಶ್ರಯಿಸಿತ್ತು! ಕೊನೆಗೆ 'ಬಸ್ರೂರ್ ಪಂಚಾಯ್ತಿ' ಮಾಡಿ, ಮೂರು ರೂಪಾಯಿಯನ್ನು ನಗದಿ ಕೊಡುವುದೆಂತಲೂ, ಉಳಿದ ಎಂಟು ಆಣೆಗಳನ್ನು ಆತನಿಗೆ ಹಿಂದಿನಿಂದ ಕಳಿಸುವುದೆಂತಲೂ ತೀರ್ಮಾನಿಸಿ, ಆತನಿಗೆ ನನ್ನ ವಿಳಾಸ ಕೊಟ್ಟೆ! ಯಾರೊ ಏನೊ, ಆತ ನನ್ನನ್ನೂ ನಂಬಿದ (?). ದುಡ್ಡು ಕಿಸೆ ಕಂಡೊಡನೆ ಆ ವ್ಯಕ್ತಿ ಮಾಯವಾಯಿತು! ಅವನೇನೆ ಆಗಲಿ, ಮಳೆಯಲ್ಲಿ ತೋಯ್ಸಿಕೊಂಡು, ತಂದೆಯವರಲ್ಲಿ ಬೈಸಿಕೊಳ್ಳಬೇಕಾಗಿದ್ದ ನನಗೆ ಪುಕ್ಕಟೆಯಂತಲೇ ಕೊಡೆ ಸಿಕ್ಕಿತು. 'ನಾನಿವತ್ತು ಯಾರದೋ ಒಳ್ಳೆಯವರ ಮುಖ ನೋಡಿದ್ದೆ' ಎಂದು ಯೋಚಿಸುವಾಗ ಬೆಳಗ್ಗೆ ಪ್ರಪ್ರಥಮ ದರ್ಶನವಿತ್ತ ಕಾವೇರಮ್ಮನ ನೆನಪಾಯ್ತು!

"ವಿಧವೆ ಮುಖ ನೋಡಬ್ಬೇರ್ದಂತೆ! ..." ಆ ತಾಯ ದರ್ಶನಲಾಭ!!... ನನಗೆ ಕೊಡೆ ಲಾಭ!!!.... ಆಸ್ಲಿದ ವೇದಾಂತ ಅನ್ನು ಅಂದರೆ ನಮ್ಮಮ್ಮ ಪಾಟ!.... ಹೀಗೆ ಏನೇನೊ ಯೋಚಿಸುತ್ತಾ, ಕಾವೇರಮ್ಮನನ್ನು ಸ್ಮರಿಸುತ್ತಾ ಮುಂಬರುವ ಪೇಟೆ ಸಾಬರ ಕಟ್ಟೆಗೆ ಬಂದೆ. ಪೇಟೆಯಿಂದ ನಾಲ್ಕು ಮಾರು ಹೋಗಿರಬಹುದು. ಹಿಂದಿನಿಂದ ಯಾರೋ ಬಂದು ಕೊಡೆಯನ್ನು ಎಳೆದರು ಗಡಿಬಿಡಿಯಿಂದ ಹಿಂದಿರುಗಿದೆ. "ದಾರಿಯಲ್ಲಿ ಹೋಗುವಾಗ ಕೊಡೆ ಕಸೀತಿ,... ತಲೆ ಸರಿ ಇದ್ಯೆನಾ? ...." ಎಂದೆ ಬಿಂಕದಿಂದ. "ನಿಲ್ಲಿ · ಹೇಳ್ತೀನಿ...." ಎಂದವ, ಕೊಡೆ ಮಾರ್ಕು ಮತ್ತು ನೂಲಿನಲ್ಲಿ ಚಿತ್ರಿಸಿದ್ದ ತನ್ನ ಹೆಸರನ್ನು ತೋರಿಸುತ್ತಾ, "ಏನೋ, ಯಾರಿಗೆ ತಲೆ ಸರಿ ಇಲ್ದಿರೋದು; ಕೊಡೆ ಕದ್ದು ಎದುರು ಬೀಳ್ತೀಯಾ? ನಿಲ್ಲಿಲ್ಲೆ, ಪೋಲಿಸ್ರಿಗೆ ತಿಳಿಸ್ತೀನಿ ನೋಡು...." ಎಂದು ಕಣ್ಣು ಕೆಂಪಗೆ ಮಾಡಿ ಗದ್ದರಿಸಿದ;—ಪೆಟ್ಟೊಂದನ್ನು ಕೊಡದೆ. ಆದೇ ಆಗ ಶಾಲೆ, ಮಾಸಿಕ ವೇತನ ಎಲ್ಲವನ್ನೂ ಮರೆತು, ಇದ್ದದನ್ನು ಎತ್ತಿಕೊಟ್ಟು, ಕೊಂಡು ಕೊಂಡ ಕೊಡೆಯ ಮೇಲಿನ ಅಧಿಕಾರದಿಂದ ಆತನಲ್ಲಿ ಜಗಳಕ್ಕೆ ನಿಂತೆ! . ಅಷ್ಟರಲ್ಲಿ ಪೇಟೆಯ ಹತ್ತಾರು ಜನರೂ ಸೇರಿದರು. "ಏಸ್ಸ..., ತಮ್ಮಾ ಈ ಕೊಡೆ ಎಲ್ಲಿ ಸಿಕ್ಕಿತಪ್ಪಾ; ಮೊನ್ನೆ ಶಿರಿಯಾರದಲ್ಲಿ ಕಳೆದ್ಹೋಗಿತ್ತು. ಇದರಲ್ಲಿ ಆತನ ಹೆಸರಿದೆ ನೋಡು, ವೃಥಾ ಜಗಳಕ್ಕೆ ನಿಂತರೆ ಜೋಕೆ!..." ಎಂದು ಕೊಡೆಯುಳ್ಳವ, ಕೊಡೆಯ ವಾರಸುದಾರನ ಹೆಸರು ತೋರಿಸಿದನೊಬ್ಬ. ನನಗೇನೂ ಮಾತು ಹೊರಡಲಿಲ್ಲ; ಕಣ್ಣಂಚಿನಲ್ಲಿ ನೀರು ಕಾಣಿಸಿಕೊಂಡಿತು.

"ಕದ್ದ ಕಳ್ಳನಾದರೂ, ಸುಭಗನಂತಿರಲು ಗೊತ್ತಿಲ್ಲ, ಪಾಪ....!" "ಹತ್ತುಸಲ ಕದ್ದವ ಒಮ್ಮೆ ಸಿಕ್ಕಿಬೀಳ್ತಾನೆ, ಅನ್ನೋದನ್ನ ನಿನ್ನ ಮಾಸ್ಟ್ರು ಕಲಿಸಲಿಲ್ವೆನೋ!....' ಹೀಗೆ ನಾನಾತರದ ಅಸಹ್ಯ ಮಾತುಗಳು ಒಬ್ಬೊಬ್ಬರ ಬಾಯಿಂದ ಹೊರಬಿದ್ದುವು' ಅವರಲ್ಲಿ ಒಬ್ಬನೂ ನನ್ನ ಯಥಾರ್ಥ ಕತೆಯನ್ನು ಕೇಳಲು ತಯಾರಿರಲಿಲ್ಲ. ನನ್ನ ಪ್ರೀತಿಯ ಕೊಡೆಯು ಆ ಪಾಪಿಗಳ ಪಾಲಿಗಾಯ್ತು. ಅವರ ಮಾತುಗಳನ್ನು ಕೇಳಲಾಗದೆ ಕಿವಿಮುಚ್ಚಿಕೊಂಡೆ ನನ್ನ ಬಾಯಿ ಕಟ್ಟಿತ್ತು. ಹೃದಯ ಕುದಿಯುತ್ತಿತ್ತು. ಕಲ ಮಿಂಚಿದುದಕ್ಕಾಗಿ ನನ್ನ ಕಣ್ಣುಗಳು ಬಿಸಿ ಹನಿಯನ್ನು ಸಾರಿದವು! ಅತ್ತೆ... ಬೇಕಷ್ಟು ಅತ್ತೆ!!.... ನನಗೊದಗಿದ ದುರ್ಗತಿಯ ಬಗ್ಗೆ ಯೋಚಿಸಿದೆ!.... ಕನಿಕರದಿಂದ ದೇವರಲ್ಲಿಯಾಚಿಸಿದೆ! 'ಸಾಯುವ ತನಕ ಆದೇಸ್ವರೂಪವನ್ನು ದೇವರು ಕೊಟ್ಟಿರಲೆ'-ದು, ಕಾವೇರಮ್ಮನನ್ನು ಶಪಿಸಿದೆ!' ಅಮ್ಮನ ಮುತ್ತಿನ ಮಾತುಗಳನ್ನು ನೆನೆದ, 'ಅಮ್ಮಾ,.. ನಿನ್ನ ಆಜ್ಞೆಯನ್ನು ಎಂದೂ ಮೀರುವುದಿಲ್ಲ'ವೆಂದು ದೃಢ ಶಪಥ ತೊಟ್ಟೆ!

ರೂಪಾಯಿ ಮೂರು ಕಳೆದ್ಹೋಯಿತೆಂದೆಣಿಸಿ, ಪುನಃ ತಂದೆಯವರಲ್ಲಿ ಕೇಳುವುದಕ್ಕೆ ಹೊಸ ಯೋಜನೆಗಳನ್ನು ಹುಡುಕುತ್ತಾ, ಶಾಲೆಯ ಕಡೆಗೆ ನಡೆದೆ.

'ಹಿಂದಿನವರದ್ದೆಲ್ಲಾ ಮೂಢ ನಂಬಿಕೆ!' ಎಂದು ಮೂಗು ಮುರಿಯುವ ನವನಾಗರಿಕ ನನಗೆ,—ಆ ನಂಬಿಕೆಗಳಲ್ಲಿಂದು ಇಂಬು ದೊರೆಯಿತು.

—ಶ್ರೀ "ನೀರಜ", ಮುತ್ಯಾಡಿ.

ತಿಂಗಳಿಗೆ ಐದು ರೂಪಾಯಿ

ಕನಿಷ್ಟ ಪಕ್ಷ ತಿಂಗಳಿಗೆ ಐದು ರೂಪಾಯಿಯನ್ನಾದರೂ ನೀವು ಉಳಿಸಬಲ್ಲಿರಾದರೆ, ಸಿಂಡಿಕೇಟ್ ಬೇಂಕಿನ ಕ್ಯುಮ್ಯುಲೇಟಿವ್ ಠೇವಣಾತಿಯ ವಿವರಗಳನ್ನು ತಿಳಿದುಕೊಳ್ಳುವುದು ಅಗತ್ಯ. ಶೇಕಡಾ 3·4ರಿಂದ 4·4ರ ವರೆಗೆ ಬಡ್ಡಿ ಸಂಪಾದಿಸುವ ಈ ಮಾಸಿಕ ಉಳಿತಾಯ ಯೋಜನೆ ಸುಲಭವೂ ಸರಳವೂ ಆಗಿದೆ. ಅಲ್ಲದೆ, ಅನೇಕಾನೇಕ ಮಂದಿಯ ಜೀವನದಲ್ಲಿ ಉಳಿತಾಯದ ಅಭ್ಯಾಸವನ್ನು ಬೆಳೆಸಲು ನೆರವಾಗಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc· No 466 N/50 date 2-12-1950 of the Director of public Instruction Madras·

Edited, Printed & Published by K. H. Shetty, at the Navayuga Press, Udipi, S. India.

ವಾ. ಚಂದಾ ರೂ. 5-75 ಬೆಲೆ: 13 ನ.ಪೈಸೆ

ನವ ಯುಗ

Vol. 39. No. 17.
ವರುಷ ೩೯. ವಾರ ೧೭.
24-12-1959

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಸೀಮಾ ವಿವಾದ

ಚೀನದ ಆಕ್ರಮಣ ನೀತಿ ಸುಸ್ಪಷ್ಟವಾಯಿತು

ಆಕ್ರಮಿತ ಪ್ರದೇಶಗಳಿಂದ ಹಿಂದೆ ಸರಿಯಿರಿ ಎಂದರೆ, ಚೀನವು ೩೩ ಸಾವಿರ ಚದರ ಮೈಲು ಭೂಭಾಗ ಕಳೆದುಕೊಳ್ಳುವುದೆಂದು ಲಾಯ್ ಹೇಳುತ್ತಾರೆ!

ಅಮೆರಿಕೆಯ ಅಧ್ಯಕ್ಷ ಐಸನ್ ಹಾವರರು ಭಾರತವನ್ನು ಸಂದರ್ಶಿಸಿದ ಕಾಲದಲ್ಲಿಯೇ ಭಾರತ– ಚೀನಾ ಸೀಮಾ ವಿವಾದದ ಕುರಿತಾಗಿ ಪ್ರಧಾನಿ ನೆಹರು ಅವರು ಚೀನೀಯ ಪ್ರಧಾನಿ ಚೌ ಎನ್ ಲಾಯ್ ಅವರಿಗೆ ನವಂಬರ ೧೬ರಂದು ಬರೆದಿದ್ದ ಪತ್ರಕ್ಕೆ ಉತ್ತರವು ಬರಬಹುದೆಂದು ನಿರೀಕ್ಷಿಸಲಾಗಿದ್ದರೂ ಅದೀಗ ತುಸು ತಡವಾಗಿಯೇ ಭಾರತ ಸರಕಾರದ ಕೈಸೇರಿದೆ. ಆದರೆ, ಈ ಉತ್ತರವು ಯಾವ ಪ್ರಶ್ನೆಯನ್ನೂ ಸಮಾಧಾನಕರವಾದ ರೀತಿಯಲ್ಲಿ ಉತ್ತರಿಸಿದಂತೆ ತೋರುವುದಿಲ್ಲ. ಚೀನಾ ಸರಕಾರದಿಂದ ಇದೇ ಮಾದರಿಯ ಉತ್ತರವು ಬಂದೀತೆಂದು ಮೊದಲೇ ಊಹಿಸಿಕೊಳ್ಳಲಾಗಿರುವುದರಿಂದ, ಯಾರೂ ವಿಸ್ಮಯವನ್ನು ವ್ಯಕ್ತಪಡಿಸದಿದ್ದರೂ, ಮೌನ ವ್ರತಾಚರಣೆಯನ್ನು ಮಾಡುವಂತಾಗಿದೆ.

ಉಭಯ ಪ್ರಧಾನಿಗಳು ದಶಂಬರ ೨೬ರಂದು ಚೀನದ ಯಾವುದೇ ಸ್ಥಳದಲ್ಲಿ ಅಥವಾ ರಂಗೂನದಲ್ಲಿ ಭೆಟ್ಟಿಯಾಗಿ ಮಾತುಕತೆಗಳನ್ನು ಮಾಡಬಹುದೆಂಬ ಒಂದು ವಿಷಯವನ್ನುಳಿದರೆ, ಉಳಿದ ಯಾವುದೇ ಪ್ರಸ್ತಾಪವು ಈ ವಿವಾದವನ್ನು ಶಾಂತಿಯಿಂದ ಬಗೆಹರಿಸುವುದಕ್ಕೆ ಸಹಾಯಕವಾಗುವುದೆಂದು ಹೇಳುವಂತಿಲ್ಲ. ಮುಖ್ಯವಾಗಿ, ಉಭಯ ದೇಶಗಳವರು ಇನ್ನೊಂದು ದೇಶವು ಹೇಳುವ ಸೀಮಾ ರೇಖೆಯ ಆಚೆ ಇರುವ ತನ್ನ ಸೈನ್ಯವನ್ನು ಹಿಂತೆಗೆದುಕೊಳ್ಳಬೇಕೆಂಬ ಪ್ರಧಾನಿ ನೆಹರು ಅವರ ಸೂಚನೆಯನ್ನು ಲಾಯ್ ಅವರು ತಿರಸ್ಕರಿಸಿದ್ದಾರೆ. ಈಗ ವಿವಾದಾಸ್ಪದವೆಂದು ಹೇಳುವ ಭಾಗಗಳೆಲ್ಲವೂ ಭಾರತೀಯ ಪ್ರದೇಶವೇ ಆಗಿರುವುದು ವಾಸ್ತವಿಕಾಂಶವಾಗಿರುವಾಗ, ಲಾಂಗ್ಜು, ನೇಫಾ, ಲಡಕ್ ಮೊದಲಾದ ಪ್ರದೇಶಗಳಲ್ಲಿ ಚೀನವು ಮಾಡಿರುವುದು ಆಕ್ರಮಣವೆಂದೂ ಅದನ್ನು ಹಿಂದೆಗೆದು ಮ್ಯಕಮಹೋನ ರೇಖೆಯಿಂದಾಚೆ ಚೀನ ತೆರಳಬೇಕೆಂದೂ ಭಾರತವು ಬಯಸಿದ್ದರೆ, ಹೀಗೆ ಮಾಡುವುದರಿಂದ ಚೀನವು ೩೩ ಸಾವಿರ ಚದರ ಮೈಲು ಭೂಭಾಗವನ್ನು ಕಳೆದುಕೊಳ್ಳಬೇಕಾಗುವುದೆಂದು ತಿಳಿಸಿ ತಿರಸ್ಕರಿಸಲಾಗಿದೆ. ಎಂದರೆ, ಈ ಪ್ರದೇಶವೆಲ್ಲವೂ ಚೀನಕ್ಕೆ ಸೇರಿರುವುವೆಂದೇ ಪ್ರಧಾನಿ ಚೌ ಎನ್ ಲಾಯ್ ಅವರ ಖಚಿತಾಭಿಪ್ರಾಯವೆಂದು ಮುಂದಟ್ಟಾಗುವುದು.

ಆದರೆ ಈ ಬಗ್ಗೆ ಭಾರತದ ನಿಲುವು ಸುದೃಢವಿದೆ. ಈ ಪ್ರದೇಶಗಳು ಅನಾದಿಯಿಂದಲೂ ಭಾರತದಲ್ಲಿಯೇ ಸೇರಿ ಹೋಗಿರುವುವೆಂಬುದು ಸುವಿದಿತವಾಗಿದೆ. ಚೀನವು ಇಂದುವರೆಗೆ ನೇಫಾ, ಲಡಕ್ ಮತ್ತು ಅನ್ಯಕ್ಷೇತ್ರಗಳ ಬಗ್ಗೆ ಮಾತ್ರ ತನ್ನ ವಾದವನ್ನು ಮುಂದೆ ಇಟ್ಟಿರುವುದಲ್ಲದೇ ತನ್ನ ವಾದವನ್ನು ಪುಷ್ಟೀಕರಿಸುವ ಸಲುವಾಗಿ ಯಾವುದೇ ಐತಿಹಾಸಿಕ ಅಥವಾ ಪ್ರಶಾಸನಿಕವೆನಿಸಿದ ಪ್ರಮಾಣಗಳನ್ನು ಮುಂದೆ ತಾರದಿರುವುದರಿಂದ, ಚೀನದ ವಾದವು ಹುರುಳಿಲ್ಲದುದೆಂದು ನಿಶ್ಚಯವಾಗಿಯೂ ಹೇಳಬಹುದು.

ಉತ್ತರ ಧ್ರುವ ಸಾಗರದ ನೀರಿನ ಉಷ್ಣತೆ ಮತ್ತು ಸಾಂದ್ರತೆಯನ್ನು ಕಂಡುಹಿಡಿಯಲು “ಅಂತಾರಾಷ್ಟ್ರೀಯ ಭೂಭೌತ ವರ್ಷ”ದ ಯೋಜನೆಯಂತೆ ಸಂಶೋಧನೆಗಳಲ್ಲಿ ಪ್ರಯತ್ನ ನಡೆಯುತ್ತಿದೆ.

ಚೀನೀ ಪ್ರಧಾನ ಮಂತ್ರಿಯವರು ಲಡಕಿನ ಅಕ್ಸಾಯಿಚಿನ್ ಕ್ಷೇತ್ರದಲ್ಲಿ ಮಾಡಿದ ಆಕ್ರಮಣವನ್ನು ನ್ಯಾಯೋಚಿತವೆಂದು ಸಾಧಿಸಲು ಭಾರತೀಯ ನಕ್ಷೆಗಳ ವಿಚಾರವನ್ನೂ ಎತ್ತಿದ್ದಾರೆ. ೧೮೬೫ರಲ್ಲಿ ಕಾಶ್ಮೀರ ಗಡಿಗಳನ್ನು ಪರಿಶೀಲಿಸಿದ ಶ್ರೀ ಜಾನ್ಸನ್‌ರವರು ಭಾರತೀಯ ನಕ್ಷೆಗಳಲ್ಲಿ ಸೂಚಿಸಿರುವ ರೇಖಾಂಕನದಂತೆಯೇ ನಿರ್ಧರಿಸಿದ್ದರು. ಈ ನಕ್ಷೆಯು “ಸರ್ವೇ ಆಫ್ ಇಂಡಿಯಾ ವಾಲ್ಯೂಮ್”ನಲ್ಲಿ ಸೇರಿಸಲ್ಪಟ್ಟಿರುವುದರಿಂದ ಭಾರತ-ಚೀನದ ಲಡಕಿನ ಸೀಮೆಯು ಇದೇ ಆಗಿರುವುದೆಂದು ತಿಳಿಯುವುದು ಎಂದಿಗೂ ತಪ್ಪೆನಿಸದು. ಇದರಂತೆಯೇ ೧೮೯೩–೯೪ರಲ್ಲಿ ಚೀನೀ ತುರ್ಕಿಸ್ಥಾನ ಸಂಬಂಧದ ವಾಕರನ ನಕ್ಷೆಗಳಲ್ಲಿ ಕಾಶ್ಮೀರದ ಸೀಮೆಯನ್ನು ಗುರುತಿಸಲಾಗಿದ್ದು, ಇವೂ ಭಾರತೀಯ ನಕ್ಷೆಗನುಸಾರವಾಗಿಯೇ ಇವೆ. ಭಾರತದ ಮಹಾ ಸರ್ವೇಕ್ಷಕನಾಗಿರುವ ಈ ವಾಕರನ ನಕ್ಷೆಯು ಅಧಿಕಾರಿಕವೆನಿಸಿದ ದಾಖಲೆಯಾಗಿರುವುದು ನಿರ್ವಿವಾದ.

ಈಗ ಪ್ರಕಾಶಿತವಾದ ಬೇರೆ ಕೆಲವು ನಕ್ಷೆಗಳಲ್ಲಿ ಸಂಬಂಧಿತ ಸೀಮೆಗಳನ್ನು ಅನಿರ್ಧಾರಿತವಾಗಿಲ್ಲವೆಂದು ಹೇಳಲು ಯಾವುದೇ ಅನ್ಯ ಪ್ರಮಾಣವಿರುವುದಿಲ್ಲ. ಈಗಿರುವ ಭಾರತೀಯ ನಕ್ಷೆಗಳಲ್ಲಿ ತೋರಿಸಿದ

(೮ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ:- 1931.

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ ...

ಕಥಾವಿಹಾರ

ಮಾಡಿದ ಪಾಪಗಳ ಸಂಸ್ಮರಣೆ

ಧರ್ಮಗುರುಗಳು ತಾವು ಮಾಡಿದ ಪಾಪಗಳೆಲ್ಲವನ್ನೂ ಸ್ಮರಿಸಿಕೊಂಡು ಅವನ್ನು ಬರೆದಿಡುತಿದ್ದರು: ಮಾತ್ರವಲ್ಲ ಅವುಗಳನ್ನು ಕುರಿತಾಗಿ ಸದಾ ಯೋಚಿಸುತಿದ್ದರು.

ಒಳ್ಳೆಯ ಧರ್ಮಗುರು ಸಿಸ್ಸೋಯಿಯವರ ಅತಿಥಿಯಾಗಿ ನಾನು ಆನಂದಮಯ ಗ್ರೀಷ್ಮಕಾಲವನ್ನು ಕಳೆದ ಮಠದ ಹೆಸರನ್ನು ಹೇಳದಿರಲು ನನಗೆ ಅನುಮತಿಯನ್ನು ಕೊಡಿರಿ. ಈ ಸುದೀರ್ಘ, ಶಾಂತಿಯುತ ಬೇಸಗೆಯ ಪ್ರತಿದಿನವೂ ನಾವು ಒಟ್ಟಿಗೆ ದಟ್ಟವಾದ ಎಲೆಗೂಡಿದ ದ್ರಾಕ್ಷೆ ಚಪ್ಪರದಡಿಯಲ್ಲಿ ಇಬ್ಬರೂ ಊಟ ಮಾಡುತ್ತಿದ್ದೆವು. ಆ ಪವಿತ್ರ ಮಠಕ್ಕೆ ಈ ಧರ್ಮಕುಟಿಯೊಂದು ಅಲಂಕಾರ. ಅಬ್ರಹಾಮನ ತಲೆಯ ಮೇಲೆ ಲೆಬನಾನಿನ ದೇವದಾರು ಮರದ ಶಾಖೆಗಳು ಹಬ್ಬಿದಂತೆ, ದ್ರಾಕ್ಷೆ ಬಳ್ಳಿಯು ನಮ್ಮ ಮೇಲೆ ಹಬ್ಬಿ, ತನ್ನ ತಂಪು ನೆರಳಿನ ಸ್ವರ್ಗೀಯ ಸುಖವನ್ನು ನಮಗೆ ನೀಡಿತ್ತು. ಧರ್ಮಗುರು ಸಿಸ್ಸೋಯಿಯವರೇ ಸ್ವತಃ ತಯಾರಿಸಿದ್ದ ರುಚಿಕರ ತಿಂಡಿಗಳಲ್ಲಿ ಅವರು ತಮ್ಮ ಸ್ವಂತ ಬುದ್ಧಿವಂತಿಕೆಯ ಮಾಧುರ್ಯವನ್ನೂ, ಪರ್ವತ ಮೂಲಿಕೆಗಳ ಸುವಾಸನೆಯೊಂದಿಗೆ ಬೆರೆಸಿರುತ್ತಿದ್ದರು.

ದ್ರಾಕ್ಷಾರಸವೆಂದರೆ ಧರ್ಮಗುರುಗಳಿಗೆ ಪಂಚಪ್ರಾಣ. ಅದನ್ನು ಅವರು ಸದಾ ಕಾರಂಜಿಯಲ್ಲಿ ತಂಪುಗೊಳಿಸುತ್ತಿದ್ದರು. ಅಂಗಳದ ಮಧ್ಯೆ ಮೂರು 'ನಿಲೋ' ಗಿಡಗಳ ಕೆಳಗೆ ಆ ಕಾರಂಜಿಯು ಜುಳುಜುಳು ಸಂಗೀತ ಹೇಳುತ್ತಿತ್ತು. ನಾವೊಂದು ಸಣ್ಣ ಮೇಜಿನ ಮುಂದೆ, ದ್ರಾಕ್ಷೆಯ ಚಪ್ಪರದಡಿಯಲ್ಲಿ ಇಡೀ ಮಧ್ಯಾಹ್ನ ಕುಳಿತಿರುತ್ತಿದ್ದೆವು. ದೇವರು, ಪ್ರಪಂಚ, ಬಾಳಿನ ಪೊಳ್ಳುತನ ಮತ್ತು ಸಾವಿನ ಸಮಸ್ಯೆಗಳ ಕುರಿತು ಶಾಂತವಾಗಿ, ಸುಜ್ಞಾನದ ಮಾತುಕತೆ ನಡೆಸುತ್ತಿದ್ದೆವು.

ಧರ್ಮಗುರು ಸಿಸ್ಸೋಯಿಯವರ ದೀರ್ಘ, ಅಲ್ಲಕಲ್ಲೋಲ ಗತಕಾಲದ ಪರಿಣಾಮವಾಗಿ, ಅವರಿಗೆ ಮಹತ್ತರ ಜೀವನಾನುಭವವಿದ್ದಿತು. ಅವರು ತಮ್ಮ ಏಕಾಂತ ಸಮಯದಲ್ಲಿ ಧರ್ಮಗ್ರಂಥಗಳನ್ನೂ, 'ಬೈಬಲ್' ಗ್ರಂಥವನ್ನೂ ಓದುತ್ತಿದ್ದರು. ಇದರಿಂದ ಅವರಿಗೆ ಪವಿತ್ರ ಜ್ಞಾನೋದಯವುಂಟಾಗಿತ್ತು.

"ಜನರು ಮುದುಕರಾಗಿ, ವಿವೇಕಯುತರಾಗಿರುವಂತಿರುತ್ತಾನೆ, ಪುಸ್ತಕಗಳು ವಿಜ್ಞಾನವೂ, ಜಾಣ್ಮೆಯೂ ಗತಕಾಲದ ಕಾರ್ಯಸಾಧನೆ ಪ್ರಸ್ತುತ ಸಮಯವೂ ಒಂದು ಭಾವನಾಸಾಗರ. ಮಾನವ ಆತ್ಮಗಳು ತಮ್ಮ ಪಥವನ್ನರಿಯದೆ ಅದರಲ್ಲಿ ಮುಂದುವರಿಯುತ್ತಿರುತ್ತವೆ. ಮಾನವನ ಕಣ್ಣೀರು, ಅವನ ಅಳಲುಗಳು, ಸಂತೋಷಗಳು, ಪ್ರಯತ್ನಗಳು, ಮೋಸಗಳು ಮತ್ತು ಅವರ ಆತ್ಮ ವಿಜಯಗಳು, ಅವರ ಆಲೋಚನೆಗಳು ಮತ್ತು ಅನುಭವಗಳು—ಆ ಸಾಗರದಾಳಕ್ಕೆ ಮುತ್ತುಗಳಂತೆ ಬಿದ್ದು ಮುಳುಗುತ್ತವೆ. ದೂರದ ಗತಕಾಲಕ್ಕೆ ಮರಳಿ ಹೋದಾಗ, ಜನತೆಯು ಅಂತರಾಳದಲ್ಲಿ ಬಿದ್ದಿದ್ದ ಸಂಪತ್ತನ್ನು ಕಾಣುತ್ತಾರೆ ಮತ್ತು ಅದರಿಂದ ವಿವೇಕವನ್ನು ಪಡೆಯುತ್ತಾರೆ."—ಎಂದು ಧರ್ಮಗುರು ಸಿಸ್ಸೋಯಿ ಹೇಳುತ್ತಾರೆ

ನಮ್ಮ ಪಾದರಿಯ ಬಾಯಿಂದ ಇಂತಹ ಮಾತುಗಳೇನಾದರೂ ಬಂದಿದ್ದಲ್ಲಿ ಆತನು ಜಂಬದಿಂದ ತುಂಬಾ ಉಬ್ಬಿಹೋಗುತ್ತಿದ್ದನೆಂದು ನಾನು ಧಾರಾಳವಾಗಿ ಹೇಳಬಲ್ಲೆ. ಆದರೆ ಧರ್ಮಗುರು ಸಿಸ್ಸೋಯಿಯವರು ಅಲ್ಲಿ ಶಾಂತರಾಗಿ ಕುಳಿತು, ಮೇಜಿನಿಂದ ರೊಟ್ಟಿ ತುಣುಕುಗಳನ್ನಾರಿಸಿಕೊಂಡು, ತಮ್ಮ ಸುಂದರ ಆಚಾರ್ಯ ಹಸ್ತದಿಂದ ಅವುಗಳನ್ನು ಕೋಳಿಗಳಿಗೂ, ಗುಬ್ಬಿಗಳಿಗೂ ಎಸೆಯುತ್ತಿದ್ದರು. ಅವು ಅವರನ್ನು ಸುತ್ತುಗಟ್ಟಿಕೊಂಡು, ನಿರ್ಭೀತಿಯಿಂದ ಅವರ ಭುಜದ ಮೇಲಕ್ಕೇರುತಿದ್ದುವು

ಅವರೇನೂ ತುಂಬಾ ಎತ್ತರವಾಗಿರಲಿಲ್ಲವಾದರೂ, ಆರೋಗ್ಯವಾಗಿದ್ದರು. ಅವರ ಕಣ್ಣುಗಳಲ್ಲಿ ಯೌವನದ ಪ್ರಕಾಶವು ಮಿಂಚುತ್ತಿತ್ತು. ಅವರದು ಸಂತೋಷದ ಸ್ಮಿತವದನ, ಗಡ್ಡ ಬಿಳುಪಾಗ ತೊಡಗಿತ್ತು. ಆದರೂ ಧರ್ಮಗುರುವಿನ ಕಪ್ಪು ಟೋಪಿಯಡಿಯಲ್ಲಿ ಶಾಶ್ವತ ಹಿಮಾಚ್ಛಾದಿತ ಪರ್ವತಗಳಂತೆ ಅವರ ಕೂದಲು ಬಿಳುಪಾಗಿ ಹೊಳೆಯುತ್ತಿತ್ತು. ಅವರ ಆಲೋಚನೆಗಳು ನಿಧಾನವಾಗಿ ಚಲಿಸುತ್ತ ಕವಲೊಡೆಯುತ್ತ, ದ್ರಾಕ್ಷೆಯ ಬಳ್ಳಿಯಂತೆ ಸುತ್ತಿಕೊಂಡು ಎಲೆದುಂಬಿದ್ದುವು. ಅವರು ತಮ್ಮ ಕುರಿತು ಹೀಗೆಂದುಕೊಳ್ಳುತ್ತಿದ್ದರು.

"ಎರಡು ಕಾರಣಗಳಿಂದ ನಾನು ಆರೋಗ್ಯನ; ಒಳ್ಳೆಯ ಜೀವನದ ಬಗ್ಗೆ ನನಗಿರುವ ಪ್ರೀತಿ, ಪಾಪಿಗಳ ಬಗ್ಗೆ ಕ್ಷಮಾಗುಣ—ಇದೇ ಆ ಕಾರಣಗಳು"

ನೀತಿ ಮತ್ತು ಗಾಢ ವಿವೇಕಗಳಿಂದ ತುಂಬಿದ ಅವರ ಕತೆಗಳಲ್ಲೊಂದನ್ನು ಹೇಳುವೆನು. 'ಧರ್ಮಗುರು ನಿಕೊಡೆಮೂಸರ ಪಾಪಗಳ ಸಾರು'—ಎಂದಿದೆ ಅದರ ಹೆಸರು.

○○ ○○

ಅದು ಸಾಮಾನ್ಯ ದಿನವಾಗಿದ್ದರೂ ಕೂಡ ಅದ್ಭುತವಾಗಿತ್ತು. ಆಕಾಶವು ವಿರಾಮದ ಮನೋಭಾವದಿಂದ ನಮ್ಮ ಮೇಲೆ ಹಬ್ಬಿಕೊಂಡಿದ್ದಂತಿತ್ತು. ಸೂರ್ಯನ ಬಿಸಿಲು ಕೂಡ ಹಾಗೆಯೇ ಇತ್ತು. ಅರಣ್ಯದ ಪ್ರಶಾಂತತೆಯಲ್ಲಿ, ಕಾರಂಜಿಯ ಶ್ರದ್ಧಾಯುತ ಸಂಗೀತದಲ್ಲಿ ಅದಾವುದೋ ಭಕ್ತಿಯುತ ಪ್ರಾರ್ಥನೆಯಿದ್ದಂತಿತ್ತು. ಕಪ್ಪು ಬಾವುಗವೊಂದು ಏನೋ ಯೋಚಿಸುತ್ತಾ ನಿಧಾನವಾಗಿ ಅಂಗಳವನ್ನು ದಾಟಿ ಪಡಸಾಲೆಗೆ ಹೋಗುತ್ತಿದ್ದುದರಲ್ಲಿ ನಮ್ರತೆಯಿದ್ದಿತು.

ಧರ್ಮಗುರು ಸಿಸ್ಸೋಯಿಯವರೂ ಮತ್ತು ನಾನೂ ದ್ರಾಕ್ಷೆ ಚಪ್ಪರದ ನೆರಳಿನಲ್ಲಿ ಮೇಜಿನ ಮುಂದೆ ಕುಳಿತು ಆ ಸುಂದರ ದಿನದ ಆನಂದಾನುಭವ ಪಡೆಯುತ್ತಿದ್ದೆವು. ಕೆಳಗಡೆ ದೂರದವರೆಗೆ ನಯವಾದ ಹಸಿರು ಬಯಲು ವ್ಯಾಪಿಸಿತ್ತು. ಅದರ ಸುತ್ತಲೂ ಬೆಟ್ಟಗಳ ನೀಲ ಛಾಯಾದೃಶ್ಯಗಳು ಕಂಡುಬರುತ್ತಿದ್ದುವು. ಬೆಟ್ಟದ ಮೇಲಿನ ಮರಗಳ ತುದಿಗಳು ಪ್ರಾರ್ಥನೆ ಮಾಡುತ್ತ ಆಲಿಸುತ್ತಿಕೊಂಡಿದ್ದಂತೆ ಕಂಡುಬರುತ್ತಿದ್ದವು.

ಕಾಲ್ಮಣೆಯ ಮೇಲೆ ಒರಗಿಕೊಂಡು ಧರ್ಮಗುರು ಸಿಸ್ಸೋಯಿಯವರು ನಿಧಾನವಾಗಿ ಶಾಂತಿಯುತವಾಗಿ ತಮ್ಮ ಹಳದಿಯ ಮಣಿಮಾಲೆಯನ್ನು ಸುಂದರ ಕೈಗಳಿಂದ ಹಿಡಿದುಕೊಂಡು ಜಪಮಾಡುತ್ತಿದ್ದರು. ಅವರ ಮೌನವು ಭಾವಗರ್ಭಿತವಾಗಿತ್ತು.

ಬಿಳಿಯ ಮೇಲುಡುಪನ್ನು ಸುತ್ತಿಕೊಂಡಿದ್ದ ಕಿವುಡ ಅಡಿಗೆಯಾತನು ಕೈಯಲ್ಲಿ ತಟ್ಟೆಗಳನ್ನು ಹಿಡಿದುಕೊಂಡು ಅಂಗಳದ ಮೂಲಕ ಹಾದುಹೋಗುತ್ತಿದ್ದನು. ಧರ್ಮಗುರು ಸಿಸ್ಸೋಯಿಯವರು ಆತನನ್ನು ಕರೆದರು.

'ತಯಾರಾಗಿದೆಯೆ?'— ಎಂದು ಅವರು ಕೇಳಿದರು, ಗಟ್ಟಿಯಾಗಿ ಮತ್ತು ಸ್ಪಷ್ಟವಾಗಿ ಅವರು ತಮ್ಮ ಮುಖವಲ್ಲಿನ ನಡುಕಟ್ಟಿನ ಜೇಬಿನಿಂದ ಗಡಿಯಾರವನ್ನು ತೆಗೆದುಕೊಂಡು ಅದರ ಕಡೆ ನೋಡಿದರು.

'ಯಾಕೆ? ಹೌದೌದು, ಬೇಗಾಗುತ್ತೆ' —ಎಂದು ಅಡಿಗೆಯವನು ಉತ್ತರಕೊಡುತ್ತಾ, ಸ್ವಲ್ಪ ನಿಧಾನಿಸಬೇಕೆಂದು ಕೈಸನ್ನೆ ಮಾಡಿದನು. ಮತ್ತೊಂದು ಪ್ರಶ್ನೆಗಾಗಿ ಕಾಯದೆಯೇ ಆತನು ಅಡಿಗೆಯ ಮನೆಯ ಕಡೆಗೆ ಹೊರಟುಹೋದನು.

ಒಳ್ಳೆಯತನದಿಂದ ಹೊರಹೊಮ್ಮಿ ಹಬ್ಬಿದ ನಗುನಗೆಯು ಧರ್ಮಗುರು ಸಿಸ್ಸೋ

(೧೧ನೇ ಪುಟ ನೋಡಿರಿ)

ASP-LIC-AS-12 A KN

1959 ಬೋನಸ್ ವರ್ಷ

ಒಂದು ಲಾಭಸಹಿತ ಪಾಲಿಸಿಯನ್ನು ಈಗಲೇ ಪಡೆಯಿರಿ

ಲೈಫ್ ಇನ್ಶೂರನ್ಸ್ ಕಾರ್ಪೊರೇಷನಿನ 31.12.1959 ರ ವರೆಗಿನ ಎರಡನೇ ವೇಲ್ಯುವೇಶನ್ ಬೇಗನೆ ಆಗಲಿದೆ. ಈ ವೇಲ್ಯುವೇಶನ್ ತಾರೀಕಿನಂದು ಜಾರಿಯಲ್ಲಿರುವ ಎಲ್ಲಾ ಯೋಗ್ಯ ಪಾಲಿಸಿಗಳಿಗೆ ವೇಲ್ಯುವೇಶನಿನ ಫಲವಾಗಿ ತೋರಿಬಂದ ಲಾಭದಲ್ಲಿ ಭಾಗವಹಿಸುವ ಹಕ್ಕು ಇರುತ್ತದೆ.

ಕಾರ್ಪೊರೇಷನ 31.12.1957 ರ ವರೆಗಿನ ಪ್ರಥಮ ವೇಲ್ಯುವೇಶನಿನ ಫಲವಾಗಿ ಸಾಕಷ್ಟು ಲಾಭ ತೋರಿಬಂದಿದ್ದು, ಕಾರ್ಪೊರೇಷನ್ ಮಾರಾಟ ಮಾಡಿದ ಲಾಭಸಹಿತ ಪಾಲಿಸಿಗಳಿಗೆ ಕೆಳಗೆ ಕಾಣಿಸಿರುವ ದರದಲ್ಲಿ ಬೋನಸ್ ಪ್ರಕಟಿಸಲಾಗಿತ್ತು:

ಎಂಡೋಮೆಂಟ್ ಎಶುರನ್ಸಸ್: ವಿಮಾ ಹಣ ರೂ. 1000 ದ ಮೇಲೆ ವರ್ಷಕ್ಕೆ ರೂ. 14

ಹೋಲ್ ಲೈಫ್ ಎಶುರನ್ಸಸ್: ವಿಮಾ ಹಣ ರೂ. 1000 ದ ಮೇಲೆ ವರ್ಷಕ್ಕೆ ರೂ. 17½

ವಿಶೇಷ ಸೂಚನೆ: 31.12.1959 ರ ಮುಂಚೆ ಕಡಿಮೆ ಹಣಕ್ಕೆ ರೂಪಾಂತರಗೊಳಿಸಿದ ಪೈಡ್-ಅಪ್ ಪಾಲಿಸಿಗಳಿಗೆ ಮತ್ತು ಲ್ಯಾಪ್ಸ್ ಆದ ಪಾಲಿಸಿಗಳಿಗೆ ಬೋನಸ್ ಪಡೆಯುವ ಹಕ್ಕು ಇರಲಾರದು.

ನಿಮ್ಮ ಪಾಲಿಸಿಯನ್ನು ಭದ್ರವಾಗಿಡಿರಿ. ಕ್ರಮವಾಗಿ ಪ್ರೀಮಿಯಮ್ಮನ್ನು ಕಟ್ಟಿ ನಿಮ್ಮ ಪಾಲಿಸಿಯೂ ಎರಡನೇ ವೇಲ್ಯುವೇಶನ್ನಿಂದಾಗಿ ತೋರಿಬರುವ ಲಾಭದಲ್ಲಿ ಭಾಗವಹಿಸುವಂತೆ ನೋಡಿರಿ.

ನೆನಪಿನಲ್ಲಿಡಿರಿ: 1959 ಬೋನಸ್ ವರ್ಷ

ಲೈಫ್ ಇನ್ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ

ಒಂದು ಸಂಶೋಧನೆ

ರಸಾಯನವೇತ್ತ ವ್ಯಾಡಿ ಮಹಾಶಯ

ಕ್ರಿಸ್ತಪೂರ್ವ-ಶಕದ ಸಂಧಿಕಾಲದಲ್ಲಿದ್ದ ವ್ಯಾಡಿ ರಸಾಯನ ಮೀಮಾಂಸೆ ವ್ಯಾಕರಣಗಳಲ್ಲಿ ಅದ್ವಿತೀಯ ಶಾಸ್ತ್ರಜ್ಞನಾಗಿದ್ದನು. ಆದರೆ, ಆತನ ಕೃತಿಗಳಲ್ಲಿ ಹೆಚ್ಚಿನವು ಕಾಲದ ಕಡಲಲ್ಲಿ ಕತ್ತಲೆಯಾಳದಲ್ಲಿ ಮುಳುಗಿ ಹೋಗಿವೆ.

ಕ್ರಿಸ್ತಾಬ್ಧ ೧೦೩೦ರಲ್ಲಿ ಸುಪ್ರಸಿದ್ಧ ಅರಬ್ಬೀ ವಿದ್ವಾಂಸನಾದ ಅಲಬರೂನಿಯು ಭಾರತಕ್ಕಾಗಮಿಸಿದ ಸಂದರ್ಭದಲ್ಲಿ ತಾನು ಉಜ್ಜೈನಿಗೂ ಬಂದಿದ್ದನು. ಅಲ್ಲಿ ಆ ಕಾಲಕ್ಕೆ ಸುಮಾರು ಒಂದು ಸಾವಿರ ವರ್ಷಗಳಷ್ಟು ಹಿಂದೆ ಜೀವಿಸಿಕೊಂಡಿದ್ದ ಮಹಾವಿದ್ವಾಂಸ ವ್ಯಾಡಿ ಎಂಬವನ ಹೆಸರನ್ನೂ ಆತನ ಪ್ರಶಂಸೆಯನ್ನೂ ಕಿವಿಯಾರೆ ಕೇಳಿದ್ದನು. ರಸಾಯನ ಶಾಲೆಯಲ್ಲಿ ಪ್ರಯೋಗ ಸಾಧನೆಗಳ ಮೂಲಕ ತಾನು, ವಿವಿಧ ರಸಾಯನಗಳಿಂದ ಅಪರಂಜಿ ಚಿನ್ನವನ್ನು ತಯಾರಿಸುತ್ತಿದ್ದನೆಂದು ತಿಳಿದು ಅಲಬರೂನಿಯು ಒಂದು ಬಾರಿ ವಿಸ್ಮಯ ಚಕಿತನಾದನು. ಆ ಕಾಲದಲ್ಲಿ ಅರಬ್ಬೀ ದೇಶವಿಡಿ ಸುವರ್ಣ ಸಂಶೋಧನೆಯಲ್ಲಿಯೇ ವ್ಯಸ್ತವಾಗಿತ್ತು. ವ್ಯಾಡಿ ಮಹಾಶಯನು ಸುವರ್ಣ ಸಿದ್ಧಿ ಪಡೆಯುವ ಪ್ರಯೋಗಾದಿಗಳನ್ನು ವಿವರಿಸುವ 'ಭೈಷಜ ಸಂಸ್ಕಾರ'ವೆಂಬ ಪುಸ್ತಕವೊಂದನ್ನು ಬರೆದಿದ್ದನೆಂಬ ಸುದ್ದಿಯೂ ಅಲಬರೂನಿಯ ಕಿವಿಗೆ ಬಿತ್ತು. ಆದರೆ, ಅದರೊಂದಿಗೆ, ಆರ್ಥಿಕ ಅನನುಕೂಲತೆಯ ಕಾರಣದಿಂದ ಪ್ರಚಾರಗೊಳಿಸಲು ಅಶಕ್ತನಾದ ವ್ಯಾಡಿಯು ವ್ಯಸನದಿಂದಾಗಿ ಶಿಪ್ರಾ ನದಿಗೆಸೆದು ಬಿಟ್ಟನೆಂದೂ ತಿಳಿದು ಬಂತು. ಅದೃಷ್ಟವಶದಿಂದ ನೀರಿನಲ್ಲಿ ತೇಲಾಡುತ್ತಿದ್ದ ಈ ಪುಸ್ತಕವು ಒಬ್ಬ ವೇಶ್ಯಾಂಗನೆಯ ಕೈ ಸೇರಿತೆಂದೂ, ಆಕೆ ವ್ಯಾಡಿಯನ್ನು ಕರೆಸಿ, ಆತನಿಗೆ ಯಥೇಚ್ಛವಾಗಿ ಹಣವನ್ನಿತ್ತಳೆಂದೂ, ಈ ಹಣದ ನೆರವಿನಿಂದ ವ್ಯಾಡಿಯು ಬಹಳಷ್ಟು ಔಷಧಿಗಳನ್ನು ತಯಾರಿಸಿದನೆಂದೂ ಹಲವಾರು ಸಂಶೋಧನೆಗಳಲ್ಲಿ ತಲ್ಲೀನನಾಗಿ, ಅವುಗಳಲ್ಲಿ ಯಶಸ್ಸು ಗಳಿಸಿದನೆಂದೂ ಅಲಬರೂನಿ ತಿಳಿದುಕೊಂಡನು.

ಅಲಬರೂನಿಯು ತನ್ನ ಪ್ರವಾಸ ಕಥನವೆನಿಸಿದ 'ಕಿತಾಬ್-ಉಲ್ ಹಿಂದ್' ಎಂಬ ಪುಸ್ತಕದಲ್ಲಿ ಕೆಲವೊಂದು ವಿಚಿತ್ರ ಸಂಗತಿಗಳನ್ನು ಉಲ್ಲೇಖಿಸಿದ್ದಾನೆ. ವ್ಯಾಡಿಯು ಒಂದು ರಸಾಯನವನ್ನು ನಿರ್ಮಿಸಿ, ಅದನ್ನು ಆತ ಮತ್ತಾತನ ಸಹೋದರಿಯರು ಶರೀರಕ್ಕೆ ಲೇಪಿಸಿ ಆಕಾಶದಲ್ಲಿ ಹಾರುತ್ತಿದ್ದರಂತೆ! ಅಲಬರೂನಿಯು ಯಾವ ಆಧಾರದಿಂದ ಈ ರೀತಿ ಬರೆದನೆಂದು ತಿಳಿಯುವುದಿಲ್ಲವಾದರೂ ಆ ಕಾಲದಲ್ಲಿ ವ್ಯಾಡಿಯು ಮಹಾ ರಸಾಯನವೇತ್ತನೆಂಬ ಕೀರ್ತಿಯಿಂದ ಮೆರೆಯುತ್ತಿದ್ದನೆಂದು ಅವಶ್ಯ ತಿಳಿಯಬಹುದು.

ಈ ವ್ಯಾಡಿಯ ಜೀವನಕಾಲವನ್ನು ನಿರ್ಧರಿಸುವುದು ಬಹು ಕಠಿನ. ಅಲಬರೂನಿಯ ಸೂಚನೆಯಿಂದ ಈತನ ಸಮಕಾಲಿಕನವನೆಂದು ಕೆಲವರೆನ್ನುತ್ತಾರೆ. ಇನ್ನು ಕೆಲವು ವಿದ್ವಾಂಸರು ಈತನು ವಿಕ್ರಮ ಮಹಾರಾಜನ ಆಸ್ಥಾನದಲ್ಲಿದ್ದನೆಂದೂ ಈತನ ಹಲವಾರು ಪ್ರಯೋಗಗಳನ್ನು ಸ್ವಯಂ ವಿಕ್ರಮನೇ ಕಣ್ಣಾರೆ ಕಂಡಿರುವನೆಂದೂ ಹೇಳುತ್ತಾರೆ. ಇವನು ನಂಬುವುದಾದರೆ, ಅವನ ಆಸ್ಥಾನ ನವರತ್ನ ಮಾಲೆಯಲ್ಲಿ ಈ ವಿಲಕ್ಷಣ ವಿದ್ವಾಂಸನ ಹೆಸರೇಕಿಲ್ಲವೆಂಬ ಪ್ರಶ್ನೆ ಉದ್ಭವಿಸುತ್ತದೆ. ಕಥಾಸರಿತ್ಸಾಗರದ ಕರ್ತನು, ಮಹಾರಾಜ ವಿಕ್ರಮನ ಉಜ್ಜೈನಿಯಲ್ಲಿ ಒಬ್ಬ ರಸಾಯನಿಕ ವ್ಯಾಡಿಯಿದ್ದನೆಂದು ಹೇಳಿದ್ದಾನೆ ನಿಜ.

ವ್ಯಾಡಿ ಒಬ್ಬ ರಸಾಯನ ಶಾಸ್ತ್ರಿ ಮಾತ್ರವಲ್ಲ, ವೈಯಾಕರಣಿಯೂ ಆಗಿದ್ದನೆಂದು ಪ್ರಖ್ಯಾತಿಯಿದೆ. ಹನ್ನೊಂದನೆಯ ಶತಮಾನದ ರಾಜಶೇಖರನೆಂಬ ಪ್ರಸಿದ್ಧ ಆಲಂಕಾರಿಕನು ತನ್ನ "ಕಾವ್ಯ ಮೀಮಾಂಸೆ"ಯಲ್ಲಿ ಈ ರೀತಿ ಉಲ್ಲೇಖಿಸಿದ್ದಾನೆ —. "ಕಾವ್ಯಕಾರರ ಪರೀಕ್ಷೆಯು ಉಜ್ಜಯಿನಿಯಲ್ಲಾಗುವಂತೆ ಪಾಟಲಿಪುತ್ರದಲ್ಲಿ ಶಾಸ್ತ್ರಕಾರರ ಪರೀಕ್ಷೆಯಾಗುತಿತ್ತು. ಇವರಲ್ಲಿ ಪಾಣಿನಿ, ಪಿಂಗಲ, ವ್ಯಾಡಿ, ವರರುಚಿ ಮತ್ತು ಪತಂಜಲಿ ಮೊದಲಾದವರು ಪರೀಕ್ಷೆ ಕೊಟ್ಟವರು."

ಮಹಾಭಾಷ್ಯಕಾರ ಪತಂಜಲಿಯು ಗೋನಾರ್ದ ಗ್ರಾಮದವನೆಂದೂ ಇದು ಭೋಪಾಲದ ಸಮೀಪದಲ್ಲಿರುವುದೆಂದೂ ವಿದಿಶೆಯ ಶುಂಗರ ಅಶ್ವಮೇಧ ಯಾಗದ ಪುರೋಹಿತನಾಗಿದ್ದನೆಂದೂ ತಿಳಿಯುತ್ತದೆ. ವ್ಯಾಡಿಯ ಒಂದು ಗ್ರಂಥ "ಸಂಗ್ರಹ" ವೆಂಬುದರಿಂದ ಉದ್ಧರಣೆಯನ್ನು ಮಹಾಭಾಷ್ಯದಲ್ಲಿ ಪತಂಜಲಿ ಮಾಡಿರುವುದರಿಂದ, ಪ್ರಾಯಃ ವ್ಯಾಡಿಯು ಆತನ ಕಾಲದಲ್ಲಿ ಜೀವಿಸಿರಬಹುದು. ಭರ್ತೃಹರಿಯೂ ತನ್ನ ವಾಕ್ಯಪದೀಯದಲ್ಲಿ ಇವರ ಉಲ್ಲೇಖವನ್ನೂ ಉದ್ಧರಣೆಯನ್ನೂ ಮಾಡಿದ್ದಾನೆ. ಈ ಕಾರಣದಿಂದ ವ್ಯಾಡಿಯು ಈ ಕಾಲಕ್ಕೆ ಪೂರ್ವಜನಾಗಿರಬಹುದು ಅಲ್ಲವಾದರೆ, ಇವರ ಸಮಕಾಲೀನನಂತೂ ಆಗಲೇಬೇಕು.

ಪತಂಜಲಿಯು ವ್ಯಾಡಿಯನ್ನು 'ದಾಕ್ಷಾಯಣ' ಎಂದು ಕರೆದಿದ್ದಾನೆ. ಇದರಿಂದ ವ್ಯಾಡಿಯು ದಾಕ್ಷಾಯಣ ಕುಲದವನೆಂದು ತಿಳಿಯಬಹುದು. ಮಹಾ ವ್ಯಾಕರಣವೇತ್ತ ಪಾಣಿನಿಯೂ ಇದೇ ವಂಶದವನು. ಮಹಾಭಾಷ್ಯಕಾರನು ಈತನನ್ನು 'ದಾಕ್ಷೀಪುತ್ರ' ಎಂದು ಹೇಳಿದ್ದಾನೆ

ಹೀಗೆ ವ್ಯಾಡಿ ಮತ್ತು ಪಾಣಿನಿಯವರ ಕುಲಪೂರ್ವಜ ಆಗಿರುವಾಗ ಇಬ್ಬರಲ್ಲೂ ನಿಕಟ ಸಂಬಂಧವಿದ್ದರೂ ಆಶ್ಚರ್ಯಪಡಬೇಕಾಗಿಲ್ಲ. ದಕ್ಷನ ಹಿರಿಯ ಮಗಳು ದಾಕ್ಷಿಯ ಹಿರಿಯ ಮಗ ಪಾಣಿನಿಯೆಂದೂ ಕಿರಿಯ ಮಗ ವ್ಯಾಡಿಯೆಂದೂ ಕೆಲವೆಡೆ ಪ್ರಸಿದ್ಧವಿದೆ

ಕಾತ್ಯಾಯನೆಂಬ ಇನ್ನೊಬ್ಬ ಮಹಾ ವೈಯಾಕರಣಿಯು ವ್ಯಾಡಿಯ "ಸಂಗ್ರಹ"ವನ್ನು ಸಾದರವಾಗಿ ಉಲ್ಲೇಖಿಸಿದ್ದಾನೆ. ಕಾತ್ಯಾಯನನಿಗಿಂತ ವ್ಯಾಡಿಯು ಅವಶ್ಯ ಹಿಂದಿನವನಿರಲೇಬೇಕು. ವ್ಯಾಡಿಯ 'ಸಂಗ್ರಹ'ದಲ್ಲಿ ಒಂದು ಲಕ್ಷ ಶ್ಲೋಕಗಳಿವೆಯೆಂದು ಹೇಳಲಾಗುತ್ತದೆ.

ಭರ್ತೃಹರಿ ರಚಿತ "ವಾಕ್ಯಪದೀಯ"ಕ್ಕೆ ಪುಣ್ಯರಾಜನೆಂಬವನು ಬರೆದ ಟೀಕೆಯಲ್ಲಿ ಈ ರೀತಿ ಉಲ್ಲೇಖವಿದೆ—"ಇಹ ಪುರಾ ಪಾಣಿನೀಯೇಽಸ್ಮಿನ್ ವ್ಯಾಕರಣೇ ವ್ಯಾಡ್ಯುಪರಚಿತಂ ಗ್ರಂಥಲಕ್ಷಪರಿಮಾಣಂ ಸಂಗ್ರಹಾಭಿಧಾನಂ ನಿಬಂಧನಮಾಸೀತ್"

ಇಂದು ವ್ಯಾಡಿಲಿಖಿತ "ಸಂಗ್ರಹ" ಗ್ರಂಥ ಅನುಪಲಬ್ಧವಿದೆ. ಮಹಾಭಾಷ್ಯದಂತಹ ವ್ಯಾಪಕ ಮತ್ತು ಪ್ರಾಂಜಲವೆನಿಸಿದ ಗ್ರಂಥವು ದೊರೆತ ನಂತರ ವ್ಯಾಡಿಯ ಪುಸ್ತಕದ ಉಪಯೋಗವು ಕಡಿಮೆಯೆನಿಸುತ್ತ ಬಂದು ಕಾಣೆಯು ಪಾಣಿನಿ ಸೂತ್ರವೃತ್ತಿಯು ಮರೆಯಾದಂತೆಯೇ ಅದು ಅಜ್ಞಾತವಾಸವನ್ನು ಹೊಂದಿ ಕ್ರಮೇಣ ಮೂಲೆಪಾಲಾಯಿತು ಎಂದು ಹೇಳಬಹುದು. ಆದರೂ ಮಹಾಭಾಷ್ಯ ನಿರ್ಮಾಣವಾಗುವ ವರೆಗೆ ವ್ಯಾಡಿಯು ಮಹತ್ವಪೂರ್ಣ ಸ್ಥಾನವನ್ನು ಪಡೆದಿದ್ದನೆಂಬುದು ನಿಶ್ಚಯ. ಮಹಾಭಾಷ್ಯದ ರಚನೆಗೂ 'ಸಂಗ್ರಹ'ದ ಉಪಯೋಗವು ಬಹಳಷ್ಟಾಗಿದೆ. ಇದರಿಂದಾಗಿಯೇ ಕೆಲಕಾಲದ ವರೆಗೆ ಮಹಾಭಾಷ್ಯವನ್ನು 'ವ್ಯಾಡಿಸಂಗ್ರಹ ನಿವೃತ್ತಿ' ಎಂಬ ಹೆಸರಿನಿಂದ ಕರೆಯುತ್ತಿದ್ದರು.

ಪಾಣಿನಿಯು ಕ್ರಿ. ಪೂ. ೫-೬ನೆಯ ಶತಮಾನದವನೆಂದು ತಿಳಿಯಲಾಗುತ್ತಿದೆ. ವ್ಯಾಡಿ ಕುಣಿ, ಭರ್ತೃಹರಿ ಮೊದಲಾದ ವಿದ್ವಾಂಸರು ಅನಂತರದ ೩-೪ ನೂರು ವರ್ಷಗಳ ನಂತರದವರಾಗಿರಬಹುದು. ಈ ಕಾಲವು 'ಶುಂಗ'ರ ಕಾಲಕ್ಕೆ ಸಮೀಪವೇ ಇರುತ್ತದೆ. ಶುಂಗರ ಕಾಲಾನಂತರ ಮಾಲವಗಣವು ಸಂಘಟಿತವಾಗಿ ವಿಕ್ರಮನ ನೇತೃತ್ವದಲ್ಲಿ ರಾಜ್ಯವಾಳಿದವು. ಆ ಕಾಲದಲ್ಲಿಯೇ ಪತಂಜಲಿ, ವ್ಯಾಡಿ, ಭರ್ತೃಹರಿ, ಕಾಳಿದಾಸ ಮೊದಲಾದ ವಿದ್ವಾಂಸರಿದ್ದಿರಬಹುದು. ಇದರಿಂದ ಕಥಾಸರಿತ್ಸಾಗರದ ಕಥನಕ್ಕೂ ಸಾಧುತ್ವವನ್ನು ಕಲ್ಪಿಸಬಹುದು.

ವ್ಯಾಡಿಯು ಶಬ್ದಗಳ ಅರ್ಥ ವಿವೇಚನೆ ಮಾಡುವ ಗ್ರಂಥ ನಿರ್ಮಿಸಿರುವನೆಂದು ಬೇರೆ ಬೇರೆ ಗ್ರಂಥಕಾರರ ಉಲ್ಲೇಖಗಳಿಂದ ತಿಳಿಯುತ್ತದೆ. ಚರಕ, ಹರ್ಷ

(೧೦ನೇ ಪುಟ ನೋಡಿರಿ)

ಕುಂದಾಪುರ ಡಿ ಮು ಕೋರ್ಟಿನಲ್ಲಿ
O S 362/59

ನಂಜಮ್ಮ ಹೆಗ್ಗಡ್ತಿ —ವಾದಿಳು
1 ಸೂರಪ್ಪ ಸೆಟ್ಟಿ 2 ವಿಟ್ಠಲ ಸೆಟ್ಟಿ — ಪ್ರತಿವಾದಿಯು.

ಕುಂದಾಪುರ ತಾಲೂಕು ನಾಡ ಗ್ರಾಮದ ಕಡ್ಡೆ ಪಡುಮನೆಯಲ್ಲಿರುವ ಸುಬ್ಬಕ್ಕ ಸೆಡ್ತಿರ ಮಗ 1ನೇ ಪ್ರತಿವಾದಿ ಸೂರಪ್ಪ ಸೆಟ್ಟಿ I, ಈತನ ಮಗ 2ನೇ ಪ್ರತಿವಾದಿ ವಿಟ್ಠಲ ಸೆಟ್ಟಿ 1ಕೂಡಾ 2ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ_

ಪ್ರತಿವಾದಿರಿಂದ ಡಿಮೂಂಡ್ ನೋಟಿನ ಬಾಬ್ತು ಬರತಕ್ಕ ಹಣಗಳ ಬಗ್ಗೆ ವಾದಿಳು ದಾಖಲು ಮಾಡಿದ ಮೇಲಿನ ದಾವಾ ಮುಲ್ಕಿಯ ಕೋರ್ಟಿನಲ್ಲಿ ತಾ. 9-1-1960 ನೇ ದಿನ ಬೆಳಿಗ್ಗೆ 11 ಗಂಟೆಗೆ ತನ್ನಿಗೆ ಯಿಡೋಣಾಗಿದೆ ಎಂಬ ಸಂಗ್ತಿ ಈ ಮೂಲ್ಕ ನಿಮಗೆ ತಿಳಿಸೋಣಾಗಿದೆ.

B. S. Shetty
Vakil for Plaintiff.
Coondapoor 14—12—59.

ಅನುಭವವನ್ನು ಅನುಭವಸ್ಥರಿಂದಲೇ ಪಡೆಯಿರಿ!

ಆರ್ಥಿಕ ವಿಷಯದಲ್ಲಿ ನಿಮಗೆ ಬೇಕಾಗುವ ಅನುಭವವನ್ನು ಅನುಭವಸ್ಥ "ಕೊರ್ಪೊರೇಶನ್" ಬೇಂಕಿನಿಂದ ಯಥೇಷ್ಟವಾಗಿ ಪಡೆಯಿರಿ!

"ಕೊರ್ಪೊರೇಶನ್" ಬೇಂಕು ನಮ್ಮ ಜಿಲ್ಲೆಯ ಎಲ್ಲಾ ಬೇಂಕುಗಳಲ್ಲಿ—ಏಕೆ, ಸಮಗ್ರ ಮೈಸೂರು ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ— ಅತಿ ಹೆಚ್ಚು ಅನುಭವಸ್ಥ ಬೇಂಕು!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೇರಿಕನ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ ಹರಿದಾಸ ಭಟ್ಟ, ಎಂ ಎ.

ಪ್ರಕಾಶಕರ :
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ 1=75, ಬಿಳಿ ಕಾಗದ.
ರೂ. 2ನ್ನು M O ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್. ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಇತಿಹಾಸ ಪೃಷ್ಠ

ಆಗ್ನೇಯ ಏಶ್ಯದೊಡನೆ ಭಾರತೀಯ ಸಂಬಂಧ

ಕ್ರಿಸ್ತಶಕದ ಆರಂಭದಲ್ಲಿಯೇ ಭಾರತೀಯರ ವಸಾಹತುಗಳಾಗಿದ್ದ ಆಗ್ನೇಯ ಏಶ್ಯದ ದೇಶಗಳಲ್ಲಿ ಇಂದಿಗೂ ಭಾರತೀಯ ಸಂಸ್ಕೃತಿಯ ಪ್ರಭಾವ ಅಚ್ಚಳಿಯದೆ ಉಳಿದಿದೆ.

ಆಗ್ನೇಯ ಏಷ್ಯದ ಭಾರತ ಮತ್ತು ಚೀನಾದ ಸಂಸ್ಕೃತಿಗಳು ಕೂಡಿ ಜೊತೆಗೇ ಬೆಳೆದು ಫಲಬಿಟ್ಟ ಆ ಭಾಗ ಹಿಂದ್ ಚೀನಾ ಎಂಬ ಹೆಸರಿನಿಂದ ವಿಖ್ಯಾತವಾಗಿದೆ. ಇದು ಐದು ರಾಜ್ಯಗಳಲ್ಲಿ ವಿಭಾಜಿತವಾಗಿತ್ತು. ಅನಾಮ, ಟಾನ್‌ಕಿನ್, ಕೋಚಿನ್-ಚೀನಾ. ಕಾಂಬೋಡಿಯಾ ಮತ್ತು ಲಾವೋಸ್— ಇವೇ ಆ ಐದು ರಾಜ್ಯಗಳು. ಗತ ಮಹಾಯುದ್ಧದ ಬಳಿಕ ಅನಾಮ, ಟಾನ್‌ಕಿನ್ ಮತ್ತು ಕೋಚಿನ್-ಚೀನಾವನ್ನು ಒಟ್ಟುಗೂಡಿಸಿ ಒಂದು ರಾಜ್ಯವನ್ನಾಗಿ ಮಾಡಿ, ಅದರ ಹೆಸರು ವಿಯೆಟ್‌ನಾಮ್ ಎಂದಾಯಿತು ಕಾಂಬೋಡಿಯಾ ಮತ್ತು ಲಾವೋಸ್ ಪೃಥಕ-ಪೃಥಕ ರಾಜ್ಯವಾಗುಳಿದುವು.

ವಿಯೆಟ್‌ನಾಮಿನ ಅನಾಮ ಪ್ರದೇಶವು ಹಿಂದೆ ಭಾರತೀಯ ಧರ್ಮ ಮತ್ತು ಸಂಸ್ಕೃತಿಯ ಒಂದು ಪ್ರಮುಖ ಕೇಂದ್ರವಾಗಿತ್ತು. ಆ ಸಮಯ ಇದರ ಹೆಸರು "ಚಂಪಾ" ಎಂದಾಗಿತ್ತು. ಈ ಹೆಸರನ್ನು ಬೌದ್ಧಕಾಲೀನ ಭಾರತೀಯ ನಗರವಾದ ಚಂಪಾ—ಈಗಿನ ಭಾಗಲ್‌ಪುರದ ಆಧಾರದ ಮೇಲೆ ಇಡಲಾಯಿತು.

ಭಾರತೀಯರು ಈ ದೇಶಕ್ಕೆ ಯಾವಾಗ ಬಂದರು ಎಂಬುದು ವಿವಾದಗ್ರಸ್ತವಾದ ವಿಷಯವಾಗಿದೆ. ಆದರೆ ಮಸಪೇರೋ ಹಾಗೂ ಅನ್ಯ ವಿದ್ವಾಂಸರ ಕಥಾನುಸಾರ ಮತ್ತು ಇಲ್ಲಿ ದೊರಕಿರುವ ಶಿಲಾಲೇಖದ ಆಧಾರದಿಂದ ಎರಡನೇ ಶತಾಬ್ಧಿಯಲ್ಲಿ "ಶ್ರೀಮಾರ" ಎಂಬೊಬ್ಬ ಹಿಂದೂ ರಾಜನ ರಾಜ್ಯವಿತ್ತು ಎಂದು ನಿಶ್ಚಿತವಾಗಿ ಹೇಳಬಹುದು. ವಸ್ತುತಃ ಶ್ರೀಮಾರನೇ ಚಂಪಾದಲ್ಲಿ ಹಿಂದೂರಾಜ್ಯದ ಸಂಸ್ಥಾಪಕನೆಂದು ತಿಳಿಯಲಾಗುತ್ತದೆ.

ಶಿಲಾಲೇಖ ಕ್ರಮಾಂಕ ೨ರಿಂದ ೬ರ ವರೆಗಿನ [ಶ್ರೀ ಆರ್. ಸಿ. ಮಜುಂದಾರರ "ಏನ್ಶಿಯಂಟ್ ಇಂಡಿಯನ್ ಕಾಲೋನಿಜ್ ಇನ್ ಫಾರ್ ಈಸ್ಟ್, ಚಂಪಾ] ವುಗಳನ್ನು ನೋಡಿದಾಗ ೫ನೇ ಶತಾಬ್ಧಿಯಲ್ಲಿ ರಾಜ ಭದ್ರವರ್ಮನು ಇಲ್ಲಿ ರಾಜ್ಯವಾಳುತ್ತಿದ್ದನೆಂದು ತಿಳಿದು ಬರುತ್ತದೆ. ಈತನ ಪೂರ್ತಿ ಹೆಸರು ಧರ್ಮ ಮಹಾರಾಜ ಶ್ರೀ ಭದ್ರವರ್ಮನ್ ಎಂದು. ಈತನೇ ಭದ್ರೇಶ್ವರ ಸ್ವಾಮಿಯ ಹೆಸರಿನಲ್ಲಿ ಇತಿಹಾಸ ಪ್ರಸಿದ್ಧವಾದ ಶಿವ ಮಂದಿರವೊಂದನ್ನು ಮಾಯಿಸೋನ್‌ನಲ್ಲಿ ಕಟ್ಟಿಸಿದ.

ಭದ್ರವರ್ಮನ ಬಳಿಕ ಆತನ ಪುತ್ರ ಗಂಗರಾಜನು ರಾಜ್ಯದ ಅಧಿಕಾರಿಯಾದನು. ಗಂಗರಾಜನು ತನ್ನ ಕೊನೆಯ ದಿನಗಳಲ್ಲಿ ರಾಜ್ಯವನ್ನು ತ್ಯಜಿಸಿ, ಗಂಗಾದಡಕ್ಕೆ ಬಂದು ನೆಲೆಸಿದನು ಎಂದು ಶಿಲಾಲೇಖ ಕ್ರಮಾಂಕ ೧೨ರಿಂದ ವಿದಿತವಾಗುತ್ತದೆ.

ಹೆಚ್ಚು ಕಡಮೆ ೬ನೇ ಶತಾಬ್ಧಿಯಲ್ಲಿ ರುದ್ರವರ್ಮನು ಇಲ್ಲಿಯ ರಾಜನಾದನು. ಈತನ ಕಾಲದಲ್ಲಿ ಶತ್ರುಗಳು ಭದ್ರವರ್ಮನ್ ಮೂಲಕ ನಿರ್ಮಿತವಾದ ಭದ್ರೇಶ್ವರ ಸ್ವಾಮಿಯ ಪ್ರಸಿದ್ಧ ಶಿವ ಮಂದಿರವನ್ನು ಸುಟ್ಟು ಹಾಕಿದ್ದರು ಈ ರೀತಿಯ ಉಲ್ಲೇಖವು ನಮಗೆ ಶಿಲಾಲೇಖ ಕ್ರಮಾಂಕ ೭ರಲ್ಲಿ ದೊರಕುತ್ತದೆ. ರುದ್ರವರ್ಮನ ಬಳಿಕ ಆತನ ಪುತ್ರ ಶಂಭುವರ್ಮನ್ ರಾಜನಾದನು ಆತನ ತನ್ನ ತಂದೆಯ ಕಾಲದಲ್ಲಿ ಜೀರ್ಣವಾದ ಶಿವ ಮಂದಿರವನ್ನು ಪುನಃ ಪ್ರತಿಷ್ಠಾಪಿಸಿ, ಅದಕ್ಕೆ "ಶಂಭು ಭದ್ರೇಶ್ವರ" ಎಂದು ಹೆಸರಿಟ್ಟನು.

ಸನ್ ೭೫೭ರ ನಂತರ ಚಂಪಾದ ಪಾಂಡುರಂಗ ಎಂಬ ಹೆಸರಿನ ಹೊಸ ರಾಜ್ಯವಂಶದ ಸ್ಥಾಪನೆಯಾಯಿತು ಪ್ರಥ್ವೀಂದ್ರವರ್ಮನ್ ಈ ರಾಜ್ಯದ ಸ್ಥಾಪಕನಾಗಿದ್ದನು ಇವರ ರಾಜ್ಯದ ವಿಸ್ತಾರವು ಸಂಪೂರ್ಣ ಚಂಪಾದ ಹರಡಿ ಕೊಂಡಿತ್ತು. ಪ್ರಥ್ವೀಂದ್ರವರ್ಮನ್‌ನ ಬಳಿಕ ಸತ್ಯವರ್ಮನ್ ರಾಜ್ಯದ ಅಧಿಕಾರಿಯಾದನು. ಈತನ ಶಾಸನ ಕಾಲದಲ್ಲಿ ಕೆಲವು ಆಕ್ರಮಣಕಾರಿಗಳು ಚಂಪಾದ ಮೇಲೆ ಆಕ್ರಮಣ ಮಾಡಿ, ಮುಖಲಿಂಗ ಸ್ಥಾಪಿತವಾಗಿದ್ದ ಒಂದು ಮಂದಿರವನ್ನು ಹಾಳುಗೊಳಿಸಿದರು. ಸನ್ ೭೮೪ರಲ್ಲಿ ಸತ್ಯವರ್ಮನ್‌ನ ಸಹೋದರಿಂದ ಗಂಡ ಹರಿವರ್ಮನ್‌ನ ಕೈಗೆ ರಾಜ್ಯಸೂತ್ರ ಬಂತು. "ರಾಜಾಧಿರಾಜ ಶ್ರೀ ಚಂಪಾಪುರ ಪರಮೇಶ್ವರ" ಎಂಬುದು ಈತನ ಬಿರುದಾಗಿತ್ತು.

ಸನ್ ೮೭೫ರಲ್ಲಿ ಎರಡನೇ ಇಂದ್ರವರ್ಮನ್‌ನ ಮೂಲಕ ಇಲ್ಲಿ ಭೃಗುವಂಶ ಸ್ಥಾಪನೆಯಾಯಿತು. ಇದೇ ರೀತಿ ಹಿಂದೂ ರಾಜರುಗಳ ಮೂಲಕ ಇಲ್ಲಿ ಅನೇಕ ಶತಾಬ್ಧಿಗಳ ವರೆಗೆ ರಾಜ್ಯವಾಳಿದ ಬಳಿಕ ಸನ್ ೧೪೭೧ರಲ್ಲಿ ಅನಾಮಿಗಳು ಇಲ್ಲಿಗೆ ಒಂದು ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು ಇವರ ಬಳಿಕವೇ ಚಂಪಾ ಎಂಬ ಹೆಸರು. "ಅನಾಮ" ಎಂದಾಯಿತು

ಚಂಪಾದ ಸಾಮಾಜಿಕ ವ್ಯವಸ್ಥೆ ನಮ್ಮ ಪ್ರಾಚೀನ ಭಾರತದ ಸಮಾಜ ವ್ಯವಸ್ಥೆಯನ್ನು ಹೆಚ್ಚು ಕಡಮೆ ಹೋಲುತ್ತಿತ್ತು. ಭಾರತದಂತೆ ಇಲ್ಲೂ ಕೂಡಾ ನಾಲ್ಕು ವರ್ಣಗಳು—ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ— ಇದ್ದುವು ಬ್ರಾಹ್ಮಣರಿಗೆ ಮತ್ತು ಕ್ಷತ್ರಿಯರಿಗೆ ಅಧಿಕ ಪ್ರಾಧಾನ್ಯವಿತ್ತು. ಏಕೆಂದರೆ ಭಾರತದಿಂದ ಚಂಪಾಕ್ಕೆ ಬಂದಿರುವ ಜನರು ಅಧಿಕವಾಗಿ ಇದೇ ಎರಡು ವರ್ಣದವರಾಗಿದ್ದರು. ಬ್ರಾಹ್ಮಣ ಮತ್ತು ಕ್ಷತ್ರಿಯ ವರ್ಣಗಳವರೊಳಗೆ ಅಂತರ್ಜಾತೀಯ ವಿವಾಹ ಪ್ರಚಲಿತವಿತ್ತೆಂದು ಚಂಪಾದ ಭಾರತೀಯ ರಾಜವಂಶಗಳ ಇತಿಹಾಸದಿಂದ ವಿದಿತವಾಗುತ್ತದೆ. ಸಮಾಜದಲ್ಲಿ ಬ್ರಾಹ್ಮಣರ ಸ್ಥಾನವು ಸರ್ವೋಪರಿಯಾಗಿತ್ತು ಆದರೆ ಪ್ರಾಚೀನ ಭಾರತದಲ್ಲಿದ್ದಂತೆ ಅವರು ದೇಶದ ರಾಜನೀತಿಯ ಸಂಚಾಲನ ಮಾಡುತ್ತಿರಲಿಲ್ಲ.

ಚಂಪಾದಲ್ಲಿ ವೈವಾಹಿಕ ಸಂಬಂಧವೆ ಹೆಚ್ಚು ಕಡಮೆ ಭಾರತದ ರೀತಿಯಲ್ಲೇ ನಡೆಯುತ್ತಿತ್ತು. ಸತೀ ಪದ್ಧತಿಯು ಅಲ್ಲಿ ಪ್ರಚಲಿತವಾಗಿತ್ತು. ಅಲ್ಲಿಗೆ ಹೋಗಿದ್ದ ಒಬ್ಬ ವಿದೇಶೀ ಯಾತ್ರಿಕನು ಹೀಗೆ ಬರೆದಿದ್ದ: "ಇಲ್ಲಿ ಯಾರಾದರೂ ಒಬ್ಬ ಮನುಷ್ಯ ಸತ್ತರೆ, ಆತನೊಡನೆ ಆತನ ಪತ್ನಿ ಕೂಡಾ ಅಗ್ನಿಕುಂಡಕ್ಕೆ ಬಿದ್ದು ಸಾಯುತ್ತಾಳೆ. ಏಕೆಂದರೆ ಪರಲೋಕದಲ್ಲಿ ಕೂಡಾ ಸ್ತ್ರೀಯು ತನ್ನ ಪತಿಯೊಡನೆ ಇರಬೇಕೆಂಬುದು ಇವರ ವಿಶ್ವಾಸವಾಗಿತ್ತು " ಯಾವ ಸ್ತ್ರೀಯು ತನ್ನ ಪತಿಯೊಡನೆ ಅಗ್ನಿಕುಂಡಕ್ಕೆ ಬಿದ್ದು ಸಾಯುತ್ತಿಲ್ಲವೋ, ಆಕೆ ಪೂರ್ಣ ಆದರ್ಶ ಹಿಂದೂವಿ ಧವೆಯಂತೆ ಸಮಸ್ತ ಸುಖ ಮತ್ತು ವಿಲ

(೧೨ನೇ ಪುಟ ನೋಡಿರಿ)

ಇದೀಗ ಜಗತ್ತಿನಲ್ಲೆಲ್ಲಾ ಪ್ರೀತಿ ಮತ್ತು ಸಹೋದರಭಾವದ ಚಿಹ್ನೆಯಾಗಿ ಉಡುಗೊರೆಗಳನ್ನು ಸಾಂಪ್ರದಾಯಿಕವಾಗಿ ವಿನಿಮಯ ಮಾಡಿಕೊಳ್ಳುವ ಸಂತೋಷ ಮತ್ತು ಸಮಾರಂಭದ ಸಮಯ.

ಟಿಬಿ ಮುದ್ರೆಗಳನ್ನು ಕೊಂಡುಕೊಂಡು ನಿಮ್ಮ ಕ್ರಿಸ್‌ಮಸ್ ಶುಭಾಶಯ ಕಾರ್ಡುಗಳಿಗೆ, ಮತ್ತು ಉಡುಗೊರೆಯ ಕಟ್ಟುಗಳಿಗೆ ಅಂಟಿಸಿರಿ. ಇದು ಕ್ಷಯರೋಗದಿಂದ ಬಳಲುವವರಿಗಾಗಿ ನೀವು ಮಾಡುವ ನೇರ ಸಹಾಯವಾಗಿದೆ.

ಒಂದು ಟಿಬಿ ಮುದ್ರೆಯ ಬೆಲೆ ಬರೇ ಹತ್ತು ನಯೇ ಪೈಸೆ.

ಮುದ್ರೆಗಳು ದೊರೆಯುವ ಸ್ಥಳಗಳು:

(1) ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್‌ಡನ್ ಟಿ ಬಿ. ಕ್ಲಿನಿಕ್ ಮತ್ತು ಡಿಸ್ಪೆನ್ಸರಿ, ಕೆಂಪೇ ಗೌಡ ರೋಡ್, ಬೆಂಗಳೂರು ಸಿಟಿ (2) ಮಹಿಳಾಮಂಡಲ ಮತ್ತು ಶ್ರೀ ಬಸವೇಶ್ವರ ದೇವಸ್ಥಾನ, ಪಂಚ್ ಕಮಿಟಿ. ಕಲ್ಯಾಣಿ, ಗ್ರೈನ್ ಮರ್ಚಂಟ್ಸ್ ಎಸೋಸಿಯೇಶನ್ ಮತ್ತು ಭಾರತ ಸಮಾಜ, ಬೀದರ್. (3) ದೈವಜ್ಞ ವೆಲ್‌ಫೇರ್ ಸೆಂಟರ್, ಲಕ್ಷ್ಮೀನಾರಾಯಣ ಟೆಂಪ್ಲ್ ಕಂಪೌಂಡ್, ಬಸವನಗುಡಿ, ಮಂಗಳೂರು. (4) ಗೌರವ ಕಾರ್ಯದರ್ಶಿ, ದಕ್ಷಿಣ ಕನ್ನಡ ಜಿಲ್ಲಾ ಟಿ. ಬಿ ಕಮಿಟಿ, ಗವರ್ನಮೆಂಟ್ ವೆನ್‌ಲೊಕ್ ಹೊಸ್ಪಿಟಲ್, ಮಂಗಳೂರು. (5) ಶ್ರೀ ಯಲ್. ಯಸ್. ಕಾಮತ್, ವ್ಯವಸ್ಥಾಪಕ ಭಾರತ ಸೇವಾ ಸಮಾಜ, ಕೆನರಾ ಕಾಲೇಜ, ಕುಮಟಾ. (6) ಅಧ್ಯಕ್ಷೆಯರು, ಮಹಿಳಾ ಸಮಾಜ, ಕಾರವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ಧಾಪುರ, ಹಳಿಯಾಳ್, ಸುಪಾ ಮತ್ತು ಯಲ್ಲಾಪುರ.

ಭಾರತದಲ್ಲಿ ಹತ್ತನೇ ಕ್ಷಯರೋಗ ಮುದ್ರೆ ಮಾರಾಟ ಚಳವಳಿ

(ದಿ ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಡಿಲ್ಲಿ, ಇವರಿಂದ ಪ್ರಾರಂಭಿಸಲ್ಪಟ್ಟುದು.)

Space kindly donated by:

MESSRS. MAFATLAL GAGALBHAI & CO. PRIVATE LTD., BOMBAY.

ಮಾನವ ಸಾಹಸ

ಧ್ರುವ ದೇಶಗಳ ಹವಾಮಾನ ಪರಿವರ್ತನೆ

ಬೇರಿಂಗ್ ಕೊಲ್ಲಿಯಲ್ಲಿ ಉತ್ತರ ಧ್ರುವಸಾಗರ—ಶಾಂತಸಾಗರಗಳನ್ನು ಪ್ರತ್ಯೇಕಿಸಿ, ಬಿಸಿನೀರು ಹಾಯಿಸಿದರೆ, ಧ್ರುವದ ಹಿಮ ಕರಗಿ ಹವಾಮಾನವೇ ಪರಿವರ್ತಿತವಾಗಬಹುದು. ದ್ರುತಗತಿಯ ವಿಜ್ಞಾನಕ್ಕಿದು ಅಸಂಭವವೆ?

ಇಂದು ಪ್ರಪಂಚವು ವಿಜ್ಞಾನಪಥದಲ್ಲಿ ಬಹಳಷ್ಟು ಮುಂದುವರಿದಿದೆ; ಆದರೆ, ಈ ಸಾಧಿಸಿದ ಪ್ರಗತಿಯಿಂದಲೇ ಇಂದಿನ ಮಾನವ ತೃಪ್ತಿಪಟ್ಟುಕೊಳ್ಳುವಷ್ಟು ಮೂರ್ಖನಾಗಿಲ್ಲ. ಜಗತ್ತಿನ ವಿಜ್ಞಾನಕ್ಷೇತ್ರದಲ್ಲಿ ಇತ್ತೀಚೆಗೆ ಸೋವಿಯತ್ ರಶ್ಯವು ಮಾಡಿದ ಗಣನೀಯ ಸಾಹಸ ಮತ್ತು ಗಳಿಸಿದ ಅಸಂಭಾವ್ಯ ಯಶಸ್ಸುಗಳು ಆದರ ಇನ್ನೂ ಅಧಿಕತಮವೆನಿಸಿದ ಸಂಶೋಧನೆಯಲ್ಲಿ ವ್ಯಕ್ತವಾಗಲು ಪ್ರೋತ್ಸಾಹವನ್ನೂ ಧೈರ್ಯವನ್ನೂ ತಂದುಕೊಟ್ಟಂತಾಗಿದೆ. ರಶ್ಯವು ಚಂದ್ರಲೋಕಕ್ಕೆ ಮಾನವನು ಪ್ರಯಾಣಿಸುವ ಸಾಧ್ಯಾಸಾಧ್ಯತೆಯೊಂದೆಡೆಯಲ್ಲಿ ವಿವೇಚಿಸಲ್ಪಡುತ್ತಿರುವುದಾದರೆ, ಮತ್ತೊಂದೆಡೆಯಲ್ಲಿ ಅದು ಉತ್ತರ ಧ್ರುವವೃತ್ತದ ಉತ್ತರದಲ್ಲಿರುವ ದೇಶಗಳ ಹವೆಯನ್ನೇ ಬದಲಾಯಿಸುವ ಪ್ರಯತ್ನದಲ್ಲಿ ತತ್ಪರವಾಗಿದೆ. ಈ ಆಶೆಯು ಇಂದು ರಶ್ಯದ ಜನತೆಯ ಮೇಲೆ ಸವಾರಿ ಮಾಡುತ್ತಿದೆಯೆನ್ನಬಹುದು. ಯುರೋಪು, ಉತ್ತರ ಅಮೇರಿಕೆ ಮತ್ತು ಏಶ್ಯ ಭೂಖಂಡಗಳ ಉತ್ತರ ಪ್ರದೇಶದಲ್ಲಿ ಇಂದು ಆಧಿಪತ್ಯ ನಡೆಸುತ್ತಿರುವ ದುರುಳ ಹಿಮರಾಜನನ್ನು ಪದಚ್ಯುತಗೆಯಿಂದಿಳಿಸಿ ಬಿಡುವ ಭಗೀರಥ ಪ್ರಯತ್ನವನ್ನು ಅದು ಮುಂದುವರಿಸುತ್ತಿದೆ. ಯಾವ ವಿಧದಿಂದ ಆತನನ್ನು ಪರಾಜಿತಗೊಳಿಸಬಹುದೆಂದು ಚಿಂತಿತವಾಗಿದೆ. ರಶ್ಯದ ಈ ಕಲ್ಪನೆಯು ಕೇವಲ ಕಲ್ಪನೆಯು, ಭೂಮ ಸಾಮ್ರಾಜ್ಯದ ಆಧಿಪತ್ಯವೂ ಕೂಡ! ಅಥವಾ ಅಡುಗೂಲಜ್ಜಿಯ ಮನರಂಜನೆ ಹಾರಿಯೆನಿಸಿದ ದಂತ ಕಥೆ ಮೊದಲಾದವುಗಳಲ್ಲಿ ತಮ್ಮ ಈ ಸಂಭಾವ್ಯ ಯೋಜನೆಯನ್ನು ಕಾರ್ಯಗತಗೊಳಿಸುವ ಮಾರ್ಗಗಳನ್ನೂ ವಿಧಾನಗಳನ್ನೂ ಅವರು ತಿಳಿದಿದ್ದಾರೆ. ತೋರಿಕೆಯ ಮಟ್ಟಿಗೆ ಈ ವಿಧಾನವು ದುಸ್ಸಾಧ್ಯವೆಂದು ಕಾಣಬಹುದು; ಆದರೆ, ಆಧುನಿಕ ಇಂಜಿನಿಯರರಿಗೆ ಅಸಾಧ್ಯವೆಂಬುದಿಲ್ಲವೆಂಬುದನ್ನು ನಾವು ಅವಶ್ಯ ಗಮನಿಸಬೇಕು.

ರಶ್ಯದ ಈ ಯೋಜನೆಯ ಕೇಂದ್ರವೆಂದು ಸೈಬೀರಿಯಾದ ಪೂರ್ವತೀರ ಮತ್ತು ಅಲಾಸ್ಕಾದ ಪಶ್ಚಿಮ ಕರಾವಳಿಗಳನ್ನು ಒಂದನ್ನೊಂದು ಪ್ರತ್ಯೇಕಿಸುವ ಮತ್ತು ಶಾಂತ ಮತ್ತು ಉತ್ತರ ಧ್ರುವಸಾಗರಗಳನ್ನು ಜೋಡಿಸುವ ಬೇರಿಂಗ್ ಕೊಲ್ಲಿಯಲ್ಲಿದೆ. ಇದು ಕಡಿಮೆಯೆಂದರೆ ಸುಮಾರು ೧೫೦ ಅಡಿ ಆಳವಿದ್ದು, ಹೆಚ್ಚೆಂದರೆ ೫೦ ಮೈಲು ಅಗಲವಿರುವುದು. ರಶ್ಯನ್ ವಿಜ್ಞಾನಿಗಳ ಯೋಜನೆಯ ಆಶಯಗಳು ಈ ಒಂದು ಚಿಕ್ಕ ಪ್ರದೇಶದಲ್ಲಿವೆ.

ಉತ್ತರ ಧ್ರುವಸಾಗರ ಮತ್ತು ಶಾಂತಸಾಗರಗಳು ಪರಸ್ಪರ ವಿಪರೀತ ಗುಣವುಳ್ಳವುಗಳಾಗಿವೆ. ಮೊದಲನೆಯದು ಅತಿ ಶೀತೋದಕಯುಕ್ತವಾಗಿರುವುದಾದರೆ, ಎರಡನೆಯದು ಅತಿ ಉಷ್ಣೋದಕ ಸಹಿತವಾಗಿರುವುದು. ಈಗ ಮಾಡಬೇಕಾದ ಕೆಲಸವು ಅತ್ಯಲ್ಪವೇ. ಯಾವುದೇ ಒಂದು ರೀತಿಯಿಂದ ಶಾಂತ ಸಾಗರದ ಬೆಚ್ಚಗಿನ ನೀರು ಉತ್ತರ ಧ್ರುವಸಾಗರದ ತಣ್ಣೀರಿನಲ್ಲಿ ಬೆರೆಯುವಂತಾಯಿತೆಂದರೆ, ಆಗ ಧ್ರುವವೃತ್ತದ ಉತ್ತರಕ್ಕಿರುವ ಹಿಮವೆಲ್ಲವೂ ಕರಗಿಬಿಡುವುದು; ತತ್ಪರಿಣಾಮವಾಗಿ ಆ ಪ್ರದೇಶದ ಹವಾಮಾನವೂ ಬದಲಾಯಿಸಿ ಹೋಗುವುದು.

ಈಗ, ಈ ರೀತಿ ಒಂದು ಸಾಗರದಿಂದ ಇನ್ನೊಂದಕ್ಕೆ ನೀರು ಹಾಯಿಸುವುದು ಹೇಗೆ ಎಂದು ವಿಚಾರಿಸಬಹುದು. ಮೊತ್ತಮೊದಲಿಗೆ ಬೇರಿಂಗ್ ಜಲಸಂಧಿಯಲ್ಲಿ ಎರಡು ಸಾಗರಗಳ ನಡುವೆ ಕಟ್ಟ ಕಟ್ಟಬೇಕು. ಈ ನಿಯೋಜಿತ ಅಣೆಕಟ್ಟಿನ ಪರಿಮಾಣವು ಮೂರು ಕೋಟಿ ಅರುವತ್ತಾರು ಚದರ ಅಡಿಗಳಾಗಬಹುದು. ಕೇಳುವಾಗ ಈ ಅಣೆಕಟ್ಟಿನ ರಚನೆಯು ಅಸಂಭವವೆಂದು ಕಂಡರೂ ಇಂದಿನ ಕಾಲದಲ್ಲಿದು ನಿಜವಾಗಿಯೂ ಸಾಧ್ಯವೇ ಸರಿ. ಈ ಅಣೆಕಟ್ಟಿನಿಂದ ನಮಗೆ ಮುಖ್ಯವಾಗಿ ಎರಡು ಪ್ರಯೋಜನಗಳಿವೆ. ಮೊದಲನೆಯದಾಗಿ, ಧ್ರುವ ಪ್ರದೇಶದ ಕೋಟಿಗಟ್ಟಲೆ ಎಕ್ರೆ ಭೂಮಿಯಲ್ಲಿ ಈಗ ಜನ ವಸತಿಯಿಲ್ಲವಾದರೂ ಹಿಮಾಚ್ಛಾದಿತಕೊಂಡಿದ್ದರೂ ಆ ಮೇಲೆ ಅದರಲ್ಲಿ ಕೃಷಿಯನ್ನು ಮಾಡಬಹುದು; ಪಶು ಪಕ್ಷಿಗಳನ್ನು ಸಾಕಬಹುದು; ಮತ್ತು ಎರಡನೆಯದಾಗಿ, ಅಮೇರಿಕ ಏಶ್ಯಾಗಳ ನಡುವಿರುವ ಬೇರಿಂಗ್ ಕೊಲ್ಲಿಯಲ್ಲಿ ಹಡಗುಗಳೂ ಸಂಚರಿಸಬಹುದು.

ಉತ್ತರಧ್ರುವ ವೃತ್ತವು ಜಗತ್ತಿನ ಹವೆಯ ಕಾರಖಾನೆಯೆಂದು ಹೇಳುತ್ತಾರೆ. ಇಲ್ಲಿಯೇ ಹುಟ್ಟಿದ ಚಳಿಯು ಉತ್ತರ ದೇಶಗಳನ್ನು ಕಬಳಿಸುತ್ತದೆ. ಯುರೋಪು, ಅಮೇರಿಕೆ ಮತ್ತು ಏಶ್ಯಗಳ ಉತ್ತರದ ದೇಶಗಳನ್ನು ಹಿಮದೇಶವಾಗಿ ಮಾಡುವ ಹಿಮಗಾಳಿಯು ಇಲ್ಲಿಂದಲೇ ಬೀಸುತ್ತದೆ.

ಬೇರಿಂಗ್ ಅಣೆಕಟ್ಟಿನ ಕಲ್ಪನೆಯನ್ನು ರಶ್ಯನರು ೧೯೨೦ರಲ್ಲಿ ಮೊತ್ತಮೊದಲಿಗೆ ಮಾಡಿದ್ದರು. ಆಗ ಲೆನಿನ್‌ನು ಗ್ಲೇಬ್ ಕ್ರಿಶ್ಝೊವಾಸ್ಕಿಯೆಂಬ ಸಮರ್ಥ ನಿರ್ಮಾಪಕನಿಗೆ ಈ ಬಗ್ಗೆ ಆವಶ್ಯಕ ನಕ್ಷೆಗಳನ್ನು ಬಿಡಿಸಲು ಆದೇಶವಿತ್ತಿದ್ದನು. ಕ್ರಿಶ್ಝೊವಾಸ್ಕಿಯ ಯೋಜನೆಯಲ್ಲಿ ಈ ಅಣೆಕಟ್ಟು ಯಾತಾಯಾತದ ಮಾರ್ಗವಾಗಿಯೂ ಇರಬೇಕೆಂಬುದು ಕೂಡ ಒಂದಾಗಿತ್ತು. ಈ ಉದ್ದೇಶವು ಇಂದಿನ ಯೋಜನೆಯಲ್ಲೂ ಸೇರಿಕೊಂಡಿದೆ. ಇದರಿಂದ ಪೇರಿಸ್‌ನಿಂದ ನ್ಯೂಯಾರ್ಕಿನವರೆಗೆ ನೇರವಾಗಿ ರೇಲು ಮಾರ್ಗ ಕೊಂಡು ಹೋಗುವ ಸಾಧ್ಯತೆಯಿದೆ. ಪೇರಿಸ್‌ನಿಂದ ರೈಲಿನಲ್ಲಿ ಹೊರಟು ಯುರೋಪು ಏಶ್ಯಗಳನ್ನು ದಾಟಿ ಬೇರಿಂಗ್ ಅಣೆಕಟ್ಟನ್ನು ಹಾದು ಅಲಾಸ್ಕಾ ಕೆನೆಡಗಳ ದಾರಿಯಾಗಿ ನ್ಯೂಯಾರ್ಕಿಗೆ ಮಾನವನು ಮುಟ್ಟಲು ಸಮರ್ಥವಾದ ದಿನವೇ ಮಾನವನ ಶಕ್ತಿಯು ಬಹ್ವಂಶ ಪ್ರಕಟವಾಗುವುದೆನ್ನಬಹುದು. ಅದೇ ಆತನ ಶಕ್ತಿಯ ವಿಜಯದ ಶಿಖರವಾಗುವುದು.

ಬೇರಿಂಗ್ ಅಣೆಕಟ್ಟಿನಿಂದ ಉತ್ತರ ಧ್ರುವದ ಶೀತವನ್ನು ತಡೆಯುವ ವಿಧಾನವನ್ನು ಈಗಾಗಲೇ ಕಂಡು ಹಿಡಿದಿದ್ದಾರೆ. ಅಣುಶಕ್ತಿ ಚಾಲಿತ ಪಂಪುಗಳ ಮೂಲಕ ಶಾಂತಸಾಗರದ ನೀರನ್ನು ಉತ್ತರ ಧ್ರುವ ಸಾಗರಕ್ಕೆ ಹಾಯಿಸಬೇಕು. ಈ ರೀತಿ ನೀರಿನ ಹಾಯಿಸುವಿಕೆಯಿಂದ ಉಂಟಾಗುವ ಉಷ್ಣವು ಪ್ರಪಂಚದ ಒಟ್ಟು ತೈಲದಿಂದ ಉತ್ಪಾದಿಸಬಹುದಾದ ಉಷ್ಣಕ್ಕಿಂತ ಮುಪ್ಪಟ್ಟು ಹೆಚ್ಚೆಂದು ಸುಪ್ರಸಿದ್ಧ ರಶ್ಯನ್ ಇಂಜಿನಿಯರ್ ಮಾರ್ಕನಿಯೆಂಬವನು ಹೇಳುತ್ತಾನೆ.

ಅತ್ಲಾಂತಿಕ ಸಾಗರದ ಉಷ್ಣ ಪ್ರವಾಹಗಳು ಯುರೋಪದ ಉತ್ತರ ಭಾಗದಿಂದ ಹರಿದು, ಮುಂದುವರಿದು, ರಶ್ಯದ ಉತ್ತರದ ನೊವಾಯ ಝೆಮುಲ್ಯಾ ದ್ವೀಪಸಮೂಹದ ವರೆಗೆ ಬಡೆಯುತ್ತವೆ. ಉತ್ತರ ಧ್ರುವದಿಂದ ಹೆರಡುವ ಶೀತವು ನಾರ್ವೆ, ಸ್ವೀಡನ್, ಸೈಬೀರಿಯಾ, ಅಲಾಸ್ಕಾ ಉತ್ತರ ಕೆನಡ, ಗ್ರೀನ್‌ಲೆಂಡ್‌ಗಳತ್ತ ಪಸರಿಸುತ್ತದೆ. ಈ ನಿಯೋಜಿತ ಬೇರಿಂಗ್ ಅಣೆಕಟ್ಟಿನಿಂದಾಗಿ ಶಾಂತಸಾಗರದ ನೀರು ಧ್ರುವ ಮಹಾಸಾಗರಕ್ಕೆ ಹರಿಯುವುದರಿಂದ, ಪರಿಸ್ಥಿತಿಯು ಸಂಪೂರ್ಣ ವಿಪರ್ಯಾಸವಾಗುವುದು. ವೈಜ್ಞಾನಿಕರು ಇದರ ಸುಖಸ್ವಪ್ನ ಕಾಣುತ್ತಿರುವರು. ಇಂದಿನ ವೈಜ್ಞಾನಿಕರ ಕನಸನ್ನು ಬರೇ ಕನಸು ಎಂದು ತಿಳಿದುಕೊಂಡರೆ ಅದೇ ಒಂದು ಕನಸಾಗುವುದು. ಸೋವಿಯತ್ ವೈಜ್ಞಾನಿಕರು ಈ ಮಹಾ ಸಾಹಸದಲ್ಲಿ ಮುಂದೊತ್ತುವುದು ಮಾತ್ರವಲ್ಲದೆ ಯಶಸ್ವಿಗಳೂ ಆಗುವುದು ಖಂಡಿತ. ವಿಶ್ವೇತಿಹಾಸದಲ್ಲಿ ಚಿರಸ್ಮರಣೀಯವೆನಿಸುವ ಆ ದಿನವು ಎಂದು ಬರುವುದೆಂದು ಈಗಲೇ ನಿರ್ಧಾರವಾಗಿ ಹೇಳುವಂತಿಲ್ಲ. ಆದರೂ ಅದು ಅತಿ ನಿಕಟದಲ್ಲಿಯೇ ಬರುವುದು.



ಉತ್ತಮ ಭಾಷಣಕರ್ತ ಸಾಂತಿಜೊತ ಐಸನ್ ಹಾವರರ ಭಾಷಣವನ್ನು ರಿಕಾರ್ಡ್ ಮಾಡಿ "ವ್ಹಾಯ್ಸ್ ಆಫ್ ಅಮೇರಿಕಾ"ದಲ್ಲಿ ಬಿತ್ತರಿಸಲಾಗುತ್ತದೆ.

ದಿ. ಕೆಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ, ದ.ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ಮಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಸದ್ರಿಯವರಿಗೆ ರಿಜಿಸ್ಟ್ರ ನೋಟೀಸು ಕೊಟ್ಟಲ್ಲಿ ಸಹಾ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರಿಗೆ ವ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ— ಸದ್ರಿಯವರ ಈಡಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 30-12-1959ರ ಒಳಗೆ ಬಿಡಿಸದಿದ್ದಲ್ಲಿ ತಾರೀಕು 7-1-1960ರಲ್ಲಿ ಬೆಳಗ್ಗೆ ಗಂಟೆ 11ಕ್ಕೆ ಯಾ ನಮಗೆ ಯುಕ್ತ ಕಂಡ ಇತರ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
34/222	ಗೋಪಾಲ ಪೂಜಾರಿ, ಕೊರಗ ಪೂಜಾರಿಯ ಅಳಿಯ, ನಡಂಬಳ್ಳಿ, ಕಲ್ಯಾಣಪುರ P. O.	10-00
34/337	ಫೀಟರ್ ಮೆಂಡೋನ್ಸ, ಸಲ್ವಾದರ್ ಮೆಂಡೋನ್ಸರ ಮಗ, ತೀರ್ಥಹಳ್ಳಿ, ತೀರ್ಥಹಳ್ಳಿ P O	20-00
34/1626	ಬಸವ ಸಾಲಿಯನ್, ಕಾಳಪ್ಪ ಸಾಲಿಯನರ ಅಳಿಯ, ಕಡವಿನ ಹತ್ತಿರ, ಕಲ್ಯಾಣಪುರ P O.	15-00
34/1757	ಜೋನ್ ಫುರ್ಟಡೋ, ಇನಾಸ್ ಫುರ್ಟಡರ ಮಗ ಬಪ್ಪಾಡಿ, ಬ್ರಹ್ಮಾವರ P. O.	215-00

Kallianpur,
19—12—1959.

S. REBELLO,
Agent.

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮಾನವನ ಮತ್ತು ಪಶುಗಳಲ್ಲಿ ತಿಲಾಂಶದಷ್ಟು ಮಾತ್ರ ಅಂತರ ವಿರುವುದು; ಮಾನವನು ಮನಸ್ಸಿನಲ್ಲಿ ಮನನಮಾಡಿ ಮುಂದುವರಿಯು ತ್ತಾನೆ; ಪಶು ಕಣ್ಣಿನಿಂದ ನೋಡಿಕೊಂಡು ಮುಂದುವರಿಯುತ್ತಿದೆ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೪-೧೨-'೫೯	೧೭

ಚೀನದ ನಕಾರೋತ್ತರ

ಪಂಚಶೀಲದ ಹೆಸರನ್ನು ನಾಲಗೆಯಲ್ಲಿ ಉಚ್ಚರಿಸಿ ಭಾರತದ ಮಿತ್ರತ್ವಕ್ಕೆ ಶೂಲ ವೆಸೆದ ಚೀನ ಸರಕಾರವು ಭಾರತ-ಚೀನಾಗಳ ನಡುವಿರುವ ಸೀಮಾವಿವಾದದ ಬಗ್ಗೆ ಮಾತುಕತೆಗಳನ್ನು ನಡೆಸಲು ತಾನು ಸಿದ್ಧವೆಂದೂ ಭಾರತದ ಪ್ರಧಾನಿಯವರು ದಶಂಬರ ೨೬ರಂದು ರಂಗೂನ ಇಲ್ಲವೇ ಚೀನದ ಯಾವುದೇ ಎಡೆಯಲ್ಲಿ ಭೆಟ್ಟಿಯಾಗ ಬೇಕೆಂದೂ ತಿಳಿಸಿದ್ದಾರೆ. ಈ ವಿಚಾರವಾಗಿ ಇದೇ ಸಂಚಿಕೆಯ ಬೇರೊಂದೆಡೆಯಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಭಾರತ-ಚೀನಗಳಲ್ಲಿ ಎರಡೂ ಯುದ್ಧವನ್ನು ಬಯಸುವುದಿಲ್ಲ; ಸಂಧಾನದ ಮೂಲಕವಾಗಿಯೇ ಈ ಬೃಹತ್ ಸಮಸ್ಯೆಯನ್ನು ಇತ್ಯರ್ಥನೆನಿಸಿಕೊಳ್ಳಲು ಕುತೂಹಲವನ್ನು ತೋರ್ಪಡಿಸುತ್ತಿರುವುದು ತುಸು ಸಮಾಧಾನದ ಸಂಗತಿ. ಆದರೆ, ಚೀನ ಸರಕಾರವು ಈ ಬಗ್ಗೆ ನಡೆದು ಬಂದ ದಾರಿಯನ್ನು ಸೂಕ್ಷ್ಮವಾಗಿ ಪರ್ಯಾಲೋಚನೆ ಮಾಡುವಾಗ, ಅದು ಸಂಧಾನ ಬಯಸುತ್ತಿದೆಯೆ? ಎಂಬ ಸಂದೇಹವು ಮೂಡುತ್ತಿದೆ.

ಉಭಯ ದೇಶಗಳೂ ತಮ್ಮ ಸೀಮೆಯೆಂದು ಹೇಳುವಲ್ಲಿಂದ ಉಭಯತರರೂ ಹಿಂದೆ ಸರಿದು, ಮುಂದೆ ಮಾತುಕತೆಗಳಿಗೆ ತೊಡಗುವ ಅವಕಾಶವನ್ನು ಕಲ್ಪಿಸಬೇಕೆಂಬ ಭಾರತೀಯ ಪ್ರಧಾನಿಯವರ ಸಲಹೆಯನ್ನು ಚೀನ ಸರಕಾರವು ನೆಲಕ್ಕೆಸೆದು ಮೆಟ್ಟಿ ಬಿಟ್ಟಿರುವುದು ಮಾತ್ರವಲ್ಲದೇ ಹೀಗೆ ತಾನು ಮಾಡಿದುದಾದರೆ, ಭಾರತಕ್ಕೇನೂ ನಷ್ಟವಿಲ್ಲ, ತಾನು ಮಾತ್ರ ೩೪ ಸಾವಿರ ಚದರ ಮೈಲು ಪ್ರದೇಶವನ್ನು ಕಳೆದುಕೊಂಡಂತಾಗುವುದು ಎಂದು ಉತ್ತರಿಸಿದೆ. ಇದರಿಂದಲೇ ಚೀನೀಯರ ಅಂತರ್ಯವೇನು? ಅದು ತನ್ನ ಗುರಿಯೆಂದು ಯಾವುದನ್ನಿಟ್ಟುಕೊಂಡಿದೆ ಎಂಬುದರ ಅರಿವು ನಮಗಾಗುವುದು. ಭಾರತವು ತನ್ನ—ಗಡಿಯೆಂದು ವಿಶ್ವವಿಖ್ಯಾತ ಮೆಕ್‌ಮೋಹನ ರೇಖೆಯನ್ನು ಹೇಳುತ್ತದೆ. ಚೀನವು ಅದನ್ನೊಪ್ಪದೆ, ಅದರ ದಕ್ಷಿಣದಲ್ಲೂ ತನ್ನ ಆಧಿಪತ್ಯವಿದೆಯೆನ್ನುತ್ತದೆ. ಈಗ ಚೀನಿ ಸೇನೆಯು ಮೆಕ್‌ಮೋಹನ ರೇಖೆಯನ್ನು ಮೀರಿ ಬಂದಿರುವುದರಿಂದ ಚೀನವು ಈ ಪ್ರದೇಶದಲ್ಲಿರುವ ತನ್ನ ಸೈನ್ಯವನ್ನು ಖಾಲಿಮಾಡಿ, ಆ ಸ್ಥಳವನ್ನು ತೆರವು ಮಾಡಬೇಕಾಗುವುದು. ಹೀಗೆ, ತಾನು ಅನ್ಯಾಯವಾಗಿ ಆಕ್ರಮಿಸಿಕೊಂಡ ಈ ಭೂಭಾಗದಿಂದ ಕಂಬಿ ಕೀಳುವುದು ನ್ಯಾಯೋಚಿತವಾದರೂ ಅನಕ್ಕೆ ಚೀನವು ಸಿದ್ಧವಿಲ್ಲ, ಎಂದರೆ, ತಾನು ಮಾಡಿದುದು ಆಕ್ರಮಣವೆಂದು ಒಪ್ಪುವ ಮಾತಂತೂ ದೂರವಿರಲಿ, ಆ ಬೆಟ್ಟಗಾಡುಗಳು ನಿರ್ಜನ ಹಿಮಾಚ್ಛಾದಿತ ಪ್ರದೇಶವನ್ನು ಬಿಟ್ಟು ತೊಲಗಲಿಕ್ಕೂ ತಯಾರಿಲ್ಲ ಎಂದಂತಾಯಿತು. ಹಾಗಿರುವಾಗ, ಇದೇ ಮಾದರಿಯ ಶೀತಲಯುದ್ಧವನ್ನು ಇನ್ನೂ ಬೆಳೆಸಿಕೊಂಡು ಹೋಗುವುದೇ ಚೀನದ ಬಯಕೆಯೆಂದು ತಿಳಿಯಬಹುದು. ಭಾರತವು ತನ್ನ ಸೀಮೆಯನ್ನು ಇಂದು ನಿನ್ನೆಯಿಂದ ಹೇಳುತ್ತಿಲ್ಲ. ಪ್ರಕೃತಿಮಾತೆಯೇ ಚೀನೀಯ ಸಾಮ್ರಾಜ್ಯ ಮತ್ತು ಭಾರತವನ್ನು ಪ್ರತ್ಯೇಕಿಸಿದೆ. ಪುರಾಣೇತಿಹಾಸಕಾಲದಿಂದಲೇ ಹಿಮಾಲಯವೇ ಭಾರತದ ಗಡಿಯಾಗಿದೆ. ಅಲ್ಲದೇ ಇತಿಹಾಸಾವಧಿಯಲ್ಲಿನ ಹಲವಾರು ದಾಖಲೆಗಳೂ ಇದನ್ನು ಪ್ರತಿಪಾದಿಸುತ್ತಿವೆ. ಕಳೆದ ಶತಮಾನದಲ್ಲೂ ಸುಪ್ರಸಿದ್ಧ ಸರ್ವೇಗಾರರು ಸರ್ವೆ ನಡೆಸಿ ಈ ಗಡಿಯನ್ನು ಗುರುತಿಸಿದ್ದಾರೆ. ಯಾವಾಗಲೂ ತಮ್ಮವರ ವಾದವನ್ನೇ ಪ್ರತಿಸಿದ್ಧೀಕರಿಸುವ ಭಾರತೀಯ ಕಮ್ಯುನಿಸ್ಟರೂ ಈ ಬಾರಿ ಕಮ್ಯುನಿಸ್ಟ್ ಚೀನದ ವಾದವನ್ನು ಅಲ್ಲಗಳೆದು ಮೆಕ್‌ಮಹೋನ ರೇಖೆಯೇ ಭಾರತ—ಚೀನಗಳ ಸೀಮೆಯೆಂದು ಒಪ್ಪಿಕೊಂಡಿದೆ. ಹಾಲು ಬೆಳ್ಳಗಿರುವುದು ಹೇಗೆ ಸತ್ಯವಾಗಿರುವಂತೆ ಭಾರತದ ಗಡಿಯಾದರೂ ಮೆಕ್‌ಮಹೋನ ರೇಖೆಯೆಂಬುದು ಭಾವಿಯ ನೀರಿನಷ್ಟು ತಿಳಿಯಾಗಿದೆ.

ಆದರೆ, ಚೀನವು ಇವೆಲ್ಲವನ್ನೂ ಮನಸ್ಸಿಗೆ ಹಚ್ಚಿಕೊಂಡಿಲ್ಲ. ಅದರ ಆಕ್ರಮಣ ನೀತಿಗೆ, ವಿಸ್ತಾರವಾದೀ ಮನೋವೃತ್ತಿಗೆ ಈ ಚಿರಸತ್ಯವು ಎಂದಿಗೂ ಹೊಳೆಯುವುದೂ ಇಲ್ಲ. ತಾನು ಉತ್ತರಿಸಲು ಒಂದು ತಿಂಗಳ ಕಾಲ ತೆಗೆದುಕೊಂಡ ಚೀನೀಯ ಪ್ರಧಾನಿ ಲಾಯ್ ಅವರು ನೆಹರುರವರಿಗೆ ಒಂದು ವಾರದ ಬಿಡುವನ್ನೂ ಸಂಪೂರ್ಣ ಕೊಡಲಿಲ್ಲವೆಂದಾಗ, ಈ ಮಾತುಕತೆಯ ಬಗ್ಗೆ ಅವರಲ್ಲಿ ಆಸಕ್ತಿಯೆಷ್ಟಿದ್ದೀತೆಂದು ಊಹಿಸಬಹುದು. ಸಂಧಾನದ ಭೆಟ್ಟಿ ಆಗಲೇ ಬಾರದು; ಆದರೂ ಆದರಲ್ಲಿ ವಿಶೇಷ ಚರ್ಚೆ ನಡೆಯದೆ ಅದು ಮುರಿಯಬೇಕು ಎಂಬವರ ಆಶಯವಿದ್ದಿರುವುದೇನೋ! ಆದರೆ, ಪ್ರಧಾನಿ ನೆಹರೂ ಈ ಸಮಸ್ಯೆಯ ಬಗ್ಗೆ ತಾಳ್ಮೆಯಿಂದಲೂ ಎಚ್ಚರಿಕೆಯಿಂದಲೂ ವರ್ತಿಸ ಹತ್ತಿದ್ದಾರೆ; ಎಂತಲೇ ಇಷ್ಟೊಂದು ಅವಸರದಲ್ಲಿ ಯಾವ ಸಿದ್ಧತೆಯೂ ಇಲ್ಲದೆ ಮಾತುಕತೆ ನಡೆಸುವುದರಿಂದ ಪ್ರಯೋಜನವಿಲ್ಲವೆಂದು ಕಂಡುಕೊಂಡಿದ್ದಾರೆ; ಇದನ್ನು ತಿಳಿಸಿಯೂ ಇದ್ದಾರೆ. ಇಲ್ಲಿಗೇ ಮುಗಿಯದೆ ಪೇಕಿಂಗದಲ್ಲಿಯ ಭಾರತೀಯ ರಾಯಭಾರಿಗೆ ಕರೆಕಳಿಸಿರುವರೆಂದೂ ತಿಳಿಯುತ್ತದೆ. ಅವರೊಡನೆ ವಿಶೇಷ ರೀತಿಯ ವಿಚಾರ ವಿನಿಮಯ ಮಾಡಿ, ಮುಂದಿನ ದಾರಿಯನ್ನು ಸುಗಮಗೊಳಿಸುವ ಸಾಧ್ಯಾಸಾಧ್ಯತೆಯ ಕುರಿತು ಪರಿಶೀಲನೆ ನಡೆಸುವರು. ಈ ವಿಷಯದಲ್ಲಿ, ಸಮಸ್ತ ಭಾರತೀಯರ ಬೆಂಬಲವು ಪ್ರಧಾನಿ ನೆಹರು ಅವರಿಗಿದೆ; ಅವರು ಈ ನೇತೃತ್ವದಿಯ ಕದನ ಪ್ರಸಂಗದಲ್ಲಿ ತೀರ ಜಾಗ್ರತೆಯಿಂದ ಮುಂದುವರಿಯುವರೆಂದು ಭಾರತೀಯರೆಲ್ಲರೂ ನಂಬಿದ್ದಾರೆ. ಚೀನದ ದಬ್ಬಾಳಿಕೆಗೆ ತಲೆಬಗ್ಗಿಸದೆ, ಭಾರತದ ಗರಿಮೆಗೆ ಕುಂದನ್ನು ತಂದುಕೊಳ್ಳದೆ ಅವರು ಮುಂದುವರಿಯುವರೆಂದು ಅವರಲ್ಲಿ ವಿಶ್ವಾಸವನ್ನೂ ಇಟ್ಟಿದ್ದಾರೆ.

ಸಂಕ್ಷಿಪ್ತ ಸುದ್ದಿಗಳು

ವರಿಷ್ಠ ಪರಿಷತ್ತು

ಪಾಶ್ಚಾತ್ಯ ಮಹಾರಾಷ್ಟ್ರಗಳ ನಾಯಕರಾದ ಐಸನ್ ಹಾವರ್, ಜನರಲ್ ಡಿಗಾಲೆ ಮತ್ತು ಹೆರಾಲ್ಡ್ ಮ್ಯಾಕಮಿಲನ್ ರವರು ಪೇರಿಸ್‌ನಲ್ಲಿ ಒಂದುಸೇರಿ ಮುಂದಿನ ಎಪ್ರಿಲ್ ಮಾಸದಲ್ಲಿ ಪೇರಿಸ್‌ನಲ್ಲಿ ಜಾಗತಿಕ ವರಿಷ್ಠರ ಸಮ್ಮೇಳನವನ್ನು ಸೇರಿಸಲು ಮತ್ತು ಅದರಲ್ಲಿ ರಶ್ಯವನ್ನೂ ಕೂಡಿಸಿಕೊಳ್ಳಲು ಒಪ್ಪಿಗೆಯನ್ನಿತ್ತರು. ಈ ಉಚ್ಚ ಮಟ್ಟದ ಪರಿಷತ್ತು ಎಪ್ರಿಲ್ ೨೭ ರಂದು ಸೇರುವುದು. ಜರ್ಮನಿಯ ಭವಿತವ್ಯದ ಬಗ್ಗೆ ರಶ್ಯದೊಡನೆ ಹೊಂದಿಕೊಂಡು, ಮುಂದೆ, ಬರ್ಲಿನ್ ಪ್ರಶ್ನೆಯನ್ನು ಚರ್ಚಿಸಬೇಕೆಂದು ಗೊತ್ತಾಗಿದೆ. ಆದರೆ, ತ್ರಿರಾಷ್ಟ್ರಗಳು ಬರ್ಲಿನದಲ್ಲಿ ತಮ್ಮ ಹೊಣೆಗಾರಿಕೆಗಳ ದೃಷ್ಟಿಯಿಂದ ಅಗತ್ಯವಿರುವಷ್ಟು [illegible] ಉಳಿಸಿಕೊಳ್ಳಲು ವ್ಯತ್ಯಯ ತರುವಂತಹ ಯಾವ ಕ್ರಮವನ್ನೂ ಒಪ್ಪಿಕೊಳ್ಳಬಾರದೆಂದು ಹೇಳಿದ್ದಾರೆ. ಈ ನಿರ್ಧಾರವನ್ನು ಕೇಳಿದ ರಶ್ಯವು ಬರ್ಲಿನ ಪ್ರಶ್ನೆಯ ಬಗ್ಗೆ ವ್ಯಕ್ತಪಟ್ಟ ಅಭಿಪ್ರಾಯಗಳ ಬಗ್ಗೆ ನಿರಾಶೆಯನ್ನು ವ್ಯಕ್ತಪಡಿಸಿದರೂ ಪರಿಷತ್ತು ಸೇರುವಂತಾದುದಕ್ಕೆ ಸಂತೋಷಪಟ್ಟಿದೆ.

ಸ್ವೀಡನ್ನದ ಪ್ರಧಾನಿ ಭಾರತದಲ್ಲಿ

ಸ್ವೀಡನ್ನದ ಪ್ರಧಾನಮಂತ್ರಿ ಶ್ರೀ ಎರ್ಲಾಂಡರ ಅವರು ಭಾರತದ ಸಂದರ್ಶನದಲ್ಲಿ ತೊಡಗಿದ್ದು ಅವರಿಗಿಲ್ಲಿ ಭವ್ಯ ಸ್ವಾಗತ ದೊರೆತಿದೆ. ಎರಡು ವರ್ಷಗಳಿಗೆ ಮೊದಲು ಭಾರತೀಯ ಪ್ರಧಾನಿ ನೆಹರು ಸ್ವೀಡನ್ನಕ್ಕೆ ಭೆಟ್ಟಿಕೊಟ್ಟಿದ್ದರು. ಸಮಾಜ ವಿಕಾಸ ಯೋಜನೆಯ ಹಳ್ಳಿಗಳಿಗೂ ಶ್ರೀ ಎರ್ಲಾಂಡರರು ಸಂದರ್ಶನವಿತ್ತು ಗ್ರಾಮೀಣ ಪ್ರದೇಶದಲ್ಲಿ ಭಾರತವು ಸಾಧಿಸಿಕೊಂಡ ಪ್ರಗತಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಭಾರತೀಯ ಪ್ರಧಾನಿ ೧೨ ವರ್ಷ ತನ್ನ ಸ್ಥಾನವುಳಿಸಿಕೊಂಡಿದ್ದರೆ, ಶ್ರೀ ಎರ್ಲಾಂಡರರು ೧೩ ವರ್ಷಗಳಿಂದ ಸ್ವೀಡನ್ನದ ಪ್ರಧಾನಿಯಾಗಿರುವರು.

ವಿದರ್ಭ ರಾಜ್ಯವಿಲ್ಲ

ದ್ವಿಭಾಷಾ ಮುಂಬಯಿ ರಾಜ್ಯದ ವಿಭಜನೆಯಲ್ಲಿ ಇಂದು ಸಂದೇಹವುಳಿದಿಲ್ಲ. ಈ ಬಗ್ಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮರಾಠಿ ಪ್ರಧಾನ ಭಾಷೆಯಾಗಿರುವ ಮುಂಬಯಿ ರಾಜ್ಯ ಹಾಗೂ ಗುಜರಾತಿ ಮುಖ್ಯ ಭಾಷೆಯಾಗಿರುವ ಗುಜರಾತಗಳೆಂಬ ಎರಡು ರಾಜ್ಯಗಳು ಸ್ಥಾಪಿತವಾಗುವುವು. ಈ ಗಳಿಗೆಯಲ್ಲಿ ವಿದರ್ಭ ರಾಜ್ಯದ ಬೇಡಿಕೆಯನ್ನು ಕಾಂಗ್ರೆಸ್ ಒಪ್ಪಿಕೊಳ್ಳದೆ ವಿದರ್ಭದ ಹಿತಾಭಿವೃದ್ಧಿಯ ದೃಷ್ಟಿಯಿಂದಮ ಮುಂಬಯಿಯೊಡನಿರುವುದೇ ಒಳ್ಳೆಯದೆಂದು ಅಭಿಪ್ರಾಯಪಟ್ಟಿದೆ. ನಾಗಪುರ ನಗರ ರಕ್ಷಣೆಯ ಕುರಿತಾಗಿ ವಿಶೇಷ ನಿಗಾ ತೆಗೆದುಕೊಳ್ಳುವುದೆಂದು ಆಶ್ವಾಸನೆಯಿತ್ತಿದೆ. ಗುಜರಾತಕ್ಕೆ ಹೊಸ ರಾಜಧಾನಿಯನ್ನು ಕಟ್ಟಲು (ಅಹಮ್ಮದಾಬಾದದಲ್ಲಿ) ೧೦ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಈ ಎರಡು ರಾಜ್ಯಗಳು ಮುಂದಿನ ಎಪ್ರಿಲ್ ಒಂದರಂದು ಉದ್ಘಾಟಿತವಾಗುವುವು.

ಮಹಿಳಾಮಣಿ ಅಬಲೆಯೆ?

ಒಂದು ಕಾಲದಲ್ಲಿ ಕೇವಲ ಗೃಹಲಕ್ಷ್ಮಿಯೆಂಬ ಹೆಸರಿನಿಂದ ಪೂಜಿತವಾಗುತಿದ್ದ ಭಾರತೀಯ ನಾರಿಯರಿಂದು ಕಾಲಗತಿಯಿಂದಾಗಿ, ಅದಕ್ಕೆ ಹೊಂದಿಕೊಂಡು ಮುಂದುವರಿಯುತ್ತಿರುವರು ಮಾತ್ರವಲ್ಲದೇ ಪುರುಷರಿಗೆ ಪ್ರಬಲ ಪ್ರತಿಸ್ಪರ್ಧಿಗಳಾಗಿ ಎಲ್ಲೆಡೆಯಲ್ಲೂ ಎಲ್ಲ ಕ್ಷೇತ್ರಗಳಲ್ಲೂ ಕಂಡು ಬರುವರು. ನಮ್ಮ ಸರಕಾರಗಳಾದರೂ ಸಮಾಜದ ತೆರೆಯಮರೆಯಲ್ಲಿರುತಿದ್ದ ಸ್ತ್ರೀಯರ ಸರ್ವಾಂಗೀಣ ಅಭಿವೃದ್ಧಿಗಾಗಿ, ಅವರ ಸ್ಥಿತಿಗತಿಗಳನ್ನು ಉನ್ನತೀಕರಿಸುವ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿವೆ. ಸ್ತ್ರೀ ವಿದ್ಯಾಭ್ಯಾಸ ಮತ್ತು ಸ್ತ್ರೀಯರಹಿತಚಿಂತನೆಗೆ ಹೇರಳ ವೆಚ್ಚವನ್ನೂ ಮಾಡುತ್ತಿವೆ ಈಗ, ಪ್ರಚುರವಾಗುತ್ತಿರುವ ಕುಟುಂಬ ಯೋಜನೆಯ ಉದ್ದೇಶವೂ ಅವರ ಒಳಿತಿಗಾಗಿಯೇ ಎಂದು ಹೇಳುವವರೂ ಇದ್ದಾರೆ. ಇಂದು ಎಲ್ಲೆಲ್ಲಿಯೂ ಮಹಿಳಾ ಉಮೇದ್ವಾರರ ಸಂಖ್ಯೆಯೇ ಏರಿಬರುತ್ತಿದೆ, ಉದ್ಯೋಗಾವಕಾಶವನ್ನು ತುಂಬಿಕೊಳ್ಳುವಲ್ಲಿಯೂ ಪ್ರಥಮ ಪ್ರಾಶಸ್ತ್ಯ ಅವರಿಗೇನೇ ಮೀಸಲು. ಎಂತಲೇ ಪ್ರಾಥಮಿಕ ಶಾಲೆಗಳಿಂದ ಹಿಡಿದು ಸ್ನಾತಕೋತ್ತರ ಪದವಿ ಕಾಲೇಜಗಳ ವರೆಗೆ ಪುಟ್ಟ ಕಿರಾಣಿ ಅಂಗಡಿಯಿಂದ ದೊಡ್ಡ ಹೋಟೆಲ್ ವರೆಗೆ, ಆಫೀಸು, ಕಛೇರಿ, ಹೋಟೆಲ್, ಸ್ಟಾಲು ಎಲ್ಲೆಲ್ಲಿಯೂ ಮಹಿಳಾಮಣಿಗಳ ನಗುಮೊಗಗಳು ಕಂಡುಬರುತ್ತವೆ. ಆದರೆ ಹೀಗೆ ಮುಂದುದರಿಯುವ ಮಹಿಳೆಯರು ಸೈನ್ಯ ಪಡೆಯಲ್ಲಿ ಯೋಧರಾಗಿ ಸೇರುವುದು ತನಗಿಷ್ಟವಿಲ್ಲವೆಂದು ಜನರಲ್ ತಿಮ್ಮಯ್ಯನವರು ಉದ್ಗರಿಸಿರುವುದರಿಂದ ಮಹಿಳೆಯರ ಪ್ರಗತಿಗೆ ಮೂಗುದಾರ ಹಾಕಿದಂತಾಯಿತು. ಹಿಂದಿನ ಕಾಲದ ಸ್ತ್ರೀ ರಾಜ್ಯಗಳಲ್ಲಿ ಮಹಿಳಾಮಣಿಗಳ ಮಹಾ ಸೈನ್ಯವೇ ಇತ್ತೆಂಬುದನ್ನು ಆಧಾರವಾಗಿಟ್ಟುಕೊಂಡು, ಮಹಿಳೆಯರು ಅಬಲೆಯರೆಂಬ ಕಲ್ಪನೆಯನ್ನೂ ದೂರವಾಗದಿರುವುದಕ್ಕೆ ಸಂತಾಪವನ್ನು ಸೂಚಿಸಿ, ಮತಪ್ರದರ್ಶನ ನಡೆಸುವಷ್ಟು ಭಾರತೀಯ ಮಹಿಳೆಯರು ತಿಳಿಗೇಡಿಗಳಾಗಲಾರರಲ್ಲವೆ? ಚೀನಾ—ಭಾರತಗಳ ನಡುವೆ ಏಳಬಹುದೆಂದಿರುವ ಮಹಾಯುದ್ಧದಲ್ಲಿ ಪ್ರತ್ಯಕ್ಷ ಯೋಧರಾಗಿ ಹೋರಾಡುವ ಮೃತ್ಯು ಸಮಸಂದರ್ಭದಿಂದ ಉಳಿದುಕೊಳ್ಳುವಂತಾದರೆ, ಅವರಿಗೇನೇ ಕ್ಷೇಮವಲ್ಲವೆ?

ನಿರೀಕ್ಷಿಸಿರಿ!

ವಾಡಿಕೆಯಂತೆ **1960**ನೇ ಜನವರಿ **26**ಕ್ಕೆ ಪ್ರಕಟವಾಗುವ

'ನವಯುಗ'ದ ಪ್ರಜಾರಾಜ್ಯ ವಿಶೇಷ ಸಂಚಿಕೆಯನ್ನು

ನಿರೀಕ್ಷಿಸಿರಿ.

ಅಲ್ಲಲ್ಲಿಯ ಸುದ್ದಿ ಸಾರ

ವಿವಾಹ ಸಮಾರಂಭ—ಡಾ| ಟಿ. ಎಮ್. ಎ. ಪೈಗಳ ಪುತ್ರಿ ಕುಮಾರಿ ಮಾಲತಿ ಇವರ ವಿವಾಹ ಸಮಾರಂಭವು ಶ್ರೀ ಬಳ್ಕುಂಜೆ ವಾಮನ ಶೆಣೈಯವರ ಪುತ್ರ ಶ್ರೀ ಬಾಲಕೃಷ್ಣ ಶೆಣೈ ಇವರೊಡನೆ ಇದೇ ತಾ. ೨೩ನೇ ಸಂಜೆ ಉಡುಪಿಯ ಪದವೀಂದ್ರ ಕಲಾ ಮಂದಿರದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಈ ಸಮಾರಂಭಕ್ಕೆ ಊರು ಪರವೂರುಗಳಿಂದ ಅಭ್ಯಾಗತರು ಬಹುಸಂಖ್ಯೆಯಲ್ಲಿ ಬಂದಿದ್ದರು. ದಾಂಪತ್ಯ ಸೇವೆಯಾದ ಮೇಲೆ ಡಾ| ಟಿ. ಎಂ. ಎ. ಪೈಗಳು ತಮ್ಮ ಮೇಲಿನ ಪ್ರೀತಿ ವಿಶ್ವಾಸದಿಂದ ಆಗಮಿಸಿದ ಅತಿಥಿ ಅಭ್ಯಾಗತರಿಗೆ ಧನ್ಯವಾದಗಳನ್ನರ್ಪಿಸಿದರು. ಪ್ರಿನ್ಸಿಪಾಲ್ ಎಚ್. ಸುಂದರರಾಯರು ವಿವಾಹದ ಕುರಿತು ಮಾತನಾಡಿ ನೂತನ ವಧೂವರರಿಗೆ ಶುಭಕೋರಿದರು.

ಉಡುಪಿಯಲ್ಲಿ ಕುಟುಂಬ ಯೋಜನಾ ದಿನಾಚರಣೆಯು ತಾ. ೧೮ರಂದು ಸ್ಥಳೀಯ ಸರಕಾರಿ ಆಸ್ಪತ್ರೆಯಲ್ಲಿ ನಗರಸಭಾಪತಿ ಡಾ| ಕೆ. ಯಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೇಶವ ಕುಡ್ವರಿಂದ ಪ್ರಾರ್ಥನೆಯಾದ ಮೇಲೆ ಫೆಮಿಲಿ ಪ್ಲೇನಿಂಗ್ ಕ್ಲಿನಿಕಿನ ಮೆಡಿಕಲ್ ಆಫೀಸರರಾದ ಡಾ| ಎಂ. ವಿ. ಕಮಲಮ್ಮನವರು ಸ್ವಾಗತಿಸಿ ವರದಿಯನ್ನೋದಿದರು. ಅನಂತರ ಡಾ. ಇ. ಅನಂತ ರಾವ್, ಡಾ. ಪಿ. ಆರ್. ನಾಯಕ್, ಡಾ. ವಿ. ಯಲ್. ಪಂಡಿತ್ ಇವರು ಕುಟುಂಬ ಯೋಜನೆಯ ಉದ್ದೇಶ ಪ್ರಯೋಜನಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀ ಎ. ಜೆ. ಅಲ್ಸೆಯವರು ಕುಟುಂಬ ಯೋಜನೆಯನ್ನು ವಿರೋಧಿಸಿ ಹಾಸ್ಯಪೂರ್ಣವಾಗಿ ಮಾತನಾಡಿದರು. ಅಧ್ಯಕ್ಷ ಡಾ. ಐತಾಳರು ತಮ್ಮ ಭಾಷಣದಲ್ಲಿ ಕುಟುಂಬ ಯೋಜನೆ ಅತ್ಯಾವಶ್ಯಕವೆಂದರು. ಮೆಡಿಕಲ್ ಆಫೀಸರ್ ಶ್ರೀ ಡಾ. ಲೋಕನಾಥ ಶೆಟ್ಟರು ಧನ್ಯವಾದಗಳನ್ನು ಅರ್ಪಿಸಿದರು. ಬೆಳಿಗ್ಗೆ ಕುಟುಂಬ ಯೋಜನೆಗೆ ಸಂಬಂಧಿಸಿದ ಪ್ರದರ್ಶನವೊಂದನ್ನು ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಜಿ ಯಸ್ ನಾಗವೋಲಿಯವರು ಉದ್ಘಾಟಿಸಿದ್ದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಕಾಲಕ್ಕೆ ತಕ್ಕಂತೆ ನಾವು ನಡೆದುಕೊಳ್ಳಬೇಕೆಂದೂ, ಕುಟುಂಬ ಯೋಜನೆಯು ಜನಸಾಮಾನ್ಯರಿಗಂತೂ ಅತ್ಯಾವಶ್ಯಕವೆಂದೂ ಹೇಳಿದರು.

ಉಡುಪಿ ತಾಲೂಕು ಗ್ರಾಮ ಉದ್ಯೋಗಸ್ಥರ ಮಹಾ ಸಭೆಯು— ತಾ. ೧೪ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಯಸ್. ವೆಂಕಟರಾಜ್‌ರವರ ಅಧ್ಯಕ್ಷತೆಯಲ್ಲಿ ಜರಗಿ ಗ್ರಾಮಾಧಿಕಾರಿಗಳ ಆನುವಂಶಿಕ ಹಕ್ಕನ್ನು ರದ್ದುಪಡಿಸುವ ಸರಕಾರೀ ಧೋರಣೆಯನ್ನು ಪ್ರತಿಭಟಿಸಿತಲ್ಲದೆ ಜಿಲ್ಲಾ ಸಂಘವು ಇದರ ಕಾನೂನುಬದ್ಧತೆಯನ್ನು ಪರಿಶೀಲಿಸಿ ಇದು ಅಸಾಧ್ಯವೆಂದು ಕಂಡುಬಂದರೆ ಕೆಲವು ಸವಲತ್ತುಗಳನ್ನು ಕೇಳಿಕೊಳ್ಳುವ ಇತ್ಯಾದಿ ನಿರ್ಣಯಗಳಾದುವು.

ದ. ಕ. ಜಿಲ್ಲಾ ಗ್ರಾಮ ಉದ್ಯೋಗಸ್ಥರ ಸಮ್ಮೇಳನವು– ತಾ. ೨೦ರಂದು ಮಂಗಳೂರ ಕೆಥೋಲಿಕ್ ಕ್ಲಬ್‌ನಲ್ಲಿ ಶ್ರೀ ಜೆ. ಯಂ. ಲೋಬೊ ಪ್ರಭು ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಶ್ರೀನಿವಾಸರಾಯರು ಸ್ವಾಗತಿಸಿದರು. ಜಿ. ಸೋಮಶೇಖರರಾಯರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಗ್ರಾಮ ಉದ್ಯೋಗಸ್ಥರು ಪ್ರಜಾಪ್ರಭುತ್ವ ರೀತಿಗೆ ಅನುಸಾರವಾಗಿ ತಮ್ಮ ಬೇಡಿಕೆಗಳನ್ನು ಮುಂದಿರಿಸಿರುವುದು ನ್ಯಾಯವಾಗಿದೆಯೆಂದರು. ಅಧ್ಯಕ್ಷರ ಮತ್ತು ಕೆ. ಬಿ. ಜಿನರಾಜ ಹೆಗ್ಡೆ ಮೊದಲಾದವರ ಭಾಷಣಗಳಾದ ಮೇಲೆ ಗ್ರಾಮಾಧಿಕಾರಿಗಳ ಹಕ್ಕು ಮತ್ತು ಹುದ್ದೆಗಳನ್ನು ರದ್ದು ಮಾಡುವ ಮೈಸೂರು ಸರಕಾರದ ಧೋರಣೆಯನ್ನು ವಿರೋಧಿಸುವ ಹಾಗೂ ಗ್ರಾಮ ಉದ್ಯೋಗಸ್ಥರ ಸಂಘಗಳು ಈ ವರೆಗೆ ಸರಕಾರಕ್ಕೆ ಮಾಡಿರುವ ಎಲ್ಲಾ ಮನವಿಗಳನ್ನು ಅನುಮೋದಿಸಿ ಅವುಗಳಲ್ಲಿ ಕೇಳಿರುವಂತೆ ಸರಕಾರವು ತಮ್ಮ ಧೋರಣೆಯನ್ನು ಬದಲಾಯಿಸಬೇಕೆನ್ನುವ, ಮೈಸೂರು ರಾಜ್ಯಕ್ಕೆ ಕರ್ನಾಟಕವೆಂಬ ಹೆಸರಿಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಶ್ರೀ ಬೋಳಾರ ವಿಠಲರಾಯರು ದಿವಂಗತರಾದರು—ಜಿಲ್ಲೆಯ ಅಗ್ರಗಣ್ಯ ಉದ್ಯಮಿಗಳಲ್ಲೊಬ್ಬರೂ ನಮ್ಮ ಜಿಲ್ಲೆಯಲ್ಲಿ ಜ್ವಾಂಟ್ ಸ್ಟಾಕ್ ಕಂಪೆನಿಗಳನ್ನು ಪ್ರಥಮವಾಗಿ ಸ್ಥಾಪಿಸಿದವರೂ ಆದ ಶ್ರೀ ಬೋಳಾರ ವಿಠಲರಾಯರು ಇದೇ ತಾ. ೨೦ನೇ ಬೆಳಗ್ಗೆ ಬೋಳಾರದ ತಮ್ಮ ನಿವಾಸದಲ್ಲಿ ೮೩ನೇ ವಯಸ್ಸಿನಲ್ಲಿ ನಿಧನಗೊಂಡರು. ಪಿ. ಪಿ. ಸಿ. ಕಂಪೆನಿ, ಸರಸ್ವತೀ ಪ್ರಿಂಟಿಂಗ್ ಪ್ರೆಸ್, ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿದವರು ಇವರೇ. ರಾಷ್ಟ್ರೀಕರಣವಾಗುವವರೆಗೂ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆಯ ಮೆನೇಜಿಂಗ್ ಡೈರೆಕ್ಟರರಾಗಿ ಅದರ ಪ್ರಗತಿಗೆ ತುಂಬಾ ದುಡಿದಿದ್ದರು. ಕನ್ನಡ ಸಾಹಿತ್ಯದ ಅಭಿವೃದ್ಧಿಗಾಗಿ ಇವರು ತುಂಬಾ ಕೆಲಸಮಾಡಿದ್ದಾರೆ. 'ಸುವಾಸಿನಿ' ಕನ್ನಡ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಕೆಲವರ್ಷ ನಡೆಸಿದ್ದರು. ಇವರು ಪ್ರಾರಂಭಿಸಿದ 'ಕಂಠೀರವ' ವಾರಪತ್ರಿಕೆಯು ಈಗಲೂ ನಡೆಯುತ್ತಿದೆ. ಇವರು ಕನ್ನಡ ಸಾಹಿತ್ಯ ಸೇವಕರಾಗಿ, ಪತ್ರಿಕಾ ವ್ಯವಸಾಯಿಯಾಗಿ, ಉದ್ಯಮಿಗಳಾಗಿ, ವಿಮಾಗಾರರಾಗಿ ಕನ್ನಡನಾಡಿಗೆ ತುಂಬಾ ಸೇವೆಸಲ್ಲಿಸಿರುವರು.

ಬೆಂಗಳೂರಿಗೆ ಶಿಷ್ಟಮಂಡಲ

ಇತ್ತೀಚೆಗೆ ಜ್ಯಾರಿಯಾದ ಹೊಸ ರೂಲುಗಳಿಂದ ಉಂಟಾದ ತೊಂದರೆಯ ನಿವಾರಣೆಯ ಕುರಿತು, ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಅಧ್ಯಕ್ಷರಾದ ಶ್ರೀ ಟಿ. ಎ. ಪೈಯವರ ನಾಯಕತ್ವದಲ್ಲಿ ಶ್ರೀಗಳಾದ ಕುರುಕಾಲು ಗಣಪಯ್ಯ ಶೆಟ್ಟಿ, ಕೆ. ರಮೇಶ ರಾವ್, ಪಿ. ವಿಟ್ಟಲ ಶೆಟ್ಟಿ, ರೆವರೆಂಡ್ ಫಾದರ್ ಜೆ. ಡಿ ಸೋಜ, ಕೂಡಾ ೫ ಮಂದಿಯ ನಿಯೋಗವು ಬೆಂಗಳೂರಿಗೆ ತಾ. ೧೪ ೧೨—೫೯ಕ್ಕೆ ತೆರಳಿತು.

ತಾ. ೧೫ರಲ್ಲು ಬೆಂಗಳೂರು ವಿಧಾನ ಸೌಧದಲ್ಲಿ ವಿದ್ಯಾಮಂತ್ರಿ, ವಿದ್ಯಾ ಡೈರೆಕ್ಟರ್, ಮತ್ತು ಡೈರೆಕ್ಟರರ ಪರ್ಸನಲ್ ಅಸಿಸ್ಟೆಂಟ್ ಕೂಡಾ ಅಧಿಕಾರಿಗಳ ಸಮಕ್ಷಮದಲ್ಲಿ ಶಿಷ್ಟಮಂಡಳವು ಆಗೋಸ್ತು ೩೦ರ ಮಹಾಸಭೆಯ ನಿರ್ಣಯಗಳ ಕುರಿತು ದೀರ್ಘ ಚರ್ಚೆ ನಡೆಸಿದ ಬಳಿಕ ವಿದ್ಯಾಧಿಕಾರಿಗಳು ಈ ಕೆಳಗಿನ ವಿಷಯಗಳನ್ನು ಮಾತ್ರ ಒಪ್ಪಿದ್ದಾರೆಂಬ ವಿಚಾರವನ್ನು ಎಲ್ಲಾ ಮೆನೇಜರರ ಅವಗಾಹನೆ ಬಗ್ಗೆ ಪ್ರಕಟಿಸಲಾಗಿದೆ.

1. ಮೈಸೂರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ರೀತಿಯ ಅಧ್ಯಾಪಕ–ವಿದ್ಯಾರ್ಥಿ ದಾಮಾಶಯವನ್ನು ತರುವುದಕ್ಕಾಗಿ ಈವರೆಗೆ ಜ್ಯಾರಿಯಲ್ಲಿದ್ದ ದ. ಕ. ಜಿಲ್ಲೆಗೆ ಸೂಕ್ತ 1 : 30ರ ದಾಮಾಶಯದ ಹೊಸ ರೂಲನ್ನು ಜ್ಯಾರಿಮಾಡಿದ್ದರಿಂದ, ಹೊಸ ದಾಮಾಶಯ ಭರ್ತಿಯಾಗುವ ವರೆಗೆ ತಾ. 1—6—59ರ ನಂತರ ಯಾವ ಕಾರಣದಿಂದಲೂ ಖಾಲಿಯಾಗುವ ಸ್ಥಾನಗಳಿಗೆ ಹೊಸ ಅಧ್ಯಾಪಕರನ್ನು ನೇಮಿಸಬಾರದು. ಒಂದು ವೇಳೆ ಒಬ್ಬನಾದರೂ ಸೆಕೆಂಡರಿ ಗ್ರೇಡ್ ಟ್ರೈನ್ಡ್ ಅಗತ್ಯವಿರುವ ಶಾಲೆಯಲ್ಲಿ ಅಂತಹ ಅಧ್ಯಾಪಕನ ಸ್ಥಾನವು ಖಾಲಿಯಾದರೆ ಮಾತ್ರ ಒಬ್ಬ ಸೆಕೆಂಡರಿ ಗ್ರೇಡ್ ಟ್ರೈನ್ಡ್ ಅಧ್ಯಾಪಕನನ್ನು ನೇಮಿಸಬಹುದು.

2. ತಾ. 31—5—59ರ ವರೆಗೆ ಶಾಲಾ ಕೆಲಸದಲ್ಲಿದ್ದು ಗ್ರಾಂಟು ಪಡೆದ ಅಧ್ಯಾಪಕರ ಪೈಕಿ ತಾ. 1—6—59ರ ಲಾಗಾಯ್ತು ಹೊಸ ರೂಲಿನ ಯಾವ ಕಾರಣದಿಂದಲಾದರೂ ಗ್ರಾಂಟು ತಡೆಹಿಡಿಯಲ್ಪಟ್ಟಿದ್ದ ಎಲ್ಲಾ ಅಧ್ಯಾಪಕರ ಗ್ರಾಂಟನ್ನು ಕೂಡಲೇ ಕೊಡಿಸುವ ಏರ್ಪಾಡು ಮಾಡಲಾಗುವುದು. ಮಾತ್ರವಲ್ಲದೆ ಅಂತಹ ಅಧ್ಯಾಪಕರನ್ನು ಮುಂದಕ್ಕೂ ಹಳೆಯ ರೂಲಿನಂತೆ ಸರ್ವಿಸಿನಲ್ಲಿ ಇರಗೊಡಿಸಲಾಗುವುದು.

3. ನಾನ್‌ಬೇಸಿಕ್ ಟ್ರೈನ್ಡ್ ಅಧ್ಯಾಪಕರು ಬೇಸಿಕ್ ಶಾಲೆಗಳಲ್ಲಿ ತಾ. 31-5-59ರ ಹಿಂದೆಯೇ ಕೆಲಸಕ್ಕೆ ಸೇರಿದ್ದು, ಸದ್ರಿಯವರ ಗ್ರಾಂಟು ಚಾಲ್ತಿ ವರ್ಷದಲ್ಲಿ ತಡೆಹಿಡಿಯಲ್ಪಟ್ಟಿದ್ದರೂ ಹಾಗೆ ತಡೆಹಿಡಿಯಲ್ಪಟ್ಟಿದ್ದ ಗ್ರಾಂಟನ್ನು ಕೊಡಿಸುವ ಏರ್ಪಾಡು ಮಾಡುವುದಲ್ಲದೆ, ಅಂತಹ ಅಧ್ಯಾಪಕರನ್ನು ಹಳೆ ರೂಲಿನಂತೆಯೇ ಸರ್ವಿಸಿನಲ್ಲಿ ಇರಗೊಡಿಸಲಾಗುವುದು. ಅಲ್ಲದೆ ನಾನ್ ಬೇಸಿಕ್ ಟ್ರೈನ್ಡ್ ಅಧ್ಯಾಪಕರಿಗೆ ಅಲ್ಪಾವಧಿಯ ಮರು ತರಬೇತಿಯನ್ನು ಕೊಡಿಸುವರೆ ಆದಷ್ಟು ಬೇಗನೆ ಏರ್ಪಾಡು ಮಾಡಲಾಗುವುದು.

4. ಹೊಸ ದಾಮಾಶಯದ ಹಾಜರಿಯ ಮೇರೆಗೆ ಅಧ್ಯಾಪಕರನ್ನು ನೇಮಿಸುವರೆ ಅನುಕೂಲವಾಗುವಂತೆ 1ನೇ ಕ್ಲಾಸಿಗೆ ವರುಷದಲ್ಲಿ ಎರಡಾವರ್ತಿ ಮಕ್ಕಳನ್ನು ದಾಖಲು ಮಾಡಿ ಡಿವಿಜನುಗಳನ್ನು ಮಾಡಲು ಅನುಮತಿಕೊಡಲಾಗುವುದು.

5. ಅಧ್ಯಾಪಕರಿಗೆ ½ ದಿನದ ರಜೆ ದೊರೆಯಲಾರದು. ಐಚ್ಛಿಕ ರಜೆಗಳು 4 ಇರುವುದನ್ನು ಪರಿಗಣಿಸಲಾಗದು. ಆದರೆ ಸದ್ರಿ ರಜೆಗಳನ್ನು ದಶಂಬರ ಅಂತ್ಯದಲ್ಲಿ ಮುಂದಾಗಿ ತಿಳಿಸಬೇಕೆಂಬ ಕ್ರಮವನ್ನು ಮನ್ನಾ ಮಾಡಿ ಅಗತ್ಯವುಳ್ಳ ಸಮಯದಲ್ಲಿ ಇನ್ಸ್‌ಪೆಕ್ಟಿಂಗ್‌ಆಫೀಸರರಿಗೆ ಬರಕೊಂಡು ಆ ರಜೆಯನ್ನು ಉಪಯೋಗಿಸಬಹುದು ಅನಿರೀಕ್ಷಿತವಾದ ನೆರೆ ವಗೈರೆ ಸ್ಥಳೀಯ ಗಂಡಾಂತರದ ದೆಸೆಯಿಂದ ಶಾಲೆ ನಡೆಸುವರೆ ಕಷ್ಟವಾದರೆ ಅಂತಹ ದಿನಗಳಲ್ಲಿ ಶಾಲೆಯನ್ನು ಮುಚ್ಚಿ ಇತರ ರಜಾ ದಿನಗಳಲ್ಲಿ ಶಾಲೆಯನ್ನು ನಡೆಸಿ ಶಾಲಾ ದಿನಗಳನ್ನು ಭರ್ತಿಮಾಡಿಕೊಳ್ಳಬಹುದು.

6. ದೀರ್ಘ ರಜೆಗಳ ಪೈಕಿ ಸರ್ಕಲರು ಮೂಲಕ ಈಗ ತಿಳಿಸಿರುವ ರಜಾ ದಿನಗಳಲ್ಲಿ ಅಗತ್ಯವುಳ್ಳ ತಿದ್ದುಪಡಿಯನ್ನು ಅಪೇಕ್ಷಿಸುವ ಪಕ್ಷಿಯ ಶಾಲಾ ಆಡಳಿತೆದಾರರು ಮೇ 22ನೇ ತಾರೀಕಿಗೆ ಶಾಲೆ ಪ್ರಾರಂಭವಾಗುವಂತೆ ಸಿಟಿ ರಜೆ 2 ವಾರ, ಜೂನ್—ಜುಲೈ ತಿಂಗಳ ಮಳೆ—ನೇಜಿನ ಬೇಸಾಯದ ಸಂಬಂಧ 4 ವಾರ, ದಸರಾ—ಯಾ—ಸುಗ್ಗಿ ಬೇಸಾಯದ ಸಂಬಂಧ 2 ವಾರ, ಕ್ರಿಸ್‌ಮಸ್ ರಜೆ 1 ವಾರವೂ ಅಗತ್ಯವಿದ್ದರೆ ಕ್ರಿಸ್‌ಮಸ್ ರಜೆಯನ್ನು ಸುಗ್ಗಿ ಬೇಸಾಯಕ್ಕೆ ಉಪಯೋಗಿಸುವಂತೆಯೂ ಈ ರೀತಿ ಬದಲಾವಣೆಯನ್ನು ಮಾಡಿಕೊಳ್ಳಬಹುದು ಆದರೆ ಅಂತಹ ಬದಲಾವಣೆಯನ್ನು D. E. O.ರವರಿಗೆ ಮುಂದಾಗಿ ತಿಳಿಸತಕ್ಕದ್ದು.

7. ದ. ಕ. ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಸಂಘವು ರಿಜಿಸ್ಟರಾಗಿರುವುದರಿಂದ ಇಲಾಖಾಧಿಕಾರಿಗಳು ಖಾಸಗಿ ಶಾಲೆಗಳಿಗೆ ಕಳುಹಿಸತಕ್ಕ ಎಲ್ಲಾ ಹುಕುಂಗಳ ಕೋಪಿಗಳನ್ನು ಜಿಲ್ಲಾ ಸಂಘಕ್ಕೂ ಕಳುಹಿಸಬೇಕಾಗಿ ಕೇಳಿಕೊಂಡಲ್ಲಿ ರಿಜಿಸ್ಟರಾದ ಜಿಲ್ಲಾ ಸಂಘದ ಘಟನಾವಳಿಯ ಪ್ರತಿಯನ್ನು ತಮಗೆ ಕಳುಹಿಸಿದ ಬಳಿಕ ಸದ್ರಿ ಹುಕುಂಗಳ ಕೋಪಿಗಳನ್ನು ಜಿಲ್ಲಾ ಸಂಘಕ್ಕೆ ಕಳುಹಿಸುವ ಏರ್ಪಾಡು ಮಾಡಲಾಗುವುದು.

ನಿಯೋಗದ ಸಂಭಾಷಣಾ ಕಾಲದಲ್ಲಿ ಶ್ರೀ S. ಮುಕುಂದರಾವ್, M. L. C. ಮತ್ತು ಶ್ರೀ ಕೆ. ಕೆ. ಶೆಟ್ಟಿ, M. L. C. ಮತ್ತು ಇನ್ನಿತರರು ಸಹ ಉಪಸ್ಥಿತರಿದ್ದರು ಎಂದು ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಸಕ್ರೆಟರಿ ಶ್ರೀ ಕುರು ಕಾಲು ಗಣಪಯ್ಯ ಶೆಟ್ಟರು ತಿಳಿಸುತ್ತಾರೆ.

ಮಂಗಳೂರಲ್ಲಿ ಕುಟುಂಬ ಯೋಜನಾ ದಿನಾಚರಣೆಯು ತಾ ೧೮ರಂದು ಗವರ್ನಮೆಂಟ್ ಕಾಲೇಜಿನಲ್ಲಿ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು, ಡಾ. ಕೆ. ಬಾಳಪ್ಪ ಶೆಟ್ಟರು ಸಂದೇಶಗಳನ್ನು ಓದಿದರು. ಜಿಲ್ಲಾ ವೈದ್ಯಾಧಿಕಾರಿ ಡಾ. ತಿಮ್ಮಪ್ಪನವರು ಕುಟುಂಬ ಯೋಜನೆಯ ಕಾರ್ಯದ ವರದಿಯನ್ನೋದಿದರು. ಆಮೇಲೆ ಡಾ. ಯಂ. ವಿ. ಚಾರಿ, ಡಾ. ರೆ. ಪಿ. ಗಣೇಶನ್, ಡಾ. ಬಿ. ಪುರುಷೋತ್ತಮ್ ಮತ್ತು ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಕುಟುಂಬ ಯೋಜನೆಯ ಪ್ರಯೋಜನವನ್ನು ವಿವರಿಸಿ ಭಾಷಣವಿತ್ತರು. ಅಧ್ಯಕ್ಷರ ಭಾಷಣವಾದ ಮೇಲೆ ಡಾ. ಬಿ. ಆರ್. ಹೆಗ್ಡೆಯವರು ಆಭಾರ ಸೂಚಿಸಿದರು. ಕುಟುಂಬ ಯೋಜನೆಗೆ ಸಂಬಂಧಿಸಿದ ಪ್ರದರ್ಶನವನ್ನು ಕೂಡಾ ಏರ್ಪಡಿಸಲಾಗಿತ್ತು.

ಕುಂದಾಪುರ – ಬೋರ್ಡು ಹೈಸ್ಕೂಲಿನ ಕಲಾ ಮಂದಿರದಲ್ಲಿ ಇಡುವ ಸಲುವಾಗಿ ತಯಾರಿಸಿದ ಶ್ರೀ ಸೌಕೂರು ಅಂತಯ್ಯ ಶೆಟ್ಟರ ತೈಲ ಚಿತ್ರದ ಅನಾವರಣ ಸಮಾರಂಭವು ತಾ. ೨೦ರಲ್ಲು ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೆ ವಿಟ್ಠಪ್ಪನವರು ಸ್ವಾಗತಿಸಿದ ಮೇಲೆ ಶ್ರೀ ಕೆ. ವೆಂಕಪ್ಪ ಶೆಟ್ಟರು ತೈಲ ಚಿತ್ರವನ್ನು ಅನಾವರಣ ಮಾಡಿದರು ಶ್ರೀಗಳಾದ ನರಸಿಂಹ ಕಾಮತ್, ಕೋಟ್ಯಣ್ಣ ಶೆಟ್ಟಿ, ಎಸ್. ಎಸ್. ಪರಮೇಶ್ವರಯ್ಯ, ರಘುನಾಥ ಶೆಣೈ ಇವರು ಶ್ರೀ ಅಂತಯ್ಯ ಶೆಟ್ಟರ ಗುಣಗಳನ್ನು ಪ್ರಶಂಶಿಸಿ ಮಾತನಾಡಿದರು. ಅಧ್ಯಕ್ಷ ಡಾ| ಪೈಗಳು ಶ್ರೀ ಶೆಟ್ಟರ ಉತ್ತಮ ಗುಣಗಳನ್ನು ಕೊಂಡಾಡಿ ಸಂದರ್ಭೋಚಿತ ಭಾಷಣವಿತ್ತರು. ಈ ಸಮಾರಂಭವನ್ನು ವ್ಯವಸ್ಥಾಪಿಸಿದವರು ಶ್ರೀ ಸೌಕೂರು ಅಂತಯ್ಯ ಶೆಟ್ಟರ ಮಕ್ಕಳಾದ ಎಡ್ವಕೇಟ್ ಕೊಳ್ಕೆಬೈಲ್ ಸೂರಪ್ಪ ಶೆಟ್ರು ಮತ್ತು ಸಹೋದರರು.

ಸುರತ್ಕಲ್— ವಿದ್ಯಾದಾಯಿನೀ ಹೈಸ್ಕೂಲಿನ ವಾರ್ಷಿಕೋತ್ಸವವು ತಾ 19ರಂದು ಮಂಗಳೂರಿನ ಅಡ್ವೋಕೇಟ್ ಶ್ರೀ ಎ ಶಂಕರಾಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ದೇವಕಿ ಆರ್. ಕೇಶವ್, ಬಿ ಎ. ಬಿ. ಟಿ, ಇವರು ಶಾಲಾ ಸ್ಥಳಸ್ಥಿತಿ ವಾಚನವನ್ನು ಮಾಡಿದರು. ಮುಖ್ಯೋಪಾಧ್ಯಾಯರಿಂದ ವರದಿವಾಚನವಾದ ಬಳಿಕ, ಬಹುಮಾನ ವಿತರಣೆ ನಡೆಯಿತು, ಸಭಾಧ್ಯಕ್ಷರು ಶಾಲೆಯ ಕಾರ್ಯಾಭಿವೃದ್ಧಿಯ ಕುರಿತು ಮೆಚ್ಚಿಗೆ ಸೂಚಿಸಿ ಮಾತನಾಡಿದರು. ವಂದನಾರ್ಪಣೆ ಕೊನೆಗೆ ಮನೋರಂಜನೆಯ ಕಾರ್ಯಕ್ರಮಗಳಾದುವು.

ತಾ. ೨೦ರಂದು ಶಾಲಾ ಹಳೆ ವಿದ್ಯಾರ್ಥಿ ಸಂಘದ ದಿನಾಚರಣೆಯು ಜಿಲ್ಲಾ ಮೆಜಿಸ್ಟ್ರೇಟರಾದ ಶ್ರೀ ಜಿ ಶ್ರೀನಿವಾಸ ರಾವ್, ಬಿ ಎ. ಬಿ. ಯಲ್. ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ನೆರವೇರಿತು.

ಕಡಿಯಾಳಿ—ಹಾ ಎ ಶಾಲೆಯ ಸಂಯುಕ್ತ ವಾರ್ಷಿಕ ಸಭೆಯು ತಾ ೨೦ರಂದು ನಗರಸಭಾಧ್ಯಕ್ಷರಾದ ಡಾ| ಕೆ. ಎಲ್. ಐತಾಳ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತ ಭಾಷಣ ಮಾಡಿದರು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಹಾಡುಗಳು ಹಾಗೂ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದ ಬಳಿಕ ಶಾಲಾ ಪಾರ್ಲಿಮೆಂಟಿನ ಅಧಿವೇಶನವು ಜರಗಿ ಮಂತ್ರಿಗಳ ಆಡಳಿತವರದಿಗಳ ಕುರಿತು ಚರ್ಚೆ ನಡೆಯಿತು. ಬಳಿಕ 'ವಿದ್ಯಾರ್ಥಿಗಳು ಸಿನಿಮಾ ನೋಡುವುದು, ಹಾನಿಕರ ಮತ್ತು ಶ್ರೇಯಸ್ಕರ' ಎಂಬ ವಿಷಯದ ಕುರಿತು ಚರ್ಚಾಗೋಷ್ಠಿಯೂ ನಡೆಯಿತು. ಶಾಲಾ ಹಸ್ತಲಿಖಿತ ಪತ್ರಿಕೆಯಾದ 'ಕುಸುಮ'ದ ದ್ವಿತೀಯ ಸಂಚಿಕೆಯನ್ನು ಶ್ರೀ ಉ. ಲಕ್ಷ್ಮೀನಾರಾಯಣ ಶಿಣೈಯವರು ಉದ್ಘಾಟಿಸಿದರು.

ಪೋಲೀಸ್ ಸ್ಟೇಶನಿನ ಶಾಖೆ— ಉಡುಪಿ ಟೌನ್ ಪೋಲೀಸ್ ಸ್ಟೇಶನಿನ ಶಾಖೆಯೊಂದು ಸಿರಿಬೀಡಿನಲ್ಲಿ ತಾ. ೨೦ರಂದು ಜ್ಯುಡಿಶಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಪಾಂಗಾಳ ರಾಮಚಂದ್ರ ರಾಯರ ಹಿರಿತನದಲ್ಲಿ ಉದ್ಘಾಟಿಸಲ್ಪಟ್ಟಿರುವುದಾಗಿ ತಿಳಿದು ಬರುತ್ತದೆ.

ಬಿಡುವು

ನಾವು ವರ್ಷಕ್ಕೊಂದು ಬಾರಿ ರಜೆ ಪಡೆಯುವಂತೆ ಬರುವವಾರದ ಅಂದರೆ ತಾ. 31ರ ಸಂಚಿಕೆಯನ್ನು ಪ್ರಕಟಿಸುವುದಿಲ್ಲ. ಜನವರಿ 7ರ ಸಂಚಿಕೆಯು ಕ್ರಮವಾಗಿ ಹೊರಡುವುದು ವಾಚಕರು ಗಮನಿಸಬೇಕಾಗಿ ವಿನಂತಿ.

ವ್ಯವಸ್ಥಾಪಕ **ನವಯುಗ.**

ಮಧ್ಯಪ್ರದೇಶ ಸರಕಾರಿ ನೌಕರರು

ಕಳೆದ ಕೆಲವಾರು ದಿನಗಳಿಂದ ಸಂಪು ಹೂಡಿದ್ದ ಮಧ್ಯಪ್ರದೇಶ ಸರಕಾರದ ತೃತೀಯ ವರ್ಗದ ನೌಕರರು ತಮ್ಮ ಸಂಪನ್ನು ನಿಲ್ಲಿಸಿದ್ದಾರೆ. ಇದರಿಂದಾಗಿ ಸರಕಾರ ಎದುರಿಸಬೇಕಾಗಿದ್ದ ಮಹಾ ಪ್ರಶ್ನೆಯೊಂದು ಬಗೆಹರಿದಂತಾಯಿತು. ಕೆಲವೊಂದು ಬೇಡಿಕೆಗಳನ್ನು ಮುಂದಿಟ್ಟು ಸಂಪು ಹೂಡಿದ್ದ ಈ ನೌಕರರು ಈಗ ಮುಖ್ಯಮಂತ್ರಿಯವರ ಬಿನ್ನಹದ ಮೇರೆಗೆ ಸಂಪನ್ನು ಹಿಂದೆತೆಗೆದುಕೊಂಡಿರುವುದಾಗಿ ಹೇಳಿದ್ದಾರೆ. ಮುಖ್ಯಮಂತ್ರಿಯವರು ನೌಕರರ ಕೇಳಿಕೆಗಳನ್ನು ಸಮಾಧಾನದಿಂದ ಪರಿಶೀಲಿಸಿ ಸಾಧ್ಯವಾದುವನ್ನು ಕಾರ್ಯಗತಗೊಳಿಸುವ ಭರವಸೆಯಿತ್ತಿದ್ದಾರೆ.

ಪುಸ್ತಕ ವಿಮರ್ಶೆ

ಬಾಲಗೀತಾಂಜಲಿ— ಸಂಪಾದಕರು: ಶ್ರೀ ದಾಂತಿ. ಪ್ರಕಾಶಕರು: ಸುಬೋಧಿನಿ ಕನ್ನಡ ಪುಸ್ತಕಗಳು, ಆಲೆವೂರು, ಉಡುಪಿ. ಪುಟಗಳು. ೨೪. ಬೆಲೆ. ರೂ ೦-೨೫

ಪ್ರಧಾನವಾಗಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಅಧ್ಯಯನ, ಕಂಠಪಾಠಗಳ ಸಲುವಾಗಿ ಸಂಕಲಿತವಾದ ಈ ಬಾಲಗೀತಾಂಜಲಿಯಲ್ಲಿ ಶ್ರೀ ದಾಂತಿಯವರು ಸ್ವಯಂ ನೂತನ ಪಾಠಪಟ್ಟಿಯನ್ನು ಅನುಲಕ್ಷಿಸಿ ಪ್ರಥಮದ ಎರಡು ವರ್ಗಗಳಿಗೆ ಕಲಿಸಲು ಉಪಯುಕ್ತವಾದ ಹಾಡುಗಳನ್ನು ಬರೆದು ಸಂಗ್ರಹಿಸಿದ್ದಾರೆ. ಈ ಸ್ವತಂತ್ರ ಕೃತಿಗಳಲ್ಲಿ ಭಾಷೆ, ಸಾಮಾಜಿಕ ಅಧ್ಯಯನ, ತೋಟಗಾರಿಕೆ ಮೊದಲಾದ ಪಾಠಗಳಿಗೆ ಹೊಂದಿಕೊಳ್ಳಲಾಗುವ ಗೀತೆಗಳಿವೆ. ಇವುಗಳೊಡನೆ ರಾಷ್ಟ್ರಗೀತೆ, ರಾಜ್ಯಗೀತೆಗಳ ಸಂಗ್ರಹವೂ ಸಾಮೂಹಿಕ ಪ್ರಾರ್ಥನಾ ಪದ್ಯಗಳೂ ಕೂಡಿಕೊಂಡಿವೆ. ಉತ್ತಮವಾದ ಮುದ್ರಣ, ಆಕಾರಗಳಿಂದ ಸಚಿತ್ರವಾಗಿ ಪ್ರಕಟಗೊಂಡ ಈ ಗೀತೆಗಳ ಗುಚ್ಛವನ್ನು ಪ್ರಾಥಮಿಕ ಶಾಲೆಗಳು ಹೃತ್ಪೂರ್ವಕ ಸ್ವಾಗತಿಸಿ, ತಮ್ಮ ವಿದ್ಯಾರ್ಥಿಗಳಿಗೆ ಇದರ ಪ್ರಯೋಜನವನ್ನು ತಿಳಿಸಿ ಹೇಳಬೇಕು. ಗೀತೆಗಳ ಸಂಖ್ಯೆ ಕೆಲವೇ ಆದರೂ ಅವು ವಿದ್ಯಾರ್ಥಿಗಳ ಉಪಯೋಗಕ್ಕೆ ಉಪಯುಕ್ತವಾಗಿವೆ.

ಕಡೆಂಗೋಡ್ಲು ಶಂಕರ ಭಟ್ಟರು— ಬರೆದವರು: ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರು ಪ್ರಕಾಶಕರು: ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ ಪುಟಗಳು: ೩೧, ಬೆಲೆ. ೦—೪೦.

ದಕ್ಷಿಣ ಕನ್ನಡದ ಹೆಮ್ಮೆಯ ಕವಿಯಾಗಿ, ಅಧ್ಯಾಪಕರಾಗಿ, ಪತ್ರಿಕೋದ್ಯಮಿಯಾಗಿ ಕೀರ್ತಿಭಾಜನರಾದ ಶ್ರೀ ಕಡೆಂಗೋಡ್ಲುರವರ ಹೆಸರನ್ನು ಅರಿಯದ ಸಾಹಿತ್ಯಾಭಿಮಾನಿಯಿರಲಾರನು. ಅವರೀಗ ತಮ್ಮ ಕಾವ್ಯ ರಚನೆಯ ಕಾರ್ಯವನ್ನು ಮುಂದೊತ್ತದೆ ಹೋದರೂ ಆದರ್ಶ ಪತ್ರಿಕಾಕರ್ತರಾಗಿ ನಮಗೆ ತೋರುತ್ತಾರೆ ಅವರು ಸಾಹಿತ್ಯದಲ್ಲಿ ಸದಭಿರುಚಿಯನ್ನು ಕೆರಳಿಸಿದವರು. ರುಚಿಯಾದ ಶುಚಿಯಾದ ಸಾಹಿತ್ಯವನ್ನು ನಿರ್ಮಿಸಿದವರು ಸಾಹಿತ್ಯದ ಸರ್ವ ಪ್ರಕಾರದಲ್ಲೂ ತಮ್ಮ ಕೈಯಾಡಿಸಿದವರು ಇಂತಹ ಮಹಾ ವ್ಯಕ್ತಿಯೊಬ್ಬರು ನಮ್ಮವರೆಂಬುದು ದಕ್ಷಿಣ ಕನ್ನಡಿಗರಿಗೊಂದು ಹೆಮ್ಮೆ!

ಶ್ರೀ ಕಡಂಗೋಡ್ಲು ಅವರ ಸ್ಥೂಲ ಪರಿಚಯದೊಂದಿಗೆ ಸಾಹಿತ್ಯಸೇವೆ ಹಾಗೂ ರಚಿಸಿದ ಕೃತಿಗಳ ವಿವರವನ್ನೂ ಜತೆಗೆ ಅಂಥಾ ಕೃತಿಗಳ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯವನ್ನೂ ಲಘುವಾಗಿ ವಿವೇಚಿಸಿರುವ ಈ ನವೋದಯ ಪ್ರಚಾರ ಪುಸ್ತಕ ಮಾಲೆಯ ಈ ನವೀನ ಪ್ರಕಟಣೆಯು ಕವಿ ಕಡೆಂಗೋಡ್ಲು ಅವರ ಅಧಿಕ ಪರಿಚಯ ಮಾಡಿಕೊಳ್ಳಲು ಪ್ರೋತ್ಸಾಹ ನೀಡುತ್ತದೆ ಮೈಸೂರು ವಿಶ್ವವಿದ್ಯಾನಿಲಯದ ಮಾದರಿಯಲ್ಲಿಯೇ ಈ ಪ್ರಚಾರಪುಸ್ತಕ ಮಾಲೆಯೂ ದಿನೇ ದಿನೇ ಜನಾದರಣೆಗಳಿಸಲು ಸಮರ್ಥವಾಗುವುದರಲ್ಲಿ ಸಂದೇಹವಿಲ್ಲ.

ಶಾರ್ವರಿ ಸಂವತ್ಸರದ ಶ್ರೀಕೃಷ್ಣ ಪಂಚಾಂಗ, ಉಡುಪಿ— ಗಣಿಸಿ ಪರಿಶೋಧಿಸಿದವರು: ಶ್ರೀ ಪಾರಂಪಳ್ಳಿ ಲಕ್ಷ್ಮೀನಾರಾಯಣ ಅಡಿಗ, ವಿಮರ್ಶಕರು: ಶ್ರೀ ಭಂ. ನಾರಾಯಣಾಚಾರ್ಯರು. ಬೆಲೆ: ರೂ. ೧-೨೫

ಎಲ್ಲ ಪಂಚಾಂಗಗಳಿಗಿಂತಲೂ ಮೊದಲಾಗಿ ಪ್ರಕಟವಾಗುತ್ತಿರುವ, ಆರ್ಯಭಟ ಪಾಕ್ಷಿಕರ ರೀತ್ಯಾ ನಿತ್ಯಪಂಚಾಂಗ ಮತ್ತು ನವೀನ ದೃಕ್ಸಿದ್ಧಾಂತ ರೀತ್ಯಾ ಗ್ರಹಣ ಗ್ರಹಸ್ಫುಟಾದಿಗಳಿಂದ ಆಡಕವಾಗಿರುವ ಈ ಪಂಚಾಂಗವನ್ನು ಸಾನಸಾರಿ ಸ್ವೀಕರಿಸುತ್ತೇವೆ ಸಾಮಾನ್ಯವಾಗಿ ಹಿಂದೂ ಜನತೆಗೆ ಉಪಯುಕ್ತವಾದ ನಿತ್ಯ ಪಂಚಾಂಗ ಮಾತ್ರವಲ್ಲದೇ ಜ್ಯೋತಿಷ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳೂ ಕೂಡಿಕೊಂಡಿರುವುವು, ದ್ವಾದಶ ರಾಶಿಯವರ ರಾಶಿಫಲವೂ ಇದರಲ್ಲಿದೆ, ವಿಷಯ ಸಂಗ್ರಹದಲ್ಲಿ ಲೋಪವಿಲ್ಲದೆ ಉಪಯುಕ್ತತೆಯಲ್ಲಿ ಹ್ರಾಸವಾಗದೆ ಸುಲಭ ಬೆಲೆಯಲ್ಲಿ ಲಭ್ಯವಾಗುವಂತೆ ನಿಸಿರುವ ಈ ಪಂಚಾಂಗವು ನಮ್ಮ ಪಂಚಾಂಗದ ಕೊರತೆಯನ್ನು ನೀಗಿಸಲು ಸಮರ್ಥವಿದೆ.

—ಗೋರಾ.

ಪ್ರಥಮ ಭಾರತೀಯ ನೌಕಾಂಗಣ



ಭಾರತದ ಮೊತ್ತಮೊದಲು ನೌಕಾಂಗಣವನ್ನು ವಿಶಾಖಪಟ್ಟಣದಲ್ಲಿ ಸ್ಥಾಪಿಸಲಾಗಿದ್ದು, ಅಲ್ಲಿ ೨೪ ಆಧುನಿಕ ಮಾದರಿಯ ಹಡಗಗಳನ್ನು ಇದು ವರೆಗೆ ಕಟ್ಟಲಾಗಿದೆ ಗಣನೀಯ ಪ್ರಮಾಣದಲ್ಲಿ ಮುಂದುವರಿಯುತ್ತಿರುವ ಈ ನೌಕಾಂಗಣವು ಆಧುನಿಕ ಭಾರತದ ಪುನಾರಚನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುವುವೆಂಬುದು ಸುವಿದಿತ ಈಗ ಹಡಗು ಕಟ್ಟುವುದಕ್ಕೆ ಆಗುವ ಒಟ್ಟು ವೆಚ್ಚದಲ್ಲಿ ಸೇಕಡ ೬೦ರಷ್ಟು ಸಾಧನಗಳಿಗಾಗಿ ವೆಚ್ಚವಾಗುತ್ತಿದೆ ಇವುಗಳನ್ನು ವಿದೇಶಗಳಿಂದಲೇ ಈಗ ತರಿಸಬೇಕಾಗಿದೆ ಆದರೆ, ಭಿಲಾಯ್, ದುರ್ಗಾಪುರ ಮತ್ತು ರೂರ್ಕೇಲಾದ ಉಕ್ಕಿನ ಕಾರ್ಖಾನೆಗಳ ಉಕ್ಕು ಲಭ್ಯಮಾನವಾಯಿತೆಂದರೆ, ವಿದೇಶದಿಂದಾಗುವ ಆಯಾತವು ಸೇಕಡ ೧೫—೨೦ರಷ್ಟು ಇಳಿಯಬಹುದು. ಉತ್ತಮ ತಂತ್ರಜ್ಞರ ಅಭಾವವನ್ನು ನೀಗಿಸಿಕೊಳ್ಳಲು, ತಕ್ಕ ಕರ್ಮಚಾರರಿಗೆ ತರಬೇತಿ ವ್ಯವಸ್ಥೆಯನ್ನು ಮಾಡಲಾಗಿರುತ್ತದ

ಈ ಚಿತ್ರದಲ್ಲಿ ನೌಕಾಂಗಣದ ನಾಲ್ಕು ದೃಶ್ಯಗಳನ್ನು ಕಾಣಬಹುದು:

ದೃಶ್ಯ ೧—ಪಾದಂಯನ್ನು ರಚಿಸುವ ವಿಭಾಗ.

ದೃಶ್ಯ ೨—ನೌಕಾಂಗಣದ ವಿದ್ಯುತ್ ಸ್ವಯಂ ಛೇದಕ ಯಂತ್ರ.

ದೃಶ್ಯ ೩ ಕಟ್ಟುತ್ತಿರುವ ಎರಡು ನೌಕೆಗಳು.

ದೃಶ್ಯ ೪—ತಂಗುಮನೆಯಲ್ಲಿ "ಭಾರತೀಯ ಉದ್ಯಮ" ನೌಕೆಯನ್ನು ಜೋಡಿಸುತ್ತಿರುವುದ.

ಸೀಮಾ ವಿವಾದ

(೧ನೇ ಪುಟದಿಂದ)

ಸೀಮೆಯು ಇಂದು ನಿನ್ನೆಯದಲ್ಲ, ಪರಂಪರಾ ಪ್ರಾಪ್ತವಾದುದು. ಈಗ ದೊರೆಯುವ ಕೆಲವು ಚೀನೀಯ ನಕ್ಷೆಗಳು ಪ್ರಕೃತ ಚೀನವು ತನ್ನ ಸೀಮಾಂತರ್ಗತವೆನ್ನುವ ಪ್ರದೇಶಗಳನ್ನು ಭಾರತದ ಸೀಮೆಯೊಳಗೇನೇ ಸೇರಿಸಿದ್ದು ಚೀನದ ವಾದವನ್ನೇ ಖಂಡನೆ ಮಾಡುವಂತಿವೆಯೆಂದು ತಿಳಿಯುತ್ತದೆ. ಹಾಗಿರುವಾಗ, ಚೀನದ ದುರುದ್ದೇಶವು ಇಷ್ಟರಲ್ಲೇ ಪ್ರಕಟವಾಗಿರುವುದೆಂಬುದು ಮತ್ತಷ್ಟು ಸುದೃಢವಾಗಿದೆ.

ಪ್ರಧಾನಿ ಲಾಯ್ ಅವರ ಈ ವಾದರಿಯ ಉತ್ತರಕ್ಕೆ ಪ್ರತ್ಯುತ್ತರ ರವಾನಿಸಲು ಅದರ ಕೂಲಂಕಷ ಅಭ್ಯಾಸವು ಅವಶ್ಯವೆಂದು ತಿಳಿಯಲಾಗಿದೆ. ಭಾರತವು ಮುಖ್ಯವಾಗಿ ಮುಂದಿಟ್ಟ ಸೂಚನೆಯನ್ನು ಅವರು ಅಲ್ಲಗಳೆದುದರಿಂದ ಈ ಗಹನವಾದ ಅಧ್ಯಯನವು ಅನಿವಾರ್ಯವಾಯಿತು. ಆದುದರಿಂದ ಪ್ರಧಾನಿದ್ವಯರು ರಂಗೂನಿನಲ್ಲಿ ಅಥವಾ ಚೀನದ ಯಾವುದೇ ಪ್ರದೇಶದಲ್ಲಿ ದಶಂಬರ ೨೬ರಂದು ಭೇಟಿಯಾಗುವುದು ಅಸಂಭವನೇ ಸರಿ. ಈ ಬಗ್ಗೆ ಮಧ್ಯಕಾಲೀನ ಪತ್ರವೊಂದು ಇಷ್ಟರಲ್ಲೇ ಚೀನೀಯ ಪ್ರಧಾನಿಯವರ ಕೈಸೇರಬಹುದು

ಪ್ರಧಾನಿ ಲಾಯ್ ಅವರ ಪತ್ರದ ಅಧ್ಯಯನವನ್ನು ಮಾಡಿದನಂತರವಾದರೂ ಆಕ್ರಮಿತ ಪ್ರದೇಶಗಳಿಂದ ಚೀನವು ಹಿಂದೆಸರಿಯದಿರುವಾಗ, ದೇಶದ ಒಂದು ಭಾಗದಲ್ಲಿ ಆಕ್ರಮಣಕಾರರನ್ನಿರಿಸಿಕೊಂಡು, ಅವರೊಡನೆ ಮಾತುಕತೆ ನಡೆಸುವುದು ಶಿಷ್ಟಾಚಾರವೆಂದು ಹೇಳಬರುವುದಿಲ್ಲವಾದುದರಿಂದ, ಪರಸ್ಪರ ಭೆಟ್ಟಿಯು ಮಾತು ತೀರ ದೂರವುಳಿಯುವುದು ಖಂಡಿತವೆ. ಇದಕ್ಕೆ ಇತ್ತೀಚೆಗೆ ಪ್ರಧಾನಿ ನೆಹರೂ ಚೀನ—ಭಾರತ ಸಂಬಂಧವಾಗಿತ್ತ ಸುದೀರ್ಘ ಹೇಳಿಕೆಯೇ ಆಧಾರವಾಗಿದೆ ನಾವು ಸ್ವತಂತ್ರ ಸರಕಾರವನ್ನು ಸ್ಥಾಪಿಸಿಕೊಂಡ ನಂತರ ಬೇರೆ ಯಾರೊಬ್ಬರಿಗೂ ಹೆದರಿಕೊಂಡಿಲ್ಲ ನಮ್ಮ ಮೇಲೆ ಆಕ್ರಮಣ ಮಾಡಿದ ಮಾತ್ರಕ್ಕೆ ಶಕ್ತಿಯಿದ್ದವರು ಪ್ರತಿಆಕ್ರಮಣ ಮಾಡಬಾರದೆಂದರೂ ಅದು ಉತ್ತಮ ಮಾರ್ಗವಲ್ಲ ಈ ಸಂಗತಿಯನ್ನು ಯಾರೂ ಕುರುಡರಾಗಿ ಕಾಣುತ್ತಿಲ್ಲ, "ಥವಾ ಸಾಮಾನ್ಯವೆಂದೂ ತಿಳಿಯುತ್ತಿಲ್ಲ."

ಹಾಗಾದರೆ, ಭಾರತ ಸರಕಾರದ ಮುಂದಿನ ಹೆಜ್ಜೆಯೇನು? ಸಂಧಾನದ ಪ್ರಯತ್ನವನ್ನು ಇಲ್ಲಿಯೇ ಮುಗಿಸಿ ಬಿಡುವುದೆ ಎಂಬ ಪ್ರಶ್ನೆ ಎದ್ದು ಬರುತ್ತದೆ. ಇದನ್ನೇ ಸಮಸ್ತ ಭಾರತೀಯರೂ ನಿರೀಕ್ಷಿಸುತಿದ್ದಾರೆ

—ರಾಶಿ

ಸಕಾಲದಲ್ಲಿ, ಸುಲಭ ದರದಲ್ಲಿ

ಸುಂದರ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ ಬುಕ್‌ವರ್ಕನ್ನೂ ಚಲೋದಾಗಿ ಮಾಡಿ ಕೊಡಲಾಗುವುದು.

NAVAYUGA PRESS, UDIPI

Printers & Publishers

Santhekatte — UDIPI.

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾ-ಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೆ ಯೋಗ್ಯವಾದ ಪುಸ್ತಕ

ಬೆಲೆ ರೂಪಾಯಿ ಒಂದು

ರೂ 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪರಿಚಯ

ಆದರ್ಶ ಜನಸೇವಕ—ಡಾ| ಸೀತಾರಾಮಯ್ಯ

ಭಾರತೀಯರಲ್ಲಿ ಕರ್ತವ್ಯ ಪರಿಜ್ಞಾನ ಬೆಳೆಯಬೇಕು; ಅವರಲ್ಲಿ ಹೊಣೆಗಾರಿಕೆಯ ಮನೋಭಾವ ಸಂವರ್ಧನೆಗೊಳ್ಳಬೇಕೆಂದವರು ಆಶಿಸಿ, ಅದಕ್ಕಾಗಿ ದುಡಿದಿದ್ದರು.

ಉನ್ನತಸ್ತರದ ದೇಶಸೇವಕರಾಗಿ, ಭಾರತೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿ, ಮಧ್ಯಪ್ರದೇಶದ ರಾಜ್ಯಪಾಲರಾಗಿ ದುಡಿದ ಶ್ರೀ ಪಟ್ಟಾಭಿ ಸೀತಾರಾಮಯ್ಯನವರು ತಮ್ಮ ೮೦ನೆಯ ವಯಸ್ಸಿನಲ್ಲಿ ತಾ. ೧೭ರಂದು ಕಣ್ಮರೆಯಾದರು. ನಮ್ಮ ಭಾರತದ ನಿರ್ಮಾತರ ಒಂದು ಪಂಕ್ತಿಯು ಹೀಗೆಯೇ ಮಾಯವಾಗುತ್ತ ಬರುತ್ತಿರುವ ಸಮಯವೀಗೀಗ ಅತಿ ಸನ್ನಿಹಿತವಾಗಿದೆ.

ಡಾ| ಭೋಗರಾಜು ಪಟ್ಟಾಭಿ ಸೀತಾರಾಮಯ್ಯನವರು ೧೮೮೦ರ ನವಂಬರ ೨೪ನೆಯ ದಿನಾಂಕ, ಈಗ ಆಂಧ್ರ ಪ್ರದೇಶಕ್ಕೆ ಸೇರಿದ ಎಲ್ಲೂರು ಜಿಲ್ಲೆಯ ಗುಂಡುಗೋಲನು ಎಂಬ ಗ್ರಾಮದಲ್ಲಿ ಹುಟ್ಟಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿದ ಬಳಿಕ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ತದನಂತರ ಮಛಲೀಪಟ್ಟಣದಲ್ಲಿ ನೆಲಸಿ ಎಫ್. ಎ. ಪರೀಕ್ಷೆಯಲ್ಲೂ ಅದೇ ಶ್ರೇಣಿಯಲ್ಲಿ ತೇರ್ಗಡೆಯಾದರು. ಆ ಮೇಲೆ ಮದ್ರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ. ಎ. ಅಧ್ಯಯನವನ್ನು ಪೂರ್ತಿಗೊಳಿಸಿ, ಮದ್ರಾಸು ಮೆಡಿಕಲ್ ಕಾಲೇಜಿನಲ್ಲಿ ಎಂ. ಬಿ. ಸಿ. ಎಂ. ಪದವಿಯ ಅಭ್ಯಾಸಾವಧಿಯನ್ನು ಪೂರ್ಣಗೊಳಿಸಿದರು. ಅವರು ಬಿ. ಎ. ವರ್ಗದಲ್ಲಿ ಓದುತ್ತಿರುವಾಗಲೇ ೧೮೮೫ರಲ್ಲಿ ಭಾರತೀಯ ಕಾಂಗ್ರೆಸ್ಸಿನ ಸ್ಥಾಪನೆಯ ಅವಧಿಯಲ್ಲಿ, ಅದರ ಸ್ವಯಂಸೇವಕರಾಗಿ ಸೇರಿದರು. ಅಧಿವೇಶನವು ಮದ್ರಾಸದಲ್ಲಿ ಸೇರಿದಾಗ, ಆನಂದ ಮೋಹನ ಬೋಸರು ಮಾಡಿದ ಅಧ್ಯಕ್ಷಸ್ಥಾನದಿಂದ ಸ್ನೇಹ ಮತ್ತು ಸೇವೆಯ ಪ್ರಾಧಾನ್ಯ ವಿವರಿಸುವ ಭಾಷಣವು ಶ್ರೀ ಸೀತಾರಾಮಯ್ಯನವರ ಮೇಲೆ ಪ್ರಭಾವ ಬೀರಿತು. ಅದೇ ವೇದಿಕೆಯ ಮೇಲೆ ನಿಂತು ತಾನೂ ಒಂದು ದಿನ ಜನತೆಗೆ ಸಂದೇಶ ನೀಡುವೆನೆಂದವರು ಎಂದೂ ನೆನಸಿರಲಾರರು. ೧೯೦೮ರಲ್ಲಿ ಮದ್ರಾಸದಲ್ಲಿ ಪುನಃ ಕಾಂಗ್ರೆಸ್ ಸಮ್ಮೇಳನ ಸೇರಲು, ಅದರಲ್ಲಿ ಅವರು ಪ್ರತಿನಿಧಿಯಾಗಿ ಭಾಗವಹಿಸಿದ್ದರು ಮಾತ್ರವಲ್ಲ, ಅಂದಿನಿಂದ ಮೊನ್ನೆಯವರೆಗೂ ಕಾಂಗ್ರೆಸ್ ಅಧಿವೇಶನದಲ್ಲವರು ಸಮಾವೇಶರಾಗುತ್ತಿದ್ದರು. ೧೯೧೬ರಲ್ಲಿ ಡಾ| ಪಟ್ಟಾಭಿಯವರು ಎ.ಐ.ಸಿ.ಸಿ.ಯ ಸದಸ್ಯರಾಗಿ ಕಾಂಗ್ರೆಸ್‌ನ ಒಳಗಿನ ಮನುಷ್ಯರಲ್ಲೊಬ್ಬರಾದರು. ಇವರ ಪ್ರಯತ್ನಗಳ ಫಲವಾಗಿಯೇ ೧೯೧೮ರಲ್ಲಿ ಆಂಧ್ರರಿಗೋಸ್ಕರ ಪ್ರತ್ಯೇಕ ಕಾಂಗ್ರೆಸ್ ಸಮಿತಿಯ ರಚನೆಯಾಯಿತು. ೧೯೩೭ರಲ್ಲಿ ಡಾ| ಪಟ್ಟಾಭಿಯವರು ಇದರ ಅಧ್ಯಕ್ಷರೂ ಆದರು.

ಸಾರ್ವಜನಿಕ ಸೇವೆಯಲ್ಲಿ ತನ್ನ ಜೀವನವನ್ನು ಕಳೆಯುವ ಉತ್ಕಟಾಭಿಲಾಷೆಯಿಂದ ಡಾ| ಪಟ್ಟಾಭಿಯವರು ತಮ್ಮ ಉದ್ಯೋಗಕ್ಕೆ ೧೯೧೯ರಲ್ಲಿ ತಿಲಾಂಜಲಿಯಿತ್ತರು. ಭಾರತದ ಭಾವಿಪೀಳಿಗೆಗಾಗಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದ ಇವರು ಆಂಧ್ರ ಜಾತೀಯ ಕಲಾಶಾಲೆಯನ್ನು ಸ್ಥಾಪಿಸಿ ರಾಷ್ಟ್ರೀಯ ಶಿಕ್ಷಣವನ್ನು ಒದಗಿಸಿ ಗ್ರಾಮೋದ್ಯೋಗಗಳ ಅಭಿವೃದ್ಧಿಯನ್ನು ಸಾಧಿಸಿದರು.

೧೯೧೯ರಲ್ಲಿ ಆಂಧ್ರ ಪ್ರಾದೇಶಿಕ ಸಹಕಾರ ಸಮ್ಮೇಳನ ಮತ್ತು ೧೯೨೭ರಲ್ಲಿ ಪ್ರಾದೇಶಿಕ ಸಮ್ಮೇಳನಗಳ ಅಧ್ಯಕ್ಷರಾಗಿ ಆಯ್ಕೆಗೊಂಡರು. ೧೯೨೮ರಲ್ಲಿ ಮಹಾತ್ಮಾ ಗಾಂಧಿಯವರ ಕೇಳಿಕೆಯಂತೆ ಭಾರತವನ್ನು ೨೧ ಪ್ರಾದೇಶಿಕ ಕಾಂಗ್ರೆಸ್ ವಿಭಾಗಗಳಾಗಿ ಮಾಡುವ ವಿವರಣೆಯೊಂದನ್ನು ತಯಾರಿಸಿದರು. ೧೯೩೪ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೂ ಆದರು. ಕಾಂಗ್ರೆಸಿಗನ ಕಾರ್ಯ ಪ್ರಣಾಳಿಯ ಪ್ರಕಟಣೆ ಮತ್ತು ಸಂಶೋಧನ ವಿಭಾಗದ ನಿರ್ಮಾಣವಾಗ ಬೇಕೆಂದವರಾಗ ಗೊತ್ತುವಳಿಯನ್ನು ಮುಂದಿಟ್ಟರು. ಇವೆರಡೂ ಮಂಜೂರಾದುವು. ಅಖಿಲ ಭಾರತ ನೂಲುವವರ ಸಂಘದ ಅಧ್ಯಕ್ಷರಾಗಿ ೧೯ ವರ್ಷ ದುಡಿದು ಇವರು ಈ ಉದ್ದಿಮೆಯ ಯಶಸ್ಸಿಗೆ ಕಾರಣೀಭೂತರಾದರು.

ಡಾ| ಪಟ್ಟಾಭಿಯವರು ವ್ಯಕ್ತಿ ಮತ್ತು ವಿಚಾರದ ಬಗ್ಗೆ ವಿಮರ್ಶೆಮಾಡುವ ಕುಶಾಗ್ರ ಲೇಖನಿಯುಳ್ಳವರೂ ಆಗಿದ್ದರು. ಆಂಗ್ಲ ಭಾಷೆಯಲ್ಲಿ ಪ್ರಕಟವಾಗುತಿದ್ದ ಜನ್ಮಭೂಮಿ ಪತ್ರಿಕೆಯಲ್ಲಿ ಇವರ ರಚನಾತ್ಮಕ ಟೀಕೆ ಟಿಪ್ಪಣಿಗಳು ಸಾಕಷ್ಟು ಪ್ರಭಾವ ಬೀರಿದ್ದುವು.

ಜನತಾ ಕಾಂಗ್ರೆಸ್‌ನ ಉಪಾಧ್ಯಕ್ಷ ಹಾಗೂ ಅಧ್ಯಕ್ಷರಾಗಿದ್ದು ಆ ರಾಜ್ಯದ ಜನತೆಯಲ್ಲಿ ಕರ್ತವ್ಯ ಮತ್ತು ಉತ್ತರದಾಯಿತ್ವದ ಮಹತ್ವವನ್ನು ಬಿತ್ತಿ ಅವರನ್ನು ಎಚ್ಚರಿಸಿದರು. ಡಾ| ಪಟ್ಟಾಭಿಯವರು ಹಲವು ಬಾರಿ ಜೈಲುವಾಸದ ಅನುಭವ ಪಡೆದವರು. ೧೯೩೦ ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ೧೯೩೨–೩೩, ೪೨ ರಲ್ಲಿ ಸೆರೆಮನೆ ಸೇರಿದರು. ೩೯ರಲ್ಲಿ ಕಾಂಗ್ರೆಸ್ ಅಧ್ಯಕ್ಷಗದ್ದುಗೆಯನ್ನು ಏರಬೇಕೆಂದು ಗಾಂಧಿಜಿಯವರ ಪ್ರೇರಣೆಯಂತೆ ನಾಮಪತ್ರ ಸಲ್ಲಿಸಿದರು. ಆದರೆ, ಸುಭಾಷಚಂದ್ರ ಬೋಸರಿದ ಪರಾಜಿತರಾದರು. ಇದರಿಂದ ನೊಂದ ಮಹಾತ್ಮಾಗಾಂಧಿ ಇದನ್ನು ತನ್ನ ಸೋಲೆಂದು ಉದ್ಗರಿಸಿದರು. ೧೯೪೮ರಲ್ಲಿ ಪುನಃ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದರು. ಜಯಪುರದ ಅಧಿವೇಶನದಲ್ಲಿ ಭಾಗವಹಿಸಿದ್ದರು.

ಬೇಂಕಿಂಗ್ ಮತ್ತು ಇನ್ಶೂರೆನ್ಸ್ ವಿಭಾಗದಲ್ಲಿ ಇವರಿಗೆ ಅತೀವ ಆಸಕ್ತಿಯಿದ್ದುದು ಆಂಧ್ರ ಬೇಂಕ್, ಆಂಧ್ರ ಇನ್ಶೂರೆನ್ಸ್ ಕಂಪೆನಿ, ಕೃಷ್ಣ ಡಿಸ್ಟ್ರಿಕ್ಟ್ ಬೇಂಕ್ ಮೊದಲಾದುವುಗಳ ಸ್ಥಾಪನೆಯಿಂದ ತಿಳಿಯುತ್ತದೆ.

ಕಾಂಗ್ರೆಸ್‌ನ ಸ್ವರ್ಣ ಮಹೋತ್ಸವದ ಸಂದರ್ಭದಲ್ಲವರು ಅದರ ಪ್ರಗತಿಯ ಐತಿಹಾಸಿಕ ಸ್ಮಾರಕ ಗ್ರಂಥವೊಂದನ್ನು ಹೊರತಂದರು. ಈ ಮಾದರಿಯ ಗ್ರಂಥಗಳಲ್ಲಿ ಇದೇ ಪ್ರಪ್ರಥಮವಾಗಿದ್ದು ವಿವಿಧ ಭಾರತೀಯ ಭಾಷೆಗಳಲ್ಲದು ಈಗ ಅನುವಾದಿತವಾಗಿದೆ. ಜಗತ್ತಿನ ಸಂವಿಧಾನ, ಭಾರತದ ಆರ್ಥಿಕ ಸಮೀಕ್ಷೆ, ಗಾಂಧಿವಾದ ಮತ್ತು ಸಮಾಜವಾದ ಮುಂತಾದ ಹಲವಾರು ಅನುಪಮ ಹಾಗೂ ಅತ್ಯಮೂಲ್ಯ ಗ್ರಂಥ ಬರೆದ ಕೀರ್ತಿ ಡಾ| ಪಟ್ಟಾಭಿಯವರದು.

ಆಂಧ್ರ ರಾಜ್ಯಸ್ಥಾಪನೆಯ ವಿಷಯದಲ್ಲೂ ಶ್ರೀ ಪಟ್ಟಾಭಿಯವರ ಕೈವಾಡ ಇಲ್ಲದಿಲ್ಲ. ಇವರ ತಳಪಾಯ ಹಾಕಿದ ಜೆ. ವಿ. ಪಿ. ವರದಿ (ಜವಾಹರಲಾಲ, ವಲ್ಲಭಾಯಿ, ಪಟ್ಟಾಭಿ)ಯ ಬರಹಗಾರರಲ್ಲಿ ಇವರೂ ಒಬ್ಬರು. ೧೯೫೨ರಲ್ಲಿ ಶಾಸನ ಸಭೆಯ ಸದಸ್ಯರಾಗಿ ಡಾ| ಪಟ್ಟಾಭಿ ಚುನಾಯಿತರಾದರು. ಮುಂದಕ್ಕೆ ಮಧ್ಯಪ್ರದೇಶದ ರಾಜ್ಯಪಾಲರಾಗಿ ನೇಮಿಸಲ್ಪಟ್ಟರು. ಇವರು ಉನ್ನತಾದರ್ಶವನ್ನೂ ಗೌರವವನ್ನೂ ಹಿಂದಿನಿಂದಲೂ ಉಳಿಸಿಕೊಂಡು ಬಂದ ಸರಳ ವ್ಯಕ್ತಿಯಾಗಿದ್ದು ನಿವೃತ್ತಿಯಾದ ನಂತರ ಹೈದರಾಬಾದದಲ್ಲಿ ವಾಸಿಸಿಕೊಂಡಿದ್ದರು.

ಡಾ| ಪಟ್ಟಾಭಿಯವರ ನಿಧನವು ವೃದ್ಧಾಪ್ಯದಿಂದಾದುದು. ಇದರಿಂದ ದುಃಖಿಸಬೇಕಾದ ಅಗತ್ಯವಿಲ್ಲವಾದರೂ, ಇಂತಹ ಆದರ್ಶನಾಯಕರು ನಮ್ಮ ಕಣ್ಮುಂದಿನಿಂದ ಒಬ್ಬೊಬ್ಬರಾಗಿಯೇ ಜಾರಿ ಹೋಗುತ್ತಿರುವಾಗ, ಅವರ ಸ್ಥಾನವನ್ನು ತುಂಬಿಸುವ ಅನ್ಯ ಯುವಕರನ್ನು ಕಾಣದಿರುವುದಕ್ಕಾಗಿ ಮರುಗಬೇಕಾಗಿದೆ. ಡಾ. ಪಟ್ಟಾಭಿ ಸೀತಾರಾಮಯ್ಯನವರ ಬಹುಮುಖ ಪ್ರತಿಭೆ, ಸರ್ವತೋಮುಖ ಸೇವಾಭಾವನೆ ಆದರ್ಶ ಸರಳ ಜೀವನಗಳು ಇಂದು ಭಾರತೀಯರಿಗೆ ಅನುಕರಣಯೋಗ್ಯವಾಗಿವೆ. ದಿವಂಗತರ ಆತ್ಮವು ಚಿರಶಾಂತಿ ಪಡೆಯುವುದರೊಡನೆ ಭಾರತೀಯರೆಲ್ಲರಿಗೂ ಕರ್ತವ್ಯ ಜ್ಞಾನವೊದಗಲೆಂದು ಇಂದು ಎಲ್ಲರೂ ಹಾರೈಸಬೇಕಾಗಿದೆ.

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅದೃಷ್ಟಶಾಲಿ ರಾಷ್ಟ್ರನಾಯಕ
ಜಾರ್ಜ್ ವಾಶಿಂಗ್‌ಟನ್
ಲೇಖಕಿ: ಜಿನೇ ಇಯೋಟನ್.
ಅನುವಾದಕರು:
ಯು. ಎಲ್. ಆಚಾರ್ಯ, ಎಮ್. ಎ. ಎಲ್. ಟಿ.

ಅಮೇರಿಕದ ಮೊದಲ ಅಧ್ಯಕ್ಷನ – ಜಾರ್ಜ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪಾಯಿ ಒಂದೂಕಾಲು.

ಪ್ರತಿಗಳಿಗೆ ಬರೆಯಿರಿ:

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No 466 N/50 date 2-12-1950 of the Director of public Instruction Madras.

ನೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ಜಾನಪದ ಕಲೆ

ಜನಜೀವನದ ಮೇಲೆ ಕಲೆಯ ಪ್ರಭಾವ

ವಿಯಟನಾಮದ ಹಲಕಲವು ನೃತ್ಯ ಪರಂಪರೆಗಳು ವಿಯಟನಾಮಿಯ ಜನತೆಯ ಜೀವನವನ್ನೇ ಪ್ರತಿಬಿಂಬಿಸುತ್ತವೆ.

ವಿಯಟ್‌ನಾಮಿನ ಜನರ ಇತಿಹಾಸದಲ್ಲಿ ನೃತ್ಯಗಳಿಗೆ ಒಂದು ಪುರಾತನ ಪರಂಪರೆ ಇದೆ. ಗ್ರಾಮಾಂತರ ಪ್ರದೇಶದ ನೃತ್ಯಗಳೇ ಆಗಲಿ ನಗರಗಳಲ್ಲಿ ಹಾಗೂ ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಅಭಿನಯಿಸಲ್ಪಡುವ ನುರಿತ ಕಲಾವಿದರ ನೃತ್ಯಗಳೇ ಆಗಲಿ ಅವು ವಿಯಟ್‌ನಾಂಗರ ಜನಜೀವನವನ್ನು ತುಂಬಾ ಚೆನ್ನಾಗಿ ಪ್ರತಿಬಿಂಬಿಸುತ್ತವೆ.

"ಕುದುರೆ ಸವಾರಿ", "ಬಣ್ಣದ ಚಿಟ್ಟೆ" ಮತ್ತು "ಇಬ್ಬರು ಸೈನಿಕರು ಕುದುರೆಗಳ ಮೈತೊಳೆಯುವುದು"—ಈ ಕೆಲವು ನೃತ್ಯಗಳಂತೂ ತುಂಬಾ ಪುರಾತನ ಕಾಲದ ನೃತ್ಯಗಳಾಗಿವೆ. ಮೊದಲನೆಯ ನೃತ್ಯದಲ್ಲಿ, ತುದಿಯಲ್ಲಿ ನಾಲ್ಕು ಕೂಸಲಿನ ಕುಚ್ಚುಗಳಿರುವ ಕೋಲೇ ಕುದುರೆಯಾಗಿ ಪರಿಗಣಿಸಲ್ಪಡುವುದು. ಈ ಕೋಲಿನ ಆಸರೆಯಿಂದ ಕುದುರೆ ಸವಾರಿಯನ್ನು ನೃತ್ಯದ ರೂಪದಲ್ಲಿ ಅಭಿನಯಿಸುವ ವೈಖರಿ ತುಂಬಾ ಶೋಭಿಸುತ್ತದೆ. ಎರಡನೆಯದು ಬಣ್ಣದ ಬೆಳಕಿನಲ್ಲಿ ನೃತ್ಯದ ವೈಖರಿಯನ್ನು ಪ್ರದರ್ಶಿಸುತ್ತದೆ. ಮೂರನೆಯದನ್ನು ಇಬ್ಬರು ಅಭಿನಯಿಸಬೇಕು. "ಮದ್ಯಾಭಿಷೇಕ" ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಅಭಿನಯಿಸಲ್ಪಡುತ್ತಿದ್ದ ನೃತ್ಯ. "ಮಶಾಲಿನ ಮೆರವಣಿಗೆ" ದೊಡ್ಡ ದೊಡ್ಡ ಹಬ್ಬ ಹುಣ್ಣಿಮೆ ಸಮಾರಂಭಗಳಲ್ಲಿ ಅಭಿನಯಿಸಲ್ಪಡುತ್ತಿದ್ದ ನೃತ್ಯ. "ಬೀಸಣಿಗೆ" ನೃತ್ಯ ಅರಮನೆಗಳಲ್ಲಿ ತುಂಬಾ ಪ್ರಸಿದ್ಧಿಯಾಗಿತ್ತು.

"ಕೋಲಿನ ನೃತ್ಯ" ಮತ್ತು "ಕತ್ತಿ ನೃತ್ಯ" ಇವುಗಳು ವಿಯಟ್‌ನಾಮ್ ದೇಶದ ಪುರುಷರ ಸಾಹಸವನ್ನು ಪ್ರತಿಬಿಂಬಿಸುವ ನೃತ್ಯಗಳು, ಅವರ ಸಿಂಹಗಳ ಮೆರವಣಿಗೆ "ನೃತ್ಯ ವಿಯಟ್‌ನಾಮಿಸ್ ಜನರ ಆಶಾವಾದ ಹಾಗೂ ಹುಮ್ಮಸ್ಸನ್ನು ಪ್ರತಿಬಿಂಬಿಸುತ್ತದೆ.

ವಿಯಟ್‌ನಾಮಿನ ನೃತ್ಯಗಳು ಬೆಳೆಯಲು ಪರ್ವತ ಪ್ರದೇಶಗಳೇ ಮುಖ್ಯತಃ ಪುರಾದವು, ವಿರಾಮ ಕಾಲದಲ್ಲಿ ಮತ್ತು ಹಬ್ಬ ಹುಣ್ಣಿಮೆ ಸಮಾರಂಭಗಳಲ್ಲಿ ಜನ ತಮ್ಮ ಒಲವನ್ನು ನೃತ್ಯಗಳ ಕಡೆಗೆ ಹೊರಳಿಸುತ್ತಿದ್ದರು, ಒಂದೊಂದು ಜನಾಂಗದ ವೈಶಿಷ್ಟ್ಯವಾಗಿಯೇ ಬೇರೆ ಬೇರೆ ನೃತ್ಯಗಳು ಬೆಳೆದಿರುವುದು ಕಂಡು ಬರುತ್ತದೆ. "ಕೋತಿ" ನೃತ್ಯ ಕಾಪ್ರೊಲಿನ್ ಜನಾಂಗದ ವೈಶಿಷ್ಟ್ಯವಾದರೆ, "ಭಜಿ" ನೃತ್ಯ ಈಡಿ ಜನಂಗದ ವಿಶೇಷತೆ.

೧೯೪೫ರ ಆಗಸ್ಟ್ ಕ್ರಾಂತಿ ವಿಯಟ್‌ನಾಮಿನ ಆದ್ಯಂತ ಒಂದು ಸಾಂಸ್ಕೃತಿಕ ಪರ್ವಕಾಲವಾಗಿ ಪರಿಣಮಿಸಿತು. ೧೯೫೦ರಲ್ಲಿ ಸ್ಥಾಪಿಸಲ್ಪಟ್ಟ ವಿವಿಧ ಸಂಸ್ಥೆಗಳು ರಾಷ್ಟ್ರದ ಪರಂಪರಾಗತ ನೃತ್ಯಗಳ ಒಂದು ವಿಶಿಷ್ಟ ಅಧ್ಯಯನಕ್ಕೇ ಕೈಹಾಕಿವು.

ಇದರ ಪರಿಣಾಮವಾಗಿ ಎಷ್ಟೋ ಜಾನಪದ ನೃತ್ಯಗಳನ್ನು ಈಗಿನ ನೃತ್ಯಗಳಲ್ಲಿ ಅಳವಡಿಸಿಕೊಳ್ಳುವ ಕಾರ್ಯ ನಡೆಯಿತು. ಉದಾಹರಣೆಗಾಗಿ "ಪೋಲ" ನೃತ್ಯ ವಿಯಟ್‌ನಾಮ್ ಪಡೆಗಳ ವಿಜಯೋತ್ಸವದ ವಸ್ತುವನ್ನು ಮೈಗೂಡಿಸಿಕೊಂಡಿದೆ. ಅಂತೆಯೇ "ಬೀಸಣಿಗೆ ನೃತ್ಯ" ಥಾಯ್ ಜನಾಂಗದ ಹೆಂಗಳೆಯರ ಸುಖದುಃಖ ಜೀವನವನ್ನು ಪ್ರತಿಬಿಂಬಿಸುತ್ತದೆ. ಬೀಸಣಿಗೆಗಳನ್ನು ಬೀಸಿಕೊಂಡು ಅವರು ಅಭಿನಯಿಸುವ ನೃತ್ಯ "ಬಣ್ಣದ ಚಿಟ್ಟೆ"ಯ ಆನಂದೋತ್ಸಾಹವನ್ನೇ ಪ್ರತಿಬಿಂಬಿಸುತ್ತದೆ.

ನಿಯೋಜನಾಂಗದ ಜಾನಪದ "ಕೊಹ" ನೃತ್ಯದ ಅನುಕರಣೆ ಮಾಡಿ ಕೆಲವು ಹೊಸ ನೃತ್ಯಗಳೂ ರೂಪಿತವಾಗಿವೆ. ಹೀಗೆಯೇ ಇನ್ನೂ ಹಲವಾರು ಹೊಸ ನೃತ್ಯಗಳು ಹಳೆಯ ನೃತ್ಯಗಳ ಮೂಲದಿಂದ ರೂಪುಗೊಂಡಿರುವುದು ಕಂಡುಬರುತ್ತದೆ.

"ಭುವಿರಳಿಯ" ಎಂಬ ಒಂದು ನೃತ್ಯ ತುಂಬಾ ರೋಮಾಂಚಕಾರಿಯೆನ್ನಬೇಕು. ಮೂವರು ಕುದರೆ ಸವಾರರು ತಮ್ಮ ಸಾಹಸ ಪ್ರದರ್ಶನದ ಮೂಲಕ ಸುಂದರ ಕನ್ಯೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುವ ವಸ್ತುವನ್ನು ಹೊಂದಿದ್ದು ಪುರಾತನ ನೃತ್ಯ ವಸ್ತುವಿನ ಆಧಾರದ ಮೇಲೆ ರೂಪುಗೊಂಡಿದೆ.

ಒಂದು ಸಂಶೋಧನೆ

(೩ನೇ ಪುಟದಿಂದ)

ಚರಿತೆ ಹಾಗೂ ಯಕ್ಷಗಾನ ನಾಟಕಗಳಲ್ಲಿ ಇದೇ ಸಂಗ್ರಹ ಗ್ರಂಥವನ್ನು "ಸಂಗ್ರಹ ವ್ಯಾಕರಣ"ವೆಂಬ ಹೆಸರಿನಿಂದ ಸ್ಮರಿಸಲಾಗಿದೆ. ಭರ್ತೃಹರಿಯ ವಾಕ್ಯಪದೀಯದ ನಿರ್ಮಾಣಕಾಲದಲ್ಲಿ ಈ ಗ್ರಂಥವು ಮರೆಯಾಗುತ್ತ ಬಂದಿರಬೇಕು. ಭರ್ತೃಹರಿಯು ಈ ರೀತಿ ಹೇಳಿದ್ದಾನೆ— "ಪ್ರಾಯೇಣ ಸಂಕ್ಷೇಪರುಚೀನಲ್ಪವಿದ್ಯಾಪರಿಗ್ರಹಾನ್ ಸಂಪ್ರಾಪ್ಯ ವೈಯ್ಯಾಕರಣಾನ್ ಸಂಗ್ರಹೇಸ್ತಮುಪಾಗತೇ" — ಎಂದರೆ, ವೈಯ್ಯಾಕರಣರಲ್ಲಿಯೂ ವಿಸ್ತೃತ ವಿವರಣೆಯನ್ನುಳಿದು ಸಂಕ್ಷೇಪದಲ್ಲಿಯೇ ತಿಳಿಯುವ ಅಭಿರುಚಿಯು ಬೆಳೆಯುತ್ತ ಬಂದುದರಿಂದ 'ಸಂಗ್ರಹ' ಗ್ರಂಥವು ಅಸ್ತವಾಯಿತು.

ವ್ಯಾಡಿಯು ಮಹಾ ಮೀಮಾಂಸಕನಾಗಿದ್ದನು. ಪ್ರಾಯಃ ಮೀಮಾಂಸಕರು ಜಾತಿಪಕ್ಷ-ವಾದದ ಸಮರ್ಥಕನಿರಬೇಕಾಗುತ್ತದೆ. ಆದರೆ, ವ್ಯಾಡಿಯು ವ್ಯಕ್ತಿ ಅಭಿಧಾನದ ಪಕ್ಷವನ್ನು ಪ್ರತಿಪಾದಿಸಿ, ಮಹಾಸಾಹಸವೆಸಗಿದ್ದಾನೆ. ಸಂಗ್ರಹ ಗ್ರಂಥವನ್ನಲ್ಲದೇ ನ್ಯಾಯ ಮತ್ತು ಪರಿಭಾಷೆಯ ಮೇಲೂ ವ್ಯಾಡಿಯು ಗ್ರಂಥ ಬರೆದಿರಬೇಕು. ಈ ಗ್ರಂಥದಿಂದ ಉದ್ಧರಣಗಳನ್ನು ಪತಂಜಲಿ ಮತ್ತು ವಾರ್ತಿಕಕಾರರು ಅಲ್ಲಲ್ಲಿ ಮಾಡಿದ್ದಾರೆ. "ವ್ಯಾಖ್ಯಾನತೋ ವಿಶೇಷ ಪ್ರತಿಪತ್ತಿಃ" ಎಂಬ ಪರಿಭಾಷೆಯನ್ನು ಮೊತ್ತ ಮೊದಲು ಪ್ರತಿಪಾದಿಸಿದವನು ವ್ಯಾಡಿಯೇ. ಈ ಪರಿಭಾಷಾ ಗ್ರಂಥದ ಹೆಸರು "ವ್ಯಾಡಿಪರಿಭಾಷಾವೃತ್ತಿ' ಎಂದಿತ್ತು. ಈ ಪುಸ್ತಕದ ಕೆಲವು ಭಾಗಗಳು ಪ್ರಾಚೀನ ಪುಸ್ತಕಾಲಯಗಳಲ್ಲಿ ಸುರಕ್ಷಿತವಾಗಿವೆಯೆಂದು ತಿಳಿಯುತ್ತದೆ.

'ಶಬ್ದ ಕಲ್ಪದ್ರುಮ'ದಲ್ಲಿ ವ್ಯಾಡಿಯನ್ನು ಕೋಶಕಾರನೆಂದು ಉಲ್ಲೇಖಿಸಿದೆ. 'ಉತ್ಪಲಿನೀ' ಎಂಬುದು ಈತನು ರಚಿಸಿದ್ದ ಕೋಶವೆಂದು ಹೇಳಲಾಗುತ್ತದೆ.

ಇದರಿಂದಾಗಿ ವ್ಯಾಡಿಯು ತನ್ನ ಕಾಲದ ಮಹಾ ವಿದ್ವಾಂಸನೂ ಆಚಾರ್ಯನೂ ಆಗಿದ್ದನು. ವೈಯ್ಯಾಕರಣಿಗಳಲ್ಲಿ ಮಾತ್ರವಲ್ಲ ರಾಸಾಯನಿಕಜ್ಞರಲ್ಲಿಯೂ ಈತನು ಅಮರನಾಗಿದ್ದಾನೆ. ಡಾ। ಪ್ರಫುಲ್ಲಚಂದ್ರರಾಯ್ ಅವರು ತನ್ನ 'ಭಾರತೀಯ ರಸಾಯನ ಶಾಸ್ತ್ರದ ಇತಿಹಾಸ'ವೆಂಬ ಗ್ರಂಥದಲ್ಲಿ ವ್ಯಾಡಿಯ ರಸಾಯನ ಶಾಸ್ತ್ರಜ್ಞತೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿರುವರು.

ಇನ್ನು ಕೆಲವರು ರಸಾಯನವೇತ್ತ ವ್ಯಾಡಿ ಮತ್ತು ವೈಯ್ಯಾಕರಣ ವ್ಯಾಡಿಯರು ಅನ್ಯಾನ್ಯರೆಂದು ಹೇಳುತ್ತಾರೆ. ಆದರೂ ವ್ಯಾಡಿಯು ಪ್ರಾರಂಭದಲ್ಲಿ ಸುಪ್ರಸಿದ್ಧ ವೈಯ್ಯಾಕರಣನಾಗಿದ್ದು ತನ್ನ ಜೀವಿತದ ಉತ್ತರಾರ್ಧದಲ್ಲಿ ರಸಾಯನ ಶಾಸ್ತ್ರದಲ್ಲಿ ಅಪ್ರತಿಮನೆನಿಸಿದನೆಂದು ಭಾವಿಸುತ್ತಾರೆ. ಏಕೆಂದರೆ ಈತನ ವಿವಿಧ ವಿಷಯ ಪರಿಜ್ಞಾನವನ್ನೂ, ಯೋಗ್ಯತೆ ಪ್ರತಿಭೆಗಳನ್ನೂ ಮಹಾಭಾಷ್ಯಕಾರನೂ ಹೊಗಳುತ್ತಾನೆ. ವ್ಯಾಡಿಯ ಈ ತರದ ಸಾಂಗೋಪಾಂಗವಾದ ಜ್ಞಾನವನ್ನು ಕಂಡೇ ಗರುಡ ಪುರಾಣಕಾರನು ತನ್ನ ಶ್ರದ್ಧಾಂಜಲಿಯನ್ನು ಈ ರೀತಿ ಅರ್ಪಿಸಿದ್ದಾನೆ — "ವ್ಯಾಡಿರ್ಜಗಾದ ಜಗತಾಂ ಹಿಮಹಾಪ್ರಭಾವಃ ಸಿದ್ಧಾಂ ವಿದಗ್ಧಹಿತತ್ಪರಯಾ ದಯಾಳುಃ" ಎಂದು.

ಇಷ್ಟರಿಂದಲೇ ವ್ಯಾಡಿಯ ಹಿರಿಮೆಯನ್ನು ನಾವು ತಿಳಿದುಕೊಳ್ಳಬಹುದು.

(ವಿವಿಧ ಮೂಲಗಳಿಂದ)

—ಗೋಶಾ.

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು.ಶಿ.ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು ,,	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟಮಾರಾ (ಅನು: ಕು. ಶಿ. ಹರಿದಾಸ ಭಟ್)	2	0
ಮೋಹದ ಮಹಾಜಾಲ (ವೀರಪ್ಪ ಯುಗಟ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಚನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನಮ್ಮಲ್ಲಿ ಸಿಗುವ ಇತರ ಪುಸ್ತಕಗಳ ಯಾದಿಗೆ ಬರೆಯಿರಿ

ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಕಥಾವಿಹಾರ

(೨ನೇ ಪುಟದಿಂದ)

ಯವರ ಮುಖಕ್ಕೆ ಕಾಂತಿ ಕೊಟ್ಟಿತು.

'ಇವತ್ತು ನಾವು ಏನು ತಿನ್ನುತ್ತೇವೆ, ಗೊತ್ತೆ?'—ಎಂದು ಅವರು ನನ್ನ ಕಡೆಗೆ ತಿರುಗಿ ಕೇಳಿದರು.

'ನೀವು ಇನ್ನೇನೋ ತಯಾರಿಸಿದ್ದೀರಿ, ತುಂಬಾ ಪಂಚರುಚಿ, ಪುನಃ'—ಎಂದೆ ನಾನು, ಕಾರಂಜಿಯ ತೊಟ್ಟಿಯಲ್ಲಿ ಅವರು ದ್ರಾಕ್ಷಾರಸದ ಸೀಸೆಯನ್ನು ತಂಪುಗೊಳಿಸುತ್ತಿದ್ದುದನ್ನು ನೋಡುತ್ತಾ.

ಊಟಕ್ಕೇನೋ ವಿಶೇಷವಾದುದು ಇದೆಯೆಂದು ಅಲ್ಲಿದ್ದ ಸೀಸೆಯು ಮುನ್ಸೂಚನೆ ಕೊಡುತ್ತಿತ್ತು. ಏನೋ ರುಚಿಕರವಾದ ತಿನಿಸಿರಬೇಕು.

ಮೇಜಿನ ಮೇಲೆ ತಮ್ಮ ಕೈಗಳನ್ನಿಡುತ್ತ ಧರ್ಮಗುರು ಸಿಸ್ಕೋಯಿಯವರಿಂತೆಂದರು. "ಇಲ್ಲ, ಇವತ್ತು ನಮಗೆ ಸಿಕ್ಕುವುದು ಸರಳವಾದ ಆಹಾರ. ಆದರೂ ಅದು ಅರ್ಥಭರಿತವಾಗಿದೆ. ಧರ್ಮಗುರು ನಿಕೊದೆಮೂಸರ ಪಾಪಗಳಿಂದ ಮಾಡಿದ ಸಾರಿನ ರುಚಿಯನ್ನು ಇವತ್ತು ನಿನಗೆ ತೋರಿಸುತ್ತೇನೆ."

ಬೆರಗಾಗಿ, ಅವರ ಒಳ್ಳೆಯ ತಮಾಷೆಯ ಮಾತನ್ನು ಮೆಚ್ಚುತ್ತ, ನಾನು ಅವರ ಕಡೆ ನೋಡಿದೆನು.

ವಿಚಾರಮಗ್ನರಾಗಿ ತಲೆಕಾಗಿಸಿಕೊಂಡು ಧರ್ಮಗುರು ಸಿಸ್ಕೋಯಿಯವರು ತಮ್ಮ ಮಾತನ್ನು ಮುಂದುವರಿಸುತ್ತಾ, ಇಂತೆಂದರು:

"ನಾನು ತಮಾಷೆಯೇನೂ ಮಾಡುತ್ತಿಲ್ಲ. ನಾನು ಹೇಳುತ್ತಿರುವುದೆಲ್ಲ ಸತ್ಯ. ಇವತ್ತು ಧರ್ಮಗುರು ನಿಕೊದೆಮೂಸರ ಪಾಪಗಳಿಂದ ಮಾಡಿದ ಸಾರನ್ನು ನಾವು ಸೇವಿಸುವೆವು. ಆ ಬಡಪಾಯಿಯು ಸ್ವರ್ಗದಲ್ಲಿ ವಿಶ್ರಾಂತಿಪಡೆಯಲು ಹೋಗಿ ಈಗೊಂದು ವರ್ಷವಾಯಿತು. ಅಲ್ಲಿ ಮಠದ ಸ್ಮಶಾನದ 'ಕ್ವಿನ್ಸ್' ಮರದಡಿಯಲ್ಲಿ ಅವರ ಸಮಾಧಿಯಿದೆ. ಆ ಗಿಡವನ್ನು ಅವರೇ ನೆಟ್ಟು, ಬೆಳೆಸಿದ್ದರು. ಅವರ ಜೀವನದ ನಮ್ರತೆಯಿಂದ ಈ ಸತ್ಪುರುಷರ ಹೆಸರು ವಿಸ್ಮೃತಿಗೀಡಾಗಲು ಸಹಾಯಕವಾಗಿದೆ. ಆದರೂ ಅವರ ಆತ್ಮವು ದೇವಭೀತಿಯಲ್ಲಿ ಬಾಳುತ್ತಿದ್ದು, ಸದಾ ಅನಿಶ್ಚಿತತೆಯಿಂದ ಸೀಳಾಗಿ ಸ್ವರ್ಗದ ಅನುಗ್ರಹಕ್ಕಾಗಿ ನಿರಂತರವೂ ಪ್ರಯತ್ನಿಸುತ್ತಿತ್ತು.

"ಅವರ ಅವಸಾನ ಕಾಲಕ್ಕೆ ಒಂದು ವರ್ಷ ಮೊದಲು ನಾನು ಅವರನ್ನು ಅಲ್ಲಿ ಕಂಡೆನು. ಅವರು ವಯೋವೃದ್ಧರಾಗಿದ್ದಾಗ್ಯೂ, ದೃಢಕಾಯರಾಗಿ ಆರೋಗ್ಯವಂತರಾಗಿ ಇದ್ದರು. ಅವರ ಎತ್ತರವಾದ, ನೇರವಾದ ವಿಶಾಲ-ಭುಜಾಕೃತಿಯ ನೆನಪು ನನಗಿನ್ನೂ ಇದೆ. ಅವರು ಬಾಗದೆ ಇಗರ್ಜಿಯ ಬಾಗಿಲನ್ನು ಪ್ರವೇಶಿಸಲಾಗುತ್ತಿರಲಿಲ್ಲ. ಅವರ ನಡಿಗೆಯೂ ಭಾರವಾಗಿ, ನಿಧಾನವಾಗಿ, ಗೌರವಪೂರ್ಣವಾಗಿ ಇದ್ದಿತು. ಅವರ ಅಗಲ ಕಣ್ಣುಗಳ ಮೇಲೆ ದಟ್ಟವಾದ ಹುಬ್ಬುಗಳು ಹಬ್ಬಿದ್ದುವು. ಅವರ ದೃಷ್ಟಿಯಲ್ಲಿ ನಿಗೂಢ, ವಿಚಿತ್ರ, ಅದ್ಭುತ ಶಕ್ತಿಯಿತ್ತು. ಅವರ ವ್ಯಕ್ತಿತ್ವದ ಸಾಮರ್ಥ್ಯಕ್ಕೆ ಅದು ಹೊಂದಿಕೊಂಡು ಇರಲಿಲ್ಲ.

"ಪ್ರಾತಃಕಾಲಗಳಲ್ಲಿ ಅವರು ತಮ್ಮ ಕುಟೀರದಿಂದ ಹೊರಬಂದು, ಇಗರ್ಜಿಯ ಹೊರಬಾಗಿಲಿನಲ್ಲಿ ನಿಂತು ಶಿಲುಬೆಯಂತೆ ಸಂನ್ಯಾಸವನ್ನು ಮಾಡಿಕೊಂಡರು. ಸೂರ್ಯರಶ್ಮಿಯು ಅವರ ಅಗಲವಾದ ಭುಜಗಳ ಮೇಲೆ ಬಿದ್ದಿತ್ತು. ಅವರು ಧರಿಸಿದ್ದ ಮಾಸಿದ, ಹಳೆಯ ನಿಲುವಂಗಿಯ ಬಟ್ಟೆದ ಬೆನ್ನಂಚಿನ ಮೇಲೆ ಬಿದ್ದಿದ್ದಂತೆ ಭುಜಗಳ ಮೇಲೆ ಬಿದ್ದಿತ್ತು.

"ಅವರು ಎಂತಹ ಪಾಪಕ್ಕೂ ಅವಕಾಶ ಕೊಡದಂತೆ ತುಂಬ ಬಲಿಷ್ಠರಾಗಿದ್ದರು. ಪಾಪಗಳ ವಿರೋಧವಾಗಿ ಅವರು ತಮ್ಮ ಬಿಗಿಮುಷ್ಟಿ ಮುನ್ನೆಕ್ಕುತ್ತಿದ್ದರು—ಶಿಲುಬೆಯಾಕಾರವ್ಯಾಸಕ್ಕಾಗಿ ಒಂದುಗೂಡಿದ ಬೆರಳುಗಳನ್ನಲ್ಲ. ಅದುದರಿಂದಲೇ ಆ ಮರಂತೆ ಪ್ರಾರ್ಥನೆಮಾಗುತ್ತಿದು ಅವರಿಗೆ ತಕ್ಕದ್ದಲ್ಲವೆಂದು ನಾನು ಯಾವಾಗಲೂ ಆಲೋಚಿಸುತ್ತಿದ್ದೆನು. ದೇವರು ನನ್ನನ್ನು ಕ್ಷಮಿಸಬೇಕು.

"ಧರ್ಮಗುರು ನಿಕೊದೆಮೂಸ್‌ರವರು ತಮ್ಮ ಸಣ್ಣ ಕೋಣೆಯಲ್ಲಿ ಒಬ್ಬರೇ ವಾಸಿಸುತ್ತಿದ್ದರು. ನನ್ನೊಡನೆ ಬೆರೆಯುವುದ. ಅವರಿಗೆ ಇಷ್ಟವಿರಲಿಲ್ಲ. ಅವರು ಒಂಟಿಯಾಗಿಯೇ ಊಟಮಾಡುತ್ತಿದ್ದರು. ಇಗರ್ಜಿಯ ಪ್ರಾತಃಕಾಲದ, ಸಂಧ್ಯಾಕಾಲದ ಪ್ರಾರ್ಥನೆಗಳಲ್ಲಿ ಅವರು ಹೊತ್ತಿಗೆ ಸರಿಯಾಗಿ, ಕ್ರಮವಾಗಿ ಹಾಜರಿರುತ್ತಿದ್ದರು. ತೋಟದ ಹೂಗಿಡಗಳನ್ನು ಅವರು ಆದರದಿಂದ ನೋಡಿಕೊಳ್ಳುತ್ತಿದ್ದರು. ಬಿಳಿಯ ಗುಲಾಬಿ ಹೂಗಳೆಂದರೆ ಅವರಿಗೆ ವಿಶೇಷ ಪ್ರೀತಿ. ಬಗೆಬಗೆಯ ಗುಲಾಬಿ ಗಿಡಗಳನ್ನು ಅವರು ಇಲ್ಲಿ ನೆಟ್ಟಿದ್ದರು. ಮೇ ತಿಂಗಳ ಸುಂದರ ಮುಂಜಾನೆಗಳಲ್ಲಿ ಈ ಗುಲಾಬಿ ಹೂಗಳು ಅರಳಿದಾಗ, ಸಣ್ಣ ಶ್ವೇತ ದೇವತೆಗಳು ತೋಟದಲ್ಲಿ ತುಂಬಿಕೊಂಡಿದ್ದಂತೆ ಕಾಣುತ್ತಿತ್ತು. ಧರ್ಮಗುರು ನಿಕೊದೆಮೂಸರು ಅವುಗಳ ಮಧ್ಯೆ ಹೋಗಿ ಓಡಾಡುತ್ತಿದ್ದರು. ಅವುಗಳನ್ನು ಅವರು ಮೂಸುತ್ತಿದ್ದರಾದರೂ, ಯಾವಾಗಲೂ ಕೇವಲ ಒಂದೇ ಹೂವನ್ನು ಮಾತ್ರವೇ ಕಿತ್ತುಕೊಳ್ಳುತ್ತಿದ್ದರು.

"ಆ ದೂರದ ಬೆಂಚಿನ ಮೇಲೆ ಯಾವಾಗಲೂ ಒಂದೇ ಒಂದು ಗುಲಾಬಿ ಹೂ ಇರುತ್ತಿದ್ದುದು ಸೋಜಿಗವೇ ಸರಿ. ಆ ಬೆಂಚಿನಾಚೆಗೆ ನಮ್ಮ ಅತ್ಯಂತ ಸುಂದರವಾದ ಹುಲ್ಲುಗಾವಲಿದೆ. ಇಲ್ಲಿ ಒಂದೇ ಒಂದು ಗುಲಾಬಿ ದಿನವೂ ಬೆಂಚಿನ ಮೇಲೆ ಇರುತ್ತಿದ್ದುದು ರಹಸ್ಯ ಗರ್ಭಿತವಾಗಿದ್ದರೂ ವಿಶೇಷತೆಯಿಲ್ಲದಿರಲಿಲ್ಲ. ಅದರ ವಿಚಿತ್ರವನ್ನು ನಾನಿಂದು ಬಲ್ಲೆನು.

"ಸುಂದರ ವಸಂತ-ಗ್ರೀಷ್ಮಕಾಲಗಳಲ್ಲಿ ಧರ್ಮಗುರು ನಿಕೊದೆಮೂಸರು ತಮ್ಮ ಬಹ್ವಂಶದ ವೇಳೆಯನ್ನು ನದೀತೀರದಲ್ಲಿ ಕಳೆಯುತ್ತಿದ್ದರು ಮೀನುಗಾರಿಕೆಯಲ್ಲಿ ಅವರಿಗೆ ವಿಶೇಷ ಆಸಕ್ತಿಯಿತ್ತು.

"ನೆರಳು ತುಂಬಿದ್ದ ಕಣಿವೆಯಲ್ಲಿ ನದಿಯುದ್ದಕ್ಕೂ ತಿರುಗಾಡುತ್ತ, ದಂಡೆಯುದ್ದಕ್ಕೂ ಇದ್ದ ಪೊದೆಗಳ ಮಧ್ಯಾಂತರ ಶ್ರಮಪೂರ್ವಕವಾಗಿ ಹಾಯುತ್ತಿದ್ದರು. ಕಾಲದ ಹೊಡೆತಕ್ಕೆ ಸಿಕ್ಕಿ ಹಸುರುಗಟ್ಟಿದ್ದ ಭಾರೀ ಬಂಡೆಗಳ ಮೇಲೆ ಅವರು ಹತ್ತುತ್ತಿದ್ದರು. ಅವರಿಗೆ ಬಳಲಿಕೆಯ ಅನುಭವವೇ ಆಗುತ್ತಿರಲಿಲ್ಲ. ಇಂತಹ ದಿನಗಳಲ್ಲಿ ಅವರು ಸಾಯಂಕಾಲದ ಪ್ರಾರ್ಥನೆಗು ವೇಳೆಗೆ ಇರುತ್ತಿರಲಿಲ್ಲ. ಆದರೆ ಇಗರ್ಜಿಯ ಗಂಟೆ ಬಾರಿಸುವ ಶಬ್ದ ಕೇಳಿಸಿದೊಡನೆಯೇ ಮೀನುಗಾರಿಕೆಯ ವಸ್ತುಗಳನ್ನು ಬಿಟ್ಟುಬಿಟ್ಟು, ಗಂಟೆನಾದವು ನಿಲ್ಲುವವರೆಗೂ ಅವರು ಶಿಲುಬೆಯ ಸಂನ್ಯಾಸವನ್ನು ಮಾಡಿಕೊಳ್ಳುತ್ತಿದ್ದುದನ್ನು ಅನೇಕ ಜನರು ಕಂಡವರಿದ್ದಾರೆ.

"ಧರ್ಮಗುರು ನಿಕೊದೆಮೂಸರು ತುಂಬಾ ಯುವಕರಾಗಿದ್ದಾಗಲೇ, ಅವರಿಗೆ ಇನ್ನೂ ಇಪ್ಪತ್ತು ವರ್ಷ ವಯಸ್ಸಾಗಿದ್ದಾಗಲೇ, ಅವರು ಇಗರ್ಜಿಯನ್ನು ಸೇರಿದರು. ಅವರ ನಡೆವಳಿಕೆ ವಿಚಿತ್ರವಾಗಿರುತ್ತಿತ್ತು. ಅನೇಕಸಲ ಅವರನ್ನು ಹಿರಿಯ ಧರ್ಮಗುರು ಆಗಬೇಕೆಂಬ ಕರೆ ಕೋರಲಾಗಿತ್ತಾದರೂ, ಅವರು ಸದಾ ವಿನೀತರಾಗಿ ನಿರಾಕರಿಸುತ್ತಿದ್ದರು.

"ಈಗ ಅವರು ಪರಲೋಕವಾಸಿಗಳಾಗಿ ವಿಶ್ರಾಂತಿ ಪಡೆದಿದ್ದಾರೆ. ತಮ್ಮ 'ಕ್ವಿನ್ಸ್' ಮರದಡಿಯಲ್ಲಿ ಶಾಂತಿಯನ್ನು ಪಡೆದಿದ್ದಾರೆ. ಆ ಗಿಡವು ಅವರ ಸಮಾಧಿಯ ಮೇಲೆ ತನ್ನ ದಟ್ಟವಾದ ಪೊದೆಗಳನ್ನು ಚಾಚಿದೆ. ಎಳೆಯ ಹಸುರು ಕಾಯಿಗಳು ಅದರಲ್ಲಿ ತುಂಬಿಕೊಂಡಿವೆ ಅವರ ಪಾಪಗಳಿಂದ ತಯಾರಿಸಲಾದ ಸಾರನ್ನೇ ನಾವಿಂದು ಸೇವಿಸುವೆವು."

ಧರ್ಮಗುರು ಸಿಸ್ಕೋಯಿಯವರು ವಿವೇಕದ ಮುಗುಳ್ನಗೆಯನ್ನು ಸೂಸುತ್ತ, ತಮ್ಮ ಕೈಗಳನ್ನು ಮೇಲಕ್ಕೆತ್ತಿದರು. ನಿಲುವಂಗಿಯ ತೋಳುಗಳನ್ನು ಹಿಂದಕ್ಕೆ ಸರಿಸುತ್ತಾ ಅವರು ತಮ್ಮ ಮಾತನ್ನು ಮುಂದುವರಿಸಿದರು.

"ನಿನ್ನೆ ಧರ್ಮಗುರು ನಿಕೊದೆಮೂಸರ ಕೋಣೆಯಲ್ಲಿನ ಒಂದು ಗುಪ್ತ ಕಪಾಟಿನ ತಳದಲ್ಲಿ ಪಣ್ಣಿನ ಮುಡಿಕೆಯೊಂದು ಸಿಕ್ಕಿತು. ಈಗ ಆ ಕೋಟೆ ಬರಿದು. ಅದರಲ್ಲಿ ಯಾರೂ ಇಲ್ಲ. ಆ ಮುಡಿಕೆಯಲ್ಲಿ 'ಹರಿಕೋತ್' ಕಾಳುಗಳು ತುಂಬಿದ್ದುವು. ಆ ಕಾಳಿನ ಮಡಿಕೆಯ ಮೇಲೆ ಮೃತರ ಪ್ರಾರ್ಥನೆಯ ಪುಸ್ತಕವಿದ್ದಿತು. ವಿಶೇಷತೆಯೇನೆಂದರೆ, ಆ ಮುಡಿಕೆಯಲ್ಲಿದ್ದ ಪ್ರತಿಯೊಂದು ಕಾಳನ್ನೂ ಪ್ರತ್ಯೇಕ-ಪ್ರತ್ಯೇಕ ಕಾಗದದ ಚೂರುಗಳಲ್ಲಿ ಸುತ್ತಿಡಲಾಗಿತ್ತು.

"ಪ್ರಾರ್ಥನಾ ಪುಸ್ತಕದ ಮೊದಲನೆಯ ಬರಿಯ ಪುಟದ ಮೇಲೆ ಬರೆದಿರುವುದೇನೆಂದರೆ......"

—ಎನ್ನುತ್ತಾ ಧರ್ಮಗುರು ಸಿಸ್ಕೋಯಿಯವರು ತಮ್ಮ ನಿಲುವಂಗಿಯ ಎದೆ ಜೇಬಿನಿಂದ ಒಂದು ಪುಸ್ತಕವನ್ನು ಹೊರತೆಗೆದರು. ಆ ಪುಸ್ತಕಕ್ಕೆ ಹಳೆಯ ಬಟ್ಟೆ ಹಾಕಿತ್ತು. ಆ ಪುಸ್ತಕವನ್ನು ತೆರೆದು, ಧರ್ಮಗುರು ಸಿಸ್ಕೋಯಿಯವರು ಓದತೊಡಗಿದರು.

'ನನ್ನ ಕಾರ್ಯರೂಪದ ಅಥವಾ ಆಲೋಚನಾ ರೂಪದ ಪ್ರತಿಯೊಂದು ಪಾಪಕ್ಕೂ ನಾನಿಲ್ಲಿ ಒಂದು ಕಾಳನ್ನು ಬಿಟ್ಟು ಹೋಗುತ್ತಿದ್ದೇನೆ. ಸ್ವಪೂರ್ವವಲ್ಲದ ತಪ್ಪುಗಳಿಗೆ ಒಂದೊಂದು ಕಪ್ಪು ಕಾಳು. ನನ್ನ ಆತ್ಮವನ್ನು ಸಂದೇಹಕ್ಕೆ ದೂಡಿದ, ಮತ್ತು ಅವು ಪಾಪಗಳು ಹೌದೋ, ಅಲ್ಲವೋ ಎಂಬ ನನ್ನ ಆಲೋಚನೆಗಳು ನಿರ್ಧರಿಸಲಾಗದ ಪ್ರತಿಯೊಂದು ತಪ್ಪಿಗೂ ಒಂದೊಂದು ಬಿಳಿಯ ಕಾಳು. ಕಪ್ಪು ಪಾಪಗಳಿಗಾಗಿ ದೇವರ ಮುಂದೆ ನಾನು ಗಾಢವಾಗಿ ಪಶ್ಚಾತ್ತಾಪ ಪಡುತ್ತೇನೆ. ಬಿಳಿಯವುಗಳಿಗಾಗಿ ನಾನು ದಯಾ ಪ್ರಾರ್ಥಿಯಾಗಿದ್ದೇನೆ.'

ಧರ್ಮಗುರು ಸಿಸ್ಕೋಯಿಯವರು ಪುಸ್ತಕವನ್ನು ಮುಚ್ಚಿ, ಮೇಜಿನ ಮೇಲಿಟ್ಟರು. ತಮ್ಮ ಜೇಬಿನಿಂದ ಒಂದು ಕರವಸ್ತ್ರವನ್ನು ಅವರು ತೆಗೆದುಕೊಂಡರು. ಅದರಲ್ಲಿ ಏನನ್ನೋ ಸುತ್ತಿಡಲಾಗಿತ್ತು. ಅವರು ಅದನ್ನು ಬಿಚ್ಚಿ, ಆ ವಸ್ತುವನ್ನು ಹೊರತೆಗೆದರು. ಅದನ್ನು ಮೇಜಿನ ಮೇಲೆ ಸುರಿದರು. ಅದು ಮತ್ತೇನೂ ಆಗಿರದೆ ಅನೇಕ ಸಣ್ಣ ಸಣ್ಣ ಮುಡಿಕೆಯ ಕಾಗದಗಳಾಗಿದ್ದುವು. ಧರ್ಮಗುರುವು ನಿಟ್ಟುಸಿರೊಂದನ್ನು ಬಿಟ್ಟೊಡನೆಯೇ ಆ ಕಾಗದದ ಚೂರುಗಳು ಚದರಿದುವು. ಅವರು ತಮ್ಮ ಮಾತನ್ನು ಮುಂದುವರಿಸುತ್ತ ಇಂತೆಂದರು.

"ಇವೇ ಆ ಸಣ್ಣ ಕಾಗದಗಳು. ಇವುಗಳಲ್ಲಿ ಆ ಕಾಳುಗಳನ್ನು ಸುತ್ತಿಡಲಾಗಿತ್ತು ಈ ಪ್ರತಿಯೊಂದು ಕಾಗದದ ಮೇಲೆಯೂ ಧರ್ಮಗುರು ನಿಕೊದೆಮೂಸರ ಪಾಪವೊಂದನ್ನು ಬರೆದಿಡಲಾಗಿದೆ. ಅವುಗಳನ್ನು ನಾ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 257/51.

R. E. P. No. 651/58.

ರಿವರೆಂಡ ಫಾಧರ್ ಸೀಟರ ಕರ್ನೇಲಿಯೊ, ಯೇಜಂಟ, ಮಾರ್ಕಿಲಿನ್ ಕರ್ನೇಲಿಯೊ — ಅರ್ಜಿದಾರರು.

ಮತ್ತು

ಕರಿಯಾದು ಹೆಂಗ್ಸು ಕೂಡಾ — ಯೆದ್ರಿರು.

ಇವರೊಳಗೆ

1. ಕರಿಯಾದು ಹೆಂಗ್ಸು—ಬೈಕ್ಲ ಮರಕಾಲನ ಹೆಂಡ್ತಿ, 2. ಪದುಮು 3. ಅಂಗಾರೆ, ಬೈಕುಲ ಮರಕಾಲನ ಮಕ್ಕಳು— ಉಡ್ಪಿ ತಾಲ್ಕು ಉದಿಯಾವರ ಗ್ರಾಮದಲ್ಲಿರುವವರು — ಎದ್ರಿರು.

1ನೆಯವಳು ಸ್ವತಹಾ ಮತ್ತು ತನ್ನ ಸಂರಕ್ಷಣೆಯಲ್ಲಿರುವ ವ್ಯಾನರ ಮಕ್ಕಳು 4ನೆ ಸುಂದರ 5ನೆ ಸಂಜೀವ ಇವರ ಗಾರ್ಡಿಯನಾಗಿ ಕೂಡಾ—

ಮೇಲ್ಕಂಡ ಅಮ್ಲುಜ್ಯಾರಿಯಲ್ಲಿ ಸಿದ್ರಿ ಎದ್ರಿರಿಗೆ ಆಗತಕ್ಕ ಯಿಸ್ತಿಹಾರ್ ನೋಟೀಸು ತಾ. 11-1-60ಕ್ಕೆ ಯಿಟ್ಟಿರುವದ್ರಿಂದ ಆ ದಿವ್ಸ ಸದ್ರಿ ಯೆದ್ರಿರು ತಮ್ಮ ಆಕ್ಷೇಪ ಹೇಳುವದನ್ನು ಜ್ಯಾಹೀರುಮಾಡಿಕೊಳ್ಳತಕ್ಕದ್ದು.

P. Padamanabha Rao,
Vakil for Petitioner.
Udipi, Dated, 14—12—1959.



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & CO. (M. I.) CALCUTTA—40

ಸ್ಟಾಕಿಸ್ಟರು: ಸ್ಟಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619

UDIPI, THURSDAY
24–12–1959

LICENSE NO. 31
Licensed to Post without Prepayment

ನು ಕ್ರಮಶಃ ಓದಿದೆನು, ಒಂದಾದ ಮೇಲೊಂದರಂತೆ ಪ್ರಾಯಶಃ ಈ ಬಡಪಾಯಿ ಧರ್ಮಗುರುವಿನ ಆತ್ಮವು ವೃಥಾ ಪೀಡಿತವಾಗಿತ್ತೆಂದು ನನಗೆ ಕಾಣುತ್ತದೆ. ನಮ್ಮ ದಯಾಮಯ ದೇವರು ಧರ್ಮಗುರುವಿನ ಪ್ರಾರ್ಥನೆಗಳನ್ನು ಕಾರುಣ್ಯದ ಮತ್ತು ಸದ್ಭಾವನೆಯ ಮಂದಹಾಸದಿಂದ ಸ್ವೀಕರಿಸಿರಬೇಕು. ಅವುಗಳಲ್ಲಿ ಕೆಲವನ್ನು ನಾವು ಓದೋಣ

“ಪ್ರಾಪಂಚಿಕ ಜೀವನವೂ ಮತ್ತು ನನ್ನ ಯೌವನವೂ ನನಗೆ ನೆನಪಾದುವು ನಾನು ಸನ್ಯಾಸವನ್ನು ಸ್ವೀಕರಿಸುವುದಕ್ಕೆ ಕಾರಣವಾದ ನನ್ನ ಪ್ರೇಮದ ನೆನಪಾಯಿತು. ನಾನು ಪ್ರೀತಿಸಿದಾಕೆಯು ಮತ್ತು ಆಕೆಯು ಪ್ರೀತಿಸುತ್ತಿದ್ದ ಬಿಳಿಯ ಗುಲಾಬಿ ಹೂಗಳ ನೆನಪಾಯಿತು— ಕಪ್ಪು ಕಾಳು.

“ಆಕೆಯ ಬಿಳಿಯ ಗುಲಾಬಿಗಳ ನೆನಪಿಗಾಗಿ, ಮೂರು ಗುಲಾಬಿ ಗಿಡಗಳನ್ನು ನಾನು ತೋಟದಲ್ಲಿ ನೆಟ್ಟಿದ್ದೇನೆ!—ಕಪ್ಪು ಕಾಳು,

“‘ಇಗರ್ಜಿಯ ಮಠದ ಗೋಡೆಯಾಚೆಯ ಹುಲ್ಲುಗಾವಲಿನ ಬಳಿಯಲ್ಲಿರುವ ‘ಬೆಂಚ್’ನ ಮೇಲೆ ನಾನು ಪ್ರತಿದಿನವೂ ಒಂದು ಬಿಳಿಯ ಗುಲಾಬಿಯನ್ನು ಬಿಟ್ಟಿರುತ್ತೇನೆ. ಅದನ್ನು ಯಾರು ಬೇಕಾದರೂ ತೆಗೆದುಕೊಳ್ಳಬಹುದು. ಆಕೆಗೊಂದು ಕಾಲದಲ್ಲಿ ಸಂತೋಷವಾಗುತ್ತಿದ್ದಂತೆ, ಅದರಿಂದ ಅಪರಿಚಿತ ಆತ್ಮವೊಂದಕ್ಕೆ ಸಂತೋಷವಾಗಲಿ.’—ಬಿಳಿಯ ಕಾಳು.

“‘ಒಂದು ಆಲೋಚನೆಯು ನನಗೆ ಶಾಂತಿಭಂಗ ಮಾಡಿದೆ. ಬಾಳಿನಿಂದ ದೂರ, ನಾನೇಕೆ ಓಡಿದೆ? ನಾನು ಸ್ವತಃ ನನ್ನನ್ನು ಕಾಪಾಡಿಕೊಂಡೆನೆ, ಅಥವಾ ಇಲ್ಲವೆ?’— ಬಿಳಿಯ ಕಾಳು.

“‘ನಾನು ಧ್ಯಾನಮಗ್ನನಾಗುತ್ತೇನೆ. ಮಾನವನಲ್ಲಿ ಅತ್ಯುನ್ನತ ಯೋಗ್ಯತೆ ಯಾವುದರದು? ಅವನ ಆತ್ಮದ್ದೆ ಅಥವಾ ಅವನ ದೇಹದ್ದೆ? ಇದು ನನಗೆ ತಿಳಿಯದಾಗಿದೆ. ಅವು ಅವಿಭಾಜ್ಯವಲ್ಲವೆ! ದೇಹದ ಸುಖಮಯ ಪ್ರವೃತ್ತಿಗಳ ಬಗ್ಗೆ ಆತ್ಮಕ್ಕೆ ಸಂತೋಷವಾಗದೆ?’— ಬಿಳಿಯ ಕಾಳು.”

ಈ ರೀತಿಯಾಗಿ ಮಡಕೆಯಲ್ಲಿಡಲಾಗಿದ್ದ ಗುರುತಿನ ಎಲ್ಲ ಚೀಟಿಗಳಲ್ಲಿಯೂ ಅವರು ಮಾಡಿದ್ದ ಪಾಪಗಳನ್ನೇನೂ ದಾಖಲೆಗೊಳಿಸಿರಲಿಲ್ಲ. ಅವು ಅವರ ಯೌವನದ ಕಾಲದ ಸಂಸ್ಮರಣೆಗಳಾಗಿದ್ದುವು ಮಾತ್ರ. ಅವರಲ್ಲಿ ಸಂದೇಹಗಳನ್ನು ಮೂಡಿಸಿದ ಆಲೋಚನೆಗಳ ದಾಖಲೆಗಳಾಗಿದ್ದುವು ಮಾತ್ರ. ಈ ಸಂದೇಹಗಳು ದಿವಂಗತ ಧರ್ಮಗುರು ನಿಕೊದೆಮೂಸರ ಆತ್ಮವನ್ನು ಪೀಡಿಸುತ್ತಿದ್ದುವು.

ಅವರು ಕಾಗದದ ಚೂರುಗಳೆಲ್ಲವನ್ನೂ ಓದಿ ಮುಗಿಸಿದರು. ತರುವಾಯ ಧರ್ಮಗುರು ಸಿಸ್ರೋಯಿಯವರು ಆ ಕಾಗದಗಳನ್ನು ಪುನಃ ಮಡಿಚಿ ಜೇಬಿನಲ್ಲಿಟ್ಟುಕೊಳ್ಳುತ್ತಾ, ನನ್ನ ಕಡೆ ನೋಡಿ— ‘ಮನುಷ್ಯನೆಂತಹವನು!....’ ಎಂದೊಡನೆಯೇ, ನಾನು “ಕಪ್ಪು ಕಾಳು!” ಎಂದು ಉತ್ತರಕೊಟ್ಟೆನು. “ಕಪ್ಪು ಮತ್ತು ಬಿಳುಪು ಕೂಡಾ!”—ಎಂದರವರು. ಮಧ್ಯಾಹ್ನವಾಗಿತ್ತು. ಕಪ್ಪು ಮತ್ತು ಬಿಳುಪು ಕಾಳುಗಳ ಸುವಾಸನೆಯ ಸಾರು ಮೇಜಿನ ಮೇಲಿತ್ತು. ‘ಇದು ಧರ್ಮಗುರು ನಿಕೊದೆಮೂಸರ ಪಾಪಗಳ ಸಾರು. ಆ ದ್ರಾಕ್ಷಾರಸ ತಣ್ಣಗಾಗಿದೆ. ಆ ಒಳ್ಳೆಯ ಗುರುವಿನ ಆತ್ಮಶಾಂತಿಗಾಗಿ ನಾವದನ್ನು ಸೇವಿಸೋಣವೆನ್ನಿಸಿತು.” ಎನ್ನುತ್ತಾ ಅವರು ನನ್ನನ್ನು ಊಟಕ್ಕೆ ಕರೆದರು.

—ಎಲಿನ್ ಪೆಲಿನ್.

(ಬಲ್ಗೇರಿಯನ್ ಕಥೆ)

ಚಂದಾದಾರರು

ತಮ್ಮ ಚಂದಾ ಹಣವನ್ನು ‘ಸಿಂಡಿಕೇಟ್’ ಬ್ಯಾಂಕಿನ ಯಾವದೇ ಶಾಖೆಯಲ್ಲಿ ‘ನವಯುಗ’ದ ಖಾತೆಗೆ ಯಾವ ತರದ ಖರ್ಚಿಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರುಗಳಿ, ಜಾಹೀರಾತುದಾರರುಗಳಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

ಇತಿಹಾಸ ಸ್ಪೃಷ್ಟ

(೪ನೇ ಪುಟದಿಂದ)

ಸವನ್ನು ತ್ಯಾಗಮಾಡಿ, ಜೀವನ ಪರ್ಯಂತ ಸರಳತನದಿಂದ ಇರುತ್ತಿದ್ದಳು. ಚಂಪಾದಲ್ಲೂ ರಾಜರುಗಳಲ್ಲಿ ಬಹು ವಿವಾಹದ ಪದ್ಧತಿಯಿತ್ತು.

ಭಾರತ ದೇಶದಂತೆ ಮೃತನ ಅಂತ್ಯಕ್ರಿಯೆಯು ಇಲ್ಲಿ ಕೂಡಾ ಜಾರಿಯಲ್ಲಿದೆ. ಮೃತನ ಅಗ್ನಿ ಸಂಸ್ಕಾರ ಕೂಡಾ ಆಗುತ್ತಿತ್ತು. ಇದರ ಬಳಿಕ ಅವಶೇಷಗಳನ್ನು ನೀರಿನೊಡನೆ ವಿಲೀನಗೊಳಿಸುತ್ತಿದ್ದರು. ಚಂಪಾದಲ್ಲಿ ಭಾರತೀಯ ಗ್ರಂಥಗಳು ಚೆನ್ನಾಗಿ ಪ್ರಚಲಿತವಾಗಿದ್ದುವು. ರಾಮಾಯಣ—ಮಹಾಭಾರತದ ಜೊತೆಗೆ “ಕಾದಂಬರಿ” ಮತ್ತು ‘ನೈಷಧಚರಿತ”ದಂತಹ ಉಚ್ಚಕೋಟಿಯ ಸಂಸ್ಕೃತ ಗ್ರಂಥಗಳು ಕೂಡಾ ಇಲ್ಲಿ ಅಭ್ಯಸಿಸಲ್ಪಡುತ್ತಿದ್ದುವು. ಚಂಪಾದಲ್ಲಿ ಸಂಸ್ಕೃತ ಭಾಷೆಗೆ ಬಹಳ ಮಹತ್ವವಿತ್ತೆಂದು ಇಲ್ಲಿ ದೊರಕಿರುವ ಶಿಲಾ ಲೇಖಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

ಚಂಪಾದಲ್ಲಿ ಪೂಜಿಸಲ್ಪಡುವ ದೇವತೆಗಳಲ್ಲಿ ಭಗವಾನ್ ಶಿವನ ಸ್ಥಾನ ಸರ್ವೋಪರಿಯಾಗಿದೆ. ಇಲ್ಲಿಯ ಹಿಂದೂ ರಾಜರು ಶಿವ ಮಂದಿರಗಳನ್ನು ಕಟ್ಟಿಸುವುದು ಮತ್ತು ಅವುಗಳನ್ನು ಪೂಜಿಸುವುದು ತಮ್ಮ ಪರಮ ಪುನೀತ ಕರ್ತವ್ಯವೆಂದು ತಿಳಿಯುತ್ತಿದ್ದರು. ಚಂಪಾದ ಜನರ ಧಾರ್ಮಿಕ ಜೀವನದಲ್ಲಿ ಶಿವಪೂಜೆಗೆ ಅತ್ಯಧಿಕ ಮಹತ್ವ ಕೊಡಲಾಗುತ್ತಿತ್ತು. ಅಲ್ಲದೆ ಹಿಂದೂ ಧರ್ಮ ಶಾಸ್ತ್ರಗಳಲ್ಲಿ ವರ್ಣಿತವಾದಂತೆ ಇಲ್ಲಿ ಶಿವನ ಸ್ವರೂಪದ ಕಲ್ಪನೆ ಮಾಡಿಕೊಂಡಿದ್ದಾರೆ ಎಂದು ಇಲ್ಲಿಯ ಅನೇಕ ಶಿಲಾ ಲೇಖಗಳಿಂದ ವಿದಿತವಾಗುತ್ತದೆ.

ಚಂಪಾದಲ್ಲಿ ಶಕ್ತಿಯನ್ನು ಪೂಜಿಸುವ ಪರಂಪರೆ ಕೂಡಾ ವಿದ್ಯಮಾನವಾಗಿತ್ತು. ಇಲ್ಲಿ ಉಮಾ, ಗೌರಿ, ಭಗವತಿ ಮತ್ತು ಮಹಾಭಗವತಿಯ ರೂಪದಲ್ಲಿ ಶಕ್ತಿಯನ್ನು ಪೂಜಿಸುತ್ತಿದ್ದರು ಎಂದು ಕೆಲವು ಶಿಲಾಲೇಖಗಳಿಂದ ತಿಳಿಯುತ್ತದೆ. ಹರಿವರ್ಮನ್‌ನ ಶಿಲಾಲೇಖ ಕ್ರಮಾಂಕ ೨೭ರ ಅನುಸಾರ ಕೇತರಾಡದಲ್ಲಿ ಆ ಸಮಯ ಜಗತ್ಪ್ರಸಿದ್ಧವಾದ ಒಂದು ಭಗವತೀ ಮಂದಿರವಿತ್ತು. ರಾಜನಾದ ಇಂದ್ರವರ್ಮನ್‌ನು ಸನ್ ೮೧೮ರಲ್ಲಿ ದೇವಿಯ ಒಂದು ಚಿನ್ನದ ಮೂರ್ತಿಯನ್ನು ಮಾಡಿಸಿದ್ದನು. ಇದನ್ನು ಬಳಿಕ ಕಾಂಬೋಜದ ಆಕ್ರಮಣಕಾರರು ತೆಗೆದುಕೊಂಡು ಹೋದರೆಂದು ಶಿಲಾಲೇಖ ಕ್ರಮಾಂಕ ೪೫ರಿಂದ ವಿದಿತವಾಗುತ್ತದೆ.

ಇಲ್ಲಿ ಗಣೇಶನನ್ನು ಕೂಡಾ ಪೂಜಿಸುತ್ತಿದ್ದರು. ಇಲ್ಲಿ ದೊರಕಿರುವ ಅಧಿಕಾಂಶ ಗಣೇಶನ ಮೂರ್ತಿಗಳೆಲ್ಲಾ ಕುಳಿತುಕೊಂಡವುಗಳಾಗಿವೆ. ಕೇವಲ ಮಾಯಿ ಸೋನ್‌ನಲ್ಲಿರುವ ಒಂದು ಗಣೇಶನ ಮೂರ್ತಿಯು ನಿಂತುಕೊಂಡುದಾಗಿದೆ.

ಚಂಪಾದಲ್ಲಿ ವೈಷ್ಣವ ಧರ್ಮ ಕೂಡಾ ಚೆನ್ನಾಗಿ ಪ್ರಚಲಿತವಾಗಿತ್ತು. ಇಲ್ಲಿಯ ವಿವಿಧ ಶಿಲಾಲೇಖಗಳಲ್ಲಿ ಭಗವಾನ್ ವಿಷ್ಣುವಿಗೆ ಸಂಬಂಧಿತವಾದ ಅನೇಕ ಕಥೆಗಳ ಉಲ್ಲೇಖವಿದೆ. ರಾಮಾಯಣದಲ್ಲಿ ವರ್ಣಿತವಾದ ಘಟನೆಗಳು ತಮ್ಮ ದೇಶದಲ್ಲೇ ಘಟಿಸಿದುವು ಮತ್ತು ತಾವು ಭಗವಾನ್ ರಾಮನ ವಂಶದವರು ಎಂದು ಚಂಪಾವಾಸಿಗಳ ವಿಶ್ವಾಸವಾಗಿದೆ ಇಲ್ಲಿ ಭಗವಾನ್ ಶ್ರೀಕೃಷ್ಣನ ಒಂದು ಮೂರ್ತಿ ಕೂಡಾ ದೊರಕಿದೆ. ಈ ಮೂರ್ತಿಯು ಕೃಷ್ಣನು ಬೆರಳಲ್ಲಿ ಗೋವರ್ಧನ ಪರ್ವತವನ್ನು ಎತ್ತಿ ಹಿಡಿದು ವ್ರಜವಾಸಿಗಳ ಮತ್ತು ಅವರ ದನಗಳಿಗೆ ರಕ್ಷಣೆ ಕೊಡುತ್ತಿರುವುದನ್ನು ತೋರಿಸುತ್ತದೆ.

ಇದರ ಹೊರತು ಚಂಪಾದಲ್ಲಿ ಇಂದ್ರ, ಬ್ರಹ್ಮ, ಸೂರ್ಯ, ಚಂದ್ರ, ವರುಣ, ಅಗ್ನಿ, ಕುಬೇರ, ಯಮ —ಮೊದಲಾದ ದೇವತೆಗಳನ್ನು ಕೂಡಾ ಪೂಜಿಸುತ್ತಿದ್ದರೆಂದು ಇಲ್ಲಿಯ ವಿಭಿನ್ನ ಶಿಲಾಲೇಖಗಳಿಂದ ತಿಳಿದುಬರುತ್ತದೆ.

ಚಂಪಾದ ಪ್ರಾಚೀನ ಶಿಲ್ಪಕಲೆ ಕೂಡಾ ಭಾರತೀಯ ಪ್ರಭಾವದಿಂದ ಕೂಡಿರದೆ ಇರಲಿಲ್ಲ. ಇಲ್ಲಿಯ ಅಸಂಖ್ಯ ಮಂದಿರಗಳು ಹಿಂದೂ ಮಂದಿರಗಳಂತಿದ್ದು, ಕಲೆಯ ದೃಷ್ಟಿಯಿಂದ ಕೂಡಾ ದಕ್ಷಿಣ ಭಾರತದ ಹಲವು ಮಂದಿರಗಳನ್ನು ಹೋಲುತ್ತವೆ. ಇಲ್ಲಿ ಮೂರ್ತಿಕಲೆಯ ಮೇಲೆ ಬಿದ್ದಿರುವ ಭಾರತೀಯ ಪ್ರಭಾವವನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಇಲ್ಲಿ ಡಾಂಗಡುಂಗ್‌ನಲ್ಲಿರುವ ಕುಳಿತಿರುವ ಬುದ್ಧನ ಮೂರ್ತಿಯೊಂದು ವೇಷ-ಭೂಷಣ, ಕೇಶ ವಿನ್ಯಾಸ—ಮೊದಲಾದವುಗಳಲ್ಲಿ ಭಾರತೀಯ ಬುದ್ಧ ಮೂರ್ತಿಯನ್ನೇ ಪೂರ್ಣವಾಗಿ ಸರಿಹೋಲುತ್ತದೆ. ಮಾಯಿಸೋನ್‌ನಲ್ಲಿರುವ ಸ್ಕಂದನ ಮೂರ್ತಿಯೊಂದು ಸಮಸ್ತ ಮೂರ್ತಿಗಳಿಗಿಂತಲೂ ಅಧಿಕ ಸುಂದರವಾಗಿದೆ. ಈ ಪ್ರತಿಮೆಯು ನವಿಲಿನ ಮೇಲೆ ನಿಂತಿದೆ. ಇಲ್ಲೇ ಇಬ್ಬರು ಸಂಗೀತಕಾರರ ಭಾವಪೂರ್ಣ ಹಾಗೂ ಸುಂದರವಾದ ಎರಡು ಮೂರ್ತಿಗಳಿವೆ. ಆ ಎರಡು ಮೂರ್ತಿಗಳಲ್ಲಿ ಒಂದು ಮೂರ್ತಿ ಕೊಳಲು ಬಾರಿಸುತ್ತಿದ್ದರೆ, ಮತ್ತೊಂದು ವೀಣಾವಾದನದಲ್ಲಿ ಲೀನವಾಗಿದೆ.

ಮಾಯಿಸೋನ್‌ನಲ್ಲಿ ಉತ್ಕೃಷ್ಟ ಚಿತ್ರಕಲೆಯ ಇನ್ನೊಂದು ಮಾದರಿ ನಮಗೆ ನೋಡಲು ಸಿಗುತ್ತದೆ. ಒಂದು ಸ್ಥಳದಲ್ಲಿ ಶಿವನ ತಾಂಡವ ನೃತ್ಯವನ್ನು ಬಹಳ ಸುಂದರವಾದ ರೀತಿಯಲ್ಲಿ ಚಿತ್ರಿಸಲಾಗಿದೆ. ಶಿವನ ಕಾಲುಗಳ ಬಳಿ ನಂದಿಯ ಚಿತ್ರವಿದೆ. ಹಾಗೂ ಅಕ್ಕಪಕ್ಕದಲ್ಲಿ ಮೂರು ಸಣ್ಣ ಮೂರ್ತಿಗಳಿವೆ. ಮೇಲ್ಗಡೆ ಯಾವುದೋ ಅಪ್ಸರೆ ಯಾ ಗಂಧರ್ವನ ಚಿತ್ರವಿದೆ. ದೌರ್ಭಾಗ್ಯವಶಾತ್ ಶಿವನ ಮುಖದ ಬಳಿಯ ಕೆಲವು ಭಾಗ ಒಡೆದು ಹೋಗಿರುವುದರಿಂದ, ಆತನ ಮುಖವನ್ನು ಸ್ಪಷ್ಟವಾಗಿ ಕಾಣಲಾಗುವುದಿಲ್ಲ. ಆದರೂ ಆತನ ನಾಲ್ಕು ಭುಜಗಳ ಅಂದಾಜು ಮಾಡಬಹುದು.

ಈ ರೀತಿ ದೊರಕುವ ಭಾರತೀಯ ಸಂಸ್ಕೃತಿಯ ಅವಶೇಷಗಳು ತಮ್ಮ ಪುರಾತನ ಕಥೆಗಳನ್ನು ಸ್ವಯಂ ಹೇಳುತ್ತಿವೆ.

(ಶ್ರೀ ಲಲ್ಲನ್ ಪ್ರಸಾದ್ ವ್ಯಾಸರ ಹಿಂದಿ ಲೇಖನದ ಅನುವಾದ)

—ಎನ್. ನಾರಾಯಣ ಬಲ್ಲಾಳ

ಮೂರು ಲಕ್ಷ ಮಂದಿ

ಸಿಂಡಿಕೇಟ್ ಬೇಂಕಿನ ಗ್ರಾಹಕರ ಸಂಖ್ಯೆ 3 ಲಕ್ಷಕ್ಕೂ ಮಿಕ್ಕಿದೆ; ಮತ್ತು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದೊಂದು ಕೇವಲ ಹಣ ಹೆಮ್ಮೆಯ ವಿಷಯವಾಗಿರದೆ, ಜನತೆಯ ವಿಶ್ವಾಸದ ಪ್ರತೀಕವಾಗಿದೆ ಎಂದು ನಾವು ವಿನಮ್ರತೆಯಿಂದ ಭಾವಿಸುತ್ತೇವೆ. ಅತಿ ಸಾಮಾನ್ಯ ಜನರ ಮನೆಯ ಬಾಗಿಲಿಗೆ ಕೂಡಾ ಬೇಂಕಿಂಗ್ ವ್ಯವಹಾರದ ಸೇವೆಯನು ತಂದು ನೀಡುವ ಮುಂದಾಳುತನವನ್ನು ಸಿಂಡಿಕೇಟ್ ಪ್ರದರ್ಶಿಸಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

‘ನವಯುಗ’ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

Edited, Printed & Published by K. H. Shetty, at the Navayuga Press, Udipi, S. India.